

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದುವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ

ಪ್ರಧಾನ ಸಂಪಾದಕ

ಡಾ.ಬಿ.ಎಸ್. ಪ್ರಣತಾರ್ತಿಹರನ್



ಶತಮಾನದ ಪತ್ರಗಳು

(೧೮೯೧ - ೨೦೦೪)

ಸಂಪಾದಕ

ಡಾ.ಬಿ.ಎಸ್. ಪ್ರಣತಾರ್ತಿಹರನ್

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ)

೩೦೫೯, ೪ನೇ ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ,

ಗೋಕುಲಂ, ಮೈಸೂರು - ೫೭೦ ೦೦೨

sanketi E-lib-2 Web : 6-6-2018

ಸಂಕೇತಿ ಅಧ್ಯಯನ ಯೋಜನೆ

ಸಂಪುಟ ೨

Sanketi : Letters of The Century (1891-2003)

Editor
Dr. B.S. Pranatartiharan
Professor & Head, Department of Kannada
Government Arts College, Hassan-573201

Published by
Samudaya Adhyayana Kendra (R)
3059, 4th 'A' Cross, Gokulam Park Road
Gokulam, Mysore - 570 002

Pages : xxxii + 402

First Edition : 2004

Price : Rs. 500/-

ಸಂಕೇತಿ : ಶತಮಾನದ ಪತ್ರಗಳು (೧೮೯೧-೨೦೦೩)

ಸಂಪಾದಕ
ಡಾ. ಬಿ.ಎಸ್. ಪ್ರಣತಾರ್ತಿಹರನ್
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ
ಸರ್ಕಾರಿ ಕಲಾ ಕಾಲೇಜು, ಹಾಸನ-೫೭೩ ೨೦೧

ಪ್ರಕಾಶಕರು
ಸಮುದಾಯ ಅಧ್ಯಯನ ಕೇಂದ್ರ (ರಿ.)
೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ, ಗೋಕುಲಂ
ಮೈಸೂರು - ೫೭೦ ೦೦೨

ಪುಟಗಳು : xxxii + ೪೦೨

ಮುದ್ರಣ : ೨೦೦೪

ಬೆಲೆ : ರೂ. ೫೦೦/-

ಡಿಟಿಪಿ :
ಫ್ರೆಂಡ್ಸ್ ಕಾಮ್-ಟೆಕ್
೧೨೧/೧, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦ ೦೧೮
ದೂರವಾಣಿ : ೨೬೫೨೮೪೫೪

ಮುದ್ರಕರು :
ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
೧೧೭/೨, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮
ದೂರವಾಣಿ : ೨೬೬೧೩೧೨೩, ೨೬೬೧೮೭೫೨

ಅಧ್ಯಕ್ಷರು ಮತ್ತು ಪ್ರಾಯೋಜಕರು
ಡಾ. ರಾಮನಾಥಪುರ ಎಸ್. ಚಂದ್ರಶೇಖರಮೂರ್ತಿ
ಯು.ಎಸ್.ಎ.

ನಿರ್ದೇಶಕರು
ಶ್ರೀ ನಟೇಶ್ ಮಗ್ಗಿ, ಯು.ಎಸ್.ಎ.

ಸದಸ್ಯರು
ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ
ಗೌರವಾಧ್ಯಕ್ಷರು, ಸಮುದಾಯ ಅಧ್ಯಯನ ಕೇಂದ್ರ, ಮೈಸೂರು
(ಪ್ರಾಯೋಜಕರು)

ಲಂಡನ್ ಶಾಖೆಯ ಅಭಿಮಾನಿಗಳು
ಭಾರತೀಯ ವಿದ್ಯಾಭವನ
(ಪ್ರಾಯೋಜಕರು)

ಶ್ರೀಮತಿ ರಾಜಲಕ್ಷ್ಮೀ, ಮತ್ತೂರು ಶ್ರೀ ಕೃಷ್ಣಮೂರ್ತಿ
(ಮಹಾದಾನಿಗಳು)

ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ
ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ
ಶ್ರೀಮತಿ ಸತ್ಯವತಿ, ಶ್ರೀ ಹರವೆ ಕೇಶವಮೂರ್ತಿ
ಡಾ. ಆರ್. ಇಂದಿರಾ,
ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು)
ಶ್ರೀಮತಿ ಕೆ.ಎಸ್. ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್
ಶ್ರೀಮತಿ ಎಸ್.ಕೆ. ಪಾರ್ವತಮ್ಮ,
ಶ್ರೀ ಬಿ.ಎಸ್. ಕೃಷ್ಣಮೂರ್ತಿ
ಶ್ರೀಮತಿ ಸುಧಾ, ಶ್ರೀ ಎ.ಎಸ್. ಅರುಣಕುಮಾರ್
ಶ್ರೀಮತಿ ಲಕ್ಷ್ಮೀ, ಶ್ರೀ ಹೆಚ್.ಕೆ. ವೆಂಕಟರಾಮಯ್ಯ
(ಪೋಷಕರು)

ಅರ್ಪಣೆ

ಸಮಸ್ತ ಸಂಕೇತಿಬಂಧುಗಳಿಗೆ

ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಅಮೆರಿಕದಲ್ಲಿ ನೆಲೆಸಿರುವ ಡಾ. ಆರ್.ಎಸ್. ಚಂದ್ರಶೇಖರಮೂರ್ತಿ ಅವರು ಅಧ್ಯಕ್ಷರಾಗಿ, ಹಾಗೂ ಶ್ರೀ ನಟೇಶ್ ಮಗ್ಗೆ ಅವರು ನಿರ್ದೇಶಕರಾಗಿ ಈ ಯೋಜನೆಯನ್ನು ಮುನ್ನಡೆಸುತ್ತಿದ್ದಾರೆ. ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಮೈಸೂರು
ಮಕರ ಸಂಕ್ರಾಂತಿ
೧೫-೦೧-೦೪

ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಮುನ್ನುಡಿ

ಪತ್ರವ್ಯವಹಾರದ ಮೂಲಕ ಪರಸ್ಪರ ಸುದ್ದಿಮುಟ್ಟಿಸುವುದು, ವಿಚಾರ ವಿನಿಮಯ ಮಾಡಿಕೊಳ್ಳುವುದು, ಸಲಹೆ-ಸಹಕಾರಗಳನ್ನು ಪಡೆದುಕೊಳ್ಳುವುದು, ತೊಡಕು-ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದು, ಮಾರ್ಗದರ್ಶನ ದೊರಕಿಸಿಕೊಳ್ಳುವುದು ಇವೇ ಮುಂತಾದ ಲೌಕಿಕ ಪ್ರಯೋಜನಗಳನ್ನು ಮನುಷ್ಯನು ಸಾಕಷ್ಟು ಹಿಂದಿನಿಂದಲೂ ಪಡೆದುಕೊಳ್ಳುತ್ತಿದ್ದಾನೆ. ಆದರೆ ಕವಿತೆ, ಕತೆ, ಕಾದಂಬರಿ, ನಾಟಕ ಮುಂತಾದ ಸೃಜನಶೀಲ ಸಾಹಿತ್ಯಪ್ರಕಾರಗಳಂತೆ ಪತ್ರಗಳೂ ಸಾಹಿತ್ಯರಂಗವನ್ನು ಪ್ರವೇಶಿಸಬಲ್ಲವು ಎಂಬುದು ಸಾಹಿತ್ಯಮಾರ್ಗದಲ್ಲಿ ಸಂಚರಿಸುವವರಿಗೆ ಇತ್ತೀಚಿನ ದಶಕಗಳಲ್ಲಷ್ಟೇ ಗಮನಕ್ಕೆ ಬಂತೆಂದು ಭಾವಿಸಬಹುದಾಗಿದೆ. ಹೆಚ್ಚಿನ ವಿಶೇಷಗಳೇನನ್ನೂ ಒಳಗೊಳ್ಳದ ಸರ್ಕಾರಿ ಆಡಳಿತದ ಪತ್ರಗಳಾಗಲಿ; ಕ್ಷೇಮಸಮಾಚಾರದ, ಸುದ್ದಿವಾಹಕಗಳಾದ, ಸಾಮಾನ್ಯ ನಿರೂಪಣೆಯ ಪತ್ರಗಳಾಗಲಿ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸಲಾರವು. ಕಾವ್ಯಗುಣದ ಸ್ಪರ್ಶವಿರುವ, ಬೋಧಪ್ರದವಾದ, ಶಾಸ್ತ್ರ-ಕಾವ್ಯ-ಲೋಕಜ್ಞಾನಗಳನ್ನು ಕುರಿತಂತಿರುವ; ನಂಬಿಕೆ-ನಡವಳಿಕೆ, ಆಚಾರ-ವಿಚಾರ, ಆಚರಣೆ-ಸಂಪ್ರದಾಯ, ನಡೆ- ನುಡಿ- ಮುಂತಾದ ಜೀವನೋಪಯೋಗಿಯಾದ ಸಂಗತಿಗಳ ಚರ್ಚೆ, ನಿರೂಪಣೆ, ಪ್ರತಿಪಾದನೆಗಳನ್ನೊಳಗೊಂಡಂತೆ ರೂಪುಗೊಳ್ಳುವ ಪತ್ರಗುಚ್ಛಗಳು 'ಪತ್ರ ಸಾಹಿತ್ಯ' ಎಂಬ ಗೌರವಕ್ಕೆ ಪಾತ್ರವಾಗುತ್ತವೆ.

ಸಾಹಿತ್ಯಪ್ರಕಾರಗಳಲ್ಲೊಂದಾದ ಪ್ರವಾಸಕಥನವು ಪತ್ರರೂಪವನ್ನೂ ತಾಳಿಕೊಳ್ಳಬಹುದು. ಅಲ್ಲಿ ಪತ್ರಶೈಲಿಯು ಸಾಹಿತ್ಯಾಭಿವ್ಯಕ್ತಿಯ ಒಂದು ತಂತ್ರವಾಗಿಯೂ ಬಳಕೆಯಾಗಬಹುದು.

ಪತ್ರಗಳಲ್ಲಿ ಉಲ್ಲಿಖಿತವಾಗುವ ವಿಷಯಗಳು ಅನಂತಮುಖಿಯಾಗಿರುತ್ತವೆ. ಸಾಮಾಜಿಕ, ರಾಜಕೀಯ, ಐತಿಹಾಸಿಕ, ಸಾಹಿತ್ಯಿಕ, ಸಮಸ್ಯಾತ್ಮಕ, ಸಂಶೋಧನಾತ್ಮಕ, ಉಪದೇಶಾತ್ಮಕ - ಮುಂತಾದ ಅನೇಕಾನೇಕ ವಿಷಯಗಳು ಪತ್ರಪ್ರಪಂಚಕ್ಕೆ ಬಂದು ನಿರೂಪಣೆಯ ಗುಣಗೌರವಗಳಿಂದ ಸಾಹಿತ್ಯಪ್ರಕಾರದ ಮನ್ನಣೆಯನ್ನು ಪಡೆದುಕೊಳ್ಳುತ್ತವೆ. ಪುತ್ರೋತ್ಸವದ ಸಂಭ್ರಮದಲ್ಲಿ ಬರೆದ ಪತ್ರವು ಹರ್ಷೋಲ್ಲಾಸಗಳನ್ನು ತುಂಬಿಕೊಟ್ಟರೆ; ಆತ್ಮೀಯರನ್ನು ಕಳೆದುಕೊಂಡ ಸಂಕಟದಲ್ಲಿ ಬರೆದ ಪತ್ರ ಕರುಣರಸಕ್ಕೆ ಮುಟ್ಟಿಸಬಹುದು. 'ದುಃಖಿಸುವುದೇಕೆ, ಸಮಾಧಾನ ತಂದುಕೊಳ್ಳಿ, ಜಗತ್ತಿನ ಸ್ವರೂಪವೇ ವಿಯೋಗವಲ್ಲವೆ' ಎಂದು ಹಿರಿಯರು ದುಃಖಿತಪ್ತರಿಗೆ ಬರೆದ ಸಾಂತ್ವನಪತ್ರವು ಶಾಂತರಸವನ್ನು ತಂದುಕೊಡುತ್ತದೆ. ಹೀಗೆಲ್ಲ ಸಶಕ್ತ ಪತ್ರಗಳು ನವರಸಭರಿತವಾಗಿ ಸಹೃದಯರನ್ನು ಸೆಳೆದುಕೊಳ್ಳಬಲ್ಲವು. ಪತ್ರಗಳ 'ಆನಂದಮುಖ'ದಂತೆಯೇ ಅವುಗಳ 'ಉಪದೇಶಮುಖ'ವೂ ಅಷ್ಟೇ ಪ್ರಶಸ್ತವಾದುದು.

ಆನಂದಮುಖ, ಉಪದೇಶಮುಖಗಳಲ್ಲದೆ 'ಉಪಯೋಗ ಮುಖ' ಎಂಬ ಮೂರನೆಯದೊಂದು ಮುಖವೂ ಪತ್ರಸಾಹಿತ್ಯಕ್ಕೆ ಕೂಡಿಕೊಂಡ ವಿಶೇಷ ಗುಣ. ಮಿಕ್ಕ ಸಾಹಿತ್ಯ ಪ್ರಕಾರಗಳಿಗಿಂತ ಈ ದಿಕ್ಕಿನಲ್ಲಿ ಪತ್ರಸಾಹಿತ್ಯವು 'ವಿಲಕ್ಷಣ'. ಸಮಕಾಲೀನ ಸ್ಥಿತಿಗತಿಗಳು, ಏರುಪೇರುಗಳು, ಸಮಸ್ಯೆಗಳು, ಮೊದಲಾದ ನೂರಾರು ವಿಚಾರಗಳು ಪತ್ರಗಳಿಗೆ ಗ್ರಾಸವಾಗಿರುತ್ತವೆ. ಹೀಗಾಗಿ ಪತ್ರಸಾಹಿತ್ಯವು ಇತಿಹಾಸರಚನೆಗೆ, ಮಹಾಪುರುಷರ ಜೀವನಗಾಥೆಯ ನಿರೂಪಣೆಗೆ, ಆಯಾ ಕಾಲದ ಸಾಮಾಜಿಕ ಸ್ಥಿತಿಗತಿಗಳ ತಿಳಿವಳಿಕೆಗೆ ವಿಪುಲವಾದ ಸಾಮಗ್ರಿಯನ್ನು ಒದಗಿಸಿಕೊಡುತ್ತದೆ. ನಮ್ಮ ಸಂಸ್ಕೃತಿ, ಸಂಸ್ಕಾರ, ಹಬ್ಬಹರಿದಿನಗಳ ಮೇಲೆ ಬೆಳಕು ಚೆಲ್ಲುತ್ತದೆ. ಪತ್ರಸಾಹಿತ್ಯದ ಆನಂದಮುಖಕ್ಕಿಂತ ಈ ಉಪಯೋಗಮುಖವೇ ವಿಶಾಲವಾದುದು.

ರಾಷ್ಟ್ರಕಾರಣ, ಅಧ್ಯಾತ್ಮ, ಸ್ವಾತಂತ್ರ್ಯಸಂಗ್ರಾಮವೇ ಮೊದಲಾದ ಹೋರಾಟಗಳು; ಆಂದೋಳನಗಳು, ಚಳುವಳಿಗಳು, ಕ್ರಾಂತಿಗಳು ಮುಂತಾದ ಮಹತ್ವದ ವಿಚಾರಗಳ ಹಿನ್ನೆಲೆಯಲ್ಲಿ ಮಹಾಪುರುಷರು, ಗಣ್ಯರು ಬರೆದ ಪತ್ರಗಳು 'ಪತ್ರಸಾಹಿತ್ಯ'ವಾಗಿ ಲೋಕಹಿತ ಸಾಧನೆಗೆ ಪೂರಕವಾಗುತ್ತವೆಂಬುದರಲ್ಲಿ ಎರಡು ಮಾತಿಲ್ಲ. ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಮಹಾತ್ಮಗಾಂಧಿ ಮೊದಲಾದ ಮಹಿಮಾನ್ವಿತರ ಪತ್ರಗಳು ಈಗಾಗಲೇ ಪತ್ರಸಾಹಿತ್ಯವಾಗಿ ಲೋಕೋಪಯೋಗಿಯಾಗಿರುವ ವಿಷಯ ಸರ್ವವಿದಿತವಾಗಿದೆ.

* * *

ಸಂಕೇತಿಜನಾಂಗದ ಸಾಹಿತ್ಯರಾಯಭಾರಿಯಾಗಿ ದುಡಿಯುತ್ತಿರುವ ಡಾ।। ಪ್ರಣತಾರ್ತಿಹರನ್ ಅವರು ತಮ್ಮ ಮಹಾಯೋಜನೆಯ ಒಂದು ಸುಗ್ಗಿಯಾಗಿ ಸಂಕೇತಿ ಪತ್ರಸಾಹಿತ್ಯದ ಈ ಬೃಹತ್ ಸಂಪುಟವನ್ನು ಅತ್ಯಂತ ಶ್ರಮವಹಿಸಿ ಸಂಪಾದಿಸಿಕೊಟ್ಟಿದ್ದಾರೆ. ೧೯ನೆಯ

ಶತಮಾನದ ಕೊನೆಯ ದಶಕದಿಂದ ಮೊದಲ್ಗೊಂಡು, ೨೦ನೆಯ ಶತಮಾನದ ಪರ್ಯಂತ ಬರೆಯಲಾಗಿರುವ ಸ್ವಾರಸ್ಯಮಯವೂ ಉಪಯುಕ್ತವೂ ವೈವಿಧ್ಯಮಯವೂ ಆದ ೫೫೫ ಪತ್ರಗಳನ್ನು ಇಲ್ಲಿ ತಾವೇ ರೂಪಿಸಿಕೊಂಡ ವಿಂಗಡಣೆಯ ಪದ್ಧತಿಯಲ್ಲಿ ಸಂಕಲಿಸಿಕೊಟ್ಟಿದ್ದಾರೆ. ೫೫೫ ಎಂಬ ಸಂಖ್ಯೆಗೆ ವೇದಾಂತದ ಹಿನ್ನೆಲೆಯಲ್ಲಿ ವಿಶೇಷ ಮಹಿಮೆಯುಂಟು. ಬಾದರಾಯಣರು ಬರೆದ ಬ್ರಹ್ಮಸೂತ್ರಗಳ ಸಂಖ್ಯೆ ೫೫೫. ಈ ಹೊಸ ಶತಮಾನದ ಕೆಲವು ಪತ್ರಗಳೂ ಇಲ್ಲಿ ಅಳವಟ್ಟಿವೆ. ನಾಲ್ಕುಸಾವಿರಕ್ಕೂ ಹೆಚ್ಚು ಸಂಕೇತಿಪತ್ರಗಳನ್ನು ಸಂಗ್ರಹಿಸಿದ ಹರನ್‌ರವರು ಅವುಗಳನ್ನೆಲ್ಲ ಚೆನ್ನಾಗಿ ಬಡಿದು, ತೂರಿ, ಕೇರಿ, ಗಟ್ಟಿಕಾಳುಗಳನ್ನು ಮಾತ್ರವೇ ಆಯ್ದುಕೊಂಡು ಎರಡು ಖಂಡಗಳಲ್ಲಿ ಜೋಡಿಸಿದ್ದಾರೆ. ಪ್ರಥಮ ಖಂಡದಲ್ಲಿ 'ಕೌಟುಂಬಿಕ ಪತ್ರಗಳು' ಎಂಬ ಶೀರ್ಷಿಕೆಯಲ್ಲಿ ವಿವಿಧ ವಯೋಮಾನದ, ವಿವಿಧ ಮನೋಧರ್ಮದ, ವಿವಿಧ ಗ್ರಾಮ-ನಗರಗಳ, ವಿವಿಧ ವಿದ್ಯಾಅಂತಸ್ತುಗಳ, ವಿವಿಧ ವೃತ್ತಿಗಳ ವೃದ್ಧರೂ ವೃದ್ಧೆಯರೂ ; ಯುವಕರೂ ಯುವತಿಯರೂ ; ಬಾಲಕರೂ ಬಾಲೆಯರೂ ವಿವಿಧ ಸನ್ನಿವೇಶ-ಸಂದರ್ಭಗಳಲ್ಲಿ ಹಾರ್ದಿಕವಾಗಿ, ಸಹಜ ಭಾವದಲ್ಲಿ ಬರೆದ ೪೩೫ ಪತ್ರಗಳಿವೆ. ಅವರಾರೂ ಮುಂದೊಂದು ದಿನ ತಮ್ಮ ಪತ್ರಗಳು ಪ್ರಣತಾರ್ತಿಹರನ್ ಅವರ ಕೈಗೆ ಸಿಕ್ಕಿ 'ಪತ್ರಸಾಹಿತ್ಯ' ವಾಗಿಬಿಡುತ್ತವೆ ಎಂದು ಭಾವಿಸಿಕೊಂಡು ಬರೆದವರಲ್ಲ ; ಮಿಕ್ಕ ಸಾಹಿತ್ಯ ಪ್ರಕಾರಗಳಿಗಿಲ್ಲದ, ಪತ್ರಸಾಹಿತ್ಯಕ್ಕೆ ಮಾತ್ರವೇ ಮೀಸಲಾದ ವಿಶಿಷ್ಟ ಲಕ್ಷಣಗಳಲ್ಲಿ ಇದು ಅತ್ಯಂತ ಪ್ರಮುಖವಾದುದು.

ಪ್ರಥಮಖಂಡದ ೪೩೫ ಪತ್ರಗಳಲ್ಲಿ ಕನ್ನಡ ಮಾತ್ರವಲ್ಲದೆ ಸಂಸ್ಕೃತ, ಆಂಗ್ಲಭಾಷೆಗಳಲ್ಲಿ ಬರೆದ ಪತ್ರಗಳೂ ಸೇರಿವೆ. ಸಂಸ್ಕೃತ ಪತ್ರಗಳಿಗೆ ಅಲ್ಲಲ್ಲೇ ಸಂಪಾದಕರು ಕನ್ನಡಾನುವಾದವನ್ನು ಒದಗಿಸಿ ಕೊಟ್ಟಿರುವುದು ಮೆಚ್ಚತಕ್ಕ ಸಂಗತಿಯಾಗಿದೆ. ಪತ್ರವಿಷಯಗಳು ಅನಂತಮುಖಿಯಾಗಿರುತ್ತವೆಯಾದರೂ ಪ್ರಣತಾರ್ತಿಹರನ್‌ರವರು ಅತ್ಯಂತ ಸಾವಧಾನವಾಗಿ ಎಲ್ಲವನ್ನೂ ಅಧ್ಯಯನ ಮಾಡಿ, ಅವುಗಳನ್ನು ಜಾತಾದಿ, ಅಧ್ಯಯನ, ವಿವಾಹ, ವ್ಯವಸಾಯ-ಉದ್ಯೋಗ, ಸಂಸ್ಕಾರವಲಯ, ಜಿಜ್ಞಾಸೆ, ಆರೋಗ್ಯ, ಆತಂಕ, ಜುಗುಪ್ಸೆ, ಆಸ್ತಿವಿಭಾಗ, ಗೃಹಕೃತ್ಯ, ಯೋಗಕ್ಷೇಮ, ತಂದೆ ಮಕ್ಕಳ ನಡುವೆ, ಒಂದೇ ಕುಟುಂಬದ ಪತ್ರಗಳು, ಪತ್ರಾಂಶ, ಸಾವು-ಸಾಂತ್ವನ, ದೇವನಾಗರಿಲಿಪಿಯ ಪತ್ರಗಳು, ಹೊಸ ಅಲೆಯ ಪತ್ರಗಳು- ಎಂಬ ಅಷ್ಟಾದಶ ಶೀರ್ಷಿಕೆಗಳಲ್ಲಿ ರೇಖೆಮಾಡಿ ಜೋಡಿಸಿದ್ದಾರೆ. ನಿಜಕ್ಕೂ ಈ ಅಷ್ಟಾದಶ- ೧೮ ಎಂಬ ಸಂಖ್ಯೆ ಅತ್ಯಂತ ರಹಸ್ಯಮಯವಾದುದು. ೧೮೯೧ನೇ ಇಸವಿಯ ಪತ್ರಗಳನ್ನೂ ಹರನ್ ತಡಕಿ ತೆಗೆದಿದ್ದಾರೆಂದರೆ ಯಾರಿಗೆ ತಾನೆ ಅಚ್ಚರಿಯಾಗುವುದಿಲ್ಲ !

* * *

ಈ ಪ್ರಥಮಖಂಡದಲ್ಲಿರುವ ಪತ್ರಗಳ ಭಾಷೆಶೈಲಿಗಳು ತುಂಬ ಮೋಹಕವಾಗಿವೆ. "ಸರ್ಕಾರದ ಧನ್ವಂತರೀ ಇಲಾಖೆಯವರಿಂದ ಪ್ರಯೋಗಿಸಲ್ಪಡುತ್ತಿರುವ ಇನಾಕ್ಯುಲೇಷರ್ ಮಹಾಶಕ್ತ್ಯಸ್ತ್ರದಿಂದ ಪ್ಲೇಗ್ ಮಹಾಮಾರಿ ಭೂತವು ಅರಣ್ಯರೋದನ ಮಾಡಲಿಕ್ಕೆ ಪರಾರಿಯಾಗುತ್ತಲಿದೆಯೆಂದು ಸೂಚಿಸಲು ಬಹಳ ಸಂತೋಷವಾಗುತ್ತದೆ" ; "ಜೀವಮಾನವೆಲ್ಲ ಸಂಸಾರದ ಜಂಜಾಟದಲ್ಲಿ ಕಳೆದು ಅಹವಾಲುಗಳು ಒಂದನ್ನೊಂದು ಬಿಗಿದುಕೊಂಡಿರುವಾಗ ಅದರಲ್ಲಿ ಕೆಲವು ಕ್ಷಣಗಳನ್ನು ಭಗವಂತನ ನಾಮಸ್ಮರಣೆಯಲ್ಲಿ ಕಳೆಯಬಹುದಾಗಿದೆ. ಭಗವದ್ಭಕ್ತರಿಗೆ ಇದಕ್ಕಿಂತ ಬೇರೊಂದಿಲ್ಲ" ; "ಮಿತ್ರಾ ! ಮಗ್ಗುಲಲ್ಲಿರುವ ನವಮಣಿಯ ಮೇಲ್ಮೆಯ ಬೆಡಗಿನ ಬಿನ್ನಾಣದ ಮಧುರಾಧರದ ಹೊಳಪಿಗೆ ಸೋತು ಆಜನ್ಮಮಿತ್ರರತ್ನವನ್ನು ಮರೆಯುವಂಥ ಕುಲಹೇಡಿಯಾದ ಮಿತ್ರದ್ರೋಹಿಯೆಂದು ನನ್ನನ್ನು ಭಾವಿಸಿದೆಯ ?"; "ಅವಳ ತಂದೆತಾಯಿಯರಿಗೆ ಅಪ್ಪಿತಪ್ಪಿಯೂ ಒಂದು ಸಲ ಮಗಳನ್ನಾಗಲಿ ಅಳಿಯನನ್ನಾಗಲಿ ಕರೆಯುವ ಅಭ್ಯಾಸವಿಲ್ಲ. ಆದರೂ ಹೋದಳು. ಭೇತಾಳ ಮುಳ್ಳುಮುತ್ತುಕದ ಮರವೇರಿದರೆ ವಿಕ್ರಮಾದಿತ್ಯ ವಾಪಸ್ ಕರೆತರಲು ಹೋಗುವಂತೆ ಚಿ॥ಯೂ ಹೋಗಿದಾನೆ" ; "ಮೊದಲು ಮಾತಾಡಿಕೊಂಡಿದ್ದಂತೆಯೆ ಪ್ರಸಂಗಗಳು ಒದಗಿಬಂದದ್ದು ನೋಡಿ ಮನಸ್ಸು ಕರಗಿ ನೀರಾಗಿಹೋಗುತ್ತಿದೆ. ಅನ್ಯಾಯವಾಗಿ ನಿಮ್ಮನ್ನು ಒಂದು ಮಾತು ಕೇಳುವ ಹಾಗೆ ಮಾಡಿದೆನಲ್ಲ ಎಂದು ತುಂಬಾ ಯೋಚನೆಯಾಗಿದೆ. ಈ ವಿಷಯದಲ್ಲಿ ನಿಮ್ಮಗಳ ಕ್ಷಮಾಪಣೆಯನ್ನು ಬೇಡುತ್ತಿದ್ದೇನೆ" ; "ಅಂದು-ಜೀವನದಲ್ಲಿ ಕಾಲಿಡುವ ಅತಿ ಉತ್ಸಾಹದಲ್ಲಿ ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನೂ ಬಿಟ್ಟು, ಜೀವನಸಮುದ್ರಕ್ಕೆ ಹಾರಿದರೆ, ಅಮೃತದ ಬದಲು ವಿಷಪಾನವಾಗಬೇಕೆ ? ನಿರ್ಮಲೋದಕವೆಂದು ನಂಬಿದ ಸರಸ್ಸು ಕೆಸರುಗುಂಡಿಯಾಗಬೇಕೆ? ಸರ್ವಾಭೀಷ್ಟ ಫಲಪ್ರದವೆಂದು ನಂಬಿದ ವಸ್ತು ಕೇವಲ ಕಲ್ಲಾಗಬೇಕೆ? 'ದೇವಾ-ಇಂತಹ ದುಃಖವನ್ನು ಪ್ರಾಣಿಸಾಮಾನ್ಯಕ್ಕೆ ಕೊಡಬೇಡ' ಎಂದು ಎಷ್ಟು ಬೇಡಿದರೂ, ಕೇಳಬೇಕಲ್ಲ ಅವನ ಕಿವಿಗೆ ?" ; "ಆ ನಿಧಿಯನ್ನು ದೇವರು ತನ್ನದನ್ನಾಗಿ ಮಾಡಿಕೊಂಡಾಯಿತಲ್ಲಾ. ಏನೋ ಕೆಲಸ ಮಾಡುವುದಕ್ಕಾಗಿ ಊಟ ಮಾಡಬೇಕು. ಊಟ ಮಾಡ್ತೇನಲ್ಲಾ ಅಂತ ಕೆಲಸ ಮಾಡಬೇಕು. ನಗಬೇಕು, ನಗಿಸಬೇಕು. ನನ್ನ ಪರಿಸ್ಥಿತಿಯನ್ನು ನಿಮಗೆ ತಿಳಿಸಲಸಾಧ್ಯವು. ದಯವಿಟ್ಟು ನೀವೇನೂ ಬೇಜಾರು ಮಾಡಿಕೊಳ್ಳುವುದು ಬೇಡ. ನಿಮ್ಮ ಮೇಲೆ ನನಗೇಕೆ ಬೇಜಾರು. ಭಗವಂತನೇ ನಮ್ಮ ಪಾಲಿಗೆ ನಿಷ್ಕರುಣಿಯಾಗಿ ಕುಳಿತಿರುವಾಗ ಯಾರ ಮೇಲೆ ನಮ್ಮ ಪ್ರತಾಪವನ್ನು ವ್ಯಕ್ತಪಡಿಸುವುದೋ ಕಾಣೆ"- ಎಂಬಂತಹ ವಾಕ್ಯಗಳನ್ನು ಮತ್ತೆ ಮತ್ತೆ ಮೆಲುಕು

ಹಾಕಬೇಕೆನಿಸುತ್ತದೆ. ಒಂದೆರಡು ಪತ್ರಗಳಲ್ಲಿ ಕೂಡಿಕೊಂಡಿರುವ ಸಂಕೇತಿಭಾಷೆಯ ವಾಕ್ಯಗಳು ಕೂಡ ಸನ್ನಿವೇಶದ ಸೊಬಗನ್ನು ಇಮ್ಮಡಿಗೊಳಿಸಿವೆ.

"ಈಗ ಮನೆಯಲ್ಲಿ ಜೋಳ ಮುರಿದಿದ್ದೇವೆ. ಸುಮಾರಾಗಿದೆ. ಕೆರೆಗೆ ನೀರಿಲ್ಲ. ಗದ್ದೆಬೆಳೆ ಸಾಮಾನ್ಯ ;" "ಮಳೆ ಕಡಮೆ. ಕೆಲವೆಡೆ ಉಂಟು. ಪ್ರಾಂತ ಸುಭಿಕ್ಷ. ನಮ್ಮ ನಿಮ್ಮ ಮನೆಯಲ್ಲೆಲ್ಲರೂ ಕ್ಷೇಮ" - ಎಂಬಂತೆ ಅನೇಕ ಕಡೆಗಳಲ್ಲಿ ಚಿಕ್ಕಚಿಕ್ಕ ವಾಕ್ಯಗಳು ಮನಸ್ಸನ್ನು ಮುದಗೊಳಿಸುತ್ತವೆ. ಕೆಲವು ಪತ್ರಗಳು ತಮ್ಮ ಆಡುನುಡಿಯ ಸೊಗಡಿನಿಂದ ಓದುಗರನ್ನು ಸಂತೋಷಪಡಿಸುತ್ತವೆ. ತಮ್ಮ ಮಗನಿಗಾಗಿ ಹುಡುಗಿಯನ್ನು ನೋಡಿಕೊಂಡು ಬಂದ ತಂದೆ, ಆಕೆಯನ್ನು ವರ್ಣಿಸುತ್ತ ಮಗನಿಗೆ ಬರೆಯುವ ಪತ್ರದಲ್ಲಿರುವ "ತಲೆಯು ದಪ್ಪವಾಗಿಲ್ಲ. ಅವಯವಗಳು ಅಂದವಾಗಿಯೂ ದೃಢವಾಗಿಯೂ ಮುಖವು ಕಲಾಯುಕ್ತವಾಗಿಯೂ ಇವೆ" ಎಂಬ ವಾಕ್ಯಗಳು ನಗೆಯುಕ್ಕಿಸುತ್ತವೆ. ಸಂದರ್ಭಾನುಸಾರ ಪತ್ರದ ಒಡಲಿನಲ್ಲಿ ಹಾಸುಹೊಕ್ಕಾಗಿರುವ ಹತ್ತಾರು ಸುಭಾಷಿತರೂಪದ ಶ್ಲೋಕಗಳು ಕೂಡ ಗಮನಸೆಳೆಯುತ್ತವೆ.

ಸಣ್ಣದಾರಿ ಪ್ರವೇಶಿಸು, ಕಲ್ಲುಹಾಕು, ಕೈಯಳ್ಳಾಡಿಸು, ಅವರಿವರಿಗೆ ಬಾಯಿಬಿಡು, ಕಾಡುಪಾಲಾಗು, ಬರಿಕೈಯಲ್ಲಿ ನಿಲ್ಲು , ತಳ್ಳಿಗೆ ಹೋಗದಿರು, ಭಾಷ್ಕಳ ಹೊಡೆ, ಜವಾಬು ಬೆಳೆಸು, ಎದೆ ಒಡೆದುಕೊ- ಎಂಬಂತೆ ಪತ್ರಗಳಲ್ಲಿ ಬಳಕೆಯಾಗಿರುವ ನುಡಿಗಟ್ಟುಗಳು ಭಾಷೆಯ ಸೊಬಗಿಗೆ ತಿಲಕವಿಟ್ಟಂತಿವೆ. ಕನ್ನಡ ಶೈಲಿಯ ನಡುವೆ ಆಂಗ್ಲಶಬ್ದಗಳು ಅಪ್ರಯಾಸವಾಗಿ ಬಳಕೆಯಾಗಿವೆ. ಯತ್ಕಿಂಚಿತ್ತು, ವಿದ್ಯಾವ್ಯಸನಿ, ಆಪಚ್ಛುಂತಿ, ದ್ರವ್ಯಧ್ವಂಸ, ಕಿಂವದಂತಿ, ಅಶನಾರ್ಥಿ, ವಾಚಾಪರೀಕ್ಷೆ, ಗುಣಗ್ರಹಣೆ ಎಂಬಂತೆ ಸಂಸ್ಕೃತ ಶಬ್ದಗಳು ; ದಸ್ತಾವೇಜು, ತರದೂದು, ತಲಾಶು, ಶಿವಾಯಿ, ಜುಮ್ಲಾ, ತಪಸೀಲು, ಸಬೂಬು, ಲೇಣಾದೇಣಾ ಎಂಬಂತೆ ಅನ್ಯದೇಶ್ಯಗಳು ; ಆಲಾಜೋಲಿ, ಹಗ್ಗಾಗು, ಪಿಚ್ಚುಲು ಎಂಬಂತೆ ಸಂಕೇತಿ ವಿಶಿಷ್ಟವಾದ ಶಬ್ದಗಳು ಸಹಜವಾಗಿ ಸೇರಿಕೊಂಡಿವೆ. 'ಹುಬ್ಬಳ್ಳಿಯಾಂವಾ' ಎಂದು ಬೇಂದ್ರೆಯವರು ಬಳಸಿರುವಂತೆ, ಇಲ್ಲಿ 'ಹಾಸನದಾಕೆ' ಎಂಬ ಶಬ್ದ ತಮಾಷೆಯಾಗಿದೆ. ಕಳೆದ ಶತಮಾನದ ಆರಂಭದ ದಶಕಗಳಲ್ಲಿ ಕೇಶವ್ಯೆಯ್ಯ, ಯರಡು, ಯಿಲ್ಲಿ , ವೂರು, ವುಭಯ, ವಾಪ್ಸು ಎಂಬಂತೆ ಬರವಣಿಗೆಯ ಲಿಪಿಸ್ವರೂಪ ವಿಶಿಷ್ಟವೆನಿಸುತ್ತದೆ.

ಈ ಪತ್ರಗಳು ಸಂಕೇತಿ ಜನಾಂಗವು ಏಳಿಗೆಯ ಪಥದಲ್ಲಿ ಸಾಗಿನಡೆದ ನಿಚ್ಚಳವಾದ ಚಿತ್ರವೊಂದನ್ನು ಕಟ್ಟಿಕೊಡುವುದರಲ್ಲಿ ನಿಸ್ಸೀಮವೆನಿಸಿವೆ. ಈ ಹಿಂದೆ ಸಂಕೇತಿಗಳು ಅನುಭವಿಸಿದ ಕ್ಷಾಮಡಾಮರಗಳು, ಪ್ಲೇಗುಸಿಡುಬು ಮುಂತಾದ ರೋಗಬಾಧೆಗಳು, ಬಡತನ, ನಿರುದ್ಯೋಗ; ವಿದ್ಯಾಭ್ಯಾಸಕ್ಕಾಗಿ ಪಟ್ಟ ಕಷ್ಟನಿಷ್ಠುರಗಳು, ವಿಭಿನ್ನ ಪರಿಸ್ಥಿತಿಗಳಿಗೆ ಹೊಂದಿಕೊಂಡ ಬಗೆ, ತಮ್ಮ ಸಂಸ್ಕೃತಿಸಂಸ್ಕಾರಗಳನ್ನು ಕಾಪಾಡಿಕೊಳ್ಳಬೇಕೆಂದು ಹಂಬಲಿಸಿದ್ದು ; ಕೃತಜ್ಞತೆ, ಪ್ರಾಮಾಣಿಕತೆ, ನೇರವಾದ ನಡೆ ಈ ಮುಂತಾದ ಅವರ ಗುಣವಿಶೇಷಗಳು- ಇವೆಲ್ಲವೂ ಇಲ್ಲಿನ ಪತ್ರಗಳಲ್ಲಿ ಪಡಿಮೂಡಿವೆ ; ಸಂಕೇತಿ ಜನಾಂಗದ ಕೈಗನ್ನಡಿಯಾಗಿ ಈ ಕೃತಿ ಬೆಳಗುತ್ತಿದೆಯೆಂದೇ ಹೇಳಬೇಕು.

* * *

ಈ ಪತ್ರಸಾಹಿತ್ಯವನ್ನು ಸಹೃದಯರು ಆಸ್ವಾದಿಸಲು ಅನುಕೂಲವಾಗುವಂತೆ ಡಾ॥ ಪ್ರಣತಾರ್ತಿಹರನ್‌ರವರು ಅಗತ್ಯವೆಂದು ತೋರಿದ ಪತ್ರಗಳಿಗೆ ಸೂಕ್ತವಾದ ಹಿನ್ನೆಲೆಯನ್ನೂ ವಿವರಣೆಗಳನ್ನೂ ವಿಮರ್ಶೆಯನ್ನೂ ಒದಗಿಸಿಕೊಟ್ಟಿದ್ದಾರೆ. ತಮ್ಮನ ದುಃಸ್ಥಿತಿ; ನಾನು ತಾತ್ಸಾರ ಮಾಡಿಲ್ಲ ; ಪ್ರೊಫೆಸರನ್ನು ಆಶ್ರಯಿಸು; ಆಳುತ್ರಾಣವಾಗಿದಾನೆ; ತಂದೆಯ ವಾಗ್ದಂಡ; ಜೀವನ್ ಭದ್ರಾಣಿ ಪಶ್ಯತಿ- ಎಂಬಂತೆ ಎಲ್ಲ ಪತ್ರಗಳಿಗೂ ಸೂಕ್ತವಾದ, ಆಕರ್ಷಕವಾದ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಪ್ರಸ್ತುತ ಸಂಕಲನವನ್ನಾಗಲಿ, ಒಟ್ಟಾರೆ ಕನ್ನಡ ಪತ್ರಸಾಹಿತ್ಯವನ್ನು ಅಧ್ಯಯನ ಮಾಡಬಯಸುವ ಸಂಶೋಧಕರಿಗಾಗಲಿ, ಪತ್ರಸಾಹಿತ್ಯವನ್ನು ಹೇಗೆ ಸಂಪಾದಿಸಬೇಕೆಂಬ ಮಾರ್ಗದರ್ಶನವನ್ನು ಬಯಸುವವರಿಗಾಗಲಿ ಈ ಸಂಪುಟವು ತವನಿಧಿಯಂತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಸರ್ವಾಂಗಸುಂದರವೂ ಶಾಸ್ತ್ರೀಯವೂ ಅಧ್ಯಯನಯೋಗ್ಯವೂ ಆದ ಬಗೆಯಲ್ಲಿ ಈ ಕೃತಿಯು ಮೂಡಿಬಂದಿದೆಯೆಂಬುದನ್ನು ಎಷ್ಟು ಕೊಂಡಾಡಿದರೂ ಸಾಕಾಗುವುದಿಲ್ಲ.

* * *

ಈ ಸಂಪುಟದ ದ್ವಿತೀಯ ಖಂಡದಲ್ಲಿ ಪ್ರೊ॥ ಶ್ರೀಕಂಠಕುಮಾರಸ್ವಾಮಿಗಳೆಂಬ ಗಣ್ಯವಿದ್ವನ್ಮಣಿಗಳೊಬ್ಬರು ೧೯೮೨ರಿಂದ ಪ್ರಾರಂಭಿಸಿ ಇತ್ತೀಚಿನವರೆಗೂ ಬರೆದ ೧೨೦ ಪತ್ರಗಳ ಒಕ್ಕೂಟವಿದೆ. ಅವುಗಳನ್ನು ಹರನ್‌ರವರು ಶ್ರೀ ಬಿ.ವಿ. ಶ್ರೀಕಂಠ ಮತ್ತು ಇತರರಿಗೆ ಬರೆದ ಪತ್ರಗಳು, ಮಗಳಿಗೆ ಬರೆದ ಪತ್ರಗಳು, ಸ್ವಾಮೀಜಿಯೊಬ್ಬರಿಗೆ ಬರೆದ ಪತ್ರ ಎಂದು ಮೂರಾಗಿ ವಿಂಗಡಿಸಿದ್ದಾರೆ. ಈ ಪತ್ರಗಳೆಲ್ಲ ವಿದ್ವತ್ಪೂರ್ಣವೂ ವಿಚಾರಪರಿಪ್ಲುತವೂ ಚಿಂತನಪೂರ್ಣವೂ ಬೋಧಪ್ರದವೂ ಆಗಿದ್ದು , ಸಾಮಾನ್ಯ ವ್ಯಾವಹಾರಿಕಸ್ತರದಿಂದ ಮೇಲೆದ್ದು ಪತ್ರಸಾಹಿತ್ಯದ ಸಲ್ಲಕ್ಷಣಗಳನ್ನೂ ವ್ಯಾಪ್ತಿವಿಸ್ತಾರಗಳನ್ನೂ ಘನತೆಗೌರವಗಳನ್ನೂ ಮನದಟ್ಟು ಮಾಡಿಕೊಡುವಂತಿವೆ. ಪತ್ರಗಳು, ಅವುಗಳನ್ನು ಬರೆಯುವ ಲೇಖಕನ ರಾಯಭಾರಿಯಿದ್ದಂತೆ. ಆ ಲೇಖಕನ ವ್ಯಕ್ತಿತ್ವದ ನಾನಾ ಮುಖಗಳನ್ನು ಅವು ಅನಾವರಣಗೊಳಿಸುತ್ತವೆ. ಶ್ರೀಕಂಠಕುಮಾರಸ್ವಾಮಿಗಳ ನಿರಾಡಂಬರ ಜೀವನಶೈಲಿ, ಸಹೃದಯತೆ, ಆರ್ದ್ರಮನಸ್ಕತೆ, ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಕನ್ನಡ ಸಂಸ್ಕೃತಿಯ ವಿಷಯದಲ್ಲಿರುವ ಸಾಂದ್ರವಾದ ಪ್ರೀತಿ, ತಾವು ತಿಳಿದುದನ್ನು ಜಿಜ್ಞಾಸುಗಳಿಗೆ ತಿಳಿಸಿಕೊಡಬೇಕೆಂಬ

ಉತ್ಕಂಠೆ, ಅಂಧಶ್ರದ್ಧೆಗಳ ಕೋಟಲೆಗೆ ಯಾರೂ ಸಿಲುಕಬಾರದೆಂಬ ಕಳಕಳಿ, ನಮ್ಮ ಆಚರಣೆಗಳ ಅಂತರಾಳದಲ್ಲಿರುವ ಧ್ಯೇಯೋದ್ದೇಶಗಳನ್ನು ತಮ್ಮ ಅಂತರ್ದೃಷ್ಟಿಯಿಂದ ಕಂಡು ಉದ್ಘಾಟಿಸುವ ಅಧ್ಯಯನಶೀಲತೆ ; ಉದಾರವಾದಿತೆ, ಹೊಸಹೊಸದನ್ನು ಕಾಣುವ, ಹೊಸಹೊಸದನ್ನು ಕಟ್ಟುವ ನವನವೋನ್ಮೇಷಶಾಲಿಯಾದ ಪ್ರತಿಭೆ- ಈ ಮುಂತಾದ ಮಹೋನ್ನತ ಗುಣಗಳನ್ನು ಇಲ್ಲಿರುವ ಅವರ ಪತ್ರಗಳ ಅಧ್ಯಯನದ ಮೂಲಕ ಮನನ ಮಾಡಬಹುದಾಗಿದೆ.

* * *

ಹಿಂದೀಸಾಹಿತ್ಯರಂಗದಲ್ಲಿ ಪತ್ರಸಾಹಿತ್ಯವು ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ಮಹಾತ್ಮಾ ಮುಂಶೀರಾಮ್ ಅವರು ೧೯೦೪ರಲ್ಲಿ ಪ್ರಕಟಿಸಿದ ಸ್ವಾಮಿ ದಯಾನಂದ ಸರಸ್ವತಿಗಳ ಪತ್ರಗಳ ಸಂಕಲನವೇ ಆ ಕ್ಷೇತ್ರದ ಮೊತ್ತಮೊದಲ ಕೃತಿಯಾಗಿದೆ. ಅಲ್ಲಿಂದ ಮುಂದಕ್ಕೆ ಆನಂದ ಕೋಸಲ್ಯಾಯನ, ಧೀರೇಂದ್ರವರ್ಮ, ಸತ್ಯಭಕ್ತಸ್ವಾಮಿ, ಸೂರ್ಯಬಲಿಸಿಂಹ, ವ್ರಜಮೋಹನಲಾಲ್ ವರ್ಮಾ, ದ್ವಿವೇದಿ, ಪದ್ಮಾಸಿಂಹಶರ್ಮ, ಕಮಲಾಪತಿತ್ರಿಪಾಠಿ, ಡಾ॥ ಜಗದೀಶಚಂದ್ರ, ಪ್ರೇಮ್‌ಚಂದ್, ಬನಾರಸೀದಾಸ್ ಚತುರ್ವೇದಿ, ಪುರುಷೋತ್ತಮದಾಸಟಂಡನ್, ಕಿಶೋರಿದಾಸ ವಾಜಪೇಯಿ, ಸುಮಿತ್ರಾನಂದನಪಂತ್, ಹರಿವಂಶರಾಯ್ ಬಚ್ಚನ್- ಈ ಮೊದಲಾದ ಗಣ್ಯರು ಬರೆದ ಪತ್ರಗಳ ಸಂಕಲನಗಳು ಪ್ರಕಟಗೊಂಡಿವೆ. ಕನ್ನಡದಲ್ಲಿ ಪತ್ರಸಾಹಿತ್ಯವು ಹೆಚ್ಚಿನ ಬೆಳವಣಿಗೆಯನ್ನು ಸಾಧಿಸಿಲ್ಲ. ಹತ್ತಾರು ಸಂಕಲನಗಳು ಹೊರಬಂದಿವೆಯಾದರೂ ಹಿರಿಯ ಸಾಹಿತಿಗಳ, ವಿದ್ವಾಂಸರ ಪತ್ರಗಳನ್ನು ಸಂಶೋಧಿಸಿ ಬೆಳಕಿಗೆ ತರುವ ಅಗತ್ಯವಿದೆ. ಈ ಸಮುದಾಯದಲ್ಲಿ ಎ.ಎನ್. ಮೂರ್ತಿರಾಯರ 'ಚಿತ್ರಗಳು-ಪತ್ರಗಳು' (೧೯೭೮) ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರಕ್ಕೆ ಪಾತ್ರವಾದ ಮಹತ್ವದ ಕೃತಿ. ಅದರ 'ಪತ್ರಗಳು' ಎಂಬ ಭಾಗವು ೭೬ ಪತ್ರಗಳಿಂದ ಕೂಡಿದೆ. ತನ್ನ ಆತ್ಮೀಯ ಶೈಲಿ, ಬದುಕಿನ ನೋವುನಲಿವುಗಳ ಆರ್ದ್ರವಾದ ಚಿತ್ರಣ, ತಿಳಿಹಾಸ್ಯದಿಂದ ಕೂಡಿದ ರಸಮಯವಾದ ಶೈಲಿ ಇವೇ ಮುಂತಾದುವು ಅದರಲ್ಲಿ ಎದ್ದುಕಾಣುತ್ತವೆ. ಆ ಪತ್ರಗುಚ್ಛದಲ್ಲಿ ಮೂರ್ತಿರಾಯರು ತೀನಂಶ್ರೀ ಅವರಿಗೆ ಬರೆದಿರುವ ಪತ್ರಗಳ ಸಂಖ್ಯೆಯೇ (೭೦) ಹೆಚ್ಚು. ಮಿಕ್ಕಂತೆ ಮಗ ಸುಬ್ಬರಾಮಯ್ಯನವರಿಗೆ (೫) ಸೊಸೆ ನ್ಯಾನ್ಸಿನಾಗರಾಜ್ ಅವರಿಗೆ (೧) ಬರೆದ ಆರು ಪತ್ರಗಳಿವೆ. ಸಾಂಸ್ಕೃತಿಕ ಹಿನ್ನೆಲೆಯಿಂದಲೂ ಈ ಎಲ್ಲ ಪತ್ರಗಳು ಮಹತ್ವವನ್ನು ಗಳಿಸಿಕೊಂಡಿವೆ. "ಕಾಲು ಶತಮಾನಕ್ಕಿಂತ ಹೆಚ್ಚಿನ ಅವಧಿಯಲ್ಲಿ ಆಗಾಗ ಬರೆದ ಪತ್ರಗಳು, ಇವು" ಎಂದು ಮೂರ್ತಿರಾಯರೇ ಸೂಚಿಸಿದ್ದಾರೆ. ಇಂಗ್ಲಿಷ್ ಸಾಹಿತ್ಯದ ಕ್ಷೇತ್ರದಲ್ಲಿ ಕಾರ್ಲೈಲ್ ಮತ್ತು ಎಮರ್ಸನ್ನರ ನಡುವೆ ನಡೆದ ಪತ್ರವ್ಯವಹಾರವು ಲೋಕಪ್ರಸಿದ್ಧವಾದುದೆಂದು ಬಲ್ಲವರು ಹೇಳುತ್ತಾರೆ. ಸಂಪರ್ಕ ಸೌಲಭ್ಯಗಳು ಮೇರೆಮೀರಿ ಬೆಳೆದಿರುವ ಈ ಹೊಚ್ಚಹೊಸ ಯುಗದಲ್ಲಿ 'ಪತ್ರಸಾಹಿತ್ಯ'ಕ್ಕೆ ಏನು ಭವಿಷ್ಯವಿದೆಯೋ ತಿಳಿಯದು.

* * *

ಪ್ರಸ್ತುತ ಡಾ॥ ಪ್ರಣತಾರ್ತಿಹರನ್ ಸಂಪಾದಿಸಿರುವ ಈ ಪತ್ರಸಾಹಿತ್ಯ ಸಂಕೇತಿ ಸಂಸ್ಕೃತಿಗೆ ಅವರು ಸಮರ್ಪಿಸಿರುವ ಅನುಪಮವಾದ ಕೊಡುಗೆ. ಸಂಕೇತಿಬಂಧುಗಳಿಗೆಲ್ಲ ಈ ಸಂಪುಟವು ಆತ್ಮೀಯವಾಗುವುದರಲ್ಲಿ ಸಂದೇಹವಿಲ್ಲ. ಅಷ್ಟೇ ಏಕೆ, ಕನ್ನಡನಾಡಿನ ಒಟ್ಟು ಬ್ರಾಹ್ಮಣಸಮುದಾಯ ಈ ಕೃತಿಯಿಂದ ಪ್ರೇರಣೆ ಪ್ರಯೋಜನಗಳನ್ನು ಪಡೆಯುತ್ತದೆಂದು ನಾನು ನಂಬಿದ್ದೇನೆ. ಅವರಿವರೆನ್ನದೆ ಕನ್ನಡಸಾಹಿತ್ಯ ಪ್ರೇಮಿಗಳೆಲ್ಲರನ್ನೂ ಮೆಚ್ಚಿಸಬಲ್ಲ ಸಂಕಲನ ಇದಾಗಿದೆ. ಅಷ್ಟೇನೂ ಸಮೃದ್ಧವಲ್ಲದ ಕನ್ನಡ ಪತ್ರಸಾಹಿತ್ಯ ರಂಗಕ್ಕೆ ಇದೊಂದು ಅಮೂಲ್ಯವಾದ ಸೇರ್ಪಡೆ; ಅಷ್ಟು ಮಾತ್ರವಲ್ಲ , ಭಾರತದ ಯಾವ ಭಾಷೆಯಲ್ಲೂ ಇಷ್ಟೊಂದು ದೊಡ್ಡಗಾತ್ರದ ಪತ್ರಸಾಹಿತ್ಯ ಕೃತಿ ಪ್ರಕಟವಾಗಿರುವುದನ್ನು ನಾನು ಕಂಡಿಲ್ಲ. ಪ್ರಣತಾರ್ತಿಹರನ್ ಅವರ ಸಹನೆ, ತಾಳ್ಮೆ, ಕಾರ್ಯದಕ್ಷತೆ, ವಿದ್ವತ್ತು, ಪ್ರಯತ್ನಶೀಲತೆ, ಪ್ರಾಮಾಣಿಕತೆ, ಕಡಿವಡೆಯದೆ ಸಾಹಿತ್ಯಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿರುವಿಕೆ- ಈ ಮೊದಲಾದ ಅನನ್ಯಗುಣಗಳೇ ಇಂತಹ ಸತ್ಕೃತಿಯೊಂದು ಬೆಳಕು ಕಾಣಲು ಸಾಧ್ಯಮಾಡಿವೆ. ಸಂಕೇತಿ ಬಂಧುಗಳೆಲ್ಲರ ಪರವಾಗಿ, ಕನ್ನಡಿಗರೆಲ್ಲರ ಪರವಾಗಿ ಡಾ॥ ಪ್ರಣತಾರ್ತಿಹರನ್ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು
ಮೈಸೂರು

ಡಾ. ಕೆ. ಅನಂತರಾಮು
ಕನ್ನಡ ಪ್ರಾಧ್ಯಾಪಕ

ಅರಿಕೆ

'ಸಂಕೇತಿ : ಒಂದು ಅಧ್ಯಯನ' ಎಂಬುದು ನನ್ನ ಪಿಎಚ್.ಡಿ., ನಿಬಂಧ. ಅದು 'ಸಂಕೇತಿ ಅಧ್ಯಯನ' ಮಾಲಿಕೆಯ ಮೊದಲ ಸಂಪುಟವಾಗಿ ೨೦೦೩ರಲ್ಲಿ ಪ್ರಕಟವಾಯಿತು. 'ಸಂಕೇತಿ : ಶತಮಾನದ ಪತ್ರಗಳು' ಎಂಬುದು ಸಂಕೇತಿ ಸಮುದಾಯದ ಪತ್ರಸಾಹಿತ್ಯ. ಅದು ಈ ಮಾಲಿಕೆಯ ಎರಡನೆಯ ಸಂಪುಟವಾಗಿ ಈಗ ಹೊರಬರುತ್ತಿದೆ.

ಸಂಗ್ರಹ

ಸಂಕೇತಿ ಸಮುದಾಯದ ಕೌಟುಂಬಿಕ ಪತ್ರಗಳನ್ನು ಸಂಗ್ರಹಿಸುವ ಪ್ರೇರಣೆ ಬಂದದ್ದು ಆಕಸ್ಮಿಕವಾಗಿ. ೧೯೮೬ರಲ್ಲಿ ಕೊಳ್ಳೇಗಾಲದ ಶ್ರೀಮಹದೇಶ್ವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿ ಸೇವೆ ಸಲ್ಲಿಸುತ್ತಿದ್ದೆ. ಆ ವರ್ಷದ ಬೇಸಗೆ ರಜೆಯಲ್ಲಿ ನನ್ನ ಹಳ್ಳಿಗೆ ಹೋದೆ. ಹಾಸನಜಿಲ್ಲೆಯ ಬಸವಪಟ್ಟಣ ನನ್ನ ಪೂರ್ವಿಕರ ಊರು. ನನ್ನ ಬಾಲ್ಯವನ್ನು ಅಲ್ಲಿಯೇ ಕಳೆದಿದ್ದೆ. ಆ ದಿನಗಳಲ್ಲಿ 'ಸ್ವಾಮಿ, ಬಿಕ್ಷ' ಎಂದು ಕೂಗಿ ಬೇಡುತ್ತಿದ್ದ ಒಬ್ಬ ಭಿಕ್ಷುಕನಿದ್ದ. ಆತ ಹತ್ತಿರಹತ್ತಿರ ನೂರು ವರ್ಷ ಬದುಕಿದ್ದ. ಆ ಬಾರಿ ನಾನು ಊರಿಗೆ ಹೋದಾಗ ಆತ ಸತ್ತ ಸುದ್ದಿ ಕೇಳಿದೆ. ಒಂದು ರೀತಿಯ ಶೂನ್ಯದ ಅನುಭವವಾಯಿತು. ಹಳ್ಳಿಯ ಜೀವನವೇ ಅಂಥದು. ಅದು ತನಗೆ ಸಂಬಂಧಿಸಿದ ಎಲ್ಲವನ್ನೂ ಆತ್ಮೀಕರಿಸಿಕೊಳ್ಳುತ್ತದೆ. ಅಲ್ಲದೆ, 'ಸ್ವಾಮಿ, ಬಿಕ್ಷ'ನ ಅಜ್ಜ ಬರೆದುಕೊಟ್ಟಿದ್ದ ತಾಳೆಗರಿ ಗ್ರಂಥವೊಂದು ನಮ್ಮ ಮನೆಯಲ್ಲಿತ್ತು. ಅದು ಗದುಗಿನ ಭಾರತ. ಆ ಕಾರಣದಿಂದಾಗಿಯೂ ನಮಗೆ ಆತನ ಮೇಲೆ ಅಭಿಮಾನ. ಆತನಿಗಾಗಿ ಮೌನ ಆಚರಿಸಿದೆ. ನಮ್ಮ ಹಳೆಯ ಮನೆಯ ಅಟ್ಟದಲ್ಲಿ , ಆತನ ಪೂರ್ವಿಕರು ಪ್ರತಿ ಮಾಡಿಕೊಟ್ಟ ಆ ಗ್ರಂಥವಿತ್ತು. "ಅದನ್ನು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಗೆ ತಲುಪಿಸಬೇಕು, ಅದೇ ನಾನು ಆ 'ಭಿಕ್ಷುಕ'ನಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ" ಎನಿಸಿತು. ಅಟ್ಟ ಹತ್ತಿದೆ. ಒಂದು ಜಾಯಿಕಾಯಿ ಪೆಟ್ಟಿಗೆಯಲ್ಲಿದ್ದ ಮೂರು ತಾಳೆಗರಿ ಗ್ರಂಥಗಳನ್ನು ಎತ್ತಿಕೊಂಡೆ. ಅವುಗಳ ಜತೆ ಸಂಸ್ಕೃತ ಲಿಪಿ ಮತ್ತು ಭಾಷೆಯಲ್ಲಿ ಬರೆದ ಹತ್ತಾರು ಕಾಗದಗಳೂ ಇದ್ದವು. ಗ್ರಂಥಗಳನ್ನು ಅಧ್ಯಯನಸಂಸ್ಥೆಗೆ ತಲುಪಿಸಿದೆ, ಕಾಗದಗಳನ್ನು ಕೇವಲ ಅಭಿಮಾನದಿಂದ ಜೋಪಾನವಾಗಿ ಇಟ್ಟುಕೊಂಡೆ.

೧೯೮೯ರಲ್ಲಿ ಶಿವಮೊಗ್ಗೆಯ ಸಹ್ಯಾದ್ರಿಕಾಲೇಜಿಗೆ ವರ್ಗವಾಯಿತು. ಶ್ರೀ ಬಿ.ವಿ.ಶ್ರೀಕಂಠ ಎಂಬ ವಿಶಿಷ್ಟ ವ್ಯಕ್ತಿಯೊಬ್ಬರು ಭದ್ರಾವತಿಯಲ್ಲಿದ್ದರು. ಅವರು ಇತಿಹಾಸಪ್ರಜ್ಞೆ ಇರುವ ವ್ಯಕ್ತಿ. ಹಲವು ಅಪರೂಪದ ಅಧ್ಯಯನಸಾಮಗ್ರಿ ಅವರ ಬಳಿ ಇತ್ತು. ಪ್ರೊ. ಶ್ರೀಕಂಠಕುಮಾರಸ್ವಾಮಿ ಎಂಬ ಚಿಂತಕರು ಬರೆದ ಪತ್ರಗಳ ಕಟ್ಟು ಅವುಗಳಲ್ಲೊಂದು. ವಿಶೇಷವಾಗಿ ಧರ್ಮ ಮತ್ತು ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಬರೆದ ದೀರ್ಘಪತ್ರಗಳು ಅವು. ಅವನ್ನು ನೋಡಿದ ಮೇಲೆ ಸಂಕೇತಿ ಸಮುದಾಯದ ಪತ್ರಸಾಹಿತ್ಯದ ಬಗೆಗೆ ಆಸಕ್ತಿ ಮೂಡಿತು. ನನ್ನ ಬಳಿ ಇದ್ದ ಸಂಸ್ಕೃತಪತ್ರಗಳಿಗೆ ಒಂದು ಗುರಿ ಕಂಡಿತು. ಕೌಟುಂಬಿಕ ಪತ್ರಗಳನ್ನು ಸಂಗ್ರಹಿಸ ತೊಡಗಿದೆ.

೧೯೯೦ರ ಬೇಸಗೆ ರಜೆಯಲ್ಲಿ ಬಸವಪಟ್ಟಣವನ್ನು ಕೇಂದ್ರವಾಗಿ ಇಟ್ಟುಕೊಂಡು ಕ್ಷೇತ್ರಕಾರ್ಯವನ್ನು ಆರಂಭಿಸಿದೆ. ಮೊದಲು ಹೋದದ್ದು ಸುಮಾರು ಹನ್ನೆರಡು ಮೈಲು ದೂರದ ಒಂದು ಹಳ್ಳಿಗೆ. ಅಲ್ಲಿ ಒಂದು ಮದುವೆ ನಡೆಯುವುದಿತ್ತು. 'ಅಲ್ಲಿ ಪತ್ರಸಂಗ್ರಹವನ್ನೂ ಮಾಡಬೇಕು' ಎಂಬ ಉದ್ದೇಶವಿತ್ತು. ಆದರೆ "ನಿಮ್ಮ ಮನೆಗೆ ಬಂದಿರುವ ಕಾಗದಗಳನ್ನು ಕೊಡಿ" ಎಂದು ಕೇಳುವುದು ಹೇಗೆ? ಆ ಯೋಚನೆ ಬರುತ್ತಲೇ ನಾಲಗೆ ಒಣಗುತ್ತಿತ್ತು. ಸೈಕಲ್ ತುಳಿಯುವುದು ಕಷ್ಟವಾಗುತ್ತಿತ್ತು. ಬಿಸಿಲು ಹೆಚ್ಚು ಸುಡುತ್ತಿತ್ತು. ಮನಸ್ಸು ವಿಪರೀತ ಡೋಲಾಯಮಾನವಾಗುತ್ತಿತ್ತು. ಆ ಹಳ್ಳಿಗೆ ಪ್ರವೇಶಿಸುತ್ತಲೇ ಒಬ್ಬ ಸಂಕೇತಿರೈತರು ಎದುರಾದರು. ಆಗತಾನೇ ತೋಟದಿಂದ ಬರುತ್ತಿದ್ದರು. ತಲೆಯಮೇಲೆ ಸೋಗೆಯ ಹೊರೆ ಇತ್ತು. ನಮ್ಮ ತಂದೆಯವರ ಕಾರಣದಿಂದಾಗಿ ನಾನೂ ಅವರಿಗೆ ಪರಿಚಿತ. ಮನೆಗೆ ಕರೆದುಕೊಂಡು ಹೋದರು. ಕುಶಲೋಪರಿ ಆಯಿತು. ಅವರ ಮನೆಯ ಅಟ್ಟದ ದಬ್ಬೆಗೆ ನೇತುಹಾಕಿದ್ದ ಕಾಗದಗಳ ಸರ ಕಂಡದ್ದು ಆಗಲೇ. ಮದುವೆಯ ಊಟಕ್ಕೆ ಕೂರಲು ಇನ್ನೊಂದು ಮನೆಗೆ ಹೋದೆವು. ಅಲ್ಲೂ ಅಂಥದೊಂದು ಸರವಿತ್ತು. ಆ ಸಂಜೆ ಆ

ರೈತಬಂಧುವಿನ ತೋಟದಲ್ಲಿ ಎಳನೀರು ಕುಡಿಯುತ್ತಿದ್ದೆವು. ಆಗಲೇ ಪತ್ರಸಂಗ್ರಹದ ನನ್ನ ಉದ್ದೇಶವನ್ನು ವಿವರಿಸಿದೆ. ಗೋಪ್ಯವನ್ನು ಕಾಪಾಡುವ ಭರವಸೆ ಕೊಟ್ಟೆ. ಸಂಕೇತಿ ಪತ್ರಸಾಹಿತ್ಯದ ಕಲ್ಪನೆ ಮೂಡಿಸಿದೆ. ಅವರು, ತಂತಿಯೊಂದಕ್ಕೆ ಪೋಣಿಸಿ ಇಟ್ಟಿದ್ದ ಅಷ್ಟೂ ಕಾಗದಗಳನ್ನು ಕೊಟ್ಟರು, ಇತರ ಇನ್ನೂ ನಾಲ್ಕು ಮನೆಗಳಲ್ಲಿ ಕೊಡಿಸಿದರು. ಒಟ್ಟು ೪೦೦ ಪತ್ರಗಳ ಬೋಣಿಗೆ ಆಗಿತ್ತು.

ಇದರಿಂದ ಉತ್ತೇಜಿತನಾಗಿ ೨೦-೨೫ ಮೈಲು ದೂರದ ಇನ್ನೊಂದು ಹಳ್ಳಿಗೆ ಹೋದೆ. ಪರಿಚಿತರು ಇದ್ದಾರೆನ್ನುವುದೇ ಆ ಹಳ್ಳಿಯ ಆಯ್ಕೆಗೆ ಇದ್ದ ಅಳತೆಗೋಲು. ಬಸ್ಸಿನಿಂದ ಇಳಿದು ಮೂರು ಮೈಲು ನಡೆಯಬೇಕಾಗಿತ್ತು. ಊರು ತಲುಪಲು ಇನ್ನೂ ಮೂರು ಫರ್ಲಾಂಗ್ ಇತ್ತು. "ಯಾರ ಮನೆಗೆ ಹೋಗಲಿ? ಯಾರನ್ನು 'ಪತ್ರ ಕೊಡಿ' ಎಂದು ಕೇಳಲಿ? ಹೇಗೆ ಕೇಳಲಿ? ಅವರು ಹೀಯಾಳಿಸಿ ತಿರಸ್ಕರಿಸಿದರೆ ಅಪಮಾನವಲ್ಲವೆ?" ಎಂಬಂಥ ಪ್ರಶ್ನೆಗಳ ಮೇಲೆಯೇ ಹೆಜ್ಜೆ ಹಾಕುತ್ತಿದ್ದೆ. ನನ್ನದೇ ಪ್ರಪಂಚದಲ್ಲಿ ಮುಳುಗಿ ಹೋಗಿದ್ದೆ. 'ಕ್ಷೇಮ್ಮ್ಮೊ್ಮ್ಯ'? ಎಂಬ ಆತ್ಮೀಯವಾದ ಸ್ವಾಗತ ಗುಡುಗಿತು. ಅಂಥ ಅಕ್ಕರೆ, ಅಂಥ ಗಡಸು ದನಿ. ಅವರಿಗೆ ನನ್ನ ಪರಿಚಯವಿತ್ತು. ಅದು ಉಳುಮೆಯ ಕಾಲ. ಅವರು ಉಳುತ್ತಿದ್ದರು. ಹಲಸಿನ ಮರದ ಅಡಿ ಕೂತೆ. ಒಂದೆರಡು ನಿಮಿಷದಲ್ಲಿ ನೇಗಿಲು ಕೈಬಿಟ್ಟು ಅವರೂ ಬಂದು ಕೂತರು, ನಶ್ಯದ ಡಬ್ಬಿ ತೆಗೆದರು. ಅವರೊಬ್ಬ ಮಾಜಿ ಯೋಧ. ಹೊಲ ಉತ್ತೇ ಜೀವಿಸಬೇಕಾಗಿರಲಿಲ್ಲ. 'ಮಣ್ಣಿನ ಜತೆ ಒಡನಾಟ, ಗಿಡದ ಜತೆ ಉಸಿರಾಟ' ಎಂದು ನಿರ್ಣಯಿಸಿ ನಶ್ಯ ಸೇದಿ ಕೈ ಒದರಿದರು. ಅದೇ ಸಮಯಕ್ಕೆ ಇನ್ನೊಬ್ಬ ರೈತ ಬಂದ. ಹೋರಿಗೆ 'ಜೊತೆಹಾಕುವ' ಮಾತು ಗಹನವಾಗಿ ಸಾಗಿತ್ತು. ಆ ನಡುವೆ ನಾನೂ ಒಂದು ಬಣಸಾಲು ಉತ್ತೆ. ಅವರ ಮನೆಯಲ್ಲೇ ತಿಂಡಿ, ಊಟ, ಕಾಫಿ. ಅವರ ಯುದ್ಧಾನುಭವವನ್ನು ಕೇಳುವುದರಲ್ಲೇ ಆ ದಿನ ಪೂರ್ತಿ ಕಳೆಯಿತು. ಆ ಶಿಸ್ತುಗಾರನ ಬಳಿ ಪತ್ರ ಕೇಳುವ ಧೈರ್ಯ ಬರಲಿಲ್ಲ. 'ಹೊತ್ತಾಯಿತು, ಬರುತ್ತೇನೆ' ಎಂದು ಮೇಲೆದ್ದೆ. 'ಅದೇನು, ಬಂದಿದ್ದಿರಿ?' ಎಂದರು. ವಿವರಿಸಿದೆ. ಅವರು ಕೂತಿದ್ದುದು ಮಿಲಿಟರಿ ಪೆಟ್ಟಿಗೆಯೊಂದರ ಮೇಲೆ. ತಕ್ಷಣ ಅದರ ಬಾಗಿಲು ತೆಗೆದರು. ಅಚ್ಚುಕಟ್ಟಾಗಿ ಜೋಡಿಸಿ ಕಟ್ಟಿ ಇಟ್ಟಿದ್ದ ಪತ್ರಗಳ ಕಂತೆಯನ್ನೇ ಕೊಟ್ಟರು. ಅದರಲ್ಲಿ ೩೫೦ ಪತ್ರಗಳಿದ್ದವು. 'ಆಚೋಯ!' (ಸರಿಯೆ? ಸಮಾಧಾನವೇ? ನಿಮಗೆ ಉಪಯೋಗಕ್ಕೆ ಬರುತ್ತದೆಯೇ?) ಎಂದು ಜೋರಾಗಿ ನಕ್ಕು ಬೀಳ್ಕೊಟ್ಟರು.

ಆಮೇಲೆ ಹತ್ತಾರು ಹಳ್ಳಿ ಸುತ್ತಿದೆ. ಅದೇ ಅಂಜಿಕೆ, ಹಿಂಜರಿಕೆ, ಅನುಮಾನ, ಭೀತಿ ಇದ್ದೇ ಇತ್ತು. ಹೊಲ, ಗದ್ದೆ, ತೋಟ, ಮದುವೆಮನೆ, ಗಾಡಿಪ್ರಯಾಣ, ಶ್ಮಶಾನ- ಇಂಥ ಹಲವು ಎಡೆಗಳಲ್ಲಿ ಪೀಠಿಕೆ ಹಾಕಿ ಬೆಳೆ ತೆಗೆಯಬೇಕಾಗುತ್ತಿತ್ತು. 'ಒಂದು' ಪತ್ರ ಕೊಟ್ಟವರೂ ಉಂಟು. 'ಹತ್ತು' ಪತ್ರ ಕೊಟ್ಟವರೂ ಉಂಟು. ೧೯೯೧ರ ಹೊತ್ತಿಗೆ ಒಟ್ಟು ೩೦೦೦ ಪತ್ರಗಳು ಸಂಗ್ರಹವಾಗಿದ್ದವು.

ನಾನು ಆಗಲೂ ಶಿವಮೊಗ್ಗೆಯಲ್ಲಿ ಸೇವೆಸಲ್ಲಿಸುತ್ತಿದ್ದೆ. ಮೈಸೂರಿನ ಮನೆಯನ್ನು ಸಹೋದ್ಯೋಗಿ ಮಿತ್ರರೊಬ್ಬರಿಗೆ ವಹಿಸಿದ್ದೆ. 'ದೀಪಹಚ್ಚಿಕೊಂಡಿರಿ' ಎಂದು ವಿನಂತಿಸಿದ್ದೆ. ಅವರಿಗೂ ಅದು ಸಹಾಯವಾಗಿತ್ತು. ಆದರೆ ನನ್ನ ಗ್ರಂಥಭಂಡಾರವಿದ್ದ ಕೋಣೆಯನ್ನು ನನ್ನ ವಶದಲ್ಲೇ ಉಳಿಸಿಕೊಂಡಿದ್ದೆ. ಅವರೂ ಅದನ್ನು ಬಳಸಿಕೊಳ್ಳಲು ಅವಕಾಶ ಕೊಟ್ಟಿದ್ದೆ. ಈ ೩೦೦೦ ಪತ್ರಗಳನ್ನು ಒಂದು ಕಾರ್ಡ್‌ಬೋರ್ಡ್ ಪೆಟ್ಟಿಗೆಯಲ್ಲಿ ತುಂಬಿದೆ. ಅದನ್ನು ಮೈಸೂರಿನ ನನ್ನ ಮನೆಯ ಆ ಗ್ರಂಥಭಂಡಾರದಲ್ಲಿರಿಸಿದೆ. ಹಿಂದೆ ಬಸವಪಟ್ಟಣದಲ್ಲಿ ಹಾಡಿನ ಸಂಗ್ರಹದ ಪುಸ್ತಕಗಳನ್ನು ಗೆದ್ದಲು ತಿಂದಿತ್ತು. ಹಾಗಾಗದಿರಲೆಂದು ಆ ಪೆಟ್ಟಿಗೆಯನ್ನು ಆರು ಅಡಿ ರ್‍ಯಾಕಿನ ತುದಿಯಲ್ಲಿರಿಸಿದೆ. ಕೀಟನಾಶಕಗಳನ್ನೂ ಸಿಂಪಡಿಸಿದೆ.

ಮೂರು ತಿಂಗಳು ಬಿಟ್ಟು ಒಮ್ಮೆ ಮೈಸೂರಿಗೆ ಹೋದೆ. ನನ್ನ ಗ್ರಂಥಭಂಡಾರವನ್ನು ಗೆದ್ದಲು ಆಕ್ರಮಿಸಿಲ್ಲವೆ ಎಂದು ಪರಿಶೀಲಿಸಿದೆ. ಎಲ್ಲವೂ ಚೆನ್ನಾಗಿತ್ತು. ಹೊರಟೆ. ಅಷ್ಟರಲ್ಲಿ ಕಾರ್ಡ್‌ಬೋರ್ಡ್ ಪೆಟ್ಟಿಗೆಯ ಮೇಲೆ ಏನೋ ರಿಂಗಿನ ಮಾದರಿ ಕಾಣಿಸಿತು. ಅದನ್ನು ತೆಗೆದರೆ ಪೆಟ್ಟಿಗೆಯೊಳಗಿನಿಂದ ಇಡೀ ಪ್ಲಾಸ್ಟಿಕ್ ಕೊಡವೇ ಹೊರಗೆ ಬಂತು. 'ನಾನು ಯಾವಾಗ ಇದನ್ನು ಇಟ್ಟೆ?' ಎಂದು ಗೊಣಗಿಕೊಂಡೆ. ಗೆಳೆಯನ ಪತ್ನಿ ಓಡಿಬಂದರು, 'ಅದು ನಮ್ಮದೇ ಕೊಡ, ನಮ್ಮ ಮಿನ್ನಿ ಬಾಗಿಲಿಗೆ ನೀರು ಹಾಕಿದ ಮೇಲೆ ಕೊಡಾನ ಅಲ್ಲಿ ಜೋಪಾನವಾಗಿ ಇಡುತಾಳೆ, ಅಷ್ಟೆ' ಎಂದರು. ಸುಮಾರು ಒಂದು ಸಾವಿರ ಪತ್ರ ತೇವಗೊಂಡು ಹಾಳಾಗಿತ್ತು. ಕೋಪ, ದುಃಖ, ಹತಾಶೆ ಎಲ್ಲ ಒಟ್ಟಿಗೆ ಉಂಟಾಯಿತು. ಗೆಳೆಯನ ಮಡದಿ ತಿರಸ್ಕಾರವಾಗಿ ನಕ್ಕರು. ಕಾಫಿ ಕೊಟ್ಟು ಕೂರಿಸಿದರು. ತಮ್ಮ ಮನೆಯಲ್ಲಿ ಅಲ್ಲಿಇಲ್ಲಿ ಬಿದ್ದಿದ್ದ 'ಕಾಗದ'ಗಳನ್ನೆಲ್ಲ ಗುಡ್ಡೆಹಾಕಿಕೊಂಡು ನನ್ನ ಎದುರಿಗೆ ಕೂತರು. ಅವನ್ನು ನೋಡಿದಂತೆ ಮಾಡಿ ಒಂದೊಂದಾಗಿ ಮುದುಡಿ 'ಹಾಳು ಕಸ' ಎಂದು ಮೂಲೆಗೆ ಹಾಕಿದರು. ಕಸದ ಮೊರದಲ್ಲಿ ತುಂಬಿಕೊಂಡು ಕನ್ಸರ್ವೆನ್ಸಿಗೆ ಎಸೆದು ಬಂದರು. ನಾನು ಹಿಂದಿನಿಂದ ಅವನ್ನೆಲ್ಲ ನನ್ನ ಬ್ಯಾಗಿಗೆ ತುಂಬಿಕೊಂಡು ಬಂದೆ. ಅವುಗಳಲ್ಲಿ ಚೆನ್ನಾದ ಅರುವತ್ತೈದು ಪತ್ರಗಳಿದ್ದವು.

ಸಾವಿರ ಪತ್ರಗಳು ಹಾಳಾಗಿದ್ದವು. ಮತ್ತೆ 'ಆ' ಒಂದು ಸಾವಿರ ಪತ್ರಗಳನ್ನು ಸಂಗ್ರಹಿಸಬೇಕೆಂಬ ಗುರಿ ಹಾಕಿಕೊಂಡೆ. ಕ್ಷೇತ್ರಕಾರ್ಯ ಮುಂದುವರಿಸಿದೆ. ೨೦೦೩ರ ಹೊತ್ತಿಗೆ ೪೫೦೦ ಪತ್ರಗಳಾದುವು.

ಪತ್ರಸಾಹಿತ್ಯ

ಪತ್ರಸಾಹಿತ್ಯ ಎಂಬುದು ಪಾಶ್ಚಾತ್ಯರಲ್ಲಿರುವ ಒಂದು ಸಾಹಿತ್ಯ ಪ್ರಕಾರ. ಅಂಥದೊಂದು ಮಾದರಿ ಭಾರತದಲ್ಲಿ ಬೆಳೆದಿಲ್ಲ, ಕನ್ನಡದಲ್ಲಿಯೂ ಬೆಳೆದಿಲ್ಲ. ಇತರ ಸಾಹಿತ್ಯಪ್ರಕಾರಗಳನ್ನು ಅನುಕರಿಸಿದ ಭಾರತೀಯರು ಈ ಪ್ರಕಾರವನ್ನು ಏಕೆ ಬೆಳೆಸಲಿಲ್ಲ ಎಂಬುದು ಆಶ್ಚರ್ಯಕರವಾಗಿದೆ. ಕನ್ನಡದಲ್ಲಿ ಈ ಪ್ರಕಾರಕ್ಕೆ ಸೇರುವ ಅನೇಕ ಕೃತಿಗಳೇನೋ ಬಂದಿವೆ.

ಪತ್ರಸಾಹಿತ್ಯದಲ್ಲಿ 'ಕಾಲ್ಪನಿಕ ಪತ್ರಗಳು' ಎಂಬುದೇ ಒಂದು ವಿಭಾಗ. ಆ ವಿಭಾಗಕ್ಕೆ ಸೇರುವ ಪತ್ರಗಳಲ್ಲಿ ಗೋಕಾಕರ 'ಜೀವನಪಾಠಗಳು' ಗ್ರಂಥದ 'ವನಮಾಲಿಯ ಒಲವಿನೋಲೆಗಳು' ಎಂಬುದೂ ಒಂದು. ಆ ಪತ್ರಗಳು ಉಪದೇಶಾತ್ಮಕವಾಗಿವೆ, ಜೊತೆಗೆ ಅವುಗಳಲ್ಲಿ ಕಾವ್ಯಮೌಲ್ಯ ಇದೆ. ಹಾಗೆಯೇ, ಪಂಡಿತ ಸಿ.ಕೃಷ್ಣ ಅವರ 'ಮುಗುದೆಯರ ಪತ್ರಗಳು' ಎಂಬ ಸಂಕಲನದಲ್ಲಿ ಹಾಸ್ಯವಿದೆ, ಸಂತೋಷವಿದೆ, ಮೊದಲಪ್ರೇಮದ ಸವಿಗನಸುಗಳಿವೆ. ಇಲ್ಲಿರುವುವು 'ಪ್ರಣಯದಲ್ಲಿ ಓಲಾಡುವ ಬೆಳುದಿಂಗಳ ಪಾತ್ರಗಳು.'

'ಕಾರುಣ್ಯ ಕಿರಣ' ಜ.ಚ.ನಿ. ಅವರ ಗ್ರಂಥ. ಇಲ್ಲಿಯೂ ಉಪದೇಶಾತ್ಮಕ ಪತ್ರಗಳೇ ಇವೆ. ಅವು ವಚನಶೈಲಿಯಲ್ಲಿವೆ. ಈ ಬಗೆಗೆ, "ಭಾವಸಂಸ್ಕಾರವನ್ನೂ ಹೃದಯಸಂಸ್ಕಾರವನ್ನೂ ಪಡೆದು ಹೃದಯಸ್ಪರ್ಶಿಯಾದರೆ ಬುದ್ಧಿನಿಷ್ಠವಾದ ಉಪದೇಶ ಸಾಹಿತ್ಯವಾಗುತ್ತದೆ. ಈ ಸಾಹಿತ್ಯಗುಣದ ರಜತರೇಖೆಗಳಿಂದ ರಂಜಿತವಾಗಿರುವುದರಿಂದ ಇಲ್ಲಿ ಓಲೆಗಳು ಯಾರಿಗಾಗಿ ಉದ್ದಿಷ್ಟವೋ ಅವರಿಗೆ ಮಾತ್ರವಲ್ಲದೆ ಇತರರಿಗೂ ಉಪಾದೇಯವಾಗಿವೆ" ಎಂಬ ಎಂ.ವಿ.ಸೀ. ಅವರ ಮಾತು ('ಚಿನ್ನದ ಬೆಳಸು', ಪು. ೧೧೨) ಪತ್ರಸಾಹಿತ್ಯದ ಬಗೆಗಿನ ಒಳ್ಳೆಯ ವ್ಯಾಖ್ಯಾನವಾಗಿದೆ.

ಪತ್ರಕಥೆ, ಪತ್ರಕಾದಂಬರಿಯ ನಿದರ್ಶನಗಳೂ ನಮ್ಮಲ್ಲಿವೆ. ಪತ್ರತಂತ್ರದ ಮೂಲಕವೇ ಹಾಸ್ಯಕಥೆಯೊಂದನ್ನು ಬರೆದಿರುವ ಡಾ। ಎ.ಜಿ.ಸುಬ್ಬರಾವ್ ('ಅಮರಾಯಿ ಹರಾಜು' : ದಾರಿಯಾವುದಯ್ಯಾ) ಆ ಕಲೆಯು ಪಡೆಯಬಹುದಾದ ಹೊಸ ಆಯಾಮವೊಂದನ್ನು ತೋರಿಸಿಕೊಟ್ಟಿದ್ದಾರೆ. ಹುಣಸೆ ಫಸಲನ್ನು ಹರಾಜು ಮಾಡಲು ಸರ್ಕಾರದ ವಿವಿಧಸ್ತರದ ಕಚೇರಿಗಳ ನಡುವೆ ನಡೆಯುವ ಪತ್ರವ್ಯವಹಾರವು ಅದರ ಹಂದರ. ಆ ಬಗೆಗೆ ಮೇಲಿನವರ ಸಮ್ಮತಿ ದೊರೆಯುವ ವೇಳೆಗೆ ಹುಣಸೆ ಫಸಲು ನಾಶವಾಗಿರುತ್ತದೆ. ನಮ್ಮ ವ್ಯವಸ್ಥೆಯ ನಿಧಾನಗತಿಯನ್ನು ತೀಕ್ಷ್ಣವಾದ ವ್ಯಂಗ್ಯದ ಮೂಲಕ ಇದು ಪ್ರತೀಕಿಸಿದೆ. ಬೀಚಿ ಅವರ 'ಬೆಳ್ಳಿ ಪತ್ರಗಳು' ಎಂಬ ಕಾದಂಬರಿ ೨೫ ಪತ್ರಗಳ ಮೂಲಕವೇ ಬೆಳೆದಿದೆ. ಭಾವನಾವಲಯವನ್ನು ಪುಷ್ಟಿಗೊಳಿಸುವಲ್ಲಿ ಈ ತಂತ್ರ ಹೇಗೆ ಸಿದ್ಧಿ ಪಡೆದಿದೆ ಎಂಬುದನ್ನು ಅದರಲ್ಲಿ ಕಾಣಬಹುದು.

ಪತ್ರಸಾಹಿತ್ಯದ ಇನ್ನೊಂದು ವಿಭಾಗ ವಾಸ್ತವಪತ್ರಗಳದು. ಪಾಶ್ಚಾತ್ಯರು ನಿತ್ಯಜೀವನದ ಪತ್ರಗಳನ್ನೂ ಕಲಾತ್ಮಕವಾಗಿ ಬರೆಯುವುದನ್ನು ರೂಢಿಸಿಕೊಂಡಿರುವುದು ಕಾಣುತ್ತದೆ. ಅಂಥ ಪತ್ರಗಳ ಸಂಕಲನಗಳು ಕನ್ನಡದಲ್ಲಿಯೂ ಬಂದಿವೆ. ಜವಹರಲಾಲ್ ನೆಹರೂ ಅವರ ಪುಸ್ತಕವನ್ನು 'ಮಗಳಿಗೆ ತಂದೆಯ ಓಲೆಗಳು' ಎಂಬ ಹೆಸರಿನಲ್ಲಿ ಕಪಟ್ರಾಳ ಕೃಷ್ಣರಾಯರು ಕನ್ನಡಕ್ಕೆ ತಂದಿದ್ದಾರೆ. 'ತಾಯಿಗೆ ಬರೆದ ಪತ್ರಗಳು' ಇ.ಎ. ಭಾಸ್ಕರರಾಯರ ಕೃತಿ. ಅವರು ಉನ್ನತ ವ್ಯಾಸಂಗಕ್ಕಾಗಿ ಜರ್ಮನಿಗೆ ಹೋದಾಗ ಬರೆದ ಪತ್ರಗಳು ಅದರಲ್ಲಿವೆ. ಗೋಕಾಕರ 'ಸಮುದ್ರದಾಚೆಯಿಂದ', ಆರ್.ಕೆ.ಕಾರಂತರ 'ಪ್ರವಾಸಿಯ ಪತ್ರಗಳು' ಪ್ರವಾಸ ಸಾಹಿತ್ಯದ ಗುಂಪಿಗೆ ಸೇರುತ್ತವೆ; ಆದರೆ ಪತ್ರರೂಪದಲ್ಲಿವೆ. ಸಾಹಿತಿಗಳೇ ಬರೆದ ಪತ್ರಗಳಲ್ಲಿ ಸಾಹಿತ್ಯಗುಣ ಇರುವುದು ಸಹಜ. ಮಾಸ್ತಿಯವರು ಸಂಪಾದಿಸಿದ 'ಸಾಹಿತ್ಯ ಲಾಲನೆ', ಕು.ಶಿ. ಹರಿದಾಸಭಟ್ಟರು ಸಂಗ್ರಹಿಸಿದ 'ಗೋವಿಂದ ಪೈ ಬರೆದ ಪತ್ರಗಳು', ಹರಿಹರಪ್ರಿಯ ಅವರು ಸಂಪಾದಿಸಿದ 'ಕುವೆಂಪು ಪತ್ರಗಳು' ಅದೇರೀತಿಯವು. ಇವುಗಳ ಬಗೆಗೆ ಬರೆದ ಮಾತುಗಳಲ್ಲಿ- ಕವಿಯ ವ್ಯಕ್ತಿಚಿತ್ರವನ್ನು ಕಟ್ಟುವ, ಕವಿಯ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಮಾಹಿತಿ ದೊರೆಯುವ- ಪ್ರಯೋಜನಗಳ ಬಗೆಗೆ ಹೇಳಲಾಗಿದೆ. ಎ.ಎನ್.ಮೂರ್ತಿರಾಯರ 'ಚಿತ್ರಗಳು-ಪತ್ರಗಳು' ಇದೇ ಗುಂಪಿಗೆ ಸೇರುವಂಥದು.

ವಾಸ್ತವಪತ್ರಗಳಲ್ಲಿಯೇ ವಿಶಿಷ್ಟವಾದವು ಕೌಟುಂಬಿಕ ಪತ್ರಗಳು. ಮಡಿಕೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ ಭಾಷಣದಲ್ಲಿ ಡಿ.ವಿ.ಜಿ. ೧೯೩೨ರಷ್ಟು ಹಿಂದೆಯೇ ಈ ಬಗೆಗೆ ಹೇಳಿದ್ದರು. "ಬಂಧುಮಿತ್ರರೊಡನೆ ಬಳಯಿಸುವ ಪತ್ರಪ್ರಸಂಗವೂ (Letter writing) ಒಂದು ಬಗೆಯ ಸಾಹಿತ್ಯವೇ. ಈ ಜಾತಿಯ ಬರವಣಿಗೆಯೂ ಇಂಗ್ಲಿಷ್‌ನಲ್ಲಿ ಹೆಚ್ಚಾಗಿದೆ. ಲ್ಯಾಂಬ್, ಮಕಾಲೆ,

ಮ್ಯಾತ್ಯೂ ಆರ್ನಾಲ್ಡ್, ಹಕ್ಸ್ಲಿ ಇತ್ಯಾದಿಗಳು ಬರೆದ ಕಾಗದಗಳು ವಿವಿಧ ವಸ್ತುವರ್ಣನೆ, ಪರಿಹಾಸ ವಚನ, ಅಂತರಂಗ ವಿವರಣೆ ಇವುಗಳಿಗೆ ಆದರ್ಶಪ್ರಾಯಗಳಾಗಿ, ಓದುವವರಿಗೆ ವಿನೋದವನ್ನುಂಟುಮಾಡತಕ್ಕವಾಗಿವೆ." ಈ ಮಾತುಗಳು ಕೌಟುಂಬಿಕ ಪತ್ರಗಳ ವಸ್ತುವೈವಿಧ್ಯ, ರಸವೈವಿಧ್ಯ ಮತ್ತು ಅಂತರಂಗ ದರ್ಶನದ ಗುಣಗಳ ಕಡೆಗೆ ನಮ್ಮ ಗಮನ ಸೆಳೆಯುತ್ತವೆ.

ಕೌಟುಂಬಿಕ ಪತ್ರಗಳಲ್ಲಿ ನೂರಾರು ರೀತಿಯ ಪಾತ್ರಗಳಿರುತ್ತವೆ, ನೂರಾರು ರೀತಿಯ ಸನ್ನಿವೇಶಗಳಿರುತ್ತವೆ; ಅವಕ್ಕೆ ತಕ್ಕಂತೆ ನಿರೂಪಣೆ ಇರುತ್ತದೆ. ಅಲ್ಲಿರುವ ಸಂಬಂಧಗಳು ಹತ್ತಾರು ರೀತಿಯವು, ಅವುಗಳ ಭಾವಾಭಿವ್ಯಕ್ತಿ ಮುಕ್ತವಾಗಿರುತ್ತದೆ; ಜೀವನದ ಸವಾಲನ್ನು ಎದುರಿಸುವ ಅವರವರದೇ ವಿಶಿಷ್ಟ ವಿಧಾನಗಳಿರುತ್ತವೆ. ಅಲ್ಲಿ, ತಮ್ಮ ದನಿಯನ್ನು ಇನ್ನೊಬ್ಬರು ಕೇಳಿಸಿಕೊಂಡಾರೆಂಬ ಅಂಜಿಕೆ ಇರುವುದಿಲ್ಲ; ತನ್ನ ಎದುರಿಗಿರುವ ವ್ಯಕ್ತಿ ಚೆನ್ನಾಗಿ ಕೇಳಿಸಿಕೊಳ್ಳಬೇಕೆಂಬ ಬಿಚ್ಚುನುಡಿ ಇರುತ್ತದೆ. ಅದರಿಂದಲೇ ಭಾಷೆಯು ಪರಿಣಾಮಕಾರಿಯಾಗಿ ಮೂಡುತ್ತದೆ. ಹೊರಪ್ರಪಂಚದಲ್ಲಿರುವ ಎಲ್ಲವೂ ಅಲ್ಲಿರುತ್ತವೆ- ಸಾಮಾಜಿಕ, ಕೌಟುಂಬಿಕ, ವೈಯಕ್ತಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ- ಎಂಬಂತೆ ಅಧ್ಯಯನಕ್ಕೆ ಆಕರಗಳೂ ಆಗುತ್ತವೆ; ಕಾಲಸಂದು ಸಾರ್ವತ್ರಿಕಗೊಂಡಂತೆ ಸಾಹಿತ್ಯವೇ ಆಗಿಬಿಡುತ್ತವೆ. ಅತ್ಯಂತ ಸಹಜವಾದ, ಅಪ್ರಜ್ಞಾಪೂರ್ವಕವಾಗಿ ಬರೆದ ಪತ್ರಗಳು ಅವು. ಭಾವವು ಮಾಗಿದ ಸ್ಥಿತಿಯಲ್ಲಿ ಬರೆದ ಪತ್ರಗಳು ಅನೇಕವೇಳೆ ಇತರ ಸಾಹಿತ್ಯಕೃತಿಗಳಿಗಿಂತ ಹೆಚ್ಚು ಕಾವ್ಯಾತ್ಮಕವಾಗಿರುವುದುಂಟು. ಓದುಗರ ಕಲ್ಪನೆಗೆ, ಸ್ಪಂದನಕ್ಕೆ, ಭಾವನಾವಿಶೇಷಕ್ಕೆ, ಜೀವನರಹಸ್ಯದ ಪರಿಭಾವನೆಗೆ ಅಲ್ಲಿ ಅವಕಾಶವಿದೆ.

ನಿರ್ವಹಣೆ

ನಾನು ಸಂಗ್ರಹಿಸಿದ ೪೫೦೦ ಪತ್ರಗಳಲ್ಲಿ ಮಹತ್ತ್ವದವೆಂದು ಕಂಡುಬಂದ ೫೫೫ ಪತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಜೀವನಕ್ಕೆ ಸಂಬಂಧಿಸಿದಂತೆ ಏನಾದರೂ ಮಾಹಿತಿಯೋ, ಹೊಳಹೋ, ದಿಗ್ದರ್ಶನವೋ ದೊರೆಯುವುದೇ ಈ ಪತ್ರಗಳ ಆಯ್ಕೆಗೆ ಇರುವ ಮಾನದಂಡವಾಗಿದೆ. ಹೀಗೆ ಆಯ್ಕೆಯಾದ ಪತ್ರಗಳೆಲ್ಲವೂ ಒಂದೇ ಮಟ್ಟದವಲ್ಲ. ಆದರೆ ಜೀವನದ ವಿವಿಧ ಆಯಾಮಗಳನ್ನು ಪ್ರತಿನಿಧಿಸುವುದರಿಂದ ಅವನ್ನು ಪ್ರಕಟಿಸಲಾಗಿದೆ.

ಈ ಪತ್ರಗಳಲ್ಲಿ ಕೆಲವು, ಹಲವು ದಶಕಗಳಷ್ಟು ದೀರ್ಘಕಾಲದವು. ಅನೇಕ ಪತ್ರಗಳು ಶಿಥಿಲವಾಗಿವೆ, ಅಕ್ಷರಗಳು ಮಾಸಿವೆ; ಮೋಡಿ ಅಕ್ಷರಗಳಲ್ಲಿ ಬರೆದವೂ ಇವೆ. ಹಾಗಾಗಿ ಈ ಪತ್ರರಾಶಿಯನ್ನು ಅಧ್ಯಯನ ಮಾಡುವುದೇ ಒಂದು ಸವಾಲಾಯಿತು. ಆದರೂ, ನಿಖರವಾಗಿ ಓದುವುದಕ್ಕೆ ಒತ್ತು ಕೊಡಲಾಗಿದೆ.

ಪತ್ರಗಳ ಶಿರೋಭಾಗ ಮತ್ತು ಮುಕ್ತಾಯಭಾಗಗಳಲ್ಲಿನ ಕನ್ನಡ, ಇಂಗ್ಲಿಷ್, ದೇವನಾಗರೀಲಿಪಿಗಳ ಪದಗಳನ್ನು ಆಯಾ ಲಿಪಿಯಲ್ಲೇ ಕೊಟ್ಟಿದೆ. ಪತ್ರದ ಒಡಲಿನಲ್ಲಿ ಮಾತ್ರ ನಾಗರೀಲಿಪಿಯ ಭಾಗಗಳನ್ನು ಕನ್ನಡಕ್ಕೆ ಲಿಪ್ಯಂತರಗೊಳಿಸಿದೆ. ಕನ್ನಡ ಮತ್ತು ಇಂಗ್ಲಿಷ್‌ಅಂಕಿಗಳನ್ನು ಯಥಾವತ್ತಾಗಿ ಉಳಿಸಿಕೊಂಡಿದೆ; ನಾಗರಿಅಂಕಿಗಳನ್ನು ಮಾತ್ರ ಕನ್ನಡಅಂಕಿಗೆ ಪರಿವರ್ತಿಸಿದೆ. ಓದುಗರ ಅನುಕೂಲವನ್ನು ಅನುಲಕ್ಷಿಸಿ ಹೀಗೆ ಮಾಡಿದೆ.

ಕುಶಲೋಪರಿಯ ಪ್ರಾರಂಭಿಕ ವಾಕ್ಯಗಳು ಹಾಗೂ ಸಭ್ಯತಾಪೂರ್ವಕ ಮುಕ್ತಾಯದ ಕೊನೆಯ ವಾಕ್ಯಗಳಲ್ಲಿ ವಿಶೇಷವೂ ವೈವಿಧ್ಯವೂ ಇದ್ದಾಗ ಮಾತ್ರ ಅವನ್ನು ಉಳಿಸಿಕೊಂಡಿದೆ.

ಮೊದಲಭಾಗದ ೪೩೫ ಪತ್ರಗಳು ೧೮ ಗುಚ್ಛಗಳಲ್ಲೂ ಎರಡನೆಯ ಭಾಗದ ೧೨೦ ಪತ್ರಗಳು ೩ ವಿಭಾಗಗಳಲ್ಲೂ ವಿಂಗಡಣೆಗೊಂಡಿವೆ. ಮೊದಲಭಾಗದಲ್ಲಿ ಜೀವನಚಕ್ರದ ಚಿತ್ರವೊಂದು ದೊರೆಯುವಂತೆ ಈ ವಿಂಗಡಣೆ ಮಾಡಿದೆ. ಎರಡನೆಯಭಾಗದಲ್ಲಿ ಪತ್ರಗಳ ಆಂತರಿಕಸ್ವರೂಪವನ್ನು ಅನುಲಕ್ಷಿಸಿ ವಿಂಗಡಿಸಲಾಗಿದೆ. ಪ್ರತಿವಿಭಾಗದಲ್ಲೂ ಪತ್ರಗಳು ಕಾಲಾನುಕ್ರಮದಲ್ಲಿವೆ.

ಪತ್ರಗಳಿಗೆ ಸಂಬಂಧಿಸಿದಂತೆ ಸಂಕೇತಿ ಸಮುದಾಯದ ಈವರೆಗಿನ ಅಧ್ಯಯನದ ಹಿನ್ನೆಲೆಯಲ್ಲಿ ಕೆಲವು ಟಿಪ್ಪಣಿಗಳನ್ನು ಕೊಡಲಾಗಿದೆ.

ಸಾಹಿತ್ಯವಾಗಿ ಪತ್ರಗಳು

ಸಂಕೇತಿ ಸಮುದಾಯದ ಪತ್ರವ್ಯವಹಾರವೆಲ್ಲ ಬಹುಮಟ್ಟಿಗೆ ಕನ್ನಡದಲ್ಲಿಯೇ ನಡೆದಿದೆ. ಸಂಸ್ಕೃತ ಮತ್ತು ವೇದವನ್ನು ವಿಧ್ಯುಕ್ತವಾಗಿ ಪಾಠಶಾಲೆಗಳಲ್ಲಿ ಕಲಿಯತೊಡಗಿದಮೇಲೆ ಕೆಲವರು ಸಂಸ್ಕೃತದಲ್ಲಿಯೇ ಪತ್ರವ್ಯವಹಾರ ನಡೆಸಿದ್ದಾರೆ. ಸಂಗ್ರಹವಾದ ಒಟ್ಟು ೪೫೦೦ ಪತ್ರಗಳಲ್ಲಿ ಸಂಸ್ಕೃತಭಾಷೆಯಲ್ಲಿ ಬರೆದ ಕೇವಲ ೨೫ ಪತ್ರಗಳು ಸೇರಿವೆ. ಸಾಂಪ್ರದಾಯಿಕ ವಿದ್ಯೆಯನ್ನು ಪಾಠಶಾಲೆಗಳಲ್ಲಿ ಪಡೆಯುವ ನೂತನಕ್ರಮವು ಪ್ರಾರಂಭವಾಗುತ್ತಿದ್ದಂತೆಯೇ ಆಧುನಿಕಶಿಕ್ಷಣಕ್ಕೆ ಈ ಸಮುದಾಯ ಒಲಿಯಿತು. ಹಾಗಾಗಿ ಸಂಸ್ಕೃತವು ಇಂಗ್ಲಿಷ್‌ಗೆ

ಬೇಗ ದಾರಿ ಮಾಡಿಕೊಟ್ಟಿತು. ಸಂಸ್ಕೃತದಲ್ಲಿ ಪತ್ರವ್ಯವಹಾರ ನಡೆದದ್ದು ಕಡಮೆ, ಇಂಗ್ಲಿಷ್ ಭಾಷೆಯ ಮೂಲಕ ನಡೆದದ್ದು ಅದಕ್ಕಿಂತ ಹೆಚ್ಚು. ಆದರೆ, ಇಂಗ್ಲಿಷ್ ಕಲಿತವರು ಇಂಗ್ಲಿಷ್ ಕಲಿಯದ ತಮ್ಮ ಬಂಧುಗಳ ಜತೆ ವ್ಯವಹರಿಸಬೇಕಿತ್ತು ; ಇಂಗ್ಲಿಷ್ ಕಲಿತ ಬಂಧುಗಳಾದರೂ ಕನ್ನಡವನ್ನು ಬಿಟ್ಟು ಇಂಗ್ಲಿಷ್ ಭಾಷೆಯಲ್ಲಿ ವ್ಯವಹರಿಸುವುದು ಆತ್ಮೀಯತೆಯನ್ನು ಬಲಿಗೊಡುತ್ತಿತ್ತು, ಕೃತಕವಾಗಿ ಕಾಣುತ್ತಿತ್ತು. ಆದ್ದರಿಂದ ಅವರ ಇಂಗ್ಲಿಷ್ ಪತ್ರವ್ಯವಹಾರವು ಸ್ನೇಹಿತರಿಗೆ ಮತ್ತು ನಗರಗಳಲ್ಲೇ ಇರುವ ಕೆಲ ಬಂಧುಗಳಿಗೆ ಸೀಮಿತವಾಯಿತು. ದೊರೆತ ಪತ್ರಗಳ ಪ್ರಮಾಣವನ್ನು ಗಮನಿಸಿದರೆ (ಶೇ.೯೯), ಕನ್ನಡವೇ ಅವರ ನೈಜ ಮಾಧ್ಯಮವಾಗಿದೆ; ಉಳಿದ ಭಾಷೆಗಳು ತಾತ್ಕಾಲಿಕವಾದ ಮತ್ತು ಸೀಮಿತವಾದ ವ್ಯವಹಾರಕ್ಕೆ ಬಳಕೆಗೊಂಡಿವೆ. ಅದು ಮಾತ್ರವಲ್ಲ, ಸಂಕೇತಿ ಭಾಷೆಯಲ್ಲಿ ಬರೆದ ವಾಕ್ಯಗಳು ಬಲುಬಲು ಅಪರೂಪವಾಗಿ ಅಲ್ಲೊಂದು ಇಲ್ಲೊಂದು ಪತ್ರದಲ್ಲಿ ಕಾಣುತ್ತವೆ. ಪತ್ರವ್ಯವಹಾರದಲ್ಲಿ ಕನ್ನಡವೇ ಹೇಗೆ ಇವರ ಅಂತರಂಗದ ಭಾಷೆಯಾಗಿದೆ ಎಂಬುದು ಇದರಿಂದ ತಿಳಿಯುತ್ತದೆ.

ಸಂಕೇತಿ ಸಮುದಾಯದ ಪತ್ರಸಾಹಿತ್ಯದ ಸ್ವರೂಪವು ಶಿಕ್ಷಣ, ನೌಕರಿ, ನಗರೀಕರಣ, ತಾಂತ್ರಿಕತೆಯ ಅಭಿವೃದ್ಧಿಗೆ ಹೊಂದಿಕೊಂಡಿದೆ. ನಮಗೆ ಸಿಕ್ಕಿರುವ ಮೊದಲ ಪತ್ರ ಕ್ರಿ.ಶ. ೧೮೯೧ರದ್ದು. ೧೮೯೧ರಿಂದ ೧೯೨೦ರವರೆಗೆ ಸಿಕ್ಕಿರುವ ಪತ್ರಗಳು ಬಹು ಕಡಮೆ. ಪತ್ರ ಸಂಸ್ಕೃತಿಗೆ ಒಗ್ಗುತ್ತಿರುವ ಸ್ಥಿತಿಯನ್ನೇ ಅದು ತೋರಿಸುತ್ತದೆ. ಆ ವೇಳೆಗೆ ಸಂಕೇತಿಗಳು ಹಳ್ಳಿಗಳಲ್ಲಿಯೇ ನೆಲೆಸಿರುತ್ತಿದ್ದುದರಿಂದ, ಭೌತಿಕಸಂಪರ್ಕದ ಮಿತಿಯಲ್ಲೇ ತಮ್ಮ ವ್ಯವಹಾರಗಳನ್ನಿಟ್ಟುಕೊಂಡಿದ್ದುದರಿಂದ ಅವರ ಪತ್ರಗಳಲ್ಲಿರುವ ವಿವರ ಬಹು ಕಡಮೆ. ವ್ಯವಹಾರಕ್ಕೆ ಕ್ಲ್ಪಪ್ತವಾದ ಒಂದೆರಡು ಸಾಲುಗಳೋ ಅಂಶಗಳೋ ಅಲ್ಲಿರುತ್ತವೆ. ಪತ್ರಗಳು ವ್ಯಾಪಕವಾಗಿ ದೊರೆತಿರುವುದು ೧೯೨೦ಕ್ಕಿಂತ ಮುಂದೆ. ಸಂಪ್ರದಾಯಶೀಲರಾದ ಸಂಕೇತಿಗಳು ಆಧುನಿಕ ವಿದ್ಯೆಗೆ, ಉದ್ಯೋಗಕ್ಕೆ ಹಾಗೂ ನಗರೀಕರಣಕ್ಕೆ ತೆರೆದುಕೊಂಡ ಕಾಲಘಟ್ಟಕ್ಕೆ ಇದು ಹೊಂದುತ್ತದೆ. ೧೯೨೦ರಿಂದ ೧೯೪೦ರವರೆಗಿನ ಅವಧಿಯು ಈ ಸಮುದಾಯವು ಆಧುನಿಕ ಶಿಕ್ಷಣ ಮತ್ತು ನಗರಜೀವನದ ಮೂಲಕ ಹೊಸಪ್ರಪಂಚಕ್ಕೆ ತೆರೆದುಕೊಂಡ ಮೊದಲಘಟ್ಟ. ವಾಹನಸಂಪರ್ಕ ಕಡಮೆ ಇತ್ತು. ಪತ್ರಗಳ ಮೂಲಕವೇ ಸಮಸ್ತ ವ್ಯವಹಾರವೂ ನಡೆಯಬೇಕಿತ್ತು. ಆಗ ಹೊರಟ ಪತ್ರಗಳಲ್ಲಿ ಅವರ ಒಳತೋಟಿಯ ದಟ್ಟಚಿತ್ರಣ ಸಿಗುತ್ತದೆ. ಅಲ್ಲಿ ತೀವ್ರ ತಳಮಳವಿದೆ. ಭಾಷೆಯ ಹೊಸತನವೂ ಅಲ್ಲಿ ಕಾಣಿಸಿಕೊಂಡಿದೆ. ೧೯೪೦ ರಿಂದ ೧೯೯೦ರ ವರೆಗಿನ ಘಟ್ಟದಲ್ಲಿ ಹೊಸ ಪರಿಸರಕ್ಕೆ ಹೊಂದಿಕೊಂಡ ಶಾಂತಸ್ಥಿತಿ ಇದೆ. ಆದರೆ ಹೊಸ ಸವಾಲು, ಪರಿಸರ, ಸಾಧ್ಯತೆ, ಸಾಧನೆಗಳ ಎದುರಾಟವಿದೆ. ಅದು ವಾಹನಗಳ ಸೌಕರ್ಯ ಹೆಚ್ಚುತ್ತಿದ್ದ ಅವಧಿ. ಆಗಾಗ ಭೌತಿಕವಾಗಿಯೇ ಭೇಟಿಯಾಗುವ ಸಾಧ್ಯತೆಯೂ ಹೆಚ್ಚಿತು. ಹೊಸ ಸನ್ನಿವೇಶಗಳು ಅವರ ನಡೆ ಮತ್ತು ಭಾಷೆಯನ್ನು ಪರಿಣಾಮಿಸಿರುವುದು ಅಲ್ಲಿ ಕಾಣುತ್ತದೆ. ೧೯೯೦ಕ್ಕಿಂತ ಮುಂದೆ ದೂರವಾಣಿ ಸಂಪರ್ಕದಲ್ಲಿ ಕ್ರಾಂತಿಯಾಯಿತು. ಅವರ ಸುದ್ದಿಗಳೂ, ಅದಕ್ಕೆ ಹೊಂದಿಕೊಂಡ ಭಾವಾವೇಶವೂ ಗಾಳಿಯಲ್ಲಿ ಲಯವಾಯಿತು. ಪತ್ರಸಂಖ್ಯೆಯೂ ಸೊರಗಿತು. ೨೧ನೆಯ ಶತಮಾನದಲ್ಲಿ ಇ-ಮೇಲ್ ಮೂಲಕ ಸುದ್ದಿಯ ತೆಳು ಹಂದರ ತೆರೆಯ ಮೇಲೆ ಕಾಣಿಸಿಕೊಂಡು ಕಣ್ಮರೆಯಾಗುತ್ತಿದೆ. ಒಟ್ಟಿನಲ್ಲಿ , ಸಂಕೇತಿಗಳ ಪತ್ರಸಾಹಿತ್ಯವು ಸ್ಥೂಲವಾಗಿ ಪ್ರಾರಂಭವಾದಾಗಿನಿಂದ ಹಿಡಿದು ಬಹುತೇಕ ಕೊನೆಗೊಳ್ಳುವವರೆಗಿನ ಒಂದು ಸುತ್ತು, ಇಲ್ಲಿನ ಸಂಗ್ರಹದಲ್ಲಿ ಪ್ರತಿಬಿಂಬಿತವಾಗಿದೆ.

ಒಂದೇ ಕುಟುಂಬದ ಸದಸ್ಯರ ನಡುವೆ ಹೊರಟ 'ಪಾಸ್ಟನ್ ಪತ್ರಗಳು', ತಂದೆಯು ಮಗನಿಗೆ ಬರೆದ ನೀತಿಬೋಧಕ ಪತ್ರಗಳನ್ನೊಳಗೊಂಡ 'ಲೆಟರ್ಸ್ ಟು ಹಿಸ್ ಸನ್' (ಲಾರ್ಡ್ ಚೆಸ್ಟರ್ ಫೀಲ್ಡ್) ಇವನ್ನು ಪ್ರಸ್ತುತ ಸಂಕಲನದ ಮೊದಲ ಭಾಗದ ಸ್ವರೂಪಕ್ಕೆ ಸಂವಾದಿಯಾಗಿ ನಿದರ್ಶಿಸಬಹುದು. ವಿವೇಕಾನಂದರ ಜೀವನದೃಷ್ಟಿಯನ್ನು ತಿಳಿಸುವ 'ವಿವೇಕಾನಂದರ ಪತ್ರಮಾಲೆ', ಕೆನಡ ದೇಶದ ಜನಜೀವನದ ಬಗ್ಗೆ ಮಾಹಿತಿ ನೀಡುವ 'ಕೆನಡದಲ್ಲಿ ಕನ್ನಡಿಗ' (ಡಾ. ವಿ. ಶೆಟ್ಟಿ) ಇಂಥ ಪತ್ರಸಂಕಲನಗಳನ್ನು ಈ ಸಂಪುಟದ ಎರಡನೆಯ ಭಾಗದ ಸ್ವರೂಪಕ್ಕೆ ಹೋಲಿಸಬಹುದು.

ಇಲ್ಲಿನ ಪತ್ರಗಳಲ್ಲಿ ಭಾಷೆ ಪರಿಣಾಮಕಾರಿಯಾಗಿಯೂ ಕಾವ್ಯಮಯವಾಗಿಯೂ ಬಳಕೆಯಾಗಿದೆ. ಉದಾಹರಣೆಗೆ, "ಇದೇನೆ ಅಕ್ಕ ಹಾಗ್ ನಿಂತ್ಕೊಂಡ್ ಬಿಟ್ಟೆ. ನಾನೇ ಕಣೇ. ನಿನ್ನ ತಂಗಿ ಬರೆದಿರೊ ಕಾಗದ ಕಣೇ. ಆಶ್ಚರ್ಯ ಆಯ್ತು? ನಿಧಾನವಾಗಿ ಓದು" (ಪತ್ರ ೨೨೩). ಇದು ಹಳ್ಳಿಯ ಸಾಧಾರಣ ಹೆಣ್ಣುಮಗಳೊಬ್ಬಳು ಪತ್ರವನ್ನು ಪ್ರಾರಂಭಿಸಿರುವ ರೀತಿ. ಇದರಲ್ಲಿ ಲವಲವಿಕೆ ಇದೆ, ಬಂಧುತ್ವದ ಉತ್ಕಟತೆ ಇದೆ, ಅಂತರಂಗದ ಪ್ರೀತಿ ಇದೆ. ಅದನ್ನೂ ಮೀರಿ ಒಂದು ರಮ್ಯ ಚಿತ್ರವನ್ನು ಇದು ಕಟ್ಟಿಕೊಟ್ಟಿದೆ : ಅಂಚೆಯವನು ಪತ್ರವೊಂದನ್ನು ಕೊಟ್ಟು ಹೋಗಿದ್ದಾನೆ. ದೂರದ ಊರಿನಲ್ಲಿರುವ ಅಕ್ಕ ಬಹುದಿನಗಳ ಅನಂತರ ತನ್ನ ತಂಗಿಯ ಆ ಪತ್ರವನ್ನು ಪಡೆದಿದ್ದಾಳೆ. ಅವಳಿಗೆ ಪತ್ರ ಬರುವುದು ಅಪರೂಪ. ಹಾಗೆಂದೇ ಆ ಪತ್ರವು ಅವಳಲ್ಲಿ ಪ್ರೀತಿ, ಆಶ್ಚರ್ಯ, ಅನುಮಾನಗಳನ್ನೆಲ್ಲ ಒಟ್ಟಿಗೆ

ಹುಟ್ಟಿಸಿದೆ. ಅವಳು ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ- ಇನ್ನೂ ಪತ್ರದ ಹೊರವಿವರಗಳಲ್ಲೇ ಅವಳ ಕಣ್ಣು ನೆಟ್ಟಿದೆ. ತವರಿನ ನೆನಪು ಪುಟಿದೆದ್ದಿದೆ; ಕಣ್ಣು ಮಿಂಚಿದೆ, ಮುಖ ಅರಳಿದೆ; ಹಾಗೇ ಮೈಮರೆತು ನಿಂತಿದ್ದಾಳೆ- ಇದು ಆ ತಂಗಿಯ ಮಾತುಗಳ ಸೂಚನೆಯು ಕಟ್ಟಿಕೊಡುವ ಭಾವಚಿತ್ರ ; ಅಭಿರಾಮತರವಾದ ಚಿತ್ರ.

ತನಗಾದ ಪುತ್ರೋತ್ಸವದ ಹರ್ಷವನ್ನು ಹಂಚಿಕೊಳ್ಳಲು ಮಿತ್ರನೊಬ್ಬನು ಉಲ್ಲಾಸದಿಂದ 'ನನ್ನ ಪ್ರೀತಿಯ ಅಣ್ಣೂ' ಎಂದು ಪತ್ರದ ಪ್ರಾರಂಭಮಾಡಿರುವ ರೀತಿಯಾಗಲಿ (ಪತ್ರ ೧), ಬಾಲಭಾಷೆಯೇ ಒಂದು ಶಕ್ತಿಯಾಗುವ ಪರಿಯಾಗಲಿ (ಪತ್ರ ೨೩೮), ಗುರು-ಶಿಷ್ಯರ ಪ್ರಶ್ನೋತ್ತರದ ಜ್ಞಾನಯಾತ್ರೆಯ ಆವೇಶವನ್ನು ಕಾಣಿಸುವ 'ಶ್ರೀಕಂಠ' ಎಂಬ ಒಂದೇ ಪದದ ಪ್ರಾರಂಭವಾಗಲಿ-ಪರಿಣಾಮಕತೆಯ ದೃಷ್ಟಿಯಿಂದ ಉಲ್ಲೇಖನೀಯವಾದವು.

ಏನನ್ನಾದರೂ ಸುಂದರವಾಗಿ ಮತ್ತು ಆಕರ್ಷಕವಾಗಿ ಹೇಳಿದರೆ ಅಥವಾ ಬರೆದರೆ ಅದೊಂದು ಸಾಹಿತ್ಯಿಕ ಅಭಿವ್ಯಕ್ತಿ ಎನಿಸುತ್ತದೆ. ಸಾಹಿತ್ಯ ಎನ್ನುವುದು ಮನುಷ್ಯನ ಅತ್ಯುತ್ತಮ ಅನುಭವ ಮತ್ತು ಚಿಂತನೆಯ ದಾಖಲೆ ಎನ್ನುತ್ತಾನೆ ಮ್ಯಾತ್ಯೂ ಆರ್ನಾಲ್ಡ್. ಸಾಹಿತ್ಯವು ಹೇಗೆ ಭಾಷೆಯ ಮೂಲಕವೇ ಅಭಿವ್ಯಕ್ತವಾಗುವ 'ಕಲೆ' ಎಂಬುದನ್ನು ಕೆಳಗಿನ ನಿದರ್ಶನಗಳಿಂದಲೂ ನೋಡಬಹುದು.

ತನ್ನ ಕೈಗೂಸನ್ನು ಕಳೆದುಕೊಂಡ ಎಳೆಯ ತಾಯಿಯೊಬ್ಬಳ ಶೋಕಗೀತೆಯಾಗಿ ಬಂದಿರುವ (ಪತ್ರ ೩೬೮) ಸಾಲುಗಳನ್ನೇ ನೋಡೋಣ. ಮಗು 'ಕೈ ಬಿಡುವುದು' ಎಂದರೆ ತಾಯಿಯನ್ನೇ ಸದಾ ಅವಲಂಬಿಸದೆ ಓಡಾಡಿಕೊಳ್ಳುವ ಸ್ಥಿತಿ. 'ಕೈಬಿಟ್ಟು ಹೋಗುವುದು' ಸಾಯುವುದನ್ನೇ ಸೂಚಿಸುವ ನುಡಿಗಟ್ಟು. 'ಕೈ ಬಿಟ್ಟಾಗ', 'ಕೈಬಿಟ್ಟು ಹೋದಳಲ್ಲಾ' ಎಂಬ ರೂಪಗಳಲ್ಲಿ ಈ ನುಡಿಗಟ್ಟುಗಳು ಬಳಕೆಯಾಗಿವೆ. ಅವುಗಳ ನಡುವಣ ವ್ಯತ್ಯಾಸವು ಸಂದರ್ಭವಶದಿಂದ ಹುಟ್ಟಿಸುವ ಕ್ರೂರವ್ಯಂಗ್ಯವು ದುಃಖಾನುಭವವನ್ನು ಹೆಚ್ಚಿಸುತ್ತದೆ. ಮಗು ಸತ್ತ ಮೇಲೆ 'ಸದಾ' ಸೊಪ್ಪುಕತ್ತರಿಸಿ ಹಾಕುವ ಶೋಕತಪ್ತ ತಾಯಿಯ ಚಿತ್ರವೇ ಆ ದುಃಖಾನುಭವವನ್ನು ಹೆಪ್ಪುಗಟ್ಟಿಸುತ್ತದೆ. ಆ ಪತ್ರದ ಮುಂದಿನ ಸಾಲುಗಳು ಶೋಕವನ್ನೇ ಹಿಂಡುವ ಅನುಭವ ಉಂಟು ಮಾಡುವುದಕ್ಕೆ ಈ ಪೀಠಿಕೆ ಮತ್ತಷ್ಟು ಪುಷ್ಟಿಕೊಡುತ್ತದೆ.

ಆ ಪತ್ರದ ಪಕ್ಕದಲ್ಲೇ ಇರುವ ೩೬೭ನೆಯ ಪತ್ರದಲ್ಲಿ ಶೋಕದಿಂದ ಪ್ರಶಾಂತಿಗೆ ಮುನ್ನಡೆಸುವ ಸ್ಥಿತಪ್ರಜ್ಞತೆಯ ಮಾತುಗಳಿವೆ. ಒಂದೆಡೆ ಭಾವನೆ ಕೆರಳುತ್ತದೆ, ಮತ್ತೊಂದೆಡೆ ಅದು ಉಪಶಮನಗೊಳ್ಳುತ್ತದೆ; ಉಪಶಮನಗೊಳ್ಳಬೇಕು. ಆಗಲೇ ಅದು ಸಾಹಿತ್ಯದ ಗರಿಮೆಗೆ ಅರ್ಹವಾಗುವುದು. 'ಐದು ದುರ್ನಯಕ್ಕೈದು ಎಡೆಯಲ್ಲಿ ಗದಾಪ್ರಹಾರ ಮಾಡಿದ' ವಿವರವಿರುವ ೧೬೯ನೆಯ ಪತ್ರದಲ್ಲಿಯೇ, ಕೊನೆಯಲ್ಲಿ ಉಪಶಾಂತಿಯೂ ಇದೆ. ಕಷ್ಟ, ಸುಖ, ಕೋಪ, ತಾಪ, ಸಮಾಧಾನಗಳಲ್ಲೆಲ್ಲಾ ತೀವ್ರಾನುಭವಗಳೂ, ತೀವ್ರಾಭಿವ್ಯಕ್ತಿಯೂ, ಪತ್ರಸಾಹಿತ್ಯದಲ್ಲಿರುತ್ತದೆ ಎನ್ನುವುದಕ್ಕೆ ಸಾಕ್ಷಿಯಂತೆ ಈ ಪತ್ರಗಳಿವೆ.

ಇವು ಯಾವುವೂ ಪ್ರಜ್ಞಾಪೂರ್ವಕವಾಗಿ ಬರೆದುವಲ್ಲ; ಇವು ಅನುಭವ ಮತ್ತು ಭಾವನೆಗಳ ಸಹಜ ಅಭಿವ್ಯಕ್ತಿಗಳು; ಸ್ವಂತಕ್ಕಾಗಿ ಬರೆದವು. ಅವುಗಳ ಸಂವಹನಗುಣ ದೊಡ್ಡದು.

ಸಾಧಾರಣ ರೈತನೊಬ್ಬನ ಪತ್ರದಲ್ಲೂ (೨೨೬) ಇರುವ ಚಿತ್ರಕಶಕ್ತಿ ಬೆರಗು ಹುಟ್ಟಿಸುವಂತಿದೆ. ದರೋಡೆಕೋರರು, ವೃದ್ಧರಾದ ಗಂಡಹೆಂಡಿರ ಮೇಲೆ ಕಾಡುದಾರಿಯಲ್ಲಿ ಆಕ್ರಮಣ ಮಾಡಿದ ಘಟನೆಯ ವರ್ಣನೆ ಅದು. ಆ ವರ್ಣನೆ ಮೈನವಿರೇಳಿಸುವಂತಿದೆ. ಅವಿದ್ಯಾವತಿಯಾದ ಹಳ್ಳಿಯ ಹೆಣ್ಣುಮಗಳೊಬ್ಬಳ ಮೇಲೆ ಕಳ್ಳತನದ ಆರೋಪ ಬಂದಾಗ ತನ್ನ ಗಂಡನಲ್ಲಿ ಮಾಡಿಕೊಂಡ ನಿವೇದನೆ ಒಂದೆಡೆ ಇದೆ. ಬ್ರಾಹ್ಮಣರ ಗ್ರಾಮ್ಯಭಾಷೆಯ ಸ್ವರೂಪ ಮತ್ತು ಸೊಗಡಿಗೆ ಆ ಪತ್ರ (೧೫೭) ನಿದರ್ಶನದಂತೆ ಇದೆ. ಅದಕ್ಕೆ, ಭಾವನೆಗೆ ಪುಷ್ಟಿ ಕೊಡುವ ಶಕ್ತಿ ಇದೆ. ವರ್ಣನೆ, ವಿವರ, ಹೋಲಿಕೆ, ಉದ್ಗಾರ, ನೀತಿಬೋಧೆ, ಸಂತಾಪಸೂಚನೆ, ಇಂಥ ಹಲವು ಸನ್ನಿವೇಶಗಳಲ್ಲಿನ ಅನೇಕ ಪತ್ರಗಳಲ್ಲಿ ಇಂಥ ಸಿದ್ಧಿ ಕಾಣಿಸುತ್ತದೆ.

ಇಲ್ಲಿ ಪ್ರವಾಸವರದಿಗಳಿವೆ, ವ್ಯಕ್ತಿಚಿತ್ರಗಳಿವೆ, ಆತ್ಮಕಥನಗಳೂ ಇವೆ. "You have a knack of writing letters in such a way as to make others shed tears of joy" (ಪತ್ರ ೫೪೦), ಇದು ಓದುಗರೇ ಮಾಡಿರುವ ಪ್ರಶಂಸೆ. ತನ್ನ ಆತ್ಮಚರಿತ್ರೆಯನ್ನೇ ಪರೀಕ್ಷೆಗೆ ಇಟ್ಟು (ಪತ್ರ ೫೪೦) "'Hats off to Amma' ಎಂದು ಹೇಳು. ನನಗಲ್ಲ," ಎನ್ನಬಲ್ಲ ಭಾವಪಕ್ವತೆ ಇಲ್ಲಿ ಕಾಣಿಸುತ್ತದೆ. ತುಂಬ ವೃದ್ಧಳೂ ರೋಗಿಷ್ಠಳೂ ಆದ ತಾಯಿಯ ವೇದನೆಯನ್ನು ನೋಡಲಾರದೆ, 'ಸ್ವಾಮಿ, ಅವಳ ಪ್ರಾಣವನ್ನು ತೆಗೆದುಕೊ' ಎಂದು ಮಗನೇ ಪ್ರಾರ್ಥಿಸಬೇಕಾದ ಸ್ಥಿತಿಯೊಂದು ಅಲ್ಲಿ ಚಿತ್ರಿತವಾಗಿದೆ. ಜೀವನವು ಸಾಗುವ ವಿಚಿತ್ರಪಾತಳಿಯ ದರ್ಶನ ಅಲ್ಲಿ ಆಗುತ್ತದೆ. ಅನುಕಂಪವನ್ನು ಮೀರಿದ ವಿಸ್ಮಯ ಮೂಡುತ್ತದೆ. ೫೫೦ನೆಯ ಪತ್ರದಲ್ಲಂತೂ ಗೃಹಕೃತ್ಯದ ಸುತ್ತಲೇ ಹೆಣೆದುಕೊಂಡ ಜೀವನಾರ್ಣವದಿಂದ

ಬಿಡಿಸಿಕೊಂಡು ತೃಷ್ಣಾಕ್ಷಯದ ಪರಾಕಾಷ್ಠೆಯನ್ನೇರುವ ಉನ್ನತ ಗಮನವಿದೆ. ಅಪರಕರ್ಮದಂಥ, ಸಾಮಾನ್ಯವಾಗಿ ಹೆದರಿಕೆ ಹುಟ್ಟಿಸುವ ವಿಷಯವಿರಲಿ (ಪತ್ರ ೫೩೧, ೫೩೨), ಆಸ್ಪತ್ರೆಯಲ್ಲಿರುವ ರೋಗಿಯೊಬ್ಬನಿಗೆ ಹೇಳುವ ಸಮಾಧಾನವಿರಲಿ (ಪತ್ರ ೫೩೦), ಉಪನಯನ ಸಂಸ್ಕಾರದಂಥ ಶಾಸ್ತ್ರವಿಷಯದ ವಿವರವಿರಲಿ (ಪತ್ರ ೫೨೯) ಒಂದು ಭಾವಗೀತೆಯ ಗತಿಯನ್ನು ಪಡೆಯುವುದು ಸಾಧ್ಯ ಎಂಬುದನ್ನು ಇಲ್ಲಿ ಕಾಣಬಹುದು. ಇಲ್ಲೆಲ್ಲ ಆತ್ಮಶೋಧದ ಗುಣವಿದೆ.

ಇಲ್ಲಿ ವ್ಯಾಕರಣಜಿಜ್ಞಾಸೆ ನಡೆದಿದೆ, ಕಾವ್ಯ ಹೇಗಿರಬೇಕು ಎಂಬುದಕ್ಕೆ 'ವಿದ್ವತ್ಕವಯಃ ಕವಯಃ' ಎಂಬ ಉತ್ತರವಿದೆ. ಅದು ಹೇಗಾದರೂ ಇರಲಿ, ಶ್ಲೋಕಗಳನ್ನೇ ರಚಿಸಿ ಅದರ ಬಗೆಗೆ ಮಾತನಾಡಿದ್ದಾರೆ. ಶ್ಲೋಕಗಳಿಂದಲೇ ಪತ್ರವ್ಯವಹಾರ ನಡೆಸಿದ್ದಾರೆ. ಶ್ಲೋಕಗಳನ್ನೂ ಉಕ್ತಿಗಳನ್ನೂ ಆಧರಿಸಿದ ನೀತಿಬೋಧೆ ಇದೆ. ಕ್ರಿಮಿನಲ್ ಕೇಸು ನಡೆಸುವ ಪ್ರಸ್ತಾಪದಲ್ಲೂ ಒಂದು ಚೊಕ್ಕ ಕಥನವಿದೆ (ಪತ್ರ ೧೫೫). ವಿಧೇಯಳಾದ ಪತ್ನಿಯೂ ತನ್ನ ಪತಿಯನ್ನು ಛೇಡಿಸುವ, ತರಾಟೆಗೆ ತೆಗೆದುಕೊಳ್ಳುವ ಉಕ್ತಿ ವಿಧಾನವಿದೆ (ಪತ್ರ ೧೯೮, ೧೯೯). "ನಿಮ್ಮ ಕಾವ್ಯಮಯವಾದ ಪತ್ರ ಬಹಳ ದಿನಗಳ ಮೇಲೆ ಬಂದು ನಮ್ಮೆಲ್ಲರಿಗೂ ಸಂತೋಷವನ್ನುಂಟು ಮಾಡಿತು...." (ಪತ್ರ ೨೦೧) ಎಂಬ ಮಾತಿನಲ್ಲಿ- ಕಾವ್ಯಾತ್ಮಕವಾಗಿ ಬರೆಯಬಲ್ಲವರೂ, ಅದನ್ನು ಆಸ್ವಾದಿಸಬಲ್ಲವರೂ ಇರುವ ಸೂಚನೆ ಇದೆ. 'ಜಾನ್‌ಸ್ಟುವರ್ಟ್ ಮಿಲ್' ಎಂಬಾತ ೧೮೩೨ರಷ್ಟು ಹಿಂದೆಯೇ ಇಂಥ ಪತ್ರಗಳನ್ನು "ಅರ್ಥಪೂರ್ಣವಾದ ಕೃತಿವಿಶೇಷ"ಗಳೆಂದು ಗುರುತಿಸಿದ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

"ಆದರೂ ಮಾತ್ರಾಹ್ವಾನ ಕಾಲದಲ್ಲಿ ಇಷ್ಟವು ನೆರವೇರದೆ ಜನ್ಮಗೃಹದ ಅಗಲುವಿಕೆಯ ವಿಷಾದವು ಕೆಲವು ಚರ್ಯಗಳಿಂದ ತೋರುತ್ತಿದೆ. ಇದು ಲೋಕದಲ್ಲಿ ಸ್ತ್ರೀಜನ ಸ್ವಭಾವವಾದ ಕರ್ತವ್ಯವೇ ಹೌದು. ಅತಿಶಯವಲ್ಲ." (ಪತ್ರ ೨೧೨) ಹೀಗೆ ಸಾಂದ್ರವಾಗಿ ಬರೆಯಬಲ್ಲ ಮತ್ತು ಹೇಳಿಕೆಗಳಲ್ಲಿ ಲೋಕಸಿದ್ಧಾಂತವನ್ನಡಗಿಸಬಲ್ಲ ಶೈಲಿಯ ಸಿದ್ಧಿಗೆ ಹೇರಳವಾದ ನಿದರ್ಶನಗಳು ಇಲ್ಲಿ ಸಿಗುತ್ತವೆ (ಉದಾ: ಪತ್ರ ೨೧೩, ೨೨೦ ಇ.) 'ರುಕ್ಕು ಎಣಸಣ್ಣ ಮಣಸಣ್ಣನಾಗುತ್ತಿದ್ದಾಳೆ' ಎಂಬಂಥ ಪ್ರಯೋಗಗಳಿರಲಿ, ವಿಷಯವನ್ನು ಪರಿಷ್ಕಾರವಾಗಿ ಒಕ್ಕಣಿಸುವ ರೀತಿಯಾಗಲಿ (ಪತ್ರ ೨೬೭), ಶೈಲಿವೈವಿಧ್ಯದ ಭಾಗವಾಗಿ ಬರುತ್ತವೆ. "ವಾಯುಗುಣವು ಇಂದಿದ್ದಂತೆ ನಾಳೆ ಇರುವುದಿಲ್ಲ. ಒಂದು ದಿನ ಮಂಜು ಬೀಳುವುದು, ಒಂದು ದಿನ ಮೋಡ. ೧ ದಿನ ಮಳೆ ಶಿಬರು ಹೀಗೆಲ್ಲಾ ಅವ್ಯವಸ್ಥೆಯಾಗಿದೆ" (ಪತ್ರ ೨೮೬) ಎಂದು ತಂದೆಯು ಮಗನಿಗೆ ಬರೆದ ಸಾಲುಗಳು ಸೊಸೆಯ ವರ್ತನೆಯ ಚಾಂಚಲ್ಯವನ್ನು ಕುರಿತವು! ಇಂಥ ಪ್ರತಿಮೆಗಳೂ ಸಾಮಾನ್ಯರ ಪತ್ರಗಳಲ್ಲಿವೆ. ಅಪಘಾತಕ್ಕೊಳಗಾಗಿ ಚೇತರಿಸಿಕೊಳ್ಳುತ್ತಿರುವ ಸೈನಿಕನೊಬ್ಬನ, "If after resuming work, I find it difficult to do quality work and produce tangible results and prove myself to be effective and efficient, I may have to think of tendering resignation..." (ಪತ್ರ ೪೧೬) ಎಂಬ ಆಧುನಿಕರ ನೈತಿಕ ಔನ್ನತ್ಯದ ಅಭಿವ್ಯಕ್ತಿಯವರೆಗೆ ಇಲ್ಲಿನ ಪತ್ರಗಳು ಹರಡಿಕೊಂಡಿವೆ.

ಈ ಸಂಪುಟದ ಎರಡನೆಯ ಭಾಗದಲ್ಲಿರುವ ಪ್ರೊ. ಶ್ರೀಕಂಠ ಕುಮಾರಸ್ವಾಮಿಯವರ ಪತ್ರಗಳನ್ನು 'ವಿಚಾರ ಸಾಹಿತ್ಯ'ದ ಗುಂಪಿಗೆ ಸೇರಿಸಬಹುದು. ಇದು 'ವೈದಿಕ ವಿಚಾರ ಸಾಹಿತ್ಯ'. ಬಿ.ವಿ. ಶ್ರೀಕಂಠ ಮತ್ತಿತರರಿಗೆ ಬರೆದ ಪತ್ರಗಳಲ್ಲಿ ಶಾಸ್ತ್ರಾಚಾರಗಳು ಮತ್ತು ಸಂಪ್ರದಾಯಗಳ ಬಗೆಗೆ ವಿಶ್ಲೇಷಣೆ ಇದೆ. ಮಗಳಿಗೆ ಬರೆದ ಪತ್ರಗಳಲ್ಲಿ ಹೆಚ್ಚಾಗಿ ವೇದಮಾರ್ಗದ ಅಂತರಂಗದರ್ಶನ ಮಾಡಿಸುವ ಯತ್ನವಿದೆ. ಮೂರನೆಯ ಭಾಗದಲ್ಲಿರುವ ಒಂದೇ ಪತ್ರದಲ್ಲಿ ಅವರ ಚಳವಳಿಯ ಆಶಯದ ಘೋಷಣೆ ಇದೆ. ಈ ಪತ್ರಗಳನ್ನು ಕಾಲಾನುಕ್ರಮದಲ್ಲಿ ಕೊಟ್ಟಿರುವುದರಿಂದ ಕುಮಾರಸ್ವಾಮಿಯವರೂ ಸೇರಿದ ಹಾಗೆ ಹಲವರ ಕುಟುಂಬಜೀವನದ ಪುಟ್ಟ ಚರಿತ್ರೆಯೂ ದೊರೆಯುತ್ತದೆ. ಪುರೋಹಿತರೊಬ್ಬರ ದಿನಚರಿಯೂ ಇಲ್ಲಿದೆ. ಒಂದೊಂದು ಪತ್ರವೂ ತನ್ನಷ್ಟಕ್ಕೇ ಸಮಗ್ರವಾದ ಒಂದು ಘಟಕವಾಗಿದೆ. ಇಪ್ಪತ್ತು ವರ್ಷಗಳ ದೀರ್ಘ ಅವಧಿಯಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರಿಸಿದ ಪತ್ರಗಳು ಇವು. ಪ್ರಸ್ತುತ ಸಂಪುಟದಲ್ಲಿ ಅವು ಸಂಕಲನವಾಗಿ ಒಂದೇಕಡೆ ದೊರೆಯುವುದರಿಂದ ಪುನರಾವರ್ತನೆಯ ಭಾಗಗಳಿರುವುದು ಸಹಜ. ಸಾಧ್ಯವಾದಷ್ಟೂ ಪುನರಾವರ್ತನೆಯನ್ನು ನಿವಾರಿಸಲು ಯತ್ನಿಸಲಾಗಿದೆ. ಅನೇಕ ಪತ್ರಗಳು ಒಂದು ಪ್ರಬಂಧದ ರೂಪದಲ್ಲೋ ಲೇಖನದ ರೂಪದಲ್ಲೋ ಯಶಸ್ವಿಯಾಗಿ ಬೆಳೆದಿವೆ.

ಪ್ರೊ. ಶ್ರೀಕಂಠಕುಮಾರಸ್ವಾಮಿಯವರು ಒಬ್ಬ ಸೃಜನಶೀಲ ಲೇಖಕರೂ ಹೌದು. ಅವರ ಪತ್ರಗಳಲ್ಲಿನ ಕಾವ್ಯಗುಣಗಳ ಬಗೆಗೆ ಈಗಾಗಲೇ ಚರ್ಚಿಸಲಾಗಿದೆ. ಅವರ 'ಹೃದಯಸಂಪನ್ನತೆ' ಸುಂದರ ವ್ಯಕ್ತಿಚಿತ್ರಗಳಿಂದಲೂ ಘಟನಾಚಿತ್ರಗಳಿಂದಲೂ ಕೂಡಿದ ಕೃತಿ. ಅವರಲ್ಲೊಬ್ಬ ಕವಿ ಇದ್ದಾನೆ, ಋಷಿ ಇದ್ದಾನೆ; ವಿಜ್ಞಾನಿಯೂ ಆದ ಅವರಲ್ಲಿ ಒಬ್ಬ ಚಿಂತಕನೂ ಇದ್ದಾನೆ ಎಂಬುದು ಇಲ್ಲಿನ ಪತ್ರಗಳಲ್ಲಿ ಕಾಣುತ್ತದೆ; ಮಾನವೀಯ ನೆಲೆಯ ಚಿಕಿತ್ಸಕನೊಬ್ಬ ಅವರ ಪತ್ರಗಳಲ್ಲಿನ ಸಾಮಾನ್ಯ ಆಶಯರೂಪದಲ್ಲಿ ಕಾಣಿಸಿಕೊಂಡಿದ್ದಾನೆ. ಅವರು

ವೇದೋಪನಿಷತ್ತುಗಳ ಆಶಯಗಳಿಗೆ ನಿಷ್ಠರಾಗಿದ್ದಾರೆ. ಅವರ ಪತ್ರಗಳು ಪ್ರಶ್ನಕರು ಒಡ್ಡಿದ ವಿಶಿಷ್ಟ ಸನ್ನಿವೇಶಗಳಿಗೂ ಉತ್ತರವಾಗಿ ಬಂದಿವೆ ; ಆ ಹಿನ್ನೆಲೆಯನ್ನೂ, ಆಶಯವನ್ನೂ ಗೌಣಗೊಳಿಸಿ ಓದಿದರೆ, ಸಾಂಪ್ರದಾಯಿಕರಿಗೆ ಅನೇಕ ಕಡೆ ಅವು ಅತಿರೇಕದ್ದೂ ಭಾವೋದ್ವೇಗದ್ದೂ ಪ್ರತೀಕಾರಾತ್ಮಕವಾದದ್ದೂ ಆಗಿ ಕಂಡರೆ ಆಶ್ಚರ್ಯವಿಲ್ಲ. ಹಾಗೆಯೇ ಪ್ರೌಢರಲ್ಲದವರಿಗೆ, ಸ್ವಚ್ಛಂದತೆಗೆ ಸಿಕ್ಕ ಪರವಾನಗಿಯಾಗಿಯೂ ಕಾಣಬಹುದು.

ಅಂಧಶ್ರದ್ಧೆ ಕೂಡದು, ವೈಜ್ಞಾನಿಕ ಮನೋಧರ್ಮ ಬೆಳೆಯಬೇಕು. ಯಾವ ಆಚರಣೆಗೂ ಅದೃಷ್ಟ ಪ್ರಯೋಜನವಿಲ್ಲ, ದೈವೀಸಂಪದ್ಗುಣಗಳನ್ನು ಬೆಳೆಸಿಕೊಳ್ಳುವುದೇ ಅವುಗಳ ಗುರಿ. ಧರ್ಮದ ಬಹಿರ್‌ವ್ಯಾಪಾರ ನಿಲ್ಲಬೇಕು, ಆಂತರಿಕ ಮೌಲ್ಯ ಅಧಿಕವಾಗಬೇಕು. ಇದು ಕುಮಾರಸ್ವಾಮಿಯವರ ವಿಚಾರಧಾರೆ. ಮುಕ್ತವಾಗಿ ಚಿಂತಿಸಬಲ್ಲವರು ಈ ಆಶಯವನ್ನು ಗ್ರಹಿಸಿ ಆತ್ಮಾವಲೋಕನ ಮಾಡಿಕೊಳ್ಳುವುದು ಸಾಧ್ಯ.

ಅವರ ಪತ್ರಗಳಲ್ಲಿ ವ್ಯಕ್ತವಾಗಿರುವಂತೆ- ಪ್ರೊ. ಶ್ರೀಕಂಠಕುಮಾರಸ್ವಾಮಿ ಅವರಿಗೆ ಸಂಸ್ಕಾರಗಳನ್ನು ಅರ್ಥಪೂರ್ಣವಾಗಿ ಆಚರಿಸುವುದರಲ್ಲಿ ಶ್ರದ್ಧೆ ಇದೆ. ಪುನರ್ಜನ್ಮದಲ್ಲಿ ನಂಬಿಕೆ ಇದೆ. ಅಗ್ನಿಕಾರ್ಯ ಮತ್ತು ಸಾವಿತ್ರೀ ಮಂತ್ರಜಪದಿಂದ ವಿದ್ಯಾರ್ಜನೆಯ ಸಾಮರ್ಥ್ಯ ಹೆಚ್ಚುತ್ತೆಂಬ ಬಗೆಗೆ ಅಚಲ ವಿಶ್ವಾಸವಿದೆ. ರಾಹುಕಾಲ, ಮುಹೂರ್ತಗಣನೆ, ನವಗ್ರಹ ಪೂಜೆಯಂಥ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಇದೆ. ರಜಸ್ವಲಾ ವಿಚಾರ, ಜ್ಯೋತಿಷ ಇಂಥ ವಿಷಯಗಳಲ್ಲಿ ವೈಚಾರಿಕ ನಿಲುವು ಇದೆ. ವಿಧಿ, ಅನಧ್ಯಯನದಂಥ ವಿಚಾರಗಳಲ್ಲಿ ಖಚಿತ ವಿವೇಚನೆ ಇದೆ. ಶ್ರಾದ್ಧ , ಪಿತೃಯಜ್ಞದಂಥ ವಿಷಯಗಳಲ್ಲಿ ಸಂಪ್ರದಾಯದಲ್ಲಿ ಬಂದಿರುವ ಕೆಲ ನಿಲುವುಗಳನ್ನು ಅವರು ಪ್ರಶ್ನಿಸಿದ್ದಾರೆ- ಅವರ ಈ ವಿಚಾರಧಾರೆಯ ನೆಲೆಗೂ ಇರುವ ಮಿತಿ ಅವರಿಗೆ ತಿಳಿದಿದೆ.

"ಅಂಥ ಸಮಯದಲ್ಲಿ ಶಾಸ್ತ್ರವಾಕ್ಯಗಳಲ್ಲಿ ನಂಬಿಕೆಯೊಂದೇ ನಮಗೆ ದಾರಿ. ಆದರೆ ಆ ನಂಬಿಕೆಯನ್ನು ನಮ್ಮ ಜೀವನದ ಪ್ರತಿಯೊಂದು ಸಾಮಾನ್ಯ ಕಾರ್ಯಗಳಿಗೂ ಅನ್ವಯಿಸಿದಾಗ ಅದು ಅಂಧಶ್ರದ್ಧೆಯಾಗುತ್ತದೆ. ಜಾಡ್ಯವಾಗುತ್ತದೆ" ಎಂದು ಸ್ಪಷ್ಟಪಡಿಸಿಯೇ (ಪತ್ರ ೪೪೪) ಅವರು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ರಾಮಾಯಣ ಭಾರತಾದಿ ಮಹಾಗ್ರಂಥಗಳ ಅಧ್ಯಯನದಿಂದಲೇ ವೈದಿಕಸಂಸ್ಕೃತಿಯ ನಿಜವಾದ ಅರ್ಥ ಆಯಿತೆಂದು ಅವರು ನಿವೇದಿಸಿಕೊಂಡೂ ಇದ್ದಾರೆ (ಪತ್ರ ೧೮-೧೧-೯೧. ಬಹಳ ಶಿಥಿಲವಾದ ಪತ್ರ. ಪ್ರಕಟಿಸಿಲ್ಲ) ಅವರಿಗೆ, ತಾವು ತಿಳಿದುಕೊಂಡಿರುವುದೇ ಸರಿ ಎಂಬ ಆಗ್ರಹವಿಲ್ಲ (ಪತ್ರ ೫೫೫). "ಅದೃಷ್ಟವಾದ ವಿಷಯವಾದ್ದರಿಂದ, ಸತ್ಯಕ್ಕೆ ನಿಕಟವಾದ Explanations ಕೊಡಬಹುದೇ ಹೊರತು ಸತ್ಯವನ್ನೇ ಯಾರೂ ಹೇಳಲು ಸಾಧ್ಯವಿಲ್ಲ. ಕೆಲವು circumstantial evidence ನಿಂದ ನಾವು ನಿಶ್ಚಯ ಮಾಡಬೇಕಾಗುತ್ತದೆ. ಆದ್ದರಿಂದ ಆದಷ್ಟು factಗಳನ್ನು ಸಂಗ್ರಹಿಸಬೇಕು" (ಪತ್ರ ೪೫೫) ಎಂಬ ಅವರ ಮಾತು ಸತ್ಯವನ್ನು ತಿಳಿಯಲು, ಅನ್ವೇಷಿಸಲು ಅವರಿಗೆ ಇರುವ ತೆರೆದಮನಸ್ಸನ್ನೇ ತೋರುತ್ತದೆ.

ಅವರ ಪತ್ರಗಳಲ್ಲಿ ಒಂದು ವೇಗವಿದೆ, ಶಕ್ತಿ ಇದೆ, ಸೆಳೆತವಿದೆ. ಅದು ಅವರ ವೈಚಾರಿಕ ಅಹಮಿಕೆಯಿಂದ ಆಗಿರದೆ, ಅವರಿಗನಿಸಿದ ಕೊರತೆಗಳನ್ನು ನೀಗಿ ವೈದಿಕ ಜೀವನಕ್ರಮವನ್ನು ಅದರ ಅನಂತಸ್ಫೂರ್ತಿಯ ಕಡೆಗೆ ಮತ್ತೆ ಒಯ್ಯುವ ಕಳಕಳಿಯಿಂದ ಆಗಿದೆ. ಆದ್ದರಿಂದಲೇ ಇಲ್ಲಿನ ಪತ್ರಗಳನ್ನು ಮತ್ತೆಮತ್ತೆ ಓದಿದಾಗ ಹೊಸಹೊಸ ಪ್ರೇರಣೆಗಳು ದೊರೆಯುತ್ತವೆ. ಇಷ್ಟಾಗಿಯೂ, ವೈದಿಕ ಜೀವನ ಮಾರ್ಗಕ್ಕೆ ಇರುವುದು ಅಥವಾ ಇರಬಹುದಾದುದು ಇದೊಂದೇ ವ್ಯಾಖ್ಯಾನವಲ್ಲ ; ಪತ್ರರೂಪದಲ್ಲಿ ನಮಗೆ ದೊರೆತುದು ಇದೊಂದು ಮಾತ್ರ.

ವೈದಿಕ ಜೀವನಮಾರ್ಗದ ಮೂಲಸತ್ತ್ವ ದೊಡ್ಡದು, ಗಟ್ಟಿಯಾದುದು. 'ಅನಾದಿ' ಮತ್ತು 'ಅನಂತ' ಎಂದು ಈ ಸನಾತನ ಧರ್ಮಕ್ಕೆ ಜೋಡಿಸುವ ವಿಶೇಷಣಗಳು ಅರ್ಥಪೂರ್ಣವಾದವು. ಕಾಲಕಾಲದ ಎಲ್ಲ ಒಳಿತುಗಳನ್ನು ಮೈಗೂಡಿಸಿಕೊಳ್ಳುತ್ತ ವಿಕಾಸಶೀಲವಾಗಿ ಚಲಿಸುತ್ತಿರುವುದರ ಸಂಕೇತ ಅದು. ಅದರ ಆಲದ ಬೀಜದೊಳಗಿನ ವಿಸ್ತಾರಕ್ಕೂ ಹಿಡಿದ ಕನ್ನಡಿ. ಯಾವುದೇ ಮೂಲಪರಿಕಲ್ಪನೆಗಳನ್ನು ಯಾವುದೇ ಮುಂಬರುವ ಪೀಳಿಗೆಗಳು ಅಷ್ಟೇ ಅಂತಃಸ್ಫೂರ್ತಿಯಿಂದ ಅನುಷ್ಠಾನಕ್ಕೆ ತರುವುದಿಲ್ಲ. ಅದು ನಿಸರ್ಗಸಿದ್ಧ ಸತ್ಯ. ಅದನ್ನು ವಿಮರ್ಶಿಸುವ ಜಾಗೃತಿ ಕೆಲವೆಡೆಗಳಲ್ಲಾದರೂ ಚರಿತ್ರೆಯಲ್ಲಿ ಕಂಡಿದೆ. ಆಗ ಪಂಥಗಳು ಹುಟ್ಟಿವೆ, ಪರಸ್ಪರ ವಿರುದ್ಧವಾಗಿ ನಿಂತಿವೆ, ಎದುರು ಪಕ್ಷವನ್ನು ಹೀಯಾಳಿಸಿವೆ. ವೈದಿಕಮಾರ್ಗದಲ್ಲಿಯೂ ಇದು ನಡೆದಿದೆ. ಆದರೆ ಜಗತ್ತಿನಲ್ಲಿ ಇನ್ನೆಲ್ಲೂ ಕಾಣದ ಅತಿ ವಿಶಿಷ್ಟ ಪರಿಪಾಠ ಈ ಮಾರ್ಗದಲ್ಲಿದೆ. ಅದೆಂದರೆ ನಿರಂತರವಾಗಿ ತನ್ನನ್ನೇ ತಾನು ವಿಮರ್ಶಿಸಿಕೊಳ್ಳುವುದು, ವ್ಯಾಖ್ಯಾನಿಸುವುದು, ಚರ್ಚಿಸುವುದು. ಈ ಆತ್ಮವಿಮರ್ಶಕ ಗುಣವೇ ವೈದಿಕಮಾರ್ಗದ ಶಕ್ತಿಯಾಗಿದೆ. ಆ ಶಕ್ತಿಯಿಂದಾಗಿಯೇ ಅದರ ಹಳೆಯ ಬೇರು ಜೀವಂತವಾಗಿದೆ, ಹೊಸ ಚಿಗುರು ನಳನಳಿಸುತ್ತಿದೆ. ಹೊರವಲಯಗಳಿಂದಲೂ ಅದು ಮುಕ್ತವಾದ ಟೀಕೆಗೆ ಒಳಗಾಗುತ್ತಿದೆ; ಆದರೂ ಆ ಆತ್ಮಚಿಕಿತ್ಸಕ

ಶಕ್ತಿಯಿಂದಾಗಿಯೇ ಉಳಿದುಕೊಂಡಿದೆ. ಅದೂ, ಪ್ರಾಯಶಃ ಜಗತ್ತಿನ ಇತರ ಜಾತಿಧರ್ಮಗಳ ವಿಷಯದಲ್ಲಿ ಕಾಣದ ಒಂದು ವಿಶೇಷವೇ ಆಗಿದೆ.

ನಾವೆಲ್ಲರೂ ಆದರ್ಶವೆಂದು ಗಣಿಸುವ 'ಅವನವನ ಧರ್ಮವನ್ನು ಅವನವನು ಹುಡುಕಿಕೊಳ್ಳಬೇಕು' ಎಂಬ ಸುಂದರ ತತ್ತ್ವ ವೈದಿಕ ಜೀವನಕ್ರಮದಲ್ಲಿ ಸಾಕಾರವಾಗಿದೆ.

ಈ ಸಂಪುಟದ ಮೊದಲಭಾಗದ ಪತ್ರಗಳಲ್ಲಿ, ಹುಟ್ಟಿನಿಂದ ಸಾವಿನವರೆಗಿನ ವಿಸ್ತಾರವಾದ ಭಿತ್ತಿ ಇದೆ. ಅಲ್ಲಿನ ಒಂದೊಂದು ಪತ್ರವೂ ಒಂದೊಂದು- ಕಥನ, ಅನುಭವ, ಚಲನೆ, ನೋವು, ತಳಮಳ, ಹೊಳಹು, ಧೀಮಂತಿಕೆ, ಛಲ, ಸಾಧನೆ- ಹೀಗೆ ಜೀವನದ ಅನಂತ ಆಯಾಮಗಳ ಪ್ರತಿನಿಧಿಯಾಗಿದೆ. ಅಲ್ಲಿ ಸಮಾಧಾನ, ಶಾಂತಿಯ ಕಡೆಗೆ ನೋಟವಿದೆ. ಆಕಾಶಕ್ಕೆ ಮುಖವಿಟ್ಟು ಕೇಳುತ್ತಿರುವ ವ್ಯಕ್ತ ಮತ್ತು ಅವ್ಯಕ್ತ ಪ್ರಶ್ನೆಗಳೂ ಅಲ್ಲಿವೆ. ಅವಕ್ಕೆ ಉತ್ತರ ಹುಡುಕುವಂತೆ ಎರಡನೆಯಭಾಗದ ಪತ್ರಗಳಿವೆ. ಆದ್ದರಿಂದಲೇ, ಅನುದ್ದಿಷ್ಟವಾದರೂ ಅವು ಒಂದಕ್ಕೊಂದು ಪೂರಕವಾಗಿ ಕಾಣಿಸಿಕೊಂಡಿವೆ. ಮೊದಲಭಾಗ ದತ್ತಾಂಶದಂತೆಯೂ ಎರಡನೆಯ ಭಾಗವು ವಿಶ್ಲೇಷಣೆಯಂತೆಯೂ ಇದೆ. ಹಾಗಾಗಿ ಎರಡೂ ಭಾಗಗಳಲ್ಲಿ ಒಂದು ನಿರಂತರತೆಯೂ, ಎರಡೂ ಭಾಗಗಳು ಸೇರಿ ಒಂದು ಉದ್ದೇಶವೂ ಸಹಜವಾಗಿ ಸೃಷ್ಟವಾಗಿದೆ. ಇದರಿಂದಾಗಿ ಇಲ್ಲಿನ ಇಡೀ ಪತ್ರಸಾಹಿತ್ಯಕ್ಕೊಂದು ಸೃಜನಾತ್ಮಕ ದರ್ಶನ ಲಭ್ಯವಾಗಿದೆ. ಮಾನವನ ಬದುಕಿನ ಸಾರ್ಥಕ್ಯವನ್ನು ಪರಿಭಾವಿಸುವುದು ಈ ಒಟ್ಟಂದದಿಂದ ಸಾಧ್ಯವಾಗಬಹುದು. ಅದು ಸಾಧ್ಯವಾಗುವುದಾದರೆ ಈ ಶ್ರಮ ಸಾರ್ಥಕವಾದಂತೆ.

ಕೃತಜ್ಞತೆಗಳು

ನನ್ನ ಪೂಜ್ಯ ಗುರುಗಳೂ, ವಿದ್ವಾಂಸರೂ, ಸಂಶೋಧಕರೂ ಆದ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರು ಪ್ರೀತಿಯಿಂದ ಈ ಗ್ರಂಥದ ಮುನ್ನುಡಿ ಬರೆದುಕೊಟ್ಟು ಹರಸಿದ್ದಾರೆ. ಗ್ರಂಥದ ಸಿದ್ಧತೆಯಲ್ಲಿ ಮಾರ್ಗದರ್ಶನ ನೀಡಿದ್ದಾರೆ.

ಮೊದಲ ಭಾಗದ ೪೩೫ ಪತ್ರಗಳನ್ನು ಈ ಸಂಗ್ರಹಕ್ಕಾಗಿ ಹತ್ತಾರು ಸಹೃದಯ ಮಿತ್ರರು ಒದಗಿಸಿಕೊಟ್ಟು ತಾವು ತೆರೆಯ ಹಿಂದೆ ನಿಂತಿದ್ದಾರೆ. ಅವರಲ್ಲಿ ಕೆಲವರಿಂದ ಪತ್ರ ದೊರಕಿಸಿಕೊಡಲು ಮುದಲಾಪುರದ ಶ್ರೀ ಎಂ.ಕೆ. ಚನ್ನಕೇಶವ ಅವರೂ, ಸಮುದಾಯ ಅಧ್ಯಯನ ಕೇಂದ್ರದ ಅಧ್ಯಕ್ಷರಾದ ಕವಿ ರುದ್ರಪಟ್ಟಣದ ಶ್ರೀ ಆರ್.ವಿ. ಶ್ರೀನಿವಾಸಯ್ಯ ಅವರೂ ನೆರವಾಗಿದ್ದಾರೆ. ಎರಡನೆಯ ಭಾಗದ ಪತ್ರಗಳು ಈ ಸಂಕಲನದಲ್ಲಿ ಈ ಸ್ವರೂಪದಲ್ಲಿ ಪ್ರಕಟವಾಗಲು ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ ಅವರು ಅನುಮತಿ ನೀಡಿ ಸಹಕರಿಸಿದ್ದಾರೆ. ಅವರು ಬರೆದ ಪತ್ರಗಳನ್ನು ಸಂಗ್ರಹಿಸಿ ಜೋಪಾನ ಮಾಡಿದ್ದ ಶ್ರೀ ಬಿ.ವಿ. ಶ್ರೀಕಂಠ ಅವರೂ ಶ್ರೀಮತಿ ಶೈಲಜಾ ಪ್ರತಾಪ್ ಅವರೂ ಅವನ್ನು ಪ್ರಕಟಣೆಗಾಗಿ ಒಪ್ಪಿಸಿ ಸಂಗ್ರಹಕಾರ್ಯವನ್ನು ಹಗುರಗೊಳಿಸಿದ್ದಾರೆ.

ಕಲೆ ಹಾಕಿದ ಪತ್ರಗಳನ್ನು ಜೋಡಿಸಿ, ಅವಕ್ಕೆ ಅಡಿಟಿಪ್ಪಣಿಗಳನ್ನು ಬರೆದು ಮೊದಲು ತೋರಿಸಿದ್ದು ಪ್ರೊ. ಜಿ. ಅಶ್ವತ್ಥನಾರಾಯಣ ಅವರಿಗೆ-ಹತ್ತು ವರ್ಷಗಳ ಹಿಂದೆ. ಅವರು ತಕ್ಷಣ ಅದರ ಸ್ವರೂಪ ಹೇಗಿರಬೇಕೆಂದು ನಿರ್ದೇಶಿಸಿ ಕರಡಿನ ತುಂಬ ಮೇಲು ಟಿಪ್ಪಣಿಗಳನ್ನು ಮಾಡಿ ಪ್ರೋತ್ಸಾಹಿಸಿದರು. ಆ ಮುಂದೆ ಈ ಸಂಗ್ರಹ ಇನ್ನೂ ಬೆಳೆದು ಈ ಸ್ವರೂಪವನ್ನು ಪಡೆದಿದೆ.

ಜಾನಪದ ವಿದ್ವಾಂಸರೂ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದ ಪ್ರಾಧ್ಯಾಪಕರೂ ಆದ ಡಾ. ಅಂಬಳಿಕೆ ಹಿರಿಯಣ್ಣ ಅವರು ಸಂಕೇತಿ ಸಮುದಾಯದ ಬಗೆಗೆ ಅಧ್ಯಯನ ಮಾಡಲು ದಾರಿ ತೋರಿಸಿದವರು. ಅವರ ದೀಪಹಸ್ತ ಸದಾ ದಾರಿತೋರುತ್ತಿದೆ.

ನನ್ನ ಪೂಜ್ಯಗುರುಗಳಾದ ಪಂಡಿತರತ್ನ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ವಿದ್ಯೆಯ ಮೇರು. ಸಮುದಾಯ ಅಧ್ಯಯನ ಕೇಂದ್ರದ ಮೊದಲಹಂತದ ಯೋಜನೆಯಲ್ಲಿ ಗೌರವಾಧ್ಯಕ್ಷಸ್ಥಾನದಿಂದ ಅವರು ನೀಡಿದ ಪ್ರೋತ್ಸಾಹವು ಸಂಜೀವಿನಿಯ ಸ್ವರೂಪದ್ದು.

ಸಮುದಾಯ ಅಧ್ಯಯನ ಕೇಂದ್ರದ ಸಂಶೋಧನೆ ಮತ್ತು ಪ್ರಕಟಣೆಯ ಕಾರ್ಯಕ್ಕೆ ಸದಾ ಕಣ್ಗಾವಲಾಗಿದ್ದು ಆತ್ಮವಿಶ್ವಾಸ ತುಂಬುತ್ತಿರುವವರು ಆತ್ಮೀಯರೂ ವಿದ್ವಾಂಸರೂ ಸಹೃದಯರೂ ಆದ ಶ್ರೀ ಎನ್.ಎಸ್. ಶಾರದಾ ಪ್ರಸಾದ್ ಅವರು. ಅವರು ಈ ಗ್ರಂಥದ ಪ್ರಕಟಣೆಯಲ್ಲೂ ನೆರವಾಗಿದ್ದಾರೆ.

ವಿದ್ವಾಂಸರೂ ಹಿರಿಯರೂ ಆದ ಡಾ. ಎ.ಎಸ್. ವೇಣುಗೋಪಾಲರಾವ್, ಪ್ರೊ. ಆರ್. ಇಂದಿರಾ, ಡಾ. ಬಿ.ಎಸ್. ನರಹರಿ, ಡಾ. ಟಿ.ವಿ. ಸತ್ಯನಾರಾಯಣ, ಪ್ರೊ. ಜಿ. ಅಶ್ವತ್ಥನಾರಾಯಣ ಅವರೂ, ಮಿತ್ರರಾದ ಶ್ರೀ ನಾಗೇಶ್, ಶ್ರೀ ಬಿ.ವಿ. ವೆಂಕಟನಾರಾಯಣ ಅವರೂ ಈ ಕೃತಿಯನ್ನು ನೋಡಿ, ಗಮನಿಸಿ ಅಮೂಲ್ಯ ಪ್ರತಿಕ್ರಿಯೆ ನೀಡಿ ಪ್ರೋತ್ಸಾಹಿಸಿದ್ದಾರೆ. ಸಹೃದಯರಾದ ಡಾ. ಆರ್. ರಾಮಕೃಷ್ಣ, ಶ್ರೀ ಕೆ.ವಿ. ಸುಬ್ಬರಾವ್ ಮತ್ತು ಡಾ. ಸುರೇಶಪಾಟೀಲ (ಕನ್ನಡಪ್ರಭ) ಅವರ ಸದಭಿಪ್ರಾಯ ಒಂದು ಬೆಂಬಲವಾಗಿ ಬಂದಿದೆ.

'ಒಂದೇ ಕುಟುಂಬದ ಕೆಲವು ಪತ್ರ'ಗಳ ಪ್ರತಿ ಮಾಡಿಕೊಟ್ಟವರು ಶ್ರೀಮತಿ ಮಂಗಳ ಶ್ರೀನಿವಾಸ್ ಮತ್ತು ಶ್ರೀ ಪಿ.ಕೆ. ಶ್ರೀನಿವಾಸ್. ದೇವನಾಗರಿ ಲಿಪಿಯಲ್ಲಿದ್ದ ಪತ್ರಗಳನ್ನು ಕನ್ನಡಕ್ಕೆ ಲಿಪ್ಯಂತರಗೊಳಿಸಿ ಕೊಟ್ಟವರು ಡಾ. ಎಚ್.ಎನ್. ವೀಣಾ ಅವರು. ವಿದ್ವಾನ್ ಶ್ರೀ ಎಚ್.ವಿ. ನಾಗರಾಜರಾವ್ ಅವರೂ ದೇವನಾಗರೀ ಪತ್ರಗಳನ್ನು ಸರಿಯಾಗಿ ಓದಲು ಪ್ರೀತಿಯಿಂದ ನೆರವಾಗಿದ್ದಾರೆ. ಡಾ. ಟಿ.ವಿ. ಸತ್ಯನಾರಾಯಣ ಅವರು ಸಂಸ್ಕೃತ ಪತ್ರಗಳನ್ನು ಓದಲು ನೆರವಾಗಿ ಅವಕ್ಕೆ ಕನ್ನಡ ಸಾರಾಂಶವನ್ನೂ ಬರೆದುಕೊಟ್ಟಿದ್ದಾರೆ. ಅವರು ಅದಕ್ಕಾಗಿ ೪-೫ ಗಂಟೆಗಳ ಕಾಲ ನಿರಂತರವಾಗಿ ಕೂರುತ್ತಿದ್ದುದು ನನಗೊದಗಿದ ಪ್ರಭಾವೀ ಅನುಭವ. ಮೌಲಿಕವಾದ ಅಭಿಪ್ರಾಯವನ್ನೂ ತಿಳಿಸಿದ್ದಾರೆ. ಇಡೀ ಪುಸ್ತಕದ ಕರಡನ್ನೂ ನೋಡಿದ್ದಾರೆ. ಹಳೆಯ ಕನ್ನಡಪತ್ರಗಳ ಮೋಡಿ ಅಕ್ಷರಗಳನ್ನು ಓದುವಲ್ಲಿ ಡಾ. ಬಿ.ಎಸ್. ನರಹರಿ ಅವರೂ ನೆರವಾಗಿದ್ದಾರೆ.

ಈ ಸಂಕಲನದ ಪ್ರಕಟಣೆಯ ಕಲ್ಪನೆ ಸಾಕಾರಗೊಂಡುದು ಅನೇಕ ಮಹನೀಯರಿಂದ : ಶ್ರೀಮತಿ ಕೆ.ಕೆ. ವಿಜಯಲಕ್ಷ್ಮೀ, ಡಾ. ಆರ್. ಎಸ್. ಚಂದ್ರಶೇಖರಮೂರ್ತಿ ಯು.ಎಸ್.ಎ. ; ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು; ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್ (ಪ್ರಾಯೋಜಕರು) ; (ಶ್ರೀಮತಿ ರಾಜಲಕ್ಷ್ಮೀ), ಮತ್ತೂರು ಶ್ರೀ ಕೃಷ್ಣಮೂರ್ತಿ, ಬೆಂಗಳೂರು (ಮಹಾದಾನಿಗಳು) ; ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ, ಹಾಸನ ; ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ, ಹಾಸನ ; ಶ್ರೀಮತಿ ಸತ್ಯವತಿ, ಶ್ರೀ ಹರವೆ ಕೇಶವಮೂರ್ತಿ, ಮೈಸೂರು; ಡಾ. ಶ್ರೀಮತಿ ಆರ್. ಇಂದಿರಾ, ಶ್ರೀ ಎಸ್. ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು ; ಶ್ರೀಮತಿ ಕೆ.ಎಸ್. ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು ; (ಶ್ರೀಮತಿ ಸರಳಾ), ಶ್ರೀ ಬಿ.ಕೆ. ರಾಮಚಂದ್ರ, ಬಸವಪಟ್ಟಣ ; ಶ್ರೀಮತಿ ಸುಧಾ, ಶ್ರೀ ಎ.ಎಸ್. ಅರುಣಕುಮಾರ್, ಮಂಡ್ಯ ; ಶ್ರೀಮತಿ ಲಕ್ಷ್ಮೀ, ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು (ಪೋಷಕರು) -ಇವರೆಲ್ಲರ ಉದಾರ ಆರ್ಥಿಕ ಸಹಾಯ ಇಡೀ ಸಮುದಾಯಕ್ಕೆ, ಇಡೀ ಸಾಂಸ್ಕೃತಿಕ ಅಧ್ಯಯನ ಪ್ರಪಂಚಕ್ಕೆ ಆಸರೆಯಾಗಿ ಬಂದಿದೆ.

ಕಲ್ಲಹಳ್ಳಿ ಶ್ರೀ ಶ್ರೀನಿವಾಸಮೂರ್ತಿ, ಹಾಸನ, ಅವರೂ, ಶ್ರೀ ಬಿ.ವಿ. ವೆಂಕಟನಾರಾಯಣ, ಮೈಸೂರು ಅವರೂ ಈ ಕಾರ್ಯದಲ್ಲಿ ನೀಡುತ್ತಿರುವ ಸಹಕಾರ ದೊಡ್ಡದು. ನನ್ನ ಮಾತೃಶ್ರೀಯವರಾದ ಪಾರ್ವತಮ್ಮ ಸುಬ್ಬರಾಯಶಾಸ್ತ್ರೀ ಅವರು ತಮ್ಮ ೮೨ರ ವೃದ್ಧಾಪ್ಯದಲ್ಲೂ ಅವರದೇ ರೀತಿಯಲ್ಲಿ ಸಹಕರಿಸಿದ್ದಾರೆ. ಮಗಳು ಚಿ||ಸೌ|| ಶರ್ವಾಣಿ ಹರನ್ ಇಂಟರ್‌ನೆಟ್ ಕೆಲಸಗಳನ್ನು ಮಾಡಿಕೊಟ್ಟಿದ್ದಾಳೆ. ಪತ್ನಿ ಡಾ. ವಿಜಯಾಹರನ್ ತಮ್ಮ ಗೃಹಕೃತ್ಯ ಮತ್ತು ಕಛೇರಿ ಜವಾಬ್ದಾರಿಗಳ ನಡುವೆಯೂ ಕರಡುತಿದ್ದುವ, ತಾಳೆ ನೋಡುವ ಕೆಲಸಗಳಲ್ಲಿ ಪೂರ್ಣಸಹಕಾರ ನೀಡಿದ್ದಾರೆ.

ಸಂಶೋಧನೆಯು ಅಧ್ಯಾಪಕವೃತ್ತಿಯ ಮುಖ್ಯ ಭಾಗಗಳಲ್ಲೊಂದು ಎಂದು ಹೇಳಲಾಗುತ್ತದೆ. ಕಾಲೇಜು ಶಿಕ್ಷಣ ನಿರ್ದೇಶನಾಲಯದ-ನಿರ್ದೇಶಕರಾದ ಡಾ. ಎಂ.ಡಿ. ಮುತ್ತಮ್ಮ ಅವರು, ಹೆಚ್ಚುವರಿ ನಿರ್ದೇಶಕರಾದ ಪ್ರೊ. ಕೆ.ವಿ. ಕೋದಂಡರಾಮಯ್ಯ ಅವರು, ಜಂಟಿನಿರ್ದೇಶಕರಾದ ಡಾ. ಪಿ.ಆರ್. ಮಹೇಶ್ವರಮೂರ್ತಿ ಅವರು, ಪ್ರೊ. ಬಿ.ವಿ. ಮಠದ್ ಅವರು, ಪ್ರೊ. ಕೆ. ಶ್ರೀಹರಿ ಅವರು, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ (ಮೌಲ್ಯಮಾಪನ) ಶ್ರೀ ಎಸ್. ಎನ್. ನಾಗರಾಜ್ ಅವರು, ಮಿತ್ರ ಪ್ರೊ. ಶಿವಾಜಿ ಜೋಯಿಸ್ ಅವರು, ಹಾಸನದ ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎನ್.ಎನ್. ಪುಟ್ಟಸ್ವಾಮಿ ಅವರು ಮತ್ತು ನನ್ನ ಎಲ್ಲ ಅಧ್ಯಾಪಕ ಅಧ್ಯಾಪಕೇತರ ಸಹೋದ್ಯೋಗಿ ಮಿತ್ರರು ಸಹಕಾರ ನೀಡಿದ್ದಾರೆ. ಸಮುದಾಯ ಅಧ್ಯಯನ ಕೇಂದ್ರದ ಎಲ್ಲ ಪದಾಧಿಕಾರಿಗಳೂ, ವಿದ್ವಾಂಸರೂ, ಕಾರ್ಯಕರ್ತರೂ ಸಂತೋಷದಿಂದ ಎಲ್ಲ ನೆರವೂ ನೀಡಿದ್ದಾರೆ.

ಈ ಎಲ್ಲ ಹಿರಿಯರಿಗೂ, ಸಹೃದಯರಿಗೂ, ಅವರ ವಾತ್ಸಲ್ಯಕ್ಕಾಗಿ, ಸಾಮಾಜಿಕ ಪ್ರಜ್ಞೆಗಾಗಿ, ಸ್ನೇಹಕ್ಕಾಗಿ, ಶ್ರಮಕ್ಕಾಗಿ, ಔದಾರ್ಯಕ್ಕಾಗಿ ಮತ್ತೆ ಮತ್ತೆ ನಮಸ್ಕರಿಸುತ್ತೇನೆ.

ಶ್ರದ್ಧೆಯಿಂದ ಡಿಟಿಪಿ ಕೆಲಸ ನಿರ್ವಹಿಸಿಕೊಟ್ಟ ಫ್ರೆಂಡ್ಸ್ ಕಾಮ್‌ಟೆಕ್‌ನ ಮಿತ್ರರಿಗೂ, ಮುದ್ರಣಕಾರ್ಯವನ್ನು ಮುದ್ದಾಗಿ ಮಾಡಿಕೊಟ್ಟ ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು ಅವರಿಗೂ ಆಭಾರಿಯಾಗಿದ್ದೇನೆ.

೧೫-೧-೨೦೦೪
ಮಕರ ಸಂಕ್ರಾಂತಿ
ಮೈಸೂರು

ಪ್ರಣತಾರ್ತಿಹರನ್

ಪತ್ರಗಳ ಮಾದರಿ







ಪರಿವಿಡಿ

ಶತಮಾನದ ಪತ್ರಗಳು

ಮೊದಲನೆಯ ಭಾಗ : ಕೌಟುಂಬಿಕ ಪತ್ರಗಳು

* ವಿಷಯ/ಭಾಷೆ/ಸನ್ನಿವೇಶದ ಮರುಘಟ್ಟ : ಕಾಲಾನುಕ್ರಮದ ಮರುಹೊಂದಾಣಿಕೆ

ಗುಚ್ಛ - 4 ವ್ಯವಸಾಯ-ಉದ್ಯೋಗ

ಗುಚ್ಛ - 5 ಸಂಸ್ಕಾರ ವಲಯ

ಗುಚ್ಛ - 6 ಜಿಜ್ಞಾಸೆ

ಗುಚ್ಛ - 7 ಆರೋಗ್ಯ

ಗುಚ್ಛ – 13 ತಂದೆ ಮಕ್ಕಳ ನಡುವೆ

ಗುಚ್ಛ – 14 ಒಂದೇ ಕುಟುಂಬದ ಪತ್ರಗಳು

ಗುಚ್ಛ - 15 ಪತ್ರಾಂಶ

ಬಾಲ್ಯ

ವಿವಾಹ

ಸಂಸ್ಕಾರ ವಲಯ

ಅಭಿರುಚಿ

ಆರೋಗ್ಯ

ವ್ಯವಹಾರ

ಕೋರ್ಟು ಕಚೇರಿ

ವೃದ್ಧಾಪ್ಯ

ಸಾವು

ಗುಚ್ಛ - 16 ಸಾವು-ಸಾಂತ್ವನ

ಗುಚ್ಛ - 17 ದೇವನಾಗರೀಲಿಪಿಯ ಪತ್ರಗಳು

ಗುಚ್ಛ – 18 ಹೊಸ ಅಲೆಯ ಪತ್ರಗಳು

+ ಇ-ಮೇಲ್ ಪತ್ರಗಳು

ಎರಡನೆಯ ಭಾಗ

ಪ್ರೊ. ಶ್ರೀಕಂಠಕುಮಾರಸ್ವಾಮಿ ಅವರ ಪತ್ರಗಳು

ಅ. ಶ್ರೀ ಬಿ.ವಿ. ಶ್ರೀಕಂಠ ಮತ್ತು ಇತರರಿಗೆ ಬರೆದ ಪತ್ರಗಳು

ಆ. ಮಗಳಿಗೆ ಬರೆದ ಪತ್ರಗಳು

ಇ. ಸ್ವಾಮೀಜಿಯೊಬ್ಬರಿಗೆ ಬರೆದ ಪತ್ರ

ಅನುಬಂಧ

---

* ಬಿ.ವಿ.ಎಸ್. ಅವರು ಅನ್ಯ ಕುಟುಂಬಗಳಿಂದ ಸಂಗ್ರಹಿಸಿದ ಪತ್ರಗಳು : ಪ್ರಬಂಧಾತ್ಮಕ ಪತ್ರಗಳು.

ಸಂಕೇತಿ : ಶತಮಾನದ ಪತ್ರಗಳು

ಮೊದಲನೆಯ ಭಾಗ

ಕೌಟುಂಬಿಕ ಪತ್ರಗಳು

ಗುಚ್ಛ - 1

ಜಾತಾದಿ

ವ್ಯಕ್ತಿಗೆ 'ಜಾತಕರ್ಮ'ದಿಂದ ಮೊದಲುಗೊಂಡು 'ಷೋಡಶ ಸಂಸ್ಕಾರ'ಗಳನ್ನು ನಡೆಸುವುದು ವೈದಿಕ ಪದ್ಧತಿ. 'ಜಾತಾದಿ' ಎಂದರೆ ಜಾತಕರ್ಮದಿಂದ ಮೊದಲುಗೊಂಡು ಮಾಡುವ ಸಂಸ್ಕಾರಗಳು ಎಂದು ಅರ್ಥ. ಅನೇಕ ಕಾರಣಗಳಿಂದ ಕೆಲವೇಳೆ ಗಂಡುಮಕ್ಕಳಿಗೂ ಹೆಣ್ಣುಮಕ್ಕಳಿಗೂ ಕೆಲವು ಪ್ರಾರಂಭಿಕ ಸಂಸ್ಕಾರಗಳು ನಡೆದಿರುವುದಿಲ್ಲ. ಅವುಗಳನ್ನು ನಡೆಸಿದ ಹೊರತು ಮುಂದಿನ ಸಂಸ್ಕಾರವನ್ನು ನಡೆಸುವಂತಿಲ್ಲ. ಹಾಗಾಗಿ, ಅವರಿಗೆ ಮಾಡಬೇಕಾಗಿದ್ದ ಸಂಸ್ಕಾರಗಳನ್ನು ಮೊದಲು ಸಂಕ್ಷಿಪ್ತವಾಗಿ ನಡೆಸಿ ಪ್ರಸ್ತುತ ಸಂಸ್ಕಾರವನ್ನು ವಿವರವಾಗಿ ನಡೆಸುತ್ತಾರೆ.

ಪ್ರಸ್ತುತ ಭಾಗದಲ್ಲಿ, ಶಿಶುಜನನದಿಂದ ತೊಡಗಿ ಉಪನಯನದವರೆಗೆ ಸಂಬಂಧಿಸಿದ ಕೆಲವು ಪತ್ರಗಳಿವೆ.

೧

ಪುತ್ರೋತ್ಸವದ ಸಂದರ್ಭ

ಮೈಸೂರಿನ ಸಹಪಾಠಿ ಮಿತ್ರನಿಗೆ ಬರೆದ ಕವರು

कुशलम् Sree ಹಾಸನಜಿಲ್ಲೆಯ ಊರು
ದಿ। 26/9/36

ನನ್ನ ಪ್ರೀತಿಯ ಅಣ್ಣೂ,

ನಿನಗೆ ಸಕ್ಕರೆ ಬೇಕೇ ಸಕ್ಕರೆ? ಹಾಗಾದರೆ ಸ್ವೀಕರಿಸು. ಆದರೆ ನಿನಗೆ ಕೈಯೆತ್ತಿ ಮನದಣಿಯ ಕೊಡುವಷ್ಟು ಸಮರ್ಥನು ನಾನಲ್ಲವೆಂಬುದು ನಿನಗೇ ಗೊತ್ತಿರುವುದಲ್ಲವೆ! ಮತ್ತೇನು ಮಾಡಲಿ! ಇಷ್ಟು ಮಾತ್ರ ಹೇಳಬಲ್ಲೆ, ಕೇಳು. ನನ್ನ ಹೃದಯದ ಹುಂಡಿಯಲ್ಲಿ ಹುದುಗಿರುವ ಹುಡಿಸಕ್ಕರೆಯ ಹುಡಿಯನ್ನೆಲ್ಲಾ ನೀನೇ ಆರಿಸಿಕೋ! ಈಗಲಾದರೂ ನಿನ್ನ ಮನ ದಣಿಯಿತೇ? ಇಲ್ಲದಿದ್ದರೆ ನಾನೇನು ಮಾಡಲಿ? ನನ್ನನ್ನೇ ನಿನಗೆ ಅರ್ಪಿಸುತ್ತೇನೆ. ಬೇಕಾದ್ದು ತೆಗೆದುಕೊ. ಅಲ್ಲದೆ, ಇದೇ ನಿಜ ಭಾದ್ರಪದ ಶುದ್ಧ ಪಂಚಮಿ ಪ್ರಾತಃಕಾಲ 8 ಘಂಟೆ ಶುಭಕಾಲದಲ್ಲಿ ಸೌ॥ ಪತಿಯಲ್ಲಿ ಪುತ್ರರತ್ನವನ್ನು ಅನುಗ್ರಹಿಸಿ ನನ್ನನ್ನು ಆನಂದ ಸಾಂಬ್ರಾಜ್ಯಕ್ಕೆ ಒಡೆಯನನ್ನಾಗಿ ಆ ಸರ್ವಶಕ್ತನು ಮಾಡಿರುವನಲ್ಲವೇ? ಅದೇ ನನ್ನ ಸಾಂಬ್ರಾಜ್ಯದಲ್ಲಿ ನಿನಗೆ ಎಷ್ಟು ಭಾಗವು ಬೇಕೋ ಅಷ್ಟನ್ನೂ ನಿನಗೇ ಬಿಟ್ಟುಕೊಟ್ಟಿರುತ್ತೇನೆ. ಇನ್ನಾದರೂ ತೃಪ್ತಿಯೇ? ನಿನಗೆ ತೃಪ್ತಿಯೋ ಅತೃಪ್ತಿಯೋ ನನಗೇನು. ನನ್ನ "ಅಳಿಲು ಭಕ್ತಿ ಮಳಲು ಸೇವೆಯನ್ನು" ಮಾತ್ರ ನೀನು ಸ್ವೀಕರಿಸಿಯೇ ತೀರಬೇಕು. ಇಲ್ಲದಿದ್ದರೆ ನಿನ್ನನ್ನು ಬಿಡುವರಾರು.

ಎಷ್ಟಾದರೇನು. ನಾನೇನೋ ಆನಂದ ಸಾಂಬ್ರಾಜ್ಯಕ್ಕೆ ಒಡೆಯನೆಂದು ಹೆಮ್ಮೆ ಪಡುತ್ತಿರುವೆನೆಂದು ನೀನು ತಿಳಿದಿರಬಹುದು. ಆದರೆ ದೀನದಯಾಪರನು ನಿನ್ನನ್ನು ಅದೇ ಸಾಂಬ್ರಾಜ್ಯಕ್ಕೆ ಚಕ್ರವರ್ತಿಯನ್ನಾಗಿ, ಸಾರ್ವಭೌಮನನ್ನಾಗಿ ಮಾಡಿದ ನಂತರ ನಾನು ನಿನ್ನ ಸಾಂಕುಶನಾದರೆ ತಾನೆ ಆಗ ನಾನು ಹೆಮ್ಮೆಪಡುವದು. ಕರುಣಾಳುವು ಈ ಯೋಗವನ್ನೂ ಜಾಗ್ರತೆ ಕೊಡುತ್ತಾನೆಂದು ಹಂಬಲಿಸುತ್ತಾ ಅವನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಿದ್ದೇನೆ.

ಇಲ್ಲಿ ನನ್ನ ಸರ್ಕಾರದ ಸೇವೆಯನ್ನು ಸಲೀಸಾಗಿ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ನಿನಗೆ ಭಾರತಿಯು ಸುಲಲಿತವಾಗಿ ಒಲಿಯಲೆಂದು ನನ್ನ ಪ್ರಾರ್ಥನಾ ಮೊಗ್ಗುಗಳನ್ನು ಅವಳ ಮೇಲೆ ಎರಚುತ್ತಿರುತ್ತೇನೆ. ಅದರ ಫಲವನ್ನು ಕೇಳಲು ನನ್ನ ಕರ್ಣದ್ವಯಗಳನ್ನು ಗಜಕರ್ಣಗಳನ್ನಾಗಿ ಮಾಡಿಕೊಂಡಿರು ತ್ತೇನೆ.

ಇಲ್ಲಿ ಚಿ॥ ಸೌ॥ ರತ್ನಮ್ಮನ ಪುತ್ರೀರತ್ನ "ಭಾರತಿ" (ಹೆಸರು) ಯೂ ಮಾ॥ ಶ್ರೀ॥ ಯವರೂ ಸರ್ವರೂ ಹಳ್ಳೀಮೈಸೂರಿನಲ್ಲಿ ಸರ್ವರೂ ಕುಶಲ.

ಈ ಪ್ರಾಂತ್ರದಲ್ಲಿ ಸಂಕೇತಿಗಳ ಜೀವನಾಧಾರಕ್ಕೆ ಆಧಾರವಾಗಿರುವ ತೋಟಕ್ಕೆ ತಟಾಕಗಳೆಲ್ಲವೂ ಮೇಘರಾಜನ ಅಧೀನದಲ್ಲಿರಲಾರದೆ ಭಾಸ್ಕರ ಭಗವಾನನ ಆಡಳಿತಕ್ಕೆ ಸೇರಿ ಎಲ್ಲವೂ ಸಂಕುಚಿತಗಳಾಗಿರುತ್ತವೆ. ಆದರೆ ಜಗದೊಡೆಯನ ಆಧಿಪತ್ಯದಲ್ಲಿ ಮೇಲ್ಕಂಡ ಜಲಾಶಯಗಳೆಲ್ಲವೂ ಪುನಃ ತಮ್ಮೊಡೆಯನ ಆಳ್ವಿಕೆಗೇ ಒಳಪಟ್ಟು ವಿಶಾಖಾ ಮಳೆಯೊಳಗಾದರೂ ವಿಶಾಲವಾಗಿ ವಿರಾಜಿಸುತ್ತವೆಂದು ಒಣ ನಂಬಿಕೆ ಇರುತ್ತದೆ.

ಸರ್ಕಾರದ ಧನ್ವಂತರೀ ಇಲಾಖೆಯವರಿಂದ ಪ್ರಯೋಗಿಸಲ್ಪಡುತ್ತಿರುವ ಇನಾಕ್ಯುಲೇಷ್ಠ ಮಹಾಶಕ್ತ ಸ್ತ್ರದಿಂದ ಪ್ಲೇಗ್ ಮಹಾಮಾರಿ ಭೂತವು ಅರಣ್ಯರೋದನ ಮಾಡಲಿಕ್ಕೆ ಪರಾರಿ ಯಾಗುತ್ತಲಿದೆಯೆಂದು ಸೂಚಿಸಲು ಬಹಳ ಸಂತೋಷವಾಗುತ್ತದೆ. ಇಂಥಾ ಭೂತಗಳ ಭಯವನ್ನು ತಪ್ಪಿಸಲು ಪ್ರಜೆಗಳಿಗಾಗಿ ಹೊಡೆದಾಡುತ್ತಿರುವ ಘನಸರ್ಕಾರಕ್ಕೆ ನಾವು ದೊಡ್ಡ ಋಣಿಗಳೇ ಅಲ್ಲವೇ?

ಸಾಕು. ಈ ಹರಟೇಮಲ್ಲನ ಹರಟೇ ಕೇಳಲು ನಿನಗೂ ಬೇಜಾರಲ್ಲವೇ. ಹಾಗಾದರೆ ಇಲ್ಲಿಗೆ ನಿಲ್ಲಿಸುತ್ತೇನೆ. ಮಾತ್ರ ನಿನ್ನಿಂದ ಒಂದನ್ನು ಅಪೇಕ್ಷಿಸದೇ ನಿಲ್ಲಿಸಲಾರೆನು. ಏನೆನ್ನುವೆಯೋ? ಕುಶಲ ಪತ್ರ.

ಇತಿ ನಿನ್ನ ಹರಟೇಮಲ್ಲ ಪ್ರಿಯ
ಬಾಂಧವ ತಮ್ಮ

ಸಂಸ್ಕೃತ ಭಾಷೆಯನ್ನು ಕಲಿಯತೊಡಗಿದವರು ಆ ಭಾಷೆಯಲ್ಲಿ, ಆಂಗ್ಲ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡತೊಡಗಿದವರು ಆ ಭಾಷೆಯಲ್ಲಿ ಉತ್ಸಾಹದಿಂದ ವ್ಯವಹರಿಸತೊಡಗಿದರು. ಈ ಪತ್ರದಲ್ಲಿ ಕಾಣುವುದು ಕನ್ನಡವನ್ನು ವ್ಯವಸ್ಥಿತವಾಗಿ ಕಲಿಯತೊಡಗಿದವರ ಸಂಭ್ರಮ. ಅದಕ್ಕೆ ಮಿತ್ರತ್ವ, ಪುತ್ರೋತ್ಸವದ ಉಲ್ಲಾಸವೂ ಸೇರಿದೆ.

೨

ಮಮ್ಮಗಳ ಜನನ

ಮಾವನು ಅಳಿಯನಿಗೆ ಬರೆದ ಕಾರ್ಡು

ಕುಶಲಂ ಶ್ರೀ ತಾ 17-11-52
ಹಾಸನಸೀಮೆಯ ಹಳ್ಳಿ

ಚಿ॥...ನಿಗೆ...ನು ಮಾಡೂವ ಅನೇಕ ಆಶೀರ್ವಾದಗಳೂ. ಅದಾಗಿ ಇವರೀಗೆ ವುಭಯ ಕುಶಲೋಪರಿ ಸಾಂಪ್ರತ...

ಚಿ। ಸೌ।...ಮ್ಮನು ತಾ 10-11-52 ನೆ ಸೋಮವಾರ ಸೂರ್ಯೋದಯವಾದ 56 ಘಳಿಗೆ ಐದು ಲಿಪ್ತಿಗೆ ಸರಿಯಾದ ತುಲಾಲಗ್ನದಲ್ಲಿ ಸುಖಪ್ರಸೂವಾಗಿ ಸ್ತ್ರೀ ಶಿಶೂವ್ರೂ ಸೌ। ...ಮ್ಮನೂ ಸುಖವಾಗಿ ಇರುತ್ತಾರೆ. ಬ್ರಹಸ್ಪತಿವಾರ ಮನೇಗೆ ಬರುತ್ತಾಳೆ. ತಾವು ಯರಡು ದಿವ್ಸ ಮುಂಚಿತವಾಗಿಯೆ ಬರಬೇಕಾಗಿ ಇತ್ಯಾದಿ ವಿವರಗಳೂ. ಖಂಡಿತ ಬರುತ್ತೀರಾಗಿ ನಂಬಿರುತ್ತೇನೆ.

'ಗೆ' ವಿಳಾಸ
...ರ ಸಮುಕ್ಷಮಂಗಳಿಗೆ

ಜನನ ಸಮಯದ ವಿವರಗಳು ಮುಖ್ಯವಾದುವು. ಹುಟ್ಟಿದಾಗ ಸಂತೋಷವನ್ನಾಗಲಿ ಸತ್ತಾಗ ವಿಷಾದವನ್ನಾಗಲಿ ವ್ಯಕ್ತಪಡಿಸುವುದು ಒಂದು ಕಾಲದ ಜನಗಳಿಗೆ ಕೃತಕವೆನಿಸುತ್ತಿದ್ದಿರಬಹುದು.

೩

ಔಷಧೋಪಚಾರ

ಮಗಳು ಹೆತ್ತ ಸಮಾಚಾರ ; ಬೀಗರಿಗೆ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ: ಹಾಸನಜಿಲ್ಲೆಯ ಹಳ್ಳಿ
ತಾ. 14-2-74

ತೀ॥ ಗಳಿಗೆ ಸಮಾನರಾದಂಥವರ ದಿವ್ಯಚರಣ ಸನ್ನಿಧಾನಂಗಳಿಗೆ ಅನಂತ ನಮಸ್ಕಾರಗಳು.

ಅದಾಗಿ ಈವರವಿಗೆ ಉಭಯಕುಶಲೋಪರಿ ಸಂಪ್ರತಿಗಳು.

ತಮ್ಮಗಳ ಆಶೀರ್ವಾದ ಬಲದಿಂದ ಇಲ್ಲಿ ಚಿ॥ ಗಳಾದಿಯಾಗಿ ಸರ್ವರೂ ಕ್ಷೇಮ. ನೆನ್ನೆ ಪ್ರಾತಃಕಾಲ 7 ಘಂಟೆ 30 ನಿಮಿಷಗಳಲ್ಲಿ (ಬುಧವಾರ) ಚಿ॥ಸೌ॥...ಯು ಹೆಣ್ಣು ಮಗುವಿನ ತಾಯಿಯಾಗಿರುತ್ತಾಳೆ. ಭಗವಂತನ ಕೃಪೆಯಿಂದ ಹೆಚ್ಚಿನ ತೊಂದರೆಗಳಾಗದೆ ಸುಖಪ್ರಸುವೆಯೆಂದೇ ಹೇಳಬಹುದು. ನಂತರ ನಡಸಬೇಕಾದ ಔಷಧೋಪಚಾರಗಳು ನಡೆಯುತ್ತಿವೆ. ಈ ಸಂತೋಷ ಸಮಾಚಾರವನ್ನು ಮನೆಯಲ್ಲಿ ಎಲ್ಲರಿಗೂ ತಿಳಿಸಬೇಕಾಗಿ ಪ್ರಾರ್ಥನೆಗಳು. ಸಮಯವರಿತು ತಾವುಗಳು ಎಲ್ಲರೊಡನೆ ಮಗುವನ್ನು ನೋಡಲು ದಯಮಾಡಿಸಬೇಕಾಗಿ ಬೇಡುತ್ತೇನೆ. ಈಗ ಮಗು ಬಾಣಂತಿ ಆರೋಗ್ಯವಾಗಿರುತ್ತಾರೆ. ಮ॥ ರವರಿಗೆ ನನ್ನ ನಮಸ್ಕಾರಪೂರ್ವಕವಾಗಿ ಈ ವಿಚಾರ ತಿಳಿಸುವುದು.

ಇತಿ ನಮಸ್ಕಾರಗಳು

ಮ॥ ರವರಿಗೆ – ಅಳಿಯನಿಗೆ. ಪತ್ರಕ್ಕೆ ಅರಿಶಿನ ಹಚ್ಚಿದೆ.

೪

ಮಮ್ಮಗನ ಜನನ

ಮಾವನಿಂದ ಮತ್ತೊಬ್ಬ ಅಳಿಯನಿಗೆ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ: ಹಾಸನಜಿಲ್ಲೆಯ ಹಳ್ಳಿ
ತಾ 31-7-78

ಚಿ|| ರಾ|| ಸಹಸ್ರಾಯುವಾದ...ನಿಗೆ ಅನಂತಾಶೀರ್ವಾದಗಳು. ಅದಾಗಿ ಈವರವಿಗೆ ಉ.ಕು. ಸಂಪ್ರತಿಗಳು.

...ಪ್ರಕೃತ ಇದೇ ತಿಂಗಳು 28ನೇ ಶುಕ್ರವಾರ ಬೆಳಿಗ್ಗೆ 11½ ಘಂಟೆಯಲ್ಲಿ ಚಿ|| ಸೌ|| ...... ಪುತ್ರರತ್ನವನ್ನು ಪ್ರಸವಿಸಿದ್ದಾಳೆಂಬ ವಿಷಯವನ್ನು ತಿಳಿಸಲು ಹರ್ಷಿಸುತ್ತೇನೆ. ಮಗು ಬಾಣಂತಿ ಆರೋಗ್ಯವಾಗಿದ್ದಾರೆ. ನಮ್ಮ ಮನೆಯಲ್ಲೂ ಪುಂಜನನವಾಗಲು ಪ್ರಾರಂಭವಾಯಿತು. ಇರಲಿ. ಚಿ|| ಸೌ||.... ನಾಳೆ ಸೋಮವಾರ ಒಳಕ್ಕೆ ಬರುತ್ತಾಳೆ. ಆದರೆ ಆ ದಿನ ನಡಸಬೇಕಾದ ಫಲಪೂಜಾದಿ ಸಂತೋಷ ಸಮಾರಂಭಕ್ಕೆ ಅವಕಾಶವಿಲ್ಲದೆ ವ್ಯಾಕುಲವಾಗಿದೆ. ಕಾರಣ ಅದೇದಿನ ನಮ್ಮ ತೀ|| ಮಾವನವರು ಈ ಹಿಂದೆಯೇ ನಡಸಬೇಕಾಗಿದ್ದ ಅವರ ತೀ|| ಗಳವರ ವೈದೀಕ ಆಶೌಚದ ನಿಮಿತ್ತ ಅತಿಪನ್ನವಾದ್ದರಿಂದ ಶುದ್ಧಿಯಾದ ದಿನ ಅಂದರೆ ಸೋಮವಾರ ನಡಸಲು ಇಲ್ಲೆ ಬರುವವರಿದ್ದಾರೆ. ಆದ್ದರಿಂದ ಮುಂದಿನ ಶನಿವಾರ 15ನೇ ದಿನ ಈ ಮೇಲ್ಕಂಡ ಸಮಾರಂಭವನ್ನು ನಡಸಬೇಕೆಂದಿದ್ದೇವೆ. ಆ ದಿನಕ್ಕೆ ನೀವು ಚಿ || ಗಳೆಲ್ಲರೊಡನೆ ಇಲ್ಲಿಗೆ ಬಂದು ಮಕ್ಕಳಿಗೆ ಆಶೀರ್ವದಿಸಿ ನಮ್ಮ ಮನಸ್ಸಂತೋಷಪಡಿಸಬೇಕಾಗಿ ಕೋರುವ...

...ಈ ವರ್ಷ ಇನ್ನೊಂದು ಹರ್ಷದ ಸಂಗತಿಯೆಂದರೆ ವಿಪರೀತದ ಮಳೆಯಿಂದಾಗಿ ನಮ್ಮ ಕೆರೆಗೆ ನೀರು ಬಂದಿದೆ. ಆದ್ದರಿಂದ ಈ ವರ್ಷದ ತರೀಫಸಲು ಮಾಡಲು ಉಪಕ್ರಮ ಮಾಡಿದ್ದೇವೆ. ಆದ್ದರಿಂದ ಕೆಲ್ಸ ಕಾರ್ಯಗಳ ಒತ್ತಡ ವಿಪರೀತವಾಗಿದೆ. ಬಾಕಿ ಎಲ್ಲಾ ಯಥಾಸ್ಥಿತಿಯಲ್ಲಿದೆ. ಖಂಡಿತ ಬರುತ್ತೀರೆಂದು ನಂಬಿದ್ದೇನೆ. ಈ ವಿಚಾರಗಳನ್ನು ತೀ|| ಗಳಿಗೆ ನನ್ನ ನಮಸ್ಕಾರಪೂರ್ವಕವಾಗಿ ತಿಳಿಸುವುದು.

ಚಿ|| ಗಳಿಗೆ ಆಶೀರ್ವಾದಗಳು

ಇನ್ನೇನೂ ಅತಿಶಯವಿಲ್ಲಾ

ಇಂತು ಆಶೀರ್ವಾದಗಳು

ತೀ||ಗಳಿಗೆ - ನಿಮ್ಮ ಪೂಜ್ಯ ತಂದೆಯವರಿಗೆ

ಕ್ಷೇಮ ಶ್ರೀ: ಹಾಸನಜಿಲ್ಲೆಯ ಹಳ್ಳಿ

ತಾ 31-7-78

ಚಿ||ಸೌ|| ಶಶಿಗೆ ಆಶೀರ್ವಾದಗಳು.

ಶಶೀ ಚನ್ನಾಗಿದ್ದೀಯಾ ! ಮಕ್ಕಳು ಹುಷಾರಾಗಿದ್ದಾರೆಯೆ ? ...ಮೊನ್ನೆ ಶುಕ್ರವಾರ ಚಿ|| ಸೌ||...ಗೆ ಗಂಡು ಮಗು ಹುಟ್ಟಿದೆ. ಮಗು ತುಂಬಾ ಚನ್ನಾಗಿದೆ. ಆದರೆ ತುಂಬಾ ತೊಂದರೆ ಆಯ್ತಮ್ಮಾ. ಅಂತು ದೇವರು ಹೇಗೋ ಕಾಪಾಡಿದ. ಸೋಮವಾರ ಒಳಕ್ಕೆ ಬರುತ್ತಾಳೆ. ಆದರೆ ವಿಷಯ ಗೊತ್ತಲ್ಲಾ. ನಿಮ್ಮಜ್ಜಂದು. ಆದ್ದ್ರಿಂದ ಮುಂದಿನ ಶನಿವಾರ 12ನೇ ತಾರೀಖು ತೊಟ್ಟಿಲುಶಾಸ್ತ್ರ ಎಲ್ಲಾ ನಡಸಬೇಕು. ನೀನು ಖಂಡಿತಾ ಬಾ. ಮಕ್ಕಳಿಗೂ ಹೇಳು...ಈಗ ನಿನ್ನ ಅಮ್ಮಂಗೆ ಉಸಿರು ಬಿಟ್ಟು ತೆಗೆದುಕೊಳ್ಳಲೂ ಪುರಸತ್ತಿಲ್ಲಾ.

ಬರೀ ಅಮ್ಮಂಗೇ ಅಲ್ಲಾ. ನಂಗೂ ಹಾಗೇ. ಗದ್ದೇಗೆಲ್ಲಾ ನೀರಾಗಿದೆ. ಈಗೀಗ ಅಗೆ ಹಾಕಿದ್ದೇವೆ. ಹಕ್ಕಿ ಕಾಯಬೇಕು. ಗದ್ದೆ ತೆವರು ತೆಗೀಬೇಕು. ಕೂಲಿ ಯಾರೂ ಸಿಕ್ಕಲ್ಲಾ. ಎಷ್ಟು ಮಾಡಿದರೂ ಮುಗಿಯೋಲ್ಲಾ. ಶಕ್ತಿ ಸಾಲದು. ಏನು ಮಾಡಲಿ. ತುಂಬಾ ಕಷ್ಟವಾಗಿದೆ. ಬಿಡೋಣಾಂದ್ರೆ ಮನಸ್ಸಿಲ್ಲಾ. ಅನುಭವಿಸಬೇಕಾಗಿದೆ. ಇರಲಿ, ಏನೇ ತೊಂದರೆ ಇದ್ರೂ ಒಂದು ದಿನಕ್ಕಾದರೂ ಖಂಡಿತಾ ಬಂದುಹೋಗು...

ಇನ್ನೇನೂ ಹೆಚ್ಚಿಲ್ಲಾ. ಇಂತು ಆಶೀರ್ವಾದಗಳು.

ಶಾಸ್ತ್ರ - ಸಂಪ್ರದಾಯಗಳು ಕಾಲನಿಗದಿತ. ಆದರೆ ನಾನಾ ಕಾರಣಗಳಿಂದ ಅವು ಹಿಂಚುಮುಂಚಾಗುತ್ತವೆ. ಅಂಥ ಒಂದು ನಿದರ್ಶನ ಇಲ್ಲಿದೆ. ಪ್ರಕೃತ ಪತ್ರಕಾರನು ವೃದ್ಧನಾದರೂ ವ್ಯವಸಾಯಾದಿಗಳಲ್ಲಿ ನಿರತನಾಗಿ ಶ್ರಮಪಡುವುದು ಅನಿವಾರ್ಯವೆನ್ನುವುದು ಕಾಣುತ್ತದೆ. ಅಷ್ಟರ ನಡುವೆಯೂ ಪುಂಶಿಶುವಿನ ಜನನ ಆತನಲ್ಲಿ ಸಂಭ್ರಮ ಮೂಡಿಸಿದೆ. ಅದು ಅವನಲ್ಲಿ ಹೊಸ ಚೈತನ್ಯ ಮೂಡಿಸಿದೆ. ಪತ್ರದ ಭಾಷೆಯಲ್ಲೂ ಅದು ವ್ಯಕ್ತವಾಗಿದೆ.

ಱ*

ಜನ್ಮಕುಂಡಲಿ (ಕವರು)

ಶುಭಮಸ್ತು

ಜನನೀಜನ್ಮಸೌಖ್ಯಾನಾಂ ವರ್ಧನೀ ಕುಲಸಂಪದಾಮ್ ।

ಪದವೀ ಪೂರ್ವಪೂಣ್ಯಾನಾಂ ಲಿಖ್ಯತೇ ಜನ್ಮಪತ್ರಿಕಾ||

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನಶಕ ಗತಾಬ್ದಾಃ ೧೮೫೯ ಶ್ರೀಮದೀಶ್ವರ ನಾಮ ಸಂವತ್ಸರದ ಚೈತ್ರಮಾಸದ ಕೃಷ್ಣ ಪಕ್ಷ (29-4-1937) ಗುರುವಾರ ಚತುರ್ಥಿ ೫೩-೪ ಜ್ಯೇಷ್ಠಾನಕ್ಷತ್ರ ೩೨-೭ ಪರಿಘ ನಾಮ ಯೋಗ ೨೦-೨೦ ಬವ ಕರಣ ೨೦-೪೪ ಮೇಷಮಾಸ ತೇದಿ 17 ಈ ಶುಭದಿನದಲ್ಲಿ ಉದಯಾದಿ 12-58 ಘಟಿಕಾ ಸಮಯದಲ್ಲಿ... ಹಳ್ಳಿಯ... ನವರ ಮಗ...ಯ ಧರ್ಮಪತ್ನಿ ಸೌ|| ಹ|| ಕುಂ ಶೋಭಿತೆಯಾದ...ಮ್ಮನ ಗರ್ಭಸುಧಾಂಬುಧಿಯಲ್ಲಿ ಚಿ||...ಮ್ಮನ ಜನನ.

---

* ವಿಷಯ/ಭಾಷೆ/ಸನ್ನಿವೇಶದ ಮರುಘಟ್ಟ : ಕಾಲಾನುಕ್ರಮದ ಮರುಹೊಂದಾಣಿಕೆ

ಶುಕ್ರ ಶನಿ	ರವಿ ಹರ್ಷಲ್	ಬುಧ ಕೇತು	ಮಾಂದಿ
	ರಾಶಿಕುಂಡಲಿ		ಲಗ್ನ
ಗುರು			ನೆಪ್ಚೂನ್
	ಕುಜ ಚಂದ್ರ, ರಾಹು		

ಶುಕ್ರ ಮಾಂದಿ			
ಚಂದ್ರ ಗುರು ರಾಹು	ಅಂಶಕುಂಡಲಿ		ಲಗ್ನ
ಬುಧ			ರವಿ ಹರ್ಷಲ್ ಕೇತು
	ನೆಪ್ಚೂನ್	ಕುಜ	ಶನಿ

೬

ಮಗುವಿನ ಆಟ

ಅತ್ತಿಗೆಗೆ ನಾದಿನಿಯ ಅಂತರ್ದೇಶೀಯ ಪತ್ರ

ಹಾಸನ ಜಿಲ್ಲೆ

24-3-81

...ಚಿ. ರಾಣಿ ಆರೋಗ್ಯವಾಗಿದ್ದಾಳೆ. ಅವಳು ಭಾಗಿಯನ್ನು ಏನಾದರೂ ತಿನ್ನುವ ಪದಾರ್ಥ ಕೇಳುವಾಗ ದೊಡ್ಡಮ್ಮ ಎನ್ನುವ ಬದಲು ಅತ್ತ ಅತ್ತ ಅತ್ತ ಎಂದು 4-6 ಬಾರಿ ಅನ್ನುತ್ತಾಳೆ. ಅಲ್ಲಿಂದ ಬಂದಮೇಲೆ ಅವಳಿಗೆ ನಮ್ಮ ಮನೆಯೇ ಬೇಜಾರಾಗಿ ಸದಾ ಅವರ ದೊಡ್ಡಮ್ಮನ ಮನೆಯಲ್ಲೇ ಶೀನಿ, ಸುಬ್ಬು, ಲಕ್ಷ್ಮಿಯ ಜೊತೆ ಆಟವಾಡುತ್ತಾಳೆ.

'ಚೆನ್ನ ಮಲ್ಲಕ್ಕ ಡ್ಯಾನ್ಸ್ ಆಡು' ಎಂದರೆ ನನ್ನನ್ನೇ 'ನೀನೂ ಆಡು' ಅಂತಾಳೆ. ಅವಳೊಬ್ಬಳೇ ಆಡುವುದಿಲ್ಲ. ಲಕ್ಷ್ಮಿಯನ್ನಾದರೂ ಕರೆಯುತ್ತಾಳೆ. ಕೆಲವೊಮ್ಮೆ ಇದ್ದಕ್ಕಿದ್ದಂತೆ ಶಿಸ್ತಾಗಿ ವಾಂತಿ ಶುರು ಮಾಡುತ್ತಾಳೆ. ಮಾತಂತೂ ಕೇಳಲೇ ಬೇಡಿ. ವಿಪರೀತವಾಗಿದೆ. ಇದು ನನ್ನ ಜಗುಲಿ, ಇದು ನನ್ನ ಕಂಭ ಅಂತ ಜಗಳ ಮಾಡ್ತಾಳೆ. ನನಗೆ ನಾಳೆ ನೀರು. ಅವಳು ಅವರ ದೊಡ್ಡಮ್ಮನ ಮನೆಯಲ್ಲೇ ಇದ್ದಾಳೆ. ಅಲ್ಲೇ ಮಲಗುತ್ತಾಳೆ. ಎಲ್ಲ ಮಾತಿಗೂ "ಅಣ್ಣಕ್ ಚೊಲ್ಲಣಿ. ಕುಡುಮತ್ತೆ...."+ ಅಂತಾಳೆ. ಮುದ್ದಾಡಿದರೂ "ಅಣ್ಣಕ್ ಚೊಲ್ಲಣಿ" ಅಂತಾಳೆ. ದಾರಿ ತಪ್ಪಿ ಒಮ್ಮೆ ಮನೆಗೆ ಬಂದರೂ 'ಅಣ್ಣ ಅಂಗೇ' ಅಂತಾಳೆ. "ಇಲ್ಲ , ಅವರು ತೋಟಕ್ಕೆ ಹೋಗಿದಾರೆ" ಅಂದರೆ ಇನ್ನು ಒಳಕ್ಕೂ ಬರುವುದಿಲ್ಲ. ಅವಳ ದೊಡ್ಡಮ್ಮನ ಮನೆಗೆ ಹೋಗ್ತಾಳೆ. "ಈಗ ಯಾಕೆ ? ಬಾ" ಅಂದರೆ 'ಚೊಲ್ಲಿ ವರಣಿ, ತಡಿ' ಅಂತಾಳೆ. ಹೀಗೆ ವಿಪರೀತವಾಗಿದೆ ಅವಳ ತುಂಟಾಟ.

ಇಲ್ಲಿ ಉದ್ಧರಣಗಳು ಮಾತ್ರ ಸಂಕೇತಿ ಭಾಷೆಯಲ್ಲಿವೆ ಎಂಬುದನ್ನು ಗಮನಿಸಬಹುದು. ಉಳಿದಂತೆ ಎಲ್ಲ ಪತ್ರಗಳೂ ಇರುವುದು ಕನ್ನಡದಲ್ಲೇ. ಬಹುತೇಕ ಹೆಣ್ಣುಮಕ್ಕಳು ಪತ್ರವ್ಯವಹಾರಕ್ಕೆ ತೊಡಗಿಕೊಂಡದ್ದು ಸ್ವಾತಂತ್ರ್ಯೋತ್ತರ ಭಾರತದಲ್ಲಿ.

೭*

ಚೌಲಸಂಸ್ಕಾರ

ಮಧ್ಯದೇಶದ ಹಳ್ಳಿಯಿಂದ ಮೈಸೂರಿಗೆ ಬರೆದ ಕಾರ್ಡು

27-5-38

ಚಿ।...ಗೆ...ಉಪಾಧ್ಯಾಯನ ಆಶೀರ್ವಾದಗಳು.

...ಇದೇ ಬಹುಧಾನ್ಯ ನಾಮ ಸಂವತ್ಸರದ ಜ್ಯೇಷ್ಠ ಶುದ್ಧ ತದಿಗೆ ಬುಧವಾರ ನನ್ನ ಮಗ ಚಿ..... ಉಪಾಧ್ಯಾಯನ ಮಗ ಚಿ॥ ರಾ॥...ಗೆ ಚೌಲ ಪ್ರಸ್ತವನ್ನು ಹಿರಿಯರು ನಿಶ್ಚಯಿಸಿರುವುದರಿಂದ ಈ ಶುಭಮುಹೂರ್ತಕ್ಕೆ ನೀನು ಖಂಡಿತ 2 ದಿವಸ ಮುಂಚಿತವಾಗಿ ಬಂದು ಶಿಶುವಿಗೆ ಆಶೀರ್ವಾದ ಮಾಡಿ ನನ್ನ ಮನಸ್ಸಂತೋಷಪಡಿಸುತ್ತೀಯೆಂತ ನಂಬಿರುತ್ತೇನೆ. ಉದಾಸೀನ ಮಾಡದೆ ಒಂದು ದಿವಸಕ್ಕಾದರೂ ರಜಾ ತೆಗೆದುಕೊಂಡು ಖಂಡಿತ ಬರತಕ್ಕದ್ದು. ಉದಾಸೀನ ಮಾಡಲಾಗದು. ಮತ್ತು...ಗೂ...ಗಳಿಗೂ ಬರುವಂತೆ ತಿಳಿಸತಕ್ಕದ್ದು... ಅವಧಾನಿಗಳ ಮನೆಯಲ್ಲೂ...ಶಾಸ್ತ್ರಿಗಳ ಮನೆಯಲ್ಲೂ ಎಲ್ಲರೂ ಖಂಡಿತ ಬರುವಂತೆ ಕರೆಯುವುದು. ಉದಾಸೀನಬೇಡ.

ಇತಿ ಆಶೀರ್ವಾದಗಳು

ಎಂಟು ದಿನ ಇಲ್ಲವೆ ನಾಲ್ಕು ದಿನ ಮುಂಚಿತವಾಗಿ ಬರಬೇಕೆಂದು ಆಹ್ವಾನಿಸುತ್ತಿದ್ದುದು ರೂಢಿ. ವಿದ್ಯಾರ್ಥಿಗಳಿಗೆ ಇಲ್ಲವೆ ನೌಕರಿಯಲ್ಲಿರುವವರಿಗೆ ಒಂದು ದಿನದ ಮಟ್ಟಿಗಾದರೂ ರಜಾ ಪಡೆದು ಬರುವಂತೆ ಆಹ್ವಾನಿಸತೊಡಗಿದ್ದು ಒಂದು ದೊಡ್ಡ ಬದಲಾವಣೆ. ಅಲ್ಲದೆ, ಆವರೆಗೆ ತಾವೇ ಖುದ್ದಾಗಿ ಹೋಗಿ ಆಹ್ವಾನಿಸದಿದ್ದರೆ ಅಪಮಾನವೆಂದು ಬಗೆದಿದ್ದವರು, ನಗರ ಗಳಿಗೆ ಹೋಗಲಾಗದೆ ಆಪ್ತರ ಮೂಲಕ ಕರೆಸಲೂ ಆರಂಭಿಸಿದರು.

+ ಅಪ್ಪನಿಗೆ ಹೇಳುತ್ತೇನೆ, ಕೊಡು ಮತ್ತೆ, ಅಪ್ಪ ಎಲ್ಲಿ? ಹೇಳಿಬರುತ್ತೇನೆ, ತಡಿ.

೮
ಶುಭಪಸ್ತ (ಚೌಲಕ್ಕೆ ಆಹ್ವಾನ)

ಕುಶಲ ಶ್ರೀ ತಾ 23-3-50

ಹಾಸನಸೀಮೆಯ ಹಳ್ಳಿ

ಚಿ॥...ನೀಗೆ...ನು ಮಾಡೂವ ಅನೇಕ ಆಶೀರ್ವಾದಗಳು. ಅದಾಗಿ ಇವರೀಗೆ ಇಲ್ಲಿ ಇರೂವಂತ್ಥಾ ಚಿ॥ ಆದಿಯಾಗಿ ಸರ್ವರೊಡನೆ ನಾನೂ ಕ್ಷೇಮ. ಅಲ್ಲಿ ಇರೂವಂತ್ಥಾ ಚಿ॥ ಆದಿಯಾಗಿ ಸರ್ವರೊಡನೆ ನಿಮ್ಮಗಳ ಆಯುರಾರೋಗ್ಯಂಗಳೀಗೆ ಆಗಿಂದಾಗ್ಯೆ ಕುಶಲಪತ್ರಿಕ ಬರಸುತ್ತಾ ಬರೂವದು ಸಾಂಪ್ರತ.

ಇದೆ ಚೈತ್ರ ಶುದ್ಧ ದಶಮಿ ಬುಧವಾರ ಚಿ॥...ಗೆ ಚೌಲ ಪಸ್ತ ಅಕ್ಷರಾಭ್ಯಾಸವು ನಡಿಯಬೇಕೆಂದು ನಿಶ್ಚಯಾ ಮಾಡಿಕ್ಕೊಂಡು ಇರೂವದ್ದರಿಂದ ಇ ಶುಭಪಸ್ತಕ್ಕೆ ತಾವು ಸಕುಟುಂಬ ಸಪರಿವಾರ ಸಮೇತರಾಗಿ ಬಂದು ಚಿ॥ ಪಸ್ಥ ಬೆಳಿಸಿ ಆಶೀರ್ವಾದ ಮಾಡಿ ನಮ್ಮಗಳ ಮನಸ್ಸಂತೋಷಪಡಿಸಬೇಕಾಗಿ ಕೋರುತ್ತೇನೆ... ಭಾನುವಾರ ಪಯಾಣ ಬೆಳಿಸಿ ಖಂಡಿತ ಬರುತ್ತೀರಾಗಿ ನಂಬಿ ಇರುತ್ತೇನೆ.

ಇತಿ ಆಶೀರ್ವಾದಗಳು

'ಪಸ್ತ' ಎನ್ನುವುದು ಮಂಗಳಕಾರ್ಯವನ್ನು ಸೂಚಿಸುವ ಪದ. ಪಸ್ತೂ ಪ್ರಯೋಜನೂ, ಕನ್ನಾಲೂ ಕಾರ್ತೀಕ್ಯ, ಕನ್ನಾಲು ಉಪನಯನು, ಚೌಲೂ ಪಸ್ತೂ ...... ಇವು ಅಂಥ ಕೆಲವು ಜೋಡಿ ಪದಗಳು. ಪಸ್ತ ಎನ್ನುವ ಪದವು nuptials ಎಂಬ ಅರ್ಥದಲ್ಲೂ ಬಳಕೆಯಲ್ಲಿದೆ. ಪತ್ರಕ್ಕೆ ಅರಿಶಿನ ಹಚ್ಚಿದೆ.

೯*
ಮಗನ ಉಪನಯನ

ಮಾವನು ಅಳಿಯನಿಗೆ ಬರೆದ ಕಾರ್ಡು

ಕುಶಲ ಶ್ರೀ 3-2-49

ಹಾಸನಸೀಮೆಯ ಹಳ್ಳಿ

ಚಿರಂಜೀವಿ...ಗೆ...ನು ಮಾಡುವ ಅನೇಕ ಆಶೀರ್ವಾದಗಳು. ಅದಾಗಿ ಯೀವರೀಗೆ ಇಲ್ಲಿ ಸರ್ವರೊಡನೆ ನಾನೂ ಕ್ಷೇಮ. ಅಲ್ಲಿ ಸರ್ವರೊಡನೆ ನಿಮ್ಮಗಳ ಆಯುರಾರೋಗ್ಯಂಗಳಿಗೆ ಆಗಿಂದಾಗ್ಯೆ ಕುಶಲಪತ್ರಿಕಾ ಬರಸುತ್ತಾ ಬರೂವದು ಸಾಂಪ್ರತ. ಯಿದೇ ಮಾಘ ಶುದ್ಧ ತ್ರಯೋದಶಿ ಶುಕ್ರವಾರ ಚಿ॥ ರಾಜೇಶ್ರೀ...ಗೆ ವುಪನಯನಲಗ್ನವು ನಡಿಯಬೇಕೆಂದು ನಿಶ್ಚಯ ಮಾಡಿ ಇರುತ್ತೆ. ಯೀ ಶುಭ ಮುಹೂರ್ತಕ್ಕೆ ಯರಡು ದಿವ್ಸ ಮುಂಚಿತವಾಗಿಯೇ ಸರ್ವರನ್ನೂ ಕರದುಕೊಂಡು ಬಂದು ಬ್ರಹ್ಮೋಪದೇಶವುಪನಯನ ಮುಹೂರ್ತವನ್ನು ನಡಿಸಿ ವಟುವಿಗೆ ಆಶೀರ್ವಾದ ಮಾಡಿ ನಮ್ಮಗಳ ಮನಸ್ಸಂತೋಷಪಡಿಸಬೇಕಾಗಿ ಇತ್ಯಾದಿ ವಿವರಗಳೂ.

ಇತಿ ಆಶೀರ್ವಾದಗಳು

ಯೀವರೀಗೆ, ಯಿದೇ, ಯೀ, ಯರಡು ಇಂಥ ಪದಪ್ರಯೋಗಗಳು ೧೯೪೦ರ ಕಾಲದಲ್ಲಿ ಕೆಲವರಲ್ಲಿತ್ತು.

ತಮ್ಮ ಕ್ಷೇಮವನ್ನು ತಿಳಿಸಿ ಅನಂತರ ಉದ್ದಿಷ್ಟರ ಕ್ಷೇಮವನ್ನು ನಿರೀಕ್ಷಿಸುವುದು, ಆಶೀರ್ವಾದ ಇಲ್ಲವೆ ನಮಸ್ಕಾರ ತಲುಪಿಸುವುದು ಎಲ್ಲ ಪತ್ರಗಳ ರೀತಿ. ಕಿರಿಯರಿಗೂ ಇಲ್ಲಿ 'ಆದೇಶ' ಇಲ್ಲ, ಬದಲಿಗೆ 'ಬರಸುತ್ತಾ ಬರುವುದು' ಎಂಬ ವಿನಮ್ರ ಸೂಚನೆ ಇದೆ.

ಸಂಸ್ಕಾರ ಸಂದರ್ಭಗಳು ಬಂಧುಮಿತ್ರರು ಕಲೆತು ಸಾವಕಾಶವಾಗಿ ಮಾತಾಡಿ, ಊಟಮಾಡಿ, ನಕ್ಕುನಲಿಯಲು ಇದ್ದ ಅವಕಾಶಗಳು. ಯಾವ ಸೌಲಭ್ಯಗಳಾಗಲೀ ಇತರ ಮನೋರಂಜನೆಯ ಸಾಧನಗಳಾಗಲೀ ಇಲ್ಲದಿದ್ದ ಮತ್ತು ಬಂಧುತ್ವವು ಗಾಢವಾಗಿ ಬಳಕೆಯಾಗುತ್ತಿದ್ದ ದಿನಗಳಲ್ಲಿ ಎಂಟುದಿನ/ ಎರಡುದಿನ ಮುಂಚಿತವಾಗಿ ಬರುವಂತೆ ಆಹ್ವಾನಿಸುವ ರೂಢಿ ಇತ್ತು. ಪತ್ರದ ಕೊನೆಯಲ್ಲಿ 'ಪ್ರಾರ್ಥನೆ' ಮಾಡುವುದನ್ನು ತಪ್ಪಿಸಿ ಅಳಿಯಂದಿರಿಗೆ 'ಆದೇಶ' ನೀಡುವುದನ್ನೂ ಬಿಟ್ಟು 'ಇತ್ಯಾದಿ ವಿವರಗಳು' ಎಂದು ಮುಗಿಸಿರುವುದನ್ನು ಗಮನಿಸಬಹುದು.

ಇತ್ತೀಚೆಗೆ ಆಹ್ವಾನಪತ್ರಗಳು ಕ್ರಮಬದ್ಧವಾಗಿ ಮುದ್ರಣಗೊಳ್ಳುತ್ತಿವೆ. ಅದಕ್ಕೆ ಮೊದಲು, ಪತ್ರಗಳಲ್ಲಿ ಆಹ್ವಾನ ನೀಡುತ್ತಿದ್ದ ರೀತಿಯ ಒಕ್ಕಣೆ ಇಲ್ಲಿದೆ. ಪತ್ರಕ್ಕೆ ಅರಿಶಿನ ಹಚ್ಚಿದೆ.

೧೦
ಮಮ್ಮಗನ ಉಪನಯನ

ಆಧುನಿಕ ವಿದ್ಯೆ ಪಡೆದು ಅಧ್ಯಾಪಕರಾಗಿದ್ದವರ ಕಾರ್ಡು

ಕ್ಷೇಮ ಶ್ರೀ ಲಕ್ಷ್ಮೀಕೇಶವ ಪ್ರಸನ್ನ ಬೆಂಗಳೂರು

ತಾ 3.5.82

ಚಿ॥...ಗೆ ಅನಂತ ಆಶೀರ್ವಾದಗಳು. ಅದಾಗಿ ಈವರಿಗೆ ಉ.ಕು.ಸಂ. ಇಲ್ಲಿ ನಾವೆಲ್ಲರೂ ಆರೋಗ್ಯ. ನಿಮ್ಮೆಲ್ಲರ ಆರೋಗ್ಯಕ್ಕೆ ಕಾಗದ ಬರೆಯುವುದು.

ಸ್ವಸ್ತಿಶ್ರೀ ಇದೇ ದುಂದುಭಿ ನಾಮ ಸಂವತ್ಸರದ ಜ್ಯೇಷ್ಠ ಶುಕ್ಲ ಪಂಚಮಿ ಗುರುವಾರ (ತಾ॥ 27.5.82) 11.30 ಘಂ. ಯಿಂದ 12.00 ಘಂ.ಯೊಳಗೆ ಸಲ್ಲುವ ಸಿಂಹಲಗ್ನ ಶುಭಾಂಶದಲ್ಲಿ ನನ್ನ ಹಿರಿಯ ಮಗ... ನ ಪುತ್ರ ಚಿ॥ ...ಗೆ ಬೆಂಗಳೂರಿನಲ್ಲಿ ಸ್ವಗೃಹದಲ್ಲಿ (ವಿಳಾಸವಿದೆ) ಬ್ರಹ್ಮೋಪದೇಶವನ್ನು ಕೊಡಲು ಶ್ರೀಕುಲಸ್ವಾಮಿ ಪ್ರೇರಣೆ ಪೂರ್ವಕ ಗುರುಹಿರಿಯರು ನಿಶ್ಚಯಿಸಿರುತ್ತಾರಾಗಿ ಚಿ॥ ಗಳಾದಿಯಾಗಿ ಎಲ್ಲರನ್ನೂ ಕರೆದುಕೊಂಡು ಎರಡು ದಿವಸ ಮುಂಚಿತವಾಗಿ ಬಂದು ಶುಭಕಾರ್ಯವನ್ನು ನೆರವೇರಿಸಿ ವಟುವಿಗೆ ಆಶೀರ್ವದಿಸಬೇಕಾಗಿ ಕೋರುತ್ತೇನೆ.

ಇತಿ ಆಶೀರ್ವಾದಗಳು

ಪತ್ರ ಸಂ. ೮, ೯, ೧೦ರ ವ್ಯತ್ಯಾಸಗಳನ್ನು ಗಮನಿಸಬಹುದು. ಲಗ್ನದ ವಿವರಗಳು ಇಂಗ್ಲಿಷ್ ತಾರೀಖಿನೊಂದಿಗೂ ಇಲ್ಲಿ ನಮೂದಾಗಿವೆ. ಕುಲಸ್ವಾಮಿಯನ್ನು ಅವಶ್ಯವಾಗಿ ನೆನೆದಿದ್ದಾರೆ. 1982ರ ವೇಳೆಗೆ ವಿವಾಹಗಳೇ ಒಂದು ದಿನದಲ್ಲಿ ಮುಗಿಯುವ ಪರಿಪಾಠ ಮೊದಲಾಗಿತ್ತು. ಆದರೂ ಎರಡುದಿನ ಮುಂಚೆ ಬರುವಂತೆ ಸಾಂಪ್ರದಾಯಿಕ ಆಹ್ವಾನ ಇಲ್ಲಿ ಮುಂದುವರಿದಿದೆ. ವೃದ್ಧರಾದರೂ 'ಕೋರಿಕೆ' ಸಲ್ಲಿಸಿದ್ದಾರೆ. ಅಚ್ಚುಕಟ್ಟಾಗಿ, ಹಿತಮಿತವಾಗಿ, ಎಲ್ಲ ವಿವರಗಳನ್ನೂ ಒಳಗೊಂಡು ಕ್ಷೇಮಾಶೀರ್ವಾದಗಳನ್ನು ಪೂರೈಸುವ ಪತ್ರ ಇದು. ಪರಂಪರೆ ಮತ್ತು ಹೊಸ ಸಂವೇದನೆಗಳ ಸಂಗಮ ಇಲ್ಲಿದೆ. ಪತ್ರಕ್ಕೆ ಅರಿಶಿನ ಹಚ್ಚಿದೆ.

ಗುಚ್ಛ - 2
ಅಧ್ಯಯನ

ಆರು ದಶಕಗಳ ಪತ್ರಗಳನ್ನು ಇಲ್ಲಿ ಕಾಲಾನುಕ್ರಮದಲ್ಲಿ ಕೊಟ್ಟಿದೆ. ವಿದ್ಯಾರ್ಥಿಗಳ ಸಮಸ್ಯೆಗಳು ಕಾಲಕಾಲಕ್ಕೆ ಹೇಗೆ ಭಿನ್ನವಾದವು ಮತ್ತು ಪರಿಹಾರವಾದವು ಎಂಬುದನ್ನು ಇವುಗಳಲ್ಲಿ ನೋಡಬಹುದು. ವಿದ್ಯಾರ್ಥಿಗಳ ಕಲಿಕೆಯ ಕಾಳಜಿ, ಪೋಷಕರ ಆತಂಕ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಸಂಕೀರ್ಣ ಸಂಗತಿಗಳ ಪ್ರಪಂಚವೊಂದು ಈ ಪತ್ರಗಳಲ್ಲಿ ತೆರೆದುಕೊಳ್ಳುತ್ತದೆ.

೧೧

ಭಿಕ್ಷಾನ್ನದವರು

ವಸತಿಸಮಸ್ಯೆ ಕುರಿತು, ವಿದ್ಯಾರ್ಥಿಯು ತಂದೆಗೆ ಬರೆದ ಕಾರ್ಡು

ಶ್ರೀ ನಗರ

ತಾ 30-11-21

ನಿಮ್ಮ ಆಶೀರ್ವಾದ ಪತ್ರಿಕೆಯು ಬಂತು. ನಿದ್ದೆಯನ್ನೂ ಅನ್ನವನ್ನೂ ಬಿಡಬೇಕೆಂದೇನೂ ನಾನು ಹೇಳಿಲ್ಲ. ನನಗೆ ವಿವೇಕವಿಲ್ಲೆಂಬುದು ಲೋಕವಿದಿತವಾಗಿಯೇ ಇದೆ. ನೀವು... ರವರಿಗೆ ಕಾಗದ ಬರೆದಿದ್ದಂತೆ ಗೋಪದ್ಮವ್ರತಕ್ಕೆ ಅಲ್ಲಿಗೆ ಅವರ ಹೆಂಡತಿಯನ್ನು ಕರೆದುಕೊಂಡು ಹೋಗು, ನಿಮ್ಮ ಮನೆಯವರನ್ನೂ ನೋಡಿದಂತಾಗುತ್ತೆ ಎನ್ನಲು ನಾನು ಇದು ಪಾಠದ ಕಾಲವಾದ್ದರಿಂದ ನನಗೀಗ ಹೋಗಲಾಗುವುದಿಲ್ಲೆನಲು ಅವರಿಗೆ ಸಿಟ್ಟು ಬಂತು. ನಾನು ಮೈಸೂರಿಗೆ ಬಂದಂದಿನಿಂದ ಅವರು ಬಹಿಷ್ಠೆಯಾದರೆಂದರೆ ನಾನೇ ದೊಡ್ಡಕೆರೆಗೆ ಮಡಿಯನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಈಚೆಗೆ 1 ಸಲ ನನಗೆ ಬಹಳ ಬರವಣಿಗೆ ಕೆಲಸವಿದ್ದುದರಿಂದ ನಾನು ಹೋಗಲಿಲ್ಲ. ಇದು ಅವರನ್ನು ಮತ್ತೂ ಸಿಟ್ಟಿಗೆಬ್ಬಿಸಿತು. ಮನೆಯಲ್ಲಿದ್ದುಕೊಂಡು ಸಮಯದಲ್ಲಿ ಉಪಕಾರ ಮಾಡುವುದಿಲ್ಲೆಂದು ಚನ್ನಾಗಿ ಬೈದು ನೀನು ಈ ದಿನ 12 ಗಂಟೆ ಯೊಳಗಾಗಿ ಬೇರೆ ಕಡೆಗೆ ಹೋಗದಿದ್ದರೆ ಎಲ್ಲವನ್ನೂ ಕಿತ್ತು ಬಿಸಾಡುತ್ತೇನೆ ಎನಲು ನಾನು ತೀ॥ ರವರನ್ನು ಕಾಣಲು ಸದ್ವಿದ್ಯಾ ಶಾಲೆಯಲ್ಲಿರೆಂದರು. ಇದೇ ನನ್ನ ಅಪರಾಧ. ನನ್ನ ಬರವಣಿಗೆ ಯಲ್ಲಂದವಿಲ್ಲೆಂದು ನೀವು ತಿಳಿದೇ ಇಲ್ಲವೇ. ಫೀಸು ಮೊದಲಿದ್ದಂತೆಯೇ ಇದೆ. ತೀ॥ ರವರು 1 ಪಾತ್ರೆ ಕೊಟ್ಟಿದ್ದಾರೆ. ನನ್ನ ಜತೆಯಲ್ಲಿನ ಹುಡುಗರು ಭಿಕ್ಷಾನ್ನದವರಾದ್ದರಿಂದ ಭಿಕ್ಷಾನ್ನದಿಂದ ಬಂದು (ಊಟ) ಮಾಡುವ ಹೊತ್ತಿಗೆ $9^1/_2$-10 ಗಂಟೆಗಳಾಗುತ್ತೆ. 10-12 ರವರೆಗೆ ಓದುತ್ತಾರೆ. ಹಾಗೆ ನನಗೆ ಆಗುವುದಿಲ್ಲ. ಬೆಳಿಗ್ಗೆ 8 ಗಂ.ಗೆ ಏಳುತ್ತಾರೆ. ಒಂದು ವೇಳೆ ನಾನೂ 10 ರಿಂದ ಓದೋಣೆಂದರೆ ಇಲ್ಲಿ ಗಲಾಟೆಯಾಗುತ್ತೆ. ನೀನು ಮನಸ್ಸಿನಲ್ಲಿ ಓದಿದರೂ ನಮಗೆ ಅವಧಾನ ಸಾಲುವುದಿಲ್ಲ ಎನ್ನುತ್ತಾರೆ. ಒಳಗೆ ಮಲಗಲು ಜಾಗವಿಲ್ಲ. 2-3 ಜನ ಹೊರಗೇ ಮಲಗುತ್ತಾರೆ. ಇಷ್ಟೇ ವಿಚಾರ. ನನ್ನ ಮಾತಿನಲ್ಲಿ ನಂಬುಗೆ ಸಾಲದಿದ್ದರೆ ತೀ॥ ರವರನ್ನೇ ಕೇಳಿ ತಿಳಿಯಬಹುದು. ನಿಮಗೆ ಕ್ಲೇಶ ಮಾಡಬೇಕೆಂದು ನನ್ನ ಉದ್ದೇಶವಲ್ಲ. ಅಥವಾ ನಿಮ್ಮ ಕಾರ್ಡಿನಲ್ಲಿರುವಂತೆ ಬುದ್ಧಿಯೇ ಹತೋಟಿಯಲ್ಲಿಲ್ಲವೇನೋ ನನಗೊಂದೂ ತಿಳಿಯದು. ನನ್ನ ಅಂಗಿಗೋಸ್ಕರ ಪ್ರಯತ್ನ ಪಡಬೇಕಾದ್ದಿಲ್ಲಾ. ಇನ್ನೇನೂ ವಿಶೇಷವಿಲ್ಲ. ದಯವಿಟ್ಟು ನನ್ನ ವಿಜ್ಞಾಪನೆಗಳನ್ನೆಲ್ಲರಿಗೂ ತಿಳಿಸಿರಿ.

ಇಂತು ವಿಜ್ಞಾಪನೆಗಳು

ಎಳೆಯ ಬಾಲಕರು ವಿದ್ಯಾಭ್ಯಾಸಕ್ಕಾಗಿ ದೂರದ ಊರುಗಳಿಗೆ ಹೋಗತೊಡಗಿದ್ದ ಕಾಲ. ಅನ್ಯ ಪರಿಸರಗಳಿಗೆ ಹೊಂದಿಕೊಳ್ಳುವುದು ಅವರಿಗೆ ಕಷ್ಟವಾಗುತ್ತಿದ್ದಿರಬೇಕು. ಭಿಕ್ಷಾನ್ನದಿಂದ, ಅನ್ಯಾಶ್ರಯದಿಂದ ಬದುಕಬೇಕಾಗಿ ಬಂದ ವಿದ್ಯಾರ್ಥಿಗಳ ಗೋಳು ಇಲ್ಲಿದೆ. ಮುಂದೆ ಹಾಸ್ಟಲುಗಳು ರೂಢಿಗೆ ಬಂದ ಮೇಲೆ ಗೃಹಸ್ಥರಿಗೆ ತೊಂದರೆ ತಪ್ಪಿತು. ಅನ್ಯಾಶ್ರಯದ ಮುಜುಗರವೂ ಮಕ್ಕಳಿಗೆ ತಪ್ಪಿತು. ಬಹಿಷ್ಠೆ-ಮುಟ್ಟು.

೧೨
ಪುಸ್ತಕಪಟ್ಟಿ
IV form ವಿದ್ಯಾರ್ಥಿಯ ಕಾರ್ಡು

ಕ್ಷೇಮ ಶ್ರೀರಾಮ 12-12-22
ನಗರ

ತೀ॥ ರವರ ದಿವ್ಯ ಶ್ರೀಚರಣ ಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ಪ್ರಣಾಮಪೂರ್ವಕವಾದ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯಕುಶಲ ಸಂಪ್ರತಿ.

ತಮ್ಮ ಆಶೀರ್ವಾದ ಪತ್ರಿಕೆಯು ಹಸ್ತಗತವಾಯ್ತು. ವಿಷಯಗಳು ಸ್ಮೃತಿಪಥಕ್ಕೆ ಬಂದಿವೆ. ದೈವಾನುಗ್ರಹದಿಂದ ತಾವು ಸುಲಲಿತವಾಗಿ ಊರಿಗೆ ತಲಪಿದರೆಂಬ ಅಂಶವನ್ನು ತಿಳಿದ ಕೂಡಲೇ ಸಂತೋಷ ಯುಕ್ತಾದೆನಾದಾಗ್ಯೂ ಒಂದು ವಿಷಯವು ಮಾತ್ರ ನನ್ನ ಮನಸ್ಸನ್ನು ನಿರ್ಬಂಧಿಸಿದೆ-ಅದೇನೆಂದರೆ ಫಲಿತಾಂಶವು ತಿಳಿಯದಿರುವಿಕೆ.

ತತ್ಕಾಲಕ್ಕೆ ಈ ವಿಚಾರವದಂತಿರಲಿ. ತಾವು ಬರುವಾಗ ನನಗಾಗಿ ದಯೆಯಿಟ್ಟು ಈ ಕೆಳಗಣ ಪುಸ್ತಕಗಳನ್ನು ತರಬೇಕಾಗಿ ಪ್ರಾರ್ಥನೆ. ನಾನು, ನಿಮ್ಮ ಗೈರಾಜರಿಯಲ್ಲಿ ಅನೇಕ ಕಾಗದಗಳನ್ನು ಬರೆದಾಗ್ಯೂ ಯಾವತ್ತು ಕಾಗದಗಳಲ್ಲಿ 1 ಕ್ಕಾದರೂ ಉತ್ತರ ಕೊಡಲಿಲ್ಲಾದ ಕಾರಣವೇನೋ ತಿಳಿಯದೆ ವ್ಯಾಕುಲ ಚಿತ್ತನಾಗಿದೇನೆಂಬಂಶವು ಅವನಿಗೂ ತಿಳಿದಿರಬಹುದಾದಾಗ್ಯೂ ಈ ವರ್ತನೆಯು ಅನುಚಿತವು. ನನ್ನ ವಿಜ್ಞಾಪನೆಗಳನ್ನು ಮಾ॥ ಯವರಿಗೂ, ಅದರಲ್ಲೂ ತೀ॥...ಗೂ ತಿಳಿಸಬೇಕಾಗಿ ಪ್ರಾರ್ಥನೆ.

1. ಜನರಲ್ ಇಂಗ್ಲಿಷ್ (ದೊಡ್ಡದು). ಅಟ್ಟದ ಮೇಲಿದೆ.
2. ಇಂಗ್ಲಿಷ್ ಕಥೆಯ ಪುಸ್ತಕಗಳು. ತೀ॥ ರವರಲ್ಲಾದರೂ ಸರಿ.
3. ಕ್ಲಾಯಿಸ್ಟರ್ and hearth
4. Pilgrim's Progress
5. Tom Brown's school days
6. Lamb's Tales from Shakespere
7. A Tale of 2 cities
8. Uncle Tom's Cabin

ಇವುಗಳಲ್ಲದೆ ಇನ್ನಾವುದಾದರೂ ಸರಿಯೆ. ಅಂತು ಇವುಗಳನ್ನು ನೀವು ಬರುವಾಗ ದಯೆಯಿಟ್ಟು ತನ್ನಿ...

ಚಿ॥...ನಿಗೆ ನನ್ನ ಆಶೀರ್ವಾದಗಳನ್ನು ತಿಳಿಸಿ ಬುದ್ಧಿವಾದಗಳನ್ನು ತಿಳಿಸಿರಿ. ಪರೀಕ್ಷೆಯು ಇನ್ನೂ 2 ತಿಂಗಳು ಉಳಿಯಿತು.

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ
ದೈವಂ ಹಿ ದೇಯಮಿತಿ ಕಾಪುರುಷಾ ವದಂತಿ ।
ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ
ಯತ್ನೇ ಕೃತೇ ಯದಿ ನ ಸಿಧ್ಯತಿ ಕೋऽತ್ರ ದೋಷಃ ॥

ಎಂಬಂತೆ ನಾವು ಪಡುವ ಪ್ರಯತ್ನವನ್ನು ನಾವು ಪಟ್ಟರೆ ದೇವರೂ ಸಹಾಯ ಮಾಡುವನು.

ಇನ್ನೇನೂ ವಿಶೇಷವಿಲ್ಲ.

ಇತಿ ಸಾಷ್ಟಾಂಗ ಪ್ರಣಾಮಪೂರ್ವಕ ವಿಜ್ಞಾಪನೆಗಳು.

ವಿದ್ಯಾರ್ಥಿಗೆ ತನ್ನ ಜವಾಬ್ದಾರಿ ತಿಳಿದಿದೆ, ಓದಿನಲ್ಲಿ ಗಂಭೀರ ಆಸಕ್ತಿ ಬೆಳೆದಿದೆ. ನನ್ನ ತಮ್ಮನೂ ಚೆನ್ನಾಗಿ ಓದಿ ಮುಂದೆ ಬರಬೇಕೆಂಬ ತೀವ್ರ ಕಾಳಜಿ ಇದೆ.

೧೩
ಅಭ್ಯಂಗಸ್ನಾನ
ತಂದೆಗೆ ಮಗನ ಕಾರ್ಡು. ಆರ್ಥಿಕಾನುಕೂಲಕ್ಕಾಗಿ ಯತ್ನ

ಕುಶಲಂ ಶ್ರೀರಾಮ ನಗರ
ತಾ 1/8/24

...ಮೊಬಲಗನ್ನು ಮಾತ್ರ ಹಾಸ್ಟೆಲ್ ಅಡ್ರೆಸ್ಸಿಗೆ ಕಳುಹಬೇಕಾಗಿ ಪ್ರಾರ್ಥನೆ. ನಾನು ಇಲ್ಲಿ ಅಭ್ಯಂಗನಕ್ಕಾಗಿ ಒಂದು ಸಮೀಪದಲ್ಲಿರುವ ಹೋಟೆಲಿಗೆ ಸೇರಬೇಕೆಂದಿದ್ದೇನೆ. ತಿಂಗಳಿಗೆ ಎರಡು ಸಲ ಅಭ್ಯಂಗನವಾದರೆ ಮೊಬಲಗು 0-8-0. ನಾನೇ ಸ್ವಂತ ಅಡಿಗೆ ಮಾಡಿಕೊಳ್ಳುತ್ತಿದ್ದೇನೆ. ಸಾರು ಹುಳಿಗಳಿಗೆ ಹೋಟೆಲ್‌ನಿಂದ 0-0-9 ಕಾಸಿಗೆ ತರುತ್ತಿದ್ದೇನೆ. ನಮ್ಮ ಫ್ರೀಶಿಪ್ಪಿನ ವಿಚಾರದಲ್ಲಿ ಜೂನ್-ಜುಲೈಗಳಿಗೆ ಮಾತ್ರವೆಂದೂ (½ Free) ಅಲ್ಲಿಂದ ಮುಂದಿನ ವಿಚಾರವನ್ನು ಆಲೋಚಿಸಬೇಕೆಂದೂ ನೋಟೀಸು ಬಂದಿತ್ತು. ದೇವಾಸಿನಿಂದ ಏನೂ ಉತ್ತರ ಬರಲಿಲ್ಲ. ಬೆಂಗಳೂರಿನವರು ತೀ॥ ಅಜ್ಜಯ್ಯನವರಿಗೆ ಈ ಪ್ರತಿ ಕಾಗದ ಬರೆದಿದ್ದರು. "ಈ ಹುಡ್ಗ ನಿನ್ನೆ ಕಾಗದಾ ಬರೆದಿದ್ದನು. ಅವನಿಗೆ ಏನೂ ಕೊಡುತ್ತಲೇ ಇಲ್ಲವೆ ? ಹಾಗಿದ್ದರೆ ಏನಾದರೂ ಸಹಾಯ ಮಾಡುವುದೆಂದು." ಅವರು ನನ್ನನ್ನು ಪ್ರಶ್ನಿಸಲು ನಾನು ಕೊಡುತ್ತಿರುವನೆಂಬಂಶವನ್ನು ಅದರಲ್ಲಿ ಬರೆಯಲೇ ಇಲ್ಲವೆ ಎಂದು ಹೇಳಿಬಿಟ್ಟೆನು. ಆಮೇಲೆ ಅವರೂ ಸುಮ್ಮನಾದರು. ಪುನಃ ಕೂಸಿಗೆ ಅನುಕೂಲ ಮಾಡಬೇಕೆಂದು ಕೇಳೋಣವೆಂದಿದ್ದೆ. ಆದರೆ ಅವರು ಈಗ ಕಾರ್ಯಾಂತರದ ಮೇಲೆ ಬೆಂಗಳೂರಿಗೆ ಹೋಗಿದ್ದಾರೆ. ನೀವು ಏನಾದರೂ ಬರಬೇಕಾದಿದ್ದರೆ ಬರೆಯುತ್ತೇನೆ. ಸದ್ಯಕ್ಕೆ ಪ್ರಕೃತ ಬ್ರಾ.ನಿ.ಸ.ನಂದು ಇನ್ನೂ ಇತ್ಯರ್ಥವಾಗಿಲ್ಲ. ದೇವಾಸಿಗೆ ವೊಂದು ಕಾಗದ ಬರೆದರೆ ಅನುಕೂಲವೆಂದು ತೋರುತ್ತೆ. ನಾನು ಆರೋಗ್ಯವಾಗಿದೇನೆ. ತೀ॥ ಅಜ್ಜಯ್ಯನವರ ಮನೆಯಲ್ಲಿ ಎಲ್ಲರೂ

ಕುಶಲರು. ಕೇಶವಯ್ಯನಿಂದ ಯಾವ ಪುಸ್ತಕಗಳು ಸಿಗುತ್ತವೆಂಬುದು ಗೊತ್ತಾದರೆ ಇಲ್ಲಿ ಯಾವ ಪುಸ್ತಕಗಳನ್ನು ತೆಗೆದುಕೊಳ್ಳಬೇಕೆಂಬುದು ಗೊತ್ತಾಗುತ್ತದೆ. ಈಗ ವಾರಗಳು ಮೂರು ಇವೆ. ತೀ॥ ಕೃಷ್ಣಾಯರ ಮನೆ, ತೀ॥ ನಾರಾಯಣರಾಯರ ಮನೆ, ತೀ॥ ಅಜ್ಜಯ್ಯನವರ ಮನೆ. ಬಾಕಿ ವಾರಗಳು ಅಡಿಗೆ ಮಾಡಿಕೊಳ್ಳುತ್ತಿದ್ದೇನೆ. ಅದರಿಂದ ನನಗೆ ವ್ಯಾಸಾಂಗಕ್ಕೆ ತೊಂದರೆ ಇಲ್ಲ. ಇನ್ನೇನೂ ವಿಶೇಷವಿಲ್ಲಾ.

ಇತಿ ವಿಜ್ಞಾಪನೆಗಳು

ಅಭ್ಯಂಗಸ್ನಾನವು ಪಾರಂಪರಿಕ ಜೀವನದ ಮುಖ್ಯ ಭಾಗ. ಅದರ ವಿಷಯವೇ ಪ್ರತ್ಯೇಕ ನಿರೂಪಣೆಯನ್ನು ಅಪೇಕ್ಷಿಸುವಷ್ಟು ವಿಸ್ತಾರವಾದುದು. ಇಪ್ಪತ್ತನೆಯ ಶತಮಾನದ ಆದಿಭಾಗವು ಹೋಟೆಲುಗಳ ಪ್ರವೇಶಕ್ಕೆ ತೀವ್ರ ನಿಷೇಧವಿದ್ದ ಕಾಲ. ಅಭ್ಯಂಗಸ್ನಾನಕ್ಕಾಗಿ ಅದನ್ನು ಬಳಸುವಷ್ಟು ಬದಲಾವಣೆ ಇಲ್ಲಿ ಕಾಣುತ್ತದೆ. ವಾರಾನ್ನವು ವಿದ್ಯಾರ್ಥಿಗಳ ಮುಖ್ಯ ಆಸರೆಯಾಗಿತ್ತು. ಆ ಕಾಲಕ್ಕೆ ದೇವಾಸ್ ಸಂಸ್ಥಾನದಲ್ಲಿ ಸಂಕೇತಿ ಸಮುದಾಯದ ಒಬ್ಬರು ದಿವಾನರಾಗಿದ್ದರು. ವಿದ್ಯಾರ್ಥಿಯು ಅವರ ನೆರವನ್ನು ಬಯಸಿದಂತೆ ತಿಳಿಯುತ್ತದೆ.

೧೪

ಮಹಾರಾಜರ ಸಾವು (ತಂದೆಗೆ ವಿದ್ಯಾರ್ಥಿಯ ಪತ್ರ)

ತಾ 15.8.24
ನಗರ

...ಸದ್ಯದಲ್ಲಿ ಫೀಸು ಮತ್ತು ಇತರ ಖರ್ಚುಗಳಿಗೆ ದುಡ್ಡಿಲ್ಲದಿರುವುದರಿಂದ ಕೇವಲ ಕಷ್ಟಕ್ಕೇ ಬಂದಿದೆ. ಆದ್ದರಿಂದ ತಾವು ದಯೆಯಿಟ್ಟು ಈಗಲಾದರೂ ಜಾಗ್ರತೆಯಾಗಿ ಇಪ್ಪತ್ತೈದು ರೂಪಾಯಿ ಕಳುಹಿದಲ್ಲಿ ಬಹಳ ಅನುಕೂಲವಾಗುತ್ತದೆ. ಈಗ ಸದ್ಯದಲ್ಲಿ ನಾಲ್ಕು ವಾರಗಳಿವೆ. ಬಾಕಿ ಮೂರು ವಾರಗಳು ಅಡಿಗೆ ಮಾಡಿಕೊಳ್ಳಬೇಕಾಗಿದೆ. ನಾನು ಈವರಿಗೂ ನಿರೀಕ್ಷಿಸಿದ್ದಾಯ್ತು. ಆದರೂ ಉಪಯೋಗವಾಗಲಿಲ್ಲ. ಆದ್ದರಿಂಗ ಈಗ ಬರೆಯಲೇಬೇಕಾಗಿ ಬಂತು...ಇಲ್ಲಿ ಇನ್ನೇನೂ ವಿಶೇಷವಿಲ್ಲ. ತಿರುವಾಂಕೂರು ಮಹಾರಾಜರವರು ಗತಿಸಿದುದನ್ನು ಕೇಳಿ ವಿಷಾದಿಸುತ್ತೇನೆ...

ಮೈಸೂರುರಾಜ್ಯದಲ್ಲೂ ತಿರುವಾಂಕೂರು ಮಹಾರಾಜರ ಬಗೆಗೆ ಇದ್ದ ಪ್ರೀತ್ಯಾದರಗಳನ್ನು ಇದು ಸೂಚಿಸುತ್ತದೆ. ಹಲವು ಶತಮಾನಗಳ ಹಿಂದೆ ಶೆಂಕೋಟ್ಟೈ ಪ್ರಾಂತದಲ್ಲಿದ್ದ ಸಂಕೇತಿಗಳಿಗೆ ತಿರುವಾಂಕೂರು ಆಸ್ಥಾನದ ಸಂಬಂಧ ಗಾಢವಾದುದು. ತಿರುವಾಂಕೂರು ಸಂಸ್ಥಾನದ ರೂವಾರಿಯೇ ದಳವಾ ರಾಮಯ್ಯನ್ ಎಂಬ ಒಬ್ಬ ಸಂಕೇತಿ ಪುರುಷ. ಆತ ಮಂತ್ರಿಯೂ ಸೇನಾನಿಯೂ ಆಗಿದ್ದವನು.

೧೫

ತನ್ನ ಕಷ್ಟವನ್ನು ಕುರಿತು

ಓದುತ್ತಿರುವ ಬಾಲಕನು, ಹಳ್ಳಿಯ ತಂದೆಗೆ ಬರೆದಿರುವ ಕಾರ್ಡು

ಕುಶಲ ಶ್ರೀರಾಮ 30/1/29
ಬಸವನಗುಡಿ

ತೀ॥ರವರ ದಿವ್ಯ ಚರಣಸನ್ನಿಧಿಗಳಲ್ಲಿ ಬಾಲಕಕೃತಾನೇಕ ಸಾಷ್ಟಾಂಗ ವಿಜ್ಞಪ್ತಯಃ ತದುಪರಿ ಸಾಂಪ್ರತಂ.

ತಮ್ಮ ಆಶೀಃ ಪತ್ರಿಕೆಯು ತಲಪಿತು. ಎಲ್ಲರೂ ಆರೋಗ್ಯವಾಗಿರುವರೆಂಬುದನ್ನು ಕೇಳಿ ಮನಸ್ಸಂತೋಷವಾಯ್ತು. ಮಾರ್ಚ್ 18ರ ಲಾಗಾಯ್ತು ಏಪ್ರಿಲ್ ನಾಲ್ಕನೆಯ ತಾರೀಖಿನವರೆಗೆ ಪರೀಕ್ಷೆ ನಡೆಯುತ್ತದಾದುದರಿಂದ ಚಿ॥ ಮೂರ್ತಿಯ ಜತೆಯಲ್ಲಿ ನಾನೇ ಹೋಗಬೇಕಾಯಿತು.

ಪ್ರಕೃತದಲ್ಲಿ ಮಂದಭಾಗ್ಯನಾದ ನನ್ನ ವ್ಯಾಸಂಗವು ಸಮರ್ಪಕವಾಗಲು ಅವಕಾಶವಿಲ್ಲದೆ ಹೋಗಿದೆ. ನೆನ್ನೆಯಿಂದ ಸ್ವಲ್ಪ ಕಣ್ಣು ನೋವು ಉಪಕ್ರಮವಾಗಿದೆ. ಔಷಧಿ ಹಾಕಿಸುತ್ತಿದ್ದೇನೆ. ಒಟ್ಟಿನಲ್ಲಿ ನಾನು ಕೇವಲ ಅದೃಷ್ಟಹೀನನೆಂದೇ ತೋರುವುದು. ದೈವಚಿತ್ತವಿದ್ದಂತಾಗಬೇಕೇ ವಿನಾ ವೃಥಾ ಹೇಗೆ ಸಾಧ್ಯ. ಅಂತೂ ಇನ್ನೂ ಒಂದು ಒಂದೂವರೆ ತಿಂಗಳು ಹೆಣಗಿ ಓದುತ್ತೇನೆ. ನನ್ನ ಹಣೆಯ ಬರಹವಿದ್ದಂತಾಗಲಿ. ಇದಕ್ಕೆ ಯಾರೂ ಏನೂ ಮಾಡಿ ಸಾಧ್ಯವಿಲ್ಲಾ. ಯೋಚಿಸಿ ಉಪಯೋಗವಿಲ್ಲಾ...ನು ಫೆಬ್ರವರಿ ೧೫ಕ್ಕೆ ಇಲ್ಲಿಂದ ಹೊರಟು ಅಲ್ಲಿಗೆ ಬರುತ್ತಾನೆ. ಆಗಲಾದರೂ ಅವನ ಕೈಯಲ್ಲಿ ಐದು ರೂಪಾಯಿಗಳನ್ನು ಕಳುಹಿಸಿಕೊಟ್ಟರೆ ತುಂಬಾ ಅನುಕೂಲವಾಗುತ್ತದೆ. ಇಲ್ಲಿ ನ್ಯಾ. ಹೈಸ್ಕೂಲಿನಿಂದ ಬೇರೆ ವಿದ್ಯಾರ್ಥಿ ನಿಲಯವನ್ನೇರ್ಪಡಿಸುವುದಿಲ್ಲ. ಅವರಿಗೆ ಏನು ಸಾಧ್ಯವೋ ಅದನ್ನು ಇಲ್ಲಿಗೇ ಕೊಟ್ಟುಬಿಡುತ್ತಾರೆ. ಅದಕ್ಕಾಗಿ ಇತರಾಪಿ ಇನ್ನೂ ಒಂದೆರಡು ಹುಡುಗರನ್ನು ಹೆಚ್ಚಾಗಿ ತೆಗೆದುಕೊಳ್ಳಬಹುದು ಅಷ್ಟೆ. ಇನ್ನೇನೂ ಸಮಾಚಾರವಿಲ್ಲ. ಇತಿ ಸಾ॥ ವಿಜ್ಞಪ್ತಯಃ.

ಕಣ್ಣುನೋವಿಗಾಗಿ ವಿಪರೀತ ಚಿಂತೆ ಹತ್ತಿಸಿಕೊಳ್ಳಬೇಕಾದ ಕಾಲ ಮುಗಿದಿದೆ. ಆದರೆ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಇದ್ದ ವೈದ್ಯಕೀಯ ಸಾಧ್ಯತೆಗಳ ಮಿತಿಯು ಹಿನ್ನೆಲೆಯಲ್ಲಿ ಅದರ ಗುರುತ್ವವನ್ನು ಕಲ್ಪಿಸಿಕೊಳ್ಳಬಹುದು. ಚೆನ್ನಾಗಿ ಓದಿದ ವಿದ್ಯಾರ್ಥಿಯೂ ಇಂಥ ಉಪಟಳಗಳ ಕಾರಣದಿಂದ ಯಶಸ್ಸು ಕಳೆದುಕೊಳ್ಳುವುದು ಸಾಧ್ಯವಿತ್ತು. ಪ್ರಕೃತ ವಿದ್ಯಾರ್ಥಿಯು ಪದವಿ ಪಡೆದು ಒಳ್ಳೆಯ ನೌಕರಿ ಪಡೆದ ಜಾಣನೇ.

೧೬

ಎದೆಗುಂದಿದ ಮಗ (ಕಾರ್ಡು)

ಕುಶಲ ಶ್ರೀರಾಮ 13/2/29
ಬಸವನಗುಡಿ

...ಕಣ್ಣುನೋವು ಈಗ ಸಂಪೂರ್ಣವಾಗಿಯೂ ಗುಣವಾಗಿದೆ. ಆದರೂ ಪರೀಕ್ಷೆಯಲ್ಲಿ ಏನು ಮಾಡುತ್ತೇನೆಯೋ ನನಗೇ ಭರವಸೆಯಿಲ್ಲ. ಒಟ್ಟಿನಲ್ಲಿ ಕೇವಲ ಗುರುಹಿರಿಯರ ಆಶೀರ್ವಚನ ಪ್ರಭಾವದಿಂದ ಹೇಗಾದರೂ ಪಾಸಾಗಬೇಕೇ ಹೊರತು ಅನ್ಯಥಾ

ಸಾಧ್ಯವೇ ಇಲ್ಲವೆಂದು ಆಗಾಗ್ಗೆ ಮನಸ್ಸಿಗೆ ತೋರುತ್ತದೆ. ಮುಖ್ಯವಾಗಿ ನನ್ನ ಬಾಳು ನಗುವವರ ಮುಂದೆ ಎಡವಿಬಿದ್ದಹಾಗಾಗಿದೆ. ಯತ್ನವಿಲ್ಲ, ನನ್ನ ವಿಧಿ. ಯಾರೂ ಏನು ಮಾಡಿಯೂ ಸಾಧ್ಯವಿಲ್ಲಾ. ಆದರೂ 'ಯತ್ನೇಕೃತೇ' ಎಂದು ಇನ್ನೊಂದು ತಿಂಗಳ ಕಾಲ ಶ್ರಮಪಟ್ಟು ಕೆಲಸ ಮಾಡುತ್ತೇನೆ. ಇಷ್ಟರ ಮೇಲೆ ನನ್ನ ಪುರಾಕೃತ ಕರ್ಮಫಲವನ್ನನುಭವಿಸಬೇಕಾದರೂ ನಾನೇ. ಆದರೆ ನಾನು ಈಗ ನನ್ನ ಪ್ರಕೃತ ಸ್ಥಿತಿಯ ವಿಚಾರವಾಗಿ ಹೆಚ್ಚು ಗಮನ ಕೊಟ್ಟಿಲ್ಲ. ಆದುದರಿಂದ ಸಾಧ್ಯವಾದಷ್ಟು ಶಾಂತನಾಗಿ ವ್ಯಾಸಂಗ ಮಾಡುತ್ತಿದ್ದೇನೆ.

ಎಮ್ಮೆ ಯಾರಿಗೆ ? ಯಾರದು ? ಇದೇನಿದು ? ಏನು ಕಥೆ? ನಮಗೇಕೆ ಎಮ್ಮೆ ? ಇಲ್ಲಿ ಚಿ।।ಸೌ।।...ನದೇನು ? ಅಂತೂ ಏನಾದರೂ ಮಾಡಿಕೊಳ್ಳಲಿ. ನನ್ನ ಸ್ಥಿತಿಯೇ ಹೀಗಿರುವಾಗ ನಾನು ಯಾರಿಗಾದರೂ ಹೇಳುವುದು ತಾನೇ ಹೇಗೆ ? ಕಾಲಸ್ಥಿತಿಯು ಕ್ಷಣೇ ಕ್ಷಣೇ ಬದಲಾಯಿಸುತ್ತಿದೆ. ಈ ದಿನ ಇದ್ದ ಹಾಗೆ ನಾಳೆ ಇರುವುದಿಲ್ಲ. ಏನೋ ಈಗಲೇ ಎಲ್ಲಿಯಾದರೂ ಒಂದು ಜೀವನೋಪಾಯದ ವೃತ್ತಿಯನ್ನವಲಂಬಿಸಿದ್ದರೆ ಎಲ್ಲರಿಗೂ ನಿಶ್ಚಿಂತೆಯಾಗುತ್ತಿತ್ತು. ಅವನಿಷ್ಟ. ಚಿ।।...ಯಾದರೂ ಕಷ್ಟಪಟ್ಟು ವ್ಯಾಸಂಗ ಮಾಡಲಿ. ಇನ್ನೊಂದು ವಿಚಾರ. ತೀ।।...ಶಾ।।ರವರ ಕುಟುಂಬಕ್ಕೆ ತುಂಬಾ ಖಾಯಿಲೆ ಎಂದು ಕೇಳಿದೆ. ಸಮಾಚಾರವೇನು. ಬಾಂಬೆ ಅಕೌಂಟೆನ್ಸಿ ಪರೀಕ್ಷೆಯ ವಿಚಾರವನ್ನು ತಿಳಿದೆ. ಏನೂ ಅಷ್ಟು ಪ್ರೋತ್ಸಾಹಕರವಾಗಿಲ್ಲ. ಎಲ್ಲವನ್ನೂ ಮುಖತಃ ಮಾತನಾಡಬೇಕು ಅಷ್ಟೆ. ಇನ್ನೇನೂ ವಿಶೇಷವಿಲ್ಲ. ಇತಿ ಸಾ।। ವಿಜ್ಞಾಪನೆಗಳು.

'ಕರ್ಮ' ಎನ್ನುವುದನ್ನು ನಂಬಿ ಯಾರೂ ಕೈ ಕಟ್ಟಿ ಕುಳಿತಿರುವುದಿಲ್ಲ. ಬದಲಿಗೆ ಪೂರ್ಣ ಯತ್ನ ಮಾಡಿದವನು ವಿಫಲನಾದಾಗ ಹತಾಶೆಗೊಂಡು ದುರಂತಕ್ಕೆ ಈಡಾಗದಂತೆಯೂ, ಮರುಯತ್ನಕ್ಕೆ ಚೇತನವನ್ನು ತುಂಬುವಂತೆಯೂ 'ಕರ್ಮ' 'ವಿಧಿ' ತತ್ವಗಳು ನೆರವಾಗುತ್ತವೆನ್ನುವುದಕ್ಕೆ ಈ ಪತ್ರವು ಸಾಕ್ಷಿಯಾಗಿದೆ.

೧೭

ಸಂಸ್ಕೃತ ಕಲಿಯುವ ಆಸೆ

ವಿದ್ಯಾರ್ಥಿಯೊಬ್ಬನು ತನ್ನ ತಂದೆಗೆ ಬರೆದ ಕಾರ್ಡು

ಕ್ಷೇಮ ಶ್ರೀ 1.7.29

ಬೆಂಗಳೂರು

.... ನಾನು ಮೊಬಲಗನ್ನು ಶ್ರೀ।। ರಾಮರಾಯರ ಸಂಗಡ ಕೊಟ್ಟು ಅಪ್ಲಿಕೇಷರ್ಷ ಫಾರಂನ್ನೂ ಅವರ ವಶಕ್ಕೆ ಕೊಟ್ಟು ರೆಕಮೆಂಡೇಷರ್ಷ ಕೇಳಲು "ಆಗಲಿ" ಎಂದು ಅದನ್ನು ತೆಗೆದುಕೊಂಡರು. ಆದರೆ ತೀ।। ಅಣ್ಣಯ್ಯನವರು ಬರುವುದು ಇನ್ನೂ ಒಂದು ತಿಂಗಳಾದರೆ ಇಲ್ಲಿರಲು ಅನಾನುಕೂಲಗಳುಂಟು ಮತ್ತು ಇಲ್ಲಿ ಸುಲ್ತಾನ್‌ಪೇಟೆಯಲ್ಲಿ ಮಾರ್ಕೆಟ್ಟಿನಲ್ಲಿಯೂ ಸ್ವಲ್ಪ ಗಲಾಟೆಯಾಗಿರುವುದರಿಂದಲೂ ತಮ್ಮ ಮಾತನ್ನು ಕೇಳದ ಮಂದ ಮತಿಯಾದ ಮತ್ತು ದೂರಾಲೋಚನೆಯಿಲ್ಲದವನಾದ ನನ್ನನ್ನು ಕ್ಷಮಿಸಿ. ದೇವರ ದಯೆಯಿಂದ ಫ್ರೀಷಿಪ್ ಆದರೂ ಸಹ ನನ್ನನ್ನು ಕರೆದುಕೊಂಡು ಹೋಗಿ ಮೈಸೂರಿನಲ್ಲಿಯೇ ಸಂಸ್ಕೃತ ಪಾಠಶಾಲೆಗೆ ಸೇರಿಸಿ ನನ್ನನ್ನು ಕಾಪಾಡಬೇಕಾಗಿ ಬೇಡುತ್ತೇನೆ. ಇಂಗ್ಲೀಷು ಕಷ್ಟವು ಮತ್ತು ಇಲ್ಲಿ ಗಲಾಟೆಯು ದಿನೇ ದಿನೇ ಹೆಚ್ಚುತ್ತಲಿದೆ. ಆದುದರಿಂದ ಪಾಮರನಾದ ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿಯೇ ಖಂಡಿತವಾಗಿ ಸೇರಿಸಿ, ಮನಗೆಡದೆ ಕೃಪೆಯಿಟ್ಟು. ಏತಕ್ಕೋ ಹೀಗೆ ಬರೆದಿದ್ದಾನೆಂದು ಉದಾಸೀನ ಮಾಡದೆ ನನ್ನನ್ನು ಅಲ್ಲಿಗೇ ಸೇರಿಸಬೇಕಾಗಿ ಬೇಡುತ್ತೇನೆ. ಇಲ್ಲಿ ಫಂಡಿನಲ್ಲಿ ಹುಡುಗರು ಹೆಚ್ಚಾಗುತ್ತಲಿದ್ದಾರೆ. ಈಗಾಗಲೇ ಇನ್‌ಸ್ಟ್ರಾಮೆಂಟ್ ಬಾಕ್ಸಿನ ರಬ್ಬರು ಹಾಳಾಯಿತೆಂದು ತಿಳಿಸಲು ವಿಷಾದಿಸುತ್ತೇನೆ. ತಮ್ಮ ಆಗಮನವನ್ನೇ ಇದಿರು ನೋಡುತ್ತಿದ್ದೇನೆ. ಇಲ್ಲಿ ಉಪಾಧ್ಯಾಯ ಮಂಡಲಿ, ನಾನು ಎಲ್ಲರೂ ಸೌಖ್ಯವಾಗಿದ್ದೇವೆ. ಮತ್ತು ತಮ್ಮ ಕ್ಷೇಮಕ್ಕೆ ಆಶೀಃ ಪತ್ರಿಕಾ ದಯಪಾಲಿಸುವುದಲ್ಲದೆ ತಾವೂ ಬರಬೇಕಾಗಿ ಬೇಡುತ್ತೇನೆ.

ನನಗೆ ಸಂಸ್ಕೃತವನ್ನೋದಬೇಕೆಂದಿದೆ. ಆದ್ದರಿಂದ ಬಡವನ ಮೇಲೆ ದಯವಿಟ್ಟು ಇಲ್ಲಿಗೆ ಬಂದು ಖಂಡಿತ ಕರೆದುಕೊಂಡು ಹೋಗಬೇಕಾಗಿ ಬೇಡುವೆನು. ಬಾಕಿ ವಿಷಯಗಳನ್ನು ಮುಖತಃ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನೂ ಫ್ರೀಷಿಪ್ಪಿನ ವಿಷಯ ಗೊತ್ತಿಲ್ಲ.

ಇಂದಿನ ದಿನಗಳಲ್ಲಿ ರ್‍ಯಾಗಿಂಗ್‌ನಿಂದಾಗಿ ಪ್ರೌಢರೇ ವಿದ್ಯಾಭ್ಯಾಸವನ್ನು ಮೊಟಕು ಮಾಡಿಕೊಂಡ, ಆತ್ಮಹತ್ಯೆ ಮಾಡಿಕೊಂಡ ನಿದರ್ಶನಗಳಿವೆ. ಪ್ರಕೃತ ಬಾಲಕನ ಭಾಷೆಯೇ ತಿಳಿಸುವಂತೆ ಆತನು ಬಲು ಕೋಮಲ ಸ್ವಭಾವದವನು. IV ಫಾರಂನಲ್ಲಿ ಓದಲು ದೂರದ ನಗರಕ್ಕೆ ಸೇರಿದ ಬಾಲಕ. ಮೊದಲೇ ಹೆದರಿದವನ ಮೇಲೆ ಹಾವು ಬಿಟ್ಟ ಹಾಗೆ ಕೋಮುಗಲಭೆಯೂ ಭೀಕರತೆಯನ್ನುಂಟುಮಾಡಿದರೆ ಎಳೆಯ ಮನಸ್ಸು ಹೇಗೆ ವಿಲವಿಲನೆ ಒದ್ದಾಡಬೇಡ? ಹತಾಶನಾದ ಬಾಲಕನ ಪತ್ರವಿದು.

೧೮

ವ್ಯಾಕರಣದ ಬಗೆಗೆ

ಹಿರಿಯ ವಿದ್ಯಾರ್ಥಿಯೊಬ್ಬನ ಅಭಿಪ್ರಾಯದ ಕವರು

ಕುಶಲಂ ಶ್ರೀರಾಮ 1.12.30

ನಗರ

ತೀ।।ರವರ ದಿವ್ಯ ಚರಣ ಸನ್ನಿಧಿಗಳಲ್ಲಿ ಬಾಲಕಕೃತಾನೇಕ ಸಾ।। ವಿಜ್ಞಪ್ತಯಃ. ತದುಪರಿ ಉಭಯಕುಶಲಂ ಸಂಪ್ರತಿ.

ತಮ್ಮ ಕೃಪಾಪೂರ್ವಕವಾದ ಆಶೀಃ ಪತ್ರಿಕೆ ತಲಪಿತು. ಮ॥ ಕೆ.ವೆಂ...ರವರು ನನ್ನ ರೂಮಿಗೆ ಕೇವಲ 2-3 ಗಂಟೆಗಳ ಕಾಲ ಮಾತನಾಡುವುದಕ್ಕೆ ಮಾತ್ರವೇ ಬಂದಿದ್ದರು. ಅವರಕ್ಕನ ಮನೆ ಬಿಟ್ಟು ಇಲ್ಲಿಗೇಕೆ ಬಂದಾರು ? ಅಂತೂ ಆ ವಿಚಾರದಲ್ಲಿ ಏನೂ ಗಾಬರಿಯಿಲ್ಲ. ನಮ್ಮ ಸ್ಕಾಲರ್‌ಷಿಪ್ಪು ಜುಲೈ ಲಾಗಾಯ್ತು ಬರುತ್ತೆ. ಆಯಾಯಾ ತಿಂಗಳ ಸ್ಕಾಲರ್‌ಷಿಪ್ಪನ್ನು ಅದರ ಮುಂದಿನ ತಿಂಗಳು ಕೊಡುವ ಪದ್ಧತಿ. ಎಂದರೆ ಜುಲೈದು ಆಗಸ್ಟಿನಲ್ಲಿ, ಆಗಸ್ಟಿನದು ಸೆಪ್ಟಂಬರಿನಲ್ಲಿ ಹೀಗೆ. ಈ ಕ್ರಮದಿಂದ ಈಗ ಜುಲೈ ಲಾಗಾಯ್ತು ಅಕ್ಟೋಬರ್ ಪೂರ್ತಾ ಆಗುವ ನಾಲ್ಕು ತಿಂಗಳ 80 Rs ನ್ನು ಒಟ್ಟಿಗೆ ಕೊಡುತ್ತಾರೆ. ಇಂತಹ ದಿವಸ ಕೊಡುತ್ತಾರೆಂಬುದು ಇನ್ನೂ ನಿರ್ಣಯವಿಲ್ಲ. ಕೊಟ್ಟನಂತರ ಹೇಗೆ ಅನುಕೂಲವೋ ಹಾಗೆ ಮಾಡೋಣ. ಈ ನಾಲ್ಕು ತಿಂಗಳ ಸ್ಕಾಲರ್‌ಷಿಪ್ಪು ಸಂದಮೇಲೆ, ಇಲ್ಲಿಂದ ಮುಂದಕ್ಕೆ ಪೂರ್ವೋಕ್ತ ರೀತಿಯಂತೆ ತಿಂಗಳಿಗೊಂದು ಸಲ ಬಟವಾಡೆಯಾಗುತ್ತೆ. ನಾನು ನೆನ್ನೆ ತಾನೆ s.w. ರನ್ನು ನೋಡಿದೆ. ಹಿಂದಿನದಕ್ಕೆ ಮೋಸವಿಲ್ಲ ಎನ್ನುವ ಸ್ಥಿತಿ. ಹೈದರಾಬಾದಿನ ಜೋಷಿಯ ಮೌನವು ಪ್ರಾಣಸಂಕಟ ವಾಗಿದೆ. ಬೆಂಗಳೂರಿನ ಸೂಪರಿಂಟೆಂಡೆಂಟರವರಿಂದ s.w.ಗೆ ಇನ್ನು ಎರಡು ವರ್ಷ ಕಾಲಕ್ಕೆ ಬೇಕಾಗುವಷ್ಟು ಉಮೇದುವಾರರ ಹೆಸರುಗಳು ರಿಜಿಸ್ಟರಾಗಿರುವ ಪ್ರಯುಕ್ತ ನೀವು ಕೇಳುವಾತನಿಗೆ ಅವಕಾಶವಿಲ್ಲವೆಂದು ಉತ್ತರ ಬಂದಿತಂತೆ. ಸರಿ ; ನನಗೆ ಚಪಲ, s.w. ಗೆ ಧರ್ಮಸಂಕಟ. ನಾನು ಆ ಡಿವಿಜನ್ನಲ್ಲಿ ಹ್ಯಾಗೆ ? ಈ ಡಿವಿಜನ್ನಲ್ಲಿ ಹ್ಯಾಗೆ ಅಂತಾ ಕೇಳುತ್ತಾ ಬಂದೆ. s.w. ಹ್ಯಾಗಾದರೂ ಆಗಲಿ, ನೀವು ಬೊಂಬಾಯಿಗೆ ಹೋಗಲಿಕ್ಕೆ ಸಿದ್ಧ ಇದ್ದೀರಾ ಎಂದರು. ನನಗೆ ಆಗಬೇಕೋ ಹೋಗಬೇಕೋ ಎನ್ನೊ ಧೈರ್ಯ ಮನಸ್ಸಿನಲ್ಲಿ–ಹುಂ ಎಂದೆ. ಹಾಗಾದರೆ ಒಂದು ಅಪ್ಲಿಕೇಷನ್ ಬರೀರಿ, ಕಳಿಸಿ ನೋಡೋಣ ಎಂದರು. ಹು ಅಂದೆ ಬರೆದೆ. ಅದರ ತಲೆ ಮೇಲೆ "ನಾನು ಈ ಅರ್ಜಿಯನ್ನು ಕೇವಲ ವಿನಯದಿಂದಲೂ ಮರ್ಯಾದೆಯಿಂದಲೂ ಕಳುಹಿಸಿಕೊಡಲು ಅಪ್ಪಣೆ ಬೇಡುತ್ತೇನೆ" ಎಂದು ಮುಂತಾಗಿ,–ಇದರಿಂದಲಾದರೂ Bombayಯ ಪ್ರೆಸಿಡೆನ್ಸಿ ಪೋ.ಮಾ. ಮನಸ್ಸು ಕರಗೀತೋ ಅಂತ ಒಂದು ಆಶೆ–ಬರೆದಿದ್ದಾರೆ. ಅದನ್ನೂ ಈಗ ಪೋಸ್ಟ್ ಮಾಡಬೇಕು. ಅಲ್ಲದೆ ಧಾರ್ವಾಡಾ, ಬಳ್ಳಾರಿ ಜಿಲ್ಲಾ ಸೂಪರಿಂಟೆಂಡೆಂಟರು ಗಳಿಗೂ ಮೂರು ಮೂರು ಆಣೆಗೆ ಕ್ಷೌರ ಮಾಡಿಸಿಕೊಂಡಿದ್ದೇನೆ. s.w. ನನಗೆ ಬಳ್ಳಾರಿ ಸೂ॥ ಶೆಪರ್ಡ್ ಪರಿಚಯವಿಲ್ಲವೆಂದರು. ಇನ್ನೂ ನಾನು, ನೀವು ಬರೆದು ಕೊಡುತ್ತೀರಾ? ನಾನು ಹೋಗಲೇ ಅಂತ ಕೇಳಿಲ್ಲ. ಮಾತಿನ ಮೇಲೆ ಮಾತಾಡುತ್ತಾ s.w. ಹೇಳಿದರು:– ಈ ಸೂ॥ ಗಳು ಒಂದು ಕೆಲಸ ಖಾಲಿ ಬಿತ್ತೂ ಅಂದ್ರೆ ಅದನ್ನು 300-350 Rsಗೆ ಮಾರ್ತಾರೆ. ನಮಗೆ ಹೇಗೆ ಸಾಧ್ಯಾ ಆಗ್ತದೋ ಹೇಳ್ಲಿಕ್ಕಿಲ್ಲ ಎಂದರು. ಏತನ್ಮಧ್ಯೆ ರೆಕ್ರೂಟ್‌ಮೆಂಟ್ ಬೋರ್ಡಿನಲ್ಲಿ 1 ಕೆಲಸ ಖಾಲಿ ಇದೆ ಅಂತ ಗೆಜೆಟ್ಟಿನಲ್ಲಿತ್ತು.

ಸೆಕ್ರೆಟರಿಯಟ್ ಡಿಪಾರ್ಟ್‌ಮೆಂಟ್

40-5-90-6-150 ಖಾಯಂ ಕೆಲಸ.

ಸರಿ ; ಅದಕ್ಕೂ 1. ಆ. ಗೆ ಸಿದ್ಧ ಮಾಡಿದ್ದೇನೆ. ಫಲಿತಾಂಶವನ್ನು ಬೇಕಾದರೆ ಈಗಲೇ ಬರೆಯಬಹುದು. ಬರೆದರೂ ಒಂದೇ ಬಿಟ್ಟರೂ ಒಂದೇ. ಆದ್ದರಿಂದ ಬರೆಯುವುದಿಲ್ಲ. ಈಗ ನನಗೆ ಸ್ಕಾಲರ್‌ಷಿಪ್ಪು ಬಂದಿರುವುದರಿಂದ ಬ್ರಾ.ವಿ.ಸ.ಸಂ.ದಿಂದ ಏನಾದರೂ ಬರುತ್ತೆಂಬ ನಂಬಿಕೆಯಿಲ್ಲ. ತಥಾಪಿ ನಮ್ಮ ಅಪ್ಲಿಕೇಷನ್‌ಗಳು ಪ್ರಿನ್ಸಿಪಾಲರ ಮುಖಾಂತ್ರ ಹೋಗುವುದರಿಂದ ಆ ಯೋಚನೆಯಿಲ್ಲವೇ ಇಲ್ಲ. ಇದರ ಮೇಲೆ ಹೇಗಾಗುವುದೋ ನೋಡಬೇಕು.

ಅತಿಯಾಗಿ ವ್ಯಾಕರಣಕ್ಕೆ ಎದೆ ಒಡೆದುಕೊಳ್ಳುವುದು ಮಹಾ ಅವಿವೇಕ. ವ್ಯಾಕರಣವು ಸಾಹಿತ್ಯದ ತಿಳಿವಳಿಕೆಗೆ ಸಹಾಯಕಾರಿ ಯಾಗಿರಬೇಕೇ ವಿನಾ ಅದನ್ನೇ ವ್ಯಾಸಂಗ ಮಾಡುತ್ತೇನೆಂದು ಕೂತುಕೊಳ್ಳಬಾರದು. ಸಿದ್ಧಾಂತ ಕೌಮುದಿ, ಬಾಲಮನೋರಮಾ, ಮೊದಲಾದ ವ್ಯಾಕರಣ ಗ್ರಂಥಗಳಿಗೂ, ಮಮ್ಮಟ, ಕುವಲಯಾನಂದ, ರಸಗಂಗಾಧರ ಮುಂತಾದ ಲಕ್ಷಣಗ್ರಂಥಗಳಿಗೂ ನಮ್ಮ ಆಯುಷ್ಯದಲ್ಲಿ ಅತಿ ಬೆಲೆ ಬಾಳುವ ಕಾಲವನ್ನು ಹಾಳುಮಾಡಿಕೊಳ್ಳುವುದಕ್ಕಿಂತಲೂ ಬೇರೆ ದೊಡ್ಡ ತಪ್ಪು ಇದೆಯಂದೇ ನನಗೆ ತೋಚುವುದಿಲ್ಲ. ಸಂಸ್ಕೃತವನ್ನೋದುವುದು ಕಾವ್ಯ ರಸಾಸ್ವಾದನೆಗೆ. ಅದಕ್ಕೆ ತಕ್ಕಷ್ಟು ವ್ಯಾಕರಣವು ಎರಡು ಭಂ. ಗಳಲ್ಲಿಯೂ ಇದೆ (ಭಂಡಾರ್ಕರ್). ಆದ ಕಾರಣ ಅವನು ವ್ಯಾಕರಣವನ್ನೇ ಓದುವುದಾದರೆ ಮೊದಲು ಊರಿಗೆ ಬರಲಿ. ಅಲ್ಲದೆ ಸಿದ್ಧಾಂತಕೌಮುದೀ ಪಾಠ ಹೇಳುವವರು ತಾನೇ ಯಾರಲ್ಲಿ? ಹಾಗೆ ವ್ಯಾಕರಣವನ್ನೇ ಓದಿಯೇ ತೀರಬೇಕೆಂದು ಹೇಳಿ ಹಟಮಾರಿತನ ಮಾಡಿದರೆ, ಪ್ರಥಮತಃ ಲಘುಕೌಮುದಿ ಯನ್ನೋದಬೇಕು. ಇದೊಂದೂ ಅವನ ಬುರುಡೆಗೆ ಅಂಟದೆಯೇ ಹೋದರೆ "ಮೂರ್ಖಸ್ಯ ನಾಸ್ತ್ಯೌಷಧಂ" ಎಂದು ಹೇಳಬೇಕಾಗುತ್ತೆ.

ಹಿಂದೆಯೇ ಒಂದು ದಿನ...ದ ಸುಬ್ಬಣ್ಣನ ಶ್ರೀನಿವಾಸಯ್ಯನವರು ಇಲ್ಲಿಗೆ ಬಂದು ಮಾತಾಡುತ್ತಿದ್ದಾಗ ಅವರು ಕೇಳಿದರು, ನಿಮ್ಮ ದುಡ್ಡಿಗೇನು ಮಾಡುತ್ತೀರಿ ? ಎಂದು. ನಾನು ಅದು ಅವನ ಜತೆಯಲ್ಲಿಯೇ ಹೋಯಿತೆಂದು ಹೇಳಿದ್ದೆ ನಮ್ಮ ದುರ್ವಿಧಿ ಹಾಗೇ ಆಗಬೇಕೇನೋ ?

ನಮ್ಮ ಪರೀಕ್ಷೆಗೆ ಅಪ್ಲಿಕೇರ್ಷ ಜನವರಿಯಲ್ಲಿ ಮಾಡಬೇಕು. ಡಿಸೆಂಬರ್ ರಜಾ 1 ತಿಂಗಳು ಕೊಡಬಹುದೆಂದು ಒಂದು ಕುಂಟು ವದಂತಿ ಇದೆ. ಹಾಗೇನಾದರೂ ಆದರೆ, ಟ್ರಿಪ್ಪುಗಳ ಹಾವಳಿಯಿಲ್ಲದಿದ್ದರೆ, ಆಗ ಊರಿಗೆ ಬಂದರೂ ಬರುತ್ತೇನೆ.

ಚಿ|| ಮೂರ್ತಿಗೆ ಈ ಮೊದಲೇ 1 ಕಾರ್ಡು ಬರೆದು, ಅದರಲ್ಲಿ ಕೆಲವು ಪ್ರಶ್ನೆಗಳನ್ನು ಹಾಕಿದ್ದೆ ; ಅವನು ಎಕ್ಸರ್‌ಸೈಸ್ ತೆಗೆದುಕೊಳ್ಳುತ್ತಿಲ್ಲವೆಂದು ನನಗೆ ತಿಳಿಯಬಂತು. ಅದಕ್ಕೋಸ್ಕರ–ಯಾಕೆ ? ಏನು ಅಂತ ಕೇಳಿದ್ದೆ, ಉಪಶ್ರೀ ಇಲ್ಲ.

F. ನ್ನೂ ನೋಡಿ ಅದರ ಫಲಿತಾಂಶವನ್ನೂ ತಿಳಿದು ಕಾಗದ ಬರೆಯೋಣವೆಂದು ಸುಮ್ಮನಿದ್ದೆ. ಆದರೆ ನಮ್ಮ ಕಾಲೇಜಿನ ಕೆಲಸ ಮುಗಿದು ವಿರಾಮ ಸಿಕ್ಕುವ ಹಾಗೇ ಇಲ್ಲ. ಇನ್ನು ಅಡಿಗೆ ಮಾಡಿಕೊಳ್ಳುವುದಕ್ಕೂ ಸರಿಯಾಗಿ ಪುರಸತ್ತು ಸಿಕ್ಕುತ್ತೋ ಇಲ್ಲವೋ ಎಂದು ಸಂದೇಹ. ನೋಡಬೇಕು ಏನಾಗುವುದೋ.

ಈಗ ಸದ್ಯದಲ್ಲಿ ಹೊಳೇನರಸಿಪುರದಲ್ಲಿ ಪ್ಲೇಗಿನ ಅವಾಂತರ ಬಹಳವಾಗಿ, ಹೊಳೇನರಸಿಪುರದ ಡಾಕ್ಟರು ಸಾಲದೆ ಹಾಸನದ ಡಾಕ್ಟರೂ, ಹೊಳೇನರಸಿಪುರದ ಲೇಡಿ ಡಾಕ್ಟರೂ ಎಲ್ಲರೂ ಸೇರಿಕೊಂಡು ಒಂದು ಕಡೆಯಿಂದ ಜನಗಳನ್ನು ತರುಬಿಕೊಂಡು ಇನಾಕ್ಯೂಲೇರ್ಷ ಮಾಡುತ್ತಿದ್ದಾರೆ. ಆದುದರಿಂದ ಚಿ||....ಯು ಈ ದಿನ ಕೃ. ಶಾಸ್ತ್ರಿ ಮನೆಯಲ್ಲಿ ಊಟ, ಇವತ್ತು ಅವರ ಮನೆಯಲ್ಲಿ ಸಂತರ್ಪಣೆ, ಚಿನ್ನಣ್ಣ ನೋಡಿಕೊಂಡು ಬಾ ಎಂದ ಎಂದು ಮುಂತಾದ ನೆವಗಳನ್ನಿಟ್ಟುಕೊಂಡು ಅಲ್ಲಿಗೆ ಹೋಗುವುದನ್ನು ನಿಲ್ಲಿಸುವುದು ಕ್ಷೇಮವೆಂದು ತೋರುತ್ತೆ...

ಹೊಳೇನರಸಿಪುರದವರು ಕೇಳಿದಲ್ಲದೆ ಸ್ಕಾಲರ್‌ಷಿಪ್ ಬರುತ್ತಿದೆಯೆಂಬ ವಿಚಾರವನ್ನು ತಿಳಿಸದಿದ್ದರೇ ಮೇಲು. ಇನ್ನೇನೂ ವಿಶೇಷವಿಲ್ಲಾ.

ಇತಿ ಸಾ|| ವಿಜ್ಞಾಪನೆಗಳು.

ನಾನು ತಾ 8-9ಕ್ಕೆ ಮತ್ತೊಂದು ಕಾಗದ ಬರೆಯುತ್ತೇನೆ.

೧೯

ದುಸ್ಸಹವಾಸ ಬೇಡ

ನಗರದಲ್ಲಿ ಓದಲು ಹೋಗಿರುವ ತಮ್ಮನಿಗೆ

ಮಧ್ಯದೇಶದ ಹಳ್ಳಿ
24.7.32

...ನಿನ್ನ ಕಾಗದವು ತಲಪಿ ನಮ್ಮೆಲ್ಲರಿಗೂ ಬಹಳ ಸಂತೋಷವಾಯ್ತು. ಆದರಲ್ಲೂ ನೀನು ಯಾವ ತರಗತಿಗೆ ಸೇರಿಕೊಂಡಿರುವೆಯೆಂಬುದರ ಮಾತೇ ಇಲ್ಲ. ಈಗಲಾದರೂ ಅದನ್ನು ಬರಿ. ವಾರಗಳೆಲ್ಲಾ ಅನುಕೂಲವಾಗಿ ನಡೆಯುತ್ತಿವೆಯೆ?.. ನಿನ್ನ ಮಾವನವರ ಮನೆಯಲ್ಲಿ ನಿನ್ನ ಮಧುರಾರ್ಥವೇ ಆದಿಯಾಗಿ ಎಲ್ಲರೂ ಆರೋಗ್ಯವಾಗಿರುತ್ತಾರೆ.

ಪರಸ್ಥಳದಲ್ಲಿ ವಿದ್ಯಾರ್ಜನೆ ಮಾಡುವುದರ ಕಷ್ಟ ಸುಖಗಳು ಈಗ ನಿನಗೆ ಅಲ್ಪಸ್ವಲ್ಪ ಅನುಭವಕ್ಕೆ ಬರುತ್ತಿರಬಹುದೆಂದು ತೋರುತ್ತದೆ. ಅಭ್ಯಂಗನಾದಿಗಳಿಗೆ ಏನು ಏರ್ಪಾಡು ಮಾಡಿಕೊಂಡಿದ್ದೀಯೆ? ಪರಸ್ಥಳಗಳಲ್ಲಿ ದುರ್ವ್ಯಸನಗಳಿಗೆ ಹೋಗದೆ ಇರುವಂತೆ ದುಸ್ಸಹವಾಸಕ್ಕೆ ಬೀಳದಿರುವುದು ಬುದ್ಧಿವಂತರ ಲಕ್ಷಣ. ಪ್ರಾಪ್ತ ವಯಸ್ಕನಾದ ನಿನಗೆ ಈ ವಿಷಯವು ಈ ಮೊದಲೇ ತಿಳಿದಿರಬಹುದಾದರೂ ತತ್ತ್ವತಃ ಅನುಭವವಾಗಿಲ್ಲವೆಂದು ತಿಳಿದು ನಾನು ಬರೆದಿದ್ದೇನೆ...

ನಗರಗಳಿಗೆ ಓದಲು ಹೋದ ವಿದ್ಯಾರ್ಥಿಗಳು, ಹಾಸ್ಟಲಿನ ಸೌಲಭ್ಯವಿಲ್ಲದಿದ್ದಾಗ ವಾರಾನ್ನ ಮಾಡಿಕೊಂಡು ಓದುತ್ತಿದ್ದರು. ಬಡವರು ಹಾಸ್ಟಲಿಗೆ ಹಣವನ್ನು ಕಟ್ಟಲು ಸಾಧ್ಯವಾಗದಾಗ ವಾರಾನ್ನ ಮುಂದುವರಿಯಿತು. ವಾರಾನ್ನಪದ್ಧತಿ ಕಳೆದ ಮೂರು ನಾಲ್ಕು ದಶಕಗಳಿಂದಷ್ಟೆ ಕಾಣೆಯಾಗಿದೆ. ಕಾಲಕ್ರಮದಲ್ಲಿ ಸಂಕೇತಿ ಹಾಸ್ಟಲುಗಳು ಬಂದುದು, ಬಡವಿದ್ಯಾರ್ಥಿಗಳಿಗೆ ಉಚಿತ ಅವಕಾಶವಾದುದು ಒಂದು ಮುನ್ನಡೆ.

ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಲ್ಲಿಯೇ ವಿವಾಹವಾದ ಪ್ರಸಂಗಗಳು ಕಳೆದ ಮೂರು – ನಾಲ್ಕು ದಶಕಗಳಿಂದ ಕಂಡಿಲ್ಲ. ದೂರದ ಊರುಗಳಲ್ಲಿ ಮುಗ್ಧ ಮಕ್ಕಳು ಕೆಟ್ಟ ಹವ್ಯಾಸಗಳಿಗೆ ಬಿದ್ದಾರೆನ್ನುವುದು ಎಲ್ಲ ಹಿರಿಯರ ಎಲ್ಲ ಕಾಲದ ಆತಂಕ.

೨೦

ವಿದ್ಯಾರ್ಥಿಗೆ ನೀತಿ

ಗ್ರಾಮದ ಹಿರಿಯರೊಬ್ಬರು, ನಗರದಲ್ಲಿನ ವಿದ್ಯಾರ್ಥಿಗೆ ಬರೆದ ಕಾರ್ಡು

ಕ್ಷೇಮ ಶ್ರೀ 19/8/32

ಮಧ್ಯದೇಶದ ಹಳ್ಳಿ

ಚಿ||...ನಿಗೆ...ಉಪಾಧ್ಯಾಯನು ಮಾಡುವ ಆಶೀರ್ವಾದಗಳು... ನೀನು ಇಲ್ಲಿಂದ ಸರ್ವರನ್ನೂ ಬಿಟ್ಟು ಸರ್ವಸ್ವವನ್ನೂ ಬಿಟ್ಟು ವಿದ್ಯಾವ್ಯಾಸಂಗಕ್ಕಾಗಿ ಹೋಗಿರುವುದು ಸರಿಯೆ. ಆದರೆ ವೃಥಾ ಕಾಲಕ್ಷೇಪ ಮಾಡದೆ ವಿದ್ಯಾಭ್ಯಾಸ ಮಾಡಿ ನಮ್ಮಗಳಿಗೆ ಯಶಸ್ಸು ತರುತ್ತೀಯೆಂತ ನಂಬಿರುತ್ತೇನೆ. ಇಲ್ಲಿ ನಿನ್ನ ತೀ. ರೂಪರವರ ಮನೆಯಲ್ಲಿಯೇ ಆದಿಯಾಗಿ ಸರ್ವರೂ ಕ್ಷೇಮವಾಗಿರುತ್ತೇವೆ. ಇಲ್ಲಿ ಚಿ....ನೂ ವಿದ್ಯಾಭ್ಯಾಸ ಮಾಡುತ್ತಿರುವ ಹೆಸರಾಗಿದೆ. ನೀನು ಮಾತ್ರ ಜಾಗರೂಕನಾಗಿದ್ದುಕೊಂಡು ಕಾಲವನ್ನು ವೃಥಾ ಕಳೆಯದೆ ವ್ಯಾಸಂಗ ಮಾಡುತ್ತಿರು.

...ಮತ್ತು ಆಂಮ್ಲೋ ಅಣ್ಣಯ್ಯ ಪಂಡಿತರ ಆಸ್ಪತ್ರೆಯಲ್ಲಿ ಸೇರು ಅಶ್ವಗಂಧೀ ಲೇಹವನ್ನು ಅನುಕೂಲವಾದರೆ ಲಲಿತಾ ಬಸ್ಸಿನವನ ಕೈಯ್ಯಿನಲ್ಲಿ ಕೊಟ್ಟು ಕಳುಹಿಸತಕ್ಕದ್ದೂ.

ನೀನು ಕಳುಹಿಸುವುದನ್ನು ತಿಳಿಸಿದರೆ ಬಸ್ ಹತ್ತಿರಕ್ಕೆ ಬರುತ್ತೇನೆ. ಯಾವುದಕ್ಕೂ ಕಾಗದ ಕಂಡ ಕೂಡ್ಲೇ ಜವಾಬು ಬರೆಯತಕ್ಕದ್ದು. ಗೌರೀಹಬ್ಬಕ್ಕೆ ಬರತಕ್ಕದ್ದು. ನೀನು ಲೇಹವನ್ನು ಬರುವಾಗ ತಂದರೂ ಸರಿಯೆ. ಅದರ ಜತೆಯಲ್ಲಿ ಗಜಕರ್ಣಕ ಮುಲಾಮು ಡಬ್ಬಿ ಕಳುಹಿಸು.

ಇತಿ ಆಶೀರ್ವಾದಗಳು

ಮೂವತ್ತರ ದಶಕದಲ್ಲಿ ಆಧುನಿಕ ವಿದ್ಯೆಗಾಗಿ ಅಲ್ಲಲ್ಲಿ ಕಾಣತೊಡಗಿದ ತಹತಹ ಹಾಗೂ ಊರವರೂ ಅಂಥವರ ಯಶಸ್ಸಿಗಾಗಿ ಕಾತರಿಸುತ್ತಿದ್ದುದು ಇಲ್ಲಿನ ವಸ್ತು. ಆಯುರ್ವೇದೀಯ ಔಷಧಕ್ರಮ ಮತ್ತು ಅಂಥ ಔಷಧಿಯನ್ನು ನಗರಗಳಿಂದ ತರಿಸಿಕೊಳ್ಳುತ್ತಿದ್ದ ರೀತಿ ಇಲ್ಲಿ ವ್ಯಕ್ತವಾಗಿದೆ.

೨೧

ತಮ್ಮನ ದುಃಸ್ಥಿತಿ

ಸೋದರನೊಬ್ಬನು ಹಳ್ಳಿಯ ತಂದೆಗೆ ಬರೆದ ಕಾರ್ಡು

ಕುಶಲಂ ಶ್ರೀರಾಮ ಬೆಂಗಳೂರು

$11\frac{10}{32}$

ಇಲ್ಲಿ ಚಿ|| ಯು ತಿಂಡಿಗವಕಾಶವಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾನೆ. ಹಸಿವೆಂದು ಬೆಳಿಗ್ಗೆ 8½ ಘಂಟೆಗೇ ಊಟಮಾಡಿ 10½ ಘಂಟೆಗೆ ಕಾಲೇಜಿಗೆ ಹೋಗಿ 6 ಗಂಟೆಗೆ ಬಂದು ಪುನಃ 8 ಗಂಟೆಗೆ ಊಟ ಮಾಡುತ್ತಾನೆ. ಈ ಎರಡು ಊಟಗಳ ಮಧ್ಯೆ ಅವನಿಗೆ ತಿಂಡಿಯಿಲ್ಲದೆ ವ್ಯಾಸಂಗಕ್ಕೆ ತಕ್ಕಷ್ಟು ಗಮನ ಕೊಡುವುದಕ್ಕಾಗಲೀ, ಕ್ಲಾಸಿನಲ್ಲಿ ನಡೆಯುವ ಪಾಠಗಳನ್ನು ಮನಗೊಟ್ಟು ಕೇಳುವುದಕ್ಕಾಗಲೀ ಸಾಧ್ಯವಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾನೆ. ಅಲ್ಲದೆ, ಅವನಿಗಿರುವುದು ಒಂದು ಶರಟು, ಒಂದು ನೆಟ್ ಬನಿಯನ್. ಅವುಗಳ ಪೈಕಿ ಶರಟು ಶತಗ್ರಂಥಿ ಮಲಿನ ವಸನವಾಗಿದೆ. ಇತ್ಯಾದಿ ಕಾರಣಗಳಿಂದ ಸದ್ಯಕ್ಕೆ 5 Rs ಕಳುಹಿಸಿದರೆ ಅವನ ಪಾಡು ನೆಟ್ಟಗಾದೀತು. ಇಲ್ಲದಿದ್ದರೆ ಅವನಿಗೆ ವೃಥಾ ಕಾಲಹರಣವಾಗುವುದಷ್ಟೇ ಅಲ್ಲದೆ ತಕ್ಕಷ್ಟು ಆಹಾರವಿಲ್ಲದೆ ಕಂಗೆಟ್ಟು ಬೆಳೆವಣಿಗೆಗೆ ಕುಂದುಂಟಾಗುವುದೆಂಬಂಶವನ್ನು ನಾನು ತಮಗೆ ಹೊಸದಾಗಿ ವಿಜ್ಞಾಪಿಸಿಕೊಳ್ಳಬೇಕಾಗಿಲ್ಲ.

ಹಸು ಮತ್ತು ಕರುಗಳನ್ನು ಮೇಯಿಸುವುದಕ್ಕೆ ಕೂಡಿ ಆಯಿತೆ? ಎಲ್ಲಿಗೆ ? ಇಲ್ಲಿ ಎಲ್ಲರೂ ಆರೋಗ್ಯವಾಗಿರುತ್ತಾರೆ. ಇನ್ನೇನೂ ವಿಶೇಷವಿಲ್ಲ. ಈ ನವರಾತ್ರಿಯಲ್ಲಿ ವೇ|| B. ಸುಬ್ರಹ್ಮಣ್ಯ ಶಾಸ್ತ್ರಿಗಳು ಊರಿಗೆ ಬಂದಿದ್ದರೆ ಅವರಿಂದ ಕುಮಾರಸಂಭವ ಕಾವ್ಯವನ್ನು ತೆಗೆದುಕೊಂಡು ನಮ್ಮೂರ ಗರ್ಲ್ಸ್ ಸ್ಕೂಲ್ ಹೆ|ಮಾ|ರವರ ಹುಡುಗ ಊರಿಗೆ ಬಂದಿದ್ದರೆ ಅವನ ಕೂಡಾ, ಅದನ್ನು ಚಿ|| ಮೂರ್ತಿಗಾಗಿ ಕಳುಹಿಸಿ. ಅಲ್ಲಿ ತಮ್ಮಲ್ಲಿನ ಕ್ಷೇಮ ಲಾಭಗಳಿಗೆ ಕಾಗದ ಬರೆಯಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ ವಿಜ್ಞಪ್ತಯಃ

ಪ್ರಕೃತ ವಿದ್ಯಾರ್ಥಿಯು ರ್‍ಯಾಂಕ್ ಗಳಿಸುತ್ತಿದ್ದಾತ. ಆದರೆ ತಾರುಣ್ಯದಲ್ಲಿಯೇ ರೋಗಗ್ರಸ್ತನಾಗಿ ಸತ್ತನೆಂಬುದು ದಾರುಣವಾದುದು. ಬಡತನವು ವಿದ್ಯೆಗೆ ಅಡ್ಡಿಯಾದುದು ಮಾತ್ರವಲ್ಲ, ಪ್ರಾಣಕ್ಕೂ ಕಂಟಕವಾದ ಸಂದರ್ಭವಿದು. ಪಟ್ಟಣಗಳಲ್ಲಿ, ಕರಾವು ಮುಗಿದಾಗ ಇಲ್ಲವೆ ಬೇಸಿಗೆ ಬಂದು ಮೇವು ಸಾಲದಾಗ ಹಳ್ಳಿಯ ರೈತರ ಮನೆಗಳಿಗೆ ರಾಸುಗಳನ್ನಟ್ಟಿ ಕಾಪಾಡುವುದು ರೂಢಿ.

೨೨

ವಿದ್ಯೆಗಾಗಿ ಹಟ

ನಗರ ಸೇರಿದ ಬಾಲಕನು, ತಂದೆಗೆ ಬರೆದ ಕಾರ್ಡು

ಕ್ಷೇಮ ಶ್ರೀಃ 5.6.34
ನಗರ

...ಅಲ್ಲಿಗೆ ಈ ದ್ವಾದಶೀ ದಿವಸ ಹೋಗಿಬರುವೆನು. ಇದುವರೆಗೂ ವಾರಗಳಿಲ್ಲದೆ ಅನ್ನಕ್ಕೆ ಮಾರ್ಗವೇನೆಂಬುದರಲ್ಲಿಯೇ ಕಾಲ ಕಳೆಯಿತು. ಆದರೂ ಅತಿಶಯವಾದ ಬಾಧೆಯನ್ನು ತಡೆಯಲಾರದೆ ಊಟಕ್ಕಾಗಿಯೇ 6 ರೂಪಾಯಿಗಳನ್ನು ಸಾಲ ಮಾಡಿದ್ದೇನೆ. ಹೀಗೆ ಸಾಲ ಮಾಡಿ ಊಟ ಮಾಡಬೇಕಾಗುವುದೆಂದು ನಾನು ಯೋಚಿಸಿರಲಿಲ್ಲ. ಕೆಲವು ದಿವಸ ಅಡಿಗೆ ಮಾಡಿಕೊಳ್ಳುವವರ ಸಹ, ಮತ್ತೆ ಕೆಲವು ದಿವಸ ಹೋಟೆಲಿನಲ್ಲಿ – ಹೀಗೆ ತಳ್ಳಿದ್ದಾಯಿತು. ಇದಕ್ಕಿಂತಲೂ ಸುಲಭವಾದ ಮಾರ್ಗ ತೋರಲಿಲ್ಲ. ವಾರಕ್ಕಾಗಿ ಅಲೆದಾಗ ಅವರು ಹೇಳತಕ್ಕ ಅವಧಿ 1-2 ತಿಂಗಳು. ದಯವಿಟ್ಟು ಕ್ಷಮಿಸಬೇಕಾಗಿ ಪ್ರಾರ್ಥನೆಗಳು. ಈಗ 2.6.34 ರಿಂದ ಛತ್ರದಲ್ಲಿ ಊಟಕ್ಕೆ ಅನುಕೂಲವಾಯಿತು. ಸ್ಕಾಲರ್‌ಷಿಪ್ಪಿನಲ್ಲಿ ಆರು ಆಣೆ ಕಮ್ಮಿ ಮಾಡಿದ್ದಾರೆ. ಅದರಲ್ಲಿ ಅರ್ಧ ಈಗ ನಮಗೆ ಕೊಡುವರು. ಈ ವಿಚಾರ ಇಷ್ಟು. ವೇ||... ಶಾಸ್ತ್ರಿಗಳಿಗೆ ಪಂಡಿತ ಪರೀಕ್ಷೆಯಲ್ಲಿ ಪಾಸಾಗಿರುತ್ತೆ. 13 ಜನಗಳಿಗೆ ಪಾಸಾಗಿರುತ್ತೆ. ಅವರು ಅಲ್ಲಿಯೇ ಇದ್ದರೆ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆಗಳು. ಹಿಡಿಯುವ ಸೌಟು ತೆಗೆದು ಕೊಳ್ಳಬೇಕಾಗಿದೆಯಾಗಿ 3 ರೂಪಾಯಿಗಳನ್ನು ಕಳುಹಿಸಿ

ಕೊಡಬೇಕಾಗಿ ಪ್ರಾರ್ಥನೆ. ಸೌ|| ಮಾ|| ಶ್ರೀಯವರಿಗೆ ನಮಸ್ಕಾರಗಳನ್ನು ತಿಳಿಸಬೇಕಾಗಿ ಬೇಡುತ್ತೇನೆ.

ಇತಿ ವಿಜ್ಞಪ್ತಯಃ

೨೩

ನಮಗೆಲ್ಲ ಪಾಸಾಗಿದೆ (ಹಳ್ಳಿಯಲ್ಲಿರುವ ಹಿರಿಯ ಮಿತ್ರರಿಗೆ ಪತ್ರ)

ಕುಶಲಮ್ ಶ್ರೀ : 5.11.34

ಮೈಸೂರು

ತೀ|| ಶಾಸ್ತ್ರಿಗಳ ಚರಣಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರಗಳು, ಅದಾಗಿ ಸಾಂ.

ತಮ್ಮ ಅನುಗ್ರಹದಿಂದ ನಾನು ಆರೋಗ್ಯದಲ್ಲಿರುವೆನು. ಕಳೆದ 4ನೇ ತಾರೀಖಿನ ದಿವ್ಸಾ ತಮ್ಮ ಅಡ್ರೆಸ್ಸಿಗೆ ಕಾರ್ಡು ಬಂದಿತು. ಅದನ್ನು ಈ ಪತ್ರದ ಜೊತೆಯಲ್ಲಿಯೇ ಕಳುಹಿಸಿರುವೆನು. ಶಾಲಾ ಪ್ರಾರಂಭದ ಹೊತ್ತಿಗೆ ರಿಜಲ್ಟ್ ಬೋರ್ಡು ಹಾಕಿದ್ದರು. ನಮ್ಮ ಪೈಕಿ ಎಲ್ಲರಿಗೂ ಪಾಸಾಗಿರುವುದು. ಈಗ ನನಗೆ ಮುಂದೆ ಓದಲು ಚಂಪೂರಾಮಾಯಣವು ಬೇಕಾಗಿರುವುದು. ತಾವು ಬರುವಾಗ್ಗೆ ತಮ್ಮಲ್ಲಿ ಇದ್ದರೆ ದಯವಿಟ್ಟು ತರಬೇಕಾಗಿ ಪ್ರಾರ್ಥನೆ. ನನ್ನ ಆರೋಗ್ಯ ನಮಸ್ಕಾರಗಳನ್ನು ನಮ್ಮ ತೀ|| ರಿಗೆ ತಿಳಿಸುವುದು ಮತ್ತು ಅವರನ್ನು ಕೇಳಿ ಭರ್ತೃಹರಿ ಪುಸ್ತಕವು ಬೇಕಾಗಿರುವುದು, ತೆಗೆದುಕೊಂಡು ಬರಬೇಕಾಗಿ ಕೋರುತ್ತೇನೆ. ತಮ್ಮಗಳ ಆರೋಗ್ಯಕ್ಕೆ ಕಾಗದ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ. ತಿಳಿದವರಿಗೆ ಹೆಚ್ಚಿಗೆ ಬರೆಯಲು ಶಕ್ತನಲ್ಲ.

ಅನೇಕ ಸಾಷ್ಟಾಂಗ ನಮಸ್ಕಾರಗಳು.

ಆಪ್ ಲೋಗೋಂಕೇ ಸಾಮ್ನೇ ವಿಶೇಷ್ ವಿಷಯ್ ಪ್ರಾರ್ಥನ್ ಕರೂಂಗಾ.

೨೪

ಪ್ರಶ್ನಪತ್ರಿಕೆ ಕಳುಹಿಸಿಕೊಡಿ

ನಗರದಲ್ಲಿರುವ ಬಂಧುವಿಗೆ ಬರೆದ ಕಾರ್ಡು

ಕ್ಷೇಮ ಶ್ರೀ 12/12/39

ಚನ್ನರಾಯಪಟ್ಟಣ

ಮ||ರಾ|| ಭಾವನವರ ಸ|ಕ್ಕೆ ನಮಸ್ಕಾರಗಳು. ಸಾಂಪ್ರತ.

1941 ನೆ ಇಸವಿಯಲ್ಲಿ ನಡೆಯುವ ಪಂಡಿತ ಪರೀಕ್ಷೆಯ ಸಂಬಂಧದ 'ಇಂಟರ್' ಪರೀಕ್ಷೆಯ ವಿಚಾರವಾಗಿ ಅಲ್ಲಿ ನಾರ್ಮಲ್‌ಸ್ಕೂಲ್‌ನಲ್ಲಿ ವಿಚಾರಿಸಿ ತಿಳಿಸಬೇಕು. ನಾನು ಮೊದಲು ತಿಳಿದುಕೊಂಡಿದ್ದ ಪುಸ್ತಕಗಳಿಗೂ ಈಗ ತಿಳಿದು ಬರುವ ಪುಸ್ತಕಗಳಿಗೂ ಸ್ವಲ್ಪ ಹೆಚ್ಚು ಕಡಮೆ ತೋರುತ್ತಾ ಇದೆ. ಸಂಸ್ಕೃತ ಭಾಗದ ಪುಸ್ತಕಗಳು ಯಾವುವು? ಅವುಗಳಲ್ಲಿ ಪ್ರತಿಯೊಂದರಲ್ಲೂ ಪೋರ್‌ಷರ್ ಎಷ್ಟು? ಸಬ್‌ಜಕ್ಟ್‌ವಾರ್ ಪ್ರಶ್ನೆ ಪತ್ರಿಕೆಗಳೆಷ್ಟು? ವ್ಯಾಸಾಂಗ ವಿಚಾರದಲ್ಲಿ ಗಮನಿಸಬೇಕಾದ ಸಂಗಾತಿಗಳಾವುವು. ಇದೇ ಮೇರೆ ಕನ್ನಡ ಭಾಗದ ಪುಸ್ತಕಗಳು ಅವುಗಳ ಪೋರ್ಷನ್‌ಗಳು ಇತ್ಯಾದಿ ವಿಚಾರಗಳನ್ನು ತಿಳಿಸುವುದು. ತಮಗೆ ಸಾಧ್ಯವಿದ್ದು ದೊರಕಿಸುವ ಭಾಗದಲ್ಲಿ ಹಳೆ ಪರೀಕ್ಷಾ ಪತ್ರಿಕೆಗಳನ್ನು ಮತ್ತು ಈ ವರ್ಷದ 1st ಕಾರ್‌ಟರ್ ಪರೀಕ್ಷೆಯ ಪ್ರಶ್ನಪತ್ರಿಕೆಗಳನ್ನು ಕಳುಹಿಸಿ ಕೊಡುವಿರಾಗಿ ನಂಬಿರುತ್ತೇನೆ. ನೀವು ಪಠ್ಯಪುಸ್ತಕಗಳನ್ನು ತಿಳಿಸಿದ ನಂತರ ನನಗೆ ಬೇಕಾಗುವ ಪುಸ್ತಕಗಳಿಗೆ ಮುಂದೆ ಬರೆಯುತ್ತೇನೆ...

ಇತಿ ನಮಸ್ಕಾರಗಳು

ಪುಸ್ತಕಗಳ ಹೆಸರನ್ನು ಬರೆಯುವಾಗ ಅವುಗಳ ಕವಿ ಹೆಸರು ಮತ್ತು ಪಬ್ಲಿಕೇಷನ್ ಸಹ ತಿಳಿಸುವುದಾಗಿ ನಂಬಿರುತ್ತೇನೆ.

19ನೆಯ ಶತಮಾನದಲ್ಲಿಯೇ ಸಂಕೇತಿಗಳು ಕೂಲಿಮಠಗಳನ್ನು ನಡೆಸಿ ಜೈಮಿನಿ ಮತ್ತು ಗದುಗಿನ ಭಾರತಗಳನ್ನು ಕಲಿಸುತ್ತಿದ್ದುದಕ್ಕೂ ಕಲಿಯುತ್ತಿದ್ದುದಕ್ಕೂ ಆಧಾರಗಳಿವೆ. ಆದರೆ ತಮಿಳುನಾಡಿನಿಂದ ವಲಸೆ ಬಂದ ಎಂಟು ಶತಮಾನಗಳನಂತರ ಮೊದಲ ಬಾರಿಗೆ ಇಪ್ಪತ್ತನೆಯ ಶತಮಾನದ ಮೊದಲರ್ಧದಲ್ಲಿ ಅನೇಕ 'ಕನ್ನಡ ಪಂಡಿತ'ರು ಉತ್ಪಾದನೆಗೊಂಡರು. ಅದಕ್ಕಾಗಿ ಈ ಪತ್ರವನ್ನು ಕೊಟ್ಟಿದೆ.

೨೫

ಪ್ರದೋಷಪೂಜೆ, ವೇಣುಗಾನ (ಕವರು)

ಕ್ಷೇಮಮ್ ಶ್ರೀ : ಮೈಸೂರು

$4\frac{8}{41}$

...ನೆನ್ನೆಯ ದಿವಸ ಪ್ರದೋಷಪೂಜೆಯು ಬಹು ವಿಜ್ರಂಭಣೆಯಿಂದ ನೆರವೇರಿತು. ಸಾಭಿಮಾನಿಗಳಾದ ನಮ್ಮ ವಿದ್ಯಾರ್ಥಿಗಳು ಅಂತ್ಯಾಕ್ಷರೀಪಠನದಿಂದ ಮಂದಿರವನ್ನು ಪ್ರಕಾಶಗೊಳಿಸಿದರು. 9 ಘಂಟೆಯವರೆವಿಗೆ ನಮ್ಮ ತೀ. ಭಾವನವರ ವೇಣುಗಾನವು ನಡೆಯಿತು. ಕಡೆಯಲ್ಲಿ ನಮ್ಮ ಗುರುವರ್ಯರಾದ ಗುಂಡಾವಧಾನಿಗಳು ಗಾಯಕರಿಗೆ ಆಶೀರ್ವಾದ ಮಾಡಿದರು. ಪ್ರಸಾದವಿನಿಯೋಗದಿಂದ ಪೂಜೆಯು ಮಂಗಳಗೊಂಡಿತು. ಶಾಲಾಧ್ಯಕ್ಷರ ಮನೆಗೆ ಪ್ರಸಾದವನ್ನು ಕಳುಹಿಸಿದ್ದೆನು...ನಮ್ಮ ಅವಧಾನಿಗಳ ಹತ್ತಿರ ಘನ ಹೇಳಲು ಆರಂಭಿಸಿರುವೆನು. ಇನ್ನೂ ಕೆಲವು ವಿಶೇಷ ವ್ಯಾಸಂಗವನ್ನು ಕೈಗೊಂಡಿರುವೆನು...ಇಲ್ಲಿ

ಘನಪಾಠಿ ಸುಬ್ಬಣ್ಣ, ಸೀತಾರಾಮ ಶಾಸ್ತ್ರಿಗಳು ಮೊದಲಾದ ನಮ್ಮ ಸುಹೃದ್ವರ್ಗದವರೆಲ್ಲರೂ ಆರೋಗ್ಯ. ತಮ್ಮ ಕುಶಲಕ್ಕೆ ಪತ್ರ ಬರೆಯುವುದು. ನನ್ನ ವಿಜ್ಞಾಪನೆಯನ್ನು ನಮ್ಮ ಗುರುಹಿರಿಯರವರಿಗೆ ತಿಳಿಸುವುದು. ವಿಶೇಷವಿಲ್ಲ. ವಿಜ್ಞಾಪನಾ

ಮುಂದಿನ ಭಾಗ 'ರಹಸ್ಯ'ಕ್ಕಾಗಿ ಕನ್ನಡವನ್ನೇ ಹಿಂದಿ ಲಿಪಿಯಲ್ಲಿ ಬರೆದದ್ದು.

೨೬

ಜೀವನ ನಾಟಕದ ೩ ದೃಶ್ಯ

ಹಿರಿಯ ಬಂಧುವಿಗೆ ವಿದ್ಯಾರ್ಥಿಯೊಬ್ಬನ ಪತ್ರ (ಕವರು)

ಕ್ಷೇಮ ಶ್ರೀ ನಗರ

ತಾ. 11.12.50

...ನಿಮ್ಮ ೨.೧೨.೫೦ರ ಕವರು ತಲಪಿತು. ನನ್ನ ಮೇಲೆ ಅಭಿಮಾನವಿಟ್ಟು ಪತ್ರ ದಯಪಾಲಿಸಿದ್ದಕ್ಕಾಗಿ ನಿಮಗೆ ಹಾರ್ದಿಕ ವಂದನೆಗಳು. ನೀವೂ ಮತ್ತು ಮಾ॥ ಶ್ರೀ॥ ಅಜ್ಜಿಯವರೂ ನನ್ನ ಮತವನ್ನೇ ಅನುಮೋದಿಸಿದ್ದೀರಿ. ತೀ॥ ರವರು ಎಲ್ಲವನ್ನೂ ನನ್ನ ತಲೆಯಮೇಲೆಯೇ ಹಾಕಿ ಸುಮ್ಮನಿದ್ದರು. ಆದರೆ ಅವರೇ ಕನ್ಯಾಪಿತೃಗಳನ್ನು "ಮನೆಯಲ್ಲಿ ವಿವಾಹಯೋಗ್ಯಳಾದ ಕನ್ಯೆ ಇರುವಾಗ ವಯಸ್ಸಾಗದ ಅವನಿಗೆ ಮದುವೆಗೇನು ಅವಸರ?" ಎಂದು ಕೇಳಿದ್ದರೆ ನಾನು ಕೊಡಬೇಕಾದ ಉತ್ತರ ತಪ್ಪುತ್ತಿತ್ತು.

ತೀ॥ ರವರು ಅಲ್ಲಿಗೆ ಬಂದಿದ್ದಾಗ ನನ್ನ ಬೆಂಗಳೂರಿನ ಜೀವನ ರೀತಿಯನ್ನು ವಿಶದವಾಗಿ ತಿಳಿಸಿರಬಹುದು. ನಾನು ಹಾಸನದಿಂದ ಬೆಂಗಳೂರಿಗೆ ಹೊರಟಾಗ ರಾಮಕೃಷ್ಣಹೋಮಿನಲ್ಲಿ ಸ್ಥಳ ಸಿಗುತ್ತದೆಂಬ ಭರವಸೆಯಿಂದ ಅನೇಕ ಆಸೆಗಳನ್ನು ಕಲ್ಪನೆ ಮಾಡಿಕೊಂಡಿದ್ದೆ. ಆದರೆ ಅಲ್ಲಿ ಸ್ಥಳ ಸಿಗದೆ ಇದ್ದದ್ದು ನನ್ನ ಉತ್ಸಾಹಕ್ಕೆ ಪ್ರಪ್ರಥಮ ಕೊಡಲಿಪೆಟ್ಟು ಬಿದ್ದಂತಾಯಿತು. ನಂತರ ವಾರದ ಹುಡುಗನಾದೆ. ಆಗ ನನ್ನ ಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನೇ ತಿರುವಿಹಾಕಿದಂತಾಯಿತು. ನನ್ನ ಈ ೧೭ ವರ್ಷದ ಸಮಗ್ರ ಜೀವನ ನಾಟಕವನ್ನು ೩ ದೃಶ್ಯಗಳಾಗಿ ವಿಂಗಡಿಸಬಹುದು. ೧) ತೀ॥ ಅಜ್ಜಯ್ಯನವರ ಜೊತೆಯಲ್ಲಿ ಮತ್ತು ಮಾ॥ ಶ್ರೀ॥ ಅಜ್ಜಿಯವರ ಜೊತೆಯಲ್ಲಿ ಹಸುಗೂಸಿನಂತೆ ಸರಸವಾಗಿ ಕಳೆದ ಕಾಲ (ನನ್ನ ಜೀವಮಾನದಲ್ಲಿ ಆತರಹೆಯ ಜೀವನವನ್ನು ಇನ್ನು ನಡೆಸಲಾರೆ). ೨) ವಿಭಾಗವಾದ ಮೇಲೆ ಸೌ॥ ಮಾ॥ ಶ್ರೀ ಮತ್ತು ಮಾ॥ ಶ್ರೀ॥ ಅಜ್ಜಿಯವರೊಡನೆ (ಕೆಲವು ಕಾಲ ತೀ॥ ಮತ್ತು ಮಾ॥ ಶ್ರೀ॥ಯವರೊಡನೆಯೂ) ಕಳೆದ ಸರಸ ವಿರಸ ಮಿಶ್ರ ಜೀವನ ಮತ್ತು ಪ್ರಪಂಚವನ್ನರಿಯಬೇಕೆಂಬ ಉತ್ಸುಕತೆಯ ಕಾಲ. ೩) ವಾರದ ಹುಡುಗನಾಗಿ ಆಡುತ್ತಿರುವ ದೃಶ್ಯ. ಪ್ರಪಂಚವನ್ನರಿಯುತ್ತಿರುವ ಕಾಲ.

ನಾನು ಹೋಮಿಗೆ ಮುಂದಿನ ಸಲವೂ ಕರ್ತವ್ಯ ದೃಷ್ಟಿಯಿಂದ ಅಪೇಕ್ಷಾ ಪತ್ರವನ್ನು ಸಲ್ಲಿಸುತ್ತೇನೆ. ಪ್ರಯತ್ನಪಡಲು ಮನಸ್ಸಿಲ್ಲ. B.M.S. ಕಾಲೇಜಿನಲ್ಲಿ ಯಾವ ತರಹೆಯ ಸಹಾಯವೂ ದೊರೆಯುವಂತಿಲ್ಲ. ನನಗೂ ವ್ಯಾಸಂಗ ಮುಗಿಯುವವರೆಗೆ ವಿವಾಹದ ಇಷ್ಟವಿಲ್ಲ. ಭಗವದಿಚ್ಛೆ ಹೇಗಿದೆಯೋ ತಿಳಿಯಲಾರೆ. ನಾನು ಗೋಪಾಲಸ್ವಾಮಯ್ಯಂಗಾರ್ಯರನ್ನು ಮತ್ತೊಮ್ಮೆ ನೋಡಲೂ ಇಲ್ಲ , ನೋಡುವುದೂ ಇಲ್ಲ.

ತೀ॥ ರವರಿಗೆ ತೊಂದರೆ ಎಂಬುದು ನನಗೂ ಗೊತ್ತು. ಆದರೆ ನೀವು ಹೇಳಿರುವಂತೆ ದೇಹವನ್ನು ವಿಕ್ರಯ ಮಾಡಿಕೊಳ್ಳಲು ಒಪ್ಪುವುದಿಲ್ಲ. ಆದ ಕಷ್ಟವಾಗಲಿ. ಹೀಗೆಯೇ ತಳ್ಳುವುದು.

ಸೌ॥ಮಾ॥ಶ್ರೀ॥ ಚಿಕ್ಕಮ್ಮನವರು ಆರೋಗ್ಯವೆ ? ಅವರಿಗೆ ನನ್ನ ವಿಜ್ಞಾಪನೆಗಳನ್ನು ತಿಳಿಸಿ. ಚಿ॥ಗಳು ಆರೋಗ್ಯವೆ ? ಅವರಿಗೆ ನನ್ನ ಆಶೀರ್ವಾದಗಳನ್ನು ತಿಳಿಸಿ. ಮಾ॥ಶ್ರೀ॥ ಅಜ್ಜಿಯವರು ಎಲ್ಲಿದ್ದಾರೆ ? ಆರೋಗ್ಯವಾಗಿದ್ದಾರೆಯೆ ?

ನಾನು ಕ್ರಿಸ್‌ಮಸ್ ರಜದಲ್ಲಿ ಹಾಸನಕ್ಕೆ ಹೋಗೋಣ ವೆಂದಿದ್ದೇನೆ. ಮತ್ತು ಕನ್ಯಾಪಿತೃಗಳಿಗೆ ಅಪ್ರತಿಹತವಾದ, ನಿಷ್ಠುರವಾದ ಉತ್ತರ ಕೊಡಬೇಕೆಂಬ ಮನಸ್ಸು ಮಾಡಿದ್ದೆ. ಆದರೆ ನಿಮ್ಮ ಕಾಗದ ನೋಡಿದ ಮೇಲೆ ಅನಿಷ್ಠುರವಾದ ಉತ್ತರವನ್ನು ಕೊಡುವುದೇ ಲೇಸೆಂದು ತೋರುತ್ತದೆ...

ವಿದ್ಯಾಭ್ಯಾಸಕ್ಕಾಗಿ ಸೂಕ್ತ ನೆಲೆಯನ್ನೇ ಕಂಡಿಲ್ಲದ ವಿದ್ಯಾರ್ಥಿಯು ವಿವಾಹದ ಪ್ರಶ್ನೆಯನ್ನು ಎದುರಿಸಬೇಕಾದುದು ಆಗಿನ ಸ್ಥಿತಿಯ ಒಂದು ಮುಖವಾಗಿದೆ.

೨೭

ಕಳ್ಳರ ಸಂತೆ

ಎಂಜಿನಿಯರಿಂಗ್ ವಿದ್ಯಾರ್ಥಿಯೊಬ್ಬ ತನ್ನ ಹಿರಿಯ ಬಂಧುವೊಬ್ಬರಿಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ 17.3.51

ಬೆಂಗಳೂರು

ತೀ॥ರವರ ಚರಣಸನ್ನಿಧಾನಂಗಳಲ್ಲಿ ಬಾಲಕನ ವಿಜ್ಞಾಪನೆಗಳು. ಅದಾಗಿ ಈವರಿಗೆ ಉ.ಕು.ಸಾಂ.

ಈ ಹಿಂದೆ ನೀವು ಬರೆದ ಕಾಗದ ತಲಪಿತು. ನಿಮಗೆ ವೃಥಾ ತೊಂದರೆ ಕೊಟ್ಟಂತಾಯಿತು. ದಯವಿಟ್ಟು ಕ್ಷಮಿಸಿ.

ಶ್ರೀಮಾನ್ R.K.K. ಯವರನ್ನು ನಿಮಗೆ ಕಾಗದ ಬರೆದ

ಕೆಲವು ದಿನಗಳ ನಂತರ ಮತ್ತೆ ಭೇಟಿ ಮಾಡಿದೆ. ಆಗ ಅವರು ಊರಿಗೆ ಹೋಗಿ ಬತ್ತ ಸಾಗಿಸಿಕೊಂಡು ಬಂದೆನೆಂದರು. ಮತ್ತು ನನ್ನ ಪ್ರಯತ್ನವನ್ನು ನಾನು ಮಾಡಿದೆನೆಂದು ಅವರು ನನ್ನನ್ನು ಶ್ಲಾಘಿಸಿದರು. ಅವರು ನನ್ನ ವಿಚಾರದಲ್ಲಿ ಯಾವಾಗಲೂ ಅಸಮಾಧಾನವನ್ನು ತೋರ್ಪಡಿಸಿಲ್ಲ.

Poor Boys' Fund ಗೆ ಅಪೇಕ್ಷಾಪತ್ರವನ್ನು ಸಲ್ಲಿಸಿದ್ದೆನೆಂದು ನಿಮಗೆ ಹಿಂದೆ ತಿಳಿಸಿದ್ದೆ. ಕಾಲೇಜಿನಲ್ಲಿ ಇನ್ನೂ ಇತರೇ ಮುಖ್ಯ ಮುಖ್ಯ ಉಪಾಧ್ಯಾಯರುಗಳಿಗೂ ಹೇಳಿಕೊಂಡಿದ್ದೆ. ಆದರೆ “ಕಳ್ಳ ಕಳ್ಳರೇ ಸೇರಿ ಸಂತೆ ಕಟ್ಟಿದಂತೆ” ಇವತ್ತು, ನಾಳೆ meeting ಆಗುತ್ತದೆ ಎಂದು ಹೇಳಿಕೊಂಡು ತಳ್ಳಿದರು. ಕೊನೆಗೆ term days ಮುಗಿಯಿತು. Meeting ಮಾಡದೇನೇ ತಳ್ಳಿದರು. ಹಾಗೂ ಹೀಗೂ ನಾನು ನಿಮ್ಮೆಲ್ಲರ ಆಶೀರ್ವಾದದಿಂದಲೂ ದೈವಾನುಗ್ರಹದಿಂದಲೂ ಈ ವರ್ಷವನ್ನು ಕಳೆದೆ.

...ಈ ವರ್ಷ ನನ್ನ ಅದೃಷ್ಟ ಸ್ವಲ್ಪವೂ ಚೆನ್ನಾಗಿಲ್ಲ. ಏನೋ ಒಂದು ಉನ್ನತ ಧ್ಯೇಯವನ್ನು ಸಾಧಿಸಿ ತೀ।। ರವರಿಗೂ ಸೌ।। ಮಾ।। ಶ್ರೀ।।ಯವರಿಗೂ ಸಂತೋಷವನ್ನುಂಟು ಮಾಡಬೇಕೆಂದಿದ್ದೆ. ಆದರೆ ಪರೀಕ್ಷೆಯಲ್ಲಿ ನಾನಾ ಕಾರಣಗಳಿಂದ ನನ್ನ ಮನಸ್ಸಿಗೆ ತೃಪ್ತಿಯಾಗುವಂತೆ ಮಾಡಿಲ್ಲ. ಮನಸ್ಸಿಗೆ ಬಹಳ ಬೇಜಾರಾಗಿದೆ. ನಾನು ಈ ವರ್ಷ ಪಾಸಾಗುತ್ತೇನೆಂದು ತೋರುತ್ತದೆ. ಈ ಬರೀ ಪಾಸಿಗೇ ನಾನು ಒಂದು ವರ್ಷವನ್ನು ಪೂರ್ತಿ ದಂಡ ಮಾಡಿದಂತಾಗುತ್ತದೆ. Practical Examination ನಲ್ಲಿ ಚೆನ್ನಾಗಿ ಮಾಡಿ ಒಂದು I Classನಲ್ಲಾದರೂ ಪಾಸಾದರೆ, ಇಷ್ಟೆಲ್ಲಾ ದುಡ್ಡನ್ನು ವ್ಯಯ ಮಾಡಿದ್ದಕ್ಕೆ ಸಾರ್ಥಕವೆಂದು ತೋರುತ್ತದೆ. ಆದರೆ ಭಗವದಿಚ್ಛೆಯೇ ಬೇರೊಂದಿದ್ದರೆ ನಾನೇನೂ ಮಾಡಲಾರೆ. ನಗುವವರ ಮುಂದೆ ಜಾರಿ ಬಿದ್ದಂತಾಗುವುದೋ ಏನೋ ನಮ್ಮ ಬಾಳು ! ಬಣ್ಣವಿಲ್ಲದ ಬಾಳ್ಕೆಯಾಗದಿದ್ದರೆ ಸಾಕು. ಹಾಗೆ ಅನುಗ್ರಹ ಮಾಡು ಎಂದು ಅನುದಿನವೂ ಪರಮಾತ್ಮನ ಪ್ರಾರ್ಥನೆಯನ್ನು ನಾನು ಮಾಡುವುದಿರಲಿ, ತೀ।। ರವರಿಗೆ ಹಗಲು ರಾತ್ರಿ ಇದೇ ಧ್ಯಾನ. ಹೇಗಾದರೂ ಆಗಲಿ. ದೇವರ ಮೇಲೆ ಭಾರ ಹಾಕಿದ್ದೇನೆ...

ನೀವು ಊರಿನ ವಿಳಾಸಕ್ಕೇ ಆಶೀರ್ವಾದ ಪತ್ರ ದಯಪಾಲಿಸುತ್ತೀರೆಂದು ನಂಬಿದ್ದೇನೆ.

ಇನ್ನೇನೂ ವಿಶೇಷವಿಲ್ಲ

ಇತಿ ವಿಜ್ಞಾಪನೆಗಳು.

ಮುಂದೆ ಉನ್ನತ ಪದವಿಗೇರಿ ವಿದೇಶಗಳಲ್ಲಿಯೂ ಸೇವೆ ಸಲ್ಲಿಸಿದ ಜಾಣ ವಿದ್ಯಾರ್ಥಿ ಈತ.

೨೮

ರೂಮು ಮಾಡುವ ಇರಾದೆ

ಪರರ ಮನೆಯಲ್ಲಿ ಓದುತ್ತಿರುವ ವಿದ್ಯಾರ್ಥಿಯ ಪತ್ರ

ಕ್ಷೇಮ ಶ್ರೀ ಬೆಂಗಳೂರು

ತಾ 28.6.51

...ನೀವು ನನ್ನ ಮೇಲೆ ಉದಾಸೀನ ಭಾವವನ್ನು ತಾಳಿರುವುದಕ್ಕೆ ಕಾರಣ ಈಚೆಗೆ ನನಗೆ ತಿಳಿಯಿತು. ನನಗೆ ಬರೀ II Class ನಲ್ಲಿ ತೇರ್ಗಡೆಯಾಗಿರುವುದು ನಿಮ್ಮ ಅಭಿಮಾನಲತೆಯನ್ನು ಕುಂದಿಸಿದೆ ಎಂಬುದು ನನಗೆ ಅರ್ಥವಾಗುತ್ತದೆ. ನನಗೇ ಆ ವಿಚಾರದಲ್ಲಿ ಎಷ್ಟು ವ್ಯಸನವಾಗಿರಬೇಕು ಎಂಬುದನ್ನು ನೀವೇ ದಯವಿಟ್ಟು ಊಹಿಸಿ. ನಾನು ಈ ಸನ್ನಿವೇಶಗಳಲ್ಲಿದ್ದರೆ ಮುಂದಿನ ವರ್ಷ ಪಾಸಾಗುವುದೂ ಕಷ್ಟ ಎಂದು ಬರೆದಿದ್ದಿರಿ. ಅಧ್ಯಾಪಕ ವರ್ಗದಲ್ಲಿ ಕೆಲವರು ಬಹಳ ವ್ಯಸನ ಪಟ್ಟರು. ಎಲ್ಲವೂ ದೈವಾಯತ್ತ.

ಈ ವರ್ಷವೂ ಮರಿಯಪ್ಪಾ ಹಾಸ್ಟಲ್‌ನಲ್ಲಿಯೂ, R.K. ಹೋಮಿನಲ್ಲಿಯೂ ಸೀಟಿಲ್ಲ. ಯಥಾಪ್ರಕಾರ “ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ” ಎಂದು ಪ್ರತಿ ಮನೆ ಬಾಗಿಲಿಗೂ ಅಲೆಯುವುದಾಗಿದೆ.

ನಾನು ಈಗ ಇರುವ ಸ್ಥಳದಲ್ಲೇ ಇದ್ದರೆ ನನ್ನ ವ್ಯಾಸಂಗ ಮುಂದುವರಿಯುವುದು ಕಷ್ಟ. ಆದ್ದರಿಂದ...ಕೇಶವಯ್ಯನವರ ಮಗ...ನ ಜೊತೆಯಲ್ಲಿ ರೂಮು ಮಾಡಿಕೊಂಡಿರೋಣವೆಂದು ನಿಶ್ಚಯಿಸಿದ್ದೇನೆ. ದೇವರ ದಯದಿಂದ ಅವನಿಗೂ ಸೀಟು ಸಿಗಬೇಕು.

...ನಾನು Electrical Branch ತೆಗೆದುಕೊಂಡಿದ್ದೇನೆ. ವ್ಯಾಸಂಗವು ಗುರುತರವಾದುದು, ಪ್ರೌಢವಾದುದು. ಆದ್ದರಿಂದ.. ಈ ಸನ್ನಿವೇಶದಲ್ಲಿ ಸಾಗಲಾರದು. ನಾಗರಾಜನಿಗೆ ಸೀಟು ಸಿಕ್ಕಿ ರೂಮು ಮಾಡಿ ಅಲ್ಲಿಗೆ ಬದಲಾಯಿಸುವವರೆಗೂ ಸ್ವಲ್ಪವೂ ನಿರಾಳವಿಲ್ಲ. ಅವನೂ ವಾರ ಮಾಡಿಕೊಂಡಿರುತ್ತಾನೆ. ಅಂತೂ ರೂಮಿಗೆ ಹೋದರೆ ಸ್ವತಂತ್ರವಾಗಿ, ಪರರ ಹಂಗಿಲ್ಲದೆ, ನೆಮ್ಮದಿಯಾಗಿರಬಹುದು. ಭಗವದಿಚ್ಛೆ ಏನಿದೆಯೋ ತಿಳಿಯದು.

...ಕಾಗದ ಕಂಡ ಕೂಡಲೆ ಆಶೀರ್ವಾದ ಪತ್ರ ದಯಪಾಲಿಸುತ್ತೀರಾಗಿ ನಂಬಿದ್ದೇನೆ. ಉದಾಸೀನ ಮಾಡಬೇಡಿ. ವಾರದ ಮನೆಯಲ್ಲಿ ಊಟ ಮಾಡಿ ಕಾಲೇಜಿಗೆ ಹಾಗೇ ಓಡಿ ಹೋಗುವುದು, ಲೇಟ್ ಆದರೂ ಆಯಿತು. ಏನೂ ಮಾಡುವ ಹಾಗಿಲ್ಲ. ಇದೆಲ್ಲಾ ಪೂರ್ವಸುಕೃತದ ಫಲವೆಂದೇ ಭಾವಿಸಬೇಕಾಗಿದೆ.

ಓದಿನಲ್ಲಿ ನಿಜವಾದ ಶ್ರದ್ಧೆ ಇರುವ ವಿದ್ಯಾರ್ಥಿಯ ಸೂಕ್ಷ್ಮಜ್ಞತೆ, ಜವಾಬ್ದಾರಿ, ವಿನಯ ಇಲ್ಲಿ ಕಾಣುತ್ತದೆ. ವಾರಾನ್ನವು ವರವೇ ಆಗಿದ್ದ ದಿನಗಳವು. ಆದರ ಕಷ್ಟಗಳೂ ಇದ್ದವು. ಇವುಗಳ ನಡುವೆ ಉನ್ನತಿಗೇರಿದ ವಿದ್ಯಾರ್ಥಿ ಈತ.

೨೯

ಸಲಹೆಗಾಗಿ ಪ್ರಾರ್ಥನೆ

ವಿದ್ಯಾರ್ಥಿಯು, ಹಿರಿಯ ಬಂಧುವಿಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಬೆಂಗಳೂರು

ತಾ 8.8.51

ತೀ॥ರವರ ಚರಣಸನ್ನಿಧಾನಂಗಳಲ್ಲಿ ಬಾಲಕನ ವಿಜ್ಞಾಪನೆಗಳು. ಆದಾಗಿ ಈವರಿಗೆ ಉ.ಕು.ಸಂ.

ನಾನು ಈ ಹಿಂದೆ ಬರೆದ ಕಾಗದ ನಿಮಗೆ ತಲಪಿರಬಹುದು. ಅದಕ್ಕೆ ಉತ್ತರವನ್ನು ಈವರೆವಿಗೂ ನಿರೀಕ್ಷಿಸಿ ನಿರಾಶನಾದೆ. ಉತ್ತರ ಬರದಿರಲು ಕಾರಣವೇನೋ ತಿಳಿಯದು. ಸಂಕೇತಿ ಸ್ಕಾಲರ್‌ಷಿಪ್ಪಿಗೆ apply ಮಾಡುತ್ತೇನೆ. ನಿಮ್ಮಿಂದ ಸಾಧ್ಯವಾದಷ್ಟು ಪ್ರಯತ್ನಗಳನ್ನು ಮಾಡಿ. ಅನ್ಯಥಾ ಭಾವಿಸಬೇಡಿ.

ನೀವು ಪ್ರೀತ್ಯಾದರಗಳಿಂದ ನಾಗರಾಜನ ಕೂಡ ಕಳುಹಿಸಿದ ಸೈಕಲ್ಲು ಏನೂ ಜಖಂ ಆಗದೆ ತಲಪಿತು. ನಿಮಗೆ ತೊಂದರೆ ಯಾಯಿತೋ ಬಿಟ್ಟಿತೋ ಅದು ನನಗೆ ತಿಳಿಯದು. ನನಗೆ ಬಹಳ ಅನುಕೂಲವಾಗುತ್ತಿದೆ. ನಿಮ್ಮೊಡನೆ ಮಾತನಾಡಲು ಅವಕಾಶ ವಾಗಲಿಲ್ಲವೆಂದು ನಾಗರಾಜನು ತಿಳಿಸಿದನು. ನಿಮ್ಮ ಸೈಕಲ್ ಪಂಪನ್ನೂ ಕಳುಹಿಸಿದ್ದರೆ ಚೆನ್ನಾಗಿತ್ತು. ಈಗಲೂ ಯಾರಾದರೂ ಬರುವವರಿದ್ದರೆ ದಯವಿಟ್ಟು ಕಳುಹಿಸಿಕೊಡಿ.

...ಹಳ್ಳಿಯಿಂದ ಮ್ಯಾ॥ ಶ್ರೀ॥ ಅಜ್ಜಿಯವರು ಅವಲಕ್ಕಿಯನ್ನು, ಹುರಿಹಿಟ್ಟು, ಬೆಲ್ಲವನ್ನು ನಾಗರಾಜನ ಕೂಡ ಕಳುಹಿಸಿರುತ್ತಾರೆ. ಅವರ ತೊಂದರೆಗಳನ್ನು ಗಮನಕ್ಕೆ ತಂದುಕೊಳ್ಳದೆ, ನನ್ನ ಹಿತದೃಷ್ಟಿಯಿಂದ ಅವರು ಅವುಗಳನ್ನು ಅತಿ ಪ್ರಯಾಸದಿಂದ ಕಳುಹಿಸಿರುವಂತೆ ತೋರುತ್ತದೆ. ಹೋದವರ್ಷ ಹಾಸನದಿಂದ ಕಳುಹಿಸಿದ ತಿಂಡಿಯನ್ನೇನೋ ವಾಪಸು ಮಾಡಿದ್ದೆ. ಆದರೆ ಅಜ್ಜಿ ತಿಂಡಿ ಕಳುಹಿಸಿದ್ದಾರೆಂದು ತಿಳಿದ ಕೂಡಲೆ, ಮಾ॥ ಶ್ರೀ॥ ಯವರ ಆಶೀರ್ವಾದವೇ ಮೂರ್ತಿವತ್ತಾಗಿ ಬಂದಂತೆ ತೋರಿತು. ನಾನು ಕಷ್ಟಪಟ್ಟು, ಕದ್ದು ಕದ್ದು ಆಗ ಈಗ ಒಂದಿಷ್ಟು ತಿನ್ನುತ್ತಿದ್ದೇನೆ. ಊರಿಗೆ ಹೋದಾಗ ಅವರಿಗೆ ನನ್ನ ವಿಜ್ಞಾಪನೆಗಳನ್ನು ತಿಳಿಸಿ ಮತ್ತು ನನ್ನ ವಿಚಾರವಾಗಿ ಅವರೇನೂ ಪೇಚಾಡಬೇಕಿಲ್ಲವೆಂದು ದಯವಿಟ್ಟು ತಿಳಿಸಿ...

...ನನ್ನ ಪರಿಸ್ಥಿತಿಗಳು ಈ ಸಲ ಉತ್ತಮಗೊಳ್ಳಬಹುದೆಂದಿದ್ದೆ. ಆದರೆ ಈವರೆವಿಗೂ ಆ ಶುಭಸೂಚನೆಗಳೇ ಇಲ್ಲ. ಏನೇನು ಮಾಡಿಕೊಟ್ಟರೂ ಇವನ ಗೋಳು ತಪ್ಪಲೇ ಇಲ್ಲ ಎಂದು ಮಾತ್ರ ಭಾವಿಸಬೇಡಿ. ನಾನು ಈ ಮನೆಯ ವಿಚಾರವನ್ನು ತಕ್ಕಮಟ್ಟಿಗೆ ಹೋದ ಕಾಗದದಲ್ಲಿ ಬರೆದಿದ್ದೆ. ನಾನು ಹೋದ ತಿಂಗಳು ರೂಮಿಗೆ ಹೋಗದೆ ಇಲ್ಲೇ ಇದ್ದುದರಿಂದ, ಹೋದ ತಿಂಗಳ ಬಾಡಿಗೆಯನ್ನು ಅವರು ಕೇಳಿದ ಪ್ರಕಾರ ಕೊಡಲು ಹೋದರೆ ಸ್ವೀಕರಿಸಲಿಲ್ಲ. ಮತ್ತು ಹುಚ್ಚು ಹಿಡಿದ ಹಾಗೆ ಮನೆಯಾಕೆಯಿಂದಲೂ ಮತ್ತು ಅವರ ಅಕ್ಕನಿಂದಲೂ ಬೈಗಳನ್ನೂ, ತಿರಸ್ಕಾರಪೂರಿತವಾದ ಮಾತುಗಳನ್ನೂ ಕೇಳುತ್ತಿದ್ದೇನೆ. ಈ ವಿಚಾರಗಳನ್ನು ಕೆಲವು ಕಾಲದಿಂದ ತಡೆದುಕೊಂಡಿದ್ದು, ವಿಧಿಯಿಲ್ಲದೆ ಒಂದು ದಿನ ಶ್ರಿಮಾನ್...ಪ್ಪನವರ ಕೂಡ ತಿಳಿಸಿದೆ. ಆದರೆ ಯಾವಾಗ 'ಗಂಡ' ನೆನಿಸಿಕೊಂಡವನು 'ಹೆಂಡತಿ'ಯಾದವಳ ಕೈಗೊಂಬೆಯಾದನೋ ಆಗಲೇ ಪ್ರತಿಮಾತುಗಳು ಮಡದಿಯ ಮಾತುಗಳಿಗೆ ಸೈಗೊಡುವುದೇ ನ್ಯಾಯ ಆಗಿದೆ ! ಆಕೆ ಕಠೋರವಾಗಿ ಹೇಳಿದರೆ ಇವರದು ಬೆಣ್ಣೆಯಲ್ಲಿ ಕೂದಲು ತೆಗೆದಂತೆ, ಅಂಗೈಲಿ ಕೈಲಾಸ ತೋರಿಸಿದಂತೆ. ನೆರೆಯವರ ಬದುಕನ್ನು ನೋಡಿ ಸೈರಿಸಲಾರದೆ, ಈ ಮನೆಯಾಕೆಯ ಅಕ್ಕನು ನೆರೆಮನೆಗಳಲ್ಲೆಲ್ಲಾ ನನ್ನನ್ನು ದೂರಿರುವುದು ನನಗೆ ಗೊತ್ತಾಗಿದೆ. ಮನೆಯಲ್ಲಿ ತನ್ನ ಮಕ್ಕಳ ವ್ಯಾಸಂಗಕ್ಕೆ ತೊಂದರೆಯಾಗುವುದೆಂದು, ಇಲ್ಲಿಗೆ ಮಕ್ಕಳೊಡನೆ ಬಂದು ಹರಟೆ ಕೊಚ್ಚುತ್ತಾರೆ ಇತ್ಯಾದಿ. ಇಂತಹ ಸನ್ನಿವೇಶಗಳಲ್ಲಿದ್ದುಕೊಂಡು ವ್ಯಾಸಂಗಕ್ಕೆ ಹೆಚ್ಚಿನ ಗಮನ ಕೊಡಲಾರದವನಾಗಿದ್ದೇನೆ. ಸಾಧ್ಯವಾದಷ್ಟು ಬೇಗ, ಈ ವಾತಾವರಣವನ್ನು ಬಿಟ್ಟು ಬೇರೆಡೆಗೆ ಹೋಗಲು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇನೆ. ಎಂದಿಗೆ ಅದು ನೆರವೇರುವುದೋ ತಿಳಿಯದು. ಈ ವಿಚಾರಗಳನ್ನು ಊರಿಗೂ ಬರೆದಿದ್ದೇನೆ. ಇಂತಹ ಸನ್ನಿವೇಶಗಳಲ್ಲಿ ಏನು ಮಾಡಬೇಕೆಂಬುದಕ್ಕೆ ಸೂಕ್ತ ಸಲಹೆಗಳನ್ನು ಕೊಟ್ಟು, ಸಾಧ್ಯವಾದಷ್ಟು ಬೇಗನೆ ಆಶೀರ್ವಾದ ಪತ್ರ ದಯಪಾಲಿಸುತ್ತೀರಾಗಿ ನಂಬಿದ್ದೇನೆ...

ಇನ್ನೇನೂ ವಿಶೇಷವಿಲ್ಲ.

ಇತಿ ವಿಜ್ಞಾಪನೆಗಳು

೩೦

ನಿಸರ್ಗದ ನೆನಪು

ಓದಲು ಬೆಂಗಳೂರಿಗೆ ಹೋಗಿರುವ ಬಾಲಕನು ಆತ್ಮೀಯರಾದ ಚಿಕ್ಕ ತಂದೆಯವರಲ್ಲಿ ನೋವನ್ನು ತೋಡಿಕೊಂಡಿರುವ ಕಾರ್ಡು

ಕ್ಷೇಮ ಶ್ರೀ ಬೆಂಗಳೂರು

ತಾ. 24.12.52

ತೀ॥ ರವರ ಚರಣಸನ್ನಿಧಾನಂಗಳಲ್ಲಿ ಬಾಲಕನ ವಿಜ್ಞಾಪನೆಗಳು...ಆದಾಗಿ ಈವರಿಗೆ ಉ.ಕು.ಸಂ.

...ಹೊಸ ಜನಗಳ ಪರಿಚಯು, ಹೊಸ ಊರು ಒಂದೂ ಮನಸ್ಸಿಗೆ ಬೇಡವಾಗಿರುವುದರಿಂದ ಎಲ್ಲಿಗೆ ಹೋಗುವುದೂ ಬೇಕಾಗಿಲ್ಲ. ಹಾಸನಕ್ಕೂ ನನಗೂ ಇದ್ದ ಯಾವುದೋ ಒಂದು ನಿಕಟ ಸಂಬಂಧ ಕಡಿದು ಬಿದ್ದಂತಾಗಿದೆ. ನಾನು ನೊಂದ ವೇಳೆಗಳಲ್ಲಿ, ಸಂತೋಷದಿಂದ ಇದ್ದಾಗಲೂ ನನ್ನೊಡನೆ ಸ್ವಲ್ಪವೂ ಹಿಂಜರಿಯದೆ ಸುಖ ದುಃಖಗಳಲ್ಲಿ ಸಮನಾಗಿ ಭಾಗಿಯಾಗುತ್ತಿದ್ದ ಪ್ರಕೃತಿಮಾತೆಯುನ್ನು ನೆನೆಸಿಕೊಂಡಾಗಲಂತೂ ಬಹಳ ವ್ಯಸನವಾಗುತ್ತದೆ. ಎಲ್ಲರೂ ಭದ್ರಾವತಿಗೆ ಹೋದರು ಎಂದು ಕೇಳಿದ ಕೆಲವು ದಿವಸಗಳು ನನಗೆ ಬಹಳ ತ್ರಾಸದಾಯಕವಾದುವು. ನನ್ನನ್ನು ತಿಳಿದುಕೊಂಡಿರುವ ನಿಮಗೆ ನನ್ನ ವಾಕ್ಯಗಳು ಅಸಂಬದ್ಧವಾಗಿ ಕಾಣುವುದಿಲ್ಲವೆಂದುಕೊಂಡಿದ್ದೇನೆ. ಯಾಂತ್ರಿಕ ಜೀವನ ನಡೆಸುವವನಿಗೆ ಇದೆಲ್ಲಾ ಏಕೆ ಎಂಬ ಭಾವನೆ ಬಾರದಿರಲಿ. ಕೂಡಲೆ ಕಾಗದ ಬರೆಯಬೇಕಾಗಿ ಪ್ರಾರ್ಥನೆ.

ಇತಿ ವಿಜ್ಞಾಪನೆಗಳು

ತನ್ನ ತಂದೆಗೆ ಹಾಸನದಿಂದ ಭದ್ರಾವತಿಗೆ ವರ್ಗವಾದಾಗ ಬಾಲಕನು ತೋಡಿಕೊಂಡ ಭಾವನೆ ಇದು.

೩೧

ಕಾಲ ವ್ಯರ್ಥ ಮಾಡಬೇಡ

ಅಧ್ಯಾಪಕರೊಬ್ಬರು ಆತ್ಮೀಯ ವಿದ್ಯಾರ್ಥಿಗೆ ಬರೆದ ಪತ್ರ

ಕುಶಲಂ ಶ್ರೀ ಹೆಗ್ಗಡದೇವನ ಕೋಟೆ
29-6-1959

ಚಿ|| ರಾ||...ಗೆ ಆಶೀರ್ವಾದಗಳು. ಅದಾಗಿ ನೀನು ತಾ. 25 ರಲ್ಲಿ ಬರೆದ ಪ್ರೀತಿಯ ಪತ್ರವು ತಲುಪಿತು. ನೀನು H.S. Ist Year ನಲ್ಲಿ ಓದುತ್ತಿರುವೆಯೆಂದು ಬರೆದಿರುತ್ತೀಯೆ. ಅದನ್ನು ನೋಡಿ ಬಹಳ ಸಂತೋಷವಾಯಿತು. ನಿನ್ನನ್ನು ಇಂಗ್ಲೀಷ್ ಮತ್ತು ಗಣಿತದಲ್ಲಿ ಬಹಳ ನಿಪುಣನನ್ನಾಗಿ ಮಾಡಬೇಕೆಂಬ ಅಪೇಕ್ಷೆಯಿತ್ತು. ಅದು ನೆರವೇರಲಿಲ್ಲವೆಂಬ ವ್ಯಥೆಯಿಂದ ನಿನಗೆ ಕಾಗದವನ್ನು ಬರೆಯಲಾರದವನಾದೆನು. ಈಗಲೂ ನಿನಗೆ ಎಲ್ಲ ಪಾಠಗಳಲ್ಲಿಯೂ ಸುಲಭವಾದ ಮಾರ್ಗವನ್ನು ತೋರಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಕಾಲವನ್ನು ವ್ಯರ್ಥ ಮಾಡದೆ ಆಯಾಯಾ ದಿವಸದ ಪಾಠಗಳನ್ನು ಎರಡು ಸಾರಿ ಓದಿ ಅಥವಾ ಬರೆದು ಮುಗಿಸಿಕೊಂಡು ಬಾ. ಯಾವುದೂ ಕೊನೆಗೆ ಕಷ್ಟವಾಗುವುದಿಲ್ಲ...ನಿನ್ನ ಜೊತೆಗಾರರಿಗೆಲ್ಲಾ ನನ್ನ ಆಶೀರ್ವಾದವನ್ನು ತಿಳಿಸು. ಈಗ ತಾನೇ High Schoolಗೆ ಬಂದಿರುತ್ತೀಯೆ. ಪಾಠಗಳು ಸ್ವಲ್ಪ ಕಷ್ಟವಾಗಬಹುದು ಮತ್ತು ವಿಷಯಗಳು ಹೆಚ್ಚು. ಆದರೆ ನಿನಗೆ ಆಟದಮೇಲೆ ಎಷ್ಟು ಆಸೆಯಿದೆಯೋ ಅಷ್ಟೇ ಗಮನವನ್ನು ಪಾಠದ ಮೇಲೆಯಿಡು. ನಿಷ್ಕಾರಣವಾಗಿ ಶಾಲೆಗೆ ತಪ್ಪಿಸಿಕೊಳ್ಳಬೇಡ. ಪಾಠಗಳು ಹೋಗಿಬಿಡುತ್ತವೆ. ಇದೆಲ್ಲಾ ನಿನಗೇ ತಿಳಿದಿದೆ.

ನಾನೇನೂ ಹೆಚ್ಚಾಗಿ ಬರೆಯಬೇಕಾಗಿಲ್ಲ. Ist Class ನಲ್ಲಿ ಪಾಸು ಮಾಡಲು ಯತ್ನಿಸು.

ಇತ್ಯಾಶಿಷಃ

ವಿದ್ಯಾರ್ಥಿ – ಅಧ್ಯಾಪಕ ಸಂಬಂಧಗಳು ನಿಕಟವಾಗಿದ್ದ ದಿನಗಳಿದ್ದವು. ಅದು ಗೌರವ ಮತ್ತು ಪ್ರೀತಿಯ ನಿಕಟತೆ. ವಿದ್ಯಾರ್ಥಿಗಳ ಸಂಖ್ಯೆ ಕಡಮೆ ಇದ್ದುದರಿಂದಲೂ ಅದು ಸಾಧ್ಯವಿತ್ತು. ಇತ್ತೀಚೆಗೆ ಅಂಥ ಅರ್ಥಪೂರ್ಣ ಸಂಬಂಧ ತಪ್ಪಿರುವುದಕ್ಕೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಆದ ಹೆಚ್ಚಳವೊಂದೇ ಕಾರಣವಲ್ಲ.

೩೨

ಸಾಲದ ಸುದ್ದಿಯೇ ಬೇಡ

ದೂರದ ಊರಿನಲ್ಲಿ ಪರರ ಮನೆಯಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ ಮಗನಿಗೆ, ತಂದೆಯ ಬುದ್ಧಿವಾದದ ಪತ್ರ (ಕವರು)

कुशलम् श्रीः 14/8/63

ಹಾಸನಜಿಲ್ಲೆಯ ಹಳ್ಳಿ

...ಮಾರ್ಕೆಟ್ಟಿಗೆ ಹೋಗಿ ಚಾಪೆಯನ್ನು ಕೊಂಡುಕೊ...ತಣ್ಣೀರು ಸ್ನಾನ ನಿನಗೆ ಹೊಸದು. ಪ್ರಾರಂಭದಿಂದಲೇ ಮಳೆ ಬೇರೆ. ದೇಹಸ್ಥಿತಿಯನ್ನು ನೋಡಿಕೊಂಡು, ತಲೆಗೆ ಸ್ನಾನ ಮಾಡದಿದ್ದರೂ ಸರಿ. ಆರೋಗ್ಯದ ಕಡೆ ಎಚ್ಚರಿಕೆ ಇರಲಿ. ಅತಿ ಆತುರವೂ ಗಾಬರಿಯೂ ಅಪಾಯಕಾರಿ. ನಿಧಾನವಾಗಿ ತೃಪ್ತಿಯಾಗಿ ಊಟ ಮಾಡು. ಸಂಕೋಚಪಡಬೇಕಾದ ಕಾರಣವಿಲ್ಲ. ರಸ್ತೆಯಲ್ಲಿ ಸಂಚಾರ ಮಾಡುವಾಗ ವಾಹನಗಳ ಚಲನವಲನಗಳನ್ನು ನೋಡಿಕೊಂಡು ತಿರುಗು...ಸಾಧ್ಯವಾದಮಟ್ಟಿಗೆ ಹಣ ಸಾಲ ಕೊಡಬೇಡ; ಸಾಲ ಮಾಡಲೂ ಬೇಡ. **ತಾಜ ಕಲಂ :** ಅರ್ಥವಾಗದ ಪಾಠಗಳನ್ನು... ರಿಂದ ಹೇಳಿಸಿಕೊ...ಸಂಧ್ಯಾವಂದನಾದಿಗಳನ್ನು ಬಿಡದೆ ಮಾಡು. ಅದು ನಿನಗೆ ರಕ್ಷಾಕವಚ...ಸೌಜನ್ಯದಿಂದಿರು. ಪರಮಾತ್ಮನ ಕೃಪೆಯನ್ನು ಸಂಪಾದಿಸಿಕೊ...

ಇತಿ ಆಶೀರ್ವಾದಗಳು

೩೩

ಗೆಳೆಯರ ಗಲಾಟೆ

ಓದಲೆಂದು ಹಳ್ಳಿಯಿಂದ ಪಟ್ಟಣಕ್ಕೆ ಹೋಗಿ, ಅಲ್ಲಿ ಇತರ ಗೆಳೆಯರೊಂದಿಗೆ ಮನೆ ಮಾಡಿಕೊಂಡಿರುವ ಮಗನು, ತಂದೆಗೆ ಬರೆದ ಕಾರ್ಡು

Safe Sree 23/11/63
Hassan

ತೀ॥ರವರಲ್ಲಿ ವಿಜ್ಞಾಪನೆಗಳು.

...ನಾನು ನಿಮಗೆ ಮೊದಲೇ ತಿಳಿಸಿದ್ದಂತೆ ಈ ಮನೆಯಲ್ಲಿ ಓದಲು ಸಾಧ್ಯವಿಲ್ಲ. ನೀವು...ನಿಗೆ ರೂಮು ಮಾಡಲು ಹೇಳಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವನು ಮಾತ್ರ ನಾನು ಗೊತ್ತು ಮಾಡಿದ ರೂಮುಗಳನ್ನು ಕೈ ತಪ್ಪಿಸಿ ಸಂತೋಷಪಡುವುದರಲ್ಲಿಯೇ ತನ್ನ ಶಕ್ತಿಯನ್ನೆಲ್ಲಾ ವ್ಯರ್ಥ ಮಾಡಿಕೊಳ್ಳುತ್ತಿದ್ದಾನೆಯೇ ಹೊರತು ಒಂದು ರೂಮನ್ನು ಗೊತ್ತು ಮಾಡುವ ಕೆಟ್ಟ ಕೆಲಸಕ್ಕೆ ಕೈಹಾಕಿಲ್ಲ. ನಿಜವಾಗಿ ಹೇಳುವುದಾದರೆ ನಾನು ಊರಿಂದ ಬಂದಮೇಲೆ ಓದಿಲ್ಲ. ಅಕಸ್ಮಾತ್ ಓದಲು ಕುಳಿತರೂ ಬೇಕೆಂದೇ ಎಲ್ಲರೂ ಗಲಾಟೆ ಎಬ್ಬಿಸಿ ನನ್ನ ಉತ್ಸಾಹವನ್ನು ತಣ್ಣಗೆ ಮಾಡುತ್ತಾರೆ. ಒಟ್ಟಿನಲ್ಲಿ ನಾನು ಪರೀಕ್ಷೆಯಲ್ಲಿ ಪಾಸಾಗುವ ಆಸೆಯನ್ನು ಹೊಂದಿಲ್ಲ. ಇದಕ್ಕೆ ಇನ್ನೊಂದು ಪ್ರಬಲ ಕಾರಣವೆಂದರೆ ಇಲ್ಲಿರುವವರೆಲ್ಲರೂ ಒಂದು ಸಲ P.U.C ಯಲ್ಲಿ ದಂಡಯಾತ್ರೆ ಮಾಡಿದವರೇ ಆಗಿರುತ್ತಾರೆ. ಗಡಿಯಾರದ ಉಪಯೋಗವಂತೂ ನನ್ನ ಪಾಲಿಗಿಲ್ಲವೇ ಇಲ್ಲ. ಅದು ರಾಷ್ಟ್ರೀಕರಿಸಲ್ಪಟ್ಟಿದೆ ! ಅಕಸ್ಮಾತ್ 7 ಗಂಟೆಗೆ ಮಲಗಿ 12 ಗಂಟೆಗೆ ಅಲಾರಮ್ಮಿಟ್ಟರೂ ಅದನ್ನು ಬೇರೆ ಮಾಡಿ ಸಂತೋಷಪಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ನಾನು ನನ್ನ ಜವಾಬ್ದಾರಿಯನ್ನು 2 ತಿಂಗಳ ಹಿಂದೆಯೇ ಕಳೆದು ಕೊಂಡಾಯಿತು. ಒಂದು ರೂಮು ಮಾಡಬೇಕೆಂದು ನೀವು ಬಂದಾಗಲೆಲ್ಲಾ ಹೇಳುತ್ತಿದ್ದೆ. ನೀವಂತೂ ಇನ್ನೂ ರೂಮು ಮಾಡಲು ಅವನಿಗೆ ಹೇಳಲಿಲ್ಲ.

ಹಳ್ಳಿಯಿಂದ ಪಟ್ಟಣಕ್ಕೆ ಬಂದಾಗ ಬದಲಾದ ಪರಿಸರದಲ್ಲಿ ಅಸ್ವತಂತ್ರರಾಗುವ ಮುಗ್ಧ ಬಾಲಕರು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುವ ಅನಿವಾರ್ಯತೆಯೂ ಅಸಹಾಯಕತೆಯೂ ಕೆಲವೊಮ್ಮೆ ಇರುತ್ತದೆ. ಬುದ್ಧಿವಂತರೂ ಶ್ರಮಸಹಿಷ್ಣುಗಳೂ ಆದರೂ ಅಂಥ ವಿದ್ಯಾರ್ಥಿಗಳು ಯಶಸ್ಸು ಪಡೆಯುವುದು ಕಷ್ಟವಾಗುವುದು ಹೀಗೆ. ಈ ಬಾಲಕ ಮುಂದೆ ಒಳ್ಳೆಯ ವಿದ್ಯೆ ಪಡೆದು ನೌಕರಿಗೆ ಸೇರಿದವನು.

೩೪

ಎಂ.ಓ. ಮಾಡುವೆ

ತುರ್ತಾಗಿ ಹಣ ಬೇಕೆಂದು ಬರೆದ ಮಗನಿಗೆ, ತಂದೆಯ ಕಾರ್ಡು

ಕುಶಲಮ್ ಶ್ರೀಃ 14/9/65

ಹಾಸನಜಿಲ್ಲೆಯ ಹಳ್ಳಿ

ಚಿ॥ಗೆ ಆಶೀರ್ವಾದಗಳು.

...ನನ್ನ ಎಲ್ಲ ಪ್ರಯತ್ನವೂ ವ್ಯರ್ಥವಾದ್ದರಿಂದ ವಿಳಂಬವಾಗುತ್ತಿದೆ. ಸಮಯವಂತೂ ಮೀರಿತು. ಈ ದಿನ ಸಂಬಳ ವಾಗುವ ನಿರೀಕ್ಷೆ ಇದೆ. ನಾಳೆ M.O ಮಾಡಿ ಕಳುಹಿಸುತ್ತೇನೆ. ಇದೂ ನೆರವೇರದಿದ್ದರೆ ತೀ॥...ರಲ್ಲಿ ಸಾಲ ತೆಗೆದುಕೊಳ್ಳುವುದು. ಆದಷ್ಟು ಬೇಗ ಕಳುಹಿಸುತ್ತೇನೆ. ತೀ॥...ರಿಗೆ ಶನಿವಾರ (11/9) ಕೊಹಿನೂರು ಲಾರಿಯಲ್ಲಿ 3 ಪಲ್ಲ 35 ಸೇರು ಅಕ್ಕಿಯನ್ನು ಕಳುಹಿಸಿದ್ದೇನೆ. ಅದು ತಲಪಿದ್ದಕ್ಕೆ ಜವಾಬು ಬರಲಿಲ್ಲ. ಚಿ॥...ನು ಅಲ್ಲಿಗೆ ಹೋಗುವುದಾದರೆ ಅವರಿಗೆ ವಿಷಯವನ್ನು ತಿಳಿಸಲಿ.

ಚಿ॥...ನಿಗೆ

ಶಾಂತ ಮನಸ್ಕನಾಗಿ ಗಾಬರಿಯನ್ನು ಬಿಟ್ಟು ಗಣೇಶ ಶಾರದಾ ಗುರುಗಳಿಗೆ ಭಕ್ತಿಯಿಂದ ನಮಸ್ಕರಿಸಿ ತಾಯಿಗೆ ಮನಸಾ ನಮಸ್ಕರಿಸಿ ಪರೀಕ್ಷೆಯಲ್ಲಿ ಉತ್ತರಿಸು. ಕುಲದೈವದ ಕೃಪೆಯಿಂದ ಉತ್ತೀರ್ಣ ನಾಗುವೆ. 16/9 ರಂದು ಮಾತ್ರ ನೀನು ಬಹಳ ಜಾಗರೂಕತೆ ಯಿಂದ ವರ್ತಿಸು. ಶಾಂತಸಂಕಲ್ಪನಾಗಿ ನಿನ್ನ ಬುದ್ಧಿಯು ಸ್ಥಿರವಿರಲಿ. ಸಮಾಧಾನ ಚಿತ್ತನಾಗಿ ಬರೆ. ದೇವರು ಕರುಣಿಸುವನು.

ಪರ್ಮನೆಂಟು ಪೋಸ್ಟ್‌ಮಾಸ್ಟರು ಇಲ್ಲದ್ದರಿಂದ T.M.O. ಕಳುಹಿಸುವ ಅವಕಾಶವಿಲ್ಲ...

ಬಡವರಾದರೂ, ಮಗನನ್ನು ವಿದ್ಯಾವಂತನಾಗಿ ಮಾಡಬೇಕೆಂಬ ಬಯಕೆ ತಂದೆಯದು. ಸಂಬಳವು ನೆಟ್ಟಗೆ ಸಂದಾಯವಾಗದ ಅಧ್ಯಾಪಕ ಆತ. ಮಗನು ಪರೀಕ್ಷೆಯಲ್ಲಿ ಸಫಲನಾಗಲು ದೈವಸಹಾಯಬೇಕೆಂಬ ನಂಬಿಕೆ; ಜ್ಯೋತಿಷ್ಯದಲ್ಲೂ ಶ್ರದ್ಧೆ.

೩೫

ಪ್ರೊಫೆಸರನ್ನು ಆಶ್ರಯಿಸು

ಹಳ್ಳಿಯ ತಂದೆಯು, ಹಾಸ್ಟಲಿನಲ್ಲಿ ಸೇರಿದ ಮಗನಿಗೆ ಬರೆದ ಕಾರ್ಡು

ಕುಶಲಮ್ ಶ್ರೀಃ 27/12/65

ಹಾಸನಜಿಲ್ಲೆಯ ಹಳ್ಳಿ

...ಇತ್ತೀಚೆಗೆ ನಿನ್ನಿಂದ ಕಾಗದ ಇಲ್ಲ. ನಿನ್ನ ಹಾಸ್ಟಲಿನ ಊಟದ ವ್ಯವಸ್ಥೆ ಸರಿಹೋಗಿದೆಯೆ? ಇಲ್ಲವೆ ? ವ್ಯವಸ್ಥೆ ಕೆಟ್ಟ ಸಮಾಚಾರವನ್ನು ನೀನು ಬರೆಯಲಿಲ್ಲ. ಅಲ್ಲಿಯ ಆಹಾರ ಮತ್ತು ಪ್ರಮಾಣಗಳು ಸರಿಹೋಗದಿದ್ದಲ್ಲಿ ಕೂಡಲೆ ಬರಿ. ಬೇರೆ ಕಡೆಯಾದರೂ ತೃಪ್ತಿಯಾದ, ದೇಹಕ್ಕೆ ಹಿತವೆನಿಸಿದ ಆಹಾರವನ್ನು ದೊರಕಿಸಿ ಕೊಳ್ಳುವ ಏರ್ಪಾಡು ಮಾಡಿಕೊ. ಕಳುಹಿಸುತ್ತೇನೆ.

ಚಿ॥...ನು 15 ದಿನಗಳಿಂದ ನ್ಯೂಮೋನಿಯಾ ಜ್ವರದಿಂದ ಬಾಧೆ ಪಡುತ್ತಿದ್ದಾನೆ. ಅವನು ಈಗ...ಹಳ್ಳಿಯಲ್ಲಿದ್ದಾನೆ. ಅಲ್ಲಿಯೇ ಮಲಗಿ ಔಷಧಿ ವಗೈರೆ ಎಲ್ಲವೂ ಅಲ್ಲಿಯೇ ನಡೆಯುತ್ತಿದೆ. ಭಗವಂತನಕೃಪೆಯಿಂದ ಗುಣಮುಖವಾಗಿದ್ದಾನೆ. ನಿನ್ನ ತಾಯಿಯೂ ಅಲ್ಲಿಗೆ ಹೋಗಿದ್ದಾಳೆ. ಭಗವಂತನ ಕೃಪೆಯಲ್ಲಿ ಸೇರಿದ್ದು.

ನಿನ್ನ ಆರೋಗ್ಯಕ್ಕೆ ಕುಂದು ತರುವ ಆಹಾರ ತೆಗೆದುಕೊಳ್ಳಬೇಡ. ಪರೀಕ್ಷೆ ಹತ್ತಿರವಾದಂತೆ ದೇಹಾರೋಗ್ಯಕ್ಕೂ ಹೆಚ್ಚಿನ ಗಮನ ಕೊಡು.

...ಎದುರು ಮನೆಯಲ್ಲಿರುವ ಪ್ರೊಫೆಸರನ್ನು ಹಿಡಿದು ನಿನ್ನ ಸಂದೇಹಗಳನ್ನು ಪರಿಹರಿಸಿಕೊ. ಅವರು ಉದಾರವಾಗಿ ಹೇಳಿಕೊಡುತ್ತಾರಂತೆ. ಹೋಗಿ ಕೇಳು. ಅದರಲ್ಲಿ ಏನೂ ಅಪಮಾನವಿಲ್ಲ.

...ದ್ರವ್ಯಧ್ವಂಸವಾದರೂ ಹಿತವಾದ, ತೃಪ್ತಿಕರವಾದ ಊಟಕ್ಕೆ ಗತಿಯಿಲ್ಲವಾಗಿದೆ. ಇದೂ ನಮ್ಮ ದೌರ್ಭಾಗ್ಯ.

ಇತಿ ಆಶೀರ್ವಾದಗಳು

ಹಳ್ಳಿಯ ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಪಟ್ಟಣಗಳನ್ನು ಸೇರಿದಾಗ ಎದುರಿಸಬೇಕಾಗಿಬರುವ ಸಮಸ್ಯೆಗಳು ಅನೇಕ. ಬಂಧುಗಳಿಂದಲೂ, ಒಗ್ಗಿದ ಪರಿಸರದಿಂದಲೂ ದೂರವಾದ ಅವರ ಮನಸ್ಸು ಪರಕೀಯವಾಗುತ್ತದೆ. ಅದರೊಂದಿಗೆ ಆಹಾರ, ವಸತಿ, ಹೊಸ ಪರಿಸರವೂ ಸಮಸ್ಯೆಗಳನ್ನೊಡ್ಡುತ್ತವೆ. ಕಲಿಕೆಯ ಮಾಧ್ಯಮವೂ ಬದಲಾಗುತ್ತದೆ. ನಗರದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವುದು ಕಠಿಣವಾಗುವುದಿರಲಿ, ಅಸ್ತಿತ್ವವೇ ಕಷ್ಟವಾಗುತ್ತದೆ. ಅದಕ್ಕೆ ಪರಿಹಾರವಾಗಿ ಹಾಸ್ಟಲುಗಳು ಬಂದಿವೆ. ಆದರೆ ಕೆಲವೊಮ್ಮೆ ಸಮಸ್ಯೆಗಳು ಪೂರ್ಣವಾಗಿ ಬಗೆಹರಿದಿರುವುದಿಲ್ಲ, ಪೋಷಕರು ಅಸಹಾಯಕರಾಗಿ ಉಳಿಯುವ ದುರಂತವೂ ಸಂಭವಿಸಬಹುದು.

೩೬

ಟಾನಿಕ್ ತೆಗೆದುಕೊ

ಮಗನ ಬಗ್ಗೆ ತಂದೆಯ ಕಾಳಜಿ. ಅಂತರ್ದೇಶೀಯ ಪತ್ರ

ಕುಶಲಮ್ ಶ್ರೀಃ 14/8/67

ಹಾಸನಜಿಲ್ಲೆಯ ಹಳ್ಳಿ

...ನಾನು ನೆನ್ನೆ ಊರಿಗೆ ಸುಖವಾಗಿ ತಲಪಿದೆನು. ಎಷ್ಟು ಸಮಯವಿದ್ದರೂ ಹೇಳಬೇಕಾದ ಎರಡು ಮಾತನ್ನು ಹೇಳಲಿಲ್ಲ, ನೀನು ಕೃಶನಾಗಿ ಬಿಳಿಚಿಕೊಂಡಿದ್ದೀಯೆ. ಕಾರಣ ಆಹಾರದ ಅಪರ್ಯಾಪ್ತತೆಯೋ ಅವಿಚ್ಛಿನ್ನವಾದ ವ್ಯಾಸಂಗವೋ ಅಥವಾ ಎರಡೂ ಸೇರಿಯೋ ಆಗಿದ್ದೀತು. ತಿಂಡಿ ಬಗ್ಗೆ ನಾನು ಹೇಳಿದ ಯುಕ್ತಿಯನ್ನುಪಯೋಗಿಸಿ ಸ್ವಲ್ಪ ಅನ್ನವನ್ನೇ ದೊರಕಿಸಿಕೊಳ್ಳುವ ಪ್ರಯತ್ನ ಮಾಡು. ಸರ್ವಥಾ ಸಾಧ್ಯವಿಲ್ಲದಿದ್ದಲ್ಲಿ ಕೆಲವು ದಿನಗಳ ವರೆಗೆ ಆ ತಿಂಡಿಯನ್ನೇ ಒಪ್ಪಿಕೊ. ಅನಿವಾರ್ಯ. ಡಾಕ್ಟರರಿಗೆ ತೋರಿಸಿ ಯಾವುದಾದರೂ ಒಂದು ಟಾನಿಕನ್ನೂ ತೆಗೆದುಕೊಳ್ಳುವ ಪ್ರಯತ್ನಮಾಡು. ಆ ಸಮಯಕ್ಕೇ ತುಪ್ಪವನ್ನು ಸಿದ್ಧ ಪಡಿಸಿಕೊ.... ಸಾಯಂಕಾಲದ ವೇಳೆಯಾದರೂ ಸ್ವಲ್ಪ ವಿಶ್ರಾಂತಿ ದೊರಕಿಸಿಕೊ. ಆಹಾರ ಅಪರ್ಯಾಪ್ತವಾದರೆ ಬುದ್ಧಿ ತಾನೇ ಮೊಂಡು ಬೀಳುತ್ತದೆ...ಸಾಧ್ಯವಾದ ಮಟ್ಟಿಗೆ ಖಾಲಿ ಹೊಟ್ಟೆ ಬೇಡ. ಇಲ್ಲಿಗೆ ಗಣಪತಿ ಹಬ್ಬಕ್ಕೆ ಬಂದು ಪೂಜೆ ಮಾಡಿಕೊಂಡು ಮಾರನೆ ದಿನ ಪ್ರಯಾಣ ಮಾಡು...

೩೭

ಯಮ್ಮೆ ಕಾಯಲು ಹಾಕುವೆ (ತಾತನ ಕಾರ್ಡು)

ಕ್ಷೇಮ ಶ್ರೀ ಹಾಸನಜಿಲ್ಲೆಯ ಹಳ್ಳಿ
10-1-68

ಚಿ। ... ನಿಗೆ ಸರಿಯಾಗಿ ಪೋದುವಂತೆ ಬುದ್ಧಿ ಹೇಳುವದು. ಈ ಧಫ ಕೇಳದೆ ಇದ್ದರೆ...ನು ಬಂದು ಕುತ್ತಿಗೆ ಮೇಲೆ ಚೆನ್ನಾಗಿ ಇಡದು ಯಮ್ಮೆ ಕಾಯುವದಕ್ಕೆ ಹಾಕುತ್ತಾನೆಯಂತ ಹೇಳುವದು. ಇ ಕಾಗದವನ್ನು ಅವನೀಗೆ ತೋರಿಸುವದು. ನೀವು ಹೇಳಿದ ಪ್ರಕಾರ ಜೋಳ ಇರುತ್ತೆ.

ಬಂಧುಗಳ ಮನೆಯಲ್ಲಿ ಪಟ್ಟಣದಲ್ಲಿ ಓದುತ್ತಿರುವ ಮಮ್ಮಗನ ಬಗೆಗೆ ತಾತನ ಕಾಳಜಿ ಇದು.

೩೮

ಕೀಳರಿಮೆ

ನಗರದ ಹಾಸ್ಟಲಿಗೆ ಸೇರಿದ ಹಳ್ಳಿಯ ಹುಡುಗನೊಬ್ಬನು
ಕೀಳರಿಮೆಯಿಂದ ಸೊರಗಿ ಬರೆದ ಕಾರ್ಡು

ಕುಶಲಮ್ ಶ್ರೀ : Mysore
4th March, 68

...ಒಂದು ತಿಂಗಳ ದೀರ್ಘ ಅಂತರದಿಂದ ಪಾಠಗಳು ಮರೆತುಹೋಗಿ ಮೊದಲಿಂದ ಪ್ರಾರಂಭಿಸಬೇಕಾಗಿದೆ. ಅನೇಕರಿಗೆ ಒಂದು ತಿಂಗಳೇ ಸಾಕಾಗಬಹುದಾದರೂ ನನಗೆ ಹಾಗೆ ಇಲ್ಲ. ಆದರೂ ನನ್ನ ಈ ದೌರ್ಬಲ್ಯವನ್ನು ಈ ಒಂದು ತಿಂಗಳಮೇಲೆ ಹಾಕುವ ಹಾಗಿಲ್ಲ. ಓದಿದ್ದೇನೆ. ಓದುತ್ತೇನೆ. ಪಾಸಾಗಬಹುದು. ಆಗದೆಯೂ ಇರಬಹುದು. ಅದಕ್ಕೆ ನನ್ನ ಸೋಮಾರಿತನ ಕಾರಣವಲ್ಲ. ಏಕೆಂದರೆ ಅದಕ್ಕೆ ಅವಕಾಶ ಕೊಟ್ಟಿಲ್ಲ. ಇಲ್ಲದಿರುವ ದಡ್ಡತನವೂ ಕಾರಣವಾಗಲಾರದು. ಇದಕ್ಕೆಲ್ಲಾ ನನ್ನಲ್ಲಿ ಯಾವುದೋ ಮುಖ್ಯವಸ್ತುವು ಸಾಲದಿರುವುದೇ ಕಾರಣವೆನಿಸುತ್ತದೆ. ಮುಂದೆ ಓದುತ್ತಾ ಹೋದಂತೆ ನೀರಿನ ಮೇಲೆ ಬರೆದಂತೆ ಅದೆಲ್ಲಾ ಮಾಯವಾಗುತ್ತದೆ. ನನ್ನ ಈ ದೌರ್ಭಾಗ್ಯಕ್ಕೆ ಬೇರೆ ಯಾರೂ ಕಾರಣರಾಗಲಾರರು.

ಪದವಿಯನ್ನು ಪಡೆಯುವುದು ಭಗವತ್ಸಂಕಲ್ಪದಲ್ಲಿ ಇರುವಂತೆ ಕಾಣುವುದಿಲ್ಲ, ಆಗದಿದ್ದರೂ ಈ ರೀತಿಯ ಓದಾಟ ನನಗೆ ಸಾಕಾಗಿದೆ. ಅಲ್ಲದೆ ಸಾಮಾನ್ಯವಾದ ಯಾವ ಆಶೋತ್ತರಗಳೂ

ನಾನು ಕಲ್ಪಿಸಿಕೊಂಡಿಲ್ಲವಾದ್ದರಿಂದ ನನ್ನನ್ನು ದುಃಖಭಾಗಿಯನ್ನಾಗಿ ಮಾಡಲಾರವು. ಇವುಗಳಿಂದ ಮುಕ್ತನಾಗಿ ಶಾಂತನಾಗಿರಬೇಕೆಂದು ಇಷ್ಟಪಡುತ್ತೇನೆ.

ಪರೀಕ್ಷೆಯು ಏಪ್ರಿಲ್ 15 ರಿಂದ (ನಮಗೆ 20 ರಿಂದ) ಪ್ರಾರಂಭವಾಗುತ್ತದೆ. ಓದುತ್ತಿದ್ದೇನೆ. ಆಗುವುದಾಗಲಿ. ಏನಾದರೂ ಈ 2 ತಿಂಗಳು ಈ ವಿಧವಾದ ಪ್ರಯತ್ನಕ್ಕೆ ಕೊನೆಯಾಗುತ್ತದೆ. ಅದೇ ಕೊನೆಯ ತೀರ್ಮಾನವಾಗುತ್ತದೆ. ಇದರಿಂದ ತಾವು ಬೇಜಾರು ಪಟ್ಟುಕೊಳ್ಳಬಾರದು.

ಈ ವಿದ್ಯಾರ್ಥಿಯು ಪದವಿ ಪರೀಕ್ಷೆಯಲ್ಲಿ ರ‍್ಯಾಂಕು ಪಡೆದವನು.

೩೯

ಅಚಾತುರ್ಯ

ರೂಮು ಮಾಡಿಕೊಂಡು ಓದುತ್ತಿರುವ ಮಗನ ಪತ್ರ (ಕವರು)

OM TAT SAT

Safe Sree Mysore

30-6-68

...ದಯವಿಟ್ಟು ಕ್ಷಮಿಸಿ. ಬರೆಯುತ್ತಿದ್ದೇನೆ. ಹೀಗೆ ಮಾಡಬಾರದಾಗಿತ್ತು ಎಂದು ಪಶ್ಚಾತ್ತಾಪವಾದರೂ, ಹೇಗೆ ಮಾಡಬಹುದಿತ್ತು ಎಂಬುದನ್ನು ತಿಳಿಯಲಾರೆ. ಬಂದಕೂಡಲೆ ರೂಮು, ಊಟ ಮುಖ್ಯ ಮತ್ತು ಮೊದಲ ಕೆಲಸವಾಗಿತ್ತು. ರೂಮು ಮಾಡುವುದರ ಮತ್ತು ಅಡಿಗೆ ಮಾಡಿಕೊಳ್ಳುವುದರ ಮೊದಲ ಅನುಭವದ ಪರಿಣಾಮವಾಗಿ ಮತ್ತು ಇತರ ಕೆಲವು ಅನಿವಾರ್ಯ ವಸ್ತುಗಳಿಗಾಗಿ ಹಣವನ್ನು ಉಪಯೋಗಿಸಲೇ ಬೇಕಾಯಿತು. ಈಗ ಅಡ್ಮಿಷನ್ ಫೀಗಾಗಿ 90 ರೂಗಳು ಬೇಕಾಗಿದೆ. ಯುಕ್ತವಲ್ಲದ್ದಕ್ಕೆ ಹಣವನ್ನು ವೆಚ್ಚ ಮಾಡಲಿಲ್ಲ. ದಯವಿಟ್ಟು ಕ್ಷಮಿಸಿ. ಇನ್ನು ಮುಂದೆ ಈ ರೀತಿಯ ಅಚಾತುರ್ಯವಾಗದಂತೆ ಎಚ್ಚರಿಕೆ ವಹಿಸುತ್ತೇನೆ. ಗಡಿಯಾರವನ್ನು ಕೊಟ್ಟು ಕಳುಹಿಸಿ....

ಬಡತನದ ತಾಪ, ವಿನಯ ಮತ್ತು ಮೊದಲಬಾರಿ ನಗರಕ್ಕೆ ಬರುವ ವಿದ್ಯಾರ್ಥಿಗಳ ಪಾಡು ಇಲ್ಲಿ ಕಾಣುತ್ತದೆ.

೪೦

ರ‍್ಯಾಂಕ್ ಸರ್ಟಿಫಿಕೇಟ್

ತಂದೆಯು ಮಗನಿಗೆ ಬರೆದ ಪತ್ರ

ಹಾಸನಜಿಲ್ಲೆಯ ಹಳ್ಳಿ

19/8/68

...ನಿಮ್ಮ ಕಾಲೇಜಿನ ಪ್ರಿನ್ಸಿಪಾಲರಿಗೆ ಒಂದು ಕಾಗದ ಬರೆದು ವಿನಯದಿಂದ ಪ್ರಾರ್ಥಿಸಿದೆ. ಅವರಿಗೆ ಕರುಣೆಯಿಲ್ಲ ವಾಯ್ತು.

ಈಗ ನೀನು ವಿಶ್ವವಿದ್ಯಾಲಯದ ಆಫೀಸಿಗೆ ನಿನ್ನ ಅಂಕಗಳ ಅಧಿಕೃತ ಪಟ್ಟಿಯೊಡನೆ ಹೋಗಿ ಅದರಲ್ಲಿ ನಿನ್ನ ರ‍್ಯಾಂಕನ್ನು ನಮೂದಿಸುವಂತೆ ಕೇಳಿ ಬರೆಸು ಮತ್ತು 5 ರೂಗಳನ್ನು ಕಟ್ಟಿ ನಿನ್ನ ರ‍್ಯಾಂಕ್ ಸರ್ಟಿಫಿಕೇಟನ್ನು ಕೊಡಬೇಕೆಂದು ಕೇಳಿ ತೆಗೆದುಕೊ. ಈ ಬಗ್ಗೆ ವಿಶ್ವವಿದ್ಯಾಲಯದ ರಿಜಿಸ್ಟ್ರಾರರಾದ ಶ್ರೀ ರಾಮಚಂದ್ರ್ಯ ಎಂಬುವರನ್ನೇ ಕಂಡು ವಿದ್ಯಮಾನಗಳನ್ನೆಲ್ಲಾ ವಿವರಿಸಿ ಹೇಳು. ನ್ಯಾಯಪಕ್ಷಪಾತಿಯಾದ ಅವರು ಆ ನಿಮಿಷದಲ್ಲಿ ಕೆಲಸ ಮಾಡಿಕೊಡುತ್ತಾರೆ – ಇತ್ಯಾದಿ ವಿಚಾರಗಳನ್ನು ಇಲ್ಲಿಯ ಕಾಲೇಜು ಪ್ರಿನ್ಸಿಪಾಲರು ತಿಳಿಸಿದರು. ಈ ಸರ್ಟಿಫಿಕೇಟು ಯಾವ ನಿಮಿಷದಲ್ಲಿ ನಿನಗೆ ಪ್ರಯೋಜನಕ್ಕೆ ಬರುತ್ತದೋ ತಿಳಿಯದು. ಆದ್ದರಿಂದ ಮೇಲ್ಕಂಡ ಎರಡು ಕೆಲಸಗಳನ್ನೂ ಆದಷ್ಟು ಬೇಗನೆ ಮಾಡು...ಇದರಿಂದ ವಿಶ್ವವಿದ್ಯಾಲಯದ ಅಥವಾ ನಿಮ್ಮ ಕಾಲೇಜಿನ ಹುಳುಕು ಹೊರಬರುತ್ತದೆ. ಕರ್ಕ್ಷ ಸ್ಲಿಪ್ ಮಾತ್ರದಿಂದ ನೀನು ತೃಪ್ತನಾಗಬೇಡ. ಅದು ನಿನ್ನ ತೃಪ್ತಿಗಾಗಿ ಹೇಳಿದ ಮಾತು. ಅಥವಾ ನಿಮ್ಮ ಈಗಿನ ಕಾಲೇಜಿನ ಪ್ರಾಧ್ಯಾಪಕರು ಅಲ್ಲಿಂದಲೇ ಈ ಎರಡನ್ನೂ ತರಿಸುವುದಾದರೆ ಸಂತೋಷ...

ರ‍್ಯಾಂಕ್ ಬಂದರೂ ಹಳ್ಳಿಗರಿಗೆ ಆತಂಕ ತಪ್ಪದ ನಿದರ್ಶನ ; ಶೋಷಣೆಯ ಒಂದು ಮುಖ.

೪೧

ಹಾಸ್ಟಲೇ ಉತ್ತಮ

ವಸತಿಸಮಸ್ಯೆ ಕುರಿತು ತಂದೆಗೆ ಕಾರ್ಡು

Sree Safe ನಗರ

9.11.68

...ಈಗ ನಾನು ರೂಮು ಮಾಡಿಕೊಳ್ಳುವ ಯೋಚನೆಯನ್ನು ಕೈಬಿಟ್ಟಿದ್ದೇನೆ. ಹಾಸ್ಟಲೇ ವರ್ಷದ ಉತ್ತರಾರ್ಧದಲ್ಲಿ ಉತ್ತಮ. ಅಲ್ಲದೆ ಓದಬೇಕಾದ ರೀತಿ ಈಗೀಗ ಗೊತ್ತಾಗುತ್ತಿದೆ. ಕಳೆದ ಅರ್ಧ ವರ್ಷದಲ್ಲಿ ಹೆಚ್ಚು ಶ್ರಮಪಟ್ಟರೂ ಫಲವು ಮಾತ್ರ ಇಲ್ಲದುದು ಈಗ ಗಮನಕ್ಕೆ ಬಂದಿದೆ. ಕೆಲವೊಮ್ಮೆ ಗಟ್ಟಿಯಾಗಿ ಓದಿಕೊಳ್ಳಬೇಕಾದ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸೈಕಲ್ಲಿನ ಸಹಾಯವನ್ನು ಪಡೆಯುತ್ತೇನೆ. ಅಲ್ಲದೆ ರೂಮು ಮಾಡುವುದು ಮತ್ತೊಂದು ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತದೆ. ಈ ವೇಳೆಗೆ ಹಾಸ್ಟಲಿಗೆ ನನ್ನ ಜೀವನ ಒಗ್ಗಿರುವುದರಿಂದ ಈ ಸಮಯದಲ್ಲಿ

ಬೇರೆ ವ್ಯವಸ್ಥೆಗಳನ್ನು ಮಾಡಿಕೊಳ್ಳದಿರುವುದು ಸೂಕ್ತವೆಂದು ಭಾವಿಸಿದ್ದೇನೆ. ತೀ॥ ಅಣ್ಣನವರನ್ನು ವೃಥಾ ಸುತ್ತಿಸಿದ್ದಾಯಿತು. ಅವರು ಪೆಟ್ಟಿಗೆ ತೆಗೆದುಕೊಳ್ಳುವುದಕ್ಕೆ ಬರುವುದಾದರೆ ಪುರಸತ್ತಾದಾಗ, ಸೌಕರ್ಯವಿದ್ದಾಗ ಬರಲಿ, ಆತುರವಿಲ್ಲ. ನನ್ನ ಕೈಲಾದ ಪ್ರಯತ್ನವನ್ನು ಮಾಡುತ್ತೇನೆ. ಮುಂದೆ ದೈವೇಚ್ಛೆ...

ಅರ್ಧವರ್ಷ ಕಳೆದರೂ, ನಗರಕ್ಕೆ ಬಂದ ವಿದ್ಯಾರ್ಥಿಯು ವಸತಿಸಮಸ್ಯೆಗೆ ಗಮನ ಕೊಡಬೇಕಾಗಿರುವ ಸ್ಥಿತಿಯನ್ನು ಗಮನಿಸಬಹುದು.

೪೨

ಶ್ಲೋಕದಲ್ಲಿ ಶೋಕ

ಹಾಸ್ಟಲಿನಲ್ಲಿ ಸೀಟಗಾಗಿ ವಾರ್ಡನರಿಗೆ ಮಾಡಿದ ಮನವಿ

ನಗರ
9-7-74

...ಆದರೆ ನಾನು, ಶ್ರೀ...ವರನ್ನು ಕಂಡು

ಭವಂತಂ ತ್ರಾತಾರಂ ಭವಭಯವಿದೂನಸ್ಯ ಜಗತಃ
ಶರಣ್ಯಂ ಸಂಭಾವ್ಯ ವ್ಯಸನಪರಿತಾಪವ್ಯವಹಿತೇ॥
ಪ್ರವಿಷ್ಟಂ ಸಂಸಾರೇ ಕಠಿಣಮನಸಾ ಮಾಂ ಯದಿ ಭವಾನ್
ಭವಾನೀಸಂಜಾತ ತ್ಯಜಸಿ ಕಮಹಂ ಯಾಮಿ ಶರಣಮ್॥
ಕ್ಷುಧಾರ್ತೇ ನಾಹಾರಃ ಪ್ರಿಯಜನವಿದೂರೇ ನ ವಸತಿಃ
ಕೃತಜ್ಞಾ ನೋ ಮಿತ್ರಾಃ ಮಯಿ ಹಿತಜನಾಃ ಹಂತ ವಿಮುಖಾಃ।
ಚಿರಂ ವ್ಯಾಧಿರ್ದೈನ್ಯೋ ಖಲಕುಜನಸೇವಾಗಣವಿಭೋ
ಕಥಂ ಮೇ ಸಂಪ್ರಾಪ್ತಾ ಯದಿ ತವ ಕಟಾಕ್ಷೋ ನ ಚಲಿತಃ॥

ಎಂಬ ಎರಡು ಶ್ಲೋಕಗಳನ್ನು ಬರೆದು ತೋರಿಸಿದೆ. ಅವರು ನಿನಗೆ ಹೇಗೆ ಇಷ್ಟವೋ ಹಾಗೆ ಇದ್ದುಕೊಂಡು ಊಟ ಮಾಡಿಕೊಂಡಿರು ಎಂದು ಹೇಳಿದರು. ಆದರೆ ಹೋಗಿ ನೋಡುವಾಗ ಮುಂಚೆ ನೋಡಿದ್ದ ರೂಮು ಭರ್ತಿಯಾಗಿಬಿಟ್ಟಿತ್ತು. ಆದ್ದರಿಂದ ನನಗೊಬ್ಬನಿಗಾಗಿಯೇ ಒಂದು ರೂಮನ್ನು ಕೊಟ್ಟಿದ್ದಾರೆ. ಸದ್ಯಕ್ಕೆ ಅನುಕೂಲ ಎಂದು ಎನ್ನಿಸುತ್ತದೆ. ನಾಳೆ – ನಾಡಿದ್ದು ಅಲ್ಲಿಗೆ ಹೋಗುತ್ತೇನೆ...

ಗತಕಾಲದ ರಾಜರ ಆಸ್ಥಾನಗಳಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನು ನೆನಪಿಗೆ ತರುವ ಪ್ರಸಂಗ ಇದು.

೪೩

ಹಾಸ್ಟಲಿಗೆ ಸೇರಿದ ಹೆಣ್ಣು

ಹೊಸದಾಗಿ ಹಾಸ್ಟಲಿಗೆ ಸೇರಿದ ಹೆಣ್ಣುಮಗಳೊಬ್ಬಳು ತನ್ನ ಅಕ್ಕನಿಗೆ ಬರೆದ ಪತ್ರ

Safe Sree Ram Hassan
4-8-81

ಮಾ। ರವರಿಗೆ ಸಮಾನರಾದ ಅಕ್ಕನ ಚರಣಕಮಲಗಳಲ್ಲಿ ತಂಗಿಯು ಬೇಡುವ ಆಶೀರ್ವಾದಗಳು. ಇಲ್ಲಿ ನಾನು ನನ್ನ ಗೆಳತಿಯರೊಂದಿಗೆ ಅರೋಗ್ಯದಿಂದಿದ್ದೇನೆ. ತಮ್ಮೆಲ್ಲರ ಆರೋಗ್ಯವನ್ನು ಬಯಸುತ್ತಾ ಪತ್ರವನ್ನು ಪ್ರಾರಂಭಿಸುತ್ತೇನೆ.

ನಾನೀಗ ಎಂದೂ ಅರಿಯದ ಹೊಸ ಬಾಳನ್ನು ಪ್ರಾರಂಭಿಸಿದ್ದೇನೆ. ಈಗಾಗಲೇ ನಿಮಗೆ ಈ ವಿಷಯ ತಿಳಿದಿರಬಹುದು. ನಾನು ಇಷ್ಟುದಿನ ಪತ್ರ ಬರೆಯದಿದ್ದುದಕ್ಕಾಗಿ ವಿಷಾದಿಸುತ್ತೇನೆ. ನಾನು Hostel ಗೆ ಬಂದು ಈಗಾಗಲೇ 15 ದಿನಗಳಾದುವು. ದಿನಚರಿಯೆಂದರೆ ಬೆಳಿಗ್ಗೆ 5.30 ಕ್ಕೆ ಎದ್ದು ನಿತ್ಯಕರ್ಮಗಳನ್ನು ತೀರಿಸಿಕೊಂಡು 6 ಗಂಟೆಗೆ ಪ್ರತಿದಿನ ಪ್ರಾರ್ಥನೆ, ನಂತರ ಕೆಲಸ– ಎಂದರೆ ಅಡಿಗೆ ಮಾಡಿ, ಪಾತ್ರೆ ತೊಳೆದು, ಲೆಟ್ರಿನ್ ಕ್ಲೀನ್ ಮಾಡುವ ಕೆಲಸದವರೆಗೆ ಎಲ್ಲಾ ನಾವೇ ಮಾಡಬೇಕು. ಪ್ರತಿದಿನ ಒಂದೊಂದು ಕೆಲಸ ಇದ್ದೇ ಇರುತ್ತದೆ. ಒಂದು ಗುಂಪಿಗೆ 4 ಜನ. ನಾವು ಈಗಾಗಲೇ 2 ದಿನ ಅಡಿಗೆ ಮಾಡಿಯಾಯಿತು. 3 ಹೊತ್ತೂ ಅನ್ನ. ಕಾಫಿ ಇಲ್ಲ, ತಿಂಡಿ ಇಲ್ಲ. ಬೆಳಿಗ್ಗೆ 7 ಗಂಟೆಗೆ ಅಡಿಗೆ ಆಗಿರುತ್ತದೆ. ಕ್ಲಾಸ್ 9 ಗಂಟೆಗೆ ಇರುತ್ತದೆ. ಬೆಳಿಗ್ಗೆ ಹುಳಿಗೆ ಊಟ ಮಾಡಿದರೆ ಮಧ್ಯಾಹ್ನ ಮಜ್ಜಿಗೆಗೆ ಊಟ ಮಾಡಬೇಕು. ರಾತ್ರಿ ಎಲ್ಲಾ ಒಟ್ಟಾಗಿ ಊಟಮಾಡುವುದು. ಪಕ್ಕದಲ್ಲೇ ಭಾವಿ ಇದೆ. ಅಲ್ಲಿ ಸೇದಿಕೊಂಡು ಸ್ನಾನ ಇತ್ಯಾದಿ ಮಾಡಬೇಕು. ತಣ್ಣೀರಲ್ಲೇ ಸ್ನಾನ. ಮೊನ್ನೆ ಭೀಮನ ಅಮಾವಾಸ್ಯೆಗೆ ಒಬ್ಬಟ್ಟು ತಟ್ಟಿದ್ದೆವು. ತುಂಬಾ ಚೆನ್ನಾಗಿತ್ತು. ಇಲ್ಲಿ ತಿನ್ನುವುದಕ್ಕೆ, ಓದುವುದಕ್ಕೆ ಏನೂ ಕಡಿಮೆಯಿಲ್ಲ. ಕಾಲೇಜಿಗೆ ಬಿಟ್ಟು ಇನ್ನೆಲ್ಲೂ ಕಳುಹಿಸುವುದಿಲ್ಲ. ನಿನ್ನೆ ಎಂದರೆ ಶನಿವಾರ ಅಣ್ಣ ಬಂದಿದ್ದರು. ಚೋಮಾಯಿ ತಂದಿದ್ದರು. ತುಂಬಾ ಚೆನ್ನಾಗಿತ್ತು...

ಇಂದು ನಮ್ಮದು ಬಡಿಸುವ ಕೆಲಸ. Bell ಆಯ್ತು. ನಾನಿನ್ನು ಬರಲಾ.

ಇತಿ ನಿನ್ನ ತಂಗಿ

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮೊದಲಬಾರಿಗೆ ಸಂಕೇತಿ ಸಮುದಾಯದ ಹೆಣ್ಣು ಮಕ್ಕಳಿಗಾಗಿ ವಿದ್ಯಾರ್ಥಿನಿನಿಲಯ ಪ್ರಾರಂಭವಾಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸ ಚಾಲನೆ ಪಡೆದದ್ದು ಎಂಬತ್ತರ ದಶಕದಲ್ಲಿ. ಚೋಮಾಯಿ – ಶಾವಿಗೆ. ಇದು ಸಂಕೇತಿ ಸಮುದಾಯದ ಅತಿ ವಿಶಿಷ್ಟ ತಿನಿಸು.

ಗುಚ್ಛ - 3

ವಿವಾಹ

ವಿವಾಹಕ್ಕೆ ಸಂಬಂಧಿಸಿದ ಪತ್ರಗಳಲ್ಲಿ ಸಾಮಾನ್ಯವಾಗಿ ನಿಷ್ಕರ್ಷೆಯಾಗುವವರೆಗಿನ ವಿವರಗಳು, ವಿವಾಹೋತ್ತರ ವಿಶ್ಲೇಷಣೆಗಳು ಇರುತ್ತವೆ. ವಿವಾಹದ ವಿವರಗಳು ಇರುವ ಅಗತ್ಯವೇ ಇರದ್ದರಿಂದ ಪತ್ರಗಳಲ್ಲಿ ಅವು ಕಾಣಿಸುವುದಿಲ್ಲ. ವಿವಾಹದ ವೇಳೆ ಯಾವುದಾದರೂ ವಿಶೇಷ ಪ್ರಸಂಗಗಳು ನಡೆದು, ಉಲ್ಲೇಖನೀಯವಾಗಿದ್ದರೆ ಮಾತ್ರ ಅವು ಪತ್ರಗಳಲ್ಲಿ ಕಾಣಿಸಿಕೊಂಡಾವು. ಆದರೆ ಅಂಥ ಪತ್ರಗಳು ಇಲ್ಲಿ ದೊರೆತಿಲ್ಲ. ಇಲ್ಲಿನ ಪತ್ರಗಳನ್ನು ೧೯೫೦ರವರೆಗೆ ಮತ್ತು ೧೯೫೦ ರಿಂದ 1970 ಹಾಗೂ ೧೯೭೦ರನಂತರ ಎಂದು ಸ್ಥೂಲವಾಗಿ ಮೂರು ವರ್ಗಗಳಲ್ಲಿ ಜೋಡಿಸಿದೆ. ವಿವಾಹಕ್ಕೆ ಸಂಬಂಧಿಸಿದ ಎಲ್ಲ ಹಂತಗಳ ಎಲ್ಲ ವಿವರಗಳಿಗೂ ಇಲ್ಲಿ ಹುಡುಕಬಾರದು.

ಳಳ

ನಮ್ಮ ದೌರ್ಭಾಗ್ಯ ಸಮುದಯ

ಮರುಮದುವೆಯನ್ನೊಲ್ಲದ ವಿದ್ಯಾರ್ಥಿಗೆ ತಂದೆಯ ವಾತ್ಸಲ್ಯದ ಪತ್ರ

ಕುಶಲಂ ಶ್ರೀ ಲಕ್ಷ್ಮೀ ಕೇಶವಃ ಪ್ರಸನ್ನಃ ಮಧ್ಯದೇಶದಹಳ್ಳಿ
29.3.33

...ನೀನು ಬರೆದ ಕಾಗದವು ಕೈ ಸೇರಿತು. ಕನ್ಯಾ ಕೊಡುವದಾಗಿ ಆಕೆಯು ತಾನಾಗಿ ವರ್ತಮಾನ ಕೊಟ್ಟಿರುವುದೊಂದಂಶ ಮಾತ್ರ ವಾಸ್ತವವೇ ವಿನಾ ಉಳಿದಂಶಗಳೆಲ್ಲವೂ ಮಿಥ್ಯೆಗಳು.

ಯೋಚಿಸ ಕೆಲಸವಿಲ್ಲ, ನಿನ್ನನ್ನು ಆಲೋಚಿಸಿ, ಇಷ್ಟವನ್ನರಿಯದೆ ಯಾವ ಕೆಲಸಕ್ಕೂ ಮುಂದುವರಿಯಲಾರೆನೆಂಬಂಶವನ್ನು ಮೊದಲಿನ ಕಾಗದಗಳಲ್ಲೇ ಸೂಚಿಸಿದ್ದೇನೆ. ಗಾಬರಿಪಡಬೇಕಾದುದಿಲ್ಲ. ಚಿ...ಯು ಇಷ್ಟರಲ್ಲೇ ಊರಿಗೆ ಬರುವವನಾಗಿದಾನೆ. ಚಿ...ಯು ಬೆಂಗಳೂರಿಗೆ ಹೋಗಿ ಕೆಲ ದಿನಗಳಿದ್ದು ನಂತರ ಊರಿಗೆ ಬರಬಹುದಾಗಿ ತೋರುತ್ತೆ. ನೀನೂ ರಜ ಬಂದ ಕೂಡಲೆ ಊರಿಗೆ ಬಂದು ನಮ್ಮ ಮನಸ್ಸಿಗೆ ಪ್ರಶಾಂತತೆಯನ್ನುಂಟು ಮಾಡುವಿಯೆಂದು ನಂಬಿದೇನೆ. ನಿನ್ನ ತಾಯಿಯಂತೂ ಹಗಲಿರುಳೂ ನಿನ್ನನ್ನು ನೋಡಬೇಕೆಂಬ ಹಂಬಲಿಕೆಯಲ್ಲೆ ಇದಾಳೆ. ಲಗ್ನದ ವಿಚಾರವಾಗಿ ಎಲ್ಲಿಯೂ ಯಾವ ವಿಧವಾದ ಪ್ರಯತ್ನ ಮಾಡಿಲ್ಲ. ಇದು ತಥ್ಯಾಂಶ. ಅವಸ್ಯಕವಾದ ಕೆಲಸವಿದ್ದಲ್ಲಿ ನೀನು 4-6 ದಿನಗಳಮಟ್ಟಿಗೆ ಇಲ್ಲಿದ್ದು ಪ್ರಯಾಣ ಬೇಕಾದರೂ ಮಾಡಬಹುದು. ಇಲ್ಲಿ ನಿನ್ನ ಅತ್ತಿಗೆಯೇ ಆದಿಯಾಗಿ ಎಲ್ಲರೂ ಭಗವತ್ಕೃಪೆಯಿಂದ ಕುಶಲಿಗಳು. ನಮ್ಮ ವಿಚಾರದಲ್ಲಿ ಅದರಲ್ಲೂ ನಶಿಸಿದ ಬಾಂಧವ್ಯ ವಿಚಾರದಲ್ಲಿ ಮೊದಲಿನಿಂದಲೂ ಅಸೂಯಾಪರರಾಗಿದ್ದವರ ಹೃದಯಗಳು ಆನಂದಪೂರಿತಗಳಾದುವು. ಇದು ನಮ್ಮ ದೌರ್ಭಾಗ್ಯ ಸಮುದಯವು. ಇದಕ್ಕಾಗಿ ವ್ಯಥಿಸಬಾರದು. ಶ್ರೀ ಚಾಮುಂಡಾಂಬೆಯು ನಿನ್ನ ವ್ಯಾಸಂಗದ ಫಲಕ್ಕೆ ಸನ್ಮಂಗಳಗಳನ್ನು ಕೃಪೆಯಿಂದ ಬೀರಲೆಂದು ಹಾರೈಸುತ್ತಿರುವೆನು.

ಆಶೀಃ

ಒಬ್ಬ ತಂದೆಯ ಆರ್ದ್ರ ಮನಸ್ಸು ಇಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಸಮುದಾಯದ ಸಾಮಾಜಿಕ ಸಂಬಂಧಗಳ ಒಂದು ರೀತಿಗೂ ಇಲ್ಲಿ ನಿದರ್ಶನವಿದೆ. ಎಂಥ ಸಾಂಸಾರಿಕ ಕ್ಲೇಶಗಳನ್ನು ಹೊತ್ತೇ ಹುಡುಗರು ವಿದ್ಯಾಭ್ಯಾಸ ನಡೆಸುತ್ತಿದ್ದರು ಎಂಬುದರ ಸೂಚನೆಯೂ ಇಲ್ಲಿ ಸಿಗುತ್ತದೆ.

ಳಜ

ಸೋದರನ ವಿವಾಹ

ನೌಕರಿಯುಳ್ಳ ವಿವಾಹಿತ ಪುತ್ರನು, ತನ್ನ ಸೋದರನ ವಿವಾಹಕ್ಕೆ ಸಂಬಂಧಿಸಿದಂತೆ ತಂದೆಗೆ ಬರೆದ ಕಾರ್ಡು

ಕುಶಲಂ ಶ್ರೀರಾಮ ಚನ್ನರಾಯಪಟ್ಟಣ
ತಾ॥ 17.10.33

ತೀ॥ ರವರ ದಿವ್ಯ ಚರಣ ಸನ್ನಿಧಿಗಳಲ್ಲಿ ಬಾಲಕಕೃತಾನೇಕ ವಿಜ್ಞಪ್ತಯಃ. ತದುಪರಿ ಉಭಯ ಕುಶಲಂ ಸಂಪ್ರತಿ.

ತಮ್ಮ ಕೃಪಾಪೂರ್ವಕವಾದ ಆಶೀಃ ಪತ್ರಿಕೆಯು ಇಲ್ಲಿಗೆ ಬಂದಾಗ ನಾನು ಊರಲ್ಲಿರಲಿಲ್ಲ. ಬೆಂಗಳೂರಿನಲ್ಲಿ M.V. ರವರನ್ನು ಪ್ರಸ್ತಾಪಿಸಲು ಅವರು ಹೂಣಭಾಷಾನಭಿಜ್ಞರಿಗೆ ಕೊಡುವುದರಲ್ಲಿ ತಮಗಿರುವ ಅಸಂತುಷ್ಟಿಯನ್ನು ತೋರ್ಪಡಿಸಿದರು. ಸಾಲಗಾಮೆಯಲ್ಲಿ ಒಂದು ಕನ್ಯಾ ದೃಷ್ಟಿಯಲ್ಲಿ ಬಿದ್ದು, ಅದಕ್ಕೆ ಪ್ರಯತ್ನಪಡುವ ವೇಳೆಗೆ ಅದು ಅನ್ಯಾಕ್ರಾಂತವಾಗಿದೆಯೆಂದು ವರ್ತಮಾನ ಬಂದಿತು. ನಾನೂ ಅಲ್ಲಲ್ಲಿ ಪ್ರಸ್ತಾಪಿಸುತ್ತಲೇ ಇದ್ದೇನೆ. ಎಲ್ಲಿಯಾದರೂ ಸಮ್ಯಗ್ಭಾವವು ತೋರಿಬಂದರೆ ಕೂಡಲೇ ಅರಿಕೆ ಮಾಡಿಕೊಳ್ಳುತ್ತೇನೆ. ಈ ಗಲಾಟೆಗಳ ನಡುವೆ ನಾನು ಮೈಸೂರಿಗೆ ಹೋಗಲವಕಾಶವಾಗಿಲ್ಲ. ಇಲ್ಲಿ ಪ್ಲೇಗು ಉಪಶಮನವಾಗಿದೆ. ಚಿ॥ಯು ಮೊಗುಚಿಕೊಳ್ಳಲು ಈಗ 8-10 ದಿನಗಳಿಂದ ಆರಂಭ ಮಾಡಿದ್ದಾನೆ. ಆಟವಾಡಿಕೊಂಡಿದ್ದಾನೆ. ಚಿ॥...ನು ಊರಿಗೆ ಬಂದಿದ್ದಾನೆಂದು ತಿಳಿಯಿತು. ಅವನ ಅಭಿಪ್ರಾಯಗಳೇನು ? ಮೈಸೂರಿನಲ್ಲಿ ಎಲ್ಲಿಯಾದರೂ ಅನುಕೂಲ ಭಾವವುಳ್ಳ ಕನ್ಯಾಗಳುಂಟೆ ?... ಸುಂಕ್ಲಾಪುರಕ್ಕಿನ್ನೂ ಹೋಗಿಲ್ಲ. ಹೋಗಲು ಪುರಸತ್ತಾಗಿರಲಿಲ್ಲ. ಇನ್ನು ಸದ್ಯದಲ್ಲೇ ಹೋಗಿಬರುತ್ತೇನೆ. ಅಲ್ಲಿ ಎಲ್ಲರೂ ಕ್ಷೇಮವಾಗಿರುವುದನ್ನು ಕೇಳಿ ಸಂತೋಷವಾಯಿತು. ದೈವಾನುಗ್ರಹದಿಂದ ಇಲ್ಲೆಲ್ಲರೂ ಕ್ಷೇಮವಾಗಿದ್ದೇವೆ. ನನ್ನ ವಿಜ್ಞಾಪನೆಗಳನ್ನು ಮಾ॥ಯವರಿಗೆ ದಯವಿಟ್ಟು ತಿಳಿಸಬೇಕೆಂದು ಬೇಡುತ್ತೇನೆ. ಬೆಂಗಳೂರಿನಲ್ಲಿ ನನ್ನ ಕೆಲಸವೊಂದೂ ಅನುಕೂಲಿಸಲಿಲ್ಲ. ಜಮೀನು ವಿಕ್ರಯವಾದ ವಿಷಯ ರಹಸ್ಯವಾಗಿರಲಿ. ಇನ್ನೇನೂ ವಿಶೇಷವಿಲ್ಲಾ.

ಇತಿ ವಿಜ್ಞಪ್ತಯಃ

ಚಿ॥ಸೌ॥...ಗೆ ಕ್ಷಯವೆಂದು ಕೇಳಿದೆ. ನಿಜವೆ ?

ಕನ್ಯೆಗಳನ್ನು ಬೇಡಿಹೋಗುವ ಕಾಲ ಅದಾಗಿತ್ತು. ಆಂಗ್ಲಭಾಷೆಯೂ ಆ ಮೂಲದ ವಿದ್ಯಾಭ್ಯಾಸವೂ ಇಲ್ಲದವರಿಗೆ ಕನ್ಯೆ ಕೊಡಲು ನಿರಾಕರಿಸಲೂ ಆರಂಭವಾಗುತ್ತಿತ್ತು. ಪ್ರತಿ ಪತ್ರದಲ್ಲೂ ತಾಯಿಗೆ ನಮನಗಳನ್ನು ತಪ್ಪದೆ ತಿಳಿಸಲಾಗುತ್ತಿತ್ತು. ಈ ಮೂರರಲ್ಲೂ ಈಗ ಆಗಿರುವ ಬದಲಾವಣೆಗಳನ್ನು ಓದುಗರೇ ಪರಿಭಾವಿಸಬಹುದು. ವೇದ ಮತ್ತಿತರ ಪಾರಂಪರಿಕ ವಿದ್ಯೆಗಳ ಬಗೆಗೆ ಇದ್ದ ಗೌರವವು ಆಂಗ್ಲವಿದ್ಯೆ ಇದ್ದಲ್ಲಿಗೆ ಸ್ಥಳಾಂತರವಾಗುವ ಪರಿವರ್ತನಶೀಲ ಸಂದರ್ಭ ಅದು.

೪೬

ಮಾತುಳಿಯದಂತೆ ಮಾಡಿ

ವಿವಾಹಕ್ಕೆ ಸಂಬಂಧಿಸಿದಂತೆ ತನ್ನ ತಂದೆಗೆ ಹಳ್ಳಿಗೆ ಬರೆದ ಕಾರ್ಡು

ಕ್ಷೇಮ ಶ್ರೀಃ ನಗರ

18.11.33

ತೀ॥ರವರ ದಿವ್ಯಚರಣ ಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನೆಗಳು, ಸಂಪ್ರತಿ.

ಮ॥...ನವರ ಮಗಳು ಪೀಚು (ದಸ್ಸು). ಹಿಂದೆಯೇ ಪ್ರಸಂಗಾತ್ ತಮಗೆ ತೋರಿದುದೇ ನನ್ನ ಅಭಿಪ್ರಾಯವೆಂದು ವಿಜ್ಞಾಪಿಸಿಕೊಂಡಿರುವುದರಿಂದ ಇದು ನನ್ನ ಕೊನೆ ಉತ್ತರವಾಗುವುದಿಲ್ಲವಾಗಿ ಪುನಃ ಅದನ್ನೇ ಬರೆದರೆ ಹೇಳಿದ್ದನ್ನೇ ಹೇಳಿದಂತಾಗುವುದು. ಆದರೂ ಅದನ್ನು ಬಿಟ್ಟರೆ ಬೇರೆ ಸಾಧ್ಯವಿಲ್ಲ. ಪ್ರಸಕ್ತ ಸ್ಥಾನಗಳಲ್ಲಿ ನಮ್ಮ ಮೇಲೆ ಮಾತುಳಿಯುವಂತೆ ಮಾಡಬಾರದಾಗಿ ಪ್ರಾರ್ಥನಾ. ಈ ವಿಚಾರದಲ್ಲಿ ಹೆಚ್ಚಿಗೆ ಬರೆಯುವುದಕ್ಕೆ ತಿಳಿವಳಿಕೆಯೇ ಇಲ್ಲ.

ವಿಜ್ಞಾಪನೆಗಳು

೩೦ರ ದಶಕದಲ್ಲಿ ವಿದ್ಯಾರ್ಥಿದೆಸೆಯಲ್ಲಿಯೇ ವಿವಾಹವಾಗುವುದು ಸಾಮಾನ್ಯವಾಗಿತ್ತು. ಆಗಲೂ ಎಷ್ಟೇ ವಿನಯವಂತರಾದರೂ, ಒಲ್ಲದ ಹೆಣ್ಣನ್ನು ಹೇಗಾದರೂ ನಿರಾಕರಿಸುತ್ತಿದ್ದರೆಂಬುದನ್ನು ಈ ಪತ್ರದಲ್ಲಿ ಕಾಣಬಹುದು.

೪೭

ತನ್ನ ವಿವಾಹದ ವಿಷಯ

ವಿದ್ಯಾರ್ಥಿಯೊಬ್ಬನು ತಂದೆಗೆ ಬರೆದ ಕಾರ್ಡು

ಕ್ಷೇಮ ಶ್ರೀ 24.11.33

ಮೈಸೂರು

...ಆಶೀಃ ಪತ್ರಿಕಾ ಕೈ ಸೇರಿತು...ಹಳ್ಳಿಯವರ ವಿಚಾರದಲ್ಲಿ ನಾನು ಹೇಗೂ ಯಾವ ವಿಧವಾದ ಭರವಸೆಯ ಮಾತನ್ನೂ ಹೇಳಿಲ್ಲ. ನನಗೆ ಆ ಅಭಿಪ್ರಾಯವೂ ಇಲ್ಲ. ಆ ಉದ್ದೇಶದಿಂದ ಹೇಳಿಯೂ ಇಲ್ಲ. ಆ ವಿಚಾರದಲ್ಲಿ ಯಾವ ಉತ್ಕಂಠತೆ ಮೊದಲೇ ಇಲ್ಲ. ಅವರು ಕೇಳಿದ್ದಕ್ಕೆ, ಆದರೆ ಸಂತೋಷವಿಲ್ಲ, ಆಗದಿದ್ದರೆ ದುಃಖವಿಲ್ಲೆಂಬ ವಿಚಾರ ಹೇಳಿದೆ. ತಾವನ್ಮಾತ್ರ. ಭಾವಿ ನಮ್ಮ ಸುಖ, ದುಃಖಗಳನ್ನುದ್ದೇಶಿಸಿ ನಮ್ಮ ಹಿತವನ್ನೇ ಬಯಸುವರಲ್ಲಿ ತಮಗಿಂತ ಮುಂದುವರಿಯುವರಿನ್ನೊಬ್ಬರಿಲ್ಲೆಂಬ ಉದ್ದೇಶದಿಂದಲೇ ಇದುವರೆಗೆ ಬಹಳ ಅಭಿಮಾನದಿಂದಿರುವೆನು. ಸಭ್ರಾತೃಕಳೂ, ಸಪಿತೃಕಳೂ ಆದ ಕನ್ಯೆಯನ್ನೇ ಉದ್ವಾಹ ಮಾಡಿಕೊಳ್ಳುವ ವಿಚಾರದಲ್ಲಿ ನನ್ನ ಪರಮೋದ್ದೇಶವನ್ನು ಹಿಂದೇಯೇ ವಿಜ್ಞಾಪಿಸಿಕೊಂಡಿರುವೆನು (ಆದಾಯವಿದ್ದರೂ, ಇಲ್ಲದಿದ್ದರೂ). ಅಂದರೆ ಅಲ್ಲಿಗೆ ಹೋದಾಗ ಪ್ರಕರಣವಶಾತ್ ನಡೆದ ವಿಚಾರವನ್ನು ಮನೆಯಲ್ಲಿ ಮಾತನಾಡಿರುವೆ. ಈಗ ಸ್ವಲ್ಪ ಶಂಕಾಂತರಗಳಿಗೆ ಅವಕಾಶವಾಗಿರುವಂತೆ ತೋರುತ್ತಿರುವುದು...ಹಳ್ಳಿಯ ವಿಚಾರದಲ್ಲಿ ಸ್ವಲ್ಪವೂ ಪ್ರಯತ್ನವೇ ಬೇಡ. ಅದೂ ಅಲ್ಲದೆ ಈಗಲೆ ಮದುವೆ

ಇಲ್ಲದ ಮಾತ್ರದಿಂದ ನನಗೆ ಯಾವ ವ್ಯಥೆಯೂ ಇಲ್ಲವಾದ್ದರಿಂದ ನಾನು ಅಷ್ಟು ಬಹುದೂರ ಯೋಚಿಸುವದೇ ಅನುಚಿತವಾಗಿ ಪೂರ್ತಿ ವಿಚಾರದಲ್ಲಿಯೂ ಒಪ್ಪಿ ತಮ್ಮ ಮೇಲೆಯೇ ಸಮಸ್ತ ಭಾರವನ್ನೂ ಬಿಟ್ಟು ಅಪ್ಪಣೆಯನ್ನು ಶಿರಸಾವಹಿಸಿ ಮದುವೆ ಮಾಡಿಕೊಳ್ಳಲು ಸಿದ್ಧನಾದ ಮೇಲೆ, ಮೇಲೆ ಮೇಲೆ ಬರುತ್ತಿರುವುದನ್ನು ನೋಡಿ ಸ್ವಲ್ಪ ಹೆದರಿರುವೆನು...ಇನ್ನು ಈ ವಿಚಾರವಾಗಿ ನನ್ನನ್ನು ಕೇಳುವುದು ಬೇಡವಾಗಿ ಶಿರಶಃ ಪ್ರಾರ್ಥಿಸುವೆನು...

ಸಂಸಾರಭಾರವು ವಿದ್ಯೆಗೆ ಹಾನಿ. ಆದರೆ ಅದನ್ನು ಎದುರಿಸುವುದು ಅನಿವಾರ್ಯವಾದರೂ ಯಶಸ್ವಿಯಾಗಿ ವಿದ್ಯಾಭ್ಯಾಸವನ್ನು ಮಾಡುವವರು ಸಾಹಸಿಗಳೇ ಸರಿ.

೪೮

ಯತ್ರಾಕೃತಿಸ್ತತ್ರ ಗುಣಾಃ

ವಿವಾಹಯೋಗ್ಯ ವರನ ಪ್ರಸ್ತಾಪದ ಕಾರ್ಡು

ಕುಶಲ ಶ್ರೀ **ನಗರ**

18.4.34

...ಇವರಿಗೆ (ತಂದೆಗೆ) ಕಾಲೇಜಿನಲ್ಲಿ ಕೆಲಸವಿದೆ (75 ಸಂಬಳ). ಆತನು intermediate ಕ್ಲಾಸಿನಲ್ಲಿ ವ್ಯಾಸಂಗ ಮಾಡುತ್ತಿರುವನು. 'ಯತ್ರಾಕೃತಿಸ್ತತ್ರಗುಣಾಃ' ಎಂಬಂತೆ ಬಹು ಸುಂದರಾಕೃತಿ, ವೈದಿಕ ವೃತ್ತಿ, ಸದ್ಗುಣ ಭರಿತ, ತಕ್ಕಷ್ಟು ಅನುಕೂಲವಾಗಿದ್ದಾರೆ. ಕಟ್ಟೆಪುರದ ವೇ||... ಶಾಸ್ತ್ರಿಗಳ ಸಮೀಪ...ಬಾಂಧವ್ಯ. ಅವರನ್ನು ವಿಚಾರಿಸಿದರೆ ಇನ್ನೂ ವಿಷದವಾಗಿ ತಿಳಿಯುತ್ತದೆ. ಮತ್ತು ಅವರಿಂದ ಈ ಕಾರ್ಯ ಸಾಧ್ಯ. ಇನ್ನೂ ಅನೇಕ ವರಗಳಿವೆ. ಆದರೆ ಕೆಲವು ನಮ್ಮಿಂದ ತಡೆಯಲಾಗುವುದಿಲ್ಲ. ಇನ್ನು ಕೆಲವು ನಾವಾಗಿ ಬಿಡತಕ್ಕವು. ಬೇರೆ ವಿಚಾರಿಸುವುದು, ಮೇಲಿನ ಕಕ್ಷೆಯಲ್ಲಿರುವುದರಿಂದ ವೇ||... ಶಾಸ್ತ್ರಿಗಳಿಗೆ ಸುಲಭವಾಗಿರುವುದರಿಂದ ಅವರಿಗೇ ಒಂದು ಕಾಗದ ಬರೆಯುವಂತೆ ತಿಳಿಸಬೇಕಾಗಿ ಪ್ರಾರ್ಥನೆಗಳು...ರಾಯರ ಮಗನೊಬ್ಬನಿರುವನು, ಇಲ್ಲೇ ಇದ್ದಾನೆ. ಅಂತು ಮೇಲೆ ಹೇಳಿದುದು ನನಗಂತೂ ಪರ್ಯಾಪ್ತವಾಗಿದೆ...ಅವರು ತಮ್ಮ ಗಾಂಭೀರ್ಯವನ್ನು ಪ್ರಕಟಪಡಿಸುವರೇ ಹೊರತು ಸಣ್ಣ ದಾರಿ ಪ್ರವೇಶಿಸ ತಕ್ಕವರಲ್ಲ...

೪೯

ಗಾಡಿ ಕಳುಹಿಸುತ್ತೇನೆ

ಮದುವೆಗೆ ಆಹ್ವಾನಿಸಿ ತಂಗಿಗೆ ಬರೆದ ಕಾರ್ಡು

ಕ್ಷೇಮ ಶ್ರೀ 8-2-43

ಕುಪ್ಪಹಳ್ಳಿ

ಸೌ||...ಮ್ಮನಿಗೆ...ಮ್ಮನು ಮಾಡುವ ಅನೇಕ ಆಶೀರ್ವಾದಗಳೂ. ಇಲ್ಲಿ ಎಲ್ಲರೂ ಕ್ಷೇಮ. ಅಲ್ಲಿ ನಿಮ್ಮಗಳ ಕ್ಷೇಮಕ್ಕೆ ಆಗಾಗ್ಗೆ ಕಾಗದ ಬರೆಯುತ್ತೀಯೆಂದು ನಂಬಿದ್ದೇನೆ. ನಿನಗೆ ನಾನು ಬರೆದ ಕಾಗದ ತಲಪಿರಬಹುದು. ನಾನೂ ನಿನ್ನ ಭಾವನವರೂ ಮೈಸೂರಿಗೆ ಹೋಗಿದ್ದೆವು. ಅಲ್ಲಿ ನಿನ್ನ ಯಜಮಾನರನ್ನು ಕಂಡು ಕೇಳಿ ಬರುತ್ತೇವೆಂದು ಎರಡು ದಿನ ಹೋಗಿದ್ದೆವು. ಅವರು ಊರಿನಲ್ಲಿ ಇರಲಿಲ್ಲ. ಲಗ್ನಪತ್ರಿಕೆಯನ್ನು ಕೊಟ್ಟು ಬಂದಿದ್ದೇವೆ.

ನೀನು ಮದುವೆಗೆ ನಾಲ್ಕು ದಿನ ಮುಂಚೆಯೇ ಬರಬೇಕು. ಕರೆಯುವುದಕ್ಕೆ ಕಳುಹಿಸುತ್ತಿದ್ದೆ. ನಿನ್ನ ಯಜಮಾನರನ್ನು ಕೇಳಿ ಅವರು ಯಾವಾಗ ಕಳುಹಿಸುತ್ತಾರೆಂಬುದನ್ನು ತಿಳಿಸಿದರೆ ನಾನು ಯಾರನ್ನಾದರೂ ಕಳುಹಿಸುತ್ತೇನೆ. ನಿನ್ನ ಮನೆ ಅಡ್ಡಿ ತಿಳಿಯಿತು. ನಿನ್ನ ಯಜಮಾನರು ಅದು ಕಳೆದ ಮಾರನೇ ದಿನ ಖಂಡಿತ ಬರಲಿ. ಹಾಗೆ ಅವರು ಕಳುಹಿಸುವುದಿಲ್ಲವೆಂದರೆ ನೀನು ಧೈರ್ಯಕ್ಕೆ ಸೀದಾ ಬಸ್ಸಿನಲ್ಲಿ ಬಂದರೆ ನಾನು ಅಲ್ಲೀಗೇ ಗಾಡಿ ಕಳುಹಿಸುತ್ತೇನೆ. ನಿನ್ನ ಮೈದುನನನ್ನು ಕರೆದುಕೊಂಡು ನಾಲ್ಕು ದಿನ ಮುಂಚೆಯೇ ಬಂದರೆ ಬಹಳ ಸಂತೋಷ. ಇಲ್ಲದಿದ್ದರೆ ಬರೆ. ನಾನು (ಜನ) ಕಳುಹಿಸುತ್ತೇನೆ. ಮೊಸಳೆ ಇಂದ ಅಕ್ಕಾವರು ಗುರುವಾರ ಬೆಳಗ್ಗೆ ಬರುತ್ತಾರೆ. ಈ ಕಾಗದವನ್ನು ಮಾವಾವರಿಗೆ ತೋರಿಸು. ಅಮ್ಮಾವರು ದುಡ್ಡನ್ನೆಲ್ಲಾ ತೆಗೆದುಕೊಂಡು ಬರಲಿ. ಅಮ್ಮಾಮಿಯವರು ಬರದಿದ್ದರೆ ನಾನು ಇನ್ನು ಮಾವಾವರ ಮನೆಗೆ ಬರುವುದಿಲ್ಲ. ನೀನೂ ಅಮ್ಮಾಮಿಯವರನ್ನು ಜೊತೆಯಲ್ಲಿ ಕರೆದುಕೊಂಡು ನಾಲ್ಕು ದಿನ ಮುಂಚೆಯೇ ಬಾ. ನೀನು ಸೀದಾ ಬಸ್ಸಿನಲ್ಲಿ ಬಾ. ಬೇರೆಯವರ ಜೊತೆ ನಿನಗೆ ಸರಿಯಾಗುವುದಿಲ್ಲ.

ನಿನ್ನ ಎದುರು ನೋಡುತ್ತೇನೆ. ಅಮ್ಮಾಮಿಯವರು ಇಷ್ಟು ಜಾಗ್ರತೆ ಬರುವುದಿಲ್ಲವೆಂದರೆ ಬರೆ. ಯಾರನ್ನಾದರು ಕಳುಹಿಸುತ್ತೇನೆ. ಕಂಡಿತಾ ಕಾಗದ ಬರೆ. ಮಕ್ಕಳಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ಅತ್ತೆಯವರಿಗೂ ತಿಳಿಸಿ ಜೊತೆಯಲ್ಲಿ ಕರೆದುಕೊಂಡು ಬಾ. ಹೆಚ್ಚಿಗೆ ಬರೆಯಲಾರೆ. ನಿನ್ನ ಕಾಗದ ಎದುರು ನೋಡುತ್ತಿರುವ ನಿನ್ನ ಅಕ್ಕನ ಆಶೀರ್ವಾದಗಳು.

ವಿಳಾಸ :...ತಾಲ್ಲೂಕು...ನವರ ಮನೆಯಲ್ಲಿ ಇರೂವ...ಮ್ಮನೀಗೆ.

ಬಸ್ಸಿನ ಸೌಕರ್ಯ ಚೆನ್ನಾಗಿಲ್ಲದ ದಿನಗಳು. ವಾಮೆಗಳನ್ನು ವ್ಯಾಪಕವಾಗಿ ಬಳಸುತ್ತಿದ್ದ ಸಂದರ್ಭ. ಹೆಂಗಸರು 'ಯಜಮಾನರ' ಅಪ್ಪಣೆಯಂತೆ ನಡೆಯುತ್ತಿದ್ದ ಸ್ಥಿತಿ. ಇವುಗಳ ಹಿನ್ನೆಲೆಯಲ್ಲಿ ಈ ಪತ್ರವು ೪೦ರ ದಶಕದ ಸಾಮಾಜಿಕ ಸ್ಥಿತಿಯನ್ನು ಗುರುತಿಸುತ್ತದೆ. ಅಡ್ಡಿ-ಆಶೌಚಗಳೊದಗುವುದು.

೫೦* ಆಳು ತ್ರಾಣವಾಗಿದಾನೆ (ವರಗಳ ವಿವರ)

28-7-37

...ಖುಷ್ಕಿ ಪೈರನ್ನು ಉದ್ಧಾರ ಮಾಡುವ ವೃಷ್ಟಿಯಾಗುತ್ತಿದೆ. ನಮ್ಮೂರ ಸುತ್ತಮುತ್ತ ಯಾವ ಕೆರೆ ಕಟ್ಟೆಯೂ ತುಂಬಿಲ್ಲ (5 ಮೈಲಿ 6 ಮೈಲಿಗಳವರಿಗೆ). ವರಗಳ ತಪ್ಸೀಲ್ ಹಿಂಭಾಗದಲ್ಲಿ ಬರೆದಿದೇನೆ.

ಕ್ರ. ಸಂ.	ವಾಸಸ್ಥಳ	ತಂದೆಯ ಹೆಸರು	ವರನ ವೃತ್ತಿ	ವರ್ಷ	ಜೀವನೋಪಾಯ ಜಮೀನು ವಗೈರೆ	ಗೋತ್ರ	ಪಿತೃ	ಮಾತೃ	ಜನ ಸಂಖ್ಯೆ
1	ರಾಮನಾಥಪುರ ಪುತ್ರತ್ರಯ	—	V ಫಾರಂ	14	ಡಿಟೊ	ವತ್ಸ	ಇದಾರೆ	ಇದಾರೆ	I
2	ಸರಗೂರು ಪುತ್ರದ್ವಯ	—	ಬೇನಾಮಿ	ಡಿಟೊ	ಡಿ	(ಆ) ಕೌಂಡಿನ್ಯ	ಡಿಟೊ	ಡಿಟೊ	2
3	ಪಿರ್‍ಯಾಪಟ್ಟಣ	—	ಎಂಟ್ರೆನ್ಸ್‌ಸ್ಕೂಲ್	17	ಡಿ	ಆತ್ರೇಯಸ	”	”	7
4	ಸೋಮನಹಳ್ಳಿ	—	ಕ್ರಮಾಧ್ಯಾಪಕ ವೇದಾಧ್ಯಾಯೀ	16	ಡಿ	ಆಯಾಸ್ಯಗೌತಮ	”	”	3
5	ಕೇರಳಾಪುರ ಪುತ್ರದ್ವಯ	—	ಸಾಮಾನ್ಯ ಓದು ಬರಹಸ್ಥ	15	ಡಿ	ವಾಧೂಲಸ	”	”	4
6	ಹಾನಗಲ್ ಪುತ್ರದ್ವಯ	—	L.S. ಆಗಿದೆ	16	ಡಿ	ಭಾರದ್ವಾಜ	”	ಇಲ್ಲ	6
7	ಡಿ-SS ಪುತ್ರದ್ವಯ	—	ಸಾಮಾನ್ಯ ಬರವಣಿಗೆ	16	ಡಿ	(ಉತ್ತಮ) ಡಿ	”	ಡಿ	3
8	ಬರಗೂರು	—	ಡಿ	ಡಿ	ಡಿ	ಭಾರದ್ವಾಜ	ಇಲ್ಲ	ಇದಾರೆ	1
9	ಕೇರಳಾಪುರ ಪುತ್ರತ್ರಯ	—	ಡಿ	18	ಡಿ	ಆಯಾಸ್ಯ ಗೌತಮ	ಇದಾರೆ	ಇದಾರೆ	6
10	ಸೋಮನಹಳ್ಳಿ ಏಕಮಾತ್ರ	—	ಅಧ್ಯಾಪಕ	16	ಡಿ	ಡಿ	ಇಲ್ಲ	ಡಿ	2
11	ಹಾನಗಲ್ 1+4	—	ವ್ಯಾಸಂಗಿ	14	ಡಿ	ಭಾರದ್ವಾಜ	ಇದಾರೆ	ಇದಾರೆ	4
12	ಹಳ್ಳಿ ಮೈಸೂರು ಏಕಮಾತ್ರ	—	ವೇದಾಭ್ಯಾಸಿ	18	ಡಿ	ಡಿ	ಇಲ್ಲ	ಇದಾರೆ	5

30 ಮಣ ಅಡಿಕೆ, 5 ಬಂಡಿ ಬತ್ತ ಬರುತ್ತೆ, ಮನೆ ಇದೆ, ಜೀವನಕ್ಕೆ ಅನುಕೂಲವಿದೆ, ಆಳು ತ್ರಾಣವಾಗಿದಾನೆ.

ಶುಭಂ ಭವತು

೫೧

ವಿವಾಹದ ಪೂರ್ವಸಿದ್ಧತೆ

ತಂದೆಯಿಲ್ಲದ ಸೋದರಿಯ ಬಗೆಗೆ ಅಣ್ಣನು ತಮ್ಮನಿಗೆ ಬರೆದುದು

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ನಗರ
23-5-43

...ಪ್ರಕೃತದಲ್ಲಿ ಭಾವನವರ ಬೆಳ್ಳಿ ಚೊಂಬನ್ನು ಕೊಟ್ಟು 24-6-0 ತೂಕವುಳ್ಳ ತಟ್ಟೆಯನ್ನೂ 1 ರೂ 10 ಆ.ಯನ್ನೂ ತೆಗೆದುಕೊಂಡುದಾಯಿತು. ಎರಡು ಜತೆ ಬಳೆಗಳಿಗೆ ರೂ 4/- ಗಂಧದ ಡಬ್ಬಿ ಮತ್ತು ಊದಗಡ್ಡಿ ರೂ 1/- ಬಿಳೀ ಪಗಡೇ ಅಚ್ಚು ಇನ್ನೂ ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲ. ಅದಕ್ಕೆ ಬದಲು ಏನಾದರೂ ಬೇಕೇ ಬೇಡವೆ ? ರೇಷ್ಮೇ ಚೌರಿಯನ್ನು ಈ ದಿನ ನೋಡಿ ತೆಗೆದಿಡುತ್ತೇನೆ. ತುಮಕೂರು ಬಾಚಣಿಗೆ 4ಕ್ಕೆ 0-4-0.

ಕುತ್ತಲಾದ 40 ಅಡಕಿನ ಸೀರೆಗಳನ್ನು ವಿಚಾರಿಸಿದ್ದರಲ್ಲಿ 23-24 ರೂ ಬೆಲೆ ಹೇಳುತ್ತಾರೆ. ಪನ್ನವೂ ಸಾಕಾಗುವಂತೆ ನನಗೆ ತೋರಲಿಲ್ಲ. ಅದು 5 ಗೇಣೂ ಪೂರ್ತಿಯಿಲ್ಲ. ಆದ್ದರಿಂದ ಮಾ॥ಯವರನ್ನು ಆಲೋಚಿಸಿ ಅಲ್ಲಿಯೇ ತೆಗೆದುಕೊಳ್ಳಬೇಕು. ಸಿಲ್ಕ್ ಸೀರೆಗಳೆಲ್ಲಾ ಹಳೆಯ ಸ್ಟಾಕಿನಂತೆ ತೋರಿತು.

ನಾನು ಅಲ್ಲಿಂದ ಬಂದ ಮೇಲೆ ಡೇ. ಡೈ. ರವರಿಂದ ಒಂದು ದಿನವಾದರೂ ರಜಾ ತೆಗೆದುಕೊಂಡದ್ದಕ್ಕಾಗಿ ತುಂಬಾ ಆಕ್ಷೇಪಣೆಯಾಗಿ ನನ್ನನ್ನು ಗಡಿ ಕಾಣಿಸುವುದಾಗಿ ಹೇಳಿದರು. ಹೀಗಾಗಿ ನನಗೆ ಬರಲು ಸಾಧ್ಯವಾಗುವುದೋ ಇಲ್ಲವೋ ತಿಳಿಯದು. ಇಲ್ಲಿ ತೆಗೆದಿಟ್ಟಿರುವ ಸಾಮಾನುಗಳನ್ನು ಯಾರ ಕೈಲಾದರೂ ಕಳುಹಿಸಲು ಪ್ರಯತ್ನಪಡುವೆನು. ಡೇ. ಡೈಯವರು ಎಲ್ಲಿಯಾದರೂ ಸರ್ಕೀಟು ಹೋಗುವ ಪಕ್ಷಕ್ಕೆ ಹೇಗಾದರೂ ಮಾಡಿ ಒಂದು ದಿವಸದ ಮಟ್ಟಿಗಾದರೂ ಬರಬೇಕೆಂಬ ಉದ್ದೇಶವಿದೆ.

ಈಗಿನ 'ಸರಳ ವಿವಾಹ'ಗಳಿಗೆ ಹೋಲಿಸಿಕೊಂಡರೆ ಇರಲಿ, ವಿರಳವಾದ ವೈಭವದ ವಿವಾಹಗಳಿಗೆ ಹೋಲಿಸಿದರೂ ೫೦ ವರ್ಷಗಳ ಹಿಂದಿನ ಈ ವಿವರಗಳು ವಿವಾಹಕ್ಕೆ ಪಡಬೇಕಾಗಿದ್ದ ಶ್ರಮದ ಸೂಚನೆ ಕೊಡುತ್ತವೆ. ಸಂಪರ್ಕ ಮಾಧ್ಯಮಗಳ ಅಭಾವ, ವಿಶೇಷವಾದ ಎಲ್ಲಕ್ಕೂ ದೊಡ್ಡ ನಗರಗಳನ್ನು ಆಶ್ರಯಿಸಬೇಕಾದುದು ಇಂಥ ಮಿತಿಗಳಲ್ಲಿ ಆ ಜನರು ಎಷ್ಟು ಪಾಡು ಪಡುತ್ತಿದ್ದಿರಬಹುದೆಂಬುದನ್ನು ಇದರ ಮೂಲಕ ಕಲ್ಪಿಸಿಕೊಳ್ಳಬೇಕು. ಡೇ. ಡೈ. – ಡೆಪ್ಯುಟಿ ಡೈರೆಕ್ಟರ್.

೫೨

ಸೋದರಿಯ ವಿವಾಹ

ಹಿರಿಯರೂ ವಿದ್ವಾಂಸರೂ ಆದ ಭಾವನಿಗೆ ಕಾರ್ಡು

ಕುಶಲ ಶ್ರೀ ತಿಪ್‌ಟೂರು
27.7.47

ತೀ। ಭಾವನವರ ದಿವ್ಯಚರಣ ಸನ್ನಿಧಾನಂಗಳಿಗೆ...ನ ಸಾಷ್ಟಾಂಗಪೂರ್ವಕ ವಿಜ್ಞಾಪನಂಗಳು. ಆದಾಗಿ ಈವರಿಗೆ ಉಭಯ ಕುಶಲೋಪರಿ ಸಾಂಪ್ರತ.

ನಾನು ಜುಲೈ ಹದಿನಾರರಲ್ಲಿ ಉಪಾಧ್ಯಾಯ ವೃತ್ತಿಗೆ ತಿಪ್‌ಟೂರ್ ಹೈಸ್ಕೂಲಿನಲ್ಲಿ ಸೇರಿಕ್ಕೊಂಡಿದ್ದೇನೆ. ಸಂಬಳ 50+15 ರೂಗಳು. ಇದು ಗೌರ್ನಮೆಂಟು ಹೈಸ್ಕೂಲು. ಹಾಸನದಲ್ಲಿ ಇಷ್ಟವಿಲ್ಲದೆ ಇಲ್ಲಿಗ್ಗೆ ಬಂದು ಸೇರಿಕ್ಕೊಂಡೆನು. ಇಲ್ಲಿ ಮನೆಯಾಗಲಿ ಅಥವಾ ರೂಮಾಗಲಿ ಬಾಡಿಗೆಗೆ ದೊರೆಯುವುದು ಅತಿ ಕಷ್ಟ. ಸಧ್ಯಕ್ಕೆ ನನ್ನ ಸ್ನೇಹಿತರು ಒಬ್ಬರೆ ಇದ್ದದ್ದರಿಂದಲು ಮತ್ತು ನನ್ನ ಜೊತೆಯಲ್ಲಿ ಇರಲು ಇಷ್ಟಪಟ್ಟದ್ದರಿಂದಲು ಅವರ ಮನೆಯಲ್ಲೆ ಇರುತ್ತೇನೆ. ಬೇರೆ ಮನೆ ಅಥವಾ ರೂಮಾಗಲಿ ಸಿಕ್ಕಿದರೆ ಹೋಗಬೇಕೆಂದಿದ್ದೇನೆ. ನೋಡುತ್ತಲಿರುತ್ತೇನೆ.

ನಾನು ತಮಗೆ ಈ ಹಿಂದೆ ಬರದ ಎರಡು ಕಾಗದಗಳು ತಲಪಿರಬಹುದು. ಈಗ ಹೊಳೆನರಸಿಪುರದ ಒಂದು ಎರಡನೆ ವರ ಬಂದಿದೆ. ಅವರಿಗೆ ಮೊದಲನೆ ಸಂಬಂಧ ತಮ್ಮ ಊರಿನದೆ. ತಪ್ಪಿ 2-3 ತಿಂಗಳುಗಳಾಗಿವೆ. ಅವರು ಒಬ್ಬರು ಪ್ರೈಮರಿ ಸ್ಕೂಲು ಉಪಾಧ್ಯಾಯರು. ಮೊದಲನೆ ಸಂಬಂಧದ ಮನೆಯಲ್ಲಿ ತರಲು ಶಕುನವಾಗದೆ ಇದ್ದದ್ದರಿಂದ ಇಷ್ಟಪಡಲಿಲ್ಲವೆಂತ ಹೇಳಿದರು. ಅವರು ಯಾರು ತಮಗೆ ಗೊತ್ತೆ? ಅವರ ವಯಸ್ಸೆಷ್ಟು ? ಕೊಡಬಹುದೆ? ಎಲ್ಲವನ್ನೂ ಬರೆದು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ. ಉದಾಸೀನ ಮಾಡಬಾರದು. ಇತಿ ವಿಜ್ಞಾಪನೆಗಳು.

ಗಂಡಿಗೆ ಹೆಂಡತಿ ಸತ್ತುದರಿಂದ ಆಗುತ್ತಿದ್ದ ೩-೪ನೇ ವಿವಾಹಗಳ ಸಂದರ್ಭವು ಈ ಶತಮಾನದ ಮಧ್ಯಭಾಗದ ಹೊತ್ತಿಗೆ ತಪ್ಪಿದರೂ ಎರಡನೇ ವಿವಾಹದ ಸಂದರ್ಭಗಳು ಮುಂದುವರಿದವು. ಹೆಂಡತಿಯು ನಿಧನವಾದಾಗ ಅವಳ ತಂಗಿಯನ್ನೇ ವರಿಸುವುದಕ್ಕೆ ಆದ್ಯತೆ ಇರುವ ಅಪರೂಪದ ಒಂದು ಸೂಕ್ಷ್ಮ ಸೂಚನೆ ಇಲ್ಲಿದೆ. ಶಕುನಗಳನ್ನು ನೋಡುವ ಪರಿಪಾಠವು ಒಂದೆರಡು ದಶಕಗಳಿಂದ ಈಚೆಗೆ ಬಹಳಷ್ಟು ಕ್ಷೀಣಿಸಿದೆ.

೫೩

ನೌಕರಿಗೆ ಸೇರಿದ್ದ ಬಾಲಕ

ನಗರದಲ್ಲಿ ನೌಕರಿಗೆ ಸೇರಿದ್ದ ಬಾಲಕನು ತನ್ನ ಆತ್ಮೀಯ ಬಂಧುವಿಗೆ ಬರೆದ ಕಾರ್ಡು

ಕ್ಷೇಮ ಶ್ರೀ ಬೆಂಗಳೂರು
ತಾ। 23.1.53

...ನೀವು ಬರೆದ 29.12.52ರ ಕಾಗದ ತಲಪಿ ಬಹಳ ಸಂತೋಷವಾಯಿತು. ಆ ಕಾಲಕ್ಕೆ ತಕ್ಕ ಉತ್ತೇಜನವನ್ನು ಕೊಟ್ಟು ನನ್ನನ್ನು ಹುಮ್ಮಸ್ಸಿನಿಂದ ಕೆಲಸ ಮಾಡುವಂತೆ ಆಶೀರ್ವಾದ

ಮಾಡಿದ್ದೀರಿ. ಅದರಂತೆಯೇ ಕರ್ತವ್ಯ ಪಾಲನೆಗಾಗಿ ಕಷ್ಟವನ್ನು ಸಹಿಸುವ ಶಕ್ತಿಯು ನನ್ನಲ್ಲಿ ಉದಯಿಸುವಂತೆ ನನಗೆ ದಿನದಿನವೂ ತುಂಬು ಹೃದಯದಿಂದ ತಾವು ಹರಕೆಯನ್ನು ಕೊಡುತ್ತಿದ್ದರೆ ನಾನು ಖಂಡಿತವಾಗಿಯೂ ಭಾಗ್ಯಶಾಲಿ.

...ತೀ|| ರವರು ಕನ್ಯಾಪಿತೃಗಳಿಂದ ಪೀಡಿತರಾಗಿ ನನಗೆ ಈ ತಿಂಗಳ ಆದಿಯಲ್ಲಿ ನನ್ನ ವಿವಾಹದ ಬಗ್ಗೆ ನನ್ನ ಅಭಿಪ್ರಾಯವನ್ನು ತಿಳಿಯಲು ಕಾಗದ ಬರೆದಿದ್ದರು. ಒಬ್ಬರು ಶಿವಮೊಗ್ಗ ಬಳಿ ಇರುವ ...ಎಂಬ ಅಸಿಸ್ಟೆಂಟ್ ಎಂಜಿನಿಯರ್. ಮತ್ತೊಬ್ಬರು ಉತ್ತರ ಆರ್ಕಾಟು ಜಿಲ್ಲೆಯ ಎಲೆಕ್ಟ್ರಿಕಲ್ ಎಂಜಿನಿಯರ್‌ರು. "ನನ್ನ ಮದುವೆಯನ್ನು ನೆರವೇರಿಸುವುದಾಗಲೀ ಅಥವಾ ಒಪ್ಪಿಕೊಳ್ಳುವುದಾಗಲೀ ನನ್ನ ಭವಿತವ್ಯವನ್ನು ಭವ್ಯವಾಗಿ ಮಾಡುವ ಆಶಾಕಿರಣಗಳು ನಿಮ್ಮಲ್ಲಿ ಮೂಡಿದ್ದರೆ ನಿಮಗೆ ತಿಳಿದಂತೆ ಮಾಡುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ" ಎಂದು ನಾನು ಉತ್ತರ ಕೊಟ್ಟೆ. ನಾನು 'ಕೂಡಲೆ ಕಾಗದ ಬರೆಯಿರಿ' ಎಂದು ಪ್ರಾರ್ಥಿಸಿದರೂ ಸಹ ಈವರೆವಿಗೂ ಕಾಗದ ಬಾರದಿರುವುದನ್ನು ನೋಡಿ ನನ್ನ ಮನಸ್ಸಿನಲ್ಲಿ ನಾನಾ ಬಗೆಯ ಕಲ್ಪನೆಗಳು ಉದ್ಭವಿಸುತ್ತಿವೆ. ಒಂದೊಂದು ಸಲ ಯೋಚಿಸಿದಾಗಲೂ "ನಾನು ನಮ್ಮ ತಂದೆಯವರನ್ನು ಅರ್ಥ ಮಾಡಿಕೊಂಡಿಲ್ಲವೆ" ಎಂಬ ಪ್ರಶ್ನೆ ಕಣ್ಣ ಮುಂದೆ ನಿಲ್ಲುತ್ತದೆ. ಮತ್ತೆ ಹಾಗೆಯೇ ಯೋಚಿಸಿದರೆ "ಸೂಕ್ಷ್ಮಗ್ರಾಹಿಗಳೂ, ಕುಶಲಬುದ್ಧಿಯವರೂ ಆದ ತೀ|| ರವರಿಗೆ ಮಂದಮತಿಯೂ, ಘೃತಬುದ್ಧಿಯವನೂ ಆದ ನಾನು ಸುಪುತ್ರನೆನಿಸುತ್ತೇನೆಯೇ" ಎನಿಸುತ್ತದೆ. ಕೆಲವು ಸಮಯಗಳಲ್ಲಿ ತೀ||ರವರ ಒಗಟು ಕಾಗದಗಳನ್ನು ಅರ್ಥ ಮಾಡಿಕೊಳ್ಳುವುದೇ ಸಾಧ್ಯವಿಲ್ಲವೆಂದು ವ್ಯಸನಪಡುತ್ತೇನೆ. ಕೊನೆಯದಾಗಿ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ವ್ಯವಹಾರಪ್ರಿಯನಾದ ಮನುಷ್ಯನಿಗೆ ಆನಂದದ ಅತಿಶಯತೆಯ ದಿನಗಳು ಮೂರೇ ಮೂರು-ಎಂದು ಅನುಭಾವಿಕರು ಹೇಳುತ್ತಾರೆ. ಒಂದು ತನ್ನ ಮದುವೆಯ ದಿನ ; ಇನ್ನೊಂದು ಮೊದಲ ಮೊಗುವನ್ನು ಪಡೆದ ದಿನ. ಮೂರನೆಯದು ತನ್ನ ಮಗನ ತಲೆಯ ಮೇಲೆ ಮದುವೆಯ ಅಕ್ಷತೆಗಳು ಬೀಳುವ ದಿನ. ತೀ||ರವರಿಗೆ ಉಳಿದಿರುವುದು ಕೊನೆಯ ಆನಂದ ಒಂದೇ ಒಂದು. "ನಾನು ಆನಂದಪಡುವುದಕ್ಕೆ ಕಾರಣಕರ್ತನಾದ ಮಗ ಪೂರ್ಣ ಸಹಕಾರಿಯಾಗಲಿಲ್ಲವೆಂಬ" ತೀ||ರವರ ಅಸಮಾಧಾನ ಮತ್ತು ವ್ಯಸನವು ಕಾಗದ ಬರೆಯದಿರುವುದಕ್ಕೆ ಕಾರಣವೆಂದು ಭಾವಿಸಲೆ? ಒಂದೂ ತಿಳಿಯುವುದಿಲ್ಲ. ಇಷ್ಟೆಲ್ಲಾ ಬರೆದೆನೆಂದು ಆಲಸ್ಯ ಪಟ್ಟುಕೊಳ್ಳಬೇಡಿ. ನಿಮಗೆ ಪುರಸತ್ತಾದಾಗ ಹಿತವಚನಗಳೆರಡನ್ನು ಬರೆದು ತೀ||ರವರಿಗೆ ಸರಿಯಾದ ಮಗನಾಗೆಂದು ಆಶೀರ್ವದಿಸಿ ಕಾಗದ ಬರೆಯಬೇಕಾಗಿ ಅಂಗಲಾಚಿ ಬೇಡುತ್ತೇನೆ.

ನಿಮಗೆ ನನ್ನ ಸಹಸ್ರ ಪ್ರಣಾಮಗಳು

ಒಬ್ಬ ಬಾಲಕನು ತನ್ನ ಒಬ್ಬ ಬಂಧುವಿನಲ್ಲಿ ಇಟ್ಟಿರುವ ಪ್ರೀತಿ, ಶ್ರದ್ಧೆಯ ಆಧಿಕ್ಯವು ಇದರಿಂದ ತಿಳಿಯುತ್ತದೆ. ಅಲ್ಲದೆ, ಇದು ಒಬ್ಬ ಒಳ್ಳೆಯ ವಿದ್ಯಾವಂತನಾದ ಪ್ರೌಢನು ಬರೆದಿರುವ ಪತ್ರವಾಗಿರುವುದರಿಂದ ಅವರ ವಿನಯವನ್ನು ವಿಶೇಷವಾಗಿ ಪರಿಗಣಿಸಬೇಕು. ತನ್ನ ತಂದೆಯ ಮನಸ್ಸಿಗೆ ನೋವಾಯಿತೋ ಎಂಬ ಪೇಚು ಆತನನ್ನು ಅಲುಗಾಡಿಸಿದೆ. ಅದಿರಲಿ, ಇದು ಒಬ್ಬ ವಿವಾಹದ ಹೊಸ್ತಿಲಲ್ಲಿ ನಿಂತ ಯುವಕನ ಮನಸ್ಸಿನ ಪ್ರತಿಬಿಂಬವಾಗಿದೆ. ಮನೋವಿಜ್ಞಾನಿಗಳಿಗೆ ಈ ಪತ್ರವು ಒಳ್ಳೆಯ ನಿದರ್ಶನವಾಗಿ ದೊರೆಯಬಹುದು.

೫೪
ಯುವಕನ ಪ್ರತಿಕ್ರಿಯೆ

ವಿವಾಹವಾಗು ಎಂದು ಸೂಚಿಸಿದ ಹಿರಿಯರಿಗೆ, ಯುವಕನ ಪ್ರತಿಕ್ರಿಯೆ ಇರುವ ಕಾರ್ಡು

ಕ್ಷೇಮ ಶ್ರೀ ಮಡಕೇರಿ

6.6.54

...ಮದುವೆಯೇನೋ ಆಗಬೇಕಾಗಿತ್ತು. ಆದರೆ ಇನ್ನೂ ಕಂಕಣ ಕೂಡಿ ಬಂದಿಲ್ಲವೆಂದು ತೋರುತ್ತದೆ. ಮನುಷ್ಯನು ಯೋಚಿಸುವುದೇ ಒಂದಾದರೆ ದೇವರು ಮಾಡುವುದೇ ಒಂದು. ಯಾವತ್ತಿಗೆ ಆಗುತ್ತದೆಯೋ ಅವತ್ತಿಗೇ ಆಗಲಿ. ಹೆಚ್ಚಿಗೆ ತೊಂದರೆ ತೆಗೆದುಕೊಳ್ಳಲು ಹೋಗುವುದಿಲ್ಲ. ಅಂತೂ ಈ ಸಲ ಇಲ್ಲವೆಂದೇ ತೋರುತ್ತಿದೆ. ಎಲ್ಲಾವುದಕ್ಕೂ ದೈವಾನುಕೂಲ ಮತ್ತು ದೊಡ್ಡವರ ಆಶೀರ್ವಾದ ಬೇಕು.

ಈಗ ಇರತಕ್ಕಂಥ ಕೆಲಸವು ಇನ್ನೂ ಹಂಗಾಮಿಯ ರೀತಿಯಲ್ಲಿಯೇ ಇದೆ. ಸದ್ಯದಲ್ಲೇ ಖಾಯಂ ಆಗುವುದರಲ್ಲಿದೆ. ನನ್ನ ಜೀವನಕ್ಕೆ ಏನೂ ತಾಪತ್ರಯವಿಲ್ಲ. ಚೆನ್ನಾಗಿ ಸಂಬಳ ಕೊಡುತ್ತಾರೆ...

ಎಲ್ಲವನ್ನೂ ದೇವರು ಮತ್ತು ದೊಡ್ಡವರ ಆಶೀರ್ವಾದದ ಕೃಪೆಗೆ ಹೊಂದಿಸುವುದು ವಿನಯಮಾರ್ಗ. ಎರಡನೆಯ ಪ್ಯಾರಾದಲ್ಲಿ ತನ್ನ ಸಂಬಳದ ಬಗೆಗೆ ಹೇಳಿಕೊಂಡಿರುವುದು ನೇರವಾದ ಪ್ರಾಯೋಗಿಕ ಮಾರ್ಗ.

೫೫
ಜಾತಕ ಪ್ರಶಸ್ತವಾಗಿದೆ

ಜಿಜ್ಞಾಸುವೊಬ್ಬರಿಗೆ ಜ್ಯೋತಿಷಿಯೊಬ್ಬರ ಕಾರ್ಡು

12/3/55
Kadur

ಚಿ||ಗೆ ಆಶೀರ್ವಾದಗಳು. ಅದಾಗಿ ಈವರೆವಿಗೆ ಉ.ಕು. ಸಂಪ್ರತಿ. ನಿನ್ನ ಅಭಿಮಾನಪೂರ್ವಕ ಪತ್ರವು ಹಸ್ತಗತವಾಯ್ತು. ನಿನ್ನಲ್ಲಿರುವ ದೈವ ಗುರು ಪಿತೃಭಕ್ತಿ ಭಾವನೆಗೆ ತುಂಬಾ ಸಂತೋಷ ಪಡುತ್ತೇನೆ. ಚರ್ಚಾಸ್ಪದವಾದ ವಿಚಾರದಲ್ಲಿ-ನೀನು ಕಳಿಸಿರುವ ಜಾತಕ (ಕನ್ಯಾ) ಕ್ರಮಶಃ ಇರುತ್ತೆ. ಯೋಚಿಸಿ ನೋಡಿದ್ದರಲ್ಲಿ

ಕನ್ಯಾಜಾತಕ...ದೋಷದಿಂದಲೇ ಆತುರವಾಗಿ ಬರೆಯುವಲ್ಲಿ ಸಂವತ್ಸರ ತಪ್ಪಾಗಿ ಬಿದ್ದಿರಬೇಕೆಂದು ಊಹಿಸುತ್ತೇನೆ. ಹಿರಿಯರು ನೋಡಿ ಹೇಳಿದ್ದರಲ್ಲಿ ಈ ಜಾತಕಗಳು ಪ್ರಶಸ್ತವಾಗಿವೆಯೆಂದೂ ನಾಡಿ...ಗಿರುವುದರ ಹೊರತು ಅನ್ಯಥಾ ಬಾಕಿ ಭಾಗಗಳಲ್ಲೆಲ್ಲಾ ಪ್ರಶಸ್ತವಾಗಿರುತ್ತೆಂದು ಅಭಿಪ್ರಾಯಪಟ್ಟಿದಾರೆ. ಅಂಗಾರಕ ದೋಷ ಎರಡರಲ್ಲೂ ಇರುವುದಾಗಿಯೂ ತಿಳಿಸಿರುತ್ತಾರೆ. ನನಗೆ ಚಂಡೀಹೋಮದ ಶಾಂತ್ಯುತ್ಸವಕ್ಕೆ ಆಹ್ವಾನವಿರಲಿಲ್ಲ. ಇದರಿಂದಲೂ ಬರಲಿಲ್ಲ.

(ವಿಳಾಸ: ಅರಕಲ್ಗೂಡು ತಾಲ್ಲೂಕು ದೊಡ್ಡಮಗ್ಗೆ ಹೋಬ್ಳಿ ಅಗ್ರಹಾರದ ಚನ್ನದೇವರಯ್ಯನವರ ಮಗ ಚಿ||...ಇವರ ಮಗ ಮಿಡಲ್ ಸ್ಕೂಲ್ ವಿದ್ಯಾರ್ಥಿಯ ಮೂಲ್ಕ ದೊಡ್ಡ ಮಗ್ಗೆ Post Dodda Magge, TQ Arkalgud.)

೫೬

ತನ್ನ ಮಕ್ಕಳ ವಿವಾಹ

ಸೋದರನಿಗೆ ಅಂತರ್ದೇಶೀಯ ಪತ್ರ

ಕುಶಲಂ ಶ್ರೀರಾಮ ಶಿವಮೊಗ್ಗ ಜಿಲ್ಲೆ

ತಾ. 30.3.56

...ಶ್ರೀ ಇಂ||...ನವರ ಮನೆಯಿಂದ ಪ್ರಸ್ತಾಪ ಬಂದಿತ್ತು. ನಾನು ಕೊಟ್ಟು ತರುವ ಸಲಹೆಯನ್ನು ಮಾಡಿದೆ. ಅವರು ಅದಕ್ಕೂ ಒಪ್ಪಿ, ನಾನೂರು ರೂ. ಕೆಲಸ ಮಾಡಿಸಿಕೊಡುತ್ತೇನೆ ಎಂದು ಮುಂತಾಗಿ ಆಶ್ವಾಸನ ಕೊಟ್ಟಿದ್ದರು. ಆದರೆ, 'ದೈವೇ ಬಲೇ ದುರ್ಬಲೇ' ಎಂಬಂತಾಯಿತು ನನ್ನ ಅವಸ್ಥೆ. ಫಾಲ್ಗುಣ ಮಾಸ ಮುಗಿಯುತ್ತ ಬಂತು. ಈ ವರ್ಷವಾದರೂ ಲಗ್ನ ನಡೆಯಬಹುದೆಂಬ ಆಸೆ ದಿನೇ ದಿನೇ ದೂರವಾಗುತ್ತಿದೆ. ಚಿ||... ನಿಗೊಂದು ಎಳೆ ಹಾಕಿಬಿಡೋಣವೆಂದರೆ ಅದಕ್ಕೂ ಅವಕಾಶವಿಲ್ಲದಂತಾಗಿದೆ. ಅವಳ ಹಣೆಯಲ್ಲಿ ಲಗ್ನವಾಗುವ ಯೋಗವೇ ಇಲ್ಲವೇನೋ !

ಹೇಗೋ, ಇನ್ನೂ ಒಂದು ಸಲ ನೋಡಬೇಕಾದರೆ ನೋಡಿಬಿಡು. ಅದೃಷ್ಟವಿದ್ದಂತಾಗಲಿ. ಪದೇ ಪದೇ ಹೋಗಿ ನೋಡೆಂದು ನಿನಗೆ ಹೇಳಲೂ ಸಂಕೋಚವಾಗುತ್ತಿದೆ. ಬೆಂಗಳೂರಿಗಾದರೂ ಹೋಗಿಯೇ ಬಾ. ವೇ||...ಅವರ ಮಗನೊಬ್ಬನು ಬೆಂಗಳೂರಿನಲ್ಲಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ನಿರೀಕ್ಷಣೆ ಬಹಳವಾಗಿದೆಯೆಂದು ಕಾಣುತ್ತದೆ. ಅಂತೂ ಮನುಷ್ಯಯತ್ನದಲ್ಲಿ ಮಾಡಬಹುದಾದ ಪ್ರಯತ್ನ ಮಾಡಿಬಿಡು. ಆಮೇಲೆ ದೈವಾಯತ್ತ.

ಇಲ್ಲಿ ೧-೨ ವರಗಳೇನೋ ಇವೆ. ಆದರೆ ವಿದ್ಯಾಗಂಧವಿಲ್ಲ. ನಮ್ಮದಿಯಾಗಿರುವ ಸ್ಥಿತಿಯೂ ಇಲ್ಲ. ಫೋಟೋ ಸಮರ್ಪಕ ವಾಗಿಲ್ಲದಿದ್ದರೆ ಬೇರೆ ಮಾಡಿಸೋಣ.

ಒಟ್ಟಿನಲ್ಲಿ, ನನ್ನ ಬಾಳು ಹಾಸ್ಯಾಸ್ಪದವಾಯಿತು. "ದರಿದ್ರೋऽಸ್ಮಿ, ಅಭದ್ರೋऽಸ್ಮಿ, ನಿಂದ್ಯೋऽಸ್ಮಿ, ವಿಷಣ್ಣೋऽಸ್ಮಿ". ಈ ವಿಚಾರಗಳಲ್ಲಿ ನಮಗೆ ಯಾರೂ ಆಪ್ತರಿಲ್ಲ. ಅಷ್ಟೇ ಅಲ್ಲ, ಪ್ರತ್ಯಕ್ಷ ಶತ್ರುಗಳ ಬಾಧೆಗಿಂತ ಹಿತಶತ್ರುಗಳ ಬಾಧೆಗೆ ಸಿಕ್ಕಿ ಹಣ್ಣಾಗಿದ್ದೇನೆ. ನನ್ನಿಂದ ಉಪಕೃತರಾದವರೂ ನನ್ನ ವಿಚಾರದಲ್ಲಿ ಅಸಹನೆಯಿಂದ ಕೆಲಸ ಮಾಡುತ್ತಾರೆ. ಎಷ್ಟು ಬರೆದರೂ ಸ್ವಲ್ಪವೇ.

ಈ ಸಲ ಯಾವುದನ್ನೂ ಇತ್ಯರ್ಥ ಮಾಡಿಬಿಡು. ಜಮೀನುಗಳ ಮಾರಾಟದ ವಿಷಯವೇನಾಯಿತು ? ಇನ್ನೇನೂ ವಿಶೇಷವಿಲ್ಲಾ.

ಮಕ್ಕಳ ವಿವಾಹವನ್ನು ಸಕಾಲದಲ್ಲಿ ಸರಿಯಾಗಿ ನೆರವೇರಿಸಿ ಮರ್ಯಾದೆ ಉಳಿಸಿಕೊಳ್ಳುವುದೂ ಇಲ್ಲಿ ಒಂದು ಮೌಲ್ಯವಾಗಿದೆ. ಹೆಣ್ಣು ಹೆತ್ತವರ ಗೋಳು ಸ್ಪಷ್ಟವಾಗಿ ಕಾಣುತ್ತದೆ. ಇಂ||– ಇಂಜಿನಿಯರ್ ; ಎಳೆ ಹಾಕು–ಉಪನಯನ ಮಾಡು

೫೭

ಮದುವೆಗೆ ಯತ್ನಿಸಿ (ಹೆಣ್ಣುಮಗಳೊಬ್ಬಳ ಪತ್ರ)

ಕ್ಷೇಮ ಶ್ರೀ ನಗರ

8-5-60

...ನೀವು ಇಲ್ಲಿಗೆ ಬಂದಿದ್ದಾಗ ಅಮ್ಮಾವರು ವರದ ವಿಷಯ ಹೇಳಿದ್ದರಂತೆ. ಅದಕ್ಕೆ ನೀವು ಕಾಗದ ಬರೆದು ವಿಚಾರಿಸಿದಿರಾ ? ಕಾಗದ ಬಂತೆ ? ಅಡ್ರಸ್ ಸಿಕ್ಕಿತೆ ? ಕಾಲೇಜು ಬಾಗಿಲು ತೆಗೆಯುವುದರೊಳಗೆ ಇತ್ಯರ್ಥವಾದರೆ ಸರಾಗವೆಂದು ಯೋಚಿಸುತ್ತಿದ್ದಾರೆ.

ನನಗೂ ಸಹ ನೀವೇ ತೊಂದರೆ ವಹಿಸಿ ನಾನಾ ಕಾರ್ಯಗಳಿದ್ದರೂ ಬದಿಗಿರಿಸಿ ನಾಕಾರು ಸಲ ಸುತ್ತಿ ಒಂದು ಇತ್ಯರ್ಥಕ್ಕೆ ತಂದು ನನ್ನನ್ನು ಗೃಹಿಣಿಯನ್ನಾಗಿ ಮಾಡಿದಿರಿ. ಹಾಗೆಯೇ ಈಗಲೂ ಪ್ರಯತ್ನಪಟ್ಟು...ನನ್ನೂ ಗೃಹಿಣಿಯನ್ನಾಗಿ ಮಾಡುತ್ತೀರೆಂದು ನಂಬಿದ್ದೇನೆ. ಇದು ನಿಮ್ಮಿಂದಲೇ ಆಗಬೇಕು. ಮತ್ಯಾರಿಂದಲೂ ಆಗುವ ಹಾಗಿಲ್ಲ. ಒಂದು ಸಮಯ ಮೊಖ್ತ ಹೋಗಿ ಬರಬೇಕಾದ ಪಕ್ಷಕ್ಕೆ ನಿಮ್ಮ ಕೆಲಸಗಳ ಮಧ್ಯೆ ಇದೂ ಒಂದು ಕೆಲಸವೆಂದು ಭಾವಿಸಿ ಹೋಗಿ ಯಾವುದನ್ನೂ ವಿಚಾರಿಸಿಕೊಂಡು ಬಂದರೆ ಒಳ್ಳೆಯದು. ಮೇಲಾಡುವವರು ಬಹಳವಿದ್ದಾರೆ. ಜಾತಕ ನೋಡುವ ಕೆಲಸ ಬೇಡ. ಮನೋ ನಿಶ್ಚಯವೇ ನಿಶ್ಚಯ. ಈಗ ಎಲ್ಲಾ ಕಡೆಯಲ್ಲೂ ಹಾಗೆ ಮಾಡುತ್ತಿದ್ದಾರೆ.

...ನೀವು ಹಿಂದೆ ಮೈಸೂರಿಗೆ ಬಂದಿದ್ದದ್ದು ತಿಳಿಯಿತು. ಇಲ್ಲಿಯತನಕ ಬಂದಿದ್ದಿರಿ. ಹಾಗೇ ನರಸಿಪುರಕ್ಕೂ ಬಂದು ಒಂದು

ಸಾರಿ ನೋಡಿಕೊಂಡು ಪ್ರಯಾಣ ಬೆಳೆಸಬಹುದಾಗಿತ್ತು. ಮುಂದಾದರೂ ಇನ್ನೊಂದು ಸಾರಿ ಎಲ್ಲರನ್ನೂ ಕರೆದುಕೊಂಡು ಬರುತ್ತೀರೆಂದು ನಂಬಿದ್ದೇನೆ...

ಹೀಗೆ ಜಾತಕವನ್ನಾಧರಿಸಿ ವಿವಾಹವಾಗುವುದನ್ನು ೨-೩ ದಶಕಗಳ ಹಿಂದೆಯೇ ಉಲ್ಲಂಘಿಸಿದ ನಿದರ್ಶನಗಳಿವೆಯಾದರೂ ಅದು ಬಹು ಪ್ರಚಲಿತವಾಗಿ ಪದ್ಧತಿಗೆ ಬಂದುದಕ್ಕೆ ಆಧಾರವಿಲ್ಲವಾಗಿದೆ. ಆದರೆ ಜಾತಕ, ಶಕುನ...ಹೀಗೆ ನೂರೆಂಟು ಪರೀಕ್ಷೆಗಳನ್ನು ಸವಿವರವಾಗಿ ಮಾಡಿ ನವೆಯುತ್ತಿದ್ದುದು ಬಹುಪಾಲು ಕಣ್ಮರೆಯಾಗಿದೆಯೆಂದು ಧಾರಾಳವಾಗಿ ಹೇಳಬಹುದು.

೫೮

ವರನೊಬ್ಬನ ದೃಷ್ಟಿ

ತನ್ನ ವಿವಾಹದ ಬಗೆಗೆ ನವವಿದ್ಯಾವಂತನ ಪತ್ರ (ಕವರು)

ಕುಶಲಂ ಶ್ರೀ ನಗರ
2.9.1961

...ಹಳ್ಳಿಯವರಿಗೆ ಯಾವ ವಾಗ್ದಾನವನ್ನೂ ಮಾಡಿಲ್ಲ. ಅವರಿಂದ ನಮ್ಮ ಮೇಲೆ ಯಾವ ಆರೋಪಣೆಯೂ ಬರುವ ಹಾಗಿಲ್ಲ.

ನಾನು ಹಿಂದಿನ ಕಾಗದದಲ್ಲಿ ತಿಳಿಸಿರುವ ಹಾಗೆ ಹಣಕ್ಕಾಗಿ ನಾನು ಆಸೆಪಡುವವನಲ್ಲ. ದೇವರು ಅಂತಹ ಹಣವನ್ನು ಸಂಪಾದನೆ ಮಾಡುವ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾನೆ. ನನ್ನ ಕೆಲಸ ಸಧ್ಯದಲ್ಲೆ ಖಾಯಂ ಆಗುತ್ತೆ. ನಂತರ ತಿಂಗಳಿಗೆ 260 ರೂ. ಮತ್ತು ಜೊತೆಗೆ ಹೊರಗೆ ಹೋದಾಗ ಪ್ರತಿದಿನ 6 ರೂ. ಮತ್ತು II Class ಛಾರ್ಜು ಬರುತ್ತೆ. ನೀವು ನಮ್ಮ ಮನೆಯವರ ವಿಷಯಕ್ಕಾಗಿ ಯೋಚನೆ ಮಾಡಬೇಕಾದ್ದೇನಿಲ್ಲ. ಅವರನ್ನು ಒಪ್ಪಿಸುವ ಭಾರ ನನಗಿರಲಿ. ಕನ್ಯಾಮಾತ್ರ ಚೆನ್ನಾಗಿರಬೇಕು. ಕೆಟ್ಟ ನಕ್ಷತ್ರವಾಗಬಾರದು. S.S.L.C. ವರೆಗಾದರೂ ಓದಿರಬೇಕು. ಯೋಗ್ಯವಾದ ಮನೆತನದವರಾಗಬೇಕು. ಈ ವಿಷಯದಲ್ಲಿ ನಾನೇನೂ ನಿಮಗೆ ಹೆಚ್ಚಿಗೆ ಬರೆಯಬೇಕಾಗಿಲ್ಲ. ಎಲ್ಲವನ್ನೂ ನೀವೇ ನೋಡಿ ಪ್ರಯತ್ನಿಸುವುದು. ಇದರಲ್ಲಿ ನಿಮಗೆ ಪೂರ್ತಿ ಸಾತಂತ್ರ್ಯ ಇದೆ. ಅನ್ಯಥಾ ಭಾವನೆ ಬೇಡ...

ನೌಕರಿಗೆ ಸೇರಿ ಆರ್ಥಿಕ ಸ್ವಾತಂತ್ರ್ಯ ಪಡೆದ ವಿದ್ಯಾವಂತ ಯುವಕರ ಸ್ವತಂತ್ರ ಧೋರಣೆ ಇಲ್ಲಿದೆ.

೫೯

ವೃತ್ತಾಂತದ ತಿಳಿವಿಗಾಗಿ

ವರಾನ್ವೇಷಣೆಗೆ ಹೋಗಿದ್ದವರ ವೃತ್ತಾಂತಗಳನ್ನು ತಿಳಿಯಲು ಕಾರ್ಡು

ಕುಶಲಂ ಶಿವಂಭವತು ಶಿವಮೊಗ್ಗ ಜಿಲ್ಲೆ
9.3.64

...ಈ ಪತ್ರ ಇಷ್ಟು ದೂರ ಓದಿದರೂ ಇವರು ಯಾರು ಎನ್ನುವುದು ಬಹುಶಃ ನಿಮಗೆ ಅರ್ಥವಾಗದಿರಬಹುದು. ಆಶ್ಚರ್ಯವೇನಲ್ಲ. ಇದೆಲ್ಲಾ ಕಾಲಮಹಿಮೆ ಹಾಗೂ ದುರದೃಷ್ಟ. ಕಾರಣ : ಅಣ್ಣನಿಗೆ ತಂಗಿಯ ಮರವು ತಂಗಿಗೆ ಅಣ್ಣನ ಮರವು ಇದು ಈ ಕಾಲದ ನಿಷ್ಠುರ ಸತ್ಯ. ಆಗಲಿ. ದೈವೇಚ್ಛೆಗೆ ಯದುರಾರು. ಚಿ॥ ಸೌ॥ ತಮ್ಮ ಸೌಭಾಗ್ಯವತಿ...ಳಿಗೆ ನನ್ನ ಆಶೀರ್ವಾದದೊಡನೆ ಜ್ಞಾಪಿಸಿ. ನೀವುಗಳೆಲ್ಲಾ ಆರೋಗ್ಯವಾಗಿ ಸುಖವಾಗಿದ್ದೀರೆಂದು ನಂಬುತ್ತೇನೆ.

...ಪ್ರಕೃತ ತಮ್ಮ ಊರಿನ ಶ್ರೀ...ಎನ್ನುವವರು ಸ್ವಲ್ಪ ದಿವಸಗಳ ಹಿಂದೆ ಇಲ್ಲಿಗೆ ದಯಮಾಡಿಸಿದ್ದರು. ಸಾಂಪ್ರದಾಯಿಕವಾಗಿ ಮಾತಾಡಿದೆವು. ಇಷ್ಟರಲ್ಲೇ ಒಂದಾವರ್ತಿ ನಮ್ಮ ಊರಿಗೆ ಭೇಟಿ ಕೊಡಬೇಕೆಂತಾ ಆಹ್ವಾನವಿತ್ತಿದ್ದಾರೆ. ಆದರೂ ನಿಮ್ಮ ನಮ್ಮ ಬಾಂಧವ್ಯದ ಬಗ್ಗೆ ನಾನು ಅವರೊಂದಿಗೆ ಹೇಳಲಿಲ್ಲ. ಕಾರಣ ಅವರು ವರಾರ್ಥಿಗಳಾಗಿ ಬಂದಿದ್ದರು. ಈ ವಿಷಯದಲ್ಲಿ ಅವರನ್ನು ತಮ್ಮಿಂದ ಅರಿಯಬೇಕೆಂಬ ಉದ್ದೇಶದಿಂದ ಯಾರೋ ಅನ್ನುವ ಹಾಗಿದ್ದರೆ ಉತ್ತಮವೆನಿಸಿತು. ಶ್ರೀ...ಗಳು ತಮಗೆ ಬಂಧುಗಳಾಗ ಬೇಕೆ? ದಯಮಾಡಿ ತಮ್ಮಿಂದ ಸಾಧ್ಯವಾದಷ್ಟೂ ಅವರ ಪರಿಚಯ, ಸ್ವಭಾವ ಇವುಗಳನ್ನು ತಿಳಿಸಿ. ನಾವು ಬಾಂಧವ್ಯ ಮಾಡಲು ಸಾಧ್ಯವೆ? ಅವರನ್ನು ಪ್ರತ್ಯಕ್ಷವಾಗಿ ¼ ಘಂಟೆ ಭೇಟಿ ಮಾಡಿದೆವಾದರೂ ಇನ್ನೂ ಅವರ ವಿಷಯವನ್ನು ನಿಮ್ಮ ದೃಷ್ಟಿಯಿಂದ ಅರಿಯುವ ಆಶಯವಿದೆ. ಹಾಗೂ ಅವರ ಹೆಣ್ಣುಮಕ್ಕಳು (ವಿವಾಹಕ್ಕೆ ಸಿದ್ಧವಾಗಿರುವ) ರೂಪಗುಣದಲ್ಲಿ ಹ್ಯಾಗೆ? ನಾವು ಅವರಲ್ಲಿ ಬಾಂಧವ್ಯ ಬೆಳೆಸುವುದರಲ್ಲಿ ನಿಮ್ಮ ಅಭಿಪ್ರಾಯವೇನು ಸಾಧ್ಯವಾದಷ್ಟು ತಿಳಿಸಿ. ಆದಷ್ಟು ಬೇಗ ತಮ್ಮ ಅಭಿಪ್ರಾಯವನ್ನು ತಿಳಿದು ನಾನು ಅವರಿಗೆ ಬರೆಯಬೇಕು. ನಿಮ್ಮ ಅಭಿಪ್ರಾಯವನ್ನು ತಿಳಿದು ನಾನು ಅಲ್ಲಿಗೆ ಈ ದೃಷ್ಟಿಯಿಂದ ಬರಬೇಕೆ ಹಾಗೂ ಯಾವಾಗ ಅನ್ನುವದನ್ನೂ ನಿರ್ಧರಿಸಬೇಕಾದ ಕಾರಣ ಸಾಧ್ಯವಾದಷ್ಟು ಬೇಗ ಜವಾಬು ಬರೆಯುತ್ತೀರಾಗಿ ನಂಬುತ್ತೇನೆ.

ಅಡ್ರಸ್ಸು...

ವಿವಾಹ ಬೆಳೆಸುವುದು ಒಂದು ಮನೆತನದ ಕೀರ್ತಿ, ಗೌರವ, ಆರ್ಥಿಕತೆ, ಭವಿಷ್ಯದ ಮೇಲೆ ಪರಿಣಾಮ ಬೀರುವ ಮುಖ್ಯ ಸಂದರ್ಭ. ಇದು ಪ್ರಸ್ತುತ ಸಮಾಜದಲ್ಲಿ ಏಕಮಾರ್ಗಿ ಬೀರೆ. ಹಾಗಾಗಿ ಹೆಣ್ಣಾಗಲಿ, ಗಂಡಾಗಲಿ ಅವರ ಹಿನ್ನೆಲೆಯನ್ನು ಕೂಲಂಕಷವಾಗಿ ಪರಾಮರ್ಶಿಸುವುದು ರೂಢಿ. ಜಾತಿಗಳೂ, ಉಪಜಾತಿಗಳೂ ಗಟ್ಟಿಗೊಳ್ಳುವುದರ ಹಿಂದಿನ ಕಾರಣಗಳಲ್ಲಿ ಇದು ಮುಖ್ಯವಾದುದು.

೬೦

ಕಣ್ಣು ಮೂಗು ಇಲ್ಲದ ಪತ್ರ

ವರಾರ್ಥಿಗಳಾಗಿ ಬಂದವರ ವಿವರಗಳನ್ನು ಬಂಧುವೊಬ್ಬರಿಂದ ತಿಳಿದುಕೊಂಡನಂತರ ಅವರಿಗೆ ಪ್ರತ್ಯುತ್ತರವಾಗಿ ಬರೆದುದು

ಶಿವಮೊಗ್ಗ ಜಿಲ್ಲೆ

೧೮.೩.೬೪

...ತಾವು ಅಭಿಮಾನವಿಟ್ಟು ಬರೆದ ಕಾಗದಾ ತಲಪಿ ತುಂಬಾ ಸಂತೋಷವಾಯಿತು. ಬಾಕೀ ವಿಷಯಗಳನ್ನು ಸಧ್ಯದಲ್ಲಿಯೇ ತಮ್ಮಲ್ಲಿಗೆ ಬಂದಾಗ ತಿಳಿಸುತ್ತೇನೆಯಲ್ಲದೆ ತಮ್ಮ ಸಲಹೆಯ ಪೂರ್ಣ ಸಹಕಾರವನ್ನು ಆಶಿಸುತ್ತೇನೆ. ತಮ್ಮಗಳನ್ನು ಭೇಟೀ ಮಾಡುವ ದಿನವನ್ನು ಪೂರ್ವಭಾವಿಯಾಗಿ ತಮಗೆ ಪತ್ರಮುಖೇನ ತಿಳಿಸುತ್ತೇನೆ. ಸಧ್ಯದಲ್ಲಿ ಈ ವಿಷಯವಾಗಿ ಪತ್ರಮೂಲಕ ಬರೆಯಲಿಕ್ಕೇನೂ ಇಲ್ಲ. ತಮ್ಮ ಕಾಗದ ಬಂದ ನಂತ್ರ ಸೂಕ್ತ ಕಂಡಂತೆ ನಿರ್ದಿಷ್ಟವಿಲ್ಲವಾದರೂ ಮನಸ್ಸಿನ ದುಗುಡಕ್ಕೆ ಅವಕಾಶವಿಲ್ಲದೆ ಪತ್ರ ಮೂಲ್ಕ ಸಂಬಂಧಿಸಿದವರಿಗೆ ನಮ್ಮ ಅಭಿಪ್ರಾಯವನ್ನು ತಿಳಿಸುವ ರೀತಿ ನೀತಿಗಾಗಿ ಮುಂದುವರಿಯಲು ಉದ್ದೇಶಿಸ ಲಾಗಿದೆ...

ಕನ್ಯಾಪಿತೃಗಳ ಮನೆಯ ವಿವರಗಳನ್ನು ಕೇಳಿ ಬರೆದ ಮೊದಲ ಪತ್ರಕ್ಕೂ ಈ ಪತ್ರಕ್ಕೂ ಇರುವ ಶೈಲಿಯ ವ್ಯತ್ಯಾಸ ಮಾತ್ರವಲ್ಲ ಧೋರಣೆಯ ವ್ಯತ್ಯಾಸವನ್ನೂ ಗಮನಿಸಬಹುದು. ತಮ್ಮ ನಿರ್ಧಾರವನ್ನು ಗೋಪ್ಯವಾಗಿಡಲು ಹೊರಟು ಭಾಷೆಯನ್ನು ಗೋಜಲಾಗಿಸಿದ್ದಾರೆ. ಹೀಗೆ ಒಮ್ಮೊಮ್ಮೆ ವ್ಯವಹಾರವು ಕೌಶಲ್ಯದಿಂದ ಕೂಡಿರುತ್ತದೆ.

೬೧

ನಾನು ತಾತ್ಸಾರ ಮಾಡಿಲ್ಲ

ನಗರದಲ್ಲಿರುವ ಅಣ್ಣನು, ಹಳ್ಳಿಯಲ್ಲಿರುವ ತಮ್ಮನಿಗೆ ಬರೆದ ಕಾರ್ಡು

ಕುಶಲಂ ಶ್ರೀಃ ನಗರ

ತಾ। 25-6-69

...ನಿನ್ನ ತಾ।। 20-6-69ರ ಕಾಗದವು ನೆನ್ನೆ ತಲಪಿತು. ವರದ ವಿಚಾರದಲ್ಲಿ ನಾನು ತಾತ್ಸಾರ ಮಾಡಿದೆನೆಂದು ನೀನು ಬರೆದಿರುವ ಮಾತು ಸರಿಯಲ್ಲ. ನೀನು ವರದ ವಿಚಾರವನ್ನು ಹೇಳಿದ ಕೂಡಲೇ ನಾನು ಕನ್ಯೆಯ ನಕ್ಷತ್ರವನ್ನು ತಿಳಿಸಿ ಪ್ರಯತ್ನ ಮಾಡಿ ನೋಡು ಎಂದು ಹೇಳಿದೆ. ಅನಂತರ ಮೇ ತಿಂಗಳ 8ನೇ ತಾರೀಖಿನಲ್ಲಿ ಜಾತಕವನ್ನು ಕೊಟ್ಟು ಕಳುಹಿಸಿದೆ. ಅದು ತಲಪಲಿಲ್ಲವೆಂದು ನೀನು ಹೇಳಿದೆ. ನಾನು ಪುನಃ ಕೊಟ್ಟು ಕಳುಹಿಸಿದೆ. ಇದರಲ್ಲಿ ತಾತ್ಸಾರದ ಮಾತು ಬರುವುದಿಲ್ಲ. ನಾನು ತಾತ್ಸಾರಮಾಡಲಿಲ್ಲ. ಈಗ ಕಾಲಾತೀತ ವಾಗಿದ್ದರೆ ವಿಶೇಷಪ್ರಯತ್ನ ಬೇಕಿಲ್ಲ. ದೈವೇಚ್ಛೆಯಿದ್ದಂತಾಗಲಿ.

...ಹಳ್ಳಿಯ...ಶಾಸ್ತ್ರಿಗಳ ಮಗನೊಬ್ಬನು M.B.B.S. ಮಾಡಿದ್ದಾನೆಂದು ಕೇಳಿದೆ. ಅವರು ನನ್ನಂತಹವರೊಡನೆ ಸಂಬಂಧ ಮಾಡಲು ಒಪ್ಪುವರೋ ಎಂಬುದು ತಿಳಿಯದು. ಅವರು ದ್ರವ್ಯಾಪೇಕ್ಷಿಗಳಾಗಿದ್ದರೆ ನನ್ನಿಂದ ಸಾಧ್ಯವಿಲ್ಲ...

ಹೆಣ್ಣು ಮಕ್ಕಳ ವಿವಾಹಕ್ಕೆ ಪೂರ್ವದಲ್ಲಿ ಇಂಥ ವೈವಿಧ್ಯಪೂರ್ಣ ಸಿದ್ಧತಾ-ಸನ್ನಿವೇಶಗಳು ಇರುತ್ತವೆ. ಸೋದರರಿಬ್ಬರಿಗೂ ತಮ್ಮ ಮನೆತನದ ಕನ್ಯೆಯೊಂದು ಗೃಹಿಣಿಯಾಗಿ ವಂಶದ ಕೀರ್ತಿಯನ್ನು ಉಳಿಸಬೇಕೆಂಬ ತೀವ್ರ ಕಳಕಳಿಯೇ ಇದೆ. ಕನ್ಯೆಯು ಅವಿವಾಹಿತಳಾಗಿ ಉಳಿಯುವುದು ವೇದನೆಯದೇನೋ ಹೌದು; ಅಪಮಾನವೆಂದೂ ಇವರು ಭಾವಿಸುತ್ತಾರೆ.

ನಗರದಲ್ಲಿ ನೌಕರಿಯಲ್ಲಿದ್ದರೂ ಕನ್ಯಾಪಿತೃವಾದುದರಿಂದ, ಹಳ್ಳಿಯ ವೈದ್ಯನೊಡನೆ ಸಂಬಂಧ ಬೆಳೆಸುವುದು ಆರ್ಥಿಕ ಕಾರಣದಿಂದ ಕಷ್ಟಸಾಧ್ಯವಾಗುತ್ತದೆ. ಯಾವುದೇ ಸಮಾಜವೂ ಇಂಥ ವರ್ಗವೈಷಮ್ಯದಿಂದ ಎಂದಿಗೂ ಹೊರತಾಗಿರುವುದಿಲ್ಲ

೬೨

ಜಾತಕ ನೋಡುತ್ತಿರುವುದು

ಅಣ್ಣನಿಗೆ ತಂಗಿಯ ನಿವೇದನೆಯ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ತಾ 7-3-75

ಬೆಂಗಳೂರು

ಚಿ।।...ನಿಗೆ ಕನ್ಯೆಗಳು ಬರುತ್ತಿವೆ. ಆದರೆ ಜಾತಕ ಸರಿಯಾಗಿ ಹೊಂದುತ್ತಿಲ್ಲ. ಅವನ ಜೀವನ ನಮ್ಮ ಜೀವನದಂತೆ ಆಗದಿರಲೆಂದು ಜಾತಕ ನೋಡುವುದಾಗಿದೆ. ಕೊನೆಗೆ ನೋಡದೆ ಮಾಡುವ ಪರಿಸ್ಥಿತಿ ಬರುತ್ತೆಂದು ತೋರುತ್ತೆ.

...ನನ್ನ ಪುರಾಣ ಯಾವಾಗಲಾದರೂ ಸಂಧಿಸಿದಾಗ ವಿಜ್ಞಾಪಿಸಿಕೊಳ್ಳುತ್ತೇನೆ. ಲಕ್ಷ್ಮೀಕೇಶವನ ದಯೆಯಿಂದ ಚಿ।। ಸೌ।।...ಗೆ ಮದುವೆ ನಿಶ್ಚಿತವಾಯಿತೆಂದರೆ ಬರುತ್ತೇನಲ್ಲಾ, ಆಗ ಪುರಾಣ ಹೇಳುತ್ತೇನೆ. ಗಣೇಶಪುರಾಣ ಓದಿದರೆ ಸಕಲೇಷ್ಟಾರ್ಥವೂ ಸಿದ್ಧಿಸುವುದೆನ್ನುತ್ತಾರೆ. ಅದೂ ಓದಿ ಮುಗಿಯುತ್ತಾ ಬಂತು. ಆದರೆ ನನ್ನ ಪಾಪದ ಫಲದಿಂದ ಇಷ್ಟಾರ್ಥ ಮಾತ್ರ ನೆರವೇರಿಲ್ಲ...

೬೩

ಸಂಬಂಧ ಬೆಳೆಸೋಣ (ಮಿತ್ರರಲ್ಲಿ ಪತ್ರ)

ಕುಶಲಮ್ ಶ್ರೀ: ರಾಯಚೂರು

24.9.1975

ಮಾನ್ಯ ಮಿತ್ರರಾದ,

ವೇ। ಬ್ರಂ।...ಅವಧಾನಿಗಳ ಸ।ಕ್ಕೆ...ಅವಧಾನಿಯ ನಮಸ್ಕಾರಗಳು. ಉ.ಕು.ಸಾಂ।।

ಸುಮಾರು 2-3 ತಿಂಗಳ ಹಿಂದೆ ನನ್ನ ಇಬ್ಬರು ಮಕ್ಕಳು ಅಲ್ಲಿಗೆ ಬಂದಿದ್ದರಂತೆ. ವಿವಾಹ ವಿಷಯಕವಾದ ಪ್ರಸ್ತಾವ ಮಾಡಿದರಂತೆ. ಮುಂದಿನ ವರ್ಷಕ್ಕೆ ನೋಡೋಣವೆಂಬುದಾಗಿ ನೀವು ಹೇಳಿದಿರಂತೆ. ಪ್ರಕೃತ, ನನ್ನದೊಂದು ಪ್ರಾರ್ಥನೆ. ನನ್ನ ಮನೆಯಲ್ಲಿ ವರ, ಕನ್ಯಾ ಎರಡೂ ಇವೆ. ನಿಮ್ಮ ಮನೆಯಲ್ಲಿಯೂ ಹಾಗೆಯೇ ಇದ್ದಾರೆಯೇ ? ಇದ್ದರೆ ಅವರಿಬ್ಬರ ವಯಸ್ಸು, ನಕ್ಷತ್ರ, ಅವರ ವಿದ್ಯಾರ್ಹತೆ, ಉದ್ಯೋಗ ಇತ್ಯಾದಿ ವಿವರಗಳನ್ನು ತಿಳಿಸುವಿರಾ ? ಪ್ರಥಮತಃ ನಮ್ಮ ಮನೆಯಲ್ಲಿ ಸಂಬಂಧ ಬೆಳಸುವ ಅಭಿಲಾಷೆ ಇರುವ ಪಕ್ಷಕ್ಕೆ, ಮೇಲೆ ಕೇಳಿದ ವಿಷಯ. ''ಸಮಯೋರೇವ ವಿವಾಹಃ ಶೋಭತೇ'' ಎಂಬ ಉಕ್ತಿಗನುಸಾರವಾಗಿ, ನಾವಿಬ್ಬರೂ ಸಂಬಂಧ ಬೆಳಸಲು ಸಮಾನತೆ ಇದೆಯೆಂದು ನನ್ನ ಭಾವನೆ. ನಿಮ್ಮ ಅಭಿಪ್ರಾಯ ಹೇಗಿದೆಯೋ ಕಾಣೆ.

ನನ್ನ ಮಗ...ಇಲಾಖೆಯಲ್ಲಿ...ಆಗಿದ್ದಾನೆ. ವಯಸ್ಸು 28 ಆಗಿದೆ. ಸಂಬಳ 650 ಬರುತ್ತಿದೆ. ಮಗಳು S.S.L.C. ಓದಿದ್ದಾಳೆ. ಸುಮಾರು 25 ವರ್ಷಗಳು. ಇಬ್ಬರೂ ಲಕ್ಷಣವಾಗಿದ್ದಾರೆ. ಸಂಪ್ರದಾಯಾನುಸಾರ ಬೆಳೆದವರು. ನಿಮ್ಮದೂ ಹಾಗೆಯೇ ಇರುವುದರಿಂದಲೇ ಈ ಸಂಬಂಧ ಮಾಡೋಣವೆಂಬ ಅಭಿಲಾಷೆಗೆ ಪ್ರೇರಕವಾಯಿತು. ನಿಸ್ಸಂಕೋಚವಾಗಿ ಎಲ್ಲಾ ವಿಚಾರಗಳನ್ನೂ ತಿಳಿಸಿ, ಆದಷ್ಟು ಜಾಗ್ರತೆ ಉತ್ತರ ಬರೆಯಿರಿ...ನಿಮಗೆ ಸಂಬಂಧ ಮಾಡುವ ಅಭಿಲಾಷೆಯಿದ್ದಲ್ಲಿ ಮುಂದೆ ಪರಸ್ಪರ ಸಂದರ್ಶನ, ಮಾತುಗಳು ಇತ್ಯಾದಿ ಅಗತ್ಯ ಕರ್ತವ್ಯಗಳನ್ನು ಕೈಕೊಳ್ಳಬಹುದು.

ಇಷ್ಟೇ ಪ್ರಕೃತ

ಇತಿ ನಮಸ್ಕಾರಗಳು

ವಿವಾಹವನ್ನು ಗೊತ್ತುಮಾಡುವ ಪೂರ್ವಭಾವಿಯಾದ ಪ್ರಕ್ರಿಯೆ ಇಲ್ಲಿದೆ. ಇಲ್ಲಿ ಮುಖ್ಯವಾದುದು 'ಸಂಪ್ರದಾಯಾನುಸಾರವಾಗಿ' ಮಕ್ಕಳು ಬೆಳೆದಿರುವುದರಿಂದ ಪರಸ್ಪರರಿಗೆ ಒಪ್ಪಿಗೆಯಾಗುವುದೆಂಬ ನಿರೀಕ್ಷೆ. ಆದರೆ ಇತ್ತೀಚಿನ ದಶಕಗಳಲ್ಲಿ ಅದು ಹೇಳಿಕೊಳ್ಳಬಹುದಾದ ಮತ್ತು ಒಪ್ಪಿಕೊಳ್ಳಲು ಪ್ರೇರಕವಾಗಬಹುದಾದ ಮೌಲ್ಯವಾಗಿ ಉಳಿದಿಲ್ಲವೆಂಬುದು, ಆಗಿರುವ ಸಾಮಾಜಿಕ ಪರಿವರ್ತನೆಯ ರೀತಿಯನ್ನು ಸೂಚಿಸುತ್ತದೆ. ವಾಸ್ತವವಾಗಿ ಸಾಂಪ್ರದಾಯಿಕವಾಗಿರುವುದನ್ನು ಮುಖ್ಯವಾಗಿ ಹೆಣ್ಣುಮಕ್ಕಳು ಇಷ್ಟಪಡದಿರುವುದರಿಂದ ಸಂಸಾರಗಳಲ್ಲಿ ಕ್ಷೋಭೆಗಳು ಉದಿಸಿರುವ ಪ್ರಸಂಗಗಳೂ ಇರುತ್ತವೆ.

೬೪

ಕೂಡಿಯೇ ವಿವಾಹ

ಮಾವನು ಅಳಿಯನಿಗೆ, ತನ್ನ ಇಬ್ಬರು ಹೆಣ್ಣುಮಕ್ಕಳ ವಿವಾಹಕ್ಕೆ ನಡೆಸಿದ ಪ್ರಯತ್ನ ಕುರಿತು ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ: ಹಾಸನಸೀಮೆಯ ಹಳ್ಳಿ

ತಾ. 25-2-76

...ನಿಮ್ಮ ಊಹೆಯಂತೆಯೇ ಮೊನ್ನೆ 21ನೇ ತಾರೀಖು ...ಊರಿನಿಂದ ಇಲ್ಲಿಗೆ ಪತ್ರ ಬಂದಿದ್ದು ಅದರಂತೆ ಮಾರನೇ ದಿನವೇ ನಾನು ಚಿ|| ಸೌ||...ಳೊಡನೆ ಹೋಗಿದ್ದೆ. ಆದರೆ ತೀ||... ಬಾಧ್ಯಾರು ಈ ಹಿಂದೆ ತಿಳಿಸಿದ್ದ ಹುಡುಗನನ್ನು ನೋಡದೆ (ಸ್ಕೂಲ್ ಮಾಸ್ಟರ್) ಬೇರೆ ಒಬ್ಬ ಹುಡುಗನಿಗೆ ಪ್ರಯತ್ನಪಟ್ಟರು. ಅವರೂ ಜಮೀನ್‌ದಾರರು. ಒಂದು ಅಂಗಡಿ ಇಟ್ಟಿರುತ್ತಾರಂತೆ. ಅವರೆಲ್ಲಾ ಹುಡುಗಿಯನ್ನು ನೋಡಿದರು. ಅವರಿಗೆ ಜಾತಕ ಅವಶ್ಯವಾಗಿ ಬೇಕಂತೆ. ಮತ್ತು ನಗದಾಗಿ 3 ಸಾವಿರ ಕೊಡಬೇಕಂತೆ. ವರೋಪಚಾರ ಕಡಮೆಯಾದರೂ ಚಿಂತೆಯಿಲ್ಲಾ ಎಂದರಂತೆ. ಇದೆಲ್ಲಾ ತೀ||...ಬಾಧ್ಯಾರ ಮುಖಾಂತರ ತಿಳಿಯಿತು. ಇದಲ್ಲದೇ ಬೇರೆ ಯಾವುದನ್ನೂ ನೋಡಲಿಲ್ಲಾ, ನಂತರ ತೀ||...ಬಾಧ್ಯಾರು "ನೀವು ಈ ಕೂಡಲೇ ಊರಿಗೆ ಹೋಗಿ (ಹುಡುಗಿಯ ಜಾತಕವಿಲ್ಲದ್ದರಿಂದ) ಹುಟ್ಟಿದ ದಿನ, ಕಾಲ ಇದೆಲ್ಲವನ್ನೂ ವಿಶದವಾಗಿ ಸೂಚಿಸಿ ಕೂಡಲೆ ಪತ್ರ ಬರೆಯಿರಿ, ಇಲ್ಲಿ ನಾನು ಜಾತಕ ಕುಂಡಲಿ ಮಾಡಿ ಅವರಿಗೆ ತಿಳಿಸಿ ನಂತರ ಮುಂದಿನ ಫಲಿತಾಂಶವನ್ನು ತಿಳಿಸುತ್ತೇ"ನೆಂದು ತಿಳಿಸಿದ್ದರಿಂದ ನೆನ್ನೆ ಊರಿಗೆ ಬಂದು ಅವರ ಹೇಳಿಕೆಯಂತೆ ಪತ್ರ ಬರದಿರುತ್ತೇನೆ. ಮುಂದಿನ ವಿಚಾರ ಹೇಗೋ ತಿಳಿಯದು. ಹುಡುಗಿಯ ಅದೃಷ್ಟ ಹೇಗಿದೆಯೋ. ವೃಥಾ ಶ್ರಮವೇ ಆಗುತ್ತೋ ಏನೋ. ಅವರಿಂದ ಪತ್ರ ಬರುವವರೆವಿಗೂ ಕಾತರವಾಗಿರುತ್ತೆ. ಹಾಗಿಲ್ಲದೇ ಒಂದನ್ನೇ ನಡಸುವುದು ಕಷ್ಟಸಾಧ್ಯ.

ಮತ್ತೆ ಶ್ರೀಯುತ...ಯ್ಯನವರ ಮನೆಗೂ ಹೋಗಿದ್ದೆ. ಅವರ ಹಿರಿಯ ಮಕ್ಕಳು ಶ್ರೀ...ಗಳು ಬಂದಿದ್ದರು. ಬಹಳ ವಿಶ್ವಾಸದಿಂದ ಮಾತಾಡಿಸಿದರು. ಆದಷ್ಟು ಕೂಡಲೆ ಲಗ್ನ ನಡಸಿಕೊಡಲು ಅಪೇಕ್ಷೆಪಟ್ಟರು. ಮತ್ತೆ ಈ ಲಗ್ನದ ವಿಚಾರವಾಗಿಯಾದರೂ ಬಂದಿದ್ದಕ್ಕೆ ಮಾತುಕತೆ ಪೂರೈಸಿ ನಿಶ್ಚಯ ಮಾಡಿ ತಾಂಬೂಲ ವಿನಿಮಯ ಮಾಡಿಕೊಳ್ಳಬಹುದೆಂದು ತಿಳಿಸಿದರು. ಅದಕ್ಕೆ ತೀ||...ಬಾಧ್ಯಾರು ಈಗ ಬೇಡ. ಎರಡನ್ನೂ ಸೇರಿಸಿ ಒಟ್ಟಿಗೆ ಮಾಡೋಣ. ನಾವುಗಳೆಲ್ಲಾ...ಹಳ್ಳಿಗೆ ಬರುತ್ತೇವೆ. ಅಲ್ಲೇ ಎಲ್ಲವನ್ನೂ ವ್ಯವಸ್ಥಿತವಾಗಿ ನಡಸೋಣ ಎಂದು ಹೇಳಿದ್ದರಿಂದ

ಹಾಗೆಯೇ ಬಂದೆ. ಒಟ್ಟಿನಲ್ಲಿ ಈ ಪ್ರಯಾಣದಿಂದ ಯಾವುದೂ ಅನುಕೂಲ ಕಾಣುತ್ತಿಲ್ಲ. ಕಂಡರೆ ಮುಂದೆ ತಿಳಿಸುತ್ತೇನೆ. ಈ ವಿಚಾರಗಳನ್ನೆಲ್ಲಾ ತೀ|| ಗಳವರಿಗೆ ತಿಳಿಸಿರಿ...

ಅನೇಕ ಹೆಣ್ಣುಮಕ್ಕಳಿದ್ದು ಬಡತನವೂ ಇದ್ದಾಗ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲು, ಒಟ್ಟಿಗೆ ವಿವಾಹವೇರ್ಪಡಿಸುವ ರೂಢಿ ಇದೆ. ಹಾಗೆ ಮಾಡಿದಾಗ 'ಒಂದು ಏಳು ಒಂದು ಬೀಳು' ಎಂಬ ನಂಬಿಕೆಯೂ ಇರುವುದರಿಂದ ಕೆಲವರು ಈ ಕ್ರಮವನ್ನು ಒಪ್ಪುವುದೂ ಇಲ್ಲ. ಆದರೆ ಬಡತನವು ಅದನ್ನು ಅನಿವಾರ್ಯವಾಗಿಸುತ್ತದೆ. ತೀ||ಗಳವರಿಗೆ ತಿಳಿಸಿರಿ–ಬೀಗರಿಗೆ.

೬೫

ಸಮ್ಮತಿ ಸಿಕ್ಕಿದೆ

ಮಗಳ ವಿವಾಹ ನಿಷ್ಕರ್ಷೆಯ ಸಂದರ್ಭದಲ್ಲಿ ಅಳಿಯನಿಗೆ ಪತ್ರ

ಕ್ಷೇಮ ಶ್ರೀ: ಹಾಸನಸೀಮೆಯ ಹಳ್ಳಿ

ತಾ| 27-2-76

ಚಿ|| ರಾ|| ಸ||...ನಿಗೆ ಆಶೀರ್ವಾದಗಳು

...ಈ ಹಿಂದೆ ತಮಗೆ ತಿಳಿಸಿದ್ದಂತೆ...ಊರಿನ ಚಿ|| ಸೌ||... ಳನ್ನು ತಂದುಕೊಳ್ಳುವವರ ಕಡೆಯಿಂದ ತೀ||...ಉಪಾಧ್ಯಾಯರ ಮುಖಾಂತರ ಸಮ್ಮತಿ ಸೂಚಕವಾದ ಪತ್ರ ಈಗತಾನೆ ಬಂದಿತು. ಜಾತಕಾನುಕೂಲ ಪ್ರಶಸ್ತವಾಗಿ ಕೂಡಿರುವುದರಿಂದ ಒಪ್ಪಿಗೆ ಕೊಟ್ಟಿರುವರೆಂದು ತಿಳಿಯಿತು. ನಂತರ ನಾಳೆ ಭಾನುವಾರ ರಾತ್ರೆ ರೈಲಿನಲ್ಲಿ ಹೊರಟು ಸೋಮವಾರ ಬೆಳಿಗ್ಗೆ ಹಾಸನಕ್ಕೆ ಬಂದು ಅಲ್ಲಿಂದ...ಹಳ್ಳಿಗೆ ಬರುತ್ತೇವೆಂಬುದಾಗಿಯೂ ನಂತರ ಅಲ್ಲೇ ಲಗ್ನ ಸಂಬಂಧವಾದ ಸಂಭಾಷಣೆ ವಿನಿಮಯ ಮುಖೇನ ಫಲತಾಂಬೂಲ ಸ್ವೀಕಾರವನ್ನೂ ನಡೆಸಿ ನಂತರ ಸಾಯಂಕಾಲ ಪ್ರಯಾಣವೆಂಬುದಾಗಿಯೂ ತಿಳಿಸಿ ಈ ವಿಚಾರ ದೃಢಕ್ಕಾಗಿ ನನ್ನನ್ನು ಹಾಸನಕ್ಕೆ ಬಂದು ಟೆಲಿಫೋನ್ ನಂಬರ್ ಕಾಲ್ ಮಾಡುವುತೆಯೂ ತಿಳಿಸಿರುತ್ತಾರೆ. ಇವೆಲ್ಲಾ ಮಧ್ಯವರ್ತಿಗಳಾದ ತೀ...ಉಪಾಧ್ಯಾಯರ ಮುಖೇನ ತಿಳಿದ ವಿಚಾರ. ಅದರಂತೆ ಈಗ ನಾನು ಹಾಸನಕ್ಕೆ ಬಂದಿರುತ್ತೇನೆ. ಆದ್ದರಿಂದ ನೀವು ಖಂಡಿತ ಭಾನುವಾರ ಸಾಯಂಕಾಲ ಊರಿಗೆ ಬರಬೇಕು...ಬಂದು ಈ ಮುಹೂರ್ತ ಕಾರ್ಯ ನಡಸಲು ಸಮಾಲೋಚಿಸಿ ಉಭಯತ್ರರಿಗೂ ಅನುಕೂಲವಾಗುವಂತೆ ಸಹಕರಿಸುತ್ತೀರೆಂದು ನಂಬಿದ್ದೇನೆ. ಖಂಡಿತ ಉದಾಸೀನ ಮಾಡಲಾಗದು. ಈ ವಿಚಾರಗಳನ್ನೆಲ್ಲಾ ತೀ|| ಗಳವರಲ್ಲಿ ಅರಿಕೆ ಮಾಡಿದ್ದೇನೆಂದು ತಿಳಿಸಿರಿ. ಬಾಕಿ ವಿಚಾರ ಮುಖತಃ

ಇಂತು ಆಶೀರ್ವಾದಗಳು.

ಮನೆಯ ಸಮಾರಂಭಗಳಲ್ಲಿ, ವಿಶೇಷವಾಗಿ ವಿವಾಹ ಸಂದರ್ಭಗಳಲ್ಲಿ ಬಂಧುಗಳ ಸಹಕಾರ ಪಡೆಯುವುದು ಸಾಮಾನ್ಯ. ಸಮುದಾಯವು ದೂರದೂರದ ಸಂಬಂಧಗಳನ್ನು ಮಾಡಿಕೊಳ್ಳತೊಡಗಿದ ಮೇಲೆ ರೈಲು, ಫೋನುಗಳ ಬಳಕೆಯೂ ಜೊತೆಗೂಡಿತು. ಆಧುನಿಕತೆಗೆ ಒಗ್ಗಿಕೊಳ್ಳುತ್ತಿರುವ ಸಾಮಾಜಿಕ ಸಂದರ್ಭದ ಪತ್ರ.

೬೬

ಪಿತ್ರಾರ್ಜಿತವೇನಿದೆ ?

ಕನ್ಯಾಪಿತೃವಿನ ಪ್ರಶ್ನೆಗಳುಳ್ಳ ಕಾರ್ಡು

ಕುಶಲಂ ಶ್ರೀರಾಮ ಬೆಂಗಳೂರು

ದಿ| 25.3.81

...ನೀನು ಬರೆದಿರುವ ವರನ ಬಗ್ಗೆ ನನಗೆ ಏನೂ ವಿವರಗಳು ತಿಳಿಯದೆ ಅಪರಿಚಿತಸ್ಥರಿಗೆ ಮಧ್ಯಸ್ಥಿಕೆಯಿಲ್ಲದೆ ಹೇಗೆ ಬರೆಯಲಿ! ಹುಡುಗನಿಗೆ ಯಾವ ಇಲಾಖೆಯಲ್ಲಿ ಕೆಲಸ, ಕೆಲಸದ ಹೆಸರೇನು, ಸಂಬಳವೆಷ್ಟು ? ಆತನಿಗೆ ಅವಿವಾಹಿತ ಸಹೋದರ ಸಹೋದರಿಯರೆಷ್ಟು ಮಂದಿ ! ಪಿತ್ರಾರ್ಜಿತವೇನಿದೆ ? ಇತ್ಯಾದಿ ವಿವರಗಳು ನಿನಗೆ ತಿಳಿದಿರುವುದರಿಂದ ನೀನು ನನಗೆ ಕೂಡಲೆ ಕಾಗದ ಬರಿ. ಹುಡುಗಿ ಚೆನ್ನಾಗಿದೆಯೇ ಇಲ್ಲವೇ ಎಂಬುದನ್ನು ನಿರ್ಣಯಿಸುವವರು ಹುಡುಗನೇ ಅಥವಾ ತಾಯಿತಂದೆಗಳೇ ? ಹೇಗೇ ಆದರೂ ಹುಡುಗ ನೋಡಿದಲ್ಲದೆ ಆಗದು. ಆದುದರಿಂದ ಹುಡುಗನು ಬೆಂಗಳೂರಿಗೆ ಒಂದು ಭಾನುವಾರ ಬಂದು ಹುಡುಗಿಯನ್ನು ನೋಡಿಕೊಂಡು ಹೋದರೆ, ಆಮೇಲೆ ಮುಂದಿನ ಮಾತು. ಆ ರೀತಿ ಅವನು ಇಲ್ಲಿಗೆ ಬರುವಂತೆ ತಂದೆ ಮಗನಿಗೆ ಹೇಳುವಂತೆ ಮಾಡು...

ಹತ್ತಿರದ ಹಳ್ಳಿಗಳಲ್ಲೇ ಎಲ್ಲರೂ ನೆಲೆಸಿದ್ದು ವ್ಯವಸಾಯಾವಲಂಬಿಗಳಾಗಿದ್ದಾಗಿನ ಪ್ರಶ್ನಾವಳಿಗಳೂ, ಸಂಬಂಧ ಪ್ರಕ್ರಿಯೆಗಳ ರೀತಿ ನೀತಿಗಳೂ ಬೇರೆ ಇರುತ್ತಿದ್ದವು. ಸನ್ನಿವೇಶವನ್ನನುಸರಿಸಿ ಅವು ಬೇರೆಯಾಗುತ್ತವೆ. ಆದರೆ ಹೆಣ್ಣುಹೆತ್ತವರ ಮೂಲಭೂತ ಆತಂಕ ಒಂದೇ.

೬೭

ಭಾವೀ ಪತ್ನಿಯ ಬಗೆಗೆ

ಮದುವೆ ಗೊತ್ತಾದ ಯುವಕನು ತನ್ನ ಅಕ್ಕನಿಗೆ ಬರೆದಿರುವ ಪತ್ರ (ಕವರು). ಒಬ್ಬ ವ್ಯಕ್ತಿಯ ಸುತ್ತ ಇಡೀ ಕುಟುಂಬವು ಸಂಬಂಧಿಸಿರುವುದು

ನಗರ

16.9.82

ಪ್ರೀತಿಯ ಅಕ್ಕನಿಗೆ

...ಎಲ್ಲ ವಿಷಯಗಳೂ ನಿನಗೆ ತಿಳಿದಿವೆ. ನೀನು ಪತ್ರ ಬರೆದೇ ಬರೆಯುತ್ತೀಯೆಂದು ತಿಳಿದಿದ್ದೆ. ನಾನು ನಿನ್ನಲ್ಲಿಗೆ ಬರಬೇಕೆಂದು

ಪ್ರಯತ್ನಪಟ್ಟೆ. ಏನು ಮಾಡಲಿ? ಆಗಲಿಲ್ಲ. ಎಲ್ಲವೂ ಗಡಿಬಿಡಿಯಾಯ್ತು. ಇರಲಿ.

...ಅವಳೂ ನೀನೂ...ಹಳ್ಳಿಗೆ ಹೋಗಿ ಶ್ರೀ...ರವರ ಮಗಳನ್ನು ಮಾತಾಡಿಸಿಕೊಂಡು ಬಂದಿರಿ ಎಂದು ತಿಳಿಯಿತು. ನೀನು ಇಷ್ಟು ಮಾಡಿದ್ದು ನನಗೆ ಬಹಳ ಸಂತೋಷವಾಯ್ತು...ಮ್ಮನಿಗೆ ಬಹಳಷ್ಟು ಸಲ ಹೇಳಿದ್ದೆ, ಅಕ್ಕಣ್ಣಂಗೆ ಹೇಳು ಅಂತ. ನನ್ನ ಮಾತಿಗೆ ನಿನ್ನಿಂದ ಬೆಲೆ ಸಿಕ್ಕಿದ್ದು ಸಂತೋಷ. ಆದರೆ ಆಮೇಲೆ ನಿನ್ನ ಅನಿಸಿಕೆಯ ಪತ್ರವೇ ನನಗೆ ಬರಲಿಲ್ಲವೇಕೆ ? ನಿನಗೆ ಹೇಗನ್ನಿಸಿತು ? ನಿನ್ನ ರಾಮಗೆ ಸರಿ ಹೋಗ್ತಾಳಾ ? ನಾನು ಈಗಲೇ ಮದುವೆ ಬೇಡವೆಂದು ಡ್ರಾಪ್ ಮಾಡಿದ್ದೆ. ಅಣ್ಣನಿಂದ ಬಲವಂತ ಜಾಸ್ತಿಯಾಯ್ತು. ಹೇಗೋ, ಋಣಾನುಬಂಧ ಬಲ್ಲವರಾರು ? ನಾನೂ ಅದೇ ಹುಡುಗಿಯನ್ನು ಒಪ್ಪಿಕೊಂಡಂತೆಯೇ. ನನ್ನ ಅಕ್ಕ ತಂಗಿಯರಷ್ಟು ಚೆಲುವು ಅವಳಲ್ಲಿಲ್ಲವೆಂದು ನನ್ನ ಭಾವನೆ. ನಿಮಗೆ ಹೇಗೆ.

ಇದೆಲ್ಲದರ ಮಧ್ಯೆ...ಳ ಪ್ರಾಬ್ಲಮ್ ಕೂಡ ಬಹಳ ದೊಡ್ಡದಾಗಿದೆ. ಯಾರು ನೋಡಿದರೂ ಅವಳು ದಪ್ಪ ಅನ್ನುತ್ತಾರೆ. ಇಲ್ಲದಿದ್ದರೆ ನಮ್ಮೂರಿನ ಶಶಿಯೇ ಒಪ್ಪಿಕೊಳ್ಳುತ್ತಿದ್ದ. ಅದೂ ಅಲ್ಲದೆ...ಳಿಗೆ ಹೇಳಿದರೆ ಸ್ವಲ್ಪವೂ ಅರ್ಥವಾಗದು. ಅವಳು ಸ್ವಲ್ಪ ಎಕ್ಸೈಸ್ ಮಾಡಿದರೆ ಸರಿಹೋಗಬಹುದು. ಸರಿಯಾಗಿ ಓದುವುದೂ ಇಲ್ಲ. ಅದೇನು ಮಹಾ ಎನ್ನುವ ಧೋರಣೆ ಬೇರೆ. ಒಂದೆರಡು ವರುಷ ಕಳೆದರೆ ಅವಳು ಸಣ್ಣಾಗುವಳೆಂದು ನನ್ನ ನಂಬಿಕೆ. ಅದಕ್ಕೇ ಡಿಗ್ರಿಯನ್ನಾದರೂ ಮುಗಿಸು ಎಂದೆ. ಹೆಚ್ಚಿಗೆ ಹೇಳಿದರೆ ಕಣ್ಣೀರಿಡುತ್ತಾಳೆ. ನನಗಂತೂ ಇದೆಲ್ಲದರ ಪ್ರಾಬ್ಲಮ್ ನೆನೆಸಿಕೊಂಡರೆ ತಲೆ ಮೊಸರಾಗುತ್ತದೆ. ತಂದೆಯವರು ಬೇರೆ ಹಾರ್ಟ್ ಪೇಷಂಟ್ ಆಗಿದಾರೆ. ಮತ್ತೆ ಅಟ್ಯಾಕ್ ಆದರೆ ಅವರು ಬದುಕುವುದು ಕಷ್ಟ. ಅವರಿಲ್ಲದ ನನ್ನನ್ನು ನೆನಸಿಕೊಂಡರೆ ಜೀವನವೇ ಬೇಡವೆನಿಸುತ್ತದೆ. ಇದೆಲ್ಲದರ ನಡುವೆ.....ನದು ಬೇರೆ ಫಜೀತಿ. ಇದೆಲ್ಲವನ್ನೂ ಯಾರಿಗೂ ಹೇಳುವಂತೆಯೇ ಇಲ್ಲ. ಮನೆಯಲ್ಲಿ ಬೇರೆ...ರ ವಕ್ರದೃಷ್ಟಿ ನಮ್ಮ ಮೇಲೆ ಬಿದ್ದಿದೆ. ಅತ್ತಿಗೆಗೂ ಅಮ್ಮನಿಗೂ ಸರಿಹೋಗದು. ಎಲ್ಲಾ ಬರೀ ಪ್ರಾಬ್ಲಮ್‌ಗಳೇ ಆಯ್ತು. ಬಂದಿದ್ದೆಲ್ಲಾ ಬರಲಿಬಿಡು. ಹೃದಯ ಬಹಳ ಗಟ್ಟಿಯಾಗಿದೆ.

ಅಂದು ನೀನು...ನ ಹೇಗೆ ಕಾಲೇಜಿನಿಂದ ಬರಮಾಡಿಸಿಕೊಂಡೆ. ನಿನ್ನ ದೃಷ್ಟಿಯ ನೇರವಾದ ಕಾಮೆಂಟ್‌ಗಳನ್ನು ಆಶಿಸುತ್ತೇನೆ.

ಪತ್ರ ಬರೆ. ಇತಿ ನಮಸ್ಕಾರಗಳು

ಶಿವರಾಮು

೭೮

ಮಗಳಿಗೆ ವಿವಾಹ : ಕೊರಗು

ಮಗಳಿಗೆ ವಿವಾಹ ಮಾಡಲಾಗದ ಚಿಂತೆಯಲ್ಲಿರುವ ತಂದೆಯು ಇನ್ನೊಬ್ಬ ಮಗಳಿಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ: ಹಾಸನಜಿಲ್ಲೆಯ ಹಳ್ಳಿ

ತಾ. 20-9-82

ನೀನು...ಹಳ್ಳಿಗೆ ಹೋಗಿದ್ದೆಯಂತೆ. ಹುಡುಗಿ ನೋಡಿದೆಯಾ? ಈ ವಿಚಾರವನ್ನು (...ಹಳ್ಳಿಯವರು ಇಲ್ಲಿಗೆ ಬಂದದ್ದನ್ನು) ಮೊದಲೇ ನಿನಗೆ ತಿಳಿಸಿದ್ದೆ. ಅದಕ್ಕೆ ನೀನೂ ಸಹ ಮೆಚ್ಚುಗೆ ತೋರಿಸಿದ್ದೆ. ಈಗ ಹೇಳು. ಹೇಗಿದ್ದಾಳೆ. ನಿನ್ನ ಮನಸ್ಸಿಗೆ ಹಿಡಿಸಿತೆ ? ಚಿ||.... ಏನೋ ಪರವಾಗಿಲ್ಲ ಎಂದಳು. ಅವಳು ಹಬ್ಬ ಕಳೆದ 3 ದಿನಕ್ಕೆ ಹಳ್ಳಿಗೆ ಹೋಗಿಬಂದಳು... ನಿನ್ನ ಯಜಮಾನರು ಏನು ಹೇಳಿದರು. ನಿಮಗೆಲ್ಲಾ ಒಪ್ಪಿಗೆಯೇ ? ತಿಳಿಸು. ಮುಂದಿನ 27ನೇ ತಾ. ಸೋಮವಾರ...ಹಳ್ಳಿಯವರು ಇಲ್ಲಿಗೆ ಬರಬಹುದು. ಈವರವಿಗೂ ಅಪರಪಕ್ಷವಾದ್ದರಿಂದ ಈ ವಿಚಾರವನ್ನು ಯಾರಿಗೂ ಪತ್ರಮುಖೇನ ತಿಳಿಸಲಾಗಲಿಲ್ಲ. ನಾಳೆ ಸೋಮವಾರ ಅವರು ಲಗ್ನಾಂಗವಾದ ವಿಚಾರ ವಿನಿಮಯ ಮಾಡಬಹುದು. ಅಂತು ಇನ್ನೂ ತುಂಬಾ ದೂರವಿದೆ. ಮುಂದಿನ ಮಾಘಮಾಸದವರೆವಿಗೂ ಕಾಯಬೇಕು. ಅದೆಲ್ಲಾ ಸರಿ. ನನ್ನ ಚಿಂತೆ ಇನ್ನೂ ಹೆಚ್ಚಾಯಿತು. ಹುಡುಗಿಗೆ ಮಾಡಲಾಗಲಿಲ್ಲ. ನಂತರ ಹೇಗೋ ಏನೋ. ಅವಳಿಗೆ ಋಣಾನುಬಂಧವೇ ಇಲ್ಲವೇನೋ. ಅದೇ ಯೋಚನೆಯಾಗಿದೆ. ನಿಮ್ಮ ಯಜಮಾನರಿಗೆ ಯಾವುದಾದರೂ ಯೋಗ್ಯ ಸ್ಥಳ ತಿಳಿದಿದ್ದರೆ ತಿಳಿಸಲಿ ಹೇಳು. ಪತ್ರ ಬರದರೆ ಬರುತ್ತೇನೆ. ನಿನ್ನ ತಮ್ಮನಿಗೂ ಸಹ ಅದೇ ಯೋಚನೆಯಾಗಿದೆ. ಈಗಲೂ ಹುಡುಗ ಸಿಕ್ಕಿದರೆ ಮಾಡಿಬಿಡೋಣವೆಂದು ಹೇಳಿಹೋಗಿದ್ದಾನೆ. ಈ ವಿಚಾರವಾಗಿ ನಮ್ಮ ಪಕ್ಕದ ಮನೆ ಕೃಷ್ಣಪ್ಪನವರ ಮಗ ಗೋಪಿಗೆ ಕೊಡಬೇಕೆಂದು ಕೇಳಿದ್ದಕ್ಕೆ ಅವರು ಸಮ್ಮತಿಸಲಿಲ್ಲ. ಒಟ್ಟಿನಲ್ಲಿ ಹುಡುಗಿ ದಪ್ಪ ಎಂಬ ಸಂದೇಹ. ಅದಕ್ಕೆ ಏನೋ ಒಂದು ಕಾರಣ. ಯಾವುದೂ ತೋಚುತ್ತಿಲ್ಲ. ದೈವೇಚ್ಛೆ ಇದ್ದಂತಾಗಲಿ. ನಾನೇನು ಮಾಡಲಿ. ಸರಿ.

...ಈಗ ಮನೆಯಲ್ಲಿ ಜೋಳ ಮುರಿದಿದ್ದೇವೆ. ಸುಮಾರಾಗಿದೆ. ಕೆರೆಗೆ ನೀರಿಲ್ಲ. ಗದ್ದೆ ಬೆಳೆ ಸಾಮಾನ್ಯ.

ತೀ|| ನಿನ್ನ ಮಾವನವರಿಗೆ ನಮ್ಮ ಈ ಸಂಬಂಧದ ಬಗ್ಗೆ ಸೂಕ್ಷ್ಮವಾಗಿ ತಿಳಿಸಿರು. ಹಾಗೂ ನಮಸ್ಕಾರಗಳನ್ನು ತಿಳಿಸು...

ಕನ್ಯಾಪಿತೃಗಳ ಕೊರಗು ವಿಶೇಷವಾದುದು. ಅನೇಕ ಹೆಣ್ಣುಮಕ್ಕಳುಳ್ಳ ತಂದೆಗೆ ಅದು ಇನ್ನೂ ದೊಡ್ಡದು. ಬಡರೈತನೊಬ್ಬನ ವೇದನೆ ಈ ದೃಷ್ಟಿಯಿಂದ ಅನುಕಂಪನೀಯವಾದುದು. ಇಂಥ ಪತ್ರಗಳಲ್ಲಿ ಆನುಷಂಗಿಕವಾಗಿ ಅಪರ ಪಕ್ಷ ಇತ್ಯಾದಿ ಸಂದರ್ಭಗಳ ವಿಧಿ-ನಿಷೇಧ ಇತ್ಯಾದಿಯಾದ ಸಾಂಸ್ಕೃತಿಕ ವಿವರಗಳೂ ದೊರೆಯುತ್ತವೆ.

೬೯

ನಾನು ಏನೂ ಕೇಳದಾದೆ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ: ಹಾಸನ ಜಿಲ್ಲೆ

ತಾ. 10-10-82

..ಕಳೆದ ಸೋಮವಾರಕ್ಕೆ 8 ದಿನಗಳಲ್ಲಿ ನಿನಗೆ ಹಿಂದೆ ತಿಳಿಸಿದಂತೆ...ಹಳ್ಳಿಯವರು ಇಲ್ಲಿಗೆ ಬಂದಿದ್ರು. ನಮ್ಮ ಆತಿಥ್ಯ ಸ್ವೀಕರಿಸಿ ಲಗ್ನಾಂಗವಾದ ಮಾತುಕತೆಗಳ ಬಗ್ಗೆ ತಿಳಿಸಿದರು... ನಾನೇನೂ ಹೆಚ್ಚು ಹೇಳದೆ ನಿಮ್ಮ ಮಗಳಿಗೆ ಮಾಡಿಕೊಟ್ಟಂತೆ ಮಾಡಿಕೊಡಿರಿ ಎಂದದ್ದಕ್ಕೆ ಅವರು ಅದು ಅಕಾಲವೂ ಆಗಿಹೋಯಿತು. ಅದರಿಂದ ಉಪಯೋಗವಿಲ್ಲ. ಆಗ ನಾನು ಅವರಿಗೆ ಏನೂ ಕೊಡಲೇಇಲ್ಲ ಎಂದೆಲ್ಲಾ ಹೇಳಿ ತುಂಬಾ ಕೊರಗಾಡಿ ಒಂದು ಬಗೆ ದೈನ್ಯತೆಯಿಂದ ಹೇಳಿದರು. ಆಗ ನಾನು ಏನು ಮಾಡಲಿ. ನನಗೆ ಬಾಯೇ ಬರಲಿಲ್ಲ. ನಿಮ್ಮ ಇಷ್ಟದಂತೆ ಮಾಡಿ ಎಂದೆ. ಅದಕ್ಕೆ ಅವರು ನಮ್ಮ ಖರ್ಚಿಗೆ 10 ಸಾವಿರ ಕೊಡುವೆವೆಂದೂ 1 ಕೆ.ಜಿ. ಬೆಳ್ಳಿಪದಾರ್ಥ ಕೊಡುವೆವೆಂದೂ, ಇನ್ನು ಡ್ರೆಸ್ಸು, ವಾಚು, ಉಂಗುರಕ್ಕೆ ನೀವೇ ಕೊಳ್ಳಿರಿ ಹಣ ಕೊಡುವೆವೆಂದೂ, ವಾಹನಸೌಕರ್ಯ ಒದಗಿಸುವೆವೆಂದೂ ಹೇಳಿದರು. ಇಷ್ಟೆ ಅವರು ತಿಳಿಸಿದ್ದು. ನಾನು ಏನನ್ನೂ ಕೇಳಲಾರದವನಾದೆ. ಅವರ ಇಷ್ಟದಂತೆ ಮಾಡಲಿ. ಆದರೆ ಲಗ್ನಕಾಲ ಇನ್ನೂ 4-5 ತಿಂಗಳುಗಳಿವೆ. ಮುಂದಿನ ಫಾಲ್ಗುಣ ಮಾಸದಲ್ಲಿ, ಆ ವೇಳೆಗೆ ನಮ್ಮ ಹುಡುಗಿಗೂ ಎಲ್ಲಾದರೂ ಸಿಕ್ಕಿದರೆ ಜತೆಯಲ್ಲೇ ಮಾಡಬೇಕೆಂಬ ಹಂಬಲ...

...ಸದ್ಯಕ್ಕೆ ಸಾಮಾನ್ಯವಾಗಿ ಹದಮಳೆ ಬಂದಿದೆ. ಕೆರೆಗೆ ನೀರಿಲ್ಲ. ಜೋಳ ಎಲ್ಲಾ ಕೊಟ್ಟಾಯಿತು. ಕಳೆದ ವರ್ಷದ ಅರ್ಧದಷ್ಟಾಯಿತು...

'ಮದುವೆಯೋ ಮನೆಹಾಳೋ' ಎಂಬುದು ನಾಣ್ಣುಡಿಯಾಗಿದೆ. ವರೋಪಚಾರದ ವಿವರಗಳು ಆವರವರ ಆಸೆ, ಅಂತಸ್ತು, ಒತ್ತಡಗಳಿಗನು ಗುಣವಾಗಿ ಬದಲಾಗುತ್ತವೆ. ಶಾಸ್ತ್ರಾಚಾರಗಳ ಪ್ರಾಧಾನ್ಯ ಅಳಿದರೂ ಇವುಗಳ ಪ್ರಾಧಾನ್ಯವು ದೊಡ್ಡದೇ ಇರುತ್ತದೆ.

೭೦

ಸಹಾಯ ಕೋರಿದ ತಂದೆ

ಮಗನ ವಿವಾಹ ಗೊತ್ತಾಗಿದೆ. ಮಗಳಿಗೂ ಆಗಬೇಕು. ವರ ಗೊತ್ತಾಗಿಲ್ಲ. ವಿವಾಹ ಸಂಬಂಧಿತ ಸಿದ್ಧತೆಗಳ ಪೂರೈಕೆಗೆ ವಿವಾಹಿತಪುತ್ರಿಯ ಸಹಾಯ ಕೋರಿ ತಂದೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ: ಹಾಸನಸೀಮೆಯ ಹಳ್ಳಿ

ತಾ. 2-2-83

ಚಿ|| ಸೌ||...ನಿಗೆ ಆಶೀರ್ವಾದಗಳು.

...ಏನಮ್ಮಾ ಹೇಗಿದ್ದೀಯಾ ? ಹುಶಾರಾಗಿದ್ದೀಯ ! ನಿನ್ನ ಪುಟಾಣಿಗಳು ಚನ್ನಾಗಿದ್ದಾರಾ ? ನಾನು ಮೊನ್ನೆ...ಹಳ್ಳಿಗೆ ಹೋಗಿದ್ದೆ. ಆದರೂ ಅಲ್ಲಿಗೆ ಬರಲು ಆಗಲಿಲ್ಲ. ಕಾರಣ ಮುಂದೆ ತಿಳಿಸತೀನಿ. ಏನೂ ತಿಳಿಕೊಬೇಡ. ಏನೊ ಒಂದು ಉದ್ದೇಶ ಇಟ್ಟುಕೊಂಡು ಹೋಗಿದ್ದೆ. ಅದು ಆಗೊಹಾಗಾಗಲಿಲ್ಲ. ಹೋಗಲಿ ಬಿಡು. ಇನ್ನು ಕೊರಗಿ ಏನು ಪ್ರಯೋಜನ. ಸಧ್ಯ ಈಗ ಪ್ರಯತ್ನಪಟ್ಟಿರೋದನ್ನ ಮರ್ಯಾದೆಯಿಂದ ನಡಸಿ ಬಚಾವಾದರೆ ಸಾಕು. ಮುಂದೆ ನೋಡಿಕೊಳ್ಳೋದು. ಅದರಂತೆ ನಾಳೆ 14ನೆ ತಾರೀಖು ಲಗ್ನಪತ್ರಿಕೆ ಶಾಸ್ತ್ರ ಆಗಬೇಕು. ಅದಕ್ಕೆ ನೀನೂ ನಿನ್ನ ಯಜಮಾನರೂ ಬನ್ನಿ. ಬಹುಶಃ ನಿನ್ನ ತಮ್ಮನೂ ಬಂದರೂ ಬರಬಹುದು. ಗೊತ್ತಿಲ್ಲ. ಇಂದು ಕಾಗದ ಬರದಿದೀನಿ.

ಸರಿ. ಇನ್ನು ಇಲ್ಲಿ ಈ ವರ್ಷದ ಕಣದ ಕೆಲ್ಸ ಎಲ್ಲಾ ಮುಗೀತು. ಭತ್ತ ಏನೇನೂ ಆಗಲಿಲ್ಲ. ಬಾಕೀದೆಲ್ಲಾ ಕೊಂಚ ವಾಸಿ. ಈಗ ಮನೆಗೆ ಕೊಂಚ ರಿಪೇರಿ ಆಗತಾ ಇದೆ. ಮುಂದಿನ ಹಜಾರ, ಜಗಲಿ, ರೂಂಗಳು ಇದಕ್ಕೆಲ್ಲಾ ಸಿಮೆಂಟ್ ಹಾಕಿಸಿದೆ. ಒಂದು ಲೆಟ್ರಿನ್ ಕೆಲ್ಸ ಮಾಡತಾ ಇದ್ದೀವಿ. ಗುಂಡಿ ಆಗಿದೆ. ಬಾಕಿ ಎಲ್ಲಾ ಆಗಬೇಕು.

ಸರಿ ಇನ್ನೇನು. ನಿನ್ನ ಅಮ್ಮ ಸುಮಾರಾಗಿದ್ದಾಳೆ. ಈಗ 3 ದಿನ ರಜಾ. ಈ ಮಧ್ಯೆ ಕಳೆದ ಒಂದು ವಾರದ ಹಿಂದೆ ಮನೆಯವರೆಲ್ಲಾ ಮಲಗಿದ್ದೆವು (ಫ್ಲೂಜ್ವರ). ಕೆಮ್ಮು ಅಸಾಧ್ಯ. ತುಂಬಾ ತೊಂದರೆ ಆಗಿತ್ತಮ್ಮ. ಈಗ ಸ್ವಲ್ಪ ವಾಸಿ. ಮೊನ್ನೆ ಸಂಡಿಗೆ ಕೆಲ್ಸ ಕೊಂಚ ಮಾಡಿದ್ದಾಳೆ. ಚಿ||...ದೇ ಅಡಿಗೆ.

ಚಿ||ರಾ|| ನಿನ್ನ ತಮ್ಮನಿಂದ ಕಳೆದ ವಾರ ಕಾಗದ ಬಂದಿತ್ತು. ಅವನು ಸ್ಕೂಟರ್‌ನಲ್ಲಿ ಬಿದ್ದು ಸ್ವಲ್ಪ ಕಾಲು ಪೆಟ್ಟು ಮಾಡಿಕೊಂಡಿದ್ದಾನಂತೆ. ಏನೂ ಗಾಭರಿ ಇಲ್ಲಾಂತ ಬರದಿದ್ದನು. ಹೇಗಿದ್ದಾನೋ ಏನೋ ಒಂದೂ ಗೊತ್ತಿಲ್ಲಾ. ಎಲ್ಲಾ ಹುಡುಗಬುದ್ಧಿ. ಹೋಗಲಿ ಬಿಡು. ಒಟ್ಟನಲ್ಲಿ ನಮ್ಮ ಕರ್ತವ್ಯ ನಾವು ಮಾಡಬೇಕು.

...ಎರಡು ವಾರ ಮೊದಲೇ ಬಂದು ಇಲ್ಲಿ ಕೆಲ್ಸ ಕಾರ್ಯ ನೋಡಿಕೊಬೇಕಮ್ಮಾ. ನಿನ್ನ ಅಮ್ಮಂ ಕೈಲಿ ಏನೂ ಆಗೊಲ್ಲಾ. ಹಾಗೂ ನಿಂಗೆ ಬೇಕಾದ ಬಟ್ಟೇನೂ ತೊಗೋಬೇಕು. ಆಂ. ತಿಳೀತಾ ಸರಿ. ಮುಂದೆ ಮಾತಾಡೋಣ. ನಿನ್ನ ತೀ|| ಮಾವನವರು ಈಗ ಚನ್ನಾಗಿ ಹುಶಾರಾಗಿರಬಹುದು. ಚಿ|| ಗಳಿಗೆ ಆಶೀರ್ವಾದಗಳನ್ನು ತಿಳಿಸು.

ಇನ್ನೇನಮ್ಮ. ಬರಲಾ. ಆಂ. ಹುಂ. ಸರಿ. ಕಾಗದ ಬರೆ.

ಇಂತು ಆಶೀರ್ವಾದಗಳು

ಚಿ॥ರಾ॥...ರವರಿಗೆ ಅನಂತಾಶೀರ್ವಾದಗಳು. ನಂತರ ಈವರವಿಗೆ ಉ.ಕು. ಸಂಪ್ರತಿಗಳು. ...ಈಗ ಇದೇ ತಿಂಗಳು 14ನೇ ತಾ. ಸೋಮವಾರ ನಾವುಗಳು...ಹಳ್ಳಿಗೆ ಚಿ॥ ರಾ॥...ನ ಲಗ್ನಾಂಗವಾಗಿ ನಡಸಬೇಕಾದ ಪತ್ರಿಕಾ ಸಮಾರಂಭಕ್ಕೆ ಹೋಗಬೇಕಾಗಿದೆ. ಅದರಂತೆ ಅವರು ನಮಗೆ ತಿಳಿಸಿದ್ದಾರೆ. ಆದ್ದರಿಂದ ನೀವು ಖಂಡಿತಾ ಆ ದಿನಕ್ಕೆ ಚಿ॥ ಸೌ॥ ಪತಿಯೊಡನೆ ಅಲ್ಲಿಗೆ ಬರಬೇಕೆಂದು ಕೋರಿಕೆ...

ಪತ್ರದ ಆತ್ಮೀಯ ಶೈಲಿ, ಸರಳ ಸಹಜ ಭಾಷೆ ಗಮನಾರ್ಹವಾದುದು. ನೇರ ಸಂಭಾಷಣೆಯ ಅನುಭವ ಹಾಗೂ ಆಧುನಿಕ ಸಂದರ್ಭದ ಸಾಂಸಾರಿಕ ಚಿತ್ರ ಇಲ್ಲಿದೆ.

೭೧

ಭಾವೀ ಅಳಿಯನ ವಿವರ

ವಿವಾಹನಿಷ್ಕರ್ಷೆಯ ವಿವರ : ಮತ್ತೊಬ್ಬ ಅಳಿಯನಿಗೆ

ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ: ಹಾಸನ ಜಿಲ್ಲೆ

ತಾ. 29-3-83

...ನೆನ್ನೆ ನಿಮ್ಮಗಳ ಪ್ರಯಾಣ ಸುಖಕರವಾಗಿರಬಹುದು ಹಾಗೂ ನಾನು ನೆನ್ನೆ ಅಲ್ಲಿಗೆ ಬಂದಿದ್ದ ವಿಚಾರವೆಲ್ಲಾ ವೇದ್ಯವೇ ಆಗಿದೆ. ಅದರಂತೆ ರಾತ್ರೆ ಅವರಲ್ಲಿ ಎಲ್ಲರೊಡನೆ ಹೋಗಿ ಪ್ರಸ್ತಾಪ ಮಾಡಲಾಗಿ ಅವರೇನೋ ಸದಭಿಪ್ರಾಯ ಸೂಚಿಸಿದರು. ಜತೆಯಲ್ಲೆ ಕೆಲವು ಶರತ್ತುಗಳನ್ನೂ ತಿಳಿಸಿದ್ದಾರೆ. ಅದನ್ನು ಮುಂದೆ ತಿಳಿಸುತ್ತೇನೆ.

ಸಧ್ಯಕ್ಕೆ ಈಗ ನಮಗೆ ಬೇಕಾದ್ದು ಹುಡುಗನ ಯೋಗ್ಯತೆ, ಹಾಗೂ ಗುಣ. ಅದು ನನ್ನ ಮನಸ್ಸಿಗೆ ಹಿಡಿಸಿದೆ. ಏಕೆಂದರೆ ಅವರಲ್ಲಿ ಯಾವ ವಿಧವಾದ ದುಶ್ಚಟಗಳೂ ಇಲ್ಲವೆಂದು ಖಚಿತವಾಗಿದೆ ಹಾಗೂ...ಎಂ.ಎ.ಯಲ್ಲಿ ಉತ್ತೀರ್ಣನಾಗಿ ಖಾಯಂ ಕೆಲ್ಸ ನಿರ್ಧಾರವಾಗಿದೆಯೆಂದು ತಿಳಿಯಿತು. ಈಗ 1200 ರೂ. ಪಗಾರ ಸಿಗುತ್ತದೆಯಂತೆ. ಈ ಕಡೆ ತೋಟದಲ್ಲೂ ಉತ್ತಮ ವರಮಾನವಿರುವುದಾಗಿ ತಿಳಿಯಿತು. ಸಧ್ಯ ಆ ಮನೆಯ ಯಾಜಮಾನ್ಯವೆಲ್ಲಾ ಹುಡುಗನದೇಯಂತೆ. ಕಾರಣ ಅವರ ತಂದೆ ತಿಂಗಳಿಗೆ 25 ದಿನಗಳಿಗಿಂತಲೂ ಹೆಚ್ಚು ದಿನ ಹೊರಗಡೆಯೇ ಸಂಚಾರ. ಇದರ ಮೇಲೆ ಹುಡುಗನೂ ಸಹ ಆಚಾರವಂತನಾಗಿ ಆಧ್ಯಾತ್ಮಿಕ ಹಾಗೂ ಲೌಕಿಕ ಎರಡರಲ್ಲೂ ಸಮರಸವಾಗಿ ಹೊಂದಿಕೊಂಡಿದ್ದಾನಂತೆ. ಪ್ರಚಂಡವಾಗ್ಮಿ ಹಾಗೂ ಕಾಲೇಜ್ ಲೆಕ್ಚರರ್ (ಉಪನ್ಯಾಸಕ). ಹೀಗಿರುವುದರಿಂದ ನಾನು ಮನಸ್ಸು ಮಾಡದೆ ಹೇಗೆ ಇರಲಿ ? ಇದಕ್ಕೆ ಚಿ॥ ಶೈಲಳು ಸಮ್ಮತಿಸುವಳೆಂದು ನಂಬಿಕೆ. ಇರಲಿ. ಸಧ್ಯಕ್ಕೆ ಚಿ॥ಸೌ॥ ಶೈಲಳಿಗೆ ಅಡ್ಡಿಗೆ ದಿನಗಳಿವೆಯೆಂದು ತಿಳಿಯಿತು. ಅದು ಕೂಡಲೇ ಕಳೆದರೆ ಒಳ್ಳೆಯದು. ಏಕೆಂದರೆ ಅವರೇನೋ, "ನೀವು ಹುಡುಗಿಯನ್ನು... ಹಳ್ಳಿಗೆ ಕರೆದು ತನ್ನಿ (ನಿಮ್ಮ ಮಗಳ ಮನೆಗೆ) ನಾವು ನೋಡಿ ನಂತರ ತೀರ್ಮಾನ ತಿಳಿಸುತ್ತೇವೆ" ಎಂದರು. ಆದರೆ ನಾನು ಅದಕ್ಕೆ ಸಮ್ಮತಿಸಲಿಲ್ಲಾ. ಖಂಡಿತಾ ಸಾಧ್ಯವಿಲ್ಲಾ. ನೀವುಗಳು ಹುಡುಗನೊಡನೆ ಊರಿಗೇ ಬಂದು ನಿಮ್ಮ ಅಭಿಪ್ರಾಯ ತಿಳಿಸಿದರೆ (ಹಾಗೂ ಒಪ್ಪಿಗೆ ಕೊಟ್ಟರೆ) ನಂತರ ನಾನು ಅಲ್ಲಿಗೆ ಬೇಕಾದರೆ ಅಕ್ಕನ ಮನೆಗೆ ಕಳುಹಿಸಿಕೊಡುತ್ತೇನೆಂದು ಹೇಳಿದ್ದರಿಂದ, ಅದಕ್ಕನುಗುಣವಾಗಿ ಅವರು ಇದೇ ಬಹುಳ ದಶಮಿ ಗುರುವಾರ (ತಾ 7) ರಂದು ಶುಭದಿನವಾದ್ದರಿಂದ ಬರುವುದಾಗಿ ತಿಳಿಸಿದ್ದಾರೆ. ಅದು ತಪ್ಪಿದರೆ ಇನ್ನು ಯುಗಾದಿ ಕಳೆದು ಮುಂದೆ ಸಾಧ್ಯವಾದಾಗ ನೋಡಬೇಕೆಂದರು. ಹೀಗಿರುವಾಗ ಈ ವಿಚಾರ ಆದಷ್ಟು ಜಾಗ್ರತೆ ಇದಮಿತ್ಥವಾಗುವುದು ಒಳಿತಲ್ಲವೆ ? ಆದ್ದರಿಂದ ಹೇಳಿದೆ. ಈಗ ಅವಳಿಗೆ ಅಡ್ಡಿ ಕಳೆದಿದ್ದರೆ ಸರಿ. ಇಲ್ಲಾ ಕೂಡಲೇ ಕಳೆಯುವಂತೆ ಡಾಕ್ಟರ ಸಲಹೆ ಪಡೆದು ಔಷಧೋಪಚಾರ ಮಾಡಿಸುವುದು ಸೂಕ್ತ. ಅಂತು ಅವರು ಹೇಳಿದ ದಿನಕ್ಕೆ ಶುದ್ಧಿಯಾಗುವಂತೆ ಆಗಿ ಎಲ್ಲಾ ಸುಸೂತ್ರವಾದಲ್ಲಿ ನಮ್ಮ ಪುಣ್ಯ. ಹಾಗೂ ಅವರನ್ನು ಕರೆದುಕೊಂಡು ಬರಲು ಚಿ॥ ರಾ॥...ವರಿಗೆ ವಿಚಾರ ತಿಳಿಸಿ ಪತ್ರ ಬರೆಯಬೇಕಾದ್ದರಿಂದ ಕೂಡಲೆ ಅಂದರೆ ಈ ಪತ್ರ ತಲಪಿದ ಕೂಡಲೇ ನನಗೆ ವಿಚಾರ ತಿಳಿಸಿದರೆ ನಾನು ಅವರಿಗೆ ತಿಳಿಸಲು ಅನುಕೂಲವಾಗುತ್ತೆ. ಖಂಡಿತಾ ಕೂಡಲೆ ತಿಳಿಸಿರಿ...ಒಟ್ಟಿನಲ್ಲಿ ಈ ಸಂಬಂಧ ನಮಗೇನೊ ಹಿಡಿಸಿದೆ. ಮುಂದಿನದು ದೈವೇಚ್ಛೆ. ಪ್ರಯತ್ನ ನಮ್ಮದು. ಫಲಾಫಲ ದೈವಲೀಲೆ.

ಇನ್ನು ಅವರ ಶರತ್ತುಗಳು :

೧) ...ಹಳ್ಳಿಯಲ್ಲೇ ವಾಸ.

೨) ಕಾಲೇಜು ಸರ್ಕಾರಕ್ಕೆ ಸೇರುವವರೆಗೂ ಅಲ್ಲೆ ಕೆಲ್ಸ (ಅತ್ತೆ ತುಂಬಾ ಒಳ್ಳೆಯವರಂತೆ)

೩) ತಾಯಿ ತಂದೆಯವರ ಜತೆಯಲ್ಲಿ ಇರಬೇಕು (ಮನೆಯಲ್ಲಿ ತಂಗಿ ಒಬ್ಬಳು ವಿನಃ ಬೇರೆ ಯಾರೂ ಇಲ್ಲಾ)

೪) ಮನೆ ಯಾಜಮಾನ್ಯ ವಹಿಸುವ ಚೈತನ್ಯ ಇರಬೇಕು.

೫) ನಾವು ವರದಕ್ಷಿಣೆ ತೆಗೆದುಕೊಳ್ಳುವುದಿಲ್ಲ (ಆದರೆ ಸದ್ಯಕ್ಕೆ ನಮಗೆ ೫ ಸಾವಿರ ರೂ.ಗಳನ್ನು ಸಾಲ ರೂಪದಲ್ಲಿ ಕೊಡಬೇಕು. ಅದಕ್ಕೆ ಬಡ್ಡಿ ಇಲ್ಲದೆ ಎರಡು ವರ್ಷಗಳಲ್ಲಿ ಹಿಂದಿರುಗಿಸುತ್ತೇವೆಂದು.)

೬) ಸಭೆ ಒಪ್ಪುವಂತೆ ಕೊಡಬೇಕಾದ್ದನ್ನೆಲ್ಲಾ ಕೊಡಬೇಕು.

೭) ಸುರಕ್ಷಿತ ಪ್ರಯಾಣ ಸೌಲಭ್ಯ ಒದಗಿಸಬೇಕು.

೮) ಜ್ಯೇಷ್ಠಮಾಸದಲ್ಲಿ ವಿನಃ ಅದಕ್ಕೆ ಮುಂಚೆ ಸಾಧ್ಯವಿಲ್ಲಾ.

ಇನ್ನು ನಿಮ್ಮ ಮನೆಯಲ್ಲೇ ಕಾರ್ಯ ನಡೆಸಬಹುದು. ಹೀಗೆಂದು ಹೇಳಿದ್ದಾರೆ. ಆದರೆ ಇದೆಲ್ಲಾ ಸಾಧುವಾದದ್ದೇ. ಹೆದರುವ ಸಾಧ್ಯತೆಗಳೇನೂ ಇಲ್ಲ. ಅವರು ಎಲ್ಲ ರೀತಿಯಿಂದಲೂ ಸ್ಥಿತಿವಂತರಾಗಿ ನಮಗಿಂತಲೂ ಉತ್ತಮ ಜೀವನ ನಡಸುವವ ರಾಗಿದ್ದಾರೆ. ಈ ವಿಚಾರಗಳನ್ನೆಲ್ಲಾ ಚಿ|| ಸೌ|| ಶೈಲಳಿಗೆ ಹೃದಯಂಗಮವಾಗುವಂತೆ ಹೇಳುತ್ತೀರಾಗಿ ನಂಬಿದ್ದೇನೆ. ಆ ಮನೆಯಲ್ಲಿ ಎಲ್ಲ ತರದ ಸೌಲಭ್ಯಗಳೂ ಇವೆ. ಬಾಕಿ ವಿಚಾರ ಮುಖತಃ...

ನಿಷ್ಕರ್ಷೆಯ ಸನ್ನಿವೇಶದ ಒಂದು ಚಿತ್ರವನ್ನು ಈ ಪತ್ರವು ಕಲ್ಪಿಸಿಕೊಡುತ್ತದೆ.

೨೨

ಕನ್ಯಾನ್ವೇಷಣೆ

ಪತ್ನೀವಿಹೀನರಾದ ಗೃಹಸ್ಥರೊಬ್ಬರು, ತಮ್ಮ ಗಂಡುಮಕ್ಕಳಿಗಾಗಿ ಕನ್ಯಾನ್ವೇಷಣೆಗಾಗಿ ಬಂಧುಗಳಲ್ಲಿ ಪ್ರಾರ್ಥನೆ ಮಾಡಿದ ಪತ್ರ

ಕುಶಲ ಶ್ರೀ: ಶಿವಮೊಗ್ಗ ಜಿಲ್ಲೆ
12-9-85

...ಪ್ರಕೃತ ವಿಷಯ ಏನೆಂದ್ರೆ ಈಗ ನನ್ನ ಹಿರೀಮಗ ಚಿ|... ಇವನಿಗೆ ಕಲ್ಯಾಣ ನಡೆಸಬೇಕೆಂದು ಯೋಚಿಸಿದ್ದೇನೆ. ನಮ್ಮ ಮನೆ ಪರಿಸ್ಥಿತಿ ತಮಗೆ ವೇದ್ಯವಿದೆ. ಸತ್ಕುಲ ಪ್ರಸೂತದಲ್ಲಿ ಜನಿಸಿ ಇರತಕ್ಕಂಥಾ ವಧುವಿದ್ದರೆ ತಿಳ್ಸಿ. ನಿಮ್ಮ ಕಡೆ ಇದ್ದಲ್ಲಿ ನೋಡಿ. ನನ್ನ ಮಗನಿಗೆ 34 ವಯಸ್ಸು. ಎಂಎ., ಬ್ಯಾಂಕಿನಲ್ಲಿದ್ದು ಈಗ ಊರಲ್ಲಿ ವೇದಭಾಗಕ್ಕೆ ನಿಂತು ತೋಟಗಳನ್ನು ನೋಡಿ ಕೊಂಡಿರುತ್ತಾನೆ. ಮನೆಯಲ್ಲಿ ಸರ್ವ ಅನುಕೂಲವಿದ್ದರೂ ಅತಿಥಿ ಅಭ್ಯಾಗತರು ಬಂದಲ್ಲಿ ಆದರಿಸುವವರಿಲ್ಲದಂತೆ ಆಗಿದೆ... ಮನೆಯಲ್ಲಿ ನಾನು ನನ್ನ ಜ್ಯೇಷ್ಠಕುಮಾರ ಇಬ್ಬರು ಮಾತ್ರ ಇದ್ದೇವೆ. ಆದರೆ ಚಿ. ವಧು ಆರೋಗ್ಯವಾಗಿರಬೇಕು ಮತ್ತು ಮ್ಯಾನೆಜಿಂಗ್ ಕೆಪಾಸಿಟಿ ಬಹಳ ಚೆನ್ನಾಗಿರಬೇಕು. ವಯೋಮಿತಿ 23 ರಿಂದ 28ರವರೆಗೆ. ರೂಪು ಇರಬೇಕು. ವಿದ್ಯಾರ್ಹತೆ S.S.L.C. ಆಗಿದ್ದರೂ ಸಾಕು. ಸ್ಥಾನಮಾನಕ್ಕೆ ಈಗಿನ ಕಾಲದಂತೇ ಗೌರವದಿಂದ ಕಲ್ಯಾಣ ಮಾಡಿಕೊಟ್ಟರೆ ಸಾಕು. ಇಲ್ಲಿಯೇ ಬಂದು ನಡಸಿದ್ದಲ್ಲಿ ಹೋಗಿಬರುವ ಛಾರ್ಜನ್ನು ಕೊಡಬೇಕಾಗಿಲ್ಲ. ಒಟ್ಟಿನಲ್ಲಿ ಬಂಧುಗಳು ಅನೇಕ ತರಹ ಇರುವುದರಿಂದ ಕಲ್ಯಾಣ ಮಂಟಪ ಗಳಲ್ಲಿ ಮಾಡಿಕೊಟ್ಟರೆ ಸಾಕು. ನಮ್ಮ ಖರ್ಚುಗಳನ್ನು ಏನೂ ಕೊಡಬೇಕಾಗಿಲ್ಲ. ಒಳ್ಳೆ ನಡತೆ, ಒಳ್ಳೆ ಕುಲ, ರೂಪು ನಮ್ಮ ಮನೆ ಪ್ರೈವೇಟ್ ನೋಡಿಕೊಳ್ಳುವಂತಿರಬೇಕು. ಬಂದವಳೇ ಯಾಜಮಾನ್ಯ ವಹಿಸಬೇಕಾಗಿರುತ್ತೆ. ಯಾವ ಕೆಲ್ಸವನ್ನೂ ಮಾಡದೇ ಮಾಡಿಸುವ ಬುದ್ಧಿವಂತಿಕೆ ಇದ್ದರೆ ಸಾಕು. ನಮ್ಮ ಗೋತ್ರ...ಎಲ್ಲಾ ವಿಷಯವೂ ತಮಗೆ ತಿಳಿದೇ ಇದೆ. ತಾವು ಸ್ವಲ್ಪ ಶ್ರಮವಹಿಸಿ 4 ಕಡೆ ತಮಗೆ ತಿಳಿದಿರುವ ಮಟ್ಟಿಗೆ ನೋಡಿ ಈ ಕೂಡ್ಲೆ ಪತ್ರ ಬರೆಯಿರಿ. ಕಾರ್ತಿಕ ಮಾಸದಲ್ಲೇ ನಡಸಬೇಕೆಂದಿದ್ದೇನೆ. ತಮ್ಮ ಪತ್ರ ಬಂದ ನಂತ್ರ ನಾನೇ ಖುದ್ದು ಬಂದು ನೋಡಿ ಮುಂದಿನ ನಡವಳಿಕೆ ಬಗ್ಗೆ ಮುಖತಃ ಮಾತನಾಡುತ್ತೇನೆ...

ತಮ್ಮ ವಿವರ ಮತ್ತು ವಧುವಿನ ನಿರೀಕ್ಷಿತ ಅರ್ಹತೆಯ ವಿವರಗಳನ್ನು ಇಲ್ಲಿ ಕೊಟ್ಟಿದೆ. ಈ ವಿವರಗಳಲ್ಲಿ ಸೂಕ್ಷ್ಮ ವೈವಿಧ್ಯಗಳಿದ್ದೇ ಇರುತ್ತವೆ.

೨೩*

ಛತ್ರ ನೋಡಿ

16-12-79

ತಾ|| 25-2-1980ನೇ ಫಾಲ್ಗುಣ ಶುದ್ಧ ದಶಮಿ ಸೋಮವಾರ ವಿವಾಹಕ್ಕೆ ಪ್ರಶಸ್ತವಾಗಿದೆಯಂತ ವೇದಮೂರ್ತಿಗಳು ಅಪ್ಪಣೆ ಕೊಡಿಸಿದ್ದಾರೆ. ಈ ಮುಹೂರ್ತ ಬಿಟ್ಟರೆ ಈ ವರ್ಷದಲ್ಲಿ ಬೇರೆ ಲಗ್ನವಿಲ್ಲ.

ಆದ್ದರಿಂದ ಛತ್ರ ವಗ್ಯೆರೆ ಏರ್ಪಾಟುಗಳನ್ನು ಮಾಡುವ ಬಗ್ಗೆ ಪ್ರಯತ್ನಿಸಿ. ಈ ಬಗ್ಗೆ ಉಳಿದ ವಿಚಾರಗಳನ್ನು ಮುಖತಃ ತಿಳಿಸುವೆನು.

೨೪

ಸೂಕ್ತ ಲಗ್ನದ ನಿಷ್ಕರ್ಷೆ

ಅಂತರ್ದೇಶೀಯ ಪತ್ರ

कुशलम् श्री: ಬೆಂಗಳೂರು
10/3/80

...ಪ್ರಕೃತ, 28-4-80ಕ್ಕಿಂತ ಉತ್ತಮವಾದ ಲಗ್ನ ಇನ್ನೂ ನಾಕಾರು ತಿಂಗಳು ಇಲ್ಲವೆಂದು ಕಾಣುತ್ತದೆ.

ಇದರಲ್ಲಿಯೂ 1) ಬುಧನು ನೀಚರಾಶಿ, ನೀಚಾಂಶದಲ್ಲಿದಾನೆ. ಆದರೆ ಭಾಗಗಳನ್ನು ಲೆಕ್ಕ ಹಾಕಿದರೆ ನೀಚನಲ್ಲ.

2) ಗುರು ಕನ್ಯಾ ಜನ್ಮರಾಶಿಗೆ ಅಷ್ಟಮದಲ್ಲಿದಾನೆ.

3) ಚಂದ್ರ ನನ್ನ ಜನ್ಮರಾಶಿಗೆ ಅಷ್ಟಮದಲ್ಲಿದಾನೆ.

ಚಂದ್ರ, ರವಿ, ಗುರುಗಳ ತಾರಾಬಲ ಇಬ್ಬರಿಗೂ ಸಾಮಾನ್ಯವಾಗಿದೆ. ಇದೇನೂ ಪ್ರಶಸ್ತವಲ್ಲ. ಆದರೂ 3-4-80ಕ್ಕಿಂತ

ಉತ್ತಮ. ಏಕೆಂದರೆ ಅದು ನನ್ನ ಜನ್ಮಮಾಸದಲ್ಲಿ ಉಂಟಾಗುತ್ತದೆ. ಅಲ್ಲದೆ ಮೀನಚೈತ್ರ, ಬೃಹಸ್ಪತಿ ಸಿಂಹದಲ್ಲಿದ್ದು ಜನ್ಮರಾಶ್ಯಷ್ಟಮದಲ್ಲಿದ್ದಾನೆ. ಯಾವ ಗ್ರಹದ ತಾರಾಬಲವೂ ಯಾರೊಬ್ಬರಿಗೂ ಇಲ್ಲ.

ಅದರಿಂದ, ಇನ್ನಾವ ಅಡ್ಡಿಯೂ ಇಲ್ಲದಿದ್ದರೆ 28-4-80ರಂದು ನಡೆಸಬಹುದು. (ಕರ್ಕಾಟಕಲಗ್ನ-ಕನ್ಯಾ-ತುಲಾಂಶಗಳಲ್ಲಿ)

ನನಗಂತೂ ಗ್ರಹಣಾನಂತರ ಆರೋಗ್ಯ ಚೆನ್ನಾಗಿಲ್ಲ. ಇದೇ ದಿನ ಚಿ|| ಸೌ||...ಕಾಗದ ಬರೆದು ಚಿ|| ಸೌ|| ಮಗುವಿಗೆ ವಾಂತಿ, ಭೇದಿ ನಿಂತೇ ಇಲ್ಲ, ನನ್ನ ಬಿಟ್ಟರೆ ಬೇರೆ ಯಾರಿಗೂ ಮಗುವಿನ ಆರೋಗ್ಯ ಬೇಕಾಗಿಲ್ಲ. ಮಗುವನ್ನು ಸೌ||ಮಾ||ಶ್ರೀ|| ತಾಯಿಯವರ ಬಳಿಗೆ ಬಿಟ್ಟು ಬರುತ್ತೇನೆ ಎಂದು ಬರೆದಿದ್ದಾಳೆ. ಚಿ||ಸೌ|| ಮಗುವಿನ ಆರೋಗ್ಯವನ್ನು ಹೋಗಿ ನೋಡಿಕೊಂಡು ಬಂದರೆ ತಿಳಿಸಿ...ಚೈತ್ರ ಶುದ್ಧ ಪೂರ್ಣಿಮೆಯನ್ನು ಪರಿಶೀಲಿಸಬಹುದು. ರಜಾ ಕಷ್ಟ. ಹಸ್ತಾ ನಕ್ಷತ್ರ ಧೂಮಿತವಾಗುತ್ತದೆ.

ಹೀಗೆ ಲಗ್ನಗಳನ್ನು ಗೊತ್ತುಮಾಡುವ ಕ್ರಮವು ಮಾತ್ರ ಇಂದಿಗೂ ಬಹು ಪ್ರಚಲಿತವಾಗಿ ಮುಂದುವರಿದಿದೆ.

೭೫*

ಲಗ್ನಪತ್ರಿಕೆ; ಒಕ್ಕಣೆ

ಶ್ರೀಃ

ಪ್ರಸೀದತು ಶ್ರಿ ಲಕ್ಷ್ಮೀಕೇಶವಃ ||

ಸಶಂಖಚಕ್ರಂ ಸಕಿರೀಟಕುಂಡಲಂ
ಸಪೀತವಸ್ತ್ರಂ ಸರಸೀರುಹೇಕ್ಷಣಮ್ ।
ಸಹಾರವಕ್ಷಸ್ಥಲಶೋಭಿಕೌಸ್ತುಭಂ ।
ನಮಾಮಿ ವಿಷ್ಣುಂ ಶಿರಸಾ ಚತುರ್ಭುಜಮ್ ||

ಆದಿತ್ಯಾದಿಗ್ರಹಾಸ್ಸರ್ವೇ ಸನಕ್ಷತ್ರಾಸ್ಸರಾಶಯಃ ।
ಕುರ್ವಂತು ಮಂಗಳಂ ನಿತ್ಯಂ ಯಸ್ಯೈಷಾ ಲಗ್ನಪತ್ರಿಕಾ ||

ಹಾಸನಜಿಲ್ಲಾ.../ತಾಲ್ಲೂ/ಹೋಬಳಿ/ಗ್ರಾಮದಲ್ಲಿರುವ/ನವರ ಮಗ/ಮೂರ್ತಿಯೂ,/ತಾಲ್ಲೂಕು/ಹೋಬಳಿ/ಗ್ರಾಮದಲ್ಲಿರುವ/ ನವರ ಮಗ/ಅಪ್ಪನೂ ಸಹ ಮಾಡುವ ವಿಜ್ಞಾಪನೆಗಳು.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೮೯೭ಕ್ಕೆ ಸಲ್ಲುವ ಶ್ರೀರಾಕ್ಷಸನಾಮಸಂವತ್ಸರದ ಫಾಲ್ಗುನ ಶುಕ್ಲ ೭ ಸೋಮವಾರ (8-3-76) ಸೂರ್ಯೋದಯಾದಿ ಘಂ 9-46 ರ ಮೇಲೆ 9-58 ರ ಒಳಗೆ ಸಲ್ಲುವ ಶುಭ ಮೇಷ ಲಗ್ನದಲ್ಲಿ ಶ್ರೀಗಳ ಚತುರ್ಥ ಪುತ್ರ/...ಚಿ.ರಾ/...

ಶ್ರೀ/ರವರ ತಮ್ಮ/ಯ ದ್ವಿತೀಯ ಪುತ್ರಿ ಚಿ|| ಸೌ|| ಹ|| ಕುಂ|| ಶೋ/ಇವರ ವಿವಾಹವು/ತಾಲ್ಲೂ/ಹೋಬಳಿ/ಗ್ರಾಮದಲ್ಲಿ ನೆರವೇರುವಂತೆ ಗುರುಹಿರಿಯರು ಶ್ರೀ ಲಕ್ಷ್ಮೀಕೇಶವಸ್ವಾಮಿಯವರ ಪ್ರೇರಣೆಯಂತೆ ನಿಶ್ಚಯಿಸಿರುತ್ತಾರಾಗಿ ಈ ಶುಭಮುಹೂರ್ತಕ್ಕೆ ತಾವು ಕುಟುಂಬ ಪರಿವಾರ ಸಮೇತರಾಗಿ ದಯೆಮಾಡಿಸಿ ವಧೂವರರನ್ನು ಆಶೀರ್ವದಿಸಬೇಕಾಗಿ ಪ್ರಾರ್ಥಿಸುವ

ತಮ್ಮ ವಿಧೇಯರು

...ಮೂರ್ತಿ

...ಅಪ್ಪ

೭೬*

ಪುರೋಹಿತರಿಗೆ ಆಹ್ವಾನ

ಕುಶಲಂ ಶ್ರೀರಾಮ ಬೆಂಗಳೂರು

23-9-1972

ವೇ|| ಬ್ರ|| ಶ್ರೀ...ಉಪಾಧ್ಯಾಯರ ಸ||ಕ್ಕೆ...ನ ಅನಂತ ನಮಸ್ಕಾರಗಳು. ಅದಾಗಿ ಈವರಿಗೆ ಉಭಯಕುಶಲ. ಸಂಪ್ರತಿ.

ಅಲ್ಲಿ ತಾವೆಲ್ಲರೂ ಕುಶಲಿಗಳೆಂದು ನಂಬಿದ್ದೇನೆ. ಪ್ರಕೃತ ಇದೇ ಪರಿಧಾವಿ ನಾಮ ಸಂವತ್ಸರದ ಆಶ್ವಯುಜ ಶು|| ೧೩ ಶುಕ್ರವಾರ (20.10.72) ನನ್ನ ಎರಡನೆಯ ಮಗ ಚಿ||...ಗೆ ವಿವಾಹವು ನಡೆಯಬೇಕೆಂದು ಶ್ರೀ ಲಕ್ಷ್ಮೀಕೇಶವ ಪ್ರೇರಣೆಯಾಗಿರುವುದರಿಂದ ತಾವು ಈ ಶುಭಲಗ್ನಕ್ಕೆ ಕುಟುಂಬ ಪರಿವಾರ ಸಮೇತರಾಗಿ ದಯಮಾಡಿಸಿ, ನಮ್ಮ ಕಡೆಯ ಪೌರೋಹಿತ್ಯವನ್ನು ವಹಿಸಿ, ಲಗ್ನ ಬೆಳೆಸಿ, ವಧೂವರರಿಗಾಶೀರ್ವದಿಸಿ, ನನ್ನ ಅಲ್ಪ ಸಂಭಾವನೆಯನ್ನು ಸ್ವೀಕರಿಸಿ, ನಮಗೆಲ್ಲಾ ಸಂತೋಷವನ್ನುಂಟು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಲಗ್ನ ನಡೆಯುವ ಸ್ಥಳ...

ಶುಕ್ರವಾರ ಧನುರ್ಲಗ್ನವನ್ನಿಟ್ಟಿದೆ. 10½ ಗಂಟೆಯಿಂದ 12¾ ಗಂಟೆವರೆಗೆ ಲಗ್ನವಿದೆ. ಅದರಲ್ಲಿ 10½ ಯಿಂದ 12 ರವರೆಗೆ ರಾಹುಕಾಲವೂ ಇದೆ. ನಾವು ಪೂರ್ವದಿನವೇ ನಾಂದೀ ನವಗ್ರಹಾದಿಗಳನ್ನು ಮಾಡಿಕೊಳ್ಳಬೇಕೆ ? ಯಾವುದಕ್ಕೂ ತಾವು ಬುಧವಾರ ಸಾಯಂಕಾಲ ಇಲ್ಲಿಗೆ ಬಂದರೆ, ಮುಂದಿನ ಕಾರ್ಯಕ್ರಮಗಳನ್ನು ಯೋಜಿಸಿಕೊಳ್ಳಲು ಅನುಕೂಲವಾಗುತ್ತದೆ. ಅಚ್ಚಾದ ಲಗ್ನಪತ್ರಿಕೆಗಳು ನಿಧಾನವಾಗಿ ಬರುತ್ತವೆ. ಯಾವುದಕ್ಕೂ ತಮ್ಮ ಕಾಗದದ ನಿರೀಕ್ಷಣೆಯಲ್ಲಿದ್ದೇನೆ.

ಲಗ್ನಪತ್ರಿಕೆಗಳು ಅಚ್ಚಾಗುವ ಪದ್ಧತಿ ಬರುವ ಮೊದಲು ಪತ್ರಮುಖೇನ ಆಹ್ವಾನವು ತಲಪುತ್ತಿದ್ದ ಮಾದರಿ ಇದು. ಲಗ್ನ ಕಾಲವು ಅಲ್ಪ

ಅವಧಿಯದಾದಾಗಲೋ, ಬೆಳಗ್ಗೆ ಬೇಗ ಲಗ್ನ ಇಟ್ಟಿರುವಾಗಲೋ ನಾಂದೀ ನವಗ್ರಹಾದಿಗಳನ್ನು ಮುನ್ನಾದಿನವೇ ಮಾಡಿಕೊಳ್ಳುವುದು ಲಗ್ನ ಸಾಧಿಸಲು ಅನುಕೂಲವಾಗುವಂತೆ ಮಾಡಿಕೊಂಡ ಒಂದು ಏರ್ಪಾಟು. ರಾಹುಕಾಲದಲ್ಲಿ ನಂಬಿಕೆಯೂ ಇವರಿಗಿದೆ. ಹತ್ತಿರದ ಬಂಧುಗಳಿಗೆ ಇಂಥ ವೈಯಕ್ತಿಕ ಆಹ್ವಾನಗಳಲ್ಲದೆ ಮುದ್ರಿತ ಪತ್ರಿಕೆಗಳೂ ತಲಪುತ್ತವೆ.

೨೭

ಪೂರ್ವಭಾವೀ ಅಗತ್ಯಗಳು

ಪುರೋಹಿತರನ್ನು ನಿರ್ಧರಿಸಿಕೊಳ್ಳುವುದು ಮತ್ತು ಇತ್ತೀಚೆಗೆ ಛತ್ರವನ್ನು ಗೊತ್ತುಮಾಡಿಕೊಳ್ಳುವುದು ವಿವಾಹದ ಪೂರ್ವಭಾವೀ ಅಗತ್ಯಗಳು ; ಪುರೋಹಿತರಿಗಾಗಿ ಬರೆದ ಕಾರ್ಡು

ಕುಶಲಂ ಶ್ರೀಃ ಬೆಂಗಳೂರು

ತಾ। 5.6.82

ಚಿ।।ಗೆ ಆಶೀರ್ವಾದಗಳು. ಉ.ಕು.ಸಂ.

ಪ್ರಕೃತ ಚಿ।।...ಳಿಗೆ ವರ ಗೊತ್ತಾಗಿ ತಾ 28-1-82 ರಂದು ಇದೇ ಮಲ್ಲೇಶ್ವರದಲ್ಲಿರುವ ಕೆನರಾ ಯೂನಿರ್ಯ ಕಲ್ಯಾಣ ಮಂದಿರದಲ್ಲಿ ವಿವಾಹ ನಡೆಸುವುದೆಂದು ಭಗವತ್ಕೃಪೆಯಿಂದ ಸಂಕಲ್ಪ ಮಾಡಲಾಗಿದೆ. ಈ ಬಗ್ಗೆ ಅಚ್ಚಾದ ಲಗ್ನಪತ್ರಿಕೆಯನ್ನು ಕಳುಹಿಸಿದ್ದೇನೆ. ನೀನು ಚಿ।। ಸೌ।। ಗಳೆಲ್ಲರನ್ನೂ ಕರೆದುಕೊಂಡು ಬಂದು ಲಗ್ನ ಬೆಳೆಸಿ ವಧೂವರರಿಗಾಶೀರ್ವದಿಸ ಬೇಕಾಗಿರುವುದರಿಂದ ಉದಾಸೀನ ಮಾಡದೆ ಎಲ್ಲರೂ ಬರುವುದು.

...ನಾನು ಈಗ ಸುಮಾರು 8 ದಿನಗಳ ಕೆಳಗೆ ರಿಪ್ಲೈಕಾರ್ಡು ಬರೆದು ವೇ।।... ಉಪಾಧ್ಯಾಯರನ್ನು ಮದುವೆಗೂ ಪೌರೋಹಿತ್ಯಕ್ಕೂ ಆಹ್ವಾನಿಸಿದೆ. ಅವರಿಂದ ಈವರೆಗೂ ಉತ್ತರ ಬರಲಿಲ್ಲ, ಆದುದರಿಂದ ನೀನು ನನಗೋಸ್ಕರ ತೊಂದರೆ ತೆಗೆದುಕೊಂಡು ಅವರನ್ನು ಖುದ್ದಾಗಿ ಕಂಡು, ಅವರು ಬರುತ್ತಾರೆಯೇ ಇಲ್ಲವೇ ಎಂಬುದನ್ನು ತಿಳಿದು, ಮರುಟಪ್ಪಾಲಿಗೇ ಜವಾಬು ಬರೆಯಬೇಕು. ಅವರು ಯಾವುದೇ ಕಾರಣದಿಂದ ಬರುತ್ತಿಲ್ಲವೆಂದಾದರೆ, ಅಲ್ಲಿಂದ ಬೇರೆ ಯಾರಾದರೂ ಪೌರೋಹಿತ್ಯಕ್ಕೆ ಬರತಕ್ಕವರಿದ್ದರೆ ತಿಳಿಸು. ಅವರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸುತ್ತೇನೆ. ಇದು ತುಂಬಾ ತುರ್ತಾದ ವಿಷಯ. ಆದುದರಿಂದ ನನಗೆ ಮರು ಟಪ್ಪಾಲಿಗೇ ಜವಾಬು ಬರಿ.

ಚಿ।।...ಗೆ ಅಲಾಹಿದಾ ಲಗ್ನಪತ್ರಿಕೆ ಕಳುಹಿಸಿರುತ್ತೇನೆ. ಎಲ್ಲರೂ ಖಂಡಿತಾ ಬರುವುದು. ಇತ್ಯಾಶಿಷಃ.

೨೮*

ಲೋಪ : ಪೇಚಾಟ

ವರನ ತಂದೆಯು, ವಿವಾಹದ ಸಂದರ್ಭದಲ್ಲಿ ಆಗಿರಬಹುದಾದ ಲೋಪಕ್ಕಾಗಿ ಬಂಧುವೊಬ್ಬರಲ್ಲಿ ಪೇಚಾಡಿಕೊಂಡಿರುವ ಕಾರ್ಡು

ಕುಶಲಂ ಶಿವಂ ಭವತು ಶಿವಮೊಗ್ಗ ಜಿಲ್ಲೆ

29.4.64

...ಪ್ರಕೃತ ತಮ್ಮಗಳ ನೇತೃತ್ವದಲ್ಲಿ ಶುಭಕಾರ್ಯವನ್ನು ಆಗಮಾಡಿಸಿ ಸಹಕರಿಸಿದ ಬಗ್ಗೆ ನಾವುಗಳು ತುಂಬಾ ಸಂತೋಷಿಸುತ್ತೇವೆ. ಆದರೆ ನಾವು ವಾಪ್ಸು ಪ್ರಯಾಣ ಹೊರಡುವ ಆತುರದಲ್ಲಿ ಬಂಧುಗಳನ್ನು ಸತ್ಕರಿಸುವಾಗ ನಮಗೆ ಸಮಯ ಸಾಲದೆ ಅಲ್ಲಿನ ನಮ್ಮ ಬೀಗರ ಕಡೆಯ ಆಪ್ತ ಬಂಧುಗಳಲ್ಲಿ ಯಾರನ್ನು ಸತ್ಕರಿಸಿದೆವೋ ಯಾರನ್ನು ಸತ್ಕರಿಸಲಿಲ್ಲವೋ ಅರ್ಥವಾಗುತ್ತಿಲ್ಲ. ನಮಗೆ ಬಿಡಾರವಾಗಿ ಇಳಿದುಕೊಂಡಿದ್ದ ಮನೆಯವರು ವೇ।।...ಬಾಧ್ಯಾರು ಅವರಿಗೇ ತಾಂಬೂಲ ಕೊಟ್ಟ ನೆನಪಿಲ್ಲ ಹಾಗೂ ಅಲ್ಲಿ ಕಿಷ್ಕಿಂದವಾದ ಕಾರಣ ಇನ್ನೊಂದು ಮನೆಯಲ್ಲಿ ಒಂದು ರೂಮು ಸಾಮಾನು ಇಟ್ಟುಕೊಳ್ಳಲು ಅಣಿ ಮಾಡಿಕೊಟ್ಟಿದ್ದರು. ಅವರಿಗೆ ನಮ್ಮಿಂದ ತುಂಬಾ ಕಿರುಕುಳ ವಾಗಿರಬಹುದು. ಅವರ ಮನೆಯ ಕೆಲವು ವಸ್ತುಗಳೂ ಬೆರೆತು ಬಂದಿದೆ. ಅದನ್ನೇನೋ ವಾಪ್ಸು ಮಾಡುತ್ತೇವೆಯಾದರೂ ತಾಂಬೂಲ ಕೊಟ್ಟು ಸತ್ಕರಿಸದೆ ಬಂದೆವು. ದಯಮಾಡಿ ನನ್ನ ನಮಸ್ಕಾರವನ್ನು ಅವರಿಗೆ ಹೇಳಿ. ಹಾಗೂ ಬೀಗರ ಆಪ್ತ ಬಂಧುಗಳ ಪರಿಚಯವೇ ಪ್ರಥಮತಃ ಆಗಿಲ್ಲ. ಆದರೂ ವಿವೇಚಿಸಿ ಸತ್ಕರಿಸಬೇಕಿತ್ತು. ಈ ವಿಷಯವಾಗಿ ಬೀಗರಿಗೆ ದಯಮಾಡಿ ಕ್ಷಮಿಸಬೇಕಂತ ನನ್ನ ಪರವಾಗಿ ಹೇಳುತ್ತೀರಾಗಿ ನಂಬಿರುತ್ತೇನೆ...

ಹಳ್ಳಿಗಳಲ್ಲಿ ವಿವಾಹವಾಗುವಾಗ ಗ್ರಾಮದ ಯಾವುದಾದರೂ ಮನೆಗಳಲ್ಲೇ ವರನ ಕಡೆಯವರಿಗೂ ಬಿಡಾರದ ವ್ಯವಸ್ಥೆ ಮಾಡಿರುತ್ತಾರೆ. ಗ್ರಾಮದ ಜನಗಳೂ ಒಂದು ಮನೆಯವರಂತೆ ಓಡಾಡುತ್ತಾರೆ. ಅಂಥ ನೆರವು ಮಾಡಿದವರಿಗೆ 'ತಾಂಬೂಲ'ಗಳನ್ನು ಕೊಡುವ ಮೂಲಕ ಕೃತಜ್ಞತೆಯನ್ನರ್ಪಿಸುತ್ತಾರೆ.

೨೯*

ಪುಷ್ಪವತಿಯಾದ ವಿಚಾರ (ಅಳಿಯನಿಗೆ ಬರೆದ ಕಾರ್ಡು)

ಕುಶಲಂ ಶ್ರೀಃ ತಾ। 16.2.30

ಮಲ್ಲರಾಜಪಟ್ಣ

ಆಶೀಃ ಉ.ಕು.ಸಂ.

ಈ 4-3 ಭಾನುವಾರದ ಪ್ರಾತಃಕಾಲ 8 ಘಂಟೆ ಸಮಯದಲ್ಲಿ ಚಿ। ಸೌ। ಹ। ಕುಂ ಶೋಭಿತಳಾದ ರಾಮಲಕ್ಷ್ಮಮ್ಮನು ಪುಷ್ಪವತಿಯಾಗಿದಾಳೆಂದು ತಿಳಿಸಲು ಸಂತೋಷಿಸುತ್ತೇನೆ. ಇದೇ

ವಿಚಾರವನ್ನು ನಿಮ್ಮ ಸರಗೂರು ಭಾವನವರಿಗೂ ತಿಳುಹಿಸಿದೇನೆ. ಅತಿಶಯವಿಲ್ಲ. ಇತ್ಯಾಶೀರ್ವಾದಾಃ

೮೦

ಪುಷ್ಪವತಿ : ಕಾಲದ ವಿವರ (ಕವರು)

ಕ್ಷೇಮ ಶ್ರೀ ತಾ 5-9-35

ಮಹಾರಾಜೇ ಶ್ರೀ...ಹಳ್ಳಿಯ...ನವರ ಮಕ್ಕಳೂ ಹಾಸನದ ಮಿಡ್ಲ್ ಸ್ಕೂಲ್ ಮಾಷ್ಟರ್...ರವರಿಗೆ...ಹಳ್ಳಿಯ...ಯ್ಯನು ಮಾಡೂವ ನಮಸ್ಕಾರಗಳು. ಅದಾಗಿ ಇವರೀಗೆ ಇಲ್ಲಿ ಇರೂವಂತ್ಹಾ ಚಿ|| ಆದಿಯಾಗಿ ಸರ್ವ್ವರೊಡನೆ ನಾನೂ ಕ್ಷೇಮ. ಅಲ್ಲಿ ತಮ್ಮ ಮನೆಯಲ್ಲಿ ಸರ್ವ್ವರೊಡನೆ ತಮ್ಮ ಕ್ಷೇಮಲಾಭಂಗಳಿಗೆ ಆಗಿಂದಾಗ್ಯೆ ಕುಶಲಪತ್ರಿಕ ಬರಸುತ್ತಾ ಬರಬೇಕು ಸಾಂಪ್ರತ...

ಇದೆ ಭಾದ್ರಪದ ಶುದ್ಧ ಸಪ್ತಮಿ ಗುರುವಾರ ಚಿ|ಸೌ|...ಮ್ಮನು ಸೂರ್ಯೋದಯವಾದ ಆರು ಘಳಿಗೆ ಸಮಯಕ್ಕೆ ಸರಿಯಾದ ಕನ್ಯಾಲಗ್ನದಲ್ಲಿ ಪುಷ್ಪವತಿ ಆಗಿರುತ್ತಾಳೆ.

ಇತಿ ನಮಸ್ಕಾರಗಳು

ಪುಷ್ಪವತಿಯಾದ ಹೆಣ್ಣಿನ ಬಗೆಗೆ 'ಒಸಗೆ' ಕಳಿಸುವ ಜಾಗದಲ್ಲಿ ಬಂದ ಪತ್ರರೂಪವಿದು. ಹೆಣ್ಣು, ಪುಷ್ಪವತಿಯಾಗುವ ಮೊದಲೇ ವಿವಾಹ ; ಪುಷ್ಪವತಿಯಾದ ವಿಷಯವು ದೂತರ ಮೂಲಕ ಬೀಗರಿಗೆ ಮುಟ್ಟುವುದು ; ಅನಂತರ ನಿಷೇಕ ಪ್ರಸ್ತ ಸಮಾರಂಭ- ಇದು ಒಂದು ಕಾಲದ ಕ್ರಮವಾಗಿತ್ತು. ಈಗ ಹೆಣ್ಣಿಗೆ ೧೮ ವರ್ಷಗಳು ಕಳೆದೇ ವಿವಾಹವಾಗುತ್ತದೆ. ಆದರೂ ಆಕೆಯು ಪುಷ್ಪವತಿಯಾದಾಗಿನ ಆಚರಣೆಯು ವಿಶೇಷವಾಗಿ ಹಳ್ಳಿಗಳಲ್ಲಿ ಉಳಿದು ಬಂದಿದೆ. ಪತ್ರಕ್ಕೆ ಅರಿಶಿನ ಹಚ್ಚಿದೆ.

೮೧

ತಂಗಿಯ ಸೀಮಂತಕ್ಕೆ (ಗೆಳೆಯನನ್ನು ಆಹ್ವಾನಿಸಿರುವ ಕಾರ್ಡು)

ಕ್ಷೇಮ ಶ್ರೀ: ಮಧ್ಯದೇಶದಹಳ್ಳಿ
5-11-35

ಮ||...ನವರಿಗೆ ವಿಜ್ಞಾಪನೆಗಳು. ಉ.ಕು. ಸಂಪ್ರತಿ. ಇಲ್ಲಿ ಸರ್ವರೂ ಕ್ಷೇಮ. ನಿನ್ನ ಸುಕ್ಷೇಮಾತಿಶಯಂಗಳಿಗೆ ಕಾಗದ ಬರೆಯುವುದು.

ಇದೇ ಕಾರ್ತೀಕ ಶುದ್ಧ ತ್ರಯೋದಶಿ ಶುಕ್ರವಾರ ನನ್ನ ತಂಗಿ ಸೌಭಾಗ್ಯವತಿ...ಮ್ಮನಿಗೆ ಸೀಮಂತ ಪ್ರಸ್ತವನ್ನು ಹಿರಿಯರು ನಿಶ್ಚಯಿಸಿರುವದ್ದರಿಂದ ನೀನು ಆ ದಿವಸಕ್ಕೆ...ಗೂ ಬರುವಂತೆ ಹೇಳಿ ನೀನೂ ಖಂಡಿತಾ ಬರುವುದು. ಇನ್ನೇನೂ ವಿಶೇಷವಿಲ್ಲ. ಇತಿ ವಿಜ್ಞಾಪನೆಗಳು.

ಗೆ ವಿಳಾಸ : ಮೈಸೂರಿಗೆ
ಮಹಾರಾಜಾ ಕಾಲೇಜು ವಿದ್ಯಾರ್ಥೀ
ಹಳ್ಳಿಯ...ನಿಗೆ
ರೂಮ್ ನಂಬರ್...

ದೇವನಾಗರಿ ಲಿಪಿಯು ಕಿಂಚಿತ್ತಾದರೂ ಬಳಕೆಯಾಗುವುದು ಸಂಸ್ಕೃತವನ್ನು ಕಲಿತವರಲ್ಲಿ. ಅದು ಸಹಜವಾದುದು. ಇಂಗ್ಲಿಷ್ ಕಲಿತವರು ಇದೇ ಮಾದರಿಯಲ್ಲಿ ಆ ಭಾಷೆಯನ್ನು ಬಳಸಿಕೊಳ್ಳುತ್ತಾರೆ. ಮಾತೃಭಾಷೆಯಲ್ಲದ, ಕಲಿತ ಭಾಷೆಯು ಹೀಗೆ ಬಳಕೆಗೊಳ್ಳುವ ಮೂಲಕ, ವ್ಯಕ್ತಿಯು ತಾನು ವಿಶೇಷವೆಂದು ಪ್ರಕಟಿಸಿಕೊಳ್ಳುವ ಕೆಲಸ ನಡೆಯುತ್ತದೆ. ಆಗಿನ 'ಗೆ' ವಿಳಾಸದ ಮಾದರಿಯನ್ನು ಗಮನಿಸಬಹುದು. ಪತ್ರಕ್ಕೆ ಅರಿಶಿನ ಹಚ್ಚಿದೆ.

ಗುಚ್ಛ - 4

ವ್ಯವಸಾಯ-ಉದ್ಯೋಗ

ಸಂಕೇತಿಗಳ ಪಾರಂಪರಿಕ ವೃತ್ತಿ ತೋಟಗಾರಿಕೆ. ವ್ಯವಸಾಯದಲ್ಲಿ ವ್ಯಾಪಕರಾದ ಅವರು ೨೦ನೆ ಶತಮಾನದ ಆರಂಭದ ದಶಕಗಳಲ್ಲಿ ನವೀನವಿದ್ಯೆ ಪಡೆದು ನೌಕರಿಗಳಲ್ಲಿ ತೊಡಗಿಕೊಂಡರು. ಇಲ್ಲಿರುವ ಪತ್ರಗಳು ಕಾಲಾನುಕ್ರಮದಲ್ಲಿಯೇ ಇವೆ. ವ್ಯವಸಾಯ ಮತ್ತು ನೌಕರಿಗೆ ಸಂಬಂಧಿಸಿದ ಪತ್ರಗಳು ಬೆರೆತಿವೆ. ಅವು ತಮ್ಮಷ್ಟಕ್ಕೇ ಪರಿವರ್ತನಶೀಲ ಸ್ಥಿತಿಯೊಂದನ್ನು ತೋರಿಸುತ್ತವೆ.

೮೨

'ದೂರಪ್ರಾಂತ'ದಿಂದ

ಅಳಿಯನು ಮಾವನಿಗೆ ಬರೆದ ಯೋಗಕ್ಷೇಮದ ಕಾರ್ಡು

ಕ್ಷೇಮ ಶ್ರೀ ತಾ। 29.7.1926

ವಿಠಲಾಪುರ

ತೀ। ಮಾವನವ್ರು ದಿವ್ಯ ಚರಣಸನ್ನಿಧಿಯಲ್ಲಿ ಬಾಲ್ಕನ ವಿಜ್ಞಾಪನೆಗಳು. ಅದಾಗಿ ಈವರೆಗೆ ಕ್ಷೇಮ. ಸಂಪ್ರುತಿ.

ನೀವು ಬರೆದ ಕಾರ್ಡು ಬಂದು ತಲ್ಪಿ ಅಭಿಪ್ರಾಯವಾಯ್ತು. ಈ ಕಡೆಯೂ ಮಳೆ ಸಾಮಾನ್ಯಾಗಿ ಆಗಿದೆ. ಅಲ್ಲಿ ರುದ್ರಪಟ್ನ ಆ ಪ್ರಾಂತ್ಯ ಪ್ಲೇಗು ಗಲಾಟೆ ಇದೆಯೆಂತ ವರ್ತಮಾನ ಕೇಳಿರುತ್ತೇನೆ, ನಿಜವೆ. ಮತ್ತು ರುದ್ರಪಟ್ನದಲ್ಲಿ ತೀ।। ಮಾವನವ್ರುಗಳ ಮನೆಯಲ್ಲಿ ಎಲ್ಲರ ಆರೋಗ್ಯಕ್ಕೂ ಮತ್ತು ನಿಮ್ಮ ಮನೆಯಲ್ಲೂ ಸರ್ವರ ಆರೋಗ್ಯಕ್ಕೂ ಕೂಡ್ಪೆ ಬಾಲಕನ ಮೇಲೆ ಕೃಪೆಯಿಟ್ಟು ಆಶೀರ್ವಾದ ಪತ್ರಿಕಾ ಅಪ್ಪಣೆ ಕೊಡಿಸಬೇಕು. ಇದುವರೆಗೂ ಅಲ್ಲಿನ ಯೋಗಕ್ಷೇಮವೆ ತಿಳಿಯದೆ ಒಂದು ವರುಷದಾರಭ್ಯ ತುಂಬಾ ವ್ಯಾಕುಲವಾಗಿತ್ತು. ಈಗಿನ ಕಾರ್ಡು ನೋಡಿ ಸಂತೋಷವಾಯ್ತು. ನಾನು ಆ ಪ್ರಾಂತ್ಯ ಬರಬೇಕೆಂದು ಆಲೋಚನೆ ಮಾಡಿದ್ದೆನು. ಈಗ ಬರುವುದಕ್ಕೆ ನನ್ನ ಸ್ವಂತಗದ್ದೆಗಳು ನಾಟಿಯಾಗಿ 15 ದಿವ್ಸಗಳಾಯ್ತು. ಒಂದು ತಾಕು 3 ಎಕ್ರೆ ಗದ್ದೆಯನ್ನು ಗುತ್ತಿಗೆಗೆ ಮಾಡಿಕೊಂಡಿರುತ್ತೇನೆ. ಅವು ಇನ್ನೂ ನಾಟಿಯಾಗಿಲ್ಲ. ಹೋದ ವರುಷ ಶ್ರಮಪಟ್ಟು 4-5 ಸಾವಿರ ಕಬ್ಬು ವಾರಸಾಗುವಳಿಗೆ ನೆಟ್ಟಿದೇವು. ಅದೂ ಬೆಳೆ ಚೆನ್ನಾಗಿದೆ. ಈಗ ಆ ಗದ್ದೆ ನಾಟಿ ಆದಮೇಲೆ ಇನ್ನು 20 ದಿವ್ಸಗಳೊಳಗಾಗಿ ಆ ಪ್ರಾಂತ್ಯ ಒಂದು ಸಲ ಖಂಡಿತ ಬರುತ್ತೇನೆ.

ಎಲ್ಲಾ ಅಂಶಕ್ಕೂ ಕೂಡ್ಪೆ ಜವಾಬು ಬರೆಯುವುದು. ಬಾಕಿ ವಿಷಯವೆಲ್ಲಾ ಮೊಖ್ತಾ ಬಂದಾಗ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನೇನೂ ವಿಶೇಷವಿಲ್ಲ.

ಇತಿ ವಿಜ್ಞಾಪನೆ

ಇಪ್ಪತ್ತನೆಯ ಶತಮಾನದ ಇಪ್ಪತ್ತರ ದಶಕದಲ್ಲಿ ವಿಠಲಾಪುರ ಮತ್ತು ಅರಕಲಗೂಡು ಭಿನ್ನ 'ಪ್ರಾಂತ್ಯ'ಗಳೆನಿಸಿ ಸಂಪರ್ಕವು ಕಷ್ಟಸಾಧ್ಯವಾಗಿತ್ತು. ಮಾವ ಅಳಿಯನ ನಡುವೆ ಸುಮಧುರ ಬಾಂಧವ್ಯವಿದ್ದು ಯೋಗಕ್ಷೇಮ ಪತ್ರವು ಒಂದು ವರ್ಷದ ನಂತರ ಬರುತ್ತದೆನ್ನುವುದು ಗಮನಿಸಬೇಕಾದ ಸಂಗತಿ. ಪ್ಲೇಗಿನ ಸುಳಿವು ಅನೇಕ ಪತ್ರಗಳಲ್ಲಿ ದೊರೆಯುತ್ತದೆ. ಅಳಿಯನ ವಿನಯವನ್ನೂ ಯೋಗಕ್ಷೇಮ ವಿಚಾರಣೆಯ ಒಕ್ಕಣೆಯನ್ನೂ ಇಲ್ಲಿ ಗಮನಿಸಬಹುದು. ತನ್ನ ಆರ್ಥಿಕ ಸುಸ್ಥಿತಿಯ ಬಗೆಗೆ ಅಳಿಯನು ಮಾವನಿಗೆ ಕೊಡುವ ಚಿತ್ರವನ್ನೂ ಇಲ್ಲಿ ಗುರುತಿಸಬಹುದು. ಗುತ್ತಿಗೆ, ವಾರಕ್ಕೆ ಸಾಗುವಳಿ ಮಾಡುತ್ತಿದ್ದ ವಿಷಯ ಇಲ್ಲಿ ಮುಖ್ಯವಾದುದು.

೮೩

ಹೆಂಗಸರ ಹಾಡೇ ಹೀಗೆ

ನಿರುದ್ಯೋಗಿ ಮಗನೊಬ್ಬನ ಕಾರ್ಡು

ಕುಶಲಂ ಶ್ರೀರಾಮ ನಗರ

ತಾ। 31-3-31

...M.G.ರವರನ್ನು ನಾನು ಇನ್ನೂ ನೋಡಿಲ್ಲ. ನೋಡಬೇಕೆಂಬ ತವಕವೂ ಇಲ್ಲ. ಅವರು ರಾಮೇಶ್ವರಕ್ಕೆ ಹೋಗುವಂತೆ ಕಾಣಲಿಲ್ಲ. ಈ ದಿನವೂ ತಾತಯ್ಯನವರು "ಏನೋ ಮಹಾರಾಯಾ, ನನಗೆ ಸಲಾಮು ಹಾಕಿ ಊರಿಗೆದ್ದುಬಿಡುತ್ತೀಯೋ, ಇಲ್ಲ ಇಲ್ಲಿಯೇ ಇರುತ್ತೀಯೋ" ಎಂದು ಕೇಳಿದರು. ಅಲ್ಲಿ ಇನ್ನೂ ಕೆಲವರು ಕುಳಿತಿದ್ದುದರಿಂದ 'ಯೋಚಿಸುತ್ತಿದ್ದೇನೆ' ಎಂದು ಅಷ್ಟೇ ಹೇಳಬೇಕಾಯಿತು. ಅವರಿಗೆ ಪುರಸತ್ತಾಗಿ ಒಂಟಿಯಾಗಿ ಸಿಕ್ಕಿದರೆ ವಿಸ್ತಾರವಾಗಿ ಎಲ್ಲವನ್ನೂ ಹೇಳಬೇಕೆಂಬ ಆಸೆ. ಅದಕ್ಕೆ ಸ್ವಲ್ಪ ಸಮಯ ನಿರೀಕ್ಷಣೆ ಮಾಡುತ್ತಿದ್ದೇನೆ. ಕೆಲಸದ ವಿಚಾರದಲ್ಲಿ ಇಲ್ಲಿ ನಿರಾಶನಾಗಿರುವುದೇ ಮೇಲು. ರಿಟ್ರೆಂಚ್‌ಮೆಂಟ್ ಸ್ಕೀಮಿನ ಪ್ರಕಾರ ಇನ್ನು ಮೇಲೆ ವೇಕೆನ್ಸಿಗಳನ್ನು ಗೆಸೆಟ್ಟಿನಲ್ಲಿ ಹಾಕುವುದಿಲ್ಲ. ಏನಾದರೂ ರಜಾರಫ್ತಿನಿಂದ ಖಾಲಿಬಿದ್ದರೂ ಮಿಕ್ಕವರೇ ಸರಿಮಾಡಿಕೊಂಡು ಹೋಗಬೇಕಂತೆ. ನಮ್ಮ ಕುಳ್ಳಿಯು (ವೇ॥ ಕೋಲಾರದ...ರ ಮಗಳು M.A., B.T.,) N.S.S.ರನ್ನು ಕಂಡಳು. ಇನ್ನು 3 ವರ್ಷ ಮಾತಾಡಿಸಬೇಡ ಎಂದರು. ದಿವಾನರನ್ನೂ ಮಿ। ಮ್ಯಾರ್ಥ್ಯ ರವರನ್ನೂ ನೋಡಿದಳು. ಏನೂ ಉಪಯೋಗವಿಲ್ಲ. ಹೆಂಗಸರ ಪಾಡೇ ಹೀಗೆ. ಇನ್ನು ಗಂಡಸರ ದುರವಸ್ಥೆಯನ್ನು ಹೇಳಬೇಕಾದ್ದೇ ಇಲ್ಲ. ತತ್ರಾಪಿ B.A.ಗಳನ್ನು ಕೇಳುವವರು ಯಾರು? S.W.ರನ್ನು ನೋಡಿಯೇನು ಬಿಟ್ಟೇನು ? ಇದುವರೆಗೆ ಮ॥ S.P...ರು D.D.P.I. ಆಗಿದ್ದರು. ಈಗ ಅವರನ್ನು DPI ಆಫೀಸಿಗೇ ತೆಗೆದುಕೊಂಡು ಅವರ ಸ್ಥಾನಕ್ಕೆ ಮಿ॥ ಮೊಹಿಯುದ್ದೀನ್‌ರನ್ನು ಹಾಕಿದಾರೆ. ∴ ಏನೂ ಉಪಯೋಗವಿಲ್ಲಾ.

ಚಿ॥ ಮೂರ್ತಿಯು 3ನೆಯ ತಾರೀಕು B'lore ಬಿಡುವನಂತೆ. ರಾಯಪ್ಪನವರನ್ನು ವಿಚಾರಿಸಿದೆ-ಕೋರ್ಟಿನಲ್ಲಿ ದಾವಾ ದಾಖಲಾಗಿದೆ. ಆದ್ದರಿಂದ ದಸ್ತಾವೇಜು ಇಲ್ಲಿಲ್ಲ. ಅದರಲ್ಲಿ "ನನ್ನ ಮೂರನೆಯ ಮದುವೆಗಾಗಿ ಮಾಡಿದ್ದ ಸಾಲವನ್ನು ತೀರಿಸುವುದಕ್ಕಾಗಿ" ಎಂದು ಬರೆದಿದ್ದಾನಂತೆ. ಯಾರ ಹತ್ತಿರ ಮಾಡಿದ ಸಾಲ ಎಂದು ಕೇಳಲು ಅದು ನನಗೆ ಜ್ಞಾಪಕವಿಲ್ಲ ಎಂದರು. H.N.P. ಯಿಂದ ಅವರು ಬುಧವಾರ ಬೆಂಗಳೂರಿಗೆ ಹೋದರೆಂದು ವೆಂಕಟೇಶ ಮಹಾತ್ಮೆಯಿಂದ ತಿಳಿಯಿತು...ನಿಗೆ ಆಧಾರವಾಗಿರುವ ಗದ್ದೆ ಅವನಿಗೇ 1500ಕ್ಕೆ ಖರೀದಿ ಯಾಗುವುದಂತಲ್ಲ, ಏನು ಸಮಾಚಾರ ಎಂದು ಮಹಾತ್ಮೆ ಕೇಳಿತು. ನನಗೇನೂ ಈ ಸಮಾಚಾರ ತಿಳಿಯದಪ್ಪ ಎಂದೆ. ನಮ್ಮೂರಿನಲ್ಲಿ ರಾಮನವರಾತ್ರಿ ಆರಂಭವಾಗಿದೆ. ಅದು ಕಳೆಯುವುದರೊಳಗೆ ನೀವು ಈ ಸಲವಾದರೂ ಬನ್ನಿ ಎನ್ನಲು ಅದರೊಳಗೇ ಬರುವೆನೆಂದು ವಾಗ್ದಾನ ಮಾಡಲಾರೆ. ಅಂತೂ ಬರುತ್ತೇನೆ ಯಾವಾಗಲಾದರೂ ಎಂದು ಹೇಳಿ ಕಳುಹಿಸಿದೆ. ನಾನು ತಾತಯ್ಯ ನವರನ್ನು ಕಂಡು ಮಾತಾಡಿದ ವಿನಾ ಯಾವುದನ್ನೂ ಇತ್ಯರ್ಥವಾಗಿ ಹೇಳಲಾರೆ.

ಇತಿ ವಿಜ್ಞಪ್ತಯಃ

ಮುವತ್ತರ ದಶಕದಲ್ಲಿ ಎಂ.ಎ., ಬಿ.ಟಿ., ತೇರ್ಗಡೆಯಾದ ಮಹಿಳೆಯು ಸಂಕೇತಿ ಸಮುದಾಯದಲ್ಲಿ ಆಧುನಿಕ ವಿದ್ಯೆಗಿಳಿದ ಮೊದಲ ಪಂಕ್ತಿಯಾಕೆ. ಅಂಥ ತೀರಾ ಅಪರೂಪದ ಸಂದರ್ಭಗಳು ೧೯ನೆಯ ಶತಮಾನದ ಕೊನೆಯಿಂದಲೇ ಸಿಗುತ್ತವೆ. ಪುರುಷರು ಆಧುನಿಕ ವಿದ್ಯೆಗಿಳಿದದ್ದೇ ೧೯ನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ. ಈ ಸಮುದಾಯದ ಮಹಿಳೆಯರು ಸಾಮೂಹಿಕವಾಗಿ ಆಧುನಿಕ ವಿದ್ಯೆಗಿಳಿದದ್ದು ಸುಮಾರು ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ.

೨೪

ಹತಾಶೆಯ ಪರಮಾವಧಿ

ಪದವೀಧರನಾದ ಯುವಕನು, ಉದ್ಯೋಗ ದೊರೆಯದೆ ತಲುಪಿದ ಹತಾಶೆಯ ಪರಮಾವಧಿ ಈ ಕಾರ್ಡು. ನಗರದಲ್ಲಿ ಓದುತ್ತಿರುವ ಕಿರಿಯ ಸೋದರನಿಗೆ ಬರೆದುದು

ಹಾಸನಜಿಲ್ಲೆಯ ಹಳ್ಳಿ
ತಾ॥ 8-8-1932

ನಿನ್ನ ತಾ $1\frac{8}{32}$ ರ ಕಾಗದವು ತಲಪಿ ಬಹಳ ಸಂತೋಷ ವಾಯಿತು... ಪ್ರಕೃತದಲ್ಲಿ ನನ್ನದೇ ಕೇವಲ ಯೋಚನೀಯವಾದ ಸ್ಥಿತಿ. ಇತೋಭ್ರಷ್ಟಸ್ತತೋ ಭ್ರಷ್ಟಃ. ನೀನು ಕಂಡಂತೆಯೇ ಹೈಕೋರ್ಟು ವೇಕೆನ್ಸಿಗಳು ಇನ್ನೂ ಬಾರದಿರುವುದು ನನ್ನ ದುರದೃಷ್ಟ. ಇಲ್ಲಿ ಜಡಿಮಳೆ ಹಿಡಿದು ಹೊರಕ್ಕೆ ಹೊರಡುವುದಕ್ಕೂ ಆಗುತ್ತಿಲ್ಲ. ಮನೆಯಲ್ಲಿ ವೃಥಾ ಕಾಲಹರಣವಾಗುತ್ತಿದೆ. ಸಂಪಾದನೆ ಮಾಡುವವರಿಗೆ ಕಣ್ಣು ಕೆಂಪಾಗಲು ಎಷ್ಟು ಬೇಕೋ ಅಷ್ಟು ನಡೆಯುತ್ತಿದೆ. ದೈವಸೃಷ್ಟವಾದ ಜಂಗಮಪ್ರಪಂಚದಲ್ಲಿ ನನ್ನಂತೆ ಕಷ್ಟಪರಂಪರೆಗೆ ಸಿಕ್ಕಿರುವವನು ನಭೂತೋ ನ ಭವಿಷ್ಯತಿ. ವಿದ್ಯಾವ್ಯಸನಿಯಾದ ನಿನಗೆ ನನ್ನ ಕ್ಲೇಶ ಪರಂಪರೆಗಳ ಕಥನದಿಂದ ಚಿತ್ತಕ್ಲೇಶವನ್ನುಂಟುಮಾಡುವುದಿಲ್ಲ. ಜನ್ಮಾಂತರ ಕರ್ಮಫಲಮನು ಭವತಿ ಪುರುಷಸ್ಯೇಹ ಜನ್ಮನಿ. ಇದಿರಲಿ.

ನನ್ನ ಸ್ಥಿತಿಯು ಉತ್ತಮಗೊಳ್ಳದೆ ಹೀಗೆಯೇ ಆಗಲಿ ಅಥವಾ ಇದಕ್ಕಿಂತಲೂ ಹೀನವಾದುದಾಗಿಯಾಗಲೀ ಇರುವುದಾದರೆ ನಾನು ಕಾಡುಪಾಲಾಗಲು ಹೆಚ್ಚು ಕಾಲ ಹಿಡಿಯುವುದಿಲ್ಲ. ಜನನದಾರಭ್ಯ ಕಷ್ಟಪರಂಪರೆಗಳನ್ನನುಭವಿಸಿ, ಮನುಷ್ಯಜಾತಿಯಿಂದ ಬಹು ತೊಂದರೆಗಳನ್ನನುಭವಿಸುತ್ತ ಬಂದವನನ್ನು ಸಾವು ಹೆದರಿಸ ಲಾರದು. ನೀವಿಬ್ಬರಾದರೂ ಕುಲದೀಪಕರಾದರೆ ನನಗೆ ಬಹಳ ಸುಖವಾಗುವುದು.

ಈ ಕಾಗದವನ್ನು ಕೊಡುವವರ ಸಂಗಡ ಒಂದು ಜತೆ ಯಜ್ಞೋಪವೀತವನ್ನೂ ಒಂದು ಬಳ್ಳ ಅವಲಕ್ಕಿಯನ್ನೂ ಕಳುಹಿಸಿರುತ್ತೆ...

ಅತಿಭಾವುಕತೆಯನ್ನು ಈ ಪತ್ರದಲ್ಲಿ ಕಾಣಬಹುದು. ಸಂಕೇತಿಗಳಲ್ಲಿರುವ ವ್ಯವಸಾಯದ ಬಗೆಗಿನ ಪ್ರೀತಿಗೆ ಭಿನ್ನವಾಗಿ ನೌಕರಿಯ ಕಡೆಗೆ ಒಲವು ತೋರುತ್ತಿರುವ ಈ ಪತ್ರ ಆ ಕಾಲಕ್ಕೆ ಅಪವಾದರೂಪದ್ದು.

೮೫

ನೌಕರಿಗಾಗಿ ಪರದಾಟ

ಪದವೀಧರನೊಬ್ಬನು, ನೌಕರಿಗಾಗಿ ಪರದಾಡುತ್ತಿರುವ ಸಂಗತಿಯನ್ನು ತಂದೆಗೆ ತಿಳಿಸಿ ಬರೆದ ಕಾರ್ಡು

ಶ್ರೀರಾಮಪುರ

11 $\frac{10}{32}$

...ಮೈಸೂರಿನಲ್ಲಿ ದಿವಾನ್‌ಬಹದ್ದೂರ್ ಶ್ರೀಕಂಠೇಶ್ವರಯ್ಯರು ಊರಲ್ಲಿರಲಿಲ್ಲ. ವೇ।। ಸುಬ್ರಹ್ಮಣ್ಯ ಅಯ್ಯರ್‌ರವರು ಶಾಮಣ್ಣನವರಿಗೆ ಕೊಟ್ಟ ಕಾಗದದಿಂದ ಏನೂ ಪ್ರಯೋಜನವಾಗಲಿಲ್ಲ. ಇಲ್ಲಿ ದೊರೆಸ್ವಾಮಿ ಅಯ್ಯರ್‌ರವರಿಂದ ದಸರಾ ರಜಾ ಕಳೆದ ಮೇಲೆ ಯತ್ಕಿಂಚಿತ್ತು ಪ್ರಯೋಜನವಾದೀತೆಂಬ ಭರವಸೆಯಿದೆ...ಹಾಸನದ D.E.O.ರವರಿಗೆ ಕಾಗದಾ ಬರೆದಿದ್ದೇನೆ. C.R.B.ಯಿಂದ ಗೆಸೆಟ್ಟಿನಲ್ಲಿ ಪ್ರಕಟವಾಗಿದ್ದ ಎಸಳೂರಿನ ಇಪ್ಪತ್ತು ರೂ.ಗಳ ವೇಕೆನ್ಸಿಯೊಂದಕ್ಕೆ ಅಪ್ಲಿಕೇಷನ್ ಹಾಕಿದೆನು. ಮೈಸೂರಿನಲ್ಲಿ ಪೋಸ್ಟಲ್ ಸೂಪರಿಂಟೆಂಡೆಂಟರೂ S.W. ರೂ ಕೈಯಳ್ಳಾಡಿಸಿದರು. ಆದರೆ S.W.ರವರು ಒಂದು ಕಾಗದಾ ಕೊಡಿಸುವುದಾಗಿಯೂ ಅದನ್ನು ತೆಗೆದುಕೊಂಡು ಹೈದರಾಬಾದಿನ ರೆಸಿಡೆಂಟ್ ಆಫೀಸಿಗೆ ಹೋಗೆಂದೂ ಹೇಳಿದರು. ಅವರು ಯಾರಿಂದ ಕಾಗದವನ್ನು ಕೊಡಿಸಬೇಕೆಂದುದ್ದೇಶಿಸಿದ್ದರೋ ಅವರು ಊರಲ್ಲಿರಲಿಲ್ಲವಾದ ಕಾರಣ ಸದ್ಯಕ್ಕೆ ಅದು ಹಾಗೆಯೇ ನಿಂತಿದೆ. ನವರಾತ್ರಿಯ ರಜಾ ಕಳೆದ ಮೇಲೆ ಹೈಕೋರ್ಟ್ ಬಾಗಿಲು ತೆರೆಯುತ್ತದೆ. ಆಗ ನನ್ನ ಫಲಿತಾಂಶವನ್ನು ತಿಳಿಯಬೇಕು. ಕಡೆಗೆ ಟೆಂಪರರಿ ವೇಕೆನ್ಸಿಯನ್ನಾದರೂ ನನಗೆ ಕೊಟ್ಟೇ ತೀರಬೇಕೆಂದು ದೊರೆಸ್ವಾಮಯ್ಯರ್‌ರವರು ರೆಜಿಸ್ಟ್ರಾರ್‌ರವರಿಗೆ ಕೇವಲ ಆಗ್ರಹಪೂರ್ವಕವಾಗಿ ಅಪ್ಪಣೆ ಮಾಡಿರುವರು...

೮೬

ಅತೃಪ್ತ ಅಧ್ಯಾಪಕ (ತಂದೆಗೆ ಮಗನ ಕಾರ್ಡು)

ಕುಶಲಂ ಶ್ರೀರಾಮ ಚನ್ನರಾಯಪಟ್ಟಣ

ತಾ। 10.9.33

...ನಾನೂ ಗೆಸ್ಟೆಟ್ಟಿನಲ್ಲಿ ಕಂಡ ವೇಕೆನ್ಸಿಗಳಿಗೆಲ್ಲಾ ಅಪ್ಲಿಕೇಷನ್ ಹಾಕುತ್ತಲೇ ಇದ್ದೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನ ವೇಕೆನ್ಸಿಗಳು ಬ್ರಾಹ್ಮಣೇತರರಿಗೆಂದೇ ಬರುತ್ತಿವೆ. ಅಮಲ್ದಾರರ ಮನೆಯ ಪಾಠವು ಈ ತಿಂಗಳ 2-3ನೇ ತಾರೀಕಿಗೇ ಅವಭೃತವಾಯಿತು. ಕಾರಣ, ಹೆಂಗಸರು ಹೆತ್ತಿರುವರೆಂದು. ಶಿರಸ್ತೆದಾರರ ಮನೆಯದು ಪ್ರಾರಂಭವೇ ಆಗಲಿಲ್ಲಾ. ಅಂತೂ ಇತರ ವಿಧದಿಂದ ಉತ್ಪತ್ತಿ ಯಾವುದೂ ಇಲ್ಲ. ನಾನೂ ರಿಜಿಸ್ಟ್ರೇಷನ್ ಪರೀಕ್ಷೆಗೆ ವ್ಯಾಸಂಗ ಮಾಡಬೇಕೆಂದು ಸಂಕಲ್ಪಿಸಿದ್ದೇನೆ. ಆದರೆ ಅದಕ್ಕೆ ಉಪಹತಿಗಳೇ ಅನೇಕವಾಗಿರುವಂತೆ ತೋರುತ್ತದೆ...

ನವರಾತ್ರಿಯಲ್ಲಿ ನಾನು ಬೆಂಗಳೂರಿಗೆ ಹೋಗಬೇಕಾಗುತ್ತದೆ. ರಜಾದಲ್ಲಿ ನೀವುಗಳು ಇಲ್ಲಿಗೆ ಬರುವುದಾದರೆ ಬಹಳ ಸಂತೋಷ. ನನ್ನ ವರ್ಗದ ವಿಷಯದಲ್ಲಿ D.E.O. ರವರು ಇಲ್ಲಿಗೆ ಬಂದಾಗ ಮುಖತಃ ಪ್ರಸ್ತಾಪಿಸಬೇಕೇ ವಿನಾ ಪತ್ರಿಕಾಪ್ರಸಂಗದಿಂದ ಲಾಭವಿಲ್ಲವೆಂದು ತೋರುತ್ತದೆ. ಮುಂದಿನ ತಿಂಗಳು ಇಲ್ಲಿಗೆ ಇನ್‌ಸ್ಪೆಕ್ಷನ್ನಿಗೆ ಬರುವರು. ಈಗ ಇಲ್ಲಿ ಪ್ಲೇಗು ಗಲಾಟೆಯು ಕೊಂಚ ಕಡಿಮೆಯಾಗಿದೆ. ಹಿರೀಸಾವೆಯ ಹೆ। ಮಾ।ರವರು ವೇ। ತಿಪ್ಪಯ್ಯಾವಧಾನಿಗಳಿಗಾಗಲೀ, ಹಳ್ಳೀಮೈಸೂರಿನ ಸೋಮರಾಯರಿಗಾಗಲೀ ಬರೆದು ತಿಳಿಯಬೇಕೇ ವಿನಾ ಹಾಗೆಯೇ ಹೇಳಲು ಸಾಧ್ಯವಿಲ್ಲವೆಂದು ಬರೆದಿದ್ದಾರೆ...

ಅಧ್ಯಾಪಕರ ಸಂಬಳವು ಅತ್ಯಲ್ಪವಾಗಿದ್ದ ದಿನಗಳ ಹೋರಾಟ ಇದು. ಆ ವೃತ್ತಿ ಇಷ್ಟವಾದಾಗಲೂ ಇಂಥ ಒದ್ದಾಟ ಇದ್ದೇ ಇರುತ್ತದೆ. ನಾನಾ ರೀತಿಯ ಮಿತಿಗಳೂ ಈ ದಾರಿಯಲ್ಲಿರುವುದು ಇಲ್ಲಿ ಕಾಣುತ್ತದೆ.

೮೭

ಪದವೀಧರರ ಪಾಡು

೧೯೩೪ರ ವೇಳೆಯಲ್ಲಿ ಪದವೀಧರರ ಪಾಡು ಹೇಗಿತ್ತೆಂದು ಸೂಚಿಸುವ ಕಾರ್ಡು

ಕುಶಲಂ ಶ್ರೀರಾಮ ಚನ್ನರಾಯಪಟ್ಟಣ

ತಾ। 11.6.34

ತೀ।।ರವರ ದಿವ್ಯ ಚರಣಸನ್ನಿಧಿಗಳಲ್ಲಿ ಬಾಲಕಕೃತಾನೇಕ ವಿಜ್ಞಪ್ತಯಃ. ತದುಪರಿ ಉಭಯ ಕುಶಲ ಸಂಪ್ರತಿ.

ತಾವು ಕೃಪಾಪೂರ್ವಕವಾಗಿ ಕಳುಹಿಸಿದ ಹತ್ತು ರೂ.ಗಳು ತಲಪಿದವು. ಇಲ್ಲಿ ನನಗೆ ಸ್ವಲ್ಪ ಸ್ವಲ್ಪವಾಗಿ ಗುಣವಾಗುತ್ತಿದೆ. ಇನ್ನೂ ನನ್ನ ವರ್ಗದ ಸಮಾಚಾರವೇನೂ ಬಂದಿಲ್ಲ. ಈಗ್ಗೆ ಈ ಡಿಸ್ಟ್ರಿಕ್ಟಿನ ಮಿಡಲ್ ಸ್ಕೂಲುಗಳಲ್ಲಿ 8-9 ವರ್ಗಾವರ್ಗಿಗಳು ನಡೆದಿವೆ. ಈ ಸಲಕ್ಕಿಷ್ಟೇ ಸರಿಯೆಂದು ಕೆಲವರು ಹೇಳುತ್ತಾರೆ.

...ಈಗ ಹಾಲಿ ಈ ಊರಿನ ಪ್ರೈ. ಬಾ. ಸ್ಕೂಲಿನಲ್ಲಿ ಒಬ್ಬರು, ಮಿಡಲ್ ಸ್ಕೂಲಿನಲ್ಲಿ ಇಬ್ಬರು ಈ ರೀತಿಯಾಗಿ ಮೂವರು ಗ್ರಾಜುಯೇಟುಗಳೂ 20 ರೂ. ಮೇಲೆಯೇ ಇದ್ದಾರೆ.

ಮ|| ನರಸಿಂಹಜೋಸ್ಯರ ಪ್ರಯತ್ನದ ಫಲವಾಗಿಯೂ ಏನೂ ಕಾಗದ ಬಂದಿಲ್ಲ, ಒಟ್ಟಿನಲ್ಲಿ ಪರಿಸ್ಥಿತಿಯು ಆಶಾಜನಕವಾಗಿಲ್ಲ, ನಾನೂ D.E.O. ರವರಿಗೆ ಸ್ಕೂಲು ಮುಖಾಂತರವೂ ಪ್ರೈವೇಟಾಗಿಯೂ ಬರೆದು ಬೇಸತ್ತಾಯಿತು. ಅಸ್ತಿಪಾಸ್ತಿಗಳ ಸೊಲ್ಲೇ ಇಲ್ಲ, H.S.R. ಗೆ ಬರೆದು ತಿಳಿಯೋಣವೆಂದರೆ, ಆ ವ್ಯಕ್ತಿಗೆ ಇದರ ಗಂಧವೂ ತಿಳಿಯುವುದು ಕಷ್ಟ. ಸರಕಾರದಲ್ಲಿ T.A. ಕೊಡಲು ಹಣವಿಲ್ಲದುದರಿಂದ ಅಪ್ರಕೃತವಾಗಿ ವರ್ಗಾವರ್ಗಿಗಳನ್ನು ನಡೆಸಕೂಡದೆಂದು D.D.P.I. ರವರು ಇರ್ಸ್ಟ್ರಕ್ಷ್ ಕೊಟ್ಟಿರುವಂತೆ ವರ್ತಮಾನ. ಕಾಲಪುರುಷನ ಗರ್ಭದಲ್ಲೇನಿದೆಯೋ ತಿಳಿಯದು.

ಚಿ||...ನೂ ಒಂದು ಕಾಗದವನ್ನು ಬರೆದಿದ್ದಾನೆ. ಸತ್ರದಲ್ಲಿಯೇ ಊಟಕ್ಕನುಕೂಲವಾಯಿತಂತೆ. ಆರೋಗ್ಯವಾಗಿದ್ದಾನಂತೆ...

CRB ಅಪ್ಲಿಕೇಷನ್ನುಗಳ ವಿಚಾರದಲ್ಲಿ ನಾವು ವಿದ್ಯಾಭ್ಯಾಸದ ಇಲಾಖೆಯ ವೇಕೆನ್ಸಿಗಳಿಗೇ ಹೊರತು ಇತರ ಇಲಾಖೆಯ ವೇಕೆನ್ಸಿಗಳಿಗೆ ಅಪ್ಲಿಕೇರ್ಷ ಹಾಕಕೂಡದೆಂದು DPI ರಿಂದ ಆರ್ಡರಾಗಿ ನಮ್ಮ ಕೆಲವು ಅಪ್ಲಿಕೇರ್ಷಗಳು ವಾಪ್ಸು ಬಂದುವು. ವಿದ್ಯಾಭ್ಯಾಸದ ಇಲಾಖೆಯ ವೇಕೆನ್ಸಿಗಳೆಲ್ಲಾ 15, 17, 26 ರೊಳಗಿನವೇ ಹೊರತು ಮೇಲಲ್ಲ. ಈ ರೀತಿಯಾಗಿ ಇಲ್ಲಿ 2-3 ಜನ ಗ್ರಾಜ್ಯುಯೇಟುಗಳು ಪ್ರೈ. ಮತ್ತು ಮಿಡಲ್ ಸ್ಕೂಲುಗಳಲ್ಲಿರುವುದು ಸಹೋದ್ಯೋಗಿಗಳಿಗೂ ಗ್ರಾಮಸ್ಥರಿಗೂ ಹಾಸ್ಯಾಸ್ಪದವಾದ ವಿಷಯವಾಗಿದೆ. ಯತ್ನವಿಲ್ಲ...

೮೮

ಕಷ್ಟಾರ್ಜಿತ ಧನ

ಸೋದರನ ಉದ್ಯೋಗಕ್ಕಾಗಿ ಯತ್ನ. ಕಾರ್ಡು

ಕುಶಲಂ ಶ್ರೀರಾಮ ಚನ್ನರಾಯಪಟ್ಟಣ

ತಾ| 12.6.35

ಚಿ||ಗೆ ಅನೇಕಾಶೀರ್ವಾದಗಳು.

ನೀನು ಇಂಗ್ಲೀಷಿನಲ್ಲಿ ಬರೆದಿದ್ದ ಕಾರ್ಡು ತಲುಪಿತು... ತೀ|| ರವರಿಗೆ ನೀನು ಬರೆದಿದ್ದ ಕಾಗದವೂ ಅವರ ಅಭಿಪ್ರಾಯದೊಡನೆ ಬಂದು ಸೇರಿತು. ಹಾಸನದ ವೇಕೆನ್ಸಿಯನ್ನು ಬೇರೆ ಯಾರಿಗೋ ಕೊಟ್ಟಿರುತ್ತಾರೆ. R.S.N., R.S.R. ಇಬ್ಬರೂ ಹೇಳಿರುವುದು ಶುದ್ಧ ಸುಳ್ಳು. ಆರ್ಡರು ಬಂದೇ ಇಲ್ಲ, ಕಳುಹಿಸಿಯೂ ಇಲ್ಲ, ತೀ||ರವರಿಗೆ ನಿನ್ನ ಕೈಯಿಂದ B.S.N.ಗೆ ಪಂಚಮಿಯನ್ನು ಕೊಡಿಸಿದುದರಲ್ಲಿ ತೃಪ್ತಿಯಿಲ್ಲದೆ ಈಗ ದಶಮಿಗೂ ಹೆರೆಸಿದರು. ಮೇಲೆಬಿದ್ದು ಕೊಳ್ಳಿ ಕೊಳ್ಳಿ ಎಂದು ಕೊಡಲು ಹೋದರೆ ಯಾರು ಬೇಡವೆನ್ನುತ್ತಾರೆ ? ನಿನ್ನ ವ್ಯಾಸಂಗಕ್ಕೆ ತೊಂದರೆಯಿಲ್ಲದಂತೆ ನಿನಗೆ ಪುರಸತ್ತಾದರೆ ಒಂದು ಸಲ ಶರ್ಮನನ್ನು ಕಂಡು ಈ ವಿಚಾರಗಳನ್ನೆಲ್ಲಾ ಸರಿಯಾಗಿ ತಿಳಿಸಿ, ಏನೂ ಸಾಧ್ಯವಿಲ್ಲದಿದ್ದರೆ ನೀನು ಕೊಟ್ಟಿರುವುದನ್ನಾದರೂ ವಾಪಸು ತೆಗೆದುಕೊಳ್ಳಲು ಪ್ರಯತ್ನಿಸಿ ನೋಡು. ವಿನಯವೇ ಒಳ್ಳೆಯದು. ಒಟ್ಟಿನಲ್ಲಿ ನಾನು ಪ್ರತಿಕೂಲ ದೈವನು. ಕೇವಲ ಕಷ್ಟಾರ್ಜಿತವಾದ ಧನಕ್ಕೆ ತೀ||ರವರು ಏನೂ ಬೆಲೆಯನ್ನೇ ಕಟ್ಟಲಿಲ್ಲವೆಂದು ತೋರುತ್ತೆ. ಯತ್ನವಿಲ್ಲ...

ಹೊಸ ವಿದ್ಯಾಭ್ಯಾಸಕ್ರಮಕ್ಕೆ ಒಳಗಾದೊಡನೆ ಇಂಗ್ಲಿಷ್ ಭಾಷೆಯಲ್ಲಿ ಪತ್ರ ಬರೆದುದು; ಪ್ರತಿಯಾಗಿ ಈ ಪತ್ರದಲ್ಲಿರುವ ವ್ಯಂಗ್ಯವನ್ನು ಗುರುತಿಸಬಹುದು. ಉದ್ಯೋಗಕ್ಕಾಗಿ 'ಲಂಚ'ದ ಪಾತ್ರವನ್ನೂ ಗಮನಿಸಬಹುದು. 'ಪಂಚಮಿ' ಎಂದರೆ ಐದು ರೂ; ದಶಮಿ ಎಂದರೆ ಹತ್ತು ರೂ.

೮೯

ವಿಧವೆಯು ಜಮೀನಿನ ಬಗ್ಗೆ

ಪರಸ್ಥಳದಲ್ಲಿ ಪರರ ಮನೆಯಲ್ಲಿ ಅಡುಗೆ ಮಾಡಿಕೊಂಡು ಜೀವಿಸುತ್ತಿರುವ ವಿಧವೆಯು, ಬಂಧುವೊಬ್ಬರಿಗೆ ತನ್ನ ಜಮೀನಿನ ಬಗ್ಗೆ ಬರೆದಿರುವ ಕಾರ್ಡು

20.9.35

ಬೆಂಗಳೂರು

...ನಾನು ಹಾಸನಕ್ಕೆ ಕಾಗದ ಬರೆದಿದ್ದೆ. ಅದಕ್ಕೆ ಜವಾಬೇ ಬರಲಿಲ್ಲ, ನನಗೆ ತುಂಬಾ ಯೋಚನೆಯಾಗಿದೆ. ನೀವು ಬಸವಾಪಟ್ಟಣಕ್ಕೆ ಹೋಗಿ ಬೀಗರನ್ನು ಕಂಡು ಗದ್ದೆಯನ್ನು ಮುತುವರ್ಜಿಯಾಗಿ ನೋಡಿಕೊಳ್ಳುವಂತೆ ನಾನು ತುಂಬಾ ಹೇಳಿರುವೆನೆಂದು ತಿಳಿಸಿ. ಮಳೆಯೇನಾದರೂ ಆಗಿದೆಯೆ, ಏರಿ ಕೆಳಗಿನ ಗದ್ದೆಗೆ ಬತ್ತವನ್ನು ಹಾಕಿಸಿರುತ್ತಾರೆಯೇ? ಅವರು ವಿನಹಾ ನನಗೆ ಗದ್ದೆಯ ವಿಚಾರದಲ್ಲಿ ಬೇರೆ ಯಾರೂ ಇಲ್ಲ, ಖಂಡಿತ ಈ ವಿಚಾರವನ್ನು ಅವರಿಗೆ ತಿಳುಹಿಸಿದರೆ ನನಗೆ ಬಹಳ ಉಪಕಾರವಾಗುತ್ತೆ...

೯೦

ಚೀಣಿ ಮಾಡಿದ್ದಾರೆಯೇ ?

ಭಾವನ ಕುಶಲ ಪತ್ರ

ಕ್ಷೇಮ ಶ್ರೀ ಬಾಣಾವರ

15-12-45

ಮ।ರಾ। ಭಾವನವರ ಸ।ಕ್ಕೆ ನಮಸ್ಕಾರಗಳು. ಉಭಯ ಕುಶಲೋಪರಿ ಸಾಂಪ್ರತ...

ತಾವು ಅಭಿಮಾನವಿಟ್ಟು ಒಂದು ತಿಂಗಳಲ್ಲಿ ಬರೆದ ಕಾಗದ ತಲಪಿ ಅಭಿಪ್ರಾಯವಾಯ್ತು. ಜವಾಬು ಬರೆಯಲು ಇಂದು ನಾಳೆ ಎಂದು ಸಾವಕಾಶವಾಯಿತು. ಇಲ್ಲಿ ಎಲ್ಲರೂ ಆರೋಗ್ಯ ವಾಗಿರುವುದಾಗಿದೆ.

ಇಲ್ಲಿ ಪ್ಲೇಗು ಗಲಾಟೆ 100ಕ್ಕೆ 90 ಭಾಗ ಕಡಮೆ ಇದೆ. ಜೋರಿನಲ್ಲಿಲ್ಲ. ಚಿ।। ಸೌ।।...ನು ನಿಮ್ಮನ್ನು ಮತ್ತು ಮಾತುಶ್ರೀಯವರನ್ನು ಪದೇ ಪದೇ ಜ್ಞಾಪಿಸಿಕೊಳ್ಳುತ್ತಾ ಇರುತ್ತಾಳೆ. ಇಲ್ಲಿ ಕೆಲವು ಕಡೆ 8 ಆಣೆ ಪೈರು 4 ಆಣೆ ಪೈರು ಛುದೋಭಂಗವಾಗಿ ಬೆಳೆಯಾಗಿದೆ. ಹುರುಳಿ ಬೆಳೆಗೂ ಮಳೆ ಅಗತ್ಯವಿದೆ. ಪೈರು ಹಿತವಿಲ್ಲ. ಅಲ್ಲಿ ಮಳೆ ಬೆಳೆ ಹೇಗಿದೆ. ನಾಲೆ ಬಯಲಿನಲ್ಲಿ ಪೈರು ಹೇಗಿದೆ. ತೋಟದಲ್ಲಿ ನಿಮ್ಮ ಶ್ರಮದ ಫಲ ಎಷ್ಟರಮಟ್ಟಿಗೆ ಇರುತ್ತದೆ... ಈ ಸಾರಿಯೂ ಅಡಕೆ ಚೇಣಿ ಮಾಡಿರುತ್ತಾರೆಯೇ ಹೇಗೆ ? ಕಳೆದ ವರ್ಷದ ಶ್ರಮಕ್ಕೆ ಅಲ್ಪಸ್ವಲ್ಪವಾದರೂ ಫಲವುಂಟಾಯಿತೆ ಹೇಗೆ. ಡಿಸೆಂಬರ್ ರಜದಲ್ಲಿ ಸಾಧ್ಯವಾದರೆ ಆ ಕಡೆ ಬರೋಣವೆಂಬ ಯೋಚನೆ ಇದೆ. ಆಗ್ಗೆ ಮಾತೃಶ್ರೀಯವರನ್ನು ಇಲ್ಲಿಗೆ ಕಳುಹಿಸಿಕೊಡುವ ವಿಚಾರವನ್ನು ತಾವು ಯೋಚಿಸಿರಬೇಕಾಗಿ ಪೂರ್ವಭಾವಿಯಾಗಿ ತಮ್ಮ ಗಮನಕ್ಕೆ ತಂದಿರುತ್ತೇನೆ. ಮನಸ್ಸಿಗೆ ಬೇಜಾರು ಮಾಡಿಕೊಳ್ಳಬಾರದು. ಇಲ್ಲಿಗ್ಗೆ...ನಿಂದ ನನ್ನ ತಂಗಿಯ ಮಗನು ಓದಲು ನವರಾತ್ರಿ ಕಳೆದ ಮೇಲೆ ಬಂದಿರುತ್ತಾನೆ. ಪರೀಕ್ಷೆಗೆ ಕಟ್ಟಿರುತ್ತಾನೆ.

ಇತಿ ನಮಸ್ಕಾರಗಳು

೯೧

೨೫ ರೂ. ಸಂಬಳದ ಆಸೆ

ಬಂಧುವೊಬ್ಬರು, ವಿದ್ಯಾವಂತನಾದ ಹಳ್ಳಿಯ ಯುವಕನಿಗೆ, 'ಉದ್ಯೋಗ'ಕ್ಕೆ ಸೇರಲು ಪ್ರೇರೇಪಿಸಿ ಬರೆದ ಕಾರ್ಡು

8-10-46

ಬಾಣಾವರ

...ನಿಮ್ಮ ಕಾಗದ ತಲಪಿ ಅಭಿಪ್ರಾಯವಾಯ್ತು. ಕ್ಷೇಮ ಲಾಭಾದಿಗಳು ತಿಳಿದು ಸಂತೋಷವಾಯ್ತು. ವ್ಯವಸಾಯಕ್ಕೆ ತುಂಬ ನಿಗವಿಟ್ಟಿರುವುದಾಗಿ ತಿಳಿದು ಸಂತೋಷ. ನಾನು ನವರಾತ್ರಿಯಲ್ಲಿ... ಹಳ್ಳಿಗೆ ಹೋಗಿದ್ದು ನೆನ್ನೆ ಇಲ್ಲಿಗೆ ಬಂದೆನು. ಆ ಕಡೆ ಮಳೆ ಬೆಳೆ ಚೆನ್ನಾಗಿದೆ.

...ಹಾಸನದ D.O. ರವರಿಗೆ ಒಂದು ಅರ್ಜಿ ಗುಜರಾಯಿಸಿ ಕೊಳ್ಳಿ. ತಾತ್ಸಾರ ಮಾಡಬೇಡಿ. ನಾನು ಹೀಗೆ ಬರೆದೆನೆಂದು ಮನಸ್ಸಿನಲ್ಲಿ ಪ್ರಕಾರಾಂತರ ಭಾವಿಸಕೂಡದಾಗಿ ನನ್ನ ಕೋರಿಕೆ. ನಿಮ್ಮ ಅರ್ಜಿ ಕಳುಹಿಸಿದರೆ ನಿಮ್ಮ ಊರಿನಲ್ಲೇ ಅಥವಾ ಸುತ್ತಮುತ್ತಲಿನಲ್ಲೇ ಮಾಹೆಯಾನ 25 ರೂ. ಕಮ್ಮಿ ಇಲ್ಲದ ಸಂಬಳದ ಕೆಲಸ ಸಿಕ್ಕುತ್ತೆ. ಜೊತೆಗೆ ತುಟ್ಟಿಭತ್ಯ ಸಹ ಸಿಕ್ಕುತ್ತದೆ. ಜೀವನಕ್ಕೆ ಇದ್ದುದರಲ್ಲಿ ಸ್ವಲ್ಪ ನೆಮ್ಮದಿಯಾಗುತ್ತೆ. ತಮ್ಮ ಜೊತೆಯವರೆಲ್ಲ ಉತ್ತಮ ಸ್ಥಿತಿಯಲ್ಲಿರುತ್ತಾರೆ. ಈಗಿರುವ D.O. ಆಫೀಸರು ಒಳ್ಳೆಯವರು. ಅನುಕೂಲವಾಗುತ್ತೆ. ಅವರು ಇನ್ನು ಒಂದು ವಾರದಲ್ಲೆ ವರ್ಗಪಟ್ಟು ಹೋಗುವುದರಲ್ಲಿರುತ್ತಾರೆ. ತಾತ್ಸಾರ ಮಾಡಬೇಡಿ. ನಿಮಗೆ ಬರಲು ಗೃಹಕೃತ್ಯದ ಅನಿವಾರ್ಯಗಳಿಂದ ತೊಂದರೆಯಾಗಿದ್ದರೆ ನಿಮಗೆ ಎಲ್ಲಿಗೆ ಕೆಲಸವಾಗಬೇಕೆಂಬುದಕ್ಕೆ ಮ।। ರಾ।। ಭಾವನವರಿಗೆ ತಿಳಿಸಿರಿ. ತಾತ್ಸಾರ ಮಾಡದೆ ಕೂಡಲೆ ಒಂದು ಅರ್ಜಿಯನ್ನು ಕೆಲಸಕ್ಕೆ ಹಾಕಿಕೊಳ್ಳಿ. ಮೂರುಪಾಲು ಮಿಡಲ್ ಸ್ಕೂಲಿನಲ್ಲಿ ನಿಮ್ಮ ಊರಲ್ಲೇ ಸಿಕ್ಕಬಹುದು. ಇದೇ ವಿಚಾರದಲ್ಲಿ ಅರ್ಜಿ ಯಾವಾಗ ಬರುವುದೆಂದು ನಿಮ್ಮ ಅಣ್ಣನವರು ತದೇಕ ಧ್ಯಾನಚಿತ್ತದಲ್ಲಿದ್ದಾರೆ. ವಿದ್ಯಾವಂತರಿಗೂ ಪ್ರಾಜ್ಞರಿಗೂ ಹೆಚ್ಚಿಗೆ ಬರೆಯಲು ಶಕ್ತನಲ್ಲ. ಇಲ್ಲಿ ಮುತ್ತಜ್ಜಿಯವರು ಆರೋಗ್ಯ. ಮಗು ಬಾಣಂತಿ ಆರೋಗ್ಯ. ಚಿ।।...ವ್ಯಾಸಂಗ ಮಾಡುತ್ತಿದ್ದಾಳೆ.

ಇತಿ ನಮಸ್ಕಾರಗಳು

ನಲವತ್ತರ ದಶಕದಲ್ಲಿ ವಿದ್ಯಾಭ್ಯಾಸ ಮಾಡಿದರೂ ವ್ಯವಸಾಯದ ನಂಟನಿಂದ ಬಿಡಿಸಿಕೊಳ್ಳುವ ಉತ್ಕಟ ಅಪೇಕ್ಷೆ ಇರುತ್ತಿರಲಿಲ್ಲ. ನೌಕರಿಗೆ ಸೇರಲೇಬೇಕೆಂಬ ಅಭಿಲಾಷೆ ಅನೇಕರಲ್ಲಿ ಮೂಡಿರಲಿಲ್ಲ. ಕಾಲಕ್ರಮದಲ್ಲಿ ನೌಕರಿಯನ್ನೂ ಹಿಡಿದು ವ್ಯವಸಾಯವನ್ನೂ ಬಿಡದ ಸಮನ್ವಯ ಬಂತು. ಅದರ ಮುಂದಿನ ಹಂತವೇ ನಗರೀಕರಣ, ಈಗ ವಿದೇಶೀಕರಣ.

೯೨

ಉದ್ಯೋಗಾಕಾಂಕ್ಷಿಯ ಕಾರ್ಡು

ವ್ಯವಸಾಯನಿರತನಾದ ಹಳ್ಳಿಯ ಗೆಳೆಯನಿಗೆ ಬರೆದುದು

ஶ்ரீ:ஶலம் தீ: **ಕುಪ್ಪಹಳ್ಳಿ**

ತಾ। 1-11-46

ಮ।।...ಗಳ ಸಮಕ್ಷಮಕ್ಕೆ...ನ ನಮಸ್ಕಾರಗಳು. ಉಭಯಕುಶಲೋಪರಿ ಸಂಪ್ರತಿ.

ನಿಮ್ಮ ಪ್ರೀತಿಪೂರಿತವಾದ ಪತ್ರವು ತಲಪಿತು. ಪ್ರಕೃತದಲ್ಲಿ ನಾನು ಅನುಸರಿಸಿರುವ ವೃತ್ತಿಯೇ ಲೇಸೆಂದು ಭಾವಿಸಿದ್ದ ನನಗೆ ಈ ನಿಮ್ಮ ಅಪೂರ್ವ ಸಲಹೆಯೂ ಪುನಃ ಆಸೆಗೊಳಿಸಿರುವುದು. ಈ ನಿಮ್ಮ ಸಲಹೆಯು ಇದಕ್ಕೆ ನೀವು ಸಾಧ್ಯವಾದಷ್ಟು ವಾಕ್ಸಹಾಯ ಮಾಡಲು ಸಮರ್ಥರೆಂದು ವ್ಯಕ್ತಪಡಿಸುತ್ತದೆ. ನಿಮ್ಮುತ್ತರವನ್ನು

ನಿರೀಕ್ಷಿಸಿ ನಂತರ ಡಿ.ಸಿ.ಯವರಿಗೆ ಅರ್ಜಿ ಕೊಡುತ್ತೇನೆ... ಚುಂಚನಗಟ್ಟೆಯ ಕೆಲಸವು ಸರ್ವಥಾ ಇಷ್ಟವಿಲ್ಲ. ಒಂದು ವೇಳೆ ಅನುಕೂಲವಾದರೆ ಉದರ್ಕವೇ ಸಾಕು.

೯೩

ಪ್ರವಾಸ; ವ್ಯವಸಾಯ

ಪ್ರವಾಸ ಹೋದವರು ಅಲ್ಲಿಂದಲೇ ಹಳ್ಳಿಯ ವ್ಯವಸಾಯವನ್ನು ನಿಯಂತ್ರಿಸುವ ಸಂದರ್ಭದಲ್ಲಿ ಬರೆದ ಕಾರ್ಡು

ಕ್ಷೇಮ ಶ್ರೀ ಬೆಂಗಳೂರು

ತಾ. 16.10.51

...ಈಗ ಆ ಪ್ರಾಂತ್ಯ ಅಡಿಕೆ ದರ ಯಾವ ರೀತಿ ಇರುತ್ತೆ. ಅಡಿಕೆ ಗುತ್ತಿಗೆಯನ್ನು ಅಂದರೆ ಹಸರು ವಾಣಿಯನ್ನು ಯಾವ ದರದಲ್ಲಿ ಮಾಡುತ್ತಾರೆ. ದಯವಿಟ್ಟು ತಪ್ಪೀಲು ಚೆನ್ನಾಗಿ ತಿಳಿದು ಬರೆಯುತ್ತೀರಾಗಿ ನಂಬಿದ್ದೇನೆ. ಈ ವಿಚಾರವಾಗಿ ಕಟ್ಟೇಪುರದ ಮ|| ರಿಗೆ ಹಿಂದೆಯೇ ಬರೆದಿದ್ದೆ. ಅವರಿಂದ ಸರಿಯಾದ ಉತ್ತರ ಬರಲಿಲ್ಲ. ಅವರಿಗೆ ತಾವೇ ಸ್ವತಃ ರೇಖೆ ಮಾಡಬೇಕೆಂದು ಇಷ್ಟ. ಎಷ್ಟು ನಷ್ಟವಾದರೂ ತಮ್ಮ ಹೆಂಡತಿ, ಹೆಂಡತಿ ಅಕ್ಕ ರೇಖೆ ಮಾಡಿಬಿಟ್ಟು 10-0-0 ಗೋಟು ಅಡಿಕೆ ಎಡೆಯುವುದು ಪ್ರಾಪ್ತವಾದರೆ ಮುಂದೆ ದರ ಇಳಿದು ಎಷ್ಟು ನಷ್ಟವಾದರೂ ಇದೇ ಹೆಚ್ಚೆಂದು ಅವರ ಭಾವನೆ. ಅದನ್ನು ಬೇಕಾದಷ್ಟು ಖುದ್ದು ಹೇಳಿದ್ದೇನೆ. ತಮ್ಮ ಮನೆಯ ಎಲ್ಲರ ಆರೋಗ್ಯಕ್ಕೂ ಇದರ ತಪ್ಪೀಲಿನೊಡನೆ ಬರೆಯಿರಿ...

ತೋಟಗಾರರಾದರೂ ಸಂಕೇತಿಗಳು ಅಡಿಕೆ ವಹಿವಾಟಿನಲ್ಲಿ ಜಾಣರಾಗಿರಲಿಲ್ಲ. ಚೆನ್ನಾಗಿ ದುಡಿದು ಬೇರೊಬ್ಬರ ಮಡಿಲು ತುಂಬುವುದು ಅವರ ಜಾಯಮಾನವಾಗಿತ್ತು. ಎಂಬತ್ತರ ದಶಕದವರೆಗೆ ಅದು ಬಹುಪಾಲು ಹಾಗೆಯೇ ಮುಂದುವರಿಯಿತು. ಅಡಿಕೆ ಧಾರಣೆಯೂ ಏರುವ ಹೊತ್ತಿಗೆ ಮಾರುಕಟ್ಟೆಯ ಪರಿಜ್ಞಾನವೂ ಲಭ್ಯವಾದಂತಾಯ್ತು. ಈಗ ಅಡಿಕೆ ಅವರನ್ನು ಕಾಪಾಡಿದೆ.

೯೪

ಉದ್ಯೋಗ : ಅನುಭವ

ನಗರದಲ್ಲಿ ಉದ್ಯೋಗ ಅರಸಿ ಹೊರಟ ಎರಡನೆಯ ಪೀಳಿಗೆಯ ಹಳ್ಳಿಗರ ಅನುಭವವು ನಗರದ ಮಿತ್ರರೊಬ್ಬರ ಅಂತರ್ದೇಶೀಯ ಪತ್ರದಲ್ಲಿದೆ

Bangalore

कुशलम् Sri Date. 5.1.1956

...ತಮ್ಮ ಪತ್ರಗಳು ಬಂದು ಮುಟ್ಟಿದವು. ಅಭಿಪ್ರಾಯವಾಯ್ತು. ಆದರೆ ನಾನು ವಹಿಸಿಕೊಂಡಿರುವ ಕೆಲಸವು ಬಹಳ ಸುಲಭವೆಂದು ಭಾವಿಸಬಾರದು. ನಿಮಗೆ ಮಾತು ಕೊಟ್ಟಂತೆ ಎರಡಾವರ್ತಿ C.R.B. ಆಫೀಸಿಗೆ ಹೋಗಿ ಅಲ್ಲಿ ಪೊಲೀಸ್ ಕಾವಲಿನಿಂದ ಒಳಗೆ ಹೋಗಲು ಅವಕಾಶವಿಲ್ಲದ್ದರಿಂದ ವಿಫಲನಾಗಿ ವಾಪಸ್ಸು ಬರಬೇಕಾಯಿತು. ನನಗೆ ಆಪ್ತರಾಗಿರುವವರು ರಜ ಹೋಗಿದ್ದರು. ಅವರು ಈ ದಿನವೋ ನಾಳೆಯ ದಿನವೋ ಬರಬಹುದು. ಬಂದಕೂಡಲೇ ಪ್ರಯತ್ನಪಟ್ಟು ಮಾಡುತ್ತೇನೆ. ಅಲ್ಲದೆ ಅವರ ಬಾಬ್ತು ಸರಟಿಫ್‌ಕೇಟಿಗೆ ಗೆಜಟೆಡ್ ಆಫೀಸರವರ ರುಜು ಮಾಡಿಸಿರುತ್ತೇನೆ. ನೀವು ಕಳುಹಿಸಿದ ಅಪ್ಲಿಕೇಷನ್ ರೆಪೋರ್ಟು ಸಹ ಇದೆ. ಸಮಯ ನೋಡಿ ನಮ್ಮ ಕೆಲಸವನ್ನು ಮಾಡಿಕೊಳ್ಳ ಬೇಕೇ ಹೊರತು ಉಡಾಫೆಯಿಂದಾಗಲೀ ದಿಟ್ಟತನದಿಂದಾಗಲೀ ನಡೆದುಕೊಂಡರೆ ನಮ್ಮ ಕೆಲಸವು ನಡೆಯುವಂತಿಲ್ಲ. ನಮ್ಮಂಥಾವರು ನೂರಾರು ಮಂದಿ ಕಾದು ಬೇಸತ್ತು ಹೋಗುತ್ತಾ ಇದ್ದಾರೆ. ಅಲ್ಲದೆ ನಿಮ್ಮ ಭಾವನವರು ನನ್ನನ್ನು ನಂಬಿ ಯಾರನ್ನೂ ನೋಡದೆ ಹೊರಟುಬಂದೆ ಎಂಬುದಾಗಿ ಬರೆದಿರುತ್ತಾರೆ. ಆದರೆ ನನ್ನ ಪ್ರಯತ್ನ ನಾನು ಮಾಡುತ್ತೇನೆಂದು ಹೇಳಿದೆನೆ ಹೊರತು ಅನ್ಯಥಾ ಭಾವಿಸಬಾರದು. ಅಲ್ಲದೆ ರಿಕ್ತಪಾಣಿಯಿಂದ ಏನು ಪ್ರಯತ್ನಿಸಿದರೂ ವಿಫಲವೇ ಹೊರತು ಫಲದಾಯಕವಿಲ್ಲ ಎಂಬುದು ನಿಮಗೆ ತಿಳಿಯದ ವಿಷಯವಲ್ಲ. ಅದಕ್ಕಾಗಿ ತಾಳ್ಮೆಯು ಅತ್ಯಾವಶ್ಯಕ ಎಂಬುದನ್ನು ಮರೆಯಬಾರದು. ಎಂತೆಂಥಾ ವಿದ್ಯಾವಂತರೇ ವಿಫಲವಾಗಿದ್ದಾರೆ. ನಮ್ಮದೇನು ? ಆದರೂ ಪುರುಷಪ್ರಯತ್ನ ಮಾಡಬೇಕು. ಮಾಡುತ್ತೇನೆ. ಇನ್ನು ಎಕ್ಸಾಮಿನೇಷನ್ ಡ್ಯೂಟಿಗೆ ಹಾಕಿದ್ದಾರೆ. ಸೋಮುವಾರಕ್ಕೆ ಮುಗಿಯುತ್ತೆ. ಬುಧುವಾರ ಆಫೀಸಿಗೆ ಹೋಗಿ ಪ್ರಯತ್ನ ಮಾಡುತ್ತೇನೆ. ಇದಕ್ಕೆ ಸ್ವಭಾವವಾಗಿ ದೈವಸಹಾಯವೂ ಬೇಕು.

ಇಲ್ಲಿ ಮಗುವಿಗೆ ಸ್ವಲ್ಪ ಶೀತವಾಗಿ ತೊಂದರೆಪಡುತ್ತಾ ಇದೆ. ಚಿಕಿತ್ಸೆಯನ್ನು ಸಹ ಮಾಡಿಸುತ್ತಿದ್ದೇನೆ. ಸಂಸಾರದ ತಾಪತ್ರಯ. ನನ್ನ ದುರವಸ್ಥೆ ನಿಮಗೆ ಗೊತ್ತೇ ಇದೆ. ಪುನಃ ಅರಿಕೆ ಮಾಡಿಕೊಳ್ಳುವುದೇನು ? ನಿಮ್ಮ ಮಿತ್ರರು ವೇ|| ಮೂರ್ತಿ ಶ್ರೀ...ಶಾಸ್ತ್ರಿಗಳ ಮನೆಯಲ್ಲಿಯೂ ಎಲ್ಲರೂ ಆರೋಗ್ಯವಾಗಿದ್ದಾರೆ. ತಮ್ಮ ಕಾಗದವನ್ನು ತೋರಿಸಿದೆ. ಅವರೂ ಕೂಡ ನನ್ನನ್ನು ನೀವು ಇಂಥಾ ಅಸಾಧ್ಯ ಕೆಲ್ಸಕ್ಕೆ ಒಪ್ಪಬಾರದಾಗಿತ್ತೆಂದೂ ಯಾವ ಕೆಲ್ಸವೂ ಸುಮ್ಮನೆ ಆಗಲಾರದೆಂದೂ, ನಾನೂ ಎರಡಾವರ್ತಿ ಹೋಗಿ ವಾಪಸ್ಸು ವಿಫಲವಾಗಿ ಬಂದೆನೆಂದೂ ಹೇಳಿದರು. ಅಲ್ಲದೆ ನಿಮ್ಮ ಸ್ನೇಹಿತರು...ರನ್ನು ನೋಡಲು ಎರಡು ಸಲ ಹೋಗಿದ್ದೆ. ಅವರೂ ಸಿಕ್ಕಲಿಲ್ಲ. ಅವರ ಮೂಲಕ

ಮುಂದುವರಿಸೋಣವೆಂದು ಯೋಚಿಸಿದ್ದೇನೆ. ಬುಧವಾರ ಅವರನ್ನೂ ನೋಡಿಕೊಂಡು ಮುಂದುವರಿಸಿ ನಿಮಗೆ ಜವಾಬು ಬರೆಯುತ್ತೇನೆ.

ಹಾಲಿ ಈಗ ಮನೆಯ ರಿಪೇರಿ ವಗೈರೆಗೆ ಹಣವೇನಾದರೂ ಖರ್ಚಿಗೆ ಅವಸ್ಯಕತೆಯೆ ಹೇಗೆ ? ಸೌ॥ ವತಿಗೆ ತನ್ನ ಸ್ವಂತ ಖರ್ಚಿಗೆ ಸೀರೆ ತೆಗದುಕೊಳ್ಳಲು ಮತ್ತು ಸಂಕ್ರಾಂತಿ ಹಬ್ಬಕ್ಕೆ ಖರ್ಚಿಗೆ ರೂಪಾಯಿಗಳು ಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ತಾತ್ಸಾರ ಮಾಡದೆ 30 ರೂಪಾಯಿಗಳನ್ನು ಈ ಕಾಗದ ಕಂಡಕೂಡಲೆ ಕಳುಹಿಸಿಕೊಟ್ಟರೆ ಬಹಳ ಉಪಕಾರ ಮಾಡಿದಂತಾಗುತ್ತೆ, ನಾನು ಇಲ್ಲಿಗೆ ಬಂದಾಗಲೇ ಹೇಳಬಹುದಾಗಿತ್ತು, ಆಗ ಸುಮ್ಮನೆ ಇದ್ದು ಮೊನ್ನೆಯ ದಿನ ಹೇಳಿದ್ದರಿಂದ ತಮಗೆ ಬರೆಯಬೇಕಾಯಿತು. ಮನಸ್ಸಿಗೆ ಬೇಜಾರುಪಟ್ಟುಕೊಳ್ಳಬಾರದು. ಅವಕಾಶವಾದಲ್ಲಿ ಈ ತಿಂಗಳು 18 ಅಥವಾ 20ಕ್ಕೆ ನಾನೇ ಒಂದಾವರ್ತಿ ಬರಬೇಕೆಂದಿದ್ದೇನೆ. ಎಷ್ಟರ ಅವಕಾಶವಾಗುತ್ತೋ ಗೊತ್ತಿಲ್ಲ, ಆದ್ದರಿಂದ ನೀವು ದಯಮಾಡಿ ಸೌ॥ವತಿಯ ಅಪೇಕ್ಷೆಯಂತೆ ದಯಮಾಡಿ ರೂಪಾಯಿಗಳನ್ನು ಕಳುಹಿಸಿಕೊಡುತ್ತೀರಾಗಿ ನಂಬಿರುತ್ತೇನೆ. ಇಲ್ಲದಿದ್ದರೆ ಅವರ ಮನಸ್ಸಿಗೆ ನೋವಾಗಬಹುದು, ಅದನ್ನು ನೋಡಲು ನನಗೆ ಇಷ್ಟವಿಲ್ಲ, ನನ್ನ ತಾಪತ್ರಯ, ಸಿಟಿವಾಸ, ಪ್ರೈವೇಟ್ ಪಾಠಗಳು ರಜದಿಂದ ನಿಂತುಹೋಗಿವೆ. ಇಷ್ಟೆಲ್ಲಾ ತಾಪತ್ರಯದಲ್ಲಿ ಮನೆಯಲ್ಲಿ ಮಾರ್ಗಶಿರಬಹುಳ ದಶಮಿ, ಪುಷ್ಯ ಬಹುಳ ದಶಮಿ, ಪುಷ್ಯ ಬಹುಳ ಏಕಾದಶಿ ಈ ದಿನಗಳು ತಿಥಿಗಳು ಬೇರೆ ನಡೆಯಬೇಕು. ಇವೆಲ್ಲಾ ಆಗುವುದರೊಳಗೆ ನನಗೆ ಎಷ್ಟು ತೊಂದರೆ ಎಂಬುದನ್ನು ಹೇಳಲಾರೆ. ತಾವು ವಿದ್ಯಾವಂತರು. ತಮಗೆ ನಾನೇನೂ ಹೆಚ್ಚಿಗೆ ಹೇಳಲು ಯೋಗ್ಯತೆಯೂ ಇಲ್ಲ.ಒಟ್ಟಿನಲ್ಲಿ ತಮ್ಮ ಕೆಲ್ಸವನ್ನು ಮುತವರ್ಜಿಯಿಂದ ಮುಂದುವರಿಸಲು ಭಗವಂತನು ನನಗೆ ಧೈರ್ಯವನ್ನು ಕೊಡಲೆಂದೂ, ಅದರ ಫಲ ತಮಗೆ ಲಭಿಸಲೆಂದೂ ದೇವರನ್ನು ಪ್ರಾರ್ಥಿಸುತ್ತೇನೆ.

ಸೌ। ವತಿಯು ತಮ್ಮ ಕಡೆಯಿಂದ ಬರುವ M.O. ನಿರೀಕ್ಷಣೆಯಲ್ಲಿಯೇ ಇರುತ್ತಾರೆ. ಅದು ಬಂದ ಹೊರತು ಹಬ್ಬದ ಸಲಕರಣೆಗಳನ್ನು ಸಿದ್ಧಪಡಿಸಿಕೊಳ್ಳಲು ಅವಕಾಶವಿಲ್ಲ ಎಂದು ಹೇಳುತ್ತಿದ್ದಾರೆ. ಅಲ್ಲಿ ಎಲ್ಲರ ಕ್ಷೇಮಕ್ಕೂ ಜವಾಬು ಬರೆಯುವುದು.

ಇನ್ನೇನೂ ವಿಶೇಷವಿಲ್ಲ, ಸೌ। ಹೆಸರಿಗೆ ಮಣಿಯಾರ್ಡರ್ ಮಾಡಿರಿ...

ಈ ಪತ್ರದಲ್ಲಿ ಗಮನಿಸಬೇಕಾದುದೆಂದರೆ ಅದರ ಶೈಲಿ. ಹಳ್ಳಿಯ ಮಿತ್ರನ ನೌಕರಿಗಾಗಿ ಪ್ರಯತ್ನ ಮಾಡುವ ವಿಷಯದ ಜೊತೆಗೆ ಇತರ ಸಂಗತಿಗಳು ಹೇಗೆ ಕ್ರಮವರಿತು ಜಾಗ ಪಡೆದಿವೆ ಎಂಬುದನ್ನು ಇಲ್ಲಿ ಗಮನಿಸಬೇಕು. ಒಮ್ಮೆ ಉದ್ಯೋಗಕ್ಕೆ ಸಹಾಯ ಮಾಡುವ ಸಂಗತಿ, ಮತ್ತೊಮ್ಮೆ ತಮ್ಮ ಬಡತನ, ಹಣ ಕಳುಹಿಸಿರೆಂಬ ಸಂಗತಿ. ಈ ಜಾಣತನ ನಗರೀಕರಣದ ಮಡಿಲಿನಿಂದ ಮೊದಲ ಬಾರಿ ಅಪರೂಪವಾಗಿ ಈ ಸಮುದಾಯದಲ್ಲಿ ಇಲ್ಲಿ ಗೋಚರಿಸಿದೆ.

೯೫

ತೋಟದ ವ್ಯವಹಾರ

ಪ್ರವಾಸ ಹೋಗಿರುವ ರೈತಮಿತ್ರರಿಗೆ ಬರೆದ ಕಾರ್ಡು

ಕ್ಷೇಮ ಶ್ರೀ ಬೆಂಗಳೂರು,೫.೭.೧೯೫೮

ಮ॥ ರಾ॥ ಶ್ರೀ...ಗಳಿಗೆ ನಮಸ್ಕಾರಗಳು, ಅದಾಗಿ

...ನಾನು ಎರಡು ದಿನವಿದ್ದು ಬರಬೇಕೆಂದಿದ್ದವನು ಇಲ್ಲಿಯ ಅನಿವಾರ್ಯ ಮತ್ತು...ಕಾಟದಿಂದ ಇದುವರಿಗೂ ಇರಬೇಕಾಗಿ ಬಂತು. ನನ್ನ 5ನೇ ಮಗನಿಗೆ ಇಂಜಿನೀರಿಂಗಿನಲ್ಲಿ ಸೀಟು ಸಿಕ್ಕುವ ಹಾಗಿದೆ. ಅಡಿಕೆ ಮೊಬಲಗಿನ ಪೈಕಿ 200 ರೂಪಾಯಿಗಳು...ನಿಂದ ಬಂದರೂ ಸಾಕಾಗುವಂತೆ ಇಲ್ಲ, ಅವನಿಗೂ ಇನ್ನೂ 50 ರೂಪಾಯನ್ನು T.M.O.ನಲ್ಲಿ ಕಳುಹಿಸುವಂತೆ ಕಾಗದ ಬರೆದಿದ್ದೇನೆ. ಮೊಬಲಗು ನನಗೆ 8ನೇ ತಾರೀಖು ಸಾಯಂಕಾಲದ ಒಳಗೆ ತಲಪಿರಬೇಕು. ಅವನು ಸೋಮವಾರವೇ ಕಳುಹಿಸದಿದ್ದ ಭಾಗದಲ್ಲಿ ಅವರ ಮನೆಗೆ ಹೋಗಿ ಮಂಗಳವಾರ ಅರಕಲಗೂಡಿನಿಂದ ಬೆಳಗ್ಗೆ ನನಗೆ ಟೆಲಿಗ್ರಾಂ M.O. ಕಳುಹಿಸುವಂತೆ ಹೇಳಿ. ಅವನಿಗೆ ತಗಾದೆ ಮಾಡಿ ಕಳುಹಿಸಲು ಏರ್ಪಾಡು ಮಾಡಿ.

ತೋಟದಲ್ಲಿ ಬಾಳೆಗೊನೆಗಳು ಸುಮಾರು 10 ಗೊನೆ ಬಲಿತಿರಬಹುದು...ನನ್ನೂ ಕರೆದುಕೊಂಡು ತೋಟಕ್ಕೆ ಹೋಗಿ ಮಧುರಂಗದ ಗೊನೆ 1 ಬೂದಬಾಳೆ 2 ರಸಬಾಳೆ 1 ಮರಬಾಳೆ 8 ಜುಂಮ್ಲಾ 12 ಗೊನೆಯನ್ನು ಎಣಿಸಿ ಯಾರಿಗಾದರೂ ಕೊಟ್ಟು ಮೊಬಲಗು ನಿಮ್ಮಲ್ಲಿಯೇ ಇಟ್ಟರಿ. ನಾನು ಬಂದು ತೆಗೆದುಕೊಳ್ಳು ತ್ತೇನೆ. ಅಂತು...ನು ಮೊಬಲಗು T.M.O. ಮಾಡುವಂತೆ ನೋಡಿಕೊಳ್ಳಿ. ಮನೆಯಲ್ಲಿ 3 ಗೊನೆ ಇದ್ದದ್ದು ಇದುವರಿಗೆ ಇಲಿ ಪಾಲಾಗಿರಬಹುದು. ಇಲ್ಲಿ ನಾಳೆ...ಹುಡುಗನನ್ನು ಇಂಜಿನೀರಿಂಗ್‌ಗೆ ಅಡ್ಮಿಟ್ ಮಾಡಿ ಬರುತ್ತೇನೆ.

ಇತಿ ನಮಸ್ಕಾರಗಳು

ಇಪ್ಪತ್ತನೆಯ ಶತಮಾನದ ಮಧ್ಯದ ಹೊತ್ತಿಗೆ ಆಧುನಿಕ ವಿದ್ಯೆಗೆ ತೊಡಗಿಕೊಳ್ಳುವುದು ವ್ಯಾಪಕವಾಯಿತು. ವೈದ್ಯಕೀಯ ಸೌಲಭ್ಯದ ಕಾರಣದಿಂದ, ಹುಟ್ಟಿದ ಮಕ್ಕಳಲ್ಲಿ ಬಹುಪಾಲು ಉಳಿಯುವಂತಾಯಿತು. ನಗರೀಕರಣಕ್ಕೂ, ಸಾಮಾಜಿಕ ಸ್ಥಿತ್ಯಂತರಕ್ಕೂ ಬೀಜಾಂಕುರವು ಆಗಲೇ ಆಯಿತು.

೯೬

ನೌಕರಿ : ತಂದೆಯ ಪ್ರತಿಕ್ರಿಯೆ

ನೌಕರಿ ದೊರೆತ ಮಗನು, ಅದನ್ನು ಇಷ್ಟಪಡದೆ ಹಳ್ಳಿಗೆ ಬಂದು ವ್ಯವಸಾಯದಲ್ಲಿ ನಿರತನಾಗಬಯಸಿದುದಕ್ಕೆ, ತಂದೆಯ ಪ್ರತಿಕ್ರಿಯೆ ಇರುವ ಅಂತರ್ದೇಶೀಯ ಪತ್ರ

ಹಾಸನಜಿಲ್ಲೆಯ ಹಳ್ಳಿ

ಕುಶಲಮ್ ಶ್ರೀಃ 17/6/70

ಚಿ.ಗೆ. ಆಶೀರ್ವಾದಗಳು. ಉಭಯ ಕುಶಲೋಪರಿ ಸಂಪ್ರತಿ. ನಿನ್ನ ಸುಖಪ್ರಯಾಣದ ಬಗ್ಗೆಯೂ ಆರೋಗ್ಯದ ಬಗ್ಗೆಯೂ ನಿನ್ನಿಂದ ಕಾಗದ ಬರಲಿಲ್ಲ, ವ್ಯಾಕುಲವುಂಟಾಗಿದೆ. ಪ್ರಕೃತ ನಾನು ನಿನಗೆ ಬರೆದ ಕಾಗದಕ್ಕೂ ಉತ್ತರ ಇಲ್ಲ. ಅದು ನಿನಗೆ ತಲಪಲಿಲ್ಲವೆ? ಆಫೀಸಿನಲ್ಲಿ ನೋಡು. ನಿನಗೆ ಈ ವಿಷಯಗಳನ್ನು ತಿಳಿಸಬೇಕಾಗಿದೆ.

ಊರಿನಲ್ಲಿ ತಿನ್ನಲಿಕ್ಕೆ ಮಣ್ಣೂ ಉಳಿಯಲಿಕ್ಕಿಲ್ಲ. ಆದ್ದರಿಂದ ನೀನು ಪರಮಾತ್ಮನು ನಿನಗೆ ಕರುಣಿಸಿರುವ ಅನ್ನವನ್ನು ದೃಢಪಡಿಸಿಕೊ. "ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ" ಎಂಬಂತೆ ಮಾಡಿಕೊಳ್ಳಬೇಡ.

ಸಹಸಾ ವಿದಧೀತ ನ ಕ್ರಿಯಾಮ್
ಅವಿವೇಕಃ ಪರಮಾಪದಾಂ ಪದಮ್ ।

ಇದನ್ನು ಚೆನ್ನಾಗಿ ಮನನ ಮಾಡು. ''ನವಂತಿ ಸಂತಸ್ತ್ರೈಲೋಕ್ಯಾದಪಿ ಲಬ್ಧುಂ ಸಮುನ್ನತಿಮ್" ಇದರ ಅರ್ಥವನ್ನು ಗ್ರಹಿಸು.

ನೀನು ಇದುವರೆಗೂ ಒಂದು ಗಡಿಯಾರವನ್ನು ಏಕೆ ಕೊಂಡಿಲ್ಲ?...ನಲ್ಲಿ ಸಿಗುವುದಿಲ್ಲವೆ ? ಆ ಸಮಸ್ಯೆ ನಿಸರ್ಗಾವಾಗಿಲ್ಲ. ಎರಡು ಸೆಟ್ಟು ಬಟ್ಟೆ ಇರಬೇಕೆಂಬ ನಿಯಮವಿಲ್ಲ. ಇನ್ನೂ ಎರಡು ಸೆಟ್ಟು ಹೊಲಿಸಿಕೊ. ನಾನಂತೂ ನಿಮಗೆ ಒಳ್ಳೆ ಬಟ್ಟೆ ಹೊಲಿಸಿ ಕೊಡಲಾರೆ. ನಿಮ್ಮ ಹಣದಲ್ಲಿ ನೀವು ಒಳ್ಳೆ ಬಟ್ಟೆ ಹೊಲಿಸಿಕೊಳ್ಳಲು ನನ್ನ ಅಡ್ಡಿಯಿಲ್ಲ. ನಿಮ್ಮ ಹಣದಲ್ಲಿ ದೇಹಪೋಷಣೆ ಮಾಡಿಕೊಳ್ಳಿ. ನೀನು ನಿನ್ನ ದೇಹ, ಆರೋಗ್ಯಗಳ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳಬೇಕು. ಮನೆ ಬದಲಾಯಿಸಿದ್ದೀಯಾ? ಅಣಿಯಾಗಿದೆಯೆ ? ನಿನ್ನ ವೃತ್ತಿ ನಿರ್ವಿಘ್ನವಾಗಿ ಯಶಸ್ವಿಯಾಗಿ ನಡೆಯಲಿ...ನೀನು ಈ ಕಾಗದಕ್ಕೂ ಉತ್ತರ ಬರೆಯದಿದ್ದರೆ ನಿಮ್ಮ ಮೆನೇಜರಿಗೆ ಬರೆಯುತ್ತೇನೆ.

ಶಾಂತಿಃ ಪುಷ್ಟಿಸ್ತುಷ್ಟಿಶ್ಚಾಸ್ತು.

ಇತಿ ಶಂ

೯೭

ಹುಡುಗುರು ಒಳ್ಳೆಯವರು

ಅಧ್ಯಾಪಕರೊಬ್ಬರು ತಮ್ಮ ತಂದೆಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಕೋಲಾರ

22.9.85

...ಇಲ್ಲಿ ಯಾವ ಬೇಸರವೂ ಇಲ್ಲ. ಊರಿಗೆ ದೂರ ಅನ್ನುವುದೊಂದು ಬಿಟ್ಟರೆ ಬಹಳ ಚೆನ್ನಾಗಿದೆ. ಪರೀಕ್ಷೆಯಲ್ಲಿ ಬಹಳ ಸ್ಟ್ರಿಕ್ಟ್ ಆಗಿದ್ದಾಗ ಭಯದ ವಾತಾವರಣವಿತ್ತು. ಆದರೂ ಯಾರೂ ಯಾರಿಗೂ ಕೈ ಎತ್ತಿಲ್ಲ. ಬದಲಿಗೆ ಈಗ ತರಗತಿಯಲ್ಲಿ ಬೇರೆಯ ತರಗತಿಯ ಹುಡುಗರೆಲ್ಲಾ ತುಂಬಿಕೊಂಡು ಪಾಠ ಕೇಳುತ್ತಾರೆ. ಸ್ಟಾಫ್ ರೂಮಿಗೇ ಬಂದು ಕರೆದುಕೊಂಡು ಹೋಗುವಷ್ಟು ಆಸಕ್ತಿ. ನೂರಾರು ಹುಡುಗರಿದ್ದರೂ ಗಲಾಟೆ ಒಂದು ಚೂರೂ ಇಲ್ಲ. ಉಳಿದವರು ಇಲ್ಲಿ ಹುಡುಗರ ಬಗ್ಗೆ ಹೇಳುವ ಟೀಕೆಗಳು ನಿಜವೇ ಎಂದು ಆಶ್ಚರ್ಯವಾಗುವಷ್ಟು ಒಳ್ಳೆಯ ರೀತಿ ಇದ್ದಾರೆ. ಇದಕ್ಕೆ ಕಾರಣ ಒಂದೋ, ಎರಡೋ, ಯಾವುದೋ ಗೊತ್ತಿಲ್ಲ.

ಈ ಸಮುದಾಯದ ಅಧ್ಯಾಪಕರು ಎಲ್ಲೆಡೆ ಅದ್ಭುತ ಯಶಸ್ಸು ಸಾಧಿಸಿದ್ದಾರೆ. ಇದೊಂದು ಪ್ರಾತಿನಿಧಿಕ ಪತ್ರ.

ಗುಚ್ಛ - 5

ಸಂಸ್ಕಾರ ವಲಯ

ಹಬ್ಬ, ವ್ರತ, ಹೋಮಗಳು ಹಾಗೂ ಸಂಸ್ಕಾರಗಳಿಗೆ ಸಂಬಂಧಿಸಿದ ಕೆಲವು ಪತ್ರಗಳು ಇಲ್ಲಿವೆ. ಈ ಸಂಬಂಧದಲ್ಲಿ ಪತ್ರಗಳು ಸಾಮಾನ್ಯವಾಗಿ ಆಹ್ವಾನರೂಪವಾಗಿ ಇರುವುದರಿಂದ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

೯೮

ಸಂಗೀತ ಕಚೇರಿ (ಮಿತ್ರರೊಬ್ಬರಿಗೆ ಮೈಸೂರಿಗೆ ಬರೆದ ಕಾರ್ಡು)

ಕುಶಲಂ ಶ್ರೀಃ ತಾ। 5 $\frac{4}{35}$

ಚಿ।ಗೆ ಆಶೀಃ

ಪಿ।...ಮೂರ್ತೀಕೃತ ಉ.ಕು.ಸಂ.

ನಾವುಗಳು ಬೇಲೂರಿಗೆ ರಥೋತ್ಸವಕ್ಕಾಗಿ ಹೊರಡಬೇಕೆಂದಿದ್ದೆವು. ಹಲವು ಅನಿವಾರ್ಯಗಳಿಂದ ಈಗ ಹೊರಡುವ ನಿರ್ಧಾರವಿಲ್ಲದ್ದರಿಂದ ಈ ಅಂಶವನ್ನು ಹಳ್ಳಿಮೈಸೂರು ವೇ।। ಸೋಮನಾಥಯ್ಯನವರಿಗೆ ತಿಳಿಸಿ ನಮ್ಮ ನಿರೀಕ್ಷಣೆಯು ಅನವಶ್ಯಕವೆಂದು ಸೂಚಿಸುವುದು. ನಾವೆಲ್ಲರೂ ಭಗವದನುಗ್ರಹದಿಂದ ಕುಶಲರು. ನಮ್ಮ ತೀ। ಭಾವನವರು ಇಲ್ಲಿ ಆರೋಗ್ಯವಾಗಿದ್ದಾರೆ. 2 ವಾರಗಳು ಕಳೆದ ನಂತರ ಅಲ್ಲಿಗೆ ಬಂದಾರು. ಅಲ್ಲಿನ ಬಿ.ಕೃ.ರವರ ರಾಮಮಂದಿರದ ರಾಮೋತ್ಸವದ ಸಂಗೀತದ ಏರ್ಪಾಡಿನ ಪ್ರೋಗ್ರಾಂ ಮತ್ತು ಟೈಂಟೇಬಲ್ ಟಿಕೆಟ್ಸ್ ರೇಟ್ಸ್ ವಗೈರೆ ಎಲ್ಲವನ್ನೂ ತಿಳಿಸುವುದು. ಎಲ್ಲವೂ ತಿಳಿಯದಿದ್ದರೆ ತಿಳಿದಷ್ಟನ್ನಾದರೂ ಬರೆವುದು. ಮುಸ್ಲಿ ಸುಬ್ರಹ್ಮಣ್ಯಯ್ಯನವರ, ಚಂಪೆ ಸುಬ್ಬಯ್ಯಭಾಗವತರ ಇನ್ನೂ ಮುಖ್ಯರಾದ ಸಂಜೀವರಾಯರೇ ಮುಂತಾದವರಗಳದನ್ನು ಕೇಳುವ ಅಭಿಲಾಷೆ ಇದೆ. ಅವು ಯಾವ ಯಾವ ದಿವಸ ಎಂಬುದನ್ನಾದರೂ ಬರೆವುದು. ನಿರೀಕ್ಷಣೆಯಲ್ಲಿದ್ದೇನೆ. ಇಲ್ಲಿ ಭಗವದನುಗ್ರಹದಿಂದ ಸರ್ವರೂ ಕುಶಲರು. ಇತ್ಯಾಶೀಃ

ಪಿ.ಸು. ಮೂರ್ತಿ

ಸಂಗೀತಾಭಿಲಾಷೆಯನ್ನು ಈ ಪತ್ರದಲ್ಲಿ ಗುರುತಿಸಬಹುದು.

೯೯

ಪುರೋಹಿತಮಿತ್ರರಿಗೆ ಕಾರ್ಡು

ಕ್ಷೇಮ ಶ್ರೀಃ ತಾ। 12/6/37

ಚಿ।। ಮುತಣ್ಣನಿಗಾಶೀಃ ಉ.ಕು. ಸಂಪ್ರತಿ. ನಾನು ಈ ದಿವಸ ಕಳ್ಳಿ ಕೊಪ್ಪಲಿಗೆ ಪ್ರಯಾಣ ಮಾಡಿದೇನೆ. ಅಲ್ಲಿಂದ ಬುಧವಾರ ಗುರುವಾರ ಹಿಂತಿರುಗುತ್ತೇನೆ. ಈ ಶು. ೧೦ ಶುಕ್ರವಾರ ಪಶ್ಚಿಮವಾಹಿನಿಯಲ್ಲಿ Y.G. ಕೇಶವರಾಯರ ಮಗನಿಗೆ ಉಪನಯನವಾಗಬೇಕೆಂದು ಕಾಗದ ಬಂದಿದೆ. ಬುಧವಾರವೇ ನೀನು ಪಶ್ಚಿಮವಾಹಿನಿಯಲ್ಲಿ ಬಂದು ಪುನಃ ಶುಕ್ರವಾರ ಅವರ ತಮ್ಮನಿಗೆ ಲಗ್ನವೂ ನಡೆಯಬೇಕಾಗಿದೆ. ಅನುಕೂಲವಾದರೆ ಅದನ್ನೂ ನೆರವೇರಿಸಿ ಬರುವುದು. ಬೇಜಾರಾದಲ್ಲಿ ಉಪನಯನ ಕಳೆದ ನಂತರ ಊರಿಗೆ ಬರುವುದು. ನಂತರ ನಾನು ಬೇಕಾದರೆ ಹೋಗಿ ಬರುವೆನು. ಇಲ್ಲಿ ಮಳೆ ಇಲ್ಲ, ಒಡ್ಡರಹಳ್ಳಿಯಲ್ಲಿಯೂ ಇಲ್ಲಿಯೂ ಚಿ।ಸೌ। ಗಳಾದಿಯಾಗಿ ನಾವೆಲ್ಲರೂ ದೈವಾನುಗ್ರಹದಿಂದ ಹುಷಾರಾಗಿದೇವೆ. ಮುಖ್ಯವಾಗಿ ಎಲ್ಲ ಲಗ್ನಗಳನ್ನೂ ನೀನೇ ನೆರವೇರಿಸಬೇಕಾಗಿದೆ. ಎಚ್ಚರಿಕೆ ಇರಲಿ. ಆಶೀಃ. ಶ್ರೀನಿವಾಸ ಉಪಾಧ್ಯಾಯ.

೧೦೦

ಋಷಿಪಂಚಮಿ (ಕಾರ್ಡು)

ಕ್ಷೇಮ ಶ್ರೀ ಹಾಸನಸೀಮೆಯ ಹಳ್ಳಿ
1/9/37

ತೀ|| ಮಾವಯ್ಯನವರ ಸ||ಕ್ಕೆ...ಹಳ್ಳಿಯ...ನ ಸಾ| ವಿಜ್ಞಾಪನೆಗಳು. ಅದಾಗಿ ಈವರಿಗೆ ನಮ್ಮ ಮನೆಯಲ್ಲಿ ಬಾಲಕರೇ ಆದಿಯಾಗಿ ಸರ್ವರೂ ಕುಶಲ. ತಮ್ಮ ಮನೆಯಲ್ಲಿ ಸರ್ವರ ಆರೋಗ್ಯಾತಿಶಯಗಳಿಗೆ ಪತ್ರಿಕಾ ದಯಪಾಲಿಸಬೇಕಾಗಿ ಬೇಡುತ್ತೇನೆ. ತಾವು ಮ||...ಯರ ಸಂಗಡ ಕಳುಹಿಸಿದ ಕ್ಷೇಮ ಸಮಾಚಾರದ ಕಾಗದ ತಲಪಿತು. ಆದರೆ ಜವಾಬು ಕಳುಹಿಸಲು ನಾನು ಊರಲ್ಲಿರಲಿಲ್ಲವಾಗಿ ಅವಕಾಶ ದೊರೆಯಲಿಲ್ಲ. ಕ್ಷಮಿಸಬೇಕು. ಇದೇ ಈಶ್ವರನಾಮ ಸಂವತ್ಸರದ ಭಾದ್ರಪದ ಶುದ್ಧ ಪಂಚಮಿ ದಿವ್ಸ ನಮ್ಮ ಮಾತೋಶ್ರೀಯವರು ಋಷಿಪಂಚಮಿ ವ್ರತವನ್ನು ನಡೆಸಬೇಕೆಂದು ನಿಶ್ಚಯ್ಸಿರುವದ್ದರಿಂದ ತಾವು ಮನೆಯಲ್ಲಿ ಸೌ||...ಮ್ಮ ಆದಿಯಾಗಿ ಎಲ್ಲರನ್ನೂ ಕರೆದುಕ್ಕೊಂಡು ಎರಡು ದಿವ್ಸ ಮುಂಚಿತವಾಗಿ ದಯಮಾಡ್ಸಿ ವ್ರತವು ಸಾಂಗವಾಗಿ ನೆರವೇರುವಂತೆ ಮಾಡ್ಸಬೇಕಾಗಿ ಬೇಡುತ್ತೇನೆ. ತಾವು ವಿನಹ ಬೇರೆ ಹಿತ್ಯೈಷಿಗಳು ಮತ್ಯಾರಿರುವರೆಂಬ ಅಂಶ ತಮಗೇನೆ ತಿಳಿದಿರುತ್ತಾಗಿ ಕಾರ್ಡಿನಲ್ಲಿ ಉಪಚಾರೋಕ್ತಿಗಳನ್ನು ಬರೆಯುವುದು ಅನುಚಿತ. ಖಂಡ್ತವಾಗಿ ತಾವು ದಯಮಾಡ್ಸಬೇಕಾಗಿ ಬೇಡುತ್ತೇನೆ.

ಮ|| ನಾರಣಪ್ಪನವರ ಸಂಗಡಲೂ ಈ ಸಂಗ್ತಿಗಳನ್ನು ಮೊಖ್ತ ಅರಿಕೆ ಮಾಡಿಕೊಂಡಿದ್ದೇನೆ. ಅವರೂ ಸಹ ಗೌರೀ ಹಬ್ಬಕ್ಕೆ...ಹಳ್ಳಿಗೆ ದಯಮಾಡ್ಸುವರಾಗಿದ್ದಾರೆಂದು ತಿಳಿಯಿತು. ಮುಂದೆ ಎಲ್ಲವನ್ನೂ ನಡಿಸುವ ಭಾರ ತಮ್ಮದಾಗಿದೆ.

ಇತಿ ವಿಜ್ಞಾಪನೆಗಳು

ಸಂಕೇತಿಗಳು ವ್ರತಗಳನ್ನು ಕರ್ನಾಟಕಕ್ಕೆ ಬಂದ ನಂತರ ಇಲ್ಲಿನವರಿಂದ ಸ್ವೀಕರಿಸಿದರು. ಹೀಗೆ ಈ ವ್ರತಗಳನ್ನು ಎಷ್ಟು ಹಿಂದಿನಿಂದ ಆಚರಿಸುತ್ತಾ ಬಂದಿರುವರೆಂಬುದಕ್ಕೆ ಇರುವ ಲಿಖಿತ ದಾಖಲೆಗಳು ಇಂಥ ಪತ್ರಗಳಲ್ಲಷ್ಟೇ ದೊರೆಯಬೇಕು, ಆದರೆ ವ್ಯವಹರಿತ ಪತ್ರಗಳೂ ಆಮೂಲಾಗ್ರವಾಗಿ ಉಳಿದುಬಂದಿಲ್ಲ.

೧೦೧

ಸೋದರಬದಿಗೆ (ಕಾರ್ಡು)

8.10.44

...ಈ ಬಾರಿ ಸೋದರಬದಿಗೆಗೆ ಇಲ್ಲಿ ದಯಮಾಡಿಸಿ ಎಲ್ಲರ ಮನಸ್ಸನ್ನು ಸಂತೋಷಪಡಿಸುವಿರಾಗಿ ನಂಬಿರುತ್ತೇನೆ. ಕಾರ್ಯಗೌರವದಲ್ಲಿ ಇದ್ದುದರಲ್ಲಿ ಅವಕಾಶ ಮಾಡಿಕೊಂಡು ಬಂದು ಒಂದೆರೆಡು ದಿವಸಗಳು ಇದ್ದು ಮನಸ್ಸಿಗೆ ಸಮಾಧಾನವಾಗಲು ತಮ್ಮ ಅಮೋಘವಾದ ಸಲಹೆಗಳನ್ನು ನೀಡುವುದಾಗಿಯೂ ಬಯಸುತ್ತೇನೆ. ಹೆಚ್ಚಿನ ವಿಚಾರಗಳು ಇಲ್ಲಿ ಸೋದರಬದಿಗೆಯು ಬುಧವಾರವೆಂದು ಹೇಳುತ್ತಾರೆ...

ಹಬ್ಬಗಳು ನಡೆಯುವ ದಿನಗಳು ಪಂಚಾಂಗವನ್ನಾಧರಿಸಿ ಇರುತ್ತವೆ. ಆದರೆ ಇದರಲ್ಲಿಯೂ ಸ್ಮಾರ್ತ, ವೈಷ್ಣವ, ಶ್ರೀವೈಷ್ಣವರಲ್ಲಿ ಭಿನ್ನತೆ ಬರುವ ಸಂದರ್ಭಗಳಿವೆ. ಸ್ಮಾರ್ತರಲ್ಲಿಯೇ ಇಂಥ ಕೆಲವು ಸಂದರ್ಭಗಳು ಜಿಜ್ಞಾಸೆಗೆ ಗ್ರಾಸವಾಗುತ್ತವೆ.

೧೦೨

ಸಂಸ್ಕಾರ ಕೂಟ

ಸಂಸ್ಕಾರಗಳನ್ನು ಕೂಡಿಸಿ ಮಾಡುವಂತೆಯೇ, ಅನೇಕರಿಗೆ ಸಂಬಂಧಿಸಿದ ಸಂಸ್ಕಾರಗಳನ್ನು ಒಟ್ಟಿಗೆ ನಡೆಸುವುದು ಆಧುನಿಕ ಪದ್ಧತಿ. ಇದು ವೆಚ್ಚವನ್ನು ಕಡಿತಗೊಳಿಸುವ ಉಪಾಯವೂ ಹೌದು. ಕಾರ್ಡು

ಹಾಸನಜಿಲ್ಲೆಯ ಹಳ್ಳಿ, 13-4-55

ಇಲ್ಲಿ ಚಿ||...ನಿಗೆ...ಹಳ್ಳಿಯ ಚಿ||...ನವರ ಮಗಳನ್ನು ತಂದು ವೈಶಾಖ ಶುದ್ಧ ದಶಮಿ ದಿವಸ...ಹಳ್ಳಿಯಲ್ಲೇ ಲಗ್ನ ನಡೆಯಬೇಕಂತ ನಿಶ್ಚಯ ಮಾಡಿರುತ್ತೆ. ಮಾತುಕತೆಗಳೆಲ್ಲಾ ಆಗಿರುತ್ತೆ. ಇನ್ನೂ ಲಗ್ನ ಕಟ್ಟಿಲ್ಲ...ಚಿ||...ಗೂ ಮತ್ತು ಚಿ||...ಗೂ ಚೌಲ ನಡೆಯಬೇಕೆಂದೂ ನಿಶ್ಚಯ ಮಾಡಿದ್ದೇವೆ. ತಾವು ಈ ವಿಷಯದಲ್ಲಿ ಉದಾಸೀನ ಮಾಡದೆ ದಯವಿಟ್ಟು ನಾಲ್ಕು ದಿವಸ ಮುಂಚಿತವಾಗಿಯೆ ಇಲ್ಲಿಗೆ ಬರಬೇಕು.

೧೦೩

ಹಿರಿಯ ಬಂಧುವಿಗೆ (ಹೋಮದ ವಿಷಯ)

ಶಿವಮೊಗ್ಗ, ತಾ| 9.10.58

ತೀ| ಭಾವನವರ ಸ.ಕ್ಕೆ...ನ ವಿಜ್ಞಾಪನಂಗಳು. ಅದಾಗಿ ಈವರಿಗೆ ಉಭಯಕುಶಲೋಪರಿ ಸಾಂಪ್ರತ. ತಮ್ಮ 7.10.58ರ ಪತ್ರ ತಲಪಿತು. ಇಲ್ಲಿನ ಹೈಸ್ಕೂಲ್ ಹೆಡ್‌ಮಾಸ್ಟರವರಿಂದ ಸರ್ಟ್‌ಫಿಕೇಟ್ ಮಾಡಿಸಿ ಈ ಕೂಡ ಕಳುಹಿಸಿದ್ದೇನೆ.

ಚಂಡಿಹೋಮದ ವಿಷಯದಲ್ಲಿ ಊರಿಗೆ ಕಾಗದ ಬರದಿದ್ದು ಸರಿಯಷ್ಟೆ. ಈಗ ತೀರ್ಥರೂಪರವರು ಅವರು ಹೇಳುವ ರೀತಿಯಲ್ಲಿ ಮಾತ್ರ ಮಾಡುವದಾದರೆ ಆಗಬಹುದೆಂದು ಇಲ್ಲವಾದರೆ ಚಂಡಿಹೋಮವೇ ಬೇಡವೆಂದು ಪತ್ರ ಬರೆದಿದ್ದಾರೆ. ನಾನು ಸಾಲ ತೆಗೆಯಲು ಏರ್ಪಾಡು ಮಾಡಿ ಸಾಲ ತೀರಿಸುವ ಹೊರೆಯೂ ನನಗೆ ಇರಲೆಂದು, ಚಂಡೀಹೋಮ ಆದರೆ ಸಾಕೆಂದು, ಈಗಿರುವ ಕಷ್ಟಗಳಾದರೂ ಕಳೆದು ದೇವರು ಒಳ್ಳೆಯದನ್ನು ಮಾಡಬಹುದೆಂದು ಬಹಳ ಕಷ್ಟಪಟ್ಟು ಏರ್ಪಾಡು ಮಾಡಿದ್ದಕ್ಕೆ ಈ ಉತ್ತರ ಬಂದಿದೆ. ನೆನ್ನೆ ಉತ್ತರ ಬಂದಾಗಿನಿಂದ ಮನಸ್ಸಿಗೆ ತುಂಬಾ ಜಿಗುಪ್ಸೆ ವಿಷಾದ ಉಂಟಾಗಿದೆ. ದೇವರಿಗೆ ನಾವುಗಳು ಪ್ರಪಂಚದ ಮೇಲೆ ಇರುವುದು ಇಷ್ಟವಿಲ್ಲವೋ ಏನೋ ಎಂದು ಯೋಚನೆ ಆಗಿದೆ. ದೇವರು

ಎಂದು ನಮ್ಮ ತೀರ್ಥರೂಪರವರಿಗೂ ಮತ್ತು ಮೇಲಾಗಿ ನಮ್ಮ ಅಣ್ಣನವರಿಗೂ ಒಳ್ಳೆಯ ಬುದ್ಧಿ ಕೊಡುವರೋ ಏನೋ ಹೇಳಲಾರೆ. ನಾನು ಏನೇ ಹೇಳಿದರೂ ಅವರಿಗೆ ಅದು ಪಥ್ಯವಾಗುತ್ತಿಲ್ಲ. ನಾನು ಹೇಳುವುದೆಲ್ಲಾ ವಿರೋಧವೆಂದೂ ಅದಕ್ಕೆ ಪ್ರತಿಯಾಗಿಯೇ ಮಾಡಬೇಕೆಂದೂ ನಿರ್ಧರಿಸಿರುವಂತೆ ಕಾಣುತ್ತಿದೆ.

ಪುನಃ ಊರಿಗೆ ಕಾಗದ ಬರದಿದ್ದೇನೆ. ಉತ್ತರದ ನಿರೀಕ್ಷಣೆಯಲ್ಲಿಯೇ ಇದ್ದೇನೆ. ಉತ್ತರ ಬಂದನಂತರ ಫಲಿತಾಂಶವನ್ನು ಬರೆಯುತ್ತೇನೆ. ದೈವೇಚ್ಛೆ ಹೇಗಿದೆಯೋ ಹೇಳಲಾರೆ. ಮಾ।ಸೌ। ತಾಯಿಯವರು ಆರೋಗ್ಯವಾಗಿರುತ್ತಾರೆ. ಮ।ರಾ। ಭಾವನವರ ಮನೆಯಲ್ಲೂ ಎಲ್ಲರೂ ಆರೋಗ್ಯವಾಗಿರುತ್ತಾರೆ.

ಇತಿ ವಿಜ್ಞಾಪನಂಗಳು

ಆಧುನಿಕ ವಿದ್ಯೆ ಪಡೆದು ಹೊಸ ರೀತಿಯಲ್ಲಿ ಚಿಂತಿಸುವ ಯುವಕರಿಗೂ, ಪಾರಂಪರಿಕವಾಗಿ ಹಳ್ಳಿಯಲ್ಲಿ ಬದುಕು ಸಾಗಿಸುತ್ತಿರುವವರಿಗೂ ಇಂಥ ಅಭಿಪ್ರಾಯ ಭೇದಗಳು ಬರುವುದು ಸಹಜವೂ ಸಾರ್ವತ್ರಿಕ ಸ್ವರೂಪದ್ದೂ ಆದುದು.

೧೦೪

ಋತ್ವಿಕರಿಗಾಗಿ ಹುಡುಕಾಟ (ಆಸ್ತಿಕರೊಬ್ಬರ ಕಾರ್ಡು)

ಕ್ಷೇಮ ಶ್ರೀ 7.6.66

P. Patna

ವೇ॥ಮೂ॥ಗಳಾದ...ಸ॥ಕ್ಕೆ...ಯ ನಮಸ್ಕಾರಗಳು. ಪ್ರಕೃತ ಇಲ್ಲಿ ಈ ಊರಿನ ಶ್ರೀ ಶ್ರೀ ವೈದ್ಯೇಶ್ವರ ಸ್ವಾಮಿಯವರಿಗೆ ಅಭಿಷೇಕಾದಿಗಳನ್ನು ಪ್ರಾರಂಭಿಸಿರುತ್ತೇವೆ. ಅದಕ್ಕಾಗಿ ಅಗ್ರಹಾರ ಮತ್ತು ಬಸವಾಪಟ್ಟಣದಿಂದ ಋತ್ವಿಕರುಗಳನ್ನು ಆಹ್ವಾನಿಸಿ ಗ್ರಾಮಸ್ಥರು ಕೋರಿದ ರೀತಿಯಲ್ಲಿ ಈ ದಿವಸದಿಂದ ಅಭಿಷೇಕಾದಿಗಳು ಪ್ರಾರಂಭವಾಗಿರುತ್ತೆ. ಅದಕ್ಕಾಗಿ ನಿಮ್ಮ ಬೀಗರಾದ ವೇ॥ ಮೂ॥ ಅವಧಾನಿಗಳು ಅಲ್ಲಿಗೆ ಬಂದಿರುತ್ತಾರೆಂದು ಅವರ ಅಣ್ಣಂದಿರು ತಿಳಿಸಿ ಅವರಿಗೆ ಗುರುವಾರ ಸಾಯಂಕಾಲವೇ ಪಿರ್‍ಯಾಪಟ್ಟಣದ ಬಸ್ಸಿನಲ್ಲಿ ಪಿರ್‍ಯಾಪಟ್ಟಣಕ್ಕೆ ಬರಬೇಕೆಂದು ಕೋರಿ ಕಾಗದ ಬರೆಯಿರೆಂದು ಅಪ್ಪಣೆ ಕೊಡ್ಸಿದರ ಮೇಲೆ ಕಾಗದ ಬರೆದಿರುತ್ತೇನೆ. ಅವರು ಬರುವಾಗ...ಮಕ್ಕಳು ಚಿ॥...ಅವಧಾನಿಗಳನ್ನು ಕರೆದುಕೊಂಡು ಖಂಡಿತಾ ಗುರುವಾರ ಸಾಯಂಕಾಲದ ಬಸ್ಸಿಗೆ ಬರಬೇಕೆಂದು ಬೇಡುತ್ತೇನೆ. ಅಲ್ಲದೆ ವೇ॥ ಮೂ॥ ಗಳಾದ ಅಗ್ರಹಾರದ... ಅವಧಾನಿಗಳಾಗಲೀ ಅವರ ಮಕ್ಕಳಾಗಲೀ ಖಂಡಿತಾ ಗುರುವಾರವೇ ಸಾಯಂಕಾಲಕ್ಕೆ ಇಲ್ಲಿಗೆ ಬರಬೇಕೆಂದು ಬೇಡುತ್ತೇವೆ. ಅವರಿಗೆ ಅಗ್ರಹಾರಕ್ಕೆ ಹೋಗಿ ದಯಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದೆನು. ಅವರು ಕೆಲವು ಅನಿವಾರ್ಯಗಳನ್ನು ಹೇಳಿ ಸಾಧ್ಯವಿಲ್ಲವೆಂದು ಹೇಳಿದ್ದರು. ಈಗ ಆ ಅನಿವಾರ್ಯಗಳು ಕಳೆದಿರಬಹುದೆಂದು ಭಾವಿಸುತ್ತೇನೆ. ಆದ್ದರಿಂದ ದಯವಿಟ್ಟು ಅವರ ಪೈಕಿ ಯಾರಾದರೂ ಒಬ್ಬರು ಬರಬೇಕಾಗಿ ಬೇಡುತ್ತೇನೆ. ಇಲ್ಲಿನ ಕಾರ್ಯಗಳಿಗೆ ವೇದಪುರುಷರು ಕಡಿಮೆಯಾಗಿ ಬಹಳ ತೊಂದರೆಯಾಗಿರುತ್ತಾದ್ದರಿಂದ ತಾವು ಮುತುವರ್ಜಿ ವಹಿಸಿ ಸರ್ವರನ್ನು ನನ್ನ ಪರವಾಗಿ ಪ್ರಾರ್ಥಿಸಿ ತಾವು ಸಹ ಕರೆದುಕೊಂಡು ಬರುವಿರಾಗಿ ನಂಬಿರುತ್ತೇನೆ. ಉದಾಸೀನ ಮಾಡಬಾರದಾಗಿ ಬೇಡುತ್ತೇನೆ.

ಇನ್ನೇನೂ ವಿಶೇಷವಿಲ್ಲಾ.

ಇತಿ ನಮಸ್ಕಾರಗಳು

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಪ್ರತಿ ಹಳ್ಳಿಯಲ್ಲಿ ಋತ್ವಿಕರ ಸಂಖ್ಯೆ ಎಷ್ಟು ಹೆಚ್ಚಾಗಿರುತ್ತಿತ್ತೆಂದರೆ ಎಲ್ಲರೂ ಸೇರಿದರೆ ದಕ್ಷಿಣೆ ಹೇಗೆ ಕೊಡುವುದೆಂದು ಸಾಮಾನ್ಯರು ಯೋಚಿಸುತ್ತಿದ್ದರು. ಅರುವತ್ತರ ದಶಕದ ಹೊತ್ತಿಗೆ ಋತ್ವಿಕರ ಅಭಾವ ಪ್ರಾರಂಭವಾಯಿತು.

೧೦೫

ಅನುಷ್ಠಾನ (ಮಗನಿಗೆ ತಂದೆಯ ಅಂತರ್ದೇಶೀಯ ಪತ್ರ)

कुशलम् ಶ್ರೀಃ 4/1/72

ಹಾಸನಜಿಲ್ಲೆಯ ಹಳ್ಳಿ

ಚಿ.ಗೆ. ಆಶೀರ್ವಾದಗಳು. ಉ.ಕು. ಸಂಪ್ರತಿ. ನೀನು ಬರೆದ ಪತ್ರ ನಿನ್ನೆ ತಲಪಿತು.

ಹಣವನ್ನು ನೀನು ಇಲ್ಲಿಗೆ ಕಳುಹಿಸಬೇಡ. ಅಲ್ಲಿಯೇ ಒಂದು ಎಕೌಂಟು ಇಟ್ಟು ಬೇಂಕಿನಲ್ಲಿ ಇಡುವುದು. ಈಗ ನಮ್ಮ ಮನೆಯಲ್ಲಿ ಹಣಕ್ಕೆ ಬೆಲೆಯಿಲ್ಲದೆ ಹೋಗಿದೆ. ಸರ್ವಪ್ರಯತ್ನದಿಂದ ನನಗೆ ಬರುವಷ್ಟರಲ್ಲಿ ಕಾಲಯಾಪನೆ ಮಾಡಬೇಕೆಂದು ನನ್ನ ಅಭಿಪ್ರಾಯ. ಹಣ ಕಂಡರೆ ಅದಕ್ಕೂ ದಾರಿ ಸಿದ್ಧವಾಗುತ್ತದೆ. ಮೂರು ಜನ ದುಡಿದೂ ಒಂದು ಅಂಗುಲ ಮುಂದಕ್ಕೂ ಹೋಗಲಾಗಲಿಲ್ಲ. ಸಾಲ ಹೊತ್ತುಕೊಂಡು ಹೀಗೆ ನಾವು ದುಂದು ಮಾಡುವುದಾದರೆ ಅಪಹಾಸಕ್ಕೆ ಗುರಿಯಾಗಬೇಕಾದೀತು. ನೀನು ಊರಿಗೆ ಬರುವವರೆಗೂ ಕಳುಹಿಸಬೇಡ. ಬರುವಾಗ ಬೇಕಾದಷ್ಟು ಮಾತ್ರ ತೆಗೆದುಕೊಂಡು ಬಾ.

ಅನುಷ್ಠಾನ :–ಅನುಷ್ಠಾನ ಪ್ರಾರಂಭಿಸಿದ್ದೇನೆಂದು ಬರೆದಿದ್ದಿ. ಇಷ್ಟು ದಿನ ಬೇಕಾಯಿತೆ ಪ್ರಾರಂಭಿಸುವುದಕ್ಕೆ ? ಉಳಿದ ಜಪಗಳನ್ನು ಹಿಂದಕ್ಕೆ ತಳ್ಳು. ಬೀಜಮಾತ್ರವಾಗಿ ಜಪಿಸು. ಪ್ರಪಂಚ ಬೇಡ,

ಬೆಳಗ್ಗೆ ೫ ಘಂಟೆಗೆ ಎದ್ದು ನಿನ್ನ ಅನುಷ್ಠಾನವನ್ನು ೬ ಘಂಟೆವರೆಗೆ ಮಾಡು. ನಂತರ ಸ್ನಾನಾದಿಗಳನ್ನು ಜರುಗಿಸು. ಸಂಧ್ಯಾವಂದನಾದಿಯಾಗಿ ಎಲ್ಲ ಜಪವೂ ಅರ್ಧ ಘಂಟೆಯೊಳಗೆ ಮುಗಿಸು. ಅಷ್ಟು ಸಾಕು. ಎಲ್ಲವನ್ನೂ ವಿಧಿವತ್ತಾಗಿ ಅನುಷ್ಠಾನ ಮಾಡುವುದಾದರೆ (ನೌಕರಿಯಲ್ಲಿರುವವರು) ಹೊಟ್ಟೆಗಿಲ್ಲದೆ ಸಾಯಬೇಕಾದೀತು. ವೃತ್ತಿಯಲ್ಲಿ ದೋಷವುಂಟಾದೀತು.

ಚಿ.ಸೌ...ಈಗ ಇಲ್ಲೆ ಇದ್ದಾಳೆ. ಆರೋಗ್ಯವಾಗಿದ್ದಾಳೆ. ಬಳೆ ತೊಡಿಸಿದ್ದಾಯ್ತು. ಈಗ 26/12ರಂದು ನಾತಿಪಿಚಾರನ್ನು ನಡೆಸಿದ್ದಾಯ್ತು. ದ್ರವ್ಯಲೋಭಾದಿಗಳಿಂದ ಸೀಮಂತ ನಡೆಸುವ ಬಗ್ಗೆ ವಿಮುಖರಾಗಿದ್ದಾರೆ. ಈ ಕಾರಣದಿಂದ ಅವರ ಮನೆಯಲ್ಲಿ ಬೆಳೆಯಬೇಕಾಗಿದ್ದ ಸೌಹಾರ್ದ ಬೆಳೆಯಲಿಲ್ಲ. ಪ್ರತ್ಯುತ ವೈಮನಸ್ಯವೇ ಬೆಳೆದಿದೆ.

ನಿನ್ನ ಆಹಾರಾದಿಗಳೆಲ್ಲ ವ್ಯವಸ್ಥಿತವಾಗಿವೆಯೆ ? ಸ್ವಲ್ಪವೂ ಲೋಭ ಮಾಡಿ ದೇಹಕ್ಕೆ ಅಪಾಯ ಮಾಡಿಕೊಳ್ಳಬೇಡ. ದೇಹ ಪಟುವಾಗಿದೆಯೆ ? ಮನಸ್ಸು ಪ್ರಶಾಂತವಾಗಿದೆಯೆ ? ಚಿ॥...ನು ಇಲ್ಲಿಗೂ ಪತ್ರ ಬರೆಯಲಿಲ್ಲ. ಅಂತೂ ಕ್ಷೇಮಸಮಾಚಾರ ತಿಳಿಯಿತು. ಚಿ...ನ ಹೆಂಡತಿ ತೌರಿಗೆ ಹೋಗಿದ್ದಾಳೆ.

ನಾವೆಲ್ಲರೂ ಆರೋಗ್ಯವಾಗಿದ್ದೇವೆ. ನೀನು ಅಲ್ಲಿ ತುಪ್ಪ ಕೊಳ್ಳುವುದಿಲ್ಲ. ಆ ಬಗ್ಗೆ ನಾನು ಮತ್ತೆ ಪತ್ರ ಬರೆಯುತ್ತೇನೆ. ನಿನ್ನಿಂದ ಪತ್ರ ಬಂದ ನಂತರ ಕಳುಹಿಸುತ್ತೇನೆ.

ಇತಿ ಆಶೀರ್ವಾದಗಳು

ಅನುಷ್ಠಾನದ ವಿಷಯದಲ್ಲಿ ಪರಿಸ್ಥಿತಿಯೊಂದಿಗೆ ರಾಜಿ ಅನಿವಾರ್ಯವಾದ ಸಂದರ್ಭ ಇದು. ಸಂಸ್ಕಾರಗಳೂ ಶಾಸ್ತ್ರ ಸಂಪ್ರದಾಯಗಳೂ ಆಚರಣೆಯಲ್ಲಿ ಹಿಂದೆ ಬೀಳುತ್ತಿರುವುದು ಪರಿವರ್ತನಶೀಲ ಸಮಾಜದ ಲಕ್ಷಣವಾಗಿದೆ. ಅದಕ್ಕೆ ಆರ್ಥಿಕತೆ, ಶ್ರದ್ಧೆ, ನಂಬಿಕೆ, ಸಮಯಾಭಾವ ಮೊದಲಾದ ನಾನಾ ಕಾರಣಗಳೂ ಇವೆ.

೧೦೬

ಹೋಮಕ್ಕಾಗಿ ಆಹ್ವಾನ (ಆಧುನಿಕ ವಿದ್ಯೆ ಪಡೆದು ಅಧ್ಯಾಪಕ ವೃತ್ತಿ ಮಾಡುವಾತನು, ತನ್ನ ಹೆಂಡತಿಯ ಅಣ್ಣನಿಗೆ ಬರೆದ ಕಾರ್ಡು)

ಕ್ಷೇಮ ಶ್ರೀ 22.7.75

ಹಾಸನಸೀಮೆಯ ಹಳ್ಳಿ

ಮ। ರಾ। ಭಾವನವರಿಗೆ...ನು ಮಾಡುವ ನಮಸ್ಕಾರಗಳು. ಅದಾಗಿ ಈವರಿವಿಗೆ ಉಭಯಕುಶಲೋಪರಿ ಸಾಂಪ್ರತ.

ಇದೇ ಶ್ರಾವಣಕೃಷ್ಣಪಕ್ಷ ತದಿಗೆ ಭಾನುವಾರ ಮತ್ತು ಚೌತಿ ಸೋಮವಾರ ತಾ। ಆಗಸ್ಟು 24 ಮತ್ತು 25 ಈ ಎರಡು ದಿವಸಗಳಲ್ಲಿ ಗಾಯತ್ರಿಹೋಮ ನಡೆಯಿಸಬೇಕೆಂದಿರುತ್ತೇನೆ. ನೀವು ಆ ದಿವಸಕ್ಕೆ ದೊಡ್ಡ ಮನಸ್ಸು ಮಾಡಿ ಋತ್ವಿಜರಾಗಿ ಬಂದು ಹೋಮಕಾರ್ಯ ಯಶಸ್ವಿಯಾಗಿ ನಡೆಯುವಂತೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಋತ್ವಿಜರು 10-12 ಮಂದಿ ಬೇಕಾಗಿರುತ್ತೆ. ನೀವು ಖಂಡಿತ ದಯಮಾಡಿಸಬೇಕು ಮತ್ತು ನಿಮ್ಮ ಬೀಗರ ಹೆಸರು ಮತ್ತು ವಿಳಾಸ ನೆನಪಿನಲ್ಲಿಲ್ಲ. ನೀವು ಬರುವಾಗ ಅವರನ್ನೂ ಕರೆದುಕೊಂಡು ಬರುವುದು. ಅವರು ಬರಬೇಕೆಂಬ ನನ್ನ ಪ್ರಾರ್ಥನೆಯನ್ನು ತಿಳಿಸಿ. ಅವರ ವಿಳಾಸ ತಿಳಿಸಿದರೆ ಅವರಿಗೂ ಬೇರೆ ಕಾಗದ ಬರೆದು ಪ್ರಾರ್ಥಿಸಿಕೊಳ್ಳುತ್ತೇನೆ. ಶನಿವಾರ ಸಾಯಂಕಾಲಕ್ಕೆ ಬಂದರೆ ಎಲ್ಲಾ ಕಾರ್ಯಕ್ಕೂ ಅನುಕೂಲ. ಇನ್ನೂ ಒಬ್ಬಿಬ್ಬರು ಋತ್ವಿಜರನ್ನು ಕರೆದುಕೊಂಡು ಬಂದರೆ ತುಂಬಾ ಸಂತೋಷ. ತಿಳಿದವರಿಗೆ ಹೆಚ್ಚಿಗೆ ಬರೆಯಲು ಶಕ್ತನಲ್ಲ. ತಾವು ಕುಟುಂಬ ಪರಿವಾರ ಸಮೇತ ದಯಮಾಡಿಸಬೇಕಾಗಿ ಪ್ರಾರ್ಥನೆ. ಕಾಗದ ಬರೆಯುವುದು.

ಇತಿ ನಮಸ್ಕಾರಗಳು

ಆಧುನಿಕ ವಿದ್ಯೆ ಪಡೆದರೂ ಪಾರಂಪರಿಕ ನಂಬಿಕೆ ಮತ್ತು ಆಚರಣೆಗೆ ಬದ್ಧರಾದುದು ಇಲ್ಲಿ ಕಾಣುತ್ತದೆ. ಋತ್ವಿಜರ ಬಗೆಗೆ ಇರುವ ಭಕ್ತಿ, ಗೌರವ ಹಾಗೂ ಋತ್ವಿಜರ ಸಂಖ್ಯೆ ಕಡಿಮೆ ಆಗುತ್ತಿದ್ದ ಈ ಸಂದರ್ಭದಲ್ಲಿ ಅವರಿಗೆ ಹೆಚ್ಚುತ್ತಿದ್ದ ಬೇಡಿಕೆ ಇಲ್ಲಿ ಸೂಚನೆಗೊಂಡಿದೆ. ಬಂಧುತ್ವದ ಬಳಕೆಯ ತೀವ್ರ ಕಾಳಜಿಯೂ ಇಲ್ಲಿದೆ.

೧೦೭

ಮಾವನ ನೆರವು (ಅಳಿಯನ ಮನೆಯ ಸಂಸ್ಕಾರ ಸಮಾರಂಭ ; ಅಂತರ್ದೇಶೀಯ ಪತ್ರ)

ಹಾಸನಜಿಲ್ಲೆಯ ಹಳ್ಳಿ

ಕ್ಷೇಮ ಶ್ರೀ: ತಾ. 6-2-80

...ಅಂದು ನೀವು ನನಗೆ ತಿಳಿಸಿದ್ದಂತೆ ಬಾಳೆಕಾಯನ್ನು ವಿಚಾರಿಸಲಾಗಿ ಬೇರೆ ಯಾರ ಬಳಿಯೂ ದೊರಕಲಿಲ್ಲ. ಶ್ರೀ...ವರ ಬಳಿ ಕೊಂಚ ಸಿಗುತ್ತೆಂದು ತಿಳಿಸಿದರು. ಅಂತು ಸುಮಾರು 500 ಕಾಯಿಗಳನ್ನು ತರಬಹುದು (ಇಲ್ಲಿ ಮನೇದೂ ಸೇರಿ). ಬಾಕಿ ಸಾಲದಿದ್ದಕ್ಕೆ ನೀವು ಬೇರೆ ಪ್ರಯತ್ನ ಮಾಡಬಹುದು. ನೆನ್ನೆ ಶ್ರೀ...ಯವರ ಮನೆಗೆ ಅಡಿಗೆಯವರು (ಹಳ್ಳಿಯಿಂದ) ಬಂದಿದ್ದರು. ಅವರಿಗೆ ಮತ್ತೊಮ್ಮೆ ವಿಷಯ ತಿಳಿಸಿದ್ದೇನೆ. ಅದಕ್ಕೆ ಆಗಲಿ, ನಾವು ಬಂದು ನಿರ್ವಹಿಸುತ್ತೇವೆಂದು ತಿಳಿಸಿದರು. ಏನೂ ಘಾಬರಿ ಇಲ್ಲ, ನಿರಾಳದಿಂದಿರಿ. ಎಲ್ಲಾ ಸುಸೂತ್ರವಾಗಿ ನಡೆಯುತ್ತೆ. ಇನ್ನು ಇಲ್ಲಿಂದ ಸಾಕಷ್ಟು ಬಾಳೆಎಲೆ, ದೊನ್ನೆ ಎಲ್ಲಾ ತರಲು ಏರ್ಪಾಡು ಮಾಡುತ್ತೇನೆ. ನಾಳೆ ಭಾನುವಾರ ಇಲ್ಲಿ ಮಾ॥ ಅತ್ತಿಗೆಯವರ

ವರ್ಷಾಂತಿಗ ಶ್ರಾದ್ಧ ನಡೆಯುತ್ತೆ. ಸೋಮವಾರ ಸಮಾರಾಧನೆ. ಆ ದಿನವೂ ನೀವು ಬಂದರೆ ಸಂತೋಷ. ಆ ಬಗ್ಗೆ ಚಿ।।...ಪತ್ರ ಬರದು ತಿಳಿಸಿದ್ದಾನೊ ಹೇಗೋ ? ನನಗೆ ತಿಳಿಯದು. ಬಹುಶಃ ತಿಳಿಸದಿದ್ದರೂ ಬಂದಲ್ಲಿ ಅನುಚಿತವೆನಿಸದು. ನಿಮಗೆ ಈಗ ಹಣದ ಕೊರತೆ ಇದ್ದಲ್ಲಿ ತಿಳಿಸಿರಿ. ಸಾಧ್ಯವಾದಷ್ಟನ್ನು ಒದಗಿಸುತ್ತೇನೆ. ಯಾವುದಕ್ಕೂ ಸಂಕೋಚ ಬೇಡ...

ಪರಸ್ಪರ ಸಹಕಾರದಿಂದಲೇ ಎಂಥ ಸಮಾರಂಭಗಳೂ ನಡೆಯುತ್ತವೆ. ಇಡೀ ಹಳ್ಳಿಯು ಒಂದು ಕುಟುಂಬದಂತೆ ಸಹಕರಿಸಿ ಕೆಲಸವನ್ನು ಯಶಸ್ವಿಯಾಗಿಸುತ್ತದೆ. ಛತ್ರಗಳು, ನಗರಗಳಲ್ಲಿ ಸಮಾರಂಭ ನಡೆಯುವಿಕೆ, ಬಾಡಿಗೆಗೆ ಪಾತ್ರೆಗಳೂ ಅಡುಗೆಯವರೂ ಪರಿಚಾರಕರೂ ದೊರೆಯುವುದು–ಇವೆಲ್ಲ ಬರುವ ಮುಂಚೆ ಇದ್ದದ್ದು ಸುಸಂಘಟಿತ ಪ್ರೀತಿಪೂರ್ಣ ಸಾಮಾಜಿಕ ವ್ಯವಸ್ಥೆ. ಪರಸ್ಪರಾವಲಂಬನೆಯ ಅನಿವಾರ್ಯತೆ ಕಡಿಮೆಯಾದಂತೆ ಪ್ರೀತಿಯ ಬಂಧವೂ ಶಿಥಿಲವಾಗುತ್ತಿದೆ.

೧೦೮

ನೀನು ಬಂದರೆ ಸಹಾಯ

ಹಬ್ಬಕ್ಕೆ ಮಗಳಿಗೆ ಆಹ್ವಾನ. ತಂದೆಯ ಕಾರ್ಡು

ಹಾಸನಸೀಮೆಯ ಹಳ್ಳಿ, ತಾ. 19.12.81

...ನೀನು ಈ ಸಲ ಸಂಕ್ರಾಂತಿ ಹಬ್ಬಕ್ಕೆ ಇಲ್ಲಿಗೇ ಬಂದುಬಿಡು. ಅಲ್ಲಿ ತೊಂದರೆಪಡಬೇಡ. ಅದಕ್ಕೆ ಕಾರಣವೂ ಇದೆ. ನಿನ್ನ ಅಮ್ಮ ಸಂಕ್ರಾಂತಿ ಜ್ಯೋತಿ ಹೊತ್ತಿಸುತ್ತಾಳೆ. ಈ ವರ್ಷ ಅದು ನಿಲ್ಲಬೇಕಾದರೆ ಸುಮಾರು 5-6 ದಿನಗಳಾಗಬಹುದು. ಈ ಮೊದಲೇ ನಿನ್ನ ಅಮ್ಮನ ಆಲಾಜೋಲಿ ಗೊತ್ತೇ ಇದೆ. ಇದರ ಮೇಲೆ ಒಂದು ವಾರ ಉಪವಾಸ ಮಾಡಿ ಮನೆ ಕೆಲ್ಸಗಳನ್ನು ನಿಭಾಯಿಸಿ ಕಡೆದಿನ ನಾಲ್ಕಾರು ಜನಗಳಿಗೆ ಹಸ್ತೋದಕ ಹಾಕುವುದು ಹೇಗೆ. ಆದ್ದರಿಂದ ಅವಳಿಗೂ ಸಹಾಯವಾಗುತ್ತೆ. ಖಂಡಿತಾ ಬರಬೇಕೆಂದು ಅಪೇಕ್ಷಿಸುತ್ತಾಳೆ. ಈ ವಿಚಾರವಾಗಿ ನಿನ್ನ ಯಜಮಾನರಿಗೂ ತಿಳಿಸುತ್ತೇನೆ. ಉದಾಸೀನ ಬೇಡ...

ಆಲಾಜೋಲಿ = ನಿಧಾನ ಸ್ವಭಾವ, ತುಂಬಾ ಸೋತಿರುವುದು

೧೦೯

ಪತ್ರಮುಖೇನ ಹರಸುವುದು

ಸಂಸ್ಕಾರ ಸಮಾರಂಭಕ್ಕೆ ಬರಲಾಗದವರು, ಪತ್ರಮುಖೇನ ಹರಸುವುದು ಪತ್ರಸಂಸ್ಕೃತಿಯು ಬೆಳೆದ ನಂತರದ ಒಂದು ಲಕ್ಷಣ

ಕ್ಷೇಮ ಶ್ರೀ ಬೆಂಗಳೂರು

ತಾ. 21.2.82

...ನಿನ್ನೆ ಸಂಜೆ ಬೊಂಬಾಯಿನಿಂದ ಬಂದ ನಂತರ ನಿಮ್ಮ ಮೊಮ್ಮಗನ ಬ್ರಹ್ಮೋಪದೇಶ ಸಮಾರಂಭದ ಆಹ್ವಾನ ಪತ್ರಿಕೆಯನ್ನು ನೋಡಿ ಬಹಳ ಸಂತೋಷವಾಯಿತು.

ಪ್ರಕೃತದಲ್ಲಿ ನಾನು ಮುಂದಿನ ವಾರದಿಂದ 4.3.82ರವರೆವಿಗೆ ಹೈದರಾಬಾದು ಮತ್ತು ವಿಶಾಖಪಟ್ಟಣಗಳಲ್ಲಿರಬೇಕಾಗಿರುವುದರಿಂದ ಮೇಲ್ಕಂಡ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗದೆ ಇರುವುದಕ್ಕಾಗಿ ನಿಮ್ಮೆಲ್ಲರ ಕ್ಷಮೆ ಯಾಚಿಸುತ್ತೇನೆ.

ವಟುವಿಗೆ ಭಗವಂತನು ಆಯುರಾರೋಗ್ಯಾದಿಗಳನ್ನು ಕರುಣಿಸಲಿ ಎಂದು ಅವನಲ್ಲಿ ನಮ್ಮೆಲ್ಲರ ಪ್ರಾರ್ಥನೆ...

ಅಷ್ಟಗ್ರಾಮಗಳ ಪರಿಧಿಯಲ್ಲಿ ವಾಸಿಸುತ್ತಿದ್ದವರು ದೇಶ ವಿದೇಶಗಳಲ್ಲಿ ಸಂಚರಿಸತೊಡಗಿದ್ದು ವಿಶೇಷವಾಗಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ.

೧೧೦

ಯಾಗಕ್ಕೆ ಆಹ್ವಾನ (ತಂಗಿಯು ಅಕ್ಕನಿಗೆ ಬರೆದ ಪತ್ರ)

Safe Shree rama 19-11-88

ಶಿವಮೊಗ್ಗ ಜಿಲ್ಲೆ

...ಅಕ್ಕಾ ಇದೇ ತಿಂಗಳು ತಾ। 29ರಿಂದ ಪ್ರಾರಂಭವಾಗುವ ಶ್ರೀರಾಮತಾರಕ ಮಹಾಯಾಗಕ್ಕೆ ನೀವೆಲ್ಲರೂ ಬನ್ನಿ. ತುಂಬಾ ಚನ್ನಾಗಿರುತ್ತದೆ. ಭಗವಂತನ ಆರಾಧನೆಯನ್ನು ನೋಡಿ ಭಗವತ್ಕೃಪೆಗೆ ಪಾತ್ರರಾಗುವ ಒಂದು ಸುವರ್ಣ ಕಾಲ. 8 ದಿನಗಳ ಕಾಲ ನಡೆಯುವ ಈ ಹೋಮಕ್ಕೆ ಸಾವಿರಾರು ಜನ ಸೇರುವ ಅಂದಾಜಿದೆ. ಅವರುಗಳಿಗೆ ಶಾಲಾ ಕಾಲೇಜಿದ್ದರೆ ನೀನೊಬ್ಬಳಾದರೂ ಬಾ...

ಆಹ್ವಾನ ಪತ್ರಿಕೆ ತಲಪುತ್ತದೆ. ಜೀವಮಾನವನ್ನೆಲ್ಲ ಸಂಸಾರದ ಜಂಜಾಟದಲ್ಲಿ ಕಳೆದು ಅಹವಾಲುಗಳು ಒಂದನ್ನೊಂದು ಬಿಗಿದುಕೊಂಡಿರುವಾಗ ಅದರಲ್ಲಿ ಕೆಲವು ಕ್ಷಣಗಳನ್ನು ಭಗವಂತನ ನಾಮಸ್ಮರಣೆಯಲ್ಲಿ ಕಳೆಯಬಹುದಾಗಿದೆ. ಭಗವದ್ಭಕ್ತರಿಗೆ ಇದಕ್ಕಿಂತ ಬೇರೊಂದಿಲ್ಲ. ಯೋಚಿಸು...ಕ್ಕೆ ಹೋದರೆ ನಿನ್ನ ಅತ್ತೆಮಾವಂದಿರಿಗೆ ಈ ವಿಷಯವನ್ನು ತಿಳಿಸು. ಅವರುಗಳನ್ನೂ ಕರೆದುಕೊಂಡು ಬಾ. ವಯಸ್ಸಾಗಿದೆ. ಹಿಂದೆ ಇದ್ದಷ್ಟು ದಿನ ಮುಂದೆ ಇರುವುದಿಲ್ಲ, ಆದ್ದರಿಂದ ಇದನ್ನು ನೋಡಿದರೆ ಕಾಶೀಯಾತ್ರೆಯ ಪುಣ್ಯ ಲಭಿಸುತ್ತದೆ. ನನ್ನ ನಮಸ್ಕಾರಗಳನ್ನು ತಿಳಿಸು.

ಯಾಗಗಳು ನಡೆಯುವುದೂ ಅಪರೂಪ, ಆ ಕುರಿತ ಪತ್ರಗಳೂ ಅಪರೂಪ.

ಗುಚ್ಛ - 6

ಜಿಜ್ಞಾಸೆ

ದೇವಸ್ಥಾನಗಳಲ್ಲಿ ಸೇರಲಿ, ಭೋಜನಕೂಟಗಳಲ್ಲಿರಲಿ, ತೋಟದಲ್ಲಿರಲಿ, ಮದುವೆಮನೆಯಲ್ಲಿರಲಿ, ಅದು ಹುಟ್ಟು, ಸಾವು, ಆಚಾರಕ್ಕೆ ಸಂಬಂಧಿಸಿರಲಿ ಅಥವಾ ಯಜ್ಞಯಾಗಗಳಿಗೆ ಸಂಬಂಧಿಸಿರಲಿ – ಇಂಥ ಜಿಜ್ಞಾಸೆಗಳು ವ್ಯಾಪಕವಾಗಿ ನಡೆದಿರುತ್ತವೆ. ಕೆಲವು ವೈಯಕ್ತಿಕ ಮಟ್ಟದಲ್ಲಿ ಸದ್ದಿಲ್ಲದೆ ಪರಿಹಾರವಾಗತಕ್ಕವು; ಕೆಲವು ಸಮುದಾಯದಲ್ಲಿ ಸುದ್ದಿಯಾಗಿ, ಚರ್ಚೆಗೆ ದಾರಿ ಮಾಡಿ ಆತಂಕವನ್ನೂ ಹುಟ್ಟಿಸುವಂಥವು.

೧೧೧

ವೇದಭಾಷ್ಯ

ಪುಸ್ತಕಗಳನ್ನು ಮಿತ್ರನಿಂದ ಕೊಳ್ಳುವ ಪತ್ರ. ಕವರು

ಕುಶಲ ಶ್ರೀಃ **ಮತ್ತೂರು**

3-1-43

ವೇ. ಬ್ರಂ. ಶ್ರೀ ವಿದ್ವಾಂಸರಾದ...ಗಳಿಗೆ ಅನಂತ ಪ್ರಣಾಮಗಳು. ಉ.ಕು. ಸಾಂಪ್ರತ.

ನಮ್ಮ ತೀರ್ಥರೂಪರವರು ಈಗ 15 ದಿವಸಗಳ ಹಿಂದೆ ನಿಮ್ಮೂರಿಗೆ ಬಂದಾಗ ವೇದಭಾಷ್ಯದ ಪುಸ್ತಕಕ್ಕೆ ಹೇಳಿ ಕಳುಹಿಸಿದ್ದೆ. ಆದರೆ ನೀವು ರೂಪಾಯಿ 1ಕ್ಕೆ ಎರಡಾಣೆ ಬಿಡುತ್ತೇನೆಂದೂ ಸದ್ಯ ಆ ಪುಸ್ತಕಗಳು ನಿಮ್ಮ ಹತ್ತಿರವಿರುವುದಿಲ್ಲವೆಂದೂ ಕೇಳಿದೆ. ಹಿಂದೆ ನೀವು ಆ ಪುಸ್ತಕಗಳನ್ನು ಮುಕ್ಕಾಲು ಖರೀದಿಗೆ ತೆಗೆದು ಕೊಂಡಿದ್ದೇನೆಂದೂ ಬೇಕಾದರೆ ಅದೇ ಛಾರ್ಜಿಗೆ ಕೊಡುವೆನೆಂದೂ ಹೇಳಿದ್ದಿರಿ. ಅದೇ ಮೇರೆಗೆ ನೀವು ಪುಸ್ತಕಗಳನ್ನು ಕೊಡುವುದಾದರೆ ಪುಸ್ತಕಗಳೆಲ್ಲವನ್ನೂ ತರಿಸಿ ನಿಮ್ಮ ಹತ್ತಿರವಿಟ್ಟುಕೊಂಡಿದ್ದರೆ ನಮ್ಮ ತೀರ್ಥರೂಪರವರು ಪುನಃ ಸದ್ಯದಲ್ಲಿಯೇ ಬರುವ ನಿರೀಕ್ಷಣೆಯಿದೆ. ಅವರ ಕೈಯಲ್ಲಿ ರೂಪಾಯಿಗಳನ್ನು ಕಳುಹಿಸುತ್ತೇನೆ. ಆವಾಗ ಪುಸ್ತಕಗಳನ್ನು ಕಳುಹಿಸಬಹುದು. ಈ ವಿಷಯವನ್ನು ಪರ್ಯಾಲೋಚಿಸಿ ಜವಾಬು ಬರೆಯುತ್ತೀರಾಗಿ ನಂಬಿದ್ದೇನೆ. ಪ್ರಾತಿಶಾಖ್ಯವನ್ನು ಕೊಡುವುದಾದರೆ ಅದನ್ನು ಅದರ ಬೆಲೆಗಿಂತಲೂ ಎಂಟಾಣೆಯನ್ನು ಹೆಚ್ಚಾಗಿ ಕೊಡಲು ಸಿದ್ಧನಿದ್ದೇನೆ. ಅದನ್ನು ಬರೆಯಬೇಕು...ತಮ್ಮೆಲ್ಲರ ಕುಶಲಕ್ಕೆ ಬರೆಯಬೇಕಾಗಿ ಬೇಡುತ್ತೇನೆ...

ಇತಿ ತಮ್ಮವ

ಹೀಗೆ 'Second hand' ಪುಸ್ತಕಗಳನ್ನು ಕೊಳ್ಳುವ ರೂಢಿ ಶಾಲಾ ಪಠ್ಯಗಳ ಸಂಬಂಧದಲ್ಲಿ ನಡೆಯುವುದಿದೆ. ಆದರೆ ಅಪರೂಪದ ವೇದಗ್ರಂಥಗಳನ್ನು ಸ್ಥಾಯಿಯಾಗಿ ಸಂಗ್ರಹಿಸಲು ಮಾಡುತ್ತಿರುವ ಯತ್ನ ಇದು. ಶಿವಮೊಗ್ಗ ಜಿಲ್ಲೆಯಿಂದ ಹಾಸನ ಜಿಲ್ಲೆಗೆ ಬಂದಿರುವ ಈ ಪತ್ರದಲ್ಲಿ ಒಂದು ಮುಖ್ಯ ಗ್ರಂಥಕ್ಕೆ ಅದರ ಬೆಲೆಗಿಂತಲೂ ಹೆಚ್ಚಾಗಿ ಕೊಡಲು ಸಿದ್ಧವಿರುವ ರೀತಿಯನ್ನು ಗಮನಿಸಬಹುದು.

೧೧೨

ತಪ್ಪಿಹೋದ ಮಾಸಿಕ

ಪ್ರವಾಸದಲ್ಲಿರುವ ಸೋದರನು ಬರೆದ ಪತ್ರ

ತುಮಕೂರು

ತಾ 16-6-43

...ಈ ದಿನ ತೀ|| ರವರ ಮಾಸಿಕ ನಡೆಯಬೇಕಾಗಿತ್ತು. ಆದರೆ ನಾನು 6-6-43 ರಲ್ಲಿ ಮೈಸೂರನ್ನು ಬಿಟ್ಟು ದಾವಣಗೆರೆಗೆ ಹೋದೆನು. ಅಲ್ಲಿಂದ ತಾ 15-6-43 ರಲ್ಲಿ ಇಲ್ಲಿಗೆ ಬಂದಿದ್ದೇನೆ.

ಇಲ್ಲಿಂದ 20-6-43ಕ್ಕೆ ಹೊರಟು ವೇಧಾಗಿರಿಗೆ ಹೋಗಿ ಅಲ್ಲಿಂದ ತಾ 25-6-43ರಲ್ಲಿ ಮೈಸೂರಿಗೆ ವಾಪಸ್ ಹೋಗಬೇಕಾಗಿದೆ. ಈ ಪ್ರವಾಸದ ದೆಸೆಯಿಂದ ಮಾಸಿಕಕ್ಕೆ ಬರಲಾಗಲಿಲ್ಲ. ಇದನ್ನು ತಿದ್ದಿಕೊಳ್ಳಲು ಸೌಕರ್ಯವಿದೆಯೆ? ಮುಂದಿನ ತಿಂಗಳು ನಾನು ಮಾಸಿಕ, ತಿಥಿ ವಗೈರೆಗಳಿಗಾಗಿ ಯಾವ

ತಾರೀಖಿನಿಂದ ಯಾವ ತಾರೀಖಿನವರೆಗೆ ರಜಾ ತೆಗೆದು ಕೊಳ್ಳಬೇಕೆಂಬ ವಿಚಾರವಾಗಿಯೂ...ಕಾಗದ ಬರಿ.

ಶಾಸ್ತ್ರಗಳು, ಆಕಸ್ಮಿಕವಾಗಿ ನಡೆದ ಪ್ರಮಾದಗಳಿಗೆ ಪರಿಹಾರವನ್ನು ಹೇಳುತ್ತವೆ. ಆದರೆ ಸಾಧ್ಯವಾದ ಮಟ್ಟಿಗೂ ಪ್ರಮಾದಗಳಾಗದಂತೆ ನೋಡಿಕೊಳ್ಳುವುದು ಸನಾತನಿಗಳ ರೂಢಿ; ಶ್ರಾದ್ಧದ ವಿಚಾರದಲ್ಲಿಯಂತೂ ಕರ್ತವ್ಯಲೋಪವು ಕಲ್ಪಿಸಿಕೊಳ್ಳಲಾಗದ ಸಂಗತಿ. ಆದರೆ ಸರ್ಕಾರಿ ನೌಕರಿಗಳಿಗೆ ಸೇರಿ ದೂರದೂರದ ಎಡೆಗಳಲ್ಲಿ ವಾಸಿಸತೊಡಗಿದ ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದೀಚೆಗೆ ವಿಕೃತಿಗಳು ಪ್ರಾರಂಭವಾದವು. ಬರಬರುತ್ತಾ ಇಂಥ ಲೋಪಗಳು ಸಂಕೀರ್ಣವಾಗಿವೆ.

೧೧೩
ತ್ರಿಪಿಂಡ, ಷಟ್ಪಿಂಡ

ತ್ರಿಪಿಂಡ, ಷಟ್ಪಿಂಡ ಪಕ್ಷಗಳು ತೀವ್ರ ವಾಗ್ವಾದಗಳಿಗೆ ಎಡೆಮಾಡಿದ್ದವು.
ಅಂಥ ಒಂದು ವಾದ ಇಲ್ಲಿದೆ

कुशलम्   श्री :   मैसूरु
8.10.44

ವೇ|| ಬ್ರ|| ಶ್ರೀ.. ದೀಕ್ಷಿತರ ಸ.ಗಳಲ್ಲಿ ನಮಸ್ಕಾರಗಳು, ಸಂಪ್ರತಿ.

ತಾವು 6.10.44 ರಲ್ಲಿ ಬರೆದ ಕಾಗದ ಈ ಕಾಗದ ಬರೆಯುವ ಮುನ್ನ ಅಂದರೆ ½ ಘಂಟೆಗೆ ಪೂರ್ವದಲ್ಲಿ ಲಬ್ಧವಾಯ್ತು. ತಮ್ಮ ಕಾಗದದ ವಿಷಯದಿಂದ ತಮ್ಮ ಮನಸ್ಸಿನ ಅಭಿಪ್ರಾಯವೂ ವ್ಯಕ್ತವಾಯ್ತು. ಆದರೆ ಇಷ್ಟು ದಿವಸ ನನ್ನ ಪರಿಚಯ ಮತ್ತು ಸಂಸರ್ಗ ಮಾಡಿದರೂ ನನ್ನ ಅಭಿಪ್ರಾಯವನ್ನು ಬರೆದ ಕಾಗದದಿಂದ ಗ್ರಹಿಸದೆ ಇಷ್ಟರಮಟ್ಟಿಗೆ ಬರೆದಿರುವುದು ಬಹಳ ಶ್ಲಾಘನೀಯಾಂಶ. ಮತ್ತೇನೆಂದರೆ ನನ್ನ ಅಶಿಸ್ತು ಪ್ರೌಢಿಮಾಭಿವ್ಯಕ್ತಿ ದ್ವಾರಾ ತಮ್ಮನ್ನು ಅವಹೇಳನಾಭಾಗಿಗಳನ್ನಾಗಿ ಮಾಡಲು ಉದ್ದೇಶಿಸಿ ತಮಗೆ ಕಾಗದ ಬರೆಯಲಿಲ್ಲವೆಂಬ ಅಂಶವನ್ನು ತಮ್ಮ ಅವಗಾಹನೆಗೆ ತಂದು, ಅವಸರವಶಾತ್ ಇಲ್ಲಿ, ಅಂದರೆ (ಕ್ಲಾಸಿನಲ್ಲಿ) ಬಂದ ದೀಕ್ಷಿತರ ಮಾತಿನ ಪ್ರಕರಣದಲ್ಲಿ ತಾವು ಹೇಳಿದ್ದು ಜ್ಞಾಪಕಕ್ಕೆ ಬಂದು ವೇ|| ಅವಧಾನಿಗಳವರ ಸನ್ನಿಧಿಯಲ್ಲಿ ತ್ರಿಪಿಂಡ ಪಕ್ಷವೂ ಉಂಟೆಂಬುದಾಗಿ ಉದಹರಿಸಿದ ಬಗ್ಗೆ, ಅವರಿಂದ ಪ್ರಮಾಣ ಗ್ರಂಥದ ವಿಷಯವಾಗಿ ದೃಢವಾದನಂತರ ತಾವು ಹೇಳಿದ ವಚನವು ಜ್ಞಾಪಕವಿಲ್ಲದಿದ್ದ ಕಾರಣ ಊರಿಗೆ ಹೋಗಿದ್ದಾಗ ತಾವು ಒಂದು ವಚನವನ್ನು ಹೇಳಿದರೆಂಬ ಅಂಶವನ್ನು ವಿಜ್ಞಾಪಿಸಿದೆನು. ಆಗ ಅವರು ತಮಗೆ ಕಾಗದ ಬರೆದು ಆ ಪ್ರಮಾಣವನ್ನು ತರಿಸು ಎಂಬುದಾಗಿಯೂ ಅಪ್ಪಣೆ ಕೊಡಿಸಿದರು. ಆ ಅಭಿಪ್ರಾಯದಿಂದ ಮೊದಲನೆ ಕಾಗದವು ಬರೆಯಲ್ಪಟ್ಟಿತು. ಮತ್ತೊಂದು ವಿಷಯವೇನೆಂದರೆ ತಾವು ಅಲ್ಲಿ ಹೇಳಿದ ಮಾತುಗಳಿಗೂ ಈ ಕಾಗದದಲ್ಲಿ ಬರೆದ ವಿಷಯಗಳಿಗೂ ಬಹಳ ದೂರವಿರುವುದರಿಂದ ತಾವು ವ್ಯವಹಾರಜ್ಞರಿದ್ದೀರೆಂಬ ವಿಷಯವೂ ಈಗ ಚೆಂದಾಗಿ ಮಂದಟ್ಟಾಗಿದೆ. ತಾವೇ ಲೈಬ್ರರಿಯ ಪುಸ್ತಕಗಳನ್ನೆಲ್ಲಾ ತಂದು ಅಲ್ಲಿ ಪ್ರಮಾಣಗಳನ್ನು ನೋಡಿದುದಾಗಿಯೂ ತಾವು ಅದರಲ್ಲಿನ ಆಧಾರಗಳಿಂದ ತ್ರಿಪಿಂಡಪಕ್ಷವಿರುವುದಾಗಿಯೂ ಅಪ್ಪಣೆ ಕೊಡಿಸಿದ ಮಾತು ವಿಸ್ಮೃತವಾಗಿದ್ದೂ ಒಂದು ಶ್ಲಾಘನೀಯಾಂಶ ಮತ್ತು ತಮ್ಮಲ್ಲಿ ಪ್ರಾರ್ಥನೆಯೇನೆಂದರೆ ಎಲ್ಲರಲ್ಲೂ ಒಂದೇ ವಿಧವಾದ ತಮ್ಮ ಮಾರ್ಗವನ್ನು ಆಯಾವ್ಯಕ್ತಿಯ ನಡವಳಿಕೆಗೆ ಅನುಸಾರವಾಗಿ ಪ್ರಯೋಗಿಸಿದಲ್ಲಿ ಉಪಯೋಗಬಾಹುಳ್ಯವಿರುವುದಾಗಿಯೂ ನಿವೇದಿಸಿ ತಮ್ಮಲ್ಲಿ ಕ್ಷಮೆಯನ್ನು ಬೇಡಿ ತಿಸ್ಫುರಿತನಾದ ನನ್ನ ತಪ್ಪುಗಳ ಬಗ್ಗೆ ದಯೆಯಿಟ್ಟು ಮಾಡುತ್ತೀರೆಂದು ನಂಬಿ ಈ ಕಾಗದದ ಬರವಣಿಗೆಯನ್ನು ನಿಲ್ಲಿಸುವುದರ ಪೂರ್ವದಲ್ಲಿ ವೇ|| ಬ್ರ|| ಶ್ರೀ.. ಶಾಸ್ತ್ರಿಗಳಿಗೆ ನನ್ನ ಬಿನ್ನಹಗಳನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ ನಮಸ್ಕಾರಗಳು

ಈ ವಾದವಿವಾದಗಳು ಮಧ್ಯದೇಶದಲ್ಲಿ ತೀವ್ರವಾಗಿ ನಡೆದು ಎರಡು ಪ್ರಬಲ ಪಕ್ಷಗಳೇರ್ಪಟ್ಟಿದ್ದವು. ಅದಕ್ಕಾಗಿ ಕೈಹೊತ್ತಗೆಗಳೂ ಪ್ರಸಾರಪತ್ರಗಳೂ ಪ್ರಕಟವಾದವು; ಚರ್ಚಾಗೋಷ್ಠಿಗಳೂ ನಡೆದವು. ಪ್ರಚಾರಾಭಿಯಾನವೂ ಹೊರಟಿತು. ಆದರೆ ಯಾವುದೂ ತೀರ್ಮಾನವಾಗದೆ ಅವರವರು ಅವರವರ ಪಥದಲ್ಲಿ ಮುಂದುವರಿದರು.

೧೧೪
ಕುಮಾರೀಪೂಜೆ ಬಗೆಗೆ (ಸಂಶಯ ನಿವಾರಣೆ)

ಕುಶಲಂ   ಶ್ರೀಃ   ದೇವರಾಯ ಸಮುದ್ರಂ
ತಾ 11-4-49

ತೀ|| ಪೂಜ್ಯ ಗುರುಗಳ ಚರಣ ಸನ್ನಿಧಿಗಳಲ್ಲಿ... ಘನಪಾಠಿಯು ಮಾಡುವ ಪ್ರಣಾಮಪೂರ್ವಕ ವಿಜ್ಞಾಪನೆಗಳು ಉ.ಕು.ಸಂ.

...ಪ್ರಕೃತ ಕುಮಾರೀಪೂಜೆಯಲ್ಲಿ ಇದುವರೆವಿಗೆ ಎಲ್ಲೂ ಪ್ರತ್ಯಾಮ್ನಾಯವಾಗಿ ಕಲಶಾದಿಗಳಲ್ಲಿ ಆವಾಹನೆ ನಡೆದಿಲ್ಲ (ನನಗೆ ತಿಳಿದ ಮಟ್ಟಿಗೆ). ಪೂಜಾಕಲ್ಪದಲ್ಲಿಯೂ ಕೂಡ ಪ್ರತ್ಯಾಮ್ನಾಯವಾಗಿ ಪೂಜೆ ಜರುಗಿಸಲು ಅವಕಾಶ ಕಂಡು ಬರುವುದಿಲ್ಲ. ಅದಕ್ಕಾಗಿ ಕೊನೇಪಕ್ಷ ಒಬ್ಬ ಕುಮಾರಿಯಾದರೂ ಇದ್ದರೆ ಮೇಲು. ಅದಕ್ಕಾಗಿ ಕೆಲವು ಪ್ರಮಾಣಗಳನ್ನು ಬರೆಯುತ್ತೇನೆ.

ಯಜಮಾನಃ ಪೂಜಯೇಚ್ಚ ಕನ್ಯಾನಾಂ ನವಕಂ ಶುಭಮ್ ।
ದ್ವಿವರ್ಷಾದ್ಯಾದ್ಯಶಾಬ್ದಾಂತಾಃ ಕುಮಾರೀಃ ಪರಿಪೂಜಯೇತ್॥
ಮಂತ್ರಾಕ್ಷರಮಯೀಂ ಲಕ್ಷ್ಮೀಂ ಮಾತೃಣಾಂ ರೂಪಧಾರಿಣೀಮ್।
ನವದುರ್ಗಾತ್ಮಿಕಾಂ ಸಾಕ್ಷಾತ್ ಕನ್ಯಾಮಾವಾಹಯಾಮ್ಯಹಮ್॥

ಅನೇನೈವ ಮಂತ್ರೇಣ ನವಾಪಿ ಆವಾಹಯೇತ್।
ಅಶಕ್ತೌ ಯಥಾಶಕ್ತಿ ಏಕಾಮಪಿ ವಾ॥

ಎಂದು ಸಪ್ತಶತೀ ವಿಧಿಯಲ್ಲಿ ಹೇಳಿದೆ.

ಹೀಗೆಯೇ ಪ್ರಯೋಗವಿಧಿಯಲ್ಲಿಯೂ ಸಹ

"ಕುಮಾರ್ಯಶ್ಚ ಪ್ರತ್ಯಹಂ ಶತಂ ನವ ಏಕಾ ವಾ ಯಥಾಶಕ್ತಿ ವಾ ಪೂಜ್ಯಾ"

ಎಂದು ಹೇಳಿದೆ.

ಆದ್ದರಿಂದ ಒಬ್ಬಳಾದರೂ ಕುಮಾರಿಯಿದ್ದರೆ ಕೆಲಸವನ್ನು ಜರುಗಿಸಬಹುದು. ಇದೂ ಸಾಧ್ಯವಿಲ್ಲದಿದ್ದರೆ ದಯವಿಟ್ಟು ತಿಳಿಸಿ. ಶೃಂಗೇರಿಗೇ ಬರೆದು ಅಲ್ಲಿಯ ಅಭಿಪ್ರಾಯವನ್ನು ತಿಳಿಸುತ್ತೇನೆ...

ಇತಿ ಪ್ರಣಾಮಪೂರ್ವಕ ವಿನಂತಿಗಳು

೧೧೫

ಶ್ರಾದ್ಧ ವಿಚಾರ

10.8.52

ವೇ॥....ಶಾಸ್ತ್ರಿಗಳಿಗೆ ನತಯಃ. ಅಧಿಕಮಾಸದಲ್ಲಿ ಬಂದ ಪ್ರತ್ಯಾಬ್ದಿಕ ಅಧಿಕದಲ್ಲೇ ಉಂಟಾಗಿದ್ದರೆ ಅಧಿಕದಲ್ಲೇ ಮಾಡಬೇಕು. ನಿಜದಲ್ಲಿ ಉಂಟಾಗಿದ್ದು ಅಧಿಕ ಬಂದರೆ ಅಧಿಕದಲ್ಲಿ ಮಾಡಬೇಕಾಗಿಲ್ಲಾ. ಆ ದಿವಸ ರಿಕ್ತವಾಗಿ ಬಿಡಬಾರದು. ಯರಡುಜನ ಬ್ರಾಹ್ಮಣರಿಗೆ ಹಸ್ತೋದಕ ಹಾಕುವ ಪದ್ಧತಿ ನಮ್ಮ ಪಿತೃಪಿತಾಮಹ ಇವರಿಂದ ಆಚಾರ ಬಂದಿದೇ. ನಾವೂ ಕೂಡಾ ಹೀಗೇ ನಡಿಶಿರುತ್ತೇವೆ. ನಿಜಮಾಸದಲ್ಲಿ ಸತ್ತವರಿಗೆ ನಿಜದಲ್ಲೇ ಅಧಿಕದಲ್ಲಿ ಸತ್ತವರಿಗೆ ಅಧಿಕದಲ್ಲೇ ಮಾಡುವುದು ನಮ್ಮ ಆಚಾರ ಬಂದಿದೇ. ಹೀಗೇ ನಡಿಸುತ್ತೇವೆ. ಆ ದಿನ ರಿಕ್ತವಾಗಿ ಬಿಡುವದಿಲ್ಲಾ. ಯರಡು ಜನಕ್ಕೆ ಹಸ್ತೋದಕ ಹಾಕುತ್ತೇವೆ. ಶಾಸ್ತ್ರ ಆಧಾರ ಇದೆ. ಅಧಿಕದಲ್ಲಿ ಮಾಡಬೇಕು ಅನ್ನುವರಿಗೆ ಪೂರ್ವಪಕ್ಷ ಯೆಷ್ಟೋ ಇದೆ. ಅದನ್ನೆಲ್ಲಾ ಮೊಖ್ತಾ ಮಾತನಾಡೋಣ.

ಇತಿ ನತಯಃ. ವೆಂಕಟರಮಣಶಾಸ್ತ್ರೀ ಸರಗೂರ್

ಈಗಲೂ ಇಂಥ ವಿಷಯಗಳ ಚರ್ಚೆ, ಜಿಜ್ಞಾಸೆ ನಡೆಯುವುದುಂಟು. ಆದರೆ ಹೇಳುವ ಸಾಮರ್ಥ್ಯ ಇರುವವರು, ಕೇಳುವ ಆಸಕ್ತರು ಇಬ್ಬರೂ ಕಡಮೆಯಾಗುತ್ತಿದ್ದಾರೆ.

೧೧೬

ಶ್ರೀಮದ್ರಾಮಾಯಣ ಗ್ರಂಥ (ಮಿತ್ರನಿಗೆ ಕೃತಜ್ಞತೆ)

ಕುಶಲಂ ಶ್ರೀಃ ತಾ 23-11-69
ಕುಪ್ಪಹಳ್ಳಿ

ವೇ॥ ಬ್ರಹ್ಮಶ್ರೀ...ಶಾಸ್ತ್ರಿಗಳ ಸ॥ ಕ್ಕೆ...ನ ಅನಂತ ವಂದನೆಗಳು. ಅದಾಗಿ ಈವರಿವಿಗೆ ಉಭಯ ಕುಶಲೋಪರಿ ಸಂಪ್ರತಿ.

ನಾವೆಲ್ಲರೂ ಕುಶಲಿಗಳು...ನಿಮ್ಮೆಲ್ಲರ ಕುಶಲಕ್ಕೂ ಅಗಾಗ್ಯೆ ಕಾಗದ ಬರೆಯುತ್ತಿರುವಿರಷ್ಟೆ.

ಪ್ರಕೃತ ನೀವು ಕಳುಹಿಸಿದ ರಾಮಾಯಣಪುಸ್ತಕವು ಮತ್ತು ಅದಕ್ಕಾಗಿ ಕಳುಹಿಸಿದ್ದ ಮೌಲ್ಯವೂ ಸಹ (ರೂ 7) ನನಗೆ ತಲಪಿತು. ನೀವು ಮೊಬಲಗನ್ನು ಹಿಂತಿರುಗಿಸಿದ್ದು ನನಗೆ ಮನಸ್ಸಿಗೆ ಸಮರ್ಪಕವಾಗಲಿಲ್ಲ. ಆದರೆ

ದಾತವ್ಯಮಿತಿ ಯದ್ದಾನಂ ದೀಯತೇಽನುಪಕಾರಿಣೇ ।
ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಮ್॥

ಎಂಬ ಭಗವದ್ಗೀತೆಯ 18 ನೇ ಅಧ್ಯಾಯದ ಶ್ಲೋಕದಂತೆ ನಿಮ್ಮದು ಸಾತ್ವಿಕ ತ್ಯಾಗವೆನಿಸಿಕೊಳ್ಳುವುದು. ಪ್ರತಿಯು ಸ್ಫುಟಾಕ್ಷರ ಮತ್ತು ಪ್ರತಿಯೊಂದು ಸರ್ಗದ ಅವತರಣಿಕೆ ವಾಕ್ಯಗಳೊಡನೆ ಪಾರಾಯಣಕ್ಕೆ ಆನಂದವಾಗಿರುವುದು. ಆದರೆ ಕೆಲವು ಸರ್ಗಗಳಲ್ಲಿ ತೆಲಗು ಲಿಪಿಯ ಪ್ರತಿಗಿಂತಲೂ ಶ್ಲೋಕಗಳು ನ್ಯೂನಾತಿರೇಕ ಗಳಾಗಿವೆ. ಅಲ್ಲದೆ ಶ್ಲೋಕಗಳಲ್ಲಿ ಕೆಲವು ಶಬ್ದಗಳು ವ್ಯತ್ಯಾಸವಾಗಿರು ತ್ತವೆ. ವಿವಿಧಾಶ್ಚ ವಧಾಶ್ಚಾನ್ನಾ ವಿಶ್ವಾಮಿತ್ರ ಸಮಾಗಮ ಎಂಬಲ್ಲಿ ವಿಶ್ವಾಮಿತ್ರ ಸಮಾಯನೇ ಎಂದಿದ್ದರೂ ಅಯನ ಶಬ್ದಕ್ಕೆ ಮಾರ್ಗವೆಂಬ ಅರ್ಥದಿಂದ ಸರಿಹೋಗುವುದು.

"ಅಶೋಕೋ ಮಂತ್ರಪಾಲಶ್ಚ ಸುಮಂತ್ರಶ್ಚಾಷ್ಟಮಸ್ತಥಾ" ಎಂಬಲ್ಲಿ "ಅಶೋಕೋ ಮಂತ್ರಪಾಲಶ್ಚ" ಎಂಬುದಾಗಿರುವುದೂ ಅಮಾತ್ಯನಾಮಧೇಯವೇ ಬೇರೆಯಾಗಿದೆ. ಈ ರೀತಿ ಶಬ್ದಾಂತರಗಳಿವೆ. ಇದಕ್ಕಾಗಿ ಅಲ್ಲಗಳೆದೆನೆಂದು ಭಾವಿಸಬಾರದು. ಪ್ರಾಜ್ಞರಿಗೆ ಲಿಖಿತ ಮೂಲಕ ವಿಶೇಷ ಬರೆಯಲಾರೆ.

ಇತಿ ನತಯಃ

ರಾಮಾಯಣ ಪಾರಾಯಣವನ್ನು ಎಷ್ಟು ಬಾರಿ ಮಾಡಿರುತ್ತಿದ್ದರೆಂದರೆ, ಗ್ರಂಥವು ಅವರಿಗೆ ಕಂಠಸ್ಥವಾಗಿರುತ್ತಿತ್ತು. ಒಂದೇ ಓದಿಗೆ ಇಂಥ ನ್ಯೂನಾತಿರೇಕಗಳನ್ನು ಪತ್ತೆ ಮಾಡುವುದು ಅವರಿಗೆ ಸಾಧ್ಯವಿತ್ತು.

೧೧೭

ನೌಕರಿಯಲ್ಲಿರುವ ಮಗನಿಗೆ

ತಂದೆಯು ಬರೆದ ಅಂತರ್ದೇಶೀಯ ಪತ್ರ

ಕುಶಲಮ್ ಶ್ರೀಃ ಹಾಸನ ಜಿಲ್ಲೆ
3/12/69

...ಆದಿತ್ಯಹೃದಯ ಮಟ್ಟಿಗೆ ಉಪದೇಶವಿಲ್ಲದಿದ್ದರೂ ಪ್ರತಿ ಭಾನುವಾರ ಮೂರು ಸಲ ಪಠನ ಮಾಡು. ರಾಮಾಯಣ ಪಾರಾಯಣಕ್ಕೆ ಉಪದೇಶವಾದರೆ ಆಯ್ತು. ಅದಕ್ಕೆ ಬೇರೆ ಬೇಕಿಲ್ಲ.

ನಿನಗೆ ಉಪದಿಷ್ಟವಾಗಿರುವ ಮಂತ್ರಗಳ ಪೈಕಿ ಶಿವಷಡಕ್ಷರಿಯನ್ನು ಸಾಧ್ಯವಾದಷ್ಟೂ ಹೆಚ್ಚು ಜಪಮಾಡು. ಮೊದಲು 300 ಗಾಯತ್ರಿ ಜಪ ಮಾಡಿಟ್ಟು ಅನಂತರ ಉಳಿದವುಗಳನ್ನು ಸಾಧ್ಯವಾದಷ್ಟು ಜಪಿಸು. ಗಾಯತ್ರಿಯನ್ನು ಕಡಿಮೆ ಮಾಡಬಾರದು. ಜಪ ಮಾಡುವ ಕಾಲದಲ್ಲಿ ಆಯಾ ದೇವತೆಗಳು ಪ್ರತ್ಯಕ್ಷವಾಗಿರುವಂತೆಯೂ ಪ್ರತಿ ಜಪಕ್ಕೂ ಒಂದೊಂದು ಹೂವು ಪೂಜೆ ಮಾಡುವಂತೆಯೂ ಭಾವಿಸಿ ಜಪ ಮಾಡಲು ಸಾಧ್ಯವಾದರೆ ಒಳ್ಳೆಯದು.

ಶಿವಷಡಕ್ಷರಿ ಜಪಕಾಲದಲ್ಲಿ ಅಭಿಷೇಕ, ಜಪ, (ಬಿಲ್ವಪತ್ರೆ) ಪೂಜೆ ಎಲ್ಲವೂ ಏಕಕಾಲದಲ್ಲಿ ನಡೆಯುವಂತೆ ಭಾವಿಸು. ತಲೆ ಕೆಡಿಸಿಕೊಳ್ಳಬೇಡ. ಎಷ್ಟು ಸಾಧ್ಯವೋ ಅಷ್ಟೇ ಮಾಡು...

ವಿಜ್ಞಾನವನ್ನೇ ಓದಿ ನೌಕರಿಗೆ ಸೇರಿದವರೂ ಈ ಮಾರ್ಗವನ್ನು ಪೂರ್ಣವಾಗಿ ಬಿಟ್ಟಿಲ್ಲ. ಇದು ಸಂಕೇತಿಗಳ ಸಾರ್ವತ್ರಿಕ ಪ್ರವೃತ್ತಿಯಾಗಿದೆ.

೧೧೮

ವ್ಯಾಕರಣ ವಿಚಾರ (ಅಂತರ್ದೇಶೀಯ ಪತ್ರ)

कुशलम् श्री: Bhupal
24th Jan 70

...ಚಂಡೀಹೋಮಕ್ಕೆ...ನು ಕಾಗದ ಬರೆದಿದ್ದ...ಕೆರೆ ಗದ್ದೆಗೆ ನಾವು ಖರ್ಚು ಮಾಡಿದ ಹಣ, ಪಟ್ಟ ಶ್ರಮದ ಫಲವೂ ಬಂದಂತಿಲ್ಲ.

'ವ್ಯೋಮಕೇಶಹಿಮಾಂಶು' ಎಂಬ ಪದಕ್ಕೆ ಹೇಗೆ ವಿಗ್ರಹವಾಕ್ಯವಾಗುತ್ತದೆ?

1) ವ್ಯೋಮ ಏವ ಕೇಶಃ ಯಸ್ಯ ಸಃ
ವ್ಯೋಮಕೇಶಃ, ತಸ್ಯ ಭೂಷಣಶ್ಚ ಹಿಮಾಂಶುಃ
ವ್ಯೋಮಕೇಶಹಿಮಾಂಶುಃ

2) ವ್ಯೋಮಃ ಕೇಶಃ
ತತ್ರ ಹಿಮಾಂಶುರ್ಯಸ್ಯ ಸಃ ವ್ಯೋಮಕೇಶಃ

(ಯಾವುದು ಸರಿ? ಅಥವಾ ಬೇರಾವುದು ಸರಿ?)

೧೧೯

ವ್ಯಾಕರಣ ವಿಚಾರ (ಅಂತರ್ದೇಶೀಯ ಪತ್ರ)

कुशलम् श्रीः ತಾ 1.2.71
ಹಾಸನಜಿಲ್ಲೆಯ ಹಳ್ಳಿ

ವ್ಯೋಮ ಏವ ಕೇಶಃ ಯಸ್ಯ ಸಃ ವ್ಯೋಮಕೇಶಃ. ವ್ಯೋಮಕೇಶೇ ಹಿಮಾಂಶುಃ ವ್ಯೋಮಕೇಶಹಿಮಾಂಶುಃ ಎಂಬುದೇ ಸರಿ.

೧೨೦

ಬುದ್ಧಿಮಾತು ; ಪಂಚೆಗಾಗಿ (ಅಂತರ್ದೇಶೀಯ ಪತ್ರ)

कुशलम् श्रीः 16/2/71
ಹಾಸನಜಿಲ್ಲೆಯ ಹಳ್ಳಿ

...ಅಲ್ಲಿಯ ಗಲಾಟೆ ಸಮಯದಲ್ಲಿ ಶ್ರೀ ನಿಂಗೇಗೌಡರಿಂದ ನೀನು ಸುಖವಾಗಿದ್ದೀಯೆಂಬ ವಿಷಯ ತಿಳಿದು ಬಂತಾದ್ದರಿಂದ ನಾನು ನೆಮ್ಮದಿಯಿಂದಿದ್ದೆನು.

"ವನೇ ರಣೇ ಶತ್ರುಜಲಾಗ್ನಿಮಧ್ಯೇ
ಮಹಾರ್ಣವೇ ಪರ್ವತಮಸ್ತಕೇ ವಾ
ಸುಪ್ತಂ ಪ್ರಮತ್ತಂ ವಿಷಮಸ್ಥಿತಂ ವಾ
ರಕ್ಷಂತಿ ಪುಣ್ಯಾನಿ ಪುರಾಕೃತಾನಿ॥

ಆ ದಿವಸ ಪುಣ್ಯವಶದಿಂದ ಒಳಗೇ ಇರುವ ಬುದ್ಧಿ, ಸಮಯ ಸಂದರ್ಭಗಳೊದಗಿದವು. ಅದರೆ ಇದು ಇಲ್ಲಿಗೆ ಮುಗಿದುದಲ್ಲ. ಎಚ್ಚರವಾಗಿರು..

ಮೈಸೂರಿನಲ್ಲಿ ಕೈಮಗ್ಗದ ಪಂಚೆ ಸಿಗುವುದಿಲ್ಲ. ಆದ್ದರಿಂದ 100ನೆ ನಂಬರಿನ 6 ಮೊಳ ಉದ್ದ 3 ಮೊಳ ಅಗಲ ಉಳ್ಳ ಕೆಂಪು ಅಥವಾ ಹಸಿರು ಅಂಚು ಉಳ್ಳ ಅಂಚು ಕಡ್ಡಿ ಅಂಚಾಗಿ ಎರಡು ಕಡೆಯಲ್ಲೂ ತುಟ್ಟ ತುದಿಯಲ್ಲಿರಬೇಕು. ಅಂದರೆ ಬಾ ಬಾ ಅಂಚು. ನೀನು ತಂದಿದ್ದ ಪಂಚೆಯಲ್ಲಿದ್ದಂತೆ ಇರಬೇಕು. 5 ಜತೆಗೆ ಅಷ್ಟಣೆ ಕೊಡು. ಇಲ್ಲಿ ದೊರೆಯುವುದಿಲ್ಲ... ಕೊಯಮತ್ತೂರುಸಣ್ಣ ಸಿಕ್ಕಿದರೆ ಸ್ವಲ್ಪ ಹೆಚ್ಚಾಗಿ ತೆಗೆದಿಟ್ಟುಕೊ. ಇಲ್ಲೂ ಅದಕ್ಕಿಂತ ಅಗ್ಗವಾಗಿ ದೊರೆಯದು. ಚಿ...ನು ಊರಿಗೆ ಬಂದ ನಂತರ ತುಪ್ಪ ಕಳುಹಿಸುತ್ತೇನೆ. ಮೆಣಸಿನಪುಡಿ ವಗೈರೆ ಮುಗಿಯಿತೆ ಎಂಬ ಬಗ್ಗೆ ಬರೆ. ಸಮಯ ದೊರೆತರೆ ಡ್ರೈವರನಿಗೆ ಹೇಳಿ ನನಗೆ ಕಾಗದ ಬರೆ. ಇಲ್ಲದಿದ್ದರೆ ಚಿ...ನೇ ಬರುತ್ತಾನೆ.

ವ್ಯೋಮಕೇಶಹಿಮಾಂಶುಃ
ವ್ಯೋಮ್ನಿ ಕೇಶಾಃ ಯಸ್ಯ ಸಃ
ಎಂಬ ವಿಗ್ರಹವಾಕ್ಯದಂತೆ ಇದು ಶಿವಪರವಾಯ್ತು.
ವ್ಯೋಮಕೇಶೇ ಭೂಷಣತಯಾ ವರ್ತಮಾನಃ ಹಿಮಾಂಶುಃ
ವ್ಯೋಮಕೇಶಹಿಮಾಂಶುಃ

ಇದು ಚಂದ್ರಪರವಾಯ್ತು. ಶಿವನ ಶೇಖರದಲ್ಲಿ ಭೂಷಣನಾಗಿ ಇರುವ ಚಂದ್ರ ಎಂದರ್ಥವಾಗುತ್ತದೆ. ಮಧ್ಯಮಪದಲೋಪ ಸಮಾಸ. ವ್ಯೋಮ ಏವ ಕೇಶಃ ಎಂದು ವಿಗ್ರಹವಾಕ್ಯವಿದ್ದಿದ್ದರೆ (ಇದು ಕೇಶವ ಪರ) ವ್ಯೋಮಕೇಶೇ ಹಿಮಾಂಶುಃ ಯಸ್ಯ ಸಃ ಎಂದು ವಿಗ್ರಹ ಮಾಡಿ ಪುನಃ ಶಿವಪರ ಮಾಡಬಹುದಾಗಿತ್ತು. ಅದು ಸುಧಾಕರಾದಿಸಮ್ಮತವಾದ ವಿಗ್ರಹವಲ್ಲ.

'ವ್ಯೋಮಕೇಶಸ್ಯ ಹಿಮಾಂಶುಃ' ಎಂದು ವಿಗ್ರಹ ಮಾಡಿದರೂ ಚಂದ್ರಪರವೇ ಆಗುತ್ತದೆ. ಈ ಪದ ಎಲ್ಲಿದೆ ? ವಿಶೇಷಣ ವಿಶೇಷ್ಯಗಳು ಯಾವುವು?...

೧೨೧

ಸಂಸ್ಕೃತದಲ್ಲಿ ಕವಿತ್ವ (ಅಂತರ್ದೇಶೀಯ ಪತ್ರ)

कुशलम्   श्री:   Bhupal

24.3.71

...ಒಂದು ಶ್ಲೋಕವನ್ನು ರಚಿಸಿದ್ದೇನೆ.

ಪ್ರಜ್ಞಾಂ ಪ್ರಯಚ್ಛ ಮೇ ತಾರೇ
ಪ್ರಬುದ್ಧಾಂ ಪ್ರಯತಾಂ ಶುಭಾಮ್ ।
ಪುತ್ರವನ್ನಿರತಂ ಪಾಹಿ
ಮಯಿ ಮಾತಃ ಕೃಪಾಂ ಕುರು ॥

ಇದರ ರಚನೆ ಸರಿಯಾಗಿದೆಯೆ ತಿಳಿಸಿ.

ಕವಿ ಲಕ್ಷ್ಮೀಶನೂ ರುದ್ರಭಟ್ಟನೂ ಸಂಕೇತಿ ಸಮುದಾಯದಿಂದ ಬಂದವರೆಂಬ ಒಂದು ಮೌಖಿಕ ಪರಂಪರೆ ಇದೆ. ಸಂಪ್ರದಾಯಗೀತೆಗಳನ್ನು ರಚಿಸಿದವರಿದ್ದಾರೆ. ಅವರಲ್ಲಿ ಕಾವ್ಯಶಕ್ತಿ ಇರುವುದಕ್ಕೆ ಪುರಾವೆಯಾಗಿ ಇಂಥ ರಚನೆಗಳೂ ಆಗಾಗ ಸಿಗುತ್ತವೆ.

೧೨೨

ವಿದ್ವತ್ಕವಯಃ ಕವಯಃ

ಕವಿತೆ ಹೇಗಿರಬೇಕೆಂಬ ಬಗೆಗೆ ಒಂದು ಅಭಿಪ್ರಾಯ

कुशलम्   ಶ್ರೀಃ   9/2/73

ಹಾಸನಜಿಲ್ಲೆಯ ಹಳ್ಳಿ

...ನಿನ್ನ ಪತ್ರಗಳು ತಲಪಿದವು. ಶಾಲೆಯಲ್ಲಿ 5-6 ದಿನಗಳಿಂದ ನಡೆದ ಕುಣಿತದಿಂದಲೂ ಮನೆಯಲ್ಲಿಯ ವಾತಾವರಣದಿಂದಲೂ ಮುಗ್ಧನಾಗಿದ್ದೆ. ನೆನ್ನೆಯೇ ಟಪ್ಪಾಲಿಗೆ ಹಾಕಬಹುದಾಗಿತ್ತು. ನನಗೆ ತಿಳಿದಷ್ಟು ತಿದ್ದಿದ್ದೇನೆ. ಪತ್ರಿಕೆಗೆ ಕೊಡು. ಆದರೂ ವಿದ್ವತ್ಕವಯಃ ಕವಯಃ. ಪುರಾಣಗಳನ್ನೂ ಇತಿಹಾಸಗಳನ್ನೂ ಓದಬೇಕು. ಶಾಸ್ತ್ರಗಳನ್ನು ಓದಬೇಕು. ಅಲ್ಲಿ ನಿರೂಪಿಸಿರುವ ಸಿದ್ಧಾಂತಗಳನ್ನು ಕ್ರೋಡೀಕರಿಸಿ ಒಂದೊಂದು ಪದ್ಯದಲ್ಲಿ ಬರೆಯಬೇಕು. ಇದು ಬಹುಕಾಲಾಪೇಕ್ಷ...

೧೨೩

ಕವಿತ್ವ (ಕವರು)

श्री:   ಹಾಸನಜಿಲ್ಲೆಯ ಹಳ್ಳಿ

ತಾ 27.12.73

ಮಾನ್ಯ ಬ್ರಹ್ಮ ಶ್ರೀ...ಶಾಸ್ತ್ರಿಗಳಿಗೆ ಅನಂತವಂದನೆಗಳು. ತಮ್ಮ ಪತ್ರ ಮೊನ್ನೆ ತಲಪಿತು.

"ಗುಣದೋಷೌ ಬುಧೋ ಗೃಹ್ಣನ್......"

ಇತ್ಯಾದಿ ವಚನದಂತೆ ತಾವು ನನ್ನ ಸಾಸಿವೆ ಪ್ರಮಾಣದ ಕಾರ್ಯಕ್ಕೆ ಪರ್ವತ ಸದೃಶವಾದ ಪ್ರೀತಿಯನ್ನೆರೆದಿರಿ; ತುಂಬ ಕೃತಜ್ಞನಾಗಿದ್ದೇನೆ.

ತಮ್ಮ ವಾಕ್ಸುಧೆಯಿಂದ ಬಲಗೊಂಡು, ತಮ್ಮ ಆಜ್ಞೆಯಂತೆ ಮತ್ತೊಂದು ಮೂರು ಪದ್ಯಗಳನ್ನು ರಚಿಸಿ ಇದರೊಡನೆ ಕಳುಹಿಸುತ್ತಿದ್ದೇನೆ.

ಅಲ್ಲದೆ, 7.12.1973 ನೇ ತಾ.ನ ವಿಕ್ರಮ ಪತ್ರಿಕೆಯ ಪುಟ 12ರಲ್ಲಿ ಮತ್ತೆ "ಚನ್ದ್ರಂ ಗತೋಽಮಾನವಃ" ಎಂದು ಸಮಸ್ಯಾಪೂರಣಕ್ಕಾಗಿ ಕೊಟ್ಟಿರುವುದನ್ನು ಸಹ ಯಥಾಮತಿ ಪೂರೈಸಿ ಸಕಾಲದಲ್ಲಿ ಬೆಂಗಳೂರು ಅಡ್ರೆಸ್ಸಿಗೆ ಕಳುಹಿಸಿದ್ದೇನೆ. ಆ ಪದ್ಯಗಳನ್ನೂ ಸಹ ತಮ್ಮ ಅವಗಾಹನೆಗಾಗಿ ಇದರೊಡನೆ ಕಳುಹಿಸಿದ್ದೇನೆ.

ಇತಿ ಪ್ರಣತಯಃ

ತಮ್ಮ ವಿದ್ಯಾರ್ಥೀ

೧೨೪

ನಾರಾಯಣೀಯಂ (ಶ್ಲೋಕಗಳು)

कुशलम्   श्री:   Bhupal

18th Aug 75

..."ನಾರಾಯಣೀಯಂ" ನಲ್ಲಿರುವ ಈ ಶ್ಲೋಕವನ್ನು ಬರೆದಿದ್ದೇನೆ.

ದೃಷ್ಟ್ವಾಥ ದೈತ್ಯಹತಕೇನ ರಸಾತಲಾಂತೇ
ಸಂವೇಶಿತಾಂ ಝಟಿತಿ ಕೂಟಕಿಟೀರ್ವಿಭೋ ತ್ವಮ್॥
ಆಪಾತುಕಾನವಿಗಣಯ್ಯ ಸುರಾರಿಖೇಟಾನ್ ।
ದಂಷ್ಟ್ರಾಂಕುರೇಣ ವಸುಧಾಮದಧಾಃ ಸಲೀಲಮ್॥
ಧೃತ್ವಾಮೀನವಪುಃ ಶ್ರುತೀನುದದಧಾಃ
ಕಾರುಣ್ಯದುಗ್ಧೋದಧೇ॥

ಎಂದು ಉಪಯೋಗಿಸಬಹುದು ತಾನೆ ?

೧೨೫

ಕರ್ಮಜಿಜ್ಞಾಸೆ

कुशलम्   ॥ श्री: ॐ श्री: ॥   ಮೈಸೂರು

ದಿ. 07.01.76

ಪರಮಪೂಜ್ಯ ಗುರುಗಳ ದಿವ್ಯ ಚರಣಧೂಳಿಯನ್ನು ಶಿರಸಾವಹಿಸಿ, ಕೃತ ಅನಂತ ನಮಸ್ಕಾರಗಳು. ಅದಾಗಿ ಉ.ಕು.ಸಾಂ. ಇಲ್ಲಿ ಮಾತೂಶ್ರೀಯವರೊಡನೆ ಕುಶಲದಿಂದಿದ್ದೇವೆ. ಅಲ್ಲಿ ಮಾತೂಶ್ರೀಯವರಿಗೆ ನಮಸ್ಕಾರಗಳನ್ನು ತಿಳಿಸಬೇಕಾಗಿ ನಮ್ರ ವಿನಂತಿ.

ನನ್ನ ಹೃದಯುದಲ್ಲಿ ಈಗ ಆವರಿಸಿಕೊಂಡಿರುವ "ಧರ್ಮಜಿಜ್ಞಾಸೆ" ಈಗಾಗಲೇ ತಮಗೆ ವೇ।। ಬ್ರಂ।। ಶ್ರೀ...ವಾಧ್ಯಾರಿಂದ ಮನವರಿಕೆಯಾಗಿದೆ...ದಯವಿಟ್ಟು ತಾವು ಕೃಪೆ ಮಾಡಿ, ಈ ಕೆಳಗಿನ ಅಂಶಗಳಿಗೆ, ಧರ್ಮಶಾಸ್ತ್ರರೀತ್ಯಾ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸಬೇಕಾಗಿ ಕೈಮುಗಿದು ಬೇಡುತ್ತೇನೆ.

(ಈ ಕೆಳಗಿನವು ವೈಯಕ್ತಿಕ ವಿಷಯವಲ್ಲ–ಸಮಾಜದಲ್ಲಿರುವ ಸಂದರ್ಭಗಳಷ್ಟೆ)

1) ವರ್ಷದೊಳಗಿನ 16 ಶ್ರಾದ್ಧಗಳ ಸಂದರ್ಭ–ಹಿರಿಯ ಅಣ್ಣ ಕಾಶ್ಮೀರದಲ್ಲೋ ಅಸ್ಸಾಂನಲ್ಲೋ ಇದ್ದಾರೆ. ಕಿರಿಯವನು ಈ ಪ್ರಾಂತ ಇದ್ದಾನೆ :

(i) ಹಿರಿಯವನು ನಾನು ಶ್ರಾದ್ಧಗಳನ್ನು ಮಾಡುತ್ತಿದ್ದೇನೆ ಎಂದು ಬಾಯಿಯಲ್ಲೂ ಹೇಳುತ್ತಾನೆ – ಲಿಖಿತ ಮುಖೇನವೂ ತಿಳಿಸುತ್ತಾನೆ. ಕಿರಿಯವನಿಗೆ, ನಂಬಲರ್ಹವಾದ ಮೂಲಗಳಿಂದ ತಿಳಿದಂತೆ, ಹಿರಿಯವನು ಶ್ರಾದ್ಧಗಳನ್ನು (ಮಾಸಿಕಗಳನ್ನು) ಮಾಡುತ್ತಿಲ್ಲ! ಆಗ ಕಿರಿಯವನು ಹೇಗೆ ನಡೆದುಕೊಳ್ಳಬೇಕು?

(ii) ಹಿರಿಯವನು, ಕಿರಿಯವನಿಗೆ "ನಾನು ಮಾಡಲಾರೆ – ನೀನೇ ಮಾಡು" ಎನ್ನುತ್ತಾನೆ. ಆಗ ಕಿರಿಯವನು ಏನು ಮಾಡಬೇಕು?

(iii) ಸನ್ನಿಹಿತನಾಗಿದ್ದೇ "ನನಗಿಷ್ಟವಿಲ್ಲ – ಮಾಡುವುದಿಲ್ಲ" – ಎನ್ನುತ್ತಾನೆ. ಆಗ ಕಿರಿಯವನು ಏನು ಮಾಡಬೇಕು?

2) ಅಣ್ಣ ತಮ್ಮಂದಿರಲ್ಲಿ ಬದ್ಧ ದ್ವೇಷವಿದೆ ಎನ್ನೋಣ. ಪರಸ್ಪರ ಮುಖಾವಲೋಕನವೂ ಇಲ್ಲ, ತಮ್ಮನ ಮನೆಗೆ ಅಣ್ಣ ಬರುವುದಿಲ್ಲ, ತಮ್ಮನ ಮನೆಯಲ್ಲಿರುವ ಮಾತಾಪಿತೃಗಳಲ್ಲೊಬ್ಬರು ಮೃತರಾಗುತ್ತಾರೆ. ಆಗ ಕಿರಿಯವನು ಏನು ಮಾಡಬೇಕು? (ಪರಸ್ಪರ ಸೇರುವುದು ಸಾಧ್ಯವಿಲ್ಲ)

ದಯವಿಟ್ಟು ಉತ್ತರ ಕೊಡಬೇಕಾಗಿ ಸವಿನಯ ವಿನಂತಿ.

ಇತಿ ನತಯಃ

।। ॐ तत्सत् ।।

ಶ್ರಾದ್ಧ, ಅಪರಕರ್ಮಗಳ ವಿಷಯದಲ್ಲಿ ಇಂಥ ನಡೆವಳಿಕೆಯು ವಿಶೇಷವಾಗಿ ಕಾಣುವುದು ಸ್ವಾತಂತ್ರ್ಯೋತ್ತರ ಕಾಲದಲ್ಲಿ – ಅದರಲ್ಲೂ ಇಪ್ಪತ್ತನೆಯ ಶತಮಾನದ ಏಳನೆ ದಶಕದಿಂದ ತೊಡಗಿ. ಈ ಪತ್ರ ಬರೆದವರು ದೊಡ್ಡ ಹುದ್ದೆಯಲ್ಲಿದ್ದ ಎಂಜಿನಿಯರು.

೧೨೬

ಬ್ರಹ್ಮಭೋಜನ (ಅನುಮಾನ ಪರಿಹಾರ : ಕೃತಜ್ಞತಾಪತ್ರ)

ಕುಶಲಂ ।।श्री: ॐ श्री:।। ಮೈಸೂರು

ತಾ 21.01.76

ಪರಮಪೂಜ್ಯ ಗುರುಗಳ ಪಾದಪದ್ಮಂಗಳ ಧೂಳಿಯನ್ನು ಶಿರಸಾವಹಿಸಿ ಕೃತ ಅನಂತ ನಮಸ್ಕಾರಗಳು. ಅದಾಗಿ ಉ.ಕು.ಸಾಂ. ಇಲ್ಲಿ ಮಾತೂಶ್ರೀಯವರೊಡನೆ ಕುಶಲದಿಂದಿದ್ದೇನೆ.

ನಿಮ್ಮ ಆಶೀರ್ವಾದ ಪತ್ರ ಈಗ ತಾನೇ ತಲಪಿತು. ಅದಕ್ಕಾಗಿ ತುಂಬಾ ಚಿರಋಣಿಯಾಗಿದ್ದೇನೆ. ನಿಮಗೆ ಕೊಟ್ಟ ಶ್ರಮ – ತ್ರಾಸಗಳಿಗೆ ಕ್ಷಮೆಯಾಚಿಸುತ್ತೇನೆ.

ನಿಮ್ಮ ಪತ್ರದಿಂದ ತೃಪ್ತನಾಗಿದ್ದೇನೆ. ಮನಸ್ಸಿನ ಅಲ್ಲೋಲ ಶಾಂತಸ್ಥಿತಿಗೆ ತಿರುಗಿದೆ. ನಿಮ್ಮ ಅಪ್ಪಣೆಯಂತೆಯೇ ನಡೆದು ಕೊಳ್ಳುವವನಾಗಿದ್ದೇನೆ.

ಶೀ।। ಅಣ್ಣಯ್ಯನವರೊಡನೆ ಮಾಡಲವಕಾಶವಿಲ್ಲದಾಗ (ವರ್ಷಪರ್ಯಂತ) "ಬ್ರಹ್ಮಭೋಜನ" ದಿಂದಲೇ ನನ್ನ ಕರ್ತವ್ಯ ಪೂರ್ಣತೆಯನ್ನು ಕಾಣಲಿದ್ದೇನೆ.

ಮನೆಯಲ್ಲಿ ಮಾತೂಶ್ರೀಯವರಿಗೆ ನಮಸ್ಕಾರಗಳನ್ನು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

ಯಾವಾಗ್ಲೂ ನಿಮ್ಮ ಆಶೀರ್ವಾದ ಕವಚವನ್ನು ಪ್ರಾರ್ಥಿಸುತ್ತಿರುವ

ನಿಮ್ಮ ಬಾಲಕನ ನತಯಃ

।। ॐ तत्सत् ।।

ಶ್ರಾದ್ಧ, ಅಪರಕರ್ಮಗಳ ವಿಷಯದಲ್ಲಿಯೂ ಸಾರ್ವತ್ರಿಕವಾಗಿ, ವಿಶೇಷವಾಗಿ ನಗರಗಳಲ್ಲಿ, ಮೊದಲಿದ್ದ ಕಾಳಜಿ, ತೀವ್ರ ಸ್ಪಂದನಗಳು ಕ್ಷೀಣಿಸುತ್ತಿರುವುದು ಆಧುನಿಕ ವಿದ್ಯಮಾನವಾಗಿದೆ.

೧೨೭

ಒಂದಷ್ಟು ಪ್ರಶ್ನೆಗಳು (ಅನುಮಾನ ಪರಿಹಾರ)

ॐ ಶ್ರೀ 13.12.85

ಕೊಡಗಿನ ಹಳ್ಳಿ

ಮಾನ್ಯ ಶ್ರೀ...ಶಾಸ್ತ್ರಿಗಳಲ್ಲಿ ತಮಗೆ ಅಪರಿಚಿತನಾದ ಆದರೆ ತಮ್ಮ ಬಗ್ಗೆ ತಿಳಿದಿರುವ...ನು ಮಾಡುವ ವಿಜ್ಞಾಪನೆಗಳು. ನನ್ನ ಮನಸ್ಸಿನಲ್ಲಿ ಬಂದಿರುವ ಈ ಸಂಶಯವನ್ನು ಜ್ಞಾನಿಗಳಾದ ತಾವು ನಿವಾರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ವಿಶ್ವಾಮಿತ್ರನ ಪತ್ನಿ ಯಾರು? ಅವಳ ಹೆಸರೇನು? ವಿಶ್ವಾಮಿತ್ರಗೋತ್ರ ಬ್ರಹ್ಮರ್ಷಿಯಾದ ಮೇಲೆ ಬಂದುದೆ ಅಥವಾ ಅದಕ್ಕೆ ಮೊದಲೆ? ದಯವಿಟ್ಟು ತಿಳಿಸಿ...

ಗುಚ್ಛ - 7

ಆರೋಗ್ಯ

ಕಾಲಕ್ರಮದಲ್ಲಿ ಔಷಧಿಯ ಮಾರ್ಗವು ಬದಲಾದುದನ್ನೂ, ಆರೋಗ್ಯ ಔಷಧೋಪಚಾರಗಳ ಬಗೆಗಿನ ಸಂಕೇತಿಗಳ ಧೋರಣೆಯನ್ನೂ ಈ ಸಂಬಂಧದ ಕೆಲವು ಪತ್ರಗಳು ಸೂಚಿಸುತ್ತವೆ.

೧೨೮

ನಸ್ಯ, ಟಾನಿಕ್ (ಮಿತ್ರನಿಗೆ ಬೆಂಗಳೂರಿನ ಕಾರ್ಡು)

ಕ್ಷೇಮ ಶ್ರೀ ತಾ। 6-6-1936

ಚಿರಂಜೀವಿ ರಾಜೇಶ್ರೀ ರಾಮಾವಧಾನಿಗಳ ಸಮಕ್ಷಮಕ್ಕೆ... ಸಂಪ್ರತಿ. ತಾವು ಬರದ ಕಾರ್ಡು ತಲಪಿತು. ಬಟ್ಟೆಯೂ ತಲಪಿತು. ಚಿರಂಜೀವಿಯು ಸುಖವಾಗಿ ಬಂದು ಸೇರಿದನು. ಆತನನ್ನು ನೋಡಿದ್ದರಿಂದ ತಮ್ಮಲ್ಲಿ ಉಂಟಾಗಿದ್ದ ಸಂದೇಹವು ಬಹಳ ಮಟ್ಟಿಗೆ ಕಮ್ಮಿಯಾಯಿತು. ತಾವು ದಯವಿಟ್ಟು ಬರುವಾಗ್ಗೆ ಬಾಕಿಯಿರುವ ನಸ್ಯೆಗಳನ್ನು ತೆಗೆದುಕ್ಕೊಂಡು ಬರಬೇಕು. ತೀ। ಸುಬ್ರಾಯಶಾಸ್ತ್ರಿಗಳಿಗೂ ನನ್ನ ವಿನಯಪೂರ್ವಕ ವಿಜ್ಞಾಪನೆಗಳನ್ನು ತಿಳಿಸಿ. ಫಲಿತಾಂಶವನ್ನು ಬರಿಯಬೇಕು. ತಾವು ರಕ್ತಪುಷ್ಠಿಗೆ ಟಾನಿಕ್ ತೆಗೆದುಕೊಳ್ಳುವುದು ಉತ್ತಮ. ಇನ್ನು ಉಪಯೋಗಿಸುವ ಪಕ್ಷ ಉತ್ತುತ್ತಿ, ದ್ರಾಕ್ಷಿ, ಶುಂಠಿ, ಜೇನು, ದೊರೆತರೆ ಸೊಗದೇ ಬೇರು ಇವುಗಳನ್ನು ಸಮಾಂಶ ಸೇರಿಸಿ ತೆಗೆದುಕೊಳ್ಳಬೇಕು. ಆಶೀಃ.

೧೨೯

ಹೆತ್ತ ವಿಷಯ

ದೂರದ ಊರಿನ ಮಗನಿಗೆ ಕಾರ್ಡು

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ಹಾಸನ

$25\frac{3}{40}$

...ನಾನು ಇಲ್ಲಿಗೆ ಬಂದು 16 ದಿನಗಳಾದುವು. ಕಳೆದ ಮಾಘ ಬ ೧೨ ಮಂಗಳವಾರದ ಪ್ರಾತಃಕಾಲ 10 ಘಂಟೆ ಸಮಯದಲ್ಲಿ ಚಿ।। ಸೌ।।...ಮ್ಮನು ಸ್ತ್ರೀ ಶಿಶುವನ್ನು ಈ ಫಾಲ್ಗುನ ಶು ೭ ಶನಿವಾರ ಪ್ರಾತಃಕಾಲ $9^1/_4$ ಘಂಟೆ ಸಮಯದಲ್ಲಿ ಚಿ ।। ಸೌ।।..... ಮ್ಮನು ಮಿಷನ್ ಹಾಸ್ಪೆಟಲ್‌ನಲ್ಲಿ ಪುಂಶಿಶುವನ್ನು ಪ್ರಸುವಿಸಿ ಇರ್ಕಡೆಗಳಲ್ಲೂ ಈರೀರ್ವರೂ ದೈವಾನುಗ್ರಹದಿಂದ ಹದುಳಿಗರಾಗಿರುವರು. ನಾಳೆ ಹಾಸ್ಪೆಟಲ್‌ನಿಂದ ಬಂದು ಮಂಗಲಸ್ನಾನ ಆಗುತ್ತದೆ. ನಂತರ ಅಂದರೆ ಬುಧವಾರ ಗುರುವಾರದಲ್ಲಿ ಊರುಕಡೆ ಹೊರಡುವ ಯೋಚನೆ ಇದೆ. ಈ ಮಧ್ಯೆ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ದೇಹಸ್ಥಿತಿಯನ್ನೂ ಪರೀಕ್ಷಿಸಿ ಈ ದಿವಸ ರಕ್ತ ತೆಗೆದು ಪರೀಕ್ಷಾರ್ಥವಾಗಿ ಬೆಂಗಳೂರಿಗೆ ಕಳುಹಿರುವರು. ಅದರ ಫಲಿತಾಂಶವು ಬಂದ ನಂತರ ಊರಿಗೆ ಹೋಗಬೇಕಾದೀತೋ ಎಂಬ ಊಹೆಯೂ ಇದೆ. ಹೇಗಾಗುವುದೋ ನೋಡಬೇಕು. ವಾಯುವಿನ ಬಾಧೆಯು ಬೆನ್ನು, ಭುಜ, ಎಡದ ರುಂಡ ವಗೈರೆ ಸ್ಥಾನಗಳಲ್ಲಿ ಬಾಧಿಸುತ್ತಿದೆ. ಆಹಾರ ವಿಚಾರದಲ್ಲಿ ಕೊರತೆಯಿಲ್ಲದೆ ಮಾಮೂಲಿನಂತೆ ಸಾಗುತ್ತಿದೆ. ಇದರ ಬಾಧೆ ಮಟ್ಟಿಗೆ ತಪ್ಪಿಲ್ಲ. ಊರಲ್ಲೆಲ್ಲರೂ ಸುಖವಾಗಿರುವ ದಾಗಿ ಕಾಗದ ಬಂದಿದೆ.

ಎಲ್ಲನಿಂದ ಒಂದು ಕರಾವಿನ ಹಸುವನ್ನೂ (ಹೆಂಗರು) 15 ರೂಗಳಿಗೆ ಕೊಂಡುದಾಗಿದೆ. ಸದ್ಯಕ್ಕೆ ಕಥೆ ತಳ್ಳುತ್ತಿದೆ.

ದೇವರು ನಿನ್ನ ಕಾರ್ಯಗಳನ್ನು ಸುಗಮವಾಗಿ ನೆರವೇರಿಸಲೆಂದು ಎಲ್ಲರೂ ದೇವರಲ್ಲಿ ಹರಸುತ್ತಿದೇವೆ. ಎಲ್ಲ ಭಾಗದಲ್ಲೂ ಜಾಗರೂಕನಾಗಿರು.

ಇತ್ಯಾಶೀ ಃ

ಇಪ್ಪತ್ತನೆಯ ಶತಮಾನದ ನಲವತ್ತರ ದಶಕದ ವೇಳೆಗೆ ನಗರಗಳಲ್ಲಾದರೂ ಹೆರಿಗೆಗೂ ಇತರ ಆರೋಗ್ಯ ವಿಚಾರಗಳಿಗೂ ಆಧುನಿಕ ಆಸ್ಪತ್ರೆಗಳ ಪ್ರಯೋಜನವನ್ನು ಪಡೆಯುವ ಪ್ರವೃತ್ತಿ ಬೆಳೆದಿರುವುದು ಕಾಣುತ್ತದೆ. "ಇರ್ಕಡೆಗಳಲ್ಲೂ ಈರೀರ್ವರೂ... ಹದುಳಿಗರಾಗಿರುವರು" ಇಂಥ ಪ್ರಯೋಗಗಳನ್ನು ಗಮನಿಸಬೇಕು. ಪ್ರಾಯಶಃ, ಪತ್ರಕಾರರು ಕನ್ನಡ ಗ್ರಂಥಗಳನ್ನು ನೋಡಿದವರಾದುದರಿಂದ ಇಂಥ ಭಾಷೆ ಬಳಕೆಯಾಗಿದೆ.

೧೩೦

ಮಗಳಿಗೆ ಪ್ರಾಣಭೀತಿ (ಬೀಗರ ಕಾರ್ಡು)

ಕ್ಷೇಮಂ ಶ್ರೀ ತಾ। 31-3-42

ಮಹಾರಾಜೇ ಶ್ರೀ ರಾಮನಾಥಪುರದ ರಿಟೇರ್ಡು ಸ್ಕೂಲ್ ಮಾಸ್ಟರ್ ರಾಮಯ್ಯನವರಿಗೆ ಸೋಮನಹಳ್ಳಿಯ ಭೀಮಯ್ಯನ ನಮಸ್ಕಾರಗಳು. ಅದಾಗಿ ಇವರೀಗೆ ವುಭಯ ಕುಶಲೋಪರಿ ಸಾಂಪ್ರತ. ಚಿ।ಸೌ। ಸಾವಿತ್ರಮ್ಮನಿಗೆ ಭಾನುವಾರ ರಾತ್ರೆ ಲಾಗಾಯ್ತು ಹೊಟ್ಟೆನೋವು ಪ್ರಾಪ್ತವಾಗಿ ಬಹಳ ತೊಂದರೇಗೆ ಕಾರಣ ವಾಗಿರುತ್ತೆ. ಆಸ್ಪತ್ರೇಗೆ ಹೋಗೋಣವೆಂದರೂ ಸಹ ಗಾಡಿಯಲ್ಲಿ ಕೂರೂವದಕ್ಕೂ ಸಹ ಸಾಧ್ಯವಿಲ್ಲದಂತೆ ಆಗಿರುತ್ತೆ. ಈ ದಿವಸದ ಅವಳ ಸ್ಥಿತಿಯನ್ನು ನೋಡಿದರೆ ಪ್ರಾಣ ವುಳಿಯುವದೆ ಅಸಾಧ್ಯವಾಗಿ ತೋರುತ್ತೆ. ಈ ಕಾಗದ ಕಂಡ ಕೂಡ್ಲೆ ವುದಾಸೀನ ಮಾಡದೆ ಖಂಡಿತ ಬರುತ್ತೀರಾಗಿ ನಂಬಿರುತ್ತೇನೆ. ಇತಿ ನಮಸ್ಕಾರಗಳು.

೧೩೧

ಪ್ಲೇಗು, ದೇವನೂರಿಗೆ ಯಾತ್ರೆ

ಕ್ಷೇಮ ಶ್ರೀ ತಾ। 29.9.45

ಬಾಣಾವರ

...ನೀವು ಗೌರಿಹಬ್ಬಕ್ಕೆ ಕಳುಹಿಸಿದ ಮಂಗಳದ್ರವ್ಯವು ಸಕಾಲಕ್ಕೆ ತಲಪಿತು...ಈಗ ಸುಮಾರು ಒಂದು ತಿಂಗಳಿಂದ ಇಲ್ಲಿ ಪ್ಲೇಗು ಗಲಾಟೆ ಬಹಳವಾಗಿದೆ. ನಾನು ಇರುವ ಪ್ರಾಂತದ ಆಜುಬಾಜಿನಲ್ಲಿ ಅಷ್ಟಾಗಿ ಇಲ್ಲ. ಮನೆಯಲ್ಲಿ ಎಲ್ಲರೂ ಇನಾಕ್ಯುಲೇಷ್ಹ ಮಾಡಿಸಿಕೊಂಡಿರುತ್ತೇವೆ. ಈಗ ತಾ. 25 ರಿಂದ ಪ್ಲೇಗ್ ಗಲಾಟೆಗಾಗಿ 10 ದಿವಸ ಸ್ಕೂಲಿಗೆ ರಜ ಬಂದಿರುತ್ತೆ. ಇನ್ನು 2-3 ದಿವಸದಲ್ಲಿ ಎಲ್ಲರನ್ನೂ...ಹಳ್ಳಿಗೆ ಕರೆದುಕೊಂಡು ಹೋಗಬೇಕೆಂದಿರುತ್ತೇನೆ. ಈ ಪ್ರಾಂತದಲ್ಲಿ ಮಳೆ ಬಾರದೆ ತುಂಬ ತೊಂದರೆಯಾಗಿತ್ತು. ಈಗ ಸುಮಾರು ಒಂದು ಹದ ಮಳೆ ಬಂದಿರುತ್ತೆ...ಚಿ॥ಸೌ॥...ನು ಆರೋಗ್ಯವಾಗಿ ಆಡಿಕೊಂಡಿರುತ್ತಾಳೆ. ಸ್ಕೂಲಿಗೆ ಸೇರಿಸಿಲ್ಲ. ಸೌ॥ಯು ಬಹಿಷ್ಠೆಯಾದ ಪ್ರಯುಕ್ತ ರಜ ಬಂದೊಡನೆ ಊರಿಗೆ ಹೊರಡಲಾಗಲಿಲ್ಲ. ಕಡೆಯ ಶ್ರಾವಣ-ಶನಿವಾರ ದೇವನೂರಿಗೆ ಹೋಗಿ ದರ್ಶನ ಮಾಡಿಕೊಂಡು ಬಂದೆವು...ನಿಮ್ಮ ಮನೆಯಲ್ಲಿ ಎಲ್ಲರ ಆರೋಗ್ಯಭಾಗ್ಯಕ್ಕೂ ಮಳೆ ಬೆಳೆ ವಿಚಾರಗಳಿಗೂ ಕಾಗದ ಬರೆಯುವುದು...

೧೩೨

ಇಲಾಜನ್ನು ತಿಳಿಸಿ ಪತ್ರ

ತೀವ್ರವಾಗಿ ಗಾಯಗೊಂಡ ಸೋದರನ ಬಗೆಗೆ

ಕ್ಷೇಮ ಶ್ರೀಃ ಹಾಸನಸೀಮೆಯ ಹಳ್ಳಿ

16/12/53

...ತೀ...ನಿಗೆ ಇನ್ನೂ ಚೆನ್ನಾಗಿ ಹುಷಾರಿಲ್ಲ. ಘಾಯ ಮಾದಿಲ್ಲ. ಮೊದಲಿಗಿಂತಲು ಸ್ವಲ್ಪ ಉತ್ತಮ. ಹೊಟ್ಟೆಗೆ ಕೊಡುವ ಕಜ್ಜಿ ಔಷಧಿ ಹೊಸದು. ಧೈರ್ಯ ಸಾಲದು. ಆದ್ದರಿಂದ ಜಂಗ್ಲಿ ಬಾದಾಮಿ, ಮುರದಾರಶಿಂಗಿ, ಮಡ್ಡಿ ಕರ್ಪೂರ ಮತ್ತು ಕಪಿಲಾ ಹಿಟ್ಟು ಈ ನಾಲ್ಕನ್ನು ಚನ್ನಾಗಿ ಪಟ್ಟೆ ಹಾಗೆ ಪುಡಿ ಮಾಡಿ ಕೊಪ್ಪರಿ ತುಪ್ಪದಲ್ಲಿ ಚನ್ನಾಗಿ ಮಿಲಾಕತ್ತು ಮಾಡಿ ಪ್ರತಿ ದಿನ ಎರಡು ಬಾರಿ ಸವರುತ್ತಾ ಬಂದರೆ 4 ದಿನಗಳಲ್ಲಿ ಗುಣವಾಗುತ್ತದೆ. ಪದಾರ್ಥ ಗಳನ್ನು ಒಂದೊಂದಕ್ಕೆ 2 ಆಣೆ ಪ್ರಕಾರ ತಂದರೆ ಸಾಕು...ಇದೇ ಅತ್ಯುತ್ತಮವಾದ ಔಷಧಿ...

೧೩೩

ಸೋದರಿಯ ಆರೋಗ್ಯ

ಆಧುನಿಕ ವಿದ್ಯೆಗೆ ತೊಡಗಿಕೊಂಡ ಯುವಕನೊಬ್ಬನ ಚಿಂತನೆ

ಕುಶಲ ಶ್ರೀ ಹಾಸನಸೀಮೆಯ ಹಳ್ಳಿ

12.5.55

ತ್ರೀ॥ ಭಾವನವರಿಗೆ...ನ ವಿಜ್ಞಾಪನಂಗಳು. ಅದಾಗಿ ಈವರೆಗೆ ಉಭಯ ಕುಶಲೋಪರಿ ಸಾಂಪ್ರತ.

ತಮ್ಮ ಆಗಿನ ಕಾಗದ ತಲಪಿ ಸಕಲವೂ ಅಭಿಪ್ರಾಯವಾಯ್ತು. ಮಾ॥ ಸೌ॥...ಮ್ಮನಿಗೆ ಪ್ರಶ್ನೆ ನೋಡಿದ್ದರಲ್ಲಿ ಬ್ರಹ್ಮನ ಕಾಟವೆಂತ ಬಂತು. ಈಗ ಹುಶಾರು ಹ್ವಾಗಿದೆ...ಅಕ್ಕನವರಿಗೆ ಕೈಮುಸಗೆ ವಿಷಯ ವೇನಾದರೂ ಇದ್ದರೆ ನೋಡಿಸಿ ಔಷಧಿ ಕೊಡಿಸುವುದು... ಮಾ॥ ಸೌ॥...ನಿಗೆ ಕುಲದೇವತೆ ವಿಷಯವೆ ಮುಖ್ಯವಾಗಿದೆಯಂತ ತಿಳಿಯಿತು. ಆದ್ದರಿಂದ ತಾವು ದೇವರಿಗೆ ಖಂಡಿತ ಆದಷ್ಟು ಬೇಗ ಹೋಗಿಬರುವುದು ಒಳ್ಳೆಯದು. ಉದಾಸೀನ ಮಾಡಬಾರದು. ಯಾವುದಕ್ಕೂ ತಮ್ಮ ಉತ್ತರವನ್ನೇ ನೋಡುತ್ತ ಇದ್ದೇವೆ. ಇನ್ನೇನೂ ವಿಶೇಷವಿಲ್ಲ.

ಇತಿ ವಿಜ್ಞಾಪನಂಗಳು

ಆಧುನಿಕ ವೈದ್ಯವನ್ನು ಈ ಸಮುದಾಯ ಎಷ್ಟು ನಿಧಾನವಾಗಿ ಸ್ವೀಕರಿಸಿತು ಎಂಬುದರ ಸಣ್ಣಸೂಚನೆ ಇಲ್ಲಿದೆ.

೧೩೪

ಅನಾರೋಗ್ಯದ ಸಂದರ್ಭ

ಪಟ್ಟಣದಲ್ಲಿ ನೌಕರಿಯಲ್ಲಿರುವ ಸೋದರನೊಬ್ಬನು ಹತಾಶನಾಗಿರುವುದು. ಇನ್ನೊಬ್ಬ ಭಾವನಿಗೆ ಬರೆದ ಪತ್ರ

ಹರಿಹರ
31.8.1962

...ಚಿ। ಸೌ।...ಳು ನಗರದಿಂದ...ಹಳ್ಳಿಗೆ ಬಂದಿರುತ್ತಾಳೆ. ಕೈಕಾಲು ಊದು ಇಳಿದಿಲ್ಲ. ತುಂಬಾ ಕೃಷವಾಗಿದ್ದಾಳೆ. ಔಷಧಿ ಕೊಡುತ್ತಾ ಇದ್ದಾರೆ. ಎಲ್ಲಾ ದೈವೇಚ್ಛೆ. ಯಾರಿಗೂ ನಮ್ಮ ಮೇಲೆ ದಯೇ ಇಲ್ಲ. ನಮ್ಮ ಮನೆಯವರೆಂದರೆ ತುಂಬಾ ಉದಾಸೀನರಾಗಿ ಕಾಣುತ್ತಾರೆ. ಇದೆಲ್ಲವೂ ಪ್ರಾಮಾಣಿಕರಿಗೆ ಸಹಜವಾಗಿ ಬರುವ ತೊಂದರೆಗಳು ಇರಬಹುದು. ಬೇಗ ದೇವರು ನನ್ನ ತಂಗಿಗೆ ಆರೋಗ್ಯ ಭಾಗ್ಯವನ್ನು ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸುತ್ತೇನೆ. ಸರ್ವಾಂತರ್ಯಾಮಿಯಾದ ದೇವರೇ ಕಾಪಾಡಲಿ ಎಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ. ಪ್ರತಿಯೊಬ್ಬರಿಗೂ ಖಾಯಿಲೆ ಬರುತ್ತೆ. ಎಲ್ಲರೂ ಔಷಧಿ ಕೊಡಿಸಿ ಗುಣಮಾಡಿಕೊಳ್ಳುವುದಿಲ್ಲವೆ ? ಇದು ನಮ್ಮ ದೌರ್ಭಾಗ್ಯ. ಮಾ। ಸೌ। ಅಕ್ಕನವರನ್ನು ಕಳುಹಿಸಿಕೊಡಿ. ನನ್ನ ತಂಗಿಯು ಅವರ ಅಕ್ಕನನ್ನು ನೋಡಬೇಕೆಂದು ತುಂಬಾ ಹಂಬಲಿಸುತ್ತಾ ಇರುತ್ತಾಳೆ. ತಾವೂ ಬಂದರೆ ಸಂತೋಷ...

ಔಷಧೋಪಚಾರಕ್ಕಾಗಿ ಹಳ್ಳಿಯಿಂದ ಪಟ್ಟಣಕ್ಕೆ ಹೋಗುವುದು ಸಹಜ. ಆದರೆ ಇಲ್ಲಿ ಅದಕ್ಕೆ ವಿರುದ್ಧವಾದ ರೀತಿಯು ನಡೆದಿದೆ. ಆಗ, ನಾಟಿ ಔಷಧಿಗಳು ಹೆಚ್ಚಾಗಿ ಬಳಕೆಯಾಗುತ್ತಿದ್ದವು.

೧೩೫

ಮಗನಿಗೆ ಮಾರ್ಗದರ್ಶನ (ಅಂತರ್ದೇಶೀಯ ಪತ್ರ)

10/9/69

ಕುಶಲಮ್ ಶ್ರೀಃ ಹಾಸನಸೀಮೆಯ ಹಳ್ಳಿ

...ಭೃಜ್ಞಾಮಲಕವನ್ನು ತಂದಿಟ್ಟುಕೊಂಡು ಒಂದು ಪೈಸಾ ತೂಕದಷ್ಟು ಮಾತ್ರ ತಲೆಯ ಮೇಲಿಟ್ಟು ಬಿಸಿನೀರಿನಲ್ಲಿ ಸ್ನಾನ ಮಾಡು. ಕಣ್ಣಿಗೆ ತಂಪಾಗಿರುತ್ತೆ.

ಅಲ್ಲಿಯ ಆಯುರ್ವೇದ ಔಷಧಾಲಯದಲ್ಲಿ ಒಂದು ಪೌಂಡು ಅಶ್ವಗಂಧ ಲೇಹವನ್ನು ತಂದು ಬೆಳಿಗ್ಗೆ ½ ತೊಲ, ರಾತ್ರಿ ½ ತೊಲದಂತೆ ತುಪ್ಪದಲ್ಲಿ ಕಲೆಸಿ ತೆಗೆದುಕೊ. ಹೆಚ್ಚಾಗಿ ತಿಂದರೆ ಭೇದಿಯಾಗುತ್ತೆ. ಎಣ್ಣೆಯ ಪದಾರ್ಥಗಳನ್ನೂ ಶಲಧಿ ಪದಾರ್ಥಗಳನ್ನೂ ತಿನ್ನಬಾರದು. ಪಥ್ಯ ಚೆನ್ನಾಗಿರಬೇಕು. ದೇಹದಲ್ಲಿ ಸೇರಿಕೊಂಡಿರುವ ವಾತ ನಿರ್ಮೂಲವಾಗುತ್ತೆ. ಹಾಲುಕುಡಿ. ಅನಂತರ ಕಾಣುವ ಹಸಿವನ್ನು ತುಪ್ಪದಲ್ಲಿ ಅಡಗಿಸು.

ಶ್ರೀ ಗಣಪತಿಯವರಹಬ್ಬದ ದಿನ ಗಣಪತಿ ಇಟ್ಟು ನಿನಗೆ ಬಂದಷ್ಟು ರೀತಿಯಲ್ಲಿ ಪೂಜಿಸು. ನೈವೇದ್ಯಕ್ಕೆ ಬಾಳೆಹಣ್ಣು, ಕಲ್ಲುಸಕ್ಕರೆ, ಬಾದಾಮಿ, ಈಚ್ಚುಕಾಯಿ, ಇನ್ನೂ ಒಳ್ಳೇ ಹಣ್ಣುಗಳನ್ನಿಡು. ಪೂಜೆ ಆದ ನಂತರ ಗಣಪತಿ ಹೆಸರಿನಲ್ಲಿ ಒಬ್ಬ ಬ್ರಾಹ್ಮಣರಿಗೆ ಸ್ವಲ್ಪವನ್ನು ಕೊಡು. ಗಣಪತಿ ಸುಪ್ರೀತನಾಗುತ್ತಾನೆ. ಜಪ ಬಿಡಬೇಡ. ಅದೇ ನಿನ್ನ ರಕ್ಷಕ..ಪ್ರತಿವಾರದ ದಿನಭವಿಷ್ಯದಲ್ಲೂ ನಿನಗೆ ಬರೆಯುವುದು ಕೋಪ ಬಿಡಿ ಎಂದೇ! ...ಧೈರ್ಯ, ವಿವೇಕ, ವಿನಯ, ಶಾಂತಿ, ಸೌಜನ್ಯಗಳನ್ನು ಸಂಪಾದಿಸು. ಶ್ರಿ ಗಣೇಶ ಶಾರದಾ ಗುರುಗಳ ಅನುಗ್ರಹವಿದೆ ನಿನಗೆ...

ಇತಿ ಶುಭಮ್

೧೩೬

ಮತ್ತಷ್ಟು ಉಪದೇಶ

ದೂರದ ಊರಿನಲ್ಲಿ ದೊಡ್ಡ ಹುದ್ದೆಯ ನೌಕರಿ ಮಾಡುತ್ತಿರುವ ಮಗನಿಗೆ ಮತ್ತಷ್ಟು ಉಪದೇಶ ಇರುವ ಅಂತರ್ದೇಶೀಯ ಪತ್ರ

11/6/70

ಕುಶಲಮ್ ಶ್ರೀಃ ಹಾಸನಸೀಮೆಯ ಹಳ್ಳಿ

ಶ್ರೀ ಮಹಾಗಣಪತಿಯು ನಿನಗೆ ಸುಖ ಪ್ರಯಾಣವನ್ನು ಕರುಣಿಸಿದ್ದಾನೆಂದು ನಂಬಿದ್ದೇನೆ. ಸುಖವಾಗಿ ತಲಪಿದ್ದಕ್ಕೂ ಮನೆ ಬದಲಾವಣೆ ವಗ್ಯೆರೆ ವಿಷಯಗಳಿಗೂ ಕಾಗದ ಬರೆ. ಈಗ ಅತ್ಯವಶ್ಯಕವಾಗಿರುವ Fanನ್ನು ಕಂತು ರೀತಿಯಲ್ಲಾದರೂ ಕೊಂಡುಕೊ.

...ಜೀನುತುಪ್ಪದ ಔಷಧಿಯನ್ನು ನಿಯತವಾಗಿ ತೆಗೆದುಕೊ... ಪರ್ಯಾಪ್ತವಾಗಿ ತುಪ್ಪ, ಹಾಲು ಉಪಯೋಗಿಸು (ಜೀರ್ಣಿಸಿ ಕೊಳ್ಳಲು ಸಾಧ್ಯವಾದಷ್ಟು) ಚೆನ್ನಾಗಿ ದೇಹವನ್ನು ಪೋಷಿಸು. ಇದು ಅದಕ್ಕೆ ಸಮಯ...

"ಶರೀರಮಾದ್ಯಂ ಖಲು ಧರ್ಮಸಾಧನಮ್". ಇದನ್ನು ಚೆನ್ನಾಗಿ ನೆನಪಿಡು.

"ಸ್ಮರಣಂ ಕೀರ್ತನಂ ಕೇಳಿಃ ಪ್ರೇಕ್ಷಣಂ ಗುಹ್ಯಭಾಷಣಮ್।
ಸಂಕಲ್ಪೋऽಧ್ಯವಸಾಯಶ್ಚ ಕ್ರಿಯಾನಿರ್ವೃತ್ತಿರೇವ ಚ ।
ಏತನ್ಮೈಥುನಮಷ್ಟಾಂಗಂ ಪ್ರವದಂತಿ ಮನೀಷಿಣಃ ।
ಏತದ್ವಿಪರೀತಂ ಬ್ರಹ್ಮಚರ್ಯಮ್"

ಎಂಬುದನ್ನು ನೆನಪಿಡು. ಆಗುಂತುಕವಾಗಿ ಒದಗುವ ಕ್ಲೇಶಗಳನ್ನು ಮರೆತು ಶಾಂತ ಸಂಕಲ್ಪನಾಗಿ ನೆಮ್ಮದಿಯ ಜೀವನವನ್ನು ನಡೆಸು. ಶಂಕಾತಂಕಗಳನ್ನು ದೂರಮಾಡು. "ಭಜಮನಶ್ಶಿವಮೇವ ನಿರಂತರಂ" ಶಾಂತನಾದರೂ ಎಚ್ಚರಿಕೆಯಿಂದಿರು...

೧೩೭

ಜಪಕ್ಕೆ ಸಲಹೆ (ಗ್ರಹಣದೋಷ ಪರಿಹಾರ)

कुशलम्   श्रीः   20-4-77

...ಳಿಂದಲೂ ಪತ್ರ ಬಂತು. ಅವಳೂ ಅವರ ತಾಯಿ ಇಲ್ಲಿಗೆ ಬರುವುದರಲ್ಲಿದ್ದಾಳೆಂದು ಬರೆದಿದ್ದಾಳೆ. ಇನ್ನೂ ಬಂದಿಲ್ಲ. ಶ್ರೀ ಅತ್ಯಮ್ಮನವರು ಬೆಂಗಳೂರಿಂದ ನಿನ್ನೆ ಮಧ್ಯಾಹ್ನ ಊರಿಗೆ ಬಂದರು. ಔಷಧಿ ಸಿಕ್ಕಿಲ್ಲವೆಂಬ ಸಮಾಚಾರವನ್ನು...ನಿಂದ ತಿಳಿದು ಹೇಳಿದರು. ನಾನು ಈಗ ಬೆಂಗಳೂರಿಗೆ ಬರತಕ್ಕವನಿಲ್ಲ. ಬರುವಾಗ ಔಷಧಿ ತಕ್ಕೊಂಡು ಬಾ. ಪ್ರಕೃತ ಗ್ರಹಣ ನಿಮಿತ್ತವಾಗಿ ನೀನು ಆ ಸಮಯದಲ್ಲಿ ಜಪ ಮಾಡಬೇಕಿತ್ತು. 3 ದಿವಸ ಮುಂಚೆ ಬರೆದಿಟ್ಟೆ. ಸಮಯದಲ್ಲಿ ಮರೆತು ಹೋಯ್ತು. ಈಗ ಇಲ್ಲಿ ಬರೆದಿದ್ದೇನೆ. ಮೂರು ದಿನವಾದರೂ ರಾತ್ರೆಯೋ ಹಗಲೋ ಜಪ ಮಾಡು. ಪೀಡಾಪರಿಹಾರವಾಗಲಿ.

ಶುಭತಿಥೌ ಅದ್ಯ ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ, ರಾಹುಗ್ರಸ್ತಸೂರ್ಯೋಪರಾಗ ಜನಿತಪೀಡಾಪರಿಹಾರಾರ್ಥಮ್ ಅಪಮೃತ್ಯುಪರಿಹಾರಾರ್ಥಮ್ ಆಯುಷ್ಯಾಭಿವೃದ್ಧ್ಯರ್ಥಂ ಸರ್ವಾರಿಷ್ಟಪರಿಹಾರಾರ್ಥಂ ಸಮಸ್ತಾಭ್ಯುದಯಾವಾಪ್ತ್ಯರ್ಥಂ ಸಮಸ್ತದೇವತಾಪ್ರೀತ್ಯರ್ಥಂ ಸಮಸ್ತದೇವತಾಪ್ರಸಾದಸಿದ್ಧ್ಯರ್ಥಂ ಸಮಸ್ತದೇವತಾಕಂ ಜಪಂ ಕರಿಷ್ಯೇ ಇತಿ ಸಂಕಲ್ಪ್ಯ

ಯೋऽಸೌ ವಜ್ರಧರೋ ದೇವಃ ಆದಿತ್ಯಾನಾಂ ಪ್ರಭುರ್ಮತಃ।
ಸಹಸ್ರನಯನಃ ಶಕ್ರಃ ಗ್ರಹಪೀಡಾಂ ವ್ಯಪೋಹತು ॥ 1 ॥

ಮುಖಂ ಯಸ್ಸರ್ವದೇವಾನಾಂ ಸಪ್ತಾರ್ಚಿರಮಿತದ್ಯುತಿಃ ।
ಸೂರ್ಯೋಪರಾಗಸಂಭೂತಿಮಗ್ನಿ ಪೀಡಾಂ ವ್ಯಪೋಹತು ॥ 2 ॥

ಯಃ ಕರ್ಮಸಾಕ್ಷೀ ಲೋಕಾನಾಂ ಧರ್ಮೋ ಮಹಿಷವಾಹನಃ।
ಯಮಸ್ಸೂರ್ಯೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು ॥ 3 ॥

ರಕ್ಷೋಗಣಾಧಿಪಸ್ಸಾಕ್ಷಾನ್ನೀಲಾಂಜನಸಮಪ್ರಭಃ ।
ಖಡ್ಗಹಸ್ತೋऽತಿಭೀಮಶ್ಚ ಗ್ರಹಪೀಡಾಂ ವ್ಯಪೋಹತು ॥ 4॥

ನಾಗಪಾಶಧರೋ ದೇವಃ ಸದಾ ಮಕರವಾಹನಃ ।
ಸಜಲಾಧಿಪತಿರ್ದೇವೋ ಗ್ರಹಪೀಡಾಂ ವ್ಯಪೋಹತು ॥5॥

ಪ್ರಾಣರೂಪೋ ಹಿ ಲೋಕಾನಾಂ ಸದಾ ಕೃಷ್ಣಮೃಗಪ್ರಿಯಃ ।
ವಾಯುಸ್ಸೂರ್ಯೋಪರಾಗೋತ್ಥಾಂ ಗ್ರಹಪೀಡಾಂ ವ್ಯಪೋಹತು ॥ 6 ॥

ಯೋऽಸೌ ನಿಧಿಪತಿರ್ದೇವಃ ಖಡ್ಗಶೂಲಗದಾಧರಃ ।
ಸೂರ್ಯೋಪರಾಗಕಲುಷಂ ಧನದೋऽತ್ರ ವ್ಯಪೋಹತು ॥7॥

ಯೋऽಸಾವಿಂದುಧರೋ ದೇವಃ ಪಿನಾಕೀ ವೃಷವಾಹನಃ ।
ಸೂರ್ಯೋಪರಾಗಪಾಪಾನಿ ಸ ನಾಶಯತು ಶಂಕರಃ ॥8॥

ತ್ರೈಲೋಕ್ಯೇ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಬ್ರಹ್ಮವಿಷ್ಣ್ವರ್ಕರುದ್ರಾಶ್ಚ ದಹಂತು ಮಮ ಪಾತಕಮ್ ॥9॥

ಒಂದು ಕಲಶದಲ್ಲಿ ನೀರನ್ನು ಮುಂದುಗಡೆ ಇಟ್ಟು ಅದನ್ನು ನೋಡುತ್ತಾ ಜಪ ಮಾಡಿ ಜಪಾನಂತರ ಆ ಉದಕವನ್ನು ಪ್ರೋಕ್ಷಣೆ ಮಾಡಿಕೊಳ್ಳುವುದು.

ಈ ಶ್ಲೋಕಗಳನ್ನು ಹಾಳು ಮಾಡುವುದು ಬೇಡ. ಮುಂದೂ ಇದರ ಉಪಯೋಗವಿರುತ್ತದೆ.

ಸರ್ವೇ ಸಮುದ್ರಾಸ್ಸರಿತಃ ತೀರ್ಥಾನಿ ಜಲದಾ ನದಾಃ ।
ಆಯಾಂತು ಯಜಮಾನಸ್ಯ ದುರಿತಕ್ಷಯಕಾರಕಾಃ ॥

ಇದರಿಂದ ಕಲಶದಲ್ಲಿ ಸಮಸ್ತ ದೇವತೆಗಳನ್ನು ಆವಾಹನೆ ಮಾಡುವುದು.

ಇತಿ ಶಂ

೧೩೮

ಪಾರಂಪರಿಕ ನಂಬಿಕೆ

ಕೈಬಿಡದ ನಂಬಿಕೆಗಳನ್ನು ಸೂಚಿಸುವ ಅಂತರ್ದೇಶೀಯ ಪತ್ರ

Bangalore

कुशलम्   श्री:   28-2-81

...ಅವರನ್ನು ಶುಕ್ರವಾರ ಮೈಸೂರಿನಲ್ಲಿ ಚಿ॥...ನು ಡಾಕ್ಟರ ಬಳಿ ಕರೆದುಕೊಂಡು ಹೋಗಿ ಮೂಗನ್ನು ಪಂಚರ್ ಮಾಡಿಸಿದ್ದಾನೆ. ಎರಡು ಮೂಗಿನೊಳಕ್ಕೂ ದಬ್ಬಳ ಹಾಕಿ ತೂತು ಮಾಡಿ ಕೀವು, ರಕ್ತಾ ಎಲ್ಲವನ್ನೂ ತೆಗೆದರಂತೆ. ಅದಕ್ಕಾಗಿ ಮಾತ್ರೆಗಳನ್ನು ಬರೆದುಕೊಟ್ಟಿದ್ದರು. ಅದನ್ನು ತೆಗೆದುಕೊಳ್ಳುತ್ತಿದ್ದಾರೆ.

...ನೀವಿಬ್ಬರೂ ಹೋಗಿ ಬಂದನಂತರ ನಾನೂ 8 ದಿನ ಬೆಳ್ಳುಳ್ಳಿಯನ್ನು ಉಪಯೋಗಿಸಿದೆ. ಕೆಮ್ಮು ಬಹುಮಟ್ಟಿಗೆ ಕಡಿಮೆಯಾಯಿತು.

ಸ್ವೌ॥ ಮಾ॥ ಶ್ರೀಯವರು ಬಂದನಂತರ ಅವರಿಗೆ ವಿಪರೀತ ಕೆಮ್ಮು ಮೊದಲಿನ ಹಾಗೇ ಉಂಟಾಯಿತು. ಅವರೂ 2 ದಿನ ಬೆಳ್ಳುಳ್ಳಿ ಊಟ ಮಾಡಿದ್ದರಿಂದ ತಕ್ಕಷ್ಟು ಕಡಿಮೆಯಾಗಿತ್ತು. ಆದರೆ ಆ ಕೂಡಲೆ ಉಷ್ಣ ಆಯಿತೆಂದು ಎಣ್ಣೆ ನೀರು ಇತ್ಯಾದಿ ಮಾಡಿಕೊಂಡಿದ್ದರಿಂದ ಅವರಿಗೆ ಈಗ ವಿಪರೀತ ಕೆಮ್ಮು ಆಗಿದೆ. ನಿತ್ರಾಣವೂ ಆಗಿದೆ.

ಬೆಳ್ಳುಳ್ಳಿಯಿಂದ ಆಗಿರುವ ಗುಣವೂ ನನಗೂ ತಾತ್ಕಾಲಿಕವೋ ಅನ್ನಿಸುತ್ತದೆ. ಇದಕ್ಕೆ ಒಮ್ಮೆ ಕೈಮಸಿಕೆ ಔಷಧಿ ತೆಗೆದುಕೊಳ್ಳಬೇಕು... ಊರಿಂದ ಬೇರು ತಂದಿದಾರೆ. ಒಂದು ತಿರುಪಿನ ಮುಚ್ಚಳದ ಪ್ಲಾಸ್ಟಿಕ್ ಭರಣಿಯಲ್ಲಿ ½ ಸೇರು ಅಚ್ಚ ಹಸುವಿನ ಬೆಣ್ಣೆಯನ್ನು ಪಾರ್ಸಲ್ ಮಾಡಿ ಕಳಿಸುವಂತೆ ತೀ॥ ಅಣ್ಣನವರಿಗೆ ತಿಳಿಸುವುದು. ಇದು ಈವರೆಗೆ ನೋಡಿರದಂಥಾ ತುಂಬ ವಿಚಿತ್ರವಾದ, ಕೆಟ್ಟದಾದ ಕೆಮ್ಮು. ನೀವು ಈ ಕೆಮ್ಮು ಇಲ್ಲಿರುವಾಗ ಬರಲೇ ಬೇಡಿರಿ.

ಸೌ॥ ಮಾ॥ ಶ್ರೀ॥ ರವರು ಬೆಳ್ಳುಳ್ಳಿ ತಿನ್ನುವುದನ್ನು ಬಿಟ್ಟ ಮರುದಿನವೇ (ಶುಕ್ರವಾರ) ಕೆಮ್ಮು ವಿಪರೀತವಾಗಿ ಗಾಬರಿ ಯಾಯಿತು. Nursing home ಗೆ ಸೇರಿಸುವ ಬಗ್ಗೆ ಯೋಚಿಸುತ್ತಿದ್ದೆ ಅವರು ಒಪ್ಪಲಿಲ್ಲ.

ಇವತ್ತು ಬೆಳ್ಳುಳ್ಳಿ ಊಟ ಮಾಡಿದೆವು. ಸ್ವಲ್ಪ ಕಡಿಮೆ. ಭಯವಾಗುವಷ್ಟಿಲ್ಲ.

ನೆನ್ನೆ ರಾತ್ರಿ ಕರಟದಲ್ಲಿ ಬಿಳೀ ಹುರುಳೀ ಕಾಳುಗಳನ್ನಿಟ್ಟು ಉಚ್ಚೆ ಹುಯ್ದು ಇಟ್ಟಿತ್ತು. ಇವತ್ತು ಅವೆಲ್ಲಾ ಕಪ್ಪಗಾಗಿವೆ. ಆದ್ದರಿಂದ ಕೈವಿಷ ಆಗಿದೆ ಅನ್ನಿಸುತ್ತೆ...ಅದಕ್ಕೆ ಮದ್ದು ಮಾಡಲು ಹಸು ಬೆಣ್ಣೆ ಬೇಕು.

ನನಗೂ ಬೆಳ್ಳುಳ್ಳಿ ಬಿಟ್ಟರೆ ಮೊದಲಿನಂತೆ ಆಗುತಾ ಇರುವುದರಿಂದ ನಾನೂ ಕೈವಿಷಕ್ಕೆ ಔಷಧಿ ತೆಗೆದುಕೊಳ್ಳುತ್ತೇನೆ. ಬೇರೆ ಔಷಧಗಳೆಲ್ಲ ನಿಷ್ಪ್ರಯವಾದವು. ಈ ಕೆಮ್ಮಂತೂ ನಮ್ಮನ್ನು ಬಿಟ್ಟು ಹೋಗುವುದೋ ಬಿಡಿಸಿ ಹೋಗುವುದೋ ಕಾಣೆ.

ವಿಶೇಷವಿಲ್ಲ

ಇತಿ

ವಿಷಪ್ರಯೋಗ ಎಲ್ಲಿ ಆಗಿರಬಹುದೆಂಬ ಬಗ್ಗೆ ಊಹೆ ಮಾತ್ರ ಸಾಧ್ಯವಾಗಿದೆ.

ಎಂಬತ್ತರ ದಶಕದಲ್ಲಿ ಈ ರೀತಿಯ ಚಿಂತನೆಯು ವ್ಯಾಪಕವಾಗಿರಲಿಲ್ಲ, ಬಹಳವಾಗಿ ಇಳಿಮುಖವಾಗಿತ್ತು.

೧೩೯

ತಂದೆಯ ಆರೋಗ್ಯ

ತಂಗಿಯು ಅಕ್ಕನಿಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ವಂದೇಮಾತರಂ ಹಾಸನಸೀಮೆಯ ಹಳ್ಳಿ
27.7.82

...ನಿನಗೆ ವಿಷಯ ತಿಳಿದಿಲ್ಲವೆಂದೆನಿಸುತ್ತದೆ. ತೀ॥ ತಂದೆಯವರಿಗೆ ಹುಶಾರಿರಲಿಲ್ಲ. 15 ದಿನ ಆಯಿತು. 10 ದಿನದಿಂದ ಆಸ್ಪತ್ರೆ ಯಲ್ಲಿದ್ದರು. ಮನೆಗೆ ಬಂದು ಒಂದು ವಾರವಾಯ್ತು. ಏನೂ ಇಲ್ಲ. ಒಂದು ದಿನ ಸಂಜೆ ಇದ್ದಕ್ಕಿದ್ದಂತೆ ಎದೆನೋವು ಅಂತ ಮಲಗಿಕೊಂಡರು. 5-6 ಗಂಟೆಗಳ ಕಾಲ ಇತ್ತು. ಆಮೇಲೆ ಮೊದಲಿನಂತೆಯೇ ಆಯಿತು. ಮಾರನೇದಿನ ಬೆಳಿಗ್ಗೆ ಹಾಸನಕ್ಕೆ ಹೋಗಿ ವೈದ್ಯರಲ್ಲಿ ತೋರಿಸಿದಾಗ ಅವರು ಆಶ್ಚರ್ಯಪಟ್ಟರಂತೆ. "ನೀವು ಹಳ್ಳಿಗಾಡಿನವರಾದ್ದರಿಂದ ತಡೆದುಕೊಂಡಿದ್ದೀರ. ಪಟ್ಟಣದವರಾಗಿದ್ದರೆ...!" ಎಂದರಂತೆ. ಈಗ ಯಾವತರಹ ನೋವೂ ಇಲ್ಲ...

ಅವತ್ತು ಬಂದಿದ್ದು ಅಷ್ಟೆ. ಮಾತ್ರೆ ಔಷಧಿ ಎಲ್ಲಾ ತೆಗೆದುಕೊಳ್ಳುತ್ತಿದ್ದಾರೆ. ಆದರೇನು ಅದು ಮತ್ತೆ ಯಾವಾಗ ಬರುತ್ತದೆಂದು ವೈದ್ಯರಿಗೂ ತಿಳಿಯುವುದಿಲ್ಲವಂತೆ ! ಇನ್ನೊಮ್ಮೆ ಬಂದರೆ ನೀವಿಲ್ಲ ಅಂತ ಹೇಳಿದರು. ಅವರನ್ನು ಉಳಿಸಿಕೊಳ್ಳುವುದು ನಮ್ಮ ಕೈಯ್ಯಲ್ಲಿದೆ. ಕೆಲಸ ಮಾಡಬಾರದು. ಸರಿಯಾಗಿ ಮಾತ್ರೆ ತಿನ್ನಬೇಕು. ಈಗ ಬೇಕಾದರೂ ಬರಬಹುದು, ನಾಳೆ ಬೇಕಾದರೂ ಬರಬಹುದು. ಈಗ ನಾವೇ ಅದೃಷ್ಟವಂತರು. ಮೊದಲು ಎಚ್ಚರಿಕೆ ಕೊಟ್ಟಂತಾಯಿತು ಇದು. ಮುಂದಿನದು ನಮ್ಮ ಕೈಯಲ್ಲಿದೆ. ಈಗ ಯಾವ ತರಹ ನೋವೂ ಇಲ್ಲ, ಗಾಬರಿಯಾಗಬೇಡ...

ಸ್ವತಃ ಮಾಡುವ ತೋಟ- ತುಡಿಕೆಯ ದುಡಿಮೆಯಿಂದಾಗಿ ಈ ಸಮುದಾಯದವರು ದೃಢಕಾಯರೂ ಆರೋಗ್ಯಶಾಲಿಗಳೂ ಆಗಿರುತ್ತಿದ್ದರು.

೧೪೦

ಸೋದರನ ಆರೋಗ್ಯ

ಸೋದರನ ಆರೋಗ್ಯದ ಬಗೆಗೆ ಕಾಳಜಿ ವಹಿಸಿ, ತಂದೆಗೆ ಬರೆದ ಕಾರ್ಡು

ಕ್ಷೇಮ ಶ್ರೀ 16.7.91

ತೀ॥ರಲ್ಲಿ ವಿನಯಪೂರ್ವಕ ಸಾಷ್ಟಾಂಗ ಪ್ರಣಾಮಗಳು, ಸಾಂಪ್ರತ.

...ತೀ॥ ಅಣ್ಣನವರು ಇನ್ನಾದರೂ ಹೆಚ್ಚು ಶ್ರಮ ತೊಗೊಳ್ಳೋದು ಬೇಡ. ಚಿಂತೆಯನ್ನು ಮಾಡದಿರಲಿ. ಮನೆ ಬದಲಿಸಿದ್ದರಿಂದ ಅವರಿಗೆ ಆದ ತೊಂದರೆ ನನಗೆ ಗೊತ್ತು. ಆದರೆ ಅವರ ಆರೋಗ್ಯದ ದೃಷ್ಟಿಯಿಂದ ಈ ಬದಲಾವಣೆ ಅನಿವಾರ್ಯ ವಾಗಿತ್ತು...

ತಿರುಗಾಟವನ್ನು ಆದಷ್ಟೂ ಕಡಿಮೆ ಮಾಡಲಿ...ಹಳ್ಳಿ ಔಷಧಿ ನಿಲ್ಲಿಸೋದು ಬೇಡ. ತಕ್ಷಣ ತೊಗೊಳ್ಳಲಿ. ಚೆನ್ನಾಗಿ ತಂಪು ಮಾಡಿಕೊಳ್ಳಲಿ. ಬೆಂಗಳೂರಿಗೆ ಹೋಗಿ ಕಣ್ಣು ತೋರಿಸಲಿ... ಇವಿಷ್ಟೂ ತಕ್ಷಣ ಮಾಡಬೇಕಾದ ಕೆಲಸ. ಉದಾಸೀನ ಬೇಡ.

ತಡವೂ ಬೇಡ. ನೀರುಸೇದೋದು ಇತ್ಯಾದಿ ಇದ್ದರೆ ಆಳು ಇಟ್ಟುಕೊಳ್ಳಲಿ. ಶ್ರಮಗಳೂ ಹೀಯಾಳಿಕೆಗಳೂ ತಿರಸ್ಕಾರಗಳೂ ಆಗದಂತೆ ನಿಗಾ ಮಾಡಬೇಕಾದುದನ್ನು ...ಯವರಿಗೆ ಮನದಟ್ಟು ಮಾಡಿ.

ಮುಂದಿನ ಬಾರಿ Transfer ಮಾಡಿಸಿಕೊಂಡು ಆ ಕಡೆ ಬರುತ್ತೇನೆ.

ತೀ॥ ಅಣ್ಣನವರು ನಿಮ್ಮೊಡನೆ...ಹಳ್ಳಿಯಲ್ಲೇ ಇದ್ದಿದ್ದರೆ ನಿಮಗೂ ಅನುಕೂಲ ಇತ್ತು. ಆದರೆ ಅವರ ಕ್ಷೇಮದ ದೃಷ್ಟಿಯಿಂದ ...ಊರು ವಾಸವನ್ನು ಅನಿವಾರ್ಯಗೊಳಿಸಿತೆಂದೇ ಈಗಲೂ ನನ್ನ ಭಾವನೆ.

ಮುಂದಿನ ತಿಂಗಳ ಹೊತ್ತಿಗೆ 5000 ರೂ ಸಿದ್ಧವಾಗುತ್ತೆ. ತೀ॥ ಅಣ್ಣನವರನ್ನು ಕೇಳಿ. ಬೇಕೆಂದರೆ ಕಳಿಸುತ್ತೇನೆ. ಹಣದ ಸಂಗತಿಗಳಿಗಾಗೂ ಚಿಂತೆ ಮಾಡೋದು ಬೇಡ.

ತೀ॥ ಅಣ್ಣನವರು ತಮ್ಮ ಆರೋಗ್ಯದ ಕಡೆ ಗಮನ ಕೊಡಲಿ. ಉಳಿದವರಿಗೂ ಅದು ಇರಬೇಕು...

ಅತಿಶಯವಿಲ್ಲ
ಇತಿ ನಮಸ್ಕಾರಗಳು

ಗುಚ್ಛ - 8

ಆತಂಕ

ಮುಂದಿನ ಪತ್ರಗಳಲ್ಲಿ, ಸಾಮಾನ್ಯವಾಗಿ ಎದುರಾಗುವ ನಾನಾ ರೀತಿಯ ಆತಂಕಗಳ ಸ್ವರೂಪ ಕಾಣುತ್ತದೆ.

೧೪೧

ಕೋಮು ಗಲಭೆ

ಪರಊರಿನಲ್ಲಿ ತೊಂದರೆಯಲ್ಲಿರುವ ಮಗನಿಗೆ, ತಂದೆಯ ಕಾರ್ಡು

ಕುಶಲಂ ಶ್ರೀ ಛಾಯಾಪತಿಃ ವಿರಹಿ 9.8.28

ಹಾಸನಜಿಲ್ಲೆಯ ಹಳ್ಳಿ

ಚಿ|| ಗೆ ಆಶೀರ್ವಾದಗಳು, ಉ.ಕು.ಸಂ. ಸುಮಾರು 20 ದಿನಗಳಲ್ಲಿ ನಿನಗೆ 1 ಕಾರ್ಡು ಬರೆದಿದ್ದೆ. ಉತ್ತರವೇ ಇಲ್ಲ... ಜನಗಳು ಹೇಳುವುದರಲ್ಲೂ ಪತ್ರಿಕೆಗಳನ್ನು ನೋಡುವುದರಲ್ಲೂ ಅಲ್ಲಿ ಇನ್ನೂನೂ ಗಲಾಟೆಯು ತಪ್ಪಿಯೇ ಇಲ್ಲವಾಗಿ ಸದಾ ನಮಗೆ ನಿನ್ನ ಚಿಂತೆಯೇ ದೇವರ ಧ್ಯಾನವಾಗಿದೆ. ಹೀಗಿರುವಾಗ ನೀನು 15 ದಿನಗಳಿಗೊಮ್ಮೆಯಾದರೂ 1 ಕಾರ್ಡು ಬರೆಯದಿರುವದು ಅತ್ಯಂತ ಶೋಚನೀಯ ವಿಚಾರ. ನೀನು ಹೊರಗೆ ಸಂಚರಿಸುವ ಕಾಲಗಳಲ್ಲಿ ಏನು ಅಪಾಯ ಸಂಭವಿಸುವುದೋ ಎಂದು ಬಲುವಾಗಿ ನಿನ್ನ ತಾಯಿ ಕೊರಗುತ್ತಿರುವಳಲ್ಲದೆ ನನ್ನನ್ನು ಹೋಗಿ ಊರಿಗೆ ಕರೆತಾರೆಂದು ಹಿಂಸಿಸುತ್ತಿರುವಳು. ನನಗೂ ಅದೇ ಉತ್ತಮವೋ ಎಂದು ಕಾಣುತ್ತೆ. ಮುಖ್ಯವಾಗಿ ನಮ್ಮಂತಹ ದರಿದ್ರರಿಗೆ ಯಾವ ಭಾಗದಲ್ಲೂ ಏಳಿಗೆಯಿಲ್ಲ. "ದರಿದ್ರನಾದಂಗೆ ಸರ್ವಂ ಶೂನ್ಯಂ'' ಎಂದು ಸಿದ್ಧವಚನವೇ ಇದೆ. ನಾವು ಮಾಡುವದಾದರೂ ಏನಿದೆ. ಎಲ್ಲ ವಿದ್ಯಮಾನಗಳಿಗೂ, ನಿಮ್ಮಗಳಿಗೆ ಯಾವ ಭಾಗದಲ್ಲೂ ಅಪಾಯಕ್ಕೆ ಕಾರಣವಿಲ್ಲವೆ ? ಎಂಬುದಕ್ಕೂ ತಕ್ಷಣ ಉತ್ತರ ಬರಿ. ನೈಜಾಂಶವು ತಿಳಿದರೆ ನಾನು ಬರುವದಿಲ್ಲ, ನೀನು ಆಗಾಗ್ಗೆ ಕಾರ್ಡು ಬರಿಯುತ್ತಿದ್ದರೆ ಧೈರ್ಯವಿರುತ್ತೇನೆ. ಇಲ್ಲದಿದ್ದರೆ ಅಹರ್ನಿಶಿಯೂ ವ್ಯಾಕುಲ ತಪ್ಪದು. ಎಲ್ಲ ಭಾಗದಲ್ಲೂ ನಿನ್ನ ಮನಸ್ಸಿಗೆ ಶಾಂತಿಯಿದ್ದರೆ ವಾಜಪೇಯಂಸ್ಕಾಲರ್ಷಿಪ್ಪಿಗೆ ಪ್ರಯತ್ನಿಸಿದ್ದೆಯಾ ? ಫಲಿತಾಂಶ ಏನೆಂಬುದನ್ನು P.V.R. ಗೆ ಬರೆದಿದ್ದೆಯಾ? ಫಲಿತಾಂಶವೇನೆಂಬುದನ್ನು ತಪ್ಪದೆ ಬರಿ. ಮನಶ್ಶಾಂತಿಯಿಲ್ಲದಿದ್ದರೆ ಬೇಸರಗೊಳ್ಳಬೇಡ. ಮುಖ್ಯ ಎಲ್ಲ ಕಾಲಗಳಲ್ಲೂ ಬಲು ಜಾಗರೂಕತೆಯಿಂದಿರಬೇಕು. ಯಾವ ಸಂದರ್ಭದಲ್ಲೂ ಸರ್ಕಾರದವರ ದೃಕ್ಪಥಕ್ಕೆ ಕಾರಣನಾಗಿಲ್ಲವೆ ತಿಳಿಸು. ಆಗದಿದ್ದಲ್ಲಿ ಮುಂದೂ ಆಗಬೇಡ. ನಾವುಗಳೊಬ್ಬರೂ ಪ್ರಬಲವಿಚಾರಗಳಿಗೆ ಸಮರ್ಥರಲ್ಲ. ಬಲು ಎಚ್ಚರಿಕೆ. ಇತರರ ಬೋಧನೆಗೆ ಒಳಪಟ್ಟೀಯೆ. ಖಂಡಿತ. ನಿನ್ನ ಕಾರ್ಯದಲ್ಲಿ ನಿರತನಾಗಿರು. ನಾನು ಬರಬೇಕಾದ ಸಂದರ್ಭವಿದ್ದರೆ ಬರಿ. ಬರುತ್ತೇನೆ...ಇದನ್ನು ಟೆಲಿಗ್ರಾಂ ಎಂದು ಭಾವಿಸಿ ಉತ್ತರ ಕೊಡುವಿಯಾಗಿ ನಂಬಿದ್ದೇನೆ. ಖಂಡಿತ ಜರೂರ್ ಬರಿ. ತಾಮಸ ಬ್ಯಾಡ. ಸಾವಕಾಶವಾದರೆ ನಾನೇ ಬರಬೇಕಾಗುತ್ತೆ.

ಅತಿಶಯವಿಲ್ಲ

ಇತಿ ಆಶೀಃ

ಬಡತನದಲ್ಲಿ ಬಾಡಿದ ಹಳ್ಳಿಗರು ತಮ್ಮ ಭಾಗ್ಯೋದಯಕ್ಕಾಗಿ ಕನಸು ಕಾಣುವಾಗಲೇ ಎರಗುವ ವಿಘ್ನಗಳಿಗೂ ಆತಂಕಗಳಿಗೂ ಪ್ರತಿಕ್ರಿಯೆ ಇಲ್ಲಿದೆ.

೧೪೨

ಸ್ವಯಂಕೃತಾಪರಾಧ (ಕಳವು, ಆಘಾತ. ಕವರು)

ಕ್ಷೇಮ ಶ್ರೀಃ ತಾ14.3.30

ತೆರುಕಣಾಂಬಿ

...ನಿನ್ನೆ 1 ಕಾರ್ಡು ಬರೆದೆನು. ಆದರೆ ಇದುವರೆಗೂ ನನ್ನ ದುರಾದೃಷ್ಟಕ್ಕೆ ಅಡಿಕೆಗೆ ಧಾರಣೆ ಇಲ್ಲವೆಂದು ಒಂದಕ್ಕೇ ಕೊರಗುತ್ತಿದ್ದೆನು. ಆದರೂ ನಾವು ಅಡಿಕೆ ಇಟ್ಟದ್ದ...ವರ ಮನೆಯಲ್ಲಿ ಇದುವರೆಗೂ 1 ಕಾಳು ಅಡಕೆಗಾಗಲಿ 1 ಕಾಸಿಗಾಗಲಿ ದ್ರೋಹ ಬಂದಿರಲಿಲ್ಲ. ಆದರೆ ಈ ದಿವ್ಸ ನೆನ್ನೆ ಸಾಯಂಕಾಲ ಸಂತೆಯಿಂದ ಬಂದಮೇಲೆ ರೂಪಾಯಿಗಳಿದ್ದದನ್ನು...ವರಿಗೆ ಕೊಟ್ಟು ಹತ್ತು ರೂಪಾಯಿನ ನೋಟು 1 ಐದು ರೂಪಾಯಿನ ನೋಟು 4 ತೆಗೆದುಕ್ಕೊಂಡು ನನ್ನಲ್ಲಿದ್ದ ನೋಟು ಸೇರಿ ಹದಿನಾಲ್ಕು 5 ರೂಪಾಯಿನದು, 3 ಹತ್ತು ರೂಪಾಯಿನದು ಪಾಕೆಟ್ಟಿನಲ್ಲಿಟ್ಟು ಬಾಕಿ ರೂಪಾಯಿಗಳು ಮತ್ತು ಚಿಲ್ಲರೆ ಚೀಲದಲ್ಲಿಟ್ಟುಕ್ಕೊಂಡು ಹತ್ತಿರದಲ್ಲೇ ಇಟ್ಟುಕ್ಕೊಂಡು ಮಲಗಿದ್ದೆ. ಬೆಳಿಗ್ಗೆ ಎದ್ದು ಮುಖ ತೊಳೆಯುವುದಕ್ಕೋಸ್ಕರ ನಂಬಿಗೆಯಾಗಿದ್ದದ್ದರಿಂದ ಕೋಟನ್ನು ಅಲ್ಲಿಯೇ ಇಟ್ಟು ಹೊರಗೆ ಹೋದೆನು. ಮII...ವರು ಮನೆಯಲ್ಲಿರಲಿಲ್ಲ. ನಾನು ಬಂದು ನೋಡುವಲ್ಲಿ ಪಾಕೆಟ್ಟು ನಾನು ಇಟ್ಟಂತೆ ಇರಲಿಲ್ಲ. ಅದನ್ನು ತೆಗೆದು ನೋಡುವಲ್ಲಿ ಹತ್ತು ರೂಪಾಯಿನ ನೋಟುಗಳು 3 ಇರಲಿಲ್ಲ. ಆದರೆ ಇದನ್ನು ಹೇಳಿದರೆ ಯಾರೂ ನಿಜವೆಂದು ನಂಬುವುದಿಲ್ಲವಾದ್ದರಿಂದ ಬಾಯಿ ಮುಚ್ಚಿಕ್ಕೊಂಡು ಗಂಭೀರವಾಗಿ ಬಂದೆನು. ಆದರೆ ಇದೆಲ್ಲಾ ಈ ವರುಷದ ನನ್ನ ದುರಾದೃಷ್ಟ. ಯೇನು ಮಾಡಿಯೂ ಸಾಧ್ಯವಿಲ್ಲ. ನಾನು ಹೊಟ್ಟೆಗೆ ಅನ್ನವಿಲ್ಲದೆ ಕಣ್ಣಿಗೆ ನಿದ್ದೆಯಿಲ್ಲದೆ ಬಿಸಿಲಿನಲ್ಲಿ ಒಣಗಿ ದುಡಿದು ಗಿಣಿಯನ್ನು ಸಾಕಿ ಬೆಕ್ಕಿಗೆ ಕೊಟ್ಟಂತೆ ಕೊಟ್ಟು ಬಿಟ್ಟೆನು. ಇದು ಸ್ವಯಂಕೃತಾಪರಾಧವಾದ್ದರಿಂದ ಯಾರಲ್ಲಿಯೂ ಹೇಳಲು ನಾಚಿಕೆಯಾಗುತ್ತೆ. ಭಗವಂತನು ಹೇಗೆ ನನ್ನನ್ನು ಈ ವರುಷ ಕಾಪಾಡುವನೋ ತಿಳಿಯದು. ಬಾಕಿ ವಿಷಯವೆಲ್ಲಾ ಮುಖತಃ ತಿಳಿಯುತ್ತೆ...

ವರ್ಷದ ಫಸಲು ಮಾರಿ ಬಂದ ಹಣ ಇಡೀ ವರ್ಷದ ಜೀವಿತಕ್ಕೆ ಬೇಕಾದುದು. ಅದನ್ನು ಕಳೆದುಕೊಂಡರೂ ಮರ್ಯಾದೆಗೆ ಅಂಜಿ ತೆಪ್ಪಗಾದವನ ಸ್ಥಿತಿ ಇದು. ಇದು ಪರಿಸ್ಥಿತಿಯನ್ನು ನಿಭಾಯಿಸಲು ಅವರೇ ಹಾಕಿಕೊಂಡ ಮಿತಿ.

೧೪೩

ಕನ್ಯೆಗಾಗಿ ಜಾಲಾಟ (ಬಡ್ಡಿಗಾಗಿ ಹಣ, ಕಾರ್ಡು)

ಕುಶಲಂ ಶ್ರೀರಾಮ ಚನ್ನರಾಯಪಟ್ಟಣ

ತಾ 30.11.33

...H.N. ಪುರದ R.R ನ ಸಾಲವನ್ನು ತೀರಿಸುವುದಕ್ಕಾಗಿ ಅಲ್ಲಿಗೆ ಬಂದಿದ್ದೆ ಅದಕ್ಕೆ ಮೊದಲು ನಾನು ಮೈಸೂರಿಗೆ ಹೋಗಿದ್ದೆ ತಕರಾರಿನಲ್ಲೇ ಹಾಗೂ ಹೀಗೂ ಸೊಂಟದ್ದನ್ನು B. ಸು.ರಾ.ಗಳ ಸಮಕ್ಷಮದಲ್ಲಿಯೇ ಎರಡು ಮೂರು ಕಮ್ಮಿಯಾಗಿ 3½ ಗೆ ವಿಲೇ ಮಾಡಿ ಅದನ್ನು ಇಲ್ಲಿಯ ಕೋ ಆಪರೇಟೀವ್ ಸೊಸೈಟಿಯಲ್ಲಿ ಷೇರು ಡಿಪಾಸಿಟ್ಟಾಗಿಟ್ಟದ್ದೇನೆ. ಇದು ಲಿಮಿಟೆಡ್ ಸೊಸೈಟಿ ಯಾದ್ದರಿಂದ ಭಯವಿಲ್ಲ. ಸಾಲೀಯಾನಾ ಶೇ. 7 ರಂತೆ ಕೊಡುತ್ತಾರೆ. ಗೌರ್ನಮೆಂಟು ಟ್ರೆಜರಿಯಲ್ಲಿ ಶೇ. 2 ರಂತೆ ಮಾತ್ರ ಕೊಡುತ್ತಾರೆ. ಇನ್ನೊಂದನ್ನು ವಿಲೇ ಮಾಡುವುದು ಸದ್ಯಕ್ಕೆ ಸಾಧ್ಯವಿಲ್ಲ. ಈ ವಿಷಯವು, ರಹಸ್ಯವಾಗಿರಲಿ. ಏಕೆಂದರೆ ಇದು ತಿಳಿದರೆ ಅವನೂ 3½ ಯನ್ನೇ ತನಗೂ ಕೊಡಬೇಕೆಂದು ಪೇರು ಹಾಕಿಕೊಳ್ಳುವನು. ಇದು ಷೇರು ಮೊಬಲಗಾಗಿ ಹಾಕಿರುವುದರಿಂದ ಇನ್ನು 3 ವರ್ಷಗಳು ಅಲ್ಲಾಡಿಸುವ ಹಾಗಿಲ್ಲ. ತಮಗೆ ಪೂರ್ವಭಾವಿಯಾಗಿಯೇ ಸೂಚಿಸಿದ್ದಂತೆ K.S.V.ಯು ಮೊಬಲಗನ್ನು ಬೆಂಗಳೂರಿನಲ್ಲಿ ಶೇ. 12 ರಂತೆ ಬಡ್ಡಿಗೆ ಹಾಕಿದ್ದರೂ ಅವನು ತನಗೆ ಎಲ್ಲಾ ನಗದೇ ಬೇಕೆಂದು ನಿಷ್ಠುರವಾಗಿ ಕಾಗದ ಬರೆದಿರುತ್ತಾನೆ. ನಾನು ಹಣ ಸಿಕ್ಕುವುದೇ ಎಂದು H.N. ಪುರದ ...ಗೂ ಕಾಗದ ಬರೆದಿರುತ್ತೇನೆ. ಹಾಗೇನಾದರೂ ನಿಮಗೇ ಇನ್ನೂರು ಇನ್ನೂರೈವತ್ತು ರೂ.ಗಳು ಒದಗುವ ಸಂದರ್ಭಕ್ಕೆ ಶೇ. 12 ರಂತೆ 250 RS.ಗಳ ಪ್ರೊನೋಟನ್ನು ನಿಮ್ಮ ಹೆಸರಿಗೇ ಬರೆಯಿಸಿ ಮುಖತಃ ಸಂಧಿಸಿದಾಗ ಕೊಡುವೆನು. ಹಣಕ್ಕೆ ಏನೂ ಭಯವಿಲ್ಲ. 100 ರೂ ಸಂಬಳದ ಮನುಷ್ಯನಾದ್ದರಿಂದ ದಾವಾ ಹಾಕಿ ಸಂಬಳದಲ್ಲಿ ಅಟ್ಯಾಚ್ ಮಾಡಿಸಿದರೂ ನಮ್ಮ ಅಸಲು ಬಡ್ಡಿ ಬಂದು ಹೋಗುತ್ತೆ. ಇನ್ನೆಲ್ಲೂ ಹಣಕ್ಕೆ ಭಯವಿಲ್ಲದೆ, ಕಾಲಾವಧಿಗೆ ಸರಿಯಾಗಿ ಶೇ. 12 ರಂತೆ ಬಡ್ಡಿಕೊಡುವ ಕುಳಗಳನ್ನು ಕಾಣೆ. ತಾವೂ ಆಲೋಚನೆ ಮಾಡಿ ನೋಡಬಹುದು.

ಚಿII...ಗೆ ಅಗ್ರಹಾರವೇ ಸರಿಯಾಗಿ ಒಪ್ಪಿದೆ. ಜನ್ಮನಕ್ಷತ್ರಾದಿ ವಿಷಯಗಳಲ್ಲಿಯೂ ಸಂದೇಹ ನಿವಾರಣೆಯಾಗಿದೆಯಂತೆ. ಈ ಪ್ರಾಂತ್ಯದಲ್ಲಿರುವ ಅಗ್ರಹಾರದ ಕೊಪ್ಪಲು, ಮಾರಸೆಟ್ಟಿಹಳ್ಳಿ ತೋಟ, ಕಟ್ಟೆಹೊಸಹಳ್ಳಿ ಇತ್ಯಾದಿ ಗ್ರಾಮಗಳಲ್ಲಿ ಕನ್ಯೆ ಯಾವುದೂ ಇಲ್ಲ. ಅಗ್ರಹಾರದ ವಿಷಯದಲ್ಲಿ ತನ್ನ ಸಮ್ಮತಿಯನ್ನು ನಿಮಗೆ ತಿಳಿಸುವಂತೆ ಚಿIIಯು ನನ್ನೊಡನೆ ಮುಖತಃ ಹೇಳಿದನು. ನಾನು ಸ್ಯಾನಿಟರಿ ಇ್ನ್ನ್.ರವರ ಕೆಲಸಕ್ಕೆ ಅರ್ಜಿ ಹಾಕಿದ್ದೆ. ಅದಕ್ಕೋಸ್ಕರ ಮೈಸೂರಿಗೆ ಹೋಗಿದ್ದೆ. ಆದರೆ ಅದೇ ಡಿಪಾರ್ಟ್‌ಮೆಂಟಿನವರ ಪಾಲಾಯಿತು ...ವೃಥಾ ದ್ರವ್ಯಧ್ವಂಸ...

ಮುವತ್ತರ ದಶಕದಲ್ಲಿ ಬಹುಪಾಲು ಹಳ್ಳಿಗಳಲ್ಲೇ ಇದ್ದ ಸಂಕೇತಿಗಳು ಹಣಕಾಸು ವ್ಯವಹಾರದಲ್ಲಿ ಇಷ್ಟು ಜಾಣರಾಗಲಿ ಸಾಹಸಿಗಳಾಗಲಿ ಆಗಿರಲಿಲ್ಲ. ಇದೊಂದು ಅಪವಾದದ ಸಂದರ್ಭ.

೧೪೪

ಬಸ್ಸುಗಳ ಮಾಧ್ಯಮ

ಪದಾರ್ಥಗಳನ್ನೂ ಪತ್ರವನ್ನೂ ಕಳಿಸಲು : ಕಾರ್ಡು

ಕುಶಲಂ ಶ್ರೀರಾಮ ಹಾಸನ

ತಾ 25.9.34

...ನೀವೆಲ್ಲರೂ ಇಲ್ಲಿಂದ ಪ್ರಯಾಣ ಮಾಡಿದಾರಭ್ಯ ಕಾಗದವೇ ಬರಲಿಲ್ಲ...ಹಳ್ಳಿಯಿಂದ ಬಂದ ಗಣಪತಿಪೂಜಾಸಾಹಿತ್ಯಗಳನ್ನು ತಾ 12.9.34 ರ ಪ್ರಾತಃಕಾಲ ಇಲ್ಲಿಂದ ಅಲ್ಲಿಗೆ ಹೊರಟ ಬಸ್ಸಿನಲ್ಲಿ ಆರೋಗ್ಯಸ್ವಾಮಿನಾಯಿಡು ಎಂಬ ಡ್ರೈವರಿನ ಕೂಡಾ.....ನ ಅಂಗಡಿಗೆ ತಲಪಿಸುವಂತೆ ಹೇಳಿ ಸಾಮಾನುಗಳನ್ನೂ ಸೌ॥ ವತಿಗೆಂದು ತಂದಿದ್ದ ಸೀರೆಯನ್ನು ಹಾಕಿ ಹೊಲೆದಿದ್ದ ಚೀಲವನ್ನೂ ನಮ್ಮ ಮನೆಗೆ ತಲಪಿಸುವಂತೆ ತಿಳಿವಳಿಕೆ ಕೊಟ್ಟು ಅಂಗಡಿ...ನಿಗೆ ಒಂದು ಚೀಟಿಯನ್ನೂ ಕೊಟ್ಟು ಕಳುಹಿಸಿದ್ದೆ. ಆ ಪದಾರ್ಥಗಳು ನಿಮಗೆ ತಲಪಿದುವೇ ಇಲ್ಲವೇ ಎಂಬುದನ್ನು ತಿಳಿಯಲು ಈಗ 4-6 ದಿನಗಳ ಕೆಳಗೆ ಒಂದು ಕಾರ್ಡು ಬರೆದಿದ್ದೆ. ಅದಕ್ಕೂ ಜವಾಬಿಲ್ಲ..... ನ ಕೂಡಾ ಹೇಳಿ ಕಳಿಸಿದ್ದೆ. ಅದಕ್ಕೂ ಉತ್ತರವಿಲ್ಲ. ಆ ಪದಾರ್ಥಗಳು ತಲಪಿದವೆಂದು ನಿಮ್ಮಿಂದ ಕಾಗದಾ ಬಂದಲ್ಲದೆ ನನಗೆ ಶಾಂತಿಯಿಲ್ಲ. ಆದುದರಿಂದ ನೀವು ಈಗಲಾದರೂ ಉದಾಸೀನ ಮಾಡದೆ ಮುರುಟಪ್ಪಾಲಿಗೇ ಕಾಗದಾ ಬರೆಯ ಬೇಕೆಂದು ಪ್ರಾರ್ಥನೆ...

ಸಾರಿಗೆ, ಸಂಪರ್ಕ ತಂತ್ರಜ್ಞಾನ ಈಗ ಸಾಧಿಸಿರುವ ಪ್ರಗತಿಯ ಹಿನ್ನೆಲೆಯಲ್ಲಿ ಮೂವತ್ತರ ದಶಕದ ವ್ಯವಹಾರಗಳ ನಿಧಾನಗತಿ ಅನುಭವಕ್ಕೆ ಬರಬಹುದು.

೧೪೫

ಕೆರೆ ತುಂಬಿಲ್ಲ (ಕಾರಣ ತಿಳಿಸಿದ ಕಾರ್ಡು)

ಶ್ರೀ ಸುಂಕಲಾಪುರ

ತಾ 1-2-37

ಮ॥...ಮೇಸ್ತರ ಸ। ಕ್ಕೆ ಸೇವಕ...ನ ನಮಸ್ಕಾರಗಳು...ಉಭಯ ಕುಶಲ ಸಂಪ್ರುತಿ.

ನಾನು ಯಿಲ್ಲಿಗೆ 27-1-37 ರಲ್ಲು ಬಂದೆ. ತಂಮ ಕಾರ್ಡು ನೋಡಿದೆ. ಯೀ ವರ್ಷ ಯಿಲ್ಲೂ ಕೆರೆ ತುಂಬಿಲ್ಲವಾಗಿ ಭತ್ತದ ಬೆಳೆಯೆಲ್ಲಾ ಬಸವಾಪಟ್ಣದಿಂದ ತರಬೇಕಾದ್ದಿದೆ. ಆದರೂ, ತಮಗೆ $4^1/_2$ ಖಂಡಿ ಭತ್ತ ಕೊಡುವಂತೆ ಮ॥ ಚೆಂನಪ್ಪನವರಿಗೆ ಬರೆದಿದ್ದೇನೆ. ನಾನು ಮಾರ್ಚಿ ತಿಂಗಳಲ್ಲಿ ವಂದು ದಫಾ ಬರಬೇಕೆಂದಿದ್ದೇನೆ.

ಯಿಲ್ಲಿ ಸರ್ವರೂ ಕ್ಷೇಮಿಗಳು

ತಂಮ ಅನುತಾಪಕ್ಕೆ ನಂನ ಅನೇಕ ವಂದನೆಗಳು

ಇತಿ ನಮಸ್ಕಾರಗಳು

ಭಾಷೆಯನ್ನು ಹಿಂದಿನ ಕೆಲವರು ಬಳಸುತ್ತಿದ್ದ ರೀತಿಗೆ ಇಲ್ಲಿ ನಿದರ್ಶನಗಳು: ಚೆಂನಪ್ಪ, ತಂಮ, ನಂನ...ಇ.

೧೪೬

ಅಂತ್ಥಾ ಅಸಂಭವ ಏನು ? (ಬೀಗರ ಪತ್ರ. ಕವರು)

ಕ್ಷೇಮಂ ಶ್ರೀ ತಾ। ೫-೬-೧೯೩೭

ಮ॥ ಅರಕಲಗೂಡಿನ ಸ್ಕೂಲ್ ಮಾಸ್ಟರ್ ರಾಮಯ್ಯನವರ ಸಮುಕ್ಷಮಂಗಳಿಗೆ

ಕೃಷ್ಣಾಪುರದ ಶ್ರೀನಿವಾಸಯ್ಯನ ಸಾಷ್ಟಾಂಗ ನಮಸ್ಕಾರಗಳು. ಅದಾಗಿ ಯೀವರೀಗೆ ಯಿಲ್ಲಿಯಿರೂವಂತ್ಥಾ ಚಿ॥ ಆದಿಯಾಗಿ ಸರ್ವರೊಡನೆ ನಾನೂ ಕ್ಷೇಮ. ಅಲ್ಲಿ ಯಿರೂವಂತ್ಥಾ ಚಿ॥ ಆದಿಯಾಗಿ ಸರ್ವರೊಡನೆ ತಮ್ಮ ನಿರಂತರ ಸುಕ್ಷೇಮಕ್ಕೆ ಆಗಿಂದಾಗ್ಯೆ ಕುಶಲಪತ್ರಿಕಾ ಬರಸುತ್ತ ಬರುವುದು ಸಾಂಪ್ರತ.

ಹಿಂದೆ ನಾನು ಬರದ ಕಾಗದಕ್ಕೆ ತಹಲ್‌ವರಿಗೂ ಜವಾಬೇ ಬರಿಯದೆ ಯಿರೂವದು ತಮ್ಮ ವುದಾಸೀನದಿಂದಲೋ ಅಥವ ಕಾಗದಕ್ಕೆ ಅನಾನುಕೂಲಿದ್ದೆಶೆಯಿಂದಲೋ ಯೋಚಿಸಲ ಸಾಧ್ಯವಾಗಿಧೆ. ಅಂತ್ಥಾ ಅಸಂಭವಗಳು ಏನಾದರು ತಮಗೆ ಸಂಭವಿಸಿದ್ದಲ್ಲಿ ನಿಷ್ಕಪಟವಾಗಿ ಅದನ್ನು ಲಿಖಿತಮುಖೇನ ನಮೂದು ಮಾಡಿ ಯೋಗಕ್ಷೇಮವನ್ನೂ ಬರದಲ್ಲಿ ಮುಂದೆ ಸರಸ್ವತಿಯ ವಿಘ್ನೇಶ್ವರರ ಕಟಾಕ್ಷದಿಂದ ಸಾನುಕೂಲಗಳು ದೊರಕುವ ವಿಶಯದಲ್ಲಿ ಅಭ್ಯಂತರವೇನೂ ಕಾಣುವದಿಲ್ಲಾ. ತಿಳಿದಂತ್ಥಾ ಪ್ರಾಜ್ಞರಿಗೆ ವಿಶೇಷ ಬರಿಯತ್ತಕ್ಕೆ ಶಕ್ತರಲ್ಲಾ. ಯಿಂತಿ ಸಾಷ್ಟಾಂಗ ನಮುಸ್ಕಾರಗಳು.

೧೪೭

ಸಾಲಕ್ಕಾಗಿ ಮೊರೆ (ಮಿತ್ರನಿಗೆ ಕಾರ್ಡು)

ಶ್ರೀ ರಾಂ 6.8.37

ದಾವಣಗೆರೆ

ಮ.ರಾ...ನವರ ಸನ್ನಿಧಿಯಲ್ಲಿ ಅನನ್ತಶಾಸ್ತ್ರಿಕೃತ ವಿಜ್ಞಾಪನೆಗಳು. ಉಭಯ ಕ್ಷೇಮ ಸಂ–

...ಮಿತ್ರವರ್ಯರೆ–ತಮಗೆ 3-4 ಕಾಗದಗಳನ್ನು ಬರೆದೆನು. ತಮ್ಮ ಅನುಗ್ರಹವಾಗಲಿಲ್ಲ. ನನ್ನ ದುರದೃಷ್ಟ. ನನಗೆ ಲಗ್ನಕ್ಕಾಗಿ ಸಹಾಯ ಮಾಡುತ್ತೇನೆಂದು ವಾಗ್ದಾನ ಮಾಡಿದವರೊಬ್ಬರೂ ಕೊಡಲಿಲ್ಲ. ತಾವು 50/- ರೂಗಳಿಗೆ ಪ್ರಯತ್ನ ಮಾಡುವುದಾಗಿ ಅಭಯ ಕೊಟ್ಟಿದ್ದಿರಿ. ನನ್ನ ದುರ್ದೈವದಿಂದ ತಾವೂ ಊದಾಸೀನ ಮಾಡಿದಿರಿ. ಗ್ರಹಗತಿ ವಕ್ರವಾಗಿರುವಾಗ ಯಾವ ಕಾರ್ಯವೂ ಆಗಲಾರದು. ತಾವು ಈಗಲಾದರೂ ಪ್ರಯತ್ನ ಮಾಡಿ ಆದಷ್ಟು ಜಾಗ್ರತೆ 50 ರೂಗಳನ್ನು ಕಳುಹಿಸಿಕೊಡಬೇಕಾಗಿ ಪಾದಾಕ್ರಾಂತನಾಗಿ ಬೇಡಿಕೊಳ್ಳುವೆನು. 50 ರೂ. ಒದಗದೆ ಇದ್ದರೆ 25 ರೂ. ಗಳನ್ನಾದರೂ ಆದಷ್ಟು ಜಾಗ್ರತೆ ಕಳುಹಿಸಿ ಪ್ರಾಣವನ್ನುಳಿಸಬೇಕಾಗಿ ಬೇಡಿಕೆ...

೧೪೮

ಟಿಕೆಟ್‌ಹಣ : ಸೂಚನೆ (ಶಿಷ್ಯನೊಬ್ಬನಿಗೆ ಕವರು)

Sahitya Vidwan ಶ್ರೀ: Bangalore city

Date : 23-1-1941

ಚಿ|| ಕಿಟ್ಟಣ್ಣನಿಗೆ ಅಗ್ರಹಾರದ ವೆಂಕಟಸುಬ್ಬಾಶಾಸ್ತ್ರಿಯ ಆಶೀರ್ವಾದಗಳು. ಉಭಯಕುಶಲಾದ್ಯುಪರಿಷ್ಟಾಶೀಃ ಸಾಂಪ್ರತವು. ನಮ್ಮ ತಾಯಿಯವರ ನೇತ್ರಚಿಕಿತ್ಸಾರ್ಥವಾಗಿ ನಿನ್ನೆ ಡಿಸೆಂಬರ್ ಮಾಹೆ 28ನೇ ದಿನ ಹೊರಟು ಬೆಂಗಳೂರಿಗೆ ಬಂದಿರುತ್ತೇನೆ. ಬರುವಾಗ್ಯೆ ರಾಮನಾಥಪುರದಿಂದ 1 ರಿಟರ್ನು ಟಿಕೇಟನ್ನು ಲಲಿತಾ ಬಸ್ ಸರ್ವಿಸ್ಸಿನಲ್ಲಿ 755/29-12-41 ನಂಬರ್ ಟಿಕೇಟನ್ನು 1 ತಿಂಗಳು ವಾಯಿದೇ ಹಾಕಿಸಿ ತೆಗೆದುಕ್ಕೊಂಡು ಬಂದಿರುವುದನ್ನು ಈ ದಿವ್ಸ ಇದರ ಕೂಡಾ ಕಳುಹಿಸಿರುತ್ತೇನೆ.

ನಾನು 29 ತಾರೀಖಿನ ವಳಗಾಗಿ ಇಲ್ಲಿಂದ ಬರಲು ಸಾಧ್ಯವಿಲ್ಲ. ಅನ್ಯಾಯವಾಗಿ ನಷ್ಟವಾಗುತ್ತಾದ್ದರಿಂದ ಇದನ್ನು ನಿನಗೆ ಕಳುಹಿಸಿರುತ್ತೇನೆ. ಇದನ್ನು ಯಾರಾದರೂ ಪ್ರಯಾಣಿಕರು ಹೊರಡುವುದನ್ನು ವಿಚಾರಿಸಿ ಬಸ್ಸ್ ಸ್ಟ್ಯಾಂಡಿನಲ್ಲಿ ಈಗಿನ ರೇಟಿಗೆ ಮಾರಿ ದುಡ್ಡು ಇಟ್ಟಿರುವುದು. ಬೆಳಿಗ್ಯೆ 8½ ಘಂಟೆಗೆ ಬಸ್ ಸ್ಟ್ಯಾಂಡಿಗೆ ನೇರವಾಗಿ ಹೋಗಿ ವಿಚಾರಿಸಿ ಟಿಕೇಟಿನ ದುಡ್ಡು ಬರುವಂತೆ ಏರ್ಪಾಡು ಮಾಡುವುದು. ಅಥವಾ ಸೂಕ್ತವಾದರೆ ಆ ಬಸ್ಸಿನ ಅಧಿಕಾರಿಗಳಿಂದ ಕಾಲವನ್ನು ಹೆಚ್ಚಿಸಲೂಬಹುದು. ದುಡ್ಡು ತೆಗೆದುಕೊಳ್ಳುವುದು ಉತ್ತಮ. ಇಲ್ಲಿ ಎಲ್ಲರೂ ಕುಶಲಿಗಳು. ಅಲ್ಲಿನ ಎಲ್ಲರ ಆರೋಗ್ಯಕ್ಕೂ ಮೇಲಿನ ವಿಷಯದ ಫಲಿತಾಂಶಕ್ಕೂ ಈ ಕೂಡಲೇ ಜವಾಬ್ ಬರಿಯುತ್ತೀಯಾಗಿ ನಂಬಿರುವೆನು. ಇತ್ಯಾಶಿಷಃ.

೧೪೯

ಬಾಡಿಗೆ ಮನೆಯ ವಿಚಾರ (ಬಂಧುವಿಗೆ ಕಾರ್ಡು)

ಕ್ಷೇಮ ಶ್ರೀರಾಮ ಸಹಾಯಂ ಚಾಮರಾಜಪೇಟೆ

ತಾ| 4.8.47

ಮ|| ರಾಮಾವಧಾನಿಗಳ ಸ||ಕ್ಕೆ ಚನ್ನಿಗರಾಯಾವಧಾನಿಯ ವಿಜ್ಞಾಪನೆಗಳು. ವುಭಯ ಕುಶಲೋಪರಿ ಸಾಂಪ್ರತ. ತಮಗೆ 4-4-47 ರಲ್ಲಿ ಬರದ ಕಾಗದಕ್ಕೆ ಯಿದುವರಿವಿಗೂ ಜವಾಬ್ ಬರಲಿಲ್ಲಾ. ಯೀ ಸಲಕ್ಕೆ ಉದಾಸೀನ ಭಾವಕ್ಕೆ ಕಾರಣವೇನೆಂಬುದಂತ ನಮಗೆ ಗೊತ್ತಾಗಲಿಲ್ಲ. ಮನೇ ಜಗಲೀ ಗೋಡೆಯೇನಾದರೂ ರಿಪೇರಿ ಮಾಡಿಸುತ್ತಾಯಿರುತ್ತೀರಾ ಹ್ಯಾಗೆ. ಮನೇಲಿ ಯಾವ್ಯಾವ ಮಾಲುಗಳನ್ನು ಬಿಟ್ಟಿರುತ್ತಾರೆಯೆ, ಖಾಲಿಯಿರುತ್ತದೆ ಹ್ಯಾಗೆ. ನನಗೆ ಯಿನ್ನೂ 1 ತಿಂಗಳಿಂದಲೂ ಪೂರಾ ಖಾಯಿಲೆಯಾಗಿ ವುಳಿಯುವುದೆ ಬಹಳ ಕಷ್ಟವಾಗಿರುತ್ತೆ. ಆದರೆ ಯೀದಫಾಕ್ಕೆ ದೇವರು ಉಳಿಸಿದರೆ ಆಗ್ಗೆ...

ಏಕರೀತಿ ವಿಶ್ವಾಸವಿರಲಿ

ಇತಿ ವಿಜ್ಞಾಪನೆಗಳು

೧೫೦

ತಮ್ಮ ಅನಾರೋಗ್ಯ ವಿಚಾರ (ಬೆಂಗಳೂರಿನಿಂದ ಕವರು)

ಕ್ಷೇಮ ಶ್ರೀರಾಮ ಸಹಾಯಂ 30-5-48

ಮ|| ರಾ|| ವೆಂಕಟರಾಮರವರ ಸ||ಕ್ಕೆ ಚೆನ್ನಪ್ಪೈಯ್ಯನು ಮಾಡುವ ವೇದೋಕ್ತಿಗಳು. ಯಿಲ್ಲಿ ನಾವೆಲ್ಲರೂ ಕ್ಷೇಮ. ಅಲ್ಲಿ ಎಲ್ಲರ ಕ್ಷೇಮಕ್ಕೆ ಆಗಿಂದಾಗ್ಯೆ ಕಾಗದಾ ಬರಸುತ್ತಾ ಬರಬೇಕಾಗಿ ಕೋರುತ್ತೀನಿ. ಸಾಂ.

ತಾವು ಬರದಿರುವ 21-1-48ರ ಟಪ್ಪಾಲಿಗೆ 23-1-48ರಲ್ಲಿ ಜವಾಬ್ ಬರದಿದ್ದಕ್ಕೆ ತಹಲ್‌ವರಿವಿಗೂ ತಮ್ಮಿಂದ ಜವಾಬ್ ಬಂದಿರುವದಿಲ್ಲ. ಏನು ಕಾರಣವೋ ಗೊತ್ತಾಗಲಿಲ್ಲ. ನಾವು ರಜಾ ಕಾಲದಲ್ಲಿ ಬರಬೇಕೆಂಬ ಯೋಚನೆ ಮಾಡಿದ್ದೆವು. ನನಗೆ ಮಹಾ ಖಾಯಿಲೆ ಪ್ರಾಪ್ತವಾಗಿಯಿರುತ್ತೆ. ಬಿದ್ದ ಕಡೆ ಬಿದ್ದುಯಿರುತ್ತೇನೆ. ಯದ್ದು ತಿರುಗಾಡಲು ಸ್ವಲ್ಪವೂ ಸಾಧ್ಯವಿಲ್ಲಾ. ದೈಯ್ವಯತ್ನ ಹ್ಯಾಗೆಯಿದೆ ಗೊತ್ತಿಲ್ಲ. ಮನಸ್ಸು ಯೋಚನೆಯಲ್ಲಿ ಖಾಯಿಲೆ. ಹುಷಾರಾದರೆ ಪುನಃ ಜಲ್ಮ ಎತ್ತಿದಂತೇ ಭಾವಿಸಬೇಕು. ನಿಮ್ಮಗಳನ್ನು ನಾನು ಬಂದು ನೋಡುತ್ತೀನೆಯೆಂಬ ಭರವಸೆ ನನಗೆ ಖಂಡಿತವಾಗಿಯೂ ಯಿಲ್ಲ. ಯಾಕಂದರೆ ದೇಹವು ಬಹಳ ನಿತ್ರಾಣವಾಗಿರುವದರಿಂದಲೂ ಗ್ರಹಗಳು ಬಹಳ ಕ್ರೂರವಾಗಿರುವ

ದರಿಂದಲೂ ಹೇಳಬೇಕಾಗಿದೆ. ಯಿದುವರಿಗೆ ಮನೆ ಬಾಡಿಗೆಯ ರೂಪಾಯಿಗಳು ಎಷ್ಟು ಬಂದಿರುತ್ತೆ. ಆದರಲ್ಲಿ ಯಾವ ಯಾವದಕ್ಕೆ ಎಷ್ಟೆಷ್ಟು ಖರ್ಚಾಗಿಯಿರುತ್ತೆಯೆಂಬುದನ್ನು ತಪ್ಪೀಲಾಗಿ ಟಪ್ಪಾಲ್ ಬರಿಯಿರಿ. ನಿಂಮ್ಮಲ್ಲಿ ಸಿಲ್ಕು (10-0-0) ಹತ್ತು ರೂಪಾಯಿಗಳನ್ನು ಯೀ ಕಾಗದ ತಂದಿರುವವರ ಹಸ್ತಾ ಕಾಗದಾ ಬರದು ಕಳುಹ್ಸಿ. ಕೊಡ, ಪಾತ್ರೆಗಳನ್ನು ಕೃಷ್ಣಪ್ಪನವರ ವಶಕ್ಕೆ ಪಟ್ಟಿಯಲ್ಲಿ ಕಂಡ ಮೇರೆವೊಪ್ಪಿಸಿ...ಎಲ್ಲಾ ವಿಚಾರಗಳಿಗೂ ನಿಮ್ಮಗಳ ಕ್ಷೇಮಕ್ಕೂ ಉದಾಸೀನಾ ಮಾಡದೆ ಟಪ್ಪಾಲ್ ಬರಸಬೇಕು. ಏಕರೀತಿ ವಿಶ್ವಾಸವಿರಲಿ. ಇಂತಿ ನಮಸ್ಕಾರಗಳು.

ರಿಟೈರ್ಡು ದಫೆದಾರ್

ಮನೆ ಕಂದಾಯದ ರಸೀತಿಗಳನ್ನು ಕಳುಹ್ಸಿಕೊಡಿ

ತಮಗೆ ಬಂದ ಕಾಗದದ ಮೇಲೆ, ಪತ್ರ ಯಾವಾಗ ಬಂತು, ಉತ್ತರ ಬರದದ್ದು ಯಾವ ದಿನ, ಬರೆದ ಉತ್ತರವೇನು, ಕೈಕೊಂಡ ಕ್ರಮವೇನು ಎಂಬ ಷರಾವನ್ನು ಪತ್ರ ಪಡೆದವರು ಬರೆದಿರುವುದುಂಟು. ಅಂಥ ಟಿಪ್ಪಣಿ: 30-5-48ರಲ್ಲಿ ಈ ಕಾಗದವನ್ನು ತಂದ ಕೆ.ಆರ್. ಕೃಷ್ಣಪ್ಪನವರ ಕೂಡ ಪಟ್ಟಿಯಲ್ಲಿ ಕಂಡಂತೆ ಪಾತ್ರೆಗಳನ್ನೂ ಮರದ ಮೇಜವನ್ನೂ ಹತ್ತು ರೂಪಾಯಿಗಳನ್ನೂ ಕೊಟ್ಟು ಕಳುಹಿಸಿರುತ್ತೇನೆ.

೧೫೧

ದಾರಿದ್ರ್ಯ (ಪಟ್ಟಣದ ನೌಕರಿಯಾತ ಸೋದರನಿಗೆ ಬರೆದ ಕಾರ್ಡು)

ಕುಶಲಂ	ಶ್ರೀಃ	ಹಾಸನ

ತಾ 22.2.51

...ನಿನ್ನ ಕವರೂ ಕಾರ್ಡೂ ಎಲ್ಲವೂ ತಲಪಿದುವು. ಈ ಸಲದ ತೊಂದರೆಯನ್ನು ಮ|| ಅಗ್ರಹಾರದ...ವರ ಬಾಯಿಂದ ಕೇಳಿ ಬಹಳ ಸಂಕಟವಾಯಿತು. ಕೈಮೀರಿದುದಕ್ಕೆ ಏನು ಮಾಡಲೂ ಸಾಧ್ಯವಿಲ್ಲ. ನಾನಂತೂ ದೈವವೇ ಶರಣೆಂದಿದ್ದೇನೆ...ಸ್ವಲ್ಪ ಕೃಷ್ಣ ಧಾನ್ಯವಾದರೂ ಸಿಕ್ಕೀತೋ ಎಂದು ನೋಡುತ್ತಿದ್ದೇನೆ. ಏನಾಗುವುದೋ ನೋಡಬೇಕು. ನಿನಗೆ ರೇಷನ್ ಕಾರ್ಡು ಸಿಕ್ಕುವುದು ಕಷ್ಟವಾಗಿದೆಯೆಂದೂ ತಿಳಿಯಿತು. ಈ ಪರಿಸ್ಥಿತಿಯಲ್ಲಿ ಪದಾರ್ಥವನ್ನು ಸಾಧ್ಯವಾದಷ್ಟು ಸಂಗ್ರಹಿಸಿಕೊಳ್ಳುವುದೇ ಜಾಣತನ. ಇಲ್ಲದಿದ್ದರೆ ಬಹು ಕಷ್ಟವಾಗುವುದು.

ಮುಂದೆ ಬೆಲೆ ಏರುವ ನಿರೀಕ್ಷಣೆಯಿದ್ದರೆ ಅಡಿಕೆಯನ್ನು ಈಗಲೇ ಏಕೆ ಮಾರಬೇಕು?

ಚಿ||.....ಗೆ ಮುಂದಿನ ವರ್ಷ ಈಗಿನ ಏರ್ಪಾಡು ನಡೆಯದೆಂದೇ ತೋರುತ್ತದೆ. ಹಾಸ್ಟೆಲುಗಳಲ್ಲಿ ಊಟ 30/ತಿಂಡಿ 10/ ಫೀಸು 20/ಒಟ್ಟು 60/-ಆದರೂ ಆಗಲೇಬೇಕು. ಇತರ ವಿಚಾರಗಳು ಇದ್ದೇ ಇವೆ. ಏನು ಮಾಡುವುದೆಂಬುದು ಹೊಳೆಯುವುದಿಲ್ಲ...ದೇವರು ತೋರಿದಂತಾಗಲಿ !

ನನ್ನ ದೇಹಸ್ಥಿತಿಯ ಪರೀಕ್ಷೆಯು ಇಲ್ಲಿ ಪೂರ್ತಿಯಾಗುವುದಿಲ್ಲ. ಮೈಸೂರಿಗೋ ಬೆಂಗಳೂರಿಗೋ ಹೋಗಬೇಕಾಗುತ್ತದೆ. ರಿಕ್ತ ಹಸ್ತನಿಗೆ ಆ ಚಪಲಗಳು ಹೇಗೆ ಸಾಧ್ಯ!

ಮಾ|| ಯವರಿಗೆ ದೇಹಕ್ಕೆ ತನುವಾದರೆ ಸದ್ಯಕ್ಕೆ ಎಷ್ಟೋ ಮೇಲು. ಔಷಧಿಗಳಿಂದ ಏನು ಪ್ರಯೋಜನ? ರಕ್ತ ಮಾಂಸಗಳಿಲ್ಲದೆ ಜೀರ್ಣವಾಗಿರುವ ದೇಹ. ದೇಹಕ್ಕೆ ಸ್ವಲ್ಪ ಸೌಖ್ಯ ಬೇಕೆಂದು ತೋರುತ್ತದೆ.

೧೫೨

ಕಳ್ಳತನ, ದರೋಡೆ

ಆಕ್ರಮಣ ಮೊದಲಾಗಿ ಮನೆಯಲ್ಲಿ ವಿಪರೀತ ಕಷ್ಟಬಂದಾಗ ಬರೆದ ಅಂತರ್ದೇಶೀಯ ಪತ್ರ

ಕುಶಲಂ	ಶ್ರೀ	ದಾವಣಗೆರೆ

ತಾ 26-7-57

...ತಮ್ಮ ಕಾಗದಗಳು ತಲಪಿದವು...ಇತ್ತೀಚೆಗೆ ಊರ ಕಡೆ 2-3 ವೇಳೆ ದರೋಡೆಗಳು ನಡೆದವು. 2-3 ಸಾವಿರ ಮಾವಿನಕಾಯನ್ನು ಹೊತ್ತುಕ್ಕೊಂಡು ಹೋದರು. ಹಿತ್ತಲಲ್ಲಿದ್ದ ಹುಲ್ಲೂ ಸಹ ಹೊತ್ತುಕ್ಕೊಂಡು ಹೋಗಿರುತ್ತಾರೆ. ಗೋವಿಂದನನ್ನು ಹೊಡೆದಿದ್ದಾರೆ. ಇವುಗಳು ನಡೆದು 15 ದಿನಗಳಾದವು. ಹರಿಹರದವರು ಯಂತ್ರ ಕೊಟ್ಟಾಗಿನಿಂದ ಈ ದರೋಡೆಗಳು ನಿಂತಿದ್ದವು. ಬಂದಿದ್ದ ಹೊಸ ಮುದುಕರು ಅದನ್ನೂ ಹಾಳು ಮಾಡಿದರು. ಅವರೂ ಕೂಡ ನಮಗೆ ಏನೂ ಅನುಕೂಲ ಮಾಡಲಿಲ್ಲ. ಗಜಮದ ತಂದರೆ ಅದು ಕಲ್ಲು ಯನ್ನುತ್ತಾರೆ. ಅವರಿಗೆ ಯಾವ ಶಕ್ತಿಯೂ ಇರುವುದು ನನಗೆ ಕಾಣಿಸುವುದಿಲ್ಲ. ಎಲ್ಲವೂ ಬರಿ ಬೂರಿ ಆಟಾಟೋಪ ಎಂದು ನನಗೆ ಕಾಣಿಸುತ್ತೆ. ನಾವು ದೇವರ ಕೆಲಸ ಮಾಡಿದ ಮೇಲೆ ತೊಂದರೆಗಳು ಮೇಲಿಂದ ಮೇಲೆ ಹೆಚ್ಚಾಗಿ ನಷ್ಟಗಳೂ ಕೂಡ ಜಾಸ್ತಿ ಆಗಿದೆಯೇ ಹೊರತು ಅನುಕೂಲ ಎಳ್ಳಷ್ಟೂ ಆಗಿಲ್ಲ. ಯಲ್ಲಾಪುರದ ಮೇಸ್ತ್ರು ಮಾಡಿದ ಯಂತ್ರವನ್ನು ತೆಗೆದಿದ್ದು ಗೋವಿಂದನಿಗೆ ಏಟು ಬೀಳಲು ಕಾರಣ ಆಯ್ತು. ಇನ್ನು ಇವರುಗಳನ್ನು ನಂಬುವುದರಲ್ಲಿ ಅರ್ಥವಿಲ್ಲವೆಂದು ನನಗೆ ತೋರುತ್ತೆ. ನೀವು ಕೂಡ ದಯವಿಟ್ಟು ಮೋಸಹೋಗಬೇಡಿ. ಆತನಲ್ಲಿ ಖಂಡಿತ ಯಾವ ಶಕ್ತಿಯೂ ಇಲ್ಲ. ನಮ್ಮದೇ ಉದಾಹರಣೆ.

...ಈಗ ಗ್ರಹಚಾರ ನಮಗೆ ಎಷ್ಟು ಕ್ರೂರ ಎಂಬುದನ್ನು ನೋಡಿದರೆ ಭಯವಾಗುತ್ತೆ. ಕತ್ತಲೆಯಲ್ಲಿ ಗಾಳಿ ಮಳೆಯಿಂದ ಕೂಡಿದ ಕಾರ್ಮೋಡವಿರುವಾಗ ಕಾಡಿನಲ್ಲಿ ದಾರಿ ತಪ್ಪಿದವನಿಗೆ ಎಷ್ಟು ಭಯವಾಗಬಹುದೋ ಅದಕ್ಕಿಂತಲೂ ನೂರ್ಮಡಿಯಾಗಿದೆ. ಉಳಿದಿರುವ ಮಾರ್ಗ ಒಂದೇ. ಈಶ್ವರನಲ್ಲಿ ಅಚಲವಾದ ಭಕ್ತಿ. ಅವನೇ ಕಾಪಾಡಬೇಕು. ಆತನು ದಯಾಮಯನು, ದೀನಬಂಧು, ನಂಬಿದವರನ್ನು ಕೈ ಬಿಡುವುದಿಲ್ಲ. ಕಷ್ಟವು ಬಂದರೂ ಇಷ್ಟು ಬರಬಾರದು. ನಾನು ಕಥೆ, ಸಿನಿಮಾ ಇವುಗಳಲ್ಲಿ ಮಾತ್ರ ನೋಡಿದ್ದೆ. ಈಗ ಸ್ವಂತ ಅನುಭವ ಆಗುತ್ತಿದೆ. ಆದರೂ ನನ್ನ ಮನಸ್ಸು ಧೈರ್ಯದಿಂದ ಇದೆ. ಈಶ್ವರನು ಖಂಡಿತ ಕಾಪಾಡುವನು ಎಂಬ ನಂಬಿಕೆ ಇದೆ. ಆದರೆ ನನ್ನ ಮನಸ್ಸಿನಲ್ಲಿ ಒಂದೇ ಒಂದು ವ್ಯಥೆ. ಅದು ಏನೆಂದರೆ ನಮ್ಮ ವೃದ್ಧ ಮಾತಾಪಿತೃಗಳ ಮನಸ್ಸು ಎಷ್ಟು ನೋಯುತ್ತಿರಬಹುದೋ ಹೇಳಲಾರೆ. ಅವರುಗಳು ನಮ್ಮನ್ನು ಈ ಮಟ್ಟಕ್ಕೆ ತರಲು ತುಂಬಾ ಕಷ್ಟಪಟ್ಟಿದ್ದಾರೆ. ಒಂದು ದಿನವಾದರೂ ಸುಖಪಟ್ಟಿಲ್ಲ. ಈಗಲೂ ಸುಖವಿಲ್ಲವಲ್ಲಾ ಎಂದು ನನ್ನ ಮನಸ್ಸು ಬಹಳ ನೊಂದು ಬೆಂದು ಹೋಗಿದೆ. ನಮ್ಮ ತೀರ್ಥರೂಪರವರು ಈಗ ಒಂದಾವರ್ತಿ ಚಿಕ್ಕಮಗಳೂರಿಗೆ ಬರಬೇಕೆಂದರೆ ಎಷ್ಟು ಕಷ್ಟಪಟ್ಟುಕ್ಕೊಂಡು ಬರುತ್ತಾರೋ ಹೇಳಲಾರೆ. ಎಲ್ಲವನ್ನೂ ಯೋಚನೆ ಮಾಡಿಕ್ಕೊಂಡರೆ ಜೀವನವೇ ಜುಗುಪ್ಸೆಯಾಗುತ್ತದೆ. ಎಲ್ಲಾ ಪರಮಾತ್ಮನ ಲೀಲೆ. ಎಲ್ಲರಿಗಿಂತಲೂ ಹೆಚ್ಚಾಗಿ ನಾವೇ ಪಾಪ ಮಾಡಿದೇವೆಯೋ ಅಥವಾ ದೇವರು ಎಲ್ಲಾ ಪಾಪವನ್ನೂ ಒಂದೇ ಸಲ ಕಳೆಯಲು ಇಷ್ಟು ಕಷ್ಟ ಕೊಡುತ್ತಿರಬಹುದೇ ಎನಿಸುತ್ತದೆ. ಏನೇ ಇರಲಿ. ಬಂದದ್ದನ್ನು ಸಂತೋಷದಿಂದ ಆದರಿಸೋಣ. ಈಶ್ವರೇಚ್ಛೆ ಏನಿದಿಯೋ ಅದು ಆಗಲೇಬೇಕು-ಎಂದು ಸಮಾಧಾನ ತಾಳಬೇಕಾಗಿದೆ. ಇದೆಲ್ಲಾ ಬರೆದೆನೆಂದು ಮನಸ್ಸಿಗೆ ಬೇಜಾರು ಮಾಡಿಕೊಳ್ಳಬೇಡಿ. ಇದು ಮನಸ್ಸಿನ ಉದ್ವೇಗ ಅಷ್ಟೆ. ಕಾಗದ ಬರೆಯಬೇಕಾಗಿ ಪ್ರಾರ್ಥಿಸುತ್ತೇನೆ. ಬಂದರೆ ಮೊಖ್ತಾ ಮಾತನಾಡಬಹುದು.

ಸುಮ್ಮನೆ ಬರದೆ. ಖಂಡಿತ ಯಾವ ಭಯವೂ ಇಲ್ಲ...

೧೫೩

ಬಾಡಿಗೆದಾರರಿಗೆ

ನಗರವನ್ನು ಸೇರಿದ ಅಧ್ಯಾಪಕರೊಬ್ಬರು ಆರ್ಥಿಕ ಮುಗ್ಗಟ್ಟಿನಲ್ಲಿರುವುದು. ಹಳ್ಳಿಯ ಬಾಡಿಗೆದಾರರಿಗೆ ಬರೆದ ಪತ್ರ

ಕ್ಷೇಮ ಲಕ್ಷ್ಮೀಕೇಶವ ಪ್ರಸನ್ನ ತಾ 20.1.60

ಬೆಂಗಳೂರು ಸಿಟಿ

...ತಮ್ಮಿಂದ ಅನುಗ್ರಹಿತವಾದ ಕಾಗದ ಬಂದು ತಲಪಿತು. ನಾನು ತಮಗೂ ಜವಾಬು ಬರೆದಿರುತ್ತೇನೆ. ಇಲ್ಲಿ ಜೀವನ ಕಷ್ಟ ಎಂಬುದು ತಮಗೂ ತಿಳಿದಿರಬಹುದು. ಆದರೆ ಬರುತ್ತಿರುವ ಪೆನ್‌ಷ‌ನ್ ಮತ್ತು ಮೇಲೆ ಪಾಠದಿಂದ ಬರುವುದೂ ಸಹ ಕಷ್ಟ ಜೀವನವೇ ಆಗಿರುತ್ತೆ. ಬಹಳ ಕಷ್ಟದಿಂದ ಜೀವನ ರಥವನ್ನು ನಡೆಯಿಸಬೇಕಾಗಿದೆ. ಯತ್ನವಿಲ್ಲ. ನನ್ನ ಪಾಲಿಗೆ "ಸುಖಂ ಸ್ವಪ್ನೇಪಿ ದುರ್ಲಭಮ್" ಎಂಬ ನಾಣ್ಣುಡಿಯಂತೆ ಆಗಿದೆ. ನನ್ನ ಹಣೆ ಬರ ಹೀಗೇ ಎಂದು ತಿಳಿದುಕೊಂಡು ಪಾಲಿಗೆ ಬಂದದ್ದು ಪರಮಾನ್ನ ಎಂಬ ಹಿತೋಕ್ತಿಯಂತೆ ಅನುಭವಿಸುತ್ತಿದ್ದೇನೆ. ನಮ್ಮ ಮನಸ್ಸಿನ ಬೇಸರಿಕೆಯನ್ನು ಆಪ್ತರಲ್ಲಿ ಹೇಳಿಕೊಂಡರೆ ಸ್ವಲ್ಪ ಸಮಾಧಾನವಾಗುತ್ತೆ. ಆದ್ದರಿಂದ ಇದ್ದ ವಿಷಯವನ್ನು ಮರೆಮಾಚದೆ ಹೇಳಿಕೊಂಡೆನು. ನಿಮ್ಮಲ್ಲಿರುವ ಬಾಡಿಗೆ ಬಾಬ್ತು ಹಣವನ್ನು ಕಳುಹಿಸಿಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತೆ. ನಾಳೆ ಭಾನುವಾರ ನನ್ನ ತಂದೆಯವರ ವೈದೀಕ ನಡೆಯಬೇಕಾಗಿದೆ. ಬಹಳ ತೊಂದರೆಯಲ್ಲಿದ್ದೇವೆ. ಇಲ್ಲಿ ಎಷ್ಟು ಕಷ್ಟಪಟ್ಟು ಸಂಪಾದಿಸಿದರೂ ಜೀವನಕ್ಕೆ ಸಾಕಾಗದಂತೆ ಇದೆ. ಯತ್ನವಿಲ್ಲ. ತಮ್ಮ ಉದಾರ ಸಹಾಯವನ್ನು ಅಪೇಕ್ಷಿಸುತ್ತೇನೆ...

ಗುಚ್ಛ - 9

ಜುಗುಪ್ಸೆ

ತೀವ್ರ ದುಃಖ, ವಿರಸ, ಸಂಘರ್ಷ ಮತ್ತು ಅಂಥ ಸಂದರ್ಭಗಳಲ್ಲಿ ಹಿತೋಕ್ತಿ, ಸಮಾಧಾನ – ಇವು ಸಂಸಾರಗಳಲ್ಲಿ ಇರತಕ್ಕವು. ಪ್ರತಿವ್ಯಕ್ತಿಯೂ ಸ್ವಕೇಂದ್ರಿತನಾಗಿಯೇ ಚಿಂತಿಸುತ್ತಾನೆ. ಅದು ಅತಿಯಾದಾಗ ಸಂಘರ್ಷವೂ ತೀವ್ರವಾಗುತ್ತದೆ. ಪರಸ್ಪರ ಹಿತವಚನಗಳಿಂದಲೇ ಬದುಕು ಸಹ್ಯವಾಗುತ್ತದೆ.

೧೫೮

ಸಂಸಾರದ ಗೋಳು (ತಂಗಿಯ ಬಗ್ಗೆ ತಂದೆಗೆ ಮಗನ ಕವರು)

ಕುಶಲಂ ಶ್ರೀರಾಮ ಹಾಸನ

ತಾ। 26.2.35

ತೀ॥ರವರ ದಿವ್ಯಚರಣ ಸನ್ನಿಧಿಯಲ್ಲಿ ಬಾಲಕಕೃತಾನೇಕ ವಿಜ್ಞಪ್ತಯಸ್ತದುಪರ್ಯೋಭಯ ಕುಶಲಂ ಸಂಪ್ರತಿ.

...ಪ್ರಕೃತದಲ್ಲಿ...ಹಳ್ಳಿಯಲ್ಲಿ ಪೋಲಿಗಳ ಕಾಟದಿಂದ ಚಿ॥ ಸೌ॥...ಳು ಮಾನವಾಗಿ ನಿರ್ಭೀತಿಯಾಗಿ ಬಾಳಲು ಅವಕಾಶ ವಿಲ್ಲದೆ ಬಹಳ ತೊಂದರೆಗೊಳಗಾಗಿ ಜೀವಿತವು ದುಃಸ್ಸಹವೆಂದು ಮನಗಂಡಿದ್ದಾಳೆ. ಅವಳ ಗಂಡನು ಬೇಜವಾಬುದಾರಿ ಮನುಷ್ಯನಾಗಿ ಎಲ್ಲೆಲ್ಲಿಯೋ ಅಲೆಯುತ್ತಿದ್ದಾನೆ. ಅವಳ ನಿರ್ಘೃಣ ಅತ್ತೆಯು... ಹಳ್ಳಿಯಲ್ಲಿದ್ದಾರೆ. ಇಂತಹ ಸಮಯದಲ್ಲಿ ಪೋಲಿಯಾದ ಅವಳ ಮೈದುನನು ಅವಳನ್ನು ಬೀದಿಪಾಲು ಮಾಡುತ್ತಿದ್ದಾನೆ.

ಇದರ ಜತೆಯಲ್ಲಿರುವ ಕಾಗದಗಳಿಂದ ತಮಗೆ ಎಲ್ಲಾ ವಿಷಯಗಳೂ ವೇದ್ಯವಾಗುತ್ತವೆ. ನೀವು ಈ ಕಾಗದ ಕಂಡ ಕೂಡಲೇ ಬಂದು ಅವಳನ್ನು ಕರೆದುಕೊಂಡು ಹೋಗದಿದ್ದರೆ ಅವಳು ತನ್ನ ಜೀವನ ಯಾತ್ರೆಯನ್ನು ಇಷ್ಟಕ್ಕೇ ಸಂತೋಷದಿಂದ ಮುಗಿಸಿ ಸಾವಿನ ದಾರಿಯನ್ನೇ ಹಿಡಿಯುವಳೆಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲಾ. ಇದರ ಜತೆಯಲ್ಲಿರುವ ಕಾಗದಗಳಲ್ಲಿ ನಮೂದಾಗಿರುವ ವಿಷಯಗಳೆಲ್ಲಾ ಸತ್ಯವೆಂದು ಮ॥ ರಾ॥...ರವರೂ ಹೇಳಿದರು. ಸನ್ನಿವೇಶವೇನೋ ಬಹಳ ವಿಷಮವಾಗಿದೆ. ನೀವು ಎಷ್ಟೇ ತೊಂದರೆಯಾದರೂ ಲಕ್ಷಿಸದೆ ಈ ಕಾಗದವನ್ನೇ ಅರ್ಜೆಂಟ್ ಟೆಲಿಗ್ರಾಮೆಂದು ಭಾವಿಸಿ ಕೂಡಲೇ ಹೊರಟುಬಂದ ಹೊರತು ಸಾಧ್ಯವೇ ಇಲ್ಲ. ಖಂಡಿತವಾಗಿಯೂ ಗುರುವಾರವೇ ಹೊರಟು ಬರಬೇಕೆಂದು ಪ್ರಾರ್ಥನೆ. ಒಟ್ಟಿನಲ್ಲಿ ಒಂದೂ ಚೆನ್ನಾಗಿಲ್ಲ.

ಬಾಕಿ ವಿಷಯಗಳೆಲ್ಲಾ ಮುಖತಃ.

ಇತಿ ವಿಜ್ಞಪ್ತಯಃ

(ಇದರ ಜತೆಯಲ್ಲಿರುವ ಕಾಗದಗಳೆಲ್ಲವನ್ನೂ ದಯೆಯಿಟ್ಟು ಜೋಪಾನವಾಗಿ ತೆಗೆದುಕೊಂಡು ಬನ್ನಿ.)

ಅಪರೂಪವಾದರೂ ಇಂಥ ಪ್ರಸಂಗವೊಂದು ಇಪ್ಪತ್ತನೆಯ ಶತಮಾನದ ನಲವತ್ತರ ದಶಕದಲ್ಲಿ ನಡೆದಿದೆ ಎಂಬುದು ಗಮನಾರ್ಹವಾದುದು.

೧೫೯

ತಂಗಿಯ ಪಾಡು

ಸೋದರನು ತಂದೆಗೆ ಬರೆದ ಕವರು

ಕುಶಲಂ ಶ್ರೀರಾಮ ಹಾಸನ

ತಾ 1-4-1935

ಚಿ॥ ಸೌ॥...ಳು ಕೊಣನೂರಿಗೆ ಬಂದಿದ್ದಳಷ್ಟೆ. ಶುಕ್ರವಾರ ಎಂದರೆ ಕೊಣನೂರಿನಲ್ಲಿ ಚೌಲವು ನಡೆದ ಮಾರನೆಯದಿನ ಅವಳಿಗೆ ಬೈಗುಳ ಸುರಿಮಳೆಯಾಯಿತು. ಕೊಣನೂರಿಗೆ ಹೋಗುವುದಕ್ಕೆ ಮೊದಲು,...ಹಳ್ಳಿಯಲ್ಲಿ ಅವಳು ನೋಡದೆ, ಕೆಂಡವಿರುವ ಬೂದಿಯನ್ನು ತಿಪ್ಪೆಗೆ ಹಾಕಿದ್ದಳೆಂದೂ, ಅದರಿಂದ

ಪಕ್ಕದಲ್ಲಿದ್ದ 4-5 ರೂಗಳ ಹುಲ್ಲಿನ ಮೆದೆಗೆ ಬೆಂಕಿ ಬಿತ್ತೆಂದೂ ಕೇಳಿದೆನು. ಇದನ್ನು ಉದ್ದೇಶಪೂರ್ವಕವಾಗಿ ಮಾಡಿದಳೆಂದೂ, ಮನೆಯ ಪದಾರ್ಥಗಳನ್ನು ಮಾರಿದಳೆಂದೂ ಅವಳ ಮೈದುನದಿರು ಹೇಳಿದ ಚಾಡಿಯ ಮಾತುಗಳನ್ನು ಕೇಳಿಕೊಂಡು ದುರಾಗ್ರಹಗ್ರಸ್ತಳಾದ ಅವಳ ಅತ್ತೆಯು ಶುಕ್ರವಾರ ರಾತ್ರಿ ಗಾಢನಿದ್ರೆಯಲ್ಲಿ ಮಲಗಿದ್ದ ಅವಳ ಎಡತೋಳಿನ ಮೇಲೆ ಬಹುಭಯಂಕರವಾದ ಒಂದು ಬರೆಯನ್ನೆಳೆದು, ಕೂಡಲೇ ಅವಳು ಅಳತೊಡಗಲು, ಬಾಯಿ ಮುಚ್ಚಿಕೊಳ್ಳದಿದ್ದರೆ ಮತ್ತೂ ಬರೆಹಾಕುವುದಾಗಿ ಅವಳನ್ನು ಹೆದರಿಸಿ ಅವಳ ಮಾಂಗಲ್ಯವನ್ನು ಎಳೆದು ಕಿತ್ತಳು. ಬರೆ ಬಿದ್ದರೂ ಮೂರ್ಛೆ ಬೀಳದೆ ಇದ್ದ ಅವಳು ಕೂಡಲೇ ಅವಳ ಕೈಯಿಂದ ಮಾಂಗಲ್ಯವನ್ನು ಕಿತ್ತುಕೊಂಡು ಕಟ್ಟಿಕೊಂಡಳು. ಜನಗಳು ತನ್ನನ್ನು ಏನೆನ್ನುವರೋ ಎಂಬ ಭಯದಿಂದ ಅವಳು ಗದ್ದಲ ಮಾಡದೆ, ಆ ಅನಿರ್ವಚನೀಯವಾದ ಯಾತನೆಯನ್ನು ಸಹಿಸಿಕೊಂಡು ರಾತ್ರಿಯನ್ನು ಕಳೆದಳು. ಮಾರನೆಯ ದಿನವಾಗಲೀ ಮುಂದಾಗಲೀ ಅವಳು ಅದನ್ನು ಯಾರಿಗೂ ತೋರಿಸಲಿಲ್ಲ. ಅನಂತರ ಅವಳು ಕೌಶಿಕಕ್ಕೆ ಸಾಗಿಸಲ್ಪಟ್ಟಳು. ಅಲ್ಲೊಂದೆರಡು ದಿನಗಳು ಕಳೆದ ಮೇಲೆ ಅವಳು ...ಹಳ್ಳಿಗೆ ಬಂದಳು. ಆ ವೇಳೆಗೆ, ತಕ್ಕ ಚಿಕಿತ್ಸೆಯಿಲ್ಲದಿದ್ದ ಕಾರಣ, ತುಂಬಾ ನೋವಾಗಿ, ತೋಳು ಬಹಳವಾಗಿ ಊದಿಕೊಂಡಿತು. ಇಷ್ಟಾದರೂ ಅವಳೇ ಎಲ್ಲಾ ಕೆಲಸಗಳನ್ನು ಮಾಡಿಕೊಂಡು, ಅವಳ ಮೈದುನರಿಗೆ ಪಿಂಡವನ್ನು ಬೇಯಿಸಬೇಕಾಗಿತ್ತು. ಮನೆಯಲ್ಲಿ ಯಾವ ಆಹಾರ ಪದಾರ್ಥಗಳೂ ಇರಲಿಲ್ಲ. ಒಂದಿಷ್ಟು ಅಕ್ಕಿಯನ್ನು ಬೇಯಿಸುವುದು, ಅವರಿಬ್ಬರಿಗೂ ಬಡಿಸಿ ಮಿಕ್ಕುದನ್ನು ಇವಳು ತಿನ್ನುವುದು, ಹೀಗೆ ನಡೆದುಕೊಂಡು ಬಂದಿತ್ತು. ಅವಳಿಗೆ ತೋಳನ್ನು ಅಳ್ಳಾಡಿಸುವುದಕ್ಕೂ ಆಗದೆ, ಬಹಳ ನೋವಾಯಿತು. ಆ ಶುಕ್ರವಾರ ಅವಳು ತೊಟ್ಟಿದ್ದ ಕುಪ್ಪಸವನ್ನು ಅವಳು ಬಿಚ್ಚಲು ಸಾಧ್ಯವಾಗಿಲ್ಲ. ಆ ನೋವಿಗೆ ದಿನ ಬಿಟ್ಟು ದಿನ ಜ್ವರ, ಛಳಿ ಬಂದು, ಈಗ ಅವಳು ತೀರಾ ಕೃಶಳಾಗಿದ್ದಾಳೆ. ನಾನು ಕಳೆದ ಶುಕ್ರವಾರ...ಹಳ್ಳಿಗೆ ಹೋಗಿದ್ದು, ಗ್ರಾಮಸ್ಥರ ಅನುಮತಿಯನ್ನು ಪಡೆದು ಕರೆದುಕೊಂಡು ಬಂದು ಆಸ್ಪತ್ರೆಯಲ್ಲಿ ಔಷಧಿ ಹಾಕಿಸುತ್ತಿದ್ದೇನೆ. ತೋಳೇನೋ ಬಹಳ ರಣವಾಗಿದೆ. ಇಲ್ಲಿಂದ ಹೋಗಿ ಡಾಕ್ಟರ ಸರ್ಟಿಫಿಕೇಟನ್ನು ಪಡೆದು ಜೀವನಾಂಶಕ್ಕೆ ದಾವಾ ಹಾಕಬೇಕಾಗಿದೆ. ಅವಳ ತೋಳು ಎಲ್ಲಿ ಹುಳುತುಬಿಡುವುದೋ ಎಂದು ಗಾಬರಿಯಾಗಿದೆ.

ಚಿ॥...ಯ ಮದುವೆಯಲ್ಲಿ ಅವಳಿಗೆ ಕೊಟ್ಟಿದ್ದ ಸೀರೆಯನ್ನೂ ಎರಡು ರವಿಕೆಯ ಕಣಗಳನ್ನೂ ಕಿತ್ತುಕೊಂಡು ತೆಗೆದಿಟ್ಟು ಕೊಂಡಿರುವರು. ಈ ವಿಷಯವನ್ನೂ ಮಹಾಜನರ ಗೋಚರಕ್ಕೆ ತಂದಿರುತ್ತೇನೆ. ಅಂತೂ ಈ ಸಮಯದಲ್ಲಿ ಕ್ರಿಮಿನಲ್ ಕೇಸನ್ನು ಅತ್ಯವಶ್ಯಕವಾಗಿ ಮಾಡಬೇಕಾಗಿದೆ...

ಮೂವತ್ತರ ದಶಕದಲ್ಲಿ ಕೋರ್ಟು ಕಛೇರಿಗಳ ವ್ಯವಹಾರ ಬಹಳ ಕ್ಷೀಣ ಪ್ರಮಾಣದಲ್ಲಿತ್ತು, ಈಗಲೂ ಅದು ಹೆಚ್ಚಿಲ್ಲ.

೧೫೬

ನನಗೆ ಮದವಿಲ್ಲ (ಹಿರಿಯ ವಿದ್ಯಾರ್ಥಿಯೊಬ್ಬರಿಗೆ ಕಾರ್ಡು)

ಕ್ಷೇಮ ಶ್ರೀ ತಾ। 17.12.1935

ಮ.ರಾ. ವೆಂಕಟಸುಬ್ಬಾಶಾಸ್ತ್ರಿಗಳವರ ಸಮಕ್ಷಮಕ್ಕೆ ಶ್ರೀನಿವಾಸ ಉಪಾಧ್ಯಾಯನು ಮಾಡುವ ನಮಸ್ಕಾರಗಳು. ಅದಾಗಿ ಉ.ಕು. ಸಾಂಪ್ರತ. ನೀವು ಬರೆದ ಕಾರ್ಡು ಈ ದಿನ ನನ್ನ ಕೈಸೇರಿತು. ನಾನು ನಿಮಗೆ ಕಾಗದ ಬರೆಯಲು ಉದಾಸೀನತೆಯೂ ಮತ್ತು ತಿರಸ್ಕಾರ ಭಾವವೂ ಅರ್ಥ ಮದವೂ ವಿದ್ಯಾಡಂಭವೂ ಯಾವುದೂ ಇವುಗಳಲ್ಲಿ ಒಂದೂ ತೋರಿ ಕಾಗದ ಬರೆಯಲಿಲ್ಲ ವೆಂದು ತಿಳಿಯಕೂಡದು. ಆದರೂ ನನ್ನದು ಒಂದು ದೊಡ್ಡ ತಪ್ಪಾದದ್ದಾಯಿತು. ಅದನ್ನು ಕ್ಷಮಿಸಿ. ಅದೇನೆಂದರೆ ಈ ಮನೆಯ ಗಲಾಟೆಯಲ್ಲಿ ನಿಮ್ಮ ಕಾಗದ ಬಂದಾಗ್ಯೂ ಅದಕ್ಕೆ ಪ್ರತ್ಯುತ್ತರ ಬರೆಯದೆ ಇದ್ದದ್ದೇ. ಈ ವಿಚಾರದಲ್ಲಿ ನನ್ನನ್ನು ಈಗ ಕ್ಷಮಿಸುತ್ತೀರಾಗಿ ನಂಬಿರುತ್ತೇನೆ. ಆದರೆ ಈಗ ನನ್ನ ಸ್ಥಿತಿಯನ್ನು ಹೇಳಲವಕಾಶವಿಲ್ಲ. ಒಡ್ಡಹಳ್ಳಿಗೆ ಸೌಭಾಗ್ಯವತಿಯನ್ನು ಹೆತ್ತು ಒಳಕ್ಕೆ ನೀರು ಹಾಕಿಕೊಂಡು ಬಂದ ದಿವಸವೇ ಕಳುಹಿಸಿದೆ. ಹೋಗಿಬಂದ ದಿವಸ ಹುಶಾರಾಗಿದ್ದಳು. ಈಚೆಗೆ ಒಂದು ದಿವಸ ಜ್ಞಾನಾಜ್ಞಾನವಾಗಿ ಬಹಳ ಗಾಬರಿಯಾಗಿತ್ತು. ಈಚೆಗೆ ಕೊಂಚ ಹುಶಾರಾಗಿ 8-15 ದಿನಕ್ಕೊಮ್ಮೆ ಇದ್ದಕ್ಕಿದ್ದ ಹಾಗೇ ಚಳಿ ಬರುತ್ತಿದೆ. ಚಿ.ರಾ. ಬಾಲಕ ಬಾಲಕಿಯರಿಗೂ ಕೊಂಚ ಹುಶಾರಿಲ್ಲ. ತೀ.ರೂ.ರವರು ಒಂದು ದಿವಸ ತೆಂಗಿನಮರಕ್ಕೆ ಹತ್ತಿ ಕಾಲು ಜಾರಿ ಕೊಂಚ ಪೆಟ್ಟಾಗಿತ್ತು. ಈಗ ಹುಶಾರಾಗಿರುತ್ತಾರೆ. ನನ್ನ ವಿಚಾರವಿರಲಿ. ಅವರು ನಿಮ್ಮ ಸೌ.ವತಿಯವರನ್ನು ಕರೆದುಕೊಂಡು ಬಂದಿರುತ್ತಾರೆ. ಈಗ ಹುಶಾರಾಗಿರುತ್ತಾರೆ. ನಿಮ್ಮ ತೀ.ರವರು ಕಾಗದ ಬರೆದಿರಬಹುದು. ಅದರಲ್ಲಿ ಇಲ್ಲಿಯ ಯೋಗಕ್ಷೇಮವನ್ನು ಬರೆದಿದ್ದರೂ ಇರಬಹುದು. ಆದರೂ ನನ್ನ ಹಿಂದಿನ ಯಾವ ತಪ್ಪಿದ್ದರೂ ಕ್ಷಮಿಸಿ ಹಿಂದಿನಂತೆ ಏಕರೀತಿ ಮನಸ್ಸಿಡುತ್ತೀರಾಗಿ ನಂಬಿರುತ್ತೇನೆ. ಆದರೆ ನರಸಿಂಹಮೂರ್ತಿಯು ನನ್ನಲ್ಲಿ ಈಗ ಓದುತ್ತಿಲ್ಲ. ಅವನ ವಿಚಾರ ನನಗೆ ಬೇಕಿಲ್ಲ. ಅದನ್ನು ಬರೆದರೆ ಬಹಳವಿದೆ. ಇರಲಿ. ಮಾ॥ ಶ್ರೀಯವರಿಗೆ ಮುಂದಲ ಶನಿವಾರ ಬೆಳಿಗ್ಗೇ ಮೋಟಾರಿಗೆ ಖಂಡಿತ ಬರಬೇಕೆಂದು ತೀ. ರೂಪರವರು ತಿಳಿಸಿರುತ್ತಾರೆ. ಮಧ್ಯಾಹ್ನವೇ ಪ್ರತಿ ಕಾಗದ ಬರೆಯುವುದು ಸಾವಕಾಶವಾಯಿತೆಂದು ಕ್ಷಮಿಸಿಬಿಡುವಿರಾಗಿ ನಂಬಿರುತ್ತೇನೆ.

ಇತಿ ನಮಸ್ಕಾರಗಳು

ತಾಜಾ ಕಾಲಂ : ಪಂಕ್ತಿಗಳು ಒಂದಕ್ಕೊಂದು ಸರಿಯಿಲ್ಲ. ಯಾವ ವಿಚಾರವನ್ನೂ ಮನಸ್ಸಿಗೆ ತಿಳಿಯದೆ ವಿಶ್ವಾಸವಿಡುತ್ತೀರಾಗಿ ನಂಬಿರುತ್ತೇನೆ. ಅಡಿಕೆಯನ್ನು ಕೆಡವಿಸಿಲ್ಲ. ಬರವಣಿಗೆಯು ಬಹಳ ವಕ್ರವಾಯಿತೆಂದು ಬೇಜಾರುಪಡಕೂಡದು.

೧೫೭

ಪತಿಗೆ ವಿವರಣೆ

ತನ್ನ ತವರಿನಿಂದ ಪತಿಗೆ ವಿವರಣೆ ನೀಡಿ ಬರೆದ ಪತ್ರ

ಕ್ಷೇಮಾ ಶ್ರೀ ತಾ 28.9.38

ಬೆಟ್ಟದಪುರ

ತೀ॥ ನನ್ನ ಪ್ರಾಣಕಾಂತರಿಗೆ ಪ್ರಾಣಕಾಂತೆಯ ವಿಜ್ಞಾಪನೆಗಳೂ. ಇದಾಗಿ ಈವರಿಗೆ ಉಭಯ ಕುಷಲೋಪರೀ ಸಾಂಪ್ರತ.

ತಾಉ ಬರದ ಕಾಗದವನ್ನು ನೋಡಿ ಮನಸ್ಸಿಗೆ ಅಭಿಪ್ರಾಯವಾಯ್ತು. ನಾನು ಕಣ್ಣಿನಲ್ಲೂ ಕಂಡಿಲ್ಲ. ಮನಸ್ಸಿನಲ್ಲಿ ಸೊಲ್ಪಉೂ ಸಂಶಯವಿಡಬೇಡಿ. ನಾನು ಖಂಡಿತವಾಗಿಯೂ ಕಾಣೆ. ಯಾವ ಯಾವ ಹೊಟ್ಟೇ ಉರಿ ಇರುಉದೋ ಅದನ್ನೆಲ್ಲಾ ತೀರಿಸಿಕ್ಕೊಂಡೇ ಹೋಗಲೀ. ದೊಡ್ಡವರು ಒಂದು ಗಾದೇ ಹೇಳುವ್ರುದುಂಟು. ತಾನು ಕಳ್ಳಿ ಪರರ ನೆಂಬೋಳು ; ಹಾದರಗೀತಿ ಗಂಡನ ನೆಂಬೋಳು ಯೆಂಬುವ ಗಾದೆಗೆ ಸರಿಯಾಗಿದೆ.

ತಮ್ಮ ಅತ್ತಿಗೆಯವರ ಯೋಗ್ಯತೆಯನ್ನು ತಾಉ ಕಂಡಿರಲಿಲ್ಲವೇ. ನನಗೆ ಕಾಗದವನ್ನು ಬರೆಯಬೇಕಾದ್ದೇ ಇರಲಿಲ್ಲ. ನನ್ನ ಯೋಗ್ಯತೆಯನ್ನು ಕಂಡಿರಲಿಲ್ಲವೆ. ಆಗಲೇ ನಿರಾಳವಾಗಿ ಹೇಳಬೊಹುದಾಗಿತ್ತು. ಸಂಶಯವಿಟ್ಟುಕ್ಕೊಂಡು ಕಾಗದಾ ಬರದಿರುತ್ತೀರಿ. ಹಾಗೆ ಸೊಲ್ಪಉೂ ಯೋಚಿಸಬೇಡಿ. ಅಂಥ್ಹಾ ಕೆಲಸಗಳಿಗೆ ಕಂಡಿತವಾಗಿಯೂ ಹೋಗಿಲ್ಲ.

ಇಷ್ಟೂ ಹೊತ್ತಿಗೆ ನಾನು ಕಾಗದವನ್ನು ಬರದು ನಾಲ್ಕಾರು ದಿನಗಳಾಗಬೇಕಾಗಿತ್ತು. ನನಗೂ ಹುಶಾರಿಲ್ಲ. ಜ್ವರ ತಲೇನೋಉ. ಮಲಗಿಯೇ ಇರುತ್ತೇನೆ. ಸ್ರೌ॥ ಮಾ॥ ತಾಯಿಯವರಿಗೆ ಖಾಯಿಲೆ ಮತ್ತಷ್ಟು ಹೆಚ್ಚು. ಹೊಟ್ಟೆಗೆ ಯಾವ ಆಹಾರವೂ ಸೇರುಉದಿಲ್ಲ. ನನಗೆ ನೋಡಲು ಬಹಳ ದುಖ್ಖವಾಗಿದೆ. ಹುಶಾರಾದರೆ ಯಾರ ಪುಣ್ಯವೊ. ಭಗವಂತನಿಗೆ ಹ್ಯಾಗೆ ಮನಸ್ಸು ಬರುಉದೊ. ಒಂದೂ ತಿಳಿಯುಉದಿಲ್ಲ. ಯಿಾ ತಾಪತ್ರಯಗಳಿಂದ ಕಾಗದಾ ಬರೆಯಲು ಕಣ್ಣುಮೂಗು ತೋರಲಿಲ್ಲ. ಯಿದರಿಂದ ಮನಸ್ಸಿಗೆ ಯೇನೂ ತಿಳಿದುಕೊಳ್ಳಬಾರದು. ತೀ॥ ದೊಡ್ಡ ಮಾವನವರು ಬೆಂಗಳೂರಿನಿಂದ ಇನ್ನು ೩-೪ ದಿನಗಳಲ್ಲಿ ಬರುತ್ತಾರೆ. ಅವರ ಅಭಿಪ್ರಾಯ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು. ತೀ॥ ನನ್ನ ತಂದೇಯ್ಯವರಿಗೆ ಆಸ್ಪತ್ರೆಗೆ ಹೋಗಲು ಇಷ್ಟವಿಲ್ಲ. ಇದು ಯಾವ ಬಗೆಯಲ್ಲಿ ಉಷಾರಾಗುಉದೋ ಕಾಣೆ.

ಸೌ॥ ಮಾ॥ ಅಕ್ಕನವರು ಪೆಟ್ಟಿಗೇ ಕಾದುಕೊಂಡಿರು ಎಂದು ಹೇಳಿ...ಪಟ್ಟಣಕ್ಕೆ ಹೋಗಿದ್ದರು. ಇವಳು ದೊರೆಯಾಗಿದ್ದರೆ ನಾನು ಹಾಗೇ ಮಾಡುತ್ತಿದ್ದೆ. ನಾನು ಅರಿಯದೆ ಹಿಂದೆ ದಾಸಿಯಂತೆ ಇವಳ ಊಳಗವನ್ನು ಉಜ್ಜುತ್ತಿದ್ದೆನಲ್ಲ. ಅದಕ್ಕೆ ಈಗಲೂ ಹಾಗೇಯೆಂದು ತಿಳಿದುಕ್ಕೊಂಡಿರಬೊಹುದು. ಸೊಲ್ಪ ಯೆಚ್ಚರ ವಾಗಿರುವಂತೆ ತಿಳಿಸಿ. ದುಡ್ಡು ಒಡವೆಗಳ ಸಾವಕಾರೆ. ನಾನು ಹೇಗೆ ಹೇಳಿದರೂ ಯಾವ ಯಾವ ವಿಧವಾಗಿ ಮಾತಾಡಿದರೂ ಜೈಸ್ಸಿಕ್ಕೊಂಡಿರಬಹುದೆಂದು ಮಾಡಿಕ್ಕೊಂಡಿರಬೊಹುದು.

ತಾನೇ ದುಷ್ಕೃತ್ಯಗಳಲ್ಲಿ ಭಾಗಿ. ಇನ್ನೊಬ್ಬರ ಮೇಲೆ ಇಲ್ಲದೇ ಇರುಉದನ್ನು ಹೇಳಿದಾರೆ. ತಾನು ಮಾಡಿದ್ದೆಲ್ಲಾ ಈಚೆಗೆ ಬರುಉದು. ಈಗ ಈ ವಿಧವಾದ ಮಾತುಗಳು, ನನ್ನ ಸಂಗಡ ಬಾಯಿಗೆ ಬಂದಂತೆ ಬೈಸ್ಸಿಕ್ಕೊಳ್ಳುಉದಕ್ಕೆ.

ನಾನು...ಹಳ್ಳಿಯಲ್ಲೇ ತಮಗೆ ತಿಳಿಸಿದ್ದೆ. ಅದು ಸಾಲುಉದಿಲ್ಲ. ದಯವಿಟ್ಟು ಯೆರಡು ರೂಗಳನ್ನು ಮನಿಯಾಡ್ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ತಿಳಿದವರಿಗೆ ಹೆಚ್ಚಾಗಿ ಬರೆಯಲು ಶಕ್ತಳಲ್ಲ. ಉದಾಶೀನ ಮಾಡಬಾರದು.

ತಾಉಗಳು ಬರುವಾಗ, ನನಗೆ ಒಂದು ಬೆಡಸೀಟ್ ಒಂದು ಕಂಬಳಿ ಒಂದು ಬಟ್ಟೆ ಇಉಗಳನ್ನು ದಯವಿಟ್ಟು ಉದಾಶೀನ ಮಾಡದೆ ತರಬೇಕಾಗಿ ಪ್ರಾರ್ಥಿಸುತ್ತೇನೆ. ಖಂಡಿತವಾಗಿಯೂ ಮರೆಯಬಾರದು.

ಮಾ॥ ಅತ್ತೆಯವರಿಗೆ ನನ್ನ ವಿಜ್ಞಾಪನೆಗಳನ್ನು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ. ಅವರ ಯೆಡೆಯಲ್ಲಿ ನನ್ನದೊಂದು ಸೀರೇ ಇದೆ. ತಾಉಗಳು ಬರುವಾಗ ಅದನ್ನು ತೆಗೆದುಕ್ಕೊಂಡು ಬರುವುದು.

ಬೆಳ್ಳೀ ತಟ್ಟೇ ಸಿಕ್ಕಿದ್ದು ಆಶ್ಚರ್ಯವಾಗಿದೆ. ನಾನು ಔಷಧಿ ಜಾಗ್ರತೆಯಾಗಿ ತೆಗೆದುಕ್ಕೊಳ್ಳದೆ ಇದ್ದುದ್ದರಿಂದ ಕೆಂಬಲು ಪೂರ್ತಿ ಹೋಗಲಿಲ್ಲ. ಮತ್ತೆ ಬೇರೇ ಔಷಧಿಯನ್ನು ಕೊಡಬೇಕೆಂದು ಮಾಡಿಕೊಂಡಿರುವರು. ಕೆಂಬಲಿಂದ ಭಾರಿ ತೊಂದರೆಯಾಗಿದೆ. ನಿಲ್ಲುಉದೊ ಇಲ್ಲವೋ ಕಾಣೆ.

ತಿಳಿದವರಿಗೆ ಯಾವ ಸಮಾಚಾರಕ್ಕೂ ಹೆಚ್ಚಾಗಿ ಬರೆಯಲು ಶಕ್ತಳಲ್ಲ. ಕಾಗದವನ್ನು ಕಂಡಕೂಡಲೆ ಕುಶಲಪತ್ರಿಕಾ ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಇನ್ನೇನು ವಿಶೇಷವಿಲ್ಲ.

ಇತಿ ವಿಜ್ಞಾಪನೆಗಳೂ

೧೫೮

ಸಾವಿನಲ್ಲೂ ಬಾರದವರು (ಬಂಧುವಿಗೆ ಬರೆದ ಕಾರ್ಡು)

ಕುಶಲ ಶ್ರೀ ಹಾಸನಸೀಮೆಯ ಹಳ್ಳಿ

26.5.47

ತೀ। ಭಾವನವರ ದಿವ್ಯಚರಣ ಸನ್ನಿಧಾನಂಗಳಿಗೆ...ನ ಸಾಷ್ಟಾಂಗಪೂರ್ವಕ ವಿಜ್ಞಾಪನಂಗಳು. ಅದಾಗಿ ಈವರಿಗೆ ಉಭಯ ಕುಶಲೋಪರಿ ಸಾಂಪ್ರತ.

...ತೀರ್ಥರೂಪರವರು ಬರದ ಕಾರ್ಡು ನಾನು ಬರದ ಕಾರ್ಡುಗಳು ತಮಗೆ ತಲಪಿರಬಹುದು. ಚಿ। ಸೌ।...ನು ಸ್ವರ್ಗಸ್ಥಳಾದ ವಿಷಯವನ್ನು ತಿಳಿಸಲು ತುಂಬಾ ವಿಷಾದವಾಗುತ್ತದೆ. ಒಂದು ಸಲವಾದರು ಊರಿಗೆ ಬರಲು ತಮಗೆ ಕರುಣೆ ಬರಲಿಲ್ಲ. ಆಕೆಗೆ ತಮ್ಮನ್ನು ನೋಡಲು ಅದೃಷ್ಟವಿಲ್ಲ. ಮಾಡತಕ್ಕದ್ದೇನು. ಮುಂದಿನ ಗುರುವಾರದಿಂದ ಆಕೆಗೆ ನಡೆಯಬೇಕಾದ ಕರ್ಮಗಳನ್ನು...ಹಳ್ಳಿಯಲ್ಲಿಯೇ ನಡೆಸುತ್ತಾರೆ. ಈಗಲಾದರು ತಾವುಗಳೆಲ್ಲರು ದಯವಿಟ್ಟು ಒಂದು ಸಲ ಬಂದರೆ ಆಕೆಯ ಮಕ್ಕಳನ್ನಾದರು ನೋಡಬಹುದು. ಈಗಲೂ ತಮ್ಮ ಇಷ್ಟ. ನಾನು ಹೆಚ್ಚಿಗೆ ಬರಯಲಾರೆ...

ನಾನಾ ಕಾರಣಗಳಿಂದ ಉತ್ಪನ್ನವಾದ ಮನಸ್ತಾಪವು ಸಾವಿನ ಸಂದರ್ಭದಲ್ಲೂ ಮುಂದುವರಿಯುವಷ್ಟು ಕಠಿಣವಾದ ಸನ್ನಿವೇಶಗಳು ಇರುತ್ತವೆ; ಒಡೆದ ಮನಸ್ಸು ಕೂಡುವುದೇ ಹೆಚ್ಚು.

೧೫೯

ಕಷ್ಟಕ್ಕೆ ಸ್ಪಂದಿಸಿರುವುದು (ಬಂಧುವೊಬ್ಬರ ಕಾರ್ಡು)

ಬಾಣಾವರ

16.8.47

...ಮನುಷ್ಯನ ಜೀವನವೇ ಕಷ್ಟಮಯವಾದುದು. "ಸುಖಂ ಸ್ವಪ್ನೇऽಪಿ ದುರ್ಲಭಮ್" ಎಂದು ನಿಮಗೂ ತಿಳಿದ ವಿಷಯವೇ ಆಗಿದೆ. ಈಗ ನಿಮ್ಮ ಕೆಲಸ ಖಾಯಂ ಆಯಿತೆ? ಅದರ ವಿಚಾರ ಏನಾಯಿತೆಂಬುದು ನನಗೆ ತಿಳಿಯದೆ ಚಿಂತಿಸುತ್ತಿದ್ದೇನೆ. ನಾವು ಯಾವುದರಲ್ಲಿ ಬೇಜಾರು ಮಾಡಿದರೂ ಜೀವನ ಪಥ ನಡೆಯಬೇಕು. ಬಿಡುವಂತಿಲ್ಲ..... ನಿಮ್ಮ ಮಗುವಿನ ವಿಚಾರ ತಿಳಿದು ಎಲ್ಲರಿಗೂ ವ್ಯಸನವಾಗಿರುತ್ತದೆ. ನೀವು ತಂದಿರುವ ಹಸುವಿನ ಆರೋಗ್ಯವಿಚಾರ ಹೇಗಿರುತ್ತೆ ತಿಳಿಸುವುದು. ಕಷ್ಟಕಾಲಗಳು ಕಳೆದು ಮುಂದೆ ಸುಖದಿನಗಳು ಬರಬಹುದು. ಧೈರ್ಯದಿಂದ ವರ್ತಿಸುವುದು ಸಕಲಕ್ಕೂ ಕ್ಷೇಮಕರವೆಂದು ನನ್ನ ಭಾವನೆ. ತಿಳಿದವರಿಗೆ ಹೆಚ್ಚಿಗೆ ಬರೆಯಲು ಶಕ್ತನಲ್ಲ. ಮಗುವಿಗೆ ಖಾಯಿಲೆಯಾಗಿ ಗಾಬರಿಯಾಗಿದ್ದ ಕಾಲದಲ್ಲಿ ಮಾತೃಶ್ರೀಯವರನ್ನು ಕಳುಹಿಸಿದ್ದಕ್ಕೆ ತುಂಬ ಕೃತಜ್ಞನಾಗಿದ್ದೇನೆ...

೧೬೦

ಸಮಾಧಾನ ಪತ್ರ

ಬಂಧುವು ಕಷ್ಟದಲ್ಲಿರುವಾಗ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಬಾಣಾವರ

16-3-48

...ನೀವು ಅಭಿಮಾನವಿಟ್ಟು ಬರೆದ ಕಾಗದ ಬಂದು ತಲಪಿ ಅಲ್ಲಿ ಎಲ್ಲರ ಕ್ಷೇಮ ಲಾಭಗಳು ತಿಳಿದು ಸಂತೋಷವಾಯಿತು.

...ನಿಮ್ಮ ಕಾಗದವನ್ನು ನೋಡಿದರೆ ಜೀವನದಲ್ಲಿ ಬಹಳ ಬೇಜಾರು ಬಂದಿರುವಂತೆ ತೋರುತ್ತದೆ. ಆದರೆ ಕಾರಣ ತಿಳಿಯಲಿಲ್ಲ. ಒಂದು ಸಾರಿ ಬಂದು ನೋಡಿಕೊಂಡು ಬರೋಣವೆಂದರೆ ಬಹಳ ದೂರವಾಗಿರುತ್ತೆ. ಮಧ್ಯೆ ಮಧ್ಯೆ ಅಡ್ಡಿಗಳು ಸಹ ಬಂದಿರುತ್ತೆ. ಮಿಡಲ್‌ಸ್ಕೂಲ್‌ಗೆ ರಜ ಬಂದನಂತರ ಬರಬೇಕೆಂದು ಉದ್ದೇಶವಿರುತ್ತದೆ. ನಿಮಗೆ ಸಾಧ್ಯವಾದರೆ ಒಂದು ಸಾರಿ ಇಲ್ಲಿಗೆ ಬಂದರೆ ಭದ್ರಾವತಿ ಕಡೆ ಹೋಗಿ ಜೊತೆಯಲ್ಲಿ ನೋಡಿಕೊಂಡು ಬರಬಹುದು. ಕಷ್ಟಗಳು ವಿಘ್ನಗಳು ತೊಂದರೆಗಳು ಮನುಷ್ಯನಿಗೆ ಮೀಸಲಾಗಿರತಕ್ಕವುಗಳೆಂದು ನನ್ನ ಭಾವನೆ. ಅದನ್ನೆ ಮಹದದ್ಭುತವೆಂದು ಚಿಂತಿಸುತ್ತಾ ಮನಸ್ಸಿನ ಶಾಂತಿಯನ್ನು ಕಳೆದುಕೊಂಡು ಮಾನವತ್ವಕ್ಕೆ ವಿಘ್ನವನ್ನುಂಟುಮಾಡಿಕೊಳ್ಳಬಾರದೆಂದು ನನ್ನದೊಂದು ಸಲಹೆ. ತಿಳಿದವರಿಗೆ ಹೆಚ್ಚಿಗೆ ಬರೆಯಲಾರೆನು. ಭಗವಂತನ ಮೇಲೆ ಭಾರ ಹಾಕಿ ನಮ್ಮ ನಮ್ಮ ಕರ್ತವ್ಯಗಳನ್ನು ಕೈಲಾದ ಮಟ್ಟಿಗೂ ಜೀವಿತಕಾಲದಲ್ಲಿ ಮಾಡುತ್ತಾ ಮೊಂಡ ಎತ್ತಿನಂತೆ ಜೀವಿತವನ್ನು ಸಾಗಿಸಬೇಕಾಗಿದೆ...

೧೬೧

ತವರಿನಲ್ಲಿ ನೊಂದ ತಂಗಿ

ತನ್ನ ಅಳಲನ್ನು ಅಣ್ಣನಲ್ಲಿ ತೋಡಿಕೊಂಡಿರುವುದು

ಕ್ಷೇಮ ಶ್ರೀ ತಾರೀಖು ೨೨-೭-೪೯

ತೀ॥...ಅಣ್ಣೈಯ್ಯನವರ ದಿವ್ಯ ಚರಣ ಸನ್ನಿಧಾನಂಗಳಲ್ಲಿ ಬಾಲಕಿ ಸೌ॥...ಮಾಡುವ ಅನೇಕ ಸಾಷ್ಟಾಂಗ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರಿಗೆ ಉ.ಕು. ಸಂಪ್ರುತಿ.

ತಮ್ಮೊಡನೆ ೨-೩ ವೇಳೆ ನನ್ನ ಜಾತಕದ ಕುಂಡಲಿ ಬರೆದು ಕೊಡಿರೆಂದು ಬೇಡಿಕೊಂಡೆ. ದಯ ಬರಲಿಲ್ಲ. ಬರುವ ವೇಳೆ

ಇದೊಂದು ವಿಚಾರ ಹೇಳೋಣವೆಂದಿದ್ದೆ. ಆದರೆ ಸಮಾಧಾನ ವಿಲ್ಲದೆಯೋ ಅಥವಾ ಕೆಲಸದಿಂದಲೋ ಅಂಗಡಿಗೆ ಹೋದಿರಿ. ಆದುದರಿಂದ ಕಾಗದದಲ್ಲಿ ಬರೆಯಬೇಕಾಯಿತು.

ಈ ವರುಷದಿಂದ ತಾವು ಕಳುಹಿಸುತ್ತಿದ್ದ ಗೌರಿಹಬ್ಬದ ಮಂಗಳ ದ್ರವ್ಯವನ್ನು ದಯವಿಟ್ಟು ಕಳುಹಿಸಬೇಡಿರೆಂದು ಹಲವು ಬಾರಿ ನಮಸ್ಕರಿಸಿ ಬೇಡಿಕೊಳ್ಳುತ್ತೇನೆ. ಖಂಡಿತ ಕಳುಹಿಸಬೇಡಿ. ನಾವು ...ಹಳ್ಳಿಗೆ ಬಂದಾಗ್ಗೆ ನಮಗಾಗಿ ಕಷ್ಟನಷ್ಟ ಕಿರುಕುಳಕ್ಕೊಳಗಾಗಿ ಬಹಳ ನೊಂದಿರುವಿರಿ. ಅಕ್ಕಪಕ್ಕದವರಿಗೂ ನನ್ನಿಂದ ನಷ್ಟವಾಗಿರುವಂತೆ ಭಾವಿಸಿರುವಿರೆಂದು ತಿಳಿಯಬಂತು. ಕುಡಿಯಲು ನಿಮಗೆ ಚೆಂಬಿಗೂ ಗತಿಯಿಲ್ಲದಂತೆ ಬಾಚಿಕೊಂಡಿರುವ ನಾವು ಅದರಲ್ಲಿಯೇ ಇಲ್ಲಿ ಜೀವಿಸುತ್ತಿದ್ದೇವೆ. ಅದನ್ನು ಚೇತರಿಸಿಕೊಳ್ಳಬೇಕು. ಅದರ ಜೊತೆಗೆ ಈ ಖರ್ಚೂಬೇಡ. ನಿಮ್ಮ ಪತ್ನಿಯವರ ಬಂಧುವರ್ಗಕ್ಕೆ ನೀವು ಹಿತೈಸಿಗಳಾಗಿ ಅವರಿಗೆ ಬೇಕಾದ ಸಹಾಯ ಗಳನ್ನು ಮಾಡಿಕೊಂಡು ಅವರಲ್ಲಿ ವಿಶ್ವಾಸ ಸಂಪಾದಿಸಿಕೊಂಡು ನೀವುಗಳೆಲ್ಲರು ಕ್ಷೇಮವಾಗಿದ್ದರೆ ಸಾಕು.

ನೀವು ಬರೆದಿದ್ದ ಕಾಗದಕ್ಕೆ ಸೌ।। ಮಾ।।...ಅಕ್ಕನವರ ಮನೆಗೆ ಜವಾಬು ಬರೆದಿದ್ದೆ. ತಿಳಿಸಿರಬಹುದು. ನಾನು ಅಲ್ಲಿ ದೇವರನ್ನು ಮರೆತು ಬಂದೆ. ಪಾತ್ರೆಯನ್ನು ಮಾ।। ಯರವರಿಗೆ ಇರಲೆಂದೇ ಇಟ್ಟು ಬಂದಿರುವೆನು. ಅದನ್ನು ವಿಚಾರಿಸದೆ ಅವರು ಬರೆದರು. ಬೀಗ, ಇನ್ನೂ ಕೆಲವು ಪದಾರ್ಥಗಳನ್ನು ನಾನು ಅವರಿಗಾಗಿಟ್ಟು ಬಂದೆ. ನನ್ನ ಪದಾರ್ಥಕ್ಕೋಸ್ಕರ ನೀವು ತೊಂದರೆಪಡಬೇಡಿ. ಇದ್ದರೆ ಇರಲಿ ಇಲ್ಲದಿದ್ದರೆ ಹೋಗಲಿ; ಹಿಂದೆ ಹೋದುದಕ್ಕೇ ಸೇರಲಿ...ಕೆಲವರಿಗೆ ಅವರವರ ಮನದಿಷ್ಟದಂತೆ ದೇವರು ನೆರವೇರಿಸಿ ಕೊಡಲು ಅವರಿಗೆ ದಿಕ್ಕುದೆಸೆ ನೆಂಟರು ಇಷ್ಟರು ಯಾರೂ ಬೇಡವಾಗಿಬಿಡುವುದು. ಪ್ರಕೃತದಲ್ಲಿ ಮತ್ತೊಮ್ಮೆ ನಿಮ್ಮ ಮನೆಗೆ ತಿರುಪೆಗೆ ಬಂದಾಗ ಯೇನು ಬೇಕಾದರೂ ಕೊಡಿ. ಈಗ ಬೇಡ.

ಇದು ತಲಪಿದೊಡನೆ ನಿಮ್ಮ ಮನೆಯ ಮತ್ತು ಸೌ।। ಮಾ।। ಅಕ್ಕನವರ ಮನೆಯ ಯೋಗಕ್ಷೇಮ ಬರೆಯುತ್ತೀರೆಂದು ನಂಬಿರುತ್ತೇನೆ.

ಇತಿ ವಿಜ್ಞಾಪನೆಗಳು

ನನ್ನ ಹೃದಯ ಸುಣ್ಣದಂತೆ ಕುದಿಯುತ್ತಿದೆ. ಅದರಿಂದ ಖಂಡಿತ ದಯವಿಟ್ಟು ಕಳುಹಿಸಬೇಡಿ. ಅದೇನೂ ಸಾಲವಲ್ಲ. ಹೆಚ್ಚು ಬರೆಯಲು ಶಕ್ತಳಲ್ಲ.

ಮಂಗಳದ್ರವ್ಯವು ಮುತ್ತೈದೆತನವು ಶಾಶ್ವತವಾಗಿ ಇರಲೆಂದು ಹಾರೈಸಿ ಸೋದರನು ಸೋದರಿಗೆ ಕೊಡುವಂಥದು. ಅದು ಹೆಣ್ಣಿಗೆ ಪರಮ ಆಸ್ತಿ. ಅದನ್ನು ಕೊಡಲು ಸೋದರನು ನಿರಾಕರಿಸಿದಾಗ ಹೆಣ್ಣು ನೋಯುವಳು. ತನಗೇ ಸಿಟ್ಟು ಬಂದಾಗ ಅದನ್ನು ನಿರಾಕರಿಸಿ ತನ್ನ ಕ್ರೋಧದ ಉಬ್ಬರವನ್ನು ಪ್ರಕಟಿಸುವಳು. ಅಪರೂಪಕ್ಕೆ ಈ ತುದಿಯನ್ನು ಹೆಣ್ಣು ಮುಟ್ಟುವುದುಂಟು.

೧೬೨

ಕೋರ್ಟು, ಬೇಸರಿಕೆ

ಹಿರಿಯ ಬಂಧುವೊಬ್ಬರಲ್ಲಿ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಬೆಂಗಳೂರು

ತಾ 2-12-59

...ಪರೀಕ್ಷೆಗೆ ಈಗ ಓದುತ್ತಾ ಇದ್ದೇನೆ. "ಯುದ್ಧಕಾಲೇ ಶಸ್ತ್ರಾಭ್ಯಾಸಃ" ಎಂದು ಆಗಿದೆ. ಪರೀಕ್ಷೆ ಇದೇ 16ನೇ ತಾರೀಖಿನಿಂದ ಪ್ರಾರಂಭವಾಗುತ್ತೆ. ಇಲ್ಲಿಯವರೆಗೂ ಎಲ್ಲಾ ಪುಸ್ತಕಗಳನ್ನೂ ಒಂದಾವರ್ತಿ ಕೂಡ ಓದಲು ಆಗಿಲ್ಲ. ಖಾಯಿಲೆ ಆದ ಒಂದು ವರುಷದಿಂದ ಜ್ಞಾಪಕಶಕ್ತಿಯೇ ಕಡಿಮೆ ಆಗಿದೆಯೋ ಎಂಬಂತೆ ಆಗಿದೆ. ಮನುಷ್ಯ ಪ್ರಯತ್ನ ಏನೋ ಮಾಡುತ್ತಾ ಇದ್ದೇನೆ. ದೇವರ ದಯೆ ಇರಬೇಕು.

...ಇಲ್ಲಿ ಹಿಂದೆ ಇಟ್ಟಿದ್ದ ಲಾಯರನ್ನು ಬಿಟ್ಟು ಬೇರೆಯವರನ್ನು ಇಡಬೇಕೆಂದು ಮಾಡಿದ್ದೇನೆ. ಇವುಗಳಿಂದ ಆಗುತ್ತಿರುವ ಖರ್ಚನ್ನು ನೋಡಿ ನಾವುಗಳು ಬರೀ ಲಾಯರುಗಳ ಹೊಟ್ಟೆ ತುಂಬಲು ಮಾತ್ರ ದುಡಿಯುತ್ತಿರಬೇಕೆಂದು ಮತ್ತು ಅದಕ್ಕೋಸ್ಕರವಾಗಿಯೇ ದೇವರು ನಮ್ಮನ್ನು ಸೃಷ್ಟಿಸಿದ್ದಾನೋ ಎಂದು ಮನಸ್ಸಿನ ಮೇಲೆ ಆಗುತ್ತಿರುವ ಪರಿಣಾಮವನ್ನು ಯೋಚನೆ ಮಾಡಿಕೊಂಡರೇ ಹುಚ್ಚು ಬಂದಂತೆ ಆಗುತ್ತದೆ. ಊರಲ್ಲಂತು ನನ್ನ ಮಾತನ್ನು ಕೇಳುವವರೇ ಇಲ್ಲ. ನನಗೂ ಜೀವನದಲ್ಲಿ ತುಂಬ ಬೇಸರವಾಗಿ ಹೋಗಿದೆ. ಕೆಲವು ವೇಳೆ ನನ್ನ ಇರುವಿಕೆಯು ದೇವರಿಗೆ ಇಷ್ಟವಿಲ್ಲವೋ ಏನೋ ಎಂದು ಯೋಚನೆ ಮಾಡುವ ಸಂದರ್ಭಗಳು ಹೆಚ್ಚಾಗಿ ಬರುತ್ತಿವೆ. ಇಹಲೋಕದಲ್ಲಿ ಇರುವವರೆಗೆ ಮನುಷ್ಯನಾಗಿ ಹುಟ್ಟಿದ್ದರಿಂದ ಮನುಷ್ಯನ ಕರ್ತವ್ಯಗಳನ್ನು ಮಾಡಬೇಕು. ಆದ್ದರಿಂದ ಮಾಡುತ್ತಾ ಇದ್ದೇನೆ...

ಬಹುವಾಗಿ, ಹಿರಿಯರ ಮುಂದೆ ತಮ್ಮ ಸಮಸ್ಯೆಗಳನ್ನು ಪರಿಹರಿಸಿ ಕೊಳ್ಳುತ್ತಿದ್ದ ಸಮುದಾಯ, ಕೋರ್ಟು ಕಛೇರಿಗಳನ್ನು ಅವಲಂಬಿಸತೊಡಗಿದ್ದು ಸ್ವಾತಂತ್ರ್ಯೋತ್ತರ ಕಾಲದ ವಿದ್ಯಮಾನ.

೧೬೩

ಒಕ್ಕಲುತನ ಹೋಯಿತು

ಕುಶಲಮ್ ಶ್ರೀಃ 25-7-70

...ಚಿ|| ಇನ್ನೂ ಯಾವ ಕಾಲೇಜಿಗೂ ಸೇರಿಲ್ಲ. ಉಳಿದಿರುವುದು B.Ed., ಒಂದೇ...ನಿನ್ನೆ ಬೆಂಗಳೂರಿಗೆ interviewಗೆ ಹೋಗಿದ್ದಾನೆ. ಈಗ ಮೀನುಗಾರಿಕೆಗೆ (Fisheries) ಪ್ರಯತ್ನ ನಡೆಯುತ್ತಿದೆ. ಭವಿತವ್ಯತೆ ಹೇಗಿದೆಯೋ ತಿಳಿಯದು...ಹಣ ಅನಿಯತವಾಗಿ ವ್ಯಯವಾಗುತ್ತಿದೆ. ಹೆಣಸೂರೆ. ತಲೆಯೆತ್ತುವುದೇ ಕಷ್ಟವಾಗಿದೆ.

...ಪ್ರಕೃತ...ಊರಿನ ಬಾಂಧವ್ಯ ನಮ್ಮ ಒಕ್ಕಲುತನವನ್ನೇ ಬಲಿ ತೆಗೆದುಕೊಂಡಂತೆ ಕಾಣುತ್ತದೆ. ನಮ್ಮದಾದ ಯಾವುದೇ ಪದಾರ್ಥಗಳನ್ನೂ ಅವರು ನಮಗೆ ಕೊಟ್ಟಿಲ್ಲ. ನಾನು ಕಳೆದ ಶನಿವಾರ...ಊರಿಗೆ ಹೋಗಿದ್ದೆ. ಕಳ್ಳ ಬೇಲಿ ಮೇಲೆ ಕೂತಂತೆ ಉತ್ತರ ಬಂತು. "ಧನಿಷ್ಠಾ ನಕ್ಷತ್ರದಲ್ಲಿ ಮರಣ ಹೊಂದಿದ ಪ್ರಯುಕ್ತ ಆ ಕೊಠಡಿಗೆ ಯಾರೂ ಪ್ರವೇಶ ಮಾಡಬಾರದೆಂದು ವಾಧ್ಯಾರ್ರೂ ನಂಜನಗೂಡಿನವರೂ ತುಂಬಾ ನಿರ್ಬಂಧಪಡಿಸಿದ್ದರಿಂದಲೂ ಜನರೆಲ್ಲರೂ ನಮ್ಮನ್ನು ಹೆದರಿಸಿದ್ದರಿಂದಲೂ ಅನಿವಾರ್ಯವಾಗಿ ಆ ಕೊಠಡಿ ಬಾಗಿಲಿಗೆ ಬೀಗ ಹಾಕಿದ್ದೇವೆ. ನಾವು ಯಾರೂ ಅಲ್ಲಿಗೆ ಪ್ರವೇಶವೂ ಮಾಡುತ್ತಿಲ್ಲ. ಅವಳದಾದ ಎಲ್ಲ ಪದಾರ್ಥ ಗಳೂ ಅಲ್ಲೇ ಇವೆ. ಅಲ್ಲದೆ ನಮ್ಮದಾದ ಬೆಳ್ಳಿ ಪಾತ್ರೆಗಳನ್ನೆಲ್ಲಾ ಅಲ್ಲೇ ಇಟ್ಟಿದ್ದೇವೆ. ಮೂರು ತಿಂಗಳು ಕಳೆದ ನಂತರ ಬಾಗಿಲು ತೆಗೆದು ನಾನೇ ನಿಮ್ಮ ಮನೆಗೆ ತಂದುಕೊಡುತ್ತೇನೆ. ಯಾರಿಗೂ ನೋವುಂಟು ಮಾಡಿ ಬಾಳುವ ಉದ್ದೇಶವಿಲ್ಲ. ಹಿಂದೆ ಈಶ್ವರನಿಗೆ ಕೋಪ ಬರುವಂತೆ ಮಾಡಿದ್ದಕ್ಕೆ ಪಾಪದ ಫಲವನ್ನು ಈಗ ಅನುಭವಿಸುತ್ತಿದ್ದೇನೆ. ಮತ್ತೆ ಅವನನ್ನು ಕೋಪಗೊಳಿಸುವ ಕೆಲಸ ಮಾಡುವುದಿಲ್ಲ. ಈ ಬಗ್ಗೆ ನಿಮಗೆ ಭಯ ಬೇಡ" ಎಂದರು. 'ನಿಮಗೆ ಹೆದರಿಕೆ ಇರಬಹುದು. ನಮಗೆ ಆ ಬಗ್ಗೆ ಹೆದರಿಕೆಯಿಲ್ಲ' ಎಂದೂ ಹೇಳಿದ್ದಾಯ್ತು. ನನಗೆ ತೋರಿದ ಯುಕ್ತಿಯನ್ನೆಲ್ಲಾ ಹೇಳಿದ್ದಾಯ್ತು. ಬರಿಗೈಲಿ ಬಂದೆನು. ಅವರ ಅಣ್ಣನವರಲ್ಲಿ ಹೇಳಿದೆ. "ನೀವು ಯಾವ ತಿಷ್ಠತಿಯನ್ನೂ ಹೊತ್ತುಕೊಳ್ಳುವುದು ಬೇಡ. ಆ ರೂಮಿನಲ್ಲಿ ಏನನ್ನೂ ಇಟ್ಟಿರುವ ಬಗ್ಗೆ ನನಗೆ ನಂಬಿಕೆ ಇಲ್ಲ. ಆದರೂ ಅವರ ಅವಧಿ ಕಳೆಯಲಿ. ಏನು ಹೇಳುತ್ತಾರೋ ನೋಡೋಣ" ಎಂದರು. ಅದಕ್ಕೂ ಮೊದಲೇ ನಮ್ಮೂರಿನಲ್ಲಿ ನಮಗೆ ಏನನ್ನೂ ಕೊಡುವುದಿಲ್ಲವೆಂಬ ಅಪಶಬ್ದ ಹೊರಟಿತ್ತು. ಅವಳಿಗೆ ಆಶೀರ್ವದಿಸಿ ಬಂದ ಸ್ಟೀಲುಗಳು, ಹಣ, ಸೀರೆಗಳು, ಅವರು ವಿವಾಹ ಕಾಲದಲ್ಲಿ ಇಟ್ಟ ಆಭರಣಗಳು, ನಾವಿಟ್ಟ ಸರ ಇತ್ಯಾದಿ ಸುಮಾರು ಮೂರು ಸಾವಿರ ರೂ.ಗಳಷ್ಟು ಪದಾರ್ಥಗಳಿವೆ. ಎಲ್ಲವನ್ನೂ ಬಿಟ್ಟು ನಾವಿಟ್ಟ ಸರವನ್ನೂ ಕೊಡುವುದಿಲ್ಲವೆಂಬ ಶಬ್ದ ಹೊರಬಿದ್ದಿದೆ...ಎಲ್ಲವೂ ಅವ್ಯವಸ್ಥಿತ.

ಬಟ್ಟೆ ಬರೆ ಪರ್ಯಾಪ್ತವಾಗಿದೆಯೆ? "ವಾಸಃ ಪ್ರಧಾನಂ ಖಲು ಯೋಗ್ಯತಾಯಾಃ." ಹೊಟ್ಟೆಗೆ ಹಾಕದೆ ಉಪಯೋಗ ವಿಲ್ಲದ್ದಕ್ಕೆ ವ್ಯಯ ಮಾಡುವುದು ನಮ್ಮ ಮನೆಯ ದೋಷ. ಅದನ್ನು ತಿದ್ದಿಕೊಳ್ಳಬೇಕು...

ತಿಷ್ಠತಿ–ಅಪವಾದ

೧೬೪

ಬೇಸರಗೊಂಡ ಹೆಣ್ಣಿಗೆ (ಭಾವನ ಸಮಾಧಾನ)

ತಾ 11.3.82

ಕ್ಷೇಮ ಶ್ರೀ ಪೂಮಗಾಮೆ

...ನಾನು ನೆನ್ನೆಯ ದಿವಸ ಅಲ್ಲಿಂದ ಹೊರಟವನು 1 ಗಂಟೆಯ ಬಸ್ಸಿನಲ್ಲಿ ಸುಖವಾಗಿ ಊರನ್ನು ತಲಪಿದೆನು. ಇಲ್ಲಿ ಎಲ್ಲರೂ ಆರೋಗ್ಯವಾಗಿರುತ್ತೇವೆ. ನಿನ್ನ ಮನೆಯ ಊಟ ಮತ್ತು ತಿಂಡಿ ಯಾವಾಗಲೂ ನೆನೆಸಿಕೊಳ್ಳುವಂತೆ ಮಾಡುತ್ತಿರುತ್ತದೆ...ಹಳ್ಳಿಗೆ ಹೋಗಿದ್ದೆನು. ಯಾವ ರೀತಿಯ ಭಯವೂ ಇಲ್ಲಾ. ನೀನು ಮಾತ್ರಾ ಮನಸ್ಸಿನಲ್ಲಿ ಯಾವುದೋ ಯೋಚನೆಯನ್ನು ಹಚ್ಚಿಕೊಂಡು ಕೊರಗುತ್ತಿದ್ದೀಯೆ. ನಿನಗೆ ಒಂದು ರೀತಿಯಾದ ಮನಸ್ಸಿನ ಖಾಯಿಲೆ ಶುರುವಾಗಿರುತ್ತೆ. ಅಷ್ಟೆ. ನೀನು ಮನಸ್ಸಿನಲ್ಲಿ ನನ್ನನ್ನು ಯಾರೂ ಬಯ್ಯುವುದಿಲ್ಲ ಎಲ್ಲರೂ ನನ್ನನ್ನು ಒಳ್ಳೆಯ ದೃಷ್ಟಿಯಿಂದ ನೋಡುತ್ತಿದ್ದಾರೆ. ನನ್ನನ್ನು ಹೊಗಳುತ್ತಿದ್ದಾರೆ ಎಂದು ಭಾವನೆಯನ್ನು ಮಾಡಿಕೊ. ನಿನಗೆ ತುಂಬಾ ಒಳ್ಳೆಯದಾಗುತ್ತದೆ.

ಒಂದು ರೀತಿಯಲ್ಲಿ ನೋಡಿದರೆ ನಿನ್ನಷ್ಟು ಸುಖವಾಗಿ ಇರುವವರು ಯಾರೂ ಇಲ್ಲ. ನೀನೇ ಎಲ್ಲರಿಗಿಂತ ಸುಖವಾಗಿರು ವವಳು. ಮಾತು ಜಗಳ ಎಲ್ಲರ ಮನೆಯಲ್ಲೂ ಇರುತ್ತದೆ. ನಿನ್ನ ಅತ್ತೆಯ ಕೈಯಲ್ಲಿ ಚೆನ್ನಾಗಿ ಮಾತಾಡಿಕೊಂಡು ಇರು. ಈಗ ಹೇಗೂ ಬೇರೆ ಆಗಿರುತ್ತೀಯ. ಅವರ ಮನೆಯಲ್ಲಿ ಇರಬೇಕಾಗಿ ಇಲ್ಲಾ. ಮುದುಕರು ಎಲ್ಲರ ಮನೆಯಲ್ಲಿಯೂ ಹಾಗೆಯೇ. ನೀನೇ ತಾಳ್ಮೆಯನ್ನು ತೆಗೆದುಕೊ. ನೀನು ಸಣ್ಣ ಸಣ್ಣ ಕಾರಣಕ್ಕೆಲ್ಲಾ ಜಗಳ ಮಾಡಿಕೊಂಡು ಬಾವಿಗೆ ಹಾರುತ್ತೇನೆ, ಹೊಳೆಗೆ ಹಾರುತ್ತೇನೆ ಎಂದು ಹೇಳುತ್ತಿದ್ದರೆ ಎಷ್ಟು ಹೆದರಿಕೆ ಆಗುತ್ತದೆ ಎಂದು ಯೋಚನೆ ಮಾಡಿರುತ್ತೀಯಾ. ಒಂದು ಪಕ್ಷ ನೀನು ಹೇಳಿದಂತೆಯೇ ಮಾಡಿದರೆ ನಿನ್ನ ಮಕ್ಕಳ ಪಾಡು ಯಾವ ಪಾಡಾಗುತ್ತದೆಯೆಂದು ಆಲೋಚನೆ ಮಾಡಿರುತ್ತೀಯಾ. ನಿನ್ನ ಯಜಮಾನರಿಗೆ ಈಗಲೇ ಕೋರ್ಟಿನಲ್ಲಿ ಸರಿಯಾಗಿ ಕೆಲಸ ಮಾಡಲು ಆಗುತ್ತಿಲ್ಲವಂತೆ. ಮನಸ್ಸಿನಲ್ಲಿ ಯಾವಾಗಲೂ ಮನೆಯ ಯೋಚನೆ, ನಿನ್ನ ಯೋಚನೆ. ಎಲ್ಲರೂ ಸುಖದಿಂದ ಇರಬೇಕಾದರೆ ನೀನು ನಗುತ್ತಾ ಸಂತೋಷವಾಗಿ ಇರಬೇಕು. ನಿನಗೇನೂ ತಿಳಿಯದ ವಿಷಯವಲ್ಲ. ನಿನಗೆ ಆಲೋಚನೆ

ಶಕ್ತಿಯಿದೆ. ಸರಿಯಾಗಿ ಆಲೋಚಿಸಿ ನೋಡು. ಸಿಟ್ಟಿನಲ್ಲಿ ಕುಯಿದುಕೊಂಡ ಮೂಗು ಮತ್ತೆ ಬರುವುದಿಲ್ಲ.

ಈ ಊರನ್ನು ಬಿಡುವಂತೆ ಹೇಳಿದೆ. ಅವರು ಅದಕ್ಕೆ ತುಂಬಾ ಕಾರಣಗಳನ್ನು ಹೇಳಿದರು. ಅವರು ಹೇಳಿದುದು ಸರಿ. ಅದನ್ನು ತಿರಸ್ಕರಿಸುವಂತಿಲ್ಲ. ಆದುದರಿಂದ ಎಲ್ಲಿಗೂ ಹೋಗುವಂತಿಲ್ಲಾ. ನೀನು ಹಿಂದಿನದೆಲ್ಲವನ್ನೂ ಮರೆತು ಸುಖವಾಗಿರಲು ಪ್ರಯತ್ನಿಸುತ್ತೀಯೆಂದು ನಂಬಿರುತ್ತೇನೆ. ನನ್ನ ಮನಸ್ಸಿಗೆ ತೋಚಿದುದನ್ನು ಬರೆದಿರುತ್ತೇನೆ. ಯೋಚಿಸಿ ನೋಡು. ನನಗೆ ಜವಾಬು ಬರಿ.

ನಿನ್ನ ಸಂಸಾರ ಸುಖವಾಗಿ ಸಂತೋಷವಾಗಿದ್ದರೆ ನನಗೂ ಸಂತೋಷ. ದೇವರು ಒಳ್ಳೆಯ ಬುದ್ಧಿಯನ್ನು ಕೊಡಲೆಂದು ಆಶಿಸುತ್ತೇನೆ...

ಸೂಕ್ಷ್ಮ ಪ್ರಕೃತಿಯವರೋ ಅಹಂಕಾರಿಗಳೋ ಆದಾಗ ಒಟ್ಟು ಕುಟುಂಬಗಳು ಶಿಥಿಲವಾಗುತ್ತವೆ. ಆಧುನಿಕವಿದ್ಯಾಭ್ಯಾಸ, ಸಾಮಾಜಿಕ ಬದಲಾವಣೆ, ಸ್ವತಂತ್ರ ಮನೋವೃತ್ತಿ ಇರುವ ಪ್ರಸ್ತುತ ಆಧುನಿಕ ಸಮಾಜದಲ್ಲಿ ಪೀಳಿಗೆಯ ಅಂತರ ಹೆಚ್ಚುತ್ತಿದೆ. ವಿಭಕ್ತ ಕುಟುಂಬಗಳು ಸಾರ್ವತ್ರಿಕವಾಗುತ್ತಿವೆ. ವೃದ್ಧರು – ತಂದೆ, ತಾಯಿ, ಅಜ್ಜ ಅಜ್ಜಿ– ಇಂಥ ಹತ್ತಿರದ ಜನ ವೃದ್ಧಾಶ್ರಮದಲ್ಲಿ ಸೇರಬೇಕಾಗಿ ಬರುತ್ತಿದೆ. ಪೀಳಿಗೆಯ ಸಂಘರ್ಷ ಇಂದು ತೀವ್ರವಾಗಿದೆ. ಆದರೆ ಆಧುನಿಕ ವಿದ್ಯೆಯನ್ನು ಚೆನ್ನಾಗಿ ಪಡೆದು ವಿಶಾಲ ಮನಸ್ಕತೆಯನ್ನು ರೂಢಿಸಿಕೊಂಡ ವ್ಯಕ್ತಿಗಳು ಎಲ್ಲವನ್ನೂ ಅನುಕಂಪದಿಂದಲೂ ಕ್ಷಮಾಶೀಲತೆಯಿಂದಲೂ ನೋಡುವ ಸಂದರ್ಭದಲ್ಲಿ ಈಗಲೂ ಇಂಥ ಸಮಸ್ಯೆ ಇಲ್ಲದ ಕುಟುಂಬಗಳನ್ನು ಕಾಣಬಲ್ಲೆವು. ಪಾರಂಪರಿಕ ನೈತಿಕ ನೆಲೆಗಟ್ಟು ಇದ್ದಾಗಲೂ ಇಂಥ ಶಾಂತಿ ಸಾಧ್ಯ. ಮತ್ತೂರು ಹೊಸಹಳ್ಳಿ, ಲಿಂಗದಹಳ್ಳಿಯಲ್ಲಿ ಕೌಟುಂಬಿಕ ಸ್ಥಿತಿ ಉಳಿದೆಡೆಗಿಂತ ಭದ್ರವಾಗಿದೆ.

೧೬೫

ತಂಗಿಯ ಸಮಾಧಾನ

ಜೀವನದಲ್ಲಿ ಬೇಸರಗೊಂಡ ಅಕ್ಕನಿಗೆ ಅಂತರ್ದೇಶೀಯ ಪತ್ರ

ಪೂಮಗಾಮೆ
3.2.83

ಪ್ರೀತಿಯ ಅಕ್ಕಾ,

ಯಾಕಕ್ಕಾ ನಾನು ಬರೆದ ಪತ್ರಕ್ಕೆ ಉತ್ತರಾನೇ ಬರೆದಿಲ್ಲ. ಅಥವಾ ನಿನಗೆ ತಲುಪೇ ಇಲ್ವೋ. ಇದು 3ನೇ ಕಾಗದ ನಾನು ನಿನಗೆ ಬರೀತಾಯಿರೋದು. ಇದಕ್ಕಾದರೂ ದಯವಿಟ್ಟು ಒಂದು ಪಂಕ್ತಿನಾದರೂ ಬರೆಯುತ್ತೀಯಾ ಅಂತ ನಂಬ್ಕೋಂಡಿರ್‌ತೀನಿ ಅಕ್ಕಾ. ಪ್ಲೀಸ್ ನಿರಾಶೆ ಮಾಡಬೇಡ್ವೆ.

ನಾವೆಲ್ಲಾ ಇಲ್ಲಿ ಕ್ಷೇಮದಿಂದಿದ್ದೀವಿ. ನಿಮ್ಮಗಳಿಗೆ ಆಯುರಾರೋಗ್ಯ ಕೊಟ್ಟು ಸಂತೋಷದಿಂದಿರೋಹಾಗೆ ಮಾಡು ದೇವರೇ ಅಂತ ದಿನಾ ಈ ದೇವರಲ್ಲಿ ಬೇಡಿಕೊಳ್ಳುತ್ತೀನಮ್ಮಾ. ಯಾಕೆ letter ಬರೆಯೋದಕ್ಕೆ ಬೇಜಾರಾ. ನನ್ನ ಸುನೀತನ ಕೈಲಾದರೂ ಬರೆಸು. ನೀನು ಮನಸ್ಸಿಗೆ ಇಲ್ಲದ್ದನ್ನೆಲ್ಲಾ ಯೋಚನೆ ಮಾಡ್ಕೊಂಡು, ಆ ಮಕ್ಕಳ ತಲೆಮೇಲೆ ಕಲ್ ಹಾಕ್ ಬೇಡ.

ಅವರೇ ನಿನ್ನ ಜೀವನದ ಜೀವನಾಡಿಗಳು. ಜೀವನದಲ್ಲಿ interest ಇದ್ರೆ ಮಾತ್ರ ಅಕ್ಕಾ ಬದ್ಕೋಕ್ಕಾಗೋದು. ಯಾವ ಕಾರಣಕ್ಕೂ ನಾವು ಅದನ್ನ ಕಳ್ಕೋಬಾರದು. ಆದಷ್ಟು ಸಂತೋಷವಾಗಿರು. ಭಾವನ್ನ ಚೆನ್ನಾಗ್ ನೋಡ್ಕೊ. ಮಕ್ಕಳು ಹುಶಾರಾಗಿದ್ರೆ, ಅವರು ಸಂತೋಷವಾಗಿ ನಗುನಗ್‌ತಾಯಿದ್ರೆ ನಮಗೂ ಸಂತೋಷ ಅಲ್ವಾ. ನಿನ್ನ ತಂಗಿ ಆಗಿ ಹೀಗ್ ಬರೀತಿದ್ದೀನಿ ಅಂತ ನೊಂದ್ಕೋಬೇಡ ಅಕ್ಕ. ನನಗಂತೂ ನಿನ್ನ ಪತ್ರ ಎದುರುನೋಡಿ ನೋಡಿ ಸಾಕಾಯ್ತು. ಇವತ್ತು ಈ ಕಾಗದ ಅತ್ಕೊಂಡು ಬರೀತಾಯಿದ್ದೀನಿ. ಗೊತ್ತಾ. ನಿನ್ನ ತಂಗಿ ಮೇಲೆ ಪ್ರೀತಿ, ವಾತ್ಸಲ್ಯ, ಮಮತೆ, ಕನಿಕರ ಇದ್ರೆ, ಇವತ್ತೆ ಈಗಲೇ ಪತ್ರ ಬರಿ. ನಿರಾಶೆಮಾಡೋಲ್ಲ ತಾನೇ. ಊಟಕ್ಕೆ ಬಡಿಸ್ಬೇಕು. ಬರ್‍ಲಾ ?

ನಿನ್ನ ಪ್ರೀತಿಯ ತಂಗಿ

ಸಂಕೀರ್ಣ ಕಾರಣಗಳಿಂದ ಆದ ಮಾನಸಿಕ ವಿಕೃತಿ ಉಂಟುಮಾಡುತ್ತಿರುವ ಸಾಂಸಾರಿಕ ಕ್ಷೋಭೆಯ ಅಪರೂಪದ ಸಂದರ್ಭಕ್ಕೆ ಮದ್ದು ಇಂಥ ಪತ್ರಗಳ ಜೀವಾಳ.

ಗುಚ್ಛ - 10

ಆಸ್ತಿ ವಿಭಾಗ

ಕೌಟುಂಬಿಕ ವಿರಸಗಳು ಗೃಹಭಂಗದಲ್ಲಿ ಪರ್ಯವಸಾನವಾಗುತ್ತವೆ. ೨೦ನೆ ಶತಮಾನದ ಆದಿಭಾಗದಲ್ಲಿದ್ದ ಅವಿಭಕ್ತ ಕುಟುಂಬಗಳ ಪದ್ಧತಿಯು ಈ ಹೊತ್ತಿಗೆ 'ವಿಭಕ್ತ' ವಾಗಿದೆ. ತಂದೆ ತಾಯಿಗಳೂ ವೃದ್ಧಾಶ್ರಮಗಳ ಮೊರೆಹೋಗುವವರೆಗೆ ಅದು ಬೆಳೆದಿದೆ. ಸ್ವಾರ್ಥ, ಸಂಯಮಹೀನತೆ, ಅನುಕಂಪ ಮತ್ತು ಕ್ಷಮಾಶೀಲತೆ ಇಲ್ಲದಿರುವಿಕೆ, ಸಣ್ಣತನ – ಈ ಪರಿವರ್ತನೆಗೆ ಮೂಲಕಾರಣಗಳಾಗಿವೆ. ಆರ್ಥಿಕ ಸ್ವಾತಂತ್ರ್ಯವೂ ಸಾಮಾಜಿಕ ಮುಕ್ತತೆಯೂ ಅದಕ್ಕೆ ನೆರವಾಗಿದೆ. ಇಲ್ಲಿರುವ ಪತ್ರಗಳಲ್ಲಿ ದಾಯಾದಿಗಳ ಹಗೆಯನ್ನು ಕಾಣಬಹುದು.

೧೬೬

ನಿನ್ನ ಮನಸ್ಸು ತಿಳಿಯಾಗಲಿ (ತಮ್ಮನಿಗೆ ಕವರು)

ಮಡಿಕೇರಿ

4 10/43

...ನಿನಗೆ ಮೂರು ಕಾಗದಗಳನ್ನು ಬರೆದಿದ್ದೆ ; ನೀನು ಒಂದಕ್ಕಾದರೂ ಜವಾಬು ಕೊಡಲಿಲ್ಲ; ನಿನ್ನ ಆಶಯವಾದರೂ ತಿಳಿಯಲಿಲ್ಲ, ಹೇಗೂ ಮತ್ತೊಂದು ಕಾಗದವನ್ನು ಬರೆದಿದ್ದೇನೆ. ಇದರಲ್ಲಿಯಾದರೂ ಹಿಂದಿನ ಕಾಗದಗಳ ವಿಷಯವನ್ನೇ ಬರೆದಿದ್ದೇನೆ.

ಸಂಗಪ್ಪನ ಕಾಗದದ ಅವಧಿಯು ಎಲ್ಲಿಯವರೆಗೆ?...

ಮ॥...ನವರಿಂದ ಏನಾದರೂ ದುಡ್ಡು ಬಂದಿತೆ? ಇನ್ನು ಯಾವುದಾದರೂ ಕಾಗದಗಳಿಗೆ ಅವಧಿ ಸಮೀಪಿಸುತ್ತಾ ಬಂದಿದೆಯೆ? ನೋಡಿ ತಕ್ಕ ಕ್ರಮವನ್ನು ಜರುಗಿಸು. ಕಷ್ಟಾರ್ಜಿತವಾದ ಹಣವನ್ನು ಉಪೇಕ್ಷೆಯಿಂದ ಕಳೆದುಕೊಳ್ಳಬಾರದು.

ಊರಿನಲ್ಲಿ ಅಡಿಕೆ ಸುಗ್ಗಿ ಆರಂಭವಾಗಿರಬಹುದು. ಹಳೇ ತೋಟದಲ್ಲಿಯೂ ಏನಾದರೂ ಒಂದೆರಡು ಪಿಚ್ಚುಲಿದ್ದರೆ ಅದನ್ನು ಮನೆಗೆ ಹಾಕಿಸಿಬಿಡು.

ನಮ್ಮ ಆಸ್ತಿ ವಿಭಾಗದ ವಿಚಾರವಾಗಿ ದಸ್ತಾವೇಜು ಬರೆದು ರಿಜಿಸ್ಟರ್ ಮಾಡಿಸಬೇಕೆಂಬುದು ನಿನ್ನ ಅಭಿಪ್ರಾಯವೆ ! ಅದು ಬಹಳ ದುಡ್ಡು ತಿನ್ನುವ ಕೆಲಸ. ಅದಕ್ಕಿಂತಲೂ ಯಥಾವಿಧಿಯಾಗಿ ಎರಡು ಪ್ರತಿಗಳನ್ನು ಸಾದಾ ಕಾಗದದಲ್ಲಿ ಬರೆದು ಎರಡರಲ್ಲಿಯೂ ನಮ್ಮಿಬ್ಬರ ಮತ್ತು ಸಾಕ್ಷಿಗಾರರ ರುಜುಗಳಿದ್ದು ಒಬ್ಬೊಬ್ಬರು ಒಂದೊಂದನ್ನು ಇಟ್ಟುಕೊಂಡರೆ ಸಾಲದೆ ? ಖಾತೆಗಳ ಬದಲಾವಣೆಗೆ ಮಾತ್ರ ಅರ್ಜಿ ಕೊಟ್ಟುಕೊಂಡು ರುಸುಂ ಕೊಡಬಹುದೆಂದು ತೋರುತ್ತದೆ.

...ಹಳ್ಳಿ ಗದ್ದೆಗೆ ಎಂತಹ ಬತ್ತ ಹಾಕಿದೆ ? ಕೆರೆ ಕೆಳಗಿನ ಗದ್ದೆಗೆ ಏನು ಹಾಕಿದೆ ?

...ಇನ್ನೂ ಸಣ್ಣ ಹಂಡೆಯ ವಿಷಯವಾಗಿ ಭಾಗವಾಗಿಲ್ಲ; ಅದುವರೆಗೆ ದೊಡ್ಡ ಹಂಡೆಯನ್ನು ಕೊಡುವುದಿಲ್ಲ ಎಂದು ಹೇಳಿದೆಯಂತೆ. ಈ ವಿಚಾರದಲ್ಲಿ ನಾನು ನಿನಗೆ ಹಿಂದೆಯೇ ತಿಳಿಸಿದ್ದೇನೆ. ನಿನ್ನ ಅಭಿಪ್ರಾಯವನ್ನು ನನಗೆ ತಿಳಿಸುವುದು ನಿನ್ನ ಕರ್ತವ್ಯ. ಹೆಚ್ಚಿನ ಏರುಪೇರುಗಳಿಗೇ ನಾನು ಮಾತನಾಡದಿರವಾಗ ಇದರದೊಂದು ದೊಡ್ಡ ವಿಷಯವೆ? ಹೊಸ ತೋಟದಲ್ಲಿ ತೆಂಗು ವಗೈರೆ ಫಸಲುಗಳಿದ್ದು, ಹಳೆಯ ತೋಟದಲ್ಲಿ ಏನೂ ಇಲ್ಲದಿದ್ದರೂ, ಕೆರೆಯ ಕೆಳಗಿನ ಗದ್ದೆಯಲ್ಲಿ ಉತ್ತರಾರ್ಧವನ್ನೇ ತೆಗೆದುಕೊಂಡೂ, ಮನೆಯ ಮುಂದಿನ ಮಂದಳವು ನಿನಗೆ ಪರಿಹಾರವೆಂದರೆ, ನ್ಯಾಯದ ಹೆಸರಿನಲ್ಲಿ ನಡೆಯುವ ಕೆಲಸಗಳಿಂತಹವು ಎಂದಿಷ್ಟೇ ಹೇಳಿದರೇ ಸಾಲದೆ? ನಾನಾ ರೀತಿಯಲ್ಲಿ ನಷ್ಟಗಳಿಗೆ ಗುರಿಯಾಗಿರುವಾಗ ಇದರ ವಿಷಯವಾಗಿ

ಮಾತನಾಡತಕ್ಕದ್ದೇನಿದೆ? ಆ ವಿಷಮದಿನದಲ್ಲಿ ನೀನೂ ಮಾ|| ಯವರೂ ಸೌಹಾರ್ದದಿಂದಿದ್ದರೆ, ಹೊರಗಿನವರನ್ನು ಕರೆಸ ಬೇಕಾಗಿತ್ತೆ? ಅದನ್ನೆಲ್ಲಾ ಇಲ್ಲಿ ಪುನಃ ಹೇಳುತ್ತ ಕುಳಿತು ಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ಮಾತ್ಸರ್ಯದಿಂದ ಕದಡಿದ ಮನಸ್ಸು ತಿಳಿಯಾದ ಮೇಲೆ – ಪ್ರಾಯಃ ಎಷ್ಟೋ ವರ್ಷ ಗಳಾದ ಮೇಲೆ – ನೀನು ಈ ಘಟನೆಗಳನ್ನೆಲ್ಲಾ ಪುನರಾವಲೋಕನ ಮಾಡುವ ಸಂದರ್ಭವೊದಗಿದರೆ, ಆಗಲಾದರೂ ವಿಷಯಗಳನ್ನು ಸರಿಯಾಗಿ ನೋಡಬಲ್ಲವನಾದೀಯೋ ಏನೋ ? ಸ್ವಾತಂತ್ರ್ಯಕ್ಕಾಗಿ ನೀನು ತಹ ತಹ ಪಡುತ್ತಿದ್ದೆಯೆಂಬುದನ್ನು ತಿಳಿದೇ ಸಮಸ್ತವೂ ನಿನ್ನ ಕೈಲೇ ಇರಲೆಂದು ಯಜಮಾನಿಕೆಯನ್ನೇ ನಿನ್ನ ಕೈಲಿಟ್ಟದ್ದೆ. ನಮ್ಮ ಅಂತಃಕಲಹಗಳನ್ನು ನೋಡಿ, ಒಡೆಯುವಂತೆ ಮಾಡಿ ಸಂತೋಷಪಡುವವರು ಎಂದಿಗೂ ಅಪ್ತರಲ್ಲವೆಂಬುದನ್ನು ಮನಸ್ಸಿನಲ್ಲಿಡು. ಮಾತಿಗೆ ಮೊದಲೇ ನಾನು ಬೇಜವಾಬುದಾರಿಯವ ನೆಂದು ಮೊದಲಾಗಿ ಮೂದಲಿಸಿದರೂ ನನಗೆ ತಮ್ಮ ನೀನೊಬ್ಬನೇ. ನಿನಗೆ "ಆಪ್ತರು" ಅನೇಕರಿರಬಹುದು. ನಾನು ಕಾಲಸ್ರೋತಕ್ಕೆ ಸಿಕ್ಕಿ ಸವೆದಿದ್ದೇನೆ. ನೀನು ಸವೆದಿಲ್ಲ. ನಿನ್ನ ಹೃದಯವನ್ನು ಬಿಚ್ಚಿ ನನ್ನೊಡನೆ ಮಾತನಾಡುವ ರೂಢಿ ನಿನಗಿದ್ದರೆ, ಆಗಿನ ಸ್ಥಿತಿಯೇ ಬೇರೆಯಾಗಿರುತ್ತಿತ್ತು.

ಇಲ್ಲಿ ನಮಗೆ ಪರಿಚಿತರು, ಮಿತ್ರರು ಮೊದಲಾಗಿ ಎಲ್ಲರೂ ನೀನು ವಿದ್ಯಾರ್ಜನೆ ಮಾಡಿ ಸುಮ್ಮನಿರುವುದಕ್ಕಿಂತ ಈ ಕಷ್ಟಕಾಲದಲ್ಲಿ ನಮ್ಮ ಅಲ್ಪವರಮಾನದಲ್ಲಿ ಜೀವಿಸುವುದು ಅಸಾಧ್ಯವಾದುದರಿಂದ ಸರ್ಕಾರೀ ನೌಕರಿಯನ್ನು ಸಂಪಾದಿಸುವು ದೊಳ್ಳೆಯದೆಂದು ಒತ್ತಾಯ ಮಾಡುತ್ತಿದ್ದಾರೆ. ಎಂ.ಎ., ಪದವಿ ಪಡೆದಿದ್ದಿ. ಕೇವಲ ಈಗಿನ ಚಿಕ್ಕಸಂಸಾರದ ದೃಷ್ಟಿಯಿಂದಲ್ಲದೆ, ಮುಂದಿನ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡಬೇಕಾದುದು ನಿನಗೆ ಕರ್ತವ್ಯವಾಗಿದೆ. ಆದುದರಿಂದ ಕೂಡಲೇ ಡೆ|| ಡೈರವರಿಗೆ ಒಂದು ಅರ್ಜಿಯನ್ನು ಹಾಕುವುದು ಉತ್ತಮವೆಂದು ತೋರುತ್ತದೆ. ನನ್ನನ್ನು ನೀನು ಹಿತೈಷಿಯಲ್ಲವೆಂದು ತಿಳಿದರೂ, ನಿನಗೆ ನಾನು ಬುದ್ಧಿಯನ್ನು ಹೇಳುವುದು ಅನುಚಿತವೆಂದು ನೀನು ತಿಳಿದರೂ ನಮ್ಮ ಸಂಬಂಧದ ದೃಷ್ಟಿಯಿಂದ ಹೇಳಬೇಕೆನಿಸಿ ಹೇಳಿದ್ದೇನೆ– ನಿನ್ನ ಇಷ್ಟ. ಎಷ್ಟು ಬರೆಯಲಿ?

ನಿಮ್ಮೆಲ್ಲರ ಯೋಗಕ್ಷೇಮಕ್ಕೆ ಈಗಲಾದರೂ ನೀನು ಕಾಗದ ಬರೆಯಲು ಸೌಕರ್ಯವಾಗಲೆಂದು ಇದರೊಡನೆ 1½ ಆ. ಸ್ಟಾಂಪನ್ನಿಟ್ಟದ್ದೇನೆ.

ಪತ್ರದ ಓಟ ಒಂದು ಭಾವಗೀತೆಯ ಅನುಭವವನ್ನು ಕೊಡುತ್ತದೆ. ರತ್ನಾಕರನ ಭರತನು ಬಾಹುಬಲಿಗೆ ಭ್ರಾತೃವಾತ್ಸಲ್ಯದ ಹೂಮಳೆಗರೆದು ಮಾತಾಡಿದ ಸನ್ನಿವೇಶ ನೆನಪಿಗೆ ಬರುತ್ತದೆ.

೧೬೭
ಅಡಕೆ ಕೆಡವಿಸು (ಬಚ್ಚಲು ವ್ಯವಸ್ಥೆಗಾಗಿ ಕಾರ್ಡು)

ಮಡಿಕೇರಿ
22/9/44

...ಗೋಡೆಯನ್ನು ಹಾಕಿಸಿ ಬಚ್ಚಲೊಂದನ್ನು ಕಟ್ಟಿಸುವ ವಿಚಾರದಲ್ಲಿ ಒಂದು ವರ್ಷದ ಮೇಲಿಂದಲೂ ಆಳುಗಳು ಸಿಕ್ಕುತ್ತಿಲ್ಲವೆಂಬುದೇ ಆಯಿತು. ತೀ|| ರವರ ವೈದೀಕಕ್ಕೆ ಬಂದಿದ್ದಾಗಲೂ ಈಚೆಗೂ ಆಚೆ ಮನೆಯನ್ನು ಖಾಲಿ ಮಾಡಿಸು ವಂತೆ ಹೇಳಿದೆ. ನಿನಗೆ ಅದೂ ಇಷ್ಟವಾಗಲಿಲ್ಲ. ಪ್ರಕೃತದಲ್ಲಿ ಈ ಪ್ರ.ಪ. ಸಭೆಯ ಅಧಿವೇಶನವು ಕಳೆದಕೂಡಲೇ ಆಫೀಸುಗಳ ವರ್ಗಾವರ್ಗಿಯು ಚುರುಕಾಗಿ ನಡೆಯುತ್ತದೆ. ಪ್ರತಿಯೊಂದು ಆಫೀಸಿನಲ್ಲಿಯೂ ತತ್ಸಂಬಂಧವಾದ ಕಾರ್ಯಗಳೆಲ್ಲಾ ನಡೆದು ಸರ್ಕಾರದ ಆರ್ಡರು ಕಾರ್ಯರೂಪಕ್ಕೆ ಬರಲು ಡಿಸೆಂಬರು 23ರವರೆಗೆ ಬೇಕಾಗಬಹುದು. ಅಂತೂ ಇನ್ನೂ ಮೂರು ತಿಂಗಳಾದರೂ ಎಲ್ಲರೂ...ಹಳ್ಳಿಯಲ್ಲಿಯೇ ಇರಬೇಕು. ಆದುದ ರಿಂದ, ಈಗ ಆಚೆ – ಮನೆಯನ್ನು ಖಾಲಿ ಮಾಡಿಸಿಕೊಟ್ಟರೂ ಸರಿಯೆ; ಅದಿಲ್ಲದಿದ್ದರೆ ಹೇಗೂ ನನ್ನ ಹಂಡೆಯೇ ನಿನ್ನ ಬಳಿ ಇನ್ನೂ ಇದೆ – ನಿನ್ನ ಬಚ್ಚಲಿನಲ್ಲಿಯೇ ಅವಕಾಶವಾದರೂ ಸರಿಯೆ, ಅಥವಾ, ಅದೂ ಸಾಧ್ಯವಿಲ್ಲವೆನ್ನುವುದಾದರೆ ದೊಡ್ಡ ಹಿತ್ತಲಿನಲ್ಲಿ ಒಂದು ಗುಡಿಸಲು ಹಾಕಿಸಿಕೊಡು. ಅದಕ್ಕೆ ಬೇಕಾಗುವ ಖರ್ಚನ್ನು ಕೊಡಲು ಸಿದ್ಧನಾಗಿದ್ದೇನೆ. ಈ ಮೂರರಲ್ಲಿ ಯಾವುದಾದರೂ ಸರಿಯೆ, ಕೂಡಲೇ ಆಗಬೇಕೆಂಬ ವಿಷಯವು ನಿನ್ನ ಮನಸ್ಸಿಗೆ ಹೊಳೆಯಬಹುದು. ಯಾವುದು ಅನುಕೂಲಿಸಿತೆಂಬ ವಿಚಾರದಲ್ಲಿ ನೀನು ನನಗೆ ಮರು ಟಪ್ಪಾಲಿಗೇ ಒಂದು ಕಾರ್ಡು ಬರಿ. ಇಲ್ಲದಿದ್ದರೆ, ಮನೆಯಲ್ಲಿ ಹೇಳಿ ಬರೆಸಿದರೂ ಸಾಕು. ಈ ಮೂರರಲ್ಲಿ ಒಂದೂ ಆಗುವುದಿಲ್ಲವೆಂದು ತೋರಿದಲ್ಲಿ ನನಗೆ ಕೂಡಲೇ ಜವಾಬು ಬರಿ.

...ಹಳ್ಳಿಯವನು ಬಾಕಿ ರೂಪಾಯಿಗಳನ್ನು ಕೊಟ್ಟನೇ?...

...ಹಳ್ಳಿಯಲ್ಲಿ ಬಾಕಿ ಬತ್ತದ ವಿಚಾರವೇನಾಯ್ತು ? ನನ್ನ ತೋಟದಲ್ಲಿ ಅಡಿಕೆ ಕೆಡವಿಸುವಂತಿದ್ದರೆ ಕೆಡವಿಸಬಲ್ಲೆಯ?... ಮ್ಯ|| ಭಾವನವರು ಕೊಟ್ಟದ್ದ ಮಾದರಿ ಅಡಿಕೆಚೂರನ್ನು ಬರಗೂರು ಚಿನ್ನನ ವಶಕ್ಕೆ ತುಮಕೂರಿನಲ್ಲಿ ಕೊಟ್ಟದ್ದೇನೆ. ತುಮಕೂರಿನಲ್ಲಿಯೂ ಅಡಿಕೆ ತುಂಬುವವರಿಲ್ಲ...

ಸೋದರರಲ್ಲಿ ಒಬ್ಬನು ನಗರದಲ್ಲಿ ನೌಕರಿಗೆ ಸೇರಿದಾಗ ಉಂಟಾಗುವ ಪಾಲುಗಾರಿಕೆಯ ಸಮಸ್ಯೆಗಳ ಮಾದರಿಯೇ ಬೇರೆಯಾದುದು. ಹೊಸವಿದ್ಯೆ –ಹೊಸನೌಕರಿ – ಅದನ್ನನುಸರಿಸಿ ಹೊಸ ನಮೂನೆಯ ಸಂಬಂಧ, ಸಮಸ್ಯೆಗಳು. ಇಂಥದೊಂದು ಹೊಸಘಟ್ಟವು ಮೂವತ್ತರ ದಶಕದಿಂದೀಚೆಗೆ ಸಮುದಾಯದಲ್ಲಿ ಕಾಣಿಸಿಕೊಳ್ಳತೊಡಗಿತು.

೧೬೮

ಗೋಡೆ ಏಕೆ ಕೆಡವಿದೆ ? (ಸೋದರನಿಗೆ ಪತ್ರ)

ಕುಶಲಂ ಶ್ರೀರಾಮ ಹಾಸನ

ತಾ। 12-9-1946

ಚಿ॥ಗೆ ಆಶೀರ್ವಾದಗಳು.

ಮಾ॥ ಯವರು ಬಾಣಾವರಕ್ಕೆ ಪ್ರಯಾಣ ಮಾಡಿ ಎರಡು ತಿಂಗಳ ಮೇಲಾಯಿತು. ಅವರು ಹೊರಡುವುದಕ್ಕೆ ಎಷ್ಟೋ ದಿನಗಳ ಮೊದಲೇ ಹಿಂದಿನ ಅಡಿಕೆ ಹಣದ ಬಾಕಿಯೆಲ್ಲಾ ಮ॥ ತಿಮ್ಮಪ್ಪುಟ್ಟಯ್ಯನವರಿಂದ ಬಂದಿದ್ದರೂ ನನಗೆ ಬರಬೇಕಾದಷ್ಟು ಹಣವನ್ನು ಮಾ॥ ಯವರೊಡನೆಯೇ ಕೊಟ್ಟು ಕಳುಹಿಸಬಹುದಾಗಿತ್ತು. ಆದರೆ ನೀನು ಕೊಟ್ಟು ಕಳುಹಿಸಲಿಲ್ಲ. ಈಚೆಗೆ ಎರಡು ತಿಂಗಳು ಕಳೆದರೂ ಮನಿ ಆರ್ಡರ್ ಕೂಡಾ ಮಾಡಲಿಲ್ಲ. ನಿನ್ನ ಆಶಯವೇನೋ ತಿಳಿಯದಾಗಿದೆ. ಹೋದ ವರ್ಷದ ಅಡಿಕೆಯಲ್ಲಿ ಅಲ್ಪಸ್ವಲ್ಪ ಬಂದಿತ್ತೆಂದು ಬರೆದಿದ್ದೆ. ಅದರ ವಿಚಾರವೂ ತಿಳಿಯಲಿಲ್ಲ. ಹೋದ ವರ್ಷ ನನ್ನ ಬಾಬ್ತು ಬತ್ತವೆಷ್ಟು ಬಂತು ? ಯಾವ ದರದಲ್ಲಿ ಯಾರಿಗೆ ವಿಲೇ ಮಾಡಿದೆ ? ಎಷ್ಟು ಹಣ ಬಂತು ? ಈಚೆಗೆ ನಿನ್ನ ಪ್ರಯತ್ನದಿಂದ ಗುತ್ತಿಗೇದಾರನು ಇನ್ನೂ ಅಷ್ಟು ಬತ್ತವನ್ನು ಕೊಟ್ಟುಬಿಟ್ಟನೆಂದೂ ತಿಳಿಯಬಂತು. ಈ ವರ್ಷ ಯಾರು ಗುತ್ತಿಗೇ ಮಾಡುವವನು ? ಎಷ್ಟು ಗುತ್ತಿಗೇ ಬತ್ತ ಬರಬೇಕಾದ್ದು ? ಗುತ್ತಿಗೇ ಚೀಟಿ ಯಾರ ಹೆಸರಿನಲ್ಲಿ ಬರೆಯಿಸಿದ್ದೀಯೆ ? ಯಾವ್ಯಾವ ಜಮೀನುಗಳ ಖಾತೆಯನ್ನು ನೀನೇ ಬದಲಾಯಿಸಿದ್ದೀಯೆ ? ಅದು ಯಾವ್ಯಾವ ರೀತಿ ನಡೆಯಿತು? ಮನೆಯಲ್ಲಿ ಮಧ್ಯದ ಗೋಡೆಯನ್ನೊಡೆದು ಪೂರ್ಣ ಮನೆಯನ್ನೂ ನೀನೇ ಆಕ್ರಮಿಸಿಕೊಂಡಿದೀಯೆಂದೂ ತಿಳಿಯ ಬಂತು. ನನ್ನನ್ನು ಕೇಳದೆಯೇ ನಾನೇ (ಅನ್ಯಾಯವಾದರೂ) ಪೂರ್ತಾ ಖರ್ಚನ್ನೂ ಹಾಕಿಕೊಂಡಿದ್ದ ಗೋಡೆಯನ್ನು ನೀನು ಹೇಗೆ ಕೆಡವಿದೆ? ನನ್ನ ಮನೆಯ ಉಪಯೋಗವು ನಿನಗೆ ಆಗಬೇಕಾಗಿದ್ದಲ್ಲಿ, ನೀನು ನನಗೆ ಬರೆಯಬೇಕಾಗಿತ್ತು. ಹಾಗೆ ಮಾಡದೆ ನೀನೇ ಸ್ವತಂತ್ರಿಸಿ ವರ್ತಿಸಿರುವುದು ಸರಿಯಲ್ಲ. ಇದೇಕೆ ಹೀಗೆ ಮಾಡಿದೆಯೆಂಬ ಬಗ್ಗೆ ಕೂಡಲೇ ಬರಿ. ನಾನು ಊರು ಬಿಟ್ಟು ಬಂದಮಾತ್ರಕ್ಕೇ ಹೀಗೆ ಮಾಡಬೇಕೆ ? ನೀನು ಬೇಕೆಂದು ಕೇಳಿದ್ದರೆ ನಾನು ಬೇಡವೆನ್ನುತ್ತಿದ್ದೆನೇ ? ನೀನು ಈ ರೀತಿ ಅತಿಕ್ರಮಿಸಬೇಕೆ ? ಪೂರ್ತಾ ಮನೆಯನ್ನು ಆಕ್ರಮಿಸಿಕೊಂಡು ಒಂದು ವರ್ಷದ ಮೇಲಾದರೂ, ನನಗೆ ಆ ಬಗ್ಗೆ ಒಂದು ಕಾಗದಾ ಕೂಡಾ ಬರೆಯಲು ಆಗಲಿಲ್ಲವೆ ? ನಾನು ಬಚ್ಚಲು ಮನೆಯಿಲ್ಲದೆ ಎಷ್ಟೋ ಸಲ ನಿನಗೆ ಕಾಗದ ಬರದೂ, ಮುಖತಃವಾಗಿಯೂ ಕೇಳಿದಾಗ ಸೌಕರ್ಯದ ದೃಷ್ಟಿ ನಿನಗೆ ಬರದೇ ಹೋದುದು ಈಗ ಬಂತೆ ? ನಿನ್ನ ನಡತೆಯನ್ನು ಈಶ್ವರನು ಮೆಚ್ಚಲಿ ! ನಾನು ತುಂಬಾ ಅನುಭವಿಸಿದ್ದರೂ ಇದನ್ನು ನಿರೀಕ್ಷಿಸಿರಲಿಲ್ಲ.

ಮ॥ ಭಾವನವರು ಈವರೆಗೂ ಹಣವನ್ನು ಕೊಟ್ಟಿಲ್ಲವೆ ? ಹಾಗೆ ಕೊಡದಿದ್ದಲ್ಲಿ, ಇನ್ನು ಒಂದು ಸಲ ಮಾತ್ರ ಅವರನ್ನು ಕೇಳಿಬಿಡು. ಆಮೇಲೆ ದೇವರು ತೋರಿಸಿದಂತಾಗಲಿ ! ಪರಸ್ಥಳದಲ್ಲಿ ನಾನು ಜೀವನಕ್ಕೆ ಸಾಲದೆ, ಪ್ರತಿ ತಿಂಗಳೂ ಬಡ್ಡಿ ತೆತ್ತುಕೊಂಡು ಸಾಲ ಮಾಡಿಕೊಳ್ಳುತ್ತಿರುವುದು, ನಾಲ್ಕು ವರ್ಷಗಳಿಂದಲೂ ಇವರು ನಮ್ಮ ಕಷ್ಟಗಳ ಕಡೆಗೆ ಗಮನ ಕೊಡದೇ ಇರುವುದು. ಈ ನಡೆಯು ಸರಿಯಲ್ಲ. ನಾನು ಇನ್ನು ಕಾಯಲಾರೆ. ನಾನು ಹತ್ತಾರು ಕಡೆಗಳಲ್ಲಿ ಜವಾಬು ಹೇಳುವಂತಾಗಿದೆ. ಮನುಷ್ಯನ ಸಹನೆಗೂ ಮಿತಿಯುಂಟು. ಅದು ಮೀರಿದರೆ ಚೆನ್ನಲ್ಲ.

ಬ. ಕೇಶವಮೂರ್ತಿಯ ಕಾಗದಕ್ಕೆ ಜೂನ್ 25ಕ್ಕೆ ಅವಧಿಯು ಮುಗಿಯುತ್ತಿತ್ತಾದುದರಿಂದ 24ನೆಯ ತಾರೀಖಿನವರೆಗೂ ನಿರೀಕ್ಷಿಸಿ ಆ ದಿನ ಹೊಳೇನರಸೀಪುರದ ಮುನ್ಸೀಫ್ ಕೋರ್ಟಿನಲ್ಲಿ ದಾವ ದಾಖಲ್ಮಾಡಿಸಿದೆ. ಈಗಲೂ ಬಂದು ಕೋರ್ಟು ಖರ್ಚು ಅಸಲು ಬಡ್ಡಿ ದೇಖೀಲು ಎಲ್ಲವನ್ನೂ ಫೈಸಲ್ಮಾಡುವುದಾದರೆ ದಾವಾ ಮುಂದಕ್ಕೆ ಜರುಗದಂತೆ ನಿಲ್ಲಿಸಬಹುದು.

ತೋಟದ ಸ್ಥಿತಿಯೇನು ? ಹಳ್ಳಿ ಗದ್ದೆಯ ಸ್ಥಿತಿಯೇನು ? ಹಿಂದೊಂದು ಕಾಗದದಲ್ಲಿ ಮ। ಬಿ.ಕೆ. ಸೀತಾರಾಮಯ್ಯನವರ ಮಗನಿಂದ ಒಂದು ಪುಸ್ತಕ ಬರಬೇಕಾಗಿತ್ತೆಂದೂ ಅದನ್ನ ವಿಚಾರಿಸಬೇಕೆಂದೂ ಬರೆದಿದ್ದೆ. ಅದಕ್ಕೆ ಉತ್ತರವೇ ಇಲ್ಲ. ಸೊಸೈಟಿಗೆ ನನ್ನ ಬಾಬ್ತು ತೀ॥ರವರು ಹಣ ಕಟ್ಟಿದ್ದಕ್ಕೆ ಮನೆಯಲ್ಲಿ ರಶೀತಿಗಳಿರಬೇಕು. ಅವುಗಳನ್ನು ಸ್ವಲ್ಪ ನೋಡು ಎಂದು ಬರೆದಿದ್ದೆ. ಅದಕ್ಕೆ ಉತ್ತರವಿಲ್ಲ. ಮಾ॥ಯವರು ಬರುವಾಗಲೂ ನನ್ನ ಬೀಸುವ ಕಲ್ಲು, ಸಂಸ್ಕೃತ ಪುಸ್ತಕಗಳು ಇವುಗಳನ್ನೊಂದನ್ನೂ ಕಳುಹಿಸಲಿಲ್ಲ. ಇನ್ನೂ ಅನೇಕರು ಬಂದು ಹೋದರು. ಒಬ್ಬರ ಕೂಡೆಯೂ ಕಳುಹಿಸಲಿಲ್ಲ. ಏನು ಕಾರಣ ? ಚಿ॥ ಚನ್ನಕೇಶವಯ್ಯನು ಬರೆದಿದ್ದ ಕಾಗದ ಬಂದು ತಲಪಿತು. ಜುಲೈ 15ನೆಯ ತಾರೀಖೇ ಅಂಥ ಅರ್ಜಿಗಳಿಗೆ ಕೊನೆಯ ದಿನವಾಗಿದ್ದುದರಿಂದ ನಾನು ಕೂಡಲೇ ಕಾಗದಾ ಬರಿಯಲಿಲ್ಲ. ಅರಕಲಗೂಡು ರೇಂಜು ಇನ್ಸ್‌ಪೆಕ್ಟರನ್ನು ಕಂಡು ಸದ್ಯಕ್ಕೆ ಒಂದು ಹಂಗಾಮಿ ಕೆಲಸವನ್ನು ಮಾಡಿಕೊಳ್ಳಲಿ. ನನ್ನ ಬಾಬ್ತು ಲೆಕ್ಕಾಚಾರವನ್ನು ಒಂದು ಬ್ಯಾಲೆನ್ಸ್ ಷೀಟಿನ ರೂಪದಲ್ಲಿ ಹಾಕಿ ಕಳುಹಿಸು. ಅದಕ್ಕಾಗಿ ಇದರೊಡನೆ ಒಂದು ಕವರನಿಟ್ಟಿದ್ದೇನೆ. ನನ್ನ ಬಾಬ್ತು ಹಣವನ್ನು ಕೂಡಲೇ ಕಳುಹಿಸು. ಇತ್ಯಾಶಿಷಃ. ಪಿ.ಎಸ್. ನೀನು ಹಣವನ್ನು ಮಾ॥ಯವರ ಕೂಡಾ

ಕಳುಹಿಸಿದ್ದರೆ ನಿನಗೆ ಮನಿ ಆರ್ಡರ್ ಕಮೀಷನ್ನಾದರೂ ಉಳಿಯುತ್ತಿತ್ತು.

೧೬೯

ಒಳಗುದಿ, ಆಹ್ವಾನ (ಕವರು)

ಮಡಿಕೇರಿ
21.9.46

1. ಅಡಿಕೆಯಬಾಬ್ತು ಹಣದ ಲೆಕ್ಕಾಚಾರದ ಬಗ್ಗೆ ನೀನು ಬರೆದೆನೆಂದು ಹೇಳುವ ಕಾಗದವು ಬಂದಂತೆ ಜ್ಞಾಪಕವಿಲ್ಲ. ಹೇಗೋ, ಲೆಕ್ಕಾಚಾರವು ಸರಿಯಾಗಿದ್ದರೆ ಸರಿ,

2. ಹಿಂದೆ ಒಂದು ಕಾಗದದಲ್ಲಿ ಖಾತೆಯನ್ನು ಬದಲಾವಣೆ ಮಾಡಿರುವ ಪ್ರಯುಕ್ತ ಬತ್ತದ ರಕ್ಷಣೆಯು ಕಷ್ಟವೆಂದೂ ಅದರ ಮರು ಕಾಗದದಲ್ಲಿ ಪಟೇಲ್ ಶಾನುಭೋಗರು ಖಾತೆಯನ್ನು ಇಷ್ಟಬಂದಂತೆ ಬದಲಾಯಿಸಲು ಸ್ವತಂತ್ರರೆಂದು ಮೊದಲಾಗಿಯೂ ನೀನು ಬರೆದಿರುವುದು ನಿನಗೆ ಜ್ಞಾಪಕವಿಲ್ಲವೆ ? ಅದನ್ನು ಯಾವ ಅವಸ್ಥೆಯಲ್ಲಿ ಬರೆದೆ ? ಉನ್ಮತ್ತಾವಸ್ಥೆಯೆ?

3. ಮನೆಯ ಗೋಡೆಯನ್ನು ಒಡೆದವರು ನೀವೇ ಎಂದೂ ಈ ವಿಷಯದಲ್ಲಿ ನೀವು ತೋರಿಸಿದ ಉಚ್ಛೃಂಖಲ ಪ್ರವೃತ್ತಿಯನ್ನು ತಡೆಯುವುದು ತುಂಬಾ ಕಷ್ಟವಾಯಿತೆಂದೂ ಮಾ॥ ಯವರು ಹೇಳಿದರು. ಅವರೇ ಒಡೆದರೆಂದು ನೀನು ಹೇಳುತ್ತೀಯೆ. ಮನೆಯನ್ನು ನೀನು ಉಪಯೋಗಿಸಿಕೊಂಡೆಯೆಂದು ನನಗೆ ಎಳ್ಳಷ್ಟೂ ವ್ಯಥೆಯಿಲ್ಲ. ಆದರೆ ಯಾರೇ ಆಗಲಿ, ಗೋಡೆ ಒಡೆದುದು ಕ್ರಮವಲ್ಲ. ನಾನು ಮಾ॥ ಯವರನ್ನು ಬಲವಂತ ಮಾಡಿದೆನೆಂಬ ಮಾತು ಸುಳ್ಳು. ಬಲವಂತವಾಗಿಯಾದರೂ ಅವರಿಗೆ ಈ ಜವಾಬ್ದಾರಿಯನ್ನು ವಹಿಸಿ ಹೋಗಬೇಕಾದ್ದೇನೂ ಇರಲಿಲ್ಲ. ದೊಡ್ಡವರು ಬದುಕಿ ಬಾಳಿದ ಮನೆ. ಬಾಗಿಲು ಮುಚ್ಚಿಕೊಂಡು ಬೀಗಹಾಕಿಕೊಂಡು ಹೋಗಬಾರದು – ಎಂದು ಒಂದು ದೀಪಾ ಹಚ್ಚಿಕೊಂಡಿರಿ ಎಂದು ಹೇಳಿದೆ...

ಬಚ್ಚಲನ್ನು ಏರ್ಪಾಡು ಮಾಡುವ ಬಗ್ಗೆ ನಾನು ಅನೇಕ ಕಾಗದಗಳನ್ನು ಬರೆದೆ. ನೀನು ಒಂದಕ್ಕೂ ಜವಾಬು ಕೊಡಲಿಲ್ಲ. ಒಂದು ಸಲ ಪಕ್ಕದ ಮನೆಯನ್ನು ಕೊಡುವುದಾಗಿ ಮಾತುಕೊಟ್ಟೆ. ನೀನು ಮನೆಯನ್ನು ಕೊಡಲಿಲ್ಲ... ಇಲ್ಲ, ನೀನು ಯಾವುದನ್ನೂ ಮಾಡತಕ್ಕವನಾಗಿರಲಿಲ್ಲ. ಆದುದರಿಂದ ಬೇರೆ ಕಡೆ ಹೋಗದೆ ಗತ್ಯಂತರವಿರಲಿಲ್ಲ. ಬೇರೆ ಕಡೆ ಹೋಗಬೇಕಾಗಿ ಬಂದುದು ರುಚ್ಯಂತರಾನ್ವೇಷಣೆಗಾಗಿ ಅಲ್ಲ. ನಿನ್ನ ವಚನಭ್ರಷ್ಟತೆಯ ದೆಸೆಯಿಂದ. ನಿನ್ನ ಅಂತರಾತ್ಮನನ್ನು ಹುಡುಕಿ ಸತ್ಯವನ್ನಾಡು. ಸುಳ್ಳಾಡಿ, ಬೈದು, ಮಿಥ್ಯಾರೋಪಣೆ ಮಾಡುವುದರಿಂದ ನಿನ್ನ ದಾನವ ಸ್ವಭಾವವು ಮಾನವ ಸ್ವಭಾವಕ್ಕೇರಲಾರದು. ಯಾವ ತಿರ್ಯಗ್ಜಂತುಗಳನ್ನು ಮೆಚ್ಚಿಸಲು ಈ ಪಾಶವೀತೃಪ್ತಿಯನ್ನವಲಂಬಿಸಿದೆಯೆಂಬುದನ್ನು ದೇವರ ಮುಂದಾದರೂ ಒಪ್ಪಿಕೊ. ನಾನು ಮಾತಿಗೇ ಬರುವವನಲ್ಲ; ನನ್ನನ್ನೇಕೆ ಕೆರಳಿಸಿ ಕೆಣಕುತ್ತಿ? ನಾನು ನಿನ್ನಂತೆ ವ್ಯವಹಾರಪಟುವಲ್ಲ....ನೀನು ಸ್ಪಷ್ಟವಾಗಿ ಆಡು. ಇತರರಿಗೆ ತೊಂದರೆ ಕೊಟ್ಟು ತೊಂದರೆಪಡುವುದನ್ನು ನೋಡಿ ಸಂತೋಷಪಟ್ಟೆನೆಂದು ಹೇಳು. ನಿನ್ನ ನಡತೆಯು, ನಿನ್ನ ಭಾಷೆಯು ನಿನ್ನ ಕುಲಕ್ಕೆ, ನಿನ್ನ ವಿದ್ಯೆಗೆ, ನಿನ್ನ ಅಂತಸ್ತಿಗೆ ಗೌರವ ತರತಕ್ಕದ್ದಲ್ಲ. ತೀ॥ ರವರ ಸರಳ ಸಾತ್ವಿಕ ಸ್ವಭಾವವನ್ನು ನೋಡಿ ನಮ್ಮ ನಮ್ಮ ಜೀವನಗಳನ್ನು ತಿದ್ದಿಕೊಳ್ಳಬೇಕು. ಗರ್ವೋದ್ಧತರಾಗಿ ಮೆರೆದು ಜಿಹ್ವಾ ಚಾಪಲ್ಯವನ್ನು ತೀರಿಸಿಕೊಳ್ಳುವುದು ದೊಡ್ಡಸ್ತಿಕೆಯನ್ನು ಸ್ಥಾಪಿಸ ಲಾರದು. ಹಿರಿಯರ ಬದುಕಿನ ಬೆಳಕಿನಲ್ಲಿ ನಾವು ನಡೆಯುವುದು ಶ್ರೇಯಸ್ಕರ. ಈ ದಿನ ನನ್ನ ಮನಸ್ಸು ಹತೋಟಿ ತಪ್ಪಿ ಇಷ್ಟು ಮಾತನ್ನು ಬರೆಯಬೇಕಾದ ಪ್ರಸಂಗಕ್ಕಾಗಿ ದೇವರಲ್ಲಿ ಕ್ಷಮೆಯನ್ನು ಯಾಚಿಸುತ್ತಿದ್ದೇನೆ. ಕೆಲವು ಕಾಲದಿಂದ ಚಿತ್ತವನ್ನು ಸಂಯಮದಲ್ಲಿಟ್ಟು ಕೊಂಡಿದ್ದೇನೆಂದು ತಿಳಿದಿದ್ದೆ. ಆದರೆ ಈಗ ಇನ್ನೂ ಹೆಚ್ಚು ಪ್ರಯತ್ನ ಪಡಬೇಕೆಂಬುದು ವ್ಯಕ್ತವಾಯಿತು.

4. ಭಾವನವರೊಡನೆ ನೀನು ಮಾಡಿದ ಲೇವಾದೇವಿಯ ವಿಚಾರದಲ್ಲಿ ನನಗೂ ಅವರಿಗೂ ಪರಿಚಯವಿಲ್ಲವೆ? ಎಂದು ಕೇಳಿದ್ದೀಯೆ. ನನಗೆ ತಿಳಿಸದೆ ನೀನು ಸಾಲವನ್ನು ಕೊಡುವಾಗ ಈ ವಿಚಾರಗಳು ಸ್ಫುರಿಸಲಿಲ್ಲವೆ? ಕೊಟ್ಟಮೇಲೂ ನೀನು ಹೇಳಿರಲಿಲ್ಲ. ಕೇವಲ ಪ್ರಾಸಂಗಿಕವಾಗಿ ಹೊರಕ್ಕೆ ಬಂತು. ನೀನು ಕೊಟ್ಟ ಹಣ, ನೀನು ಅಲ್ಲೇ ಇರತಕ್ಕವನು, ನನ್ನ ಹಿಂದಿನ ಲೇವಾದೇವಿಗಳ ವಸೂಲಿ ವಿಚಾರದಲ್ಲೂ ನೀನೇ ಮಾತಾಡುತ್ತಿದ್ದವನು. ಅದರಂತೆಯೇ ಇದೂ. ಇದರಲ್ಲಿ ವಿಶೇಷವೇನಿದೆ?' ನಿನಗೆ ಬರೆದುದರಿಂದ ನಿನಗೆ ಗೌರವಕ್ಕೆ ಕುಂದೆ?

ನಾನು ಈ ನಾಲ್ಕು ವರ್ಷಗಳಲ್ಲಿ ಎಷ್ಟು ಕಷ್ಟನಷ್ಟಗಳನ್ನನು ಭವಿಸಿದೆನೆಂಬುದು ನಿನಗೆ ಗೊತ್ತಿಲ್ಲವೆ? ಎಲ್ಲಾ ಕಾಲದಲ್ಲಿಯೂ ಅವರ ಕಷ್ಟಗಳನ್ನೇ ವರ್ಣಿಸುತ್ತಿದ್ದರೆ, ನಮ್ಮ ಕಷ್ಟಕ್ಕೆ ಇವರು ನೆರವಾಗುವುದು ಯಾವಾಗ? ಪರಸ್ಥಳದಲ್ಲಿ ನಾನು ಕಷ್ಟಪಡುತ್ತಿರುವ ಕಾಲದಲ್ಲಿ ನನ್ನ ಬತ್ತದ ಹಣವನ್ನು ನನಗೆ ತಿಳಿಸದೆಯೇ ದುರುಪಯೋಗಪಡಿಸಿಕೊಂಡರೆ ಇಲ್ಲಿ ನಾನು ಕೈಸಾಲಗಳನ್ನು ಮಾಡಿಕೊಂಡು ಜವಾಬು ಹೇಳುತ್ತಿರಲೆ? ಮನೆಯಲ್ಲಿ ಒಬ್ಬರಿಗೂ ಬಟ್ಟೆಯಿಲ್ಲ. ಬಟ್ಟೆಯನ್ನು ಕೊಳ್ಳೋಣವೆಂದರೆ ಕಾಸಿಗೆ ಗತಿಯಿಲ್ಲ.

ಕಾಸಾದಲ್ಲದೆ ಬಟ್ಟೆಯನ್ನು ಕೊಳ್ಳಲು ಸಾಧ್ಯವಿಲ್ಲ. ಈ ಗೃಹಕೃತ್ಯ ಗಳನ್ನೆಲ್ಲಾ ಇಲ್ಲಿ ಬರೆಯುತ್ತಾ ಹೋಗಬೇಕಾದ್ದಿಲ್ಲ...

5. ಜಮೀನುಗಳ ಜವಾಬ್ದಾರಿಯನ್ನು ವಹಿಸುವ ಬಗ್ಗೆ ನೀನು ಹಿಂದೆ ಒಂದು ಕಾರ್ಡು ಬರೆದಿದ್ದೆ. ಈಗಲೂ ಅದೇ ವಿಷಯವನ್ನೇ ಬರೆದಿದ್ದೀಯೆ. ಹಿಂದಿನ ಕಾಗದದಲ್ಲಿ ಸುಮ್ಮನೇ ಕೇಳಿದ್ದೆ; ಈಗ ನಾನು ಕಿರುಕುಳ ಕೊಡುತ್ತಿದ್ದೇನೆಂಬ ಆಪಾದನೆಯನ್ನು ಮಾಡಿ ಕೇಳಿದ್ದೀಯೆ.

ನಮ್ಮ ಜಮೀನುಗಳ ಆದಾಯ ನಷ್ಟ, ಕಷ್ಟ ಸುಖಗಳು ನಮ್ಮಿಬ್ಬರಲ್ಲಿಯೇ ಇರಬೇಕಾದುದು ನ್ಯಾಯ. ಇದಕ್ಕಾಗಿ ಮತ್ತೊಬ್ಬರನ್ನು ನೇಮಿಸುವುದು ಸರಿಯಲ್ಲ. ನನ್ನಿಂದ ನಿನಗೆ ಬಹಳ ಕಿರುಕುಳ ಉಂಟಾಗಿದೆಯೆಂದು ಬರೆದಿದ್ದೀಯೆ; ಇದು ಸುಳ್ಳು. ನಾನು ನಿನಗೆ ಕಿರುಕುಳವನ್ನೇನು ಕೊಟ್ಟದ್ದೇನೆಂಬುದನ್ನು ನೀನು ಹೇಳಿಲ್ಲ. ಇರಲಿ, ಈ ಸಲದ ಬಗ್ಗೆ ಕೆಲವು ವಿವರಗಳನ್ನು ಕೇಳಿರುವುದು ನಿನಗೆ ಕಿರುಕುಳವಾಯಿತೆ? ಅದು ನಿನ್ನಲ್ಲಿ ಅಪ್ರಾಮಾಣಿಕತೆಯ ಸಂದೇಹದಿಂದಲ್ಲ; ಯಾವ ನಿಮಿಷದಲ್ಲಿ ಡೆ। ಕ। ರವರಿಂದ ನನಗೆ ನೋಟೀಸು ಬರುವುದೋ ಎಂದು ಭಯಗ್ರಸ್ತನಾಗಿರುವುದರಿಂದ. ನಡೆದಿರುವ ನಡೆವಳಿಕೆಯೊಂದು, ನಾನು ಹೇಳುವುದೊಂದು ಆಗಬಾರದೆಂದು, ಎರಡು ಮೂರು ಸಲ ನಿನಗೆ ಬರೆದು ವಿವರಗಳನ್ನು ತರಿಸಿಕೊಳ್ಳಬೇಕಾಯಿತು. ಇದು ಕಿರುಕುಳವೆ? ಹಿಂದಿನ ವರ್ಷಗಳಲ್ಲಿ ನಿನ್ನನ್ನೇನಾದರೂ ಈ ವಿವರಗಳನ್ನು ಕೇಳಿದ್ದೆನೆ? ವೃಥಾ ಮಿಥ್ಯಾಪೋಷಣೆಯಿಂದ ಏನು ಲಾಭ? ಹಾಗಿಲ್ಲದಿದ್ದರೆ ಏನು ಕಿರುಕುಳವೆಂಬುದನ್ನು ಸಮರ್ಥಿಸು.

ಇತರರನ್ನು ನೇಮಿಸುವುದು ಕಷ್ಟವಲ್ಲ. ಆದರೆ ಅದೇನಿದ್ದರೂ ನಮ್ಮಿಬ್ಬರಲ್ಲೇ ಇರಬೇಕೆಂಬುದೇ ನನ್ನ ಅಭಿಮತ. ಆಪ್ತರನ್ನು ನೇಮಿಸು ಎಂದು ಬರೆದಿದ್ದಿ; ನೀನು ಆಪ್ತನಲ್ಲವೆ? ನನಗೆ ಲಾಭವಾಗಲೀ ನಷ್ಟವಾಗಲೀ ನೀನಿರುವಾಗ ನಾನು ಮತ್ತೊಬ್ಬರನ್ನು ನೇಮಿಸುವುದು ಧರ್ಮವಲ್ಲ; ಎಂದಿನಂತೆ ನೀನೇ ನೋಡಿಕೊ. ನಾನು ಬೇರೆ ನೇಮಿಸಲು ಮನಸ್ಸೊಪ್ಪುತ್ತಿಲ್ಲ.

ನಾನು ಧನ್ಯನಾಗಿ ನಿನ್ನ ಕಷ್ಟಸುಖಗಳ ಕಡೆ ಗಮನ ಕೊಡುತ್ತಿಲ್ಲವೆಂದು ಆರೋಪಿಸಿದ್ದೀಯೆ. ಇದರಲ್ಲಿ ತಥ್ಯಾಂಶವಿಲ್ಲ. ಯಾವುದನ್ನು ನೋಡಿ ನೀನು ನನ್ನನ್ನು ಧನ್ಯನೆಂದು ಭಾವಿಸಿದೆಯೋ ನನಗೆ ತಿಳಿಯದು. ಹೇಗಾದರೂ ಆಗಲಿ, ನನಗೆ ಸರ್ಕಾರಿ ಕೆಲಸವಿರುವುದೆಂದೂ ಸಂಬಳ ಬರುವುದೆಂದೂ ನೀನು ಭಾವಿಸಿ ಕರುಬಿವಿಯಾದರೆ, ಅದು ನಿನ್ನ ತಪ್ಪು.

ನನ್ನ ವಿದ್ಯಾಭ್ಯಾಸಕ್ಕೆ ತೀ॥ರವರು ಕ್ಲೇಶಪಟ್ಟಂತೆ ನಿನ್ನ ವಿದ್ಯಾಭ್ಯಾಸಕ್ಕೂ ಕ್ಲೇಶಪಟ್ಟರು. ನೀನೂ ವಿದ್ಯಾವಂತನಾದೆ. ಎಲ್ಲಿಯಾದರೂ ನಿನಗೊಂದು ಸರ್ಕಾರಿ ಕೆಲಸವನ್ನು ಕೊಡಿಸಿ ತಾವು ಧನ್ಯರಾಗಬೇಕೆಂದು ಪ್ರಯತ್ನಪಟ್ಟುದು ನಿನಗೂ ತಿಳಿಯದೆ ಇಲ್ಲ ; ನೀನು ಮೂರ್ಖತನವನ್ನೇ ಮಾಡಿದೆ. ಈಚೆಗೆ ನಾನು ಮಡಿಕೇರಿಯಿಂದಲೂ ಕಾಗದ ಬರೆದಿದ್ದೆ. ಅದಕ್ಕೆ ನೀನು ಔದಾಸೀನ್ಯದಿಂದಲೋ ತಿರಸ್ಕಾರದಿಂದಲೋ ಜವಾಬೇ ಕೊಡಲಿಲ್ಲ. ಇದಕ್ಕೆ ಯಾರು ಹೊಣೆ ?

...ಚಿಂತೆಯಿಲ್ಲ ; ಈಗಲೂ ನಿನಗೆ ಸಮ್ಮತವಾದರೆ ಹೇಳು. ಮಾತ್ಸರ್ಯದಿಂದ ಕದಡಿದ ನಿನ್ನ ಮನಸ್ಸು ತಿಳಿಗೊಂಡಿದ್ದರೆ, ಬಾ, ಜತೆಯಲ್ಲಿರೋಣ. ನನ್ನ ಕಷ್ಟ ಸುಖಗಳಲ್ಲಿ ನೀನೂ ಭಾಗಿಯಾಗು. ಕಾಲಾತೀತವಾಗಿಲ್ಲ. ಪ್ರಯತ್ನಪಡೋಣ. ದೇವರಿದ್ದಾನೆ. ನಮ್ಮಂತಹ ಗತಿಹೀನರಿಗೆ ಅವನೇ ಗತಿ. ನೀನೂ ಮಕ್ಕಳೊಂದಿಗ. ನಿನ್ನ ಅಲ್ಲಿಯ ವರಮಾನವು ನಿನಗೆ ಸಾಲದು. ನಾನಿದ್ದುಕೊಂಡೂ ನೀನು ಕಷ್ಟಪಡಬೇಡ. ಇದುವರೆಗೆ ನೀನು ನಿನ್ನ ಕಷ್ಟವಿಂತಹುದೆಂದು ಹೇಳಿದೆಯಾ? ನಾನು ಗಮನ ಕೊಡದೆ ಹೋದೆನೆ? ಈ ದಿನ ನೀನು ಕಣ್ಣಲ್ಲಿ ನೀರು ಬರಿಸಿದೆ. ಕಷ್ಟಪಡಬೇಡ, ನೋಯಬೇಡ, ಈ ಕಾಗದ ಕಂಡಕೂಡಲೇ ಸಂತೆಗಾಡಿಯಲ್ಲಿ ಬಂದು ಹೋಗು. ವಿಷಯಗಳನ್ನು ಮುಖತಃ ಮಾತನಾಡಿಬಿಡೋಣ. ಇನ್ನು ಧೋರಣೆ ಮಾಡಬೇಡ. ನೀನು ಏನು ದೋಷಾರೋಪಣೆ ಮಾಡಿದರೂ, ನೀನು ಹೇಗೆ ವರ್ತಿಸಿದರೂ, ನಿನ್ನ ಯೋಗಕ್ಷೇಮವನ್ನು ನೋಡುವುದು ನನ್ನ ಕರ್ತವ್ಯ. ಖಂಡಿತ ಸಂತೆಗಾಡಿಯಲ್ಲಿ ಬಂದುಬಿಡು. ಈ ಕಾಗದವನ್ನಿಲ್ಲಿಗೇ ಮುಗಿಸುತ್ತೇನೆ. ಪಾರೀಕುತ್ತಿನ ವಿಷಯ ಇಲ್ಲೇ ಮಾತಾಡೋಣ...

P.S. ಯಾವುದಕ್ಕೂ ಚಿಂತಿಸಬೇಡ ; ನಾನು ನಿನ್ನ ಅಪದೆಸೆಯನ್ನು ಬಯಸುವವನಲ್ಲ. ನಿನ್ನ ಅಭ್ಯುದಯವನ್ನೇ ಬಯಸುತ್ತಿರುವೆನು. ಕೂಡಲೇ ಬಂದುಬಿಟ್ಟು ಮಾತಾಡು...

ಜಗಳಕ್ಕೆ, ವಿರಸಕ್ಕೆ, ಘರ್ಷಣೆಗೆ ಎರಡುರೂಪು- ವಿದ್ಯಾವಂತರದು, ಅವಿದ್ಯಾವಂತರದು; ಮಾತಿನರೂಪದ್ದು, ಲಿಖಿತರೂಪದ್ದು. 'ವಿದ್ಯಾವ್ಯಾಧ್ಯಭಿಮಾನಗ್ರಸ್ತಂ ಲೋಕಂ ಶೋಕಹತಂ ಚ ಸಮಸ್ತಮ್.'

೧೭೦

ಪಾತ್ರೆಗಳ ತಖ್ತೀಲೂ

30-5-48

1) ಬಿಂದಿಗೆಗಳೂ – 2
2) ತಪ್ಪಲೆಗಳೂ – 4
3) ಹಂಡೆ ದೊಡ್ಡದು – 1
ಚಿಕ್ಕದು – 1

4) ಕಡಬಿನ ಕೊಲದಪ್ಪಲೆ
ಚಿಬ್ಬಿಲು 2 - 1 ಮುಚ್ಚಲ
5) ಸಂಣ ಕಂಚು – 3
6) ತಾಂಬಾಲೆಗಳೂ – 3
7) ಹಿತ್ತಾಲೆ ಸೌಟು – 4
8) ತಾಂಮ್ರ – ಹಿತ್ತಾಲೆ ತಂಬಿಗೆ – 5
9) ಏತದ ತಿರುಗಣಿ – 2
10) ಕವಂಗ – 1
11) ಹಿತ್ತಾಲೆ ತಟ್ಟೆ – 2
12) ಕಂಚಿನ ಸೌಟು – 2
13) ದೊಡ್ಡ ಕಂಚು – 1
14) ಹಿತ್ತಾಲೆ ಚೊಂಬು – 3
15) ತಾಂಮ್ರದ ಪಂಚಪತ್ರೆ – 8
16) ಹಿತ್ತಾಲೆ ಪಂಚಪತ್ರೆ – 4
17) ಹಿತ್ತಾಲೆ ಗ್ಲಾಸು – 2
18) ಹಿತ್ತಾಲೆ ಸ್ಥಾಲಿಗಳು – 5
19) ಕಂಚಿನ ದೊಡ್ಡ ಬಟ್ಲು – 2
20) ದೀಪ ಹಿತ್ತಾಲೇದು – 5
21) ಹಿತ್ತಾಲೆ ಸಂಣ ಬಟ್ಲು ದೊಡ್ಡದು – 14
22) ಹಿತ್ತಾಲೆ ಗಂಟೆ – 1
23) ಕಂಚಿನ ಲೋಟಾ – 1
24) ಹಿತ್ತಾಲೆ ಸೊಡ್ಲು – 1

ಮೇಲ್ಕಂಡ ಪಟ್ಟಿಯಂತೆ ಪಾತ್ರೆಗಳನ್ನೆಲ್ಲಾ...ಗಳಿಂದ ತಾ. 30-5-48ನೇ ಭಾನುವಾರ ನನ್ನ ವಶಕ್ಕೆ ತೆಗೆದುಕೊಂಡಿರುತ್ತೇನೆ.

೧೭೧

ಗಿರಾಕಿ ನೋಡು (ಜಮೀನು ಮಾರುವ ತರಾತುರಿ)

ಮಡಿಕೇರಿ

7 3/70

...ನಾನು ಅಕ್ಕಿ ಅವಶ್ಯಕವಾಗಿ ಬೇಕಾಗಿದೆಯೆಂದು ನಿನಗೆ ಜನವರಿಯಲ್ಲಿ ಕಾಗದ ಬರೆದೆ. ಇನ್ನೂ ನಿನ್ನಿಂದ ಅಕ್ಕಿ ಬರಲಿಲ್ಲ.

ನನ್ನ ಪದಾರ್ಥವನ್ನು ನನಗೆ ಕೊಡಲು ನೀನು ಮಾಡಬೇಕಾದ ತರದೂದೇನು? ವಿಳಂಬವೇಕಾಗಬೇಕು? ಆಯಾಯಾ ಕಾಲದಲ್ಲಿ ನನಗೆ ಬರಬೇಕಾದುದನ್ನು ನೀನು ಕೊಟ್ಟುಬಿಟ್ಟರೆ, ನನಗೆ ತೊಂದರೆಯಿರುತ್ತಿರಲಿಲ್ಲ. ವರ್ಷಗಟ್ಟಲೆಯಿಂದ ಸಬೂಬುಗಳನ್ನು ಹೇಳಿಕೊಂಡು ಸತಾಯಿಸುತ್ತ ಬರುತ್ತಿದ್ದೀಯೆ. ಉದ್ದೇಶಪೂರ್ವಕವಾಗಿ ಹೀಗೆ ಮಾಡುತ್ತಿರುವುದರಿಂದ ನನಗೆ ಅನುಮಾನವಾಗುತ್ತಿದೆ. ತೊಂಬತ್ತು ಸೇರು ಅಕ್ಕಿಗೆ ಮೂರನೆಯ ವರ್ಷ, ಬಾಬನಹಳ್ಳಿಯ ಗದ್ದೆಯ ಬತ್ತ ಈಗ ಬರತಕ್ಕದ್ದು. ಹೀಗಾದರೆ ವಿಳಂಬಕ್ಕೆ ತುದಿಮೊದಲಿಲ್ಲವೆ ? ನಿನಗೆ ನೆಪಗಳನ್ನು ಹೇಳಿಕೊಂಡು ತಳ್ಳುತ್ತ ಬರಲು ಸಂಕೋಚವಾಗದಿರಬಹುದು. ಆದರೆ ಪದೇ ಪದೇ ಇದೇ ವಿಚಾರದಲ್ಲಿ ಬರೆಯುತ್ತಿರುವುದು, ಅದೇ ಉತ್ತರಗಳನ್ನು ನಿನ್ನಿಂದ ಪಡೆಯುತ್ತಿರುವುದು – ಇದು ನನಗೆ ಬಹಳ ಸಂಕೋಚವಾಗುತ್ತದೆ. ಪಟ್ಟಣಗಳಲ್ಲಿ ವಾಸ ಮಾಡುವವರ ಕ್ಲೇಶಗಳು ನಿನಗೆ, ಅನುಭವವಿಲ್ಲದಿರಬಹುದು. ಆದರೆ ಅವುಗಳನ್ನೆಲ್ಲಾ ನಾನು ಇಲ್ಲಿ ಬರೆಯುವ ಅವಶ್ಯವಿಲ್ಲ. ಬರೆದರೆ ಚೆನ್ನಾಗಿಯೂ ಇರುವುದಿಲ್ಲ. ನೀನೂ ಸಂಸಾರಿಯಾದ್ದರಿಂದ ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕೂಡಲೇ ಅಕ್ಕಿಯನ್ನು ಪೂರ್ತಾ ಕಳಿಸಿಕೊಡು.

ನೀನು ಹಿಂದೆ ಬಾಬನ ಹಳ್ಳಿಯ ಗದ್ದೆಯ ವಿಷಯಗಳಲ್ಲಿ 'ಕೆರೆತುಂಬಿ, ಬೆಳೆಯಾದವರ್ಷ ಗಿರಾಕಿ ನೋಡೋಣ' ವೆಂದು ಬರೆದಿದ್ದೆ ! ಆದುದರಿಂದ ನಾನು ಈ ವರ್ಷದ ಆರಂಭದಲ್ಲಿ ನಿನಗೆ ಗಿರಾಕಿ ನೋಡಲು ಬರೆದೆ. ಆದರೆ ನೀನು ಅದಕ್ಕೆ ಗಮನ ಕೊಡಲಿಲ್ಲವೆಂದು ತೋರುತ್ತದೆ.

ಈಗಲಾದರೂ ಗಿರಾಕಿಯನ್ನು ನೋಡು. ನಿನಗೆ ಸಾಧ್ಯವಿಲ್ಲದಿದ್ದರೂ ಇಷ್ಟವಿಲ್ಲದಿದ್ದರೂ ನಾನು ನನ್ನ ಪಾಲನ್ನಾದರೂ ಮಾರಲು ಪ್ರಯತ್ನ ಪಡುತ್ತೇನೆ. ನನ್ನದಾಗಿ ಉಳಿದಿರುವ ಚೂರೂಪಾರು ಆಸ್ತಿಗಳನ್ನು ಮಾರಿಕೊಳ್ಳಬೇಕಾಗಿದೆ. ಗದ್ದೆಯನ್ನು ಒಟ್ಟಿನಲ್ಲಿ ಮಾರಿದರೆ ಮೂರುಕಾಸು ಹೆಚ್ಚಾಗಿ ಬಂದೀತೋ ಎಂದು ನಿನಗೆ ಬರೆದೆ, ಅಷ್ಟೆ; ಮನೆ ಹಿತ್ತಲುಗಳ ವಿಚಾರದಲ್ಲಿಯೂ ಗಿರಾಕಿಯಾಗಬೇಕಾಗಿದೆ. ಈ 26-27 ವರ್ಷಗಳಿಂದ ಈ ಬಗ್ಗೆ ನಿನಗೆ ಬಹಳ ತೊಂದರೆಯಾಗಿರಬೇಕು. ಈ ತೊಂದರೆಯು ಮುಂದುವರಿಯುವುದು ಬೇಡ. 37-38 ವರ್ಷಗಳಿಂದ ಊರೂರು ಅಲೆಯುತ್ತ ಬಂದಿರುವ ನನ್ನ ಕಷ್ಟಗಳು ನಿನಗೆ ಅರಿವಾಗಲಾರವು. ಆದುದರಿಂದ ಗಿರಾಕಿಗಳನ್ನು ನೋಡುವ ಇಷ್ಟವಿದ್ದರೆ ಸಂತೋಷ; ಇಲ್ಲದಿದ್ದರೆ, ನಿನ್ನ ಅಭಿಪ್ರಾಯವನ್ನು ಸಾಧ್ಯವಾದಷ್ಟು ಕೂಡಲೇ ತಿಳಿಸಿಬಿಡು...

ಪಟ್ಟಣದವರ ಕ್ಲೇಶಗಳು ಹಳ್ಳಿಯ ರೈತನಿಗೆ ಅರ್ಥವಾಗುವುದಿಲ್ಲ ಎಂಬುದು ಒಂದು ಪಕ್ಷ. 'ನಗರವನ್ನು ಸೇರಿದ ವಿದ್ಯಾವಂತನು ಪೆನ್ನು ಕಾಗದ ಹಿಡಿದು ಕೋಣೆಯಲ್ಲಿ ಆರಾಮ ಕುರ್ಚಿಯಲ್ಲಿ ಕುಳಿತು ಲೆಕ್ಕಾಚಾರಗಳನ್ನು ಒಕ್ಕಣಿಸುತ್ತಾನೆ. ಹಳ್ಳಿಯಲ್ಲಿ ಕಣ್ಣಿಕ್ಕಿಳಿದು ಮಣ್ಣು ಬಗೆದು ಜೀವಿಸುವ ರೈತನು ಕಣ್ಣೀರಿನಲ್ಲಿಯೇ ಹಳಹಳಿಸುತ್ತಾನೆ. ಹಳ್ಳಿಯ ರೈತನ ಕಷ್ಟ ಪಟ್ಟಣದವರಿಗೆ ಅರ್ಥವಾಗುವುದಿಲ್ಲ' ಎಂಬುದು ಇನ್ನೊಂದು ಪಕ್ಷ. ಎರಡರಲ್ಲೂ ಸತ್ಯಾಂಶವಿದೆ.

ಆದರೆ ಇದರ ನಡುವೆ ಇರುವ ಅಗೋಚರ ರೇಖೆಯು ಅಣ್ಣತಮ್ಮಂದಿರನ್ನು ಹೇಗೆ ದೂರಮಾಡುತ್ತಾ ಹೋಗಬಹುದು ಎಂಬುದನ್ನು ಇಂಥ ಪತ್ರಗಳಲ್ಲಿ ನೋಡಬಹುದು.

೧೭೨

ಬೆಲೆ ನಿಷ್ಕರ್ಷೆ ಮಾಡು (ಸೋದರರಲ್ಲಿ ಮಾರಾಟದ ವ್ಯವಹಾರ)

ಮಡಿಕೇರಿ

ತಾ. 31.8.1971

...ನಿನ್ನ 27.8.71 ರ ಕಾಗದ ತಲುಪಿತು. ನಿನಗೆ ಎಷ್ಟಕ್ಕೆ ಬೇಕೋ ಅಷ್ಟಕ್ಕೆ ಪತ್ರ ಬರೆಸುವುದೆಂದು ಬರೆದರೂ ಮತ್ತೆ ಮತ್ತೆ ಚೌಕಾಸಿ ಮಾಡುತ್ತಿರುವುದರ ಅರ್ಥವೇ ನನಗೆ ತಿಳಿಯುತ್ತಿಲ್ಲ. ನಿನ್ನ ಉದ್ದೇಶವಾದರೂ ಏನು? ಹಿಂದಿನ ಸ್ವತ್ತುಗಳನ್ನು ಮಾರಿದಾಗ ನಾನು ಬೆಲೆಗಳನ್ನು ತಿಳಿಸಿದ್ದೆನೆ? ಸ್ಥಳವಿದ್ಯಮಾನವನ್ನೂ ಧರ್ಮವನ್ನೂ ಅರಿತು ನೀನೇ ಬೆಲೆಯನ್ನು ನಿಷ್ಕರ್ಷೆ ಮಾಡುವುದೆಂದು ಹಿಂದಿನ ಕಾಗದಗಳಲ್ಲೆಲ್ಲಾ ಬರೆದಾಯಿತಲ್ಲ ! ನಾನು ಮನೆಗಳ ಮತ್ತು ಹಿತ್ತಲುಗಳ ವ್ಯಾಪಾರ ಮಾಡಿಲ್ಲ.... ಹಳ್ಳಿಯ ಧಾರಣೆ ವಾಸಿಗಳನ್ನು ನಾನೇನು ಬಲ್ಲೆ? ನಾನು ಇಷ್ಟೆಲ್ಲಾ ಬರೆದಿದ್ದರೂ ಮತ್ತೆ ಮತ್ತೆ ಕೆತ್ತುತ್ತಲೇ ಇರುವುದರ ಉದ್ದೇಶ ಕಾಲಹರಣ ಮಾಡುವುದೆ? ಅಥವಾ ಇನ್ನೇನಾದರೂ ಉದ್ದೇಶವೆ? ನಿನ್ನ ಇಷ್ಟ ಹೇಗಿದೆಯೋ ಹಾಗೆ ಮಾಡಿಕೋ...

೧೭೩

ಮನಸ್ಥೈರ್ಯವಿರಲಿ (ಬೇರೆಯಾದ ಮಗಳಿಗೆ ತಂದೆಯ ಪತ್ರ)

ಕ್ಷೇಮ ಶ್ರೀ: ಹಾಸನಜಿಲ್ಲೆಯ ಹಳ್ಳಿ

ತಾ 19.12.81

...ನೆನ್ನೆ ನೀನು ಬರದ ಪತ್ರ ತಲಪಿತು. ಎಲ್ಲ ವಿಚಾರಗಳನ್ನು ಕೇಳಿ, ಕೊಂಚ ಸಮಾಧಾನವಾಯಿತು. ಈವರೆವಿಗೂ ಉತ್ತರವನ್ನು ಬರೆಯದ್ದರಿಂದ ನಿನ್ನ ಅಮ್ಮ ಯಾಕೋ ಏನೋ ಎಂದು ಕೊರಗುತ್ತಿದ್ದಳು. ನಿನ್ನ ಯಜಮಾನರಿಂದ ಪತ್ರ ಬಂದಿಲ್ಲ. ನೀನು ಕೊಂಡುಕ್ಕೊಂಡ ಪದಾರ್ಥಗಳನ್ನು ತಿಳಿದು ಸಮಾಧಾನವಾಗಿದೆ. ಸಂಸಾರಕ್ಕೆ ಏನೆಲ್ಲಾ ಬೇಕು. ಹೀಗಿದ್ದೂ ಬರಿಕೈಯಲ್ಲಿ ನಿಂತೆಯೆಲ್ಲಾ ಎಂದು ಸಂಕಟ.ಇರಲಿ. ಚಿಂತಿಸಬೇಡ. ಒಂದೊಂದಾಗಿ ಹೊಂದಿಸಬಹುದು...ನಾನು ಬರುವಾಗ ನಿನಗಾಗಿ ತಂದಿರುವ ಡಬ್ಬಿಗಳನ್ನೂ ಚಂಬೂ ತರುತ್ತೇನೆ. ನೀನು ಬಾ ಎಂದು ಬರೆದರೆ ಬರುತ್ತೇನೆ. ಹೋದದ್ದೆಲ್ಲಾ ಹೋಗಲಿ. ದೈವೇಚ್ಛೆ ಇದ್ದರೆ ಪಡೆಯೋಣ. ಮಕ್ಕಳನ್ನು ಜೋಪಾನವಾಗಿ ನೋಡಿಕೊ. ನೀನೂ ಮನಸ್ಥೈರ್ಯದಿಂದ ನಿಭಾಯಿಸು. ಸರಿ...

ಇನ್ನೊಂದು ಪಕ್ಷದ ವಾದವನ್ನು ಸಮಾನಾಂತರವಾಗಿ ಊಹಿಸಬಹುದು. ಇಬ್ಬರಿಗೂ ಅವರವರದೇ ದೃಷ್ಟಿವಾದಗಳಿರುವುದರಿಂದಲೇ ಸಂಘರ್ಷ.

೧೭೪

ತೊಳಲುತ್ತಿರುವ ರೈತ

ಒಟ್ಟು ಕುಟುಂಬದಲ್ಲಿದ್ದು, ವ್ಯಕ್ತಿತ್ವ ಸ್ಥಾಪನೆಯಾಗದವನ ಪತ್ರ

Safe ಕುಶಲಂ Sree ಹಾಸನಜಿಲ್ಲೆಯ ಹಳ್ಳಿ

26/3/85

...ನಿಮ್ಮ 2 ಪತ್ರಗಳೂ ಬಂದು ಬಹಳ ದಿನಗಳಾದರೂ ನಾನು ಕಾಗದ ಬರೆಯದೆ ಇದ್ದುದಕ್ಕೆ ಮೊದಲು ಕ್ಷಮೆ ಕೇಳುತ್ತೇನೆ. ನಿಮ್ಮ ಮೊದಲಪತ್ರ ಬಂದನಂತರ ನಾನು ಬೆಂಗಳೂರಿಗೆ ಕಾಗದ ಬರೆದೆ. ಆದರೆ ಅವರಿಂದ ತಕ್ಷಣ ಉತ್ತರ ಬರಲಿಲ್ಲ. 20 ದಿನಗಳ ನಂತರ ಅವರಿಂದ ಉತ್ತರ ಬಂತು. ವರನ ಕೆಲಸ ಏನು? ಖಾಯಂ ಕೆಲಸವೇ? ಎಂದು. ಅದೇ ವೇಳೆಗೆ ನಿಮ್ಮ ಪತ್ರ ಬಂತು. ಅದರಲ್ಲಿ ಅವನಿಗೆ ಸಂಬಳ ಕಮ್ಮಿ ಇರಬಹುದು ಎಂಬ ಅನುಮಾನ ಬಂತು. ಆದರೂ ಅವರಿಗೆ ಬರೆದೆ. ಆದರೆ ಅವರು ಹುಡುಗಿಗೆ 1100 ರೂ ಸಂಬಳ ಬರುತ್ತೆ. ವರನಿಗೆ ತುಂಬಾ ಕಮ್ಮಿ ಆಯಿತು. ಬೇಡ ಎಂದರು. ನಾನು ನಿಮಗೆ ತಕ್ಷಣ ಕಾಗದ ಬರೆಯಬೇಕಾಗಿತ್ತು.

ಆದರೆ ಇತ್ತೀಚೆಗೆ ನನಗೆ ಎಲ್ಲಿಗೂ ಕಾಗದ ಬರೆಯುವುದಕ್ಕೆ ಯಾಕೋ ಮನಸ್ಸೇ ಬರುತ್ತಿಲ್ಲ. ದಿನಾ ಜಗಳ, ಮನಸ್ಸಿಗೆ ನೆಮ್ಮದಿ ಇಲ್ಲ. ಯಾವ ಕೆಲಸ ಮಾಡುವುದಕ್ಕೂ ಮನಸ್ಸು ಬರುವುದಿಲ್ಲ. ಏಕೆ ಮಾಡಬೇಕು? ಯಾರಿಗಾಗಿ ಮಾಡಬೇಕು ಎಂಬ ಭಾವನೆ ಬರುತ್ತದೆ. ಇಲ್ಲಿ ನಮ್ಮದು ಎಂಬ ಭಾವನೆಯೇ ಬರುತ್ತಿಲ್ಲ. ಮಗು ಆಟವಾಡಿಕೊಂಡಿರುತ್ತಾನೆ. ಆದರೆ ತುಂಬಾ ಬಡವಾಗಿದೆ. ಈಗೀಗ ಒಂದೊಂದು ಹೆಜ್ಜೆ ಇಡುತ್ತಾನೆ. ಅವನನ್ನು ಚೆನ್ನಾಗಿ ಸಾಕುವ ಯೋಗ್ಯತೆಯೂ ನಮಗಿಲ್ಲ. ನಮ್ಮಂಥವರಿಗೆ ಮದುವೆ, ಹೆಂಡತಿ, ಮಕ್ಕಳು ಸಲ್ಲ.

ಇಲ್ಲಿ ನಾವು ಬೇರೆಯವರ ಹಂಗಿನಲ್ಲಿ ಬೆಳೆಯುತ್ತಿದ್ದೇವೆಯೋ ಎಂಬ ಭಾವನೆ ಬರುತ್ತದೆ. ನನಗೂ ತಡೆದೂ ತಡೆದೂ ಸಾಕಾಗಿದೆ. ಕೊನೆಗೆ ಒಂದು ದಿನ ಏನಾಗುತ್ತದೆ ಎಂದು ಹೇಳುವುದು ಕಷ್ಟ. ಒಬ್ಬ ಮನುಷ್ಯ ಕೊನೆಗೆ ಪೂರ್ತಿ ನಿರಾಶನಾದರೆ ಅವನು ಏತಕ್ಕೂ ಹೇಸುವುದಿಲ್ಲ ಎಂಬುದನ್ನು ಈ ಮನೆಯ ಗಂಡುಮಕ್ಕಳು ಎಂಬ ಮಹನೀಯರಿಗೆ ತೋರಿಸಿಕೊಡುತ್ತೇನೆ...

...ಅವರಿಗೆ ನಾನು ಕಾಗದ ಬರೆಯದೇ ಇರುವುದಕ್ಕೆ ಬೇಸರ ಮಾಡಿಕೊಳ್ಳಬಾರದೆಂದು ಹೇಳಿ. ನನಗೆ ನಾಕಕ್ಷರ ಕಲಿಸಿ ಅನ್ನ ಹಾಕಿದವರನ್ನು ಎಂದಿಗೂ ಮರೆಯುವುದಿಲ್ಲ...

೧೭೫

ಪಾಲು : ಗೋಜಲು

ಆಸ್ತಿಯನ್ನು ಪಾಲು ಮಾಡುವ ಸಂದರ್ಭದಲ್ಲಿ, ಒಬ್ಬರ ಅಸಹಕಾರವೂ ಕೆಲಸವನ್ನು ಗೋಜಲು ಮಾಡುತ್ತದೆ. ಅಂಥ ಸಂದರ್ಭಕ್ಕೆ ವ್ಯಾಖ್ಯಾನವಾದ ಪತ್ರ

ಕ್ಷೇಮ ಶ್ರೀ: ಪುರ

ತಾ 9.4.88

...ನಿನ್ನ ಪತ್ರ ತಲಪಿ ಅಭಿಪ್ರಾಯವಾಯ್ತು. ನಮಗೆಲ್ಲಾ ಬಹಳ ವಿಷಾದವಾಯಿತು. ಮ|| ರಾ|| .... ವರಿಗೆ ಆಡಿದ ಮಾತಿನ ಬೆಲೆ ಏನು ಎಂಬುದೇ ಗೊತ್ತಿಲ್ಲ. ಅವರಿಗೆ ಸ್ವಲ್ಪವಾದರೂ ವಿವೇಕವಿದ್ದಿದ್ದರೆ ಈ ವಿಧವಾದ ವ್ಯವಹಾರವಾಗುತ್ತಿರಲಿಲ್ಲ. ನಿಮ್ಮ ತೀ|| ರೂ ಈ ವಿಚಾರದಲ್ಲಿ ಎಲ್ಲಿ ಅವಮಾನವಾಗುವಂತೆ ಮಾಡುತ್ತಾರೋ ಎಂದು ಯೋಚಿಸುತ್ತಿದ್ದರು. ಹಾಗೇ ಆಯಿತು. ಮ|| ರಾ||...ರು ಮೊದಲೇ ಯೋಚಿಸಿ ದೃಢವಾದ ನಿಲುವನ್ನು ತಳೆದಿದ್ದರೆ ಇಷ್ಟಕ್ಕೆಲ್ಲಾ ಅವಕಾಶವಾಗುತ್ತಿರಲಿಲ್ಲ. ಈಗ ಅವರು ನಾಮಕಾವಸ್ತೆ ಪಟೇಲರಾಗಿದ್ದಾರೆ. ಇಂಥವರ ಹತ್ತಿರ ವ್ಯವಹಾರ ಬಹಳ ಕಷ್ಟ. ನೀವುಗಳು ಬಹಳ ಮುತುವರ್ಜಿಯಿಂದ ಒಳ್ಳೆಯದಾಗಲಿ ಎಂದು ಪ್ರಯತ್ನಪಟ್ಟಿರಿ. ಅದಕ್ಕೆ ಏನೂ ಬೆಲೆಯಿಲ್ಲದಂತಾಯಿತು. ಅದಕ್ಕಾಗಿ ನೀವೇನೂ ವ್ಯಸನ ಪಡಬೇಕಾಗಿಲ್ಲ. ಇನ್ನು ಮುಂದೆ ಅವರ ಹಣೆಬರಹ ಅವರಿಗೆ ಸೇರಿದ್ದು...

ಗುಚ್ಛ - 11

ಗೃಹಕೃತ್ಯ

ವಿವಿಧ ವಿಷಯಗಳಿಗೆ ಸಂಬಂಧಿಸಿದ ಪತ್ರಗಳನ್ನು ಆಯಾ ಗುಂಪಿನಲ್ಲಿ ಕಾಲಾನುಕ್ರಮವಾಗಿ ಕೊಟ್ಟಿದೆ. ಸಂಸಾರ ಯಾತ್ರೆಯಲ್ಲಿ ಕಾಣುವ ವೈವಿಧ್ಯಮಯವೂ ವರ್ಣಮಯವೂ ಆದ ಮುಖ ಇಲ್ಲಿದೆ.

೧೭೬

'ದೇವರು ವಪ್ಪಲಾರ'

14.6.1915

ತರಿಕೆರೆ

ಕ್ಷೇಮಾ ನಮಸ್ಕಾರ,

ವುಭಯ ಕುಶಲೋಪರಿ ಸಾಂ.

ತಾವು ಬರದ ಕುಶಲ ಬಂದು ತಲ್ಪಿತು. ಅದರಲ್ಲಿ ಯಿದ್ದ ಪ್ರಾಂಶಿರಿ ನೋಟು ತಲ್ಪಿ ಸಂತೋಷವಾಯಿತು.... ತಾವು ನನ್ನ ಸಮಯಕ್ಕೆ ಕೊಟ್ಟ ಮೊಬಲಗನ್ನು ತಮ್ಮ ಸಮಯಕ್ಕೆ ಕೊಡದೆ ಯಿದ್ದಲ್ಲಿ ದೇವರು ವಪ್ಪಲಾರ. ನಾನು ಲಗ್ನವನ್ನು ಮಾಡಿ... ಮಾಡಲು ಕೈಲಿ ವಂದು ಕಾಸೂ ಯಿಲ್ಲಾ. ಬರೂವ ಸಂಬಳ ....ಡಿಗೆ ಸಾಲದೂ. ಧಾರಣೆವಾಸಿ ಹೇಳತೀರದು. ಆತನಿಗೆ.... ವಿಚಾರಿಸುತ್ತೀನಿ. ಹಾಗೇನಾದರು ಲಗ್ನ ವದಗಿದ ಪಕ್ಷದಲ್ಲಿ ನೀವು ಪುನಹಾ ಕೆಲವು ಕಾಸು ಕೊಡಬೇಕು. ಅವನ.... ಆಗಾಗ್ಯೆ ವಿಚಾರಿಸಿಕೊಳ್ಳುತ್ತಾಯಿರಿ. ಮತ್ತೇನೂ ವಿಶೇಷವಿಲ್ಲಾ, ತಮ್ಮ ಮಗನ ವುಪನಯನ ಬೆಳಸಿ....

ಯಿಂತೀ ನಮಸ್ಕಾರ

ತಮ್ಮ ತೀ|| ರವರಿಗೆ... ವಿಚಾರದಲ್ಲಿ ಬಹಳ ...ವಿತ್ತೆಂದು ತೋರುತ್ತದೆ.

೧೭೭

ಸ್ವಪ್ನಭೀತಿ

ಕುಶಲಂ ಶ್ರೀರಾಮ ಚನ್ನರಾಯಪಟ್ಟಣ

29-6-33

ತೀ||ರವರ ದಿವ್ಯ ಚರಣ ಸನ್ನಿಧಿಗಳಲ್ಲಿ ಬಾಲಕ ಕೃತಾನೇಕ ವಿಜ್ಞಪ್ತಯಃ ತದುಪರಿ ಉಭಯ ಕುಶಲ ಸಂಪ್ರತಿ.

ನಾನು ಇಲ್ಲಿಗೆ ಬಂದಾಗಿನಿಂದ ಅಲ್ಲಿನ ಕ್ಷೇಮ ಸಮಾಚಾರವೇ ತಿಳಿಯದೆ ಹೋದುದರಿಂದಲೂ ದುರ್ನಿಮಿತ್ತ ದುಸ್ವಪ್ನಗಳ ದೆಸೆಯಿಂದ ಮನಸ್ಸು ಆಪಚ್ಛಂತಿಯಾಗಿರುವುದರಿಂದಲೂ ಈ ಕಾಗದ ಕಂಡ ಕೂಡಲೇ ಅಲ್ಲಿನ ಎಲ್ಲಾ ವಿಷಯಗಳಿಗೂ ಆಶೀಃ ಪತ್ರಿಕಾ ದಯಪಾಲಿಸಬೇಕಾಗಿ ಬೇಡುತ್ತೇನೆ...

ಇತಿ ವಿಜ್ಞಪ್ತಯಃ

30ರ ದಶಕದಲ್ಲಿ ಶಕುನಗಳಿಗೂ ಸ್ವಪ್ನಗಳಿಗೂ ಇದ್ದ ಒತ್ತು ವಿಶೇಷವಾದುದು.

೧೭೮

ಸಾಮಾನು ವಶಕ್ಕೆ (ಪಟ್ಟಿ)

21.10.34

ನನ್ನ ಮಾವನವರಾದ...ರಾಯರ ಅತ್ತೆ ಸಣ್ಣಕ್ಕನವರು ಇದ್ದ ಬಸವಾಪಟ್ಟಣದ ಮನೆಯ ಬಾಗಿಲು ಬೀಗವನ್ನು ನಾನು ಖುದ್ದು ತೆಗೆದು ಈ ದಿವಸ ಕೆಳಗೆ ಪಟ್ಟಿಯಲ್ಲಿರುವ ಸಾಮಾನುಗಳನ್ನು ನನ್ನ ವಶಕ್ಕೆ ತೆಗೆದುಕೊಂಡಿರುತ್ತೇನೆ.

ಹಿತ್ತಾಳೆ ಬಿಂದಿಗೆ ಎರಡು 2

ತಾಮ್ರದ ಬಿಂದಿಗೆ ಒಂದು 1

ಹಿತ್ತಾಳೆ ತಪ್ಪಲೆ ಮೂರು 3
ಹಿತ್ತಾಳೆ ಚಂಬುಗಳು ಮೂರು 3
ಹಿತ್ತಾಳೆ ತಾಂಬಾಳೆ ಒಂದು 1
ಹಿತ್ತಾಳೆ ಬೋಶಿ ಒಂದು 1
ಹಿತ್ತಾಳೆ ದೇವರ ಸಂಪುಟ ಒಂದು 1
ಹಿತ್ತಾಳೆ ತಟ್ಟೆ ಒಂದು 1
ಹಿತ್ತಾಳೆ ಕೊಳದಪ್ಪಲೆ ಒಂದು 1
ಹಿತ್ತಾಳೆ ಚರಕಲು ಒಂದು 1
ಹಿತ್ತಾಳೆ ಕಪ್ಪು ಒಂದು 1
ಹಿತ್ತಾಳೆ ಕಡಬಿನ ಕೊಳದಪ್ಪಲೆ ತಟ್ಟೆಗಳು ಸಮೇತ 1
ಕಬ್ಬಿಣದ ಬಾಣಲೆ 2
ಅಲ್ಯೂಮಿನಮ್ ಬಟ್ಟಲು 1
ಕೊಪ್ಪರಿ ಹೆರೆಯುವ ಮಣೆ ಒಂದು 1
ಗೇರು ಕುಕ್ಕೆಗಳು ಐದು 5
ಕಬ್ಬಿಣದ ಕಾವಲೆ ಒಂದು 1
ಕಬ್ಬಿಣದ ಸೌಟು ಒಂದು 1
ಗೇರು ಕೊಮ್ಮೆ ಒಂದು 1
ಕಬ್ಬಿಣದ ಪಾವು ಒಂದು 1
ಹಸಿಯ ಕಲ್ಲು ಮಡಕೆ ಐದು 5
ಹಾಲಿ ಇದ್ದ ಭತ್ತ
ಮಂದಲಿಗೆ ಒಂದು 1

ಜುಮ್ಲಾ ಮೂವತ್ತಾರು ಸಾಮಾನುಗಳು ಮತ್ತು ಭತ್ತವನ್ನು ತುಂಬಿಟ್ಟಿದ್ದ ಕಲ್ಲು ಮಡಕೆಯಲ್ಲಿದ್ದ ನಗದು ಎರಡು ರೂಪಾಯಿಗಳು ಸಹ ನನ್ನ ವಶಕ್ಕೆ ಬಂದಿರುತ್ತೆ.

21/10/34

೧೭೯

ಗೆಳೆಯನಿಗೆ ಪತ್ರ

ಬಾಲ್ಯಮಿತ್ರನು ನಗರಕ್ಕೆ ಬರೆದಿರುವ ಪ್ರೀತಿಯ ಪತ್ರ

ಹಾಸನಜಿಲ್ಲೆಯ ಹಳ್ಳಿ
7.5.35

ಪ್ರಿಯಮಿತ್ರ...ರಿಗೆ ನಮಸ್ಕಾರಗಳು. ಉ.ಕು.ಸಂ.

ತಮ್ಮ 17 4/35 ರ ಕಾರ್ಡು ಬಹಳ ಹಿಂದೆಯೇ ಇಲ್ಲಿಗೆ ಬಂದಿದ್ದರೂ ನಾನು ಪರಸ್ಥಳಗಳಿಗೆ ಸುತ್ತುವುದರಲ್ಲಿದ್ದ ಕಾರಣ ಈ ಕಾಗದ ಬರೆಯಲು ಸಾವಕಾಶವಾದದ್ದಕ್ಕಾಗಿ ಕ್ಷಮೆ ಬೇಡುತ್ತೇನೆ. ಇದು ನ್ಯಾಯವಾಗಿಯೂ ಎಲ್ಲರಿಗೂ ವಿರಾಮಕಾಲವಾಗಿದ್ದರೂ ಈಗಲೂ ತಮ್ಮ ಗೋಷ್ಠೀ ಸುಖವನ್ನು ಅನುಭವಿಸುವ ಅದೃಷ್ಟವು ಇಲ್ಲದುದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದು. ಆದರೆ ವಿದ್ಯಾರ್ಜನೆಗಾಗಿ ತಾವು ಈ ಕಾಲವನ್ನು ಉಪಯೋಗಿಸಿ ಕೊಳ್ಳಬೇಕಾದ ಕಾರಣವನ್ನೇ ಈ ಚಿಂತೆಗೆ ಸಮಾಧಾನವನ್ನಾಗಿ ಮಾಡಿಕೊಳ್ಳಬೇಕಾಗಿದೆ. ತಾವೂ ಅದೇ ಭಾವನೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಉದಾಶೀನ ಮಾಡುವುದಿಲ್ಲವೆಂದು ನಂಬುತ್ತೇನೆ. ನಾನು ಮೈಸೂರಿನಿಂದ ಬೆಂಗಳೂರಿಗೆ ಹೋದ ಮೇಲೆ ಕಾಗದ ಬರೆಯದದನ್ನು ಮನಸ್ಸಿನಲ್ಲಿಡದೆ ಕ್ಷಮಿಸಬೇಕಾಗಿ ಪ್ರಾರ್ಥಿಸುತ್ತೇನೆ. ಪುನಃ ನಾನು ಬೆಂಗಳೂರಿಗೆ ಹೋಗಬೇಕಾದ ಪ್ರಕೃತವು 99% ಭಾಗ ಮನ್ನಾ ಮಾಡಲ್ಪಟ್ಟು ಇಲ್ಲಿ ಖಾಯಂ ಆಗಿ ಕುಲಕಸುಬಾದ ವ್ಯವಸಾಯವನ್ನೇ ಅವಲಂಬಿಸಿರುತ್ತೇನೆ. ಮಿತ್ರಾ! ಮಗ್ಗುಲಲ್ಲಿರುವ ನವಮಣಿಯ ಮೇಲ್ಮೆಯ ಬೆಡಗಿನ ಬಿನ್ನಾಣದ ಮಧುರಾಧರದ ಹೊಳಪಿಗೆ ಸೋತು ಆಜನ್ಮಮಿತ್ರರತ್ನವನ್ನು ಮರೆಯುವಂಥ ಕುಲಹೇಡಿಯಾದ ಮಿತ್ರದ್ರೋಹಿಯೆಂದು ನನ್ನನ್ನು ಭಾವಿಸಿದೆಯ? ಹೇಗಾದರೂ ಭಾವಿಸು. ಮಾತ್ರ ನಿನ್ನ ವಿದ್ಯಾಧನದೊಂದಿಗೆ ಸಾಧ್ಯವಾದಷ್ಟು ಜಾಗ್ರತೆ ನಿನ್ನ ಗೋಷ್ಠಿಸುಖವನ್ನು ಕೊಡುತ್ತೀಯೆಂದು ನಂಬಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಏನು ಬರೆಯಲಿ.

...ದೀಕ್ಷಿತರ ಮತ್ತು...ಅವಧಾನಿಗಳ ಕ್ಷೇಮಲಾಭವನ್ನು ತಿಳಿಸಲು ಸಹ ಸಂತೋಷ.

ಮಳೆ ಕಡಮೆ. ಕೆಲವೆಡೆ ಉಂಟು. ಪ್ರಾಂತ್ಯ ಸುಭಿಕ್ಷ. ನಮ್ಮ ನಿಮ್ಮ ಮನೆಯಲ್ಲೆಲ್ಲರೂ ಕ್ಷೇಮ. ಪರಮಾತ್ಮನು ನಿನಗೂ ನಿನ್ನ ಭಾಗವು ಜಾಗ್ರತೆ ಅನ್ಕೂಲವಾಗಲು ಅನುಗ್ರಹಿಸಿ ನಮ್ಮ ಸಂತೋಷವಿಮ್ಮಡಿಸಲೆಂದು ಪ್ರಾರ್ಥಿಸಿ ನಮಸ್ಕರಿಸುತ್ತಿರುವ.

ಸಂಕೇತಿಗಳಿಗೆ ವ್ಯವಸಾಯವು 'ಕುಲಕಸುಬು' ಎಂಬುದು ಬಹಳ ಸೂಕ್ತವಾದ ಅಭಿವ್ಯಕ್ತಿಯಾಗಿದೆ.

೧೮೦

ಸೋದರನಿಗೆ ಉಪದೇಶ (ಕಾರ್ಡು)

ಹಾಸನ
ತಾ 14.7.36

ಚಿ||ಗೆ ಅನೇಕಾಶೀರ್ವಾದಗಳು. ಅದಾಗಿ ಈವರಿಗೆ ಉಭಯ ಕುಶಲಂ ಸಂಪ್ರತಿ. ಪ್ರಕೃತದಲ್ಲಿ ನಾನು ನೆನ್ನೆ ಹೈಸ್ಕೂಲಿನಲ್ಲಿ ಡ್ಯೂಟಿಗೆ ಸೇರಿದೆ. ಇನ್ನುಮೇಲೆ ಕಾಗದಗಳನ್ನು ಮನೆಯ ಅಡ್ರಸ್ಸಿಗೇ ಬರಿ.

...ನಿನ್ನ ಮಾವನವರಿಗೆ ತುಂಬಾ ಖಾಯಿಲೆಯೆಂದೂ ನೀನು ಬರಬೇಕೆಂದೂ ಕಾಗದ ಬರೆದಿರಬಹುದು. ನೀನು ಬರಬೇಕಾದ

ಪ್ರಸಂಗವೇನೂ ಕಾಣಲಿಲ್ಲ. ಏನಕೇನಾಪ್ಯುಪಾಯೇನ ಮಗಳನ್ನು ಬರಮಾಡಿಕೊಳ್ಳಬೇಕೆಂದು ಊರಿಗೂ ಕಾಗದಾ ಬರೆದಿದ್ದಾರೆಂದು ತಿಳಿಯ ಬಂದಿತು.

...ವ್ಯಾಸಾಂಗದ ವಿಚಾರದಲ್ಲಿ ಗಮನವಿರಲಿ...ಇದಕ್ಕಾಗಿ ನೀನು ದ್ರವ್ಯಧ್ವಂಸ ಮಾಡಿಕೊಳ್ಳುವುದು ಅನವಶ್ಯಕ.

ಓರಿಯಂಟಲ್ ಲೈಬ್ರರಿಯ ಗದುಗಿನ ಭಾರತ 1 ಸೆಟ್ಟನ್ನು (5-2-0) ಬರುವಾಗ ತೆಗೆದುಕೊಂಡು ಬಾ.

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳು ಬಾಲ್ಯವಿವಾಹದ ಕಾಲ. ವಿದ್ಯಾರ್ಥಿಗಳಿಗೇ ವಿವಾಹವಾಗಿರುತ್ತಿತ್ತು. ಹೀಗೆ ವಿವಾಹವಾದ ಬಾಲಕರು ತಮ್ಮ ಸಂಬಂಧಗಳ ವಿಷಯದಲ್ಲಿ ಮುಗ್ಧರೂ ಪರಾಧೀನರೂ ಆಗಿರುತ್ತಿದ್ದರು. ಆರ್ಥಿಕ ಪರಾಧೀನತೆಯೂ ಅದಕ್ಕೆ ಕಾರಣವಾಗಿರುತ್ತಿತ್ತು. ಅಂದಮೇಲೆ 'ಸಂಪಾದಿಸುವ' ಸೋದರನೂ ಆತನ ಸಂಸಾರದ ವಿಷಯದಲ್ಲಿ ಪ್ರವೇಶಿಸುತ್ತಿದ್ದ.

೧೮೧

ಮಗುವನ್ನು ಕಳಿಸಿರಿ

ಹಳ್ಳಿಯಲ್ಲಿರುವ ತನ್ನ ಅತ್ತೆಗೆ ಬರೆದ ಕಾರ್ಡು

ಕ್ಷೇಮ ಶ್ರೀ ತಾ 27.10.36

ಹಾಸನ

ಸೌ॥ ಮಾ॥ ಅತ್ತೆಯವರ ಚರಣಸನ್ನಿಧಾನಂಗಳಿಗೆ ಬಾಲಕಿ ...ಮ್ಮನ ಅನೇಕ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯ ಕುಶಲೋಪರಿ ಸಾಂಪ್ರತ. ಇಲ್ಲಿ ಯೆಲ್ಲರೂ ಕ್ಷೇಮ. ಅಲ್ಲಿ ನಿಮ್ಮಗಳ ಕ್ಷೇಮಕ್ಕೆ ಕಾಗದಾ ಬರೆಯುವುದು. ತೀ॥ ಯವರಿಗೆ ಸಾಷ್ಟಾಂಗ ವಿಜ್ಞಾಪನೆಗಳನ್ನು ತಿಳಿಸುವುದು.

ಚಿ॥...ಯು ಆರೋಗ್ಯವಾಗಿದ್ದಾನೆಯೆ? ಚಿ॥ ಯನ್ನು ಕಳಿಸಿ. ಒಂದು ನಿಮುಷವನ್ನು ಕಳೆಯುವುದು ಒಂದು ಯುಗವಾಗಿದೆ. ಮನೆಯಲ್ಲಿ ನಿಂತುಕೊಳ್ಳಲು ಕೂಡ ಆಗುವುದಿಲ್ಲ. ಅವನ ಚೇಷ್ಟೆ, ಹಟ ತುಂಟಾಟ ಇವುಗಳನ್ನು ತಡೆಯಲಾರದೆ ಹೋಗಿ ಬರಲಿಯೆಂದು ಕಳಿಸಿದೆ. ಈಗ ಮನೆಯಲ್ಲಿ ಇರಲಾಗುವುದಿಲ್ಲ. ನೀವುಗಳೂ ನೋಡಿದುದಾಯಿತು. ಇನ್ನು ದಯವಿಟ್ಟು ಈ ಕಾಗದ ಕಂಡ ತಕ್ಷಣ ಅವನನ್ನು ಕಳುಹಿಸಬೇಕೆಂದು ಪ್ರಾರ್ಥಿಸುತ್ತೇನೆ. ಅವರೂ ನಾಳೆಯಿಂದ ಸ್ಕೂಲಿಗೆ ಹೋಗಿಬಿಡುತ್ತಾರೆ. ಮನೆಯಲ್ಲಿ ಒಬ್ಬಳಿರುವುದು ನನಗೆ ಅಸಾಧ್ಯವಾಗಿ ತೋರುತ್ತೆ. ದಯವಿಟ್ಟು ಉದಾಸೀನ ಮಾಡದೆ ಕಳಿಸುತ್ತೀರೆಂದು ನಂಬಿದ್ದೇನೆ. ನಿಮಗೆ ಬರಲು ಅವಕಾಶವಾದರೆ ನೀವೇ ಕರೆದುಕೊಂಡು ಬನ್ನಿ. ಒಂದು 15 ದಿವಸಗಳಿದ್ದು ಹೊರಡಬಹುದು. ಗುರುವಾರ 10 ಘಂಟೆಗೆ ಬಸ್ ಹತ್ತಿರಕ್ಕೆ ಬರುತ್ತಾರೆ. ನಿಮಗೆ ಬರಲು ಸಾಧ್ಯವಿಲ್ಲವಾದರೆ ಚಿ॥ ಮೈದುನನವರ ಜೊತೆಮಾಡಿ ಕಳುಹಿಸಿ...ಏನೋ ಬರೆದಳೆಂದು ಉದಾಸೀನ ಮಾಡಬೇಡಿ. ನಾನು ಚಿ ॥ ಯನ್ನು ಕಳುಹಿಸಬೇಕೆಂದು ಬರೆದುದನ್ನು ನೋಡಿ ನಿಮ್ಮಗಳಿಗೆ ನನ್ನ ಮೇಲೆ ಕೋಪಬರಬಹುದು. ಇದು ನನ್ನ ಕೈಯತ್ನವಲ್ಲ...ನೀವು ಬರುವಾಗ ಚಕೋತನೆ ಹಣ್ಣನ್ನು ಮತ್ತು ದಿಂಡನ್ನು ಇದ್ದರೆ ತೆಗೆದುಕೊಂಡು ಬನ್ನಿ. ಮುಂದೆ ಅಡಿಕೆ ಸುಗ್ಗಿಯಾದ್ದರಿಂದ ಆಮೇಲೆ ಬರಲು ಅವಕಾಶವಾಗುವುದಿಲ್ಲ. ಈಗಲೇ ಖಂಡಿತವಾಗಿ ಬರಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ ವಿಜ್ಞಾಪನೆಗಳು

ಸತ್ಯನಾರಾಯಣ ಪೂಜೆಯನ್ನು ಈಗ ಮಾಡಲಿಲ್ಲವಾದ ಕಾರಣ ನಾನು 3 ವರುಷದ ಹಿಂದೆ ಊರ ಅಮ್ಮನವರ ಹೆಸರಿನಲ್ಲಿ 5 ಜನಕ್ಕೆ ಹೂವಿಳ್ಯ ಮಾಡಬೇಕೆಂದಿದ್ದುದನ್ನು ಈಗ ಶುಕ್ರವಾರ ಮಾಡಬೇಕಂದುಕೊಂಡಿದ್ದೇನೆ. ನೀವು ಖಂಡಿತವಾಗಿ ಬರುವುದು.

'ಊರ ಅಮ್ಮ'ನು ಗ್ರಾಮದೇವತೆ

೧೮೨

ಜಗದ್ಗುರುಗಳ ಫೋಟೋ (ಗುರುಭಕ್ತಿ)

ಕಾಲಡಿ

28.8.39

...ಇಲ್ಲಿ ಸ್ವಾಮಿಗಳಿಗೆ ದೇಹದಲ್ಲಿ ಆರೋಗ್ಯವಿಲ್ಲದೆ 15 ದಿನಗಳಾಯ್ತು. ನಾನು ಕ್ಷೇಮವಾಗಿದ್ದೇನೆ. ಒಂದು ಶೃಂಗೇರಿ ಚಂದ್ರಶೇಖರಭಾರತೀ ಸ್ವಾಮಿಗಳ ಫೋಟೋವನ್ನು ಪೋಷ್ಟು ಮೂಲಕ ಆದಷ್ಟು ಜಾಗ್ರತೆ ಕಳುಹಿಸಿಕೊಡಬೇಕೆಂದು ಪ್ರಾರ್ಥನೆ. ಬಹಳ ಚಿಕ್ಕದೂ ಬೇಡ. ಬಹಳ ದೊಡ್ಡದೂ ಬೇಡ. ಸಾಮಾನ್ಯವಾಗಿದ್ದರೆ ಸಾಕು. ಇದನ್ನು ಉದಾಸೀನ ಮಾಡದೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ.

ವಿದ್ಯಾಕಾತರನಾಗಿ ಹಳ್ಳಿಯಿಂದ ಹೊರಟು ಕಾಲಡಿಯನ್ನು ಸೇರಿದ ಬಾಲಕನು, ಬಂಧುಮಿತ್ರರಿಗೆ ಕಳಿಸಿದ ಕೋರಿಕೆ ಇದು.

೧೮೩

ಹರ್ಷ ನಶ್ಯಕ್ಕಾಗಿ (ನಗರದ ಗೆಳೆಯನಿಗೆ ಬರೆದ ಕಾರ್ಡು)

ಕ್ಷೇಮ ಶ್ರೀರಸ್ತು 8/5/1940

ಮಧ್ಯದೇಶದ ಹಳ್ಳಿ

ಮ॥ ರಾ॥ ..... ನವರ ಸ.ಕ್ಕೆ

...ಶಾಸ್ತ್ರೀಕೃತಾನೇಕ ನತಯಃ. ಅದಾಗಿ ಇಲ್ಲಿ ನಾನೂ ನಿಮ್ಮ ಮನೆಯವರೆಲ್ಲರೂ ಕುಶಲಿಗಳು. ಅಲ್ಲಿಂದ ನೀವು ಹಿಂದೆ ಕಳುಹಿಸಿದ್ದ

ನಶ್ಯ ತಲಪಿತು. ಉತ್ತಮವಾಗಿಯೂ ಇತ್ತು. ಈಗ ರಜದಲ್ಲಿ ಬರುವಂತಿದ್ದರೆ ಮರೆಯದೆ ನಾಲ್ಕು ತೊಲ ಅಥವಾ ಪಾವು ಹರ್ಷ ನಶ್ಯವನ್ನು ತರುವುದು. ಬೆಣ್ಣೆ ಹಾಕದಿರುವ ಮತ್ತು ಹೊಸದಾಗಿ ಬಂದ ಮಾಲನ್ನೇ ನೋಡಿ ತರುವುದು. ಬಂದಕೂಡಲೆ ಅದರ ಕಿಮ್ಮತ್ತು ಕೊಡುತ್ತೇನೆ. ಅಥವಾ ನೀವು ಬಾರದಿದ್ದಲ್ಲಿ ಸಮ್ಯಕ್ಕಾದ ಯಾರೊಡನೆಯಾದರೂ ಅವಕಾಶವಾದಾಗ ಕಳುಹಿಸಿ (ಇದ್ದುದರಲ್ಲಿ ಶೀಘ್ರವಾಗಿ)...ವೃದ್ಧಪರಾಶರ ಹೋರಾ ವಿದ್ಯಾಮಾಧವೀಯ ಪುಸ್ತಕಗಳ ಬೆಲೆಯನ್ನು ವಿಚಾರಿಸುವುದು. ಅವುಗಳು ಬೇಕಾಗಿವೆ. ಹೆಚ್ಚು ಶ್ರಮ ಕೊಟ್ಟುದಕ್ಕೆ ಕ್ಷಮೆ ಇರಲಿ. ನಿಮ್ಮ ಉತ್ತರ ನಿರೀಕ್ಷಣೆಯಿಂದ ವಿರಾಮಗೊಳ್ಳುವ ನಿಮ್ಮ ಚಿರಪರಿಚಿತ.

ನಶ್ಯವು ಮಧ್ಯದೇಶದ ಸಂಕೇತಿಗಳಿಗೂ ತಾಂಬೂಲವು ಮತ್ತೂರು-ಹೊಸಹಳ್ಳಿಯವರಿಗೂ ವಿಶೇಷವಾಗಿ ಅಂಟಿದ್ದು. ಸಾಮಾನ್ಯವಾಗಿ ಸಂಕೇತಿಗಳಿಗೆ ವಿಶೇಷವಾಗಿ ಅಂಟಿದ್ದು ನಶ್ಯ. ಹೇಗಾದರೂ ಅದನ್ನು ಸಂಪಾದಿಸುವುದು ಮಾತ್ರವಲ್ಲ, ಅದಕ್ಕಾಗಿ ಪರದಾಡುವುದೂ ಉಂಟು.

೧೮೪

ಸುವರ್ಣವೃಷ್ಟಿ (ಹಬ್ಬಕ್ಕೆ ಆಹ್ವಾನಿಸಿದ ಕಾರ್ಡು)

ಕ್ಷೇಮ ಶ್ರೀ 2-11-42

ಚನ್ನರಾಯಪಟ್ಟಣ

...ತಾ 6.12.42 ರಿಂದ ದೀವಳಿಗೆ ಹಬ್ಬ 4 ದಿವಸವೆಂದು ತಮಗೆ ತಿಳಿದ ವಿಷಯವೇ ಆಗಿದೆ. ಅಗ್ಗೆ ಎಲ್ಲರನ್ನೂ ಕರೆದುಕೊಂಡು ಬರಬೇಕು. ಬಂದವರು ಸೋದರಬಿದಿಗೆಯನ್ನು ಕಳೆದುಕೊಂಡು ಹೊರಡುಬಹುದು. ಈ ನೆವದಲ್ಲಿ ಎಲ್ಲರೂ ಬಂದಂತೆಯೂ ತಮ್ಮ ಸತ್‌ಸಹವಾಸ 4 ದಿವಸಗಳು ನನಗೆ ಲಭಿಸುವುದೆಂದೂ ಸಂತೋಷಪಡುತ್ತಾ ಇರುತ್ತೇನೆ...

ಈಗ ಇಲ್ಲಿ ಎರಡು ದಿನಗಳಿಂದ ಮಳೆ ಬರುತ್ತಾ ಇದೆ. ನೆನ್ನೆ ಸಂತೆಯುಲ್ಲಿ ರಾಗಿ ಪಲ್ಲ 10 ರೂ., 9 ರೂ.ನಲ್ಲಿ ಮಾರಾಟವಾಯಿತು. ಇಲ್ಲಿಯ ಅಡಕೆ ಚಿಲ್ಲರೆ ಬಿಕರಿ ಪಾವು 4 ಆಣ ಅಂದರೆ ಮಣ 20 ರೂ ಆಗಿತ್ತು. ಅಕ್ಕಿ ರೂಗೆ 5 ಸೇರು 5½ ಸೇರು ಆಗಿದೆ. ಈ ಸಾರಿ ಚೇಣಿ ಮಾಡಿದವರಿಗೂ ಅಡಕೆಯುಳ್ಳವರಿಗೂ ಸುವರ್ಣವೃಷ್ಟಿ. ಈಗ್ಗೆ ತಿಂಗಳ ಹಿಂದೆ ಸಂತೆ ಮುಂತಾದ ಗಲಾಟೆಗಳಾಗಿ ಸರ್ಕಾರದವರು ಗುಂಡು ಹಾರಿಸಿ ಬಹಳ ದಿಗಿಲಾಗಿತ್ತು. ಈಗ ಯಾವ ಗಲಾಟೆಯೂ ತೋರುತ್ತಾ ಇಲ್ಲ...

ವ್ಯವಸಾಯದೊಂದಿಗೆ ಇವರ ಸಂಬಂಧ, ಸಂತೆಯು ವಹಿಸುತ್ತಿದ್ದ ಮುಖ್ಯ ಪಾತ್ರ ; ನಿತ್ಯಜೀವನದಲ್ಲಿ ಮುಖ್ಯ ಧಾನ್ಯಗಳ ಬೆಲೆಗಳ ಏರಿಳಿತಗಳ ಕಡೆಗಿದ್ದ ಆತಂಕದ ಗಮನ ಇಲ್ಲಿ ಕಾಣುತ್ತದೆ.

೧೮೫

ಹರಕೆ : ಹೊಟ್ಟೆನೋವು

ಹಾಸನಸೀಮೆಯ ಹಳ್ಳಿ

12-1-43

...ಮನೆಯಲ್ಲಿ ಇಲ್ಲಿ ತೀರ್ಥರೂಪರವರಿಗೂ ಚಿ। ಗೂ ನನಗೂ 8-9 ದಿನಗಳಿಂದ ಚಳಿ ಜ್ವರ ಬರುತ್ತಾ ಇದೆ. ತೀ।ರವರಿಗೆ ಮಾತನಾಡಲೂ ಶಕ್ತಿ ಇಲ್ಲ. ನಿತ್ರಾಣವಾಗಿದೆ. ದೇವರದಯೆ ಹೇಗಿದೆಯೋ ಗೊತ್ತಿಲ್ಲ. ಇಲ್ಲಿ ಮಾ।ಸೌ। ಅಕ್ಕನವರಿಗೆ ಒಂದು ದಿನ ಹೊಟ್ಟೆನೋವು ಬಂದಿತ್ತು. ದೇವರ ಸನ್ನಿಧಿಗೆ ಬರುತ್ತೇವೆಂದು ಕಟ್ಟಿಟ್ಟ ಮೇಲೆ ನಿಂತಿತು. ಕೂಡಲೇ ಹೋಗಿ ಬರಬೇಕು. ಈ ಕಾಗದವನ್ನು ಕಂಡಕೂಡ್ಲೆ ಬರುವುದು...

ಇದು ಆಧುನಿಕ ವಿದ್ಯಾವಂತನ ಕಾಗದವೆಂಬುದನ್ನು ನೆನಪಿನಲ್ಲಿಡಬೇಕು.

೧೮೬

ವಿನಯ (ಸೋದರಿಯು ಸೋದರನಿಗೆ ಬರೆದ ಕಾರ್ಡು)

ಕ್ಷೇಮ ಶ್ರೀ ತಾ ೧೮-೧೦-೪೫

ಬಾಣಾವರ

ತೀ॥...ಣ್ಣಯ್ಯನವರ ದಿವ್ಯ ಚರಣ ಸನ್ನಿಧಾನಂಗಳಲ್ಲಿ ಅನೇಕ ಸಾಷ್ಟಾಂಗನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯಕುಶಲ ಸಂಪ್ರತಿ.

ಈ ಹಿಂದೆ ಹದಿನೈದು ದಿವಸದಲ್ಲಿ ತಮಗೆ ನಾನು ಒಂದು ಕವರು ಬರೆದು ಜವಾಬು ಬರೆಯಬೇಕೆಂದು ಪ್ರಾರ್ಥಿಸಿಕೊಂಡೆ. ಅದು ತಮ್ಮ ಕೈಸೇರಲಿಲ್ಲವೋ ಅಥವಾ ದಯ ಬರಲಿಲ್ಲವೋ ತಿಳಿಯಲಿಲ್ಲ. ನನ್ನ ದುರದೃಷ್ಟ.... ಕಾಗದ ತಲಪಿದ್ದ ಭಾಗದಲ್ಲಿ ಕೂಡಲೆ ಅತಿಶಯೋಕ್ತಿಗಳಿಲ್ಲದಿದ್ದರೂ ಕ್ಷೇಮ ಸಮಾಚಾರಕ್ಕೆ ಕೂಡಲೆ ಆಶೀಃ ಪತ್ರಿಕೆಯನ್ನು ದಯವಿಟ್ಟು ಬರೆಯಬೇಕೆಂದು ಪ್ರಾರ್ಥಿಸುತ್ತೇನೆ.

ಚಿ...ನು ಆರೋಗ್ಯವಾಗಿ ಆಡಿಕೊಂಡಿರುವನೆ, ಹೆಜ್ಜೆ ಹಾಕುವನೆ ತಿಳಿಸಿ. ಮಾತಾಡುವನೆ ಎಂಬ ವಿಚಾರಗಳನ್ನು ತಿಳಿಸಬೇಕೆಂದು ಬೇಡುತ್ತೇನೆ. ಪಾಪಿಷ್ಠಳಾದ ನನ್ನನ್ನು ಇಷ್ಟು ಉದಾಸೀನ ಮಾಡಬೇಡಿ. ದಯವಿಟ್ಟು ಜವಾಬು ಬರೆಯಬೇಕಾಗಿ ಬೇಡುತ್ತೇನೆ.

...ನಿಂದ ಹೊರಟಾರಭ್ಯ ನಡೆದ ಸಂಗತಿಯನ್ನೆಲ್ಲಾ ಕವರಿನಲ್ಲಿ ಬರೆದಿದ್ದೆ. ಚಿ॥...ನಿಗೆ ಪುಸ್ತವಾಗಿಲ್ಲವೆಂದು ಸೂಚಿಸುವ ಕಾಗದ ಈ ದಿನ ಮೈಸೂರಿನಿಂದ ಬಂದಿದೆ...ಮಾ॥ ತಾಯಿಯವರಿಗೆ ನನ್ನ ವಿಜ್ಞಾಪನೆಗಳನ್ನು ತಿಳಿಸುವುದು. ಅತ್ತಿಗೆಯವರು ತೌರುಮನೆಗೆ

ಹೋಗಿದ್ದರೆ ?... ನಾನು ತಿಳುವಳಿಕೆಯಿಲ್ಲದೆಯಾಗಲಿ ಬುದ್ಧಿ ಭ್ರಮೆಯಿಂದಾಗಲಿ ತಪ್ಪುಗಳನ್ನು ಬರೆದಿದ್ದೇನೋ ಹೇಗೋ ತಿಳಿಯದು. ತಂದೆಯೋಪಾದಿಯಲ್ಲಿರುವ ತಾವು ಕ್ಷಮಿಸಬೇಕು.

ಇಲ್ಲಿ ಮಳೆ ಸಮೃದ್ಧಿಯಾಗಿ ಆಗಿದೆ. ನನ್ನ ದುರದೃಷ್ಟದಿಂದ, ಕಯ್ಯಿನ ಹಣ ಖರ್ಚು ಮಾಡಿಕೊಂಡು ಹೆಂಡಿರು ಮಕ್ಕಳಿಲ್ಲದವರಂತೆ ಅಲ್ಲಿ ಹೋಗಿ ದೇವಕಾರ್ಯ ಮಾಡುವರು. ನಮಗೆ ಏನೂ ಬರುವುದಿಲ್ಲ, ಇನ್ನೇನೂ ವಿಶೇಷವಿಲ್ಲ, ಇತಿ.

ತಮ್ಮ ಕಾಗದವನ್ನು ನಿರೀಕ್ಷಿಸುತ್ತಿರುವೆನು. ಉದಾಸೀನ ಮಾಡಬಾರದು. ತಿಳಿದವರಿಗೆ ಹೆಚ್ಚು ಬರೆಯಲು ಶಕ್ತಳಲ್ಲ. ವಿಳಾಸ:...ತಾಲ್ಲೋಕು...ಹೋಬಳಿ...ಹಳ್ಳಿಯ...ಯ್ಯನವರ ಮಕ್ಕಳು ಶ್ರೀ...ಗಳ ಸನ್ನಿಧಾನಂಗಳಿಗೆ.

ಇತಿ ವಿಜ್ಞಾಪನೆಗಳು

೧೮೭

ಗೃಹಕೃತ್ಯದಲ್ಲಿ ವಿರಸ

ಮನೆಯ ಯಜಮಾನನು ಸತ್ತನಂತರ, ಗೃಹಕೃತ್ಯದಲ್ಲಿ ಬಂಧುಗಳಲ್ಲಿ ಏನೋ ವಿರಸವುಂಟಾಗಿ ಪತ್ರ ಬರೆಯುವುದು ನಿಂತಿದೆ. ಅಂಥವೇಳೆಯಲ್ಲಿ ಆರೇಳು ವರ್ಷದ ಪುಟ್ಟ ಹುಡುಗಿಯು, ಪ್ರಾಯಶಃ ತನ್ನ ತಾಯಿಯ ನಿರ್ದೇಶನದಲ್ಲಿ, ತನ್ನ ಸೋದರಮಾವನಿಗೆ ಬರೆದಿರುವ ಪತ್ರ.

ಆಶೀರ್ವಾದಪತ್ರಕ್ಕೆ ಕೋರಿಕೆ

ಕ್ಷೇಮ ಶ್ರೀ ತಾ 6-8-47

ಹಾಸನಸೀಮೆಯ ಹಳ್ಳಿ

ತೀ॥ ಮಾವಯ್ಯನವರ ದಿವ್ಯ ಚರಣ ಸನ್ನಿಧಾನಂಗಳಲ್ಲಿ ಬಾಲಕಿ...ಯು ಮಾಡುವ ಅನೇಕ ಸಾಷ್ಟಾಂಗಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯ ಕುಶಲ ಸಂಪ್ರತಿ.

ನಾವು ಮಾಡಬಾರದಂಥ ಅಪರಾಧಗಳನ್ನು ಏನು ಮಾಡಿದ್ದೇವೋ ತಿಳಿಯದು. ಏಳು ಎಂಟು ತಿಂಗಳಿಂದ ಒಂದು ಆಶೀಃ ಪತ್ರಿಕೆಯನ್ನು ದಯಪಾಲಿಸಲಿಲ್ಲ, ತೀ॥ ತಂದೆಯವರು ಬರೆದ ಕಾಗದಕ್ಕೂ ಜವಾಬು ಬರೆಯಲಿಲ್ಲವೆಂದು ಮಾ॥ ಯವರಿಗೆ ಬಹಳವಾಗಿ ಹಿಂಸೆಯನ್ನು ಮತ್ತು ಕಿರುಕುಳವನ್ನು ಮಾಡುತ್ತಿರುವರು. ಅದಕ್ಕಾಗಿ ತಾಯಿಯವರು ನೀವುಗಳೆಲ್ಲರೂ ಇದ್ದು ಒಂದಾವರ್ತಿ ಬಿಡದೆ ಒಂದು ಕಾಗದವನ್ನು ಸಹ ಬರೆಯದೆ ಹೀಗೆ ಮಾಡಿದುದಕ್ಕಾಗಿ ವ್ಯಸನಪಟ್ಟು ಗೋಳಾಡುತ್ತಿರುವರು. ಚಿ॥ ಮಗುವಿಗೂ ಕೂಡಾ ತುಂಬಾ ಕಾಯಿಲೆಯಾಗಿದೆ. ಈಗಲಾದರೂ ಹತಭಾಗಿಗಳಾದ ನಮ್ಮ ಮೇಲೆ ದಯೆಯನ್ನೂ ಕರುಣೆಯನ್ನೂ ಇಟ್ಟು ಮಾ॥ ಅಜ್ಜಮ್ಮನವರನ್ನು ಒಂದು ಹದಿನೈದು ದಿವಸ ಇಲ್ಲಿಗೆ ಕಳುಹಿಸಿಕೊಟ್ಟರೆ ನಮಗೆ ಉಪಕಾರವಾಗುವುದಲ್ಲದೆ ಮಾ॥ಗೆ ಕಿರುಕುಳವೂ ತಪ್ಪುವುದು. ಇದೇ ಟೆಲಿಗ್ರಾಮೆಂದು ಭಾವಿಸಿ ಖಂಡಿತವಾಗಿ ಕಳುಹಿಸಿಕೊಡುತ್ತೀರೆಂದು ಎದುರು ನೋಡುತ್ತಿದ್ದೇವೆ. ಮಾ॥ ಅಜ್ಜಮ್ಮನವರು ಹಾಸನಕ್ಕೆ ಬಂದವರು ಇಲ್ಲಿಗೆ ಬರದೇ ಹೋಗಿರುವರು. ಇದಕ್ಕೆಲ್ಲ ನಮ್ಮ ದುರದೃಷ್ಟವೇ ಕಾರಣ.

ತಿಳಿದವರಿಗೆ ಹೆಚ್ಚಾಗಿ ಬರೆಯಲು ಶಕ್ತಳಲ್ಲ, ಮನೆಯಲ್ಲಿ ಬಹಳ ಕಷ್ಟವಾಗಿದೆ. ಖಂಡಿತ ಕಳುಹಿಸುವುದು.

ಇತಿ ವಿಜ್ಞಾಪನೆಗಳು

'ದಯಪಾಲಿಸಲಿಲ್ಲ', 'ಹತಭಾಗಿಗಳು', 'ದಯೆಯನ್ನೂ ಕರುಣೆಯನ್ನೂ ಇಟ್ಟು', 'ನಮ್ಮ ದುರದೃಷ್ಟ' ಈ ಪದಗಳೇ, ಪತ್ರದ ಮನೋಧರ್ಮವನ್ನು ಸೂಚಿಸುತ್ತವೆ. ವಿರಸವಿದ್ದಾಗಲೂ ವಿನಯಕ್ಕೆ ಕುಂದಿಲ್ಲ. 'ಟೆಲಿಗ್ರಾಂ' ಎಂಬುದು ಅರ್ಧ ಶತಮಾನದ ಹಿಂದೆ ಅಪರೂಪಕ್ಕೆ ಬಳಕೆಯಾಗುತ್ತಿತ್ತು ; 'ತುರ್ತು' 'ಗಂಭೀರ' ಮೊದಲಾದ ಅರ್ಥಗಳಷ್ಟೇ ಅದಕ್ಕಿದ್ದವು.

೧೮೮

ಗೋಡೆ ಕಟ್ಟಿಸಿ (ಬಂಧುವೊಬ್ಬರಿಗೆ ಬರೆದ ಕಾರ್ಡು)

ಕ್ಷೇಮ ಶ್ರೀರಾಮ ಸಹಾಯಂ Date $24\frac{12}{47}$

ಚಾಮರಾಜಪೇಟೆ

ವಿಜ್ಞಾಪನೆಗಳು. ವುಭಯಕುಶಲೋಪರಿ ಸಾಂಪ್ರತ.

...ಮುಸಲ್ಮಾನರಿಗೂ ಹಿಂದೂಗಳಿಗೂ ಬಹಳ ಗಲಾಟೆಯಿದೆ. ಇದರಿಂದ ಕೊಂಚ ಜನರಿಗೆ ತೊಂದ್ರೆ ಹಿಂಸೆ ಸಹಾ ವುಂಟಾಗಿದೆ. ರಾತ್ರಿ 10 ಗಂ. ಬೆಳಗಿನ 7 ಗಂಟೆವರಿಗೆ ಹೊರಗೆ ಸಂಚಾರ ಮಾಡದಂತೆ ಜನರಿಗೆ ಆಜ್ಞೆ ಆಗಿಯಿರುತ್ತೆ. ಮನೆ ಖಾಲಿ ಮಾಡಿರುತ್ತಾರೆಯೆ. ಯಾ ಯಿನ್ನೂ ಮಾಡದಿದ್ದರೆ ಯಿನ್ನೂ ಎಷ್ಟು ಕಾಲ ಬೇಕಾಗಿರುತ್ತೆ. ನಾನು ಅಲ್ಲಿಗೆ ಬರಲು ತುಂಬಾ ತೊಂದ್ರೇಲಿಯಿದೇನೆ. ದಯವಿಟ್ಟು ಸರಿಯಾದವರು ಯಾರಾದರೂ ಕೆಲಸ ಮಾಡತಕ್ಕ ಜನರು ವೊದಗಿದರೆ ಗೋಡೆ ಕೆಲಸವನ್ನು ಗುತ್ತಿಗೆಗೆ ಕೊಟ್ಟು ಮಾಡಿಸುವದು ವಳ್ಳೇದಾಗಿ ತೋರುತ್ತೆ. ತಮ್ಮ ಅಭಿಪ್ರಾಯವೇನು. ತಮ್ಮ ಕೆಲಸವೆಂತ ಭಾವಿಸಿ ನೆರವೇರಿಸಬೇಕಾಗಿ ಕೋರುತ್ತೇನೆ. ಬರಲು ಶರೀರದಲ್ಲಿ ಹುಷಾರಿಲ್ಲ ಮತ್ತು ದುಡ್ಡಿನ ತಾಪತ್ರಯ ಸಹಾ ಯಿರುತ್ತೆ. ಆದ್ದರಿಂದ ತಮಗೆ ತೊಂದ್ರೆ ಕೊಡಬೇಕಾಗಿ ಬರದಿದ್ದಾಗಿಧೆ.

ಇತಿ ವಿಜ್ಞಾಪನೆಗಳು

ಚನ್ನಿಗರಾಯಾವಧಾನಿ

೧೮೯

ಪ್ರವಾಸ : ದಕ್ಷಿಣ ಭಾರತ

ಕ್ಷೇಮ ಶ್ರೀ ರಾಮೇಶ್ವರಂ
3-10-52

...ನಾವು 24-9-52 ರ ರಾತ್ರೆ ಬೆಂಗಳೂರಿನಿಂದ ಹೊರಟು ಮೆಟ್ಟೂರಿಗೆ ಮಾರನೆ ಬೆಳಗ್ಗೆ 10 ಗಂ. ಹೊತ್ತಿಗೆ ಹೋದೆವು. ಅಲ್ಲಿ ನಿಂತ ವಿಚಾರಗಳದಂತಿರಲಿ. Mettur Dam ನ ಎತ್ತರ 176 ಅಡಿ, ಉದ್ದ 70-70 ಅಡಿ. ಇದು ಉದ್ದಕ್ಕೂ ನೆಟ್ಟಗಿದೆ. ಒಂದು ತುದಿಯಿಂದ ಮತ್ತೊಂದು ತುದಿಯನ್ನು ನೋಡಬಹುದು. ಈಗ ನೀರಿನ ಮಟ್ಟ 40.56 ಮಾತ್ರ.

ಮೆಟ್ಟೂರಿನಿಂದ ಮದ್ರಾಸಿಗೆ ಬಂದೆವು. ಅಲ್ಲಿಯ Official Programme ಗಳು ಆದ ಮೇಲೆ ಅಡಿಯಾರ್ ಬೀಚಿಗೆ ಹೋಗಿದ್ದೆ. ಇದನ್ನು ಆಂಗ್ಲರು one of the best Honey-moon Places ಎಂದು ಪರಿಗಣಿಸಿದ್ದಾರೆ. ಅಡಿಯಾರ್‌ನಲ್ಲಿರುವ theosophical society ಯ ಕಾಂಪೌಂಡಿನೊಳಗೆ ಒಂದು ಭಾರಿ ಆಲದ ಮರ ಇದೆ. ಅದರ ಉದ್ದ (ಎತ್ತರವಲ್ಲ) 210 ಅಡಿ, ಅಗಲ 205 ಅಡಿ. ಅದರ ನೆರಳಿನಲ್ಲಿ 4000 ಜನ ಏಕಕಾಲದಲ್ಲಿ ವಿಶ್ರಮಿಸಿಕೊಳ್ಳಬಹುದು. ಅದು ಪ್ರಪಂಚದ ಮೂರನೆ ದೊಡ್ಡ ಮರವಂತೆ. ಅಡಿಯಾರ್ ಬೀಚಿನಲ್ಲಿ ಬಹಳ ಪ್ರಶಾಂತ ವಾತಾವರಣ. ಆದರೆ ಟ್ರಿಪ್ಲಿಕೇನ್ ಬೀಚು ಬಹಳ ದೊಡ್ಡದು ಮತ್ತು ಪ್ರತಿ ಸಂಜೆ ಅಲ್ಲಿಗೆ ಹೋಗುವುದೇ ಕಷ್ಟವಾಗುವಷ್ಟು ಜನಸಂದಣಿ. ಮೈಲಾಪುರದ ಕಾಪಾಲೀಶ್ವರ ದೇವಸ್ಥಾನಕ್ಕೆ ಹೋಗಿದ್ದೆ.

ಮದರಾಸಿನಿಂದ ತಿರುಚಿನಾಪಳ್ಳಿಗೆ ಬಂದೆವು. ಅಲ್ಲಿಯ Golden Rock Railway workshop ಇಂಡಿಯದಲ್ಲಿ ಎರಡನೆಯದು. ತಿರುಚಿನಾಪಳ್ಳಿ (or Trichy) ಮತ್ತು 5-6 ಮೈಲಿ ದೂರದಲ್ಲಿರುವ ತಿರುವೆದಂಬೂರ್‌ಗೆ ಹೋಗಿ ರೇಡಿಯೋ Transmitter ಮತ್ತು Receiving Station ಗಳನ್ನು ನೋಡಿಕೊಂಡು ಬಂದೆವು. 6-7 ಮೈಲಿ ದೂರದಲ್ಲಿರುವ ಶ್ರೀರಂಗಕ್ಕೆ ಹೋಗಿ ರಂಗನಾಥಸ್ವಾಮಿ ದರ್ಶನ ಮಾಡಿಕೊಂಡು ಬಂದೆವು. ನಮ್ಮ ದುರದೃಷ್ಟದಿಂದ ತಂಜಾವೂರಿನ ಯಾತ್ರೆ ತಪ್ಪಿತು. ಅದಕ್ಕೆ ಸ್ವಲ್ಪ ವ್ಯಸನವೂ ಆಯಿತು. Trichy ನಲ್ಲಿ ಒಂದು ಎತ್ತರವಾದ ಬೆಟ್ಟವಿದೆ. ಆ ಬೆಟ್ಟದ ಮೇಲುಗಡೆ ಸುಂದರವಾದ ಗಣಪತಿ ವಿಗ್ರಹವಿದೆ. ಮತ್ತು ಅಲ್ಲಿಯೇ ಒಂದು ದೈತ್ಯಾಕಾರದ ಗಂಟೆಯಿದೆ. ಆ ಗಂಟೆಯ ನಾಲಗೆಯನ್ನು ಎಳೆಯಲು ಸರಿಯಾದ ಎರಡಾಳು ಬೇಕು. ಬೆಟ್ಟದ ಮೇಲಿಂದ ನೋಡಿದರೆ Trichy ಊರು ಬಹಳ ಮುದ್ದಾಗಿ ಕಾಣುತ್ತದೆ (ಮುಂದೆ ಮಧುರೆಗೆ ಹೋಗುತ್ತೇವೆ).

ಮೊನ್ನೆ ರಾತ್ರಿ Trichyಯಿಂದ ಹೊರಟು ನೆನ್ನೆ ಬೆಳಿಗ್ಗೆ ಧನುಷ್ಕೋಡಿಗೆ ಬಂದು ಸಮುದ್ರಸ್ನಾನ ಮಾಡಿ ಮಧ್ಯಾಹ್ನಕ್ಕೆ ಪಾಂಬನ್‌ಗೆ ಬಂದೆವು. ಇಲ್ಲಿ $1\,^3/_4$ ಮೈಲಿ ರೈಲ್ವೆ ಸೇತುವೆ ಇದೆ. ದೊಡ್ಡ ಹಡಗುಗಳು ಬಂದಾಗ ತೊಂದರೆ ಆಗದಂತೆ ಸೇತುವೆಯನ್ನು ಎತ್ತುವುದಕ್ಕೆ ಏರ್ಪಾಡು ಮಾಡಿದ್ದಾರೆ. ನೆನ್ನೆ ಸಂಜೆ ರಾಮೇಶ್ವರಕ್ಕೆ ಬಂದೆವು...ಅತ್ಯುತ್ತಮವಾದ ಊಟಗಳು ಪ್ರತಿ ಕಡೆಯಲ್ಲಿಯೂ ದೊರೆಯುತ್ತಿವೆ.

ಹಳ್ಳಿಯ ಬಾಲಕನೊಬ್ಬನು ನಗರದಲ್ಲಿ ಓದಿ ಶೈಕ್ಷಣಿಕ ಪ್ರವಾಸ ಹೋದಾಗ ಹಳ್ಳಿಯ ಹಿರಿಯರಿಗೆ ಬರೆದ ಪತ್ರ. 50ರ ದಶಕದಲ್ಲಿ ಇದು ಅಪರೂಪದ ಸಂಗತಿಯಾಗಿತ್ತು.

೧೯೦

ಇದು ನಿರ್ಜನ ಪ್ರದೇಶ (ಅಧ್ಯಾಪಕನ ಪತ್ರ)

ಆದಿಚುಂಚನಗಿರಿ
17-8-56

...ನಾನು ಈಗ್ಗೆ ಆದಿಚುಂಚನಗಿರಿ ಹೈಸ್ಕೂಲಿನಲ್ಲೆ ಇದ್ದೇನೆ. ಇಲ್ಲಿ ಹೈಸ್ಕೂಲಿನಲ್ಲೆ ಒಂದು ರೂಮಿನಲ್ಲಿ ಅಡಿಗೆ ಮಾಡಿಕೊಂಡು ನಾವು ಮೂರು ಜನಗಳು ಊಟ ಮಾಡುತ್ತೇವೆ. ಇಲ್ಲಿ ಇರುವುದು ಒಂದು ಬೆಟ್ಟ. ಈ ಬೆಟ್ಟದ ಮೇಲೆಯೆ ಹೈಸ್ಕೂಲು ಮತ್ತು ಒಕ್ಕಲಿಗರ ಒಂದು ಮಠವಿದೆ. ಊರಿಲ್ಲ ಕೇರಿ ಇಲ್ಲ, ನಿರ್ಜನ ಪ್ರದೇಶ. ನವಿಲುಗಳು ಬೇಕಾದಷ್ಟಿವೆ. ಅವುಗಳು ಕೂಗುವುದನ್ನೂ, ಜಾಗರಾಡುವುದನ್ನೂ ನೋಡುತ್ತಾ ಕುಳಿತಿರಬಹುದು. ಇಂಥಾ ಪ್ರದೇಶದಲ್ಲಿ ಹೇಗೊ ಋಷಿಗಳು ಕಾಲವನ್ನು ತಳ್ಳುವಂತೆ ತಳ್ಳಬೇಕಾಗಿದೆ. ಇನ್ನೇನೂ ಅತಿಶಯವಿಲ್ಲ, ಇತಿ ವಿಜ್ಞಾಪನಂಗಳು.

ಸುಮಾರು 40 ವರ್ಷಗಳ ಹಿಂದಿನ ಆದಿಚುಂಚನಗಿರಿಯ ಪರಿಸರದ ರಮ್ಯಚಿತ್ರ ಇಲ್ಲಿದೆ. ಆದರೆ ಹಳ್ಳಿಯಿಂದಲೇ ಬಂದ ಅಧ್ಯಾಪಕರಿಗೂ ಇದು ಬೇಸರ ತರಿಸಿದೆ.

೧೯೧

ಪ್ರಮಾದ ಸರಿಪಡಿಸಲು

ಪರಸ್ಪರ ಸಂಬಂಧಗಳಲ್ಲಿ ತಪ್ಪುಗ್ರಹಿಕೆಯಿಂದಾದ ಪ್ರಮಾದವನ್ನು ಸರಿಪಡಿಸಲು ಯತ್ನಿಸಿ ಬರೆದ ಪತ್ರ

ಕ್ಷೇಮ ಜೈ ಹಿಂದ್ ತಾ. 14.10.58
ಬೆಂಗಳೂರು ಸಿಟಿ

...ತಮ್ಮ ಆಶೀರ್ವಾದಪೂರ್ವಕವಾದ ಅನುಗ್ರಹಪತ್ರವು ಬಂದು ಮುಟ್ಟಿತು. ನಾವು ಕೃತಾರ್ಥರಾದೆವು ಮತ್ತು ತಾವು ಇಷ್ಟು ಕ್ಷಮಾ ರೂಪವಾಗಿ ಬರೆಯುವುದಕ್ಕೆ ಮಾಡಿರುವ ಅಪರಾಧವೇನೂ ಇಲ್ಲ ಎಂಬಂಶವನ್ನು ಮೊದಲೇ ತಿಳಿಸಿರುತ್ತೇನೆ. ಅಲ್ಲದೆಯೂ ನಮ್ಮ

ಬಾಂಧವ್ಯವು ಮನೆಯಿಂದ ಅಲ್ಲ, ಅದಕ್ಕೆ ಮುಂಚಿತವಾಗಿನಿಂದಲೂ ನಡೆದುಕೊಂಡು ಬರುತ್ತಿದೆ. ನಾನು ಅಣ್ಣತಮ್ಮಂದಿರಿಬ್ಬರನ್ನೂ ಕೈ ತುಂಬ ಎತ್ತಿಕೊಂಡು ಆಟವಾಡಿಸುತ್ತಿದ್ದೆ ಎಂದು ನೆನಪಾಗುತ್ತಿದೆ. ಅಲ್ಲದೆ ನಿಮ್ಮ ಮಾ।। ಯವರು ನಾನು ಬಂದರೆ ಬಹಳ ಪುತ್ರವಾತ್ಸಲ್ಯದಿಂದ ಅನ್ನ ಹಾಕುತ್ತಿದ್ದುದು ನೆನಪಿಗೆ ಬರುವಾಗ ನಿಮಗೆ ನಾನು ಕೃತಘ್ನನಾಗುವುದು ನನ್ನ ಜೀವಿತಕಾಲದಲ್ಲಿಲ್ಲ ಎಂದು ದೃಢವಾಗಿ ಹೇಳುತ್ತೇನೆ. ಈ ವಿಶ್ವಾಸದಿಂದಲೇ ನಿಮ್ಮ ಮಗ ಚಿ।। ರಾ।।...ಯನ್ನು ಮನೆಯಲ್ಲಿ 1 ವರ್ಷದವರೆಗೆ ಇಟ್ಟುಕೊಂಡು ಇದ್ದ ವಿಷಯವೂ ತಿಳಿದಿರಬಹುದು. ಹೀಗಿರುವಾಗ ನೀವು ಆ ರೀತಿ ಕಾಗದ ಬರೆದರೆಂಬ ಆಕ್ರೋಶವಾಗಲೀ ಭೇದಭಾವನೆಯಾಗಲೀ ಕಿಂಚಿತ್ತಾದರೂ ಇಲ್ಲ ಎಂಬ ಅಂಶವನ್ನು ಮರೆಯದಿರಬೇಕೆಂದು ಸೌ। ಪತಿಯು ಹೇಳುತ್ತಾಳೆ. ನಾವೇನಾದರೂ ಬಾಯಲ್ಲಿ ಒಂದು, ಕಾರ್ಯಥ ಒಂದು ಯೋಚಿಸಿದ್ದರೆ ನೀವು ಬರೆದ ಕಾಗದ ನನಗೆ ಮನಸ್ಸಿಗೆ ತಗಲುತ್ತೆ. ಅದು ಇಲ್ಲದೇ ಇರುವುದರಿಂದ ಆ ಕಾಗದದ ವಿಷಯವನ್ನೇ ನಾನು ಯೋಚಿಸುವುದಿಲ್ಲ. ಆದ್ದರಿಂದ ನೀವು ಹಿಂದೆ ಸುಮಾರು 10-15 ವರ್ಷಗಳಿಂದ ಯಾವ ರೀತಿ ಸಹೋದರ ಭಾವನೆಯೋ? ಮಿತ್ರರೆಂಬ ಭಾವನೆಯೋ ಇತ್ತೋ ಹಾಗೆಯೇ ಮುಂದೆಯೂ ಇರಬೇಕೆಂದೂ ಯಾವ ರೀತಿಯೂ ಮನಸ್ಸಿಗೆ ಬೇಜಾರುಪಟ್ಟುಕೊಳ್ಳದಂತೆಯೂ ಅವಕಾಶ ಕೊಡಲೆಂದು ದೇವರನ್ನು ಕ್ಷಮೆ ಬೇಡುತ್ತೇವೆ. ನೀವು ಯಾವ ವಿಧವಾದ ನೋವನ್ನೂ ಹೃದಯದಿಂದ ದೂರಮಾಡಿಬಿಡಿ. ನಾವು ಇಲ್ಲಿ ಎಲ್ಲರೂ ಹಿರಿಯರ ಅನುಗ್ರಹದಿಂದಲೂ ಆಶೀರ್ವಾದದಿಂದಲೂ ಆರೋಗ್ಯವಾಗಿರುತ್ತೇವೆ...

ಬಾಡಿಗೆದಾರನಾದ ಉದ್ದಿಷ್ಟ ವ್ಯಕ್ತಿಗೆ ಸಮಾಧಾನಪಡಿಸುತ್ತಾ ಆತನ ಉಪಕಾರಕ್ಕೆ ಕೃತಜ್ಞತೆ ಸೂಚಿಸುತ್ತಾ ಅವರ ಬಾಂಧವ್ಯವನ್ನು ನೆನಪಿಸುತ್ತಾ, ತಮ್ಮಿಂದಲೂ ಆತನಿಗೆ ಆಗಿರುವ ಉಪಕಾರಗಳನ್ನು ನೆನಪಿಸಿರುವ ರೀತಿ, ಒಕ್ಕಣೆ ಜಾಣತನದ್ದಾಗಿದೆ.

೧೯೨

ಹುಣಸೆಹಣ್ಣು ತನ್ನಿ (ಜಾಣತನ. ಕಾರ್ಡು)

ಕ್ಷೇಮ ಶ್ರೀ ತಾ 14.6.59

ಮೈಸೂರು

ಚಿ।। ಸೌ।।...ಳಿಗೆ...ಅಲ್ಲಿ ನಿಮ್ಮಗಳ ಕ್ಷೇಮ ಸಮಾಚಾರಕ್ಕೆ ಆಗಾಗ್ಗೆ ಕಾಗದ ಬರೆಯುವುದು.

ಚಿ।।...ನಿಗೆ ಪರೀಕ್ಷೆ ಹತ್ತಿರವಾಗುತ್ತಿದೆ. ಬಹಳ ಕಷ್ಟಪಟ್ಟು ವ್ಯಾಸಂಗ ಮಾಡುತ್ತಿದ್ದಾನೆಂದು ನಂಬಿದ್ದೇನೆ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಲೆಂದು ಆಶಿಸುತ್ತೇನೆ.

ನೀನು ಹೋದಸಲ ಬಂದಾಗ ನಿರಾಳವಾಗಿ ನಾಲ್ಕು ದಿವಸ ಕೂಡ ಜೊತೆಯಲ್ಲಿರಲಿಲ್ಲ. ಮನೆಯ ಆಗಿನ ಗಲಾಟೆಯಲ್ಲಿ ನಿರಾಳವಾಗಿ ಕೂತು ಒಂದು ಮಾತು ಸಹ ಆಡಲಾಗಲಿಲ್ಲ. ಆದ್ದರಿಂದ ಚಿ।।...ನಿಗೆ ಪರೀಕ್ಷೆ ಕಳೆದ ಮೇಲೆ ಚಿ।। ಗಳನ್ನೆಲ್ಲಾ ಕರೆದುಕೊಂಡು ಬಂದು 8 ದಿವಸವಾದರೂ ಜೊತೆಯಲ್ಲಿ ಇರುವಂತೆ ಪುರಸತ್ತು ಮಾಡಿಕೊಂಡು ಹೊರಟು ಬರುವುದು. ಏನೋ ಬರೆದೆನೆಂದು ಉದಾಸೀನ ಮಾಡಬೇಡ. ಖಂಡಿತ ಬರುತ್ತೀಯೆಂದು ನಂಬಿದ್ದೇನೆ.

ಚಿ।। ಸೌ।।...ಳಿಗೆ ಬಾಣಂತನ ಕಳೆಯುತ್ತಾ ಬಂತು. ಮೊಗು ತುಂಬಾ ಚೆನ್ನಾಗಿದೆ...ಎಂದು ಹೆಸರಿಟ್ಟದ್ದಾರೆ...ನಿಮ್ಮೆಲ್ಲರನ್ನೂ ನೋಡಬೇಕೆಂದು ಬಹಳ ಆಸೆಪಡುತ್ತಾಳೆ.

ಇಲ್ಲಿ ಹುಣಸೇಹಣ್ಣು ಬಹಳ ತಗ್ಗಾಗಿದೆ. ಆದ್ದರಿಂದ 5-6 ರಲ್ಲಿದ್ದರೆ 3 ಮಣ ಹುಣಸೆಹಣ್ಣನ್ನು ತೆಗೆದಿಟ್ಟಿರುವಂತೆ ಮೈದುನನವರಿಗೆ ತಿಳಿಸು. ರೇಖೆಯಾಗಿರುವುದು ಈಗಲೇ ಸಿಕ್ಕದಿದ್ದರೆ ತುಂಬ ಹಣ್ಣಿರುವವರಿಗೆ ಅಡ್‌ವಾನಸ್ ಕೊಟ್ಟದ್ದು ರೆಡಿಯಾದ ತಕ್ಷಣ ತೆಗೆದುಕೊಳ್ಳಿ. ಹುಣಸೆ ಹಣ್ಣಿಗೆ ಬಹಳ ತೊಂದರೆಯಾಗಿದೆ. ಈಗಲೇ ಸಿಕ್ಕಿದರೆ ಯಾರಾದರೂ ಬರುವವರ ಕೈಲಿ 1 ಮಣ ಕಳುಹಿಸಿ ಉಳಿದ 2 ಮಣ ಆಮೇಲೆ ತಂದರೂ ಆಗುತ್ತೆ...

೧೯೩

ತಾಯಿ ಬರೆದ ಕಾರ್ಡು

ತನ್ನ ತವರಿನ ಕಷ್ಟವನ್ನು ನೋಡಲು ಹೋಗಿದ್ದ ಅವಿದ್ಯಾವತಿಯಾದ ತಾಯಿಯೊಬ್ಬಳು, ತನ್ನ ಪುಟ್ಟ ಮಗನ ನೆಪ ಮಾಡಿಕೊಂಡು ಪತಿಯ ಮನೆಗೆ ಬರೆದ ಕಾರ್ಡು

23.10.62

ಹಾಸನಜಿಲ್ಲೆಯ ಹಳ್ಳಿ

ಚಿ।।...ಗೆ ಸೌ।। ಮಾ।। ತಾಯಿಯವರ ಆಶೀರ್‌ವಾದಗಳು. ನೀನು ಬರೆದ ಕಾಗದ ತಲಪಿತು. ತೀ।। ನಿನ್ನ...ಮಾವನವರು ಈಗ ಸೊಸಂತ್ರವಾಗಿ ಎದ್ದು ಕುಳಿತುಕೊಳ್ಳುತ್ತಾರೆ. ತೀ।।...ಮಾವನವರು ಈ ಸತಿ ಮೇಲಕ್ಕೆ ಯೆದ್ದರೆ ಪುಣ್ಯ. ನೋಡಿದರೆ ಘಾಬರಿಯಾಗುವ ಹಾಗಿದೆ. ಈಗ ಬಾಕಿಯೆಲ್ಲರೂ ಹುಶಾರಾಗಿ ಇರುತ್ತೇವೆ. ನಿಮಗಳ ಅರೋಗ್ಯಕ್ಕೆ ಕಾಗದಾ ಬರೆಯುತ್ತಾ ಇರಿ. ಹಬ್ಬದಲ್ಲಿ ಯಾರನ್ನಾದರೂ ಕರೆದು ಮಾಡಿಸಿರಿ.

ನಾನು ಬರುವುದು ಇನ್ನೂ ಒಂದು ತಿಂಗಳಾಗಬೊಹುದು. ಅಮ್ಮನವರನ್ನು ಕಳುಹಿಸಿದ ಹೊರತು ಬರಬಾರದಂತೆ. ಇ ಪಕ್ಷ। ಕಳೆಯಬೇಕು, ಅಮ್ಮನವರನ್ನು ಕಳುಹಿಸಬೇಕಾದರೆ. ಸೌ।। ನಿನ್ನ

ಚಿಕ್ಕಮ್ಮನವರಿಗೆ ಜ್ವರಾ ತಲೇ ನೋವು ನಿಂತಿದೆ. ಅವಳ ದೇಹಸ್ಥಿತಿ ಸರಿ ಇಲ್ಲ. ಊದಲು ಒಂದು ದಿನ ಇದ್ದಹಾಗೆ ಮತ್ತೊಂದು ದಿನ ಇರುವುದಿಲ್ಲ. ಆದ್ದರಿಂದ ಹಬ್ಬ ಕಳೆದ ನಂತರ ಅವಳ ಯೋಗಕ್ಷೇಮವನ್ನು ನೋಡಬೇಕೆಂದಿದಾರೆ.

ನೀನು ಕೂಡಲೇ ಕಾಗದ ಬರಿ.

ಇತೀ ಆಶೀರ್‍ವಾದಗಳು

ಅಮ್ಮ ಅಂದರೆ ಸಿಡುಬು. ಅದನ್ನೆಲ್ಲ ನಾಟಿ ಔಷಧದಿಂದಲೇ ನಿಭಾಯಿಸುತ್ತಿದ್ದುದುಂಟು.

೧೯೪

ತವರಿಗೆ ಹೋದ ಸೊಸೆ

ಬಂಧುಗಳೊಬ್ಬರ ಮೂಲಕ ಮತ್ತೆ ಗಂಡನ ಮನೆಗೆ ಸೇರಲು ಯತ್ನಿಸಿದ್ದಕ್ಕೆ , ಮಾವನ ಪ್ರತಿಕ್ರಿಯೆ

ಹಾಸನಜಿಲ್ಲೆಯ ಹಳ್ಳಿ

20.02.68

...ಊರವರನ್ನು ಅವರೂರಿಗೆ ಕಳುಹಿಸಿಬಿಡಿ. ಕಷ್ಟಸುಖ ತಿಳಿಯಬೇಕು. ಅವರವರ ಮನೆಯಲ್ಲಿ ಯಾರು ಹೀಗೆ ಮಾಡಲು ಹೇಳಿಕೊಟ್ಟರೋ ಅವರಿಂದಲೇ ಛೀಮಾರಿ ಆಗಬೇಕು. ತನ್ನ ತಪ್ಪು ತನಗೆ ತಿಳಿಯಬೇಕು. ಆಗಲೇ ಅದು ಸರಿಹೋಗುವುದು. ಉಪಚಾರ ಮಾಡಬೇಡಿ. ಉದಾಸೀನ ತೆಗೆದುಕೊಳ್ಳಿ. ಎಲ್ಲ ಸರಿಹೋಗುತ್ತೆ. ಅವರುಗಳು ಕೊಟ್ಟಿರುವ ತೊಂದರೆಯನ್ನು ಯೋಚಿಸಿಕೊಂಡರೆ ಮೈಯೆಲ್ಲಾ ಉರಿಯುತ್ತೆ. ಎಷ್ಟು ಹೇಳಿದರೂ ಅಲ್ಲವೇ. ಹೇಗಾದರೂ ಆಗಲಿ ದೇವನಿರುವನು. ಆತನು ಎಂದೂ ನಮ್ಮನ್ನು ಕೈ ಬಿಡುವುದಿಲ್ಲ. ಹೇಗಾದರೂ ನಡೆಸುತ್ತಾನೆ...

೧೯೫

ತಂದೆಯ ಕಾಳಜಿ

ನೌಕರಿಗೆ ಹೋದ ಮಗನ ಸೌಲಭ್ಯಗಳ ಬಗೆಗೆ ಕಾರ್ಡು

9.1.70

ಹಾಸನಜಿಲ್ಲೆಯ ಹಳ್ಳಿ

...ಪಾತ್ರೆಗಳನ್ನೂ ಅಡಿಗೆ ಉಪಕರಣಗಳನ್ನೂ ತೆಗೆದುಕೊಂಡು ಶನಿವಾರ ಬೆಳಗ್ಗೆ ಇಲ್ಲಿಂದ ಹೊರಟು ಸಾಯಂಕಾಲಕ್ಕೆ ಅಲ್ಲಿಗೆ ಬರುತ್ತಾನೆ...ನು. ನಿನ್ನ ಮನೆಯು ಕಚೇರಿಗೆ ಸಮೀಪದಲ್ಲಿದೆಯೆ? ಸೊಳ್ಳೆಕಾಟ ಆ ಪ್ರದೇಶದಲ್ಲಿ ಕಡಿಮೆ ಇದೆಯೆ? ನಲ್ಲಿ ಇದೆಯೆ? ಅಥವಾ ಬಾವಿಯೆ? ಗಾಳಿ ಬೆಳಕು ಚೆನ್ನಾಗಿದೆಯೆ? ರೂಮಿನಲ್ಲಿ ಫ್ಯಾನ್ ಇದೆಯೆ? ರೂಮಿನಲ್ಲಿ ಇದ್ದಿಲು ಒಲೆಯಲ್ಲಿ ಅಡಿಗೆ ಮಾಡಬಹುದೆ? ಸ್ಟೌನಲ್ಲಿ ಮಾಡಿದರೆ ತುಂಬಾ ಉಷ್ಣ. ವಿಪರ ಮನೆಯೆ? ಲೊಕ್ಯಾಲಿಟಿ ಚೆನ್ನಾಗಿದೆಯೆ? ಯಾವ ಅಪಾಯವೂ ಇಲ್ಲವೆ? ಆ ಪ್ರದೇಶದ ಪರಿಚಯವಿರುವವರ ಸಲಹೆ ತೆಗೆದುಕೊಂಡೆಯಾ?...ಇದುವರೆಗೆ ನಿನಗೆ ಯಾವ ಅಪಾಯ ಶಂಕೆಯೂ ಇರಲಿಲ್ಲ. ಇನ್ನು ನೀನು ತುಂಬಾ ಎಚ್ಚರವಾಗಿರು...

ಮನೆಯಿಂದ ದೂರ ಹೋಗಿ ಇರಬೇಕಾಗಿ ಬಂದ 'ಬೆಳೆದ'ಮಕ್ಕಳ ಬಗೆಗೂ ಇರುವ ಅಂಜಿಕೆಯನ್ನು ಈ ಪತ್ರದಲ್ಲಿ ಕಾಣಬಹುದು.

೧೯೬

ಶಾಂತಿ, ಸಹನೆ ಇರಲಿ (ಮಗನಿಗೆ ಅಂತರ್ದೇಶೀಯ ಪತ್ರ)

16.8.71

ಹಾಸನಜಿಲ್ಲೆಯ ಹಳ್ಳಿ

...ನೀನು ಗೌರಿ ಹಬ್ಬಕ್ಕೆ ಬರುತ್ತೀಯೆಂತ ನಿರೀಕ್ಷಿಸುತ್ತಿದ್ದೆ. ನೀನು ಬರಲೇ ಇಲ್ಲ. ಭಾದ್ರಪದ ಶುಕ್ಲ ಚತುರ್ದಶೀ ಶನಿವಾರ ಉಪಾಕರ್ಮ ನಡೆಯಲಿದೆ. ಮೂರು ದಿವಸ ರಜೆ ತೆಗೆದುಕೊಂಡು ಖಂಡಿತ ಬರುವುದು. ನಾವು ಪ್ರಥಮೋಪಾಕರ್ಮ ಸಿದ್ಧತೆಯಲ್ಲಿರುತ್ತೇವೆ.

...ಎಂತಹ ಸಮಯದಲ್ಲೂ ಧೈರ್ಯ, ವಿವೇಕ, ವಿನಯಗಳು ನಮಗೆ ರಕ್ಷಕವಾಗಿರುತ್ತವೆ.

ಜಪದಿಂದ ಅಂತಶ್ಶುದ್ಧಿ ಬಹಿಶ್ಶುದ್ಧಿಗಳಾಗಿ ಮನಸ್ಸಿಗೆ ಶಾಂತಿಯು ದೊರಕುತ್ತದೆ. ಅದಿಲ್ಲದಿದ್ದರೆ ಮನಸ್ಸು ಇನ್ನೂ ಪ್ರಕ್ಷುಬ್ಧವಾಗುತ್ತಿತ್ತು.

ಎಂತಹ ಸಮಯದಲ್ಲೂ ಯಾರಲ್ಲೂ ವಿಶ್ವಾಸವಿಟ್ಟು ಯಾರನ್ನೂ ಹೊಗಳಲೂ ಬೇಡ ತೆಗಳಲೂ ಬೇಡ. ಕರಟಕದಮನಕರು ಎಲ್ಲೆಡೆಯಲ್ಲೂ ಇರುತ್ತಾರೆ.

ಶಾಂತಿ, ಸಹನೆಗಳನ್ನು ಚೆನ್ನಾಗಿ ಅಭ್ಯಾಸ ಮಾಡು. ಮಾತು ಮಿತವಿರಲಿ, ಹಿತವಿರಲಿ...

ಈ ವರ್ಷ ಮಳೆಯಿಲ್ಲದೆ ಕೆರೆ ತುಂಬಿಲ್ಲ. ಗದ್ದೆ ಹಾಳು ಬಿದ್ದಿತು.

೧೯೭

ಸಾಧನೆ : ನಿರ್ದೇಶನ (ತಂದೆಯ ಅಂತರ್ದೇಶೀಯ ಪತ್ರ)

19/11/71

ಹಾಸನಜಿಲ್ಲೆಯ ಹಳ್ಳಿ

...ಅನುಷ್ಠಾನವನ್ನು ಪ್ರಾರಂಭಿಸಿದೆಯಾ? ಗುರುಗಳ ಸೂಚನೆಯಂತೆ ಎಲ್ಲವನ್ನೂ ಅನುಸರಿಸು. ಆ ವಿದ್ಯೆಯನ್ನು ಸ್ವಾಧೀನ

ಪಡಿಸಿಕೊಳ್ಳುವ ಆಸೆಯಿದ್ದರೆ ಮಮತೆಯಿಂದ, ಶ್ರದ್ಧೆಯಿಂದ ಕಲಿ. ಆಹಾರ ವ್ಯವಹಾರಗಳಲ್ಲಿ ಹಿತಮಿತವಾದ ಶುದ್ಧವಾದದ್ದನ್ನು ಸೇವಿಸು. ಸಾತ್ವಿಕವಾದ, ರಸ್ಯ, ಸ್ನಿಗ್ಧವಾದ ಆಹಾರವನ್ನು ಸೇವಿಸು. ಬೇಸರದಿಂದ ಯಾವುದನ್ನೂ ಮಾಡಬೇಡ. ಪ್ರತಿನಿತ್ಯ ರಾತ್ರೆ ಒಂದು ಸೇಬಿನಹಣ್ಣು ವಗೈರೆ ತಿನ್ನು, ಒಂದಿಷ್ಟು ಹಾಲು ಕುಡಿ. ಹಣ ಖರ್ಚಾಗುತ್ತದೆಂದು ಯೋಚಿಸಬೇಡ. ಇದೆಲ್ಲವೂ ಉದರ ಪೋಷಣೆಗೆ ಅವಿರುದ್ಧವಾಗಿರಲಿ. ಸಾಧು ಸಂತರನ್ನು ನಾಶಮಾಡುವ ಸರ್ಕಾರವಾದ್ದರಿಂದ ನಿನ್ನ ವೃತ್ತಿಯಲ್ಲೇ ಮುಂದುವರೆದು ಜೀವನ ಯಾತ್ರೆಯನ್ನು ಸಾಗಿಸಬೇಕು. ನೀನು ಯೋಗವಿದ್ಯೆಯಲ್ಲಿ ಪಾರಂಗತನಾಗಿ ಜೀವನ್ಮುಕ್ತನಾದರೂ ಜೀವನ ಯಾತ್ರೆ ಇದರಿಂದಲೇ ಸಾಗಬೇಕು. ಇದನ್ನು ಸ್ಮೃತಿಪಥದಲ್ಲಿಟ್ಟುಕೊಂಡೇ ಏನನ್ನಾದರೂ ಸಾಧಿಸು...

ಜೀವನ್ಮುಕ್ತನಾಗುವುದು ಸಾಂಪ್ರದಾಯಿಕ ಬದುಕಿನ ಆತ್ಯಂತಿಕ ಗುರಿ. ಅದನ್ನು ಸಾಧಿಸಲು ಗಂಭೀರವಾಗಿ ತೊಡಗುವ ಸಂದರ್ಭಗಳು ಅಪರೂಪ.

BANGLADESH

ಕುಜಃ		ಶನಿಃ ಲಗ್ನ	
			ಕೇತುಃ
ರಾಹುಃ			
ರವಿಃ ಶುಕ್ರಃ	ಚಂ. ಗುರುಃ ಬುಧಃ		

೧೯೮

ಪತಿಗೆ ಬರೆದ ಕಾಗದ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಹಾಸನಸೀಮೆಯ ಹಳ್ಳಿ

ತಾ॥ 12.3.1973

ಪ್ರಿಯರಿಗೆ ನಮಸ್ಕಾರಗಳು

ಅದಾಗಿ... ಸಾಂಪ್ರತ

ನಾನು ಕ್ಷೇಮ. ತಾವು ಕ್ಷೇಮವಿರುವುದೆಂದು ಭಾವಿಸಿರುವೆ. ಅಂದು ನಾವು ಸುಖವಾಗಿ 3 ಗಂಟೆಗೆ ಊರಿಗೆ ತಲಪಿದ ವಿಷಯ ತೀ॥ ರವರ ಪತ್ರದಿಂದ ತಿಳಿದಿರಬಹುದು. ಅವರ ಪತ್ರ ತಲಪಿರಬಹುದೆಂಬ ಭರವಸೆಯಿಂದ 8 ದಿನಗಳು ತಡವಾಗಿ ತಡಮಾಡಿ ಬರೆಯುತ್ತಿರುವೆನು. ನನ್ನ ಕಾಗದ ಬರದಿದ್ದರೆ ಶಾನೇ ತಮಗೆ ಯೋಚನೆಗೆ ಕಾರಣವಿಲ್ಲದಿರಬಹುದು. ಚಿಂತೆಯಿಲ್ಲ, ಓದಿ.

ಅಲ್ಲಿಂದ ಬಂದ ಎರಡುಮೂರು ದಿನಗಳಲ್ಲಿಯೇ ಔಷಧಿ ತೆಗೆದುಕೊಂಡೆ. ಇನ್ನೂ ಹುಳಿಬಿಟ್ಟಿಲ್ಲ. ಸಪ್ಪೆಯೂಟ 15 ದಿನಗಳವರೆಗೆ...ಊರಿನಿಂದ ನೀವು ಹೇಳಿದ ಔಷಧಿಯನ್ನು ಕೇಳಿಕೊಂಡು ಬಂದಿರುವಿರಾ. ಬರುವಾಗ ತಿಳಿದುಕೊಂಡು ಬನ್ನಿ. ಮಂಗಳಗೌರಿ ಪೂಜೆ ಮಾಡಿದ್ದೆ.

ಬಂದಾಗ ನಾಲ್ಕುದಿನ ಹೊಸದಾಗಿತ್ತು. ಈಗ ಇಲ್ಲಿ ಹೊತ್ತು ಕಳೆಯುವುದು ಹೇಗೆನಿಸಿದೆ. ನಿಮ್ಮನ್ನು ನೋಡಿ ಎಷ್ಟು ದಿನವಾಯಿತೆನಿಸಿದೆ. ತಾವು ಇಲ್ಲಿಗೆ ಬರುತ್ತೀನೆಂದುದು ನೆನಪಿದೆಯಷ್ಟೆ. ನಾನು ಇಲ್ಲಿಗೆ ಬಂದಮೇಲೆ ಮರೆತಿರಬಹುದು. ಕಣ್ಣೆದುರಿಗಿರುವಾಗಲೇ ಹೇಳಲಾಗದಷ್ಟು. ಹೇಗೋ ಆರೋಗ್ಯವಾಗಿರುವಿರೆಂದು ತಿಳಿದರೆ ಸಾಕು. ನನಗೆ ಕುರು ಎದ್ದು 4 ದಿನಗಳಿಂದ ಬಾಧೆ. ಹಾಸನಕ್ಕೆ ಹೋಗಿಲ್ಲ. ನೀವು ಯಾವಾಗ ಬರುತ್ತೀರೆಂಬುದಕ್ಕೆ ಪತ್ರ ಬರೆಯಿರಿ.

ಚಿ॥...ನು ಆಟವಾಡಿಕೊಂಡಿರುವನೆ. ಗಂಟಲ ನೋವು ಹೇಗಿದೆ? ಅವನ ಆಟ, ಮಾತುಗಳು ನೆನಪಿಗೆ ಬರುತ್ತಿರುತ್ತವೆ. ಹಿರಿಯರಿಗೆ ನಮಸ್ಕಾರವನ್ನು ಕಿರಿಯರಿಗೆ ಆಶೀರ್ವಾದವನ್ನು ತಿಳಿಸಿ.

...ನಾನು ಬರುವಾಗ ನಿಮಗೆ ಹೇಳಿದ ವಿಷಯ ನೆನಪಿದೆಯೇ? ತಾವು ಬರುವಾಗ ಸಾಧ್ಯವಾದಷ್ಟು ತೆಗೆದುಕೊಂಡು ಬನ್ನಿ.

...ಹಿತ್ತಲಿನಲ್ಲಿ ಗಿಡಗಳು ಹೇಗಿವೆ ? ಮಳೆ ಆಗಿದೆಯೆ? ಗದ್ದೆನಾಟಿ ಆಯಿತೆ ತಿಳಿಸಿ.

ಇನ್ನೇನೂ ವಿಷಯವಿಲ್ಲ

ಇತಿ ನಮಸ್ಕಾರಗಳು

ತಮ್ಮ ಪ್ರೀತಿಯ ಪತ್ನಿ

ಈ ಪತ್ರ ನಿಮ್ಮ ಕೈಸೇರಿತೆ ಹೇಗೆಂಬುದಕ್ಕೆ ನಿಮ್ಮ ಪತ್ರದಿಂದ ತಿಳಿಯಬೇಕು.

ಮಾತಿನ ಮೊನಚು ಶಾಲೆಗಳಲ್ಲಿ ಕಲಿತು ಬರಬೇಕಾಗಿಲ್ಲ. ಹಳ್ಳಿಗಾಡಿನ ಹೆಣ್ಣುಮಕ್ಕಳು ಹೇಗೆ ಹರಿತವಾಗಿ ಬರೆಯಬಲ್ಲರೆಂಬುದನ್ನು ಇಲ್ಲಿ ಕಾಣಬಹುದು.

೧೯೯

ತವರಿನಿಂದ ಪತಿಗೆ (ಅಂತರ್ದೇಶೀಯ ಪತ್ರ)

Date 21-1-74

ಕ್ಷೇಮ ಶ್ರೀ ಹಾಸನಸೀಮೆಯ ಹಳ್ಳಿ

ತೀ. ಪ್ರಾಣದೊಲ್ಲಭರಿಗೆ ನಿಮ್ಮ ದಾಸಳ ಅನಂತಾನಂತ ನಮಸ್ಕಾರಗಳು, ಅದಾಗಿ...ಸಾಂಪ್ರತ.

ನಾನು 8 ದಿನಗಳ ಹಿಂದೆ ಬರೆದ ಕಾಗದ ತಲಪಿರಬಹುದೆಂದು ಭಾವಿಸುವೆ. ನಿಮ್ಮಿಂದ ಕಾಗದ ಬರಬಹುದೆಂದೂ ತಿಳಿದಿದ್ದೆ. ಸದಾ ನಿಮ್ಮಗಳ ಯೋಚನೆಯಲ್ಲೇ ಇರುವಗೆ ಕಾಗದವನ್ನೂ ಬರೆಯಲಾಗದಷ್ಟು ಬೇಸರವೊ ಅಥವಾ ಇನ್ನಾವ ಕಾರಣವೊ ನಾನಂತೂ ತಿಳಿಯೆ. ಅಂತೂ ಮತ್ತೊಂದು ಪತ್ರ ಬರೆಯಲು–ಪಕ್ರಮಿಸಿರುವೆ. ಪಾಪ ನನಗೆ ಕಾಗದ ಬರೆಯಲು ವೇಳೆ ಸಿಗಬೇಕಲ್ಲಾ. ಅಲ್ಲಿ ನೀವು ಮತ್ತು ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ...ನೀವು ಈ ಹಿಂದೆಯೇ ಬಂದೇ ಬರುವಿರೆಂದು ತಿಳಿದಿದ್ದೆ. ನಾನು ತಿಳಿದಂತೆ ಸುಳ್ಳಾಯಿತು. ಮೈಸೂರಿಗೆ ಹೋಗಿ ಬಂದಿರಾ ತಿಳಿಸಿ. ಯಾವುದಕ್ಕೂ ಮೊದಲು ಕಾಗದ ಬರೆಯಿರಿ.

8 ದಿನಗಳ ಹಿಂದೆ ಅಂದರೆ ಹಬ್ಬದ ದಿನ ಜ್ವರ ಬಂದು ಅದರಿಂದ ಕೆಮ್ಮು ಪ್ರಾರಂಭವಾಗಿ ಈಗ ಹೆಚ್ಚಾಗಿದೆ. ಅನುಭವಿಸಬೇಕಾಗಿದೆ. ಮಜ್ಜಿಗೆಯಲ್ಲೂ ಊಟಮಾಡುವುದನ್ನು ಬಿಟ್ಟಿರುವೆ. ಆದರೆ ಇದು ಕಳೆದ ಹೊರತು ಕಡಿಮೆ ಯಾಗುವುದಿಲ್ಲವೆನ್ನುತ್ತಾರೆ.

ಏನು ಮಾಡುವುದು...

ಇನ್ನೇನೂ ಬರೆಯಲು ತಿಳಿಯಲ್ಲ, ಮುಂದಿನ ಶನಿವಾರದಲ್ಲಿ ನಿಮ್ಮ ನಿರೀಕ್ಷೆಯಲ್ಲಿರುವೆ.

ಇತಿ ನಮಸ್ಕಾರಗಳು

೨೦೦

ತಂದೆಗೆ ಸಮಾಧಾನ

ನೌಕರಿಗೆಂದು ದೂರದ ಊರಿಗೆ ಮಗನನ್ನು ಕಳಿಸಿದ ತಂದೆಯು, ಆತನ ಕ್ಷೇಮದ ಬಗೆಗೆ ಅತಿ ಚಿಂತಿತರಾದುದಕ್ಕೆ ಪ್ರತಿಯಾಗಿ, ಮಗನ ಆಗ್ರಹಪೂರ್ವಕ ಸಮಾಧಾನ. ಅಂತರ್ದೇಶೀಯ ಪತ್ರ

Bhupal

22nd Sept. 75

...ತಾವು ಬರೆದ ಪತ್ರ ತಲಪಿತು. ಸೆಪ್ಟೆಂಬರ್ 1 ಅಥವಾ ಎರಡನೇ ತಾರೀಖು ನಾನು ಕಾಗದ ಬರೆದಿರುತ್ತೇನಷ್ಟೆ ? ಈಗ ಎಷ್ಟುದಿನ ಆಗಿಹೋಯಿತು? ಅಷ್ಟಕ್ಕೂ ವಾರವಾರವೂ ಕಾಗದ ಬರೆಯುವುದಕ್ಕೆ ತಾನೆ ಏನಿರುತ್ತದೆ ? ನನ್ನ ಆರೋಗ್ಯ ಒಂದೇ ಸಮಾನಾಗಿದೆ. ಹೆಚ್ಚೂ ಆಗಿಲ್ಲ ಕಡಿಮೆಯೂ ಆಗಿಲ್ಲ.

ನೀವು ಬರೆದಿರುವ ಪತ್ರವನ್ನು ನೋಡಿದರೆ ತುಂಬಾ ವ್ಯಥೆ ಪಟ್ಟುಕೊಂಡು ಬರೆದಿರುವ ಹಾಗೆ ಕಾಣುತ್ತದೆ. ನಾನು ಗಣಪತಿ ಹಬ್ಬಕ್ಕೆ ಬರದ್ದರಿಂದ ದೀರ್ಘಕಾಲ ನೀವು ನಿಮ್ಮಲ್ಲೇ ಅನೇಕ ರೀತಿ ಕಲ್ಪಿಸಿಕೊಂಡು ಚಿಂತಿಸಿದ್ದರಿಂದ ಇಂತಹ ಭಾವನೆಗಳು ಉಂಟಾಗಿವೆಯೆಂದು ತೋರುತ್ತದೆ. ಮನಸ್ಸಿನ ಆವೇಗವೇನೋ ದುರ್ಮೂಲ್ಯವಾದದ್ದಾದರೂ ಸಂಪೂರ್ಣವಾಗಿ ಅದರಲ್ಲಿಯೇ ತೊಂತಿಕೊಳ್ಳುವುದು ಯಾಕೆ?

...ನನ್ನ ವೈಯಕ್ತಿಕ ಕ್ಲೇಶಗಳಿಂದ ಹಬ್ಬಕ್ಕೆ ಬರಲಾಗಲಿಲ್ಲ, ಡಿಪಾರ್ಟ್‌ಮೆಂಟಿನಲ್ಲಿ ಇಬ್ಬರು ಮೂವರು ರಜಾ ಆದಾಗ ರಜಾ ಸಿಕ್ಕುವುದೂ ಕಷ್ಟವಾಗುತ್ತದೆ. ಜಪಸರವನ್ನು ಮಾಡಿಸಿದ್ದೇನೆ.

ಹಣದ ವಿಚಾರದಲ್ಲಿ ಅಷ್ಟೆಲ್ಲಾ ಬರೆಯುವ ಅವಶ್ಯಕತೆ ಇರಲಿಲ್ಲ, ನಾನು ಬಂದಿದ್ದಾಗ ಕೊಟ್ಟ ಅಲ್ಪ ಹಣವೂ ನನ್ನ ಕಣ್ಣೆದುರಿನಲ್ಲೇ ಖರ್ಚಾಗಿ ಹೋಗಿದ್ದನ್ನು ನೋಡಿದ್ದರಿಂದಲೂ ಗದ್ದೇ ಕೆಲಸ ತುಂಬಾ ಬಾಕಿ ಇದ್ದರಿಂದಲೂ, ಇರಲೆಂದು ಅಷ್ಟನ್ನು ಕಳಿಸಿದೆ. ತಮ್ಮ ಔಷಧಿಗಳೂ ಹೆಚ್ಚು ಖರ್ಚಾಗಲಿ, ಕಡಿಮೆಯಾಗಲಿ ಅವಶ್ಯವಾಗಿ ಮಾಡಲ್ಪಡತಕ್ಕವು ತಾನೆ. ಪ್ರತಿಯೊಂದಕ್ಕೂ ಯಾಕೆ ಹೀಗೆ ವಿಪರೀತ ಅರ್ಥ ಮಾಡಬೇಕು? ಅಷ್ಟಕ್ಕೂ ನಾನು ಸಂಪಾದನೆ ಮಾಡಿದ್ದು ತಮಗೆ ಸೇರಿದ್ದು ತಾನೆ. ಅದನ್ನು ಸ್ವೀಕರಿಸುವುದಕ್ಕೆ ಯಾಕೆ ಸಂಕೋಚಪಟ್ಟುಕೊಳ್ಳಬೇಕು?...

ಮನೆ ಮಂದಿಯು ಎಷ್ಟೇ ದೂರದೂರಕ್ಕೆ ಚದುರಿರಲಿ, ಮನೆಯ ಹಿರಿಯರಿರುವ ಕಡೆ ಎಲ್ಲರೂ ಸೇರಿ ಗಣಪತಿ ಹಬ್ಬವನ್ನು ಆಚರಿಸುವುದು ಸಂಪ್ರದಾಯ. ತಂದೆ ಮಕ್ಕಳ ನಡುವೆ ಪ್ರೀತಿಯ ಆಗ್ರಹವಿದೆ.

೨೦೧

ನಿವೃತ್ತರಿಗೆ ಸಮಾಧಾನ

ಬಂಧುವೊಬ್ಬರು ಹಿರಿಯರಿಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಬೆಂಗಳೂರು

ತಾ 3-1-76

...ನಿಮ್ಮ ಕಾವ್ಯಮಯವಾದ ಪತ್ರ ಬಹಳ ದಿನಗಳ ಮೇಲೆ ಬಂದು ನಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಿತು. ನಾನು ಭಾವಿಸಿದ್ದಂತೆ ನಿವೃತ್ತ ಜೀವನ ನಿಮಗೆ ಅಹ್ಲಾದಕರವಾಗಿರುವಂತೆ ತೋರಿ ಬರಲಿಲ್ಲ– ಅದರಲ್ಲೂ ಸ್ವಭಾವಕ್ಕೆ ವಿರುದ್ಧವಾದ ವೃತ್ತಿಯಲ್ಲಿ ತೊಡಗಬೇಕಾಗಿರುವುದರಿಂದ. ಪುಸ್ತಕಗಳು ಕಷ್ಟಸಾಧ್ಯವಾಗಿ ಯಾದರೂ ದೊರಕುವುದಾದ ಪಕ್ಷಕ್ಕೆ ಅವುಗಳನ್ನು ಪತ್ತೆ ಮಾಡಿಕೊಂಡರೆ ನಿಮ್ಮ ಅರ್ಧ ಬೇಸರ ದೂರವಾಗಬಹುದೆಂದು ನನ್ನ ಎಣಿಕೆ. ಹಲವಾರು ವರ್ಷಗಳಿಂದ ಒಂದು ಬಗೆಯ ಕಾರ್ಯಕ್ಕೆ ಒಗ್ಗಿಕೊಂಡಿದ್ದು ಈಗ ತಟಕ್ಕನೆ ಹೊಸ ರೀತಿಯ ಜೀವನಕ್ಕೆ ಹೊಂದಿಕೊಳ್ಳುವುದು ಕಷ್ಟವಾಗಿ ತೋರುವುದು ಸಹಜವೇ.

ಯಾವುದೇ ಬಗೆಯ ಹವ್ಯಾಸಗಳಲ್ಲಿ ನಿಮಗೆ ಆಸಕ್ತಿಯಿದ್ದರೆ ಅಂಥವನ್ನು ಮುಂದುವರಿಸಲು ಈಗ ಅವಕಾಶ ಮಾಡಿಕೊಳ್ಳ ಬಹುದು. ಐವತ್ತೆಂಟರವರೆಗಿನ ನಿರೀಕ್ಷೆ ಹುಸಿಯಾಗಿ ಬಹುಮೊದಲೇ ನಿವೃತ್ತಿ ಬಂದುದು ನಿಮ್ಮ ಮನಸ್ಸಿಗೆ ಹೆಚ್ಚಿನ ಆಘಾತವನ್ನು ಮಾಡಿದೆಯೆಂದು ಭಾವಿಸುತ್ತೇನೆ. ಈ ಅನ್ಯಾಯವನ್ನು ಸರ್ಕಾರವೇ ಪರಿಹರಿಸಲಿಲ್ಲವೆಂದಮೇಲೆ ಅನ್ಯಥಾ ಮಾರ್ಗವೆಲ್ಲಿದೆ? ಕಾಲಾಯ ತಸ್ಮೈನಮಃ ಎಂದುಕೊಂಡು ಸಮಾಧಾನ ಮಾಡಿಕೊಳ್ಳಬೇಕಷ್ಟೆ...

೨೦೨
ಬೇಸರಗೊಂಡ ಮಗಳು

ಸೋದರಬದಿಗೆಗೆ ಸೋದರನು ತನ್ನ ಮನೆಗೆ ಬರದೆ ಇದ್ದುದಕ್ಕೆ ಬೇಸರ. ತಂದೆಯ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಹಾಸನಸೀಮೆಯ ಹಳ್ಳಿ
8.11.78

...ಮೊನ್ನೆ ನೀನು ಬರದ ಪತ್ರ ತಲಪಿತು. ಎಲ್ಲ ಅರ್ಥವಾಯಿತು. ನನ್ನ ರೇಖು ಇಂದೇಕೆ ಹೀಗೆ ಬರೆದಿದ್ದಾಳೆ? ಎನ್ನಿಸಿತು. ಮತ್ತು ತುಂಬಾ ದುಗುಡವಾಗಿದ್ದೀಯೆಂದು ತಿಳಿಯಿತು.

"ಅಲ್ಲಾ ರೇಖು, ಯಾಕೆ ಹೀಗೆ ಬೇಜಾರು ಮಾಡಿಕೊಂಡಿದ್ದೀಯಾ. ಏನೋ ಹಬ್ಬಕ್ಕೆ ಬರಲು ಆಗಲಿಲ್ಲ. ಕಾರಣ, ನಿನ್ನ ತಮ್ಮ ಯಾರಯಾರನ್ನೋ ಹಿಡಿದು ಒಂದು ಕೆಲ್ಸ ಮಾಡಿಕೊಂಡಿದ್ದ. ಅವರು ಅವತ್ತು ಕೆಲ್ಸಕ್ಕೆ ಬರಬೇಕೂಂತ ಹೇಳಿದ್ರಂತೆ. ಅದಕ್ಕೆ ಕೆಲ್ಸಕ್ಕೆ ಹೋಗಿದ್ದ. ಅವನು ಆವತ್ತು ಎಲ್ಲೂ ಹಬ್ಬಕ್ಕೆ ಊಟಕ್ಕೆ ಹೋಗಲೇ ಇಲ್ಲ. ರಾತ್ರಿ 8 ಘಂಟೇಲಿ ಬಂದು ನಿನ್ನ ಅಕ್ಕ ಬಲವಂತ ಮಾಡಿದ್ರಿಂದ ಹೋದ. ಇನ್ನು ನನಗೆ ಬರಲು ಹುಶಾರಿರಲಿಲ್ಲ. ಇದೆಲ್ಲಾ ಏನು ಮಹಾ. ಅಷ್ಟಕ್ಕೆ ಬೇಜಾರೇ? ಈಗ ರಜಾದಲ್ಲಿ ಮಕ್ಕಳನ್ನು ಕಳಿಸಿರಲಿಲ್ವೆ? ಗೌರೀ ಹಬ್ಬದಲ್ಲಿ ಅಣ್ಣಯ್ಯ 4 ದಿನಗಳು ಇದ್ದು ಬರಲಿಲ್ವೆ ? ಇಷ್ಟಕ್ಕೆ ಏನೇನೋ ಬರದುಬಿಟ್ಟದ್ದೀಯಾ. ಹೋಗಲಿ ಬಿಡು. ಈಗಲಾದ್ರೂ ಸಮಾಧಾನ ಮಾಡಿಕೊ. ಇನ್ನು ಸ್ವಲ್ಪ ದಿನದಲ್ಲಿ ನಾನೇ ಬರುತ್ತೇನೆ. ಮುಂದೆ ಹೇಳು, ಮಕ್ಕಳು ಚನ್ನಾಗಿದ್ದಾರಾ? ನಿನ್ನ ಯಜಮಾನರು ಹುಶಾರಾಗಿದ್ದಾರಾ?...

ನಿನ್ನ ತಮ್ಮ ಈಗ ಊರಲ್ಲಿಲ್ಲಾ. ಬೆಂಗಳೂರಿನ ಇಂಜನೀಯರಿಂಗ್ ಕಾಲೇಜ್‌ನಲ್ಲಿ ಲೆಚ್ಚರರ್ ಕೆಲ್ಸ ಸಿಕ್ಕಿದೆ. ಹೋಗಿ ಒಂದು ವಾರವಾಯಿತು. ನಾಳೆ ಭಾನುವಾರ ಬರುತ್ತೇನೆಂದು ಕಾಗದ ಬರೆದಿದ್ದ. ಅಲ್ಲಿ ಇರಲು ತುಂಬಾ ತೊಂದರೆಯಂತೆ. ಹೋಟೆಲ್ ಊಟ. ಯಾವುದೂ ಇನ್ನೂ ವ್ಯವಸ್ಥೆ ಇಲ್ಲಾ. ಮುಂದೆ ನೋಡಬೇಕು. ನಿನಗೆ ಸಂತೋಷ ಅಲ್ವಾ ! ಈ ವಿಚಾರ ನಿನ್ನ ಯಜಮಾನರಿಗೆ ತಿಳಿಸು. ನಿನ್ನ ಅಮ್ಮಂಗೆ ತುಂಬಾ ವ್ಯಸನ. ಮೊದ್ಲೆಲ್ಲಾ ಓತ್ತೀನಿಂತ ಊರಲ್ಲಿರಲಿಲ್ಲಾ. ಈಗ ಪರೀಕ್ಷೆ ಮುಗಿದಕೂಡ್ಲೆ ಕೆಲ್ಸಕ್ಕೇಂತ ಪರದಾಡ್ತಾನಂತ ಅತ್ತುಬಿಟ್ಟೂಂನ್ನು. ಇದೆಲ್ಲಾ ಈಗ ಇಷ್ಟು ಸಾಕು. ಈಗ ನಿರಾಳವಾಯ್ತಾ. ಸಂತೋಷವಾಗಿ ಕಾಗ್ದಾ ಬರೀತಿಯಾ? ಆಂ. ತುಂಬ ಸಂಯಮ ಬೇಕಮ್ಮಾ. ಮಕ್ಕಳಿಗೆಲ್ಲಾ ಹೇಳು. ಆಶೀರ್ವಾದಾಂತ ತಿಳಿಸು. ತೀ|| ನಿನ್ನ ಮಾವನವರಿಗೆ ನನ್ನ ನಮಸ್ಕಾರಗಳನ್ನು ತಿಳಿಸು...

(ಅದೇ ಪತ್ರದಲ್ಲಿ ತಂಗಿಯ ಒಕ್ಕಣೆ)

...ಅಕ್ಕಾ ಯಾಕೆ ಕೋಪ. ತುಂಬಾ ಬೇಜಾರ್ ಮಾಡ್‌ಕೊಂಡ್ಬಾಗಿದೀಯಾ. ಹಬ್ಬಕ್ಕೆ ಯಾರೂ ಬರ್‍ಲಿಲ್ಲಾಂತಾನಾ. ಒಂದೊಂದ್ ವರ್ಷ ಒಬ್ಬೊಬ್ರುಮನೆಗೆ ಹೀಗಾಗುತ್ತಪ್ಪ. ಅದಕ್ಕೇನ್ ಮಾಡೋಕ್ಕಾಗುತ್ತೆ. "ಅವರ ಮನೇಲಿ ತುಂಬಾ ಪ್ರೆಸೆಂಟ್ ಮಾಡ್ತಾರೆ, ನಾನ್ ಅಲ್ಲಿಗೆ ಹೋಗ್ತೀನಿ" ಅಂತಾನಾ ಅಥವಾ ನೀನ್ ಯಾಕ್ ಹೀಗ್ ಬರ್‌ದಿದೀಯೋ ನಂಗೊತ್ತಿಲ್ಲಪ್ಪ. ನಮ್ಮಲ್ಲಿರೋದು ನಾವ್ ಕೊಡೋದು ಕಣೇ.

ಇಷ್ಟೆಲ್ಲಾ ಬರೆದೆ ಅಂತ ಬೇಜಾರಾಯ್ತಾ. ಸುಮ್ನೆ ಅಕ್ಕ ಅನ್ನೋ ಸದರದಿಂದ ಬರೆದೆ ಕಣೇ ಅಷ್ಟೆ...

ಸೋದರ ಬದಿಗೆ ಸಂಕೇತಿ ಸಮುದಾಯದ ಪ್ರಮುಖ ಆಚರಣೆಗಳಲ್ಲೊಂದು.

೨೦೩
ಅಕ್ಕನ ನೋಡುವ ಚಪಲ

ತಂಗಿಯು ಆಸೆ ತೋಡಿಕೊಂಡಿರುವ ಅಂತರ್ದೇಶೀಯ ಪತ್ರ

Safe ShreeRama ಶಿವಮೊಗ್ಗ ಜಿಲ್ಲೆ
8.2.80

Dear akkanna

ಪ್ರೀತಿಯ ಅಕ್ಕನಿಗೆ ನಿನ್ನೊಲವಿನ ತಂಗಿ...ನ ಅನಂತ ನಮಸ್ಕಾರಗಳು.

...ನೀನು ಬರೆದಿರುವಂತೆ ಚಿ||...ನ ಚೌಲಕ್ಕೆ ಬರುವುದು ಇನ್ನೂ ಗೊತ್ತಿಲ್ಲ. ಮಾವನ ಮದುವೆಗೂ ಬಂದಿರಲಿಲ್ಲ. 3 ತಿಂಗಳು ಪ್ರಯಾಣ ನಿಷಿದ್ಧವೆಂದಿದ್ದರು. ಅಕ್ಕನ ಮನೆಗೇ ಆದ್ದರಿಂದ ಪರ್ವಾಗಿಲ್ಲ ಹಾಗೆ ಅಂತೆಲ್ಲಾ ಹೇಳಿ ನೋಡ್ಬೇಕು. ಅಕ್ಕಾ ನಿನ್ನನ್ನು ತುಂಬಾ ನೋಡ್ಬೇಕು ಅಂತ ಅನ್ನಿಸ್ತಾ ಇದೆ ಅಕ್ಕಾ. ಯಾಕೆ ಅಂತ ಗೊತ್ತಿಲ್ಲ. 1½ ವರ್ಷವಾಗ್ತಾ ಬಂತು. ಮುಖಾನೇ ಮರೆತು ಹೋಗ್ತಾ ಇದೆ...ಮ್ಮ ಅಂತೂ ದಿನಕ್ಕೆ ಹತ್ತು ಸಲ ಜ್ಞಾಪಕ ಬರ್‍ತಾಳೆ.

...ನೀನು ಕಳುಹಿಸುವಂತೆ ಒತ್ತಾಯವಾಗಿ ಇವರಿಗೆ ಪತ್ರಬರೆ. ನನ್ನ ಹೆಸರಿಗೆ ಬರೆದರೂ ಚಿಂತೆ ಇಲ್ಲ. ನಾನು ಇವರಿಗೆ ತೋರಿಸುತ್ತೇನೆ. ಆಗ ಮಾತ್ರ ನನ್ನ ಮತ್ತು ನಿನ್ನ ಭೇಟಿ ಸಾಧ್ಯ. ಬಂದರೆ ಪುಟಾಣಿ ಜೊತೇಲಿ ಬರ್ತೀನಿ. ನಿನ್ನ ಬಾವಾಜಿ ಬರೋದಿಲ್ಲ. ನನಗಂತೂ ಬರ್ಬೇಕು ಅಂತ ತುಂಬಾ ಆಸೆ ಇದೆ. ನೋಡ್ಬೇಕು.

...ಓ ಮರ್ತೇ ಬಿಟ್ಟೆ. ನಿನ್ನ ಮಗ ಚಿ। ...ಆರೋಗ್ಯದಿಂದಿದ್ದಾನೆ. ಚನ್ನಾಗಿ ಆಟವಾಡಿಕೊಂಡಿದ್ದಾನೆ. ದೊಡ್ಡಮ್ಮನ ಮನೆಗೆ ಹೋಗೋಣಾಂದ್ರೆ ಕಣ್ ಕಣ್ ಬಿಡ್ತಾನೆ. ಪಾಪ ಅವನಿಗೇನು ಗೊತ್ತು. ಬಸ್ ಹತ್ತಿದ್ರೆ ಖುಷಿಯೋ ಖುಷಿ. ಎಲ್ಲಾ ಮಾತನ್ನೂ ಆಡ್ತಾನೆ.

ಊರಿಂದ ಈ ದಿನ ಕಾಗದ ಬಂದಿದೆ. ಎಲ್ರೂ ಆರೋಗ್ಯದಿಂದಿದ್ದಾರೆ. ಅಣ್ಣನೂ ಸಹ ಬರುವಂತೆ ಕಾಗದ ಬರೆದಿದ್ದಾನೆ. ನೋಡ್ಬೇಕು. ಬರ್ತೀನಿ. ನಾಳೆ ನನಗೆ ನೀರು. ಪುಟಾಣಿ ಎದ್ದಿದೆ ನೋಡ್ತೀನಿ...

೨೦೪

ಪ್ರಭಾ ಸೋಮಾರಿ (ಅತ್ತಿಗೆಗೆ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಹಾಸನಜಿಲ್ಲೆಯ ಹಳ್ಳಿ
7.7.81

ಸೌ॥ ಮಾ॥ ಶ್ರೀ ಅತ್ತಿಗೆಯವರಿಗೆ ಬಾಲಕಿಯ ನಮಸ್ಕಾರಗಳು. ಅದಾಗಿ ಈವರೆಗೆ ಉಭಯ ಕುಶಲೋಪರಿ ಸಾಂಪ್ರತ.

ಇಲ್ಲಿ ಎಲ್ಲರೂ ಆರೋಗ್ಯವಾಗಿದ್ದೇವೆ. ನಿಮ್ಮ ಪತ್ರ ಬಂದು ಬಹಳ ದಿನವಾಯಿತು. ಉತ್ತರ ಬರೆಯಲು ಬಹಳ ಸೋಮಾರಿಗಳಾಗಿಬಿಟ್ಟಿದ್ದೇವೆ. ಅದೂ ಇದೂ ಕೆಲಸ ಸರಿ, ಸಮಯ ಸ್ವಲ್ಪ ಸಿಕ್ಕರೆ ಹಿತ್ತಲು ಹೀಗೆ ಏನೇನೋ ಆಗಿ ನಾಳೆ ನಾಳೆ ಅಂತ ನೂಕಿದ್ದಾಯಿತು. ಮಾಶಿಕಗಳು 2-3, ಹೊರಗಾದೆ, ಮದುವೆ, ಹೀಗೆ ಕಳೀತು ದಿನಗಳು. ಈಗ ಅವರು...ಹಳ್ಳಿಯಿಂದ ಬಂದರು. 'ಮದ್ನಿ ಬಹಳ ಬೇಜಾರು ಮಾಡಿಕೊಂಡರು. ಒಂದು ಕಾಗದಕ್ಕೂ ಉತ್ತರ ಬರೆಯೋದಿಲ್ಲಾ' ಅಂತಾ ತುಂಬಾ ತುಂಬಾ ಬೈದುಬಿಟ್ಟರು. ಅದಕ್ಕೆ 8 ದಿವಸ ಹಿಂದೆಯೇ ತಂದಿದ್ದ ಕಾಗದವನ್ನು ತಕ್ಷಣ ಕೈಗೆ ತೆಗೆದುಕೊಂಡೆ. ನನಗೆ ಗೊತ್ತು, ನಿಮಗೆ ಬೇಜಾರಾಗಿರುತ್ತೆ ಅಂತ. ನಾನೂ ಸಹ ಕೊರಗುತ್ತಾ ಇದ್ದೆ, ಇನ್ನೂ ಕಾಗದ ಬರೆಯಲಿಲ್ಲವಲ್ಲಾಂತ. ಖಂಡಿತ ಬೇಜಾರು ಮಾಡಿಕೊಳ್ಳಬೇಡಿ ಮದ್ನಿ. ನಿಮಗೆ ಗೊತ್ತೇ ಇದೆ, ಈ ಸೋಮಾರಿಗಳ ವಿಷಯ ಏನೂಂತ. ನಾವು ಕಾಗದ ಬರೆಯಲಿ, ಬರೆಯದಿರಲಿ ನಮಗೆ ಯಾವತ್ತೂ ಜಂಬ ದೊಡ್ಡತನ ಮಾತ್ರ ಬರೋದಿಲ್ಲ. ನಾವು ಮೊದಲಿನಂತೆಯೇ ಯಾವತ್ತೂ ಇರುತ್ತೀವಿ. ನಾನು ಇಷ್ಟಾದರೂ ಬರೀತೀನಿ. ಪ್ರಭಾ ನನಗಿಂತ ಸೋಮಾರಿ. ಅದು ನಿಮಗೂ ಗೊತ್ತೇ ಇದೆ. ನೀವು ಖಂಡಿತ ಬೇಜಾರು ಮಾಡಿಕೊಳ್ಳಬೇಡಿ.

...ಹೊಸ ವಿಷಯ ತಿಳೀತು. ಹೊಲಿಗೆ ಯಂತ್ರ ತಂದಿದ್ದೀರಂತೆ. ನಾನಿನ್ನೂ ಕೂತೇ ಇದೀನಿ. ನೀವು ಆಗಲೇ ಹೊಲೆಯಲು ಶುರು ಮಾಡಿಬಿಟ್ಟರಿ. ಯಂತ್ರ ಚೆನ್ನಾಗಿದೆಯೇ? ಎಷ್ಟು ಹಣ? ಎಲ್ಲಾ ವಿಷಯವನ್ನೂ ಬರೆಯಿರಿ. ಏನೇನೋ ಹೊಲಿದಿದ್ದೀರಿ ಆಗಲೇ ಅಂತ ಕಾಣುತ್ತೆ...ನಾನು ಒಂದೊಂದು ಸಲ ಪ್ರಭಾಳ ಮನೆಗೇ ಹೋಗಿ ಅಲ್ಲೇ ಏನಾದರೂ ಹೊಲೆದುಕೊಂಡು ಬರುತ್ತೇನೆ. ಅಷ್ಟೇ...

ಪ್ರಭಾಳ ಪತ್ರ

...ನಿಮ್ಮ ಪತ್ರ ತಲಪಿತು. ನಾನು ಸುಮಾರು 15 ಸಾರಿ ಓದಿದ್ದೇನೆ. ಅಷ್ಟೆ. ನಿಮ್ಮ ಪತ್ರದಿಂದ ನನಗೆ ಬಹಳ ಸಂತೋಷವಾಯಿತು ಮತ್ತು ಆಶ್ಚರ್ಯವಾಯಿತು. ಆಶ್ಚರ್ಯಕ್ಕೆ ಕಾರಣ ನನಗೆ ಯಾರಿಂದಲೂ ಪತ್ರ ಬರುವ ಸಂಭವವೇ ಇಲ್ಲವೇ ಇಲ್ಲ. ಹೀಗಿರುವಾಗ ನಿಮ್ಮ ಪತ್ರದಿಂದ ನನಗೆ ಸಂತೋಷವಾಗಬೇಡವೆ?

...ಒಂದು ಶನಿವಾರ ಭಾನುವಾರಗಳಲ್ಲಿ ಬಿಡುವು ಮಾಡಿಕೊಂಡು ಬನ್ನಿ. ನಿಮ್ಮ ನೀರು ಸೇದುವ ಗ್ರಹಚಾರ ನನಗೊದಗಿದೆ. ಈಗ ಅದೊಂದು ಬಿಟ್ಟರೆ ಇನ್ನೆಲ್ಲಾ ಸರಿಯಾಗಿದೆ...

ಇತಿ ನಮಸ್ಕಾರಗಳು

೨೦೫

ಬಾಂಬೆಯ ಜೀವನ (ಪ್ರವಾಸದಲ್ಲಿ ಹೊಸ ಅನುಭವ)

ಬಾಂಬೆ
1-1-82

...ಹೈದರಾಬಾದಿನಿಂದ ಹೊರಟ ನಾನು ಈಗ ಬಾಂಬೆಯಲ್ಲಿದ್ದೇನೆ. ಹೈದರಾಬಾದಿನಲ್ಲಿ ಸರಿಯಾದ ಊಟ ಸಿಗದೆ ಬಹಳ ತೊಂದರೆಯಾಯಿತು. ಹೊಟ್ಟೆ ಈಗಲೂ ಸರಿ ಇಲ್ಲ. ಇರಲಿ. ಬಾಂಬೆ ಎಷ್ಟೋ ವಾಸಿ. ಪ್ರತಿ 10 ಹೋಟೆಲ್ಲಿಗೂ 5-6 ಹೋಟೆಲುಗಳು ಉಡುಪಿಯವರದ್ದು.

ಬಾಂಬೆಯ ಶಿಸ್ತಿನ ಜೀವನ ಬಲು ಸೊಗಸು. ಇಲ್ಲಿನ ಜನಸಂಖ್ಯೆ ಸುಮಾರು 78 ಲಕ್ಷ; ಬೆಂಗಳೂರಿನ ನಾಲ್ಕರಷ್ಟು ಅಂತಿಟ್ಕೋ. ಇಲ್ಲಿ ಇಲ್ಲದೇ ಇರೋ ಫ್ಯಾಕ್ಟರಿಗಳೇ ಇಲ್ಲ. ಪ್ರತಿ ಮೂಲೆಯ ಜನಗಳೂ ಇಲ್ಲಿದ್ದಾರೆ. ಇದು ಸರಿಯಾದ ಕಾಸ್ಮಾಪಾಲಿಟನ್ ಸೊಸೈಟಿಯ ಪ್ರತಿಬಿಂಬ.

ನಾನು ಚೆಂಬೂರು ಎನ್ನುವ ಏರಿಯಾದಲ್ಲಿ ರೂಮು ಮಾಡಿದ್ದೇನೆ. ಬಾಡಿಗೆ ಎಷ್ಟು ಅಂತ ಕೇಳಬೇಡ. 60ರೂ, ಒಂದು ದಿನಕ್ಕೆ. ಇಲ್ಲಿಂದ ನಮ್ಮ ಟ್ರೈನಿಂಗ್ ಪ್ಲೇಸ್‌ಗೆ ಹತ್ತಿರವಾಗುತ್ತೆ.

ಟಾಟಾ ಅಂತ ಕೇಳಿದ್ದೀಯಲ್ಲ, ಅವನ ಪವರ್ ಸ್ಟೇಷನ್ ಒಂದಿದೆ. ಸ್ಟೇಷನ್ ಎಷ್ಟು ಚೆನ್ನಾಗಿದೆ ಅಂದರೆ ಯಾವುದೋ ಬ್ರಿಟನ್‌ನಲ್ಲಿರೋ ಸ್ಟೇಷನ್ ನೋಡಿದ ಹಾಗಾಗುತ್ತೆ. ಇಷ್ಟೇ ಪ್ರೈವೇಟ್‌ನವರಿಗೂ ಗೌರ್ನಮೆಂಟಿನವರಿಗೂ ವ್ಯತ್ಯಾಸ. ಟ್ರಾಂಬೆ ಅಂತ ಇದೆಯಲ್ಲ ಅದರ ಹತ್ತಿರಾನೇ ಇದು ಇರೋದು. ನಮಗೆ 'ಸಿಮ್ಯುಲೇಟರ್' ಟ್ರೈನಿಂಗ್ ಕೊಡ್ತಿರೋ ರೀತೀನೂ ಅಷ್ಟೆ. ಎಲ್ಲಾ ಹೊಸತರ.

ನಾವಿರೋ ಈ ಏರಿಯಾ ಒಂದರಲ್ಲಿ ಸುಮಾರು 5-6 ದೊಡ್ಡ ಇಂಡಸ್ಟ್ರಿಗಳಿದಾವೆ. ಇನ್ನು ಲೆಕ್ಕ ಹಾಕ್ಕೊ ಎಷ್ಟು ಇಂಡಸ್ಟ್ರಿಯಲೈಸ್ ಆಗಿದೆ ಅಂತ...

ಹೊಸದಾಗಿ ನೌಕರಿ ಹಿಡಿದು ಮುಂಬಯಿಗೆ ಹೋದ ಹುಡುಗನೊಬ್ಬನು ತನ್ನ ಹಳ್ಳಿಯ ಅಕ್ಕನಿಗೆ ಬರೆದ ಪತ್ರ.

೨೦೬

ಸೊಸೆಯ ಬಗೆಗೆ

ಬಂಧುವೊಬ್ಬರಲ್ಲಿ 'ಅತ್ತೆ' ಯೊಬ್ಬರ ನಿವೇದನೆ

ಅಂತರ್ದೇಶೀಯ ಪತ್ರ

ಶಿವಮೊಗ್ಗ
23.8.82

...ಪ್ರಕೃತ ಚಿ॥ ನಾರಾಯಣಿಯ ಕುಟುಂಬ ಇದ್ದಕ್ಕಿದ್ದಂತೆ ತವರಿಗೆ ಹೋಗಿದಾಳೆ. ಅವಳ ತಂದೆ ತಾಯಿಯರಿಗೆ ಅಪ್ಪಿತಪ್ಪಿಯೂ ಒಂದು ಸಲ ಮಗಳನ್ನಾಗಲಿ ಅಳಿಯನನ್ನಾಗಲಿ ಕರೆಯುವ ಅಭ್ಯಾಸವಿಲ್ಲ, ಆದರೂ ಹೋದಳು. ಭೇತಾಳ ಮುಳ್ಳು ಮುತ್ತುಕದ ಮರವೇರಿದರೆ ವಿಕ್ರಮಾದಿತ್ಯ ವಾಪಸ್ ಕರೆತರಲು ಹೋಗುವಂತೆ ಚಿ॥...ಯೂ ಹೋಗಿದಾನೆ. ಮನೆಯಲ್ಲಿ ನಾನೊಬ್ಬಳೇ..

ಇಲ್ಲಿನ ಉಪಮೆಯನ್ನು ಗಮನಿಸಬೇಕು.

೨೦೭

ನೌಕರಿಯ ಜೀವನ

20-2-87

...ಮೊನ್ನೆ office ನಲ್ಲಿ club day ಇತ್ತು. ಚಿ॥ ಪುಟ್ಟುಗೆ Fancy dress ನಲ್ಲಿ Prize ಬಂದಿದೆ. ಆಧುನಿಕ ಅರ್ಜುನ ಸನ್ಯಾಸಿ ವೇಷ ಹಾಕ್ಕೊಂಡು ಸ್ವಲ್ಪ ಕೂಡ ಹೆದರದೆ 'ನೀ ಮೀಟಿದ ನೆನಪೆಲ್ಲವು' ಹಾಡು ಹೇಳಿದ. ಎಲ್ಲರಿಂದ ಚಪ್ಪಾಳೆ. ಸರ್ಟಿಫಿಕೇಟ್ ಕೂಡ ಕೊಟ್ಟಿದ್ದಾರೆ. ಈ ವಿಷಯ ಸುಧೀಗೆ ಹೇಳು, ಖುಷಿ ಪಟ್ಕೊತ್ತಾಳೆ. ನಿರೂಗೆ ಚಿತ್ರಗೀತೇಲಿ ಬಂತು. ನಂಗೆ ಕೂಡ 4 Prize ಬಂದಿದೆ. ಇವರಿಗೂ ನಾಟಕದಲ್ಲಿ 1 ಬಂದಿದೆ. ತುಂಬಾ grand ಆಗಿ ಮಾಡಿದ್ರು...

ಆಧುನಿಕ ವಿದ್ಯೆ, ನೌಕರಿ ಪಡೆದಂತೆ ಹೊಸ ರಂಗಗಳಿಗೂ ಈ ಜನರು ಕಾಲಿಟ್ಟು ಮಾಡುತ್ತಿರುವ ಸಾಧನೆಯ ಮೊದಲ ಹೆಜ್ಜೆಗಳಿವು.

೨೦೮

ಜಿಗ್‌ಜಾಗ್ ಮಾಡು

ಹಳ್ಳಿಯ ಸೋದರಿಯಿಂದ ಹಳ್ಳಿಯ ಸೋದರಿಗೆ ಪತ್ರ

ಕ್ಷೇಮ ಶ್ರೀ 6.3.1988

ಪ್ರೀತಿಯ ರಾಮಕ್ಕನಿಗೆ ಅನಂತ ನಮಸ್ಕಾರಗಳು. ಅದಾಗಿ ಉ.ಕು.ಸಾಂ. ನೀನು ಕಳಿಸಿಕೊಟ್ಟಿರುವ ಮಿಡಿ ತುಂಬಾ ಚೆನ್ನಾಗಿದೆ. ಅದನ್ನು ಚಿಕ್ಕಕ್ಕನೇ ಕೊಟ್ಟಿದ್ದಾಳೆಂದು ಹೇಳಿದ್ದೇನೆ. ನಾನು ಅತ್ತುಂಬಿಯವರೊಂದಿಗೆ ಕಳಿಸಿರುವ ಬಟ್ಟೆಯನ್ನು ಅಲ್ಲಿ ಅಳತೆಯ ರವಿಕೆ ಇದೆಯಲ್ಲಾ ಹಾಗೆ ಹೊಲಿ. ಬಾರ್ಡರ್ ಕಳಿಸಿರುವುದು ಬೆರಳು ಅಗಲ ಬಿಟ್ಟು (ಎಂದರೆ ತುದಿಗೆ ಅಲ್ಲ) ಹಾಕಬೇಕು. ಇನ್ನೊಂದು ಸರಿಯಾಗುವಂತಿದೆ (ತೋಳು ಮತ್ತು ಬೆನ್ನಿಗೆ ಆಗುತ್ತದೆ). ನಾನೂ ಮೊನ್ನೆ ಈ ತರ ಸೀರೆ ತೆಗೆದುಕೊಂಡು ಅದಕ್ಕೆ ಬಾರ್ಡರ್ ಕೊಡಿಸಿದ್ದೇನೆ. ಪದ್ದಕ್ಕ ಹಾಕಿಕೊಟ್ಟಳು. ಗೌರಿಹಬ್ಬದ ಒಳಗೆ ಹೊಲಿದು ದಯವಿಟ್ಟು ಕಳಿಸಿಕೊಡು. ಗಿರಿಜೆಯ ಚೂಡಿದಾರ್‌ಗೆ ನಿಮ್ಮ ಊರಿನಲ್ಲಿ ಅನುಕೂಲವಿದ್ದರೆ ಎಲ್ಲ ಕಡೆಗೂ ಜಿಗ್‌ಜಾಗ್ ಮಾಡಿಸಿಬಿಡು. ಪ್ಯಾಂಟೂ ಸಹ ಸ್ವಲ್ಪ ಕಾಲೆಲ್ಲಾ ಲೂಸಾಗೇ ಇರಲಿ. ನಿನಗೆ ಆಗಾಗ ತೊಂದರೆ ಕೊಡುತ್ತಿದ್ದೇನೆ. ಕ್ಷಮೆ ಇರಲಿ. (ನನ್ನ ರವಿಕೆಗೂ ಸುತ್ತಲೂ ಜಿಗ್‌ಜಾಗ್ ಮಾಡಿಸಿಬಿಡು. ಆಗ ಲೈನಿಂಗ್ ಕೊಡುವ ಅವಶ್ಯಕತೆ ಇರುವುದಿಲ್ಲ.)

ಇತಿ ನಮಸ್ಕಾರಗಳು

ನಳಿನಿರಾವ್

೨೦೯

ಮಗಳಿಗೆ ಹಿತನುಡಿ (ತಂದೆಯ ಕವರು)

ಕ್ಷೇಮ ಶ್ರೀ : ಹಾಸನ ಜಿಲ್ಲೆ
ತಾ 20.10.91

ಚ್ಛಿ॥ ಸೌ॥ ಪುಟ್ಟನಿಗೆ 'ದೀರ್ಘಸುಮಂಗಲೀಭವ' ಎಂಬ ಆಶೀರ್ವಾದಗಳು. ಅದಾಗಿ ಈವರವಿಗೆ ಇಲ್ಲಿನ ಕುಶಲ ಸಮಾಚಾರಗಳು.

ನಿನ್ನ ಕಾಗದ ತಲುಪಿ ಬಹಳ ಆನಂದವಾಯಿತು. ಸಂತೋಷಕ್ಕೂ ಕಣ್ಣೀರು ಬರುವುದೆಂದು ನಿನ್ನ ಕಾಗದದ ಒಕ್ಕಣೆಯಿಂದ ಅನುಭವ ವೇದ್ಯವಾಯಿತು. ಹೀಗೆ ಎಂದೆಂದೂ ಸಂತೋಷಕರವಾದ ಪತ್ರಗಳೇ ಬರಲೆಂದು ಹಾರೈಸುತ್ತೇನೆ. ವಿದ್ಯಾವಿನಯ ಸಂಪನ್ನತೆಯಿಂದ ಕೂಡಿದ ಪತಿ ದೊರೆಯಲು ಪೂರ್ವಜನ್ಮದ ಪುಣ್ಯವಿರಬೇಕು. ಎಲ್ಲರಿಗೂ ಈ ಭಾಗ್ಯ ದೊರಕುವುದಿಲ್ಲ. ಆದ್ದರಿಂದ ಅವರ ಮನಸ್ಸಿನಂತೆ ನಡೆ. ಅವರಿಗೆ ಎದುರು ವಾದಿಸಿ ಎಂದೂ ಅವರ ಮನಸ್ಸಿಗೆ ಬೇಸರವಾಗುವಂತೆ ಮಾಡಬೇಡ. ನಿನ್ನ ಅತ್ತೆ ಮಾವಂದಿರು ದೇವತಾಪುರುಷರು. ಬಹಳ ಭಕ್ತಿಯಿಂದ ಎಚ್ಚರಿಕೆಯಿಂದ ವರ್ತಿಸು. ಬಹಳ ಸೈರಣೆಯಿಂದ ಆದರ್ಶ ಗೃಹಿಣಿಯಾಗು. ಚಿ॥ ಗಳನ್ನು ಪ್ರೀತಿಯಿಂದ ಕಾಣು. ಒಟ್ಟಿನಲ್ಲಿ ಎಲ್ಲರ ಮನಸ್ಸನ್ನೂ ಗೆದ್ದು ಬಾಳುವಂತೆ ಹಾರೈಸುತ್ತೇನೆ.

ಈಗ ಮಳೆ ಚನ್ನಾಗಿ ಆಗಿದೆ. ಗದ್ದೆ ಬೆಳೆ ಸಾಮಾನ್ಯ. ತೋಟದ ಕೆಲ್ಸ ಮಾಡಲು ಆಳಿಲ್ಲದೆ ಏನೂ ಮಾಡಿಲ್ಲ. ಅಡಕೆ ಕುಯ್ಲಿಗೆ ಬಂದಿಲ್ಲಾ. ಬಾಕಿ ಎಲ್ಲಾ ಯಥಾಸ್ಥಿತಿಯಲ್ಲಿದೆ...

ಗುಚ್ಛ - 12

ಯೋಗಕ್ಷೇಮ

ಜೀವನವು ಅನೇಕ ಮುಖಗಳುಳ್ಳದು. ಯಾವುದೋ ಮುಖ್ಯ ವಿಚಾರಗಳಿಗಾಗಿ ಬರೆದ ಏಕವಿಷಯಕ ಪತ್ರಗಳಿರುವಂತೆ, ಅನೇಕ ಮುಖ್ಯ ಸಾಂಸಾರಿಕ ಸಂಗತಿಗಳನ್ನು ಕುರಿತ ಕೌಟುಂಬಿಕ ಪತ್ರಗಳೂ ಇವೆ. ಇಂಥ ಕೆಲವು ಪತ್ರಗಳನ್ನೂ ಇಲ್ಲಿ ಅವುಗಳ ಪೂರ್ಣರೂಪದಲ್ಲಿ ಕೊಟ್ಟಿದೆ. ಇವು ಪತ್ರದ ಸಾಮಾನ್ಯ ಸ್ವರೂಪವನ್ನೂ ಸಂಸಾರದ ಬಹುಮುಖ ಚಿತ್ರವನ್ನೂ ಒದಗಿಸುತ್ತವೆ. ಯಾವಾಗಲೂ ಸಂಸಾರವು ಬಹುಪಾತಳಿಗಳಲ್ಲಿ ಚಲಿಸುತ್ತಿರುವುದರಿಂದ ಇಂಥ ಪತ್ರಗಳು ಹೆಚ್ಚು ಸಹಜ ಚಿತ್ರವನ್ನು ಕಟ್ಟಿಕೊಡುತ್ತವೆ.

೨೧೦

ಶಾವಿಗೆ ಒರಳು (ಸೋದರನಿಗೆ ಬರೆದ ಕಾರ್ಡು)

ಕ್ಷೇಮ ಶ್ರೀ ತಾ। 9-12-1923

ಹಾಸನಜಿಲ್ಲೆಯ ಹಳ್ಳಿ

ತೀ।। ಅಣ್ಣಯ್ಯನವರ ಚರಣಸನ್ನಿಧಿಯಲ್ಲಿ ಬಾಲಕನು ಮಾಡುವ ವಿಜ್ಞಾಪನೆಗಳು. ಈವರಿವಿಗೆ ಉಭಯಕುಶಲೋಪರಿ ಸಾಂಪ್ರತ.

ನೀವು ಬರೆದ ಕಾರ್ಡು ತಲಪಿತು. ಅದರಂತೆ 10 ರೂಪಾಯಿಗಳನ್ನು ಮ।। ಲಾಯರ್ ಕೃಷ್ಣರಾಯರ ಮನೆಯಲ್ಲಿರುವ ಮ।। ಶಾಮಣ್ಣನವರ ಸಂಗಡ ಕಳುಹಿಸಿದ್ದೇನೆ. ಅವರನ್ನು ಕೇಳಿ ತೆಗೆದುಕೊಳ್ಳುವುದು. ಇಲ್ಲಿಯ ಗಲಾಟೆಯಿಂದಲೂ ಅಡಿಕೆ ರೇಖಿ ಮಾಡಿಸಬೇಕಾದ್ದರಿಂದಲೂ ನಾಳೆ ನಾಡಿದ್ದರಲ್ಲಿ ಊರಿಗೆ ಪ್ರಯಾಣ ಮಾಡುತ್ತೇವೆ. ಮಲ್ಲರಾಜಪಟ್ಟಣದಲ್ಲಿ ವಾಸಕ್ಕನುಕೂಲಿಸಲಿಲ್ಲ, ಈ ಕಾರಣದಿಂದ ಅಡಿಕೆ ಗುತ್ತಿಗೆ ಮಾಡಲಿಲ್ಲ. ತೀ।।...ರವರ ಕುಟುಂಬವು ಪುಂಶಿಶುವನ್ನು ಹೊಂದಿದುದನ್ನು ಕೇಳಿ ಬಹಳ ಸಂತೋಷವಾಯಿತು. ತೀ।।ರ ವರ್ಗದ ವಿಚಾರ ಇನ್ನೂ ಬಂದಿಲ್ಲ, ಅದು ಜುಲೈಗೆ ಬರುವುದೆಂದು ನೆನ್ನೆ ಹೊಸ ವದಂತಿ ಹುಟ್ಟಿದೆ. ನೋಡಬೇಕು. ಶಾವಿಗೆ ಒರಳು ಸೋಮನಹಳ್ಳಿಯಲ್ಲಿರುವುದರಿಂದ ಅಲ್ಲಿಂದಲೇ ತರಿಸಿಕೊಳ್ಳುವಂತೆ ತೀ।।ರವರಿಗೆ ಹೇಳುವುದು. ನಾನು ಈಗಲೂ ನಮ್ಮ ಉಪಾಧ್ಯಾಯರ ಮನೆಯಲ್ಲಿಯೇ ವ್ಯಾಸಂಗ ಮಾಡಿಕೊಂಡಿರುತ್ತೇನೆ. ಚಿ।।...ಯೂ ಬುದ್ಧಿವಂತನಾಗಿ ವ್ಯಾಸಂಗ ಮಾಡಿಕೊಂಡಿರುತ್ತಾನೆ. ನನಗೆ I ಮತ್ತು II ಕ್ವಾರ್ಟರುಗಳಲ್ಲಿ ಪಾಸಾಗಿದೆ. ನನಗೆ ಈಗ 3 ದಿನಗಳಿಂದಲೂ ಛಳಿ ಜ್ವರ ಬರುತ್ತಿದೆ. ಮೊಬಲಗನ್ನು ಬಹು ಜೋಕೆಯಾಗಿ ಇಟ್ಟುಕೊಳ್ಳುವುದು. ಪೆಟ್ಟಿಗೆಯಲ್ಲಿ ಮನಸ್ವಿಯಾಗಿಡಬಾರದು. ತೀ।।...ರವರ ಕೂಡಾ ಕೊಟ್ಟಿದ್ದರೂ ಬಾಧೆಯಿಲ್ಲ. ಎಚ್ಚರ. ವ್ಯಾಸಂಗದಲ್ಲಿ ನಿರತನಾಗಿರುವುದು. ದೇಹಾರೋಗ್ಯದ ಎಚ್ಚರ ಚೆನ್ನಾಗಿರಲಿ. ಪರಮೇಶ್ವರಾನುಗ್ರಹದಿಂದ ಎಲ್ಲರೂ ಕುಶಲರು.

ಇಂತು ನಮಸ್ಕಾರಗಳು.

ವಿದ್ಯಾರ್ಥಿಯೂ ಅಡಿಕೆ ತುಡಿಕೆಯಲ್ಲಿ ತೊಡಗಿಕೊಳ್ಳುವುದು, ಶಾವಿಗೆ ಒರಳಿನ ಪ್ರಸ್ತಾಪದಲ್ಲಿ ಸೂಚ್ಯವಾದ – ಸಂಕೇತಿಗಳಿಗೂ ಶಾವಿಗೆಗೂ ಇರುವ ನಿಕಟತೆ – ಇಲ್ಲಿ ಮುಖ್ಯ ಸಂಗತಿಗಳು.

೨೧೧

ಅಡಿಕೆ ಗುತ್ತಿಗೆಗೆ ಕೊಡಿ (ವಿದ್ಯಾರ್ಥಿಯು ತಂದೆಗೆ ಬರೆದ ಕಾರ್ಡು)

Safe Sree 25.10.33

Mysore

ತೀ।। ರವರ ಚರಣಸನ್ನಿಧಿಯಲ್ಲಿ ಬಾಲಕಕೃತಾನೇಕ ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಪ್ತಯಃ ಸಂಪ್ರತಿ.

ಗುರ್ವನುಗ್ರಹದಿಂದ ಸಧ್ಯಕ್ಕೆ ಪಾಸಾಗಿದೇನೆ ಮತ್ತು ಮೊದಲನೆಯ ಬಹುಮಾನವೂ ದೊರೆತಿದೆ. ಈ ಸರಿ ನಮ್ಮ ತರಗತಿಯಲ್ಲಿ 12 ಜನಗಳಿಗೆ 4 ಜನಗಳು ಮಾತ್ರ ಪಾಸಾಗಿರುತ್ತಾರೆ. ಅಂತು ಸುಸ್ತಿನ ವಿಚಾರ. ವಾರಗಳೆಲ್ಲವೂ ಮೊದಲಿನಂತೆ ಅನುಕೂಲವಾಗಿವೆ. ಪಂಚೆಗಳನ್ನು ತೆಗೆದುಕೊಂಡೆನು.

...ತಾವು ದಯೆಯಿಟ್ಟು ಸಾಧ್ಯವಾದಮಟ್ಟಿಗೆ ಅಡಿಕೆ ಗುತ್ತಿಗೆಗೆ ಕೊಟ್ಟುಬಿಡಬೇಕಾಗಿ ಪ್ರಾರ್ಥನೆಗಳು. ರೇಖಿ ಮಾಡುವುದು ಬಹಳ ಕಷ್ಟವಾಗುತ್ತೆ. ಸಣ್ಣನಿಂದ ಎಲೆ ಹಣ ಪೂರ ಬಂತೆ. ಅವನು ನಿಮ್ಮ ಹಸ್ತಕ್ಕೆ ಕೊಟ್ಟಿರುವುದು ೧ ರೂ. ಎಲೆಯವನು ನನ್ನ ಕೈಲಿ ಕೊಟ್ಟಿರುವುದು ೧-೧೨-೦. ಬಾಕಿ ವಜಾ ಮಾಡಿಕೊಳ್ಳುವುದು.

ಅತಿಶಯವಿಲ್ಲ

ನಮಸ್ಕಾರಗಳು.

ಮಕ್ಕಳು 'ಓದಲು' ಹೊರಗೆ ಹೋದಾಗ ಮನೆಯಲ್ಲಿ ಕುಗ್ಗಿದ ಜನಬಲದಿಂದ, ಅಡಿಕೆ ತುಡಿಕೆಯನ್ನು ಸ್ವತಃ ಮಾಡಲಾಗದೆ, ಗುತ್ತಿಗೆಗೆ ಕೊಡುವ ಪ್ರವೃತ್ತಿ ಕಾಣಿಸಿಕೊಂಡಿದೆ.

೨೧೨

ಮಳೆ : ತೊಂದರೆ (ವಿವಾಹಿತಪುತ್ರನಿಗೆ ತಂದೆಯ ಕವರು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ಹಾಸನಜಿಲ್ಲೆ

17 6/36

ಅಶೀರ್ವಾದಾಃ ಉಭಯಕುಶಲ ಸಂಪ್ರತಿ.

ಈ ಊರಿನಲ್ಲಿ ಚೌರ್ಯ ಪ್ರಸಂಗಗಳೇನೋ ಇವೆ. ನೆನ್ನೆ ರಾತ್ರೆಯೂ...ನನ ಮನೆಗೆ ಬಿದ್ದು ಕೆಲವು ಪದಾರ್ಥಗಳನ್ನಪಹರಿಸಿ ದರೆಂದು ಕಿಂವದಂತಿಯಾಗಿದೆ.

ಹೋದ ವರ್ಷದ ಅಡಿಕೆಯೆಲ್ಲವೂ ಹಾಸನಕ್ಕೆ ಬರುವ ವೇಳೆಗೇ 3 Rs. ಬಿಕರಿಯಾಗಿತ್ತು, ಆಗಿನ ಕೆಲಸವನ್ನು ನೆರವೇರಿಸಿತು. ನೂರು ಸೇರು ಅಡಿಕೆ ಮಾತ್ರ ಹಾಜರಿದೆ. ಸಮಯ ನೋಡುತ್ತಿದೇನೆ. 2-3 ಅಂಗಡಿಗಳಿಂದ 16-17 ರೂ. ಕೊಡಬೇಕಾಗಬಹುದು. ಇದು ವಿನಾ ಇನ್ನಾರಿಗೂ ಏನೂ ಕೊಡಬೇಕಾದ ಋಣವಿಲ್ಲ, ಗಾಬರಿಪಡಬೇಡ. ಕಂದಾಯವೂ (ರಿವಿನ್ಯೂ) ಬೇಬಾಕಾಗಿದೆ.

ಮಳೆಯಿಲ್ಲದ ತೊಂದರೆ ನಮಗೆ ಮಾತ್ರವಲ್ಲ, ನಮ್ಮ ಸುತ್ತಮುತ್ತ 10 ಮೈಲಿ ಫಾಸಲೆಯವರಿಗೆಲ್ಲಾ ಇದೆ. ಇದಕ್ಕಾಗಿ ಯಾಗಲಿ ಇತರ ವಿಚಾರಗಳಿಗಾಗಲಿ ಕ್ಲೇಶ ಪಡಬಾರದೆಂದು ಮೊದಲೇ ಸೂಚಿಸಿದ್ದೇನೆ. ಜ್ಞಾಪಕವಿರಲಿ. ಜಗತ್ಸಂರಕ್ಷಕನ ಇಷ್ಟದಂತಾಗುವುದು ಸಿದ್ಧವಾಗಿದೆ, ಇದಕ್ಕೇಕೆ ಯೋಚನೆ ?

ಮನೆಯಲ್ಲಿರುವ ವ್ಯಕ್ತಿಯಲ್ಲಿ ಕಂಡುಬರುವ ದೋಷ, ಲೋಪಗಳು ಆಗಾಗಲೇ ತಿದ್ದಲ್ಪಡುತ್ತಿವೆಯೋ ಪರಂತು ಔದಾಸೀನ್ಯಕ್ಕೆಡೆಗೊಟ್ಟಿಲ್ಲ. ಈ ಭಾಗದಲ್ಲಿ ನಿನಗಿಂತಲೂ ಹೆಚ್ಚಿನ ಗಮನವು ನಮಗಿದೆ. ಗಾಬರಿಯಿಲ್ಲ.

ಆದರೂ ಮಾತ್ರಾಹ್ವಾನ ಕಾಲದಲ್ಲಿ ಇಷ್ಟವು ನೆರವೇರದೆ ಜನ್ಮಗೃಹದ ಅಗಲುವಿಕೆಯ ವಿಷಾದವು ಕೆಲವು ಚರ್ಯೆಗಳಿಂದ ತೋರುತ್ತಿದೆ. ಇದು ಲೋಕದಲ್ಲಿ ಸ್ತ್ರೀಜನ ಸ್ವಭಾವವಾದ ಕರ್ತವ್ಯವೇ ಹೌದು. ಅತಿಶಯವಲ್ಲ.

ಓದಾನು, ಅಂಗಣ್ಣು ಅಳಿಕ್ಯಕ್ಕಿ ವಂದಾಕ ಉಟ್ಟೂಡ್‌ರ ವಿಚಾರ್‌ತ್ಲೆ ಓಷಣ್ಣದಮ್ಮ ಅಣ್ಣರ್‌ದ್ ಒರು ಭಾರೀ ಯೋಚನೇಕಿ ವಂದ್ರಾಂದ್. ಇಂದೆ ವಿಚಾರ್‌ತ್ಲೆ ಉಂದೆ ಅಭಿಪ್ರಾಯೆತ ನಿರೀಕ್ಷಣೆ ಪಣ್ಣಾಣ್ರಾಣಿ. ಯುಕ್ತ ವಿಚಾರ್‌ತ ತೆರ್‌ಪಿ.+

ಈ ಸಲ ನೀನು ಕಾಗದ ಬರೆದುದಕ್ಕೆ ಪ್ರಾಯಃ 1 ಘಂಟೆಯ ಕಾಲ ಹಿಡಿದಿರಬಹುದು. ಹೀಗೆಯೇ ಮುಂದೆಯೂ ಬರೆಯುತ್ತಾ ಬಂದರೆ ಸ್ವಲ್ಪಮಟ್ಟಿಗಾದರೂ ನೋಡುವಂತಾದೀತು. ಆಚರಿಸು.

ನಮ್ಮ ಮತ್ತು ತೀ॥ ಉ॥ ರ ಮನೆಗಳಲ್ಲಿ ದೈವಾನುಗ್ರಹ ದಿಂದೆಲ್ಲರೂ ಕುಶಲರೆಂದು ತಿಳುಹಲು ಸಂತೋಷಿಸುತ್ತೇನೆ. ಯಾವ ಭಾಗದಲ್ಲೂ ಯೋಚಿಸಬೇಡ. ಶಾಂತಮನಸ್ಕನಾಗಿರು.

ಆಶೀಃ

ವ್ಯವಸಾಯ ವ್ಯವಹಾರಗಳ ವಿಚಾರದಲ್ಲಿ ವಿದ್ಯಾರ್ಥಿಯು ಚಿಂತಾಮುಕ್ತನಾಗಿರಬೇಕೆಂಬ ತಂದೆಯ ಅಪೇಕ್ಷೆ; ತಂದೆ ತಾಯಿಗಳ ಜೊತೆಯಲ್ಲಿಯೇ ಹಳ್ಳಿಯಲ್ಲಿ ಇರುವ ಸೊಸೆಯ ವರ್ತನೆ ಮತ್ತು ನಿರ್ವಹಣೆ; ಮಗನ ಕೈಬರಹದ ಬಗೆಗೆ ಸೂಚನೆ; ತಮ್ಮ ಮನೆಯದಲ್ಲದೆ ಪುರೋಹಿತರ ಮನೆಯ ಯೋಗಕ್ಷೇಮ ವಿಚಾರ ಇಲ್ಲಿ ಮುಖ್ಯವಾದ್ದು. ಸಂಕೇತಿ ಭಾಷೆಯಲ್ಲಿಯೇ ಬರೆದ ಒಂದೆರಡು ಸಾಲುಗಳು ಇಲ್ಲಿವೆ. ಅದು ಕನ್ನಡ ಲಿಪಿಯಲ್ಲಿ ಬರೆದುದು. ಸಂಗ್ರಹವಾದ ಸಾವಿರಾರು ಪತ್ರಗಳಲ್ಲಿ ಸಂಕೇತಿ ಭಾಷೆಯ ಸಾಲುಗಳು ದೊರೆತುದು ಬಹು ಕಡಮೆ. ಅತಿರಹಸ್ಯದ್ದೋ, ಆತ್ಮೀಯವಾದದ್ದೋ, ಮುಖ್ಯವೆನಿಸಿದ್ದೋ ಆದಾಗ ಮಾತ್ರ ಪತ್ರಭಾಗವಾಗಿ ಸಂಕೇತಿ ಭಾಷೆಯು ಬಳಕೆಯಾಗುತ್ತಿದ್ದಿರಬಹುದು.

೨೧೩

ತಂದೆಯ ವಾಗ್ದಂಡ (ಅವಿವೇಕಿಯಾಗಿ ವರ್ತಿಸಿದ ಮಗನಿಗೆ ಕವರು)

ಕುಶಲಂ ಶ್ರೀಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ತಾ। 23.6.1941

ಹಾಸನಜಿಲ್ಲೆಯ ಹಳ್ಳಿ

+ ಏನಾದರೂ ಅಲ್ಲಿಂದ ಕರೆಯಲು ಬಂದರೆ, ಕಳಿಸುವ ವಿಚಾರದಲ್ಲಿ ಏನು ಮಾಡುವದು ಎನ್ನುವುದು ಒಂದು ಭಾರೀ ಯೋಚನೆಗಿಟ್ಟುಕೊಂಡಿದೆ. ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಯುಕ್ತವಾದ ವಿಚಾರವನ್ನು ತಿಳಿಸು.

ಚಿ॥ ಗೆ ಆಶೀರ್ವಾದಾಃ ಉ.ಕು.ಸಂ.

ವಿಶಾಲವಾದ ಬರವಣಿಗೆಯಿಂದ ಕೂಡಿದ ನಿನ್ನ ಕಾರ್ಡು ಬಂದು ಸೇರಿ ಸಂತೋಷವಾಯಿತು.

ನಿನಗೆ ವೇತನವು ಹತ್ತು ರೂಪಾಯಿಗಳು ಬರುವುವೆಂದು ನಿನ್ನಿಂದಲೇ ಕೇಳಿದ್ದನ್ತೆ, ನನ್ನ ಜ್ಞಾಪಕ. ಅಥವ ನನ್ನ ಅರುಳು ಮರುಳೇ ಹಾಗಾಯಿತೋ ತಿಳಿಯದು.

ಅಡಿಗೆ ಮಾಡಿಕೊಂಡು ವಿದ್ಯಾಭ್ಯಾಸ ಮಾಡುವುದು ಕೇವಲ ಶ್ರಮವೆನ್ದು ಹಿನ್ದೆಯೇ ನಿನಗೆ ಸೂಚಿಸಿದ್ದನ್ತೆ, ಜ್ಞಾಪಕ. ಅದು ನಿನಗೆ ಆಗ್ಯೆ ಹಿತವಾಗಿ ಪರಿಣಮಿಸದುದಕ್ಕಾಗಿ ಪಶ್ಚಾತ್ತಾಪಪಡಬೇಕಾಗಿದೆ.

ಇರಲಿ. 1 ತಿಂಗಳು ಅಡಿಗೆ ಮಾಡಿಕೊಂಡನಂತರ ಅಲ್ಲಿ ಖರ್ಚು ಹೆಚ್ಚು, ಬರುವ ದುಡ್ಡು ಸಾಲದು ಎಂಬಂಶವೂ ತಿಳಿಯದೇ ಹೋಯಿತೆ ? ಕೋಲಾರದಲ್ಲಿ 8 $^{1}/_{2}$ ವರ್ಷಗಳು ವಾಸಿಸಿದಾಗ್ಯೂ ಅನುಭವವಾಗಲಿಲ್ಲವೆ ? ಬರುವ ವೇತನವು ಸಾಲದೆಂಬುದು ಗೊತ್ತಾದ ಕೂಡಲೆ ನೀನು ನಿನ್ನ ಮನೆಗೆ ಬರುವುದರಲ್ಲಿ ಯಾರ ಅಡ್ಡಿಯೂ ಇರಲಿಲ್ಲವೆಂದೂ, ಮುಂದೆಯೂ ಇಲ್ಲವೆಂದೂ ತೋರಲಿಲ್ಲವೆ ? ಪರನ್ತು ನೀವಿಬ್ಬರೂ ನಿಮ್ಮ ನಿಮ್ಮ ಸ್ಥಳಗಳಿಗೆ ಪ್ರಯಾಣ ಮಾಡುವಾಗ್ಯೆ ನಾನು ಇನ್ನೂ ರುಗ್ಣಶಯ್ಯೆಯಲ್ಲಿಯೇ ಇದ್ದುದೂ, ನಿನ್ನ ಅಣ್ಣನೂ ನಿನ್ನನ್ನು ಕೋಲಾರವಾಸವನ್ನು ಸಾಕುಮಾಡು ಎಂದು ತಿಳಿಸಿದುದೂ ಸ್ಮೃತಿಪಥದಲ್ಲಿರಬಹುದು.

ಮೇಲಾಗಿ ನೀನು ಪ್ರಥಮತಃ ವಿದ್ಯಾಭ್ಯಾಸಕ್ಕಾಗಿ ಕೋಲಾರಕ್ಕೆ ಪ್ರಯಾಣ ಮಾಡುವಾಗ್ಯೆ ನಿನ್ನಣ್ಣನು ಈ ವಿದ್ಯಾಭ್ಯಾಸದಿಂದ ಯಾವ ಜೀವನೋಪಾಯವೂ ಇಲ್ಲವೆಂದೂ, ದೈಹಿಕ ಮಾನಸಿಕ ಕ್ಲೇಶಗಳಿಗೆ ಮತ್ತು ದ್ರವ್ಯವ್ಯಯಕ್ಕೆ ಎಡೆಯಾಗುವುದು ಮಾತ್ರವೇ ಫಲವೆಂದೂ ಸೂಚಿಸಿದುದನ್ನೂ ಮರೆತೆಯಾ ? ಈಗ ಪಶ್ಚಾತ್ತಾಪಪಟ್ಟೇನು ಫಲ ? "ನಡೆದುದನ್ನು ನುಡಿದು ಫಲವಿಲ್ಲ". ಒಟ್ಟಿನಲ್ಲಿ ವಿದ್ಯಾಭ್ಯಾಸದಿಂದ ಕೆಡುಕೆಂದು ಅಭಿಪ್ರಾಯವಲ್ಲ. ಸಧ್ಯಕ್ಕೆ ನೋಡಿದಲ್ಲಿ ನೀನು ಗುರುದ್ರೋಹ ಮಾಡಲಾರೆಯೆಂದು ತೋರುತ್ತೆ.

ಸುಖಜೀವನವು ಶ್ರಿಮನ್ತರಿಗೇ ವಿನಾ ನಮ್ಮಂತಹವರಿಗಲ್ಲ. ಏಕೆಂದರೆ ನಾವು ಅಂತಹ ಪುಣ್ಯವನ್ನು ಪಡೆಯಲಿಲ್ಲ.

ಇಲ್ಲಿಂದ ಪ್ರಯಾಣ ಮಾಡುವಾಗ 20 ಸೇರಕ್ಕಿಯನ್ನು ಕೊಂಡು ಹೋಗಿದ್ದರೆ 1 ತಿಂಗಳಿನ ಸಾಲವಾದರೂ ತಪ್ಪುತ್ತಿತ್ತು. ನಿನಗೆ ಮನಬರಲಿಲ್ಲವೆಂದು ಕಾಣುತ್ತೆ. ಮಾಡುವದಾದರೂ ಏನಿದೆ?

ನೀನು ಇಲ್ಲಿಂದ ಪ್ರಯಾಣ ಮಾಡುವಾಗ ಅಥವ 4-6 ದಿನ ಮುಂಚೆ ನಿನ್ನಣ್ಣನು ಸೀರೆಯನ್ನು ತರುವ ಮಾತೆತ್ತಿದಾಗ ಮೈಸೂರಿನಿಂದ ಕಳುಹಿಸಿಕೊಡುವ ಸೂಚನೆಯನ್ನು ತಿಳಿಹಿದುದರಿಂದ ಅದನ್ನು ನಂಬಿ ಈವರಿಗೂ ತೆಗೆದುಕೊಳ್ಳಲಿಲ್ಲವೇ ವಿನಾ ಇಲ್ಲಿಯಾಗಲಿ ಹಾಸನದಲ್ಲಿಯಾಗಲಿ ಸಿಗದೇ ಇರಲಿಲ್ಲ. ನಿನ್ನ ಮಾತು ದೃಢಪಟ್ಟಂತಾಯಿತಲ್ಲವೆ ? ನಿನ್ನ ಮಾತನ್ನು ನಂಬಿ ಇಲ್ಲಿ ಮಾರಲು ಬಂದಿದ್ದ ಹಲವು ಸೀರೆಗಳನ್ನೆಲ್ಲಾ ಚಿ॥ ಸೌ॥ ನಿನ್ನ ಹೆಂಡತಿಯು ಅಲಕ್ಷ್ಯ ಮಾಡಿದಳು. ಪಟ್ಟಣಕ್ಕೆ ಹೋಗಿ ಸೀರೆಯನ್ನು ತರುವೆನೆಂದು ಬರೆದಿರುವಿ. ಯಾವ ಪಟ್ಟಣದಿಂದಲೋ ತಿಳಿಯಲಿಲ್ಲ. ಮನಬಂದು ಅದನ್ನು ಕೊಂಚ ತಿಳುಹುವೆಯಾ ?

"ದುರ್ಜೀವನ" ಎಂದು ಉಲ್ಲೇಖಿಸಿರುತ್ತೀಯೆ. ಇಲ್ಲಿ ನಮ್ಮವರೆಲ್ಲಾ ಅಂದರೆ ಅನೇಕರು ಮೇಲ್ಕಂಡ ಹೆಡ್ಡಿಗೇ ಸೇರಿದವರಾಗಿರುವಾಗ ನಾವೂ ಅವರ ಜೊತೆಯೇ ತಾನೆ ?

ನೀನು ಮೈಸೂರಿಗೆ ಪ್ರಯಾಣ ಮಾಡುವಾಗ ಚಿ॥...ಯು ಏನು ಪ್ರಶ್ನೆ ಮಾಡಿದನೆಂಬುದಾಗಲೀ ನೀನೇನು ಉತ್ತರ ಹೇಳಿದೆಯೆಂಬುದಾಗಲಿ ನನಗೆ ತಿಳಿಯದು. ತಿಳಿಸಬಹುದಾದರೆ ತಿಳುಹು.

ನೀನು ಚಿ॥ ಸೌ॥ ನಿನ್ನ ಹೆಂಡತಿಯೊಡನೆ ಮೈಸೂರಿನಲ್ಲಿ ವಾಸಿಸುವ ಅಂಶವನ್ನು ನಾನಾವಾಗ ಸೂಚಿಸಿದೆನೋ ತಿಳಿಯದು. ತಿಳಿಸುವ ಅಂಶವಾದರೆ ತಿಳುಹು. ಯಾರೊಡನೆ ತಿಳುಹಿದೆನು? ಚಿ॥ ವೇ॥ ಅವಧಾನಿಗಳು ನೀನು ಸಂಸಾರ ಸಮೇತ ಕೆಲಕಾಲ ಮೈಸೂರಲ್ಲಿ ವಾಸ ಮಾಡಲೆಂದು ಸಲಹೆ ಕೊಟ್ಟಾಗಲೂ ನಾನು ಅವರೊಡನೆ "ಉಂಟು" "ಇಲ್ಲ" ಎಂಬ ಶಬ್ದವೇ ಎತ್ತದೆ ಮೌನವಾಗಿದ್ದೆನು. ಅವರು ದೀರ್ಘ ಭಾಷಣ ಮಾಡಿದರು. ಭಾಷಣವೇನೋ ರುಚಿಯಾಗಿತ್ತು (ನೀನು ಆಗ ಗೈರ್ಹಾಜರ್).

ನಾನು ಕೋಲಾರದಲ್ಲಿ ವಾಸಿಸುತ್ತಾ ನೀವುಗಳು ಇಲ್ಲಿ ವಾಸಿಸುವುದು ಉತ್ತಮವೆಂದು ಬರೆದರೆ ಹೃತ್ಪೂರ್ವಕವಾದ ಆಶೀಃ ಮಾಡುವೆನು.

ನೀನು ಇಲ್ಲಿ ನಿರುದ್ಯೋಗಿಯಾಗಿರುವಿಯೆಂದೂ ಅಲ್ಲೇ ಇರೆಂದೂ ಉದ್ದೇಶಿಸಿ ಬರೆಯಲಿಲ್ಲ. ನೀನು ನಿರುದ್ಯೋಗಿಯಾಗಿರಬಹುದೆ ? ಸದುದ್ಯೋಗಿಯಾಗಿರಬೇಕೆ ? ಎಂಬುದನ್ನು ಮನಸ್ಸಿನಲ್ಲಿ ವಿಚಾರಮಾಡಿ ಯೋಗ್ಯವಾದುದನ್ನು ಆಚರಿಸಬೇಕೆಂಬುದನ್ನು ತಿಳಿಯದಷ್ಟು ಬಾಲಕನು ನೀನಲ್ಲ.

ನಿನ್ನ ವಿದ್ಯಾಭ್ಯಾಸದ ಪರಮೋದ್ದೇಶವನ್ನು ಆಶ್ರಯಿಸಿಯೂ, ಅಡಿಗೆ ಮಾಡಿಕೊಂಡಿರುವುದು ಕಷ್ಟವಲ್ಲವೆಂದು ನೀನು ಹೇಳಿದ್ದರಿಂದಲೂ, ಈಗಿರುವ ನಮ್ಮಿಬ್ಬರಲ್ಲಿ ಒಬ್ಬರು ಗೈರ್ಹಾಜರಾಗುವವರಿಗೂ, ಸಾಧ್ಯವಾದರೆ ಅಲ್ಲಿಂದ ಮುಂದೂ ನಿನ್ನ ವಿದ್ಯಾಭ್ಯಾಸವು ಸುಗಮವಾಗಲೆಂದೂ ಉದ್ದೇಶವಿಟ್ಟು

ರಜದಲ್ಲಿ ಬಂದಾಗ ಆಲೋಚಿಸೋಣ. ಆಮೇಲೆ ಬೇಕಾದ ಹಾಗೆ ಮಾಡೋಣ.

ಒಂದಾವರ್ತಿ ಬಿಟ್ಟು ಬಂದು ಪುನಃ ಹೋಗುವುದು ಗೌರವವಲ್ಲ ವೆಂಬುದ್ದೇಶದಿಂದಲೂ ಆ ರೀತಿ ಬರೆದೆನು. ವಿದ್ಯಾಭ್ಯಾಸವು ಬೇಸರವಾಗಿದ್ದಲ್ಲಿ ಅದನ್ನು ಮಾಡಲೇಬೇಕೆಂದು ಯಾವ ನಿರ್ಬಂಧವೂ ಇಲ್ಲ, ನಿನ್ನ ಇಷ್ಟಾನುಸಾರ ಮಾಡಬಹುದು. ನಿನ್ನ ಮನೆಗೆ ಬರುವಲ್ಲಿ ಯಾರಿಗೂ ಹೇಳಬೇಕಾದುದಾಗಲಿ ಕೇಳಬೇಕಾದುದಾಗಲಿ ಅಗತ್ಯವಿಲ್ಲ.

ವಿದ್ಯಾಭ್ಯಾಸಕ್ಕಾಗಿ ನೀನು ಪಟ್ಟಿರುವ ಶ್ರಮಕ್ಕೆ, ಮಾಡಿರುವ ದ್ರವ್ಯವ್ಯಯಕ್ಕೆ ದೇವರು ದಯೆಯಿಟ್ಟು ಯಾವಾಗ, ಯಾವ ವಿಧವಾದ ಫಲವನ್ನು ದಯಪಾಲಿಸುವರೋ ತಿಳಿಯದು. ಶುಭಂ ಭವತು.

ಹಣವನ್ನು ಸಂಪಾದಿಸಲು ಪ್ರಯತ್ನ ಮಾಡುವದು ಪ್ರತಿಯೊಬ್ಬನಿಗೂ ಕರ್ತವ್ಯವೇ ಆಗಿದೆ. ಆದರೆ ಇವನಿಷ್ಟದಂತೆ ನೆರವೇರುವುದೂ, ಇಲ್ಲದುದೂ ದೈವಾಧೀನ ತಾನೆ ?

ಕೋಲಾರದಲ್ಲಿದ್ದು ನೀನು ಹಣ ಸಂಪಾದಿಸಬೇಕೆಂಬುದ್ದೇಶ ವನ್ನು ನಾನಾವಾಗಲೂ ನಿನಗೆ ಉಪದೇಶಿಸಿಲ್ಲ, ದುಡ್ಡಿದ್ದರೆ ದುಂದುಗಾರಿಕೆ ಮಾಡದೆ ಮಿತವ್ಯಯದಿಂದ ದೇಹಾರೋಗ್ಯವನ್ನೂ ಚನ್ನಾಗಿ ಕಾಪಾಡಿಕೊಂಡಿರಬೇಕೆಂಬುದಿಷ್ಟೇ ನನ್ನ ಉಪದೇಶ.

ನಾನು ಕೋಲಾರದಲ್ಲಿ ವಾಸಿಸುವುದಾದಲ್ಲಿ ನಿನ್ನ ಸಹಾಯವನ್ನು ಅಪೇಕ್ಷಿಸಿ ನಿನಗೆ ತೊಂದರೆ ಕೊಡದೆ ಸ್ವತಂತ್ರನಾಗಿಯೇ ಇರುವೆನು. ಆ ಭಾಗದಲ್ಲಿ ಅಡ್ಡಿಯಿಲ್ಲ, ನೀನು ಈ ಊರಿನಲ್ಲಿಯೇ ಇದ್ದು, ಇರುವ ಮನೆಯನ್ನು ರಿಪೇರಿ ವಗೈರೆ ಮಾಡಿಕೊಂಡು ದೀಪ ಹತ್ತಿಸಿಕೊಂಡಿರುವುದು ಪರಮಸಂತೋಷವಾದ ವಿಷಯ. ವ್ಯಾಸಂಗವು ಬೇಸರವಾಗಿರುವಾಗ 'ದಶಾಭುಕ್ತಿಯೇ' ಮೊದಲಾದ ಜ್ಯೋತಿಷ್ಯ ಪ್ರಸಂಗಗಳು ಅನವಸ್ಯಕ. ವ್ಯಾಸಂಗವನ್ನು ಮಾಡಲು ಉತ್ಸಾಹವೇ ಇಲ್ಲದಾಗ ಆ ವಿಚಾರವೇಕೆ ? ಉಪನಿಷತ್ಪುಸ್ತಕವನ್ನು ಈ ಕೂಡಾ ಕಳುಹಿಸಿದೇನೆ.

ನೀನು ಕಾರ್ಡನ್ನು ಬರೆದುದಾವಾಗಲೋ? ಪೋಸ್ಟಿಗೆ ಹಾಕಿದುದಾವಾಗಲೋ? ಎಂಬ ಶಂಕೆಯು ಬಾಧಿಸುತ್ತಿದೆ.

ಅತಿಶಯಗಳಿಲ್ಲ, ಇತ್ಯಾಶೀರ್ವಾದಗಳು.

ಲೇಖನಿಗಳ ಬದಲಾವಣೆಯಿಂದಲೂ ಪ್ರಾತಃಕಾಲ ಕೆಲ ಹೊತ್ತೂ ಸಾಯಂಕಾಲ ಕೆಲ ಹೊತ್ತೂ ಬರೆದುದರಿಂದಲೂ ಬರವಣಿಗೆಯು ವಿಜಾತೀಯವಾಗಿದೆ. ಇರಲಿ. ಮಾಹೆಯಾನಾ 4 ರೂ.ಗಳಂತೆ ಇನ್ನೂ 4½ ವರ್ಷಗಳ ಕಾಲ ಹಣ ಒದಗಿಸು ವುದು ಸಾಧ್ಯವೆ ? ಎಂಬಂಶದಲ್ಲಿ ನೀನು ವಿಚಾರಾರ್ಹನಲ್ಲ.

ವೃದ್ಧನೂ ರೋಗಿಯೂ ಬಡವನೂ ಆದ ತಂದೆ ; ಇನ್ನೂ ಹೆಚ್ಚು ಕಾಲ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಮನದ ಮಗ; ಅದಕ್ಕೆ ಇರುವ ತೀವ್ರ ಅನಾನುಕೂಲಗಳು ; ಇದರಿಂದ ಮನೆಯಲ್ಲಿ ಉಂಟಾಗಿರುವ ಕ್ಷೋಭೆ ಈ ಪತ್ರದಲ್ಲಿ ಬಿಡಿಬಿಡಿಯಾಗಿ ಹರಡಿಕೊಂಡಿದೆ.

೨೧೪

ನನ್ನ ದುರದೃಷ್ಟ (ಅಣ್ಣನಿಗೆ ತಂಗಿಯ ಕಾರ್ಡು)

ಕ್ಷೇಮ ಶ್ರೀ ಹಾಸನಸೀಮೆಯ ಹಳ್ಳಿ
8.11.43

ತೀ॥ ಅಣ್ಣಯ್ಯನವರ ದಿವ್ಯಚರಣಸನ್ನಿಧಾನಂಗಳಲ್ಲಿ ಬಾಲಕಿ ಸೌ॥...ಯು ಮಾಡುವ ಅನೇಕ ಸಾಷ್ಟಾಂಗ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯಕುಶಲ. ಸಂಪ್ರತಿ.

ನೀವು ದಯವಿಟ್ಟು ಬರೆದ ಆಶೀರ್ವಾದ ಪತ್ರಿಕೆ ತಲಪಿತು. ಕಳ್ಳೀಹಾಲು ಕುಡಿದಷ್ಟು ಸಂತೋಷವಾಯ್ತು. ವಿಜಯದಶಮಿಯ ದಿವಸ ಒಂದು ಹಸು ಕರೂ ಹಾಕಿದೆ. ಆಶ್ವಯುಜ ಬಹುಳ ಏಕಾದಶಿ ಭಾನುವಾರ ಬೆಳಗಿನ ಜಾವಕ್ಕೆ-ನಿರ್ಣಯವಾದ ಹೊತ್ತು ಗೊತ್ತಿಲ್ಲ, ಹೆಣ್ಣು ಮಗು. ಹುಷಾರಾಗಿರುತ್ತೇವೆ.

...ನು ಮಾತುಕಥೆ ನಿಷ್‌ಕರ್ಷೆಯಾದ ಮೇಲೆ ಸರ್ಜ್ ಕೋಟು ಸಿಲುಕು ಶರಟು ಮತ್ತು ಬೆಳ್ಳೀ ತಟ್ಟೇ ಚೊಂಬು ಕೊಟ್ಟಲ್ಲದೆ ಮಾಡಿಕೊಳ್ಳುವುದಿಲ್ಲವೆಂದು ಹೇಳಿ ಅದಕ್ಕೆ ಅವರು ಕೋರ್ಟು ಕಮರಿಗೆ ಹತ್ತಿಸುತ್ತೇನೆಂದು ಗಂಡಾಗುಂಡಿಯಲ್ಲಿ ಮದುವೆ ಯಾಯಿತು. ಪುಸ್ತಕ್ಕೆಂದು ಮಾವನ ಮನೆಗೆ ಹೋಗಿದ್ದ, ಅಲ್ಲಿಯೇನಾಯಿತೋ ಊರಿಗೆ ಬಂದಿದ್ದಾನೆ. ಇವರು ನನಗೆ ಖರ್ಚಿಗೆ ಮೂರೇ ಮೂರು ಕಾಸನ್ನೂ ಕೊಡದೆ ಪಾಡುಹತ್ತಿಸಿದರು. ಹಲವು ಬಗೆಯಲ್ಲಿಯೂ ಹೀಗೇ ಮಾಡುವರು. ಮುಖ್ಯವಾಗಿ ನನ್ನ ದುರದೃಷ್ಟವನ್ನು ಯೆಷ್ಟು ಹೇಳಿದರೂ ಸ್ವಲ್ಪ, ದೇವರು ಸಾಕುಮಾಡಲ್ಲ...

ಅತಿಶಯೋಕ್ತಿಗಳು ಕಾರ್ಡಿನಲ್ಲಿ ಸಾಧ್ಯವಿಲ್ಲ

ಇತಿ ವಿಜ್ಞಾಪನೆಗಳು.

೨೧೫

ಶೃಂಗೇರಿ-ಮೈಸೂರು

ಹಳ್ಳಿಯ ಮನೆಯೊಂದು ಆತಂತ್ರವಾದಾಗ ಬಾಲಕನೊಬ್ಬನು ವಿದ್ಯೆ ಕಲಿಯಲು ಸಾಹಸಪಟ್ಟು ಪಟ್ಟಣವನ್ನು ಸೇರಿದನು. ಆತನು ಕಲಿಯತೊಡಗಿದ್ದು ಸಂಸ್ಕೃತ ಮತ್ತು ವೇದವನ್ನು. ಆತನ ಕಾರ್ಡು

ಕ್ಷೇಮ ಶ್ರೀ ಮೈಸೂರು
17.6.44

ಪೂಜ್ಯ...ಶಾಸ್ತ್ರಿಗಳವರ ಸನ್ನಿಧಾನಂಗಳಲ್ಲಿ ...ಕೃತವಿಜ್ಞಾಪನಾ. ಸಂಪ್ರತಿ.

ನಾನು ಊರಿನಿಂದ ಶೃಂಗಗಿರಿಗೆ ಹೋದವನು ಅಲ್ಲಿ 1 ತಿಂಗಳು ಇದ್ದು ಅನಂತರ ಅಂದರೆ ಈಗ್ಗೆ ೨೦ ದಿನಗಳ ಹಿಂದೆ ಮೈಸೂರಿಗೆ ಬಂದಿರುತ್ತೇನೆ. ಶಾಲೆಗೂ ಶೇರಿಯಾಯಿತು. ಪಾಠವೂ ಪ್ರಾರಂಭವಾಗಿದೆ. ಛತ್ರದಲ್ಲಿಯೇ ಭೋಜನ ಸೌಕರ್ಯವಾಗಿದೆ. ಈ ವಿಷಯಗಳನ್ನು ಮ॥ ರಾ॥ ಕೇಶವ ಹೆಬ್ಬಾರರವರಿಗೆ ತಿಳಿಸಬೇಕಾಗಿ ಸವಿನಯದಿಂದ ಪ್ರಾರ್ಥಿಸುತ್ತೇನೆ. ವೇ॥ ಬ್ರಂ॥ ಹರಿಕೃಷ್ಣ ದೀಕ್ಷಿತರಿಗೂ ನನ್ನ ನಮಸ್ಕಾರಗಳು. ತಾವೂ ಕೂಡ ಕುಶಲಿಗಳಾಗಿರುವಿರೆಂದು ಭಾವಿಸುತ್ತೇನೆ. ಅವಕಾಶವಿದ್ದಲ್ಲಿ ಒಂದು ಆಶೀರ್ವಾದ ಪತ್ರವನ್ನು ಕೆಳಕಂಡ ವಿಷಯಗಳಿಗೆ ಬರೆಸಬೇಕಾಗಿ ಪ್ರಾರ್ಥಿಸುತ್ತೇನೆ. ನಿಮ್ಮ ಆಗ್ರಗಳಿಗೆ ನೀರಿನ ಸೌಕರ್ಯವಿದೆಯೆ ?

Not to publish

If possible please send ten Rs. sum as soon as. I will return with in one month.

ಇತಿ ವಿಜ್ಞಾಪನೆಗಳು

ರಹಸ್ಯವಾದ, ಮುಖ್ಯವಾದ ವಿಷಯಕ್ಕಾಗಿ ಇಂಗ್ಲಿಷ್ ಬಳಕೆಯಾಗಿರುವುದನ್ನು ಗಮನಿಸಬಹುದು.

೨೧೬

ಅಜ್ಜಿಗೆ ಪುಟ್ಟ ಬಾಲಕಿ (ಕಾರ್ಡು)

Safe Sree ತಾ। 30-11-47

ಹಾಸನಜಿಲ್ಲೆಯ ಹಳ್ಳಿ

ಮಾ॥ ಅಜ್ಜಮ್ಮನವರ ದಿವ್ಯಚರಣ ಸನ್ನಿಧಾನಂಗಳಲ್ಲಿ ಸೌ॥ ಬಾಲಕಿಯು ಮಾಡುವ ಅನೇಕ ಸಾಷ್ಟಾಂಗ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯ ಕುಶಲ ಸಂಪ್ರತಿ.

ನೀವು ಇಲ್ಲಿಂದ ಪ್ರಯಾಣ ಮಾಡಿದಂದಿನಿಂದ ನಿಮ್ಮ ಯೋಗಕ್ಷೇಮ ತಿಳಿಯದೆ ಹಾಸನಕ್ಕೆ ಎರಡು ಕಾಗದ ಬರೆದೆವು. ಒಂದಕ್ಕೂ ಜವಾಬಿಲ್ಲ. ತೀ॥ ಸಣ್ಣ ಮಾವಯ್ಯನವರಿಗೆ ಎರಡು ಕಾಗದ ಬರೆದರು. ಅವರೂ ಸಹ ಜವಾಬು ಬರೆದಿಲ್ಲ. ಒಟ್ಟಿನಲ್ಲಿ ದೇವರ ಕೃಪೆಯಿಂದ ಎಲ್ಲರೂ ಆರೋಗ್ಯವಾಗಿರುವರೆಂದು ತಿಳಿದರೆ ಅಷ್ಟಕ್ಕೇ ಸಂತೋಷಪಡುತ್ತೇವೆ.

ಇಲ್ಲಿ ಚಿ॥ ಆದಿಯಾಗಿ ಎಲ್ಲರಿಗೂ ತುರಿಗಜ್ಜಿಯಾಗಿ ಬಾಧಿಸುತ್ತಿದೆ. ನನಗೆ ನಿಮ್ಮ ಆಶೀರ್ವಾದದಿಂದ ವಾಸಾಯಿತು. ಪದಾರ್ಥ ಇನ್ನೂ ಬಂದಿಲ್ಲ. ಯೋಚನೆಯಾಗಿದೆ. ಸೀರೆಗೆ ಅಲ್ಲಿ ಪ್ರಯತ್ನಪಡಬೇಡಿ. ಸಾಧ್ಯವಾದರೆ ಕ್ರಿಸ್‌ಮಿಸ್ ರಜದಲ್ಲಿ ನಾವೇ ಬರುತ್ತೇವೆ. ಎಲ್ಲವೂ ನಮ್ಮ ದುರದೃಷ್ಟ. ಪೇಚಾಡಬೇಡಿ. ತೀ॥ ಮಾವಯ್ಯನವರಿಗೂ ಮತ್ತು ಸೌ॥ ಮಾ॥ ದೊಡ್ಡಮ್ಮನವರಿಗೂ ನನ್ನ ವಿಜ್ಞಾಪನೆಗಳನ್ನು ತಿಳಿಸುವುದಲ್ಲದೆ ನೀವಾದರೂ ದಯವಿಟ್ಟು ಉದಾಸೀನ ಮಾಡದೆ ಆಗಿಂದಾಗ್ಗೆ ಆಶೀರ್ವಾದ ಪತ್ರಿಕಾ ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇವೆ. ಹೆಚ್ಚಿಗೆ ವಿಷಯಗಳಿದ್ದಲ್ಲಿ ತಿಳಿಸಿ. ಅತಿಶಯವಿಲ್ಲ.

ಇತಿ ವಿಜ್ಞಾಪನೆಗಳು.

೨೧೭

ಹಿಂದೂ-ಮುಸಲ್ಮಾನರು (ಮಿತ್ರನ ಪತ್ರ)

ಬೆಂಗಳೂರು ಸಿಟಿ

12 1/48

ವಿಜ್ಞಾಪನೆಗಳು

ಯಿಲ್ಲಿ ಎಲ್ಲರೂ ಕ್ಷೇಮವಾಗಿರುತ್ತೇವೆ. ಅಲ್ಲಿ ಎಲ್ಲರ ಕ್ಷೇಮಗಳಿಗೆ ಆಗಿಂದಾಗ್ಯೆ ಕಾಗದ ಬರಿಯುತ್ತಾ ಬರಬೇಕು.

ತಮ್ಮ 10.1.48ರ ಕಾಗದಾ ಬಂದು ತಲಪಿತು. ತಮಗೆ ದೇಹಸ್ಥಿತಿ ಚನ್ನಾಗಿಯಿದ್ದು ಪುರಸತ್ತಾದರೆ ತಾವು ಮಾಡಿರುವ ಕೆಲಸವನ್ನು ಅಂದರೆ ಬಚ್ಚಲು ಜಗಲಿ ಗೋಡೆ ಕೆಲಸವನ್ನು ಮಾಡಿಸುವದು ಬಹಳ ಅನ್ಕೂಲವಾಗುತ್ತೆ. ಈಡು ಕಟ್ಟಿಸುವ ಕೆಲಸಕ್ಕೆ ನಾನೇ ಬರುವ ಯೋಚನೆ ಮಾಡಿಯಿರುತ್ತೇನೆ. ತಮಗೂ ಆಫೀಸಿಗೆ ರಜಾ ಸಿಕ್ಕುವ ಸಮಯದಲ್ಲಿ ಬಂದರೆ ಅನ್ಕೂಲವೆಂತ ಯೋಚಿಸಿಯಿರುತ್ತೇನೆ. ಆವಾಗ ನಿಮಗೂ ಪುರಸತ್ತು ಆಗಬಹುದು.

ಯಿಲ್ಲಿ ಹಿಂದೂಗಳಿಗೂ ಮುಸಲ್ಮಾನರುಗಳಿಗೂ ಗಲಾಟೆ ತಪ್ಪಿಲ್ಲ. ಅಕ್ಕಿ ಸಿಕ್ಕುವದು ಬಹಳ ಕಷ್ಟವಾಗಿದೆ. 1 ದಿವಸಕ್ಕೆ ವಬ್ಬರು ಮನುಷ್ಯನಿಗೆ ¾ ಪಾವುನಂತೆ ಅಕ್ಕಿ ಕೊಡುತ್ತಾರೆ. ರಾಗಿಯಿಲ್ಲವೇಯಿಲ್ಲ. ಗೋಧಿ 2½ ಸೇರು ಸಿಕ್ಕುತ್ತೆ. ಬ್ಯಾಳೆ ಸೇರು 1ಕ್ಕೆ 1½ ರೂಪಾಯಿ. ಎಲ್ಲಾ ಕಿರಾಣಿ ಮಾಲುಗಳೂ ಬಹಳ ಖರೀದಿ. ಬೆಣ್ಣೆ ಸೇರು 1ಕ್ಕೆ 1-6-0ಯ ಮೇಲೆಯಿರುತ್ತೆ. ಜೀವನಾ ಮಾಡುವದೇ ಬಹಳ ಕಷ್ಟವಾಗಿಯಿಧೆ.

...ತಮಗೆ ತೊಂದ್ರೆ ಕೊಡಬೇಕಾಗಿಯಿರುತ್ತೆ. ಕ್ಷಮಿಸಬೇಕು. ಏಕರೀತಿ ವಿಶ್ವಾಸವಿರಲಿ. ಉದಾಸೀನಾ ಮಾಡದೆ ಆಗಾಗ್ಯೆ ಕಾಗದ ಬರೆಯುತ್ತಾಯಿರಬೇಕಾಗಿ ಕೋರುತ್ತೀನಿ.

ಇತಿ ವಿನಯೋಕ್ತಿಗಳು

೨೧೮

ವಾಯುವಿನ ಔಷಧಿ (ಸೋದರಮಾವನ ಕವರು)

ಹಾಸನಜಿಲ್ಲೆಯ ಹಳ್ಳಿ

ತಾ। 1-7-53

...ಮಗು, ನೀನು ಬರದ ಎರಡು ಪತ್ರಗಳೂ ತಲಪಿದವು. ನನಗೆ ಎಂಟು-ಹತ್ತು ದಿನಗಳಿಂದ ಚಳಿ ಜ್ವರ ಬರುತ್ತಿದೆ. ರಜಾ ತೆಗೆದುಕ್ಕೊಂಡು ಇರುತ್ತೇನೆ. ಔಷಧಿ ತೆಗೆದುಕೊಳ್ಳುತ್ತಾ ಇದ್ದೇನೆ. ಇದೂ ಅಲ್ಲದೆ ಯಂತ್ರಮಂತ್ರಗಳೆಲ್ಲವೂ ನಡೆದಿವೆ. ದೇವರ ಕೃಪೆಯಿಂದಲೂ ಹಿರಿಯರ ಆಶೀರ್ವಾದದಿಂದಲೂ ಗುಣಮುಖ ನಾಗುತ್ತಿದ್ದೇನೆ.

ಇತ್ತಕಡೆ ಚನ್ನಾಗಿ ಮಳೆಯಾಗಿದೆ. ಗದ್ದೆಯನ್ನು ನಾಟಿ ಹಾಕಲು ಬಿಟ್ಟಿದ್ದೇವೆ. ರಾಗಿ ಪೈರು ಹಾಕಿ ಆಗಿದೆ. ಆಲೂಗಡ್ಡೆ ಸಹಾ ಹಾಕಿದೆ.

ಚಿ।।ಗಳಾದ...ಮತ್ತು...ಆರೋಗ್ಯವಾಗಿರುತ್ತಾರೆ. ಚಿ।।...ನ ಹಾವಳಿ ತಡೆಯಲು ಕಷ್ಟವಾಗಿದೆ. ಅಕ್ಕ, ಅಮ್ಮ, ಅಪ್ಪ, ಅಜ್ಜಿ ಅತ್ತೆ, ಕತ್ತೆ ಎನ್ನುತ್ತಾನೆ.

ವಾಯುವಿಗೆ ಔಷಧಿ : 1 ಪಾವು ಹುರಳಿಕಾಳು, ಅರೆಪಾವು ಬೆಳ್ಳುಳ್ಳಿ, ಎರಡನ್ನೂ ಚೆನ್ನಾಗಿ ಬೇಯಿಸಿ, ಕಟ್ಟನ್ನು ತೆಗೆದು ಮೂರಾವರ್ತಿ ಪ್ರತಿಸಲವೂ ಅರ್ಧಪಾವು ತುಪ್ಪ ಹಾಕಿಕ್ಕೊಂಡು ಕುಡಿಯಬೇಕು (ಒಂದು ದಿನ ಎರಡಾವರ್ತಿ. ಮಾರನೆ ದಿನ ಬೆಳಿಗ್ಗೆ). ನಂತರ ಎಂಟು ದಿನ ತಗರಿಬೇಳೆ ಸಾರು ಅನ್ನ ಊಟ ಮಾಡಬೇಕು.

ನೀನು ಚನ್ನಾಗಿ ಓದು. ಒಳ್ಳೆಯ ಹುಡುಗನಾಗು. ಕೀರ್ತಿ ಪಡಿ. ದೇವರು ಸರ್ವ ಸೌಲಭ್ಯಗಳನ್ನೂ ಕೊಡಲಿ.

೨೧೯

ಹೀಗೆ ಹೇಳಬಹುದೆ ? (ವಿಶ್ವಾಸದ್ರೋಹ. ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ತರೀಕೆರೆ

ತಾ। 22.5.57

ಮನೆ ಕೇಸು (ದರೋಡೆ) ವಜಾ ಆಯಿತು. ವಜಾ ಆದ ಮಾರನೆ ದಿನದಿಂದಲೇ ಪರಿಸ್ಥಿತಿಯು ಬದಲಾಯಿಸಿದೆ. ಶ್ರೀ ಭಟ್ಟರು ತಮ್ಮ ಪ್ರಶ್ನೆಯಲ್ಲಿ ನಮಗೆ ಒಳ್ಳೆಯದು ಆಗುತ್ತೆಂತ ಹೇಳಿದ್ದರು. ಅದು ಸುಳ್ಳು ಆದ ಹಾಗೆ ಆಗಿದೆ. ಉಳಿದ ವಿಷಯಗಳನ್ನು ಕಾದು ನೋಡಬೇಕಾಗಿದೆ. ಬರೀ ಆಟಾಟೋಪವೆಂದು ನನಗೆ ಅನ್ನಿಸಿದೆ.

ಹಿಂದೆ ನಮ್ಮ ಮನೆಗೆ ಬಂದ...ಹಳ್ಳಿಯ ಚಿಕ್ಕಪ್ಪನವರು ಚಂಡೀಹೋಮ ಮುಗಿಸಿಕ್ಕೊಂಡು ಶಿವಮೊಗ್ಗೆಗೆ ಬಂದವರು ನಮ್ಮ ದೊಡ್ಡಪ್ಪನವರ ಮನೆಗೆ ಹೋಗಿ, ನಾವುಗಳು ಅವರನ್ನು ತೆಗೆಯಲು ಹೋಮ ಮಾಡಿದುದಾಗಿಯೂ, ಚಿಕ್ಕಪ್ಪನವರು ತಾವು ಮಂತ್ರ ವ್ಯತ್ಯಾಸ ಮಾಡಿ ಆತನು ಬದುಕುವಂತೆ ಜಪ ಮಾಡಿರುವು ದಾಗಿಯೂ ಹೇಳಿರುತ್ತಾರೆ. ಯಾವುದೋ ಒಂದು ಸಂದರ್ಭದಲ್ಲಿ ಮಾತನಾಡುತ್ತಿದ್ದ ನಮ್ಮ ಶತ್ರುವು...ಹಳ್ಳಿಯವರು ಮೇಲೆ ಹೇಳಿದ ರೀತಿ ಹೇಳಿದ ಬಗ್ಗೆ...ಕೊಪ್ಪಲು ಮೇಷ್ಟ್ರು ತಿಮ್ಮೇಗೌಡರ ಸಂಗಡ ಅಕಸ್ಮಾತ್ ಮರೆತು ಹೇಳಿದ್ದಾನೆ. ಈಗ ನಮ್ಮ ಸಂದೇಹವು ನಿಸ್ಸಂದೇಹವಾಯಿತು. ಹೀಗೆ ನಾನು ಬರೆದಿರುವುದಾಗಿ ತಾವು ...ಹಳ್ಳಿಯವರಿಗೆ ನಿಸ್ಸಂಕೋಚವಾಗಿ ಹೇಳಬಹುದು. ಇದು ಸುಳ್ಳಲ್ಲ.

...ಭಟ್ಟರು ಜಪವನ್ನು ಕೃಷ್ಣಪಕ್ಷದ ಅಷ್ಟಮಿಯಿಂದ ಪ್ರಾರಂಭಿಸಿ ಅಮಾವಾಸ್ಯೆ ಒಳಗೆ ಮುಗಿಸಬೇಕೆಂದು ಹೇಳಿದ್ದರು. ಅವರು ಈಗ ಊರಿಗೆ ಹೋಗಿದ್ದವರು ಹಿಂತಿರುಗಿರಲಾರರು.

ಈ ಬಗ್ಗೆ ತಾವು ಭಟ್ಟರಿಗೆ ಕಾಗದ ಬರೆದರೆ ಆಗಬಹುದೇ ಆಲೋಚಿಸಿ.

ಮತ್ತೊಂದು ವಿಷಯ ತಮಗೆ ನಾನು ತಿಳಿಸದೆ ವಿಧಿಯಿಲ್ಲವಾಗಿದೆ. ಅದೇನೆಂದರೆ ಯಾವ ದಿನ...ಪಟ್ಟಣದವರು ಊರಿಗೆ ಬರುತ್ತಾರೋ ಆ ದಿನ ಹಿಂದೆ ಕಾಣದ ಪ್ರಾಣ ಗಂಡಾಂತರಗಳು ಬರುತ್ತವೆ. ಅವರು ಹೊರಟುಹೋದ ನಂತರ ಎಲ್ಲವೂ ಶಮನವಾಗುತ್ತದೆ. ಇದಕ್ಕೆ ಕಾರಣ ತಿಳಿಯದಾಗಿದೆ. ಇದನ್ನು ಸುಮಾರು 5 ಬಾರಿ ಪರೀಕ್ಷೆ ಮಾಡಿದ್ದೇವೆ. ಐದು ಬಾರಿಯೂ ಹಾಗೆಯೇ ಆಗಿದೆ. ಮೊನ್ನೆ ಊರಿಗೆ ಬಂದಿದ್ದರು. ಆಗಲೇ ಎಲ್ಲಿಯೂ ಇಲ್ಲದ ಗಲಾಟೆ ಪ್ರಾರಂಭವಾಗಿತ್ತು, ಅವರು ಹೋದನಂತರ ಹಾಗೆಯೇ ಶಮನವಾಗಿದೆ. ನಾನು ಊಹಿಸುವುದು 'ಅಂತರಂಗ ವ್ಯತ್ಯಾಸ' ಎಂದು...

ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿರುವವರಿಗೆ ಈ ಪತ್ರದ ಪ್ರಪಂಚ ಅನುಕಂಪನೀಯವಾಗಿ ಕಾಣಬಹುದು.

೨೨೦

ಸೋದರಮಾವನಿಗೆ

ಹಬ್ಬಕ್ಕೆ ಬಂದಿದ್ದು ಬೇಗ ಹಳ್ಳಿಗೆ ಹಿಂದಿರುಗಿದಾಗ ಬರೆದ ಕಾರ್ಡು

ಕ್ಷೇಮ ಶ್ರೀ ಬೆಂಗಳೂರು

ತಾ 24.11.74

ತೀ।। ಮಾವಯ್ಯನವರ ಪಾದಪದ್ಮಂಗಳಲ್ಲಿ ಅನೇಕ ಸಾಷ್ಟಾಂಗ

ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರೆಗೆ ಉ.ಕು. ಸಂಪ್ರತಿ.

ನಮ್ಮ ಕರೆಯನ್ನು ಮನ್ನಿಸಿ ಹಬ್ಬಕ್ಕೆ ಕಳೆಗಟ್ಟಿಸಿ ಬಂದುದಕ್ಕೆ ನಮ್ಮೆಲ್ಲರಿಗೂ ಬಹಳ ಸಂತೋಷವಾಯಿತು.

ನಾವುಗಳು ಮನೆಗೆ ಬರುವ ವೇಳೆಗೆ 'ಗಿಳಿಯು ಪಂಜರ ದೊಳಿಲ್ಲ' ಎಂಬಂತೆ ನೀವು ಹಾರಿಹೋಗಿದ್ದುದಕ್ಕೆ ಕಾರಣ ತಿಳಿಯದೆ ನಮಗೆ ಬಹಳ ವ್ಯಥೆಯಾಯಿತು. ಸುಮಾರು ಹನ್ನೆರಡೂವರೆಯ ವೇಳೆಗೆ ಕ್ಯಾಮರಾ ತೆಗೆದುಕೊಂಡು, ಮಧ್ಯಾಹ್ನ ಮ್ಯಾಟನಿಗೆ ಹೋಗಲು ಬುಕ್ ಮಾಡಿಸಿಕೊಂಡು ಬಂದರೆ, ನೀವಾಗಲೇ ಕೈಕೊಟ್ಟು ಹೋದ ಸಮಾಚಾರ ತಿಳಿಯಿತು. ಇಲ್ಲಿರಲು ಅದೇಕೆ ನಿಮಗೆ ಅಷ್ಟು ದಾಕ್ಷಿಣ್ಯವೆಂಬುದೇ ನನಗೆ ಅರ್ಥವಾಗುವುದಿಲ್ಲ.

ಈ ಬಾರಿಯಂತೂ ನೀವು ಬಂದ ರಾತ್ರೆ, ಹಬ್ಬದ ಕೆಲಸದ ಪ್ರಯುಕ್ತ ಮಾತಾಡಲು ಬಿಡುವಿಲ್ಲದಂತಾಗಿತ್ತು. ಮಾರನೆಯ ಮಧ್ಯಾಹ್ನ ಹಾಗೂ ಸಂಜೆ ನಿಮಗೆ ಬೇರೆಯ ಕೆಲಸವಿತ್ತು. ಇನ್ನು ಬಿಡುವಾಗಿ ಮಾತಾಡಲು ಅವಕಾಶವಾಗುವ ವೇಳೆಗೆ ಸರಿಯಾಗಿ ನೀವೇ ಹೊರಟುಬಿಟ್ಟಿರಿ. ಕೇವಲ ಮುಖ ನೋಡಿದಷ್ಟೇ ಅನುಭವ ನಮ್ಮ ಪಾಲಿಗೆ ದೊರೆತುದು. ನೀವು ಮುಂದಿನ ಬಾರಿ ಬರುವ ವೇಳೆಗೆ ಚೆನ್ನಾಗಿ ಬಿಡುವಿರುವ ದಿನಗಳನ್ನೇ ಹೊಂದಿಸಿಕೊಂಡು ಬರಬೇಕೆಂದು ನಮ್ಮೆಲ್ಲರ ಆಗ್ರಹ. ನಮಗಂತೂ ಈ ಸಲ ಬಹಳ ಬೇಸರವಾಯಿತು. ಅದೂ, ಭಾನುವಾರವೂ ಸೇರಿರುವಾಗ ನೀವು ಹೀಗೆ ಮಾಡಬಾರದಾಗಿತ್ತು ಎನಿಸಿತು...

೨೨೧

ಯಾತ್ರೆ ನಿಮಗೆ ಕಷ್ಟ (ಸೋದರಸೊಸೆಯ ಕಾರ್ಡು)

ಕ್ಷೇಮ ಶ್ರೀ 17.10.76

ನಗರ

ತೀ।। ಮಾವಯ್ಯನವರ ದಿವ್ಯಚರಣಸನ್ನಿಧಾನಂಗಳಲ್ಲಿ ಬಾಲಕಿಯ ಅನೇಕ ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನೆಗಳು. ಅದಾಗಿ ಈವರೆಗೆ ಉ.ಕು. ಸಂಪ್ರತಿ.

ಸೌ।। ಮಾ।।...ತಾಯಿಯವರು ನಿಮ್ಮೆಲ್ಲರನ್ನೂ ಭೇಟಿಯಾಗಿ ನಮಗೆ ನಿಮ್ಮೆಲ್ಲರ ಯೋಗಕ್ಷೇಮವನ್ನು ತಿಳಿಸಿದರು. ನಿಮ್ಮ ದೇಹಪ್ರಕೃತಿ ಬಹಳ ಸೂಕ್ಷ್ಮವಾಗಿದೆಯೆಂದೂ, ನೀವು ಅದರ ಬಗೆಗೆ ಉದಾಸೀನರಾಗಿರುವಿರೆಂದೂ ತಿಳಿದು ವಿಷಾದವೆನಿಸಿತು. ಮನುಷ್ಯ ಯತ್ನವನ್ನು ಮಾಡಿ ಮುಂದಿನದನ್ನು ದೈವಯತ್ನಕ್ಕೆ ಬಿಡಬೇಕೆಂಬುದು ನಿಮಗೆ ತಿಳಿಯದುದೇನಲ್ಲ. ಆದ ಕಾರಣ ದೇಹಾರೋಗ್ಯವನ್ನು ಸುಧಾರಿಸಿಕೊಳ್ಳುವ ಕಡೆ ನೀವು ಮೊದಲ ಗಮನವನ್ನು ಹರಿಸಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆ.

ಪ್ರಕೃತ, ದೀಪಾವಳಿ ಪಾಡ್ಯದ ಮಾರನೆಯ ದಿನ ಸೋದರಬಿದಿಗೆ ಹಬ್ಬದ ಸಲುವಾಗಿ...ಊರಿಗೆ ದಯಮಾಡಿಸಿ ನಮ್ಮೆಲ್ಲರಿಗೂ ನಿಮ್ಮನ್ನು ಕಾಣುವ ಸುಯೋಗವನ್ನು ಕಲ್ಪಿಸಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಹಾಗೂ ಈ ಸಂದರ್ಭದಲ್ಲಿ, ವೈದ್ಯಕೀಯ ಚಿಕಿತ್ಸೆಗೂ ಅವಕಾಶ ಮಾಡಿಕೊಂಡು ಬರುವಿರೆಂದು ನಂಬಿದ್ದೇನೆ.

ತೀ।। ತಂದೆಯವರು ಮತ್ತು ಸೌ।। ಮಾ।। ತಾಯಿಯವರು ಇದೇ ತಿಂಗಳು 29ರಿಂದ ಹನ್ನೆರಡು ದಿನಗಳ ಕಾಲ ದಕ್ಷಿಣ ಭಾರತ ಯಾತ್ರೆಯನ್ನು ಕೈಗೊಳ್ಳಬೇಕೆಂಬ ಯೋಜನೆಯಿದೆ. ಈ ವಿಚಾರವಾಗಿ ಹಿಂದೊಮ್ಮೆ ನಿಮ್ಮೊಡನೆ ಪ್ರಸ್ತಾಪಿಸಿದ್ದೆನಷ್ಟೆ. ಆದರೆ ಸೌ।। ಮಾ।। ತಾಯಿಯವರಿಂದ ನಿಮ್ಮ ಅನಾರೋಗ್ಯದ ವಿವರಣೆಯನ್ನು ಕೇಳಿದ ಮೇಲೆ ನಿಮ್ಮಿಂದ ಯಾತ್ರೆ ಮಾಡುವುದು ಕಷ್ಟಸಾಧ್ಯವೆನಿಸಿ, ಆ ವಿಚಾರವಾಗಿ ನಿಮಗೆ ಬರೆಯಬೇಕೆಂದಿದ್ದ ಪತ್ರವನ್ನು ಬರೆಯದೆ ಕೈತಡೆದೆ. ಸೌ।। ಮಾ।। ಅತ್ತೆಯವರು ಹಾಗೂ ನೀವು ನಮ್ಮೊಡನೆ ಬರಬೇಕೆಂದು ಪ್ರಾರ್ಥಿಸುವ ಮನಸ್ಸಿತ್ತು. ಆದರೆ ದೈವಯೋಗ ಅದಕ್ಕೆ ಅನುಕೂಲವಾಗಿರುವಂತೆ ಕಂಡುಬರಲಿಲ್ಲ.

ತೀ।। ತಂದೆಯವರು ಇದೇ ತಿಂಗಳು 25ರಂದು ಹಾಸನದ ಶಂಕರಮಠದಲ್ಲಿ ಚಂಡೀಹೋಮಕ್ಕೆ ಏರ್ಪಾಟು ಮಾಡಿ ಕೊಂಡಿರುವುದರಿಂದ ಹಬ್ಬಕ್ಕೆ ಬರಲು ಅವಕಾಶವಾಗುವುದಿಲ್ಲ.

ಈ ಪತ್ರದಲ್ಲಿಯೇ ನಿಮ್ಮ ಆಗಮನಕ್ಕಾಗಿ ಸೌ।। ಮಾ।। ತಾಯಿಯವರ ಕೋರಿಕೆಯೂ ಸಮಾವೇಶಗೊಂಡಿದೆ.

ಸೌ।। ಮಾ।। ಅತ್ತೆಯವರೂ ಬಿಡುವು ಮಾಡಿಕೊಂಡು ನಿಮ್ಮೊಡನೆ ಈ ಬಾರಿಯಾದರೂ ಬರುವರೆಂದು ಆಶಿಸಲೆ ?

...ಹೆಚ್ಚಿಗೆ ವಿಚಾರಗಳನ್ನು ಮೊಖ್ತಾ ಮಾತಾಡಬಹುದೆಂಬ ಆಸೆಯನ್ನು ಹೊಂದಿದ್ದೇನೆ. ನಿಮ್ಮ ಅನಂತವಾದ 'ಪ್ರೀತ'ಕ್ಕೆ ಚಿ।। ರಾ।।...ಒಡನೆ ಉತ್ತರ ಕಳುಹಿಸಿದ್ದೆ. ನಿಮಗೆ ತಲಪಿದೆಯೆಂದು ಭಾವಿಸಿದ್ದೇನೆ.

ಇತಿ ವಿಜ್ಞಾಪನೆಗಳು

ನುರಿತ ಭಾಷೆ, ಅಚ್ಚುಕಟ್ಟಾದ ಒಕ್ಕಣೆ, ಸಹಜ ಭಾವನೆ ಇಲ್ಲಿನ ಹಲವು ಪತ್ರಗಳ ಲಕ್ಷಣವಾಗಿದೆ.

೨೨೨

ಮಗಳಿಗೆ ಬರೆದ ಪತ್ರ

ಅನೇಕ ಮಕ್ಕಳ ತಂದೆಯೊಬ್ಬರ ಅಂತರ್ದೇಶೀಯ ಪತ್ರ

ಹಾಸನಜಿಲ್ಲೆಯ ಹಳ್ಳಿ

ತಾ। 13-12-77

...ನಿನ್ನ ಅತ್ಯಂತ ಪ್ರೀತಿಪೂರ್ವಕವಾದ ಮತ್ತು ಹಿತವಾಕ್ಯಗಳಿಂದ ಕೂಡಿದ ಪತ್ರ ತಲಪಿ ತುಂಬಾ ಸಂತೋಷವಾಯಿತು. ಕಾಗದ ಬರೆಯಲು ಕೆಲವು ತೊಂದರೆಗಳಿಂದ ವಿಳಂಬವಾಯಿತು. ಅಷ್ಟೆ. ಇದಕ್ಕಾಗಿ ನನಗೆ ಯಾವ ವಿಧವಾದ ಬೇಸರವೂ ಇಲ್ಲ ಕಂದಾ. ನನಗಾಗಿ ನೀನು ಏಕಿಷ್ಟು ಕಾಳಜಿ ವಹಿಸುತ್ತೀಯಾ. ನಿಜ ಹೇಳಬೇಕೆಂದರೆ ಪದ್ದೂ ಈಗೀಗ ನನ್ನ ಆರೋಗ್ಯ ಸ್ವಲ್ಪವೂ ಚನ್ನಾಗಿಲ್ಲ. ಡಾಕ್ಟರಲ್ಲಿ ತೋರಿಸಲಾಗಿ ಅವರು ಬ್ಲೆಡ್ ಪ್ರಶರ್ ಜಾಸ್ತಿ ಇದೇಂತ ಹೇಳುತ್ತಾರೆ. ಮತ್ತು ಅದಕ್ಕಾಗಿಯೇ ಮೈನೋವು, ನಿಶ್ಶಕ್ತಿ, ತಲೆತಿರುಗು ಇವುಗಳಿಂದ ತೊಂದರೆ ಅನುಭವಿಸುತ್ತಿದ್ದೇನೆ. ಒಟ್ಟಿನಲ್ಲಿ "ಯಾವಜ್ಜೀವಂ ಕಷ್ಟೇನ ಕಾಲಂ ನೀತಮ್" ಎನ್ನುವಂತಾಗಿದೆ. ಇರಲಿ. ಎಲ್ಲಾ ನನ್ನ ಪುರಾಣವೇ ಆಯಿತು. ಮುಂದೆ ಹೇಳುತ್ತೇನೆ ಕೇಳು.

ಮನೆಯಲ್ಲಿ ಎಲ್ಲರೂ ಚನ್ನಾಗಿದ್ದಾರೆ. ನಿನ್ನ ಅಮ್ಮ ಮೊನ್ನೆ ಹಾಸನಕ್ಕೆ ಹೋಗಿದ್ದಾಳೆ. ಇನ್ನೂ ಬಂದಿಲ್ಲಾ. ಕಾರಣ ಚಿ।। ಸೌ।। ನಿಮ್ಮಿ ಕಳೆದ ಎರಡೂವರೆ ತಿಂಗಳಿಂದ ಹೊರಗಡೆ ಆಗಿಲ್ಲಾ. ಅದಕ್ಕಾಗಿ ಡಾಕ್ಟರಲ್ಲಿ ತೋರಿಸಲು ಹೋಗಿದ್ದಾಳೆ. ಅವಳು ಒಂದು ವೇಳೆ ಗರ್ಭವತಿಯಾಗಿದ್ದರೆ ಮುಂದಿನ ವಾರ ಹೋಗಿ ಕರದುಕ್ಕೊಂಡು ಬಂದು ಔಷಧೋಪಚಾರ ನಡಸಬೇಕು. ಇನ್ನೂ ಯಾವುದೂ ನಿಖರವಾಗಿ ತಿಳಿಯದು.

...ನಂತರ ತರೀಕೆರೆಯಿಂದ ತೀ।।ಗಳು ಕಾಗದ ಬರೆದಿದ್ದರು. ಈಗ ಚಿ।। ಸೌ।। ಶಶಿಗೆ 6ನೇ ತಿಂಗಳು ನಡೆಯುತ್ತಿದೆ. ಅದು ತುಂಬಿದ ಕೂಡಲೆ ಹೋಗಿ ಕರದುಕೊಂಡು ಬರುತ್ತೇನೆ (ಈ ತಿಂಗಳ ಕೊನೆಯಲ್ಲಿ). ನಂತರ ನಡಸತಕ್ಕ ಶಾಸ್ತ್ರಗಳು ಆಗಬೇಕು.

ಓ. ತಡಿ. ನಿನ್ನ ಅಮ್ಮ ಈಗ ತಾನೇ ಬರುತ್ತಿದ್ದಾಳೆ. ನಿಮ್ಮಿ ಗರ್ಭವತಿಯಾಗಿದ್ದಾಳಂತೆ. ಈ ಸಂತೋಷ ಸಮಾಚಾರಕ್ಕೆ ನನಗೆ ಚಾಕೊಲೇಟ್ ಕೊಟ್ಟಿರುತ್ತಾಳೆ. ನಿನಗೂ ಸಂತೋಷ ತಾನೆ. ಇನ್ನು ಊರಿನಲ್ಲಿ ನಿನ್ನ ಅಕ್ಕ ಭಾವ ಮಕ್ಕಳು ಎಲ್ಲಾ ಚನ್ನಾಗಿದ್ದಾರೆ... ಸರಿ, ಆಯಿತಲ್ಲಾ.

ಇನ್ನು ಹೇಳು. ನಿನ್ನ ಮಕ್ಕಳು ಹೇಗಿವೆ. ಪುಟಾಣಿ ಕಿಟ್ಟು ಏನು ಹೇಳುತ್ತಾನೆ. ಕವಿತಾಗಡಸು ಹೇಗೆ ? ಮಕ್ಕಳನ್ನು ನೋಡಬೇಕೆನ್ನಿಸುತ್ತಿದೆ. ಆದರೆ ಈಗ ಬರಲು ಆಗುವುದಿಲ್ಲ. ಚಿ।। ಸೌ।। ಶಶಿಯನ್ನು ಕರದುಕೊಂಡು ಬಂದ ಮೇಲೆ ಬರುತ್ತೇನೆ. ಮತ್ತೆ ಅಲ್ಲಿ ನಿನ್ನ ಯಜಮಾನರಿಗೆ ಎಲ್ಲ ವಿಷಯಗಳನ್ನು ತಿಳಿಸಿ ಜತೆಗೆ ನನ್ನ ಆಶೀರ್ವಾದಗಳನ್ನು ತಿಳಿಸು. ತೀ।। ಗಳಿಗೆ ನನ್ನ ನಮಸ್ಕಾರಗಳನ್ನು ತಿಳಿಸು. ಪುಟಾಣಿಗಳಿಗೆ ಜ್ಞಾಪಕ ಕೊಡು. ಇನ್ನೇನು ಹೇಳಲಿ.

ಓ ಮರತೆ. ಪುಟ್ಟಿ ಹುಶಾರಾಗಿದ್ದಾಳಂತೆ. ಅವಳ ಸ್ಕೂಲ್‌ನಿಂದ ಟೂರ್ ಹೋಗುತ್ತಾರಂತೆ. ಅದಕ್ಕಾಗಿ ದುಡ್ಡು ಬೇಕೂಂತ ಕಾಗದ ಬರದಿದ್ದಳು. ನಿನ್ನೆ ಕಳುಹಿಸಿದೆ. ಒಟ್ಟಿನಲ್ಲಿ ಅವಳು ಓದೋಹಾಗೆ ಕಾಣೋಲ್ಲ, ಮೈಗಳ್ಳಿ. ಬೆಳ್ಳಿ ಚೆನ್ನಾಗಿದ್ದಾಳೆ. ಶಾಲೆಗೆ ಹೋಗುತ್ತಿದ್ದಾಳೆ. ಇನ್ನು ಅಣ್ಣಯ್ಯ ಹಾಸನದಲ್ಲಿದ್ದಾನೆ. ಕಾಲೇಜಿಗೆ ಹೋಗುತೀನೀಂತಾನೆ. ಮೊದ್ಲು ಕಾಲೇಜ್ ಸ್ಟ್ರೈಕ್‌ನಿಂದ ಈ ವರ್ಷದ ಪರೀಕ್ಷೇನೇ ಇಲ್ಲಾಂತಿದ್ರು. ಈಗ ಪರೀಕ್ಷೆ ನಡೆಯುತ್ತಂತೆ! ಅದೂ ಅಲ್ಲದೆ ಟೂರ್ ಬೇರೆ ಹೋಗಬೇಕಂತೆ (ಉತ್ತರ ಇಂಡಿಯಾ ಪೂರ್ತಿ). ಎಲ್ಲಾ ವಿಷಯಾನೂ ಹೇಳಿದ್ದೀನಿ ಪದ್ದೂ. ಇನ್ನೇನೂ ಇಲ್ಲಾ. ಓ. ಇಗೊ. ಈ ವರ್ಷ ಸ್ವಲ್ಪ ರಾಗಿ ಮಾತ್ರ ಆಗುತ್ತೆ. ಜೋಳ ಆಗಿದ್ದನ್ನ ಆಗಲೆ ಕೊಟ್ಟಾಯ್ತು. ಅಡಿಕೇಲಿ ಈ ವರ್ಷ ನನಗೆ ಒಂದು ಸಾವಿರ ರೂ. ಬಂತು. ಇನ್ನು ಯಾವ ಉತ್ಪತ್ತಿಯೂ ಇಲ್ಲಾ.

ಈ ಕಾಗದ ತಲಪಿದ್ದಕ್ಕೆ ಪುರಸತ್ತಾದಾಗ ಕಾಗದ ಬರೆ. ಜಾತ್ರೆಗೆ ಬರಲು ನನಗೆ ಸಾಧ್ಯವೊ ಇಲ್ಲವೊ ತಿಳಿಯದು. ಆದರೆ ಬರುತ್ತೇನೆ.

ಬಡರೈತನ ಜೀವನೋತ್ಸಾಹ ಮೆಚ್ಚುವಂತಹುದು.

೨೨೩

ಉಪ್ಪಿನಕಾಯಿ ನೆನಪು (ಅಕ್ಕನಿಗೆ ಅಂತರ್ದೇಶೀಯ ಪತ್ರ)

Safe ಶ್ರೀ ಹಾಸನಜಿಲ್ಲೆಯ ಹಳ್ಳಿ

5.6.79

...ಇದೇನೆ ಅಕ್ಕ ಹಾಗ್ ನಿಂತ್ಕೊಂಡ್‌ಬಿಟ್ಟೆ. ನಾನೇಕಣೇ. ನಿನ್ನ ತಂಗಿ ಬರೆದಿರೊ ಕಾಗದ ಕಣೇ. ಆಶ್ಚರ್ಯ ಆಯ್ತ ? ನಿಧಾನವಾಗಿ ಓದು !

ಅಕ್ಕ ನೀನು ಕೊಟ್ಟ ಉಪ್ಪಿನಕಾಯಿ ಇವತ್ತಿಗೆ ಮುಗಿಯಿತು. ಪ್ರತಿ ಸಲ ತಿನ್ನೋವಾಗಲೂ ನಿನ್ನ ನೆನಪು ಬರ್‍ದೆ ಇರ್‍ತಾ ಇರಲಿಲ್ಲ.

ಇನ್ನು ನಿನ್ನ ಮಗ ಪರು ಆರೋಗ್ಯದಿಂದ ಆಟವಾಡಿ ಕೊಂಡಿದ್ದಾನೆ. ನನಗಂತೂ ಮಧ್ಯಾಹ್ನ ಅವನನ್ನು ತಡೆದು ಸಾಕಾಗುತ್ತೆ. ಇರೊ ಆಟದ ಸಾಮಾನನ್ನೆಲ್ಲಾ ಬಾಲ್ಕನೀಲಿ ತೊಗೊಂಡ್ಹೋಗಿ ಹಾಕ್ತಾನೆ. ನನಗಂತೂ ಸುತ್ತಿ ಸುತ್ತಿ ಸಾಕಾಗುತ್ತೆ. ನೀನು

ಕೊಟ್ಟಿದ್ದೀಯಲ್ಲ , ತಿಂಡಿ ತಿನ್ನೋದಕ್ಕೆ ತಟ್ಟೀನ, ಅದರಲ್ಲೆ ಅವನು ತಿಂಡಿ ತಿನ್ನೋದು.

ಮತ್ತೆ ನಿಮ್ಮ ಮಾವ (ಬಾವಾಜಿ) ಹುಷಾರಾಗಿದ್ದಾರೆ. ಯಥಾಸ್ಥಿತಿ ಆಫೀಸಾಯ್ತು ಅವರಾಯ್ತು, ಅವರ ಮಗ ಆಯ್ತು. ನಾವೆಲ್ಲಾ ಅಬಸ್ಟ್.

ಊರಿನಿಂದ ಅಪ್ಪ ಬಂದಿದ್ದರು. ಆರೋಗ್ಯವಾಗಿದ್ದಾರೆ. ಚಿ|| ...ಳನ ಮಗುವಿಗೆ ಕಿವಿ ಚುಚ್ಚಿಸುವ ಸಲುವಾಗಿ ಅಮ್ಮನೂ ಮುಂದಿನ ವಾರ ಬರ್ತಾರೆ ಅಂತ ಕಾಣ್ಸತ್ತೆ...

ಹೆಣ್ಣು ಮಕ್ಕಳ ಪತ್ರಗಳಲ್ಲಿನ ಕೌಟುಂಬಿಕ ಆಸಕ್ತಿ ಪ್ರಖರವಾದುದು.

೨೨೪

ಅಮೆರಿಕನ್ ಜಾರ್ಜೆಟ್ (ಅಕ್ಕನಿಗೆ ಅಂತರ್ದೇಶೀಯ ಪತ್ರ)

Safe Shree Rama ತಾ| 18.5.80

...ನಿನ್ನ ಮುದ್ದಿನ ಚಿ|| ಕೋದಂಡರಾಮ ಆರೋಗ್ಯದಿಂದಿದ್ದಾನೆ. ಚನ್ನಾಗಿ ಹಟ ಮಾಡ್ತಾನೆ. ಹೆಸರು ರಾಮ ಅಂತ ಆದ್ರೂ ರಾಮನ ಭಂಟನ ಕೆಲ್ಸಾನೇ ಜಾಸ್ತಿ ಮಾಡ್ತಾನೆ. ಯಾರಿಗ್ಗೊತ್ತು, ಒಟ್ಟಿನಲ್ಲಿ ರಾಮ ಅಲ್ಲ ರಾಮನ ಭಂಟ ಆಗಿದ್ದಾನೆ, ಅಷ್ಟೆ.

ಹುಂ ಇನ್ನು ಇಲ್ಲಿನ ಪರಿಸ್ಥಿತಿ ಯಥಾಸ್ಥಿತಿ. ತೀ|| ಮಾವನವರು ಕ್ಷೇಮ. ನಿನ್ನ ಬಾವಾಜಿ ಆರೋಗ್ಯದಿಂದಿದ್ದಾರೆ. ಈಗ ಯಾವ ತರಹದ ದುರಭ್ಯಾಸವೂ ಇಲ್ಲ. ಕೆಟ್ಟಮೇಲೆ ಬುದ್ಧಿ ಬಂತು ಅನ್ನೋ ಮಾತಿನ ಹಾಗೆ. ಈಗಲಾದ್ರೂ ಬುದ್ಧಿ ಬಂತಲ್ಲಾ ಅಷ್ಟೆ ನನಗೆ ಸಂತೋಷ. ಅಂಥ ಇಸ್ಪಿಟ್ ದುಶ್ಚಟಾನೆಲ್ಲಾ ಅವರಮ್ಮನ ಹಿಂದೇನೇ ಶಾಶ್ವತವಾಗಿ ಹೊರಟೋಯ್ತು ಅಂತ ಕಾಣ್ಸುತ್ತೆ. ಅತ್ತೆ ಇದ್ದಾಗ ಅದೆಷ್ಟು ಹೇಳಿದ್ರೋ. ಕೇಳ್ಳಿಲ್ಲ. ಅವರಿದ್ದಾಗ್ಲೆ ಬಿಟ್ಟಿದ್ರೆ ಇನ್ನೂ ಸ್ವಲ್ಪ ದಿನ ಬದುಕ್ತಿದ್ರೋ ಏನೋ. ಅದೃಷ್ಟ ಇಲ್ಲ. ಅದೊಂದು ವಿಷಯದಲ್ಲಿ ನನಗೆ ಒಂದು ಸಮಾಧಾನ. ಮನಸ್ಸು ಬಂದ್ರೆ ಎಲ್ಲಾನೂ ಮಾಡ್ತಾರಕ್ಕಾ. ತುಂಬಾ ಒಳ್ಳೆಯವರು. ಈಗ ರಾವಣ ಸೀತಾಪಹರಣ ಒಂದ್ ಮಾಡದಿದ್ರೆ ಅವನು ಬ್ರಹ್ಮನಿಗೆ ಸಮಾನನಂತೆ. ಹಾಗೆ ಇವರಿಗೆ ಅದೊಂದು ಇಲ್ಲದಿದ್ರೆ ಇಂಥಾ ಮನೇನ ಇನ್ನೆರಡು ಕಟ್ಟಬಹುದಿತ್ತು ಗೊತ್ತಾ.

ಏನೇನೋ ಬರ್ದೆ ಅಂತ ಬೇಜಾರು ಮಾಡ್ಕೊಬೇಡ. ಮನಸ್ಸಿನಲ್ಲಿರೋದನ್ನ ಹೇಳಿಕೊಂಡರೆ ಸ್ವಲ್ಪ ದುಗಡ ಕಡಿಮೆಯಾಗುತ್ತೆ ಅಂತಾರಲ್ಲಾ ಹಾಗೆ. ನಿನ್ನ ಕೈಲಿ ಹೇಳಿಕೊಳ್ಳದೆ ಇನ್ನಾರ ಕೈಲಿ ಹೇಳಲಿ ಹೇಳು. ಇಲ್ಲಿ ನನಗೆ ಅಂತಹ ಆತ್ಮೀಯರಾರೂ ಇಲ್ಲ (ಇವರೊಬ್ಬರನ್ನು ಬಿಟ್ಟು). ಅಣ್ಣಮ್ಮನ ಮನೆ ತುಂಬಾ ದೂರ. ಮನಸ್ಸು ಮಾತ್ರ, ಹಾಲಿಗೆ ಸಕ್ಕರೆ ಬೆರೆತಂತೆ, ಈ ಊರು ಆ ಹಳ್ಳೀಲಿರುತ್ತೆ. ನನ್ನ ಪುರಾಣ ಸಾಕು. ನಾನಂತೂ ಸಂತೋಷ ವಾಗಿದ್ದೀನಿ. ಈಗ ನಿನ್ನದನ್ನು ಹೇಳು.

ಇನ್ನು ನಿನ್ನ ಸೀರೆ ಕೊಟ್ಟು ಕಳಿಸಿದ್ದೆ. ತಲಪಿತೋ ಹ್ಯಾಗೆ ಪತ್ರ ಬರೆ. ಮತ್ತು ನನ್ನ ಸೀರೆಯ ವಿಷಯ ಏನಾಯ್ತು. ತರಿಸಿದ್ದೀಯ ಹ್ಯಾಗೆ. ನಾನಂತೂ ದುಡ್ಡನ್ನ ಮಾಡ್ಕೊಂಡಾಗಿದೆ. ನೀನು ತರಿಸದೆ ಇದ್ದರೆ ನಿನ್ನ ಕಪ್ಪು ಅಮೆರಿಕನ್ ಜಾರ್ಜೆಟ್ ಇದೆಯಲ್ಲಾ ಅದೇ ತರಹ ತರಿಸು. ಇಲ್ಲದಿದ್ದರೆ ಅದನ್ನೇ ಕೊಡು. ನೀನು ಬೇರೆ ತೊಗೋ. ಇಲ್ಲಿ ಅವಕ್ಕಿಂತ ಚನ್ನಾಗಿರೋ ಸೀರೆ ಸಿಕ್ಕುತ್ತೆ. ಆದ್ರೆ ಈಗ ತೊಗೊಂಡ್ರೆ ಆಕ್ಷೇಪಣೆ ಆಗತ್ತೆ. ಅಲ್ಲೀದಾದ್ರೆ ಅಕ್ಕ ಕೊಟ್ಟಿದ್ದು ಅಂತ ಹೇಳ್ತೀನಿ. ಆದಷ್ಟು ಬೇಗ ರವಾನೆ ಮಾಡು. ಅಮ್ಮ ಇನ್ನು 15 ದಿನಕ್ಕೆ ಇಲ್ಲಿಗೆ ಬರ್ತಾರೆ (ತಿಂಡಿ ಇಡೋದಕ್ಕೆ). ಅವರ ಕೈಲಿ ಕಳಿಸಿದರೆ ನನಗೆ ತಲಪುತ್ತೆ. ಅಮ್ಮನ ಕೈಲೇ ದುಡ್ಡು ಕಳಿಸ್ತೀನಿ. ಕವರ್ ತುಂಬಿಸೋದಕ್ಕೆ ಏನೇನೋ ಬರ್ದೆ ಅಂತ ಬೇಜಾರಾ. ಸುಮ್ನೆ ಖಾಲಿ ಬಿಡ್ಬೇಕಲ್ಲಾ ಅಂತ ಪುರಾಣ ಹೊಡ್ದೆ ಬಿಡು...

ಸಾವಿನ ಮನೆಗೆ ಬಂಧುಗಳು ಆ ವರ್ಷದ ಗೋಕುಲಾಷ್ಟಮಿಯಂದು ಅಥವಾ ಬೇರೆ ಯಾವುದಾದರೊಂದು ದಿನ ಕರಿದ ತಿಂಡಿಗಳನ್ನು ಕೊಟ್ಟು ಬರುವುದಕ್ಕೆ 'ತಿಂಡಿ ವಯ್ಯರದ' –ತಿಂಡಿ ಇಡೋದು ಅನ್ನುತ್ತಾರೆ.

೨೨೫

ಎಂಬ್ರಾಯಿಡರಿ (ತಂಗಿಯ ಅಂತರ್ದೇಶೀಯ ಪತ್ರ)

ಹಾಸನ ಜಿಲ್ಲೆ
24.8.81

...ಅಕ್ಕಾ ಹ್ಯಾಗಿದ್ದೀಯಾ ? ನಿನ್ನ ಟೈಲರಿಂಗ್ (ಮೆಷಿನ್) ಹ್ಯಾಗಿದೆ? ತುಂಬಾ ಬಿಸಿ ಅಂತ್ ಕಾಣ್ಸುತ್ತೆ. ಮಾಡು. ಕಲಿ. ಇಂಟರೆಸ್ಟ್ ಇರೋವಾಗ ಕಲಿತುಕೊಂಡ್ರೆ ಬೇಗ ತಲೆಗೆ ಹತ್ತುತ್ತೆ. ನನ್ನ ಎಂಬ್ರಾಯಿಡರಿ ನಿನಗೆ ಯಾವಾಗ ಹೇಳಿಕೊಡುತ್ತೇನೆ ಅಂತ ಅನ್ನಿಸ್ತಾ ಇದೆ. ಟೈಂ ಮಾಡ್ಕೊಂಡು ಖಂಡಿತ ಈ ರಜದಲ್ಲಿ ಮಕ್ಕಳ್ನ ಕರಕೊಂಡು ನೀನು ಬರಲೇಬೇಕು ಅಕ್ಕಾ.

ನನಗಂತೂ ಇಲ್ಲಿ ಬೇಜಾರು. ಅಂತೂ ಸ್ವಲ್ಪ ಬಟ್ಟೆ–ಬರೆ ಹೊಲಿಯೋದಕ್ಕೆ ಬರುತ್ತಾ ಇದೆ. ೩ ಸ್ವೆಟರ್ ಬುಕ್ ಇದೆ. ಹಾಕ್ತಾ ಇದೀನಿ. ಮಹಿಳಾ ಸಮಾಜದ ಮೆಂಬರ್ ಆಗಿದೀನಿ. ಧಾರವಾಡಕ್ಕೆ ಮೀಟಿಂಗ್‌ಗೆ ಹೋದವಾರ ಹೋಗಿದ್ದರು. ನಾನೂ ಹೊರಟಿದ್ದೆ. ಅನಿವಾರ್ಯದಿಂದ ಹೋಗಲಾಗಲಿಲ್ಲ. ಮುಂದೆ ಚಿತ್ರದುರ್ಗಕ್ಕೆ ಹೋಗುವವರಿದ್ದಾರೆ. ಎಂಬ್ರಾಯಿಡರಿ ಹೇಳಿ ಕೊಡಿ ಅಂತ ಕೇಳ್ತಾ ಇದಾರೆ. ಇನ್ನೂ ಸೆಟ್ ಆಗಿಲ್ಲ.

ಖಂಡಿತಾ ನೀನು ರಜದಲ್ಲಿ ಬರ್ಲೇ ಬೇಕಕ್ಕಾ.

ಕೇವಲ ಅಡುಗೆ ಮನೆಯ ಮಿತಿಯಲ್ಲಿದ್ದ ಹೆಣ್ಣು ಹೊಸರೂಪದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾದದ್ದು ಇಪ್ಪತ್ತನೆಯ ಶತಮಾನದ ಅರವತ್ತರ ಇಸವಿಯಿಂದೀಚೆಗೆ.

೨೨೬

ಕರಾಳ ಘಟನೆ (ಮಗಳಿಗೆ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ: ಹಾಸನಜಿಲ್ಲೆಯ ಹಳ್ಳಿ

ತಾ. 18-9-81

...ಪುಟ್ಟಾ ಏನಮ್ಮಾ ಚನ್ನಾಗಿದ್ದೀಯಾ ? ನಿನ್ನ ಕಂದಮ್ಮಗಳು ಹುಷಾರಾಗಿದ್ದಾರೆಯೆ ? ಹಬ್ಬ ತುಂಬ ಜೋರಾಗಿ ನಡೆಸಿರಬಹುದು. ಕಾಗದ ಬರೀತೀಯಾಂದುಕೊಂಡಿದ್ದೆ. ಬರೀಲೇ ಇಲ್ಲ. ಇಲ್ಲಿ ಗೌರಿಹಬ್ಬಕ್ಕೆ ಚಿ|| ಸೌ|| ಅವಳ ಯಜಮಾನರು ಎಲ್ಲಾ ಬಂದಿದ್ದರು. ನಿನ್ನ ತಮ್ಮನೂ ಸಹ ಬಂದಿದ್ದ. ಚನ್ನಾಗಿತ್ತು. ನಿನ್ನ ಅಮ್ಮಂಗೆ ಚತುರ್ಭುಜ ಬಂದಂತಾಗಿತ್ತು. ಖುಷಿಯೋ ಖುಷಿ! ಸರಿ. ಅದು ಕಳೆದು ೩ ದಿನಕ್ಕೆ ಎಲ್ಲಾ ಪ್ರಯಾಣ ಮಾಡಿದರು (ಪೂರ್ವೇತಿ ಪೂರ್ವಃ).

ಈ ವರ್ಷದ ಅನಂತನಹಬ್ಬ ಇಲ್ಲಿ ತುಂಬಾ ಸಪ್ಪೆಯಾಯಿತಮ್ಮ. ಯಾರೂ ಇಲ್ಲ. ಚಿ|| ಸೌ||... ಹೋಗುವಾಗ ಚಿ|| ಯನ್ನೂ ಕರೆದುಕೊಂಡು ಹೋದಳು. ಈಗ ನಾವಿಬ್ಬರೇ. ಹೋಗಲಿಬಿಡು. ನಮ್ಮ ಕೈಲೂ ಆಗಲ್ಲ. ಇರೋವರೀಗೂ ಹ್ಯಾಗೋ ಕಾಲಾ ತಳ್ಳೋದು. ಅಂತೂ ಇದ್ದೀವಿ...

ಮಳೆ ಬರುತ್ತಿದೆ. ಜೋಳಾ ಕಟಾವಾಗುತ್ತಿದೆ. ಮಳೆ ಬೇರೆ. ಎಲ್ಲಾ ನಷ್ಟ. ಮನೇಲಿ ಕಾಲು ಹಾಕೊಕ್ಕೂ ಜಾಗಾ ಇಲ್ಲ. ಬಿಡುವಿಲ್ಲದ ಕೆಲ್ಸ. ನಿನ್ನ ತಮ್ಮ ಅವಂಗೂ ಹುಷಾರಿರಲಿಲ್ಲವಂತೆ. ಔಷಧಿ ತೊಗೋತಾ ಇದ್ದಾನಂತೆ. ಒಟ್ಟಿನಲ್ಲಿ ನಿನ್ನ ಅಮ್ಮಂಗೆ ನಿರಾಳವಿಲ್ಲ. ಏನು ಮಾಡೋದು? ಎಲ್ಲಾ ನಮ್ಮ ಕರ್ಮ. ಇದಿಷ್ಟು.

ಈಗ 8 ದಿನಗಳ ಹಿಂದೆ ಒಂದು ಘಟನೆ ನಡೀತು. ದೈವಬಲವಿಲ್ಲದಿದ್ದರೆ ಈ ವೇಳೆಗೆ ನಾವಿಬ್ಬರೂ ಸ್ವರ್ಗ ಸೇರಿ 8-10 ದಿನಾ ಆಗೋದು. ಏನೋ ಪುರಾಪುಣ್ಯದಿಂದ ಬದುಕಿ ಬಂದೆವು. ಹೇಳೋದಕ್ಕೇ ಭಯ ಆಗುತ್ತಮ್ಮಾ. ಆದರೂ ನಿನ್ನಲ್ಲಿ ಹೇಳದೆ ಸಮಾಧಾನವಿಲ್ಲ. ಈ ವಿಷಯ ಯಾರಿಗೂ ಹೇಳಬೇಡ. ತಪ್ಪೇನಿಲ್ಲಾ, ಕೇಳು ಹೇಳತೀನಿ.

ಕಳೆದ ಗೌರೀಹಬ್ಬದ ಕೆಲ್ಸ ಕಾರ್ಯಗಳ ಹೆಚ್ಚಳದಿಂದ ನಿನ್ನ ಅಮ್ಮನಿಗೆ ಹುಷಾರಿಲ್ಲದೆ ಮೈ ಕೈ ನೋವು, ಎದೆನೋವು, ಜಾಸ್ತಿಯಾಗಿ 4 ದಿನ ಮಲಗಿದ್ದಳು. ಆಗ ಡಾಕ್ಟರಿಗೆ ತೋರಿಸೋಣವೆಂದು ಹಾಸನಕ್ಕೆ ಹೋದೆವು. ಹೋಗುವ ವೇಳೆಗೆ 12 ಘಂಟೆ ಆಗಿತ್ತು. ಸರಿ, ಅಲ್ಲಿಂದ ಡಾ. ಮುನಿವೆಂಕಟೇಗೌಡರ ಹತ್ತಿರ ತೋರಿಸಿ ಇಂಜಕ್ಷನ್, ಮಾತ್ರೆ ಕೊಂಡುಕ್ಕೊಂಡು ಬರಲು ಸುಮಾರು 2 $^1/_2$ ಘಂಟೆ ಆಯಿತು. ಸರಿ. ಅಲ್ಲಿಂದ ಮನೆ ಸಾಮಾನು ಅದೂ ಇದೂ ಅಂತ ಸುತ್ತಾಡಿ ಗಣಪತಿ ನೋಡಿಕ್ಕೊಂಡು ಬಸ್‌ಸ್ಟಾಂಡಿಗೆ ಬಂದೆವು. ಆ ದಿನ ನಮ್ಮ ಕಡೆ ಬಸ್ಸು ತುಂಬಾ ನಿಧಾನ. ಅಂತೂ ಸಾಯಂಕಾಲ 6 $^1/_2$ ವೇಳೆಗೆ...ಹಳ್ಳಿಗೆ ಹೋಗುವ ಬಸ್ಸಿನಲ್ಲಿ ಬಂದು ನಮ್ಮ ಹೊಸರಸ್ತೆ ಕೂಡಿನಲ್ಲಿ ಇಳಿದೆವು. ಆಗಲೇ ಕತ್ತಲು. ಆಗ ನಮ್ಮ ಜತೆಯಲ್ಲೇ ಇನ್ನೂ ಇಬ್ಬರು ಇಳಿದರು. ಯಾರೊ ತಿಳಿಯಲಿಲ್ಲ. ಸರಿ. ನಮ್ಮ ಪಾಡಿಗೆ ನಾವು ರಸ್ತೆಯಲ್ಲಿ ಬರುತ್ತಿದ್ದೆವು. ಹಿಂದಿನಿಂದ ಬಂದ ಆ ರೌಡಿಗಳು ನಮ್ಮಿಂದ ಮುಂದೆ ಹೋದರು. ಆಗ ನಾನು ಯಾವೂರು ಎಂದು ಕೇಳಿದರೂ ಸರಿಯಾಗಿ ಹೇಳಲಿಲ್ಲ. ಕತ್ತಲು ಬೇರೆ. ನಿನ್ನ ಅಮ್ಮ ಕತ್ತಿನಲ್ಲಿ ಚೈನ್ ಸರ ಹಾಕಿದ್ದಳು. ಬೇರೆ ಯಾರೂ ಇಲ್ಲಾ. ಮುಂದೆ ಹೋಗುತ್ತಿದ್ದವರ ನಡಿಗೆ ನಿಧಾನವಾಯಿತು. ಹೀಗೇ ಇದನ್ನೆಲ್ಲಾ ಮನದಲ್ಲಿ ಗಮನಿಸಿ ರಸ್ತೆಯಲ್ಲಿ ಬಿದ್ದಿದ್ದ ಒಂದು ಕಲ್ಲನ್ನು ಕೈಗೆ ತೆಗೆದುಕ್ಕೊಂಡೆ. ನಿನ್ನ ಅಮ್ಮ ಕೇಳಿದಳು, ಯಾಕೆ ! ಎಂದು. ಇರಲಿ ಬಾ ಎಂದು ಮುಂದಕ್ಕೆ ಬಂದೆವು. ನಮ್ಮ ಗದ್ದೆ ಬಳಿ ಮೊಹರಿ ಹತ್ತಿರಕ್ಕೆ ಬಂದ ಕೂಡಲೆ ಆ ರೌಡಿಗಳಲ್ಲಿ ಒಬ್ಬ ನನ್ನ ಹತ್ತಿರ ಬಂದು ಒಂದು ಚಾಕು ತೋರಿಸಿ ಹೇಳಿದ "ನಿನ್ನ ಬಳಿ ಇರುವುದನ್ನೆಲ್ಲಾ ಕೊಟ್ಟರೆ ಸರಿ. ಇಲ್ಲದಿದ್ದರೆ ಚಾಕುವಿನಿಂದ ಇರಿದು ಕೊಲ್ಲುತ್ತೇವೆ. ಜೋಕೆ. ಕೂಗಬೇಡ" ಎಂದ. ಇನ್ನೊಬ್ಬ ನಿನ್ನ ಅಮ್ಮನ ಕತ್ತಿಗೆ ಕೈಹಾಕಿ ಚೈನ್ ಸರ ಎಳೆಯುತ್ತಿದ್ದ. ಆಗ ನಾನು ಏನು ಮಾಡಲಿ. ಹೇಗೊ ಧೈರ್ಯದಿಂದ ನನ್ನ ಕೈಲಿದ್ದ ಕಲ್ಲಿನಿಂದ ಅವನ ತಲೆಗೆ ಒಂದು ಹೊಡತ ಬಿಟ್ಟೆ. ಅದನ್ನು ತಾಳಲಾರದೆ ತತ್ತರಿಸಿ ಬಿದ್ದ. ನಾನೂ ಬಿದ್ದೆ. ಆ ವೇಳೆಗೆ ನಿನ್ನ ಅಮ್ಮನನ್ನು ಬೀಳಿಸಿ ಸರ ಕೀಳುತ್ತಿದ್ದ. ನಿನ್ನ ಅಮ್ಮನೂ ಸಹ ಗಟ್ಟಿ ಮನಸ್ಸು ಮಾಡಿ ಎರಡೂ ಕೈಗಳಿಂದ ಸರಗಳನ್ನು ಬಲವಾಗಿ ಹಿಡಿದಿದ್ದಳಂತೆ. ಹಾಗೂ ಅವನ ಎಳೆದಾಟಕ್ಕೆ ಬಿದ್ದುಬಿಟ್ಟಳಂತೆ. ಮೈಕೈ ಎಲ್ಲಾ ಕಲ್ಲಿನ ಮೇಲೆ ಬಿದ್ದು ಕೆತ್ತಿ ರಕ್ತ ಬಂದು ರಂಪವಾಗಿತ್ತು. ಹಾಗೇ ನಾನು ಎದ್ದವನೆ ಮಿಂಚಿನಂತೆ ಸರ ಕೀಳುತ್ತಿದ್ದವನ ಬಳಿ ಹಾರಿ ಬಂದು ಅದೇ ಕಲ್ಲಿನಿಂದ ತಲೆಗೆ ಹೊಡೆದೆ. ಸರಿಯಾದ ಏಟು. ಸರಿ. ಕೂಡಲೆ ಮೆಣಸಿನ ಪುಡಿಯನ್ನು ನಮ್ಮ ಕಣ್ಣಿಗೆ ಎರಚಿ ಓಡಿಹೋದರು. ನಂತರ ಜೋರಾಗಿ ಕೂಗಿ ಗಲಾಟೆ ಮಾಡಿದರೂ ಯಾರೂ ನಮ್ಮ ಸಹಾಯಕ್ಕೆ ಬರಲಿಲ್ಲ. ಆ ಭಗವಂತನೇ ಕಾವಲು. ದೈವಬಲವೇ ಬಲ. ನಮ್ಮ ಧರ್ಮ ಕರ್ಮಗಳೇ

ನಮಗೆ ರಕ್ಷಣೆ. ಅಂತೂ ಕಣ್ಣು ಬಿಡಲಾಗದೆ ಎದ್ದು ಸಾಮಾನುಗಳನ್ನೆಲ್ಲಾ (ಚಲ್ಲಾಪಿಲ್ಲಿಯಾಗಿದ್ದದ್ದು) ಸಿಕ್ಕಿದ್ದನ್ನು ತೆಗೆದುಕೊಂಡು ರಾತ್ರಿ 8 ಘಂಟೆ ವೇಳೆಗೆ ಮನೆ ಸೇರಿದೆವು. ಹೀಗಾಗಿ ನಮ್ಮ ಅವಸ್ಥೆ ಮುಗಿದುಹೋಗಿತ್ತು. ಆದರೆ ನಿಮ್ಮನ್ನೆಲ್ಲಾ ಕಾಣುವ ಭಾಗ್ಯವನ್ನು ಭಗವಂತನು ಇನ್ನೂ ಕರುಣಿಸಿದ್ದಾನೆ. ಆದ್ದರಿಂದ ಕಾಗದ ಬರೆದಿದ್ದೇನೆ. ಅಳಬೇಡ. ಸಧ್ಯ ಏನೂ ಆಗಿಲ್ಲ, ಯಾವುದೂ ಕಳೆದುಹೋಗಿಲ್ಲ. ಸರ ಕಿತ್ತುಹೋಗಿದೆ ಅಷ್ಟೆ. ನಿನ್ನ ಅಮ್ಮಂಗೆ ಕತ್ತಿನ ಹತ್ತಿರ ತುಂಬಾ ಪೆಟ್ಟಾಗಿದೆ. ಭೀತಿಯಿಂದ 3 ದಿನ ತುಂಬಾ ಕಳವಳ ಘಾಬರಿಪಡುತ್ತಿದ್ದಳು. ಅದಕ್ಕೆಲ್ಲಾ ಶಾಂತಿ ಮಾಡಿದ ನಂತರ ಈಗ ಹುಷಾರಾಗಿದ್ದಾಳೆ. ಸಾಧ್ಯವಾದಾಗ ಬರುತ್ತೇನೆ. ಎಲ್ಲಾ ವಿಷದವಾಗಿ ತಿಳಿಸುತ್ತೇನೆ. ಇದಕ್ಕಾಗಿ ಕೊರಗಬೇಡ. ಮಕ್ಕಳಿಗೆ ತಿಳಿಸು...

ಶಾಲೆಗೆ ಹೋಗದ ರೈತನ ಬರವಣಿಗೆಯಲ್ಲಿರುವ ಚಿತ್ರಕಶಕ್ತಿ, ವರ್ಣನಾ ವೈಖರಿ, ಕಥನ ಕಲೆ ಉತ್ತೇಜಕವಾದುದು. ವೃದ್ಧರಲ್ಲೂ ಇರುವ ದೇಹದಾರ್ಢ್ಯ ಮತ್ತು ಧೈರ್ಯಕ್ಕೂ ಇದು ಸಾಕ್ಷಿ.

೨೨೭

ನೆಂಟು ನಿಲ್ಲಬಾರದು (ಓರಗಿತ್ತಿಯ ಮಗನಿಗೆ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ತಾ। 5-3-82

ಬೆಂಗಳೂರು

ಚಿ।। ರಾ।।...ನಿಗೆ ಅನೇಕ ಆಶೀರ್ವಾದಗಳು. ಉ.ಕು.ಸಂ. ಇಲ್ಲಿ ಎಲ್ಲರೂ ಕ್ಷೇಮ. ಅಲ್ಲಿ ನಿಮ್ಮೆಲ್ಲರ ಕ್ಷೇಮಕ್ಕೆ ಕಾಗದ ಬರೆಯುವುದು.

ನೀನು ಬರೆದ ಕಾಗದ ಬಂದು ಸೇರಿತು. ಸಕಲವೂ ಅಭಿಪ್ರಾಯವಾಯಿತು. ನಿನ್ನ ಕಾಗದ ಬಂದ ತಕ್ಷಣವೇ ನಿನ್ನ ಮಾವನವರಿಗೆ ಮದುವೆಯ ವಿಚಾರವಾಗಿ ಕಾಗದ ಬರೆದರು. ಈ ಕಾಗದ ಕಂಡ ತಕ್ಷಣ ನಿಮ್ಮ ಅಭಿಪ್ರಾಯ ತಿಳಿಸಿ ಕಾಗದ ಬರೆಯಿರಿ ಎಂದೂ ಬರೆದಿದ್ದರು. ಆದ್ದರಿಂದ ನಾನು ಕಾಗದ ಬರೆಯಲು ನಿಧಾನಿಸಿದೆ. ಅವರಿಂದ ಕಾಗದ ಬಂದ ನಂತರ ನಿನಗೆ ತಿಳಿಸಿ ಬರೆಯೋಣವೆಂದು ಇದುವರೆಗೂ ಕಾದುನೋಡಿದೆ. ಕಾಗದವೇ ಬರಲಿಲ್ಲ. ಕಾರಣವೇನು ? ಬೇರೆ ಎಲ್ಲಾದರೂ ಸೆಟ್ಲಾಯಿತೆ ಹೇಗೆ, ನೀನಾದರೂ ತಿಳಿಸು.

ಚಿ।। ಸೌ।।...ಮ್ಮ, ಮಕ್ಕಳು ಹುಶಾರಾಗಿದ್ದಾರೆಯೆ ? ಎಲ್ಲರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ನೀನು...ಕೆಲಸಕ್ಕೆ ಯಾವ ತಿಂಗಳು ಬರುತ್ತೀಯೆ. ನೀನು ಬರುವಾಗ ಸೌ।।...ಮ್ಮ, ಮತ್ತು ಮಕ್ಕಳನ್ನು ಮರೆಯದೆ ಕರೆದುಕೊಂಡು ಬಾ. 15 ದಿನ ಇಟ್ಟುಕೊಂಡು ಕಳಿಸುತ್ತೇನೆ. ನಾನು ಬಂದಾಗಲೂ ಹೇಳಿಬಂದಿದ್ದೆ. ನೆನಪಿದೆಯೆ.

ನಮ್ಮ ತಲೆ ಇರುವಾಗ ಮುಂದಿನವರಿಗೆ ನಮ್ಮ ಪೀಳಿಗೆಯ ನೆಂಟುತನ ಮತ್ತು ಪರಿಚಯ ಮಾಡಿಸಿಕೊಟ್ಟರೆ ಮುಂದೆ ನೀವುಗಳು ಬಂದು ಹೋಗಿ ಮಾಡಲು ಪರಿಚಯವೂ ಸದರವೂ ಆಗುತ್ತೆ. ನಾವು ಕಣ್ಣು ಮುಚ್ಚಿಕೊಂಡರೆ ನಿಮ್ಮ ನೆಂಟುತನ ನಿಂತೇ ಹೋಗುತ್ತೆ ಹಾಗೆ ಆಗಬಾರದೆಂದು ನನ್ನ ಆಸೆ. ಚಿ।।...ಯು ಸಂಧ್ಯಾವಂದನೆ ಯನ್ನು ತ್ರಿಕಾಲದಲ್ಲೂ ಮಾಡುತ್ತಾನೆಯೆ. ಮಂತ್ರವೆಲ್ಲಾ ಬಾಯಿಗೆ ಬಂದಿದೆಯೆ. ನಾನು ತುಂಬಾ ಕೇಳಿದೆನೆಂದು ಹೇಳು.

...ಉಪಾದ್ರು ಕೈಯಲ್ಲಿ ಸೀತಾಕಲ್ಯಾಣ ಮತ್ತು ಪಟ್ಟಾಭಿಷೇಕ ಇವನ್ನು ನಡೆಸಬೇಕಾದರೆ ಏನೇನು ಸಲಕರಣೆಗಳು ಬೇಕು ಎಂಬುದನ್ನು ಒಂದು ಪಟ್ಟಿ ಬರೆದುಕೊಡಿ ಎಂದು ಕೇಳಿದ್ದೆ. ನಾನು ಬರುವಾಗ ಅವರು ಊರಿನಲ್ಲಿರಲಿಲ್ಲ. ಆದ್ದರಿಂದ ಎಲ್ಲವನ್ನೂ ವಿವರವಾಗಿ ಬರೆದು ನಿನ್ನ ದೊಡ್ಡಪ್ಪನವರಿಗೆ ಒಂದು ಪತ್ರ ಬರೆಯಲಿ. ಮದ್ದಿ ಬಂದಿದ್ದಾಗ ಕೇಳಿದ್ದರು. ಆ ವಿಚಾರವನ್ನು ಈಗ ತಿಳಿಸಿದ್ದೇನೆ ಎಂದು ಬರೆಯಲಿ.

ಚಿ।। ಮೈದುನನವರೂ ಚಿ।। ಸೌ।। ಓರಗಿತ್ತಿಯವರೂ ಆರೋಗ್ಯವೆ ? ಅವರಿಗೆ ನನ್ನ ಆಶೀರ್ವಾದಗಳು. ನಾನು ಕೇಳಿದೆನೆಂದೂ ಹೇಳುವುದು.

ಮೇ ತಿಂಗಳಲ್ಲಿ 27ನೇ ತಾ ಚಿ।।...ಯ ಮಗನಿಗೆ ಮುಂಜಿ ಇಟ್ಟುಕೊಂಡಿದ್ದಾರೆ. ಅದರ ಹತ್ತಿರಕ್ಕೆ ಬಂದರೆ ಅದನ್ನು ಕಳೆದುಕೊಂಡು ಹೊರಡಬಹುದು. ವಿಷಯ ತಿಳಿಸಿದ್ದೇನೆ. ನಿಮ್ಮ ಅನುಕೂಲಕ್ಕೆ ತಕ್ಕಂತೆ ಬನ್ನಿ. ಬರುವುದು ಮುಖ್ಯ.

ಮಕ್ಕಳಿಗೆ ಪರೀಕ್ಷೆ ಆಗಿರಬಹುದು. ತಿಳಿದವನಿಗೆ ಹೆಚ್ಚಿಗೆ ಬರೆಯಲಾರೆ.

ಇನ್ನೇನೂ ವಿಶೇಷವಿಲ್ಲ. ಇಂತಿ ಆಶೀರ್ವಾದಗಳು.

೨೨೮

ಒಂದು 'ಡಿಗ್ರಿ' ಆಗಿದ್ದರೆ ! (ತಂಗಿಯ ಅಂತರ್ದೇಶೀಯ ಪತ್ರ)

Safe Shree ಹಾಸನಜಿಲ್ಲೆ

5.7.82

...ಏನಕ್ಕಾ, ಏನ್ಸಮಾಚಾರ. ಹ್ಯಾಗಿದೆ ಜೀವನ. ನನಗಂತೂ ದಿನ ಅದೇ ಕೆಲಸ. ಮಾಡಿದ್ದೇ ಮಾಡೋದು. ಎಲ್ಲಾ ಯಾಂತ್ರಿಕ ಜೀವನದಂತಾಗಿದೆ. ಏನ್ಮಾಡೋದು. ಅದಕ್ಕೇ ಇವತ್ತೇಕೊ ತುಂಬಾ ಬೇಜಾರಾಯ್ತು. ನಿನಗೊಂದು Letter ಬರಿದ್ರೆ ಮನಸ್ಸಿಗೆ ಸ್ವಲ್ಪ ಸಮಾಧಾನ ಆಗುತ್ತೆ ಅನ್ನಿಸ್ತು, ಬರೀತಿದೀನಿ.

ಮಕ್ಕಳು ಹ್ಯಾಗಿದಾರೆ ? ಶಾಲೆಗೆ ಹೋಗ್ತಾ ಇದ್ದಾರಾ. ಚೆನ್ನಾಗ್ ಓದ್ದೋಕ್ ಹೇಳು. ನಿರು ಸ್ಕೂಲಿಗೆ ಹೋಗ್ತಾ ಇದ್ದಾನೆ. ಹಾಡು ಕಥೆ ಜೋರಾಗಿದೆ.

ಚಿ। ವಿಮಿ ಹೋಗಿ ಬಂದಳಾ. ಏನು ? ಅವಳಿಗೆ 2 Subjects ಹೋಗಿದೆಯಂತೆ ಪಾಪ. ತುಂಬಾ ಬೇಜಾರ್ ಮಾಡ್ಕೊಂಡಿದ್ದಾಳೆ. ಅವಳೊಬ್ಬಳಾದ್ರೂ ಚೆನ್ನಾಗ್ ಓದಿ 1 ಡಿಗ್ರಿ ಅಂತ ತೊಗೊಂಡಿದ್ರೆ ನಮ್ಮಗಳಿಗೂ ಸಂತೋಷವಾಗ್ತಾ ಇತ್ತು. ಏನ್ಮಾಡೋದು, ಎಲ್ಲಾ ವಿಧಿ ಬರಹ.

ಚಿ। ಅಣ್ಣಯ್ಯ ಊರಿಗೆ ಹೋಗೋವಾಗ ಇಲ್ಲಿಗೆ ಬಂದಿದ್ದ. ಆರೋಗ್ಯವಾಗಿದ್ದಾನೆ. ವಿಮಿ ಬಗ್ಗೆ ತುಂಬಾ ಬೇಜಾರ್ ಮಾಡ್ಕೊಂಡ. ಅವಳು ಚೆನ್ನಾಗ್ ಓದಿಲ್ಲ, ಹಾಗೆ ಹೀಗೆ ಅಂತ. ನಾನು ಜೋರ್ ಮಾಡ್ದೆ. ಆಮೇಲ್ ಸುಮ್ಮನಾದ, ನನ್ನ ಕೀ ನಿನ್ನ ಕೈಲಿದೇಂತ.

ನನ್ನ ಆರೋಗ್ಯದ ಬಗ್ಗೆ ಆರಕ್ಕೆ ಹೆಚ್ಚಿಲ್ಲ, ಮೂರಕ್ಕೆ ಕಡಿಮೆ ಇಲ್ಲ. ಒಂದು ಸ್ವೆಟರ್ ಪ್ಯಾಕ್ಸಿ ಓಪನ್ ಮಾಡೋದು ಬಾಕಿ ಇದೆ ನೋಡಮ್ಮಾ. ಈಗಲೂ ಅಷ್ಟೆ. 5-6 orders ಇವೆ. ಹಾಕ್ಬೇಕು. ಡೈಲಿ ಆಗೋಲ್ಲ. ಆದಷ್ಟು ಕೆಲ್ಸ ಎಲ್ಲಾ ಬೇಗ ಮುಗಿಸ್ಕೊಂಡು ಟೈಂ save ಮಾಡೋದೊಂದೇ ಉದ್ದೇಶವಾಗಿದೆ ಈಗ. ನಾಳೆ ನಮ್ಮ ಆಫೀಸಿನ IPOಗೆ Transfer ಆಗಿರುವುದರಿಂದ ಒಂದು function ಇಟ್ಕೊಂಡಿದೀವಿ. ಪುಳಿಯೋಗರೆ, ಮೊಸರನ್ನ. ಗೊಜ್ಜು ಕುದಿಸಬೇಕು. ಹುಳಿ ನೆನಸಿಟ್ಟಿದೀನಿ. ಸುಮಾರು 35 ಜನ ಆಗಬಹುದು. ನಾಳೆ ತುಂಬಾ ಕೆಲ್ಸ ಅಂತ ಇವತ್ತೆ ನಿನಗೊಂದು Letter ಬರೆದೆ. ನೀನು ಮಾತ್ರ ಇದು ನಿನ್ನ ಕೈ ಸೇರಿದ ತಕ್ಷಣ ಪೆನ್ನು ಕಾಗ್ದ ಹುಡುಕಬೇಕು. ಯಾಕೆ ಗೊತ್ತಾ. ನನಗೆ ಬರಿಯೋದಕ್ಕೆ.

ಹುಂ, ಮರೆತಿದ್ದೆ. ನಾವೊಂದು ಟೇಪ್‌ರೆಕಾರ್‌ಡರ್ ತಗೊಂಡಿದ್ದೀವಿ ಅಕ್ಕಾ. ಚೆನ್ನಾಗಿದೆ. ಸ್ವಲ್ಪ ಬೇಜಾರ್ ಕಳೆಯುತ್ತೆ. ಗಂಟೆ 4 ಆಯ್ತು. ನನಗೆ ಕೆಲ್ಸಾ ಇದೆ. ಪತ್ರ ಮುಗಿಸ್ತಾ. OK

yours lovely sister

೨೨೯

ಪಟ್ಟಣದ ತಂಗಿಗೆ

ನೌಕರನೊಬ್ಬನ ಕೈ ಹಿಡಿದಿರುವ ತಂಗಿಗೆ ಅಂತರ್ದೇಶೀಯ ಪತ್ರ

Safe Shree ಹಾಸನ ಜಿಲ್ಲೆ

೯-೭-೮೨

...ನೀನು ಹೊಲಿದುಕೊಟ್ಟಿರುವ ಬಟ್ಟೆಗಳನ್ನೆಲ್ಲಾ ತಂದುಕೊಟ್ಟಳು. ತುಂಬಾ ಚೆನ್ನಾಗಿ ಹೊಲಿದಿರುವೆ...ಮ್ಮನಂತೂ ನನ್ನ ರವಿಕೆ ತುಂಬಾ ಚೆನ್ನಾಗಿ ಹೊಲಿದಿದ್ದಾಳಮ್ಮ ಅಂತ ಹೇಳಿದಳು...ಮ್ಮನಿಗೆ ನನ್ನ ಲಂಗ ಉದ್ದಿಲಂಗ ಎಷ್ಟು ಚೆನ್ನಾಗಿದೆ ಅಂತ ಹಿಗ್ಗೋ ಹಿಗ್ಗು...ಗೆ ಫ್ರಾಕ್ ತುಂಬಾ ಚೆನ್ನಾಗಿ ಕಾಣಿಸುತ್ತೆ. ಇವರೆಲ್ಲರ ಸಡಗರದಲ್ಲಿ ಇರುವಾಗ...ನು ಮಾತ್ರ ಮುಖ ಸಣ್ಣಗೆ ಮಾಡಿ ನನಗೇನೂ ಇಲ್ಲವೆ ಎಂದು ಹೊರಗೆ ಓಡಿದ. ಹೀಗಿತ್ತಮ್ಮ 5 ನಿಮಿಷದ ಮಾತು. ಎಲ್ಲಾ ಶಾಲೆಗೆ ಹೊರಟು ರೆಡಿಯಾಗಿದ್ದರು. ನಂತರ ಎಲ್ಲಾ ಅವರವರ ಶಾಲೆಗೆ ಹೋದರು. ಬಟ್ಟೆಯನ್ನು ಕೊಂಡಿದ್ದು ಎಷ್ಟು ಕೊಡಬೇಕು. ಹೊಲಿಗೆ ಚಾರ್ಜು ಎಲ್ಲಾ ಎಷ್ಟು. ಬೇಸರ ಪಟ್ಟುಕೊಳ್ಳದೆ ಬರೆ. ಅಂತು ನನ್ನ ತಂಗಿಯಾದುದಕ್ಕೆ ಸಾರ್ಥಕವಾಯಿತು (ಹೊಲಿಗೆ ಕಲಿತದ್ದು). ನಾನು ಇನ್ನೊಂದು ಒಳಗಿನ ಲಂಗ ಹೊಲಿಸ್ಕೋಬೇಕು. ಒಂದು ಲಂಗಾನೂ ಸರಿಯಾಗಿ ಹಿಡಿಸ್ತಾ ಇರಲಿಲ್ಲ. ನೀನು ಹೊಲಿದುಕೊಟ್ಟಿರೋದು ತುಂಬಾ ಚೆನ್ನಾಗಿದೆ. ಮುಖ್ಯ ಸಲೀಸಾಗಿ ಹಾಕ್ಕೊಬಹುದು.

ನಿನ್ನ ಮುದ್ದಿನ ಗಿಣಿಗಳು ಆರೋಗ್ಯದಿಂದಿರುತ್ತಾರೆಯೆ ? ಅವರಿಗೆ ದೊಡ್ಡಮ್ಮನ ಸವಿನೆನಪು, ಸಿಹಿಮುತ್ತು ಕೊಡು. ಭಾವನವರು ಆರೋಗ್ಯದಿಂದಿರುವರೆ. ನೀನು ಯಾವ ವಿಧವಾದ ಯೋಚನೆಯನ್ನೂ ಮಾಡದೆ ಸಂತೋಷದಿಂದಿರು. ನಿನ್ನ ಸಂಸಾರವು ಸುಖಮಯವಾಗುತ್ತದೆ.

ಇಲ್ಲಿ ಮಳೆ ಇಲ್ಲದೆ ಬೆಳೆಯೆಲ್ಲಾ ಪೂರ್ತಾ ಒಣಗಿ ಹೋಗಿದೆ. ಮುಂದಿನ ಜೀವನದ ಸ್ಥಿತಿ ಚಿಂತಾಜನಕವಾಗಿದೆ. ಕೆರೆಯಲ್ಲಿ ನೀರಿಲ್ಲ; ಗದ್ದೆ ಪೈರೂ ಇಲ್ಲ. ತೋಟವಂತೂ ಮರವೇ ಇಲ್ಲದೆ ಪಾಳಾಗಿದೆ. ಜೀವನಸ್ಥಿತಿ ದೇವರೇ ಗತಿ. ಇದನ್ನೆಲ್ಲಾ ಯೋಚಿಸಿದರೆ ಮಳೆ ಇಲ್ಲದ ಪೈರು ನಿನ್ನದು. ನೀನೇ ಅದೃಷ್ಟಶಾಲಿ. ಯಾವ ವಿಧದ ಯೋಚನೆಯೂ ಇಲ್ಲ ಎಂದು ನನಗನ್ನಿಸುತ್ತದೆ.

ನೀನು ಯಾವಾಗ ಇಲ್ಲಿಗೆ ಬರುತ್ತೀಯ. ಮಕ್ಕಳೆಲ್ಲರೂ ಶಾಲೆಗೆ ಹೋಗುತ್ತಿದ್ದಾರೆ. ಸುಮಾರಾಗಿ ಓದುತ್ತಿದ್ದಾರೆ. ಅವರ ಪುಸ್ತಕ, ಫೀಸು, ಯೂನಿಫಾರಂ, ಬಟ್ಟೆ ಎಲ್ಲಾ ಒಂದು ಹಂತಕ್ಕೆ ಬಂದಿದೆ. ಇನ್ನು ಓದುವುದು ಅವರ ಜವಾಬ್ದಾರಿ.

ಪತ್ರ ದೊಡ್ಡದಾಯಿತು. ...ನು ಊಟ ಹಾಕಲು ಬರುತ್ತೀಯೋ ಇಲ್ಲವೋ ಅಂತ ಬೊಬ್ಬೆ ಇಡುತ್ತಿದ್ದಾನೆ. ಬರ್ತೇನಮ್ಮ. ಕಾಗದ ತಲಪಿದ್ದಕ್ಕೂ ಮತ್ತೆ ಎಲ್ಲಾ ವಿಷಯಕ್ಕೂ ಉದಾಸೀನ ಮಾಡದೆ ಪತ್ರ ಬರೆಯುತ್ತೀ ಎಂದು ನಂಬಿರುತ್ತೇನೆ. ಇನ್ನೇನೂ ವಿಶೇಷವಿಲ್ಲ...

ಕರ್ನಾಟಕಕ್ಕೆ ವಲಸೆ ಬಂದ ಸಂಕೇತಿಗಳು ವೈದಿಕ ವೃತ್ತಿಯಲ್ಲದೆ ವ್ಯವಸಾಯ, ಮರಗೆಲಸ, ಮಣ್ಣು ಕೆಲಸ ಮೊದಲಾದ ಹಲವು ಕಾಯಕಗಳಲ್ಲಿ ನೈಪುಣ್ಯ ಸಾಧಿಸಿದ್ದರು. ಇದೀಗ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಟೈಲರಿಂಗ್ ಮೊದಲಾದ ವೃತ್ತಿಗಳಿಗೆ ತೆರೆದುಕೊಳ್ಳತೊಡಗಿರುವುದು ಕಾಣಿಸುತ್ತದೆ.

೨೩೦

ತಂಗಿಗೆ ಹಿತವಾದ

ಹಳ್ಳಿಯ ಅಕ್ಕನು ಬರೆದ ಅಂತರ್ದೇಶೀಯ ಪತ್ರ

ಹಾಸನಜಿಲ್ಲೆ

27.7.82

ನಿನ್ನ ಕಾಗದವು ತಲಪಿ 8 ದಿನಗಳಾಯಿತು. ಪತ್ರ ಬರೆಯಲು ತಡವಾದುದರಿಂದ ಬೇಜಾರು ಮಾಡಿಕೊಳ್ಳಬೇಡ. ನಿನ್ನ ಪತ್ರವನ್ನು ಓದಿ ತುಂಬಾ ಸಂತೋಷವಾಯಿತು. ನನ್ನ ತಂಗಿ ನಿರಾಳವಾಗಿ ಸಂತೋಷದಿಂದಿದ್ದರೆ ನನಗೊಂದು ಹೆಮ್ಮೆ.

ಪುಟಾಣಿಗಳು ಹೇಗಿವೆ ? ಬಾಳೆಹಣ್ಣು ತಿನ್ನುವಾಗಲೆಲ್ಲಾ ಚಿ॥...ನ ನೆನಪು ಬರುತ್ತದೆ...ಳು ಭೀಮನ ಅಮಾವಾಸ್ಯೆಗೆ ಇಲ್ಲಿಗೇ ಬಂದಿದ್ದಳು. ಇಲ್ಲಿ ಮಕ್ಕಳೆಲ್ಲಾ ಆರೋಗ್ಯ. ಸುಮಾರಾಗಿ ಓದುತ್ತಿದ್ದಾರೆ. ಚಿ॥...ಗಂತೂ ನಡೆದುಕೊಂಡು ಹೋಗಿ ಬಂದು ಮಾಡುವುದೊಂದೆ. ರಾತ್ರಿಯೆಲ್ಲಾ ಅಳುತ್ತಾಳೆ. ಅಕ್ಷರ ಎಲ್ಲಾ ಬರೀತಾಳೆ. ಸ್ಕೂಲಿಗೆ 4ನೇ ರ್‍ಯಾಂಕ್ ಬಂದಿದ್ದಾಳೆ. ಚಿ।...ಗಂತೂ ಓದೋದ್ರಲ್ಲಿ ಆಸಕ್ತೀನೆ ಇಲ್ಲ. ಏನು ಮಾಡೋದು. ಒಂದೊಂದು ಗಂಡು ಮಕ್ಕಳ ಕಟ್ಕೊಂಡು ಕೊರಗೋದು ನಮ್ಮೆಲ್ಲರ ಹಣೆಬರಹ.

ಇಲ್ಲಿ ಮಳೆ ಇಲ್ಲ. ಈ ಸಲ ಗದ್ದೆ ಪೈರು ಇಲ್ಲ ಎಂದು ಕಾಣಿಸುತ್ತೆ. ದೇವರು ಎಂದಿಗೆ ಕಣ್ದೆರೆಯುತ್ತಾನೆಯೋ.

ಬಾವಾಜಿಯವರು ಆರೋಗ್ಯದಿಂದಿರುತ್ತಾರೆಯೆ. ಅವರು ಇಲ್ಲಸಲ್ಲದ ವಿಷಯಗಳನ್ನು ತಲೆಗೆ ಹಚ್ಚಿಕೊಂಡುಬಿಡುತ್ತಾರೆ. ಏನಾದರೊಂದು ಹೇಳಿದರೆ ಬಹು ಬೇಗ ನಂಬಿಬಿಡುತ್ತಾರೆ. ಖಂಡಿತವಾಗಿಯೂ ಯಾವ ಭಯವೂ ಇಲ್ಲ. "ಧರ್ಮವೆ ಜಯ". ನಾವು ಧರ್ಮವಾಗಿದ್ದರೆ ಯಾವ ಶಕ್ತಿಯೂ ಏನೂ ಮಾಡಲೂ ಸಾಧ್ಯವಿಲ್ಲ. ನಿರಾಳವಾಗಿರಲಿ. ಮನಸ್ಸಿನಲ್ಲಿಯೆ ಕೊರಗಿ ಕೊರಗಿ ಕೃಶವಾಗುತ್ತಾರೆ. ನೀನು ಅವರಿಗೆ ಎಲ್ಲಾ ವಿಷಯಕ್ಕೂ ಅವರೊಡನೆ ಸಹಕರಿಸಿ ಧೈರ್ಯ ಹೇಳಿ ಕೊರಗದಂತೆ ಮಾಡು. ಹೀಗೆಲ್ಲಾ ಬರೆದಿದ್ದೇನೆಂದು ಬೇಜಾರು ಮಾಡಿಕೊಳ್ಳಬೇಡ. ಅವರು ಆರೋಗ್ಯವಾಗಿ ನೆಮ್ಮದಿಯಾಗಿ ಇದ್ದರೆ ನಮ್ಮದೊಂದು ಜನ್ಮ. ಇಲ್ಲದಿದ್ದರೆ ನಮಗೆ ಯಾವ (ಸಮಾಜದಲ್ಲಿ) ಬೆಲೆಯೂ ಇಲ್ಲ. ನನ್ನ ತಂಗಿ ಅಂತ ಬರೆದಿದ್ದೇನೆ ಕಣೆ.

ನಿನ್ನ ಭಾವನವರು ಆರೋಗ್ಯದಿಂದಿದ್ದಾರೆ. ಕೆಲಸ ಜಾಸ್ತಿ. ಒಂದು ಕಡೆ ನೋಡಿದರೆ ಒಂದು ಕಡೆ ಹಾಳು. ತೋಟಕ್ಕೆಲ್ಲಾ ಅಡಿಕೆ ಸೊಸಿ ನೆಟ್ಟಿದ್ದು ಆಯಿತು. ಇನ್ನು ದನಗಳದ್ದು ಜೈಲುವಾಸ. ಒಂದು ದಿವಸವೂ ಊರು ಬಿಡೊ ಹಾಗಿಲ್ಲ. ಅವರು ಬಿಟ್ಟರೆ ನನಗೆ, ಹೀಗೆ. ಅಂತು ಹಳ್ಳಿಗಾಡಿನಲ್ಲಿ ಒಬ್ಬಂಟಿಗರಿಗೆ ಬಹಳ ತಾಪತ್ರಯ.

ಈ ದಿನ ಚಿ॥...ಗೂ ಬರೆಯಬೇಕು. ನನಗೆ ಈ ಹಾಳು ಕುರು ಎದ್ದು ಕೂತ್ಕೊಂಡು ಕಾಗದ ಬರೆಯಕ್ಕೂ ಆಗದ ಹಾಗೆ ದುಡೀತಿದೆ. ಹ್ಯಾಗೋ ಗೀಜಿದೀನಿ.

...ಈ ದುಬಾರಿ ಕಾಲ ಬೇರೆ. ಮರ್ಯಾದೆಯಿಂದ ಸಂಸಾರ ಮಾಡಿದರೆ ಸಾಕು ಅನ್ಸುತ್ತೆ. ಒಂದೊಂದ್ಸಲ. ಬಾವಾಜಿಗೆ ಕಾಗದ ತೋರಿಸಬೇಡ. ಏನಾದರೂ ತಿಳ್ಕೊತಾರೆ. ಗೊತ್ತಾಯ್ತ. ಬರ್‍ಲ.

೨೩೧

ಅನುಶೀಲವೆನಿಸಿತು (ಸೋದರಿಯ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ 5-4-83

ಶಿವಮೊಗ್ಗ

...ನೀವು ಆಶೀರ್ವಾದಪೂರ್ವಕವಾಗಿ ಕಳುಹಿಸಿದ ಮಂಗಳ ದ್ರವ್ಯ ತಲಪಿ ನಿಮ್ಮೆಲ್ಲರ ಯೋಗಕ್ಷೇಮ ತಿಳಿದು ಸಮಾಧಾನ ವಾಯಿತು. ಆದರೆ ಯುಗಾದಿಗೆ ಮಂಗಳ ದ್ರವ್ಯ ಕಳುಹಿಸುವ ವಾಡಿಕೆಯಿಲ್ಲ. ಇದು ಹೆಚ್ಚೆನಿಸಿತು.

ಪ್ರಕೃತ ಚಿ॥ ಸೌ॥ ತಂಗಕ್ಕನಿಗೆ ಬಂದ ಕ್ಲೇಶ ಆಗಲೇ ತಿಳಿದು ಬಹಳ ವ್ಯಸನವಾಯಿತು. ಅವಳು ಮುತ್ತೈದೆಯಾಗಿ ಹೋದರೆ ಸಾಕೆನ್ನುತ್ತಿದ್ದುದಕ್ಕೆ ದೈವ ವ್ಯತಿರಿಕ್ತ ಮಾಡಿತು.

ಚಿ॥ ನಾರಾಯಣನ ಪತ್ನಿ 18 ದಿವಸದಲ್ಲಿ ಗಂಡು ಮೊಗು ಹೆತ್ತು ಮೊಗು ಬಾಣಂತಿ ಆರೋಗ್ಯವಾಗಿರುವರು. ಆಸ್ಪತ್ರೆಯಲ್ಲಿ ಹೆತ್ತು ಮನೆಗೆ ಬಂದು ಮಂಗಳಸ್ನಾನ ಮಾಡದೆಯೇ ತಂದೆ ಮನೆಗೆ ಹೋಗಬೇಕೆಂದಿದ್ದಳು. ನನಗೇಕೋ ಅದು ಅನುಶೀಲವೆನಿಸಿ ನಾರಾಯಣನಿಗೆ ದಮ್ಮಯ್ಯ, ಮಂಗಳಸ್ನಾನ ಮಾಡಿ ಬಂದು ಪಾಯಸದೂಟ ಮಾಡಿ ಪ್ರಯಾಣ ಮಾಡಲೆಂದು ಬೇಡಿಕೊಂಡು, ಅವನು ಅವಳ ಕಾಲು ಹಿಡಿದು ಅಂತೂ ಮನೆಗೆ ಬಂದು ಅಷ್ಟು ನಡೆಸಿಕೊಟ್ಟಳು. ಅವಳಿಗೆ ತರೀಕೆರೆಗೆ ಅವಳ ತಂದೆ ವರ್ಗ ಮಾಡಿಸಿರುವುದರಿಂದ ಸಾಮಾನು ಸಮೇತ ಅವಳ ತಂದೆ–ತಾಯಿಯರೊಡನೆ ನೆನ್ನೆ ಬುಧವಾರ ಇಲ್ಲಿಂದ ಹೋದಳು. 1 ತಿಂಗಳು ಬಿಟ್ಟು ತರೀಕೆರೆಗೆ ಹೋಗುತ್ತಾಳೆಂದು ತೋರುತ್ತೆ. ಪ್ರಕೃತ, ನಾರಾಯಣನ್ನೂ ರಿಲೀವ್ ಮಾಡಿದಾರೆ. ಅವನಿಗೂ ತರೀಕೆರೆಗೆ ವರ್ಗ ಮಾಡಿಸುವ ಪ್ರಯತ್ನ ಅವನ ಮಾವನ ದಾಗಿದೆ. ಇಂದು ಅಥವಾ ನಾಳೆ ಅವನಿಗೂ ಆರ್ಡರು ಬರಬಹುದು...

೨೩೨

ಉಪ್ಪಿನಕಾಯಿಯ ಬಗೆಗೆ (ಅಕ್ಕನಿಗೆ ಪತ್ರ)

9.6.83

ಹಾಸನ ಜಿಲ್ಲೆ

...ಅಕ್ಕಾ ನೀನಂತೂ ದಿನಕ್ಕೆ ೩ ಸಲ ಜ್ಞಾಪ್ಕ ಬರ್‍ತಿಯ. ಯಾಕೆ ಗೊತ್ತಾ. ಉಪ್ಪಿನಕಾಯಿ ನನ್ನ ಪ್ರಾಣ. ನಿಮ್ಮೂರಿಗೆ ಬಂದ್ರಂತೂ ವರ್ಷ ಇಡಿ ಮಾವಿನಕಾಯಿ ಉಪ್ಪಿನಕಾಯಿ ತಿನ್ನಬಹುದು.

ನಿನ್ನ ಬಾವಾಜಿಗೆ ಸ್ವಲ್ಪ ಸಂಬಳ ಜಾಸ್ತಿ ಆಯ್ತು. ತೀII ಭಾವನವರಿಗೆ ನನ್ನ ನಮಸ್ಕಾರಗಳನ್ನು ತಿಳಿಸು...

೨೩೩

ಎಲೆ ಹೊಲಿಯುತ್ತಾರೆ (ಅಕ್ಕನಿಗೆ ಅಂತರ್ದೇಶೀಯ ಪತ್ರ)

7.7.83

ಹಾಸನ ಜಿಲ್ಲೆ

...ನಿನ್ನೆ ಬಂದ ನಿನ್ನ letter ನೋಡಿ ಮಾವ ಏನಂದ್ರು ಗೊತ್ತಾ. "4 ದಿನ ಇಟ್ಕೊಳ್ಳೋದಾದ್ರೆ...ಹಳ್ಳಿಗೆ ಹೋಗೊ Programme cancel" ಅಂದ್ಬಿಟ್ರು. ನಾನ್ ಬಿಡ್ತೀನ. ಬಂದೇ ಬರ್‍ತೀನಿ. ನನ್ನ ಪುಟಾಣಿಗಳನ್ನು ನೋಡಿ ಎಷ್ಟು ದಿನ ಆಯ್ತು.

ನೀನು ಬರೆದ ಹಾಗೆ ನೀರೂಗೆ ಹೊಡೆದು ಪಾಠ ಹೇಳಿಕೊಡೋ ಪರಿಸ್ಥಿತಿ ಇನ್ನೂ ಬಂದಿಲ್ಲ ಅಕ್ಕ. ನಾನೇನಾದ್ರೂ ಮರೆತ್ರೂ ಅವನೇ ಕೂತುಬಿಡ್ತಾನೆ ಬರೆಯೋದಿಕ್ಕೆ. ಮಗ್ಗಿ, ಅಕ್ಷರಮಾಲೆ, ಶ್ಲೋಕಗಳು, ಗಣೇಶಪಂಚರತ್ನಸ್ತೋತ್ರ ಎಲ್ಲಾ ಹೇಳ್ತಾನೆ. ಹಾಡು, ಕಥೆ ಏನ್ ಕೇಳ್ಬೇಡ. ಓದಿನಲ್ಲಿ ಶ್ರದ್ಧೆ, ಭಕ್ತಿ, ಈಗ ಮಾತ್ರಾನೋ ಮುಂದೇನೂ ಇರುತ್ತೊ ನೋಡ್ಬೇಕು.

ಇನ್ನು ನಾನು 4 ಮಕ್ಕಳಿಗೆ ಟ್ಯೂಷನ್ ಹೇಳಿಕೊಡ್ತಾ ಇದ್ದೀನಿ. ಎಂಬ್ರಾಯಿಡರಿಗೆ ಬರ್‍ತಾ ಇದ್ದಾರೆ.

ಅಮ್ಮನೇ ಎಲೆ ಹೊಲಿದು ಅಲ್ಪ ಸ್ವಲ್ಪ ದುಡ್ಡು ಸಂಪಾದನೆ ಮಾಡ್ತಿರೋವಾಗ ನಾವು ಸುಮ್ನೆ ಟೈಂ ವೇಸ್ಟ್ ಮಾಡೋದಕ್ಕಾಗುತ್ತಾ ಅಕ್ಕಾ. ಹಾಗೂ ಹೀಗೂ ನನಗೂ ಕೈಯಲ್ಲಿ ಸ್ವಲ್ಪ ದುಡ್ಡಿರುತ್ತೆ. ಮೊನ್ನೆ ಒಬ್ಬ ಜಪಾನ್‌ನಿಂದ ಇಲ್ಲಿಗೆ ಬಂದಿದ್ದ. 5-6 ಸೀರೆ ತಂದಿದ್ದ. ಅದರಲ್ಲಿ ನಾನೂ 1 ತೊಗೊಂಡೆ. ಚೆನ್ನಾಗಿದೆ. 150 ರೂಪಾಯಿ...

೨೩೪

ಮುಂಚೈ : ವಿಧವೆ

ಬಂಧುವೊಬ್ಬರಿಗೆ ಬರೆದ ಅಂತರ್ದೇಶೀಯ ಪತ್ರ

14.3.85

...ಪ್ರಕೃತ ಮಾಸಿಕಕ್ಕೆ ಬಂದ ಬ್ರಾಹ್ಮಣರೆದುರಿಗೇ ನಾನು ಮುಂದಿನ ಮಾಸಿಕವನ್ನು ಮಾಡುವುದಿಲ್ಲ ಎನ್ನುತ್ತಾನೆ. ಆಮೇಲೆ ಮಾಡಿಸಲು ನೀನೇ ಇಂದ್ರ, ನೀನೇ ಚಂದ್ರ, ದೇವೇಂದ್ರ ಎಂದು ಮಾಡಿಸಿದರೂ 4 ಸಲದಿಂದ ಒಂದೇ ಒಂದು ಅಗುಳನ್ನೂ ಮುಟ್ಟುತ್ತಿಲ್ಲ. ಇಡುವಾಗ ಕೂಗುವುದೂ ಇಲ್ಲ. "ಮುಂದಿನದು ಮಾಡುವುದಿಲ್ಲ. ನಾನು ಆಫೀಸ್ ಕೆಲಸಕ್ಕೆ ಗ್ವಾಲಿಯರ್‌ಗೆ ಹೋಗಬೇಕು" ಎಂದು ಬ್ರಾಹ್ಮಣರೂಟವಾಗುತ್ತಿರುವಾಗಲೇ ಒಳಗೆ ಬಂದು ಗಟ್ಟಿಯಾಗಿ ಹೇಳಿದ. ಆಕೆಗೆ 4 ಮಾಸಿಕದಿಂದ ಆ ದಿನವೇ ಮುಟ್ಟಿನ ನೀರು ಆಗುತ್ತಿದೆ. ಮಾತ್ರೆ ತೆಗೆದುಕೊಂಡು 4 ದಿನ ಹಿಂಚು ಅಥವಾ ಮುಂಚು ಆಗುವಂತೆ ಮಾಡಿಕೊ ಎಂದರೆ ನನಗೆ ಮಾತ್ರೆ ತಿಂದರೆ ವಾಂತಿಯಾಗುತ್ತೆ, ತಿನ್ನುವುದಿಲ್ಲ ಎನ್ನುತ್ತಾಳೆ. 51 ವರ್ಷದವಳಿಗೆ ಮೇಲುಗಳುವಿಗೆ ಮಡಿ ಹಾಕಲು ಬರುವುದಿಲ್ಲ ಎನ್ನುವುದು. ಈ ಸಂಬಂಧವಾಗಿ ಒಳಗಿದ್ದಾಗಲೂ ಯಾವ ಕೆಲಸಕ್ಕೂ ಸಹಾಯ ಮಾಡುವುದಿಲ್ಲ. ಏನನ್ನಾದರೂ ಮಾಡು ಎಂದರೆ ನನಗೂ ಈ ಕೆಲಸಕ್ಕೂ ಸಂಬಂಧವಿಲ್ಲ. ನಾನು ಮಾಡಬೇಕಾಗಿಲ್ಲ ಎಂಬ ಉತ್ತರ...

ಬೇರೆಯವರು ದೊಡ್ಡ ದೊಡ್ಡ ಹಬ್ಬಕ್ಕೆ ಕರೆದಾಗ ಅಲ್ಲಿಗೆ ಹೋಗುತ್ತಾರೆ. ಸಣ್ಣ ಹಬ್ಬಗಳನ್ನು ಹಿಂದೆ ಮಾಡಬೇಕಾಗಿಲ್ಲ ಎನ್ನುತ್ತಿದ್ದವರು ಈಗ ತಪ್ಪದೆ ಮಾಡುವುದು. ಹೊಸಬಟ್ಟೆಗಳನ್ನು ಅವರು ಹೋದಮೇಲೆ 8 ಸಲ ತೆಗೆದುಕೊಂಡು ಉಟ್ಟುಕೊಂಡರು. ಮನೆಗೆ ಹರಳೆಣ್ಣೆ ತರಿಸಿ ಗೊತ್ತಿರಲಿಲ್ಲ. ಈಗ, ಮಕ್ಕಳ, ತಮ್ಮ, ಹುಟ್ಟಿದ ಹಬ್ಬದಲ್ಲಿ ಹರಳೆಣ್ಣೆ ಹೊತ್ತಿಕೊಂಡು ನೀರು ಹಾಕಿಕೊಂಡು ಪ್ರಸಿದ್ಧವಾದ ಹೋಟೆಲಿನಿಂದ ಬೇಕಾದ ಅಡಿಗೆ ಮತ್ತು ಸಿಹಿ ತಿಂಡಿ ಅಂಗಡಿಯಿಂದ ನಾಲ್ಕೈದು ಬಗೆ ತಿಂಡಿ, 2-3 ಕಡೆ ಚೆನ್ನಾಗಿ ಶಾವಿಗೆ ಮಾಡುತ್ತಾರೆ ಅಂತ ಅಲ್ಲಿಂದ ತಂದು ತಿನ್ನುವುದು.

ಪ್ರಕೃತ ಒಂದು ಸಮಾಧಾನದ ವಿಚಾರವೆಂದರೆ ಗ್ವಾಲಿಯರ್‌ಗೆ ಹೋಗುವಾಗ ಅಸ್ತಿ ಬಿಡಲು ಹಣ ಕೊಡೆಂದು ತೆಗೆದುಕೊಂಡು ಹೋಗಿ, ಆ ಹಣದಿಂದ ಹೆಂಡತಿ ಮಕ್ಕಳಿಗೆ ಒಡವೆ ಬಟ್ಟೆ ತಂದು ಅಸ್ತಿ ವಾಪಸ್ಸು ತಂದ.

ಈಗ...ಹಳ್ಳಿಯ ನಮ್ಮ...ನು ಲಕ್ನೋಗೆ ಹೋಗಬೇಕಾಗಿದೆಯಂತೆ. ಮುಂದಕ್ಕೆ ಹೋಗಿ ಬಿಟ್ಟುಬರುವುದಾಗಿ ಹೇಳಿದ. ನಂಗೆ ಮನಸ್ಸಿಗೆ ನೆಮ್ಮದಿಯಾಯಿತು. ಅಂತಹ ಮಕ್ಕಳು ಒಬ್ಬರಿದ್ದರೆ ಸಾಕು. ಎಷ್ಟು ಜನಕ್ಕೆ ಉಪಕಾರ ಮಾಡುತ್ತಾನೆ. ಆ ಅಕ್ಕ ತಂಗಿಯರಲ್ಲಿ ಎಷ್ಟು ವಿಶ್ವಾಸ, ಎಷ್ಟು ನಡತೆ, ನಮ್ರತೆ. ದೇವರು ಪೂರ್ಣಾಯಸ್ಸು ಕೊಟ್ಟು ಕಾಪಾಡಲಿ. ನಾನವನಿಗೆ ವಾರಕ್ಕೆ ಬಂದರೆ ಹುಣಸೇ ಸಾರೋ ಮೆಣಸಿನ ಸಾರೋ ಏನೋ ಹಾಕಿ 'ಅಪ್ಪ !

ಇಂಥ ಊಟ ಹಾಕುತ್ತಿದ್ದೇನೆ' ಎಂದರೆ 'ಚೆನ್ನಾಗಿದೆಯಲ್ಲಾ ! ನೀವೇಕೆ ಪೇಚಾಡುವಿರಿ' ಎನ್ನುತ್ತಿದ್ದ ಅವನ ನೇಮ ನಿಷ್ಠೆ ಹೇಳಲು ಸಾಧ್ಯವಿಲ್ಲ, ಅಪರಂಜಿಯೇ ಆಗಿದಾನೆ.

...ಈ ದಿನ ಚಿಕ್ಕವಳ ಹುಟ್ಟಿದ ಹಬ್ಬ. 200 ರೂ.ಗೆ ಚೂಡಿದಾರ್ ತಂದು ಎಣ್ಣೆ ನೀರು ಹಾಕಿ ಕ್ರಿಶ್ಚಿಯನ್ನರಂತೆ ಕೇಕ್ ತಿಂದು ಮುಂಬತ್ತಿ ತಂದು ಕೇಕ್ ಕಟ್ಟು ಮಾಡಿ ಒಬ್ಬರ ಬಾಯಿಗೊಬ್ಬರು ಊಡಿಸಿ ಮುಂಬತ್ತಿ ಹತ್ತಿಸಿ ಆರಿಸಿ...ಸ್ಕೂಲಿಗೆ ಹುಟ್ಟಿದ ಹಬ್ಬಕ್ಕಾಗಿ ತಾರೀಖ್ ಲೆಕ್ಕದಂತೆ ಒಂದು ಸಲ ಮತ್ತು ನಕ್ಷತ್ರದ ಲೆಕ್ಕದಲ್ಲಿ ಇನ್ನೊಂದು ಸಲ. ಸ್ಕೂಲಿನ ಮಕ್ಕಳಿಗೆಲ್ಲಾ ಹಂಚಲು ಚಾಕ್‌ಲೇಟ್ ಮತ್ತು ಟೀಚರುಗಳಿಗೆ 20 ರೂನ ಸ್ವೀಟು. ನಡೆಯಲಿ. ನಾನು ಈ ಕಿರುಕುಳ ಸಹಿಸಲಾರೆ. ಸಹಿಸದೆ ಹೋಗುವುದು ಹೇಗೆ, ಎಲ್ಲಿಗೆ...

ರುಕ್ಕು ಎಣಸಣ್ಣ ಮಣಸಣ್ಣನಾಗುತ್ತಿದ್ದಾಳೆ. ಎರಡು ತಿಂಗಳಿನಿಂದ ಹೊತ್ತಿಗೆ ಅರ್ಧ ಸೌಟು ಅನ್ನ ತಿನ್ನುತ್ತಿಲ್ಲ. ಡಿ.ಸಿ. ಕಚೇರೀಲಿ ಮ್ಯಾಜೈನ್ ಏರ್ಪಾಡು ಮಾಡಬೇಕೆಂದು 2 ತಿಂಗಳಿಂದ ರಾತ್ರೆ 2-3 ಘಂಟೆಗೆ ಮಲಗುವುದು, ಬೆಳಿಗ್ಗೆ 8 ಘಂಟೆಗೇ ಹೋಗಲಿ, 9 ಘಂಟೆಗೇ ಹೋಗಲಿ, ರಾತ್ರಿ 9-10 ಘಂಟೆಗೆ ಮನೆಗೆ ಬಂದು ಅರ್ಧ ಸೌಟು ಅನ್ನ ತಿಂದು ಬರೆಯಲು ಕುಳಿತು 2-3 ಘಂಟೆಗೆ ಮಲಗುವುದು. ಅವಳನ್ನು ಒಳ್ಳೆ ಡಾಕ್ಟರಿಗೆ ಕರೆದುಕೊಂಡು ಹೋಗಿ ತೋರಿಸಪ್ಪ ಎಂದರೆ ಸಾಯಲಿ ಎನ್ನುವುದು ಉತ್ತರ. ಸತ್ತರೆ ಒಂದೇ ಸಲ ಬಾಚಿಕೊಳ್ಳಬಹುದು. ಯಾವುದಕ್ಕೆ ಸಂಕಟಪಡಲಿ.

ಸಾಲದ್ದಕ್ಕೆ ರುಕ್ಕು ಬಸ್ಸಿನಲ್ಲೇ ಯಾರಾದರೂ ಹುಷಾರಿಲ್ಲವೆನ್ನಲಿ ಅಥವಾ ಯಾವುದಾದರೊಂದು ಸಮಾರಂಭದಲ್ಲಿ ಹೇಳಲಿ ಅವರ ಮನೆ ಅಡ್ರೆಸ್ ತಿಳಿದುಕೊಂಡು ಅವರ ಮನೆಗಳಿಗೆ ಹೋಗಿ ನೋಡಿ ಅವರಿಗೆ ಔಷಧಿ ತೆಗೆದುಕೊಟ್ಟು ಮತ್ತೆ ಅವರು ಗುಣಮುಖರಾಗುತ್ತಿರುವರೆ ಇಲ್ಲವೆ ಎಂದು ಹೋಗಿ ಮತ್ತೆ ಔಷಧಿ ಬದಲಾಯಿಸಬೇಕಾದರೆ ಬದಲಾಯಿಸಿ ತಂದು ಕೊಡುವುದು. ಸಾಲದ್ದಕ್ಕೆ ಯಾರುಯಾರಿಗೂ ಗಂಡು ಹೆಣ್ಣು ನೋಡಿಕೊಡುವ ಓಡಾಟಕ್ಕೆ ಹೋಗುವುದು. ಮೂರು ಕಾಸಿನ ಪ್ರಯೋಜನವಿಲ್ಲ, ರಜದ ದಿನದಲ್ಲಿ 3 ತಿಂಗಳು ಒಂದು ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡಿ ಸಂಬಳ ಅವರಿಗೇ ಬಿಟ್ಟು ಬಂದಳು.

ಸೌ।। ಸೊಸೆ ಒಳಗಿದ್ದರೂ ಮಾಸಿಕದ ದಿನ ತಲೆಗೆ ಸ್ನಾನ ಮಾಡೆಂದರೆ ನನಗೆ ಶಾಸ್ತ್ರ ಬೇಕಾಗಿಲ್ಲ ಎನ್ನುತ್ತಾಳೆ, ರುಕ್ಕು ಬೆಂಕಿ ತೊಳೆಯುತ್ತಾಳೆ. ಏನು ಪ್ರಯೋಜನ.

ಪರಂಪರೆ ಮತ್ತು ಆಧುನಿಕತೆಯ ನಡುವಿನ ಸಂಘರ್ಷಕ್ಕೆ ಇದೊಂದು ಉತ್ತಮ ನಿದರ್ಶನ. ಆದರೆ ಸಮುದಾಯದಲ್ಲಿ ಈ ಪ್ರಮಾಣದ ಅಂತರವು ತೀರಾ ಅಪರೂಪವಾದ ಒಂದು ಸಂದರ್ಭ.

೨೩೫

Iಕ್ಲಾಸ್ ಬರಬೇಕು (ತಾತನ ಅಂತರ್ದೇಶೀಯ ಪತ್ರ)

ಹಾಸನ ಜಿಲ್ಲೆ

ತಾ। 5-10-87

...ಚಿ।। ಸೌ।। ಮೀನೂ ರಾಣಿಗೆ ಅನಂತಾಶೀರ್ವಾದಗಳು. ಮುದ್ದು ಮೀನು. ಚೆನ್ನಾಗಿದ್ದೀಯಾ ? ನಿನ್ನ ಪತ್ರ ತಲಪಿ ತುಂಬಾ ಸಂತೋಷವಾಯಿತು. ಎಷ್ಟು ಚೆನ್ನಾಗಿ ಕಾಗದ ಬರೆಯೋದನ್ನ ಕಲಿತಿದ್ದೀಯೆ ? ನಿನ್ನ ಅಜ್ಜಿಗೆ ಹಿಂಗ್ಗೋ ಹಿಂಗ್ಗು. ಆಗಲಿ. ಮುಂದೆಯೂ ಹೀಗೇ ಬರೀತಾ ಇರು. ಇಲ್ಲಿ ಎಲ್ಲರೂ ಚೆನ್ನಾಗಿದ್ದೇವೆ. ಅಲ್ಲಿ ನಿನ್ನ ಅಮ್ಮ, ಅಣ್ಣ, ಚಿ।। ರಾ।।...ಎಲ್ಲಾ ಕ್ಷೇಮ ತಾನೆ ? ಪರೀಕ್ಷೇಲಿ ಚನ್ನಾಗಿ ಬರದಿದ್ದೀಯಾ ತಾನೇ. Iಕ್ಲಾಸ್ ಬರಬೇಕು. ನಿನ್ನ ಅಮ್ಮಂಗೂ ಆಶೀರ್ವಾದ ತಿಳಿಸು. ಕೆಲ್ಸ ತುಂಬಾ ಜೋರಾಗಿರ ಬಹುದು. ಸರಿ. ಬಾಕಿ ಎಲ್ಲಾ ಯಥಾಸ್ಥಿತಿ.

೨೩೬

ಎಂದೆಂದೂ ಸಿದ್ಧಿಸಲಿ (ತಂದೆಯ ಕಾರ್ಡು)

ಕ್ಷೇಮ ಶ್ರೀ: ಹಾಸನಸೀಮೆಯ ಹಳ್ಳಿ

ತಾ। 30.5.88

ಚಿ।। ಸೌ।। ಪುಟ್ಟನಿಗೆ ಅನಂತಾಶೀರ್ವಾದಗಳು.

ನಿನ್ನ ಪತ್ರ ಕಂಡು ನಿನ್ನ ಅಮ್ಮನಿಗೆ ಹಿಂಗ್ಗೋಹಿಂಗ್ಗು (ಚೆನ್ನಾಗಿ ಹೊಗಳಿದಳಲ್ಲಾ ಎಂದು). ಸರಿ. ಈ ವೇಳೆಗೆ ಗೌರೀಪೂಜೆ ಮಂತ್ರಗಳೆಲ್ಲಾ ಬಂದಿರಬಹುದು. ಸಂತೋಷ. ಆ ಭಾಗ್ಯ ಎಂದೆಂದೂ ಸಿದ್ಧಿಸಲಿ.

ಚಿ।। ಸೌ।।...ಗೆ ಔಷಧೋಪಚಾರ ನಡೆಯುತ್ತಿರಬಹುದು. ಅಂದಹಾಗೆ ಪುಟ್ಟೂ ! ಹಾಸನದಲ್ಲಿ ಯಾರೋ ನಾಟಿ ಔಷಧಿ ಕೊಡುವರಂತೆ. ಖಂಡಿತಾ ಗುಣವಾಗುತ್ತಂತೆ. ಚಿ।।...ಳ ಮನೆ ಪಕ್ಕದ ಚಿ।। ಸೌ।।...ಮ್ಮ ಹೇಳಿದರಂತೆ. ಹೋದಾಗ ಒಮ್ಮೆ ವಿಚಾರಿಸಲು ತಿಳಿಸು.

ಈ ವರ್ಷ ಈವರೆಗೂ ಮಳೆ ಬಂದಿಲ್ಲಾ. ತಂದಿದ್ದ ಆಲೂಗಡ್ಡೆ ಎಲ್ಲಾ ಕೊಳೆತು ಹೋಗುತ್ತಿದೆ. ದಿನಾ ಆರಿಸುವುದೇ ಆಗಿದೆ.

ನಂತರ ಶ್ರೀ...ರ ಮಗಳ ಬಗ್ಗೆ ಪಕ್ಕದ ಮನೆಯಲ್ಲಿ ವಿಚಾರ ತಿಳಿಸಿ ಕೇಳಿಯಾಯಿತು. ಆದರೆ ಅವರು ತಮ್ಮ ಮಗಳಿಗೆ ಗೊತ್ತಾಗದೆ ಮಾಡುವುದಿಲ್ಲವೆಂದರು. ಅಂತು ಈ ವರ್ಷ ಲಗ್ನದ ಪ್ರಯತ್ನವಿಲ್ಲವಂತ ಅವರಿಗೆ ವಿಷಯ ತಿಳಿಸು.

...ನೀನು ಪತ್ರದಲ್ಲಿ ಬರದು ಹೋದ ವಿಷಯ-ಬೆಂಗಳೂರಿನ ಪತ್ರದಿಂದ ತಿಳಿದು ನಾವೆಲ್ಲಾ ಆಶೌಚ ಅನುಭವಿಸಿ ಶುದ್ಧರಾದೆವು.

ಇತಿ

೨೩೭

ಸಂಪಿಗೆ ಹೂ ಪೂಜಿಸಿದ್ದಿ (ಅಕ್ಕನಿಗೆ ಅಂತರ್ದೇಶೀಯ ಪತ್ರ)

Safe Shree Rama ಶಿವಮೊಗ್ಗ ಜಿಲ್ಲೆ

D. 28-8-88

...ಅಲ್ಲಿಂದ ಬಂದ ನಂತರ ಬರೆಯುತ್ತಿರುವ ಮೊದಲ ಪತ್ರ. ಹಬ್ಬದ ಗಲಾಟೆ, ಅದೂ ಇದೂ ಅಂತ ಲೇಟಾಯ್ತು. ಅನ್ಯಥಾ ಭಾವಿಸಬೇಡ.

ಯಾವಾಗಲೂ ಪುಟಾಣಿ ನೆನಸಿಕೊಳ್ತಾ ಇರ್‍ತಾನೆ, ದೊಡ್ಡಮ್ಮ ಕಥೆ ಹೇಳಿದ್ರೆ ತುಂಬಾ ಖುಷಿಪಟ್ಕೋತ್ತಾರೆ ಅಂತ. ಕೇಳೋರು ಒಬ್ಬರು ಇದ್ರೆ, ಹಳಿ ಇಲ್ಲದೇ ರೈಲು ಓಡಿಸ್ತಾನೆ ಈ ಭೂಪ.

ಚಿ|...ಮ್ಮ ಹೇಗಿದ್ದಾಳೆ ? ತುಂಬಾ ಸೌಮ್ಯ ಆಗಿಬಿಟ್ಟಿದ್ದಾಳೆ. ಮೊದಲೇ ಮಾತು ಕಡಿಮೆ. ದೇವರು ಅವಳಿಗೆ ಆರೋಗ್ಯ, ಆಯಸ್ಸನ್ನು ದಯಪಾಲಿಸಲೆಂದು ದಿನವೂ ಬೇಡಿಕೊಳ್ಳುತ್ತೇನೆ. ಯಾವುದಕ್ಕೂ ಯೋಚಿಸಬೇಡ. ಸ್ವಲ್ಪವನ್ನೂ ಬೆಟ್ಟವೇ ಆಗಿ ಚಿಂತಿಸುತ್ತೀಯೆ. ಏಕಾಗ್ರತೆಯಿಂದ ಭಗವಂತನನ್ನು ಧ್ಯಾನಿಸು. ಎಲ್ಲವೂ ಸರಿಯಾಗುತ್ತದೆ. ನಂಬಿದವರನ್ನು ಖಂಡಿತಾ ಕೈಬಿಡುವುದಿಲ್ಲ ಅವನು.

ತೀ| ಅತ್ತಂಬಿಗೆ ನನ್ನ ಅನಂತ ನಮಸ್ಕಾರಗಳನ್ನು ತಿಳಿಸು. ಸ್ವಂತ ಅಣ್ಣನಂತೆ ಭಾವನೆಯುಂಟಾಗುತ್ತದೆ. ಅವರನ್ನು ನೋಡಿದಾಗ, ಮಾತಾಡಿದಾಗ ತನ್ನಂತೆ ತಾನೇ ಆತ್ಮೀಯತೆ ಯುಂಟಾಗುತ್ತದೆ. ಹಿಂದೆ ಒಡಹುಟ್ಟಿದ ಸೋದರರನಾಗಿದ್ದರೋ ಏನೋ ? ಮಗುವಿನಂತಹ ಮನಸ್ಸು. ನೀನು ಸಂಪಿಗೆ ಹೂವನ್ನು ಎಷ್ಟು ದೇವರಿಗೆ ಪೂಜಿಸಿದ್ದೆಯೋ ನಿನಗೆ ಅವರು ಸಿಕ್ಕಿದ್ದಾರೆ. ದೇವತಾಮನುಷ್ಯ. ನಾನೇನಾದರೂ ಅಲ್ಲೇ ಹತ್ತಿರಕ್ಕೆ ಸೇರಿದ್ದರೆ ಅವರ ಸ್ಟೂಡೆಂಟ್ ಆಗಿ ಚೆನ್ನಾಗಿ ಓದಿ ಲೆಕ್ಚರರ್ ಆಗ್ತಾ ಇದ್ದೆ. ಅವರ ಪಾಠ ಕೇಳೋಕೆ ಅಷ್ಟು ಚೆನ್ನಾಗಿರುತ್ತೆ. ಅದೆಲ್ಲಾ ಕನಸು...

೨೩೮

ಪುಟ್ಟ ಬಾಲಕಿ

ಅಜ್ಜನಿಗೆ ಸ್ವತಂತ್ರವಾಗಿ ಬರೆದ ಕಾರ್ಡು

ಹಾಸನ

8.4.91

ತೀ|| ಅಜ್ಜನವರಿಗೆ. ಅಜ್ಜ ಹುಶಾರಗಿದರ. ಇನ್ನು 10 ದಿವಸಕೆ. ನಾನು ಊರಿಗೆ ಬರುತೆನೆ. ಅಜ್ಜಿ ಹುಶಾರಾಗಿದಾರ. ಅಜ್ಜಿ ನನಗೆ ಪರೀಕ್ಷೆ ಮುಗಿಯಿತು. ಮುಕುದ ಪರಿಕ್ಷೆ ಮುಗಿಯಿತು. ಇನು ನಾಗೇಷ ಪರಿಕ್ಷ 1 ದಿವಸ ಮುಗದಿದೆ. ಅಣ್ಣನು ಅಮ್ಮನು ಕರಿಕಂಡು ಬರುತೇನೆ. ಅಜ್ಜ ರಾಗವನ ಪರಿಕ್ಷ ಆಯಿತ. ನೀನು ಹೆದರಬೇಡ. ಅಜ್ಜ ಅಜ್ಜಿ ಅಣ್ಣಗೆ ತಲೆನವ್ವು ಹುಶಾರು ತಪಿದೆ. ಅಜ್ಜ ಅಮ್ಮ ಊರಿಗೆ ಬಂದು ಕೆಲಸ ಮಾಡಿಕೊಳುತಾರೆ. ಅಜ್ಜ ಅಜ್ಜಿ ಹಾಲಿಗೆ ತೊಂದರೆ ಆಗುತಿದ. ನೀರಿಗೆ ತೊಂದರೆ ಮೂಡಲ. ಅಜ್ಜ ಅಜ್ಜಿ ನಾನು ನಾಗೇಷ ಅಮ್ಮ ಮುಕುಂದ ಹೂಶಾರಾಗಿ ಇದಾರೆ. ನನ್ನಗೆ ಬಟೆ ವಗಯಕ್ಕೆ ಬರತೆ. ನೀನು ಕಷ್ಟಪಡಬೇಡ. ಅಜ್ಜಿ ಒಳ್ಳೆ ಬುದ್ಧಿ ಕಲಿತ್ತಿದ್ದೇನೆ...

ಗುಚ್ಛ - 13

ತಂದೆ-ಮಕ್ಕಳ ನಡುವೆ

ಸುಶಿಕ್ಷಿತ, ಆದರೆ ಬಡವರಾದ ಹಳ್ಳಿಯ ತಂದೆ ಮತ್ತು ದೂರದ ನಗರಗಳಲ್ಲಿರುವ ಮಕ್ಕಳ ನಡುವಿನ ಪತ್ರವ್ಯವಹಾರವು ಇಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಬಂದಿದೆ. ಹೀಗೆ ದೂರದ ಊರುಗಳಲ್ಲಿ ಹೊಸ ಶಿಕ್ಷಣ ಪಡೆಯುವ ಮತ್ತು ನೌಕರಿ ಮಾಡುವ ಯುಗದ ಪ್ರಾರಂಭದ ಹಂತ ಇಲ್ಲಿದೆ. ಆಗಿನ ಆಸೆ, ನಿರೀಕ್ಷೆ, ಆತಂಕ, ಆವೇಗ ಎಲ್ಲವೂ ಈ ಪತ್ರಗಳಲ್ಲಿವೆ. ವ್ಯಾಪಕವಾದ ಇತರ ಸಂವಹನ ಮಾಧ್ಯಮಗಳಿಲ್ಲದ್ದರಿಂದ ಈ ಪತ್ರಗಳಲ್ಲಿ ಎಲ್ಲ ಆಲೋಚನಾ ವಿವರಗಳೂ ಕಾಣಿಸಿಕೊಂಡಿವೆ. ಈ ಕಾರಣದಿಂದಲೇ ಅಲ್ಲದೆ ಈ ಗುಚ್ಛದ ಪತ್ರಗಳು ಒಂದೇ ಕುಟುಂಬದವು ಎಂಬುದರಿಂದಾಗಿ ದೊರೆಯುವ ದಟ್ಟ ಚಿತ್ರಣಕ್ಕಾಗಿಯೂ ವಿಶೇಷವಾಗಿವೆ.

೨೩೯

ಟೋಪಿ ತಗೋ (ಹೈಸ್ಕೂಲು ವಿದ್ಯಾರ್ಥಿಗೆ ತಂದೆಯ ಕಾರ್ಡು)

ಕ್ಷೇಮ ಶ್ರೀ ತಾ। 24.7.21

R. Pura

ಚಿ॥ ಗೆ ಆಶೀರ್ವಾದಗಳು. ಉ.ಕು.ಉ.ಸಂ. ಈಚೆಗೆ ನಿನ್ನಿಂದ ಕಾಗದವೇ ಇಲ್ಲ. ಕಾರಣ ತಿಳಿಯದು. ಈಗಲಾದರೂ ಬರಿ. ನಮ್ಮೂರು ಕೇಶವಯ್ಯನ ಸಂಗಡ ನಿನ್ನ ಸ್ವಂತಕ್ಕಾಗಿ 1 ರೂ.ನ್ನೂ ಸ್ವಲ್ಪ ಅವಲಕ್ಕಿಯನ್ನೂ ಕಾಗದಗಳನ್ನೂ ಕಳುಹ್ಸಿದೇನೆ. ಅವನು ಸೋಮವಾರ ಸಾಯಂಕಾಲ 5 ಗಂಟೆಗೆ ಅಲ್ಲಿಗೆ ಬರುತ್ತಾನೆ. ನೀನು ಕ್ಲಾಸ್ ಟೈಂ ಆದಮೇಲೂ ಅಂದರೆ ರೈಲು ಬಂದ $^1/_2$-$^3/_4$ ಗಂಟೆಯವರಿಗೂ ಕಾದಿದ್ದು ಅಥವ ಸ್ಟೇಷನ್ ಮಾರ್ಗವಾಗಿ ಸ್ವಲ್ಪ ದೂರ ಹೋಗಿ ತೆಗೆದುಕೊಳ್ಳುವುದು. ಏಕೆಂದರೆ ಅವನಿಗೆ ಮನೆ ಗೊತ್ತಾಗುವುದಿಲ್ಲ. ಪಾಠಗಳೇನಾದರೂ ಮನಸ್ಸಿಗೆ ಹತ್ತುವವೇ ಬರಿ. ಕಾಗದಗಳ ಪೈಕಿ ಒಂದನ್ನು ತೀ।ರವರಿಗೆ ಕೊಡು. 2ನ್ನು ನೀನೇ ಇಟ್ಟುಕೊಂಡು ಅದರಂತೆ ನಡಿಸಿ ಅದರಲ್ಲಿರುವಂಶಗಳಿಗೆಲ್ಲಾ ಜವಾಬ್ ಬರಿ. ಇದುವರಿಗೇ ಅಭ್ಯಂಗ ನಿನಗಾಗದೇ ಇದ್ದರೆ ಅಗ್ರಹಾರದ ಕೇಶವನಿರುವ ಹಾಸ್ಟೆಲಿಗೆ ಹೋಗಿ ಕೊನೇಪಕ್ಷ ದುಡ್ಡು ಕೊಟ್ಟಾದರೂ ಹಾಕಿಸಿಕೊ. ಯೋಚಿಸಬೇಡ. ನಾನು ಸಧ್ಯದಲ್ಲೇ ಬಂದು ಕ್ರಮಪಡಿಸುತ್ತೇನೆ. ನೀನು ಸ್ಟೇಷನ್ ಮಾರ್ಗವಾಗಿ ಹೋಗಬೇಡ. ಏಕೆಂದರೆ ಒಬ್ಬೊಬ್ಬರದೊಂದೊಂದು ದಾರಿ ಆದೀತು? ∴ ಸ್ಕೂಲ್ ಬಳಿಯಲ್ಲೇ ಕಾದಿರು. ಆತನಿಗೂ ನಾನು ಅದೇ ರೀತಿ ಹೇಳುತ್ತೇನೆ. ಈ 1 ರೂ.ನ್ನು ಸ್ವಂತದಲ್ಲಿಯೇ ಇಟ್ಟುಕೊಂಡು ಅತ್ಯವಶ್ಯಕವಾದ ಖರ್ಚುಗಳಿಗೆ ಉಪಯೋಗಿಸು. 1 ಉಲ್ಲನ್ ಟೋಪಿಯನ್ನು 1-4-0 ಅಥವ 1-8-0ರಲ್ಲಿ ತೆಗೆದುಕೊಡುವಂತೆ ಅಣ್ಣಯ್ಯನವರಿಗೆ ಬರೆದಿದೇನೆ. ನಿನ್ನ ಕಾಗದಗಳನ್ನು ನೀನೇ ಇಟ್ಟುಕೊಂಡು ನಿಧಾನವಾಗಿ ಸರಿಯಾದ ಉತ್ತರಗಳನ್ನು ಬರೆದು ಅನಂತರ ಹರಿ. ತಿಂಡಿಯನ್ನು ನಾಗಪ್ಪನವರ ಮನೆಯಲ್ಲಿ ಇಟ್ಟುಕೊಂಡು ದಿನವಹಿ 3 ಕಾಸಿಗೆ ಮೊಸರು ತೆಗೆದುಕೊಂಡು ಉಪಯೋಗಿಸು.

೨೪೦

ಹುರಿಹಿಟ್ಟು ಜೋಪಾನ (ವಿದ್ಯಾರ್ಥಿಗೆ ತಂದೆಯ ಕಾರ್ಡು)

ಕ್ಷೇಮ ಶ್ರೀ 20.8.21

ಆಶೀಃ

ನಂಜುಂಡಶೆಟ್ಟಿ ಗಾಡಿ ಭಾನುವಾರ ರಾತ್ರೆ ಹೊರಟು ಮಂಗಳವಾರ ಪ್ರಾತಃಕಾಲ 8 ಗಂಟೆಯೊಳಗಾಗಿ ಮೊಹದಿನ್ ಸಾಬಿ ಚೌಕಕ್ಕೆ ಬರುವುದು. ಅಲ್ಲಿ ಹೋಗಿ ಅವನಲ್ಲಿರುವ ಕಾಗದವನ್ನೂ ಸಾಮಾನುಗಳನ್ನೂ ತೆಗೆದುಕೊಂಡು ಉತ್ತರಗಳನ್ನು

ಬರೆದು ಅವನೊಡನೆಯೇ ಕಳುಹು. ನೀನು ಹೋಗುವಾಗ (ಬಂಡಿಮಾಲಿಗೆ) ಸದ್ವಿದ್ಯಾಶಾಲೆಯಲ್ಲಿ ತೀ॥ರವನ್ನು ಕಂಡು ಸಹಾಯಕ್ಕೆ ಜವಾನನನ್ನು ಕರೆದುಕೊಂಡು ಹೋಗಿ ತರುವದು. ಪೆಟ್ಟಿಗೆಯನ್ನೂ ಹುರಿಹಿಟ್ಟನ್ನೂ ನೀನೇ ನಾಗಪ್ಪನವರ ಮನೆಗೆ ತೆಗೆದುಕೊಂಡು ಹೋಗು. ಬಾಕಲಿಂದನ್ನೂ ಸೀದಾ ತೀ॥ ರವರ ಮನೆಗೇ ತೆಗೆದುಕೊಂಡು ಹೋಗಲಿ. ಮ। ನಾರಾಯಣರಾಯರನ್ನು ಕಂಡಿದ್ದೆಯಾ ಬರಿ. ಸರ್ವರೂ ಕುಶಲರು. ಆಶೀಃ.

೨೪೧

ನಡೆದೇ ಬಾ (ಹೈಸ್ಕೂಲು ವಿದ್ಯಾರ್ಥಿಗೆ ತಂದೆಯ ಕಾರ್ಡು)

ಕ್ಷೇಮ ಶ್ರೀ ತಾ। 22.9.21

ಚಿ॥ಗೆ ಆಶೀರ್ವಾದಗಳು

ಉ.ಕು.ಉ. ಸಾಂಪ್ರತ

ನಿನ್ನ ಕಾರ್ಡು ತಲಪಿ ಅಭಿಪ್ರಾಯವಾಯ್ತು. ರಜದಲ್ಲಿ ನೀನು ಇಲ್ಲಿ ಬಂದರೆ ನನಗೆ ತೊಂದರೆ ಎಂದಾಗಲಿ ಅನ್ನ ಹಾಕಬೇಕಾಗುತ್ತೆಂದಾಗಲಿ ನನ್ನ ಅಭಿಪ್ರಾಯವಲ್ಲ. ಸತ್ಸಹವಾಸ ದೊರೆತು ನೀನು ಹಿಂದಣ ಪಾಠಗಳನ್ನು ಓದಿಕೊಂಡು ಅಭಿವೃದ್ಧಿಗೆ ಬರಲೆಂಬುದ್ದೇಶ. ಇದೇ ಪ್ರತಿ ದೇವರಲ್ಲಿಯೂ ಪ್ರಾರ್ಥಿಸುತ್ತಿದ್ದೇನೆ. ಪ್ರಕಾರಾಂತರ ಭಾವಿಸಬೇಡ. ರಜದಲ್ಲಿ ಊರಿಗೆ ಬರುವಾಗ ನಾಗಪ್ಪನವರಿಗೆ ತಿಳಿಸಿ ಪುಸ್ತಕಗಳನ್ನೂ ಹೆಚ್ಚು ಬಟ್ಟೆಗಳನ್ನೂ ಪೆಟ್ಟಿಗೆಯಲ್ಲಿ ಜೋಪಾನವಾಗಿಟ್ಟು ಹೊರಟು ಬ. ವ್ಯಾಸಂಗಕ್ಕನುಕೂಲ ತೋರುವ ಯಾವದಾದರೂ 1-2 ಬುಕ್ಕುಗಳನ್ನು ತಂದರೆ ಉತ್ತಮವೆಂದು ತೋರುತ್ತೆ. ನೋಡು. ಅವಲಕ್ಕಿ ನಿನಗೆ ಅನುಪಯುಕ್ತವಾದರೆ ತೆಗೆದುಕೊಂಡು ಬ. ವಿಲೆ ಮಾಡೋಣ. ಇಂಗ್ಲಿಷ್ ಡಿಕ್ಷನರಿಯನ್ನಾಗಲಿ ಕನ್ನಡದ್ದಾಗಲಿ ತರಬೇಡ. BMSರಿಗೆ ಕನ್ನಡ ಡಿಕ್ಷನೆರಿ ಶ್ರೀಕಂಠನದೇ ಕೊಟ್ಟಾಗಿದೆ. ನಿನಗೆ ಅಪ್ರಕೃತವಾದರೆ ತರುವುದು. ಸಾಯಂಕಾಲದ ರೈಲಿನಲ್ಲಿ ಹೊರಡಬೇಡ. ಶನಿವಾರ ಅನೇಕ ಜನಗಳು ಹೊರಡುವದರಿಂದ ಸ್ಥಳ ಸಿಕ್ಕದೆ ತೊಂದರೆಯಾಗಬಹುದು. ಆದ್ದರಿಂದ ನೀನು ಭಾನುವಾರ ಹೊರಡು. ಒಂದು ವೇಳೆ ಆ ದಿನ ಸಕಾಲಕ್ಕೆ ಊಟವಾಗದಿದ್ದರೆ ಸೋಮವಾರ ಊಟ ಮಾಡಿಕೊಂಡು 1 ಗಂಟೆ ರೈಲಿಗೆ ಹೊರಡು. ಸಾಯಂಕಾಲಕ್ಕೆ ಸಾಲಿಗ್ರಾಮಕ್ಕೆ ನಡೆದುಕೊಂಡೇ ಬ. ರಾತ್ರಿ ಅಲ್ಲಿ ಮ। ಅನಂತಯ್ಯನವರ ಮನೆಯಲ್ಲಿದ್ದು ಮರುದಿನ ಮಧ್ಯಾಹ್ನಕ್ಕೆ ಇಲ್ಲಿ ಬ. ಸಾಲಿಗ್ರಾಮಕ್ಕೆ ಬರುವ ಗಾಡಿಗಳಲ್ಲಿ ಕೂತುಕೊಳ್ಳಬೇಡ. ಅವರು ಭಂಡರು. ನಾನು ಬರುವಾಗ 4 ಆ. ಮಾತನಾಡಿ ಸಾಲಿಗ್ರಾಮದಲ್ಲಿ ಗಂಟು ಕೀಳುವುದಕ್ಕೆ ಬಂದು ಕೊನೆಗೆ ಪಂಚಾಯ್ತಿ ಮಾಡಿ 5 ಆ. ಕೊಡಬೇಕಾಯ್ತು. ∴ನಡೆದುಕೊಂಡೇ ಬ. ಅದೇ ದುಡ್ಡು ನಿನ್ನ ಶರೀರ ಪೋಷಣೆಗೇ ಆಗುತ್ತೆ. ಕೇಶವಯ್ಯನೇನಾದರೂ ಬರುವದಾದರೆ ಸಾಧ್ಯರಾದ ಕೆಲವರ ಜೊತೆಯಲ್ಲೇ ಬ. ರಾತ್ರಿ ವೇಳೆ ಖಂಡಿತ ಬರಬೇಡ. ತುರ್ವೇಕೆರೆಯಿಂದೇನಾದರೂ M.O. ಬಂದರೆ...ಹಳ್ಳಿಗೆ ಕಳುಹಿಸುವಂತೆ ಹೆಡ್ಡಾಫೀಸಿನಲ್ಲಿ $^1/_4$ ಗಜ ಕಾಗದದಲ್ಲಿ ಇಂಟಮೇರ್ಷ ಬರೆದುಕೊಟ್ಟು ಬ.

ರಾಮಸ್ವಾಮಯ್ಯ

೨೪೨

ಕೋಟು ಹೊಲಿಸಿಕೋ (ಪ್ರೌಢಶಾಲಾ ವಿದ್ಯಾರ್ಥಿಗೆ ತಂದೆಯ ಕಾರ್ಡು)

ಕುಶಲಂ ಶ್ರೀ ತಾ। 15.12.21

R. Pura

ಆಶೀರ್ವಾದಗಳು ಉ.ಕು.ಉ.ಸಂ. ನಿನ್ನ ಕಾರ್ಡು ತಲಪಿತು. ನಾರಾಯಣ ಉಪಾಧ್ಯಾಯರ ಮಗ ಸುಬ್ಬರಾಯನ ಕೂಡ 2 ರೂ.ಗಳನ್ನು ಕಳುಹಿದ್ದೆನು. ತಲಪಿರಬಹುದು. ಗ್ಲಾಸನ್ನೂ ಉದ್ಧರಣೆಯನ್ನೂ ಬಿಟ್ಟುಹೋದನು. ಚಿ। ಅಪ್ಪಣ್ಣನು ಅಪ್ಲಿಕೇರ್ಷ ಮಾಡಿದಾನೆ. ನೀನು ಅವನಿಗೆ ಚೆನ್ನಾಗಿ ವ್ಯಾಸಂಗ ಮಾಡುವಂತೆ 15 ದಿನಗಳಿಗೊಮ್ಮೆ ಬರೆಯುವ ಕಾರ್ಡಿನಲ್ಲಿ ತಿಳಿಸುತ್ತ ಪ್ರೋತ್ಸಾಹ ಕೊಡುತ್ತಿರು. ಮರೆಯಬೇಡ. ನಾನು ಹಾಸನಕ್ಕೆ ಹೋಗಿದ್ದೆನು.

...ನೀನು ಲ್ಯಾಂಪು ಚಿಮಣಿ 1 ಶೀಶೆಯಲ್ಲಿ ತಂದಿಟ್ಟುಕೊಂಡು ಕೊಠಡಿಗೆ 1 ಜಾಗ ಇಟ್ಟುಕೊಂಡು ಜಾಗರೂಕತೆಯಿಂದ ವ್ಯಾಸಂಗ ಮಾಡುತ್ತಿರು. ಉದಾಸೀನ ಮಾಡಬೇಡ. ಇಲ್ಲಿ ನಮ್ಮ ಮನೆಯಲ್ಲೂ ವೇ। RKS ರ ಮನೆಯಲ್ಲೂ ರುದ್ರಪಟ್ಟಣದಲ್ಲೂ ಸರ್ವರೂ ಆರೋಗ್ಯವಾಗಿದಾರೆ. ಮುಖ್ಯವಾಗಿ ಎಲ್ಲಾ ಭಾಗದಲ್ಲೂ ನೀನು ಜಾಗರೂಕನಾಗಿರುತ್ತೀಯಾಗಿ ನಂಬಿದೇನೆ. ಪ್ರಾಯಃ ನಾನೂ 2-3 ದಿನಗಳಲ್ಲಿ ಬೇರೊಂದು ಕಡೆ ಹೋಗಿ ಬರಬೇಕೆಂದಿದೇನೆ. ಪ್ರಯಾಣ ಮಾಡಿದ ನಂತರ ಬರೆಯುತ್ತೇನೆ. ಛಳಿಗಾಲವಾದ್ದರಿಂದ ಕೋಟನ್ನು ಖಂಡಿತವಾಗಿ ಹೊಲಿಸಿಕೊ. ಉದಾಸೀನ ಮಾಡಬೇಡ. ದೇಹಾರೋಗ್ಯವು ಚೆನ್ನಾಗಿದ್ದರೆ ಯಾವ ಕೆಲಸವನ್ನಾದರೂ ಮಾಡಬಹುದು. ಅತಿಶಯವಿಲ್ಲ. ಇತ್ಯಾಶೀಃ.

೨೪೩

ಮನೆ ಗುರುತು (ವಿದ್ಯಾರ್ಥಿಗೆ ತಂದೆಯ ಕಾರ್ಡು)

ಕ್ಷೇಮ ಶ್ರೀರಾಮ ಸಹಾಯಂ 29.9.23

R. pura

ಚಿರಂಜೀವಿಗಾಶೀರ್ವಾದಗಳು. ಉ. ಕುಶಲ. ಸಂಪ್ರತಿ. ನಿನ್ನ 23.9.23ರ ಕಾರ್ಡು ತಲಪಿತು. ನಮ್ಮೂರಿನಲ್ಲಿ ಪ್ಲೇಗ್ ಗಲಾಟೆ ಇದೆ. ಸಧ್ಯಕ್ಕೆ ದೇವರ ದಯೆಯಿಂದ ಇಲ್ಲಿ ಸುಖವಾಗಿದೆ ಎಂದು ಹೇಳಬಹುದಾದರೂ ಯಾವ ನಿಮಿಷಕ್ಕೇನೋ ಎಂಬ ಸಂದೇಹವಿದ್ದೇ ಇದೆ. ವರ್ಗದ ವಿಚಾರವೇನೂ ಇತ್ಯರ್ಥವಿಲ್ಲ. ಮನೆಯಲ್ಲೆಲ್ಲರೂ ಈಶ್ವರಾನುಗ್ರಹದಿಂದೀವರಿಗೆ ಕುಶಲಿಗಳು. ಇಂದೋರಿಗೆ ಕಾಲ್ವೆಮನೆ ರಾಮಸ್ವಾಮಯ್ಯನವರ ಕೂಡ ಕಾಗದ ಬರೆದೂ ಹೇಳಿಯೂ ಕಳುಹಿಸಿದ್ದೆ. ಕಾಗದವನ್ನೂ ಕೊಟ್ಟು ವಾಚಾ ವಿಷಯವನ್ನೂ ತಿಳಿಸಿದರಂತೆ. ಕೇಳಿ ಸುಮ್ಮನಾದರಂತೆ. ಕೊಂಚ ದಿವಸ ಬಿಟ್ಟುಕೊಂಡು ಪುನಃ ಬರೆಯೋಣ. ಅದೃಷ್ಟವಿದ್ದಂತಾಗಲಿ. ತೀ।। ಅಜ್ಜಯ್ಯನವರಲ್ಲಿ ಹೇಗಾದರೂ ಮಾಡಿ 2ಕ್ಕೆ ಅನುಕೂಲಪಡಿಸಿಕೊಂಡರೆ ಉತ್ತಮ. ನಿನ್ನ ಪರೀಕ್ಷೆಯು ಮುಗಿದ ದಿನವೇ ರೈಲು ಹತ್ತಲು ಸಾಧ್ಯವಾದರೆ ಸರಿ, ಇಲ್ಲವಾದರೆ ಮರುದಿವಸ ಹೊರಟು ರಾಮನಾಥಪುರಕ್ಕೆ ಬರುವದು. ದೀಕ್ಷಿತರ ಮನೆ ಬಳಿ ಬಂದು ವಿಚಾರಿಸಿದರೆ ಮನೆ ಗೊತ್ತಾಗುತ್ತೆ. ಡಿಟೊ ಮನೆಯಿಂದ ದಕ್ಷಿಣ ದಿಕ್ಕಿನ ಬೀದಿ. ಬಾಗಿಲಲ್ಲಿ 2 ತೆಂಗಿನ ಸೊಸಿಗಳಿವೆ. ನಿನ್ನ ಪೆಟ್ಟಿಗೆ ಹಾಸಿಗೆ ಲ್ಯಾಂಪ್ ಮುಂತಾದುವನ್ನು ತೀ।।ರವರ ಮನೆಯಲ್ಲಿ ಜೋಪಾನವಾಗಿಟ್ಟು ಬರುವುದು. ಕೈಯಲ್ಲಿ ಮನಿ ಇದ್ದರೆ ಸಾಲ ಮುಂತಾದ್ದು ಕೊಡಬಾರದು. ಕುಟ್ಟೆಹುಳ ವಿಷಯದಲ್ಲಿ ಜಾಗರೂಕತೆ ಇರಲಿ. ದುಡ್ಡಿದ್ದರೆ ಬರುವಾಗ ಜೈಲು ಸೇರೊಂದನ್ನು ತರುವುದು. ತೀ।। ಅಜ್ಜಮ್ಮನವರಿಗೆ ತಿಳಿಸುವುದು. ವ್ಯಾಸಂಗ ಚೆನ್ನಾಗಿ ಮಾಡಿಕೊಂಡು ಪರೀಕ್ಷೆಯಲ್ಲುತ್ತೀರ್ಣ ನಾಗುವಂತೆ ದೇವರಲ್ಲಿ ಪ್ರಾರ್ಥಿಸು. ಬಾಕೀ ವಿಚಾರ ಮುಖತಃ ಮಾತನಾಡೋಣ. ಅತಿಶಯವಿಲ್ಲ. ಇಂತು ಆಶೀರ್ವಾದಗಳು.

೨೪೪

ಉಕ್ಕಿನ ಕಡಲೆ

ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗೆ ತಂದೆಯ ಪತ್ರ

ಕುಶಲಂ ಶ್ರೀ ತಾ। 28.6.24

ಆಶೀಃ ಉ.ಕು.ಸಾಂ. ನಿನ್ನ ಕಾರ್ಡುಗಳು ತಲಪಿದವು. ಕೇಶವಯ್ಯನು ನಾಳೆ ಅಂದರೆ ಭಾನುವಾರ ಅಥವಾ ಸೋಮವಾರ ಅಲ್ಲಿಗೆ ಬಂದಾನು. ನಿನ್ನ ಮೊದಲ ಕಾರ್ಡು 24ಕ್ಕೆ ಬಂತಾದ್ದರಿಂದ ಆ ವೇಳೆಗೆ ಅವಳು ಚಿಲ್ಕುಂದಕ್ಕೆ ಹೋಗಿ ಆಗಿತ್ತು. ∴ಅಲ್ಲಿಗೇ ಅವಳಿಗೆ ನಿನ್ನ ಅಡ್ರೆಸ್ ತಿಳಿಸಿ 1 ಕಾರ್ಡು ಬರೆದಿದೇನೆ. ಪ್ರಾಯಃ ನಿನ್ನನ್ನು ನೋಡದೇ ಇರಲಾರಳು. ನೀನು ನಾನು ಹೇಳಿದ್ದಂತೆ ತೀ। ರವರ ಮನೆಯಲ್ಲಿ 1 ವಾರದ ಮಟ್ಟಿಗೆ ಇದ್ದು ನಂತರ ಬೇರೆ ಏರ್ಪಾಡು ಮಾಡುವ ಯೋಚನೆ ಇಡದೆ ನನ್ನ ಮಾತನ್ನೇ ಉಲ್ಲಂಘಿಸಿ ಸ್ವೇಚ್ಛಾನುಸಾರಿಯಾದೆ. ಎಷ್ಟು ಹೇಳಿದರೂ ತೀರದು. ಪರಸ್ಥಳದಲ್ಲಿ ಇಷ್ಟು ಹೇಡಿ ಬಾಳಾದರೆ (ಪರಿಚಯ ವಿಶ್ವಾಸಗಳಿರುವೆಡೆಗಳಲ್ಲಿಯೂ) ಮುಂದೇನು ಪರಿಣಾಮವೊ. 7 ವಾರಗಳ ಮನೆಗಳಿಗೆ 1½-2 ಮೈಲಿ ಸುತ್ತಿಕೊಂಡೂ ಅಡಿಗೆ ಮಾಡಿಕೊಂಡೂ ವ್ಯಾಸಂಗ ಮಾಡುತ್ತೇನೆಂದು ಕಾಲವನ್ನೂ ದ್ರವ್ಯವನ್ನೂ ಹರಣ ಮಾಡುವುದಕ್ಕಿಂತಲೂ ಬೇರೆ ಯಾವದಾದರೂ ವ್ಯಾಸಂಗಿಯಾಗುವುದುತ್ತಮವಲ್ಲವೆ ? ನಿನಗೆ ಸ್ಕೂಲ್‌ನಂತೆ ಇದು ಸುಲಭವೆಂಬ ಭಾವನೆ ಇರಬಹುದು. ಇದನ್ನು ಮರೆ. 'ಉಕ್ಕಿನ ಕಡಲೆ' ಎಂದು ತಿಳಿ. ಸರ್ವಥಾತ್ಮಾ ಈ ಕ್ರಮದಲ್ಲಿ ನಿನ್ನ ವ್ಯಾಸಂಗವು ನಿಷ್ಫಲ. ಈಗ ಅಜ್ಜಯ್ಯನವರಿಗೆ ನಿನ್ನನ್ನು ಈ ವರ್ಷ ಅವರ ಸ್ವಂತ ಪೋಷಣೆಯಲ್ಲಿಯೇ ಇಟ್ಟುಕೊಂಡು ವಿದ್ಯಾದಾನ ಮಾಡಬೇಕೆಂದೂ ಯಾವ ಬ್ರಾಂಚಿಗೆ ಓದುವದಕ್ಕೂ ಅನುಕೂಲತೆ ಇಲ್ಲವೆಂದೂ ಪ್ರಾರ್ಥಿಸಿದೇನೆ (ಕಾಗದದ ಮೂಲಕ). ಇದನ್ನು ಕಂಡ ತಕ್ಷಣವೇ ನೀನು ಅವರಲ್ಲಿಗೆ ಹೋಗಿ ವಂದನಪೂರ್ವಕವಾಗಿ ಇನ್ನೂ 9 ತಿಂಗಳ ಕಾಲ ನೀವೇ ನನ್ನನ್ನು ಅನ್ನ ಹಾಕಿ ಸಂರಕ್ಷಿಸಬೇಕೆಂದೂ ಇತರ ಖರ್ಚುಗಳನ್ನು ಹೇಗಾದರೂ ಒದಗಿಸಿಕೊಳ್ಳುತ್ತೇನೆಂದೂ ಇರುವ ವಾರಗಳೂ 4 ಕೂಡ 1½ - 2 ಮೈಲಿ ದೂರದಲ್ಲಿರುವದರಿಂದ ಅಶನಾರ್ಥಿಯಾಗಿಯೇ ಇರಬೇಕಾಗುವದೇ ವಿನ ವಿದ್ಯಾರ್ಥಿಯಾಗಿರಲಾಗುತ್ತಿಲ್ಲವೆಂದೂ ನಮಸ್ಕರಿಸು. ದೇವರು ಮಾಡಿದಂತಾಗಲಿ. ಅವರು ಏನು ಅಪ್ಪಣೆ ಕೊಡಿಸುವರೊ ತಕ್ಷಣ ನನಗೆ ಬರಿ. ಅವರಿಂದಲೂ ನನಗೆ ಉತ್ತರ ಬರಬಹುದು. ನಂತರ ಯೋಚಿಸೋಣ. ನಿನ್ನ ಉತ್ತರವು ಬುಧವಾರ ಸಾಯಂಕಾಲವೇ ನನಗೆ ಬರಬೇಕು. ನಂತರ ನಾನು ಮುಂದಣ ವಿಚಾರ ತಿಳಿಸುತ್ತೇನೆ. ಇದರ ಸಂಗತಿಗಳನ್ನು ಇತರರಲ್ಲಿ ಪ್ರಸ್ತಾಪಿಸಬೇಡ. ಇದು ಇತ್ಯರ್ಥವಾಗುವವರಿಗೆ ಹ್ಯಾಗೊ ಮೊದಲಿನಂತೆ ಕಾಲ ಕಳಿ. ಇಷ್ಟರಲ್ಲೇ ಮ। ನಾರಾಯಣರಾಯರಿಂದ ಉತ್ತರ ಬಂದರೆ ಅದರ ಫಲಿತಾಂಶವನ್ನು ತಿಳಿಸು. ನಿನ್ನ ಉತ್ತರವನ್ನೇ ಎದುರು ನೋಡುತ್ತಿದೇನೆ. ನಾನು ಈ ದಿನ ಬೇಡಿಗರಹಳ್ಳಿಯ ಸ್ಕೂಲ್ ಛಾರ್ಜು ವಹಿಸುತ್ತೇನೆ. ನಾನು ಅಲ್ಲಿಗೆ ಬರಬೇಕಾದ ಸಂಭವವಿದ್ದರೆ ನಿನ್ನ ಉತ್ತರ ನೋಡಿ ಗುರುವಾರ ಹೊರಟರಾಗುತ್ತೆ. ಯಾವದನ್ನೂ ನಾನು ಹೇಳಿದಂತೆ ನಡಿಸು. ವ್ಯತ್ಯಾಸ ಬಂದರೆ ನಿನ್ನ ಮುಖಾವಲೋಕನ ಮಾಡಲಾರೆ. ಖಂಡಿತ. ಅದರಲ್ಲಿ ನಮಗೇನೂ ಅವಮಾನವಿಲ್ಲ. ನಾವು ದರಿದ್ರರೆಂಬುದನ್ನು ಎಲ್ಲರೂ ತಿಳಿದೇ ಇದಾರೆ...

೨೪೫

ಕಾವೇರಿ ಪ್ರವಾಹ (ವ್ಯಾಸಂಗಾನುಕೂಲದ ಜಿಜ್ಞಾಸೆ. ತಂದೆಯ ಕಾರ್ಡು)

ಕುಶಲಂ ಶ್ರೀರಾಮ 26-7-24

ಚಿ॥ ಗೆ ಆಶೀರ್ವಾದಗಳು. ಉ.ಕು.ಸಂ. ನಿನ್ನ ತಾ. 21ರ ಕಾರ್ಡು ತಲಪಿತು. ತೀ॥ರ ಕೈಯಲ್ಲಿ ನಿನ್ನದಂತೂ ಕೇಳಿದೆನು. ಕೆಲವು ಪಾಠಪುಸ್ತಕಗಳು ನವರಾತ್ರೆಯಾದ ಮೇಲೆ ಪ್ರಾರಂಭವಾಗುವದಾಗಿಯೂ ಅವನ್ನು ಆಗ್ಯೆ ಮಾಡಿಕೊಡುತ್ತೇನೆಂದೂ ಸಧ್ಯದಲ್ಲಿ ಆಗಿಯೇ ತೀರಬೇಕೆಂಬುವನ್ನು ಮಾತ್ರ ತೆಗೆದುಕೊಳ್ಳಲೆಂದೂ ಹೇಳಿದರು. ಆ ರೀತಿ ಮಾಡು. ಸಧ್ಯದಲ್ಲಿ ಮೊಬಲಗು ಕಳುಹುವೆನು. ಅವಶ್ಯವಾಗಿ ಆಗಲೇಬೇಕಾದುವನ್ನು ಕೊಂಡುಕೊ. ಹೊಟೇಲಿಗೆ ಸೇರಿದರೆ ಹೆಚ್ಚು ಖರ್ಚಾಗುತ್ತೇನೋ ನಿಜ. ಅಡಿಗೆಗೆ ಕೂತರೆ ಕಾಲವು ಹೆಚ್ಚು ಹಾಳಾಗುವುದು. ನಿರ್ಯೋಚನೆಯಾಗಿರದು. ಆತಂಕದಿಂದ ವ್ಯಾಸಂಗಕ್ಕೆ ಭಂಗವು. ಇದು ಹೀಗಿರಲಾಗಿ ನಿನಗೆ ಟೈಮಿಗೆ ನಷ್ಟವಾಗದಂತೆ ಇತರರ ಸಹಾಯದಿಂದ ಅಡಿಗೆಯಾಗುತ್ತಿದೆಯೆ ? ಸಾರು ಹುಳಿಗಳಿಗೆ ಏನು ಏರ್ಪಾಡು ಮಾಡಿಕೊಂಡಿದ್ದೀಯೆ? ಬರಿ. ವಾರಕ್ಕೊಮ್ಮೆ ಹೊಟೇಲಿನಲ್ಲಾದರೂ ಖಂಡಿತವಾಗಿ ಅಭ್ಯಂಗನ ಮಾಡು. ಉದಾಸೀನ ಮಾಡಿದರೆ ದೇಹಾರೋಗ್ಯ ಕೆಟ್ಟು ವ್ಯಾಸಂಗಕ್ಕೆ ಭಂಗ ಬರಬಹುದು. ಈಗ ಯಾರ್‍ಯಾರ ಮನೆಗಳಲ್ಲಿ ವಾರಗಳಿವೆ ? ನೀನೇ ಸ್ವಂತವಾಗಿ ಅಡಿಗೆ ಮಾಡಿಕೊಳ್ಳುತ್ತಾ ಕೂತರೆ ಬಹಳ ತೊಂದರೆಯಾಗುತ್ತೆ. ಇನ್ನು ಮುಂದೆಯಾದರೂ ನೀನು ಕಾಗದಗಳನ್ನು ಇಂಕಿನಲ್ಲಿ ಬರೆ. ತೀ॥ ಅಜ್ಜಯ್ಯನವರು ಇನ್ನು ಅನುಕೂಲವಾಗದೆಂದು ಹೇಳಿದರೆಂದು ಬರೆದಿದ್ದೆ. ಯಾವ ವಿಚಾರದಲ್ಲಿ ? ವಾರದ ವಿಚಾರದಲ್ಲೆ ? ಸ್ವಂತ ಮನೆಯಲ್ಲಿಯೇ ಅನ್ನ ಹಾಕಿಟ್ಟುಕೊಂಡು ಪೋಷಿಸುವ ವಿಚಾರದಲ್ಲೆ ? ಫೀಜಿನ ವಿಚಾರದಲ್ಲೆ ? ಈ ಬಗ್ಯೂ ನಿನ್ನ ಕಾಗದಗಳ ಫಲಿತಾಂಶಗಳ ಬಗ್ಯೂ ಬರಿ. ತೀ. A. ಕೇಶವಯ್ಯನವರು ಮೈಸೂರಿಗೆ ಹೋಗಿದಾರೆ. ಅವರನ್ನು ಕಂಡು ಸಂಕೋಚಪಡದೆ ದ್ರವ್ಯ ಮೂಲ್ಕ ಫೀಜಿಗೆ ಸಹಾಯ ಕೊಡಬೇಕೆಂದು ಕೇಳಿಕೊ. ...ನಾನು ಏಕಾಂಗಿಯಾಗಿ ಹೆತ್ತೇಗೌಡ್ನಹಳ್ಳಿಯಲ್ಲಿದೇನೆ. ನಾನು ಅಲ್ಲಿಗೆ ಬರಲೇಬೇಕಾದ ಅವಶ್ಯಕವಿದ್ದರೆ ಬರಿ. ಬರುತ್ತೇನೆ. ವೃಥಾ ತಿರುಗಿಸಬೇಡ. ಮಳೀ ದೆಸೆಯಿಂದ ನೀರು ಹೆಚ್ಚಿ ರಾಮನಾಥಪುರದ ಕೈಮರವು ಮುಳುಗಿ ಹೋಗಿತ್ತು. ಅನೇಕ ಮನೆಗಳೂ ಉರುಳಿದವು. ಯಿಂದೆ ಹೆ. ಹಳ್ಳಿಯಿಂದಲೂ ಹೊರಡಬೇಕಾಗಬಹುದೆಂಬ ಊಹೆ ಇದೆ. ನೋಡಬೇಕು...ಕೊಠಡಿಯಲ್ಲಿ ಗಲಾಟೆಗೆ ಅವಕಾಶವಾಗದಂತೆ ನಿರಾತಂಕವಾಗಿ ವ್ಯಾಸಂಗ ಮಾಡಲು ಯತ್ನ ಮಾಡು. ಆಶೀಃ. ಹುಡುಗರು ಹೆಚ್ಚಾಗಿ ಸೇರಿದರೆ ಗಲಾಟೆಯಾಗಿ ವ್ಯಾಸಂಗಕ್ಕೆ ತೊಂದರೆ ಬರುವುದು. ಆಶೀಃ.

೨೪೬

ದ್ರವ್ಯಧ್ವಂಸ ಮಾಡಬೇಡ (ವಾರಕ್ಕಾಗಿ ಪರದಾಟ ; ತಂದೆಯ ಕಾರ್ಡು)

ಕುಶಲಂ ಶ್ರೀ 25-8-24

...ನಿನ್ನ ಕಾರ್ಡು ತಲಪಿತು...ರವರನ್ನು ಅವರ ಮನೆಗೇ ಹೋಗಿ ಕಾಣು. ನಿನ್ನ ಉದಾಸೀನದಿಂದ ಕಾರ್ಯವಾಗುವುದಿಲ್ಲ. ಎಲ್ಲಾ ವಾರಗಳನ್ನೂ ಸರ್ವ ಪ್ರಯತ್ನದಿಂದಲೂ ಒಂಟಿಕೊಪ್ಪಲಿನಲ್ಲಿಯೇ ಮಾಡಿಕೊಳ್ಳಬೇಕು. ಸೋಮಾರಿತನವನ್ನೂ ಮೊಖ ಹೇಡಿತನವನ್ನೂ ಬಿಟ್ಟು ಪ್ರಯತ್ನ ಮಾಡು. ಆಗುತ್ತೆ. ಮೊದಲೇ ಪ್ರಯತ್ನ ಮಾಡಿದ್ದರೂ ಆಗುತ್ತಿತ್ತು. ನಿನ್ನ ಸೋಮಾರಿತನವು ಇಷ್ಟಕ್ಕೆಲ್ಲಾ ಕಾರಣವಾಯ್ತು. ಈಗಲಾದರೂ ಚಟುವಟಿಕೆಯಿಂದ ಕೆಲಸ ಮಾಡಿ ಒಂಟಿಕೊಪ್ಪಲಿನಲ್ಲಿಯೇ ವಾರಗಳನ್ನೂ ಮಾಡಿಕೊಳ್ಳುವಿಯಾಗಿ ನಂಬಿದೇನೆ. ಹಾಗಿಲ್ಲದೆ 3-4 ವಾರಗಳಲ್ಲಿ ಪರ್ಯವಸಾನವಾದರೆ ಈ ಮೊದಲಲ್ಲಿದ್ದ ಶಿಕ್ಷೆಯೇ ಆಯ್ತು. ಈಗಿರುವ ವಾರಗಳನ್ನೂ ಒಂಟಿಕೊಪ್ಪಲಿನ ವಾರಗಳನ್ನೂ ಇಟ್ಟುಕೊಂಡರೆ ನಿನಗೆ ತಿರುಗುವುದರಲ್ಲಿಯೇ ಕಾಲ ಕಳೆಯುತ್ತೆಯೇ ಹೊರ್‍ತು ವ್ಯಾಸಂಗವಾಗುವದಿಲ್ಲ. ಒಟ್ಟಿನಲ್ಲಿ ಎಲ್ಲಾ ವಾರಗಳೂ ಯಾವದಾದರೂ ಒಂದೇ ಕಡೆಯಲ್ಲಿ ಆಗಬೇಕೇ ವಿನಾ 4 ಕಡೆಗಳಲ್ಲೂ ಆದರೆ ಉಪಯೋಗವಿಲ್ಲ. ಒಂಟಿಕೊಪ್ಪಲಲ್ಲಿಯಾಗಲಿ ಈಗಿರುವ ಕಡೆಯಲ್ಲಾಗಲಿ ಒಂದು ವೇಳೆ 5-6 ವಾರಗಳಾದರೆ ಬಾಕಿ 1-2 ವಾರ ಹೋಟೆಲಿನಲ್ಲೇ ಊಟ ಮಾಡು. ಅಡಿಗೆ ಬ್ಯಾಡ. ದುಡ್ಡು ಖರ್ಚಾದರಾಗಲಿ. ಈಗಿರುವ ಹಿಂದಣ ವಾರಗಳಲ್ಲಿ 4 ಅಥವ 5 ವಾರಗಳಾಗಿದ್ದರೆ ಚಿ॥ ಸೀತಾರಾಮಯ್ಯನನ್ನು ಹೋಗಿ ಕೇಳಿಕೊ. 1 ವಾರ ಕೊಡುತ್ತಾನೆ...ವೇ॥ ತಿಪ್ಪಯ್ಯಾವಧಾನಿಗಳ ಸಹಾಯದಿಂದ... ಮೊಖಹೇಡಿತನಗಳಿಂದ ದ್ರವ್ಯಧ್ವಂಸ ಮಾಡಬೇಡ...ಸರ್ವ ಪ್ರಯತ್ನದಿಂದಲೂ ವ್ಯಾಸಂಗಕ್ಕೆ ಟೈಂ ಹೆಚ್ಚಾಗಿ ಉಪಯೋಗಿಸಬೇಕೇ ವಿನಾ ಊಟಕ್ಕೆ ಕೂಡದು. ಫಲಿತಾಂಶವನ್ನು ತಿಳುಹು. ಆಶೀಃ.

೨೪೭

ಮಂತ್ರ ಹೇಳಿಸಿ (ತಂದೆಗೆ ಪುತ್ರನ ಕವರು)

ಕುಶಲ ಶ್ರೀರಾಮ 5-7-25

ತೀ॥ ರವರ ಚರಣಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ವಿಜ್ಞಾಪನೆಗಳು. ಅದಾಗಿ ಈವರಿಗೆ ಉಭಯಕುಶಲ ಸಂಪ್ರತಿ.

ಈಗ ನಮ್ಮ ಸ್ಕೂಲಿನಲ್ಲಿ ಹುಡಗರೆಲ್ಲಾ ಹನ್ನೆರಡು ರೂಪಾಯಿಗಳನ್ನು ಏಕಕಾಲದಲ್ಲಿ ಕೊಡಲಾಗುವುದಿಲ್ಲವೆಂದು ಗಲಾಟೆ ಮಾಡಲು ಈಗ ಆರು ರೂಪಾಯಿಗಳನ್ನು ಮಾತ್ರ ಕೊಡುವುದೆಂದೂ ಮುಂದಿನ ಸಾರಿ ಆರು ರೂಪಾಯಿಗಳನ್ನು

ಕೊಡುವುದೆಂದೂ ಹೇಳಿದರು. ಚಿ||...ನ ವಿಚಾರದಲ್ಲಿ ಏನು ಆಲೋಚನೆ ಮಾಡಿರುತ್ತೀರಿ. ಶೀ|| ಸುಬ್ರಹ್ಮಣ್ಯಶಾಸ್ತ್ರಿಗಳವರಲ್ಲಿ ಒಂದು ರಘುವಂಶವೂ ಭಂಡಾರ್ಕರಿನ ಟ್ರಾನ್ಸ್‌ಲೇಷನ್ ಎಕ್ಸರ್‌ಸೈಸ್ ಪುಸ್ತಕಗಳೂ ಇವೆ. ಅವನ್ನು ತೆಗೆದಿಟ್ಟುಕೊಳ್ಳುವುದು. ನಾನು ಇಲ್ಲಿ ಒಂದು ಪ್ರಥಮ ಭಂಡಾರ್ಕರನ್ನೂ ಒಂದು ದ್ವಿತೀಯ ಭಂಡಾರ್ಕರನ್ನೂ ತೆಗೆದುಕೊಳ್ಳಬೇಕೆಂದಿದ್ದೇನೆ. ಕ್ರಯ ವಿಚಾರಿಸಿಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು ? ಈ ಸಾರಿ ಚಿ||ಯನ್ನು ಕಳುಹಿಸುವ ಯೋಚನೆ ಇದ್ದಲ್ಲಿ ಬಹು ತ್ವರೆ ಮಾಡಿ. ಹಾಗಿಲ್ಲದಿದ್ದಲ್ಲಿ ಶೀ|| ಸುಬ್ರಹ್ಮಣ್ಯಶಾಸ್ತ್ರಿಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೂ ಕೆಲವು ಉಪಯುಕ್ತ ಮಂತ್ರಗಳನ್ನು ಹೇಳಿಸಲೂ ಹಿತವೆಂದು ತೋರುತ್ತದೆ. ಅವನನ್ನು ಇಲ್ಲಿಗೆ ಕಳುಹಿಸುವ ಯೋಚನೆಯನ್ನು ಮೊದಲೇ ಮಾಡದುದಕ್ಕಾಗಿ ಬಹಳ ವಿಷಾದಿಸುತ್ತೇನೆ. ಚಿಂತಿಸಿ ಫಲವಿಲ್ಲಾ. ವೃಥಾ ಒಂದು ವರ್ಷ ಕಾಲಯಾಪನೆ ಮಾಡಬೇಕಾಯಿತೆಂದು ಬಹಳ ವ್ಯಸನವಾಗುತ್ತಿದೆ. ಒಂದು ವೇಳೆ ಊರಲ್ಲಿಯೇ ಇರುವ ಯೋಚನೆಯನ್ನು ಮಾಡಿದರೂ ಇಂಗ್ಲಿಷ್ ಜನರಲ್ ಪುಸ್ತಕಗಳನ್ನು ನೀವಾದರೂ ಕಡ್ಡಾಯದಿಂದ ಓದಿಸಬೇಕು. ಈ ವರ್ಷ ಫೇಲಾದ ಹುಡುಗರು ತಮ್ಮ ಸ್ಕೂಲಿನ ಹೆಡ್ಮಾಸ್ಟರವರಿಂದ ಉತ್ತಮವಾದ ಸರ್ಟಿಫಿಕೇಟುಗಳನ್ನು ತಂದು ಇಲ್ಲಿ ಇಂಗ್ಲಿಷಿನಲ್ಲಿಯೂ ಗಣಿತದಲ್ಲಿಯೂ ನಡೆಯುವ ಪರೀಕ್ಷೆಯಲ್ಲಿ ಪಾಸಾದರೆ, ಫೋರ್ತ್ ಫಾರಮ್ಮಿಗೆ ಸೇರಿಸಿಕೊಳ್ಳುತ್ತಿರುವಾಗ, ಪ್ಯಾಸಾಗಿ ಸುಮ್ಮನಿರ ಬೇಕೆಂದರೆ ಬಹು ಕಷ್ಟ. ಈಗ ನೀವು ರುದ್ರಪಟ್ಟಣಕ್ಕೆ ಹೋಗುವ ವಿಚಾರದಲ್ಲಿ ಮಾಡಿಕೊಂಡಿರುವ ಏರ್ಪಾಟೇನು ? ಮನೆಯಲ್ಲಿ, ರುದ್ರಪಟ್ಟಣದಲ್ಲಿ, ವಿಠಲಾಪುರದಲ್ಲಿ ಸರ್ವರೂ ಕ್ಷೇಮವೆ? ನೀವು ಶ್ರೀನಿವಾಸಯ್ಯನ ಕೂಡಾ ಕಳುಹಿಸಿದ ಹತ್ತು ರೂಪಾಯಿಗಳೂ ಆಶೀಃ ಪತ್ರಿಕೆಯೂ ತಲಪಿದವು.

ಇಲ್ಲಿ ಶೀ|| ಅಜ್ಜಯ್ಯನವರು ಮತ್ತು ಅಜ್ಜಿಯವರು ಎಲ್ಲರೂ ತುರುವೇಕೆರೆಗೆ ಹೋಗಿರುತ್ತಾರೆ. ನಾನೂ ಆರೋಗ್ಯವಾಗಿದ್ದೇನೆ. ನಾನು ಹಿಂದೆ ಬರೆದಿರುವ ಕಾಗದದ ಅಭಿಪ್ರಾಯಗಳೆಲ್ಲಾ ತಿಳಿದಿರಬಹುದು. ಪುನಃ ಬರೆಯಬೇಕಾದವಶ್ಯಕತೆ ಕಾಣುವುದಿಲ್ಲ. ಈ ವರ್ಷ ಫೀಸು 24 ರೂ.ಗಳು, ಊಟಕ್ಕೆ 60 ರೂ.ಗಳು ಪುಸ್ತಕಗಳು 6.7 ರೂ.ಗಳು ಇಷ್ಟು ಖರ್ಚು ಒಟ್ಟಿಗೆ ಕಾಣುತ್ತಿವೆ. ಕೇಶವಯ್ಯನನ್ನು ನಾನು ಈವರೆಗೂ ಕಂಡಿಲ್ಲ. ಇನ್ನೇನೂ ವಿಶೇಷವಿಲ್ಲಾ. ಇಲ್ಲಿಂದ ಮುಂದಿನ ಖರ್ಚಿನ ತಪಸೀಲನ್ನು ನಿಧಾನವಾಗಿ ಕಳುಹಿಸುತ್ತೇನೆ. ಯಾವುದಕ್ಕೂ ಆಶೀಃ ಪತ್ರಿಕಾ ಅಷ್ಟಾಕೆ ಕೊಡಿಸಬೇಕಾಗಿ ಪ್ರಾರ್ಥನೆ. ನಮಗೆ ಬೆಳಿಗ್ಗೆ 8 ರಿಂದ 10 ರವರೆಗೂ ಮಧ್ಯಾಹ್ನ 5 ರಿಂದ 6 ರವರೆಗೂ ಕ್ಲಾಸು ನಡೆಯುತ್ತೆ.

ಇತಿ ಸಾ|| ವಿಜ್ಞಾಪನೆಗಳು

ನಾನು ಹಾಸನದ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರವರ ಆಫೀಸಿಗೆ ಸುಮ್ಮನೆ ಒಂದು ಅಪ್ಲಿಕೇಷನ್ ಹಾಕಿ ಊರಿನ ಅಡ್ರೆಸ್ಸು ಕೊಟ್ಟಿದ್ದೆ ಏನಾದರೂ ಬಂತೆ ! ಉತ್ತರ ಬಂದರೂ ನಾನು ಹೋಗುವಂತಿಲ್ಲ.

ಇತಿ ವಿಜ್ಞಾಪನೆಗಳು.

ನಾನು ವಿಠಲಾಪುರಕ್ಕೆ ಆಗಿಂದಾಗ್ಗೆ ಕಾಗದ ಬರೆಯುತ್ತಿರಲೆ ? ಅಥವಾ ಬೇಕಿಲ್ಲವೆ ?

Your's most obedient

ತಾ. 17-6-25 ರಿಂದ 5-7-25 ರವರೆಗೆ

ತಾರೀಕು	ಜಮಾಖರ್ಚು ತಪ್ಸೀಲ್ ಸಹ	ಮೊಬಲಗು
29-6-25	ಹದಿನೈದು ರೂಪಾಯಿಗಳು ಮಣಿಯಾರ್ಡರು	15-0-0
17-6-25	ನಾನು ಊರಿಂದ ಬರುವಾಗ	12-0-0
29-6-25	S.B. ಯಿಂದಾ	4-0-0
4-7-25	ಶ್ರೀನಿವಾಸಯ್ಯನ ಕೂಡಾ ಕಳುಹಿಸಿದ್ದು	10-0-0
ಜುಮ್ಲಾ ಜಮಾ ನಲ್ವತ್ತೊಂದು ರೂಪಾಯಿಗಳು		Rs 41-00

ಖರ್ಚಿನ ವಿವರ

S.B. ಯಲ್ಲಿ ಹಾಲಿ ಹದಿನಾರು (Rs 16-0-0) ರೂಪಾಯಿಗಳಿವೆ.
ಜಾತಾ ಬಾಕಿ ಇಪ್ಪತ್ತೈದು ರೂಪಾಯಿಗಳು (25-0-0)

3-7-25	ಸ್ಕೂಲಿನ ಫೀಸಿಗಾಗಿ (ಅರ್ಧ ಟರ್ಮಿನದು)	6-0-0
20-6-25	ಹೋಟೇಲಿಗೆ ಊಟಕ್ಕಾಗಿ	6-0-0
30-6-25	ಅನ್ನ ತರುವ ಪಾತ್ರೆಗಾಗಿ	3-12-6
"	ಈಗ ತೆಗೆದುಕೊಂಡಿರುವ ಟೆಕ್ಸ್ಟ್ ಪುಸ್ತಕಗಳಿಗಾಗಿ	3-8-0
18-6-25	ಕವರು ಕಾರ್ಡುಗಳಿಗಾಗಿ	0-3-0
1-7-25	ಸಾಬೂನು, ಬೀಗದ ಕೈ, ಹುರಿ ಇವುಗಳಿಂದ	0-4-3
17-6-25	ರೈಲ್ವೆ ಛಾರ್ಜು, ಚಾಕು ರಿಪೇರಿ ಮಾಡಿಸಿದ್ದು	9+2+2+5
	ಆಯುಷ್ಕರ್ಮ ಮತ್ತು ಚಾಪೆ	1-2-0
ಈ ಪರ್ಯಂತ ಹೋಟೇಲಿನಲ್ಲಿ ತಿಂಡಿಗಾಗಿ		0-2-6
2-7-25	ಏಕಾದಶಿಯ ದಿನ ಸ್ವಾಮಿ ಸೇವೆಗಾಗಿ ಮತ್ತು ಫಲಾಹಾರದ ಖರ್ಚಿಗಾಗಿ	0-7-3

27-6-25	ಲ್ಯಾಂಪಿನ ಬತ್ತಿ ಹಗ್ಗ,	0-3-7
	ಬೆಂಕಿ ಕಡ್ಡಿ ಪಟ್ಟಣ ಮತ್ತು	
	ಪೋಸ್ಟ್‌ಮ್ಯಾನ್‌ಗಾಗಿ	
	ಜುಮ್ಲಾ ಖರ್ಚು	Rs 21-11-1

ಜಾತಾ ಬಾಕಿ ನಗದು ಮೂರು ರೂಪಾಯಿ ನಾಲ್ಕಾಣಾ ಹನ್ನೊಂದು ಕಾಸುಗಳು (Rs 3-4-11) ಇರುತ್ತವೆ. ಇದು ತಾ. 5-7-25ರಲ್ಲಿ ಎತ್ತಿದ ನಕಲು

೨೪೮

'ಬಾಲಬೋಧಿನಿ' ಬೇಕು (ಶಾಲಾಬಾಲಕನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀರಾಮವಿರಹಿ 5.3.26

ಆಶೀಃ ಉ.ಕು.ಸಂ. ನೀನು ಬರುವಾಗ ಚಿ. ಮೂರ್ತಿಗಾಗಿ ಕನ್ನಡ ಅಕ್ಷರದ ಸಂಸ್ಕೃತ ಬಾಲಬೋಧಿನಿ 1ನ್ನು ತರುವುದು (ಎಲ್ಲವೂ ಕನ್ನಡ ಅಕ್ಷರವೇ). ಟ್ರಾನ್ಸ್‌ಲೇಷನ್ನಿಗಿದೆ. ಅದು ಪುಟ್ಟಪರ್ತಿ ಶೇಷಾಚಾರ್‍ಯರಿಂದ ರಚಿತವಾಗಿ ಪಂಡಿತ K.S. ಚಕ್ರವರ್ತಿಗಳಲ್ಲಿ ದೊರೆಯುತ್ತೆ. ಪ್ರಾರಂಭ ಅಥವ ದ್ವಿತೀಯ ಪಾಠದಲ್ಲಿ ಶಿರಃ-ತಲೆಯು ಈ ಮೇರೆ ಇದೆ. ಅಲ್ಲದೆ ಎ. ರಾಮಣ್ಣನವರ ಮಕ್ಕಳು ಪಂಚಾಂಗವನ್ನು ಧರ್ಮಾರ್ಥವಾಗಿ ಕೊಡುತ್ತಾರೆ. ಕೇಳಿ ತರುವದು. ಅಲ್ಲದೆ 1 ಸೇರು ಹಸನಾದ ಜಡೆ ಹತ್ತಿಯನ್ನು ಯಜ್ಞೋಪವೀತಕ್ಕಾಗಿ ತರುವದು. ದುಡ್ಡು ಸಾಲದೆ ಬರುವದಾದಲ್ಲಿ ಅಲ್ಲಿ ಈ ಕಡೆ ಬರುವರೊಡನೆ ಸಾಲ ತೆಗೆದಿರುವದು. ಬಂದಾಗ ಕೊಡೋಣ. ಹೇಗೋ ಕಾರ್ಯಗಳು ನಿರ್ವಾಹವಾಗಲೇಬೇಕು. ಸಂಸ್ಕೃತ ಬಾಲಬೋಧಿನಿಯು ಅತ್ಯವಶ್ಯಕವಾದುದು. ಹೆಚ್ಚಿಗೆ ಪುಸ್ತಕಗಳನ್ನೂ ಸಾಧ್ಯವಾದಷ್ಟು ತರುವದು. ಸಂ.ಬಾ.ಗೆ ಕ್ರಯವು 0-8-0 ಆಗಬಹುದು. ಹೊರಡುವ ಮುನ್ನಾದಿವಸವೇ ತಿಪ್ಪಯ್ಯಾವಧಾನಿಗಳನ್ನು ಕಂಡು ಊರಿಗೆ ಹೋಗಿ ಬರುತ್ತೇನೆಂದು ಹೇಳಿ ವಂದಿಸುವುದು. ನಿನ್ನ ಭಾವನವರು ಇನ್ನೂ ಇಲ್ಲೇ ಇದಾರೆ. ನಾಳೆ ನಾಡಿದ್ದು ಹೊರಡಬಹುದು. ಬಾಕಿ ವಿಚಾರ ಮುಖತಃ ತಿಳಿಯುತ್ತೆ. ಇಂತು ಆಶೀರ್ವಾದಗಳು. ಇವನ್ನು ಮುಂಚೆಯೇ (3 ದಿವಸ) ತೆಗೆದಿಡುವದು.

ಆಶೀಃ

ವಿಳಾಸ

ಮೈಸೂರಿಗೆ

ಶಿವರಾಮಪೇಟೆ K. ರಾಮಯ್ಯನವರ ಬೀದಿ ಶೇಷಣ್ಣನವರ ಸ್ಟೂಡೆಂಟ್ಸ್ ಲಾಡ್ಜ್‌ನಲ್ಲಿರುವ ಚಿ। R.S. ಕುಮಾರಸ್ವಾಮಿಗೆ.

೨೪೯

ಗೌರವಯುಕ್ತ ಸಜಾ (ರಾಮಕೃಷ್ಣ ಸ್ಟೂಡೆಂಟ್ ಹೋಂ)

ಕುಶಲಂ ಶ್ರೀರಾಮ 26-7-26

ಬೆಂಗಳೂರು

...ಪ್ರಕೃತದಲ್ಲಿ ರಾಮಕೃಷ್ಣಹೋಂನ ವಿಧಿಯಂತೆ ಹೊರಗೆ ಹೋಗುವುದಕ್ಕೆ ಆಗುವುದಿಲ್ಲ. ಇಲ್ಲಿ ಪ್ರತಿಯೊಬ್ಬರೂ 5 ಗಂಟೆಗೆದ್ದು 7 ಘಂ. ಒಳಗಾಗಿ ಸ್ನಾನ ಸಂಧ್ಯಾವಂದನಾದಿಗಳನ್ನು ಮುಗಿಸಬೇಕು. ಆಮೇಲೆ 9 $^{1}/_{2}$ ಯವರೆಗೆ ಎಲ್ಲಿಯೂ ಹೋಗುವುದಕ್ಕಿಲ್ಲ. ಅನಂತರ ಊಟ ಮಾಡಿಕೊಂಡು ಕ್ಲಾಸಿಗೆ ಹೋಗಬೇಕು. ರಜಾದಿನಗಳಾದರೆ ಪೂರ್ತಾ ಮನೆಯಲ್ಲಿಯೇ ಇರಬೇಕು. ಆದರೆ 4-5 ಘಂ.ವರೆಗೆ ಪುರಸತ್ತು. ಇಲ್ಲಿ 5 ಘಂ. ಮೇಲೆ ಪ್ರತಿಯೊಬ್ಬರೂ ವಾಲಿಬಾಲ್ ಎಂಬ ಆಟವನ್ನು ಆಡಲೇಬೇಕು. 7 ಘಂ. ಆಯಿತೆಂದರೆ ರಾಮಕೃಷ್ಣಾಶ್ರಮಕ್ಕೆ ಸ್ತೋತ್ರಪಾಠಕ್ಕೆ ಹೋಗಬೇಕು. ಬರುವುದು 7 $^{1}/_{2}$ ಆಗುತ್ತದೆ. ಆಮೇಲೆ ಇನ್ನೆಲ್ಲಿಯೂ ಹೋಗುವುದಕ್ಕೆ ಅವಕಾಶವಿಲ್ಲ. ರಾತ್ರಿಯಂತೂ ಇಲ್ಲಿಯೇ ಮಲಗಿಯೇ ತೀರಬೇಕು. ಹಾಗೆ ಇಲ್ಲಿ ಮಲಗದೆ ಹೋದರೆ ಅವನ ಸೀಟಿಗೆ ಸ್ವಲ್ಪ ಯೋಚನೆಯಾಗುತ್ತದೆ. ಆದುದರಿಂದ ಎಲ್ಲಿಯೂ ಹೊರಗೆ ಹೋಗುವುದಕ್ಕೆ ಅವಕಾಶವಿಲ್ಲ. ಒಟ್ಟಿನಲ್ಲಿ ಸ್ವಲ್ಪ ಗೌರವಯುಕ್ತವಾದ ಸಜಾ ಎಂದರೂ ಸಲ್ಲುವುದು. ಮುಖ್ಯವಾಗಿ ವಿದ್ಯಾರ್ಥಿಗಳು ದುರ್ನಡತೆಗೆ ಬೀಳದಿರಲು ಎಷ್ಟೋ ಅಷ್ಟು ಇದೆ. ಇಲ್ಲಿ ಸೆಕ್ರೆಟರಿ, ವಾರ್ಡನ್ ಮತ್ತು ಎಜ್ಯುಕೇಷನಲ್ ಸೂಪರ್‌ವೈಸರ್ ಎಂದು ಮೂರು ಜನಗಳು ನಮ್ಮ ಮೇಲೆ ಕಾವಲಿದ್ದಾರೆ.

ಇಲ್ಲಿ...ನನ್ನು ವಿಚಾರಿಸಿದುದರಲ್ಲಿ ಒಂದೊಂದು ವರ್ಷ ನಡೆಯುವುದೇ ಬಹು ಕಷ್ಟವಾಗುತ್ತದೆ. ಅದಲ್ಲದೆ ಯಾವುದಾದರೂ ಒಂದು ಡಿಗ್ರಿಗೆ ಆರಂಭಿಸಿದ ಮೇಲೆ ಅದನ್ನು ಮುಂದುವರಿಸಬೇಕೇ ವಿನಾ ಬೇರೆ ಹೋಗುವುದಕ್ಕೆ ಅವಕಾಶವಿಲ್ಲ ಎಂದು ತಿಳಿಯಬಂತು. ಈ ಸಲ ಸೀಟು ಕೊಟ್ಟಿರುವವನೊಬ್ಬನಿಗೆ ಮುಂದಿನ ಸಲವೂ ಕೊಟ್ಟೇ ಕೊಡುತ್ತಾರೆಂಬ ನಿರ್ಣಯವಿಲ್ಲ. ಇನ್ನೂ ಕೆಲವು ಕಾಲ ಯೋಚಿಸಿ ನೋಡೋಣ. ಕಾಲಕ್ರಮೇಣ ಸಾಧ್ಯವಾದರೆ ಗೋಪಾಲಸ್ವಾಮಿ ಅಯ್ಯಂಗಾರ್ಯರವರನ್ನೇ ಕೇಳಿ ನೋಡುವೆನು. ಇಲ್ಲಿ ವಾಜಪೇಯಂ ಸ್ಕಾಲರ್‌ಷಿಪ್ ಎಂಬುದೊಂದಿದೆ. ಇದು ತಿಂಗಳಿಗೆ 5 ರೂ. ಇದು ಬಡ ವಿದ್ಯಾರ್ಥಿಗಳಿಗೆ ಮಾತ್ರ. ಅಪ್ಲಿಕೇಷ್ಞ ಹಾಕಿದ್ದೇನೆ. ದೈವಾನುಗ್ರಹದಿಂದ ಇದೊಂದು ಅನುಕೂಲವಾದರೆ ನಿರಾತಂಕವಾಗುವುದು. ಸಧ್ಯದಲ್ಲೇ ಇತ್ಯರ್ಥವಾಗುತ್ತದೆ...ಇಲ್ಲಿ ಅಭ್ಯಂಗನಕ್ಕೆ ಏರ್ಪಾಡು ಮಾಡಿರುತ್ತಾರೆ, 15 ದಿನಗಳಿಗೊಂದು ಸಲ. ಇಲ್ಲಿ ಅಡಿಗೆಯವನು ಸಧ್ಯಕ್ಕೆ ಒಬ್ಬ ಉಡುಪಿಯ ಬ್ರಾಹ್ಮಣ. ಅಡಿಗೆಯವನು ಈ ಮತದವನೇ ಆ ಮತದವನೇ ಆಗಬೇಕೆಂಬ ನಿಯಮವಿಲ್ಲ...

೨೫೦

ಪುನಃ ದೇವಾಸ್‌ಗೆ ಬರಿ (ಮಗನಿಗೆ ತಂದೆಯ ಪತ್ರ)

ಕುಶಲಂ ಶ್ರೀರಾಮ ವಿರಹಿ ತಾ। 25.1.27

ಆಶೀಃ ಉ.ಕು.ಸಂ.

ಈಚೆಗೆ ನಿನ್ನಿಂದ ಕಾಗದವಿಲ್ಲ. ನಾನು ಚಿ॥ ಮೂರ್ತಿಯ ಕೂಡಾ ಬರೆಸಿದ್ದ ಕವರು ತಲಪಿತೆ ? ಬರುವ ಬಗ್ಗೆ 1 ಕಾರ್ಡನ್ನು ಬರೆ. ಶ್ರೀ M.G.ರಿಗೆ ಬರೆದು ಇನ್ನೂ ಇತ್ಯರ್ಥವಾಗದಿದ್ದರೆ ಪುನಃ ಅವರಿಗೆ ದೇವಾಸ್‌ಗೆ ಬರಿ. ಅವರು ಅಲ್ಲಿಗೆ ಹೋಗಿದಾರೆ (ಅಡ್ರೆಸ್ ಸರದಾರ್ M.G. B.A. LLB. ದೇವಾಸ್ ಕೋಠಿ ಜೂನಿಯರ್ ದೇವಾಸ್ (C.I). ಕವರು ತಲಪಿದ್ದರೆ ಅದರಂತೆ ಎಲ್ಲವನ್ನೂ ಆಚರಿಸಿ ಫಲಿತಾಂಶವನ್ನು ನಿಧಾನವಾಗಿ ತಿಳಿಸು, ಕವರು ತಲಪಿದ ಬಗ್ಗೆ ಮತ್ತು ನಿನ್ನ ದೇಹಾರೋಗ್ಯಕ್ಕೆ. ಮಾರ್ಚಿಯಲ್ಲಿ ಎಕ್ಸಾಮಿನೇರ್ಷ ಯಾವಾಗ ಪ್ರಾರಂಭ್ವ? ಯಾವಾಗ ಆಖೈರ್‌ಯೆಂಬುದು ತಿಳಿದರೆ ಆ ಬಗ್ಗೆ ಸಹ 1 ಕಾರ್ಡು ತಕ್ಷಣ ಬರಿ. ವ್ಯಾಸಂಗದಲ್ಲಿ ನಿರತನಾಗಿದ್ದಲ್ಲಿ ಉತ್ತಮ ದರ್ಜೆಯಲ್ಲೆ ಉತ್ತೀರ್ಣನಾಗಿ ಆ ರೆಕೆಮಂಡೇರ್ಷ ಮುಂದಕ್ಕೂ ಸಹಾಯ ಮಾಡುವಂತೆ ಅನುಕೂಲಪಡಿಸಿಕೊ. ಇಲ್ಲವಾದರೆ ಪ್ರಿನ್ಸ್‌ಪಾಲರು ಮುಂದೆ ಸಹಾಯ ಮಾಡಲಾರರು. ಸಹಾಯವಿಲ್ಲವಾದರೆ ಮುಂದೆ ತೊಂದರೆಯಾದೀತು. ಎಚ್ಚರಿಕೆ. ಮುತ್ತಣ್ಣನವರು ನಿನ್ನಿಂದ ಕಾಗದ ಬಂದಿರುವುದಾಗಿ ಹೇಳಿದರು. ಆದರೂ ವೇ॥ಯವರಿಗೆ ಬರೆಯುವಂತೆ ಹೇಳಿದರಾದ್ದರಿಂದ ನೀನು ಸವಿನಯವಾಗಿ 1 ಕವರನ್ನು ಅವರಿಗೆ ಬರೆದುಕೊಳ್ಳುವದು. ದೈವಭಕ್ತಿಯುಕ್ತಾಗಿದ್ದರೆ ದೇವರು ನಿನಗೆ ಅನುಕೂಲಪಡಿಸುತ್ತಾನೆ. ನಿನ್ನ ಉತ್ತರವನ್ನೇ ಎದುರುನೋಡುತ್ತಿದ್ದೇನೆ.

ಆಶೀಃ

೨೫೧

ಗಲಭೆ

ಮಗನಿಗೆ, ಹಳ್ಳಿಯ ತಂದೆಯು ಬರೆದ ಕಾರ್ಡು

ಕುಶಲಂ ಶ್ರೀ ತಾ। 2.8.28

ಆಶೀಃ ಉ.ಕು.ಸಂ. ಅಲ್ಲಿ ನಡೆದ ಪರಮ ದಾರುಣವಾದ ಗಲಭೆಯ ಸಮಾಚಾರವನ್ನು ಕೇಳಿ ಹೃದಯವು ಅತಿ ತಲ್ಲಣಗೊಳ್ಳುತ್ತಿದೆ. ಆ ಸಮೂಹದಲ್ಲಿ ನೀನೂ ಭಾಗಿಯಾಗಿದ್ದಿರ ಬಹುದೆಂದು ಭಾವಿಸುತ್ತೇನೆ. ಅದು ಹೇಗಾದರೂ ಆಗಲಿ ನೀನು ಯಾವ ಘಾತವಂತಗಳಿಗೂ ಗುರಿಯಾಗದೆ ಆರೋಗ್ಯ ವಾಗಿರುವೆಯಾ ? ಹಾಗೆ ಇರುವಲ್ಲಿ ಚಿ।ಗಾಗಿ 1 ಜನರಲ್ ಇಂಗ್ಲಿಷ್ ಪುಸ್ತಕವನ್ನು R.P. ಮೂಲಕ ತಕ್ಷಣ ಕಳಿಸು. ಗಲಭೆಯ ವಿಷಯವಾಗಿ ಯಾರಿಗೂ ಕಾಗದದ ಮೂಲಕ ಬರೆಯಬೇಡ. ನಿನ್ನ ಕಾಗದವನ್ನು ಪುಸ್ತಕದಲ್ಲಿ ಇಟ್ಟು ರವಾನಿಸು. ಕಾಗದ ಬಂದಲ್ಲದೆ ಸಮಾಧಾನವಿಲ್ಲ. ಏನಾದರೂ ಗಾಯವಗೈರೆ ಆಗಿದ್ದಲ್ಲಿ ಮರೆ ಮಾಚಬೇಡ. ನಿಜಾಂಶವನ್ನು ಬರಿ. ನಾನೂ ಬಂದು ನೋಡಿಕೊಂಡು ಬರುತ್ತೇನೆ. ತಕ್ಷಣ ಬರಿ. ಆರೋಗ್ಯವಾಗಿದ್ದರೆ P.V.R. ಗೆ ಕಾಗದ ಬರೆದು ವಿಷಯಗಳನ್ನು ಸಂಗ್ರಹಿಸು. ಪುಸ್ತಕವನ್ನು ತಕ್ಷಣ ರವಾನಿಸು. ॥ ಹ್ಯಾಂಡ್ ಆದರೂ ಆಗಬಹುದು. H.N. ...ನ B.A. ಏನು ? ನಿನ್ನ ಭಾವ...ನ ವಿಚಾರವೇನು ? ಬರಿ. ವಿಠಲಾಪುರ, ರುದ್ರಪಟ್ಟಣ ಇಲ್ಲಿ ಸಹ ಭಗವದನುಗ್ರಹ ದಿಂದೆಲ್ಲರೂ ಕುಶಲರು. ಚಿ। ಶಾಮರಾಯನು ಕಣ್ಣು ಬಾಧೆಯಿಂದ ಊರಿಗೆ ಬಂದು 15 ದಿನಗಳಾಗುತ ಬಂದುವು. ತ್ವರಿತವಾಗಿ ನಿನ್ನ ಉತ್ತರವು ಬರದೇ ಇದ್ದಲ್ಲಿ ನಾನೇ ಅಲ್ಲಿಗೆ ಬರುತ್ತೇನೆ. ತಾ 5ನೇ ದಿವಸ ನಿನ್ನ ಪುಸ್ತಕವಾಗಲಿ ಕಾಗದವಾಗಲಿ ಬರುವದೆಂದು ನಿರೀಕ್ಷಿಸುತ್ತಿದ್ದೇನೆ. ಆಶೀರ್ವಾದಾಃ

ತಾಜಾ ಕಲಂ

ನಿನ್ನ ಭಾವ ರಾಮಣ್ಣನ ತಂದೆಯು ಈಗ್ಯೆ 12 ದಿವಸಗಳಲ್ಲಿ ದಿವಂಗತರಾದರಾಗಿ ಚಿ। ಸೌ। ಅಮ್ಮಣ್ಣಮ್ಮನನ್ನು ಕೇಶವಯ್ಯನ ಕುಮಾರನ ಸಂಗಡ ಅಲ್ಲಿಗೆ ಕಳುಹಿಸಿದೇನೆ. ಇನ್ನು 3-4 ದಿವಸಗಳಲ್ಲಿಯೇ ಅವರ ಸಂಗಡಲೇ ವಾಪಸ್ ಬರುವಳು. ಅತಿಶಯವಿಲ್ಲ.

ಮ॥ B.K.S. ರ ಮನೆಯಲ್ಲಿಯೂ ಶಿಶುಬಾಣಂತಿ ಯಾದಿಯಾಗಿ ಎಲ್ಲರೂ ಕುಶಲರೆಂದು ತಿಳುಹು.

ಆಶೀಃ

೨೫೨

ಗೆಸೆಟ್‌ನಲ್ಲಿ ತಿಳಿಯುತ್ತೆ (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀ ತಾ। ೨೮ -೮-೨೮

ಆಶೀಃ ಉ.ಕು.ಸಂ. 9-8-28ರ ಗೆಸೆಟ್ ಮತ್ತು 16-8-28ರ ಸ್ಟಾರ್‌ಗಳಲ್ಲಿ S.S.L.C. ಆಗಿರುವ 75 ಬಾಲಕರನ್ನು ರಿಕಾರ್ಡ್ ರೀಡಿಂಗ್, ಸರ್ವೆ ವಗೈರೆ ಕೆಲಸ ಕಲಿಸುವ ಸ್ಕೂಲ್ 1-9-28ರಲ್ಲಿ ಬೆಂಗಳೂರಿನಲ್ಲಿ ಓರ್ಪ ಆಗುವದಾಗಿ ವಗೈರೆ ನಮೂದಿದೆ. ಗೆಸೆಟ್ ತೆಗೆದು ನೋಡು. ವಿಶದವಾಗಿ ತಿಳಿಯುತ್ತೆ. ನಿನ್ನ ಭಾವನಿಗೆ ಈ ಸಂಗತಿಯನ್ನು ಬರೆದು ಅಪ್ಲಿಕೇರ್ಷ ಹಾಕಿಕೊಳ್ಳುವಂತೆ ಬರೆದಿದೇನೆ.

ನೀನು ಸ್ಥಳ ವಿದ್ಯಮಾನವನ್ನು ತಿಳಿದು ಯಾರ ಸಹಾಯ ದಿಂದಲಾದರೂ ಅನುಕೂಲಿಸಬಹುದಾಗಿ ತೋರಿದರೆ ನಿನ್ನ ಭಾವನಿಗೆ ತಕ್ಷಣ 1 ಕಾರ್ಡು ಬರೆದು ಬರಮಾಡಿಕೊಳ್ಳುವುದು. ನಾಲ್ಕು ತಿಂಗಳ ಊಟದ ಖರ್ಚನ್ನು ನಾವೇ ಒದಗಿಸಿಕೊಡೋಣ. ತಕ್ಷಣ ನೋಡಿ ಬರಿ. ಆಗಸ್ಟ್ 31ರೊಳಗೆ ಅಷ್ಟೇ ಇರಬೇಕು. ಆದ್ದರಿಂದ ಇದು ತಲಪಿದ ದಿನವೇ ನೋಡಿ ಪೂಮಗಾಮೆಗೂ ಬರೆದು ಪ್ರಯತ್ನಿಸು. ಅನುಕೂಲಿಸುವ ಹಾಗಿಲ್ಲವಾದರೆ ಕ್ಲೇಶ ಪಡಬೇಡ. ರಾಜಕೀಯ ಸ್ಕಾಲರ್‌ಷಿಪ್ಪಿನ ವಿಷಯ ತಪ್ಸೀಲು ಬರಿ. P.V.R. ಗೆ ಬರೆದು ವಿಷಯ ತಿಳಿದಿದ್ದರೆ ಎಲ್ಲವನ್ನೂ ತಪ್ಸೀಲಾಗಿ ಕವರಿನಲ್ಲಿ ಬರೆ. ಚಿ। ಚಿನ್ನಣ್ಣನೂ ಇಲ್ಲೇ ಅಶನಾರ್ಥಿಯಾಗಿದಾನೆ. ಭಗವದನುಗ್ರಹದಿಂದ ಈ ಪ್ರಾಂತ ನಮ್ಮ ಬಂಧುಗಳೆಲ್ಲರೂ ಸುಕ್ಷೇಮಿಗಳು. ನಿನ್ನ ವ್ಯಾಸಂಗದಲ್ಲಿ ನಿರತನಾಗಿರುವೆಯಾಗಿ ನಂಬಿದೇನೆ. ಹೆಚ್ಚು ವಿಷಯಗಳಿಗೆ ಗೊಂದಲವು ಬ್ಯಾಡ. ವೇ। ಕೃಷ್ಣಶಾಸ್ತ್ರಿ, H.N.D. ಇವರುಗಳ ಉದ್ಯೋಗವೇನು ? ಸಾಧ್ಯವಿದ್ದರೆ ತಿಳಿಸು. ಅತಿಶಯವಿಲ್ಲ.

ಆಶೀಃ

೨೫೩

ತೋಳಪ್ಪನವರ ಆರೋಗ್ಯ (ತಂದೆಯ ಪತ್ರ)

ಕುಶಲಂ ಶ್ರೀ ತಾ। 15.1.29

ಚಿ॥ ಗೆ ಆಶೀಃ. ನಿನ್ನ ಕಾರ್ಡುಗಳು ತಲಪಿದವು. ದೇಹ ಪೋಷಣೆಗಾಗಿ ಕಳುಹಿದ ಮೊಬಲಗನ್ನು ಅದಕ್ಕೆ ಉಪಯೋಗಿಸಿ ಕೊಳ್ಳದೆ ಇದ್ದುದು ತಪ್ಪು. ದೇಹಾರೋಗ್ಯವು ಚೆನ್ನಾಗಿದ್ದರೆ ತಾನೆ ಕಾರ್ಯ ಮಾಡಲನುಕೂಲವಾಗುತ್ತೆ ? ಮೊದಲು ಇಂಜೆಕ್ಷ್ನ ತೆಗೆದುಕೊಂಡಿದ್ದರೆ ಪರೀಕ್ಷೆಗೆ ತಪ್ಪಿಸಿಕೊಳ್ಳುವ ಸಂಭವವಿರಲಿಲ್ಲ. ನಿನ್ನ ದುರ್ದೈವಕ್ಕೆ ನಾನೇನು ಮಾಡ್ಯೇನು ? ಅದೇ ದುರ್ದೈವವು ಅಹರ್ನಿಶಿಯೂ ನಿನ್ನನ್ನು ಸೊರಗಿಸುತ್ತಿದೆ. ನಿನ್ನ ಹಣೇಬರಹ ಇದ್ದಂತಾಗಲಿ...ತೀ। ತೋಳಪ್ಪನವರಿಗೆ ದೇಹಾರೋಗ್ಯವಿಲ್ಲೆಂದು ಉತ್ತರ ಬರೆದೆ. 10-12 ದಿನಗಳಿಂದಲೂ ಚಿ। ಕೃಷ್ಣನು ಇಲ್ಲಿ ಉಂಡಾಡುವ ಭಟ್ಟನಾಗಿದಾನೆ. ಕೇವಲ ಅವಿಧೇಯ. ಇದು ನನ್ನ ದೌರ್ಭಾಗ್ಯವೇ. ಮಾಡುವದೇನು? ಚಿ। ರಾಮನು ಸುಮಾರಾಗಿ ವ್ಯಾಸಂಗ ಮಾಡುತ್ತಿದಾನೆ, ಭಗವದನುಗ್ರಹದಿಂದ...

H.N. ಪುರಕ್ಕೆ...ಸೆಂಟರ್ ತೆಗೆದುಕೊಂಡಿದಾರೆ. ನೀನು ಒದಗಲು ಸಾಧ್ಯವಿಲ್ಲದಲ್ಲಿ ನಾನೇ ಹೋಗಿಬರಬೇಕಾಗುತ್ತೆ. ಚಿ।ಸೌ। ರುಕ್ಮಿಣಿಯನ್ನು ಕರೆತಂದಿದೇನೆ. 4-5 ತಿಂಗಳ ಗರ್ಭಿಣಿ. ನಿನ್ನ ಭಾವನವರೂ ಬಂದಿದಾರೆ. ನಾಡಿದ್ದು ಪ್ರಯಾಣ ಮಾಡುತ್ತಾರೆ (ಕೌಶಿಕಕ್ಕೆ). ಕೃಷ್ಣಾಪುರದವರು ಎಲ್ಲಿರುವರೆಂಬುದೇ ತಿಳಿಯದು. ಅವರ ಕಾಗದಗಳ ಸೊಲ್ಲೇ ಇಲ್ಲ. ರುದ್ರಪಟ್ಟಣದಲ್ಲಿಯೂ ವೇ॥ BKSರ ಮತ್ತು ಶ್ರೀ...ರ ಮನೆಗಳಲ್ಲೂ ನಮ್ಮ ಮನೆಯಲ್ಲೂ ಭಗವದನುಗ್ರಹದಿಂದ ಸರ್ವರೂ ಕುಶಲಿಗಳು. ನೀನು ಹಣವನ್ನು ನಿನ್ನ ದೇಹ ಪೋಷಣೆಗೆ ಉಪಯೋಗಿಸುವುದಾಗಿ ಬರೆದಿದ್ದೆ. ಸಾಧ್ಯವಾದಷ್ಟು ಮೊಬಲಗು ಕಳಿಸುತ್ತೇನೆ. ಸಂಕೋಚ ಬೇಡ. ನಿನ್ನ ಉತ್ತರವನ್ನು ಎದುರು ನೋಡುತ್ತಿದ್ದೇನೆ...

೨೫೪

ಭಗವದ್ವಿಲಾಸ (ವಿದ್ಯಾರ್ಥಿಗೆ ತಂದೆಯ ಕಾರ್ಡು)

ಕುಶಲಂ ಶ್ರೀರಾಮ 21.1.29

ಆಶೀಃ. ಉ.ಕು.ಸಂ. ಸುಮಾರು 25 ದಿನಗಳಲ್ಲಿ ನಿನಗೊಂದು ಕಾರ್ಡು ಬರೆದಿದ್ದೆ. ಅದ್ಯಾಪಿ ಉತ್ತರವೇ ಇಲ್ಲ. ನಿನಗೆ ಪರೀಕ್ಷೆಯು ಮಾರ್ಚ 18ಕ್ಕೆ ಆರಂಭವೆಂದು ಬರೆದುದು ಸರಿಯಷ್ಟೆ ! ಆಖೈರು ಯಾವಾಗ ತಿಳಿದಿದೆಯೆ ? ಏಪ್ರಿಲ್ 1ಕ್ಕೆ H.N. ಪುರಕ್ಕೆ ಚಿ। ಮೂರ್ತಿಯ ಸಹಾಯಕ್ಕೆ ಬರಲು ಸಾಧ್ಯವೆ ? ಬರಿ. ಈ ಸಲಕ್ಕೆ ಊರಿನವರೆಲ್ಲರೂ H.N. ಪುರಕ್ಕೆ ಸೆಂಟರ್ ತೊಗೊಂಡಿದಾರೆ. ಭಗವದನುಗ್ರಹದಿಂದ ಚಿ। ಮೂರ್ತಿಯು ಹೋದರೆ ಅಲ್ಲಿ ನಿಲ್ದಾಣಕ್ಕೆ ಅನುಕೂಲವೆ ಬರೆ. ಉಂಟೆಂಬುದನ್ನು ತಿಳಿದುಕೊ. ಏಪ್ರಿಲ್ 1ಗೆ ನೀನು ಬರಲವಕಾಶವಿಲ್ಲದಲ್ಲಿ ನಾನು ಹೋಗಿಬರಬೇಕಾಗ ಬಹುದು. ಭಗವದ್ವಿಲಾಸ ಹೇಗಿರುವುದೊ ತಿಳಿಯದು. ಚಿ। ಸೌ। ರುಕ್ಮಿಣಿಯನ್ನು ಕರತಂದು 20 ದಿನಗಳಾದವು. ಮಗ್ಗಿಯುಲ್ಲಿ ನಿನ್ನ ಭಾವನವರೂ ರುದ್ರಪಟ್ಟಣ ಮತ್ತು ಇಲ್ಲಿ ಎಲ್ಲರೂ ಭಗವದನುಗ್ರಹದಿಂದ ಕುಶಲಿಗಳು. ರೋಗಾದಿಯಿಂದ ತೊಂದರೇ ಇಲ್ಲ. ಈಗ ನಿನ್ನ ದೇಹಾರೋಗ್ಯವು ಹೇಗಿದೆ. ರಕ್ತ ಬಲವು ಬರುವ ಔಷಧಿಯನ್ನು ತೆಗೆಯಲು ಕಳುಹಿದ ಮೊ.ನ್ನು ಬೇರೆ ಕಾರಣಕ್ಕೆ ಉಪಯೋಗಿಸಿದೆ. ಆದರೂ ಚಿಂತೆ ಇಲ್ಲ. ಡಾಕ್ಟರಿಗೆ ತೋರಿಸಿ ಈಗಲಾದರೂ ಔಷಧಿಯನ್ನು ತೆಗೆದುಕೊ. ಪರೀಕ್ಷೆಗೆ ಹೊರಡುವಾಗ ಚೈತನ್ಯವೇ ಇಲ್ಲವಾದರೆ ನೀನು ಮಾಡುವು ದಾದರೂ ಏನು ? ಆರೋಗ್ಯ ಭಾಗ್ಯವನ್ನೇ ಮುಖ್ಯ ಧ್ಯೇಯವನ್ನಾಗಿಟ್ಟುಕೊಂಡು ಯಾವ ಕೆಲಸಗಳಾದರೂ ಮಾಡು. ಅತಿಯಾಗಿ ನಿದ್ದೆಗೆಡುವುದು ಕೆಟ್ಟದು. ಇಂಜಕ್ಷ್ನ ತೆಗೆಯದೇ ಇದ್ದುದು ವಿಷಾದಕರ. ನಿನ್ನ ತಾಯಿಯು ಹಗಲಿರುಳೂ ವ್ಯಥಿಸುತ್ತಾಳೆ. ಎಲ್ಲ ವಿಚಾರಗಳಿಗೂ ಕುಶಲಕ್ಕೆ ಕಾರ್ಡು ಬರೆ. ದೇಹಾರೋಗ್ಯಕ್ಕೆ ಭಂಗ ತಂದುಕೊಳ್ಳಬೇಡ. ದೇವರಲ್ಲಿ ಭಕ್ತಿ ಬಾವಗಳುಳ್ಳವರ ಸಂಗ ಮಾಡು.

ಆಶೀಃ.

೨೫೫

ಅನಾಥಾಲಯ ವಿಚಾರಿಸು (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀ ಛಾಯಾಪತಿ ವಿರಹಿ 27.3.29

ಆಶೀರ್ವಾದಾಃ ಉ.ಕು.ಸಂ.

ನಿನ್ನಲ್ಲಿ ದುಡ್ಡಿದ್ದರೆ ಬರುವಾಗ 4 ಸೇಬಿನ ಹಣ್ಣು, ಸ್ವಲ್ಪ ದ್ರಾಕ್ಷಿಯಹಣ್ಣು, ಅಂಜೂರ ಮುಂತಾದುವನ್ನು ತರುವುದು (ಚಿ॥ ಸೌ॥ ರುಕ್ಮಿಣಿಗಾಗಿ). ಸಾಲ ಮಾಡಬೇಡ.

ನ್ಯಾ. ಹೈಸ್ಕೂಲು ವಿಚಾರವೇಕಾಗಿ ಗೊತ್ತಾಗಲಿಲ್ಲ. ಇಲ್ಲಿಯೇ ಚಿ॥ ರಾಮುವಿಗೆ ದೇವರೇನಾದರೂ ಪಾಸಾಗುವಂತೆ ಕರುಣಿಸಿದಲ್ಲಿ ಅಲ್ಲಿ ಎಲ್ಲಾದರೂ ಏರ್ಪಡಿಸಲು ತರದೂದು ಮಾಡಬೇಕು. ಇಲ್ಲವಾದರೆ ಬಳೆಪೇಟೆಯಲ್ಲೋ ಚಿಕ್ಕಪೇಟೆಯಲ್ಲೋ ಗೋವಿಂದ ಚೆಟ್ಟರೆಂಬುವರು ಒಂದು ಅನಾಥಾಲಯ ಏರ್ಪಡಿಸಿರುವರಷ್ಟೆ. ಅಲ್ಲಿ ಅನುಕೂಲಿಸುವುದೆ? ಯೆಂಬುದನ್ನು ತಿಳಿದುಕೊಂಡು ಬರಬೇಕು. ಉದಾಸೀನ ಮಾಡಬಾರದು. ಪರೀಕ್ಷೆಯಲ್ಲಿ ಶಕ್ತಿ ಮೀರಿ ನಿಗಾ ಇಟ್ಟು ಕೆಲಸ ಮಾಡಬೇಕಾಗಿದೆ. ಭಗವದನುಗ್ರಹದಿಂದ ಎಲ್ಲರೂ ಕುಶಲಿಗಳು. ಮುಖ್ಯವಾಗಿ ನನಗೆ ನೀವುಗಳು 2 ಅಕ್ಷರ ಕಲಿಯಬೇಕೆಂಬ ದುರಾಶೆ ಹೆಚ್ಚಿದೆ. ದೇವರು ಹೇಗೆ ನಡೆಸುವರೋ ತಿಳಿಯದಾಗಿದೆ...

ಇತ್ಯಾಶೀಃ

೨೫೬

ಮೂಳೆಯ ದೋಷ (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀಃ ತಾ॥ 20-10-29

ಆಶೀಃ ಉ.ಕು.ಸಂ.

ನಿನ್ನ ಕಾರ್ಡು ತಲಪಿದೆ. ದೇವರು ನಿನಗೆ ಆರೋಗ್ಯವನ್ನು ಕರುಣಿಸಿರುವುದಕ್ಕೆ ಸಂತೋಷಿಸುತ್ತೇನೆ. ಇನ್ನು ಮೇಲಾದರೂ ದೇವರ ದಯದಿಂದ ಚೆನ್ನಾಗಿ ವ್ಯಾಸಂಗ ಮಾಡಲು ಅನುಕೂಲಿಸಿ ಉತ್ತೀರ್ಣನಾಗಲೆಂದು ಬಯಸುತ್ತೇನೆ. ತಿಪಟೂರಿಗಾಗಲಿ ಮೈಸೂರಿಗಾಗಲಿ ಹೋಗಲಿಲ್ಲ. ಈಚೀಚೆಗೆ ನೋಡುವಲ್ಲಿ ಮೂಳೆಯು ವಕ್ರವೇ ಇದೆಯೆಂಬುದು ತೋರಿಬರುತ್ತಿದೆ. ಡಾ॥ ನಾರಾಯಣರಾಯರು, ಮುರಿದಿದ್ದ ಸ್ಥಳವನ್ನು ಕಟ್ಟುಮಾಡಿ ಎಳೆದು ಮಧ್ಯೆ ಬೆಣೆಯನ್ನು ಸೇರಿಸಿ ಔಷಧಿ ಹಾಕಿ ಹೊಲಿದರೆ ಕಾಲು ಸರಿ ಹೋಗುವದಾಗಿ ಹೇಳಿದರಂತೆ. ಹಾಗೇ ಮಾಡಿ ನೋಡೋಣವೆಂದರೆ ಈ ಕೆಲಸವು ಅವರಿಗೆ ಸಂಬಂಧಪಟ್ಟುದಲ್ಲ. ಇತರರು ಈ ಹೆಚ್ಚು ಶ್ರಮದ ಕೆಲಸವನ್ನು ಮುತುವರ್ಜಿಯಿಂದ ಮಾಡುವರೆಂಬ ಭರವಸೆಯಿಲ್ಲ. ಅವರು ದಯವಿಟ್ಟು ಡಾ॥ ಕೃಷ್ಣಸ್ವಾಮಿಯವರಿಗೆ ಶಿಫಾರ್ಸು ಹೇಳಿ ಅನುಕೂಲ ಪಡಿಸುವುದಾದರೆ ಅಲ್ಲಿಗೆ ಬರೋಣವೆಂದು ಯೋಚಿಸುತ್ತೇನೆ. ಈ ಭಾಗದಲ್ಲಿ ನಿನಗೆ ಪುರಸತ್ತಾದರೆ ಡಾ॥ ಬಿ.ಕೆ. ಅವರನ್ನು ಕಂಡು ಏನು ಹೇಳುತ್ತಾರೊ ತಿಳಿದು ಬಾ. ಹಾಗಿಲ್ಲದೆ ನಾನು ಸ್ವಂತವಾಗಿ ಹೋದರೆ ಮೊದಲಿರುವದಕ್ಕೂ ಲೋಪ ಬರುವದೇನೋ ಎಂಬ ಭೀತಿ ಇದೆ. ಆದ್ದರಿಂದ ಅವರ ಭರವಸೆಯಿಲ್ಲದೆ ಬರಲು ಧೈರ್ಯ ಸಾಲದು. ನೀನು ಯೋಚಿಸಿ ನೋಡು. M.G.ರವರಿಂದ ಉತ್ತರವಿಲ್ಲ. ಕಾಲು ಕೆಳಕ್ಕೇ ಇಳಿದು ಇಲ್ಲ. ಮೈಸೂರಿನಲ್ಲಿದ್ದುದಕ್ಕೆ ನಡೆಯವದು ಸ್ವಲ್ಪ ಉತ್ತಮ. ಇಲ್ಲಿನ ತಾಪತ್ರಯಗಳನ್ನು ಹತ್ತಿಸಿಕೊಳ್ಳಬೇಡ. ವ್ಯಾಸಂಗದಲ್ಲಿ ನಿರತನಾಗಿರು. ಬಾಕಿ ವಿಷಯ ಅಲಾಹಿದ ಬರೆಯುತ್ತೇನೆ. ಪ್ರಾಯಃ ಕವರಿನಲ್ಲಿ ಬರೆದು ಕಳುಹಿಸಲೇನು ? ಯೋಚಿಸಿ ಉತ್ತರ ಬರಿ (ಕವರಿನಲ್ಲಿ). ಕಾಲು ಕೆಳಕ್ಕೆ ಇಳಿಸಿಲ್ಲ. ಕೋಲಿನ ಸಹಾಯವಿಲ್ಲದೆಯೆ ಕುಂಟಿಕೊಂಡು ಮನೆಯೊಳಗಿಂದ ಬೀದಿ ಬಾಗಿಲಿಗೆ ಹೋಗಿಬರಬಹುದು. ಆದರೆ ಸೊಂಟಕ್ಕೆ ಸ್ವಲ್ಪ ನೋವಾಗುತ್ತದೆ. ಸರ್ವ ಪ್ರಯತ್ನದಿಂದ ವ್ಯಾಸಂಗಿಸು. ಪ್ರೊಫೆಸರ್ ಕೆ.ವಿ. ಅಯ್ಯರವರೆ ಆಗಲಿ ಮುತುವರ್ಜಿಯಿಂದ ಮಾಡಿಸುವ ಭರವಸೆ ಇದ್ದಲ್ಲಿ ಬರುತ್ತೇನೆ. ¾ ಪಾಲು ಮೂಳೆಯ ದೋಷವೇ ಹೊರ್ರು ನರದ್ದಲ್ಲ.

ಇನ್ನೂ ರಜ ಮಂಜೂರಾಗಿಲ್ಲ. ಅಪ್ಲಿಕೇಷನ್ ಮಾಡಿದೇನೆ. ನಮ್ಮ ಮತ್ತು ವೇ॥ BKS ರುಗಳ ಮನೆಗಳಲ್ಲಿ ಚಿ॥ ಸೌ॥ ಗಳೆಲ್ಲರೂ ಕುಶಲರು. ಹೊಸ ತೋಟಕ್ಕೆ ಒಂದು ಸರಪಳಿ ಮಾಡಿದ್ದಾಗಿದೆ. ಚಿ॥ ಕೃಷ್ಣನಿಗೆ ಬೈಸಿಕಲಿನ ಹುಚ್ಚು ಇಳಿದಿಲ್ಲ...ಒಂದನ್ನೂ ಹೇಳಿ ಪ್ರಯೋಜನವಿಲ್ಲ. ಚಿ॥ ರಾಮನು ಪರೀಕ್ಷೆಯಲ್ಲಿ ಪಾಸಾದನೆ? ಆರೋಗ್ಯದಿಂದಾನೆಯೆ ? ಮುಖ್ಯವಾಗಿ ನೀವುಗಳು ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡರೆ ಬಹಳ ಕ್ಷೇಮ. ತೊಡೆಯನ್ನು ಕಟ್ಟು ಮಾಡಿದಲ್ಲದೆ ಅನುಕೂಲಿಸುವುದಿಲ್ಲ. ಇತ್ಯಾಶೀಃ

೨೫೭

ವಿದ್ಯೆ ಮತ್ತು ಕೃಷಿ

ಚಾಮರಾಜನಗರಕ್ಕೆ ಪ್ರವಾಸ ಹೋಗಿರುವ ತಂದೆಯು, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಗನಿಗೆ ಬರೆದ ಕಾರ್ಡು

ಕುಶಲಂ ಶ್ರೀಃ ತಾ॥ 30.12.29

C.R.N.

ಆಶೀಃ ಉ.ಕು.ಸಾಂ.

ನಾವುಗಳು ಇಲ್ಲಿಗೆ ಬಂದ ಕೆಲಸವಿನ್ನೂ ಆಗಿಲ್ಲ. ನಾಡಿದ್ದು

ತೆರಕಣಾಂಬಿಗೆ ಹೋಗುತ್ತೇವೆ. ನೀನು ಇದ್ದುದರಲ್ಲೇ ಪುರಸೊತ್ತು ಮಾಡಿಕೊಂಡು ಹೈಗ್ರೌಂಡಿನಲ್ಲಿ ಮುನಿಸಿಪಲ್ ಕಂದಾಯ ವಸೂಲ್ಮಾಡುವ ಶಾನುಭೋಗರನ್ನು ಹಿಡಿದು ಆಕೆಯ ಮನೆ ಇದೆಯೆ ? ಇಲ್ಲವೆ ? ಇದ್ದರೆ ನಂಬರೆಷ್ಟು ? ಕಂದಾಯವೆಷ್ಟು? ಯಾವುದನ್ನೂ ತಿಳಿ. ಆಮೇಲೆ ಬೆಳೆಯನ್ನು ಕಣ್ಣಿನಿಂದ ನೋಡಿ ಎಷ್ಟು ಬಾಳಬಹುದೆಂಬುದನ್ನೂ ಕವರಿನಲ್ಲಿ ಬರೆದು ಊರಿಗೆ ರವಾನಿಸು. ಆಕೆಯ ಗಂಡನ ಹೆಸರು ನಾರಾಯಣರಾವ್.

...ರಜದಲ್ಲಿ ಊರಿಗೆ ಬರುವಾಗ S.S. ರಾವ್ಸ್ Esq. BA ಯವರನ್ನು ನೋಡುವುದಲ್ಲದೆ ವೀವರ್ಸ್ ಲೈನಿನಲ್ಲಿ ರಾಮಕೃಷ್ಣ ಹೋಂ ಏರ್ಪಾಡಾಗಿದೆಯಂತೆ, ಅದರ ಕ್ರಮಗಳೇನೆಂಬುದನ್ನು ತಿಳಿದುಕೊಂಡು ಬರಬೇಕು. ಮರೆಯಬಾರದು. ಇರಲಿ. ಪುನಃ ಬರೆದರೂ ಬರೆಬಯಬಹುದು. ಬೆಳೆಯ ವಿಷಯದಲ್ಲಿ ಮೊಕ್ತ ಖಂಡಿತವಾಗಿ ತಿಳಿದುಕೊಂಡು ಊರಿಗೆ ಬರುವ ವೇಳೆಗೆ ನಿನ್ನ ಕವರು ಬಂದಿರಲಿ. ಅದು ಮುಖ್ಯವಾಗಿದೆ. ವ್ಯಾಸಂಗದ ವಿಷಯದಲ್ಲಿ ಆಸಕ್ತನಾಗಿ ಭಗವದನುಗ್ರಹದಿಂದ ಉತ್ತೀರ್ಣ ನಾಗುವ ಪ್ರಯತ್ನ ಮಾಡು. ಆಶೀರ್ವಾದಃ

೨೫೮

ರಾಜರಾಜೇಶ್ವರಿಯ ಕೃಪೆ (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀಃ $8\ ^{2}/_{31}$

ಆಶೀಃ ಉ.ಕು.ಸಂ. ನಿನ್ನ ಕಾರ್ಡು ತಲಪಿತು. H.B. ಯಿಂದ ಬರುವ ಉತ್ತರ ನೋಡಿಯೇ S.W. ಗೆ ಕಾಗದ ಬರೆಯುವ ಹಾಗೂ ಮುಖತಃ ಬರುವ ವಿಚಾರ ಮಾಡೋಣವೆಂದು ಸುಮ್ಮನಿದೇನೆ. ಒಂದು ವೇಳೆ ಇಲ್ಲಿ ಸಾಧ್ಯವಾದರೂ M.H. ಆದೀತು. ಅದು ಸುಖವಿಲ್ಲ. ಅಲ್ಲಿಂದ ಉತ್ತರ ಬರಲು ಇನ್ನೂ 1 ವಾರ ಬೇಕಾಗುವದೊ ಅಥವ ಮಾರ್ಚ್ ಅಖೈರಾಗುವದೊ ನೋಡಬೇಕು. ಪ್ರಾಯಃ ನಿರುತ್ತರವಾಗಲಾರದು. ಮಾರ್ಚ್ ಕೊನೆಗೂ ನೋಡಿ ಆಮೇಲೆ ಹೊರಡೋಣ. ಶ್ರೀ ಲಕ್ಷ್ಮೀ-ಕೇಶವಾನುಗ್ರಹವಿದ್ದಂತಾಗಲಿ. ಚಿ|| ಚೆನ್ನಕೇಶವಯ್ಯನಿಂದ ಮೊನ್ನೆ ಕಾರ್ಡು ಬಂದಿತು. ಆರೋಗ್ಯದಿಂದಾನೆ. ನಾನೂ ಅವನಿಗೆ 1 ಕಾರ್ಡು ಬರೆದಿದೇನೆ. ನಿನ್ನಿಂದ ಕ್ಷೇಮಲಾಭ ತಿಳಿಯಲಿಲ್ಲವೆಂದು ಪಶ್ಚಾತ್ತಾಪಪಟ್ಟಿದಾನೆ. ಅದಕ್ಕೂ ಸಮಾಧಾನ ಬರೆದಿದೇನೆ. ನಿನ್ನ ಪರೀಕ್ಷೆಯು ಏಪ್ರಿಲ್ ತಿಂಗಳಲ್ಲಿ ನಡೆಯಬಹುದು. ಹೇಗಾದರೂ ಆಗಲಿ. ಪರೀಕ್ಷೆ ಕಳೆಯುವವರಿಗೆ ವ್ಯಾಸಂಗಕ್ಕನುಕೂಲಿಸುವಂತೆ ಹೋಟೆಲ್‌ನಲ್ಲಿಯಾದರೂ ಊಟ ಮಾಡುತ್ತಾ 15 ದಿನಗಳಿಗೊಮ್ಮೆ ಅಭ್ಯಂಗಸ್ನಾನವನ್ನು ತಪ್ಪದೆ ಅಲ್ಲಿಯೇ ಮಾಡುತ್ತಾ ಆರೋಗ್ಯಾದಿಗಳನ್ನು ಚೆನ್ನಾಗಿ ಕಾಪಾಡಿಕೊಂಡು ಶ್ರೀ ರಾಜರಾಜೇಶ್ವರಿಯ ಕೃಪೆಯಿಂದ ಉತ್ತೀರ್ಣನಾಗುವ ಯತ್ನ ಮಾಡು. ಇವಕ್ಕೆಲ್ಲಾ 2 ತಿಂಗಳಿಗೆ 5-6 ರೂ. ಹೆಚ್ಚಾಗಿ ಖರ್ಚಾದೀತು. ಇದಕ್ಕಾಗಿ ಹಿಂತೆಗೆಯಬಾರದು. ದುಡ್ಡಿನ ವಿಚಾರದಲ್ಲಿ ಯಾವಾಗಲೂ ಎಚ್ಚರವಿರಲಿ. ರುದ್ರಪಟ್ಟಣದ ನಿನ್ನ ಭಾವ ನಿನ್ನ ಕುಶಲವನ್ನು ತಿಳಿಸಿದನು. ದಾವಣಗೆರೆ HPM ನಿಂದ ವಿಷಯಗಳನ್ನು ತಿಳಿದುಕೊಂಡು ಬರಿ. ಅಥವ...ಹೋಗಿಬಂದರೆ ಅನುಕೂಲ. ಚಿ| K.N.L. ರಿಂದ ನೆನ್ನೆ ಆರೋಗ್ಯವಾಗಿರುವದಾಗಿ ಕಾರ್ಡು ಬಂದಿದೆ. (ಈ ಪ್ರಾಂತ) ಗಲಾಟೆ ವಗೈರೆ ಏನೂ ಇಲ್ಲ. ಭತ್ತ ಖಂಡಿ 6 ರೂ. ಇದೆ. ತೋಟಗಾರರ ಪಾಡು ಹೇಳತೀರದು. ನಗರದ ಪಂಚಾಂಗಗಳು 5ಕ್ಕೆ 1 ಡಿಸ್ಕೌಂಟ್ ಬರುತ್ತೆ. 10ನ್ನು ತೆಗೆದುಕೊಂಡರೆ 12 ಬರುತ್ತೆ. ಬರುವವರ ಸಂಗಡ ಕಳುಹು.

೨೫೯

ತಾತಯ್ಯರನ್ನು ಆಶ್ರಯಿಸು (ಬಾಲಕನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀಃ ತಾ| 26.3.31

RP

ಆಶೀಃ ನಿನ್ನ ಕಾರ್ಡು ತಲ್ಪಿತು. ಮ| ಗೋ.ರವರು ಬಂದಿದಾರೆ. ಕೂಡ್ಲೆ ಹೋಗಿ ಸಮಯ ನೋಡಿ ಆಕಡೆ ಎಲ್ಲಾದರೂ 1 ಕೆಲಸ ಮಾಡಿಸಿಕೊಡುವಂತೆ ಹೇಳು. ಸಂಕೋಚವಿಲ್ಲ. ನಾನೂ ಬಂದು ವ್ಯವಸಾಯ ಮಾಡುತ್ತೇನೆ. ನೀನಲ್ಲೇ ಇದ್ದೂ ಕಂಡು ಹೇಳದೆ ಬಂದು ನಾನು ಹೋದರೆ ಅವರೆಲ್ಲಿ ಎಂದು ಪ್ರಶ್ನೆ ಬರುತ್ತೆ. ಆಗ ಅಲೌಕಿಕವಾಗುತ್ತೆ. ಆದ್ದರಿಂದ ಅವರನ್ನು ಕಾಣದೆ ಬರಬೇಡ. ತಾ. 8 ಕಳದಲ್ಲದೆ ಹೊರಡಬೇಡ. ಅವರು ಶ್ರಾದ್ಧಾದಿಗಳಿಗೆ ರಾಮೇಶ್ವರಕ್ಕೆ ಹೋಗಿಬರುವರೆಂದು ಸುದ್ದಿ. ಹೋದರೆ ಯಾವಾಗ ಬರುವರೆಂಬುದನ್ನು ತಿಳಿ. ಇಲ್ಲೇ ನಡೆಯುವದಾದಲ್ಲಿ ನಾನೂ ಈಗಲೇ ಬಂದರೂ ಬರುತ್ತೇನೆ. ∴ ತಾ. 8-9ರವರಿಗೆ ಅಲ್ಲೇ ಇರು. ಬೆಣ್ಣೆ 3 ಸೇರಿಗೆ ಕಮ್ಮಿಯಾದರೆ ತರಬೇಡ. ಅಲ್ಲೆ ಇದ್ದರೆ ತಾತಯ್ಯ ಜೀವನಕ್ಕೆ ಏನಾದರೂ ಕೆಲಸ ಏರ್ಪಡಿಸುವರೋ ಕೇಳು. ಅಲ್ಲದೆ N.S.S. ರಿಗೆ M.H.S. ಆದರೂ ಕೆಲಸ ಕೊಡಿಸುವಂತೆ 1 ರೆಕೆಮಂಡೇಷನ್ ಕೇಳು. ದಯೆಯಿಟ್ಟು ಕೊಟ್ಟಲ್ಲಿ ಬೆಂಗಳೂರಿಗೂ ಹೋಗಿಯೇ ಬಂದುಬಿಡು. ಮುಖ್ಯ ಎಲ್ಲ ಪ್ರಯತ್ನಗಳನ್ನೂ ಮಾಡು. ಬರುವಾಗ ಇನ್ನೊಮ್ಮೆ M.S.W. ರನ್ನು ನೋಡಿ ಬಾ. ಚಾಮುಂಡೇಶ್ವರಿಯವರ ದರ್ಶನ ಮಾಡದೆ ಬರಬೇಡ. ಮಾಡಿದ ನಂತರವೇ ಮ| ರಾಯರನ್ನು ನೋಡಿದರೂ ಉತ್ತಮ. ಅಂತೂ ಅವರನ್ನು ಕಾಣದೆ ಬಂದೀಯೆ. ನನ್ನನ್ನು ರಿಟೈರ್ ಮಾಡುವರೆಂಬ

(30 ಸರ್ವಿಸ್) ಪ್ರಬಲ ವದಂತಿ ಇದೆ. ಆದ್ದರಿಂದ ನಿನ್ನ ಜೀವನಕ್ಕಾದರೂ ನಾನಾ ಪ್ರಯತ್ನಗಳನ್ನು ಮಾಡು. ಉದಾಸೀನ ಬೇಡ. H.N.P. ನನಗೆ ತಿಳಿದಿರಲಿಲ್ಲ. ಪ್ರಾಯಃ ಹಣ ತಂದು ನೋಡಿ ವಾಪ್ಸು ಅಲ್ಲಿಗೆ ಬಂದದ್ದು. ಬೆಂ.ನಲ್ಲಿ ಜೀವನಕ್ಕೇ ಮಾರ್ಗವಿಲ್ಲ. ಹೇಗಾಗುವದೋ ನೋಡಬೇಕು. M.G.ರ ಮನೆಗೆಲಸ ಅಲ್ಲೇ ನಡೆದರೆ ನೀವುಗಳೂ 1-2 ದಿನ ಅಲ್ಲಿಗೇ ಹೋಗಿ. ನಿನಗೆ ಸಂಕೋಚವಾದರೆ ಚಿ॥ ಮೂರ್ತಿಯನ್ನಾದರೂ ಕಳುಹು. ನೀನೂ ಸಂಕೋಚಪಡತಕ್ಕದ್ದಲ್ಲ. ಸ್ವಲ್ಪ ಕೆಲಸಗಾರನಂತೆ ಅದೇನು ಇದೇನು, ಏನು ತರಬೇಕು ಎಂದು ಮುಂತಾಗಿ ಓಡಾಡುತ್ತಿದ್ದರೆ ಗುಣವುಂಟು. ಆಶ್ರಯ ವಿನಾ ಅನುಕೂಲವಿಲ್ಲ. ಹುಂ ಹಂ ಬ್ಯಾಡ. ಮ। ರಾಮಪ್ಪನವರ ಹಸ್ತವೇ ಹೇಗಾದರೂ ಮಾಡಿ ಒಂದು ಕಾಗದದಲ್ಲಿ ನಮ್ಮ ಸಂಬಂಧವನ್ನು ಯಥಾವತ್ತಾಗಿ ಗುರ್ತಿಸಿಕೊಳ್ಳುವದು. ರೈಲ್ವೆಸ್ಪೇರ್ಷಗೆ ಹೋಗಿಬಂದಿದ್ದರೆ ಸಂತೋಷ. ಬಾಧಕವೇನೂ ಇಲ್ಲ. ತಾತಯ್ಯನವರನ್ನು ಚೆನ್ನಾಗಿ ಆಶ್ರಯಿಸು. ಭಗವದನುಗ್ರಹದಿಂದೆಲ್ಲರೂ ಕುಶಲಿಗಳು.

ಆಶೀಃ

೨೬೦

ಹಿರಿಯಳು ಭೀಮಪ್ಪನಿಗೆ (ವಿದ್ಯಾರ್ಥಿಯು ತಂದೆಗೆ ಬರೆದ ಕಾರ್ಡು)

ಭವ್ಯಂ ವಂದೇ ಮಾತರಂ 25.5.33

ತೀ॥ ರವರ ದಿವ್ಯಚರಣ ಸನ್ನಿಧಿಯಲ್ಲಿ ಬಾಲಕಕೃತ ಸಾಷ್ಟಾಂಗ ನತಿಪೂರ್ವಕಾನೇಕವಿಜ್ಞಪ್ತಯಃ. ಸಂಪ್ರತಿ.

ತಮ್ಮಿಂದ ಆಶೀರ್ವಾದ ಪತ್ರಿಕೆ ಯಾವುದೂ ಬರದೆ ಯತ್ಕಿಂಚಿಚ್ಚಿಂತಾಸ್ಪದವಾಗಿದೆ. ಭಾವಿತವು ಅನ್ಯಥಾಭೂತೇ ಯಥಾ ತಥಾ ಭಾತಿ । ಯಥಾ ತಥ್ಯವಿದ್ದಿದ್ದರೆ ಈ ಅಭಾವಾನುಬೋಧಕ– ಪ್ರತಿಪತ್ತಿಯು ಕಾಣುತ್ತಿರಲಿಲ್ಲ, ಯದ್ವಾ ಭಾವ್ಯಪ್ರಕರ್ಷದಿಂದ ವಿಳಂಬವೋ ಅಭಾವಬೋಧಿಕತಾನಿರೂಪಿತಸಿದ್ಧಾಂತವು ಯಾರಿಂದ. ಅನ್ಯತಾಯಾ ಅಪಿ ಭಾವನೆಯು ಸಂಭಾವಿತವಾಗಿದೆ. ಯದ್ಯಪಿ ಸಂಭಾವಿತವಾದರೂ ಅಸ್ಮದೀಯವಿಭಾವವಂತೂ ತದಪಿ ನ ಸಂಭಾವ್ಯತೇ. ಸಂಭಾವವಿದ್ದರೆ ಅದು ಯಾವಾಗ. ಯುಗಪತ್ ಎರಡರ ವಾ ಮೂರರ ಸಂಭವವೆ. ಅನ್ಯತಮಂತೋ. ಒಬ್ಬಳು (ಹಿರಿಯಳು) K.V. ಭೀಮಪ್ಪನಿಗೆಂದು ಪ್ರವೃತ್ತಿಯಿದೆ. ತದಪಿ ಚ ಸಿದ್ಧಾಂತವದೇವ ಶ್ರುತಮ್

ನಾತಿವಿಶೇಷಃ. ಇತಿ ಸಾಷ್ಟಾಂಗ ನತಿಪೂರ್ವಕವಿಜ್ಞಪ್ತಯಃ

೨೬೧

ಪ್ಲೇಗ್ ಗಾಬರಿ

ಮಗನಿಗೆ ತಂದೆಯು ಬರೆದ ಕಾರ್ಡು

ಕುಶಲ ಶ್ರೀಃ ತಾ। 28 $^{10}/_{33}$

ಆಶೀಃ ಉ.ಕು.ಸಂ. ನಿನ್ನೆರಡು ಕಾರ್ಡುಗಳೂ ಹಸ್ತಗತವಾದುವು. ಇಲ್ಲಿ ಇಬ್ಬರೂ ಈವರಿಗೆ ಕುಶಲರು. ವೇ।...ನವರಿಗೆ ಸೊಸೇ ಮೂಲ್ಕ ಚೀಟಿಯು ಸೇರಿದೆ. ಅವರೂ ನೆನ್ನೆ ನಿನಗೆ ಕಾರ್ಡು ಬರೆದಿರಬಹುದು. ಇಲ್ಲಿ ಏನೂ ಹೆಚ್ಚು ವಿದ್ಯಮಾನವಿಲ್ಲ. ನಿನ್ನ ಅತ್ತಿಗೆಗೆ ಸಃಖ್ತೆ ಖಾಯಿಲೆ ಎಂದು ಭಾನುವಾರ ಸಾಯಂಕಾಲ ಕಾರ್ಡು ಬಂದುದರಿಂದ ಸೋಮವಾರ ಅಲ್ಲಿಗೆ ಹೋಗಿ ಗುರುವಾರ ಮೊಸಳೆಯ ಮಾರ್ಗವಾಗಿ ಬಂದಳು. ಭಗವದನುಗ್ರಹದಿಂದ $^{1}/_{16}$ ಭಾಗ ಗುಣವಾಗಿದೆ. ಎದೆಯಲ್ಲಿ ಹುಣ್ಣು ಏಳುತ್ತಿರುವದರಿಂದ ಬಾಧೆ ಬಹಳ. ಅದು ಒಡೆದು ಮಾಯಲು ಇನ್ನೂ 1 ತಿಂಗಳ ಮೇಲಾಗಬಹುದು. ಪ್ಲೇಗ್ ಬಂದು ಜನಗಳೂ ಗಾಬರಿ ಹೇಳಿದ್ದರಿಂದ ಅವನೂ ಗಾಬರಿಯಾದನು. ಈಗಿನ ಸಂದರ್ಭದಲ್ಲಿ ಪ್ಲೇಗಲ್ಲವಾಗಿ ಹುಣ್ಣಿನ ಬಾಧೆಗೆ ಕಂಕುಳಲ್ಲಿ ಗದಗಳಲೆ ಇರುವುದು ಬಾಧೆಗಾಕರವಾಗಿದೆ. ಕ್ರಮಶಃ ಭಗವಂತನು ಗುಣಪಡಿಸಿಯಾನೆಂಬ ನಿರೀಕ್ಷಣೆ ಇದೆ. ಗಾಬರಿಯಂಶಗಳೇನೂ ಇಲ್ಲ. ಚಿ। ಮೊಗುವು ಆರೋಗ್ಯವಾಗಿ ಮೊಗುಚಿಕೊಂಡು ಆಟವಾಡುತ್ತಿದ್ದಾಳೆ. ಸಧ್ಯದಲ್ಲಿ ಅವಳ ಸಂರಕ್ಷಣೆಯು ಕ್ರೋಯ ಕ್ಷೀರದಲ್ಲಿದೆ. ಮುಖ್ಯ ಅವಳಿಗೂ ಕ್ಲೇಶಗಳು ಒದಗುತ್ತಿವೆ. ಪರಮೇಶ್ವರಾನುಗ್ರಹವಿದ್ದಂತಾಗಲೇಬೇಕು. ಮಾಡುವದಾದರೂ ಏನಿದೆ ? ಹೆಚ್ಚು ವಿಚಾರಗಳಿಗೆ ಬರೆಯುವೆನು. K.S. ವೆಂ.ರ ಸೋದರತ್ತೆಯ ಮಗನಿಗೊಂದು ಕನ್ಯೆ ಇರುವಳಂತೆ (ಅನಾಥಾಲಯದ ಅಕ್ಕಮ್ಮನವರ ಮಗನಿಗೆ). ಅವರ ಮನೆ ಅಂ.ಸಂ.ರ ಮನೆಯ ಅಕ್ಕಪಕ್ಕದಲ್ಲಿರುವದಂತೆ. ವಿಚಾರಿಸಿ ಏನಾದರೊಂದು ವ್ಯಾಜದಿಂದ ಕನ್ಯೆಯನ್ನು ನೋಡಿ ಫಲಿತಾಂಶ ವನ್ನು ತಿಳಿಸಿದರೆ ನಂತರ ನಾನು ಬರುವೆನು. ಸಂಕೋಚಪಡಬೇಡ. ಗಂ.ತಾ... ಮನೆಗೂ ಒಮ್ಮೆ ಹೋಗಿ ಬರುವುದು. ತಿಳಿಸುವುದು.

ಆಶೀರ್ವಾದಾಃ

೨೬೨

ಅಗ್ರಹಾರದ ಹುಡುಗಿ (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀಃ 8.11.33

ಆಶೀಃ ಉ.ಕು.ಸಂ. ಅಣ್ಣಯ್ಯನೊಡನೆ ಮಾಡಿದ ನಿನ್ನ ಪ್ರಸ್ತಾಪವು ತಿಳಿಯಿತು...ಕೊಡಬೇಕೆಂಬ ಆಶೆಯಿಂದ

ಚೆನ್ನಯ್ಯನವರ ಕನ್ಯೆಯನ್ನು ವಿಚಾರಿಸುವ ಚಪಲ ಸ್ವಲ್ಪವಿದ್ದುದರಿಂದ ಹಾನಗಲ್ಲು ರಾಮಸ್ವಾಮಯ್ಯನವರಲ್ಲಿ ಪ್ರಸ್ತಾಪಿಸಿದೇನೆ. 1 ವಾರದಲ್ಲಿ ಇತ್ಯರ್ಥ ತಿಳಿಯಬಹುದು. ನೀನು ಪದೇ ಪದೇ ಲಗ್ನ ಮುಂತಾದ ಕಾರಣಗಳಿಂದ ನಮ್ಮೊಡನೆ ಶ್ವಶೂರ ಗೃಹಕ್ಕೆ ಹೋಗಿಬರುತ್ತಿರಬೇಕೆಂಬ ಆಶೆಯಿಂದ ಪೀಡಿತನಾಗಿದೇನೆ. ಮ। BMರವರು ಬೆಂ.ನಲ್ಲಿ ವಿನಾ ಮಾಡಲು ಸಾಧ್ಯವೇ ಇಲ್ಲ. ಒಂದು ವೇಳೆ ಬಂಧುತ್ವ ಮಾಡಲು ನಮಗಿಷ್ಟವಿದ್ದಲ್ಲಿ ಇಲ್ಲಿಗೆ ಬಂದು ಮಾಡುವಿರಾ ಎಂದು ಪ್ರಸ್ತಾಪಿಸಬಹುದು...

ಹಿಂದೆ ಮುತ್ತುವಿಗೆ ಪ್ರಸ್ತಾಪ ಬಂದಾಗ ಇಲ್ಲಿ ಮಾಡಲು ಒಪ್ಪಿದ್ದರೆ ? ಅವೊಂದೂ ಬೇಡವೆಂದೇ ನಿರ್ಧಾರವಾದಲ್ಲಿ ಅಗ್ರಹಾರದ್ದನ್ನು ನಿಷ್ಕರ್ಷಿಸಲು ಯತ್ನಿಸುತ್ತೇನೆ. ಇದು ನಿನ್ನಲ್ಲಿ ಕೇಳುವ ಕೊನೆಯ ಪ್ರಶ್ನೆ. ನಿನ್ನ ಅಣ್ಣನಂತಹುದೇ ನಿನಗೂ ಆಗುವದಲ್ಲ ಎಂಬ ನಮ್ಮ ಕೊರತೆಯೂ ಜನಗಳ ಅವಹೇಳನಕ್ಕೂ ಆಕರವಾಗುವದೆಂಬ ಯೋಚನೆಯೂ ಬಾಧಿಸುತ್ತಿದೆ. ಲಭ್ಯವು ಹೇಗಿರುವದೋ ತಿಳಿಯದು. ನಿನ್ನ ಉತ್ತರದ ನಿರೀಕ್ಷಣೆಯಲ್ಲಿದೆ (ಸಂಕೋಚವಿಲ್ಲದೆ) ತಿಳಿಸು. ನಿನ್ನ ಆರೋಗ್ಯದಲ್ಲಿ ಬಹಳ ಜಾಗರೂಕನಾಗಿರು. ವ್ಯಾಸಂಗಪರನಾಗಿದ್ದರೆ ಉತ್ತಮ.

ಆಶೀಃ

೨೬೩

ದ್ರವ್ಯಕನ್ಯೆ ಸುಖವಲ್ಲ (ತನ್ನ ವಿವಾಹ ವಿಷಯ, ತಂದೆಗೆ ವಿದ್ಯಾರ್ಥಿ)

ಕ್ಷೇಮ ಶ್ರೀಃ 19-12-33

ತೀ॥ ರವರ ದಿವ್ಯಚರಣ ಸನ್ನಿಧಿಯಲ್ಲಿ ಬಾಲಕಕೃತ ಸಾಷ್ಟಾಂಗ ನಮಸ್ಕಾರಪೂರ್ವಕಾನೇಕವಿಜ್ಞಪ್ತಯಃ ಸಂಪ್ರತಿಃ

ಹಳ್ಳಿಯಕಡೆಯಲ್ಲಿ ಗೃಹಕೃತ್ಯ ನಿರ್ವಾಹಕ ಸಾಮರ್ಥ್ಯವ ಬಾಂಧವಾ ಲಕ್ಷಣ ಲಕ್ಷಿತವಾದ ಇನ್ನೂ ಇತರ ವಿಚಾರದಲ್ಲಿಯೂ ಸಮೀಚೀನರಾದ (ನಮ್ಮ ನಡತೆಯಲ್ಲಿ ನಾವು ಯಥಾಶಕ್ತಿ ಮಾಡಬಹುದಾದ ಸ್ಥಳಗಳಲ್ಲಿರತಕ್ಕ) ವ್ಯಕ್ತಿಗಳು ದೃಷ್ಟವಾಗಿರುವಲ್ಲಿ ಅವುಗಳಲ್ಲಿ ಒಂದನ್ನಾರಿಸಿ ತೆಗೆದುಕೊಳ್ಳುವುದು ನಮ್ಮ ಸ್ವಶಕ್ತಿ ಸಾಧ್ಯವಾಗಿರುವಾಗ, ಅಪರಿಚಿತರು, ಅನ್ಯಕಾರ್ಯಾಸಕ್ತರು, ಅನಾಪ್ತರು, ನಾಮಮಾತ್ರಶ್ರುತರು, ನಮ್ಮ ಹೆಸರೇ ಕೇಳಿಲ್ಲ. ನಾವು ಅವರು ಯಾರೆಂದು ಯೋಚಿಸಿದರೆ ಅವರೂ ಒಬ್ಬರು ಅಜ್ಞಾತ ಕುಲಗೋತ್ರಜ್ಞರು. ಈ ವ್ಯವಹಾರದಲ್ಲಿ ಪ್ರವೃತ್ತಿಯೇ ಸಲ್ಲ. ಮೈಸೂರಿನಲ್ಲಿ ಅಪರಿಗಣಿತರು, ಕಾರ್ಯಕಾರಿಯಲ್ಲದವರು ಇಂತಹ ಜನಗಳಲ್ಲಿ ನಾವು ಪತ್ರವ್ಯವಹಾರ ನಡೆಸುವುದರ ಉದ್ದೇಶವೇನೋ ತಿಳಿಯದು. ಈ ರೀತಿಯ ಜನಗಳು ಅಭಿಮಾನದಿಂದ ಕಾರ್ಯಕಾರಿಗಳೇ ಅಥವಾ ಅಜ್ಞಾತರೆಂದು ಕಾಗದವನ್ನು ಸೃಷ್ಟಿಸಿ ಬಿಸಾಡಿ ತಮ್ಮ ಕೆಲಸ ನೋಡುವರೋ. 2ನೇ ಸಲದ್ದೇ ಪ್ರಕೃತದಲ್ಲಿ ಅಪ್ರಕೃತದಲ್ಲಿಯೊ...ಅದು ಹಾಗೇ ಸರಿ. ಅಲ್ಲಿರುವವುಗಳಿಗಿಂತ ಇಲ್ಲಿ ಸಮೀಚೀನ ಎಂಬವ ಭಾವವೊ ಅಥವಾ ನಾಗರಿಕರಾಗಿಯೂ ವಿದ್ಯಾವತಿಯರಾಗಿಯೂ ಇರುವ ಕನ್ಯೆಯರಾಗಬೇಕೆಂದೇ ಇರಬೇಕು. ಅಲ್ಲಿ ಸಮೀಚೀನವಾಗಿರುವುದು ಬಹಳ ದೂರವೋ ಏನೋ ಎಂದು ಯೋಚಿಸಿದರೆ ಅದಕ್ಕಿಂತ ದೂರ. ಯದ್ವಾ ನಾಗರಿಕ ಕನ್ಯೆಯರನ್ನು ತಂದು ಅನುಭಾವ್ಯರನ್ನು ಮಾಡಿ ಆನಂದಪಡುವ ಅಭಿನಿವೇಶವೋ? ಹಾಗಲ್ಲದೆ ಇಲ್ಲಿಯ ಕನ್ಯೆಯೇ ಆದರೆ ಅನುಕೂಲವಾಗಿ...ವಾಗುವುದೆಂಬ ಅಭಿಪ್ರಾಯವೋ? ಯದ್ವಾ ಇಲ್ಲಿಯ ಬಾಂಧವ್ಯದಿಂದ ಆಢ್ಯತೆಯು ಹೆಚ್ಚುವುದೋ. ಏವಂಚ ಭಿನ್ನಭಿನ್ನವಾದ ಅಭಿಪ್ರಾಯಗಳಿಂದ ಕೆಲಸ ಮಾಡುವುದು ಸುಮ್ಮನಿರುವುದಕ್ಕಿಂತ ಸ್ವಲ್ಪ...ವೇ ಸರಿ. ಮುಂದಾದರೂ ಅವರೆಲ್ಲಾ ನನಗೆ ಸ್ವಲ್ಪ ಸಂಬಂಧಿಕರೂ ಎಂಬ ಅಭಿಪ್ರಾಯದಿಂದ ಸ್ವಲ್ಪ ಬಾಯಿ ಹಾಕಿದೆನೇ ಹೊರತು ಮತ್ತೇನೂ ಆಕ್ಷೇಪಣೆ ವಿಚಾರವಿಲ್ಲ. ಅಲ್ಲಿಯೇ ಬಡವರಾದರೂ ಉತ್ತಮವಾದ ಬಾಂಧವ್ಯ ಪ್ರತಿಪಾದಕರಾಗಿದ್ದರೆ ಕಾರ್ಯಕ್ಷೇಮ. ಅಲ್ಲಿಯೇ ಸಮೀಚೀನವಾಗಿರುವುದು ಎಂದರೆ ಅಗ್ರ...ಹುಡುಗಿ ನನಗೆ ಬೇಡ... ದ್ರವ್ಯಗಳಲ್ಲಿ ಬಾಯಿ ಬಿಟ್ಟರೆ ನಮ್ಮನ್ನು ಎಷ್ಟರಮಟ್ಟಿಗೆ ಭಾವಿಸುವರೋ. ಹೋಗಲಿ. ಪ್ರಕೃತದಲ್ಲಿ ಅಲ್ಲಿ ಸಮೀಚೀನ ವಾಗಿರುವುದಿಲ್ಲದಿದ್ದರೆ ಸದ್ಯಕ್ಕೆ ನಿಲ್ಲಿಸಿಬಿಡುವುದರಲ್ಲಿ ತಾನೆ ಕಷ್ಟವೇನೂ? ಬಾಧೆಯಿಲ್ಲವಲ್ಲ...ಅಂತೂ ದೈವೇಚ್ಛೆ ಇದ್ದಂತೆ ಆಗುವುದೇ ಒಳ್ಳೆಯದು. ಈ ಕ್ಷುದ್ರಗಳೆಲ್ಲ ನಮ್ಮ ಕಷ್ಟವನ್ನು ಪರಿಹಾರ ಮಾಡಲಾರವು. ಅಂತೂ...ದ್ರವ್ಯಪ್ರಧಾನವಾದ ಕನ್ಯೆಯರು ಸುಖವಲ್ಲ. ತಮ್ಮ ಚಿತ್ತ ಬಂದಂತೆ ಮಾಡುವದು.

ದ್ರವ್ಯಾಪೇಕ್ಷೆಯನ್ನು ಮೀರಿದ ಚಿಂತನೆಯನ್ನೂ ಅದನ್ನು ತನ್ನ ತಂದೆಗೆ ಇಷ್ಟು ನೇರವಾಗಿ ಹೇಳುವ ಧೈರ್ಯವನ್ನೂ, ವಿನಯದ ನಡುವೆಯೇ ಇದು ಸಾಧ್ಯವಾಗಿರುವುದನ್ನೂ ಗಮನಿಸಬೇಕು.

೨೬೪

ರಾಮಾಯಣದ ಪ್ರಶ್ನೆ (ವಿದ್ಯಾರ್ಥಿಯ ಕಾರ್ಡು)

ಕ್ಷೇಮ ಶ್ರೀ 10-1-34

ತೀ॥ರವರ ದಿವ್ಯ ಚರಣ ಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು, ಸಂಪ್ರತಿ.

ತೀ॥ ಸುಬ್ರಹ್ಮಣ್ಯಶಾಸ್ತ್ರಿಗಳ ಹಸ್ತ ಕಳುಹಿಸಿದ ಆಶೀಃ ಪತ್ರಿಕೆಯು

ಕೈ ಸೇರಿತು. ಆ ದಿವಸ ನಾನು ಅವರನ್ನು ನೋಡುವ ವೇಳೆಗೆ ಸಮಯ ಮೀರಿತ್ತು. ಈ ದಿವಸ ಊಟದ ಸಾವಕಾಶದಿಂದ ಏವಂಚ..."ನೀನು ರಾಮಾಯಣ ಪ್ರಶ್ನೆ ನೋಡಿದಾಗ ಎಲ್ಲಕ್ಕೂ ಸುಖವಾಗಿ ಬಂದಿತೆ ಎಂಬ ವಿಚಾರ ತಿಳಿಸಿದರೆ ಸಾಕು. ನಾನು ಇನ್ನು ಅದನ್ನು ಪುನಃ ನೋಡುವುದಿಲ್ಲ" ಎಂಬ ವಾಕ್ಯವು ಯಾವ ಅಭಿಪ್ರಾಯದಿಂದ ಎಂಬ ವಿಚಾರವು ವೇ॥ ದೀಕ್ಷಿತರ ಬಳಿ ರಾಮಾಯಣ ಪ್ರಶ್ನೆ ನೋಡಿಸಿದ್ದರಲ್ಲಿ ಅನುಕೂಲವಾಗಲಿಲ್ಲ ಎಂಬ ವಾಕ್ಯ ಮನಸ್ಸಿಗೆ ಬಂದಮೇಲೆ ಗೊತ್ತಾಯಿತು. ಸರ್ವಥಾ ಜಾತಕ ಸಂಘಟನೆಯಿಲ್ಲ ಎಂದು ಮತ್ತೆ ಮತ್ತೆ ವಿಜ್ಞಾಪಿಸಿಕೊಂಡರೂ ಪುನಃ ಅದರಲ್ಲಿ ಇಷ್ಟು ಪ್ರವೃತ್ತಿಯು ಮೇಲ್ಕಂಡ...ರಿಂದಲೇ ಎಂಬುದು ಅಭಿಪ್ರಾಯವಾಯ್ತು. (...ರ ವಿಚಾರ)– ಮಾಘ ಶುದ್ಧದಲ್ಲಿ 7 ನೇ ದಿನ (ಸಪ್ತಮಿ) ಬಹುಮಾನ ಸಭೆಯಿರುವುದರಿಂದ ಸರ್ವಥಾ ಅವಕಾಶವಿಲ್ಲ. ಫಾಲ್ಗುನ ಶುದ್ಧದಲ್ಲಿ ಎಂದರೆ ಅಲ್ಲಿಗೆ ನಮ್ಮ ಪರೀಕ್ಷೆಯು 15 ದಿನಗಳುಳಿದಂತಾಗುವುದು. ಆದ್ದರಿಂದಲೇ 2ನೇ ವರ್ಷವಾದರೂ ಆಗಬಹುದೆಂಬ ಅಭಿಪ್ರಾಯ ಸ್ಫುಟವಾಯಿತು. ತಾವು ನಿದರ್ಶಿಸಿದ 2ರಲ್ಲಿಯೂ ಅನುಕೂಲ ದೈವಾಭಾವದಿಂದ ಇನ್ನು ಯಾವುದೂ ಸಮೀಚೀನವಾಗಿಲ್ಲವಾಗಿ ಸಧ್ಯಕ್ಕೆ ಮದುವೆಯ ಯೋಚನೆಯು ನನ್ನ ಮನಸ್ಸಿನಿಂದ ಬಹು ದೂರದಲ್ಲಿದೆ. ಇನ್ನು ನಾನು ಇಲ್ಲಿ 1½ ವರ್ಷ ಮಾತ್ರ ಇರುವ ಸಂದರ್ಭ. ಅನುಕೂಲದೈವ ಇದ್ದರೆ ಇನ್ನು ಮುಂದಕ್ಕೂ ಇರಬೇಕಾಗುವುದು. ಸುಮ್ಮನೆ ಅಲ್ಲಿ ಇಲ್ಲಿ ಪ್ರಸ್ತಾಪಿಸುವುದರಿಂದ... ಅವರಿವರು ಬಂದು ಪ್ರಸ್ತಾಪಿಸಬಹುದು. ಉತ್ತರವಿಲ್ಲದೆ ಹೋಗುವುದು ದುರ್ಭಾವನಾವಕಾಶ. ಆದ್ದರಿಂದ ಈ ಪ್ರಕರಣವನ್ನು ಸಧ್ಯಕ್ಕೆ ಶಾಂತಮನಸ್ಕರಾಗಿ ನಿಲ್ಲಿಸಿದರೆ ಎಲ್ಲರ ಮನಸ್ಸೂ ಪ್ರಶಾಂತವಾಗುವುದಾಗಿ ಕಾಣುತ್ತೆ. ಇದು ಯಾರಿಗೂ ಅಷ್ಟು ವ್ಯಸನಕಾರಣವಲ್ಲ. ಹಾಗೆ ದುಃಖಸಂಭಾವ್ಯವಾಗಿದ್ದರೆ ಸಮೀಚೀನ ವಸ್ತುಪರಿಗ್ರಹದಲ್ಲಿಯೂ ಸುಖಾನುಭವ ಅನುಭಾವಿಸತಕ್ಕದ್ದಿದೆ. ಸಾವಕಾಶವಾಗಿ ಮದುವೆಯೆಂದ ಮಾತ್ರಕ್ಕೆ ಮದುವೆ ಮಾಡಿ ಕೊಳ್ಳುವುದಿಲ್ಲವೆಂದಲ್ಲ...

ಮಾಘಫಾಲ್ಗುನಗಳಲ್ಲಿ ಲಗ್ನವಿಲ್ಲದಿರುವುದರಿಂದಲೇ ಮುಂದೆ ಆಗಲುಳ್ಳದಕ್ಕೆ ಈಗ ಪ್ರಯತ್ನವು ಅಸಮೀಚೀನವಾಗಿದೆ. ತಾವು ದಯೆಯಿಟ್ಟು ದ್ರವ್ಯವ್ಯಯಿಕವಾದ ದೇಹಶ್ರಮಿಕವಾದ ಈ ಕೆಲಸದಿಂದ ವಿಶ್ರಾಂತರೆಂಬ ವಾರ್ತೆಯಿಂದ ಶ್ರವಣೋತ್ಸವವು ನಡೆಯಬಹುದೆಂದು ನಂಬಿರುವೆನು. ಪ್ರಯತ್ನವು ಸಫಲ ವಾಗುವುದಿಲ್ಲ, ಪತ್ರವ್ಯವಹಾರದಿಂದುಪಯೋಗವಿಲ್ಲ, ಅತಿಶಯ ವಿಜ್ಞಾಪಿಸಲು ಶಕ್ತನಲ್ಲ, ತಮ್ಮ ಮತ್ತು ಸೌ॥ ಮಾ॥ ಶ್ರೀಯವರ ಆರೋಗ್ಯಕ್ಕೆ ಆಶೀಃ ಪತ್ರಿಕಾ ದಯಪಾಲಿಸಬೇಕಾಗಿ ಪ್ರಾರ್ಥನೆಗಳು.

ಇತಿ ವಿಜ್ಞಾಪನಾ

೨೬೫

ಮಾತೃವಾಕ್ಯ ಪರಿಪಾಲನೆ (ವಿದ್ಯಾರ್ಥಿಗೆ ತಂದೆಯ ಕವರು)

ಕುಶಲಂ ಶ್ರೀಃ ತಾ। 12 1/34

ಆಶೀಃ ಉ.ಕು.ಸಂ.

ನಿನ್ನ ತಾಯಿಯು ನಿನ್ನನ್ನು ನೋಡಬೇಕೆಂದು ಅಪೇಕ್ಷಿಸುತ್ತಾಳೆ. ಆದ್ದರಿಂದ ನೀನು ಭಾನುವಾರ ಅಥವಾ ಸೋಮವಾರ ಮಧ್ಯಾಹ್ನ ಕ್ಕಾದರೂ ಇಲ್ಲಿಗೆ ಸೇರುವುದು. ಮಂಗಳವಾರವೇ ವಾಪಸ್ ಹೊರಡಬಹುದು. ನಾವು ದೈವಾನುಗ್ರಹದಿಂದ ಕುಶಲರು. ಅತಿಶಯವಿಲ್ಲ. ಮಾತೃವಾಕ್ಯ ಪರಿಪಾಲನೆಗೆ ಸುಸಮಯವಲ್ಲವೆ? ಆಶೀರ್ವಾದಾಃ

ಉದಾಸೀನ ಮಾಡಿದರೆ ಅವಳು ಮಾತ್ರ ಅಲ್ಲಿಗೆ ಬರುವಳು ಆಶೀಃ

ಗತಿಸಿದ ವಿಷಯಗಳು

ಆಶೀಃ ಉ.ಕು.ಸಂ. 26 1/34

ನಿನ್ನ ಬಹುಮಾನದ ವಿಷಯವನ್ನು ತಿಳಿಯಲು ನಿನ್ನ ತಾಯಿಯು ಅಪೇಕ್ಷಿಸುತ್ತಾಳೆ. ವೇ॥ ತಿ. ಅ. ಕುಟುಂಬದ ಸಂಗಡ ಬೀಗದ ಕೈಗಳು ಕಳುಹಿದ್ದೆ. ತಲಪಿದವೆ ? ಹ। ಸ್ವಾಮರಾಯರ ಮಗನು ಅಲ್ಲಿ ಸುಬ್ಬಮ್ಮನ ಮನೆಗೆ ಬಂದಿದಾನೆ. ಆರೋಗ್ಯ ವಾಗಿರುವನೆಯೆಂಬುದಕ್ಕೂ ನಿನ್ನಾರೋಗ್ಯಕ್ಕೂ ತುರ್ತು 1 ಕಾರ್ಡು ಬರೆವುದು. ಈ ಕಾರ್ಡಿನ ಛಾರ್ಜು ಸ್ವಾಮರಾಯನಿಂದ ಬರುವದಾಗಿದೆ. ಉದಾಸೀನ ಮಾಡಬೇಡ (ವೇ। ತಿಪ್ಪಯ್ಯಾವ ಧಾನಿಗಳ ಕುಟುಂಬದ ಸಂಗಡ ಕಳಿಸಿದ್ದೇನೆ). ವ್ಯಾಸಂಗ ನಿರತನಾಗು. ಶಾಂತ ಮನಸ್ಕನಾಗಿರುವದು ಒಳ್ಳೆಯದು.

ಆಶೀಃ

೨೬೬

ನಿನ್ನ ಮದುವೆಗೆ ಬಾ (ವಿದ್ಯಾರ್ಥಿಗೆ ತಂದೆಯ ಪತ್ರ)

ಕ್ಷೇಮ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನಃ 1-2-34

ಆಶೀಃ ಉ.ಕು.ಸಂ. ಪೂರ್ವಾಲೋಚನೆಯಂತೆ ಈ ಮಾಘ ಬ. ೯ ಗುರುವಾರ ಕೃಷ್ಣಾಪುರದ ವೇ। ಕೃಷ್ಣಶ್ರೌತಿಯವರ ಪುತ್ರಿ

ಚಿ। ಸೌ। ಸಾವಿತ್ರಮ್ಮನನ್ನು ತಂದು ವಿವಾಹವನ್ನು ಬೆಳೆಸಲು ಹಿರಿಯರು ನಿಶ್ಚಯಿಸಿರುವುದರಿಂದ ನೀನು ೭ ಮಂಗಳವಾರ ಸಾಯಂಕಾಲಕ್ಕೆ ಇಲ್ಲಿಗೆ ಬರುವುದು. ಉದಾಸೀನ ಮಾಡಬಾರದು. ಬರುವಾಗ ಅತ್ಯವಸ್ಯಕ ವ್ಯಾಸಂಗದ ಪುಸ್ತಕಗಳನ್ನೂ ಶುಭ್ರವಾದ (ಬಣ್ಣದಲ್ಲಿ ಭೂಸಾ ಸಕ್ಕರೆಯಂತಿರುವ) 1 ಸೇರು ಉಪ್ಪನ್ನೂ ತರುವುದು. ಹಸನಾದ ಕೇಸರಿ ½ ತೊಲ ತರುವುದು. 8 ಬುಧವಾರವೇ ಇಲ್ಲಿಂದ ಹೊರಡಬೇಕು. ಧೋರಣೆ ಮಾಡ ಬಾರದು. ಇತಿ ಆಶೀರ್ವಾದಗಳು.

ಹೊಸ ಬರಹ

ಆಶೀಃ. ಸಂತರ್ಪಣೆಯನ್ನು ಅವರಿಗೇ ವಹಿಸಿದೆ. ನೀನು ಮಂಗಳವಾರ ಸಾಯಂಕಾಲಕ್ಕೆ ಬರುವುದು. ಸುಗಂಧ ದ್ರವ್ಯಗಳಿಗೆ ದುಡ್ಡು ವ್ಯಯ ಬೇಡ. ಯಾವ ಸಾಮಾನೂ ತರಬೇಡ.

ಆಶೀಃ

ತಾ। 15/2/34

ಕುಶಲಂ

ಲಗ್ನ ಪತ್ರಿಕೆಗಳು ತಲಪಿದವು. ಈ ದಿವಸ ಕೃಷ್ಣಾಪುರಕ್ಕೆ ಬಂದೆ. ಎಲ್ಲ ವಿಚಾರವನ್ನು ಮಾತನಾಡಿದ್ದಾಯ್ತು. ಹಿಂಭಾಗದಲ್ಲಿ ಹೊಸದಾಗಿ ಬರೆದಿರುವದನ್ನು ಆಚರಿಸು.

ಆಶೀಃ

೨೬೭

ಹುಡುಗಿಯ ಲಕ್ಷಣ (ವಿದ್ಯಾರ್ಥಿಗೆ ತಂದೆಯ ಕವರು)

ಕುಶಲಂ ಶ್ರೀ ಲಕ್ಷ್ಮೀ ಕೇಶವಃ ಪ್ರಸನ್ನಃ ತಾ। $3\,^{2}/_{34}$

ಚಿ। ಗೆ ಆಶೀಃ. ಉ.ಕು.ಸಂ.

ನಿನ್ನ ಕಾರ್ಡೂ ಕಾಗದವೂ ಸೇರಿದುವು. ಅವರೂ ಆತುರವಾಗಿ ಫಾಲ್ಗುನ ಮಾಸದ ಲಗ್ನವನ್ನೇ ಬಯಸುತ್ತಿದ್ದರಾಗಿ ಆ ಭಾಗ ಉತ್ತಮವೇ ಆಯಿತು.

ತಾ। 28.1.34ನೆ ಭಾನುವಾರ (ಮಾಘ ಶು ೧೩) ನಾನು ಅವರ ಮನೆಗೆ ಹೋಗಿ ಕನ್ಯೆಯನ್ನು ನೋಡಿ ಅವರೊಡನೆ ಮಾತಾಡಿ ಬಂದೆನು.

1) ಮಾನ್ಯಗಾರರಾದ್ದರಿಂದ ಕೋರ್ಟು ವ್ಯವಹಾರದ ಮೇಲೆ ದ್ವೇಷ.

2) ವೈದಿಕವೃತ್ತಿಯವರು, ಸಭ್ಯರು, ವಿನೀತರು, ಮರ್ಯಾದೆಪರರು. ಆದರೂ ಆಧುನಿಕ ನಾಗರಿಕತೆಯು ಸಾಲದು.

3) ಸ್ಥಳದಲ್ಲಿರುವ ಸೌಕರ್ಯಗಳನ್ನು ಬಿಟ್ಟು ಪರಸ್ಥಳಕ್ಕೆ ಬರುವುದಿಲ್ಲ.

ಕನ್ಯಾವಿಷಯ

1) ತಲೆಯು ದಪ್ಪವಾಗಿಲ್ಲ. ಅವಯವಗಳು ಅಂದವಾಗಿಯೂ ದೃಢವಾಗಿಯೂ ಮುಖವು ಕಲಾಯುಕ್ತವಾಗಿಯೂ ಇವೆ.

2) ವಯೋನುಗುಣವಾಗಿ ಎತ್ತರವಾಗಿದಾಳೆ. ಸಾಮಾನ್ಯವಾದ ಗೌರವರ್ಣವೆನ್ನಬಹುದು. ಒಟ್ಟಿನಲ್ಲಿ ನನಗೇನೋ ಸಮರ್ಪಕ ವಾಯ್ತು.

3) ಕುಗ್ರಾಮವಾಸವು ತಪ್ಪಿದರೆ ಬಹುಮಟ್ಟಿಗೆ ಮಾರ್ಪಾಡಾಗುವುದು.

ಸಂತರ್ಪಣೆ ವಿಷಯ

1) ಅವರಿಗೆ ತಕ್ಕ ಮೌಲ್ಯವನ್ನು ಕೊಟ್ಟರೆ ನಿರ್ವಹಿಸುತ್ತಾರೆ. ಆದರೆ ಅದು ಇತರರಿಗೆ ನಮ್ಮ ದೌರ್ಬಲ್ಯವನ್ನು ಸೂಚಿಸಬಹುದು. ಇರಲಿ.

2) ನಾವು ಏನಾದರೊಂದು ರವೇಭಕ್ಷ್ಯವನ್ನು 1 ದಿನ ಮಾಡಿಸೋಣವೆಂದು ಅಭಿಪ್ರಾಯವಿದೆ. ಸ್ವಲ್ಪ ಶ್ರಮಪಡಬೇಕು.

3) 2 ದಿವಸದ ಸಂತರ್ಪಣೆಯೂ ಸೇರಿ 50ಕ್ಕೆ ಓರಲಾರದೆಂದು ಭಾವನೆ ಇದೆ.

4) ಈ ಭಾಗದಲ್ಲಿ ಹಾಸನದಲ್ಲಿ ನಿಮ್ಮ ಚಿಕ್ಕಪ್ಪನವರ ಅಳಿಯ ಗುಂಡಪ್ಪನಿರುವದರಿಂದ ಸಂಭಾವನೀಯವಾಗಿ ಕಾರ್ಯ ನಿರ್ವಾಹ ಮಾಡಿಯಾರೆಂದು ನನ್ನ ಊಹೆ ಇದೆ. ತಯಾರ್ಮಾಡಿಸುವುದು ಹಾಸನದಲ್ಲೆ, ಇದಕ್ಕೆ ಸಾಧ್ಯವಿಲ್ಲದಲ್ಲಿ ಮಾಮೂಲ್ ಇದ್ದೇ ಇದೆ.

5) ಆ ಹುಡುಗಿಯ ಸೋದರ ಮಾವನೇ...ಲಗ್ನಕ್ಕೆ ಬಂದಾರೆಂಬ ಊಹೆ ಇದೆ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯ ತಿಳಿಸು. ಅದರಂತೆ ಪ್ರಯತ್ನಪಡುವೆನು.

ಇನ್ನು ಪ್ರಯಾಣದ ವಿಚಾರ

ಪ್ರಾಯಃ ಇಲ್ಲಿಂದ ಹತ್ತು ಜನಗಳಿಗೆ ಕಮ್ಮಿ ಇಲ್ಲದೆ ಹೊರಡಬೇಕಾಗುತ್ತೆ. ಹೋಗುತ ಬರುತ ಒಬ್ಬನ ಬಸ್ಸನ್ನೇ ಗೊತ್ತುಮಾಡಿದರೆ ಇಸಂ 1ಕ್ಕೆ 1-0-0 ಮೇರೆ ನಮ್ಮ ಸಂತರ್ಪಣೆಯ ಸಾಮಾನುಗಳೊಡನೆ ಹಾಸನಕ್ಕೆ ಬಿಡಬಹುದೆಂದು ನಿರೀಕ್ಷಣೆ ಇದೆ. ಅಲ್ಲಿಂದಾಚೆ 2 ಗಾಡಿಗಳು ಬೇಕು. ಅವನ್ನು ಅಲ್ಲಿಂದಲೇ ಕಳುಹುವಂತೆ ಏರ್ಪಡಿಸಬೇಕಾಗುತ್ತೆ. ಇದು ಸುಖವೆ?

2) ಗಾಡಿಯನ್ನೇ ಮಾಡಿಕೊಂಡು ಹೊರಡುವಲ್ಲಿ ಅಲ್ಲಿಗೆ ಗಾಡಿ 1ಕ್ಕೆ 4-4-0 ಬಾಡಿಗೆ ಕೊಡಬೇಕು. ಮಧ್ಯೆ 1 ಸ್ಥಳದಲ್ಲಿ ಪಾಕ ಪ್ರಯತ್ನ ಮಾಡಬೇಕು. ರಾತ್ರಿ ವೇಳೆಯ ಪ್ರಯಾಣವು

ಹಿತವಲ್ಲ. ಇದಕ್ಕೆ 8 ಬುಧವಾರವೇ ಹೊರಡಬೇಕು ಅಥವ ಬುಧವಾರ ಇಲ್ಲಿ ದೇವರ ಸೇವೆ ಮಾಡಿ ರಾತ್ರಿ 3-4 ಗಂಟೆಗೆ ಹೊರಟು ಗುರುವಾರ ಸಾಯಂಕಾಲ ಅಲ್ಲಿಗೆ ಸೇರಬೇಕು. ಆಗ್ಯೆ ನಿನಗೆ 1 ದಿವಸ ಕಾಲ ಹೆಚ್ಚಾಗುತ್ತೆ. ಇದು ಸುಖವೆ ? ಈ ಬಗ್ಯೆ ನಿನ್ನ ಉತ್ತರ ನಿರೀಕ್ಷಣೆಯಿಂದ ಮುಂದುವರಿಯುವೆನು.

ಪ್ರಿಂಟಿಂಗ್

ಕೆಲವು (20) ಕಾರ್ಡನ್ನು ಇಂಗ್ಲಿಷ್‌ನಲ್ಲಿಯೂ 30ನ್ನು ಕನ್ನಡದಲ್ಲಿಯೂ ಪ್ರಿಂಟ್ ಮಾಡಿಸಿ (ಮುಂದಣ ಕಾಪಿ ಮೇರೆ) ಬಸ್‌ನವರ ಸಂಗಡ ಕಳುಹುವ ದಿವಸವನ್ನು ತಿಳಿಸಿದರೆ ನಾನು ಕಾಯ್ದು ತೆಗೆದುಕೊಳ್ಳುವೆನು. ಆಶೀಃ.

ಅಲ್ಲಿಗೆ ತಕ್ಕಷ್ಟು ಇಟ್ಟುಕೊಂಡು ಅಲಂಕರಿಸಿಕೊಡಬೇಕಾದವರಿಗೆ ಕೊಡುವದು. ಈ ಕಾಗದ ತಲಪಿದ್ದಕ್ಕೆ ಉತ್ತರ ಬರೆವುದು. ಬರುವಾಗ ಹಸನಾದ ಊದುಗಡ್ಡಿ ಮುಂತಾದ ಸುಗಂಧದ್ರವ್ಯಗಳನ್ನೂ ½ ತೊಲ ಕೇಸರಿಯನ್ನೂ ತರುವುದು.

ಒಟ್ಟಿನಲ್ಲಿ ನಿನಗೆ 2 ದಿನ ಸಾವಕಾಶವಾದರೆ (ಬಸ್ಸಿಗಿಂತ 8 ರೂಗಳೂ ಕಮ್ಮಿ.) 2 ಸೇರು ಶುಭ್ರವಾದ ಉಪ್ಪನ್ನು ತರುವದು. ಲಗ್ನಪತ್ರಿಕೆಗಳನ್ನು ಯಾವ ಬಸ್ಸಿನಲ್ಲಿ ಕಳುಹುವಿಯೊ ಬರಿ.

ಗಾಡಿ ಪ್ರಯಾಣವಾದರೆ ನೀನು ಮಂಗಳವಾರ ಸಾಯಂಕಾಲವೇ ಇಲ್ಲಿಗೆ ಸೇರಬೇಕು.

ಆಶೀಃ

ಯಾವದಕ್ಕೂ ಜರೂರು ಬರಿ.

ಆಶೀಃ

ವ್ಯಾಸಂಗಕ್ಕೆ ಅವಸ್ಯಕವಾದ 2-3 ಪುಸ್ತಕಗಳನ್ನು ತರುವುದು. ಬೆಳ್ಳಿಯ ಪಾತ್ರೆಗಳನ್ನು ಕೊಡಬಹುದಾಗಿ ತೋರುತ್ತೆ. ತಿಮ್ಮಪ್ಪಯ್ಯನೂ ರಾಮಯ್ಯನೂ ದೇಶಭ್ರಷ್ಟರಾದರು.

(ಅದರ ಜತೆಯಲ್ಲಿರುವ ಲಗ್ನಪತ್ರಿಕೆಯ ಕರಡು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನಃ

ಆದಿತ್ಯಾದಿ...

ಕುರ್ವಂತು...

ಮ।। ಸನ್ನಿಧಿಯಲ್ಲಿ

ಸೇವಕ...ನತಿಗಳು. ಉ.ಕು.ಸಂ.

ಈ ಶ್ರೀಮುಖ ಸಂ...ಫಾಲ್ಗುನ ಶು. ೧೦ ಶುಕ್ರವಾರ ದಿವಿ ೭ ಘಳಿಗೆ ಮೇಲೆ ೧೧ ಘಳಿಗೆಯೊಳಗೆ ಸಲ್ಲುವ ಶುಭ ಮೇಷ ಲಗ್ನದಲ್ಲಿ ದ್ವಿತೀಯ ಪುತ್ರ ಚಿ।। ರಾ।।...ನಿಗೆ ಹಾಸನದ ತಾ। ಕೃಷ್ಣಾಪುರದಲ್ಲಿರುವ...ಶ್ರೌತಿಗಳ ಜ್ಯೇಷ್ಠ ಪುತ್ರಿ ಚಿ।। ಸೌ।। ಹ।। ಕುಂ।। ಶೋ।। ಗಳಾದ ಸಾವಿತ್ರಮ್ಮನನ್ನು ತಂದು ಕೃಷ್ಣಾಪುರದಲ್ಲಿ ವಿವಾಹ ಲಗ್ನ ಬೆಳೆಸಲು ಹಿರಿಯರು ನಿಶ್ಚಯಿಸಿರುವದರಿಂದ ತಾವು ಸಕುಟುಂಬ ಪರಿವಾರರಾಗಿ 2 ದಿನ ಮುಂಚೆ ದಯಮಾಡಿಸಿ ಲಗ್ನ ಬೆಳೆಸಿ ವಧೂವರರಿಗಾಶೀರ್ವದಿಸಿ ಸಂತೋಷಪಡಿಸಬೇಕಾಗಿ ಪ್ರಾರ್ಥಿಸುವ ತಮ್ಮ ವಿಧೇಯ

೨೬೮

ಅಭ್ಯಂಜನ ಮಾಡು (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀಃ ತಾ। 4-10-34

ಆಶೀಃ ಉ.ಕು.ಸಂ.

ನಿನ್ನ ಕಾಗದವು ತಲಪಿತು. ಮ। ತಮ್ಮಯ್ಯನವರಲ್ಲಿ ನಿನ್ನ ಕುಶಲವನ್ನು ತಿಳಿದುಬರುವಂತೆ ಹೇಳಿದ್ದೆನು. ಮತ್ತೇನೂ ಇಲ್ಲ. ಸೌಲಭ್ಯವಾಗಿ ದೊರೆತರೆ ಅಧ್ಯಾತ್ಮರಾಮಾಯಣ (ಸಣ್ಣತು) 1ನ್ನು ತರುವುದು. ಪೂಜೆ ಸುಬ್ರಾಯರ ಮನೆ ಮಗ್ಗುಲಲ್ಲಿರುವ Y.G.ಗೆ ಬ್ರಾಯರನ್ನು (ಕುರುಡ) ಕೊಡು. ಮ। ನಾರಾಯಣರಾಯರನ್ನು ಕಂಡು ಈ ದಸರದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಅವರ ಸ್ನೇಹಿತರು ಬರುವರಷ್ಟೆ. ನಿನ್ನ ಅಣ್ಣನನ್ನು ಅಲ್ಲಿಗೆ ಕಳುಹಲೆ? ಅದಕ್ಕೆ ನಾನು ಬರಲೇ ? ಬರಮಂಶವನ್ನು ತಿಳಿದು ಏನು ಹೇಳುವರೊ ಬರಿ. ಅವರು ಮಿತ್ರರ ಭೇಟಿ ಮಾಡಿಸಲು ಇದು ಸುಸಮಯ. ಈ ಅಕ್ಟೋಬರ್‌ನಿಂದ 30 Rs. ಕೆಲಸಗಳನ್ನು ಗ್ರಾಜುಯೇಟ್ ಗಳಿಗೇ ಕೊಡಬೇಕೆಂದು ಗೆಸೆಟ್ ಇದೆ ಎಂಬಂಶವನ್ನು ತಿಳುಹು. ಹೇಗಾದರೂ ಮಾಡಿ ಇದೊಂದು ಕೆಲಸವನ್ನು ದಯೆಯಿಟ್ಟು ಆಗ ಮಾಡಬೇಕೆಂದು ತಿಳುಹು. ಉಯ್ಯಾಲೆಯ ಸರಪಣಿಯನ್ನು ನಾಗರಾಜನೊಡನೆ ತರುವುದು (ಹೆಣಿಕೆಯದಾಗಬೇಕು). ಕ್ರಯವೆಷ್ಟಾಗಬಹುದು. ತೀ। ತಿ. ಅವಧಾನಿಗಳನ್ನು ಇನ್ನೊಮ್ಮೆ ಕೇಳಿ ಏನು ಹೇಳುವರೊ ತಿಳಿದು ಬರಿ. ಅನುಕೂಲವಾದರೆ ಇಬ್ಬರನ್ನೂ ಕಾಣಲು ಅಣ್ಣಯ್ಯನನ್ನು ಕಳುಹುವ ಯೋಚನೆ ಇದೆ. ಎಷ್ಟು ಶ್ರಮವಾದರೂ ನಿನ್ನ ಅಣ್ಣನ ವಿಚಾರದಲ್ಲಿ ಮಾಡಬೇಕಾದ ಎಲ್ಲ ಪ್ರಯತ್ನಗಳನ್ನೂ ಇನ್ನೂ ಕೊಂಚ ದಿವಸಗಳು ಮಾಡಿ ನೋಡಿ ನಂತರ ಸುಮ್ಮನಾಗಬೇಕೆಂದಿರುವದರಿಂದ ನೀನು ಅಲ್ಲಿರುವಾಗ ನಾನು ಸೂಚಿಸುವಂಶಗಳಿಗೆ ಮನಃಪೂರ್ತಿಯಾದ ಗಮನ ಕೊಡುವಿಯಾಗಿ ನಂಬಿದೇನೆ. ಪ್ಯಾಲೆಸ್ ಆ। ನಲ್ಲಾದರೂ ಆಗಬಹುದೆಂದು ಮ। B.S.N.ರಿಗೆ ತಿಳುಹು. ಮ। ತಮ್ಮಯ್ಯನವರ ಸಂಗ ಇನ್ನಾವ ವಿಷಯವೂ ಹೇಳಿಲ್ಲ. 15 ದಿನಗಳಿಗೊಮ್ಮೆ-ಯಾದರೂ ಅಭ್ಯಂಜನ ಮಾಡದೆ ಇರಬೇಡ. ದೇಹಾರೋಗ್ಯಕ್ಕೆ

ಮುಖ್ಯವಾಗಿ ಗಮನ ಕೊಡು. ಗದ್ದೆ ನಾಟಿ ಮಾಡಿ ಒಣಗಿ ಹೋಯಿತು. ದಕ್ಷಿಣ ದೇಶದ ಬಹುಭಾಗ ಅನಾವೃಷ್ಟಿಮಯ, ಉತ್ತರ ದೇಶಗಳು ಅತಿವೃಷ್ಟನಾಹುತಮಯ. ಅಂತೂ ಎಲ್ಲರಿಗೂ ಕಷ್ಟ. ವಿಶ್ವವ್ಯಾಪಿಯಾದ್ದರಿಂದ ಮಾಡುವದೇನಿದೆ. ಟ್ರಂಕನ್ನು ಸರಿ ಮಾಡಿಸಿಕೊಂಡು ಮರೆಯದೆ ತರುವುದು. ಅದರ ಅವಸ್ಯಕತೆ ಬಹಳ ಇದೆ.

ಆಶೀಃ

೨೬೯

ಮಾತಿನ ಅರ್ಥವೇನು ? (ಹಳ್ಳಿಯ ತಂದೆಗೆ ಬರೆದ ಕಾರ್ಡು)

ಕುಶಲಂ ಶ್ರೀರಾಮ ಹಾಸನ

ತಾ। 26.10.34

ತೀ।। ರವರ ದಿವ್ಯಚರಣ ಸನ್ನಿಧಿಗಳಲ್ಲಿ ಬಾಲಕಕೃತಾನೇಕ ವಿಜ್ಞಪ್ತಯಃ. ತದುಪರ್ಯೋಭಯ ಕುಶಲಂ ಸಂಪ್ರತಿ.

ಚಿ।। ಶೀನನು ತಾ। 23.10.34ರಲ್ಲಿ ಬರೆದ ಕಾರ್ಡು ತಲಪಿತು. ಅವನು ತನ್ನ ಕಾರ್ಡಿನಲ್ಲಿ ಅನ್ಯೋಽಪಿ ಕೋಽಪಿ ಯದಿ ಸ್ಯಾತ್ ಸ್ಥಿರ ಪ್ರದೇಶಃ ಇದಾನೀಂ ತದ್ವಾಕ್ಯಾಸ್ವಾದಯಿತುಂ ನಾವಕಾಶ ಇತಿ ತತ್ರೈವ ಗತ್ವಾ ಯಥಾಭವಂತಮೇವ ಪ್ರಾಪ್ನುಯಾತ್ತತ್ತಂ ತಥಾಕಾರ್ಯಂ ಎಂದು ಬರೆದಿರುವ ವಾಕ್ಯದ ಆಶಯವು ಸ್ಪಷ್ಟವಾಗಿಲ್ಲವಾದ ಕಾರಣ ತೀ।। ಭಾವನವರಿಂದ ಅವನು ಈ ವೇಳೆಗೆ ಊರಿಗೆ ಬಂದಿರಬಹುದೆಂದು ತಿಳಿಯಬಂತಾದುದರಿಂದ ಅವನ ಅಭಿಪ್ರಾಯವನ್ನು ಸ್ಪಷ್ಟವಾಗಿ ಕೂಡಲೇ ತಿಳಿಸುವುದಕ್ಕಾಗಿ ಈ ಕಾಗದವನ್ನು ಊರಿಗೇ ಬರೆದಿದ್ದೇನೆ. ನಾನು ಮಂಗಳವಾರ ಬಸ್ಸಿನಲ್ಲಿ ಕೊಟ್ಟು ಕಳುಹಿಸಿದ್ದ ಕಾಗದವು ತಲಪಿರಬಹುದು. ಚಿ। ಯು ಆರೋಗ್ಯವಾಗಿ ಆಡಿಕೊಂಡಿದ್ದಾನೆ. ಚಿ।। ಸೌ।। ಅಮ್ಮಣ್ಣಕ್ಕನು ಆರೋಗ್ಯವಾಗಿದ್ದಾಳೆಂದು ತಿಳಿಯಬಂತು. ಮ।। ಬಿ. ಚನ್ನಪ್ಪಯ್ಯನವರು ಕಣಕಟ್ಟೆಯಲ್ಲಿಯೇ ಇದಾರೆ. ಇನ್ನೇನೂ ವಿಶೇಷವಿಲ್ಲ

ಇತಿ ಸಾ. ವಿಜ್ಞಪ್ತಯಃ

೨೭೦

ಫಲಗುತ್ತಾ ಅವಧಿ (ಓದುತ್ತಿರುವ ಮಗನಿಗೆ ಕವರು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಸ್ತು 1 $^{1}/_{35}$

ಚಿ।। ಗೆ ಆಶೀಃ. ಉ.ಕು.ಸಂ. ನಿನ್ನ ಕಾಗದಗಳು ಸೇರಿದವು.

ಮ।। ಬಿ.ಎಸ್. ನಾರಾಯಣರಾಯರು ಹೇಳಿದಂತೆ ನೀನು ನಡೆದಿರುವಂತೆ ತೋರಲಿಲ್ಲ (ನಿನ್ನ ಅಣ್ಣನಿಂದ ತತ್ಸಂಬಂಧವಾಗಿ ಕಾಗದ ವಗೈರೆ ಇಲ್ಲದುದರಿಂದ).

ಭಗವದಿಚ್ಛೆಯಂತಾಗಲಿ. ಮಾಡುವದೇನು ? ಮರಗೆಲಸವನ್ನು ಮ। ಉ. ರಿಂದ ಮಾಡಿಸುವ ಪ್ರಯತ್ನ ಮಾಡುವೆನು.

ಮ। ಗಂಗಾಧರೈಯ್ಯನವರಿಗೆ ಫಲಗುತ್ತಾ ಅವಧಿಯು ಇನ್ನೂ 1-1½ ವರ್ಷಗಳಿರುವುದರಿಂದ ಬಿಡಲಾಗುವುದಿಲ್ಲವೆಂದು ತಕರಾರ್ಮಾಡಿದ್ದರಿಂದ ಅದರ ವಿಚಾರ ಸದ್ಯಕ್ಕೆ ಮುಗಿದುಹೋಯ್ತು.

ಈಗ ವೆಂಕಟರಮಣನು ಕೆ.ಎಸ್. ರಿಗೆ ತನ್ನ ತೋಟವನ್ನು 600ಕ್ಕೆ ತೆಗೆದುಕೊಂಡು ನಿಮ್ಮ ತೋಟವನ್ನು 800ಕ್ಕೆ ಕೊಡಿಯೆಂದು ಕಡ್ಡಾಯ ಮಾಡುತ್ತಿದಾನೆ. ಇವರು 550ಕ್ಕೆ ಕೇಳಿದೆನೆಂದು ಹೇಳಿದರು (ನಮ್ಮ ಅಡೆ). ಅಂತೂ ಸ್ವಲ್ಪ ಹೆಚ್ಚು ಕಡಿಮೆ ಹಾಗೇ ನಡೆದೀತೆಂದು ಊಹೆ. ಹೋಗಲಿ. ಭಾರವೇ ತಪ್ಪಿದಂತಾಯ್ತು.

ಚಂದ್ರಮುರವು ಇಲ್ಲಿ ಯಾರಿಗೂ ಪ್ರಕೃತವಿಲ್ಲವಾಯ್ತು.

ಯತ್ನವಿಲ್ಲ.

ಮ। ಮುತ್ತಣ್ಣನವರಿಗೆ ಸಾಮಾನುಗಳು ತಲಪಿದುದಾಗಿಯೂ ಉತ್ತರವನ್ನು ಅವರ ಮಾವನವರಿಗೆ ಬರೆದುದಾಗಿಯೂ ಹೇಳಿದರು. ಅಂತೂ ಎಲ್ಲರೂ ದೈವಾನುಗ್ರಹದಿಂದ ಕುಶಲರು.

ಹಳ್ಳಿ ಮೈಸೂರಿನವರಿಂದ ನಮಗೆ ಬರಬೇಕಾದುದೇನೂ ಇಲ್ಲ, ಕಾಗದ ಬರೆದುದು (ವಿಚಾರ ಮಾಡದೆ) ಸಾಮಾನ್ಯವೇ ಸರಿ.

ಸ್ಕಾಲರ್‌ಷಿಪ್ ವಿಚಾರ ತಿಳಿದು ಬಹಳ ವಿಷಾದವಾಯ್ತು. ನಮ್ಮ ದೌರ್ಭಾಗ್ಯಕ್ಕೆ ಮಾಡುವದೇನು ? ಪ್ರಮುಖರನ್ನಾಶ್ರಯಿಸಿ ಪ್ರಯತ್ನ ಮಾಡಿನೋಡು.

ತೋಟದಲ್ಲಿದ್ದ ದೊಡ್ಡಮಾವಿನ ಮರವನ್ನು ತೆಗೆಸಿಕೊಯ್ಸಿದೆನು. 2 ತುಂಡುಗಳಿಗೆ 25 ರೂ. ಖರ್ಚಾಯ್ತು. 1 ಅಡಿ ಅಗಲ 1 ಅಂಗುಲ ದಪ್ಪ 7 - 7½ ಅಡಿ ಉದ್ದದ ಹಲಗೆಗಳು ಸುಮಾರು 80-84ರವರಿಗೆ ಬಾವಿಯಲ್ಲಿ ಹಾಕಿಟ್ಟಿದ್ದೇನೆ. ಇನ್ನೂ 3 ತುಂಡುಗಳಿಂದ 30-35 ಹಲಗೆಗಳು ಸಿಗಬಹುದು. ದ್ರವ್ಯಾಭಾವದಿಂದಲೂ ಅದರಿಂದ ಅಷ್ಟೇನೂ ಹೆಚ್ಚು ಪ್ರಯೋಜನ ವಿಲ್ಲದಿದ್ದರೂ ತಟಸ್ಥನಾಗಿದೇನೆ. ಮುಂದೆ ಏನು ಮಾಡೋಣ ? ನಿನ್ನ ಅಭಿಪ್ರಾಯ ತಿಳಿಸು. ಅಡಿಕೆ ಕೆಲಸ ಸಾಗುತ್ತಿದೆ. ಆಶೀಃ. ನಿನ್ನ ಆರೋಗ್ಯದ ವಿಚಾರದಲ್ಲಿ ಜಾಗರೂಕನಾಗಿರು.

ಅಭ್ಯಂಜನ ಸ್ನಾನದಲ್ಲಿ ಆಲಸನಾಗಬಾರದು.

ಆಶೀಃ

ಪುರೋಹಿತರೊಬ್ಬರು ಮರಗೆಲಸವನ್ನೂ ಮಾಡುತ್ತಿದ್ದ ಉಲ್ಲೇಖ ಇಲ್ಲಿದೆ. ಸಂಕೇತಿಗಳು ಇಂಥ ಇತರ ಕಸುಬುಗಳಲ್ಲೂ ನುರಿತಿದ್ದರೆನ್ನುವುದಕ್ಕೆ ಹಿಂದಿನಿಂದಲೂ ಆಧಾರಗಳಿವೆ.

೨೭೧

ಮರ ಹತ್ತಿಯಾರು (ಹಾಸನದಲ್ಲಿರುವ ಮಗನಿಗೆ ತಂದೆಯ ಪತ್ರ)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋsಸ್ತು ತಾ। 25.3.36

ಆಶೀಃ ಉ.ಕು.ಸಂ. ನಾನು ಬರೆದ ಕಾಗದ ಸೇರಿ ಅದರಂತೆ ನಡೆದಿರುವೆಯಾ ? ಮುಖ್ಯವಾಗಿ ಮೊದಲು ಬೆಣ್ಣೆ ತೆಗೆದು ಕಾಯಿಸಿ ಇರಿಸಿರುವೆಯಾ ? ಕೃಷ್ಣಾಪುರಕ್ಕೆ ಶೋಭಾಪತ್ರಿಕೆ ಕಳುಹದಿದ್ದಲ್ಲಿ ಚೈತ್ರ ಶು. ೧೦ ಬುಧವಾರ ಶಾಂತಿ ಹೋಮವೆಂದು ಪತ್ರಿಕೆ ಬರೆದು ತಕ್ಷಣ ಕೇಶವನೊಡನೆ ಕಳುಹು.

20-22 ರೂ.ನಲ್ಲಿ ಲಕ್ಷಣವಾಗಿರುವ 2 ಮಾದರಿಯಲ್ಲಿ ಒಂದೊಂದರಂತೆ 2 ಧರ್ಮಾವರದ ಸೀರೆಗಳನ್ನು ತಂದಿಟ್ಟರು. ಬೇಕಾದವನ್ನು ಇಟ್ಟುಕೊಳ್ಳೋಣ. ನಿನ್ನ ಹೆಂಡತಿಯ ಅನಿವಾರ್ಯ ವಿಲ್ಲದಲ್ಲಿ 2ನ್ನೂ ನಮೂದಿಸಿ ನರಸೀಪುರಕ್ಕೆ RR ಗೆ RN ಗೆ ನಿನ್ನತ್ತೆಗೆ ಪ್ರತ್ಯೇಕ ಕಾಗದಗಳನ್ನು ಬರೆದು ಕವರಿನಲ್ಲಿಟ್ಟು ರವಾನಿಸು. ನಿನ್ನ ಉತ್ತರ ಬಂದು ನಾನು ಬರೆದು ಅವರಿಗೆ ತಲುಪಲು ವಿಳಂಬವಾಗುತ್ತೆ. ಅದರಿಂದ ವಿರೋಧಕ್ಕೆ ಕಾರಣವಾದೀತು. ಮೊಸಳೆಗೂ ಕಾಗದ ಬರೆಯುವುದು. ಸಾಧ್ಯವಾದರೆ ಗಾಡಿ ಕಳುಹಿ(...ದ ದೊಡನೆ) ಕರೆಸಿಕೊಳ್ಳುವದು. (೯ ಮಂಗಳವಾರ ಸಾಯಂಕಾಲಕ್ಕಾದರೂ) ಬರುವ ಚೈತ್ರ ೧೦ ದಿವಸ ೭ ಶುಭ ಕಾರ್ಯಗಳನ್ನೂ ನಡೆಸಲು ಯೋಚಿಸಿದೆ. ನಿನ್ನ ಕಾಗದ ಬಂದರೆ ಸಂತೋಷ ಮತ್ತು ಧೈರ್ಯ. ಮೊದಲೇ ಸೂಚಿಸಿರುವಂತೆ ಕೃಷ್ಣಾಪುರದ ಕಾಗದದಲ್ಲಿ ವೇ। ರಘುಪತಿ ಶ್ರೌತಿಗಳನ್ನು ಪುಸ್ತಕ್ಕೆ, ಉದಕಶಾಂತಿ ಗಾಗಿ ಬರುವಂತೆ ಮಂಗಳವಾರ ಮಧ್ಯಾಹ್ನಕ್ಕೆ ಅಲ್ಲಿಗೆ ಕರೆಸಿಕೊಂಡಿ ರುವಂತೆ (ಇನ್ನಿಬ್ಬರು ವೈದಿಕರನ್ನೂ) ಬರಿ. ಹಲಸಿನ ಕಾಯಿಗಳನ್ನೂ ಪರಂಗಿಕಾಯಿಗಳನ್ನೂ ಒದಗಿದಷ್ಟು ಮಟ್ಟಿಗೆ ಸಿದ್ಧಪಡಿಸುವಂತೆ ತಿಳಿಸು.

ದೈವಾನುಗ್ರಹವಿದ್ದು ಈ ಲಗ್ನದಲ್ಲಿ ಚಿ॥ ಕಿಟ್ಟಿಗೂ ಒದಗಬೇಕೇ ಹೊರ್ತು ಮುಂದೆ ಜ್ಯೇಷ್ಠದವರಿಗೆ ಯತ್ನವಿಲ್ಲ. ಅಲ್ಲಿನವರಿಗೆ ಶಾಂತಿಯನ್ನು ನಿಲ್ಲಿಸುವ ಯತ್ನವಿಲ್ಲ. ಸಾಧ್ಯವಾದರೆ ನಾಲ್ಕು ಹಸರು ತೆಂಗಿನ ತಾರ ಹಾಳೆಯನ್ನೂ 4 ಬಾಳೆಕಂದುಗಳನ್ನೂ ಶ್ರೀ M.P.R. ರಿಂದ ತರಿಸಿದರೆ ಉತ್ತಮ (ಮಾವಿನೆಲೆ.)

ಹುಡುಗರಿಗೆ ಹೇಳೀಯೆ ? ಮರ ಹತ್ತಿಯಾರು. ಎಚ್ಚರಿಕೆ. ಹೂವು ಹಾಲು ಮೊಸರು, ಓಲಗದವರಿಗೆ (1 ದಿನಕ್ಕೆ) ಏರ್ಪಾಡು ಮಾಡು. ಮ॥ ರಾಜಯ್ಯನವರ ತಂದೆಗೆ ಉದಕಶಾಂತಿಗೆ ಬರುವಂತೆ ಮಧ್ಯಾಹ್ನವೇ ತಿಳಿಸಿರು.

...ಮನೆ ಎಲ್ಲಿ ಎಂಬುದನ್ನು ತಿಳಿದಿರು.

ಸಂತೆಯಲ್ಲಿ 10 ಸೌತೇಕಾಯಿಗಳು, 50, 60 ಎಳನೀರುಗಳು (ಸಣ್ಣವಾದರೂ ಚಿಂತೆಯಿಲ್ಲ) ತೆಗೆಸಿಡಬೇಕು ಮತ್ತು 1 ಅಡಿಸೇರು ಅರಿಸಿನ ಪುಡಿ, 3 ಧಡಿಯ ಒಳ್ಳೆಣ್ಣೆ, 1 ಅಡಿ ಸೇರು ಹರಳೆಣ್ಣೆ, 1 ರೂ.ಗೆ ರವೆ, 2 ರೂ.ಗೆ ಕಡಲೆಬೇಳೆ, 0-8-0ಗೆ ಉಪ್ಪು, 4-0-0ಗೆ ಅಲಸಂದೆ, ಹುಳಿಹಣ್ಣು, 5 ಸೇರು ಅಂಗಡಿತುಪ್ಪ, ನಿಂಬೆಕಾಯಿಗಳು ಇವನ್ನು ಕೊಂಡಿರು. ಈ ಕಾಗದವು ಯಾವಾಗಲೂ ನಿನ್ನ ಜೇಬಿನಲ್ಲಿರಲಿ. 1 ಲಾಂಟರ್ನ್ ಶೀಮೆಎಣ್ಣೆ, 1 ಸೇರು ಕೊಬ್ಬರಿ ಎಣ್ಣೆ 1 ವಾಲ್ ಲ್ಯಾಂಪ್ ಸಿದ್ಧವಿರಲಿ.

2 ಮನೆಗಳೂ ಶುಚಿಯಾಗಿ ಸ್ವಾಧೀನದಲ್ಲಿರಲಿ. ತಕ್ಷಣ ನಿನ್ನತ್ತೆಯನ್ನು ಬರಮಾಡಿಕೊಂಡು ಬೇಕಾದ ಪಾತ್ರೆಗಳು, ಬಾಣಲೆ, ಪಾಟಲಿ, ತಪ್ಪಲೆ ಮುಂತಾದವನ್ನು ಒದಗಿಸುವುದು.

ನಿನ್ನತ್ತೆಯು ಬರದೇ ಹೋದಲ್ಲಿ ಮಂಗಳವಾರ ಮಧ್ಯಾಹ್ನದ ಮೇಲೆ ಸೀತಮ್ಮನನ್ನೂ ಮುದುಕಿಯನ್ನೂ ಬರಮಾಡಿಕೊಂಡು ಬೇಕಾದ ಸಹಾಯವನ್ನು ಪಡೆವುದು. ನಾವು 30.3.36ನೇ ಸೋಮವಾರ ರಾತ್ರೆ ಹೊರಟು ಮಂಗಳವಾರ ಬೆಳಿಗ್ಯೆ 8-9ಕ್ಕೆ ಬರುವೆವು. ಆ ದಿನ ಪ್ರಾತಃಕಾಲ ಚಿ॥ ಗೆ ಮಂಗಲಸ್ನಾನವಾಗಿರಲಿ. ಮರೆತೀಯೆ. ಸುಣ್ಣ, ಹಿಂಗೂ, ಏಲಕ್ಕಿ, ಕೇಸರಿ, ಪಚ್ಚಕರ್ರೂರ, ಕೊಡೆ, ಕಾಪಿಪುಡಿ, ಸೀಗೆಪುಡಿಗಳು ಸಿದ್ಧವಿರಲಿ. ಇನ್ನು ಯಾವದ್ಯಾವದನ್ನು ಮರೆತು ಇರುವೆನೊ ತಿಳಿಯದು. ನೀನು ಯೋಚಿಸಿ ಸಿದ್ಧಪಡಿಸು. ಮೊದಲಿನ ಕಾಗದ ತಲಪಿತೊ ಇಲ್ಲವೊ ಎಂಬ ಶಂಕೆಯಿಂದ ಪುನಃ ಪತ್ರ ಬರೆಯಬೇಕಾಯ್ತು. ಬರೆಯುವ ಕಾಗದಗಳಲ್ಲಿ ಚಿ॥ ಮು. ಹೆಂಡತಿ ಸೌ॥ ಸೀ.ಗೆ ಶಾಂತಿಕಲ್ಯಾಣ ಚಿ॥ ರಾ॥ ಕಿಟ್ಟಿಗೆ ಚೂಡಾಕರ್ಮ ಎಂದು ಸೂಚಿಸು. ಧಾತು ಸಂ. ಚೈತ್ರ ಶು. ೧೦ ಬುಧವಾರ. ಆಶೀಃ

೨೭೨

ವಾಚಾಪರೀಕ್ಷೆ ಯಾವಾಗ ? (ಮಗನಿಗೆ ತಂದೆಯ ಉತ್ತರ)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನಃ $27\,{}^{3}/_{36}$

ಚಿ॥ಗೆ ಆಶೀಃ ಉ.ಕು.ಸಾಂ.

ನಿನ್ನ ಕಾಗದ ಸೇರಿತು. ವಾಚಾ ಪರೀಕ್ಷೆಯು ಯಾವಾಗ ಆರಂಭವಾಗಿ ಯಾವಾಗ ಮುಗಿಯುವುದು ? ಚೈತ್ರ ಶು ೧೦ ದಿನದ ತರುವಾಯ ಪ್ರಶಸ್ತವಾದ ಲಗ್ನವಿಲ್ಲ, ಪ್ರತ್ಯೇಕವಾಗಿ ಹೊರಡುವಷ್ಟು ಉದಾರ ಕಾಲಾದೇಶವಲ್ಲ. ಆದ್ದರಿಂದ ನಿನ್ನ ವಾಚಾಪರೀಕ್ಷೆಯು ಕೊನೆ ಪಕ್ಷ ತಾ। 31ನೇ ಮಧ್ಯಾಹ್ನ 12ಕ್ಕೆ ಮುಗಿದರೂ ನೀನು ಆ ಮಧ್ಯಾಹ್ನದ ರೈಲಿನಲ್ಲಿ ರಾತ್ರೆ 10ಕ್ಕೆ ಹಾಸನಕ್ಕೆ

ಹಿಂದೆ ತಿಳಿಸಿರುವ ಸಾಮಾನುಗಳೊಡನೆ ಸೇರಿದರೆ ತೊಂದರೆ ಇಲ್ಲ. ಪ್ರಿನ್ಸಿಪಾಲರಲ್ಲಿ ವಿಚಾರವನ್ನು ತಿಳಿದು ತಕ್ಷಣ ಉತ್ತರ ಬರಿ. ನೀನು ಹಾಸನಕ್ಕೆ ರೈಲಿನಲ್ಲಾಗಲಿ ಬಸ್‌ನಲ್ಲಾಗಲಿ ಬರುತ್ತೀಯೆಂಬುದನ್ನು 1 ಕಾರ್ಡು ಮೂಲ್ಕ ನಿನ್ನ ಅಣ್ಣನಿಗೆ ತಿಳಿಸಿದರೆ ಬಸ್‌ಸ್ಟ್ಯಾಂಡಿಗಾಗಲಿ ರೈಲ್ವೆ ನಿಲ್ದಾಣಕ್ಕಾಗಲಿ ಬಂದಿರುವೆವು. ಎಲ್ಲ ಭಾಗದಲ್ಲೂ ಸಹಾಯವಾಗುತ್ತೆ. ಜಾಗರೂಕತೆಯಿಂದ ತಿಳಿಸು. ಬರಿ. ಬೇಸರಪಡಬಾರದು. ಪ್ರಾಯಃ ಈ ವೇಳೆಗೆ ಪರೀಕ್ಷಾ ನೋಟೀಸ್ ಪಬ್ಲಿಷ್ ಮಾಡಿಯೇ ಇರಬಹುದು. ಇಷ್ಟು ಕಾಲ ವಿಳಂಬವಾದುದೇ ಮನಸ್ಸಿಗೆ ವ್ಯಾಕುಲವಾಗಿದೆ. ಪರೀಕ್ಷೆಯು ಮಂಗಳವಾರ ಮಧ್ಯಾಹ್ನಕ್ಕೂ ಕ್ಲೋಸಾಗದಿದ್ದಲ್ಲಿ ವಿಧಿಯಿಲ್ಲ. ಮುಂದೆ ಆದುದಾಗಲಿ. ಮಂಗಳವಾರದಿಂದ ಮುಂದಕ್ಕೂ ಪರೀಕ್ಷೆ ನಡೆದಲ್ಲಿ ಪರೀಕ್ಷೆ ಪೂರೈಸಿದ ನಂತರ ನೀನಲ್ಲೇ ಇರು. ನಾನು ಪುನಃ ಬರೆಯುವಂತೆ ಆಚರಿಸು. ಪರೀಕ್ಷೆಯು ಯಾವಾಗ್ಯೆ ಆಖೈರೆಂಬುದನ್ನು ಬರೆಯದೆ ಉದಾಸೀನ ಮಾಡೀಯೆ ಜೋಕೆ. ನೀನು ಪೋಸ್ಟ್ ಆ.ಗೆ ಹೋಗಿ ಬರಲು ಟೈಂ ಅನುಕೂಲಿಸೀತೋ ಇಲ್ಲವೋಯೆಂಬ ಶಂಕೆಯಿಂದ ರಿಪ್ಲೆ ಕಾರ್ಡು ಬರೆದಿದೇನೆ. ದೈವಾನುಗ್ರಹದಿಂದ ನಾವೆಲ್ಲ ಕುಶಲರು. ಒಂದು ವೇಳೆ ಮಂಗಳವಾರ ಮಧ್ಯಾಹ್ನ ಹೊರಡಲನುಕೂಲಿಸುವಲ್ಲಿ ಸಾಮಾನುಗಳನ್ನು ರೈಲ್ ಸ್ಟೇಷನ್ ಬಳಿಯೇ ಕೊಂಡರೂ ಚಿಂತೆ ಇಲ್ಲ. ಮಾರ್ಕೆಟ್‌ಗೇ ಹೋಗಬೇಕೆಂಬ ನಿಯಮವಿಲ್ಲ. ಅದೂ ಇಲ್ಲವಾದಲ್ಲಿ ಹಾಸನದಲ್ಲೇ ಆದರೂ ಕೊಳ್ಳಬಹುದು. ಬರಲು ಅನುಕೂಲಿಸುವಲ್ಲಿ 2 ಕಟ್ಟು ವೀಳೆಯದೆಲೆಯನ್ನು ತರುವದು. ನಿನ್ನ ಉತ್ತರವನ್ನು ಭಾನುವಾರ ಮಧ್ಯಾಹ್ನದ ಟಪಾಲ್‌ನಲ್ಲಿ ಎದುರು ನೋಡುತ್ತಿದೇನೆ. ಸೋಮವಾರ ಬಂದರೂ ನಿರ್ವಹಿಸುತ್ತೇನೆ. ಆಶೀಃ. ಪರೀಕ್ಷೆ ಮಂಗಳವಾರಕ್ಕೆ ಮುಗಿಯದೇ ಇರುವಲ್ಲಿ ಕಾರ್ಡು ಬರೆಯಲೇ ಬೇಡ.

ದೂರವಾಣಿ ಸೌಲಭ್ಯದಿಂದ ಈಗ ಆಗಿರುವ ವೇಗ ಮತ್ತು ಕಾರ್ಯಾನುಕೂಲವನ್ನು ಇದರ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದು.

೨೭೩

ಭಾಗವತ ಶಬ್ದ ಯಾರದು ? (ತಂದೆಯ ಕಾರ್ಡು)

ಕುಶಲಂ ಶ್ರೀಃ 17-7-36

...ಕಾಗದ ಔಷಧಿ ಸೇರಿದವು. ನಿಧಾನವಾದ್ದರಿಂದ ಬಾಧೆಯಿಲ್ಲ. ನಾನು ಇನ್ನೂ 2 ವಾರ ಬಿಟ್ಟು ಸೇವಿಸುವೆನು...ಖುಷ್ಕಿಗೆ ಅನುಕೂಲಿಸುವ ಮಳೆ ಈ ದಿನ ಪ್ರಾತಃಕಾಲ ಮಾತ್ರ ಬಂದಿತು. ತೋಟದ ವಿಚಾರದವರು ನಾನಿದ್ದಾಗಲೇ ನನ್ನಿಂದುತ್ತರ ಪಡೆದು ಹೋದರು. ಅದ್ಯಾಪಿ ನನ್ನಲ್ಲಿ ಯಾವ ಪ್ರಸ್ತಾಪಕ್ಕೂ ಬಂದಿಲ್ಲ. ನಿನ್ನಣ್ಣನಿಗೆ ತಿಳಿಸಿಯೇ ಇಲ್ಲ. ಹಾಸನದಿಂದ ನಿನಗೆ ಬಂದಿರುವಂತೆಯೇ ನನಗೂ ಕಾರ್ಡು ಆಕೆಯ ಹೆಸರಿನಿಂದಲೆ ಬಂದಿದೆ. ನಾನೂ ಅದೇ ಭಾವನೆಯಿಂದಲೇ ತಟಸ್ಥನಾಗಿದೇನೆ. ಮುಂದೆ ನೋಡೋಣ. ಅವರು ಆರೋಗ್ಯವಂತರಾಗಿರಬೇಕಾದುದೇ ಮುಖ್ಯಾಂಶವಾಗಿದೆ. ಕಾಲು ಉಳುಕಿಲ್ಲ. ವಾಯುವೆಂದೂ ಹಲವರು ಹೇಳುತ್ತಾರಾಗಿ ಚಿಕಿತ್ಸೆ ಮಾಡುತ್ತಿದೆ. ಕೊಂಚ ಗುಣಮುಖವಾಗಿದೆ. ಸಾಧ್ಯವಿಲ್ಲದಲ್ಲಿ ಬರುವೆನು. ಇಲ್ಲಿಂದ ಹೊರಡುವಾಗಲೇ ಬೇಕಾದರೂ ಇನ್ನೂ 2 Rs. ತೆಗೆಯಬಹುದಾಗಿತ್ತು. ಬಾಧೆ ತೋರಲಿಲ್ಲ. ಆಗಿಹೋದುದಕ್ಕೇನು? ಈ ಸಲ ಗದ್ದೆಯೇನೂ ಬಿತ್ತಿಲ್ಲ. ತೋಟಗಳಲ್ಲಿ ಬದುಕುವ ಸಂಭವವಿಲ್ಲ. ಮಾಡುವದೇನಿದೆ ? ಚಿ॥...ಯ ವಿಚಾರದಲ್ಲಿ ಸಾಧ್ಯವಾದಷ್ಟೂ ನಿಗಾ ಮಾಡುತ್ತಿದೇನೆ. ಏಕಮಾತ್ರ ಪುತ್ರನಾಗಿ ಉಭಯತ್ರರಿಗೂ (ಮಾತಾಪಿತೃಗಳಿಗೂ) ಪರಸ್ಪರಾನುರಾಗವು ಅತಿಶಯಾಗಿರುವದರಿಂದ ಅವನ ಮನೋಧರ್ಮವೂ ಬಹುಮಟ್ಟಿಗೆ ಊರು ಕಡೆಯೇ ಕೆಲಸ ಮಾಡುತ್ತಿದೆ. ಇದು ನನ್ನನ್ನು ಭವದಲ್ಲಿಯೇ ಇಡುವದರಿಂದ ಅತಿಶಯವಾಗಿ ತೋರುವದಿಲ್ಲ. ಇದಿರಲಿ. ವರ್ಗಕ್ಕೆ ಬೇಕಾದುದರಲ್ಲಿ ½ ಭಾಗ ಶಕ್ತಿಯೂ ಇಲ್ಲದಿರುವುದಾಗಿ ಯಾತ್ರಾ 6½ ಗೆ ವಿನಾ ನಮ್ಮಿಬ್ಬರ ಸೇರುವಿಕೆ ಇಲ್ಲದ್ದರಿಂದಲೂ ಗಣಿತ ಭಾಗವನ್ನು ಕ್ರಮಪಡಿಸಲು ಸಾಧ್ಯವಿಲ್ಲ. ಅವನು ಕ್ಲಾಸ್ ಪಾಠಗಳಿಗೆ ಗಮನ ಕೊಟ್ಟು ಕೂರಬೇಕು. ರಜದ ದಿವಸಗಳಲ್ಲಿ ಸ್ವಲ್ಪ ಹೆಚ್ಚು ಗಮನ ಕೊಡೋಣವೆಂದರೆ ಆ ದಿನಗಳಲ್ಲಿ ಅವನು ಮಾತಾಪಿತೃಗಳ ದರ್ಶನಕ್ಕಾಗಿ ಪ್ರಯಾಣಿಸಿರುವನು. ಏನು ಮಾಡುವದೆಂದು ತೋಚುವದಿಲ್ಲ. ಆದರೂ ಸಾಧ್ಯವಾದದ್ದೆಲ್ಲಾ ಮಾಡುವೆನು. ದೃಗ್ಗೋಚರವಾದ ತಪ್ಪುಗಳನ್ನು ತಿದ್ದುತ್ತಿರುವದಾಗಿದೆ. ಭಗವದನುಗ್ರಹದಿಂದ ನಾವೆಲ್ಲರೂ ಕುಶಲರೆಂದು ತಿಳುಹಲು ಸಂತೋಷಿಸುತ್ತೇನೆ. ಭಾಗವತ ಶಬ್ದವು ಸ್ವಂತ ಉತ್ಪ್ರೇಕ್ಷೆಯೊ? ಇತರರ ಸಂತೋಷಾಶೀರ್ವಾದಗಳಿಂದ ಲಭ್ಯವಾದುದೋ ತಿಳಿಯದು. ವೇ॥ಉ॥ರ ಮನೆಗಳಲ್ಲೆಲ್ಲರೂ ಕುಶಲರು. ಹಾಸನದಾಕೆಯಿಂದ ಗಾಬರಿಯಾದ ಕಾಗದ ಏನಾದರೂ ಬಂದಲ್ಲಿ ಆಗಿನ ಸಮಯ ಸಂದರ್ಭಗಳನ್ನರಿತು ಕಾರ್ಯವನ್ನು ಮುಂದುವರಿಸುತ್ತೇನೆ. ಯೋಚಿಸಬೇಡ. ನಿನ್ನಣ್ಣನು ಯಾವ ವಿಚಾರವನ್ನೂ ತಿಳಿಸದೇ ಇರುವುದು ಖೇದಾಶ್ಚರ್ಯಗಳಿಗಾಕರವಾಗಿದೆ. ಅಲ್ಲಿಯೂ ಎಲ್ಲರೂ ಕುಶಲರೆಂದು ತಿಳಿದು ಎಲ್ಲರಿಗೂ ಸಂತೋಷವಾಯ್ತು. ಚಿ॥ ನಾರಾಯಣ್ರಾಯನ ಕು.ಗೆ ½ ಘಂಟೆ ಅಕ್ಷರಾಭ್ಯಾಸ ಮಾಡಿಸು ಎಂದು ಬರೆದಿದೇನೆ. ಏನು ಮಾಡುತ್ತಿರುವರೋ ತಿಳಿಯದು. 1-2 ವಾರಗಳಲ್ಲಿ ನಾವೇನಾದರೂ ಹೋಗಿ ಬರಬೇಕಾಗುವದೋ

ಏನೋ (ಚಿ|| ಸೌ||ನನ್ನು ಕಳುಹಲು) ಎಂಬ ಯೋಚನೆ ಇದೆ. ಆಗ್ಯೆ ಹೇಗಾಗುವುದೋ ಮಾಡುವೆನು. ನೀನು ಮಾತ್ರ ಕ್ಲೇಶಗಳಿಗೆಡೆಗೊಡದೆ ದೇಹಾರೋಗ್ಯಕ್ಕೆ ಗಮನವಿಟ್ಟು ವ್ಯಾಸಂಗಿಸು. ಹಾಲಿಗೆ ಹೆಚ್ಚು ಖರ್ಚಾದರೂ ಸಂತೋಷ. ಆಕ್ಷೇಪಣೆಯಂಶವಿಲ್ಲ. ಆಶೀಃ.

೨೭೪

ಗ್ರಾಮದ ಆರೋಗ್ಯ (ತಂದೆಯ ಕವರು)

ಕ್ಷೇಮಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು $10^{9}/_{36}$

ಚಿ|| ಗೆ ಆಶೀಃ ಉ.ಕು.ಸಂ.

ನಿನ್ನ ಕಾಗದ ಸೇರಿತು.

1) ...ಕ್ಕೆ ಹೋಗಿ ವೇ||...ನ್ನು ವಿಚಾರಿಸಿದುದಾಯಿತು. ಅಲ್ಲಿ ನೀನು ಬರೆದಿರುವ ಪುಸ್ತಕಗಳ ಪೈಕಿ "ಲಘುಶಬ್ದೇಂದುಶೇಖರ" ಒಂದು ಮಾತ್ರ ಗ್ರಂಥಾಕ್ಷರದಲ್ಲಿ ಬರೆದ ಪುಸ್ತಕವಿದೆ. ಕಾಪಿ ಮಾಡಬೇಕಾದರೆ 1 ತಿಂಗಳು ಬೇಕು. ಗ್ರಂಥಾಕ್ಷರ ಓದುವ, ಬರೆಯುವ ಪರಿಚಯಗಳು ಚೆನ್ನಾಗಿರಬೇಕು.

ಅವರು ಕೊಡುವದಿಲ್ಲವೆಂದು ಹೇಳುವ ಅರ್ಥಕ್ಕೆ ಬೇಕಾದಷ್ಟು ವಿಚಾರಗಳನ್ನೊಡಗೂಡಿಸಿ ವಿಶಾಲವಾದ ಆರ್ಗ್ಯು ಕೋಟ್ ಮಾಡಿದರು. "ಪುಸ್ತಕ ಇದು ಪ್ರಿಂಟ್ ಆಗಿದೆ, ಬೇಕಾದರೆ 1 ವಾರದಲ್ಲಿ ನಾನು ತರಿಸಿಯೇ ಕೊಡುತ್ತೇನೆ" ಎಂದು ಮುಂತಾಗಿ ಎದೆ ತಟ್ಟಿದರು. ಹೋಗಲಿ ಸಮಯವಾದಾಗ (ಅಚ್ಚು ಪುಸ್ತಕ ಸಿಕ್ಕದಿದ್ದಲ್ಲಿ) ಬರೆದುಕೊಳ್ಳುವದೇ ಮೇಲು.

2) ಈ ಕೆಳಗಿನ ವಿಚಾರಗಳು ನಿನಗೆ ಸ್ನಾನಾಶೌಚಾದಿಗಳನ್ನು ಕೊಡುವುದಿಲ್ಲ. ಗ್ರಾಮದ ಆರೋಗ್ಯ ವಿಚಾರವನ್ನು ಮಾತ್ರ ಸೂಚಿಸುತ್ತವೆ. ಈ ಕಾಗದ ಕೊಡುವ ರಾಜನ ತಾಯಿಯು ಈ ಭಾದ್ರಪದ ಶು. ೧೧ ದಿನವೂ ಪುಟ್ಟಪ್ಪನವರ ಕುಟುಂಬ ಅಮ್ಮಯ್ಯಕ್ಕನು ಈ ೧೬ ಭಾನುವಾರವೂ ಪ್ಲೇಗ್ ಮಾರಿಗೆ ತುತ್ತಾದರು.

ಈಚೇಗೇನೂ ಇಲ್ಲ.

ಚಿ| ವೆಂ. ಮೂ. ಯು ಬಂದೇ ಇಲ್ಲ, ಅವನ ವಿಚಾರ ಬರೆದಿರುವ ಕಾಗದಗಳನ್ನೆಲ್ಲ ಜೋಪಾನವಾಗಿಟ್ಟಿರುವಿಯಾಗಿ ನಂಬಿದೇನೆ.

3) ಕಾಲುವೆ ಮನೆ ಪುಟ್ಟಸೋಮಯ್ಯ ತನ್ನ ಹಾಲಿ ಇರುವ ತೋಟವನ್ನು (ಮೂರ್ತಿಯಿಂದ ಕೊಂಡದ್ದನ್ನು) ಗಂಗಾಧರಯ್ಯನಿಗೆ ಕ್ರಯಕ್ಕೆ ಕೊಡಲು (850) ನಿಷ್ಕರ್ಷಿಸಿರುವುದಾಗಿಯೂ ಪ್ರಾತಿನಿಧ್ಯವಾಗಿ ನಮ್ಮ ಮೇಲಣ ತೋಟವನ್ನು ಹ| ನವರು ಕೇಳಿರುವದಕ್ಕಿಂತ ಇನ್ನೂ ಕೊಂಚ ಕಡಮೆಯಾಗಿ ಕೊಡಲೆಂದೂ ಮೂರ್ತಿಯಿಂದ ಕೇಳಿಸಿದನು. ಒಂದು ವೇಳೆ ಭರ್ತಿಗೆ ತೆಗೆದರೂ ಇರಲಿ. ನಾನು ಯೋಚಿಸುವೆನೆಂದು ಮಾತ್ರ ಹೇಳಿರುವೆನು.

ಕೊಟ್ಟೇಬಿಡುವುದಾದಲ್ಲಿ ಪ್ರಾಯಃ ಪೂರಾ ಮೊಬಲಗು ಬಂದೇ ಬರುತ್ತೆ. ಹಾಗೆ ಬರುವುದಿಲ್ಲವಾದಲ್ಲಿ ಕೆಲಸವೇ ಇಲ್ಲ. ಇರಲಿ. ಪ್ರಕೃತ ಚಲವಾದಿಯೂ ಎಲೆಯನ್ನೆಲ್ಲಾ ತರಿದು ಕೈಗೆ ಸಿಕ್ಕಿದುದನ್ನೆಲ್ಲಾ ತಿನ್ನುವದರಲ್ಲಿಯೇ ಕೃತವೆಂದಿದ್ದರಿಂದ (ಹಂಬಿಗೆ ನೀರು ತೂಕ ಹಾಕದೆ) ಅವನನ್ನು ನಿವೃತ್ತಿ ಮಾಡಿದ್ದಾಯ್ತು. ಇಂತಹ ಕ್ಲೇಶಗಳು ಹತ್ತೆಂಟನ್ನು ಅನುಭವಿಸಿದುದೂ, ಅನುಭವಿಸುವದರಲ್ಲೇ ಪರ್ಯವಸಾನವಾಗಿದೆ.

ಈ ಭಾಗದಲ್ಲಿ ನಿನ್ನ ಇಷ್ಟವೇನು ? ಈವರಿಗೆ ಮಳೆ ಇಲ್ಲದೆ ಮರಗಳೆಲ್ಲಾ ಬಾಡುತ್ತಿವೆ. ಮೇಲಿನ ತೋಟದಲ್ಲಿ ಅವನು ಮಾಡಿದ ಹಂಬನ್ನೆಲ್ಲಾ ಕೂಲಿ ಕೊಟ್ಟು ಕಟ್ಟಿಸಿದೇನೆ.

4) ಇಟ್ಟುಕೊಳ್ಳಬೇಕೆಂಬ ಇರಾದೆ ಇದ್ದಲ್ಲಿ ಋಣಾನುಬಂಧ ನಿನ್ನ ಹೆಸರಿಗೆ ಅನುಕೂಲವಾಗಿ ಬರುವದೆ ? ಎಂದು ಮೊದಲನೇ ಸಲವೂ, ನಾಲ್ವರಿಗೆ ಅನ್ನ ಹಾಕುತ್ತ ಬಂದರೆ ಅನುಕೂಲವೆ ? ಸಂತತಿ ಪ್ರತಿಬಂಧಕವಿಲ್ಲವೆಯೆಂದು 2ನೇ ಸಲವೂ.

5) BKSರ ಮನೆ ಹಾಲಿ ಸ್ಕೂಲಿರುವ ಮನೆ ನಮಗೆ ಋಣಾನುಬಂಧ ಚೆನ್ನಾಗಿ ಬರುವದೆ ? ಎಂಬುದನ್ನು ಬುದ್ಧಿವಂತರಾದ ದೈವಜ್ಞರಲ್ಲಿ ಸರಿಯಾಗಿ ವಿಚಾರಿಸಿ ನಿನ್ನ ಪ್ರಶ್ನೆ? ಅವರ ಉತ್ತರ ಎಲ್ಲವನ್ನೂ ಚ.ತು. ತಪ್ಪದೆ ವ್ಯತ್ಯಾಸವಿಲ್ಲದೆ ಕ್ರಮವಾಗಿ ಬರೆದು ಕಳುಹು. ಮುಂದೆ ನೋಡೋಣ. ಯಾವದು ಹೇಗಾದರೂ ಇರಲಿ ಮುಂದೆ ಇದರಿಂದ 1 ಭರ್ತಿಯಾಗಿ ಬರುವದಾದಲ್ಲಿ ವಿಲೇ ಮಾಡಿಯೇ ಬಿಡೋಣವೆಂದು ಅಭಿಪ್ರಾಯವಿದ್ದಲ್ಲಿ ಅದನ್ನೂ ಬರಿ (ಉಳಿಯುವ ಒಂದು ತೋಟವನ್ನೇ ನೋಡಿಕೊಂಡರೆ ಸಾಕೆನ್ನುವದಾದರೆ).

ಪ್ರತಿ ವರ್ಷವೂ ೧೦ಕ್ಕೆ ಕಡಿಮೆಯಿಲ್ಲದೆ ಮರಗಳು ಹೋಗುತ್ತಿವೆ. ಸಸಿಗಳ ನಾಟುವಿಕೆ ಮತ್ತು ಅಭಿವೃದ್ಧಿಗೆ ಅವಕಾಶವಿಲ್ಲ.

ಯೋಚಿಸಿ ಬರೆ.

ದೈವಜ್ಞರಿಗಾಗಿ 1 ರೂ. ಖರ್ಚಾದರೂ ಆಗಲಿ ಬುದ್ಧಿವಂತರಲ್ಲಿ ತಿಳಿದು ಬರಿ.

ಬೆಂಡೋಲೆಗಾಗಿ ತೊಂದರೆ ತೆಗೆದುಕೊಳ್ಳಬೇಡ. ಅಪ್ರಕೃತ. ಸಾಧ್ಯವಾದರೆ ಬಳ್ಳವನ್ನು ಕಳುಹು. ಕೃ.ಪು. ದಿಂದ ಯಾವ

ವಿಚಾರವೂ ಇಲ್ಲ. ಅಲ್ಲಿರುವ (ಮೊಸಳೆಯಲ್ಲಿ) ಅವರ ಬಂಧುಗಳ ಸಂಗಡ ಚಿ॥ ಸೌ॥ ಸಾವಿತ್ರಮ್ಮನ್ನು ಗೌರಿಯ ಹಬ್ಬಕ್ಕೆ ಕರತರುವದಾಗಿ ಹೇಳಿದರೆಂದು ಕಿಂವದಂತಿ ಇದೆ. ನೋಡಬೇಕು. ಹಾಸನದಲ್ಲಿ ದೈವಕೃಪೆಯಿಂದ ಎಲ್ಲರೂ ಕುಶಲರು. ಆಶಿಷಃ. ಅಡಿಕೆ ಬತ್ತಗಳನ್ನು ಒದಗಿದರೆ ಲೇಣಾದೇಣಾ ಮಾಡುವ ಸಂಭವವಿಲ್ಲ. ನಾನೂ ಅದೇ ಯೋಚನೆಯನ್ನೇ ಮಾಡಿದೇನೆ. ಗಾಬರಿ ಇಲ್ಲ. ಆಶೀಃ

"ಸಂತತಿಯ ಪ್ರತಿಬಂಧಕವಿಲ್ಲವೆ" ಎಂಬುದನ್ನು ಅತಿ ನಿರ್ಧಾರವಾಗಿ ತಿಳಿಯಬೇಕೆಂಬುದೇ ಪರಮೋದ್ದೇಶ. ನನಗೆ ಒಂದು ವಿಧವಾದ ಶಂಕಾ ಪ್ರಾಪ್ತವಾಗಿದೆ. ಆದ್ದರಿಂದ ಇಷ್ಟೆಲ್ಲ ಆತುರ. ಬೇಕಾದರೆ ದೈವಜ್ಞರಲ್ಲಿ ಹೋಗುವಾಗ ನಿನಗಾಪ್ತರಾಗಿಯೂ ಬುದ್ಧಿವಂತರಾಗಿಯೂ ಇರುವ ಒಬ್ಬರನ್ನು ಕರೆದುಕೊಂಡು ಹೋಗು. ಉದಾಸೀನ ಬೇಡ. ಆಶೀಃ. ಪ್ಲೇಗ್‌ನಲ್ಲಿ ಹೊಲೆಯರಲ್ಲಿ 3 ಕೇಸು ಬೆಸ್ತರಲ್ಲಿ ವೆಂಕಟ ಮಗ್ಗದವರಲ್ಲಿ 2 ಬ್ರಾಹ್ಮಣರಲ್ಲಿ 2 ಮರಣಗಳಾದವು.

೨೭೫

ಹೆಂಡತಿ ಬಂದುದು ಹೇಗೆ ? (ತಂದೆಯ ಪತ್ರ. ಕವರು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ತಾ। 10.1.37

ಚಿ॥ ಗೆ ಆಶೀಃ. ಉ.ಕು.ಸಂ.

ನಿನ್ನ ತಾ। 6-1-37ರ ಕಾರ್ಡು ತಲಪಿ ಸಂತೋಷವಾಯ್ತು. ಶ್ರೀ ಸತ್ಯನಾರಾಯಣಸ್ವಾಮಿಯವರ ಸೇವೆಯು ಅಲಭ್ಯವಾದುದಕ್ಕಾಗಿ ವಿಷಾದಿಸಬೇಕಾಯ್ತು. ಕಾರಣ ಹಾಲಿ ಸ್ಕೂಲ್‌ನಲ್ಲಿ ಇಬ್ಬರು ಟೀಚರುಗಳು ಮಾತ್ರ ಇರುವದೇ. ಯತ್ನವಿಲ್ಲ.

ನಿನ್ನ ತಾಯಿಯನ್ನಾದರೂ ಕಳುಹೋಣವೆಂದರೆ ತಾನೊಬ್ಬಳೇ ಹೊರಡಲು ಇಷ್ಟಪಡಲಿಲ್ಲ. ಮಾಡುವುದೇನು ? ಚಿ॥ ಸೌ॥ ಸಾವಿತ್ರಿಯನ್ನು ಅವರೇ ಕರೆತಂದು ಬಿಟ್ಟರೋ ಅಥವ ಬೇರಾರಾದರೂ ಕರೆತಂದರೊ ಎಂಬುದನ್ನು ತಿಳಿಯಲಿಚ್ಛಿಸುತ್ತೇನೆ. ಇಷ್ಟವಾದರೆ ತಿಳಿಹು.

ಹಲವಂಶಗಳನ್ನು ಮುಖತಃ ಮಾತನಾಡಲವಕಾಶವಾಗದುದಕ್ಕಾಗಿ ವಿಷಾದಿಸುತ್ತೇನೆ.

ಪತ್ರ ಮೂಲಕ ತಿಳುಹತಕ್ಕುವಾಗಿದ್ದರೆ ತಿಳುಹು.

ಇಂಗ್ಲಿಷ್ ಪುಸ್ತಕವನ್ನು ಈ ಕೂಡಾ ಕಳುಹಿದೇನೆ. ತಲಪಿದ್ದಕ್ಕೂ ಮೇಲ್ಕಂಡ ವಿಚಾರಗಳಿಗೂ ನಿನ್ನಾರೋಗ್ಯಕ್ಕೂ ಬಾಕಿ ಹೆಚ್ಚು ವಿಚಾರಗಳಿಗೂ 1 ಕಾರ್ಡು ಬರೆಯುವಿಯಾಗಿ ನಂಬಿದೇನೆ.

ದೈವಾನುಗ್ರಹದಿಂದ ನಾವುಗಳು ಸಾಮಾನ್ಯವಾಗಿ ಆರೋಗ್ಯವಾಗಿದೇವೆ.

ಚಿ॥ ಕೇಶವಮೂರ್ತಿಯ ಹೆಂಡತಿಗೆ ಪ್ಲೇಗ್ ಅಟಾಕ್ ಆಗಿದೆ. ದೇವರು ಕೃಪೆಯಿಟ್ಟು ಆರೋಗ್ಯಭಾಗ್ಯವನ್ನು ಕರುಣಿಸಬೇಕಾಗಿದೆ. ಒಟ್ಟಿನಲ್ಲಿ ಗ್ರಾಮವು ಆರೋಗ್ಯ ಸ್ಥಿತಿಯಲ್ಲಿಲ್ಲ.

ಇತ್ಯಾಶಿಷಃ

ನೀನು ಪುಷ್ಯ ಶು 1 ಸಾಯಂಕಾಲಕ್ಕಾದರೂ ಮೈಸೂರಿಗೆ ಸೇರುವೆಯೆಂಬ ಭಾವನೆಯಿಂದ ಇದನ್ನು ಮೈಸೂರಿಗೆ ಬರೆದಿದೇನೆ. ಶ್ರೀ ಸತ್ಯನಾರಾಯಣನು ಸರ್ವರಿಗೂ ಮಂಗಳವನ್ನೀಯಲಿ.

ಆಶೀಃ

೨೭೬

ಉದ್ಯೋಗತತ್ಪರತೆ (ತಂದೆಯ ಪತ್ರ)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ತಾ। 27-1-37

ಚಿ॥ ಗೆ ಆಶೀಃ ಉ.ಕು.ಸಂ.

ನಿನ್ನೆ ತಾ। 23-1-37ರ ಕಾಗದವು 24ನೇ ತಾ। ಸೇರಿತು. ಅದರಲ್ಲಿ ಕಾಣಿಸಿರುವ ಕೃ.ಪು. ವಿಷಯವು ನಿನಗೆ ಮೊದಲೇ ಗೊತ್ತಿತ್ತು. ಆದ್ದರಿಂದ ಕಾಗದ ಬಂದರೆ ಹೋಗಿಬರಲೆ ಎಂದು ಇಲ್ಲೇ ಕೇಳಬಹುದಾಗಿತ್ತು. ಹೋಗಿಬರಲೂಬಹುದಾಗಿತ್ತು. ನಿನಗೆ ಉತ್ತರ ಬರದರೂ ಮಂಗಳವಾರ ಮಧ್ಯಾಹ್ನ ತಲಪುತ್ತಿತ್ತಾದ್ದರಿಂದ ತಕ್ಷಣ ಬರೆಯಲಿಲ್ಲ. ನಾನು ಸೋಮವಾರ ಬೆಳಿಗ್ಗೆ ಹೊರಡಬೇಕೆಂದಿದ್ದೆ. ಭಾನುವಾರ ಸಾಯಂಕಾಲ ತೀ.ದೀ.ಕೇ ತಾಯಿಯು ದಿವಂಗತರಾದ್ದರಿಂದ ನಿಲ್ಲಬೇಕಾಯಿತು. ನಮಗೇನೂ ಸ್ನಾನಾದಿಗಳಿಲ್ಲ.

C.T. ಮೂರ್ತಿಯು ಬರಲೇ ಇಲ್ಲ. ವೇ॥ ಮು.ಉ. ಹೋಗಿ ಎಲ್ಲರನ್ನೂ ಗಾಡಿಯಲ್ಲಿ ಕರೆತಂದುದಾಯ್ತು.

ಬಿಲ್ಲನ್ನು ತಲಪಿಸಿದೇನೆ. ಅವರ ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದಾರೆ.

ನೀನಿದ್ದಾಗಲೆ ನಿನ್ನ ತಾಯಿಯು ಆರೋಗ್ಯವಾಗಿದ್ದುದನ್ನು ಕಂಡಿದ್ದರೂ ಕೇಳಿ ಅದೇ ಕ್ಲೇಶಕ್ಕೆ ಅವಕಾಶವೇಕೆ ? ಯಾವುದೋ ಕೆಲಸಕ್ಕೆ ಬಾರದ ವಿಚಾರಕ್ಕೆ ಮನಗೊಟ್ಟು ಕ್ಲೇಶಪಟ್ಟು ಮನೋಧರ್ಮವನ್ನು ಚಲಿಸಿ ಉದ್ಯೋಗ ತತ್ಪರತೆಗೆ ಭಂಗ ತರಬಾರದು. ನಿನ್ನ ತಾಯಿಯೂ ಈಗ ಚೆನ್ನಾಗಿ ಆರೋಗ್ಯವಾಗಿದಾಳೆ. ಆಕೆಯ ಯೋಗಕ್ಷೇಮವನ್ನು ನೋಡಿಕೊಳ್ಳುವ

ಜವಾಬ್ದಾರಿಯು ನಿಮಗಳಿಗಿಂತಲೂ ನನಗೆ ಪ್ರಾಮುಖ್ಯವಾಗಿದೆ. ಚಿಂತಿಸ ಕೆಲಸವಿಲ್ಲ.

ಅವಳನ್ನು ಈ ತೇ. ೭ ಸೋಮವಾರ ಹಾಸನಕ್ಕೆ ಕಳುಹಿದ್ದೆನು. (೭ ಮಂಗಳವಾರ ಬಳೆ ತೊಡಿಸುವಂತೆ ಹೇಳಿ) ವೆಂ.ಲ.ನೂ. ಹೊರಟು ಹೋಗಿದ್ದರೂ ಕೂಡ ನಿನ್ನತ್ತಿಗೆಯೂ ನಿನ್ನಣ್ಣನೂ ಅದು ಅನವಸ್ಯಕವೆಂದೇ ತೀರ್ಮಾನಿಸಿದ್ದರಿಂದಲೂ ಚಿ॥ಸೌ॥ಸ.ಗೂ ಔಷಧಿ ತೆಗೆದುಕೊಳ್ಳುವದು ಬೇಡವೆಂದೂ ಮೊದಲು ಸಲವೂ ತೆಗೆದುಕೊಂಡಿರಲಿಲ್ಲವಾಗಿಯೂ ಆ ಕೆಲಸವೂ ಇಲ್ಲವಾಯ್ತು. ಈ ವಿಚಾರವನ್ನು ನಾನು ನವರಾತ್ರೆಯಲ್ಲಿ ಕೇಳಿದಾಗಲೇ ಔಷಧಿ ಅನವಸ್ಯಕವೆಂದು ಹೇಳಿದ್ದಳು. ಆದ್ದರಿಂದ ನಿನ್ನ ತಾಯಿಯೂ ಶನಿವಾರ ಸಾಯಂಕಾಲ ಊರಿಗೆ ಬಂದಳು.

ಚಿ॥ ಕಿಟ್ಟಿಯೂ ಬಂದಿರುವನು. ಎಲ್ಲರೂ ದೈವಾನುಗ್ರಹದಿಂದ ಆರೋಗ್ಯವಾಗಿದೇವೆ.

ಮಾಘ ಶು ೧ ಕಳೆದ 1-2 ದಿನಗಳಲ್ಲಿಯೋ ಅಥವಾ ಮೊದಲೋ ನಾನು ಹೋಗಿ ಚಿ॥ ಸೌ॥ ಶಾಂತಮ್ಮನನ್ನೂ ಚಿ॥ ಸೌ॥ ಸಾವಿತ್ರಮ್ಮನನ್ನೂ ಕರೆತರುವೆನು. ಇಲ್ಲವೇ ಚಿ॥ ಸೌ॥ ಶಾಂ. ಮಾತ್ರ ಕರತರಬೇಕಾಗುತ್ತೆ. ಚಿ॥ ಸೌ॥ ಸಾ....ನ್ನು ಕರತರುವಂತೆ ಕೃ.ಪು.ಕ್ಕೆ ಕಾಗದ ಬರೆದಿದೇನೆ. ಆಗಲೇ ಅವರ ಮನೆಗೆ ಚಕ್ಕುಲಿ ಇಡುವ ಕೆಲಸವನ್ನೂ ನೆರವೇರಿಸಬೇಕಾಗಿದೆ. ಇನ್ನೊಂದು ವಾರದಲ್ಲಿ ಲೇಹ ಸೇವನೆಗಾರಂಭಿಸುವೆನು.

ಇಲ್ಲಿನ ಸಂಬಂಧವಾದ ಯಾವ ಕಷ್ಟ ನಷ್ಟಗಳನ್ನೂ ಯೋಚಿಸಿಕೊಂಡು ಆತಂಕಕ್ಕೆಡೆಗೊಡದೆ ಸ್ಥಿರಚಿತ್ತದಿಂದ ವ್ಯಾಸಂಗ ಮಾಡಿ ಅನ್ನದಾತರ ಪ್ರೀತಿಗೆಡೆಗೊಡುವಿಯಾಗಿ ನಂಬಿದೇನೆ.

ನಿನ್ನ ತಾಯಿಯು ಸಂಪೂರ್ಣಾರೋಗ್ಯವಾಗಿರುವುದರಿಂದ ಪ್ರಶ್ನಭಾಗವೇನೂ ಬೇಕಿಲ್ಲ, ಚಿಂತಿಸಬೇಡ.

K. ಶ್ರೀ. ರವರಲ್ಲಿ ಪ್ರಸ್ತಾಪಿಸಿದೆನು. ಸರಿ. my hand is nil. ಆದ್ದರಿಂದ ಕಾ.ವೆಂ. ತಾಟಸ್ಥ್ಯಭಾವವಾಗಿದೆ.

ನಾನೂ ಅದೇ ತರದೂದಿನಲ್ಲಿದೇನೆ. ಈಗಿನ ಕ್ಷಾಮ ಸ್ಥಿತಿಯಿಂದ ಯಾರೊಬ್ಬರೂ ಧೈರ್ಯ ಮಾಡುವುದಿಲ್ಲ. ಆದರೂ ಹಿಂದೆಯೇ ಕೇಳಿದ್ದ ಶಾ.ಕೃ.ಗೆ. ಸಲಹೆ ಮಾಡಿದೇನೆ. ಹೇಗಾಗುವದೋ ನೋಡೋಣ. ಕೊನೆಗೆ 9ಕ್ಕೇ ಆದರೂ ಇನ್ನೂ ಕೊಂಚ ಕಮ್ಮಿಯಾದರೂ ರಡಿಯಾಗಿದೇನೆ. ಉದಾಸೀನ ಮಾಡುವುದಿಲ್ಲ, ಇದಕ್ಕಾಗಿ ಚಿಂತಿಸಬೇಡ. ನಾನಿರುವವರಿಗೂ ನನ್ನದಾಗಿದೆ. ಅಡಿಕೆ ಕೆಡವಿದಾಗ ಅಲ್ಲಿ ನಡೆಯಬೇಕಾದ ಕೆಲಸ ನಡೆಸುತ್ತೇನೆ. ನನ್ನ ಜೀವಮಾನವಿರುವವರೆಗೂ ತೀರ್ಮಾನವೇ ಆಗದೇ ಸೌಕರ್ಯವೂ ಆಗದೇ ಇರುವಲ್ಲಿ ಬಿಟ್ಟು ಸುಮ್ಮನಾಗಿಬಿಡಿ. ನನ್ನಿಂದ ನಿಮಗೆ ಸಾವಿರಾರು ನಷ್ಟವಾದಂತೆ ಹೋಗಲಿ. ನಮ್ಮ ಸುಖಕ್ಕಿಂತ ಅದು ಹೆಚ್ಚಿನದಲ್ಲ.

ಸಂದರ್ಭ ಬಿದ್ದರೆ ಪೋರಡೆಯೊಡನೆ ನಾವೂ ಲ.ಚಿ.ರೂ ಛೇಂಜಸ್ ಪ್ರಯತ್ನ ಮಾಡಿ ಆಮೇಲೆ ಹೇಗೆ ಬೇಕಾದರೂ ಮಾಡೋಣವೆಂದೂ ಯೋಚನೆ ಇದೆ. ಯಾವುದಕ್ಕೂ, ಕೂತು ಮಲಗಬೇಕೇ ಹೊರ್ತು ನಿಂತಿದ್ದಂತೆಯೇ ಮಲಗಲು ಯತ್ನಿಸ ಬಾರದು. ದೈವಬಲವಿದ್ದಂತಾಗಲಿ.

ನಿಮ್ಮಿಬ್ಬರಿಗಿಂತಲೂ ಮೊದಲೇ ನನಗೆ ಈ ಯೋಚನೆ ಇತ್ತೆಂಬುದು ನಿಮ್ಮಗಳಿಗೆ ಗೊತ್ತೇ ಇದೆ. ಸಮಯ ಬರಬೇಕಾಗಿದೆ.

ಅಡಿಕೆ ದರ ಇಲ್ಲಿ 4-4-0, 4-6-0, 4-8-0 ಇದೆ. ಮುಂದೆ ಇನ್ನೂ ಹೆಚ್ಚಬಹುದೆಂಬ ಉದ್ದೇಶದಿಂದ ಅನೇಕರಂತೆ ನಾನೂ ಸ್ಟಾಕ್ ಮಾಡಿದೇನೆ. ಇಲ್ಲಿ ಇನ್ನೂ ಸ್ಫೋಟಕೋಪದ್ರವದ ಚಿಹ್ನೆ ಇದ್ದೇ ಇದೆ. ನಿಧಾನ ದ್ರೋಹಿಯಾಗಿದೆ. ಈಗ 2 ತಿಂಗಳಲ್ಲಿ ಆಳುಗಳಿಗಾಗಿ ಎಷ್ಟು ಪ್ರಯತ್ನಪಟ್ಟರೂ ಅನೇಕರು ಖಾಯಿಲೆ, ಬತ್ತ ಕೊಯ್ಯುವದು, ಹುರುಳಿ ಕೀಳುವುದು, ಬಡಿಯುವುದು ಇತ್ಯಾದಿಗಳನ್ನು ಹೇಳುವರೇ ಪರನ್ತು ಆಳುಗಳೇ ಹುಟ್ಟುವದಿಲ್ಲ. ಮೇಲಣ ತೋಟದ ಹಂಬಿನ ಕಡ್ಡಿಯೆಲ್ಲಾ ನಿರ್ನಾಮವೇ ಆಯ್ತು. ಈಗಲೂ ಆಳುಗಳು ಹುರುಳಿ ಹುಚ್ಚೆಳ್ಳು ರಾಗಿ ಬಡಿಯುವುದು ಇತ್ಯಾದಿ ಸಬೂಬುಗಳನ್ನು ಹೇಳುವರೆ ಹೊರ್ತು ಕೆಲಸಕ್ಕೆ ಬರುವದಿಲ್ಲ.

ನಾನೂ ನನ್ನ ಬುದ್ಧಿಗೆ ತಿಳಿದಮಟ್ಟಿಗೆ ಪ್ರಯತ್ನಿಸುತ್ತಿದೇನೆ. ಈ ವರ್ಷ...ನು ನನ್ನೊಡನೆ ಈವರಿಗೂ ಪ್ರಸ್ತಾಪಿಸಿಲ್ಲ, ಕೇಳಿದರೆ ಧಾರೆ ಎರೆದುಕೊಳ್ಳುವೆನು.

ಒಟ್ಟಿನಲ್ಲಿ ಎಲ್ಲರಿಗೂ ಶಕ್ತಿ ಕಮ್ಮಿಯಾಗುತ್ತ ಬಂತು. ಅವನ ಮಗನು ಉದ್ಧತ ಮತ್ತು ಅವಿಧೇಯ ಶಿಖಾಮಣಿ. ಆದುದಾಗಲಿ ಅನುಭವಿಸೋಣ.

1 ತಿಂಗಳಿಂದ ಯಾತ ಹಾಕುವ ವಿಚಾರದಲ್ಲಿ ತಗಾದೆ ಮಾಡುತ್ತಿದ್ದರೂ ಬತ್ತ ಬಡಿಯುತ್ತೇನೆ, ಖಾಯಿಲೆ, ಸ್ವಲ್ಪ ಹುಷಾರಾಗಲಿ, ರಾಗಿ ಗುಡ್ಡೆಗೆ ಮುಳ್ಳು ಹಾಕುತ್ತೇನೆ ಇತ್ಯಾದಿಗಳಿಂದ ಕಾಲಹರಣ ಮಾಡುತ್ತಿರುವನೆ ಪರನ್ತು ಕಾರ್ಯಾರಂಭವೇ ಇಲ್ಲ, ಆದರೆ ಅವನ ಹಂಬಿಗೂ ವಾರಕ್ಕೆರಡು ಹದ ನೀರು ಹಾಕುತ್ತಿದಾನೆ. ನಮ್ಮ ಹಂಬಿಗೂ ಹದಕ್ಕೆ 6 ಆ. ಮೇರೆ ವಾರಕ್ಕೆರಡು ಹದ ಹಾಕಿಸುತ್ತಿದೇನೆ. ಅವರು ಹಾಕಿದಷ್ಟು. ಮುಖತಃ ಇರುವುದಕ್ಕಾಗು ವುದಿಲ್ಲ, ಇದ್ದ ದಿವಸ ಬರುವದಿಲ್ಲ, ಬಂದ ದಿವಸ ಹಾಕುವದಿಲ್ಲ, ಹೇಗಾದರೂ ಆಗಲಿ ಎಂದು ದ್ರವ್ಯಧ್ವಂಸ ಮಾಡುತ್ತಿದೇನೆ. ಶಾ.ಕೃ.ನೂ ಏರದ ಪ್ರಯತ್ನ ಬಾಯಲ್ಲೇ ಹೇಳುತ್ತಿದಾನೆ.

ಆಳುಗಳು ದೊರೆತರೆ ನೂರಾರು ರೂ. ಖರ್ಚಾದರೂ ಹಿಂತೆಗೆಯುವದಿಲ್ಲ. ಯೋಚಿಸಬೇಡ.

ಮ|| ರಾಜನ ಹೆಂಡತಿಯು ಆರೋಗ್ಯ ಹೊಂದುತ್ತಿದಾಳೆ. ನಿನ್ನ ಕ್ಲಾಸ್‌ನಲ್ಲಿ ಸ್ಕಾಲರ್‌ಶಿಪ್ Rs. 13 ಎಂದೂ ಅಶನಕ್ಕಾಗಿ 3 ಎಂದೂ ಕೇಳಿದ್ದೆ. ಈಗ 1 ರೂ. ಕಡಿಮೆಯಾಯಿತೆಂದು ಬರದಿರುವದನ್ನು ನೋಡಿ ತುಂಬ ವಿಷಾದಿಸುತ್ತೇನೆ. ಕಾರಣ ತಿಳಿಯದು. ಹಾಲಿ 3 ರೂ. ಬರುತ್ತಿದೆಯೆಂದು ಭಾವಿಸಿದ್ದೆನು. ಮಾಡುವದೇನಿದೆ ? ಎಲ್ಲ ವಿಚಾರಗಳಿಗೂ ಉತ್ತರವನ್ನು ಇಲ್ಲಿಗೆ ಬರುವರೊಡನೆ ಕಳುಹು. ಒಟ್ಟಿನಲ್ಲಿ ನೀನು ಇಲ್ಲಿನ ವಿಚಾರಗಳಿಗೆ ಮನಗೊಟ್ಟು ಕ್ಲೇಶಕ್ಕೆಡೆಗೊಡದಂತೆಯೂ ಕೃತಕಾರ್‍ಯನಾಗು ವಂತೆಯೂ ಸರ್‍ವಮಂಗಳೆಯಾದ ಶ್ರೀ ಚಾಮುಂಡಾಂಬೆಯವರು ಅನುಗ್ರಹಿಸಿ ನಿಮ್ಮಗಳಿಗೆ ಆಯುರಾರೋಗ್ಯೈಶ್ವರ್‍ಯಾದಿಗಳನ್ನು ಕರುಣಿಸಿ ಚಿರಕಾಲ ಕಾಪಾಡಲೆಂದು ಪ್ರಾರ್ಥಿಸುವದರ ಮೂಲಕ ನನ್ನ ಲೇಖಣಿಗೆ ವಿರಾಮ ಕೊಟ್ಟದ್ದೇನೆ.

ಇತ್ಯಾಶೀರ್ವಾದಾಃ

೨೭೭

ಆ ಮನೆಯ 'ತಳ್ಳಿ' (ಹಳ್ಳಿಯಲ್ಲಿರುವ ತಂದೆಗೆ ಪತ್ರ. ಕವರು)

ಕುಶಲಮ್ ಶ್ರೀ : 23.6.1937

ತೀ|| ರವರ ದಿವ್ಯ ಚರಣಸನ್ನಿಧಿಯಲ್ಲಿ ಬಾಲಕಕೃತ ಸಾ|| ನಮಸ್ಕಾರಪೂರ್ವಕ ವಿಜ್ಞಪ್ತಯಃ ಸಂಪ್ರತಿ.

ತಾವು ವಾತ್ಸಲ್ಯದಿಂದ ಕಳುಹಿಸಿಕೊಟ್ಟ ಅವಲಕ್ಕಿ ಮಾವಿನ ಹಣ್ಣುಗಳು ತಲಪಿದವು. ಬಹಳ ಆನಂದವಾಯ್ತು. ಇನ್ನು ಏನನ್ನೂ ಕಳುಹಿಸಬೇಡಿ. ಸಾಕು.

ನನಗೆ ಅಶನ, ವಸನ, ವೇತನಗಳಲ್ಲಿ ಯಾವದೊಂದಂಶ ದಲ್ಲಿಯೂ ಇದುವರೆಗೆ ನ್ಯೂನತೆ ಕಂಡುಬಂದಿಲ್ಲ. ವೇತನದ ವಿಷಯದಲ್ಲಿ ನ್ಯೂನತೆಯೆಂದು ಯಾರೋ ಪ್ರಲೋಭನಪಡಿಸಿರು ವರೆಂದು ಕಾಣುತ್ತದೆ. ಪ್ರಾರಂಭವಾದ ಮೇಲೆ ಒಂದೇ ಒಂದು ತಿಂಗಳೂ ತೆಗೆದುಕೊಳ್ಳದೆ ಬಿಟ್ಟಿಲ್ಲ.

ಅವಲಕ್ಕಿಯು ನಿರ್ವಿವಾದವಾಗಿ ಬೆಳಗಿನ ಹೊತ್ತು ವಿನಿಯೋಗವಾಯ್ತು. ನಾನು ಬರುವಾಗ ಸೌ|| ಮಾ|| ಶ್ರೀಯವರಿಗೆ ತಿಳುಹಿಸಿ 1 ಜತೆ ಕಾಲುಬಳೆಯನ್ನು ತೆಗೆದುಕೊಂಡು ಬಂದಿದ್ದೆ. ಅದನ್ನು ಕರಗಿಸಿದ ನಂತರ 5 ತೊಲ ಮಾತ್ರ ಉಳಿಯಿತು. ಮೊದಲು 14 ತೊಲ ಇತ್ತು. ಅದರ ಜತೆಗೆ 0-12-0 ಹಾಕಿ ಈ ತಟ್ಟೆಯನ್ನು ತೆಗೆದುಕೊಂಡಿದ್ದೇನೆ. ಕಾಲುಬಳೆಯು ಬಹಳ ಕಮ್ಮಿ ಬೆಳ್ಳಿಯದಾದ್ದರಿಂದ ಊದಿಸಿದ ಮೇಲೆ ಬಹಳ ಕಡಮೆ ಬಂತು. ಮನೆಯ ವಿಚಾರವನ್ನು ವಿಚಾರಿಸಿದುದಾಯ್ತು. ಆ ಮನೆಯನ್ನು ಯಾರು ತೆಗೆದುಕೊಳ್ಳುವರೋ ಅವರ ಕಳತ್ರ ಮತ್ತು ಪುತ್ರರು ಸರ್ವಥಾ ಬದುಕುವಂತಿಲ್ಲ. ಆ ಮನೆಯ ದಕ್ಷಿಣ ದಿಕ್ಕಿನ ಬಾಗಿಲಿನಲ್ಲಿ ಬಹು ಹಿಂದಿನ ಕಾಲದಲ್ಲಿ ಹಣವನ್ನು ಹೂಳಿ ಇಟ್ಟದ್ದರಿಂದೂ ಅದು ಇದುವರೆವಿಗೂ ಯಾರಿಗೂ ಸಿಕ್ಕದೆ ಈಗ ಒಂದು ಗ್ರಹವಾಗಿ ಪರಿಣಮಿಸಿದೆಯೆಂದೂ ಅದರ ಬಾಧೆಯಿಂದ ಅನೇಕರು ನಷ್ಟವಂಶರೂ ನಷ್ಟಕಳತ್ರರೂ ನಷ್ಟಪುತ್ರರೂ ಆಗಿದ್ದಾರೆಂದೂ ಆ ಮನೆಯಲ್ಲಿ ಪೂರ್ವದಲ್ಲಿ ಅಕ್ಕಸಾಲಿಗರು, ಬಡಗಿಗಳು, ಇತರೆ ಜನಗಳು, ಬ್ರಾಹ್ಮಣರು ಅನೇಕರು ವಾಸವಾಗಿರುವ ಕಾಲದಿಂದಲೂ ಇದೇ ರೀತಿ ಇದೆಯೆಂದೂ ಅದಕ್ಕೆ ಪರಿಹಾರವು ಸರ್ವಥಾ ಸಾಧ್ಯವಿಲ್ಲವೆಂದೂ ಹಾಗೆ ಪರಿಹಾರವಿರಲೇಬೇಕೆಂದರೆ ಆ ಮನೆಯನ್ನು ನಿರ್ಮೂಲವಾಗಿ ಒಡೆಯಿಸಿ ಹೊಸದಾಗಿ ಕಟ್ಟಿಸಿದರೆ ಅನುಕೂಲವಾಗುವುದೆಂದೂ 3 ಕಾಸಿಗೆ ಕೊಡುವುದಾದರೂ ನೀವು ಅದರ ತಳ್ಳಿಗೆ ಹೋಗಬೇಡಿರೆಂದೂ ಸ್ಪಷ್ಟವಾಗಿ ಹೇಳಿದರು. ಹಿಂದೆ ತೋಟದ ವಿಚಾರವನ್ನು ನೋಡಿದ್ದವರೇ ಈಗ ಇದನ್ನು ನೋಡಿದರು. ತೋಟದ ವಿಷಯದಲ್ಲಿ ತಾವು ಹೇಳಿದಷ್ಟು ನಡೆಯಿಸುತ್ತಿದ್ದರೆ ಬಾಧಕವಿಲ್ಲವೆಂದು ಪುನಃ ಹೇಳಿದರು. ಆ ವಿಚಾರವನ್ನು ತಮಗೆ ತಿಳಿಸಿದ್ದಕ್ಕೆ ತಾವು ಏನ ಹೇಳಿದಿರೆಂದು ಕೇಳಿದರು. ಇತ್ಯಾದಿ ವಿವರ ಶ್ರುತವಿರಬೇಕು.

ಸೌ|| ಮಾ|| ಮದ್ದಿಯವರು ಕೊಟ್ಟದ್ದ ಹಸುವಿನ ಪಡಕ್ಕೆ ಕಟ್ಟು ಹಾಕಿಸಿದ್ದೇನೆ. 4-0-0 ರೂ. ತಗುಲಿತು. ಅದನ್ನು ನಾನು ಊರಿಗೆ ಬರುವಾಗ ತೆಗೆದುಕೊಂಡು ಬರುವೆನು. 3-8-0 ಕೊಟ್ಟು ಪಂಚೆಯನ್ನು ತೆಗೆದುಕೊಂಡೆನು.

ತಟ್ಟೆಯನ್ನು ಮುತ್ತಣ್ಣನವರ ಕೂಡೆ ಕಳುಹಿಸಿದ್ದೇನೆ. ಬೆಲೆ 3-5-0. ನಾನು ಬೆಳ್ಳಿಯನ್ನು 0-8-3 ರೂ.ನಂತೆ ಕೊಟ್ಟೆ.

ಮಳೆ ಇಲ್ಲವೆಂದು ಕೇಳಿ ಬಹಳ ಸಂಕಟವಾಗಿದೆ. ಚಿ|| ಕಿಟ್ಟಿಯು ಆರೋಗ್ಯವಾಗಿರಬಹುದೆಂದು ನಂಬಿದ್ದೇನೆ. ಸೌ|| ಮಾ|| ರವರಿಗೆ ನನ್ನ ವಿಜ್ಞಾಪನೆಗಳನ್ನು ತಿಳಿಸಬೇಕಾಗಿ ಪ್ರಾರ್ಥನೆಗಳು.

ಮ|| ಮುತ್ತಣ್ಣ ಉಪಾಧ್ಯಾಯರ ಬಳಿ ನಾನು ರೂಪಾಯಿ ತೆಗೆದುಕೊಂಡಿಲ್ಲ. ಬೇಕಾದಾಗ ಬರೆಯುವೆನು. ತೀ|| ಅಣ್ಣಯ್ಯನ ವರಿಂದ ಮೊನ್ನೆ ಆಶೀಃ ಪತ್ರಿಕಾ ಬಂದಿತು. ಆರೋಗ್ಯವಾಗಿದ್ದಾರೆ. ಅವರಿಗೂ ಸ್ವಲ್ಪಮಟ್ಟಿಗೆ ಕಿಟ್ಟಿಯ ಮೇಲೆಯೇ ಯೋಚನೆ. ತೊಟ್ಟನಾಗಪ್ಪನವರ ನಿವೇಶನವನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುವುದು ಒಳ್ಳೆಯದೆಂದು ತೋರುವುದು. ಬಾವಿಕಟ್ಟೆಯ ಕೆಲಸ ನಡೆಯುತ್ತಿದೆಯೆ ? ಇದರೊಡನೆ 2 ಬೆಡ್‌ಷೀಟುಗಳನ್ನು

ಕಳುಹಿಸಿದ್ದೇನೆ. ಬೆಡ್‌ಷೀಟ್ ತೆಗೆದುಕೊಂಡು ಬಾ ಎಂದರೆ ಇದ್ದದ್ದೆಲ್ಲಾ ತೆಗೆದುಕೊಂಡು ಬಂದು ನಾನು ಎಷ್ಟಿದೆಯೆಂದೂ ನೋಡದೆ ಕಟ್ಟಿಕೊಂಡು ಬಂದಿದ್ದುದರ ಫಲವಾಗಿ ಇದು.

ಇತ್ಯಾದಿ ವಿಚಾರಗಳಿಗೂ ತಮ್ಮ ಆರೋಗ್ಯಕ್ಕೂ ಆಶೀಃ ಪತ್ರಿಕಾ ದಯಪಾಲಿಸಬೇಕಾಗಿ ಪ್ರಾರ್ಥನೆಗಳು. ಅತಿಶಯವಿಲ್ಲ. ಇತಿ ನಮಸ್ಕಾರ ಪೂರ್ವಕ ವಿಜ್ಞಪ್ತಯಃ.

೨೭೮

ತೋಟ ಕ್ರಯಕ್ಕಿದೆ (ಮಗನಿಗೆ ಕವರು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು 15/5/38

ಚಿ॥ಗೆ ಆಶೀಃ ಉ.ಕು.ಸಂ.

ಮ। K ಸುಬ್ಬರಾಯರ ಪುತ್ರಿ ಪುತ್ರರ ವಿವಾಹ ಲಗ್ನಪತ್ರವು ಟಪಾಲ್ ಮೂಲ್ಕ ಹಸ್ತಗತವಾಗಿರಬಹುದು.

ನೀನು ಅಲ್ಲಿಗೆ ಹೋಗಿ ಬರುವಲ್ಲಿ ಯಾವ ದಿವಸ ಹೊರಡುವೆ ಎಂಬುದನ್ನು ಬರೆದರೆ ಚಿ। ಸೌ।...ಳನ್ನು ಮೈಸೂರಿಗೆ ಕರೆತಂದು ಕಳುಹುವೆನು. ಯಾವ ದಿವಸ ಹೊರಡುವಿ ಎಂಬುದನ್ನು ಬರೆದರೆ ಆ ಟೈಮಿಗೆ ಬರುವೆವು. ನಿನ್ನ ಅಣ್ಣ ಮತ್ತು ಚಿ॥ಗಳು ಸಹ ನೆನ್ನೆ ಹಾಸನಕ್ಕೆ ಪ್ರಯಾಣ ಮಾಡಿದರು. ದೈವಾನುಗ್ರಹದಿಂದ ನಾವೆಲ್ಲರೂ ಕುಶಲರು. ಆಶೀಃ.

ಹ। ತಿಮ್ಮಪ್ಪಯ್ಯನ ತೋಟ ಕ್ರಯಲಬ್ಧವಾಗುವಂತಿದೆ. ಅದು ನಮ್ಮ ಕುಟುಂಬದ ಋಣಾನುಬಂಧಕ್ಕೆ ಒದಗುವದೆ ? ಎಂಬುದನ್ನು ಚೆನ್ನಾಗಿ ವಿಚಾರಿಸಿ ಸಾಧ್ಯವಾದಷ್ಟು ಜಾಗ್ರತೆ ಬರಿ. ಬಾಕಿಯ ಎರಡೂ ಒಂದೊಂದೂ ಕತರಾಗಿವೆ. ಸರಳಾಗಿಲ್ಲ. ಈ ವಿಚಾರಗಳನ್ನು ನಿನ್ನ ಅಣ್ಣನ ಸಮುಕ್ಷಮ ನಿನ್ನಲ್ಲಿ ಮಾತನಾಡಬೇಕೆಂದಿದ್ದೆ. ನೀನು ರಜದಲ್ಲಿ ಊರಿಗೆ ಬರಲೇಇಲ್ಲ. ಮುಂದೆ ಮಾತನಾಡೋಣ. ಮೇಲಿನ ವಿಷಯ ಜರೂರ್ ಬೇಕಾಗಿದೆ. ಕ್ರಯವು ಪ್ರಾಯಃ 350ರಲ್ಲಿ ಹೆಚ್ಚು ಕಡಮೆ ಬೀಳಬಹುದು. ಈವರಿಗೆ ಮಳೆ ಇಲ್ಲ. ತೋಟದಲ್ಲಿ ಬಾವಿ ತೋಡಿಸಲು, ನೀರು ಹಾಕಿಸಲು 50ರೂಗೆ ಮೇಲೆ ಖರ್ಚಾಯ್ತು. ಏನೂ ಪ್ರಯೋಜನವಿಲ್ಲ. ಜರೂರಿಲ್ಲದ ಕೆಲಸ. ನನಗೆ ಜುಲೈ 14ಕ್ಕೆ ರಿಟೈರ್ ಆರ್ಡರ್ ಬಂದಿದೆ.

ದುಡ್ಡಿನ ಮುಗ್ಗಟ್ಟು ಹೇಳತೀರದು. ಪ್ರಾರಂಭದಿಂದ ಪಠಿಸಿದ ಪುಸ್ತಕಗಳನ್ನು ಹಿಂದಣದಿಂದ ಶೇಖರಿಸುವದು ಉತ್ತಮ. ಬಾಕೀ ವಿಚಾರಗಳನ್ನು ಮುಖತಃ ಮಾತನಾಡೋಣ. ಸರ್ಟಿಫಿಕೇಟನ್ನೂ ಕಳುಹಿದೆ. ನಲುಗದಂತಿರುವದಕ್ಕಾಗಿ ಒಂದು ಬುಕ್ಕಿನಲ್ಲಿ ಕಳುಹಿದೆ. ದೈವಾನುಗ್ರಹದಿಂದ ನಾವೆಲ್ಲರೂ ಕುಶಲರು (ನಾರದರತ್ನ ದ್ವಿತೀಯ ಪ್ರಕರಣ). ದೇಹಾರೋಗ್ಯಕ್ಕೆ ಹೆಚ್ಚು ಗಮನವಿರಲಿ. ಆಶೀಃ.

೨೭೯

ಆದರ ಪ್ರಾಪ್ತಿ ಇದೆ (ಮನೆ ಕೊಳ್ಳಬಹುದು)

कुशलम् श्री: मैसूरु

23-5-38

ವಿಜ್ಞಪ್ತಯಃ ಸಂಪ್ರತಿ

ಲಗ್ನಪತ್ರಿಕೆಯು ತಲಪಿ ಬಹಳ ಆನಂದವನ್ನುಂಟು ಮಾಡಿತು.

ತಾವು ನನ್ನನ್ನು ಇಂತಹ ಪ್ರಸಂಗಗಳಿಗೆ ಪರ್ಯಾಪ್ತವಾದ ಹಣ ಸಂಪಾದಿಸುವ ಮಗನನ್ನಾಗಿ ಸಂಭಾವನೆ ಮಾಡಿ ತಮ್ಮ ಸೊಸೆಯನ್ನು ಇಲ್ಲಿಗೆ ಕರೆದುಕೊಂಡು ಬರುವ ವಿಚಾರವನ್ನೂ ಉಲ್ಲೇಖಿಸಿದ್ದಕ್ಕಾಗಿ ತುಂಬಾ ಕೃತಜ್ಞನಾಗಿದ್ದೇನೆ...ನಾಳೆ ನಾನು ಪರೀಕ್ಷೆಗೆ ಅರ್ಜಿ ಹಾಕುವ ದಿವಸ. ಬಹುಧಾನ್ಯ ಸಂವತ್ಸರವು ಅರ್ಥವತ್ತಾಗುವಂತೆ ಕಾಣಲಿಲ್ಲ.

ಮನೆಯ ವಿಷಯವನ್ನು ಜಾಗ್ರತೆಯಾಗಿ ಬರೆಯಲು ಆಗದಿರುವುದಕ್ಕೆ ಕಾರಣ ಅದು ಕೇವಲ ಸ್ವತಂತ್ರವಾದದ್ದಲ್ಲದಿರುವುದೇ. ಈ ದಿವಸ ವಿಚಾರಿಸಿದೆನು. "ಆ ಮನೆಯಿಂದ ಯಾವ ವಿಧವಾದ ಅಪಾಯವೂ ಇಲ್ಲ. ಗ್ರಹಾದಿಗಳ ಬಾಧೆಯೂ ಇಲ್ಲ. ಪಂಚಮಾಷ್ಟಮ ಸ್ಥಾನಗಳಿಗೆ ಪ್ರತಿಬಂಧಕವೂ ಇಲ್ಲ. ಎಲ್ಲ ವಿಷಯವೂ ಅನುಕೂಲವಾಗಿದೆ. ಆದರಿಂದ ನಮಗೆ ಅತಿಶಯವಾದ ಲಾಭವಿಲ್ಲದಿದ್ದರೂ ಸ್ವಲ್ಪವೂ ಕೆಡಕಿಲ್ಲ. ಕೆಲವರು ಪ್ರಕಟಮಿತ್ರರು ಆ ಮನೆಯಲ್ಲಿ ಗ್ರಹಸಂಚಾರವಿದೆಯೆಂದು ಹೇಳಬಹುದು. ಅದು ಕೃತ್ರಿಮದಲ್ಲಿ ಸೇರತಕ್ಕದ್ದು. ಯಾವ ಗ್ರಹಬಾಧೆಯೂ ಇಲ್ಲ. ಸರ್ವರೀತ್ಯಾ ಅನುಕೂಲವಾಗಿದೆಯೆಂಬಂಶದಲ್ಲಿ ನಾನು ಭರವಸೆ ಕೊಡುತ್ತೇನೆ" ಎಂದು ಹೇಳಿದರು. ಅಲ್ಲದೆ ಈ ಮನೆಯ ಪ್ರಾಪ್ತಿ ನಮಗಿದೆಯೆಂದು ನಿರ್ಭರವಾಗಿ ಹೇಳಿದ್ದಾರೆ. ಇನ್ನೊಬ್ಬರ ಮಾತಿಗೆ ಬೆರಗಾಗಬೇಕಾಗಿಲ್ಲ. ತಮಗೆ ಸಮರ್ಪಕವಾಗಿದ್ದರೆ ತೆಗೆದುಕೊಳ್ಳಬಹುದು.

ಪರಂತು ಈಗಿರುವ ಮನೆಯನ್ನು ಸರ್ವಥಾ ಮಾರಕೂಡದು. ...ಪ್ಪಯ್ಯನವರ ಮನೆಯನ್ನು ಕೊಂಡುಕೊಳ್ಳಬೇಕು. ಆಮೇಲೆ ಯಾವುದಾದರೊಂದು ರೀತಿ ಕ್ರಮಪಡಿಸಿಟ್ಟುಕೊಳ್ಳಬೇಕು. ಇದು ನನ್ನ ಅಭಿಪ್ರಾಯ. ಈ ಮನೆಯನ್ನು ಕೊಂಡುಕೊಳ್ಳಲು ಇನ್ನೂ ಕೆಲವರು ಪ್ರಯತ್ನ ಮಾಡಿರಬಹುದು. ತಮಗೆ ಸಂಪೂರ್ಣ ಇರಾದೆ ಇರುವ ಪಕ್ಷದಲ್ಲಿ ಜಾಗ್ರತೆಪಡಿಸಬೇಕಾಗಿ ಕೋರುತ್ತೇನೆ.

ಅತಿಶಯವಿಲ್ಲಾ ಇತಿ ವಿಜ್ಞಪ್ತಯಃ

೨೮೦

ವಿನಯದಿಂದ ಸಾಧಿಸು (ಮಗನಿಗೆ ತಂದೆಯ ಕವರು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು ತಾ। 1 $^{8}/_{38}$

ಚಿ। ಗೆ ಆಶೀಃ ಉ.ಕು.ಸಂ.

ವೇ।। ತಿ।। ಕುಟುಂಬದ ಹತ್ತಿರ ಕಳುಹಿದ್ದ ಕಾಗದವು ಹಸ್ತಗತವಾಗಿರಬಹುದು. ನಾನು ರ್ಪೆರ್ಷೆ ರೆಕಾರ್ಡ್‌ಗಳ ಕಂಪ್ಲೆಂಟ್‌ಗಾಗಿ ಹೆಚ್.ಎನ್. ಪುರಕ್ಕೆ ಹೋಗಿದ್ದು ಹಾಗೆಯೇ ಹಾಸನಕ್ಕೂ ಹೋಗಿದ್ದೆನು. ಪ್ರಸ್ತಾಪಾಂತರಗಳಿನ್ದ ನಿನಗೆ ಸುಮಾರು 1 ವಾರದಿಂದ ಅಸ್ವಸ್ಥತೆಯುಂಟಾಗಿರುವದಾಗಿ ತಿಳಿದು ಬಹಳ ವ್ಯಾಕುಲವಾಯ್ತು. ಇಲ್ಲಿಗೆ ತಿಳಿಸಲು ನಿನಗೆ ಮನ ಬಾರದಿರುವುದೂ ಒಂದು ಪ್ರಶಂಸನೀಯಾರ್ಹವಾದ ವಿಷಯವೇ. ಇರಲಿ. ಪ್ರಕೃತ ನೀನು ದೈವಾನುಗ್ರಹದಿಂದ ಆರೋಗ್ಯವಾಗಿರುವೆಯಾ ? ದ್ರವ್ಯಾವಶ್ಯಕತೆ ಯಿದ್ದರೆ ಬರಿಯಬೇಕಾಗಿ ಬರೆದಿದ್ದೆ. ಏನೊಂದು ಉತ್ತರವೂ ಲಭ್ಯವಿಲ್ಲವಾಗಿ ಪುನಃ ಜ್ಞಾಪಿಸಿದ್ದೇನೆ. ಪರೀಕ್ಷೆಯು ಪ್ರಾರಂಭಿಸುವ ಮೊದಲೇ ನೀನು ಶ್ರೀದೇವೀಪ್ರಾರ್ಥನೆಯನ್ನು ಮಾಡಿ (ಪ್ರಥಮ ಶ್ರೇಣಿಯಲ್ಲುತ್ತೀರ್ಣನಾಗುವನ್ತೆ) ನಂತರ ಪರೀಕ್ಷೆಗೆ ಕೂತುಕೊಳ್ಳತಕ್ಕದ್ದಿದೆ. ಉದಾಸೀನಾಂಶವಲ್ಲ. ರಜ ಬಂದ ನಂತರ ಇಲ್ಲಿಗೆ ಬರುವಿ ಎಂಬ ಭರವಸೆ ಇದೆ. ನಿನ್ನೊಡನೆ ಹಲವು ಆದಾಯವ್ಯಯದ ಆಲೋಚನೆ ಮಾಡತಕ್ಕದ್ದಿದೆ. ಯಾವುದೋ ಕಾರಣದಿಂದ ಯಾರೋ ಹಿಸುಣರು ಸೂಚಿಸುವ ವಚನಗಳಿಗೆಡೆ ಗೊಡುವುದು ಕರ್ತೃತ್ವಪರಾಯಣರ ಕೆಲಸವಲ್ಲ.

ಗೃಹವು ನನ್ನ ಗೈರ್ಹಾಜರಿಯಲ್ಲಿ H + AS ರಿಗೆ ವಿನಿಯೋಗಿಸಲ್ಪಟ್ಟಿತು. ಅದರಿಂದಾವ ಕೊರತೆಯೂ ಇಲ್ಲವೆಂದು ನನ್ನ ಭಾವನೆ.

ಹಾಸನದಲ್ಲಿಯೂ ಇಲ್ಲಿಯೂ ದೈವಾನುಗ್ರಹದಿಂದ ಎಲ್ಲರೂ ಕುಶಲರೆಂದು ಅರುಹಲು ಸಂತೋಷಿಸುತ್ತೇನೆ.

ಎಲ್ಲರಲ್ಲಿಯೂ ವಿನಯವಿಧೇಯತೆಗಳಿಂದಿದ್ದು ಉದ್ದೇಶ ಕಾರ್ಯವನ್ನು ಸಾಧಿಸಬೇಕಾಗಿ ಇನ್ನೂ ಒಮ್ಮೆ ಅಲ್ಲ, ಸಹಸ್ರ ಸಲ ಒತ್ತಿ ಹೇಳುತ್ತೇನೆ.

ಅಭ್ಯಂಜನತ್ಯಾಗ ಮಾಡಿದರೆ ಆರೋಗ್ಯಭಂಗವಾಗುತ್ತೆನ್ದು ನನ್ನ ಭಾವನೆ. ಹೋಟಲಿನಲ್ಲಿ ಮೌಲ್ಯ ಕೊಟ್ಟಾದರೂ ಆ ಕೆಲಸ ಮಾಡಿಕೊಳ್ಳಬೇಕೆಂಬುದು ನಮ್ಮ ಒತ್ತಾಯ. ಆಲಸ್ಯಶಬ್ದ ಶ್ರವಣ ಮಾತ್ರದಿಂದಲೇ ಹೃದಯವು ಜರ್ಝರೀಕೃತವೇ ಸರಿ. ಅಷ್ಟಕ್ಕೆಡೆಗೊಡಬೇಡ. ನಿಮ್ಮಗಳ ಆರೋಗ್ಯವನ್ನು ನೋಡಿ ಸಂತೋಷಿಸುವದಕ್ಕಿಂತ ಹೆಚ್ಚಿನ ಸಂತೋಷವಿಲ್ಲವೆಂದು ತಿಳಿದಿದೇವೆ. ಬರುವಾಗ ಒಂದು ಹಸನಾದ ಕೈಗೊಡಲಿಯನ್ನು ತರುವುದು. ಆಶೀಃ.

ದುಡ್ಡು ಬೇಕಾಗಿದ್ದರೆ ಎಷ್ಟೆಂಬುದನ್ನು ಸಂಕೋಚಪಡದೆ ಬರಿ. ಗಾಬರಿ ಇಲ್ಲ. ನಿನ್ನ ತಾಯಿಯೂ ಕೇವಲ ಉತ್ಸಾಹದಿಂದ ನಿನ್ನುತ್ತರ ನಿರೀಕ್ಷಣೆಯಲ್ಲಿದ್ದಾಳೆ.

ಆಶೀಃ

೨೮೧

ದೈವಜ್ಞರನ್ನು ಕೇಳು

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು 1-11-38

...ಅಲ್ಲಿ ನಿನ್ನ ಪಾಠಕ್ರಮಗಳು ಸರಿಯಾಗಿ ನಡೆಯುತ್ತಿವೆಯೆಂದು ಭಾವಿಸಿ ಸಂತೋಷಿಸುತ್ತಿದ್ದೇವೆ.

...ತೈಲವನ್ನು ತರಿಸುವುದರಲ್ಲೇ ಇದಾರೆ...ಸಾಮಾನ್ಯವಾಗಿ ಸಂಚಾರ ಮಾಡುತ್ತಿರುವೆನಾದರೂ ವಾಯು ಹಿಡಿಯುವುದಕ್ಕಿಂತ ಮುಂಚಿನಂತಾಗುವುದಿಲ್ಲ. ಕೊಂಚ ಹೊತ್ತು ಮಡಿಸಿಕೊಂಡು ಕೂತಿದ್ದರೆ ಅಲ್ಲೇ ಕಟ್ಟಿ ಸೇದುತ್ತೆ. ಏಳಬೇಕಾದರೆ ಕೊಂಚ ಪ್ರಯಾಸ. ಹೀಗಿದೆ.

...ಖುಷಿಗೆ ಕೊಂಚ ಅನುಕೂಲಿಸುವ ವೃಷ್ಟಿಯಾಯ್ತು. ಹಸನಾದ ಇಂಗು ಇದ್ದರೆ 2 ತೊಲ, ಜಂತುವಿನ ಔಷಧಿ (ರ್ನ್ಯಾ ಪಿ ರ್ನೈ) ಕಳುಹಿಸುವುದಲ್ಲದೆ ಉಪಯೋಗಿಸುವ ಕ್ರಮಗಳೆಲ್ಲಾ ಬರಿ. ಇವೆರಡೂ ಅತ್ಯವಶ್ಯಕ. ಪ್ರಾಜ್ಞದೈವಜ್ಞರಲ್ಲಿ ನಮ್ಮ ಸಂಸಾರದ ಸಂಬಂಧವಾದ ಪ್ರಶ್ನೆಗಳನ್ನು ಕೇಳಿ ಫಲಿತವನ್ನು ಸ್ಪಷ್ಟವಾಗಿ ಬರೆದು (ಇತರರು ನೋಡಲು ಅನುಕೂಲಿಸದಂತೆ) ಕಳುಹು...ನಿನ್ನ ತಾಯಿಗೆ ಕೊಂಚ ಪಿತ್ತಾಧಿಕ್ಯವಾಗಿತ್ತು. ಈಗ ಗುಣವಾಗಿದೆ.

ಚಿ।।...ಯೂ ಆರೋಗ್ಯವಾಗಿ ಸ್ಕೂಲಿಗೆ ಹೋಗಿ ಬರುತ್ತಿರುವ ನಾದರೂ "ಆಟದಲ್ಲಿ ಜಾಣ ಪಾಟದಲ್ಲಿ..." ನಾಗಿದಾನೆ. ಯಾವಾಗಲೂ "ಆ ಕರಿಯನು ಬರಲಿ. ನನಗೆ ವಸ್ತ್ರವನ್ನೂ ಮಗುಟವನ್ನೂ ಕೊಡಲಿಲ್ಲ, ಅವನಿಗೆ ಮಾಡುವೆನು" ಇತ್ಯಾದಿ ಪ್ರಲಾಪಗಳು. ಅಲ್ಲದೆ ಮೂರ್ಖಶಿಖಾಮಣಿ. ಶಿಕ್ಷಾರ್ಹ ಕಾಲವಲ್ಲ, ಯತ್ನವಿಲ್ಲ, ಅತಿಥೇಯ ಶಿಖಾಮಣಿ.

...ಈಗ 1 ವಾರದಲ್ಲಿ ನಡೆದ ಮಕ್ಕಳ ಪ್ರದರ್ಶನದಲ್ಲಿ Rs. 3-2-0 ಬೆಲೆ ಬಾಳುವ ರೈಲ್ ಚೊಂಬೊಂದು ಪ್ರಥಮ ಪಾರಿತೋಷಿಕವಾಗಿ ಬಂದಿತಂತೆ...

೨೮೨

ಬೋರೆಗೆ ಹೋಗದಿರಲಿ (ತಂದೆಗೆ ಬರೆದ ಕವರು)

कुशलम् श्री: 22.10.1940

ತೀ. ರವರ ದಿವ್ಯ ಚರಣಸನ್ನಿಧಿಗಳಲ್ಲಿ ಬಾಲಕನ ಸಾ. ನಮಸ್ಕಾರ ಪೂರ್ವಕ ವಿಜ್ಞಪ್ತಯಃ ಸಮ್ಪ್ರತಿ :

ತಾವು ಕಳುಹಿಸಿದ ಆಶೀರ್ವಾದ ಪತ್ರಿಕೆಯನ್ನು ಶಿರಸಾ ಸ್ವೀಕರಿಸಿದೆನು. ಬಹುಮಾನಗಳ 148ರಲ್ಲಿ 100ನ್ನು ಫಿಕ್ಸೆಡ್ ಡಿಪಾಸೆಟ್ಟಿನಲ್ಲಿಟ್ಟಿರುತ್ತೇನೆ. ಇನ್ನು ಬಾಕಿ ಚಾಲ್ತಿ ಡಿಪಾಸೆಟ್ಟಿನಲ್ಲಿದೆ. ನಾನು ಇನ್ನೂ ಅಪ್ಲಿಕೇಷರ್ಷ ಕೊಟ್ಟಿಲ್ಲ. M.A.ಗೆ ಸೇರೋಣ ವೆಂದಿದ್ದೇನೆ. 1 ವರ್ಷ ಅಥವಾ 6 ತಿಂಗಳೇ ಇರುವ ವಿಷಯ. ತಮ್ಮ ಸಂಧಾನಗಳನ್ನು ನೋಡಿದರೆ ನಮ್ಮ ಪ್ರಿನ್ಸಪಾಲರಿಗೂ ...ನವರಿಂದ ಬರೆಸುವ ಹವಣಿಕೆ ತೋರುತ್ತದೆ. ಹಾಗೇನಾದರೂ ಬರುವ ಸಂದರ್ಭದಲ್ಲಿ ನನ್ನನ್ನು ಆತನು ಕಾಲೇಜಿಗೆ ಸೇರಿಸುವುದಿಲ್ಲ. ನಾನು ಇನ್ನು ಸ್ವಲ್ಪಕಾಲವೇಕಾಂತ ವ್ಯಾಸಂಗ ಮಾಡಿ ಆಮೇಲೆ ಆ ಪ್ರಯತ್ನ ಮಾಡುವೆನು. ನಮ್ಮ ಪ್ರಯತ್ನದಲ್ಲಿ ಅದೂ ಇಲ್ಲದೆ ಈಗಲೇ ಊರಿಗೆ ಬರಬೇಕಾಗುತ್ತೆ. ಆ ವಿಚಾರ ಏನಾದರೂ ತಿಳಿದರೆ ಪಂಡಿತರಿಗೂ ನನ್ನ ವಿಷಯದಲ್ಲಿ ಔದಾಸೀನ್ಯ ಉಂಟಾಗುವುದು. ಅಂತು ಸ್ವಲ್ಪ ಗಂಭೀರವಾಗಿ ನನ್ನನ್ನು ಇರಗೊಡಲಾರಿರಿ. ಹಾಗಿದ್ದರೆ ಈಗಲೇ ಬಾ ಎಂದು ಬರದರೆ ಈಗಲೇ ಊರಿಗೆ ಬರುವೆನು. ಆ ರೀತಿ ಸರ್ವಾವಮಾನವಾದ ಮೇಲೆ ಬರುವುದು ಅನುಚಿತ.

...ಹಾಸನಕ್ಕೆ ಕಳುಹಿಸುವ ವಿಷಯದಲ್ಲಿ ನನ್ನ ಅಡ್ಡಿಯಿಲ್ಲ. ಅಲ್ಲಿಗೆ ಯಾರು ಬೇಕಾದರೂ ಬಂದು ನೋಡಿಕೊಂಡು ಹೋಗಲಿ. ಆದರೆ ನೋಡಿಕೊಂಡು ಹೋಗುವುದಕ್ಕೆಂದು ಬಂದಾಸಾಮಿಗಳು ಏನಾದರೂ ಕೃತ್ರಿಮ ನಡೆಸಿಯಾರು ಅಥವಾ ನಾನು ಡಿಸಂಬರ ರಜದಲ್ಲಿ ಅಲ್ಲಿಗೆ ಬಂದು ಕರಕೊಂಡು ಹೋಗುವೆನೆಂದು ಉಪಶಾಂತಿ ಹೇಳುತ್ತಿರುವುದು. ಅಷ್ಟರಲ್ಲೇ ತೃಪ್ತಿಪಡುತ್ತಿರಲಿ. ಅಂತು ಸರ್ವಥಾ ಅಲ್ಲಿಗೆ ಕಳುಹಿಸುವುದು ಬೇಡ. ಪರಿಸ್ಥಿತಿಯು ತುಂಬಾ ಉಗ್ರವಾಗಿದೆ. ಹಾಗೆಯೇ ಬೋರೆ ಮೇಲಕ್ಕೆ ಮತ್ತೊಂದು ಮುಗುದೊಂದು ಕಡೆಗೆ ಕಳುಹಿಸುವುದನ್ನೂ ಕಾಲಸ್ಥಿತಿಗನು ಗುಣವಾಗಿ ನಿಲ್ಲಿಸಿದರೆ ತುಂಬಾ ಕೃತಜ್ಞನಾಗಿರುತ್ತೇನೆ. ಇಷ್ಟು ಮಾತ್ರದಿಂದ ನಮ್ಮ ದಾರಿದ್ರ್ಯವು ಇಂಗುವುದಿಲ್ಲ. ಅಥವಾ ಅಲ್ಲಿಗೆ ಕಳುಹಿಸುವುದರಲ್ಲಿ ದಾರಿದ್ರ್ಯ ಇಂಗುವ ಅಭಿಪ್ರಾಯವೇ ? ಅಲ್ಲದೆ ಇನ್ನೇನಾದರೂ ವಿಶೇಷಾಭಿಪ್ರಾಯವಿರುವಲ್ಲಿ ಅದೂ ನನ್ನ ಪುಣ್ಯವೇ ಆಯ್ತು. ನಾನು ಇನ್ನು ಅಲ್ಲಿಗೆ ಬರುವ ಆವಸ್ಯಕತೆ ಇರುವುದಿಲ್ಲ. ಅಂತೂ ಲೋಕರಂತೆ ನಾವೂ ಇರುವುದು ಉಚಿತವೆಂದು ತೋರುತ್ತೆ. ತಮಗೆ ಹೇಗೆ ಉಚಿತವೆಂದು ತೋರುವುದೋ ಹಾಗೆ ಆಚರಿಸಬಹುದು. ಇದರಿಂದಲೂ ಸ್ವಲ್ಪ ಮನುಷ್ಯನ ಜೀವಮಾನ ದಲ್ಲಿ ಉಬ್ಬರವಿಳಿತಗಳೂ ಅಪಘಾತಗಳೂ ಉಂಟಾಗಬಹುದು. ಅದರಿಂದ ಜೀವಮಾನದ ಬದಲಾವಣೆಗಳೂ ಉಂಟಾಗಬಹುದು. ತಮ್ಮಿಷ್ಟ.

ಗದ್ದೆಯನ್ನು ಬರೆಸಿಕೊಂಡಾಯಿತೆ ? ಇಲ್ಲದಿದ್ದರೆ ಸಾವಕಾಶ ಮಾಡದೆ ನಿಶ್ಶಂಕವಾಗಿ ಬರೆಯಿಸಿಕೊಳ್ಳಿ. ಅದರಿಂದ ನಮಗೆ ಯಾವ ಉಪಹತಿಯೂ ಇರುವುದಿಲ್ಲ. ತಡಮಾಡಬೇಡಿ. ಅದರ ಸುಖದುಃಖ ನನಗಿರಲಿ. ತಕ್ಕ ಸಾಮಗ್ರಿಗಳನ್ನು ಹೊಂದಿಸುವೆ ನಾದುದರಿಂದ ಅಡಿಗೆ ಅಷ್ಟು ತೊಂದರೆಯಾಗಲಾರದು.

ಅತಿಶಯವಿಲ್ಲ ವಿಜ್ಞಪ್ತಯಃ

ವಿದ್ಯಾರ್ಥಿವೇತನವನ್ನು ಕೊಡುತ್ತಾರಾದ್ದರಿಂದ ಮಧ್ಯೆ ಬಿಟ್ಟು ಹೋಗುವೆನೆಂದು ತಿಳಿದರೆ ಅದಕ್ಕೆ ಈಗಲೇ ಕಲ್ಲು ಹಾಕುವರು. ಇಲ್ಲದಿದ್ದರೆ ಬಾಂಡು ಬರೆದುಕೊಡಬೇಕು. ಯಾರಿಗೂ ಇಲ್ಲದಿರುವುದು ನನಗೆ. ಆದ್ದರಿಂದ ಸಧ್ಯಕ್ಕೆ ಯಾವ ಪ್ರಯತ್ನವೂ ಬೇಡ. ಯಾರಾದರೂ ಬರುವವರಿದ್ದರೆ ಮೂರ್ತಿಗೆ ಒಂದು ಪೆಟ್ ಕಳುಹಿಸಿಕೊಡುತ್ತೇನೆ.

ಇತಿ ವಿಜ್ಞಾಪನೆಗಳು.

೨೮೩

ನುಚ್ಚಿನ ಚೀಲ ತಲುಪಿತು (ತಂದೆಗೆ ಕವರು)

ಕುಶಲಂ ಶ್ರೀರಾಮ ಹಾಸನ

ತಾ। 7.11.40

ತೀ।। ರವರ ದಿವ್ಯ ಚರಣ ಸನ್ನಿಧಿಯಲ್ಲಿ ಬಾಲಕನ ಸಾ।ನ।ಪೂ। ವಿಜ್ಞಾಪನೆಗಳು ಅದಾಗಿ ಈವರಿಗೆ ಉಭಯ ಕುಶಲ ಸಂಪ್ರತಿ.

ತಾವು ಕಳುಹಿಸಿಕೊಟ್ಟಿದ್ದ ಅಕ್ಕಿಯ ನುಚ್ಚಿನ ಚೀಲವು ತಲಪಿತು.

ಪ್ರಕೃತದಲ್ಲಿ ತಾವು ಸೀತಾರಾಮಾವಧಾನಿಗಳ ಗದ್ದೆಯ ವಿಚಾರವಾಗಿ ಅವರಿವರನ್ನು ನೀವು ಅರ್ಧ ತೆಗೆದುಕೊಳ್ಳಿ, ನೀವು ತೆಗೆದುಕೊಳ್ಳಿ ಎಂದು ಯಾಚಿಸುತ್ತಿರುವುದಾಗಿ ತಿಳಿಯಬಂತು. ನೀವು ಹೀಗೆ ಮಾಡುತ್ತಾ ಅವಹೇಳನಕ್ಕೆ ಗುರಿಯಾಗುವ ಸಂಭವ ವೊದಗುವುದೆಂದು ನಾನು ಎಣಿಸಿರಲಿಲ್ಲ. ನಾನು ಊರಿಂದ ಹೊರಡುವಾಗಲೇ ಅದನ್ನು ತೆಗೆದುಕೊಳ್ಳಿ ಎಂದು ಅಭಿಪ್ರಾಯ ಪಟ್ಟಿದ್ದೆ. ಆದರೂ ಅದರಂತೆ ಯೋಚಿಸದೆ, ಚಿ।। ಕಿಟ್ಟಿಯ ಅಭಿಪ್ರಾಯಗಳನ್ನೂ ತಳ್ಳಿ ಈಗ ಅವರಿವರಿಗೆ ಬಾಯಿಬಿಡುವುದು ಗೌರವಕ್ಕೆ ಹಾನಿಯನ್ನುಂಟು ಮಾಡುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲಾ. ಅನೇಕ ಬಾರಿ ರಾಮಾಯಣ ಪುಶ್ನೆಗಳನ್ನು ನೋಡಿಯೂ ಅದರಲ್ಲಿ ಸದ್ಭಾವವೇ ಪುತಿಸಲವೂ ತೋರಿ ಬಂದರೂ ಕ್ಷಣಿಕ ಚಿತ್ತವೃತ್ತಿಯನ್ನಾಶ್ರಯಿಸುವುದನ್ನು ನೋಡಿದರೆ ನನಗೇನೋ

ನಾಚುಕೆಯಿಂದ ತಲೆ ತಗ್ಗಿಸುವಂತೆ ಆಗುತ್ತಿದೆ. ಆದುದರಿಂದ ಈಗಲಾದರೂ ಸ್ವಲ್ಪವೂ ಹಿಂದು ಮುಂದು ನೋಡದೆ ಈ ಕಾಗದ ತಲಪಿದ ಕೂಡಲೇ ಪೂರ್ತಾ ಜಮೀನನ್ನೇ ಬರೆಸಿಕೊಂಡು ಎಲ್ಲರೆದುರಿಗೆ ಆತ್ಮಗೌರವವನ್ನೂ ಕಾಪಾಡಿಕೊಂಡು ಬರಬೇಕೆಂದು ಪ್ರಾರ್ಥನೆ. ಕನ್ನೇಗೌಡನ ಕೊಪ್ಪಲಲ್ಲಿ ವಿಚಾರಿಸಿದ್ದರಲ್ಲೂ ಅನುಕೂಲವಾಗಿಯೇ ಬಂದ ಮೇಲೆ ಈ ವಿಧವಾದ ಚಾಂಚಲ್ಯವು ಶ್ರೇಯಸ್ಕರವಲ್ಲ. ಆ ಜಮೀನನ್ನು ಕೊಳ್ಳುವುದರಲ್ಲಿ ನಮಗೇನೂ ಕೇಡಿಲ್ಲ. ಊರಿನಲ್ಲಿ ಸುಮ್ಮನೆ ಹಗ್ಗಾಗುವುದು ತರವಲ್ಲ.

ನಾನೇ ಊರಿಗೆ ಬಂದು ಹೋಗಬೇಕೆಂದಿದ್ದೆ. ಆದರೆ ಚಿಕ್ಕಮಗುವಿಗೆ ವಿಪರೀತ ಕೆಮ್ಮಲಾಗಿ ಆಸ್ಪತ್ರೆಯಲ್ಲಿ ಔಷಧಿ ಕೊಡಿಸುತ್ತಿದ್ದೇನೆ.

ಯಂತ್ರವನ್ನು ಕಟ್ಟಿದ್ದರಿಂದ ಚಿ।। ಲಕ್ಷ್ಮಿಗೆ ಏನೂ ಪ್ರಯೋಜನವಾಗಿಲ್ಲವೆಂದೇ ಹೇಳಬಹುದು.

ಮ।। ಗದ್ದೆಹೊಸೂರು ರಾಮಸ್ವಾಮಿಶಾಸ್ತ್ರಿಗಳಿಗೆ ಇಲ್ಲಿಗೇ (ಮಿಡಲ್‌ಸ್ಕೂಲಿಗೆ) ವರ್ಗವಾಗಿದೆ.

ನಾನು ಈ ಮೇಲ್ಕಂಡ ರೀತಿಯಾಗಿ ವೃಥಾ ಉಪನ್ಯಾಸ ಮಾಡಿದನೆಂದು ಭಾವಿಸದೆ ಕೂಡಲೇ ಜಮೀನನ್ನು (ಪೂರ್ತಾ) ಬರೆಸಿಕೊಳ್ಳುವಿರೆಂದು ಪ್ರಾರ್ಥಿಸುತ್ತೇನೆ. ಇದೇ ವಿಚಾರದಲ್ಲಿ ಚಿ।। ಯೂ ಅವನ ಸಮ್ಮತಿಯನ್ನು ಸೂಚಿಸಿ ಒಂದು ಕಾರ್ಡನ್ನು ಬರೆದಿದ್ದಾನೆ.

ಇತರ ವಿಚಾರಗಳು ಕ್ರಮಶಃ

ಕೃಷ್ಣಾಪುರದಲ್ಲಿಯೂ ಎಲ್ಲರೂ ಆರೋಗ್ಯವೆಂದು ನೆನ್ನೆ ಸಂತೆಯ ದಿನ ತಿಳಿಯಿತು

ಇನ್ನೇನೂ ವಿಶೇಷವಿಲ್ಲ

ಇತಿ ವಿಜ್ಞಪ್ತಯಃ

೨೮೪

ರಾಗಿ ಮೋಳೆ ಬಿತ್ತು (ಮಗನಿಗೆ ತಂದೆಯ ಕಾರ್ಡು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು 14.6.41

ಚ. ಪಟ್ಟಣ

ಚಿ। ಗೆ ಆಶೀಃ ಉ.ಕು.ಸಾಂ. ಚಿ।ಸೌ। ರುಕ್ಮಿಣಿ ಮತ್ತು ಸೀತೆ ಇವರನ್ನು ಕಳುಹಲು ಇಲ್ಲಿಗೆ ಬಂದಿದ್ದೆನು. ಎಲ್ಲರೂ ಸುಖವಾಗಿದಾರೆ. ಹಾಸನದಲ್ಲೂ ಎಲ್ಲರೂ ಸುಖವಾಗಿದಾರೆ. ಚಿ।ಸೌ। ನಾಗಲಕ್ಷ್ಮಿಗೆ ಶೀರೆಯನ್ನು ಈವರಿಗೆ ಕಳುಹಲಿಲ್ಲ. ಈಗಲಾದರೂ ವೇ।। ಮು.ಉ.ರ. ಸಂಗಡ ಕಳುಹು. ಉದಾಸೀನ ಬೇಡ. ಕೋಣನೂರಿನಲ್ಲಿರುವ ತಿಮ್ಮಪ್ಪಯ್ಯನು (ಅಡಿಕೆ) ಅಲ್ಲಿಗೆ ರಾವಂದೂರ ಮೇಷ್ಟರ ಮನೆಗೆ ಬಂದಿದ್ದಾನೆಂದು ತಿಳಿಯಿತು. ಅಡಿಕೆ ಹಣವನ್ನು ಕೊಡುವಂತೆ ಕೇಳಿ ಬಂದಷ್ಟಾದರೂ ತೆಗೆದುಕೊಳ್ಳುವ ಪ್ರಯತ್ನಕ್ಕೆ ಮೆಹನತ್ತು ಮಾಡು. ಉದಾಸೀನ ಬೇಡ. ಶಿವಾಯಿ ಈವರಿಗೆ ಬಂದ ಮಳೆಗಳಲ್ಲಿ ನಮಗೆ ಪೂರ್ವಸ್ಥಿತಿಗೆ ಏನೂ ವ್ಯತ್ಯಾಸವಾಗಿಲ್ಲ. ಗದ್ದೆಗೆ ಚೆಲ್ಲಿದ್ದ ರಾಗಿಯು ನೀರು ಹರಿದು ಗಂಜಿ ಮೋಳೆ ಬಿದ್ದು ಹೋಯ್ತು. ಮುಂದೇನು ಮಾಡಬೇಕೆಂದು ಯೋಚನೆಯಲ್ಲಿದ್ದೆ. ಭಾದ್ರಪದ ಮಾಸದಲ್ಲಾಗಲಿ ಶ್ರಾವಣ ದಲ್ಲಾಗಲಿ ಊರಿಗೆ ಬಂದಾಗ ಅಲ್ಲಿನ (ಮೈಸೂರಿನ) ವಾಸವನ್ನು ಬಿಡುವ ವಿಚಾರವನ್ನು ಮಾತಾಡೋಣ. ಅಷ್ಟರಲ್ಲೇ ಬಿಡಬೇಕಾದ ಅವಸ್ಯಕವಿಲ್ಲ. ದೈವಾನುಗ್ರಹದಿಂದ ಎಲ್ಲರೂ ಕುಶಲರು. ದೇಹಾರೋಗ್ಯಕ್ಕೆ ಹೆಚ್ಚು ಗಮನವಿರಲಿ.

ಇತ್ಯಾಶೀಃ

೨೮೫

ಕೃತಜ್ಞತೆ ಹೇಳು

ವಿದ್ಯಾರ್ಥಿಯೊಬ್ಬನಿಗೆ ತಂದೆಯು ಬರೆದ ಪತ್ರ (ಕವರು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು 8.7.41

ಚಿ।।ಗೆ ಆಶೀಃ ಉ.ಕು.ಸಂ. ಆ ದಿನ ನಾನು ಸುಖವಾಗಿ ರಾಮನಾಥಪುರದ ಸೇತುವೆಯ ಸಮೀಪದ ಕೈಮರದ ಬಳಿ ಇಳಿದೆನು. ಕೂಡಲೆ ಡ್ರೈವರ್ ಷರೀಫ ಗಾಡಿಯವರಿಗೆ ಹೇಳುತ್ತೇನೆ. ದುಡ್ಡು ಕೊಡದೆ ಕೂತು ಹೋಗಿ ಎಂದು ತಾನಾಗಿಯೇ ಹೇಳಿದನು. ಅದರಂತೆಯೇ ಕೆಲಸ ನಡೆಯಿತು. ಇದು ಆತನಿಂದಾದ ಉಪಕಾರ. ಆದ್ದರಿಂದ ಅವನನ್ನು ಕಣ್ಡಾಗ ಒಮ್ಮೆ ಕೃತಜ್ಞತಾ ಸೂಚಕವಾದ ಎರಡು ಮಾತುಗಳನ್ನಾಡುವುದು ಯುಕ್ತವಾಗಿ ಕಾಣುತ್ತೆ.

ನೀನು ಒಂದು ಘಳಿಗೆ ಪುರಸತ್ತು ಮಾಡಿಕೊಂಡು 10ನೇ ತಾ. ಕಳೆದ ನಂತರ ಅಗ್ರಹಾರದ ಬೀದಿ ಸಿಹಿ ನೀರು ಕಟ್ಟೆ 2252ನೇ ನಂಬರ್ ಮನೆಯಲ್ಲಿ ಮ।। ನಾರಾಯಣರಾಯರನ್ನು ಕಂಡು ವಿಚಾರಗಳನ್ನು ಕೇಳಿ ತಿಳಿದುಕೊಂಡು ಆಶಾಜನಕವಾಗಿದ್ದರೆ ಇಲ್ಲಿಗೆ ತಿಳುಹು. ಕಿಕ್ಕೇರಿಯವರೆಂದರೆ ಅನೇಕರಿಗೆ ಜಾಗೃತೆ ಗೊತ್ತು ಹತ್ತುವಂತಿದೆ. ಅವರಿಗೆ ಸ್ವಲ್ಪ ಪ್ರೋತ್ಸಾಹ ಕೊಡು. ಮುಂದೇನು ಕೊಡಬೇಕೆಂದು ಪ್ರಶ್ನಿಸಿ ಏನು ಹೇಳುವರೊ ತಿಳುಹು.

ಮ।। A.S. ರಿಗೆ ನಾನು ಕೊಟ್ಟ ಚೀಟಿ ಕಾರ್ಡುಗಳನ್ನು ತಲಪಿಸಿರಬಹುದು.

ಮೇಲ್ಕಂಡ 10ನೇ ತಾ। ಕಳೆದ ನಂತರ ನಿನಗೂ ದೇವರು ಬುದ್ಧಿ ಕೊಟ್ಟಲ್ಲಿ ಹಾ.ಕಸ್ತೂರಿರಾಜ ಚೆಟ್ಟಿಯವರನ್ನು ಮನೆಯ ಬಳಿ ನೋಡಿದರೆ (ಒಳ್ಳೆಯ ಲಗ್ನದಲ್ಲಿ) ಸಂತೋಷ. ಅವರ ಮನೆಯು ದೊಡ್ಡ ಪೇಟೆಯಲ್ಲಿ ಸೀದಾ ನೆಟ್ಟಗೆ ಹೋದರೆ ಸೆಂಟ್ ಫಿಲೋಮೀನಾ ಚರ್ಚ್‌ನಿಂದ ಇನ್ನೂ ಉತ್ತರಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಇನ್ನೂ 1-1½ ಫ. ಹೋದರೆ ಪೂರ್ವಕ್ಕೆ ಹೋಗುವ ದೊಡ್ಡ ರಸ್ತೆಯಲ್ಲಿ ಸುಮಾರು 1 ಫ. ಹೋದರೆ ಬಲಗಡೆ ಅಂದರೆ ದಕ್ಷಿಣ ದಿಕ್ಕಿನ ಶ್ರೇಣಿಯಲ್ಲಿದೆ. ಒಳ್ಳೆಯ ಹೂವು 1 ರೂದು, 2 ನಿಂಬೆಯ ಹಣ್ಣುಗಳನ್ನು ಕೈಯಲ್ಲಿ ತೆಗೆದುಕೊಂಡು ಹೋಗಿದ್ದರೆ ಉತ್ತಮ. ಕಾಲೇಜಿನ ಕಡೆಯ ಎಲ್ಲ ವಿದ್ಯಮಾನಗಳಲ್ಲೂ ಬಹುಜಾಗರೂಕನಾಗಿರುವದು ಶ್ರೇಯಸ್ಕರ. ಪರಸ್ಥಳವಾದ್ದರಿಂದ ದೇಹಾರೋಗ್ಯಕ್ಕೆ ಹೆಚ್ಚು ಗಮನ ಕೊಡಬೇಕಲ್ಲದೆ ಯಾರಿಗೂ ದುಡ್ಡು ಸಾಲ ವಗ್ಯೆರೆ ಕೊಡದಿರುವುದು ಬಹಳ ಮೇಲು.

ದೈವಾನುಗ್ರಹದಿಂದ ನಾವೆಲ್ಲರೂ ಕುಶಲರು. ಚಿ॥ ಸೌ॥ ಮೀನಾಕ್ಷಿಯ ಮಗನಿಗೆ ಕರ್ತಾಳು ನಮ್ಮ ಜ್ಞಾತಿಯೇ ಕೃಷ್ಣಪ್ಪನವರ ಪುತ್ರಿಯನ್ನು ತಂದೂ, ಕಾಲುವೆಮನೆ ರಾಮಸ್ವಾಮಯ್ಯನವರ ಪುತ್ರಿಯನ್ನು ಹನಸೋಗೆ ಲೇಟ್ ಕೇಶವಯ್ಯನವರ ಪುತ್ರ ಚಿ। ಹೆಚ್.ಕೆ. ಕೃಷ್ಣಮೂರ್ತಿಗೆ ಕೊಟ್ಟೂ ವಿವಾಹಗಳು ಕಳೆದ 10 ಶುಕ್ರವಾರದ ದಿನ ಜರುಗಿದುವು. ಇತ್ತಲು ಮಳೆಯಿಲ್ಲ. ಕಾತರಿಸುವಂತಾಗಿದೆ. (ಖುಷ್ಕಿ) ತೋಟಗಳಲ್ಲಿ ಸೊಂಟದುದ್ದ ಕಾಡುಗಿಡಗಳು ಬೆಳೆದಿವೆ.

ಅತಿಶಯವಿಲ್ಲ, ಇತ್ಯಾಶೀಃ

ಅಲ್ಲಿರುವವುಗಳಲ್ಲಿ ಯಾವ ತರಹೆ ಆದಾಯವೆಂದು ತೋರುತ್ತೊ ಆ ತರಹ 1 ದರ್ಜೆ B ಪೊಟ್ಟಣವನ್ನು ವೇ॥ ಕೃಷ್ಣಮೂರ್ತಿಯ ಸಂಗಡಾ ಕಳುಹುವುದು. ಬಾಕಿ ವಿಚಾರ ಮುಖತಃ ಹೇಳಲು ಇದೆ.

೨೮೬

ಗುದ್ದಲಿ ಎಲೆ ತಾ (ತಂದೆಯ ಕಾರ್ಡು)

ಕುಶಲಂ ಶ್ರೀ ಲಕ್ಷ್ಮೀಕೇಶವಃ ಪ್ರಸನ್ನೋಽಸ್ತು 19 8/41

ಚಿ.ಗೆ ಆಶೀಃ ಉ.ಕು.ಸಾಂ. ನಾನು ಅಲ್ಲಿಂದ ಬಂದೀಚೆಗೆ ಅತ್ತಣ ಕುಶಲವು ತಿಳಿಯದಾಗಿದೆ.

ನಿನ್ನ ಅಣ್ಣನು ಅಲ್ಲಿಗೆ ಬಂದಿದ್ದಾಗ ಪ್ರಸ್ತಾಪಿಸಿದಂತೆ 3 ಅಪ್ಲಿಕೇಷನ್‌ಗಳನ್ನು ಹಾಕಿಕೊಂಡಿದ್ದುದ್ದಾಗಿಯೂ ಹೈಸ್ಕೂಲ್‌ಗಳ ವರ್ಕಿಸಿಗಳ ಅವನ್ನು ರವಾನಿಸದೆ 1ನ್ನು ಮಾತ್ರ ರವಾನಿಸಿರುವುದಾಗಿ ಕಾಗದ ಬಂದಿರುತ್ತೆಂದೂ ಬರೆದಿರುವನು. ನಿನಗೀಗ ಅವಕಾಶವಿರುವದರಿಂದ ಸಿಹಿ ನೀರು ಕಟ್ಟೆ 2252 ಶ್ರೀ ಕಿಕ್ಕೇರಿ ನಾರಾಯಣರವರನ್ನು ಕಂಡು ಅವೆರಡನ್ನೂ ರವಾನಿಸುವಂತೆ ಏರ್ಪಡಿಸಲು ಸಹಾಯ ಮಾಡಬೇಕಾಗಿ ಹೇಳು. ಮರೆಯಬೇಡ. ದೈವಾನುಗ್ರಹದಿಂದೆಲ್ಲರೂ ಕುಶಲರು. ಮಳೆಯಿಲ್ಲ. ಅಲ್ಲಿಂದ ನೀನು ಹಬ್ಬಕ್ಕೆ ಊರಿಗೆ ಬರುವಾಗ ಮಂದವಾಗಿಯೂ ದೊಡ್ಡದಾಗಿಯೂ ಇರುವ 1 ಗುದ್ದಲಿ ಎಲೆಯನ್ನು ತರುವುದು. ಬರುವುದು ಇನ್ನೂ ನಿಧಾನವಾದಲ್ಲಿ ಆರಾದರೂ ಸರಿಯಾದವರು ದೊರೆತರೆ ಕಳುಹುವುದು. ಇಲ್ಲವೆ ನೀನು ಬರುವಾಗಲೇ ತರುವುದು. ಉದಾಸೀನ ಮಾಡಬೇಡ. ಮ। ಕಿಕ್ಕೇರಿ ನಾರಾಯಣರಾಯರನ್ನು ಕಂಡಾಗ ರವಾನೆಯಾಗಿರುವ ಅಪ್ಲಿಕೇಷನ್ನಿನ ವಿಚಾರವಾಗಿ ಇದುವರಿಗೇನಾದರೂ ಫಲಿತಾಂಶ ತಿಳಿದಿದೆಯೆ ? ಎಂಬುದನ್ನು ವಿಚಾರಿಸಿ ಉತ್ತರ ಬರೆಯಬಹುದಾದ ಸಂದರ್ಭವಿದ್ದಲ್ಲಿ ಬರೆ. ದೇಹಾರೋಗ್ಯದ ವಿಚಾರದಲ್ಲೂ ವ್ಯಾಸಂಗದಲ್ಲೂ ಜಾಗರೂಕನಾಗಿರು. +ವಾಯುಗುಣವು ಇಂದಿದ್ದಂತೆ ನಾಳೆ ಇರುವುದಿಲ್ಲ. ಒಂದು ದಿನ ಮಂಜು ಬೀಳುವುದು. ಒಂದು ದಿನ ಮೋಡ. 1 ದಿನ ಮಳೆ ಶಿಬರು ಹೀಗೆಲ್ಲಾ ಅವ್ಯವಸ್ಥಿತವಾಗಿದೆ. ಎಚ್ಚರಿಕೆ. ವಿಷಯಗಳನ್ನು ಮರೆಯಬಾರದು.

ಇತ್ಯಾಶೀಃ

೨೮೭

ತಲಪಿದ್ದಕ್ಕೆ ಬರೆ (ತಂದೆಯ ಕಾರ್ಡು)

कुशलम् ಶ್ರೀಃ 1/7/65

ಚಿ.ಗೆ ಆಶೀರ್ವಾದಗಳು. ಉ.ಕು.ಸಂ. ಈ ದಿವಸ ಚಿ. ರಾಮನು ಇಲ್ಲಿಂದ ಹೊರಡುವವನಿದ್ದಾನೆ. ಅವನಿಗೆ ರೂಮು ಮತ್ತು ಆ ಮನೆಯ ಜನಗಳನ್ನು ಪರಿಚಯ ಮಾಡಿಸಿ ಸ್ನಾನಕ್ಕೂ ನೀರು ಕೊಡುವಂತೆ ಏರ್ಪಡಿಸುವುದು. ಪಾಠಕ್ಕೆ ಸೇರಿಕೊಂಡ ನಂತರ ಅವರಿಗೆ ಎಷ್ಟು ಹಣ ಕೊಡಬೇಕೆಂಬುದನ್ನು ತಿಳಿದು ಕೊಂಡು ಬರೆ. ರಾಮನ ಕೂಡ ಅವರಿಗೆ ಕೊಡಬೇಕಾದ ಹಣವನ್ನು ಕಳುಹಿಸಿದ್ದೇನೆ. ನೀನು ಹಾಸ್ಟಲಿಗೆ ಪ್ರಯಾಣ ಮಾಡಿದ್ದಕ್ಕೂ ರಾಮನು ತಲಪಿದ್ದು, ಅಡಿಗೆ ಮಾಡಲು ಪ್ರಾರಂಭಿಸಿದ್ದು, ಅವರಿಗೆ ಕೊಡಬೇಕಾದ ಹಣ ಇತ್ಯಾದಿ ಎಲ್ಲ ವಿಷಯಗಳಿಗೂ ಕಾಗದ ಬರೆಯುವುದು.

ಗಣೇಶ ಶಾರದಾ ಗುರುಗಳ ಅನುಗ್ರಹವು ನಿನಗೆ

+ ತನ್ನ ಸೊಸೆಯ ವರ್ತನೆಯ ಬಗೆಗಿನ ಮಾತುಗಳು.

ಅಭ್ಯುದಯವನ್ನು ಕರುಣಿಸಲಿ.

ಇತಿ ಆಶೀರ್ವಾದಗಳು

ಸ್ಕಾಲರ್‌ಷಿಪ್ಪಿನ ಫಾರಂಗಳನ್ನು ಕೂಡ ಕಳುಹಿಸಿದ್ದೇನೆ. ಕೂಡಲೆ ತೆಗೆದುಕೊಂಡು ಪ್ರಿನ್ಸಿಪಾಲರಿಗೆ ಕೊಟ್ಟು ಬೇಗ ಕಳುಹುವಂತೆ ಹೇಳು.

೨೮೮

ಹಣ ಕೊಡಲು ತಿಳಿಸಿದೆ

ನಗರದಲ್ಲಿ ಉದ್ಯೋಗದಲ್ಲಿರುವ ಮಗನಿಗೆ ಬರೆದ ಕಾರ್ಡು

30/4/85

कुशलम्   श्री :   ಹಾಸನಜಿಲ್ಲೆಯ ಹಳ್ಳಿ

ಚಿ.ಗೆ. ವೇದೋಕ್ತ ಆಶೀರ್ವಾದಗಳು. ಅದಾಗಿ ಈವರೆಗೆ ಉಭಯಕುಶಲೋಪರಿ ಸಮ್ಪ್ರತಿ.

M.G.C.ಯಿಂದ ಇನ್ನೆರಡು ತಿಂಗಳಲ್ಲಿ ಮುಗಿಸಿ ಬೆಂಗಳೂರಿಗೆ ತೆರಳತಕ್ಕದ್ದೆಂತ ನೋಟೀಸು ಬಂದಿರುವುದಾಗಿಯೂ ಬೆಂಗಳೂರಿನಲ್ಲಿ ಮನೆ ಬಾಡಿಗೆ 700-800 ಕೊಡಬೇಕಾಗುತ್ತದೆಂದೂ ಪಗಡಿ 8-10 ಸಾವಿರ ಕೊಡಬೇಕಾಗುತ್ತದಾದ್ದರಿಂದ ಇಟ್ಟಿಗೆ ಗೂಡನ್ನು ಮಾರಿ ಕೂಡಲೆ ವ್ಯವಹಾರ ನಡೆಯುತ್ತಿರುವಂತೆ ಬಡ್ಡಿ ಸೇರಿಸಿ ಕೂಡಲೆ ಹಣವೊದಗಿಸಿಕೊಡಬೇಕೆಂತಲೂ ತಿಳಿಸಿದೆ. ಎರಡೇ ತಿಂಗಳೆಂದರೆ ಕಷ್ಟ. ಆದರೂ ವಿಚಾರವನ್ನು ನನ್ನ ಕಿವಿ ಮೇಲೆ ಹಾಕಿದ್ದೇನೆಂದು ತಿಳಿಸಿ ಎಂದು ಹೇಳಿದರು. ನಿಮ್ಮೆಲ್ಲರ ಕ್ಷೇಮಕ್ಕೆ ಪತ್ರ ಬರೆಯುವುದು.

ಇತಿ ಆಶೀರ್ವಾದಗಳು.

ಗುಚ್ಛ - 14

ಒಂದೇ ಕುಟುಂಬದ ಪತ್ರಗಳು

ಇಲ್ಲಿರುವ ಎಲ್ಲ ಪತ್ರಗಳೂ ಹಾಸನ ಸೀಮೆಯ ಒಂದು ಹಳ್ಳಿಯ ಒಂದೇ ಕುಟುಂಬಕ್ಕೆ ಸಂಬಂಧಿಸಿದವು. ತಂದೆ, ಮಗ, ಮಗಳು, ಅಳಿಯ, ಗೆಳೆಯ, ಬೀಗರು, ಬಂಧುಗಳು ಪರಸ್ಪರರಿಗೆ ಬರೆದುಕೊಂಡ ಪತ್ರಗಳ ಒಳಪ್ರಪಂಚ ಇಲ್ಲಿದೆ. ಇಲ್ಲಿರುವ ಪತ್ರಗಳು 2.9.94 ರಿಂದ 20.3.97 ರ ಅವಧಿಯವು, ಅಂದರೆ ಕೇವಲ ಎರಡೂವರೆ ವರ್ಷಗಳ ಮಿತ ಅವಧಿಯಲ್ಲಿ ಹೊರಟವು. ಇಪ್ಪತ್ತನೆಯ ಶತಮಾನದ ಕೊನೆಯ ವರ್ಷಗಳ ಪತ್ರಗಳು ಇವು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಗರವಲಸೆ ಹೆಚ್ಚುತ್ತ ಬಂತು. ಮೊದ ಮೊದಲು ಶೇಕಡ ಎಂಬತ್ತರಷ್ಟು ಪತ್ರಗಳು ಹಳ್ಳಿಗಳ ನಡುವೆಯೇ ಹೊರಡುತ್ತಿದ್ದವು. ಈ ಕೊನೆಯ ಹಂತದ ಪತ್ರಗಳಲ್ಲಿಯೂ ಹಳ್ಳಿಗಾಡಿನಿಂದ ಹೊರಟವು ಇದ್ದೇ ಇವೆ, ಆದರೆ ನಗರಗಳು-ಮುಖ್ಯವಾಗಿ ಬೆಂಗಳೂರು-ಪ್ರಧಾನ ಪಾತ್ರವಹಿಸಿವೆ. ಮುಖ್ಯವಾದ ಬದಲಾವಣೆ ಎಂದರೆ, ಈ ಪತ್ರಗಳ ಸಿಂಹಪಾಲು ಅಂತರ್ದೇಶೀಯ ಪತ್ರಗಳದೇ ಆಗಿರುವುದು. ಸ್ವಾತಂತ್ರ್ಯ ಪೂರ್ವದಲ್ಲಿ ಕಾರ್ಡುಗಳದೇ ಸಿಂಹಪಾಲಾಗಿತ್ತು. ಇನ್ನೂ ಒಂದು ಮುಖ್ಯ ಅಂಶವೆಂದರೆ ಆಗ ಕಾರ್ಡುಗಳಲ್ಲಿ ಬರೆಯುತ್ತಿದ್ದ ವಿಷಯಗಳ ಬಾಹುಳ್ಯವಾಗಲಿ, ಗಾಂಭೀರ್ಯವಾಗಲಿ ಇಲ್ಲಿ ಕಾಣದಿರುವುದು. ಆಗ ಕಾರ್ಡಿನಲ್ಲಿ ಬರೆಯುತ್ತಿದ್ದವರು ಸಣ್ಣ ಅಕ್ಷರಗಳಲ್ಲಿ ಅಂದವಾಗಿ ಬರೆಯುತ್ತಿದ್ದರು, ಸಾಂದ್ರವಾಗಿ ಬರೆಯುತ್ತಿದ್ದರು. ಅವರು ಒಂದು ಕಾರ್ಡಿನಲ್ಲಿ ಬರೆಯುತ್ತಿದ್ದ ಪ್ರಮಾಣದ ಮಾಹಿತಿ ಈಗಿನ ಅಂತರ್ದೇಶೀಯ ಪತ್ರಗಳಲ್ಲಾಗಲಿ ಕವರುಗಳಲ್ಲಾಗಲಿ ಇಲ್ಲ. ಆಗ ಇರುತ್ತಿದ್ದ ಭಾವತೀವ್ರತೆಯಾಗಲಿ, ಸಂಬಂಧ ಗಾಢತೆಯಾಗಲಿ ಇಲ್ಲಿ ಪೇಲವವಾಗಿ ಅಭಿವ್ಯಕ್ತವಾಗಿದೆ. ಫೋನುಗಳ ಬಳಕೆ ಕ್ರಮಕ್ರಮವಾಗಿ ಹೆಚ್ಚಿ ಪತ್ರ ಬರೆಯುವ ಅಭ್ಯಾಸವೇ ತಪ್ಪಿಹೋಗುವ ಸಂಧಿಕಾಲದ ಪತ್ರಗಳು ಇವು. ಹಾಗಾಗಿ ಪತ್ರಗಳನ್ನೇ ಪೂರ್ಣವಾಗಿ ಅವಲಂಬಿಸದ ಸನ್ನಿವೇಶವೂ ಇಲ್ಲಿನ ಪತ್ರಗಳ ಸ್ವರೂಪವನ್ನು ನಿರ್ಣಯಿಸಿರುವಂತಿದೆ. ಭಾಷಾ ಶುದ್ಧಿಯಾಗಲಿ ಅಂದವಾದ ಕೈ ಬರಹವಾಗಲಿ ಇಲ್ಲದ್ದು ಒಂದು ಹಿನ್ನಡೆ. ಈ ಪತ್ರಗಳಲ್ಲಿ ಅಲ್ಲಲ್ಲಿ ಕಾಣುವ ಒಂದೆರಡು ಅಂಶಗಳನ್ನು ಪೋಣಿಸಿ ಈ ಗುಚ್ಛವು ಆ ಸಂದರ್ಭದ ಸಾಮಾಜಿಕ ಚಿತ್ರವನ್ನು ಕೊಡುವಂತೆ ನಿರ್ವಹಿಸುವ ಯತ್ನ ಇಲ್ಲಿ ನಡೆದಿದೆ.

೨೮೮

ಕ್ಷಮಾಯಾಚನೆ

ಅಳಿಯನು ಮಾವನಿಗೆ ಬರೆದ ಅಂತರ್ದೇಶೀಯ ಪತ್ರ

Safe ಓಂ 2.9.1994

ಮೈಸೂರುಜಿಲ್ಲೆಯ ಹಳ್ಳಿ

...ನಾನು ರಾತ್ರಿ 8 ಗಂಟೆಗೆ ಸುಖವಾಗಿ ತಲುಪಿದೆ...ನೀವು ಕೊಟ್ಟಿರುವ ತಿಂಡಿಗಳು ಚೆನ್ನಾಗಿದೆ ಅಂತ ತೀ. ನಮ್ಮ ತಂದೆ ಮಾತುಶ್ರೀ ತಾಯಿಯವರು ಹೇಳಿದರು. ಮತ್ತು ತಿಂಡಿಯನ್ನು ಇಷ್ಟು ಜಾಸ್ತಿ (ತುಂಬಾ) ಯಾಕೆ ಕೊಟ್ಟರು ಅಂತ ಹೇಳಿದರು. ಗಣಪತಿ ಎಲ್ಲವನ್ನು ತೋರಿಸಿದೆ. ಬಟ್ಟೆ ತುಂಬಾ ಚೆನ್ನಾಗಿದೆ. ನೀವು ಕೊಟ್ಟಿರುವುದಕ್ಕೆ ಬೆಲೆ ಕಟ್ಟಲು ಸಾಧ್ಯ ಇಲ್ಲ.

...ತೀರ್ಥರೂಪು ಮಾವನವರಿಗೆ. ನೀವು ನಾನು ಹೊರಟಾಗ ತುಂಬಾ ಕೋಪವಾಗಿದ್ದಿರಿ, ನನ್ನಿಂದ ನಿಮಗೆ ಏನಾದರೂ ಬೇಜಾರೇ? ನನ್ನಿಂದ ಏನಾದರೂ ತಪ್ಪಾಗಿದ್ದರೆ ನಾನು ಮಾಡಿರುವ ತಪ್ಪನ್ನು ಹೇಳಿದರೆ ನಾನು ತಿದ್ದಿಕೊಳ್ಳುತ್ತೇನೆ.

ನನ್ನಿಂದ ಏನಾದರೂ ತಪ್ಪಾಗಿದ್ದರೆ ಕ್ಷಮಿಸಿ. ಅಣ್ಣಯ್ಯ ಹೇಗಿದ್ದಾರೆ? ಅವರಿಗೆ ನನ್ನ ನಮಸ್ಕಾರಗಳು. ನೀವು ಒಂದು ಚೆನ್ನಾಗಿರುವ ಬ್ಯಾಟರಿಯನ್ನು ತೆಗೆದುಕೊಳ್ಳಿ, ನೀವು ರಾತ್ರಿ ಬರುವುದು ಹೋಗುವುದು ಲೇಟಾಗುತ್ತದೆ. ತುಂಬಾ ಕತ್ತಲೆ ಇರುತ್ತದೆ. ಇನ್ನೇನು ಸಮಾಚಾರ...ಮಳೆ ಏನಾದರೂ ಬಂದಿದೆಯೇ.

ಕಾಫಿ ಬೀಜವನ್ನು ಗ್ಯಾರಂಟಿಯಾಗಿ ತರುತ್ತೇನೆ. ನಾನೇ ಬಂದರೆ ನಾನೇ ತರುತ್ತೇನೆ. ಇಲ್ಲಿ Societyಯಲ್ಲಿ ಸಕ್ಕರೆ ಸಿಕ್ಕಿದರೆ ಸಕ್ಕರೆಯನ್ನು ತರುತ್ತೇನೆ.

ಸಾಧ್ಯವಾದರೆ...(ಬಸವಾಪಟ್ಟಣ)ಕ್ಕೆ ಬರುತ್ತೇನೆ. ಯಾವುದಕ್ಕೂ ಪತ್ರ ಬರೆಯಿರಿ.

೨೯೦

ಚೋಮಾಯಿ ಹೊಗಳಿಕೆ (ಮಗಳ ಅಂತರ್ದೇಶೀಯ ಪತ್ರ)

Safe Shree 21.1.1995

...ನಮ್ಮ ಮನೆಯವರು, ಅಮ್ಮನ ತರಹ ಯಾರಿಗೂ ಚೋಮಾಯಿ ಮಾಡಲು ಬರುವುದಿಲ್ಲ ಎಂದು ಅಮ್ಮನ್ನು ತುಂಬಾ ಹೊಗಳಿದರು...

೨೯೧

ಗಂಗಾ ಸಮಾರಾಧನೆ (ನಾಮಕರಣಕ್ಕೆ ಆಹ್ವಾನಿಸಿದ ಕಾರ್ಡು)

ಕ್ಷೇಮ ನಂಜನಗೂಡು
17.5.1995

ನಾವುಗಳು ಕ್ಷೇಮ. ನೀವುಗಳು ಕ್ಷೇಮವೆಂದು ನಂಬಿದ್ದೇನೆ. ಇದೇ ತಿಂಗಳು 24.5.95ನೇ ಬುಧವಾರ ಅಂದರೆ ವೈಶಾಖ ಕೃಷ್ಣಪಕ್ಷ ದಶಮಿ ಬೆಳಿಗ್ಗೆ ಗಂ. 5-57ರಿಂದ 7-23ರಲ್ಲಿ ಸಲ್ಲುವ ಶುಭ ವೃಷಭ ಲಗ್ನದಲ್ಲಿ ನಮ್ಮ ಮೊಮ್ಮಗನಿಗೆ (ಚಿ|| ಸೌ||... ಮತ್ತು ಚಿ.ರಾ...ರವರ ಪುತ್ರ) ನಾಮಕರಣ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ಅಂದೇ ಗಂಗಾ ಸಮಾರಾಧನೆ. ಚಿ|| ರಾ||...ನಿಗೂ ತಿಳಿಸಿ. ನೀನು ಸಕುಟುಂಬ ಎಲ್ಲರೊಡನೆ ಒಂದು ದಿನ ಮುಂಚೆ ಬಂದು ಚಿ|| ರಾ||...ಗೆ ಆಶೀರ್ವದಿಸುವುದು...

೨೯೨

ಯಂತ್ರೋಪಕರಣ (ತಂದೆಗೆ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ 13.6.1995
ಬೆಂಗಳೂರು

...ಚಿ|| ರಾ|| ನಾಗೇಶನಿಗೆ ತಿಳಿಸಿ. ನಾನು ಅವನಲ್ಲಿ ಟಿ.ವಿ.ಎಸ್. ಇಂಜಿನ್‌ಗೆ ಹೇಳಿದ್ದೆ. ಅದು ಇದಕ್ಕೆ ಆಗುವುದೋ ಇಲ್ಲವೋ ಕೇಳಿ ತಿಳಿಸುತ್ತೇನೆಂದು ಹೇಳಿದ್ದ ಆದರೆ ತೆಗೆದುಕೊಂಡರೆ ಪೂರ್ತಿ ಇಂಜಿನ್ ತೆಗೆದುಕೊಳ್ಳಿ ಎಂದು ಮೆಕ್ಯಾನಿಕ್ ಹೇಳಿದ. ಆದರೆ ಅದು ಈಗ ಸಧ್ಯಕ್ಕೆ ಬೇಡ. ಬೇಕಾದ್ದಲ್ಲಿ ನಾನೇ ತಿಳಿಸುತ್ತೇನೆ. ಆಮೇಲೆ ನೋಡೋಣವೆಂದು ಹೇಳಿ. ಅಲ್ಲಿ ಮಳೆ ಆಗಿದೆಯಾ ತಿಳಿಸಿ. ಆಲೂಗಡ್ಡೆ ಹುಟ್ಟಿರಬಹುದೆಂದು ಭಾವಿಸಿದ್ದೇನೆ...

೨೯೩

ಗೆಳೆಯನ ಆಕ್ಷೇಪ (ಅಂತರ್ದೇಶೀಯ ಪತ್ರ)

Safe 5.7.1995

ಪ್ರೀತಿಯ ಗೆಳೆಯನಿಗೆ ನಿನ್ನ ಸ್ನೇಹಿತ ಮಾಡುವ ನಮಸ್ಕಾರಗಳು.

ಈ ಕಾಗದ ಬರೆಯಲು ಕಾರಣ ನೀನು ಬಂದು ತುಂಬಾ ದಿನಾ ಆಯಿತು. ಕಾರಣ ಗೊತ್ತಿಲ್ಲ. ಮದುವೆಯಾದ ಮೇಲೆ ಒಂದು ಸಾರಿ ಕೂಡ ಬರಲಿಲ್ಲ. ನಾನು ಕಾಯುತ್ತಾ ಇದ್ದೇನೆ. ನಿನ್ನ ಯೋಗಕ್ಷೇಮಕ್ಕಾದರೂ ತಿಳಿಸಲಿಲ್ಲ, ನಾನು ನನ್ನ ಮನದಲ್ಲೆ ನೆನೆದು ಬೈಯ್ದುಕೊಳ್ಳುತ್ತಾ ಇದ್ದೇನೆ. ಜೊತೆಗೆ ಹೆಂಡತಿ ಬಂದ ಮೇಲೆ ನಮ್ಮನ್ನು ಮರೆತಿರುವ ಹಾಗಿದೆ. ಪರವಾಗಿಲ್ಲ, ಬಿಡುವು ಮಾಡಿಕೊಂಡು ಬರಬೇಕಾಗಿ ಕೇಳಿಕೊಳ್ಳುತ್ತೇನೆ...ಭಾನುವಾರ ಆದರೆ ಮನೆಯಲ್ಲೇ ಇರುತ್ತೇನೆ. ಬೇರೆ ದಿನ ಆದರೆ ಫ್ಯಾಕ್ಟರಿ ಹತ್ತಿರ ಸಿಗುತ್ತೇನೆ...

೨೯೪

ತವರಿನ ಕಾಳಜಿ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
6.8.1995

...ಅಣ್ಣ ನಾನು ಭೀಮನ ಅಮಾವಾಸ್ಯೇ ಹಬ್ಬಕ್ಕೆ ಊರಿಗೆ ಬರುವುದಿಲ್ಲ. ಏಕೆಂದರೆ ನಾನು 2 ತಿಂಗಳು ಅಲ್ಲಿಯೇ ಇರಬೇಕಾಗುತ್ತದೆ ಹಾಗೂ ಇಲ್ಲಿ ಇವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ನಾನು ಅಣ್ಣಯ್ಯನ ಮನೆಗೆ ಹಬ್ಬಕ್ಕೆ ಹೋಗುತ್ತೇನೆ. ಕೊನೆ ಮಂಗಳವಾರಕ್ಕೆ ಊರಿಗೆ ಬರುತ್ತೇನೆ. ಅಮ್ಮ ನೀವು ಅವತ್ತು ಆಸ್ಪತ್ರೆಗೆ ತೋರಿಸಲಿಲ್ಲವಂತೆ ಎಂಬ ವಿಷಯವನ್ನು ಲಕ್ಷ್ಮಿ ತಿಳಿಸಿದಳು. ಅಮ್ಮ ನೀವು ದಯವಿಟ್ಟು ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬನ್ನಿ, ಉದಾಸೀನ ಮಾಡಬೇಡಿ. ನಿಮ್ಮನ್ನು ಕೈ ಮುಗಿದು ಬೇಡಿಕೊಳ್ಳುತ್ತೇನೆ, ಹೋಗಿ ಬನ್ನಿ. ನಿಮ್ಮ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಿ. ತುಂಬ ಕೆಲಸ ಮಾಡಿಕೊಂಡು ತಿಂಡಿ, ಊಟ ಮಾಡುವುದನ್ನು ಲೇಟು ಮಾಡಬೇಡಿ. ಅಣ್ಣ ನಿಮ್ಮ ಎದೆನೋವು ಹೇಗಿದೆ. ಹೋಯಿತೆ? ನೀವು ಮರವನ್ನು ಹತ್ತಬೇಡಿ, ಹಾಗೂ ಸರಿಯಾದ ಸಮಯಕ್ಕೆ ತೋಟದಿಂದ ಬಂದು ತಿಂಡಿ ಊಟವನ್ನು ಮಾಡಿ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಿ. ಅಣ್ಣ ಆಲೂಗಡ್ಡೆ ಹೇಗಿದೆ, ಮಳೆ ಬಂದಿದೆಯೋ ಇಲ್ಲವೋ ಗೊತ್ತಾಗಲಿಲ್ಲ, ಇಲ್ಲಿಯೂ ಮಳೆಯಿಲ್ಲ...

ಇವರಿಗೆ – ಗಂಡನಿಗೆ

೨೯೫

ಕುಶಲ ವಿಚಾರ (ಅಂತರ್ದೇಶೀಯ ಪತ್ರ)

ಕುಶಲ ಶ್ರೀ ಬೆಂಗಳೂರು

17.10.1995

...ನೀವು ಸೋದರ ಬಿದಿಗೆ ದಿವಸಕ್ಕೆ ಬರಲು ಬರೆದ ಪತ್ರ ಕೈ ಸೇರಿ ಬಹಳ ಸಂತೋಷವಾಯಿತು. ಚಿ|| ...ನು ದೂರವಾಣಿಯ ಮೂಲಕ ತಿಳಿಸಿದ್ದ. ಚಿ|| ರಾ||...ನು ಬರಲು ಪ್ರಯತ್ನಿಸುತ್ತಾನೆ. ಚಿ|| ರಾ||...ನಿಗೆ ಗಂಡು ಮಗು. ಮಗು ಬಾಣಂತಿ ಕುಶಲರಾಗಿರುತ್ತಾರೆ. ಚಿ|| ಸೌ||...ಮಗು ಹೇಗಿದೆ. ಎಲ್ಲರಿಗೂ ನನ್ನ ನೆನಪನ್ನು ಕೊಡುವುದು. ನೀವು...ಸಂಗಡ ಮಾತನಾಡಲು ಪತ್ರ ಕಳಿಸಿದ್ದಿರಿ. ಚಿ|| ಸೌ||...ಗೆ ಬಳೆ ತೊಡಿಸುವ ಶಾಸ್ತ್ರದ ವಿಚಾರ : 7ನೇ ತಿಂಗಳಲ್ಲಿ ಬಳೆ ತೊಡಿಸುವ ಶಾಸ್ತ್ರ ಇಟ್ಟುಕೊಳ್ಳೋಣ. ಎಲ್ಲಿ, ಹೇಗೆ ಎನ್ನುವ ವಿಚಾರವಾಗಿ ಮುಂದೆ ಮಾತನಾಡುವ. ನಿನ್ನೆ...ಇಲ್ಲಿಗೆ ಬಂದಿದ್ದರು. ಅವರೂ ನಾನೂ ಮಾತನಾಡಿ ಈ ನಿರ್ಧಾರಕ್ಕೆ ಬಂದಿದ್ದೇವೆ. ಬಾಕಿ ವಿಚಾರ ಮುಂದಿನ ಪತ್ರದಲ್ಲಿ...

೨೯೬

ಬಳೆ ತೊಡಿಸುವ ಶಾಸ್ತ್ರ

ಸೋದರ ಬಿದಿಗೆಗೆ ಅಂತರ್ದೇಶೀಯ ಪತ್ರ

ಕ್ಷೇಮ 18.10.1995

ನೀವು ಚಿ|| ಚಂದ್ರಶೇಖರರನ್ನು ದೀಪಾವಳಿ ಸೋದರ ಬಿದಿಗೆಗೆ ಕಳಿಸಿಕೊಡುವಂತೆ ತಿಳಿಸಿರುತ್ತೀರಿ. ಆದರೆ ಚಿ|| ಚಂದ್ರಶೇಖರನು ಹೊಸಪೇಟೆಗೆ ಹೋಗಿರುತ್ತಾನೆ. ಅಲ್ಲದೆ ನನ್ನ ಮೈದುನ ನಾರಾಯಣಮೂರ್ತಿ ಸೋದರ ಬಿದಿಗೆಗೆ ಹೊಸಪೇಟೆಗೆ ಹೋಗುತ್ತಿದ್ದಾನೆ, ಅಲ್ಲಿ ಸೋದರ ಬಿದಿಗೆ ನಡೆಯಬಹುದು. ನಾನು ಸಹ ಬೆಂಗಳೂರಿಗೆ ಸೋದರ ಬಿದಿಗೆಗೆ ಹೋಗುತ್ತಿದ್ದೇನೆ. ಚಿ|| ಶಾರದಳೇನಾದರೂ ದೀಪಾವಳಿಗೆ ಅಕಸ್ಮಾತಾಗಿ ಬಂದರೆ ಚಿ|| ಚಂದ್ರಶೇಖರನನ್ನು ನಿಮ್ಮ ಊರಿಗೆ ಕಳಿಸಿಕೊಡುತ್ತೇನೆ. ಈ ವಿಚಾರವನ್ನು ಚಿ|| ಲಕ್ಷ್ಮೀಗೆ ತಿಳಿಸುವುದು ಮತ್ತು ನನ್ನ ಆಶೀರ್ವಾದಗಳನ್ನು ತಿಳಿಸುವುದು, ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳುವಂತೆ ತಿಳಿಸುವುದು ಮತ್ತು ಇನ್ನೊಂದು ವಿಚಾರ. ಚಿ|| ಲಕ್ಷ್ಮಿಗೆ ಬಳೆ ತೊಡಿಸುವ ಶಾಸ್ತ್ರವನ್ನು ಒನೇ ತಿಂಗಳಿನಲ್ಲಿ ಇಟ್ಟುಕೊಳ್ಳುವಂತೆ ನನ್ನ ಭಾವನವರು ತಿಳಿಸಿರುತ್ತಾರೆ. ಈ ವಿಚಾರವಾಗಿ ನಮಗೆ ನನ್ನ ಭಾವನವರಿಂದ ಕಾಗದ ಬರಬೇಕು. ಈ ವಿಚಾರವನ್ನು ಚಿ|| ಲಕ್ಷ್ಮಿಗೆ ತಿಳಿಸುವುದು. ನಿಮ್ಮ ಮನೆಯವರಿಗೆಲ್ಲರಿಗೂ ದೀಪಾವಳಿ ಹಬ್ಬವು ಸುಖ, ಸಂತೋಷ, ಆರೋಗ್ಯ, ಸಮೃದ್ಧಿ ತರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

೨೯೭

ಮಗಳ ಕುಶಲ ವಾರ್ತೆ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಮೈಸೂರುಜಿಲ್ಲೆಯ ಹಳ್ಳಿ

16.11.1995

ನಮ್ಮ ಅತ್ತೆಯವರ ವೈದೀಕವನ್ನು ಇಲ್ಲಿಯೇ (...ಪುರದಲ್ಲಿ) ಮಾಡುತ್ತೇವೆ. ಆದ್ದರಿಂದ ಅಣ್ಣನವರು ಅಂದಿನ ದಿನಕ್ಕೆ ನೇಮದಿಂದ ಬರಲಿ. ಮತ್ತು ಸೋಮನಹಳ್ಳಿ ಭಾವನವರಿಗೆ ಹೇಳಿದ್ದಾರೆ. ಮತ್ತು ಅಮ್ಮನವರನ್ನು ಖಂಡಿತ ಎರಡು ದಿವಸ ಮುಂಚಿತವಾಗಿ ಕಳಿಸಿಕೊಡಿ. ಬರುವಾಗ ಸ್ವಲ್ಪ ಹಾಲು, ಮೊಸರು, ಬೆಣ್ಣೆ ತೆಗೆದುಕೊಂಡು ಬರಲಿ ಮತ್ತು ಬಾಳೆದೆಲೆಯನ್ನು ತೆಗೆದುಕೊಂಡು ಬರಲಿ. ಉದಾಸೀನ ಮಾಡದೆ ಖಂಡಿತ ಎರಡು ದಿವಸ ಮುಂಚೆಯೇ ಬನ್ನಿ. ನನಗೆ ಏನೇನೂ ಮಾಡುವುದಕ್ಕೂ ಬರುವುದಿಲ್ಲ, ನಿಮ್ಮನ್ನು ಕಾಯುತ್ತಿರುತ್ತೇನೆ. ರೋಹಿಣಿಗೆ ತಿಳಿಸಿ, ನಿಮ್ಮ ಭಾವನವರು...ಕ್ಕೆ ಹೋಗಿದ್ದರು. ಅಲ್ಲಿ ಅತ್ತೆ, ಮಾವ ಮತ್ತು...(ಭಾವ) ಎಲ್ಲರೂ ಆರೋಗ್ಯವಾಗಿದ್ದಾರೆ. ರೋಹಿಣಿಯ ಅತ್ತೆಯವರು ಕೇಳಿದರಂತೆ, ರೋಹಿಣಿಯನ್ನು ಯಾವಾಗ ಕಳಿಸಿಕೊಡುತ್ತಾರೆ ಎಂದು ಕೇಳಿದರು. ನಾನು ಸೋಮನಹಳ್ಳಿಗೆ ಹೋಗಿದ್ದೆ, ಅಲ್ಲಿ ಹೋರ್ಗಿತ್ತಿ...ನನ್ನನ್ನು ಕೇಳಿದಳು. ನನಗೆ ಯಾವುದೂ ಗೊತ್ತಿಲ್ಲ ಎಂದು ಹೇಳಿದೆ. ರೋಹಿಣಿಯನ್ನು ಎರಡು ದಿವಸದ ಮಟ್ಟಿಗೆ ಕರೆದುಕೊಂಡು ಬನ್ನಿ. ಮಗುವನ್ನು ನೋಡಬೇಕೆಂದು ಅನ್ನಿಸುತ್ತಿದೆ. ಆದರೆ ಕರೆದುಕೊಂಡು ಬನ್ನಿ...ಅಣ್ಣಯ್ಯ ಸೋದರ ಬಿದಿಗೆ ಹಬ್ಬಕ್ಕೆ ಬರಲಿಲ್ಲ...ಅಣ್ಣಯ್ಯನೂ ಸಹ ಬರಲಿಲ್ಲ. ನನಗೆ ತುಂಬ ಬೇಜಾರು ಆಯಿತು. ಸಾಗರ್ ಆರೋಗ್ಯವಾಗಿದ್ದಾನೆ, ನಾವು ಕೂಡ ಆರೋಗ್ಯವಾಗಿದ್ದೇವೆ (ಇನ್ನೇನೂ ವಿಷಯವಿಲ್ಲ, ಇಂತಿ ನಮಸ್ಕಾರಗಳು).

ಅಮ್ಮ ನೀವು ಬರುವಾಗ ಒಂದು ಫ್ಲಾಸ್ಕ್ ತೆಗೆದುಕೊಂಡು ಬನ್ನಿ. ನಮ್ಮನೇದು ಹೊಡೆದುಹೋಗಿದೆ. ಆದ್ದರಿಂದ ಹೊಸದೊಂದನ್ನು ತೆಗೆದುಕೊಂಡು ಬನ್ನಿ. 4, 5 ಲೋಟ ಹಿಡಿಸುವುದನ್ನು ತನ್ನಿ. ನಾವು ಸೋಮನಹಳ್ಳಿಗೆ ಹೋದಾಗ ಮುದ್ದಾಪುರದ ಭಾವನವರ ಹತ್ತಿರ ಹೇಳಿ ಕಳಿಸಿದ್ದೆವು, ಊರಿಗೆ ಹೋಗಿ ಬನ್ನಿ ಎಂದು. ಅವರು...ಪುರಕ್ಕೆ ಬರುತ್ತಾರೆ, ಹೇಳುವುದಕ್ಕೆ. ಖಂಡಿತ ಬನ್ನಿ. ಎಲ್ಲ ವಿಷಯವನ್ನು ಮಾತನಾಡೋಣ...

ಇತಿ ನಮಸ್ಕಾರಗಳು

ನಿಮ್ಮ ಮಗಳು...

೨೯೮

ಇರಬೇಕು ಎನಿಸಿತ್ತು (ಗೆಳತಿಯ ಅಂತರ್ದೇಶೀಯ ಪತ್ರ)

ಕ್ಷೇಮ ಓಂ ಬೆಂಗಳೂರು

18.11.1995

...ಆತ್ಮೀಯ ಗೆಳತಿ...ಗೆ ನನ್ನ ಸವಿನೆನಪುಗಳು...ನಾನು ತಕ್ಷಣ ಪತ್ರ ಬರೆಯಲಾಗಲಿಲ್ಲ. ಕಾರಣ ನಮ್ಮ ಅಜ್ಜಿಗೆ ಸೀರಿಯಸ್ ಆಗಿ ಶಿವಮೊಗ್ಗ ಆಸ್ಪತ್ರೆಗೆ ಸೇರಿಸಿದ್ದಾರೆ. ಹಾಗಾಗಿ ನಾನು ಅಲ್ಲಿಗೆ ಹೋಗಿ ನಿನ್ನೆ ಬಂದೆ.

ನೀನು ಹೇಗಿದ್ದೀಯಾ, ಮಗು ಹೇಗಿದೆ? ಮನೆಯಲ್ಲಿ ಎಲ್ಲರೂ ಹೇಗಿದ್ದಾರೆ?

ನಾನೂ...ನೂ ಆ ದಿನ ಇಲ್ಲಿಗೆ ಸಂಜೆ 6.30 ಕ್ಕೆ ಬಂದೆವು. ನಮ್ಮ ತಂದೆಯ Phone 7.15ಕ್ಕೆ ಬಂದಿತು. ನನ್ನ ತಮ್ಮನು ಊರಿಂದ ಬಂದಿದ್ದ. ನೀವು ಕೊಟ್ಟಿದ್ದ ಶಾವಿಗೆಯನ್ನು ಅವನೂ.... ನೂ ತಿಂದರು. ತುಂಬಾ ಚೆನ್ನಾಗಿದೆ ಅಂದ್ರು... ನು ನಿನ್ನನ್ನು ಕೇಳಿದ.

ನಾನಂತು ಬರುವಾಗ ತುಂಬಾ ಬೇಸರದಿಂದ ಬಂದೆ. ನೀವೆಲ್ಲಾ ಎಷ್ಟು ಆತ್ಮೀಯತೆಯಿಂದ ನೋಡಿಕೊಂಡಿರಿ. ನನಗೆ ಇನ್ನೂ ಇರಬೇಕು ಅನ್ನಿಸಿತ್ತು. ಆದರೆ Phone ಕಾರಣಕ್ಕಾಗಿ ಅವಸರದಲ್ಲಿ ಬಂದಾಯಿತು...

ಇತಿ ಗೆಳತಿ...

೨೯೯

ಮಗು ಬಾಣಂತಿಗೆ ಆರತಿ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಮೈಸೂರುಜಿಲ್ಲೆಯ ಹಳ್ಳಿ
22.11.1995

...ನಾವುಗಳೆಲ್ಲರೂ ಕ್ಷೇಮ. ಅಲ್ಲಿ, ನೀವುಗಳೆಲ್ಲರೂ ಮತ್ತು ಮಗು ಬಾಣಂತಿ ಆರೋಗ್ಯವಾಗಿರುವಿರಾಗಿ ನಂಬಿರುತ್ತೇನೆ. ಮುಂದೆ ಬರಲಿರುವ ಮಾರ್ಗಶಿರ ಶುಕ್ಲ ಪಕ್ಷದ ಪೂರ್ಣಿಮೆ ಅದು ಮಕ್ಕಳ ಹುಣ್ಣಿಮೆ ಆಗಿರುವುದು. ಅದೇ ದಿವಸ ಮಗು ಬಾಣಂತಿಗೆ ಆರತಿ-ನಡೆಸುವುದಾಗಿ ನಿಶ್ಚಯಿಸಿರುತ್ತೇನೆ. ಆದ್ದರಿಂದ ನೀವುಗಳಿಬ್ಬರೂ ದಂಪತಿಗಳು ಮಗು ಬಾಣಂತಿಯನ್ನು ಸೂಕ್ತವಾದ ದಿವಸವನ್ನು ನೀವುಗಳೂ ನೋಡಿ ಇಲ್ಲಿಗೆ ನಾಲ್ಕು ದಿವಸ ಮುಂಚಿತವಾಗಿ ಇಲ್ಲಿಗೆ ಕರೆದುಕೊಂಡು ಬರಬೇಕಾಗಿ ನನ್ನ ವಿನಂತಿ.

ತಾ. 1.12.1995ನೇ ಮಾರ್ಗಶಿರ ಶುಕ್ಲ ದಶಮಿ ಶುಕ್ರವಾರ ಬಹಳ ಚೆನ್ನಾಗಿರುತ್ತೆ. ಅದೇ ದಿವಸ ನಮ್ಮಲ್ಲಿಗೆ ಮಗು ಬಾಣಂತಿಯರನ್ನು ಕರೆದುಕೊಂಡು ಬರುವುದು ಸೂಕ್ತವಾಗಿರುವುದಾಗಿ ನನಗೆ ತೋರುತ್ತೆ. ನಿಮಗೆ ಅನುಕೂಲ ಇರುವಂತೆ ಮಾಡಬಹುದು.

ಇತಿ ನಮಸ್ಕಾರಗಳು

ತೀರ್ಥರೂಪು ಮಾವನವರಿಗೆ ಸುಬ್ರಮಣ್ಯನು ಮಾಡುವ ಅನಂತ ನಮಸ್ಕಾರಗಳು. ನೀವುಗಳು ಮನೆಯಲ್ಲಿ ಎಲ್ಲರೂ ಕ್ಷೇಮವಾಗಿರುವಿರೆಂದು ನಂಬಿದ್ದೇನೆ. ಇಲ್ಲಿ ಎಲ್ಲರೂ ಆರೋಗ್ಯ... ಫೋನ್ ಮಾಡಿದಾಗ ಸಂಧ್ಯಾವಂದನೆ ಮಾಡುತ್ತಿದ್ದೆ. ಏನನ್ನೂ ಸರಿಯಾಗಿ ಮಾತನಾಡಲು ಸಾಧ್ಯವಾಗಲಿಲ್ಲ.

ನೀವುಗಳು ಅಂದರೆ ಮಾತೃಶ್ರೀ ಅತ್ತೆಯವರನ್ನು ಸಹ ಜೊತೆಯಲ್ಲಿ 4 ದಿವಸ ಮುಂಚಿತವಾಗಿ ಕರೆದುಕೊಂಡು ಬರುವುದು. ಮನೆಯಲ್ಲಿ ಎಲ್ಲರನ್ನೂ ಕರೆದುಕೊಂಡು ಬಂದರೆ ನನಗಂತೂ ತುಂಬಾ ಸಂತೋಷ. ನೀವು ಖಂಡಿತವಾಗಿ ಹಾಗೆಯೇ ಮಾಡಿ. ನೀವುಗಳು ಯಾವಾಗ ಬರುತ್ತೀರಿ ಅನ್ನುವುದಕ್ಕೆ Phone ಮಾಡಲಿ. ಅಕಸ್ಮಾತ್ ನಮ್ಮ ಮನೆಯ Phoneನಲ್ಲಿ ಲೈನ್ ಸಿಕ್ಕದಿದ್ದರೆ ಬೇರೆ No.ಗೆ ಮಾಡಲಿ...ಬತ್ತ ಹೇಗಿದೆ, ರಾಗಿ ಎಲ್ಲ ಚೆನ್ನಾಗಿದೆಯೇ? ಅಡಿಕೆ ಕೆಡವಿ ಆಗಿದೆಯೇ ?...

೩೦೦

ಮಗನ ಆಕ್ಷೇಪಣೆ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
4.12.1995

...ಏನೆಂದರೆ ನಾವು ಬರುವ ಭಾನುವಾರದಂದು ಊರಿಗೆ ಬರುತ್ತೇವೆ. ಮಾರನೇ ದಿನ ಧರ್ಮಸ್ಥಳಕ್ಕೆ ಹೋಗುವುದು. ಆದ್ದರಿಂದ ಮಾ|| ಶ್ರೀಯವರನ್ನು ಬರುವ ಶನಿವಾರದೊಳಗೆ ಊರಿಗೆ ಬರುವ ಹಾಗೆ ಚಿ|| ರಾ||...ಗೆ...ಕ್ಕೆ ಫೋನ್ ಮಾಡಿ ತಿಳಿಸಿ. ಉದಾಸೀನ ಮಾಡಬೇಡಿ. ಏಕೆಂದರೆ ನಾನು ಆಗಲೇ ರಜಾ ಬರೆದುಕೊಟ್ಟು ಪಾಸ್ ರೆಡಿ ಮಾಡಾಗಿದೆ...ಮತ್ತೆ ಹಾಗೆ ಬೇರೆ ವಿಷಯ ಕೇಳಿದೆ. ಏನೆಂದರೆ ಚಿ|| ಸೌ||...ಳನ್ನು ನೋಡಲು ಬಂದಿದ್ದರಂತೆ. ಏನಾಯಿತು ತಿಳಿಸಲಿಲ್ಲ. ನೀವು ನಮಗೆ ಒಂದು ಪತ್ರವನ್ನೂ ಬರೆಯುವುದಿಲ್ಲ. ನಾವು ಬೇರೆಯವರ ಹತ್ತಿರ ಕೇಳಿಕೊಳ್ಳಬೇಕಾಗಿದೆ. ನಿಮಗೆ ನಮಗೆ ಒಂದು ಪತ್ರವನ್ನು ಬರೆಯಲು ಕಷ್ಟವಾಗಿದೆಯಾ?...

೩೦೧

ಬಳೆ ತೊಡಿಸುವ ಶಾಸ್ತ್ರ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
7.12.1995

ಚಿ||...ರವರಿಗೆ ವಿವಾಹ ಗೊತ್ತಾಗಿರುವುದು ಸಂತೋಷದ ವಿಚಾರ. ನಾವುಗಳು ಚಿ||...ಗೆ ಬಳೆ ತೊಡಿಸುವ ಶಾಸ್ತ್ರವನ್ನು

ತಾ. 17.12.95ರಂದು ಇಟ್ಟುಕೊಂಡಿದ್ದು ಸರಿಯಷ್ಟೆ. ಆದರೆ ಈಗ ಅನಿವಾರ್ಯ ಕಾರಣದಿಂದ ತಾ. 25.12.95ರಂದು ಇಟ್ಟುಕೊಂಡಿರುತ್ತೇವೆ. ಈ ಶುಭ ಕಾರ್ಯಕ್ಕೆ ತಾವು ಕುಟುಂಬ ಸಮೇತ ದಯಮಾಡಿಸಿ ಚಿ॥...ಯನ್ನು ಆಶೀರ್ವದಿಸಬೇಕಾಗಿ ಸವಿನಯ ವಿನಂತಿ ಮತ್ತು ನಮ್ಮ ಅಣ್ಣನವರು ತಾ. 13.12.95ರಂದು ನಿಮ್ಮಲ್ಲಿಗೆ ಬರಬಹುದು. ಅವರು ಬಂದರೆ ಚಿ॥...ಯನ್ನು ಕಳಿಸಿಕೊಡುವುದು ಅಥವಾ ಚಿ॥...ರವರ ನಿಶ್ಚಿತಾರ್ಥವು ಮುಗಿದ ನಂತರ ಕಳಿಸಿ ಕೊಡುತ್ತೀರ ಹೇಗೆ ಎಲ್ಲ ವಿಚಾರವನ್ನು ತಮಗೆ ಬಿಟ್ಟರುತ್ತೇನೆ...

೩೦೨

ವಿವಾಹಯತ್ನ (ಗೆಳೆಯನಿಗೆ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಹಾಸನಜಿಲ್ಲೆಯ ಹಳ್ಳಿ
28.12.1995

...ಅವರು ನನ್ನ ಕೈಲಿ ನಿಮ್ಮ ಅಳಿಯಂದಿರು ಯಾವ ಮಾತುಕತೆಯನ್ನೂ ಸರಿಯಾಗಿ ಆಡಲಿಲ್ಲ ಅಂತ ಹೇಳಿದರು. ಆದ್ದರಿಂದ ನೀವು ದಂಪತಿಗಳು ಇಲ್ಲಿ ಬಂದು ವಿಷಯಗಳೇನೆಂದು ತಿಳಿದುಕೊಂಡು ಹೋಗುವುದು. ಈ ಕಾಗದ ಕಂಡ ಕೂಡಲೇ ಬರುವುದು. ಲಗ್ನದ ವಿಚಾರವಾಗಿ ಬಸವಾಪಟ್ಟಣಕ್ಕೆ ಖಂಡಿತವಾಗಿ ಬನ್ನಿ. ಉದಾಸೀನ ಮಾಡಬೇಡಿ.

೩೦೩

ಬೀಗರಿಗೆ ನೆರವು (ಅಂತರ್ದೇಶೀಯ ಪತ್ರ)

Safe ಓಂ ಮೈಸೂರುಜಿಲ್ಲೆಯ ಹಳ್ಳಿ
8.2.1996

...ಆದಷ್ಟು ಬೇಗ ಬತ್ತವನ್ನು ಬಡಿಸಿ. ನಿಮಗೆ ಅಂದರೆ ಸರಳಳ ಮದುವೆಗೆ ಹಣದ ಅವಶ್ಯಕತೆ ಇದ್ದರೆ ಬೀಗರು ಅಂತ ಸಂಕೋಚಪಟ್ಟುಕೊಳ್ಳಬೇಡಿ. ಖಂಡಿತ ಬರುವುದು. ಹೇಗೆ ಕೇಳುವುದು ಅಂತ ದಾಕ್ಷಿಣ್ಯಪಟ್ಟುಕೊಳ್ಳಬೇಡಿ. ಖಂಡಿತ ಬನ್ನಿ.

...ನಾನು ಸ್ವಲ್ಪ ಬೇಗ ಫಾಲು ಅವರ ಮನೆಗೆ ಬಂದಿದ್ದರೆ ನೀವು ಸಿಗುತ್ತಿದ್ದಿರಿ. ಫೋಟೋ ಎಲ್ಲಾ ಕತ್ತಲೆಯಲ್ಲಿ ತೆಗೆದಿದ್ದರೂ ಚೆನ್ನಾಗಿ ಬಂದಿದೆ ಅಂತ ಅನ್ನಿಸುತ್ತದೆ. ಆದರೆ ನಿಮ್ಮ ಫೋಟೋ ಕಡೆಯಲ್ಲಿ ತೆಗೆದಿದ್ದು ಬಂದಿಲ್ಲ. ಅದೇ ನನಗೆ ಬೇಜಾರು. ನಿಮ್ಮ ಊರಿಗೆ ಅಂದರೆ ಸರಳಳ ಮದುವೆಯ ಹೊತ್ತಿಗೆ ಒಂದು Gas Light ಅನ್ನು ತರುವುದಕ್ಕೆ ಮನಸ್ಸು ಮಾಡಿ. ಮನೆಗೂ ಸಹ ತುಂಬಾ ಅನುಕೂಲವಾಗುತ್ತದೆ. ಅಕ್ಷಯ್‌ನ Photo Print ಮಾಡಿಸಿ ನೀವೇ ತಂದುಕೊಟ್ಟರೆ ಬಂದ ಹಾಗೆ ಆಗುತ್ತದೆ. ನೀವೇ ಖಂಡಿತ ತೆಗೆದುಕೊಂಡು ಬನ್ನಿ. ದಯವಿಟ್ಟು ಉದಾಸೀನ ಮಾಡಬೇಡಿ.

ಇತಿ ನಮಸ್ಕಾರಗಳು.

೩೦೪

ತಂದೆತಾಯಿಗಳಿಗೆ ಆಹ್ವಾನ (ಮಗಳ ಕಾರ್ಡು)

ಕ್ಷೇಮ ಶ್ರೀ ಮೈಸೂರುಜಿಲ್ಲೆಯ ಹಳ್ಳಿ
6.3.1996

...ಅಮ್ಮ ಅಣ್ಣ ನೀವು ಖಂಡಿತ ದಂಪತಿ ಸಮೇತರಾಗಿ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಖಂಡಿತ ನಮ್ಮ ಮನೆಯಲ್ಲಿ ಔತಣ (ಸಿಹಿ ಊಟ) ಮಾಡಿಕೊಂಡು ಹೋಗಬೇಕು. ಆದ್ದರಿಂದ ಖಂಡಿತ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು... ಅಣ್ಣಯ್ಯನಿಗೂ ತಿಳಿಸಿ. ಖಂಡಿತ...ಪುರಕ್ಕೆ ಒಂದು ಸಾರಿ ಬರಲಿ...ಗೆ ಹೆರಿಗೆ ಆದ ಮೇಲೆ ಕಾಗದ ಬರೆಯಿರಿ.

...ಅಮ್ಮ, ಅಣ್ಣ ಖಂಡಿತ ಯಾವತ್ತು ಬರುತ್ತೀರ ಎಂಬುದಕ್ಕೆ ಕಾಗದ ಬರೆಯಿರಿ. ನಿಮ್ಮ ಪತ್ರ ಇದಿರು ನೋಡುತ್ತಿರುತ್ತೇನೆ...

೩೦೫

ಸೋದರ ಬಿದಿಗೆ (ಆಹ್ವಾನಿಸಿದ ಕಾರ್ಡು)

ಕ್ಷೇಮ ಶ್ರೀ 14.3.1996

...ಏನೆಂದರೆ ಈಗ ಬರುವ ಗುರುವಾರ ಅಂದರೆ 21.3.96ನೇ ತಾರೀಖು ಯುಗಾದಿ ಸೋದರ ಬಿದಿಗೆ ಹಬ್ಬವನ್ನು ಇಟ್ಟುಕೊಂಡಿದ್ದೇನೆ. ಆದ್ದರಿಂದ...ಅಣ್ಣಯ್ಯನನ್ನು ಖಂಡಿತ ಸೋದರ ಬಿದಿಗೆ ಹಬ್ಬಕ್ಕೆ ಕಳಿಸಿಕೊಡುತ್ತೀರಾಗಿ ನಂಬಿರುತ್ತೇನೆ. ಮತ್ತು ಚಿಕ್ಕಪ್ಪನವರ ಮಕ್ಕಳಿಗೂ ಸಹಾ ತಿಳಿಸಿ. ಅವರು ಖಂಡಿತ ಬರಲಿ. ಈ ಸಾರಿ ಖಂಡಿತ...ಅಣ್ಣಯ್ಯ ಬರಲಿ. ಅಮ್ಮ ಅಣ್ಣ ನೀವು ಕೂಡ ಒಂದು ಸಾರಿ ಬಂದು ನಮ್ಮ ಮನೆಯಲ್ಲಿ ಔತಣ ಮಾಡಿಸಿಕೊಂಡು ಹೋಗಿ ಬರಬೇಕು. ಖಂಡಿತ ಬನ್ನಿ...ಅಣ್ಣ ನೀವು ಬರುವಾಗ ಸಕ್ಕರೆ ಮತ್ತು ಆದರೆ ಸೀಮೆಎಣ್ಣೆ ತೆಗೆದುಕೊಂಡು ಬನ್ನಿ...

೩೦೬

ಅಮ್ಮನ ಬಗ್ಗೆ ಕಾಳಜಿ (ಮಗಳ ಕಾರ್ಡು)

ಕ್ಷೇಮ ಶ್ರೀ 21.3.1996

...ಅಣ್ಣ ದಯವಿಟ್ಟು ಅಮ್ಮನವರನ್ನು ಊಟ ತಿಂಡಿಗೆ ಕಾಯಿಸದೆ ಸಮಯಕ್ಕೆ ಸರಿಯಾಗಿ ತೋಟದಿಂದ ಬೇಗ ಬಂದು ಊಟ ತಿಂಡಿಯನ್ನು ಮಾಡುವುದು ಮತ್ತು ನಿಮ್ಮೆಲ್ಲರ ಆರೋಗ್ಯದ ಬಗ್ಗೆ ಉದಾಸೀನ ಮಾಡದೆ ಅದರ ಬಗ್ಗೆ ಹೆಚ್ಚು ಗಮನ ಕೊಡುವುದು.

ಅಕ್ಕಪಕ್ಕದ ಮನೆಯವರನ್ನು ಅಂದರೆ ಚಿಕ್ಕಪ್ಪ ಹಾಗೂ ಮಾವಯ್ಯನವರ ಮನೆಯಲ್ಲಿ ಎಲ್ಲರನ್ನು ಕೇಳಿದೆನೆಂದು ತಿಳಿಸುವುದು.

೩೦೭

ಬಂಧುವಿಗೆ ಶಿಶು ಜನನ

ಕುಶಲ ಶ್ರೀ ಬೆಂಗಳೂರು
24.3.1996

ಮಾನ್ಯ ಬಂಧುಗಳಲ್ಲಿ...

...ಈ ದಿವಸ ಅಂದರೆ 24.3.96ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಚಿ|| ಸೌ||...ಯು ಹೆಣ್ಣು ಮಗುವಿಗೆ ಜನ್ಮ ನೀಡಿರುತ್ತಾಳೆ. ಮಗು, ಬಾಣಂತಿ ಕುಶಲರಾಗಿರುತ್ತಾರೆ. ಈ ವಿಚಾರ ನಿಮ್ಮಗಳಿಗೆ ತಿಳಿಸಲು ಸಂತೋಷಪಡುತ್ತೇನೆ...

೩೦೮

ಪತ್ರಿಕೆಯು ಜೋಪಾನ (ಕಾರ್ಡು)

ಕ್ಷೇಮ ಶ್ರೀ 17.4.1996

...ತೀರ್ಥರೂಪು ಭಾವನವರಿಗೆ...ನ ನಮಸ್ಕಾರಗಳು. ಅಲ್ಲಿಂದ ಹೊರಟು ಅರಕಲ್‌ಗೂಡ್‌ನಲ್ಲಿ ಇಳಿದೆ. ಬ್ಯಾಗನಲ್ಲಿ ಜನಮಿತ್ರ ಪೇಪರ್ ಇರಲಿಲ್ಲ. ಆದ್ದರಿಂದ ನಮ್ಮ ಮನೆಯಲ್ಲಿ ಅಥವಾ... ನ ಮನೆಯಲ್ಲಿ ಇರಬಹುದು. ಅದನ್ನು ಜೋಪಾನವಾಗಿ ಕೊಟ್ಟು ಕಳುಹಿಸಿ. ಇನ್ನೇನೂ ವಿಷಯವಿಲ್ಲ,

ಇತಿ ನಮಸ್ಕಾರಗಳು

೩೦೯

ಆಹ್ವಾನಕ್ಕೆ ಪುಷ್ಟಿ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀಃ ಬೆಂಗಳೂರು
11.6.1996

...ನೀವುಗಳು ಬೆಂಗಳೂರಿಗೆ ಬರುತ್ತೀರೆಂದು...ಹೇಳಿದಳು. ಎಂದು ಬರುತ್ತಿದ್ದೀರಿ ತಿಳಿಸಿ, ಒಂದು ವೇಳೆ ಮಾ|| ಅಕ್ಕ ಒಬ್ಬರೇ ಬರುವುದಾದರೆ ನಮಗೆ ಸರಿಯಾದ ಸಮಯ ತಿಳಿಸಿದರೆ ಯಾರಾದರೂ ಬಸ್‌ಸ್ಟ್ಯಾಂಡ್‌ಗೆ ಹೋಗಿ ಕರೆದುಕೊಂಡು ಬರಬಹುದು. ಯಾವುದಕ್ಕೂ ಸರಿಯಾಗಿ ತಕ್ಕ ಸಮಯಕ್ಕೆ ತಿಳಿಸಿ...

೩೧೦

ದೇವತಾಕಾರ್ಯಕ್ಕಾಗಿ (ಮಗಳ ಆಹ್ವಾನ, ಕಾರ್ಡು)

ಕ್ಷೇಮ ಶ್ರೀಃ Bangalore
17.6.1996

ತೀ|| ರೂಪುರವರಿಗೆ ಮತ್ತು ಮಾ|| ಶ್ರೀಯವರಿಗೆ...ಳು ಮಾಡುವ ನಮಸ್ಕಾರಗಳು...ಏನೆಂದರೆ ಈ ಹಿಂದೆ ತಿಳಿಸಿದಂತೆ ನಮ್ಮ ಮನೆಯಲ್ಲಿ 20 ರಿಂದ 26 ರವರೆಗೆ ದೇವತಾಕಾರ್ಯ ಇಟ್ಟುಕೊಂಡಿದ್ದೇವೆ. ತಾವು ಎಲ್ಲರನ್ನೂ ಕರೆದುಕೊಂಡು ಬರುವುದು. ...ಅಣ್ಣಯ್ಯನಿಗೆ ನನ್ನ ನಮಸ್ಕಾರಗಳು. ಅಮ್ಮ ನೀವು ಖಂಡಿತಾ ಬೇಗ ಬನ್ನಿ. ನನಗೆ ಎಲ್ಲವೂ ಯೋಚನೆ. ನಿಮಗೆ 20ನೇ ತಾರೀಖಿಗೆ ಬರಲಿಕ್ಕಾಗದಿದ್ದರೆ 22ನೇ ತಾರೀಖಿಗೆ ಖಂಡಿತಾ ಬನ್ನಿ. ಸ್ವೀಟ್ ಎಲ್ಲಾ ನೀವೇ ಮಾಡಬೇಕು. ನನಗೆ ಏನೂ ತೋಚುವುದಿಲ್ಲ, ಅಡಿಗೆ ಏನು ಮಾಡಬೇಕು, ಏನು ಮಾಡಬಹುದು ಎಲ್ಲದಕ್ಕೂ ಸರಿಹೋಗುತ್ತದೆ. ನಾವು ಯಾರಿಗೂ ಇನ್ನು ಹೇಳಿಲ್ಲ, ನೀವೇ ಬಂದರೆ ಎಲ್ಲದಕ್ಕೂ ಸರಿಹೋಗುತ್ತದೆ. ಖಂಡಿತಾ ನೀವು ಬೇಗ ಬನ್ನಿ. ಅಣ್ಣ ನೀವೂ ಅಷ್ಟೆ... ಅಣ್ಣಯ್ಯ ಡ್ಯೂಟಿ ಬಿಟ್ಟು ಬರಲು ಆಗದಿದ್ದರೆ ಡ್ಯೂಟಿ ಅಲ್ಲಿಗೆ adjust ಮಾಡಿಕೊಂಡು ಬರಲಿ. ತೀ|| ರೂಪು ಚಿಕ್ಕಪ್ಪನವರ ಮನೆಗೂ ಖಂಡಿತಾ ಮರೆಯದೆ ತಿಳಿಸಿ. ಮತ್ತು ಪೂಮಗಾಮೆ ಚಿಕ್ಕಪ್ಪಂದಿರ ಮನೆಗೆ ಮರೆಯದೆ ತಿಳಿಸಿ. ಖಂಡಿತಾ ಬರಲು ಹೇಳಿದ್ದಾರೆ ಎಂದು ನಮ್ಮ ಪರವಾಗಿ ನೀವೇ ಹೇಳಿ...

೩೧೧

ಕುಶಲ ಸಮಾಚಾರ (ಗೆಳೆಯನ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
7.8.1996

ಮ|| ರಾ|| ಶ್ರೀ||...ರವರ ಸನ್ನಿಧಾನಕ್ಕೆ...ನ ವಿಜ್ಞಾಪನೆಗಳು ಅದಾಗಿ ಉಭಯ ಕುಶಲೋಪರಿ ಸಾಂಪ್ರತ.

ತಾವು ಬರೆದ ಪತ್ರ ತಲುಪಿತು. 11ನೇ ತಾರೀಖು ಚಿ|| ಸೌ||...ಹಾಗೂ ಮಗುವನ್ನು ಕರೆದುಕೊಂಡು ಬರುವುದನ್ನು ತಿಳಿದು ಸಂತೋಷವಾಯ್ತು. ಮೊನ್ನೆ ತೀ||...ಸಹ ಇಲ್ಲಿಗೆ ಬಂದಿದ್ದರು. ವಿಚಾರವನ್ನು ತಿಳಿಸಿದ್ದಾರೆ. ಆದರೆ ನನಗೆ ಅನಿವಾರ್ಯ

ಕಾರಣಗಳಿಂದ ಮುಖ್ಯವಾಗಿ ಕಛೇರಿಯ ಕೆಲಸ ಕಾರ್ಯಗಳ ಹೊರೆಯಿಂದ ನಾನು ಆ ದಿನ ಬರಲು ಸಾಧ್ಯವಾಗುತ್ತಿಲ್ಲ. ದಯವಿಟ್ಟು ತಪ್ಪು ತಿಳಿಯಬೇಡಿ. ಬಿಡುವಾದಾಗ ಖಂಡಿತ ಬರುತ್ತೇನೆ.

...ನಾನು ದಾವಣಗೆರೆಗೆ ನಮ್ಮ Employees Union ಪರವಾಗಿ ಮೂರು ತಿಂಗಳು ಹೋಗುತ್ತೇನೆಂದು ತಿಳಿಸಿದ್ದೆ. ಆದರೆ ಅದು Cancel ಆಯಿತು.

ನೀವು ಬೆಂಗಳೂರಿಗೆ ಯಾವಾಗ ಬರುತ್ತೀರಿ? ಚಿ॥ ಸೌ॥ ...ಹೇಗಿದ್ದಾಳೆ? ಅವಳ ಆರೋಗ್ಯ ಆಗ ಸರಿ ಇರಲಿಲ್ಲ. ಈಗ ಬೆಂಗಳೂರಿನಲ್ಲೇ ಇರುವಳೇ ಹೇಗೆ? ಅವರ ಯಜಮಾನರನ್ನು ಚಿ॥ ಸೌ॥ ...ಳ ಮನೆಯಲ್ಲಿ ನೋಡಿದೆ. ಲಕ್ಷಣವಾಗಿದ್ದಾರೆ ಹಾಗೂ ಚಟುವಟಿಕೆಯಿಂದ ಮಾತನಾಡುತ್ತಾರೆ. ಬಹಳ ಸಂತೋಷವಾಯ್ತು...

ಹಿರಿಯರಿಗೆ ನನ್ನ ಗೌರವಪೂರ್ವಕ ನಮಸ್ಕಾರಗಳು, ಕಿರಿಯರಿಗೆ ಮಮತೆಯ ನೆನಪುಗಳು.

ಇಂತಿ ನಿಮ್ಮವ

೩೧೨

ಫಲಪೂಜೆಗೆ ಆಹ್ವಾನ (ಗೆಳೆಯನಿಗೆ ಕಾರ್ಡು)

ಕುಶಲ ಶ್ರೀ 20.8.1996

...ತಾ. 28.8.1996ರಂದು ಉಪಾಕರ್ಮ ಮತ್ತು ಮನೆಯಲ್ಲಿ... ಮಗುವಿಗೆ ಫಲಪೂಜೆ ಮಾಡಿಕೊಳ್ಳುತ್ತಾರೆ. ನೀವುಗಳು ಎಲ್ಲರನ್ನು ಸಹ ಕರೆದುಕೊಂಡು ಖಂಡಿತ ಬರುವುದು. ಆದಷ್ಟು ಬೇಗ ಬರುವುದು. ಮಗು ಬಾಣಂತಿ ಆರೋಗ್ಯವಾಗಿರುತ್ತಾರೆ...

೩೧೩

ಮಗಳ ಗೃಹಕೃತ್ಯ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
26.8.1996

...ನೀವು ಕಳುಹಿಸಿದ ಗೌರಿಹಬ್ಬದ ಅರಿಶಿಣ ಕುಂಕುಮದ ಹಣ ತಲುಪಿತು. ನಾನು ನೆನ್ನೆ ಮುಟ್ಟು. ಸೋಮವಾರ ನೀರು ಆಗುತ್ತದೆ. ಗೌರಿ ಪೂಜೆ ಮಾಡಬಹುದು. ಈ ಹಿಂದೆ ಅತ್ತಿಗೆಯವರು ಬರೆದ ಪತ್ರವೂ ತಲುಪಿತು. ಹಲಸಿನ ಹಣ್ಣು ಚೆನ್ನಾಗಿತ್ತು. ನಮ್ಮ ಅತ್ತೆಯವರು ಇಲ್ಲೇ ಇದ್ದಾರೆ. ಹಬ್ಬ ಕಳೆದುಕೊಂಡು ಹೋಗಿ ಬರುತ್ತಾರೆ. ಅವರೂ ಕೂಡ ಆರೋಗ್ಯವಾಗಿದ್ದಾರೆ. ನಮ್ಮ ಮಾವನವರ ವೈದೀಕ ಊರಿನಲ್ಲಿ ಅಂದರೆ ಕೇರಳಾಪುರದಲ್ಲಿ ಮಾಡಲು ತೀರ್ಮಾನಿಸಿದ್ದಾರೆ...

ಹೋದ ಮಂಗಳವಾರ ಕಡೇ ಮಂಗಳಗೌರಿ ಪೂಜೆಯಲ್ಲಿ ಎಲ್ಲಾ ಅಣ್ಣನವರ ಮನೆಗೆ ಹೋಗಿದ್ದೆವು. ಊಟ ಮಾಡಿಕೊಂಡು ಬಂದೆವು...ಅತ್ತಿಗೆಯವರು ಗೌರಿಹಬ್ಬಕ್ಕೆ ಎಲ್ಲಿಗೆ ಹೋಗಿದ್ದಾರೆ...

ಅಮ್ಮ ನೀವು 20ನೇ ತಾರೀಖು ಬರಲು ಆಗದಿದ್ದರೆ 23ನೇ ತಾರೀಖಿನ ಸಾಯಂಕಾಲವಾದರೂ ಬನ್ನಿ. ಏಕೆಂದರೆ ಸ್ವೀಟ್ ಮಾಡಬೇಕು. ಅಮ್ಮ ಅಲ್ಲೇ ಆದರೆ ನಿಮಗೆ ಬಸ್ಸಿನಲ್ಲಿ ತರಲು ಆದರೆ 100 ಪೀಸ್ ಆಗುವಷ್ಟು ಮೈಸೂರು ಪಾಕ್ ಮಾಡಿಕೊಂಡು ಬನ್ನಿ. ಏಕೆಂದರೆ ಪಾತ್ರೆ ಎಲ್ಲದಕ್ಕೂ ಅಲ್ಲೇ ಸರಿ ಎಂದು. ಆದರೆ ಮಾಡಿಕೊಂಡು ಬನ್ನಿ. ಸೀತಾಮಣಿ ಸೀರೆ ಕಳುಹಿಸಿದಳೆ? ಕಳುಹಿಸಿದ್ದರೆ ನಾನು ಅದನ್ನು 20ನೇ ತಾರೀಖಿನ ದಿನವೆ ಪೂಜೆಗೆ ಇಡಬೇಕು. ಅದಕ್ಕೆ. ಆಮೇಲೆ ತಂದರೆ ಅದು ಪ್ರಯೋಜನ ಆಗುವುದಿಲ್ಲ...

೩೧೪

ಅರಿಶಿನ ಕುಂಕುಮ (ಮಗಳ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
7.9.1996

...ಅಮ್ಮ ನೀವು ಅಣ್ಣಯ್ಯನ ಹತ್ತಿರ ಗೋಕುಲಾಷ್ಟಮಿ ಮತ್ತು ಗೌರಿಹಬ್ಬಕ್ಕೆ ಬಾ ಎಂದು ಹೇಳಿಕಳುಹಿಸಿದ್ದಿರಿ. ಆದರೆ ನಾನು ಬರಲಾಗಲಿಲ್ಲ. ನಿಮಗೆ ಸರಳಾ ಎಲ್ಲಾ ವಿಷಯವನ್ನು ಹೇಳಿರಬಹುದು. ಆದ್ದರಿಂದ ನಾನು ಬರಲಾಗಲಿಲ್ಲ. ಅಮ್ಮ, ಬರುವ 24.9.96 ಅಂದರೆ ಮಂಗಳವಾರ ನಮ್ಮ ಮಾವನವರ ವೈದೀಕವಾಗುತ್ತದೆ. ಅಂದಿನ ದಿನಕ್ಕೆ ನಿಮಗೆ ನಮ್ಮ ಸಹಾಯಕ್ಕೆ ಬರಲಿಕ್ಕಾಗುತ್ತದೆಯೇ ಅಥವಾ ಮತ್ತೆ ಏನಾದರೂ ತೊಂದರೆಯಿದೆಯೇ ಯಾವುದಕ್ಕೂ ಈ ಪತ್ರ ಕಂಡ ಕೂಡಲೇ ಪತ್ರ ಬರೆಯಿರಿ. ಯಾಕೆಂದರೆ ನೀವು ಬರುವುದಾದರೆ ಖಂಡಿತ ಈ ಪತ್ರ ಕಂಡ ತಕ್ಷಣ ಪತ್ರ ಬರೆಯಿರಿ. ಇಲ್ಲದಿದ್ದರೆ ... ಅಣ್ಣಯ್ಯ ಹಬ್ಬಕ್ಕೆ ಊರಿಗೆ ಬಂದರೆ ಅವರ ಹತ್ತಿರ ತಪ್ಪದೇ ಹೇಳಿ ಕಳುಹಿಸಿ. ಏಕೆಂದರೆ ಮುಂದಿನ ಏರ್ಪಾಡಿಗೆ ಸರಿಹೋಗುತ್ತದೆ. ಅಮ್ಮ ನೀವು ಬಂದರೆ ಸರಳನ ಹತ್ತಿರ ಹೇಳಿದ್ದೀನಲ್ಲ ಅದನ್ನು ಕೊಟ್ಟರೆ ಪರವಾಗಿಲ್ಲ ಎಂದರೆ ತೆಗೆದುಕೊಂಡು ಬನ್ನಿ...

ಚಿ|| ನಾಗೇಶ ಕಳುಹಿಸಿದ ಗೌರಿಹಬ್ಬದ ಅರಿಶಿನ ಕುಂಕುಮದ ಹಣ ತಲುಪಿತು ಎಂದು ಅವರಿಗೆ ತಿಳಿಸಿ. ಅವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ...

೩೧೫

ಅಳಿಯನಿಂದ ಕುಶಲವಾರ್ತೆ (ಅಂತರ್ದೇಶೀಯ ಪತ್ರ)

Safe ಓಂ ಮೈಸೂರುಜಿಲ್ಲೆಯ ಹಳ್ಳಿ
26.9.1996

...ಕಾಗದವನ್ನು ತುಂಬಾ ವಿಳಂಬವಾಗಿ ಬರೆಯುತ್ತಿದ್ದೇನೆ ಕ್ಷಮಿಸಿ. ಬೆಳಿಗ್ಗೆ ಹೊತ್ತು ಅಕ್ಷಯ್ ಪತ್ರ ಬರೆಯುವುದಕ್ಕೆ ಬಿಡುವುದಿಲ್ಲ, ರಾತ್ರಿ ಹೊತ್ತು ನಾನು ಮಂತ್ರಕ್ಕೆ ಹೋಗುತ್ತೇನೆ. ಪತ್ರ ಬರೆಯುವುದಕ್ಕೆ ಸಮಯವೇ ಸಿಗುವುದಿಲ್ಲ. ಒಂದು ತರಹ ಯಂತ್ರ ಜೀವನವಾಗಿದೆ. ಪತ್ರ ತಂದಿಟ್ಟು ಬರೆಯುವುದಕ್ಕೆ ಒಂದು ತಿಂಗಳೇ ಆಯಿತು. ಇವತ್ತಿನ ದಿವಸ ಮಾತೃಶ್ರೀ ತಾಯಿ ಹಾಗೂ ತೀ|| ತಂದೆಯವರು ಅನಂತನ ವ್ರತಕ್ಕೆ ಹಾನಗಲ್‌ಗೆ ಹೋಗಿದ್ದಾರೆ. ರೋಹಿಣಿ ಹಾಗೂ ಮಗು ಹುಣಸೂರಿಗೆ ಅನಂತನ ವ್ರತಕ್ಕೆ ಹೋಗಿದ್ದಾರೆ. ನಾನು ಮನೆಯಲ್ಲಿ ಒಬ್ಬನೆ. ಈವಾಗ ನಿಮಗೆ ಪತ್ರ ಬರೆಯುತ್ತಿದ್ದೇನೆ. ಈವಾಗಲಾದರೂ ಮಳೆ ಆಗಿದೆಯೇ? ಆಲೂಗಡ್ಡೆ ಕೊಟ್ಟಾಯಿತೇ? ಇಳುವರಿ ಹೇಗೆ? ಎಲ್ಲದಕ್ಕೂ ಪತ್ರ ಬರೆಯಿರಿ. ಇಲ್ಲಿ ಅಡಿಕೆ ಧಾರಣೆ 100 kg. (ಕ್ವಿಂಟಾಲ್)ಗೆ 1350ರೂ. ನಡೆಯುತ್ತಾ ಇದೆ. ಅಂದರೆ ಲಕ್ಷಗಟ್ಟಲೆ ಅಂದರೆ 1000ಕ್ಕೆ 265ರೂ. ಆಗಬಹುದು ಅಂತ ಅನ್ನಿಸುತ್ತದೆ. ನಿಮ್ಮದು ಕೊಟ್ಟದೆಯೇ? ನಮ್ಮದು ಇನ್ನೂ ಆಗಿಲ್ಲ. ಹಬ್ಬಕ್ಕೆ ಅಣ್ಣ ಎಲ್ಲ ಬಂದಿದ್ದಿರಬೇಕು. ಅವರೆಲ್ಲಾ ಕ್ಷೇಮವೇ? ಮಾತೃಶ್ರೀ ಅತ್ತೆಯವರಿಗೆ ನನ್ನ ಅನಂತ ನಮಸ್ಕಾರಗಳನ್ನು ತಿಳಿಸಿ. ಅವರ ಆರೋಗ್ಯ ಹೇಗಿದೆ?

...ಚೆನ್ನಾಗಿ ಆಟವಾಡಿಕೊಂಡು ಇರುವಳೇ? ಈವಾಗ ಈಜುತ್ತಾಳೆಯೇ? ಅಮಗಾಲೂ ಹೂಡುತ್ತಾಳೆಯೇ? ಪತ್ರ ಬರೆಯಿರಿ. ಪಾಪುವಿಗೆ ನನ್ನ ಆಶೀರ್ವಾದಗಳು. ಇನ್ನು ಊರಿನಲ್ಲಿ ಬಾಕಿ ಬೆಳೆಗಳು ರಾಗಿ ಹಾಗೂ ಹುರುಳಿ ಹೇಗೆ? ಇಲ್ಲಿ ಮಳೆ ತುಂಬಾ ಚೆನ್ನಾಗಿ ಆಗಿದೆ. ನೆನ್ನೆಯು ಸಹ ಒಂದು ಹದ ಮಳೆ ಬಂತು. ಕೆರೆ ಹಾಗೂ ಕಟ್ಟೆಗಳಿಗೆ ಪರವಾಗಿಲ್ಲ, ನೀರು ಬಂದಿದೆ. ಸುಮಾರು 3 ತಿಂಗಳಿಂದಲೂ ಮಳೆ, ನಮ್ಮ ತೋಟಕ್ಕೆ ಗೊಬ್ಬರ ಹಾಕಲು ಅವಕಾಶ ಕೊಟ್ಟಿಲ್ಲ. ಅಡಿಕೆ ವಿಳ್ಯೆದೆಲೆ ತುಂಬಾ ಚೆನ್ನಾಗಿದೆ. ರೋಹಿಣಿಯನ್ನು ಗೌರಿಹಬ್ಬಕ್ಕೆ ಕಳುಹಿಸಲಿಲ್ಲ ಅಂತ ಬೇಜಾರು ಮಾಡಿಕೊಳ್ಳಬೇಡಿ. ಹಬ್ಬಕ್ಕೆ ಬೆಂಗಳೂರಿನಲ್ಲಿ ಇರುವ ನಮ್ಮ ಅಣ್ಣಂದಿರು ಬಂದಿದ್ದರು. ಗೋಕುಲಾಷ್ಟಮೀ ಹಬ್ಬದ ದಿವಸ ನಮ್ಮ ತೀರ್ಥರೂಪು ಭಾವನವರ (ಬೆಂಗಳೂರು) ತಾಯಿ (ದೊಡ್ಡ ಭಾವ) ಸ್ವರ್ಗಸ್ಥರಾದ್ದರಿಂದ ಅವತ್ತೇ ಬೆಂಗಳೂರಿಗೆ ನಮ್ಮ ತಂದೆ ಹೋಗಿ ಬಂದರು. ಗಣಪತಿ ಹಬ್ಬದ ಮಾರನೆ ದಿವಸವೇ ನಮ್ಮ ತಂದೆ ಹಾಗೂ ತಾಯಿ ಬೆಂಗಳೂರಿಗೆ ಹೋಗಿ ಬಂದರು. ಈವಾಗ 3 ದಿವಸದಲ್ಲಿ ಮಾತೃಶ್ರೀ ತಾಯಿಯವರು ಬೆಂಗಳೂರಿನಿಂದ ಬಂದಿದ್ದು. ಅಕ್ಷಯಕುಮಾರನನ್ನು ತಡೆಯುವುದೇ ಒಂದು ಕಷ್ಟ. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಬೀದಿಯಲ್ಲೇ ಆಟ ಆಡಬೇಕು, ಅಕ್ಕಪಕ್ಕದ ಮನೆಗೆ ಹೋಗುತ್ತಾನೆ.

ಬೆಳಿಗ್ಗೆ 6 ಘಂಟೆಯ ಹೊತ್ತಿಗೆ ಎದ್ದು ಬೀದಿ ಅಕ್ಕಪಕ್ಕದ ಮನೆಗಳಿಗೆ ಹೋಗುತ್ತಾನೆ. ಓಡುತ್ತಾನೆ. ದೇವರಿಗೆ ನಮಸ್ಕರಿಸುತ್ತಾನೆ. ಅ, ಆ, ಇ, ಈ, ಸ, ವ, ನ ಕಾ, ಕಾ, ಥೈ ಥೈ ಎಂದರೆ ಕುಣಿಯುತ್ತಾನೆ. ಬೆಳಿಗ್ಗೆಯಿಂದ ಸಾಯಂಕಾಲದ ವರೆವಿಗೂ ಒಬ್ಬರು ಇವನಿಗೆ ಕಾವಲು ಇರಬೇಕು. ಎಳೆಯ ಕರುವೇ ಇವನ ಜೊತೆಗಾರ. ಇವನು ಅದನ್ನು ಹೊಡೆಯಲಿ ಹಾಗೂ ಅದರ ಮೇಲೆ ಕುಳಿತುಕೊಳ್ಳಲಿ ಏನೂ ಮಾಡುವುದಿಲ್ಲ. ಒಟ್ಟಿನಲ್ಲಿ ಆರೋಗ್ಯವಾಗಿದ್ದಾನೆ. ಮಗುವಿನ ವರ್ಷವರ್ಧಂತಿಯ ಬಗ್ಗೆ ಪತ್ರ ಬರೆಯುತ್ತೇನೆ...

ನಮ್ಮ ಊರಿಗೆ ಸಿಟಿ ಬಸ್ ಹಾಕಿದ್ದಾರೆ. ಹಾಗೂ ಕೆಲವು Express ನಿಲ್ಲಿಸುತ್ತದೆ. ಅದರ ಕಾಪಿಯನ್ನು ಕಳುಹಿಸಿಕೊಡುತ್ತೇನೆ. ಈವಾಗ 4 ದಿವಸದಲ್ಲಿ strike ಮಾಡಿ ಮಂತ್ರಿಯ ಕಾರನ್ನು ಅಡ್ಡ ಹಾಕಿ ನಿಲ್ಲಿಸಿ ಎರಡು ಘಂಟೆಗಳ ಕಾಲ ನಿಲ್ಲಿಸಿದ್ದೆವು. ಇನ್ನು ಕೆಲವು Madikeri ಬಸ್‌ಗಳನ್ನು ನಿಲ್ಲಿಸಲು ಮನವಿ ಮಾಡಿದ್ದೇವೆ. ತಪ್ಪಿದ್ದರೆ ಕ್ಷಮಿಸಿ...

ಇತಿ ನಮಸ್ಕಾರಗಳು

೩೧೬

ದೇವತಾಕಾರ್ಯಕ್ಕಾಗಿ (ಅಣ್ಣನನ್ನು ಆಹ್ವಾನಿಸಿದ ಕಾರ್ಡು)

Safe Sree Bangalore
1.10.1996

...ಈ ಹಿಂದೆ ತಿಳಿಸಿದಂತೆ 13.10.96ರಂದು ಸಂಜೆ ಸತ್ಯನಾರಾಯಣ ಪೂಜೆಯನ್ನು ಮತ್ತು 14.10.96ರಂದು ದೇವತಾಕಾರ್ಯವನ್ನೂ ಇಟ್ಟುಕೊಂಡಿರುತ್ತೇವೆ. ಆದುದರಿಂದ ತಾವುಗಳು ಸಂಸಾರ ಸಮೇತ ಎರಡು ದಿನ ಮುಂಚಿತವಾಗಿ ಬಂದು ಕಾರ್ಯವನ್ನು ಸುಗಮವಾಗಿ ನೆರವೇರಿಸಿಕೊಡಬೇಕಾಗಿ ಕೋರಿಕೊಳ್ಳುತ್ತೇನೆ. ಇನ್ನೇನೂ ವಿಶೇಷವಿಲ್ಲ.

ಹೋಮಕ್ಕೆ ಬೇಕಾದ ಸಮಿತ್ತು (300) ಯಕ್ಕ ಮುಂತಾದುವುಗಳನ್ನು ಹೊಂದಿಸಿ ತರಲು...ರಿಗೆ ತಿಳಿಸಿರುವೆ. ತಾವು ಸಹಕರಿಸಿ ಅದನ್ನು ತರಬೇಕಾಗಿ ಕೋರಿಕೊಳ್ಳುತ್ತೇನೆ.

ಇತಿ ನಮಸ್ಕಾರಗಳು

೩೧೭

ಬೀಗರಿಗೆ ಆಹ್ವಾನ

ಮಮ್ಮಗನ ಹುಟ್ಟಿದ ಹಬ್ಬ : ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಮೈಸೂರುಜಿಲ್ಲೆಯ ಹಳ್ಳಿ
13.10.1996

ಮ॥ ರಾ॥ ಶ್ರೀ॥...ಬೀಗಂದಿರ...ಸ॥ ಕೈ... ನ ನಮಸ್ಕಾರಗಳು.

ಅದಾಗಿ ಉಭಯ ಕುಶಲೋಪರಿ ಸಾಂಪ್ರತ, ಇಲ್ಲಿ ಎಲ್ಲರೂ ಕ್ಷೇಮ. ನೀವುಗಳೆಲ್ಲರೂ ಆರೋಗ್ಯವಾಗಿರುವಿರಾಗಿ ನಂಬಿರುತ್ತೇನೆ. ಪ್ರಕೃತ ಇದೇ ಆಶ್ವಯುಜ ಶುಕ್ಲ ಪೂರ್ಣಿಮಾ ಶನಿವಾರ 26.10.96 ಈ ಶುಭ ದಿವಸ ಚಿ॥ ಮಗುವಿಗೆ ಹುಟ್ಟಿದ ಹಬ್ಬ ನಡೆಸಬೇಕೆಂಬುದಾಗಿ ಕುಲಸ್ವಾಮಿಯ ಪ್ರೇರಣೆ ಮೇರೆ ನಿಶ್ಚಯಿಸಿರುತ್ತೇನೆ. ಈ ಶುಭ ದಿವಸಕ್ಕೆ ಎರಡು ದಿವಸ ಮುಂಚಿತವಾಗಿ ತಾವುಗಳೆಲ್ಲರೂ ಅಂದರೆ ನಿಮ್ಮ ಪತ್ನಿ, ಪುತ್ರರು ಮತ್ತು ನಿಮ್ಮ ಸಹೋದರರೊಂದಿಗೆ ಎಲ್ಲರನ್ನೂ ಜೊತೆಯಲ್ಲಿಯೇ ಕರೆದುಕೊಂಡು ಬಂದು ಈ ಶುಭ ಸಮಾರಂಭಕ್ಕೆ ಭಾಗವಹಿಸಿ ಚಿ॥ ಮಗುವಿಗೆ ಆಶೀರ್ವದಿಸಿ ನಮಗೆಲ್ಲರಿಗೂ ಸಂತೋಷವನ್ನುಂಟು ಮಾಡುವಿರಾಗಿ ನಂಬಿರುತ್ತೇನೆ. ಖಂಡಿತ ಉದಾಸೀನ ಮಾಡದೆ ಬರುವಿರೆಂಬುದಾಗಿ ನಂಬಿರುತ್ತೇನೆ.

ಇತಿ ನಮಸ್ಕಾರಗಳು

೩೧೮

ಮಮ್ಮಗನ ಪತ್ರ

ಕ್ಷೇಮ ಶ್ರೀ 25.11.1996

ತೀರ್ಥರೂಪು ಅಜ್ಜ ಅಜ್ಜಿ ಮಾವನವರಿಗೆ...ಮಾಡುವ ನಮಸ್ಕಾರಗಳು. ಇಲ್ಲಿ ನಾವು ಆರೋಗ್ಯವಾಗಿದ್ದೇವೆ. ನಿಮ್ಮ ಆರೋಗ್ಯದ ಬಗ್ಗೆ ಪತ್ರ ಬರೆಯಿರಿ, ಅಣ್ಣ ಶನಿವಾರ ಬೆಟ್ಟಕ್ಕೆ ಹತ್ತಿ ಪೂಜೆ ಮಾಡಿಕೊಂಡು ಬಂದರು. ಭಾನುವಾರ ಬೆಳಿಗ್ಗೆ ಕೈ ಕಾಲು ನೋವು ಎಂದು ಮಲಗಿದರು. ಸಾಯಂಕಾಲ ಅಣ್ಣ ಮಲಗಿಯೇ ಇದ್ದರು. ಆಗ ಯಾರೋ ಶಾಸ್ತ್ರ ಹೇಳಬೇಕು ಎಂದರು. ಅಣ್ಣ ಮಲಗಿದ್ದಾಗ ಅವರು .... ಕೂಗಿದರು. ಅಣ್ಣ ಶಾಸ್ತ್ರ ಹೇಳಕ್ಕೆ ಕುಳಿತರು. ಎಷ್ಟು ಹೊತ್ತಾದರು ಅವರು ಹೋಗಲಿಲ್ಲ, ಸ್ವಲ್ಪ ಹೊತ್ತಿನ ಮೇಲೆ ಮುಗಿಯಿತು. 5 ಗಂಟೆಯ ಮೇಲೆ ನಾನು 6 ಗಂಟೆಯವರೆಗೆ ಓದಿದೆ. ಓದಿ ಟಿ.ವಿ. ನೋಡಿ 8 ಗಂಟೆಯ ಮೇಲೆ ಮಲಗಿಕೊಂಡೆ.

ಇನ್ನೇನೂ ವಿಷಯವಿಲ್ಲ.

ಇಂತಿ ನಿಮ್ಮ ಮೊಮ್ಮಗನಾದ

೩೧೯

ವೈದಿಕಕ್ಕೆ ಆಹ್ವಾನ (ಕಾರ್ಡು)

ಕ್ಷೇಮ ಶ್ರೀ ಮೈಸೂರು ಜಿಲ್ಲೆಯ ಹಳ್ಳಿ
9.12.1996

...ಏನೆಂದರೆ 16.12.96 ನಮ್ಮ ಅತ್ತೆಯವರ ವೈದೀಕದ ಹತ್ತಿರಕ್ಕೆ ನನಗೆ ಮುಟ್ಟಿನ ದಿನವಾಗಿರುವುದರಿಂದ ಅಮ್ಮನವರನ್ನು ಖಂಡಿತ ಶುಕ್ರವಾರ ದಿನವೇ ಕಳಿಸಿಕೊಡಿ. ಯಾವುದನ್ನೂ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವಾದ್ದರಿಂದ ಅಮ್ಮನವರನ್ನು ಕಳಿಸಿಕೊಡಿ. ಅಣ್ಣ ನೀವು ಭಾನುವಾರ ದಿವಸ ಬಂದುಬಿಡಿ. ಅಣ್ಣಯ್ಯ ಹೇಗಿದ್ದಾರೆ...ಮತ್ತು ಮಗು ಹೇಗಿದ್ದಾರೆ ತಿಳಿಸಿ. ನಾನು ಕೇಳಿದೆ ಎಂದು ಹೇಳಿ...

ಅಣ್ಣನವರೆ ಪೂರ್ವಪಂಕ್ತಿಗೆ ಆಗಬೇಕು. ಅಣ್ಣ ನೀವು ಅಮ್ಮನವರನ್ನು ಶುಕ್ರವಾರ ದಿವಸವೆ ಖಂಡಿತ ಕಳಿಸಿಕೊಡಿ...

ಇತಿ ನಿಮ್ಮ

೩೨೦

ತಾಯಿ ತಲುಪಿದ ಸುದ್ದಿ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
16.12.1996

...ಮಾ॥ ಶ್ರೀ॥ ಅಮ್ಮನವರು ಊರಿಗೆ ಹೋಗಿ ಬಂದು 1 ತಿಂಗಳ ಹತ್ತಿರವೇ ಆಗುತ್ತಾ ಬಂತು. ಆದರೆ ಇದೂವರೆವಿಗೂ ಒಂದು ಪತ್ರವೂ ಇಲ್ಲ. ತಲುಪಿದ್ದಕ್ಕೆ ಕೂಡಲೇ ಪತ್ರ ಬರೆಯಿರಿ ಎಂದು ಹೇಳಿ ಕಳುಹಿಸಿದ್ದೆ. ಆದರೂ ಬರೆದಿಲ್ಲ, ಮಧ್ಯೆ ಚಿ॥ ರಾ॥...ನು ಅವನ ಬಸ್ಸು ನೋಡಲು ಬಂದಿದ್ದನಂತೆ. ನಮ್ಮ ಡಿಪೋ ಹತ್ತಿರ ಬಂದಿದ್ದನಂತೆ. ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ. ನನಗೆ ವಾರದ ರಜ ಇತ್ತು. ಅವನು ಅಲ್ಲಿಗೆ ಬಂದವನು ಮನೆಗೆ ಬಂದು ಹೋಗಿದ್ದರೆ ಮಾ॥ ಶ್ರೀ॥ ಯವರು ಸುಖವಾಗಿ ತಲುಪಿದರೋ ಇಲ್ಲವೋ ತಿಳಿಯುತ್ತಿತ್ತು...

ಇಲ್ಲಿ ಒಂದು ವಾರದಿಂದ ತುಂಬ ಮಳೆ ಬೀಳುತ್ತಿದೆ...ಈ ಮಳೆ ಗಾಳಿಯಿಂದ ಮನೆಯಲ್ಲಿ ಎಲ್ಲರಿಗೂ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ...ಮುಂದಿನ ತಿಂಗಳಿಂದ ಹೊಸ ರಜೆ ಇರುತ್ತದೆ. ಆಗಲಾದರೂ ಪುರಸತ್ತು ಮಾಡಿಕೊಂಡು ಬೇಲೂರಿಗೆ ಹೋಗಿ ಬರೋಣವೆಂದುಕೊಂಡಿದ್ದೇನೆ. ಆಗ ಊರಿಗೆ ಬರುತ್ತೇನೆ. ತೀರ್ಥ ರೂಪುರವರು ಈ ಚಳಿಗಾಳಿಯಲ್ಲಿ ತುಂಬ ಓಡಾಡಬೇಡಿ. ಏಕೆಂದರೆ ಕಾಲಿನ ಗಾಯ ಜಾಸ್ತಿ ಆಗುತ್ತದೆ. ದಯವಿಟ್ಟು ಸರಿಯಾಗಿ ನೋಡಿಕೊಳ್ಳಿ...

ಇತಿ

೩.೨೧

ತವರ ಆಸೆ (ಅಪ್ಪ ಅಮ್ಮನಿಗೆ ಅಂತರ್ದೇಶೀಯ ಪತ್ರ)

Safe Shree ಮೈಸೂರುಜಿಲ್ಲೆಯ ಹಳ್ಳಿ

18.12.1996

...ನಾನು ಸಂಕ್ರಾಂತಿ ಹಬ್ಬಕ್ಕೆ ಬರುವುದಕ್ಕೆ ಆಸೆ ಇದೆ. ನೀವು ತೀ।। ರೂಪುರವರ ಹತ್ತಿರ ಪತ್ರ ಬರೆಸಿ. ನನಗೆ ನಿಮ್ಮಗಳ ಜೊತೆ ಇರಬೇಕು ಅನ್ನಿಸಿದೆ...ನೋಡಬೇಕು ಅನ್ನಿಸಿದೆ...ಹೇಗಿದ್ದಾಳೆ,.... ಅಣ್ಣಯ್ಯ ಹೇಗಿದ್ದಾರೆ. ಅಮ್ಮ ನೀವು ಹೇಗಿದ್ದೀರಾ?? ತೀ।। ರೂಪುರವರು...ಪುರಕ್ಕೆ ಬಂದಿದ್ದಾರೆ. ನಮ್ಮ ಊರಿನಿಂದ ಜಾತ್ರೆಗೆ ಹೋದವರು ಹೇಳಿದರು. ಅವರು ಯಾಕೆ ಹೀಗೆ ಮಾಡುತ್ತಾರೆ. ಇಷ್ಟು ಹತ್ತಿರ ಬಂದು ಯಾಕೆ ಇಲ್ಲಿಗೆ ಬರುವುದಿಲ್ಲ. ನನಗೆ ಗೊತ್ತಿಲ್ಲ. ನಾನು ಏನು ಪಾಪ ಮಾಡಿದ್ದೇನೋ ಗೊತ್ತಿಲ್ಲ. ಇಲ್ಲಿ ನಿಮ್ಮ ತಂದೆ ಇಲ್ಲಿಗೆ ಬಂದು ಒಂದು ರಾತ್ರಿ ಇದ್ದು ಹೋಗಬಹುದಿತ್ತು ಅನ್ನುತ್ತಾರೆ. ನಾನು ಊರಿಗೆ ಹೋಗುತ್ತೇನೆ ಎಂದರೆ ನಿಮ್ಮ ತಂದೆ ಇಷ್ಟು ಹತ್ತಿರ ಬಂದು ಯಾಕೆ ಬರಲಿಲ್ಲ ಎನ್ನುತ್ತಾರೆ. ಏನು ಮಾಡಲಿ ನನ್ನ ಗ್ರಹಚಾರ, ಹೋಗಲಿ ಬಿಡಿ. ನೀವೆಲ್ಲರೂ ಹೇಗಿದ್ದೀರಾ. ಪಾಪು ಹೇಗೆ ಆಟವಾಡುತ್ತಿದೆ? ಎಷ್ಟು ದಿವಸವಾಯಿತು ಎನ್ನಿಸುತ್ತಿದೆ (ನಿಮ್ಮೆಲ್ಲರನ್ನು ನೋಡಿ). ಅಮ್ಮ ತಂದೆಯವರ ಕಾಲು ಹೇಗಿದೆ?

ಅಕ್ಷಯ್ ಚೆನ್ನಾಗಿ ಆಟವಾಡುತ್ತಿದ್ದಾನೆ...ಅಣ್ಣಯ್ಯ ಖಂಡಿತ ಬರಲಿ. ಬರುತ್ತೇವೆ ಅಂದಿದ್ದರು. ಯಾಕೆ ಬರಲಿಲ್ಲ. ಇಲ್ಲಿ ಬಹಳ ಮಳೆ ಸುರಿಯುತ್ತಿದೆ. ಅಡಿಕೆ ಕೆಡವಿಸಿ ಬೇಯಿಸಿದ್ದಾರೆ. ಬಿಸಿಲೇ ಇಲ್ಲ. ಎಲ್ಲಾ ಅಡಿಕೆ ಬೂಷ್ಟು ಬಂದಿದೆ. ಎಲ್ಲರೂ ಬೇಜಾರಿನಲ್ಲಿ ಇದ್ದಾರೆ. ಯಾವತ್ತು ಬಿಸಿಲು ಬರುತ್ತದೊ ಗೊತ್ತಿಲ್ಲ...

೩.೨೨

ಮಗನ ಕಳಕಳಿ (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು

16.1.1997

...ನೀವು ನಿಮ್ಮ ಕೈ ಕಾಲು ಗಾಯದತ್ತ ಉದಾಸೀನ ಮಾಡಿದ್ದೀರೆಂದು ತಿಳಿಯುತ್ತಿದೆ. ಏಕೆಂದರೆ ನೀವು ಪತ್ರದಲ್ಲಿ ತಿಳಿಸಿರುವ ಪ್ರಕಾರ ಇಷ್ಟು ದಿವಸ ಯಾವ ಟ್ರೀಟ್‌ಮೆಂಟ್ ತೆಗೆದುಕೊಂಡಿಲ್ಲವೆಂದು ನನಗೆ ಅನ್ನಿಸುತ್ತಿದೆ. ಆದರೆ ನೀವು ಅದರ ಬಗ್ಗೆ ಇಷ್ಟು ಧೋರಣೆ ಮಾಡಿದರೆ ಮುಂದೆ ತುಂಬಾ ಕಷ್ಟವಾಗುತ್ತದೆ...

೩.೨೩

ಬಂಧುವಿವಾಹಯತ್ನ (ತಂದೆಗೆ ಮಗನ ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು

17.1.1997

...ನಾನು ಊರಿಗೆ ಬಂದಾಗ ಏನಾದರೂ ಮಾತಾಡಿದ್ದರೆ ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ಅಣ್ಣ ನೀವು ಉದಾಸೀನ ಮಾಡದೆ ಸರಿಯಾಗಿ ಆಸ್ಪತ್ರೆಗೆ ತೋರಿಸಿ. ಅಲ್ಲಿ ಆಗದಿದ್ದರೆ ಬೆಂಗಳೂರಿಗೆ ಬನ್ನಿ, ಇಲ್ಲಿ ಸರಿಯಾದ ಸ್ಕಿನ್ ಡಾಕ್ಟರ್‌ಗೆ ತೋರಿಸೋಣ. ನಾನು ಮ।। ರಾ।। ಭಾವನವರಿಗೆ ಬೇಲೂರಿನ ಹುಡುಗನ ಬಗ್ಗೆ ಹೇಳಿದ್ದೇನೆ. ಆದರೆ ನಾನು ಬರುವಾಗ್ಗೆ ಅಲ್ಲಿನ ಅಡ್ರೆಸ್ಸ್ ಬಿಟ್ಟು ಬಂದಿದೇನೆ. ಆದರೂ ಅವರಿಗೆ ಮನೆಯ ಗುರುತನ್ನು ಹೇಳಿದ್ದೇನೆ. ಇಲ್ಲದಿದ್ದರೆ ಊರಿಗೆ ಬಂದು ಹೋಗುತ್ತಾರೆ. ನಮ್ಮ ಊರಿಗೆ ಬಂದು ಹೋದರೆ, ಆದರೆ ಜೊತೆಯಲ್ಲಿ ನೀವು ಹೋಗಿ ಬನ್ನಿ.

೩.೨೪

ಮಗಳ ಆಕ್ಷೇಪಣಾ (ಅಂತರ್ದೇಶೀಯ) ಪತ್ರ

ಕ್ಷೇಮ ಶ್ರೀ ಬೆಂಗಳೂರು

21.1.1997

...ಅಮ್ಮ ನಿಮ್ಮ ಅಳಿಯ ಊರಿಗೆ ಬರುವುದು ಗೊತ್ತಿರಲಿಲ್ಲ. ಆದ್ದರಿಂದ ನಾನು ಎಳ್ಳು ಕಳುಹಿಸಲಿಲ್ಲ. ಏನೂ ಬೇಜಾರು ಮಾಡಿಕೊಳ್ಳಬೇಡಿ. ನನಗೆ ಇನ್ನೂ ಹೆರಿಗೆ ಡೇಟ್ ಕೊಟ್ಟಿಲ್ಲ. ಕೊಟ್ಟಮೇಲೆ ಪತ್ರ ಬರೆಯುತ್ತೇನೆ. ಅಮ್ಮ ಏನೆಂದರೆ ನೀವು ನಿಮ್ಮ ಅಳಿಯನ ಹತ್ತಿರ...ಳಿಗೆ 33 ವರ್ಷ ಎಂದು ಹೇಳಿದರಂತೆ. ಬೇಜಾರು ಮಾಡಿಕೊಳ್ಳಬೇಡಿ. ಅಪ್ಪಿ ತಪ್ಪಿಯೂ ಕೂಡ ಮರೆತು ಯಾರ ಹತ್ತಿರವೂ ಕೂಡ ಹೇಳಬೇಡಿ. ನಾನೇ ಅವಳ ಹುಟ್ಟಿದ ತಾರೀಖನ್ನು ನೋಡಿದ್ದೇನೆ. ಅವಳಿಗೆ ಈಗ 29ನೇ ವರ್ಷ ನಡೀತಿದೆ...ಏಕೆಂದರೆ ಮತ್ತೆ ಎಲ್ಲಿಯಾದರೂ ಮರೆತು ಹೇಳಿದರೆ ಜನರಿಗೆ ಹೇಳಿದ್ದೆ ನಿಜ ಆಗುತ್ತದೆ ಅದಕ್ಕೆ. ಅದು ಹೋಗಲಿ ಎಂದರೆ

...ವಯಸ್ಸು ಬಿಟ್ಟಿದೆ ಎಂದರೆ ಆಯಿತು. ಅದು ಎಷ್ಟಾದರೇನಂತೆ ಎಂದು ಹೇಳಿದರಂತೆ. ಅಂದರೆ ವಯಸ್ಸು ಬಿಡುತ್ತದೆ ಎಂದು 45 ವರ್ಷದವರಿಗೂ 40 ವರ್ಷದವರಿಗೂ ಕೊಡಲಿಕ್ಕಾಗುತ್ತದೆಯೋ ಎಂದು ಬೇಜಾರು ಮಾಡಿಕೊಂಡರು, ನಿಮ್ಮ ಅಳಿಯ. ಹಾಗೆ ಮತ್ತೊಮ್ಮೆ ಹೇಳಬೇಡಿ, ದಯವಿಟ್ಟು. ಇವರು ತುಂಬಾ ಬೇಜಾರು ಮಾಡಿಕೊಂಡರು. ಯಾವುದಕ್ಕೂ ಮತ್ತೊಮ್ಮೆ ಪತ್ರ ಬರೆಯುತ್ತೇನೆ. ನೀವು ಕಳುಹಿಸಿದ ಚಕ್ಕಲಿ ಎಳ್ಳು ಎಲ್ಲಾ ಚೆನ್ನಾಗಿತ್ತು. ಮೆಂತ್ಯ ಸೊಪ್ಪು ಅವರೆಕಾಯಿ ಎಲ್ಲಾ ಚೆನ್ನಾಗಿತ್ತು...

೩.೨೫

'ಬ್ಯಾಡ್ ನ್ಯೂಸ್' (ಅಂತರ್ದೇಶೀಯ ಪತ್ರ)

ಕ್ಷೇಮ ಶ್ರೀ ಬೆಂಗಳೂರು
5.2.1997

...ಅಮ್ಮ ನೀವು ಅವತ್ತು ಊರಿಗೆ ಸುಖವಾಗಿ ಹೋಗಿ ಬಂದಿದ್ದೀರಾ ಹಾಗೂ ಆ ದಿವಸ ನೀವು ಆಸ್ಪತ್ರೆಗೆ ತೋರಿಸಿಕೊಂಡು ಹೋಗಿದ್ದೀರಾ ಎಂದುಕೊಂಡಿದ್ದೇನೆ. ಅಮ್ಮ ಈಗ ಸೊಂಟ ನೋವು ವಾಸಿಯಾಯಿತೆ. ವಾಸಿಯಾಗದೆ ಇದ್ದರೆ ಇನ್ನೊಂದು ಸಾರಿ ತೋರಿಸಿಕೊಂಡು ಬನ್ನಿ. ಉದಾಸೀನ ಮಾಡಬೇಡಿ. ಅಣ್ಣ ನಿಮ್ಮ ಕಾಲಿನ ಪೆಟ್ಟು ವಾಸಿಯಾಯಿತೆ. ನೀವು ಸಹ ಆಸ್ಪತ್ರೆಗೆ ತೋರಿಸಿ. ಯಾವುದಾದರೂ ಔಷಿ ಹಾಕಿದರೆ ಹೋಗುತ್ತದೆ ಎಂದು ಆಸ್ಪತ್ರೆಗೆ ತೋರಿಸದೆ ತಡಮಾಡಬೇಡಿ. ತಕ್ಷಣ ತೋರಿಸಿ ವಾಸಿ ಮಾಡಿಕೊಳ್ಳಿ. ಹೋಗದೆ ಇದ್ದರೆ ಇಲ್ಲಿಗೆ ಬನ್ನಿ ನಾವೆ ತೋರಿಸುತ್ತೇವೆ. ಅಣ್ಣ ನಾನು ಅವತ್ತು ಹೊರಟ ದಿವಸ ನಿಮಗೆ ನಮಸ್ಕಾರ ಮಾಡಲಿಲ್ಲ ಹಾಗೂ...ಅತ್ತಿಗೆ ಅಣ್ಣಯ್ಯ ಇಬ್ಬರಿಗೂ ಒಂದು ಸಾರಿ ಹೋಗಿ ಬರುತ್ತೇನೆ ಎಂದು ಹೇಳುವುದಕ್ಕೆ ಆಗಲಿಲ್ಲ. ಬೇಜಾರು ಮಾಡಿಕೊಳ್ಳಬೇಡಿ. ನಾನು ನಿಮಗೆ ಇಲ್ಲಿಂದಲೇ ಕೈ ಮುಗಿಯುತ್ತೇನೆ.

ಅಣ್ಣ ನೀವೆ ಒಂದು ಸಾರಿ ಬೆಂಗಳೂರಿಗೆ ಬನ್ನಿ. ನಮಗೆ ತುಂಬಾ ಸಂತೋಷವಾಗುತ್ತದೆ...ಅತ್ತಿಗೆ ಅಣ್ಣಯ್ಯ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ. ಅಣ್ಣಯ್ಯ ಮನೆಗೆ ಬರುವುದಿಲ್ಲ, ಅಣ್ಣಯ್ಯ ನೀವು ಬಂದರೆ ಇವರಿಗೆ ಒಂದು ಸಾರಿ ಫೋನ್ ಮಾಡಿ ಬನ್ನಿ. ಖಂಡಿತಾ ಮನೆಗೆ ಬನ್ನಿ. ನನ್ನ ಚಿನ್ನ ಮುದ್ದು...ಹೇಗೆ ಇದೆ. ಚೆನ್ನಾಗಿ ಆಟವಾಡುತ್ತದೆ ಅನ್ನಿಸುತ್ತದೆ. ನನ್ನ ಮುದ್ದು...ಗೆ ಅವರ ಅತ್ತೆಯ ಆಶೀರ್ವಾದಗಳನ್ನು ತಿಳಿಸಿ. ಹಾಗೂ ಅಲ್ಲಿ ಚಿಕ್ಕಮ್ಮನ ಮನೆಯಲ್ಲಿ ಅಮ್ಮಮ್ಮ ಮನೆಯಲ್ಲಿ ಎಲ್ಲರಿಗೂ ನಾನು ಕೇಳಿದೆ ಎಂದು ತಿಳಿಸಿ. ಇಲ್ಲಿ...ಅಣ್ಣಯ್ಯನ ಮನೆಯಲ್ಲಿ ಹಾಗೂ ...ನ ಮನೆಯಲ್ಲಿ ಎಲ್ಲರೂ ಆರೋಗ್ಯವಾಗಿದ್ದಾರೆ. ಅಮ್ಮ... ಊರಿಗೆ ಬರುವುದಿಲ್ಲ ಅನ್ನಿಸುತ್ತದೆ.

ಅಮ್ಮ ಒಂದು ಬ್ಯಾಡ್ ನ್ಯೂಸ್ ಅಂದರೆ ನನಗೆ ಹೊಟ್ಟೆಯಲ್ಲೇ ಮಗು ಹೋಗಿಬಿಟ್ಟಿದೆ ಎಂದು...ಚಿಕ್ಕಮ್ಮನ ಆಸ್ಪತ್ರೆಗೆ 4ನೇ ತಾರೀಖು ಹೋಗಿದ್ದೆವು. ಅಲ್ಲಿ ಅವರು ನೋಡಿ ಈ ವಿಷಯ ಹೇಳಿದರು. ಏನು ಮಾಡುವುದು ಎಲ್ಲ ನನ್ನ ಹಣೆ ಬರಹ.

ಇನ್ನೇನೂ ವಿಷಯವಿಲ್ಲ.

ಇತಿ ನನ್ನ ಅನಂತ ನಮಸ್ಕಾರಗಳು

೩.೨೬

'ಅಮ್ಮ' ಬಂದ ವಿಷಯ (ಅಜ್ಜನಿಗೆ ಮಮ್ಮಗನ ಕಾರ್ಡು)

ಶ್ರೀ ಕ್ಷೇಮ 13.2.1997

ತೀರ್ಥರೂಪು ಅಜ್ಜ ಅಜ್ಜಿಯವರಿಗೆ...ಮಾಡುವ ನಮಸ್ಕಾರಗಳು.

ಇಲ್ಲಿ ಎಲ್ಲರೂ ಆರೋಗ್ಯವಾಗಿದ್ದೇವೆ. ನಿಮ್ಮ ಆರೋಗ್ಯದ ಬಗ್ಗೆ ಪತ್ರ ಬರೆಯಿರಿ. ನನಗೆ ತುಂಬಾ ಜ್ವರ ಬಂದಿತು. ನಾನು ಮಾತ್ರೆಯನ್ನು ತೆಗೆದುಕೊಂಡೆ. ಸ್ವಲ್ಪ ಜ್ವರ ಕಡಿಮೆಯಾಗಿತ್ತು. ನಾನು ಆಚೆ ಕಡೆಗೆ ಬಂದರೆ ತಲೆ ತಿರುಗುತ್ತದೆ. ನನಗೆ ಮುಖದಿಂದ ಅಮ್ಮ ಎದ್ದಿತ್ತು. ಅದು ಮೈಯಲ್ಲಿ ಬಂದಿತು. ಅಮ್ಮ ನನಗೆ ಬೇವಿನ ಸೊಪ್ಪನ್ನು ಅಣ್ಣ ಹತ್ತಿರ ತರಲು ಹೇಳಿದರು. ಅಮ್ಮ ಅದನ್ನು ಹಾಸಿಗೆಯ ತಳಕ್ಕೆ ಹಾಕಿದರು. ಬೆಳಿಗ್ಗೆ ಅದನ್ನು ಅರೆದು ನನ್ನ ಮೈಯಿಗೆ ತಿಕ್ಕಿ ಸ್ನಾನ ಮಾಡಿಸಿದರು. ಅಮಾಮಿ ಹೇಗಿದ್ದಾರೆ. ನಮ್ಮ ಪುಟ್ಟು ಗಿಣಿ...ಹೇಗಿದ್ದಾಳೆ. 22ನೇ ತಾರೀಖು ಜಾತ್ರೆ ಇರುವುದರಿಂದ ನಾಲ್ಕು ದಿವಸದ ಮುಂಚೆಯೇ ಕಳಿಸಿಕೊಡಿ. ಇನ್ನೇನೂ ವಿಷಯವಿಲ್ಲ...

ಇಂತಿ ನಿಮ್ಮ ಮೊಮ್ಮಗ...

೩.೨೭

ಮಳೆಯ ಸಂಭ್ರಮ (ಅಳಿಯನ ಕವರು)

Safe ಓಂ ಮೈಸೂರುಜಿಲ್ಲೆಯ ಹಳ್ಳಿ
20.3.1997

...ಇಲ್ಲಿ ತುಂಬಾ ಚೆನ್ನಾಗಿ ಮಳೆಯಾಗಿದೆ. ಒಂದೇ ಒಂದು ಮಳೆಗೆ ಕೆರೆಕಟ್ಟೆಗಳೆಲ್ಲಾ ತುಂಬುವ ಮಟ್ಟಕ್ಕೆ ಬಂದಿದೆ. ಅಂದರೆ ಪಂಡರಿ ಅವರು ಇಲ್ಲಿಂದ ಹೋಗಿ ಬಂದ ಮೇಲೆ ಮಳೆ ಬರಲಿಲ್ಲ ಅಂತ ನೀರನ್ನು ಬಿಡುವುದಕ್ಕೆ ಶುರು ಮಾಡಿದೆವು. ಅವತ್ತೇ ಮಳೆ.

ಸುಮಾರು ಇಂಥಾ ಮಳೆಯನ್ನು ಕಂಡು 15-20 ವರ್ಷಗಳೇ ಆಗಿತ್ತು. ಹಾಗೆಯೇ ಸಿಡಿಲು ಹಾಗೂ ಘಾಳಿ. ಸುಮಾರು 15-20 ಸಿಡಿಲು ಬಿದ್ದಿದೆ. ಸುಮಾರು ಒಟ್ಟು ಆಗ್ರದಲ್ಲಿ 700 ಅಡಿಕೆ ಮರ ಮುರಿದಿರಬಹುದು. ಅಲ್ಲಿಗೆ ಮಳೆ ಚೆನ್ನಾಗಿ ಆಗಿದೆಯಾ? ಆಲೂಗಡ್ಡೆ ಹಾಕಿ ಆಗಿದೆಯಾ? ನಿಮ್ಮಿಂದ ಯಾವ ಕಾಗದವೂ ಇಲ್ಲ. ನಾನು ಸಹ ಬರೆದಿಲ್ಲ. ನಾನು ಹಾಗೂ ರೋಹಿಣಿ ಬರುವ ತಾ.18 ಹೆಬ್ರೂರಿಗೆ ಹೋಗುತ್ತಿದ್ದೇವೆ...

ಅಕ್ಷಯಕುಮಾರ ಚೆನ್ನಾಗಿ ಆಟವಾಡಿಕೊಂಡು ಇದ್ದಾನೆ. ಗೋಡೆ ಹಿಡಿದುಕೊಂಡು ನಿಂತುಕೊಳ್ಳುತ್ತಾನೆ. ಅವನನ್ನು ತಡೆಯುವುದೇ ಕಷ್ಟವಾಗಿದೆ. ಕಣ್ಣನ್ನು ಮುಚ್ಚಿ ತೆಗೆಯುವುದರೊಳಗೆ ಬೀದಿಗೆ ಹೋಗಿರುತ್ತಾನೆ...

ನಾನು ಅಲ್ಲಿಗೆ ಬಂದು ಸುಮಾರು ದಿವಸಗಳಾಗಬೇಕಾಗಿತ್ತು. ಆದರೆ ಏನು ಮಾಡಲಿ, ನನ್ನ ಪರಿಸ್ಥಿತಿ ಒಂದು ತರಹ ಕತ್ತರಿ ಮಧ್ಯೆ ಅನ್ನುವ ಹಾಗೆ. Motor ಸುಟ್ಟು ಹೋಯಿತು. ನಮ್ಮ ಮಾತೃಶ್ರೀ ತಾಯಿಯವರು ಈವಾಗ 15 ದಿವಸದಲ್ಲಿ ಬೆಂಗಳೂರಿನಿಂದ ಬಂದರು. ಆಮೇಲೆ ರೋಹಿಣಿಗೆ ಆರೋಗ್ಯ ಸರಿ ಇರಲಿಲ್ಲ. ಒಂದು ವಾರ ಮಳೆ ಬಂದು ಯಾವ ಕೆಲಸವನ್ನೂ ಮಾಡಲು ಸಾಧ್ಯ ಇರಲಿಲ್ಲ. ರೋಹಿಣಿ ನಿಮ್ಮೆಲ್ಲರನ್ನೂ ನೋಡಬೇಕೆಂದು ಅಳುತ್ತಿದ್ದಾಳೆ. ನನಗೂ ನಿಮ್ಮ ಊರನ್ನು ಹಾಗೂ ನಿಮ್ಮನ್ನು ನೋಡಬೇಕೆಂದು ತುಂಬಾ ಆಸೆ ಇದೆ. ನಿಮ್ಮನ್ನು ನೋಡಿ ಎಷ್ಟೋ ವರುಷ ಆಗಿದೆ ಅಂತ ಅನ್ನಿಸುತ್ತಿದೆ...

ಗುಚ್ಛ - 15

ಪತ್ರಾಂಶ

ಸಂಗ್ರಹ ಮಾಡಿದ ನಾಲ್ಕು ಸಾವಿರಕ್ಕೂ ಹೆಚ್ಚು ಪತ್ರಗಳಲ್ಲಿ, ಆರಿಸಿದ ಕೆಲವು ನೂರು ಪತ್ರಗಳನ್ನಷ್ಟೆ ಈ ಗ್ರಂಥದಲ್ಲಿ ಪ್ರಕಾಶಪಡಿಸಲಾಗಿದೆ. ಉಳಿದ ಪತ್ರಗಳು ಕೇವಲ ಕ್ಷೇಮ ಸಮಾಚಾರವನ್ನು ತಿಳಿಸುವುದು ಅಥವಾ ವಿಚಾರಿಸುವುದು ಇಷ್ಟರಲ್ಲಿಯೇ ಪರ್ಯವಸಾನವಾಗಿದ್ದವು. ಆದರೆ ಅಂಥ ಪತ್ರಗಳ ಗುಂಪಿನಿಂದ ಆರಿಸಿದ ಕೆಲವು ಅಂಶಗಳನ್ನು ಇಲ್ಲಿ ಕೊಡಲಾಗಿದೆ. **ಅವನ್ನು ತಾರೀಕುವಾರು** ಹಾಗೂ **ವಿಷಯಾನುಕ್ರಮಣಿಕೆಯಲ್ಲಿ ಜೋಡಿಸಿದೆ.** ಮತ್ತು ಉಳಿದ ಗುಚ್ಛಗಳ ವಿಚಾರಗಳೆಲ್ಲಾ ಒಂದೇ ಎಡೆ ಸಂಕ್ಷಿಪ್ತವಾಗಿ ದೊರೆಯುವುದು ಇಲ್ಲಿನ ವಿಶೇಷವಾಗಿದೆ.

ಅ) ಬಾಲ್ಯ

೩.೨೮

ಸಾಮಾನು ಮರೆತಿದ್ದೇವೆ

9-7-45

...ನಾನು ಶಾಲೆಗೆ ಸೇರಿಕೊಂಡೆನು. ಪಾಠಗಳು ನಡೆಯುತ್ತಿವೆ. ಮನೆಯಲ್ಲಿ ಅಟ್ಟದ ಹಲಗೆಗೆ 1 ಜಾಲರಿ ಸೌಟು, 1 ಮಗುಚುವ ಕೈ, 1 ಎಣ್ಣೆ ಸೌಟು, 1 ಕಡೆಯುವ ಮಂತು, ಅಡಿಗೆ ಮನೆಯಲ್ಲಿ ಎಣ್ಣೆ ಗುಂಬದೊಳಗೆ ಒಂದು ಅಲ್ಯೂಮಿನಿಯಂ ಚಮಚ ಇಷ್ಟನ್ನೂ ಅಲ್ಲೇ ಮರೆತು ಬಿಟ್ಟು ಬಂದಿದ್ದಾರಂತೆ. ನನ್ನ ಶಾಲೆಗೆ ತೆಗೆದುಕೊಂಡು ಹೋಗುವ ಚೀಲ ಅದು ಅಲ್ಲೇ ಇದೆ. ಈ ಸಾಮಾನುಗಳನ್ನು ಆ ಚೀಲಕ್ಕೆ ಹಾಕಿ ಕಾಗದ ಕೊಡುವ ಸುಬ್ಬಣ್ಣನ ಕೈಯಲ್ಲೇ ದಯವಿಟ್ಟು ಕಳುಹಿಸಿಕೊಡಿ. ಮ॥ ಶ್ರೀ॥ ಶೀನಿ ಶಾನುಭೋಗರ ಮನೆಯಲ್ಲಿ 'ಲಂಡನ್ ನ್ಯೂಸ್' ಎಂಬ ಪುಸ್ತಕವನ್ನೂ (ಸೀನರಿಗೆ ಕೊಟ್ಟ ಪುಸ್ತಕ) ಹೆಬ್ಬಾರ್ ಅಜ್ಜಯ್ಯನವರ ಮನೆಯಲ್ಲಿ ಒಂದು ಪುಟ್ಟ ಗೇರು ಕುಕ್ಕೆಯೂ ಉಳಿದಿದೆ. ಮಾ॥ ಶ್ರೀ॥ ಅಜ್ಜಮ್ಮನವರನ್ನು ಕಳುಹಿಸಿ ತರಿಸಿಕೊಂಡು ಈ ಸಾಮಾನುಗಳ ಜೊತೆಯಲ್ಲಿ ಅದನ್ನೂ ಕೊಟ್ಟು ಕಳುಹಿಸಿ...

೩.೨೯

ಪುಸ್ತಕಗಳನ್ನು ಕಳಿಸಿ

...ತಾವು ದಯವಿಟ್ಟು ನನಗೆ ನಿಮ್ಮಲ್ಲಿಯಾಗಲಿ ನಿಮಗೆ ಸ್ನೇಹಿತರಾದಂಥಾವರಲ್ಲಿಯಾಗಲಿ ಇದ್ದರೆ ಒಂದು ಕಿರಾತಾರ್ಜುನೀಯವನ್ನು ಮಂದು ಭರ್ತೃಹರಿಯನ್ನು ಒಂದು ಸಂಸ್ಕೃತ ಅಮರವನ್ನ ದಯವಿಟ್ಟು ಈ ಕಾಗದವನ್ನು ತಂದ ಹುಡುಗನ ಸಂಗಡದಲ್ಲಿ ಕೊಟ್ಟು ಕಳುಹಿಸುತ್ತೀರೆಂದು ನಂಬಿರುತ್ತೇನೆ. ಉದಾಸೀನ ಮಾಡದೆ ಕಿರಾತಾರ್ಜುನೀಯವನ್ನಾದರೂ ದಯವಿಟ್ಟು ಕಳುಹಿಸುತ್ತೀರೆಂದು ಬೇಡಿಕೊಳ್ಳುತ್ತೇನೆ. ಇದರಲ್ಲಿ ಎಷ್ಟು ತಪ್ಪಿದ್ದಾಗ್ಯೂ ಕ್ಷಮಿಸುತ್ತೀರೆಂದು ನಂಬಿರುತ್ತೇನೆ...

ಇತಿ ತವ ಶಿಷ್ಯಃ

೩.೩೦

ಸ್ಟೇಷನ್‌ಗೆ ಬನ್ನಿ (ರೈಲಿನಲ್ಲಿ ಬರುತ್ತೇನೆ)

13-3-53

...ನಾನು 18-3-53ನೇ ಬುಧವಾರ ಹಾಸನಕ್ಕೆ ಬರುತ್ತೇನೆ. ಬೆಳಗಿನ ರೈಲಿನಲ್ಲಿ ಹೊರಟು 10-30ಕ್ಕೆ ಹಾಸನಕ್ಕೆ ಬರುವುದರಲ್ಲಿ ಬರುತ್ತೇನೆ. ಆದ್ದರಿಂದ ಯಾರಾದರೂ ರೈಲಿನ ಹತ್ತಿರಕ್ಕೆ ಬನ್ನಿ...

೩.೩೧

ಶಾಲೆ ಬಾಗಿಲು ತೆಗೆದಿದೆ

30-5-60

...ಸ್ಕೂಲ್ ಬಾಗಿಲು ತೆಗೆದು ಎಂಟು ದಿನಗಳಾಯಿತು. ಈ

ಕಾಗದವನ್ನು ಕಂಡ ಕೂಡಲೆ ಖಂಡಿತ ತಕ್ಷಣ ಹುಡುಗರನ್ನು ಕಳುಹಿಸಿ. ನಮಗೆ ಒಂದು ಕಾಗದ ಹಾಕಿ ಬಸ್ಸಿನ ಮೇಲೆ ಕೂರಿಸಿಬಿಡಿ...

೩೩೨

ಭಾಷ್ಕಳ ಬೇಡ (ವ್ಯಾಸಂಗ ಮಾಡಲಿ)

5-8-60

...ಮೂದೇವಿ ಕವಿದುಕೊಂಡಿರುವ ಪ್ರಯುಕ್ತ ತಲೆ ಕೆಟ್ಟಿದೆ. ತಡವಾಗಿ ಉತ್ತರ ಬರೆಯುತ್ತಿದ್ದೇನೆ...ವ್ಯರ್ಥವಾಗಿ ಕಾಲ ಕಳೆಯದೆ ಈ ಊರಿನ ಹುಡುಗರೊಡನೆ ಭಾಷ್ಕಳ ಹೊಡೆಯದೆ ವ್ಯಾಸಂಗ ಮಾಡುವಂತೆ ಹೇಳಿ.

ನಿಮ್ಮಿಂದ ನಾವು ಪಡೆಯುತ್ತಿರುವ ಉಪಕಾರ ಪರಂಪರೆಯಲ್ಲಿ, ನಾನು ಕಳಿಸಿದ ಅಕ್ಕಿ ತೃಣಪ್ರಾಯವಾದದ್ದು. ಅದನ್ನು ಸಮಯ ಬಂದರೆ ನಿಮ್ಮಿಂದ ಪಡೆಯುವ ಸಹಾಯಕ್ಕೆ ಬೀಜರೂಪದಿಂದಿರಲಿ ಎಂದು ಭಾವಿಸಿದ್ದೇನೆ. ಇವತ್ತೂ ನೀವು ಮೆಣಸು, ನಾವು ಜೋಳವೇ. ಪ್ರಕಾರಾಂತರ ಭಾವಿಸಬೇಡಿ...

ಆ) ವಿವಾಹ

೩೩೩

ಹುಡುಗನು ಸುಂದರ

20-4-40

...ನೆನ್ನೆ ಭದ್ರಾವತಿಯಲ್ಲಿ...ನವರ ಮಗನನ್ನು ಕರೆಸಿ ನೋಡಿದೆವು. ಬಹಳ ಸುಂದರನಾಗಿದ್ದಾನೆ. ವೊಪ್ಪಿರುತ್ತಾನೆ. ಅಶ್ವಿನಿ ನಕ್ಷತ್ರ. ತಾವು ಹಾಸನಕ್ಕೆ ಭಾವನವರ ಜೊತೆಯಲ್ಲಿ ಹೋಗಿ ವಿಚಾರಿಸಿ. ಇಂಥ ವರ ಸಿಗುವುದು ಕಷ್ಟ. ಮಾ|| ಅತ್ಯಮ್ಮನವರಿಗೆ ನಮ್ಮೆಲ್ಲರ ಕ್ಷೇಮವನ್ನು ತಿಳ್ಸಿ...ಯನ್ನು ಕಳ್ಸಿದರೆ। ಚೈನ್ ಮಾಡುವುದಕ್ಕೆ ಕೊಟ್ಟಿರುತ್ತೇನೆ. ಮಳೆಯಾಗಿರುತ್ತೆ. ಶ್ರವಣ ೧೨ ಉದ್ಯಾಪನೆಗೆ ಗುಂಡಯ್ಯನವರು ೫೦ ರೂಪಾಯಿ ಕೊಡುತ್ತೇನೆಂತ ತಿಳ್ಸಿದರು. ಬಾಕಿ ಮೊಬಲಗು ಇವರು ಕೊಡುತ್ತಾರಂತೆ. ಕೃಷ್ಣಾಪುರದ ಸ್ವಗೃಹದಲ್ಲಿಯೇ ನಡಿಯುವಂತೆ...ನವರಿಗೆ ತಿಳ್ಸಿ...

೩೩೪

ವರದಕ್ಷಿಣೆ ಇಲ್ಲ

16-2-60

...ಬೆಂಗಳೂರಿನಿಂದ ಒಂದು ಹುಡುಗಿ ಬಂದಿದೆ. ಕೊಡುವುದನ್ನೆಲ್ಲಾ ಕೊಡುತ್ತಾರೆ. ಚೆನ್ನಾಗಿ ಮಾಡಿಕೊಡುತ್ತಾರಂತೆ. S.S.L.C. ಆಗಿದೆ. ವರದಕ್ಷಿಣೆ ಮಾತ್ರ ಕೊಡುವುದಿಲ್ಲವಂತೆ. ಏಕೆಂದರೆ ಅವರು ಬಡವರಂತೆ. ವರದಕ್ಷಿಣೆ ಇಲ್ಲದ್ದರಿಂದ ಸೌ|| ಮಾ|| ಶ್ರೀ|| ತಾಯಿಯವರಿಗೆ ಇಷ್ಟವಿಲ್ಲ. ಹುಡುಗಿ ಚೆನ್ನಾಗಿ ಬೆಳ್ಳಗಿದ್ದಾಳಂತೆ. ಈ ವಿಷಯದಲ್ಲಿ ಅಭಿಪ್ರಾಯ ತಿಳಿಸಿ ಕಾಗದ ಬರೆಯುವುದು...

೩೩೫

ನಾನು ಸಿದ್ಧನಿದ್ದೇನೆ (ಆ ಹುಡುಗಿ ಬೇಡ ಎನ್ನುತ್ತಾರೆ)

14-6-62

...ನನ್ನ ಲಗ್ನ ನಿಷ್ಕರ್ಷೆಯಾಗಿದ್ದು ಸರಿಯಷ್ಟೆ. ಆದರೆ ಅದು ಆದ ದಿವಸದಿಂದ ಯಾರ ಬಾಯಲ್ಲಿ ಕೇಳಿದರೂ ಮಾಡಿಕೊಳ್ಳ ಬೇಡೆಂಬುದೆ ವಿನಃ ಬೇರೆ ವಿಷಯವಿಲ್ಲ. ಊರಿನಿಂದ ದೃಢ ಮನಸ್ಸು ಮಾಡಿಕೊಂಡು ಬೆಂಗಳೂರಿಗೆ ಬಂದರೆ ಅಲ್ಲಿ ಪುನಃ ಅದೇ ವಿಷಯ. ಹೀಗಾಗಿ ಒಂದೂ ತೋಚದವನಾಗಿ ತೆಗೆದುಕ್ಕೊಂಡ ಹಣವನ್ನು ವಾಪಸ್ಸು ಮಾಡುವಂತೆ ತೀ|| ಮಾವನವರ ಮನೆಯಲ್ಲಿ ಕೊಟ್ಟು ಹೊರಟು ಬಂದೆ. ಮೊದಲು ಮಾತಾಡಿಕೊಂಡಿದ್ದಂತೆಯೆ ಪ್ರಸಂಗಗಳು ಒದಗಿ ಬಂದದ್ದು ನೋಡಿ ಮನಸ್ಸು ಕರಗಿ ನೀರಾಗಿ ಹೋಗುತ್ತಿದೆ. ಅನ್ಯಾಯವಾಗಿ ನಿಮ್ಮನ್ನು ಒಂದು ಮಾತು ಕೇಳುವ ಹಾಗೆ ಮಾಡಿದೆನಲ್ಲ ಎಂದು ತುಂಬಾ ಯೋಚನೆಯಾಗಿದೆ. ಈ ವಿಷಯದಲ್ಲಿ ನಿಮ್ಮಗಳ ಕ್ಷಮಾಪಣೆಯನ್ನು ಬೇಡುತ್ತಿದ್ದೇನೆ. ಪುನಃ ಅವರುಗಳು ನಿಮ್ಮ ಹತ್ತಿರ ಬಂದು ಆರೋಪಣೆ ಮಾಡಿದ ಪಕ್ಷದಲ್ಲಿ ನಾನು ಲಗ್ನ ಮಾಡಿಕೊಳ್ಳಲು ಸಿದ್ಧನಾಗಿದ್ದೇನೆ. ದೇವರು ತೋರಿಸಿದ್ದಾಗಲಿ...

೩೩೬

ಜಾತಕ

10-2-68

...ಅಸಲು ಜಾತಕ ಕಳುಹಿಸಿರುವುದಿಲ್ಲಾ. ಯಥಾ ನಕಲು ಕಳುಹಿಸಿರುತ್ತೇನೆ. ಅದರಲ್ಲಿ ಯಾವ ರೀತಿಯೂ ತಪ್ಪು ಬರೆದಿರುವುದಿಲ್ಲಾ. ಕನ್ಯೆಗೆ B.Sc., ಆಗಿರುತ್ತೆ. ಸೀನಿಯರ್ 'ವೀಣಾ' ಪರೀಕ್ಷೆಗೆ ಈ ಸಲ ಕಟ್ಟಿರುತ್ತಾಳೆ. ಪೂರ್ತಿ ಪಾಠ ಆಗಿರುತ್ತೆ. ಜಾತಕವನ್ನು ಪರಿಶೀಲಿಸಿ ದೊಡ್ಡ ಮನಸ್ಸು ಮಾಡಿ ಜವಾಬು ಬೆಳೆಸಬೇಕಾಗಿ ಕೋರುತ್ತೇನೆ...ಅಶ್ಮಿ್ವ ದಿವಸೇ ಸೂರ್ಯೋದಯಾನಂತರೇ ಜನನಕಾಲ ಘಟಿಕಾಃ ೨೦-೨೫ ತತ್ಸಮಯೇ ಮಕರಲಗ್ನೇ ಕನ್ಯಾಬುಧನವಾಂಶೇ ಜಗಳೂರು ತಾಲ್ಲೂಕು ಬಿಳಿಜೋಡು ಗ್ರಾಮ

ವಾಸಿ ಮ।। ರಾ।।...(ಪೊಲೀಸ್. ಸ.ಇ.) ನಾಮಧೇಯಸ್ಯ ಪತ್ನ್ಯಾಃ ಹ। ಕುಂ। ಶೋ।...ಲಕ್ಷ್ಮಿ ಬಾಯಾಃ ಗರ್ಭಾರ್ಣವೇ ಪೂರ್ಣಚಂದ್ರಸದೃಶಕನ್ಯಾರತ್ನಮಜೀಜನತ್. ಪುಷ್ಯಾನಕ್ಷತ್ರ ದ್ವಿತೀಯ ಚರಣೇ ಜಾತತ್ವಾತ್ 'ಹೇಮಾದ್ರಿಜಾತಾ' ಇತಿ ಜನ್ಮನಾಮ. ಅಥ ವ್ಯವಹಾರ ನಾಮ...ಲಕ್ಷ್ಮಮ್ಮ ಇತಿ ಸುಪ್ರಸಿದ್ಧಮಸ್ತಿ...

೩೩೭

ಶ್ಲೋಕದಲ್ಲೇ ತೀರ್ಮಾನ (ಮದುವೆ ಬೇಡ)

2-2-76

...ಪ್ರಕೃತ ನನಗೆ ಈಗ ಮದುವೆಯಾಗುವ ಮನಸ್ಸಿಲ್ಲ. ಆದ್ದರಿಂದ ನನಗಾಗಿ ಯಾವ ಜಾತಕಗಳನ್ನೂ ಪರಿಶೀಲಿಸುವುದಾಗಲೀ, ಮಾತು ಕೊಡುವುದಾಗಲೀ ಕೂಡದು. ತಮ್ಮಣ್ಣನು ಇಷ್ಟಪಟ್ಟರೆ ಅವನಿಗೆ ಮಾಡಿಬಿಡತಕ್ಕದ್ದು. ಈ ವಿಚಾರದಲ್ಲಿ ನನಗೆ ಇನ್ನೊಮ್ಮೆ ಕಾಗದ ಬರೆಯುವ ಅವಶ್ಯಕತೆ ಇಲ್ಲ.

ನ ಪುನರ್ಗೃಹ್ಯತೇ ತ್ಯಕ್ತಾ ಸಂಸ್ಕೃತಿರ್ವ್ಯರ್ಥಬುದ್ಧಿಭಿಃ ।

ಮುಖೋತ್ಸೃಷ್ಟಂ ಯಥೋಚ್ಛಿಷ್ಟಂ ಶೌಚಸಂಸ್ಕೃತಮಾನಸೈಃ।।

ಕೂಡಲೇ 2 ಜತೇ ಯಜ್ಞೋಪವೀತವನ್ನು ಪಾರ್ಸಲಿನಲ್ಲಿ ಕಳಿಸುವುದು...

೩೩೮

ಕೊನೆಯ ಮುಹೂರ್ತ (ಛತ್ರದ ಏರ್ಪಾಟು ಮಾಡಿ)

16-12-79

...ತಾ. 25-2-1980 ನೇ (ಫಾಲ್ಗುನ ಶುದ್ಧ ದಶಮೀ) ಸೋಮವಾರ ವಿವಾಹಕ್ಕೆ ಪ್ರಶಸ್ತವಾಗಿದೆಯಂತ ವೇದಮೂರ್ತಿಗಳು ಅಪ್ಪಣೆ ಕೊಡಿಸಿದ್ದಾರೆ. ಈ ಮುಹೂರ್ತ ಬಿಟ್ಟರೆ ಈ ವರ್ಷದಲ್ಲಿ ಬೇರೆ ಲಗ್ನವಿಲ್ಲ. ಆದ್ದರಿಂದ ಛತ್ರ ವಗ್ಯೆರೆ ಏರ್ಪಾಟುಗಳನ್ನು ಮಾಡುವ ಬಗ್ಗೆ ಪ್ರಯತ್ನಿಸಿ...

ಇ) ಸಂಸ್ಕಾರ ವಲಯ

೩೩೯

ಉಪಾಕರ್ಮಕ್ಕೆ ಬರುವೆ

ಕ್ಷೇಮ ಶ್ರೀ Kadur

2-8-1904

ಮಹಾರಾಜೇಶ್ರೀ ಹಿರಿಯಣ್ಣನವರ ಸ।।ಕ್ಕೆ ಗುಂಡಪ್ಪನ ಸಾ. ನಮಸ್ಕಾರ. ಅದಾಗಿ ಯೀವರಿಗೆ ಯಿಲ್ಲಿ ನಾವೆಲ್ಲರೂ ಕ್ಷೇಮ. ಅಲ್ಲಿ ಮನೆಯಲ್ಲಿ ಚಿ।। ಸೌ।। ಗಳಾದಿಯಾಗಿ ನಿಮ್ಮಗಳ ಕ್ಷೇಮಕ್ಕೆ ಬರಸುತ್ತಾ ಯಿರಬೇಕಾಗಿ ಅಪೇಕ್ಷೆಗಳೂ. ನಾನಾ ಪ್ರಯತ್ನ ಮಾಡಿದರೂ ಊರಿಗೆ ಬಂದಿರಾ...

...ಊರಲ್ಲಿಯೂ ಬೇರೆ ತಿಳಿಯಲಿಲ್ಲ. ಚಿ।।ಗಳ ಯೋಗಕ್ಷೇಮಕ್ಕೂ ಕಾಗದ ಬರೆಯಿರಿ. ತಾವು ಮರೆಯದೆ ಊರಿನ ಯೋಗಕ್ಷೇಮಕ್ಕೂ ಬರಸುತ್ತಾಯಿರಬೇಕು. ನಾನು ಉಪಾಕರ್ಮಕ್ಕೆ... ಕೋಟಹಾಳಿಗೆ ಬರುತ್ತೇನೆ. ಯೀ ವಿವರ ಕಂಡು...ತರುವಂತೆಯೂ ಹೇಳಿ.

ಇಂತಿ ನಮಸ್ಕಾರಗಳು

ಗುಂಡಪ್ಪ

೩೪೦

ಸಂಕಷ್ಟಹರ ಗಣಪತಿ

12-8-59

...ಇದೆ ಶ್ರಾವಣ ಬೊಹುಳ ತದಿಗೆ ಶುಕ್ರವಾರ ಸಂಕಷ್ಟಹರ ಗಣಪತಿ ವ್ರತವು ಆಗಬೇಕಾಗಿ ಇರುತ್ತೆ. ಇ ವ್ರತಕ್ಕೆ ಯರಡು ದಿವ್ಸ ಮುಂಚಿತವಾಗಿಯೆ ಮನೆಯಲ್ಲಿ ಚಿ।। ಸೌ।। ಯೆಲ್ಲರನ್ನೂ ಕರದುಕ್ಕೊಂಡು ಬಂದು ವ್ರತವನ್ನು ಬೆಳಿಸಿ ನಮ್ಮ ಮನಸ್ಸಿಗೆ ಸಂತೋಷವನ್ನು ವುಂಟು ಮಾಡಬೇಕಾಗಿ ಕೋರುತ್ತೇನೆ...

೩೪೧

ಕಾಶೀಯಾತ್ರೆ

12-12-59

...ಪುರದ...ಮಾವಯ್ಯನವರು ಕಾಶೀಗೆ ಹೋಗಿ ಇರುತ್ತಾರೆ, ಯಾತ್ರೆ ಮಾಡಿಕ್ಕೊಂಡು ಬರುವದಕ್ಕೆ. ನಮ್ಮ...ಮ್ಮನು...ಪುರದಲ್ಲಿ ...ಮಾವಯ್ಯನವರ ಮನೆಯಲ್ಲಿ ಇರುತ್ತಾಳೆ...

೩೪೨

ಅಶ್ವತ್ಥೋಪನಯನ (ವಿವಾಹ)

ಶ್ರೀರಸ್ತು ಲಕ್ಷ್ಮೀಕೇಶವಃ ಪ್ರಸೀದತು ಶುಭಮಸ್ತು

ಅಶ್ವತ್ಥೋಪನಯನವಿವಾಹಮಹೋತ್ಸವಲಗ್ನಪತ್ರಿಕಾ ।।

ಮ।।ರಾ।।ಶ್ರೀ...ರವರ ಸ।। ಕ್ಕೆ।।

ಹಾಸನ ತಾಲ್ಲೂಕು ಪ್ರೊಮಗಾಮೆಯಲ್ಲಿರುವ...ನು ಮಾಡುವ

ವಿಜ್ಞಾಪನೆಗಳು. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1918ಕ್ಕೆ ಸಲ್ಲುವ ಧಾತೃಸಂವತ್ಸರದ ಫಾಲ್ಗುಣ ಕೃಷ್ಣ ನವಮೀ ಉಪರಿದಶಮೀ ಬುಧವಾರ 2-4-97 ಸೂರ್ಯೋದಯಾದಿ 11-20 ಗಳಿಗೆಗಳ ಮೇಲೆ (11-00) ಸಲ್ಲುವ ಶುಭ ಮಿಥುನ ಲಗ್ನದಲ್ಲಿ

ಅಶ್ವತ್ಥೋಪನಯನ ವಿವಾಹ ಮಹೋತ್ಸವವನ್ನು ಪೂಮ ಗಾಮೆಯಲ್ಲಿ ನಡೆಸಲು ದೈವಪ್ರೇರಣೆಯಿಂದ ಗುರುಹಿರಿಯರು ನಿಶ್ಚಯಿಸಿರುತ್ತಾರೆ. ತಾವು ಈ ಮಹೋತ್ಸವಕ್ಕೆ ಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ ನಮ್ಮ ಮನಸ್ಸಂತೋಷಪಡಿಸಬೇಕಾಗಿ ಕೋರುತ್ತೇನೆ.

ಇಂತು ತಮ್ಮವ

ಸಹಿ

ಈ) ಅಭಿರುಚಿ

೩೪೩

ಜ್ಯೋತಿಷ ಗ್ರಂಥ

3-8-37

...ಇಲ್ಲಿ ನಾನು ಈಗ ಬಾಕಿ ನಿಂತಿರುವ ವೇದವನ್ನು ಹೇಳಬೇಕೆಂದು ಪ್ರಾರಂಭಿಸಿರುತ್ತೇನೆ. ಅದೂ ಅಲ್ಲದೆ ಕೆರ್ಲಾಪುರದ ಜೋಯಿಸರ ಮಕ್ಕಳಾದ ಮಾಸ್ಟರ್ ಸುಬ್ರಾಯರ ಬಳಿಯಲ್ಲಿ ಕೊಂಚ ಜ್ಯೋತಿಷ್ಯವನ್ನು ನೋಡುತ್ತಿರುತ್ತೇನೆ. ಆದ್ದರಿಂದ ನನಗೆ ಸೂರ್ಯಸಿದ್ಧಾಂತ ಸಟೀಕಾ ಉದಾಹರಣೆ ಸಮೇತ ಇರತಕ್ಕಂಥಾದ್ದು ಸಿಕ್ಕುತ್ತದೆಯೆ ವಿಚಾರಿಸಿ ಬರೆಯಿರಿ. ಇಲ್ಲಿ ನನಗೆ ಸಟೀಕಾ ಉದಾಹರಣೆ ಇಲ್ಲದುದು ಸಿಕ್ಕಿದೆ. ಆದ್ದರಿಂದ ದಯವಿಟ್ಟು ಶ್ರಮ ತೆಗೆದುಕ್ಕೊಂಡು ಜಾಗ್ರತೆ ಜೋಯಿಸರಲ್ಲಿ ತಿಳಿದು ನೋಡಿ ಇದ್ದರೆ ಇದನ್ನು ಕಳುಹಿಸುವುದು. ಮತ್ತು ಸಿದ್ಧಾಂತದಲ್ಲಿ ಕರಣಗ್ರಂಥಗಳು ಬಹಳವಾಗಿರುತ್ತದೆ. ಅವುಗಳಾದರೆ ಬೇಕಿಲ್ಲ, ಸಿದ್ಧಾಂತ ಗ್ರಂಥವೇ ಬೇಕಾಗಿರುವುದರಿಂದ ತಲಾಶ್ ಮಾಡಿ...ಜಾಗ್ರತೆ ಜೋಯಿಸರಲ್ಲಿ ತಿಳಿದು ಗಣಿತಕ್ಕೂ ಜಾತಕಕ್ಕೂ ಪ್ರಯತ್ನಪಟ್ಟು ಕಳುಹಿಸಬೇಕು...

೩೪೪

ಅದೇ ಪುಸ್ತಕ ಬೇಕು

10-8-1937

...ನಾನು ಬರೆದಿದ್ದ ವಿಚಾರವನ್ನು ಎಂದರೆ ಸೂರ್ಯಸಿದ್ಧಾಂತದ ಬುಕ್ಕು ಟೀಕು ಸಮೇತ ಉದಾಹರಣೆ ಇರುವುದು ಸಿಕ್ಕುವುದೇ ಎಂದು ಬರೆದಿದ್ದೆ. ವಿಚಾರಿಸಿದಿರಾ. ಪುರಸತ್ತಾಗಿದೆಯೆ? ಸುಧಾರಸಟೀಕಾ ಬೃಹಜ್ಜಾತಕವನ್ನು ವಿಚಾರಿಸಿದಿರಾ...ಗಣಿತದ ಪುಸ್ತಕ ಬಂದ ಹೊರತು ನನಗನುಕೂಲವಿಲ್ಲ. ಕಾರಣಗಳು ಬೇಕಿಲ್ಲ, ಆದರಲ್ಲೂ ಉದಾಹರಣ ಸಮೇತ ಸಿದ್ಧಾಂತ ಗಣಿತ ಬೇಕೇ ಹೊರತು ಇಲ್ಲದಿದ್ದರೆ ಬೇಕಿಲ್ಲ. ಬೇಜಾರುಪಡಬೇಡಿ...

೩೪೫

ಸಂಗೀತ ಕಚೇರಿಗೆ ಬನ್ನಿ

21-11-79

...ಅಲ್ಲಿ ನಿಮ್ಮ ಕೆಲಸಗಳು ಮುಗಿದಿದ್ದರೆ ಇಲ್ಲಿಗೆ ಬನ್ನಿ. Dec. 9ನೇ ತಾರೀಖು ನೇದನೂರಿ ಕೃಷ್ಣಮೂರ್ತಿ ಸಂಗೀತ ಇದೆ. Dec 15 ತಾರೀಖು ಇರುವ ಶ್ರಾದ್ಧದ ಬಗ್ಗೆ ಏನು ಏರ್ಪಾಟು?...

ಉ) ಆರೋಗ್ಯ

೩೪೬

ಪ್ಲೇಗಿನಿಂದ ಚಿಂತೆ

ಕ್ಷೇಮ ಶ್ರೀ ಎಲೇ ಚಾಗಹಳ್ಳಿ

12-2-1902

ಚಿ॥ ರಾ॥ ಹಿರಣ್ಣೈಯ್ಯನವರಿಗೆ ಕೃಷ್ಣಪ್ಪನು ಮಾಡೂವ ಆಶೀರ್ವಾದಗಳು. ಅದಾಗಿ ಯೀವರಿಗೆ ...ಕುಶಲೋಪರಿ. ತರುವಾಯ ಯೀಗ್ಯೆ ಬಹಳ ದಿವ್ಸದಿಂದ ತಮ್ಮ ಕಡೆ ಯೋಗಕ್ಷೇಮವೇ ತಿಳಿಯದೆ ಮನಸ್ಸಿಗೆ ತುಂಬಾ ವ್ಯಾಕುಲವಾಗಿದೆ. ಇಲ್ಲಿ ನರಶೀಪುರದಲ್ಲಿ ಪ್ಲೇಗು ರೋಗವು ಹೆಚ್ಚಾಗಿರುವದ್ದರಿಂದ ಹೋಗಿಬರಲು ಅವಕಾಶವಿಲ್ಲಾ. ಇದುವರಿಗೆ ನಮ್ಮ ಗ್ರಾಮದಲ್ಲಿ ಗಲಾಟೆ ಏನೂಯಿಲ್ಲಾ. ಇಲ್ಲಿ ಮನೆಯಲ್ಲಿ ಚಿ॥ ಗಳೊಡನೆ ಯಲ್ಲರೂ ಕ್ಷೇಮದಲ್ಲಿರುತ್ತೇವೆ. ಅತ್ತ ಕಡೆ ಸರ್ವರ ಕ್ಷೇಮಕ್ಕೆ ಕೂಡ್ಲೆ ಜವಾಬು ಬರಿಯುವದು. ಏನೋ ಬರದನೆಂದು ಉದಾಸೀನ ಮಾಡಕೂಡದು. ಆಗಾಗ್ಯೆ ಕ್ಷೇಮ ಸಮಾಚಾರವನ್ನು ತಿಳಿಸುತ್ತಾ ಬರಬೇಕು. ಮರಿಯಕೂಡದು. ಯಿನ್ನೇನೂ ಅತಿಶಯವಿಲ್ಲಾ, ಕೂಡ್ಲೆ ಜವಾಬು ಬರಿಯುವದು.

ಇಂತ್ತಿ ಆಶೀರ್ವಾದಗಳು,

...ನವರಿಗೆ ತಲ್ಪಿಸಬೇಕು.

೩೪೭

ಶಿಡಬು ಬಂದಿದೆ

22-9-62

ಚಿ...ನಿಗೆ ಸೌ। ಮಾ। ಶ್ರೀ ತಾಯಿಯವರ ಆಶೀರ್ವಾದಗಳು. ಅಲ್ಲಿಂದ ಶನಿವಾರ ಹೊರಟವಳು ಸುಖವಾಗಿ...ಹಳ್ಳಿಗೆ ತಲಪಿದೆನು. ಮಾರನೆ ದಿನ ಬೆಳಗ್ಗೆ ತೀ...ಮಾವನವರಿಗೆ ಜ್ವರ ಬಂದು ಈ ಕಡೆ ಗ್ನಾನವೇ ಇಲ್ಲದಿರುವದನ್ನು ನೋಡಿ ಘಾಬರಿಯಾಗಿ ಹಾಸನದಿಂದ ಡಾಕ್ಟರ್ ಬಂದು ಇಂಜಕ್ಷನ್ ಮಾತ್ರೆ ಕೊಟ್ಟರು. ಕೊಟ್ಟ ಮಾರನೇ ದಿನವೇ ಶಿಡಬು ಎಂದು ಅರ್ಥವಾಯಿತು. 50ರೂ. ಖರ್ಚು ಆಗಿದ್ದೂ ಅಲ್ಲದೆ ಪ್ರಾಣವೂ ವುಳಿಯುವ ಹಾಗೆ ಕಾಣುವದಿಲ್ಲ. ಅಲ್ಲಿಂದಲು ಗ್ನಾನವೇ ಇಲ್ಲ. ಉಸರನ್ನು ನೋಡುತ್ತಾ ಹಗಲು ರಾತ್ರಿ ಕುಳಿತಿರುತ್ತೇವೆ. ಈ ಸಲಿ ಹುಶಾರಾದರೆ ನಮ್ಮಗಳ ಪುಣ್ಯವೇ ಸರಿ. ಎಲ್ಲರಿಗೂ ಹುಚ್ಚು ಹಿಡಿದಂತಾಗಿದೆ. ಏನು ಮಾಡುವದಕ್ಕೂ ತೋಚುತ್ತಾ ಇಲ್ಲ. ಭಗವಂತನ ದಯದಿಂದ ಸ್ವಲ್ಪ ಗುಣ ಕಂಡರೂ ಹೊರಟು ಬಂದು ಬಿಡುತ್ತೇನೆ. ನೀವೆಲ್ಲ ಮನೆ ಕಡೆ ಎಚ್ಚರವಾಗಿರಿ...

೩೪೮

ಆಸ್ಪತ್ರೆಗೆ ಊಟ

17-2-90

...ಈ ದಿನ ಆಸ್ಪತ್ರೆಗೆ ಸೇರಿದ್ದೇನೆ. ಆದರೆ ಮುಂದಿನ ಗುರುವಾರದ ವೇಳೆಗೆ Operation ಆಗಬಹುದು. ಅನಂತರ ಹತ್ತು ದಿನಗಳು ಆಸ್ಪತ್ರೆಯಲ್ಲೇ ಇರಬೇಕಾಗುತ್ತದೆ. ಸಾಯಂಕಾಲದ ವೇಳೆ ಊಟ ಆಸ್ಪತ್ರೆಗೆ ತರಲು ಆಸ್ಪತ್ರೆ ದೂರ. ಬೆಂಗಳೂರು ಪರಿಚಯ ಇರುವವರು ಆಗಬೇಕು...

೩೪೯

ಆಪರೇಶನ್ ಇಲ್ಲ

26-2-90

...ಆಪರೇಷನ್ ಇಲ್ಲ, ಔಷಧಿ ಮಾತ್ರ ಸಾಕು ಎಂದು ಹೇಳಿದ್ದರಿಂದ ನಿನ್ನೆ ಆಸ್ಪತ್ರೆಯಿಂದ (ಭಾನುವಾರ) ಮನೆಗೆ ಬಂದೆ. ...ಆಹಾರದಲ್ಲಿ ಇನ್ನೂ ಸತ್ವಪೂರಿತವಾದ ಅಂಶವಿರುವ ತರಕಾರಿಗಳನ್ನು ಉಪಯೋಗಿಸಿ ರಕ್ತದಲ್ಲಿ ಕಡಿಮೆಯಾಗಿರುವ ಅಂಶಗಳನ್ನು ಹೆಚ್ಚಿಸಿಕೊಳ್ಳುವಂತೆ ತಿಳಿಸಿರುತ್ತಾರೆ...

ಊ) ವ್ಯವಹಾರ

೩೫೦

ಕ್ಷಮಿಸಿ (ವಾಪಸ್ಸು ತಗೊಂಡಿದೀನಿ)

1-3-42

...ಪ್ರಾಚೀನ ಸಂಸ್ಕೃತಿಗನುಸಾರವಾಗಿ ಈ ಸಲವೂ ಕಾಗದ ಬರೆದೆನು. ಇದು ತಮ್ಮ ಆಗ್ರಹಕಾರಿ ಆಗುವುದೆಂದು ನಾನು ಭಾವಿಸಿರಲಿಲ್ಲ. ದುರ್ದೈವವು ಹೆಗಲೇರಿದಾಗ ಒಳ್ಳೆಯದೂ ಕೆಟ್ಟದಾಗುವುದು. ಇದನಿವಾರ್ಯವು. ಯಾವ ರೀತಿ ಯಾವ ದುರ್ಭಾವನೆಯಿಂದಲೂ ನಾನು ಕಾಗದ ಬರೆಯಲಿಲ್ಲ. ಕೃಪೆಯಿಟ್ಟು ಕ್ಷಮಿಸುವುದು. 23-2-42 ರಲ್ಲಿ ಬರೆದ ಲೇಖನವನ್ನು ವಾಪಸ್ ತೆಗೆದುಕೊಂಡಿರುತ್ತೇನೆ...

ಇತಿ

೩೫೧

ಮಾತಾಡುವವರು

13-3-91

...ನೀವು ರಾಜಣ್ಣನವರನ್ನು ಕರೆದುಕೊಂಡು ಬನ್ನಿ. ನಾರಾಯಣಸ್ವಾಮಿ ಬೇಡ. ಅವರು ಮತ್ತು ಶೀನಣ್ಣನವರು ರಾಜೇಂದ್ರನ ವಿರೋಧವಾಗಿ ಮಾತನಾಡುವುದಿಲ್ಲವಂತೆ. ಹೇಳಿದ್ದಾರೆ. ರಾಜಣ್ಣನವರು ಸರಿಯಾಗಿ ಮಾತನಾಡಿದರೆ ನಮಗೂ ಸ್ವಲ್ಪ ಬಲವಿರುತ್ತದೆ. ಅಥವಾ ಇನ್ನೂ ಯಾರಾದರೂ ಸರಿಯಾಗಿ ಮಾತನಾಡುವವರಿದ್ದರೆ ಕರೆದುಕೊಂಡು ಬನ್ನಿ. ನಾವೇ ಹೇಳೋಣ. ರಾಜಿ ಮಾಡಿಕೊಳ್ಳುವುದಾದರೆ ನಮಗೂ ಅನುಕೂಲ...

೩೫೨

ಪಾವತಿ ಮಾಡಿ

1-5-1891

ರಾ॥ ಮುದ್ದಾಪುರದಲ್ಲಿ ಯಿರುವ ಚಿ. ಹಿರಣ್ಣಯ್ಯನಿಗೆ ಸುಬ್ರಾಯನೂ ಮಾಡುವ ಆಶೀರ್ವಾದ. ವುಭಯ ಕ್ಷೇಮೋಪರಿ ತರುವಾಯ ನಮ್ಮ ಚಿರಂಜೀವಿ ಕೇಶವೈಯ್ಯನು ನಿಮ್ಮ ವೂರಲ್ಲಿ ಔಳೀ ಕೊಟ್ಟಿರುವ ಲಬ್ಬೆ ಸಾವುಕಾರರಲ್ಲಿ ವಂದು ಟೌಲು ವಂದು ಹಚ್ಚಡ ಯರಡಕ್ಕಾಗಿ ೩-೧೨-೦ ಆಣವನ್ನು ಕಳುಹಿಶಿಯಿದ್ದೇನೆ. ಅವರೀಗೆ ಪಾವತೀ ಮಾಡಬೇಕು. ಸಾವಕಾಶವಾಯ್ತೂ ಯಂತ ಕೋಪ ಮಾಡಬಾರದು ಯೆಂದು ಹೇಳಬೇಕು. ಸುಬ್ರಾಯನು ವೂರಲ್ಲಿ ಯಿದ್ದಾನೊ ಇಲ್ಲವೊ. ಆಶೀರ್ವಾದ.

Subraya

ಕ್ಷೇಮ. ಹಾಸನದ ತಾಲೋಕು ಸಾಲಗಾಮೆ ಸಮ್ಮತು ಜೋಡಿ ಮುದ್ದಾಪುರದಲ್ಲಿಯಿರುವ ಹಿರಣ್ಣಯ್ಯನವರಿಗೆ,

೩೫೩

ತೊಂದರೆ ಕೊಡಬೇಡಿ

2-11-91

...ಈ ರೀತಿ ಪತ್ರ ಬರೆದು ತೊಂದರೆ ಕೊಟ್ಟು ಸಾಧಿಸುವುದಾದರೂ ಏನೋ ತಿಳಿಯದು. ನಿಮ್ಮಂತಹವರಿಂದ ನಮ್ಮಂತ ಎಷ್ಟು ಜನ ತೊಂದರೆ ಪಡುತ್ತಾರೋ ? ಅದರಿಂದ ನಿಮಗೆ ಸಿಗುವುದಾದರೂ ಏನು ? ಊರಿನಲ್ಲಿ ಇರುವವರೆಗೆ ತೊಂದರೆ ಕೊಟ್ಟರಿ. ಈಗ ಈ ರೀತಿಯ ತೊಂದರೆ ಪ್ರಾರಂಭಿಸಿದ್ದೀರಿ...ನೀವು ಅಂದು ತಾಯಿ ಮತ್ತು ತಂದೆಯವರನ್ನು ಬೇರೆ ಮಾಡಿ ಈಗ ಈ ರೀತಿ ಪತ್ರ ಬರೆಸಲು ನಾಚಿಕೆಯಾಗುವುದಿಲ್ಲವೇ...ನೀವು ನಿಮ್ಮ ತಾಯಿಯನ್ನು 3 ತಿಂಗಳು ಒಬ್ಬೊಬ್ಬರ ಮನೆಯಲ್ಲಿ ಊಟ ಹಾಕಿದಂತೆ ಮಾಡುವಂತಹವನಲ್ಲ ನಾನು. ತಂದೆಯವರು ಇಂದಿನಿಂದಲೇ ನನ್ನ ಮನೆಯಲ್ಲಿ ಬಂದು ಇರುವುದಕ್ಕೆ ನನ್ನ ಅಡ್ಡಿಯೇನೂ ಇಲ್ಲ...ಇನ್ನೊಮ್ಮೆ ನಮ್ಮ ಮನೆಯ ವಿಚಾರಕ್ಕೆ ತಲೆ ತೂರಬೇಡಿ...

೩೫೪

ಸಾಮಾನು ತರುವೆ

ಕ್ಷೇಮಾ ಕ್ಷೇಮಾ ಪಲ್ಲರಸನಗೂಡು

22-2-1895

ತಮ್ಮ ಆಶೀರ್ವಾದ ಪತ್ರಿಕೆಯನ್ನು ನೋಡಿ ಮನಸ್ಸಿಗೆ ವೊಂದು ವಿಧವಾಗಿ ಸಂತೋಷವು ಮತ್ತೊಂದು ವಿಧವಾಗಿ ಸ್ವಲ್ಪ ಪೇಚಾಟ ವುಂಟಾದ್ದರಿಂದ ಜರೂರು ತಂತೀ ವರ್ತಮಾನವನ್ನು ಕೊಟ್ಟೆನು ಹೊರ್ತು ಯೆಲ್ಲಾ ವಿಷಯವನ್ನು ತಿಳಿಸಿದೆನು. ಜವಾಬನ್ನು ಬರಿಯದ್ದಕ್ಕಾಗಿ ತುಂಬಾ ವಿಷಾದಿಸುತ್ತೇನೆ. ನನ್ನ ದುರದೃಷ್ಟ. ನಾನು ಬೆಂಗಳೂರು ಮಾರ್ಗವಾಗಿ ಚೆಲ್ಕುಂದಕ್ಕೆ ಚಿ॥ ಸೌ॥ ನನ್ನ ಹೆಂಡತಿಯನ್ನು ಕರಿಯಲಿಕ್ಕೆ ಹೋಗುತ್ತೇನಾದ್ದರಿಂದ ಇಲ್ಲಿಗೆ ಕಾಗದ ಬರಿವ ಕೆಲಸವಿಲ್ಲಾ (25ನೆ ತಾ। ಹೊರಟು ಹೋಗುತ್ತೇನೆ). ಚೆಲ್ಕುಂದದಿಂದ ಕುಪ್ಪಹಳ್ಳಿಗೆ ಬಂದು ವಿಶಿಷ್ಟ ಸಾಮಾನುಗಳನ್ನೂ ತೆಗೆದುಕೊಂಡು ಹಾಸನಕ್ಕೆ ಬರುತ್ತೇನೆ. ಕುಪ್ಪಹಳ್ಳಿಯಿಂದ ಕಾಗದವನ್ನು ಬರಿಯುತ್ತೇನೆ. ಮ। ಹಿರಿಯಣ್ಣಯ್ಯನವರಿಂದ ಹತ್ತು ರೂಪಾಯಿ ತೆಗೆದುಕೊಳ್ಳಿರಿ.

ಯೆಲ್ಲಾ ಭಾಗದಲ್ಲೂ ನೀವು ಮಾಡಿದ್ದೆ ನನಗೆ ಇಷ್ಟವು. ಯೆಲ್ಲಿಗೂ ಪ್ರಯಾಣ ಮಾಡಕೂಡದು. ಆರೋಗ್ಯವಾಗಿಧೇನೆ.

ವಿಜ್ಞಾಪನೆಗಳು

ಹಾಸನ ತಾಲ್ಲೋಕು ಸಾಲಗಾಮ ಹೋ। ಜೋಡಿ ಮುದ್ದಾಪುರದಲ್ಲಿರುವ ತೀ। ಬಸವಾಪಟ್ಟಣದ ಸುಬ್ಬರಾಯ ಯಜಮಾನರ ಸ॥ ಕ್ಕೆ

ಖ) ಕೋರ್ಟು-ಕಚೇರಿ

೩೫೫

ಮೊಕದ್ದಮೆಗೆ ೫ ರೂ.

14-2-1902

ಶೀತಾರಾಮ್ಮೈನವರೆ ಆ-ಮೊಕದ್ದಮಾದಲ್ಲಿ ನಿಮ್ಮ ರಿವೈಶ್ ಸ್ಟೇಟ್‌ಮೆಂಟ್ ಕೊಡುವುದಕ್ಕೂ...

ಮಾಹೆ ತಾ 20ಕ್ಕೆ ಉಪಯೋಗಯಿರುತ್ತೆ ನೀವು ಖಂಡಿತವಾಗಿ ಆ ತಾರೀಖಿಗೆ ಬರಬೇಕು. ಬಾರದಿದ್ದರೆ ಮೊಕದ್ದಮೆ ವಜಾ ಆಗುತ್ತೆ ಮತ್ತು...ಅಡ್ಜರನ್‌ಮೆಂಟು ಖರ್ಚು ೫ ರೂ. ಕೊಡಬೇಕೆಂದು ಆಕ್ರೈರು ಮಾಡಿದಾರಾದರಿಂದ ತೆಗೆದುಕೊಂಡು ಬರಬೇಕು.

ಸುಬ್ಬರಾವ್

೩೫೬

ಅರ್ಜಿ ವಜಾ ಆಗಿದೆ

24-11-1905

ಹಿರಣ್ಣೈಯ್ಯ...ಹಳ್ಳಿ

...3ರಲ್ಲಿ ಆರ್ಗ್ಯೂಮೆಂಟು ನಡದು ರಿಕಾರ್ಡು ತರಿಶಿ ನೋಡಿ ಆರ್‌ಡರ್ ಹೇಳುವದಾಗಿ ಹೇಳಿದ್ದರು. ಮುಂಚೆಗೆ ರಿಕಾರ್ಡು ತರಿಶಿ ನೋಡಿಯೂ ವಿವಾದದಲ್ಲಿ ಪ್ರವೇಶ ಮಾಡಲೂ ಕಾರಣವಿಲ್ಲವೆಂದು ಅಭಿಪ್ರಾಯಪಟ್ಟು ನಿಂಮ್ಮ ಅರ್ಜಿಯನ್ನು ವಜಾ ಮಾಡಿಬಿಟ್ಟರು...

೩೫೭

ರಿಕಾರ್ಟು ನಡಿಸುತ್ತೇನೆ

12-12-59

...ಹಾಸನದ ನಮ್ಮ 26-11-59ಕ್ಕೆ ಇದ್ದ ಹೀರಂಗು 7-1-60ಕ್ಕೆ ಇರುತ್ತೆ. ನೀನು ಬರದಿರೂವ ಲಾಯರು ನಿನ್ನ ಮನಸ್ಸಿಗೆ ಸಮರ್ಪಕವಾಗಿ ತೋರಿದರೆ ಅದನ್ನೆ ಮಾಡೂವದು. ಆರ್ಡರ್ ಸಂಬಂಧವಾಗಿ ಇದುವರೀಗೆ ಏನೂ ನಡಿಸಿಲ್ಲಾ. ಅಲ್ಲಿನ ಕಾಲ ಆಗಿ ಹೋಇತು. ಇನ್ನು ಹತ್ತು ಹನ್ನೆರಡು ದಿವ್ಸಗಳೀಗೆ ಗದ್ದೆ ಕುಯ್ಲಿಗೆ

ಬರೂವಂತಿದೆ. ಮುಂಚೆ ರಿಕಾರ್ಟು ನಡಿಸಿದರೆ ಗಲಭೆ ಆಗುತ್ತಂತ ನಿಧಾನಿಸಿ ಇರುತ್ತೇನೆ. ಇನ್ನು ನಡಿಸುತ್ತೇನೆ.

೩೫೮

ರಾಜಿ : ೮೨೦ ರೂ.

11-1-60

...ನಮ್ಮ ಫಸಲ್ ನಷ್ಟದ ಕೇಸು ಇ ತಿಂಗಳು ಏಳಕ್ಕೆ ಹೀರಂಗು ಇದ್ದದ್ದು ಸರಿಯಷ್ಟೆ. ಆ ದಿವ್ಸ ಲಾಯರು ಮತ್ತು ಜಡ್ಜಿಯವರು ಸೇರಿ ರಾಜಿಯಲ್ಲೆ ಫೈಸಲ್ ಮಾಡಿಕ್ಕೊಳ್ಳಿಯಂತ ಹೇಳಲು ನಾನು ಆಗಲಿಯಂತ ಹೇಳಿದ್ದರ ಮೇಲೆ ಜಿಜ್ಞಾಸ ನಡಿದು ಮುನಿಸೀಪರವರು ಯಂಟನೂರ ಯಿಪತ್ತು ರೂಪಾಯಿ ಕೊಟ್ಟುಬಿಡಿಯಂತ ಹೇಳಿಬಿಟ್ಟರು...

...ನೀನು ಬರುವಾಗ ತೀರ್ಥರೂಪು ಮಾವನವರನ್ನು ನೋಡಿಕ್ಕೊಂಡು ಬರುವುದು. ಅಜ್ಜಿ ಅಮ್ಮಾಮಿಯವರ ವಿಚಾರವನ್ನೂ ತಿಳಿದುಕ್ಕೊಂಡು ಬರೂವದು...

ಋ) ವೃದ್ಧಾಪ್ಯ

೩೫೯

ಮತ್ತೆ ಹಳ್ಳಿಗೆ ಬರಲಾರೆ

5-12-91

...ಚಿ॥...ಗೆ ಮೂಳೆ ಕಟ್ಟಾಗಿದ್ದರಿಂದ ಇಲ್ಲಿ ಸರಿಯಾದ ಡಾ. ಇಲ್ಲದ ಕಾರಣ ಬೆಂಗಳೂರಿಗೆ ಹೋಗಿದ್ದನು. ಅಲ್ಲಿ ಅವರು ಬೆಲ್ಟ್ ಹಾಕಿದ್ದಾರೆ. ಇನ್ನೂ ತೆಗೆದಿಲ್ಲ. ಸಧ್ಯದಲ್ಲೇ ತೆಗೆಯಬಹುದು. ಅನಂತರ X-ರೇ ತೆಗೆಸಬೇಕು. ಆಮೇಲೆ ಏನು ಎಂಬುದು ತಿಳಿಯುತ್ತದೆ. ಈಗ ಪ್ರತಿ ದಿವಸವೂ ಶೇಖರ್ ಬಂದು ಆಫೀಸಿಗೆ ಕರೆದುಕೊಂಡು ಹೋಗುತ್ತಾನೆ. ಇಲ್ಲಿನ ಪರಿಸ್ಥಿತಿ ಹೀಗಿದೆ. ನೀವು ಇಲ್ಲೇ ಬಂದರೆ ಎಲ್ಲಾ ಸರಿಹೋಗುತ್ತದೆ. ವಯಸ್ಸಾದ ಮೇಲೆ ಯಾರಾದರೂ ಒಬ್ಬರ ಮೇಲೆ ನಂಬಿಕೆ ಇಟ್ಟು ಅವರಿಗೆ ಅದನ್ನೆಲ್ಲಾ ವಹಿಸಿ ಜೊತೆಯಲ್ಲಿರುವುದು ಒಳ್ಳೆಯದು...ನಾನು ಅಲ್ಲಿ ಬಂದು ಮತ್ತೆ ಎಲ್ಲವನ್ನೂ ಹೊಂದಿಸಿಕೊಂಡು ಸಂಸಾರ ಮಾಡುವುದು ಸಾಧ್ಯವಿಲ್ಲದ ಕೆಲಸ. ಇದುವರೆವಿಗೂ ಊರಿನಲ್ಲಿ ಕಷ್ಟಪಟ್ಟು ಸಾಕಾಗಿದೆ. ಇನ್ನು ನನ್ನ ಕೈಯಲ್ಲಿ ಏನೂ ಆಗುವುದಿಲ್ಲ. ಇರುವವರೆಗೂ ಎಲ್ಲೊ ಒಂದು ಕಡೆ ಕೃಷ್ಣಾರಾಮ ಎಂದು ಇರುತ್ತೇನೆ. ನಿಮಗೆ ಸಂತೋಷವಿದ್ದರೆ ಇಲ್ಲಿಗೇ ಬನ್ನಿ...ತಪ್ಪಿದ್ದರೆ ಕ್ಷಮಿಸಿಬಿಡಿ...

ಎ) ಅಂತ್ಯ

೩೬೦

ಕರ್ಮಕ್ಕೆ ಏರ್ಪಾಡು (ಮಾಡಿಕೊಳ್ಳಿ)

ಮೈಸೂರು

5-10-1910

ಮಹಾರಾಜೆ ಶ್ರೀ ಹಿರಣ್ಣಪ್ಪನವರ ಸ॥ ಕ್ಕೆ ರೆವಿನ್ಯು ಶಿರಸ್ತೇದಾರ್ ಶ್ರೀನಿವಾಸರಾಯರ ಮಗ ವೆಂಕಟಸುಬ್ಬರಾಯನ ನಮಸ್ಕಾರಗಳು. ಆದಾಗಿ ಉಭಯ ಕುಶಲೋಪರಿಗಳು. ನಾನು ತಮಗೆ ಮೊದಲು ಬರೆದ ಕಾಗದ ತಲಪಿರಬಹುದು. ತಮ್ಮ ಅತ್ತಿಗೆ ಭಾಗಿರತಮ್ಮನವರು ನೆನ್ನೆ ಅಂದರೆ ಮಂಗಳವಾರ ಮಧ್ಯಾನ್ನ ಮೂರು ಘಂಟೆಗೆ ಸ್ವರ್ಗಸ್ತರಾದರು. ದಹನವೇನೋ ನಡಿಯಿತು. ಆದರೆ ಯಾವ ಕರ್ಮವೂ ನಡಿದಿರುವದಿಲ್ಲ. ಮೊದಲಿನಿಂದಲೂ ಪ್ರತಿ ಕರ್ಮಗಳನ್ನೂ ನಡಿಸತಕ್ಕ ಬಗ್ಯೆ ಅವಶ್ಯಕವಾದ ಯೇರ್ಪಾಡು ಮಾಡಿಕೊಳ್ಳಲು ತಮಗೆ ತಿಳಿಸಿಧೆ.

ಇಂತಿ ನಮಸ್ಕಾರಗಳು,

ಹಾಸನದ ತಾಲ್ಕು ಸಾಲಗಾಮ ಹೋಬಳಿ ಜೋಡಿ ಮುದ್ದಾಪುರದಲ್ಲಿರುವ ಶೀತಾರಾಮೈಯ್ಯನವರ ಮಕ್ಕಳು ಮ॥ ಹಿರಣ್ಣಪ್ಪನವರ ಸ। ಕ್ಕೆ

೩೬೧

ತತ್ತರಿಸಿ ಹೋಗಿದ್ದೇವೆ

24-4-92

...ಅನಿರೀಕ್ಷಿತವಾಗಿ ಎರಗಿದ ಈ ಬರಸಿಡಿಲಿನಂತಹ ಸಮಾಚಾರಕ್ಕೆ ನಾವೆಲ್ಲರೂ ತತ್ತರಿಸಿಹೋಗಿದ್ದೇವೆ. ನೀನು ನಿನ್ನ ಕಾರ್ಯವನ್ನು ಹೊರನಾಡಿನಲ್ಲಿ ಯಶಸ್ವಿಯಾಗಿ ಮುಗಿಸಿಕೊಂಡು ಬಂದುದನ್ನು ಕೇಳುವ ನಿರೀಕ್ಷೆಯಲ್ಲಿದ್ದ ನಮಗೆ ದುರ್ದೈವದ ಸಂಗತಿಯೋ ಮೊದಲು ಕಾದಿತ್ತು...ಶ್ರೀರಾಮುನ ಹಾಗೆ ಪಿತೃಸೇವೆಯಲ್ಲಿ ನಿರತನಾಗಿದ್ದ ನಿನಗೆ ಅಂತ್ಯಕಾಲದಲ್ಲಿ ಹೀಗಾದುದು ತುಂಬ ಶೋಚನೀಯ...

ಗುಚ್ಛ - 16

ಸಾವು - ಸಾಂತ್ವನ

ಸಾವು, ಸಾಂತ್ವನವನ್ನು ಹಿಂದೆ ಇರಿಸಿಕೊಂಡೇ ಮುಂದೆ ಸಾಗುತ್ತದೆ. ಮನುಷ್ಯನಿಗೆ ಬರುವ ದೊಡ್ಡ ದುಃಖಗಳಲ್ಲಿ ಮುಖ್ಯವಾದುದು ಸಾವಿಗೆ ಹೊಂದಿಕೊಂಡುದು. ಅದಕ್ಕೆ ಹೊಂದಿಕೊಂಡ ಸಾಂತ್ವನವೂ, ಸಮಾಧಾನದ ಮಾತುಗಳಲ್ಲಿ ವಿಶೇಷ ತೀವ್ರತೆಯನ್ನು ಪ್ರಕಟಿಸುವುದುಂಟು. ಸಾವಿಗೆ ಸಂಬಂಧಿಸಿದ ಔಪಚಾರಿಕ ಪತ್ರಗಳು ದೊರೆತುದು ಕಡಮೆ. ಏಕೆಂದರೆ ಹತ್ತಿರದ ಸಾವಿನ ಸಂದರ್ಭಗಳಲ್ಲಿ ಹತ್ತು ಹನ್ನೆರಡು ದಿನಗಳೊಳಗಾಗಿ ಖುದ್ದು ಹೋಗಿ ಸಮಾಧಾನಪಡಿಸುವ ಆಚರಣೆಗಳೇ ಇವೆ. ಈ ಸಂಬಂಧದಲ್ಲಿ ಪತ್ರಗಳು ದೊರೆಯುವುದು ನಗರೀಕರಣದ ನಂತರದ ಬೆಳವಣಿಗೆ, ಅದೂ ವಿಶೇಷವಾಗಿ ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ.

೩೬೨

ಸಾವಿಗೆ ಬಾರದ ಅಳಿಯ (ಮಾವನು ಬರೆದ ಕಾರ್ಡು)

ಕ್ಷೇಮ ಶ್ರೀ ಹಾಸನಸೀಮೆ
25-5-47

...ಸಾಂಪ್ರತ.

...ಇಲ್ಲಿ ಚಿ। ಸೌ।...ನು 23.5.47ರ ಶುಕ್ರವಾರ ಸ್ವರ್ಗಸ್ಥಳಾದಳು. ಅವಳ ಮುಖವನ್ನು ಕಾಣುವ ರುಣಾನುಬಂಧವು ನಿನಗೆ ಇರಲಿಲ್ಲ, ಯತ್ನವೇನು. ಅದಕ್ಕಾಗಿ ನೀನು ಭಾರಿ ಶೋಕವನ್ನು ತೆಗೆದುಕೊಳ್ಳಬೇಡ...

ಇತಿ ಆಶೀರ್ವಾದಗಳು

೩೬೩

ಸೊಸೆಯ ಸಾವಿನ ಸುದ್ದಿ (ಮಾವನು ಅಳಿಯನಿಗೆ ತಿಳಿಸಿರುವುದು)

ಕ್ಷೇಮ ಶ್ರೀ ತಾ। 6-2-48
ಹಾಸನಸೀಮೆ

ಚಿ।।...ನಿಗೆ...ನು ಮಾಡುವ ಅನೇಕ ಆಶೀರ್ವಾದಗಳು. ಅದಾಗಿ ಇವರೀಗೆ ಇಲ್ಲಿ ಇರೂವಂತ್ಥಾ ಚಿ। ಆದಿಯಾಗಿ ಸರ್ವರೊಡನೆ ನಾನೂ ಕ್ಷೇಮ. ಅಲ್ಲಿ ಇರೂಮಂತ್ಥಾ ಚಿ। ಆದಿಯಾಗಿ ಸರ್ವರೊಡನೆ ನಿಮ್ಮಗಳ ಕ್ಷೇಮಾತಿಶಯಂಗಳಿಗೆ ಆಗಿಂದಾಗ್ಯೆ ಕುಶಲ ಪತ್ರಿಕ ಬರಸುತ್ತಾ ಬರೂವದು ಸಾಂಪ್ರತ. ಯಿಾಗ ಯರಡು ತಿಂಗಳ ಲಾಗಾಯ್ತು ಅತ್ತ ಕಡೆ ಯೋಗಕ್ಷೇಮವೆ ತಿಳಿಯದೆ ಮನಸ್ಸಿಗೆ ತುಂಬಾ ಯೋಚನೇಗೆ ಕಾರಣವಾಗಿ ಇರುತ್ತೆ. ಇ ಕಾಗದ ತಲಪಿದ ಕೂಡ್ಲೆ ಅಲ್ಲಿನ ಕ್ಷೇಮ ಲಾಭಂಗಳೀಗೆ ಕಾಗದ ಬರಿಯುತ್ತೀರಾಗಿ ನಂಬಿರುತ್ತೇನೆ.

ಚಿ...ಯ ಹೆಂಡತಿ...ಮ್ಮನು ಪುಷ್ಯ ಶುದ್ಧ ತದಿಗೆ ಮಂಗಳವಾರ ರಾತ್ರೆ ಪ್ಲೇಗಿನಲ್ಲಿ ಸತ್ತುಹೋದಳು. ಅವಳ ಚಿಕ್ಕಪ್ಪ...ನೂ ಸಹಾ ಆ ದಿವಸವೆ ಸತ್ತುಹೋದನು. ಅವಳ ಕ್ರಿಯಾದಿಯೂ ಕೂಡಾ ಆಗಿರುತ್ತೆ. ...ಮ್ಮ ಮತ್ತು ಮಗು ಆರೋಗ್ಯವಾಗಿ ಇರುತ್ತಾರೆ. ಯಾವದಕ್ಕೂ ಕೂಡ್ಲೆ ಕಾಗದ ಬರಿಯುವುದು.

ವಿಳಾಸ

...ತಾಲ್ಲೂಕು...ದಲ್ಲಿರುವ...ನವರ ಮಕ್ಕಳು...ಗಳಿಗೆ

ಹಿರಿಯರು ಬರೆದ ಈ ಪತ್ರವು ಸಾವಿನ ಸುದ್ದಿಯನ್ನು ಹೊತ್ತಿದ್ದರೂ ಒಕ್ಕಣೆಯಲ್ಲಿ ವ್ಯತ್ಯಾಸವಾಗಿಲ್ಲ, ಸಾವಿನ ಸುದ್ದಿಯೇ ಇಲ್ಲಿ ಗೌಣ. ಆಧುನಿಕರಂತೆ ವಿಷಾದ ಸೂಚನೆಯೂ ಇಲ್ಲ. ಕ್ರಿಯೆ ನಡೆದ ಸುದ್ದಿ ಇಲ್ಲಿ ಮುಖ್ಯ. 'ಗೆ' ವಿಳಾಸದ ಆಗಿನ ಮಾದರಿ ಇಲ್ಲಿದೆ.

೩೬೪

ಅತ್ತಿಗೆಯ ಸಾವು (ಬಂಧುವಿಗೆ ಬರೆದ ಕಾರ್ಡು)

ಕುಶಲಂ ಶ್ರೀ ಧಾರವಾಡ
ತಾ 6.1.67

...ನೆನ್ನೆ...ಹಳ್ಳಿಯಿಂದ ಕಾಗದ ಬಂದಿದೆ. ತೀ। ಅಣ್ಣನವರ ಹೆಂಡತಿ ಮಾ। ಸೌ। ಅತ್ತಿಗೆಯವರು ತಾ। 2.1.67ರಾತ್ರೆ ತೀರಿಕ್ಕೊಂಡರೆಂದು ತೀರ್ಥರೂಪರವರು ಬರದಿರುತ್ತಾರೆ. ಇದು ನಮ್ಮ ದುರದೃಷ್ಟ. ಕಷ್ಟಗಳು ಬರುವಾಗ ಒಂದರ ಮೇಲೊಂದು ಬರುತ್ತವೆ. ಇದನ್ನು ಭರಿಸಲು ಕೆಲವು ವೇಳೆ ಕಷ್ಟಸಾಧ್ಯವಾಗುತ್ತೆ. ಏನು ಮಾಡುವುದೋ ತಿಳಿಯದಾಗಿದೆ...

೩೬೫

ಸೊಸೆಯ ಸಾವು (ಮಗನಿಗೆ ತಂದೆ. ಅಂತರ್ದೇಶೀಯ ಪತ್ರ)

29/6/70

ಹಾಸನ ಜಿಲ್ಲೆ

...ಒಂದು ವಿಪತ್ತಿನಿಂದ ಪಾರಾದೆವು. ಮನಸ್ಸನ್ನು ಸ್ಥಿರಪಡಿಸಿಕೊ. ಈಗ ಮತ್ತೊಂದು ಬಂದೊದಗಿತು. ತಾ। 23/6/1970ನೇ ಮಂಗಳವಾರ ಮಧ್ಯಾಹ್ನ ನಾಲ್ಕು ಘಂಟೆ ಸಮಯದಲ್ಲಿ ಸೌ।...ಯು ಸ್ವರ್ಗಸ್ಥಳಾದಳೆಂದು ತಿಳಿಸಲು ವಿಷಾದಿಸುತ್ತೇನೆ. ನಮ್ಮ ದುರ್ದೈವದ ಫಲ. ಏನೇ ಆದರೂ "ಪ್ರತಿಬಧ್ನಾತಿ ಹಿ ಶ್ರೇಯಃ ಪೂಜ್ಯಪೂಜಾವ್ಯತಿಕ್ರಮಾತ್" "ಸಂತೋಷಂ ಜನಯೇತ್ಪ್ರಾಜ್ಞಃ", "ಸಾಧುಸಜ್ಜನಸಂತಾಪೋ ಮಂಶಚ್ಛೇದಾಯ ಕಲ್ಪತೇ". ಇತ್ಯಾದಿ ವಚನಗಳನ್ನು ಯಾವಜ್ಜೀವವೂ ನೆನಪಿನಲ್ಲಿಡಬೇಕು. ಶನಿವಾರ (4/7/70) ರಂದು ಸಂತರ್ಪಣೆ. ಸೌಕರ್ಯವಿದ್ದಂತೆ ಮಾಡು...

೩೬೬

ಗತಿಸಿದಾಗ ಪ್ರತಿಕ್ರಿಯೆ

ಕುಟುಂಬದ ಸದಸ್ಯರೊಬ್ಬರ ಅಂತರ್ದೇಶೀಯ ಪತ್ರ

Ranchi
2/7/70

...ನಮ್ಮ ದುರದೃಷ್ಟಕ್ಕೆ ಎಲ್ಲಾ ಒಂದರ ನಂತರ ಒಂದು ಬರುತ್ತಾ ಇದೆ. ಇದೆಲ್ಲಾ ಪೂರ್ವಜನ್ಮದ ಕರ್ಮಗಳಿಗೆ ಫಲಗಳೆಂದು ಕಾಣುತ್ತದೆ. ತಾವು ಬರೆದ ರೀತಿ ನಾವಾವ ಸಾಧು ಸಂತರನ್ನು ಸಂತಾಪಗೊಳಿಸಿ ಈ ದುಃಖಕ್ಕೆ ಬಾಧ್ಯರಾಗಿದ್ದೇವೋ ತಿಳಿಯದು. ಮಾ।। ಸೌ।।...ವರಿಗೆ ಏನಾಗಿತ್ತು ? ಹಠಾತ್ತಾಗಿ ಮರಣ ಸಂಭವಿಸಿತೆ? ಏನನ್ನೂ ಬರೆದಿಲ್ಲ. ಇದರಲ್ಲೇನೋ ಕೃತ್ರಿಮವಿರ ಬೇಕೆಂದು ಕಾಣುತ್ತದೆ. ನಾನದನ್ನು ತಿಳಿಯಲು ಪ್ರಯತ್ನಿಸುತ್ತೇನೆ.

ಆವೂರಿನ ಸಜ್ಜನರೆನಿಸಿಕೊಳ್ಳುವರಾರೂ ನಮ್ಮ ದುಃಖದಲ್ಲಿ ನಮಗೆ ಸಹಾಯಕರಲ್ಲ. ಸಂತೋಷದಲ್ಲಿ ಪಾಲುಗೊಳ್ಳುತ್ತಾರೆ. ದುರ್ಜನರಿಗಂತೂ ಅಸೂಯಾದಿಗಳ ಮೂಲಕ ನಮ್ಮ ಮೇಲಿರುವ ದ್ವೇಷ ಕಂಡಂತೆಯೇ ಇದೆ. ಇವುಗಳ ಮಧ್ಯದಲ್ಲಿ ನಾವು ಮನಶ್ಶಾಂತಿಯಿಂದಿರಲು ಸಾಧ್ಯವಿಲ್ಲಾ. ತಾವು ಎಷ್ಟು ಕಾಲ ಆ ನೆಲದ ಮೇಲೆ ಮೋಹಪಡೋಣವಾಗುತ್ತದೆ ? ಆ ವೂರನ್ನು ಬಿಡುವುದೇ ಕ್ಷೇಮವೆಂದು ತೋರುತ್ತದೆ. ಇದು ಎಂದಾದರೂ ಆಗತಕ್ಕದ್ದೇ ಆಗಿದೆ. ಈಗಾಗಿರುವಷ್ಟರಲ್ಲಿಯೇ ನಮಗೆ ಯಾರು ನಿಜವಾದ ಹಿತಚಿಂತಕರು ಇದ್ದಾರೆ ಎಂಬುದು ಸ್ಪಷ್ಟವಾಗಿದೆ...

೩೬೭

ಜೀವನ್ ಭದ್ರಾಣಿ ಪಶ್ಯತಿ (ಮಿತ್ರರ ಸಾಂತ್ವನ. ಕವರು)

ಕ್ಷೇಮ ಶ್ರೀ: Bangalore

ತಾ। 9-7-70

ವೇ.ಬ್ರ.ಶ್ರೀ...ಗಳ ಸ.ಕ್ಕೆ ನಮಸ್ಕಾರಗಳು. ಅದಾಗಿ

ತಮ್ಮ ಕೃಪಾಪತ್ರ ತಲಪಿತು. ಧನ್ಯವಾದಗಳು. ಮಹಾಕವಿ ಯೋರ್ವನು ಹೇಳಿರುವಂತೆ,

ಸುಖಮೇ ಸಬಹೇ ಯೀ ಮೀತ್
ದುಃಖಮೇ ಜೋ ಹೇ ವೇ ವಹೀ ಸಚ್ಚಾಮೀತ್

ಸುಖ ಕಾಲದಲ್ಲಿ ಬಹಳ ಮಂದಿ ಮಿತ್ರರಿರುತ್ತಾರೆ. ಕಷ್ಟದ ಕಾಲದಲ್ಲಿ ಆಗುವವನೇ ನಿಜವಾದ ಮಿತ್ರ. ಮಿತ್ರ-ಶತ್ರುಗಳ ಒರೆಗಲ್ಲು ನಮಗೊದಗುವ ಕಷ್ಟ. ಚಿ.ಗೆ ಒದಗಿದ ಆಘಾತದಿಂದ ಚೇತರಿಸಿಕೊಳ್ಳುತ್ತಿರುವಷ್ಟರಲ್ಲಿಯೇ ಒದಗಿದ ಪುತ್ರವಧೂ ನಿರ್ಯಾಣದ ದುಃಖ ನಿಜವಾಗಿಯೂ ಸಹಿಸಲಸಾಧ್ಯವಾದುದು. ಒರಳಿಗೆ ಸಿಕ್ಕಿಕೊಂಡ ಮೇಲೆ ಒನಕೆ ಏಟನ್ನು ತಪ್ಪಿಸಿಕೊಳ್ಳುವುದು ಹೇಗೆ ?

ಇಷ್ಟು ಬೇಗ ಇಂಥ ಅಸಹನೀಯ ದುಃಖವನ್ನು ನಿಮ್ಮ ಚಿ.ಗೆ ನೀಡಿದ ಆ ವಿಧಿಯ ಅಟ್ಟಹಾಸದ ಹಿನ್ನೆಲೆಯಲ್ಲಿ ಅಡಗಿರುವ ರಹಸ್ಯವನ್ನು ಭೇದಿಸಲು ಯಾರಿಂದಲೂ ಸಾಧ್ಯವಿಲ್ಲ. ನಿಮ್ಮಲ್ಲಿ ಹುದುಗಿರುವ ಆಧ್ಯಾತ್ಮಿಕ ಭಾವನೆಗಳಿಗೆ ಮತ್ತಷ್ಟು ಪುಷ್ಟಿ ಕೊಟ್ಟು ಮನಸ್ಸಿನ ಪರಿಪಕ್ವತೆಯನ್ನು ಮತ್ತಷ್ಟು ದೃಢಪಡಿಸಲು, ವಿಧಿಯು, ಇಂತಹ ದುರ್ಭರ ಪ್ರಸಂಗಗಳನ್ನು ಒಡ್ಡಿರಬಹುದು. ಎಷ್ಟು ಕಷ್ಟ ಸುಖಗಳು ಬರಲಿ, ಸಂಸಾರದ ನಿಸ್ಸಾರತೆಯನ್ನು ಮನಗಾಣಲೇ ಬೇಕು. ಅನೈಕಾಂತಿಕದಲ್ಲಿ ಏಕಾಂತತೆಯನ್ನು ಹುಡುಕಬೇಕು, ಸರ್ವದರಲ್ಲಿಯೂ ಏಕತೆಯನ್ನು ಕಂಡು, ಏಕತೆಯಲ್ಲಿ ಮನವನ್ನಿರಿಸ ಬೇಕು. ದುಷ್ಟಶಕ್ತಿಗಳು ವ್ಯಕ್ತಿತ್ವದ ಭಂಗಕ್ಕೆ ಪ್ರಯತ್ನಿಸಿ ಮುನ್ನುಗ್ಗಿದಾಗ, ವ್ಯಕ್ತಿಯು ತನ್ನ ವಿರಾಟ್ ಸ್ವರೂಪವನ್ನು ಪ್ರದರ್ಶಿಸಬೇಕು. ಆಗಲೇ

ಮಾನವತೆಯ ವಿಕಾಸ. ಅತಿ ದುರ್ಭರ ದುಃಖಾನುಭವದಲ್ಲಿರುವ ನಿಮಗೆ ಭಗವಂತನು ದುಃಖರಹಿತ ಶಾಶ್ವತ ಸುಖದತ್ತ ಮನಸ್ಸನ್ನೊಯ್ಯಲಿ. ಸುಖದುಃಖ ರಹಿತ ನಿರ್ವಿಕಾರ ಸ್ಥಿತಿಯತ್ತ ತಮ್ಮಗಳ ಗಮನ ಹರಿಯಲಿ. ಮನಸ್ಸಿಗೆ ಶಾಂತಿಯು ದೊರಕುವಂತಾಗಲಿ. ಶ್ರೀ ಗುರು ಸ್ಮರಣೆಯಲ್ಲಿ ಲೀನವಾಗುವ ಸ್ಥಿತಿಯನ್ನು ದಯಪಾಲಿಸಲಿ. ಇದೇ ಸರ್ವನಿಯಾಮಕನ ಸನಿಹದಲ್ಲಿ ನಮ್ಮ ಪ್ರಾರ್ಥನೆ.

ಈ ಗೊಂದಲ ಪ್ರಪಂಚದಲ್ಲಿ, ಕಾಡು ಮೃಗಗಳಂತೆ ಮಾನವನೇ ಮಾನವರನ್ನು ಕಬಳಿಸಲು ಹಾತೊರೆಯುತ್ತಿರುವ ಈ ಅಪೂರ್ವ ಸೃಷ್ಟಿಯಲ್ಲಿ, ಒಬ್ಬರಿಗೆ ಒಬ್ಬರು ಸಮಾಧಾನ ಹೇಳುವುದೆಂದರೆ 'ಹತ್ತು ಹೆತ್ತವಳಿಗೆ ಮೂರು ಹೆತ್ತವಳು ಪಾಠ ಹೇಳಿದಳು' ಎನ್ನುವಂತಾಗುವುದಾದರೂ ಮನಸ್ಸಿನ ಆವೇಗ ತಡೆಯಲು ಸಾಧ್ಯವಿಲ್ಲ. 'ಪರಸ್ಪರಂ ಭಾವಯಂತಃ' ಎನ್ನುವಂತೆ ನಮ್ಮ ಸ್ಥಿತಿಯೆ ನಿಮ್ಮ ಸ್ಥಿತಿಯೆನ್ನುವಾಗ, ಸಮಯದಲ್ಲಿ ಒಂದೆರಡು ಸಮಾಧಾನೋಕ್ತಿಗಳು ಹೊರಹೊಮ್ಮುವುವು. ಇಂದು, ನಿಮ್ಮ ಚಿ.ಗೆ ಒದಗಿದ ಸ್ಥಿತಿಯನ್ನು ನೆನಸಿಕೊಂಡರೆ 25 ವರ್ಷಗಳ ಹಿಂದಿನ ನನ್ನ ಸ್ಥಿತಿ ನೆನಪಿಗೆ ಬರುವುದು. ಅಂದು-ಜೀವನದಲ್ಲಿ ಕಾಲಿಡುವ ಅತಿ ಉತ್ಸಾಹದಲ್ಲಿ ಕಾರಣಾಂತರಗಳಿಂದ ವಿದ್ಯಾಭ್ಯಾಸವನ್ನೂ ಬಿಟ್ಟು, ಜೀವನ ಸಮುದ್ರಕ್ಕೆ ಧುಮುಕಿದರೆ, ಅಮೃತದ ಬದಲು ವಿಷಪಾನವಾಗಬೇಕೆ ? ನಿರ್ಮಲೋದಕವೆಂದು ನಂಬಿದ ಸರಸ್ಸು ಕೆಸರು ಗುಂಡಿಯಾಗಬೇಕೆ ? ಸರ್ವಾಭೀಷ್ಟಫಲಪ್ರದವೆಂದು ನಂಬಿದ ವಸ್ತು ಕೇವಲ ಕಲ್ಲಾಗಬೇಕೆ? "ದೇವಾ-ಇಂತಹ ದುಃಖವನ್ನು ಪ್ರಾಣಿ ಸಾಮಾನ್ಯಕ್ಕೆ ಕೊಡಬೇಡ" ಎಂದು ಎಷ್ಟು ಬೇಡಿದರೂ, ಕೇಳಬೇಕಲ್ಲ ಅವನ ಕಿವಿಗೆ ? ಅವನ ಚಾತುರ್ಯವೆಲ್ಲವೂ ಇಂತಹ ವಿಧ್ವದಲ್ಲಿಯೆ ಅಡಗಿರುವುದು. ಅವನ ಸಮರಸತೆಯು ಇಂತಹ ವಿಷಮತೆಯಲ್ಲಿಯೇ ನಮಗೆ ಅಭಿವ್ಯಕ್ತವಾಗುವುದು. ಮುಖ್ಯವಾಗಿ, ನಿಮ್ಮ ಚಿ.ಯ ಮನೋವೇದನೆಯು ಬಲು ಬೇಗ ದೂರಾಗಿ ಸ್ವಸ್ಥ ಚಿತ್ತನಾಗಲೆಂದು ಹಾರೈಸುತ್ತೇನೆ.

ನೆನ್ನೆ ದಿವಸ, ಪರೀಕ್ಷಾ ಫಲಿತಾಂಶವು ಹೊರಬಿತ್ತು. ನಮ್ಮ ಚಿ.ಯು ಬಿ.ಎಸ್‌ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿ ಪ್ರಥಮ ರ್‍ಯಾಂಕನ್ನು ಪಡೆದಿದ್ದಾನೆ. ಶ್ರೀ ಗುರುಕೃಪೆ. ಸರ್ವವಿಧದಲ್ಲಿಯೂ ನನ್ನ ಸರ್ವಸ್ವಾಪಹಾರಕನೆಂದು ದೈವವನ್ನು ತೆಗಳಿದರೂ, ಇದೊಂದರಲ್ಲಿಯಾದರೂ, ಅವನಿಗೆ, ಅಭಿನಂದನೆ ಗಳನ್ನು ಅರ್ಪಿಸಲೇಬೇಕು. ಮುಂದೆ ಎಂ.ಎಸ್‌ಸಿ.ಗೆ ಸೇರುವ ಉದ್ದೇಶ; ಅದಕ್ಕಾಗಿ ಪ್ರಯತ್ನ ನಡೆಯುತ್ತಿದೆ.

ಎಲ್ಲರೂ ಆರೋಗ್ಯ. ಜೀವನದ ಆಗುಹೋಗುಗಳ ಬಗ್ಗೆ ನಮಗೆಷ್ಟು ಆತುರವಿದೆ. ಜೀವನಲತೆ ಇಂದೇ ಫಲಿಸಬೇಕೆಂಬ ಕಾತುರತೆ. ಆದರೆ ಕಾಲ ಒದಗಬೇಕಲ್ಲ. ತಂದ ಪಾಥೇಯ ತಿಂದು ಮುಗಿಯಬೇಕಲ್ಲ. "ಜೀವನ್ ಭದ್ರಾಣಿ ಪಶ್ಯತಿ" ಇದೊಂದೇ ಬದುಕಿಗೆ ಆಧಾರ. ಅಂತೂ ನಗರದ ಮಹಾಜೀವನ ಯಾತ್ರೆ ಸಾಗುತ್ತಿದೆ. ಏಳು ವರುಷಗಳುರುಳಿದುವು. ಇನ್ನೆಷ್ಟು ದಿವಸವೋ? ಪರಸ್ಪರ ಭೇಟಿಯ ಸಮಯ ಹತ್ತಿರವಾಗಲೆಂದು ಪ್ರಾರ್ಥಿಸುತ್ತೇನೆ. ನೀವು ಹಾಗೂ ನಿಮ್ಮ ಕುಟುಂಬದವರು ಶಾಂತಿ, ಸುಖ-ಸಮಾಧಾನವಂತರಾಗಲೆಂದು ಶ್ರೀ ಗುರುವರನಲ್ಲಿ ಅನನ್ಯ ಪ್ರಾರ್ಥನೆ .

ಇತಿ

ತಮ್ಮವ

೩೬೮

ಕೂಸು ಸತ್ತ ತಾಯಿ

ಅತ್ತಿಗೆಗೆ ಬರೆದ ಅಂತರ್ದೇಶೀಯ ಪತ್ರ

ಕ್ಷೇಮ ಶ್ರೀ ಹಾಸನ ಜಿಲ್ಲೆ

24/5/78

ಸೌ।। ಮಾ।। ಅತ್ತಿಗೆಯವರಿಗೆ ವಿನಯಪೂರ್ವಕ ನಮಸ್ಕಾರಗಳು. ನೀವುಗಳೆಲ್ಲರೂ ಚಿ।ಗಳೊಂದಿಗೆ ಆರೋಗ್ಯ ದಿಂದಿರುವಿರೆಂದು ತಿಳಿದು ಸಂತೋಷವಾಯಿತು. ನಿಮ್ಮ ಕಾಗದ ನಿನ್ನೆ ತಾನೇ ಕೈಸೇರಿತು.

ಹೇಗೋ ಒಂದೊಂದು ದಿನವನ್ನು ಯುಗವನ್ನಾಗಿ ಕಳೆಯುತ್ತಲಿದ್ದೇನೆ. ನಮ್ಮ ಮನೆಯಲ್ಲಿ ರೇಷ್ಮೆ ಹುಳುಗಳನ್ನು ಸಾಕುತ್ತಲಿರುವ ವಿಷಯ ನಿಮಗೂ ತಿಳಿದಿರುತ್ತದೆ. ಚಿ।। ಪದ್ದಿ ಇದ್ದಾಗಲೂ ರೇಷ್ಮೆ ಹುಳು ಸಾಕುತ್ತಿದ್ದರು. ಆಗ ಅವುಗಳಿಗೆ ನಾನು ಹೆಚ್ಚು ಮುತುವರ್ಜಿ ವಹಿಸಿರಲಿಲ್ಲ. ಪದ್ದು ಕೈಬಿಟ್ಟಾಗ ಮಾಡ್ತೀನಿ ಎಂದಿದ್ದೆ. ಈಗ ಪದ್ದು ಕೈಬಿಟ್ಟು ಹೋದಳಲ್ಲಾ. ಈಗ ಸದಾ ಅವುಗಳಿಗೆ ಸೊಪ್ಪು ಕತ್ತರಿಸಿ ಹಾಕುವುದು ಇತ್ಯಾದಿ ಇತ್ಯಾದಿ ಕೆಲಸಗಳು.

ನಾನು ಊರಿಗೆ ಬರುವುದೇ ಇಲ್ಲವೆಂದಲ್ಲ. ಸುಮ್ಮನೆ ಕಾರಣವಿಲ್ಲದೆ ಯಾಕೆ ಬರಬೇಕು. ಪದ್ದೂನ ತೋರಿಸಲೋ ? ಹೆಮ್ಮೆಪಡಲೋ ? ಆ ನಿಧಿಯನ್ನು ದೇವರು ತನ್ನದನ್ನಾಗಿ ಮಾಡಿಕೊಂಡಾಯಿತಲ್ಲಾ. ಏನೋ ಕೆಲಸ ಮಾಡುವುದಕ್ಕಾಗಿ ಊಟ ಮಾಡಬೇಕು. ಊಟ ಮಾಡ್ತೇನಲ್ಲಾ ಅಂತ ಕೆಲಸ

ಮಾಡಬೇಕು. ನಗಬೇಕು, ನಗಿಸಬೇಕು. ನನ್ನ ಪರಿಸ್ಥಿತಿಯನ್ನು ನಿಮಗೆ ತಿಳಿಸಲಸಾಧ್ಯವು. ದಯವಿಟ್ಟು ನೀವೇನೂ ಬೇಜಾರು ಮಾಡಿಕೊಳ್ಳುವುದು ಬೇಡ. ನಿಮ್ಮ ಮೇಲೆ ನನಗೇಕೆ ಬೇಜಾರು. ಭಗವಂತನೇ ನಮ್ಮ ಪಾಲಿಗೆ ನಿಷ್ಕರುಣಿಯಾಗಿ ಕುಳಿತಿರುವಾಗ ಯಾರ ಮೇಲೆ ನಮ್ಮ ಪ್ರತಾಪವನ್ನು ವ್ಯಕ್ತಪಡಿಸುವುದೋ ಕಾಣೆ. ಯಾವಾಗಲಾದರೂ ಬರ್ತೀನಿ. ಇಲ್ಲದೆ ಹೋದರೆ ನೀವೇ ಒಂದು ದಿನ ಬಂದುಬಿಡಿ. ಪದ್ದೂನ ಹುಟ್ಟಿದ ಹಬ್ಬ ಮಾಡಿ ನಿಮ್ಮನ್ನು ಕರೆಸಿಕೊಳ್ಳುವೆನೆಂದು ತುಂಬಾ ಹರ್ಷದಿಂದ ಇದ್ದೆ. ಹೋಗಲಿ. ಒಮ್ಮೆ ನೀವೇ ಒಂದು ದಿನ ಪುರುಸತ್ತಾಗಿ ಬನ್ನಿ.

ಸೌ॥ ಮಾ॥ ತಾಯಿಯವರು ಬಂದಿರುವರಲ್ಲಾ, ಅವರು ಆರೋಗ್ಯದಿಂದಿರುವರೆ. ನನ್ನ ನಮಸ್ಕಾರಗಳನ್ನು ತಿಳಿಸಿ. ತೀ॥ ತಂದೆಯವರಿಗೂ ಸಹ ತಿಳಿಸಿ. ಬಹಳ ತಪ್ಪುಗಳಿವೆ. ಕ್ಷಮಿಸಿ.

ಏನು ಬರೆಯಬೇಕೋ ತಿಳಿಯದೆ ಏನೇನೋ ಬರೆದಿದ್ದೇನೆ. ಬೇಜಾರು ಮಾಡಿಕೊಳ್ಳಬೇಡಿ.

ಇನ್ನೇನೂ ವಿಷಯವಿಲ್ಲ.

೩೭೯

ಪೂರ್ವಪಙ್ತೆಗೆ ಬನ್ನಿ (ಶ್ರಾದ್ಧಕ್ಕೆ ಆಹ್ವಾನ)

ಕುಶಲಾನಿ ಶ್ರೀರಸ್ತು ಶ್ರೀಃ ಓಂ ಶ್ರೀಃ

ನಗರ

ದಿ 17.08.81

ಪರಮಪೂಜ್ಯ ಗುರುವರ್ಯರ ಪಾದಾರವಿಂದಗಳಲ್ಲಿ ಕೃತ ಅನಂತ ನಮಸ್ಕಾರಗಳು. ಅದಾಗಿ ಉ.ಕು.ಸಾಂ.

ಭಗವದನುಗ್ರಹದಿಂದ ಇಲ್ಲಿ ಎಲ್ಲರೂ ಕುಶಲದಿಂದಿದ್ದೇವೆ. ಅಲ್ಲಿ ಮಾತೂಶ್ರೀ ಅವರಿಗೆ ನಮಸ್ಕಾರಗಳನ್ನು ದಯವಿಟ್ಟು ತಿಳಿಸಿ.

ಪ್ರಕೃತ, ಇದೇ ಭಾದ್ರಪದ ಬಹುಳ ಷಷ್ಠಿ ಶನಿವಾರ ದಿನಾಂಕ 19.9.81ರಂದು ನನ್ನ ತೀ॥ರವರ ಶ್ರಾದ್ಧ. ನೀವು ಅವರಿಗೂ ಗುರುಗಳಾಗಿದ್ದಿರಿ. ದಯವಿಟ್ಟು ಪೂರ್ವಪಙ್ತೆಗೆ ಒಪ್ಪಿ, ಒಂದು ದಿನ ಮುಂಚಿತವಾಗಿಯೇ ಬಂದು ಉದ್ಧರಿಸಬೇಕಾಗಿ ಪ್ರಾರ್ಥನೆ.

ದಯವಿಟ್ಟು ಉದಾರ ಮನಸ್ಸಿನಿಂದ, ನಿಮ್ಮ ಒಪ್ಪಿಗೆ ಹಾಗೂ ಆಶೀರ್ವಾದ ಪತ್ರಕ್ಕೆ ಬರೆಯಬೇಕಾಗಿ ಕೋರುತ್ತೇನೆ. ಇಂತೀ ವಿಜ್ಞಾಪನೆಗಳು.

ॐ तत्सत्

೩೭೦

ಪ್ರಸಾದ ಸ್ವೀಕರಿಸಿ (ಪುಣ್ಯತಿಥಿಗೆ ಆಹ್ವಾನ)

...ಇದೇ ಪುಷ್ಯ ಶುದ್ಧ ತದಿಗೆ ಭಾನುವಾರದಂದು ನಮ್ಮ ತೀರ್ಥರೂಪರವರ ಪುಣ್ಯತಿಥಿಯು ಬರುತ್ತದೆ. ತಾವುಗಳೆಲ್ಲರೂ ದಯವಿಟ್ಟು ಬಂದು ಪ್ರಸಾದ ಸ್ವೀಕರಿಸಬೇಕಾಗಿ ಪ್ರಾರ್ಥಿಸುತ್ತೇನೆ. ಖಂಡಿತ ಉದಾಸೀನ ಮಾಡಬಾರದು...

೩೭೧

Don't lose heart

24-2-92

ನಾಗರಕೋಯಿಲ್

ಪ್ರಿಯರೆ...

ನಿಮ್ಮ ಪಿಎಚ್.ಡಿ., ಅಧ್ಯಯನದ ಸಂಬಂಧದಲ್ಲಿ ಮಾಡಬೇಕಾಗಿದ್ದ ಮಹತ್ವಾಕಾಂಕ್ಷೆಯ ಕ್ಷೇತ್ರಕಾರ್ಯದ ದೂರ-ತಾಣ ಮುಟ್ಟುತ್ತಲೇ ಎಂಥ ಬರಸಿಡಿಲಿನಂಥ ಸುದ್ದಿ ಕಾದಿತ್ತು ನಿಮಗೆ. Don't lose heart. ದೇವರು ದೊಡ್ಡವನು.

ನಮ್ಮ ತಂದೆಯವರ ಮರಣದ ಸುದ್ದಿ ಬಂದಾಗ ನಾನೂ ಇಂಥದೇ ಅವಸ್ಥೆಯಲ್ಲಿದ್ದೆ, ಆದ್ದರಿಂದ ನಿಮ್ಮ ದುಃಖದ ಆಳ ಎಂಥದೆಂಬುದನ್ನು ಅರಿಯಬಲ್ಲೆ. It is a loss to our community. ನೀವು ನಿಮ್ಮ ಪೂಜ್ಯ ಮಾತೆಯವರನ್ನೂ ಕಿರಿಯರನ್ನೂ ಸಮಾಧಾನ ಮಾಡಲು, ದೃಢವಾಗಿರಬೇಕು, You should be bold.

ನಾನೂ ನನ್ನೆಲ್ಲ ಸಂಬಂಧಿಗಳೂ ಅಗಲಿದ ಆತ್ಮಕ್ಕೆ ಶಾಂತಿ ದೊರೆಯಲೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇವೆ.

ರಾಜಾಮಣಿ

೩೭೨

ಸಂತಾಪ ನಿರ್ಣಯ

ಸಂತಾಪ ಸೂಚಕ ಪತ್ರಗಳನ್ನು ಬರೆಯುವುದು ಹೊಸ ಕ್ರಮವಾದಂತೆ, ಸಂಘ ಸಂಸ್ಥೆಗಳು ಸಂತಾಪ ಸೂಚಕ ನಿರ್ಣಯಗಳನ್ನು ಅಂಗೀಕರಿಸುವುದೂ ಒಂದು ಹೊಸ ಬೆಳವಣಿಗೆ.

ಕೌಶಿಕ ಸಂಕೇತಿ ಸಂಘ (ರಿ) ಮೈಸೂರು

ತಾ॥ 24.4.92

ಶ್ರೀ...ಗೆ

ಸಂತಾಪ ಸೂಚಕ ನಿರ್ಣಯ

ನಿಮ್ಮ ಪೂಜ್ಯ ತಂದೆಯವರಾದ...ಗಳ ನಿಧನಕ್ಕೆ ಸಂಘದ ಕಾರ್ಯಕಾರಿ ಸಮಿತಿಯು ತನ್ನ ಅತೀವ ದುಃಖವನ್ನು ವ್ಯಕ್ತಪಡಿಸುತ್ತದೆ.

ಮೃತರ ಆತ್ಮಕ್ಕೆ ಸದ್ಗತಿ ನೀಡಲೆಂದು ಹಾಗೂ ನಿಮ್ಮ ಮತ್ತು ನಿಮ್ಮ ಕುಟುಂಬದವರಿಗೆ ಈ ದುಃಖವನ್ನು ಸಹಿಸಲು ಭಗವಂತನು ಹೆಚ್ಚಿನ ಧೈರ್ಯವನ್ನು ನೀಡಲೆಂದು ಪ್ರಾರ್ಥಿಸುತ್ತಾ

ಇತಿ

ಕಾರ್ಯಕಾರಿ ಸಮಿತಿಯ ಪರವಾಗಿ
ಪ್ರಧಾನ ಕಾರ್ಯದರ್ಶಿ

೩.೭೩

ಮಹಾ ವಿದ್ವಾಂಸರ ಸಾವು

ಚಿ॥...ಗೆ ಆಶೀರ್ವಾದಗಳು

ಬೆಂಗಳೂರು
ತಾ 25-4-92

ನಿಮ್ಮ ಪೂಜ್ಯ ತಂದೆಯವರ ನಿಧನದ ವಾರ್ತೆ ಇಂದು ತಿಳಿಯಿತು. ಹಾಗೆಯೇ ಬಹಳ ದುಃಖವೂ ಆಯಿತು. ...ಗಳ ನಿಧನದಿಂದ ಸಂಕೇತಿ ಜನಾಂಗವು ಒಬ್ಬ ಮಹಾ ವಿದ್ವಾಂಸರನ್ನು ಕಳೆದುಕೊಡಿತು . ಇವರ ಸಾವಿನ ದುಃಖವನ್ನು ಭರಿಸಲು ನಿಮ್ಮ ಪೂಜ್ಯ ತಾಯಿಯವರಿಗೂ ಹಾಗೂ ಎಲ್ಲಾ ಕುಟುಂಬ ವರ್ಗದವರಿಗೂ ಭಗವಂತನು ಶಕ್ತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

೩.೭೪

ಮರಣಂ ಧ್ರುವಂ

ಶ್ರೀ...ಗೆ ವಿಜ್ಞಾಪನೆ

30/4/92
ಮೈಸೂರು

ತಮ್ಮ ತೀರ್ಥರೂಪರಾದ...ಅವರು ಸ್ವರ್ಗಸ್ಥರಾದ ವಿಚಾರ ತಿಳಿದು ಅತೀವ ದುಃಖವಾಯಿತು.

ಸಹೃದಯಿಗಳೂ, ವಿದ್ವನ್ಮಣಿಗಳೂ ಆತ್ಮೀಯ ಮಿತ್ರರೂ ಆಗಿದ್ದವರನ್ನು ಕಳೆದುಕೊಂಡಿದ್ದು ನಮ್ಮ ದುರ್ದೈವ. "ಜಾತಸ್ಯ ಮರಣಂ ಧ್ರುವಂ"- ಪ್ರಕೃತಿ ನಿಯಮ. ಅದರ ಮುಂದೆ ನಾವು ನಿಷ್ಕ್ರಿಯರು.

ಮೃತರ ಆತ್ಮಕ್ಕೆ ಶಾಂತಿಯನ್ನೂ ತಮ್ಮೆಲ್ಲರಿಗೂ ದುಃಖವನ್ನು ಭರಿಸುವ ಶಕ್ತಿಯನ್ನೂ ಪ್ರಾರ್ಥಿಸುತ್ತೇನೆ.

ತಮ್ಮವ

೩.೭೫

ಮೇಧಾವಿಗಳು

22.8.92
USA

...ನಿಮ್ಮ ತಂದೆಯವರ ಮರಣವಾರ್ತೆ ಕೇಳಿದೆ. ಮನಸ್ಸಿಗೆ ತುಂಬ ಸಂಕಟವಾಯ್ತು. ಎಂಥಾ ಮೇಧಾವಿಗಳು, ಜಾಣರು, ಯಾರ ಗೋಜಿಗೂ ಹೋದವರಲ್ಲ, ತಮ್ಮ ಕರ್ತವ್ಯವನ್ನು ಬಹಳ ಚೆನ್ನಾಗಿ ಪಾಲಿಸಿಕೊಂಡು ಬಂದವರು. ಸಾವಿರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿದವರು. ಅವರ ಪಾಠದ ರೀತಿ ಇನ್ನು ಯಾರಿಂದಲೂ ಸಾಧ್ಯವಿಲ್ಲ. ಗುಣಗ್ರಹಣೆಗಳು. ಅವರ ಸಾವಿನಿಂದ ನಮ್ಮಗಳಿಗೆಲ್ಲ ತುಂಬ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಸದಾ ಕೋರುತ್ತೇವೆ. ನಿಮ್ಮ ಅಣ್ಣತಮ್ಮಂದಿರಿಗೂ ಮಾತೋಶ್ರೀಯವರಿಗೂ ನನ್ನ ಸಂತಾಪ ಸೂಚನೆಯ ವಿಷಯ ವನ್ನು ತಿಳಿಸಬೇಕಾಗಿ ಪ್ರಾರ್ಥನೆ. ನಿಮಗೆಲ್ಲ ದೇವರು ಈ ನಷ್ಟವನ್ನು ಸಹಿಸಲು ಶಕ್ತಿಯನ್ನು ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಗುಚ್ಛ - 17

ದೇವನಾಗರೀ ಲಿಪಿಯ ಪತ್ರಗಳು

ದೇವನಾಗರೀ ಲಿಪಿಯಲ್ಲಿದ್ದ ಪತ್ರಗಳನ್ನು ಕನ್ನಡಕ್ಕೆ ಲಿಪ್ಯಂತರಗೊಳಿಸಿ ಇಲ್ಲಿ ಪ್ರಕಟಿಸಲಾಗಿದೆ. ಹೀಗೆ ಲಿಪ್ಯಂತರಗೊಳಿಸುವಾಗ ಸಂಖ್ಯೆಗಳನ್ನೂ ಪರಿವರ್ತಿಸಿ ಕೊಡಲಾಗಿದೆ. ತಾರೀಖುವಾರು ಜೋಡಿಸಿರುವ ಈ ಪತ್ರಗಳು ಕೇವಲ ಕನ್ನಡ ಬಲ್ಲವರಿಗೂ ಬಹುಪಾಲು ಅರ್ಥವಾಗುವಂತಿವೆ. ಪತ್ರದ ಕೆಳಗೆ ದಿಕ್ಸೂಚಿಯಾಗಬಲ್ಲ ಸಾರಾಂಶವನ್ನು ಕೊಡಲಾಗಿದೆ. ಈ ಪತ್ರಗಳಲ್ಲಿ ಕೆಲವು, ವಿದ್ಯಾರ್ಥಿಗಳು ಬರೆದವು ; ಕೆಲವು ವಿದ್ವಾಂಸರೇ ಬರೆದವು. ಕೆಲವು ಪತ್ರಗಳು ಸರಳವಾಗಿಯೂ ಕೆಲವು ಪತ್ರಗಳು ಪತ್ರವಿಷಯವನ್ನನುಸರಿಸಿ ಕ್ಲಿಷ್ಟವಾಗಿಯೂ ಇವೆ. ದೀರ್ಘವಾದ ಪತ್ರಗಳು ಕೆಲವೇ ಇವೆ. ಆಯಾ ಭಾಷೆಯಲ್ಲಿ ಶಿಕ್ಷಣ ಪಡೆದವರು ಆಯಾ ಭಾಷೆಯಲ್ಲಿಯೇ ಪತ್ರ ಬರೆಯುವ ಸ್ಫೂರ್ತಿ ಹೊಂದಿರುತ್ತಾರೆಂಬುದು ಸಂಸ್ಕೃತ ಭಾಷೆಗೆ ಸಂಬಂಧಿಸಿದಂತೆಯೂ ಸಾಕಾರಗೊಂಡಿರುವದನ್ನು ಇಲ್ಲಿ ಗಮನಿಸಬಹುದು.

೩೭೬

ಪ್ರದೋಷಪೂಜೆ

ಕುಶಲಮ್ ಶ್ರೀಃ ಮೈಸೂರು

5.9.1941

ಪ್ರಸೀದತು ಭಗವತೀ ವೇದಮಾತಾ ಗಾಯತ್ರೀ।

ಶ್ರೀಮತಾಂ ವಿದುಷಾಂ ಗುರುವರ್ಯಾಣಾಂ ಸನ್ನಿಧೌ ವಿಜ್ಞಪ್ತಯಃ । ಆದೌ ಕಿಂಚಿದಿವ ವಿಲಿಖ್ಯ ಸಾಂಪ್ರತಿಕಾನ್ವಿಷಯಾನ್ವಿಜ್ಞಾಪಯಿತುಮ್ಪ್ರಯತೇ। ಶ್ರೀಮತಾಮಾಶೀಃ ಪತ್ರಿಕಾ ಭಾದ್ರಪದ ಶುಕ್ಲ ತ್ರಯೋದಶ್ಯಾಸ್ಸಾರ್ಧಷಡ್ವಾದನ ಸಮಯೇ (ತಾ.3.9.1941) ಮಯಾ ಸಮಾಸಾದಿತಾ ಸಾದರಮ್ ಪಠಿತಾ ಚ। ಅಧುನಾ ತು ಮದೀಯಮ್ಮಾನಸಂ ಡೋಲಾಯತೇ। ಅತೋ ಯದ್ಯಪಿ ನಾಹಮ್ಪತ್ರಿಕಾ ಲೇಖನಾಯ ಪ್ರಭವಾಮಿ ತಥಾಪಿ "ನ ತು ವ್ಯಥಿತವ್ಯ ಚೇತಃ" ಇತ್ಯಾಜ್ಞಾಮ್ಪರಿಪಾಲಯಿತುಮೇವ ವಿಜ್ಞಪ್ತಿಪತ್ರಿಕಾಂ ಲಿಖಿತುಮೀಹೇ।

ಆಶೀಃಪತ್ರಿಕಾಯಾಃ ಪ್ರಾಥಮಿಕೋಯಂ ಶಬ್ದಃ "ನತಯಃ" ಇತಿ। ನ ಮಹ್ಯಂ ಸ ಶಬ್ದೋ ರೋಚತೇ। ನಾಪ್ಯಹನ್ತಂ ಕಾಮಯೇ। ಪರಮಹಮಿಚ್ಛಾಮಿ "ಆಶಿಷಃ" ಇತಿ ಪದಮ್। ಛಾತ್ರತ್ವಾತ್। ಅತಃ ಇತಃ ಪರಂ ತಥೈವ ಕೃಪಯಾ ಪ್ರಯುಂಜೀರನ್ ಇತಿ ಪ್ರಾಥಮಿಕೀ ಮದೀಯಾ ವಿಜ್ಞಪ್ತಿಃ।

ಸಂಪ್ರತಿ।

ಭವಿತವ್ಯತಾನ್ನ ಕೋಪ್ಯುಲ್ಲಂಘಯಿತುಮೀಷ್ಟೇ। ಉಕ್ತಂ ಕಿಲ ತತ್ರಭವತಾ ವಿಷ್ಣುಶರ್ಮಣಾ ಪಂಚತಂತ್ರೇ "ನ ಹಿ ಭವತಿ ಯನ್ನ ಭಾವ್ಯಂ ಭವತಿ ಚ ಭಾವ್ಯಂ ವಿನಾಪಿ ಯತ್ನೇನ । ಕರತಲಗತಮಪಿ ನಶ್ಯತಿ ಯಸ್ಯ ಹಿ ಭವಿತವ್ಯತಾ ನಾಸ್ತಿ" ಇತಿ। ಶ್ಲೋಕಮಿಮಮ್ಮನಸಿ ಕೃತ್ವೈವ ನಾಪಿ ರೋದನಸ್ಥಾನಮಿತಿ ಪ್ರಕೃತಿಸ್ಥೋ ಭವಾಮೀತಿ ವಾಕ್ಯಮತ್ರ ಭವಂತೋ ಲಿಲಿಖುರಿತಿ ಸಂಭಾವಯಾಮಿ। ಅಹಮಪಿ ತಾಂ ಸೂಕ್ತಿಂ ಸ್ಮಾರಂ ಸ್ಮಾರಮ್ಪ್ರಾಕೃತೋ ಬುಭೂಷಾಮಿ। ಭವಿತಾಸ್ಮಿ ವಾ ನವೇತಿ ಶಂಕೇ। ಸರ್ವಮಪಿ ಈಶ್ವರಾಯತ್ತಮಿತಿ ಯಥಾ ತಥಾ ವಾ ಭವತು ।

ದಿಷ್ಟ್ಯಾ ತತ್ರಾತ್ರಭವಂತಃ ಕುಶಲಿನ ಇತ್ಯೂಹೇ। ದಿಷ್ಟ್ಯೈವಾತ್ರ ವಯಮಪಿ (ಅಹಮತ್ರತ್ಯಾಸ್ಸುಹೃದಶ್ಚೇತಿ ಬಹುತ್ವೋಪಪತ್ತಿಃ) ಕುಶಲಿನೋ ವರ್ತಾಮಹೇ। ಅತ್ರ ಸಾಮಾನ್ಯತಯಾ ದಶದಿವಸೇಭ್ಯಃ ಪರ್ಜನ್ಯಃ ಪ್ರವರ್ಷತಿ। ಪರಂ

ತತ್ರ ತು ವೃಷ್ಟೋ ದೇವೋ ನ ವೇತಿ ನಾಹಂ ಜಾನೇ। ಭಾದ್ರಪದಶುಕ್ಲತ್ರಯೋದಶ್ಯಾಂ (ತಾ.3.9.41) ಸಪ್ತವಾದನ ಸಮಯೇ ನಿರ್ವರ್ತಿತಾ ಪ್ರದೋಷಪೂಜಾ। ತದಾ ಯಥಾ ವಿದ್ಯಾಗಣಪತಿಸಭಾಕಾರ್ಯಕ್ರಮೇ (programme of the Vidyaganapati Sabha) ಶ್ರೀಮಂತಃ ಟಿ. ಶ್ರೀನಿವಾಸ ಮೂರ್ತಯೋ ವೇಣುಂ ಸಂಪ್ರಾವಾದಯನ್। ಶ್ರೋತಾರೋ ನೈಕೇ ಸಮಾಗಚ್ಛನ್। ತೇಭ್ಯೋ ಯಥಾಪೂರ್ವಂಚ ವಿದ್ಯಾಗಣಪತಿಪ್ರಸಾದಂ ಜ್ಯೋತಿಷವಿದ್ವಾಂಸಶ್ಚೇನ್ನಿಗರಾಯ ಪುರಾಣಿಕಾಸ್ಸಮ್ಯಗ್ವ್ಯತರನ್। ಅಪೃಚ್ಛಂಶ್ಚ ಭವತಾಂ ಕಾರ್ಯಕ್ರಮಮ್। ಯಥಾಸಮಯಂಚೋದಿತಾಶ್ಚ ಮಯಾ। ಪಾಠಶಾಲಾಯಾಃ ಶ್ರೀಕಂಠಶಾಸ್ತ್ರಿಣಃ ಪೃಷ್ಟಾ ಯಥಾಪೂರ್ವಂ ತೈರೇಕರೂಪ್ಯಕಂ ದತ್ತಂ ಚ। ಪ್ರದೋಷ ಪೂಜಾವೇಲಾಯಾಂ ವಿಶೇಷತೋಽನ್ತ್ಯಾಕ್ಷರೀ ಪ್ರಚಲಿತಾ।

ವಿದ್ಯಾರ್ಥಿದಶೈವಾಸ್ಮಿನ್ಸಮಯೇ ಆನಂದಜನಯಿತ್ರೀತಿ ನೈಕೇ ಕಥಯಂತಿ। ಸತ್ಯಮಿದಂ ಕಥನಮ್। ಪರಮ್ಮಾನವಜೀವನೇ ದುಃಖೇನಾಪಿ ಭವಿತವ್ಯಮೇವ। ಅತ ಏವ ಸಮ-ಸುಖ-ದುಃಖಸ್ಯ ಜೀವನಸ್ಯೈವ ತತ್ವದವಾಚ್ಚತ್ವಮಿತಿ ಮನೋವೈಜ್ಞಾನಿಕಾ (ಮನಶ್ಶಾಸ್ತ್ರಜ್ಞ ತತ್ತ್ವವಿದಃ) ಆಚಕ್ಷತೇ। ಏತದನುರೋಧೇನ ಮನುಷ್ಯಾಸ್ಸುಖಮಿವ ದುಃಖಮಪ್ಯಾದ್ರಿಯೇರನ್। ಅತಸ್ತತ್ರ ಭವಂತೋ ದುಃಖಂ ಮಾಕಾರ್ಷುರಿತಿ ದ್ವೈತೀಯಿಕೀ ವಿಜ್ಞಪ್ತಿಃ।

ಅವಾಪ್ತಾಃ ಪೇಟಿಕಾಸ್ಥಾಸ್ತಂಡುಲಾ ದ್ವಿವಿಧಾಶ್ಚಣಕಖಂಡಾ ಲವಣಂ ಚ। ಇದಂ ದುಃಖಸ್ಥಾನಂ ಚ ಯದತ್ರತ್ಯಾನಸ್ಮಾನ್ (ಮಾಂ ಸುಹೃದಶ್ಚ) ಪ್ರತಾರ್ಯ (ವಿನಾ ಕಥನೇನ) ತತ್ರಭವಂತಃ ಆತ್ಮನೋ ಗ್ರಾಮಂ ಪ್ರಾತಿಷ್ಠಂತ। ಪರಮಿದನ್ತ್ವಾನಂದಸ್ಥಾನಂ ಚ ಯದಸ್ಮತ್ಪ್ರೇಯಾಂಚ್ಛ್ರೀಮಾನ್ ಕೃಷ್ಣಮೂರ್ತಿಃ ಪಂಚಷಾನ್ಮಾ ಸಾನತಿಕ್ರಮ್ಯ ಪಿತಾ ಭವಿತಾ। ''ನ ಖಲು ಸಮಾಪನೀಯಃ ಕೌಮುದೀವ್ಯಾಸಂಗಃ। ಪ್ರವೇಷ್ಟವ್ಯಾ ಕಕ್ಷ್ಯಾ'' ಇತ್ಯತ್ರಭವಂತ ಆದಿದಿಶುಃ। ಕಥಂ ವಾ ದೇಶಚಲನಮ್ಭವಿತೇತಿ ನಾಹಮದ್ಯ ಯಾವನ್ನಿರಣೈಷಮ್।

ಪ್ರಾಯೋ ಮಾಸಾತ್ಪೂರ್ವಮಹಸ್ತತ್ರಭವತಾಮ್ ಮಹಾಯುದ್ಧಂ ಭಾರತಂ ಚೇತಿ ಶಿರಸ್ಕಮ್ಪ್ರಬಂಧಂ (ಮಹಾಯುದ್ಧ್ ಔರ್ ಭಾರತ್) ಅದರ್ಶಯಮ್। ಪರಂ ಮಮ ಹಿಂದೀಭಾಷಾಧ್ಯಯನಮಧಿಗತಫಲಮುತ ನೇತಿ ನಾಹಮಪೃಚ್ಛಮ್ । ಗೈರ್ವಾಣ್ಯಾಂ ವಾಣ್ಯಾಮಪಿ ದ್ವಿತ್ರಾನ್ನಿಬಂಧಾನಹಮಲಿಖಮ್। ಶೋಧನೇಚ್ಛಯಾ ವಿರಾಮಕಾಲೇಽಮುಷ್ಮಿನ್ತಾನೇತಾನ್ ದರ್ಶಯಿತಾಸ್ಮಿ। ಮದೀಯಾ ಲೇಖನ ಪರೀಕ್ಷಾ ಸಮಾಪ್ತಾ। ಪರಂ ವಾಕ್ಪರೀಕ್ಷಾ ನಾದ್ಯಾವಧ್ಯಾರಬ್ಧಾ। ಅವಶಿಷ್ಟಾ ವಿಜ್ಞಪ್ತಿಃ ವಿರಾಮಕಾಲೇ ಸಮಕ್ಷಂ ವಿಜ್ಞಾಪಯಿತಾಸ್ಮಿ। ಭವತಾಮಾಶೀಃ ಪತ್ರಿಕಾನ್ನಿರೀಕ್ಷಿತಾಹೇ।

...ವಿದ್ವಾಂಸರಾದ ಗುರುವರ್ಯರ ಸನ್ನಿಧಿಯಲ್ಲಿ ವಿಜ್ಞಾಪನೆಗಳು. ನಿಮ್ಮ ಪತ್ರ ತಲಪಿತು. ಮೊದಲಿಗೆ ಸ್ವಲ್ಪ ಬರೆದು ನಂತರ ಪ್ರಸ್ತುತ ವಿಷಯ ಹೇಳುವೆ. ನಿಮ್ಮ ಆಶೀರ್ವಾದ ಪತ್ರಿಕೆ ಭಾದ್ರಪದ ಶುಕ್ಲ ತ್ರಯೋದಶಿ ದಿವಸ 6½ ಗಂಟೆ ಸಮಯದಲ್ಲಿ ನನಗೆ ತಲಪಿತು. ಅದನ್ನು ಆದರಪೂರ್ವಕವಾಗಿ ಓದಿದೆ. ಈಗ ನನ್ನ ಮನಸ್ಸು ಒಂದು ರೀತಿ ಡೋಲಾಯಮಾನವಾಗಿದೆ. 'ಆಶೀರ್ವಾದ' ಯೋಗ್ಯತೆ ನನಗಿಲ್ಲ. ಆದರೂ ನಿಮ್ಮ ಮನಕ್ಕೆ ಸಮಾಧಾನ.

ಆಶೀರ್ವಾದ ಪತ್ರಿಕೆಯ ಪ್ರಾರಂಭದಲ್ಲಿ 'ನಮಸ್ಕಾರಗಳು' ಪದ ಬಳಸುತ್ತಾರೆ. ಅದು ನನಗೆ ಇಷ್ಟವಾಗುವುದಿಲ್ಲ. ನನಗಿಷ್ಟವಾದುದು 'ಆಶೀರ್ವಾದಗಳು' ಅಂತಲೇ. ಏಕೆಂದರೆ ಅದು ವಿದ್ಯಾರ್ಥಿಯಾದ ಕಾರಣದಿಂದ. ಇನ್ನು ಮುಂದೆ ಆಶೀರ್ವಾದ ಅಂತಲೇ ನೀವು ಬರೆಯಬೇಕು.

ಮುಂದೆ ಆಗುವುದನ್ನು ತಪ್ಪಿಸಲು ಆಗುವುದಿಲ್ಲ. ವಿಷ್ಣುಶರ್ಮನ ಪಂಚತಂತ್ರದಲ್ಲಿ, 'ಯಾವುದು ಆಗಬಾರದೋ ಅದು ಆಗುವುದಿಲ್ಲ, ಏನು ಆಗಬೇಕೋ ಅದು ಪ್ರಯತ್ನ ಇಲ್ಲದೆಯೂ ಆಗುತ್ತದೆ. ಆಗಬಾರದೆಂದರೆ ಕೈಯಲ್ಲಿರುವುದೂ ನಷ್ಟವಾಗುತ್ತದೆ. ಆದ್ದರಿಂದ ಭವಿಷ್ಯದ ಚಿಂತನೆ ಬೇಡ'- ಈ ಶ್ಲೋಕವನ್ನು ಮನಸ್ಸಿನಲ್ಲಿಟ್ಟು ದುಃಖಿಸಬಾರದೆಂಬ ಭಾವನೆಯಿಂದ ನೀವು ಬರೆದಿದ್ದೀರಿ ಅಂದುಕೊಳ್ಳುತ್ತೇನೆ. ನಾನು ಕೂಡ ಆ ಸೂಕ್ತಿಯನ್ನು ಮತ್ತೆ ಮತ್ತೆ ನೆನೆಸಿಕೊಳ್ಳುತ್ತಾ, ಮುಂದೆ ಆಗುವ ವಿಚಾರದ ಬಗೆಗೆ ಯೋಚಿಸುವುದಿಲ್ಲ. ಎಲ್ಲವೂ ಈಶ್ವರಾಯತ್ತ. ಆದ್ದರಿಂದ ಹೇಗಾದರೂ ಆಗಲಿ.

ತಾವು ಅಲ್ಲಿ ದೈವಾನುಗ್ರಹದಿಂದ ಕುಶಲಿಗಳೆಂದು ಊಹಿಸುವೆ. ಭಗವದನುಗ್ರಹದಿಂದ ಇಲ್ಲಿ ನಾನೂ ನನ್ನ ಸ್ನೇಹಿತರೂ ಎಲ್ಲರೂ ಕ್ಷೇಮವಾಗಿದ್ದೇವೆ. ಇಲ್ಲಿ ಸಾಮಾನ್ಯವಾಗಿ ಹತ್ತು ದಿನಗಳಿಂದ ಮಳೆ ಬಿಳುತ್ತಿದೆ. ಆದರೆ ಅಲ್ಲಿ ದೇವರು ಮಳೆ ಸುರಿಸಿದ್ದಾನೋ ಇಲ್ಲವೋ ತಿಳಿಯದು.

ಭಾದ್ರಪದ ಶುಕ್ಲ ತ್ರಯೋದಶಿ ದಿನದಲ್ಲಿ ಏಳು ಗಂಟೆ ಸಮಯದಲ್ಲಿ ಪ್ರದೋಷ ಪೂಜೆಯು ನಡೆಸಲ್ಪಟ್ಟಿತು. ಆಗ ವಿದ್ಯಾಗಣಪತಿ ಸಭೆಯ ಕಾರ್ಯಕ್ರಮದಲ್ಲಿ ಶ್ರೀಮಾನ್ ಟಿ. ಶ್ರೀನಿವಾಸಮೂರ್ತಿಗಳು ವೇಣುವಾದನ ಮಾಡಿದರು. ಆಗ ಶ್ರೋತೃಗಳು ಅಧಿಕ ಸಂಖ್ಯೆಯಲ್ಲಿ ಬಂದಿದ್ದರು. ಅವರಿಗೆ ಸಂಪ್ರದಾಯದಂತೆ ವಿದ್ಯಾಗಣಪತಿಯ ಪ್ರಸಾದವನ್ನು ಜ್ಯೋತಿಷ್ಯ ವಿದ್ವಾಂಸರಾದ ಚನ್ನಿಗರಾಯ ಪುರಾಣಿಕರು ನೀಡಿದರು. ಅವರು ತಮ್ಮ ಕಾರ್ಯಕ್ರಮವನ್ನು ಕೇಳಿದರು. ನಾನು ಸಮಯಾನುಸಾರ ವಿವರಿಸಿದೆನು. ಪಾಠಶಾಲೆಯ ಶ್ರೀಕಂಠಶಾಸ್ತ್ರಿಗಳನ್ನು ಕೇಳಲಾಗಿ ಅವರು ಹಿಂದಿನಂತೆ ಒಂದು ರೂಪಾಯಿ ನೀಡಿದರು. ಪ್ರದೋಷಪೂಜೆಯ ಸಮಯದಲ್ಲಿ ವಿಶೇಷವಾಗಿ ಅಂತ್ಯಾಕ್ಷರಿ ನಡೆಯಿತು. ಈ ಸಮಯದಲ್ಲಿ ವಿದ್ಯಾರ್ಥಿ ದೆಸೆಯು ಆನಂದದಾಯಕವಾದುದು ಎಂದು ಅನೇಕರು ಹೇಳುತ್ತಾರೆ. ಅದು ಸತ್ಯ. ಆದರೆ ಮನುಷ್ಯನ ಜೀವನದಲ್ಲಿ ದುಃಖವೂ ಇದೆ.

ಆದ್ದರಿಂದ ಜೀವನದಲ್ಲಿ ಸುಖ ದುಃಖ ಎರಡನ್ನೂ ಸಮಾನವಾಗಿ ಅನುಭವಿಸಬೇಕೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಇದಕ್ಕೆ ಅನುಗುಣವಾಗಿ ಮನುಷ್ಯರು ಸುಖವನ್ನು ಅನುಭವಿಸುವಂತೆ ದುಃಖವನ್ನೂ ಅನುಭವಿಸಬೇಕು. ಆದ್ದರಿಂದ ತಾವು ದುಃಖಪಡಬಾರದೆಂದು ನನ್ನ ವಿಜ್ಞಾಪನೆ.

ಪೆಟ್ಟಿಗೆಯಲ್ಲಿರುವ ಅಕ್ಕಿ, ಕಡಲೆ, ಕೆಲ ಕಾಳುಗಳು, ಉಪ್ಪು ದೊರೆತವು. ಇದು ನನಗೆ ದುಃಖ ಉಂಟು ಮಾಡಿತು. ತಾವು ನನಗೆ ಹಾಗೂ ನನ್ನ ಸ್ನೇಹಿತರಿಗೆ ತಿಳಿಸದೆ ಗೊತ್ತಾಗದಂತೆ ತಮ್ಮ ಗ್ರಾಮಕ್ಕೆ ಹೊರಟು ಹೋದಿರಿ. ಆದರೆ ನಮ್ಮ ಹಿತೈಷಿಯಾದ, ಪ್ರೇಮಭಾಗಿಯಾದ ಶ್ರಿಮಾನ್ ಕೃಷ್ಣಮೂರ್ತಿಯು ಇನ್ನು 5-6 ತಿಂಗಳಲ್ಲಿ ತಂದೆಯಾಗುವ ನೆಂಬುದು ಆನಂದಕ್ಕೆ ಕಾರಣವಾದ ವಿಷಯ. ಕೌಮುದೀ ವ್ಯಾಸಂಗವನ್ನು ಬಿಡಬಾರದು, ಆ ತರಗತಿಗೆ ಹೋಗಬೇಕು ಎಂದು ತಾವು ನನಗೆ ಆದೇಶಿಸಿದ್ದಿರಿ. ತಮ್ಮ ಅಪ್ಪಣೆಯನ್ನು ಮೀರುವುದು ಹೇಗೆ ಎನ್ನುವುದು ವಿಚಾರ ಮಾಡುವ ವಿಷಯ.

ಒಂದು ತಿಂಗಳ ಹಿಂದೆ ನಾನು ತಮಗೆ 'ಮಹಾಯುದ್ಧ ಮತ್ತು ಭಾರತ' (ಮಹಾಯುದ್ಧ್ ಔರ್ ಭಾರತ್) ಎಂಬ ಶಿರೋನಾಮೆಯ ಪ್ರಬಂಧವನ್ನು ತೋರಿಸಿದೆನು. ಆದರೆ ನಾವು ಕಲಿತ ಹಿಂದಿ ಪ್ರಯೋಜನವಾಗಿದೆಯೋ ಇಲ್ಲವೋ ಎಂದು ನಾನು ಕೇಳಲಿಲ್ಲ. ಸಂಸ್ಕೃತ ಭಾಷೆಯಲ್ಲಿಯೂ ಒಂದೆರಡು ಪ್ರಬಂಧಗಳನ್ನು ನಾನು ಬರೆದಿದ್ದೇನೆ. ಅದನ್ನು ಶೋಧಿಸುವ ಇಚ್ಛೆಯಿಂದ ಈ ರಜಾ ಕಾಲದಲ್ಲಿ ಇವುಗಳನ್ನು ತಮಗೆ ತೋರಿಸುವೆನು. ನನ್ನ ಲೇಖನ ಪರೀಕ್ಷೆ ಮುಕ್ತಾಯವಾಗಿದೆ. ಆದರೆ ವಾಕ್ ಪರೀಕ್ಷೆ ಇದುವರೆಗೂ ನಡೆದಿಲ್ಲ. ಇನ್ನು ಉಳಿದ ಹೇಳಬೇಕಾದ ವಿಷಯವನ್ನು ರಜಾ ಸಮಯದಲ್ಲಿ ಪ್ರತ್ಯಕ್ಷವಾಗಿ ತಮಗೆ ವಿಜ್ಞಾಪಿಸುವೆನು.

ತಮ್ಮ ಆಶೀರ್ವಾದ ಪತ್ರಿಕೆ ನಿರೀಕ್ಷಿಸುವ

೩೭೭

ಆ ವಿದ್ವಾಂಸ !

ಕುಶಲಮ್ ಶ್ರೀಃ ಮೈಸೂರು

14.12.1941

ವಿದುಷಾಮತ್ರಭವತಾಂ ಶಾಸ್ತ್ರಿಣಾಂ ಸನ್ನಿಧೌ। ವಿಜ್ಞಪ್ತಯಃ। ಸಂಪ್ರತಿ।

ತತ್ರ ಭವತಾಂ ಸ್ವೀಯಾಭಿಜನಗಮನೇ ಅಸ್ಮದಾಚಾರ್ಯ ಪಾದೈಸ್ಸದುಃಖಂ ನಿಗದಿತನ್ತದೀಯೈಶ್ಶಬ್ದೈರ್ನಿರೂಪ್ಯ ಮದೀಯಂ ಸಾಂಪ್ರತಿಕಮಭಿಪ್ರಾಯಂ ಕಿಂಚಿದಿವ ನಿವೇದಯಾಮಿ।

ಯದ್ಯಪಿ...ಮೂರ್ತಿಃ ಆಸ್ಮಾಕೀನಂ ಗೃಹಮಾತ್ಮೀಯವತ್ ಮನ್ಯತೆ ಸ್ಮ। ಶಕ್ನೋತಿ ಸ್ಮ ಚಾನ್ಯಾ ಅಪಿ ದ್ವಿತ್ರಾಃ ಪರೀಕ್ಷಾ ದಾತುಂ ಸಃ। ಯದಿ ಸ ಏವ ಮನ್ವಸ್ಥಾಸ್ಯತ್ತಥಾಪಿ ನಾಧಿಕಂ ಕಿಂಚಿತ್ ಪ್ರಯೋಜನಮಭವಿಷ್ಯತ್। ಅತೋ ಯತ್ಸ ವಿದ್ಯ ಮಾನಾಯಾಮಪಿ ಪಿಪಠಿಷಾಯಾಂ ಮಹೀಯಸ್ಯಾಮ್ ಅಧ್ಯಯನಮುದಸೃಜತ್, ಯಚ್ಚ ಅಧ್ಯಾಪಕತ್ವಮಧಿಗಮ್ಯ ಸ್ವಾಭಿಜನಮಪಿ ತೃಣಾಯ ಮನ್ಯಮಾನೋ ಜೀವನಯಾತ್ರಾಮೇವ ಮುಖ್ಯತಯಾ ಮನಸಿ ಕೃತ್ಯ ಚ ದವಿಷ್ಠಂ ದೇಶಮಧ್ಯಗಾತ್ – ತದೇತದ್ರಮಣೀಯಮೇವ। ಅನ್ಯಥಾ ಸ ಕಿಂ ವಾ ಕರ್ತುಂ ಪ್ರಭವತಿ ಸ್ಮ ಪ್ರಾಣಯಾತ್ರಾಯೈ। ಪರಂ ತು ಅಯಂ ಶ್ರೀಮಾನ್ (ಅತ್ರಭವಂತೋ ಭವಂತಃ) ಅಧ್ಯಯನಂ ಪರ್ಯಹಾಸೀದಿತ್ಯತ್ರಾಹಮತೀವ ದೂಯೇ। ಯದ್ಯಪಿ ಅಯಮಧಿಗತಶ್ರುತಃ (ಬಂಧುಃ ಶೀಲಲಕ್ಷಣಸಂಪನ್ನಃ ಶ್ರುತವಾನರೋಗ ಇತಿ ವರಸಂಪತ್ (ಆಪ-ಗೃ.ಸೂ. 1.3.20) ಇತ್ಯಾದೌ ದರ್ಶನಾದ್ಯದ್ಯಪಿ ಶ್ರುತಶಬ್ದವಾಚ್ಯತ್ವ-ಮಂಗಚಣಾಯಾಃ ಶ್ರುತೇರೇವ ತಥಾಪಿ ಸಂಪ್ರತಿ ತಾದೃಶ್ಯಾಸ್ತಸ್ಯಾ ಅಧ್ಯೇತೄಣಾಮಪಿ ವೈರಲ್ಯಾತ್ ಪ್ರತ್ಯೇಕಮಪಿ ತತ್ಪದವಾಚ್ಯತ್ವಮಿತ್ಯೇವ ವಿವಕ್ಷಾತ್ರ।) ಯದ್ಯಪಿ ಶ್ರೀಮಾನ್, ಯದ್ಯಪಿ ನಯೀ, ಯದ್ಯಪಿ ಪೂಜ್ಯಪೂಜಕಭಾವಚುಂಚುಃ, ಕಿಂ ಬಹುನಾ, ಪರಮಾರ್ಥತಃ ಅಭಿಜ್ಞಪದವಾಚ್ಯಃ. ಪರಂ ತತ್ರತ್ಯಾನಾಮವೈದ್ಯುಷ್ಯಪಿಶಾಚಗ್ರಸ್ತತ್ವಾನ್ನ ಕೋಽಪ್ಯೇನಂ ಬಹುಮನ್ಯತೇ। ನ ಕೋಽಪ್ಯಸ್ಯ ವಚಸಿ ಶ್ರದ್ದಧಾತಿ। ತಚ್ಛುಶ್ರೂಷತಿ ವಾ, ಕಿಂ ಬಹುನಾ ವಕ್ತುಮಪಿ ನ ಸಹತೇ ಅಯಮಪಿ ಅಧಿಗತವಿದ್ಯ ಇತಿ। ಯಾವದ್ವಿದ್ವಜ್ಜನ ಮಂಡನಾಯಮಾನತ್ವೋಪಚಾರಾದಾತ್ಮನಿ। ಅತ ಏನೇನ ಯತಿತವ್ಯಮಾಸೀತ್। ವಿಂಶತಿರೂಪ್ಯಕಮಾತ್ರೀಮಪಿ ಮಾಸಿಕೀಂ ಭೃತಿಮವಾಪ್ತುಮ್। (ಭೃತಿಶಬ್ದವಾಚ್ಯತ್ವಂ ಮಾಸಿಕ್ಯಾ ವಿದ್ವಜ್ಜನ ಸಂಭಾವನಾಯಾ ಏವೇತ್ಯತ್ರ ವಿವಕ್ಷಾ) ಏವಂ ನಾನುಷ್ಠಾಯಾಯಂ ಸ್ವಾಭಿಜನಮೇವ ಪ್ರತ್ಯಾವರ್ತಿಷ್ಟೇ ತ್ಯಹಮತೀವ ವಿಷೀದಾಮಿ। ಇತಿ।

ವಸ್ತುತಸ್ತು ಅತ್ರಭವತಾಂ ಸ್ವಾಭಿಜನಪ್ರತ್ಯಾವರ್ತನೇ (ವಿಷಯ ಸಪ್ತಮ್ಯೇಷಾ ಪೂರ್ವತ್ರಾಪಿ) ಅಸ್ಮಾಕಮಾಚಾರ್ಯ-ಪಾದಾ ಅರೋದಿಷುಶ್ಚ। ಅತಃ ತೇಷಾಮಾಶಯೇನ ಕಿಂಕರ್ತವ್ಯಮಾಸೀದಿತಿ ತತ್ರಭವಂತಃ ಏವ ಸಮಾಲೋಚಯಂತು।

ಅಶ್ರುಪತನಸ್ಯ ಅನಿಷ್ಟಸೂಚಕತ್ವಾತ್ಸ್ವಾಭಿಜನಪ್ರತ್ಯಾವರ್ತನ-ಸಮಯೇ ಶ್ರೀಮತಾಂ ನಾಹಮರೋದಿಷಮ್। ವೇದಾಹಮೇಕ ಏವ ತಾತ್ಕಾಲಿಕೀಂ ಮಾಮಕೀನಾಮವಸ್ಥಾಮ್। ಅತ ಏವ ನೈವ ವಕ್ತುಮಪಿ ತದಾ ಪ್ರಾಭೂವಂ ಕಿಂಚಿದಪಿ। ಮನ್ಯೇ

ಬಹುತಿಥಾದ್ದಿನಾದನಂತರಂ ಪುನಸ್ತತ್ರಭವತಾಂ ದರ್ಶನಂ ಭವಿಷ್ಯತೀತಿ।

ಆಸ್ತಾಂ ಅಯಂ ಮಹತೀ ಕಥಾ। ಮುಖ್ಯಾನ್ಯೇವ ಕಾನಿಚಿದ್ವಾಕ್ಯಾನಿ ಲಿಖಿತುಂ ಕಾಮಯೇ ವಿಜ್ಞಪ್ತಿಪತ್ರಿಕಾಯಾಃ ಅತಿವಿಸ್ತೃತತ್ವಾಪಾತಭಿಯಾ।

ಯದ್ಯಪಿ ದೀಕ್ಷಿತ ವಿಷಯೇ "ಅಪಿಗೃಹ್ಯಸ್ಮಯತೇ ಪ್ರಜಾನಾಂ ಗೋಪೀಥಾಯ" (ತೈ.ಸಂ.ಕಾ.ಪ್ರ. ಅ 6.1.3) ಇತಿ-"ತಸ್ಮಾದ್ದೀಕ್ಷಿತೇ ನಾಪಿ ಗೃಹ್ಯಸ್ಮೇತವ್ಯಮ್" (ತೈ.ಆರ.ಪ್ರ.ಅ. 5.1) ಇತಿ ಚ ಶ್ರುತಿಃ ದೀಕ್ಷಿತಕರ್ತೃಕಂ ವ್ಯಕ್ತಸ್ಮಯಂ ಪ್ರತಿಷೇಧತಿ, ಪರಂ ತತ್ರಭವಾನಾಪಸ್ತಂಬಸ್ತು ಬ್ರಹ್ಮಚಾರಿವಿಷಯೇ ವ್ಯಕ್ತಮೇವಾಹ "ನ ಸ್ಮಯೇತ" (ಆಪ., ಧರ್ಮ 1.2.7.6) "ಯದಿ ಸ್ಮಯೇತಾಪಿ ಗೃಹ್ಯಸ್ಮಯೇತೇತಿ ದ್ವಿ-ಬ್ರಾಹ್ಮಣಮ್" (ಆಪ. ಧರ್ಮ 1.2.7.7) ಇತಿ। ಏವಮೇವ ನೈಕೇ ನಿಯಮಾ ಬ್ರಹ್ಮಚಾರಿಣಃ ನಿತ್ಯಮನುಷ್ಠೇಯತಯಾ ಚೋದಿತಾಃ, ವಿಶೇಷತಃ ಆಚಾರ್ಯ ಸಕಾಶೇ। ತಥಾ ವೇದಾಂಗಾಧ್ಯಯನೇಽಪಿ ನಿಯಮಾನುಷ್ಠೇನ ಸಿದ್ಧಿಮಾಹ। ಯತ್ಕಿಂಚ ಸಮಾಹಿತಃ ಅಬ್ರಹ್ಮಾಪ್ಯಾಚಾರ್ಯಾ ದುಪಯುಂಕ್ತೇ ಬ್ರಹ್ಮಪದೇ ಏವತಸ್ಮಿನ್ಫಲಂ ಭವತಿ (ಆಪ. ಧರ್ಮ 1-2-5-7) ಇತಿ। ಏತಾದೃಶಾನ್ನೈಕಾನ್ನಿಯಮಾನತ್ರ ಭವತಾನ್ನಿಕಷಾ ಅತ್ಯಕ್ರಾಮಮ್, ಅಸ್ಮಯಮ್। ಅನ್ಯಥಾ ಅಕಾರ್ಷಂ ಚ। ಯಶ್ಚ ಪೂರ್ವೋಕ್ತನಿಯಮಾತಿಕ್ರಮಜೋಽಪ ರಾಧಃ, ಯಶ್ಚ ಪ್ರಕಾರಾಂತರೇಣಾನುಷ್ಠಿತಃ, ತಂ ಸರ್ವಮಪಿ ತತ್ರಭವಂತೋ ಮರ್ಷಯಂತು ಕೃಪಯೇತಿ, ಮದೀಯಾ ಏಕಾ ವಿಜ್ಞಪ್ತಿಃ।

ಪಾದೋನರೂಪ್ಯಕತ್ರಯಂ (1.12.0) ಪ್ರಾಯಃ ಅತ್ರ ಭವದ್ಭ್ಯೋ-ಮಯಾ ದೇಯಮಿತಿ ಆಪಾತತೋಽಹಂ ಜಾನೇ। ತಥಾಹಿ ಏಕಾಗ್ನಿಕಾಂಡಸ್ಯ ಮೂಲ್ಯಮೇಕರೂಪ್ಯಕಮ್ (1-0-0) ತಥಾ ರಘುವಂಶಸ್ಯಾಪಿ ಮೂಲ್ಯಮೇಕಂ ರೂಪ್ಯಕಮ್ (1-0-0) ನಂಜನಗೂಡ್ ನಗರಾಯ ಗಂತುಂ. ತಥಾ ತತ್ರ ವ್ಯಯೀಕೃತಂ ಚ ದ್ವಾದಶಾಣಕಾಃ (0-12-0) ಆಹತ್ಯ ಪಾದೋನರೂಪ್ಯಕತ್ರಯಮಿತಿ। ತದಾ ಕಿಂವಾ ಭವಾನ್ನಾಹಂ ದಾತುಮಶಕ್ನುವನ್ ಆಗಮಿಷ್ಯತಿ ಮಾಸೇ ಅರ್ಥಾತ್ ಪುಷ್ಯಮಾಸೇ (ಜ. 1942) ಶ್ರೀಮಾನ್ ತೇ ಮಿತ್ರಮಣಯೇ ಕೃಷ್ಣಮೂರ್ತಿನೇ ತಸ್ಯಾಗ್ರಜನ್ಮಾ ರೂಪ್ಯಕಾಣಿ ಪ್ರೇಷಯಿಷ್ಯತಿ। ತತ್ರಭವಂತಃ ಪಾದೋನರೂಪ್ಯಕ ತ್ರಯಂ ತತ್ರೈವ ತೇನ ಕೃಪಯಾ ಆದದತು-ತಥಾ ಕಥಯಂತು ಚ ಅವಶಿಷ್ಟಾನ್ಯೇವ ಪ್ರೇಷಯೇತಿ। ಏವಂ ಸತಿ ಅಹಮತ್ರೈವ ಕೃಷ್ಣಮೂರ್ತಿನೇ ಪಾದೋನರೂಪ್ಯಕತ್ರಯಂ ದಾತಾಸ್ಮಿ। ಅತಃ ಅನುಕಂಪಯಾ ಏವಮನುತಿಷ್ಠಂತ್ವಿತಿ ದ್ವಿತೀಯಾ ವಿಜ್ಞಪ್ತಿಃ।

ಮಹದಿದಂ ದುಃಖಸ್ಥಾನಮಸ್ಮದೀಯಾನಾಂ ಸರ್ವೇಷಾಮಪಿ ಯತ್ ಬಿ.ಎಸ್. ಸೇತೂರಾಮಃ (ಭೂತಪೂರ್ವಃ ಪಾಠಶಾಲಾ ವಿದ್ಯಾರ್ಥೀ ತಥಾಭೂತಪೂರ್ವಃ (Student in Sharada Vilasa High School, Mysore) ಅಕಸ್ಮಾತ್ ಅಕಾಲಮೃತ್ಯುಮಧ್ಯಗಾದಿತಿ। ಹೇತುಶ್ಚ ದ್ವಿತ್ರಾನ್ ದಿವಸಾನನುಸ್ಯೂತಾ ಅಲ್ಪೀಯಸೀ ಕರ್ಣಪೀಡಾ। ಇಮಾನಿ ವಾಕ್ಯಾನಿ ಲಿಖಿತುಂ ಹಸ್ತೋ ನೈವೇಚ್ಛತಿ ಅರ್ಥಾತ್ಪಶ್ಚಾತ್ಸರತಿ।

ರಾತ್ರೌ ವಾ ಲಿಖಿತತ್ವಾತ್ ಪತ್ರಿಕಾಯಾ ನೈಕೇ ಅಕ್ಷರ ಸ್ಖಾಲಿತ್ಯಾದಯೋ ದೋಷಾ ಅಲ್ಪೀಯಸ್ತ್ವಾಚ್ಚ ಮೇಧಾಯಾಃ ಸಂಭವೇಯುಃ। ಯದ್ಯೇವಂ ತರ್ಹಿ ತೇ ಕ್ಷಂತವ್ಯಾ ಇತಿ ತೃತೀಯಾ ವಿಜ್ಞಪ್ತಿಃ।

ಅತ್ರತ್ಯಾ ವಯಂ (ಅಹಮತ್ರಭವತಾಂ ಸುಹೃದಶ್ಚೇತಿ ಬಹುತ್ವೋಪಪತ್ತಿಃ) ಕುಶಲಿನಃ ಸುಖಿನಶ್ಚ । ತತ್ರಭವತಾಮಾಶೀಃ ಪತ್ರಿಕಾಂ ದೃಷ್ಟಾಸ್ಮಿ।

ಪೂಜ್ಯರೂ ವಿದ್ವಾಂಸರೂ ಆದ ಶಾಸ್ತ್ರಿಗಳ ಸನ್ನಿಧಿಯಲ್ಲಿ ವಿಜ್ಞಾಪನೆಗಳು.

ತಾವು ತಮ್ಮ ಗ್ರಾಮಕ್ಕೆ ಹೋದ ಸಮಯ ನಮ್ಮ ಆಚಾರ್ಯರು ದುಃಖದಿಂದ ಹೇಳಿದ್ದನ್ನು ಅವರ ಮಾತುಗಳಿಂದಲೇ ನಿರೂಪಿಸಿ ಈಗ ನನ್ನ ಅಭಿಪ್ರಾಯವನ್ನು ಸ್ವಲ್ಪ ನಿವೇದಿಸಿಕೊಳ್ಳುತ್ತೇನೆ.

ವಿದ್ವಾನ್...ನಮ್ಮ ಮನೆಯನ್ನು ತಮ್ಮ ಮನೆಯಂತೆಯೇ ಭಾವಿಸಿದ್ದನು. ಅಲ್ಲದೆ ಅವನು ಬೇರೆ ಒಂದೆರಡು ಪರೀಕ್ಷೆಗಳನ್ನು ಕೊಡಲು ಸಮರ್ಥನಾಗಿದ್ದನು. ಒಂದು ವೇಳೆ ಅವನು ಈ ರೀತಿಯಲ್ಲಿ ಮಾಡದೇ ಹೋಗಿದ್ದರೆ ಅವನಿಗೆ ಪ್ರಯೋಜನ ಆಗುತ್ತಿರಲಿಲ್ಲ. ಅಧಿಕವಾಗಿ ಓದಬೇಕೆಂಬ ಆಸೆ ಇದ್ದರೂ ಅಧ್ಯಯನ ಮುಗಿಸಿ ಅಧ್ಯಾಪಕ ವೃತ್ತಿ ಪಡೆದು ತನ್ನವರನ್ನೂ ತೃಣಕ್ಕೆ ಸಮಾನವಾಗಿ ಭಾವಿಸಿ ತನ್ನ ಜೀವನ ಯಾತ್ರೆಯನ್ನೇ ಮುಖ್ಯವೆಂದು ಸಂಕಲ್ಪಿಸಿ ದೂರದೇಶಕ್ಕೆ ಹೊರಟುಹೋದನು. ಇದು ರಮಣೀಯವಾದುದೇ. ಹಾಗಿಲ್ಲದಿದ್ದರೆ ತನ್ನ ಪ್ರಾಣಯಾತ್ರೆಗಾಗಿ ಅವನು ಏನನ್ನು ಮಾಡಲು ಸಮರ್ಥನಾಗುತ್ತಿದ್ದನು. ಆದರೆ ಈ ಮನುಷ್ಯನು ಅಧ್ಯಯನವನ್ನು ಪರಿಹಾರ್ಯ ಮಾಡಿದನು ಎನ್ನುವುದನ್ನು ಕಂಡು ನಾನು ಅತೀವ ದುಃಖಿತನಾಗಿದ್ದೇನೆ. ನಿಜಕ್ಕೂ ಇವನು ಶಾಸ್ತ್ರಾದಿಗಳನ್ನು ಬಲ್ಲವನು, ಬಂಧು, ಸದ್ಗುಣಸಂಪನ್ನ, ದೃಢಕಾಯ, ಆರೋಗ್ಯವಂತ ಮೊದಲಾದ ವರ ಸಂಪತ್ತುಗಳು ಇದ್ದರೂ 'ಶ್ರುತ' ಶಬ್ದಕ್ಕೆ ಸ್ವಲ್ಪವೂ ಒಳಗಾಗಲಿಲ್ಲ. ಆದರೂ ಈಗ ಅಂಥ ಅಧ್ಯಯನಶೀಲರು ದೊರಕುವುದು ದುರ್ಲಭವಾದ್ದರಿಂದ ಆ 'ಶ್ರುತಿ ಸಂಪನ್ನ' ಎಂಬ ಪದಕ್ಕೆ ಇವನು ಅರ್ಹನು. ಯಾವನು ಶ್ರಿಮಂತನಾಗಿರಬಹುದು, ವಿನಯವಂತನಾಗಿರಬಹುದು, ಪೂಜ್ಯ-ಪೂಜಿಕ ಭಾವ ಅರಿತಿರಬಹುದು, ಹೆಚ್ಚೇನು ಪರಮಾರ್ಥತಃ ಅವನು ಅಭಿಜ್ಞ

ಎಂಬ ಪದಕ್ಕೆ ವಾಚ್ಯನೂ ಆಗಿರಬಹುದು. ಆದರೂ ಅಲ್ಲಿರುವಂಥ ಜನರು ಅವೈದುಷ್ಯವೆಂಬ ಪಿಶಾಚಿಯಿಂದ ಇಂಗಲ್ಪಟ್ಟವರಾದ್ದರಿಂದ ಯಾವನೊಬ್ಬನೂ ಇವನನ್ನು ಗೌರವಿಸಲಾರ. ಯಾರೂ ಇವನ ಮಾತಿನಲ್ಲಿ ನಂಬಿಕೆ ಇಡುವುದಿಲ್ಲ. ಇವನ ಮಾತನ್ನು ಕೇಳುತ್ತಾರೇನು ? ಹೆಚ್ಚು ಹೇಳುವದೇನು? ಇವನು ವಿದ್ಯೆ ಸಂಪಾದಿಸಿದವನೆಂದು ಹೇಳಲು ಆಗುವದಿಲ್ಲ. ವಿದ್ವಾಂಸ ಅನಿಸಿಕೊಂಡುದಕ್ಕೆ ತಕ್ಕಂತೆ ಇವನು ನಡೆಯಬೇಕಾಗಿತ್ತು. ತಿಂಗಳಿಗೆ (ಕೇವಲ) 20 ರೂ. ಸಂಬಳ ಎಂಬ ಒಂದೇ ಒಂದು ಕಾರಣಕ್ಕೆ ತನ್ನವರನ್ನೆಲ್ಲಾ ಬಿಟ್ಟು ಆ ದೂರದ ಊರಿಗೆ ಹೋದ ಎನ್ನುವುದು ನನಗೆ ದುಃಖದ ವಿಷಯ.

ನಿಜವಾಗಿಯೂ ತಮ್ಮಂಥ ಸಾಧು ಜನರನ್ನು ಬಿಟ್ಟು ಹೋಗಿರುವುದು ಎನ್ನುವುದನ್ನು ಕೇಳಿ ನಮ್ಮ ಗುರುಗಳು ದುಃಖಪಟ್ಟರು. ಆದರೂ ನಾವೇನು ಮಾಡಬಹುದು ಎಂಬ ಆಲೋಚನೆ ಅವರದು. ತಾವೂ ಅದರ ಬಗ್ಗೆ ಆಲೋಚಿಸಿ. ಕಣ್ಣೀರು ಹಾಕುವುದು ಅನಿಷ್ಟ ಸೂಚಕ. ಆದುದರಿಂದ ತನ್ನವರನ್ನು ಬಿಟ್ಟು ಹೋಗುವ ವೇಳೆ ಅವರ ಬಗ್ಗೆ ನಾನು ದುಃಖಿಸಲಿಲ್ಲ. ನಾನೊಬ್ಬನೇ ಆಗ ತತ್ಕಾಲದ ನನ್ನ ಅವಸ್ಥೆಯನ್ನು ಅರಿತಿದ್ದವನು. ಅನೇಕ ದಿನಗಳ ನಂತರ ತಮ್ಮ ದರ್ಶನ ಆಗುವದೆಂದು ತಿಳಿದಿದೆ. ಇರಲಿ.

ವಿಜ್ಞಾಪನ ಪತ್ರಿಕೆಯು ಅತಿ ದೊಡ್ಡದಾಗಬಹುದೆಂಬ ಹೆದರಿಕೆಯಿಂದ ಈ ಕಥೆ ಇರಲಿ. ಮುಖ್ಯವಾಗಿ ಒಂದೆರಡು ವಾಕ್ಯ ಬರೆಯಲು ಇಚ್ಛಿಸುವೆನು.

ದೀಕ್ಷಿತರ ವಿಷಯದಲ್ಲಿ "..." ಎಂಬ ಶ್ರುತಿಯು ದೀಕ್ಷಿತರ ಕಾರ್ಯವನ್ನು ಆಶ್ಚರ್ಯದಿಂದ ಪ್ರತಿಷೇಧಿಸುತ್ತದೆ. ಆದರೆ ಪೂಜ್ಯರಾದ ಆಪಸ್ತಂಬರು 'ಬ್ರಹ್ಮಚಾರಿ' ವಿಷಯದಲ್ಲಿ ಆಶ್ಚರ್ಯಪಡಬಾರದು ಎಂಬುದಾಗಿ ವ್ಯಕ್ತವಾಗಿ ಹೇಳಿದ್ದಾರೆ. "..." ಹೀಗೆ ಬ್ರಹ್ಮಚಾರಿಯಾದವನು ಕೆಲವು ನಿಯಮಗಳನ್ನು ನಿತ್ಯವೂ ಗುರುವಿನ ಬಳಿ ಆಚರಿಸಬೇಕೆಂದು ತಿಳಿಸಿದೆ. ಹಾಗೇ ವೇದ ವೇದಾಂಗ ಅಧ್ಯಯನದಲ್ಲಿಯೂ ನಿಯಮದಿಂದ ಅನುಷ್ಠಾನ ಮಾಡಿದ್ದಾದರೆ ಸಿದ್ಧಿ ಉಂಟಾಗುತ್ತದೆ ಎಂದು ಹೇಳಿದ್ದಾರೆ. "..." ಈ ರೀತಿಯ ನಿಯಮಗಳನ್ನು ತಮ್ಮ ಬಳಿಯಲ್ಲಿ ನಾನು ಪಡೆದೆನು. ಅದನ್ನು ನೆನಪು ಮಾಡಿಕೊಳ್ಳುತ್ತೇನೆ. ಹಾಗಿಲ್ಲದಿದ್ದರೆ ಅಪಚಾರವಾಗುವುದು. ಈ ಹಿಂದೆ ಹೇಳಿದ ನಿಯಮಗಳನ್ನು ಮೀರಿರುವುದರಿಂದ ಉಂಟಾದ ಯಾವ ಅಪರಾಧವಿದೆಯೋ ಅಲ್ಲದೆ ಬೇರೆ ರೀತಿಯಿಂದಲೂ ಮಾಡಿರುವ ಅಪರಾಧ ಯಾವದಿದೆಯೋ ಅವೆಲ್ಲವನ್ನೂ ಕೃಪೆಯಿಂದ ಕ್ಷಮಿಸಬೇಕೆಂದು ವಿಜ್ಞಾಪನೆ.

ಎರಡೂಮುಕ್ಕಾಲು ರೂಪಾಯಿಗಳನ್ನು ನಾನು ತಮಗೆ ಕೊಡಬೇಕೆಂದು ತಿಳಿದಿದ್ದೇನೆ. ಹೇಗೆಂದರೆ ಏಕಾಗ್ನಿ ಕಾಂಡಕ್ಕೆ 1 ರೂಪಾಯಿ ಬೆಲೆ, ರಘುವಂಶಕ್ಕೆ 1 ರೂಪಾಯಿ ಬೆಲೆ. ನಂಜನಗೂಡು ನಗರಕ್ಕೆ ಹೋಗಲು ಮತ್ತು ಅಲ್ಲಿ ಖರ್ಚು ಮಾಡಲು 12 ಆಣೆ. ಇವು ಒಟ್ಟು ಸೇರಿ 2 $^{3}/_{4}$ ರೂಪಾಯಿ ಆಗುತ್ತದೆ. ಆಗ ನಾನು ತಮಗೆ ಕೊಡಲು ಶಕ್ತನಾಗುವೆನು. ಮುಂದಿನ ಪುಷ್ಯಮಾಸದಲ್ಲಿ ನನ್ನ ಮಿತ್ರನಾದ ಕೃಷ್ಣಮೂರ್ತಿಗೆ ಹಣವನ್ನು ಕಳುಹಿಸುವೆನು. ತಾವು 2 $^{3}/_{4}$ ರೂಗಳನ್ನು ಕೃಪೆ ಮಾಡಿ ಅವನಿಂದ ತೆಗೆದುಕೊಳ್ಳಿ ಎಂದು ಎರಡನೆಯ ವಿಜ್ಞಾಪನೆ.

ನಮ್ಮೆಲ್ಲರ ಮಿತ್ರನಾಗಿದ್ದ, ಪಾಠಶಾಲೆಯಲ್ಲಿ ಹಿಂದೆ ಓದುತ್ತಿದ್ದ ಬಿ.ಎಸ್. ಸೀತಾರಾಮು ಅಕಾಲ ಮೃತ್ಯುವಿಗೆ ತುತ್ತಾದನೆಂಬುದು ತುಂಬ ದುಃಖದ ವಿಷಯ. ಒಂದೆರಡು ದಿನಗಳಾದರೂ ಈ ವಿಷಯ ಹೇಳಬೇಕು. ಇದು ಕಿವಿಗೆ ಪೀಡೆ ಉಂಟು ಮಾಡುವುದು. ಈ ವಾಕ್ಯ ಬರೆಯಲು ನನ್ನ ಕೈ ಮುಂದೆ ಬರುತ್ತಿಲ್ಲ, ಹಿಂದೆ ಸರಿಯುತ್ತಿದೆ. ಈ ಕಾಗದವನ್ನು ರಾತ್ರಿ ಬರೆದ ಕಾರಣ ಅಕ್ಷರಸ್ಖಾಲಿತ್ಯಗಳು ಅನೇಕ ಇವೆ. ಆದರೆ ಇದು ಬುದ್ಧಿಪೂರ್ವಕವಾಗಿ ಬರೆದುದಲ್ಲ. ಆದರೂ ಈ ರೀತಿ ದೋಷಗಳಿದ್ದರೆ ಅದನ್ನು ಕ್ಷಮಿಸಬೇಕೆಂದು ಮೂರನೆಯ ವಿಜ್ಞಾಪನೆ.

ಇಲ್ಲಿ ನಾನೂ ನನ್ನ ಸ್ನೇಹಿತರೂ ಸುಖದಿಂದಿದ್ದೇವೆ. ತಮ್ಮ ಆಶೀರ್ವಾದ ಪತ್ರಿಕೆಯನ್ನು ನಿರೀಕ್ಷಿಸುತ್ತೇನೆ.

೩೭೮

೩. ಕಾಂಡ ಸಾಕೆ ?

ಕುಶಲಮ್ ಶ್ರೀಃ ಮೈಸೂರು

17.1.1942

ಶ್ರೀಮತಾಮತ್ರಭವತಾಂ ವಿದುಷಾಂ ಶಾಸ್ತ್ರಿಣಾಂ ಸನ್ನಿಧೌ। ವಿಜ್ಞಪ್ತಯಶ್ಚ

ಸಂಪ್ರತಿ।

ಅದ್ಯಾಹವಮ್ ಅಪಠಂಚಾಶೀಃಪತ್ರಿಕಾವಮ್। ಯದ್ಯಪಿ ಏಕೋ ಮಾಸೋ ಅತ್ಯಗಾದಾಶೀಃಪತ್ರಿಕಾಮಧಿಗಮ್ಯ। ತಥಾಪಿ ಕೈಶ್ಚಿದ್ಧೇತುಭಿರ್ನ ಪ್ರಾಭೂವಮದ್ಯಾವಧಿ ಪತ್ರಿಕಾಲೇಖನಾಯ। ತತ್ರೈಕಂ ಕಾರಣಮಾಸ್ಮಾಕೀ ಅಲಸತಾಪಿ। ಅತೋಽಹಂ ಪ್ರಾರ್ಥಯೇ ಕೃಪಯಾತ್ರ ಭವಂತೋಽಪರಾಧಮಿಮಂ ಮರ್ಷಯನ್ತ್ವಿತಿ। ವಿಶ್ವಸಿಮಿ ಚಾತ್ರ ಭವದ್ಭಿರಪರಾಧೋಽಯಂ ಕ್ಷಮ್ಯತ ಇತಿ।

ಯಾವದಹಂ ಪ್ರಾಪಂ ವಿದ್ಯಾರ್ಥಿವೇತನಂ ತಾವದ್ವಿರಾಮೋ ದತ್ತೋ ರಾಜಕೀಯಪ್ರಾಚ್ಯಕೋಶಾಗಾರಸ್ಯ (The Government Oriental Library) ಸ ಚ ಪೌಷಕೃಷ್ಣಾಷ್ಟಮ್ಯಾಂ ವ್ಯತ್ಯಕ್ರಾಮತ್ (ಸಮಾಪ್ತಿಮಗಾತ್) ತಾ.10.1.42 ಶಾಂಕರೀಯಂ ರೂಪ್ಯಕದ್ವಯಂ ಗೃಹೀತ್ವಾ ಶ್ರೀಮತೇ ರಾಮಶರ್ಮಣೇ ದತ್ತಮ್। ಸ ಚ ಪುಸ್ತಕದ್ವಯಾಯ ಪ್ರಯತಮಾನ ಆಸ್ತೇ। ಪ್ರಾಯೋ ಲಪ್ಸ್ಯತೇ ಚ ಪುಸ್ತಕದ್ವಯಂ ಪಾದಮೂಲ್ಯೇನ। ಯದ್ಯೇವಂ ತರ್ಹಿ ಪ್ರೇಷಯಿತಾಸ್ಮಿ ದ್ವಿತ್ರಿ ದಿನಾಭ್ಯಂತರ ಏವ ಪುಸ್ತಕದ್ವಯಮ್। ಮನ್ಯೇ ಚ ತತ್ರಭವತಾಂ ವಿದ್ಯಾಸಂಬಂಧೋ ವಿವರ್ಧತ ಇತಿ।

ನೈವಾತ್ರ ಸಂದದಧತ್ ತಿರುವೇಂಕಟಭಟ್ಟಾಚಾರ್ಯೋಽಸ್ತಿ। ವಿರಾಮೇ। ಅತೋಽಹಮೇವಾಪ್ರಾಕ್ಷಿಷಂ.

ಚಕ್ರವರ್ತ್ಯಯ್ಯಂಗಾರ್ಯ ಮುದ್ರಣಾಲಯೇ ವೈದ್ಯನಾಥೀಯಂ ಧರ್ಮಶಾಸ್ತ್ರಮ್। ತತ್ರಾಹತ್ಯ ಕಾಂಡಚತುಷ್ಟಯಮೇವ ಮುದ್ರಾಪ್ಯ ಕ್ರಯಾಯ ಸಿದ್ಧಮಸ್ತಿ ಕ್ರಯ್ಯಮ್) ತತ್ರೈಕಮಾಹ್ನಿಕ ಕಾಂಡಮೇವ ತತ್ತು ಅತ್ರಭವತೋ ನಿಕಷಾ ವರ್ತತ ಏವೇತ್ಯಹಮನುಮಿನೋಮಿ। ಅವಶಿಷ್ಟೇ ಕಾಂಡತ್ರಿತಯೇ ಪ್ರಥಮಂ ತಿಥಿನಿರ್ಣಯಕಾಂಡಂ। ದ್ವಿತೀಯಂ ವರ್ಣಾಶ್ರಮಕಾಂಡಂ। ತೃತೀಯಂ ಶ್ರಾದ್ಧಕಾಂಡಮ್। ತತ್ರೈಕಸ್ಯ ಕಾಂಡಸ್ಯ ಏಕಮೇವ ಪುಸ್ತಕಮವಶಿಷ್ಟಮಿತಿ ತನ್ಮೂಲ್ಯಮಿದಾನೀಂ ಸಪಾದರೂಪಕದ್ವಯಮ್ (2.4.0) ಪೂರ್ವಂತು ಪಾದೋನರೂಪ್ಯಕ ದ್ವಯಮ್ (1.12.0) ತತಶ್ಚಾಹ್ನಿಕಕಾಂಡವರ್ಜಂ ಕಾಂಡತ್ರಿತಯಸ್ಯಾಹತ್ಯ ಮೂಲ್ಯಂ ಸಾರ್ಧರೂಪ್ಯಪಂಚಕಮ್ (5.8.0)॥ ಯದಿ ಲಿಖ್ಯತೇ ಕಾಂಡತ್ರಿತಯಮೇವ ಸಾಧಯಿತುಂ ತರ್ಹಿ ಅವಶ್ಯಂ ಸಾಧಯಿತಾಸ್ಮಿ - ಅನುಮಿನೋಮಿ ಚ ಮಮಾ-ಲಿಖಿತಪೂರ್ವಾಂ ಪತ್ರಿಕಾಮತ್ರಭವಂತೋಽಧ್ಯಗುರಿತಿ। ತತ್ರ ಯಚ್ಚ ಯಾವಚ್ಚಾತ್ರಭವತಾಂ ಸ್ವೀಯಾಭಿಜನಪ್ರತ್ಯಾವರ್ತನೇ ಲಿಖಿತಂ ತತ್ಸರ್ವಮಪಿ ಪೂಜ್ಯಪಾದಾನಾಮಸ್ಮಾಕಂ ಗುರುವರ್ಯಾಣಾಂ ಮತ್ಯೈವ ನ ತು ಸ್ವಮನೀಷಯಾ। ಅತ್ರಭವಂತೋ ವಿದುರೇವ ನೈಕೇಷು ವಿಷಯೇಷು ಅಹಂ ಯಾವದ್ಭಾರತರಾಷ್ಟ್ರೀಯ-ಮಹಾಸಭಾನುದಾಯೀತಿ। ಅತೋಹಮಭಿಪ್ರೈಮಿ ಅಧಿಗತವಿದ್ಯಾನಾಂ ಗ್ರಾಮೇ ವಾಸಃ ತಥಾ ಪ್ರಾಕೃತಾನಾಂ ಜನಾನಾಂ ಬೋಧನಂ ಚೈವ ವರೀಯ ಇತಿ। ನ ಜಾನೇ ಮಮ ಪ್ರಾಣಯಾತ್ರಾನೌಃ ಕಾಂ ದಿಶಮಭಿಪ್ರಚಾಲಿತೇತಿ। ಪರಮ್ಮದೀಯೋ ಮುಖ್ಯ ಆಶಯಸ್ತು ಯದ್ಯತ್ರಭವಂತೋ ಯಾವದ್ವರ್ಷಚತುಷ್ಟಯಮಧೀತ್ಯ ಸ್ವಾಭಿಜನಂ ಪ್ರತ್ಯಾವರ್ತಿಷ್ಯಂತ ತರ್ಹಿ ಭೂಯಃ ಪ್ರಯೋಜನಮಭವಿಷ್ಯದಿತಿ। ಅಸ್ತ್ವಿಯಂ ಕಥಾ।

ಅತ್ರತ್ಯಾ ವಯಂ ಅಹಂ ಮಿತ್ರಮಣಿ ಕೃಷ್ಣಮೂರ್ತೀ, ನಾರಾಯಣ ಭಟ್ಟಾಚಾರ್ಯಾಃ ಮಿತ್ರವೃಂದಂ ಚೇತಿ ಬಹುತ್ವೋಪಪತ್ತಿರಿತಿ ಭಾವಃ। ಮನ್ಯೇ ಚಾತ್ರಭವಂತಃ ಕುಶಲಿನಃ ಸುಖಿನಶ್ಚೇತಿ ದಿಷ್ಟ್ಯಾ ಕುಶಲಿನಃ ಸುಖಿನಶ್ಚ। ನಿರೀಕ್ಷಿತಾಹೇ ಆಶೀಃಪತ್ರಿಕಾಮ್। ಯದಿ ತತ್ರಭವದ್ಭಿಃ ಪ್ರತ್ಯಹಂ ಪಠ್ಯತೇ ವೃತ್ತಪತ್ರಿಕಾ ತತ್ರ ಪ್ರತಿರೂಪ್ಯಕಮಾಣಕದ್ವಯಮಲ್ಪೀಕ್ರಿಯತೇ ಮೂಲ್ಯೇ (ಕಮೀಶನ್) ತರ್ಹಿ ಪಾಠಶಾಲೀಯಾ ವಾರ್ತಾ ಜ್ಞಾತೈವೇತಿ ನ ತದರ್ಥಮಿಹ ಪ್ರಯತ್ಯತೇ। ಕರ್ತವ್ಯಮೇವೇತಿ ನ ಮದೀಯಂ ಕೃತ್ಯಂ ಪ್ರಶಂಸಾರ್ಹಮ್।

ಉಪನಿಪತಿತಾಮಸಹ್ಯಾಮಾಪದಂ ಸೋಢುಂ ಪೂಜ್ಯಾಯ ಶ್ರೀಮತೇ ಮುತ್ತಣ್ಣೋಪಾಧ್ಯಾಯಾಯ ಶಕ್ತಿಂ ಪ್ರಯಚ್ಛತಾಂ ಭಗವಂತೌ ಶಿವಾವಿತಿ ಪ್ರಾರ್ಥಯೇ

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪೀ।
ಲಲಾಟಲಿಖಿತಾರೇಖಾ ಪರಿಮಾರ್ಷ್ಟುಂ ನ ಶಕ್ಯತೇ॥

ಇತ್ಯುಕ್ತ್ವಾ ವಿರಮಾಮಿ।

ಪೂಜ್ಯರಾದ ಶಾಸ್ತ್ರಿಗಳ ಸನ್ನಿಧಿಯಲ್ಲಿ ವಿಜ್ಞಾಪನೆಗಳು. ಈಗ ನಾನು ತಮ್ಮ ಆಶೀರ್ವಾದ ಪತ್ರಿಕೆ ಓದಿದೆ. ಈ ಪತ್ರ ನನಗೆ ಬಂದು ಒಂದು ತಿಂಗಳಾಯಿತು. ಆದರೂ ಕೆಲವಾರು ಕಾರಣಗಳಿಂದ ಕಾಗದ ಬರೆಯಲು ಆಗಲಿಲ್ಲ. ಇದರಲ್ಲಿ ನನ್ನ ಸೋಮಾರಿತನವೂ ಒಂದು ಕಾರಣ. ಆದ್ದರಿಂದ ದಯಮಾಡಿ ನನ್ನ ಈ ಅಪರಾಧವನ್ನು ಮನ್ನಿಸಬೇಕೆಂದು ಪ್ರಾರ್ಥನೆ. ತಾವು ಈ ಅಪರಾಧವನ್ನು ಕ್ಷಮಿಸುತ್ತೀರೆಂದು ನಂಬಿರುವೆ.

ನಾನು ವಿದ್ಯಾರ್ಥಿ ವೇತನ ಪಡೆದಾಗ The Government Oriental Library ಗೆ ರಜಾ ಇತ್ತು. ಆ ವಿರಾಮವು ಪುಷ್ಯ ಕೃಷ್ಣ ಅಷ್ಟಮಿಯಂದು ಮುಗಿಯಿತು. 10.1.42 ರಂದು ಶಂಕರನ ಎರಡು ರೂಪಾಯಿಗಳನ್ನು ತೆಗೆದುಕೊಂಡು ರಾಮಶರ್ಮನಿಗೆ ಕೊಟ್ಟೆನು. ಅವನಾದರೋ ಎರಡು ಪುಸ್ತಕಗಳನ್ನೂ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಪ್ರಾಯಃ 12 ಆಣೆಗೆ ಆ ಎರಡು ಪುಸ್ತಕಗಳೂ ದೊರೆಯುತ್ತವೆ. ಹಾಗೆ ದೊರಕಿದರೆ ಒಂದೆರಡು ದಿನಗಳಲ್ಲಿ ಆ ಎರಡು ಪುಸ್ತಕಗಳನ್ನು ಕಳಿಸುವೆನು. ತಮ್ಮ ವಿದ್ಯಾಸಂಬಂಧವಾದ ಕಾರ್ಯವು ಬೆಳೆಯುತ್ತಿದೆ ಎಂದು ನಂಬಿರುವೆ. ತಿರುವೇಂಕಟಭಟ್ಟಾಚಾರ್ಯರು ರಜಾದಲ್ಲಿದ್ದುದರಿಂದ ಇದನ್ನು ಪಡೆಯಲಾಗಲಿಲ್ಲ. ಆದ್ದರಿಂದ ನಾನೇ ಚಕ್ರವರ್ತಿ ಅಯ್ಯಂಗಾರ್ಯರ ಮುದ್ರಣಾಲಯದಲ್ಲಿ ವೈದ್ಯನಾಥೀಯ ಧರ್ಮಶಾಸ್ತ್ರ ಕೇಳಿದೆ. ಅಲ್ಲಿ ನಾಲ್ಕು ಕಾಂಡಗಳನ್ನು ಮಾತ್ರ ಮುದ್ರಿಸಿ ಮಾರಾಟಕ್ಕೆ ಇಟ್ಟಿದ್ದಾರೆ. ಅದರಲ್ಲಿ ಆಹ್ನಿಕ ಕಾಂಡವು ತಮ್ಮ ಬಳಿಯಲ್ಲಿದೆ ಎಂದು ಊಹಿಸುವೆನು. ಉಳಿದ ಮೂರು ಕಾಂಡಗಳಲ್ಲಿ ಮೊದಲನೆಯದು ತಿಥಿನಿರ್ಣಯಕಾಂಡ ; ಎರಡನೆಯದು ವರ್ಣಾಶ್ರಮ ಕಾಂಡ ; ಮೂರನೆಯದು ಶ್ರಾದ್ಧ ಕಾಂಡ. ಅದರಲ್ಲಿ ಒಂದು ಕಾಂಡವುಳ್ಳ ಒಂದೇ ಒಂದು ಪುಸ್ತಕವು ದೊರೆಯುತ್ತಿದೆ. ಈಗ ಅದರ ಬೆಲೆ 2-4-0. ಹಿಂದೆ ಅದರ ಬೆಲೆ 1-12-0. ಆದ್ದರಿಂದ ಆಹ್ನೀಕಕಾಂಡ ಬಿಟ್ಟು ಉಳಿದ ಮೂರು ಕಾಂಡಗಳ ಬೆಲೆ ಒಟ್ಟು 5-8-0. ಮೂರು ಕಾಂಡಗಳೇ ಸಾಕು ಎಂದು ತಾವು ಬರೆದು ತಿಳಿಸಿದರೆ ಅದನ್ನು ತರಲು ಪ್ರಯತ್ನಿಸುವೆ. ನನ್ನಿಂದ ಬರೆದ ಕಾಗದವನ್ನು ತಾವು ಓದಿದ್ದೀರೆಂದು ಊಹಿಸುತ್ತೇನೆ. ಆ ಪತ್ರದಲ್ಲಿ ಪೂಜ್ಯರ ಬಗ್ಗೆ ತಮ್ಮ ಬಂಧುಗಳಿಂದಾದ ತಿರಸ್ಕಾರದ ವಿಷಯದಲ್ಲಿ ಏನು ಬರೆದಿದೆಯೋ ಅದೆಲ್ಲವೂ ನಮ್ಮ ಗುರುಗಳ ಅಭಿಪ್ರಾಯದಂತೆ ಬರೆದಿರುವುದು, ನನ್ನ ಸ್ವಬುದ್ಧಿಯಿಂದ ಅಲ್ಲ. ತಾವು ಅನೇಕ ವಿಷಯಗಳಲ್ಲಿ ತಿಳಿದವರು. ನಾನು ಭಾರತ ರಾಷ್ಟ್ರೀಯ ಮಹಾಸಭೆಯ ಅನುವರ್ತಿ. ಆದ್ದರಿಂದ ವಿದ್ಯೆಯನ್ನು ಸಂಪಾದಿಸಿದವರು ಹಳ್ಳಿಯಲ್ಲಿ ವಾಸ ಮಾಡಿ, ತಿಳಿಯದ ಸಾಮಾನ್ಯ ಜನರಿಗೆ ತಿಳಿಸಿಕೊಡುವದೇ ಉತ್ತಮ ಎಂದು ನಾನು ಭಾವಿಸುತ್ತೇನೆ. ನನ್ನ ಜೀವನ ಯಾತ್ರೆ ಯಾವ ದಿಕ್ಕಿಗೆ ಹೋಗುವುದೆಂದು ನನಗೆ ತಿಳಿಯದು. ಆದರೆ

ನನ್ನ ಮುಖ್ಯ ಆಶಯ ನಾಲ್ಕು ವರ್ಷ ಕಾಲ ಅಧ್ಯಯನ ಮಾಡಿ ತಾವು ತಮ್ಮವರನ್ನು ಬಿಟ್ಟುಹೋದುದು ಒಂದು ರೀತಿಯಲ್ಲಿ ತಮಗೆ ಪ್ರಯೋಜನ ಆಗಿರಬಹುದೇನೊ. ಈ ಕಥೆ ಇರಲಿ. ಇಲ್ಲಿ ನಾನು, ಮಿತ್ರ ಕೃಷ್ಣಮೂರ್ತಿ, ನಾರಾಯಣಭಟ್ಟ ಉಳಿದ ಮಿತ್ರವೃಂದದವರು ಕ್ಷೇಮದಿಂದಿದ್ದೇವೆ. ತಾವೂ ಸಹ ಅದೃಷ್ಟದಿಂದ ಸುಖ ಕ್ಷೇಮದಿಂದಿದ್ದೀರೆಂದು ತಿಳಿದಿರುವೆನು. ತಮ್ಮ ಆಶೀರ್ವಾದ ಪತ್ರಿಕೆ ನಿರೀಕ್ಷಿಸುತ್ತೇನೆ. ತಾವು ಪ್ರತಿದಿನವೂ ವೃತ್ತಪತ್ರಿಕೆಯನ್ನು ಓದುತ್ತೀರಲ್ಲವೇ? ಅಲ್ಲಿ ಪ್ರತಿ ರೂಪಾಯಿಗೆ ಎರಡು ಆಣೆ ಮೌಲ್ಯದಲ್ಲಿ ಕಮೀಷನ್ ಪಡೆಯುವುದಾದರೆ ಪಾಠಶಾಲೆಯ ವಾರ್ತೆಯು ತಿಳಿಯುತ್ತದೆ. ಆದ್ದರಿಂದ ಇಲ್ಲಿ ನಾನು ಪ್ರಯತ್ನಿಸುತ್ತಿಲ್ಲ. ಇದು ಮಾಡಬೇಕಾದುದೇ ಆದ್ದರಿಂದ ನನ್ನ ಕಾರ್ಯವು ಪ್ರಶಂಸಾರ್ಹವೂ ಅಲ್ಲ. ಈ ತೊಂದರೆಗಳನ್ನು ಸಹಿಸುವ ಶಕ್ತಿಯನ್ನು ಪೂಜ್ಯರಾದ ಮುತ್ತಣ್ಣೋಪಾಧ್ಯಾಯರಿಗೆ ಪಾರ್ವತೀ ಪರಮೇಶ್ವರರು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಹಣೆಯಬರಹವನ್ನು ಹರಿಹರಬ್ರಹ್ಮರು ಸಹ ಅಳಿಸಲು ಸಾಧ್ಯವಿಲ್ಲ. ಇಷ್ಟು ಹೇಳಿ ಈ ಪತ್ರ ಮುಗಿಸುತ್ತೇನೆ.

೩೭೯

ಶಿವನೇ ರಕ್ಷಕ

ಕುಶಲಮ್ ಶ್ರೀಃ ಮೈಸೂರು

7.5.1942

ಅಯಿ ಮಾನ್ಯಾಃ

ಸತ್ಯಾಮಪಿ ಗರೀಯಸ್ಯಾಂ ದಿದೃಕ್ಷಾಯಾಂ ಕತಿಪಯಾದ್ಧೇತೋರ್ಗತೇ ವಿರಾಮಕಾಲೇ ನಾಹಮತ್ರ ಭವತೋ ದ್ರಷ್ಟುಂ ಪ್ರಾಭೂವಮಿತಿ ವಿಷೀದಾಮಿ ವಿಜ್ಞಾಪಯಿತುಮ್। ನೈಸರ್ಗಿಕಜ್ಯೇಷ್ಠಮಾಸೇ ಸಾಮಾನ್ಯತೋ ಮಮ ಕನೀಯಸ್ಯಾಸ್ಸ್ವಸುರುದ್ವಾಹೋ ಭವಿತಾ। ತದಾಹಮಾಗಂತಾಸ್ಮಿ, ತಥಾವಶ್ಯಮತ್ರಭವತೋ ದ್ರಷ್ಟಾಸ್ಮಿ ಚ।

ಏಕಸ್ಮಾತ್ಸಪ್ತಾಹಾತ್ಪೂರ್ವಮೇವಾಹಮಶ್ರೌಷಮತ್ರ ಭವತಾಮಿದಾನೀಂತನೀ ಸಾಂಸಾರಿಕೀ ಅವಸ್ಥಾ ಶೋಚನೀಯೇತಿ। ಅನ್ಯಥಾ ಪ್ರಾಕ್ತನಂ ವಿಜ್ಞಪ್ತಿಪತ್ರಂ ಸಂಕ್ಷೇಪತೋ ಲಿಖ್ಯೇತ। ಪಿಷ್ಟಪೇಷಣನ್ಯಾಯಾನ್ನೇದಾನೀಮಹಂ ತಾಮವಸ್ಥಾಂ ವಿವೃಣೋಮಿ। ಶೋಕ ಸಹಿಷ್ಣುತಾಮತ್ರಭವದ್ಭ್ಯೋ ಯಚ್ಛತ್ವಿತಿ ಭಗವತಾಸ್ಮಾಕೀ ಪ್ರಾರ್ಥನಾ। ಸರ್ವತ್ರಾಪಿ ಶಿವ ಏವ ಶರಣಂ ಹಿ।

ಅಸ್ತು । ನೇದಾನೀಮತ್ರ ಶ್ರೀಮತಶ್ಶಂಕರಸ್ಯ ಕನೀಯಾನ್ ಭ್ರಾತಾ ಸನ್ನಿದಧಾತಿ। ಆಸ್ಮಾಕಸ್ಯ ಅನಂತನಾರಾಯಣಸ್ಯ Room No.12 ವಿವಾಹಾರ್ಥಂ ಸ ಸಾಲಿಗ್ರಾಮಗ್ರಾಮಂ ಗತಸ್ತಿಷ್ಠತಿ। ಅದ್ಯ ಶ್ವೋ ವಾ ಸ ಪರ್ಯಾವರ್ತತೇ ತತಶ್ಚ ಪ್ರಷ್ಟಾಸ್ಮಿ ಪುಸ್ತಕಪ್ರೇಷಣವಿಷಯೇ ಸ ಕಿಂ ವಾನ್ವಸ್ಯಾದಿತಿ। ಯದಿ ಪುಸ್ತಕಚತುಷ್ಟಯಂ ನ ಪ್ರೇಷಿತಂ ತರ್ಹಿ ಮಿತ್ರಮಣಿನಾ ಕೃಷ್ಣಮೂರ್ತಿನಾನ್ಯೈರ್ವಾ ಸಾರ್ಧಂ ಪ್ರೇಷಯಿತಾಸ್ಮಿ। ನಾದ್ಯ ಯಾವತ್ ಕೃಷ್ಣಮೂರ್ತೀ ಮಹಿಶೂರಪುರೀಮಾಗತಃ ಶ್ರುತಂ ಚ ಸೋಮನಹಳ್ಳೀಗ್ರಾಮಮಧ್ಯಾಸ್ತ ಇತಿ

ಯದ್ಯತ್ರತ್ಯಾನ್ ಪಂಡಿತಪ್ರಕಾಂಡಾನ್ಪೃಚ್ಛಾಮಿ ತಥಾಪಿ ನೋಚೇದನ್ಯಕಾರ್ಯಾರ್ತಿಪಾತಸ್ತರ್ಹಿ ಧರ್ಮಸಿಂಧುಂ ನಿರ್ಣಯಸಿಂಧುಂ ವಾವಲೋಕ್ಯ "ಉದಿತೇ ಭಾರ್ಗವೇ (ಶುಕ್ರೇ) ಗುರುಮೌಢ್ಯಮುದ್ವಾಹಕರ್ಮಣಿ ದೋಷತ್ವೇನ ಪರಿಗಣಿತಮುತ ನ" ಇತಿ ಪ್ರಶ್ನಸ್ಯೋತ್ತರಂ ಕೃಪಯಾತ್ರ ಭವಂತೋಽನುಗೃಹ್ಣಂತ್ವಿತ್ಯಾಸ್ಮಾಕೀ ವಿಜ್ಞಪ್ತಿಃ।

ದಿಷ್ಟ್ಯಾ ಕುಶಲಿನಸ್ಸುಖಿನಶ್ಚ ಅತ್ರ ಆಸ್ಮಾಕಾಸ್ಸಮೇ।

ಅತ್ರಭವದೀಯಃ ಸು.

ಮಾನ್ಯರೆ, ತಮ್ಮನ್ನು ನೋಡುವ ಆಸೆ ಅತಿಯಾಗಿದ್ದರೂ ರಜಾ ಕಾಲದಲ್ಲಿ ತಮ್ಮನ್ನು ನೋಡಲು ಆಗಲಿಲ್ಲ ಎನ್ನುವುದು ದುಃಖದಾಯಕವೆಂದು ವಿಜ್ಞಾಪಿಸುತ್ತೇನೆ. ಜ್ಯೇಷ್ಠ ಮಾಸದಲ್ಲಿ ನನ್ನ ಚಿಕ್ಕ ಸೋದರಿಯ ವಿವಾಹ ನಡೆಯಲಿದೆ. ಆಗ ನಾನು ಬರುವೆ. ತಮ್ಮನ್ನು ಖಂಡಿತ ನೋಡುವೆನು.

ಒಂದು ವಾರದ ಹಿಂದೆಯೇ ತಮ್ಮ ಈಗಿನ ಸಂಸಾರದ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ ಎಂದು ಕೇಳಿದೆನು. ಹಾಗಿಲ್ಲದಿದ್ದರೆ ಹಿಂದಿನ ವಿಜ್ಞಾಪನ ಪತ್ರವನ್ನೇ ಸಂಕ್ಷೇಪವಾಗಿ ಬರೆಯಬೇಕು. ಪಿಷ್ಟಪೇಷಣ ನ್ಯಾಯದಂತೆ ಹಿಂದಿನದನ್ನು ನಾನು ಬರೆಯುವುದಿಲ್ಲ. ದುಃಖ ಸಹಿಸುವ ಶಕ್ತಿಯನ್ನು ಭಗವಂತನು ತಮಗೆ ಕೊಡಲೆಂದು ಪ್ರಾರ್ಥನೆ. ಎಲ್ಲ ಕಡೆಯೂ ಶಿವನೇ ರಕ್ಷಕನಲ್ಲವೆ ?

ಇರಲಿ. ಈಗ ಇಲ್ಲಿ ಶಂಕರನ ಚಿಕ್ಕ ತಮ್ಮನು ನಮ್ಮ ಅನಂತನಾರಾಯಣನ ಹನ್ನೆರಡನೆಯ ಕೊಠಡಿಯಲ್ಲಿ ಇಲ್ಲ. ಅವನು ವಿವಾಹಕ್ಕೋಸ್ಕರ ಸಾಲಿಗ್ರಾಮಕ್ಕೆ ಹೋಗಿದ್ದಾನೆ. ಇವತ್ತೋ ನಾಳೆಯೋ ಅವನು ಬರಬಹುದೆಂದು ತಿಳಿದಿದ್ದೇನೆ. ಪುಸ್ತಕವನ್ನು ಕಳುಹಿಸುವ ವಿಷಯದಲ್ಲಿ ಅವನು ಏನು ಮಾಡಿದನೋ ಗೊತ್ತಿಲ್ಲ. ನಾಲ್ಕು ಪುಸ್ತಕ ಕಳುಹಿಸದಿದ್ದರೆ, ಮಿತ್ರನಾದ ಕೃಷ್ಣಮೂರ್ತಿ ಅಥವಾ ಬೇರೆ ಯಾರ ಮುಖಾಂತರವಾದರೂ ಕಳಿಸುವೆ. ಈವರೆಗೂ ಕೃಷ್ಣಮೂರ್ತಿ ಮೈಸೂರಿಗೆ ಬಂದಿಲ್ಲ. ಅವನು ಸೋಮನಹಳ್ಳಿಗೆ ಹೋಗಿರುವನೆಂದು ತಿಳಿಯಿತು.

ಇಲ್ಲಿನ ಶ್ರೇಷ್ಠ ಪಂಡಿತರನ್ನು ಕೇಳಿದ್ದೇನೆ. ಆದರೂ ತಮ್ಮ ಬೇರೆ ಕೆಲಸದ ಮಧ್ಯೆಯೂ ಧರ್ಮಸಿಂಧು, ನಿರ್ಣಯಸಿಂಧು ನೋಡಿ "..." (ಶುಕ್ರನು ಉದಿತನಾಗಿದ್ದು ಗುರುವು ಅಸ್ತನಾಗಿದ್ದಾಗ ವಿವಾಹ ಒಳ್ಳೆಯದೆ ಅಥವಾ ದೋಷವೆ ಎಂಬ ಪ್ರಶ್ನೆಗೆ) ಉತ್ತರ ದಯಮಾಡಿ ಕೊಡಬೇಕಾಗಿ ಪ್ರಾರ್ಥನೆ. ಇಲ್ಲಿ ನಾವೆಲ್ಲರೂ ಕುಶಲಿಗಳು. ಅಲ್ಲಿ ತಾವು ಕುಶಲಿಗಳೆಂದು ತಿಳಿದಿದ್ದೇನೆ.

೩೮೦

ವರ್ಗ ಮಾಡಿಸಿಕೊಡಿ

ಕುಶಲಮ್ ಶ್ರೀಃ 16.7.1942

ವೇದಮೂರ್ತಿ। ಬ್ರಹ್ಮಶ್ರೀ

ಬಿ.ಯಸ್. ಸುಬ್ಬರಾಯಮಹೋದಯಾನಾಂ ಚರಣ ಸನ್ನಿಧೌ ಸಾಷ್ಟಾಂಗಪ್ರಣಾಮಃ। ತತ್ರಭವತಾಂ ಮಹೋದಯಾನಾಂ ಕ್ಷೇಮಲಾಭಾದೇವಂ ಪ್ರಾರ್ಥಯಾಮಿ। ಇದಂ ಪತ್ರಂ ಭವತಾಂ ಮಹದಾಶ್ಚರ್ಯಕಾರಿ ಭವೇದಿತಿ ಅಹಂ ತರ್ಕಯಾಮಿ। ಅತಃ ಮಮ ಪರಿಚಯಂ ತಾವತ್ ಪ್ರಥಮಂ ನಿವೇದಯಾಮಿ। ಸಂಸ್ಕೃತಪಾಠಶಾಲಾಯಾಮ್ ಅಷ್ಟಮಕೊಠರೇ ಅಹಂ ನ್ಯವಸಮ್। ತದಾ ಭವಂತಃ 19 ಕೊಠರೇ ಆಸನ್। ಅಪಿ ಚ ಮಮ ವ್ಯಾಕರಣಶಾಸ್ತ್ರಸಿದ್ಧಾಂತ ಕೌಮುದೀ ಪಾಠಪ್ರವಕ್ತಾರಃ ಭವಂತ ಏವ। ಅಹಂ ಬೇಲೂರು ಗ್ರಾಮೀಣಃ ಸಾಹಿತ್ಯಶಾಸ್ತ್ರಾಧ್ಯಾಯೀ। ಏತಾವಾನ್ ಮಮ ಪರಿಚಯಃ। ಅಲಂ ಸಂಭಾವಯಾಮಿ। ಅಸ್ತು ಪ್ರಕೃತೇ ಅಹಂ ಅತ್ರ ಅಧ್ಯಾಪಕೋಽಸ್ಮಿ। ಅತ್ರಾಗತ್ಯ 6 ವರ್ಷಾಣಿ ಅಭೂವನ್। ಅಸ್ಮಿನ್ ಮಹಾಗ್ರಾಮೇ ಷಡ್ವರ್ಷಾಧಿಕಂ ಜೀವೇಯಮ್ ಇತಿ ಮಹತ್ ಕಠಿಣಮ್ ಅಸ್ತಿ। ಅತಃ ತತ್ರಭವತಾಂ ಸನ್ನಿಧೌ ಅಹು ಪ್ರಾರ್ಥಯಾಮಿ ಕಿಮಿತಿ ಚೇತ್ ತತ್ರ ಪೂಜ್ಯಪಾದಾನಾಂ ವೇಂಕಟರಾಮಯ್ಯ ಮಹೋದಯಾನಾಂ ಮಹತ್ಪ್ರಯತ್ನೇನ ಮಮ ಅಸ್ಮಾತ್ ಗ್ರಾಮಾತ್ ಗ್ರಾಮಾಂತರಾಯ ವರ್ಗಾಂತರಂ ಕಾರಯಿತುಂ ಭವತಾಂ ಸಾಹಾಯ್ಯಮ್ ಆವಶ್ಯಕಮ್ ಅಸ್ತಿ ಭವಂತಃ ಮಾಂ ಕಷ್ಟಪೀಡಿತಂ ಭ್ರಾತರಮ್ ಇತಿ ಜ್ಞಾತ್ವಾ ಮಹೋಪಕಾರಂ ಕರಣೀಯಮ್ ಇತಿ ಪ್ರಾರ್ಥ್ಯ ಪತ್ರಂ ಸಮಾಪಯಿಷ್ಯಾಮಿ। ಪ್ರಥಮಪತ್ರೇ ಏವ ಇತ್ಥಂ ಲಿಖಿತವಾನಿತಿ ನ ಕ್ರೋಧನೀಯಮ್ ಇತಿ ಪ್ರಾರ್ಥಯೇ। ಉತ್ತರರೂಪೀ ಆಶೀರ್ವಾದಪತ್ರಿಕಾಪ್ರಾಪ್ತಿಂ ಪ್ರತೀಕ್ಷ್ಯಾಮಿ।

ಸಾಷ್ಟಾಂಗಪ್ರಣಾಮಃ

ವೇ।। ಬ್ರ।। ಶ್ರೀ ಬಿ.ಎಸ್. ಸುಬ್ಬರಾಯ ಮಹೋದಯರ ಚರಣ ಸನ್ನಿಧಿಯಲ್ಲಿ ಸಾಷ್ಟಾಂಗ ಪ್ರಣಾಮಗಳು. ತಮ್ಮಂಥ ಪೂಜ್ಯರ ಕ್ಷೇಮಲಾಭಕ್ಕೆ ಪ್ರಾರ್ಥಿಸುತ್ತೇನೆ. ಈ ಪತ್ರ ತಮಗೆ ಅತಿ ಆಶ್ಚರ್ಯವನ್ನುಂಟು ಮಾಡಿದೆ ಎಂದು ಊಹಿಸುತ್ತೇನೆ. ಆದ್ದರಿಂದ ನನ್ನ ಪರಿಚಯ ಮೊದಲಿಗೆ ಹೇಳುವೆನು. ಹಿಂದೆ ನಾನು ಪಾಠಶಾಲೆಯಲ್ಲಿ ಎಂಟನೆಯ ಕೊಠಡಿಯಲ್ಲಿ ವಾಸಿಸುತ್ತಿದ್ದೆ. ಆಗ ತಾವು ಹತ್ತೊಂಬತ್ತನೆಯ ಕೊಠಡಿಯಲ್ಲಿದ್ದಿರಿ. ಅಲ್ಲದೆ ವ್ಯಾಕರಣಶಾಸ್ತ್ರದಲ್ಲಿ ಸಿದ್ಧಾಂತ ಕೌಮುದೀ ಪಾಠವನ್ನು ನನಗೆ ಹೇಳಿದವರು ತಾವೇ. ನಾನು ಬೇಲೂರು ಗ್ರಾಮದವನು, ಸಾಹಿತ್ಯ ಶಾಸ್ತ್ರ ಅಧ್ಯಯನ ಮಾಡಿದವನು. ಇದಿಷ್ಟು ನನ್ನ ಪರಿಚಯ. ಹೆಚ್ಚು ಹೇಳಲಾರೆ, ಇರಲಿ. ಪ್ರಕೃತದಲ್ಲಿ ಇಲ್ಲಿ ನಾನು ಅಧ್ಯಾಪಕ. ನಾನು ಇಲ್ಲಿಗೆ ಬಂದು ಆರು ವರ್ಷಗಳಾಗಿವೆ. ಈ ದೊಡ್ಡ ಗ್ರಾಮದಲ್ಲಿ ಆರು ವರ್ಷಗಳ ಕಾಲ ವಾಸಿಸುತ್ತಿದ್ದೇನೆ ಎಂಬುದು ತುಂಬ ಕಷ್ಟದ್ದಾಗಿದೆ. ಆದ್ದರಿಂದ ನಾನು ತಮ್ಮ ಬಳಿ, ಪೂಜ್ಯರಾದ ವೆಂಕಟರಾಮಯ್ಯನವರ ಮಹತ್ತರ ಪ್ರಯತ್ನದಿಂದ ಈ ಗ್ರಾಮದಿಂದ ಬೇರೆ ಗ್ರಾಮಕ್ಕೆ ನನ್ನನ್ನು ವರ್ಗ ಮಾಡಿಸಿಕೊಡಲು ಅವರಿಗೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ತಮ್ಮ ಸಹಾಯ ಆವಶ್ಯಕವಾದುದು ಎಂದು ಕೇಳುತ್ತಿದ್ದೇನೆ. ತಾವು ನನ್ನನ್ನು ಕಷ್ಟದಿಂದಿರುವ ತಮ್ಮ ಸೋದರ ಎಂದು ಭಾವಿಸಿ ಮಹದುಪಕಾರ ಮಾಡಬೇಕೆಂದು ಪ್ರಾರ್ಥಿಸಿ ಈ ಪತ್ರವನ್ನು ಮುಗಿಸುತ್ತೇನೆ. ಮೊದಲ ಪತ್ರದಲ್ಲೇ ಈ ರೀತಿ ಬರೆದಿದ್ದೇನೆ ಎಂದು ಕೋಪಿಸಬಾರದಾಗಿ ಪ್ರಾರ್ಥಿಸುತ್ತೇನೆ. ಉತ್ತರ ರೂಪದಲ್ಲಿ ತಮ್ಮ ಆಶೀರ್ವಾದ ಪತ್ರಿಕೆ ಬರುವುದೆಂದು ನಿರೀಕ್ಷಿಸುತ್ತಿರುವೆನು.

ಸಾಷ್ಟಾಂಗ ಪ್ರಣಾಮಗಳು.

೩೮೧

ದೇಶದ ಸಂಘರ್ಷ

ಕುಶಲಮ್ ಶ್ರೀಃ ಮೈಸೂರು

15.8.1942

ಅಯಿ ಮಾನ್ಯಾಃ

ಸಮಾಸಾದಿತಾ ಸಾದರಂ ಪಠಿತಾ ಚಾತ್ರ ಭವತಾಮಾಶೀಃ ಪತ್ರಿಕಾ ಪೂರ್ವೇದ್ಯುಸ್ಸಾರ್ಧದ್ವಯವಾದನಸಮಯೇ। ಅನುಮಿನೋಮಿ ಅದ್ಯ ಯಾವನ್ಮಾಮಕೀ ವಿಜ್ಞಪ್ತಿಪತ್ರಿಕಾಪಿ ಅತ್ರಭವತಾಂ ಹಸ್ತಂಗತೇತಿ। ಅದ್ಯತನೀಮತ್ರಭವತಾಮವಸ್ಥಾಮಾಲೋಚ್ಯೈವಾತೀವ ದೂಯತೇ ಮೇ ಮಾನಸಮ್। ಗತಂ ವಿಷಯಮೇವ ಸ್ಮಾರಂ ಸ್ಮಾರಮತ್ರಭವಂತೋ ಮಾ ಶೋಚನ್, ತಥಾ ಇತಃ ಪರಂ ಯಥಾ ರೋಚತೇ ತಥಾತ್ರ ಭವನ್ತೋಽನುತಿಷ್ಠಂತು ಇತಿ ಮದೀಯಾ ವಿಜ್ಞಪ್ತಿಸ್ತತ್ರಭವದ್ಭಿಃ।

ಅತೋಽಪ್ಯಧಿಕಂ ಕಿಂ ವಾ ವಿಜ್ಞಾಪಯಿತುಂ ಪ್ರಭವತ್ಯಯಂ ಸೇವಕಃ?

ಅಸ್ತು। ಸಂಪ್ರತಿ ಮಾಮಕೀಂ ದಯನೀಯಾವಸ್ಥಾಂ ಚಿಂತಯಾಮಿ। ಪ್ರಥಮತ ಏವ ಸಾಂಪ್ರತಿಕಾದಸ್ಮದ್ದೇಶಸ್ಯ ಮಹತೋ ವಿಪ್ಲವಾದೇವ ಮೇ ಮನೋ ವಿಶೇಷತೋಽಧ್ಯೇತುಂ ನೈವಕಾಮಯತೇ। ....ಏತೇ ಚ ನಿಗೂಢಾ ವಿಷಯಾಃ। ಅಥಾಪಿ ಅತ್ರಭವತಾಂ ಸನ್ನಿಧೌ ವಿಜ್ಞಾಪನೇನ ಅಲ್ಪೀಯಸೀ ಮನಃಶಾಂತಿಃ ಸಂಭವತೀತ್ಯಭಿಪ್ರೇತ್ಯೈವ ತಥಾನುಷ್ಠಿತಮ್। ಅತಃ ಪರಂ

ಭಗವಾನೇವ ಶರಣಮ್। ಸಂಪ್ರತಿ ಅತೋಽಪಿ ವಿಶೇಷತೋ ವಿಜ್ಞಾಪಯಿತುಂ ನಾಹಂ ಪಾರಯಾಮಿ। ಸ್ಖಾಲಿತ್ಯಾನಿ ಮರ್ಷಯನ್ತ್ವಾರ್ಯಾಃ। ಅನುಪದಮೇವ ಪುನರ್ವಿಜ್ಞಾಪಯಿತಾಸ್ಮಿ।

ಕುಶಲಿನಃ ಸುಖಿನಶ್ಚಾತ್ರತ್ಯಾ ಆಸ್ಮಾಕೈಸ್ಸಮಂ।

ಅತ್ರಭವತಾಂ ಸೇವಕಃ

ಪೂಜ್ಯರೆ, ತಾವು ಬರೆದ ಆಶೀರ್ವಾದ ಪತ್ರ ತಲಪಿತು. ಅದನ್ನು ಆದರದಿಂದ ನೆನ್ನೆ 2 1/2 ಗಂಟೆ ಸಮಯದಲ್ಲಿ ಓದಿದೆ. ನನ್ನ ವಿಜ್ಞಾಪನ ಪತ್ರ ಈಗ ತಮ್ಮ ಕೈ ಸೇರಿದೆ ಎಂದು ಊಹಿಸುವೆ. ತಮ್ಮ ಈಗಿನ ಅವಸ್ಥೆಯನ್ನು ಆಲೋಚಿಸಿ ನನ್ನ ಮನಸ್ಸು ಅತ್ಯಂತ ದುಃಖಗೊಂಡಿದೆ. ಕಳೆದ ವಿಷಯವನ್ನೇ ತಾವು ಮತ್ತೆ ಮತ್ತೆ ಯೋಚಿಸಬೇಡಿ. ಇಲ್ಲಿಂದ ಮುಂದೆ ತಮಗೆ ಹೇಗೆ ತೋರುತ್ತದೋ ಹಾಗೆ ನಡೆಯಿರಿ ಎಂದು ನನ್ನ ವಿಜ್ಞಾಪನೆ. ಇದಕ್ಕಿಂತ ಈ ಸೇವಕ ಇನ್ನು ಮತ್ತೇನು ಹೇಳಲು ಸಾಧ್ಯ?

ಇರಲಿ. ಈಗ ನನ್ನ ದೈನ್ಯಾವಸ್ಥೆಯನ್ನು ಚಿಂತಿಸುತ್ತೇನೆ. ಮೊದಲಿಗೆ ನಮ್ಮ ದೇಶದ ಮಹತ್ತರವಾದ ಸಂಘರ್ಷದಿಂದ ಹೆಚ್ಚಾಗಿ ಅಧ್ಯಯನ ಮಾಡಲು ನನ್ನ ಮನಸ್ಸು ಬಯಸುತ್ತಿಲ್ಲ. ಇವೆಲ್ಲಾ ನಿಗೂಢ ವಿಷಯಗಳು. ಆದರೂ ತಮ್ಮ ಬಳಿ ಹೇಳಿಕೊಂಡರೆ ಸ್ವಲ್ಪವಾದರೂ ಮನಶ್ಶಾಂತಿ ಎಂದು ತಿಳಿದು ಬರೆದಿರುತ್ತೇನೆ. ಇನ್ನು ಮುಂದೆ ಭಗವಂತನೇ ಗತಿ. ಈಗ ಇದಕ್ಕಿಂತ ಹೆಚ್ಚೇನೂ ಹೇಳಲು ಶಕ್ತನಲ್ಲ. ನನ್ನ ತಪ್ಪುಗಳನ್ನು ಮನ್ನಿಸಿ.

ಇಷ್ಟರಲ್ಲೇ ತಮಗೆ ಪತ್ರ ಬರೆಯುತ್ತೇನೆ. ನಮ್ಮ ಮಿತ್ರರೆಲ್ಲಾ ಅನುಕೂಲಿಗಳೂ ಸುಖಿಗಳೂ ಆಗಿರುವರು.

ತಮ್ಮ ಸೇವಕ

೩೮೨

ಅನುಷ್ಠಾನ

ಕುಶಲಮ್ ಶ್ರೀಃ ಮೈಸೂರು

5.10.1942

ಅತ್ರಭವತಾಂ ಸನ್ನಿಧೌ ಸಾದರಂ ವಂದೇ।

ಸಂಪ್ರತಿ।

ಅತ್ರತ್ಯೇನ ಮಯಾ ವಿಜ್ಞಪ್ತಿಪತ್ರಿಕೇಯಮಧುನಾಲಿಖ್ಯತ ಇತೀದಮತ್ರಭವತಾಂ ಮಹಾನ್ತಂ ವಿಸ್ಮಯಮಾವಹತೀತ್ಯಹಮಭಿಪ್ರೈಮಿ। ಪರಂತು "ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ ಲಲಾಟಲಿಖಿತಾ ರೇಖಾ ಪರಿಮಾರ್ಷ್ಟುಂ ನ ಶಕ್ಯತೇ" ಇತ್ಯಭಿಯುಕ್ತೋಕ್ತಿಂ ಸ್ಮಾರಂ ಸ್ಮಾರಮತ್ರಾಗಮನ ಇವ ನಿರ್ಗಮನೇಽಪಿ ನಿಯತೇರೇವ ಹೇತುತೇತ್ಯಹಂ ಸುದೃಢಂ ವಿಶ್ವಸಿಮಿ। ಅತ ಏವಾತ್ರ ಭವನ್ತೋ ಮಾಂ ಕ್ಷಮಂತಾಮಿತ್ಯಾಸ್ಮಾಕೀ ವಿಜ್ಞಪ್ತಿಃ ಶ್ರೀಮತಾಂ ಸನ್ನಿಧೌ।

ಆಸ್ಮಾಕಸ್ಯಾನುಷ್ಠಾನಸ್ಯಾಪಾಯೇನ ವಿನೈವಾಹಮತ್ರ ವರ್ತೇ। ಪ್ರಾತಃ ಪಂಚವಾದನಸಮಯೇ ಸಂಪ್ರೋತ್ಥಿತಃ। ಯಾವದಷ್ಟವಾದನಸಮಯಂ ಪ್ರತ್ಯಹಮಸ್ಮಿನ್ನೇವ ವ್ಯಾಪದಿ ವ್ಯಾಪೃತೋಽಸ್ಮಿ। ವಿವರಣಂ ತು ಕರ್ತವ್ಯಸ್ಯ ಪ್ರತ್ಯಕ್ಷಂ ಪತ್ರಿಕಾಂತರೇ ವಾ ಕರ್ತಾಹೇ। ಪಾರಮಾರ್ಥಿಕಂ ವಿಷಯಮತ್ರ ಭವತಾಂ ಸನ್ನಿಧೌ ವಿಜ್ಞಾಪಯಿತುಂ ಜಾತುಚಿದಪಿ ನೈವಾಹಂ ಜಿಹ್ರೇಮಿ। ಅತ್ರತ್ಯೋಽಯಂ ನಿಯಮಃ ಯದತ್ರತ್ಯಃ ಪ್ರತಿಮಾಸಮೇಕೈಕಪತ್ರಿಕಾಲೇಖನಾಯ ಪ್ರಭವತೀತಿ।

ಅಹಮತ್ರ ಕುಶಲೀ। ಮದೀಯಸ್ಯೋದಂತಸ್ಯ ಮಿತ್ರಮಣೇಃ ಕೃಷ್ಣಮೂರ್ತಿನಃ ಮಮ ಆಯುಷ್ಮತ್ಯಾಃ ಪಾರ್ವತ್ಯಾಶ್ಚ ಯಥಾ ಕಥಂಚಿದವಬೋಧನೇ ಅತ್ರಭವಂತಃ ಕಿಂಚಿದಿವ ಶ್ರಮಂ ವಹಂತ್ವಿತಿ ಸವಿನಯಂ ವಿಜ್ಞಾಪಯಾಮಿ। ಪ್ರಾಜ್ಞಾನಾಂ ಸನ್ನಿಧೌ ವಿಶಿಷ್ಯ ಕಿಂ ವಾ ವಿಜ್ಞಾಪಯಿತುಂ ಪಾರಯತ್ಯಯಮ-ಕಿಂಚನಃ। ಅತಃ ಪರಂ ಶಿವಃ ಶರಣಮ್। ಪಾದಸೇವಕಃ ಅತ್ರ ಭವತಾಮಾಶೀಃಪತ್ರಿಕಾಯಾ ನಿರೀಕ್ಷಕಃ

ಪೂಜ್ಯರ ಬಳಿಯಲ್ಲಿ ಆದರಪೂರ್ವಕ ವಂದನೆಗಳು. ಇಲ್ಲಿರುವ ನಾನು ಈ ವಿಜ್ಞಾಪನ ಪತ್ರವನ್ನು ಈಗ ಬರೆಯುತ್ತಿರುವೆನು ಎಂಬುದು ತಮಗೆ ಅತಿ ಆಶ್ಚರ್ಯವನ್ನುಂಟು ಮಾಡಿದೆ ಎಂದು ಭಾವಿಸುತ್ತೇನೆ. ಆದರೂ ಹಣೆಯ ಬರಹವನ್ನು ಹರಿಹರಬ್ರಹ್ಮರೂ ಅಳಿಸಲಾರರು ಎಂಬ ಜ್ಞಾನಿಗಳ ಮಾತನ್ನು ಬಾರಿಬಾರಿಗೂ ಸ್ಮರಿಸಿ ಇಲ್ಲಿ 'ಬರುವಂತೆ' 'ಹೋಗುವದರಲ್ಲಿಯೂ' ವಿಧಿಯೇ ಎಲ್ಲದಕ್ಕೂ ಕಾರಣ ಎಂದು ನಾನು ನಂಬಿದ್ದೇನೆ. ಆದ್ದರಿಂದ ತಾವು ನನ್ನನ್ನು ಕ್ಷಮಿಸಬೇಕೆಂದು ವಿಜ್ಞಾಪಿಸುತ್ತೇನೆ. ಇಲ್ಲಿ ನಾನು ನನ್ನ ಅನುಷ್ಠಾನಕ್ಕೆ ಅಪಾಯ ಇಲ್ಲದಂತೆ ಇದ್ದೇನೆ. ಸಾಮಾನ್ಯವಾಗಿ ಐದು ಗಂಟೆಗೆ ಏಳುತ್ತೇನೆ. ಪ್ರತಿದಿವಸವೂ 8 ಗಂಟೆವರೆಗೆ ಈ ಕೆಲಸ ಕಾರ್ಯಗಳಲ್ಲೇ ತೊಡಗಿರುತ್ತೇನೆ. ಮಾಡಬೇಕಾದ್ದರ ವಿವರಣೆಯನ್ನು ಪ್ರತ್ಯಕ್ಷವಾಗಿ ಅಥವಾ ಪತ್ರಿಕೆಯಲ್ಲಿ ಮಾಡುವೆನು. ಪಾರಮಾರ್ಥಿಕ ವಿಷಯವನ್ನು ತಮ್ಮ ಬಳಿ ತಿಳಿಸಲು ಸ್ವಲ್ಪವೂ ನಾನು ನಾಚುವದಿಲ್ಲ. ಇಲ್ಲಿನ ನಿಯಮ ಅಂದರೆ ಇಲ್ಲಿನವರು ಪ್ರತಿ ತಿಂಗಳೂ ಒಂದೊಂದು ಪತ್ರಿಕೆ ಬರೆಯಲೇಬೇಕು ಎಂಬುದು.

ಇಲ್ಲಿ ನಾನು ಕುಶಲಿ. ನನ್ನ ವಿಷಯವನ್ನು ಮಿತ್ರ ಕೃಷ್ಣಮೂರ್ತಿ ಹಾಗೂ ನನ್ನ ಶ್ರೀಮತಿ ಪಾರ್ವತಿ ಇವರಿಗೆ ಹೇಗಾದರೂ ತಿಳಿಸುವಂಥ ಶ್ರಮವಹಿಸಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಪ್ರಾಜ್ಞರ ಬಳಿ ವಿಶೇಷವಾಗಿ ತಿಳಿಸುವ ಶಕ್ತಿ ನನಗಿಲ್ಲ. ಇದಕ್ಕಿಂತ ಹೆಚ್ಚು ಶಿವನೇ ನಮ್ಮ ರಕ್ಷಕ.

ಇತಿ ಪಾದಸೇವಕ. ತಮ್ಮ ಪತ್ರದ ನಿರೀಕ್ಷೆಯಲ್ಲಿರುವೆನು.

೩೮೩

ಪದಾರ್ಥ ತಲಪಿದವು

ಕುಶಲಮ್ ಶ್ರೀಃ ಮೈಸೂರು

ಕಾ.ಬ. ಚತುರ್ದಶೀ

ತೀ. ಶಾಸ್ತ್ರಿಣಾಮ್ ಚರಣಸರೋಜಯೋಃ ಸಾಷ್ಟಾಂಗಂ ಪ್ರಣಮ್ಯ ವಿಜ್ಞಾಪಯತ್ಯಸೌ ನೃಸಿಂಹಶರ್ಮಾ

ಸ್ವಾಮಿನಃ

ಲಬ್ಧಮ್ ಭವದ್ಭಿಃ ಪ್ರೇಷಿತಮ್ ವಸ್ತು, ಪುಸ್ತಕಂ ಚ. ಸಿದ್ಧೀಕೃತಃಚ ಪದಾರ್ಥಃ। ಯದಾ ಗ್ರಾಮಾದ್ವಿಶ್ವಸನೀಯಾ ಆಗಚ್ಛಂತಿ ಜ್ಞಾತಾಃ । ಭವದ್ವಚನಾಚ್ಚೇತ್ ತರ್ಹಿ ಅಮುಮ್ ನೇತುಮರ್ಹಂತೀತಿ ವಿಜ್ಞಾಪಯಾಮಿ। ಪಂಚಾಮೃತಾವಸಾನಾಗಮವಸ್ತು ಅಪೇಕ್ಷಿತಮಸ್ತಿ ಚೇತ್। ಆಶೀಃಪತ್ರಿಕಯಾ ಅನುಗ್ರಹೀತುಮರ್ಹೋಽಯಮ್ ಜನ ಇತಿ ಚ ನಿವೇದ್ಯೋಪಸಂಗೃಹ್ಣಾತೀತಿ ಶಮ್।

ಇತಿ ವಿಜ್ಞಾಪನಾಃ

ತೀ॥ ಶಾಸ್ತ್ರಿಗಳ ಚರಣಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿ ನೃಸಿಂಹಶರ್ಮನು ವಿಜ್ಞಾಪಿಸುತ್ತಾನೆ. ಸ್ವಾಮಿಗಳೆ, ತಮ್ಮಿಂದ ಕಳುಹಿಸಲ್ಪಟ್ಟ ಪದಾರ್ಥಗಳೂ ಪುಸ್ತಕಗಳೂ ದೊರಕಿದವು. ಪದಾರ್ಥವನ್ನು ಉಪಯೋಗಿಸಿಕೊಳ್ಳಲಾಯಿತು. ತಮ್ಮ ಗ್ರಾಮದಿಂದ ವಿಶ್ವಾಸ ಪಾತ್ರರಾದ ಜನರು ಬಂದಾಗ ತಮ್ಮ ಮಾತಿಗೆ ಅನುಸಾರವಾಗಿ ಇದನ್ನು ತೆಗೆದುಕೊಂಡು ಹೋಗಬೇಕು ಎಂದು ವಿಜ್ಞಾಪಿಸುತ್ತೇನೆ.

ಆಶೀರ್ವಾದ ಪತ್ರಿಕೆಯುನ್ನು ತಾವು ಅನುಗ್ರಹಿಸಬೇಕೆಂದು ನಿವೇದಿಸಿಕೊಳ್ಳುತ್ತೇನೆ.

ವಿಜ್ಞಾಪನೆಗಳು

೩೮೪

ಕಾಲಟಿ-ಶೃಂಗೇರಿ

ಕುಶಲಮ್ ಶ್ರೀಃ ಶೃಂಗಗಿರಿಃ

2.6.1958

ತೀ॥ ಶಾಸ್ತ್ರಿಣಾಂ ಚರಣಪಂಕಜಯೋಃ

ಬಾಲಕಸ್ಯ ಅಷ್ಟಾಂಗನಮಸ್ಕಾರಪೂರ್ವಕವಿಜ್ಞಾಪನಾಃ। ಭೋಃ ಸದ್ಗುರೂಣಾಮ್ ಅನುಗ್ರಹೇಣ ಅಹಂ ಕುಶಲೀ ಭವಾಮಿ। ವ್ಯಾಧಿನಿಮಿತ್ತೇನ ಗತಹಾಯನೇ ಕಾರ್ತಿಕೇ ಮಾಸಿ ಕಾಲಟೀಂ ವಿಹಾಯ ಶೃಂಗಗಿರಿಂ ಪ್ರತಿ ಆಗತೋಽಹಮ್। ಅಸ್ಯಾಂ ಮಠೀಯಪಾಠಶಾಲಾಯಾಮೇವ ಸಂಸ್ಕೃತಮಧೀಷ್ಯೇ ವೇದಾಧ್ಯಯನಂ ನರಹರಿಭಟ್ಟಾನಾಂ ನಿಕಟೇ ಕರಿಷ್ಯೇ, ಪದಪಾಠೇ ತೃತೀಯಕಾಂಡಂ ಸಮಾಪ್ಯ ಚತುರ್ಥೇ ದ್ವೌ ಪ್ರಶ್ನೌ ಆಸ್ತಾಮ್। ಇದಾನೀಂ ಬ್ರಾಹ್ಮಣಭಾಗಮಧೀಷ್ಯೇ, ಪ್ರಥಮಾಷ್ಟಕೇ ಸಪ್ತಪ್ರಶ್ನಾನ್ಯಾಸನ್ ಮಾಘಕಾವ್ಯೇ ಚತ್ವಾರಃ ಸರ್ಗಾಃ ಲಘುಕೌಮುದ್ಯಾಂ ಭ್ವಾದಿಪ್ರಕರಣೇ ಭೂಧಾತುಃ ಸಂಪೂರ್ಣಾ, ಕಿರಾತಾರ್ಜುನೀಯೇ ದ್ವೌ ಸರ್ಗೌ ಚ ಆಸ್ತಾಮ್ ಇದಾನೀಂ ವ್ಯಾಧೇಃ ಪರಿಪಕ್ವಾವಸ್ಥಾ ಅನೇಕವಿಧ ಔಷಧ ಸೇವನೇನ ಸ್ವಸ್ಥಃ ಭವಂತಃ। ವೇದಾಂತಮ್ ಅಧೀಷ್ಯಂತ ಇತಿ ಶ್ರುತ್ವಾ ಹೃಷ್ಟತರೋಽಸ್ಮಿ। ಇದಾನೀಂಪರ್ಯಂತಂ ಕೃತಾಪರಾಧಾನ್ ಭವಂತಃ ಕ್ಷಂತುಮರ್ಹಥ ವಿಶ್ವಾಸಪೂರ್ವಕೇಣ ಭವಂತಃ ಆಶಿಷ ಪತ್ರಿಕಾಂ ಪ್ರೇಷಯಂತು ಇತಿ ಸವಿನಯಮಭ್ಯರ್ಥಯೇ। ವೇ॥ ಕೃಷ್ಣಮೂರ್ತೇರಪಿ ಮಮ ನಮಸ್ಕಾರಾಃ। ಗ್ರಾಮಸಮಾಚಾರಾನ್ ಭವತ್ಪ್ರಭೃತಿ ಸರ್ವೇಷಾಂ ಯೋಗಕ್ಷೇಮಂ ಚ ಸಮ್ಯಗ್ಜ್ಞಾತುಮುತ್ಕೋಽಸ್ಮಿ. ಮಮ ಕಿಂಚಿದಪಿ ಪರಿಚಯೋ ನಾಸ್ತಿ. ದ್ವಾಭ್ಯಾಂ ಮಾಸಾಭ್ಯಾಂ ಪ್ರಾಕ್ (Reply Card) ಪ್ರೇಷಿತಮ್ ತಲ್ಲಬ್ಧೋವಾ ನ ವಾ ನ ಜ್ಞಾಯತೇ. ಅಲಂ ಪಲ್ಲವಿತೇನೇತಿ। ಶಮ್.

ತೀ॥ ಶಾಸ್ತ್ರಿಗಳ ಚರಣಕಮಲಗಳಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರ ಪೂರ್ವಕ ವಿಜ್ಞಾಪನೆಗಳು. ಪೂಜ್ಯರೆ, ಸದ್ಗುರುಗಳ ಅನುಗ್ರಹದಿಂದ ಇಲ್ಲಿ ನಾನು ಕ್ಷೇಮವಾಗಿರುವೆನು. ಆರೋಗ್ಯವಿಲ್ಲದ ಕಾರಣ ಕಳೆದ ವರ್ಷ ಕಾರ್ತಿಕ ಮಾಸದಲ್ಲಿ ಕಾಲಟಿಯನ್ನು ಬಿಟ್ಟು ಶೃಂಗೇರಿಗೆ ಬಂದೆ. ಈ ಮಠದ ಪಾಠಶಾಲೆಯಲ್ಲೇ ಸಂಸ್ಕೃತವನ್ನು ಓದುವೆನು. ನರಹರಿಭಟ್ಟರ ಬಳಿ ವೇದಾಧ್ಯಯನ ಮಾಡುವೆನು. ಪದಪಾಠದಲ್ಲಿ ಮೂರನೆಯ ಕಾಂಡ ಮುಗಿದಿದೆ. ನಾಲ್ಕನೆಯದರಲ್ಲಿ ಎರಡು ಪ್ರಶ್ನ ಇದೆ. ಈಗ 'ಬ್ರಾಹ್ಮಣ' ಭಾಗದ ಅಧ್ಯಯನ ಮಾಡುತ್ತಿದ್ದೇನೆ. ಪ್ರಥಮಾಷ್ಟಕದಲ್ಲಿ ಎಂಟು ಪ್ರಶ್ನ ಮುಗಿದಿದೆ. ಮಾಘಕಾವ್ಯದಲ್ಲಿ ನಾಲ್ಕು ಸರ್ಗ, ಲಘುಕೌಮುದಿಯಲ್ಲಿ ಭ್ವಾದಿ ಪ್ರಕರಣದಲ್ಲಿ ಭೂಧಾತು ಮುಗಿದಿದೆ. ಕಿರಾತಾರ್ಜುನೀಯದಲ್ಲಿ ಎರಡು ಸರ್ಗ ಮುಗಿದಿದೆ. ಈಗ ಅನೇಕ ರೀತಿಯ ಔಷಧ ಸೇವಿಸಿದ ಕಾರಣ ರೋಗ ಒಂದು ಸ್ಥಿತಿಗೆ ಬಂದು ಆರೋಗ್ಯವಾಗಿ ಇದ್ದೇನೆ. ವೇದಾಂತವನ್ನು ಓದಬೇಕೆಂದು ಕೇಳಿ ಆನಂದಗೊಂಡಿದ್ದೇನೆ. ಇಲ್ಲಿಯವರೆವಿಗೆ ಮಾಡಿರುವ ಅಪರಾಧಗಳನ್ನು ತಾವು ಕ್ಷಮಿಸಿ ವಿಶ್ವಾಸಪೂರ್ವಕವಾಗಿ ಆಶೀರ್ವಾದ ಪತ್ರಿಕೆ ಕಳುಹಿಸಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ವೇ॥ ಕೃಷ್ಣಮೂರ್ತಿಗೂ ನನ್ನ ನಮಸ್ಕಾರಗಳು. ಗ್ರಾಮದ ವಿಷಯಗಳನ್ನೂ ತಮ್ಮ ಹಾಗೂ ಬೇರೆಯವರ ಯೋಗಕ್ಷೇಮವನ್ನೂ ತಿಳಿಯಲು ಉತ್ಸುಕನಾಗಿದ್ದೇನೆ. ನನಗೆ ಸ್ವಲ್ಪ ಪರಿಚಯವೂ ಇಲ್ಲ. ಎರಡು ತಿಂಗಳ ಮೊದಲು ರಿಪ್ಲೇ ಕಾರ್ಡನ್ನು ಕಳುಹಿಸಿದ್ದೆನು. ಅದು ದೊರಕಿತೋ ಇಲ್ಲವೋ ತಿಳಿಯದು. ಹೆಚ್ಚು ವಿಸ್ತಾರವನ್ನು ಮಾಡುವುದಿಲ್ಲ.

ಮಂಗಳ.

೩೮೫

ಮುಷ್ಕರ , ಎಚ್ಚರ

ಕುಶಲಮ್ ಶ್ರೀಃ 15.9.1970

ಚಿ। ರಾ।...ಯೇ ವೇದೋಕ್ತಾ ಆಶಿಷಃ ಸಮುಲ್ಲಸಂತುತರಾಮ್, ಉಭಯಕುಶಲೋಪರಿ

ಸಂಪ್ರತಿ

ಇತಃ ಪ್ರಸ್ಥಿತೋ ಭವಾನ್ ಸುಖೇನೈವ ಪ್ರಾಪ್ತಃ ಮಂಗಲಾಪುರೀಂ ಇತಿ ತರ್ಕಯೇ । ಭವತಃ ಕ್ಷೇಮಂ ಅಧಿಕೃತ್ಯ ನಾಸಾದಿತಂ ಪತ್ರಂ। ಏತತ್‌ಪತ್ರ ಪ್ರಾಪ್ತ್ಯನಂತರಮೇವ ಲಿಖ ಪತ್ರಮೇಕಮ್। ಇದಾನೀಂ ವಿದ್ಯಾರ್ಥಿನಃ ಮುಷ್ಕರಾದಿಕಂ ಕುರ್ವತೇ। ಅತಃ ಅಪ್ರಮತ್ತೋ ಭವ। ಜಾಗೃತೋ ಭವ। ಮಹೀಶೂರಪುರ್ಯಾಮ್ ಉನ್ನತವಿದ್ಯಾಶಾಲಾಃ ಸರ್ವಾ ಮುದ್ರಿತಾಃ।

ಚಿ। ವಾಮನಃ ಆಗ್ರಾನಗರಾತ್ ಪ್ರತ್ಯಾಗತಃ ಸ್ಥಿರವಾಸರೇ। ಕುಶಲೀ ಚ।

ವಯಂ ಸರ್ವೇ ಕುಶಲಿನಃ। ಚಿ। ಸೌ। ಮಣಿಃ ಆವುತ್ತಃ ಚ ಅತ್ರೈವ ಸ್ತಃ।

ಆನಂದೂರೀಯಾಣಾಂ ಮಾತಾ (ವೃದ್ಧಾ) ಮೃತಾ ಗತಸೋಮವಾಸರೇ। ನ ಅಸ್ಮಾಕಂ ಕಿಮಪಿ ಸ್ನಾನಾದಿಕಂ। ಪ್ರೇಷಯ ಕುಶಲಪತ್ರಮ್ । ಇತಿ ಶಮ್

ಚಿ॥ರಾ॥ ...ಗೆ ವೇದೋಕ್ತ ಆಶೀರ್ವಾದಗಳು. ಉಭಯ ಕುಶಲೋಪರಿ ಸಾಂಪ್ರತ. ಇಲ್ಲಿಂದ ಹೊರಟ ನೀನು ಮಂಗಳೂರಿಗೆ ಸುಖವಾಗಿ ತಲಪಿದೆ ಎಂದು ಊಹಿಸುತ್ತೇನೆ. ನಿನ್ನ ಕ್ಷೇಮದ ಬಗ್ಗೆ ಪತ್ರ ಬಂದಿಲ್ಲ. ಈ ಪತ್ರವನ್ನು ನೋಡಿದ ನಂತರ ಒಂದು ಕಾಗದ ಬರಿ. ಈಗ ವಿದ್ಯಾರ್ಥಿಗಳು ಮುಷ್ಕರ ಇತ್ಯಾದಿಗಳಲ್ಲಿ ತೊಡಗಿದ್ದಾರೆ. ಆದ್ದರಿಂದ ಎಚ್ಚರ ತಪ್ಪಬೇಡ. ಜಾಗರೂಕನಾಗಿರು. ಮೈಸೂರಿನಲ್ಲಿ ಉನ್ನತ ವಿದ್ಯಾಶಾಲೆಗಳೆಲ್ಲವೂ ಮುಚ್ಚಿವೆ. ಚಿ॥ ವಾಮನನು ಶನಿವಾರ ಆಗ್ರಾ ನಗರದಿಂದ ಬಂದನು. ಅವನು ಕ್ಷೇಮವಾಗಿದ್ದಾನೆ. ನಾವೆಲ್ಲ ಕುಶಲದಿಂದಿದ್ದೇವೆ.

ಚಿ॥ಸೌ॥ ಮಣಿ ಮತ್ತು ಭಾವ ಇಲ್ಲಿಯೇ ಇದ್ದಾರೆ. ಆನಂದೂರಿನವರ ವೃದ್ಧ ತಾಯಿಯವರು ಕಳೆದ ಸೋಮವಾರ ಮೃತರಾದರು. ನಮಗೆ ಸ್ನಾನಾದಿ ಯಾವುದೂ ಇಲ್ಲ. ಕುಶಲಪತ್ರ ಬರೆ.

ಮಂಗಳ.

೩೮೬

ತಂತಿ ತಲಪಿತೆ?

ಶ್ರಾವಣ ಸಿತ 14

ಕುಶಲಮ್ ಶ್ರೀಃ ಬಸವಪತ್ತನಮ್

23.11.70

ವೇದೋಕ್ತಾಃ ಆಶಿಷಃ। ಉಭಯ ಕುಶಲೋಪರಿ ಸಂಪ್ರತಿ ಅಧಿಗತಂ ತ್ವಯಾ ಲಿಖಿತಂ ಪತ್ರಮ್। ತಚ್ಚ .... ಪುರಂ ಪ್ರತಿ ಪ್ರೇಷಿತಮ್। ಶಾಲಾಂ ಗತೇನ ಮಯಾ ಬುಧವಾಸರೇ ಭವತಾಂ ಪತ್ರಂ ನಿರೀಕ್ಷ್ಯ ಹತಾಶಃ ಅತೀವ ಕಾತರೇಣ ಚೇತಸಾ ತಂತ್ರೀಸಮಾಚಾರಂ ಪ್ರೇಷಯಿತುಂ ತದಧಿಕಾರಿಣೇ ರೂಪ್ಯಕದ್ವಯಂ ಅದಾವಮ್। ಸ ಚ ಅದ್ಯ ಪ್ರಾತಃ ಪ್ರೇಷಿತವಾನ್। ಸಾಯಂ ಗ್ರಾಮಂ ಗತೇನ ಮಯಾ ತ್ವಯಾ ಲಿಖಿತಂ ಪತ್ರಮಾಸಾದಿತಮ್। ಸ ಚ ಸಮಾಚಾರಃ ತ್ವಯಾ ಪ್ರಾಪ್ತ ಇತಿ ತರ್ಕಯಾಮಿ। ಸರ್ವೇ ವಯಮತ್ರ ಕುಶಲಿನಃ। ಚಿ। ಕೇಶವಃ ಕಿಂಚಿದಿವಿವ ಜ್ವರಿತಃ ಇದಾನೀಮ್ ಉಲ್ಲಾಘೋ ಭವತಿ। ತೇ ಭ್ರಾತೃಜಾಯಾಂ ತತ್ಪಿತಾ ಮಾತೃಕುಲಂ ಅನಯುತ್ ಹ್ಯಃ। ಅತ್ರ ವೃಷ್ಟಿಃ ನಾಸ್ತಿ। ವಯಮಿದಾನೀಂ ರಾಜಕೀಯಶಾಲಾಧಿಕಾರಿಣಃ ನ ಪುರಸಭಾ ಪ್ರೌಢಶಾಲಾಧ್ಯಾಪಕಾಃ। ವಿಸ್ಮರ ತತ್। ಅಕಿಂಚಿತ್ಕರಮೇತತ್। ವಿತರ ಪತ್ರಮ್ ಇತಿ ಶಮ್।

ವೇದೋಕ್ತ ಆಶೀರ್ವಾದಗಳು. ಉಭಯ ಕುಶಲೋಪರಿ ಸಾಂಪ್ರತ.

ನಿನ್ನ ಪತ್ರವು ದೊರಕಿತು. ಅದನ್ನು...ಪುರಕ್ಕೆ ಕಳುಹಿಸಲಾಯಿತು. ಶಾಲೆಗೆ ಹೋಗಿದ್ದೆ. ನಾನು ಬುಧವಾರ ನಿನ್ನ ಪತ್ರ ನಿರೀಕ್ಷಿಸಿದ್ದು ಅದು ಬರದೆ ಅತೀವ ಕಾತರನಾಗಿ ತಂತಿ ಸಮಾಚಾರ ಕಳುಹಿಸಲು ಅಧಿಕಾರಿಗಳಿಗೆ ಎರಡು ರೂಪಾಯಿ ಕೊಟ್ಟೆ. ಅವರು ಈ ದಿನ ಬೆಳಗ್ಗೆ ತಂತಿ ಸಮಾಚಾರ ಕಳುಹಿಸಿದರು. ಸಂಜೆ...ಹಳ್ಳಿಗೆ ಹೋದ ನನಗೆ ನೀನು ಬರೆದ ಪತ್ರ ದೊರಕಿತು. ತಂತಿ ಸಮಾಚಾರ ನಿನಗೆ ದೊರಕಿರಬಹುದು ಎಂದು ಊಹಿಸುತ್ತೇನೆ. ಇಲ್ಲಿ ನಾವೆಲ್ಲ ಕುಶಲಿಗಳು. ಕೇಶವನಿಗೆ ಸ್ವಲ್ಪ ಜ್ವರ ಬಂದಿತ್ತು. ಈಗ ಪರವಾಗಿಲ್ಲ. ನಿನ್ನ ಅತ್ತಿಗೆಯನ್ನು ಅವರ ತಂದೆ ಅವಳ ತೌರಿಗೆ ಕರೆದುಕೊಂಡು ಹೋದರು. ಇಲ್ಲಿ ಮಳೆ ಇಲ್ಲ. ಈಗ ನಾವು ಸರ್ಕಾರದ ಶಾಲೆಯ ಅಧಿಕಾರಿಗಳೇ ಹೊರತು ಪುರಸಭಾ ಪ್ರೌಢಶಾಲೆಯ ಅಧ್ಯಾಪಕರಲ್ಲ. ಅದನ್ನು ಮರೆ. ಇದಕ್ಕೆ ಏನೂ ಮಾಡಲು ಸಾಧ್ಯವಿಲ್ಲ. ಪತ್ರ ಬರೆ.

ಇತಿ ಮಂಗಳ.

೩೮೭

ವ್ಯಾಕರಣ ವಿಚಾರ

ಕುಶಲಮ್ ಶ್ರೀಃ 4.3.1971

ಆಶಿಷಃ। ಸಂಪ್ರತಿ

ಹ್ಯಃ ಪತ್ರೇ ಮಯಾ ಲಿಖಿತಂ “ವ್ಯೋಮ ಏವ ಕೇಶಾಃ ಯಸ್ಯೇತಿ ತನ್ನ। ವ್ಯೋಮ್ನಿ ಕೇಶಾಃ ಯಸ್ಯೇತಿ ವಿಗ್ರಹಃ। ಅಮರ ಸುಧಾಕರಮತೇ ಅಯಂ ವಿಗ್ರಹಃ। ಅಯಮೇವ ಸಾಧುಃ॥

ಇತಿ ಶಮ್

ಆಶೀರ್ವಾದಗಳು. ನೆನ್ನೆ ನಾನು ಪತ್ರದಲ್ಲಿ ಬರೆದಿರುವಂತೆ

ವ್ಯೋಮ ಏವ ಕೇಶಾಃ ಯಸ್ಯ ಇತಿ ತತ್ನ ಈ ವಿಗ್ರಹ ವಾಕ್ಯ ಸರಿಯಲ್ಲ.

ವ್ಯೋಮ್ನಿ ಕೇಶಾಃ ಯಸ್ಯ ಇತಿ ವಿಗ್ರಹಃ ಈ ರೀತಿಯ ವಿಗ್ರಹವು ಅಮರಕೋಶದ ಟೀಕಾಕಾರ ಸುಧಾಕಾರನ ಮತದಲ್ಲಿ ಇದೆ. ಇದೇ ಸರಿಯಾದುದು.

ಮಂಗಳ

೩೮೮

ಉಪಾಕರ್ಮಕ್ಕೆ ಬಾ

ಭಾ.ಶು. ೧೦

ಕುಶಲಮ್ ಶ್ರೀ ಬಸವಪತ್ತನತಃ

ಆಶಿಷಃ ಉಭಯ ಕುಶಲೋಪರಿ ಸಂಪ್ರತಿ

ಪೂರ್ವಂ ಮಯಾ ಪತ್ರಮೇಕಂ ಲಿಖಿತಮ್। ಸಂದಿಹಾನೇನ ಮಯಾ ಪುನಃ ಲಿಖ್ಯತೇ। 4.9.71 ತಮೇ ಸ್ಥಿರವಾಸರೇ ಉಪಾಕರ್ಮ ಪ್ರವರ್ತತೇ ಇತಿ ತ್ವಯಾ ಭಾರ್ಗವವಾಸರ ಏವ ಆಗಂತವ್ಯಮಿತಿ।

ಸರ್ವೇ ವಯಂ ಕುಶಲಿನಃ। ಭವಾನಪಿ ಭವತಃ ಕ್ಷೇಮಾದಿ ಅಧಿಕೃತ್ಯ ಲಿಖ ಪತ್ರಮ್।

ಮುದ್ಗಲಪುರಾತ್ ಆಗತಾಃ ಸರ್ವೇ।

ತತ್ರಾಪಿ ಸರ್ವೇ ಕುಶಲಿನಃ।

ಇತಿ ಆಶಿಷಃ।

ಆಶೀರ್ವಾದಗಳು. ಉಭಯ ಕುಶಲೋಪರಿ ಸಾಂಪ್ರತ.

ಈ ಹಿಂದೆ ನಾನು ಒಂದು ಪತ್ರ ಬರೆದಿದ್ದೆನು. ಅದು ತಲುಪಿತೋ ಇಲ್ಲವೋ ಎಂಬ ಸಂದೇಹದಿಂದ ಮತ್ತೆ ಒಂದು ಪತ್ರ ಬರೆದೆನು. 4.9.71 ಶನಿವಾರ ಉಪಾಕರ್ಮ ನಡೆಯುತ್ತದೆ. ನೀನು ಶುಕ್ರವಾರವೇ ಬರಬೇಕು. ನಾವೆಲ್ಲಾ ಕ್ಷೇಮದಿಂದಿದ್ದೇವೆ. ನೀನು ನಿನ್ನ ಕ್ಷೇಮಸಮಾಚಾರಗಳಿಗೆ ಪತ್ರ ಬರೆ. ಮುದಲಾಪುರದಿಂದ ಎಲ್ಲರೂ ಬಂದಿದ್ದಾರೆ. ಅಲ್ಲಿಯೂ ಎಲ್ಲರೂ ಕುಶಲಿಗಳು.

ಇತಿ ಆಶೀರ್ವಾದಗಳು.

೩೮೯

ಶರೀರವನ್ನು ಪೋಷಿಸು

ಕುಶಲಮ್ ಶ್ರೀ ಬಸವಪತ್ತನಮ್

ಕಾ.ಅಸಿತ

ವೇದೋಕ್ತಾಃ ಆಶಿಷಃ ಸಮುಲ್ಲಸನ್ತುತರಾಮ್। ಉ.ಕು.ಸಂಪ್ರತಿ – ತ್ವಯಾ ಲಿಖಿತಂ ಪತ್ರಂ ಪ್ರೇಷಿತಂ ದ್ರವ್ಯಮಪಿ ಪ್ರಾಪ್ತಮ್।

ಯತ್ ತ್ವಯಾ ಲಿಖಿತಂ ತತ್ ತೈಲಶಕಟಚಾಲಕಂ ಸಮಾಲೋಚ್ಯ ಪ್ರೇಷಯಾಮಿ।

ಇದಂ ತು ಅವಧಾರ್ಯಂ ಯತ್ "ವಿರಾಮಕಾಲೇ ಅಸ್ಮದ್ಗೃಹೇ ಭವತಃ ಅನ್ಯಸ್ಯ ವಾ ಶರೀರಪೋಷಣಾ ದುರ್ಲಭಾ। ಅತಃ ತತ್ ಅನ್ಯಥಾ ಅನಾಲೋಚ್ಯ ತತ್ರೈವ ತ್ವಯ್ಯೈವ ಅಧಿಕೇನಾಪಿ ಧನೇನ ಅಪ್ರಮತ್ತೇನ ಶರೀರ ಪೋಷಣಂ ಕರ್ತವ್ಯಮ್ । ಇತಿ।

ಯದಿ ಸ ಚಾಲಕಃ ಅಂಗೀಕರೋತಿ ತರ್ಹಿ ಚುಲ್ಲೀಂ, ಘೃತಂ ಚ ಪ್ರೇಷಯಾಮಿ। ಚಿ॥ ಶಿಶುಃ ವಯಂ ಚ ಸರ್ವೇ ಕುಶಲಿನಃ

ಇತಿ ಶಮ್

ವೇದೋಕ್ತ ಆಶೀರ್ವಾದಗಳು. ಉಭಯ ಕುಶಲ ಉಪರಿ ಸಾಂಪ್ರತ. ನಿನ್ನಿಂದ ಬರೆದ ಪತ್ರವು ಕಳುಹಿಸಲ್ಪಟ್ಟಿತು. ಹಣವೂ ದೊರಕಿತು. ನಿನ್ನಿಂದ ಬರೆದಿರುವುದನ್ನು ಬಸ್ಸಿನ ಚಾಲಕನೊಡನೆ ವಿಚಾರಿಸಿ ಕಳುಹಿಸುತ್ತೇನೆ. ಇದನ್ನು ನೀನು ತಿಳಿದಿರು. ರಜಾಕಾಲದಲ್ಲಿ ನಮ್ಮ ಮನೆಯಲ್ಲಿ ನಿನ್ನ ಅಥವಾ ಬೇರೆಯವರ ಯೋಗಕ್ಷೇಮ ನೋಡಿಕೊಳ್ಳುವದು ಕಷ್ಟಕರವಾದುದು. ಆದ್ದರಿಂದ ಇದನ್ನು ಅನ್ಯಥಾ ಭಾವಿಸದೆ ಅಲ್ಲೇ ನಿನ್ನಿಂದಲೇ ಹೆಚ್ಚು ಹಣವನ್ನು ಕೊಟ್ಟಾದರೂ ಎಚ್ಚರಿಕೆಯಿಂದ ನಿನ್ನ ಶರೀರ ರಕ್ಷಣೆ ಮಾಡಿಕೊ. ಆ ಚಾಲಕ ಒಪ್ಪಿದರೆ ಒಲೆ ಮತ್ತು ತುಪ್ಪವನ್ನು ಕಳುಹಿಸುತ್ತೇನೆ. ಮಗು ಮತ್ತು ನಾವೆಲ್ಲಾ ಕುಶಲಿಗಳು.

ಮಂಗಳ.

೩೯೦

ತುಪ್ಪ ತಲಪಿತೆ?

ಕುಶಲಮ್ ಶ್ರೀ ಮಾಘಕೃಷ್ಣ ದ್ವಿತೀಯಾ

ವೃಷಭಪುರ್ಯಾಃ

ಆಯುಷ್ಮತೇ ಆಶಿಷಃ ಸಮುಲ್ಲಸಂತುತರಾಮ್। ಅತ್ರತ್ಯಾಃ ಸರ್ವೇ ಭಗವದನುಗ್ರಹೇಣ ಕುಶಲಿನಃ। ಸಂಪ್ರತಿ (22.1.72) ತಮೇ ಸ್ಥಿರವಾಸರೇ ಮಯಾ ಇತಃ ಪ್ರೇಷಿತಂ ಘೃತಂ, ತದ್ವೈವ ಮಯಾ ಲಿಖಿತಂ ಪತ್ರಮಪಿ ತ್ವಯಾ ಲಬ್ಧಂ ನ ವಾ ಇತ್ಯೇತತ್, ತವ ಆರೋಗ್ಯಾದಿಕಂ ಚ ಅಧಿಕೃತ್ಯ ಪತ್ರಮೇಕಂ ಲಿಖ। ದಶದಿನೇಷು ಗತೇಷ್ವಪಿ ತ್ವಯಾ ನ ಪ್ರೇಷಿತಂ ಪತ್ರಮ್ ಇತಿ ಪ್ರಕ್ಷುಬ್ಧಂ ಮನಃ। ಯದಿ ಘೃತಂ ನಾಸಾದಿತಂ ತ್ವಯಾ

ಪ್ರಭೂತಧನನಾಶಃ ಭವೇದಿತಿ ಶಂಕಿತಃ। ತವ ಮಾತುಲಾಯ ಚಿ॥ ರಾಮಾಯ ತದೀಯಾಧಿಕಾರಿಣಃ ತೈಲಶಕಟಮೇಕಂ ಅದದುಃ। ಚಿ॥ ನಾಗರಾಜಃ ಸ್ವ ಪರೀಕ್ಷಾಯಾಮುತ್ತೀರ್ಣಃ। ಸ್ಥಾನು ನ ಲಿಖಿತಮ್। ಚಿ॥ ಶೇಷಕೃಷ್ಣ ಶ್ವಃ ಪರಶ್ವೋ ವಾ ಶ್ವಶುರಗೃಹಂ ತತ್ಸ್ಯಾಲಕಸ್ಯ ಉಪನಯನಾರ್ಥಂ, ಜ್ಯೇಷ್ಠ ಶ್ವಶುರಪುತ್ರ್ಯಾಃ ವಿವಾಹಾರ್ಥಂ ಚ ಗನ್ತಾ ಅಸ್ತಿ। ಅಪ್ರಮತ್ತೋ ಭವ ಅನುಷ್ಠಾನಾದಿಷು। ಅನುಪದಮೇವ ತವ ಆರೋಗ್ಯಾದಿಕಂ ಅಧಿಕೃತ್ಯ ಪತ್ರಂ ಲಿಖ। ಇತಿ ಆಶಿಷಃ ಚಿ। ವಾಮನಃ ಪ್ರಾಯೇಣ ಭಾನುವಾಸರೇ ಆಗಂ ತಾ।

ಆಯುಷ್ಮಂತನಿಗೆ ಆಶೀರ್ವಾದಗಳು. ಇಲ್ಲಿ ನಾವೆಲ್ಲಾ ಭಗವಂತನ ಅನುಗ್ರಹದಿಂದ ಕುಶಲಿಗಳು. ಈ ದಿನ (22.1.72) ಶನಿವಾರ ಇಲ್ಲಿಂದ ತುಪ್ಪ ಕಳುಹಿಸಿದ್ದೇನೆ. ಆಗಲೇ ನಾನು ಬರದ ಪತ್ರ ನಿನಗೆ ದೊರೆತಿರಬಹುದು. ನಿನ್ನ ಆರೋಗ್ಯ ಇತ್ಯಾದಿ ವಿಷಯಕ್ಕೆ ಪತ್ರ ಬರೆ. ಹತ್ತು ದಿನ ಕಳೆದರೂ ನಿನ್ನಿಂದ ಪತ್ರವಿಲ್ಲ, ಮನಸ್ಸಿಗೆ ಆತಂಕವಾಗಿದೆ. ತುಪ್ಪ ನಿನಗೆ ದೊರಕಿಲ್ಲದಿದ್ದರೆ ತುಂಬಾ ಹಣ ನಷ್ಟ ಎಂಬ ಶಂಕೆ. ನಿನ್ನ ಸೋದರಮಾವ ರಾಮನಿಗೆ ಅವನ ಅಧಿಕಾರಿಗಳು ಒಂದು ವಾಹನವನ್ನು ಕೊಟ್ಟರು. ಚಿ॥ ನಾಗರಾಜನು ತನ್ನ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಾನೆ. ಸ್ಥಾನ ಸೂಚಿಸಿಲ್ಲ. ಚಿ॥ ಶೇಷಕೃಷ್ಣನು ನಾಳೆಯೋ ನಾಡಿದ್ದೋ ತನ್ನ ಭಾವಮೈದುನನ ಉಪನಯನಕ್ಕೆ ಮತ್ತು ದೊಡ್ಡ ಮಾವನ ಮಗಳ ವಿವಾಹಕ್ಕೋಸ್ಕರವೂ ತನ್ನ ಮಾವನ ಮನೆಗೆ ಹೋಗುವವನು. ಅನುಷ್ಠಾನಾದಿಗಳಲ್ಲಿ ಜಾಗರೂಕನಾಗಿರು. ಕೂಡಲೆ ನಿನ್ನ ಆರೋಗ್ಯಾದಿಗಳ ಬಗ್ಗೆ ಪತ್ರ ಬರೆ. ವಾಮನನು ಭಾನುವಾರ ಬರಬಹುದು.

ಇತಿ ಆಶೀರ್ವಾದಗಳು.

೩೯೧

ಎಲ್ಲವೂ ನಾಶವಾಗುತ್ತಿದೆ

28.3.1972

ಕುಶಲಮ್ ಶ್ರೀ ಬಸವಪತ್ತನಮ್

ಆಶಿಷಃ ಉಭಯಕುಶಲೋಪರಿ ಸಂಪ್ರತಿ

ಮಯಾ ಚ ಭಾರ್ಗವವಾಸರೇ ಪತ್ರಮೇಕಮ್ ಇತಃ ಪ್ರೇಷಿತಮ್। ತ್ವಯಾ ಅಧಿಗತಮಿತಿ ಮನ್ಯೇ। ಅದ್ಯ ಭೌಮವಾಸರೇ ಇತಃ ಮಂಗಲೂರು ತೈಲಶಕಟೇ ಘೃತಂ ಪ್ರೇಷಿತಮ್। ಸಾರಥಯೇ ರೂಪ್ಯಮೇಕಂ ದತ್ತಂ ಚ। ತತ್‌ಘೃತಂಚ ತ್ವಯಾ ಅಧಿಗತಮ್। ಆಹಾರಮಸ್ತಿ ನೇತಿ ನಿರೂಪ್ಯ ಪತ್ರಮೇಕಂ ಲಿಖ। ಚಿ॥ ವಾಮನಃ ಹಸ್ತಾಂಕನೇನ ಸಹ ಪ್ರತಿಕೃತೀಃ ತಸ್ಯ ಪೂರ್ವೇದ್ಯುಃ ಪ್ರೇಷಿತವಾನ್। ಅದ್ಯೈವ ಅಂತಿಮೋ ದಿವಸಃ ತಸ್ಯ ಇತಿ ಪ್ರಯೋಜನಂ ನಾಸ್ತಿ ತೇನ। ಏವಂಪ್ರಾಯಾ ಏವ ಅಸ್ಮತ್‌ಕುಟುಂಬೇ ಸರ್ವೇಷಾಂ ಭವಿತವ್ಯತಾ। ಕಿಂ ಕುರ್ಮಃ ಸ್ವಬುದ್ಧ್ಯೈವ ಸ್ವಯಮಾಗತಾನ್ ಸರ್ವಾನಪಿ ಲಾಭಾನ್ ನಾಶಯಾಮಃ। ಕುಶಲಿನಃ ಸರ್ವೇ। ಅಚಿರೇಣ ಪತ್ರಮೇಕಂ ಲಿಖ।

ಇತಿ ಶಮ್

ಆಶೀರ್ವಾದಗಳು. ಉಭಯ ಕುಶಲೋಪರಿ ಸಾಂಪ್ರತ. ಇಲ್ಲಿಂದ ನಾನು ಶುಕ್ರವಾರವೇ ಒಂದು ಪತ್ರ ಕಳುಹಿಸಿದೆನು. ಅದು ನಿನಗೆ ಸಿಕ್ಕಿದೆ ಎಂದು ತಿಳಿದಿದ್ದೇನೆ. ಈ ದಿನ ಮಂಗಳವಾರ ಇಲ್ಲಿಂದ ಮಂಗಳೂರು ಬಸ್ಸಲ್ಲಿ ತುಪ್ಪ ಕಳುಹಿಸಿದ್ದೇನೆ. ಡ್ರೈವರಿಗೆ ಒಂದು ರೂಪಾಯಿ ಕೊಟ್ಟಿದ್ದೇನೆ. ಆ ತುಪ್ಪ ನಿನಗೆ ದೊರಕಿತೆ ? ಆಹಾರ ಇದೆಯೋ ಇಲ್ಲವೋ ? ಎಲ್ಲಕ್ಕೂ ಪತ್ರವನ್ನು ಬರೆ. ವಾಮನನು ಸಹಿ ಮಾಡಿ ಯಥಾಪ್ರತಿಯನ್ನು ನೆನ್ನೆಯೇ ಕಳುಹಿಸಿದ. ಈ ದಿನವೇ ಕೊನೆಯ ದಿನ ಆದ್ದರಿಂದ ಅದರಿಂದ ಏನೂ ಪ್ರಯೋಜನವಿಲ್ಲ. ನಮ್ಮ ಕುಟುಂಬದಲ್ಲಿ ಎಲ್ಲರಿಗೂ ಇದೇ ರೀತಿ ಆಗುತ್ತಿದೆ. ಏನು ಮಾಡುವುದು ? ತಾನಾಗಿಯೇ ಬಂದ ಎಲ್ಲ ಲಾಭವನ್ನೂ ನಮ್ಮ ಬುದ್ಧಿಯಿಂದಲೇ ನಾಶ ಮಾಡುತ್ತಿದ್ದೇವೆ. ಎಲ್ಲರೂ ಕುಶಲಿಗಳು. ತಡಮಾಡದೆಯೇ ಪತ್ರ ಬರೆ.

ಇತಿ ಮಂಗಳ

೩೯೨

ಅಕ್ಕಿ ಕಳುಹಿಸುತ್ತೇನೆ

ಕುಶಲಮ್ ಶ್ರೀ 4.7.1972

ಆಶಿಷಃ ಸಂಪ್ರತಿ

ಮಯಾ ಲಿಖಿತಂ ಪತ್ರಮಾಸಾದಿತಂ ಭವತೇತಿ ಮನ್ಯೇ। ಅತಿವೃಷ್ಟಿಹೇತೋಃ ತಂಡುಲಾಃ ನ ಪ್ರೇಷಿತಾಃ। ಅದ್ಯ ತಂಡುಲಾನಾನೀಯ ಶೋಧಯಿತ್ವಾ ಗೋಣ್ಯಾಂ ನಿಕ್ಷಿಪ್ಯ ಸಜ್ಜೀಕೃತಾಃ। ಹ್ಯಃ ಆಗತಃ ಇಬ್ರಾಹಿಮಃ ತನ್ನಯಾಮಿ ಇತ್ಯವದತ್। 6.7.72 ತಮೋ ಗುರುವಾಸರೇ ಅವಶ್ಯಂ ತಂಡುಲಾನ್ ಪ್ರೇಷಯಾಮಿ। ನೈತದನ್ಯಥಾ ಭವಿಷ್ಯತಿ। ತದವಶ್ಯಂ ಭವಾನ್ ತೈಲಶಕಟಸಮೀಪಮಾಗತ್ಯ ನಯತು ತಂಡುಲಾನ್। ತೇ ಮಾತಾ ಇದಾನೀಮತ್ರೈವಾಸ್ತೇ। ಚಿ. ಕೇಶವಃ ಕಿಂಚಿದಿವ ರುಗ್ಣಃ। ಸರ್ವೇ ವಯಂ ಕುಶಲಿನಃ।

ಚಿ। ಸೌ। ಲಲಿತಾ ಪರೀಕ್ಷಾಯಾಮ್ ಉತ್ತೀರ್ಣಾ । ಸಂಗೀತಕಸ್ತು ನಾಯಾತಃ। ಇತಿ ಶಮ್

ತೇ ಮಾತುಃ ಧನಂ ಮಾ ಪ್ರೇಷಯ ಭವಾನ್। ಅಹಮತ್ರೈವ ದದಾಮಿ। ಯಾವದಸ್ತಿ ಧನಂ ತತ್ತು ತತ್ರೈವ ತಿಷ್ಠತು।

ಆಶಿಷಃ

ಆಶೀರ್ವಾದಗಳು. ಈಗ ನಾನು ಬರೆದ ಪತ್ರ ನಿನಗೆ ತಲಪಿದೆ ಎಂದು ನಂಬಿದ್ದೇನೆ. ಇಲ್ಲಿ ಹೆಚ್ಚು ಮಳೆ ಬೀಳುತ್ತಿದೆ. ಆದ ಕಾರಣ ಅಕ್ಕಿಯನ್ನು ಕಳುಹಿಸಿಲ್ಲ. ಈ ದಿನ ಅಕ್ಕಿ ತಂದು ಶೋಧಿಸಿ ಗೋಣಿಚೀಲದಲ್ಲಿ ಕಟ್ಟಿಡಲಾಗಿದೆ. ನೆನ್ನೆ ಬಂದ ಇಬ್ರಾಹಿಮನು ಅದನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಹೇಳಿದ. 6.7.72 ಗುರುವಾರ ಖಂಡಿತ ಅಕ್ಕಿಯನ್ನು ಕಳುಹಿಸುತ್ತೇನೆ. ತಪ್ಪುವುದಿಲ್ಲ. ಆದ್ದರಿಂದ ನೀನು ಬಸ್ಸಿನ ಬಳಿ ಬಂದು ಅಕ್ಕಿಯನ್ನು ತೆಗೆದುಕೊಂಡು ಹೋಗು. ನಿನ್ನ ತಾಯಿಯು ಈಗ ಇಲ್ಲಿಯೇ ಇದ್ದಾಳೆ. ಕೇಶವನಿಗೆ ಸ್ವಲ್ಪ ಆರೋಗ್ಯ ಇಲ್ಲ. ನಾವೆಲ್ಲ ಕುಶಲಿಗಳು. ಚಿ॥ಸೌ॥ ಲಲಿತಳು ಉತ್ತೀರ್ಣಳಾಗಿದ್ದಾಳೆ. ಸಂಗೀತದ ಫಲಿತಾಂಶ ಬಂದಿಲ್ಲ. ನಿನ್ನ ತಾಯಿಗೆ ನೀನು ಹಣ ಕಳುಹಿಸಬೇಡ. ನಾನೇ ಇಲ್ಲಿ ಕೊಡುತ್ತೇನೆ. ನಿನ್ನ ಬಳಿ ಇರುವ ಹಣ ನಿನ್ನಲ್ಲೇ ಇರಲಿ.

ಆಶೀರ್ವಾದಗಳು.

೩೯೩

ಎರಡು ರೂ. ಕೊಟ್ಟಿದೆ

26.1.1973

ಕುಶಲಮ್ ಶ್ರೀಃ ವೃಷಭಪುರೀತಃ

ಆಶಿಷಃ ಸಂಪ್ರತಿ

ಅದ್ಯ ಭಾರ್ಗವವಾಸರೇ (26.1.73) ಮಂಗಳೂರು ಸಾರಥಿನಾ ಸಹ ತಂಡುಲಾಃ ಪ್ರೇಷಿತಾಃ। ನ ತು ಘೃತಮ್। ತವ ಗೃಹಸ್ಯ ವಿಶ್ವವಿದ್ಯಾಲಯಸ್ಯ ಚ ಲಕ್ಷಣಾನಿ ತಸ್ಮೈ ದತ್ತಾನಿ। ಗೃಹಂ ಪ್ರಾಪಯತಿ, ವಿದ್ಯಾಲಯಂ ವಾ ಪ್ರಾಪಯತಿ, ತಸ್ಯ ಶಿರಸ್ಥಾನೇ, ವಾ ನಿಕ್ಷಿಪತಿ। ಅದ್ಯ ಯದಿ ನ ಪ್ರಾಪಯತಿ ಶ್ವಃ ತ್ವಮೇವ ಗತ್ವಾ ಗೃಹಾಣ। ಏತದರ್ಥಂ ತಸ್ಮೈ ರೂಪ್ಯಕದ್ವಯಂ ದತ್ತಮ್। ಈಶ್ವರಕುಟುಂಬ ವಾಹನಾ ನೀವ ಇದಾನೀಮಸ್ಮದ್‌ಗೃಹಮ್। ನ ಪಾರಯಾಮಿ ಲಿಖಿತುಮ್। ತವ ಆರೋಗ್ಯಂ ತಂಡುಲಪ್ರಾಪ್ತಿಂ ಚ ಅಧಿಕೃತ್ಯ ಪತ್ರಮೇಕಂ ಲಿಖ।

ಸರ್ವೇ ವಯಂ ಕುಶಲಿನಃ।

ಇತಿ ಶಮ್

(ಶಿರಸ್ಥಾನಮ್ = T.C's office)

ಆಶೀರ್ವಾದಗಳು, ಸಂಪ್ರತಿ.

ಈ ದಿನ ಶುಕ್ರವಾರ (26.1.73) ಮಂಗಳೂರು ಡ್ರೈವರ್ ಮೂಲಕ ಅಕ್ಕಿ ಕಳುಹಿಸಿದ್ದೇನೆ. ತುಪ್ಪ ಕಳುಹಿಸಿಲ್ಲ. ನಿನ್ನ ಮನೆ ಮತ್ತು ವಿಶ್ವವಿದ್ಯಾಲಯದ ಗುರುತನ್ನು ಹೇಳಿದ್ದೇನೆ. ಮನೆಗೇ ತಲುಪಿಸಬಹುದು ಅಥವಾ ವಿಶ್ವವಿದ್ಯಾಲಯಕ್ಕೆ ತಲುಪಿಸಬಹುದು. ಅವನ ಟಿ.ಸಿ. ಆಫೀಸಿನಲ್ಲೇ ಇಟ್ಟಿರಬಹುದು. ಈ ದಿನ ತಂದು ಕೊಡದಿದ್ದರೆ ನಾಳೆ ನೀನೇ ಹೋಗಿ ತೆಗೆದುಕೊ. ಇದಕ್ಕಾಗಿ ಅವನಿಗೆ ಎರಡು ರೂಪಾಯಿ ಕೊಡಲಾಗಿದೆ. ಈಶ್ವರನ ಕುಟುಂಬದ ವಾಹನದಂತೆ ಈಗ ನಮ್ಮ ಮನೆ. ಹೆಚ್ಚು ಬರೆಯಲು ಶಕ್ತನಲ್ಲ. ನಿನ್ನ ಆರೋಗ್ಯಕ್ಕೂ ಅಕ್ಕಿ ದೊರೆತುದಕ್ಕೂ ಬರೆ. ನಾವೆಲ್ಲರೂ ಕ್ಷೇಮವಾಗಿದ್ದೇವೆ.

ಮಂಗಳ.

೩೯೪

ಕುಶಲಕ್ಕೆ ಬರೆಯಿರಿ

ಕುಶಲಮ್ ಶ್ರೀಃ ಮತ್ತೂರು

27.5.1976

ಶ್ರೀಮತಾಂ ತತ್ರಭವತಾಂ ಪ್ರಿಯಸುಹೃದಾಂ ಶಾಸ್ತ್ರಿಮಹೋದಯಾನಾಂ ಸವಿಧೇ ಸಪ್ರಶ್ರಯಂ ಪ್ರಣಾಮಾಂಜಲಯಃ ಸಮುಲ್ಲಸಂತುತರಾಮ್। ವಯಂ ತತೋ ನಿರ್ಗತ್ಯ ಸುಖೇನ ಸ್ವಾವಾಸಂ ಪ್ರವಿಷ್ಟಾಃ ಕುಶಲಿನಶ್ಚ। ತತ್ರಭವತಾಮ್ ಸಮೇಷಾಂ ಕುಶಲಮ್ ಆಯತ್ಯಾ ಸಾಕಮ್ ಆಕರ್ಣಯಿತುಂ ಕಾತರಂ ಮೇ ಮನಃ। ಅನುಪದಮೇವ ಶುಭೋದರ್ಕವಾಹಂ ಕುಶಲಪತ್ರಂ ಭವದ್ಭಿಃ ಪ್ರೇಷಣೀಯಮಿತಿ ಪ್ರಾರ್ಥಯೇ।

ಚಿರಾಯುಷ್ಮದ್ಭ್ಯಃ ಶೇಷಕೃಷ್ಣಪ್ರಮುಖೇಭ್ಯಃ ಸರ್ವೇಭ್ಯಃ ಅಸ್ಮದಾಶೀಃ ನಿವೇದನೀಯಾ।

ಬಹುವಕ್ತವ್ಯಂ ಮನಸಿ ವರ್ತತೇ ಔಚಿತ್ಯಭಂಗಭಿಯಾ ಲೇಖನೇ ಅಸಮರ್ಥೋಽಸ್ಮಿ ಕ್ಷಂತವ್ಯೋಽಸ್ಮಿ ಚ। ಅನ್ಯತ್ಸರ್ವಂ ಯಥಾಪೂರ್ವಮ್।

ಇತಿ ಭವದೀಯಃ...ಧರ್ಮರಾಜಾದಿಭ್ಯೋಽಪಿ ಅಸ್ಮತ್ ಕುಶಲವಾರ್ತಾ ಪ್ರೇಷಣೀಯಾ

ಇತಿ ಶಮ್

ಪೂಜ್ಯರಾದ, ಪ್ರಿಯ ಸ್ನೇಹಿತರಾದ ಶಾಸ್ತ್ರಿಗಳ ಸನ್ನಿಧಾನದಲ್ಲಿ ಪ್ರೀತಿಪೂರ್ವಕವಾದ ಪ್ರಣಾಮಾಂಜಲಿಗಳು. ಅಲ್ಲಿಂದ ಹೊರಟ ನಾವು ನಮ್ಮ ಮನೆಗೆ ಸುಖವಾಗಿ ಬಂದೆವು. ಕ್ಷೇಮದಿಂದ ಇದ್ದೇವೆ. ಅಲ್ಲಿ ತಮ್ಮೆಲ್ಲರ ಕುಶಲ ಸಮಾಚಾರವನ್ನೂ ಆರೋಗ್ಯಾದಿಗಳನ್ನೂ ಕೇಳಲು ನನ್ನ ಮನಸ್ಸು ಕಾತರಗೊಂಡಿದೆ. ಕೂಡಲೆ ಶುಭಕರವಾದ ಕುಶಲ ಪತ್ರವನ್ನು ತಾವು ಕಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಚಿ॥ರಾ॥ ಶೇಷಕೃಷ್ಣ ಮೊದಲಾದ ಎಲ್ಲರಿಗೂ ನಮ್ಮ ಆಶೀರ್ವಾದಗಳನ್ನು ತಿಳಿಸುವುದು. ಮನಸ್ಸಿನಲ್ಲಿ ತುಂಬಾ ಹೇಳಬೇಕೆಂದಿದೆ. ಔಚಿತ್ಯವು ಭಂಗವಾಗುವುದೆಂಬ ಹೆದರಿಕೆಯಿಂದ ಬರೆಯಲು ಅಸಮರ್ಥನಾಗಿದ್ದೇನೆ. ಕ್ಷಮೆಯಿರಲಿ. ಉಳಿದುದೆಲ್ಲವೂ ಹಿಂದಿನಂತೆ.

ಧರ್ಮರಾಜ ಮೊದಲಾದವರಿಗೂ ನಮ್ಮ ಕ್ಷೇಮ ಸಮಾಚಾರ ತಿಳಿಸುವುದು.

ತಮ್ಮವನು.

ಮಂಗಳ

೩೯೫

ಜಾತಕ ಕಳುಹಿಸಿ

ಶಮ್ ಶ್ರೀಃ ಹುಹು

1.3.1978

ನಮೋ ಮಹದ್ಭ್ಯಃ ಸುಹೃದ್ವರೇಭ್ಯಃ ಶಾಸ್ತ್ರಿವರ್ಯೇಭ್ಯಃ। ಭವತ್ಪತ್ರಮಧಿಗತಮ್ ಅವಗತಂ ಚ। ಭವದಾಜ್ಞಾನುಸಾರೇಣ ನ ಚ ನೀತಾ ... ಗೀತಾ। ಕಿಂ ಚ ಯದ್ಯಪಿ ಭವದ್ಭಿಃ. ಮದನುಕೂಲಾಯೇತಿ ಕೃತ್ವಾ ಆಗತಂ ತೈಲಶಕಟಂ ಉಜ್ಝಿತ್ವಾ ಅನಾಗತಬೈಲಶಕಟಪ್ರತೀಕ್ಷಣಮಿವ ಮೇ ವ್ಯವಸಾಯಃ ಇತಿ ವ್ಯಲೇಖಿ । ಅತಿವೇಗಶೀಲತೈಲಶಕಟಾಪೇಕ್ಷಯಾ ಮಂದ ಗಮನಶೀಲಬೈಲಶಕಟಮೇವ ಸುಗಮಂ ಖಲು ಆಪದ್ಭೂಯಿಷ್ಠತ್ವಾತ್ತೈಲಶಕಟಸ್ಯ। ನಿರ್ಭಯಪ್ರಯಾಣಮೇವ ವರಮಿತಿ ಮತ್ವಾ ಭಗವಂತಂ ಭವಂತಂ ಚ ಪ್ರತೀಕ್ಷನ್ ತೂಷ್ಣೀಮಾಸೇ। ಅಪಿ ಚ ಆವಯೋಃ ಸಕೃತ್ ಚಿಕ್ಕಮಗಳೂರು ಗಮನಮ್ ಯುಕ್ತಮಿತಿ ಭಾತಿ। ತನ್ಮಯಾ ಅಸೂಚಿ ಚ ಪ್ರಾಕ್ತನಪತ್ರೇ। ಕಿಮರ್ಥಂ ತಸ್ಯ ಉತ್ತರಂ ನಾಲೇಖಿ। ಕುತ ಇತಿ ಚೇತ್। ತಯಾನುಭೂತಪೂರ್ವೋಽಸ್ಮಿ। ಮದನುಭವಮೇವ ಭವತ್ಪುರತಃ ಸ್ಥಾಪಿತಮ್। ಅತ ಏವ ಭಣಾಮಿ ಏಕವಾರಂ ಗಚ್ಛಾವಃ ತತ್ಸಮಕ್ಷಮ್ ಇತಿ। ಸರ್ವಥಾ ಪ್ರತ್ಯಕ್ಷತೋ ವ್ಯವಹಾರಃ ಯಥಾ ಸುಕರಃ ನ ತಥಾ ಪತ್ರಮುಖೇನೇತಿ ಮನ್ಯೇ। ಸಮ್ಯಗಾಲೋಚಯಂತು ಭವಂತಃ। ಅಪಿ ಚ ಚಿರಾಯುಷ್ಮತಃ ಶ್ರೀಪತೇಃ ಜಾತಕಂ ಚ ಅತ್ರ ಪ್ರೇಷಯಂತು। ಅತ್ರಸ್ಥೈಃ ಅನುಭವಪೂರ್ಣಕಾರ್ತಾಂತಿಕೈಃ ಸಾಕಂ ಸಮ್ಯಗಾಲೋಚ್ಯ ಸತಿ ಪ್ರತಿಬಂಧಕೇ ತನ್ನಿವಾರಣೋಪಾಯಂ ಚ ಜ್ಞಾತ್ವಾ ಪ್ರಯತಾಮಃ। ಸರ್ವಥಾ ಉದ್ವಾಹಯೋಗಾಭಾವೇ ಅಗ್ರಿಮಮ್ ಆಲೋಚಯಾಮಃ ತದ್ಯುಕ್ತತರಮಿತಿ ಭಾತಿ. ಸಪದಿ ಉತ್ತರಂ ದಾತವ್ಯಮ್। ಸರ್ವೇಽತ್ರ ವಯಂ ಕುಶಲಿನಃ ಶಿಷ್ಟಂ ಸರ್ವಂ ಯಥಾತಥಮ್.

ಇತಿ ಭವದೀಯಃ

ಮಹಾಮಹಿಮರಾದ ಮಿತ್ರಶ್ರೇಷ್ಠರಾದ ಶಾಸ್ತ್ರಿಗಳಿಗೆ ನಮಸ್ಕಾರ.

ತಮ್ಮ ಪತ್ರ ತಲಪಿ ವಿಷಯ ತಿಳಿಯಿತು. ತಮ್ಮ ಆದೇಶದಂತೆ ಗೀತಳನ್ನು...ಗೆ ಕರೆದುಕೊಂಡು ಹೋಗಲಾಯಿತು. ಅಲ್ಲದೆ ತಾವು ನನಗೆ ಅನುಕೂಲವಾಗಲಿ ಎಂದು ಬಂದ ಬಸ್ಸನ್ನು ಬಿಟ್ಟು ಬರದ ಬಸ್ಸನ್ನು ನಿರೀಕ್ಷಿಸುವಂತೆ ನನ್ನ ಪ್ರಯತ್ನ ಎಂದು ಬರೆದಿದ್ದೀರಿ. ಅತಿ ವೇಗದ ಬಸ್ಸಿಗಿಂತ ನಿಧಾನವಾಗಿ ಹೋಗುವ ಎತ್ತಿನ ಬಂಡಿಯೇ ಸುಗಮವಾದುದಲ್ಲವೆ ? ಏಕೆಂದರೆ ಬಸ್ಸಿನಲ್ಲಿ ವಿಪತ್ತು ಹೆಚ್ಚು. ಭಯರಹಿತ ಪ್ರಯಾಣವೇ ಶ್ರೇಷ್ಠವೆಂದು ಭಾವಿಸಿ ಭಗವಂತನನ್ನು ತಮ್ಮನ್ನು ಪ್ರತೀಕ್ಷಿಸಿ ಸುಮ್ಮನೆ ಕುಳಿತೆ. ಅಲ್ಲದೆ ನಾವಿಬ್ಬರೂ ಒಮ್ಮೆ ಚಿಕ್ಕಮಗಳೂರಿಗೆ ಹೋಗುವುದು ಒಳಿತು ಎಂದು ತೋರುತ್ತಿದೆ. ಅದನ್ನು ನಾನು ಹಿಂದಿನ ಕಾಗದದಲ್ಲಿ ಸೂಚಿಸಿದ್ದೇನೆ. ಅದಕ್ಕೆ ಉತ್ತರ ಬರೆದಿಲ್ಲ ಏಕೆ ? ಏಕೆಂದರೆ ನಾನು ಅನುಭವಿಸಿದ ಅನುಭವವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಅದಕ್ಕಾಗೇ ಅವರ ಎದುರಿಗೇ ಒಮ್ಮೆ ಹೋಗೋಣ ಎಂದು ಹೇಳುತ್ತಿದ್ದೇನೆ. ಎಲ್ಲ ರೀತಿಯಲ್ಲಿಯೂ ವ್ಯವಹಾರವು ಎದುರಿಗೆ ಎಷ್ಟು ಸುಲಭವೋ ಹಾಗೆ ಪತ್ರಮೂಲಕ ಅಲ್ಲ ಎಂದು ಭಾವಿಸುತ್ತೇನೆ. ತಾವು ಚೆನ್ನಾಗಿ ಆಲೋಚನೆ ಮಾಡಿ. ಅಲ್ಲದೆ ಚಿ.ರಾ. ಶ್ರೀಪತಿಯ ಜಾತಕವನ್ನು ಇಲ್ಲಿಗೆ ಕಳುಹಿಸಿರಿ. ಇಲ್ಲಿರುವ ಅನುಭವೀ ಜ್ಯೋತಿಷಿಕರೊಡನೆ ಆಲೋಚಿಸಿ ಮದುವೆ ತಡವಾಗಿರುವುದಕ್ಕೆ ಅದರ ನಿವಾರಣೋಪಾಯ ತಿಳಿದು ಪ್ರಯತ್ನಿಸೋಣ. ಎಲ್ಲ ರೀತಿಯಲ್ಲೂ ವಿವಾಹಯೋಗ ಇಲ್ಲದಿದ್ದರೆ ಮುಂದೆ ಆಲೋಚಿಸೋಣ. ಅದೇ ಸರಿ ಎಂದು ತೋರುತ್ತದೆ. ಕೂಡಲೆ ಉತ್ತರ ಕೊಡಿ. ಇಲ್ಲಿ ನಾವೆಲ್ಲರೂ ಕುಶಲಿಗಳು. ಉಳಿದದ್ದೆಲ್ಲಾ ಹಿಂದಿನಂತೆ.

ತಮ್ಮವನು

೩೯೬

ವಿವಾಹ : ಖಾಜೀ ನ್ಯಾಯ

ಕುಶಲಮ್ ಶ್ರೀಃ 7.12.1979

ಆಶಿಷಃ ಸಂಪ್ರತಿ,

ರಾಮನಾಥಪುರಂ ಗತ್ವಾ ಅಪ್ರಾಕ್ಷಮ್ "ಸ ತು ಪರಿಶೀಲ್ಯ ಅನಯೋಃ ಘಟನೈವ ನಾಸ್ತಿ ಅಪರಿಹಾರ್ಯೋ ನಾಡೀದೋಷಃ" ಇತಿ ಅವದತ್ । ತತಃ ದೈವಂ ಪೃಚ್ಛಾಮಿ ಇತಿ ಪ್ರಶ್ನರೀತ್ಯಾ ಆಲೋಚ್ಯ ಶಕುನಂ ಚ ನಿರೀಕ್ಷ್ಯ (ಆಗತೌ ದಂಪತೀ) ಗುಣಾಧಿಕ್ಯತಯಾ ಬಾಧಕಾಭಾವ ಇತಿ ಚಾವದತ್। ಸಮಸ್ಯಾ ನ ಪರಿಹೃತಾ। ಏತದರ್ಥಂ ಸಹಸಾ ಮಹೀಶೂರಪುರೀಮ್ ಆಗತ್ಯ ಜಾತಕೇ ದತ್ವಾ ಪರಿಶೀಲಯೇತ್ಯುಕ್ತಮ್। ಆಲೋಚ್ಯ ಚ "ನ ಗ್ರಾಹ್ಯಮೇತತ್ ಇತ್ಯುಕ್ತಮ್ ತತಶ್ಚ ಗ್ರಹಸನ್ನಿವೇಶಾದಿತಿ ನಿರೀಕ್ಷ್ಯ ತ್ಯಾಜ್ಯಮೇವ ಇತಿ ನ ಬ್ರವೀಮಿ" ಕಿಂತು ಗ್ರಹಣೇ ಬಾಧಕಾಭಾವಃ (75 %) ಇತ್ಯುಕ್ತಮ್"। ತತಃ 5.5.80 ತಃ ಅನಂತರಮಸ್ಯ ವಿವಾಹೋ ಭವಿತಾ ನ ಇದಾನೀಂ ಇತಿ ಚೋಕ್ತಮ್। ಗ್ರಹಬಾಧಾಯಾಃ ಶಾಂತಿಂ ಕುರು ಇತ್ಯಾಹ। ತತಃ ರಾಮಶಾಸ್ತ್ರೀ "ಅತೀವ ಶೋಭತೇ ಇಯಮೇವ ಕನ್ಯಾ

ಭವತಿ। ಅತಿ ಸಮೀಚೀನಂ ವರ್ತತೇ। ಅಸ್ಮಿನ್ನೇವ ಸಂವತ್ಸರೇ ಭವತಿ" ಇತ್ಯಾದಿ ಆಹ। ತತಃ ಕಾಲಃ ಅತೀವ ಸಮೀಚೀನಂ ಭವತಿ। ತಸ್ಯಾಃ ಪಾಣಿಗ್ರಹಣಾದನಂತರಮೇವ ತಸ್ಯ ಅಭ್ಯುದಯಃ ದೃಶ್ಯತೇ। ಸಾ ಯಸ್ಯ ಕರಂ ಗೃಹ್ಣಾತಿ ತಸ್ಯ ಅಭ್ಯುದಯಃ। ನ ದೋಷಂ ಪಶ್ಯಾಮಿ। ಸಂಬಂಧಃ ಮನೋಹರೋ ಭವತಿ ಇತಿ ಬಹುವರ್ಣಿತಮ್।

ದೇವೀಪೂಜಯಾ ಕಿಮುತ್ತರಂ ಲಬ್ಧಮ್? ಪ್ರಾಯೇಣ ರಾಮನಾಥಪುರಮಹೀಶೂರಪುರ್ಯೋರಪಿ ತದೇವೇತಿ ಭಾತಿ। (ಸಾಮಾನ್ಯಂ) ರಾಮನಾಥಪುರೀಯಃ ಖಾಜೀ ನ್ಯಾಯಂ ಕೃತ್ವಾ ತನ್ನಿರಾಸೇ ನ ಅಯತತ। ತೇನೈವ ನಿರಾಸೇ ಮಹಾನ್ ಆನಂದಃ ಅನೇನ ಕಲಾಪೇನ ಶ್ರೀಪತಿಃ ಕೀದೃಶೋ ಭವತಿ ಇತಿ ಭಯಮೇವ।

ಇತಿ ಆಶಿಷಃ

ರಾಮನಾಥಪುರಕ್ಕೆ ಹೋಗಿ ಕೇಳಿದೆನು. ಅವರು ಪರಿಶೀಲಿಸಿ 'ಇವರಿಬ್ಬರಿಗೂ ಸಂಬಂಧ ಕೂಡುವುದೇ ಇಲ್ಲ, ನಾಡಿದೋಷ ಪರಿಹರಿಸಲು ಸಾಧ್ಯವಿಲ್ಲ' ಎಂದು ಹೇಳಿದರು. ಅನಂತರ ದೈವವನ್ನು ಕೇಳುತ್ತೇನೆ ಎಂಬುದಾಗಿ ಪ್ರಶ್ನ ರೀತಿಯಿಂದ ಆಲೋಚಿಸಿ ಶಕುನವನ್ನು ನಿರೀಕ್ಷಿಸಿ ಅಧಿಕ ಗುಣಗಳು ಬಂದಿದ್ದರಿಂದ ಮಾಡುವುದಕ್ಕೆ ಬಾಧಕವಿಲ್ಲ ಎಂದು ಹೇಳಿದರು. ಸಮಸ್ಯೆ ಪರಿಹಾರ ಆಯಿತು. ಇದಕ್ಕೇ, ಕೂಡಲೇ ಮೈಸೂರಿಗೆ ಬಂದು ಎರಡೂ ಜಾತಕ ಕೊಟ್ಟು ನೋಡಿಸು ಎಂದು ಹೇಳಿದ್ದು, 'ಇದು ಸ್ವೀಕಾರಾರ್ಹವಲ್ಲ' ಎಂದು ಹೇಳಿದರು. ನಂತರ, ಗ್ರಹಸನ್ನಿವೇಶಗಳಿಂದ ಪರಿಶೀಲಿಸಿ 'ಇದನ್ನು ಬಿಟ್ಟುಬಿಡಬೇಕು ಎಂದು ಹೇಳುವುದಿಲ್ಲ, ಆದರೆ ಸ್ವೀಕರಿಸಿದರೆ ತೊಂದರೆ ಇಲ್ಲ' ಎಂದು ಹೇಳಿದರು. '5.5.85 ರ ನಂತರ ಇವನ ವಿವಾಹ ಆಗುತ್ತದೆ, ಈಗ ಆಗುವುದಿಲ್ಲ' ಎಂದು ಹೇಳಿದರು. 'ಗ್ರಹಬಾಧೆಗಾಗಿ ಶಾಂತಿ ಮಾಡಿಸಿ' ಎಂದು ಹೇಳಿದರು. ಅನಂತರ ರಾಮಾಶಾಸ್ತ್ರಿಗಳು, 'ಈ ಕನ್ಯೆಯೇ ಅತ್ಯಂತ ಪ್ರಶಸ್ತಳಾಗಿದ್ದಾಳೆ, ವಿವಾಹಯೋಗವೂ ಚೆನ್ನಾಗಿದೆ, ಈ ವರ್ಷವೇ ಆಗುತ್ತದೆ' ಇತ್ಯಾದಿಯಾಗಿ ಹೇಳಿದರು. 'ಅನಂತರ ಒಳ್ಳೆಯ ಕಾಲ ಬರುತ್ತದೆ. ಅವಳ ಕೈ ಹಿಡಿದ ನಂತರವೇ ಇವನ ಏಳಿಗೆ ತೋರುತ್ತೆ. ಅವಳು ಯಾವನ ಕೈ ಹಿಡಿಯುತ್ತಾಳೋ ಅವನಿಗೆ ಏಳಿಗೆ ಆಗುತ್ತದೆ. ದೋಷ ತೋರುತ್ತಿಲ್ಲ, ಈ ವಿವಾಹ ಸಂಬಂಧ ಮನೋಹರ' ಎಂಬುದಾಗಿ ಬಹುವಾಗಿ ಹೇಳಿದರು.

ದೇವೀಪೂಜೆಯಿಂದ ಯಾವ ಉತ್ತರ ದೊರಕಿತು ? ಪ್ರಾಯಃ ರಾಮನಾಥಪುರ ಮತ್ತು ಮೈಸೂರಿನಲ್ಲಿ ಅದೇ ಅಭಿಪ್ರಾಯವು ತೋರುತ್ತಿದೆ ಎಂದು ಅನ್ನಿಸುತ್ತಿದೆ. ಸಾಮಾನ್ಯವಾಗಿ ರಾಮನಾಥಪುರದವರು ಖಾಜೀ ನ್ಯಾಯ ಮಾಡಿ ಅದರ ನಿವಾರಣೆಗಾಗಿ ಪ್ರಯತ್ನಿಸಲಿಲ್ಲ ಎಂದು ತೋರುತ್ತದೆ.

...ಅದರಿಂದಲೇ ಇದು ದೂರವಾಗುವುದಾದರೆ ಈ ಕಾರ್ಯದಿಂದ ಮಹದಾನಂದ ಆಗುತ್ತದೆ. ಶ್ರೀಪತಿ ಹೇಗಿದ್ದಾನೋ ಎಂದು ಹೆದರಿಕೆ ಆಗುತ್ತಿದೆ.

ಆಶೀರ್ವಾದಗಳು.

೩೯೭

ವ್ಯಾಕರಣ ವಿಚಾರ

ಶ್ರೀಃ

27.2.1980

ತತ್ರಭವದ್ಭ್ಯಃ ಶ್ರೀ ಸುಬ್ಬರಾಯಶಾಸ್ತ್ರಿಭ್ಯಃ

ಮಾನ್ಯೇಭ್ಯಃ ಇಮಾಃ ಪ್ರಣತಯಃ।

ಅಸ್ಮದ್ಗುರವಃ ಕೆ.ಜಿ.ಸುಬ್ರಹ್ಮಣ್ಯಶಾಸ್ತ್ರಿಣಃ ಕಾರ್ಯವಿಶೇಷೇಣ ಅಸ್ಮದ್ಗೃಹಮಾಗತಾಃ ಅನ್ಯಸ್ಮಿನ್ ಕಸ್ಮಿಂಶ್ಚಿತ್ ಭಾವಿನಿ ಶುಭೇ ಲಗ್ನೇ ವಿವಾಹೋಽಯಂ ಸಂಪದ್ಯತೇ ಇತ್ಯಬ್ರುವನ್। ತ್ರ್ಯಹಾತ್ಪ್ರಾಕ್ ಕಿಂಚ "ದಮ್ಪತ್ಯೋಶ್ಚಿರಮಾಯುಷಂ" ಇತ್ಯತ್ರ ಆಯುಃ ಶಬ್ದಸ್ಯ ಪುಂಸಿ ಪ್ರಯೋಗಃ ನ ಘಟತೇ ಇತಿ ಉಕ್ತವನ್ತಃ। ಏತತ್ಪೂರ್ವಂ ಮಯಾಪತ್ರಮೇಕಂ ಲಿಖಿತಂ ತಚ್ಚ ಭವದ್ಧಸ್ತಗತಮಿತಿ ಚಿಂತಯಾಮಿ। ಮಯಾಪಿ ಶ್ಲೋಕಂ ಪೂರಯತಾ ಚತುರ್ಥಃ ಪಾದಃ ಯಥಾವತ್ ಉಕ್ತಃ। ಸಂಪ್ರತಿ ಚಿನ್ತಯತಾ ಮಯಾ "ದಮ್ಪತ್ಯೋಶ್ಚಿರಮಾಯುಷಾ ಸುಖತತಿಮ್..." ಇತ್ಯುಕ್ತೇ ಸಮೀಚೀನಂ ಭವೇದಿತಿ ಭಾವ್ಯತೇ। ಚಿರಂ ಆಯುಷಾ ಸಮಂ ಸುಖತತಿಂ ಸತ್ಪುತ್ರಪೌತ್ರಾದಿಕಂ ದತ್ತಾಂ – ಇತಿ।

ಪ್ರಕೃತಂ ಭವೇದಿತ್ಯೇತಾವತ್ ಲಿಖಿತಂ, ಕೃಪಯಾ ನ ಅನ್ಯಥಾ ಭಾವಯಿತುಮರ್ಹನ್ತಿ ಭವಂತಃ

ಇತಿ ವಿಶ್ವಸಿಮಿ

ಇತಿ ಪ್ರಣತಯಃ ಭವದೀಯಃ

ಭವದೀಯಂ ಅಪಿ ಪತ್ರವ್, ಇದಂ ಪತ್ರಂ ಸಮಾಪಯತೋ ಮೇ ಹಸ್ತಗತಮಿದಾನೀಮೇವ। ಭವದುಕ್ತೀಃ ಭಗವತ್ಯಾಃ ಸರಸ್ವತ್ಯಾಃ ಆಶೀರಿತಿ ಶಿರಸಾ ವಹಾಮಿ

ಇತಿ ಶಮ್।

ಅಲ್ಲಿರುವ ಮಾನ್ಯ ಶ್ರೀ ಸುಬ್ಬರಾಯಶಾಸ್ತ್ರಿಗಳಿಗೆ ಪ್ರಣಾಮಗಳು. ನಮ್ಮ ಗುರುಗಳಾದ ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರಿಗಳು ಕಾರ್ಯವಿಶೇಷದಿಂದ ನಮ್ಮ ಮನೆಗೆ ಬಂದರು. ಬೇರೊಂದು ಮುಂದಿನ ಶುಭಲಗ್ನದಲ್ಲಿ ಈ ವಿವಾಹವು ಆಗುತ್ತದೆ ಎಂದು ಹೇಳಿದರು. ಮೂರು ದಿವಸಕ್ಕೆ ಮುಂಚೆ 'ದಂಪತ್ಯೋಃ ಚಿರಮಾಯುಷಮ್' ಎಂಬ ಪ್ರಯೋಗದಲ್ಲಿ 'ಆಯುಷ್' ಶಬ್ದವು ಪುಲ್ಲಿಂಗದಲ್ಲಿ ಪ್ರಯೋಗಿಸಲ್ಪಡುವುದಿಲ್ಲ ಎಂದು ಹೇಳಿದರು. ಇದಕ್ಕೆ ಮೊದಲು ನಾನು ಬರೆದ ಪತ್ರವೊಂದು ತಮ್ಮ ಕೈ ತಲಪಿದೆಯೆಂದು ಊಹಿಸುತ್ತೇನೆ. ನನ್ನಿಂದಲೂ ಸಹ ಶ್ಲೋಕ ಪೂರ್ಣ ಮಾಡಬೇಕೆಂದು ನಾಲ್ಕನೆಯ ಪಾದವು ಯಥಾವತ್ತಾಗಿ ಹೇಳಲ್ಪಟ್ಟಿತು. ಈಗ ನಾನು ಸಹ ಆಲೋಚಿಸಿದೆನು. 'ದಂಪತ್ಯೋಃ ಚಿರಮಾಯುಷಾ ಸುಖತತಿಮ್' ಹೀಗೆ

ಹೇಳಿದರೆ ಸರಿಯಾಗುತ್ತದೆ ಎಂದು ತೋರುತ್ತದೆ. ಚಿರಂ ಆಯುಷಾ ಸಮಂ ಸುಖತತಿಂ ಸತ್ಪುತ್ರಪೌತ್ರಾದಿಕಂ ದತ್ತಾಮ್ ಇತಿ ಪ್ರಕೃತಂ ಭವೇದಿತ್ಯೇತಾವತ್ ಲಿಖಿತಮ್. ಇಲ್ಲಿಯತನಕ ಬರೆಯಲ್ಪಟ್ಟಿದೆ. ದಯಮಾಡಿ ಅನ್ಯಥಾ ಭಾವಿಸಬೇಡಿ. ನಮಸ್ಕಾರಗಳು. ತಮ್ಮವನು.

ಈ ಪತ್ರವನ್ನು ಪೂರ್ಣ ಮಾಡುತ್ತಿರುವಾಗಲೇ ತಮ್ಮ ಪತ್ರವು ನನ್ನ ಕೈ ಸೇರಿದೆ. ತಮ್ಮ ಮಾತುಗಳನ್ನು ಸರಸ್ವತೀದೇವಿಯ ಆಶೀರ್ವಾದ ಗಳಿಂದು ಶಿರಸಾವಹಿಸುತ್ತೇನೆ.

ಇತಿ ಮಂಗಳ.

೩೯೮

ಅಪರಕರ್ಮದ ಹಕ್ಕು

ಕುಶಲಮ್ ಶ್ರೀಃ 5.1.1981

ವೇ। ಬ್ರಂ। ಶ್ರೀ ಶ್ರೀ ಶಾಸ್ತ್ರಿಣಾಂ ಸನ್ನಿಧೌ ಸವಿನಯಂ ವಿಜ್ಞಪ್ತಯಃ

ಸಮುಲ್ಲಸಂತುತರಾಮ್ ಸಂಪ್ರತಿ

ವಯಮತ್ರ ಸರ್ವೇ ಕುಶಲಿನಃ। ತಾ.5.1.81 ತಮ ದಿವಸಸ್ಯ ಶ್ರೀಮಂತಾಂ ಪತ್ರಿಕಾ ಸಮಾಸಾದಿತಾ ಸಾದರಮವಲೋಕಿತಾ ಚ । ವಿಷಯೇಽಸ್ಮಿನ್ ನ ಕಿಂಚಿದಪಿ ನಿರೂಪಯಿತುಂ ಪ್ರಭವಾಮಿ – ಅಥಾಪಿ – "ಸರ್ವಥಾ ಉತ್ತರಂ ದೇಯಮಿತಿ" ಸೂಚಿತತ್ವಾದಗತ್ಯಾ ಯತ್ ಕಿಂಚಿತ್ ವಿವೃಣೋಮಿ।

ತತ್ರ ವೈದ್ಯನಾಥೀಯೇ ಶ್ರಾದ್ಧಕಾಂಡೇ (P. 29) ಅತ್ರಾಯಂ ಕ್ರಮಃ ಇತಿ ಪ್ರಕೃತ್ಯ...ಧನಹಾರೀ ದೌಹಿತ್ರಃ=ದೌಹಿತ್ರಃ-ಪತ್ನೀಪತಿಃ ಇತ್ಯಾದಿ...ಜಾಮಾತಾ ಸಖಾ...ತಥಾ= ಆಪಸ್ತಂಬೀಯೇ ಪಿತೃಮೇಧಸೂತ್ರೇ ಆದೌ (P. 5) ದ್ವಿತೀಯ ಸೂತ್ರ ವ್ಯಾಖ್ಯಾಯಾಮ್...ಗಾರ್ಗ್ಯ ಗೋಪಾಲಕಯಜ್ವಾ= ಜಯಸ್ತ್ರೀ ಸಂಕಾರೇ ಕರ್ತಾರಃ=ಇತ್ಯಾರಭ್ಯ ಔರಸೋಽಥ ಸಪತ್ನೀಕಃ...ದೌಹಿತ್ರೋ ಭ್ರಾತೃಪೂರ್ವಕಃ= ಜಾಮಾತಾ ಸಪಿಂಡಾಸ್ಸೋದಕಾಃ ಕ್ರಮಾತ್=ಇತಿ ಉಭಯತ್ರಾಪಿ ದೌಹಿತ್ರಸ್ಯಾಪಿ (ಪೂರ್ವಾಭಾವೇ ಪರಃ ಇತಿ ವ್ಯವಸ್ಥಾ) ಔರ್ಧ್ವದೈಹಿಕೇ ಸಂಸ್ಕರ್ತೃತ್ವಮಭ್ಯುಪಗತಮ್। ಸರ್ವತ್ರಜಾಮಾತಾ ಅಂತೇ ನಿವೇಶಿತಃ (ಅತ್ರ ಸಂಸ್ಕರ್ತೃತ್ವೇನ) ಅತಃ ಪ್ರಕೃತೇ ಜಾಮಾತುಃ ಸಂಸ್ಕರ್ತೃತ್ವಂ ನಾಸ್ತ್ಯೇವೇತಿ ವಕ್ತುಂ ಶಕ್ಯಮ್

(ಇತಿ ಮಮ ಮತಿಃ।)

ಯದ್ಯಪಿ ದೌಹಿತ್ರಶಬ್ದಃ ಮುಖ್ಯಯಾ ವೃತ್ತ್ಯಾ-ದುಹಿತುಃ ಔರಸೇ ಪ್ರಯುಜ್ಯತೇ ತಥಾಪಿ ಗೌಣ್ಯಾ ವೃತ್ತ್ಯಾ (ತಥಾ ಸಂಪ್ರತಿ ಸರ್ವತ್ರ ವ್ಯವಹಾರೇಽಪಿ) ಜಾಮಾತೃ-ದುಹಿತೃಭ್ಯಾಂ ಸ್ವೀಕೃತೇಽಪಿ ಸಃಪ್ರಯುಕ್ತಃ ಏವ ಅತಃ ಅಸ್ಮಿನ್ ಪ್ರಕರಣೇ ದೌಹಿತ್ರಸ್ಯೈವ ಮುಖ್ಯತಯಾ ಸಂಸ್ಕರ್ತೃತ್ವಮ್। ಇತಿ ಗಮ್ಯತೇ।

ಪ್ರಕೃತೇ। "ಯಸ್ಯ ಪಿತಾ ಜೀವತಿ ತಸ್ಯ- ಸ್ವಜನನೀ ಸಂಸ್ಕಾರಾದಿವರ್ಜ್ಯಂ...ಪಿತ್ರ್ಯೇನಾಧಿಕಾರಃ" ಇತಿ ದೌಹಿತ್ರಸ್ಯ ನಾಮ್ನಾ-ತದ್ಧಸ್ತೇನ ದರ್ಭಾದಿ ಗೃಹೀತ್ವಾ) ಯಃ ಕಶ್ಚಿತ್ ಕುರ್ಯಾತ್ ಸಗೋತ್ರಃ – ಅಸಗೋತ್ರೋ ವಾ। ತತ್ರ=ಜ್ಞಾತಿಭಿನ್ನಃ ಸರ್ವಾಸಾಂ ಕ್ರಿಯಾಣಾಂ ಕರ್ತಾ ತದಾ ತಸ್ಯ (ಪ್ರಾಯಃ) ಕರ್ಮಾನುಷ್ಠಾನಕಾಲ ಏವಾಶೌಚಂ – ನಾತ ಊರ್ಧ್ವಮ್ ಅರ್ಥಾತ್ ಪರೇದ್ಯುಃ ಪುನಃ ಯಾವತ್ ಕರ್ಮಾರಂಭಂ ಪೂರ ಏವ। ಪ್ರಕೃತೇ ಅಯಂ ಕರ್ತಾ ಪ್ರಯೋಜ್ಯಃ ಯದಿ ಸನಾಭಿರೇವೈತಾದೃಶಃ ಕರ್ತಾ ತಸ್ಯ ಪೂರ್ಣಮಾಶೌಚಮ್ = ತತ್ರ ಪೂರ್ವಸ್ಯ ಆಶೌಚಂ ಸತ್ಕರ್ತೃತ್ವನಿಬಂಧನಾಮ್ ಇತಿ ಯಸ್ಯ ಸಪಿಂಡತ್ವ ನಿಬಂಧನಂ ತತ್। ಸ್ವಯಾತಾಯಾಃ ಸ್ತ್ರಿಯಾಃ ಸಪಿಂಡಾಯಾಃ ಪೂರ್ಣಮಾಶೌಚಂ ಸರ್ವದಾ।

ಅತ್ರ ಪ್ರಯೋಜಕಕರ್ತುಃ ಅರ್ಥಾತ್ ದೌಹಿತ್ರಸ್ಯ (ಮಮ ಮತ್ಯಾ) ತೂಷ್ಣೀಂ ಸ್ಥಿತಾವಪಿ ಪೂರ್ಣಮಹಮಿತಿ ಭಾವಯಾಮಿ=ಯತಃ ತಸ್ಯ ಶಾಸ್ತ್ರಚೋದಿತಮ್-ಮುಖ್ಯತಯಾ ಸಂಸ್ಕರ್ತೃತ್ವಮ್

ಸಂಪ್ರತಿ ಅಂಗಧರ್ಮಾಣಾಂ ವಿಚಾರಃ ।

ತತ್ರಮುಖ್ಯಕರ್ತುಃ ಔರ್ಧ್ವ + ದೈಹಿಕೇ ಔರಸಸ್ಯ = ಪಿತ್ರೋಃ ಮೃತಿಶ್ರುತೌ ಸ್ನಾನಮ್-ಕ್ಷುರಕರ್ಮ...ಆದಿ...ದಶಮೇ ಅಹನಿ ಪುನರಪಿ ಕ್ಷುರಕರ್ಮ...ಸಂಚಯನ ದಿವಸಾತ್... ದ್ವಾದಶಾಹಮ್-(ದ್ವಾತ್ರ ಅಭಿವಿಧೌ) ನಿತ್ಯಕ್ರಿಯಾಃ...(ವಾಸ ಉದಕತಿಲೋದಕ-ಪಿಂಡ ಪ್ರದಾನ-ಬಲಿ ಪ್ರದಾನಾನಿ...ಮಧ್ಯೇ ವಿಷಯೇಽಹನಿ ನವ ಶ್ರಾದ್ಧಮ್=ಏವಮಾದೀನಿ ಕರ್ಮಾಣಿ ಕರ್ತವ್ಯಾನಿ=೧ ತತ್ರ ಶಾಸ್ತ್ರಚೋದಿತೇ ಮುಖ್ಯಕರ್ತರಿ=(ಸ್ವಯಂ ಕರ್ತುಮಧಿಕರೋತಿ ಚೇತ್ ಅರ್ಥಾತ್ ತಸ್ಯ ಪ್ರಮೀತ-ಪಿತೃಕತ್ವೇ=) ಉಭಯತ್ರ ವಪನಂ ನಿಯತಮೇವ। ಪ್ರಾಯೇಣ ಸರ್ವತ್ರ ಪ್ರಯೋಜ್ಯಕರ್ತರಿ ವಪನಾಭಾವ ಏವ। ಇತಿ ಮಮ ಮತಿಃ।

ಅತ್ರ ಔರ್ಧ್ವದೈಹಿಕೇ-ಶಾಸ್ತ್ರಚೋದಿತೋ ಮುಖ್ಯಃ ಸಂಸ್ಕರ್ತಾ ಪ್ರಯೋಜಕಕರ್ತಾ ಭಾವೇನ ಕರ್ಮಾಣಿ ಕರ್ತುಂ

(ಆತ್ಮನಃ ಅನಧಿಕಾರಿತ್ವಾತ್) ನಿಯುಕ್ತಃ ಅನ್ಯೋಽರ್ಥಃ ಕಶ್ಚಿತ್।

ಪ್ರಯೋಜ್ಯಕರ್ತಾ ಇತಿ ಪ್ರಯೋಜಕಪ್ರಯೋಜ್ಯಕರ್ತೃತ್ವ ವಿಭಾಗಪುರಸ್ಸರಂ ಮಯಾ ವಿಷಯಾ ನಿರೂಪಿತಾಃ।

ಅಥ ಅನ್ಯವಿಚಾರಃ। ಅತ್ರ ಆಶೌಚಶತಕಮ್ ನಾಮಗ್ರಂಥಸ್ಯ ಏವ ನಾನ್ಯದ್ಗ್ರಂಥಾಂತತರಮ್। ತತ್ರ ಆಶೌಚ ಶತಕೇ ಪ್ರಕೃತ-ಪ್ರಕರಣಸ್ಯ ಸಹಾಯಕೋ ಭಾಗೋ ನ ದೃಷ್ಟಃ (ಮಯಾ) ವೈದ್ಯನಾಥೀಯೇ ಆಶೌಚಕಾಂಡೇ-ಏತಾದೃಶಾ ವಿಚಾರಾಃ ಸಮಾಲೋಚ್ಯ ನಿರ್ಣೀತಾಃ ಇತಿ ತರ್ಕಯಾಮಿ= ತತಃ ಏವ ಅತ್ರಭವಂತಃ ಅಸ್ಮಿನ್ ವಿಷಯೇ ನಿರ್ಣಯಂ ಪ್ರಾಪ್ನುವನ್ತು ಇತಿ ಪ್ರಾರ್ಥಯಿತಾ ಅತ್ರ ಅಘವಿಷಯೆಪ್ರಾಕ್ ಯದ್ಯನ್ನಿರೂಪಿತಂ ತತ್ ಸರ್ವಮಪಿ ಮಮ ಬುದ್ಧ್ಯಾ ಆಲೋಚ್ಯೈವ ನ ಗ್ರಂಥಾವಲೋಕನಪೂರ್ವಕಮ್-ಅತಃ ತತ್ ಸರ್ವಮಪಿ ಸಾಧ್ವೇವೇತಿ ನ ಭಾನಮ್।

ಸಾಮಾನ್ಯತಃ ಪ್ರಕೃತೇ ಸರ್ವೇ ಪ್ರಶ್ನಾಃ ಲಿಖಿತೋತ್ತರಾಃ। (ಯಥಾಮತಿ) ಆತ್ರ ವಿಷಯೇ ಮಮ ಜ್ಞಾನು ತು ಅಲ್ಪೀಯ ಏವ। ಶ್ರೀಮದ್ಭಿಃ ಸಂದೇಹಪರಿಹಾರಾರ್ಥಂ ಪತ್ರಪ್ರೇಷಣಂ ಕಥಮ್ ಅರ್ಥವತ್ । ಅತಃ ಪರಮತ್ರಭವಂತ ಏವ ಪ್ರಮಾಣಮ್। ಇತಿ ಸಾದರಂ ನಮಸ್ಕೃತಯಃ

ವಶ್ಯಃ-ಸು.

ವೇ।। ಬ್ರ।। ಶ್ರೀ।। ಶಾಸ್ತ್ರಿಗಳ ಸನ್ನಿಧಾನದಲ್ಲಿ ಸವಿನಯ ವಿಜ್ಞಾಪನೆಗಳು ಸಮರ್ಪಿತವಾಗಲಿ. ಸಾಂಪ್ರತ. ಇಲ್ಲಿ ನಾವು ಕ್ಷೇಮವಾಗಿದ್ದೇವೆ. ತಾ. 5.1.1981 ರ ತಮ್ಮ ಪತ್ರವು ದೊರಕಿತು. ಅದನ್ನು ಆದರದಿಂದ ನೋಡಿದೆನು. ಈ ವಿಷಯದಲ್ಲಿ ಏನನ್ನೂ ಬರೆಯಲು ನಾನು ಶಕ್ತನಲ್ಲ. ಆದರೂ ಹೇಗಾದರೂ ಉತ್ತರ ಕೊಡಬೇಕು ಎಂದು ಸೂಚಿಸಿರುವ ಕಾರಣ ಬೇರೆ ದಾರಿ ಇಲ್ಲದೆ ಸ್ವಲ್ಪ ವಿವರಿಸುತ್ತೇನೆ. ವೈದ್ಯನಾಥೀಯ ಶ್ರಾದ್ಧಕಾಂಡದಲ್ಲಿ ಈ ಕ್ರಮವಿದೆ. '...' ಆದ್ದರಿಂದ ಪ್ರಕೃತದಲ್ಲಿ ಅಳಿಯನಿಗೆ ಸಂಸ್ಕಾರ ಮಾಡುವ ಅರ್ಹತೆ ಇಲ್ಲವೇ ಇಲ್ಲ ಎಂದು ಹೇಳಲು ಸಾಧ್ಯ. ಇದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ದೌಹಿತ್ರ ಶಬ್ದವು ಮುಖ್ಯ ವೃತ್ತಿಯಿಂದ ಮಗಳ ಹಿರಿಯ ಮಗನಿಗೆ ಪ್ರಯೋಗಿಸಲ್ಪಡುತ್ತದೆ. ಆದರೂ ಗೌಣೀವೃತ್ತಿಯಿಂದ ಅಳಿಯ ಮತ್ತು ಮಗಳೊಡನೆ ಸ್ವೀಕರಿಸಲ್ಪಟ್ಟರೂ ಈ ಪ್ರಕರಣದಲ್ಲಿ ಮಮ್ಮಗನಿಗೆ ಮುಖ್ಯವಾಗಿ ಸಂಸ್ಕಾರ ಮಾಡುವ ಅರ್ಹತೆ ಎಂದು ತೋರುತ್ತದೆ.ಪ್ರಕೃತದಲ್ಲಿ ಯಾರ ತಂದೆಯು ಜೀವಿಸಿರುತ್ತಾನೋ ಅವನಿಗೆ ತನ್ನ ತಾಯಿ ಮೊದಲಾದವರ ಸಂಸ್ಕಾರಾದಿ ಕಾರ್ಯವು ವರ್ಜ್ಯ. ತಂದೆಯಿಂದ ಅಧಿಕಾರ ಎಂಬುದಾಗಿ ದೌಹಿತ್ರನ ಹೆಸರಿನಿಂದ ಅವನ ಕೈಯಿಂದ ದರ್ಭೆ ಮೊದಲಾದವನ್ನು ತೆಗೆದುಕೊಂಡು ಯಾರಾದರೂ ಸಗೋತ್ರದವನೋ ಅಗೋತ್ರದವನೋ ಆಗಲಿ ಜ್ಞಾತಿಗಳಿಂದ ಎಲ್ಲ ಕಾರ್ಯಗಳೂ ಮಾಡಿಸಲ್ಪಡಬೇಕು. ಆಗ ಅವನಿಗೆ ಕಾರ್ಯಾನುಷ್ಠಾನ ಪರ್ಯಂತ ಆಶೌಚವಿರುತ್ತದೆ. ಅನಂತರ ಇರುವುದಿಲ್ಲ. ಅಂದರೆ ಮಾರನೆಯ ದಿವಸ ಎಂದಿನಂತೆ ಕೆಲಸ ಕಾರ್ಯಗಳನ್ನು ಮಾಡಬಹುದು. ಪ್ರಕೃತದಲ್ಲಿ ಈ ಕರ್ತೃವು ಈ ಕಾರ್ಯವನ್ನು ಮಾಡಲೇಬೇಕಾಗಿದ್ದರೆ ತನ್ನ ಜತೆಯಲ್ಲಿ ಹುಟ್ಟಿದವರೊಡನೆ ಈ ಕಾರ್ಯ ಮಾಡುವಾಗ ಅವನಿಗೆ ಪೂರ್ಣ ಆಶೌಚ ಇರುತ್ತದೆ. ಯಾರಿಗೆ ಮೊದಲು ಆಶೌಚ ಕಾರ್ಯನಿಬಂಧನೆಯಿಂದ ಎಂದು ಹೇಳಿದೆಯೋ ಆಗ ಅದು ಅವನಿಗೆ ನಿಬಂಧನೆಯಾಗುತ್ತದೆ. ಆ ಕಾರ್ಯ ಪೂರ್ತಾ ಆಶೌಚವಿರುತ್ತದೆ. ಇಲ್ಲಿ ಸಂಸ್ಕಾರಾದಿ ಕಾರ್ಯವನ್ನು ಮಾಡಬೇಕಾದ ದೌಹಿತ್ರನಿಗೆ (ಮಗಳ ಮಗ) ನನ್ನ ಅಭಿಪ್ರಾಯದಂತೆ ಸುಮ್ಮನೆ ಇದ್ದರೂ ನಾನು ಪೂರ್ಣ ಎಂದು ಭಾವಿಸುತ್ತೇನೆ. ಅವನಿಗೆ ಮುಖ್ಯ ಕರ್ತೃತ್ವವನ್ನು ಶಾಸ್ತ್ರವು ಹೇಳುತ್ತದೆ.

'...' ಎಂಬುದಾಗಿ ನನ್ನ ಅಭಿಪ್ರಾಯ...ನನ್ನಿಂದ ವಿಷಯವು ನಿರೂಪಿಸಲ್ಪಟ್ಟಿದೆ. ಇದಲ್ಲದೆ ಬೇರೆಯ ವಿಚಾರ : ಇಲ್ಲಿ ಆಶೌಚ ಶತಕ ಎಂಬ ಗ್ರಂಥದ ಅಭಿಪ್ರಾಯವೇ ಹೊರತು ಬೇರೆ ಗ್ರಂಥದ್ದಲ್ಲ. ಆಶೌಚ ಶತಕದಲ್ಲಿ ಪ್ರಕೃತ ಪ್ರಕರಣದ ಸಹಾಯಕ ಭಾಗವು ಕಂಡುಬರಲಿಲ್ಲ. ವೈದ್ಯನಾಥೀಯದ ಆಶೌಚ ಕಾಂಡದಲ್ಲಿ ಈ ವಿಚಾರಗಳನ್ನು ನಾನು ನೋಡಿ ಆಲೋಚಿಸಿ ನಿಶ್ಚಯಿಸಿ ಈ ರೀತಿ ಊಹಿಸುತ್ತೇನೆ. ಅನಂತರ ಈ ವಿಷಯದಲ್ಲಿ ನೀವೇ ತೀರ್ಮಾನ ತೆಗೆದುಕೊಳ್ಳಿ ಎಂದು ಪ್ರಾರ್ಥಿಸುತ್ತೇನೆ. ಅಘ ವಿಷಯದಲ್ಲಿ ಹಿಂದೆ ಏನೇನನ್ನು ಹೇಳಲಾಯಿತೋ ಇದೆಲ್ಲವನ್ನೂ ನಾನು ಆಲೋಚಿಸಿ ನನ್ನ ಬುದ್ಧಿಯಿಂದ ಹೇಳಿದ್ದೇನೆಯೇ ಹೊರತು ಗ್ರಂಥಾವಲೋಕನದಿಂದ ಹೇಳಿದುದಲ್ಲ...ಅದೆಲ್ಲವೂ ಸರಿ ಎಂದು ಭಾವಿಸಬಾರದು. ಸಾಮಾನ್ಯವಾಗಿ ಪ್ರಕೃತದಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಬರೆಯಬೇಕು. ಈ ವಿಷಯದಲ್ಲಿ ನನ್ನ ಜ್ಞಾನ ಅಲ್ಪವಾದುದು. ಸಂದೇಹ ಪರಿಹಾರಕ್ಕಾಗಿ ಪತ್ರವನ್ನು ಕಳುಹಿಸುವುದು ಎಷ್ಟು ಸರಿ ? ಮತ್ತು ತಾವೇ ಪ್ರಮಾಣ. ಆದರಪೂರ್ವಕ ನಮಸ್ಕಾರಗಳು.

೩೯೯

ಸಂಕಲ್ಪ ವಿಚಾರ

8.8.85

ಕುಶಲಮ್ ಶ್ರೀಃ ಬೆಂಗಳೂರು

ಅತ್ರಭವತಾಂ ಸೇವಾಯಾಂ ಸಾದರಂ ನತಯಃ ಸಂಪ್ರತಿ..

ವಯಮತ್ರ ಸರ್ವೇ ಕುಶಲಿನಃ। ತತ್ರಭವತಾಂ ಸಮೇಷಾಂ ಕುಶಲಂ ಭಾವಯಾಮಿ.

ಅತ್ರ ಮಾಂ ಪೃಷ್ಟವಂತಃ ತದ್ಯಥಾ ಅತ್ರ ಅಧಿಕಮಾಸೇ ಶ್ರಾವಣಮಾಸೇ ಸ್ವರ್ಯಾತಸ್ಯ ನಿಜಶ್ರಾವಣ ಮಾಸೀಯಾನುಮಾಸಿಕಸ್ಯ ಕಥಂ ಸಂಕಲ್ಪಃ ಯದಿ ಸಾಧಾರಣ್ಯೇನ ದ್ವಿತೀಯಾನುಮಾಸಿಕ ಶ್ರಾದ್ಧೇ ಇತ್ಯಾದಿ ಪ್ರಕಾರೇಣ ಸಂಕಲ್ಪಃ ಕ್ರಿಯತೇ ತದಾ ಆಗಾಮಿ ಜ್ಯೇಷ್ಠಮಾಸೀಯಮಾಸಿಕೇ ದ್ವಾದಶಾನುಮಾಸಿಕಶ್ರಾದ್ಧಮಿತಿ ವಕ್ತವ್ಯಮ್। ತತಃ ಆಷಾಢ ಮಾಸೀಯಮಾಸಿಕೇ ಕಥಂಸಕಲ್ಪಃ ದ್ವಾದಶಾ ಸಪಿಂಡೀಕರಣ

ದಿವಸೇ ಊನೇ ದ್ವಿತೀಯ ತ್ರೈಯಾದಿಕ ತೃತೀಯ... ದ್ವಾದಶಾನುಮಾಸಿಕಾನಾಮಿತಿ ಯಥೋಚಿತಂ ಸಂಕಲ್ಪಿತಂ ತದಾ ತ್ರಯೋದಶಾನುಮಾಸಿಕಮಿತಿ ವೈದಿಕಾನಾಂ ವ್ಯವಹಾರಾಭಾವಾನ್ನ ತಥಾ ವಕ್ತುಂ ಪಾರ್ಯತ ಇತ್ಯಭಿಪ್ರೈಮಿ।

ಏವಂ ಸತಿ ಕಥಮನುಷ್ಠೇಯಮ್। ಏತಾದೃಶಂ ವಿಷಯಂ ಪುರಸ್ಕೃತ್ಯ ಕದಾಸ್ಮದ್ಗುರುಚರಣೈಃ ಶ್ರೀಶ್ರೀನಿವಾಸಾವಧಾನಿಭಿಃ ಸಮಾಹಿತಮಿತಿ ಯುಷ್ಮದ್ಗ್ರಾಮೀಣಾಃ- ವೇ। ಮೂ। ಕೃಷ್ಣ ಉಪಾಧ್ಯಾಯಾಃ ಕಥಯಂತಿ ಸ್ಮ (ಮಯಾಪಿ ವರ್ಧಿತವಂತಃ ಕಿಮುತ್ತರಮಿತಿ ನ ಸ್ಮರ್ಯತೇ।)

ಅತ್ರ ವೈದ್ಯನಾಥೀಯಸ್ಮೃತಿಃ ನಿರ್ಣಯ ಸಿಂಧು ಸ್ಮೃತಿರ್ವಾ ನಾಸ್ತಿ। ಅಹಮಾಗಾಮಿ ಭೌಮವಾಸರೇ ತಾ.3.8.85 ದಿವಸೇ ತತ್ರ ಆಗಂತಾಸ್ಮಿ। ಪ್ರಕೃತೋಪಯೋಗೀ ಶಿಷ್ಟಾನಾಮಾಚಾರಃ ಅನ್ವೇಷ್ಟವ್ಯಃ। ಇತಿ ಶಮ್।

ಭವದೀಯ ಸು

...ತಮ್ಮ ಸೇವೆಯಲ್ಲಿ ಆದರಪೂರ್ವಕ ನಮಸ್ಕಾರಗಳು, ಸಾಂಪ್ರತ.

ನಾವೆಲ್ಲರೂ ಇಲ್ಲಿ ಕ್ಷೇಮದಿಂದಿದ್ದೇವೆ. ತಾವೆಲ್ಲರೂ ಕ್ಷೇಮದಿಂದಿರುವಿರೆಂದು ಭಾವಿಸುತ್ತೇನೆ. ತಾವು ನನ್ನನ್ನು ಕೇಳಿದ್ದೀರಿ- ಅದರಂತೆ ಅಧಿಕ ಶ್ರಾವಣ ಮಾಸದಲ್ಲಿ ಸ್ವರ್ಯಾತವಾದ ನಿಜ ಶ್ರಾವಣ ಮಾಸದ ಆನುಮಾಸಿಕ ಸಂಕಲ್ಪವು ಹೇಗೆ ? ಸಾಮಾನ್ಯವಾಗಿ 'ದ್ವಿತೀಯ ಆನುಮಾಸಿಕ ಶ್ರಾದ್ಧದಲ್ಲಿ' ಮೊದಲಾದ ಪ್ರಕಾರದಿಂದ ಸಂಕಲ್ಪ ಮಾಡುವದಾದರೆ ಆಗ ಮುಂದಿನ ಜ್ಯೇಷ್ಠಮಾಸದ ಮಾಸಿಕದಲ್ಲಿ 'ದ್ವಾದಶ ಆನುಮಾಸಿಕ ಶ್ರಾದ್ಧ' ಎಂದು ಹೇಳಬೇಕು. ಅನಂತರ ಆಷಾಢಮಾಸದ ಮಾಸಿಕದಲ್ಲಿ ಹೇಗೆ ಸಂಕಲ್ಪ ? ದ್ವಾದಶ ಸಪಿಂಡೀಕರಣ ದಿವಸದಲ್ಲಿ ಊನಾಬ್ದಿಕದಲ್ಲಿ 'ದ್ವಿತೀಯ ತ್ರೈಯಾದಿಕ ತೃತೀಯ ದ್ವಾದಶ ಆನುಮಾಸಿಕಗಳಿಗೆ' ಎಂದು ಯಥೋಚಿತವಾಗಿ ಸಂಕಲ್ಪಿತವಾಗಿದೆ. ಆಗ ತ್ರಯೋದಶ ಆನುಮಾಸಿಕ ಎಂದು ವೈದಿಕರ ವ್ಯವಹಾರವಿಲ್ಲದಿರುವುದರಿಂದ ಆ ರೀತಿಯಲ್ಲಿ ಹೇಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಡುತ್ತೇನೆ. ಹೀಗಿರುವಾಗ ಹೇಗೆ ಅನುಷ್ಠಾನ ಮಾಡಬೇಕು ? 'ಇಂಥಾ ವಿಷಯವನ್ನು ಅಧಿಕರಿಸಿ ನಮ್ಮ ಗುರುಗಳಾದ ಶ್ರೀನಿವಾಸಾವಧಾನಿಗಳು ಹೇಳುತ್ತಿದ್ದರು' ಎಂಬುದಾಗಿ ನಿಮ್ಮ ಗ್ರಾಮದ ವೇ।। ಮೂ।। ಕೃಷ್ಣಮೂರ್ತಿ ಉಪಾಧ್ಯಾಯರೂ ಹೇಳುತ್ತಿದ್ದರು. ನನಗೂ ಹೇಳಿದ್ದರು. ಈಗ ಆ ಉತ್ತರ ಯಾವುದು ಎಂದು ಜ್ಞಾಪಕಕ್ಕೆ ಬರುತ್ತಿಲ್ಲ. ಇಲ್ಲಿ ವೈದ್ಯನಾಥೀಯ ಸ್ಮೃತಿ, ನಿರ್ಣಯಸಿಂಧು ಸ್ಮೃತಿಗಳು ಇಲ್ಲ. ನಾನು ಮುಂದಿನ ಮಂಗಳವಾರ 3.8.85 ರಂದು ಅಲ್ಲಿಗೆ ಬರುವೆನು. ಪ್ರಕೃತ ಉಪಯೋಗಕ್ಕೆ ಬರುವ ಶಿಷ್ಟರ ಆಚಾರವನ್ನು ಹುಡುಕಬೇಕು.

ತಮ್ಮವ. ಮಂಗಳ.

೪೦೦

ಯಶ ಸಿಗಲಿ

ಓಂ ಮತ್ತೂರು

ವೈಶಾಖ ಶುದ್ಧ ತೃತೀಯಾ

ಆತ್ಮೀಯಾಯ ಹರನ್‌ಮಹೋದಯಾಯ ನಮಃ। ಭವದೀಯಮ್ ಆಹ್ವಾನಪತ್ರಂ ಪ್ರಾಪ್ತಮ್। ಪರಂ ತು ಕಾರ್ಯಗೌರವಾತ್ ಮಯಾ ತಸ್ಮಿನ್ ಕಾರ್ಯಕ್ರಮೇ ಉಪಸ್ಥಾತುಂ ನ ಶಕ್ಯತೇ। ಕ್ಷಮ್ಯತಾಮ್।

ಕಾರ್ಯಕ್ರಮಃ ಯಶಸ್ವೀ ಭವತು ಇತಿ ಭಗವಂತಂ ಪ್ರಾರ್ಥಯಾಮಿ।

ಸರ್ವೇಷಾಂ ಜ್ಯೇಷ್ಠಾನಾಂ ನಮಸ್ಕಾರಾನ್ ನಿವೇದಯತು। ನಾನ್ಯಃ ವಿಶೇಷಃ

ಭವದೀಯಃ

ಶ್ರೀನಿಧಿಃ, ಮತ್ತೂರು

ಆತ್ಮೀಯರಾದ ಹರನ್ ಅವರಿಗೆ ನಮಸ್ಕಾರಗಳು. ತಮ್ಮ ಆಹ್ವಾನ ಪತ್ರ ತಲಪಿತು. ಆದರೆ ಕಾರ್ಯಗೌರವದಿಂದ ಆ ಕಾರ್ಯಕ್ರಮಕ್ಕೆ ನಾನು ಬರಲು ಆಗುತ್ತಿಲ್ಲ. ಕ್ಷಮೆಯಿರಲಿ. ಕಾರ್ಯಕ್ರಮ ಯಶಸ್ವಿ ಆಗಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಎಲ್ಲ ಹಿರಿಯರಿಗೂ ನಮಸ್ಕಾರಗಳನ್ನು ತಿಳಿಸುವುದು. ಬೇರೆ ವಿಶೇಷವಿಲ್ಲ.

ತಮ್ಮವನು-ಶ್ರೀನಿಧಿ, ಮತ್ತೂರು.

ಗುಚ್ಛ - 18

ಹೊಸಅಲೆಯ ಪತ್ರಗಳು

"ಹೊಸಅಲೆ" ಎಂಬ ಶಬ್ದಪ್ರಯೋಗ ತನ್ನ ಪ್ರಚಲಿತ ಅರ್ಥಕ್ಕೆ ಅನುಗುಣವಾಗಿ, ಹೊಸ ನಿರೀಕ್ಷೆಗಳನ್ನು ಹುಟ್ಟಿಸುವುದು ಸಹಜ. ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಅವಲಂಬನೆ ಮತ್ತು ಸ್ಫೂರ್ತಿಯನ್ನು ಬಿಟ್ಟು ಆಂಗ್ಲ ಭಾಷೆಯನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಂಡುದು ನಿಸ್ಸಂದೇಹವಾಗಿ ಒಂದು ಹೊಸ ಪ್ರವೃತ್ತಿ. ಅದು ಆಂಗ್ಲ ಭಾಷಾ ಶಿಕ್ಷಣದಿಂದ ಮೂಡಿದುದು. ವೈಜ್ಞಾನಿಕ ಪ್ರಗತಿಯನ್ನನುಸರಿಸಿ ಕೈಗಾರಿಕೀಕರಣ, ನಗರೀಕರಣ ಆಯಿತು; ಅದರ ಜೊತೆಗೇ ಸಾವಿರ ಆವಿಷ್ಕಾರಗಳಾಗಿ ಹೊಸ ಸೌಲಭ್ಯಗಳು ಉಂಟಾದುವು; ಜೀವನಶೈಲಿ, ಜೀವನದೃಷ್ಟಿ ಎರಡೂ ಬದಲಾಗುತ್ತ ಬಂದವು. ವೃತ್ತಿ ಬದಲಾಯಿತು. ಬದುಕಿಗೆ ಅನಂತ ಆಯಾಮ ಮೂಡತೊಡಗಿತು. ಈ ಹೊಸ ಜೀವನ ಕ್ರಮವನ್ನು ಪ್ರತಿನಿಧಿಸಲು ಅಗತ್ಯವಾದ ಪ್ರಮಾಣದಲ್ಲಿ ಇಲ್ಲಿ ಪತ್ರಗಳನ್ನು ಪ್ರಕಾಶಪಡಿಸಿಲ್ಲ. ಆದರೆ ಅಂಥ ಹೊಸ ಅಲೆಯ ಹೆಬ್ಬಾಗಿಲನ್ನು ಓರೆ ಮಾಡಿ ಇಣುಕುನೋಟ ಕಲ್ಪಿಸುವ ಕೆಲಸವನ್ನು ಇಲ್ಲಿನ ಪತ್ರಗಳು ಮಾಡುತ್ತವೆ.

೪೦೧

ಶುಭಾಶಯ (ಷಷ್ಟ್ಯಬ್ದಿಪೂರ್ತಿ ಸಮಾರಂಭ)

ಜಯನಗರ

3.1.78

ಸನ್ಮಾನ್ಯ ಮಿತ್ರರಿಗೆ ವಂದನೆಗಳು,

ಭಾನುವಾರ ನಡೆಯುವ ತಮ್ಮ ಅರವತ್ತನೆಯ ಹುಟ್ಟುಹಬ್ಬದ ಬಹು ಸಂತೋಷದ ಸಮಾರಂಭಕ್ಕೆ ಬರಬೇಕೆಂದು ಉತ್ಸುಕತೆಯಿಂದಿದ್ದೆ. ತಮಗೆ ಅವತ್ತು ಹೇಳಿದಂತೆ ಅವತ್ತು ಬೆಳಗ್ಗೆ ಒಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲು ಆಗಲೇ ಒಪ್ಪಿಕೊಂಡಿದ್ದೇನೆ. ಅದರ ನಂತರ ತಮ್ಮಲ್ಲಿಗೆ ಬರಬೇಕೆಂದುಕೊಂಡಿದ್ದೆ. ಆದರೆ ಅವತ್ತು ವಿಶ್ವವಿದ್ಯಾನಿಲಯದ ಪರೀಕ್ಷೆಗೆ ಸಂಬಂಧಿಸಿದಂತೆ ಸಮಿತಿಯೊಂದರ ಸಭೆಗೆ ಹೋಗಬೇಕಾಗಿದೆ. ಇದರಿಂದಾಗಿ ತಮ್ಮನ್ನು ನಾನೇ ಕಂಡು ಶುಭಾಶಯಗಳನ್ನು ಹೇಳುವ ಅವಕಾಶವನ್ನು ಕಳೆದುಕೊಳ್ಳಬೇಕಾಗಿದೆ. ತಾವು ದಯೆಯಿಟ್ಟು ಕ್ಷಮಿಸಬೇಕು. ಬೇರೆ ಊರುಗಳಿಂದ ಸದಸ್ಯರು ಬರುವ ಪರೀಕ್ಷೆಯ ಕೆಲಸದ ಸಭೆಗೆ ನಾನು ಅನಿವಾರ್ಯವಾಗಿ ಹೋಗಬೇಕಾಗಿದೆ. ತಾವು ವಿಶ್ವಾಸದಿಂದ ಬಂದು ಆಹ್ವಾನಿಸಿದಿರಿ. ನಾನು ಬಾರದಿರುವುದಕ್ಕೆ ಕ್ಷಮೆ ಬೇಡುತ್ತೇನೆ.

ತಮ್ಮ ಷಷ್ಟ್ಯಬ್ದಿ ಸಮಾರಂಭದ ಶುಭ ಸಮಯದಲ್ಲಿ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಎಲ್ಲ ರೀತಿಗಳಲ್ಲಿ ಬಾಳನ್ನು ಶ್ರೀಮಂತ ಗೊಳಿಸಿಕೊಂಡ ತಮ್ಮ ಸೌಜನ್ಯ, ಇತರರಿಗೆ ನೆರವಾಗುವ ನಿರಾಡಂಬರ ಸ್ನೇಹ, ಕಲೆಗಳಲ್ಲಿ ಆಸಕ್ತಿ ಇವೆಲ್ಲ ತಮಗೆ ಬಹುಮಂದಿ ಸ್ನೇಹಿತರನ್ನು ತಂದುಕೊಟ್ಟಿವೆ. ಸಹಜವಾದ ಆಡಂಬರರಹಿತವಾದ ಒಳ್ಳೆಯತನ ತಮ್ಮದು. ತಮಗೂ ತಮ್ಮ ಮನೆಯವರೆಲ್ಲರಿಗೂ ದೀರ್ಘ ಆಯುಸ್ಸು, ಆರೋಗ್ಯ, ಸಂತೋಷಗಳನ್ನು ಭಗವಂತನು ಕೃಪೆ ಮಾಡಲಿ, ಎಲ್ಲ ರೀತಿಗಳಲ್ಲಿ ಮಂಗಳವಾಗಲಿ ಎಂದು ಹೃತ್ಪೂರ್ವಕ ಹಾರೈಕೆ.

ಖುದ್ದು ಭಾಗವಹಿಸುತ್ತಿದ್ದ ದಿನಗಳು ಶುಭಾಶಯಪತ್ರಗಳಿಗೆ ದಾರಿ ಮಾಡಿವೆ.

೪೦೨

ಶೋಷಣೆ, ಏಕಾಕಿತನ (ನಗರೀಕರಣದ ಕೂಗು)

ಕುಶಲಂ ಶ್ರೀ ಬೆಂಗಳೂರು

26.2.94

...ಪ್ರಕೃತ-ಚಿ।।...ನ ಕೆಲಸದ ವಿಚಾರದಲ್ಲಿ ಚಿ।।...ಯು 2-3 ಕಡೆಗಳಲ್ಲಿ ಹೇಳಿದ್ದಾನಂತೆ. ಯಾವುದಾದರೂ ಸಿಗುತ್ತುತೆ. ಮತ್ತೊಂದು ಕಡೆ ಹೇಳಿದ್ದಕ್ಕೆ - ಕೆಲಸ ಸಿಗುತ್ತದೆ 1,500 ರೂ.ಗಿಂತ ಹೆಚ್ಚು ಸಿಗುವುದಿಲ್ಲ, ಅವರು ಹೇಳಿದ ಕಡೆಗೆ ಹೋಗುತ್ತಿರಬೇಕು...

...ನಿನ್ನ ಸೋದರತ್ತೆ ಮನೆಯಲ್ಲಿ ಹಾಸಿಗೆಯ ಮೇಲೇ ಇರುವಷ್ಟು ಆರೋಗ್ಯವಾಗಿದ್ದಾಳಂತೆ. ಅವಳ ಸೊಸೆಗೆ ಕ್ವಾರ್ಟರ್ಸ್ ಕೊಟ್ಟಿರುವುದರಿಂದ ಚಿ।। ... ನು ಸಂಸಾರ ಸಮೇತ ಅಲ್ಲಿಗೇ ಹೊರಟು ಹೋಗಿದ್ದಾನೆ. ಡಾ.... ಮ್ಮನು ಕೆಲಸಕ್ಕೆ ಹೊರಟು ಹೋದರೆ ಅವಳ ತಾಯಿ ಒಬ್ಬಳೇ ಮನೆಯಲ್ಲಿರುತ್ತಾಳೆ...

ಸರ್ಕಾರಿ ನೌಕರಿ ದೊರೆಯುವ ದಿನಗಳು ಮುಗಿದಾಗ ಕಂಡ ವಿದ್ಯಾವಂತ ಉದ್ಯೋಗಾರ್ಥಿಗಳನ್ನು ಶೋಷಿಸುವ ಒಂದು ಮುಖ ಇಲ್ಲಿದೆ. ವಿಭಕ್ತ ಕುಟುಂಬಗಳು, ತತ್ರಾಪಿ ನಗರಗಳಲ್ಲಿ ಎದುರಿಸುವ ಸವಾಲುಗಳ ಒಂದು ಮುಖವೂ ಇಲ್ಲಿದೆ.

೪೦೩

ಸಾಹಿತಿಗೆ ಗೌರವಧನ

ಕ್ಷೇಮ ಶ್ರೀ ಬೆಂಗಳೂರು
3.8.95

...ಊರಿನಿಂದ ವಿಲೇಜ್ ಅಕೌಂಟೆಂಟಿಗೆ D.Cಯಿಂದ ಕೂಡಲೇ ನನ್ನನ್ನು ನೋಡಿ ಗೌರವಧನ ಇತ್ಯಾದಿಗಳಿಗೆ ನನ್ನ ಸ್ಟೇಟ್‌ಮೆಂಟ್ ತೆಗೆದುಕೊಂಡು ಕಳಿಸುವಂತೆ ಬಂದಿದ್ದಾಗಿ ತಿಳಿಸಿದ್ದರಿಂದ ಹೋಗಿದ್ದೆ. ಅವರು ಸಿಕ್ಕದೆ ಒಂದು ವಾರ ಇರಬೇಕಾಯಿತು.

...14ನೇ ತಾ।। ನಿಮ್ಮ ಮನೆಗೆ ಬಂದು ಶುಭ ಸೂಚಕವಾದ ಸಿಹಿಯನ್ನೆಲ್ಲಾ ಪಡೆದು ಬಂದಿದ್ದೆ 9ನೇ ತಾ।। ವಿಧಾನಸೌಧಕ್ಕೆ ಹೋಗಿದ್ದೆ. 3 ದಿನಗಳ ಕಾಲ ಶ್ರೀ ದೇವೇಗೌಡರಿಗೆ ಕಾನ್‌ಫರೆನ್ಸ್ ಇದ್ದಿದ್ದರಿಂದ ನೋಡಲು ಅವಕಾಶವಾಗಲಿಲ್ಲ, ಅವರ ಸೆಕ್ರೆಟರಿ ನೀವೇ D.C. ಹತ್ತಿರ ಹೋಗಿ ನೋಡಿ ಎಂದು ಹೇಳಿದಾಗ, ಆಹ್ವಾನವಿಲ್ಲದೆ ನಾನು ಹೋಗಲಾರೆ ಎಂದಿದ್ದೆ.

...ಆ ವಿಲೇಜ್ ಅಕೌಂಟೆಂಟ್ ತ.ರಾ.ಸು. ಅವರ ಮಕ್ಕಳೆಂದೂ ಅಜ್ಜ ಮೆಂಕಣ್ಣಯ್ಯನವರೆಂದೂ ತಿಳಿಯಿತು. ನನ್ನ ಬಾಲ್ಯದಲ್ಲೇ ವೆಂಕಣ್ಣಯ್ಯನವರ ಪರಿಚಯವಿತ್ತೆಂದು ಹೇಳಿದೆ...

ಸಂಕೇತಿಗಳು ಆಧುನಿಕ ಸಾಹಿತ್ಯ ರಚನೆಗೆ ವ್ಯಾಪ್ತವಾಗಿ ತೊಡಗಿಕೊಂಡದ್ದು ಸ್ವಾತಂತ್ರ್ಯೋತ್ತರ ಕಾಲದಲ್ಲಿ

೪೦೪

ಸತ್ತವರ ಧ್ವನಿಸುರುಳಿ

ಕುಶಲಂ ಶ್ರೀ ಬೆಂಗಳೂರು
9.9.1998

...'ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ' ಎಂಬ ನಾಣ್ಣುಡಿಯಂತೆ ನಮ್ಮ ಸೌ।। ಮಾ।। ಶ್ರೀಯವರನ್ನು ಕಳೆದುಕೊಂಡು ತಬ್ಬಲಿಯಾಗಿ ನರಳುತ್ತಿದ್ದೇನೆ. ಈ ವೇಳೆಗೆ ನಿಮಗೂ ವಿಷಯ ತಿಳಿದಿರಬಹುದು. ಆದರೆ ಒಮ್ಮೆಯೂ ಈ ಕಡೆ ಬರಲೇ ಇಲ್ಲ, ಕಾರಣ ತಿಳಿಯದು.

ಪ್ರಸ್ತುತ ವಿಷಯವೇನೆಂದರೆ ಸೌ।। ಮಾ।। ಶ್ರೀ ಯವರ ಧ್ವನಿ ಸುರುಳಿ ನನ್ನ ಬಳಿ ಇತ್ತು, ದೊಡ್ಡಪ್ಪನವರಿಗೆ ನನ್ನ ಬಳಿ ಇದೆ ತಂದುಕೊಡುವೆ ಎಂದು ಹೇಳಿದೆ. 1 ತಿಂಗಳಿಂದ ಮನೆಯಲ್ಲೆಲ್ಲಾ ಹುಡುಕಿದರೂ ಅದು ನನಗೆ ಸಿಗುತ್ತಿಲ್ಲ. ಈಗ ನಿಮ್ಮ ಬಳಿ ಇರುವ ವಿಷಯ ತಿಳಿಯಿತು. ದೊಡ್ಡಪ್ಪನವರ ವ್ಯಾಕುಲ ಮನಸ್ಸಿಗೆ ಅದನ್ನು ಕೇಳಿಯಾದರೂ ಸ್ವಲ್ಪ ಸಮಾಧಾನ ಸಿಗಬಹುದೇನೋ ಎಂಬ ಆಸೆ. ಅದನ್ನು ಇನ್ನೊಂದು ಪ್ರತಿ ಮಾಡಿಕೊಂಡು ಹಿಂತಿರುಗಿಸುವೆ. ಅಥವಾ ನೀವೇ ಇನ್ನೊಂದು ಪ್ರತಿ ಮಾಡಿ ಕಳಿಸಿಕೊಟ್ಟರೂ ಬಹಳ ಆಭಾರಿಯಾಗಿರುತ್ತೇನೆ. ದಯವಿಟ್ಟು ಎಲ್ಲಿ, ಯಾವಾಗ ನಾನು ಅದನ್ನು ಪಡೆಯಬಹುದು ಎಂಬುದನ್ನು ತಿಳಿಸಿದರೆ ಬಹಳ ಅನುಕೂಲವಾಗುತ್ತದೆ.

ಈ ಕಾಗದದೊಂದಿಗೆ ನನ್ನ ವಿಳಾಸವಿರುವ ಒಂದು ಕವರ್ ಇಟ್ಟಿರುತ್ತೇನೆ. ದಯವಿಟ್ಟು ಉದಾಸೀನ ಮಾಡದೆ ಮೈಸೂರಿನ ಮನೆಯಲ್ಲಿ ಅದು ದೊರೆಯುವುದಾದರೆ ವಿಳಾಸ ಕೊಟ್ಟರೆ ನಾನು ಬಂದು ತೆಗೆದುಕೊಳ್ಳುವೆ...

ನಿಮ್ಮ ಬಾಳ ಸಂಗಾತಿ ಆರೋಗ್ಯವೆ? ಅವರಿಗೆ ನನ್ನ ನೆನಪುಗಳು...

ಈ ಕೆಳಕಂಡ ದಿನಾಂಕಗಳಲ್ಲಿ ಸಂಜಯನಗರದ ತೀ।।... ಮನೆಯಲ್ಲಿ ಮಾಶಕಗಳು ನಡೆಯುತ್ತವೆ. ಒಮ್ಮೆಯಾದರೂ ಖಂಡಿತ ಬರುವುದು...

ನಿಮ್ಮ ಸೋದರಿ

ಸತ್ತವರ ನೆನಪು ಛಾಯಾಚಿತ್ರ, ಚಲನಚಿತ್ರ, ಧ್ವನಿಸುರುಳಿಗಳಲ್ಲಿ ಜೀವಂತಗೊಳ್ಳುವ ಯುಗ ಇದು.

೪೦೫

ಚಿತ್ರ : ವರಾನ್ವೇಷಣೆ

ಶುಭಮಸ್ತು ಹಾಸನ ಜಿಲ್ಲೆ
19.10.98

ಮಾನ್ಯ ಭಾವನವರಿಗೆ,

ಸಸ್ನೇಹ ನಮಸ್ಕಾರಗಳು – ಸಾಂಪ್ರತ. ಇಲ್ಲಿ ನಾವುಗಳೆಲ್ಲರೂ ಆರೋಗ್ಯ. ಅಲ್ಲಿ ನೀವುಗಳೂ ಎಲ್ಲರೂ ಆರೋಗ್ಯವಾಗಿರುವಿರೆಂದು ನಂಬಿದ್ದೇನೆ.

ನಮ್ಮ-ನಿಮ್ಮ ಭೇಟಿ ಇತ್ತೀಚೆಗೆ ಮೈಸೂರಿನಲ್ಲಿ ವಿವಾಹ ಸಂದರ್ಭದಲ್ಲಿ ಆಗಿತ್ತು. ನಾನು ನಿಮಗೆ ನನ್ನ ಮಗಳ ಭಾವಚಿತ್ರ ಮತ್ತು ಜಾತಕದ ನಕಲನ್ನು ಕಳಿಸಿಕೊಡುತ್ತೇನೆಂದು ಹೇಳಿದ್ದೆನು. ಸ್ವಲ್ಪ ನಿಧಾನವಾಯಿತು – ದಯವಿಟ್ಟು ಬೇಸರ ಮಾಡಬೇಡಿ.

ಈ ಪತ್ರದೊಂದಿಗೆ ಒಂದು ಭಾವಚಿತ್ರ ಮತ್ತು ಜಾತಕದ ನಕಲನ್ನು ಕಳಿಸುತ್ತಿದ್ದೇನೆ. ದಯವಿಟ್ಟು ನೀವು ಈ ದಿಸೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವಿರೆಂದು ನಂಬಿರುತ್ತೇನೆ. ನಿಮ್ಮ ಪ್ರಯತ್ನದಿಂದ ನಮಗೆ ಅನುಕೂಲವಾದಲ್ಲಿ ನಾನು ನಿಮಗೆ ಜೀವನ ಪರ್ಯಂತ ಆಭಾರಿಯಾಗಿರುತ್ತೇನೆ.

ಇದು ತಲಪಿದ್ದಕ್ಕೆ ದಯವಿಟ್ಟು ಒಂದು ಪತ್ರ ಬರೆಯಿರಿ. ಮಾ|| ಅತ್ತೆಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ. ತಮ್ಮ ಕುಟುಂಬದವರಿಗೆ ನಮ್ಮ ನೆನಪುಗಳನ್ನು ತಿಳಿಸಿ.

ಒಂದು ವೇಳೆ ನೀವು ಹೇಳಿರುವ ಕಡೆ ಅನುಕೂಲವಾಗದೇ ಇದ್ದರೆ, ಯಾವುದಾದರೂ ಬೇರೆಯಾದರೂ ಸರಿಯೆ, ವಿಚಾರ ತಮ್ಮ ಅವಗಾಹನೆಯಲ್ಲಿರಲಿ.

ಇತಿ ನಿಮ್ಮ ವಿಶ್ವಾಸಿ

ಪಾರಂಪರಿಕ ಜಾತಕದ ಜತೆಗೆ ಛಾಯಾಚಿತ್ರದ ಬಳಕೆ ಒಂದು ಹೊಸ ಹೆಜ್ಜೆ.

೪೦೬

ವೈದಿಕತೆಗೆ (ಹೊಸ) ಹುರುಪು

ಕ್ಷೇಮ ಓಂ ಭದ್ರಾವತಿ

27.02.2000

...ನೀವು ಸಹಿತ ಈಚೆಗೆ ಕಾಗದ ಬರೆದಿಲ್ಲ. ಕಾರಣ ವೇನು? ನಿಮ್ಮ ಕಾರ್ಯಕ್ರಮಗಳು ಏನು? ವೇ|| ಬ್ರ|| ಶ್ರೀ|| ಶ್ರೀಕಂಠಕುಮಾರಸ್ವಾಮಿ ಮಾಮನವರನ್ನು ಭೇಟಿ ಮಾಡಿದ್ದಿರಾ? ಅವರು ನನಗೆ ಬರೆದ ಪತ್ರಗಳ Xerox Copies ಅವರಿಗೆ ಕೊಟ್ಟಿರುವಿರಾ? ಅವರು ಬರೆದ 'ಶ್ರಾದ್ಧ' ಪುಸ್ತಕದ Proof Correction ಆಯಿತಾ? 'ಪತ್ರಮಂದಾರ' ಎಲ್ಲಿಯವರೆಗೆ ಬಂತು, ಎಲ್ಲಾ ವಿಷಯಗಳಿಗೂ detail ಆಗಿ ಪತ್ರ ಬರೆಯಿರಿ...

ನನ್ನ ಮಗನ ವಿವಾಹಸಮಯದಲ್ಲಿ ನಾನು ಮೈಸೂರಿನಲ್ಲಿ 8 ದಿವಸಗಳು ಇದ್ದೆ. 21 ವಿವಾಹವಾದ ಮೇಲೆ ಅಗ್ನಿಯನ್ನು 5 ದಿವಸ ಇಟ್ಟುಕೊಂಡಿದ್ದೆವು. ಬೆಳಿಗ್ಗೆ ಮತ್ತು ಸಂಜೆ ವೇ|| ಬ್ರ|| ಶ್ರೀ|| ಮಾಮನವರು ಬಂದು ಔಪಾಸನ ಮಾಡಿಸುತ್ತಿದ್ದರು. ನನಗೆ ಏನೂ ಕೆಲಸವಿರಲಿಲ್ಲ. ನೀವು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಬಹಳ ವಿಷಯಗಳನ್ನು ಮಾತಾಡಬಹುದಾಗಿತ್ತು.

ನನ್ನ ಅತ್ತಿಗೆ ಮತ್ತು ಬೀಗಿತ್ತಿ ಚಿ|| ಸೌ|| R.V. ವಸಂತಲಕ್ಷ್ಮಿ, ನನ್ನ ಭಾವಮೈದುನ ಚಿ|| B.S. Narayana Swamy ಇವರುಗಳು ಭೇಟಿಯಾಗಿದ್ದರಾ? ಚಿ|| ಸೌ|| ವಸಂತ ಈ ಸಲವೂ ಬೆಟ್ಟದಪುರ ಸಂಕೇತಿ ಸಂಘದ ಚುನಾವಣೆಯಲ್ಲಿ ಬಹಳ ಮತಗಳನ್ನು ಗಳಿಸಿ ಗೆದ್ದು, ಪುನಃ ಉಪಾಧ್ಯಕ್ಷೆಯಾಗಿದ್ದಾಳೆ. ಇದು ಸಂತೋಷ ಸುದ್ದಿ. ಅವಳಿಗೆ ಕೆಲಸ ಮಾಡಲು Capacity ಇದೆ.

...ಕಾಲ ಓಡುತ್ತಿದೆ. ದೇವರು ನನಗೆ ಬುದ್ಧಿಶಕ್ತಿ ಕೊಟ್ಟಿದ್ದರೂ, ಏನೂ ಸಾರ್ಥಕತೆಯ ಕೆಲಸ ಮಾಡಿಲ್ಲವೆಂದು ತೋರುತ್ತೆ. ಏನೋ ಕೆಲವರಿಗೆ ದೇವರ ಪೂಜೆ ಮಾಡುವ ವಿಧಾನ ಹೇಳಿಕೊಟ್ಟಿರುವೆನು. ಇದು ಹೇಗಾಯಿತೆಂದರೆ ನಾನು 1970ನೇ ಇಸವಿಯಲ್ಲಿ ಸಿಲೋನ್ (ಶ್ರೀಲಂಕಾ)ಗೆ ಹೋಗಿ ಬಂದು Paper Town ನಲ್ಲಿ ವೇದಶಾಲೆ ಪ್ರಾರಂಭಿಸಿ, ಸುಮಾರು 12-15 ಜನಗಳನ್ನು ಕೂಡಿಸಿ, ಶ್ರೀ ಶಂಕರಾಚಾರ್ಯ ವೇದಪಾಠಶಾಲೆ ಎಂದು ನಾಮಕರಣ ಮಾಡಿ ವೇ||ಬ್ರ||ಶ್ರೀ|| ಕೆ. ಎಸ್. ರಾಮಸ್ವಾಮಿ ಶಾಸ್ತ್ರಿಗಳವರ ಕೈಲಿ ವೇದ ಕಲಿತೆ. ಅವರು ಒಂದು ವಿಷಯ ಹೇಳಿದ್ದರು, "ನೀನು ಪೂಜೆ ಮಂತ್ರ ಕಲಿತ ಮೇಲೆ, ಯಾರಾದರೂ ನನಗೂ ಹೇಳಿಕೊಡಿ ಎಂದು ಕೇಳಿದರೆ ನೀನು ಹೇಳಿಕೊಡು– ಅವರವರ ಪೂಜೆ ಇತ್ಯಾದಿಗಳನ್ನು ಅವರವರೇ ಮಾಡಿಕೊಳ್ಳ ಬೇಕು. ಇನ್ನೊಬ್ಬರನ್ನು ಆಶ್ರಯಿಸಕೂಡದು" ಎಂದು ಹೇಳಿದ್ದರು. ಹೀಗಾಗಿ ನಾನು ಬಹಳ ಜನಕ್ಕೆ ಹೇಳಿಕೊಟ್ಟಿರುವೆನು. ಎಲ್ಲಾ ವಿಷಯಗಳಿಗೆ ಕಾಗದ ಬರೆಯಿರಿ.

ನನ್ನ ಮಗನ ವಿವಾಹದ ಬಗ್ಗೆ : ನಿಜವಾಗಿ ನನ್ನ ಮಗ, ನನ್ನ ಸೊಸೆ ಬಹಳ ಪುಣ್ಯವಂತರು. ಏಕೆಂದರೆ ವೇ|| ಬ್ರ|| ಶ್ರೀ|| ಮಾಮನವರು ಪ್ರಧಾನ ಆಚಾರ್ಯರಾಗಿದ್ದುದಕ್ಕೆ. ನಿಜವಾಗಿ 20, 21 ವೇದವ್ರತ ಹೋಮಗಳು ಬಹಳ ಚೆನ್ನಾಗಿ ಆಯಿತು, ಮಂತ್ರ ಕೇಳಲು ಎರಡು ಕಿವಿಗಳು ಸಾಲದಾಗಿತ್ತು. ಅವರಿಂದ 5 ದಿವಸಗಳು (ಏನೂ ತೊಂದರೆಯಾಗದೆ)

ಕಾರ್ಯಕ್ರಮಗಳು ಸುಗಮವಾಗಿ, ಸಕಾಲದಲ್ಲಿ ನಡೆದವು. ಅವರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಅವರು ಇದ್ದರೆ ಏನೋ ಒಂದು ತರಹ ಶಕ್ತಿ, ಚೈತನ್ಯ. ಅವರು ಮದುವೆ ಮಾಡಿಸಿದ್ದುದನ್ನು ಸರಿಯಾಗಿ ನೋಡಿ, ಅನುಭವಿಸಿದರೆ, ನಾನು ಮತ್ತು ನನ್ನ ಪತ್ನಿ ಇಬ್ಬರೂ ಪುನಃ ವಿವಾಹ ಮಾಡಿಕೊಳ್ಳಬೇಕು ಎನ್ನಿಸುತ್ತದೆ. ಅಷ್ಟು ಚೆನ್ನಾಗಿತ್ತು...

–ಬಿ.ವಿ. ಶ್ರೀಕಂಠ

೪೦೭

ಮಾತೃಭಾಷೆಗೆ ವಿದಾಯ !

ಬೆಂಗಳೂರು

28.01.2003

...ನಿಮ್ಮ ಪತ್ರವನ್ನು ನೋಡಿ ಅಬ್ಬಾ! ಎನ್ನಿಸಿತು! ನಿಮ್ಮಿಂದ, ನಿಮ್ಮಂಥವರಿಂದ ಮಾತ್ರವೇ ಸಾಧ್ಯ ಇಂಥ ಕಾರ್ಯ. ...ನೀವು ಮಾಡುವ ಈ ಕಾರ್ಯವು ಒಂದು ಅವಿಸ್ಮರಣೀಯ ಸ್ಮಾರಕವೇ ಆಗುತ್ತದೆ.

ನಮ್ಮ ಜನಾಂಗವು ಋಷಿ ಸಂತತಿಯದು. ಋಷಿ ಪರಂಪರೆ ಎಂದರೆ ಬುದ್ಧಿಶಾಲಿಗಳ ಪೀಳಿಗೆ. ಜೀವನವನ್ನು ನಿಜಕ್ಕೂ ಅನುಭವಿಸುವ ಜನಾಂಗ. ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ – ಈ ಎಲ್ಲ ಕ್ಷೇತ್ರಗಳಲ್ಲೂ ಯಾರಿಗೂ ಕಡಿಮೆ ಇಲ್ಲದಂತೆ ನಡೆದುಕೊಳ್ಳುವವರು ನಾವು. ಇದರಿಂದ ಅಹಂಕಾರ ಪಡಬಾರದು. ನಮ್ಮ ಪೂರ್ವಜರನ್ನು ಸ್ಮರಿಸಿ ತಲೆಬಾಗಬೇಕು ಎಂಬುದು ನನ್ನ ಅನಿಸಿಕೆ.

ನಮ್ಮ ಹಿಂದಿನವರು ನಮಗೆ ಕೊಟ್ಟದ್ದನ್ನು ನಮ್ಮ ಮುಂದಿನವರಿಗೆ ನಾವು ಕೊಟ್ಟರೇ ನಮ್ಮ ಪೂರ್ವಜರಿಗೆ ನಾವು ಗೌರವ ಸಲ್ಲಿಸಿದಂತೆ ಆಗುತ್ತದೆ. ನಿಮ್ಮ ಕೃತಿಮಾಲೆಯು ಈ ಅಂಶದ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದರೆ ಚೆನ್ನ.

...ಒಂದೇ ಒಂದು ವಿಷಯದಲ್ಲಿ ನನಗೆ ಅತಿ ಹೆಚ್ಚಿನ ಸಂಕಟವಾಗುತ್ತದೆ. ನಮ್ಮ ಜನ ಹಲವರು ನಮ್ಮ ಸಂಕೇತಿ ಭಾಷೆಯನ್ನು ಕೈ ಬಿಡುತ್ತಿದ್ದಾರೆ. ಇದು ನಮ್ಮ ಜನಾಂಗಕ್ಕೇ ಆಗಿರುವ ನಷ್ಟ ಎಂಬುದು ನನ್ನ ಅಭಿಪ್ರಾಯ. ನಮ್ಮನ್ನು ಬಂಧಿಸಿ ಇಟ್ಟಿರುವ ರಜ್ಜುವೆಂದರೆ ನಮ್ಮ ಭಾಷೆ ಒಂದೇ, ಬೇರೇನೂ ಇಲ್ಲ ಅಲ್ಲವೆ?

...ವಿನಾಕಾರಣ ನಮ್ಮ ಭಾಷೆಯನ್ನು ಆಡುವುದನ್ನು ಬಿಟ್ಟವರು ಏಕೆ ಹೀಗೆ ಮಾಡಿದರು ಎಂಬುದರ ಬಗೆಗೆ ನೀವು ಸಂಶೋಧ ನಡೆಸಿದರೆ ಇದೂ ಒಂದು ದಾಖಲೆಯಾಗಿ ಉಳಿಯುತ್ತದೆ...

ಲಂಡನ್ನಿನಲ್ಲಿ 153 ಭಾಷೆಯ ವಿವಿಧ ಜನಾಂಗದವರು ಇದ್ದಾರೆ. ಒಂದು ಜನಾಂಗವೂ ತನ್ನ ತಾಯಿನುಡಿಯನ್ನು ಕೈ ಬಿಟ್ಟಿಲ್ಲ. ನಮ್ಮ ಸುಶಿಕ್ಷಿತ ಜನರು ಹಲವರು ನಮ್ಮ ತಾಯಿ ನುಡಿಯನ್ನು ಮನೆಯನ್ನು ಬಿಟ್ಟು ಓಡಿಸಿಬಿಟ್ಟರು...!

– ಮತ್ತೂರು ಕೃಷ್ಣಮೂರ್ತಿ

೪೦೮*

ಇಂಗ್ಲಿಷ್ : ಸಂವಹನ

Safe Sree Basavanagudi

12th Feb, 1928

Dear brother,

I received your letter today. Please excuse me for not having written earlier. Fortunately by God's grace Mr. V. Gopalaswami aiyangar is kind enough to permit to remain here until the end of this year. So there is no worry about it now. I am studying well here for the next examination. I hope you all are keeping good health.... one day I had seen Mr. Keshavaiah (Jois) of Vittalapur here. He told me that all were safe and sound there...

೪೦೯

ಹೊಸ ಪರಿಣಾಮ (ಮಾರ್ಗದರ್ಶನ)

Sri Bangalore

6.6.1929

My Dear...

Your P.C. of 27th...I am glad to know your father is improving though there is difficulty regarding his...The only advice I can give is that you should take up only such work as will not interfere with your studies. You must get rid of the other part at any cost. No collections this year. Our results have also been poor. Take good care of your father at present...

'ಆಳುವವರ ಭಾಷೆ'ಯಿಂದ ನಮ್ಮವರೇ ಆದ ಹಿರಿಯರಿಗೂ ಹೊಸ ಬಗೆ ಸಿಕ್ಕಿತು.

೪೧೦

ಹೊಸ ಪರಿಚಯ

Safe Sree Rama Mysore

1st June,1930

Dear Mr...

I have been asked by Mr.S.L. Sreekantiah to reply you for your letter of 15th ultimo. The results of the B.A. Degree and intermediate were announced yesterday.

...I am an unknown person to you. I have addressed you as "Dear Mr..." I did not know and I do not know how to address. Excuse me. Of course I am a relative of your S.L.Sreekantiah. So you are my friend. It is on this basis I have addressed. I think I have supplied you with necessary information. Mr.Sreekantiah is not in the station. went to Bettadapur last week. Not yet returned...

H.N. Subrahmanyam

ಸಂಕೇತಿ ಬಂಧುಗಳ ನಡುವೆಯೇ ಅಪರಿಚಿತರನ್ನೂ ಇಂಗ್ಲಿಷ್ ಮೂಲಕ ಮುಟ್ಟುವ ಹೊಸ ಸಾಧ್ಯತೆ ತೆರೆದುಕೊಂಡಿತು.

೪೧೧

ಹೊಸ ವಿದ್ಯೆ, ವೃತ್ತಿ (ಹೊರ ರಾಜ್ಯಗಳಿಗೂ ದಾಪುಗಾಲು)

Mysore

14th July, 1930

Dear...

It was but yesterday that I learnt a mutilated account of your.... at Hassan. I left this place to Bombay on the 5th inst. in view of Joining the V.J.T. Institute but I was too late and hence had to return yesterday. It seems my father sent by post the telegram to Bombay but I returned before it could reach me. Since the time before me to make further arrangements to send up my application was so short I had to drop off the attempt in sheer despair. How I wish I had some time enough to think!..

I hope you have already sent up your application and I do wish you success in your attempt. Who knows, perhaps you will go there an year in advance to me to be of immense help to me if I were to join next time. Hoping you will reply soon...

೪೧೨

ನೌಕರಿ ದೊರೆಯದು

Mysore

28th June, 1931

Dear...

Your kind letter with thanks. I am really sorry to hear the 'no vacancy' episode. But how have you solved to overcome it? My brother did not get a seat in the Eng. School and we are left in the dark. I propose to take him with me to B'lore to-night and see the Suptd. personally and try a chance. I have settled to choose between the G.D.A. and the Hebbal School. In the latter I expect a scholarship of about 15/- while the former is rather expensive. I am still undecided but have resolved to stay at B'lore this year. My address for the present there will be C/o Students' Home. I will have left your watch as well as Prof. Jacob's copy of the Univ. Calendar here and you can take them back whenever it is convenient to you. I have paid 1/8- towards the repair of the watch but we can settle it leisurely. You neednot open that topic while receiving the watch from home.

Yours sincerely,

೪೧೩

I am very sorry

Safe Channarayapatna

11th June, 1934

My Dear Brother,

Your P.C. of the 8th instant to hand. I am very sorry that you are in trouble. Can you

understand how much I feel for my inability to help you when you are in urgent need? Perhaps you cannot. Poverty and sickness are fast sapping my vitality. Here one after another is falling ill. I too had fallen ill but I am slowly recovering. I am glad that you have passed in first class and that you are allowed to mess in the choultry. However, let not your worries come in the way of your studies. Take the earliest opportunity to join the IV form. During vacations if you come to me I can help you as much as I can. I hope that this letter reaches you in the enjoyment of sound health. Praying for your welfare.

No more to pen with

Yours affectionately

೪೧೪

ವೈದ್ಯಕೀಯ ಬೆಂಬಲ

Bangalore

16 May 1971

My Dear...

Malathi and I are extremely happy to learn from you that the second operation done at Bombay by Dr. Bansali has given you great relief and comfort and that you are progressing satisfactorily. We are rather annoyed that Dr...inspite of his qualifications and experience, should treat your case so light heartedly, eventhough you frequently complained to him of continuing pain. I had respect for his professional ability and now I have to revise my opinion. Perhaps he attaches more importance to money rather than to the relief and comfort of his patients. Before I recommended him I consulted my brother-in-law Dr.Krishnamurthy who told that he is really good. When I meet Dr. Krishnamurthy next time I will tell him about the complications you developed which ultimately warranted a second operation...

೪೧೫

ವಿಮಾನ ವೇಗ (ಅತ್ಯುತ್ತಮ ಸಾಧ್ಯತೆಯ ತಡಕಾಟ)

Bangalore

4 July, 1971

My Dear...

I was thrilled when I got your trunk call yesterday and when I spoke to you and Murthy.

After coming here (brother Balu had come to the airport to take me home) brother Balu made all arrangements on priority basis, for various examinations by specialists. Blood was tested three days after I had taken normal food and the blood-sugar value is within permissible limits. ECG was taken and scanning of the brain was done and the results were negative. Neuro-surgeons examined me in detail and found nothing wrong. These specialists had a long discussion with brother Balu and finally concluded that one of the minor blood vessels in the head is temporarily blocked by a clot. Until either the clot disappears or the blood stream finds an alternative route to flow, which normally happens after a few months, the heaviness in the head persists. For this purpose, some pills have been prescribed which I should take for a few months. Balakrishna Rao has categorically said that there is nothing to worry at all.

I am flying to Bangalore back tomorrow by the morning flight and will reach Bangalore by about 10-30 hrs. I will write to you off and on about my progress...

I spoke to Malathi and Dr. Krishna Murhty on telephone yesterday. Malathi is really worried very much and I hope God will reward her adequately.

All my friends had come to see me and all are disappointed that I had no time to go to their houses.

Hope Murthy has reported for duty and that the work is to his liking.

When is Shashi expected to shift to his own sweet home. I have written to him also today and kindly enquire from him whether he received it or not.

I have written to Murthy today to your house address...

೪೧೬

ಯೋಧ : ಆಲೋಚನೆ

24 July 1971

My Dear...

Received your affectionate letter two days back. We are happy to learn that you have more or less recovered completely from the discomfort of the operation.

Tentatively we have decided to go to KGF on 28 July. The heaviness in my head has not subsided appreciably. Only about 10% has come down. According to doctors, it will take at least two to three months to get satisfactory relief. I do not know what sins I have committed to suffer like this. Hope I will be my normal self in the near future.

It is sickening to be without work, and life hangs heavy. Because of this, I have decided to go back to work, so that occupied mind may give some relief. If after resuming work, I find it difficult to do quality work and produce tangible results and prove myself to be effective and efficient, I may have to think of tendering resignation. I will keep you informed of further developments.

Latha is fairly active but is not very comfortable due to rainy and cloudy weather. Hope she gets some relief after going to K.G.F.

Malathi is keeping well. she is very much down hearted that a seasoned soldier is compelled to be lazy and confined to the house.

Kindly enqiure from Shashi whether he received my letter. I got his letter a few days back.

Thank you very much for the details of my investment and the suggestions. I will reflect the interest in the income tax return, after I return to K.G.F.

I have requested the authorities in the main office at Bangalore whether it is possible to keep me till middle of Oct. 71 in the Bangalore Office, so that I may go back to factory completely fit for any type of work, because Latha has to go to the lady doctor every fortnight for a check. The frequency of examination may become more after a month or so. To bring her from KGF to Bangalore so often may not be very desirable. We are really at our wits end. Everything will be decided in a week's time. I am also trying with the idea that I should resign my job, stay in Bangalore till Latha's confinement is over and she returns to Bombay and then find a new career.

Latha is receiving letters from Murthy regularly. You may be meeting him of and on. He seems to be liking his present job...

೪೧೭

ಹೆಣ್ಣಿಗೆ (ಅಮಿತ) ಸ್ವಾತಂತ್ರ್ಯ

26 Nov. 1971

My dear...

...Murthy is not able to come to Bangalore. Hence Latha will travel alone and the railway reservation has already been done. She will leave Bangalore on 1st Jan. 71 by Deccan Express by about 15-00 hrs. and reach Poona on 2nd Jan. 71 by about 16-00 hrs. She will stay in Poona on 2nd Jan. with our friend Maj...who will meet her at the station and take her home. She will leave for Bombay on 3rd Jan. by Deccan Queen and reach Bombay by about 10-30 hrs. Kindly meet her either at Dadur or VT whichever is convenient to you and take her home...

೪೧೮

ವೈದ್ಯೆಯ ಗೋದಾನ

Safe Sree 21.7.1988

Bangalore

Dear Sri...

Hope you have reached your destination safely. I was worried that you were caught in rains, that day...

You wanted a prescription. Please find it on the next page.

I heard that a gentleman in Agrahara, by name...is prepared to accept **ಗೋದಾನ.** If it is not troublesome for you, please find out from either Chi. Sow...husband or Chi. Sow... husband whether a good cow (never mind about the cost) is available for purchase. Probably I might go over to Agrahara to request Mr...around 30th & 31st of July. I will call on you also at Basavapattana as I have a long pending programme to visit Sri Mavayya.

೪೧೯

ಸಂಘಟನೆ, ಚಳವಳಿ

Secunderabad

25.1.1989

My Dear...

Hope you are in receipt of my letter dated 22nd Jan. Today being our strike day, we had demonstration before our zonal office where all officers from our bank had gathered for a joint programme to press our demand for immediate settlement of our wages. Your letters & DD promptly reached me through one of our colleagues from our main branch who came there to participate in the programme. As you had not written my branch name, it had gone to R P Road Branch. Thank God! your important letters with remittance have reached my hands. A few letters pertaining to me have not reached. For instance, your own letter intimating me about your arrival in July, has not reached me till date. Hence, write the branch name specifically for prompt reaching. This is enough to bore you...

Winter is lifting away its legs and summer has started to step in. Other things are normal.

With love and regards

೪೨೦

ದ್ರಾವಿಡಪೂರ್ವ ಸಂಸ್ಕೃತಿ

Madras

1.9.1992

Dear Shri...

1June of last when I had been to Tirunelveli I was told that you were also there trying to study about the sanketi brahmins. Surely you would have sufficient information from Shri T.S. Minakshi Sundaram, T.S. Subramania Sastri, his son and several others.

...Presently I am studying about a civilization even earlier to the Dravidians who were those migrators some 18 to 20 thousand years ago...

K. Ramasami

೪೨೧

ಸಂಕೇತಿ ಆಧಿಪತ್ಯ

Madhurai

30.11.1992

Dear Shri...

Meanwhile, my mind was so much buffling and itching to put down on paper whatever information I have been able to obtain, study and deduce about the sub-sects of the Tamizh brahmins and especially of the Sanketis.... Recently i.e., while I was in Bombay, I had to interest myself in archaeology and about the Indus Valley civilization in particular...

In the light of the study I made, I am able to see that sanketis as the sect of brahmins in total control of the temple management and the entire territories where they were situated. All these and much more should form the basis of how brahminical theocratic states had descended...

K. Ramasami

೪೨೨

(ಸಂಕೇತಿಗಳೇ) ಒಂದಾಗಿ ಮುನ್ನಡೆಸಿ

Trivandrum

5.7.93

Respected Uncle,

Namaskaram, I am the grandson of late Sri T.S. Krishna Iyer and Late Smt. Rugmini Ammal who constructed Sri Komalavalli Amman Temple at Ayikudi, near Tenkasi in the year 1937 and also the grandson of late Sri K.R. Sankaranarayana Iyer of Krishnapuram who settled at Tenkasi as a lawyer and who was a veteran congress leader in the early days. We belong to Sankethi group of Brahmins. My father late Sri T.K. Subramaniam was the only son of my grandfather and he passed away on 31.12.77.

The temple at Ayikudi was constructed as per the Devine message given by Goddess Sankara Gomathi of Sankaran Coil to my grandmother during her monthly worship visits. The deity installed at Ayikudi temple is in the name of Balavalli. In the days of my grandfather and father the affairs of the temple were well managed. Every year the Navarathri Festivals were conducted. In the dailies at Mysore these details were published and the same cuttings with translations were sent to us by one of my father's friends who I suppose is Sri Sooryanarayana.

After the days of my father the management of the temple were very difficult. One archaka is engaged and a meagre amount is paid to him. Only the daily pooja is done. The people in local area are conducting the Navarathri every year.

Recently, on 17.10.92 a theft was attempted in the temple. The thieves damaged the idol of Lord Muruga and stole away the talisman of devi and silver in the Sanku. We had some amount collected and we performed Kumbhabhishekam and a new idol of Lord Muruga installed on 30.4.93. The kumbabhishekam was conducted on 1.5.93. Also the Mandala Abhishekam was performed on 11.6.93.

Now we propose to set up a permanent fund for the temple so that the future routine poojas and also the maintenance of the temple are done without any hindrances. Please therefore take due interest in the matter for me and let all our class of Sankethis unite and donate liberally to this Noble Cause and also get the blessings of Goddess Saraswathi (Nacharamma) Herself who has incarnated at this place as Komalavalli. I am enclosing a copy of the brief history of the temple for your reference.

I got your address through my Cousin brother Sri Y.S. Manian who is the son of Sri Yegna Narayana Iyer of Erachakulam. Please do your best in the matter and reply at your convenience.

Yours Sincerely,

೪೨೩

ನಿಮಗಿದೋ ಸ್ವಾಗತ

Trivandrum

21.8.93

Respected Uncle,

Namaskarams. Well and wish to hear the same from you. Your kind letter to hand. Please excuse for the belated reply. As I do

not know how to tide over some of my presently aggravated problems I am not able to do anything as expected. Please be writing often. Sri Ambi Vadhyar of Karamanai is one of my Uncles. He passed away on 22.2.93. I pray Goddess to bless you in your valued endeavour to bring out the book. While going over to Trivandrum, please write to me for your programme. You are always welcome. Nothing more now.

Affectionately yours

೪೨೪

ನಾಚಾರಮ್ಮ : ಅಪಮಾನ

Trivandrum

29.4.1994

Respected Sir,

Namaskarams. At the outset let me thank you for your valued assistance to our Ayikudi temple. I am enclosing the holy laksharchana prasadam and also the receipt. I pray Goddess to shower her blessings on one and all...

A brief history of the temple is also sent herewith from which briefly publish the history of the temple. It should contain the brief fact that the deity has chosen the place Ayikudi, because it was there that Goddess Saraswathi (Nacharamma) was ridiculed, and Goddess Sankara Gomathi of Sankarnainar Koil has incarnated herself as Goddess Komalavalli to bless those who repent for their ignorance in having ridiculed Saraswathi years back.

Please reply me for your favourable actions in our favour. Once again I thank you for your efforts to publish the news in the dailies and all assistance extended to me.

Yours Sincerely

೪೨೫

ಮೂಲದಾಖಲೆ

Bangalore

3.9.1994

Dear...

We are fine here & trust to hear the same from you all too. Please make yourselves convenient to visit us once.

The tax may be paid leisurely & no hurry. But, please post a xerox copy of the tax paid receipts to me after the same is paid, at your convenience, retaining the original at your end. I will collect the same whenever I call on you. As I forgot to tell you, I am writing this letter in this matter. The original receipt of the last year's tax paid, didn't reach me, sent by my tenant. Hence, I am requesting you to mail the xerox copy only.

Sincerely Yours

೪೨೬

ಕರ್ನಾಟಕ ಕನ್ಯೆ ಬೇಕು

Tirunelveli Jn.

15.11.94

Dear...

Your last letter read, "Rest in person". But we were really disappointed that you didn't turn up on 26th October, the day of my daughter's marriage, with members of your family. I thought you would meet my son, for whom I am on the look out for suitable bride. I believe that you have his horoscope and bio-data. I shall be obliged if you can forward horoscopes of suitable brides with details of qualifications, family etc., early.

My son has left for Japan after attending the marriage. Mr. Kesavamurthy of Bangalore has not so far sent the two photos of my daughter. Please see they are returned to me early.

On consultation here with our astrologers I am informed that the star being Barani for my son and your cousin's daughter there is no compatibility though otherwise we are satisfied.

Please do reply and also send me suitable horoscopes of sanketis in your state as well as abroad who are agreeable for the alliance.

Yours very Sincerely,

T.S. Minakshi Sundaram

೪೨೭

ಮಗ ಭಾರತಕ್ಕೆ ಬರುವ

Tirunelveli Jn

31.8.95

Dear Sri..

Received your letter. Thank you very much. We are all quite well here & hope the same with you and family.

Enclosed are copies of my son's horoscope, along with details of his education etc. As I wrote to you earlier, please forward suitable horoscopes which are agreeable with that of my son. My son is expected to come to India in December.

With regards,

Yours Sincerely

T.S. Minakshi Sundaram

೪೨೮

ಸಾಯುವ ವಯಸ್ಸಲ್ಲ

Mysore

10 Jan 96

My Dear Rayan

I am very sorry to hear that your dear wife passed away. She wasn't certainly that aged for the event. I can imagine how keenly you will miss her smiling presence beside you. But I know you are philosopher enough to face the inevitable. God will give you strength to bear the seperation and keep on with your good work.

With my best wishes to you.

೪೨೯

ದೂರದ ಇಲ್ಲಿಗೆ ಬನ್ನಿ (ಅಲ್ಲಿನ ದುಃಖ ಮರೆಯಿರಿ)

Pune

25.1.1996

Dear...

...But we do remember you, very much, wish we could be with you...loss is terrible, we can't imagine...without...been...a noble person. You have lost a life partner - the void impossible to fill. It is not possible to express our feelings of deep sorrow in words for our association with both of you was selfless and studded over well half a century. We would like you consider our suggestion—Please come to stay after the 'kriyas' are completed for a change. There are a number of friends and relatives who will help you in body and mind. Do let us know...

೪೩೦

(ಮೈಸೂರಿನವರೇ, ಔರಂಗಾಬಾದಿನ ಹೆಣ್ಣು) ತಿರುನೆಲ್‌ವೇಲಿಗೆ ಬಂದಾಳೆ ?

Tirunelveli

6.7.96

Dear Sri...

I am gratefully obliged to your letter dated 20.6.96 and the details you have given and the enclosed horoscope. I thank you for taking interest and sending me the horoscope.

You have not written to say whether the girl's parents have had compared the horoscopes and what they opine about it. I believe that they have had copies of horoscope sent by me containing Bio-data. At my end I feel that there may be agreement. The snag, however, is one has to decide about settling down before proceeding further. Any way please keep in touch with me and if you come across good horoscopes which may be compared at your end, Please send the same to me. Please also write to

the girl's father at Aurangabad and let me know whether they have compared the horoscopes and what they have found on comparison.

If you have no copy of horoscope sent by me earlier, please let me know so that I can send you further copies.

We are all well here and hope the same with you and your wife and children.

Please do reply and oblige.

Thanking you,

Yours Sincerely,

T.S. Minakshi Sundaram

೪೩೧[+]

ಶ್ಲಾಘನೀಯ ಯೋಜನೆ

U.S.A.

30.12.2002

Dear...

It was very nice talking to you. I am very delighted you have taken up a huge undertaking.

I understand your total dedication to the most difficult task. Your service to the sankethi Community is admirable.

May the lord give you his blessings to complete the noble deed you have taken up.

Yours Sincerely,

R.S. Chandrasekhara Murthy

೪೩೨

ಸಂಕೇತಿ ಪತ್ರಿಕೆ

30.1.03

e-mail of Dr. M.S. Nataraja-President of NASA...You can get in touch with him and familiarise him with the sanketi project and he can put it in the sanketi news letter here.

good wishes,

Jai Rangappa

೪೩೩

ಇದೋ ನಮ್ಮ ನೆರವು

U.S.A.

15.4.2003

Thank you very much for your very kind e-mail message.

We are indeed very happy, you are doing invaluable service to our tribe, to wit all sankethis.

There is no way to thank you enough for your selfless service and dedication.

We are very happy and grateful we are able to be of some assistance in your noble efforts.

with kind regards,

Yours Sincerely,

R.S. Chandrasekhara Murthy

೪೩೪

ಕೃಷಿ : ಅಮೆರಿಕದಲ್ಲೇ ?

11-5-03

Thank you for your e-mail. It was nice knowing you and your wife. Regarding the article for the second volume I neither have any knowledge nor any experience in agriculture. Therfore, please excuse me. However, I will approach others who might be interested to contribute. Based on my understanding, it is not a topic which you can expect much expertise from NASA members here.

Best Wishes,

Nataraja

೪೩೫

ಕಾರ್ಯಕರ್ತರು

Dear...

My brother-in-law Somasundara told me that you are trying to contact me. I have not received any e-mail from you. Reg. books... It is a noble cause. I am proud of volunteers like you who are dedicated to serve.

Best Wishes,

Natesh Magge

[+] e-mail ಪತ್ರಗಳು

ಎರಡನೆಯ ಭಾಗ

ಪ್ರೊ. ಶ್ರೀಕಂಠಕುಮಾರಸ್ವಾಮಿ ಅವರ ಪತ್ರಗಳು

ಆ. ಶ್ರೀ ಬಿ.ವಿ. ಶ್ರೀಕಂಠ ಮತ್ತು ಇತರರಿಗೆ ಬರೆದ ಪತ್ರಗಳು

೪೩೬

ಲೌಕಿಕ ವಿದ್ಯೆಗೂ ಲಾಭವಿದೆ (ಉಪನಯನ ಸಂಸ್ಕಾರ)

कुशलम् श्री : Madras

12.2.82

ಚಿ|| ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ವೇದೋಕ್ತ ಆಶೀರ್ವಾದಗಳು. ನಿನ್ನ ಕಳಕಳಿಯ ಕಾಗದ ತಲಪಿತು. ನಿನ್ನ ಧಾರ್ಮಿಕ ಶ್ರದ್ಧೆಯನ್ನೂ, ಶಾಸ್ತ್ರೀಯವಾದ ಕರ್ಮಗಳನ್ನು ನೋಡಿ ಸಂತೋಷಪಡುವ ಜ್ಞಾನವನ್ನೂ ನೋಡಿ ಬಹಳ ಸಂತೋಷವಾಯಿತು. ನಿನ್ನ ಮಗನಿಗೆ ಇದುವರೆಗೂ ಉಪನಯನ ಮಾಡದೇ ಇದ್ದುದು ತಪ್ಪೇ. ಚಿಂತೆಯಿಲ್ಲ. ಆಪಸ್ತಂಬರು "ಉಪನಯನಂ ವಿದ್ಯಾರ್ಥಂ ಶ್ರುತಿತಃ ಸಂಸ್ಕಾರಃ" (ವಿದ್ಯಾರ್ಜನೆಗೆ ಹೊರಟಿರುವವನಿಗೆ ಮಾಡುವ ವೇದೋಕ್ತವಾದ ಸಂಸ್ಕಾರವೇ ಉಪನಯನ) ಎಂದು ಹೇಳಿದರು. ಅಂದರೆ ಈ ಸಂಸ್ಕಾರ ಬಲದಿಂದ ವಟುವಿಗೆ ಮೇಧಾಗ್ರಹಣಾದಿ ಬಲಗಳು ಅಭಿವೃದ್ಧಿಯಾಗಿ ಅವನಿಗೆ ವಿದ್ಯಾರ್ಜನೆಯು ಸುಲಭವಾಗಿ ಆಗಲಿ ಎನ್ನುವುದೇ ಉದ್ದೇಶ. ಅದನ್ನು ಆ ಹುಡುಗನು ವಿದ್ಯಾರ್ಜನೆ ಆರಂಭ ಮಾಡುವುದಕ್ಕೆ ಮೊದಲೇ ಮಾಡಬೇಕಲ್ಲವೇ ? ಅದಕ್ಕೇ ಅವರು ಗರ್ಭಾಷ್ಟಮದಿಂದ ಹಿಡಿದು 16 ನೇ ವರ್ಷದವರೆಗೂ ಅವಕಾಶ ಕೊಟ್ಟರು. ಆಮೇಲೆ ಮಾಡಿದರೆ ದಂಡ, ಉಪಯೋಗವಿಲ್ಲ ಎಂದರ್ಥ. ಉಪನಯನವೆಂದರೆ ಕೇವಲ ಒಂದೆಳೆ ಜನಿವಾರ ಹಾಕಿಕೊಳ್ಳುವುದು ಎಂದಾಗಿದೆ. ವಿವಾಹದಲ್ಲಿ ಎರಡು ಹಾಕಿಕೊಳ್ಳಬೇಕಿದೆ, ಅದರಿಂದ ಉಪನಯನ ಅಂತ ಮಾಡಿ ಒಂದು ಹಾಕಿ ಎರಡನೆಯದನ್ನು ವಿವಾಹದಲ್ಲಿ ಹಾಕಿಕೊಳ್ಳಲು ಅನುಕೂಲವಾಗುತ್ತದೆಂದೂ ಅದೇ ಶಾಸ್ತ್ರವೆಂದೂ ಎಷ್ಟೋ ಜನರ ಭಾವನೆ. ಅದೇನೂ ಅಗತ್ಯವಿಲ್ಲ. ವಿವಾಹದಲ್ಲಿಯೇ ಎರಡನ್ನೂ ಒಟ್ಟಿಗೆ ಹಾಕಿಕೊಳ್ಳಬಹುದು !! ಆಪಸ್ತಂಬರು ಕೇವಲ ವೇದವಿದ್ಯೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೇಳಿದರೂ, ಅದನ್ನು ಲೌಕಿಕ ವಿದ್ಯೆಗೆ ಉಪಯೋಗಿಸಿಕೊಂಡರೂ ತಪ್ಪಿಲ್ಲ. ಲೌಕಿಕ ವಿದ್ಯಾರ್ಜನೆಗೂ ಮೇಧಾಗ್ರಹಣಾದಿ ಸಾಮರ್ಥ್ಯಗಳು ಬೇಕಲ್ಲವೇ ? ಆದ್ದರಿಂದ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು 16 ವರ್ಷದೊಳಗಾದರೂ ಮಾಡುವುದು ಯುಕ್ತ. ಅಷ್ಟೊತ್ತಿಗೆ S.S.L.C. ಆಗಿ ಪ್ರೌಢ ವಿದ್ಯಾಭ್ಯಾಸದ ಮೊದಲನೆಯ ಹಂತಕ್ಕೆ ಹೊರಟಿರುತ್ತಾನೆ. ಆಗಲಾದರೂ ಮಾಡಿದರೆ ಖಂಡಿತ ಅವನಿಗೆ ಅನುಕೂಲವಾಗುತ್ತದೆ. ಮಾಡು. ...ನನಗೋಸ್ಕರ ಕಾಯದೆ ಯೋಗ್ಯರನ್ನು ಬೇರೆ ಯಾರನ್ನಾದರೂ ಕರೆಸಿ ಮಾಡಿಸಿಕೊಂಡರೆ ನನಗೆ ಬಹಳ ಸಂತೋಷ. ಅವನಿಗೆ ಸಂಸ್ಕಾರವಾಗುವುದು ಮುಖ್ಯ. ಇಲ್ಲದಿದ್ದರೆ ನೀನು Juneವರೆಗೂ ಕಾಯಬೇಕಾಗುತ್ತದೆ. June 3ನೇ ತಾರೀಖು ನನ್ನ ಮಗಳಿಗೆ ವಿವಾಹ ನಿಶ್ಚಯಿಸಿದ್ದೇನೆ (ಕುಮಾರಸ್ವಾಮಿಗಳ ಮಗ ಕಿಟ್ಟಣ್ಣನಿಗೆ ಕೊಟ್ಟು). ಅದು 4 ದಿನ ಮುಗಿದ ಮೇಲೆ ಸ್ವಲ್ಪ ಬಿಡುವಾಗಿರುತ್ತೇನೆ. June 9, 10 ಚೆನ್ನಾಗಿದೆ. ಯಾವತ್ತಾದರೂ ಒಂದು ದಿನ ಮಾಡಬಹುದು. ನಿನಗೆ ಅನುಕೂಲವಿದ್ದರೆ ಲಗ್ನ ನಿಶ್ಚಯ ಮಾಡಿ ಬರೆಯುತ್ತೇನೆ. ಅಥವಾ April 12ನೇ ತಾರೀಖಿನೊಳಗೇ ಮಾಡಬೇಕೆಂದರೆ ಇಲ್ಲಿಗೇ ಬಂದುಬಿಡು. ನನ್ನ ಮನೆಯಲ್ಲಿಯೇ ಮಾಡಬಹುದು. ಅಥವಾ ನಿನ್ನ ತಮ್ಮನ ಮನೆಯಲ್ಲಿ ಮಾಡಬಹುದು. ಯಾವ ಅಡ್ಡಿಯೂ ಇಲ್ಲ. ಇಲ್ಲಿಯೇ ಆದ್ದರಿಂದ ನಾನು ಹೇಗೋ adjust ಮಾಡಿಕೊಳ್ಳುತ್ತೇನೆ. ಬಹಳ ದೂರವಾಗುತ್ತದೆ, ಎಲ್ಲರೂ ಬರಲು ಕಷ್ಟ ಎಂದು ಯೋಚಿಸಬೇಡ. ಇದು ಕೇವಲ ವೈದಿಕಸಂಸ್ಕಾರ, social function ಅಲ್ಲ. ಅತ್ಯಂತ ಆಪ್ತರು ಇದ್ದರೆ ಸಾಕು. ಕೂಡಲಿ, ಶೃಂಗೇರಿ, ಶಿವಮೊಗ್ಗ ಎಂದು ಬರೆದಿದ್ದೀಯೆ. ನನಗೆ ಅವುಗಳೂ ಇಷ್ಟವಿಲ್ಲ. ಕಾರಣವೇನೆಂದರೆ

ಅಲ್ಲೆಲ್ಲಾ ಹೋದರೆ, ಮೊದಲಿನಿಂದ ಹಿಡಿದು ಕೊನೆಯವರೆಗೂ ಎಲ್ಲವನ್ನೂ ಹೊಸದಾಗಿ ಹೊಂದಿಸಿಕೊಳ್ಳಬೇಕು. ನೀನು ಅವುಗಳಿಗೆ ಗಮನ ಕೊಡಬೇಕು. ಸಹಾಯಕ್ಕೆ ಜನ ಇದ್ದರೂ, ನಿನ್ನನ್ನೇ final decisionಗೆ ಬಂದು ಕೇಳುತ್ತಾರೆ. ಆದ್ದರಿಂದ ನೀನು ಉಪನಯನದಲ್ಲಿ ಏಕಾಗ್ರತೆ ವಹಿಸಲು ಸಾಧ್ಯವಿಲ್ಲ. ಉಪನಯನಕರ್ಮ ಪೂರ್ತಿ ನಿನ್ನದೇ ಆದ್ದರಿಂದ 3 ಘಂಟೆಗಳ ಕಾಲ ನೀನು ಅದರಲ್ಲಿಯೇ ಮಗ್ನನಾಗಿರಬೇಕಾಗುತ್ತದೆ. ಬೇರೆ ಕಡೆ ಮನಸ್ಸು ಹರಿಸಲು ಅವಕಾಶವಿರುವುದಿಲ್ಲ, ಇರಕೂಡದು. ಅದನ್ನು ಯೋಚಿಸಿದರೆ ನೀನು ಭದ್ರಾವತಿಯಲ್ಲೇ ಮಾಡುವುದು ಉಚಿತ. ಅಥವಾ ಇಲ್ಲಿ ಮಾಡು. ಇಲ್ಲಿ ನೀನೇ ನಮ್ಮ ಅತಿಥಿಯಾಗುವುದರಿಂದ ನಾವು ನೋಡಿಕೊಳ್ಳುತ್ತೇವೆ. ನೀನು ನಿರಾಳವಾಗಿ ಉಪನಯನಕ್ಕೆ ಗಮನಕೊಡಬಹುದು. ಯಾವುದನ್ನೂ ಯೋಚಿಸಿ ಕಾಗದ ಬರಿ.

ಇಲ್ಲಿ ಎಲ್ಲರೂ ಆರೋಗ್ಯವಾಗಿದ್ದೇವೆ. ಚಿ॥ಗಳಿಗೂ ನಿನ್ನ ಸೌ॥ಗೂ ನನ್ನ ನಮಸ್ಕಾರಗಳು. ಶ್ರಾದ್ಧ ಮಂತ್ರಗಳನ್ನು ಅವಶ್ಯವಾಗಿ ಕಲಿಯಬೇಕು. ನಾನು ಶ್ರಾದ್ಧಪ್ರಯೋಗವನ್ನು ಅರ್ಥಸಹಿತ ಬರೆದಿದ್ದೇನೆ. ನಾನು ಆ ಕಡೆ ಬಂದಾಗಲೋ ಯಾವಾಗಲಾದರೂ ತಂದುಕೊಡುತ್ತೇನೆ.

ಇತಿ ನಿನ್ನವ

ಕುಮಾರಸ್ವಾಮಿ

೪೩೭

ಬೇಗ ಉಪನಯನ (ಮಾಡುವುದು ಯುಕ್ತ)

ಕುಶಲಮ್ ಶ್ರೀ : Madras

10.6.82

ಚಿ॥ ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ವೇದೋಕ್ತ ಆಶೀರ್ವಾದಗಳು.

ನಿನ್ನ ಕಾಗದ ತಲಪಿತು. ನಿನ್ನ ಹಿಂದಿನ ಕಾಗದ ತಲಪಲಿಲ್ಲ, ಕಾರಣ ಗೊತ್ತಾಗಲಿಲ್ಲ, ನಿನ್ನಿಂದ ಏನೂ ವಿಷಯವೇ ತಿಳಿಯಲಿಲ್ಲ ಎಂದು ಯೋಚಿಸುತ್ತಲೇ ಇದ್ದೆ. ಈ ವರ್ಷ ಉಪನಯನ ಮಾಡಲು ಸಾಧ್ಯವಾಗದೆ ಇರುವುದು ದುರದೃಷ್ಟವೇ ಸರಿ. ದಕ್ಷಿಣಾಯನ ಕಳೆದ ಮೇಲೆ ಆದಷ್ಟು ಬೇಗ ಮಾಡುವುದು ಯುಕ್ತ. ಈ ಸಾರಿ ಫಾಲ್ಗುಣದಲ್ಲಿಯೇ ಮಾಡಬೇಕಾಗುತ್ತದೆ (ಅಂದರೆ March ಕೊನೆಯಲ್ಲಿ) 16 ವರ್ಷ ತುಂಬುವುದಕ್ಕೆ ಮುಂಚೆ ಆಯಿತು ಎಂಬುದಾಗಿ ಸ್ವಲ್ಪ ಮಾನಸಿಕ ಸಮಾಧಾನ. ಆಗಲೂ ಯಥಾಪ್ರಕಾರ ನನಗೆ semester ಮಧ್ಯ 4-5 ದಿನಗಳು ಬರಲು ಕಷ್ಟವೇ ಆಗಬಹುದು. ಅದು ಬಿಟ್ಟರೆ ಪುನಃ ಮೇ ತಿಂಗಳಿಗೇ ಹೋಗಬೇಕು. ನೋಡೋಣ, ನಾನೂ ನಿಧಾನವಾಗಿ ಪಂಚಾಂಗ ನೋಡಿ ಬರೆಯುತ್ತೇನೆ. ಕಾಲಾವಕಾಶ ಬೇಕಾದಷ್ಟಿರುವುದರಿಂದ ಯೋಚಿಸಿ ನಿಶ್ಚಯಿಸೋಣ. ಅಷ್ಟರೊಳಗಾಗಿ ನಾವೇ ಎಲ್ಲಾದರೂ ಸಂಧಿಸುವ ಸಂದರ್ಭ ಒದಗಿದರೆ ಪ್ರತ್ಯಕ್ಷ ಮಾತನಾಡೋಣ. ನಿನ್ನ ಸೌ॥ ಗೂ, ಚಿ॥ಗಳಿಗೂ ಆಶೀರ್ವಾದಗಳನ್ನು ತಿಳಿಸು.

ಇತಿ ನಿನ್ನವ

ಕುಮಾರಸ್ವಾಮಿ

೪೩೮

ಪಿತೃದೀಕ್ಷೆ ; ಗಣಪತಿಯ ವಿಗ್ರಹ

ಕುಶಲಮ್ ಶ್ರೀ : Madras

14.8.85

ಚಿ॥ ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು. ನಿನ್ನ ಕಾಗದ ತಲಪಿ ಬಹಳ ಸಂತೋಷ ವಾಯಿತು. ನಿನ್ನ ಮಗಳ ವಿವಾಹದ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ವ್ಯಾಪೃತನಾಗಿದ್ದುದರಿಂದ ಒಂದು ಆಶೀರ್ವಾದ ಪತ್ರವನ್ನು ಬರೆಯಲಾಗಲಿಲ್ಲ. ಕ್ಷಮಿಸು. ದಂಪತಿಗಳಿಗೆ ನನ್ನ ಅನಂತ ಆಶೀರ್ವಾದಗಳನ್ನು ತಿಳಿಸು (even though belatedly).

1) ನಿನ್ನ ಮಗಳಿಗೆ ಮಂಗಳಗೌರೀ ವ್ರತವನ್ನು ನಿನ್ನ ಮನೆಯಲ್ಲಿ ಧಾರಾಳವಾಗಿ ಮಾಡಿಸಬಹುದು. ನಿನ್ನ ಮನೆಗೆ ಯಾವ ಅಶುಚಿಯೂ ಇಲ್ಲ, ನೀವೇ ಗೌರಿ ತರಬಹುದು. ಯಾವ ಅಡ್ಡಿಯೂ ಇಲ್ಲ, ಸ್ವರ್ಣಗೌರೀವ್ರತವನ್ನು ನಿನ್ನ ಮಗಳಿಗೆ ಪ್ರತಿ ವರ್ಷ ನಿನ್ನ ಸೌ॥ಯು ಮಾಡುತ್ತಿದ್ದ ಕಡೆಯೇ ಮಾಡಿಸಬಹುದು. ಆದರೆ ನಿನ್ನ ಸೌ॥ಯು ಈ ವರ್ಷ ವ್ರತ ಮಾಡುವುದು ಯುಕ್ತವಲ್ಲ, ನೀನು ವಿನಾಯಕವ್ರತ ಮಾಡುವುದೂ ಯುಕ್ತವಲ್ಲ. ಈ ವರ್ಷ ಪೂರಾ 'ಪಿತೃದೀಕ್ಷೆ' ಎಂದು ಹೆಸರು. ಅಂದರೆ ನಿನ್ನ ಸಕಲ ಇಂದ್ರಿಯಗಳೂ ಪಿತೃಕಾರ್ಯದಲ್ಲಿ ಕೇಂದ್ರೀಕೃತವಾಗಿ ಇರಬೇಕೆಂಬುದು ಉದ್ದೇಶ (ಒಂದು ವರ್ಷವಾದರೂ). ತನ್ಮಧ್ಯೆ ಸ್ವರ್ಣಗೌರೀ, ವಿನಾಯಕವ್ರತ ಮುಂತಾದ ಕಾಮ್ಯವ್ರತಗಳನ್ನು ಮಾಡುವುದು ಬೇಡ ಎಂಬುದೇ ತತ್ತ್ವ. ಕಾಮ್ಯವ್ರತಗಳು ಸಾಮಾನ್ಯವಾಗಿಯೇ avoid ಮಾಡಬೇಕು. ಅದರಲ್ಲಿಯೂ ಪಿತೃಕಾರ್ಯದಂತಹ ನಿಷ್ಕಾಮಕಾರ್ಯದಲ್ಲಿ ಪ್ರವೃತ್ತನಾಗಿರುವಾಗ ಇವುಗಳೆಲ್ಲ ಬೇಡ ಎಂಬುದೇ ಆಶಯ. ಆದ್ದರಿಂದ ನೀನು ಮಾಡಲು ಹೋಗಬೇಡ.

2) ಇನ್ನು ಮಣ್ಣಿನ ಗಣಪತಿಯೋ, ಬೆಳ್ಳಿ ಗಣಪತಿಯೋ ಎಂಬ ಪ್ರಶ್ನೆಗೆ ಸಮಾಧಾನ ನಿನ್ನ ಮನಸ್ಸೇ. ನಿನಗೆ ಹೇಗೆ ತೃಪ್ತಿಯೋ ಹಾಗೆ. ಅವೆಲ್ಲಾ ಪ್ರತೀಕಗಳು. ಅಂದರೆ Symbols. ಕೊನೆಗೆ Photo ಇಟ್ಟುಕೊಂಡು ಮಾಡಿದರೂ ಬರುತ್ತದೆ. ವಿಗ್ರಹಾದಿಗಳನ್ನು ಇಟ್ಟುಕೊಂಡು ಮಾಡಿದರೂ ಬರುತ್ತದೆ. ವಿಗ್ರಹಾದಿಗಳನ್ನು ಇಟ್ಟುಕೊಂಡರೆ ಅವನ ಸ್ವರೂಪವನ್ನೂ ಧ್ಯಾನಿಸಲು ಅನುಕೂಲ ವಾಗುತ್ತೆಂಬುದೇ ಉದ್ದೇಶ. ನಿನ್ನ ಸೌಕರ್ಯ, ನಿನ್ನ ಮಾನಸಿಕ Preparationಗೆ ತಕ್ಕಂತೆ ಮಾಡು. ಯಾವುದಕ್ಕೂ rigid ಆಗಿ attach ಮಾಡಿಕೊಳ್ಳುವುದು ಬೇಡ. ಭಯವೂ ಬೇಡ.

ಚಿ||ಗಳಿಗೆ ಆಶೀರ್ವಾದಗಳು.

ಇತಿ ನಿನ್ನವ
ಕುಮಾರಸ್ವಾಮಿ

೪೩೯

ವಿಚಾರಪರತೆ ; ಪಿತೃದೀಕ್ಷೆ

ಈ ವರ್ಷ ಅಳಿಯನನ್ನು ದೀಪಾವಳಿಗೆ ಕರೆಯಬೇಡಿ

ಕುಶಲಮ್ ಶ್ರೀ : Madras
10.10.85

ಚಿ|| ಶ್ರೀಕಂಠನಿಗೆ ಆಶೀರ್ವಾದಗಳು. ನಿನ್ನ ಕಾಗದ ತಲಪಿ ಬಹಳ ಸಂತೋಷವಾಯಿತು. ವಿಚಾರಪರತೆಯು ಮನುಷ್ಯನಿಗೆ ಅತ್ಯಗತ್ಯ. ಅದನ್ನು ಕಳೆದುಕೊಂಡೇ ನಮ್ಮ ಭಾರತದೇಶದ ಸಮಾಜ ಈಗಿನ ಹೀನಸ್ಥಿತಿಗೆ ಬಂದಿದೆ. ಇರಲಿ.

ದೀಪಾವಳಿಗೆ ಅಳಿಯನನ್ನು ಆಹ್ವಾನಿಸುವುದು ಕೇವಲ ಲೌಕಿಕ. ನಮ್ಮ ಖುಷಿಗೆ ಮಾಡುವ ಕೆಲಸ. ಈ ವರ್ಷ ಆ ಖುಷಿ items ವರ್ಜ್ಯ ಮಾಡುವುದು ಯುಕ್ತವೆಂದೆನಿಸುತ್ತದೆ. ಗೌರೀವ್ರತ, ಮಂಗಳಗೌರೀ ಇವೆಲ್ಲವೂ ವಿಧ್ಯುಕ್ತವಾದ ವ್ರತಗಳು. ಅದೂ ಅಲ್ಲದೆ ಮಾಡುವವಳು ನಿನ್ನ ಮಗಳು. ಆದ್ದರಿಂದ ಅದು ಸರಿಹೋಯಿತು. ಇಲ್ಲಿ ಅವರನ್ನು ಕರೆದು ಅವರು ಖುಷಿಪಡುವುದಲ್ಲದೆ, ನೀವೂ ಅದರಲ್ಲಿ ಭಾಗವಹಿಸಬೇಕಲ್ಲವೇ ? ಆದ್ದರಿಂದ ಕರೆಯುವುದು ಯುಕ್ತವಲ್ಲ. ಯತ್ಕಿಂಚಿತ್ತಾದರೂ ಅದರಲ್ಲಿ ವೈದಿಕ ಕಾರ್ಯ ಎನ್ನುವುದಿಲ್ಲ. ಆದ್ದರಿಂದ ಬೇಡ.

ನಾನು ಸಂಧ್ಯಾವಂದನೆ, ಪೂಜೆಗಳ ಮೇಲೆ ಸ್ವಲ್ಪ ದೊಡ್ಡದಾಗಿಯೇ ಲೇಖನಗಳನ್ನು ಬರೆದಿದ್ದೆ. ಮೈಸೂರಿನಲ್ಲಿ ನಿನ್ನ ಭಾವ ಅಚ್ಚುಹಾಕಿಸುತ್ತೇನೆಂದು ತೆಗೆದುಕೊಂಡು ಹೋಗಿ ಅವರ ಕೈಲಾಗದೆ ವಾಪಸು ಬಂತು. ಮನೆಯಲ್ಲಿಯೇ ಬಿದ್ದಿವೆ. ನಾನೂ ಅದರ ಕಡೆಗೆ ಗಮನ ಕೊಟ್ಟಿಲ್ಲ. ನಮ್ಮ ಸಮಾಜದಲ್ಲಿ ಈ ದಿವಸ ಆ ರೀತಿ ಲೇಖನಗಳಿಂದ ಜಾಗೃತಗೊಳಿಸಲು ಸಾಧ್ಯವಿಲ್ಲ. ನಾವು ಅದಕ್ಕೆಲ್ಲಾ ಬಹಳ passivity ಯನ್ನು develop ಮಾಡಿ ಕೊಂಡಿದ್ದೇವೆ. ಮೊದಲು ನಮಗೆಲ್ಲರಿಗೂ ವಿಚಾರಶಕ್ತಿ ಬೆಳೆಯಬೇಕು. ಯಾವುದನ್ನೂ ತಿಳಿದುಕೊಳ್ಳದೆ ಮಾಡುವುದಿಲ್ಲ ಎಂಬ ನಿಶ್ಚಯ ಬರಬೇಕು. ಹಾಗೆಂದು ಎಲ್ಲವನ್ನೂ ಬಿಡುವುದರಲ್ಲಿ ತಾತ್ಪರ್ಯವಿಲ್ಲ. ಮಾಡುವುದನ್ನು, ಮಾಡುತ್ತಿರುವುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂದರ್ಥ. ಆ ಭಾವನೆಯು ಜಾಗೃತವಾಗಬೇಕಾದರೆ Individual Contactsನಿಂದಲೇ ಸಾಧ್ಯ. ಒಬ್ಬರು ತಿಳಿದು ಕೊಂಡು ನಾಲ್ಕು ಜನಕ್ಕಾದರೂ ಅದನ್ನು ತಿಳಿಸಬೇಕು. ಧರ್ಮಪ್ರಚಾರವಾಗುವುದು ಹಾಗೆಯೇ. ಹಿಂದೆ ಆಗಿರುವುದೂ ಹಾಗೆಯೇ. ಅರ್ಥವಿಲ್ಲದ ಮೂಢನಂಬಿಕೆಗಳು ಪ್ರಚಾರ ವಾಗಿರುವುದೂ ಹಾಗೆಯೇ!!

ಇತಿ ನಿನ್ನವ
ಕುಮಾರಸ್ವಾಮಿ

೪೪೦

ಪುನಸ್ಸಂಧಾನ ಔಪಾಸನ (ಪುಸ್ತಕ)

find out the why of things; ಸಾಮೂಹಿಕ ಉಪನಯನ

ಕುಶಲಮ್ ಶ್ರೀ : Madras
25.10.85

ಚಿ|| ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು.

ನಿನ್ನ ಕಾಗದ ಮತ್ತು ನಿನ್ನ ಪುನಸ್ಸಂಧಾನ ಔಪಾಸನಗಳ ಬಗ್ಗೆ ಬರೆದಿರುವ cyclostyle ಪ್ರತಿ ತಲಪಿತು. ನಿನ್ನ ಶ್ರದ್ಧೆ, ಔತ್ಸುಕ್ಯಗಳನ್ನು ನೋಡಿ ಬಹಳ ಸಂತೋಷವಾಯಿತು. ಆದರೆ ನಿನ್ನ ಪ್ರತಿಯನ್ನು ನೋಡಿ conceptual ಆಗಿ ನಿನ್ನ ಅಭಿಪ್ರಾಯ ಗಳು ವಾಸ್ತವಸ್ಥಿತಿಗೆ ಬಹಳ ದೂರ ಇರುವಂತೆ ಕಂಡವು. ನೀನು 'ಅರ್ಥವನ್ನು ಬರೆದಿದ್ದೇನೆ' ಎಂದು ಬರೆದಿದ್ದಾಗ ಮಂತ್ರಾರ್ಥಗಳನ್ನೂ ಕ್ರಿಯೆಗಳ ತಾತ್ಪರ್ಯವನ್ನೂ ಬರೆದಿದ್ದೀಯೇನೋ ಅಂದುಕೊಂಡಿದ್ದೆ. ಹಾಗೇನೂ ಕಾಣಲಿಲ್ಲ. ನೀನು ಬರೆದಿರುವುದೆಲ್ಲಾ ಕೈಕರಣದ ವಾಕ್ಯಗಳಿಗೆ ಅರ್ಥ (ನಾನು ಸ್ವಲ್ಪ frank ಆಗಿ ಹೇಳುತ್ತಿದ್ದೇನೆ. ತಪ್ಪು ತಿಳಿದುಕೊಳ್ಳಬೇಡ. ನಿಮ್ಮಂಥ ಯುವಕರು analyse ಮಾಡಿ ತಿಳಿದುಕೊಳ್ಳಬೇಕೆಂಬ ಉದ್ದೇಶದಿಂದಲೇ ಕೆಣಕುತ್ತಿದ್ದೇನೆ). ಅವುಗಳನ್ನು ಇವತ್ತು ಎಲ್ಲ ಪುರೋಹಿತರೂ ಸಾಮಾನ್ಯವಾಗಿ

ಮಾಡಿಸಿಕೊಂಡು ಬರುತ್ತಿದ್ದಾರೆ. ಆ ವಾಕ್ಯಗಳು ಮಂತ್ರಗಳಲ್ಲ. ಅವುಗಳನ್ನು ಕನ್ನಡದಲ್ಲಿಯೇ ಹೇಳಿಕೊಂಡು ಮಾಡಿದರೂ ಬರುತ್ತದೆ. ಹೇಳದೇನೆಯೇ ಕ್ರಮವಾಗಿ ಮಾಡಿಕೊಂಡು ಹೋದರೂ ಸಾಕು. ಆ ವಾಕ್ಯಗಳಿರುವುದು ಕೇವಲ ಜ್ಞಾಪಕಾರ್ಥವಾಗಿ. ಆಪಸ್ತಂಬ ಸೂತ್ರದಲ್ಲಿಯೇ ಅಗ್ನಿಮುಖ ಪ್ರಕರಣದಲ್ಲಿ ಸ್ಪಷ್ಟವಾಗಿದೆ. ನಮಗೆ ಈಗಿನ ಕಾಲಕ್ಕೆ ಜನಕ್ಕೆ ಬೇಕಾಗಿರುವುದು ಏನೆಂದರೆ, ಅಷ್ಟೊಂದು ಕ್ರಿಯಾಕಲಾಪಗಳ ತಾತ್ಪರ್ಯವೇನು ? ಅವನ್ನು ಏಕೆ ಮಾಡಬೇಕು? ಹಾಗೆಯೇ ಏಕೆ ಮಾಡಬೇಕು ? ಇವುಗಳ ತಿಳುವಳಿಕೆ ಬೇಕು. ನಮ್ಮ ಹಿರಿಯರ ಎಲ್ಲರ ಮನೆಯಲ್ಲಿಯೂ ಇವುಗಳನ್ನು ಬರೆದಿರುವ ಒಂದು ಪ್ರತಿ ಇದ್ದೇ ಇದೆ. ಅದೂ ಅಲ್ಲದೆ ಅದನ್ನು ಪಕ್ಕದಲ್ಲಿಟ್ಟುಕೊಂಡು ಯಾರೂ ಪ್ರಯೋಗವನ್ನು ಮಾಡುವುದು ಸಾಧ್ಯವಿಲ್ಲ. ಪುರೋಹಿತನೊಬ್ಬನು ಇದ್ದೇ ತೀರಬೇಕು. ಇಲ್ಲ, ತಾನೇ ಗಟ್ಟು ಮಾಡಿಕೊಂಡು ಮಾಡಬೇಕು. ನೀನು ಬರೆದಿರುವುದು ನೋಡಿದರೆ, ಆ Mechanics ನ್ನು ಸರಿಯಾಗಿ ಮಾಡಿಬಿಟ್ಟರೆ ಕೃತಾರ್ಥರಾದೆವು ಎನ್ನುವ ಅಭಿಪ್ರಾಯವನ್ನು ತೋರಿಸುತ್ತಿದೆ. ನಮ್ಮ ವೇದೋಕ್ತ ಕರ್ಮಗಳ ಅಭಿಪ್ರಾಯ ಖಂಡಿತ ಅದಲ್ಲ. Mechanics ನಿಂದ ದೊರಕುವ ಫಲ Mechanical ಆಗಬಹುದೇ ಹೊರತು intellectual ಅಲ್ಲ. ಎಲ್ಲಾ ಕರ್ಮಗಳ ಗುರಿಯೂ ಕೇವಲ ಚಿತ್ತಶುದ್ಧಿಯೊಂದೇ (Intellectual Purity). ಆದ್ದರಿಂದ Intellect ಗೆ ವ್ಯಾಯಾಮವನ್ನು ಕೊಡಬೇಕು. ಅದಕ್ಕೆ ಮಂತ್ರಾರ್ಥ, ಕರ್ಮದ ಸ್ವರೂಪ, ಕ್ರಿಯೆಗಳ ತಾತ್ಪರ್ಯ ಇಷ್ಟೂ ತಿಳಿದುಕೊಂಡಿರಬೇಕು. ಹಾಗಿದ್ದರೇ ಚಿತ್ತಶುದ್ಧಿ ಸಾಧ್ಯ. ಅಗ್ನಿಯನ್ನು ಅಲಂಕರಣ ಮಾಡುವುದು ತಾತ್ಪರ್ಯವೇ ಹೊರತು, 8 ದಿಕ್ಕುಗಳಲ್ಲಿ ಮಂತ್ರಾಕ್ಷತೆಯನ್ನು ಹಾಕುವುದಲ್ಲ, 16 ಕಡೆ ಇಟ್ಟು ಅಲಂಕಾರ ಮಾಡಬೇಕೆಂದರೆ ಧಾರಾಳವಾಗಿ ಮಾಡಬಹುದು. ಪ್ರಾಣಾಯಾಮ ಮಾಡಿ ದೇಹಶುದ್ಧಿ ಮಾಡಿಕೊಳ್ಳುವುದು ತಾತ್ಪರ್ಯವೇ ಹೊರತು, ಮೂಗನ್ನು ಹಿಡಿದುಕೊಂಡು ಓಂ ಭೂಃ ಜಪಿಸುವುದಲ್ಲ. ಹೀಗೆ ಎಲ್ಲಕ್ಕೂ ಹೇಳುತ್ತಾ ಹೋಗಬಹುದು. ಮುಖ್ಯವಾಗಿ ವಿಷಯ ಜ್ಞಾನವಾಗಬೇಕೆನ್ನುವುದೇ ತಾತ್ಪರ್ಯ. ಅದನ್ನು ಬರೆದರೆ ಸಾರ್ಥಕವಾಗುತ್ತೇನೋ ಎನಿಸುತ್ತದೆ.

ಮತ್ತೊಂದನ್ನು ನಿನಗೆ ಮನಸ್ಸಿಗೆ ಬೇಜಾರಾಗುವುದಾದರೂ ನಾನು ಹೇಳಲೇಬೇಕಾಗಿದೆ. ನಿನ್ನ ಪ್ರತಿಯಲ್ಲಿ correct ಮಾಡಲು ಸಾಧ್ಯವಾಗದಷ್ಟು ತಪ್ಪಿದೆ. ಮಂತ್ರಗಳು ತಪ್ಪಿವೆ. ಅಕ್ಷರಗಳು ತಪ್ಪಿವೆ. ವಾಕ್ಯಸ್ಖಾಲಿತ್ಯಗಳಿವೆ. ಪದಪ್ರಯೋಗ ತಪ್ಪಾಗಿದೆ. Proof correction ಸರಿಯಾಗಿ ಮಾಡಿದ್ದೀರೋ ಇಲ್ಲವೋ ಕಾಣೆ. ಇವಕ್ಕೆಲ್ಲಾ ಮೂಲಭೂತವಾದ ಪುಸ್ತಕಗಳಿವೆ. ಅವುಗಳನ್ನು ನೋಡಿ ಬರೆದರೆ ಶುದ್ಧವಾಗಿರುತ್ತದೆ. Record ಮಾಡುವಾಗ ಸರಿಯಾಗಿ ಮಾಡಬೇಕೆಂಬುದು ನನ್ನ ಉದ್ದೇಶ. ಹಾಗೆ ನೋಡಿದರೆ ಕೃಷ್ಣಸ್ವಾಮಿ (ನಿಮ್ಮ ಚಿಕ್ಕಪ್ಪ) ಹತ್ತಿರ ನನ್ನ ಮಾವನವರ ತಂದೆ ಬರೆದ ಶ್ರಾದ್ಧ ಪ್ರಯೋಗ ಪ್ರತಿ ಇರಬಹುದು. ಅದು ಬಹಳ ಶುದ್ಧವಾಗಿದೆ. ಅವರು ಸ್ವತಃ ಸಂಸ್ಕೃತ, ವೇದಗಳಲ್ಲಿ ವಿದ್ವಾನ್ ಆಗಿದ್ದುದರಿಂದ ತಪ್ಪಿಲ್ಲದೆ ಬರೆದಿದ್ದಾರೆ. ನಾನು ಬರೆದ ಉದ್ದೇಶವೂ ಪ್ರಯೋಗ ದೃಷ್ಟಿಯಿಂದಲ್ಲ, ತಾತ್ಪರ್ಯದೃಷ್ಟಿಯಿಂದ. ಮಾಡುವ ಒಂದೊಂದು ಕೆಲಸಕ್ಕೂ ಏನು ಅರ್ಥ ಎಂಬುದನ್ನು ತಿಳಿಸಲೋಸುಗ ಪ್ರಯೋಗವೇ ಹೊರತು ಅದನ್ನು ನೋಡಿಕೊಂಡು ಶ್ರಾದ್ಧ ಮಾಡಲು ಸಾಧ್ಯವೆಂದಲ್ಲ. ನನ್ನದೂ ಬಹಳ ಹಿಂದೆ ಬರೆದಿದ್ದುದರಿಂದ ಅಪೂರ್ಣವಾಗಿದೆ. ಈಚೆಗೆ ಇನ್ನೂ ಸ್ವಲ್ಪ ವಿಷಯಗಳು ತಿಳಿದಿರುವುದರಿಂದ ಪೂರ್ಣ ಮಾಡಬೇಕೆನ್ನಿಸಿದೆ. ಆದ್ದರಿಂದ ನಿನ್ನ ಉದ್ದೇಶ: Let it be to find out the why of things. ಇಲ್ಲದಿದ್ದರೆ ನಮ್ಮ ಸಾಂಪ್ರದಾಯಿಕ ಜಾಡ್ಯದ ಬಲೆಯಲ್ಲಿ ನಾವೂ ಸಿಕ್ಕಿಹಾಕಿಕೊಂಡು ಉಸಿರುಕಟ್ಟಿಸಿಕೊಳ್ಳಬೇಕಾಗುತ್ತದೆ. ಉಪನಯನದ ವಿಷಯ ನಾನೇನೂ ಹೆಚ್ಚು ಹೇಳಲಾರೆ. ಈಗಾಗಲೇ ಅತ್ಯಂತ ಕಾಲಾತೀತವಾಗಿದೆ. ದಿನಮುಹೂರ್ತಗಳ ಹೆಚ್ಚು ಗೋಜಿಗೆ ಹೋಗದೆ ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಆ ಸಂಸ್ಕಾರವನ್ನು ನಡೆಸಬೇಕು. ಅದಕ್ಕೆ ಸಾಮೂಹಿಕವನ್ನು ಕಾಯುವುದು ಬಹಳ ಅನುಚಿತವಾಗುತ್ತದೆ. ಅದೂ ಅಲ್ಲದೆ ಕರ್ಮದಲ್ಲಿ ಅಷ್ಟು ಶ್ರದ್ಧೆ ಇರುವ ನೀನು ಸಾಮೂಹಿಕದಲ್ಲಿ ಮಾಡಬಾರದೆಂದೆನಿಸುತ್ತದೆ. ಉಪನಯನವೆಂದರೆ ಜನಿವಾರ ಹಾಕಿಕೊಳ್ಳುವುದಲ್ಲ (ಸಾಮೂಹಿಕದಲ್ಲಿ ಅಷ್ಟೇ ಅಭಿಪ್ರಾಯ ಇರುವ ಹಾಗೆ ಕಾಣಿಸುತ್ತದೆ). ಅದು ವಿದ್ಯಾರ್ಜನೆಗೋಸ್ಕರ ಮಾಡುವ ವೇದೋಕ್ತವಾದ ಸಂಸ್ಕಾರ. ವೇದವಿದ್ಯೆಯೇ ಆಗಬೇಕೆಂದಲ್ಲ, ಯಾವ ವಿದ್ಯೆಗಾದರೂ ಆ ಸಂಸ್ಕಾರದಿಂದ ಪ್ರಯೋಜನವಾಗಿಯೇ ಆಗುತ್ತದೆ. ವಿಧ್ಯುಕ್ತವಾಗಿ ದೇವತಾ ಪ್ರಾರ್ಥನೆಗಳನ್ನು ಮಾಡಿ, ಅವರಿಗೆ ಹೋಮಗಳನ್ನು ಮಾಡಿ ಪವಿತ್ರವಾದ ಸಾವಿತ್ರೀಮಂತ್ರವನ್ನು ಉಪದೇಶ ಪಡೆದು ಮೂರು ದಿನ ಅಗ್ನಿದೇವನನ್ನು ಕಾಪಾಡಿಕೊಂಡು ಪರಿಚರ್ಯೆ ಮಾಡಿ ಪರಿಪೂತನಾದ ಯಾವ ವಟುವಿಗೆ ತಾನೇ ವಿದ್ಯಾರ್ಜನೆಯ ಸಾಮರ್ಥ್ಯವು ಬರಲಾರದು? ನಿನ್ನ ಮಗನಿಗೆ ಇನ್ನೂ ವಿದ್ಯಾರ್ಜನೆ ಕಾಲ ಮೀರಿಲ್ಲ ಎಂಬುದೊಂದೇ ಸಮಾಧಾನ. ಆದಷ್ಟು ಜಾಗ್ರತೆ ಮಾಡು. ವಿಧ್ಯುಕ್ತವಾಗಿ ಮಾಡು. ಅದಕ್ಕೆ ಈ ಕಾಲದಲ್ಲಿಯೂ 200 ರೂ.ಗಳಿಗಿಂತ ಹೆಚ್ಚು ಖರ್ಚಾಗುವುದಿಲ್ಲ. ಇನ್ನು ನೀನು ಅದನ್ನು Social function ಮಾಡಿದರೆ 2000 ರೂ. ಆದರೂ

ಸಾಕಾಗಲಾರದು. ನಾನಿನ್ನೇನೂ ವಿಶೇಷವಾಗಿ ಹೇಳಲಾರೆ. ಚಿ॥ಗಳಿಗೆ ನನ್ನ ಆಶೀರ್ವಾದಗಳು.

ಇತಿ ನಿನ್ನವ
ಕುಮಾರಸ್ವಾಮಿ

೪೪೧

ಪ್ರಯೋಗಪುಸ್ತಕ ; ವರ್ಷಾಬ್ದಿಕ

ಕುಶಲಮ್ ಶ್ರೀ : Madras
24.12.85

ಚಿ॥ ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು. ನಿನ್ನ 19ನೇ ತಾರೀಖಿನ ಕಾಗದ ನಿನ್ನೆ ನನ್ನ ಕೈಗೆ ಸಿಕ್ಕಿತು. ನಿನ್ನೆ ತಾನೇ ನಾನು ನನ್ನ ಭಾವಂದಿರ ಎಲ್ಲಾ ಕೆಲಸಗಳನ್ನೂ ಮುಗಿಸಿಕೊಂಡು ವಾಪಸು ಬಂದೆ.

ನೀನು ಬರೆದಿರುವಂತೆ ಪುರಸತ್ತಾದಾಗ ನಿನ್ನ Copyಯನ್ನು ತಿದ್ದಿ ಕಳಿಸುತ್ತೇನೆ. ಪುನಃ ಹೇಳಬಯಸುತ್ತೇನೆ. ನಮ್ಮ ಸಂಕೇತಿ ಪ್ರಯೋಗದಲ್ಲಿ ಯಾವ ವಿಶೇಷವೂ ಇಲ್ಲ. ಎಲ್ಲವೂ ಆಪಸ್ತಂಬ ಪ್ರಯೋಗವೇ ! ಕಟ್ಟೆಮಳಲವಾಡಿ ವೆಂಕಟ್ರಾಮಾವಧಾನಿಗಳು ಶ್ರಾದ್ಧ ಪ್ರಯೋಗವನ್ನು 'ಯಾಜುಷಪೂರ್ವಪ್ರಯೋಗರತ್ನಾಕರ' ಎಂಬ ಎರಡನೇ ಸಂಪುಟವಾಗಿ ಮಾಡಿದ್ದಾರೆ. ಅದರಷ್ಟು ಶುದ್ಧವಾದ, ವಿಚಾರಪೂರಿತವಾದ ಪ್ರಯೋಗವನ್ನು ನಾನೆಲ್ಲಿಯೂ ನೋಡಿಲ್ಲ. ನನ್ನ ಮಾವನವರ ತಂದೆ ಲಕ್ಷ್ಮೀಕಾಂತಯ್ಯನವರು ಬರೆದಿರುವ ಪ್ರಯೋಗ ತಪ್ಪಿಲ್ಲದೆ ಚೆನ್ನಾಗಿದೆ. ಅದು ಇದ್ದರೆ ನಿನ್ನ ಚಿಕ್ಕಪ್ಪನವರ ಹತ್ತಿರ ಇರಬೇಕು. ಇಲ್ಲದಿದ್ದರೆ ತಮ್ಮಯ್ಯಾವಧಾನಿಗಳ (ತಾಳೆ ಮುಂಡಿ ಅವಧಾನಿಗಳ ಮಗ) ಹತ್ತಿರ ಇದೆ. ನಾನು ಬರೆದಿರುವುದೂ ಶುದ್ಧವಾಗಿದೆ ಅಂದುಕೊಂಡಿದ್ದೇನೆ (ಅದನ್ನು ಇಬ್ಬರು ಮೀಮಾಂಸಾವಿದ್ವಾನ್‌ಗಳ ಹತ್ತಿರ ಕೊಟ್ಟು ತಿದ್ದಿಸಿ ಇಟ್ಟಿದ್ದೇನೆ). ಅದೂ ನಮ್ಮ ಪ್ರಯೋಗವೇ. ಎಲ್ಲಿ ಶಾಸ್ತ್ರವಿರುದ್ಧ ವಾಗಿದೆಯೋ ಅಲ್ಲಿ ವ್ಯತ್ಯಾಸ ಮಾಡಿದ್ದೇನೆ. ಕೈಕರಣದ ವಾಕ್ಯಗಳಿಗೆ ಅರ್ಥ ಬರೆಯುವುದಕ್ಕಿಂತ ಅದನ್ನು ಅಭ್ಯಾಸವೇ ಮಾಡಬೇಕು (Dry Run).

17ನೇ ತಾರೀಖು ವರ್ಷಾಬ್ದಿಕವೆಂದು ಸುರೇಶನಿಂದ ತಿಳಿಯಿತು. ಮತ್ತು ನಾನೇ ಬಂದು ಮಾಡಿಸಬೇಕೆಂದು ಒತ್ತಾಯ ಮಾಡಿದ್ದರಿಂದ ನಾನೇ ಬರುತ್ತಿದ್ದೇನೆ. 17, 18, 19 ಬೆಂಗಳೂರಿನಲ್ಲಿರುತ್ತೇನೆ. ಊನಮಾಸಿಕವನ್ನು 16ನೇ ತಾರೀಖು ಮಾಡಬಹುದು. ಆದರೆ ಎರಡು ದಿನ Continuous ಆಗಿ ಶ್ರಾದ್ಧ ಕರ್ಮವೆಂದರೆ ಎಲ್ಲರಿಗೂ ದೈಹಿಕವಾಗಿ ಬಹಳ ಶ್ರಮವಾಗುತ್ತದೆ. ನಾನು ಗುರುವಾರಕ್ಕೇ ಅಲ್ಲಿಗೆ ಬರಲು ಸಾಧ್ಯವಿಲ್ಲ. ಆದ್ದರಿಂದ ನೀನು ಭದ್ರಾವತಿಯಲ್ಲಿಯೇ 12ನೇ ತಾರೀಖು ಭಾನುವಾರವೋ, 13ನೇ ತಾರೀಖು ಸೋಮವಾರವೋ ಮುಗಿಸಿಕೊಂಡು ಬರಬಹುದೆಂದು ಹೇಳಿದ್ದೇನೆ. ಹಾಗೇ ಮಾಡಿದರೆ ಅನುಕೂಲ ವಾಗುತ್ತದೆ. ನಕ್ಷತ್ರಗಳು, ವಾರ ಇವುಗಳನ್ನು ಹೆಚ್ಚೇನೂ ನೋಡಬೇಕಾದ್ದಿಲ್ಲ. ಸೌಕರ್ಯವಾಗಿ ಮಾಡಬಹುದು. ವರ್ಷ ತುಂಬುವುದಕ್ಕೆ ಮುಂಚೆ 10 ದಿನಗಳ ಅವಕಾಶವಿದೆ. ಭಾನುವಾರ, ಸೋಮವಾರಗಳಲ್ಲಿ ಯಾವ ನಿಷೇಧವೂ ಇದ್ದ ಹಾಗೆ ಕಾಣಿಸಲಿಲ್ಲ. ಪ್ರಥಮಸಾಂವತ್ಸರಿಕಶ್ರಾದ್ಧದ ದಿನ ನಿನ್ನ ಸೌ॥ಯು ಜತೆಯಲ್ಲಿರುವುದು ಅವಶ್ಯ. ಅನಿವಾರ್ಯವಾದರೆ ವಿಧಿಯಿಲ್ಲ. ನೀನೊಬ್ಬನೇ ಬರಬಹುದು. ಏನೂ ಅಡ್ಡಿಯಿಲ್ಲ.

17ನೇ ತಾರೀಖು ಬೆಂಗಳೂರಿನಲ್ಲಿ ನೋಡೋಣ. ಇಲ್ಲಿ ಆರೋಗ್ಯವಾಗಿದ್ದೇವೆ.

ಇತಿ ನಿನ್ನವ
ಕುಮಾರಸ್ವಾಮಿ

೪೪೨

ಸಾವಿತ್ರೀ ಉಪದೇಶ

ಕುಶಲಮ್ ಶ್ರೀ : Madras
23.1.86

ಚಿ॥ ಶ್ರೀಕಂಠನಿಗೆ ಆಶೀರ್ವಾದಗಳು.

ನಾವು ಹೋದ ಸೋಮವಾರವೇ ಬೆಳಗ್ಗೆ ಬಂದು ತಲಪಿದೆವು.

ಬಂದಮೇಲೆ ನಮ್ಮ ಪರೀಕ್ಷೆಯ ಕಾರ್ಯಕ್ರಮ ತಿಳಿದು ಸ್ವಲ್ಪ ಚಿಂತೆಯಾಯಿತು. ನಮ್ಮ ಪರೀಕ್ಷಾರಂಭವೇ May 5. ಮುಗಿಯಲು 13 ಆಗುತ್ತದೆ. Resultಗಳನ್ನೆಲ್ಲಾ ಮುಗಿಸಿ ಬರಲು ಕನಿಷ್ಠ ಪಕ್ಷ 15-16 ಆದರೂ ಆಗಿಯೇ ಆಗುತ್ತದೆ. ನಮಗೆ 19 ರಿಂದ official vacation.ಆದ್ದರಿಂದ ಸೋಮುವಿಗೆ 19 ಅಥವಾ 21ನೇ ತಾರೀಖು ಇಟ್ಟುಕೋ ಎಂದು ಬರೆದಿದ್ದೇನೆ. ನೀನು ಇನ್ನೂ ಸ್ವಲ್ಪ ಮುಂದಕ್ಕೆ ಇಟ್ಟುಕೊಳ್ಳಬೇಕಾಗುತ್ತದೆ. ನಿಮ್ಮ ಮಾ॥ಯವರ ಶ್ರಾದ್ಧ ಆ ಸಮಯದಲ್ಲಿ ಬರುತ್ತದೆಂದು ಹೇಳಿದ ಜ್ಞಾಪಕ. ಯಾವಾಗ ಎನ್ನುವುದನ್ನು ಸರಿಯಾಗಿ ಬರಿ. ಅದಕ್ಕೆ ತಕ್ಕಂತೆ ತಾರೀಖನ್ನು ಹೊಂದಿಸಿ ಕಾಗದ ಬರೆಯುತ್ತೇನೆ.

"ಕುಮಾರಸ್ಯ ಸಾವಿತ್ರ್ಯಾಃ ಉಪದೇಶಯೋಗ್ಯತಾಸಿದ್ಧ್ಯರ್ಥಂ ಯಥಾಶಕ್ತಿ ಗಾಯತ್ರೀಜಪಮಹಂ ಕರಿಷ್ಯೇ'' ಎಂದು ಸಂಕಲ್ಪ

ಹೇಳಿಕೊಂಡು ನಿತ್ಯ ಸಂಧ್ಯಾವಂದನೆಯಾದ ಮೇಲೆ ಪ್ರತ್ಯೇಕವಾಗಿ 108 ಗಾಯತ್ರಿಯನ್ನು ಮಾಡು. ಉಪನಯನಕಾಲಕ್ಕೆ 12000 ಆಗುತ್ತದೆ. ಸರಿಯಾಗುತ್ತದೆ.

ನಿನ್ನ ಸೌ।।ಗೂ ಚಿ।।ಗಳಿಗೂ ನನ್ನ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೪೩

ಶ್ರಾದ್ಧ : ಅಮಂಗಳವಲ್ಲ

ಕುಶಲಮ್ ಶ್ರೀ : Madras

7.3.86

ಚಿ।। ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು.

ನಿನ್ನ ಕಾಗದ ತಲಪಿತು. ಬಹಳ ಸಂತೋಷವಾಯಿತು. ನೀನು ಬರೆದಿರುವಂತೆ ಜೂನ್ 13ನೇ ತಾರೀಖು ಇಟ್ಟುಕೊಳ್ಳುವುದಾದರೆ ನನಗೆ ಬರುವುದು ದುಃಸಾಧ್ಯವಾಗುತ್ತದೆ. ನಾನು ಜೂನ್ 5ನೇ ತಾರೀಖಿನ ಹೊತ್ತಿಗೆ ಮದ್ರಾಸಿನಲ್ಲಿ ವಾಪಸ್ಸು ಇರಬೇಕಾಗುತ್ತದೆ (ಇಲ್ಲಿ Final year ಹುಡುಗರಿಗೆ Viva examination ಇದೆ). ಸೋಮುವಿಗೆ May 21 ಅಥವಾ 22ಕ್ಕೆ ಉಪನಯನ ಇಟ್ಟುಕೊಳ್ಳುವಂತೆ ಬರೆದಿದ್ದೇನೆ. ನೀನು May 25 (ವೈಶಾಖ ಕೃಷ್ಣ ಬಿದಿಗೆ) ಕ್ಕೆ ಇಟ್ಟುಕೊಂಡರೆ ನನಗೆ ಮಾಡಿಸಲು ಅನುಕೂಲವಾಗುತ್ತದೆ. May 30, 31 ಕ್ಕೆ ನಾನು ಬೆಂಗಳೂರಿಗೆ ಬರಬೇಕು (ಭಾವಯ್ಯನವರ ಮಾಸಿಕ ಶ್ರಾದ್ಧ). ಆದ್ದರಿಂದ ಸ್ವಲ್ಪ ಇಕ್ಕಟ್ಟಿನ ಸಂದರ್ಭವೇ ಆಗಿದೆ. ಜನಗಳು (ಸಾಂಪ್ರದಾಯಿಕರು) ಹೇಳುವುದುಂಟು, ಶ್ರಾದ್ಧಪಕ್ಷದಲ್ಲಿ ಉಪನಯನ ಮಾಡಬಾರದೆಂದು. ಅದಕ್ಕೆ ಪ್ರಾಯಃ ನೀನೂ ಜ್ಯೇಷ್ಠಮಾಸದಲ್ಲಿ ಇಟ್ಟುಕೊಂಡಿರುವಂತಿದೆ. ಜತೆಗೆ ಉಪನಯನವಾದ ತಕ್ಷಣ ನಾಂದೀ ಮಾಡಿ ಶ್ರಾದ್ಧ ಮಾಡಕೂಡದೆಂದು ಹೇಳುವುದೂ ಉಂಟು. ಈ ನಿಷೇಧಗಳಿಗೆ ಯಾವುದಕ್ಕೂ ಅರ್ಥವಿಲ್ಲ. ಯಾವ ಸೂತ್ರಕಾರರೂ ಹೇಳಿಯೂ ಇಲ್ಲ. ಶ್ರಾದ್ಧವೆಂಬುದು ಒಂದು ಅಮಂಗಳ ಕಾರ್ಯ ಎಂಬ ತಪ್ಪು ನಂಬಿಕೆ ಬಂದಮೇಲೆ ಹೊರಟಿರುವ ಸಂಪ್ರದಾಯಗಳು ಇವು. ಅವಕ್ಕೆ ಈಷದಪಿ ಪ್ರಮಾಣವಿಲ್ಲ. ಆದ್ದರಿಂದ ನೀನು ಧೈರ್ಯವಾಗಿ 25ಕ್ಕೆ ಉಪನಯನ ಮಾಡಿ 28 ಅಥವಾ 29ಕ್ಕೆ ನಿನ್ನ ತಾಯಿಯವರ ಶ್ರಾದ್ಧವನ್ನು ಮಾಡಬಹುದು. ನಾನೇ ಬಂದು ಮಾಡಿಸಬೇಕೆಂಬ ಅಹಂಕಾರದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆಂದು ಭಾವಿಸಬೇಡ. ಯಾರಿಗಾದರೂ ನಾನು ಹೇಳುವುದು ಇದೇ. ನಾನಂತೂ ಮಾಡಲು ತಯಾರಿದ್ದೇನೆ. ಆದರೆ ನಿನ್ನ ಮನಸ್ಸಿಗೆ ನಾನು ಹೇಳುತ್ತಿರುವುದು ಸರಿ ಎಂದು ದೃಢವಾಗಬೇಕು. ಹಾಗಿಲ್ಲದಿದ್ದರೆ ಮನಸ್ಸಿಗೆ ಕಿರಿಕಿರಿ ಮಾಡಿಕೊಂಡು ನಾನು ಹೇಳಿದಂತೆ ಮಾಡಬೇಕಾದ ಅಗತ್ಯವಿಲ್ಲ.ಜ್ಯೇಷ್ಠದಲ್ಲಿಯೇ ಉಪನಯನ ಮಾಡು. ಮಾಡಿಸಲು ತಿಳಿದವರು ಇದ್ದೇ ಇರುತ್ತಾರೆ. ನಾನು ಇಲ್ಲಿಂದಲೇ ಆಶೀರ್ವಾದ ಮಾಡುತ್ತೇನೆ. ಅನ್ಯಥಾ ಭಾವಿಸಬೇಡ. ನಿನ್ನ ಮಗನಿಗೆ ಮುಖ್ಯವಾಗಿ ಆ ಸಂಸ್ಕಾರ ನಡೆದು ಅದರ ಪೂರ್ತಿ ಪ್ರಯೋಜನವನ್ನು ಪಡೆಯುವುದು ಪ್ರಧಾನ. ನಾನು ಬಂದು ಮಾಡಿಸುವುದು ಎನ್ನುವುದು ಕೇವಲ incidental. ಆದ್ದರಿಂದ ಪ್ರಧಾನದ ಕಡೆಗೆ ಗಮನವಿಟ್ಟು ಕೆಲಸಗಳು ನಡೆಯಲಿ. ನಿನ್ನ ಸೌ।।ಗೂ ನನ್ನ ಆಶೀರ್ವಾದಗಳು. ಒಂದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ನಮ್ಮ ಶಾಸ್ತ್ರಗಳು ನಮಗೋಸ್ಕರ ಹೊರಟವೆಯೇ ಹೊರತು ನಾವು ಅವುಗಳಿಗೋಸ್ಕರ ಇಲ್ಲ. ನಮ್ಮ ಶ್ರೇಯಸ್ಸಿಗೋಸ್ಕರವೇ ಹೊರಟಿರುವ ಶಾಸ್ತ್ರಗಳಲ್ಲಿ ಭಯಕ್ಕೆ ಸ್ವಲ್ಪವೂ ಸ್ಥಾನವಿಲ್ಲ. ಭಯೋತ್ಪಾದಕವಾದ ಶಾಸ್ತ್ರ, ಶಾಸ್ತ್ರವೇ ಅಲ್ಲ. ಹಾಗೆಯೇ ನಮ್ಮನ್ನು ತೊಂದರೆಗೆ ಸಿಕ್ಕಿಸುವ ಶಾಸ್ತ್ರವೂ ಶಾಸ್ತ್ರ ಅಲ್ಲ. ಯೋಚಿಸಿ ನಿಶ್ಚಯ ಮಾಡಿ ತಿಳಿಸು. ಹೇಗಿದ್ದರೂ ನಾನು 19ನೇ ತಾರೀಖಿನ ಹೊತ್ತಿಗೆ ಭದ್ರಾವತಿಗೆ ಬರುತ್ತೇನೆ.

ಇತಿ ನಿನ್ನವ

ಕುಮಾರಸ್ವಾಮಿ

೪೪೪

Rationalist

ಸಂಸ್ಕಾರಕರ್ಮಗಳಿಗೆ ಅದೃಷ್ಟಫಲವಿಲ್ಲ, ಆಗುವುದು ಅಂತಃಕರಣ ಸಂಸ್ಕಾರ. ವಿಧವೆಯಾದ ನಿಮ್ಮ ಅತ್ತೆ ಉಪನಯನಕ್ಕೆ ಧಾರಾಳವಾಗಿ ಬರಲಿ, ನಿನ್ನ ಮಗನ ಉಪನಯನ ಬೆಳಗ್ಗೆ 6 ರಿಂದ 9.30ರವರೆಗೆ, ಆಮೇಲೆ ಪರೀಕ್ಷೆಗೆ ಹೋಗಲಿ. ಶ್ರಾದ್ಧದ ಅಡುಗೆಗೆ ಒಂದೇ ನಿಯಮ, ಬಂದವರಿಗೆ ತೃಪ್ತಿಯಾಗುವಂತೆ ಊಟ ಮಾಡಿಸುವುದು

ಕುಶಲಮ್ ಶ್ರೀ : Madras

20.3.86

ಚಿ।। ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಅನಂತ ಆಶೀರ್ವಾದಗಳು.

ನಿನ್ನ ಮುದ್ದಾಗಿ ಬರೆದಿರುವ ಕಾರ್ಡು ಬಂದು ತಲಪಿ ಬಹಳ ಸಂತೋಷವಾಯಿತು. ನಿನ್ನ handwriting ನೋಡಿಯೇ ಮನಸ್ಸಿಗೆ ಆನಂದ. ವಿಷಯವನ್ನು ಓದಿಯಂತೂ ಬಹಳ ತೃಪ್ತಿಯಾಯಿತು.

ವಿಚಾರಪರರಿಗೆ ವಿಷಯವನ್ನು ತಿಳಿಸುವುದರಲ್ಲಿ ನನಗೆ ಯಾವ ವಿಧವಾದ ಶ್ರಮವೂ ಇಲ್ಲ. ಬೇಜಾರು ಮೊದಲೇ ಇಲ್ಲ. ಬೇಜಾರು ಆಗುವುದು ಯಾವಾಗ ಎಂದರೆ, ಸಕಾರಣವಾಗಿ ಸಶಾಸ್ತ್ರೀಯವಾಗಿ ವಿಷಯವನ್ನು ತಿಳಿಸಿದರೂ ಕಿವಿಗೆ ಹಾಕಿಕೊಳ್ಳದೆ ಕೇವಲ ಸಂಪ್ರದಾಯಜಾಡ್ಯಕ್ಕೆ ನೇತುಬೀಳುವ ಮೌರ್ಖ್ಯವನ್ನು ತೋರಿಸಿದಾಗ. ಕೆಲವು ವೇಳೆ ಅಂಥದ್ದನ್ನು ಕಂಡಾಗ ಅಪ್ರಯತ್ನವಾಗಿ ಕ್ರೋಧವೂ ಬರುವುದುಂಟು. ನಾನು ultra rationalist ಅಲ್ಲ. Rationalityಗೂ Reasoningಗೂ ಒಂದು limit ಉಂಟು ಎನ್ನುವುದು ತಿಳಿದಿದೆ. ಅಂಥ ಸಮಯದಲ್ಲಿ ಶಾಸ್ತ್ರವಾಕ್ಯಗಳಲ್ಲಿ ನಂಬಿಕೆಯೊಂದೇ ನಮಗೆ ದಾರಿ. ಆದರೆ ಆ ನಂಬಿಕೆಯನ್ನು ನಮ್ಮ ಜೀವನದ ಪ್ರತಿಯೊಂದು ಸಾಮಾನ್ಯ ಕಾರ್ಯಗಳಿಗೂ ಅನ್ವಯಿಸಿದಾಗ ಅದು ಅಂಧಶ್ರದ್ಧೆಯಾಗುತ್ತದೆ. ಜಾಡ್ಯವಾಗುತ್ತದೆ. ಅದಕ್ಕೆ ಪೂಜ್ಯ ಶಂಕರಭಗವತ್ಪಾದರು ಗೀತಾಭಾಷ್ಯದಲ್ಲಿ ಒಂದು ಕಡೆ, 'ಅಗ್ನಿಃ ಶೀತಃ ಇತಿ ಶತವೇದ ವಾಕ್ಯೈರುಚ್ಯತೇ ಚೇತ್ ವೇದಃ ಅಪ್ರಮಾಣಂ ಸ್ಯಾತ್' (ಅಗ್ನಿಯು ಸುಡುವುದಿಲ್ಲ, ಅವನು ಶೀತಳನೆಂದು ನೂರು ವೇದವಾಕ್ಯಗಳು ಹೇಳಿದರೂ, ವೇದ ಅಪ್ರಮಾಣವಾಗುತ್ತದೆಯೇ ಹೊರತು, ಆ ವಾಕ್ಯವು ಯಥಾರ್ಥವಾಗುವುದಿಲ್ಲ) ಅಂದರೆ ಪ್ರತ್ಯಕ್ಷವಾಗಿಯೋ, ಅನುಮಾನದಿಂದಲೋ ಸಿದ್ಧವಾಗಿರುವ ವಿಷಯವನ್ನು (ಸಕಾರಣವಾಗಿ ಎಂದರ್ಥ) ಯಾವ ಶಾಸ್ತ್ರವೇ ಆಗಲಿ ವಿರುದ್ಧವಾಗಿ ಹೇಳಿದರೆ, ಆ ಶಾಸ್ತ್ರ ನಂಬಲು ಅನರ್ಹ ಎಂಬುವುದೇ ಎಲ್ಲಾ ಮಹರ್ಷಿಗಳ ತೀರ್ಮಾನ. ಪ್ರತ್ಯಕ್ಷಕ್ಕೆ ಅಗೋಚರವಾಗಿರುವ ವಿಷಯದಲ್ಲಿ ಶಾಸ್ತ್ರ ಪ್ರಮಾಣ. ಆದರೆ ನಮ್ಮ ಸಮಾಜದಲ್ಲಿ ಆಗಿರುವ ಅವ್ಯವಸ್ಥೆಯೆಂದರೆ, ಮೊದಲನೆಯದಾಗಿ ಶಾಸ್ತ್ರ ಯಾವುದು ಎಂಬುದು ತಿಳಿಯದಿರುವುದು. ಸಂಸ್ಕೃತದಲ್ಲಿ ಇರುವುದೆಲ್ಲಾ ಶಾಸ್ತ್ರವೇ!! ದೊಡ್ಡವರು (ಅವರು ವಿದ್ಯಾವಂತರಾಗಬೇಕಾದ್ದಿಲ್ಲ. ಸುಸಂಸ್ಕೃತರಾಗಬೇಕಾದ್ದಿಲ್ಲ. ಅನುಷ್ಠಾನಪರರಾಗಬೇಕಾದ್ದಿಲ್ಲ. It is enough if they are dead !!) ಹೇಳಿದ್ದೆಲ್ಲಾ ಶಾಸ್ತ್ರ. ಇನ್ನೊಂದು, ಎರಡನೆಯದಾಗಿ ಪ್ರತ್ಯಕ್ಷ ಸಿದ್ಧವಾದ ವಿಷಯವನ್ನೂ ನಮ್ಮ ಬುದ್ಧಿಶಕ್ತಿಯಿಂದ, ಕಾರ್ಯಕಾರಣಭಾವಗಳಿಂದ ವಿಚಾರ ಮಾಡದೆ, ಯಾವುದೋ ಅದೃಷ್ಟವೆಂದು ತಿಳಿದುಕೊಳ್ಳುವುದು. ಉಪನಯನ ಸಂಸ್ಕಾರವೆಂದರೇನು ? ಅದು ಏತಕ್ಕೆ ಮಾಡುತ್ತಾರೆ? ಎಂಬ ವಿಚಾರವನ್ನೇ ಮಾಡದೆ, ಯಾವಾಗಲೋ ಅಂತೂ ಒಂದು ನೂಲು ಹೆಗಲಿನಲ್ಲಿ ನೇತುಹಾಕಿಬಿಟ್ಟರೆ ಸಾರ್ಥಕವಾಯಿತು ಎಂಬ ಭಾವನೆ ಬಲಿತಿದೆ. ಇದು ಶಾಸ್ತ್ರಕ್ಕೂ ವಿರೋಧ, ಪ್ರತ್ಯಕ್ಷಕ್ಕೂ ವಿರೋಧ. ಶಾಸ್ತ್ರೀಯವಾಗಿ ಈ ಜನಿವಾರಕ್ಕೆ ಯಾವ ಸ್ಥಾನವೂ ಇಲ್ಲ. ಅದೊಂದು ಬಹಿರ್ಲಾಂಛನ. ಅದನ್ನು ಹಾಕಿಕೊಳ್ಳುವುದು ಒಂದು ನಿಯಮ (discipline), ಪಂಚೆ ಉಟ್ಟ ಹಾಗೆ, ಸ್ನಾನ ಮಾಡಿ ವಿಭೂತಿ ಹಾಕಿಕೊಂಡ ಹಾಗೆ ಅಷ್ಟೆ. ಅವುಗಳಿಗೆ ಯಾವ ಅದೃಷ್ಟ ಫಲವನ್ನೂ ಯಾರೂ ಹೇಳಿಲ್ಲ. ಅದನ್ನು ಹಾಕಿಕೊಂಡ ಮಾತ್ರಕ್ಕೇ ಉಪನಯನಸಂಸ್ಕಾರ ಖಂಡಿತ ಆಗುವುದಿಲ್ಲ. ಪ್ರತ್ಯಕ್ಷವಾಗಿ ವಿಚಾರ ಮಾಡಿದರೂ, ಅದೊಂದು ವಸ್ತ್ರ ವಿನ್ಯಾಸ. ಅದು ಪ್ರತ್ಯಕ್ಷ. ಅದರಿಂದ ಅದೃಷ್ಟ ಫಲ ಉಂಟಾಗುತ್ತದೆಂದು ಹೇಳುವುದು ಹಾಸ್ಯಾಸ್ಪದ. ಹಾಗೇ ಉಪನಯನವನ್ನು ಗರ್ಭಾಷ್ಟಮದಲ್ಲಿ ವಸಂತಋತುವಿನಲ್ಲಿ ಮಾಡುವುದೆಂಬುದೂ ಒಂದು ನಿಯಮ ಅಷ್ಟೆ. ಅನುಕೂಲವಾದ ನಿಯಮ. ಉಪನಯನವು ವಿದ್ಯಾರ್ಜನೆಗೆ ಮೊದಲಿನ ಒಂದು ಅಂತಃಕರಣ ಸಂಸ್ಕಾರವಾದ್ದರಿಂದ ವಿದ್ಯಾರ್ಜನೆಗೆ ಆರಂಭ ಮಾಡುವ ಮೊದಲು ಮಾಡುವುದು ಯುಕ್ತ. ಸಾಮಾನ್ಯವಾಗಿ ಸರಿಯಾದ ವಿದ್ಯೆಯನ್ನು ಕಲಿಯಲು ಆರಂಭಿಸುವುದು 6ನೇ ವರ್ಷ. ಹಾಗೆಯೇ ವಿದ್ಯಾರಂಭವೂ June, Julyನಲ್ಲಿ ಆಗುವುದರಿಂದ ವಸಂತ ಋತುವಿನಲ್ಲಿ (April-May) ಮಾಡಿದರೆ ಗುರುಕುಲಕ್ಕೆ (University) ಕಳಿಸಲು ಅನುಕೂಲವಾಗುತ್ತದೆಂಬ ಉದ್ದೇಶ. ಆ ಸಮಯದಲ್ಲಿ ಮಾಡಿದ್ದರಿಂದ ಯಾವ ಅದೃಷ್ಟವಾದ ಪುಣ್ಯವೂ ಸಿಗುವುದಿಲ್ಲ. ಬೇರೆ ಸಮಯದಲ್ಲಿ ಮಾಡಿದ್ದರಿಂದ ಪಾಪ ಸಂಭವಿಸುವುದೂ ಇಲ್ಲ. ಆ ಸಮಯದಲ್ಲಿ ಮಾಡಿದರೆ ಆ ಸಂಸ್ಕಾರದ ಪೂರ್ಣ ಪ್ರಯೋಜನವನ್ನು ಪಡೆಯಬಹುದು. ಬೇರೆ ಸಮಯದಲ್ಲಿ ಮಾಡಿದಾಗ ಪೂರ್ತಿ ಪ್ರಯೋಜನವಾಗದಿರಬಹುದು. ದಂಡವೇ ಆಗಬಹುದು. ಅದೂ, ಇಷ್ಟೂ-ಆ ಸಂಸ್ಕಾರವನ್ನು ಅರ್ಥವತ್ತಾಗಿ ಮಹರ್ಷಿಗಳು ಹೇಳಿರುವ ರೀತಿಯಲ್ಲಿ ಮಾಡಿಕೊಂಡರೆ. ಇವೆಲ್ಲವೂ ಪ್ರತ್ಯಕ್ಷ ಸಿದ್ಧ. ನಮಗೇ ಗೊತ್ತಾಗುತ್ತದೆ. ಆದರೆ ಇವತ್ತಿನ ದಿನದಲ್ಲಿ ಏನಾಗುತ್ತಿದೆ ? ಲೆಕ್ಕ ಹಾಕಿ, ಗುಣಿತ ಮಾಡಿ, ಕಷ್ಟಪಟ್ಟು ಮುಹೂರ್ತವನ್ನು ಸಿದ್ಧ ಮಾಡಿ, ಸಂಸ್ಕಾರದ ಕಡೆಗೆ ಗಮನವೇ ಕೊಡದೆ ಅರ್ಥಜ್ಞಾನವೇ ಇಲ್ಲದೆ ಜನಿವಾರವನ್ನು ಹಾಕಿಸಿಬಿಟ್ಟರೆ ಸಾರ್ಥಕವಾಯಿತು ಎಂದು ತಿಳಿದುಕೊಂಡಿರುವುದನ್ನು ಮೌರ್ಖ್ಯವೆಂದು ಹೇಳದೆ ಮತ್ತೇನು ಹೇಳಬೇಕು ? ಕೇವಲ ಆ ಮುಹೂರ್ತದಿಂದಲೇ ನಮಗೆ ಬೇಕಾದ ಅಂತಃಕರಣ ಸಂಸ್ಕಾರ ಸಿಗಲು ಸಾಧ್ಯವೇ ? ಇದು ಪ್ರತ್ಯಕ್ಷ ವಿರೋಧವಲ್ಲವೇ ? ಇದನ್ನು ನಾವೆಲ್ಲಾ ಸ್ವಲ್ಪವಾದರೂ ವಿಚಾರ ಮಾಡಬೇಡವೇ ? ಶ್ರೀಕಂಠ! ಹೀಗೇ ಬರೆಯುತ್ತಾ ಹೋದರೆ ಪುಟಗಟ್ಟಲೆ ಬರೆಯಬಹುದು. ಬೇಡ. ನಿನ್ನನ್ನೂ, ನನ್ನ frustrationಗೆ ಗುರಿ ಮಾಡಲಾರೆ.

ಇಷ್ಟು ಶಾಸ್ತ್ರಸಿದ್ಧವಾದ ವಿಷಯ. ಈ ಸಂಸ್ಕಾರ ಕರ್ಮಗಳಲ್ಲಿ ಯಾವ ವಿಧವಾದ ಅದೃಷ್ಟ ಫಲವೂ ಇಲ್ಲ. ಕೇವಲ ಅಂತಃಕರಣ ಸಂಸ್ಕಾರ (ಅಂದರೆ ಮನಸ್ಸನ್ನು ಶುದ್ಧಿಗೊಳಿಸುವುದು ಎಂದರ್ಥ). ಅದು ಆಗಬೇಕಾದರೆ ಮನಸ್ಸಿಗೆ exercise ಕೊಡಬೇಕು. ಸಂಸ್ಕಾರದ ತಾತ್ಪರ್ಯವನ್ನು ತಿಳಿದುಕೊಳ್ಳಬೇಕು. ಮಂತ್ರಾರ್ಥಗಳನ್ನು ಸ್ವಲ್ಪವಾದರೂ ಮನಸ್ಸಿಗೆ ತಂದುಕೊಳ್ಳಬೇಕು. ಮಾಡುವ ಕ್ರಿಯೆಗಳಲ್ಲಿ ಶ್ರದ್ಧಾ ಭಕ್ತಿಗಳಿರಬೇಕು. ಇಷ್ಟಾದರೆ ಅಂತಃಕರಣ ಸಂಸ್ಕಾರವಾದೀತೇ ಹೊರತು ಕೇವಲ ಮುಹೂರ್ತಾದಿಗಳಲ್ಲಿನ ಶ್ರದ್ಧಾ ಜಾಡ್ಯದಿಂದ ಮಾಡುವ ಅರ್ಥವಿಹೀನವಾದ ಯಾಂತ್ರಿಕ ಕ್ರಿಯೆಗಳಿಂದ ಯಾವ ಫಲವೂ ಖಂಡಿತ ಸಿಗುವುದಿಲ್ಲ. ಶ್ರಾದ್ಧ ಕ್ರಿಯೆಯೂ ಅಷ್ಟೆ.

ನಿನ್ನ ಅತ್ತೆಯವರು ಉಪನಯನಕಾರ್ಯಕ್ಕೆ ಧಾರಾಳವಾಗಿ ಬರಬಹುದು. ಅಗತ್ಯವಾಗಿ ಬರಬೇಕು. ಅವರಿಗೆ ನಮಸ್ಕರಿಸಿ, ಅವರ ಆಶೀರ್ವಾದವನ್ನು ಪಡೆದೇ ನೀವು ಉಪನಯನಕಾರ್ಯ ಆರಂಭಿಸಬೇಕು. ಯಾವ ವಿಧವಾದ ಶಾಸ್ತ್ರೀಯ ನಿಷೇಧವೂ ಖಂಡಿತವಾಗಿ ಇಲ್ಲ ಎಂದು ಹೇಳು. ಒಂದು ವರ್ಷ ಅವರ ಮುಖ ನೋಡಬಾರದೆಂದು ಹೇಳುವವರು ಇರಬಹುದು. ಅವರು ಬೇಕಾದರೆ ಕಣ್ಣು ಮುಚ್ಚಿಕೊಂಡು ಕೂತಿರಲಿ!! ನನ್ನ ಮಾವನವರು ಸತ್ತ 2 ತಿಂಗಳಿನಲ್ಲಿಯೇ ಶೈಲುವಿನ ವಿವಾಹವಾಯಿತು. ಅತ್ತೆಯವರನ್ನು ಕರೆದುಕೊಂಡು ಬಂದಿದ್ದೆ. ಅವರಿಗೆ ನಾವು ಕನ್ಯಾದಾನ ಮಾಡುವುದಕ್ಕೆ ಮುಂಚೆ ನಮಸ್ಕರಿಸಿಯೇ ಕಾರ್ಯ ಆರಂಭಿಸಿದೆ. ಆದ್ದರಿಂದ ನಿನ್ನ ಅತ್ತೆಯವರು ಉಪನಯನಕಾರ್ಯಕ್ಕೆ ಅವಶ್ಯವಾಗಿ ಬಂದೇ ತೀರಬೇಕೆಂದು ಹೇಳು. ಪತಿ ದಿವಂಗತರಾದ ಮಾತ್ರಕ್ಕೆ ಅವರಿಗೆ ಮಾತೃತ್ವ ಎಂಬುದಾಗಲಿ, ಮಕ್ಕಳು ಮೊಮ್ಮಕ್ಕಳ ಮೇಲಿನ ಅಭಿಮಾನವೆಂಬುದಾಗಲಿ ಒಂದು ಕ್ಷಣವೂ ಬಿಟ್ಟುಹೋಗುವುದಿಲ್ಲ. ದೋಷಯುಕ್ತ ಖಂಡಿತ ಆಗುವುದಿಲ್ಲ.

25ನೇ ತಾರೀಖು ಪರೀಕ್ಷೆ ಬೀಳಬಹುದು ಎಂದು ಬರೆದಿದ್ದೀಯೆ. ಏನೂ ಅಡ್ಡಿಯಿಲ್ಲ. 26ನೇ ತಾರೀಖು ಸೋಮವಾರ ಮಾಡಬಹುದು. ಅಥವಾ ಅವತ್ತೇ ಪರೀಕ್ಷೆಯ Timings ನೋಡಿಕೊಂಡು ಉಪನಯನವನ್ನು adjust ಮಾಡಬಹುದು. ನಾನು ಸೂರ್ಯೋದಯಕ್ಕೆ ಆರಂಭಿಸುತ್ತೇನೆ (6-00 am). ಉಪನಯನಕಾರ್ಯ 9 ಅಥವಾ 9-30ಕ್ಕೆ ಮುಗಿಯುತ್ತೆ. ಆಮೇಲೆ ಅವನು ಧಾರಾಳವಾಗಿ ಪರೀಕ್ಷೆಗೆ ಹೋಗಬಹುದು. ಮಧ್ಯಾಹ್ನ ಇದ್ದುಬಿಟ್ಟರೆ ಯೋಚನೆಯೇ ಇಲ್ಲ. ಯಾವುದಕ್ಕೂ ಹೊಂದದಿದ್ದರೆ ಸೋಮವಾರ ಮಾಡೋಣ. ಯಾವ ಚಿಂತೆಯೂ ಇಲ್ಲ. ಪರೀಕ್ಷೆಯ ದಿನ ನಿಶ್ಚಯವಾದ ತಕ್ಷಣ ನನಗೆ ವಿಷಯ ತಿಳಿಸು.

ಶ್ರಾದ್ಧದ ಅಡುಗೆ ವಿಷಯದಲ್ಲಿ ಒಂದೇ ನಿಯಮ. ನಿಷೇಧವಾದ ವಸ್ತು (ಈರುಳ್ಳಿ, ಬೆಳ್ಳುಳ್ಳಿ, ಮಾಂಸ ಇತ್ಯಾದಿ) ಒಂದನ್ನು ಬಿಟ್ಟು ನಾವು ನಿತ್ಯ ಉಪಯೋಗಿಸುವ ಎಲ್ಲ ವಸ್ತುಗಳನ್ನೂ ಉಪಯೋಗಿಸಬಹುದು. ಅದೂ ಮುಖ್ಯವಾಗಿ ಊಟಕ್ಕೆ ಬಂದಿರುವವರ ತೃಪ್ತಿಯನ್ನು ಅನುಸರಿಸಿ ಮಾಡುವುದು ಉಚಿತ (ಸತ್ತವರ ರುಚಿ ಅಲ್ಲ!). ಭೋಜನಕ್ಕೆ ಬಂದವರು ತೃಪ್ತಿಯಾಗಿ ಊಟ ಮಾಡಬೇಕೇ ಹೊರತು (ಅದು ಆತಿಥೇಯನ ಧರ್ಮ, ಕರ್ತವ್ಯ) ಪಿತೃಗಳಿಗೆ ಇಷ್ಟವೆಂದೋ, ಶಾಸ್ತ್ರ ಹೇಳುತ್ತಿದೆಯೆಂದೋ ತಿನ್ನಲು ಅಸಹ್ಯವಾದ ಪದಾರ್ಥಗಳನ್ನು ಮಾಡಿ ಬಡಿಸುವುದು ಅತ್ಯಂತ ಅಯುಕ್ತ, ಅಧರ್ಮ. ಶಾಸ್ತ್ರ ಎಂದಿಗೂ ಹೇಳಿಲ್ಲ. ಎಲ್ಲ ಸೂತ್ರಕಾರರೂ 'ಬ್ರಾಹ್ಮಣಾನ್ ಭೋಜಯೇತ್' ಎಂದು ಹೇಳಿದರು (ಬ್ರಾಹ್ಮಣರನ್ನು ಭೋಜನದಿಂದ ತೃಪ್ತಿಪಡಿಸಬೇಕು). ಆ ವಾಕ್ಯಕ್ಕೆ ಎಲ್ಲಾ ಕಡೆಯಲ್ಲೂ ಅರ್ಥವೇನೆಂದರೆ, "ಯಾವುದನ್ನು ಬಡಿಸಿದರೆ, ಬ್ರಾಹ್ಮಣರು ಉತ್ಸಾಹದಿಂದ ಊಟಮಾಡಿ ಸಂತೋಷಪಡುತ್ತಾರೋ ಅದನ್ನು ಬಡಿಸಿ ತೃಪ್ತಿಪಡಿಸುವುದು" ಎಂದು. ಇದನ್ನು ನಾವು ಮರೆತರೆ ನಮ್ಮ ಮಹರ್ಷಿಗಳಿಗೇ ದ್ರೋಹ ಮಾಡಿದಂತಾಗುತ್ತದೆ. ಮತ್ತೆ ಈ ಜಾಡ್ಯಗಳೆಲ್ಲಾ ಏಕೆ ಬಂತು ಎಂದು ಕೇಳಿದರೆ ಅದಕ್ಕೆ ನಮ್ಮ ಅಜ್ಞಾನವೇ ಕಾರಣ ಎಂದು ಉತ್ತರ ಹೇಳಬೇಕಾಗುತ್ತದೆ. ಪುನಃ ಹೇಳಬಯಸುತ್ತೇನೆ. ಬ್ರಾಹ್ಮಣರು ಊಟ ಮಾಡುವುದೆನ್ನುವುದು ಪ್ರತ್ಯಕ್ಷ. ಅವರ ತೃಪ್ತಿ, ಅತೃಪ್ತಿಯೂ ಪ್ರತ್ಯಕ್ಷ. ಅವರಿಗೆ ತೊಂದರೆಪಡಿಸಿ, ಇನ್ಯಾರೋ ಅಂತರಿಕ್ಷದಲ್ಲಿ ಕೂತು ತೃಪ್ತಿಪಡುತ್ತಿದ್ದಾರೆಂದು ಹೇಳುವುದು ಮೂರ್ಖತನ. ಇವರ ಹೊಟ್ಟೆಗೆ ಏನೇನನ್ನೋ ಹಾಕಿ, ಗೋಳಾಡಿಸಿ ಅದರಿಂದ ಅದೃಷ್ಟರಾದ ಪಿತೃದೇವತೆಗಳು ತೃಪ್ತರಾಗುತ್ತಾರೆಂದು ಯಾವ ಮಹರ್ಷಿಗಳೂ ಹೇಳುವುದಿಲ್ಲ. ಆಗಲು ಸಾಧ್ಯವೂ ಇಲ್ಲ. ಅದೆಲ್ಲಾ ನಮ್ಮ ಅಜ್ಞಾನದ ಕಲ್ಪನಾ ವಿಶೇಷಗಳು. ಅದಕ್ಕೆ ಮಹಾತ್ಮಾಗಾಂಧಿ ಹೇಳಿದರು, "Those things in the shastras which can be reasoned out must be reasoned ; anything in conflict with reason must be discarded". ಇದು ನಮ್ಮ ದೊಡ್ಡವರ ಬಾಯಿನಲ್ಲಿ ಬರಬೇಕಾದದ್ದು. ಗಾಂಧಿ ಹೇಳಿದ್ದಾರೆ! ಆದರೆ ಅದು ಅಕ್ಷರಶಃ ನಿಜ. ಯೋಚಿಸಬೇಡ. ಯಾವುದಕ್ಕೂ ಕಾಗದ ಬರಿ.

ಇತಿ ನಿನ್ನವ

ಕುಮಾರಸ್ವಾಮಿ

೪೪೫

ಮಲತಾಯಿ ಸತ್ತ ವರ್ಷ

ಹಬ್ಬ ಮಾಡಲು ಅಡ್ಡಿ ಇಲ್ಲ, ಉಪನಯನ ಬೇಗ ಮಾಡುವುದು ಈ ಕಾರಣದ ನಿಷೇಧಕ್ಕಿಂತ ಮುಖ್ಯ, ಮಗಳ ಮದುವೆಗೂ ಅಡ್ಡಿ ಇಲ್ಲ. ಶ್ರಾದ್ಧ ಅಶುಭವಲ್ಲ ; ಅಣ್ಣತಮ್ಮಂದಿರು ತಂದೆತಾಯಿಗಳ ಶ್ರಾದ್ಧವನ್ನು ಬೇರೆಬೇರೆಯೇ ಮಾಡಬೇಕು ; ಉಪನಯನಕ್ಕೆ ಬೇಕಾದ ಸಂಭಾರಗಳು

कुशलम् श्री : Madras
16.4.86

ಚಿ|| ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು. ನಿನ್ನ ಕಾಗದ ತಲಪಿತು. ನಿನ್ನ ಹಿಂದಿನ ಕಾಗದವೂ ತಲಪಿದೆ. ಅದರಲ್ಲಿ ನೀನು Questionnaire ಬರೆಯುತ್ತೇನೆಂದು ಬರೆದುದರಿಂದ ಅದಕ್ಕೆ ಕಾಯುತ್ತಾ ಕುಳಿತೆ. ಕೂಡಲೆ ಉತ್ತರ ಬರೆಯಲಿಲ್ಲ. ಮೊದಲು ನಿನ್ನ ಪ್ರಶ್ನೆಗಳಿಗೆ ಮತ್ತು ನಿನ್ನ ಸ್ನೇಹಿತರ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಆಮೇಲೆ ಉಪನಯನಕ್ಕೆ ಬೇಕಾದ ಸಂಭಾರಗಳ ಬಗ್ಗೆ ಬರೆಯುತ್ತೇನೆ. ನೀನು ಈ ಧಾರ್ಮಿಕ ವಿಷಯಗಳನ್ನು ನನ್ನನ್ನು ಕೇಳಲು ಸ್ವಲ್ಪವೂ ಸಂಕೋಚ ಪಟ್ಟುಕೊಳ್ಳಬೇಕಾದ್ದಿಲ್ಲ. ಪ್ರಶ್ನೆಯು ಎಷ್ಟೇ silly ಯಾಗಿರಲಿ ಅದನ್ನು ಕೇಳಿ ಪರಿಹಾರ ಮಾಡಿಕೊಳ್ಳಲೇಬೇಕು. ಆ ತರಹ silly ವಿಷಯಗಳೇ ದೊಡ್ಡದಾಗಿ ನಮ್ಮ ಸಮಾಜವನ್ನು ಆವರಿಸಿವೆ. ಆ ಸಿಕ್ಕಿನಿಂದ ಹೇಗಾದರೂ ಬಿಡಿಸಿಕೊಳ್ಳಬೇಕು ಮತ್ತು ಇತರರನ್ನೂ ಬಿಡಿಸಬೇಕು. ಆದ್ದರಿಂದ ನೀನೇನೂ ಯೋಚಿಸಬೇಡ. ಸಂದೇಹ ಬಂದಾಗಲೆಲ್ಲಾ ಬರಿ.

1) ನಿನ್ನ ಮಲತಾಯಿಯವರ ನಿಧನದಿಂದ ನಿನಗೆ 10 ದಿನ ಆಶೌಚವೇ ಹೊರತು ಆಮೇಲೆ ಯಾವ ಕಾರ್ಯವೂ ಇಲ್ಲ. ಆ ಒಂದು ವರ್ಷದಲ್ಲಿ ಧಾರಾಳವಾಗಿ ಹಬ್ಬ ಹರಿದಿನಗಳನ್ನು ಮಾಡಬಹುದು. 'ಮಲತಾಯಿ ಸತ್ತರು' ಎಂಬ ಸಂತೋಷದಿಂದ ಯಾರೂ ಹಬ್ಬಗಳನ್ನು ಆಚರಿಸುವುದಿಲ್ಲ ಅಲ್ಲವೇ ? ವಿಪರೀತವಾದ ಅಭಿಮಾನವಿದ್ದರೆ ದುಃಖದಲ್ಲಿ ಬೇಕಾಗಲಾರದು ಅಷ್ಟೆ.

2) ನಿನ್ನ ಮಗನಿಗೆ ಉಪನಯನವನ್ನು ಧಾರಾಳವಾಗಿ ಮಾಡಬಹುದು, ಮಾಡಬೇಕು. ಈಗಾಗಲೇ ಕಾಲಾತೀತವಾಗಿರುವುದರಿಂದ ಒಂದು ವೇಳೆ ಕೂಡದು ಎಂದು ಇದ್ದರೂ ಅದನ್ನು ನಿರ್ಲಕ್ಷಿಸಿ, ಉಪನಯನವನ್ನು ಮಾಡಿಯೇ ತೀರಬೇಕು.

3) ನಿನ್ನ ಮಗಳ ವರಾನ್ವೇಷಣೆಗೆ ಮತ್ತು ಅದರ ಮುಂದಿನ ಕಾರ್ಯಕ್ರಮಗಳಿಗೆ ಯಾವ ಅಡ್ಡಿಯೂ ಇಲ್ಲ. ಧಾರಾಳವಾಗಿ ಮಾಡಬಹುದು. ಮಾಡಬಹುದು ಎಂದ ಮೇಲೆ ಅದಕ್ಕೆ 15 ದಿನ, ತ್ರೈಪಕ್ಷ ಎಂದು ಏನೂ ಇಲ್ಲ. ಆಶೌಚ ದಿನಗಳಾದ ಮೊದಲು 10 ದಿನಗಳು ಬಿಟ್ಟು ಆಮೇಲೆ ಯಾವತ್ತು ಬೇಕಾದರೂ ಮಾಡಬಹುದು. ನಿನ್ನ ತಂದೆಯವರ ಮೂಲಕ ನಿನಗೆ ಸಪತ್ನೀಮಾತೃವಿನ (ಮಲತಾಯಿ) ಸಂಬಂಧವೇ ಹೊರತು ನೇರವಾಗಿ ಯಾವುದೂ ಇಲ್ಲ. ಆದ್ದರಿಂದ ನಿನಗೆ ಸ್ವಂತ ಮಗನ ಧರ್ಮಗಳು ಯಾವುದೂ ಬರುವುದಿಲ್ಲ. ಅವರಿಗೆ ಮಕ್ಕಳಿಲ್ಲದೆ ಹೋಗಿದ್ದಿದ್ದರೆ ಆಗ ನೀನೇ ಕರ್ತೃವಾಗಬೇಕಿತ್ತು. ಆಗಲೂ ಈ ಕಾರ್ಯಗಳಿಗೆ ಯಾವುದೂ ಅಡ್ಡಿಯಿಲ್ಲ. ಏಕೆಂದರೆ ಆಗ ಕರ್ತೃತ್ವ ಕೇವಲ ಕರ್ತವ್ಯದೃಷ್ಟಿಯಿಂದ ಬರುತ್ತದೆಯೇ ಹೊರತು ಮಮತೆಯಿಂದಲೋ, ಅಭಿಮಾನದಿಂದಲೋ ಅಲ್ಲ. ಮಮತಾ, ಅಭಿಮಾನಗಳನ್ನೇ ನಾವು ಅಶುಚಿ ಎಂದು ಕರೆಯುತ್ತೇವೆ. ಅದಕ್ಕೇ ಆಶೌಚವೂ ಕೂಡ, ಮೃತಸುದ್ದಿ ಕೇಳಿದ ಮೇಲೆಯೇ ಆರಂಭ. ಕೇಳಿದ ಮೇಲೆ ತಾನೇ ಮಮತಾ, ಅಭಿಮಾನಗಳು ಬಾಧಿಸಲು ಆರಂಭಿಸುತ್ತವೆ !!

4) ಬಾಳೆಕಾಯಿ, ಬದನೆಕಾಯಿ ಒಟ್ಟಿಗೆ ಧಾರಾಳವಾಗಿ ತರಬಹುದು. ಒಟ್ಟಿಗೆ ಅಡುಗೆಯನ್ನೂ ಮಾಡಬಹುದು. ಶ್ರಾದ್ಧದಲ್ಲಿ ಒಟ್ಟಿಗೆ ಮಾಡುವುದರಿಂದ ಕೂಡದು ಎಂಬ ಭಯ ಬಂದಿದೆ. ಹಾಗೆ ಬರುವುದಾದರೆ ಶ್ರಾದ್ಧದಲ್ಲಿ ಮಾಡುವ ಎಲ್ಲಾ ತರಕಾರಿ combinationಗಳಿಗೂ ಬರಬೇಕಲ್ಲವೇ ? ಅದೂ ಅಲ್ಲದೆ, ಒಂದು ವೇಳೆ ಶ್ರಾದ್ಧದಲ್ಲಿ ಮಾಡುವುದಾದರೆ ತಾನೇ ಅದನ್ನು ಬೇರೆ ದಿನಗಳಲ್ಲಿ ಮಾಡಲು ಭಯವೇತಕ್ಕೆ ? ಅಷ್ಟು ಭಯಂಕರ combination ಆದರೆ, ಶ್ರಾದ್ಧದದಿನ ತಾನೇ ಅದನ್ನು ಮಾಡಿ ಬ್ರಾಹ್ಮಣರಿಗೆ ಬಡಿಸಬಹುದೇ ? ಇದಕ್ಕೆ ನಮ್ಮಗಳಿಗೆಲ್ಲಾ ಶ್ರಾದ್ಧದ ವಿಷಯದಲ್ಲಿರುವ misconceptಗಳೇ ಕಾರಣ. ನಮಗೆಲ್ಲಾ ಶ್ರಾದ್ಧವೆಂದರೆ ಏನೋ ಒಂದು ಅಶುಭವಾದ, ಭಯಂಕರವಾದ ಕಾರ್ಯವೆಂಬ ತಪ್ಪು ಭಾವನೆ ಬೇರೂರಿಬಿಟ್ಟಿದೆ. ಎಂದಿಗೂ ಸೂತ್ರಕಾರರು, ಮಹರ್ಷಿಗಳು, ತಂದೆತಾಯಿಗಳನ್ನು ಕೃತಜ್ಞತೆಯಿಂದ ಸ್ಮರಿಸಿಕೊಂಡು ತುಂಬಿದ ಹೃದಯದಿಂದ ಮಾಡುವ ಕಾರ್ಯ ಅಶುಭ ಅಥವಾ ಭಯಂಕರ ಎಂದು ಹೇಳುವ ಮಹಾಪರಾಧವನ್ನು ಮಾಡುವುದಿಲ್ಲ. ಮಾಡಿಯೂ ಇಲ್ಲ. ಇವೆಲ್ಲಾ ನಮ್ಮ ಅವಿವೇಕದ ಪರಾಕಾಷ್ಠೆ. ಇನ್ನೂ ಹಾಗೆ ನೋಡಿದರೆ ಈ combination ನಿಂದಾಗಲಿ ಮತ್ತ್ಯಾವುದಾದರೂ similarity ಯಿಂದಲಾಗಲಿ ಶ್ರಾದ್ಧಕರ್ಮ ಜ್ಞಾಪಕಕ್ಕೆ ಬರುವುದಾದರೆ ಅದು ಪುಣ್ಯವೆಂತಲೇ ಹೇಳಬೇಕು, ತನ್ಮೂಲಕ ನಮ್ಮ ಪೂಜ್ಯ ಮಾತಾಪಿತೃಗಳ ಜ್ಞಾಪಕ ಬರುವುದರಿಂದ ! ಆದ್ದರಿಂದ ಆ ರೀತಿಯಾದ ಯಾವ ನಿಯಮವೂ ಇಲ್ಲವೆಂದು ಧೈರ್ಯವಾಗಿ ಹೇಳು.

5) ಅಣ್ಣತಮ್ಮಂದಿರು ಒಟ್ಟಿಗೆ ಮಾಡುವ ಶ್ರಾದ್ಧ, ಶ್ರಾದ್ಧವೇ ಆಗಲಾರದು. ಶಾಸ್ತ್ರಗಳೂ ಅದಕ್ಕೆ ಕಡು ವಿರೋಧವಾಗಿವೆ. ವೈಯಕ್ತಿಕವಾಗಿ ನಾನೂ ಕಡುವಿರೋಧಿ. ಶ್ರಾದ್ಧಕರ್ಮವು ಪಿತೃಗಳ ತೃಪ್ತಿಗೋಸ್ಕರ ಮಾಡುವುದಲ್ಲ ಎಂಬುದನ್ನು ಸ್ಪಷ್ಟವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅದು ಕೇವಲ ನಮ್ಮ ಪುತ್ರತ್ವವನ್ನು ಕಾಪಾಡಿಕೊಳ್ಳುವ, ಸಾರ್ಥಕಗೊಳಿಸುವ ಒಂದು ಕ್ರಮ. ಆದ್ದರಿಂದ ಅದನ್ನು ಪ್ರತಿಯೊಬ್ಬ ಪುತ್ರನೂ ಬೇರೆಬೇರೆ ತನ್ನ ಸಂಪಾದನೆಯಿಂದ ತಾನೇ ಶ್ರಮಪಟ್ಟು ಮಾಡಬೇಕು. ಆಗಲೇ ಅವನವನ ಪುತ್ರತ್ವ ಸಾರ್ಥಕವಾದೀತು. ಅಣ್ಣತಮ್ಮಂದಿರು ಒಟ್ಟಿಗೆ ಮಾಡುವುದಕ್ಕೆ ಪ್ರಾಯಃ ನೂರಾರು ವರ್ಷಗಳ ಹಿಂದೆ ಚಾಲ್ತಿಯಲ್ಲಿದ್ದ joint family ಕಾರಣ ಎಂದು ಕಾಣುತ್ತೆ. ಆಗ ಮನೆಗೆ ಒಬ್ಬನೇ ಯಜಮಾನನಿದ್ದು, ಬಾಕಿಯವರೆಲ್ಲರೂ ಅವನಿಗೆ ಸಹಾಯಕರಾಗಿ ದುಡಿದು, ಒಂದೇ ಪಾಕದಲ್ಲಿ ಊಟ ಮಾಡುತ್ತಿದ್ದರು. ಆಗ ಬೇರೆ ಬೇರೆ ಮಾಡುವುದು impracticable ಆಗಿ ಇದ್ದುದರಿಂದ, ಒಟ್ಟಿಗೆ ಮಾಡಿದರೂ ಪರವಾಯಿಲ್ಲ ಎಂದು ಹೇಳಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ಒಟ್ಟಿಗೇನೇ ಮಾಡಬೇಕು ಎಂದು ತಪ್ಪು ತಿಳಿದುಕೊಂಡು ಬೇರೆ ಬೇರೆ ಸಂಪಾದಿಸುತ್ತಿದ್ದರೂ, ಬೇರೆ ಬೇರೆ ಕಡೆ ಇದ್ದರೂ, ಕೆಲವು ಸಾರಿ ದ್ವೇಷಿಸುತ್ತಿದ್ದರೂ, ಒಟ್ಟಿಗೆ ಸೇರಿ ಮಾಡುವ ಅಭ್ಯಾಸ ಬಂದುಬಿಟ್ಟಿತು. ಅದಕ್ಕೆ ಬೇಕಾದ ಕುಯುಕ್ತಿಗಳನ್ನೂ ಜೋಡಿಸಿಕೊಂಡರು. “ಎಲ್ಲರೂ ಬೇರೆ ಬೇರೆ ಕೊಟ್ಟರೆ ಪಿತೃಗಳು ಸ್ವೀಕರಿಸುವುದು ಹೇಗೆ ? (ಅದೃಶ್ಯರಾಗಿರುವ ಪಿತೃಗಳು ನಾವು ಕೊಟ್ಟದ್ದನ್ನು ಸ್ವೀಕರಿಸುತ್ತಾರೆನ್ನುವುದು ನಿಜವಾಗುವುದಾದರೆ, ಅವರಿಗೆ ಅದೃಶ್ಯರಾಗುವ ಶಕ್ತಿಯ ಜತೆಗೆ ಎಲ್ಲಾ ಕಡೆಯಲ್ಲಿಯೂ ಒಂದೇ ಸಾರಿ ಇದ್ದು ಹವಿಸ್ಸನ್ನು ಸ್ವೀಕರಿಸುವ ಶಕ್ತಿಯೂ ಇದೆ ಎಂದು ಕಲ್ಪನೆ ಮಾಡಬಹುದಲ್ಲವೇ ?) ಒಬ್ಬರೇ ಕೊಟ್ಟು ತೃಪ್ತಿಪಡಿಸಿದರೆ ಸಾಲದೇ ? (ಒಬ್ಬರಿಂದ ತಾನೇ ಅವರಿಗೆ ತೃಪ್ತಿಯಾಯಿತು ಎಂದು ಯಾವ ಶಾಸ್ತ್ರಗಳು ಹೇಳುತ್ತವೋ ಗೊತ್ತಿಲ್ಲ!)'' ಈ ನೆಪದಲ್ಲಾದರೂ ಅಣ್ಣತಮ್ಮಂದಿರು ಒಟ್ಟಿಗೆ ಸೇರಬಹುದಲ್ಲವೇ ?! (ಶ್ರಾದ್ಧವೇನು get-together ಏ! ಅಣ್ಣತಮ್ಮಂದಿರ ಒಕ್ಕೂಟಕ್ಕೆ ತಾಯಿ ತಂದೆ ಸತ್ತ ದಿವಸವೇ ಮುಹೂರ್ತವೇ?) ಇವೆಲ್ಲಾ ಸರ್ವಥಾ ಅಶಾಸ್ತ್ರೀಯ, common sense ಗೂ ನಿಲ್ಲುವುದಿಲ್ಲ. ಶ್ರಾದ್ಧ ಕರ್ಮವು ಪ್ರತಿಯೊಬ್ಬ ಪುತ್ರನೂ, ತನ್ನ ತಂದೆತಾಯಿಗಳು ತನಗೆ ಮಾಡಿದ ಉಪಕಾರದ ಸ್ಮರಣೆಗಾಗಿ ಕೃತಜ್ಞತೆಯಿಂದ, ತನ್ನ ತನುಮನಧನಗಳಿಂದ ಮಾಡಬೇಕಾದ ಕರ್ತವ್ಯ ಕರ್ಮ. ಇದು ಬಿಟ್ಟು ಅದಕ್ಕೆ ಬೇರೆ ಯಾವ ಸ್ವರೂಪವೂ ಇಲ್ಲ. ಪ್ರತಿಯೊಬ್ಬನೂ ಅದನ್ನು ಬೇರೆ ಬೇರೆಯಾಗಿಯೇ ಮಾಡಬೇಕು. ಶೋಂಭೇರಿತನದಿಂದಲೋ, ಕಾಸು ಖರ್ಚಿನ ಲೋಭತನದಿಂದಲೋ, ಭಯದಿಂದಲೋ ಯಾರೋ ಒಟ್ಟಿಗೆ ಮಾಡಲು ಆರಂಭಿಸಿದ್ದರೆ ಅದು ಪ್ರಮಾಣವಲ್ಲ. ಪ್ರಕೃತ, ಯಾವುದೋ ಕಾರಣಾಂತರಗಳಿಂದ ಜಗತ್, ಶಂಕರ್ ಅಣ್ಣ ತಮ್ಮಂದಿರು ಬೇರೆ ಮಾಡಲು ಆರಂಭಿಸಿದ್ದಾರೆ. ಅದು ಬಹಳ ಯುಕ್ತ. ಇನ್ನು ಪುನಃ ಸೇರಬೇಕಾದ ಪ್ರಶ್ನೆಯೇ ಇಲ್ಲ. ಹಾಗೆ ಅವರೆಲ್ಲಾ ಒಟ್ಟಿಗೆ ಸೇರಬೇಕೆಂಬ ಅಪೇಕ್ಷೆ ಇದ್ದರೆ, ಶ್ರಾದ್ಧ ಬೇರೆಬೇರೆ ಮಾಡಿ, ಶ್ರಾದ್ಧದ ಮಾರನೇ ದಿನ ಸತ್ಯನಾರಾಯಣವ್ರತ ಇಟ್ಟುಕೊಂಡು ಒಟ್ಟಿಗೆ ಸೇರಿ ಮಾಡಲಿ. ವಿನಾಯಕವ್ರತಕ್ಕೆ ಒಟ್ಟಿಗೆ ಸೇರಲಿ. ಯುಗಾದಿಗೆ ಒಟ್ಟಿಗೆ ಸೇರಲಿ. ಒಟ್ಟಿಗೆ ಸೇರುವ ಅಭಿಲಾಷೆಗೆ ಪವಿತ್ರವಾದ ಶ್ರಾದ್ಧ ಕರ್ಮವನ್ನು target ಮಾಡುವುದು ಬೇಡ !

6) ನಿನ್ನ ಮಗನ ಉಪನಯನಕ್ಕೆ ಮುಖ್ಯವಾಗಿ ಅವನಿಗೆ ಒಂದು ಜೊತೆ ಪಂಚೆ, ಮಲ್ ಬಟ್ಟೆ (1 metre) ಕೌಪೀನಕ್ಕೆ, ಕೃಷ್ಣಾಜಿನ, ಮೌಂಜಿ (ಎರಡನ್ನೂ ನಾನು ತರುತ್ತೇನೆ), ಅವನ ಮೂಗಿನ ಉದ್ದಕ್ಕೆ ಬರುವ ಮುತ್ತುಗದ ದಂಡ, ಹೋಮಕ್ಕೆ 1 k.g. ಬೆಣ್ಣೆ ಕಾಸಿದ ತುಪ್ಪ ½ ಬುಟ್ಟಿಯಷ್ಟು ಸಣ್ಣ ಒಣಗಿದ ಚಕ್ಕೆಗಳು, 50 ಬೆರಣಿ, 15 ಸಗಣಿ ಉಂಡೆಗಳು (ಮೂಢ), ಅಗ್ನಿಯನ್ನು ಕಾಪಾಡಲು 1½ ಸೇರು ನೀರು ಹಿಡಿಯುವ ಅಗಲ ಬಾಯಿನ ಉಖೆ (ಮಡಕೆ), ಅಗ್ನಿ ಸಂರಕ್ಷಣೆಗೆ 10 k.g. ಉಮ್ಮಿ (paddy hulling ನಲ್ಲಿ ಬರುವ intermediate fraction), 8 ಇಟ್ಟಿಗೆ, ಸ್ವಲ್ಪ ಮರಳು, ಇಕ್ಕಳ, ಕೊಳಲು, ಬೀಸಣಿಗೆ, 4 ಹಿತ್ತಾಳೆ ಬಟ್ಟಲುಗಳು, 4 ಚೊಂಬು, 4 ತಟ್ಟೆ, ಒಳ್ಳೆ ದರ್ಭೆ, ಮುತ್ತುಗದ ಸಮಿತ್ತು 40, ಪರಿಧಿಗೆ ಬೇಕಾದ ಎರಡು ಮೊಳ ಉದ್ದನೆಯವು 6, ಹೋಮಕ್ಕೆ ಮಧ್ಯದ ಗುಂಡೆಲೆಗಳು 8.

ಹಿಂದಿನ ದಿನ ಸಾಯಂಕಾಲ ಪ್ರತಿಸರಬಂಧ (ಕಂಕಣ ಕಟ್ಟುವುದು) ಮತ್ತು ಅಂಕುರಾರ್ಪಣ ಕರ್ಮಗಳಾಗಬೇಕು. ಉದಕ ಶಾಂತಿಯನ್ನೂ ಬೇಕಾದರೆ ಇಟ್ಟುಕೊಳ್ಳಬಹುದು. ಅದಕ್ಕೆ 100 gm. (each) ನಷ್ಟು ಉದ್ದು, ಹೆಸರು, ಸಾಸವೆ, ಬತ್ತ, ಗೋಧಿ, ಎಳ್ಳು, 5 ಮಣ್ಣಿನ ಪಾಲಿಕೆಗಳು (ಅಂಗಡಿಯಲ್ಲಿ ಕೇಳಿದರೆ ಕೊಡುತ್ತಾರೆ), ಬಾಕಿ ಪೂಜಾಸಾಮಗ್ರಿಗಳು (ಹೂವು, ಕಾಯಿ, ಬಾಳೆಹಣ್ಣು ಇತ್ಯಾದಿ).

ಎಲ್ಲವನ್ನೂ ಬರೆದಿದ್ದೇನೆ ಅಂದುಕೊಂಡಿದ್ದೇನೆ. ಜ್ಞಾಪಕಕ್ಕೆ ಬಂದರೆ ಪುನಃ ಬರೆಯುತ್ತೇನೆ. ವೈದಿಕದಕ್ಷಿಣೆ 400 ರೂ.ಗಳಷ್ಟು ಇಟ್ಟುಕೊ. ಮಿಕ್ಕ ಖರ್ಚು, ನೀನು ಮಾಡಿದಷ್ಟು.

ಇತಿ ನಿನ್ನವ

ಕುಮಾರಸ್ವಾಮಿ

೪೪೬

ಸಂಸ್ಕಾರಗಳ ಚರಿತಾರ್ಥತೆ

ವೇದೋಕ್ತ ಸಂಸ್ಕಾರದ ಪಾವಿತ್ರ್ಯ ಬಾಹ್ಯದ್ರವ್ಯಗಳಿಂದಾಗಲಿ, ಕಾಲದಿಂದಾಗಲಿ ಅಲ್ಲ ; ಗ್ರಹಣವು ಸಾತ್ತ್ವಿಕಾಚರಣೆಯ ಸಂದರ್ಭ ಮಾತ್ರ, ಮೂರ್ಖ ಅಭ್ಯಾಸ ಸಲ್ಲ ; ಶ್ರಾದ್ಧಕ್ಕೆ 'ಮೃತ' ತಿಥಿ, ಅಪರಾಹ್ಣ ಕಾಲ ; ಆಮಶ್ರಾದ್ಧ

कुशलम्   श्री :   Madras
3.5.86

ಚಿ|| ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು.

ನಿನ್ನ ಕಾಗದ ತಲಪಿತು. ಉಪನಯನಕ್ಕೆ ಏನೇ ವಿಘ್ನಗಳು ಬಂದರೂ ಮಾಡಿಯೇ ತೀರುತ್ತೇನೆಂಬ ನಿನ್ನ ದಾರ್ಢ್ಯ ಬಹಳ ಯುಕ್ತ. ದೈವಾನುಗ್ರಹ ಆ ತರಹ ಧರ್ಮದಾರ್ಢ್ಯಕ್ಕೆ ಇದ್ದೇ ಇರುತ್ತದೆಂದು ನಂಬಿದ್ದೇನೆ. ಹೇಗಾದರೂ ನಾನು 17ನೇ ತಾರೀಖು ಬೆಳಗ್ಗೆ ಭದ್ರಾವತಿಗೆ ಬರುತ್ತಿದ್ದೇನೆ. ಆದರೆ ಅಲ್ಲಿ ಇಳಿಯುವುದಿಲ್ಲ. ಸೀದಾ ಶಿವಮೊಗ್ಗಕ್ಕೆ ಹೊರಟು ಹೋಗುತ್ತೇನೆ. ಅಲ್ಲಿ ಸೋಮುವು ಮಗನ ಉಪನಯನದ ಅಂಗವಾಗಿ ಕೂಷ್ಮಾಂಡ ಹೋಮವನ್ನು ಆರಂಭಿಸುತ್ತಾನೆ. ಆದ್ದರಿಂದ ಸೀದಾ ಹೋಗಬೇಕಾಗಿದೆ. 19, 20, 21, ನ್ಯೂಟೌನ್ ರಾಮದೇವರ ದೇವಸ್ಥಾನದಲ್ಲಿ ಶಂಕರಜಯಂತಿ ಅಂಗವಾಗಿ ಸಾಯಂಕಾಲ ನನ್ನ ಉಪನ್ಯಾಸ ಏರ್ಪಡಿಸಿದ್ದಾರೆ. ಆಗ ಸಂಧಿಸಿ ನಿಶ್ಚಯ ಮಾಡಿಕೊಳ್ಳಬಹುದು. ಯಾವುದಕ್ಕೂ ಸಂಭಾರಗಳನ್ನೆಲ್ಲಾ ಸಿದ್ಧಪಡಿಸಿರು. ಯಾವತ್ತು ಅನುಕೂಲವಾಗುತ್ತದೆಯೋ ಅವತ್ತು ಮಾಡೋಣ.

1) ಉಪನಯನ ಕೇವಲ ವೇದೋಕ್ತ ಸಂಸ್ಕಾರ. ಅದರಲ್ಲಿ ಬಾಕಿ ಯಾವ ಲೌಕಿಕ ಆಡಂಬರಕ್ಕೂ ಅವಕಾಶವೂ ಇಲ್ಲ, ಅಗತ್ಯವೂ ಇಲ್ಲ. ಮನೆಯಷ್ಟಕ್ಕೆ ಮಾಡಿಕೊಂಡರೆ ಸಾಕು. ಈ ಅಳಿಯಪೂಜೆ, ಪಾದಪೂಜೆ, ಓದಿಸುವುದು ಇವೆಲ್ಲಾ ಕೇವಲ ಆಢ್ಯತೆಯ ಪ್ರದರ್ಶನದ ಒಂದೊಂದು ಮುಖಗಳು. ತಂದೆತಾಯಿಗಳ, ಅತ್ತೆಮಾವಂದಿರ ಅನುಗ್ರಹವನ್ನು ಪಡೆಯಬೇಕು ನಿಜ. ಆದರೆ ಅದನ್ನು ಸಭೆಯಲ್ಲಿ ದೊಡ್ಡದಾಗಿ ನೂರು ಜನರ ಎದುರಿಗೆ ಮಾಡಬೇಕಾದ ಅಗತ್ಯವಿಲ್ಲ. ಅದೂ ನ್ಯಾಯವಾಗಿ ಮೊದಲೇ ಮಾಡಬೇಕು. ಉಪನಯನ ಆರಂಭಕ್ಕೆ ಮೊದಲು ಅವರಿಗೆ ನಮಸ್ಕರಿಸಿ ಅನುಗ್ರಹ ಪಡೆದು ಆರಂಭಿಸುವುದು ಯುಕ್ತ. ಅದು ಯಾರಿಗೂ ಇಷ್ಟವಿಲ್ಲ. ಏಕೆಂದರೆ ಹಾಗೆ ಮಾಡಿದರೆ ಒಬ್ಬರೂ ನೋಡಿದಂತಾಗುವುದಿಲ್ಲವಲ್ಲ !! ಅವರಿಗೆ ಏನಾದರೂ ಕೊಡಬೇಕೆಂದರೆ ಯಾರೂ ಬೇಡವೆನ್ನುವುದಿಲ್ಲ. ಆದರೆ ಪ್ರದರ್ಶನ ಬೇಕಿಲ್ಲ. ಅಳಿಯಪೂಜೆಯೂ ಅಷ್ಟೆ. ಅಳಿಯನಿಗೆ ಕೊಡಬೇಕೆನ್ನಿಸಿದರೆ ಯಾರು ಬೇಡವೆನ್ನುತ್ತಾರೆ! ನಾಲ್ಕು ಜನಕ್ಕೆ ತಿಳಿಯುವಂತೆ ಕೊಡಬೇಕೆಂಬ ಅಹಂಕಾರವೇಕೆ ಎಂಬುದೇ ಪ್ರಶ್ನೆ. ನಾನು ಮಾಡಿಸುವ ಕಡೆಯಲ್ಲೆಲ್ಲಾ ಸಾಮಾನ್ಯವಾಗಿ ವೈದಿಕ ಕಾರ್ಯವನ್ನು ಮುಗಿಸಿ ಎಲ್ಲರ ಆಶೀರ್ವಾದ ಆದೊಡನೆಯೇ ನನ್ನ ಕೆಲಸ ಮುಗಿಸಿ ಎದ್ದುಬಿಡುತ್ತೇನೆ. ಈ ಲೌಕಿಕಗಳನ್ನೆಲ್ಲ ನನಗೆ ಅದರ ಜತೆಯಲ್ಲಿ ಸೇರಿಸಲು ಇಷ್ಟವೂ ಇಲ್ಲ, ಮಾಡಿಸುವುದೂ ಇಲ್ಲ. ಆ ವೇದೋಕ್ತ ಸಂಸ್ಕಾರದ ಪಾವಿತ್ರ್ಯವನ್ನು ನಾವು ಕಾಪಾಡಬೇಕು, ಇತರರೂ ಕಾಪಾಡುವಂತೆ ಮಾಡಬೇಕು. ಆದ್ದರಿಂದ ನಿನಗೆ ಯಾರಿಗಾದರೂ ಕೊಡಬೇಕೆಂಬ ಆಸೆ ಇದ್ದರೆ ಕೊಟ್ಟು ನಮಸ್ಕಾರ ಮಾಡಿ ಬಂದು ಕೂತುಕೊ. ಕೊಡದಿದ್ದರೆ ಯಾವ ಲೋಪವೂ ಇಲ್ಲ, ಅಧರ್ಮವೂ ಅಲ್ಲ. ನಿಜವಾಗಿ ನಮ್ಮ ಸಂಪ್ರದಾಯದಲ್ಲಿ ನಾನು ಕೇಳಿದಂತೆ ಈ ಪಾದಪೂಜೆ ಅನ್ನುವುದು ಇರಲೇ ಇಲ್ಲ. ಈ ಅಳಿಯಪೂಜೆ ಇತ್ಯಾದಿಗಳೂ ಕೇವಲ ವಿವಾಹ ಚತುರ್ಥೀ ದಿನಕ್ಕೆ ಸೀಮಿತವಾಗಿದ್ದವೇ ಹೊರತು ಬೇರೆ ಯಾವ ಸಂಸ್ಕಾರಗಳಲ್ಲಿಯೂ ಇಲ್ಲ. ಅದರ ನಿಶ್ಚಯವನ್ನು ನಿನಗೇ ಬಿಟ್ಟಿದ್ದೇನೆ.

2) ಉಪನಯನ ವಿವಾಹಗಳು ಸಂಸ್ಕಾರಗಳೆಂದು ಪರಿಗಣಿಸಲ್ಪಟ್ಟಿವೆ. ಅವುಗಳನ್ನು ಕೆಲವು ದಿನಗಳಲ್ಲಿ ಮಾಡುವುದು ಒಂದು ಕ್ರಮವೇ ಹೊರತು ಅದರಿಂದಲೇ ಚರಿತಾರ್ಥವಾಗುತ್ತದೆ ಎನ್ನುವುದು ಭ್ರಮೆ. ಸಂಸ್ಕಾರವೆಂದರೇ ಅಂತಃಕರಣ ಸಂಸ್ಕಾರ. ಅಂತಃಕರಣಕ್ಕೆ ಸಂಸ್ಕಾರವಾಗಬೇಕಾದರೆ ಬಾಹ್ಯದ್ರವ್ಯಗಳಿಂದಾಗಲಿ, ಕಾಲದಿಂದಾಗಲಿ ಆಗುವುದಿಲ್ಲ. ಅದು ಕೇವಲ ಮಂತ್ರಾರ್ಥವನ್ನು ಮನನ ಮಾಡಿಕೊಂಡು ಸೂತ್ರಕಾರರು ಅಥವಾ ಶ್ರುತಿ ಹೇಳುತ್ತಿರುವ ರೀತಿಯಂತೆ ಕ್ರಿಯೆಯನ್ನು ನಡೆಸಿದರೇ ಸಾಧ್ಯ. ಮಂತ್ರಾರ್ಥದಿಂದ ಬಂದ ಪವಿತ್ರವಾದ ಸಾತ್ವಿಕ ಭಾವನೆಯನ್ನು ಕ್ರಿಯೆಯು ಪುಷ್ಟೀಕರಿಸುತ್ತದೆ ಅಷ್ಟೆ. ಈ ಕಾರ್ಯದಲ್ಲಿ ದೇಹಶುದ್ಧಿ, ದೇಶಶುದ್ಧಿ, ದ್ರವ್ಯಶುದ್ಧಿ ಅವೆಲ್ಲಾ ಪರಿಪೂರ್ಣವಾಗಿದ್ದರೆ ಭಾವನೆಯು ಉತ್ಪತ್ತಿಯಾಗುವುದಕ್ಕೂ, ದೃಢವಾಗುವುದಕ್ಕೂ ಅನುಕೂಲವಾಗುತ್ತದೆಂಬ ಭಾವನೆಯಿಂದಲೇ ಮಂಗಳಸ್ನಾನ, ಮನೆಯನ್ನು ಸಾರಿಸಿ ರಂಗೋಲಿ ಇಡುವುದು, ತೋರಣ, ಚಪ್ಪರಾದಿಗಳನ್ನು ಕಟ್ಟುವುದು, ಒಳ್ಳೆಯ ಸಾಮಾನುಗಳನ್ನು (ಪೂಜಾ, ಹೋಮಾದಿ ಕಾರ್ಯಗಳಿಗೆ) ಹೊಂದಿಸುವುದು ಎಲ್ಲಾ ಮಾಡುತ್ತಿದ್ದೇವೆ. ಇವೆಲ್ಲ ಪರಿಕರಗಳಿಲ್ಲದೆಯೇ ಭಾವನೆಯನ್ನು ಹೊಂದುವುದು ಸಾಧ್ಯ. ಅದಕ್ಕೆ ಅತೀವವಾದ ಶ್ರದ್ಧೆ, ತಾದಾತ್ಮ್ಯಾದಿಗಳು ಬೇಕು. ಆರಂಭದಲ್ಲಿ ಅವು ಎಲ್ಲರಿಗೂ ಇರಲು ಸಾಧ್ಯವಿಲ್ಲದಿರುವುದರಿಂದ ಈ ಪರಿಕರಗಳೂ ಸ್ವಲ್ಪ ಸಹಾಯವಾಗಲಿ ಎಂಬ ದೃಷ್ಟಿಯಿಂದ

ಅಳವಡಿಸಿದ್ದಾರೆ. ಆದರೆ ದುರದೃಷ್ಟವಶಾತ್ ಈ ಕಾಲದಲ್ಲಿ ಆ ಸಂಸ್ಕಾರದ ಪ್ರಧಾನ ಭಾಗವೇ ತಿಳಿಯದಂತಾಗಿ, ಈ ಪರಿಕರಗಳ scrupulous ಪಾಲನೆಯೇ ಸಂಸ್ಕಾರವೆಂದು ತಿಳಿದುಕೊಂಡು ಮೋಸಹೋಗುತ್ತಿದ್ದೇವೆ. ಒಂದು ಕ್ರಮಕ್ಕೋಸ್ಕರ ಸಾಮಾನ್ಯವಾಗಿ ಎಲ್ಲ ದೇವಕಾರ್ಯಗಳನ್ನೂ ಉತ್ತರಾಯಣ, ಶುಕ್ಲಪಕ್ಷ ಪೂರ್ವಾಹ್ನದಲ್ಲಿ ಮಾಡಬೇಕೆಂಬುದು ಸೂತ್ರಕಾರರ ಮತ. ಅಂದರೆ ಅದರಿಂದಲೇ ಒಂದು ಪುಣ್ಯವೋ, ಅಂತಃಕರಣ ಸಂಸ್ಕಾರವೋ ಆಗುತ್ತದೆಂದಲ್ಲ. ಅದೊಂದು ಕ್ರಮ ಅಷ್ಟೆ. ಅದಕ್ಕೇ ಎಲ್ಲಾ ಸೂತ್ರಕಾರರೂ 'ಸರ್ವಋತವೋ ವಿವಾಹಸ್ಯ' (ವಿವಾಹವನ್ನು ಎಲ್ಲಾ ತಿಂಗಳುಗಳಲ್ಲಿಯೂ ಮಾಡಬಹುದು) ಎಂದರು. ಹಾಗೆ ಉತ್ತರಾಯಣದಿಂದಲೇ ಒಂದು ಫಲ ಬರುವುದಾಗಿದ್ದಿದ್ದರೆ ಯಾವ ಸೂತ್ರಕಾರರೂ ಎಲ್ಲ ತಿಂಗಳುಗಳಲ್ಲಿಯೂ ವಿವಾಹ ಮಾಡ ಬಹುದು ಎಂದು ಹೇಳುತ್ತಿರಲಿಲ್ಲ. ಉಪನಯನಕ್ಕೂ 'ಗರ್ಭಾಷ್ಟಮೇಷು ಬ್ರಾಹ್ಮಣಮುಪನಯೀತ' ಗರ್ಭಾಷ್ಟಮದಲ್ಲಿ, ಅಥವಾ 8ನೇ ವರ್ಷ ಬ್ರಾಹ್ಮಣನಿಗೆ ಉಪನಯನ ಮಾಡಬೇಕು. 'ವಸಂತೇ ಬ್ರಾಹ್ಮಣಮುಪನಯೀತ' ವಸಂತ ಋತುವಿನಲ್ಲಿ ಮಾಡಬೇಕು ಅಂದರು. ಇದೂ ಕೇವಲ ಕ್ರಮಕ್ಕೋಸ್ಕರ, ಅನುಕೂಲ ಕ್ಕೋಸ್ಕರ. ಅದರಿಂದ ಆಗ ಮಾಡಿದರೆ ಹೆಚ್ಚು ಪುಣ್ಯವೆಂದೂ ಬೇರೆ ಸಮಯದಲ್ಲಿ ಮಾಡಿದರೆ ಪಾಪವೆಂದೂ ಭಾವಿಸಬಾರದು. ಆದಷ್ಟೂ ಅವರು ಹಾಕಿಕೊಟ್ಟಿರುವ ಕ್ರಮವನ್ನು ಪಾಲಿಸುವುದು ಯುಕ್ತ. ಅವರ ವಿಷಯದಲ್ಲಿ ನಮ್ಮ ಶ್ರದ್ಧಾಗೌರವಗಳನ್ನು ತೋರಿಸಿದಂತಾಗುತ್ತದೆ. ನಮ್ಮ ಕಾಲೇಜುಗಳಲ್ಲಿ Semesterಗಳು Summer Vacation ಗಳು, ಇಟ್ಟುಕೊಂಡಿರುವಂತೆ!! ಅದಕ್ಕೇ ವೇದದಲ್ಲಿ ಆಧಾನಕ್ಕೆ (ಅಗ್ನಿಹೋತ್ರ ಆರಂಭಿಸಲು) ಅನೇಕ ನಕ್ಷತ್ರಗಳನ್ನು ಹೇಳಿ ಕೊನೆಯಲ್ಲಿ 'ಯದೇವೈನಂ ಯಜ್ಞ ಉಪನಮೇತ್ । ತಸ್ಮಾದಧೀತ । ಸೈವಾಸ್ಯರ್ಧಿಃ' ಎಂದು ಹೇಳಿತು (ಯಾವಾಗ ಒಬ್ಬ ವ್ಯಕ್ತಿಗೆ ಆಧಾನ ಮಾಡಬೇಕೆಂದು ಶ್ರದ್ಧಾ ಭಕ್ತಿಗಳು ಉಂಟಾಗುತ್ತವೆಯೋ ಆಗಲೇ ಆರಂಭಿಸಬೇಕು. ಅದರಿಂದಲೇ ಅವನಿಗೆ ಅಭಿವೃದ್ಧಿ. ಬಾಕಿ ಹೇಳಿರುವುದನ್ನೆಲ್ಲಾ ತ್ಯಾಜ್ಯ ಮಾಡಬೇಕು). ಹಾಗೆ ನಿಜವಾಗಿ ಒಂದು ಒಳ್ಳೆಯ ದಿನದಿಂದಲೇ ಯಾರಿಗಾದರೂ, ಏನಾದರೂ ಫಲ ಬರುವುದಾಗಿದ್ದರೆ ವೇದ ಎಂದಿಗೂ ಹಾಗೆ ಹೇಳುತ್ತಿರಲಿಲ್ಲ. ಇನ್ನು ಮುಹೂರ್ತ, ತಾರಾಬಲ, ಗುರುಬಲ, ಚಂದ್ರಬಲ ಇವೆಲ್ಲಾ ನಮಗೆ ಜ್ಯೋತಿಷ್ಯದಲ್ಲಿರುವ ತಪ್ಪು ನಂಬಿಕೆಯಿಂದ ಬಂದಿರುವವು. ವೇದದ ರೀತ್ಯಾ, ಸೂತ್ರಕಾರರ ರೀತ್ಯಾ ದಿವಸದಲ್ಲಿ ಎಲ್ಲಾ ಕಾಲಗಳೂ ಪವಿತ್ರವೇ. ಎಲ್ಲಾ ನಕ್ಷತ್ರಗಳೂ ಪವಿತ್ರವೇ. 'ಪಂಚ ಪುಣ್ಯಾನಿ ನಕ್ಷತ್ರಾಣಿ' (ದಿವಸವನ್ನು ಐದು ಭಾಗವಾಗಿ ಮಾಡಿದರೆ ಎಲ್ಲವೂ ಪುಣ್ಯವೇ). ಅದನ್ನೇ ಪುಣ್ಯಾಹ ವಾಚನದಲ್ಲಿಯೂ ಹೇಳುತ್ತೇವೆ. 'ಯದಾ ವೈ ಸೂರ್ಯ ಉದೇತಿ ಅಥ ನಕ್ಷತ್ರಂ ನೈತಿ, ಯಾವತಿ ತತ್ರ ಸೂರ್ಯೋ ಗಚ್ಛೇತ್ । ಯತ್ರ ಜಘನ್ಯಂ ಪಶ್ಯೇತ್ । ತಾವತಿ ಕುರ್ವೀತ ಯತ್ಕಾರೀ ಸ್ಯಾತ್ । ಪುಣ್ಯಾಹ ಏವ ಕುರುತೇ। (ತಾತ್ಪರ್ಯ ಇಷ್ಟು: ಸೂರ್ಯೋದಯದಿಂದ ಸೂರ್ಯಾಸ್ತಮಾನದ ವರೆಗೂ ಪುಣ್ಯಾಹವೇ. ದೇವನಕ್ಷತ್ರಗಳು, ಯಮನಕ್ಷತ್ರಗಳು ಯಾವುದರಲ್ಲಿ ಮಾಡಿದರೂ ಪುಣ್ಯಾಹವೇ). ಇಷ್ಟು ಹೇಳಿ ಬಂದವರೆಲ್ಲರೂ 'ಪುಣ್ಯಾಹಂ' ಎಂದು ಹೇಳಬೇಕು. ಅಂದರೆ ಕಾಲ ಬಹಳ ಚೆನ್ನಾಗಿದೆ ಎಂದರ್ಥ. ಮತ್ತೇನು ಹೇಳಬಹುದೆಂದರೆ ಯಾವ ಕಾರ್ಯವನ್ನಾದರೂ ಬೆಳಗ್ಗೆ ಮಾಡಿದರೆ ಹೆಚ್ಚು ಹಿತವಾಗಿರುತ್ತದೆ. ಆ ಕರ್ಮಕ್ಕೆ ಬೇಕಾದ ಭಾವನೆಗಳನ್ನು ಬರಿಸಿಕೊಳ್ಳುವುದಕ್ಕೆ ಕಾಲ ಅನುಕೂಲವಾಗಿರುತ್ತದೆ. ಮಧ್ಯಾಹ್ನ ಸಾಯಂಕಾಲವಾಗಿಬಿಟ್ಟರೆ ಶ್ರಮ, ಸುಸ್ತು, ಸಂಕಟ, ನಿದ್ರೆ, ಹಸಿವು ಎಲ್ಲವೂ ಕಾಡಲು ಆರಂಭಿಸುತ್ತವೆ. ತದೇಕಚಿತ್ತತೆ ಬರುವುದು ಕಷ್ಟ ಎನ್ನುವುದೊಂದೇ. ಇನ್ನು ಮುಹೂರ್ತದ್ದಂತೂ ಮೂರ್ಖತನ ಎನ್ನುವುದೇ ನನ್ನ ಅಭಿಪ್ರಾಯ. ಅವೆಲ್ಲ ಜ್ಯೋತಿಷ್ಯದಲ್ಲಿರುವ ಅಂಧ ನಂಬಿಕೆಯ ಪರಿಣಾಮ. ನಕ್ಷತ್ರಗಳೂ, ಗ್ರಹಗಳೂ ನಮಗೇನೋ ಮಾಡುತ್ತವೆಯೆಂಬ ನಮ್ಮ ತಪ್ಪು ನಂಬಿಕೆಯೂ ಅದಕ್ಕೆ ಕಾರಣ. ಅವುಗಳ ಪಾಡಿಗೆ ಅವು ಇರುತ್ತವೆ. ನಮ್ಮನ್ನು, ಅದರಲ್ಲಿಯೂ ನಮ್ಮ ಅಂತಃಕರಣವನ್ನು ಅವು ಹೇಗೆ influence ಮಾಡುತ್ತವೆ ಎಂಬುದು ತಿಳಿಯದಾಗಿದೆ. ಮುಹೂರ್ತ ಸಾಧನೆ ಮಾಡುವುದೇ ಒಂದು ದೊಡ್ಡ feat ಆಗಿ ಕೂತಿದೆ. ಆ ಅವಾಂತರದಲ್ಲಿ ಎಲ್ಲಾ ವೈದಿಕ ಕರ್ಮಗಳಿಗೂ ಲೋಪ. ಮೊದಲೇ ನಾವು ಮಾಡುವುದು ಅಷ್ಟು ಲಕ್ಷಣ! ಇನ್ನು ಲಗ್ನದ ಅವಾಂತರದಲ್ಲಿ ಅದೂ ಸರಿಯಾಗಿ ನಡೆಯುವುದಿಲ್ಲ. ಮುಹೂರ್ತದಿಂದಲೇ ನಮಗೆ ಸಂಸ್ಕಾರವಾಗುವುದಾದರೆ, ಈ ಕಷ್ಟಗಳೆಲ್ಲ ಏತಕ್ಕೆ ? ಆದ್ದರಿಂದ ನಮ್ಮ ವೇದರೀತ್ಯಾ, ಸೂತ್ರಕಾರರ ರೀತ್ಯಾ ಸೂರ್ಯೋದಯಕ್ಕೆ ಆರಂಭಿಸಿ ಯಾವಾಗ ಬೇಕಾದರೂ ಮಾಡಬಹುದು. ಪಂಚಾಂಗಕರ್ತರೂ ಬರೆಯುವುದು, ಸಮಾಜದಲ್ಲಿ ಹೇಗೆ ರೂಢಿ ಬಂದಿದೆಯೋ ಅದನ್ನು ಬರೆಯುತ್ತಾರೆ. 100ಕ್ಕೆ 90 ವಿವಾಹ ಉಪನಯನಗಳು ಅವರು ಹೇಳಿರುವ ಕಾಲವಲ್ಲದ ಬೇರೆ ಕಾಲಗಳಲ್ಲಿ ನಡೆಯುತ್ತಿವೆ. ಅವರು ಹೇಳಿರುವ ಕಾಲದಲ್ಲಿ ಮಾಡಿದ ಸಂಸ್ಕಾರದಿಂದ ಪ್ರಯೋಜನವನ್ನೂ ಕಂಡಿಲ್ಲ. ಬೇರೆ ಕಾಲದಲ್ಲಿ ಮಾಡಿದ್ದರಿಂದ ನಷ್ಟವನ್ನೂ ನೋಡಿಲ್ಲ (ಇಲ್ಲಿ ಪ್ರಯೋಜನ, ನಷ್ಟಗಳೆಂದರೆ ಕೇವಲ ಅಂತಃಕರಣ ಸಂಸ್ಕಾರದ ಬಗ್ಗೆ ನಾನು

ಮಾತನಾಡುತ್ತಿದ್ದೇನೆ. ವಿವಾಹ ಸಂಸ್ಕಾರದಿಂದಲಾಗಲಿ, ಉಪನಯನ ಸಂಸ್ಕಾರದಿಂದಾಗಲಿ, ಯಾರಿಗಾದರೂ ಐಹಿಕ ಭೋಗ ಅಭಿವೃದ್ಧಿಯಾಗುತ್ತದೆಯೆಂಬ ನಂಬಿಕೆ ಇದ್ದ ಪಕ್ಷದಲ್ಲಿ ಅದು ಅಪಾಯಕರವಾದ ಭ್ರಾಂತಿ ಎಂದು ಹೇಳಬೇಕು.) ಗ್ರಹಶಾಂತಿ, ತಾರಾಬಲಶಾಂತಿ, ಮುಹೂರ್ತಶಾಂತಿಗಳೆಲ್ಲಾ ನಾವು ಮಾಡಿಕೊಂಡಿರುವ ಒಂದು ಮಾರ್ಗ. ಬಾಕಿ ಜನಗಳ ದೃಷ್ಟ್ಯಾ ಭಯದಿಂದಲಾದರೂ ಅವರಿಗೆ ತ್ಯಾಗ ಮಾಡಲು ಒಂದು ಅವಕಾಶ ಸಿಗಲಿ ಎಂಬ ದೃಷ್ಟಿ, ಅಷ್ಟೆ.

3) ಇನ್ನು ಗ್ರಹಣ ಕಾಲದಲ್ಲಿ ನಾವೆಲ್ಲಾ ಅನುಸರಿಸುತ್ತಿರುವ ನಿಯಮಗಳನ್ನು idiotic ಎಂದು ಹೇಳಬೇಕಷ್ಟೆ. ಸ್ನಾನ ತರ್ಪಣಗಳ ಬಗ್ಗೆ ನಾನು ಹೇಳುತ್ತಿಲ್ಲ. ಬಾಕಿ, ಬಟ್ಟೆಗಳನ್ನು ನೆನೆಸುವುದು, ಪಾತ್ರೆಗಳನ್ನು ತೊಳೆಯುವುದು, ಗರ್ಭಿಣಿ ಸ್ತ್ರೀಯರನ್ನು ರೂಮಿನಲ್ಲಿ ಕೂಡಿಹಾಕಿ ಸಂಧಿಗಳಿಗೆಲ್ಲಾ ಬಟ್ಟೆ ತುರುಕುವುದು, ಖಾದ್ಯ ಪದಾರ್ಥಗಳ ಮೇಲೆ ದರ್ಭೆ ಹಾಕುವುದು ಇತ್ಯಾದಿ. ಶ್ರೀಕಂಠ ! ಗ್ರಹಣವೆಂಬುದು, purely an astronomical phenomenon. ರಾಹುವಾಗಲಿ, ಕೇತುವಾಗಲಿ ಸೂರ್ಯ ಚಂದ್ರರನ್ನು ನುಂಗುತ್ತಾರೆಂದು ಹೇಳುವುದು fairy tales ಅಷ್ಟೆ. ನಮಗೆಲ್ಲಾ ಈಗ ಗ್ರಹಣ ಅನ್ನುವುದು ಏನು ಎಂದು ಚೆನ್ನಾಗಿ ಗೊತ್ತಿದೆ. ಅದರಿಂದ ಭೂಮಿಯಲ್ಲಿರುವ ಜನಗಳಿಗೆ ಯಾವ ವಿಧವಾದ ಪರಿಣಾಮವೂ ಇಲ್ಲವೆಂಬುದನ್ನು astronomers, scientists ಎಲ್ಲರೂ ಘಂಟಾಘೋಷವಾಗಿ ಹೇಳುತ್ತಿದ್ದಾರೆ. ಗ್ರಹಣದ ಪರಿಣಾಮ ವಸ್ತುನಿಷ್ಠವಾಗಿದ್ದ ಪಕ್ಷದಲ್ಲಿ ಅದು ಪ್ರಪಂಚದಲ್ಲಿ ಎಲ್ಲರಿಗೂ ಆಗಬೇಕಲ್ಲವೇ ? ಹಿಂದೂಗಳಿಗೆ ಮಾತ್ರ ಎಂದು ಹೇಳುವುದು ನಗೆಪಾಟಲಲ್ಲವೇ ? ಸಾಮಾನ್ಯ ದಿನಗಳಿಗಿಂತ ಅದೊಂದು ವಿಶೇಷ ದಿನವೆಂದು ಭಾವಿಸಿ, ಅದೊಂದು ನೆಪ ಇಟ್ಟುಕೊಂಡು, ಜಪ, ಶ್ರಾದ್ಧ ಮುಂತಾದವುಗಳನ್ನು ಮಾಡುತ್ತಿದ್ದೇವೆ. ಸ್ವಾಭಾವಿಕ ಪ್ರವೃತ್ತಿಗಳಾದ ನಮ್ಮ ಆಲಸ್ಯ, ಜಡತ್ವ, ವ್ಯರ್ಥವಾದ ಕಾರ್ಯಗಳಲ್ಲಿ ಆಸಕ್ತಿ, ಇವುಗಳನ್ನು curb ಮಾಡಲು ಒಂದು ಅವಕಾಶ ಅಷ್ಟೆ. ನಿತ್ಯವೂ ಅವುಗಳನ್ನು curb ಮಾಡುವುದು ಅಗತ್ಯವಾದರೂ practical ಆಗಿ ಸಾಧ್ಯವಾಗಲಾರದು. ಆದ್ದರಿಂದ ಹೀಗೆ ಕೆಲಕೆಲವು ವಿಶೇಷ ಕಾಲಗಳನ್ನು ಸೂಚಿಸಿ (ಅಮಾವಾಸ್ಯೆ, ಗ್ರಹಣ, ಪ್ರದೋಷ, ರಾಮನವಮೀ, ಕೃಷ್ಣಜಯಂತೀ, ಕಾರ್ತಿಕ ಸೋಮವಾರ, ವಿನಾಯಕ ಚತುರ್ಥೀ, ಅಕ್ಷತೃತೀಯಾ, ಮಾಸಶಿವರಾತ್ರಿ , ಮಹಾಶಿವರಾತ್ರಿ , ಉತ್ತರಾಯಣ, ದಕ್ಷಿಣಾಯನ ಪುಣ್ಯಕಾಲಗಳು ಇತ್ಯಾದಿ) ಅಂಥಾ ದಿವಸಗಳಲ್ಲಿಯಾದರೂ ಕೊಂಚ ಕಾಲವಾದರೂ ನಮ್ಮ ಸ್ವಾಭಾವಿಕ ತಮಃಪ್ರವೃತ್ತಿಗಳನ್ನು ಅದುಮಿ, ಸಾತ್ವಿಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲಿ ಎನ್ನುವುದೇ ಉದ್ದೇಶ. ಆ ಉದ್ದೇಶ ನಮಗೆ ಮರೆತುಹೋಯಿತು. ಅವ್ಯಕ್ತವಾದ ಭೀತಿ ಬಂದುಬಿಟ್ಟಿತು. ಆ ಭಯವನ್ನೇ ಅನುಸರಿಸಿ ಏನೇನೋ ಮೂರ್ಖ ಅಭ್ಯಾಸಗಳನ್ನೆಲ್ಲಾ ಜಾರಿಗೆ ತಂದು, ನಮ್ಮ ತಮಃಪ್ರವೃತ್ತಿಯನ್ನು ಇನ್ನೂ ಜಾಸ್ತಿ ಬೆಳಸಿಕೊಳ್ಳುತ್ತಿದ್ದೇವೆ (ಭಯವೆನ್ನುವುದೇ ತಮೋಗುಣ).

4) ಇನ್ನು ಶ್ರಾದ್ಧವನ್ನು ಮೃತತಿಥಿಯಲ್ಲಿಯೇ, ಅಪರಾಹ್ನದಲ್ಲಿಯೇ ಮಾಡಬೇಕೇ ಎಂಬ ಪ್ರಶ್ನೆ. ಶ್ರಾದ್ಧವನ್ನು ಮೃತತಿಥಿಯಲ್ಲಿಯೇ ಮಾಡಬೇಕು ಎಂಬುದು ನಾವು ಮಾಡಿಕೊಂಡಿರುವುದೇ ಹೊರತು ಯಾವ ಸೂತ್ರಕಾರರಾಗಲಿ ಮುಖ್ಯ ಸ್ಮೃತಿಕಾರರಾಗಲಿ ಹೇಳಿಯೇ ಇಲ್ಲ. ಎಲ್ಲಾ ಸೂತ್ರಕಾರರೂ 'ಮಾಸಿ ಶ್ರಾದ್ಧ'ವನ್ನು (ಅಂದರೆ ಆಜೀವ ಪರ್ಯಂತವಾಗಿ ತಿಂಗಳು ತಿಂಗಳಿಗೆ ಮಾಡಬೇಕು) ಹೇಳಿದ್ದಾರೆಯೇ ಹೊರತು ಸಾಂವತ್ಸರಿಕ ಶ್ರಾದ್ಧವನ್ನು ಯಾರೂ ಹೇಳಿಲ್ಲ. ನಮ್ಮ ಶೋಂಭೇರಿತನದಿಂದಲೂ, ಲೋಭದಿಂದಲೂ ಮಾಸಮಾಸ ಮಾಡುವುದನ್ನು ವರ್ಷಕ್ಕೊಂದು ಸಲ ಎಂದು ಇಟ್ಟುಕೊಂಡಿದ್ದೇವೆ. (ಅದಕ್ಕೇ ನಮ್ಮಲ್ಲಿ 'ಮಾಸಿಶ್ರಾದ್ಧ ವಿಧಾನೇನ ಪ್ರತ್ಯಾಬ್ದಿಕ ಶ್ರಾದ್ಧಂ ಕರಿಷ್ಯೇ' ಎಂದು ಸಂಕಲ್ಪ ಹೇಳುವುದು). ಸಾಂವತ್ಸರಿಕ ಶ್ರಾದ್ಧ ಮಾಡುವುದು ಆರಂಭವಾಯಿತೇ ಹೊರತು ಅದನ್ನು ಯಾವ ಕ್ರಮದಲ್ಲಿ ಮಾಡಬೇಕು ಎನ್ನುವುದು ಯಾರಿಗೂ ಹೊಳೆಯಲಿಲ್ಲ. ಆದ್ದರಿಂದ ನಾವು ಮಾಸಿಶ್ರಾದ್ಧ ಕ್ರಮದಂತೆ ಸಾಂವತ್ಸರಿಕ ಶ್ರಾದ್ಧವನ್ನು ಮಾಡುತ್ತೇವೆ. ಆಂಧ್ರ ಕರ್ಣಾಟಕರೆಲ್ಲಾ ಪಿಂಡಪಿತೃಯಜ್ಞ ವಿಧಾನದಂತೆ ಮಾಡುತ್ತಾರೆ (ಇದೆಲ್ಲಾ ಇನ್ನೂ ಬಹಳ ವಿಷಯಗಳಿವೆ. ಬರೆಯಲು ಕಷ್ಟ. ಪುರಸತ್ತೂ ಇಲ್ಲ. ನಾನು ಭದ್ರಾವತಿಗೆ ಬಂದಾಗ ಒಂದು ಸಣ್ಣ ಗೋಷ್ಠಿ ಬೇಕಾದರೆ ಸೇರಿಸು. ಮಾತನಾಡುತ್ತೇನೆ. ಸಂದೇಹಗಳಿದ್ದರೆ ಚರ್ಚಿಸೋಣ). ಎಲ್ಲಾ ಸೂತ್ರಕಾರರೂ ಮಾಸಿ ಶ್ರಾದ್ಧಕ್ಕೆ ಅಪರ ಪಕ್ಷ (ಕೃಷ್ಣ ಪಕ್ಷ)ದಲ್ಲಿ ಒಂದು ದಿನ ಎಂದು ಹೇಳಿಬಿಟ್ಟರು. ಅದೊಂದು ಕ್ರಮ– ದೇವಕಾರ್ಯಕ್ಕೆ ಶುಕ್ಲಪಕ್ಷವೆಂದು, ಪಿತೃಕಾರ್ಯಕ್ಕೆ ಕೃಷ್ಣಪಕ್ಷವೆಂದು. ಯಾರೂ ಎಲ್ಲಿಯೂ ಮೃತತಿಥಿಯ ಬಗ್ಗೆ ಉಲ್ಲೇಖವನ್ನೂ ಮಾಡಿಲ್ಲ ಇನ್ನೇನು ! ಮೃತತಿಥಿಯಾದರೆ ನಮಗೆ ಅವರ ಸ್ಮರಣೆಗೆ ಅನುಕೂಲವಾಗಬಹುದು ಎಂಬ ದೃಷ್ಟಿಯಿಂದ ಇಟ್ಟುಕೊಳ್ಳಬೇಕಷ್ಟೆ. ತಪ್ಪಿಲ್ಲ. ಆದರೆ ಅವತ್ತು ಮಾಡಿದ್ದೇ ಶ್ರಾದ್ಧ, ಇಲ್ಲದಿದ್ದರೆ ಪಿತೃಗಳು ತೃಪ್ತರಾಗುವುದಿಲ್ಲ, ಶಪಿಸಿ ಹೋಗುತ್ತಾರೆ ಎನ್ನುವುದು ಸರ್ವಥಾ ಅಯುಕ್ತ. ಮೂಲಭೂತವಾಗಿ ನಾವು ಮಾಡುವ ಶ್ರಾದ್ಧದಿಂದ ಪಿತೃಗಳು ತೃಪ್ತಿ ಹೊಂದುತ್ತಾರೆ ಎಂದು ಹೇಳುವುದು ತಪ್ಪು, ಅವರು ತೃಪ್ತರಾಗಿದ್ದಾರೆಂದು ನಾವು ಭಾವಿಸಿಕೊಳ್ಳುವುದು ಬೇರೆ.

ಅದು ಕೇವಲ ನಮ್ಮ ಅಂತರಂಗದ ಭಾವನೆ. ಅದನ್ನು ಯಾರೂ ಬೇಡವೆನ್ನುವುದಿಲ್ಲ. ಆದರೆ objective ಆಗಿ ಹೇಳಬಾರದು. ಶ್ರಾದ್ಧವೆನ್ನುವುದು ಮಗನಾದವನು ತನ್ನ ಕೃತಜ್ಞತೆಯನ್ನು ಸತ್ತ ತಂದೆ ತಾಯಿಗಳಿಗೆ (ಅಜ್ಜ ಮುತ್ತಜ್ಜರಿಗೆ) ಸಲ್ಲಿಸಿ, ತನ್ನ ಪುತ್ರತ್ವವನ್ನು ಕಾಪಾಡಿಕೊಳ್ಳುವುದು. It is purely a system developed to show our gratitude and feelings in the heart. ಶ್ರಾದ್ಧಕರ್ಮ ಪೂರಾ ಅದೇ ಭಾವನೆಯನ್ನು ಬೆಳೆಸುವುದಕ್ಕೇ ಹೊರಟಿರುವುದು. ಯೋಗ್ಯರಾದ, ನಮ್ಮ ತಂದೆ ತಾಯಿಗಳು ಎಂಬ ಭಾವನೆ ಬರಲು ಅರ್ಹರಾದ ಬ್ರಾಹ್ಮಣರಲ್ಲಿ, ಅವತ್ತಿನ ಮಟ್ಟಿಗೆ, ಕೆಲವು ಗಂಟೆಗಳ ಕಾಲ, ನಮ್ಮ ತಾಯಿ ತಂದೆಗಳೇ ಎಂಬ ಭಾವನೆಯನ್ನಿಟ್ಟುಕೊಂಡು ಅವರನ್ನು ನಾನಾ ವಿಧವಾಗಿ ಸತ್ಕರಿಸಿ, ಆರಿಸಿದ ಕಾಯಿಪಲ್ಯಗಳಿಂದಲೂ, ಉತ್ತಮ ಭಕ್ಷ್ಯಭೋಜ್ಯಗಳಿಂದಲೂ, ಷಡ್ರಸೋಪೇತವಾದ ಅನ್ನದಿಂದಲೂ ತೃಪ್ತಿಪಡಿಸಿ, ಶಕ್ತಿಮೀರಿ ದ್ರವ್ಯತ್ಯಾಗ ಮಾಡಿ ಅವರಿಗೆ ಆನಂದವನ್ನುಂಟು ಮಾಡಿ, ಅವರು ಸಂತೋಷದಿಂದ "ತೃಪ್ತಾಸ್ಮಃ" ಎಂದು ನಗುಮುಖದಿಂದ ಅರಳಿದ ಕಣ್ಣುಗಳಿಂದ ಹೃದಯಪೂರ್ವಕವಾಗಿ, ಬಾಯಿ ಬಿಟ್ಟು ಹೇಳಿದಾಗ, ನಮ್ಮ ಸಾಕ್ಷಾತ್ ತಾಯಿ ತಂದೆಗಳೇ ಎದುರಿಗೆ ಕೂತು ಹೇಳಿದಂತಾಗುವುದಿಲ್ಲವೆ? 'ಅದ್ಯ ಮೇ ಸಫಲಂ ಜನ್ಮ...' (ಇವತ್ತು ನನ್ನ ಜನ್ಮ ಸಾರ್ಥಕವಾಯಿತು) ಎಂದು ಶ್ರಾದ್ಧದ ಕೊನೆಯಲ್ಲಿ ಅವರೆದುರಿಗೆ ನಿಂತು ಹೇಳುವಾಗ ಹೃದಯ ಉಬ್ಬಿ ಬರುತ್ತದೆ. ದೇಹ ರೋಮಾಂಚಗೊಳ್ಳುತ್ತದೆ. ಕಂಠ ಗದ್ಗದವಾಗುತ್ತದೆ. ಕಣ್ಣಿನಲ್ಲಿ ಕೃತಕೃತ್ಯತೆಯ ಆನಂದಬಾಷ್ಪ ಸುರಿಯುತ್ತದೆ. ಶ್ರೀಕಂಠ ! ಇದೇ ದೈವಿಕ ಆನಂದ. ಸಾತ್ವಿಕ ಕರ್ಮದ ಚರಿತಾರ್ಥತೆಯ ಫಲ. ಸ್ವಲ್ಪ ಹೊತ್ತಾದರೂ ನಮ್ಮ ತಂದೆತಾಯಿಗಳೊಡನೆ ಈ ಸಾಂಸಾರಿಕ ಲೋಕವನ್ನು ಬಿಟ್ಟು ದೇವಲೋಕದಲ್ಲಿ ಇರುವ ಅನುಭವ. ಈ ಸಾತ್ವಿಕ ಅನುಭವವನ್ನು ಹೊಂದುವುದೇ ಶ್ರಾದ್ಧ ಕರ್ಮದ ಉದ್ದೇಶ. ಬೇರೇನೂ ಇಲ್ಲ. ನಾವು ಕೊಟ್ಟದ್ದು ಯಾವುದೂ ಅವರಿಗೆ ತಲಪುವುದಿಲ್ಲ. ತಲಪಬೇಕಾದ್ದೂ ಇಲ್ಲ. ನಮ್ಮ ಕೃತಕೃತ್ಯತೆಗೇ ಹೊರತು, ಅವರು ಹೊಟ್ಟೆ ತುಂಬಿಕೊಳ್ಳುವುದಕ್ಕಲ್ಲ. ಆದ್ದರಿಂದ ಮೃತತಿಥಿಯಲ್ಲಿ ಕಾರಣಾಂತರಗಳಿಂದ ಮಾಡಲಾಗದಿದ್ದರೆ ಮಾರನೆ ದಿನ ಅನುಕೂಲವಾದಾಗ ತಕ್ಷಣ ಮಾಡಬೇಕು. ಹಾಗೆಂದು indifferent ಆಗಿ ಇರುವುದಲ್ಲ. ಆಕಸ್ಮಾತ್ ಅನಿವಾರ್ಯಗಳು ಬಂದೊದಗಿದಾಗ, ಬಿಡಬಾರದು ಎಂಬ ಹಟದಿಂದ ಹೇಗು ಹೇಗೋ ಮಾಡಿ ತೀರಿಸುವುದಕ್ಕಿಂತ ಅನುಕೂಲವಾದಾಗ ತೃಪ್ತಿಯಿಂದ ಮಾಡಬೇಕು.

ಅಪರಾಹ್ನ ವ್ಯಾಪಿನಿಯಾದ ತಿಥಿ, ಶ್ರಾದ್ಧಕ್ಕೆ ಎಂದು ಒಂದು ಕ್ರಮವೇ ಹೊರತು ಅದು mandatory ಅಲ್ಲ. ಆ ತಿಥಿ ಬಂದಾಗಲೇ ಶ್ರಾದ್ಧ ಮಾಡಬೇಕೆಂದೂ ಇಲ್ಲ. ಸಾಮಾನ್ಯವಾಗಿ ಪಿತೃಕಾರ್ಯ ಮಧ್ಯಾಹ್ನ, ಅಪರಾಹ್ನದಲ್ಲಿ ಮಾಡಬೇಕು. ಇದೊಂದು ವಿಶಿಷ್ಟ ಕ್ರಮ ಅಷ್ಟೆ. ಸಾಧ್ಯವಿಲ್ಲ ಅಂದರೆ ಬೆಳಗ್ಗೇನೇ ಮಾಡುವುದು. ಒಟ್ಟಿನಲ್ಲಿ ಕಾಯಾ, ವಾಚಾ, ಮನಸಾ, ಧನಗಳಿಂದ ಆ ಕಾರ್ಯವನ್ನು ಹೃದಯ ತೃಪ್ತಿಯಾಗುವಂತೆ ಮಾಡಬೇಕು. ಇಂಥಾ ಕಾರ್ಯಗಳಲ್ಲಿ ಸ್ವಲ್ಪ ದೇಹಕ್ಕೆ ಶ್ರಮವಾದರೇನೇ ತೃಪ್ತಿ. ಅದಕ್ಕೇ ನಮ್ಮಲ್ಲಿ ಪೂಜೆ ಮುಂತಾದುವಕ್ಕೆ ಉಪವಾಸವಿರ ಬೇಕೆನ್ನುವುದು. ಆಹಾರ ಕೊಟ್ಟುಬಿಟ್ಟರೆ ಇಂದ್ರಿಯಗಳ ಚಾಪಲ್ಯ ಜಾಸ್ತಿಯಾಗುತ್ತದೆ (ಅಥವಾ ತೀರಾ ಆಹಾರ ಜಾಸ್ತಿಯಾದರೆ ನಿದ್ರೆಯೂ ಬರಬಹುದು). ಮನಸ್ಸಿನ ಏಕಾಗ್ರತೆ ಬರಲು ದುಃಸಾಧ್ಯವಾಗುತ್ತದೆ. ಸ್ವಲ್ಪ ಇಂದ್ರಿಯಗಳಿಗೆ ಆಹಾರ ಕೊಡದೆ ಇದ್ದರೆ ಅವುಗಳ ಚೇಷ್ಟೆ ಕಮ್ಮಿಯಾಗಿ ಸ್ವಲ್ಪ ಸ್ತಬ್ಧವಾಗುತ್ತವೆ. ಆಗ ಮನಸ್ಸು ಏಕಾಗ್ರತೆಯನ್ನು ಹೊಂದಲು ಅನುಕೂಲವಾಗುತ್ತದೆ. ಇದೇ ಉದ್ದೇಶ. ಆದರೆ ಈಗಿನ ನಮ್ಮ ಅಭ್ಯಾಸದಲ್ಲಿ ಕಾಫಿ ಇಲ್ಲದಿದ್ದರೆ ಮನಸ್ಸೂ ಸ್ತಬ್ಧವಾಗಿಬಿಡುತ್ತದೆ. ಇಂದ್ರಿಯಗಳು ಸೋತುಹೋಗುತ್ತವೆ. ಮುಗಿದರೆ ಸಾಕಲ್ಲಪ್ಪಾ ! ಎಂಬ ಜುಗುಪ್ಸೆ ಆವರಿಸುತ್ತದೆ. ಅದು ಸರ್ವಥಾ ಕೂಡದು. ಮನಸ್ಸು ಚಟುವಟಿಕೆಯಿಂದಿರಲು ಏನು ಬೇಕೋ ಅದನ್ನು ತೆಗೆದುಕೊಂಡು ಮಾಡುವುದು ಯುಕ್ತ, ಶಾಸ್ತ್ರಸಮ್ಮತ. ಅವುಗಳನ್ನು ತೆಗೆದುಕೊಂಡು ಶ್ರಾದ್ಧ ಮಾಡಲು ಮನಸ್ಸು ಬರುವುದಿಲ್ಲ ಎಂದು ನೀನು ಹೇಳುವುದು ಭಯದಿಂದ. ಯಾರೋ ಪಿತೃಗಳು ಬರುವ ಹಾಗೂ, ನಾನು ಕಾಫಿ ಕುಡಿದು ಮಾಡುವುದನ್ನು ನೋಡಿ ನನ್ನನ್ನು ಶಪಿಸುವ ಹಾಗೂ, ಭಯಪಡುತ್ತೇವೆ. ಕುಡಿಯದೆ 'ಉಸ್ಸಪ್ಪಾ !' ಎನ್ನುತ್ತಾ ಯಾವತ್ತಿಗೆ ಮುಗಿಯುತ್ತೋ ಈ ಹಾಳು ಶ್ರಾದ್ಧ ಎಂದು ಮನಸ್ಸಿನಲ್ಲಿ ಅಂದುಕೊಂಡು ಮಾಡಲು ನಮಗೆ ಸ್ವಲ್ಪವೂ ಭಯವಿಲ್ಲ. ಕಾರಣ ಶ್ರಾದ್ಧವೆನ್ನುವುದು ನಾವು ಮಾಡುವ ಕಾರ್ಯಗಳಿಂದ ಪಿತೃಗಳು ತೃಪ್ತರಾಗುತ್ತಾರೆನ್ನುವ ತಪ್ಪು ಭಾವನೆ. ಆದ್ದರಿಂದ ಬಯ್ದು ಕೊಂಡೋ, ಅತ್ತುಕೊಂಡೋ ಅಂತೂ ಕಾರ್ಯವನ್ನು ಮುಗಿಸಿದರೆ ಅವರಿಗೆ ತೃಪ್ತಿಯಾಗಿ ಹಾಳಾಗಿ ಹೋಗುತ್ತಾರೆ. ನನ್ನ ಮನಸ್ಸು ಅವರಿಗೇನೂ ಗೊತ್ತಾಗುವುದಿಲ್ಲವಲ್ಲ ಎಂಬ ಮಿಥ್ಯಾ ಧೈರ್ಯ ! ಅದೂ ಅಲ್ಲದೆ ಈ ತಿನ್ನದೆ, ಕುಡಿಯದೆ ಮಾಡುವುದು, ಇವೆಲ್ಲಾ ಶ್ರಾದ್ಧ ಕರ್ಮದಲ್ಲಿ ಅತ್ಯಂತ ಗೌಣವಾದ ಅಂಗಗಳು. ಅದರಲ್ಲಿ ಮುಖ್ಯವಾದುದು ಮಾನಸಿಕವಾದ ಶ್ರದ್ಧಾಭಕ್ತಿಗಳು. ಆ ಮಾನಸಿಕವಾದ ಶ್ರದ್ಧಾ ಭಕ್ತಿಗೋಸ್ಕರ (ಪ್ರಧಾನವಾದದ್ದು), ಗೌಣವಾದ ಅಂಗ ಕಲಾಪಗಳಲ್ಲಿ

ಲೋಪವಾದರೂ ಚಿಂತೆಯಿಲ್ಲ. 'ಅಂಗಲೋಪತ್ವೇ ಪ್ರಧಾನಲೋಪಃ ಅನ್ಯಾಯ್ಯಃ !' (ಅಂಗಲೋಪವಾಗುತ್ತದೆಂದು ಪ್ರಧಾನಕ್ಕೆ ಲೋಪ ಮಾಡುವುದು ಅನ್ಯಾಯ) ಎಂಬುದು ನಮ್ಮಲ್ಲಿ ದೊಡ್ಡ ನ್ಯಾಯ. ಅತ್ಯಂತ ಗೌಣವಾದ ಉಪವಾಸವೆಂಬ ಅಂಗವನ್ನು ಕಾಪಾಡುವುದಕ್ಕೋಸ್ಕರ ಪ್ರಧಾನವಾದ ಶ್ರದ್ಧಾಭಕ್ತಿಗಳನ್ನು ಲೋಪ ಮಾಡಿಸಿಕೊಳ್ಳುವುದು ಮೂರ್ಖತನವಾಗುತ್ತದೆ. ಕೂಷ್ಮಾಂಡಹೋಮಪ್ರಕರಣದಲ್ಲಿ ಇದರ ಬಗ್ಗೆ ವೇದವೇ ವಿಸ್ತಾರವಾಗಿ ಹೇಳುತ್ತಿದೆ. ಅಲ್ಲಿ ಬಂದಾಗ ಹೇಳುತ್ತೇನೆ. ಭಾಗವತದ ಆರಂಭದಲ್ಲಿ ವ್ಯಾಸರು ಭಾಗವತ ಸಪ್ತಾಹವನ್ನು ಕೇಳಬೇಕಾದರೆ ಏಳು ದಿನ ಉಪವಾಸವಿದ್ದು ಕೇಳಬೇಕು ಎಂದು ಹೇಳಿದರು. ಏಳು ದಿನ ಉಪವಾಸವಿದ್ದರೆ ನಾನು ಏಳುವುದಕ್ಕೇ ಆಗುವುದಿಲ್ಲ, ಇನ್ನು ಕೇಳುವುದೆಂತು ಎಂದು ಕೇಳಿದಾಗ ಒಂದು ಹೊತ್ತು ಊಟ ಮಾಡಿ ಕೇಳಬಹುದೆಂದರು. ಅದೂ ಕಷ್ಟವೆಂದಾಗ 'ಅಪ್ಪಾ ! ಭಾಗವತವನ್ನು ಏಳು ದಿನಗಳೂ ರುಚಿಯಾಗಿ ಕೇಳಬೇಕು. ಅದಕ್ಕೆ ಎಷ್ಟು ನಿನಗೆ ಆಹಾರ ತೆಗೆದುಕೊಳ್ಳಬೇಕೆನಿಸುತ್ತದೆಯೋ ಅಷ್ಟು ತೆಗೆದುಕೊಂಡು ಮಾಡು' ಎಂದು ಹೇಳಿದರು. ಇದೇ ನ್ಯಾಯ ಎಲ್ಲಾ ಕಡೆಯಲ್ಲಿಯೂ ಅನ್ವಯಿಸುತ್ತದೆ. ಪುನಃ ಹೇಳಬಯಸುತ್ತೇನೆ. ಉಪವಾಸ ಮಾಡಿ, ಕುಯ್ಯೋ ! ಮರ್ರೋ ! ಎಂದು ಮಾಡುವುದರಿಂದ ಯಾವ ಪುಣ್ಯವೂ ಇಲ್ಲ, ಕಾಫಿ ಕುಡಿದು, ತಿಂದು ಮಾಡಿದ್ದರಿಂದ ಯಾವ ಪಾಪವೂ ಇಲ್ಲ. ಹಾಗೆಂದು ಎಲ್ಲರೂ ಕುಡಿದು ಮಾಡಬೇಕೆಂದು ನಾನು ಹೇಳುತ್ತಿಲ್ಲ. ಒಬ್ಬನಿಗೆ ಕುಡಿಯದೆಯೇ ಕೊನೆಯವರೆಗೂ ಉತ್ಸಾಹದಿಂದ, ಶ್ರದ್ಧಾಭಕ್ತಿಗಳೊಡನೆ ಮಾಡಲು ಸಾಧ್ಯವಾದರೆ ಅವಶ್ಯವಾಗಿ ಮಾಡಬೇಕು. ತಂದೆತಾಯಿಗಳಿಗೋಸ್ಕರ ಇವತ್ತಿನ ನನ್ನ ಚಾಪಲ್ಯವನ್ನು ತಡೆಗಟ್ಟಿದೆನಲ್ಲ ಎಂಬ ಕೃತಕೃತ್ಯತೆಯ ಆನಂದವೂ ಕೊನೆಯಲ್ಲಿ ಸೇರುತ್ತದೆ. ಆ ತ್ಯಾಗವನ್ನು ಮಾಡಲು ಸಾಧ್ಯವಿಲ್ಲದವರು ಕುಡಿದು, ಶ್ರದ್ಧಾಭಕ್ತಿಯಿಂದ ಮಾಡಿ, ಆ ಆನಂದಕ್ಕೆ (ಮೊದಲಿನ ಆನಂದಕ್ಕಿಂತ ಸ್ವಲ್ಪ ಕಮ್ಮಿಯಾಗಬಹುದು. ಚಿಂತೆಯಿಲ್ಲ) ಭಾಗಿಗಳಾಗಬೇಕು. ಆದರೆ ಇದಕ್ಕೋಸ್ಕರ ಸುಮ್ಮನೆ ಬ್ರಾಹ್ಮಣರನ್ನು ಕರೆದು ದಕ್ಷಿಣೆ ಕೊಟ್ಟು ಕಳಿಸುವುದು ತೀರ ಅಯುಕ್ತ.

5) ಆಮಶ್ರಾದ್ಧ (ನೀನು ಬರೆದಿರುವ ಸ್ವಯಂಪಾಕ) ಹಿರಣ್ಯ ಶ್ರಾದ್ಧಗಳನ್ನು ಹೇಳುತ್ತಾರೆ. ನಿಜ. ಆದರೆ ಅವೆಲ್ಲಾ ಅತ್ಯಂತ ಆಪತ್ಕಾಲದಲ್ಲಿ, ಮೃತ್ಯುಶಯ್ಯೆಯಲ್ಲಿರುವಾಗ. ಸಾಮರ್ಥ್ಯವಿರುವಾಗ ಮಾಡಬಾರದು. ನಮ್ಮ ಕೃತಜ್ಞತೆಯನ್ನು ಪೂರಾ ಸಲ್ಲಿಸಿದಂತೆ ಆಗುವುದಿಲ್ಲ. ಮನೆಯಲ್ಲಿ ವೆಂಕಟರಮಣಸ್ವಾಮಿ ಫೋಟೋಗೆ ನಮಸ್ಕಾರ ಮಾಡಿದರೆ ಸಾಕು. ಆದರೆ ಕಷ್ಟಪಟ್ಟು ತಿರುಪತಿಗೆ ಹೋಗಿ ದರ್ಶನ ಮಾಡಿ ಬಂದ ತೃಪ್ತಿಯಾಗುವುದಿಲ್ಲ. ಅಲ್ಲಿಯೂ ಬಸ್ಸಿನಲ್ಲಿ ಹೋದರೆ, ನಡೆದು ಹತ್ತಿ ಹೋದಷ್ಟು ತೃಪ್ತಿಯಾಗುವುದಿಲ್ಲ. ಹಾಗೆಯೇ ಶ್ರಾದ್ಧವೂ. 2-3 ಗಂಟೆಗಳ ಕಾಲ ಹೋಮ, ಭೋಜನಾದಿ ಕಾರ್ಯಗಳಲ್ಲಿ ದೇಹ ಸ್ವಲ್ಪ ಶ್ರಮಪಟ್ಟರೇ ಪೂರ್ಣ ತೃಪ್ತಿ.

ಆದ್ದರಿಂದ ಅವಶ್ಯವಾಗಿ ಅನ್ನಶ್ರಾದ್ಧವನ್ನೇ ಮಾಡಬೇಕು. ಕಾಫಿ ಕುಡಿಯುವುದಕ್ಕೆ ಹೆದರಿ ಹಿರಣ್ಯಶ್ರಾದ್ಧ ಮಾಡುವುದು ಖಂಡಿತ ಅಶ್ರದ್ಧೆಯ ಪರಾಕಾಷ್ಠೆ ಎಂದು ಹೇಳಬಹುದು. ಹಾಗೆ ಉಪವಾಸವೇ ಇದ್ದು ಮಾಡಬೇಕೆಂದರೆ 8 ಘಂಟೆಗೆ ಆರಂಭಿಸಿ 11ಕ್ಕೆ ಮುಗಿಸಲಿ (ಆ ತರಹ ಮಾಡಿದಾಗ ಬಂದ ಬ್ರಾಹ್ಮಣರೂ ರಾತ್ರಿ ಆಹಾರ ಸ್ವೀಕಾರ ಮಾಡಬಹುದು). ಒಟ್ಟಿನಲ್ಲಿ ಶ್ರಾದ್ಧಕರ್ಮವನ್ನು ಉತ್ಸಾಹದಿಂದ, ಶ್ರದ್ಧಾಭಕ್ತಿಗಳಿಂದ ಮಾಡಬೇಕು. ಅದಕ್ಕೆ ಯಾವು ಯಾವುದು ಸಾಧನವಾಗುತ್ತದೋ ಎಲ್ಲವೂ ಗ್ರಾಹ್ಯವೇ. ಇದರ ಮೇಲೆ ಇನ್ನೂ ಸಂದೇಹಗಳು ಬರಬಹುದು. ಎಲ್ಲವನ್ನೂ ಗುರುತು ಮಾಡಿಕೊ. ನಾನು ಬಂದಾಗ ಮಾತನಾಡೋಣ. ಚಿ||ಗಳಿಗೆಲ್ಲಾ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೪೭

ಮಹರ್ಷಿಗಳಿಗೆ ಕೃತಜ್ಞತೆ

ಅದು 'ಸಾವಿತ್ರೀ ಉಪದೇಶ'

ಕುಶಲಮ್ ಶ್ರೀ : Madras
20.6.86

ಚಿ|| ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು.

ನಿನ್ನ ಹೃದಯಾಂತರಾಳದಿಂದ ಬಂದ, ಸಂತೋಷದಿಂದ ಕೂಡಿದ, ವಿಶ್ವಾಸಾಭಿಮಾನಪೂರಿತವಾದ ಕಾಗದ ಬಂದು ತಲಪಿ ಬಹಳ ಸಂತೋಷವಾಯಿತು. ನಾನು 12 ರಿಂದ 17ರವರೆಗೂ ಬೆಂಗಳೂರಿನಲ್ಲಿ ಒಂದು ವಿವಾಹ ಮಾಡಿಸಲೋಸುಗ ಹೋಗಿದ್ದರಿಂದ ಬಂದಮೇಲೆ ನಿನ್ನ ಕಾಗದ ನೋಡಿದೆ. ಕೆಲಸ ವಿದ್ದುದರಿಂದ ಉತ್ತರ ಬರೆಯುವುದು ತಡವಾಯಿತು. ಕ್ಷಮಿಸು.

ಉಪನಯನ ಸಂಸ್ಕಾರದಿಂದ ನಿಮಗೆಲ್ಲಾ ಸಂತೋಷ ವಾಗಿರುವುದು ಸಹಜ. ಆದರೆ ಅದರಿಂದ, ನಿಮಗಿಂತ ಹೆಚ್ಚಾಗಿ ನನಗೆ ಸಂತೋಷವಾಗಿದೆಯೆಂದರೆ ನೀವು ನಂಬುತ್ತೀರೋ ಇಲ್ಲವೋ ಕಾಣೆ. ಅಂಥ ಸತ್ತ್ವಗುಣಪ್ರಧಾನವಾದ ಸತ್ಕರ್ಮಗಳ ಸ್ವರೂಪವೇ

ಅದು. ಮಾಡಿಕೊಳ್ಳುವವರಿಗೆ, ಮಾಡಿಸುವವರಿಗೆ, ನೋಡುವವರಿಗೆ, ಎಲ್ಲರಿಗೂ ಸಂತೋಷವನ್ನು ಕೊಡುತ್ತದೆ. ಮಹರ್ಷಿಗಳ ಉದಾತ್ತವಾದ ಧ್ಯೇಯವು ಆಗಲೇ ಪರಿಪೂರ್ಣವಾಗುವುದು ಸಾಧ್ಯ. ಕೆಲವು ನಿಮಿಷಗಳಾದರೂ ಘಂಟೆಗಳಾದರೂ ಜನರು ಸಾತ್ತ್ವಿಕ ಆನಂದವನ್ನು ಪಡೆಯಲಿ ಎಂಬ ಅವರ ಉತ್ತಮ ಧ್ಯೇಯದಿಂದ ಅಳವಡಿಸಲ್ಪಟ್ಟ ಆ ಕರ್ಮವಿನ್ಯಾಸದಿಂದ ಯಾರಿಗೆ ತಾನೇ ಹೃದಯ ತುಂಬಲಿಕ್ಕಿಲ್ಲ ! ಪ್ರಾತಃಸ್ಮರಣೀಯರಾದ ಪುಣ್ಯಶ್ಲೋಕರಾದ ಆ ಮಹಾತ್ಮರಿಗೆ ನಮ್ಮ ಕೃತಜ್ಞತೆಯನ್ನು ಬೇರೆ ಯಾವ ರೀತಿಯಲ್ಲಿ ತಾನೇ ತೋರಿಸಲು ಸಾಧ್ಯ! ಅವರು ಹೇಳಿದಂತೆ ನಡೆದುಕೊಳ್ಳುವುದನ್ನು ಬಿಟ್ಟು. ಅದನ್ನು ಹೇಗೋ ನೀವು ಮನ್ನಿಸಿ, ನನ್ನ ಮಾತಿಗೆ ಕಿವಿಗೊಟ್ಟು, ಆ ಉಪನಯನ ಸಂಸ್ಕಾರವನ್ನು ಯಥಾವತ್ತಾಗಿ ಸಂಸ್ಕಾರವನ್ನಾಗಿ ಮಾಡಿದಿರಿ. ಅದು ಎಲ್ಲರಿಗೂ ಸಂತೋಷವನ್ನುಂಟುಮಾಡಿದೆ. ನಿಮ್ಮ ಕೃತಜ್ಞತೆಗಳನ್ನು ನಾನು ಸ್ವೀಕರಿಸಿದ್ದೇನೆ. ಹಾಗೆಯೇ ನನ್ನ ಕೃತಜ್ಞತೆಗಳನ್ನು ನೀವು ಸ್ವೀಕರಿಸಿ. ನನಗೆ ಆ ಸಂತೋಷವಿಲ್ಲದಿದ್ದ ಪಕ್ಷದಲ್ಲಿ ಮೂರು ದಿನಗಳೂ ಬೆಳಗ್ಗೆ ಸಾಯಂಕಾಲ ನಿಮ್ಮ ಮನೆಗೆ ಖುಷಿಯಾಗಿ ಬರುತ್ತಿರಲಿಲ್ಲ! ಆದ್ದರಿಂದ ಆ ಸಾತ್ತ್ವಿಕ ಆನಂದವನ್ನು ನಾನು ಹೊಂದಲು ಅವಕಾಶ ಮಾಡಿಕೊಟ್ಟದ್ದಕ್ಕೆ ನನ್ನ ಕೃತಜ್ಞತೆಗಳು. ನೀನು accident ನಿಂದ ಪಾರಾದುದು ಇದರ ಪ್ರಭಾವ ಎಂದು ತಿಳಿದುಕೊಂಡಿರುವುದು ನಿನ್ನ ಸಾತ್ತ್ವಿಕ ಮತ್ತು ಧಾರ್ಮಿಕ ಬುದ್ಧಿ. ಬೇರೆ ತರಹವೂ ಹೇಳಬಹುದಾಗಿತ್ತಲ್ಲವೇ ? ಹಾಗಲ್ಲದೆ ಹೀಗೆ ಹೇಳಿರುವುದು ನಿನಗೆ ಆ ವೈದಿಕ ಕರ್ಮದಲ್ಲಿ ಇರುವ ಶ್ರದ್ಧಾ ದಾರ್ಢ್ಯಗಳನ್ನು ತೋರಿಸುತ್ತದೆ. ಬಹಳ ಸಂತೋಷ.

ನಿನ್ನ ಚಿ।।ಯು ಸಂಧ್ಯಾವಂದನಾದಿಗಳನ್ನು ಮಾಡಿಕೊಂಡು ಬರುತ್ತಿರುವುದನ್ನು ಕೇಳಿ ಪರಮಾನಂದವಾಯಿತು.

ನಾನು ಸಾವಿತ್ರೀ ಉಪದೇಶ ಎಂದು ಉದ್ದೇಶಪೂರ್ವಕವಾಗಿ ಹೇಳಿದೆ. ಸೂತ್ರಕಾರರೆಲ್ಲರೂ ಸಾವಿತ್ರೀ ಉಪದೇಶ ಎಂತಲೇ ಹೇಳಿದ್ದಾರೆ. ಆದರೆ ಕಾಲಕ್ರಮೇಣ ಅದು ಗಾಯತ್ರೀ ಉಪದೇಶ ಎಂದಾಗಿಬಿಟ್ಟಿದೆ. ನಾವು ಉಪದೇಶ ಮಾಡುವ ಮಂತ್ರ, ಸಾವಿತ್ರೀ ಮಂತ್ರ–ಅಂದರೆ ಸವಿತೃದೇವತಾಪರವಾದ ಮಂತ್ರ. ಆ ಮಂತ್ರಕ್ಕೆ ಸವಿತೃವೇ ದೇವತೆ. ಅದು ಗಾಯತ್ರೀಛಂದಸ್ಸಿನಲ್ಲಿದೆ. ನಮ್ಮ ವೇದಗಳಲ್ಲಿ ಗಾಯತ್ರೀಛಂದಸ್ಸಿಗೆ ಬಹಳ ಪ್ರಾಶಸ್ತ್ಯವುಂಟು. ಆದ್ದರಿಂದ ಗಾಯತ್ರೀಛಂದಸ್ಸಿನಲ್ಲಿರುವ ಮಂತ್ರಗಳೆಲ್ಲಾ ಬಹಳ ಉತ್ತಮವೆಂದು ಪರಿಗಣಿಸಲ್ಪಟ್ಟಿವೆ. ಹೀಗಾಗಿ ಈ ಸವಿತೃ ಮಂತ್ರವು ಗಾಯತ್ರೀಛಂದಸ್ಸಿನಲ್ಲಿರುವುದರಿಂದ ಅದಕ್ಕೆ ಗಾಯತ್ರೀಮಂತ್ರ ಎಂದು ಹೇಳುವ ರೂಢಿ ಬಂದುಬಿಟ್ಟಿದೆ. ಆದರೆ ಆ ರೂಢಿ ಎಷ್ಟರಮಟ್ಟಿಗೆ ಹೋಗಿದೆಯೆಂದರೆ ಆ ಮಂತ್ರವು ಸವಿತೃ ದೇವತಾತ್ಮಕವಾದದ್ದು ಎಂಬುದೇ ಮರೆತುಹೋಗಿ ಆ ಮಂತ್ರಕ್ಕೆ ಗಾಯತ್ರಿಯೇದೇವತೆ ಎಂದು ಭ್ರಮಿಸಿ, ಜಪಕ್ಕೆ ಮುಂಚೆ ಆ ಗಾಯತ್ರೀದೇವತೆಯ ಧ್ಯಾನವನ್ನೇ ಹೇಳುತ್ತೇವೆ. ಇನ್ನೂ ಮುಂದಕ್ಕೆ ಹೋಗಿ ಆ ಶ್ಲೋಕದಂತೆ ಪಟವನ್ನೂ ಮಾಡಿ ಅವಳನ್ನು ಧ್ಯಾನ ಮಾಡುತ್ತೇವೆ. ಧ್ಯಾನ ಮಾಡುವುದು ತಪ್ಪಲ್ಲ. ಆದರೆ ಅದು ಕೇವಲ ಛಂದೋಭಿಮಾನಿ ದೇವತೆ. ಮಂತ್ರದೇವತೆಯಲ್ಲ. ಮಂತ್ರದೇವತೆ ಸವಿತೃವೇ ಹೊರತು ಗಾಯತ್ರಿಯಲ್ಲ. ಮಂತ್ರ ಹೇಳುತ್ತಾ ಒಂದು ಸ್ವರೂಪವನ್ನು ಧ್ಯಾನ ಮಾಡಬೇಕಾದರೆ, ಸವಿತೃಸ್ವರೂಪವನ್ನು ಧ್ಯಾನಮಾಡಬೇಕೇ ಹೊರತು ಗಾಯತ್ರೀರೂಪವನ್ನಲ್ಲ. ಆದ್ದರಿಂದ ಉದ್ದೇಶಪೂರ್ವಕವಾಗಿ ನಾನು ಸಾವಿತ್ರೀ ಉಪದೇಶ ಎಂಬ ಪದವನ್ನು ಉಪಯೋಗಿಸಿದೆ. ಇದೇ ರೀತಿ ಅನೇಕ ಅವಿವೇಕಗಳು ನಮ್ಮ ಪ್ರಯೋಗಗಳಲ್ಲಿ ಸೇರಿಕೊಂಡಿವೆ. ಒಂದೊಂದನ್ನೂ ಸರಿಯಾಗಿ ವಿಚಾರ ಮಾಡಿ ಸರಿಪಡಿಸಿಕೊಳ್ಳಬೇಕು. ಅರ್ಥವೇ ತಿಳಿಯದೆ ಮಾಡಿದ್ದು ಒಂದು, ಅರ್ಥದ ಆವಶ್ಯಕತೆಯೇ ಇಲ್ಲ, ಕೇವಲ ಯಾಂತ್ರಿಕ ಕ್ರಿಯೆಗಳಿಂದ ಚರಿತಾರ್ಥವಾಗುತ್ತದೆಂಬ ಮೂಢನಂಬಿಕೆ ಒಂದು–ಇವೆರಡೂ ನಮ್ಮ ಧರ್ಮವನ್ನು ಅರ್ಥಹೀನವಾದ ಧರ್ಮವನ್ನಾಗಿಸಿವೆ. ನಾವು ಜಾಗೃತರಾಗಬೇಕು.

ಶ್ರೀಕಂಠ ! ಬಹಳ ಸಂತೋಷ. ಹೀಗೇ ಸಂದೇಹಗಳನ್ನು ಕೇಳುತ್ತಿರು. ಎರಡನೆಯವನಿಗೆ ಬೇಗ ಉಪನಯನವನ್ನು ಮಾಡು (ಪ್ರಾಯಶ್ಚಿತ್ತದ ಆವಶ್ಯಕತೆಯಿಲ್ಲದ ಹಾಗೆ !). ನನಗೆ ಸತ್ಕರ್ಮವನ್ನು ಮಾಡಿಸಿದ್ದುದರ ಸಂತೋಷವನ್ನು ಕೊಡು. ನೀನು ನನಗೆ ಕೊಟ್ಟದ್ದು ಸಂತೋಷದಿಂದಲೇ ಕೊಟ್ಟದ್ದೇಯೆ. ನಿಜ. ಬಹಳ ಭಾರ ವಾಯಿತೇನೋ ಎನಿಸಿದೆ. ನನ್ನ ಸಂತೋಷ ಅದರಿಂದ ಸ್ವಲ್ಪ adulterate ಆಗುತ್ತದೆಯೇ ಎಂದು ಭಯವಾಗಿದೆ. ಸತ್ತ್ವಗುಣ ಪ್ರಧಾನವಾದ ಆನಂದ ಹೋಗಿ ರಜೋಗುಣವಾಗುತ್ತದೆಯೋ ಎಂಬ ಭಯ. ಆದರೆ ನಿಮಗೂ ಸಂತೋಷವಾಗಬೇಕೆಂಬ ಆಶಯವೂ ಇದೆ. ಚಿಂತೆಯಿಲ್ಲ, ನಿನ್ನ ಸೌ।।ಗೂ ಮಕ್ಕಳಿಗೂ ನನ್ನ ಅನಂತ ಆಶೀರ್ವಾದಗಳು. ನಿನ್ನ ಸೌ।।ಯ ಆದರಾತಿಥ್ಯಕ್ಕೆ ನಾನು ಚಿರಋಣಿ. ನಿಮ್ಮೆಲ್ಲರ ವಿಶ್ವಾಸಾಭಿಮಾನಗಳಿಗೆ ನಾನು ಪಾತ್ರನಾಗಿರುವುದೇ ನನಗೊಂದು ಹೆಮ್ಮೆ. I am really fortunate in my life. ನಿನ್ನ ಸ್ನೇಹಿತರೆಲ್ಲರಿಗೂ ನನ್ನ ನಮಸ್ಕಾರಗಳು.

ಇತಿ ನಿನ್ನವ

ಕುಮಾರಸ್ವಾಮೀ

೪೪೮
Hero-Worship
ಶ್ರಾದ್ಧಪ್ರಯೋಗದ ಧ್ವನಿಮುದ್ರಣ; ಸಮಾನದರ್ಶಿತ್ವದ ಪುನರ್ ಸ್ಥಾಪನೆ ಆಗಬೇಕು, ಅದಕ್ಕಾಗಿ ಹೊಸ ಸಂಸ್ಥೆ ಬೇಡ

कुशलम् श्री : Madras
4.7.86

ಶ್ರೀಕಂಠ !

ನಿನ್ನ ಅಭಿಮಾನಪೂರಿತವಾದ ಕಾಗದ ತಲುಪಿತು. ನಿನ್ನ ತುಂಬುಹೃದಯದ ಹೊಗಳಿಕೆಯನ್ನು ಓದಿ ಸ್ವಲ್ಪ ಸಂಕೋಚವಾಯಿತು. ಯದ್ಯಪಿ, ನಾನು ಕಲಿತಿರುವುದು ಸದ್ವಿನಿಯೋಗವಾಗಿ, ಅಲ್ಪ ಸ್ವಲ್ಪ ಜನಗಳಿಗಾದರೂ ನಮ್ಮ ಸಂಸ್ಕೃತಿ, ಅದರ ಅಭ್ಯಾಸದ ವಿಷಯದಲ್ಲಿ ಜಾಗೃತಿಯುಂಟಾಗಿರುವುದು ನನಗೆ ಹೆಮ್ಮೆಯ ವಿಷಯವಾದರೂ ಅದು ದುರಹಂಕಾರವಾಗ ಬಾರದಲ್ಲವೇ ? ನಾನೆಲ್ಲಿ ಅದಕ್ಕೆ ಬಲಿ ಬೀಳುತ್ತೇನೋ ಎಂದು ಭಯವಾಗಿದೆ. ಆದ್ದರಿಂದ ನೀನು ಬರೆದಿರುವುದನ್ನು ಓದಿದಾಗ ಸಂತೋಷದಿಂದ ಹೃದಯ ಉಬ್ಬುತ್ತದೆ. ಒಡನೆಯೇ ಎಚ್ಚರಗೊಳ್ಳುತ್ತೇನೆ. ಇವತ್ತಿನ ನಮ್ಮ ಸಮಾಜದಲ್ಲಿ ಆಗಿರುವ ಅನಾಹುತವೇ ಇದು. ಯಾವುದೋ ಕಾರಣದಿಂದ ಸಮಾಜದಲ್ಲಿ ಒಬ್ಬ ವ್ಯಕ್ತಿಗೆ ಗೌರವ ಕೊಡಲು ಆರಂಭಿಸಿದಾಗ ಅದರಿಂದ ಅವನಿಗೆ ತಲೆ ತಿರುಗಿ, ತನಗೆ ಎಲ್ಲಾ ಗುಣಗಳೂ ಇವೆಯೆಂದು ಭಾವಿಸಿಕೊಂಡು ಅಹಂಕಾರದಿಂದ ಬೀಗಲು ಆರಂಭಿಸುತ್ತಾನೆ. ಜನಗಳೂ ಅಜ್ಞರಾಗಿ ಅವನಲ್ಲಿ ಇಲ್ಲ ಸಲ್ಲದ ಗುಣಗಳನ್ನು ಆರೋಪ ಮಾಡಿ ಅವನನ್ನು ಅಟ್ಟಕ್ಕೇರಿಸಿ ಕೂರಿಸುತ್ತಾರೆ. ಅದಕ್ಕೇ Aldous Huxley ಹೇಳಿದ, "please do not deify an individual, you will not only, annihilate him but annihilate yourself." ಜರ್ಮನಿಯಲ್ಲಿ ಹಿಟ್ಲರ್‌ಗೆ ಆದ ಪರಿಸ್ಥಿತಿಯೇ ಅದು. ವ್ಯಕ್ತಿಯಲ್ಲಿ ನಿಜವಾಗಿ ಇರುವ ಗುಣಗಳಿಗೆ ಗೌರವ ಕೊಡೋಣ. ಆದರೆ Hero-worship ಆಗಬಾರದು. ಹಾಗೆಯೇ ಅವನ ದೋಷಗಳೂ ನಮಗೆ ತಿಳಿದಿರಬೇಕು. ಅಕ್ಷಮ್ಯವಾದ, ಪಾತಿತ್ಯಹೇತುಭೂತವಾದ ದೋಷಗಳಿದ್ದ ಪಕ್ಷದಲ್ಲಿ ಆ ವ್ಯಕ್ತಿಯನ್ನೇ ತ್ಯಾಜ್ಯ ಮಾಡುವ ಸ್ವಾತಂತ್ರ್ಯವೂ ನಮಗೆ ಇರಬೇಕು. ಇದೆ. ಆದರೆ ಉಪಯೋಗಿಸಿಕೊಂಡಿಲ್ಲ. ಆದ್ದರಿಂದ ನನ್ನನ್ನು ಹೊಗಳುವಂತೆ, ನನ್ನಲ್ಲಿ ಏನಾದರೂ ತಪ್ಪುಗಳಿದ್ದರೆ ಧೈರ್ಯವಾಗಿ ಬರಿ. ತಿದ್ದಿಕೊಳ್ಳಲು ಪ್ರಯತ್ನಪಡುತ್ತೇನೆ. ಮೂರನೆಯವರು ಹೇಳಿದಾಗ ತಾನೇ, ನಮ್ಮ ತಪ್ಪು ತಿಳಿಯುತ್ತದೆ! ನನಗೇ ಬಿಟ್ಟರೆ ಅವುಗಳನ್ನು ನನ್ನ ಶಬ್ದಜಾಲದಿಂದ ಸಮರ್ಥಿಸಿಕೊಂಡೇ ಹೋಗುತ್ತೇನೆ !

ಶ್ರಾದ್ಧಪ್ರಯೋಗದ ವಿಷಯದಲ್ಲಿ ನೀನು ಬರೆದಿರುವುದು ಬಹಳ ಸಾಧುವಾಗಿದೆ. ಒಂದು ಬಾರಿ ನಾನು ಹೇಳಿಕೊಟ್ಟು ಮಾಡಿಸುವಾಗ ಪೂರಾ Record ಮಾಡಿಕೊಂಡರೆ ಅದರಂತೆ ಮಾಡಲೂ ಅನುಕೂಲವಾಗುತ್ತದೆ. ಆಮೇಲೆ ಅಭ್ಯಾಸ ಮಾಡಲೂ ಸಾಧ್ಯವಾಗುತ್ತದೆ. ಏನೂ ಅಡ್ಡಿ ಇಲ್ಲ. ಧಾರಾಳವಾಗಿ ಮಾಡು. ಈಗ ಪ್ರತಿ ತಿಂಗಳೂ ನನ್ನ ತಂಗಿ ಮನೆಗೆ (ಮಂಜು) ಮಾಸಿಕ ಶ್ರಾದ್ಧ ಮಾಡಿಸಲು ಹೋಗುತ್ತಿದ್ದೇನೆ. ಸುರೇಶನಿಗೆ ಕಾಗದ ಬರೆದು ಅಲ್ಲಿ Record ಮಾಡಿಸುವಂತೆ ಹೇಳಬಹುದು. ಈಗ Recorder ಅತ್ಯಂತ ಉಪಯೋಗವಾಗಿದೆ. ನಮ್ಮ ಧರ್ಮಕ್ಕೆ ವಿರೋಧ ವಿಲ್ಲದಂತೆ ಆ ಆಧುನಿಕ gadget ನ್ನು ಉಪಯೋಗಿಸಿಕೊಳ್ಳ ಬಹುದಲ್ಲವೇ ?

ಬ್ರಹ್ಮಕುಮಾರಿ ಸಂಸ್ಥೆಗೆ ಹೋದಾಗ ನೀನೂ ಇದ್ದೆಯಲ್ಲವೆ? ಆಮೇಲೆ ನಿನ್ನ ಜತೆಯಲ್ಲಿ ಮಾತನಾಡಲು ಆಗಲಿಲ್ಲ ಅಂತ ಕಾಣುತ್ತೆ. ನಾನು ಅವರಿಗೆ ಹೇಳಿದಂತೆ, ಅವರು ಮಾಡುವ ಪ್ರಚಾರಾಂಶಗಳಲ್ಲಿ ಯಾವ ವಿರೋಧವೂ ಇಲ್ಲ. ನಮ್ಮ ವೇದೋಪನಿಷತ್ತುಗಳ ತತ್ತ್ವವನ್ನೇ ಹೇಳುತ್ತಿದ್ದಾರೆ. ವೇದಾಂತವನ್ನು ನಿತ್ಯಜೀವನದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಚೆನ್ನಾಗಿ ಹೇಳುತ್ತಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದಕ್ಕೋಸ್ಕರ ಈ ತರಹ ಒಂದು ಹೊಸ ಸಂಸ್ಥೆಯನ್ನು ಆರಂಭಿಸಬೇಕಾದ ಆವಶ್ಯಕತೆಯಿಲ್ಲವೆಂಬುದೇ. ಈಗ ಸದ್ಯದಲ್ಲಿ ಇರುವ system ನಲ್ಲಿ ನಮಗೆ ಕಾಣುವಂತೆ, ಅನೇಕ ತಪ್ಪು ನಂಬಿಕೆಗಳೂ, ತಪ್ಪು ಅಭ್ಯಾಸಗಳೂ ಬೇರೂರಿವೆ. ವೇದಾಂತ ತತ್ತ್ವಕ್ಕೆ ನೇರವಾಗಿ ವಿರೋಧವಾಗಿಯೇ ಇವೆ. ಅವುಗಳನ್ನು ಮೂಲ ಸಹಿತವಾಗಿ ತೊಡೆದು ಹಾಕಿ, ನಮ್ಮ system ಶುದ್ಧವಾಗಿ ಪ್ರಕಾಶಿಸುವಂತೆ ಮಾಡುವುದು ನಮ್ಮ ಕರ್ತವ್ಯ. ಅದಕ್ಕೋಸ್ಕರ ಹೊಸ ವ್ಯವಸ್ಥೆಯನ್ನು ಆರಂಭಿಸಬೇಕಾದ್ದಿಲ್ಲ. ಪರಮಾತ್ಮನು ಚೈತನ್ಯ ಸ್ವರೂಪನಾಗಿ ಎಲ್ಲರಲ್ಲಿಯೂ ಇದ್ದಾನೆ. ಶರೀರಭೇದದಿಂದ ಆತ್ಮಭೇದವಾಗುವುದಿಲ್ಲ. ಅಂದರೆ ಸಮದರ್ಶಿತ್ವವನ್ನು ಪ್ರತಿಯೊಬ್ಬರೂ ಅಭ್ಯಾಸ ಮಾಡಬೇಕಾದುದು ಕರ್ತವ್ಯ. ಒಬ್ಬ ವ್ಯಕ್ತಿಯು ಒಂದು ಗುಂಪಿನಲ್ಲಿ ಹುಟ್ಟಿದ ಮಾತ್ರದಿಂದಲೋ, ವರ್ಣ ವ್ಯತ್ಯಾಸವಾದುದರಿಂದಲೋ ನೀಚನಾಗುವುದಿಲ್ಲ, ಅವನಲ್ಲಿಯೂ ಪರಮಾತ್ಮತತ್ತ್ವವು ಚೈತನ್ಯ ಸ್ವರೂಪವಾಗಿ ಪ್ರಕಾಶಿಸುತ್ತಿದೆಯಲ್ಲವೇ? ಇದು ನಮ್ಮ ವೇದಾಂತದ ಸಾರ. ಇದನ್ನು ಯಾವ ಹೊಸ ಸಂಸ್ಥೆಯಾಗಲಿ (ಆರ್ಯ ಸಮಾಜ, ಬ್ರಹ್ಮಕುಮಾರಿ, ರಾಮಕೃಷ್ಣ ಮಿಷನ್) ಪ್ರತಿಪಾದಿಸಿ, ಹೊಸ ಸಂಸ್ಥೆಯನ್ನು ಆರಂಭಿಸಿದರೆ, ಅದನ್ನು ನಮ್ಮ ಸಮಾಜದಿಂದ ಹೊರತಳ್ಳುತ್ತೇವೆಯೇ ಹೊರತು ಎಲ್ಲರೂ ಅದನ್ನು ಅನುಸರಿಸುವುದಿಲ್ಲ, ಅದಕ್ಕೆ ಬದಲಾಗಿ ನಮ್ಮ

ವ್ಯವಸ್ಥೆಯಲ್ಲಿಯೇ ಇದ್ದು, ಒಬ್ಬೊಬ್ಬರೇ ಆ ವೇದಾಂತ ತತ್ತ್ವವನ್ನು ನಿತ್ಯಜೀವನದಲ್ಲಿ ಸ್ವಲ್ಪಸ್ವಲ್ಪವಾಗಿ ಅಭ್ಯಾಸ ಮಾಡಲು ಆರಂಭಿಸಿದರೆ ಇಡೀ ಸಮಾಜವೇ ಸರಿಹೋದೀತು. ಇದು ನನ್ನ ವಾದ. ನಮ್ಮ ಸಂಧ್ಯಾವಂದನೆ, ಪೂಜೆ, ಹೋಮ, ಶ್ರಾದ್ಧ ಇವುಗಳನ್ನು ಖಂಡಿತ ಬಿಡಬಾರದು. ಆದರೆ ಈಗಿನಂತೆ Robotನ ಹಾಗೆ ಮಾಡದೆ, ಸಮಾನದರ್ಶಿತ್ವವೆಂಬ ಗುಣ ಬೆಳೆಯಲು ಅನುಕೂಲವಾಗುವಂತೆ ಅವುಗಳನ್ನು ಸಾಧಕವಾಗಿ ಉಪಯೋಗಿಸಿಕೊಳ್ಳಬೇಕು. ಅವುಗಳಿಲ್ಲದೆ ಸಾಮಾನ್ಯ ಮನುಷ್ಯ ಮುನ್ನಡೆಯಲಾರ. ಈಗ ಬ್ರಹ್ಮಕುಮಾರಿ ಸಂಸ್ಥೆಯಲ್ಲಿ ಮಾಡಿರುವುದು ತಾನೇ ಏನು ? ಪಟಗಳನ್ನಿಟ್ಟಿದ್ದಾರೆ. Chartಗಳನ್ನಿಟ್ಟಿದ್ದಾರೆ, ನೈವೇದ್ಯ ಮಾಡಿ ಪ್ರಸಾದವೆಂದು ಸ್ವೀಕರಿಸುತ್ತಾರೆ. ಅದೇನೋ ಕೆಂಪು Bulb ಒಂದನ್ನು ಉಪಯೋಗಿಸುತ್ತಾರೆ. ಇದೆಲ್ಲ gimmicks ಆಗಿಬಿಡುತ್ತೆ. ಏಕೆಂದರೆ ಅವೆಲ್ಲಾ ನಮ್ಮ ಸ್ವಕಪೋಲಕಲ್ಪನೆ. ನಮ್ಮ ವೇದೋಕ್ತ ಕರ್ಮಗಳು ಪುಣ್ಯಶ್ಲೋಕರಾದ ಮಹರ್ಷಿಗಳಿಂದ ಬಂದದ್ದು. ಸರಿಯಾಗಿ ಮಾಡುತ್ತಿಲ್ಲವೆಂಬುದು ನಿರ್ವಿವಾದ. ಅದಕ್ಕೆ Red bulb, ಬಿಳೀ ಬಟ್ಟೆಗಳು, Chart ಗಳು ಔಷಧವಲ್ಲ. ಆ ಕರ್ಮಗಳ ಹಿನ್ನೆಲೆ, ತತ್ತ್ವಗಳನ್ನು ಅರ್ಥ ಮಾಡಿಕೊಂಡು ಶುದ್ಧೀಕರಿಸುವುದು ಮುಖ್ಯ ಕರ್ತವ್ಯ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ನಾನು ಹೊರಟಿರುವುದು.

ನೀನು ಗುಣಮುಖನಾಗುತ್ತಿರುವುದನ್ನು ಕೇಳಿ ಬಹಳ ಸಂತೋಷವಾಯಿತು. ನಿನ್ನ ಪಿತೃಗಳ ಅನುಗ್ರಹ, ವೇದಮಾತೆಯ ಆಶೀರ್ವಾದ. ನಾನು ಅದಕ್ಕೆ agent ಇರಬಹುದು! ನಿನ್ನ ಚಿ॥ಗಳಿಗೂ, ಸೌ॥ಗೂ ನನ್ನ ಅನಂತ ಆಶೀರ್ವಾದಗಳನ್ನು ತಿಳಿಸು.

ಇತಿ ನಿನ್ನವ

ಕುಮಾರಸ್ವಾಮಿ

೪೪೯

ಶ್ರಾದ್ಧ ವಿಚಾರ

ಮಂತ್ರ ಕಲಿಯಬೇಕು ; ಬ್ರಾಹ್ಮಣರು, ಆಚಾರ್ಯರು ಬರದಿದ್ದರೆ ; ತಿಥಿ, ಕಾಲ ; ಸ್ಥಾನಗಳು ; ತಿಥಿವ್ಯತ್ಯಾಸ ; ಮುತ್ತೈದೆ ಭೋಜನ ; ಮಹಾವಿಷ್ಣು ಸ್ಥಾನ ; ಅಣ್ಣತಮ್ಮಂದಿರು ಬೇರೆಯಾಗಿಯೇ ಮಾಡಬೇಕು

ಕುಶಲಮ್ ಶ್ರೀ : MADRAS 30.7.86

ಚಿ॥ ಶ್ರೀಕಂಠನಿಗೆ ಕುಮಾರಸ್ವಾಮಿಯು ಮಾಡುವ ಆಶೀರ್ವಾದಗಳು.

ನಿನ್ನ ಅಭಿಮಾನಪೂರ್ವಕವಾದ ಕಾಗದ ತಲಪಿತು. ಈಗ ತಾನೇ ಕಾಲೇಜು ಆರಂಭವಾಗಿರುವುದರಿಂದ ಸ್ವಲ್ಪ busy ಯಾಗಿದ್ದೇನೆ. ಆದ್ದರಿಂದ ತಡವಾಯಿತು. ನಿನ್ನ ಪರಿಸ್ಥಿತಿ ನನಗೆ ಅರ್ಥವಾಯಿತು. ಹೀಗೆ ಕಷ್ಟಪಡುವವರನ್ನು ಅನೇಕರನ್ನು ನೋಡಿದ್ದೇನೆ. ನನಗೆ ತೋರಿದಂತೆ, ಇದಕ್ಕೆ ಸ್ವಂತ ಅಭ್ಯಾಸ ಮಾಡುವುದು ಬಿಟ್ಟು ಬೇರೆ solution ಯಾವುದೂ ಕಾಣುತ್ತಿಲ್ಲ. ಕಷ್ಟವಾಗುತ್ತೆ ನಿಜ. ಆದರೆ ಮಾನಸಿಕ ತೃಪ್ತಿಗೋಸ್ಕರ ಕಷ್ಟಪಡಬೇಕು. ಸಂಗೀತಕ್ಕೆ, ದುಡ್ಡು ಸಂಪಾದನೆಗೆ ಎಷ್ಟೆಷ್ಟು ಕಷ್ಟವಾದರೂ, ಎಷ್ಟೆಷ್ಟು ಕಾಲ ಹಿಡಿದರೂ ಮಾಡಲು ತಯಾರಾಗಿದ್ದೇವೆ. ಆದರೆ ಶ್ರಾದ್ಧಮಂತ್ರಾದಿಗಳನ್ನು ಕಲಿಯಲು ಏಕೆ ನಮಗೆ ಕಷ್ಟವಾಗುತ್ತಿದೆಯೋ ತಿಳಿಯದಾಗಿದೆ. ರುಚಿ ಹುಟ್ಟಿಲ್ಲ ಎಂಬ ಕಾರಣ ಒಂದು ಹೊರತಾಗಿ ಬೇರೇನೂ ಕಾಣುತ್ತಿಲ್ಲ.

ಆದ್ದರಿಂದ ಸ್ವಲ್ಪ ಶ್ರಮಪಟ್ಟು ಅಭ್ಯಾಸ ಮಾಡಿ ನಿನ್ನ ಕೆಲಸವನ್ನು ನೀನೇ ಮಾಡಿಕೊಂಡು ಹೋಗುವಷ್ಟು ಆದರೆ ಮನಸ್ಸಿಗೆ ಅನಂತ ತೃಪ್ತಿಯಾಗುತ್ತದೆ. ಮಾಡಿದ ಕೆಲಸ ಸಾರ್ಥಕವಾಯಿತೆಂಬ ಚರಿತಾರ್ಥತೆ ಉಂಟಾಗುತ್ತದೆ. ಅದು ತಾನೇ ಶ್ರಾದ್ಧಕ್ಕೆ ಫಲ !!

1) ಶ್ರಾದ್ಧಕ್ಕೆ ಆಚಾರ್ಯರಿಗೆ ಹೇಳಿ ಅವರು ಒಪ್ಪಿಕೊಂಡು ಆ ದಿನವೇ ಅವರಿಗೆ ಅನಿವಾರ್ಯವಾಗಿ ಬರಲು ಆಗದಿದ್ದರೆ ಬಂದ ಬ್ರಾಹ್ಮಣರಿಗೇ ಭಕ್ತಿಯಿಂದ ಕಾಲು ತೊಳೆದು, ಅರ್ಘ್ಯಾದಿ ಉಪಚಾರಗಳನ್ನು ಮಾಡಿ (ಇವಕ್ಕೆಲ್ಲ ಮಂತ್ರಗಳನ್ನು ಹೇಳುವುದು ನಿಜ. ಆದರೆ ಅಲ್ಲಿ ಮಂತ್ರ ಪ್ರಧಾನವಲ್ಲ, ಮನಸ್ಸಿನ ಭಕ್ತಿಭಾವನೆ! ಅದಿದ್ದುಬಿಟ್ಟರೆ ಅಕಸ್ಮಾತ್ ಮಂತ್ರ ಹೇಳದಿದ್ದರೂ ಯಾವ ನಷ್ಟವೂ ಇಲ್ಲ. ಮಂತ್ರ ಹೇಳುವುದೂ ಮಾನಸಿಕ ಭಕ್ತಿ ಭಾವನೆಯ ದೃಢೀಕರಣಕ್ಕಲ್ಲವೇ ?) ಭೋಜನಾದಿಗಳನ್ನು ತೃಪ್ತಿಯಾಗಿ ಮಾಡಿಸಿ, ದಕ್ಷಿಣೆ ಕೊಟ್ಟು ಕಳುಹಿಸಿದರಾಯಿತು. ಆ ಉಪಚಾರ ವಾಕ್ಯಗಳನ್ನು ಸಂಸ್ಕೃತದಲ್ಲಿ ಹೇಳಬೇಕೆಂಬ ಯಾವ ನಿಯಮವೂ ಇಲ್ಲ. ಬ್ರಾಹ್ಮಣರಿಗೆ ತಿಳಿಯುವ, ನಮಗೆ ಅರ್ಥವಾಗುವ ಭಾಷೆಯಲ್ಲಿ ಹೇಳಿದರೂ ಸಾರ್ಥಕವಾಗುತ್ತದೆ–ನಮ್ಮ ಸಂಸ್ಕೃತದ ಅನಭಿಜ್ಞತೆಯಲ್ಲಿ ಹಾಗೆ ಹೇಳಿದರೇ ಸಾರ್ಥಕವಾಗುತ್ತದೆ ಎಂದು ಹೇಳಿದರೂ ತಪ್ಪಾಗಲಾರದು–ಆದ್ದರಿಂದ ನಿರ್ಯೋಚನೆಯಾಗಿ ಬ್ರಾಹ್ಮಣ ಭೋಜನ ಮಾಡಿಸಿ, ದಕ್ಷಿಣೆ ಕೊಟ್ಟು ಕಳುಹಿಸಬಹುದು.

2) ಆಚಾರ್ಯರು ಬಂದು ಬ್ರಾಹ್ಮಣರು ಬರಲಾಗದಿದ್ದರೆ? ಇನ್ನೊಂದು ದಿನ ಮಾಡಬೇಕು ಅಷ್ಟೆ. ಶ್ರಾದ್ಧದಲ್ಲಿ ಬ್ರಾಹ್ಮಣ ಭೋಜನವೇ ಪ್ರಧಾನವಾದುದರಿಂದ ಅಗತ್ಯವಾಗಿ ಅದಕ್ಕೆ ಪ್ರಯತ್ನ ಪಡಬೇಕು. ಸಾಧಾರಣ ಲೌಕಿಕಸ್ನೇಹಿತರನ್ನು ಹೇಳಿ ಭೋಜನ ಮಾಡಿಸಿದರೂ ಯಾವ ತಪ್ಪೂ ಇಲ್ಲ.

3) ಇದನ್ನು ಹಿಂದೆಯೇ ಚರ್ಚಿಸಿದ್ದೇನೆ ಎಂದು ಜ್ಞಾಪಕ. ಇರಲಿ.

ಶ್ರಾದ್ಧವನ್ನು ಮೃತತಿಥಿಯಲ್ಲಿ ಮಾಡಬೇಕೆಂದು ಇಟ್ಟುಕೊಂಡಿರುವುದು ಒಂದು ಕ್ರಮಕ್ಕೋಸ್ಕರ. ಪ್ರಾಯಃ ಸತ್ತ ದಿನದಲ್ಲಿ ಅವರುಗಳನ್ನು ಸ್ಮರಿಸಿಕೊಳ್ಳುವುದು ಸುಲಭವಾಗಬಹುದು. ಆದ್ದರಿಂದ ಅನಿವಾರ್ಯ ಪ್ರಸಂಗದಲ್ಲಿ prepone ಅಥವಾ postpone ಖಂಡಿತ ಮಾಡಿಕೊಳ್ಳಬಹುದು. ಯಾವ ಅಡ್ಡಿಯೂ ಇಲ್ಲ, ಆದರೆ not out of indifference or trivolous reasons. ಸಂಕಲ್ಪದಲ್ಲಿ ಯಾವತ್ತು ಮಾಡುತ್ತೀಯೋ ಅವತ್ತಿನ ತಿಥಿಯನ್ನೇ ಹೇಳಿಕೊಳ್ಳುವುದು. ನಾವು ಎಲ್ಲಿಯೂ ಸಂಕಲ್ಪದಲ್ಲಿ 'ಮೃತತಿಥೌ' ಎಂದು ಹೇಳುವುದಿಲ್ಲ. ಆದ್ದರಿಂದ ಅವತ್ತಿನ ತಿಥಿಯನ್ನೇ ಹೇಳಬೇಕು.

4) ತಿಥಿಯ ಪ್ರಾಧಾನ್ಯವಿಲ್ಲವೆಂದಾದ ಮೇಲೆ, ಆ ತಿಥಿ ಇರುವಾಗ ಮಾಡಬೇಕು ಎಂಬ ಪ್ರಶ್ನೆ ಏಳುವುದೇ ಇಲ್ಲ. ಅಪರಾಹ್ನದಲ್ಲಿ ಮಾಡಬೇಕೆನ್ನುವುದೂ ಒಂದು ಕ್ರಮವಿವಕ್ಷೆಗೋಸ್ಕರ. ದೇವತಾಕಾರ್ಯಗಳನ್ನು ಸಾಮಾನ್ಯವಾಗಿ ಪೂರ್ವಾಹ್ನದಲ್ಲಿಯೂ ಪಿತೃಕಾರ್ಯಗಳನ್ನು ಸಾಮಾನ್ಯವಾಗಿ ಅಪರಾಹ್ನದಲ್ಲಿಯೂ ಮಾಡುವುದೆಂಬುದು ಒಂದು ಕ್ರಮ. ಉಪವೀತಿ, ಪ್ರಾಚೀನಾವೀತಿ ಇದ್ದ ಹಾಗೆ. ಅಪರಾಹ್ನದಲ್ಲಿ ಮಾಡಿದರೇ ಪಿತೃತೃಪ್ತಿ, ಇಲ್ಲದಿದ್ದರೆ ನಿರಾಶರಾಗಿ ಹೋಗುತ್ತಾರೆ ಎಂದು ಹೇಳುವುದೆಲ್ಲಾ ಅರ್ಥವಾದವೆಂದು ಇಟ್ಟುಕೊಳ್ಳಬೇಕು. ನಮಗೆ ಅನುಕೂಲವಾಗಿ, ಹಿತವಾಗಿ, ತೃಪ್ತಿಯಾಗಿ, ಸಂತೋಷದಿಂದ ಯಾವಾಗ ಮಾಡಲು ಆಗುತ್ತದೆಯೋ ಅದೇ ಪ್ರಶಸ್ತವಾದ ಕಾಲ.

5) ತಂದೆ ಶ್ರಾದ್ಧಕ್ಕೆ: ಪಿತೃ ಪಿತಾಮಹ ಪ್ರಪಿತಾಮಹ ಸ್ಥಾನಕ್ಕೆ ಒಂದು; ವಿಶ್ವೇದೇವ ಸ್ಥಾನಕ್ಕೆ ಒಂದು ; ಮಹಾವಿಷ್ಣು ಸ್ಥಾನಕ್ಕೆ ಒಂದು (optional)

ಮಾತೃಶ್ರಾದ್ಧಕ್ಕೆ: ಮಾತೃಪಿತಾಮಹೀ ಪ್ರಪಿತಾಮಹೀಸ್ಥಾನಕ್ಕೆ ಒಂದು; ವಿಶ್ವೇದೇವ ಸ್ಥಾನಕ್ಕೆ ಒಂದು; ಮಹಾವಿಷ್ಣು ಸ್ಥಾನಕ್ಕೆ ಒಂದು (optional). ತಾಯಿಯ ತಾಯಿ: ಮಾತಾಮಹೀಮಾತುಃ ಪಿತಾಮಹೀ ಮಾತುಃ ಪ್ರಪಿತಾಮಹೀ ಸ್ಥಾನಕ್ಕೆ ಒಂದು; ವಿಶ್ವೇದೇವ ಸ್ಥಾನಕ್ಕೆ ಒಂದು; ಮಹಾವಿಷ್ಣು ಸ್ಥಾನಕ್ಕೆ ಒಂದು (optional)

6) ಅನಿವಾರ್ಯವಾದರೆ postpone ಮಾಡಲು ಸಾಧ್ಯವಿದೆಯಲ್ಲವೇ ? ಆದ್ದರಿಂದ ದಕ್ಷಿಣೆ ಕೊಟ್ಟು ಕಳಿಸುವುದಕ್ಕಿಂತ ಇನ್ನೊಂದು ದಿನ ಭೋಜನ ಮಾಡಿಸಿ ಶ್ರಾದ್ಧ ಮಾಡುವುದು ಯುಕ್ತ. ಹಾಗೆ ಹತ್ತಿರದಲ್ಲಿ ಒಂದು ದಿನವೂ ಅಡುಗೆ ಮಾಡಲು ಸಾಧ್ಯವೇ ಇಲ್ಲ ಅನ್ನುವುದಾದರೆ ಹಿರಣ್ಯಶ್ರಾದ್ಧ ಮಾಡಬಹುದು.

7) ಮುತ್ತೈದೆಯರನ್ನು ಕರೆದು ಊಟ ಮಾಡಿಸುವುದು ಯಾವ ಶಾಸ್ತ್ರದಲ್ಲಿಯೂ ಇಲ್ಲ. ಕೆಲವರು ಮನಸ್ತೃಪ್ತಿಗೋಸ್ಕರ ಅಭ್ಯಾಸ ಇಟ್ಟುಕೊಂಡಿದ್ದಾರೆ. ನನಗೇನೋ ಅದು ಅನವಶ್ಯಕವೆನಿಸುತ್ತದೆ.

8) ಮಹಾವಿಷ್ಣು ಸ್ಥಾನವನ್ನು optional ಎಂದು ಬರೆದಿದ್ದೇನೆ. ಆ ಸ್ಥಾನಕ್ಕೂ ಒಬ್ಬ ಬ್ರಾಹ್ಮಣನನ್ನು ಹೇಳಿದರೆ ಮೂರು ದಕ್ಷಿಣೆ ಕೊಡಬೇಕಾಗುತ್ತೆ ಎಂದು ಬಿಟ್ಟಿದ್ದಾರೆ. ಆದರೆ ಅದನ್ನು ಮಾಡಿದ್ದೇವೆ ಎಂದು ಸಮಾಧಾನ ಮಾಡಿಕೊಳ್ಳುವುದಕ್ಕೋಸ್ಕರ ದೇವರ ಮುಂದೆ ಎಲೆ ಹಾಕಿ ನಿವೇದನ ಮಾಡುತ್ತೇವೆ (ಅವನಿಗೆ ದಕ್ಷಿಣೆ ಖರ್ಚೂ ಇಲ್ಲ, ಊಟದ ಖರ್ಚೂ ಇಲ್ಲ ಅಲ್ಲವೇ !!). ಹಾಗೆ ದೇವರಿಗೆ ನಿವೇದನ ಮಾಡಿದುದನ್ನು ಇಂಥವರೇ ಊಟ ಮಾಡಬೇಕು ಎಂಬ ಯಾವ ನಿಯಮವೂ ಇಲ್ಲ. ಯಾರು ಬೇಕಾದರೂ ಮಾಡಬಹುದು. ಅದರಲ್ಲಿ ಬ್ರಾಹ್ಮಣರಿಗೆ ಬಡಿಸುವಂತೆ ಸ್ವಲ್ಪ ವಿಶೇಷವಾಗಿ ಬಡಿಸಿರುವುದರಿಂದ (ಆಮೇಲೆ ಬಾಕಿಯವರಿಗೆ ಹಾಗೆ ಬಡಿಸುತ್ತಿರಲಿಲ್ಲ !!) ಅದರ ಮೇಲೆ ಅಧಿಕಾರದ ಪ್ರಶ್ನೆ ಹೊರಟದೆ ಅಂತ ಕಾಣುತ್ತೆ !

9) ಈ ಪ್ರಶ್ನೆಗೆ ಹಿಂದೆಯೇ ಉತ್ತರ ಕೊಟ್ಟಿದ್ದೇನೆ. ಅಣ್ಣ ತಮ್ಮಂದಿರು ಯಾವ ಕಾರಣದಿಂದಲೂ ಒಟ್ಟಿಗೆ ಮಾಡುವ ಅವಕಾಶವೇ ಇಲ್ಲ. ಮಾಡುತ್ತಿದ್ದರೆ ಖಂಡಿತವಾಗಿ ತಪ್ಪು. ಇನ್ನೂ ತಮ್ಮಂದಿರು ಅಣ್ಣನ dependants ಆಗಿದ್ದರೆ ವಿಧಿ ಇಲ್ಲ. ಬೇರೆ ಬೇರೆ ಇದ್ದರೆ ಬೇರೆಬೇರೆ ಮಾಡಿಯೇ ತೀರಬೇಕು. ಆದ್ದರಿಂದ ಈ ಪ್ರಶ್ನೆಯೇ ಅನುಚಿತವೆಂದನಿಸುತ್ತದೆ.

ಇಂಥಾ ಪ್ರಶ್ನೆಗಳು ಈ ಕಾಲದಲ್ಲಿ ಬಹುಜನಗಳಿಗೆ ಬರುತ್ತವೆ. ಅಂದರೆ ಧರ್ಮದ ಮೂಲಭೂತ ತತ್ತ್ವಗಳ ಅರಿವು ನಮಗೆ ಎಷ್ಟರಮಟ್ಟಿಗಿದೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಇದಕ್ಕೆಲ್ಲಾ ಪ್ರಧಾನ ಯಾವುದು, ಗೌಣ ಯಾವುದು ಎಂದು ತಿಳಿಯದಿರುವುದೇ ಮುಖ್ಯ ಕಾರಣವಾಗಿದೆ. ಅದನ್ನು ಎಲ್ಲರಿಗೂ ತಿಳಿಯಪಡಿಸುವುದೆಂತು ಎಂಬುದೂ ತಿಳಿಯುತ್ತಿಲ್ಲ. ಸಂಕೋಚಪಡದೆ ಬರಿ. ವಿಷಯ ತಿಳಿಯಪಡಿಸಲು ನನಗೂ ಒಂದು ಅವಕಾಶ. ಯಾವ ಕಷ್ಟವೂ ಇಲ್ಲ.

ಇತಿ ನಿನ್ನವ

कुमारस्वामी

೪೫೦

ವಿಚಾರಶಕ್ತಿ ಬೇಕು

ರಾಹುಕಾಲಾದಿಗಳ ವಿಚಾರ ; ಪುತ್ರ, ಪುತ್ರಿ ಜನನದ ಬಗೆಗೆ

कुशलम्   श्री :   Madras
28.8.86

ಶ್ರೀಕಂಠ !

ನಿನ್ನ ಕಾಗದ ತಲಪಿತು. ನಿನ್ನ ಪ್ರೀತಿ, ವಿಶ್ವಾಸಗಳಿಗೆ ನಾನು

ಚಿರಋಣಿ. ನನ್ನಿಂದ ನಾಲ್ಕು ಜನಕ್ಕೆ ವಿಚಾರ ಮಾಡಲು ಆಸ್ಪದವಾಗಿದೆಯೆಂಬ ವಿಷಯ ನಿಜವಾಗಲೂ ಸಂತೋಷಕರ ವಾದದ್ದೇ. ಶಾಸ್ತ್ರವಾಕ್ಯ ಯಾವುದು, ಸುಮ್ಮನೆ ಯಾರೋ ಬರೆದಿರುವ ಚಾಟು ವಾಕ್ಯಗಳು ಯಾವುವು ಎಂಬುದನ್ನೂ ಪರಿಶೀಲಿಸುವ ಗೋಜಿಗೆ ಹೋಗದೆ, ಸಂಸ್ಕೃತದಲ್ಲಿ print ಆಗಿರುವುದೆಲ್ಲಾ ಶಾಸ್ತ್ರ ವಾಕ್ಯಗಳೆಂದು ಪರಿಗಣಿಸಿ ಅವುಗಳಿಗೆ ಜೋತುಬಿದ್ದುಕೊಂಡು, ಪ್ರತ್ಯಕ್ಷಸಿದ್ಧವಾದ ವಿಷಯದಲ್ಲಿಯೂ ಸಂದೇಹಿಸುವ ಸ್ಥಿತಿಗೆ ಬಂದಿದ್ದೇವೆ !! ಯಾವ ಮನ್ವಾದಿಸ್ಮೃತಿಕಾರರು, ಆಪಸ್ತಂಬಾದಿಸೂತ್ರಕಾರರು ಎಲ್ಲರೂ, 'ಯಸ್ತರ್ಕೇಣ ಅನುಸಂಧತ್ತೇ ಸ ಧರ್ಮಂ ವೇದ ನೇತರಃ' (ಯಾರು ವೇದಶಾಸ್ತ್ರಗಳಲ್ಲಿ ಹೇಳಿರುವ ಧರ್ಮವನ್ನು ತರ್ಕದಿಂದ ಅಂದರೆ ವಿಚಾರ ಮಾಡಿ ತಿಳಿದುಕೊಳ್ಳುತ್ತಾನೋ ಅವನೇ ಧರ್ಮವನ್ನು ತಿಳಿದವನು. ಇನ್ಯಾರಿಗೂ ತಿಳಿದಿಲ್ಲ ಎಂದೇ ಹೇಳಬೇಕು) ಎಂದು ಹೇಳಿದರೋ ಅವುಗಳನ್ನು ಮರೆತೆವು. ಪರಾವಲಂಬನವೆಂಬುದು 100% ಆಗಿಬಿಟ್ಟಿತು.

ನೀನು ಕೇಳಿರುವ ರಾಹುಕಾಲಾದಿಗಳೂ ಆ ಕೋಟಿಗೆ ಸೇರಿದ್ದೇ. ಅವುಗಳ ಗಲಾಟೆ ಯಾವಾಗ ಆರಂಭವಾಯಿತು ಎಂದು ಹೇಳಲು ಬರುವುದಿಲ್ಲ. ಅಂತೂ ನಮ್ಮ ವೇದ, ಸೂತ್ರ, ಸ್ಮೃತಿಗಳಲ್ಲಿ ಎಲ್ಲಿಯೂ ಅವುಗಳ ಉಲ್ಲೇಖವಿಲ್ಲ. ಜ್ಯೋತಿಷ್ಯದಿಂದ ಆರಂಭವಾಗಿದೆ. ಅದು ಹಳೇ ಜ್ಯೋತಿಃಶಾಸ್ತ್ರಗಳಲ್ಲಿ ಇದ್ದ ಹಾಗೆ ಇಲ್ಲ. ಅರ್ವಾಚೀನ ಗ್ರಂಥಗಳಲ್ಲಿ ಇದ್ದಂತಿದೆ. ಯಾವ ಕಾಲದಲ್ಲಿ ಜನಗಳು ವಿಪರೀತ fatalistic ಆದರೋ, ಜ್ಯೋತಿಷ್ಯದಲ್ಲಿ ನಂಬಿಕೆ ಹೆಚ್ಚಾಯಿತು. ಅದು ನಮ್ಮ ವಿಧಿಯನ್ನು ತಿಳಿಸುವುದೆಂಬ ಭ್ರಮೆ. ಅದು ಸ್ವಲ್ಪಮಟ್ಟಿಗೆ ನಿಜವಿರಬಹುದು. ಆದರೆ ಅದು ಸೂಚಕವೇ ಹೊರತು, ಪರಿಹರಿಸುವ ಸಾಮರ್ಥ್ಯವಿಲ್ಲ. ಜ್ಯೋತಿಷ್ಕರು ಈ ಅವಕಾಶವನ್ನು ತಮ್ಮ ಸಂಪಾದನೆಗೆ ಉಪಯೋಗಿಸಿಕೊಂಡಂತಿದೆ. ಅದೃಷ್ಟವಾದ ಆ ವಿಧಿಪರಿಹಾರಕ್ಕೆ ನಾನಾ ಮಾರ್ಗಗಳನ್ನು ಸೂಚಿಸಲು ಆರಂಭಿಸಿದ್ದಾರೆ – ಶಾಂತಿ, ಪುಷ್ಟಿ, ಹೋಮ, ಪೂಜೆ ಇತ್ಯಾದಿ. ವಿಧಿಯನ್ನು, ಯಾರೂ, ಯಾವತ್ತೂ ಬದಲಾಯಿಸಲು ಸಾಧ್ಯವಿಲ್ಲ ಎಂಬ ಸಿದ್ಧಾಂತವನ್ನು ಸಂಪೂರ್ಣವಾಗಿ ಮರೆತರು. ಅದನ್ನು ವ್ಯತ್ಯಾಸ ಮಾಡಬಹುದೆಂದರು. ಜನಗಳಿಗೆ ರುಚಿ ಹತ್ತಿತು. ಹೆಚ್ಚು ಶ್ರಮವಿಲ್ಲದೆ ದುಷ್ಟ ವಿಧಿಯನ್ನು ಪರಿಹರಿಸಿಕೊಳ್ಳುವುದೋ, ಬೇಕಾದ ವಿಧಿಯನ್ನು ಬರಮಾಡಿಕೊಳ್ಳುವುದೋ ಯಾರಿಗೆ ತಾನೇ ಬೇಕಿಲ್ಲ!! ಈ ಪರಿಹಾರ ಮಾರ್ಗಗಳಲ್ಲಿ ಜ್ಯೋತಿಷ್ಕನು ಕಂಡುಹಿಡಿದುಕೊಂಡದ್ದು ಈ ಕಾಲಗಳಲ್ಲಿ ಬಲಾಬಲಗಳು. ಒಂದು ಕಾಲದಲ್ಲಿ ಒಂದು ಕೆಲಸವನ್ನು ಮಾಡಿಬಿಟ್ಟರೆ ಅದು ಬಹಳ ಜಯಪ್ರದವಾಗುತ್ತದೆಂದು. ಅದು ನಿಜ. ಯಾವ ಕೆಲಸವನ್ನು ಯಾವ ಕಾಲದಲ್ಲಿ ಮಾಡಿದರೆ ಪೂರ್ಣಫಲ ಕೊಡುತ್ತದೋ ಆ ಕಾಲದಲ್ಲಿ ಅವಶ್ಯ ಮಾಡಬೇಕಾದ್ದೇ. ಮಳೆ ಬಂದಾಗ ಕೃಷಿ, ಬಿಸಿಲು ಬಂದಾಗ ಸುಗ್ಗಿ, ದೈಹಿಕ ವ್ಯಾಯಾಮಕ್ಕೆ ಬೆಳಗಿನ ಜಾವ, ಮಲಗಲು ರಾತ್ರಿ, ವಿದ್ಯಾಭ್ಯಾಸಕ್ಕೆ ಹಗಲು ಹೀಗೆ ಎಲ್ಲಾ ಪ್ರಾಪಂಚಿಕ ವ್ಯವಹಾರಗಳಿಗೂ ಒಂದು ಅನುಕೂಲವಾದ ಕಾಲವುಂಟು. ಅವುಗಳನ್ನು ಬೇರೆ ಕಾಲದಲ್ಲಿ ಮಾಡಬಾರದೆಂದಲ್ಲ. ಮಾಡಲು ಸಾಧ್ಯವಿಲ್ಲವೆಂದೂ ಇಲ್ಲ. ಆ ಕಾಲದಲ್ಲಿ ಮಾಡಿದರೆ ಹೆಚ್ಚು ಶ್ರಮವಿಲ್ಲದೆ ಪೂರ್ಣ ಫಲವನ್ನು ಪಡೆಯಲು ಅನುಕೂಲ ಎಂದಷ್ಟೇ. ಈ ದೃಷ್ಟವಾದ ಪ್ರಯೋಜನವನ್ನು ಬಿಟ್ಟರೆ, ಇನ್ಯಾವ ರೀತಿಯಲ್ಲಿಯೂ ಕಾಲವು ನಾವು ಮಾಡುವ ಕೆಲಸವನ್ನು influence ಮಾಡಲು ಸಾಧ್ಯವಿಲ್ಲ. ಇನ್ನು ಅದೃಷ್ಟ ವಿಷಯಗಳಲ್ಲಿ, ವಿವಾಹ, ಉಪನಯನ, ಗೃಹಪ್ರವೇಶ, ಹೋಮ ಇತ್ಯಾದಿಗಳಲ್ಲಿ ನಮಗೆ ವೇದಶಾಸ್ತ್ರಗಳೇ ಪ್ರಮಾಣ. ಅವೆಲ್ಲವೂ ಚಿತ್ತಶುದ್ಧಿ ಸಾಧನಗಳಾದ್ದರಿಂದ ಮನಸ್ಸು ನಿರ್ಮಲವಾಗಿರುವ ಅನುಕೂಲಸಮಯವೇ ಅದಕ್ಕೆ ಕಾಲವೇ ಹೊರತು ಇನ್ಯಾವ criterion ಹೇಳಿದರೂ ತಪ್ಪಾಗುತ್ತದೆ. ಆದ್ದರಿಂದಲೇ ವೇದವು ಆಧಾನಪ್ರಕರಣದಲ್ಲಿ ಹೇಳುವಾಗ 'ಯದೇವೈನಂ ಯಜ್ಞ ಉಪನಮೇತ್। ತಸ್ಮಾದಧೀತ । ಸೈವಾಸ್ಯರ್ಧಿಃ' ಎಂದು ಹೇಳಿತು. ಆಧಾನ ಮಾಡಿ ಅಗ್ನಿಹೋತ್ರ ಆರಂಭಿಸಬೇಕಾದರೆ, ಯಾವ ಸಮಯ, ಯಾವ ನಕ್ಷತ್ರ ಎಂದು ವಿಚಾರ ಮಾಡಿ ಕೊನೆಯಲ್ಲಿ ಮೇಲೆ ಹೇಳಿದ ವಾಕ್ಯವನ್ನು ಹೇಳುತ್ತಿದೆ. 'ಯಾವಾಗ ಆ ಕಾರ್ಯವನ್ನು ಮಾಡಬೇಕೆಂಬ ಶ್ರದ್ಧಾ ಭಕ್ತಿಗಳು ಉಂಟಾಗುತ್ತವೆಯೋ, ಆಗಲೇ ಮಾಡಬೇಕು. ಅದರಿಂದಲೇ ಅಭಿವೃದ್ಧಿ' ಎಂದು ಹೇಳುತ್ತಿದೆ. ಹಾಗೆಯೇ ಸೂತ್ರಕಾರರೂ ಸಾಮಾನ್ಯವಾಗಿ ಪೂರ್ವಾಹ್ಣದಲ್ಲಿ ಮಾಡಿ ಎಂದರು. ಕಾರಣ ಮನಸ್ಸು ಪ್ರಫುಲ್ಲವಾಗಿರುತ್ತದೆ. ದೇಹಕ್ಕೆ ಹೆಚ್ಚು ಶ್ರಮವಾಗುವುದಿಲ್ಲ. ಇದೆಲ್ಲವೂ ಚಿತ್ತಶುದ್ಧಿಗೆ ಅನುಕೂಲಕಾರಕವಾದುವು. ಆದ್ದರಿಂದ ಪ್ರಾಪಂಚಿಕ ವಿಷಯಗಳಲ್ಲಿ ಆ ಕೆಲಸಕ್ಕೆ ಅನುಕೂಲವಾದ ಕಾಲ, ವೈದಿಕವಿಷಯದಲ್ಲಿ ಮನಸ್ಸು ನಿರ್ಮಲವಾಗಿರುವುದಕ್ಕೆ ಅನುಕೂಲವಾದ ಕಾಲ–ಇಷ್ಟೇ ವ್ಯತ್ಯಾಸ ಇಟ್ಟುಕೊಳ್ಳಬೇಕೇ ಹೊರತು ಮುಹೂರ್ತ, ರಾಹುಕಾಲ, ಗುಳಿಕಕಾಲ, ಯಮಗಂಡ ಇವುಗಳಿಗೆ ಅರ್ಥವೇ ಇಲ್ಲ. ಕಾಲವೇ ಯಾವ ಕೆಲಸಕ್ಕೂ ಫಲ ಕೊಡುವುದಿಲ್ಲ. ಕಾಲ ಕೇವಲ ಸಹಾಯಕಸಾಮಗ್ರಿಯೇ ಹೊರತು, ಫಲ ಕೊಡುವುದು ಕೆಲಸ ನಡೆಯುವ ರೀತಿ. ಈಗಿನ ಕಾಲದಂತೆ ಮುಹೂರ್ತ ಸಾಧಿಸಲು ಬಡಿದಾಡಿ, ಕೊನೆಗೆ ಕರ್ಮ ಲೋಪವಾದರೆ ಏನು ಫಲ ಸಿಗಲು ಸಾಧ್ಯ ? ಕಾಲ ಎಂಬುದು

ಎಲ್ಲರಿಗೂ ಒಂದೇ ಅಲ್ಲವೇ ? ಆ ಕಾಲದಲ್ಲಿ ಕೆಲಸ ಮಾಡಿದವರೆಲ್ಲರಿಗೂ ಫಲ ಸಿಗಬೇಕಲ್ಲವೇ ? ಅದೂ ಅಲ್ಲದೆ ಕಾಲವೆಂಬುದು ಕೇವಲ Relative. ಅದು Absolute ಅಲ್ಲ. ಅದಕ್ಕೇ ನಮ್ಮಲ್ಲಿ ಕರ್ಮದ ಫಲಗಳೆಲ್ಲವನ್ನೂ ಪುರುಷನಿಷ್ಠ (subjective) ಎಂದು ಹೇಳುತ್ತೇವೆಯೋ ಹೊರತು ವಸ್ತುನಿಷ್ಠವಲ್ಲ (objective). ಕಾಲದಿಂದಲೇ ಫಲ ಬರುವುದಾದರೆ ಅದು ವಸ್ತುನಿಷ್ಠವಾಗುತ್ತದೆ. ಕೇವಲ ಹೋಮದಿಂದಲೇ ಫಲ ಬರುವುದಾದರೆ ವಸ್ತುನಿಷ್ಠವಾಗಿಬಿಡುತ್ತದೆ. ಅಗ್ನಿಯು ಸುಡುವುದು ವಸ್ತುನಿಷ್ಠಗುಣ. ಆದರೆ ಅಗ್ನಿಯನ್ನು ದೇವತೆಯೆಂದು ಭಾವಿಸುವುದು ಪುರುಷನಿಷ್ಠಗುಣ. ಎಲ್ಲರಿಗೂ ಅಗ್ನಿಯು ದೇವತೆಯಾಗಿಲ್ಲದಿರಬಹುದು. ಹಾಗೆಯೇ ಬೆಳಗ್ಗೆ ಸೂರ್ಯೋದಯ ಕಾಲದಲ್ಲಿ ಪ್ರಶಾಂತ ವಾತಾವರಣ ಇರುವುದು ವಸ್ತುನಿಷ್ಠಗುಣ. ಅದನ್ನು ಉಪಯೋಗಿಸಿಕೊಂಡು ಆ ಕಾಲದಲ್ಲಿ ಸಂಧ್ಯಾವಂದನಾದಿಗಳನ್ನು ಮಾಡಿ ಅಂತರಂಗ ಶುದ್ಧಿ ಸಂಪಾದನೆ ಮಾಡುವುದು ಪುರುಷನಿಷ್ಠ ಗುಣ. ಚಿತ್ತಶುದ್ಧಿಯನ್ನು ಕೊಡುವುದೂ ಆ ಪ್ರಾತಃಕಾಲದ ಗುಣವಾಗಿದ್ದಿದ್ದರೆ, ಆ ಕಾಲದಲ್ಲಿ ಮಾಡಿದವರೆಲ್ಲರಿಗೂ ಚಿತ್ತಶುದ್ಧಿ ಸಿಗಬೇಕು. ಹಾಗಾಗುತ್ತಿಲ್ಲ. ಪ್ರತ್ಯುತ ಸಾಯಂಕಾಲವೋ, ರಾತ್ರಿಯೋ ಮಾಡಿಯೂ ಚಿತ್ತಶುದ್ಧಿ ಸಂಪಾದನೆ ಮಾಡಿರುವವರು ಬೇಕಾದಷ್ಟು ಜನ. ಉಪನಯನವೋ, ವಿವಾಹವೋ ಬೆಳಗ್ಗೆ ಹೊತ್ತು ಮಾಡಿದರೆ, ಆ ಕರ್ಮಗಳಿಂದ ಅಂತರಂಗಶುದ್ಧಿ ಪಡೆಯಲು ಅನುಕೂಲವಾಗುತ್ತದೆ. ಪರವಾಯಿಲ್ಲ, ಸಾಯಂಕಾಲ ಮಾಡಿದರೂ ಮನಸ್ಸು ವಿಕ್ಷೇಪವಿಲ್ಲದೆ ಮಾಡಲು ಸಾಧ್ಯವೆಂದರೆ ಖಂಡಿತ ಯಾವ ಅಡ್ಡಿಯೂ ಇಲ್ಲ. ಅಷ್ಟು ಮಾತ್ರಕ್ಕೇ ಅವನಿಗೆ ದೋಷ ಬರಲು ಸಾಧ್ಯವಿಲ್ಲ. ಬೆಳಗ್ಗೆ ಮಾಡಿದವನಿಗೆ ಆ ಕಾಲದ ಮಹಿಮೆಯಿಂದಲೇ ಹೆಚ್ಚು ಪ್ರಯೋಜನವಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಕಾಲ, ದ್ರವ್ಯ, ದೇಶ ಇವುಗಳೆಲ್ಲವೂ ಪುರುಷನನ್ನು ಅವಲಂಬಿಸಿವೆ. By themselves ಅವು ಯಾವ ಪರಿಣಾಮವನ್ನೂ ಮಾಡಲಾರವು. ಅದಕ್ಕೇ ಅವುಗಳಿಗೆ absolutism ಇಲ್ಲ, Relative. Einstein ಹೇಳಿದಂತೆ There is no observed thing absolutely without relating it to the observer. ದೃಕ್ಕನ್ನು (observer) ಬಿಟ್ಟು ದೃಶ್ಯವನ್ನು (observed) ಹೇಳಲೇಬಾರದು. ಅದೂ ಅಲ್ಲದೆ ಸ್ವಲ್ಪ ಯೋಚಿಸೋಣ. ಒಂದು ಕಾಲವನ್ನು ನಾವು ರಾಹುಕಾಲ ಅಂತಲೋ, ಗುಳಿಕ ಎಂತಲೋ ಹೇಳಿದರೆ ಆ 1½ ಗಂಟೆ ಕಾಲ ಹಾಗೇ ಇರಲು ಸಾಧ್ಯವೇ ? ಭೂಮಿಯು ಸೂರ್ಯನ ಸುತ್ತಲೂ ಗಂಟೆಗೆ 70,000 ಮೈಲಿ ವೇಗದಲ್ಲಿ ತಿರುಗುತ್ತಿರುವಾಗ, ತನ್ನ ಅಕ್ಷದ ಮೇಲೆ ಗಂಟೆಗೆ 500 ಮೈಲಿ ವೇಗದಲ್ಲಿ ತಿರುಗುತ್ತಿರುವಾಗ, ಯಾವ ಕಾಲವನ್ನು ತಾನೇ absolute ಎಂದು ಹೇಳಲು ಸಾಧ್ಯ ! ಆ ಕಾಲವು, ಒಂದು ಕೆಲಸವನ್ನು, ಅದರ ಜಯಾಪಜಯಗಳನ್ನು ನಿರ್ಣಯಿಸುತ್ತದೆ ಎಂದು ಹೇಳುವುದು ಮೂರ್ಖತನವೆಂದೇ ಹೇಳಬೇಕು. ಅದೂ ವಿಚಿತ್ರವೆಂದರೆ ವ್ಯಾವಹಾರಿಕ ವಿಷಯಗಳಿಗೂ ಪ್ರತ್ಯಕ್ಷ ಸಿದ್ಧವಾದ ವಿಷಯಗಳಿಗೂ ಅವುಗಳನ್ನು ತಂದು ಜೋಡಿಸುವುದು stupidity. ರಾಹುಕಾಲದಲ್ಲಿ ಹೊರಟು ಮಧ್ಯ ಕಾರು ಕೆಟ್ಟುಹೋದರೆ, ಅದಕ್ಕೆ ಕಾಲ ಕಾರಣವಲ್ಲ. ನಮ್ಮ ಅಶ್ರದ್ಧೆ ಕಾರಣ. ಅದಕ್ಕೆ Preliminary inspection ಏನು ಮಾಡಬೇಕಿತ್ತೋ ಅದನ್ನು ಸರಿಯಾಗಿ ಮಾಡಲಿಲ್ಲ ಎಂದರ್ಥ. ದಾರಿಯಲ್ಲಿ ಸರಿಯಾಗಿ ನೋಡದೆ ಎಡವಿ ರಕ್ತ ಬರಿಸಿಕೊಂಡರೆ ಅದಕ್ಕೆ ಕಾಲ ಏನು ಮಾಡುತ್ತದೆ ? ಹೀಗೇ ಉದಾಹರಣೆಗಳನ್ನು ಬೇಕಾದಷ್ಟು ಹೇಳಬಹುದು. ಹಾಗೆಯೇ ಉಪನಯನ ಸಂಸ್ಕಾರವೆಂದರೇನು ಎಂದು ತಿಳಿದುಕೊಳ್ಳದೆ ಸಂಸ್ಕಾರವನ್ನು ವಿಧಿವತ್ತಾಗಿಯೂ ಮಾಡದೆ, ಯಾವುದೋ ಜ್ಯೋತಿಷ್ಯನು ಹೇಳುವ ಮುಹೂರ್ತದಲ್ಲಿ ಸಾವಿತ್ರೀ ಉಪದೇಶ ಮಾಡಿಬಿಟ್ಟರೆ ಏನು ಪ್ರಯೋಜನ ಅಪೇಕ್ಷಿಸಲು ಸಾಧ್ಯ? ಏನು ಪ್ರಯೋಜನವಿದೆ ? – ಅಂತರಂಗ ಸಂಸ್ಕಾರ ಬಿಟ್ಟರೆ. ಹಾಗೆಯೇ ವಿವಾಹ ಸಂಸ್ಕಾರ ಎಂದರೇನು ಎಂದು ಗೊತ್ತಿಲ್ಲದೆ ಮುಹೂರ್ತಕ್ಕೆ ಸರಿಯಾಗಿ ಮಾಂಗಲ್ಯಧಾರಣ ಮಾಡಿಬಿಟ್ಟರೆ ಏನು ಫಲ ಸಿಗಲು ಸಾಧ್ಯ ! ಉಪನಯನದಲ್ಲಿಯೋ, ವಿವಾಹದಲ್ಲಿಯೋ ಚೆನ್ನಾಗಿ ತಿಂದೋ ಅಥವಾ ಅತೀವ ಶ್ರಮಪಟ್ಟೋ ಯಾರಿಗಾದರೂ ವ್ಯಾಧಿ ಬಂದರೆ ಅದಕ್ಕೆ ವಿವಾಹ ನಡೆದ ಮುಹೂರ್ತವನ್ನು ಹೊಣೆ ಮಾಡುತ್ತೇವೆ. ಇದು ದಡ್ಡತನ ಅಲ್ಲವೇ?!!

ಆದ್ದರಿಂದ ಕೊನೆಯಲ್ಲಿ ಇಷ್ಟು ಹೇಳಬಹುದು. ವೈದಿಕವೇ ಆಗಲಿ, ಲೌಕಿಕವೇ ಆಗಲಿ, ಆ ಕೆಲಸಗಳಿಗೆ ಅನುಕೂಲವಾದ ಕಾಲಗಳಿವೆ. ಆಗ ಆ ಕೆಲಸಗಳನ್ನು ಮಾಡಿದರೆ ಪ್ರಯೋಜನ ಪೂರ್ತಿಯುಂಟು. ಲೌಕಿಕ ಕಾರ್ಯಗಳಲ್ಲಿ ನಮ್ಮ ಅನುಭವವೇ ಕಾಲನಿರ್ಣಯ ಮಾಡಬೇಕು. ವೈದಿಕ ಕರ್ಮಗಳ ವಿಷಯಗಳಲ್ಲಿ ಸೂತ್ರಕಾರರೇ ಪ್ರಮಾಣ. ಅಲ್ಲಿಯೂ ಅನೇಕ ಕಾಲ ಮಾಡಿದವನ ಅನುಭವ, ಪ್ರಮಾಣವೇ.

ನಿನ್ನ ಮಗಳಿಗೆ ಪುತ್ರೋತ್ಸವವಾದದ್ದನ್ನು ಕೇಳಿ ಬಹಳ ಸಂತೋಷವಾಯಿತು. ಸಂತೋಷಕ್ಕೆ ಪುತ್ರ, ಪುತ್ರೀ ಎನ್ನುವ ವ್ಯತ್ಯಾಸವಿಲ್ಲದಿದ್ದರೂ ಈ ಕಾಲದಲ್ಲಿ ಪುತ್ರನನ್ನು ಪಡೆದರೆ ಹೆಚ್ಚು ಸಂತೋಷಪಡುವ ರೂಢಿ ಬಂದಿದೆ. ಹಳೆಯ ಕಾಲದಲ್ಲಿ ಪುತ್ರನಿಂದ ಗತಿ ಸಿಗುತ್ತದೆಂಬ ನಂಬಿಕೆಯಿಂದ ಹೆಚ್ಚು ಸಂತೋಷ ಪಡುತ್ತಿದ್ದರು ಅಂತ ಕಾಣುತ್ತೆ. ಈ ಕಾಲದಲ್ಲಿ ಪುತ್ರನು

(ಅದರಲ್ಲಿಯೂ ತಮಿಳುನಾಡಿನಲ್ಲಿ) ಒಂದು asset. ಯಾವ ಶ್ರಮವೂ ಪಡದೆ ಹೆಣ್ಣಿನವರ ಮನೆಯಿಂದ ದೋಚಬಹುದಲ್ಲವೇ!!! ಎರಡು ರೀತಿಯಲ್ಲಿಯೂ ಆ ನಂಬಿಕೆ ತಪ್ಪು ಎಂದು ನನ್ನ ಅಭಿಪ್ರಾಯ. ಯಾರೂ, ಇನ್ನೊಬ್ಬರಿಗೆ ಸದ್ಗತಿಯನ್ನು ಕೊಡಿಸಲು ಸಾಧ್ಯವಿಲ್ಲ. ಗಂಡಾಗಿ ಹುಟ್ಟಿದ ಮಾತ್ರಕ್ಕೆ ಹೆಣ್ಣಿನವರಿಂದ ಹಣ ಮೊದಲ್ಗೊಂಡು ದೋಚುವುದೆನ್ನುವುದು ನೈತಿಕವಾಗಿ, ಧಾರ್ಮಿಕವಾಗಿ, ಕಾನೂನುರೀತಿಯಾಗಿ, ಅಪರಾಧವೇ ಸರಿ. ಆದ್ದರಿಂದ ಪುತ್ರನೆಂದ ಮಾತ್ರಕ್ಕೇ ವಿಶೇಷವಾದ ಸಂತೋಷವೇನಿಲ್ಲ ಎಂದು ಹೇಳಲು ಹೊರಟೆ, ಅಷ್ಟೆ.

ಮಗುವಿಗೂ, ತಾಯಿಗೂ ನನ್ನ ಅನಂತ ಆಶೀರ್ವಾದಗಳನ್ನು ತಿಳಿಸು. ಮನೆಯಲ್ಲಿ ಇತರ ಚಿ॥ಗಳೆಲ್ಲರಿಗೂ ನನ್ನ ಆಶೀರ್ವಾದಗಳು.

ಇತಿ ನಿನ್ನವ

कुमारस्वामी

೪೫೧

ಸಾಲಿಗ್ರಾಮ ; ರುದ್ರಾಕ್ಷಿ , ತುಳಸೀಮಾಲೆ

ನಶ್ಯ, ಬೀಡಿ ; ಒಳ್ಳೆಯ ದಿನ, ಮುಹೂರ್ತದ ಬಗೆಗೆ

कुशलम् श्री : MADRAS

22.9.86

ಶ್ರೀಕಂಠ !

ನಿನ್ನ ಕಾಗದ ತಲಪಿತು. ಉತ್ತರ ಬರೆಯಲು ಸ್ವಲ್ಪ ತಡವಾಯಿತು. ನೀನು ಸಂದೇಹಗಳನ್ನು ಬರೆಯಲು ಖಂಡಿತವಾಗಿ ಸಂಕೋಚಪಟ್ಟುಕೊಳ್ಳಬೇಕಾದ್ದಿಲ್ಲ. ಅವು ಎಷ್ಟೇ silly ಯಾಗಿರಲಿ, ನಾನು ಉತ್ತರ ಕೊಡಲು ತಯಾರಿದ್ದೇನೆ. ಕೆಲಸ ಜಾಸ್ತಿ ಇದ್ದರೆ ಸ್ವಲ್ಪ ತಡವಾಗಬಹುದು ಅಷ್ಟೆ. ಒಂದೊಂದು ಬಾರಿ ಕೆಲಸವಿಲ್ಲದಿದ್ದರೂ ಶೋಂಭೇರಿತನದಿಂದಲೂ ತಡವಾಗಬಹುದು. ಅದನ್ನು ಸಹಿಸಿಕೊ. ವಾಸ್ತವವಾಗಿ ಹೇಳುವುದಾದರೆ ನಿನ್ನ ಕಾಗದವನ್ನು ಇದಿರು ನೋಡುತ್ತಿರುತ್ತೇನೆ. ಏಕೆಂದರೆ ಜನಗಳಿಗೆ ಯಾವ ಯಾವ ರೀತಿ ಸಂದೇಹ ಬರಬಹುದೆಂಬುದೇ ನನಗೆ ಗೊತ್ತಾಗದೆ ಹೋಗಿದೆ. ನನಗೆ ತಿಳಿದಿರುವುದರಿಂದ ಎಲ್ಲರಿಗೂ ತಿಳಿದಿದೆ ಎಂದೇ ಭಾವಿಸಿಕೊಂಡುಬಿಡುತ್ತೇನೆ. ಆದ್ದರಿಂದ ನಿನ್ನ ಕಾಗದಗಳು ನನ್ನ ಕಣ್ಣು ತೆರೆದಂತೆ ಆಗುತ್ತದೆ. ಆದ್ದರಿಂದ ನಿರ್ಯೋಚನೆಯಾಗಿ ಬರಿ. ನನ್ನಿಂದ ಜನಗಳಿಗೆ ಅಲ್ಪಸ್ವಲ್ಪ ಉಪಯೋಗವಾದರೂ ಆಗುವುದಿದ್ದರೆ ನನ್ನ ಜನ್ಮ ಕೃತಾರ್ಥವಾಯಿತೆಂದುಕೊಂಡಿದ್ದೇನೆ.

1) ಸಾಲಿಗ್ರಾಮ ಮುಂತಾದವುಗಳನ್ನು ಪೂಜೆ ಮಾಡುವ ವಿಷಯ. ಮೊದಲನೆಯದಾಗಿ ಪೂಜೆ ಎಂದು ಹೊರಟಿರುವುದೇ ನಮ್ಮ ಚಿತ್ತಶುದ್ಧಿಗೋಸ್ಕರವೇ ಹೊರತು ನಾವು ಪೂಜೆ ಮಾಡುವ ದೈವಕ್ಕೆ ತೃಪ್ತಿಯಾಗುತ್ತದೆಯೆಂದಲ್ಲ. ಇಡೀ ಪ್ರಪಂಚವನ್ನು ಸೃಷ್ಟಿ ಮಾಡಿ, ನಮ್ಮನ್ನೂ ಸೃಷ್ಟಿ ಮಾಡಿ, ನಮಗೆ ಬೇಕಾದ ಉಪಭೋಗ ವಸ್ತುಗಳನ್ನೆಲ್ಲಾ ಒದಗಿಸಿಕೊಟ್ಟು, ಸರಿಯಾಗಿ ಕಾಪಾಡಿಕೊಂಡರೆ 80 ಅಥವಾ 90 ವರ್ಷಗಳ ಕಾಲ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡು ಹೋಗುವ ಈ ಮನುಷ್ಯದೇಹವೆಂಬ ಯಂತ್ರವನ್ನು ನಿರ್ಮಾಣ ಮಾಡಿಕೊಟ್ಟಿರುವ ಆ ಅನಂತಶಕ್ತಿ ಸ್ವರೂಪನಾದ ಪರಮಾತ್ಮನಿಗೆ ನಮ್ಮ ಹೃದಯಪೂರ್ವಕವಾದ ಕೃತಜ್ಞತೆಯನ್ನರ್ಪಿಸಬೇಡವೇ ? ಭಕ್ತಿಯಿಂದ, ವಿನಯದಿಂದ ತಲೆಯನ್ನು ತಗ್ಗಿಸಬೇಡವೇ ? ಅವನಿಂದಾದ ಉಪಕಾರಸ್ಮರಣೆಯಿಂದ ಕಣ್ಣಲ್ಲಿ ಆನಂದಬಾಷ್ಪಗಳು ಉದುರಬೇಡವೇ ? ಇವುಗಳನ್ನು ನಾವು ಅವನಿಗೆ ತೋರಿಸುವ ಬಗೆ ಹೇಗೆ ? ಅದೇ ಪೂಜೆ. ಅವನನ್ನು ಉಪನಿಷತ್ತುಗಳು ವಾಚಾಮಗೋಚರನೆಂದೂ (ವಾಕ್ಕು ಮನಸ್ಸಿಗೆ ಸಿಗದೆ ಇರುವಂಥಾವನು), ನಿರ್ವಿಕಾರನೆಂದೂ, ಅರೂಪನೆಂದೂ, ನಿಷ್ಕ್ರಿಯನೆಂದೂ ಉದ್ಘೋಷಿಸುತ್ತಿವೆ. ಅಂಥವನಿಗೆ ನಾವು ಪೂಜೆ ಮಾಡುವುದೆಂತು ? ಅದಕ್ಕೋಸ್ಕರ ಅವನ ಪ್ರತೀಕವೆಂದು ವಿಗ್ರಹ, ಸಾಲಗ್ರಾಮ, ಪಟ, ಚಕ್ರ, ಯಂತ್ರ, ಕಲಶ, ಹೀಗೆ ನಾನಾ ವಿಧವಾಗಿ ಕಲ್ಪಿಸಿಕೊಂಡಿದ್ದೇವೆ. ಅವೆಲ್ಲವೂ ಕೇವಲ ಪ್ರತೀಕಗಳೇ (symbols). ಅವುಗಳಲ್ಲಿ ಪರಮಾತ್ಮನನ್ನು ಭಾವಿಸಿಕೊಂಡು, ಪರಮಾತ್ಮನಿಗೆ ಸಲ್ಲಬೇಕಾದ ನಮ್ಮ ಕೃತಜ್ಞತೆ, ಗೌರವ, ಭಕ್ತಿ, ಪ್ರೀತಿ ಎಲ್ಲವನ್ನೂ ನಮಗೆ ಸಂತೋಷವಾಗುವ ರೀತಿಯಲ್ಲಿ ಆ ಪ್ರತೀಕಗಳಿಗೆ ಸಲ್ಲಿಸುತ್ತೇವೆ. ಅದೇ ಪೂಜೆ. ಅದಕ್ಕೇ ಪೂಜೆಗೆ ಲಕ್ಷಣವನ್ನು ಹೇಳುವಾಗ "ಪೂಜಾ ನಾಮ ಸಂತೋಷ ಜನಕಃ ಕರ್ಮಸಮುದಾಯಃ !" (ಪೂಜೆಯೆಂದರೆ ನಮಗೆ ಸಂತೋಷವನ್ನುಂಟು ಮಾಡುವ ಕರ್ಮಗಳ ಸಮೂಹ) ಎಂದರು. ನಮಗೆ ಉಪಕಾರ ಮಾಡಿದ ವ್ಯಕ್ತಿ ಎದುರಿಗೆ ಬಂದರೆ ನಾವೇನೇನು ಮಾಡುತ್ತೇವೆ ? ಹೂವಿನಮಾಲೆ ಹಾಕುತ್ತೇವೆ. ಕಾಲು ತೊಳೆಯುತ್ತೇವೆ. ಉನ್ನತವಾದ ಆಸನದಲ್ಲಿ ಕೂರಿಸುತ್ತೇವೆ. ಅವನ ಉಪಕಾರವನ್ನು ಸ್ಮರಿಸಿ ಸ್ಮರಿಸಿ ಹೊಗಳುತ್ತೇವೆ. ಹೃದಯದಲ್ಲಿ ತುಂಬಿದ ಕೃತಜ್ಞತೆಯಿಂದ ಕಂಠವು ಗದ್ಗದವಾಗುತ್ತದೆ. ರೋಮಾಂಚನವಾಗುತ್ತದೆ. ಎಷ್ಟು ಸಾಧ್ಯವೋ ಅಷ್ಟು ಮೃಷ್ಟಾನ್ನದಿಂದ ಅವರನ್ನು ತೃಪ್ತಿಪಡಿಸುತ್ತೇವೆ. ಕೊನೆಗೆ ಹೆಗಲ ಮೇಲೆ ಹೊರಲೂ ಸಿದ್ಧರಾಗುತ್ತೇವೆ. ಇವೆಲ್ಲಾ ನಮ್ಮ ಭಕ್ತಿ ಮರ್ಯಾದೆಗಳ ಚಿಹ್ನೆಗಳು. ಇವುಗಳನ್ನೇ ನಾವು ಪರಮಾತ್ಮನ

ಪ್ರತೀಕವಾದ ವಿಗ್ರಹ, ಸಾಲಗ್ರಾಮಾದಿಗಳಿಗೆ ಮಾಡಿದರೆ ಷೋಡಶೋಪಚಾರ ಪೂಜೆ ಎನ್ನಿಸಿಕೊಳ್ಳುತ್ತದೆ. ಇದರಲ್ಲಿ ಭಯಕ್ಕೆ ಪ್ರಸಕ್ತಿಯೇನು ? ಉದಾರಿಯಾದ ಉಪಕಾರಿ ಮನುಷ್ಯನೂ ಕೂಡ ತನ್ನ ಉಪಕೃತರಿಂದ recognition ಅಪೇಕ್ಷಿಸುವುದಿಲ್ಲ. ಕೃತಜ್ಞತೆಯನ್ನು ತೋರಿಸುವುದು ನಮ್ಮ ಕರ್ತವ್ಯವೇ ಹೊರತು ಅದರಿಂದ ಅವನ ದೊಡ್ಡತನವನ್ನು ನಾವು ಹೆಚ್ಚಿಸಿದಂತೆ ಆಗುವುದಿಲ್ಲ. ನಾವು ತೋರಿಸದಿದ್ದರೆ ಅವನಿಗೆ ಯಾವ ನಷ್ಟವೂ ಇಲ್ಲ. ಅವನು ಅದನ್ನು ನಿರೀಕ್ಷಿಸುವುದೂ ಇಲ್ಲ. ಹೀಗೆ ಸಾಧಾರಣ ಉದಾರ ಮನುಷ್ಯರ ರೀತಿಯೇ ಇರುವಾಗ ಪರಮ ಕರುಣಾ ಸಮುದ್ರನಾದ ಆ ಪರಮಾತ್ಮನು ನಾವು ಪೂಜೆಮಾಡಲಿಲ್ಲ ಎಂದೋ, ನಮಸ್ಕರಿಸಲಿಲ್ಲ ಎಂದೋ, ನೈವೇದ್ಯವನ್ನು ಸರಿಯಾಗಿ ಮಾಡಿಲ್ಲವೆಂದೋ ಕೋಪಿಸಿಕೊಳ್ಳುವುದುಂಟೇ ? ಮಾಡಿದರೆ ನಮಗೆ ಅಷ್ಟುಹೊತ್ತು ಮನಸ್ಸಿನಲ್ಲಿ ಉತ್ತಮ ಚಿಂತನೆಗಳನ್ನು ಮನನ ಮಾಡಿದ ಫಲ. ಮಾಡದಿದ್ದರೆ ನಮಗೆ ಆ ಒಂದು ದಿನದ ಮಾನಸಿಕ ಉನ್ನತಿ (ಅದು ಎಷ್ಟೇ ಸೂಕ್ಷ್ಮವಾಗಿರಲಿ) ಕಮ್ಮಿಯಾಯಿತು ಅಷ್ಟೆ. That is the price we have to pay for our laziness. Tennyson ಹೇಳಿದ ಹಾಗೆ "whenever a good deed is wrought, whenever a good thought is thought our hearts rise to higher levels." ಪೂಜೆಯ ಉದ್ದೇಶ ಅಷ್ಟೇ. ಅದನ್ನು ಮಡಿಯಲ್ಲಿ ಮಾಡುವುದು ಎಂಬುದೂ ನಮ್ಮ ಶ್ರದ್ಧಾ ದ್ಯೋತಕ. ನನಗೆ ಮಡಿಯಲ್ಲಿ 100% ಅಂದರೆ ಏನು ಅಂತ ಗೊತ್ತಾಗಲಿಲ್ಲ. ಅದರಲ್ಲಿ ಶ್ರದ್ಧಾಂಶ, ಶುದ್ಧಿಯ ಅಂಶ ಎರಡೂ ಸೇರಿದೆ. ಶುದ್ಧಿ ಅನ್ನುವುದು hygienic. ಅದು ಇದ್ದೇ ಇರಬೇಕು. ಅದಕ್ಕೇ ಸ್ನಾನ, ಒಗೆದ ವಸ್ತ್ರಗಳು etc. ಶ್ರದ್ಧೆ ಅಂದರೆ, ನಿತ್ಯ ಬಿಸಿ ನೀರಿನಲ್ಲಿ ಮಾಡುವವರು ತಣ್ಣೀರಿನಲ್ಲಿ ಮಾಡುವುದು, ಬೆಳಗ್ಗೆ ಎದ್ದು ಕಾಫಿ ಕುಡಿಯುವವರು ಅದನ್ನು ಕುಡಿಯದೆ ಇರುವುದು, ಒದ್ದೆಯಲ್ಲಿಯೇ ಮಡಿಬಟ್ಟೆಗಳನ್ನು ಹಾಕಿಕೊಳ್ಳುವುದು etc. ಇವುಗಳೆಲ್ಲವೂ ಅವರವರ ಮನಸ್ಸಿಗೆ ತಕ್ಕಂತೆ. ನಮಗೆ ಅನೇಕ ನೂರಾರು ವರ್ಷಗಳಿಂದ ಕೆಲವು ಸಾಂಪ್ರದಾಯಿಕವಾಗಿ ಮಡಿಯ ಅಭ್ಯಾಸಗಳು ಬಂದಿವೆ. ಹಾಗೆ ಮಾಡದಿದ್ದರೆ ಮನಸ್ಸಿಗೆ ಕಿರಿಕಿರಿಯಾಗುತ್ತದೆ. ಆಗ ಶ್ರದ್ಧೆ ಎನ್ನುವುದು ಖಂಡಿತ ಬರುವುದಿಲ್ಲ. ಆದ್ದರಿಂದ ಮನಸ್ಸಿಗೆ ತೃಪ್ತಿಯಾಗುವಷ್ಟು ಮಡಿ ಮಾಡಿಕೊಳ್ಳಬೇಕು. ಸಾಧ್ಯವಾಗದಿದ್ದರೆ ಸಂಕೋಚ ಮಾಡುವುದು ಇದ್ದೇ ಇದೆ. ಆದರೆ ಸೋಂಭೇರಿತನದಿಂದ ಸಂಕೋಚ ಮಾಡುವುದು ಅಶ್ರದ್ಧೆಯಾಗುತ್ತದೆ. ಅದರ ಪರಿವೆಯೇ ಇಲ್ಲದೆ, ಜ್ಞಾನವೇ ಇಲ್ಲದೆ ಇದ್ದರೆ (ಪಾಶ್ಚಾತ್ಯರ ಹಾಗೆ) ಯೋಚನೆ ಇಲ್ಲ. ಆದರೆ ಗೊತ್ತಿದ್ದೂ ಗೊತ್ತಿದ್ದೂ ಸೋಮಾರಿತನದಿಂದ ಆ ನಿಯಮಗಳನ್ನು ಅನುಸರಿಸದಿದ್ದರೆ sub-concsience ನಲ್ಲಿ ಅವ್ಯಕ್ತವಾಗಿ ಚುಚ್ಚುತ್ತಿರುತ್ತದೆ. ಅದು ಚಿತ್ತಶುದ್ಧಿಯನ್ನು ಕೊಡುವುದೆಂತು ?

ಆದ್ದರಿಂದ ನಮಗೆ ಮಡಿ ಕಲ್ಪನೆ ಏನಿದೆಯೋ ಅದನ್ನು ಅವಶ್ಯವಾಗಿ ಅನುಸರಿಸಬೇಕು. ದೈಹಿಕವಾಗಿ ಸಾಧ್ಯವಿಲ್ಲ ಎನ್ನುವುದಾದರೆ ಅವರವರಿಗೆ ತೋಚಿದಷ್ಟು ಹ್ರಸ್ವ ಮಾಡಿಕೊಳ್ಳಬಹುದು. ಆದರೆ ಇವುಗಳು ಯಾವುದರ ಪರಿವೆಯೂ ಆ ಪ್ರತೀಕ ಸ್ವರೂಪನಾದ ಪರಮಾತ್ಮನಿಗೆ ಇರುವುದೆಂದು ಭಾವಿಸಬಾರದು. Pantಗಳನ್ನು ಹಾಕಿಕೊಂಡು ಪೂಜೆ ಮಾಡಿದರೆ ಅವನು ಕೋಪಿಸಿಕೊಂಡು ಯಾರನ್ನೂ ಕೊಲ್ಲುವುದಿಲ್ಲ. 100 % ಮಡಿಯಲ್ಲಿ ಮಾಡಿದಾಕ್ಷಣ ನಮಗೆ ಕೇಳಿದ್ದನ್ನು ಕೊಡುವುದೂ ಇಲ್ಲ. ನಮ್ಮ ಮನಸ್ಸು ಯಾವ ರೀತಿ Condition ಆಗಿದೆ ಎಂಬುದನ್ನು ನಾವುಗಳೇ ಕಂಡುಕೊಂಡು ಪೂಜೆಯ ಪವಿತ್ರ ಭಾವನೆಯು ಯಾವ ಕಳಂಕಗಳೂ ಇಲ್ಲದೆ ಬರುವಂತೆ ಮಾಡಿಕೊಳ್ಳಬೇಕು. ಪೂಜೆ ಮಾಡದಿದ್ದರೆ ಸಾಲಗ್ರಾಮ ಎದ್ದು ಬಂದು ನಮ್ಮನ್ನು ಏನು ಮಾಡುತ್ತದೋ ಎಂಬ ಭಯದಿಂದ, 100 % ಮಡಿ ಮಾಡಲು ಹೋಗಿ ಒಂದೊಂದು ಕ್ಷಣವೂ ಸಾಲಗ್ರಾಮವನ್ನು ಮನೆಯಲ್ಲಿ ಬಿಟ್ಟುಹೋದವರನ್ನೂ, ಈ ಮಡಿ Procedure ನ್ನು ತಂದವರನ್ನೂ ಬಯ್ಯುತ್ತಾ ಪೂಜೆ ಮುಗಿಸಿದರೆ ಯಾವ ಚಿತ್ತಶುದ್ಧಿ ಸಿಗಲು ಸಾಧ್ಯ ! ಅಥವಾ ಮಡಿ ಹೇಗೆ ಮಾಡಬೇಕು ಅಂತ ಗೊತ್ತಿದ್ದರೂ ಕಳ್ಳನಂತೆ ಏನೂ ಮಾಡದೆ, ಸೋಮಾರಿತನದಿಂದ ಪೂಜೆಯಂತೂ ಮಾಡಿದರೆ, ಮಾಡುವಾಗ, "ಮಡಿ ಮಾಡಬಹುದಾಗಿತ್ತು, ಮಾಡುತ್ತಿಲ್ಲ. ಸಾಲಗ್ರಾಮ ಏನು ಮಾಡುತ್ತದೆಯೋ" ಎಂಬ ಯೋಚನೆಯಲ್ಲಿಯೇ ಪೂಜೆ ಮುಗಿಸಿದರೆ ಯಾವ ಚಿತ್ತಶುದ್ಧಿಯಾಗಲು ಸಾಧ್ಯ !

ನಾವು ನಾವೇ ಯೋಚನೆ ಮಾಡಿಕೊಂಡು ನಮ್ಮ ಶಕ್ತ್ಯನುಸಾರ ಮಡಿ ಮಾಡಿ, ನಮ್ಮ ಶಕ್ತ್ಯನುಸಾರ, ನಿತ್ಯವೋ, ವಾರಕ್ಕೊಂದು ದಿನವೋ, ತಿಂಗಳಿಗೊಂದು ದಿನವೋ ಪೂಜೆ ಮಾಡಬೇಕು. ಸಾಲಗ್ರಾಮ ಮನೆಯಲ್ಲಿದ್ದರೆ ಖಂಡಿತ ತಪ್ಪಲ್ಲ. ಯಾವ ಆಪತ್ತೂ ಬರಲು ಸಾಧ್ಯವಿಲ್ಲ. ಸಕಲ ಚರಾಚರ ಪ್ರಪಂಚಕ್ಕೇ ಆಶ್ರಯಭೂತನಾಗಿರುವ ಪರಮಾತ್ಮನ ಪ್ರತೀಕ ಮನೆಯಲ್ಲಿದ್ದರೇ ಭಯ ಎನ್ನುವ concept ಗಿಂತ ಹೀನವಾದ concept ಯಾವ Religion ನಲ್ಲಿಯೂ ಇಲ್ಲ. ಸ್ವಲ್ಪ ಭಯವಿದ್ದರೆ ಪೂಜೆ ಮಾಡಿಯಾನು. ತನ್ನನ್ನು ತಾನೇ ಉದ್ಧಾರ ಮಾಡಿಕೊಂಡಾನು ಎಂಬ ಭಾವನೆಯಿಂದ ದೊಡ್ಡವರು ಸ್ವಲ್ಪ ಭಯಪಡಿಸಿದ್ದಾರೆ ಅಷ್ಟೆ. ಅದನ್ನು ಯಥಾರ್ಥವಾಗಿ ತೆಗೆದುಕೊಳ್ಳುವುದು ಬೇಡ.

2) ರುದ್ರಾಕ್ಷಿ, ತುಳಸೀಮಾಲೆ ಇವುಗಳೂ ಅಷ್ಟೆ. ಅವೆಲ್ಲಾ

ಬಹಿರಲಂಕಾರಗಳು. ಅವುಗಳನ್ನು ಹಾಕಿಕೊಂಡರೆ ಮನಸ್ಸು ಪವಿತ್ರನಾದ ಪರಮಾತ್ಮನನ್ನು ಚಿಂತಿಸಲು ಸಹಾಯವಾಗುವುದು ಎಂಬುದಷ್ಟೇ ಉದ್ದೇಶ. Inherent ಆಗಿ ಅವುಗಳಲ್ಲಿ ನಮ್ಮನ್ನು ಪವಿತ್ರ ಮಾಡುವ ಯಾವ ಶಕ್ತಿಯೂ ಇಲ್ಲ. ಸಾವಿರಾರು ವರ್ಷಗಳಿಂದ ಅವು ಪವಿತ್ರವಾದ ವಸ್ತುಗಳು ಎಂದು ನಮ್ಮ ರಕ್ತದಲ್ಲಿ ಬಂದುಬಿಟ್ಟಿದೆ. ಆದ್ದರಿಂದ ಅವುಗಳನ್ನು ಹಾಕಿಕೊಂಡಾಗ ಪವಿತ್ರ ಯೋಚನೆಗಳು ಬರುವುದಕ್ಕೆ ಸಹಾಯಕವಾದಾವು. ಇನ್ನೇನಿಲ್ಲದೆ ಇದ್ದರೂ ಅವುಗಳನ್ನು ಧರಿಸಿದಾಗ, ಕೆಟ್ಟ ಯೋಚನೆಗಳನ್ನೂ, ಕೆಟ್ಟ ಕೆಲಸಗಳನ್ನೂ ಮಾಡಬಾರದು ಎಂಬ awareness ಇರುವ chance ಉಂಟು. ಅದಕ್ಕೋಸ್ಕರ ಧರಿಸಬೇಕು. ಅವುಗಳ ಯಾವುದರ ಸಹಾಯವೂ ಇಲ್ಲದೆ ಮನಸ್ಸು ಪವಿತ್ರನಾದ ಆ ಪರಮಾತ್ಮನ ಚಿಂತನೆ ಖಂಡಿತ ಮಾಡಬಹುದು. ಅವುಗಳೆಲ್ಲವೂ ಇದ್ದೂ ಸಹ ಅತ್ಯಂತ ನೀಚವಾದ ಯೋಚನೆಗಳು, ಹೇಯವಾದ ಕಾರ್ಯಗಳನ್ನೂ ಮಾಡಬಹುದು. ನಮ್ಮ ಸಂಸ್ಕೃತಿ ಹೇಗಿದೆಯೆಂದರೆ ಅವುಗಳನ್ನು ಹಾಕಿಕೊಂಡವನು ಉತ್ತಮ ಮನುಷ್ಯ ಎಂಬ concept ಬಂದಿದೆ. ಆದ್ದರಿಂದಲೇ ನಾನು ಅವುಗಳನ್ನು ಹಾಕಿಕೊಳ್ಳಲು ಹಿಂತೆಗೆಯುತ್ತೇನೆ–ಎಲ್ಲರನ್ನೂ ಮೋಸಗೊಳಿಸಿ ದಂತಾಗುವುದೆಂದು. ನಿನ್ನೆ ತಾನೇ ಮನುಸ್ಮೃತಿ ಓದುತ್ತಿದ್ದೆ. 'ನ ಲಿಂಗಂ ಧರ್ಮಕಾರಣಮ್' ಎಂದು ಒಂದು ಕಡೆ ಹೇಳುತ್ತಾರೆ. ಲಿಂಗವೆಂದರೆ ಆಶ್ರಮಕ್ಕೆ ಉಚಿತವಾದ ವೇಷಧಾರಣೆ ಎಂದರ್ಥ. ಕಾಷಾಯ ವಸ್ತ್ರವೋ, ವಿಭೂತಿಯೋ, ರುದ್ರಾಕ್ಷಿಯೋ, ಕಚ್ಛಪಂಚೆಯೋ ಧರ್ಮಕ್ಕೆ ಕಾರಣವಾಗಿದೆ. ಧರ್ಮವನ್ನು ಅನುಷ್ಠಿಸಬೇಕು. ಅವುಗಳನ್ನು ಉಪಯೋಗಿಸಬಾರದೆಂದಲ್ಲ, ನಮ್ಮ ಅನುಷ್ಠಾನಕ್ಕೆ ಅವುಗಳಿಂದ ಸಹಾಯವಾಗುವುದಾದರೆ ಉಪಯೋಗಿಸೋಣ. ಕೇವಲ exhibitionಗೋಸ್ಕರ ಆದರೆ ಬೇಡ. ಅವುಗಳನ್ನು ಧರಿಸಲು ಮಡಿ, ಗಿಡಿ ಅವೆಲ್ಲಾ ಏನೂ ಇಲ್ಲ. ಅವು ಸ್ವತಃ ಒಬ್ಬ ಮನುಷ್ಯನಿಗೆ ಯಾವುದನ್ನೂ confer ಮಾಡುವುದಿಲ್ಲ. ಅದನ್ನು ಧರಿಸಲು ಯಾವ ನಿಯಮಗಳ ಅವಶ್ಯವೂ ಇಲ್ಲ.

3) ನಿನ್ನ ಮೂರನೇ ಪ್ರಶ್ನೆ ಸ್ವಲ್ಪ ತಮಾಷೆಯಾಗಿಯೇ ಇದೆ. ನನ್ನನ್ನು ಕೇಳಿದರೆ ನಶ್ಯ, ಬೀಡಿ ಎರಡೂ ಒಂದೇ ಜಾತಿಗೆ ಸೇರಿದಂಥಾದ್ದು (ಹೊಗೆಸೊಪ್ಪು). ಅದು ಹೇಗೋ ನಮ್ಮ ಪರಂಪರೆಯಲ್ಲಿ ನಶ್ಯ ಮತ್ತೆ ಹೊಗೆಸೊಪ್ಪು ಹಾಕಿಕೊಳ್ಳುವುದು ಮಡಿ ಅಂತಾಗಿಬಿಟ್ಟಿದೆ. ಆ ಕಾಲದಲ್ಲಿ ಬೀಡಿ, ಸಿಗರೇಟು ಗೊತ್ತಿರಲಿಲ್ಲ ಅಂತ ಕಾಣುತ್ತೆ. ಆದ್ದರಿಂದ ನಮಗೆ ನಶ್ಯಕ್ಕಿಂತ ಬೀಡಿ, ಸಿಗರೇಟು ಸೇದುವವರನ್ನು ಕಂಡರೆ ಅಸಹ್ಯವಾಗುತ್ತದೆ (ಜತೆಗೆ ಅದು ಪಕ್ಕದಲ್ಲಿರುವವರಿಗೂ ತೊಂದರೆ ಮಾಡುತ್ತದೆ !). ಆದರೆ objective ಆಗಿ ನೋಡಿದರೆ ಮೂರೂ ಅಸಹ್ಯವಸ್ತುಗಳೇ. ಒಂದನ್ನು tolerate ಮಾಡುವುದಾದರೆ ಬಾಕೀದನ್ನೂ tolerate ಮಾಡಬಹುದು. ನಾವು ಅದಕ್ಕೆ condition ಆಗದೆ ಇರುವುದರಿಂದ ನಮ್ಮ ನಮ್ಮ ಮನಸ್ಸಿನ ಸಮಾಧಾನಕ್ಕೆ ತಕ್ಕಂತೆ ಆಚರಿಸಬೇಕು. ನಾನು ಯಾವ ಅಭ್ಯಾಸವೂ ಇಲ್ಲದಿರುವವರನ್ನೇ prefer ಮಾಡುತ್ತೇನೆ. ಇದಕ್ಕೆಲ್ಲಾ ಅವರವರೇ ನಿಶ್ಚಯಿಸಿಕೊಳ್ಳಬೇಕು. ಶಾಸ್ತ್ರ ಹುಡುಕಲು ಸಾಧ್ಯವಿಲ್ಲ. They are purely subjective.

4) ವಿವಾಹಲಗ್ನದ ವಿಷಯದಲ್ಲಾಗಲಿ, ಉಪನಯನಲಗ್ನ ವಿಷಯದಲ್ಲಾಗಲಿ ಸಾಮಾನ್ಯವಾಗಿ ನಾವು ಒಳ್ಳೆಯ ತಿಥಿ, ವಾರ ಅಂತ ಏನು ಇಟ್ಟುಕೊಂಡಿದ್ದೇವೆಯೋ (ಮಂಗಳವಾರ, ಶನಿವಾರ ಬಿಟ್ಟು ಬಾಕಿ ವಾರಗಳು, ಪಾಡ್ಯ, ಚತುರ್ದಶಿ, ಅಮಾವಾಸ್ಯೆ ಪೂರ್ಣಿಮೆ, ಅಷ್ಟಮೀ ಬಿಟ್ಟು ಮಿಕ್ಕ ತಿಥಿಗಳು) ಅವುಗಳಲ್ಲಿ ಅನುಕೂಲವಾದ ದಿನ ಮಾಡಬಹುದು. ನಕ್ಷತ್ರಗಳು, ವೇದರೀತ್ಯಾ ಎಲ್ಲವೂ ಉತ್ತಮವೇ. ಯಾವ ಯೋಚನೆಯನ್ನೂ ಮಾಡ ಬೇಕಾದ್ದಿಲ್ಲ. ನೀನು ಬರೆದಿರುವ ಎರಡು ದಿನಗಳೂ ಉತ್ತಮವಾಗಿವೆ. ನಿಮಗೆ ಅನುಕೂಲವಾದ ದಿವಸ ಇಟ್ಟುಕೊಳ್ಳಿ.

5) ನೀನು ಬರೆದಿರುವ ಗಾಯತ್ರಿ (ಸಾವಿತ್ರೀ) ಮಂತ್ರದ ಸ್ವರ ಸರಿಯಾಗಿದೆ. ಮುಹೂರ್ತದ ವಿಷಯ ಹಿಂದೆಯೇ ಬರೆದಿದ್ದೇನೆ. ಸೂರ್ಯೋದಯದಿಂದ ಹಿಡಿದು ಅಸ್ತಮಾನದವರೆಗೂ ಎಲ್ಲವೂ ಒಳ್ಳೆಯ ಮುಹೂರ್ತಗಳೇ. ಯಾವ ಕಾರ್ಯವನ್ನು (ದೇವಕಾರ್ಯ) ಮಾಡಬೇಕಾದರೂ ಆದಷ್ಟು ಬೇಗ ಸೂರ್ಯೋದಯದ ವೇಳೆಗೆ ಆರಂಭಿಸಬೇಕು. ಆಮೇಲೆ ಮುಗಿಯಲು ಎಷ್ಟು ಹೊತ್ತಾದರೂ ಆಗಲಿ. ಅವಸರವಿಲ್ಲದೆ ರುಚಿಯಿಂದ enjoy ಮಾಡಿಕೊಂಡು ಕೆಲಸ ಮಾಡಬೇಕು. ಪಿತೃಕಾರ್ಯ ಮಾತ್ರ ಸ್ವಲ್ಪ ಮಧ್ಯಾಹ್ನ ಕಾಲ ಬರುವ ಕ್ರಮ ಇಟ್ಟುಕೊಂಡಿದ್ದಾರೆ. ಆದ್ದರಿಂದ $9\frac{1}{2}$ – 10 ಘಂಟೆಗೆ ಆರಂಭಿಸಿದರೆ ಸರಿಯಾಗಿರುತ್ತದೆ. ನನಗೆ ಗೊತ್ತಿರುವಂತೆ ನಮ್ಮ ಕಡೆಗಳಲ್ಲಿ ಯಾವ ಕೆಲಸವನ್ನಾದರೂ ಆರಂಭಿಸುವುದೇ 10 ಘಂಟೆ ಮಾಡುತ್ತಾರೆ. ಅದು 1 ಘಂಟೆ, 2 ಘಂಟೆವರೆಗೂ ಹೋಗುತ್ತದೆ. ಬಿಸಿಲೇರಿರುತ್ತದೆ. ಹಸಿವು ಪ್ರಾಣ ತೆಗೆಯುತ್ತಿರುತ್ತದೆ. ಯಾವ ಕಾರ್ಯದಲ್ಲಿ ತಾನೇ ಸಂತೋಷವಿರಲು ಸಾಧ್ಯ ! ಮಾಡಬೇಕಲ್ಲಾ ಎಂದು ಮಾಡುವುದಾಗುತ್ತದೆ. ಜತೆಗೆ ಹೊತ್ತಾಗಿರುವುದರಿಂದ ಅವಸರ ಬೇರೆ ! ಹೀಗಾಗಿ ಗಡಿಬಿಡಿಯಲ್ಲಿ ಪರ್ಯವಸಾನವೇ ಹೊರತು ಸಮಾಧಾನವಾಗಿಯಂತೂ ಆಗಲು ಸಾಧ್ಯವೇ ಇಲ್ಲ. ಈಗ 1 ತಿಂಗಳ ಹಿಂದೆ ನನ್ನ ತಂಗಿ ಮಗಳಿಗೆ (ಸೂರ್ಯನಾರಾಯಣನ ಮಗಳಿಗೆ) ಪುಂಸವನ, ಸೀಮಂತ

ಮಾಡಿಸಿದೆ. 6-45ಕ್ಕೆ ಆರಂಭಿಸಿದ್ದಕ್ಕೆ ನಿಧಾನವಾಗಿ, ಚೆನ್ನಾಗಿ ನಡೆದು 10-45ಕ್ಕೆ ಮುಗಿಯಿತು. ಬರುವವರೆಲ್ಲಾ 11-30, 12 ಘಂಟೆಗೆ ನಿಧಾನವಾಗಿ ಬಂದರು. ಊಟ ಮಾಡಿಕೊಂಡು ಹೋದರು, ಅಷ್ಟೆ !! ಹೋದ ಭಾನುವಾರ H.N. ಕೃಷ್ಣಮೂರ್ತಿ ಸೊಸೆಗೆ (ನಿನ್ನ ಅಳಿಯನ ತಂಗಿಗೆ) ಪುಂಸವನ, ಸೀಮಂತ ಮಾಡಿಸಿದೆ. 7 ಘಂಟೆಗೆ ಪ್ರಾರಂಭಿಸಿ (ಸಿದ್ಧತೆ ಮಾಡಿಕೊಳ್ಳುವುದು ಸ್ವಲ್ಪ ತಡವಾಯಿತು) 11 ಘಂಟೆಗೆ ಸರಿಯಾಗಿ ಮುಗಿಸಿದೆ. 11½ಗೆ ಮೊದಲನೆ ಪಂಕ್ತಿ ಊಟ ಮಾಡುತ್ತಿದ್ದರು ! ಅಲ್ಲಿಯೂ ಎಲ್ಲರೂ 12 ಘಂಟೆಗೆ ಬಂದವರೇ ! ನಿತ್ಯದ routine ನಮಗೆ ಇದ್ದೇ ಇರುತ್ತದೆ. ಅವತ್ತು ಒಂದು ದಿನವಾದರೂ, ದೇವತೆಗಳು ಮನೆಗೆ ಬರುತ್ತಿದ್ದಾರೆ, ಅವರನ್ನು ಬೇಗ ಆಹ್ವಾನಿಸಿ ಸತ್ಕರಿಸಬೇಕು ಎಂಬ ಶ್ರದ್ಧೆಯಿಂದ ಬೇಗ ಎಲ್ಲರೂ ಎದ್ದು ಗಿಲಿಗಿಲಿ ಎಂದು ಸಂತೋಷ ದಿಂದ ಸ್ನಾನಾದಿಗಳನ್ನು ಮಾಡಿಕೊಂಡು ಸಿದ್ಧವಾಗಿ ಓಡಾಡ ಬಾರದೇ ? ಅವತ್ತೂ ನಮ್ಮ ನಿತ್ಯದ ಸೋಮಾರಿತನವನ್ನು ತೋರಿಸಿದರೆ, ನಾವು ದೇವತೆಗಳಿಗೆ ವಿಶೇಷವಾದ ಶ್ರದ್ಧೆಯನ್ನು ಹೇಗೆ ತೋರಿಸಿದಂತಾಯಿತು ?

ಆದ್ದರಿಂದ 'ಘಳಿಗೆ', 'ಮುಹೂರ್ತ' ಮರೆತುಬಿಡು. ಕೆಲಸ ಬೇಗ ಆರಂಭಿಸಬೇಕು. ಅದು ಯಾವಾಗ ಮುಗಿಯತ್ತದೆಯೋ ಅದೇ ಮುಹೂರ್ತ.

ನಿನ್ನ ಸೌ|| ಗೂ, ಚಿ||ಗಳಿಗೂ, ವಿಶೇಷವಾಗಿ ನಿನ್ನ ಮಗಳು, ಅವಳ ಶಿಶುವಿಗೂ ನನ್ನ ಅನಂತ ವೇದೋಕ್ತ ಆಶೀರ್ವಾದಗಳನ್ನು ತಿಳಿಸು.

ನಿನ್ನ ಸಂದೇಹಗಳು ತುಂಬಿದ ಕಾಗದವನ್ನು ಇದಿರು ನೋಡುತ್ತಿರುತ್ತೇನೆ !

ಇತಿ ನಿನ್ನವ

कुमारस्वामी

೪೫೨

ರಜಸ್ವಲೆ ; ಆಶೌಚ ; ಗ್ರಹಣ ಶಾಂತಿ

'ವಾರ' 'ತಿಥಿ'ಗಳ ಕ್ರಮವಿವಕ್ಷೆ ; ಜ್ಯೋತಿಷ್ಯ ಶಾಸ್ತ್ರ-ಜಾತಕ-ವಿಧಿ

कुशलम्　　　　श्री :　　　　Madras

16.10.86

ಶ್ರೀಕಂಠ !

ನಿನ್ನ ಕಾಗದ ಬಹಳ ದಿನಗಳ ಹಿಂದೆಯೇ ತಲಪಿತು. ನೀನು ಬರೆದಿರುವಂತೆ ಸ್ವಲ್ಪ ವಿರಾಮ ಸಮಯಕ್ಕೆ ಕಾಯುತ್ತಿದ್ದೆ. ಅದೂ ಅಲ್ಲದೆ ನೀನು ಕೇಳಿರುವ ಪ್ರಶ್ನೆಗಳು ಸ್ವಲ್ಪ fundamental ಆಗಿವೆ. ಉತ್ತರವನ್ನು ಸ್ವಲ್ಪ ವಿಶದವಾಗಿಯೇ ಕೊಡಬೇಕು.

1) ರಜಸ್ವಲಾ ವಿಷಯ : ಅವರು ಆ ಕಾಲದಲ್ಲಿ ಅಶುದ್ಧ ಎನ್ನುವುದು ನಿಜ. ಅದಕ್ಕೇ ವೇದದಲ್ಲಿಯೂ ಅವಳಿಗೆ 'ಮಲವದ್ವಾಸಾ' (ಬಟ್ಟೆಯು ಮಲಿನವಾಗಿರುವವಳು) ಎಂದು ಹೆಸರು ಕೊಟ್ಟಿದ್ದಾರೆ. ವೇದರೀತ್ಯಾ 'ತಸ್ಮಾನ್ಮಲವದ್ವಾಸಸಾ ನ ಸಂವದೇತ ನ ಸಹಾಸೀತ ನಾಸ್ಯಾ ಅನ್ನಮದ್ಯಾತ್' (ಆದ್ದರಿಂದ ರಜಸ್ವಲೆಯೊಡನೆ ಸರಸ ಸಲ್ಲಾಪ ಕೂಡದು, ಜತೆಯಲ್ಲಿ ಕೂತು ಮಲಗಿ ಮಾಡಬಾರದು, ಅವಳು ಮಾಡಿದ ಅನ್ನವನ್ನು ತಿನ್ನಬಾರದು) ಎಂಬ ನಿಯಮಗಳುಂಟು. ಅದು ಸರಿಯೆನಿಸುತ್ತದೆ. ನಾವು ಮಡಿಯಲ್ಲಿರುವಾಗ ಸ್ನಾನ ಮಾಡದಿರುವವರ, ತೀರ ಅಶುದ್ಧರಾಗಿರುವವರ ಜತೆಯಲ್ಲಿ ವ್ಯವಹಾರ ಮಾಡಲು ಇಷ್ಟಪಡುವುದಿಲ್ಲ, ಕೊಳಕು ಬಟ್ಟೆ ಹಾಕಿಕೊಂಡಿರುವವರ ಜತೆಯಲ್ಲಿಯೇ ಸಹವಾಸ ಮಾಡಲು ಇಷ್ಟವಾಗುವುದಿಲ್ಲ, ಅದೇ ರೀತಿ ಅವಳೂ ಅಶುದ್ಧಳಾಗಿರುವುದರಿಂದ (ಬಟ್ಟೆ ಕೊಳೆಯಾಗುವುದನ್ನು prevent ಮಾಡಲು ಈ ಕಾಲದಲ್ಲಿ ಸಾಧನಗಳು ಬೇಕಾದಷ್ಟಿದ್ದರೂ) ಅವಳೊಡನೆ ಸಹವಾಸ ಬೇಡ ಎನ್ನುವುದೇ ಅಭಿಪ್ರಾಯ. ಹಾಗೆಯೇ ನಮಗೆ ಅಡುಗೆ ಮಾಡುವವರೂ ಶುದ್ಧರಾಗಿರಬೇಕೆಂದು ನಾವೆಲ್ಲರೂ ಅಪೇಕ್ಷೆ ಪಡುವುದು ಸಹಜ. ಅಡುಗೆ ಯಾರಾದರೂ, ಹೇಗಾದರೂ ಮಾಡಿರಲಿ, ಬಡಿಸುವವರು ಬಿಳೀ ಬಟ್ಟೆ ಹಾಕಿಕೊಂಡು, ದವಾಲಿ ಹಾಕಿಕೊಂಡು ಬಂದುಬಿಟ್ಟರೆ ಸಾಕು ಎನ್ನುವುದು ಆಧುನಿಕರ ಅಭಿಪ್ರಾಯವಿರಬಹುದು. ಆದರೆ ಅವರಿಗೆ ನಿಜವಾಗಿ ಅಡುಗೆ ಮಾಡಿದವರ ವಿಷಯ ತಿಳಿದರೆ ಅವರೂ ತಿನ್ನಲಾರರು. ಇವೆಲ್ಲಾ ಮನುಷ್ಯಸ್ವಭಾವ. ಹೀಗಿರುವಾಗ ಭೋಜನವನ್ನು ವೈಶ್ವಾನರ ಉಪಾಸನೆ, ಪ್ರಾಣಾಗ್ನಿಹೋತ್ರ ಎಂದೆಲ್ಲಾ ಭಾವಿಸಿರುವ ನಮ್ಮ ಮಹರ್ಷಿಗಳು ರಜಸ್ವಲೆಯ ಅನ್ನವನ್ನು ತಿನ್ನಬಾರದೆಂದು ನಿಷೇಧ ಮಾಡಿರುವುದು ಸಹಜ. ಬೇರೆ ಅಶುದ್ಧಿಯಾದರೆ ಸ್ನಾನದಿಂದ ನಿವೃತ್ತಿಯಾಗಬಹುದು. ಆದರೆ ಇದು ದೇಹದಲ್ಲಿಯೇ ಉತ್ಪತ್ತಿಯಾಗಿ, ಬಹಿಃ ಕಾಣಿಸಿಕೊಳ್ಳುವುದರಿಂದ, 3 ದಿನಗಳು ಇರುವುದರಿಂದ 3 ದಿನಗಳ ಮೇಲೆಯೇ ಶುದ್ಧಿ ಎಂದು ಹೇಳಿದರು. ಕೆಲವರಿಗೆ 3 ದಿನಗಳ ಮೇಲೆ ಆರಂಭವಾಗಿ ಇನ್ನೂ ಮೂರು ದಿನಗಳು ಇರುವುದುಂಟು. ಕೆಲವರಿಗೆ ದಿನವೂ ಆಗುತ್ತಿದ್ದು ಅನುಭವಿಸುತ್ತಾರೆ. ಅವೆಲ್ಲಾ ವ್ಯಾಧಿ ನಿಮಿತ್ತವಾದವು. ನಮ್ಮ ನಿಯಮಗಳು ಸಾಧಾರಣರಿಗೆ ಅನ್ವಯಿಸುತ್ತವೆ. ವ್ಯಾಧಿನಿಮಿತ್ತದಿಂದ ಆದುವಕ್ಕೆ ನಮ್ಮ ನಮ್ಮ discretion ಉಪಯೋಗಿಸಿಕೊಳ್ಳಬೇಕು. ಅದೂ

ವೇದ ಎಲ್ಲಿಯವರೆಗೆ ಹೋಗಿದೆಯೆಂದರೆ ಈ ನಿಯಮಗಳ ಕಟ್ಟುಪಾಡು ಮಾಡಿರುವುದು 'ಪ್ರಜಾಯ್ಯೈ ಗೋಪೀಥಾಯ್ಯೈ' ಸತ್ಪ್ರಜೆ ಅವಳಿಗೆ ಹುಟ್ಟಲಿ ಎಂಬ ಅಭಿಪ್ರಾಯ. ಅವಳು ಅಶುದ್ಧಳಾಗಿದ್ದು, ಈ ನಿಯಮಗಳನ್ನು ಪಾಲಿಸದಿದ್ದರೆ, ಅಧರ್ಮ ಮಾಡಿದಂತಾಗಿ ಹುಟ್ಟುವ ಪ್ರಜೆ ದುಷ್ಟವಾಗಬಹುದು ಎನ್ನುವ ಅಭಿಪ್ರಾಯ. ಅಂದರೆ ಅವಳು ಅದನ್ನು ಮುಚ್ಚಿಟ್ಟುಕೊಳ್ಳಬಾರದು ಎನ್ನುವುದೇ ತಾತ್ಪರ್ಯ.

ಇವಿಷ್ಟೇ ಸಮಂಜಸವಾಗಿ ತೋರುತ್ತದೆ. ಇದಕ್ಕೆ ಅವಾಂತರ ನಿಯಮಗಳಾಗಿ ನಮ್ಮಲ್ಲಿ ಬಂದಿರುವ ಸಂಪ್ರದಾಯಗಳು ಕೆಲವು idiotic, ಇನ್ನು ಕೆಲವು sadistic ಎಂದು ಹೇಳಬಹುದು. ಅಕಸ್ಮಾತ್ ಅವಳ ಸ್ಪರ್ಶವಾದರೇ ಸ್ನಾನ ಮಾಡಬೇಕು, ಜನಿವಾರ ಬದಲಾಯಿಸಬೇಕು, ಅವಳಿಂದ 18 ಅಡಿ ದೂರವಿರಬೇಕು, ಗಾಳಿಯೂ ಸೋಕಬಾರದು, ಮಡಿಯಲ್ಲಿರುವಾಗ ಅವಳೊಡನೆ ಮಾತನಾಡಬಾರದು, ಊಟ ಮಾಡುವಾಗ ಅವಳ ದೃಷ್ಟಿ ಬೀಳಬಾರದು ಇವೆಲ್ಲ idiotic. ಅವಳು ಊಟ ಮಾಡಿಬಿಟ್ಟರೆ ಮಿಕ್ಕ ಶೇಷವನ್ನು ಯಾರೂ ಊಟ ಮಾಡಬಾರದು, ಅವಳು bathroom ಗೇ ಹೋಗಬಾರದು, ಮನೆಯಲ್ಲಿ ಶ್ರಾದ್ಧಾದಿಗಳು ನಡೆದರೆ ಅವಳು ಹೊರಗಡೆ ಬಿಸಿಲಿನಲ್ಲಿ ಕುಳಿತಿರಬೇಕು. ಇವೆಲ್ಲಾ sadistic. ಇವುಗಳಲ್ಲಿ ಯಾವುದನ್ನು ಅನುಸರಿಸಬೇಕು, ಯಾವುದನ್ನು ಬಿಡಬೇಕು ಎಂದು ಹೇಳುವುದು ಬಹುಕಷ್ಟ. ವೇದದಲ್ಲಿ ಹೇಳಿರುವ ನಿಯಮಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಿಕ್ಕವುಗಳನ್ನು ಅವುಗಳಿಗೆ ವಿರೋಧ ಬಾರದಂತೆ ಧಾರಾಳವಾಗಿ Moderate ಮಾಡಿಕೊಳ್ಳಬಹುದು. ಆದರೂ ಜನ್ಮತಃ ಬಂದ ಅಭ್ಯಾಸಗಳು ಇನ್ನು ಕೆಲವು ಪೂರಾ ತೆಗೆದುಹಾಕಲು ಸಾಧ್ಯವಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಈ ನಿಯಮಗಳಿಂದ ಅವಳಿಗೆ ತೀರಾ ಹಿಂಸೆಯಾಗಬಾರದು. ನಮಗೂ ಹಿಂಸೆಯಾಗಬಾರದು. ಕ್ರೌರ್ಯ ವರ್ತನೆಗೆ ಖಂಡಿತ ಅವಕಾಶವಿಲ್ಲ. ಹೊರಗಾಗಿ ಮೂರು ದಿನಗಳೂ ನರಕವಾಸ ಅನುಭವಿಸಿ, ಮೂರು ದಿನವೂ ಕಣ್ಣೀರಿನಲ್ಲಿ ಕೈ ತೊಳೆದುಕೊಳ್ಳುವುದನ್ನು ನೋಡಿದ್ದೇನೆ. ಅತ್ತೆಯವರ ಮಡಿಗೆ ಹೆದರಿ, ಅವರು ಮನೆಯಲ್ಲಿರುವವರೆಗೂ (6-7 ತಿಂಗಳು ಕಾಲ) ಮಾತ್ರೆಗಳನ್ನು ನುಂಗಿನುಂಗಿ ರಜೋದರ್ಶನವನ್ನು ತಪ್ಪಿಸಿಕೊಂಡು ಆಮೇಲೆ ಪಡಬಾರದ ಭವಣೆಯನ್ನು....ಅನುಭವಿಸಿದ್ದನ್ನು ನೋಡಿದ್ದೇನೆ. ಅವರುಗಳಿಗೆ ನೀರಿಗೆ ಪಾತ್ರೆಯನ್ನೂ ಕೊಡದೆ, ತೆಂಗಿನ ಕರಟದಲ್ಲಿ ಕಾಲ ಹಾಕಬೇಕಾಗಿ ಬಂದಿರುವುದನ್ನು ನೋಡಿದ್ದೇನೆ. ಅವಳ ನೆರಳು ಬಿದ್ದರೇ ಮಡಿಹೋಯಿತು ಎಂದು ಹಾರಾಡುವವರನ್ನೂ ಕಂಡಿದ್ದೇನೆ. ರಜಸ್ವಲೆಯ ವಿಷಯದಲ್ಲಿ ಎಷ್ಟೆಷ್ಟು ಹೆಚ್ಚಾಗಿ rigidity ತೋರಿಸುತ್ತಾರೆಯೋ ಅವರು ಅತೀವ ಶಿಷ್ಟರು, ಆಚಾರವಂತರು ಎಂಬ ಭಾವನೆ ಇವತ್ತಿಗೂ ನಮ್ಮ ಬ್ರಾಹ್ಮಣ ಸಮಾಜದಲ್ಲಿದೆ. ಅದರಷ್ಟು misconceived idea ಮತ್ಯಾವುದೂ ಇಲ್ಲ.

2) ಆಶೌಚಾದಿಗಳು ಬಂದಾಗ ಹಾಸಿಗೆ ಇತ್ಯಾದಿಗಳನ್ನು ಮುಟ್ಟಬಾರದೆಂದು ಇಟ್ಟುಕೊಂಡಿದ್ದಾರೆ. ಅಲ್ಲಿಯೂ ತಾನು ಅಶುದ್ಧಿ ಎಂಬ ಭಾವನೆ. ಆಶೌಚದಲ್ಲಿಯಂತೂ ಕೇವಲ ಮಾನಸಿಕ ಅಶುದ್ಧಿ ಅದು. ದೈಹಿಕ ಯಾವುದೂ ಇಲ್ಲ. ಮನಸ್ಸು ಅಶುದ್ಧಿ ಯಾಗಿರುವುದರಿಂದ (ಹುಟ್ಟಿದವರ, ಸತ್ತವರ ವಿಷಯದಲ್ಲಿ ನಮಗೆ ಮಮಕಾರ ಇರುವುದೇ ಅಶುದ್ಧಿ) ದೇಹವೂ ಅಶುದ್ಧವೆಂದು ಹೇಳಬಹುದು. ಆ ಭಾವನೆಯಿಂದ ಮುಟ್ಟಿದ್ದೆಲ್ಲಾ ಅಶುದ್ಧವೆಂದು ಇಟ್ಟುಕೊಂಡಿದ್ದಾರೆ. ನನಗೇನೋ ಅದು ತೀರ ಅತಿರೇಕವೆನಿಸುತ್ತದೆ. ಮಮಕಾರವನ್ನು ಆ ಕಾಲದಲ್ಲಿ ಸ್ವಲ್ಪ ಹೆಚ್ಚು ಅಭಿವ್ಯಕ್ತ ಮಾಡುವುದರಿಂದ ನಾನು ಬಾಕಿ ಕಾರ್ಯಗಳಿಗೆ ಅನರ್ಹ (ಏಕೆಂದರೆ ಸಂಧ್ಯಾವಂದನೆ, ಪೂಜೆ ಮೊದಲಾದ ಕಾರ್ಯಗಳೆಲ್ಲವೂ ಈ ಮಮಕಾರವನ್ನು ತೊಡೆದು ಹಾಕುವುದಕ್ಕೇ ಹೊರಟಿರುವವು) ಎಂಬ ಭಾವನೆಯಿಂದ, almost ಪ್ರಾಯಶ್ಚಿತ್ತರೂಪವಾಗಿ 10 ದಿನಗಳು ಆಶೌಚವನ್ನು ಅನುಭವಿಸಬೇಕು. 10 ದಿನಗಳ ವೇಳೆಗೆ ಆ ಮಮಕಾರದ ಅತಿಶಯತ್ವವು ಸ್ವಲ್ಪ ಕಮ್ಮಿಯಾಗುತ್ತದೆಂಬ ಅಭಿಪ್ರಾಯ. ಇದಕ್ಕೆ ಬಟ್ಟೆಗಳು ಮುಂತಾದುವು ಅಶುಚಿ ಎಂದು ಹೇಳುವುದು ಉಚಿತವಾಗಿ ಕಾಣುವುದಿಲ್ಲ. ಪುನಃ ಅವರವರ ಮನಸ್ಸಿಗೆ ಬಿಟ್ಟದ್ದು. ಯಾವ ಶಾಸ್ತ್ರೀಯ ನಿಯಮವೂ ಇಲ್ಲ. ಆಶೌಚ ಮುಗಿದ ಮೇಲೆ, ಆ ಹಾಸಿಗೆಯಲ್ಲಿ ಮಲಗುವಾಗ, ನಿತ್ಯವೂ ಇದು ಅಶುಚಿ, ಇದು ಅಶುಚಿ ಎಂಬ ಭಾವನೆ ನಮ್ಮ ಮನಸ್ಸನ್ನು ಕಾಡಲು ಆರಂಭಿಸಿದರೆ, ಮನಸ್ಸು ಸಮಾಧಾನವಾಗಿರುವುದು ಹೇಗೆ ? ಅವುಗಳೆಲ್ಲಾ ಅದೃಷ್ಟವಿಧಿಗಳಲ್ಲ. ನಮ್ಮ ನಮ್ಮ ಮನಸ್ಸಿಗೆ ತಕ್ಕಂತೆ ಏರ್ಪಡಿಸಿಕೊಳ್ಳಬಹುದು ಎಂಬ ಅಭಿಪ್ರಾಯ. ಪುರುಡಿನಲ್ಲಿ ಈ ನಿಯಮಗಳನ್ನು ನಾವು ಅನುಸರಿಸುತ್ತಿರಲಿಲ್ಲ. ಮೃತಸೂತಕ ಬಂದಾಗ ಹಾಸಿಗೆ ಮುಟ್ಟುತ್ತಿರಲಿಲ್ಲ. ಪ್ರಾಯಃ ಅಲ್ಲಿಯೂ 10 ದಿನಗಳ ದುಃಖದಲ್ಲಿ, ದುಃಖಸೂಚಕವಾಗಿ ಉಪಭೋಗ ವಸ್ತುಗಳ ಉಪಯೋಗ ಬೇಡವೆಂಬ ಕಾರಣವಿರಬೇಕೇ ಹೊರತು, ಅಶುದ್ಧಿಯಾಗುತ್ತದೆ ಎಂಬ ಕಾರಣವಲ್ಲ ಎಂದು ನನ್ನ ಅಭಿಪ್ರಾಯ. ಒಬ್ಬನಿಗೆ ಯಾವ ವಿಧವಾದ ದುಃಖವೂ ಇಲ್ಲ, ಸತ್ತವನ ವಿಷಯದಲ್ಲಿ ಅಭಿಮಾನವೂ ಇಲ್ಲ, ಅವನಿಗೆ ಆಶೌಚವೂ ಇಲ್ಲ. ಒಬ್ಬನು ಸತ್ತ ಮಾತ್ರಕ್ಕೇ ಅಶುಚಿ ಉಂಟಾಗುವುದಾದರೆ ಸುತ್ತಮುತ್ತ ಇರುವವರಿಗೆಲ್ಲಾ ಆಗಬೇಕು. ಹಾಗಿಲ್ಲ, ಅಭಿಮಾನಶಾಲಿಗಳಿಗೆ (ಅದರಲ್ಲಿಯೂ ಅಭಿಮಾನವು gradeವಾರು ಇರುವುದರಿಂದ

ಆಶೌಚದಲ್ಲಿಯೂ grade ಇದೆ) ಮಾತ್ರ ಆಶೌಚ. ಆದ್ದರಿಂದ ಇದು ಕೇವಲ ಪುರುಷನಿಷ್ಠವೇ (subjective) ಹೊರತು ವಸ್ತುನಿಷ್ಠವಲ್ಲ (objective).

3) ಗ್ರಹಣಕಾಲದಲ್ಲಿ ಶಾಂತಿ ಎನ್ನುವುದು ಕೇವಲ ಮೌರ್ಖ್ಯ, ಮೌಢ್ಯ, ಯಾರೂ ಯಾವ ಶಾಂತಿಯನ್ನೂ ಮಾಡಿಕೊಳ್ಳ ಬೇಕಾದ್ದಿಲ್ಲ. Geographical ಆಗಿ ನಡೆಯುವ ಒಂದು phenomenon ನಿಂದ ಕೆಲವರಿಗೆ ಮಾತ್ರ affect ಆಗುತ್ತದೆಯೆಂದರೆ ಒಪ್ಪದ ಮಾತು. ನಮ್ಮ ಸೂತ್ರಕಾರರಾಗಲಿ, ಮನ್ವಾದಿ ಸ್ಮೃತಿಕಾರರಾಗಲಿ ಯಾರೂ ಹೇಳಿಲ್ಲ. ಈ ಅವಿವೇಕ ಮಧ್ಯಕಾಲದಲ್ಲಿ ಎಲ್ಲಿಯೋ ಬಂದಿದೆ.

4) ಚೌಲಾದಿಕರ್ಮಗಳಿಗೆ ನಾನು ವಾರ, ತಿಥಿ ನಿಯಮಗಳನ್ನು ಬರೆದಿದ್ದು ಕೇವಲ ಕ್ರಮವಿವಕ್ಷೆಗೋಸ್ಕರ. ಅವುಗಳನ್ನು ಬಿಟ್ಟು ಮಾಡುವುದರಿಂದ ಹೆಚ್ಚು ಪುಣ್ಯವೆಂದರ್ಥವಲ್ಲ. ಆ ದಿನಗಳಲ್ಲಿ ಮಾಡುವುದರಿಂದ ದೋಷವೆಂದರ್ಥವಲ್ಲ. ಎಲ್ಲಾ ಕೆಲಸಗಳನ್ನೂ ಒಂದು ನಿಯಮವನ್ನನುಸರಿಸಿ ಮಾಡುವುದು ಸುಸಂಸ್ಕೃತ ಸಮಾಜದ ಪದ್ಧತಿ. ಜನವರಿಯಿಂದ ವರ್ಷಾರಂಭ ಮಾಡುವ ಹಾಗೆ, ಚೈತ್ರದಿಂದ ನೂತನ ವರ್ಷ ಆರಂಭಿಸುವ ಹಾಗೆ, April to March financial year ಇಟ್ಟುಕೊಂಡಿರುವಂತೆ. ಹೀಗೆಯೇ ನಮ್ಮಲ್ಲಿಯೂ ಶುಕ್ಲಪಕ್ಷವನ್ನು ದೇವಕಾರ್ಯಗಳಿಗೂ, ಕೃಷ್ಣಪಕ್ಷವನ್ನು ಪಿತೃಕಾರ್ಯಗಳಿಗೂ ಇಟ್ಟುಕೊಂಡಿದ್ದೇವೆ. ಹಾಗೆಯೇ ಅಷ್ಟಮೀ, ಚತುರ್ದಶೀ, ಅಮಾವಾಸ್ಯೆ, ಪೂರ್ಣಿಮೆ ಇವುಗಳು ಶ್ರಾದ್ಧದ ದಿವಸಗಳು ಎಂದು ಇಟ್ಟುಕೊಂಡಿದ್ದೇವೆ. ಆ ದಿವಸಗಳಲ್ಲಿ ಪಿತೃಕಾರ್ಯ ಮಾಡುವುದು ಉಚಿತ, ದೇವಕಾರ್ಯ ಬೇಡ ಎಂಬ ಅಭಿಪ್ರಾಯ ಇಷ್ಟೆ. ವಿಧಿಯಿಲ್ಲದೆ ಮಾಡಬೇಕಾಗಿ ಬಂದರೆ ಯಾವ ಪ್ರಮಾದವೂ ಇಲ್ಲ. ಮಂಗಳವಾರ, ಶನಿವಾರಗಳೂ ಅಷ್ಟೆ. Conventional ಆಗಿ ಬೇಡ ಎಂದು ಇಟ್ಟುಕೊಂಡಿದ್ದೇವೆ. ಸಾಮವೇದಿಗಳು ಮಂಗಳವಾರವೇ ಉಪನಯನ ಮಾಡುತ್ತಾರೆ! (ಸಾಮವೇದಕ್ಕೆ ಮಂಗಳನೇ ಅಧಿಪತಿ) ಆದ್ದರಿಂದ ಆ ದಿವಸಗಳಲ್ಲಿ ಮಾಡುವುದರಿಂದ ಯಾವ ದೋಷವೂ ಇಲ್ಲ. ಕ್ರಮವನ್ನು ಅನವಶ್ಯಕವಾಗಿ ವ್ಯತ್ಯಾಸ ಮಾಡುವುದು ಅವಶ್ಯವಿಲ್ಲ ಎಂಬ ಭಾವನೆ. ಉಪವೀತಿ, ಪ್ರಾಚೀನಾವೀತಿಗಳು ಇದ್ದಹಾಗೆ–ಒಂದು ದೇವಕಾರ್ಯ ಸಮಯದಲ್ಲಿ ಇನ್ನೊಂದು ಪಿತೃಕಾರ್ಯ ಸಮಯದಲ್ಲಿ ಎಂಬ ಕ್ರಮ ಅಷ್ಟೆ. ಅದಲು ಬದಲಾದರೆ ಖಂಡಿತ ಯಾವ ಪ್ರಮಾದವೂ ಇಲ್ಲ, ಅದೇ ರೀತಿ ಮಾಡಿಬಿಟ್ಟರೆ ಪುಣ್ಯ ಎಂಬುದೂ ಇಲ್ಲ, ಕ್ರಮವನ್ನನುಸರಿಸಿ ಮಾಡಿದೆವೆಂಬ ಸಮಾಧಾನ ಅಷ್ಟೆ. ಗುರುಬಲ, ಗುರ್ವಸ್ತ, ಶುಕ್ರಾಸ್ತ ಇವುಗಳಿಗೂ ಉಪನಯನ ವಿವಾಹಾದಿಗಳಿಗೂ ಯಾವ ಸಂಬಂಧವೂ ಇಲ್ಲ. ಉಪನಯನ ವಿವಾಹ ಮೊದಲಾದ ಸಂಸ್ಕಾರಗಳನ್ನು ನಮಗೆ ಅಳವಡಿಸಿ ಕೊಟ್ಟಿರುವ ಪುಣ್ಯಶ್ಲೋಕರಾದ ಮಹರ್ಷಿಗಳು ಇವುಗಳ ಬಗ್ಗೆ ಚಕಾರ ಶಬ್ದವನ್ನೂ ಹೇಳಿಲ್ಲ. ಮತ್ತೆ 'ಗರ್ಭಾಷ್ಟಮೇಷು ಬ್ರಾಹ್ಮಣಮುಪನಯೀತ' 'ವಸಂತೇ ಬ್ರಾಹ್ಮಣಮ್ ಉಪನಯೀತ' (ಗರ್ಭಾಷ್ಟಮವರ್ಷದಲ್ಲಿಯೂ, ವಸಂತ ಋತುವಿನಲ್ಲಿಯೂ ಬ್ರಾಹ್ಮಣನಿಗೆ ಉಪನಯನ ಮಾಡು) ಎಂದು ಸೂತ್ರಕಾರರು ಹೇಳುತ್ತಾರಲ್ಲಾ ಎಂದರೆ, ಆ ಕಾಲಗಳು, ದೃಷ್ಟವಾಗಿ, ಉಪನಯನ ಮಾಡಲು ಪ್ರಯೋಜನವಾದ ಕಾಲಗಳು. 7ನೇ ವರ್ಷ ಗುರುಕುಲಕ್ಕೆ ಹೋಗಿ ವಿದ್ಯಾರಂಭ ಮಾಡುವ ಕಾಲ. ವಸಂತಋತುವಿನಲ್ಲಿ ಎಲ್ಲವೂ ಕೆಲಸ ಕಾರ್ಯಗಳು ಮುಗಿದು, ಪ್ರಕೃತಿಯು ಪ್ರಸನ್ನಳಾಗಿರುವಾಗ ಸಂಸ್ಕಾರ ಮಾಡಲು ಉತ್ತಮ ಕಾಲ. ಶ್ರಾವಣಮಾಸದ ವೇಳೆಗೆ (ಉಪಾಕರ್ಮ) ಗುರುಕುಲಕ್ಕೆ ಕಳಿಸಿಕೊಡಲು ಅನುಕೂಲ. ಅದೇ ಸೂತ್ರಕಾರರು ವಿವಾಹಕ್ಕೆ ಹೇಳುವಾಗ 'ಸರ್ವಋತವೋ ವಿವಾಹಸ್ಯ' (ಎಲ್ಲಾ ಋತುಗಳಲ್ಲಿಯೂ ವಿವಾಹ ಮಾಡಬಹುದು) ಎಂದು ಹೇಳಿದರು. ಅವರಿಗೂ ಗೊತ್ತು, ಎರಡು party ಗಳಿರುವುದರಿಂದ, ಇಬ್ಬರಿಗೂ ಯಾವಾಗ ಅನುಕೂಲವೋ ಆಗ ಮಾಡಲಿ ಎಂಬುದೇ ಅಭಿಪ್ರಾಯ. ಈ ಕಾಲದಲ್ಲಿ ನಮಗೆ ಹೇಗೆ ಅನುಕೂಲವೋ ಹಾಗೆ ಮಾಡಬಹುದು. ಆದರೆ ಈ ಕಾಲಕ್ಕೂ ಅವರು ಹೇಳಿರುವುದು ಸಮಂಜಸವಾಗಿರುವುದರಿಂದ ಹಾಗೇ ಮಾಡುವುದು ಉಚಿತ. ಬಾಕಿ ಎಲ್ಲವೂ ಈ ಜ್ಯೋತಿಷ್ಕರ ಗಲಾಟೆ.

5) ನನಗೆ ಜ್ಯೋತಿಷ್ಯಶಾಸ್ತ್ರದ ಮೇಲೆ ಯಾವ ಆಗ್ರಹವೂ ಇಲ್ಲ. ಏಕೆಂದರೆ ಜ್ಯೋತಿಷ್ಯವೆಂಬುದು ವೇದಾಂಗ. ಆದರೆ ಅದು ಈ ಕವಡೆ ಜ್ಯೋತಿಷ್ಯವಲ್ಲ, ಅರ್ಥ Astronomy. ಸೂತ್ರಕಾರರು ಹೇಳಿರುವ ಶುಕ್ಲಪಕ್ಷ, ಕೃಷ್ಣಪಕ್ಷ, ಋತುಗಳು, ದಕ್ಷಿಣಾಯನ ಉತ್ತರಾಯಣಗಳು ಇವುಗಳನ್ನು Calculate ಮಾಡುವ ಬಗೆ ತಿಳಿದುಕೊಳ್ಳುವ ಬಗೆಯೇ ವೇದಾಂಗ ಜ್ಯೋತಿಷ. ಅವರು ಮನುಷ್ಯನ ಭವಿಷ್ಯದ ಬಗ್ಗೆ ಹೇಳಲು ಹೊರಟಿಲ್ಲ. ಆಮೇಲೆ ಯಾವಾಗಲೋ ಈ ಕಣಿ ಜ್ಯೋತಿಷ್ಯ ಆರಂಭವಾಗಿದೆ. ಅದೃಷ್ಟವಾದುದನ್ನು ತಿಳಿದುಕೊಳ್ಳಲು ಇರುವ ಮನುಷ್ಯನ ಸ್ವಭಾವ ಕುತೂಹಲವನ್ನು ಈ ಜ್ಯೋತಿಷ್ಯವು exploit ಮಾಡಿದೆಯೋ ಎನಿಸುತ್ತದೆ. ಅದು ಹೇಳುವುದೆಲ್ಲಾ ಸುಳ್ಳು ಎಂದು ನಾನು ಹೇಳಲು ಹೊರಟಿಲ್ಲ. ಪರಮಾತ್ಮನ ಈ ವಿಚಿತ್ರವಾದ ಸೃಷ್ಟಿಯಲ್ಲಿ ಪ್ರತಿಯೊಂದು phenomenon ಕೂಡ ಯಾವುದೋ ಒಂದು ಪ್ರಕೃತಿ ನಿಯಮ (natural law) ವನ್ನೇ ಅನುಸರಿಸಿ ನಡೆಯುತ್ತದೆ.

ಅದನ್ನು ತಿಳಿದುಕೊಳ್ಳುವುದಕ್ಕೆ ಹೊರಟಿರುವುದೇ science. ಹಾಗೆಯೇ ಮನುಷ್ಯ ಸೃಷ್ಟಿಯೂ ಒಂದು ನಿಯಮವನ್ನನು ಸರಿಸಿಯೇ ನಡೆಯುತ್ತದೆ. ಅದಕ್ಕೆ ನಾವು ಪ್ರಾರಬ್ಧಕರ್ಮ ಪ್ರಭಾವವೆಂದು ಹೇಳುತ್ತೇವೆ. ಈ ಪ್ರಕೃತಿಯಲ್ಲಿ ಒಂದೊಂದೂ Inter-related ಆಗಿರುವುದರಿಂದ ಮನುಷ್ಯನ ಜನ್ಮಸಮಯದಲ್ಲಿ ಇರುವ ಗ್ರಹಗತಿಗಳಿಂದ ಅವನ ಪ್ರಾರಬ್ಧಶೇಷವನ್ನು ತಿಳಿದುಕೊಳ್ಳಲು ಸಾಧ್ಯವಾಗಬಹುದು. ಅದೂ Statistical Analysis ನಿಂದಲೇ ಆಗಿರಬೇಕು–ಮನುಷ್ಯನ ಹಸ್ತರೇಖೆಗಳಿಂದ ಅವನ ಪ್ರಾರಬ್ಧವನ್ನು ಗುರುತಿಸುವಂತೆ ! ಪ್ರಾಯಃ ಪ್ರತಿಯೊಬ್ಬ ಮನುಷ್ಯನ ಶರೀರದ ಒಂದೊಂದು ಭಾಗಗಳೂ ಅವನ ಪ್ರಾರಬ್ಧಕ್ಕೆ related ಆಗಿಯೇ ಇರುತ್ತವೆ ಎಂದು ಕಾಣುತ್ತದೆ. ಆದ್ದರಿಂದ ಮನುಷ್ಯನ ಪ್ರಾರಬ್ಧವೇನು ಎಂದು ಜಾತಕವು indicate ಮಾಡುವುದು ನಿಜವಿರಬಹುದು (ಅದೂ ಜಾತಕ ಸರಿಯಾಗಿದ್ದರೆ). ಆದರೆ ಆ ಗ್ರಹಗಳೇ ಮನುಷ್ಯನ ಭವಿಷ್ಯದ ಆಗುಹೋಗುಗಳನ್ನು influence ಮಾಡುತ್ತವೆ ಎನ್ನುವುದು ಅಂಧ ಪರಂಪರೆ. ಹಾಗಾದರೆ ಪ್ರತಿಯೊಬ್ಬನ ಹಸ್ತರೇಖೆಯೂ ಅವನ ಭವಿಷ್ಯವನ್ನು influence ಮಾಡಬೇಕು !! ಆ ರೇಖೆಗಳನ್ನು ಪೂಜೆ ಮಾಡಿ, ನಮ್ಮ ಭವಿಷ್ಯವನ್ನು ವ್ಯತ್ಯಾಸ ಮಾಡಿಕೊಳ್ಳಲು ಬರಬೇಕು !

ಹಾಗಾದರೆ ಜಾತಕ ನೋಡಿ ನಮ್ಮ ಪ್ರಾರಬ್ಧವನ್ನು ತಿಳಿದುಕೊಳ್ಳಬಹುದಲ್ಲವೇ ? ಎಂದರೆ ಏನೂ ತಪ್ಪಿಲ್ಲ, If it leads to intelligent action ! ಕಷ್ಟ ಕಾದಿದೆ ಎಂದಾಗ ಧೈರ್ಯದಿಂದ ಎದುರಿಸಲು ಬೇಕಾದ ಮನಃಸ್ಥೈರ್ಯವನ್ನು ಸಂಪಾದಿಸಿಕೊಳ್ಳಬೇಕು. ಸುಖ ಬರುತ್ತದೆ ಎಂದಾಗ with equanimity receive ಮಾಡಬೇಕು. ಅದು ಬಿಟ್ಟು ಇನ್ನೂ 8-10 ವರ್ಷಗಳಲ್ಲಿ ಉಂಟಾಗುವ ಕಷ್ಟಕ್ಕೆ ಈಗಿನಿಂದಲೇ ಭಯಪಟ್ಟುಕೊಂಡು ಇಲ್ಲದಿರುವ ಎಚ್ಚರಿಕೆ ತೆಗೆದುಕೊಳ್ಳಲು ಹೋಗಿ, ಅಲ್ಲಸಲ್ಲದ ಪೂಜೆಗಳನ್ನು ಮಾಡಿಸಿಕೊಂಡು actual ಆಗಿ ಬಂದಾಗ (ಅದು ಬಂದೇ ಬರುತ್ತದೆ. ಯಾವ ಗ್ರಹವೂ ತಪ್ಪಿಸಲು ಸಾಧ್ಯವಿಲ್ಲ) ಭಯದಿಂದ ಪ್ರಾಣ ಬಿಡುವುದಾದರೆ ಅದನ್ನು ತಿಳಿದುಕೊಂಡು ಏನು ಮಾಡಬೇಕು ? ಹಾಗೆಯೇ ಸುಖ ಬರುವ ಸೂಚನೆ ಇದ್ದಾಗ ಸುಮಾರು ವರ್ಷಗಳಿಂದಲೇ ಮನಸ್ಸಿನಲ್ಲಿ ಮಂಡಿಗೆ ಹಾಕುತ್ತಾ ತಾನು ಎಣಿಸಿದಷ್ಟು ಬರದಿರುವಾಗ ಸಂಕಟಪಡುತ್ತಾ (bonus ಕೊಡುವುದಕ್ಕೆ ಮುಂಚೆಯೇ ಖರ್ಚು ಮಾಡುವಂತೆ !!) ದುರಾಶೆಯನ್ನು ಜಾಸ್ತಿ ಮಾಡಿಕೊಂಡು ದುಃಖಪಡುವ ಸ್ಥಿತಿಗೆ ಬಂದರೆ ಅದನ್ನು ತಿಳಿದುಕೊಂಡು ಏನು ಪ್ರಯೋಜನ ! ಅದಕ್ಕೆ ಬದಲಾಗಿ, ಸದಾಕಾಲವೂ ಏನು ಬಂದರೂ ಎದುರಿಸಲು ಸಿದ್ಧನಾಗಿದ್ದೇನೆಂಬ ಮನಃಸ್ಥೈರ್ಯವನ್ನು ಸಂಪಾದನೆ ಮಾಡಿಕೊಂಡು ನೆಮ್ಮದಿಯಿಂದ ಇರುವುದು ಉತ್ತಮವೆಂದು ನನ್ನ ಭಾವನೆ. ಈ ವಿಷಯದಲ್ಲಿಯೇ ನಮ್ಮ ಕರ್ಮಸಿದ್ಧಾಂತವು ನಮಗೆ ಸಹಾಯ ಮಾಡುತ್ತದೆ. ನಾವು ಮಾಡಿದ ಕರ್ಮಫಲವನ್ನು ನಾವೇ ಅನುಭವಿಸಬೇಕು. ನಮ್ಮ ಕಷ್ಟಕ್ಕೋ ಸುಖಕ್ಕೋ ಬೇರೆ ಯಾರೂ ಹೊಣೆ ಅಲ್ಲ, ನಾವೇ ಎಂಬ ಸಿದ್ಧಾಂತ ಮನಸ್ಸಿಗೆ ಬಂದರೆ, ಕಷ್ಟ ಬಂದಾಗ ಅತೀವ ದುಃಖವೋ, ಸುಖ ಬಂದಾಗ ಅಹಂಕಾರಪಡುವುದೋ (ನನಗೇ ಭಗವಂತನ ಅನುಗ್ರಹ ಜಾಸ್ತಿಯೆಂದು) ಕಮ್ಮಿಯಾಗುವುದಲ್ಲವೇ?

ಹಾಗೆಂದು ಕೈಕಟ್ಟಿ ಕುಳ್ಳಿರಬೇಕೆಂದಲ್ಲ, ನಾವೇನು ಹಿಂದೆ ಮಾಡಿದ್ದೇವೆ ಎನ್ನುವುದು ನಮಗೆ ಗೊತ್ತಿಲ್ಲ, ಯಾವ ಕರ್ಮಕ್ಕೆ ಯಾವ ಫಲ ಅನ್ನುವುದೂ ಗೊತ್ತಿಲ್ಲ, ಆದರೆ ನಾವು ಮಾಡಿದ ಕರ್ಮಫಲವನ್ನು ನಾವು ಅನುಭವಿಸಿಯೇ ತೀರಬೇಕು ಎನ್ನುವುದರಲ್ಲಿ ಸಂದೇಹವಿಲ್ಲ, ಆದರೆ ಆ ಕರ್ಮಫಲವೇನು ಎಂದು ನಮಗೆ ತಿಳಿಯುವುದು ನಮ್ಮ ಜೀವನದಲ್ಲಿ ಪ್ರಯತ್ನಪಟ್ಟ ಮೇಲೆ ತಾನೇ? ಆದ್ದರಿಂದ ನಾವು ಮಾಡುವ ಪ್ರಯತ್ನವು ಅತ್ಯಂತ ಉತ್ತಮವಾಗಿಯೇ ಇರಬೇಕು. ಒಂದು ಸಾರಿಯ ಪ್ರಯತ್ನದಲ್ಲಿ ಒಂದು ಕೆಲಸ ಆಗಲಿಲ್ಲವೆಂದರೆ, ಅದೇ ಕರ್ಮ ಎಂದು ತಿಳಿದುಕೊಂಡು ಸುಮ್ಮನಾಗುವುದು ಹೇಡಿತನ. 'ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು' ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪ್ರಯತ್ನದ ಯಾವ ಭಾಗದಲ್ಲಿ ಶೈಥಿಲ್ಯವಾಯಿತು ಎಂಬುದನ್ನು analyse ಮಾಡಿ ಕಂಡುಕೊಂಡು ಅದನ್ನು ಇನ್ನೊಂದು ಸಾರಿ ಸರಿಪಡಿಸಬೇಕು. ಪ್ರಯತ್ನವು ಸರ್ವತೋಮುಖವಾಗಿ ಸರಿಯಾಗಿದ್ದೂ ಫಲ ಬರಲಿಲ್ಲವೆಂದರೆ, ಕರ್ಮಫಲವೆಂದು ತಿಳಿದು ಸುಮ್ಮನಾಗಬಹುದು. ಹಾಗಾದರೆ ಪ್ರತಿಯೊಬ್ಬನೂ ಪ್ರಯತ್ನದಿಂದ ಎಲ್ಲವನ್ನೂ ಗಳಿಸಬಹುದಲ್ಲವೇ ಎಂದು ಕೇಳಬಹುದು. ಖಂಡಿತ ಸಾಧ್ಯ. ಪ್ರತಿಯೊಬ್ಬನಿಗೂ ಆತ್ಮದರ್ಶನವೇ ಹಕ್ಕು ಎಂದು ಉದ್ಘೋಷಿಸುತ್ತಿರುವ ನಮ್ಮ ಶಾಸ್ತ್ರಗಳಿಗೆ, ಮಿಕ್ಕವು ಪ್ರಯತ್ನದಿಂದ ಸಾಧ್ಯವಿಲ್ಲ ಎಂದು ಗೊತ್ತೇ ಇಲ್ಲ, ಮತ್ತೆ ಲೋಕದಲ್ಲಿ ಹಾಗೆ ಆಗುತ್ತಿಲ್ಲವಲ್ಲ ಎಂದು ಕೇಳಿದರೆ, ಅದು ವಾಸನಾಭೇದದಿಂದ ಎಂದು ಹೇಳಬೇಕು. ಪ್ರತಿಯೊಬ್ಬನಿಗೂ ಒಂದು ಕರ್ಮವನ್ನು ಮಾಡಿದಾಗ ಅದಕ್ಕೆ ಫಲವೆಂಬುದು ಸಿದ್ಧ ಹಾಗೆಯೇ ಆ ಕರ್ಮವನ್ನು ಮಾಡಿದ್ದರಿಂದ ವಾಸನೆ ಎಂಬುದೊಂದು ಉತ್ಪತ್ತಿಯಾಗುತ್ತದೆ. ಇದು ಮಾನಸಿಕ ಧರ್ಮ. ಇಂಗ್ಲಿಷ್‌ನಲ್ಲಿ Tendency ಎಂದು ಹೇಳಬಹುದು. ಇದು ಕರ್ಮವನ್ನು ಅವಲಂಬಿಸಿ ಸತ್ತ್ವ, ರಜಸ್ತಮೋಗುಣ ರೂಪವಾಗಿರುತ್ತದೆ. ನಮ್ಮ ಸ್ವಭಾವ ಪ್ರವೃತ್ತಿಗಳು

ಈ ವಾಸನೆಯನ್ನು ಅನುಸರಿಸಿಯೇ ಹೋಗುತ್ತವೆ. ನಮಗೆ ಕರ್ಮಫಲವನ್ನು ವ್ಯತ್ಯಾಸ ಮಾಡಲು ಬರದಿದ್ದರೂ ಅದರಿಂದ ಉಂಟಾಗಿರುವ ಈ ವಾಸನೆಗಳನ್ನು ವ್ಯತ್ಯಾಸ ಮಾಡಲು ಸಂಪೂರ್ಣ ಅಧಿಕಾರ ಉಂಟು. ಅದೇ ಮನುಷ್ಯಪ್ರಯತ್ನ. ನಮ್ಮ ವಾಸನಾನುಸಾರವಾಗಿ, ಒಂದು ಕಾರ್ಯವನ್ನು ಮಾಡಲು ಹೊರಟಾಗ ಅದರ ಸಿದ್ಧಿ, ಅಸಿದ್ಧಿಗಳು, ನಮ್ಮ ವಾಸನಾಪ್ರಾಬಲ್ಯ ಪ್ರಯತ್ನದ ಬಾಹುಳ್ಯದ ಮೇಲೆ ಅವಲಂಬಿಸುತ್ತವೆ. ವಾಸನೆ ಪ್ರಬಲವಾಗಿದ್ದರೆ ಅಲ್ಪಪ್ರಯತ್ನದಿಂದಲೇ ಒಂದು ಕಾರ್ಯ ಸಾಧ್ಯವಾಗುತ್ತದೆ. ವಾಸನೆ ದುರ್ಬಲವಾಗಿದ್ದರೆ ಬಹು ಪ್ರಯತ್ನದ ಆವಶ್ಯಕತೆಬೇಕಾಗುತ್ತದೆ. ಇದೇ ಕಾರಣ ಇವತ್ತಿನ ಪ್ರಪಂಚದಲ್ಲಿ ವ್ಯತ್ಯಾಸಗಳನ್ನು ನೋಡಲು. R.K.S.ಗೆ ಸಂಗೀತದ ವಾಸನೆ ಪ್ರಬಲವಾಗಿತ್ತು, ಅವನು ಪಟ್ಟ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿತು. ಅಷ್ಟೇ ವಾಸನೆ ಅವನ ತಮ್ಮಂದಿರಿಗೆ ಇರಲಿಲ್ಲ. ಅವರು equal ಪ್ರಯತ್ನ ಮಾಡಿದರೂ ಅವನ levelಗೆ ಬರಲಾಗಲಿಲ್ಲ. ಅವನ levelಗೆ ಬರಬೇಕಾದರೆ ನೂರರಷ್ಟು ಪ್ರಯತ್ನ ಬೇಕೇನೋ ! ಅದನ್ನು ನಾವು ಕೂತು ಹೇಳಲು ಸಾಧ್ಯವಿಲ್ಲ, ಪ್ರಯತ್ನ ಮಾಡಿ, ಸಿದ್ಧಿ ಪಡೆದ ಮೇಲೆ ಹೇಳಬೇಕು. ನನ್ನ ಮಗನನ್ನೇ ತೆಗೆದುಕೊಂಡರೆ, ಅವನಿಗೆ ವೇದವಿದ್ಯೆಯ ವಾಸನೆ ನನಗಿಂತ ಬಹುಪಟ್ಟು ಜಾಸ್ತಿ ಇದೆ. ನಾನು ಪಟ್ಟ ಪ್ರಯತ್ನಕ್ಕೆ ಹೋಲಿಸಿದರೆ, ಅವನದು ಬಹಳ ಅಲ್ಪ ಅಂತಲೇ ಹೇಳಬೇಕು. ಆದರೆ ಅವನಿಗೆ ನನಗಿಂತ ಚೆನ್ನಾಗಿ ಬರುತ್ತದೆ ಎಂದು ಹೇಳಬಲ್ಲೆ. ನನ್ನಷ್ಟೇ ಪ್ರಯತ್ನವನ್ನು ಅವನು ಪಟ್ಟಿದ್ದರೆ, ಅವನು ನನಗೆ ನೂರರಷ್ಟು ಪಾರಂಗತನಾಗುವುದರಲ್ಲಿ ಸಂದೇಹವಿಲ್ಲ. ಇದೇ ನ್ಯಾಯವನ್ನು ಎಲ್ಲರ ವಿಷಯದಲ್ಲಿಯೂ ಅನ್ವಯಿಸಬಹುದು. ಒಂದು ಹೇಳಬಯಸುತ್ತೇನೆ. ನಮ್ಮ ಧರ್ಮ ಎಂದೆಂದಿಗೂ fatalistic ಅಲ್ಲ. ವಿಧಿ, ವಿಧಿಯೆಂದು ಕೈಕಟ್ಟಿ ಕೂಡಬೇಕಾದ್ದಿಲ್ಲ. ಪ್ರಯತ್ನಶೀಲರಾಗಬೇಕು. ಪ್ರಯತ್ನಕ್ಕೆ ಕೊನೆಯೆಂಬುದಿಲ್ಲ. ಏಕೆಂದರೆ ಈಗಿನ ನಮ್ಮ ಪ್ರಯತ್ನವೇ ಮುಂದಿನ ಜನ್ಮದಲ್ಲಿ ನಮಗೆ ವಾಸನೆಯೆಂಬ ಬುನಾದಿಯಾಗುತ್ತದೆ. ವಾಸನಾ ಪ್ರಾಬಲ್ಯವಿರುವವನು ಒಂದು ಜನ್ಮದಲ್ಲಿ attain ಮಾಡುವುದನ್ನು ನಾವು 10 ಅಥವಾ ನೂರು ಜನ್ಮಗಳಲ್ಲಿ ಮಾಡಬಹುದು, ಅವಶ್ಯವಿದ್ದರೆ. ಹಾಗೆಂದು ಸುಮ್ಮಸುಮ್ಮನೆ ಎಲ್ಲಾದಕ್ಕೂ ಪ್ರಯತ್ನ ಪಡುವುದು ದಡ್ಡತನವಾಗುತ್ತದೆ. ಅನವಶ್ಯಕ. ನಮ್ಮ ನಮ್ಮ ವಾಸನೆಗಳನ್ನು ನಾವು ಕಂಡುಹಿಡಿದುಕೊಂಡು, ಸದ್ವಾಸನೆಗಳನ್ನು ಪ್ರಯತ್ನಪಟ್ಟು ಅಭಿವೃದ್ಧಿಗೊಳಿಸುತ್ತಾ, ದುಷ್ಟವಾಸನೆಗಳನ್ನು ಪ್ರಯತ್ನಪಟ್ಟು ಅದುಮಿ ನಾಶಪಡಿಸುತ್ತಾ, ಜೀವನಪೂರ್ತಿ ಸಕ್ರಿಯವಾಗಿ ಬಾಳಬೇಕು. 'ಅಯ್ಯೋ ! ನನ್ನ ಪ್ರಾರಬ್ಧ ಇಷ್ಟೇ ! ಶನಿಕಾಟ, ನಾನೇನು ಮಾಡಲಿ !' ಎಂಬ ಗೋಳುಕರೆ ವೇದಾಂತ ನಮ್ಮದಲ್ಲ. "ಶುಭಾಶುಭಾಭ್ಯಾಂ ಮಾರ್ಗಾಭ್ಯಾಂ ವಹಂತೀ ವಾಸನಾಸರಿತ್ । ಪೌರುಷೇಣ ಪ್ರಯತ್ನೇನ ಯೋಜನೀಯಾ ಶುಭೇ ಪಥಿ" ಎಂದಿತು ಉಪನಿಷತ್ತು. ವಾಸನೆಯೆಂಬ ನದಿಯು ಶುಭ, ಅಶುಭ ಎಂಬ ಎರಡು ಮಾರ್ಗಗಳಲ್ಲಿಯೂ ಹರಿಯುತ್ತದೆ. ಪುರುಷ ಪ್ರಯತ್ನದಿಂದ ಅಶುಭವಾಸನೆಯನ್ನು, ಶುಭಮಾರ್ಗದಲ್ಲಿ ಹಾಕಬೇಕು. ಹಾಗೆಯೇ "ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈಃ । ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ" (ಮನಸ್ಸಿನಲ್ಲಿ ಮಂಡಿಗೆ ಹಾಕುವುದರಿಂದ ಕಾರ್ಯಸಿದ್ಧಿ ಯಾಗುವುದಿಲ್ಲ, ಕೇವಲ ಪ್ರಯತ್ನದಿಂದಲೇ. ಮಲಗಿರುವ ಸಿಂಹದ ಬಾಯಿಗೆ ಮೃಗಗಳು ತಾವಾಗಿ ಬಂದು ಬೀಳುವುದಿಲ್ಲ) ಎಂದ ಭರ್ತೃಹರಿ. 'ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್। ವಿವಿಧಾಶ್ಚ ಪೃಥಕ್ ಚೇಷ್ಟಾಃ ದೈವಂ ಚೈವಾತ್ರ ಪಂಚಮಮ್॥ (ಕೆಲಸ ಮಾಡುವ ದೇಶ, ಮಾಡುವವನ ಯೋಗ್ಯತೆ, ಮಾಡುವ ಉಪಾಯ, ಸಲಕರಣೆಗಳು, ಮಾಡುವ ವಿವಿಧ ರೀತಿ ಇವುಗಳ ಮೇಲೆ ಒಂದು ಕೆಲಸದ ಜಯಾಪಜಯಗಳು ಅವಲಂಬಿಸಿವೆ. ಐದನೆಯದಾಗಿ ದೈವವನ್ನು ತೆಗೆದುಕೊಳ್ಳಬಹುದು) ಎಂದರು ಗೀತಾಚಾರ್ಯರು. ಉಪನಿಷತ್ತುಗಳು 'ಆತ್ಮಾ ವಾ ಅರೇ ದ್ರಷ್ಟವ್ಯಃ, ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' (ಆತ್ಮನನ್ನು ದರ್ಶನ ಮಾಡಬೇಕು-ಶ್ರವಣ, ಮನನ, ನಿದಿಧ್ಯಾಸನಗಳಿಂದ) ಎಂದು ಘೋಷಿಸುತ್ತಿವೆ. ಅವೆಲ್ಲಾ ಕೇವಲ ಮನುಷ್ಯ ಪ್ರಯತ್ನವೇ. ವಿಧಿ ಎಂಬುದು ಒಂದಿದೆ ಎಂದು ಮರೆತರೂ ಚಿಂತೆಯಿಲ್ಲ, ಒಳ್ಳೆಯ ಕೆಲಸವನ್ನು ಮಾಡಹೊರಟ ನಮ್ಮ ಪ್ರಯತ್ನ ಶಿಥಿಲವಾಗಬಾರದು. ನಮ್ಮ ವಿಧಿ ಇಷ್ಟೇ ಎಂದು ತಲೆಯ ಮೇಲೆ ಕೈಹೊತ್ತು ಕುಳಿತುಕೊಳ್ಳುವ ಅಳುಮುಂಜಿಗಳಾಗುವುದು ಬೇಡ. ಊರಲ್ಲಿರುವ ಕಣಿ ಹೇಳುವವರ ಹಿಂದೆ ಅಲೆಯುವ ನಾಯಿಗಳಾಗುವುದೂ ಬೇಡ. ಪ್ರಯತ್ನಶೀಲರಾಗೋಣ. ಸಕ್ರಿಯರಾಗೋಣ. ಆಂಜನೇಯನನ್ನು ಸ್ಮರಿಸಿಕೊಳ್ಳೋಣ. ಸೀತೆಯನ್ನು ಹುಡುಕಿ ಹುಡುಕಿ ನಿರಾಶನಾಗಿ ಆತ್ಮಹತ್ಯೆ ಮಾಡಿಕೊಳ್ಳುವವರೆಗೂ ಹೊರಟಿದ್ದ ಆಂಜನೇಯ, ಅದು ಹೇಡಿತನವೆಂದು ನಿಶ್ಚಯಿಸಿ ದೇವತೆಗಳಿಗೆ ನಮಸ್ಕಾರ ಮಾಡಿ ಪುನಃ ಹುಡುಕಲು ಹೊರಡುತ್ತಾನೆ! ಅದು ಪ್ರಯತ್ನಶೀಲತೆಯ, ಉತ್ಸಾಹದ ಆದರ್ಶ. ಪ್ರಯತ್ನಶೀಲತೆಯು ಎಷ್ಟು ಫಲಕಾರಿ ಆಗಬಹುದೆಂಬುದನ್ನು ಕೊರಿಯಾದ Asian Games ಗಳಲ್ಲಿ ಕಂಡೆವಲ್ಲವೇ ? ನಮ್ಮ ದೇಶಕ್ಕೆ 20ನೇ ಒಂದು ಭಾಗವಿರುವ S. Korea ಇವತ್ತು sports ನಲ್ಲಿ ನಮ್ಮನ್ನು ಮೆಟ್ಟಿಹಾಕಿದೆ. 30 ವರ್ಷಗಳ ಹಿಂದೆ Hockey

bat ಗೂ Cricket bat ಗೂ ವ್ಯತ್ಯಾಸ ಗೊತ್ತಿಲ್ಲದ ದೇಶ ಇವತ್ತು 60 ವರ್ಷಗಳಿಂದ champion ಆಗಿದ್ದವರನ್ನು ಮೂಲೆಗೆ ತಳ್ಳಿ ಮೇಲೆ ಬಂದಿದೆ. ಎರಡನೇ ಮಹಾಯುದ್ಧಕ್ಕೆ ಮುಂಚೆ 1 kg. ಕೂಡ steel ಮಾಡದೆ ಇದ್ದ ದೇಶ ಇವತ್ತು ನಮ್ಮ ಎರಡರಷ್ಟು steel ಉತ್ಪತ್ತಿ ಮಾಡುತ್ತಿದೆ! ಇವಕ್ಕೆಲ್ಲಾ ಕಾರಣ ಪ್ರಯತ್ನಶೀಲತೆ. ವಿಧಿಯೆನ್ನುವುದು, ನಮಗೆ ಅಪಜಯ ಲಭಿಸಿದಾಗ ಸಹಿಸಿಕೊಂಡು ಇನ್ನೂ ಹೆಚ್ಚು ಪ್ರಯತ್ನಶೀಲತೆಯನ್ನು ಕೊಡುವ ಧೈರ್ಯದ ಊಟೆಯಾಗಬೇಕೇ ಹೊರತು, ನಮ್ಮ ಉತ್ಸಾಹವನ್ನೇ ಅಡಗಿಸುವ ಭೋರ್ಗರೆಯುವ ಪ್ರಪಾತವಾಗಬಾರದು. ಎಲ್ಲಾ ದೇವೇಚ್ಛೆ ಎಂದು ಹೇಳುವುದು ಆಸ್ತಿಕನ ಲಕ್ಷಣ ಎಂದು ಜನ ತಿಳಿದುಕೊಂಡಂತಿದೆ. ಅದು ಕೇವಲ ವಿನಯಪ್ರದರ್ಶನದ ಚಿಹ್ನೆಯಾಗಬೇಕೇ ಹೊರತು ಧರ್ಮದ ಲಕ್ಷಣವಾಗಬಾರದು. ಧರ್ಮ ಎಂದಿಗೂ ಕ್ರಿಯಾತ್ಮಕವೇ ಹೊರತು ಶೋಂಭೇರಿತನವಲ್ಲ. ಬಾಳೆಗಿಡಕ್ಕೆ ಏಣಿ ಹಾಕಿ ಅದು ಮುರಿದುಕೊಂಡು ಬಿದ್ದರೆ (ನನಗೆ ಶ್ರಾದ್ಧದ ಹಿಂದಿನ ದಿನ ಸಾಯಂಕಾಲ ಆಯಿತು !!) ಅದಕ್ಕೆ ನನ್ನ ದಡ್ಡತನ ಕಾರಣವೇ ಹೊರತು ವಿಧಿಯಲ್ಲ. ಹೊಟ್ಟೆ ಕಾಣದೆ ತಿಂದು ಅಜೀರ್ಣ ಬರಿಸಿಕೊಂಡು suffer ಮಾಡಿದರೆ, ನಾವೇ ಕಾರಣವೇ ಹೊರತು ವಿಧಿಯಲ್ಲ. ರುಚಿಯಾದದ್ದನ್ನು ಹೆಚ್ಚು ತಿನ್ನುವ ವಾಸನೆಗೆ ವಿಧಿ ಕಾರಣವಿರಬಹುದು. ಆದರೆ ಹಾಗೆಯೇ ನಮ್ಮ ಸದ್ವಾಸನೆ ನಮಗೆ warning ಕೊಡುತ್ತದಲ್ಲವೇ ? ಆ ಸದ್ವಾಸನೆಯನ್ನು ಪ್ರಬಲಗೊಳಿಸುವುದು ನಮ್ಮ ಕರ್ತವ್ಯವೇ ಹೊರತು ವಿಧಿಯ ಕರ್ತವ್ಯವಲ್ಲ. ಹೀಗೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಬೇಡ. ಇಷ್ಟು ಹೇಳಬಲ್ಲೆ. ನಮ್ಮ ಧರ್ಮದಲ್ಲಿ ಪ್ರಯತ್ನಕ್ಕೇ ಪ್ರಪ್ರಥಮ ಸ್ಥಾನ. ಅದರಲ್ಲಿ ಯಾವ ಸಂದೇಹವೂ ಬೇಡ. ಅದರಿಂದ ನಾವು ನಾಸ್ತಿಕರೆನಿಸಿಕೊಳ್ಳುವುದಾದರೆ ಚಿಂತೆಯಿಲ್ಲ.

ವ್ಯಾಧಿಗಳಲ್ಲಿ ಕೆಲವು hereditaryಯಾಗಿ ಬರಬಹುದೇ ವಿನಾ ಎಲ್ಲವೂ ಅಲ್ಲ. ಸಾಮಾನ್ಯ ಜ್ವರಾದಿಗಳು, T.B, Influenza, ಅಜೀರ್ಣವ್ಯಾಧಿಗಳು, ಚರ್ಮವ್ಯಾಧಿಗಳು ಇವೆಲ್ಲವೂ ನಮ್ಮ ನಮ್ಮ ಬಾಳ್ವೆಯಲ್ಲಿ ನಡೆದುಕೊಳ್ಳುವ ರೀತಿಯಿಂದ ಬರುತ್ತವೆ. Hereditary ಯಾದರೂ, ಈಗ ವಿವಾಹಜೋಡಣೆಯಿಂದ, ಮಗುವಿಗೆ ಆ ಖಾಯಲೆ ಬರುವ probability ಯನ್ನು ಕಮ್ಮಿ ಮಾಡುವ ಅವಕಾಶ ಉಂಟಲ್ಲವೆ ? ಆದ್ದರಿಂದ ಅಲ್ಲಿಯೂ ವಿಧಿ ಎಂದು ಕೈಹೊತ್ತು ಕುಳ್ಳಿರಬೇಕಾದ್ದಿಲ್ಲ.

ವಿವಾಹದಲ್ಲಿಯೂ ಕೂಡ ಈ ಜಾತಕಗಳನ್ನು ಪರಿಶೀಲಿಸಿ ಗಂಡು ಹೆಣ್ಣುಗಳನ್ನು ಸೇರಿಸುವುದು ಮೌಢ್ಯ ಮತ್ತು ಅಪಾಯಕಾರಿ. ಮೊದಲನೆಯದಾಗಿ, ವಿವಾಹಸಂಸ್ಕಾರವನ್ನು ಅಳವಡಿಸಿ ಕೊಟ್ಟಿರುವ ನಮ್ಮ ಮಹರ್ಷಿಗಳು ಅದರ ಬಗ್ಗೆ ಒಂದು ಶಬ್ದವನ್ನೂ ಎತ್ತಿಲ್ಲ. ಎರಡನೆಯದಾಗಿ ಗಂಡಹೆಂಡಿರಾಗಿ ಬಾಳುವವರು, ನವಗ್ರಹಗಳ ಅನುಗ್ರಹದಿಂದ ಚೆನ್ನಾಗಿ ಬಾಳಲಾರರು. ಇಬ್ಬರಿಗೂ ಮಾನಸಿಕ ಸಾಂಗತ್ಯ (mental compatibility) ಇದ್ದ ಪಕ್ಷದಲ್ಲಿ ಅನ್ಯೋನ್ಯ ದಾಂಪತ್ಯದಿಂದ ಬಾಳಲು ಸಾಧ್ಯ. ಇಲ್ಲದಿದ್ದರೆ ಕೇವಲ ಮೃಗಸಂತೋಷ ಒಂದು ಮಾತ್ರದಿಂದ ತೃಪ್ತರಾಗಿ ಜೀವನವನ್ನು ತಳ್ಳಬೇಕಾಗುತ್ತದೆ. ಹೃದಯವಿಕಾಸ ಮಾಡಿಕೊಳ್ಳುವ ಅವಕಾಶವೇ ಇಲ್ಲದೆ ಹೋಗುತ್ತದೆ. ಇದೂ ಒಂದು ಜೀವನವೇ ? ಜಾತಕಗಳನ್ನು ನೋಡಿ mental attitudeಗಳನ್ನು ಸರಿಯಾಗಿ ತಿಳಿದು ಜೋಡಿಸುವುದಾದರೆ ಸಂತೋಷ. ಇದುವರೆಗೂ ಹಾಗಾಗಿಲ್ಲ. ಆಗುವುದೂ ಇಲ್ಲ. ಆದ್ದರಿಂದ ವಿವಾಹಕ್ಕೆ ಜಾತಕ ನೋಡುವುದು ಮೂರ್ಖತನ ಎಂದೇ ನನ್ನ ಅಭಿಪ್ರಾಯ.

ಶ್ರೀಕಂಠ ! ಕಾಗದ ಬಹಳ ದೀರ್ಘವಾಯಿತು. ನಿನಗೆ ಓದುವ ಹೊತ್ತಿಗೇ ತಲೆ ಚಿಟ್ಟು ಹಿಡಿಯಬಹುದು. ಆದರೆ ನೀನು ಕೇಳಿರುವ ಪ್ರಶ್ನೆಗಳಿಗೆ ಉತ್ತರ ಕೊಡಲು ಸ್ವಲ್ಪ ದೀರ್ಘ ಮಾಡಬೇಕಾಯಿತು. ಈಗಲೂ ಕೆಲವು unexplained point ಗಳಿವೆ. ನೀನು ಓದಿ, ನಿನ್ನ ಸ್ನೇಹಿತರಿಗೂ ತೋರಿಸಿ, ಸಂದೇಹ ಬಂದ ಜಾಗಗಳನ್ನು ಗುರುತು ಮಾಡಿ, ಮುಂದಿನ ಕಾಗದದಲ್ಲಿ ಬರಿ. ಉತ್ತರಿಸಲು ಪ್ರಯತ್ನಿಸುತ್ತೇನೆ.

ಚಿ|ಗಳಿಗೆಲ್ಲಾ ಆಶೀರ್ವಾದಗಳನ್ನು ತಿಳಿಸು. ನನ್ನ ಕಾಗದವನ್ನು ಕುತೂಹಲದಿಂದ ಓದುವವರಿಗೆಲ್ಲಾ ನನ್ನ ನಮಸ್ಕಾರಗಳನ್ನು ತಿಳಿಸು.

ಇತಿ ನಿನ್ನವ

कुमारस्वामी

೪೫೩

ಧರ್ಮಪ್ರಜಾಸಂಪತ್ತಿಗಾಗಿ (ವಿವಾಹ)

कुशलम्　　　　श्री :　　　　Madras
7.11.86

ಶ್ರೀಕಂಠ !

ನಿನ್ನ ವಿಶ್ವಾಸಪೂರ್ವಕವಾದ ಕಾಗದ, ಆಹ್ವಾನಪತ್ರಿಕೆ ಎಲ್ಲಾ ತಲುಪಿದುವು. Semester ಮಧ್ಯದಲ್ಲಿ ರಜ ತೆಗೆದುಕೊಂಡು ಬರುವುದು ದುಃಸಾಧ್ಯ. ಆದ್ದರಿಂದ ನನ್ನ ಗೈರುಹಾಜರಿಯನ್ನು ಕ್ಷಮಿಸು. ವಿವಾಹವು ಸಾಂಗವಾಗಿ ನೆರವೇರುವುದರಲ್ಲಿ ಸಂದೇಹವಿಲ್ಲ.

ನೂತನದಂಪತಿಗಳಿಗೆ ನನ್ನ ಹಾರ್ದಿಕವಾದ ಆಶೀರ್ವಾದ

ಗಳನ್ನು ತಿಳಿಸು. ವಿವಾಹವನ್ನು ನಮ್ಮ ಮಹರ್ಷಿಗಳು ಸಂಸ್ಕಾರವೆಂದು ಪರಿಗಣಿಸಿದ್ದಾರೆ. ಸಂಸ್ಕಾರವೆಂದರೆ ಅಂತರಂಗದ ಶುದ್ಧಿ. ಮಾನಸಿಕ ಉನ್ನತಿ (ennobling of the mind). ದಂಪತಿಗಳು ಅಂತರಂಗಶುದ್ಧಿಯೊಡನೆ ಕೂಡಿದ್ದೇ ಆದರೆ ಸತ್ಪ್ರಜಾ ಉತ್ಪತ್ತಿಯಾಗಿ ದೇಶಕ್ಷೇಮವು ಸಾಧ್ಯ ಎಂಬುದೇ ಅವರ ಉದ್ದೇಶ. ಅದಕ್ಕೇ ವಿವಾಹ ಆರಂಭದಲ್ಲಿ, ವರನು 'ಧರ್ಮಪ್ರಜಾ ಸಂಪತ್ತ್ಯರ್ಥಂ ಸ್ತ್ರಿಯಮ್ ಉದ್ವಹೇ' ಎಂದು ಸಂಕಲ್ಪಿಸುತ್ತಾನೆ. ಸ್ತ್ರೀ ಪುರುಷ ಸಂಯೋಗದಿಂದ ಪ್ರಜೋತ್ಪತ್ತಿಯಾಗುವುದು ಪ್ರಾಣಿ ಮಾತ್ರದಲ್ಲಿ ಸಹಜವಾಗಿದೆ. ಅದಕ್ಕೆ ವಿಶೇಷ ಪ್ರಯತ್ನವೇನೂ ಬೇಕಿಲ್ಲ. ಆದರೆ ಧಾರ್ಮಿಕ ಪ್ರಜೆಗಳು ಹುಟ್ಟಬೇಕೆಂದರೆ ಉಪಾಯವೇನೆಂಬುದು ತಿಳಿಯದು. ಈ ಅಸಹಾಯಕತೆಯನ್ನೂ, ದೇಶಕ್ಷೇಮಕ್ಕೆ ಧಾರ್ಮಿಕ ಪ್ರಜೆಗಳ ಆವಶ್ಯಕತೆಯನ್ನೂ ಅರಿತೇ ಮಹರ್ಷಿಗಳು, ವಿವಾಹ ಸಂಸ್ಕಾರವನ್ನು ಏರ್ಪಡಿಸಿದರು. ದಂಪತಿಗಳು ಆಂತರಂಗಿಕವಾಗಿ ಸುಸಂಸ್ಕೃತರಾದರೆ ಅವರಿಂದ ಧರ್ಮಪ್ರಜೋತ್ಪಾದನೆ ಸುಲಭ ಎಂಬುದೇ ಧ್ಯೇಯ. ಆ ಆಂತರಂಗಿಕ ಸುಸಂಸ್ಕೃತಿಯನ್ನು ಹೊಂದುವ ಸಾಧನಕ್ಕೆ ಈ ವಿವಾಹ ಸಂಸ್ಕಾರವು ಬುನಾದಿ. ದುರದೃಷ್ಟವಶಾತ್ ಇವತ್ತಿನ ವಿವಾಹಗಳು ಸಂಸ್ಕಾರದ ವಿಡಂಬನೆಗಳಾಗಿ ಕೂತಿವೆ. ಯಾಂತ್ರಿಕವಾಗಿ ಪುರೋಹಿತರು ಹೇಳಿದ ಕೆಲವು ಕ್ರಿಯೆಗಳನ್ನು ಅಂಧರಂತೆ ಮಾಡಿ ವಿವಾಹಸಂಸ್ಕಾರವನ್ನು ನೆರವೇರಿಸಿದೆವೆಂಬ ಚರಿತಾರ್ಥತೆಯಿಂದ ಬೆನ್ನುತಟ್ಟಿಕೊಳ್ಳುತ್ತಿದ್ದೇವೆ. ಇದಕ್ಕಿಂತ mockery ಮತ್ತೇನು ಬೇಕಾಗಿದೆ !

ನಿನ್ನ ಮಗಳ ವಿವಾಹವು ಆ ರೀತಿಯಾಗದೆ ನಿಜವಾದ ವಿವಾಹ ಸಂಸ್ಕಾರದ ಪ್ರಯೋಜನವನ್ನು ಇಬ್ಬರೂ ಪಡೆದು ಮಿತವಾದ ಧರ್ಮಪ್ರಜೆಗಳನ್ನು ಉತ್ಪಾದನೆ ಮಾಡಿ, ನಮ್ಮ ಪವಿತ್ರ ಭಾರತೀಯ ಸಂಸ್ಕೃತಿಯು ಉಜ್ವಲವಾಗಿ ಬೆಳಗಲು ಸಹಾಯ ಮಾಡಲೆಂದು ಪ್ರಾರ್ಥಿಸುತ್ತೇನೆ. ವೈವಾಹಿಕಜೀವನದ ಸುಖೋಪಭೋಗಗಳು, ಅದರಿಂದ ಉಂಟಾಗುವ ಆನಂದ, ಸ್ವತಃಸಿದ್ಧವಾಗಿವೆ. ಅವುಗಳಿಗೆ ಸಂಸ್ಕಾರದ ಆವಶ್ಯಕತೆಯಿಲ್ಲ ! ದೈಹಿಕ ಸುಖವೊಂದೇ ಮನುಷ್ಯನಿಗೆ ಸಂತೋಷವನ್ನು ಕೊಡಲಾರದು. ಮಾನಸಿಕ ನೆಮ್ಮದಿಯನ್ನು ಕೊಡಲಾರದು. ಅದಕ್ಕೆ ಸುಸಂಸ್ಕೃತವಾದ, ನಿರ್ಮಲವಾದ, ಉದಾರವಾದ ಅಂತಃಕರಣ ಬೇಕು. ಅದನ್ನು ನಾವು ಬೆಳೆಸಿಕೊಳ್ಳಬೇಕು. ಆ ಬೆಳೆವಣಿಗೆಯಲ್ಲಿನ ಮೊದಲನೇ ಹಂತವೇ ವಿವಾಹ. ಆ ನೂತನ ದಂಪತಿಗಳು ಈ ಸಾಂಸ್ಕೃತಿಕ ಅಭಿವೃದ್ಧಿಯ ಮಾರ್ಗದಲ್ಲಿ ಬಹುದೂರ ಹೋಗಿ ಆದರ್ಶದಂಪತಿಗಳಾಗಿ ಬಾಳಿ, ಭಾರತೀಯ ಚರಿತ್ರೆಯಲ್ಲಿ ದಿಗಂತ ವಿಶ್ರಾಂತವಾದ ಕೀರ್ತಿಯನ್ನು ಪಡೆದು ಬಹುಕಾಲ ಬಾಳಲೆಂದು ಅನನ್ಯ ಭಕ್ತಿಯಿಂದ ಆ ಯಜ್ಞಪುರುಷನನ್ನು ಪ್ರಾರ್ಥಿಸುತ್ತೇನೆ.

ಸಮಂಜಂತು ವಿಶ್ವೇದೇವಾಸ್ಸಮಾಪೋ ಹೃದಯಾನಿ ನೌ।
ಸಂ ಮಾತರಿಶ್ವಾ ಸಂ ಧಾತಾ ಸಮುದೇಷ್ಟ್ರೀ ದಧಾತು ನೌ॥

ಎಂದು ವರನು ಶೇಷಹೋಮದ ಕೊನೆಯಲ್ಲಿ ಪ್ರಾರ್ಥಿಸುತ್ತಾನೆ. ಆ ಪ್ರಾರ್ಥನೆಯಂತೆ, ಅವರಿಬ್ಬರ ಹೃದಯಗಳೂ ಎಲ್ಲಾ ವಿಧದಲ್ಲಿಯೂ ಒಂದಾಗಿ 'ಅರ್ಧೋ ವಾ ಏಷ ಆತ್ಮನಃ। ಯತ್ಪತ್ನೀ॥' ಎಂಬ ವೇದವಾಕ್ಯದಂತೆ ಎರಡು ದೇಹ, ಒಂದೇ ಆತ್ಮವೆಂಬಂತೆ ಬಾಳಲಿ. ನಿನ್ನ ಸೌ॥ಗೂ, ಇತರ ಚಿ॥ ಗಳಿಗೂ ನನ್ನ ಅನಂತ ಆಶೀರ್ವಾದಗಳನ್ನು ತಿಳಿಸು.

ಇತಿ ನಿನ್ನವ
कुमारस्वामी

೪೫೪

ವಿಧಿ

ವಿವಾಹ, ನವಗ್ರಹ ; 'ಪ್ರಾರ್ಥನೆ'ಯು ಜೀವೋತ್ಕರ್ಷಕ್ಕಾಗಿ

कुशलम् श्री : Madras
18.12.86

ಶ್ರೀಕಂಠ !

ನೀವೆಲ್ಲರೂ ಅಷ್ಟು ವಿಶ್ವಾಸದಿಂದ ನನ್ನನ್ನು ಕಾಣಲು ಬಂದ ದಿನ ನಾನು ದೇವಸ್ಥಾನದಲ್ಲಿ busyಯಾಗಿದ್ದು ನಿಮ್ಮೆಲ್ಲರನ್ನೂ ಸರಿಯಾಗಿ ಮಾತನಾಡಿಸಲೂ ಆಗಲಿಲ್ಲ. ದೇವಸ್ಥಾನದಿಂದ ಬರುವುದು ತಡವಾಯಿತು. ನಿಮಗೂ ಅಷ್ಟು ಹೊತ್ತು ಇರಲು ಸಾಧ್ಯವಾಗಿಲ್ಲ. ಹೀಗಾಗಿ ಮನಸ್ಸಿಗೆ ಬೇಜಾರಾಯಿತು. ದೇವಸ್ಥಾನವನ್ನು ಬಿಟ್ಟು ಬರುವ ಸ್ಥಿತಿಯಲ್ಲಿಯೂ ಇರಲಿಲ್ಲ. (ನಾನಿಲ್ಲದೆ ಹೋದರೆ ಸ್ವಲ್ಪ chaotic ಆಗಿಬಿಡುತ್ತೆ ವಿಶೇಷ ದಿನಗಳಲ್ಲಿ) ಆದ್ದರಿಂದ ನಿಮ್ಮನ್ನು ಮಾತನಾಡಿಸದೆಯೇ ಕಳಿಸಬೇಕಾಗಿ ಬಂತು. ಪ್ರಕಾರಾಂತರ ಭಾವಿಸಬೇಡಿ. ನನಗೇ ಮನಸ್ಸಿಗೆ ಕಷ್ಟವಾಗಿದೆ. ನಿಮ್ಮನ್ನು ಕ್ಷಮಿಸಿ ಎಂದು ಹೇಳಿದರೆ ನಿಮಗೆ embarrassment ಆಗಬಹುದು. ಆದ್ದರಿಂದ Englishನಲ್ಲಿ ಹೇಳುತ್ತೇನೆ. I am extremely sorry. Kindly excuse me.

ನೀನು ಬಿಟ್ಟುಹೋಗಿರುವ ಕಾಗದವನ್ನು ಓದಿದೆ. ನಿನಗೆ ಆಗಿರುವ confusion ನೂರಾರು ಜನಗಳಿಗೆ ಆಗಿದೆ. ನಮ್ಮ ಶಾಸ್ತ್ರಗಳೂ ಆ ವಿಷಯದಲ್ಲಿ ನಿಷ್ಪುಷ್ಟವಾದ ಉತ್ತರವನ್ನು ಕೊಡುವುದಿಲ್ಲ.

ನಾವೇ Plausible and practical explanations ಕಂಡುಹಿಡಿದುಕೊಳ್ಳಬೇಕಾಗಿದೆ. ಆ ದೃಷ್ಟಿಕೋಣದಿಂದಲೇ ನಾನು ನಿನಗೆ ಕಾಗದ ಬರೆದದ್ದು. ನೀನು ಕೊಟ್ಟಿರುವ ದೃಷ್ಟಾಂತಗಳಿಗೆಲ್ಲಕ್ಕೂ ನನ್ನ ಕಾಗದದಲ್ಲಿ ಉತ್ತರವಿದೆಯೆಂದು ನಂಬಿದ್ದೇನೆ.

ಕರ್ಮಫಲವೇ ವಿಧಿ : ವಿಧಿಯೆಂಬುದು ಇಲ್ಲವೆಂದು ನಮ್ಮ ಶಾಸ್ತ್ರಗಳು ಹೇಳುವುದಿಲ್ಲ. ಆದರೆ ಆ ವಿಧಿಯೆನ್ನುವುದು ಯಾವುದೋ ಹೊರಗಡೆ ಕೂತು ಚಾವಟಿಯಿಂದ ಹೊಡೆಯುತ್ತಿರುವ ದೈವವಲ್ಲ, ಅಥವಾ ಆಕಾಶದಲ್ಲಿ ಸಿಂಹಾಸನದ ಮೇಲೆ ಕೂತು ನಮ್ಮ ಮೇಲೆ ಅಧಿಕಾರ ಮಾಡುತ್ತಿರುವ ಸುಲ್ತಾನನಲ್ಲ. ಅದು ನಾವೇ ಮಾಡಿರುವ ಕರ್ಮಗಳ ಸಮುದಾಯ ಫಲ. ಅದನ್ನು ಅನುಸರಿಸಿಯೇ ನಮ್ಮ ಜನ್ಮ. ಅದನ್ನು ಅನುಸರಿಸಿಯೇ ನಮ್ಮ ಬುದ್ಧಿಶಕ್ತಿ, ವಾಸನೆಗಳು, ಸತ್ತ್ವರಜಸ್ತಮೋಗುಣಗಳು, ಕರ್ಮಕೌಶಲ್ಯ, ಅಚಿಕಿತ್ಸಕವಾದ ರೋಗಗಳು, ಆಯುಷ್ಯ ಮೊದಲಾದವು. ಅವುಗಳಲ್ಲಿ ನಮ್ಮ ಜನ್ಮವನ್ನೂ ಮೃತ್ಯುವನ್ನೂ ವ್ಯತ್ಯಾಸ ಮಾಡಿಕೊಳ್ಳಲು ಸಾಧ್ಯವಿಲ್ಲ. ಅಚಿಕಿತ್ಸಕವಾದ ವ್ಯಾಧಿಗಳನ್ನೂ ಅಂಗನ್ಯೂನತೆಗಳನ್ನೂ ಏನೂ ಮಾಡಲು ಆಗುವುದಿಲ್ಲ. ಆದರೆ ನಮ್ಮ ವಾಸನೆಗಳನ್ನೂ, ಸತ್ತ್ವ ರಜಸ್ತಮೋಗುಣಗಳನ್ನೂ ವ್ಯತ್ಯಾಸ ಮಾಡಿಕೊಳ್ಳಬಹುದು. ಸತತ ಅಭ್ಯಾಸದಿಂದ ನಮ್ಮ ಬುದ್ಧಿಶಕ್ತಿಯನ್ನೂ ಜಾಸ್ತಿ ಮಾಡಿಕೊಳ್ಳಬಹುದು. ಅದೇ ಪುರುಷಪ್ರಯತ್ನ. ಎಲ್ಲವೂ ವಿಧಿಯೇ ಆಗಿ ಪುರುಷಪ್ರಯತ್ನಕ್ಕೆ ಸ್ಥಾನವೇ ಇಲ್ಲದೆ ಹೋದರೆ, ನಮ್ಮ ವಿಧಿನಿಷೇಧ ರೂಪವಾದ ಧರ್ಮಶಾಸ್ತ್ರಗಳೇ ಅನರ್ಥವಾಗುತ್ತವೆ. ಎಲ್ಲಿಯವರೆಗೆ ಪುರುಷಪ್ರಯತ್ನ, ಎಲ್ಲಿಂದ ವಿಧಿ ಆರಂಭ ಎಂದು ಹೇಳುವುದು ಬಹಳ ಕಷ್ಟ. ಅದರಿಂದಲೇ ನನ್ನ ಅಭಿಪ್ರಾಯವೇನೆಂದರೆ, ಪ್ರಯತ್ನ ಮಾಡುತ್ತಲೇ ಇರುವುದು. ಅದೂ ಅಲ್ಲದೆ ನಮಗೆ ವಿಧಿಯೆಂಬುದು ತಿಳಿಯುವುದು ಯಾವಾಗ? ಎಲ್ಲಾ ಪ್ರಯತ್ನಗಳನ್ನೂ ಮಾಡಿ Result ಬಂದಾಗಲೋ ಬರದೆ ಇದ್ದಾಗಲೋ ವಿಧಿಯೆಂದು ಹೇಳುತ್ತೇವೆ. ಆಗ ಹೇಳಿದ್ದರಿಂದ ಏನು ಪ್ರಯೋಜನ ? ಪ್ರಯತ್ನಪಡುವುದಕ್ಕೆ ಮುಂಚೆಯೇ ತಿಳಿದಿದ್ದರೆ ಪ್ರಯತ್ನವೇ ಪಡದೆ ಇರಬಹುದಾಗಿತ್ತು. ನಿನ್ನ ಸ್ನೇಹಿತರು ಯಾರೋ ವರನನ್ನು ಊರೆಲ್ಲಾ ಹುಡುಕಿ ಕೊನೆಗೆ ಪಕ್ಕದಲ್ಲಿ ಶಿವಮೊಗ್ಗಾದಲ್ಲಿಯೇ ಗಂಡು ಸಿಕ್ಕಿತು ಎಂದು ಬರೆದಿದ್ದೀಯೆ. ಗಂಡು ಪಕ್ಕದಲ್ಲಿಯೇ ಇರುವುದು ಆ ಹುಡುಗಿಯ ವಿಧಿ ಅಥವಾ ಯೋಗ ಎನ್ನುವುದು ಮೊದಲೇ ತಿಳಿದಿದ್ದರೆ ಅವರು ಊರೂರು ತಿರುಗದೆ ಇರಬಹುದಾಗಿತ್ತಲ್ಲವೇ ? ಹಾಗಾದ ಮೇಲೆ ಇದು ವಿಧಿ ಎಂದು ಹೇಳುವುದರಿಂದ ಏನು ಗಳಿಸಿದ ಹಾಗಾಯಿತು? ನಾನಾ ತರಹ ಉದ್ಯೋಗಗಳಿಗೆ ಪ್ರಯತ್ನಪಟ್ಟು ಯಾವುದೋ ಕಾರಣಗಳಿಂದ ಸಿಗದೆ, ಒಂದು ಉದ್ಯೋಗ ಸಿಕ್ಕಿತೆಂದು ಇಟ್ಟುಕೊಳ್ಳೋಣ. ಅವನ ಹಣೆಬರಹ ಇದು ಎಂದು ಆ ಉದ್ಯೋಗ ಸಿಕ್ಕಿದ ಮೇಲೆ ತಾನೇ ಹೇಳುತ್ತೇವೆ. ಆ ಹಣೇಬರಹ ಏನು ಅನ್ನುವುದು ಗೊತ್ತಿಲ್ಲದೇ ಇರುವಾಗ ನನ್ನ ಹಣೇಬರಹ ಹೀಗಿದ್ದರೆ ಹಾಗಾಗುತ್ತದೆ ಎಂದು ಮನುಷ್ಯ ಸುಮ್ಮನೆ ಕೂರುತ್ತಾನೇನು? ಅದು ಯುಕ್ತವೂ ಅಲ್ಲ. ಪ್ರಯತ್ನಗಳೆಲ್ಲ fail ಆದಾಗ ಹಣೇಬರಹ ಅನ್ನುತ್ತೇವೆ. ಏನು ಪ್ರಯೋಜನ ಎನ್ನುವುದು ತಿಳಿಯಲಿಲ್ಲ. ಆ ರೀತಿ ಅಂದುಕೊಂಡು ಯಾರನ್ನೋ ಹಳಿದು, ತನ್ನ ಹಣೇಬರಹವನ್ನು ತಾನೂ ಹಳಿದುಕೊಂಡು ಜೀವನಪೂರ್ತಿ ಗೊಣಗುಟ್ಟಿಕೊಂಡು ಇರುವುದಕ್ಕೆ ಬದಲಾಗಿ ಮಾಡಿರುವ ಪ್ರಯತ್ನ ಇನ್ನೂ ಮಾಡಬೇಕು ಎಂದು ಸಕ್ರಿಯನಾಗುವುದು ಉತ್ತಮ ಪಕ್ಷ ಎಂದು ನನ್ನ ಭಾವನೆ. ಇನ್ನು ವಿಧಿ ಎನ್ನುವ ತತ್ತ್ವವನ್ನು frustration ಕಳೆದುಕೊಳ್ಳಲೂ ಯಥಾಲಾಭ ಸಂತುಷ್ಟಿಯನ್ನು ಪಡೆದುಕೊಳ್ಳಲೂ ಉಪಯೋಗಿಸುವುದಾದರೆ ಬಹಳ ಸಂತೋಷ. ಒಬ್ಬ ಮನುಷ್ಯನ ವಿಧಿಯನ್ನು predict ಮಾಡುವುದಕ್ಕೆ ಜ್ಯೋತಿಶ್ಶಾಸ್ತ್ರ ಹೊರಟಿದೆ. ಆದರೆ ಎಷ್ಟು ಜನ ಅದನ್ನು ಕೇಳಿ ತಿಳಿದುಕೊಂಡು ತಮ್ಮ ಜೀವನವನ್ನು ಇನಿತು ಎನಿಸಿಕೊಳ್ಳುತ್ತಾರೆ? ಇನ್ನು 3 ವರ್ಷಗಳು ಖಂಡಿತ ವಿವಾಹವಾಗುವುದಿಲ್ಲ ಎಂದು ಹೇಳಿದರೂ ಮಾಡುವ ಪ್ರಯತ್ನವನ್ನು (ವ್ಯರ್ಥವೇ ಆಗಲಿ) ಮಾಡುತ್ತಲೇ ಇರುತ್ತೇವಲ್ಲವೇ? ಆಮೇಲೆ ವಿವಾಹವಾಗಿ ಅವಳ ಹಣೆಬರಹ ಇಷ್ಟಿತ್ತು ಎಂದು ತಲೆ ಮೇಲೆ ಕೈ ಇಟ್ಟುಕೊಳ್ಳುವುದರಲ್ಲಿ ಏನರ್ಥ ಎಂಬುದು ತಿಳಿಯದು. 16ನೇ ವರ್ಷದಲ್ಲಿ ಮೃತ್ಯುಸಿದ್ಧ ಎಂದು ಜ್ಯೋತಿಷ್ಯ ಹೇಳಿದರೆ ಅದಕ್ಕೆ preparations ಯಾರಾದರೂ ಮಾಡಿಕೊಳ್ಳುತ್ತಾರೆಯೆ ? ಯಾವ ಜನ್ಮ, ಮೃತ್ಯು ಎನ್ನುವುದು complete ಆಗಿ ವಿಧಿಯ ಕೈಯಲ್ಲಿದೆಯೋ ಅದನ್ನೇ prevent ಮಾಡಲು ಪ್ರಯತ್ನ ಪಡುತ್ತೇವೆ. ಪರೀಕ್ಷಿತು ಪ್ರಯತ್ನಪಟ್ಟ. ಬುದ್ಧನ ತಂದೆ ಪ್ರಯತ್ನಪಟ್ಟರು. ಹೀಗಿರುವಾಗ ಸಣ್ಣ ಸಣ್ಣ ವಿಷಯದಲ್ಲಿ ವಿಧಿ ವಿಧಿ ಎಂದು ಹೇಳುವುದು ನಮ್ಮದೇ ದೌರ್ಬಲ್ಯವೇ ಹೊರತು ಧೀರತನವಲ್ಲ.

ಮನುಷ್ಯಪ್ರಯತ್ನ : ಭದ್ರಾವತಿಯಲ್ಲಿದ್ದಾಗ ನನ್ನ ಹತ್ತಿರ ವೇದಪಾಠಕ್ಕೆ ಕುಂಬಳೆ ಕೃಷ್ಣಮೂರ್ತಿ ಎಂಬ 55 ವರ್ಷದವರು ಬಂದರು. ಹಾಗೆಯೇ ನಮ್ಮವರಾದ ಒಬ್ಬರು ಮೇಷ್ಟ್ರು ಬಂದರು. ಇಬ್ಬರಿಗೂ ಸ್ವಲ್ಪವಾದರೂ ಗ್ರಹಣಸಾಮರ್ಥ್ಯವೆಂಬುದು ಇರಲಿಲ್ಲ. ಏನು ಮಾಡಿದರೂ ಅವರಿಗೆ ಬರುವ ಹಾಗೆ ಕಾಣಲಿಲ್ಲ. ಆಗ ಇಬ್ಬರಿಗೂ ಹೇಳಿದೆ, "ಸಂಸ್ಕಾರ ಬಹಳ ಕಮ್ಮಿ ಇರುವಂತೆ ಕಾಣುತ್ತದೆ. ಗ್ರಹಣ ಮಾಡುವುದು ಬಹು ಕಷ್ಟ. ಕೆಲವು ತಿಂಗಳುಗಳ

ಕಾಲ ಸುಮ್ಮನೆ ಶ್ರವಣ ಮಾಡುತ್ತಾ ಕೂತಿರಿ. ಸಂಸ್ಕಾರವಾಗುತ್ತದೆ. ಆಮೇಲೆ ಸುಲಭವಾಗಬಹುದು" ಎಂದು. ...ಮೇಷ್ಟ್ರು ನನ್ನ ಕೇಳಿಕೆಯನ್ನು ಅವಮಾನವೆಂದು ತಿಳಿದುಕೊಂಡು ಬರುವುದನ್ನೇ ಬಿಟ್ಟರು. ಕೃಷ್ಣಮೂರ್ತಿ ಮಾತ್ರ persevere ಮಾಡಿ 6 ತಿಂಗಳುಗಳ ಕಾಲ ಸುಮ್ಮನೆ ಬಂದು ಶ್ರವಣ ಮಾಡಿ ಹೋಗುತ್ತಿದ್ದರು. 6 ತಿಂಗಳಾದ ಮೇಲೆ ಒಂದು ಹೊಸ batchಗೆ ಆರಂಭಿಸಿದಾಗ ಅವರಿಗೂ ಸೇರಿಕೊಳ್ಳುವಂತೆ ಹೇಳಿದೆ. ಸುಲಭವಾಗಿ ಬಂತು. ಕೊನೆಯಲ್ಲಿ ಬಾಕಿಯವರಿಗಿಂತ ಚೆನ್ನಾಗಿಯೇ ಹೇಳಲು ಆರಂಭಿಸಿದರು. ಸಂಸ್ಕಾರವಿಲ್ಲವೆಂದು ಹೇಳಿದಾಗ...ಮೇಷ್ಟರಂತೆ ಅವರೂ ವಿಧಿ ಎಂದುಕೊಂಡು ಸುಮ್ಮನಿರಬಹುದಿತ್ತಲ್ಲವೇ ? ನಾನು ಬಾಲ್ಯದಲ್ಲಿ ನನ್ನ ಅಕ್ಕ, ತಂಗಿಯರೊಡನೆ ವೀಣೆಕೃಷ್ಣಮೂರ್ತಿಗಳ ಹತ್ತಿರ (ಮೈಸೂರಿನಲ್ಲಿ) ಸಂಗೀತ ಆರಂಭಿಸಿದೆ. ನನ್ನ ಮಾನಸಿಕ ವಿಕ್ಷೇಪದಲ್ಲಿ ಹೊಡೆಸಿಕೊಂಡೆ. ಬಯ್ಯಿಸಿಕೊಂಡೆ. ಕೊನೆಗೆ ಬಿಟ್ಟೇಬಿಟ್ಟೆ. ಈಗ ಸಂಗೀತದ ಗಂಧವೇ ಇಲ್ಲ. ಕೇಳಬೇಕು ಅನ್ನುವ ಆಸೆ ಮಾತ್ರ ಇದೆ. ಅರ್ಥವತ್ತಾದ ಶ್ಲೋಕಗಳನ್ನು ಹಾಡಬೇಕೆಂಬ ಅಪೇಕ್ಷೆಯೂ ಇದೆ. ಆದರೆ ಅದಕ್ಕೆ ಪ್ರಯತ್ನವೇ ಪಡಲಿಲ್ಲ. ವೇದದಲ್ಲಿ ಜನ್ಮತಃ ರುಚಿ ಇತ್ತು ಅಂತ ಕಾಣುತ್ತದೆ. ಪ್ರಯತ್ನಪಟ್ಟಕೂಡಲೇ ಬಂತು. ನನಗಿಂತ ನನ್ನ ಮಗನ ಸಂಸ್ಕಾರ ಚೆನ್ನಾಗಿದೆ. ಅವನಿಗೆ ಗ್ರಹಣ ಧಾರಣ ಸಾಮರ್ಥ್ಯಗಳು ಎರಡೂ ಇವೆ. ಇಲ್ಲಿರುವವರೆಗೂ ಕಲಿಯಲು ಪ್ರಯತ್ನವಿತ್ತು. ಈಗ ಅಲ್ಲಿ ಏನೂ ಇಲ್ಲ. ಅಲ್ಲಿಯೂ ಪ್ರಯತ್ನಪಟ್ಟರೆ ಕಲಿಯಬಹುದು. ಆದರೆ ಅವನ ಆಟಗುಳಿತನದಲ್ಲಿ, ಭೋಜನ ಪ್ರಿಯತೆಯಲ್ಲಿ ಪ್ರಯತ್ನವು ಶೂನ್ಯವಾಗಿದೆ. ಅದನ್ನು ವಿಧಿಯೆಂದು ಹೇಳಿ ಸಮಾಧಾನಪಟ್ಟುಕೊಳ್ಳಬಾರದು ಎಂದು ನನ್ನ ಅಭಿಪ್ರಾಯ. ಸ್ವಭಾವಸಹಜವಾದ ಆಲಸ್ಯ, ಭೋಜನಪ್ರಿಯತೆಗಳನ್ನು Controlನಲ್ಲಿಟ್ಟುಕೊಂಡು ಸದ್ವಿದ್ಯಾಸಂಪಾದನೆಗೆ ಪ್ರಯತ್ನ ಪಡುವುದೇ ಮನುಷ್ಯನ ವಿವೇಕ. ಆತ್ಮದರ್ಶನದಂತಹ ಉತ್ತಮ ಧ್ಯೇಯವೇ ಮನುಷ್ಯಪ್ರಯತ್ನದಿಂದ ದೊರಕುವಂಥಾದ್ದಾಗಿರುವಾಗ ಬಾಕಿ ತುಚ್ಛ ವಿಷಯಗಳ ಪಾಡೇನು ?

ಮೊಳೆ ಕೀಳುವ ದೃಷ್ಟಾಂತ : ಅದಕ್ಕೆ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಒಂದು ಸೊಗಸಾದ ಉದಾಹರಣೆಯನ್ನು ಕೊಡುತ್ತಾರೆ. ಒಂದು ಮರದ ಕಂಭಕ್ಕೆ ಯಾರೋ ಮೊಳೆಯನ್ನು ಹೊಡೆದಿದ್ದಾರೆ. ಅದನ್ನು ಹೊರಕ್ಕೆಳೆಯುವುದು ನಮ್ಮ ಉದ್ದೇಶ. ಅದನ್ನು ಹೊರಕ್ಕೆಳೆಯ ಬೇಕಾದರೆ ನಾವು ಮಾಡಬೇಕಾದ ಪ್ರಯತ್ನ ಎಷ್ಟು, ಎಷ್ಟು ಕಾಲವಾಗುತ್ತದೆ, ಎಂಬುದು ಆ ಮೊಳೆಯನ್ನು ಎಷ್ಟು forceನಿಂದ ಎಷ್ಟು ಒಳಕ್ಕೆ ಹೊಡೆದಿದ್ದಾರೆಂಬುದರ ಮೇಲೆ ಅವಲಂಬಿಸಿದೆ. ಎರಡೂ ನಮಗೆ ಗೊತ್ತಿಲ್ಲದಿರುವ ವಿಷಯಗಳು. ಆದರೆ ನಾವೇನು ಮಾಡಬೇಕು ! ಆ ಮೊಳೆ ಹೊರಕ್ಕೆ ಬರುವವರೆಗೂ ಎಳೆಯುತ್ತಿರಬೇಕು. ಅದು ಹೊರಕ್ಕೆ ಬಂದಾಗಲೇ ನಮಗೆ ಅದು ಎಷ್ಟು ಒಳಗೆ ಹೋಗಿತ್ತು, ಕಾಲ ಎಷ್ಟು ಬೇಕಾಯಿತು ಎನ್ನುವುದು ತಿಳಿಯುವುದು. ಇದೇ ವಿಧಿ. ಈ ದೃಷ್ಟಾಂತದಲ್ಲಿ ಇನ್ಯಾರೋ ಮೊಳೆ ಹೊಡೆದಿದ್ದಾರೆ. ನಮ್ಮ ಜೀವನದಲ್ಲಿ ಹಿಂದಿನ ಜನ್ಮಗಳಲ್ಲಿ ನಾವೇ ಮೊಳೆಯನ್ನು ಹೊಡೆದಿರುತ್ತೇವೆ. ಈ ಜನ್ಮದಲ್ಲಿ ತದ್ವಿರುದ್ಧವಾಗಿ ಪ್ರಯತ್ನಿಸಬೇಕು.

ಜೀವೋದ್ಧಾರಕ್ಕೆ ಗರಿಷ್ಠ ಯತ್ನ : ಆದ್ದರಿಂದ ನಾವು ಇವುಗಳಿಂದ ಕಲಿಯಬೇಕಾದ್ದು ಏನೆಂದರೆ ಭಗವಂತನೇ ಅನುಗ್ರಹಿಸಿರುವ ನಮ್ಮ ನಮ್ಮ ಗುಣಗಳು, ಶಕ್ತಿಗಳನ್ನು maximum ಉಪಯೋಗ ಮಾಡಿಕೊಳ್ಳಲು ಪ್ರಯತ್ನಿಸುವುದು– ಅದೂ ಧಾರ್ಮಿಕ ರೀತಿಯಲ್ಲಿ, ನಾವು ಮಾಡುವ ಪ್ರಯತ್ನಗಳಷ್ಟೂ ಜೀವೋದ್ಧಾರದ ಕಡೆ ಎಳೆಯುತ್ತಿರಬೇಕು. ನೀನು ಬರೆದಿರುವ ಶ್ಲೋಕಗಳೂ, ನಮಗೆ frustration ಬರದ ಹಾಗೆ ಮಾಡಲು ಹೇಳಿರುವ ಅರ್ಥವಾದ ಶ್ಲೋಕಗಳೇ ಹೊರತು, ನಮ್ಮನ್ನು ನಿಷ್ಕ್ರಿಯರನ್ನಾಗಿ ಮಾಡುವುದಕ್ಕಲ್ಲ. ಕರ್ಮಕ್ಕೆ ಬೆಲೆ ಇಲ್ಲದೆ ಹೋದರೆ ಆತ್ಮಲಾಭವೇ ಯಾರಿಗೂ ಸಾಧ್ಯವಿಲ್ಲ. ಅದು ಜ್ಞಾನೈಕ ಸಾಧ್ಯ. ಜ್ಞಾನವು ಶ್ರವಣ–ಮನನ–ನಿದಿಧ್ಯಾಸನಗಳಿಂದ ಸಾಧ್ಯ. ಶ್ರವಣಾದಿಗಳು ಚಿತ್ತಶುದ್ಧಿಯಿಂದ ಸಾಧ್ಯ. ಚಿತ್ತಶುದ್ಧಿಯು ನಿಷ್ಕಾಮ ಕರ್ಮಾಚರಣೆಯಿಂದ, ಸಾಮಾನ್ಯಧರ್ಮಾಚರಣೆಯಿಂದಲೇ ಸಾಧ್ಯ. ಅದು ಹಣೇಬರಹವಲ್ಲ, ವಿಧಿಯಲ್ಲ, ಶುದ್ಧವಾದ ಮನುಷ್ಯ ಪ್ರಯತ್ನ. "ಕುರ್ವನ್ನೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ" ಎನ್ನುತ್ತಿದೆ ಉಪನಿಷತ್ತು, "ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್" ಎನ್ನುತ್ತಾರೆ ಗೀತಾಚಾರ್ಯರು.

ಅದು ಪ್ರಚೋದಕ, ನಿಷೇಧಕವಲ್ಲ : ನಾನು ವಿಧಿಯೆಂದು ಹೇಳಬಾರದೆಂದು ಹೊರಟಿಲ್ಲ. ಆದರೆ ಅದು ನಮಗೆ ಐಹಿಕ ವಿಷಯಗಳಲ್ಲಿ ಯಥಾಲಾಭಸಂತುಷ್ಟಿಯನ್ನು ಕೊಟ್ಟು, ಪಾರಮಾರ್ಥಿಕದಲ್ಲಿ ಹೆಚ್ಚು ಪ್ರಯತ್ನವನ್ನು ಮಾಡಿಸುವಂತಾಗಬೇಕೇ ಹೊರತು ಹಣೇಬರಹ ಎಂದು ತಲೆಚಚ್ಚಿಕೊಂಡು ಹೇಡಿಗಳಂತೆ ಕುಳಿತುಕೊಳ್ಳುವಂತಾಗಬಾರದು. ಆ ಸಂದರ್ಭದಲ್ಲಿ ವಿಧಿ ಎಂದು ಒಂದಿದೆ ಎಂದು ಒಪ್ಪಿಕೊಳ್ಳದಿದ್ದರೂ ತಪ್ಪಿಲ್ಲ ಎನಿಸುತ್ತದೆ.

ನಿನ್ನ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರ ಕೊಡುತ್ತೇನೆ.

1) ವಿವಾಹಾದಿ ಸಂಸ್ಕಾರಗಳಲ್ಲಿ ಸೂತ್ರಕಾರರು ಏನು ಹೇಳಿದ್ದಾರೋ ಅಷ್ಟು ಮಾಡಿದರೆ ಸಾಕು. ಬಾಕಿ ಎಲ್ಲವೂ ಅನವಶ್ಯಕ. ಅದರಲ್ಲಿಯೂ ನಮ್ಮ ಆಢ್ಯತೆಯ ಪ್ರದರ್ಶನಾ

ರೂಪವಾದ ವರಪೂಜಾ ಮೊದಲಾದುವುಗಳನ್ನು ಖಂಡಿತ ನಿಷೇಧಿಸಲೇಬೇಕು. ಅಕಸ್ಮಾತ್ ಯಾವುದನ್ನು ಮಾಡಿದರೂ ಮೂಲಭೂತವಾದ ಸಂಸ್ಕಾರ ಎಂಬ concept ಗೆ ವಿರೋಧ ವಿಲ್ಲದಂತಿರಬೇಕು.

2) ಮುಹೂರ್ತ ಎನ್ನುವುದೇ ಇಲ್ಲದಿರುವಾಗ 'ಧಾರೆ'ಯನ್ನು ಇಟ್ಟಿರುವ ಮುಹೂರ್ತದಲ್ಲಿಯೇ ಮಾಡಬೇಕೇ ? ಎನ್ನುವ ಪ್ರಶ್ನೆಯೇ ಏಳುವುದಿಲ್ಲ.

3) You are begging the question. ನವಗ್ರಹ ಹೋಮ, ಪೂಜೆ, ಶಾಂತಿಯೇ ಬೇಕಿಲ್ಲವೆನ್ನುವಾಗ ಅವುಗಳನ್ನು ಮಾಡುವುದರಿಂದ ದೈವಾಂಶವಿದೆ ಎಂದು ಹೇಳಿದರೆ ಏನರ್ಥ ಎಂದು ತಿಳಿಯಲಿಲ್ಲ. ನೀನು ವಿಧಿ, ಹಣೇಬರಹ ಎಂದು ಹೇಳುವಾಗ ನವಗ್ರಹಪೂಜೆ ಮಾಡಿ ವಿಧಿಯನ್ನು ಬದಲಾಯಿಸಬಹುದು ಎಂದುಕೊಂಡಿದ್ದೀಯೇನು ? ಆಗ ನಮ್ಮ ಕೈಯಲ್ಲಿರುವ ರೇಖೆಗಳಲ್ಲೂ ದೈವಾಂಶವಿರಬೇಕು. ಏಕೆಂದರೆ ಅವುಗಳನ್ನು ನೋಡಿ ಭವಿಷ್ಯ ಹೇಳುತ್ತಾರಲ್ಲವೇ ? ನಿನ್ನ ಭಾವನೆ ಹಾಗಿದ್ದರೆ ಯಾರೂ ಏನೂ ಮಾಡಲಾರರು. ನೀನು ನನ್ನಲ್ಲಿಯೂ ದೈವಾಂಶವಿದೆ ಎಂದು ನಂಬಿದ್ದೀಯೆ. ನಿನ್ನ ನಂಬಿಕೆ ಸಕಾರಣವಾಗಿದ್ದರೆ ನಂಬಲು ಅರ್ಹ. ಇಲ್ಲದಿದ್ದರೆ ಕಿತ್ತುಹಾಕಬೇಕು.

4) ಹೋಮ, ಸಂಧ್ಯಾವಂದನೆ, ಪೂಜೆ, ಪ್ರಾರ್ಥನೆ ಎಲ್ಲವೂ ಜೀವೋದ್ಧಾರಕ್ಕೋಸ್ಕರ (Soul elevation). ಒಂದೊಂದು ದೇಶದಲ್ಲಿ ಒಂದೊಂದು ಜನಾಂಗ ಒಂದೊಂದು ತರಹ ಇಟ್ಟುಕೊಂಡಿದ್ದಾರೆ. ಆದರೆ ಎಲ್ಲರ ಧ್ಯೇಯವೂ ಕೇವಲ ಜೀವೋತ್ಕರ್ಷ ಒಂದೇ. ಅವುಗಳಿಂದ ಜೀವೋತ್ಕರ್ಷ ಅಥವಾ ಉತ್ತಮ ಮನುಷ್ಯನಾಗಲಿಲ್ಲವೆಂದರೆ ಖಂಡಿತ ದಂಡ. ನಮ್ಮದೇ ಸರಿ ಎಂದು ಹೇಳುವುದು ಸಾಹಸ. ನಮಗೆ ಈ ಕ್ರಮ tune ಆಗಿದೆ. ಅದನ್ನೇ ಮಾಡಿಕೊಂಡು ಬರುವುದು ಉಚಿತ.

ನೀನು ಪುನಃ ಬರುತ್ತೀಯೆಂದು ಹೇಳಿಹೋಗಿದ್ದೆ. ಅವಕಾಶ ವಾಗಲಿಲ್ಲವೆಂದು ಕಾಣುತ್ತೆ. ಆದರೆ ನೀವು ಬಂದಾಗ ನಾನು ಬಿಡುವು ಮಾಡಿಕೊಳ್ಳಲು ಸಾಧ್ಯವಾಗದೆ ಇದ್ದುದು ನನ್ನ ಮನಸ್ಸನ್ನು ಕೊರೆಯುತ್ತಲೇ ಇದೆ. ತಪ್ಪು ಮಾಡಿದೆನೋ ಎಂಬ guilty conscience ಬಂದಿದೆ. ಹಾಗೆ ಭಾವಿಸಿಲ್ಲವೆಂದು ನೀವು ಆಶ್ವಾಸನೆ ಕೊಟ್ಟರೆ ಮನಸ್ಸು ಸ್ವಲ್ಪ ಸಮಾಧಾನವಾಗುತ್ತದೆ.

ಚಿ।। ಗಳಿಗೆಲ್ಲಾ ಆಶೀರ್ವಾದಗಳನ್ನು ತಿಳಿಸು.

ಇತಿ ನಿನ್ನವ

ಕುಮಾರಸ್ವಾಮೀ

೪೫೫

ತ್ರಿಪಿಂಡ, ಷಟ್ಪಿಂಡ

ಕನಸುಗಳು ; ಅನಧ್ಯಯನ ; ಮಂಗಳವಾರ-ಶುಕ್ರವಾರ

कुशलम् श्री : Madras

22.1.87

ಶ್ರೀಕಂಠ !

1) ನಿನ್ನ ಕಾಗದ ತಲಪಿತು. ಈ ತ್ರಿಪಿಂಡ, ಷಟ್ಪಿಂಡಗಳ ಗಲಾಟೆ ಇವತ್ತಿನದಲ್ಲ. ಪ್ರಾಯಃ 50-60 ವರ್ಷಗಳ ಹಿಂದಿನದು. ವಿಷಯ, ಅರ್ಧಂಬರ್ಧ ತಿಳಿದುಕೊಂಡಿರುವವರ, ವಿಷಯವೇ ತಿಳಿಯದೆ ಸಂಪ್ರಾದಯಶರಣರಾಗಿರುವವರ Contribution. ಒಬ್ಬರಿಗೆ ಪೂರ್ತಿ ತಿಳಿದುಕೊಳ್ಳುವ ಇಚ್ಛೆ ಇಲ್ಲದಿರುವುದು, ಮತ್ತೊಬ್ಬರಿಗೆ ವಿಷಯ ವಿಚಾರದ ಅಪೇಕ್ಷೆಯೇ ಇಲ್ಲದಿರುವುದು, ಹಿರಿಯರು ಮಾಡಿದ ಮೇಲೆ ಅದರಲ್ಲಿ ಏನೋ ವಿಷಯವಿದ್ದೇ ತೀರಬೇಕು ಎಂಬ ಅರ್ಥವಿಲ್ಲದ ಕುರುಡು ನಂಬಿಕೆ, ಇವೆಲ್ಲಾ ಸೇರಿ ಈ ಕೋಲಾಹಲಕ್ಕೆ ಕಾರಣವಾಗಿದೆ. ಪೂರ್ವಾಗ್ರಹವಿಲ್ಲದೆ, ಮೂಲಭೂತವಾಗಿ ಸ್ವಲ್ಪ ವಿಚಾರಮಾಡಿದರೆ ಯತ್ಕಿಂಚಿತ್ತೂ ಸಂದೇಹವಿಲ್ಲದೆ ವಿಷಯವು ತಿಳಿಯುತ್ತದೆ.

ಶ್ರಾದ್ಧವೆಂಬ ನಿತ್ಯಕರ್ಮದ ಕಲ್ಪನೆ ಮಾಡಿಕೊಟ್ಟು, ನಮ್ಮ ಆತ್ಮೋದ್ಧಾರಕ್ಕೆ ಸಾಧನವನ್ನು ಅಳವಡಿಸಿಕೊಟ್ಟಿರುವವರು ನಮ್ಮ ಮಹರ್ಷಿಗಳು, ಸೂತ್ರಕಾರರು. ಅದನ್ನು ಯಾವ ರೀತಿ ಮಾಡಬೇಕೆಂಬುದನ್ನು ಹೇಳಿರುವವರೂ ಅವರೇ. ಅತೀಂದ್ರಿಯ ಜ್ಞಾನಿಗಳಾದ, ಪ್ರಾತಃಸ್ಮರಣೀಯರಾದ ಆ ಮಹರ್ಷಿಗಳು ಹೇಳಿರುವುದನ್ನು ಅರ್ಥಮಾಡಿಕೊಂಡು, ಅವರು ಹೇಳಿದಂತೆ ಶ್ರದ್ಧಾಭಕ್ತಿಗಳಿಂದ ಮಾಡಿ, ತನ್ಮೂಲಕ ಆತ್ಮೋದ್ಧಾರವನ್ನು ಪಡೆಯುವುದಕ್ಕಿಂತ ಬೇರೆ ಏನನ್ನೂ ಕೃತಜ್ಞತಾಪೂರ್ವಕವಾಗಿ, ಆ ಪೂಜ್ಯರು ನಮ್ಮಿಂದ ಅಪೇಕ್ಷಿಸಿಲ್ಲ. ಅಷ್ಟೂ ಮಾಡಲು ಯೋಗ್ಯತೆ ಇಲ್ಲದೆ ಹೋದರೂ ಚಿಂತೆಯಿಲ್ಲ. ಮಾಡುವ ಕಾರ್ಯಗಳ ವಿಷಯವನ್ನಾದರೂ, ಅವರೇನು ಹೇಳಿದ್ದಾರೆಂದು ತಿಳಿದುಕೊಳ್ಳುವ ಪ್ರಯತ್ನವೂ ಇಲ್ಲದೆ, ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿಯೇ ಮಾಡಲು ಹೊರಟರೆ ಅದನ್ನು ಕೃತಘ್ನತೆಯ ಪರಾಕಾಷ್ಠೆಯೆಂದಲ್ಲದೆ ಮತ್ತೇನೆಂದು ಹೇಳಬೇಕು ! ಇರಬಹುದು. ಯಾವುದೋ ಕಾಲದಲ್ಲಿ ಅವರು ಬರೆದಿಟ್ಟಿರುವುದು ಎಲ್ಲರ ಗಮನಕ್ಕೂ ಬರುವುದು ಕಷ್ಟವಾಗಿತ್ತು. ಆದರೆ ಈ ಕಾಲದಲ್ಲಿ ಸಾವಿರಾರು ಪುಸ್ತಕಗಳಿವೆ. ಪ್ರತಿಯೊಬ್ಬ ವಿದ್ಯಾವಂತನೂ ತಾನೇ ಓದಿ ತಿಳಿದುಕೊಳ್ಳಬಹುದು. ಹೀಗಿರುವಾಗ, ತಿಳಿದೋ ತಿಳಿಯದೆಯೋ (ಪುಸ್ತಕ ನೋಡಲು

ಸಿಗದಿದ್ದಕಾಲದಲ್ಲಿ) ಯಾವುದೋ ಒಂದು ತಪ್ಪು ಆರಂಭಿಸಿದರೆ, ಈಗ ತಿಳಿದ ಮೇಲೂ ನಮ್ಮ ಹಿರಿಯರಿಗೆ ಗೌರವ ತೋರಿಸುವ ವ್ಯಾಜದಲ್ಲಿ, ಆ ತಪ್ಪನ್ನು Perpetuate ಮಾಡುವುದು ಮೂರ್ಖತನವಲ್ಲವೇ ? ಈ ತ್ರಿಪಿಂಡದ ಗಲಾಟೆಯೂ ಈ ಜಾತಿಗೆ ಸೇರಿದ್ದು.

ಆಪಸ್ತಂಬ ಮಹರ್ಷಿಗಳು ತಮ್ಮ ಶ್ರೌತಸೂತ್ರದಲ್ಲಿ ಅಗ್ನಿಹೋತ್ರಿಗಳಿಗೆ ಪ್ರತಿ ಅಮಾವಾಸ್ಯೆಯಲ್ಲಿಯೂ ಮಾಡುವುದಕ್ಕಾಗಿ ಪಿಂಡಪಿತೃಯಜ್ಞವೆಂಬ ಶ್ರಾದ್ಧ ಕರ್ಮವನ್ನು ವಿಧಿಸಿದ್ದಾರೆ. ಅದರಲ್ಲಿ ಹೋಮ, ಪಿಂಡಪ್ರದಾನ ಎರಡೇ. ಭೋಜನವಿಲ್ಲ. ಹೋಮವೂ ಮೂರೇ. ಪಿಂಡವೂ ಮೂರೇ (ಪಿತೃಪಿತಾಮಹಪ್ರಪಿತಾಮಹ).

ಅದೇ ಮಹರ್ಷಿಗಳು ಅನಾಹಿತಾಗ್ನಿಗಳಿಗೆ (ಅಗ್ನಿಹೋತ್ರವಿಲ್ಲದಿರುವವರು), ಔಪಾಸನಾಗ್ನಿಯನ್ನು ಇಟ್ಟು ಕೊಂಡಿರುವವರಿಗೆ ತಿಂಗಳೂ ತಿಂಗಳೂ ಮಾಡಬೇಕೆಂದು ಮಾಸಿಶ್ರಾದ್ಧವನ್ನು ವಿಧಿಸಿದ್ದಾರೆ. ನಿತ್ಯಔಪಾಸನ, ವೈಶ್ವದೇವಾದಿಗಳನ್ನು ಹೇಗೆ ಮಾಡುತ್ತಾರೋ ಹಾಗೆ ತಿಂಗಳು ತಿಂಗಳೂ ಈ ಮಾಸಿಶ್ರಾದ್ಧವನ್ನು ಮಾಡಬೇಕು. ಇದರಲ್ಲಿ ಹೋಮ, ಭೋಜನ, ಪಿಂಡಪ್ರದಾನ ಇವು ಮುಖ್ಯ ಕಾರ್ಯಗಳು. ಇವು ಮೂರೂ ಪ್ರಧಾನವೇ. ಈ ಮೂರು ಕರ್ಮಗಳ ಸಮುದಾಯಕ್ಕೇ ಶ್ರಾದ್ಧ ಎಂದು ಹೆಸರು. ಇದರ ಕ್ರಮವನ್ನು ಅಪಸ್ತಂಬರು ತಮ್ಮ ಗೃಹ್ಯಸೂತ್ರದಲ್ಲಿ "ಮಾಸಿಶ್ರಾದ್ಧಸ್ಯ ಅಪರಪಕ್ಷೇ ಯಥೋಪದೇಶಂ ಕಾಲ್ಯಾಃ" ಎಂದು ಆರಂಭಿಸಿ "ಸರ್ವತಃ ಶೇಷಮವದಾಯ ಗ್ರಾಸಾವರಾರ್ಧ್ಯಂ ಪ್ರಾಶ್ನೀಯಾತ್'' ಎಂದು ಮುಗಿಸುತ್ತಾರೆ. ಅಪಸ್ತಂಬಿಗಳು ಎಲ್ಲೆಲ್ಲಿ ಮಾಸಿಶ್ರಾದ್ಧ ಮಾಡಿದರೂ ಇದೇ ಕ್ರಮ. ಇದರಲ್ಲಿ ಪಿತೃ, ಪಿತಾಮಹ, ಪ್ರಪಿತಾಮಹ– ಈ ವರ್ಗಕ್ಕೆ ಹೋಮ, ಅವರಿಗೇ ಅನ್ನಾಭಿಮರ್ಶನ, ಅವರಿಗೇ ಭೋಜನ. ಆದರೆ ಪಿಂಡಪ್ರದಾನ ಮಾತ್ರ 'ಉಭಯೋಃ' ಎರಡು ವರ್ಗದವರಿಗೂ. ಮಂತ್ರದಲ್ಲಿಯೂ ಪಿತೃವರ್ಗ, ಮಾತೃವರ್ಗಕ್ಕೆ ಸೇರಿಸಿಕೊಂಡೇ ಪಿಂಡಪ್ರದಾನ ಮಂತ್ರಗಳು ಬರುತ್ತವೆ. ಇದರಲ್ಲಿ ಕಿಂಚಿತ್ತೂ ಸಂದೇಹಕ್ಕಾಗಲಿ, ವಿಕಲ್ಪಕ್ಕಾಗಲಿ ಅವಕಾಶವೇ ಇಲ್ಲ.

ನಾವು ಈಗ ಮಾಡುತ್ತಿರುವ ಪ್ರತ್ಯಾಬ್ದಿಕಶ್ರಾದ್ಧವನ್ನು ಯಾವ ಸೂತ್ರಕಾರರೂ ಹೇಳಿಲ್ಲ. ಪ್ರಾಯಃ ಎಲ್ಲ ಸೂತ್ರಕಾರರೂ ಹೇಳಿರುವ ಮಾಸಿಶ್ರಾದ್ಧವನ್ನು ಮಾಡುವುದು ಎಲ್ಲರಿಗೂ ಅಸಾಧ್ಯವೆಂದು ತೋರಿದಾಗ ವರ್ಷಕ್ಕೊಂದಾದರೂ ಮಾಡಿದರೆ ಸಾಕೆಂದು ಯೋಚಿಸಿ ಈ ಸಾಂವತ್ಸರಿಕಶ್ರಾದ್ಧದ ಪದ್ಧತಿಯನ್ನು ಯಾರೋ ಸ್ಮೃತಿಕಾರರು ಆರಂಭಿಸಿದ್ದಾರೆಂದು ಕಾಣುತ್ತೆ. ಅದನ್ನು ಯಾವತ್ತು ಮಾಡಬೇಕೆಂಬ ಜಿಜ್ಞಾಸೆ ಬಂದಾಗ, ಮೃತತಿಥಿಯಲ್ಲಿ ಮಾಡುವುದು ಉತ್ತಮ ಎಂದು ನಿಶ್ಚಯ ಮಾಡಿ, ಹಾಗೇ ಮಾಡಿಕೊಂಡು ಬರುತ್ತಿದ್ದಾರೆ (ಸೂತ್ರಕಾರರು ಹೇಳಿರುವ ಮಾಸಿಶ್ರಾದ್ಧಕ್ಕೆ ಮೃತತಿಥಿಯ ಆವಶ್ಯಕತೆಯಿಲ್ಲ)

ಆದರೆ ಆ ವಾರ್ಷಿಕ ಶ್ರಾದ್ಧವನ್ನು ಯಾವ ರೀತಿ ಮಾಡಬೇಕೆಂಬ ವಿಚಾರ ಬಂದಾಗ, ಎರಡು ತರಹ ಆಗಿದೆ ಅಂತ ಕಾಣುತ್ತೆ. ವಾರ್ಷಿಕಶ್ರಾದ್ಧವನ್ನು ಸೂತ್ರಕಾರರು ಹೇಳದಿರುವುದರಿಂದಲೂ, ತಮ್ಮದೇ ಒಂದು ಹೊಸ ಕ್ರಮವನ್ನು ಆವಿಷ್ಕರಿಸುವಷ್ಟು ಧಾರ್ಷ್ಟ್ಯ ವಿಲ್ಲದ್ದರಿಂದಲೂ, ವಾರ್ಷಿಕಶ್ರಾದ್ಧವನ್ನು ಕಲ್ಪಿಸಿದ ಮಹನೀಯರು ಅದನ್ನು ಮಾಡುವ ಕ್ರಮಕ್ಕೆ ಸೂತ್ರಕಾರರಿಗೇ ಶರಣು ಹೋಗಬೇಕಾಗಿ ಬಂತು. ಅಲ್ಲಿ ಸ್ವಲ್ಪ ತಕರಾರು ಬಂತು! ಮಹರ್ಷಿಗಳು ಹೇಳಿರುವ ಪಿಂಡಪಿತೃಯಜ್ಞಕ್ರಮದಂತೆ ಮಾಡುವುದೇ, ಅಥವಾ ಮಾಸಿಶ್ರಾದ್ಧದಂತೆ ಮಾಡುವುದೇ!

ಆಂಧ್ರ, ಕರ್ಣಾಟಕ ದೇಶಗಳಲ್ಲಿ ಪಿಂಡಪಿತೃಯಜ್ಞದಂತೆ ಮಾಡುವುದು ಯುಕ್ತ ಎಂದು ನಿಶ್ಚಯಿಸಿ, ವಾರ್ಷಿಕ ಶ್ರಾದ್ಧವನ್ನು ಆ ಕ್ರಮದಲ್ಲಿಯೇ ನಡೆಸಿಕೊಂಡು ಬರುತ್ತಿದ್ದಾರೆ. ತಮಿಳ್‌ನಾಡು, ಕೇರಳದೇಶಗಳಲ್ಲಿ, ವರ್ಷಶ್ರಾದ್ಧವನ್ನು ಮಾಸಿಶ್ರಾದ್ಧದಂತೆ ಮಾಡಬೇಕೆಂದು ನಿಶ್ಚಯಿಸಿ, ಹಾಗೆಯೇ ಮಾಡಿಕೊಂಡು ಬರುತ್ತಿದ್ದಾರೆ. ನಾನು ಮೊದಲೇ ಬರೆದಂತೆ, ಪಿಂಡಪಿತೃಯಜ್ಞದಲ್ಲಿ ಮೂರುಹೋಮ, ಮೂರುಪಿಂಡ. ಭೋಜನವಿಲ್ಲ. ಆದರೆ ಶ್ರಾದ್ಧದಲ್ಲಿ ಭೋಜನ ಮಾಡಿಸದೆ ಮಾಡುವುದು, ಅವರುಗಳಿಗೆ ಇಷ್ಟವಾಗಲಿಲ್ಲ. ಆದ್ದರಿಂದ ಈಗ ಅವರುಗಳು ಏನು ಮಾಡುತ್ತಿದ್ದಾರೆಂದರೆ, ಹೋಮವನ್ನೂ, ಪಿಂಡಪ್ರದಾನವನ್ನೂ ಪಿಂಡಪಿತೃಯಜ್ಞದಂತೆ ಮಾಡಿ, ಭೋಜನವನ್ನು ಮಾತ್ರ ಮಾಸಿಶ್ರಾದ್ಧದಂತೆ ಮಾಡುತ್ತಿದ್ದಾರೆ. ಇದು ಅಷ್ಟು ಯುಕ್ತವಲ್ಲ. ಇರಲಿ. ಅವರು ಸಂಕಲ್ಪದಲ್ಲಿಯೂ ಹಾಗೆಯೇ ಹೇಳಬೇಕು (ಹೇಳುತ್ತಾರೋ ಇಲ್ಲವೋ ಕಾಣೆ!). "ಅಗ್ನೌ ಕರಣಂ ಪಿಂಡ– ಪ್ರದಾನಂ ಚ, ಪಿಂಡಪಿತೃಯಜ್ಞವಿಧಿನಾ, ಬ್ರಾಹ್ಮಣಭೋಜನಂ ಮಾಸಿ ಶ್ರಾದ್ಧವಿಧಿನಾ, ಪ್ರತ್ಯಾಬ್ದಿಕಶ್ರಾದ್ಧಂ ಕರಿಷ್ಯೇ'' ಆದ್ದರಿಂದ ಅವರಿಗೆ ಪಿತೃ ಶ್ರಾದ್ಧದಲ್ಲಿ ಪಿತೃವರ್ಗಕ್ಕೇ ಭೋಜನ, ಪಿತೃವರ್ಗಕ್ಕೇ ಪಿಂಡಪ್ರದಾನ. ಮಾತೃಶ್ರಾದ್ಧದಲ್ಲಿ ಮಾತೃವರ್ಗಕ್ಕೇ ಭೋಜನ, ಮಾತೃವರ್ಗಕ್ಕೇ ಪಿಂಡಪ್ರದಾನ (ಎರಡರಲ್ಲಿಯೂ ತ್ರಿಪಿಂಡವೇ).

ಮಾಸಿಶ್ರಾದ್ಧ ವಿಧಿಯನ್ನು ಹಿಂದೆಯೇ ಹೇಳಿಯಾಗಿದೆ. ನಾವೂ, ಹಿಂದೆ ದ್ರಾವಿಡದೇಶಕ್ಕೇ ಸೇರಿದ್ದವರಾದ್ದರಿಂದ, ವಾರ್ಷಿಕ ಶ್ರಾದ್ಧವನ್ನು ಮಾಸಿಶ್ರಾದ್ಧದಂತೆ ಮಾಡುವ ಅಭ್ಯಾಸ ಬಂದಿದೆ (ಸಂಕಲ್ಪದಲ್ಲಿಯೂ ಮಾಸಿಶ್ರಾದ್ಧವಿಧಾನೇನ ಎಂದೇ ಹೇಳುತ್ತೇವೆ). ಅದರಲ್ಲಿ ನಿಸ್ಸಂದೇಹವಾಗಿ ಪಿತೃಗಳಿಗೆ ಹೋಮ, ಅವರಿಗೇ

ಭೋಜನ, ಪಿಂಡಪ್ರದಾನ ಮಾತ್ರ ಇಬ್ಬರಿಗೂ. ಯಾವ ಸೂತ್ರಕಾರರೂ ಮಾತೃವಿಗೆ ಪ್ರತ್ಯೇಕವಾಗಿ ಶ್ರಾದ್ಧವನ್ನು ಹೇಳಿಲ್ಲ (ಮಾಸಿಶ್ರಾದ್ಧ). ಅವರ ಅಭಿಪ್ರಾಯದಲ್ಲಿ ಪಿತೃವಿಗೆ ಹೋಮ, ಭೋಜನ ಮಾಡಿದರೇ ಸಾಕು. ಮಾತೃವೂ ಅವರ ಜತೆಯಲ್ಲಿ ಸೇರುತ್ತಾರೆ ಎನ್ನುವುದೇ. ಪಿಂಡದಲ್ಲಿ ಮಾತ್ರ, ಅಪಸ್ತಂಬರು ಅವರಿಗೆ ಪ್ರತ್ಯೇಕವಾದ Identity ತೋರಿಸಿದ್ದಾರೆ. 'ಅದು ಸರಿಯೇ ತಪ್ಪೇ!' ಎಂದು ನಾವು ಈಗ ವಿಚಾರ ಮಾಡುವುದೇ ಬೇಡ. ನಾವು ಅರ್ಹರೂ ಅಲ್ಲ. ಇರಲಿ. ಆದರೆ ವಾರ್ಷಿಕಶ್ರಾದ್ಧದಲ್ಲಿ ಮಾತೃವಿಗೆ ಪ್ರತ್ಯೇಕವಾಗಿ ಮಾಡುವ ಅಭ್ಯಾಸಬಂತು. ಆಗಲೂ ಮಾಸಿಶ್ರಾದ್ಧ ಕ್ರಮದಂತೆ ಮಾಡಿದರು–ಪಿತೃವರ್ಗಕ್ಕೆ ಹೋಮ, ಮಾತೃವರ್ಗಕ್ಕೆ ಭೋಜನ, ಎರಡು ವರ್ಗಕ್ಕೂ ಪಿಂಡಪ್ರದಾನ. ಈ ಕ್ರಮವೇ ಉಚಿತ. ಆದರೆ ಮಧ್ಯೆ ಯಾರೋ ಸ್ವಲ್ಪ ಯೋಚಿಸಿ, ಮಾತೃಶ್ರಾದ್ಧದಲ್ಲಿ, ಪಿತೃಗಳಿಗೆ ಹೋಮ ಮಾಡಿದ ಮೇಲೆ, ಅವರಿಗೆ ಭೋಜನವನ್ನೂ ಮಾಡಿಸಬೇಕು ಎಂದು ಆರಂಭಿಸಿ, ಮಾತೃಶ್ರಾದ್ಧದಲ್ಲಿ, ಪಿತೃವರ್ಗಕ್ಕೋಸ್ಕರ ಒಬ್ಬ Extra ಬ್ರಾಹ್ಮಣನನ್ನು ನಿಮಂತ್ರಿಸುವುದಕ್ಕೆ ಆರಂಭಿಸಿದರು (ಸದ್ಯ, ಮಾತೃವಿಗೆ ಭೋಜನಮಾಡಿಸುವುದರಿಂದ, ಮಾತೃವರ್ಗಕ್ಕೇ ಹೋಮವೂ ಆಗಬೇಕು ಎಂದು ಆರಂಭಿಸಲಿಲ್ಲ. ಪ್ರಾಯಃ ಮಂತ್ರಗಳನ್ನು ವ್ಯತ್ಯಾಸಮಾಡುವ ಧೈರ್ಯ ಬರಲಿಲ್ಲ ಅಂತ ಕಾಣುತ್ತೆ!!). ಇನ್ನೂ ಸ್ವಲ್ಪ ಕಾಲ ಕಳೆದ ಮೇಲೆ, ಇನ್ಯಾರೋ ಯೋಚಿಸಿದ್ದಾರೆ. ಭೋಜನ ಯಾರಿಗೆ ಮಾಡಿಸುತ್ತೇವೆಯೋ ಅವರಿಗೇ ಪಿಂಡಪ್ರದಾನ ಮಾಡುವುದು ಸರಿ. ಭೋಜನ ಮಾಡಿಸದಿದ್ದ ಮೇಲೆ ಪಿಂಡಪ್ರದಾನ ಬೇಕಿಲ್ಲ. ಈ ನ್ಯಾಯದಂತೆ ಮಾತೃಶ್ರಾದ್ಧದಲ್ಲಿ (ಪಿತೃವಿಗೂ ನಿಮಂತ್ರಣವಿರುವುದರಿಂದ) ಎರಡು ವರ್ಗಕ್ಕೂ ಪಿಂಡಪ್ರದಾನ ಮಾಡುವುದು ಸರಿ. ಆದರೆ ಪಿತೃಶ್ರಾದ್ಧದಲ್ಲಿ ಕೇವಲ ಪಿತೃಗಳಿಗೆ ಭೋಜನ ಮಾಡಿಸುವುದರಿಂದ ಅಲ್ಲಿ 6 ಜನಕ್ಕೂ ಪಿಂಡಪ್ರದಾನದ ಅಗತ್ಯವಿಲ್ಲ (ಕರ್ನಾಟಕರಲ್ಲಿ ಹಾಗೆಯೇ ಮಾಡುತ್ತಿರುವುದನ್ನು ನೋಡಿದ್ದಿರಬಹುದು. ಅವರು ತ್ರಿಪಿಂಡ ಏಕೆ ಹಾಕುತ್ತಾರೆ ಅನ್ನುವ ಕಲ್ಪನೆ ಇದ್ದ ಹಾಗೆ ಕಾಣಿಸಲಿಲ್ಲ!). ಆದ್ದರಿಂದ ಪಿತೃಶ್ರಾದ್ಧದಲ್ಲಿ ತ್ರಿಪಿಂಡವೇ ಸಾಕು ಎಂದು ಆರಂಭವಾಯಿತು. ಅಂದರೆ, ಮೊದಲು ಹೋಮಕ್ಕೂ, ಭೋಜನಕ್ಕೂ ತಗಲು ಹಾಕಿದರು. ಆಮೇಲೆ ಭೋಜನಕ್ಕೂ ಪಿಂಡ ಪ್ರದಾನಕ್ಕೂ ತಗಲು ಹಾಕಿದರು. ಇದೇ ಅವಿವೇಕವಾಗಿದ್ದುದು. ಸೂತ್ರಕಾರರ ರೀತ್ಯಾ ಹೋಮಕ್ಕೂ, ಭೋಜನಕ್ಕೂ ಪಿಂಡ ಪ್ರದಾನಕ್ಕೂ ಅಂಗಾಂಗಿ ಭಾವವಿಲ್ಲ. ಮೂರೂ ಪ್ರತ್ಯೇಕವಾದ ಕರ್ಮಗಳು. ಅವರು ಅಳವಡಿಸಿರುವ ಮಾಸಿಶ್ರಾದ್ಧ ಕ್ರಮದಲ್ಲಿಯೇ ಭೋಜನಮಾಡಿಸದವರಿಗೂ ಪಿಂಡಪ್ರದಾನ ಮಾಡಬೇಕೆಂದು ಹೇಳಿರುವಾಗ, ನಾವು ಹೇಗೆ, ಭೋಜನ ಮಾಡಿಸಿದರೇ ಪಿಂಡ ಪ್ರದಾನವೆಂದು ಹೇಳಬಹುದೋ ನನಗೆ ತಿಳಿಯಲಿಲ್ಲ. ಸೂತ್ರಕಾರರ ರೀತ್ಯಾ, ಪ್ರತಿಯೊಬ್ಬನೂ ಮಾತಾಮಹ (ತಾಯಿಯ ತಂದೆ) ಶ್ರಾದ್ಧವನ್ನೂ ಮಾಡಬೇಕು. ಅಲ್ಲಿಯೂ ಮಾತಾಮಹವರ್ಗಕ್ಕೇ ಹೋಮ, ಅವರಿಗೇ ಭೋಜನ. ಮಾತಾಮಹ, ಮಾತಾಮಹೀವರ್ಗಕ್ಕೆರಡಕ್ಕೂ ಪಿಂಡಪ್ರದಾನ. ತ್ರಿಪಿಂಡ ಎನ್ನುವುದು ಮಾಸಿಶ್ರಾದ್ಧದಲ್ಲಿ ಬರಲು ಸಾಧ್ಯವೇ ಇಲ್ಲ. ಕರ್ನಾಟಕರು ಮಾಡುತ್ತಾರೆಂದರೆ, ಅದು ಪಿಂಡಪಿತೃಯಜ್ಞವಿಧಾನ. ಅದನ್ನೂ ಇದನ್ನೂ ಕಲಸಬಾರದು.

ಜತೆಗೆ ಮಾತೃಶ್ರಾದ್ಧದಲ್ಲಿ ಪಿತೃವರ್ಗಕ್ಕೆ ಭೋಜನ ಮಾಡಿಸುವುದು ಅನುಚಿತ. ಹೋಮ ಮಾಡಿದ ಮಾತ್ರಕ್ಕೆ ಭೋಜನವನ್ನು ಮಾಡಿಸಬೇಕು ಎಂಬ ನಿಯಮವೇನೂ ಇಲ್ಲ. ಪಿಂಡಪಿತೃಯಜ್ಞದಲ್ಲಿ ಹೋಮ ಮಾಡುತ್ತಾರೆ. ಭೋಜನವೇನೂ ಇಲ್ಲ ! ಅಗತ್ಯವಿಲ್ಲ. ಯಾರ ಶ್ರಾದ್ಧ ಮಾಡಲು ಹೊರಟಿದ್ದೇವೆಯೋ ಅವರಿಗೆ ಮಾತ್ರ ಭೋಜನ (ಇದು ಸರ್ವಸಾಧಾರಣನ್ಯಾಯ). ಆದ್ದರಿಂದ ತ್ರಿಪಿಂಡ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪಿಂಡ ಪ್ರದಾನದ ಮಂತ್ರದಲ್ಲಿಯೂ ಕೂಡ,

"ಯೇ ಚ ವೋಽತ್ರ, .. ಯಾಶ್ಚ ವೋಽತ್ರ – ತೇ ಚ ವಹಂತಾಂ, ತಾಶ್ಚ ವಹಂತಾಂ – ತೃಪ್ಯಂತು ಭವಂತಃ, ತೃಪ್ಯಂತು ಭವತ್ಯಃ" ಎಂದು, ಎರಡೆರಡೂ ಸೇರಿಬರುತ್ತದೆ. ಅದರಲ್ಲಿ ಪಿತೃಶ್ರಾದ್ಧದಲ್ಲಿ ಬರೀ ಪುಲ್ಲಿಂಗ ಹೇಳಿ, ಮಾತೃಶ್ರಾದ್ಧದಲ್ಲಿ ಎರಡನ್ನೂ ಸೇರಿಸಿ ಹೇಳುವುದು ಯುಕ್ತವಲ್ಲ. ಕೊನೆಗೆ ಪರಿಷೇಚನ ಮಂತ್ರದಲ್ಲಿ "ಪುತ್ರಾನ್ ಪೌತ್ರಾನ್... ಉಭಯಾಗ್ಂಸ್ತರ್ಪಯಂತು" (ಎರಡು ವರ್ಗದವರೂ ತೃಪ್ತಿಹೊಂದಲಿ). ಈ ಮಂತ್ರವನ್ನು ವ್ಯತ್ಯಾಸ ಮಾಡುವುದು ಹೇಗೆ?

ನನಗಂತೂ ಈ ತ್ರಿಪಿಂಡ ಷಟ್ಪಿಂಡ ಎಂದು ಸಂಖ್ಯೆಯನ್ನು ಉದ್ದೇಶಿಸಿ ಹೇಳುವುದೇ ಹಿಡಿಸುವುದಿಲ್ಲ. ಅಲ್ಲಿ ಸಂಖ್ಯೆ ಪ್ರಧಾನವಲ್ಲ. ಭಾವನೆ ಪ್ರಧಾನ. ಮೂರೇ ಏತಕ್ಕೆ, ಆರು ಏತಕ್ಕೆ ಎಂದು ಯೋಚಿಸಬೇಕೇ ಹೊರತು, ಕಣ್ಣಿಗೆ ಸಂಖ್ಯೆ ಕಾಣುತ್ತದೆಂದು ಅವನ್ನೇ ಪ್ರಧಾನವಾಗಿಟ್ಟುಕೊಂಡು ವಾಕ್ಯಾರ್ಥಮಾಡುವುದು ತಿರುಳನ್ನು ಬಿಟ್ಟು ಸಿಪ್ಪೆಗೆ ಜಗಳಾಡಿದ ಹಾಗಾಗುತ್ತದೆ. ಎಲ್ಲಿಯವರೆಗೆ ಈ ಮೌಢ್ಯ ಹೋಗಿತ್ತೆಂದರೆ, ತ್ರಿಪಿಂಡ ಮಾಡುವವರು ಷಟ್ಪಿಂಡ ಮಾಡಿಬಿಟ್ಟರೆ ಅವರ ವಂಶವೇ ಹಾಳಾಗಿ ಎಲ್ಲರೂ ನರಕಕ್ಕೆ ಹೋಗುತ್ತಾರೆಂದು ಹೇಳುತ್ತಿದ್ದರು. ನಮ್ಮ ಮನೆಯಲ್ಲಿಯೂ ತ್ರಿಪಿಂಡವೇ ಅಭ್ಯಾಸವಿತ್ತು. ನಮ್ಮ ತಾಯಿಯವರು ದಿವಂಗತ

ರಾದಾಗ ಈ ಚರ್ಚೆಬಂದು, ನಾನು ಸ್ವಲ್ಪ ಕೂಲಂಕಷವಾಗಿ ನೋಡಬೇಕಾಗಿ ಬಂತು (ಯದ್ಯಪಿ ಮಾತೃಶ್ರಾದ್ಧದಲ್ಲಿ ಷಟ್ಪಿಂಡವಾದರೂ, ತಂದೆ ಬದುಕಿರುವವರೆಗೂ ತ್ರಿಪಿಂಡವೇ ಸಂಪ್ರದಾಯವಂತೆ!!). ಆಗ ಮನಸ್ಸಿಗೆ ಇರುವ ವಿಷಯ ತಿಳಿದು ಆರಂಭದಿಂದಲೇ ಷಟ್ಪಿಂಡ ಮಾಡಲು ಶುರುಮಾಡಿದೆ. ನನ್ನ ತೀ।। ರವರು ವಿಚಾರಪರರಾದ್ದರಿಂದ ಸಂತೋಷದಿಂದ ಒಪ್ಪಿಕೊಂಡರು. ನಮ್ಮಲ್ಲಿಯೂ ಒಬ್ಬ ಪುರೋಹಿತರು ಷಟ್ಪಿಂಡದವರು. ಮಿಕ್ಕಪುರೋಹಿತರೆಲ್ಲಾ ತ್ರಿಪಿಂಡದವರು! – ಹೀಗೆ ಏನೇನೋ ವಿಚಿತ್ರವಾಗಿ ಹೊರಟಿದೆ. ಶಾಸ್ತ್ರೀಯವಾಗಿ ಇಷ್ಟು ನಿಶ್ಚಯ : **ಮಾಸಿಶ್ರಾದ್ಧವಿಧಾನೇನ ಶ್ರಾದ್ಧ ಮಾಡುವಾಗ ಮಾತೃಶ್ರಾದ್ಧ, ಪಿತೃಶ್ರಾದ್ಧ ಎರಡರಲ್ಲಿಯೂ ಷಟ್ಪಿಂಡ. ಮಾತೃ ಶ್ರಾದ್ಧದಲ್ಲಿ ಮಾತೃವಿಗೇ ಭೋಜನ, ಪಿತೃಗಳಿಗೆ ಹೋಮ. ಪಿತೃಶ್ರಾದ್ಧದಲ್ಲಿ ಪಿತೃಗಳಿಗೆ ಹೋಮ, ಪಿತೃಗಳಿಗೇ ಭೋಜನ. ತಂದೆ ಬದುಕಿದ್ದು ತಾಯಿಗೆ ಶ್ರಾದ್ಧ ಮಾಡಬೇಕಾದಲ್ಲಿ, ತಂದೆಯಿಂದ ಮೇಲೆ ಮೂರು ಪುರುಷರಿಗೆ ಹೋಮ. ಮಾತೃವರ್ಗಕ್ಕೆ ಭೋಜನ. ತಂದೆಯ ಪಿತೃವರ್ಗಕ್ಕೆ, ತಾಯಿಯ ವರ್ಗಕ್ಕೆ ಪಿಂಡಪ್ರದಾನ. ಹಾಗೆಯೇ ತಾಯಿ ಇದ್ದು, ತಂದೆ ದಿವಂಗತರಾದಾಗ ಪಿತೃವರ್ಗಕ್ಕೆ ಹೋಮ. ಪಿತೃವರ್ಗಕ್ಕೇ ಭೋಜನ. ಪಿತೃವರ್ಗ ಮತ್ತು ತಂದೆಯ ಮಾತೃವರ್ಗಕ್ಕೆ ಪಿಂಡಪ್ರದಾನ.**

(2) ಕನಸುಗಳು : ಇವುಗಳಿಗೆ ಯಾವ ಫಲವೂ ಇಲ್ಲ. ನಮ್ಮ ವೇದಾಂತಸಿದ್ಧಾಂತದಲ್ಲಿ ಅವು ಕೇವಲ ಪೂರ್ವಸ್ಮೃತಿಗಳು. ಪೂರ್ವಾನುಭವ ಇಲ್ಲದಿದ್ದರೆ ಅದೇ ಕನಸಾಗಿ ಬರಲು ಸಾಧ್ಯವಿಲ್ಲ. ಆದರೆ ಅನುಭವಗಳು ನಾವು ಜಾಗ್ರದವಸ್ಥೆಯಲ್ಲಿ ಅನುಭವಿಸಿದ ಕ್ರಮದಲ್ಲಿಯೇ ಬರುವ ಆವಶ್ಯಕತೆ ಇಲ್ಲ. ಉದಾಹರಣೆಗೆ ನಾವು ಪಕ್ಷಿ ಹಾರುವುದನ್ನು ನೋಡಿದ್ದೇವೆ. ನಮಗೇ ರೆಕ್ಕೆ ಇದ್ದಂತೆ, ಹಾರಿ ಬಂದಂತೆ ಸ್ವಪ್ನವನ್ನು ಕಾಣಬಹುದು. ಆ ರೆಕ್ಕೆಯನ್ನು ನಮ್ಮ ದೇಹಕ್ಕೆ ಜೋಡಿಸಲು ಮನಸ್ಸಿಗೆ ಯಾವ ಕಷ್ಟವೂ ಇಲ್ಲ. ನಮ್ಮ ಶವವನ್ನು ನಾವೇ ನೋಡುತ್ತೇವೆ. ನಮ್ಮನ್ನು ಹೊತ್ತುಕೊಂಡು ಹೋದಂತೆ ಸ್ವಪ್ನ ಕಾಣುತ್ತೇವೆ. ಇವುಗಳಿಗೆ ಯಾವ ಅರ್ಥವೂ ಇಲ್ಲ. ಸ್ವಪ್ನ ಎಂದು ಹೇಳಿ ಮರೆಯಬೇಕು.

(3) ಈ ಅನಧ್ಯಯನಾದಿಗಳು ಕೇವಲ convenience ಗೋಸ್ಕರ ಮಾಡಿಕೊಂಡಿರತಕ್ಕವು. 15 ದಿನಕ್ಕೊಂದು ಬಾರಿ ಗುರುಗಳಿಗೂ ವಿರಾಮಬೇಕು. ಶಿಷ್ಯರಿಗೂ ಪಾಠವನ್ನು ಜೀರ್ಣಿಸಿಕೊಳ್ಳಲು ವಿರಾಮ ಬೇಕು. ಜತೆಗೆ ಚತುರ್ದಶೀ ಅಮಾವಾಸ್ಯೆ ಈ ದಿವಸಗಳಲ್ಲಿ ಶ್ರಾದ್ಧ ಮಾಡಬೇಕಾದ ದಿನಗಳು. ಪಾಡ್ಯದಲ್ಲಿ ಇಷ್ಟಿ, ಸ್ಥಾಲೀಪಾಕಗಳು ನಡೆಯಬೇಕು. ಆದ್ದರಿಂದ ಗುರುಗಳು Busy ಯಾಗಿರುವುದರಿಂದ ಆ ಮೂರು ದಿನಗಳು ಅನಧ್ಯಯನ ಎಂದಿಟ್ಟಿದ್ದಾರೆ. convention ಎಂಬುದಾಗಿ ಅನುಸರಿಸಬೇಕೇ ಹೊರತು, ಆ ದಿನಗಳಲ್ಲಿ ಅಧ್ಯಯನ ಮಾಡಿದ್ದರಿಂದ ಯಾವ ದೋಷವೂ ಇಲ್ಲ.

4) ಮಂಗಳವಾರ, ಶುಕ್ರವಾರಗಳ ವಿಚಾರ – ಇದು ಒಂದು convention ಆಗಿ ಬಂದಿದೆ. ಅದು convention ಎಂದು ಅನುಸರಿಸಬಹುದೇ ಹೊರತು ಆವತ್ತು ಏನಾದರೂ ಕೆಲಸಮಾಡಿದರೆ ದೋಷವೆಂದಾಗಲಿ, ಕೆಟ್ಟದಾಗುತ್ತೆಂದಾಗಲಿ ಅಲ್ಲ. ಮನಸ್ಸಿನಲ್ಲಿ ಭಯದ ಲೇಶವಿರುವವರೆಗೂ ಆ Conventionಗಳನ್ನು follow ಮಾಡುವುದು ಉಚಿತ. ಇಲ್ಲದಿದ್ದರೆ, ಏನು ವ್ಯತ್ಯಾಸವಾದರೂ ಮನಸ್ಸು ಅವೆರಡನ್ನೂ Correlate ಮಾಡಲು ಪ್ರಯತ್ನಿಸುತ್ತದೆ. ಅದು, ಮೊದಲೇ ಬಂದಿರುವ ಅಂಧನಂಬಿಕೆಯನ್ನು ಇನ್ನೂ ದೃಢಪಡಿಸಲು ಅನುಕೂಲವಾಗುತ್ತದೆ. ವಿಚಾರಮಾಡಿ ಮಾಡಿ, ಈ ವಾರಕ್ಕೂ ಮಗಳನ್ನು ಕಳಿಸುವುದಕ್ಕೂ ಯಾವ ಸಂಬಂಧವೂ ಇಲ್ಲ ಎಂದು ನಿಶ್ಚಯಿಸಿ, ಆ ಕುರುಡು ನಂಬಿಕೆಯಿಂದ ಬಂದಿರುವ ಭಯವನ್ನು ಹೋಗಲಾಡಿಸಿಕೊಳ್ಳಬೇಕು. ಇಲ್ಲಿ Bertrand Russell (Nobel Laureate) ಹೇಳಿರುವ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ: There is something feeble and contemptible about a person who cannot face the vicissitudes of life without the help of comfortable myths. The saddest point of it is, that he knows somewhere in his subconscience that what he believes is a myth but he wants to believe it because it is comforting. At the same time he dare not face this thought!! Since he is aware that what he believes is not rational, he becomes furious when somebody disputes it. ನಾವೆಲ್ಲರೂ ಈ ಜಾತಿಗೆ ಸೇರಿದವರೇ !... ಆದಷ್ಟು ಹೊರಕ್ಕೆ ಬರಲು ಪ್ರಯತ್ನಿಸೋಣ.

ಶ್ರಾದ್ಧ ಮಾಡಿಸಲು ಸರಿಯಾದ ಆಚಾರ್ಯರು ಸಿಕ್ಕದೆ ನಿನ್ನ ಕಷ್ಟ ಅರ್ಥವಾಗುತ್ತದೆ. Casette record ಮಾಡಲು ಏನು ಕಷ್ಟವೂ ಇಲ್ಲ. ಆದರೆ ನಿನ್ನನ್ನೇ ಕೂರಿಸಿಕೊಂಡು, ನಿನಗೇ ಹೇಳಿ ಕೊಟ್ಟು Record ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ನಾನು ಸುಮ್ಮನೆ ಉದ್ದಕ್ಕೆ ಹೇಳಿ Record ಮಾಡಿದರೆ ಅದರಿಂದ ನೀನು ಕಲಿಯಲು ಸಾಧ್ಯವಾಗಲಾರದು. ಅದನ್ನಿಟ್ಟುಕೊಂಡು ಕೆಲಸವನ್ನೂ ಮಾಡಲಾಗುವುದಿಲ್ಲ. ನಾನು ಈ May ನಲ್ಲಿಯೂ ಭದ್ರಾವತಿಗೆ ಬರಬಹುದು. ಬಂದಾಗ ಎರಡುದಿನ 1½ ಘಂಟೆಗಳ ಕಾಲ

ಕೂತರೆ Record ಪೂರ ಮಾಡಬಹುದು. ಆಮೇಲೆ ನೀನು ಅದನ್ನಿಟ್ಟುಕೊಂಡು ಸ್ವಲ್ಪ ಅಭ್ಯಾಸಮಾಡಿ, ಶ್ರಾದ್ಧದ ದಿನ ಅದನ್ನೇ ಇಟ್ಟುಕೊಂಡು ಕೆಲಸಗಳನ್ನು ಮಾಡಿಕೊಂಡು ಹೋಗಬಹುದು. ಕ್ರಿಯೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಯಾವ ಪ್ರಮಾದವೂ ಇಲ್ಲ. ಹೇಳುವ ವಾಕ್ಯಗಳ, ಮಂತ್ರಗಳ ತಾತ್ಪರ್ಯ ಮನಸ್ಸಿಗೆ ಬಂದಿದ್ದರೆ ಸಾಕು.

ನನ್ನ ಹಿಂದಿನ ಕಾಗದಕ್ಕೆ ನಿನ್ನ Reaction ಏನೂ ಬರೆದಿಲ್ಲ. ಅಷ್ಟು ಸುಲಭವಾಗಿ ನಿನ್ನ ಸಂದೇಹಗಳೆಲ್ಲವೂ ನನ್ನ ಕಾಗದದಿಂದ ಪರಿಹಾರವಾಗಿದೆಯೆಂಬುದನ್ನು ನಾನು ನಂಬಲಾರೆ. ಅದು fundamental questions. ಅನೇಕರಿಗೆ ತಲೆ ತಿಂದಿದೆ. ಈಗಲೂ ತಿನ್ನುತ್ತಲಿದೆ. ಆದ್ದರಿಂದ ಸಂಕೋಚಪಡದೆ ನಿನ್ನ Reactions ಗಳನ್ನು ಬರಿ. ನನಗೂ, ನನ್ನ ವಾದಸರಣಿಯಲ್ಲಿ ಏನಾದರೂ ತಪ್ಪಿದ್ದರೆ ತಿಳಿಯಬೇಕು. ಅದೃಷ್ಟವಾದ ವಿಷಯವಾದ್ದರಿಂದ, ಸತ್ಯಕ್ಕೆ ನಿಕಟವಾದ explanations ಕೊಡಬಹುದೇ ಹೊರತು ಸತ್ಯವನ್ನೇ ಯಾರೂ ಹೇಳಲು ಸಾಧ್ಯವಿಲ್ಲ. ಕೇವಲ Circumstantial evidence ನಿಂದ ನಾವು ನಿಶ್ಚಯ ಮಾಡಬೇಕಾಗುತ್ತದೆ. ಆದ್ದರಿಂದ ಆದಷ್ಟು fact ಗಳನ್ನು ಸಂಗ್ರಹಿಸಬೇಕು. Please do not hesitate. ನಿನ್ನ ಮನಸ್ಸಿನಲ್ಲಿರುವುದನ್ನು ಬರಿ.

ನಿನ್ನ ಚಿ|| ಗಳಿಗೆಲ್ಲರಿಗೂ ನನ್ನ ಆರ್ಶೀರ್ವಾದಗಳು. ಆ ದಿನ ಇಲ್ಲಿ ನಿಮ್ಮೆಲ್ಲರ ಜತೆ ಸ್ವಲ್ಪ ಹೊತ್ತು ಕಾಲಕಳೆಯುವ ಅವಕಾಶವನ್ನು ಕಳೆದುಕೊಂಡೆ. ವಿಧಿಯಿಲ್ಲದೆ ಹೋಯಿತು.

ಇತಿ ನಿನ್ನವ

ಕುಮಾರಸ್ವಾಮಿ

೪೫೬

ಉಪನಯನ ಸಿದ್ಧತೆ

ಕುಶಲಮ್ ಶ್ರೀ : Madras

8.4.87

ಶ್ರೀಕಂಠ!

ನಿನ್ನ ಪ್ರಶ್ನಾವಳಿಗೆ ಇನ್ನೂ ಉತ್ತರ ಬರೆಯಲು ಆಗಿಲ್ಲ. ತಕ್ಷಣ ಬರೆದುಬಿಟ್ಟರೆ ಬರೆದ ಹಾಗೆ; ಮುಂದೂಡಿದರೆ ಹಾಗೆಯೇ ತಳ್ಳಿ ಹೋಗುತ್ತಿರುತ್ತದೆ. ಆದಷ್ಟು ಬೇಗ ಬರೆಯುತ್ತೇನೆ.

ಪ್ರಕೃತ, ನೀನು, ನಿನ್ನ ಎರಡನೇ ಮಗನಿಗೆ ಉಪನಯನ ಮಾಡಬೇಕೆಂದು ಹೇಳಿದ್ದೆ. ನನ್ನ ಚಿ|| ಯು ಭದ್ರಾವತಿಗೆ 6ನೇ ತಾರೀಖಿನಿಂದ Training ಗೋಸ್ಕರ ಬರುತ್ತಿದ್ದಾನೆ. ಅವನು ಅವನ ಅಜ್ಜನಿಗೆ ಮಾಡುವ ಶ್ರಾದ್ಧ 10ನೇ ತಾರೀಖು ಭಾನುವಾರ ಬರುತ್ತಿದೆ. ಅದಕ್ಕೋಸ್ಕರ ನಾನೂ ಅಲ್ಲಿಗೆ ಆ ವೇಳೆಗೆ ಬರಬೇಕೆಂದಿದ್ದೇನೆ. May 8ನೇ ತಾರೀಖು ಶುಕ್ರವಾರ ದಶಮೀ ಉಪನಯನ ಮಾಡಲು ಅನುಕೂಲವಾಗಿದೆ. ನಾನೂ ಮೂರು ದಿನಗಳಿದ್ದು ಕೆಲಸಗಳನ್ನು ಮುಗಿಸಿ ಬರಲು ಸೌಕರ್ಯವಾಗಿದೆ. ಆದ್ದರಿಂದ ಅವತ್ತು ಇಟ್ಟುಕೊ. 11ನೇ ತಾರೀಖು ಸೋಮುವಿನ ಮಗನಿಗೆ ಚೌಲ ಮಾಡುವಂತೆ ಬರೆದಿದ್ದೇನೆ. ಎಲ್ಲ ಕೆಲಸಗಳನ್ನೂ ಒಟ್ಟಿಗೆ ಮುಗಿಸಿಕೊಂಡು ಬರಬಹುದು.

ಹೆಚ್ಚು ಸಿದ್ಧತೆಗಳೇನೂ ಬೇಕಿಲ್ಲ. ಹಿಂದಿನ ಉಪನಯನಕ್ಕೆ ಮಾಡಿದ್ದೆಲ್ಲಾ ಜ್ಞಾಪಕವಿರಬಹುದು. ಸಿದ್ಧ ಮಾಡಿಕೊ. ಯಾವುದಾದರೂ ಹೆಚ್ಚು ಕಡಿಮೆಯಾದರೂ adjust ಮಾಡಿಕೊಳ್ಳೋಣ. ಶ್ರದ್ಧೆ ಪರಿಪೂರ್ಣವಾಗಿದ್ದರೆ ಸಾಕು.

ಈ ಕಾಗದ ತಲುಪಿದ ಕೂಡಲೆ ಯೋಚನೆ ಮಾಡಿ ನಿನ್ನ ನಿಶ್ಚಯುವನ್ನು ಬರಿ. ನೀನು ಈಗ ಇಟ್ಟುಕೊಳ್ಳಲು ಸಾಧ್ಯವಾಗದಿದ್ದರೆ, ನಾನು reservations ಸ್ವಲ್ಪ ವ್ಯತ್ಯಾಸ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಕೂಡಲೆ ಬರಿ.

ಚಿ|| ಗಳಿಗೆಲ್ಲಾ ನನ್ನ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೫೭

ದೇವರಪೂಜೆಯ ತತ್ತ್ವ

ವ್ರತ, ನಿಯಮ ; ಮುಸರೆ ; ನೈತಿಕಶಕ್ತಿ ; ಗೌರವದ ಚಿಹ್ನೆ

ಕುಶಲಮ್ ಶ್ರೀ : MADRAS

10.4.87

ಶ್ರೀಕಂಠ !

ಮೊನ್ನೆ ತಾನೇ ನಿನಗೆ ಒಂದು ಕಾಗದ ಬರೆದಿದ್ದೇನೆ. ಇವತ್ತು ಸ್ವಲ್ಪ ಪುರಸತ್ತಾಗಿತ್ತು. ನಿನ್ನ ಹಳೆಯ ಪ್ರಶ್ನಾವಳಿಗೆ ಉತ್ತರ ಕೊಡೋಣವೆಂದು ಆರಂಭಿಸಿದ್ದೇನೆ. ನಿನ್ನ ಪ್ರಶ್ನಾವಳಿಯನ್ನೂ ಇದರ ಜತೆಯಲ್ಲಿಯೇ ಕಳಿಸಿದ್ದೇನೆ (ನಿನ್ನ Referenceಗೋಸ್ಕರ).

(1)(2)(3)(4), ಇಷ್ಟು ಪ್ರಶ್ನೆಗಳೂ, ದೇವರಪೂಜೆ ಎನ್ನುವುದರ ತತ್ತ್ವವೇ ತಿಳಿಯದಿರುವುದರಿಂದ ಉಂಟಾಗಿರುವುದು. ನಮ್ಮ

ವೇದಾಂತಸಿದ್ಧಾಂತದ ರೀತ್ಯಾ ಪರಮಾತ್ಮನು ನಿರ್ಗುಣ, ನಿರಾಕಾರ, ನಿಷ್ಕ್ರಿಯನು. "ಸತ್ಯಂ ಜ್ಞಾನಮನಂತಂ ಬ್ರಹ್ಮ". ಅದ್ವೈತ ವೇದಾಂತದ ರೀತ್ಯಾ ಪ್ರತಿಯೊಬ್ಬರಲ್ಲಿಯೂ ಚೈತನ್ಯ ಸ್ವರೂಪನಾಗಿ, ಪ್ರತಿಯೊಬ್ಬರ ಚಲನವಲನಗಳಿಗೂ ಕಾರಣ ಭೂತನಾಗಿರುವ "ನಾನು" ಎಂಬ ಆತ್ಮವಸ್ತುವೇ ಪರಮಾತ್ಮನು. ನಮ್ಮ ಅಜ್ಞಾನದಿಂದ ನಮಗೆ ಅದು ತಿಳಿಯದೆ, 'ನಾನು' ಎಂಬುದನ್ನು ದೇಹವೇ ಎಂದು ಭ್ರಮಿಸಿ ತೊಳಲಾಡುತ್ತಿದ್ದೇವೆ. ಈ ಸಿದ್ಧಾಂತವನ್ನು ಒಪ್ಪದ ಮಿಕ್ಕ ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಮೊದಲಾದ ಸಿದ್ಧಾಂತಗಳೂ, ನಮ್ಮ ಆತ್ಮವೇ ಪರಮಾತ್ಮನೆಂದು ಒಪ್ಪದಿದ್ದರೂ, ಅವನು ಅದೃಷ್ಟನೆಂಬುದನ್ನೂ ವಿಶಿಷ್ಟವಾದ ಆಕಾರವಿಲ್ಲದಿರುವನೆಂಬುದನ್ನೂ ಒಪ್ಪುತ್ತಾರೆ. ಅವನು ಅದೃಷ್ಟವಾಗಿದ್ದರೂ ಪ್ರತಿಯೊಂದು ಕ್ಷಣವೂ, ಅವನ ಇರವನ್ನು ಪ್ರತಿಯೊಬ್ಬನೂ ಅನುಭವಿಸುತ್ತಿರುತ್ತಾನೆ. ಸ್ವಲ್ಪ ಅಂತರ್ಮುಖನಾದರೆ ಇರುವುದು ತಿಳಿದೇ ತಿಳಿಯುತ್ತದೆ. ಕಣ್ಣಿಗೆ ಕಾಣುವುದಿಲ್ಲ, ಕೇವಲ effectನಿಂದ ತಿಳಿದುಕೊಳ್ಳಬೇಕಾಗಿದೆ. ಆದರೆ ಈ ತರಹ circumstantial evidenceನಿಂದ ಕೇವಲ intellectual satisfaction ಆಗಬಹುದೇ ಹೊರತು, ಅನುಭವದ ಆನಂದ ಪೂರ್ಣವಾಗಲಾರದು. ಹಿಂದೆಯೇ ತಿಳಿಸಿದ್ದೇನೆ. ಯಾವ ಅನುಭವದ ಆನಂದವಾದರೂ ಪೂರ್ಣವಾಗಬೇಕಾದರೆ ಎಲ್ಲಾ ಇಂದ್ರಿಯಗಳ ಸಹಾಯವೂ ಬೇಕು. ಆದರಲ್ಲಿಯೂ ಕಣ್ಣುಗಳಿಂದ ನೋಡುವ ಅನುಭವಕ್ಕೆ ಸಮಾನವಾದುದು ಯಾವುದೂ ಇಲ್ಲ. ಅದಕ್ಕೇ ಭಗವದ್ಗೀತೆಯಲ್ಲಿ ಕೃಷ್ಣ ಎಷ್ಟು ಹೇಳಿದರೂ ಅರ್ಜುನನಿಗೆ ಮೇಲೆ ಮೇಲೆ ಸಂದೇಹ ಬರುತ್ತಲೇ ಇತ್ತು. ಏಕೆಂದರೆ ಅವನು ಹೇಳಿದ್ದೆಲ್ಲವೂ ಅರ್ಜುನನಿಗೆ ಬರೀ ಬುದ್ಧಿಗ್ರಹಣ intellectual understanding ಆಗಿತ್ತು; ಅನುಭವ ಪೂರ್ತಿಯಾಗಿರಲಿಲ್ಲ. ಇದನ್ನು ಕಂಡು ಕೃಷ್ಣನೇ ಯೋಚಿಸಿ, ಇವನಿಗೆ ಪ್ರತ್ಯಕ್ಷ ದರ್ಶನವಾಗದಿದ್ದರೆ ಸಂದೇಹಗಳು ನಿವೃತ್ತಿಯಾಗುವುದಿಲ್ಲವೆಂದು ತಿಳಿದು ವಿಶ್ವರೂಪದರ್ಶನ ಮಾಡಿಸಿದ. ಬುದ್ಧಿಗ್ರಹಣವಾಗಿದ್ದುದು ಪ್ರತ್ಯಕ್ಷಗೋಚರವಾದೊಡನೆ ಅರ್ಜುನನ ಸಂದೇಹಗಳೆಲ್ಲಾ ನಿವೃತ್ತಿಯಾಯಿತು. ಅದ್ಭುತವಾದ ಆ ರೂಪವನ್ನು ನೋಡಿ ಭಯದಿಂದ ತತ್ತರಿಸಿದ. ಪ್ರತ್ಯಕ್ಷದ ಅನುಭವವೇ ಹಾಗೆ. ರೇಡಿಯೋದಲ್ಲಿ Cricket Commentary ಕೇಳುವುದರ ಅನುಭವಕ್ಕಿಂತ T.V. ಯಲ್ಲಿ ಪ್ರತ್ಯಕ್ಷವಾಗಿ ನೋಡುವ ಅನುಭವ ಅತಿ ಹೆಚ್ಚಲ್ಲವೇ!

ಹಾಗೆಯೇ ಅದೃಷ್ಟನಾದ ಆ ಪರಮಾತ್ಮನನ್ನು ನೋಡಿ ಅನುಭವಿಸಬೇಕೆಂದು ಭಕ್ತರ ಮನಸ್ಸು ತಹತಹಪಡುತ್ತದೆ. ತ್ಯಾಗರಾಜಸ್ವಾಮಿಗಳು, "ರಾಮ ! ಎಲ್ಲರಿಗೂ ದರ್ಶನ ಕೊಟ್ಟೆ. ನನಗ್ಯಾಕೆ ಕೊಡುತ್ತಿಲ್ಲ" ಎಂದು ಹಲುಬುತ್ತಾರೆ. ಪುರಂದರದಾಸರು ಗೋಳಾಡುತ್ತಾರೆ. ಆಂಡಾಳ್ ಕಣ್ಣೀರಿಡುತ್ತಾಳೆ. ನಮ್ಮ ಕಣ್ಣಿಗೆ ಗೋಚರವಾಗಬೇಕಾದರೆ ನಮ್ಮಂತೆ ಅವಯವಗಳಿದ್ದರೆ ತಾನೇ ಸಾಧ್ಯ! ಆಕಾರವೇ ಇಲ್ಲದಿರುವವನು ಅವಯವಗಳನ್ನು ಹೊತ್ತು ಬರುವುದು ಹೇಗೆ? ಆದರೂ ಭಕ್ತರ ಅಭಿಲಾಷೆ ಮಾತ್ರ ತಣಿಯುವುದಿಲ್ಲ.

ಇದಕ್ಕೋಸ್ಕರವೇ ಪರಮಾತ್ಮನ ಪ್ರತೀಕ (Symbol) ವನ್ನು ಆರಾಧಿಸಲು ಆರಂಭಿಸಿದರು. ವೇದಗಳಲ್ಲಿ ಅಗ್ನಿ, ಸೂರ್ಯ, ಇಂದ್ರ, ವರುಣ, ಆದಿತ್ಯ ಇತ್ಯಾದಿ ದೇವತೆಗಳೆಲ್ಲಾ ಪರಮಾತ್ಮನ ಪ್ರತೀಕಗಳೇ. ಅವರಿಗೆ ಅಗ್ನಿಯ ಮೂಲಕ ನಮ್ಮ ಭಕ್ತಿ ಕೃತಜ್ಞತಾ ಪೂರ್ವಕವಾದ ಹವಿಸ್ಸನ್ನು ಸಮರ್ಪಿಸಿ ಮನಸ್ಸಿಗೆ ತೃಪ್ತಿಪಟ್ಟುಕೊಂಡರು. ಅದಕ್ಕೇ ಸಂಧ್ಯಾವಂದನೆಯಲ್ಲಿ "ಅಸಾವಾದಿತ್ಯೋ ಬ್ರಹ್ಮ" ಎಂದು ಹೇಳುವುದು. ನಮಗೆ ಕಣ್ಣಿಗೆ ಕಾಣುವ ಸೂರ್ಯನೇ ಬ್ರಹ್ಮನ (ಪರಮಾತ್ಮನ) ಸ್ವರೂಪವೆಂದು ಭಾವಿಸಿಕೊಳ್ಳುವುದು. ಇದಕ್ಕಿಂತ ಸ್ವಲ್ಪ ಸೂಕ್ಷ್ಮವಾಗಿ ಹೋಗಿ "ಓಂ" ಕಾರವನ್ನೇ ಪ್ರತೀಕವನ್ನಾಗಿಟ್ಟುಕೊಂಡು ಉಪನಿಷತ್ತುಗಳಲ್ಲಿ ಪ್ರಣವೋಪಾಸನೆ ಬೇಕಾದಷ್ಟು ಹೇಳಿದರು. ಪುರಾಣಕಾಲಕ್ಕೆ ಈ ಪ್ರಕೃತಿ ದೇವತೆಗಳ ಆರಾಧನೆ ಕಮ್ಮಿಯಾಗಿಯೋ ಅಥವಾ ತೃಪ್ತಿ ಸಾಲದೆಯೋ ವಿಗ್ರಹಾರಾಧನೆ ಆರಂಭವಾಯಿತು. ಆಗಮಶಾಸ್ತ್ರವೇ ಇದಕ್ಕೋಸ್ಕರ ಹೊರಟಿತು. ಪರಮಾತ್ಮನನ್ನು ವಿಷ್ಣುವೆಂದೂ, ಬ್ರಹ್ಮನೆಂದೂ, ರುದ್ರನೆಂದೂ, ಗಣಪತಿಯೆಂದೂ ನಾನಾವಿಧವಾಗಿ ಧ್ಯಾನಿಸಲು ಆರಂಭಿಸಿದರು. ಅವರೆಲ್ಲರಿಗೂ ಮನುಷ್ಯರಂತೆ ದೇಹಾದ್ಯವಯವಗಳನ್ನು ಕೊಟ್ಟು, ನಮ್ಮಲ್ಲಿರುವ ಗುಣಗಳನ್ನೇ (ಕೆಲವು ಸಾರಿ ಅವಗುಣಗಳನ್ನೂ) exaggerate ಮಾಡಿ ಅವರಲ್ಲಿ ಕಲ್ಪಿಸಿ ಅದಕ್ಕೆ ತಕ್ಕಂತೆ ವಿಗ್ರಹಗಳನ್ನು ಮಣ್ಣಿನಲ್ಲಿ, ಕಲ್ಲಿನಲ್ಲಿ, ಲೋಹದಲ್ಲಿ ಮಾಡಿ ಆರಾಧನೆ ಮಾಡಲು ಆರಂಭಿಸಿದರು. ನಮ್ಮಂತೆ ಇರುವವರನ್ನು ಮನಸ್ಸು ಬೇಗ ಹಿಡಿಯುತ್ತದೆ. ಹಾಗೆಯೇ ಪರಮಾತ್ಮನು ಅವತಾರ ಮಾಡಿರುವನೆಂದು ಅವರನ್ನೂ ಅವನ ಪ್ರತೀಕವನ್ನಾಗಿ ಪೂಜಿಸಲು ಆರಂಭಿಸಿದೆವು. ಅದರಲ್ಲಿಯೂ ಅವತಾರಗಳಲ್ಲಿ ನಮ್ಮಂತೆ ಮನುಷ್ಯಾವತಾರದಲ್ಲಿ ನಮಗೆ ಹೆಚ್ಚು ಪ್ರಿಯ. ಅದಕ್ಕೇ ಮತ್ಸ್ಯ, ಕೂರ್ಮ, ವರಾಹ ಮೊದಲಾದ ಅವತಾರಗಳಿದ್ದರೂ ರಾಮ, ಕೃಷ್ಣರಲ್ಲಿಯೇ ನಮಗೆ ಹೆಚ್ಚು ಪ್ರಿಯ. ನಮ್ಮಂತೆಯೇ ವಿವಾಹಾದಿಗಳನ್ನು ಮಾಡಿಕೊಂಡು ಸಂಸಾರದಲ್ಲಿದ್ದುಕೊಂಡು, ಸ್ವಲ್ಪ ಶೌರ್ಯ ಪರಾಕ್ರಮ ತೋರಿಸಿ, ಕೆಲವು ಅದ್ಭುತಗಳನ್ನು

ಮಾಡಿ, ನಮ್ಮ ಮಧ್ಯೆಯೇ ಓಡಾಡಿಕೊಂಡಿದ್ದ ಅವತಾರಗಳು ಜನಗಳಿಗೆ ಹೆಚ್ಚು ಇಷ್ಟ. ಅವರು ಹೇಗಿದ್ದರೆಂಬುದಕ್ಕೆ ಇವತ್ತು ನಮಗೆ ವಿಗ್ರಹಗಳು, ಅಥವಾ ರವಿವರ್ಮನೇ ಸಾಕ್ಷಿ. ಇನ್ನೂ ಕೆಲವರು ಯಂತ್ರ, ಚಕ್ರ ಇವುಗಳನ್ನು ಪ್ರತೀಕಗಳನ್ನಾಗಿಟ್ಟುಕೊಂಡು ಆರಾಧನೆ ಮಾಡಲು ಆರಂಭಿಸಿದರು.

ಇವೆಲ್ಲವೂ ಪ್ರತೀಕಗಳೇ (Symbols). ಅವೇ ಪರಮಾತ್ಮನಲ್ಲ. ನಮಗೆ ಪ್ರತ್ಯಕ್ಷಕ್ಕೆ ಅನುಕೂಲವಾಗಲೆಂದು ಅವುಗಳನ್ನು ಮಾಡಿಕೊಂಡು, ಅವುಗಳಲ್ಲೇ ದೇವತಾತ್ವವನ್ನು ಕಲ್ಪಿಸಿಕೊಳ್ಳುತ್ತೇವೆ. "ಸಾಲಗ್ರಾಮೇ ವಿಷ್ಣು ಬುದ್ಧಿಃ" "ಪ್ರತಿಮಾದಿಷು ವಿಷ್ಣ್ವಾದಿಬುದ್ಧಿಃ" ಎಂಬುದು ಭಗವತ್ಪಾದರ ವಚನ. ಪ್ರತೀಕಗಳಲ್ಲಿ ವಿಷ್ಣ್ವಾದಿದೇವತೆಗಳ ಬುದ್ಧಿಯೇ ಹೊರತು, ಅವುಗಳೇ ದೇವತೆಗಳಲ್ಲ. ಕಲ್ಲುವಿಗ್ರಹವಾದರೆ Geologist ಪ್ರಕಾರ ಅದು a mixture of oxides only. ಲೋಹವಾದರೆ Metallurgist ಪ್ರಕಾರ It is an alloy of different elements. ಅಷ್ಟೇ ಹೊರತು ಅವುಗಳಲ್ಲಿಯೇ ಏನೋ ಶಕ್ತಿ ಇದೆ ಎಂದು ಊಹಿಸುವುದಾಗಲಿ, ನಂಬುವುದಾಗಲಿ ಮೂರ್ಖತನ.

ಮತ್ತೆ ಸಾಲಗ್ರಾಮವೇ ಏಕೆ ಬೇಕು, ನರ್ಮದಾ ಬಾಣ ಲಿಂಗವೇ ಏಕೆ ಬೇಕು? ಪಂಚಲೋಹದ ವಿಗ್ರಹವೇ ಏಕಾಗಬೇಕು ಎಂದು ಕೇಳಿದರೆ ಅದು ನಮ್ಮ weakness ಅನುಸರಿಸಿಯೇ ಬಂದಿದೆ. ನಮಗೆ ಯಾವುದೋ ಬೀದಿಯಲ್ಲಿ ಬಿದ್ದಿರುವ ಒಂದು ಸಾಧಾರಣ ಕಲ್ಲಿನಲ್ಲಿ ದೇವತಾಬುದ್ಧಿಯನ್ನು ಬರಿಸಿಕೊಳ್ಳುವುದು ಕಷ್ಟ, ಸಿಗುವುದು ಸುಲಭವಾದದ್ದರಿಂದ. ದೇವರು ಸಿಗುವುದು ಹೇಗೇ ಕಷ್ಟವೋ ಹಾಗೆ ಪ್ರತೀಕವೂ ಸ್ವಲ್ಪ ಕಷ್ಟದಿಂದ ಸಿಗುವುದಾಗಿರಬೇಕು. ಅದಕ್ಕೆ ಯಾರೋ ಬುದ್ಧಿವಂತರು ಗಂಡಕೀ ಸಾಲಗ್ರಾಮ, ನರ್ಮದಾಬಾಣಲಿಂಗ, ಶೋಣಭದ್ರಾಗಣಪತಿ ಇವುಗಳನ್ನು ಪ್ರತೀಕವನ್ನಾಗಿಟ್ಟರು. ಮೊದಲನೆಯದಾಗಿ ಅವುಗಳನ್ನು ಹೊಂದಲು ಕಷ್ಟಪಡಬೇಕು. ಎರಡನೆಯದಾಗಿ ಅಲ್ಲಿಯ peculiar geological conditionಗಳಿಂದ ಅವುಗಳಿಗೆ ಒಂದು ವಿಶಿಷ್ಟವಾದ ಬಣ್ಣ, lustre, ನುಣುಪು ಎಲ್ಲಾ ಬಂದಿರುತ್ತವೆ. ದೇವತಾ ಭಾವನೆ ಬರಿಸಿಕೊಳ್ಳಲು ಅನುಕೂಲವಾಗುತ್ತದೆ. ಸಾಧಾರಣ ಲೋಹಕ್ಕಿಂತ ಪಂಚಲೋಹ, melt ಮಾಡುವುದೂ, cast ಮಾಡುವುದೂ ಕಷ್ಟ. ಅದರಲ್ಲೊಂದು ಗುಣವೈಶಿಷ್ಟ್ಯವೂ ಉಂಟು. ಆದರೆ ಹಿಂದಿನ ಕಾಲದ ದೊಡ್ಡದೊಡ್ಡ ದೇವಸ್ಥಾನಗಳಲ್ಲಿ ಎಲ್ಲಾ ವಿಗ್ರಹಗಳನ್ನೂ ಕಡೆಯಲು ಅನುಕೂಲವಾದ Granite stoneನಲ್ಲಿಯೋ ಬಳಪದ ಕಲ್ಲಿನಲ್ಲಿಯೋ ಮಾಡಿದ್ದಾರೆ. ಆದ್ದರಿಂದ ಅವುಗಳಿಗೆ ವಿಷ್ಣುತ್ವ ಇಲ್ಲ ಎಂದು ಹೇಳುತ್ತೇವೆಯೇ ? ಅಥವಾ ಮಿಕ್ಕವುಗಳಿಗೆ ಜಾಸ್ತಿ ಎಂದು ಹೇಳುತ್ತೇವೆಯೇ ? ಎರಡೂ ಇಲ್ಲ. ಪ್ರತೀಕವೆಂದಾದಮೇಲೆ ದೊಡ್ಡದಾಗಲಿ, ಚಿಕ್ಕದಾಗಲಿ, ಕೂತಿರಲಿ, ಕೂತಿಲ್ಲದಿರಲಿ, ಮಣ್ಣಿನದಾಗಲಿ, ಲೋಹದ್ದಾಗಲಿ ಅದು ಪ್ರತೀಕವೇ. Dia equal to length ಅಥವಾ Dia is much more than length, ಇವುಗಳನ್ನು ಹಿಡಿದು ಚರ್ಚಿಸುವುದು ಮೌಢ್ಯ. ನಮಗೆ size ದೊಡ್ಡದಾಗಿದ್ದರೆ ದೇವತಾ ಭಾವನೆ ಬರಲು ಅನುಕೂಲವಾಗುತ್ತದೆಂದರೆ ಹಾಗೇ ಮಾಡೋಣ. ಇಲ್ಲ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ನಾಣ್ಣುಡಿಯಲ್ಲಿ ನಂಬಿಕೆ ಇರುವುದಾದರೆ ಸಣ್ಣದನ್ನೇ ಆರಿಸಿಕೊಳ್ಳೋಣ. ಏಣಿ ಹಾಕಿಕೊಂಡು ಹತ್ತಿ ಹೋಗಿ ಅಭಿಷೇಕ ಮಾಡಬೇಕಾದ ತಂಜಾವೂರಿನ ಬೃಹದೀಶ್ವರಲಿಂಗಕ್ಕೂ, ಎರಡು ಕೈಗಳಿಂದ ಪೂರ್ತಿ ಸುತ್ತುವರೆಯಲು ಸಾಧ್ಯವಿರುವ ಕಾಶೀ ವಿಶ್ವನಾಥ ಲಿಂಗಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಚಾರಿತ್ರಿಕದೃಷ್ಟಿಯಿಂದ ಕಾಶೀವಿಶ್ವನಾಥ ಲಿಂಗದಲ್ಲಿ ದೇವತಾತ್ವವನ್ನು ಭಾವಿಸುವುದು ನಮಗೆ ಸುಲಭ. ಅವರವರು ತಮ್ಮ ರುಚಿಗೆ, ನಂಬಿಕೆಗಳಿಗೆ ತಕ್ಕಂತೆ ಪ್ರತೀಕವನ್ನು ಆರಿಸಿಕೊಂಡು ಉಪಾಸನೆ ಮಾಡತಕ್ಕದ್ದು.

ಇನ್ನು ಈ ಆರಾಧನೆ, ಉಪಾಸನೆ, ಪೂಜೆ ಎಂದರೇನು ? ಪರಮಾತ್ಮನಿಂದ ಸೃಷ್ಟವಾದ ಅನೇಕ ಭೋಗೋಪಯುಕ್ತವಾಗಿರುವ ವಸ್ತುಗಳನ್ನು ನಿರಂತರ ಅನುಭವಿಸುತ್ತಿರುವ ನಾವು ಅದನ್ನು ಸೃಷ್ಟಿ ಮಾಡಿಕೊಟ್ಟಿರುವವನನ್ನು ಯೋಚಿಸಿ ಮನಸ್ಸು ಆಶ್ಚರ್ಯದಿಂದ ಮೂಕವಾಗಬೇಕು. ಹಾಗೆಯೇ ಅವನ ಅನಂತವಾದ, ವಿಚಿತ್ರವಾದ ಶಕ್ತಿಗಳನ್ನು ನೋಡಿ ಕೃತಜ್ಞತೆಯಿಂದ, ವಿನಯದಿಂದ, ಗೌರವದಿಂದ ತಲೆ ತಗ್ಗಬೇಕು. ಅವನಿಂದ ಸೃಷ್ಟವಾದ ವಸ್ತುಗಳನ್ನು ಅನುಭವಿಸಿ ಸಂತೋಷಪಟ್ಟಾಗಲೆಲ್ಲಾ ಹೃದಯವು ಅವನ ವಿಷಯದಲ್ಲಿನ ಗೌರವ, ಪ್ರೀತಿಗಳಿಂದ ಉಬ್ಬಬೇಕು. ಅವನ ಅಪಾರ ಕರುಣೆಯನ್ನು ನೆನೆಸಿಕೊಂಡು ಕಣ್ಣಿನಲ್ಲಿ ಆನಂದ ಬಾಷ್ಪಗಳುದುರಬೇಕು. ದೇಹವು ಪುಲಕಾಂಕಿತವಾಗಬೇಕು. ಈ ಭಾವನೆಗಳನ್ನು ನಾನಾ ವಿಧವಾಗಿ ತೋರಿಸುವುದೇ ಆರಾಧನೆ, ಪೂಜೆ, ಉಪಾಸನೆ. ಅವನು ಕಣ್ಣಿಗೆ ಸಿಗದೆ ಇರುವುದರಿಂದ, ನಮ್ಮ ಭಾವನೆಗಳನ್ನು ಮನಸ್ಸಿನಲ್ಲಿಯೇ ಅಡಗಿಸಿಕೊಳ್ಳಲಾರದೆ ಅವನ ಪ್ರತೀಕವಾದ ವಿಗ್ರಹಕ್ಕೇ ಅವುಗಳನ್ನೆಲ್ಲಾ ತೋರಿಸುತ್ತೇವೆ. ಇದೇ ಪೂಜೆ. ನಮಗೆ ಅತ್ಯಂತ ಗೌರವಾನ್ವಿತರಾದ ವ್ಯಕ್ತಿ ನಮ್ಮ ಮನೆಗೆ ಬಂದರೆ, ಅವರಿಗೆ ಸ್ವಾಗತ ಮೊದಲ್ಗೊಂಡು ಎಲ್ಲಾ ಉಪಚಾರಗಳನ್ನೂ ವಿಶೇಷವಾಗಿ ಮಾಡುತ್ತೇವೆಯೋ ಹಾಗೆ ಯಾವನಿಂದಲೇ ನಾವು ಸೃಷ್ಟವಾಗಿರುವೆವೋ, ಅವನ ಪ್ರತೀಕಕ್ಕೆ ಆ ಉಪಚಾರಗಳನ್ನು ಮಾಡಬೇಕೆಂಬ ಅಪೇಕ್ಷೆ ಬರುವುದು ಸಹಜ ತಾನೇ ! ಇದೇ

ಪೂಜೆ. ಅದರಲ್ಲಿ ಆವಾಹನದಿಂದ ಆರಂಭಿಸಿ ನಮಸ್ಕಾರದವರೆಗೂ ನಾನಾತರಹ ಉಪಚಾರಗಳನ್ನು ಅಳವಡಿಸಿಕೊಂಡಿದ್ದೇವೆ (ಷೋಡಶೋಪಚಾರ). ಲಲಿತಾಸಹಸ್ರನಾಮದಲ್ಲಿ ಅವಳನ್ನು ಚತುಃಷಷ್ಟಿ ಉಪಚಾರಾರಾಢ್ಯಾ ಎಂದು ಸ್ತೋತ್ರ ಮಾಡುತ್ತೇವೆ. ಅವಳಿಗೆ 64 ಉಪಚಾರಗಳು ಬೇಕಂತೆ! ಭಕ್ತನ ಮಾನಸಿಕ ಭಕ್ತಿಯು ಹೆಚ್ಚಾದಂತೆ ಉಪಚಾರಗಳ ಸಂಖ್ಯೆಗಳೂ ಜಾಸ್ತಿಯಾಗುತ್ತವೆ – ಆಯಾ ಭಕ್ತನ ಸಂತೋಷ ಇದ್ದಂತೆ. ಅದಕ್ಕೇ ಪೂಜೆಗೆ ಲಕ್ಷಣ ಹೇಳುವಾಗ, "ಪೂಜಾ ನಾಮ ಸಂತೋಷಜನಕಃ ಕರ್ಮಸಮುದಾಯಃ" ಎಂದು ಹೇಳಿದರು. ಪೂಜೆಯೆಂದರೆ ನಮಗೆ ಸಂತೋಷವನ್ನುಂಟುಮಾಡುವ ಕರ್ಮಗಳ ಸಮೂಹ. ಆ ಪರಮಾತ್ಮನ ಮಹಿಮೆಯನ್ನು ಪುನಃಪುನಃ ಸ್ಮರಣೆಗೆ ತಂದುಕೊಂಡು, ಮನಸ್ಸಿನಲ್ಲಿ ಉಕ್ಕುವ ಗೌರವವನ್ನು ಉಪಚಾರ ರೂಪವಾಗಿ ತೋರಿಸುತ್ತೇವೆ. ಸ್ನಾನ ಮಾಡಿಸುತ್ತೇವೆ (ಅಭಿಷೇಕ). ಬರೀ ನೀರಿನಲ್ಲಿ ಸ್ನಾನ ಮಾಡಿಸಿದರೆ ತೃಪ್ತಿಯಿಲ್ಲ, ನಮಗೆ ಯಾವ್ಯಾವುದು ಅತ್ಯಂತ ಪ್ರಿಯ ಮತ್ತು ಅಮೂಲ್ಯವಾದ ಅಥವಾ ಪವಿತ್ರವಾದ ವಸ್ತುಗಳೋ ಅವುಗಳೆಲ್ಲದರಿಂದಲೂ ಸ್ನಾನ ಮಾಡಿಸುತ್ತೇವೆ. ಅದಕ್ಕೇ ಹಾಲು, ಮೊಸರು, ತುಪ್ಪ, ಹಣ್ಣಿನ ರಸಗಳು etc. ನೀನು (10)(11) ರಲ್ಲಿ ಕೇಳಿರುವಂತೆ, ಅವುಗಳನ್ನು ಸುರಿಯುವುದಲ್ಲ (ಆ ಶಬ್ದವೇ ತಿರಸ್ಕಾರ ಸೂಚಕವಾಗಿದೆ!). ಅವುಗಳಿಂದ ಸ್ನಾನ ಮಾಡಿಸುತ್ತೇವೆ. ಮಗುವಿಗೆ ಎಣ್ಣೆ ನೀರು ಹಾಕುವಾಗ ಮಗುವಿನ ತಲೆಯ ಮೇಲೆ ಎಣ್ಣೆ ನೀರು ಸುರಿದೆವು ಎಂದು ಹೇಳುವುದಿಲ್ಲ ಅಲ್ಲವೇ!! ಒಂದೊಂದನ್ನೂ ಬೇರೆ ಬೇರೆ ಅಭಿಷೇಕ ಮಾಡುವುದು ನಮಗೆ ಹೆಚ್ಚು ಸಂತೋಷವೆಂದರೆ ಹಾಗೇ ಮಾಡುವುದು ; ಇಲ್ಲ, ಎಲ್ಲವನ್ನೂ ಸೇರಿಸಿಮಾಡಿದರೆ ನಮಗೆ ಹೆಚ್ಚು ತೃಪ್ತಿ ಎನ್ನುವುದಾದರೆ ಹಾಗೇ ಸರಿ. ಅವುಗಳನ್ನು ಮಾಡುವುದರಿಂದ ಜಿಡ್ಡಾಗುತ್ತದೆ ಎಂದಾದರೆ ಸೀಗೇಪುಡಿ ಮಿಶ್ರವಾದ ಬಿಸಿನೀರಿನಿಂದ ಅಭಿಷೇಕಮಾಡಿ ಶುದ್ಧ ಮಾಡಬೇಕು. ಮಗುವಿಗೆ ಮೈ ಎಣ್ಣೆಯಾಗುತ್ತದೆಂದು ಹೇಳಿ, ನೀರು ಹಾಕುವುದನ್ನೇ ನಿಲ್ಲಿಸುವುದಿಲ್ಲ ಅಲ್ಲವೇ !!

ಇದಾದ ಮೇಲೆ ಮಗುವನ್ನು ಮೃದುವಾದ Towel ನಿಂದ ಒರಸುವಂತೆ ದೇವರನ್ನೂ ಮೃದುವಸ್ತ್ರದಿಂದ ಒರೆಸಬೇಕು. ಮೇಲೆ ಹೂವಿನಿಂದ ಅಲಂಕಾರ. ನಮಗೆ ಹೇಗೆ ಹೇಗೆ ಅಲಂಕಾರ ಮಾಡಿದರೆ ತೃಪ್ತಿಯೋ ಹಾಗೆ ಹಾಗೆ ಮಾಡುವುದೇ ಪೂಜೆ. ನಾವು ಪೂಜೆ ಮಾಡಿದ ಹೂವಿನಿಂದ ಅವನು ಸಂತೋಷ ಪಡುತ್ತಾನೆಂದೂ, ಸಂತೋಷಪಟ್ಟು ನಮಗೇನೋ ಕೊಡುತ್ತಾನೆಂದೂ, ಬೇರೆ ತರಹ ಹೂವನ್ನು ಪೂಜೆ ಮಾಡಿಬಿಟ್ಟರೆ ಕೋಪಿಸಿಕೊಂಡು ನಮಗೆ ಶಾಪಕೊಡುತ್ತಾನೆಂದೂ ತಿಳಿದುಕೊಂಡಿರುವುದು ಅತ್ಯಂತ ಮಂದತನ. ಅವಾಪ್ತಸಮಸ್ತ ಕಾಮನಾದ ಆ ಪರಮಾತ್ಮನಿಗೆ ನಾವು ಕೊಡುವುದೇನಿದೆ ! ನಾವು ಕೊಡುವುದನ್ನೇ ಅವನು ಕಾದಿದ್ದಾನೆಯೇ ! ಕೊಡದಿದ್ದರೆ ನಮ್ಮ ಮೇಲೆ ಕೋಪಿಸಿಕೊಳ್ಳುತ್ತಾನೆ ಎಂದು ನಾವು ಭಾವಿಸಬಹುದೇ! ನಮ್ಮ ಕರ್ಮದಂತೆ ನಾವು ಅನುಭವಿಸಬೇಕಾದದ್ದನ್ನು ಯಾರೂ ವ್ಯತ್ಯಾಸಮಾಡಲು ಸಾಧ್ಯವಿಲ್ಲ. ಅವನು ಮಾಡಲು ಹೋಗುವುದೂ ಇಲ್ಲ. ಮತ್ತೆ ಈ ಪೂಜೆ, ಅಭಿಷೇಕ, ಅಲಂಕಾರ, ನಿವೇದನಾದಿಗಳೆಲ್ಲಾ ನಮ್ಮ ತೃಪ್ತಿಗೆ, ನಮ್ಮ ಸಂತೋಷಕ್ಕೆ. ಅದಕ್ಕೆ ಒಂದು ಕ್ರಮ ಕೊಟ್ಟುಕೊಂಡಿದ್ದೇವೆ, ಅಷ್ಟೆ. ಅದಕ್ಕೆ ಮೇಲೆ ಆ ನಿಯಮಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬಾರದು. ಯಾವ ದೇವತೆಗೆ ಯಾವ ಹೂವನ್ನು ಹಾಕಬೇಕೆಂದು ನಮಗೆ ಇಷ್ಟವಿದೆಯೋ ಅದನ್ನು ಹಾಕಿ ಸಂತೋಷಪಡಬೇಕು. ಅಷ್ಟೆ. ಶಂಖದಿಂದ ಅಭಿಷೇಕ ಮಾಡುವುದರಿಂದ, ಪವಿತ್ರವಾದ ನೀರನ್ನು ಅಭಿಷೇಕ ಮಾಡಿದಂತಾಗುತ್ತದೆ. ಅದಕ್ಕೋಸ್ಕರ ಶಂಖ. ಅಷ್ಟೇ. ಅದರ ಆಕಾರವೇ ನಮಗೊಂದು ಪೂಜ್ಯ ಭಾವನೆ ಕೊಡುತ್ತದೆ ಅಷ್ಟೆ. ಇಲ್ಲದಿದ್ದರೆ ಅದೂ ಒಂದು Geological piece ಅಥವಾ Marine product.

ಹಾಗಾದರೆ, ದೇವಸ್ಥಾನಗಳಲ್ಲಿ ಪ್ರತಿಷ್ಠೆ, ಕುಂಭಾಭಿಷೇಕಾದಿಗಳನ್ನು ಮಾಡುತ್ತಾರಲ್ಲಾ ! ಅವುಗಳಿಂದ ವಿಗ್ರಹಕ್ಕೆ ಯಾವ ಶಕ್ತಿಯೂ ಬರುವುದಿಲ್ಲವೇ! ಎಂದರೆ ಇಲ್ಲ. ಮತ್ತೆ ಅವುಗಳನ್ನು ಮಾಡುವುದೇಕೆಂದರೆ, ನಮಗೆ ಆ ವಿಗ್ರಹಗಳಲ್ಲಿ ದೇವತಾತ್ವ ಭಾವನೆ ಬರಲು ಅನುಕೂಲವಾಗಲೆಂದು. ವಿಗ್ರಹವನ್ನು ಕಡೆದು ಸುಮ್ಮನೆ ಅಂಗಡಿಯಲ್ಲಿಟ್ಟಿದ್ದರೆ ನಮಗೆ ಅದರಲ್ಲಿ ದೇವತಾತ್ವ ಭಾವನೆ ಬರುವುದು ಸುಲಭವಲ್ಲ. ಅದನ್ನು ತಂದು, ಮಂತ್ರಗಳನ್ನು ಹೇಳಿ, ಹೋಮಾದಿಗಳನ್ನು ಮಾಡಿದರೆ ನಮಗೆ ಕಲ್ಪಿಸಿಕೊಳ್ಳಲು ಅನುಕೂಲವಾಗುತ್ತದೆ. We are just playing with the psychological weaknesses of the masses. ಅನೇಕ ಕಡೆ ಮಂತ್ರಗಳಿಗೂ, ದೇವತೆಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಅದೂ ಅಲ್ಲದೆ ನಮ್ಮ ಯಾವ ಮಂತ್ರಗಳಿಗೂ, ಹೋಮಕ್ಕೂ ನಾವು ಭೌತಿಕವಾದ ಒಂದು ಶಕ್ತಿಯನ್ನು ಎಂದಿಗೂ ಹೇಳಿಲ್ಲ. ಇರಲು ಸಾಧ್ಯವೂ ಇಲ್ಲ. ಶಕ್ತಿ ಎಂದ ತಕ್ಷಣ ಅದು measurable ಆಗಿಬಿಡುತ್ತದೆ. There are many kinds of sophisticated instruments today which can measure, any kind of energy released in any material. ಅವುಗಳನ್ನೆಲ್ಲಾ ನಾವು ಹೇಳಲು ಹೊರಟರೆ scientists ಎದುರಿಗೆ ಮೂರ್ಖರಾಗುತ್ತೇವೆ.

ಹೀಗೆ ಶಕ್ತಿ ಇದೆ ಎಂದು ನಂಬಿಕೊಂಡೇ ಘಜನಿ ಮಹಮೂದನಿಗೆ ಸೋಮೇಶ್ವರದ ಮೇಲೆ 17 ಸಾರಿ ದಂಡಯಾತ್ರೆ ಮಾಡಲು ಅವಕಾಶ ಕೊಟ್ಟೆವು. ಸೋಮೇಶ್ವರನು ಅವರನ್ನು ಏನೂ ಮಾಡಲಿಲ್ಲ. ಅದಕ್ಕೆ ಬದಲಾಗಿ, ಸೋಮೇಶ್ವರನು ನಮ್ಮ ಸಂಸ್ಕೃತಿಯ ಪ್ರತೀಕವೆಂದು, ಹಿಂದುಗಳೆಲ್ಲರೂ ಒಟ್ಟಾಗಿ, ಅವರ ಮೇಲೆ ಧಾಳಿ ಇಟ್ಟದ್ದಿದ್ದರೆ ತಪ್ಪಿಸಬಹುದಾಗಿತ್ತೇನೋ ! ಹಂಪೆಯ ವೈಭವಯುತವಾದ ಸಾಮ್ರಾಜ್ಯದ ದೇವಸ್ಥಾನಗಳ ವಿಗ್ರಹಗಳನ್ನೆಲ್ಲಾ ಭಿನ್ನಭಿನ್ನ ಮಾಡಿದಾಗ ಆ ಶಕ್ತಿ ಎಲ್ಲಿ ಹೋಯಿತು?

ನಾವು ಮಂತ್ರ ಹೇಳುವುದಕ್ಕೂ ಆ ವಿಗ್ರಹಗಳಿಗೆ ಶಕ್ತಿ ಬರುವುದಕ್ಕೂ ಏನು ಸಂಬಂಧ? ನಾವು ಅಭಿಷೇಕ ಮಾಡುವುದರಿಂದ ಯಾವ ಶಕ್ತಿ ಬರಲು ಸಾಧ್ಯ? ಅದು ಕಲ್ಲಾದುದರಿಂದ ಹೆಚ್ಚು ಅಭಿಷೇಕ ಮಾಡಿದರೆ ಸವೆಯುತ್ತದೆ ಅಷ್ಟೆ! ಪಳನಿ ಸುಬ್ರಹ್ಮಣ್ಯ ಸ್ವಾಮಿ ವಿಗ್ರಹ ಆದ ಹಾಗೆ! ಆದ್ದರಿಂದ ಇಲ್ಲ ಸಲ್ಲದ ಕಥೆಗಳನ್ನು (ಅಡಗೂಲಜ್ಜಿ ಕಥೆಗಳು) ಹೇಳಿಕೊಂಡು ನಾವೂ ಮೋಸಹೋಗಿ, ಇತರರನ್ನೂ ಮೋಸಪಡಿಸುವುದು ಬೇಡ. ಶಂಖ ಹೇಗಿರಬೇಕು, ಸಾಲಗ್ರಾಮ ಹೇಗಿರಬೇಕು? ಗಣಪತಿಗೆ ತುಳಸಿ ಪೂಜೆ ಮಾಡಬಹುದೇ, ಸಾಲಗ್ರಾಮಕ್ಕೆ ಮಲ್ಲಿಗೆ ಪೂಜಿಸಬಹುದೇ ಇವೆಲ್ಲಾ ವ್ಯರ್ಥವಾದ, ನಮ್ಮ ವೇದಾಂತಸಿದ್ಧಾಂತಕ್ಕೇ, ಮನುಷ್ಯತ್ವಕ್ಕೇ ವಿರೋಧವಾದ ಪ್ರಶ್ನೆಗಳು. ಎಲ್ಲರಲ್ಲಿಯೂ ಪರಮಾತ್ಮನು ಚೈತನ್ಯಸ್ವರೂಪವಾಗಿ ಪ್ರಕಾಶಿಸುತ್ತಿದ್ದಾನೆಂಬ ಪರಮ ಅಭೇದ ತತ್ವವನ್ನು attain ಮಾಡುವುದೇ ನಮ್ಮ ಧರ್ಮದ ಗುರಿಯಾಗಿರುವಾಗ, ಆ ಪರಮಾತ್ಮನ ಪ್ರತೀಕವಾದ ವಿಗ್ರಹಗಳಲ್ಲಿ ಭೇದಗಳು, ಇಷ್ಟಾನಿಷ್ಟಗಳು ಮುಂತಾದುವನ್ನು ಕಲ್ಪಿಸುವುದು ಮಹತ್ತರವಾದ ಅನ್ಯಾಯ.

5) ಇದೂ ಯಥಾ ಪ್ರಕಾರ ಸ್ವೇಚ್ಛೆ. ಸುಮಂಗಲಿಯರು ನಿತ್ಯ ಸ್ನಾನಮಾಡಿದರೆ ಕೂದಲು ಒಣಗುವುದು ಕಷ್ಟವಾಗಿ ಶೀತಾದಿರೋಗಗಳು ಬರಬಹುದು. ಹಾಗೇನಿಲ್ಲ. Drier ನಲ್ಲಿ ಒಣಗಿಸಿಕೊಳ್ಳುತ್ತೇವೆಂದರೆ ಅಗತ್ಯವಾಗಿ ಮಾಡಬಹುದು. ಏಕಾದಶ್ಯಾದಿ ವ್ರತಗಳನ್ನು ಮಾಡುವುದು ದೇಹೇಂದ್ರಿಯಗಳನ್ನು ನಮ್ಮ controlನಲ್ಲಿ ಇಟ್ಟುಕೊಳ್ಳಲು ಮಾಡಬೇಕಾದ ಒಂದು ಅಭ್ಯಾಸ. ಅದನ್ನು ಮಾಡಿದಾಕ್ಷಣಕ್ಕೆ ಪುಣ್ಯವನ್ನು ಗಳಿಸುತ್ತೇನೆಂದು ಯಾರಾದರೂ ತಿಳಿದುಕೊಂಡಿದ್ದರೆ ದಡ್ಡತನ. ಪುಣ್ಯ ಬರುತ್ತದೆಂಬ ಆಸೆಯಿಂದಲಾದರೂ ಒಂದು ದಿನ ಉಪವಾಸಮಾಡಿ ದೇಹ ದಂಡನೆ ಮಾಡುವ ಅಭ್ಯಾಸಬರಲಿ ಎಂಬ ಉದ್ದೇಶ.

6) "ಮುಸರೆ" ಅನ್ನುವ concept ನಮ್ಮ ಶಾಸ್ತ್ರಗಳಲ್ಲಿ ಇಲ್ಲವೇ ಇಲ್ಲ. ಆಪಸ್ತಂಬರು ಅನ್ನಲೇಪವಾಗಿದ್ದರೆ ಕೈ ತೊಳೆದು ಕೊಂಡು ಶುದ್ಧ ಮಾಡಿಕೊಳ್ಳಿ ಎನ್ನುತ್ತಾರೆ. ಅದಕ್ಕೇ ಅದನ್ನು ತಮಿಳಿನಲ್ಲಿ "ಪತ್ತ್" ಎಂದು ಕರೆಯುತ್ತಾರೆ. ಅನ್ನವನ್ನು ಮುಟ್ಟಿದರೆ ಕೈಗೆ ಅಂಟಿಕೊಳ್ಳುತ್ತದೆ. ಅದೇ ಲೇಪ. ಅದೇ "ಪತ್ತ್", ಅದೇ ಮುಸರೆ. ನಾವು ಅದನ್ನು extend ಮಾಡಿ ಪಾತ್ರೆ ಸೋಂಕು, ಆ ಪಾತ್ರೆ ಇಟ್ಟ ಜಾಗ, ಅನ್ನವಲ್ಲದೆ ಬೇಯಿಸಿದ್ದೆಲ್ಲಾ, ಹೀಗೆ ಏನೇನೋ ಹೊರಟದೆ. ಎಲ್ಲಕ್ಕಿಂತ ನನಗೆ ದುಃಖವಾಗುವುದೆಂದರೆ ಆ ನಿಯಮವನ್ನು ಅನುಸರಿಸುವುದರಿಂದ ನಾವು ಬಹಳ ಧರ್ಮಿಷ್ಠ ರಾದಂತೆಯೂ, ಅದನ್ನು ಮಾಡದೆ ಇರುವವರು ನಮಗಿಂತ ಪಾಪಿಷ್ಠರೆಂದೂ ಭಾವಿಸುವುದು. ಯಾವ ಒಂದು ನಿಯಮ ಕೇವಲ ಶುದ್ಧಿಗೋಸ್ಕರ (Physical Cleanliness) ಹೊರಟಿತೋ ಅದನ್ನು ನಾವು ದೊಡ್ಡ ಪುಣ್ಯಕಾರ್ಯವನ್ನಾಗಿ ಮಾಡಿದ್ದೇವೆ! What a traversty of facts !

7) ಆ ಭಯಕ್ಕೆ ಯಾರೂ ಏನೂ ಮಾಡುವುದು ಸಾಧ್ಯವಿಲ್ಲ. We must develop the moral Courage to stick to the right whatever may be the provocation. ಪುನಃ Madras Christian College motto ಜ್ಞಾಪಕಕ್ಕೆ ಬರುತ್ತದೆ: They are slaves who dare not be in the right, with one or two.

8) ವೇದಮಂತ್ರವನ್ನು ಹೇಳಲು ಇರುವ ನಿಯಮ, ಆ ವೇದಕ್ಕೆ ನಾವು ಗೌರವವನ್ನು ಕೊಡುವ ಒಂದು ಚಿಹ್ನೆ. ಪಂಚೆ ಉಟ್ಟುಕೊಂಡು ಹೇಳುವುದರಿಂದ ಪುಣ್ಯವಿಲ್ಲ. ಪ್ಯಾಂಟ್ ಹಾಕಿಕೊಂಡು ಹೇಳುವುದರಿಂದ ಪಾಪವಿಲ್ಲ. ಆದರೆ ಪಂಚೆ ಉಟ್ಟುಕೊಂಡು ಹೇಳಿ ವೇದಕ್ಕೆ ಗೌರವ ಕೊಡುವುದು ನಮ್ಮ ಸಂಸ್ಕೃತಿ. ನಮಗೆ ಅದರಲ್ಲಿ ಒಂದು ಹೆಮ್ಮೆ ಇರಬೇಕು. ವಿಧಿ ಇಲ್ಲದೆ ಎಲ್ಲಾದರೂ ಒಂದು ಕಡೆ ಆವಶ್ಯಕವಾಗಿ ಹೇಳಬೇಕಾಗಿ ಬಂದರೆ ಪ್ರಮಾದವಿಲ್ಲ. Our cultural traditions which are not irrational have to be protected and practised as such. They are really glorious. I for one, would like to follow them fastidiously. ಈ ನಿಯಮವೇ ಪೂಜಾದಿಗಳಿಗೂ ಅನ್ವಯಿಸುತ್ತದೆ. ಗೃಹಸ್ಥನಿಗೆ ಒಂದು ವಿಶಿಷ್ಟವಾದ ವೇಷವಿದೆಯೆಂದರೆ ಅದು ನಮ್ಮ culture. ಅದರಲ್ಲಿ ನನಗೆ ಯಾವ ತಪ್ಪೂ ಕಾಣಿಸಲಿಲ್ಲ. ಅದು ಕಾಡುಜನಗಳ culture ಅಲ್ಲ. ಅರಣ್ಯ ಮೃಗಗಳ ಸಂಸ್ಕೃತಿಯಲ್ಲ. ಪರಮಾತ್ಮನ ಸಾನ್ನಿಧ್ಯವನ್ನು ಅನುಭವಿಸಿದ, ಪುಣ್ಯಶ್ಲೋಕರಾದ, ಪ್ರಾತಃಸ್ಮರಣೀಯರಾದ ಮಹರ್ಷಿಗಳ ಸಂಸ್ಕೃತಿ. Should we not feel proud to follow in their footsteps at least outwardly and culturally? ಈಗ ಒಂದು ವಾರದ ಹಿಂದೆ

Gavaskar ಬರೆಯುತ್ತಾ, Even while playing, the Indian head gear fills you with a sort of pride instead of fancy head gears ಎಂದರು...

ಪತ್ರ ದೀರ್ಘವಾಯಿತು. ನಿನ್ನ ಪ್ರಶ್ನೆಗಳೂ ದೀರ್ಘವಾಗಿತ್ತು. ಚಿ॥ಗಳಿಗೆಲ್ಲಾ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೫೮

ಸಗೋತ್ರ ವಿವಾಹ

ಕುಶಲಮ್ ಶ್ರೀ : Madras

20.4.87

ಶ್ರೀಕಂಠ !

ನಿನ್ನ ಕಾಗದ ತಲಪಿತು. ನಿನ್ನ ಹಿಂದಿನ ಕಾರ್ಡೂ ತಲಪಿತ್ತು. ಅದಕ್ಕೆ ಉತ್ತರ ಬರೆಯಬೇಕೆಂದಿರುವಾಗ ನಿನ್ನ ಇನ್ನೊಂದು ಕಾಗದ ಬಂದಿತು. ಉಪನಯನವನ್ನು ಇಟ್ಟುಕೊಂಡಿರುವುದು ಬಹಳ ಸಂತೋಷ. ನನ್ನ ಹಿಂದಿನ ಕಾಗದ ನಿನ್ನ ಹತ್ತಿರ ಇದ್ದರೆ ಅದರಂತೆ ಸಂಭಾರಗಳನ್ನು ಹೊಂದಿಸಿಕೊ. ಯಜ್ಞೋಪವೀತ, ಕೃಷ್ಣಾಜಿನ, ಮೌಂಜಿಗಳನ್ನು ನಾನು ತರುತ್ತೇನೆ.

ವಿವಾದಾಸ್ಪದ : ನೀನು ಸಗೋತ್ರ ವಿವಾಹದ ಬಗ್ಗೆ ಕೇಳಿರುವ ಪ್ರಶ್ನೆ ಬಹಳ ವಿವಾದಾಸ್ಪದವಾದದ್ದು. ನೀನು ಬರೆದಿರುವಂತೆ, ಸೋದರಮಾವನ ಮಗಳನ್ನು ವಿವಾಹವಾಗುವುದು, ಸೋದರಮಾವನನ್ನೇ ವಿವಾಹವಾಗುವುದು ಸಗೋತ್ರ ವಿವಾಹದಷ್ಟೇ ದೋಷಯುಕ್ತವಾದುದು, ಅಥವಾ ಅದಕ್ಕಿಂತ ಹೆಚ್ಚಾದದ್ದು. ಅದನ್ನು ಧೈರ್ಯವಾಗಿ ಸಂಪ್ರದಾಯವಾಗಿ ಮಾಡಿಕೊಂಡು ಅನುಸರಿಸುತ್ತಿದ್ದಾರೆ. ಒಂದು ತಪ್ಪನ್ನು ಮಾಡುತ್ತಿರುವುದರಿಂದ ಇನ್ನೊಂದನ್ನೂ ಮಾಡಬೇಕೆಂದಲ್ಲ. ಆದರೆ ಗುರುತರವಾದ ಒಂದು ತಪ್ಪನ್ನು ಮಾಡಿದ ಮೇಲೆ ಅದಕ್ಕೆ ಸಮಾನವಾದ ಅಥವಾ ಕಮ್ಮಿಯಾದ ತಪ್ಪನ್ನು ಬಹಳ ಆಗ್ರಹದಿಂದ ನೋಡುವುದು ಸ್ವಲ್ಪ ವಿಚಿತ್ರವಾಗಿ ಕಾಣುತ್ತದೆ. ಇರಲಿ. ಈ ವಿಷಯದಲ್ಲಿ ಮಹರ್ಷಿಗಳ ಅಭಿಪ್ರಾಯವನ್ನು ನೋಡೋಣ.

ಮಹರ್ಷಿಗಳ ಮತ : ವಿವಾಹದಲ್ಲಿ ವಧುವಿನ ಲಕ್ಷಣಗಳನ್ನು ಹೇಳುವಾಗ, ಸಾಮಾನ್ಯವಾಗಿ

ಅನನ್ಯಪೂರ್ವಿಕಾಂ ಕನ್ಯಾಮ್ ಅಸಂಪಿಂಡಾಂ ಯವೀಯಸೀಮ್ ।
ಅರೋಗಿಣೀಂ ಭ್ರಾತೃಮತೀಮ್ ಅಸಮಾನಾರ್ಷಗೋತ್ರಜಾಮ್ ॥

ಎಂಬ ಲಕ್ಷಣಗಳನ್ನು ಎಲ್ಲರೂ ಒಪ್ಪುತ್ತಾರೆ. ಅಂದರೆ ಅನನ್ಯ ಪೂರ್ವಿಕಳಾದ (ಇನ್ನೊಬ್ಬರಿಗೆ ವಾಗ್ದತ್ತಳಲ್ಲದ), ಪಿತೃಸಾಪಿಂಡ್ಯ ಮಾತೃಸಾಪಿಂಡ್ಯಕ್ಕೆ ಸೇರದ, ತನಗಿಂತ ವಯಸ್ಸಿನಲ್ಲಿ ಚಿಕ್ಕವಳಾದ, ಅಚಿಕಿತ್ಸಕವಾದ ವ್ಯಾಧಿಯಿಲ್ಲದ, ಅಣ್ಣ ತಮ್ಮಂದಿರು ಇರುವ, ಸಮಾನ ಗೋತ್ರಪ್ರವರಗಳಲ್ಲದ ಕನ್ಯೆಯನ್ನೇ ವಿವಾಹ ಮಾಡಿಕೊಳ್ಳಬೇಕೆಂದರ್ಥ. ಆಪಸ್ತಂಬ, ಆಶ್ವಲಾಯನ, ಬೋಧಾಯನ, ಮನು, ಯಾಜ್ಞವಲ್ಕ್ಯ ಮುಂತಾದವರೆಲ್ಲರೂ ಇವುಗಳನ್ನು ಒಪ್ಪುತ್ತಾರೆ. ಇಲ್ಲಿ "ಅಸಂಪಿಂಡಾಂ" ಎಂದರೆ ಪಿತೃವರ್ಗದಲ್ಲಿ ಏಳು ತಲೆಯನ್ನೂ ತಾಯಿಯ ಕಡೆಯಲ್ಲಿ ಐದು ತಲೆಯನ್ನೂ ಬಿಡಬೇಕೆಂದು ಕಾಣುತ್ತದೆ. ಇದನ್ನೂ ಉಲ್ಲಂಘಿಸಿಯೇ ಈಗ ಮಾತುಲಕನ್ಯಾ (ಸೋದರಮಾವನ ಮಗಳು) ವಿವಾಹಾದಿಗಳು ನಡೆಯುತ್ತಿವೆ. 3-3, 4-4, 5-5 ಆಗಬಹುದು ಎಂದು ಹೇಳುವುದನ್ನು ಕೇಳಿದ್ದೇನೆ. ಅಂದರೆ ವಧು, ವರ, ಇಬ್ಬರಿಗೂ ಒಬ್ಬ ಮೂಲ ಪುರುಷರಿಂದ ಲೆಕ್ಕ ಮಾಡಿದರೆ 7-7 ಆದ ಮೇಲೆ ಮಾಡಬೇಕಾಗಿದ್ದರೂ 3-3, 4-4 ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಇಂಥಾ ವಿವಾಹಗಳಿಂದ ಗುರುತಲ್ಪಗಮನ ಮಾಡಿದಷ್ಟು ಮಹಾಪಾಪ ಎಂದು ಎಲ್ಲರೂ ಹೇಳಿರುತ್ತಾರೆ. ಆದರೂ ಈ ಸಾಪಿಂಡ್ಯಸಂಕೋಚ (ಅಂದರೆ ಸಾಪಿಂಡ್ಯ ಲೆಕ್ಕದಲ್ಲಿ ಕಮ್ಮಿ ಮಾಡಿಕೊಳ್ಳುವುದು ಬಂದುಬಿಟ್ಟದೆ) ಮಾಡುವುದು ನೂರಾರು ವರ್ಷಗಳಿಂದ ಅಭ್ಯಾಸದಲ್ಲಿದೆ. ಧರ್ಮಸಿಂಧ್ವಾದಿ ಧರ್ಮಶಾಸ್ತ್ರ ಗ್ರಂಥಕಾರರು ಕೂಡ, ಇದನ್ನು ಉಲ್ಲೇಖಿಸಿ, ಅವರವರ ಕುಲದಲ್ಲಿ ಇದು ಅಭ್ಯಾಸದಲ್ಲಿದ್ದರೆ ದೋಷವಲ್ಲ ಎಂದು ಬರೆಯುತ್ತಾರೆ. ನನಗೇನೋ ಅದು ವಿಚಿತ್ರವಾಗಿ ಕಾಣುತ್ತದೆ. ತಂದೆಯ ಕಡೆಯಿಂದ ಏಳು ತಲೆ ಬಿಟ್ಟರೂ, ಮಧ್ಯೆ ಹೆಣ್ಣು ಸಂತತಿಯೊಂದನ್ನು ಸೇರಿಸಿಕೊಂಡರೇ ಗೋತ್ರ ಬೇರೆಯಾಗುತ್ತದೆ. ಇಲ್ಲದಿದ್ದರೆ ಎಷ್ಟು ತಲೆಗಳಾದರೂ ಗೋತ್ರ ಒಂದೇ ಆಗಿರುತ್ತದೆ. ಆದರೆ ನಮ್ಮಲ್ಲಿ ಸಾಮಾನ್ಯವಾಗಿ ಹೇಳುವುದುಂಟು. ಏಳು ತಲೆ ಕಳೆದು ಹೋದರೆ ಒಂದೇ ಗೋತ್ರದವರಾದರೂ ಆಶೌಚವಿಲ್ಲವೆಂದು–ಈಗ ನಮಗೂ ನಿಮಗೂ ಇದ್ದಂತೆ. ಅದೇ ನ್ಯಾಯವನ್ನೇ ಇಲ್ಲಿಗೂ ಅನುಸರಿಸಬಹುದೇನೋ ಎನಿಸುತ್ತದೆ. ಏಳು ತಲೆ ಕಳೆದುಹೋದ ಮೇಲೆ ಒಂದೇ ಗೋತ್ರದವರಾದರೂ ಬಹಳ ದೂರವೆಂದೇ ಭಾವನೆ.

Genes : ಈಗಿನ ಕಾಲದ Genes ಮೊದಲಾದ ಯುಕ್ತಿಗಳಿಂದ ವಿಚಾರಮಾಡಿದರೆ, ಅವರು ಹೇಳಿರುವ ಸಾಪಿಂಡ್ಯ ನಿಯಮ ಹೊಂದುಮಂತೆ ಕಾಣುತ್ತದೆ. ಒಂದು ಮೂಲಪುರುಷನಿಂದ ಬಂದವರಿಗೆ Genes ಸಮಾನವಾಗಿರುವುದು ಸ್ವಭಾವ. ಬುದ್ಧಿ

ವಂತಿಕೆ, ಒಳ್ಳೆಯ ಗುಣಗಳು ಈ Genes ಆದರೆ ಪರವಾಯಿಲ್ಲ. ಆದರೆ ಅಚಿಕಿತ್ಸಕವಾದ ವ್ಯಾಧಿಗಳ Genes ಇಬ್ಬರಿಗೂ ಇದ್ದು ಬಿಟ್ಟರೆ ಮಕ್ಕಳಿಗೆ ಬರುವುದು ಖಂಡಿತ. ಆ ದೃಷ್ಟಿಯಿಂದ ವ್ಯತ್ಯಾಸಮಾಡಿಕೊಳ್ಳುವುದು ಉತ್ತಮ ಪಕ್ಷ. (Aprilನ Reader's Digest ನಲ್ಲಿ ಕೊನೆಯಲ್ಲಿ ಒಂದು ಮಗುವಿನ ಕಥೆ ಬಂದಿದೆ. ಓದು. ಅದರಲ್ಲಿಯೂ ಗಂಡ ಹೆಂಡತಿ ಇಬ್ಬರಿಗೂ ಆ ವ್ಯಾಧಿಯ Genes ಇದ್ದುದರಿಂದ ಮಗುವಿಗೆ ವ್ಯಾಧಿ ಬಂದಿದೆ!) ಅಂದರೆ Probability ಕಮ್ಮಿಯಾಗುತ್ತದೆಂದರ್ಥ. ಈ ದೃಷ್ಟಿಯಿಂದಲೇ ಸಾಪಿಂಡ್ಯ, ಸಗೋತ್ರಗಳನ್ನು ನಿಷೇಧ ಮಾಡಿದ್ದಾರೆ.... ಇಲ್ಲಿಯೂ ಸಾಪಿಂಡ್ಯ ಬಹಳ ಪ್ರಬಲ. ಏಕೆಂದರೆ ಮೂಲಪುರುಷನನ್ನು trace ಮಾಡಬಹುದು. ಆದರೆ ಸಗೋತ್ರವೆನ್ನುವುದು ಮಹರ್ಷಿಗಳ ಕಾಲಕ್ಕೆ ಸರಿಯಾಗಿತ್ತೇನೋ ! ಅವರವರದ್ದು ಸಣ್ಣ ಸಣ್ಣ ಗುಂಪು ಗಳಾಗಿದ್ದುದರಿಂದ, ಎಲ್ಲರಿಗೂ ಸಾಪಿಂಡ್ಯವೂ ಇರುತ್ತಿತ್ತು ಅಂತ ಕಾಣುತ್ತೆ. ಅಥವಾ ಸಂಬಂಧ ಹೇಗೋ ಇರುತ್ತಿತ್ತು (ಈಗ ಮತ್ತೂರು, ಹೊಸಹಳ್ಳಿಗಳಲ್ಲಿರುವಂತೆ!). ಈ ಕಾಲದಲ್ಲಿ ಸಗೋತ್ರದಲ್ಲಿ ಒಬ್ಬರೊಬ್ಬರಲ್ಲಿ Genes ಒಂದೇ ತರಹ ಇರುವುದು ಬಹಳ ಕಮ್ಮಿ ಎಂತಲೇ ಹೇಳಬೇಕು. ಎಷ್ಟೋ ತಲೆಮಾರುಗಳು ಕಳೆದು ಹೋಗಿವೆ. ಉತ್ತರದೇಶದಲ್ಲಿರುವ ಗೌಡಬ್ರಾಹ್ಮಣನಿಗೂ ನನಗೂ ಒಂದೇ ಗೋತ್ರವಿರಬಹುದು. ಆದರೆ ನಮಗೂ ಅವರಿಗೂ ರಕ್ತಸಂಬಂಧವಿದ್ದಿರಬೇಕೆಂದು ಊಹಿಸುವುದು ಬಹಳ far fetched imagination. ಆದ್ದರಿಂದ ಹತ್ತಿರ ಸಂಬಂಧವಿಲ್ಲದೆ, ಸಾಪಿಂಡ್ಯದ trace ಕೂಡ ಇಲ್ಲದಿರುವಾಗ, ಸಗೋತ್ರವಾದ ಮಾತ್ರಕ್ಕೆ ಇಷ್ಟವಾದ ಕಡೆ ವಿವಾಹ ಕೂಡದು ಎಂದು ಹೇಳುವುದು ನ್ಯಾಯವಾಗಿ ಕಾಣುವುದಿಲ್ಲವೆಂದು ನನ್ನ ಅಭಿಪ್ರಾಯ.

ಧರ್ಮಪ್ರಜೆಗಳಿಗಾಗಿ : ಮಹರ್ಷಿಗಳು ಹೇಳಿರುವ ಲಕ್ಷಣಗಳ ವಿಷಯಗಳಲ್ಲಿ ನಾವು ಗಮನಿಸಬೇಕಾದ್ದು ಇನ್ನೊಂದು ಮುಖ್ಯವಾದ ಅಂಶ. ಅವುಗಳೆಲ್ಲಾ ನಮ್ಮ guidance ಗೇ ಹೊರತು, ಅವುಗಳನ್ನು ಪಾಲಿಸಿದ್ದರಿಂದ ಪುಣ್ಯವೆಂದಾಗಲೀ, ಪಾಲಿಸದೆ ವಿರೋಧವಾಗಿ ಮಾಡಿದ್ದರಿಂದ ಪಾಪವೆಂದಾಗಲೀ ಭಾವಿಸಬಾರದು. ಅವೆಲ್ಲವೂ ದೃಷ್ಟಪ್ರಯೋಜನ ವಿಧಿಗಳು (ಹಿಂದೆಯೇ ಅದರ ವಿಷಯ ಬರೆದಿದ್ದೇನೆ). ಅವುಗಳಿಂದ ನಮಗೆ ತಿಳಿಯದಿರುವ ಯಾವ ಪ್ರಯೋಜನವಾಗಲಿ, ದೋಷವಾಗಲಿ ಸಂಭವಿಸುವುದು ಸಾಧ್ಯವಿಲ್ಲ. ಶಾಸ್ತ್ರ ನಿಯಮಕ್ಕೆ ವಿರೋಧವಾಗಿ ಹೋಗುವುದು, ಅಧರ್ಮ, ಪಾಪ ಎಂದು ಹೇಳುವುದು ನಮ್ಮ ಮಹರ್ಷಿಗಳ ಸ್ವಭಾವ. ಪುಣ್ಯ ಗಳಿಸುವ ಆಸೆಯಿಂದಲಾದರೂ ನಿಯಮವನ್ನು ಅನುಸರಿಸಲಿ ಎಂಬ ಉದ್ದೇಶ. ಪಾಪಸಂಭವದ ಭಯದಿಂದ ವಿಧಿಯನ್ನು ಉಲ್ಲಂಘಿಸದಿರಲಿ ಎಂಬ ಉದ್ದೇಶ. ಸೋದರಮಾವನ ಮಗಳನ್ನು ಮಾಡಿಕೊಂಡರೆ ಗುರುತಲ್ಪಗಮನ ಎಂಬ ಮಹಾಪಾಪಕ್ಕೆ ಗುರಿಯಾಗುತ್ತಾನೆ ಎಂದು ಹೇಳುವ ವಾಕ್ಯವನ್ನೂ ಈ ಅರ್ಥದಲ್ಲಿಯೇ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ತಮಿಳುನಾಡು, ಕರ್ನಾಟಕ, ಆಂಧ್ರದೇಶಗಳ ತುಂಬಾ ಮಹಾಪಾತಕಿಗಳೇ ಆದಾರು !! ಮುಂದೆ ಹುಟ್ಟುವ ಪ್ರಜೆಗಳು ನಿರೋಗಿಗಳಾಗಿ, ಸದ್ಗುಣಸಂಪನ್ನರಾಗಿ, ದೇಶಕ್ಷೇಮಕ್ಕೆ ಕಾರಣರಾಗಲೆಂಬುದೇ, ವಧೂವರರ ಲಕ್ಷಣಗಳನ್ನು ನೋಡಿ ವಿವಾಹ ಮಾಡಿಕೊಳ್ಳುವ ಉದ್ದೇಶ. ಅಲ್ಲಿ ಪಾಪ, ಪುಣ್ಯದ ಪ್ರಶ್ನೆ ಏಳುವುದೇ ಇಲ್ಲ. ಜತೆಗೆ ವಧೂವರರು ಒಬ್ಬರಿಗೊಬ್ಬರು ಹೃದಯಪೂರ್ವಕವಾಗಿ ಒಪ್ಪಿಕೊಂಡಿರಬೇಕೆಂಬುದೂ ಮುಖ್ಯವಾದ ಲಕ್ಷಣ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಆಪಸ್ತಂಬರು,

ಯಸ್ಯಾಂ ಮನಶ್ಚಕ್ಷುಷೋಃ ನಿಬದ್ಧಃ ತಸ್ಯಾಮ್ ಋದ್ಧಿಃ ನೇತರತ್ ಆದ್ರಿಯೇತ ಇತ್ಯೇಕೇ॥

ಎಂದು ಗೃಹ್ಯಸೂತ್ರದಲ್ಲಿ ವಿವಾಹ ಪ್ರಕರಣದಲ್ಲಿ ಬರೆದರು.

ಹೀಗಿದ್ದರೆ : ಇವುಗಳೆಲ್ಲವನ್ನೂ ನಾವು ಯೋಚನೆ ಮಾಡಿ ನಿಶ್ಚಯಿಸಬೇಕಾಗುತ್ತದೆ. ಪುನಃ ಹೇಳಬೇಕಾದರೆ, ಹತ್ತಿರದ ಸಂಬಂಧ ವಿಲ್ಲದೆ ಸಪ್ತಪೂರುಷ ಸಾಪಿಂಡ್ಯವಿಲ್ಲದಿದ್ದರೆ (ಅಂದರೆ ವಧೂವರರು ಮೂಲ ಪುರುಷನಿಂದ 7-7 ಆಗಬಾರದು), ಸಗೋತ್ರ ವಿವಾಹದಿಂದ ಯಾವ ದೋಷವೂ ಇಲ್ಲ ಎಂದೇ ನನ್ನ ಅಭಿಪ್ರಾಯ.

ಆದ್ದರಿಂದ ನಿನ್ನ ಸ್ನೇಹಿತರಿಗೆ ಹೇಳು. ಯುಕ್ತಿ ಯುಕ್ತವಾಗಿ ವಿಚಾರಮಾಡಿ ನಿಶ್ಚಯಕ್ಕೆ ಬರಲಿ. ನಿಶ್ಚಯಕ್ಕೆ ಬಂದಮೇಲೆ ಅದು ಅವರ ಸ್ವಂತವಾಗಬೇಕು. ಆಗಲೇ ಮಾನಸಿಕ ಧೈರ್ಯ ಬರುವುದು ಸಾಧ್ಯ.

ಇದರ ಮೇಲೆ ಇನ್ನೂ ಏನಾದರೂ ಸಂದೇಹಗಳಿದ್ದರೆ ಬರಿ. ಯಥಾಮತಿ ಅದನ್ನು ನಿವಾರಿಸಲು ಪ್ರಯತ್ನಿಸುತ್ತೇನೆ.

ಉಪನಯನವನ್ನು 11ನೇ ತಾರೀಖು ಸೋಮವಾರ ಇಟ್ಟುಕೊಳ್ಳಲು ಸಾಧ್ಯವೇ ? ಸೋಮುವಿನ ಮಗನ ಚೌಲವನ್ನು ಆಗ ಮಾಡಬೇಕೆಂದು ಬರೆದಿದ್ದೆ. ಅವನಿಗೇನೋ ಸ್ವಲ್ಪ ತೊಂದರೆ ಇದೆಯಂತೆ. ಅದೂ ಅಲ್ಲದೆ ಅವನು 4-5 ದಿನಗಳ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾನೆ. ಆದ್ದರಿಂದ May ತಿಂಗಳ ಕೊನೆಯಲ್ಲಿ ಬರೋಣವೆಂದಿದ್ದೇನೆ. ಈಗ 11ನೇ ತಾರೀಖು ಖಾಲಿ ಇರುವುದರಿಂದ ಅವತ್ತು ಇಟ್ಟುಕೊಳ್ಳಬಹುದೇ ಎಂದು ಕೇಳುತ್ತಿದ್ದೇನೆ. ಇನ್ನೇನೂ ಇಲ್ಲ – ನನ್ನ ಸ್ವಾರ್ಥ. 2 ದಿನ ರಜ ಉಳಿಯುತ್ತದೆ. 13ನೇ ತಾರೀಖು ನಮಗೆ ರಜ ಇದೆ. ಆದ್ದರಿಂದ ಸೋಮು,

ಮಂಗಳ ಎರಡುದಿನ ರಜ ತೆಗೆದುಕೊಂಡರೆ ಸಾಕು. 8ನೇ ತಾರೀಖು ಮಾಡಿದರೆ 4 ದಿನಗಳು ತೆಗೆದುಕೊಳ್ಳಬೇಕಾಗುತ್ತದೆ. ಅದೊಂದು ದೊಡ್ಡ ಪ್ರಮಾದವಲ್ಲ. ಆದರೂ ರಜದ ವಿಷಯದಲ್ಲಿ ನಾನು ಸ್ವಲ್ಪ ಜಿಪುಣ! ನಿನಗೆ ತೊಂದರೆಯಿಲ್ಲದೆ 11 ಕ್ಕೆ Postpone ಮಾಡಲು ಸಾಧ್ಯವಾದರೆ ಮಾಡು. ಇಲ್ಲದಿದ್ದರೆ ಯೋಚಿಸಬೇಡ. 8 ನೇ ತಾರೀಖಿಗೇ ಬರುತ್ತೇನೆ.

ಯಾವುದಕ್ಕೂ ಕೂಡಲೆ ಉತ್ತರ ಬರಿ. ನಾನು ಬರೆದು ಬಿಟ್ಟೆನೆಂದು ಒದ್ದಾಡಲು ಹೋಗಬೇಡ. ನಿನ್ನ ಕಾಗದವನ್ನು ನಿರೀಕ್ಷಿಸುತ್ತಿರುತ್ತೇನೆ. ಚಿ|| ಗಳಿಗೆಲ್ಲಾ ಆಶೀರ್ವಾದಗಳು.

ಎಲ್ಲರಿಗೂ ನೀನು ಆಹ್ವಾನ ಕೊಟ್ಟಿರುವುದು ಬಹಳ ಸಂತೋಷ. ಆದರೆ ಸೌ|| ಯೂ ಸುಮನೂ ಖಟ್ಮಂಡುವಿಗೆ ಹೊರಟಿದ್ದಾರೆ (ನನ್ನ ಹೆಂಡತಿಯ ತಂಗಿ ಅಲ್ಲಿದ್ದಾಳೆ). ಆದ್ದರಿಂದ ಬರಲು ಸಾಧ್ಯವಾಗುವುದಿಲ್ಲ. ನಾನೂ ಚಿ|| ಯೂ ಇರುತ್ತೇವೆ !!

ಇತಿ ನಿನ್ನವ

ಕುಮಾರಸ್ವಾಮಿ

P.S. 8ನೇ ತಾರೀಖು ಉಪನಯನವನ್ನು ಇಟ್ಟುಕೊಂಡರೆ ನನಗೆ ಭದ್ರಾವತಿಯಿಂದ 10.5.87 ರಾತ್ರಿ Train ಗೆ ಬೆಂಗಳೂರಿಗೆ ಒಂದು Berth reserve ಮಾಡಿಸು. 11ನೇ ತಾರೀಖು ಇಟ್ಟುಕೊಂಡರೆ 12ನೇ ತಾರೀಖು(12.5.87) ರಾತ್ರಿಗೆ Reserve ಮಾಡಿಸು. ಮರೆಯಬೇಡ.

೪೫೯

ಉಪನಯನ ಸಿದ್ಧತೆ, ವಿಧವಾವಿವಾಹ

ಕುಶಲಮ್ ಶ್ರೀ : Madras

29.4.87

ಶ್ರೀಕಂಠ!

ನಿನ್ನ ಕಾಗದ ತಲಪಿತು. ಅದರಂತೆ 8ನೇ ತಾರೀಖಿಗೇ ಸಿದ್ಧ ಮಾಡಿಕೊಂಡಿದ್ದೇನೆ. 7ನೇ ತಾರೀಖು ಬೆಳಗ್ಗೆ ರೈಲಿನಲ್ಲಿ ಅಲ್ಲಿಗೆ ಬರುತ್ತೇನೆ. ಅವತ್ತು ಸಾಯಂಕಾಲ ಸಂಧ್ಯಾವಂದನೆಯಾದ ಮೇಲೆ, ಅಂಕುರ, ಪ್ರತಿಸರ, ಮಾರನೆ ದಿನ ಉಪನಯನ (ಚೌಲವೂ ಆಗಿಲ್ಲ ಅಂತ ಕಾಣುತ್ತದೆ). ಅಂಕುರಕ್ಕೆ, ಉದ್ದು, ಎಳ್ಳು, ಸಾಸವೆ, ಗೋಧಿ, ಬತ್ತ, ಹೆಸರು ಇಷ್ಟೂ 50 gm. ಪ್ರತ್ಯೇಕವಾಗಿ ತರಿಸು. ಸ್ವಲ್ಪ ಅರಳಿ ಎಲೆಗಳೂ, ಹುತ್ತದ ಮಣ್ಣೂ ಬೇಕು. ಮಾರನೆ ದಿನಕ್ಕೆ ಹೋಮಕ್ಕೆ ಬೇಕಾದ ಸಂಭಾರಗಳು -1Kg ಬೆಣ್ಣೆಯ ತುಪ್ಪ ಅಗ್ನಿಯನ್ನು ಸಂರಕ್ಷಣೆ ಮಾಡಲು ಹೊಟ್ಟು, ಮೂಢ, ಬೆರಣಿ, ಮಡಕೆ, ಮುತ್ತುಗದ ಸಮಿತ್ತು ಉದ್ದವಾಗಿರುವವು 6, ಸಣ್ಣದು 50, ಇಷ್ಟಾದರೆ ಸಾಕು. ಮೌಂಜೀ, ಅಜಿನ, ಉಪವೀತ ಇಷ್ಟು ನಾನು ತರುತ್ತೇನೆ.

8ನೇ ತಾರೀಖು ಉಪನಯನವಾದ ಮೇಲೆ ನನಗೆ ಪೂರ್ತಿ ವಿರಾಮವೇ. Your friends are welcome. ಎಲ್ಲೆಲ್ಲಿ ನೋಡಿದರೂ ಈ confusion ಜಾಸ್ತಿಯಾಗಿದೆ. ಸ್ವಲ್ಪ ಓದಿರುವವರಿಗೆ ಈ ತರಹ ಸಂದೇಹಗಳು ನೂರಾರು ಬರುತ್ತಿವೆ. ಅನೇಕರಿಗೆ ನಂಬಲು ಕಷ್ಟ, ಬಿಡಲು ಧೈರ್ಯವಿಲ್ಲ. Difficult to believe but afraid to doubt ಅನ್ನುವ ಸ್ಥಿತಿ ಬಂದಿದೆ. ನಿಜವಾಗಲೂ ಸಮಾಜದ ಸ್ಥಿತಿ ಶೋಚನೀಯ ಎಂತಲೇ ಹೇಳಬೇಕು.

ವಿಧವಾವಿವಾಹದ ಬಗ್ಗೆ ನಾನು ಬಂದಾಗ ಹೇಳುತ್ತೇನೆ. ಧಾರಾಳವಾಗಿ ಮಾಡಬಹುದು (ಸ್ತ್ರೀಯು ಒಪ್ಪಿದರೆ!). ಯಾವ ಪಾಪವೂ ಇಲ್ಲ.

ಚಿ|| ಗಳಿಗೆಲ್ಲಾ ನನ್ನ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೬೦

ಸಂಸ್ಕಾರದಲ್ಲಿ ಆಸಕ್ತಿ, (ಶಾಸ್ತ್ರೀಯ ಆಚರಣೆಯ) ಧೈರ್ಯ, ಚಿಂತನಶಕ್ತಿ

ಕುಶಲಮ್ ಶ್ರೀ : Madras

12.5.87

ಶ್ರೀಕಂಠ!

ಉಪನಯನದ ಸವಿನೆನಪುಗಳನ್ನು ನೆನೆಸುತ್ತಾ ಇಲ್ಲಿಗೆ ಇವತ್ತು ಬೆಳಗ್ಗೆ ಬಂದು ತಲಪಿದೆ. ಮನಸ್ಸಿಗೆ ಬಹಳ ಸಂತೋಷವಾಗಿದೆ. ವೆಂಕಟೇಶನ ಮುಗ್ಧ ಸ್ವಭಾವ, ಅವನ ಮುಖದಲ್ಲಿ ಸದಾ ಓಲಾಡುತ್ತಿದ್ದ ನಗು, ಮಾಡುವ ಕರ್ಮಗಳಲ್ಲಿ ಅವನಿಗಿದ್ದ ಆಸಕ್ತಿ, ಉತ್ಸಾಹ ಎಲ್ಲವೂ ಚಿರಸ್ಮರಣೀಯವಾಗಿವೆ. ನಾನೂ ಎಲ್ಲರ ಕೈಯಲ್ಲಿಯೂ ಹೇಳಿಕೊಂಡು ಸಂತೋಷಪಡುತ್ತಿದ್ದೇನೆ. ಎಷ್ಟು ದಿನ ಸಾಧ್ಯವಾದರೆ ಅಷ್ಟು ದಿನ ಬಿಡದೆ ಅಗ್ನಿಕಾರ್ಯವನ್ನು ಮಾಡುವಂತೆ ಹೇಳು. ಅದರಿಂದ ನಮಗೆ ತಿಳಿಯದ ವಿಚಿತ್ರವಾದ ಒಂದು ಮಾನಸಿಕ ಧೈರ್ಯ (confidence) ಉಂಟಾಗುತ್ತದೆ. ಅದನ್ನು ಅನುಭವಿಸಿಯೇ ಗೊತ್ತಾಗಬೇಕು.

ಹೆಚ್ಚು ಜನಗಳನ್ನು ಸೇರಿಸಿಕೊಳ್ಳದೆ, ಛತ್ರ, ಗಿತ್ರ ಎಂದು ಒದ್ದಾಡದೆ ಚೊಕ್ಕವಾಗಿ ಹೀಗೆ ಮನೆಯಲ್ಲಿಯೇ ಶಾಸ್ತ್ರೀಯವಾಗಿ

ಉಪನಯನವನ್ನು ಮಾಡುವುದನ್ನು ಎಲ್ಲರೂ ಏಕೆ ಅನುಕರಿಸಬಾರದು ಎಂಬುದು ತಿಳಿಯುತ್ತಿಲ್ಲ. ಖರ್ಚೂ ಕಮ್ಮಿ, ಕರ್ಮವೂ ಸಾರ್ಥಕವಾಗುತ್ತದೆ. ಸಾವಿರಗಟ್ಟಲೆ ಖರ್ಚು ಮಾಡಿ, ಆ ಕರ್ಮದ ಉಪಯೋಗವೇ ಆ ಹುಡುಗನಿಗೆ ಇಲ್ಲದಂತೆ ಮಾಡುವುದರಿಂದ, ಏನು ಸಾಧಿಸಿದಂತಾಯಿತು? ಇನ್ನೇನು ತನ್ನ ಆಢ್ಯತೆಯನ್ನೂ, ತನ್ನ ಅಹಂಕಾರವನ್ನೂ ಪ್ರದರ್ಶಿಸಲು ಒಂದು ಅವಕಾಶ ಸಿಕ್ಕಿದಂತಾಯಿತು ಎಂದು ಹೇಳಬಹುದೇನೋ! ಅನೇಕರು ನನ್ನ ಮಾತುಗಳನ್ನು ಕೇಳಿದ್ದಾರೆ. ಆದರೆ ಅವುಗಳಲ್ಲಿ ಸ್ವಲ್ಪವನ್ನಾದರೂ ಕಾರ್ಯರೂಪಕ್ಕೆ ತಂದಿರುವವರು ಬಹಳ ಅಪರೂಪ. ನಿನಗೆ ಇಷ್ಟು ಧೈರ್ಯ ಬಂದು ಹಾಗೆಯೇ ಮಾಡುತ್ತೇನೆಂದು ಹೊರಟು, ಮಾಡಿ ಸಾಧಿಸಿರುವುದು ಬಹಳ ದೊಡ್ಡ achievement. ನೀನೇ ಧನ್ಯ!

ಅವತ್ತಿನ ನಿನ್ನ ಸ್ನೇಹಿತರೊಡನೆ ನಡೆದ ಸಂಭಾಷಣೆಯೂ ಮನಸ್ಸಿಗೆ ಬಹಳ ಸಂತೋಷವಾಯಿತು– except for the momentary jarring note made by your great sastryji! I felt, as if he had come there only to create trouble. Let us forget about it ! ಈ ಕಾಲದಲ್ಲಿ ಹೀಗೆ ಪ್ರಶ್ನೆಗಳನ್ನು ಕೇಳಲು ಸಾವಿರಾರು ಜನರು ಸಿದ್ಧರಿದ್ದಾರೆ. ಕೆಲವರಿಗೆ ಪ್ರಶ್ನೆಗಳನ್ನು ಕೇಳುವುದಕ್ಕೇ ಭಯ. ಅದರಿಂದಲೇ ಅಧರ್ಮ ಘಟಿಸುತ್ತದೆಯೋ ಎಂಬ ಭಯ. ಕೇಳುವವರಿಗೆ ಉತ್ತರವನ್ನು ಸಮಾಧಾನವಾಗಿ ಹೇಳುವವರು, ಒಬ್ಬರೂ ಇಲ್ಲ. ಎಲ್ಲರಿಗೂ ಒಂದೇ ಹಾಡು, "ಹಿಂದಿನವರೆಲ್ಲಾ ಮಾಡಿದ್ದರಲ್ಲಿ ತಪ್ಪು ಕಂಡುಹಿಡಿಯುವುದಕ್ಕೆ ನಾವು ಯಾರು! ಅವರು ಮಾಡಿದ ಮೇಲೆ ಅದಕ್ಕೆ ಏನೋ ಕಾರಣವಿದ್ದೇ ಇರಬೇಕು." ಈ ಹಿರಿಯರ ಮೇಲಿನ ಮಿಥ್ಯಾಗೌರವಕ್ಕೆ ಏನು ಹೇಳಬೇಕೆಂದು ತಿಳಿಯುವುದಿಲ್ಲ.

ನಿನ್ನ ಸೌ|| ಯವರಿಗೂ, ಚಿ|| ಗಳಿಗೆಲ್ಲರಿಗೂ ನನ್ನ ಹಾರ್ದಿಕ ಆಶೀರ್ವಾದಗಳನ್ನು ತಿಳಿಸು. ನೀವೆಲ್ಲರೂ ನಿತ್ಯ ಬಂದು, ನನ್ನನ್ನು ಹೊರಗಡೆ ಬೀಳ್ಕೊಡುವ ಸನ್ನಿವೇಶವನ್ನು ನೆನೆಸಿಕೊಂಡು ಪುಲಕಾಂಕಿತನಾಗುತ್ತೇನೆ. ಹೀಗೆ ಸಂಧಿಸುವ ಸನ್ನಿವೇಶವನ್ನು ದೇವರು ಕೊಡಲಿ..

ಇತಿ ನಿನ್ನವ

ಕುಮಾರಸ್ವಾಮಿ

೪೬೧

ಆದರ್ಶಸಮಾಜದ ನಿರ್ಮಾಣ, ಪ್ರಶ್ನೋತ್ತರ ಗೋಷ್ಠಿ

कुशलम्   श्री :   Madras

18.5.87

ಶ್ರೀಕಂಠ!

ತುಂಬುಹೃದಯದಿಂದ ನಿಮ್ಮ ವಿಶ್ವಾಸ ಅಭಿಮಾನಗಳನ್ನು ಉಕ್ಕಿಹರಿಸಿ ಎಲ್ಲರಿಗೂ ಆನಂದಬಾಷ್ಪಗಳು ಉದುರುವಂತೆ ಬರೆದಿದ್ದ ನಿನ್ನ ಸುಂದರ ಬರವಣಿಗೆಯಿಂದ ಕೂಡಿದ ಮಧುರವಾದ ಪತ್ರ ತಲಪಿತು. ನಿಮ್ಮ ಅಭಿಮಾನಕ್ಕೆ ನನಗೇನು ಹೇಳಬೇಕೆಂದು ತೋಚುತ್ತಿಲ್ಲ. ನಿನ್ನ, ನಿನ್ನ ವಿಶ್ವಾಸಪಾತ್ರರಾದ ಸ್ನೇಹಿತರ ಮಾತುಗಳಿಗೆ ನಾನು ಎಷ್ಟರಮಟ್ಟಿಗೆ ಅರ್ಹನೋ ಗೊತ್ತಿಲ್ಲ. ಆದರೆ ಅವೆಲ್ಲವೂ ನನ್ನಲ್ಲಿ ಮೈಗೂಡಿಕೊಂಡು, ನಾನೂ ಒಬ್ಬ ಯೋಗ್ಯ ಮನುಷ್ಯನಾಗಿ ಬಾಳಬೇಕೆಂಬ ಆಸೆಯೇನೋ ಇದೆ. ಹಾಗೆ ಪ್ರಾರ್ಥನೆಯನ್ನೂ ಮಾಡುತ್ತಿದ್ದೇನೆ. ಮುಕ್ಕಾಲು ಆಯುಷ್ಯ ಮುಗಿಯುತ್ತಿರುವ ನನಗೆ ಈಗ ಆಶಿಸುವುದರಿಂದ ಏನೂ ಪ್ರಯೋಜನವಿಲ್ಲ ಎನ್ನುವುದು ಗೊತ್ತಿದ್ದರೂ, ಮುಂದಿನ ಜನ್ಮದಲ್ಲಿಯಾದರೂ ಸಿದ್ಧಿಸಲೆಂಬ ಅಭಿಲಾಷೆ. ಇಷ್ಟು ಹೇಳಬಲ್ಲೆ, ಪ್ರಾತಃಸ್ಮರಣೀಯರಾದ ನಮ್ಮ ಮಹರ್ಷಿಗಳ ಹೃದಯವನ್ನು ಅರಿತುಕೊಳ್ಳದೆ ಯಾವುಯಾವುದನ್ನೋ ಧರ್ಮವೆಂದು ತಿಳಿದುಕೊಂಡು ಮೋಸಹೋಗುತ್ತಿರುವ ನಮ್ಮ ಭಾರತೀಯ ಪಂಡಿತ ಮತ್ತು ಅಪಂಡಿತ ಸಮಾಜವನ್ನು ನೋಡಿ ದುಃಖವಾಗುತ್ತದೆ. ಎಷ್ಟೇ ಸಣ್ಣ ರೀತಿಯಿಂದಲಾದರೂ ಅದನ್ನು ಸರಿಪಡಿಸಬೇಕು. ದಾರ್ಢ್ಯ ದಿನೇದಿನೇ ಬಲಿಯುತ್ತಿದೆ. ಅದಕ್ಕೆ ನಿಮ್ಮಂತಹ ಸಹೃದಯರ ಬೆಂಬಲವಿದೆಯೆಂದು ನಂಬಿದ್ದೇನೆ. ನಾವೆಲ್ಲರೂ ಸತ್ಪ್ರಜೆಗಳಾಗಬೇಕು, ಲೋಕಕ್ಕೇ ಆದರ್ಶವಾಗಬೇಕು. ದ್ವೈತಾದ್ವೈತ ವಿಶಿಷ್ಟಾದ್ವೈತಾದಿ ತತ್ತ್ವಗಳ ಜಾಲಕ್ಕೆ ಸಿಕ್ಕಿಕೊಂಡು ವೃಥಾ ವೈಮನಸ್ಯ ಬೆಳೆಸಿಕೊಳ್ಳದೆ ಪ್ರತಿಯೊಬ್ಬ ಮನುಷ್ಯನಿಗೂ ಸಾಮಾನ್ಯಧರ್ಮವಿದೆಯೆಂಬುದನ್ನು ತಿಳಿಸಿ ಅದನ್ನು ಅಭ್ಯಾಸ ಮಾಡುವ ಪ್ರಯತ್ನವನ್ನು ಪ್ರತಿಯೊಬ್ಬರೂ ಮಾಡಿದರೆ, ನಮ್ಮ ಅಭೀಷ್ಟ ನೆರವೇರುವುದರಲ್ಲಿ ಸಂದೇಹವಿಲ್ಲ.

ಪ್ರಕೃತ ನಿನ್ನ ಸ್ನೇಹಿತರೊಡನೆ 29, 30 (ಶುಕ್ರ, ಶನಿ) ಸಾಯಂಕಾಲ 7 ಘಂಟೆಯಿಂದ ಮಾತನಾಡಬಹುದು. ಆ ಎರಡು ದಿನಗಳೂ ಏರ್ಪಡಿಸು. Question - Answer Session ಆದರೇ ಒಳ್ಳೆಯದು. ಭಾರ ನಿನಗೆ ಬಿಟ್ಟಿದ್ದೇನೆ. ನಿನ್ನ ಸ್ನೇಹಿತರ ಮನೆಯಲ್ಲಿ ಭಾನುವಾರ ಬೆಳಗ್ಗೆ ಪೂಜೆ ಅಥವಾ ಹೋಮ ಇಟ್ಟುಕೊಳ್ಳಬಹುದೆಂದು ಹೇಳು. ಎರಡೂ ಮಾಡುವುದು ಶ್ರಮ, ಹಿತವೂ ಆಗುವುದಿಲ್ಲ. ಯಾವುದಾದರೂ 11 ಅಥವಾ 11½ ಒಳಗೆ ಮುಗಿಯುವಂತಿರಬೇಕು. ಆದ್ದರಿಂದ ಈ ಸಾರಿಗೆ ಪೂಜೆ ಒಂದೇ ಸಾಕು ಎಂದು ಹೇಳು. ಇನ್ನೊಂದು ಸಾರಿ ಹೋಮವನ್ನು ಪ್ರಧಾನವಾಗಿಟ್ಟುಕೊಂಡು ಮಾಡಿದರಾಯಿತು. ನಾನು 25ನೇ

ತಾರೀಖು ಬೆಳಗ್ಗೆ ಸೀದಾ ಶಿವಮೊಗ್ಗಾಕ್ಕೆ ಹೋಗುತ್ತೇನೆ. ಮಧ್ಯಾಹ್ನ ಭದ್ರಾವತಿಗೆ ಬರುತ್ತೇನೆ. ಸಾಧ್ಯವಾದರೆ ಸಾಯಂಕಾಲ ಸಂಧಿಸು.

ಚಿ|| ಗಳಿಗೆ ನನ್ನ ಆಶೀರ್ವಾದಗಳು. ವೆಂಕಟೇಶನ ಮಂದಹಾಸ ತುಂಬಿದ ಪ್ರಸನ್ನ, ನಿಷ್ಕಲ್ಮಷವಾದ ಮುಖ ಇನ್ನೂ ಸ್ಮರಣೆಗೆ ಬರುತ್ತಲೇ ಇರುತ್ತದೆ.

ಇತಿ ನಿನ್ನವ

ಕುಮಾರಸ್ವಾಮಿ

೪೬೨

ವಿಶೇಷಧರ್ಮ, ಸಾಮಾನ್ಯಧರ್ಮ

ಕಾರೀರೀಷ್ಟಿ, 'ಅರ್ಥವಾದ', ಗುದ್ದಲಿಪೂಜೆ

ಕುಶಲಮ್ ಶ್ರೀ : Madras

30.6.87

ಶ್ರೀಕಂಠ,

ನಿನ್ನ ಕಾಗದ ತಲಪಿತು. ನಾನು ಬಂದ ತಕ್ಷಣ ಬರೆಯುವ ಅಭ್ಯಾಸ. ಈಸಾರಿ ಏಕೆ ಬರೆಯಲಿಲ್ಲ ಅನ್ನುವುದು ನನಗೇ ತಿಳಿಯಲಿಲ್ಲ. ಪ್ರಾಯಃ ದೈಹಿಕ ಶ್ರಮ ಜಾಸ್ತಿಯಾಗಿದ್ದುದರಿಂದ ಆಮೇಲೆ ಬರೆಯೋಣವೆಂದು ಬರೆಯಲು ಮರೆತೆ ಅಂತ ಕಾಣುತ್ತೆ. ಹೋದ ವಾರ ಶಿವಮೊಗ್ಗ – ಭದ್ರಾವತಿ ಪ್ರಯಾಣ, ವೈದಿಕ ಕಾರ್ಯಗಳು, ಮಾತು, ಜತೆಗೆ ನನ್ನ ಚಿ||ಯ ಜತೆಯಲ್ಲಿ Factory ಸುತ್ತಾಟ, ಎಲ್ಲವೂ ಸೇರಿ ಶ್ರಮವಾಗಿತ್ತು. ಅದೂ ಅಲ್ಲದೆ ನಿನ್ನಿಂದ ಏನಾದರೂ ಸಂದೇಹಗಳು, ಪ್ರಶ್ನೆಗಳನ್ನು ನಿರೀಕ್ಷಿಸಿದ್ದೆ. ಏನೂ ಬರಲಿಲ್ಲವಾದ್ದರಿಂದ there was no motivation!

ಈ ಸಾರಿಯ ಭದ್ರಾವತಿ, ಶಿವಮೊಗ್ಗ ವಾಸಗಳು ಮನಸ್ಸಿಗೆ ಬಹಳ ಸಮಾಧಾನಕೊಟ್ಟವು. ಎಲ್ಲಕ್ಕಿಂತ ನೀನು ಏರ್ಪಡಿಸಿದ್ದ ಚರ್ಚಾಗೋಷ್ಠಿಗಳು ಬಹಳ ಹಿತವಾಗಿತ್ತು. ಇನ್ನೂ ಅಂಥ ನಂಬಿಕೆಗಳಲ್ಲಿಯೇ ಮುಳುಗಿ ಅದರಿಂದ ಹೊರಕ್ಕೆ ಬರಲೂ ಇಷ್ಟ ಪಡದೆ ಅದನ್ನು ಕಾಪಾಡಿಕೊಳ್ಳುವ ಭರದಲ್ಲಿ ವಿಚಾರಶಕ್ತಿಯನ್ನೇ ಕಳೆದುಕೊಂಡಿರುವ ನಮ್ಮ ವಿದ್ಯಾವಂತ ಸಮಾಜದಲ್ಲಿ ಇವತ್ತಿಗೂ ವಿಚಾರಪರರಾದ ವ್ಯಕ್ತಿಗಳಿದ್ದಾರೆ ಎಂಬುದನ್ನು ತೋರಿಸಿಕೊಟ್ಟರು, ನಿನ್ನ ಸ್ನೇಹಿತರು. ಆಶ್ಚರ್ಯವೇನೆಂದರೆ, ನಮ್ಮ ವೇದಾಂತ, ಶಾಸ್ತ್ರ ಭಾಗಗಳನ್ನು ತೆಗೆದುಕೊಂಡರೆ, ಎಲ್ಲಿಯೂ ಅವಿಚಾರಿತ ರಮಣೀಯತ್ವವನ್ನು ಅಂಗೀಕರಿಸಿಯೇ ಇಲ್ಲ. ಪ್ರತಿಯೊಬ್ಬನೂ, ವಿಚಾರ ಮಾಡಿ, ತನ್ನತನ್ನ ಗುಣಗಳಿಗೆ, ಅಧಿಕಾರಕ್ಕೆ, ಮಟ್ಟಕ್ಕೆ ಅನುಗುಣವಾಗಿ ಧರ್ಮಗಳನ್ನು ಆರಿಸಿಕೊಂಡು, ಆಚರಿಸಿಕೊಂಡು ಬರಬೇಕೆಂಬುದೇ ವಿಶೇಷಧರ್ಮಗಳ ತತ್ತ್ವ. ಸಾಮಾನ್ಯ ಧರ್ಮಗಳಲ್ಲಿಯೋ ಅಂದರೆ, (ಸತ್ಯ, ಅಹಿಂಸೆ, ದಯಾ, ದಾನ ಇತ್ಯಾದಿ) ಯಾರಿಗೂ choice ಇಲ್ಲ. ಪ್ರತಿಯೊಬ್ಬನೂ, ಅವುಗಳನ್ನು ಅನುಸರಿಸಿ, ತನ್ನನ್ನು ಉತ್ತಮನಾಗಿಸಿಕೊಳ್ಳಬೇಕು. ಈ ಉತ್ತಮನಾಗಿಸಿಕೊಳ್ಳುವ ಮಾರ್ಗದಲ್ಲಿ ವಿಶೇಷ ಧರ್ಮಗಳು ಸಹಾಯಕವಾಗಿರಬೇಕೆಂಬುದೇ ನಮ್ಮ ಧರ್ಮ. ಎಲ್ಲರೂ ಸತ್ಯತೆಯನ್ನು ಅಭ್ಯಾಸ ಮಾಡುವವರೇ. ಮಾಡುವ ರೀತಿಯಲ್ಲಿ ವ್ಯತ್ಯಾಸ ಇರಬಹುದು. ಆದರೆ ಧ್ಯೇಯ ಒಂದೇ.

ನಾನು ಮೊನ್ನೆ ಬೆಂಗಳೂರಿನಿಂದ (13,14 ಬೆಂಗಳೂರಿಗೆ ಹೋಗಿದ್ದೆ. ಯಾರ ಮನೆಯಲ್ಲಿಯೋ ರುದ್ರಹೋಮ ಮಾಡಬೇಕಾಗಿತ್ತು) ಬಂದಾಗ ಈ ಊರಿನಲ್ಲಿ ಮಳೆಗೋಸ್ಕರ ಕಾರೀರೀಷ್ಟಿ ನಡೆಯುತ್ತಿತ್ತು. ಅದು ನಮ್ಮ ವೇದಗಳಲ್ಲಿ ಹೇಳಿರುವ ನೂರಾರು ಕಾಮ್ಯೇಷ್ಟಿಗಳಲ್ಲಿ ಒಂದು. ನಾನಾ ವಿಧವಾದ ಐಹಿಕ, ಆಮುಷ್ಮಿಕ ಫಲಗಳನ್ನು ಕೊಡುವ ವೇದೋಕ್ತ ಇಷ್ಟಿಗಳಿಗೆ ಕಾಮ್ಯೇಷ್ಟಿಗಳೆಂದು ಹೆಸರು. ಅವೆಲ್ಲಾ ಕೊಡುತ್ತವೆಯೋ ಅಂದರೆ, ಖಂಡಿತ ಇಲ್ಲ. ಒಂದಕ್ಕೊಂದು ಕಾರ್ಯಕಾರಣ ಭಾವವೇ ಇಲ್ಲ. ಯಾವುದೋ ಕಾರ್ಯಮಾಡಿ, ಮತ್ಯಾವುದೋ ಫಲವನ್ನು ಹೊಂದುತ್ತೇವೆಂದು ಹೇಳುವುದು ನಗೆಗೇಡಾಗುತ್ತದೆ. ವೇದ ಹಾಗೆ ಎಂದಿಗೂ ಹೇಳುವುದಿಲ್ಲ, ಮತ್ತೆ ಹೇಳಿದೆಯಲ್ಲ ಅಂದರೆ "ರೋಚನಾರ್ಥಾ ಫಲಶ್ರುತಿಃ" (ಕರ್ಮದಲ್ಲಿ ರುಚಿ ಉಂಟು ಮಾಡುವುದಕ್ಕೋಸ್ಕರ ಫಲಶ್ರುತಿಗಳು) ಎಂದು ಸ್ಪಷ್ಟವಾಗಿ ವ್ಯಾಸರು ಭಾಗವತದಲ್ಲಿಯೇ ಹೇಳುತ್ತಿದ್ದಾರೆ. ಹೇಗಾದರೂ ಮಾಡಿ, ಪ್ರತಿಯೊಬ್ಬನನ್ನೂ ವೇದೋಪನಿಷತ್ತುಗಳ ಕಡೆಗೆ ಎಳೆದು, ಅವನಿಗೆ ಆತ್ಮಜ್ಞಾನದಲ್ಲಿ ಕುತೂಹಲವನ್ನು ಹುಟ್ಟಿಸಿ, ಆ ಮಾರ್ಗದಲ್ಲಿ ಹೋಗುವಂತೆ ಮಾಡುವುದೇ ಮಹರ್ಷಿಗಳ ಉದ್ದೇಶ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನೂ ಶ್ರಮವಿಲ್ಲದೆ ಐಹಿಕ ಫಲಗಳು ಬರಬೇಕೆಂದು ಅಪೇಕ್ಷಿಸುತ್ತಾನೆ. ಆ ಸ್ವಭಾವವನ್ನು ಮಹರ್ಷಿಗಳು exploit ಮಾಡಿದ್ದಾರೆ. ಅವನಿಗೆ ಇಷ್ಟವಾದ ಫಲಗಳನ್ನು (ಕೆಲವು ಅಸಾಧ್ಯವಾದ ಫಲಗಳು!) ಕೊಡುತ್ತೇವೆಂದು ಆಸೆ ತೋರಿಸಿ, ಕರ್ಮ ಮಾಡಲು ಹಚ್ಚುತ್ತಾರೆ. ಅದನ್ನು ಮಾಡುವಾಗ, ಆ ಮಂತ್ರಾರ್ಥಗಳು, ತತ್ತ್ವಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾನೆ. ಹಾಗೆ ಅರ್ಥ ಮಾಡಿಕೊಂಡ ಮೇಲೆ, ಆ ಕರ್ಮಕ್ಕೂ ಅಲ್ಲಿ ಹೇಳಿರುವ ಫಲಕ್ಕೂ ಒಂದಕ್ಕೊಂದು ಸಂಬಂಧವಿಲ್ಲವೆಂದು ತಿಳಿದುಕೊಂಡು ಅದರ ಆಸೆಯನ್ನು ಬಿಟ್ಟು, ಕರ್ಮಾಚರಣೆಯಿಂದ ಉಂಟಾಗುವ ಮಾನಸಿಕ ಬೆಳವಣಿಗೆಯನ್ನು ಪಡೆದುಕೊಳ್ಳುತ್ತಾನೆ. ಇದೇ ಅವರುಗಳ ಉದಾತ್ತ ಧ್ಯೇಯ. ಈ

ದೃಷ್ಟಿಯಿಂದಲೇ ಎಲ್ಲಾ ಕಾಮ್ಯೇಷ್ಟಿಗಳೂ ಹೊರಟಿವೆ. ಅವುಗಳ ಪೈಕಿ ಕಾರೀರೀಷ್ಟಿಯೂ ಒಂದು. ಆ ಕಾಲದಲ್ಲಿ ಮಹರ್ಷಿಗಳಿಗೆ ಮಳೆಯ ಮೇಲೆ ತಮ್ಮ ಅಧಿಕಾರ ಈಷದಪಿ ಇಲ್ಲ (ಈಗಲೂ ಇಲ್ಲ!) ಎನ್ನುವುದು ಚೆನ್ನಾಗಿ ಗೊತ್ತಿತ್ತು. ಆದರೆ ಸಕಾಲದಲ್ಲಿ ಮಳೆಯೂ ಬೇಕಾಗಿತ್ತು. ಮಳೆಯನ್ನು ಸುರಿಸಲು ಕಾರಣ ಭೂತವಾದ ಶಕ್ತಿಯು ಅದೃಷ್ಟವಾದುದರಿಂದ, ಅವರುಗಳಿಗೆ ಪ್ರಾರ್ಥನೆ ಮಾಡುವುದೊಂದು ಬಿಟ್ಟು ಬೇರೇನೂ ಮಾರ್ಗ ಕಾಣಿಸಲಿಲ್ಲ. ಆ ಪ್ರಾರ್ಥನೆಯನ್ನು ಕ್ರಿಯಾರೂಪವಾಗಿ ವ್ಯಕ್ತ ಪಡಿಸುವುದೇ ಕಾರೀರೀಷ್ಟಿ. ಕೇವಲ ಪ್ರಾರ್ಥನೆಯಿಂದಲೇ ಯಾವ ಕಾರ್ಯವೂ ಸಾಧ್ಯವಿಲ್ಲವೆಂಬುದು ಸರ್ವವಿದಿತವಾದ ಸಂಗತಿ. ಆದರೂ, ಅಸಹಾಯಕರಾದಾಗ, ನಮಗೆ ಪ್ರಾರ್ಥನೆ ಬಿಟ್ಟರೆ ಬೇರೆ ಗತಿಯಿಲ್ಲ. ಪ್ರಾರ್ಥನೆ ಮಾಡಿದ ಮೇಲೆ ಒಂದು ವಿಚಿತ್ರವಾದ ಸಮಾಧಾನ ಸಿಗುತ್ತದೆ. ಪ್ರಾಯಃ ನಾವು ನಿರೀಕ್ಷಿಸಿದ್ದು ನೆರವೇರದಿದ್ದರೆ ಆಗುವ ನಿರಾಶೆಯನ್ನು ಭರಿಸುವ ಧೈರ್ಯವನ್ನು ಕೊಡುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

ಈ ಕಾರೀರೀಷ್ಟಿಯಲ್ಲಿ ಯಜಮಾನನೂ ಕಪ್ಪು ವಸ್ತ್ರ ಧಾರಣಮಾಡುತ್ತಾನೆ. ಅದಕ್ಕೆ ವೇದವು ಅರ್ಥವಾದ ರೂಪದಲ್ಲಿ ಒಂದು ವಿಚಿತ್ರ explanation ಕೊಡುತ್ತದೆ. "ಮಳೆ ಬರುವಾಗ ಕಪ್ಪು ಮೋಡಗಳಿಂದ ಸೂರ್ಯನು ಆಚ್ಛಾದಿತನಾಗಿ ಕತ್ತಲೆಯಾಗುತ್ತದೆ. ಆಂದರೆ ಎಲ್ಲಾ ಕಪ್ಪಾಗಿ ಕಾಣಿಸುತ್ತದೆ. ಅದರಿಂದ ಬರುವ ಮಳೆಯೂ ಕೃಷ್ಣರೂಪ (ಕಪ್ಪು). ಆದ್ದರಿಂದ ಯಜಮಾನನು ಕೃಷ್ಣರೂಪವಾದ ಮಳೆಯನ್ನು symbolic ಆಗಿ represent ಮಾಡುವುದಕ್ಕೋಸ್ಕರ ಕಪ್ಪುವಸ್ತ್ರ ಧಾರಣೆ ಮಾಡಿದರೆ, ಕೃಷ್ಣರೂಪವಾದ ಮಳೆಯನ್ನು ತರಿಸಲು ಸಮರ್ಥನಾಗುತ್ತಾನೆ" ಎಂದು. ಇದು ಸ್ವಲ್ಪ ವಿಚಿತ್ರವಾಗಿಯೇ ಇದೆ. ವೇದದ ಪೂರಾ ಇಂಥಾ ವಿಚಿತ್ರವಾದ ಅರ್ಥವಾದಗಳು ಬೇಕಾದಷ್ಟಿವೆ. ಅದಕ್ಕೆ ಅವುಗಳಿಗೆ ಪ್ರಾಮಾಣ್ಯವನ್ನು ಕೊಡಬೇಕಾದ ಅಗತ್ಯವಿಲ್ಲವೆಂದು ವೇದಾಂತ ಮತ್ತು ಮೀಮಾಂಸಾಸಿದ್ಧಾಂತ.

ವೇದದಲ್ಲಿ ಹೇಳಿರುವುದು ಅರ್ಥವಾದ! (ಪ್ರಮಾಣವಲ್ಲ). ಅದನ್ನು ಪ್ರಮಾಣವಾಗಿಟ್ಟುಕೊಂಡು ಇನ್ನೂ ಮುಂದೆ ಹೋಗಿ ಕಪ್ಪುವಸ್ತ್ರದಿಂದ, ಕಪ್ಪುಮೋಡಗಳು ಆಕರ್ಷಿತವಾಗುತ್ತವೆ ಎಂದು ಹೇಳುವುದು ಹೆಡ್ಡತನವೆಂದೇ ಹೇಳಬೇಕು. ನಾನು ಉಡುವ ಕಪ್ಪು ವಸ್ತ್ರಕ್ಕೂ ಕಪ್ಪು ಮೇಘಕ್ಕೂ ಏನು ಸಂಬಂಧ? ಆಗ ಶಬರಿಮಲೆಯಲ್ಲಿ ಯಾವಾಗಲೂ ಮಳೆ ಸುರಿಯಬೇಕು ! Mourning ಮಾಡುವವರ ಮೇಲೆ ಮಳೆ ಬರುತ್ತಿರಬೇಕು !! ವೇದವೇ ಹೇಳಿದರೂ, ಪ್ರತ್ಯಕ್ಷಕ್ಕೆ ವಿರೋಧವಾದದ್ದನ್ನು ಯಾರೂ ಒಪ್ಪಬೇಕಾದ್ದಿಲ್ಲ ಎನ್ನುವುದೇ ನಮ್ಮ ಸಿದ್ಧಾಂತ. ಪ್ರತ್ಯಕ್ಷಕ್ಕೆ ಅಷ್ಟು ಮರ್ಯಾದೆ (ನಾವು ಕಣ್ಣಿನಲ್ಲಿ ನೋಡುತ್ತಿರುವುದೂ ಎಲ್ಲಾ ಮಿಥ್ಯೆ, ಮಾಯೆ ಎನ್ನುವ ಮಾತು ಜ್ಞಾನಿಗೆ!!). "ನ ಹಿ ದೃಷ್ಟೇ ಅನುಪಪನ್ನಂ ನಾಮ" (ಪ್ರತ್ಯಕ್ಷ ವಿಷಯದಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ) ಎಂಬುದು ಸಿದ್ಧಾಂತ. ಆದ್ದರಿಂದ ಹೀಗೇ ಏನೇನೋ ಹೇಳಿ ವೇದಕ್ಕೆ ಅಪಚಾರ ಮಾಡುತ್ತಿದ್ದೇವೆ ಎಂದೇ ನನ್ನ ಅಭಿಪ್ರಾಯ.

ಮನೆ ಕಟ್ಟಬೇಕಾದ್ದಕ್ಕೆ ಮಾಡಬೇಕಾದ ಗುದ್ದಲಿಪೂಜೆ ಇವುಗಳನ್ನು ಯಾವ ಸೂತ್ರಕಾರರೂ ಹೇಳಿಲ್ಲ. ರೂಢಿಯಲ್ಲಿ ಬಂದಿದೆ. ಯಾವ ಕೆಲಸ ಮಾಡಬೇಕಾದರೂ ಆರಂಭದಲ್ಲಿ ಮಾಡುವ ಗಣಪತಿ ಪೂಜೆಯಂತೆ! (ಅಲ್ಲಿ ಮಾಡುವುದೂ ಗಣಪತಿ ಪೂಜೆಯೇ!). ಮನೆ ಕಟ್ಟುವ ಕಾರ್ಯ ನಿರ್ವಿಘ್ನವಾಗಿ ನೆರವೇರಲಿ ಎಂದು ಪ್ರಾರ್ಥಿಸಿ ಪೂಜೆಮಾಡುವುದೇ ಗುದ್ದಲಿಪೂಜೆ. ಬೇರೇನೂ ವಿಶೇಷವಿಲ್ಲ. ಮನೆ ಕಟ್ಟುವ ಜಾಗದಲ್ಲಿ ಎಲ್ಲಿ ಬೇಕಾದರೂ ಮಾಡಬಹುದು. Contractor ನ್ನು ಕೇಳಿ ಮಾಡಿಬಿಟ್ಟರಾಯಿತು. ಅದಕ್ಕೆ ಶಾಸ್ತ್ರ ಏನೂ ಇಲ್ಲ.

ನನ್ನ ಸೋದರಮಾವನ ಮಗ ನನಗೆ ಪರಿಚಯವುಂಟು. ಹೆಚ್ಚಿಲ್ಲ, ಗಂಡ, ಹೆಂಡತಿ ಯೋಗ್ಯರು ಎಂದಿಷ್ಟು ಹೇಳಬಲ್ಲೆ. ಬಹಳ ಬಡತನದಿಂದ, ಕಷ್ಟಪಟ್ಟು ಮುಂದೆ ಬಂದಿರುವವರು. ಅವನ ಮಗ C.A. ಮಾಡಿ ಕೆಲಸದಲ್ಲಿದ್ದಾನೆಂದು ಕೇಳಿದ್ದೇನೆ. ಈಗ ಅವನಿಗೆ 29 ವರ್ಷಗಳಿರಬೇಕು. ಬಾಕಿ ಹೆಚ್ಚು ವಿಷಯಗಳು ತಿಳಿಯದು. ಈಗಿನ ನಿಮ್ಮ ಹೊಸ ಬೀಗರೂ (Dalda Srinivasaiah) ನನ್ನ ಸೋದರಮಾವನ ಮಗನೂ ಬಹಳ ಸ್ನೇಹಿತರು. ಅವರನ್ನು ವಿಚಾರಿಸಿದರೆ ಸಂಪೂರ್ಣ ಮಾಹಿತಿ ಸಿಗಬಹುದು. ಅವರಲ್ಲಿಯೇ ಹೋಗಿ ವಿಚಾರಿಸಿಕೊಂಡು ಬರಬೇಕೆಂದರೆ ಹೋಗಿ ಬರುತ್ತೇನೆ. ಏನೂ ಕಷ್ಟವಿಲ್ಲ. ಅವರಮನೆಗೆ ಹೋಗಿ ಸುಮಾರು ವರ್ಷಗಳಾದುವು. ಇದೇ ಒಂದು ನೆಪ!

ನಿನ್ನ ಮಕ್ಕಳಿಬ್ಬರೂ, ನಿತ್ಯಕರ್ಮಗಳನ್ನು ತಪ್ಪದೆ ಮಾಡಿಕೊಂಡು ಬರುವುದನ್ನು ಕೇಳಿ ಬಹಳ ಸಂತೋಷವಾಯಿತು. ಕೃತಜ್ಞತಾ ಎಂಬ ದೊಡ್ಡ ಆತ್ಮಗುಣವನ್ನು ಅಭ್ಯಾಸಮಾಡಲು ಈ ನಿತ್ಯಕರ್ಮಗಳು ಅತ್ಯಂತ ಸಹಾಯಕವಾಗುತ್ತವೆ. ಆ ಗುಣ ಅವರಲ್ಲಿ ಚೆನ್ನಾಗಿ ಬೆಳೆಯಲಿ. ನಾವು ಉಪಕಾರ ಹೊಂದುತ್ತಿರುವ ಪ್ರತಿಯೊಂದು ವಸ್ತುವಿಗೂ, ಪ್ರಾಣಿಗೂ, ಮನುಷ್ಯನಿಗೂ, ಕೃತಜ್ಞತೆಯನ್ನು ತೋರಿಸುತ್ತಾ ಹೋಗುವುದೇ ಒಂದು ದೊಡ್ಡ ಸಾಧನೆ. ಅವೆಲ್ಲವನ್ನೂ ಸೃಷ್ಟಿಸಿರುವ ಪರಮಾತ್ಮನ ಕಡೆಗೆ ಆ ಕೃತಜ್ಞತೆಯೆಂಬುದು ತಿರುಗುತ್ತದೆ. ಅದು ಅವನ ಹತ್ತಿರ ಹೋಗಲು ಸಾಧಕವಾಗುತ್ತದೆ.

ನಿನ್ನ ಸ್ನೇಹಿತರೆಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸು. ಅವರೆಲ್ಲರನ್ನೂ ಪುನಃ ಸಂಧಿಸಬೇಕೆಂದು ಮನಸ್ಸು ತವಕಗೊಳ್ಳುತ್ತಿದೆ. ರಿಟೈರ್ ಆದಮೇಲೆ 6 ತಿಂಗಳ ಕಾಲ ಭದ್ರಾವತಿಯಲ್ಲಿಯೇ ಇದ್ದು ನಮ್ಮ ಜನಜೀವನಕ್ಕೆ ಅತ್ಯಂತ ಸಾಧಕವಾಗಿರುವ ಭಾಗವತ ಗ್ರಂಥವನ್ನು ವಿಸ್ತಾರವಾಗಿ ಹೇಳಬೇಕೆಂದು ಮನಸ್ಸು ಮಾಡಿದ್ದೇನೆ. ಹಾಗೆಯೇ ನಿಮ್ಮಗಳಿಗೆಲ್ಲಾ ಪ್ರಯೋಗವನ್ನು ಹೇಳಿಕೊಟ್ಟು ಸಾಮಾನ್ಯ ಪೂಜೆ, ವ್ರತ, ಶ್ರಾದ್ಧಾದಿಗಳನ್ನು ಮಾಡುವ, ಮಾಡಿಸುವ (with Conceptual understanding) ವಿಧಾನವನ್ನು ತಿಳಿಸಿಕೊಡಬೇಕೆಂದು ಮಾಡಿದ್ದೇನೆ. ನಾನು ಕಲಿತಿದ್ದಕ್ಕೆ ಸ್ವಲ್ಪವಾದರೂ ಸಾರ್ಥಕ್ಯ ಏರ್ಪಟ್ಟೀತು.

ನಿನ್ನ ಚಿ||ಗಳಿಗೆ, ನಿನ್ನ ಸೌ||ಗೆ ನನ್ನ ಅನಂತ ಆಶೀರ್ವಾದಗಳು.

ಇತಿ ನಿನ್ನವ

ಕುमारಸ್ವಾमी

೪೬೩

'ಅಭಯ', ಆಚಮನ, ಪ್ರಾಣಾಯಾಮ, ಉಪಾಕರ್ಮ

कुशलम् श्री : Madras

7.8.87

ಶ್ರೀಕಂಠ!

ನಿನ್ನ ಕಾಗದ ತಲಪಿತು. ನೀನು ಮದ್ರಾಸಿಗೆ ಬಂದೂ ಇಲ್ಲಿಗೆ ಬರದೆ ಇದ್ದುದು ನನಗೂ ನಿರಾಶೆಯನ್ನುಂಟುಮಾಡಿತು. ಆದರೆ ಚಿಂತೆಯಿಲ್ಲ, ಈ ತರಹ ಸಂದರ್ಭಗಳು ಎಷ್ಟೋ ಬಾರಿ ನನಗೂ ಆಗಿವೆ. ಕ್ಷಮಿಸುವ ಪ್ರಶ್ನೆ ಏನೂ ಇಲ್ಲ, ನಿನ್ನಿಂದ ಉತ್ತರ ಬರದೆ ಇದ್ದಾಗ ಕಾಗದ ತಲಪಿದೆಯೋ ಇಲ್ಲವೋ ಎಂಬ ಯೋಚನೆ. ತಲಪಿದ್ದರೂ ನಾನೇನಾದರೂ offensive ಆಗಿ ಬರೆದಿದ್ದೇನೋ ಎಂಬ ಯೋಚನೆ (ಕಾಗದ ಬರೆದ ಮೇಲೆ ಏನು ಬರೆದಿದ್ದೆ ಎನ್ನುವುದು ಸಾಮಾನ್ಯವಾಗಿ ಮರೆತು ಹೋಗಿರುತ್ತದೆ!). ಅಂತೂ ಹಾಗೇನಿಲ್ಲ ಎಂದು ತಿಳಿದು ಸಂತೋಷವಾಯಿತು.

1) ನೀನು ಬರೆದಿರುವ ವ್ಯಕ್ತಿಗಳಂತಹವರು ಸಾವಿರಾರು ಮಂದಿ ಇದ್ದಾರೆ. ಮನುಷ್ಯನಿಗೆ ಭಯವೆಂಬುದು ಸಹಜ. "ದ್ವಿತೀಯಾದ್ವೈ ಭಯಂ ಭವತಿ" ಎಂದು ಹೇಳುತ್ತದೆ ಉಪನಿಷತ್ತು. ಎರಡನೆಯದು ಎಂಬುದು ಇದ್ದರೇ ಭಯ. ಅದರಿಂದಲೇ ಪ್ರಪಂಚ ಬ್ರಹ್ಮವಸ್ತುವಿನ ವ್ಯಕ್ತಸ್ವರೂಪ. ಬ್ರಹ್ಮ ಒಂದು ಬಿಟ್ಟರೆ ಇನ್ನಾವುದೂ ಇಲ್ಲವೆಂಬುದೇ ಅದ್ವೈತವೇದಾಂತಸಿದ್ಧಾಂತ. ಆ ಸಿದ್ಧಾಂತವಿರಲಿ. ಸಾಮಾನ್ಯವಾಗಿ ನಮಗೆಲ್ಲಾ ಭಯವೆಂಬುದು ಅದೃಷ್ಟವಾದ ವಿಷಯಗಳಿಂದ ಉಂಟಾಗುತ್ತದೆ. ನಮಗೆ ಕಣ್ಣಿಗೆ ಗೋಚರವಾಗದ, ನಮಗಿಂತ ಶಕ್ತಿಶಾಲಿಯಾದ ಒಂದು ವಸ್ತುವಿನಿಂದ ನಮಗೆ ಏನು ಆಪತ್ತು ಬರಬಹುದೋ ಎಂಬುದರಲ್ಲಿಯೇ ಭಯ. ಅದಕ್ಕೇ ಗೀತೆಯಲ್ಲಿ ದೈವೀಸಂಪತ್ತುಗಳನ್ನು ಹೇಳುವ ಸಂದರ್ಭದಲ್ಲಿ (16 ನೇ ಅಧ್ಯಾಯ) ಮೊದಲನೆಯ ಗುಣವಾಗಿ 'ಅಭಯಂ' ಎಂದು ಹೇಳಿದರು. ನಮಗೆ ಕಣ್ಣಿಗೆ ಕಾಣುವ, ಗೊತ್ತಿರುವ ವ್ಯಕ್ತಿಯಿಂದಲೋ, ವಸ್ತುವಿನಿಂದಲೋ ಭಯ ಏರ್ಪಟ್ಟರೆ ಅದಕ್ಕೆ prevention ಮಾಡಿಕೊಳ್ಳಬಹುದು. ಮಾಡಿಕೊಳ್ಳುತ್ತೇವೆ. ಎದುರಿಸಿದಾಗ ಪರಿಹಾರವನ್ನೂ ಮಾಡಿಕೊಳ್ಳುತ್ತೇವೆ. ಒಂದು ವೇಳೆ ನಮಗೆ ಕಣ್ಣಿಗೆ ಕಾಣದಿದ್ದರೂ, ನೋಡಿದವರಿಂದ ತಿಳಿದುಕೊಂಡು ಪರಿಹಾರ ಮಾಡಿಕೊಳ್ಳಬಹುದು. ಆದರೆ ಕಣ್ಣಿಗೇ ಕಾಣದ, ಯಾವ ರೀತಿಯಲ್ಲಿಯೂ ತಿಳಿದುಕೊಳ್ಳಲು ಸಾಧ್ಯವಿಲ್ಲದ ವಸ್ತುವಿನಿಂದ ಆಪತ್ತು ಬರವುದೆಂದರೆ prevent ಮಾಡಿಕೊಳ್ಳಲಾರೆವು. ಪರಿಹಾರವನ್ನೂ ಮಾಡಿಕೊಳ್ಳಲಾರೆವು. ಈ ನವಗ್ರಹಗಳ, ಬೇರೆ ದೇವತೆಗಳ ಭಯ ಈ ಜಾತಿಗೆ ಸೇರಿದ್ದು. ಅದು ನಿವೃತ್ತಿಯಾಗಬೇಕಾದರೆ ನಮ್ಮ ವೇದಾಂತಸಿದ್ಧಾಂತ, ಕರ್ಮಸಿದ್ಧಾಂತಗಳಲ್ಲಿ ಪೂರ್ಣ ನಂಬಿಕೆ ಉಂಟಾದರೇ ಸಾಧ್ಯವೇ ಹೊರತು, ಇಲ್ಲದಿದ್ದರೆ ಇಲ್ಲ, ರುದ್ರಪಾರಾಯಣ, ಸಹಸ್ರನಾಮ ಪಾರಾಯಣಗಳಿಂದ ಆಂತರಂಗಿಕವಾದ ಭಯ ಹೋಗುವುದು ಸಾಧ್ಯವಿಲ್ಲ, ಅಲ್ಲಿಯೂ ಒಂದು ದೇವತೆಯ ಭಯವನ್ನು ನಿವಾರಿಸುವುದಕ್ಕೋಸ್ಕರ ಇನ್ನೊಂದು ತಿಳಿಯದ ದೇವತೆಗೆ ಶರಣು ಹೋಗುತ್ತಿದ್ದೇವೆ. ಈ ದೇವತೆಯು ಆ ದೇವತೆಯನ್ನು ಜಯಿಸಲು ಸಾಧ್ಯವೇ ಎಂಬ ಸಂದೇಹ ಬೇರೆ! ಅದಕ್ಕೇ ವೇದದಲ್ಲಿರುವ ದೇವತೆಗಳಿಗೆಲ್ಲಾ ಶರಣು ಹೋಗುತ್ತೇವೆ. ಅಲ್ಲಿಯೂ ಭಯವೇ! ಇವತ್ತು ರುದ್ರ ಮಾತ್ರ ಹೇಳಿದೆ, ಚಮಕ ಹೇಳಲು ಆಗಲಿಲ್ಲ, ರುದ್ರ ಏನು ಮಾಡುತ್ತಾನೋ! ವಿಷ್ಣು ಸಹಸ್ರನಾಮ ಮಾತ್ರ ಹೇಳಿದೆ, ಲಲಿತಾಸಹಸ್ರನಾಮ ಹೇಳಲು ಆಗಲಿಲ್ಲ ! ಲಲಿತೆ ಏನು ಮಾಡುತ್ತಾಳೋ! ಎಲ್ಲವನ್ನೂ ಹೇಳಿದೆ, ಪುರುಷಸೂಕ್ತ ಹೇಳಲಿಲ್ಲ! ಆ ಪುರುಷನು ಏನು ಶಿಕ್ಷಿಸುತ್ತಾನೋ. ಹೀಗೆ ಭಯನಿವೃತ್ತಿಗೋಸ್ಕರ ಆರಂಭಿಸಿದ ಕಾರ್ಯದಿಂದಲೇ ಹೊಸದಾದ ಭಯ ಆರಂಭವಾದರೆ, ನಮಗೆ ನಿರ್ಭಯತ್ವ ಬರುವುದು ಹೇಗೆ ?

ಅದಕ್ಕೇ "ಅಭಯಂ" ಎಂದರೆ ಶಾಸ್ತ್ರವಾಕ್ಯಗಳಲ್ಲಿ ಪೂರ್ಣ ನಂಬಿಕೆ ಇಡುವುದು ಎಂದೇ ಅರ್ಥ ಮಾಡಿದರು. ಅಪ್ಪಾ! ಇರುವ ದೇವತೆ ಒಂದೇ. ಅದೇ ನಿರಾಕಾರವಾದ, ನಿರ್ಗುಣವಾದ, ಸಚ್ಚಿದಾನಂದ ಸ್ವರೂಪವಾದ ಬ್ರಹ್ಮ. ಅದೇ ಆತ್ಮವಸ್ತುವಾಗಿ ಸಕಲಜೀವಿಗಳಲ್ಲಿಯೂ, ಪ್ರಕಾಶಿಸುತ್ತಾ, ಎಲ್ಲರ ಚಟುವಟಿಕೆಗಳಿಗೂ

ಕಾರಣಭೂತವಾಗಿ ಇದ್ದುಕೊಂಡಿದೆ. ಅದನ್ನು ತಿಳಿದುಕೊಳ್ಳುವುದು ಅತ್ಯವಶ್ಯ. ಆದರೆ ನಮ್ಮ ಇಂದ್ರಿಯಜನ್ಯವಾದ ಅಜ್ಞಾನದಿಂದ ತಿಳಿದುಕೊಳ್ಳಲು ಕಷ್ಟವಾಗಿದೆ. ಅದನ್ನು ತಿಳಿದು ಕೊಳ್ಳುವ ಸಾಧನೆಗೆ ಅನುಕೂಲವಾಗಲಿ ಎಂಬ ಬಹಳ ಉದಾತ್ತವಾದ ದೃಷ್ಟಿಯಿಂದ, ನಮಗೆ ಮಹರ್ಷಿಗಳು, ವೇದದಲ್ಲಿ, ಪುರಾಣಗಳಲ್ಲಿ ನಾನಾ ತರಹ ದೇವತೆಗಳನ್ನೂ, ಅವುಗಳಿಗೆ ರೂಪಗಳನ್ನೂ, ನಾಮಗಳನ್ನೂ ಸೃಷ್ಟಿಮಾಡಿಕೊಟ್ಟಿದ್ದಾರೆ. ಅವೆಲ್ಲವೂ ಆ ಪರಮಾತ್ಮವಸ್ತುವಿನ ಪ್ರತೀಕಗಳೇ (symbols) ಹೊರತು ವಾಸ್ತವವಲ್ಲ. ನಾಮರೂಪವಿಲ್ಲದಿರುವುದೇ ಪರಮಾತ್ಮನ ಸ್ವರೂಪ. ಇವತ್ತಿಗೂ "ನನ್ನ ಹೆಸರು" ಎಂದು ಹೇಳುತ್ತೇವೆಯೇ ಹೊರತು, "ನಾನು" ಎನ್ನುವುದಕ್ಕೆ ಹೆಸರಿಲ್ಲ. ಇಂಗ್ಲೀಷಿನಲ್ಲಿಯೂ , "My name is Kumaraswamy" ಎಂದು ಹೇಳುತ್ತೇವೆ. ಅಂದರೆ Kumaraswamy is different from that I ಎಂದಾಯಿತು. ಅದೇ ಆತ್ಮ ಸ್ವರೂಪ. ಆದರೆ ಎಷ್ಟೋ ಸಾರಿ ತಪ್ಪಿ "I am Kumaraswamy" ಎಂದು ಹೇಳುವುದೂ ಉಂಟು. ಅದೇ ಅಜ್ಞಾನ. ಲಲಿತಾಸಹಸ್ರನಾಮ ದಲ್ಲಿಯೂ ಅವಳನ್ನು "ನಾಮರೂಪವಿವರ್ಜಿತಾ" (ನಾಮ ರೂಪಗಳಿಲ್ಲದವಳು), ಮನೋವಾಚಾಮ್ ಅಗೋಚರಾ (ಮನಸ್ಸಿಗೂ, ವಾಕ್ಕಿಗೂ ಸಿಗದವಳು) ಎಂದು ಹೇಳುತ್ತೇವೆ. ಆದರೆ ಅಜ್ಞಾನದಿಂದ ಆವೃತವಾಗಿರುವ ನಮ್ಮ ಮನಸ್ಸಿಗೆ, ನಾಮರೂಪ ಗಳಿಲ್ಲದ ವಸ್ತುಗಳನ್ನು ಗ್ರಹಣ ಮಾಡುವುದು ಕಷ್ಟ ಸಾಧ್ಯವಾದು ದರಿಂದ ಸೌಕರ್ಯಾರ್ಥವಾಗಿ ಸಾವಿರಾರು ದೇವತೆಗಳು, ರೂಪಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಕ್ರೂರದೇವತೆಗಳು, ಕೆಲವು ಮಂಗಳಕರವಾದ ದೇವತೆಗಳು; ಕೆಲವು ಉಗ್ರ, ಕೆಲವು ಸೌಮ್ಯ – ಹೀಗೆ ನಾನಾ ತರಹ ಇವೆ. ಅವನವನ ರುಚಿಗೆ ತಕ್ಕಂತೆ, ಮನಸ್ಸಿನ level ಗೆ ತಕ್ಕಂತೆ ಯಾವುದೋ ಒಂದು ದೇವತೆಯನ್ನು ಹಿಡಿದು ಉಪಾಸನೆ ಮಾಡಿಕೊಂಡು ಬರಲಿ ಎನ್ನುವುದೇ ಉದ್ದೇಶ. ಆದರೆ ಅವುಗಳೇ ಪರಮಾತ್ಮನಲ್ಲ. ಅವುಗಳಿಗೆ ಅಸ್ತಿತ್ವವೂ ಇಲ್ಲ.

ಆದರೆ ನಾವೇನು ಮಾಡಿದ್ದೇವೆಂದರೆ, ಅವುಗಳೆಲ್ಲಕ್ಕೂ ವಾಸ್ತವತೆಯನ್ನು ಕಲ್ಪಿಸಿಕೊಂಡು, ನಮ್ಮ ಜೀವನದ ಪ್ರತಿಯೊಂದು ಆಗುಹೋಗುಗಳಿಗೂ ಅವುಗಳನ್ನು ಜವಾಬ್ದಾರಿ ಮಾಡಿ, ಒಂದರಿಂದ ಉಂಟಾದ ತೊಂದರೆಯನ್ನು (ಉಂಟಾಗಿದೆ ಎಂದು ನಾವು ಭಾವಿಸಿರುವ), ಇನ್ನೊಂದರಿಂದ ನಿವಾರಿಸಲು ಪ್ರಯತ್ನಿಸಿ, ಆಗದಿದ್ದಾಗ ಮತ್ತೊಂದು ದೇವತೆಯನ್ನು ಹಿಡಿದು, ಅದೂ ಆಗದಿದ್ದಾಗ ಮಗದೊಂದು ದೇವತೆಯನ್ನು ಹಿಡಿದು, ಏನೂ ಆಗದಿದ್ದಾಗ ಆ ದೇವತೆಗಳಿಗೆಲ್ಲಾ ಹಿಡಿಶಾಪ ಹಾಕಿ ಭಯದಿಂದಲೇ ಕಾಲಕಳೆಯುತ್ತಾ ನೆಮ್ಮದಿಯಿಲ್ಲದೆ ಬಾಳುತ್ತಿದ್ದೇವೆ. ಮೊದಲು ದೇವತೆ ಎಂದು ಹೇಳಿದ ಮೇಲೆ ಅವರು ಕ್ರೂರಿಗಳಾಗಿದ್ದಾರೆ ಎಂದು ಹೇಳುವುದೇ ಆಭಾಸವೆಂದೆನಿಸುತ್ತದೆ. ದೇವತಾತ್ವವನ್ನು ಸಂಪಾದನೆ ಮಾಡಿದ್ದಾರೆಂದರೆ ಎಲ್ಲರ ವಿಷಯದಲ್ಲಿಯೂ ಸದ್ಭಾವನೆ ಇಟ್ಟುಕೊಂಡಿದ್ದಾರೆಂದರ್ಥ. ತನಗಿಂತ ಅಶಕ್ತರಾಗಿರುವ ಮನುಷ್ಯರನ್ನು ದಂಡಿಸುವುದೇ ಕೆಲಸವಾದರೆ, ಅವನನ್ನು ದೇವತೆ ಎಂದು ಕರೆಯುವುದು ಹೇಗೆ! ಅದೂ ಒಬ್ಬರಿಗೆ ಒಳ್ಳೆಯದು, ಇನ್ನೊಬ್ಬನಿಗೆ ಕೆಟ್ಟದ್ದು ಮಾಡುವುದು ದೇವತಾತ್ವದ ಲಕ್ಷಣವೇ ! ಪ್ರಾರ್ಥನೆ ಮಾಡಿದವರಿಗೆ ಮಾತ್ರ ಒಳ್ಳೆಯದನ್ನು ಮಾಡುವುದು, ಮಿಕ್ಕವರನ್ನು ದಂಡಿಸುವುದಾದರೆ, ಅವನು ದೇವತೆ ಹೇಗಾದಾನು! ಸಾಮಾನ್ಯವಾಗಿ ನಾವು ನಮ್ಮ ದೊಡ್ಡ ಅಧಿಕಾರಿಗಳಲ್ಲಿಯೇ ನಿಷ್ಪಕ್ಷಪಾತ ಬುದ್ಧಿಯನ್ನು ಅಪೇಕ್ಷಿಸುತ್ತೇವೆ. ಹೀಗಿರುವಾಗ ದೇವತಾತ್ವವನ್ನು ಪಡೆದವನು ಇಷ್ಟೊಂದು ಪಕ್ಷಪಾತ ಬುದ್ಧಿಯಿಂದ ವರ್ತಿಸಬಹುದೇ!

ಹಾಗಾದರೆ ಲೋಕದಲ್ಲಿ ವ್ಯತ್ಯಾಸ ಕಾಣುತ್ತಿದೆಯಲ್ಲಾ ಅಂದರೆ, ಅದೇ ನಮ್ಮ ಕರ್ಮಸಿದ್ಧಾಂತ. ಪ್ರತಿಯೊಬ್ಬನೂ ಅವನವನು ಮಾಡಿದ್ದನ್ನು ಅವನು ಅನುಭವಿಸುತ್ತಾನೆ. "What one sows he reaps", "Good actions bring good results and bad actions bring bad results". ಇದು ಪ್ರತಿಯೊಬ್ಬರೂ ಒಪ್ಪಬೇಕಾದ ಮಾತು. ಲೋಕದಲ್ಲಿಯೂ ನಮ್ಮ ಅನುಭವಕ್ಕೆ ಗೊತ್ತಾಗುತ್ತಿದೆ. ಆದರೆ ಕೆಲವು ಕಾರ್ಯಗಳಿಗೆ ಫಲವು ಕಾಣಿಸುತ್ತಿಲ್ಲವಲ್ಲಾ ಎಂದರೆ, ನಮಗೆ correlate ಮಾಡಲು ಬರದಿರಬಹುದು. ಅಥವಾ ಮುಂದಿನ ಜನ್ಮಗಳಲ್ಲಾಗಬಹುದು. ಮತ್ತೆ ಗೊತ್ತಾಗದಿದ್ದರೆ ಏನು ಪ್ರಯೋಜನ ಎಂದು ಕೇಳಬಹುದು. ಗೊತ್ತಾಗಬೇಕಾದ ಅಗತ್ಯವೇ ಇಲ್ಲ. ಏನು ಕೆಲಸ ಮಾಡಿದರೂ ಅದಕ್ಕೆ ತಕ್ಕ ಫಲವನ್ನು (ಅದು ಏನಾದರೂ ಆಗಲಿ) ಅನುಭವಿಸುತ್ತೇನೆ ಎಂಬ ದೃಢವಾದ ಜ್ಞಾನವಿದ್ದರೆ ಸಾಕು. ನಾವು ಯಾವುದೋ ಒಂದು ವಿಧವಾದ ಕಷ್ಟವನ್ನು ಅನುಭವಿಸುತ್ತಿದ್ದೇವೆ. ಎಂದರೆ (ಅದು ಸಾಂಸಾರಿಕವೇ ಆಗಲಿ, ಸಾಮಾಜಿಕವೇ ಆಗಲಿ, ವ್ಯಕ್ತಿಗೆ ಸಂಬಂಧಪಟ್ಟದ್ದೇ ಆಗಲಿ, ದೈಹಿಕವೇ ಆಗಲಿ, ಮಾನಸಿಕವೇ ಆಗಲಿ) ಅದು ನಾವು ಮಾಡಿದ ಕರ್ಮಗಳ ಫಲವೇ ಎಂದು ನಿಶ್ಚಯಜ್ಞಾನ ಮನಸ್ಸಿಗೆ ಬಂದುಬಿಟ್ಟರೆ, ಆ ಕಷ್ಟವನ್ನು ಅನುಭವಿಸಲು ವಿಚಿತ್ರವಾದ ಮಾನಸಿಕ ಧೈರ್ಯ ಬರುತ್ತದೆ. ಅದು ಬಿಟ್ಟು 3rd person (ಅನ್ಯದೇವತೆಗಳು)ನ್ನು ಜವಾಬ್ದಾರಿ ಮಾಡಿದರೆ, ಭಯ ಬರಲು ಶುರುವಾಗುತ್ತದೆ. 'ಅವನಿಂದ' ಎಂಬ ಭಯ ಬಂದು ಬಿಟ್ಟರೆ, ಅವನನ್ನು ತೃಪ್ತಿಪಡಿಸಲು ಹೋಗುತ್ತೇವೆ. ನಮ್ಮ ಕಷ್ಟ

ನಿವೃತ್ತಿಯಾಗುವುದಿಲ್ಲ. ಇನ್ನೂ ಹೆಚ್ಚು ತೃಪ್ತಿಪಡಿಸಲು ಪ್ರಯತ್ನಪಡುತ್ತೇವೆ. ಆಗುವುದಿಲ್ಲ, ಆಗ ಅವನಿಗಿಂತ powerful ಆಗಿರುವ ದೇವತೆಯನ್ನು ಹುಡುಕಲು ಹೋಗುತ್ತೇವೆ. ಹೀಗೆಯೇ ಅನವಸ್ಥಾ ಪ್ರಸಂಗ. ಹೀಗೆ ಅದೃಷ್ಟವಾದ, ಅಗೋಚರವಾದ ಯಾವುದೋ ದೇವತೆಯ ಮೇಲೆ ಹಾಕಿ, ಇನ್ನೂ ಭಯವನ್ನು ಹೆಚ್ಚು ಮಾಡಿಕೊಳ್ಳುವುದಕ್ಕಿಂತ, ನಾನು ಮಾಡಿದ್ದನ್ನು ನಾನು ಅನುಭವಿಸುತ್ತಿದ್ದೇನೆ. ಅದಕ್ಕೆ ಬೇರೆ ಯಾರೂ ಹೊಣೆಯಲ್ಲ ಎಂಬುದು ಖಚಿತವಾಗಿಬಿಟ್ಟರೆ ಮನಸ್ಸು ನೆಮ್ಮದಿಯಾಗುತ್ತದೆ. ಹಾಗೆಂದು ಕಷ್ಟದ quantity ಕಮ್ಮಿಯಾಗುತ್ತದೆಂದಲ್ಲ. ಮನಸ್ಸಿನ ಮೇಲೆ ಅದರ ಪರಿಣಾಮ ಬಹಳಮಟ್ಟಿಗೆ ಕಮ್ಮಿಯಾಗುತ್ತದೆ. ತಾನು ಮಾಡಿರಬಹುದಾದ ಅಕಾರ್ಯವನ್ನು (ಅದು ಯಾವುದೇ ಆಗಲಿ) (ಈ ಜನ್ಮದಲ್ಲಿಯೋ, ಹಿಂದಿನ ಜನ್ಮದಲ್ಲಿಯೋ) ನೆನೆಸಿಕೊಂಡು, ತನ್ನಷ್ಟಕ್ಕೆ ತಾನೇ ನಗುತ್ತಾನೆ. ಇನ್ನುಮೇಲಾದರೂ ಅಕಾರ್ಯಗಳನ್ನು ಮಾಡದೆ ಇರೋಣ ಎಂದು positive ಆಗಿ ಯೋಚಿಸುತ್ತಾನೆ. ಹೀಗೆ ಅದೇ ಕಷ್ಟಗಳನ್ನು ನಗುನಗುತ್ತಾ ಎದುರಿಸುತ್ತಾನೆ. ಇದೇ ಮಾನಸಿಕ ನೆಮ್ಮದಿ, ಶಾಂತಿ.

ಇದು ಬಿಟ್ಟು ಸೂರ್ಯಮಂಡಲದಲ್ಲಿ ತಮ್ಮ ಪಾಡಿಗೆ ತಾವು ತಿರುಗುತ್ತಿರುವ ಯಾವುದೋ ಗ್ರಹಗಳನ್ನು ನಮ್ಮ ಕಷ್ಟಗಳಿಗೆ ಹೊಣೆ ಮಾಡಿದರೆ ಆಗುವ ಪ್ರಯೋಜನವೇನು! ಆ ಗ್ರಹಗಳಿಂದ ಏನಾದರೂ ಸಂಭವಿಸುವುದಾದರೆ ಅದು ಇಡೀ ಪ್ರಪಂಚಕ್ಕೆ ಆಗಬೇಡವೇ! ರೇಖಾಂಶ ಅಕ್ಷಾಂಶಗಳಿಂದ ಪರಿಣಾಮ ಅಲ್ಪ ಸ್ವಲ್ಪ ವ್ಯತ್ಯಾಸವಾಗಬಹುದು. ಆದರೆ ಒಂದೇ ಜಾಗದಲ್ಲಿರುವ ವ್ಯಕ್ತಿಗಳಲ್ಲಿ ಕೆಲವರಿಗೆ ಮಾತ್ರ ಪರಿಣಾಮ, ಮತ್ತೊಬ್ಬರಿಗಿಲ್ಲ ಎಂದು ಹೇಳುವುದನ್ನು ಯಾರೂ ನಂಬಲೂ ಸಾಧ್ಯವಿಲ್ಲ. Coincidence ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅದೇ ಕಾರಣವಾಗುತ್ತದೆಂದು ಹೇಳುವುದು ನಮ್ಮ ಸಿದ್ಧಾಂತಕ್ಕೇ ವಿರೋಧ (apart from being unscientific). ನಾವು ಮಾಡಿದ ಕರ್ಮಫಲವನ್ನು ವ್ಯತ್ಯಾಸ ಮಾಡಲು ಆ ಪರಮಾತ್ಮನಿಗೇ ಸಾಧ್ಯವಿಲ್ಲ (ಅಂದರೆ ಅವನು ಮಾಡುವುದಿಲ್ಲ ವೆಂದರ್ಥ) ಎಂದಾಗ ಅವನಿಂದ ಸೃಷ್ಟಿಯಾಗಿ ಅವನ ಆಜ್ಞೆಯಂತೆ ತಿರುಗಿಕೊಂಡಿರುವ, ಈ ಗ್ರಹಗಳಿಗೆ ಸಾಧ್ಯವೆ! ಸಾಮುದ್ರಿಕಾ ಶಾಸ್ತ್ರದಲ್ಲಿ ನಮ್ಮ ಹಸ್ತರೇಖೆಗಳನ್ನು ನೋಡಿ, ಫಲಗಳನ್ನು ಹೇಳುತ್ತಾರೆ. ಹಾಗೆಂದು ನಮ್ಮ ಕಷ್ಟ ಸುಖಗಳಿಗೆ ಈ ರೇಖೆಗಳನ್ನು ಕಾರಣವೆಂದು ಹೇಳಬಹುದೇ ! ಅದೂ Coincidental. ದೈಹಿಕ ಅವಯವಗಳ, ಲಕ್ಷಣ ಪರಿಣಾಮಗಳೂ ಕೂಡ, ಕರ್ಮಫಲವನ್ನು ಸೂಚಿಸುತ್ತವೆ. ನಮ್ಮ ಜೀವನದ ಯಾವ ಯಾವ ಕಾಲಗಳಲ್ಲಿ ಆ ಫಲವನ್ನು ಅನುಭವಿಸುತ್ತೇವೆ ಎಂದು ಅವು ಸೂಚಿಸಬಹುದೇ ಹೊರತು ಆ ಫಲವನ್ನು ವ್ಯತ್ಯಾಸಮಾಡಲು ಬರುವುದಿಲ್ಲ ಅಲ್ಲವೆ! ಸೃಷ್ಟಿಯಲ್ಲಿ ಎಲ್ಲಾ ಕಾರ್ಯಗಳಲ್ಲಿಯೂ ಒಂದೇ regular pattern ಇರುವುದರಿಂದ, ನಮ್ಮ ಜನ್ಮಕ್ಕೂ ಗ್ರಹಗಳು ಇರುವ ರೀತಿಗೂ ಒಂದು correlation ಇರಬಹುದು. ಅವುಗಳಿಂದ ನಮ್ಮ ಕರ್ಮಫಲಗಳು, ವಾಸನೆಗಳು ಈ ರೀತಿ ಇರಬಹುದು ಎಂದು ಊಹಿಸಬಹುದು. ಎಲ್ಲಾ ಸಮಯದಲ್ಲಿಯೂ, ಎಲ್ಲಾ Details ನಲ್ಲಿಯೂ ಆ Coincidence ಸರಿಯಾಗುತ್ತದೆ ಎಂದು ಹೇಳಲು ಬರುವುದಿಲ್ಲ. Statistics ನ ಹಣೇಬರಹವೇ ಇಂಥಾದ್ದು.

ಆದ್ದರಿಂದ ಏಳುರಾಟೆ ಶನಿಕಾಟದಲ್ಲಿ ನಾವು ಕಷ್ಟವನ್ನು ಅನುಭವಿಸಿದೆವು ಎಂದರೆ, ಯಾವುದೋ ನಾವು ಮಾಡಿದ ಅಕಾರ್ಯದ ಫಲ ಆ ಸಮಯದಲ್ಲಿ ಅನುಭವಿಸಬೇಕಾಗಿತ್ತು ಎಂದರ್ಥವೇ ಹೊರತು ಆ ಕಷ್ಟವು ಶನಿಯಿಂದ ಉಂಟಾದದ್ದು ಎಂದು ಹೇಳಬಾರದು. ಏಳುರಾಟೆ ಶನಿಕಾಟದಲ್ಲಿಯೂ ಯಾವ ವಿಧವಾದ ಕಷ್ಟವನ್ನೂ ಅನುಭವಿಸದೆ ಇರುವವರು ಸಾವಿರಾರು ಮಂದಿ ಇದ್ದಾರೆ. ಜತೆಗೆ ಕಷ್ಟ ಎಂದರೆ ಯಾವುದು ಎನ್ನುವುದರ ಮೇಲೆ ಹೋಗುತ್ತದೆ. ಏಕೆಂದರೆ ಕಷ್ಟಾನುಭವ ಎನ್ನುವುದು ಮಾನಸಿಕ. ಇತರರಿಗೆ ನನ್ನನ್ನು ನೋಡಿ ಕಷ್ಟಪಡುತ್ತಿದ್ದಾನೆ ಎನ್ನಿಸಬಹುದು. ಆದರೆ ನನಗೆ ಶುದ್ಧವಾದ ನೆಮ್ಮದಿ ಇರಬಹುದು. ಉದಾಹರಣೆಗೆ ಸುಮನ ವಿವಾಹ ನಿಶ್ಚಯವಾಗಿ ಮೂರು ಸಲ ನಿಂತಿತು. ನನಗೆ ತಿಳಿದ ಅನೇಕರು "ಅಯ್ಯೋ! ನಿಮಗೆ ಇಂಥಾ ಕಷ್ಟ ಪ್ರಾಪ್ತವಾಯಿತಲ್ಲಾ" ಎಂದು ನನ್ನ ಹತ್ತಿರದಲ್ಲಿಯೇ ಬಂದು ಅನುಕಂಪ ತೋರಿಸಿದ್ದಾರೆ. ಆದರೆ ನಿನಗೆ ವಾಸ್ತವವಾಗಿ ಹೇಳುವುದಾದರೆ ನನಗೆ ಈಷದಪಿ ಮನಸ್ಸಿಗೆ ಶ್ರಮ ಆಗಿಲ್ಲ. ಏಕೆಂದರೆ ವಿವಾಹ ನಿಂತುಹೋದ ಕಾರಣಗಳು ಧಾರ್ಮಿಕ, ನ್ಯಾಯ ಎಂಬುದು ಖಚಿತವಾಗಿರುವುದರಿಂದ ಯಾವ ವಿಧವಾದ ಕಷ್ಟವೂ ಮನಸ್ಸಿಗೆ ಆಗಿಲ್ಲ.... ಇತರರಿಗೆ ನಾನೇನೋ ಕಷ್ಟಪಡುವುದಾಗಿ ಕಾಣಿಸಿದರೂ ನನಗೆ ಖಂಡಿತ ಕಷ್ಟವಾಗಿಲ್ಲ, ಸಂತೋಷವಾಗಿಯೇ ಇದ್ದೇನೆ. ಹಾಗೆ ವಿವಾಹ ನಿಲ್ಲುವುದೂ ನಮ್ಮ ಒಂದು ಕರ್ಮದ ಫಲ ಎಂದಾದ ಮೇಲೆ consequenceಗಳನ್ನು ಸಂತೋಷವಾಗಿಯೇ ಅನುಭವಿಸೋಣ.

ಹೀಗೆ ಕಷ್ಟಪಡುವುದು ಎಂದರೆ ಏನೆಂದು ಹೇಳಬೇಕಾಗುತ್ತದೆ. ವ್ಯಾಧಿಗಳು ಬರಬಹುದು. ಅವೆಲ್ಲಾ ದೇಹಕ್ಕೆ ಸಂಬಂಧಪಟ್ಟವು. ದೇಹಕ್ಕೆ ಅಪಚಾರ ಮಾಡಿಕೊಳ್ಳದೆ ವ್ಯಾಧಿ ಬರುವುದಿಲ್ಲ. ಕೆಲವು hereditaryಯಾಗಿ ಬರುಹುದು. ಮೊದಲಿನಿಂದ ಇಲ್ಲದೆ ಇದ್ದುದು 40 ವರ್ಷಗಳ ಮೇಲೆ ಕಾಣಿಸಿಕೊಳ್ಳಬಹುದು. ಅದಕ್ಕೆ ಶನಿ

ಜವಾಬ್ದಾರಿಯೋ ಏಳುರಾಟೆ ಜವಾಬ್ದಾರಿಯೋ ! ನಮ್ಮ ಜನ್ಮ ಜವಾಬ್ದಾರಿ. ಅದೂ ನಾವು ಮಾಡಿದ ಕರ್ಮಫಲವೇ! ಹಾಗೆಂದು ಕೈ ಕಟ್ಟಿ ಕೂತುಕೊಳ್ಳುವುದೆಂದರ್ಥವಲ್ಲ, ದೈಹಿಕವಾದರೆ ಅದಕ್ಕೆ ತಕ್ಕ ಪರಿಹಾರ ಮಾಡಿಕೊಳ್ಳಬೇಕು. ಆಗುವ ಕಷ್ಟವನ್ನು ಕಮ್ಮಿ ಮಾಡಿಕೊಳ್ಳಬೇಕು. ಮಾನಸಿಕವಾದರೆ, ನಮ್ಮ ಸಿದ್ಧಾಂತದಲ್ಲಿ ಪೂರ್ಣನಂಬಿಕೆ ಇಟ್ಟು ಧೈರ್ಯವಾಗಿ, ನಗುನಗುತ್ತಾ, ಬಂದ ಕಷ್ಟಗಳನ್ನು ಎದುರಿಸಬೇಕು (We have to face the problems,squarely and smilingly). ಇಲ್ಲಿಯೇ ನಮಗೆ ನ್ಯಾಯವಾಗಿ ಜ್ಯೋತಿಷ್ಯ ಅಥವಾ ಸಾಮುದ್ರಿಕಾಶಾಸ್ತ್ರ ಸಹಾಯ ಮಾಡಬೇಕಾದ್ದು. ಇಂಥಾ ಕಾಲದಲ್ಲಿ ನಾವು ನಮ್ಮ ಕರ್ಮಫಲದ ಕಷ್ಟಗಳನ್ನು ಅನುಭವಿಸಬೇಕೆಂಬುದು ಪೂರ್ವಭಾವಿಯಾಗಿ ತಿಳಿದರೆ, ಅವುಗಳನ್ನು ಎದುರಿಸಲು ನಾವು ಸಿದ್ಧತೆ ಮಾಡಿಕೊಳ್ಳಬೇಡವೇ (ಮನಸ್ಸನ್ನು)! We should gear ourselves to face the troubles with double the vigour when we know them. ಹಳ್ಳವಿದೆ ಎಂದು ಗೊತ್ತಿದ್ದು, ಅದನ್ನು ತಪ್ಪಿಸಿಕೊಳ್ಳಲು ಹೋಗಿ ಬಿದ್ದರೂ ಪೆಟ್ಟಾಗುತ್ತದೆ. ತಿಳಿಯದೆ ಅಕಸ್ಮಾತ್ ಹೋಗಿಬಿದ್ದರೂ ಪೆಟ್ಟಾಗುತ್ತದೆ. ಆದರೆ ಎರಡನೆಯದರಲ್ಲಿ mental shock ಜಾಸ್ತಿಯಾಗಿ ಪೆಟ್ಟಿನ ನೋವು ಜಾಸ್ತಿಯಾದಂತೆ ಕಾಣುತ್ತದೆ. ಹಾಗೆ ಮುಂದಿನ ಕಷ್ಟ ತಿಳಿದರೆ, ಅದರ forceನ್ನು ಕಮ್ಮಿ ಮಾಡಿಕೊಳ್ಳಬಹುದಲ್ಲವೆ! ಅದು ದೇವತೆಯನ್ನು ಪೂಜೆ ಮಾಡುವುದರಿಂದ ಅಲ್ಲ, ಮನಸ್ಸನ್ನು ದೃಢ ಮಾಡಿಕೊಳ್ಳುವುದರಿಂದ. ಆದರೆ ಈಗೇನಾಗುತ್ತಿದೆ ! ಈ ಜ್ಯೋತಿಷ್ಯವನ್ನು ಕೇಳಿ 10 ವರ್ಷಗಳ ಮೇಲೆ ಬರಬಹುದಾದ ಕಂಟಕಕ್ಕೆ ಇವತ್ತಿನಿಂದಲೇ ಭಯಪಟ್ಟು ಸಾಯುತ್ತೇವೆ–preparation ಮಾಡಿಕೊಳ್ಳುವುದಿರಲಿ!

ಆದ್ದರಿಂದ ನಿನ್ನ ಸ್ನೇಹಿತರಿಗೆ ಹೇಳು. ಭಯಕ್ಕೆ ಯಾವ ಕಾರಣವೂ ಇಲ್ಲ, ಯಾವ ಶನಿಯೂ, ಯಾವ ಶುಕ್ರನೂ ಏನೂ ಮಾಡುವುದಿಲ್ಲ. ಧಾರ್ಮಿಕವಾದ ನಿತ್ಯಕರ್ತವ್ಯಗಳನ್ನೂ, ಪರೋಪಕಾರಾದಿಗಳನ್ನೂ ಮಾಡಿಕೊಂಡಿರುವಾಗ ಭಯವೇತಕ್ಕೆ! ಅವರು ಮಾಡುವ ಪಾರಾಯಣಾದಿಗಳನ್ನು ಮಾಡಲಿ. ಆದರೆ ಭಯನಿವೃತ್ತಿಗೆಂದು ಬೇಡ. ಆತ್ಮಸಂತೋಷಕ್ಕೆ. ಸಂತೋಷವಾಗಬೇಕಾದರೆ ಅವೆಲ್ಲವನ್ನೂ ಅರ್ಥಸಹಿತವಾಗಿ ಮಾಡಬೇಕು. ಕೇವಲ ಶಬ್ದೋಚ್ಚಾರಣೆಯಿಂದ ಮಾನಸಿಕ ಭಯ ನಿವೃತ್ತಿಯಾಗುವುದಿಲ್ಲ, ಮನಸ್ಸಿಗೆ ನೆಮ್ಮದಿಯೂ ಸಿಗುವುದಿಲ್ಲ, ಆ ರೀತಿ ಶಬ್ದೋಚ್ಚಾರಣೆ ಮಾಡುವ stage ನಿನ್ನ ರವಿಗೆ, ವೆಂಕಟೇಶನಿಗೆ! ಅವರೂ ಸ್ವಲ್ಪ ವಯಸ್ಸಾದಮೇಲೆ, ಅವುಗಳ ಅರ್ಥ, ಏತಕ್ಕೆ ಮಾಡಬೇಕು ಎನ್ನುವುದನ್ನು ತಿಳಿದು ಮಾಡದಿದ್ದರೆ ಖಂಡಿತವಾಗಿ ದಂಡ. ಪುರುಷಸೂಕ್ತ ಒಂದನ್ನೇ ತಾತ್ಪರ್ಯ ತಿಳಿದುಕೊಂಡು ಹೇಳಿದರೆ, ಮನಸ್ಸಿಗೆ ಆ ಮಹಾ ವಿರಾಟ್‌ಪುರುಷನ ಸ್ವರೂಪ ವಿಶದವಾಗಿ, ನೆಮ್ಮದಿಯುಂಟಾಗುತ್ತದೆ. ಲಲಿತಾ ಸಹಸ್ರನಾಮದ ನಾಮಗಳನ್ನು ಅರ್ಥವತ್ತಾಗಿ ಉಚ್ಚರಿಸಿದರೆ ನೆಮ್ಮದಿ. ಅಲ್ಲಿಯೂ 'ಪೂರ್ತಿ ಹೇಳಬೇಕು, ಹೇಳದಿದ್ದರೆ ಏನೋ ಆಗುತ್ತದೆ' ಎಂಬ ಭಯ ಹೋಗಬೇಕು. ಯಾವ ದೇವತೆಯೂ ನಮ್ಮನ್ನು ಕೊಲ್ಲುವುದಕ್ಕೇ ಸೊಂಟ ಕಟ್ಟಿ ನಿಂತಿಲ್ಲ. ರಾಮಾಯಣದ ಶ್ಲೋಕಗಳನ್ನು ಅರ್ಥವತ್ತಾಗಿ (ಎಷ್ಟಾಗುತ್ತೋ ಅಷ್ಟು) ಪಾರಾಯಣ ಮಾಡಿದರೆ ಮಾನಸಿಕ ನೆಮ್ಮದಿ ಸಿಗುತ್ತದೆ. ಯಾವುದೋ ಕರ್ಮದ ಫಲ ಮನಸ್ಸಿಗೆ ಸ್ವಲ್ಪ ವಿಕ್ಷೇಪವನ್ನುಂಟು ಮಾಡಿರಬಹುದು. ಅದನ್ನು ಎದುರಿಸಲು ನಾವು ಮೊದಲಿನಿಂದಲೂ ಮನಸ್ಸನ್ನು prepare ಮಾಡಿಕೊಳ್ಳಬೇಕು. ಅದಾಗಿಲ್ಲ, ಕೇವಲ ಪಾರಾಯಣ (ಶಬ್ದೋಚ್ಚಾರಣೆ) ದಿಂದ (ಅದು 24 ಘಂಟೆ ಮಾಡಿದರೂ) ಮಾನಸಿಕ preparation ಆಗಲು ಸಾಧ್ಯವಿಲ್ಲ. ತತ್ತ್ವವನ್ನು ತಿಳಿದು, ಮಾಡುವ ಕಾರ್ಯದಲ್ಲಿ ಉದ್ದೇಶ, ತಾತ್ಪರ್ಯಗಳನ್ನು ತಿಳಿದು ಮಾಡಿದರೇ ಮನಸ್ಸಿಗೆ ಸಂಸ್ಕಾರವಾದೀತು.

2) ಆಚಮನ, ಪ್ರಾಣಾಯಾಮಾದಿಗಳು, ಶುದ್ಧಿಗೋಸ್ಕರ ಮಾಡುವಂಥವು. ಎಲ್ಲೆಲ್ಲಿ ಹೊಸದಾದ ಒಂದು ಕರ್ಮವನ್ನು ಆರಂಭಿಸುತ್ತೇವೆಯೋ ಆಗ ಪ್ರಾಣಾಯಾಮ. ಉದಾಹರಣೆಗೆ ಅರ್ಘ್ಯಪ್ರದಾನ ಮಾಡುವಾಗ, ಜಪ ಆರಂಭಿಸುವಾಗ, ಉಪಸ್ಥಾನಮಾಡುವಾಗ. ಹಾಗೆಯೇ 'ಅಗ್ನಿಶ್ಚ...' ಇವನ್ನು ಹೇಳಿ ನೀರು ಕುಡಿದಾಗ ಪಾಪಪರಿಹಾರವಾಯಿತು, ಶುದ್ಧರಾದೆವು ಎಂಬ ಭಾವನೆಗೋಸ್ಕರ ಆಚಮನ. "ದ್ರುಪದಾದಿವ ಮುಂಚತು" ಎಂದು ನೀರನ್ನು ಮೂಸಿಬಿಡುವುದು (ಅದು ನೀರನ್ನು ಮೂಸುವುದಲ್ಲ, ಪಾಪವು ನಮ್ಮ ನಿಶ್ವಾಸ ರೂಪದಲ್ಲಿ ಹೋಯಿತು ಎಂಬುದನ್ನು symbolic ಆಗಿ ನೀರಿನ ಮೇಲೆ "ಹ್ಞು" ಎಂದು ಜೋರಾಗಿ ಉಸಿರುಬಿಟ್ಟು ಪಾಪರೂಪವಾದ ಆ ನೀರನ್ನು ಬಿಸಾಡಬೇಕು) ಪಾಪ ಪರಿಹಾರವಾದದ್ದು. ಆಪೋಹಿಷ್ಠಾ, ಸೂರ್ಯಶ್ಚ, ಇವುಗಳೆರಡೇ ಸಾಕು ಎಂದು ನಾನು ಅಷ್ಟಕ್ಕೇ ನಿಲ್ಲಿಸಿದ್ದೆ. ಅನವಶ್ಯವಾಗಿ ಲಂಬಿಸಿ, ಮಕ್ಕಳಿಗೆ ಮಾನಸಿಕ ಶ್ರಮವಾಗಬಾರದೆಂಬ ಉದ್ದೇಶ ಅಷ್ಟೆ. ಕೇಶವ, ನಾರಾಯಣಾದಿಗಳಿಗೆ ತರ್ಪಣ ಅನವಶ್ಯಕ ಎಂದೇ ನನ್ನ ಭಾವನೆ. ಮಾಡಿದರೆ ತಪ್ಪೇನಿಲ್ಲ, ಪ್ರಯಾಣದಲ್ಲಿ ಮಾನಸಿಕವಾಗಿ ಹೇಗಿದ್ದರೂ ಧಾರಾಳವಾಗಿ ಮಾಡಬಹುದು. ಆದರೆ ಅದನ್ನೇ ಬೇರೆ ಸಮಯದಲ್ಲಿಯೂ licence ಆಗಿ ತೆಗೆದುಕೊಳ್ಳಬಾರದೆಂಬುದೇ ಉದ್ದೇಶ.

3) ಉಪಾಕರ್ಮವೆಂಬುದು, ಕೇವಲ ವೇದಾಧ್ಯಯನ ಆರಂಭ ಮಾಡಲು ನಾವು ಮೊದಲು ಮಹರ್ಷಿಗಳಿಗೆ ಸಲ್ಲಿಸುವ ಕೃತಜ್ಞತಾ ದ್ಯೋತಕವಾದ ಒಂದು ಕರ್ಮ. ವೇದವೆಂಬ ನಿಧಿಯನ್ನು ನಮಗೆ ಕೊಟ್ಟು ನಮ್ಮನ್ನು ಪೂರ್ಣಮನುಷ್ಯರಾಗಿ evolve ಆಗಲು ದಾರಿ ತೋರಿಸಿಕೊಟ್ಟಿರುವ ಆ ಪ್ರಾತಃಸ್ಮರಣೀಯರಾದ ಮಹರ್ಷಿಗಳನ್ನು ಸ್ಮರಿಸಿಕೊಂಡು, ಅವರಿಗೆ ತರ್ಪಣ, ಪೂಜೆ, ಹೋಮಗಳನ್ನು ಶ್ರದ್ಧೆಯಿಂದ ಮಾಡಿ, ಅವರು ನಮಗೆ ಕೊಟ್ಟಿರುವ ವೇದದ ಕೆಲವು ಭಾಗಗಳನ್ನು ಆಚಾರ್ಯರ ಮೂಲಕ ಹೇಳಿಸಿಕೊಳ್ಳುವುದೇ ಅಧ್ಯಾಯೋಪಾಕರ್ಮ. ಇದನ್ನು ಆಪಸ್ತಂಬರು "ಶ್ರಾವಣ್ಯಾಂ ಪೌರ್ಣಮಾಸ್ಯಾಮ್ ಅಧ್ಯಾಯೋಪಾಕೃತ್ಯ" ಎಂದೇ ಹೇಳುತ್ತಾರೆ. ಸೂತ್ರಕಾರರು ಹೇಳಿದ ಮೇಲೆ ಮಿಕ್ಕದ್ದೆಲ್ಲಾ ನಮಗೆ ಅನಗತ್ಯ (irrelevant). ಶುಕ್ರಾಸ್ತ ಕರ್ಕಾಟಕಮಾಸ ಇವೆಲ್ಲಾ Incidental. ಅವುಗಳಿಗೂ ವೇದಾಧ್ಯಯನಾರಂಭಕ್ಕೂ ಯಾವ ಸಂಬಂಧವೂ ಇಲ್ಲ. ಅಕಸ್ಮಾತ್ ಬೇರೆ ಕಾರಣಗಳಿಂದ ಅವತ್ತು ಆರಂಭಿಸಲು ಆಗಲಿಲ್ಲವೆಂದರೆ (ದೇಹಾಲಸ್ಯ, ಆಶೌಚ ಇತ್ಯಾದಿ), ಆಷಾಢ ಶುದ್ಧ ಪೂರ್ಣಿಮೆಯಲ್ಲಿಯೋ, ಭಾದ್ರಪದಶುದ್ಧ ಪೂರ್ಣಿಮೆಯಲ್ಲಿಯೋ ಆರಂಭಿಸಬೇಕು. ಇಷ್ಟು ಹೇಳಬಹುದು. ಈಗ ನಾವು ಯಾರೂ, ಅಧ್ಯಯನ ಆರಂಭಕ್ಕೆ ಹೊರಟಿಲ್ಲ, ಮಾಡದಿದ್ದರೂ ಚಿಂತೆಯಿಲ್ಲ, ವೇದೋಪನಿಷತ್ತುಗಳೆಂಬ ಅದ್ಭುತವಾದ ಗ್ರಂಥರಾಶಿಯನ್ನು ಕೊಟ್ಟಿರುವ ಆ ಮಹರ್ಷಿಗಳಿಗೆ ನಮ್ಮ ಕೃತಜ್ಞತೆಯನ್ನು ತೋರಿಸುವಷ್ಟಾದರೂ ನಾವು ಮನುಷ್ಯತ್ವವನ್ನು ಕಾಪಾಡಿಕೊಳ್ಳಬೇಕು. ಅದಕ್ಕೆ ಶ್ರಾವಣ ಪೌರ್ಣಮಾಸೀ ಎಂದು ಸೂತ್ರಕಾರರು ಹೇಳಿದರು. ಮುಗಿಯಿತು. ಅವತ್ತೇ ಮಾಡುವುದು. ಅದಕ್ಕೆ ಇಲ್ಲದೆ ಇದ್ದ ಗಲಾಟೆ ಮಾಡಿಕೊಂಡು, ಉಪಾಕರ್ಮವನ್ನೇ ನಿಲ್ಲಿಸುವುದು ಮೂರ್ಖತನ, ಕೃತಘ್ನತೆ ಎಂದೇ ನನ್ನ ಅಭಿಪ್ರಾಯ. ಅವತ್ತು ಯಜ್ಞೋಪವೀತ ಹಾಕಿಕೊಳ್ಳುವುದೂ ಕೇವಲ ಶುದ್ಧಿ ಕರ್ಮ– ಹೊಸದಾಗಿ ಸ್ಕೂಲಿಗೆ ಹೋಗುವ ವಿದ್ಯಾರ್ಥಿಯನ್ನು ನೂತನ ವಸ್ತ್ರಗಳಿಂದ ಅಲಂಕರಿಸಿದಂತೆ. ಆದರೆ ಸುಮಾರು ಜನ ಹೊಸ ಜನಿವಾರ ಮನೇಲೆ ಹಾಕಿಕೊಂಡುಬಿಟ್ಟೆ ಎಂದು ಉಪಾಕರ್ಮ ಪೂರ್ತಿ ಮಾಡಿಕೊಂಡ ಚರಿತಾರ್ಥತೆಯನ್ನು ಭ್ರಮೆಯಿಂದ ಹೇಳುತ್ತಾರೆ. ಅದೊಂದು ನಮ್ಮ ದಡ್ಡತನ. ಚಿ|| ಗಳಿಗೆಲ್ಲಾ ಆಶೀರ್ವಾದಗಳನ್ನು ಹೇಳು. ಮುಂದಿನ ಸಾರಿ ಬಂದಾಗ ಅವರಿಗೆ ಸಂಧ್ಯಾವಂದನೆಯ ಅರ್ಥತಾತ್ಪರ್ಯಗಳನ್ನು ಹೇಳುತ್ತೇನೆಂದು ಹೇಳು.

ಇತಿ ನಿನ್ನವ

ಕುಮಾರಸ್ವಾಮಿ

೪೬೪

ದೈವೀಸಂಪದ್ಗುಣಗಳು ; ವಿಕಾಸ

कुशलम् श्री : Madras

20.10.87

ಶ್ರೀಕಂಠ !

ನಿನ್ನ ಕಾಗದ ಬಂದಾಗ ನಾನು ಬೆಂಗಳೂರಿಗೆ ಹೋಗಿದ್ದೆ. ಸುರೇಶನ ಮನೆಯಲ್ಲಿ, ಮಂಜು ಮನೆಯಲ್ಲಿ ಮಹಾಲಯ ಶ್ರಾದ್ಧವನ್ನು ಮಾಡಿದರು. ಅದಕ್ಕೋಸ್ಕರ ಮಾಡಿಸಲು ಹೋಗಿದ್ದೆ. ಬಂದ ಮೇಲೆ ಕಾಗದ ಓದಿದೆ. ಸಂತೋಷವಾಯಿತು. ನೀನು ಮತ್ತು ನಿನ್ನ ಸ್ನೇಹಿತರು ಕೇಳಿರುವ ಪ್ರಶ್ನೆ ಬಹಳ ಸಾಧು ಮತ್ತು fundamental. ಅವುಗಳನ್ನು ಕುರಿತು ಸ್ವಲ್ಪ ದೀರ್ಘವಾಗಿಯೇ ಬರೆಯಬೇಕೆಂದಿದ್ದೇನೆ. ಅದು retire ಆದಮೇಲೇ ಸಾಧ್ಯ ಅಂತ ಕಾಣುತ್ತೆ. ಸದ್ಯಕ್ಕೆ ಇಷ್ಟು ಹೇಳಬಲ್ಲೆ. ವೇದಗಳೇ ಆಗಲಿ, ಉಪನಿಷತ್ತುಗಳೇ ಆಗಲಿ ಸೂತ್ರಕಾರರೇ ಆಗಲಿ, ಆಮೇಲೆ ಬಂದ ನಮ್ಮ ಹಿರಿಯರೇ ಆಗಲಿ ನಿಯಮಗಳನ್ನು ಹಾಕಿಕೊಟ್ಟಿದ್ದರೂ ಅದು ಸದುದ್ದೇಶದಿಂದ ಇರಬೇಕು. ನಾವು ವೇದಗಳಿಗೂ, ಉಪನಿಷತ್ತುಗಳಿಗೂ ಸೂತ್ರಕಾರರಿಗೂ ಮರ್ಯಾದೆ ಕೊಡುವ ಕಾರಣ, ಅವರ ನಿಃಸ್ವಾರ್ಥ ಸ್ವಭಾವ. ಕೇವಲ ಜನೋಪಕಾರಕ್ಕೋಸ್ಕರ ಕಷ್ಟಪಟ್ಟು, ತುಂಬಾ ಯೋಚನೆ ಮಾಡಿ ಮಾಡಿರುವ ನಿಯಮಗಳು ನಮಗೆ ವಂದ್ಯ, ಗ್ರಾಹ್ಯ. ಅವರೂ perfect individuals ಅಲ್ಲ. ಅವರೂ ಕೆಲವು ಕಡೆ ಮುಗ್ಗರಿಸಿರಬಹುದು. ಆದರೆ ಅವರಾದ ಮೇಲೆ ಬಂದವರಲ್ಲಿ imperfection ಹೆಚ್ಚಾಗಿದ್ದುದರಿಂದ ವಿಪರೀತವಾಗಿ ಮುಗ್ಗರಿಸಿದ್ದಾರೆ. ಆದ್ದರಿಂದ ಅವುಗಳನ್ನು ಗ್ರಹಣ ಮಾಡುವಾಗ ಬಹಳ ಯೋಚನೆ ಮಾಡಬೇಕಾಗಿದೆ.

ಅವರು ನಮಗೆ ಹಾಕಿಕೊಟ್ಟಿರುವ ನಿಯಮಗಳಲ್ಲಿ, ಹೇಳಿರುವ ವಿಷಯಗಳಲ್ಲಿ ವಂದ್ಯ ಯಾವುದು, ಗ್ರಾಹ್ಯ ಯಾವುದು, ಅವರು ಮುಗ್ಗರಿಸಿರುವುದೆಲ್ಲಿ ಎಂದು ನಾವುಗಳು ಕಂಡು ಹಿಡಿಯುವುದು ಹೇಗೆ ಎಂಬ ಮೂಲಭೂತವಾದ ಪ್ರಶ್ನೆ ಏಳಬಹುದು. ಅದಕ್ಕೇನೂ ಕಷ್ಟವಿಲ್ಲ. ವೇದ, ಉಪನಿಷತ್ತುಗಳು, ಸೂತ್ರಕಾರರು ಎಲ್ಲರೂ ಒಂದೇ ಗುರಿಯನ್ನಿಟ್ಟುಕೊಂಡು ಹೊರಟಿದ್ದಾರೆ. "ಆತ್ಮಾವಾ ಅರೇ ದ್ರಷ್ಟವ್ಯಃ, ಶ್ರೋತವ್ಯಃ, ಮಂತವ್ಯಃ ನಿದಿಧ್ಯಾಸಿತವ್ಯಃ" ಎಂಬುದೇ ಎಲ್ಲರ ಉದ್ದೇಶ. ಅಂದರೆ ಪ್ರತಿಯೊಬ್ಬನೂ ಆತ್ಮದರ್ಶನವನ್ನು ಮಾಡಿಕೊಳ್ಳಬೇಕು. ಅದಕ್ಕೆ ಶ್ರವಣ ಮನನ, ನಿದಿಧ್ಯಾಸನಗಳು ಅವಶ್ಯ ಎಂದು ಹೇಳಿದರು. ಈ ಶ್ರವಣದ ಮೊದಲನೇ ಹಂತವನ್ನು ಮನುಷ್ಯನು ಹೊಂದಬೇಕಾದರೆ ಅವನಿಗೆ ಅಪಾರವಾದ ಸಿದ್ಧತೆ

ಬೇಕು. ಅವೇ ವಿವೇಕವೈರಾಗ್ಯಾದಿಗಳು, ಆತ್ಮಗುಣಗಳು. ಆತ್ಮದರ್ಶನವೆಂಬುದು ಮನುಷ್ಯನ perfect evolution ಎಂದು ಹೇಳಬಹುದು. Man becomes a perfect individual. ಕೇವಲ ಭಾರತದಲ್ಲಿಯೇ ಅಲ್ಲ ಇಡೀ ಪ್ರಪಂಚದಲ್ಲಿ ಪ್ರತಿಯೊಬ್ಬ ಮನುಷ್ಯನೂ ತನ್ನನ್ನು ತಾನೇ evolve (ವಿಕಾಸ) ಮಾಡಿಕೊಳ್ಳುತ್ತಾ ಹೋಗಬೇಕು. ಒಂದೇ ಕಡೆ ನಾರಬಾರದು ಎನ್ನುವುದನ್ನು ಒಪ್ಪುತ್ತಾರೆ. ಆದರೆ ಈ perfect evolution ಗೆ ಸಾಧನಗಳೇನು ಎಂದು ವಿಚಾರಿಸಿದರೆ ಪುನಃ ವಿವೇಕ, ವೈರಾಗ್ಯಾದಿಗಳು, ಆತ್ಮಗುಣಗಳಿಗೆ ಬರಬೇಕಾಗುತ್ತದೆ. ಅವುಗಳನ್ನು ಅಭ್ಯಾಸ ಮಾಡುವುದೇ ಮನುಷ್ಯನ ಮುಖ್ಯ ಗುರಿಯಾಗಬೇಕು. ನಾನು ಸಾಮಾನ್ಯವಾಗಿ ಗೀತೆಯ 16ನೇ ಅಧ್ಯಾಯದಲ್ಲಿ ಹೇಳಿರುವ ಅಭಯಂ ಸತ್ವಸಂಶುದ್ಧಿಃ ಜ್ಞಾನಯೋಗವ್ಯವಸ್ಥಿತಿಃ। ದಾನಂ, ದಮಶ್ಚ ಯಜ್ಞಶ್ಚ, ಸ್ವಾಧ್ಯಾಯಃ, ತಪಃ, ಆರ್ಜವಮ್..., ಇತ್ಯಾದಿ 26 ಗುಣಗಳನ್ನು ಸಂಪಾದಿಸುವುದೇ ಮನುಷ್ಯನ perfection ಗೆ ಸಾಧನವೆಂದಿಟ್ಟುಕೊಂಡಿದ್ದೇನೆ. ಬಾಕಿ ಎಲ್ಲಾ ಧರ್ಮಗಳನ್ನೂ ಇವುಗಳಲ್ಲೇ ಅಡಗಿಸಬಹುದು. ಅಥವಾ ಇವುಗಳನ್ನೇ ಹ್ರಸ್ವ ಮಾಡಿ ಗೌತಮರಂತೆ 8 ಆತ್ಮಗುಣಗಳಾಗಿ ಹೇಳಬಹುದು. ಹೇಗಾದರೂ ಆಗಲಿ. ನಮ್ಮ ಸಾಂಸ್ಕೃತಿಕ ಉನ್ನತಿಗೆ ಇವುಗಳ ಅಭ್ಯಾಸ ಅತ್ಯಗತ್ಯ. ಈ ಗುಣಗಳು ಒಂದು ವರ್ಣಕ್ಕೆ ಮೀಸಲಲ್ಲ, ಒಂದು ಆಶ್ರಮಕ್ಕೆ ಮೀಸಲಲ್ಲ, ಒಂದು ದೇಶಕ್ಕೆ ಮೀಸಲಲ್ಲ, ಎಲ್ಲವೂ ಲೋಕ ವಂದ್ಯವಾದ ಗುಣಗಳು. ಆ ಗುಣಗಳಿಗೆ ಗೌರವ ಕೊಡದಿದ್ದವನು ನಿಂದ್ಯನಾಗುತ್ತಾನೆಯೇ ಹೊರತು, ಆ ಗುಣಗಳ ಲೋಕವಂದ್ಯತೆ ನಷ್ಟವಾಗುವುದಿಲ್ಲ.

ಸ್ವಭಾವವಾಗಿ ದೈವಸೃಷ್ಟಿಯಲ್ಲಿ ನಮ್ಮ ಮನಸ್ಸು ಇಂದ್ರಿಯಗಳು ಬಹಿರ್ಮುಖವಾಗಿಯೇ ಇರುವುದರಿಂದ ಈ ಗುಣಗಳು ಅವುಗಳ ಸ್ವಭಾವಕ್ಕೆ ವಿರುದ್ಧವಾಗಿಯೇ ಇವೆ. ಹೀಗಿರುವಾಗ ನಮ್ಮ ಸ್ವಭಾವಕ್ಕೆ ವಿರುದ್ಧವಾಗಿ ಯಾವುದಾದರೂ ಅಭ್ಯಾಸ ಮಾಡಬೇಕೆಂದರೆ ಕಷ್ಟಸಾಧ್ಯವೇ ! ಆದರೆ ಅವುಗಳ ಅಭ್ಯಾಸ ಅಗತ್ಯ. ಅದೇ ದೈವ ಸೃಷ್ಟಿಯಲ್ಲಿರುವ challenge! ಆ challenge ನ್ನು ನಾವು ಒಪ್ಪಿ ಸ್ವಪ್ರಯತ್ನದಿಂದ ಆ ಸದ್ಗುಣಗಳಿಗೆ ವಿಮುಖವಾಗಿರುವ ನಮ್ಮ ವಾಸನೆಗಳನ್ನು ಕಿತ್ತುಹಾಕಿ ಸದ್ವಾಸನೆಗಳನ್ನು ಬೆಳೆಸಿಕೊಂಡು ಆತ್ಮವಂತರಾಗಬೇಕು. ಕೆಲವರಿಗೆ ಪೂರ್ವಜನ್ಮಾಭ್ಯಾಸದಿಂದ ಕೆಲವು ಸದ್ಗುಣಗಳು ಸ್ವಭಾವವಾಗಿ ಬಂದಿರಬಹುದು. ಅವರು ಅವುಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಇಲ್ಲದಿರುವ ಗುಣಗಳನ್ನು ಅಭ್ಯಾಸ ಮಾಡಬೇಕು. ಕೆಲವರಿಗೆ ದುರದೃಷ್ಟವಶಾತ್ ಸದ್ಗುಣಗಳ ಸಂಪೂರ್ಣ ಅಭಾವವಿದ್ದು ಎಲ್ಲೋ ಯತ್ಕಿಂಚಿತ್ ಅಪರೂಪವಾಗಿ ಆವಿರ್ಭಾವವಾಗುತ್ತಿರಬಹುದು. ಅವರೂ ಹತಾಶರಾಗ ಬೇಕಾದ್ದಿಲ್ಲ. ಸ್ವಲ್ಪ ಹೆಚ್ಚು ಪ್ರಯತ್ನಪಡಬೇಕು.

ಈ ರೀತಿಯ ಮನುಷ್ಯಪ್ರಯತ್ನದಲ್ಲಿ ಯಾವುದಾದರೂ, ಯಾರದ್ದಾದರೂ ನಮಗೆ ಸಹಾಯ ಸಿಕ್ಕುವುದಾದರೆ ನಮ್ಮ ಕಾರ್ಯ ಸ್ವಲ್ಪ ಸುಗಮವಾಗಬಹುದು. ಅದೇ ವೇದ, ಉಪನಿಷತ್ತುಗಳ, ಸೂತ್ರಗಳ ಕೆಲಸ. ನಮಗೆ ನಾನಾ ತರಹ ಅಭ್ಯಾಸಗಳನ್ನು, ಕೆಲಸಗಳನ್ನು ಹೇಳಿಕೊಟ್ಟು ಕೇವಲ ಪ್ರವೃತ್ತಿಪರವಾಗಿಯೇ ಇರುವ ನಮ್ಮ ಇಂದ್ರಿಯಗಳನ್ನೂ, ಮನಸ್ಸನ್ನೂ ನಿವೃತ್ತಿಪರವಾಗಿ ತಿರುಗಿಸುವುದೇ ಅವುಗಳ ಉದ್ದೇಶ. ಹಾಗಿಲ್ಲದೆ ನಮ್ಮ ಇಂದ್ರಿಯ ಸ್ವಭಾವವಾದ ಗುಣಗಳನ್ನೇ ದೃಢೀಕರಿಸುವ ಸಾಧನಗಳನ್ನು ಹೇಳಿಕೊಡುವುದಾದರೆ ಅವುಗಳ ವೇದತ್ವವೇ ನಷ್ಟವಾದೀತು ! ಮನುಷ್ಯನಿಗೆ ಇವತ್ತು ಹಣ ಸಂಪಾದನೆ ಮಾಡುವುದನ್ನು ವೇದಗಳು ಹೇಳಿಕೊಡಬೇಕಾದ್ದಿಲ್ಲ, ಅದು ಸ್ವಭಾವ. ಅದರಿಂದ ನಿವೃತ್ತಿ ಹೇಗೆ ಎನ್ನುವುದನ್ನು ಹೇಳಿಕೊಡಬೇಕು. ಸ್ತ್ರೀಸುಖವನ್ನು ಪಡುವುದು ಹೇಗೆ ಎಂಬುದನ್ನು ವೇದಗಳು ಹೇಳಬೇಕಿಲ್ಲ. ಹಾಗೆಯೇ ಲೌಕಿಕ ಉಪಭೋಗಗಳನ್ನು ಹೊಂದುವುದು ಹೇಗೆ ಎನ್ನುವುದನ್ನು ಅವು ಹೇಳಿಕೊಡಬೇಕಾದ್ದಿಲ್ಲ. ಅವುಗಳಿಂದ ನಿವೃತ್ತಿಯನ್ನು ಹೇಳಿ ಕೊಡಬೇಕು. ಆಗಲೇ ಅವುಗಳಿಗೆ ವೇದತ್ವ, ಉಪನಿಷದತ್ವ. ಆಗಲೇ ನಮ್ಮ ಸೂತ್ರಕಾರರಿಗೆ ಮರ್ಯಾದೆ.

ಆದ್ದರಿಂದ ಯಾವುದು ಗ್ರಾಹ್ಯ, ಯಾವುದು ಅಗ್ರಾಹ್ಯ ಎನ್ನುವುದಕ್ಕೆ ನಮ್ಮ ಈ ದೈವೀಸಂಪದ್ಗುಣಗಳೇ ಒರೆಗಲ್ಲು. ಯಾವುದರಿಂದ ಆ ಗುಣಗಳು ಅಭಿವೃದ್ಧಿಯಾಗಲು ಸಾಧ್ಯವೋ ಅವು ಗ್ರಾಹ್ಯ. ಇಲ್ಲದಿದ್ದರೆ ಅಗ್ರಾಹ್ಯ. ಇದು ವೇದಗಳಿಗೇ ಅನ್ವಯಿಸುತ್ತದೆ. ಆದ್ದರಿಂದ ಮುಂದಿನವರ ವಿಷಯ ಹೇಳಬೇಕಾದ್ದೇ ಇಲ್ಲ. ಇನ್ನು ಅರ್ವಾಚೀನ ಸಂಪ್ರದಾಯಗಳನ್ನು ಅವಶ್ಯವಾಗಿ ಈ ಒರೆಗಲ್ಲಿನ ಮೇಲೆ ತಿಕ್ಕಿ ಪರೀಕ್ಷಿಸಬೇಕು. ನನಗೆ ತಿಳಿದಿರುವಂತೆ ಈಗ ನಾವು ಅನುಸರಿಸುತ್ತಿರುವ ಅಥವಾ ಅನುಸರಿಸಬೇಕೆಂದು ಹೇಳುತ್ತಿರುವ 95% ಸಂಪ್ರದಾಯಗಳು ಆ ದೈವೀಸಂಪದ್ಗುಣಾ ಭಿವೃದ್ಧಿಗೆ ವಿರೋಧವಾಗಿವೆ ಎಂದು ಧಾರಾಳವಾಗಿ ಹೇಳಬಹುದು. ನಮಗೆ ಅವುಗಳ ಉದ್ದೇಶ ಗೊತ್ತಿಲ್ಲ. ಹಿಂದಿನವರಿಗೆ ಗೊತ್ತಿತ್ತು ಎಂದು ಹೇಳುವುದಾದರೆ ಮಾಡಿದ್ದರಿಂದ ಪ್ರಯೋಜನವೇನು ? ನಮಗೆ ಉದ್ದೇಶ ತಿಳಿದರೆ ತಾನೇ ನಮ್ಮ evolution ಸಾಧ್ಯ ! ವೃಥಾ ಚೇಷ್ಟೆಗಳಿಂದ ಯಾರಿಗೂ ಯಾವ ಪ್ರಯೋಜನವೂ ಇಲ್ಲ ಎನ್ನುವುದನ್ನು ನಾವು ಮನಗಾಣಬೇಕು. ಕೆಲವು ಸಂಪ್ರದಾಯಗಳು ಕೇವಲ ಅನುಕೂಲಕ್ಕೋಸ್ಕರ ಇರಬಹುದು. ಅವುಗಳು ಆ ಕಾಲದಲ್ಲಿ ಅನುಕೂಲವಾಗಿದ್ದಿರಬಹುದು. ನಮಗೆ ಈ ಕಾಲದಲ್ಲಿಯೂ

ಅನುಕೂಲವಾಗಿದ್ದರೆ ಉಪಯೋಗಿಸೋಣ, ಇಲ್ಲದಿದ್ದರೆ ಬಿಡೋಣ. ಇನ್ನು ಕೆಲವು ಕೇವಲ ಸಾಂಸ್ಕೃತಿಕ ಲಕ್ಷಣ ಸೂಚಕವಾಗಿರಬಹುದು. ಅವುಗಳನ್ನೂ ಅನುಸರಿಸೋಣ. ಅವುಗಳಿಂದ ಯಾವ ವಿಧವಾದ ಧಾರ್ಮಿಕ ಪ್ರಯೋಜನವೂ ಇಲ್ಲದಿರಬಹುದು. ಆದರೂ ಆತ್ಮಗುಣಾಭ್ಯಾಸಕ್ಕೆ ವಿರೋಧವಿಲ್ಲದಿದ್ದರೆ ಅವುಗಳನ್ನು ಅನುಸರಿಸುವುದು ಅವಶ್ಯ.

ಇವುಗಳನ್ನೆಲ್ಲಾ ಉದಾಹರಣೆಗಳ ಸಹಿತ ವೇದ, ಸೂತ್ರಗಳ quotation ಗಳೊಡನೇ ವಿವರಿಸಿದರೇ ಮಂದಟ್ಟಾಗುತ್ತದೆ. ನನಗೆ ಸ್ವಲ್ಪ ಅವಕಾಶ ಕೊಡು. ನಿನ್ನ ಚಿ||ಗಳಿಗೆಲ್ಲಾ ಆಶೀರ್ವಾದಗಳು. ನಿನ್ನ ಸ್ನೇಹಿತರಿಗೆ ನನ್ನನ್ನು ಜ್ಞಾಪಿಸಿ, ನನ್ನ ನಮಸ್ಕಾರಗಳನ್ನು ತಿಳಿಸು.

ಇತಿ ನಿನ್ನವ

कुमारस्वामी

೪೬೫

ವಿಚಾರದ ಒರೆಗಲ್ಲು

ಏಳುರಾಟೆ ಶನಿ, ಪ್ರಯೋಜನ ; ದ್ವೈತಾದ್ವೈತವಿಶಿಷ್ಟಾದ್ವೈತ

कुशलम् श्री : Madras
6.11.87

ಶ್ರೀಕಂಠ !

ನಿನ್ನ ಕಾಗದ ಬಂದು ಬಹು ದಿನಗಳಾದವು. ಉತ್ತರ ಬರೆಯಲು ಪುರಸತ್ತಾಗಲಿಲ್ಲ, ತಪ್ಪು ಭಾವಿಸಬೇಡ.

ನೀನು ಕೇಳಿರುವ ಪ್ರಶ್ನೆಗಳಿಗೆ ಹಿಂದೆಯೇ ಉತ್ತರ ಕೊಟ್ಟಿದ್ದೇನೆ ಎಂದು ಕಾಣುತ್ತೆ. ಹಿಂದಿನ ಕಾಗದಗಳನ್ನು ಪುನಃ ಓದಿದರೆ ಸಿಗಬಹುದೇನೋ ! ಇರಲಿ.

1) ವೇದಗಳು ಹೇಳುತ್ತಿವೆ, ಸೂತ್ರಕಾರರು ಹೇಳಿದ್ದಾರೆ, ಸ್ಮೃತಿ ಹೇಳುತ್ತಿದೆ, ದೊಡ್ಡವರು ಹೀಗೆ ಹೇಳಿದ್ದಾರೆ ಎಂದ ಮಾತ್ರಕ್ಕೇ ಯಾವುದನ್ನೂ ನಾವು ಯಥಾರ್ಥವೆಂದಾಗಲಿ, ಸತ್ಯವೆಂದಾಗಲಿ ತೆಗೆದುಕೊಳ್ಳಬೇಕಾದ ಆವಶ್ಯಕತೆ ಖಂಡಿತ ಇಲ್ಲ. ಯಾವುದನ್ನೂ Reason (ವಿಚಾರ) ಎಂಬ ಒರೆಗಲ್ಲಿನ ಮೇಲೆ ಪರೀಕ್ಷಿಸಿ Reasonable ಆಗಿದ್ದರೆ ಮಾತ್ರ, ಅದರಿಂದ ನಮಗೆ ಯಾವ ರೀತಿಯಲ್ಲಾದರೂ ಉಪಯೋಗವಾಗುವುದಾದರೆ ಮಾತ್ರ ತೆಗೆದುಕೊಳ್ಳಬೇಕೆಂಬುದೇ ನಮ್ಮ ಸಿದ್ಧಾಂತ. Reasoning ಅಥವಾ ವಿಚಾರವೆಂದರೆ ಪ್ರಮಾಣಬದ್ಧವಾಗಿದ್ದರೆ ತೆಗೆದುಕೊಳ್ಳುವುದೆಂದರ್ಥ. ಈ ಪ್ರಮಾಣಗಳಲ್ಲಿ ಸಾಮಾನ್ಯವಾಗಿ ಪ್ರತ್ಯಕ್ಷ, ಅನುಮಾನ, ಶಬ್ದ ಎಂದು ಮೂರು ಪ್ರಮಾಣಗಳನ್ನು ಎಲ್ಲರೂ ಗ್ರಹಿಸಿದ್ದಾರೆ. ವಿಜ್ಞಾನಿಯೂ ಪ್ರತ್ಯಕ್ಷ, ಅನುಮಾನಗಳನ್ನು ಒಪ್ಪುತ್ತಾನೆ. ಶಬ್ದವನ್ನು ಒಪ್ಪುವುದಿಲ್ಲ. ಬೀಜವನ್ನು ನೆಟ್ಟು ನೀರು ಹಾಕಿದರೆ ಗಿಡ ಬೆಳೆಯುತ್ತದೆ ಎಂದು ಹೇಳಿದರೆ ಅದು ಪ್ರತ್ಯಕ್ಷ. ಅದಕ್ಕೆ ವೇದಾಶಾಸ್ತ್ರ ಸೂತ್ರಕಾರರು ಬೇಕಿಲ್ಲ. ಪ್ರತ್ಯಕ್ಷದಿಂದಲೇ ಅನುಮಾನ ಹುಟ್ಟಿದೆ. ಎಲ್ಲೋ ಒಂದು ಕಡೆ ಬೆಳೆದ ಗಿಡಕ್ಕೆ ಗೊಬ್ಬರ ಹಾಕಿದ್ದನ್ನು ಕಂಡು, ಅದು ಚೆನ್ನಾಗಿ ಫಲ ಬಿಟ್ಟಿರುವುದನ್ನು ಕಂಡು, ಇನ್ನೊಂದು ಕಡೆ ಹಾಗೆ ಬಿಟ್ಟಿರುವಾಗ ಗೊಬ್ಬರವನ್ನು ಹಾಕಿರಬೇಕು ಎಂದು ಊಹಿಸುವುದು ಅನುಮಾನ. ನಾವು electrons ನೋಡದೆ ಹೋದರೂ ಅದರ resultನಿಂದ electrons ಇರಬೇಕು ಎಂದು ಊಹಿಸುವುದು, ಅನುಮಾನ. ಕೆಲವು, ಆಪ್ತರು ಹೇಳಿದ್ದನ್ನು ಕೇಳಿದರೇ ಸಾಧ್ಯ. ಅದಕ್ಕೆ ಶಬ್ದಪ್ರಮಾಣ ಎಂದು ಹೆಸರು. ಇಲ್ಲಿಯೇ ನಾವು ಎಚ್ಚರಿಕೆಯಿಂದ ಇರಬೇಕಾದ್ದು. ಯಾವುದು ಪ್ರತ್ಯಕ್ಷಕ್ಕೂ, ಅನುಮಾನಕ್ಕೂ ಸಿಗುವುದಿಲ್ಲವೋ ಅಲ್ಲಿ ಶಬ್ದಪ್ರಮಾಣವೇ ಗತಿ. ಇದಕ್ಕೆ ನಮ್ಮಲ್ಲಿ ಮಗುವಿನ ತಂದೆಯನ್ನು ತಿಳಿದುಕೊಳ್ಳುವ ಉದಾಹರಣೆಯನ್ನು ಕೊಡುತ್ತಾರೆ. ಮಗುವಿನ ತಂದೆ ಯಾರು ಎನ್ನುವುದು ಪ್ರತ್ಯಕ್ಷವಲ್ಲ, ಅನುಮಾನವೂ ಸಾಧ್ಯವಲ್ಲ. ತಾಯಿ ಬಂದು ಇವನೇ ನಿನ್ನ ತಂದೆ ಎಂದು ಹೇಳಿದರೆ ನಾವು ಒಪ್ಪಿಕೊಂಡು ವ್ಯವಹರಿಸಬೇಕು. ಇದೇ ಶಬ್ದಪ್ರಮಾಣ. ಆದರೆ ಈ ಶಬ್ದ ಪ್ರಮಾಣವು ಪ್ರತ್ಯಕ್ಷಕ್ಕೋ, ಪ್ರತ್ಯಕ್ಷವನ್ನು ಅವಲಂಬಿಸಿರುವ ಅನುಮಾನಕ್ಕೋ ವಿರೋಧವಾಗಿದ್ದರೆ, ಅದು ಖಂಡಿತ ನಿಲ್ಲುವುದಿಲ್ಲ. ವೇದಶಾಸ್ತ್ರಗಳು ನಮಗೆ ಶಬ್ದಪ್ರಮಾಣ, ಅವು ಪ್ರತ್ಯಕ್ಷಕ್ಕೆ ವಿರೋಧವಾಗಿದ್ದರೆ ಅವಕ್ಕೆ ಸ್ಥಾನವೇ ಇಲ್ಲ.

ಸೂತ್ರಕಾರರ ಕಾಲದಲ್ಲಿ ಈ ರಾಹುಕಾಲಾದಿಗಳು, ಗ್ರಹಗಳ ಚೇಷ್ಟೆಗಳು palmistry, numerology ಎನ್ನುವುದು ಗೊತ್ತಿರಲಿಲ್ಲವೆಂದು ಹೇಳುವುದು ಸಾಹಸವಾಗಬಹುದು. ಅವರು ಗೊತ್ತಾಗದಿದ್ದರಿಂದ ಅದನ್ನು ಹೇಳಲಿಲ್ಲವೆಂದಲ್ಲ, ಅವು ಅವಿಚಾರಿತ ರಮಣೀಯವಾಗಿವೆ ಎನ್ನುವುದರಿಂದ ಬಿಟ್ಟರಬೇಕು ಎಂದು ನನ್ನ ಅಭಿಪ್ರಾಯ. ಒಂದು ವೇಳೆ ಅವರಿಗೆ ಗೊತ್ತಿರಲಿಲ್ಲವೆಂದೇ ಇಟ್ಟುಕೊಳ್ಳೋಣ. ಆಮೇಲೆ ಯಾರೋ ಬಂದು ಅವುಗಳನ್ನು ಪ್ರಚಾರ ಮಾಡಿದರು. ನಾವು ಅವುಗಳನ್ನು ಒಪ್ಪಬೇಕಾದರೆ ಪುನಃ ಒರೆಗಲ್ಲಿಗೆ ತಾನೇ ಹಾಕಬೇಕು.

ಒಂದು ವೇಳೆ ಅವೆಲ್ಲಾ ನಿಜವನ್ನು ಸೂಚಿಸುತ್ತವೆ ಎಂತಲೇ ಇಟ್ಟುಕೊಳ್ಳೋಣ. ತಿಳಿದುಕೊಂಡು ನಾವು ಮಾಡುವುದಾದರೂ ಏನು ! ಆ ಫಲಗಳನ್ನು ವ್ಯತ್ಯಾಸ ಮಾಡಲು ಸಾಧ್ಯವೇ ! ರೇಖೆಗಳನ್ನು ಪೂಜೆ ಮಾಡಿದರೆ ಅವು ವ್ಯತ್ಯಾಸವಾಗುತ್ತವೆಯೇ? ಸಂಖ್ಯೆಗಳನ್ನು ಪೂಜೆ ಮಾಡಿದರೆ ಅವು ವ್ಯತ್ಯಾಸವಾಗುತ್ತವೆಯೇ! ಎಲ್ಲಿಯೋ ಇರುವ ಗ್ರಹಗಳನ್ನು ಕಲ್ಲಿನ ರೂಪದಲ್ಲಿಯೋ, ಧಾನ್ಯಗಳ

ರೂಪದಲ್ಲಿಯೋ ಎದುರಿಗಿಟ್ಟುಕೊಂಡು ಪೂಜಿಸಿದ ಮಾತ್ರಕ್ಕೆ, ನಮ್ಮ ಪ್ರಾರಬ್ಧವನ್ನು ಅವು ವ್ಯತ್ಯಾಸ ಮಾಡುತ್ತವೆಯೇ ! ಹಾಗೆಂದರೆ ಇಷ್ಟ ಬಂದ ಹಾಗೆ ನಮ್ಮ ಭವಿಷ್ಯವನ್ನು ನಾವೇ ತಿದ್ದಿಕೊಳ್ಳ ಬಹುದಲ್ಲವೇ ! ಇದೆಲ್ಲಾದರೂ ಆಗಿದೆಯೆ, ಆಗಲು ಸಾಧ್ಯವೇ ! ಹೋಗಲಿ ತಿಳಿದುಕೊಂಡು, ಅದರಲ್ಲಿ ಪೂರ್ಣ ನಂಬಿಕೆ ಇಟ್ಟು, ನೆಮ್ಮದಿಯಾಗಿಯಾದರೂ ಇರುತ್ತೇವೆಯೆ ಎಂದರೆ ಇಲ್ಲ. ಇನ್ನೂ ಚಿತ್ತವಿಕ್ಷೋಭ ಜಾಸ್ತಿಯಾಗುತ್ತದೆ. ಈಗ ನೀನು ಕೊಟ್ಟಿರುವ ಉದಾಹರಣೆಯನ್ನೇ ತೆಗೆದುಕೊಳ್ಳೋಣ. 24 ವರ್ಷ ತುಂಬುವವರೆಗೂ ನಿನಗೆ ಕೆಲಸ ಸಿಗುವುದಿಲ್ಲ ಎಂದು ಆ Numerologist ಹೇಳಿದರೂ ನೆಮ್ಮದಿಯಾಗಿ 24 ವರ್ಷಗಳು ತುಂಬುವವರೆಗೂ ಕಾದು ಕೂತೆಯಾ ! ಇಲ್ಲ ! KGF ಕೆಲಸಕ್ಕೆ telegram ಗಳನ್ನು ಕೊಟ್ಟು ಕಾಗದಗಳನ್ನು ಬರೆದು ನಿರೀಕ್ಷಣೆ ಮಾಡುತ್ತಾ ತಾನೇ ಕುಳಿತೆ ! ಹಾಗೆಯೇ M.P.M. ಕೆಲಸಕ್ಕೆ ಪ್ರಯತ್ನಪಡಲಿಲ್ಲವೇ ! 24 ರವರೆಗೂ ಕೆಲಸ ಸಿಗುವುದಿಲ್ಲವೆಂದರೆ, ಪ್ರಯತ್ನವೂ ವ್ಯರ್ಥವೆಂದರ್ಥವಲ್ಲವೇ! ನಿನಗೆ 24 ತುಂಬಿದ ಮಾರನೆ ದಿನ order ಬರಬೇಕಾದರೆ ಅದಕ್ಕೆ ಮುಂಚೆಯೇ application ಹಾಕಿ interview ಆಗಿರಬೇಕಲ್ಲವೇ ! ನಿನ್ನ ಹುಟ್ಟಿದ ತಾರೀಖಿನ ಮಾರನೆ ದಿನ order ಬಂದಿರುವುದು coincidence ಅಷ್ಟೆ. ಇದಾದ ಮೇಲಾದರೂ numerology ಮೇಲೆ ದೃಢ ನಂಬಿಕೆ ಬಂದು ಅದು ಹೇಳಿದಂತೆಯೇ ಎಲ್ಲಾ ಕೆಲಸಗಳನ್ನೂ ಮಾಡುತ್ತಿದ್ದೀಯಾ ! ಕೆಲವರು ಜಾತಕ ನೋಡಿ ಮಗಳಿಗೆ ಇನ್ನು ಮೂರು ವರ್ಷ ಮದುವೆಯಾಗುವುದಿಲ್ಲ ಎಂದು ಹೇಳಿದರೂ ಕೈ ಕಟ್ಟಿ ಕೂತುಕೊಂಡಿರುವವರನ್ನು ನೋಡಿಲ್ಲ. ಹಾಗೆ ಕುಳಿತುಕೊಂಡವರನ್ನು ಇನ್ನೊಬ್ಬ ಜಾತಕಪ್ರೇಮಿಯು, ಅವಹೇಳನ ಮಾಡುತ್ತಾನೆ, “ಅವರು ಹೇಳಿದರು ಎಂದರೆ ಸುಮ್ಮನೆ ಕೂರಲು ಸಾಧ್ಯವೇ ! ಜಾತಕವೇ ಸುಳ್ಳಿರಬಹುದು. ಅವರು ಹೇಳಿದ್ದೇ ಸುಳ್ಳಿರಬಹುದು. ನಾವು ಮಾಡುವ ಪ್ರಯತ್ನ ಮಾಡಬೇಕು” ಎನ್ನುತ್ತಾನೆ. ಈಗ ಜಾತಕಫಲ ತೆಗೆದುಕೊಂಡು ಏನು ಮಾಡಬೇಕು! ಅದಕ್ಕೆ ಬದಲಾಗಿ, ಅದಕ್ಕೇನು ಪ್ರಯತ್ನಪಡಬೇಕೋ ನಿರ್ವಂಚನೆ ಯಾಗಿ ಅದನ್ನು ಮಾಡಿ, ಫಲವಾದಾಗ ಫಲವಾಯಿತೆಂದು ಸಂತೋಷಪಡುವುದು ಉತ್ತಮವಲ್ಲವೇ! ಕೆಲಸವೆಲ್ಲಾ ಆದಮೇಲೆ ಅವರು ಹೇಳಿದ್ದು ನಿಜವಾಯಿತು ಎಂದು ಕೊಂಡಾಡುವುದರಲ್ಲಿ ಏನು ಉಪಯೋಗ ಎಂದು ತಿಳಿಯಲಿಲ್ಲ. ಕಾರಣ ಆ ವಿದ್ಯೆಗಳು objective ಅಲ್ಲ. statistical ಆಗಿ prove ಮಾಡಲೂ ಸಾಧ್ಯವಿಲ್ಲ. ಸಕಾರಣವಾಗಿ ಬೆಳೆದೂ ಇಲ್ಲ. ಕೇವಲ subjective ಆಗಿ ಕೂತಿವೆ. ಹೇಳುವವನ ಮೇಲೆ ಹೋಗುತ್ತದೆ. ಅದನ್ನು science ಎಂದು ಹೇಳುವುದು ಹೇಗೆ ?

ಹಾಗೆಯೇ ನಿನಗೆ ಏಳುರಾಟೆ ಶನಿಯಲ್ಲಿ ಬಹಳ ಕಷ್ಟವಾಯಿತೆಂದು ಬರೆದಿದ್ದೀಯೇ. ಅದಕ್ಕೆ ಶನಿ ಕಾರಣವೇ, ನಿನ್ನ ಪ್ರಾರಬ್ಧ ಕಾರಣವೇ ! ಏಳುರಾಟೆ ಶನಿಯಲ್ಲಿ ಕಷ್ಟವಾಗುತ್ತದೆ ಎಂದು ಗೊತ್ತಿದ್ದ ಮೇಲೆ ಬಹಳ ಕಷ್ಟವಾಯಿತು ಎಂದು lament ಮಾಡಿದರೆ, ತಿಳಿದುಕೊಂಡಿದ್ದರಿಂದ ಆದ ಪ್ರಯೋಜನ ವೇನು! ಆಗುತ್ತದೆ ಎಂದು ತಿಳಿದುಕೊಂಡು ಏಳು ರಾಟಿ ಬರುವುದಕ್ಕೆ ಮುಂಚಿನಿಂದಲೇ ಅಳುವುದೊಂದೇ ಫಲ ಅಂತ ಕಾಣುತ್ತೆ ! ಶನಿದಶೆ 19 ವರ್ಷ ಬಹಳ ಕಷ್ಟವಾಗುತ್ತದೆ ಎಂದು ನನ್ನ ತೀ|| ರವರು ಕೆಲವರಿಗೆ ಹೇಳುತ್ತಿದ್ದರು. ಶನಿಸ್ತೋತ್ರ ಮಾಡಿ, ಎಳ್ಳು ದೀಪ ಹಚ್ಚಿ ಎಂದು ಪರಿಹಾರವನ್ನೂ ಸೂಚಿಸುತ್ತಿದ್ದರು. ಅದರಿಂದ ಎರಡು ತರಹ ಪರಿಣಾಮಗಳು ಆಗುತ್ತಿದ್ದುದನ್ನು ನೋಡುತ್ತಿದ್ದೆ. ಕೇಳಿದವರಿಗೆ, ಇನ್ನೂ ಗುರುದೆಶೆಯಲ್ಲಿರುವಾಗಲೇ, ಶನಿದಶೆ ಬರುತ್ತದೆಂದು nightmareನಲ್ಲಿ ನಡುಗುತ್ತಿದ್ದುದು. ಶನಿದಶೆ ಬಂದ ಮೇಲೆ ಶನಿಸ್ತೋತ್ರ ಹೇಳಿ ಎಳ್ಳುದೀಪ ಹಚ್ಚಿದರೂ ಕಷ್ಟ ನಿವಾರಣೆಯಾಗಲಿಲ್ಲವೆಂದು ನಿತ್ಯ ತೀ||ರವರ ಹತ್ತಿರ ಬಂದು complaint ಹೇಳುವುದು ! ಇದಕ್ಕಿಂತ ಕಷ್ಟಗಳು ಬಂದಾಗ ಧೈರ್ಯವಾಗಿ, ನಾನು ಮಾಡಿದ್ದನ್ನು ನಾನು ಅನುಭವಿಸುತ್ತೇನೆ ಎಂಬ ಒಂದು fortitudeನೊಡನೆ, ಅವುಗಳನ್ನು ಎದುರಿಸುವುದು ಉತ್ತಮ ಪಕ್ಷವಲ್ಲವೇ ! Let me cross the bridge when I reach it ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಮೊದಲಿನಿಂದಲೇ ಅದಕ್ಕೆ ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ.

ಶ್ರೀಕಂಠ ! ಅನೇಕ ಸಾರಿ ಹೇಳಿದ್ದೇನೆ. ಪುನಃ ಹೇಳ ಬಯಸುತ್ತೇನೆ. ಯಾವ ವಿಧಿಯೇ ಆಗಲಿ, ಯಾವ ಶಾಸ್ತ್ರವೇ ಆಗಲಿ (ವೇದವೋ, ಸೂತ್ರಕಾರರೋ, ಜ್ಯೋತಿಷ್ಯವೋ ಏನೇ ಆಗಲಿ), ನಾವು ನಂಬಿ ಅದರಂತೆ ನಡೆಯಬೇಕಾದರೆ ನಮಗೆ ಅವುಗಳಿಂದ ಯಾವುದಾದರೂ ಪ್ರಯೋಜನವಾಗಬೇಕು. ಒಂದು ಐಹಿಕ ಸಂಪತ್ತು (materialistic achievement) ಅಥವಾ ಆಧ್ಯಾತ್ಮಿಕ ಉನ್ನತಿ (spiritual development) ಎರಡೂ ಇಲ್ಲದಿದ್ದರೆ, ನಮಗೆ ಅದು ತ್ಯಾಜ್ಯವೇ ! ಐಹಿಕ ಸಂಪತ್ತು ಮತ್ತು ಅದರ ಸಾಧನಗಳು ನಮಗೆ ಪ್ರತ್ಯಕ್ಷ, ಅವುಗಳನ್ನು ನಮ್ಮನಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ನಾವು ಸಂಪಾದಿಸಿಕೊಂಡು ಹೋಗಬೇಕು. ಇವುಗಳನ್ನು ಸಂಪಾದಿಸುವುದಕ್ಕೆ ವೇದವೋ, ಸೂತ್ರಕಾರರೋ, ಸ್ಮೃತಿಯೋ, ಜ್ಯೋತಿಷ್ಯವೋ, numerologyಯೋ ಸಹಾಯವಾಗುವುದಾದರೆ ಖಂಡಿತ ಉಪಯೋಗಿಸಿಕೊಳ್ಳೋಣ. ನನಗೆ ಗೊತ್ತಿರುವಂತೆ, ಅವುಗಳಿಗೂ ಐಹಿಕ ಸಂಪತ್ ಸಾಧನಗಳಿಗೂ ಸಂಬಂಧವೇ ಇಲ್ಲ. ಆಧ್ಯಾತ್ಮಿಕ

ಉನ್ನತಿಗೆ ಅವುಗಳು ಸಾಧನವಾಗುವ ಹಾಗಿದ್ದರೆ ಅಗತ್ಯವಾಗಿ ಉಪಯೋಗಿಸಿಕೊಳ್ಳೋಣ. ಇಲ್ಲಿಯೂ ಆಧ್ಯಾತ್ಮಿಕ ಉನ್ನತಿಯೆಂದರೆ, ಬಹಳ ಮೇಲೆ ಹೋಗುವುದು ಬೇಡ. ನಮ್ಮಗಳ (99.99%) ಅಧಿಕಾರದ ಮಟ್ಟಕ್ಕೆ ತೆಗೆದುಕೊಂಡರೆ Development of Character ಎಂದು ಹೇಳಿದರೆ ಸಾಕು. ಅಥವಾ ಆತ್ಮಗುಣಗಳು, ದೈವೀಸಂಪತ್ತು ಏನು ಬೇಕಾದರೂ ಆಗಬಹುದು. ಅವುಗಳ ಅಭ್ಯಾಸದಲ್ಲಿ ಯಾವು ಯಾವುದು ಸಹಕಾರಿಯಾಗುತ್ತದೆಯೋ, ಎಲ್ಲವೂ ಗ್ರಾಹ್ಯ. ಹಾಗೆ ಸಹಕಾರಿಯಲ್ಲವಾದರೆ ವೇದದಲ್ಲಿದ್ದರೂ, ನಮಗೆ ಗ್ರಾಹ್ಯವಲ್ಲ. ಈ ಸ್ವಾತಂತ್ರ್ಯ ಖಂಡಿತವಾಗಿ ನಮಗೆ ಉಂಟು.

2) ದ್ವೈತಾದ್ವೈತದ ಬಗ್ಗೆ ಕೇಳಿದ್ದೀಯೆ ! ನಾವು ಕಾಣುತ್ತಿರುವ ಈ ಜಗತ್ತು, ನಾನು ಎನ್ನಿಸಿಕೊಳ್ಳುವ ಜೀವಾತ್ಮ, ಈ ಸೃಷ್ಟಿಗೆಲ್ಲಾ ಕಾರಣಭೂತನಾಗಿರುವ ಪರಮಾತ್ಮ ಈ ಮೂವರ ಸ್ವರೂಪ, ಸಂಬಂಧಗಳನ್ನು ತಿಳಿಸಿಕೊಡಲು ಹೊರಟಿರುವುದೇ ವೇದಾಂತ ದರ್ಶನ. ಇದಕ್ಕೆ ನಮಗೆ ಉಪನಿಷತ್ತುಗಳೇ ಮೂಲಶಬ್ದಪ್ರಮಾಣ. ಅವುಗಳನ್ನು ಅನುಸರಿಸಿ ವ್ಯಾಸರು ಬ್ರಹ್ಮಸೂತ್ರಗಳನ್ನು ಬರೆದರು. ಆ ಸೂತ್ರಗಳಿಗೆ ವ್ಯಾಖ್ಯಾನ ಮಾಡುವಾಗ ಒಬ್ಬೊಬ್ಬರು ಒಂದೊಂದು ತರಹ ಅರ್ಥ ಮಾಡಿಕೊಂಡು ಈ ದ್ವೈತಾದ್ವೈತ ತತ್ವಗಳನ್ನು ಹೇಳಿದರು.

ಅದ್ವೈತರೀತ್ಯಾ ಈ ಜಗತ್ತು ಹೀಗೆ ಕಾಣುತ್ತಿರುವುದು ಭ್ರಮೆ. ಅದು ಕೇವಲ ಪರಮಾತ್ಮನ ವ್ಯಕ್ತಸ್ವರೂಪ (the whole universe is a manifestation of Brahma). ಪರಮಾತ್ಮನು ಸಕಲವ್ಯಾಪಕನಾಗಿ ಜಗತ್ತಿನ ಒಳಗೆ ಹೊರಗೆ ಓತಪ್ರೋತನಾಗಿದ್ದಾನೆ. ಜೀವಾತ್ಮ ಪರಮಾತ್ಮಗಳು ಎರಡೂ ಒಂದೇ. ಜೀವನು ಮನಸ್ಸು, ಬುದ್ಧಿ, ಇಂದ್ರಿಯಗಳೆಂಬ ಉಪಾಧಿ (adjuncts) ಸಹಿತನಾಗಿರುವುದರಿಂದ ಸರಿಯಾದ ಆತ್ಮಸ್ವರೂಪ ಕಾಣದೆ ಬೇರೆ ಬೇರೆಯಾಗಿ ವ್ಯವಹಾರ ಮಾಡುತ್ತಿದ್ದೇವೆ. ಉಪಾಧಿ ನಿವೃತ್ತಿಯಾದರೆ, ಜೀವಾತ್ಮನೇ ಶುದ್ಧನಾಗಿ ಪರಮಾತ್ಮನಾಗಿ ಪ್ರಕಾಶಿಸುತ್ತಾನೆ. ಪ್ರತಿಯೊಬ್ಬ ಮನುಷ್ಯನ ಪ್ರಯತ್ನವೂ ಆ ಉಪಾಧಿಗಳನ್ನು ಕಳಚುವುದೇ. ಅದೇ Spiritual enlightenment. ಅದೇ ಮೋಕ್ಷ.

ದ್ವೈತಿಗಳು ಜಗತ್ತನ್ನು ಸತ್ಯವೆಂದು ಹೇಳುತ್ತಾರೆ. ಇದು ಪರಮಾತ್ಮನಿಂದ ಸೃಷ್ಟಿಯಾಯಿತು. ಸೃಷ್ಟಿಯಲ್ಲಿರುವುದೆಲ್ಲವೂ ಹಾಗೆಯೇ ಬೇರೆ ಬೇರೆಯಾಗಿಯೇ ಸೃಷ್ಟಿಯಾಗಿವೆ. ಪರಮಾತ್ಮನೆಂದರೆ ಸಾಕ್ಷಾತ್ ಲಕ್ಷ್ಮೀನಾರಾಯಣನೇ. ಪ್ರತಿಯೊಂದು ಜೀವವೂ ಅವನಿಗೆ ದಾಸರೂಪನಾಗಿ ಬಾಳುವುದೇ ಮೋಕ್ಷ.

ವಿಶಿಷ್ಟಾದ್ವೈತಿಗಳು, ನಾನಾ ಜೀವವಾದಿಗಳಾದರೂ, ಕೊನೆಯಲ್ಲಿ ಮೋಕ್ಷದಲ್ಲಿ, ಜೀವಾತ್ಮನು ಪರಮಾತ್ಮನಾದ ನಾರಾಯಣನಲ್ಲಿ ಐಕ್ಯವಾಗುವುದನ್ನೇ ಮೋಕ್ಷವೆಂದು ಹೇಳುತ್ತಾರೆ. ಅವರು ನಾಲ್ಕು ವಿಧವಾಗಿ ಮೋಕ್ಷವನ್ನು ಹೇಳಿದ್ದಾರೆ. ಸಾಲೋಕ್ಯ, ಸಾರೂಪ್ಯ, ಸಾಮೀಪ್ಯ, ಸಾಯುಜ್ಯ. ಕಡೆಯದೇ ಐಕ್ಯ. ಅದು ಅದ್ವೈತಕ್ಕೆ ಸ್ವಲ್ಪ ಹತ್ತಿರವಾದ್ದರಿಂದ ವಿಶಿಷ್ಟಾದ್ವೈತವಾಯಿತು.

ಈ ವ್ಯತ್ಯಾಸಗಳು, ಸಿದ್ಧಾಂತಗಳೆಲ್ಲಾ ಕೇವಲ ಶಬ್ದ ಜಾಲವೇ ಹೊರತು ಯಾರೂ ಪರಮಾತ್ಮನನ್ನು ಕಂಡವರಿಲ್ಲ. ಕಂಡವರು ಬಂದು ನಮಗೆ ಹೇಳುವುದಿಲ್ಲ. ಆದ್ದರಿಂದಲೇ ಇಷ್ಟೆಲ್ಲಾ Speculation ಗಳು ಹೊರಟಿರುವುದು. ಅವುಗಳಲ್ಲಿ ಅದ್ವೈತವು ಸ್ವಲ್ಪ Scientific reasoningಗೂ ಲೋಕಾನುಭವಕ್ಕೂ ಹೊಂದಿಕೊಳ್ಳುತ್ತದೆ ಎಂದು ನನ್ನ ಅಭಿಪ್ರಾಯ. ನನಗಂತೂ ಅವುಗಳ ಬಗ್ಗೆ ಚರ್ಚೆಯೇ ಅನವಶ್ಯ, ವ್ಯರ್ಥ, ಎಂದು ತೋಚುತ್ತದೆ. ತಿಳಿದುಕೊಳ್ಳಲು ಅಡ್ಡಿಯಿಲ್ಲ. ಮನುಷ್ಯನ ಬುದ್ಧಿಯು ಎಲ್ಲಿಯವರೆಗೆ ಹೋಗಬಹುದು ಎನ್ನುವುದು ಚೆನ್ನಾಗಿ ತಿಳಿಯುತ್ತದೆ.

ಇತಿ ನಿನ್ನವ

कुमारस्वामी

೪೬೬

ಮೂತ್ರಪುರೀಷ

ಧರ್ಮ ಮತ್ತು ನಡೆವಳಿಕೆಯಲ್ಲಿ ವಿರೋಧಾಭಾಸ, ಆತ್ಮಸಾಕ್ಷಿ

कुशलम् श्री : Madras

5.1.88

ಶ್ರೀಕಂಠ !

ನಿನ್ನ ಕಾರ್ಡು ಬಂದು ಬಹುದಿವಸಗಳಾದುವು. ಉತ್ತರ ಬರೆಯಲೇ ಇಲ್ಲ. ಬರೆಯಬೇಕು ಎನ್ನುವುದರಲ್ಲೇ ಹೇಗೋ ಕಾಲ ತಳ್ಳಿಹೋಯಿತು. ನೀನು ಏನು ಕೇಳಿದ್ದೆ ಎನ್ನುವುದೂ ಮರೆತುಹೋಗಿದೆ. ಒಂದು ಮಾತ್ರ ಜ್ಞಾಪಕ. ಮೂತ್ರಪುರೀಷಗಳಿಗೆ ಹೋಗಿ ಬಂದರೆ ಸ್ನಾನ ಮಾಡಬೇಕೇ ಎಂಬ ಪ್ರಶ್ನೆಗೆ ಮೂಲಸೂತ್ರವನ್ನು ಕೇಳಿದ್ದೆ. ಅದು ಹೀಗಿದೆ:

'ಮೂತ್ರಪುರೀಷಯೋಃ ಅನ್ನಸ್ಯ ರೇತಸಶ್ಚ ಯೋ ಲೇಪಃ ತಾನ್ ಪ್ರಕ್ಷಾಳ್ಯ ಪಾದೌ ಪ್ರಕ್ಷಾಳ್ಯ ಆಚಮ್ಯ ಪ್ರಯತೋ ಭವತಿ'

(ಮೂತ್ರ ಪುರೀಷಗಳ, ಅನ್ನದ, ರೇತಸ್ಸಿನ ಯಾವ ಲೇಪ ಉಂಟೋ ಅದನ್ನು ತೊಳೆದು, ಕಾಲು ತೊಳೆದುಕೊಂಡು ಆಚಮನ ಮಾಡಿದರೆ ಪವಿತ್ರನಾಗುತ್ತಾನೆ.)

ನಮ್ಮ ದೇಶದ ಪರಿಸ್ಥಿತಿ ನೋಡಿದರೆ ಶೋಚನೀಯವಾಗಿದೆ. ಒಂದು ಕಡೆ ಭಜನೆ, ಹರಿಕಥೆ, ಉಪನ್ಯಾಸ, ತೀರ್ಥಯಾತ್ರೆ, ದೇವಸ್ಥಾನಕ್ಕೆ ಬರುವ ಜನಗಳ ಸಂಖ್ಯೆ, ದೇವತಾಪ್ರತಿಷ್ಠೆಗಳು ಲೆಕ್ಕವಿಲ್ಲದಷ್ಟು ನಡೆಯುತ್ತಿವೆ. ಇನ್ನೊಂದು ಕಡೆ, ಲಂಚದ ಲಕ್ಷಾವತಾರಗಳು, ಕೌಟುಂಬಿಕ ದೌರ್ಜನ್ಯ, ವಧುವಿನ ಕಡೆಯವರನ್ನು ಸುಲಿಗೆ ಮಾಡುವುದು, ಭ್ರಷ್ಟಾಚಾರ, ಧರ್ಮದ ಹೆಸರಿನಲ್ಲಿ ಕೊಲೆ, ಸುಲಿಗೆ ಇತ್ಯಾದಿ ನಡೆಯುತ್ತಲೇ ಇವೆ. ಜನಗಳೆಲ್ಲಾ ಧಾರ್ಮಿಕರಾಗಿದ್ದಾರೆಂದು ಹೇಳೋಣವೇ ಎಂದರೆ ಸಾಧ್ಯವಿಲ್ಲ. ಆದರೆ ಧರ್ಮವೆಂದು ತಿಳಿದುಕೊಂಡಿರುವುದನ್ನೆಲ್ಲಾ ಮಾಡುತ್ತಿದ್ದಾರಲ್ಲಾ ಎಂದರೆ ನಮ್ಮ ಧರ್ಮದ ತಿಳುವಳಿಕೆಯೇ ತಪ್ಪು ಎಂದಾಗುತ್ತದೆ. ಅದನ್ನು ಸರಿಪಡಿಸಿಕೊಳ್ಳುವವರೆಗೂ ನಮ್ಮ ದೇಶದ ಪರಿಸ್ಥಿತಿ ಇನ್ನೂ ಶೋಚನೀಯವಾಗುತ್ತದೆಯೇ ಹೊರತು ಸರಿಹೋಗುವುದು ಕಾಣಲಿಲ್ಲ.

ನಿನ್ನೆ..., ಕೊಯಮತ್ತೂರಿನಿಂದ ಎರಡು ಸಾರಿ ಬಂದಿದ್ದರು. ಅಲ್ಲಿ ರುದ್ರಹೋಮವನ್ನು ಮಾಡಬೇಕೆಂದು ಆಸೆಪಟ್ಟರು. ಒಪ್ಪಿಕೊಂಡೆ. ಆದರೆ ಅವರು ಅವರ ಸುಬ್ರಹ್ಮಣ್ಯವಿಗ್ರಹದ ಬಗ್ಗೆ ಹೇಳಿದ ವಿಚಾರ ಬಹಳ ಅವಿವೇಕಪೂರಿತವಾಗಿತ್ತು. ಅವರೆದುರಿಗೆ ಹೇಳಲು ಸಂಕೋಚವಾಯಿತು. ಕಾಗದದಲ್ಲಿ ಬರೆದೆ. ಅದೂ ಅಲ್ಲದೆ ಅವರು ನವಗ್ರಹಹೋಮ ಮಾಡಬೇಕೆಂದು ಹೇಳಿದರು. ನಾನು ಅದಕ್ಕೆ ಒಪ್ಪಲಿಲ್ಲ. ಒಂದು, ನವಗ್ರಹಗಳು ನಮ್ಮ ಜೀವನವನ್ನು ಯಾವ ರೀತಿಯಲ್ಲಿಯೂ influence ಮಾಡದಿರುವುದು. ಎರಡನೆಯದಾಗಿ, ನಾವು ಹೇಳುವ ಮಂತ್ರಕ್ಕೂ ಗ್ರಹಗಳಿಗೂ ಯಾವ ಸಂಬಂಧವೂ ಇಲ್ಲದಿರುವುದು. ಈ ಕಾರಣಗಳಿಂದ ನನಗೆ conviction ಇಲ್ಲ. ನನಗೇ ಇಲ್ಲದಿದ್ದಾಗ ನಾನು ಕುಳಿತು ಹೋಮ ಮಾಡಿದರೆ hypocrisy ಯಾಗುತ್ತದೆ. ಆದ್ದರಿಂದ ಕ್ಷಮಿಸಬೇಕೆಂದು ಹೇಳಿದೆ.

ಅವರಿಗೆ ಬಹಳ ಬೇಜಾರಾಗಿದೆ ಅಂತ ಕಾಣುತ್ತೆ. ಅದಕ್ಕೆ ಉತ್ತರವನ್ನೇನೋ ಬರೆದರು. ಆದರೂ ಸಮಾಧಾನವಿಲ್ಲ, ನಾನೇನು ಮಾಡಲಿ !

ಶ್ರೀಕಂಠ ! ಅವರು ತಮ್ಮನ್ನೇ ವಂಚಿಸಿಕೊಳ್ಳುತ್ತಿದ್ದಾರೆ. ಅದರಲ್ಲಿ ನಾನೂ ಅವರೊಡನೆ ಭಾಗವಹಿಸಲು ಇಷ್ಟವಾಗಲಿಲ್ಲ. ನಾನು ಭದ್ರಾವತಿಯಲ್ಲಿ ಹೇಳಿದ್ದನ್ನು ಸ್ವಲ್ಪವಾದರೂ ತಿಳಿದು ಕೊಳ್ಳುತ್ತಾರೆಂದಿದ್ದೆ, ಹಾಗೇನೂ ಕಾಣಲಿಲ್ಲ. ಆದ್ದರಿಂದ ಸ್ಪಷ್ಟವಾಗಿ ಬರೆಯಬೇಕಾಯಿತು. ಅದು ಅವರಿಗೆ ರುಚಿಸಲಿಲ್ಲ. ಅಂಥ ನಂಬಿಕೆಗಳಿರುವವರ ಸಮಾಚಾರವೇ ಹೀಗೆ. ಅವರ ನಂಬಿಕೆಗೆ ವಿರೋಧವಾಗಿ ಯಾರಾದರೂ ಹೇಳಿದರೆ ಬಹಳ ಕೋಪವೇ ಬರುತ್ತದೆ. ಅದಕ್ಕೆ ಕಾರಣ ಅವರಿಗೇ sub-conscience ನಲ್ಲಿ ಸಂದೇಹ ಕಾಡುತ್ತಿರುತ್ತದೆ. ಅದನ್ನು ಎತ್ತಿ ತೋರಿಸಿದರೆ "ಕಂಡದ್ದು ಕಂಡ ಹಾಗೆ ಹೇಳಿದರೆ" ಎನ್ನುವಂತಾಗುತ್ತದೆ.

ಒಂದೇ ದುಃಖ. ಒಳ್ಳೆಯ ಯೋಗ್ಯರಾದ ಮನುಷ್ಯ ಏನೇನೋ ನಂಬಿಕೆಗಳನ್ನಿಟ್ಟುಕೊಂಡು ನಮ್ಮ ಸ್ನೇಹವನ್ನೇ ಬಿಡುವಂತಾಯಿತಲ್ಲಾ ಎಂದು. ಆಗಲಿ. ಇಂಥಾ ಸಂಯೋಗ ವಿಯೋಗಗಳು ಬೇಕಾದಷ್ಟು ಜೀವನದಲ್ಲಿ ಬಂದಿವೆ. ಅನುಭವಿಸೋಣ.

ಚಿ||ಗಳಿಗೆಲ್ಲಾ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೬೭

ಶ್ರಾದ್ಧ, ಗಾಯತ್ರಿ

ಅಣ್ಣ ತಮ್ಮ ಒಟ್ಟಿಗೆ ; ಮೃತತಿಥಿಯ ದಿನ ಶ್ರಾದ್ಧ ಮಾಡಲಾಗದಿದ್ದರೆ ; ಗಾಯತ್ರಿಯ ಅರ್ಥ ಮತ್ತು ಮನನ, ಧ್ಯಾನಾನುಕೂಲ

ಕುಶಲಮ್ ಶ್ರೀ : Madras

6.1.88

ಶ್ರೀಕಂಠ!

ನಿನ್ನೆ ತಾನೇ ನಿನಗೆ ಒಂದು ಕಾಗದವನ್ನು ಬರೆದೆ. ಮನೆಗೆ ಹೋಗುವ ಹೊತ್ತಿಗೆ ನಿನ್ನ ಕಾಗದ ಬಂದಿತ್ತು. ನಿಮ್ಮ ಮನೆಯ ಶ್ರಾದ್ಧದ ವಿಷಯವನ್ನು ಕೇಳಿದ್ದೀಯೆ. ನಾನು ಸ್ವಲ್ಪ ಸ್ಪಷ್ಟವಾಗಿ ಹೇಳುತ್ತೇನೆ. ಅನ್ಯಥಾ ಭಾವಿಸಬೇಡ.

1) ಮೊದಲನೆಯದಾಗಿ, ನಿನ್ನ ತಮ್ಮ ನಿನ್ನ ಜತೆಯಲ್ಲಿ ಬಂದು ಶ್ರಾದ್ಧ ಮಾಡುವುದೇ ತಪ್ಪು, ಅಷ್ಟು ಕಷ್ಟಪಟ್ಟುಕೊಂಡು 100-200 ರೂ.ಗಳನ್ನು ಖರ್ಚುಮಾಡಿಕೊಂಡು ಅಲ್ಲಿಗೆ ಬರುವುದಕ್ಕಿಂತ ಇಲ್ಲಿಯೇ ಅಷ್ಟು ಹಣವನ್ನು ಖರ್ಚುಮಾಡಿ, ಚೆನ್ನಾಗಿ ಶ್ರಾದ್ಧಮಾಡಬಹುದು. ಇದು ನನ್ನ ಅಭಿಪ್ರಾಯ. ನಿನ್ನ ಜತೆಗೆ ಬಂದೇ ತೀರಬೇಕು, ಇಲ್ಲದಿದ್ದರೆ ತಪ್ಪಾಗುತ್ತದೆ ಎಂಬ ಅಭಿಪ್ರಾಯ ದಿಂದ ಬರುತ್ತಿದ್ದರೆ, ಹಾಗೇನಿಲ್ಲ ಎಂದು ಹೇಳುವುದಕ್ಕೋಸ್ಕರ ಬರೆಯುತ್ತಿದ್ದೇನೆ.

ಈಗಂತೂ ಬರುತ್ತಿದ್ದಾನೆ. ಬಂದಾಗ ಹೀಗಾದರೆ ಏನು ಮಾಡುವುದು ಎಂಬ ಪ್ರಶ್ನೆಗೆ ಏನೂ ಮಾಡಬೇಕಾದ್ದಿಲ್ಲ ಎನ್ನುವುದೇ ನನ್ನ ಉತ್ತರ. ಒಂದು ವೇಳೆ ಕಾಲಕ್ಕೆ ಸರಿಯಾಗಿ ಬಂದಿದ್ದರೂ ಶ್ರಾದ್ಧದಲ್ಲಿ ಅವನು ಮಾಡುವುದೇನು ? ಕೈಕಟ್ಟಿಕೊಂಡು ನೀನು ಮಾಡುವುದನ್ನು ನೋಡುತ್ತಾ ನಿಂತಿರುವುದು ತಾನೇ ! ಬೆರಳಿಗೆ

ಪವಿತ್ರವನ್ನು ಹಾಕಿಕೊಂಡಿರಬಹುದು ! ಅದರಿಂದಲೇ ಶ್ರಾದ್ಧ ಚರಿತಾರ್ಥವಾಗುವುದಿಲ್ಲ ಅಲ್ಲವೇ ! ಈ ಸಾರಿ ಅಲ್ಲಿ ನಿಲ್ಲುವುದರ ಬದಲು ರೈಲಿನಲ್ಲಿಯೋ ಬಸ್ಸಿನಲ್ಲಿಯೋ ಕೂತಿದ್ದ ಎರಡು ಕಡೆಯೂ ಅಷ್ಟೇ ಕೆಲಸವೇತಾನೇ ! ಆದ್ದರಿಂದ ಏನೂ ಮಾಡಬೇಕಾದ್ದಿಲ್ಲ, 'ನಾನು ಸೇರಿಕೊಳ್ಳಲು ಸಾಧ್ಯವಾಗಲಿಲ್ಲವಲ್ಲಾ!' ಎಂದು ರೈಲಿನಲ್ಲಿಯೋ ಬಸ್ಸಿನಲ್ಲಿಯೋ ಪೇಚಾಡಿಕೊಂಡಿರುವುದೇ ಸಾಕು.

ಹಾಗೆ ಸುಮ್ಮನೆ ಇದ್ದುಬಿಟ್ಟರೆ ನಮಗೆ ತೃಪ್ತಿಯಾಗುವುದಿಲ್ಲ ಎಂದು ಹೇಳಬಹುದು. ಆ ತೃಪ್ತಿಯೂ ಕೂಡ ಭಯದಿಂದ ಬಂದಿರುವುದೇ ಹೊರತು ನಿಜವಾದ ಆನಂದವಲ್ಲ. ಸೇರಿಕೊಳ್ಳದಿದ್ದರೆ ಏನಾಗಿಬಿಡುತ್ತದೋ ಎಂಬ ಭಯ. ಸೇರಿ ಕೊಂಡುಬಿಟ್ಟರೆ ಆ ಭಯನಿವೃತ್ತಿ. ಅದನ್ನು ತೃಪ್ತಿ ಎಂದು ಹೇಳುವುದು ಹೇಗೆ !

ನಿಜವಾದ ತೃಪ್ತಿ, ಆನಂದಗಳನ್ನು ಪಡೆಯಬೇಕಾದರೆ, ತಾನೇ ಮಾಡಬೇಕು. ಇದೇ ನಮ್ಮ ಶಾಸ್ತ್ರಸಿದ್ಧಾಂತ.

2) ಇನ್ನು ಮಾಡುವ ಯಜಮಾನನಿಗೇ ಈ ರೀತಿಯ ಸಂದರ್ಭ ಪ್ರಾಪ್ತವಾದರೆ, ಆಗ ಮಾರನೇ ದಿನ ಮಾಡಬೇಕು. ಅದಕ್ಕೆ ಹಿಂದಿನ ದಿನ ಉಪವಾಸಾದಿಗಳೆಲ್ಲ ಮಾಡಬೇಕಾದ್ದಿಲ್ಲ. ನಾನು ಹಿಂದೆಯೇ ಬರೆದಿದ್ದೇನೆ. ಮೃತತಿಥಿಯಲ್ಲಿ ಮಾಡುವುದು ಕೇವಲ ಸ್ಮರಣ ಸೌಕರ್ಯಕ್ಕೋಸ್ಕರ. ಅದೊಂದು ಕ್ರಮ. ಆ ಕ್ರಮವನ್ನು ಪಾಲಿಸಬಾರದೆಂದಲ್ಲ. ಆದರೆ ವಿಶೇಷವಾದ ಸಂದರ್ಭಗಳಲ್ಲಿ ವ್ಯತ್ಯಾಸ ಮಾಡಿಕೊಳ್ಳಲು ಬರುತ್ತದೆ. ಮೃತತಿಥಿಯಲ್ಲಿ ಮಾಡಬೇಕೆಂದು ವೇದವಾಗಲೀ, ಸೂತ್ರಕಾರರಾಗಲೀ ಒಬ್ಬರೂ ಹೇಳಿಲ್ಲ. ಅದು ನಾವು ಮಾಡಿಕೊಂಡಿರುವ ಕಲ್ಪನೆ. ಆಗಲಿ, ಹಾಗೇ ಮಾಡೋಣ. ಆದರೆ ಅದನ್ನು ವ್ಯತ್ಯಾಸವೇ ಮಾಡಬಾರದು ಎಂದು ಹೇಳುವುದು ಅಗತ್ಯವಿಲ್ಲ.

3) "ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್" : ದೇವಸ್ಯ ಸವಿತುಃ – ಆ ಸವಿತೃ (ಸೂರ್ಯ) ದೇವತೆಯ, ತತ್ ವರೇಣ್ಯಂ ಭರ್ಗಃ – ಆ ಶ್ರೇಷ್ಠವಾದ ತೇಜಸ್ಸನ್ನು, ಧೀಮಹಿ – ಧ್ಯಾನ ಮಾಡುತ್ತೇವೆ, ಯಃ – ಯಾವ ತೇಜಸ್ಸು, ನಃ – ನಮ್ಮ, ಧಿಯಃ – ಬುದ್ಧಿಯನ್ನು, ಪ್ರಚೋದಯಾತ್ – ಸನ್ಮಾರ್ಗದಲ್ಲಿ ಪ್ರೇರೇಪಿಸಲಿ.

ಈ ಜಪಕ್ರಮದಲ್ಲಿಯೂ ಈ ಮಂತ್ರವನ್ನು 108 ಬಾರಿ ಹೇಳಿದ್ದರಿಂದಲೇ ಯಾವ ಫಲವೂ ಬರುವುದಿಲ್ಲ. ಅದು ಆರಂಭದಲ್ಲಿ, ಸ್ವಲ್ಪ ವಿವೇಕ ಬಂದಮೇಲೆ, ಅದರ ಅರ್ಥವನ್ನು ಮನನ ಮಾಡುತ್ತಿದ್ದರೆ, ತನ್ನ ಬೇರೆ ಲೌಕಿಕ ವ್ಯವಹಾರಗಳಲ್ಲಿ ಯಾವಾಗಲಾದರೂ ತಪ್ಪು ಯೋಚನೆಗಳು ಹುಟ್ಟಿದಾಗ, ಅಧರ್ಮ, ಅನ್ಯಾಯಗಳ ಕಡೆ ಮನಸ್ಸು ತಿರುಗಿದಾಗ, ಆ ತುಂಟ ಮನಸ್ಸನ್ನು ನ್ಯಾಯದ ಕಡೆ ತಿರುಗಿಸಲು ಅನುಕೂಲವಾಗುತ್ತದೆ. ನ್ಯಾಯದ ಕಡೆ ತಿರುಗಿಸಲು ಸಾಧ್ಯವಿಲ್ಲದೇ ಹೋದರೂ, ಅನ್ಯಾಯದ ಕಡೆ ತಿರುಗಿದಾಗ "ಬೆಳಗ್ಗೆ ತಾನೇ ಅಷ್ಟು ಮನನ ಮಾಡಿ ಬಂದೆನಲ್ಲಾ, ಈಗ ಮನಸ್ಸು ದುಷ್ಟ ಯೋಚನೆಗಳ ಕಡೆಗೆ ಹೋಗುತ್ತಿದೆಯಲ್ಲ" ಎಂಬ ಪಶ್ಚಾತ್ತಾಪವಾದರೂ ಆಗುತ್ತದೆ. ಹಾಗೆ ಪಶ್ಚಾತ್ತಾಪ ಪಟ್ಟು ಪಟ್ಟು ದಗ್ಧವಾದ ಮನಸ್ಸು ಯಾವುದೋ ಕಾಲದಲ್ಲಿ ಕೆಟ್ಟ ಯೋಚನೆಗಳನ್ನು ಮಾಡುವುದನ್ನೇ ಬಿಡುತ್ತದೆ. ಇಷ್ಟೇ ಜಪದ ಉದ್ದೇಶ.

4) ''ಸಾಂಖ್ಯಾಯನಸಗೋತ್ರಾ'' ಎಂಬುವುದು ಗಾಯತ್ರೀಛಂದಸ್ಸಿನ ದೇವತೆಯ ಒಂದು ವಿಶೇಷಣ. ಅವಳು ಸಾಂಖ್ಯಾಯನಗೋತ್ರಕ್ಕೆ ಸೇರಿದವಳು ಎಂದು ಮನಸ್ಸಿನಲ್ಲಿ ಮಾಡಿಕೊಳ್ಳುವುದು. ಅವಳಿಗೆ 24 ಅಕ್ಷರ, ಮೂರು ಪಾದಗಳು – ಹೀಗೆಲ್ಲಾ ಹೇಳಿದುತೆ, ಅವಳ Bio-data ಎಂದು ಹೇಳಬಹುದು. Bio-data ಇದ್ದರೆ ಅವಳನ್ನು ಧ್ಯಾನಿಸಲು ಅನುಕೂಲವೆಂಬ ಅಭಿಪ್ರಾಯ.

ನಿನ್ನ ಚಿ||ಗಳು ಸಂಧ್ಯಾವಂದನೆ, ಸಮಿಧಾಧಾನ ಮಾಡುತ್ತಿರು ವುದನ್ನು ಕೇಳಿ ಬಹ........ಳ ಸಂತೋಷವಾಯಿತು. ನಾನು ಇನ್ನೊಂದು ಬಾರಿ (ಪ್ರಾಯಃ May ತಿಂಗಳಲ್ಲಿ) ಬಂದಾಗ ಅದರ Significance ಎಲ್ಲಾ ಹೇಳುತ್ತೇನೆ. ನಿನ್ನ Brother-in-law, ಬೆಂಗಳೂರಿನಲ್ಲಿರುವವರು ಅವರ ತಮ್ಮನ ಮದುವೆಗೆ ಕಾಗದ ಬರೆದಿದ್ದರು. ನನ್ನನ್ನು ಬೆಂಗಳೂರಿನಲ್ಲಿ ಸಂಧಿಸಬೇಕೆಂದೂ ಬರೆದಿದ್ದರು. ನಾನು ಕಾಗದಕ್ಕೆ ಉತ್ತರ ಕೊಟ್ಟು, ವಧೂ-ವರರಿಗೆ ಆಶೀರ್ವಾದಗಳನ್ನು ತಿಳಿಸಿ, ನಾನು ಬೆಂಗಳೂರಿಗೆ ಬರುವ ವಿಷಯ ಬರೆದಿದ್ದೆ. ಆದರೆ ನಾನು ಬರಲಿಲ್ಲ. ಕಾಗದ ಸೇರಿದೆಯೋ ಇಲ್ಲವೋ ಎಂದು ಅನುಮಾನವಾಯಿತು. ಯಾವಾಗಲಾದರೂ ಸಂಧಿಸಿದಾಗ ಕೇಳು. ನಿನ್ನ ಸೌ|| ಗೂ, ಮಕ್ಕಳಿಗೂ ನನ್ನ ಅನಂತ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೬೮

ತತ್ತ್ವಪ್ರಚಾರ

कुशलम् श्री : Madras

21.1.88

ಶ್ರೀಕಂಠ!

ನಿನ್ನ ಸ್ನೇಹಿತರು ಅರವಿಂದರ ಕಾಗದವೂ, ನಿನ್ನ ಕಾಗದವೂ ತಲಪಿದುವು. ಅವರಿಗೆ ಪ್ರತ್ಯೇಕವಾಗಿ ಕಾಗದ ಬರೆದಿದ್ದೇನೆ. ಅವರು ಕೇಳಿದ ಪ್ರಶ್ನೆ ಈಗಿನ ಕಾಲದ ಸಮಾಜದಲ್ಲಿ ಎಲ್ಲರೂ ಕೇಳಿಕೊಂಡು ಉತ್ತರ ಕಂಡುಹಿಡಿದುಕೊಳ್ಳಬೇಕಾದದ್ದು. ಬಹಳ ಸಂತೋಷ ವಾಯಿತು.

ನನ್ನ ಕಾಗದದ ಕಾಪಿಗಳು, ನನ್ನ ತಂಗಿ ಮಗ ನರಸಿಂಹನಿಗೆ (Jyoti Industries) ಬೇಕು. ಅವನಿಗೇ ತಲಪಿಸಿದರೂ ಸಂತೋಷ. ಅದರಲ್ಲಿ ನಿನ್ನ ಪ್ರಶ್ನೆಗಳನ್ನೂ ಒಂದು ಕಡೆ ಗುರುತು ಹಾಕಿಟ್ಟರೆ ಇನ್ನೂ ಚೆನ್ನಾಗಿರುತ್ತದೆ. ನಾನು ಉತ್ತರ ಬರೆಯುವಾಗ, ನಿನ್ನ ಪ್ರಶ್ನೆಗಳನ್ನು ಬರೆದು ಉತ್ತರ ಕೊಟ್ಟಿಲ್ಲವೆಂದು ಕಾಣುತ್ತೆ. ಬೇರೆಯವರು ಓದಿದಾಗ ಶ್ರಮವಾಗಬಹುದು.

ನನಗೆ ಇನ್ನು 4 ದಿನಗಳಲ್ಲಿ ವಿಶ್ರಾಂತಿ ಸಿಗುತ್ತದೆ. ಚಿ||ಯು ಕೊನೆಯ semesterನಲ್ಲಿದ್ದಾನೆ. ಅವನಿಗೆ ಆಗಲೇ SAILನಲ್ಲಿ ಕೆಲಸ ಸಿಕ್ಕಿದೆ. ಎಲ್ಲಿಗೆ Post ಮಾಡುತ್ತಾರೆನ್ನುವುದು ಇನ್ನೂ ತಿಳಿದಿಲ್ಲ. ಅವನ ಜತೆಯಲ್ಲಿರಬೇಕೆಂಬ ಉದ್ದೇಶ. ಅದಕ್ಕೆ ಮುಂಚೆ ನಾನು ಓದಿರುವುದನ್ನೂ, ತಿಳಿದುಕೊಂಡಿರುವುದನ್ನೂ, ನಿಮ್ಮಗಳ ಜತೆಯಲ್ಲಿ ಪಾಲುಗೊಳ್ಳಬೇಕೆಂಬ ಆಸೆಯೂ ಇದೆ. ಹೇಗೆ ಮಾಡಬೇಕೆಂಬುದನ್ನು ಇನ್ನೂ ನಿಶ್ಚಯಿಸಿಲ್ಲ.

ಈಗ 12 ದಿನಗಳಿಂದ ನಮ್ಮ ದೇವಸ್ಥಾನದಲ್ಲಿ ಭಾಗವತದ ಮೇಲೆ ಉಪನ್ಯಾಸ ಮಾಡಿದೆ. ನಮ್ಮ IIT standards ನಿಂದ ಶ್ರೋತೃಗಳು ಸುಮಾರಾಗಿದ್ದರು ಎಂದೇ ಹೇಳಬಹುದು. ಅವರೆಲ್ಲರಿಗಿಂತ ನನಗೇ ಸಂತೋಷವಾಯಿತು. ಹಾಗೆಯೇ ಅದರಲ್ಲಿನ ಅತ್ಯದ್ಭುತವಾದ Rational Conceptಗಳನ್ನು ಪ್ರಚಾರ ಮಾಡಲು ನಿಮ್ಮಂಥ ಯುವಕರು ಕಟಿಬದ್ಧರಾಗಿ ನಿಲ್ಲಬೇಕು.

ಚಿ||ಗಳಿಗೆ ನನ್ನ ಆಶೀರ್ವಾದಗಳನ್ನು ತಿಳಿಸು, ನಿಮ್ಮನ್ನೆಲ್ಲಾ ಸಂಧಿಸಲು ಮನಸ್ಸು ಕಾತರಗೊಳ್ಳುತ್ತಿದೆ.

ಇತಿ ನಿನ್ನವ

कुमारस्वामी

೪೬೯

ಪೂಜೆ, ಶಿವರಾತ್ರಿ

ಸತ್ತ್ವಗುಣಾಭಿವೃದ್ಧಿಗೆ ; ನಿಯಮಗಳು ಇಂದ್ರಿಯಗಳ ಹತೋಟಿಗೆ ; ಶಿವರಾತ್ರಿಯ ಸಾರ್ಥಕ್ಯ

कुशलम् श्री : Madras
5.2.88

ಶ್ರೀಕಂಠ !

ನಿನ್ನ ಕಾಗದ ತಲಪಿತು. ಅರವಿಂದರೂ ಒಂದು ಕಾಗದ ಬರೆದಿದ್ದಾರೆ. ಅವರಿಗೂ ಉತ್ತರ ಬರೆಯುತ್ತೇನೆ. ಶಿವರಾತ್ರಿಯ ವಿಷಯ ನಿನ್ನ ಪ್ರಶ್ನೆ, ಕೇವಲ ಸಾಧಾರಣವೆನಿಸಿದರೂ ಈ ಕಾಲದಲ್ಲಿ ಈ ತರಹ ಸಂದೇಹಗಳೇ ಜಾಸ್ತಿಯಾಗಿರುವುದರಿಂದ ನನಗೆ ಇದು ಸಹಜವಾಗಿದೆ.

ಈ ತರಹ ಸಂದೇಹಗಳು ಬರುವುದಕ್ಕೆ ಮೂಲ ಕಾರಣ ಭಯ. ಶಿವರಾತ್ರಿಯಲ್ಲಿ ಅಥವಾ ಇನ್ನಾವುದೋ ವ್ರತದಲ್ಲಿ, ಸಂಸ್ಕಾರಗಳಲ್ಲಿ , ಸಾಂಪ್ರದಾಯಕವಾಗಿ ಕೆಲವು ನಿಯಮಗಳು ಬಂದಿವೆ. ಅವುಗಳನ್ನು ಪಾಲಿಸದೆ ಹೋದರೆ, ಯಾರೋ ಅಲ್ಲಿ ಕೂತು ನಮ್ಮನ್ನು ಶಿಕ್ಷೆ ಮಾಡುವುದಕ್ಕೇ ಕಾಯುತ್ತಿರುತ್ತಾನೆಂಬ ಭಯ. ಅದರಲ್ಲಿಯೂ ಮೌಢ್ಯವೆಂದರೆ "ಏನೂ ಮಾಡದಿದ್ದರೂ ಪರವಾಗಿಲ್ಲ. ಮಾಡಿದರೆ ಸರಿಯಾಗಿ ಮಾಡಬೇಕು" ಎಂಬ ನಂಬಿಕೆ!! ನಿಯಮದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಾದರೇ ಕೋಪಿಸಿಕೊಂಡು ಶಿಕ್ಷಿಸುವವನು, ಏನೂ ಮಾಡದೇನೇ ಇದ್ದುಬಿಟ್ಟರೆ ಸುಮ್ಮನಿರುವವನು ಅದೆಂಥಾ ದೇವರೋ ಕಾಣೆ !! ಯಾವನ ಸ್ಮರಣೆಯಿಂದ, ಯಾವನ ಆರಾಧನೆಯಿಂದ ನಮ್ಮ ಭಯಗಳು ಹೋಗಬೇಕೋ, ಅವನೇ ನಮ್ಮನ್ನು ಭಯಪಡಿಸುತ್ತಾನೆಂದರೆ ಬಹಳ ವಿಚಿತ್ರವಲ್ಲವೇ ! ಈ ಅನಗತ್ಯವಾದ ಭ್ರಮಾತ್ಮಕವಾದ ಭಯ ಹೋದ ಹೊರತು ನಾವು ಯಾವ ಸಾಧನೆಯನ್ನೂ ಮಾಡಲು ಸಾಧ್ಯವಿಲ್ಲ, ಮಾಡಿದ್ದೂ ದಂಡ.

ಮುಖ್ಯವಾಗಿ ನಮ್ಮ ದೇವರುಗಳ ಕಲ್ಪನೆಯೇ ಈ ಅನರ್ಥಕ್ಕೆಲ್ಲಾ ಮೂಲ. ನಮ್ಮ ಸಿದ್ಧಾಂತದಲ್ಲಿ ಪರಮಾತ್ಮನೆಂಬುವನು ಎಲ್ಲೋ ಹೊರಗಡೆ, ಸಿಂಹಾಸನದ ಮೇಲೆ ಕುಳಿತು ನಮ್ಮ ಮೇಲೆ ದಂಡ–ಪ್ರಹಾರ ಮಾಡಲು ಸಿದ್ಧನಾಗಿ ಕುಳಿತಿರುವ ನವಾಬನಲ್ಲ. ನಮ್ಮ ಸಕಲ ವ್ಯಾಪಾರಗಳಿಗೂ ಕಾರಣಭೂತನಾಗಿ, ಚರಾಚರ ವಸ್ತುಗಳಲ್ಲಿಯೂ ಸರ್ವವ್ಯಾಪಕನಾಗಿ, ಪ್ರಕಾಶಸ್ವರೂಪನಾಗಿ ಬೆಳಗುತ್ತಿರುವ ಅಂತರ್ಜ್ಯೋತಿಯೇ ಪರಮಾತ್ಮ. Albert Einstein ಹೇಳಿದಂತೆ It is the guiding spirit behind all the phenomena in the world. It is a spirit before the strength of which we have to bow down our heads in humility. ಆ ಪರಮಾತ್ಮನು ನಮಗೆ ಪ್ರತ್ಯಕ್ಷನಲ್ಲ, ಹಾಗೆಂದು ಎಲ್ಲಿಯೋ ಇದ್ದುಕೊಂಡು ಪರೋಕ್ಷನೂ ಅಲ್ಲ. ಅದಕ್ಕೇ ಅವನನ್ನು ಅಪರೋಕ್ಷನೆನ್ನುತ್ತೇವೆ. ಅವನನ್ನು ಪ್ರತಿಯೊಬ್ಬನೂ ತನ್ನವೇ ಅನುಭವದಿಂದ ತಿಳಿಯಬೇಕೇ ಹೊರತು, ಇನ್ನೊಬ್ಬರು ತೋರಿಸಿಕೊಡಲು ಸಾಧ್ಯವಿಲ್ಲ. ಆ ಅನುಭವ ಉಂಟಾಗಲು

ಅನಾದಿ ಕಾಲದಿಂದ ಬಂದಿರುವ ನಮ್ಮ ರಜೋಗುಣ, ತಮೋಗುಣ ವಾಸನೆಗಳು ಅಡ್ಡಿಯಾಗಿವೆ. ಅವುಗಳನ್ನು ಕಮ್ಮಿ ಮಾಡಿಕೊಂಡು ಸತ್ತ್ವಗುಣಗಳನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ಹೊರಟಿರುವುದೇ ಪೂಜೆ, ಹೋಮ, ಜಪ, ಶಿವರಾತ್ರಿ, ಗೋಕುಲಾಷ್ಟಮಿ, ತೀರ್ಥಯಾತ್ರೆ, ಶ್ರಾದ್ಧ, ವ್ರತ etc., ಹೀಗೆ ರಜೋಗುಣ, ತಮೋಗುಣಗಳನ್ನಡಗಿಸಿ, ಸತ್ತ್ವಗುಣಗಳನ್ನು ಅಭಿವೃದ್ಧಿ ಮಾಡುವುದೆಲ್ಲವನ್ನೂ ಧರ್ಮವೆಂದು ಹೇಳಬಹುದು. ಮೇಲೆ ಬರೆದಿರುವ ಪೂಜಾದಿಗಳು ನಿಜವಾದ ಧರ್ಮವಾಗ ಬೇಕಾದರೆ ಅವುಗಳಿಂದ ಸತ್ತ್ವಗುಣಾಭಿವೃದ್ಧಿಯಾಗಬೇಕು.

ಭಯ, ನಿದ್ರೆ, ಆಲಸ್ಯ ಇವೆಲ್ಲವೂ ತಮೋಗುಣಗಳು. ಭಯದಿಂದ ಮಾಡುವ ಕೆಲಸವಾಗಲಿ, ಭಯವನ್ನು ಉತ್ಪಾದನೆ ಮಾಡುವ ಕೆಲಸವಾಗಲಿ, ಫಲನಿರೀಕ್ಷಣೆಯಿಂದ ಮಾಡುವ ಕೆಲಸವಾಗಲಿ, ಧರ್ಮ, ಖಂಡಿತ ಆಗುವುದಿಲ್ಲ. ಅವೆಲ್ಲವೂ ರಜೋಗುಣ, ತಮೋಗುಣಗಳು. ಆದರೆ ದುರ್ದೈವವಶಾತ್ ನಮ್ಮ ಇಂದ್ರಿಯಗಳ ನೈಜವಾದ ಸ್ವಭಾವವೇ ರಜೋಗುಣ, ತಮೋಗುಣಗಳು. ಇದು ಪ್ರವೃತ್ತಿಸ್ವಭಾವ. ಹಾಗೆಂದು ಅವುಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಇಂದ್ರಿಯಗಳು ನಮ್ಮನ್ನು ಎಳೆದುಕೊಂಡು ಹೋಗಿ ಅಧಃಪಾತಾಳಕ್ಕೆ ತಳ್ಳುತ್ತವೆ. ಪಾಪ ಕಾರ್ಯಗಳನ್ನು ಮಾಡುವಂತೆ ಮಾಡುತ್ತವೆ. ಭಯಪಡುವುದು ಇಂದ್ರಿಯ ಸ್ವಭಾವವಾದರೂ, ಭಯದಿಂದ ಇನ್ನೊಬ್ಬರಿಗೆ ಹಿಂಸೆಯನ್ನೋ, ತೊಂದರೆಯನ್ನೋ ಮಾಡಿದರೆ ಪಾಪವಾಗುತ್ತದೆ. ಕ್ರೋಧವು ಸ್ವಭಾವವಾದರೂ, ಕ್ರೋಧದಿಂದ ಪಾಪಕಾರ್ಯ ಘಟಿಸುತ್ತದೆ. ಹಣದ ಆಸೆ ಸ್ವಭಾವವಾದರೂ, ಅದಕ್ಕೋಸ್ಕರ ಅನ್ಯಾಯ ಮಾರ್ಗದಲ್ಲಿ ಪ್ರವರ್ತಿಸುವುದು ಪಾಪ. ಹೀಗೆ ರಜೋಗುಣ, ತಮೋಗುಣ ಸ್ವಭಾವವಾಗಿದ್ದರೂ, ಆ ಸ್ವಭಾವದಂತೆ ಕೆಲಸಗಳನ್ನು ಮಾಡುವುದು ಪಾಪವಾಗುತ್ತದೆ! ಸ್ವಭಾವವೇ ಪಾಪವಲ್ಲ! ಹೀಗೆ ಇಂದ್ರಿಯಗಳನ್ನು ಪ್ರವೃತ್ತಿಗೇ ಬಿಟ್ಟುಬಿಟ್ಟರೆ ಅವು ಎಲ್ಲಿಯೋ ಹೋಗುತ್ತವೆ ಎಂದು ಯೋಚಿಸಿಯೇ ಮಹರ್ಷಿಗಳು ನಿವೃತ್ತಿಯನ್ನು ಅಭ್ಯಾಸ ಮಾಡುವಂತೆ ಹೇಳಿದರು. ನಿವೃತ್ತಿಯೆಂದರೆ ಇಂದ್ರಿಯಸ್ವಭಾವಗಳಿಂದ ವಿಮುಖನಾಗುವುದು. ಅವುಗಳ ಸ್ವಭಾವವಾದ ರಜೋಗುಣ, ತಮೋಗುಣಗಳನ್ನು ಕಮ್ಮಿ ಮಾಡಿ, ಸತ್ತ್ವಗುಣಾಭ್ಯಾಸ ಮಾಡಿಸುವುದು. ಈ ನಿವೃತ್ತಿ ಧರ್ಮದ ಅಭ್ಯಾಸ ಒಂದು ಕ್ಷಣದಲ್ಲಿ ಆಗುವುದಲ್ಲ, ಒಂದು ದಿವಸವಲ್ಲ, ಒಂದು ಜನ್ಮವೂ ಅಲ್ಲ, ಅನೇಕ ಜನ್ಮಗಳು ಮಾಡಬೇಕು. ಅದು ನಿಧಾನವಾಗಿ ಆಗಬೇಕು. ಸ್ವಭಾವವನ್ನು ಹಟದಿಂದ ಸ್ವಲ್ಪ ಕಾಲ ತಡೆಯಬಹುದು. ಆಮೇಲೆ ಅದು Rebound ಆಗಿ, ಮೊದಲಿಗಿಂತ ಹೆಚ್ಚಾದ ಅವ್ಯವಸ್ಥೆಗೆ ಕಾರಣವಾಗುತ್ತದೆ. ಆದ್ದರಿಂದ ಹಾಗೆ ಒಂದೇ ಸಾರಿ ಆ ಸ್ವಭಾವಕ್ಕೆ ತಡೆ ಹಾಕಬಾರದು. ಸ್ವಲ್ಪ ಸ್ವಲ್ಪವಾಗಿ ತುಂಟಕುದುರೆಯನ್ನು ಹತೋಟಿಗೆ ತೆಗೆದುಕೊಳ್ಳುವಂತೆ ತೆಗೆದುಕೊಳ್ಳಬೇಕು. ಆ ಕುದುರೆ ಹೋದ ಮಾರ್ಗದಲ್ಲಿಯೇ ಸ್ವಲ್ಪ ದೂರ ಹೋದಂತೆ ಮಾಡಿ ವಾಪಸು ಸರಿಯಾದ ಮಾರ್ಗದಲ್ಲಿ ಎಳೆದುಕೊಳ್ಳಬೇಕು. ಪುನಃ ಅದು ಅನ್ಯಮಾರ್ಗಕ್ಕೆ ಎಳೆಯುತ್ತದೆ, ಪುನಃ ಸ್ವಲ್ಪ ಹೋದಂತೆ ಮಾಡಿ ವಾಪಸ್ಸು ಬರಬೇಕು. ಇದೇ ಅಭ್ಯಾಸ. ಇದಕ್ಕೇ ಪ್ರವೃತ್ತಿಸಂಕೋಚವೆಂದು ಹೇಳಿದರು. ಇರುವ ಪ್ರವೃತ್ತಿಯನ್ನೇ (ಸ್ವಭಾವ) ಸ್ವಲ್ಪ ಸಂಕೋಚ ಮಾಡು. ಹಾಗೇ ಮಾಡುತ್ತಾ ಮಾಡುತ್ತಾ ಕಮ್ಮಿ ಮಾಡಿ ಪೂರ್ತಿ ಬಿಡುವಂತೆ ಮಾಡಬಹುದು. ನಮ್ಮ ನಿಯಮಗಳೆಲ್ಲ ಹೊರಟಿರುವುದು ಈ ಪ್ರವೃತ್ತಿಸಂಕೋಚದ ದೃಷ್ಟಿಯಿಂದಲೇ.

ಪ್ರತಿಯೊಬ್ಬನಿಗೂ ಸ್ತ್ರೀಸುಖವನ್ನು ಪಡೆಯಬೇಕೆಂಬ ಆಸೆ ಸಹಜ. ಹಾಗೇ ಬಿಟ್ಟರೆ ಮನಸ್ಸು ನಾನಾ ಸ್ತ್ರೀಗಳ ಹಿಂದೆ ಅಲೆಯುತ್ತದೆಂಬ ಪ್ರವೃತ್ತಿಯನ್ನು ಸಂಕೋಚ ಮಾಡಿ, ವಿವಾಹಿತ ಸ್ತ್ರೀಯಲ್ಲಿ ಸುಖವನ್ನು ಕಾಣು ಎಂದು ಹೇಳಿದರು (ಹಾಗೆ ಸ್ತ್ರೀ ಸುಖದ ಆಶೆಯೇ ಇಲ್ಲದಿರುವವರು ಮಹಾತ್ಮರು). ವಿವಾಹಿತ ಸ್ತ್ರೀಯಲ್ಲಿಯೂ, ವಿವಾಹದ ಪ್ರಾರಂಭದಲ್ಲಿ ಸ್ವಚ್ಛಂದವಾಗಿರು. ಆ ಸುಖಾನುಭವ ಆದ ಮೇಲೆ ಆ ಸಹಜ ಪ್ರವೃತ್ತಿಯನ್ನು ಸ್ವಲ್ಪ ಸಂಕೋಚ ಮಾಡಿ ಕೆಲವು ದಿನಗಳು ಮಾತ್ರ ಇಟ್ಟುಕೊ ಎಂದು ನಿಯಮಾರ್ಥವಾಗಿ ಏಕಾದಶೀ, ಅಮಾವಾಸ್ಯೆ, ಶ್ರಾದ್ಧ, ಅಷ್ಟಮೀ, ಚತುರ್ದಶಿ, ಪೂರ್ಣಿಮೆ, ಈ ದಿನಗಳನ್ನು ಬಿಡು ಎಂದರು. ಅಂದರೆ ಆ ದಿನಗಳಲ್ಲಿ ಆಕಸ್ಮಾತ್ ಸಂಭವಿಸಿದರೆ ಪಾಪವೆಂತಲ್ಲ, ಪ್ರವೃತ್ತಿಗೆ ಕಡಿವಾಣವನ್ನು ಹಾಕುವ ಅಭ್ಯಾಸ ಸ್ವಲ್ಪವಾದರೂ ಆಗಲಿ ಎನ್ನುವ ಉದ್ದೇಶ. ಹೀಗೇ ಸ್ವಲ್ಪ ಸ್ವಲ್ಪವಾಗಿ ಕಮ್ಮಿ ಮಾಡಿಕೊಳ್ಳುತ್ತಾ ಬಂದರೆ ಯಾವಾಗಲೋ ಆ ಪ್ರವೃತ್ತಿಯೇ ಇಲ್ಲದೆ ಹೋಗಬಹುದು.

ಹಾಗೆಯೇ, ತಿನ್ನುವುದು ಎನ್ನುವುದು ಸಹಜ ಪ್ರವೃತ್ತಿ. ಅದಕ್ಕೇ ಬ್ರಹ್ಮಚರ್ಯದಲ್ಲಿ ಇನ್ನೂ ಪೂರ್ವವಯಸ್ಸಿನಲ್ಲಿ ಉಪವಾಸಾದಿ ನಿಯಮಗಳು ಬೇಕಿಲ್ಲ ಎಂದು ಹೇಳುತ್ತಾರೆ. ಆದರೆ ಮಯಸ್ಸಾಗುತ್ತಾ ತಿನ್ನುವ ಪ್ರವೃತ್ತಿಗೆ ಕಡಿವಾಣ ಹಾಕಬೇಕು ಎಂಬ ಉದ್ದೇಶದಿಂದ ಆಗಾಗ್ಗೆ ಉಪವಾಸಗಳನ್ನು ವಿಧಿಸಿದರು. ಅವನಿಗೇ ಅಭ್ಯಾಸ ಮಾಡು ಎಂದು ಹೇಳಿದರೆ ಮಾಡುವುದಿಲ್ಲವೆಂಬ ಉದ್ದೇಶದಿಂದ ಏಕಾದಶೀ, ಅಮಾವಾಸ್ಯೆ, ಶಿವರಾತ್ರಿ, ಗೋಕುಲಾಷ್ಟಮೀ, ಮೊದಲಾದ ದಿನಗಳಲ್ಲಿ ಉಪವಾಸ ಮಾಡಬೇಕೆಂಬ ನಿಯಮವನ್ನು ಹಾಕಿದರು. ಅವತ್ತು ಊಟ ಮಾಡಿದರೆ ನರಕಪ್ರಾಪ್ತಿ ಎಂದು ಭಯಪಡಿಸಿದರು. ಉದ್ದೇಶ, ಎಲ್ಲರೂ ಪ್ರವೃತ್ತಿಸಂಕೋಚವನ್ನು

ಅಭ್ಯಾಸ ಮಾಡಲಿ, ನಿತ್ಯ ತಿನ್ನುವುದು ಇದ್ದೇ ಇರುತ್ತದೆ, ಒಂದು ದಿನ ಇಲ್ಲದೇ ಇರುವುದನ್ನೂ ಆ ಇಂದ್ರಿಯಗಳಿಗೆ ಅಭ್ಯಾಸ ಮಾಡಿಸಬೇಕು ಎನ್ನುವುದೇ! ಇದರಿಂದ ಉಪವಾಸ ಮಾಡಿದ್ದರಿಂದ ಪುಣ್ಯ, ತಿಂದಿದ್ದರಿಂದ ಪಾಪ ಎಂದು ಯಾರೂ ಭಾವಿಸಬಾರದು. ಇಂದ್ರಿಯಗಳನ್ನು ನಮ್ಮ control ನಲ್ಲಿ ಇಟ್ಟುಕೊಳ್ಳಲು ಅಭ್ಯಾಸವಾಗಲಿ ಎನ್ನುವುದೇ ಹೊರತು ಪುಣ್ಯವೆಂದಲ್ಲ. ಆ ರೀತಿ ವಿವೇಕದಿಂದ ಎಷ್ಟು ಸಾಧ್ಯವೋ ಅಷ್ಟು ಉಪವಾಸ ಮಾಡುವುದು, ಇಂದ್ರಿಯಗಳನ್ನು ನಿವೃತ್ತಿಧರ್ಮಕ್ಕೆ ತಿರುಗಿಸುವುದರಲ್ಲಿ ಫಲಕಾರಿಯಾಗುವುದೇ ಹೊರತು, ಹಟದಿಂದ ಎಲ್ಲರನ್ನೂ ಶಪಿಸಿಕೊಂಡು, ಶಿವನನ್ನೂ ಶಪಿಸಿ, ಪಿತೃಗಳನ್ನೂ ಶಪಿಸಿಕೊಂಡು ಅನವಶ್ಯಕವಾಗಿ ಕೋಪದಿಂದ ಎಲ್ಲರ ಮೇಲೂ ಹರಿಹಾಯುತ್ತಾ, ಹೊಟ್ಟೆಗೆ ಆಹಾರ ಬೀಳದ್ದರಿಂದ ನಿಷ್ಕ್ರಿಯನಾಗಿ, ಶೋಂಭೇರಿಯಂತೆ ಕೂತುಕೊಂಡು, ದೇಹವನ್ನೂ ಕೆಡಿಸಿಕೊಳ್ಳುವುದು ಉಪವಾಸವಲ್ಲ. ಹೊಟ್ಟೆಗೆ ಆಹಾರ ಬೀಳದಿರುವುದೇ ಉಪವಾಸವಾಗುವುದಾದರೆ, ಕ್ಷಾಮಪೀಡಿತ ದೇಶದಲ್ಲಿರುವವರೆಲ್ಲರೂ ತಪಸ್ವಿಗಳೇ ಆಗಬೇಕು!! ಮೃಗಗಳೂ ಆಹಾರ ಸಿಗದೆ ದಿನಗಟ್ಟಲೆ ಉಪವಾಸವಿರುತ್ತವೆ. ಅದು ತಪಸ್ಸೇ! ಆಹಾರವಿದ್ದೂ, ಪ್ರವೃತ್ತಿಸಂಕೋಚದ ದೃಷ್ಟಿಯಿಂದ, ಸಂತೋಷವಾಗಿ ಒಂದು ಹೊತ್ತೋ, ಎರಡು ಹೊತ್ತೋ ತೆಗೆದುಕೊಳ್ಳದಿರುವುದು, ಆ ಸಮಯದಲ್ಲಿ ಆದಷ್ಟು ಭಗವಚ್ಚಿಂತನೆಯೋ ಪರೋಪಕಾರವೋ ಮಾಡುವುದು ನಿಜವಾದ ಉಪವಾಸ. ಅದೇ ದೃಷ್ಟಿಯಿಂದಲೇ ಈ ಮುಸರೆ, ಮುಸರೆ ಇಲ್ಲದ್ದು ಎಲ್ಲಾ ಹೊರಟಿರುವುದು. ಮುಸರೆ ತೆಗೆದುಕೊಳ್ಳಕೂಡದು ಎನ್ನುವುದೂ ಪ್ರವೃತ್ತಿಸಂಕೋಚ ದೃಷ್ಟಿ. ಮುಸರೆಯಾದ ಪದಾರ್ಥ ಸಾಮಾನ್ಯವಾಗಿ heavyಯಾಗುತ್ತದೆ. ಆಹಾರವನ್ನು ತೆಗೆದುಕೊಳ್ಳಲೇಬೇಕು ಎನ್ನುವುದಾದರೂ ಸ್ವಲ್ಪ light ಆಗಿ ತೆಗೆದುಕೊಂಡರೆ, ಸ್ವಲ್ಪವಾದರೂ ಪ್ರವೃತ್ತಿಸಂಕೋಚ ವಾಯಿತಲ್ಲವೇ! ಮುಸರೆ ಇಲ್ಲದ್ದನ್ನು ತೆಗೆದುಕೊಳ್ಳಬೇಕೆಂದರೆ, ಏನು ಮಾಡಿದರೂ ಅದು light ಆಗಿಯೇ ಆಗುತ್ತದೆ. (ಆದರೆ ಈ ಕಾಲದಲ್ಲಿ ನಾವು ಅದರಲ್ಲಿಯೂ research ಮಾಡಿ, ಮುಸರೆ ಇಲ್ಲದ್ದೂ, ಮುಸರೆಯಷ್ಟೇ heavy ಆಗುವಂತೆ ಆಗಲು ಕಂಡುಹಿಡಿದುಕೊಂಡಿದ್ದೇವೆ!!) ಇಲ್ಲಿ ಮುಸರೆ ತಿಂದರೆ ಪಾಪ, ಮುಸರೆ ಇಲ್ಲದ್ದು ತಿಂದರೆ ಪುಣ್ಯ ಎಂದೆಲ್ಲಾ ಯೋಚನೆಗಳು ಬರಬಾರದು. ಆಹಾರದ ಕಡೆ ಯೋಚನೆ ಇಲ್ಲದೆ, ನಮ್ಮ ಕೆಲಸ ಮಾಡಿಕೊಳ್ಳಲು ಯಾವುದನ್ನು, ಎಷ್ಟು ತೆಗೆದುಕೊಳ್ಳಬೇಕೋ ತೆಗೆದುಕೊಂಡರೆ ಸಾಕು. ನಿಜವಾಗಿಯೂ ಆ ಉಪವಾಸವು ಚರಿತಾರ್ಥವಾಗುತ್ತದೆ.

ನಿದ್ರೆ, ಜಾಗರಣೆಯೂ ಅಷ್ಟೆ. ನಿದ್ರೆ ಎನ್ನುವುದು ತಮೋಗುಣ ಪ್ರವೃತ್ತಿ. ಪ್ರತಿರಾತ್ರಿಯೂ ನಿದ್ರೆ ಮಾಡುವುದು ಇದ್ದೇ ಇದೆ. ಯಾವಾಗಲಾದರೂ 15 ದಿನಕ್ಕೊಮ್ಮೆಯೋ (ಏಕಾದಶೀ) ತಿಂಗಳಿಗೊಂದು ಬಾರಿಯೋ (ಮಾಸ ಶಿವರಾತ್ರಿ) ಅಥವಾ ಕೊನೆಗೆ ವರ್ಷಕ್ಕೆ ಒಮ್ಮೆಯಾದರೋ ನಿದ್ರೆ ಸ್ವಭಾವವನ್ನು ಸಂಕೋಚ ಮಾಡಿ, ಇಂದ್ರಿಯಗಳನ್ನು ಹತೋಟಿಗೆ ತಂದುಕೊಳ್ಳುವುದನ್ನು ಕಲಿತುಕೋ ಎನ್ನುವುದೇ ಉದ್ದೇಶ. ಇಲ್ಲಿ ಜಾಗರಣೆ ಎಂದರೆ ಎರಡು ಕಣ್ಣುಗಳನ್ನೂ ತೆರೆದುಕೊಂಡಿರುವುದು ಎಂದಲ್ಲ. ಇದನ್ನು ಇಟ್ಟುಕೊಂಡೇ ಎಲ್ಲರೂ 4 show cinema ನೋಡುವುದು, T.V., Video ನೋಡುವುದು, ಇಸ್ಪೀಟು ಆಡುತ್ತಾ ಕಳೆಯುವುದು, ಕಣ್ಣಿಗೆ ನಿಂಬೆ ರಸವನ್ನೋ, ಕರ್ಪೂರವನ್ನೋ ಹಾಕಿಕೊಳ್ಳುವುದು, ಹೀಗೆಲ್ಲಾ ರಾಕ್ಷಸಕೃತ್ಯಗಳಿಂದ ರಾತ್ರಿ ನಿದ್ರೆ ಮಾಡದೆ ಇರುತ್ತಿದ್ದಾರೆ! ಇದು ಜಾಗರಣೆಯೇ? ಶುಚಿಯಾಗಿ, ನಿದ್ರೆ ಕಡೆ ಯೋಚನೆ ಇಲ್ಲದೆ ಭಗವದಾರಾಧನೆಯೋ, ಪರೋಕಾರವೋ ಮಾಡಿದ್ದಾದರೆ ಅದು ನಿಜವಾಗಿ ಜಾಗರಣೆ.

ಹೀಗೆ ನಮ್ಮ ಇಂದ್ರಿಯಗಳ ಪ್ರವೃತ್ತಿಯನ್ನು ಸಂಕೋಚಗೊಳಿಸಿ, ಅವುಗಳನ್ನು ನಮ್ಮ ಹತೋಟಿಗೆ ತಂದುಕೊಳ್ಳುವುದಕ್ಕೋಸ್ಕರವೇ ಈ ನಿಯಮಗಳು ಹೊರಟಿವೆಯೇ ಹೊರತು, ಅವುಗಳನ್ನು ಹೇಗೋ ಒಂದು ಪಾಲಿಸುವುದರಿಂದಲೇ ದೇವರ ಅನುಗ್ರಹ ಸಿಗುವುದೆಂದಾಗಲಿ, ಪಾಲಿಸದಿದ್ದರೆ, ದೈವಕ್ರೋಧಕ್ಕೆ ಪಾತ್ರನಾಗುತ್ತಾನೆಂದಾಗಲಿ ಎಂಬುದಲ್ಲ. ರಜೋಗುಣ ತಮೋಗುಣಗಳ ಕಡೆಗೇ ವಾಲುತ್ತಿರುವ ಈ ಇಂದ್ರಿಯಗಳನ್ನು ಹೀಗೆ ಸ್ವಲ್ಪ ಹತೋಟಿಗೆ ತಂದುಕೊಂಡು ಅತ್ಯಂತ ಚಂಚಲವಾಗಿರುವ ಮನಸ್ಸನ್ನು ಹತೋಟಿಗೆ ತಂದುಕೊಳ್ಳಬೇಕೆಂಬ ಉದ್ದೇಶದಿಂದಲೇ ಈ ಪೂಜಾ ಹೋಮಾದಿಗಳು ಹೊರಟಿವೆ. ಮನಸ್ಸಿಗೂ ಸ್ವಭಾವ, ರಜೋಗುಣ ತಮೋಗುಣಗಳೇ. ಅದನ್ನೂ ಸತ್ತ್ವಗುಣದ ಕಡೆಗೆ ತಿರುಗಿಸಬೇಕೆಂದು, ಅದಕ್ಕೆ ಭಗವನ್ಮಹಿಮಾ ಚಿಂತನೆಯನ್ನು ಮಾಡುವ ಅಭ್ಯಾಸವನ್ನು ಮಾಡಿಸುವುದೇ ಸುಲಭ ಮಾರ್ಗವೆಂದು ತಿಳಿದು ಪೂಜೆ, ಅಭಿಷೇಕ, ಹೋಮಾದಿಗಳು ವಿಧಿಸಲ್ಪಟ್ಟಿವೆ. ಭಗವನ್ಮಹಿಮಾ ಚಿಂತನೆಯನ್ನು ಮನಸ್ಸಿನಲ್ಲಿಯೇ ಮಾಡಿಕೊಳ್ಳಲು ಸಾಧ್ಯವಿದ್ದರೂ, ಎದುರಿಗೆ ಕಣ್ಣಿಗೆ ಕಾಣುವಂತೆ, ಅವನ ಪ್ರತೀಕವಾಗಿ (symbol) ಯಾವುದಾದರೂ ವಿಗ್ರಹವೋ, ಪಟವೋ, ಚಕ್ರವೋ, ಕಲಶವೋ ಇದ್ದರೆ ಬಾಕಿ ಇಂದ್ರಿಯಗಳೂ ಮನಸ್ಸಿನ ಜತೆಯಲ್ಲಿ ಸೇರಲು ಸಹಕಾರಿಯಾಗುತ್ತದೆಂಬ ಅಭಿಪ್ರಾಯದಿಂದ ಲಿಂಗ, ವಿಗ್ರಹ, ಪಟ, ಯಂತ್ರ, ಚಕ್ರ, ಕಲಶ, ಮೇರು ಮುಂತಾದವುಗಳನ್ನು ಕೊಟ್ಟರು. ಅದರಲ್ಲಿಯೂ ನಾನಾ

ತರಹ ದೇವತೆಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರವರಿಗೆ ಇಷ್ಟವಾದದ್ದನ್ನು ಆರಿಸಿಕೊಂಡು, ಅದನ್ನೇ ಪರಮಾತ್ಮನ ಪ್ರತೀಕವಾಗಿಟ್ಟುಕೊಂಡು ಅದರಲ್ಲಿ ಮನಸ್ಸನ್ನೂ, ಕಣ್ಣನ್ನೂ ನಿಲ್ಲಿಸಿ, ಅವನ ಮಹಿಮೆಯನ್ನು ನಾನಾ ವಿಧವಾಗಿ ಚಿಂತನೆ ಮಾಡುವುದೇ ಸತ್ತ್ವಗುಣಾಭಿವೃದ್ಧಿಗೆ ಒಂದು ಸಾಧನ. ಆ ಮಹಿಮಾಚಿಂತನೆ ಮಾಡಿ ಮಹಾಮಹಿಮಸ್ವರೂಪನಾದ ಅವನಿಗೆ (ಅವನ ಪ್ರತೀಕಕ್ಕೆ) ನಮ್ಮ ಪ್ರೀತಿಯ ಕೃತಜ್ಞತೆಯ ಗೌರವದ ಕುರುಹಾಗಿ ನಾನಾ ವಿಧವಾದ ಉಪಚಾರಗಳನ್ನು ಅರ್ಪಿಸುವುದೇ ಪೂಜೆ ಹೋಮ ಇತ್ಯಾದಿಗಳು. ಒಂದೊಂದು ಮನೆಯಲ್ಲಿ ಒಂದೊಂದು ದೇವತೆಯನ್ನು ಪರಮಾತ್ಮನ ಪ್ರತೀಕವಾಗಿ ಇಟ್ಟುಕೊಂಡಿದ್ದಾರೆ. ಇದನ್ನೇ ಕುಲದೈವ, ಕುಲದೈವ ಎಂದು ಕರೆಯುತ್ತಿದ್ದೇವೆ. ಹಾಗೆಂದರೆ ಬೇರೆ ದೈವವನ್ನು ಉಪಾಸನೆ ಮಾಡಬಾರದೆಂದಲ್ಲ. ಅದು ಪರಂಪರೆಯಾಗಿ ಬಂದಿರುವುದರಿಂದ, ಅದರಲ್ಲಿ ಪ್ರೀತಿ, ಭಕ್ತಿ, ಗೌರವಗಳನ್ನು ಸಂಪಾದನೆ ಮಾಡುವುದು ಸುಲಭ ಅಷ್ಟೆ. ಇಲ್ಲಿ ನಾವೆಲ್ಲರೂ ಗಮನಿಸಬೇಕಾದದ್ದು ಎಂದರೆ ವಿಗ್ರಹಗಳು, ಲಿಂಗಗಳು ಇತ್ಯಾದಿಗಳೆಲ್ಲಾ ಅವನ (ಪರಮಾತ್ಮನ) ಪ್ರತೀಕಗಳೇ ಹೊರತು, ಪರಮಾರ್ಥವಲ್ಲ. ಆ ವಿಗ್ರಹದಲ್ಲಿಯೇ ಲಿಂಗದಲ್ಲಿಯೇ ಏನೋ ಶಕ್ತಿ ಅಡಗಿದೆ ಎಂದು ಯಾರಾದರೂ ಭಾವಿಸಿದ್ದರೆ, ಅದು ಅಪಾಯಕರವಾದ ಭ್ರಾಂತಿ. ಅದರಲ್ಲಿ ದೇವರನ್ನು ಭಾವಿಸುವುದು ನಮಗೆ ಬಿಟ್ಟಿದ್ದೇ ಹೊರತು, ಅದರಲ್ಲಿಯೇ ಏನೋ ಇರುವುದಿಲ್ಲ. ಅದರಲ್ಲಿ ಏನೋ ಇದೆಯೆಂಬ ಭ್ರಾಂತಿಯೇ ಇವತ್ತಿನ ಭಯ, ಕಳವಳ, ಆಸೆಗಳಿಗೆ ಕಾರಣವಾಗಿರುವುದು. ಪೂಜೆಯನ್ನು ಮಾಡದಿದ್ದರೆ ಏನಾಗುತ್ತದೆಯೋ, ಮಾಡಿದರೂ ನಿಯಮದಂತೆ ಮಾಡದಿದ್ದರೆ ಏನೋ! ಎಂಬ ಭಯ, ಮಾಡುವಾಗಲೂ ಅವನು ತೃಪ್ತನಾಗುತ್ತಾನೆಯೋ ಇಲ್ಲವೋ ಎಂಬ ಕಳವಳ, ಅವನಿಗೆ ಆದಷ್ಟು ಹೆಚ್ಚು ಮಾಡಿದರೆ ನಮ್ಮ ಇಷ್ಟಾರ್ಥಗಳನ್ನು ಈಡೇರಿಸುತ್ತಾನೆಂಬ ಆಸೆ. ಇಷ್ಟು ಇವತ್ತು ನಮ್ಮ ಹಿಂದೂ ಸಮಾಜವನ್ನು ಕಾಡುತ್ತಿರುವ ನಿರಾಧಾರವಾದ ಮಿಥ್ಯಾಪ್ರತೀತಿ. ಇದನ್ನು ನಾವು ಕಳಕೊಂಡ ಹೊರತು, ನಾವು ಖಂಡಿತ ಉದ್ಧಾರವಾಗಲಾರೆವು.

ನೀನು ಕೇಳಿದ ಪ್ರಶ್ನೆಗಳಿಗೆ ಮೇಲೆ ಬರೆದಿರುವ General Explanationನಲ್ಲಿಯೇ ಉತ್ತರ ಸಿಕ್ಕಿರಬೇಕು. ಶಿವರಾತ್ರಿಯಲ್ಲಿ ಕಷ್ಟಪಟ್ಟು ಉಪವಾಸ ಇದ್ದು, ಪ್ರಾಣಬಿಟ್ಟುಕೊಂಡು ಪೂಜೆ ಮಾಡಿದ ಮಾತ್ರಕ್ಕೇ ಯಾವ ವಿಶೇಷವಾದ ಪುಣ್ಯವೂ ಸಿಗುವುದಿಲ್ಲ. ಆ ರೀತಿ ವರ್ಷಪೂರ್ತಿ, ಪ್ರತಿದಿನವೂ ಮಾಡುವ ಸಾಮರ್ಥ್ಯ ನಮಗೆ ಬರಬೇಕು. ಅದು ಸಾಧ್ಯವಿಲ್ಲದ್ದರಿಂದ, ವರ್ಷದಲ್ಲಿ ಒಂದು ದಿನವಾದರೂ, ಶುಚಿಯಾಗಿ ಉಪವಾಸವಿದ್ದು, ದೇಹೇಂದ್ರಿಯಗಳ ಕಡೆಗೆ ಸ್ವಲ್ಪ ಗಮನಕೊಡದೆ, ಭಗವನ್ನಾಮ ಚಿಂತನೆಯಲ್ಲಿ ಕಾಲ ಕಳೆಯಲಿ ಎಂಬ ನಿಯಮವೇ ಶಿವರಾತ್ರಿ. ಅದನ್ನು ವಿಧಿಯಾಗಿ ಮಾಡಿದರೆ, ಎಲ್ಲರೂ ಮಾಡುತ್ತಾರೆ. ಒಬ್ಬನೇ ಮಾಡುವುದಕ್ಕಿಂತ ಇನ್ನೂ ನಾಲ್ಕು ಜನ ನಮ್ಮಂತೆಯೇ ಮಾಡುವವರಿದ್ದರೆ, ಅವರ ಜತೆಯಲ್ಲಿ ಸೇರಿ ಮಾಡಲು ಉತ್ಸಾಹ ಬರುತ್ತದೆ. ಅದೇ Cultural Disciplineನಲ್ಲಿರುವ ಒಂದು ವೈಶಿಷ್ಟ್ಯ. ನಾನೊಬ್ಬನೇ ರಾತ್ರಿಯೆಲ್ಲಾ ಕೂತು ರುದ್ರ ಹೇಳುವುದೆಂದರೆ ಕಷ್ಟ. ಆದರೆ ಇನ್ನೂ 10 ಜನ ಜತೆಯಲ್ಲಿದ್ದರೆ ಉತ್ಸಾಹವಾಗಿ ಹೇಳಬಹುದು. ಹೇಳಿದ ಶ್ರಮವೂ ತಿಳಿಯುವುದಿಲ್ಲ. ನಿದ್ರೆಯಿಲ್ಲದ ಶ್ರಮವೂ ತಿಳಿಯುವುದಿಲ್ಲ. ಇಂದ್ರಿಯಗಳನ್ನು ಒಂದು ದಿನವಾದರೂ ಹತೋಟಿಯಲ್ಲಿಟ್ಟಂತಾಗುತ್ತದೆ. ಇಷ್ಟೇ ವಿಶೇಷ. ಬೆಳಗಿನಿಂದ ಉಪವಾಸವಿದ್ದು ರುಚಿಯಿಂದ ರಾತ್ರಿ ಪೂಜೆ ಮಾಡಲು ಸಾಧ್ಯವಾದರೆ ಬಹಳ ಸಂತೋಷ. ಆ ಪರಮಾತ್ಮನಿಗೋಸ್ಕರ ಒಂದು ದಿನದ ನಾಲಗೆ ಚಾಪಲ್ಯವನ್ನು ತಡೆಗಟ್ಟಿದೆ ಎಂಬ ಅಪರಿಮಿತವಾದ ಆನಂದ. ಹಾಗೆ ಉಪವಾಸ ಇರಲು ಸಾಧ್ಯವಿಲ್ಲ, ಪೂಜೆಯೇ ಮಾಡಲು ಆಗುವುದಿಲ್ಲ ಎನ್ನುವುದಾದರೆ ಏನಾದರೂ ತಿಂದು ಮಾಡುವುದು. ತಿನ್ನುವುದು ಎಂದಾಗ ಹೊಟ್ಟೆ ಬಿರಿಯ ತಿನ್ನುವುದೆಂದಲ್ಲ. ಶುಚಿಯಾಗಿ ಪೂಜೆ ಮಾಡಬೇಕು, ದೇಹಕ್ಕೂ ಶ್ರಮವಾಗಬಾರದು, ಅದಕ್ಕೆಷ್ಟು ಆಹಾರ ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುವುದು. ಮನಸ್ಸು ದೇಹದ ಗಮನವನ್ನು ಬಿಟ್ಟು ಭಗವನ್ಮಹಿಮಾಚಿಂತನೆಯಲ್ಲಿ ತೊಡಗಬೇಕು. ದೇಹಕ್ಕೆ ಬಹಳ ಶ್ರಮವಾಗಿಬಿಟ್ಟರೆ ಮನಸ್ಸು ಅಲ್ಲಿಯೇ ಇದ್ದುಬಿಡುತ್ತದೆ. ಇನ್ನು ಭಗವನ್ಮಹಿಮಾಚಿಂತನೆಯೆಲ್ಲಿ ಬಂತು! ಅದರಲ್ಲಿ ಮುಸರೆ, ಗಿಸರೆ ಎನ್ನುವ ಭೇದವೇನೂ ಇಲ್ಲ. ಮುಸರೆ ಇಲ್ಲವೆಂದು, ನಾನಾ ತರಹ ತಿಂಡಿ, ತಿನಿಸುಗಳನ್ನು ಮಾಡಿ ಚೆನ್ನಾಗಿ ತಿಂದು, ಹೊಟ್ಟೆ ಭಾರ ಮಾಡಿಕೊಂಡು ಪೂಜೆಗೆ ಕೂರುವುದಕ್ಕಿಂತ, ಮುಸರೆಯನ್ನೇ ಸ್ವಲ್ಪ ಸ್ವೀಕರಿಸಿ, ಹಗುರವಾದ ದೇಹದಿಂದ ಸಂತೋಷವಾಗಿ ಪೂಜೆ ಮಾಡುವುದು ಉತ್ತಮ ಪಕ್ಷ. ಮುಸರೆ ತಿನ್ನಲಿಲ್ಲವೆನ್ನುವುದು ಮಾತ್ರವೇ ತೆಗೆದುಕೊಂಡರೆ ಅದು ಸಮಾಧಾನವಲ್ಲ, ಆತ್ಮವಂಚನೆ. ಬೀಗಿತ್ತಿಯ ಮನೆ ವಿವಾಹ ಅನಿವಾರ್ಯವಾದ ಸಂದರ್ಭ, ಬಿಡಿಸಿಕೊಳ್ಳಲು ಸಾಧ್ಯವಿಲ್ಲವೆನ್ನುವುದಾದರೆ ಅದನ್ನೂ ಮುಗಿಸಿಕೊಂಡು ಬಂದು, ನಿರಾಳವಾಗಿ ಮಾರನೆ ದಿನ ಶಿವರಾತ್ರಿಯನ್ನು ಮಾಡುವುದು!!! ನನ್ನ ಧೋರಣೆ ನಿಮಗೆ ಆಶ್ಚರ್ಯವಾಗಬಹುದು. ಪುನಃ ಹೇಳಬಯಸುತ್ತೇನೆ, ಶಿವರಾತ್ರಿಯೇ (ಕೃಷ್ಣಪಕ್ಷ ಚತುರ್ದಶಿ) ನಮಗೆ ಯಾವ ಫಲವನ್ನೂ ಕೊಡುವುದಿಲ್ಲ. ಆವತ್ತಿನ ವಿಶೇಷ ಪೂಜೆಯಿಂದ ನಮಗೆ ಹೆಚ್ಚು ಮಾನಸಿಕ ಸಾತ್ತ್ವಿಕತೆ

ಉಂಟಾಗುವುದಾದರೆ ಅದೇ ಫಲ. ಅನಿವಾರ್ಯ ಸಂದರ್ಭದಲ್ಲಿ ಅದನ್ನು ಇನ್ನೊಂದು ದಿನ ಮಾಡಿ ಪಡೆದುಕೊಳ್ಳಬಹುದಲ್ಲವೇ !

ಸಮಿಧಾಧಾನವನ್ನು ಬೆಳಗ್ಗೆ ಸಾಯಂಕಾಲ ಎರಡು ಹೊತ್ತೂ ಮಾಡಬೇಕು. ಎರಡು ಹೊತ್ತೂ ಸಾಧ್ಯವಾಗಲಾರದು ಎನ್ನುವುದಾದರೆ, ಸಾಯಂಕಾಲವಾದರೂ ಮಾಡಬೇಕು."ಓಂ" ಕಾರ "ಶ್ರೀಃ" ಎರಡೂ ಮಂಗಳಕರವಾದ ಶಬ್ದಗಳು. ಆರಂಭದಲ್ಲಿ ಮಂಗಳಕರವಾಗಿ ಆರಂಭಿಸೋಣವೆಂಬ ಉದ್ದೇಶದಿಂದ ಬರೆಯುತ್ತೇವೆ. ಯಾವುದನ್ನು ಬೇಕಾದರೂ ಬರೆಯಬಹುದು, ಅದಕ್ಕೆ ಇನ್ನಾವ special significanceಊ ಇಲ್ಲ.

ಚಿ|| ಗಳಿಗೆ ಆಶೀರ್ವಾದಗಳು

ಇತಿ ನಿನ್ನವ

ಕುಮಾರಸ್ವಾಮಿ

೪೭೦

ಸತ್ತ್ವಗುಣಾಭಿವೃದ್ಧಿ

'ದಾನ'ದ ಬಗೆಗೆ, ಸವಿತೃವನ್ನು ಪ್ರಾರ್ಥಿಸುವ ಬಗೆಗೆ ; ಸಂಧ್ಯಾವಂದನೆಯ ವಿಸ್ತಾರ, ಸಮಿಧಾಧಾನಕ್ಕೆ ಕರ್ಪೂರ ; ದೇವರ ಅವತಾರ

ಕುಶಲಮ್ ಶ್ರೀ : Madras

24.3.88

ಶ್ರೀಕಂಠ !

ನಿನ್ನ ಕಾಗದ ತಲಪಿತು. ನಿನ್ನ ಸ್ನೇಹಿತರ ಆಹ್ವಾನಕ್ಕೆ ನಾನು ಚಿರಋಣಿ. ಆದರೆ ಅಷ್ಟು ದೂರದ ಪ್ರಯಾಣವೇ ನನಗೆ ತಲೆಸುತ್ತು ಬರುವಂತಾಗುತ್ತದೆ. ಅದಕ್ಕೇ ನಾನು, ಇಷ್ಟವಿದ್ದರೂ ಅನೇಕ Conferenceಗಳಿಗೆ ಹೋಗಿಲ್ಲ. ಕಾಶಿಗೆ ಕೂಡ ಹೋಗಿಲ್ಲ. ಆದ್ದರಿಂದ ಕ್ಷಮಿಸಬೇಕೆಂದು ಹೇಳು.

1) ಸ್ವಭಾವವಾದ ರಜೋಗುಣ, ತಮೋಗುಣಗಳನ್ನು, ಸತ್ತ್ವಗುಣದ ಕಡೆಗೆ ತಿರುಗಿಸಲು ಪೂಜೆ, ಹೋಮಾದಿಗಳೇ ಆಗಬೇಕೆಂಬ ನಿಯಮವಿಲ್ಲ. ಸತ್ತ್ವಗುಣಗಳನ್ನು ವಿವೇಕದಿಂದ ಸ್ವತಂತ್ರವಾಗಿ ಅಭ್ಯಾಸ ಮಾಡಬಹುದು. ಹಾಗೆಯೇ ವಿವೇಕದಿಂದ ರಜೋಗುಣ, ತಮೋಗುಣಗಳನ್ನು ಅಡಗಿಸಬಹುದು. ಒಂದೊಂದು ಸಾರಿ ನನಗೆ ಪೂಜೆ ಹೋಮಾದಿಗಳ ಸಹಾಯವೇ ಇಲ್ಲದೆ ಮಾಡುವುದು ಉತ್ತಮಪಕ್ಷವೆಂದು ತೋರುತ್ತದೆ. ಏಕೆಂದರೆ ಅವುಗಳನ್ನು ಮಾಡಲು ಹೊರಟರೆ ಮುಖ್ಯವಾದ ಉದ್ದೇಶವೇ ಮರೆತು ಹೋಗಿ, ಯಾವುಯಾವುದೋ ಕಾಮ್ಯಫಲಗಳನ್ನು ಕೇಳಲು ಆರಂಭಿಸಿ, ಕೊನೆಗೆ ಯಾಂತ್ರಿಕವಾಗಿ ಉಳಿಯುತ್ತವೆ (ಈಗ ನಮಗೆಲ್ಲಾ ಆಗಿರುವಂತೆ!). ಅದನ್ನು ತಪ್ಪಿಸಬಹುದಲ್ಲವೇ! ಈಗ ಮಾಡುತ್ತಿರುವ ಕ್ರಿಯೆಗಳಿಗೆ ಸಮರ್ಥನೆ ಮಾಡಲು ಆ explanation ಕೊಟ್ಟಿದ್ದೇನೆ. ಪ್ರಾಯಃ, ವಿವೇಕವಿಲ್ಲದ ಅತ್ಯಂತ ಮಂದಾಧಿಕಾರಿಗಳು ಹೇಗಾದರೂ ಆರಂಭಿಸಲಿ ಎಂಬ ದೃಷ್ಟಿಯಿಂದ ಮಾಡಿರಬಹುದು !

2) ದಾನಾದಿಗಳ ವಿಷಯದಲ್ಲಿ, ನಾನು ಇಷ್ಟು ಹೇಳಬಲ್ಲೆ,

ದಾತವ್ಯಮಿತಿ ಯದ್ದಾನಂ ದೀಯತೇ ಅನುಪಕಾರಿಣೇ।

ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಮ್॥

ಎಂದು ಗೀತೆ. ತ್ಯಾಗ ಮಾಡಬೇಕು ಎಂಬ ಕರ್ತವ್ಯ ಬುದ್ಧಿಯಿಂದ ನಮಗೆ ಪ್ರತಿ ಉಪಕಾರ ಮಾಡಲು ಯೋಗ್ಯತೆ ಇಲ್ಲದಿರುವ, ನಮಗೆ ಆಗಲೇ ಉಪಕಾರ ಮಾಡದಿರುವ ವ್ಯಕ್ತಿಗೆ, ಸಕಾಲದಲ್ಲಿ, ಆ ಸ್ಥಳದಲ್ಲಿ ದಾನದಿಂದ ಪ್ರಯೋಜನವಾಗುವವನಿಗೆ ಕೊಡುವುದು ಸಾತ್ವಿಕದಾನವೆಂದು ಹೆಸರು. ಹಾಗೆಯೇ ರಾಜಸ, ತಾಮಸ ದಾನಗಳಿವೆ. ನಾವುಗಳೆಲ್ಲಾ ಮಾಡುತ್ತಿರುವುದು ರಾಜಸ, ತಾಮಸ ದಾನಗಳೇ! ಇರುವವರಿಗೇ ಕೊಡುತ್ತೇವೆ. ಅದು ಕೇವಲ ಹೊಗಳಿಕೆಯ ಆಸೆಯಿಂದ. ಅವರಷ್ಟೋ, ಅವರಿಗಿಂತಲೂ ಹೆಚ್ಚಾಗಿಯೋ ನಮಗೂ ಐಶ್ವರ್ಯವಿದೆ ಎಂದು ತೋರಿಸಿಕೊಳ್ಳುವ ಉದ್ದೇಶ. ನಾಲ್ಕು ಜನಕ್ಕೆ ತಿಳಿಯಲಿ, ನಮ್ಮನ್ನು ಹೊಗಳಲಿ ಎಂಬ ಉದ್ದೇಶ. ಇಷ್ಟು ಬಿಟ್ಟರೆ ನಾವು ಕೊಡುವುದರಲ್ಲಿ ಬೇರೆ ಯಾವ ಉದ್ದೇಶವೂ ಕಾಣುವುದಿಲ್ಲ. ಈ ವೆಳ್ಳೆಪಾಕುಗಳನ್ನು ವಿತರಣೆ ಮಾಡುವುದಕ್ಕೆ ನಾನು ಕಡುವಿರೋಧಿ. ಅದರಲ್ಲಿಯೂ ಈ ವಿವಾಹೋಪನಯನಗಳಲ್ಲಿ ಮಾಡುವುದು ಬಹು ಅನ್ಯಾಯ. ನಮ್ಮ ಅಹಂಕಾರಪ್ರದರ್ಶನವೇ ಹೊರತು ಬೇರೇನೂ ಅಲ್ಲ. ಆದರೆ ನೀನು ಬರೆದಿರುವಂತೆ ಒಬ್ಬನು ಅದನ್ನು ಅನ್ಯಾಯವಾಗಿ ವ್ಯಯ ಮಾಡುತ್ತಾನೆಂದು ಗೊತ್ತಿದ್ದರೂ ದಾನ ಮಾಡುವುದು ಧರ್ಮವಾಗಲಾರದು. ಅವನು ದಾನಕ್ಕೆ ಪಾತ್ರನಲ್ಲ. ಯದ್ಯಪಿ ದಾನ ಕೊಟ್ಟಮೇಲೆ ಉಪಯೋಗಿಸಿಕೊಳ್ಳುವ ಸ್ವಾತಂತ್ರ್ಯ ಅವನಿಗುಂಟು. ಆದರೆ ನಮಗೆ ಅವನು ಮಾಡುವ ದುರುಪಯೋಗ ಗೊತ್ತಿರುವಾಗ ಕೊಟ್ಟರೆ ಅಪಾತ್ರದಲ್ಲಿ ದಾನ ಮಾಡಿದಂತಾಗುತ್ತದೆ. ಅವನಿಗೆ ಅದರಿಂದ ಸಂತೋಷ ಸಿಗಬಹುದು. ಆದರೆ ಆ ಕಾರ್ಯ ತಪ್ಪು ಎಂದು ನಮಗೆ ಗೊತ್ತಿರುವಾಗ ಅದರಿಂದ ಅವನನ್ನು ವಿಮುಖನನ್ನಾಗಿ ಮಾಡುವುದು ನಮ್ಮ ಕರ್ತವ್ಯ. ನಮ್ಮನ್ನು ಬಂದು ಕೇಳಲು ಸಂಕೋಚಪಡುವ ವ್ಯಕ್ತಿಗೆ ಕೊಡು ಎಂದರು. ಯಾಚನೆ ಮಾಡಲು ಹೊರಟಾಗ ದೇಹ, ಮನಸ್ಸು, ಲಜ್ಜೆಯಿಂದ ಒಂದು ಹಿಡಿಯಾಗಬೇಕು. ಅಂಥವನು ಸತ್ಪಾತ್ರ. ಯಾಚನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವವನಲ್ಲ. ಅದಕ್ಕೇ ಹಿಂದೆ ಬ್ರಾಹ್ಮಣರಿಗೆ ದಾನ ಮಾಡಬೇಕು ಎಂದು ಹೇಳುತ್ತಿದ್ದರು. ಕಾರಣ

ಅವನು ಸ್ವಭಾವವಾಗಿ ಯಾಚಿಸಲಾರ (ಕಷ್ಟದಲ್ಲಿದ್ದರೂ). ಯಾಚನೆ ಎನ್ನುವುದೇ ಒಂದು ದೈನ್ಯತೆ. ಅದು ಆತ್ಮಗುಣವಲ್ಲ. ಅದನ್ನು ಬ್ರಾಹ್ಮಣ ಎಂದಿಗೂ ಮಾಡುತ್ತಿರಲಿಲ್ಲ. ತೀರಾ ತಡೆಯಲು ಸಾಧ್ಯವಾಗದಾಗ ಮಾಡುತ್ತಿದ್ದ. ಆದ್ದರಿಂದ ಅಂಥವರು ಸತ್ಪಾತ್ರರೆಂದು ಹೇಳಿದರು. ಆದ್ದರಿಂದ ಅವುಗಳನ್ನೆಲ್ಲಾ ಯೋಚಿಸಿ ನಾವು ಮಾಡಬೇಕು. ದಾನ ಮಾಡಿದ್ದರಿಂದ ಪುಣ್ಯ ಬರುತ್ತದೆಂದು ಕೊಡುವುದೋ, ಅವನಿಗೆ ಉಪಕಾರವಾಗುತ್ತದೆಂದು ಕೊಡುವುದೋ ಎಲ್ಲವೂ ರಜೋಗುಣ. ಕೊಡಬೇಕೆಂದು ಕೊಡಬೇಕು. ಅದರ ಬಗ್ಗೆ ಕಿಂಚಿತ್ತೂ ಚಿಂತಿಸಬಾರದು. ಅದನ್ನು recognise ಮಾಡಬೇಕೇಂದೋ acknowledge ಮಾಡಬೇಕೆಂದೋ ಖಂಡಿತ ಅಪೇಕ್ಷಿಸಬಾರದು. ಅದು ಸಾತ್ವಿಕದಾನ. ನಾವು ಈ ವೆತ್ಲೆಪಾಕುಗಳನ್ನು ಕೊಡುವದಂತೂ ಕೇವಲ ತಾಮಸದಾನ. ಕೊಡದಿದ್ದರೆ ಲೋಭಿ ಎಂದು ಹೇಳುತ್ತಾರಲ್ಲಾ ಎಂಬ ಭಯದಿಂದ ಕೊಡುತ್ತಿದ್ದೇವೆ. ಅನೇಕರು ದಾನಮಾಡಿ, ಉಪಕಾರಮಾಡಿ, ತಮ್ಮ ಜೀವನದಲ್ಲಿ ಒಬ್ಬರ ಕೈಯಲ್ಲಿಯಾದರೂ ಅದನ್ನು mention ಕೂಡ ಮಾಡದೆ ಇರುವುದನ್ನು ನಾನು ನೋಡಿದ್ದೇನೆ. ಇತರರು ಹೇಳಿದರೂ ಲಜ್ಜೆಪಟ್ಟುಕೊಳ್ಳುವುದನ್ನು ಕಂಡಿದ್ದೇನೆ. ಅವರು ಮಹಾನುಭಾವರು. ಬಲಗೈಯಲ್ಲಿ ಕೊಟ್ಟದ್ದು ಎಡದ ಕೈಗೆ ತಿಳಿಯಬಾರದು ಎಂದು ಗಾದೆಯನ್ನು ಹೇಳುತ್ತಾರೆ. ಆದರೆ ಎಡಗೈ ಏಕೆ, ಇಡೀ ಪ್ರಪಂಚಕ್ಕೇ ತಿಳಿಯಬೇಕೆಂದು ನಮ್ಮ ಆಸೆ !! ಇದೆಂಥಾ ದಾನ !

3) ಸವಿತೃವನ್ನು ಪ್ರಾರ್ಥಿಸುವಂತೆ ಬಾಕಿಯವರನ್ನು ಏಕೆ ಮಾಡುವುದಿಲ್ಲ ಎಂಬ ಪ್ರಶ್ನೆ. ನಾನು ಮೊದಲೇ ಹೇಳಿದ್ದೇನೆ. ನಾನು ಕೊಡುತ್ತಿರುವ ವಿವರಣೆಯೆಲ್ಲಾ ಈಗ ನಾವು ಮಾಡುತ್ತಿರುವುದನ್ನು ಅರ್ಥವತ್ತಾಗಿ ಸಮರ್ಥನೆ ಮಾಡುವುದಕ್ಕೇ ಹೊರತು ಹಾಗೆಯೇ ಮಾಡಿಯೇ ತೀರಬೇಕು ಎಂದು ಹೇಳುವುದಕ್ಕಲ್ಲ. ಕೃತಜ್ಞತೆಯೆನ್ನುವುದು ಎಲ್ಲರೂ ಸುಲಭವಾಗಿ ಅಭ್ಯಾಸ ಮಾಡಲು ಸಾಧ್ಯವಾದ ಆತ್ಮಗುಣ. ಅದೇ ಸತ್ತ್ವಗುಣ. ಅದು ಬರಬೇಕಾದರೆ ಉಪಕೃತನಾಗಿರುವ ಭಾವನೆ ಬರಬೇಕು. ಹೆಚ್ಚು ಉಪಕೃತನಾಗಿರುವ ಕಡೆ ಆ ಭಾವನೆಯು ಹೆಚ್ಚು ಡಿಗ್ರಿಯಲ್ಲಿ ಅಭಿವ್ಯಕ್ತವಾಗುವುದು ಸಹಜವಲ್ಲವೇ ! ತಾಯಿ ತಂದೆಗಳಿಬ್ಬರಿಂದಲೂ ನಾವು ಉಪಕೃತರಾಗಿದ್ದರೂ, ತಾಯಿಯ ಋಣ ಹೆಚ್ಚೆಂದೆನಿಸುವುದಿಲ್ಲವೇ? ಅದೇ ರೀತಿ ತಾಯಿಯ ವಿಷಯದಲ್ಲಿ ಹೃದಯವು ಹೆಚ್ಚು ಕೃತಜ್ಞತೆಯಿಂದ ಉಬ್ಬುತ್ತದಲ್ಲವೇ! ಹಾಗೆಯೇ ಹೊರಗಿನ ಪಂಚಮಹಾಭೂತಗಳಲ್ಲಿಯೂ ಕೂಡ. ಸೂರ್ಯನಿಲ್ಲದೆ ನಾವು ಜೀವಿಸಲಾರೆವು ಎಂಬುದು ಪ್ರತಿಯೊಬ್ಬನಿಗೂ ವಿದಿತವಾದ ವಿಷಯ. ಆದ್ದರಿಂದ ಅವನ ವಿಷಯದಲ್ಲಿ ಕೃತಜ್ಞತೆ ಉತ್ಪತ್ತಿಯಾಗುವುದು ಎಲ್ಲರಿಗೂ ಸಹಜ, ಸುಲಭ. ಅವನಷ್ಟೇ ನಮಗೆ ಚಂದ್ರನಲ್ಲಿ ಬರುವುದಿಲ್ಲ. ಆದ್ದರಿಂದಲೇ ಚಂದ್ರನಿಗೆ ಹೆಚ್ಚು ಪೂಜಾದಿಗಳಿಲ್ಲ. ಆದರೆ ಜಲಾಭಿಮಾನಿ ದೇವತೆಯಾದ ವರುಣನಿಂದ ಅತ್ಯಂತ ಉಪಕೃತರಾಗಿದ್ದೇವೆ. ಪ್ರತಿಯೊಂದು ಕಾರ್ಯದಲ್ಲಿಯೂ ಅವನ ಸ್ತೋತ್ರ ಇದ್ದೇ ಇದೆ. ರಾತ್ರ್ಯಭಿಮಾನಿ ದೇವತೆಯೆಂದು, ಸಾಯಂಕಾಲದ ಸಂಧ್ಯೋಪಸ್ಥಾನದಲ್ಲಿಯೂ ಅವನನ್ನು ಪ್ರಾರ್ಥಿಸುತ್ತೇವೆ. ವಾಯು ಉಪಕಾರ ಮಾಡಿಲ್ಲವೇ ಎಂದು ಕೇಳಬಹುದು. ಅದನ್ನು ಮರೆತಿಲ್ಲ. ಭೋಜನಸಮಯದಲ್ಲಿ ಪ್ರಾಣಾಹುತಿ ಕೊಡುವುದೇ ಆ ಪಂಚಮಹಾಭೂತಗಳಲ್ಲಿ ಒಂದಾದ ವಾಯುವಿಗೆ ನಾವು ಸಲ್ಲಿಸುವ ಕೃತಜ್ಞತೆ. ಭೂಮಿಯನ್ನೂ ಸ್ತೋತ್ರ ಮಾಡುತ್ತೇವೆ. ಆದರೆ ಅದರ ಉಪಕಾರ ನಮಗೆ ಹೆಚ್ಚಾಗಿ ಕಾಣುವುದಿಲ್ಲ, ಬಂಜರು ಭೂಮಿಯಲ್ಲಿ, ಮರಳುಗಾಡಿನಲ್ಲಿ ಭೂಮಿಯಿಂದ ಅಪಕಾರವೇ ಎನ್ನಿಸಿಬಿಡುತ್ತದೆ. ಅದು ನಮ್ಮನ್ನು ಹೊತ್ತುಕೊಂಡಿದೆ, ತಿರುಗುತ್ತಿದೆ ಇದೆಲ್ಲಾ ಭಾವನೆ ಬರಿಸಿಕೊಳ್ಳುವವನಿಗೆ, ಈ ಪಂಚಮಹಾಭೂತಗಳನ್ನೂ (ಪೃಥಿವೀ, ಅಪ್ಪು, ತೇಜಃ, ವಾಯು, ಆಕಾಶ) ನಮ್ಮನ್ನೂ, ಪ್ರಪಂಚವನ್ನೂ ಸೃಷ್ಟಿ ಮಾಡಿರುವ ಅಗೋಚರನಾದ, ಅಚಿಂತ್ಯನಾದ, ಸಚ್ಚಿದಾನಂದ ಸ್ವರೂಪನಾದ ಆ ಪರಮಾತ್ಮನನ್ನೂ ಸ್ಮರಿಸಿಕೊಳ್ಳುವುದು ಸುಲಭವಲ್ಲವೇ ! ಆ ಸ್ಮರಣೆ ಕ್ರಮೇಣ ಬರಬೇಕೆಂಬುದೇ ಈ ಚಿಲ್ಲರೆ ಭೂತಗಳ ಸ್ಮರಣೆಯ ಉದ್ದೇಶ. ಸ್ಥೂಲದಿಂದ ಸೂಕ್ಷ್ಮ. ಜ್ಞಾತದಿಂದ ಅಜ್ಞಾತ. ಆ ಸ್ಥೂಲದಲ್ಲಿಯೂ ನಮಗೆ (ಸಾಮಾನ್ಯರಿಗೆ) ತಕ್ಷಣ ತೋರುವುದನ್ನು ಆರಿಸಿಕೊಂಡಿದ್ದಾರೆ ಮಹರ್ಷಿಗಳು. ನಮ್ಮ ತಾಯಿಯಲ್ಲಿ ಕೃತಜ್ಞತೆಯನ್ನು ತೋರಿಸುತ್ತೇನೆಂದರೆ, ನಮ್ಮ ತಾಯಿ ಹುಟ್ಟಲು ಕಾರಣಭೂತರಾಗಿರುವ ಅವಳ ತಂದೆ-ತಾಯಿಗಳ ಸ್ಮರಣೆಯನ್ನು ಮಾಡಬೇಡವೇ ಎಂದು ಕೇಳಬಾರದು. ಅವರನ್ನೂ ಸ್ಮರಣೆ ಮಾಡಬೇಕು ನಿಜ. ಆದರೆ ನನಗೆ ನೇರವಾಗಿ ಅವರ ಉಪಕಾರ ಕಾಣಿಸುತ್ತಿಲ್ಲ. ನನಗೆ ಆರ್ಥಿಕವಾಗಿ ಒಬ್ಬ ಉಪಕಾರ ಮಾಡಿದ್ದಾನೆಂದರೆ, ಅವನು ನನಗೆ ಹಣ ಕೊಡಲು ಕಾರಣಭೂತನಾದ ಅವನ employeesಗೂ ನಾನು ಕೃತಜ್ಞತೆ ಸಲ್ಲಿಸಬೇಕೆಂದು ಹೇಳುವುದು ಅಷ್ಟು practical ಆಗಲಾರದು. ಇದೆಲ್ಲದರಲ್ಲಿಯೂ ಉದ್ದೇಶ, ಕೃತಜ್ಞತೆಯೆಂಬ ಸತ್ತ್ವಗುಣ ಹೃದಯದಲ್ಲಿ ಮೂಡಬೇಕು, ಅಭಿವ್ಯಕ್ತವಾಗಬೇಕು. ಅದಕ್ಕೆ ಸಹಾಯಕವಾದದ್ದಷ್ಟೂ ನಮಗೆ ಗ್ರಾಹ್ಯ. ಅಪ್ರತ್ಯಕ್ಷವಾಗಿ, ಅಗೋಚರವಾಗಿರುವ ವ್ಯಕ್ತಿಯಿಂದ ಆಗಿರುವ ಉಪಕಾರವನ್ನು

ಸ್ಮರಿಸಿಕೊಳ್ಳುವುದು ಕಷ್ಟವಲ್ಲವೇ ! ಹಾಗೆ ಸ್ಮರಿಸಿಕೊಳ್ಳುವ ಸಾಮರ್ಥ್ಯ ನಮಗೆ ಬಂದು ಬಿಟ್ಟರೆ, ಈ ಚರಾಚರ ವಸ್ತುಗಳ ಸೃಷ್ಟಿಗೇ ಕಾರಣಭೂತನಾಗಿರುವ ಆ ಪರಮಾತ್ಮನನ್ನೇ ಸ್ಮರಿಸಿಕೊಳ್ಳ ಬಹುದಲ್ಲವೇ ! ಅವನು ಅಗೋಚರ, ನಾಮರೂಪಗಳಿಲ್ಲದವನು, ನಿರಾಕಾರ, ನಿರ್ಗುಣ, ಎಂದೆಲ್ಲಾ ಇರುವುದೆಂದಲ್ಲವೇ, ನಾವು ಸ್ಥೂಲವಾದ ಸೂರ್ಯ, ಚಂದ್ರ, ನೀರು, ವಾಯು, ಇಂದ್ರಾದಿ ದೇವತೆಗಳನ್ನು ಹುಡುಕಿಕೊಂಡು ಹೊರಟಿರುವುದು!! ಸ್ಥೂಲವಾದ ರೀತಿಗೆ ಯಾವಾಗ ಇಳಿದೆವೋ ಆಗ ಉಪಕಾರದ ಡಿಗ್ರಿ, ಕಣ್ಣಿಗೆ ಕಾಣುವುದರ ಪ್ರಮಾಣ ಇವುಗಳ ಮೇಲೆ ಅವಲಂಬಿಸುತ್ತದೆ ನಮ್ಮ ಕೃತಜ್ಞತಾಭಾವ. ಸೂರ್ಯನಿಗೆ ಕೃತಜ್ಞತೆ ಸಲ್ಲಿಸುತ್ತೀರಿ! ಹಾಗೆಯೇ ಚಂದ್ರನಿಗೆ, ಗ್ರಹಗಳಿಗೆ, ನಕ್ಷತ್ರಗಳಿಗೆ ಏಕೆ ಸಲ್ಲಿಸಬಾರದು ಎಂಬ ಪ್ರಶ್ನೆಗೆ ಅವುಗಳ ಪ್ರಯೋಜನ ನಮಗೆ ಕಣ್ಣಿಗೆ ಕಂಡಿಲ್ಲ ಎಂಬುದೊಂದೇ ಉತ್ತರ. ಯಾವುದೋ ಒಂದು ರೀತಿ ಪ್ರಯೋಜನವಿದೆಯೆಂದು ಕಲ್ಪಿಸಿಕೊಂಡಾದರೂ ಆ ಗ್ರಹಗಳ, ನಕ್ಷತ್ರಗಳ ಸ್ಮರಣೆ ಬೇಕಿಲ್ಲ. ಅದರಿಂದ ಪ್ರಯೋಜನವೇನೂ ಇಲ್ಲ. ಈಗ ನಾವು ಸೂರ್ಯನ ಉಪಕಾರಸ್ಮರಣೆಯಿಂದ ಸೂರ್ಯನಿಗೇನೂ ಮಾಡುತ್ತಿಲ್ಲವಲ್ಲವೇ! ನಾವು ಸ್ಮರಿಸಲಿ ಬಿಡಲಿ, ಪ್ರಕೃತಿಸಿದ್ಧವಾದ ಕೆಲಸವನ್ನು ಅವನು ಮಾಡಿಕೊಂಡೇ ಹೋಗುತ್ತಾನೆ. ಹಾಗೆಯೇ ವಾಯು, ವರುಣ ಎಲ್ಲಾ, ಅವರನ್ನು ಸ್ಮರಿಸುವುದು ಬೇಡ. ಮನೆಯಲ್ಲಿ ತಾಯಿತಂದೆಯರಿಗೆ, ಹೆಂಡತಿ ಮಕ್ಕಳಿಗೆ, ಸ್ನೇಹಿತರಿಗೆ ನಾನು ಕೃತಜ್ಞತೆಯನ್ನು ತೋರಿಸಿ ಅಭ್ಯಾಸ ಮಾಡುತ್ತೇನೆಂದರೆ ಅಗತ್ಯವಾಗಿ ಮಾಡಬಹುದು. ಅಂತೂ ಹೇಗೋ ಸತ್ತ್ವಗುಣಾಭಿವೃದ್ಧಿಯಾಗಬೇಕು. ಅದು ಸಂಧ್ಯಾವಂದನೆ ಯಿಂದಲೇ ಆಗುತ್ತದೆಂದು ನಾನು ಹೇಳುತ್ತಿಲ್ಲ. ಪುನಃ ಹೇಳಬಯಸು ತ್ತೇನೆ. ಈಗ ಮಾಡುತ್ತಿರುವುದಕ್ಕೆ ಯುಕ್ತಿಯುಕ್ತವಾದ ಸಮರ್ಥನೆ ಮಾಡಲು ಹೊರಟಿದ್ದೇನೆಯೇ ಹೊರತು, ಅವುಗಳೇ ಪರಮಾರ್ಥ ವೆಂದಲ್ಲ. ಹಾಗೆಯೇ ಗ್ರಹಪೂಜಾದಿಗಳನ್ನೂ ಸಮರ್ಥನೆ ಮಾಡಬಹುದಲ್ಲವೇ! ಎಂದರೆ, ಅವು ಆ ದೃಷ್ಟಿಯಿಂದ ಹೊರಟೇ ಇಲ್ಲ. ಅನಿಷ್ಟಫಲಗಳನ್ನು ಕೊಡದಂತೆ, ಇಷ್ಟಫಲಗಳನ್ನು ಕೊಡುವುದಕ್ಕೋಸ್ಕರ ಹೊರಟದ್ದು ನವಗ್ರಹಾರಾಧನೆ. ಇದರಷ್ಟು ಮೌಢ್ಯ ಬೇರೆಲ್ಲೂ ಕಾಣೆ. ಇದರಿಂದ ನಾನು ಅದನ್ನು ವಿರೋಧಿಸು ತ್ತೇನೆ. ಅವುಗಳಿಂದ ಆಗಿರುವ ಉಪಕಾರ ನಮಗೆ ದೃಷ್ಟವಾಗಿಲ್ಲ. ಆದ್ದರಿಂದ ಅವುಗಳ ವಿಷಯದಲ್ಲಿ ಕೃತಜ್ಞತಾ ಭಾವನೆ ಬರುವುದು ಬಹಳ ಕಷ್ಟ. ಪುನಃ ಹೇಳುತ್ತೇನೆ, ಈ ಪೂಜಾದಿಗಳೆಲ್ಲಾ They are not ends by themselves. They are only a means.

4) ಸಂಧ್ಯಾವಂದನೆಯಲ್ಲಿಯೂ ಅಷ್ಟು ವಿಸ್ತಾರ ಮಾಡುವುದಕ್ಕೆ ಕಾರಣ ಎಷ್ಟು ಹೆಚ್ಚು ಮಾಡಿದರೆ ಅಷ್ಟು ಫಲವೆಂಬ ದುರಾಶೆ. ಕೆಲವನ್ನು ಅನವಶ್ಯವಾಗಿ ಅರ್ಥವಿಲ್ಲದೆ ಬೆಳೆಸಿದರು. ಮುಖ್ಯವಾದುದನ್ನೇ ಬಿಟ್ಟರು. ಪ್ರಾಣಾಯಾಮವನ್ನು ಸರಿಯಾದ ರೀತಿಯಲ್ಲಿ ಹೇಳಿಕೊಡದೆ ಸುಮ್ಮನೆ ಮೂಗು ಹಿಡಿದು ಮಂತ್ರಗಳನ್ನು ಹೇಳುವುದನ್ನು ಅಭ್ಯಾಸದಲ್ಲಿ ತಂದರು. ಎಷ್ಟು ಸಾರಿ ತಾನೇ ಆ ಮಂತ್ರೋಚ್ಚಾರಣೆ ಮಾಡಿದ್ದರಿಂದ ನಮಗೆ ನಿಜವಾದ ಪ್ರಾಣಾಯಾಮದ ಪ್ರಯೋಜನ ಸಿಗಲು ಸಾಧ್ಯ ! ಅನವಶ್ಯವಾಗಿ ಅಂಗನ್ಯಾಸ, ಕರನ್ಯಾಸಾದಿಗಳನ್ನು ಸೇರಿಸಿದರು. ಅದರಿಂದಲೂ ಏನೋ ಫಲ ಸಿಗುತ್ತದೆಂಬ ಆಸೆ. ಅದೂ ಐಹಿಕ ಫಲಗಳೇ ಹೊರತು ಚಿತ್ತಶುದ್ಧಿಯಲ್ಲ, ಸತ್ತ್ವಗುಣಾಭಿವೃದ್ಧಿಯಲ್ಲ, ದುಷ್ಟವಾಸನೆಗಳನ್ನು ಅಡಗಿಸುವುದಲ್ಲ!

5) ಸಮಿಧಾಧಾನದಲ್ಲಿ ನೀವು ಮಾಡುತ್ತಿರುವುದು ಸರಿಯಾಗಿದೆ. ಸಮಿಧಾಧಾನದಲ್ಲಿ ನಮ್ಮ ಮುಖ್ಯ ಉದ್ದೇಶ ಸಮಿತ್ತು ಹತ್ತಿಕೊಂಡು ಉರಿಯುವುದು. ಅದಕ್ಕೆ ಸರಿಯಾಗಿ ಮಾಡಬೇಕೆಂದರೆ ಇದ್ದಲನ್ನು ಕೆಂಡ ಮಾಡಿ ಅದರಲ್ಲಿ ಮಾಡುವುದೇ ಸರಿಯಾದ ಪಕ್ಷ. ಅದನ್ನು ಮಾಡಲು ಕಷ್ಟವಾದಾಗ ಉರಿಯುವ ಯಾವ ವಸ್ತುವನ್ನು ಉಪಯೋಗಿಸಿದರೂ ಒಂದೇ. ನಾವು ಮಂಗಳಾರತಿಗೆ ಕರ್ಪೂರ ಉಪಯೋಗಿಸಿದ ಮಾತ್ರಕ್ಕೇ ಅದು ಹೆಚ್ಚು ಪವಿತ್ರವೆಂದರ್ಥವಲ್ಲ. ಎಣ್ಣೆಯಲ್ಲಿ ಅದ್ದಿದ ಬತ್ತಿಯನ್ನೂ ಕರ್ಪೂರದ ಸ್ಥಾನದಲ್ಲಿ ಉಪಯೋಗಿಸುತ್ತೇವೆ!!

6) ದೇವರ ಅವತಾರವೆನ್ನುವುದು metaphorical ಅಷ್ಟೆ. ಅವನೆಂದಿಗೂ ನಮ್ಮಂತೆ ಶರೀರವನ್ನು ಪಡೆದು ಬರುವುದಿಲ್ಲ, ಹುಟ್ಟುವುದೂ ಇಲ್ಲ. ಸಾಮಾನ್ಯಜನಗಳಿಗೆ ಒಂದು ಧೈರ್ಯವನ್ನು ಕೊಡುವುದಕ್ಕೋಸ್ಕರವಾಗಿ ಹೇಳಿರುವ ಮಾತು ಅದು. ಉತ್ತಮ ಗುಣೋಪೇತರಾದ ಮನುಷ್ಯರೆಲ್ಲರೂ ಅವತಾರಪುರುಷರೇ. They are nearer to God ಎಂದರ್ಥ. ಅಂಥವರು ಆಗಾಗ್ಯೆ ಹುಟ್ಟಿಯೇ ಹುಟ್ಟುತ್ತಾರೆ. ಅವರಿಂದ ಧರ್ಮ ಉದ್ಧಾರವಾಗುತ್ತದೆ ಎಂಬ ಆಶ್ವಾಸನಾವಾಕ್ಯವೇ ಅದು. ಹಾಗೆಂದು ಅವರ ಅವತಾರಕ್ಕೆ ನಾವು ಕಾಯುತ್ತಾ ನಿಷ್ಕ್ರಿಯರಾಗಿ ಕುಳಿತುಕೊಳ್ಳಬೇಕೆಂದಲ್ಲ (Jews redeemerನ್ನು ಕಾದು ಕುಳಿತು ತಾವೇ ನಾಶವಾದಂತೆ!). ನಮ್ಮ ಪ್ರಯತ್ನ ನಡೆಯುತ್ತಲೇ ಇರಬೇಕು. ನಮಗೆ ಅತ್ಯಂತ ನಿರಾಶೆಯಾದಾಗ frustration ಬಂದಾಗ ಆ ವಾಕ್ಯವನ್ನು ಸ್ಮರಿಸಿಕೊಂಡು, ಉತ್ತೇಜಿತರಾಗಿ, ಪುನಃ ಪ್ರಯತ್ನದಲ್ಲಿ ನಿರತರಾಗಬೇಕೆಂಬುದೇ ಆ ವಾಕ್ಯದ ತಾತ್ಪರ್ಯ.

ಇತಿ ನಿನ್ನವ

ಕುಮಾರಸ್ವಾಮೀ

೪೭೧

ಉಪನಯನ, ದಾಂಪತ್ಯ ಸಿದ್ಧಿ

कुशलम् श्री : Madras

6.5.88

ಶ್ರೀಕಂಠ!

ನಿನ್ನ ಮೂರು ಕಾಗದಗಳೂ ತಲುಪಿದವು. ಅದರಲ್ಲಿಯೂ ಚಿ।। ಯು. ಭದ್ರಾವತಿಗೇ ಮೊದಲನೆಯವನಾಗಿ ಬಂದಿರುವುದಕ್ಕೆ ಸಂತೋಷಪಟ್ಟು ಕೂಡಲೇ ಬರೆಯಬೇಕಾಗಿತ್ತು. ಆದರೆ ನಾನು ಬೆಂಗಳೂರಿಗೆ ಹೊರಡುವ ದಿನ ಆ ಕಾಗದ ಬಂದಿತು. Busyಯಾಗಿದ್ದೆ, ಬೆಂಗಳೂರಿಗೆ ಹೋದ ಮೇಲೆ ಬರೆಯಲು ಆಗಲೇ ಇಲ್ಲ. ಏತನ್ಮಧ್ಯೆ ನನ್ನ ಮಗ ಕೊನೆಯ ವರ್ಷದಲ್ಲಿ, ಇದುವರೆಗೂ ಕೊಡದಿದ್ದ Original Certificateಗಳನ್ನು Urgent ಆಗಿ ಕಳಿಸಬೇಕೆಂದು ಬರೆದ. ಆ ಅವಾಂತರವೇ ವಿಪರೀತ ಆಯಿತು. ಹೀಗಾಗಿ ಬರೆಯಲಾಗಲಿಲ್ಲ, ಕ್ಷಮಿಸು. ಚಿ।। ವೆಂಕಟೇಶ್ವರನಿಗೆ ವಿಶೇಷವಾಗಿ ಹೇಳು, ಅವನ ವಿದ್ಯಾಪ್ರಗತಿಯನ್ನು ಕೇಳಿ ಬಹ...ಳ ಸಂತೋಷವಾಯಿತು. ಅದು ಉಪನಯನಸಂಸ್ಕಾರದ ಮಹಿಮೆ ಎಂದರೆ ತಪ್ಪಾಗಲಾರದು. ಅವೆರಡಕ್ಕೂ ಕಾರ್ಯಕಾರಣ ಭಾವವಿಲ್ಲದಿದ್ದರೂ, ಸಂಸ್ಕಾರದಿಂದ ಪವಿತ್ರವಾದ ಮನಸ್ಸು ಕೆಲಸ ಮಾಡುವ ರೀತಿಯೇ ಬೇರೆ. ಅದು ಅವನಿಗೆ ಲಭಿಸಿದೆ. ಆಪಸ್ತಂಬರು – "ವಿದ್ಯಾರ್ಥಸ್ಯ ಶ್ರುತಿತಃ ಸಂಸ್ಕಾರಃ ಉಪನಯನಮ್" ಎಂದರು (ಉಪನಯನವು ವಿದ್ಯಾರ್ಜನೆ ಮಾಡುವ ವಿದ್ಯಾರ್ಥಿಗೆ ಮಾಡುವ ವೇದೋಕ್ತ ಸಂಸ್ಕಾರ). ಆ ವಿದ್ಯಾರ್ಜನೆಯು ಉತ್ತಮರೀತಿಯಲ್ಲಾಗುತ್ತಿದೆ ಎಂದು ಹೇಳಿದರೆ, ಅವರ ಸೂತ್ರ ಅವನ ವಿಷಯದಲ್ಲಿ ಅನ್ವರ್ಥವಾಗಿದೆ. ಪರಮ ಸಂತೋಷ. ಆ ವಾಗ್ದೇವಿಯು ಅವನಿಗೆ ಹೀಗೇ ಅನುಗ್ರಹಿಸಿ, ಮುಂದಕ್ಕೆ ತರಲಿ ಎಂದು ಪ್ರಾರ್ಥಿಸುತ್ತೇನೆ. ನನ್ನ ಆಶೀರ್ವಾದ ಅವನ ಮೇಲೆ ಸದಾಕಾಲವೂ ಇದೆ ಎಂದು ಹೇಳು.

ನಾನು ಮೇ 30ನೇ ತಾರೀಖಿನಿಂದ, ಜೂನ್ 4ನೇ ತಾರೀಖಿನವರೆಗೂ ಶಿವಮೊಗ್ಗಾದಲ್ಲಿ ಸೋಮುವಿನ ಮಗನ ಉಪನಯನಕ್ಕೆ ಬರಬೇಕಾಗಿತ್ತು. ಅದೇನೋ ಕೊನೇ ಗಳಿಗೆಯಲ್ಲಿ Postpone ಮಾಡಿದ್ದಾನೆ. ಕಾರಣ ಗೊತ್ತಾಗಿಲ್ಲ. ಹಾಗೆಯೇ ಭದ್ರಾವತಿಯಲ್ಲಿಯ ಶ್ರೀಕಂಠನ ಮಗನ ಉಪನಯನವೂ ಆಗಬೇಕಿತ್ತು. ಅದೂ cancel ಆಯಿತು. ಆದ್ದರಿಂದ ನಾನು ಭದ್ರಾವತಿಗೆ ಬರುವುದನ್ನು cancel ಮಾಡಿ, ಮದ್ರಾಸಿಗೆ ಬಂದುಬಿಟ್ಟೆ. ಇಲ್ಲಿ ಸೌ।।ಗೂ ಸ್ವಲ್ಪ ಹುಷಾರಿರಲಿಲ್ಲ, ಒಬ್ಬಳೇ ಇದ್ದಳು. ಆದ್ದರಿಂದ ಬಂದುಬಿಟ್ಟೆ. ಹೀಗಾಗಿ ನನ್ನ ಭದ್ರಾವತಿ Programme ಆಗಲಿಲ್ಲ. ನಿಮಗೆಲ್ಲಾ surprise ಮಾಡಬೇಕೆಂದಿದ್ದೆ, ನಡೆಯಲಿಲ್ಲ. lecture ಕೊಡುವುದಕ್ಕೆ ನನಗೆ ಬಹಳ ಇಷ್ಟವೇ. ಆದರೆ ಈಗ ಸಾಧ್ಯವಿಲ್ಲ. ನಾನು June 30ರವರೆಗೂ ಇಲ್ಲಿರುತ್ತೇನೆ. ಆಮೇಲೆ ಪೂರ್ಣ ವಿರಾಮ. ಚಿ।। ಗೆ Durgapur Alloy Steel Plantನಲ್ಲಿ ಕೆಲಸ ಸಿಕ್ಕಿದೆ. ಅವನ ಜತೆಯಲ್ಲಿಯೇ ಇರಬೇಕೆಂಬ ಆಸೆ. ಅವನು July 4ನೇ ತಾರೀಖು ಅಲ್ಲಿಗೆ ಸೇರಿಕೊಳ್ಳಬೇಕು. ಅಲ್ಲಿಯೇ ಗ್ರಾಮದಲ್ಲಿ ಯಾವುದಾದರೂ ಬಾಡಿಗೆಮನೆ ಸಿಕ್ಕಿದರೆ ಅಲ್ಲಿಗೆ ಹೋಗೋಣವೆಂದಿದ್ದೇವೆ. ಅಂತೂ July, August ಇರುತ್ತೇನೆ ಅಂತ ಕಾಣುತ್ತೆ. ಆಗ ಯಾವಾಗಲಾದರೂ ಇಟ್ಟುಕೊಳ್ಳಬಹುದು. ಬಂದುಹೋಗುತ್ತೇನೆ. ನನಗೆ ಯಾವ ವಿಧವಾದ Honorarium ಬೇಡ. It will be a pleasure to talk to your people. ನನ್ನ ಸೌಕರ್ಯವನ್ನು ತಿಳಿಸುತ್ತೇನೆ. ನನಗೆ ಕೌಟಿಲ್ಯನ ಅರ್ಥಶಾಸ್ತ್ರ ಹೆಚ್ಚು ತಿಳಿಯದು, ಈಗ ಓದಲು ಪುರಸತ್ತೂ ಇಲ್ಲ. ಆದರೆ ಅದಕ್ಕಿಂತ "Philosophy and Management" ಎಂಬ subject ಚೆನ್ನಾಗಿರುತ್ತದೆ ಅಂತ ಕಾಣುತ್ತೆ, ನಿಮ್ಮಿಷ್ಟ.

ನೀನು ಕೇಳಿರುವ ಸಪ್ತಪದೀ– ಇವಕ್ಕೆಲ್ಲಾ ಬೇರೆ ಬೇರೆ ಬರೆಯಲು ಕಷ್ಟವಾಗುತ್ತದೆ. ವಿವಾಹದ ಬಗ್ಗೆ ಒಂದು ಲೇಖನವನ್ನೇ ಬರೆದಿದ್ದೇನೆ. ಅದು ಸದ್ಯ ಈಗ ನನ್ನಲ್ಲಿದೆ. ಸುರೇಶನ ಹತ್ತಿರ (ಅವನ ತಮ್ಮ ನಾಗರಾಜನ ಮದುವೆ Aug. 15th) ಒಂದು ಕಾಪಿ ಇದೆ. ಅದನ್ನು ಹೇಗಾದರೂ ತರಿಸಿಕೊಂಡು ಓದು. "ತಾಳಿ" ಕಟ್ಟುವುದನ್ನು ಯಾವ ಸೂತ್ರಕಾರರೂ ಹೇಳಿಲ್ಲ. ಅದಕ್ಕೆ ಮಂತ್ರವೂ ಇಲ್ಲ. ಅದೂ ಬಳೆ, ಕಾಲುಂಗುರಗಳಂತೆ ಒಂದು ಅಲಂಕಾರ ವಸ್ತು ಎಂದು ಕಟ್ಟಬಹುದು ಅಷ್ಟೆ. ಅದಕ್ಕೆ ಯಾವ ಪ್ರಾಧಾನ್ಯವೂ ಇಲ್ಲ, ಕಟ್ಟದಿದ್ದರೆ ದಾಂಪತ್ಯ ಸಿದ್ಧವಾಗುವುದಿಲ್ಲವೆಂದಲ್ಲ. ಯಾವ ಮಂತ್ರವನ್ನು ಬೇಕಾದರೂ ಜಪ ಮಾಡಬಹುದು. ಸಂಕಲ್ಪ ಖಂಡಿತ ಬೇಕಿಲ್ಲ. ಮನಸ್ಸಿನ ಉದ್ದೇಶವೇ ಸಂಕಲ್ಪ. ಉಪದೇಶ ಮಾಡಿಸಿಕೊಳ್ಳಬೇಕೆನ್ನುವುದು ಮಂತ್ರೋಚ್ಚಾರಣೆ ಸರಿಯಾಗಿ ಆಗಲಿ ಎಂಬ ಉದ್ದೇಶ ಅಷ್ಟೆ. ತಾನೇ ಕಲಿಯಲು ಹೋದರೆ, ಸ್ವರ ತಪ್ಪಾಗಬಹುದು, ಅಕ್ಷರ ತಪ್ಪಾಗಬಹುದು. ಅಷ್ಟೇ ಹೊರತು ಬೇರೇನೂ ಇಲ್ಲ. ಐಹಿಕ ಕಾಮನೆಗೋಸ್ಕರ ಮಾಡುವುದಾದರೆ ಬೇಡ, ಸಿಗುವುದೂ ಇಲ್ಲ.

ಆತ್ರೇಯನ ಉಪನಯನ ಬಹಳ ಚೆನ್ನಾಗಿ ನಡೆಯಿತು. ಸುರೇಶನು ಮೂರುದಿನ ಕೂಷ್ಮಾಂಡಹೋಮ ಮಾಡಿ, 4ನೇ ದಿನ ಉದಕಶಾಂತಿ, ಪ್ರತಿಸರ, ಅಂಕುರಾರ್ಪಣಾದಿಗಳನ್ನು ಮಾಡಿ 5ನೇ ದಿನ ಉಪನಯನ ಮಾಡಿದ. 7 ಘಂಟೆಗೆ ಸರಿಯಾಗಿ

ಆರಂಭಿಸಿದೆವು. 10 ಘಂಟೆಗೆ ಮುಗಿಯಿತು, Video ತೆಗೆದಿದ್ದಾರೆ, ಬಂದಾಗ ನೋಡು.

ನಾವಿಬ್ಬರೂ ಆರೋಗ್ಯವಾಗಿದ್ದೇವೆ. ಚಿ॥ಗಳಿಗೂ, ನಿನ್ನ ಸೌ॥ಗೂ ನನ್ನ ಅನಂತ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೪೭೨

ಉಕ್ಕು (ಮಾಡುವ ಬಗೆಗೆ ಹೇಳುವೆ) ; ಶ್ರಾದ್ಧಮಂತ್ರ ರೆಕಾರ್ಡ್ ಮಾಡಿಕೊಡುವೆ

ಕುಶಲಮ್ ಶ್ರೀ : Madras

27.6.88

ಶ್ರೀಕಂಠ!

ನಿನ್ನ ಎರಡು ಕಾಗದಗಳೂ ತಲಪಿದುವು. ವಾಸ್ತವವಾಗಿ ಉತ್ತರ ಬರೆಯಲು ಪುರಸತ್ತಾಗಲಿಲ್ಲ. ಬರುವ ಗುರುವಾರ (30.6.88) retire ಆಗುತ್ತಿದ್ದೇನೆ. ಆದ್ದರಿಂದ ಸ್ವಲ್ಪ busyಯಾಗಿದ್ದೆ. ಕ್ಷಮಿಸು.

ನಾನು ಶಿವಮೊಗ್ಗಾಕ್ಕೆ 4ನೇ ತಾರೀಖು ಬೆಳಗ್ಗೆ ಬರುತ್ತಿದ್ದೇನೆ. ಸೋಮುವಿನ ಮಗನ ಉಪನಯನ 6ಕ್ಕೋ 8ಕ್ಕೋ ಇಟ್ಟುಕೊಂಡಿದ್ದಾನೆ. ಅದು ಯಾವತ್ತಾದರೂ ನಾನು 4ನೇ ತಾರೀಖು ಅಲ್ಲಿರುತ್ತೇನೆ. ಅಲ್ಲಿಂದ 11ನೇ ತಾರೀಖು ರಾತ್ರಿ ಹೊರಡುತ್ತಿದ್ದೇನೆ. ಅದಕ್ಕೆ ಅನುಸರಿಸಿ, ನಿನ್ನ ಕಾರ್ಯಕ್ರಮಗಳನ್ನು ಯೋಜಿಸು. ಸೋಮುವಿಗೂ ಹೇಳಿ, ಮಾಡು. ನೀನು ಯಾವ ತರಹ ಕಾರ್ಯಕ್ರಮ ಏರ್ಪಾಡು ಮಾಡಿದರೂ ಸರಿಯೇ!!

If possible, I would like to give them a dose of metallurgy too! Not a bitter dose but a sweet one. A short history of story of steel making will be fascinating. I leave it to you.

ಶ್ರಾದ್ಧದ ಮಂತ್ರಗಳನ್ನು record ಮಾಡಲು ಆಗಲೇ ಇಲ್ಲ. ನಾನು ಅಲ್ಲಿಗೆ ಬಂದಾಗ ಒಂದು ಹೊತ್ತು ಪುರಸತ್ತು ಮಾಡಿಕೊಂಡು ಮಾಡಿಕೊಡುತ್ತೇನೆ.

ಚಿ॥ ಗಳಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ನನ್ನ ಚಿ॥ ಯು, ನಿನ್ನೆ Bhilaiಗೆ, on his way to Durgapur ಪ್ರಯಾಣ ಮಾಡಿದ. ನಾವು ಆರೋಗ್ಯವಾಗಿದ್ದೇವೆ.

ಇತಿ ನಿನ್ನವ

ಕುಮಾರಸ್ವಾಮಿ

೪೭೩

ಮನೆ, ಪ್ರವೇಶ

ತೆಂಗಿನಮರ ಅರ್ಧಕ್ಕೆ ಕತ್ತರಿಸಿ ಬೀಳುವುದು

ಕುಶಲಮ್ ಶ್ರೀ : Bhubaneswar

29.11.88

ಶ್ರೀಕಂಠ !

ನಿನ್ನ ಕಾಗದ ತಲಪಿ ಬಹಳ ಸಂತೋಷವಾಯಿತು. ನಿನ್ನ ಕಾಗದ ಮತ್ತು ಪ್ರಶ್ನೆಗಳು ನನಗೆ tonic ಕೊಟ್ಟ ಹಾಗೆ ಆಯಿತು. ಬೇಜಾರು ಖಂಡಿತ ಇಲ್ಲ, ಈಗ ಕೆಲಸವೇನಿದೆ? ಮದ್ರಾಸಿನಲ್ಲಾದರೂ ಸ್ವಲ್ಪ busyಯಾಗಿದ್ದೆ ಎಂದು ಹೇಳಬಹುದು. ಇಲ್ಲಿ ನಿಮ್ಮಗಳ ಕಾಗದಗಳಿಗೆ ಉತ್ತರ ಬರೆಯುವುದು ಬಿಟ್ಟು ಬೇರೆ ಯಾವ ಕೆಲಸವೂ ಇಲ್ಲ. ಆದ್ದರಿಂದ ನಿರ್ಯೋಚನೆಯಾಗಿ ಬರಿ. ಅಲ್ಲಿಗೂ ಇಲ್ಲಿಗೂ ಒಂದೇ ವ್ಯತ್ಯಾಸ. ಅಲ್ಲಿ ಕಾಗದ 3 ದಿನಗಳಿಗೆ ಬರುತ್ತಿತ್ತು. ಇಲ್ಲಿಗೆ 6-7 ದಿನಗಳಾಗುತ್ತವೆ! ನಿನ್ನ ಎರಡನೇ ಮಗಳಿಗೆ ಸುಖಪ್ರಸವವಾದುದನ್ನು ಕೇಳಿ ಸಂತೋಷವಾಯಿತು. ತಾಯಿಗೂ, ಮಗುವಿಗೂ ನಮ್ಮ ಅನಂತ ಆಶೀರ್ವಾದಗಳು.

1) ಹೊಸ ಮನೆಯನ್ನು ಕಟ್ಟುವುದರ ಬಗ್ಗೆ ಆಪಸ್ತಂಬರು ಕೆಲವು ಸೂತ್ರಗಳನ್ನು ಹೇಳಿದ್ದಾರೆ. ಆದರೆ ಈಗಿನ ಕಾಲದಲ್ಲಿ ಕಟ್ಟುವ ಮನೆಗಳಿಗೆ ಅವು ಅನ್ವಯವಾಗುವುದಿಲ್ಲ. ಸೂತ್ರಕಾರರ ಕಾಲದಲ್ಲಿ ಪ್ರಾಯಃ ಮರದ ತೊಲೆಗಳನ್ನು ಕಂಭಗಳಾಗಿ ಇಟ್ಟು ಕಟ್ಟುವ ಪದ್ಧತಿ ಇತ್ತು ಎಂದು ಕಾಣುತ್ತೆ. ಈಗಿನ ಕಾಲದಂತೆ foundation ಹಾಕುವ ಅಭ್ಯಾಸವಿರಲಿಲ್ಲ. ಆ ತೊಲೆಗಳನ್ನು ನೆಡಲು ಕೆಲವು ಮಂತ್ರಗಳನ್ನು ಹೇಳುತ್ತಾರೆ. ಬಾಕಿ ಯಾವ ಅನ್ಯ ವಿಷಯವೂ ಇಲ್ಲ. ಈಗಿನ ಕಾಲದಲ್ಲಿ ಹೇಳುವ ವಾಸ್ತುಶಾಸ್ತ್ರ, ಶಿಲ್ಪಶಾಸ್ತ್ರಗಳು ಅರ್ವಾಚೀನವಾದುವು (recent). ಪ್ರಾಯಃ ನಮ್ಮ ಭಾರತದಲ್ಲಿ fatalistic attitude ಹೆಚ್ಚಾದ ಮೇಲೆ ಹೊರಟಿರುವ ಶಾಸ್ತ್ರಗಳವು. ಆದ್ದರಿಂದ ಮನೆಯ ಆಕಾರ, ಮನೆಯಲ್ಲಿರುವ ಕೊಠಡಿಗಳ ಸಂಖ್ಯೆ, ಅವುಗಳ dimensions, ಇವುಗಳೆಲ್ಲವೂ ಅದರಲ್ಲಿ ವಾಸ ಮಾಡುವವನನ್ನು influence ಮಾಡುತ್ತೆ ಎಂಬ ನಂಬಿಕೆ ಬೆಳೆದು, ಆ ಶಾಸ್ತ್ರಗಳೂ ಹಾಗೆಯೇ ಬೆಳೆದವು. ಒಂದಕ್ಕೊಂದು ಸಂಬಂಧವಿಲ್ಲ. ನಮ್ಮ ಮಹರ್ಷಿಗಳಂತೂ ಖಂಡಿತ ಸಂಬಂಧವನ್ನು ಹೇಳುವುದಿಲ್ಲ. ಕಾರ್ಯಕಾರಣ ಭಾವವೇ ಇಲ್ಲದೆ ಒಬ್ಬರು ನಂಬುತ್ತೇನೆ ಎಂದು ಹೇಳಿದರೆ ಅದಕ್ಕೆ ನಮ್ಮ ಮಹರ್ಷಿಗಳು ಜವಾಬ್ದಾರರಲ್ಲ. ಮುಖ್ಯವಾಗಿ ಮನೆಯನ್ನು ಕಟ್ಟುವುದು ನಮ್ಮ ಅನುಕೂಲವಾದ ವಾಸಕ್ಕೋಸ್ಕರ. ನಮಗೆ

ಯಾವ ರೀತಿ ಅನುಕೂಲವೋ ಆ ರೀತಿ ಕಟ್ಟಿಕೊಳ್ಳುವುದು ಉತ್ತಮ ಪಕ್ಷ, ಶಾಸ್ತ್ರಸಮ್ಮತ. ಮನೆಕಟ್ಟುವ ಆರಂಭದಲ್ಲಿ ಗುದ್ದಲಿಪೂಜೆ ಎನ್ನುವುದನ್ನೂ ಯಾವ ಸೂತ್ರಕಾರರೂ ಹೇಳಿಲ್ಲ. ಆದರೆ ಕಾರ್ಯಾರಂಭದಲ್ಲಿ (ಯಾವ ಕಾರ್ಯವೇ ಆಗಲಿ) ದೇವತಾಪ್ರಾರ್ಥನೆ ಮಾಡಿ ಆರಂಭಿಸುವುದು ನಮ್ಮ ಸಂಸ್ಕೃತಿ. ಅವಶ್ಯವಾಗಿ ಮಾಡಬೇಕಾದ್ದು. ಅದೇ ಗುದ್ದಲಿಪೂಜೆ, ನವರತ್ನಗಳನ್ನು ಹೂಳುವುದು (ಕಲ್ಲುಗಳನ್ನೂ ಗಾಜಿನ ತುಂಡುಗಳನ್ನೂ ರತ್ನಗಳೆಂದು ಭಾವಿಸಿ ಹಾಕುತ್ತಾರೆ!!) ಮುಂತಾದುವೆಲ್ಲಾ ತಾಂತ್ರಿಕ ಅಥವಾ ಆಗಮ ಶಾಸ್ತ್ರದಿಂದ ಬಂದಿರುವ ವ್ಯಾಧಿಗಳು. ಅವುಗಳಿಗೆ ಯಾವ ಶಾಸ್ತ್ರೀಯವಾದ significance ಊ ಇಲ್ಲ. ಗುದ್ದಲಿಪೂಜೆಗೆ ದಿನ ಮುಹೂರ್ತಗಳ ವಿಷಯದಲ್ಲಿಯೂ ಅಷ್ಟೆ!! ಹಿಂದೆಯೇ ಬೇಕಾದಷ್ಟು ಬಾರಿ ಅವುಗಳ ವಿಷಯ ಹೇಳಿದ್ದೇನೆ. ಇಲ್ಲಿಗೂ ಅದೇ ಅನ್ವಯವಾಗುತ್ತದೆ.

2) ಕಟ್ಟಿದಮನೆಯನ್ನು ಕೊಂಡುಕೊಳ್ಳಬೇಕಾದರೂ ಕೇವಲ ಅನುಕೂಲ, ಆರ್ಥಿಕಮಿತಿ ಇವುಗಳೇ ಮುಖ್ಯವಾದ ಕಾರಣಗಳಾಗಬೇಕೇ ಹೊರತು ಬೇರೆ ಇನ್ಯಾವುದೂ ಇಲ್ಲ. ಮನೆ ಯಾವುದೇ ಆಕಾರದಲ್ಲಿರಲಿ, ಮಟ್ಟವಾಗಿರಲಿ, ದಕ್ಷಿಣೋತ್ತರಕ್ಕೆ ಅಥವಾ ವಿರುದ್ಧವಾಗಿ slope ಇರಲಿ, ಕೇವಲ ವಾಸಿಸುವವರ ಅನುಕೂಲವೇ ಹೊರತು ಮತ್ತೇನೂ ಇಲ್ಲ. ಯಾವುದೋ ಸಂದರ್ಭದಲ್ಲಿ ಹೇಳಿರುವ ವಿಧಿಯನ್ನು ಎಲ್ಲಕಡೆಗೂ ಅನ್ವಯಿಸಿಕೊಳ್ಳುವುದು ದಡ್ಡತನವಾಗುತ್ತದೆ. ಹೋಮಕ್ಕೆ ಸ್ಥಂಡಿಲ ಹಾಕುವಾಗ, ಸ್ಥಂಡಿಲವು ದಕ್ಷಿಣೋತ್ತರಕ್ಕೆ ಸ್ವಲ್ಪ ಎತ್ತರವಾಗಿ slope ಇರಬೇಕೆನ್ನುವುದು ವಿಧಿ. ಅದು ಅಲ್ಲಿಗೆ ಮಾತ್ರ ಅನ್ವಯಿಸುತ್ತದೆ. ಮನೆ, ನೆಲಕ್ಕೂ ಮತ್ತೆಲ್ಲಿಗೂ ಅಲ್ಲ. ಈ ರೀತಿ ಅನನ್ವಿತವಾಗಿ ಬೇರೆ ಕಡೆ ಹೇಳಿರುವ ಯಾವುದೋ ಒಂದು ವಿಧಿಯನ್ನು ಎಲ್ಲ ಕಡೆಗೂ ಅನ್ವಯಿಸಿಕೊಳ್ಳುವ ದೃಷ್ಟಾಂತಗಳು ನಮ್ಮಲ್ಲಿ ಬೇಕಾದಷ್ಟಿವೆ. ಎಚ್ಚರಿಕೆಯಿಂದ ಇರಬೇಕಾದ್ದು ಅಗತ್ಯ.

3) ಗೃಹಪ್ರವೇಶ (ನವಾಗಾರ ಪ್ರವೇಶ)ದ ವಿಧಿಯನ್ನು ಆಪಸ್ತಂಬರು ತಮ್ಮ ಗೃಹ್ಯಸೂತ್ರದಲ್ಲಿಯೇ ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ ನಮ್ಮ ಉಪಾಸ್ಯದೇವತೆಯಾದ ಅಗ್ನಿಯೊಡನೆ ಪ್ರವೇಶಿಸಿ ಹೊಸಮನೆಯಲ್ಲಿ ಅಗ್ನಿ ಪ್ರತಿಷ್ಠೆಯನ್ನು ಮಾಡಿ, ಅದರಲ್ಲಿ ವಾಸ್ತು ಹೋಮ ಮಾಡುವುದೇ ಕ್ರಮ. ಆ ಮಂತ್ರಗಳೂ ಕೇವಲ ಪ್ರಾರ್ಥನಾತ್ಮಕವಾದವುಗಳು. ನಾವು ಆ ಮನೆಗೆ ಹೋದಮೇಲೆ ಎಲ್ಲಾ ವಿಧವಾದ ಸೌಖ್ಯವೂ ಎಲ್ಲರಿಗೂ ಇರಲೆಂಬುದೇ ಪ್ರಾರ್ಥನೆ. ಅದನ್ನು ಪೂಜೆ, ಹೋಮ ರೂಪದಲ್ಲಿ ಮಾಡುತ್ತೇವೆ. ಈ ಕಾಲದಲ್ಲಿ ಸೂತ್ರಕಾರರು ಹೇಳಿದಂತೆ, ಅಗ್ನಿಯೊಡನೆ ಪ್ರವೇಶ ಮಾಡುವುದು ಬಹಳ ಅಪರೂಪ. ಮಾಡುವುದೇ ಇಲ್ಲ ಎಂದು ಹೇಳಬಹುದು. ಎಲ್ಲರಿಗೂ ಉಪಾಸ್ಯದೇವತೆಯಾದ ಅಗ್ನಿಯೊಡನೆ ಪ್ರವೇಶ ಮಾಡುವುದೆಂದರೆ ಭಯ. ಅಗ್ನಿಯು ದೇವತೆ ಎನ್ನುವುದೇ ಮರೆತು ಹೋಗಿದೆ. ಆದ್ದರಿಂದ ತಾವುತಾವೇ ಹೊಸ ಪ್ರಯೋಗಗಳನ್ನು ಕಲ್ಪಿಸಿಕೊಂಡು ಏನೇನೋ ಮಾಡುತ್ತಾರೆ. ಕಲ್ಪನೆಯಲ್ಲಿಯೂ ಸಾಧುವಾದ ಕಲ್ಪನೆಯಾದರೆ ಅಂಗೀಕರಣೀಯ ಹೌದು. ಆದರೆ, ನಮ್ಮ ಶ್ರೇಯಃಕಾಮಿಗಳಾದ ಮಹರ್ಷಿಗಳು ಸ್ಪಷ್ಟವಾಗಿ ಹೇಳಿರುವ ಪ್ರಯೋಗವನ್ನು ಬಿಟ್ಟು, ಅನನ್ವಿತವಾಗಿ ನಮ್ಮ ಮಂದಬುದ್ಧಿಗೆ, ಭಯಮಿಶ್ರವಾದ ಬುದ್ಧಿಗೆ ತೋರಿದಂತೆ ಮಾಡುವುದು ಅನುಚಿತ. ಮಹರ್ಷಿಗಳಿಗೆ ಅಪಚಾರ ಎಂದು ನನ್ನ ಭಾವನೆ.

4) ಗಾಳಿಯ ಹೊಡೆತದಿಂದ ತೆಂಗಿನಮರ ಅರ್ಧ ಕತ್ತರಿಸಿ ಬಿದ್ದರೆ, ತೆಗೆದು ಹೊರಗಡೆ ಹಾಕುವುದು ! ಅಥವಾ ಅದರಿಂದ ಉಪಯೋಗವಾದದ್ದನ್ನು ಏನಾದರೂ ಮಾಡಿಸಲು ಸಾಧ್ಯವಾದರೆ ಮಾಡಿಸುವುದು. ಹಾಗೆ ಅರ್ಧವಾಗುವುದೇ ಒಂದು ಅಶುಭ ಸೂಚಕವೆಂದೋ, ದೋಷವೆಂದೋ ಭಾವಿಸುವ ಅಗತ್ಯ ಖಂಡಿತ ಇಲ್ಲ. ಮಹರ್ಷಿಗಳು ಅಷ್ಟು ಮೂರ್ಖರಲ್ಲ ! ನಮಗೆ ಅನೇಕ ವರ್ಷ ಫಲಗಳನ್ನು ಕೊಟ್ಟು ಉಪಕಾರ ಮಾಡಿರುವ ಮರ ಬಿದ್ದು ಹೋಯಿತಲ್ಲಾ ಎಂದು ನಮಗೆ ಸ್ವಲ್ಪ ದುಃಖವಾಗುತ್ತದೆ. ದುಃಖಪಡಬೇಕಾದ್ದೇ! ಅದಕ್ಕೇ ನಮ್ಮಲ್ಲಿ ಮಹಾಲಯಶ್ರಾದ್ಧದಲ್ಲಿ ಅಂಥ ಮರಗಳನ್ನು ಕೂಡ ನೆನೆಸಿಕೊಂಡು ಪಿಂಡಪ್ರದಾನ ಮಾಡಿ, ನಮ್ಮ ಕೃತಜ್ಞತೆ ತೋರಿಸುವ ಅಭ್ಯಾಸ ಬಂದಿದೆ.

ಶ್ರೀ ಬೆಂಟೂರ್‌ರವರು ನನಗೆ ಭದ್ರಾವತಿಯಲ್ಲಿಯೇ ಬೆಂಗಳೂರಿನ ಸಮ್ಮೇಳನದ ವಿಷಯ ಹೇಳಿ ಅಗತ್ಯವಾಗಿ ಬರಬೇಕೆಂದು ಹೇಳಿದ್ದರು. ಆಗಲಾರದು ಎಂದು ಅನುಮಾನವಾಗಿ ಹೇಳಿದ್ದೆ. ಈಗ ಆ ಸಮಯದಲ್ಲಿ ಬರಲು ಸಾಧ್ಯವಿಲ್ಲವಾಗಿದೆ. ದುರ್ಗಾಪುರದಲ್ಲಿ ಚಿ॥ ಯು ಮನೆಯನ್ನು ನೋಡುತ್ತಿದ್ದಾನೆ. ಡಿಸೆಂಬರ್ 2ನೇ ವಾರದಲ್ಲಿ ನಿಶ್ಚಯವಾಗಬಹುದು. ಸಾಮಾನುಗಳನ್ನೆಲ್ಲಾ ಅಲ್ಲಿಗೆ ಸಾಗಿಸಿ ನಾವಿಬ್ಬರೂ 20ನೇ ತಾರೀಖಿನ ಹೊತ್ತಿಗೆ ಬೆಂಗಳೂರಿಗೆ ಹೊರಡಬೇಕಾಗಿದೆ. ನನ್ನ ಎಡಗಾಲು, ಹಿಮ್ಮಡಿಯ ಮೇಲೆ (ankle) ನಡೆದರೆ ಬಹಳ ನೋಯಲು ಆರಂಭವಾಗಿದೆ. ಮದ್ರಾಸಿನಲ್ಲಿಯೇ ಇದರ ಸೂಚನೆ ಇತ್ತು. ಆದರೆ ಉದಾಸೀನ ಮಾಡಿದೆ. ಈಗ ಸ್ವಲ್ಪ ಜಾಸ್ತಿಯೇ ಆಗಿದೆ. ಆದ್ದರಿಂದ ಬೆಂಗಳೂರಿನಲ್ಲಿ ತೋರಿಸಬೇಕು, ಅದಕ್ಕೋಸ್ಕರ ಸ್ವಲ್ಪ ಬೇಗ ಹೊರಡುತ್ತಿದ್ದೇನೆ. ಬೆಂಗಳೂರಿನಲ್ಲಿ Dec. 31 ರಿಂದ Jan. 4 ರವರೆಗೂ ನರಸಿಂಹನ ಹೆಂಡತಿ ಉಷಳಿಗೆ ನಡೆಯುವ ಪುಂಸವನ, ಸೀಮಂತ, ತದಂಗವಾದ ಕೆಲವು ಕಾರ್ಯಗಳು.

7ನೇ ತಾರೀಖಿನಿಂದ ಪುರಸತ್ತಿದೆ. 13 ಸುರೇಶ ಮಾಡುವ ಶ್ರಾದ್ಧ. ಆ ಒಂದು ವಾರದಲ್ಲಿ ಯಾವತ್ತಾದರೂ ಎರಡು ದಿನಗಳು ನೀನು ಹೇಳಿರುವಂತೆ, ಉಪನ್ಯಾಸಗಳನ್ನಿಟ್ಟುಕೊಳ್ಳಬಹುದು. ನಾನು ಹಿಂದೆಯೇ ಹೇಳಿದಂತೆ ಒಂದು "Concepts of Philosophy in Management", ಮತ್ತೊಂದು "Place for rituals in religion especially Hinduism". ಅದನ್ನು ನಿಶ್ಚಯ ಮಾಡಿ ನನಗೆ ಬೆಂಗಳೂರಿಗೇ ಕಾಗದ ಬರಿ. ನಿನ್ನ ಕಾಗದ ನೋಡಿಕೊಂಡು ನಾನು train reservation ಮಾಡಿಸುತ್ತೇನೆ. ಆದ್ದರಿಂದ ನನ್ನ ಪರವಾಗಿ ಪುನಃ ಬೆಂಟೂರ್‌ರವರನ್ನು ಕ್ಷಮಿಸಬೇಕೆಂದು ಪ್ರಾರ್ಥಿಸು. ಅಷ್ಟು ದೊಡ್ಡದೊಡ್ಡವರ ಜತೆಯಲ್ಲಿ ಎರಡು ದಿನಗಳು ಕಾಲ ಕಳೆಯುವ ಸುಯೋಗವನ್ನು ತಪ್ಪಿಸಿಕೊಂಡದ್ದಕ್ಕೆ ನನಗೇ ವ್ಯಥೆಯಾಗುತ್ತಿದೆ, ವಿಧಿಯಿಲ್ಲ.

ನನ್ನ ನಷ್ಟದ ವಿಷಯ ಎಷ್ಟು ಕಮ್ಮಿ ಹೇಳಿದರೆ ಅಷ್ಟು ವಾಸಿ ಎಂದು ಕಾಣುತ್ತೆ. Day trainನಲ್ಲಿ ನಮ್ಮ ಸೀಟ್ ಅಡಿಯಲ್ಲಿ ಇಟ್ಟುಕೊಂಡು ಕೂತಿದ್ದಾಗಲೇ, suit-caseನ್ನು Howrah Stationನಲ್ಲಿಯೇ ಕಳವು ಮಾಡಿದ್ದಾರೆ (Howrah to Bhubaneswara ಪ್ರಯಾಣ). ನಾವೂ ಕೂತೇ ಇದ್ದೆವು!! ಅಷ್ಟೊಂದು ನಗದು ಹಣ (Rs.10,000/-) ಆಭರಣಗಳು, ಸೀರೆಗಳು ಎಲ್ಲವನ್ನೂ ಒಂದೇ suit-caseನಲ್ಲಿ ಇಟ್ಟದ್ದು ನಮ್ಮ ತಪ್ಪು. ಭುವನೇಶ್ವರದಲ್ಲಿ ದೀಪಾವಳಿ ವಿಜೃಂಭಣೆಯಿಂದ ಆಚರಿಸಬೇಕೆಂಬ ಆಸೆ, ದುರ್ಗಾಪುರದಲ್ಲಿ ಮನೆಗೆ advance ಮೊದಲಾದುವನ್ನು ಕೊಡಬೇಕಾಗಬಹುದೆಂಬ ದೂರಾಲೋಚನೆ ಇವೆರಡೂ ಸೇರಿ ಅಷ್ಟನ್ನೂ ಒಂದು ಪೆಟ್ಟಿಗೆಯಲ್ಲಿ ಬಹಳ ಭದ್ರವೆಂದು ತಿಳಿದು ತುಂಬಿಕೊಂಡಿದ್ದೆವು !! ಪೆಟ್ಟಿಗೆಯೇ ಹೋಗಬಹುದು ಎಂಬ ಕಲ್ಪನೆ ಕನಸಿನಲ್ಲಿಯೂ ಇರಲಿಲ್ಲ! ಆಯಿತು, ಹೋದುದಕ್ಕೆ ಚಿಂತಿಸಿ ಫಲವಿಲ್ಲ, ನಗುತ್ತಾ ಇರೋಣ, ಮರೆಯುವುದೇ ಔಷಧ.

ನಾನೂ, ಸೌ॥ ಯೂ ಆರೋಗ್ಯವಾಗಿದ್ದೇವೆ. ಚಿ॥ ಗಳಿಗೆಲ್ಲಾ ಆಶೀರ್ವಾದಗಳನ್ನು ತಿಳಿಸು. ಸಹೃದಯರಾದ ನಿನ್ನ ಸ್ನೇಹಿತರನ್ನು ಸಂಧಿಸಬೇಕೆಂದು ಮನಸ್ಸು ಹಾತೊರೆಯುತ್ತಿದೆ.

ಇತಿ ನಿನ್ನವ

ಕುಮಾರಸ್ವಾಮಿ

೪೭೪

(ವಿಷಯವನ್ನು) ತಿಳಿಯುವ ಅಪೇಕ್ಷೆ ; ಅಂಧಶ್ರದ್ಧೆ

ಕುಶಲಮ್ ಶ್ರೀ : ದುರ್ಗಾಪುರ

21.2.89

ಶ್ರೀಕಂಠ !

ದುರ್ಗಾಪುರಕ್ಕೆ ಹೋಗಿ ವಿಳಾಸವನ್ನು ಕೊಟ್ಟು ಕಾಗದ ಬರೆಯುತ್ತೇನೆಂದು ಹೇಳಿದ್ದೆ. ಇಲ್ಲಿಗೆ ಬಂದು ಆಗಲೇ 20 ದಿನಗಳ ಮೇಲಾದುವು. ಮನೆ ಅಣಿ ಮಾಡುವುದರಲ್ಲಿಯೇ ಕಾಲಕಳೆದು ಹೋಯಿತು. ಅಂಥಾದ್ದರಲ್ಲಿಯೂ ಕೆಲವರಿಗೆ ಕಾಗದ ಬರೆದೆ. ನಿನಗೆ ಬರೆಯಬೇಕೆಂದು ಇವತ್ತು ಕುಳಿತಿದ್ದೇನೆ. ತಡವಾದದ್ದಕ್ಕೆ ಅನ್ಯಥಾ ಭಾವಿಸಬೇಡ.

ನಾವು ಬೆಂಗಳೂರಿನಿಂದ ಮದ್ರಾಸಿಗೆ ಹೋಗಿ ಮದ್ರಾಸನ್ನು 21ನೇ ತಾರೀಖು ಬಿಟ್ಟೆವು. ಭುವನೇಶ್ವರಕ್ಕೆ ಹೋಗಿ ಅಲ್ಲಿಂದ ಕಲ್ಕತ್ತಾಕ್ಕೆ ಹೋಗಿ, ಹೋದ ತಿಂಗಳು 31ನೇ ತಾರೀಖು ಇಲ್ಲಿಗೆ ಬಂದೆವು. ಮನೆ ದೊಡ್ಡದಾಗಿ ಚೆನ್ನಾಗಿದೆ. ನೀರು ಬೇಕಾದಷ್ಟು ಬರುತ್ತದೆ, ಹತ್ತಿರದಲ್ಲಿಯೇ market ಇದೆ. ನನಗೂ ಈಗ ಹೆಚ್ಚೇನೂ ಕೆಲಸವಿಲ್ಲದಿರುವುದರಿಂದ ಮನೆಗೆ ಬೇಕಾದದ್ದನ್ನು ತರುವುದು, ಮನೆಯಲ್ಲಿ ಅಣಿ ಮಾಡುವುದು ಇವುಗಳನ್ನು ಮಾಡುತ್ತಿದ್ದೇನೆ. ಚಿ॥ ಯು shiftಗೆ ಹೋಗುತ್ತಿದ್ದಾನೆ. ಅವನ shift ಗಳಿಗೆ ಸರಿಯಾಗಿ ಇಲ್ಲಿಯೇ ಹತ್ತಿರದಲ್ಲಿ ಬಸ್ಸು ಬರುತ್ತದೆ. ಇನ್ನೂ ನನ್ನ ಉಪನ್ಯಾಸದ activity ಆರಂಭವಾಗಿಲ್ಲ.

ಇಲ್ಲಿಯ ಜನ ನಮ್ಮ ಕಡೆಯವರಷ್ಟು ಕುತೂಹಲಿಗಳಲ್ಲವೋ ಎನಿಸುತ್ತದೆ. ಯದ್ಯಪಿ ಸ್ವಾಮಿ ವಿವೇಕಾನಂದ, ಕೇಶವಚಂದ್ರ ಸೇನ ಇಂಥಾವರು ಹುಟ್ಟಿದ ದೇಶವಾದರೂ ಸಾಮಾನ್ಯ ಜನಗಳಲ್ಲಿ (ವಿದ್ಯಾವಂತರಲ್ಲಿ) ವಿಷಯವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆ ಕಾಣುವುದಿಲ್ಲ. ಸಾಂಪ್ರದಾಯಿಕವಾಗಿ ಬಂದಿರುವುದನ್ನು ಸುಮ್ಮನೆ ಗಂಭೀರವಾಗಿ ಪಾಲಿಸಿಕೊಂಡು ಹೋದರಾಯಿತು, ನಮಗ್ಯಾಕೆ ಈ ಗೊಡವೆಗಳು! ಎಂಬ ತಟಸ್ಥ ಭಾವನೆ. ಇದು ಇಲ್ಲಿಯವರಿಗೆ ಮಾತ್ರ ಅಲ್ಲ, ಭಾರತದಲ್ಲಿ ಎಲ್ಲರಿಗೂ ಅನ್ವಯಿಸುತ್ತದೆ ಎಂದುಕೊಳ್ಳೋಣ. ಇಲ್ಲಿಯವರ ಹತ್ತಿರ ಮಾತನಾಡಲು ಭಾಷೆಯ ಸಮಸ್ಯೆ ಬೇರೆ. ಎಲ್ಲರೂ ಬಂಗಾಳಿಯಲ್ಲಿಯೇ ಮಾತನಾಡುತ್ತಾರೆ. ಕೆಲವರು ಹಿಂದಿಯನ್ನು ಮಾತನಾಡುತ್ತಾರೆ. ನನಗೆ ಹಿಂದಿ ಬರುತ್ತದೆಂದಾದರೂ, ವಿಷಯಗಳನ್ನು ಚರ್ಚೆ ಮಾಡುವಷ್ಟು ಸಲೀಸಾಗಿ ಬರುವುದಿಲ್ಲ, ಬಂಗಾಳಿಯಂತೂ ಸುತರಾಂ ಬರುವುದಿಲ್ಲ, ಅವರುಗಳಿಗೆ ಇಂಗ್ಲಿಷ್ ಭಾಷೆ ಬರುವುದಿಲ್ಲ, ಹೀಗಾಗಿ ಮಾತನಾಡಲು ಸ್ವಲ್ಪ ತೊಡಕಾಗಿದೆ. ಬಂಗಾಳಿಯನ್ನು ಕಲಿಯಬೇಕೆಂದು ಮಾಡಿದ್ದೇನೆ.

ಭದ್ರಾವತಿಯಲ್ಲಿ ನಿಮ್ಮಗಳ ಜತೆಯಲ್ಲಿ ಕಳೆದ ದಿನಗಳನ್ನು ನೆನೆಸಿಕೊಂಡರೆ ಮನಸ್ಸಿಗೆ ಬಹಳ ಸಂತೋಷವಾಗುತ್ತದೆ. ಎಷ್ಟೋ ಸಾರಿ ಅಲ್ಲಿಯೇ ಬಂದು ಇದ್ದು ಬಿಡೋಣವೆನ್ನಿಸುತ್ತದೆ. ಒಂದಂತೂ

ನಿಜ. ಅನೇಕರಿಗೆ ನಮ್ಮ ಧರ್ಮದ ವಿಷಯ ತಿಳಿದುಕೊಳ್ಳಬೇಕೆಂಬ ಆಸೆ ಬಹಳವಾಗಿದೆ. ಆದರೆ ಪ್ರಶ್ನೆಗಳನ್ನು ಕೇಳುವುದಕ್ಕೇ ಭಯ. ಆ ತರಹ ಪ್ರಶ್ನೆಗಳನ್ನು ಕೇಳಿದರೇ ನಾಸ್ತಿಕ, ಧರ್ಮವಿರೋಧಿ ಎಂದೆಲ್ಲ ಅನ್ನುತ್ತಾರೋ ಎಂಬ ಭಯ! Salman Rushdie ಬರೆದಿರುವ Satanic Verses ಮೇಲೆ ಮಹಮ್ಮದೀಯರ ಗುಂಪಿನಲ್ಲಿ ನಡೆಯುತ್ತಿರುವ ಅಂಧ ವಾಕ್ಯಾರ್ಥಗಳನ್ನು ನೋಡಿದರೆ, ನಾವು ಇನ್ನೂ ಕಾಡುಜನಗಳಾಗಿಯೇ ಉಳಿದಿದ್ದೇವೆ ಎನಿಸುತ್ತದೆ. ನಮ್ಮಲ್ಲಿ ಹಿಂದೆ ಚಾರ್ವಾಕರು, ವೇದಗಳೆಲ್ಲಾ ಸುಳ್ಳು, ಬ್ರಾಹ್ಮಣರು ದ್ರವ್ಯ ಸಂಪಾದನೆಗೋಸ್ಕರ ಸ್ವರ್ಗ, ನರಕ, ಔರ್ಧ್ವದೈಹಿಕ ಕ್ರಿಯೆಗಳು, ಶ್ರಾದ್ಧ ಎಂಬುದನ್ನೆಲ್ಲಾ ಸೃಷ್ಟಿ ಮಾಡಿದ್ದಾರೆ ಎಂದು ಘಂಟಾಘೋಷವಾಗಿ ಜನಗಳಿಗೆ ಉಪದೇಶ ಮಾಡುತ್ತಿದ್ದಾಗಲೂ, ಯಾರೂ ಅವರನ್ನು ಕೊಂದುಹಾಕಬೇಕೆಂದು ಹೇಳಲಿಲ್ಲ. ಈಗ ಒಂದು ಪುಸ್ತಕ ಅವರ ಮತಕ್ಕೆ ವಿರೋಧವಾಗಿ ಬರೆದದ್ದಕ್ಕೇ ಅವನು ವಧಾರ್ಹ, ಅವನನ್ನು ಕೊಂದವನಿಗೆ ಬಹುಮಾನ ಕೊಡುತ್ತೇವೆಂದು ಹೇಳಿದರೆ, ಮತದ ಮೇಲಿನ ಅಂಧಶ್ರದ್ಧೆ ಎಷ್ಟರ ಮಟ್ಟಿಗೆ ಇದೆ ಎಂದು ತಿಳಿದುಕೊಳ್ಳಬಹುದು. ನಾಗರಿಕತೆಯ ಸೋಂಕೇ ಇಲ್ಲದೆ ಸಂಸ್ಕೃತಿ ಎನ್ನುವುದೇ ತಿಳಿಯದ ಕಾಡು ಜನದಂತೆ ವರ್ತಿಸುತ್ತಿದ್ದಾರೆ. ನಮ್ಮವರೂ ಹಾಗೆಯೇ ಆಗುತ್ತಿದ್ದಾರೆಂಬುದೇ ದುಃಖವಾದ ಸಂಗತಿ.

ಇರಲಿ, ಶ್ರೀಕಂಠ ! ನಿನ್ನ ಸಂದೇಹಗಳನ್ನು ಬರಿ. ಈಗ ಬೇಕಾದಷ್ಟು ಪುರಸತ್ತಿರುವುದರಿಂದ ಉತ್ತರ ಕೊಡಲು ಯೋಚನೆ ಇಲ್ಲ. ಅರವಿಂದ ಮತ್ತು ಇತರ ನಿನ್ನ ಸ್ನೇಹಿತರಿಗೆ ನನ್ನ ವಿಳಾಸವನ್ನು ಕೊಡು. ಇಲ್ಲಿಗೆ ಕಾಗದ ಬರುವುದೇ ಬಹಳ ನಿಧಾನವಾಗುತ್ತದೆ, ಕನಿಷ್ಠಪಕ್ಷ 8-10 ದಿನಗಳು. ಇದುವರೆಗೆ ನನಗೆ ಶೈಲು, ಸುಮ ಇಬ್ಬರಿಂದಲೇ ಕಾಗದ ಬಂದಿರುವುದು!

ಚಿll ಗಳಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ಶ್ರಾದ್ಧ ಪ್ರಯೋಗವನ್ನು Record ಮಾಡಲು ಪ್ರಯತ್ನಿಸುತ್ತೇನೆ.

ಇತಿ ನಿನ್ನವ

कुमारस्वामी

೪೭೫

ಗೃಹಪ್ರವೇಶ ; ವಿವಾಹ ; ದಾನ ಧರ್ಮ

कुशलम् श्री : Durgapur
30.3.89

ಶ್ರೀಕಂಠ !

ನಿನ್ನ ಕಾಗದ ಬಂದು ಆಗಲೇ 15 ದಿನಗಳ ಮೇಲಾದುವು. ಇನ್ನೂ ಅನೇಕ ಕಾಗದಗಳಿಗೆ ಉತ್ತರ ಬರೆಯಬೇಕಾದ್ದರಿಂದ ನಿನಗೆ ಬರೆಯುವುದು ಸ್ವಲ್ಪ ತಡವಾಯಿತು. ಚಿll ವೆಂಕಟೇಶ್ವರನ ವಿದ್ಯಾಪ್ರಗತಿಯನ್ನು ಕೇಳಿ ಬಹಳ ಸಂತೋಷವಾಯಿತು. "ಧಿಯೋ ಯೋ ನಃ ಪ್ರಚೋದಯಾತ್" ಎಂದು ಪ್ರಾರ್ಥಿಸುವುದು ಅವನಲ್ಲಿ ಅನ್ವರ್ಥವಾಗಿದೆ. ಆ ಸವಿತೃಪರಮಾತ್ಮನ ಅನುಗ್ರಹದಿಂದ ಅವನು ಹೀಗೇ ಪ್ರವರ್ಧಿಸಿ ಆದರ್ಶ ವಿದ್ಯಾರ್ಥಿಯಾಗಲಿ ಎಂದು ಹೃತ್ಪೂರ್ವಕವಾಗಿ ಆಶೀರ್ವದಿಸುತ್ತೇನೆ.

1) ನೀನು ಈಗ "ಗೃಹಪತಿ"ಯಾಗಿರುವುದು ಇನ್ನೂ ಸಂತೋಷದ ಮಾತು. ಆಪಸ್ತಂಬರ ರೀತ್ಯಾ ಗೃಹಪ್ರವೇಶವೆಂದರೆ, ಮನೆಯಲ್ಲಿ (ಈಗಿರುವ) ಔಪಾಸನ ಮಾಡಿಕೊಂಡು, ಆ ಔಪಾಸನಾಗ್ನಿಯೊಡನೆ ನೂತನ ಗೃಹಪ್ರವೇಶ ಮಾಡಿ, ಅಲ್ಲಿ ಅಗ್ನಿಸ್ಥಾಪನೆ ಮಾಡಿ, ತೀರ್ಥಕಲಶವನ್ನಿಟ್ಟು ವಾಸ್ತೋಷ್ಪತಿ ಪೂಜೆಯನ್ನು ಮಾಡಿ, ಆಮೇಲೆ ಅದೇ ಔಪಾಸನಾಗ್ನಿಯಲ್ಲಿ ವಾಸ್ತೋಷ್ಪತೇ ಎಂಬ ನಾಲ್ಕು ಮಂತ್ರಗಳಿಂದ ಹೋಮ ಮಾಡಬೇಕು. ಜಯಾದಿ ಬ್ರಹ್ಮವಿಸರ್ಜನವಾದ ಮೇಲೆ, ಆ ಕಲಶತೀರ್ಥದಿಂದ, ಮನೆಯ ಸುತ್ತಲೂ ಒಳಗಡೆ "ಶಿವಗ್ಂ ಶಿವಮ್" ಎಂಬ ಮಂತ್ರದಿಂದ ಸುತ್ತುವರೆಯಬೇಕು. ಆಮೇಲೆ ವಿಶೇಷವಾಗಿ ಬ್ರಾಹ್ಮಣ ಭೋಜನಾದಿಗಳು, ಇಷ್ಟೇ ಪ್ರಯೋಗ. ಅಗ್ನಿ ಉದ್ಧರಣ, ಪ್ರವೇಶ, ಅಗ್ನಿ ಪ್ರತಿಷ್ಠೆ, ಕಲಶ ಪ್ರತಿಷ್ಠಾದಿಗಳಿಗೆ ಏಕಾಗ್ನಿ ಕಾಂಡದಲ್ಲಿ ಮಂತ್ರಗಳನ್ನು ಹೇಳಿದೆ. ಪ್ರಯೋಗವೇನೋ ಹೆಚ್ಚು ವಿಸ್ತಾರವಿಲ್ಲ. ಆದರೆ ಇನ್ಯಾವ ಲೌಕಿಕವನ್ನೂ ಬೆರಸದೆ ಸೂತ್ರಕಾರರು ಹೇಳಿರುವಂತೆ ಮಾಡಿದರೆ, ಬಹಳ simple but grand ಆಗಿರುತ್ತೆ. ನಾನು ಅಲ್ಲಿಗೆ May 22ಕ್ಕೆ ಬರುತ್ತಿದ್ದೇನೆ. Hudco Colonyಯಲ್ಲಿರುವ ಶ್ರೀಕಂಠನ ಮಗನಿಗೆ 20 ಉಪನಯನ, 29ರವರೆಗೂ ಅಲ್ಲಿಯೇ ಇರುತ್ತೇನೆ. ಆಮೇಲೆ June ಕೊನೆಯವರೆಗೂ ಬೆಂಗಳೂರಿನಲ್ಲಿದ್ದು ವಾಪಸು ದುರ್ಗಾಪುರಕ್ಕೆ ಬರುತ್ತೇನೆ. ನಾನು ಬಂದಾಗ ಗೃಹಪ್ರವೇಶವನ್ನು ಇಟ್ಟುಕೊಳ್ಳಲು ಸಾಧ್ಯವಾದರೆ ನಾನೇ ಮಾಡಿಸುತ್ತೇನೆ. ಆದರೆ ನನಗೋಸ್ಕರ ಖಂಡಿತ ಕಾಯಬೇಕಾದ್ದಿಲ್ಲ.

2) ವಿವಾಹಸಂಸ್ಕಾರದ ವಿಷಯ Detail ಆಗಿ ಬರೆದಿದ್ದೇನೆ. ನನ್ನ ತಂಗಿ ಮಗ ಸುಬ್ರಹ್ಮಣ್ಯನ (ಮಂಜುವಿನ ತಮ್ಮ) ಮದುವೆ ಸಮಯದಲ್ಲಿ ಬರೆದಿದ್ದೆ. ಅದರ ಒಂದು Copy ಈಗ ಸುರೇಶನ ಹತ್ತಿರವೋ, ಸುಬ್ರಹ್ಮಣ್ಯನ ಹತ್ತಿರವೋ ಇದೆ. ತರಿಸಿಕೋ. ಇನ್ನೊಂದು Copy ನರಸಿಂಹನ ಹತ್ತಿರ ಇದೆ. ಅದನ್ನು ಬೇಕಾದರೂ ತರಿಸಿಕೊಳ್ಳಬಹುದು. ನಿನ್ನ ಪ್ರಶ್ನೆಗಳಿಗೆಲ್ಲಕ್ಕೂ ಅದರಲ್ಲಿ ಉತ್ತರ ಇರುವುದರಿಂದ ನಾನು ಪುನಃ ಬರೆಯಲು ಹೊರಡುವುದಿಲ್ಲ.

3) ದಾನಧರ್ಮಗಳ ಬಗ್ಗೆ ನಾನು ಹಿಂದೆಯೇ ನಿನಗೆ ಬರೆದಂತೆ ಜ್ಞಾಪಕ. ಗೀತೆಯಲ್ಲಿ ಹೇಳಿರುವ

ದಾತವ್ಯಮಿತಿ ಯದ್ದಾನಂ ದೀಯತೇ ಅನುಪಕಾರಿಣೇ !
ದೇಶೇ ಕಾಲೇ ಚ ಪಾತ್ರೇಚ ತದ್ದಾನಂ ಸಾತ್ವಿಕಂ ಸ್ಮೃತಮ್!!

ಎನ್ನುವ ಸಾತ್ವಿಕದಾನದ ಲಕ್ಷಣ, ನಾವೆಲ್ಲರೂ ಅನುಸರಿಸಬೇಕಾದದ್ದು. ಮನಸ್ಸಿನಲ್ಲಿ ಯಾವ ಉದ್ದೇಶವೂ ಇಲ್ಲದೆ (ಕೊಟ್ಟವರಿಗೆ ಪ್ರಯೋಜನವಾಗುತ್ತದೆ ಎಂಬ ಅಭಿಪ್ರಾಯವೂ ಇರಬಾರದಂತೆ. ಅದು ಅಹಂಕಾರಕ್ಕೆ ಎಡೆ ಕೊಡುತ್ತದೆ ಎಂಬ ಅಭಿಪ್ರಾಯ) ಕೇವಲ ಕೊಡುವುದು ಕರ್ತವ್ಯ ಎಂಬ ಸಂಕಲ್ಪದಿಂದ ತನಗೆ ಯಾವತ್ತೂ ಉಪಕಾರ ಮಾಡಿಲ್ಲದ, ಮಾಡುವುದಕ್ಕೆ ಸಾಮರ್ಥ್ಯವೂ ಇಲ್ಲದ ಸತ್ಪಾತ್ರನಿಗೆ, ಸರಿಯಾದ ಜಾಗದಲ್ಲಿ, ಸರಿಯಾದ ಸಮಯದಲ್ಲಿ ಕೊಡುವುದೇ ಸಾತ್ವಿಕದಾನ. ಇಲ್ಲಿ ಸರಿಯಾದ ಕಾಲದಲ್ಲಿ, ಸರಿಯಾದ ಸಮಯದಲ್ಲಿ, ಸತ್ಪಾತ್ರನಿಗೆ ಎನ್ನುವುದರಲ್ಲಿಯೇ ವಿಧವಿಧವಾದ ಅಭಿಪ್ರಾಯಗಳಿವೆ. ಸಾಮಾನ್ಯವಾಗಿ ಸರಿಯಾದ ಕಾಲವೆಂದರೆ ಗ್ರಹಣ, ಸಂಕ್ರಮಣಾದಿ ಪುಣ್ಯಕಾಲಗಳನ್ನು ಹೇಳುವುದುಂಟು. ಅದಕ್ಕೆ ಸ್ಕಾಂದಪುರಾಣದಲ್ಲಿ ಇದಕ್ಕೆ ಲಕ್ಷಣವನ್ನು ಹೇಳುತ್ತಾ, ಸರಿಯಾದ ಕಾಲವೆಂದರೆ, ಯಾವ ಕಾಲದಲ್ಲಿ ಒಂದು ವಸ್ತುವು ದುರ್ಲಭವಾಗಿರುತ್ತದೋ, ಆ ಕಾಲದಲ್ಲಿ ಆ ದುರ್ಲಭವಾದ ವಸ್ತುವನ್ನು ಕೊಟ್ಟರೆ ಅದೇ ಸರಿಯಾದ ಕಾಲ. ನೀರಿನ ಕ್ಷಾಮದಿಂದ ಎಲ್ಲರೂ ಹಾಹಾಕಾರ ಪಡುತ್ತಿರುವ ಕಾಲದಲ್ಲಿ ತನ್ನ ಹತ್ತಿರ ಇದ್ದರೆ ನೀರನ್ನು ದಾನ ಮಾಡಬೇಕು. ಪ್ರಖರವಾದ ಬಿಸಿಲು ಕಾಲದಲ್ಲಿ ಅರವಟ್ಟಿಗೆ ಇಟ್ಟು ಪಾನಕ, ನೀರುಮಜ್ಜಿಗೆ ದಾನ ಮಾಡಬೇಕು. ಅನ್ನಕ್ಷಾಮ ಕಾಲದಲ್ಲಿ store ಮಾಡಿರುವ ಅಕ್ಕಿಯನ್ನು ದಾನ ಮಾಡಬೇಕು. ಇದು ಸತ್ಕಾಲ. ಹಾಗೆಯೇ ಯಾವ ದೇಶದಲ್ಲಿ ಯಾವ ವಸ್ತುವು ದುರ್ಲಭವಾಗಿದೆಯೋ ಅಲ್ಲಿ ಆ ದಾನವನ್ನು ಮಾಡಬೇಕು. ಅದು ಸರಿಯಾದ ದೇಶ. ಇನ್ನು ಸತ್ಪಾತ್ರನಿಗೆ ಲಕ್ಷಣ ಹೇಳುವುದು ಬಹಳ ಕಷ್ಟ. ಒಟ್ಟಿನಲ್ಲಿ ಹೇಳುವುದಾದರೆ ಸತ್ಪಾತ್ರನೆಂದರೆ ಸುಸಂಸ್ಕೃತನೆಂದು ಹೇಳಬಹುದು. ಅವನು ವಿದ್ಯಾವಂತನೇ ಆಗಿರಬೇಕೆಂಬ ನಿಯಮವಿಲ್ಲ (ಸಾಮಾನ್ಯವಾಗಿ ವಿದ್ಯಾವಂತರು ಸುಸಂಸ್ಕೃತರೆಂಬ ಭಾವನೆ. ಆದರೆ ಅದು ಈ ಕಾಲದಲ್ಲಿ ಖಂಡಿತ ಅನ್ವಯವಾಗುವುದಿಲ್ಲ) ಕೇವಲ ವಿದ್ಯೆಯಾಗಲಿ, ಅಧಿಕಾರವಾಗಲಿ, ಹಣವಾಗಲಿ ಹಾಗೆಯೇ ಕೇವಲ ದಾರಿದ್ರ್ಯವಾಗಲಿ, ಅಂಗವಿಕಲತೆಯಾಗಲಿ ಒಬ್ಬನಿಗೆ ಸಂಸ್ಕೃತಿಯನ್ನು ಕೊಡಲಾರವು. ಡಿ.ವಿ.ಜಿ. ಹೇಳುವಂತೆ, ಸಂಸ್ಕೃತಿಯೆಂದರೆ, ಅದು ಜೀವನದ ಅಂತರಂಗದ ಸೊಗಸು. ಥಟ್ಟನೆ ಜ್ಞಾಪಕ ಬರುವ ಉದಾಹರಣೆಯೆಂದರೆ ಈಗ ಇಲ್ಲಿ ನಮ್ಮ ಮನೆಯಲ್ಲಿ ತೋಟದ ಕೆಲಸ ಮಾಡುತ್ತಿರುವ ಮಾಲಿ. ಅವನು ದರ್ಭಾಂಗ ಜಿಲ್ಲೆಯ ಶೂದ್ರ, ಅವಿದ್ಯಾವಂತ, ಬಡವ. ಆದರೆ ಅವನ ಆಂತರಂಗಿಕ ಸಂಸ್ಕೃತಿಯು ಬಹಳ ಉತ್ತಮ ಮಟ್ಟದ್ದು. ಅವನು ನಡೆದುಕೊಳ್ಳುವ ರೀತಿ, ಮಾತನಾಡುವ ಶೈಲಿ, ಅವನಿಗೆ ಹಣದ ಮೇಲಿರುವ ವೈರಾಗ್ಯ ಎಲ್ಲವೂ ಬಹಳ ಉತ್ತಮ ಸಂಸ್ಕೃತಿಯನ್ನು ಸೂಚಿಸುತ್ತವೆ. ಅವನು ಸತ್ಪಾತ್ರ. ನೀನು ಬರೆದಿರುವ ಭಿಕ್ಷುಕರು ಮುಂತಾದವರು professionals. ಅವರಿಗೆ ದೈನ್ಯತೆಯನ್ನು ಬಿಟ್ಟರೆ ಬೇರಾವ ಸಂಸ್ಕೃತಿಯೂ ಇಲ್ಲ. ಅವರಿಗೆ ದೀನತೆಯಿಂದ ಜೀವನ ಮಾಡುವುದನ್ನು ತಪ್ಪಿಸಿ, ಮರ್ಯಾದೆಯಿಂದ ಬಾಳಲು ಏರ್ಪಾಡು ಮಾಡಿಕೊಟ್ಟರೂ, ಅವರಿಗೆ ದೈನ್ಯತೆಯಲ್ಲಿಯೇ ರುಚಿ. ಅದು ಕೇವಲ ತಮೋಗುಣ. ಸಂಸ್ಕೃತಿಯಲ್ಲ, ಆಲಸ್ಯ, ಶೋಂಭೇರಿತನ. It is just cowardice which has made them beggars. ಅವರಿಗೆ ಕೊಡಬಾರದೆಂದಲ್ಲ, ಆದರೆ ಅದು ಸಾತ್ವಿಕ ದಾನವಲ್ಲ ಎಂದು ನನ್ನ ಅಭಿಪ್ರಾಯ. ಸುಸಂಸ್ಕೃತನಾದ ವ್ಯಕ್ತಿ ಅದನ್ನು ಎಂದಿಗೂ ದುರುಪಯೋಗ ಮಾಡಿಕೊಳ್ಳುವುದಿಲ್ಲ ಎಂಬುದು ಅರ್ಥಸಿದ್ಧ. ಇದು ಎಲ್ಲರಿಗೂ ಅನ್ವಯಿಸುತ್ತದೆ. ವೇದೋಕ್ತಕರ್ಮಗಳಲ್ಲಿ ಕೊಡುವುದು ದಕ್ಷಿಣೆಯೇ ಹೊರತು ದಾನವಲ್ಲ, ದಕ್ಷಿಣೆಯೆಂದರೆ ಅವನು ಮಾಡಿದ ಕೆಲಸಕ್ಕೆ ಸಂಭಾವನೆ. ಒರಟಾಗಿ ಹೇಳುವುದಾದರೆ ಕೂಲಿ ಎಂದು ಹೇಳಬಹುದು. ಅಲ್ಲಿ ಆ ಕೆಲಸಕ್ಕೆ ಪಟುವಾದವನನ್ನು ಕರೆಯುವುದು ಪ್ರಧಾನ. ಅಲ್ಲಿಯೂ ಅವನ ಸಂಸ್ಕೃತಿಯನ್ನು ನೋಡಬೇಕಾದ್ದು ಅಗತ್ಯವೇ. ಆದರೆ ಕೆಲಸ ಮುಖ್ಯವಾಗಿದ್ದರೆ, ಅದರಲ್ಲಿ ಒಬ್ಬನಿಗಿರುವ ದಕ್ಷತೆಯೇ qualification ಆಗುತ್ತದೆ.

ಶ್ರೀಕಂಠ! ನಿನ್ನ ಸಂದೇಹಗಳನ್ನು, ಪ್ರಶ್ನೆಗಳನ್ನು ಬರೆಯಲು ಯಾವ ರೀತಿಯ ಸಂಕೋಚವೂ ಬೇಡ, ಈಗಂತೂ ಪೂರ್ತಿ ಬಿಡುವಾಗಿದ್ದೇನೆ. ಇಲ್ಲಿ ಮಾತನಾಡಲು, ಚರ್ಚಿಸಲು ಒಬ್ಬರೂ ಇಲ್ಲ. ಆದ್ದರಿಂದ ನಿನ್ನ ಮತ್ತು ಇತರರ ಕಾಗದಗಳೇ ನನಗೆ tonic. ಚಿ|| ಗಳಿಗೆಲ್ಲಾ ನನ್ನ ಆಶೀರ್ವಾದಗಳು. ನಿನ್ನ ಸೌ|| ಯ ಆದರೋಪಚಾರಗಳು ಪದೇಪದೇ ಸ್ಮರಣೆಗೆ ಬರುತ್ತವೆ. ಅವರದ್ದು ಸುಸಂಸ್ಕೃತಿ.

ಇತಿ ನಿನ್ನವ

ಕುಮಾರಸ್ವಾಮಿ

೪೭೬

ವಿವೇಕದಿಂದ ಪ್ರೇರಣೆ

ಕುಶಲಮ್ ಶ್ರೀ : **ದುರ್ಗಾಪುರ**

20.8.89

ಶ್ರೀಕಂಠ !

ನಾನು ಇಲ್ಲಿಗೆ ಬಂದು ಆಗಲೇ 2 ತಿಂಗಳ ಹತ್ತಿರಕ್ಕೆ ಬಂತು. ನೀನು ಗೃಹಪ್ರವೇಶದ ಕ್ರಮವನ್ನು ಬರೆದುಕೊಡಬೇಕೆಂದು ಕೇಳಿದ್ದ ಜ್ಞಾಪಕ. ಆಗ ಬರೆದುಕೊಡಲಿಲ್ಲ, ನಿನ್ನ ಮನೆಗೂ ಬರಲಾಗಲಿಲ್ಲ, Paper Townಗೇ ಬರಲಿಲ್ಲ, ಏನೋ ಕಾರ್ಯಕ್ರಮಗಳ ಒತ್ತಡ ಹೆಚ್ಚಾಗಿದ್ದುದರಿಂದ ಆಗಲಿಲ್ಲ. ಪ್ರಕಾರಾಂತರ ಭಾವಿಸಬೇಡ. ನಿಮ್ಮ ಮನೆಯ ಆದರಾತಿಥ್ಯಗಳ ಸ್ಮರಣೆ ಬರುತ್ತಲೇ ಇರುತ್ತದೆ. ಯಾರಾದರೂ ಸಿಕ್ಕಿದಾಗ, ಮಾತು ಬಂದಾಗ ಉದಾಹರಿಸುತ್ತಲೇ ಇರುತ್ತೇನೆ. ನಮ್ಮ ದೇಶದಲ್ಲಿ ಅನೇಕರು ಈ ಆತಿಥ್ಯವನ್ನೂ ಒಂದು ಸಂಪ್ರದಾಯವೆಂದು ಮಾಡುತ್ತಾರೆ. ತಪ್ಪಿಲ್ಲ, ಆದರೆ ಅದರಲ್ಲಿ ಪ್ರೀತಿಯ ಅಂಶ ಸೇರಿಸುವುದಿಲ್ಲ, ಕರ್ತವ್ಯಭ್ರಷ್ಟತೆಯ ಪಾಪಭೀತಿ ಇರುತ್ತದೆ. ಯಾವುದಾದರೂ ಕಾರಣದಿಂದ ಆ ಭೀತಿ ಹೋಗಿಬಿಟ್ಟರೆ, ಕರ್ತವ್ಯವೂ ಲೋಪವಾಗುತ್ತದೆ. ಅದನ್ನೇ Prof. Hiriyanna (Professor of Sanskrit, Maharaja's College, Mysore in the 1920's)ನವರು ಹೇಳುತ್ತಾ "Intellectual Convictions which do not influence practical conduct are empty of accomplishments; and Practical conduct not rooted in deep knowledge is blind - striving" ಎಂದರು. ಎಷ್ಟು ನಿಜ! ಕರ್ತವ್ಯವೆಂದೋ, ಸಂಪ್ರದಾಯವೆಂದೋ ಬಿಟ್ಟುಬಿಟ್ಟರೆ ಏನಾದರೂ ಆಗುತ್ತದೆಂಬ ಭಯದಿಂದಲೇ ಅನೇಕ ಅಭ್ಯಾಸಗಳನ್ನು ನಡೆಸಿಕೊಂಡು ಬಂದಿದ್ದೇವೆ. ಆದರೆ ಅವುಗಳ ಬಗ್ಗೆ ವಿಚಾರ ಮಾಡಿ, ವಿವೇಕದಿಂದ ಪಾಲಿಸುತ್ತಿಲ್ಲ. ಅದನ್ನೇ ಅವರು ಹೇಳಿರುವುದು It becomes blind- striving ಎಂದು. ನನಗೆ ಜ್ಞಾಪಕವಿದೆ, ಹಿಂದೆ ನಮಗೆ ಹಾಲು ತಂದುಕೊಡುವವರು "ತುಂಬಾ ನೀರು ಬೆರಸುತ್ತೀಯಲ್ಲಪ್ಪಾ!" ಎಂದು ಕೇಳಿದರೆ, "ಸ್ವಾಮಿ! ನಿಮ್ಮ ಮನೆಗಳಿಗೆ ನೀರು ಬೆರಸಿಕೊಟ್ಟರೆ ನಮ್ಮ ವಂಶ ನಾಶವಾಗೋಕಿಲ್ವಾ!" ಎಂದು ಹೇಳುತ್ತಿದ್ದರು. ಒಳ್ಳೆಯ concept ನಿಜ. ಆದರೆ ಅದು ವಿವೇಕದಿಂದ ಬಂದಿದ್ದಲ್ಲ, ವಂಶ ನಾಶವಾಗುತ್ತದೆ ಎಂದು ಹಿರಿಯರು ಹೇಳಿದ್ದ ಭಯದಿಂದ! ಯಾವಾಗ ಅವನೇ, ನೀರು ಬೆರೆಸಿಕೊಡುವವನೂ ಯಾವ ತೊಂದರೆಯೂ ಇಲ್ಲದೆ ದುಡ್ಡುಗಳಿಸಿ ಐಶ್ವರ್ಯವಂತನಾದುದನ್ನು ನೋಡಿದನೋ, ಆಗಲೇ ಅವನಿಗೆ ಆ ಭಯ ಹೋಯಿತು. ತಾನೂ ಆರಂಭಿಸಿದ. ಆ ಭಯಕ್ಕೆ ಬದಲಾಗಿ, ವಿವೇಕದಿಂದ ನೀರು ಬೆರೆಸುವುದು ಅನ್ಯಾಯ, ಅಧರ್ಮ, ಮಾಡಬಾರದು ಎಂಬ ನಿಶ್ಚಯ ಬುದ್ಧಿಯಿಂದ ಮಾಡಿದ್ದರೆ ಎಂದಿಗೂ ಅವನು ನೀರು ಬೆರೆಸುತ್ತಿರಲಿಲ್ಲ. ಲಂಚ ತೆಗೆದುಕೊಂಡರೆ ಏನೋ ಆಗುತ್ತದೆ ಎಂಬ ಭಯದಿಂದ ಬಿಟ್ಟಿದ್ದರೆ ಅದು ಶಾಶ್ವತವಾಗುವುದಿಲ್ಲ. ಅದು ಅಧರ್ಮ – 'ಅದರಿಂದ ನನ್ನ ಮನುಷ್ಯತ್ವವೇ ಇಳಿಯುತ್ತದೆ. ತಮೋಗುಣಸಂಪನ್ನನಾಗುತ್ತೇನೆ, ಬೇಡ' ಎಂಬ ವಿವೇಕದಿಂದ ನಿಲ್ಲಿಸಿದ್ದೇ ಆದರೆ ಅದು ಶಾಶ್ವತ ಗುಣವಾಗಿರುತ್ತದೆ. ಆರಂಭದಲ್ಲಿ ಭಯವನ್ನೋ, ಆಸೆಯನ್ನೋ ಮೂಡಿಸೋಣ. ಆದರೆ ಅದು ಕ್ರಮವಾಗಿ ವಿವೇಕಪೂರಿತವಾದದ್ದಾಗಬೇಕು. ಆಗಲೇ ನಮ್ಮ ದೇಶದಲ್ಲಿ ಧರ್ಮ ಉಳಿಯಲು ಸಾಧ್ಯ. ಯಾವ ನಂಬಿಕೆಯಾದರೂ ವಿವೇಕದ ಒರೆಗಲ್ಲಿಗೆ ಹಚ್ಚಿ ಅದನ್ನು refine ಮಾಡಬೇಕು. ಅದರಿಂದ ತನಗೇನು ಪ್ರಯೋಜನ ಎಂಬುದನ್ನು ಮೊದಲು ನಿಶ್ಚಯ ಮಾಡಿಕೊಳ್ಳಬೇಕು. ಭಯದಿಂದ ಯಾವ ನಂಬಿಕೆಯನ್ನಿಟ್ಟಿದ್ದರೂ ಅದು ಖಂಡಿತ ದಂಡ. ಮೊದಲು ಮನುಷ್ಯ ಅಭ್ಯಾಸ ಮಾಡಬೇಕಾದದ್ದು "ಅಭಯ" (fearlessness). ಹಾಗಂದರೆ ಹುಲಿ, ಚಿರತೆಗಳು ಬಂದರೂ ಭಯಪಡದೆ ಅವುಗಳ ಕೈಯಲ್ಲಿ ಹತರಾಗಬೇಕೆಂದಲ್ಲ, ಧರ್ಮದ ವಿಷಯದಲ್ಲಿ ಅಭಯ.

ಶ್ರೀಕಂಠ! ನಿನ್ನ ಸಂಶಯಗಳ ಕಾಗದ ಇದುವರೆಗೂ ಬಂದೇ ಇಲ್ಲ!! ನಿರೀಕ್ಷಿಸುತ್ತಲೇ ಇದ್ದೆ. ಸಂದೇಹಗಳೆಲ್ಲಾ ನಿವಾರಣೆಯಾಗಿಯೇ ಬಿಟ್ಟವೆ ಅಂತ ಕಾಣುತ್ತೆ!! ಈ ವೇಳೆಗೆ ನೀನು ಗೃಹಪ್ರವೇಶವನ್ನು ಮುಗಿಸಿರಬಹುದು. ಮುಗಿಸಿಲ್ಲದೆ ಶಾಸ್ತ್ರೀಯ ಕ್ರಮವನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆ ಇದ್ದರೆ ಕಾಗದ ಬರಿ. ಬರೆದು ಕಳಿಸುತ್ತೇನೆ.

ಅರವಿಂದರು ಗೃಹಸ್ಥಜೀವನದಲ್ಲಿ ರುಚಿಯನ್ನು ಸವಿಯುವುದರಲ್ಲಿ ನಮ್ಮನ್ನೆಲ್ಲಾ ಮರೆತಿರಬಹುದು!! ಅವರಿಬ್ಬರಿಗೂ ನನ್ನ ಅನಂತ ಆಶೀರ್ವಾದಗಳು. ಮಿಕ್ಕ ಸ್ನೇಹಿತರೆಲ್ಲರಿಗೂ ಜ್ಞಾಪಿಸು. ಎಲ್ಲರಿಗೂ ನಮಸ್ಕಾರಗಳನ್ನು ತಿಳಿಸು, ನಿನ್ನ ಸೌ|| ಗೂ, ನಿನ್ನ ಮಕ್ಕಳಿಗೂ ನನ್ನ ಹಾರ್ದಿಕ ಸಪ್ರೇಮ ಆಶೀರ್ವಾದಗಳು. ಅವರ ವಿದ್ಯಾಭ್ಯಾಸ ಪ್ರಗತಿ ಮೊದಲಿನಂತೆಯೇ ಉತ್ತಮ ವಾಗಿದೆಯೆಂದು ನಂಬಿದ್ದೇನೆ.

ಇತಿ ನಿನ್ನವ

कुमारस्वामी

೪೭೭

ದೃಷ್ಟಪ್ರಯೋಜನ (ವಿಧಿಗಳು) ; ಗರ್ಭಿಣಿಯರಿಗೆ ಕಷ್ಟವಾದೀತೆಂದು

कुशलम्   श्री :   **ದುರ್ಗಾಪುರ**

6.9.89

ಶ್ರೀಕಂಠ !

ನಿನ್ನ ಕಾಗದ ತಲಪಿತು. ಅರವಿಂದರೂ ಒಂದು ಕಾಗದ ಬರೆದಿದ್ದಾರೆ, ಬಹಳ ಸಂತೋಷವಾಯಿತು.

ಗರ್ಭಿಣೀ ಸ್ತ್ರೀಯರು ಪೂಜಾ ವ್ರತಾದಿಗಳನ್ನು ಮಾಡಬಾರದೆಂದು ಹೇಳುವುದು ಕೇವಲ ಅವರ ಸೌಕರ್ಯಕ್ಕೋಸ್ಕರ. ವ್ರತಪೂಜೆಗಳೆಂದರೆ ಉಪವಾಸ, ದೈಹಿಕಶ್ರಮ ಇವುಗಳು ಇದ್ದೇ ಇರುತ್ತವೆ. ಅದು ಆ ಸಮಯದಲ್ಲಿ ಅವರಿಗೆ ಬೇಡವೆನ್ನುವ ಉದ್ದೇಶವೇ ಹೊರತು ಬೇರೇನೂ ಇಲ್ಲ. ದೇಹಶ್ರಮವಿಲ್ಲದೆ ಖುಷಿಯಿಂದ ಮಾಡಬಹುದಾದರೆ ಯಾರು ಬೇಡವೆನ್ನುತ್ತಾರೆ! ಇನ್ನೂ ಆ ಸಮಯದಲ್ಲಿ ಅವರುಗಳಿಗೆ ಆ ರೀತಿ ರುಚಿ ಬಂದು ಮಾಡಬೇಕೆನ್ನುವುದು ಉತ್ತಮವಲ್ಲವೆ! ಶಿಶುವಿಗೂ ಅದೊಂದು ಸಂಸ್ಕಾರವಲ್ಲವೇ? ನಾನು ಹಿಂದೆಯೇ ಹೇಳಿದ್ದೇನೆ, ನಮ್ಮ ಯಾವ ನಿಯಮಗಳಾದರೂ ದೃಷ್ಟ ಪ್ರಯೋಜನ ವಿಧಿಗಳೆಂದು. ಅಂದರೆ ಅವುಗಳಿಂದ ನಮಗೆ ಕಣ್ಣಿಗೆ ಕಾಣುವ ಯಾವುದೋ ಪ್ರಯೋಜನವಿದೆ ಎಂದರ್ಥ. ಅದೃಷ್ಟವಾದ ಪ್ರಯೋಜನವುಳ್ಳ ವಿಧಿಗಳು ಯಾವುದೂ ಇಲ್ಲ. ನಮಗೆ ಆ ಪ್ರಯೋಜನ ಆವಶ್ಯಕವಿಲ್ಲದಿದ್ದರೆ, ಆ ನಿಯಮಪಾಲನೆ ಖಂಡಿತ ಅನಗತ್ಯ. ಈ ನ್ಯಾಯವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟು ಕೊಳ್ಳುವುದು ಉಚಿತ. ಈಗ ಬಂದಿರುವ ಸಾಂಪ್ರದಾಯಿಕ ನಿಯಮಗಳನ್ನು ಪಾಲಿಸಿದರೇ ಒಂದು ಪುಣ್ಯ, ಪಾಲಿಸದಿದ್ದರೆ ಪಾಪ ಎಂಬ ಗೊಡ್ಡು ಅಪಾಯಕರವಾದ ನಂಬಿಕೆ ನಮಗೆ ಹೋಗಬೇಕು. ಹಾಗೆಂದು ಎಲ್ಲವನ್ನೂ ಬಿಟ್ಟುಬಿಡಬೇಕೆಂದು ನಾನು ಹೇಳುತ್ತಿಲ್ಲ. ಚೆನ್ನಾಗಿ ವಿಚಾರ ಮಾಡಿ ಅದರ ಪ್ರಯೋಜನ, ಅಪ್ರಯೋಜನಗಳನ್ನು ತಿಳಿದು ಆಚರಿಸಬೇಕು. ಸುಮ್ಮನೆ ಒಬ್ಬರು ಹೇಳಿದರು ಎಂದು ಮಾಡುವುದಲ್ಲ, ಅದನ್ನೇ Prof. ಹಿರಿಯಣ್ಣನವರು ಹೇಳಿದ್ದು (ಹೋದ ಕಾಗದದಲ್ಲಿ ಬರೆದಿದ್ದೆನೋ ಏನೋ) "Intellectual Convictions which do not influence practical conduct are empty of accomplishments; and Practical conduct not rooted in deep knowledge is blind - striving". ನಾವೆಲ್ಲರೂ ಈ ಎರಡನೆಯ Categoryಗೆ ಸೇರಿದವರು. ಯಾವ practice ನ್ನೂ ತತ್ತ್ವವಿಚಾರವಿಲ್ಲದೆ ಮಾಡುವುದು ವ್ಯರ್ಥ.

ಚೌಲದ ವಿಷಯದಲ್ಲಿಯೂ ಅಷ್ಟೆ, ಅದು ಹುಡುಗನಿಗೆ ಮಾಡಬೇಕಾದ ಸಂಸ್ಕಾರ. ಅದಕ್ಕೆ ಕಾಲವುಂಟು (ಮೂರನೇ ವರ್ಷ). ಆ ಕಾಲದಲ್ಲಿ ಮಾಡಿಯೇ ತೀರಬೇಕು. ತಾಯಿ ಗರ್ಭಿಣಿಯಾಗಿದ್ದರೆ ಅವುಗಳನ್ನೆಲ್ಲಾ ನಿಭಾಯಿಸುವುದು ಕಷ್ಟವೆಂಬ ದೃಷ್ಟಿಯಿಂದ ಹೇಳಿರುವುದೇ ಹೊರತು ಬೇರಾವ ಅಧರ್ಮವೂ ಇಲ್ಲ. ಆದರೆ ಕಾಲಾತೀತ ಮಾಡುವುದು ಅಧರ್ಮವೇ! ಅದರಲ್ಲಿ ಶಾಸ್ತ್ರೀಯವಾದ ಚೌಲ, ಅಶಾಸ್ತ್ರೀಯವಾದ ಚೌಲ, ಈ ವಿಭಾಗವೇ ನನಗೆ ವಿಚಿತ್ರವಾಗಿದೆ. ಅಲ್ಲಿರುವುದು ಒಂದೇ ಬಗೆಯ ಚೌಲ, ಶಾಸ್ತ್ರೀಯವಾದದ್ದು. ಅದೇ ಸಂಸ್ಕಾರ. ಬೇರಾವುದೂ ಇರಲು ಸಾಧ್ಯವಿಲ್ಲ, ಇಲ್ಲವೂ ಇಲ್ಲ. ಸುಮ್ಮನೆ crop ಬಿಡಿಸುವುದಕ್ಕೆ ಧರ್ಮದ ಸೋಗನ್ನು ಹಾಕಬೇಕಾದ್ದಿಲ್ಲ. ಯಾವಾಗ ಇಷ್ಟವೋ ಆಗ ಧಾರಾಳವಾಗಿ ಬಿಡಿಸಬಹುದು, ಖಂಡಿತ ಪಾಪವಲ್ಲ. ಇದರಲ್ಲಿ ಋಗ್ವೇದ, ಯಜುರ್ವೇದಗಳಿಗೆ ಯಾವ ವ್ಯತ್ಯಾಸವೂ ಇಲ್ಲ.

ಗೃಹಪ್ರವೇಶದ ಕ್ರಮವನ್ನು ಮುಂದಿನ ಕಾಗದದಲ್ಲಿ ಬರೆಯುತ್ತೇನೆ. ನಾನೂ ಮಾಮಿಯೂ ದೀಪಾವಳಿ ವೇಳೆಗೆ ಬೆಂಗಳೂರಿಗೆ ಬರುತ್ತೇವೆ. ಆಗ ಎರಡು ದಿನ ಭದ್ರಾವತಿಗೆ ಬಂದು ನಾರಾಯಣನನ್ನು (ಅವನಿಗೆ ತೀರ ಹುಷಾರಿರಲಿಲ್ಲ) ನೋಡಿಕೊಂಡು ಬರಬೇಕೆಂದಿದ್ದೇವೆ. ಶ್ರಾದ್ಧದ ಕ್ರಮದ record ವಿಷಯ ನನಗೆ ಜ್ಞಾಪಕವಿದೆ, ಆದರೆ ಅದನ್ನು ಕಾರ್ಯಗತ ಮಾಡಲು ಹೇಗೋ ಸಂದರ್ಭ ಸರಿಯಾಗಿ ಒದಗಿಲ್ಲ, ಕ್ಷಮಿಸು, ಖಂಡಿತ ಮಾಡುತ್ತೇನೆ. Time ಹೇಳಲಾರೆ.

ನಿನಗೆ ಇಷ್ಟು ಬೇಗ retire ಆಗುವ ಸುದ್ದಿ ನನಗೆ ಸ್ವಲ್ಪ ಆಶ್ಚರ್ಯವೇ ಆಯಿತು. ನಿನ್ನನ್ನು ನೋಡಿದರೆ retire ಆಗುವ ವಯಸ್ಸಾದಂತೆ ಕಾಣುವುದಿಲ್ಲ!! Retire ಆದಮೇಲೆ ಏನಾದರೊಂದು ಹವ್ಯಾಸ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ನೀನು ಬರೆದಿರುವಂತೆ ಓದುವುದರಲ್ಲಿ ರುಚಿ ಇಲ್ಲದಿದ್ದರೆ ಬಹಳ ಕಷ್ಟವೇ! ವೇದ, ಸಂಸ್ಕೃತಗಳ ಅಭ್ಯಾಸ ಮಾಡಬಹುದು. ಆದರೆ ಅದಕ್ಕೆ ಸರಿಯಾದ ಗುರುಗಳಿದ್ದರೆ ಸಾರ್ಥಕ. ಇಲ್ಲದಿದ್ದರೆ ದಂಡ. ಆದ್ದರಿಂದ ನೀನು ಇನ್ನೂ ಕೆಲವು ದಿವಸಗಳು ಕೆಲಸ ಮಾಡಿಕೊಂಡೇ ಇರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಅಲ್ಲಿಯೇ extension ಕೊಟ್ಟರೆ ಸಂತೋಷ. ಇಲ್ಲದಿದ್ದರೆ ಬೇರೆಲ್ಲಿಯಾದರೂ ಮಾಡುವುದು ಒಳ್ಳೆಯದು. ಕೇವಲ ಧನಾರ್ಜನೆ ದೃಷ್ಟಿಯಿಂದಲ್ಲದಿದ್ದರೂ (ಧನ ಬಂದರೆ ಬೇಡವೆಂದೇನೂ ಹೇಳಬೇಕಾದ್ದಿಲ್ಲ) ದೈಹಿಕ ಮತ್ತು ಮಾನಸಿಕ ದೃಷ್ಟಿಗಳಿಂದ ಅಗತ್ಯವೆನಿಸುತ್ತದೆ.

ಇಲ್ಲಿ ನಾವು ಸೌಖ್ಯವಾಗಿದ್ದೇವೆ. ಚಿ॥ ಯು ತನ್ನ ಕೆಲಸವನ್ನು ರುಚಿಯಿಂದ ಮಾಡಿಕೊಂಡು ಬರುತ್ತಿದ್ದಾನೆ. ನಾನೂ ಪುಸ್ತಕ ಓದುವುದು, ಬರೆಯುವುದು, ಒಂದು ಸ್ವಲ್ಪ ತೋಟದ ಉಸ್ತುವಾರಿ ಇವುಗಳಲ್ಲಿ ಕಾಲಯಾಪನೆ ಮಾಡುತ್ತಿದ್ದೇನೆ. ಇದುವರೆಗೂ ಕಾಲ ನನ್ನ ತಲೆಯ ಮೇಲೆ ಕೂತಿರುವಂತೆ ಅನಿಸಿಲ್ಲ. ಮುಂದೆಯೂ

ಹಾಗಾಗುವುದಿಲ್ಲವೆಂದು ನಂಬಿದ್ದೇನೆ. ನನ್ನ ಕಾಲು ನೋವು ಹಾಗೇ ಇದೆ. ಅದು ಆಜೀವಪರ್ಯಂತ ಇರುವುದೆಂದು ತಿಳಿದಾದ ಮೇಲೆ ಯೋಚಿಸಿ ಪ್ರಯೋಜನವಿಲ್ಲ, ಅದು ಹೆಚ್ಚಾಗದಂತೆ ನೋಡಿಕೊಳ್ಳುತ್ತಿದ್ದೇನೆ ಅಷ್ಟೆ.

ಚಿ|| ಗಳಿಗೆಲ್ಲಾ ನನ್ನ ಅನಂತಾಶೀರ್ವಾದಗಳನ್ನು ತಿಳಿಸು.

ಇತಿ ನಿನ್ನವ

ಕುಮಾರಸ್ವಾಮಿ

೪೭೮

ಗೃಹಪ್ರವೇಶ

ಮುಂಚೆ ಅಣಿ ಮಾಡುವುದು ; ಪ್ರವೇಶಕ್ಕೆ ಮುಹೂರ್ತ

ಕುಶಲಮ್ ಶ್ರೀ : ಬೆಂಗಳೂರು

11.11.89

ಶ್ರೀಕಂಠ !

ನಾನು ಹೋದ ಶನಿವಾರವೇ ಇಲ್ಲಿಗೆ ಬಂದೆ. ಕಾಗದ ಬರೆಯಬೇಕೆಂದುಕೊಂಡೇ ಕಾಲ ತಳ್ಳಿಹೋಯಿತು, ಕ್ಷಮಿಸು.

ನೂತನ ಗೃಹಪ್ರವೇಶದ ಕ್ರಮವನ್ನು ಆಪಸ್ತಂಬ ಮಹರ್ಷಿಗಳೇ ತಮ್ಮ ಗೃಹ್ಯಸೂತ್ರದಲ್ಲಿ ವಿವರವಾಗಿ ಹೇಳಿದ್ದಾರೆ. ಔಪಾಸನವನ್ನು ಮಾಡಿ, ಔಪಾಸನಾಗ್ನಿಸಮೇತರಾಗಿ ದಂಪತಿಗಳು ನೂತನ ಗೃಹಪ್ರವೇಶವನ್ನು ಮಾಡಿ, ಅಲ್ಲಿ ಅಗ್ನಿ ಪ್ರತಿಷ್ಠೆ ಮಾಡಿ, ವಾಸ್ತು ಪುರುಷನನ್ನು ಪೂಜಿಸಿ ಅವನಿಗೇ ವೈದಿಕಮಂತ್ರಗಳಿಂದ ಹೋಮ ಮಾಡಿ, ಕಲಶದ ತೀರ್ಥದಿಂದ ಮನೆಯ ಸುತ್ತಲೂ ಪರಿಷೇಚನ ಮಾಡುವುದು. ಇಷ್ಟೇ ಅದರ ಕ್ರಮ. ಈಚಿನವರು ನಾನಾ ವಿಧವಾದ ಕ್ರಮಗಳನ್ನು ಜಾರಿಗೆ ತಂದಿದ್ದಾರೆ – ರಾತ್ರಿ ಹೋಗಿ ಅಲ್ಲಿ ರಾಕ್ಷೋಘ್ನ ಹೋಮ ಮಾಡುವುದು ; ಗೃಹಪ್ರವೇಶವೇ ಆಗದೆ ಅಲ್ಲಿ ಅಗ್ನಿಯನ್ನಿಟ್ಟುಕೊಂಡು ಹೋಮ ಮಾಡುವುದು ಹೇಗೆ ಸಾಧ್ಯ ಎನ್ನುವುದು ತಿಳಿಯಲಿಲ್ಲ. ಮಾರನೆ ದಿನ ನವಗ್ರಹ ಹೋಮಾದಿಗಳನ್ನು ಮಾಡುತ್ತಾರೆ. ಅದೂ ಏಕೆ ಎನ್ನುವುದು ತಿಳಿಯಲಿಲ್ಲ, ಪ್ರಾಯಶಃ "ಗೃಹ" ಶಬ್ದಕ್ಕೂ "ಗ್ರಹ" ಶಬ್ದಕ್ಕೂ ವ್ಯತ್ಯಾಸ ತಿಳಿಯದೆ ಆಗಿದೆಯೇನೋ ಎನಿಸುತ್ತದೆ. ಹೇಗಾದರೂ ಇರಲಿ, ಮಹರ್ಷಿಗಳು, ಸೂತ್ರಕಾರರು ಹೇಳಿದ್ದರ ಮೇಲೆ, ಅದಕ್ಕೇನಾದರೂ ಸಾಧಕವಾಗಿದ್ದರೆ ಮಾಡುವುದು ಸೂಕ್ತವೇ ಹೊರತು, ನಮ್ಮದೇ ಒಂದನ್ನು ಕಲ್ಪಿಸಿ, ತದ್ವಿರುದ್ಧವಾಗಿ ಮಾಡುವುದು ಅವರಿಗೆ ಅಪಚಾರ ಮಾಡಿದಂತಾಗುವುದೆಂದು ನನ್ನ ಅಭಿಪ್ರಾಯ.

ಸೂತ್ರಕಾರರು ಹೇಳಿರುವ ಗೃಹಪ್ರವೇಶಕ್ಕೆ ಮುಂಚೆ, ಮನೆಯನ್ನು ಯಾವ ರೀತಿಯಲ್ಲಿ ಬೇಕಾದರೂ ಅಣಿ ಮಾಡಬಹುದು. ಅನೇಕರಿಗೆ (ಅದರಲ್ಲಿಯೂ ತಮಿಳುನಾಡಿನಲ್ಲಿ) ಮನೆ ಇನ್ನೂ ಪೂರ್ತಿಯಾಗದೆ ಇರುವಾಗಲೇ ಪ್ರವೇಶ ಮಾಡಬೇಕೆಂಬ ಒಂದು ಅಂಧ, ಮೂಢನಂಬಿಕೆ ಬಂದಿದೆ. ಇದರಷ್ಟು ಅರ್ಥವಿಲ್ಲದಿರುವ ನಂಬಿಕೆಯು ಬೇರೆ ಇಲ್ಲ. ಗೃಹಪ್ರವೇಶ ಮಾಡಿ, ಔಪಾಸನಾಗ್ನಿಯನ್ನು ಅಲ್ಲಿ ಸ್ಥಾಪಿಸಿದ ಮೇಲೆ, ನಿತ್ಯ ಔಪಾಸನ ಮಾಡಿಕೊಂಡು ಬರಬೇಕೆಂಬ ಉದ್ದೇಶವೇ ಹೊರತು ಪುನಃ ಅದನ್ನು ವಾಪಸ್ಸು ತೆಗೆದುಕೊಂಡು ಹೋಗುವುದಲ್ಲ! Permanent ಆಗಿ ವಾಸ ಮಾಡಲು ಮನೆ ಅಣಿಯಾದ ಮೇಲೆಯೇ ಗೃಹಪ್ರವೇಶವೇ ಹೊರತು ಅರೆಕೊರೆಯಾಗಿರುವ ಮನೆಯಲ್ಲ! ಪ್ರವೇಶವೆಂದರೆ ಅಗ್ನಿಸಮೇತರಾಗಿ ಮಂತ್ರವತ್ತಾಗಿ ಪ್ರವೇಶ ಮಾಡುವುದಕ್ಕೇ ಗೃಹಪ್ರವೇಶವೆಂದು ಹೆಸರು. ಅದಕ್ಕೆ ಮುಂಚೆ ಬೇಕಾದಷ್ಟು ಸಾರಿ ಪ್ರವೇಶ ಮಾಡಿರಬಹುದು. ಮಾಡಬೇಕಾಗಿಯೂ ಇರುತ್ತದೆ. ಆದ್ದರಿಂದ, ಮೊದಲೇ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಜೋಡಿಸಿಕೊಳ್ಳಲು ಯಾವ ಅಡ್ಡಿಯೂ ಇಲ್ಲ. ವಾಸ್ತವವಾಗಿ ಹೇಳುವುದಾದರೆ, ಸೂತ್ರಕಾರರ ರೀತ್ಯಾ ವಾಸ್ತು ಹೋಮಾದಿಗಳೆಲ್ಲಾ ಆದ ಮೇಲೆ ಬಂದ ಬ್ರಾಹ್ಮಣರನ್ನು ಅಪೂಪಾದಿಗಳಿಂದ ಸತ್ಕಾರ ಮಾಡಬೇಕು. ಆ ರೀತಿ ಸತ್ಕರಿಸಬೇಕಾದರೆ, ಎಲ್ಲಾ ಸಿದ್ಧತೆಗಳೂ ಇದ್ದರೆ ತಾನೇ ಸಾಧ್ಯ! ಏನೂ ಇಲ್ಲದ ಖಾಲಿ ಮನೆಯೊಳಕ್ಕೆ ಹೋಗಿ ಸತ್ಕರಿಸುವುದು ಹೇಗೆ?

ಇನ್ನು, ಪ್ರವೇಶಕ್ಕೆ ದಿನ, ಮುಹೂರ್ತಗಳ ವಿಷಯ. ಇದನ್ನು ಅನೇಕ ಬಾರಿ ಹೇಳಿದ್ದೇನೆ ಎನಿಸುತ್ತದೆ. ನಮ್ಮ ಶಾಸ್ತ್ರಕಾರರ ರೀತ್ಯಾ ಕಾಲ ಅನಂತ (Scientific ಆಗಿಯೂ Time is infinite), ಅದು ಒಂದು ಪರಿಮಿತ ವಸ್ತುವಲ್ಲ (object). ನಮ್ಮ ಅನುಕೂಲಕ್ಕೋಸ್ಕರ ಅದನ್ನು ವಿಭಾಗ ಮಾಡಿಕೊಂಡು (ಚಂದ್ರ ಮತ್ತು ಭೂಮಿಯ ಸುತ್ತುವಿಕೆಯನ್ನು ಅನುಸರಿಸಿ) ವರ್ಷ, ಮಾಸ, ಪಕ್ಷ, ಹಗಲು, ರಾತ್ರಿ, 24 ಘಂಟೆ, ನಿಮಿಷ ಅಥವಾ ಘಳಿಗೆ, ವಿಘಳಿಗೆಗಳು ಎಂದು ಮಾಡಿಕೊಂಡಿದ್ದೇವೆ. ಎಲ್ಲವೂ relative. ಭೂಮಿಯು ತನ್ನ ಅಕ್ಷದ ಮೇಲೆ ತಿರುಗುವುದರಿಂದ ಹಗಲು, ರಾತ್ರಿಗಳಾಗುತ್ತವೆ. ಅದನ್ನು ನಾವು ಪ್ರಾತಃಕಾಲ, ಮಧ್ಯಾಹ್ನ, ಅಪರಾಹ್ನ, ಸಾಯಂಹ್ನ, ರಾತ್ರಿ, ಅಪರರಾತ್ರಿ, ಅರುಣೋದಯಕಾಲ ಮುಂತಾದಾಗಿ ವ್ಯವಹರಿಸುತ್ತೇವೆ. ಆದರೆ ಕಾಲ ಎಂಬುದು ಒಂದು ನಿರ್ದಿಷ್ಟ ವಸ್ತುವಲ್ಲ. ಯಾವ ಕಾಲದಲ್ಲಿ ಒಂದು ಕೆಲಸವನ್ನು ಮಾಡಲು ನಮಗೆ ಎಲ್ಲಾ ವಿಧದಲ್ಲಿಯೂ

ಅನುಕೂಲವಾಗಿರುತ್ತದೆಯೋ ಅದೇ ಒಳ್ಳೆಯ ಮುಹೂರ್ತ. ಅದಕ್ಕೇ ವೇದದಲ್ಲಿ ಅಗ್ನಿ ಆಧಾನ ಮಾಡಲು ಕಾಲವನ್ನು ಹೇಳುತ್ತಾ ಕೃತ್ತಿಕಾಸ್ವಗ್ನಿಮಾದಧೀತ, ರೋಹಿಣ್ಯಾಮಗ್ನಿಮಾದಧೀತ – ಕೃತ್ತಿಕಾ ನಕ್ಷತ್ರದಲ್ಲಿ ಮಾಡು, ರೋಹಿಣಿಯಲ್ಲಿ ಮಾಡು ಎಂದೆಲ್ಲಾ ಹೇಳಿದೆ. ಅಷ್ಟು ಹೇಳಿ ಕೊನೆಯಲ್ಲಿ "ಯದೇವೈನಂ ಯಜ್ಞ ಉಪನಮೇತ್।, ತಸ್ಯಾದಧೀತ। ಸೈವಾಸ್ಯರ್ದ್ಧಿಃ" ಎಂದು ಹೇಳಿತು. ಅಂದರೆ ಯಾವ ಸಮಯದಲ್ಲಿ ಕರ್ತೃವಿಗೆ ಆಧಾನ ಮಾಡಬೇಕೆಂಬ ಮನಸ್ಸು ಬಂದು, ಶ್ರದ್ಧಾಭಕ್ತಿಗಳುಂಟಾಗಿ, ಬಾಕಿ ಎಲ್ಲಾ ಅನುಕೂಲಗಳಿವೆಯೋ ಆಗಲೇ ಆರಂಭಿಸಿ. ಅದೇ ಅವನಿಗೆ ಅಭಿವೃದ್ಧಿಯನ್ನು ಕೊಡುತ್ತದೆ ಎಂದರ್ಥ. ಆಧಾನದಿಂದ, ಅಥವಾ ವಿವಾಹ, ಉಪನಯನ ಗೃಹಪ್ರವೇಶ ಮೊದಲಾದ ಸಂಸ್ಕಾರಗಳಿಂದ ಯಜಮಾನನು ಸತ್ತ್ವಶುದ್ಧಿ ಫಲವನ್ನು ಪಡೆಯಬೇಕೇ ಹೊರತು (ಅವುಗಳಿಗೆ ಸತ್ತ್ವಶುದ್ಧಿಯೊಂದೇ ಫಲ.) ಯಾವುದೋ ಒಂದು ಜ್ಯೋತಿಷ್ಕರು ಹೇಳಿದ ಮುಹೂರ್ತದಲ್ಲಿ ತಿಳಿಯದೇ ಒಂದು ಸಂಸ್ಕಾರವನ್ನು ಮಾಡಿದಾಕ್ಷಣಕ್ಕೆ ಯಾವ ಫಲವೂ ಬರುವದಿಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಭಗವತ್ಪಾದರು ವಿವೇಕ ಚೂಡಾಮಣಿಯಲ್ಲಿ,

ಅಧಿಕಾರಿಣಮಾಶಾಸ್ತೇ ಫಲಸಿದ್ಧಿರ್ವಿಶೇಷತಃ

ಉಪಾಯಾ ದೇಶಕಾಲಾದ್ಯಾಃ ಸಂತ್ಯಸ್ಯಾಂ ಸಹಕಾರಿಣಃ ॥

ಯಾವ ಫಲಸಿದ್ದಿಯಾಗಬೇಕಾದರೂ, ಅಧಿಕಾರಿ ಸರಿಯಾಗಿರಬೇಕು. ದೇಶಕಾಲಾದಿ ಉಪಾಯಗಳು, ಅದರಲ್ಲಿ ಸಹಕಾರಿಯಾಗಿರುತ್ತವೆಯೇ ಹೊರತು ಅವೇ ಸ್ವತಂತ್ರವಾಗಿ ಯಾವ ಫಲವನ್ನೂ ಕೊಡುವುದಿಲ್ಲ ಎಂದರು.

ಜಪ ಮಾಡಲು, ಧ್ಯಾನ ಮಾಡಲು, ಬೆಳಗಿನ ಜಾವ ಚೆನ್ನಾಗಿರುತ್ತದೆ. ಆದರೆ ಆ ಕಾಲವೇ ಅವನಿಗೆ ಧ್ಯಾನ ಯೋಗವನ್ನೋ, ಏಕಾಗ್ರತೆಯನ್ನೋ ಕೊಡುವುದೆಂದಲ್ಲ. ಅವನಿಗೆ ಏಕಾಗ್ರತೆಯನ್ನು ಪಡೆಯಬೇಕೆಂಬ ತೀವ್ರವಾದ ಇಚ್ಛೆ ಇರಬೇಕು. ಆಗ ಬೆಳಗಿನಜಾವದಲ್ಲಿ ಮಾಡಿದರೆ ಅದನ್ನು ಹೊಂದಲು ಅನುಕೂಲವಾಗುತ್ತದೆ. ಇಚ್ಛೆಯೇ ಇಲ್ಲದಿದ್ದರೆ, ಬೆಳಗಿನಜಾವವೇ ಅವನಿಗೆ ಏಕಾಗ್ರತೆಯನ್ನು ಕೊಡುವುದಿಲ್ಲ. ಇಚ್ಛೆ ತೀವ್ರವಾಗಿದ್ದರೆ ಮಧ್ಯಾಹ್ನದಲ್ಲಿಯೂ ಏಕಾಗ್ರತೆಯನ್ನು ಪಡೆಯಬಹುದು. ಶ್ರಾದ್ಧಕ್ಕೆ ಅಪರಾಹ್ನ ಪ್ರಶಸ್ತವೆಂದು ಹೇಳಿದ ಮಾತ್ರಕ್ಕೇ 'ಕುಯ್ಯೋಮರ್‍ರೋ' ಎಂದುಕೊಂಡು 2 ಗಂಟೆಗೆ ಶ್ರಾದ್ಧ ಮಾಡಿದ ಮಾತ್ರಕ್ಕೆ ಯಾವ ಪಿತೃಗಳೂ ಬಂದು ತೃಪ್ತಿ ಹೊಂದುವುದಿಲ್ಲ. ಶ್ರದ್ಧಾಭಕ್ತಿಗಳಿಂದ ಮಾಡುವಾಗ ಮಧ್ಯಾಹ್ನದವರೆಗೂ ಉಪವಾಸವಿದ್ದು ಮಾಡಿದರೆ, ಏನೋ ವಿಶೇಷವಾಗಿ ಮಾಡಿದಂತೆ ಆಗುತ್ತದೆ. ದೇವತಾಪೂಜೆಗಿಂತ ವಿಶಿಷ್ಟವಾಗಿ ಪಿತೃಪೂಜೆಯನ್ನು ಮಾಡಿದೆನೆಂಬ ತೃಪ್ತಿ ಸಿಗಬೇಕಾದರೆ, ದೇವತೆಗಳಿಗೆ ಮಾಡುವುದಕ್ಕಿಂತ ಸ್ವಲ್ಪ ವ್ಯತ್ಯಾಸ ಇರಬೇಕು. ದೇವತಾಪೂಜೆ ಎಲ್ಲವನ್ನೂ ಬೆಳಗ್ಗೆಯೇ ಮುಗಿಸುತ್ತೇವೆ. ಆದ್ದರಿಂದ ಶ್ರಾದ್ಧ ಮಧ್ಯಾಹ್ನ ಮಾಡುತ್ತೇವೆ. ಆ ಕಾಲನಿರ್ದಿಷ್ಟತೆಯನ್ನೆಲ್ಲಾ ಒಂದು ಕ್ರಮ ಎಂದು ತಿಳಿದು ಮಾಡಿಕೊಂಡು ಹೋಗಬೇಕೇ ಹೊರತು, ಅವುಗಳಿಗೇ ಯಾವ ಶಕ್ತಿಯನ್ನೂ ಹೇಳುವುದು ಯುಕ್ತವಲ್ಲ. ಶಾಸ್ತ್ರೀಯವೂ ಅಲ್ಲ.

ಚಿ॥ ಗಳಿಗೆ ನನ್ನ ಆಶೀರ್ವಾದಗಳು. ನಾವು ೧೫ ರಾತ್ರಿ ಬೊಂಬಾಯಿಗೆ ಹೊರಡುತ್ತಿದ್ದೇವೆ.

ಇತಿ ನಿನ್ನವ

कुमारस्वामी

೪೭೯

ವರ್ಗಾವಣೆಗಾಗಿ

कुशलम् श्री : Durgapur

5.3.1990

ಶ್ರೀಕಂಠ !

ನಿನ್ನ ಕಾಗದ ತಲಪಿ ಬಹಳ ಸಂತೋಷವಾಯಿತು. ಬಹಳ ದಿನಗಳಿಂದ ಕಾಗದ ಬರಲೇ ಇಲ್ಲವಲ್ಲಾ ಎಂದು ಯೋಚಿಸುತ್ತಿದ್ದೆ. ಅದೇ ಸಮಯದಲ್ಲಿ M.S.R. Iyengar ರಿಂದಲೂ ಕಾಗದ ಬಂತು. ಪಾಪ! ನಾನು ಬರೆದ ಕಾಗದಕ್ಕೆ ತಕ್ಷಣ ಉತ್ತರ ಬರೆದಿದ್ದಾರೆ. ಆದರೆ ನನಗೆ ತಲುಪಿದ್ದು 10 ದಿನಗಳ ಮೇಲೆ! ನಿಜವಾಗಲೂ ಅವರ ವಿಶ್ವಾಸಕ್ಕೆ ಏನು ಹೇಳಬೇಕೆಂದು ನನಗೆ ತೋಚುತ್ತಿಲ್ಲ. ಹತ್ತಾರು ವರ್ಷಗಳಿಂದ ಸ್ನೇಹಿತರಾಗಿರುವವರೂ ಅಷ್ಟು ಆಸಕ್ತಿಯನ್ನು ವಹಿಸಿ, ತಕ್ಷಣ ಕಾಗದಕ್ಕೆ ಉತ್ತರ ಬರೆಯಲಾರರು. ಅವರು ಆ ವಿಶ್ವಾಸವನ್ನು ತೋರಿಸಿದ್ದಾರೆ. ಅವರಿಗೆ ಅತ್ಯಂತ ಕೃತಜ್ಞನಾಗಿರುವುದನ್ನು ಬಿಟ್ಟು ನಾನೇನೂ ಮಾಡುವ ಸ್ಥಿತಿಯಲ್ಲೂ ಇಲ್ಲ. ಸಂಸ್ಕೃತದಲ್ಲಿ ಹೇಳುವುದುಂಟು. "ಪುನಶ್ಚ ಭೂಯೋಽಪಿ ನಮೋ ನಮಸ್ತೇ" (ಪುನಃ ಪುನಃ ಮತ್ತೊಮ್ಮೆ ನಮಸ್ಕರಿಸುತ್ತೇನೆ, ನಮಸ್ಕರಿಸುತ್ತೇನೆ). ಅದನ್ನೇ ನಾನೂ ಅವರಿಗೆ ಮಾಡಬೇಕಾಗಿದೆ. ಅವರು, ನಮ್ಮ ಹುಡುಗನು ಅಪ್ಲಿಕೇಷನ್ ಕೊಡಲಿ ಎಂದು ಬರೆದಿದ್ದಾರೆ. ಆದರೆ, B.S. Ramaswamy (Financial Adviser, S.A.I.L.) ಮೂಲಕ ಈ transfer ಗೆ ಪ್ರಯತ್ನ ಪಟ್ಟಿದ್ದೇವೆ. ಅವರು ಮೊನ್ನೆಯ ಕಾಗದದಲ್ಲಿ, ಖಂಡಿತ ಮಾಡಿಸಿಕೊಡುತ್ತೇನೆಂದೂ, ಯಾವ ಯೋಚನೆಯನ್ನೂ

ಮಾಡಬೇಕಾಗಿದ್ದಿಲ್ಲವೆಂದೂ ಬರೆದಿದ್ದಾರೆ. ಆದ್ದರಿಂದ ಅವರಿಗೆ embarrass ಆಗುವ ಹಾಗೆ ನಾನು ಬೇರೆ ರೀತಿ ಪ್ರಯತ್ನ ಪಡುವುದು ಬೇಡವೆಂದು ಸುಮ್ಮನಾಗಿದ್ದೇನೆ. Delhi Office ನಿಂದ VISLನವರಿಗೆ ಏನಾದರೂ reference ಬಂದರೆ favourable ಆಗಿರಲೆನ್ನುವುದಕ್ಕೋಸ್ಕರ ಶ್ರೀ Iyengar ಗೆ ಕಾಗದ ಬರೆದೆ. ಶ್ರೀ ರಾಮಸ್ವಾಮಿ ಕೈಯಲ್ಲಿ ಆಗದಿದ್ದರೆ Application ಕೊಟ್ಟು ಮುಂದುವರಿಯುವುದು. ಮಧ್ಯೆ ಇವತ್ತು Iyengarಗೆ ಕಾಗದ ಬರೆಯುವಾಗ ಒಂದು ಯೋಚನೆ ಬಂತು. Of course it is only a suggestion to Sri Iyengar (ಅವರಿಗೂ ಹಾಗೇ ಬರೆದಿದ್ದೇನೆ). ಅವರೇ ಅಲ್ಲಿಂದ ತಮ್ಮ Continuous Casting Plantಗೆ ಶ್ರೀನಿವಾಸನನ್ನು transfer ಮಾಡುವಂತೆ Delhi Corporate Officeನವರನ್ನು ಕೇಳಬಹುದೇನೋ ಅಂತ. VISLನ Continuous Casting Plantನಲ್ಲಿದ್ದ Varnekkar ಎನ್ನುವವರು ಬಿಟ್ಟುಹೋದರು ಎಂದು ತಿಳಿಯಿತು. ಅವರೂ Metallurgist ಆಗಿದ್ದರು. ಅವರ ಜಾಗವನ್ನು ಶ್ರೀನಿವಾಸನು ಭರ್ತಿ ಮಾಡಬಹುದೇನೋ ಎಂಬ ಯೋಚನೆ! ಅವರಿಗಿದ್ದ Rank ಇವನಿಗೆ ಕೊಡುವುದು ಬೇಡ, ಆದರೆ plant working ವಿಷಯದಲ್ಲಿ I am sure Srinivas is equal to him, if not better. ಇದು ನಾನು ನನ್ನ ಮಗನೆಂಬ ಪಕ್ಷಪಾತದಿಂದ ಹೇಳುತ್ತಿಲ್ಲ. It is my dispassionate view as a hard-baked furnaceman and a metallurgist. ಅವನೂ ಈಗ ಇಲ್ಲಿನ Continuous Casting Plantನಲ್ಲಿ in charge ಆಗಿ ಸುಮಾರು ಒಂದೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದಾನೆ. I can easily gauge his knowledge and experience. I can only say that he will be an asset to VISL or to Sri Iyengar, G.M. (Again please don't think that I am talking as Srinivasa's Father). ಶ್ರೀಕಂಠ! ನೀನು ಅವರ ಮನೆಗೆ ಇನ್ನೊಂದು ಬಾರಿ ಹೋದಾಗ, ಮಾತನಾಡು.

ವಿಶ್ರಾಂತಿ ಜೀವನ ಸ್ವಲ್ಪ ಕಷ್ಟವೇ! Part-time ಆಗಿ ಪಾಠ ಹೇಳುವುದನ್ನೋ, ಎಲ್ಲಾದರೂ Accounts ಬರೆಯುವುದನ್ನೋ ಇಟ್ಟುಕೊಳ್ಳಬಹುದೇನೋ. ಚಿ. ಗಳಿಗೆಲ್ಲಾ ನನ್ನ ಆಶೀರ್ವಾದಗಳು. ನಾವು April 19 ಅಥವಾ 24ಕ್ಕೆ ದುರ್ಗಾಪುರವನ್ನು ಬಿಡುತ್ತಿದ್ದೇವೆ. ಸದ್ಯಕ್ಕೆ ಬೆಂಗಳೂರಿನಲ್ಲಿರುತ್ತೇವೆ.

ಇತಿ ನಿಮ್ಮವ

ಕುಮಾರಸ್ವಾಮೀ

೪೮೦

Dress discipline

ಹೆಂಗಸರು ವೇದಮಂತ್ರ ಹೇಳುವುದು; ಶುಭಕಾರ್ಯದ ದಿನ ಮೈಲಿಗೆ ಸುದ್ದಿ ಬಂದರೆ ; ಹಣೆಗೆ ಲಾಂಛನ ; ಚಿತ್ರಾವತಿ ; ಪಾರ್ವಣ ಶ್ರಾದ್ಧ

ಕುಶಲಮ್ ಶ್ರೀ : BANGALORE

19.6.1990

ಶ್ರೀಕಂಠ !

ನಿನ್ನ ಕಾಗದ ತಲುಪಿತು. ಮಧುವಿನ Transfer settle ಆದಂತಾಗಿದೆ. ಅವರ E.D. (Executive Director) ಈ 18ನೇ ತಾರೀಖು ಊರಿಗೆ ಬಂದಿರುತ್ತಾರೆ. ಅವರು ಬಂದ ಮೇಲೆ ಅವನು Relieve ಮಾಡಿಸಿಕೊಂಡು ಬರಬೇಕು. July ಮೊದಲನೇ ವಾರದಲ್ಲಿ ಬರಬಹುದು. ಈ ಪ್ರಯತ್ನದಲ್ಲಿ ನಿನಗೂ, ಹೆಚ್ಚಾಗಿ ಶ್ರೀ ಅಯ್ಯಂಗಾರ್‌ರವರಿಗೂ ಬಹಳ ಶ್ರಮಕೊಟ್ಟಿದ್ದೇನೆ. ನಾನು ಕ್ಷಮ್ಯ. ಚಿII ಯು ಅಲ್ಲಿಗೆ ಬರುವ ವಿಷಯದಲ್ಲಿ ಒಂದು ತರಹ Mental obsession ಬಂದುಬಿಟ್ಟಿತ್ತು. ಅವನ ಮನಸ್ಸಿನ ತೊಳಲಾಟ ನೋಡಲಾರದೆ ಎಲ್ಲರಿಗೂ ಶ್ರಮ ಕೊಡಬೇಕಾಯಿತು. ಅಂತೂ ಸುಮುಖವಾಗಿ ಆಗಿದ್ದು ಸಂತೋಷ. ನಿನ್ನ ಪ್ರಶ್ನೆಗಳಿಗೆ ಹಿಂದೆಯೇ ಉತ್ತರ ಬರೆದಿದ್ದೇನೆ ಎಂದು ಜ್ಞಾಪಕ, ಚಿಂತೆಯಿಲ್ಲ, ಪುನಃ ಬರೆಯುತ್ತೇನೆ.

(1) ವೇದಮಂತ್ರಗಳನ್ನು ಹೇಳಲು ಪಂಚೆ, ಉತ್ತರೀಯ ಇರಬೇಕೆನ್ನುವುದು ಒಂದು dress discipline ಅಷ್ಟೇ. ಆದರೂ it is a discipline to be followed scrupulously and not flouted, at the slightest pretext. ಹೇಳಬೇಕಾದ ಸಮಯದಲ್ಲಿ ಪಂಚೆ ಶಲ್ಯಗಳು ಸಿಗುವುದಿಲ್ಲವೆನ್ನುವುದನ್ನು ನಾನು ಒಪ್ಪಲಾರೆ. ಮನೆಗೆ ಹೋಗಿ ತರುವಷ್ಟರಲ್ಲಿ ಪ್ರಪಂಚವೂ ಮುಳುಗಿ ಹೋಗಲಾರದು ಎಂದುಕೊಂಡಿದ್ದೇನೆ. Pant, Shirt ಹಾಕಿಕೊಂಡು ಹೇಳಿದರೆ ಅಧರ್ಮವಲ್ಲ, ಪಾಪವಲ್ಲ, ನಿಜ. ಆದರೆ ಆ dress disciplineನ್ನು ವ್ಯತ್ಯಾಸ ಮಾಡಲು ಪ್ರಬಲವಾದ ಕಾರಣವಿರಬೇಕು. ನಾವುಗಳು ಅದಕ್ಕೆ condition ಆಗಿದ್ದೇವೆ. Pant, shirtಗಳನ್ನು ಹಾಕಿಕೊಂಡರೆ ಮನಸ್ಸು ಖಂಡಿತ ಶುದ್ಧವಾಗಿರುವುದಿಲ್ಲ ಏನೋ ಬಿಟ್ಟಿವು ಎನಿಸುತ್ತಿರುತ್ತದೆ. ಆದರಿಂದ ಆ ಮಂತ್ರಗಳನ್ನು ಹೇಳಿ ತಾನೇ ಯಾವ ಪ್ರಯೋಜನ! ನಾನೂ ಭದ್ರಾವತಿಯಲ್ಲಿ ನನ್ನ ಮೊದಲನೆಯ lectureನ್ನು Rotary clubನಲ್ಲಿ ಮಾಡಿದೆ. Blast furnance ಮೇಲೆ lecture. ಕೊನೆಯಲ್ಲಿ ವೇದದ ಒಂದು ಭಾಗವನ್ನು ಹೇಳಿ ಮುಗಿಸಿದೆ. Pant, shoes ಎಲ್ಲಾ ಹಾಕಿಕೊಂಡಿದ್ದೆ, ಆದರೆ ಅಲ್ಲಿ ನನ್ನ

ಸ್ವಸಂತೋಷಕ್ಕಾಗಲಿ, ಚಿತ್ತಶುದ್ಧಿಗಾಗಲಿ ಹೇಳಿದ್ದಲ್ಲ, ಸಭಿಕರು ತಿಳಿದುಕೊಳ್ಳಲೆಂಬ ಉದ್ದೇಶ. ನಾನು ಆ ಕ್ಷಣಕ್ಕೆ ವೇಷ ಬದಲಾಯಿಸಲೂ ಸಾಧ್ಯವಿರಲಿಲ್ಲ. ಹಾಗೇ ಹೇಳಿದೆ. ಆದರೆ ಅದನ್ನು license ಆಗಿ ತೆಗೆದುಕೊಳ್ಳಬಾರದು. ಶ್ರೀಕಂಠ! ನಾನು ಇಷ್ಟು ಹೇಳಬಲ್ಲೆ, ನಮ್ಮ dress discipline ನಮಗೆ ಹೊರೆಯಾಗಬಾರದು, ಕಾಟಾಚಾರವಾಗಬಾರದು, ಯಾರ ಬಲಾತ್ಕಾರಕ್ಕೋ ಮಾಡುವಂತಿರಬಾರದು. ರುಚಿಯಿಂದ, ಖುಷಿಯಿಂದ, ಹೆಮ್ಮೆಯಿಂದ ಆ ವೇಷವನ್ನು ಧರಿಸಬೇಕು. ಈವತ್ತು Pant, Shirtಗಳನ್ನು ಎಷ್ಟು ಅನಾಯಾಸವಾಗಿ, ಸಂತೋಷವಾಗಿ, ರುಚಿಯಿಂದ ಧರಿಸುತ್ತಿದ್ದೇವೆಯೋ, ಅಷ್ಟೇ ಏಕೆ ಇನ್ನೂ ಹೆಚ್ಚಿನ ಸಂತೋಷದಿಂದ ನಮ್ಮ ವೇಷವನ್ನೂ ಧರಿಸಬೇಕು. ಅದನ್ನು ತ್ಯಜಿಸಲು ಕಾರಣಗಳನ್ನು ಹುಡುಕುವುದು ಬೇಡ. It must be a matter of pride and pleasure to follow our culture in dress, in manners, in language, in all aspects of our lives. We must remember that our culture has been handed over to us by those great Maharshis who strode like colossus throughout the length and breadth of our great country. Should we not feel ashamed that we have made an alien culture our own, a culture of barbarous, mercenary colonialists? And at the same time feel reluctant and indifferent to our own great culture? Our Maharshis were not wild tribes, or mercenaries, or colonialists. They were the embodiments of gentlemanship, educated culture, austerity and modesty. Why should we try to find pretexts to avoid following that great culture? At least, let us be sportive and try to follow it on occasions where it is demanded.

(2) ಹೆಂಗಸರು ಅಗತ್ಯವಾಗಿ ವೇದಮಂತ್ರಗಳನ್ನು ಹೇಳಬಹುದು. ಅದನ್ನು ಯಾವ disciplineನಿಂದ ಕಲಿಯಬೇಕೋ ಹಾಗೆ ಕಲಿತು ಹೇಳಬೇಕು. ಪುಸ್ತಕ ನೋಡಿಕೊಂಡು ಇಷ್ಟಬಂದಂತೆ ಹೇಳುವುದಲ್ಲ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಶುಕಪಠಿತಬೇಡ, ಅದಕ್ಕೆ ಬದಲಾಗಿ ಅರ್ಥವತ್ತಾದ ಶ್ಲೋಕಗಳನ್ನೋ, ಪದ್ಯಗಳನ್ನೋ ಹಾಡಿಕೊಂಡು ಮಾಡುವುದು ಹೆಚ್ಚು ಪ್ರಯೋಜನ. ವೇದಮಂತ್ರಗಳನ್ನು ಹೇಳಿದರೇ ಒಂದು ಪುಣ್ಯ ಎಂಬ ಭ್ರಮೆ ಹೋಗಬೇಕು. ಅವುಗಳನ್ನು Basic ಆಗಿ ಅರ್ಥ ಮಾಡಿಕೊಂಡು ಸ್ವರಗಳ discipline ಅನುಸರಿಸಿ ಹೇಳಿ, ಒಂದು ಬಗೆಯ ಸಾತ್ವಿಕಾನಂದವನ್ನು ಪಡೆಯುವುದೇ ಅದರ ಪ್ರಯೋಜನ. ಬೇರೇನೂ ಇಲ್ಲ. ಆ ಭಾವನೆಯಿಂದ ಮಾಡುವುದಾದರೆ ಅಗತ್ಯವಾಗಿ ಸ್ತ್ರೀಯರೂ ಮಾಡಬಹುದು. ಸುಮ್ಮನೆ ಪುರುಷರ ಜತೆಯಲ್ಲಿ competitionಗೋಸ್ಕರ, ಪುರುಷರು ನಮಗೆ ಸಿಗದಿರುವ ಪುಣ್ಯವನ್ನು ಸಂಪಾದನೆ ಮಾಡುತ್ತಿದ್ದಾರೆ ಎಂಬ ಅಸೂಯೆಯಿಂದ ಹೇಳುವುದು ಬೇಡ. ಈಗ ಅನೇಕ ವೇಳೆ ಪುರುಷರೂ ಹೇಳುತ್ತಿರುವ ರೀತಿಯಲ್ಲಿ ಕೇವಲ ಕಂಠಶೋಷಣೆಯಾಗುತ್ತಿದೆಯೇ ಹೊರತು ಯಾವ ಪ್ರಯೋಜನವೂ ಆಗುತ್ತಿಲ್ಲ. ಪ್ರತ್ಯುತ ನಮ್ಮ ಮಹರ್ಷಿಗಳಿಗೆ ಅಪಚಾರವೇ ಆಗುತ್ತಿದೆಯೆಂದು ನನ್ನ ಭಾವನೆ. ಆ ದೋಷಕ್ಕೆ ಸ್ತ್ರೀಯರೂ ಭಾಗಿಗಳಾಗುವುದು ಬೇಡ. ಯಾವ ಕೆಲಸಕ್ಕೂ, ಅದರ ಹಿಂದೆ ಇರುವ ಹೃದಯದ ಭಾವನೆಗಳು ಮುಖ್ಯವೇ ಹೊರತು ಕೇವಲ ಕ್ರಿಯೆಯಲ್ಲ. ಅತಿಥಿಯನ್ನು ಯಥಾವತ್ತಾಗಿ ಸತ್ಕರಿಸಲಾಗದಿದ್ದರೂ, ಹೃದಯದಲ್ಲಿ ಅವನ ವಿಷಯವಾಗಿ ಪ್ರೀತ್ಯಭಿಮಾನಗಳು ತುಂಬಿ ತುಳುಕುತ್ತಿದ್ದರೆ, ಅವನಿಗೆ ಬಡಿಸುವ ಗೊಜ್ಜು, ಮಜ್ಜಿಗೆ ಅನ್ನವೇ ಮೃಷ್ಟಾನ್ನವಾದೀತು! ಹಾಗಲ್ಲದೆ ಹೃದಯದಲ್ಲಿ ಕೋಪ, ದ್ವೇಷಗಳನ್ನು ತುಂಬಿಕೊಂಡು ಮೃಷ್ಟಾನ್ನ ಮಾಡಿ ಹಾಕಿದರೂ ಅದು ವಿಷವೇ ಆಗುತ್ತದೆ. ಆದ್ದರಿಂದ ಯಾವ ಕ್ರಿಯೆಗೂ ಅದರ ಹಿಂದಿನ ಭಾವನೆ, ಅತ್ಯಂತ ಮುಖ್ಯ. ಹಾಗೆ ಚಿತ್ತಶುದ್ಧಿಗೋಸ್ಕರ, ಸಾತ್ವಿಕಾನಂದವನ್ನು ಪಡೆಯುವುದಕ್ಕೋಸ್ಕರ ಸ್ತ್ರೀಯರು ಅಭಿಷೇಕವನ್ನೂ ಮಾಡಬಹುದು, ಜಪವನ್ನೂ ಮಾಡಬಹುದು, ಹೋಮವನ್ನೂ ಮಾಡಬಹುದು.

(3) ಶುಭಕಾರ್ಯದ ದಿನ ಅಶುಭ ಮೈಲಿಗೆಯನ್ನು ಕೇಳಿದರೆ, ಏನು ಮಾಡಬೇಕೆನ್ನುವುದು. ಪುನಃ ಆ ಸಮಾಚಾರವನ್ನು ಕೇಳಿದ್ದರಿಂದ ನಮ್ಮ ಹೃದಯದಲ್ಲಿ ಆಗುವ ಪರಿಣಾಮದ ಮೇಲೆ ಹೋಗುತ್ತದೆ. ಅಶುಭ, ಮೈಲಿಗೆ, ಸೂತಕ ಎಂದರೇನು? ಆ ಸಮಾಚಾರವನ್ನು ಕೇಳಿ, ನಮ್ಮ ಮನಸ್ಸು ಕ್ಷುಬ್ಧಗೊಂಡು, ದುಃಖಪಡುವುದೇ ಮೈಲಿಗೆ. ಆ ಸಮಯದಲ್ಲಿ ಯಾವ ಶುಭ ಕಾರ್ಯವನ್ನೂ ಮುಂದುವರಿಸಲು ಮನಸ್ಸೇ ಬರುವುದಿಲ್ಲ, ಮುಂದುವರಿಸಿದರೂ ಯಥಾಪ್ರಕಾರ ಕ್ರಿಯೆ ಮಾತ್ರ ನಡೆಯುತ್ತದೆಯೇ ಹೊರತು ಮನಸ್ಸು ಕ್ಷುಬ್ಧವಾಗಿಯೇ ಇರುತ್ತದೆ. ಅದು ದಂಡ. ಅದಕ್ಕೇ ಅಶುಭವಾರ್ತೆಯನ್ನು ಕೇಳಿದ ತಕ್ಷಣ ಮೈಲಿಗೆ ಬರುತ್ತದೆ, ಕೆಲಸವನ್ನು ನಿಲ್ಲಿಸಬೇಕೆಂದು ಹೇಳಿದರು. ಹಾಗಾಗದೆ ಆ ಸಮಾಚಾರದಿಂದ ಯಾವ ಪರಿಣಾಮವೂ ಆಗದಿದ್ದರೆ, ಆದರೂ ಬಹಳ ಕ್ಷಣಿಕವಾಗಿದ್ದರೆ, ಆರಂಭಿಸಿದ ಕಾರ್ಯವನ್ನು ಮುಂದುವರಿಸುವುದು ಯುಕ್ತ. ಕೆಲವು ವೇಳೆ,

ಮನಸ್ಸಿನ ಮೇಲೆ ಪರಿಣಾಮವಾಗದಿದ್ದರೂ, ನಮ್ಮಿಂದ ದೈಹಿಕವಾದ ಉಪಕಾರವಾಗುವಂತಿದ್ದರೆ, ಅಗತ್ಯವಾಗಿ ನಮ್ಮ ಕಾರ್ಯ ನಿಲ್ಲಿಸಿ, ಆ ಉಪಕಾರವನ್ನು ಮಾಡಬೇಕು, ಅದರಿಂದ ಯಾವ ಪಾಪವೂ, ಯಾವ ಅಧರ್ಮವೂ ಘಟಿಸುವುದಿಲ್ಲ.

(4) ವಿಭೂತಿಯನ್ನು ಮೂರು ಬೆರಳಿನಲ್ಲಿ ಧರಿಸುವುದು ಕೇವಲ convenience ಮತ್ತು ಚೆನ್ನಾಗಿ ಕಾಣುತ್ತದೆಂಬುದೇ! ಬೇರೆ ಯಾವ significance ಊ ಇಲ್ಲ. ಹಣೆಗೆ ಯಾವುದಾದರೊಂದು ಲಾಂಛನವನ್ನು ಧರಿಸುವುದು ನಮ್ಮ ಸಂಸ್ಕೃತಿ. ನಾವು ವಿಭೂತಿ ಹಾಕುತ್ತೇವೆ, ಕೆಲವರು ಗೋಪೀ ಚಂದನ ಹಾಕುತ್ತಾರೆ, ನಾಮ ಹಾಕುತ್ತಾರೆ, ಮುದ್ರೆ ಹಾಕುತ್ತಾರೆ, ಗಂಧ ಹಾಕುತ್ತಾರೆ. ಅವುಗಳಿಗೆ ಯಾವ ಅರ್ಥವೂ ಇಲ್ಲ. ಆಯಾ ದೇಶದ ಅಭ್ಯಾಸ ಅಷ್ಟೆ.

(5) ಊಟ ಮಾಡುವಾಗ ಚಿತ್ರಾವತಿ ಇಡುವುದು, ಕೇವಲ ಭೂತಬಲಿಯ ಪ್ರತೀಕವೆಂದು ಹೇಳಬಹುದು. ಊಟಮಾಡುವ ಮುಂಚೆ, ವೈಶ್ವದೇವ ಮಾಡಿ, ಅಗ್ನಿಯಲ್ಲಿ ನಾವು ತಿನ್ನುವ ಅನ್ನವನ್ನು ಹೋಮ ಮಾಡಿ, ಭೂತಗಳಿಗೆ (ನಾಯಿ, ಪಕ್ಷಿ ಇತ್ಯಾದಿಗಳಿಗೆ) ಬಲಿಕೊಟ್ಟು ಅತಿಥಿಸತ್ಕಾರ ಮಾಡಿ ನಾವು ಊಟ ಮಾಡಬೇಕು. ಈಗ ಅದನ್ನು ಮಾಡುತ್ತಿಲ್ಲ. ಅದಕ್ಕೆ ಬದಲಾಗಿ ಈ ಚಿತ್ರಾವತಿ ಇಡುವ ಅಭ್ಯಾಸ ಇಟ್ಟುಕೊಂಡಿದ್ದೇವೆ. ಅದೂ ನಾವು ಎಲೆಯಲ್ಲಿ ಊಟ ಮಾಡಿ, ಎಲೆಯನ್ನು ಹೊರಗಡೆ ಹಾಕಿದರೆ, ನಾಯಿ, ಪಕ್ಷಿಗಳಿಗೆ ಸ್ವಲ್ಪ ಆಹಾರ ಸಿಗಬಹುದು. ಇಲ್ಲದೆ ಈಗ ಊಟ ಮಾಡುವಂತೆ ತಟ್ಟೆಯಲ್ಲಿ ಊಟ ಮಾಡಿ ಒಳಗೇ ತೊಳೆಯುವುದಾದರೆ ಅಗತ್ಯವೇ ಇಲ್ಲ ಎನಿಸುತ್ತದೆ. ಸುಮ್ಮನೆ Drainಗೆ ಅನ್ನವನ್ನು ಹಾಕುವುದು ವ್ಯರ್ಥವಲ್ಲವೇ! ಅದಕ್ಕೆ ಬದಲು ಊಟಕ್ಕೆ ಮುಂಚೆ ಒಂದು ಪಿಡಿಚೆ ಅನ್ನವನ್ನು ಹೊರಗಡೆ ಹಾಕಿ ಬರುವುದು ಬಹು ಯುಕ್ತ. ಅನೇಕರು ಶಿಷ್ಯರು ಹಾಗೆ ಮಾಡುವುದನ್ನು ನೋಡಿದ್ದೇನೆ. ಇನ್ನು 3,4,5 ಹಾಕುವುದು, ಎಲ್ಲವನ್ನೂ ಸೇರಿಸುವುದು, ಬೇರೆ ಬೇರೆಯಾಗಿ ಇಡುವುದು ಇವೆಲ್ಲವೂ ಅವರವರ ದೇಶಾಚಾರ. ಅದಕ್ಕೆ ಯಾವ ಅರ್ಥವೂ ಇಲ್ಲ. ಒಂದು ಕ್ರಮ. ಅದರಂತೆ ಮಾಡುವುದು. ದಕ್ಷಿಣ ದೇಶದಲ್ಲಿ (ತಮಿಳು ನಾಡಿನಲ್ಲಿ) ಯಾರೂ ಚಿತ್ರಾವತಿಯನ್ನು ಇಡುವುದೇ ಇಲ್ಲ.

(6) ನಿನ್ನ ಮಾತಾಮಹೀ (ತಾಯಿಯ ತಾಯಿ) ಶ್ರಾದ್ಧವನ್ನು ನೀನೇ ಮಾಡುತ್ತಿದ್ದರೆ ಅಗತ್ಯವಾಗಿ ಪಾರ್ವಣವಾಗಿಯೇ ಮಾಡಬೇಕು. ಹಾಗೆಯೇ ಮಾತಾಮಹ (ತಾಯಿಯ ತಂದೆ) ನದನ್ನೂ ಮಾಡಬೇಕು. ಅಜ್ಜಿಯದು ಮಾತ್ರ ಏಕೆ ಮಾಡುತ್ತಿದ್ದೀಯೆ ಎನ್ನುವುದು ತಿಳಿಯಲಿಲ್ಲ. ಈಗ ಮಧುವು ಅವನ ಅಜ್ಜಿ, ಅಜ್ಜಂದಿರ ಇಬ್ಬರ ಶ್ರಾದ್ಧವನ್ನೂ ಪಾರ್ವಣವಾಗಿಯೇ ಮಾಡುತ್ತಿದ್ದಾನೆ.

ನಿನ್ನ ಮಗನ ವಿದ್ಯಾಭಿವೃದ್ಧಿಯನ್ನು ಕೇಳಿ ಬಹಳ ಸಂತೋಷವಾಯಿತು. ಹೀಗೆಯೇ ಮುಂದುವರೆದು ದೊಡ್ಡ ವಿದ್ಯಾವಂತನಾಗಲಿ ಎಂದು ಹೃದಯಪೂರ್ವಕವಾಗಿ ಆಶೀರ್ವದಿಸುತ್ತೇನೆ. ನಿನ್ನ ಸೌ. ಗೂ ನನ್ನ ಆಶೀರ್ವಾದಗಳು. ಚಿ|| ಗಳೆಲ್ಲರಿಗೂ ನನ್ನನ್ನು ಜ್ಞಾಪಿಸಿ, ನನ್ನ ಸಪ್ರೇಮ ಆಶೀರ್ವಾದಗಳನ್ನು ತಿಳಿಸು.

ಇಂತಿ ನಿನ್ನವ

ಕುಮಾರಸ್ವಾಮೀ

೪೮೧

ಜೀವನ ಸಾರ್ಥಕ್ಯ (ಆದರಾತಿಥ್ಯಕ್ಕೆ ಕೃತಜ್ಞತೆ)

कुशलम्   श्री :   ಭದ್ರಾವತಿ

31-1-92

ರಮೇಶ್ !

ಕುದುರೆಮುಖದ ವಾಸದ ಸವಿನೆನಪುಗಳನ್ನು ಮೆಲಕು ಹಾಕುತ್ತಾ ಆನಂದಪಡುತ್ತಾ ಭದ್ರಾವತಿಗೆ 10 ಘಂಟೆಗೆ ಸರಿಯಾಗಿ ತಲಪಿದೆವು. ನಮ್ಮ ಸಂತೋಷಸ್ಮರಣೆಯಲ್ಲಿ ದಾರಿ ಕಳೆದದ್ದೇ ತಿಳಿಯಲಿಲ್ಲ. ಜ್ಯೋತಿಯು ಪ್ರೀತಿಯಿಂದ ಕಟ್ಟಿಕೊಟ್ಟ ಉಪ್ಪಿಟ್ಟನ್ನು ತೆಗೆಯಲೇ ಇಲ್ಲ !! ಡ್ರೈವರ್ ಕೂಡ ನಿಲ್ಲಿಸದೆ ಬಂದುಬಿಟ್ಟ. ಬಂದ ಕೂಡಲೆ ಕೈಕಾಲು ತೊಳೆದುಕೊಂಡು ಮೊದಲು ಉಪ್ಪಿಟ್ಟು ತಿಂದೆವು. ಚಿ||ಯೂ ಚಪ್ಪರಿಸಿಕೊಂಡು ತಿಂದ (ಮೂರು ದಿನಗಳಿಂದ ಬೆಳಗ್ಗೆ ತಿಂಡಿ ಇಲ್ಲ !!). ನಿನ್ನೆಯೇ ಬರೆಯಬೇಕೆಂದು ಕೊಂಡೆ. ಆದರೆ ಅಲ್ಲಿಯ ಕಥೆ ಹೇಳುವುದರಲ್ಲಿ, ನಿದ್ರೆ ಮಾಡುವುದರಲ್ಲಿಯೇ ಕಾಲ ಕಳೆದುಹೋಯಿತು.

ನಾವು ಕುದುರೆಮುಖಕ್ಕೆ ಕಾಲಿಟ್ಟ ದಿನದಿಂದ ಬಿಡುವವರೆಗೆ ನೀವುಗಳು ತೋರಿಸಿದ ಪ್ರೀತಿ, ಆದರ, ವಿಶ್ವಾಸ, ಅಭಿಮಾನಗಳಿಗೆ ಏನು ಹೇಳಬೇಕೆಂದು ತಿಳಿಯುತ್ತಿಲ್ಲ. ಚಿರಋಣಿ ಎಂಬ ಶಬ್ದ ಸಾಲದು ಎನಿಸುತ್ತದೆ. ರಕ್ತಹಂಚಿಕೊಂಡು ಹುಟ್ಟಿರುವ ಒಡಹುಟ್ಟಿದವರಲ್ಲಿಯೂ ಈ ರೀತಿಯ ವಿಶ್ವಾಸಾಭಿಮಾನಗಳನ್ನು ಅನುಭವಿಸಲಿಲ್ಲ. ಅಲ್ಲಿ ಅನುಭವಿಸಿದೆವು. ಈಗಿನ ಕಾಲದ Standardನಂತೆ ನಮಗೆ ಐಶ್ವರ್ಯಾದಿಗಳು ಇಲ್ಲದಿರಬಹುದು. ಮನೆಗಳನ್ನು ಕಟ್ಟದಿರಬಹುದು. Carನ್ನು ಹೊಂದದಿರಬಹುದು. ಆದರೆ ನಿಮ್ಮಂಥ ಸಹೃದಯರ ಆತ್ಮೀಯತೆಗೆ, ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವುದೇ ನಮಗೆ ದೊಡ್ಡ ಐಶ್ವರ್ಯ; ಶಾಶ್ವತವಾದ, ಇತರರು ಕದಿಯಲು ಸಾಧ್ಯವಿಲ್ಲದಿರುವ ಐಶ್ವರ್ಯ. ಆ ದಿನ

ಸೌ।।ಯು ನಾವು ಕಳೆದುಕೊಂಡ ಸಾಮಾನು, ಹಣದ ಬಗ್ಗೆ ಹೇಳುತ್ತಿರುವಾಗ ನನಗೆ ಹೇಳಬೇಕೆನಿಸಿತು, ಈಗ ನಾವು ಸಂಪಾದನೆ ಮಾಡಿರುವ ಈ ಆತ್ಮೀಯತೆಯೆಂಬ ನಿಧಿಯನ್ನು ಯಾರೂ ಕದಿಯಲು ಸಾಧ್ಯವಿಲ್ಲ. ಅಪಹಾರ ಮಾಡಲು ಸಾಧ್ಯವಿಲ್ಲ. ರಾಮಾಯಣದಲ್ಲಿ ದಶರಥನು ರಾಮನಿಗೆ ಪಟ್ಟಾಭಿಷೇಕ ಮಾಡಬೇಕೆಂದು ನಿಶ್ಚಯಿಸಿ ಅಯೋಧ್ಯೆಯ ಜನಗಳ ಸಭೆ ಸೇರಿಸಿ ಅಲ್ಲಿ announce ಮಾಡುತ್ತಾನೆ. ಜನಗಳು ಬಹು ಸಂತೋಷದಿಂದ ಜಯಜಯಕಾರ ಮಾಡುತ್ತಾರೆ. ದಶರಥನಿಗೆ ಸ್ವಲ್ಪ ಕಸಿವಿಸಿಯಾಗುತ್ತದೆ. ಆಗ ಹೇಳುತ್ತಾನೆ.

ಕಥಂ ನು ಮಯಿ ಧರ್ಮೇಣ ಪೃಥಿವೀಮ್ ಅನುಶಾಸತಿ ।
ಭವಂತೋ ದ್ರಷ್ಟುಮಿಚ್ಛಂತಿ ರಾಜಾನಂ ಮಮ ಪುತ್ರಕಮ್।।

"ಪ್ರಜೆಗಳೇ! ಅನೇಕ ವರ್ಷಗಳ ಕಾಲ ನಾನೂ ಧರ್ಮದಿಂದಲೇ ರಾಜ್ಯವನ್ನಾಳಿದೆ. ಆದರೆ ಈಗ ರಾಮ ರಾಜನಾಗಿ ಬರಬೇಕು ಎಂದು ಇಷ್ಟು ಮಟ್ಟಿಗೆ ಅಪೇಕ್ಷಿಸುತ್ತಿರುವಿರಲ್ಲಾ ನಾನೇನು ಮಾಡಿದೆ?" ಎಂದು ಕಳಕಳಿಯಿಂದ ಕೇಳುತ್ತಾನೆ. ಆಗ ಪೌರರು "ದಶರಥ ! ನೀನು ಚೆನ್ನಾಗಿಯೇ ರಾಜ್ಯಭಾರ ಮಾಡಿದೆ. ಆದರೆ ನಿನ್ನ ಮಗ ರಾಮಚಂದ್ರ ಇದ್ದಾನಲ್ಲಾ ಅವನಿಗೆ ನಿನಗಿಲ್ಲದಿರುವ ಕಲ್ಯಾಣಗುಣಗಳು ಬೇಕಾದಷ್ಟಿವೆ. ಆದ್ದರಿಂದ ಅವನು ರಾಜನಾಗಿ ಬರಬೇಕೆಂದು ಅಪೇಕ್ಷಿಸುತ್ತಿದ್ದೇವೆ" ಎಂದು ಹೇಳಿ ರಾಮನ ಗುಣಗಳನ್ನು ಒಂದೊಂದಾಗಿ ಹೇಳಲು ಆರಂಭಿಸುತ್ತಾರೆ. ಎಲ್ಲಾ ಹೇಳಿ ಇನ್ನು ಹೇಳಲು ಸಾಧ್ಯವಿಲ್ಲದೆ ಕೊನೆಯಲ್ಲಿ ಒಂದೇ ಮಾತಿನಲ್ಲಿ ಹೇಳುತ್ತೇವೆ, ಕೇಳು ಎಂದು ಹೇಳಿ

ಸ್ತ್ರಿಯೋ ವೃದ್ಧಾಃ ತರುಣ್ಯಶ್ಚ ಸಾಯಂ ಪ್ರಾತಃ ಸಮಾಹಿತಾಃ।
ಸರ್ವಾನ್ ದೇವಾನ್ ನಮಸ್ಯಂತಿ ರಾಮಸ್ಯಾರ್ಥೇ ಮನಸ್ವಿನಃ।।

"ದಶರಥ ! ಇಡೀ ಕೋಸಲರಾಜ್ಯದಲ್ಲಿರುವ ಸಕಲ ಜನಗಳು, ಸ್ತ್ರೀಯರು, ವೃದ್ಧರು, ಹುಡುಗಿಯರು, ಎಲ್ಲರೂ ಬೆಳಗ್ಗೆ ಸಾಯಂಕಾಲ ಎಲ್ಲಾ ದೇವತೆಗಳಿಗೂ ಏಕಾಗ್ರತೆಯಿಂದ ನಮಸ್ಕರಿಸುತ್ತಿದ್ದಾರೆ. ಏತಕ್ಕೆ ಗೊತ್ತೇ ? ನಮಗೆ ರಾಮ ರಾಜನಾಗಿ ಬರಬೇಕೆಂದು !"

ರಮೇಶ್ ! ಈ ಪ್ರಸಂಗವನ್ನು ನಾನು ಅನೇಕ ಕಡೆಗಳಲ್ಲಿ ಹೇಳಿದ್ದೇನೆ. ಇಡೀ ರಾಜ್ಯದ ಜನಗಳು ರಾಮನ ಬಗ್ಗೆ ಹೃದಯ ಪೂರ್ವಕವಾದ ವಿಶ್ವಾಸವನ್ನಿಟ್ಟು ಅವನ ಬಗ್ಗೆಯೇ ಚಿಂತಿಸುತ್ತಿದ್ದರು. ನಮ್ಮಂಥ ಸಾಧಾರಣ ಮನುಷ್ಯರಿಗೆ ರಾಮಚಂದ್ರನ ಯೋಗ್ಯತೆ ಇಲ್ಲದಿದ್ದರೂ ನಾಲ್ಕು ಜನಗಳಾದರೂ ನಮ್ಮ ಬಗ್ಗೆ ಹೃದಯ ಪೂರ್ವಕವಾದ (ನಿಃಸ್ವಾರ್ಥದಿಂದ) ಅಭಿಮಾನವನ್ನಿಟ್ಟುಕೊಳ್ಳುವಂತೆ ಮಾಡಿಕೊಳ್ಳುವುದೇ ನಮ್ಮ ಜೀವನದ ಗುರಿಯಾದರೆ ಎಷ್ಟೋ ಸಾರ್ಥಕವಾಯಿತು ಎಂದು ಹೇಳುತ್ತೇನೆ. ಆ ಜನ್ಮಸಾರ್ಥಕ್ಯವನ್ನು ನಿಮ್ಮಗಳ ಒಂದು, ನಿಃಸ್ವಾರ್ಥ ನಿರ್ವ್ಯಾಜ ಅಂತಃಕರಣದ ನಡತೆಯಿಂದ ನಮಗೆ ಸಂಪಾದಿಸಿಕೊಟ್ಟಿದ್ದೀರಿ. ನಾವು ಧನ್ಯರು ಎಂದಷ್ಟೇ ಹೇಳಬಲ್ಲೆ.

ಕುದುರೆಮುಖದ ವಾಸವನ್ನು, ಉಪನ್ಯಾಸಗಳಿಂದ, ಮನೆಯಲ್ಲಿನ ಊಟ ಉಪಚಾರಗಳಿಂದ ಚಿರಸ್ಮರಣೀಯವನ್ನಾಗಿ ಮಾಡಿದ್ದೀರಿ. ಇದಕ್ಕೆ ನಾವು ಯಾವ ರೀತಿಯಿಂದಲೂ ಪ್ರತ್ಯುಪಕಾರ ಮಾಡಲಾರೆವು. ಇನ್ನೂ ಅನೇಕ ವರ್ಷಗಳ ಕಾಲ ನಮ್ಮ ಬಂಧುಗಳಲ್ಲಿ, ಮಿತ್ರರಲ್ಲಿ ಈ ಸಂತೋಷವನ್ನು ಹೇಳಿಕೊಂಡು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ. ನಿಮ್ಮ ಕುಟುಂಬವು ಬಹಳ ಕಾಲ ಈ ರೀತಿಯಾದ ಆದರೋಪಚಾರಗಳನ್ನು ಎಲ್ಲರಿಗೂ ಮಾಡುವ ಸಾಮರ್ಥ್ಯವನ್ನು ಕೊಡಲೆಂದು ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ನನ್ನ ವಿಶೇಷ ಆಶೀರ್ವಾದಗಳನ್ನು 'ಇಂದು'ವಿಗೆ ತಿಳಿಸು. ಅವಳ ವಿನಯ, ಚಟುವಟಿಕೆ, ಯಾವ ಕೆಲಸವನ್ನಾದರೂ ಅವಳು ನಗುನಗುತ್ತಾ ಮಾಡುವ ರೀತಿ, ನಮಗೆ ಸಮಯಕ್ಕೆ ಸರಿಯಾಗಿ ಅವಳು ಮಾಡುತ್ತಿದ್ದ ಉಪಚಾರ ಎಲ್ಲವನ್ನೂ ನೋಡಿ ಮುಗ್ಧನಾದೆ. ಅವಳ ಸಂಸ್ಕಾರ ನಿಜವಾಗಲೂ ಉತ್ತಮವಾದದ್ದು. ಅವಳನ್ನು ಕೈಹಿಡಿಯುವವನು ನಿಜವಾಗಿಯೂ ಪುಣ್ಯಶಾಲಿ. ಅವಳಿಗೆ ನನ್ನ ಅನಂತ ವೇದೋಕ್ತ ಆಶೀರ್ವಾದಗಳು.

ಜ್ಯೋತಿ ! ನೀನು ಬಹಳ ಇಷ್ಟದಿಂದ ಕೇಳುತ್ತಿದ್ದ ನನ್ನ ಆತ್ಮಕಥೆಯನ್ನು ಪೂರ್ತಿ ಮಾಡಲಿಲ್ಲ, ಇನ್ನೊಂದು ಸಾರಿ ಮಾಡುತ್ತೇನೆ. ನೀನು ತೋರಿಸುತ್ತಿದ್ದ, ರಮೇಶನು ತೋರಿಸುತ್ತಿದ್ದ ನಿರ್ವ್ಯಾಜ ಅಂತಃಕರಣವೇ ನಿಮ್ಮ ದೊಡ್ಡ ಆಸ್ತಿ. ಅದೇ ದೊಡ್ಡ ಆತ್ಮಗುಣ. ಅದು ಅಭಿವೃದ್ಧಿಯಾಗಲೆಂದು ಪ್ರಾರ್ಥಿಸುತ್ತೇನೆ. ಶುದ್ಧ ಹೃದಯರನ್ನು ನೋಡಿದರೆ ಯಾರಾದರೂ ಮಾರುಹೋಗುತ್ತಾರೆ. ಹೋಗಬೇಕಾದ್ದೇ. ನಾನು ಮಾರುಹೋದದ್ದರಲ್ಲಿ ಆಶ್ಚರ್ಯವೇನಿಲ್ಲ. ನಿಮ್ಮ ಹೃದಯಕ್ಕೆ ಮಾರುಹೋಗಿ, ನಾಲ್ಕು ವಾಕ್ಯಗಳನ್ನು ಬರೆಯ ಬೇಕೆಂಬ ಹಂಬಲವೇ ಈ ಕಾಗದಕ್ಕೆ ಕಾರಣ. ಸ್ತುತಿಯೆಂದಾಗಲಿ, ಹೊಗಳಿಕೆಯೆಂದಾಗಲಿ ಭಾವಿಸಬೇಡಿ. ನನ್ನ ಮನಸ್ಸಿನಲ್ಲಿರುವುದನ್ನು ನಾಲ್ಕು ಮಾತುಗಳಲ್ಲಿ ಬರೆದಿದ್ದೇನೆ. ಇವೆಲ್ಲಕ್ಕೂ ಮೂಲ ಕಾರಣರಾದ ಶ್ರೀಕಂಠ ದಂಪತಿಗಳಿಗೆ ನಾನು ಎಷ್ಟು ಆಶೀರ್ವದಿಸಿದರೂ ಸಾಲದು.

ಅತ್ಯಂತ ಸಹೃದಯತೆಯಿಂದ, ಅಪರಿಮಿತವಾಗಿ, ನನ್ನ ಉಪನ್ಯಾಸಗಳನ್ನು ಕೇಳಿ ಸಂತೋಷಪಟ್ಟ, ಕುದುರೆಮುಖದ ನಿವಾಸಿಗಳಿಗೆ, ವಿನಯಪೂರ್ವಕವಾದ ನನ್ನ ನಮಸ್ಕಾರಗಳು.

ಕಂಡಾಗ ನನ್ನ ಸ್ಮರಣೆ ಕೊಡುವುದು. Please tell them that I have come back with very very sweet memories. It is only such people's good wishes that sustain me with happiness in my retired life. ಜ್ಯೋತಿ, ರಮೇಶ್, ಇಂದು, ಶ್ರೀಕಂಠ, ವೇದ ! ಬಹ...ಳ ಸಂತೋಷವಾಯಿತು. ಮತ್ತೊಮ್ಮೆ ನನ್ನ ಸಪ್ರೇಮ ಆಶೀರ್ವಾದಗಳು. ನಿನ್ನ ತೀ॥ರವರಿಗೆ ನನ್ನ ನಮಸ್ಕಾರಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೪೮೨

'ಪ್ರಯೋಗ' ಕಲಿತೆ, ಅದರಲ್ಲಿ ಆನಂದ ಕಂಡೆ

कुशलम् श्री: BHADRAVATI

20.9.94

ರಮೇಶ, ಜ್ಯೋತಿ !

ನಿನ್ನ ಕೃತಜ್ಞತಾಭರಿತವಾದ ಕಾಗದ ತಲಪಿತು. ನಾನು ಅದನ್ನು ನಿರೀಕ್ಷಿಸಿರಲಿಲ್ಲ. ನಾನು ಬಂದು ಉಪನಯನ ಮಾಡಿಸಿದಾಗ, ನನಗೆ ಯಾವ ವಿಧವಾದ ಮಾನಸಿಕ ಅಥವಾ ದೈಹಿಕ ತೊಂದರೆ ಆಗದಂತೆ ಕಾಳಜಿವಹಿಸಿ ಎಲ್ಲಾ ಏರ್ಪಾಡುಗಳನ್ನೂ ಮಾಡುತ್ತಿದ್ದ ನಿಮ್ಮ ಶ್ರದ್ಧೆಯೇ ನನಗೆ ನೀವು ಸಲ್ಲಿಸಿರುವ ಅನಂತವಾದ ಕೃತಜ್ಞತೆ. ಅನೇಕ ಸಮಯಗಳಲ್ಲಿ ನಮ್ಮ ಪ್ರಯತ್ನ ಪೂರ್ತಿ ಸಫಲತೆಯನ್ನು ಪಡೆಯದೆ ಇದ್ದಿರಬಹುದು. ಆದರೆ ಆ ಪ್ರಯತ್ನದ ಹಿಂದೆ ಇದ್ದ ಉದ್ದೇಶ (intention)ವೇ ಮನಸ್ಸಿಗೆ ಬಹಳ ಸಮಾಧಾನವನ್ನು ಕೊಡುತ್ತದೆ. ಆ ಸಮಾಧಾನವು ನನಗೆ 120% ಸಿಕ್ಕಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಆದರೂ ನಿಮಗಾಗಿರುವ ಸಂತೋಷಕ್ಕೆ ನೀವು ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಸುಸಂಸ್ಕೃತರ ಲಕ್ಷಣ. You are welcome.

ರಮೇಶ! ವಾಸ್ತವವಾಗಿ ನಾನು ಈ ಪ್ರಯೋಗದ ಕಡೆಗೆ ದೃಷ್ಟಿಯನ್ನೇ ಹಾಕಿರಲಿಲ್ಲ. ಆದರೆ ನನಗೆ ಅತ್ಯಂತ ಹತ್ತಿರದ ಆಪ್ತರ ಮನೆಯಲ್ಲಿಯೇ ನಡೆದ ಉಪನಯನ ವಿವಾಹಗಳ ಅವ್ಯವಸ್ಥೆಯನ್ನು ನೋಡಿ (They were just mockeries of what our great Maharshis have envisaged) ಮನಸ್ಸಿಗೆ ಬಹು ಸಂಕಟವಾಗಿ, ನಾನೇ ಅಭ್ಯಾಸ ಮಾಡಿ ನನ್ನ ಆಪ್ತರ ಮನೆಯಲ್ಲಾದರೂ ಮಾಡಿಸಬೇಕೆಂದು ಹಟತೊಟ್ಟು ಅಭ್ಯಾಸ ಮಾಡಿದೆ. ವೇದೋಕ್ತಕರ್ಮಗಳನ್ನು ತಿಳಿದು ಮಾಡುವುದರಲ್ಲಿ, ಮಾಡಿಸುವುದರಲ್ಲಿ ಒಂದು ಅವ್ಯಕ್ತವಾದ ದೈವಿಕಾನಂದ ಉಂಟೆಂಬುದನ್ನು ದಿವಂಗತ ಪೂಜ್ಯ ಕೇಶವಮೂರ್ತಿ ಘನಪಾಠಿಗಳ ಸತ್ಸಂಗದಲ್ಲಿ ಅನುಭವಿಸಿದ್ದೆ. ಆ ಸಂತೋಷವನ್ನು ನಾನೂ ಅನುಭವಿಸಿ ಇನ್ನೊಬ್ಬರ ಜತೆಯಲ್ಲಿಯೂ share ಮಾಡಿಕೊಳ್ಳಬೇಕೆಂಬ ಆಸೆಯಿಂದ ಈ ಪ್ರಯೋಗ ಮಾಡಿಸಲಿಕ್ಕೆ ಆರಂಭಿಸಿದೆ. ಅದರಲ್ಲಿ ನನಗೆ 100% success ಸಿಕ್ಕಿದೆಯೆಂದು ಹೇಳಲಾರೆ. ಆದರೆ ಅನೇಕ ಕಡೆ, ನಾನು ಬರೆದಂತೆ 120% ಅನುಭವಿಸಿದ್ದೇನೆ. ಮತ್ತೆ ಕೆಲವು ಕಡೆ 70%, 80%, 90% ಅನುಭವಿಸಿದ್ದೇನೆ. ಆದರೆ ಎಲ್ಲಿಯೂ 50%ಕ್ಕೆ ಕಮ್ಮಿಯಾಗಿಲ್ಲವೆಂದು ಧಾರಾಳವಾಗಿ ಹೇಳಬಲ್ಲೆ!!

ಮೊದಲಿನಿಂದಲೂ ನಾನು ಹೇಳುತ್ತಿದ್ದುದುಂಟು. ಪ್ರತಿಯೊಬ್ಬನೂ ಅವನವನ ವೃತ್ತಿ, ಉದ್ಯೋಗಗಳಲ್ಲಿ ಆನಂದವನ್ನು ಅನುಭವಿಸಬೇಕೆಂದು. ಅದರಿಂದಾಗುವ Monetary Benefits secondary. ಅದು ಆಗಿಯೇ ಆಗುತ್ತದೆ. ಆದರೆ ಅದರ ಕಡೆ ದೃಷ್ಟಿ ಕೇಂದ್ರೀಕೃತವನ್ನಾಗಿ ಮಾಡಿ ವೃತ್ತಿಯ ಆನಂದವನ್ನು ಕಳೆದುಕೊಳ್ಳಬಾರದು ಎನ್ನುವುದು ನನ್ನ ಅಭಿಪ್ರಾಯ. ನಮಗೆಲ್ಲರಿಗೂ ನಮಗೆ ಇಷ್ಟವಾದ ವೃತ್ತಿಯೇ ಸಿಗದಿರಬಹುದು. ಅದೂ ನಮ್ಮ ದೇಶದಲ್ಲಿ ಅದು ಅಸಾಧ್ಯವಾಗಿದೆ. ಆದರೂ, ಸಿಕ್ಕಿದ್ದರಲ್ಲಿಯೇ ಆನಂದಪಡುವುದಕ್ಕೆ ಕಲಿತುಕೊಳ್ಳುವುದು ಸುಸಂಸ್ಕೃತಿಯ ಲಕ್ಷಣ. I believe in Mark Twain when he said, "when you get what you like it is freedom, when you like what you get, it is happiness". ಇದು ಅಕ್ಷರಶಃ ನಿಜ. ನಾನೂ ನನ್ನ ಅಲ್ಪ ಜೀವನದಲ್ಲಿ ಎರಡು ವಿರುದ್ಧವಾದ ಉದ್ಯೋಗ ವೃತ್ತಿಗಳನ್ನು ಅವಲಂಬಿಸಿದೆ. ಎರಡರಲ್ಲಿಯೂ ಸಮಾನವಾದ ಆನಂದವನ್ನು ಹೊಂದಲು ಪ್ರಯತ್ನಿಸಿ ಜಯಶೀಲನಾದೆ ಎಂದು ಹೇಳಿದರೆ ಅಹಂಕಾರ ವಾಗಲಾರದು ಎಂದುಕೊಂಡಿದ್ದೇನೆ. ಆದರೆ ದುರದೃಷ್ಟವಶಾತ್ ಇವತ್ತು ಪೌರೋಹಿತ್ಯವನ್ನು ವೃತ್ತಿಯಾಗಿ ತೆಗೆದುಕೊಂಡಿರುವ ಕೆಲ ವೈದಿಕರು ಆ ವೃತ್ತಿಯ ಆನಂದವನ್ನು ಕಳೆದುಕೊಂಡಿದ್ದಾರೆ ಎಂದು ಹೇಳಲು ದುಃಖವಾಗುತ್ತದೆ. ನಾನು ಬರೆದಿರುವಂತೆ ನಾನು ಕಂಡಿರುವ ಸುಮಾರು ವೈದಿಕ ಸಮೂಹದಲ್ಲಿ ನಾನು ಕಂಡಿದ್ದಂಥ ಅಂಥ ವ್ಯಕ್ತಿ ಒಬ್ಬರೇ - ದಿವಂಗತ ಪೂಜ್ಯ ಕೇಶವಮೂರ್ತಿ ಘನಪಾಠಿಗಳು. ಇವತ್ತು ನಾನೇನಾದರೂ ಮಾಡಿ, ಮಾಡಿಸಿ, ಆನಂದವನ್ನು ಅನುಭವಿಸುತ್ತಿದ್ದೇನೆ, ಇತರರಿಗೂ ಸಂತೋಷವನ್ನು ಕೊಡುತ್ತಿದ್ದೇನೆ ಎಂದರೆ, ನನ್ನ ಸಂಪೂರ್ಣ ಹಾರ್ದಿಕವಾದ ಕೃತಜ್ಞತೆಯು ಅವರಿಗೆ ಸಲ್ಲಬೇಕು.

ರಮೇಶ್! ನಿಮ್ಮ ಶ್ರದ್ಧಾಭಕ್ತಿಗಳು, ಉಪನಯನವು ಶಾಸ್ತ್ರೀಯವಾಗಿ, ಚೆನ್ನಾಗಿ ನಡೆಯಬೇಕೆಂಬ ನಿಶ್ಚಯ ಮನೋಭಾವ,

ಕಾಲಕ್ಕೆ ಸರಿಯಾಗಿ ಸಿದ್ಧರಾಗಲು ಮಾಡುತ್ತಿದ್ದ ವಿಶೇಷ ಪ್ರಯತ್ನ, ಕರ್ಮವನ್ನು ಭಕ್ತಿ ಶ್ರದ್ಧೆಗಳಿಂದ ಮಾಡಿದ ಬಗೆ ಎಲ್ಲವೂ ಮನಸ್ಸಿಗೆ ಅತ್ಯಂತ ಸಂತೋಷವನ್ನುಂಟು ಮಾಡಿತು. ಎಲ್ಲಕ್ಕೂ ಮಕುಟಪ್ರಾಯವಾಗಿ, ಚಿ|| ಯು, ಹೇಳಿಕೊಟ್ಟ ಮಂತ್ರಗಳನ್ನು ಸ್ಪಷ್ಟವಾಗಿ, ಸುಸ್ವರವಾಗಿ, ನಿರ್ಭಯವಾಗಿ ಹೇಳುತ್ತಿದ್ದ ಬಗೆ, – ವೇದಾಕ್ಷರೋಚ್ಚಾರಣೆಯಲ್ಲಿ ತುಂಬಾ extremely sophisticated ಎನ್ನಿಸಿಕೊಂಡಿರುವ ನನಗೆ ಪರಮಾನಂದವನ್ನು ಕೊಟ್ಟಿತು. ಹೋಮಕಾಲದಲ್ಲಿ ಅವನು ಹೇಳುವ ರೀತಿಯನ್ನು ಕೇಳಿ ಆನಂದಬಾಷ್ಪಗಳು ತಾವಾಗಿ ಕಣ್ಣುಗಳಲ್ಲಿ ತುಂಬಿಕೊಂಡವು. ಪ್ರಾತಃಸ್ಮರಣೀಯರಾದ ಮಹರ್ಷಿಗಳು ನಿಸ್ವಾರ್ಥತೆಯಿಂದ ನಮ್ಮ ಶ್ರೇಯಸ್ಸಿಗೋಸ್ಕರ ತಮ್ಮ ಪವಿತ್ರ ಹೃದಯಗಳನ್ನು ತೆರೆದಿಟ್ಟಿರುವಂತೆ ಇರುವ ಆ ಮನೋಜ್ಞವಾದ ಮಂತ್ರಗಳನ್ನು 7 ವರ್ಷಗಳ ಪುಟ್ಟ ಬಾಲಕ ಹೃದಯಪೂರ್ವಕವಾಗಿ ಯಜ್ಞೇಶ್ವರನ ಮುಂದೆ, ಸುಸ್ಪಷ್ಟವಾಗಿ ಹೇಳಿದಾಗ, ಯಾವ ವೇದಾರಾಧಕನಿಗೆ ತಾನೇ ಆನಂದವಾಗಲಿಕ್ಕಿಲ್ಲ!! ಸಂತೋಷದಿಂದ ಕಣ್ಣಾಲಿಗಳು ನೀರಿನಿಂದ ತುಂಬಲಿಕ್ಕಿಲ್ಲ!! ಜ್ಯೋತಿ! ರಮೇಶ್! ಆ ದೈವಿಕಾನಂದವನ್ನು ನನಗೆ ನೀವು ಕೊಟ್ಟಿದ್ದೀರಿ. ಅಥವಾ ಆ ಆನಂದವನ್ನು ಅನುಭವಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿರಿ. ಅದಕ್ಕೆ ನಾನೇ ನಿಮಗೆ ಕೃತಜ್ಞತೆಯನ್ನು ಸಲ್ಲಿಸಬೇಕಲ್ಲವೇ! ನಾನು ಹಾಗೆ ಸ್ಪಷ್ಟವಾಗಿ ಬರೆದರೆ ನಿಮಗೆಲ್ಲಾ ಸಂಕೋಚವಾಗಬಹುದು. ಆದರೆ It is a fact. I must thank you profusely for that fine opportunity to enjoy divine pleasure for sometime at least. ಅಂಥಾ ಅವಕಾಶಗಳು ಸಿಗುವುದು ಜೀವನದಲ್ಲಿ ಬಹು ಕಮ್ಮಿ. ನಾನೇ ಕೂತು ಮನೆಯಲ್ಲಿ ಅನುಭವಿಸಬೇಕೆಂದರೆ, ಇನ್ನೂ ಅಷ್ಟರಮಟ್ಟಿನ ಆಧ್ಯಾತ್ಮಿಕ ಯೋಗ್ಯತೆಯನ್ನು ಪಡೆದಿಲ್ಲ. ಆದ್ದರಿಂದ ಇಂಥಾ ಅವಕಾಶಗಳಲ್ಲಿ ಅನುಭವಿಸಿ ಅನುಭವಿಸಿಯೇ, ನಮ್ಮ ಸತ್ವಗುಣಾಭಿವೃದ್ಧಿಯಾಗಬೇಕು. So THANK YOU VERY MUCH. Again you are welcome to thank me too!!

ಚಿ|| ಗೆ ನನ್ನ ಅನಂತ ಆಶೀರ್ವಾದಗಳನ್ನು ತಿಳಿಸಿ. ಅವನ ನಿತ್ಯಕರ್ಮಗಳನ್ನು ಬಿಡದೆ ಮಾಡಿಕೊಂಡು ಬರಲಿ. ಅವನಿಗೆ ಸ್ವಲ್ಪ ಬುದ್ಧಿ ಬಲಿತಮೇಲೆ ಆ ಕ್ರಿಯೆಗಳ, ಮಂತ್ರಗಳ ತತ್ತ್ವವನ್ನು ತಿಳಿಸುತ್ತೇನೆಂದು ಹೇಳಿ. ಕುದುರೆಮುಖಕ್ಕೆ ಬರಬೇಕು. ಜ್ಯೋತಿಗೂ ನಿಮ್ಮ ಮಗಳಿಗೂ ನನ್ನ ಅನಂತ ಆಶೀರ್ವಾದಗಳು.

ನಿನ್ನ ತೀ|| ರವರಿಗೆ ನನ್ನ ಸಾಷ್ಟಾಂಗ ನಮಸ್ಕಾರ ತಿಳಿಸಿ.

ಇಂತಿ ನಿಮ್ಮವ

ಕುಮಾರಸ್ವಾಮೀ

ಭದ್ರಾವತಿ (ಚೆನ್ನಾಗಿತ್ತು), ಮೈಸೂರು (ಹಿಡಿಸಿದೆ)

ಕುಶಲಮ್ ಶ್ರೀ : Mysore

19.9.96

ಶ್ರೀಕಂಠ !

ನಿನಗೆ ಆಶ್ಚರ್ಯವಾಗಿರಬಹುದು. ನಾನು ಊರಿಗೆ ಬಂದು ಆಗಲೇ 10 ದಿನಗಳಾದವು. ಈಗ ಕಾಗದ ಬರೆಯುತ್ತಿದ್ದೇನೆ. ಅನೇಕರಿಗೆ ಬರೆದೆ. ನಿನಗೆ ಬರೆಯಬೇಕು ಅಂದುಕೊಳ್ಳುವುದರಲ್ಲಿಯೇ ಗೌರೀಗಣಪತಿಗಳು ಬಂದುವು. ಸುಮ, ಶೈಲು ಎಲ್ಲರೂ ಬಂದುಬಿಟ್ಟರು. ಅವರೆಲ್ಲಾ ಇರುವಾಗ ಕಾಗದ ಬರೆಯಲು ಪುರಸತ್ತೆಲ್ಲಿ! ಅವರುಗಳು ಬರೆಯಲು ಬಿಡುವುದೂ ಇಲ್ಲ!! ಇವತ್ತೂ ಮೃದುಲಾ ಅಜ್ಜನನ್ನು ಆಟ ಆಡಲು ಕರೆಯುತ್ತಿದ್ದಾಳೆ!!! ನಾನು ಸ್ವಲ್ಪ ವಿರಾಮ ತೆಗೆದುಕೊಂಡು ಕೂತಿದ್ದೇನೆ.

ನಾವು ಬಂದು ತಲಪಿದ details ಎಲ್ಲಾ ನಿನಗೆ ತಿಳಿದಿರಬಹುದು. ನಿನ್ನ message ಸಕಾಲಕ್ಕೆ ಗೋವಿಂದನಿಗೆ ತಲಪಿದೆ. ಆದರೆ ಲಾರಿ 6-30ಕ್ಕೆ ಬಂದು ತಲಪಿತು. ಯಾವುದೂ ಒಂದು ಸ್ವಲ್ಪವೂ damage ಆಗದೆ ಬಂದು ಸೇರಿದೆ. ಬಂದ 16 ಘಂಟೆಗಳ ಕಾಲದಲ್ಲಿ (ಅದರಲ್ಲಿ 8 ಘಂಟೆ ನಿದ್ರೆ) ಎಲ್ಲವನ್ನೂ ಬಿಚ್ಚಿ set-up ಮಾಡಿ ಸಿದ್ಧ ಮಾಡಿಕೊಟ್ಟ credit, ಜಯತೀರ್ಥನಿಗೂ, ನರಸಿಂಹಮೂರ್ತಿಗೂ ಹೋಗಬೇಕು. ಸೋಮವಾರ ಸಾಯಂಕಾಲವೇ ಗಣಪತಿ ಮಂಗಳಾರತಿ ಇಟ್ಟುಕೊಂಡಿದ್ದೆವು. ಎಲ್ಲರಿಗೂ, 'ಈಗ ತಾನೇ ಬಂದು ಇನ್ನೂ ಸರಿಯಾಗಿ settle ಆಗಿಲ್ಲ. ಆಗಲೇ ಇಷ್ಟು ವಿಸ್ತಾರವಾಗಿಟ್ಟುಕೊಂಡಿರುವರಲ್ಲಾ' ಎಂಬುದೇ ಆಶ್ಚರ್ಯ. Again the credit should go to them. ಇಲ್ಲಿ ಹೊಂದಿಕೊಂಡಾಗಿದೆ, ಇನ್ನು gas ಬರಬೇಕು. phone ಒಂದು ಬರಬೇಕು.

ಶ್ರೀಕಂಠ! ನಾನು 5½ ವರ್ಷಗಳು ಭದ್ರಾವತಿಯಲ್ಲಿದ್ದೆ. ಸಂತೋಷವಾಗಿ, ನೆಮ್ಮದಿಯಾಗಿ ಕಾಲ ಕಳೆದೆ. ಆ ಸುಖ ನೆಮ್ಮದಿಗಳಲ್ಲಿ ನಿನ್ನ ಪಾತ್ರ ವಿಶೇಷವಾದದ್ದು ಎಂದು ನಾನು ಪುನಃ ಹೇಳಬೇಕಾದ್ದಿಲ್ಲ. ನಾನು ಆ ಊರಿಗೆ ಬಂದಾಗಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸಹಾಯವನ್ನು ಮಾಡುತ್ತಲೇ ಬಂದಿದ್ದ ನಿನಗೆ ನನ್ನ ಕೃತಜ್ಞತೆಯನ್ನು ಯಾವ ರೀತಿ ತಿಳಿಸಲಿ! ನೀನೊಬ್ಬನೇ ಅಲ್ಲ, ನಿಮ್ಮ ಮನೆಯವರೆಲ್ಲರ ವಿಶ್ವಾಸಾಭಿಮಾನಗಳಿಗೆ ನಾವುಗಳು ಚಿರಋಣಿಗಳು. ನೀವೆಲ್ಲರೂ ಸುಖವಾಗಿ, ಚೆನ್ನಾಗಿ

ಇರಬೇಕೆಂದು ದೇವತಾ ಪ್ರಾರ್ಥನೆಯನ್ನು ಮಾಡುವುದು ಬಿಟ್ಟು, ನಾನಿನ್ನೇನೂ ಮಾಡಲು ಅಸಮರ್ಥನಾಗಿದ್ದೇನೆ. ಕ್ಷಮಿಸು.

ಇನ್ನೂ ಈ ಊರಿನಲ್ಲಿ ನಿನ್ನಂಥ ಸ್ನೇಹಿತರು (ಅಥವಾ ಶಿಷ್ಯ!) ಸಿಕ್ಕಿಲ್ಲ. ಸ್ನೇಹಿತರು ಸುಮಾರು ಜನ ಬಂದಿದ್ದರು. ಆದರೆ ಯಾರಿಗೂ ನಿನ್ನ ರೀತಿ ವಿಷಯಸಂಗ್ರಹ ಮಾಡುವ ಇಷ್ಟವಿದ್ದಂತೆ ಕಾಣಲಿಲ್ಲ.

ನೀನು ಬಾಣಂತಿಯನ್ನು ಯಾವಾಗ ಕರೆದುಕೊಂಡು ಬರುತ್ತೀಯ? ಬಂದಾಗ ಖಂಡಿತ ಮನೆಗೆ ಬಾ. ನಾವು ಇಲ್ಲಿ ಆರೋಗ್ಯವಾಗಿದ್ದೇವೆ. ನಾಳೆ ದಿನ ಬೆಂಗಳೂರಿಗೆ ಹೋಗಿ ಅಲ್ಲಿಂದ ನಾನು ಮದ್ರಾಸಿಗೆ ಹೋಗುತ್ತೇನೆ. ಸುಮಾ ಪೂಣೆಗೆ ಹೋಗುತ್ತಾಳೆ. 22ನೇ ತಾರೀಖು ಮದ್ರಾಸಿನಲ್ಲಿ IIT ದೇವಸ್ಥಾನದಲ್ಲಿ "ಲಲಿತಾ ಸಹಸ್ರನಾಮ" ಹೋಮ ಇಟ್ಟುಕೊಂಡಿದ್ದಾರೆ. 25 ವಾಪಸ್ಸು ಬರುತ್ತೇನೆ.

ಮೈಸೂರಿನ ವಾತಾವರಣ ತುಂಬಾ ಹಿಡಿಸಿದೆ. ದೊಡ್ಡ ದೊಡ್ಡ ರಸ್ತೆಗಳು, ಹೆಚ್ಚು ವಾಹನಗಳ ಓಡಾಟವಿಲ್ಲದಿರುವಿಕೆ, ಮಾಲಿನ್ಯ ಹೆಚ್ಚಿಗೆ ಇಲ್ಲದಿರುವ ಪರಿಸರ ಎಲ್ಲವೂ ಮನಸ್ಸಿಗೆ ಬಹಳ ಸಂತೋಷ ಕೊಡುತ್ತದೆ. walking ಹೋಗುವುದು ಒಂದು ಖುಷಿಯ ವಿಷಯವಾಗಿದೆ. ಭದ್ರಾವತಿಯಲ್ಲಿ ಒಂದೊಂದು ಸಾರಿ (ಮಳೆ ಬಂದಾಗ) ಶಿಕ್ಷೆಯೇ ಆಗಿಬಿಡುತ್ತಿತ್ತು. ಹೋಗಬೇಕಲ್ಲಾ ಎಂದು ಹೋಗುವುದಾಗಿತ್ತೇ ಹೊರತು ಖುಷಿಯಿಂದ ಹೋಗಲು ಆಗುತ್ತಿರಲಿಲ್ಲ. ಮನೆಯಲ್ಲಿ ಇನ್ನೂ lift serviceಗೆ ಬಂದಿಲ್ಲ. 4 ಮಹಡಿ ಹತ್ತಬೇಕು. ಅಂಥಾ ಶ್ರಮವೇನೂ ಆಗುತ್ತಿಲ್ಲ. 2-3 ಸಾರಿ ಹತ್ತಿ ಇಳಿದು ಮಾಡಬೇಕಾದರೆ ಸ್ವಲ್ಪ ಶ್ರಮವೇಯ. ಬಾಕಿಯಂತೆ ಎಲ್ಲಾ ಸೌಕರ್ಯವಾಗಿದೆ.

ಭದ್ರಾವತಿಯಲ್ಲಿ ಎಲ್ಲರಿಗೂ (ಏಕೆಂದರೆ ನೀನು ಅನೇಕರನ್ನು ಭೇಟಿ ಮಾಡುತ್ತಿರುತ್ತೀಯೆ) ನಮ್ಮ ಯೋಗಕ್ಷೇಮವನ್ನು ತಿಳಿಸು. ಮಂಜುನಾಥ್ ಬಹಳ ಮನಸ್ಸಿಗೆ ಹಚ್ಚಿಕೊಂಡುಬಿಟ್ಟಿದ್ದರು. ಹೊರಡುವ ದಿನ ಅವರ ಕಣ್ಣುಗಳಲ್ಲಿ ನೀರು ನೋಡಿ ನನಗೆ ಬಹಳ ಕಷ್ಟವಾಯಿತು. ಅವರ ವಿಶ್ವಾಸಾಭಿಮಾನಗಳು ವಿಚಾರಾತೀತ. ನನ್ನನ್ನು ನೋಡಬೇಕೆಂದು ಈ ವಯಸ್ಸಿನಲ್ಲಿ, ಕಣ್ಣಿನ ಪಾಟವ ಅಷ್ಟು ಸರಿಯಾಗಿಲ್ಲದಿರುವಾಗಲೂ ಅವರ ಮನೆಯಿಂದ ನಡೆದುಕೊಂಡು ಬರುತ್ತಿದ್ದುದನ್ನು ನೆನೆಸಿಕೊಂಡರೆ, ನನಗೆ ನಾಚಿಕೆಯಾಗುತ್ತದೆ. ಅವರ ಅಷ್ಟು ವಿಶ್ವಾಸಕ್ಕೆ ನಾನು ಏನು ಮಾಡಿದ್ದೇನೆ ಎಂದು ಯೋಚಿಸುವಾಗ ಲಜ್ಜೆಯಾಗುತ್ತದೆ. ಅವರಿಗೂ ಶ್ರೀನಿವಾಸಮೂರ್ತಿ, ಮಗು, ಮತ್ತೆ ಅವರ ಕುಟುಂಬದವರೆಲ್ಲರಿಗೂ ನನ್ನನ್ನು ಜ್ಞಾಪಿಸಿ, ನನ್ನ ಆಶೀರ್ವಾದಗಳನ್ನು ತಿಳಿಸು (ಅವರ ವಿಳಾಸ ನನ್ನ ಹತ್ತಿರ ಇಲ್ಲ). October ನಲ್ಲಿ ಬಂದಾಗ ನೋಡುತ್ತೇನೆಂದು ಹೇಳು.

ಜ್ಯೋತಿ, ರಮೇಶ್ ಇಬ್ಬರೂ ಹಬ್ಬದ ದಿನ ಮನೆಗೆ ಬಂದಿದ್ದರು.

ಇತಿ ನಿಮ್ಮವ

ಕುಮಾರಸ್ವಾಮೀ

೪೮೪

ದತ್ತ ಜಯಂತಿ

ಪಾದುಕಾಪೂಜೆ ; ಪ್ರವರ ಹೇಳಿಕೊಂಡು ಅಭಿವಾದನ ; dress-code ; ಮಂಗಳವಾದ್ಯ ; ಶ್ರಾದ್ಧದಲ್ಲಿ 'ಆವಾಹನೆ'

कुशलम्　　श्री :　　Mysore

12.10.96

ಶ್ರೀಕಂಠ !

ನಿನ್ನ ಕಾಗದ ತಲಪಿತು. ಇಂಥಾ ಕಾಗದ ಓದಿ ಬಹಳ ದಿವಸಗಳಾಗಿದ್ದುವು. ನೀನಲ್ಲದೆ ಇನ್ಯಾರು ಅಂಥಾ ಕಾಗದ ಬರೆಯಲು ಸಾಧ್ಯ ? ಪ್ರಶ್ನೆ ಕೇಳುವ ಬಗ್ಗೆ ಖಂಡಿತ ಸಂಕೋಚ ಬೇಡ. ಇವತ್ತು ತಾನೇ Paperನಲ್ಲಿ ಓದ್ತಾ ಇದ್ದೆ. ಸತ್ಯವನ್ನು ತಿಳಿದುಕೊಂಡರೆ ಜೀವನದಲ್ಲಿ ಧೈರ್ಯ, Confidence ಎಲ್ಲಾ ಬರುತ್ತದೆ. ಇಲ್ಲದಿದ್ದರೆ perpetual fear ನಲ್ಲಿಯೇ ಜೀವನವನ್ನು ಕಳೆಯಬೇಕಾಗುತ್ತದೆ. ಅದರಲ್ಲಿ ಏನು ಸಂತೋಷ ಇರಲು ಸಾಧ್ಯ! ದೈಹಿಕವಾದ ಸೌಲಭ್ಯಗಳು ಎಲ್ಲವೂ ಇರಬಹುದು. ಆದರೆ ತಪ್ಪು ನಂಬಿಕೆಗಳು, ಮೂಢನಂಬಿಕೆಗಳಿಂದ ಮನಸ್ಸು ಯಾವಾಗಲೂ ಒಂದು ವಿಧವಾದ ಹೆದರಿಕೆಯಲ್ಲಿಯೇ ಇದ್ದರೆ ಆ ಸೌಲಭ್ಯಗಳಿಂದ ಸುಖವನ್ನು ಪಡೆಯಲು ಸಾಧ್ಯವೇ ! ಸುಖವೆಂಬುದು ಶಾರೀರಕವಲ್ಲ, ಮಾನಸಿಕ ಎಂಬುದನ್ನು ನಾವು ಮರೆಯಬಾರದು. ಆದ್ದರಿಂದ ಎಷ್ಟೇ ಕಷ್ಟವಾದರೂ ಸತ್ಯವನ್ನು ತಿಳಿಯಲು ಸಾಕಷ್ಟು ಪ್ರಯತ್ನಪಡಬೇಕು. ಆಮೇಲೆ ಅದರಂತೆ ಜೀವನವನ್ನು ರೂಪಿಸಿಕೊಳ್ಳಬೇಕು. ಇರಲಿ.

1) ದತ್ತಜಯಂತಿಯೇ ಆಗಲಿ ಬೇರೆ ಯಾವ ಉತ್ಸವವೇ ಆಗಲಿ, ನಾನಾ ತರಹ ಜಪ, ಪಾರಾಯಣಾದಿಗಳನ್ನು ಏರ್ಪಡಿಸುವ ಅಭ್ಯಾಸ ಬಂದಿದೆ. ಅದರಿಂದ ಇತರರಿಗೆ ಯಾರಿಗೂ, ಯಾವ ವಿಧವಾದ ಪ್ರಯೋಜನವೂ ನನಗೆ ಕಾಣಿಸುವುದಿಲ್ಲ. ಏಕೆಂದರೆ ಯಾರೂ ಆ ಪಾರಾಯಣವನ್ನು ಕೇಳುವುದಿಲ್ಲ. ಕೇಳುವಂತೆ ಮಾಡುವುದೂ ಇಲ್ಲ. ಅದನ್ನು ಏರ್ಪಡಿಸಿರುವ ಉದ್ದೇಶ ಪ್ರಾಯಃ ಆ ವಿದ್ಯೆಗಳನ್ನು ಅಭ್ಯಾಸ ಮಾಡಿರುವವರಿಗೆ, ಅದನ್ನು

ಅವಲೋಕನ ಮಾಡುವ ಒಂದು ಅವಕಾಶ, ಹಾಗೇ ಪ್ರೋತ್ಸಾಹ, ಆರ್ಥಿಕವಾಗಿ ವಿದ್ವಾಂಸರನ್ನು ಸತ್ಕರಿಸುವುದು. ಸುಮ್ಮಸುಮ್ಮನೆ ಅವರುಗಳನ್ನು ಸತ್ಕರಿಸಲು ಮನಸ್ಸು ಬರುವುದಿಲ್ಲ. ಆದ್ದರಿಂದ ಈ ರೀತಿ ಒಂದು ವ್ಯಾಜವನ್ನಿಟ್ಟು ಅವರಿಗೆ ಪ್ರಯೋಜನ ಮಾಡುವ ಕ್ರಮ ಬಂದಿದೆ. ಬೇರೇನೂ ಪ್ರಯೋಜನ ಕಾಣಿಸುವುದಿಲ್ಲ. ತಮ್ಮ ಜೀವನವನ್ನೇ ಆ ವಿದ್ಯೆಗಳಿಗೋಸ್ಕರ ಮುಡುಪಾಗಿಟ್ಟಿರುವವರು ಯಾರೂ ಕಾಣಿಸುವುದಿಲ್ಲ. ಆದ್ದರಿಂದ ದತ್ತಜಯಂತಿಯಲ್ಲಿ ಯಾವ ರೀತಿ ಜಪ ಪಾರಾಯಣಗಳೂ ಬೇಕಿಲ್ಲ ಎಂದು ನನ್ನ ಅಭಿಪ್ರಾಯ.

ಬೆಳಗ್ಗೆ ಹೊತ್ತು as usual ವಿಸ್ತಾರವಾಗಿ ಪೂಜೆ, ಅಭಿಷೇಕಾದಿಗಳನ್ನು ಮಾಡಬಹುದು. ಅದರಲ್ಲಿ ವೈದಿಕರನ್ನು ಸೇರಿಸಿ, ಅವರಿಗೆ ಪ್ರಯೋಜನ ಮಾಡಬಹುದು (ಮಾಡಬೇಕೆಂದಿದ್ದರೆ). ಮಧ್ಯಾಹ್ನದ ವೇಳೆ ಅನ್ನದಾನ ಮಾಡಬಹುದು (ಅವರು ಮಾಡುತ್ತಲೇ ಬಂದಿದ್ದಾರೆ.) ಸಾಯಂಕಾಲದ ಹೊತ್ತು ಉಪನ್ಯಾಸಾದಿಗಳನ್ನು ಏರ್ಪಡಿಸಬಹುದು. ಹೋಮಗಳ ವಿಷಯದಲ್ಲಿ ಯಾವುದು ಬೇಕಾದರೂ ಮಾಡಬಹುದು. ರುದ್ರಹೋಮ, ಪುರುಷಸೂಕ್ತ ಹೋಮ, ಮಹಾನಾರಾಯಣ ಹೋಮ, etc. ತಾಂತ್ರಿಕವಾಗಿ ದತ್ತಹೋಮ, ನಾರಾಯಣ ಅಷ್ಟಾಕ್ಷರೀಹೋಮ ಇತ್ಯಾದಿಗಳು (I don't prefer the latter!!).

(2) ಬೆಳ್ಳಿಯ ಪಾದುಕೆಗಳಾಗಲಿ, ಚಿನ್ನದ್ದೇ ಆಗಲಿ, ಮರದ್ದೇ ಆಗಲಿ, ಎಲ್ಲವೂ ದೇವರ, ಮಹಾತ್ಮರ, ಗುರುಗಳ ಪ್ರತೀಕ (symbols). ನಾವು ವಿಗ್ರಹಗಳಿಗೆ ಪೂಜಾದಿಗಳನ್ನು ಮಾಡುವಂತೆ ಅವುಗಳಿಗೂ ಮಾಡಬಹುದು. ಯಾವುದನ್ನು ಪ್ರತೀಕವಾಗಿ ಇಟ್ಟುಕೊಳ್ಳುತ್ತಾರೆಂಬುದೂ ಇಟ್ಟುಕೊಳ್ಳಬೇಕೆಂಬುದೂ ಅವರವರ ರುಚಿಗೆ ಬಿಟ್ಟದ್ದು. It is purely subjective. ಆದರೆ ಪೂಜೆ ಮಾಡುವುದೇ ನಿಶ್ಚಯವಾದರೆ, ವೇದಮಂತ್ರಗಳನ್ನು ಯಾವುದನ್ನು ಬೇಕಾದರೂ ಹೇಳಬಹುದು. ಅಲ್ಲಿ ತಾರತಮ್ಯವೇನೂ ಬೇಕಿಲ್ಲವೆನಿಸುತ್ತದೆ.

(3) ಪ್ರವರ ಹೇಳಿಕೊಂಡು ನಮಸ್ಕಾರ ಮಾಡಬೇಕಾದರೆ ಕೇವಲ ಪ್ರತ್ಯಭಿವಾದನ ಮಾಡಲು ಯೋಗ್ಯತೆ ಇರುವವರಿಗೆ ಮಾತ್ರ ಮಾಡಬೇಕೆಂಬ ನಿಯಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಪ್ರತ್ಯಭಿವಾದನವೆಂದರೆ, 'ಆಯುಷ್ಮಾನ್ ಭವ ಸೌಮ್ಯ' (ಹೇ ! ಯಜಮಾನ, ಆಯುಷ್ಮಂತನಾಗಿ ಬಾಳು.) ಎಂದು ಹೇಳುವುದು. ಹೀಗೆ ಹೇಳಲು ವಯಸ್ಸಿನಿಂದ ವೃದ್ಧರಾಗಿರುವವರು, ವಿದ್ಯೆಯಿಂದ ವೃದ್ಧರಾಗಿರುವವರು, ವರ್ಣದಿಂದ ಉತ್ತಮರಾಗಿರುವವರು ಮಾತ್ರ ಹೇಳಬೇಕೆಂಬ ನಿಯಮವನ್ನಿಟ್ಟುಕೊಂಡಿದ್ದಾರೆ. After all it is just a wish. We can wish long life or best of luck to any one towards whom we have love and affection or even respect. ಹ್ಞಾ ! ದ್ವೇಷಿಗಳಾದವರು ಆ ರೀತಿ wish ಮಾಡಲು ಸಾಧ್ಯವಿಲ್ಲವಾದ್ದರಿಂದ ಅಂಥವರಿಗೆ ಅಭಿವಾದನ ಮಾಡಬೇಕಾದ್ದಿಲ್ಲವೆಂದು ನನ್ನ ಅಭಿಪ್ರಾಯ. ಸಾಮಾನ್ಯವಾಗಿ ಅಗೋಚರವಾದ ಪ್ರತೀಕ ರೂಪದಲ್ಲಿರುವ ದೇವತೆಗಳಿಗೆ ದೀರ್ಘ ದಂಡ ನಮಸ್ಕಾರವೇ ಹೊರತು ಅಭಿವಾದನವಿಲ್ಲ. ಏಕೆಂದರೆ ಅವರು ಪ್ರತ್ಯಭಿವಾದನ ಮಾಡಲಾರರು. ಜೀವಂತ ವ್ಯಕ್ತಿಗಳಾಗಿದ್ದರೆ ಅವರಿಗೆ ಅಭಿವಾದನ. ಹಾಗೆಂದು ದೀರ್ಘದಂಡ ನಮಸ್ಕಾರ ಮಾಡಕೂಡದೆಂದಲ್ಲ. ಅದೊಂದು ಕ್ರಮ ಅಷ್ಟೆ. ಹಾಗೆಯೇ ಯತಿಗಳಿಗೆ (ಸ್ವಾಮಿಗಳಿಗೆ) ದೀರ್ಘದಂಡ ನಮಸ್ಕಾರವೇ ಹೊರತು ಅಭಿವಾದನವಿಲ್ಲ. ಕೇವಲ ಬ್ರಹ್ಮಚಿಂತನೆಯಲ್ಲಿರುವ ಅವರಿಗೆ ನಮ್ಮ bio-data ತಿಳಿದುಕೊಂಡು ಪ್ರತ್ಯಭಿವಾದನ ಮಾಡುವವರ ಕಡೆಗೆ ಗಮನವೇ ಹೋಗುವುದು ಸಾಧ್ಯವಿಲ್ಲ ಎಂದು ತೋರಿಸಿಕೊಡುವುದಕ್ಕೆ ಈ ಕ್ರಮ.

(4) ಈ ಪ್ರಶ್ನೆ ಸುಮಾರು ಸಲ ಚರ್ಚೆಯಾಗಿದೆ. ಚರ್ವಿತ ಚರ್ವಣವಾಗುತ್ತದೆ. ವೇದಮಂತ್ರಗಳನ್ನು ಹೇಳಲು ಬೇಕಾದ dress-code ನ್ನು ಅನುಸರಿಸುವ ವಿಷಯದಲ್ಲಿ Concession ಏಕೆ ಕೇಳಬೇಕು ಎಂದು ನನಗಿನ್ನೂ ಅರ್ಥವಾಗುವುದಿಲ್ಲ. And I don't want to show any kind of indulgence to people who want to deliberately flout the codes. ವೇದಮಂತ್ರಗಳನ್ನು ಹೇಳಬೇಕಾದ ಸಂದರ್ಭಗಳು ಆಕಸ್ಮಿಕವಾಗಿ ಬರುವುದು ಇಲ್ಲವೇ ಇಲ್ಲ ಎಂದು ಹೇಳಬಹುದು. ಎಲ್ಲವೂ pre planned ಆಗಿಯೇ ಇರುತ್ತವೆ. ಅನಿವಾರ್ಯ ಪ್ರಸಂಗವನ್ನು ಒಂದು ಉದಾಹರಣೆ ಕೊಟ್ಟರೆ ಉತ್ತರ ಹೇಳೀಯೇನು !! ಅನೇಕರು ಹೇಳುತ್ತಿರುವಾಗ ಅಕಸ್ಮಾತ್ ನಾವು ಹೋಗಿ ನಮ್ಮ ಹತ್ತಿರ ಆ ವೇಷ ಇಲ್ಲದಿದ್ದಾಗ ಸುಮ್ಮನೆ ಕೂತು ಅವರು ಹೇಳುವುದನ್ನು ಕೇಳಿಬರಬಹುದಲ್ಲವೇ ? ನಾವೂ ಹೇಳಿಯೇ ತೀರಬೇಕೆಂಬ ನಿಯಮವೇನು ? ಅಥವಾ ನಮ್ಮ ವೇಷವನ್ನು ಅಂಥ ಕಡೆ procure ಮಾಡಲು ಕಷ್ಟವೂ ಆಗಲಾರದು. ಇನ್ನು ಆ ರೀತಿಯ ಕಾರ್ಯಕ್ರಮಕ್ಕೆ ಉದ್ದೇಶಪೂರ್ವಕವಾಗಿ ಆಗಲಿ, ಮರೆವಿನಿಂದಾಗಲಿ ಪಾಶ್ಚಾತ್ಯ ವೇಷದಲ್ಲಿ ಹೋಗುವವರ ವರ್ತನೆಯನ್ನು I call it as deliberate indifference. ಅಲ್ಲಿ ಹೋಗಿ ಅನಿವಾರ್ಯವೆಂದು ನಾನು ಮಂತ್ರಗಳನ್ನು ಹಾಗೇ ಹೇಳಿದೆ ಎನ್ನುವುದು I find it absolutely inexcusable. At the risk of tedious repetition I would like to reiterate my opinion that we must be proud of our culture

which includes the dress code, which is neither vulgar nor ostentatious but at the same time most decent and simple and grand. ಅಕಸ್ಮಾತ್ ಎಲ್ಲಾದರೂ ಬೇರೆ ಉಪನ್ಯಾಸಕ್ಕೆ ಹೋಗಿದ್ದಾಗ ವೇದಮಂತ್ರಗಳನ್ನು ಉದಾಹರಣೆ ಕೊಡಬೇಕಾಗಿ ಬಂದಾಗ ಕೊಟ್ಟರೆ ತಪ್ಪಿಲ್ಲ, ಪುನಃ ಹೇಳಬಯಸುತ್ತೇನೆ. shirt, pant ಹಾಕಿಕೊಂಡು ವೇದಮಂತ್ರ ಹೇಳುವುದು ಅಧರ್ಮವಲ್ಲ, ಪಾಪವಲ್ಲ, ಆದರೆ ಅದು ಅಸಾಂಸ್ಕೃತಿಕ , ಅಂಧಾನುಕರಣದ ಪರಾಕಾಷ್ಠೆ. ನಮ್ಮ ವೈದಿಕ ವೇಷದಲ್ಲಿ ಹೋಗಿ ball-dance ಮಾಡಿದಂತೆ !!

(5) ಗಂಟೆ, ಜಾಗಟೆ, ಡೋಲು ಇವೆಲ್ಲವನ್ನೂ ಮಂಗಳ ವಾದ್ಯಗಳನ್ನಾಗಿ ಪರಿಗಣಿಸಲಾಗಿದೆ. ಮಂಗಳಾರತಿ ಸಮಯ ಎಂದು ಎಲ್ಲರಿಗೂ ತಿಳಿಯಲೆಂಬುದೇ ಉದ್ದೇಶ. ಸುಸ್ವರವಾಗಿ, ಸ್ಪಷ್ಟವಾಗಿ ವೇದಮಂತ್ರಗಳನ್ನು ಹೇಳುವವರಿದ್ದರೆ, ಅವರ ಮಂತ್ರೋಚ್ಚಾರಣೆಗೆ ಪುಷ್ಟಿ ಕೊಡುವಂತಿದ್ದರೆ ಸಾಕು (Background music ಇದ್ದಂತೆ).

(6) ಮಹಾಲಯದಲ್ಲಿಯೇ ಆಗಲಿ, ಬೇರೆ ಶ್ರಾದ್ಧಗಳಲ್ಲಿಯೇ ಆಗಲಿ, ಒಬ್ಬರಲ್ಲಿಯೇ ಎಲ್ಲರನ್ನೂ ಆವಾಹನೆ ಮಾಡುವುದು ಹೇಗೆ ? ಎಲ್ಲರಿಗೂ ಬಿಡಿಬಿಡಿಯಾಗಿ ಹೇಳುವುದು ಬಹಳ ಕಷ್ಟ ಸಾಧ್ಯ. ಆದ್ದರಿಂದ ಸಾಮಾನ್ಯವಾಗಿ ಮಾತಾಪಿತೃವರ್ಗ, ಮಾತಾಮಹವರ್ಗ, ಕಾರುಣ್ಯಪಿತೃವರ್ಗ ಎಂದು ಮೂರು ಭಾಗ ಮಾಡಿದ್ದಾರೆ. ಇದೇ min. ಇದಕ್ಕಿಂತ ಕಮ್ಮಿ ಮಾಡುವುದು ಉಚಿತವಾಗಿ ಕಾಣಿಸುವುದಿಲ್ಲ. ದ್ರವ್ಯದ ಅಡಚಣೆಯಿಂದ ಸಾಧ್ಯವೇ ಇಲ್ಲವೆನ್ನುವುದಾದರೆ ಮಾಡಬಹುದು.

ಪತ್ರ ದೀರ್ಘವಾಯಿತು. ಆದರೆ ನಿನಗೆ ಬೇಜಾರಿಲ್ಲ ಎನ್ನುವುದು ಗೊತ್ತಿದೆ. ನಾನು 24ನೇ ತಾರೀಖು ಮಧ್ಯಾಹ್ನ ಭದ್ರಾವತಿಗೆ ಬರುತ್ತಿದ್ದೇನೆ. ಶ್ರೀಕಂಠನ ಮನೆಯಲ್ಲಿ ಅನಂತವ್ರತ, ಉಪಾಕರ್ಮ ಇಟ್ಟುಕೊಂಡಿದ್ದಾರೆ. 27 ರಾತ್ರಿ ಅಥವಾ ಮಧ್ಯಾಹ್ನ ಅಲ್ಲಿಂದ ಹೊರಡುತ್ತೇನೆ. ನೀನು ಬರೆದಿರುವುದನ್ನು ನೋಡಿದರೆ ಆ ಸಮಯದಲ್ಲಿ ನಿನ್ನನ್ನು ಸಂಧಿಸಲು ಸಾಧ್ಯವಾಗುವುದಿಲ್ಲವೆಂದು ಕಾಣುತ್ತೆ. ನೋಡೋಣ. ಚಿ||ಗಳಿಗೆಲ್ಲ ಆಶೀರ್ವಾದಗಳು. 'ಇಂದು' ತನ್ನ ಪತಿಯೊಡನೆ ಈ 3-4 ದಿನಗಳಲ್ಲಿ ಮನೆ ಹುಡುಕಿಕೊಂಡು ಬಂದಿದ್ದಳು. ತುಂಬಾ ಸಂತೋಷವಾಯಿತು.

ಇತಿ ನಿಮ್ಮವ

ಕುಮಾರಸ್ವಾಮೀ

ಳಲಱ

ಕಚ್ಛ ಬಂಧ

ರಕ್ಷೆ ; ಬಹಿರ್ಲಾಂಛನಗಳು ; ಸ್ತ್ರೀಯರಿಗೆ ವೇದವಿದ್ಯೆ; ಸ್ತ್ರೀಯರೇ ಮಂತ್ರ ಹೇಳುವ ಸಂದರ್ಭ ; ಗರ್ಭಿಣಿಗಾಗಿ ವೀಣಾವಾದನದಿಂದ ಮಂತ್ರ ; ಸ್ತ್ರೀಯರಿಗೆ ಸಂಧ್ಯಾವಂದನೆ ; ಹೆಣ್ಣುಮಕ್ಕಳೂ ಶ್ರಾದ್ಧ ಮಾಡಬಹುದು ; ಅತಿಥಿ ; ವಾಮಾಚಾರ ; ಬ್ರಹ್ಮಯಜ್ಞ

कुशलम् श्री : Mysore

19.12.96

ಶ್ರೀಕಂಠ !

ನಿನ್ನ ವಿಶ್ವಾಸಭರಿತವಾದ ಕಾಗದ ತಲಪಿತು. ನಿನ್ನ ಹಾರ್ದಿಕವಾದ ಹೊಗಳಿಕೆ ನುಡಿಗಳಿಗೆ ನಾನೇನೂ ಹೇಳಲು ಬರುವುದಿಲ್ಲ. ಆ ಮಾತುಗಳು ನಿನ್ನ ಹೃದಯದ ಆಳದಿಂದ ಬಂದಿವೆ ಎನ್ನುವುದು ಗೊತ್ತು. Thank you very much ಎಂದು ಹೇಳಿ ಸುಮ್ಮನಾಗುತ್ತೇನೆ. ಉತ್ತರ ಬರೆಯಲು ತಡವಾಯಿತು. ಪುರಸತ್ತೇ ಆಗಲಿಲ್ಲ. ಕ್ಷಮಿಸು.

(1) ಯಾವ ರೀತಿ ಪುರುಷರಿಗೆ ವೈದಿಕ ಕಾರ್ಯಗಳಲ್ಲಿ ಕಚ್ಛ ಪಂಚೆಯ (ಗೃಹಸ್ಥರಿಗೆ) ನಿಯಮವಿದೆಯೋ ಹಾಗೇ ಸ್ತ್ರೀಯರಿಗೂ ಇದೆ. ಕಚ್ಛ ಬದ್ಧರಲ್ಲದಿದ್ದರೆ ವೈದಿಕ ಕಾರ್ಯಕ್ಕೆ ಅನರ್ಹರು. ನಾನು ಯಾವಾಗಲೂ ಹೇಳುವಂತೆ ಇದೊಂದು ನಮ್ಮ ಸಾಂಸ್ಕೃತಿಕ ನಿಯಮ (Cultural discipline). ಅದನ್ನು ಅನುಸರಿಸುವುದರಲ್ಲಿ ನಮಗೊಂದು ಹೆಮ್ಮೆ ಇರಬೇಕು. ಆಸೆ ಇರಬೇಕು. ಮಾಡದಿದ್ದರೆ ಏನಾಗುತ್ತೆ ಎಂಬ ಪ್ರಶ್ನೆಯೇ ಅಸಂಗತ (ಏನೂ ಆಗುವುದಿಲ್ಲ). ಮಾಡುವುದು, ನಮ್ಮ ಸಂಸ್ಕೃತಿಯ ಮೇಲೆ ನಮ್ಮ ಅಭಿಮಾನವನ್ನು ಸೂಚಿಸುತ್ತದೆ. ಅಷ್ಟೆ. ಅದು ಕಷ್ಟವೂ ಇಲ್ಲ , indecent ಊ ಅಲ್ಲ. ಸದಾಕಾಲ ಹಾಗಿರಬೇಕೆಂಬ ವಿಧಿಯೂ ಇಲ್ಲ. ಅವುಗಳನ್ನು ಬಿಡದೆ ಅನುಸರಿಸುವುದೂ ದೇಶಭಕ್ತಿಯ ಒಂದು ಸಣ್ಣ ಅಂಶ.

(2) ಹೋಮದಲ್ಲಿ ಸಿಗುವ ಭಸ್ಮ, ನಿತ್ಯಧಾರಣಕ್ಕೆ ಯೋಗ್ಯವಲ್ಲ. ಅದಕ್ಕೇ ಅದನ್ನು ಕೇವಲ ರಕ್ಷೆ ಎಂದು ಹಾಕಿಕೊಳ್ಳುವುದು. ಅದರಲ್ಲಿ ಸೌದೆ ಬೂದಿಯೇ ಹೆಚ್ಚಾಗಿರುವುದರಿಂದ, ಹಣೆಯನ್ನು ಸುಟ್ಟುಬಿಡುತ್ತದೆ. ಬೆರಣಿಯಿಂದ ಮಾಡಿದ ಭಸ್ಮವೇ ಧಾರಣಕ್ಕೆ ಸರಿ. ಹೋಮಭಸ್ಮವನ್ನೂ ರಕ್ಷೆಯೆಂದು ಹಾಕಿಕೊಳ್ಳುವುದು ನಮ್ಮ ಶ್ರದ್ಧಾದ್ಯೋತಕವೇ ಹೊರತು (ಪ್ರಸಾದ, ತೀರ್ಥಗಳನ್ನು ಸ್ವೀಕರಿಸಿದಂತೆ) ಅದಕ್ಕೆ ಮತ್ತೇನೂ ವಿಶೇಷವಿಲ್ಲ.

(3) ಧಾರಾಳವಾಗಿ ಹಾಕಿಕೊಳ್ಳಬಹುದು. ವಿಭೂತಿ, ನಾಮ, ಮುದ್ರೆ ಇವೆಲ್ಲವೂ ಕೇವಲ ಬಹಿರ್ಲಾಂಛನಗಳು. ನೋಡಲು ಲಕ್ಷಣವಾಗಿಯೂ ಕಾಣಬೇಕು ಎನ್ನುವುದೇ ಉದ್ದೇಶ.

ಭಯಂಕರವಾಗಿ ಬೂದಿ ಬಡುಕೊಂಡೋ, ಮಾರಮ್ಮನ ಹಾಗೆ ಕುಂಕುಮ ಹಚ್ಚಿಕೊಳ್ಳುವುದೋ ಇವು ಖಂಡಿತ ಭಕ್ತಿಯ ಲಕ್ಷಣಗಳಲ್ಲ. ಹೆದರಿಸುವ ಲಕ್ಷಣಗಳು. ವಿಭೂತಿ ಮೇಲೆ ಕುಂಕುಮವನ್ನೋ ಗಂಧವನ್ನೋ ಹಾಕಿದರೆ ಲಕ್ಷಣವೆಂದು ತೋರಿದರೆ ಧಾರಾಳವಾಗಿ ಹಾಕಿಕೊಳ್ಳಬಹುದು. ಇಲ್ಲಪ್ಪ ! ಅಸಹ್ಯವಾಗಿರುತ್ತವೆಂದರೆ ಬಿಡುವುದು. ಅದಕ್ಕೆ ಯಾವ ವಿಧಿನಿಷೇಧಗಳೂ ಇಲ್ಲ. Purely a matter of convenience and fair looking.

(4) ಸ್ತ್ರೀಯರ ವೇದಾಭ್ಯಾಸಕ್ಕೆ ವೇದ, ಸೂತ್ರ ವಾಕ್ಯಗಳಿಲ್ಲ. ಹಾಗೇ, ಕಲಿಯಬಾರದು ಎನ್ನುವ ವಾಕ್ಯಕ್ಕೂ ಕೂಡ ಕಾರಣ ಸಮಂಜಸವಾಗಿಲ್ಲ. ಆದರೆ ವೇದ ಹೇಳಬಾರದು ಎನ್ನುವುದಕ್ಕೆ ಯಾವುದೂ ಅದೃಷ್ಟವಾದ, ಅಪೂರ್ವವಾದ ಕಾರಣ ಇಲ್ಲ (ಯಾವ ವಿಧಿ ವಾಕ್ಯಗಳಿಗೂ ಇಲ್ಲ). ಯಾವುದೋ ಸಾಮಾಜಿಕ ಕಾರಣಗಳಿಂದ ಬೇಡವೆಂದು ಹೇಳಿರಬಹುದು. ಈಗ ನಮಗೆ ಅಂಥದ್ದೇನೂ ಕಾಣದಿರುವುದರಿಂದ ಧಾರಾಳವಾಗಿ ಕಲಿಯ ಬಹುದು. ನಿಯಮಗಳು, ಸಮಾಜದ ಪರಿಸ್ಥಿತಿಯನ್ನನುಸರಿಸಿ ಸಮಾಜದ ಏಳಿಗೆಗೇ ಹೊರಟವೆಯೇ ಹೊರತು ಸಮಾಜವನ್ನು ಕತ್ತಲೆಯ ಶತಮಾನಕ್ಕೆ ಒಯ್ಯುವುದಕ್ಕಲ್ಲ. ಇದೇ ಕಾರಣದಿಂದ ತಾನೇ ನಾನಾ ಸ್ಮೃತಿಗಳು ಬಂದಿರುವುದು. (ಅದರಲ್ಲಿಯೂ ಕೆಲವು ಒಂದಕ್ಕೊಂದು ತೀರ ವಿರುದ್ಧವಾಗಿಯೇ ಇವೆ.)

(5) ಹುಡುಗನ ಕ್ಷೌರಕಾಲದಲ್ಲಿ ಒಂದು ಮಂತ್ರ ತಾಯಿ ಹೇಳುತ್ತಾಳೆ. ವಿವಾಹದಲ್ಲಿ ಎರಡು ಮಂತ್ರಗಳು ಬರುತ್ತವೆ. ಕೂಷ್ಮಾಂಡದಲ್ಲಿ ಒಂದು ಬರುತ್ತದೆ. ಇನ್ನೊಂದು ಸಾರಿ ಬರೆಯುತ್ತೇನೆ.

(6) "ಸೋಮ ಏವ ನೋ ರಾಜೇತ್ಯಾಹುಃ ಬ್ರಾಹ್ಮಣೀಃ ಪ್ರಜಾಃ। ವಿವೃತ್ತ ಚಕ್ರಾ ಆಸೀನಾಸ್ತೀರೇಣ ಕಾವೇರಿ ತವ" (ಕಾವೇರಿ ಅಥವಾ ಹತ್ತಿರದಲ್ಲಿರುವ ನದೀತೀರದಲ್ಲಿ ಕುಳಿತು ಬ್ರಾಹ್ಮಣ ಸ್ತ್ರೀಯರು ಸೋಮನೇ ನಮಗೆ ರಾಜನಾಗಿರಲಿ ಎಂದು ಹಾಡುತ್ತಾರಂತೆ !) ಅದೇ ರೀತಿ ನನಗೂ ಸೋಮರಾಜನಂಥ ಮಗ ಹುಟ್ಟಲಿ ಎಂದು ಗರ್ಭಿಣೀ ಸ್ತ್ರೀಗೆ ಅಂತಃಕರಣದಲ್ಲಿ ಅಭಿಲಾಷೆ ಬರಲಿ ಎಂಬುದೇ ಉದ್ದೇಶ. ಆ ಅರ್ಥವನ್ನೇ ಕೊಡುವ ಮಂತ್ರಗಳಿಂದ ಹೋಮಗಳೆಲ್ಲಾ ಆಗಿರುತ್ತವೆ. ವೀಣೆಯಲ್ಲಿ ಆ ಮಂತ್ರ ಕೇಳಿ, ಗರ್ಭಿಣಿಯು ಹೆಚ್ಚು ಆಸಕ್ತಿಯಿಂದ ಆಲಿಸುವವಳಾದ್ದರಿಂದ ಈ ರೀತಿಯಲ್ಲಿಯೂ ಅವಳ ಅಂತಃಕರಣದಲ್ಲಿ ಸದ್ಭಾವನೆಯು ಪ್ರಚೋದನೆಯಾಗಲಿ ಎನ್ನುವುದೇ ತಾತ್ಪರ್ಯ. ವೀಣಾನಾದದ ಮಾಧುರ್ಯವೇ ಹೃದಯವನ್ನು ಪವಿತ್ರಗೊಳಿಸುತ್ತದೆ. ಇನ್ನು ಅದರಲ್ಲಿ ಮಂತ್ರವನ್ನೇ ನುಡಿಸಿದರೆ ಅದನ್ನು ಕೇಳಿ ಪವಿತ್ರಾನಂದದಿಂದ ಪುಳಕಿತಳಾಗುತ್ತಾಳೆ.

(7) ಇದು ಚಾರಿತ್ರಿಕವಾಗಿ ಗೊತ್ತಿಲ್ಲ. ಆದರೆ, ರಾಮಾಯಣದಲ್ಲಿ ಆಂಜನೇಯನು ಸೀತೆಯನ್ನು ಹುಡುಕಲು ಅಶೋಕವನಕ್ಕೆ ಬಂದು, ಅಲ್ಲಿ ಒಂದು ತೊರೆಯನ್ನು ನೋಡಿದಾಗ 'ಇಲ್ಲಿಯೇ ಕಾದಿದ್ದರೆ ಸಂಧ್ಯಾಕಾಲದಲ್ಲಿ ಸೀತೆ ಸಂಧ್ಯಾವಂದನೆಗೆ ಬಂದೇ ಬರುತ್ತಾಳೆ. ಆಗ ನೋಡಬಹುದು' ಎನ್ನುತ್ತಾನೆ. ಅಂದರೆ ಸ್ತ್ರೀಯರು ಸಂಧ್ಯಾವಂದನೆ ಮಾಡುತ್ತಿದ್ದರು ಎಂದು ತೋರುತ್ತದೆ. ನನ್ನ ಪ್ರಕಾರ ಸಂಧ್ಯಾವಂದನೆಯೆಂದರೆ ಸೂರ್ಯೋಪಾಸನೆ. ಸೂರ್ಯನಿಂದ ಬೆಳಕು ಪಡೆದು ಉಪಕೃತರಾಗುತ್ತಿರುವ ಸಮಸ್ತ ಜನಗಳೂ ಅದನ್ನು ಮಾಡಬೇಕೆಂಬುದೇ.

(8) ಯಾವ ಸೂತ್ರದಲ್ಲಿಯೂ ಹೆಣ್ಣುಮಗಳು ಮಾಡಬಹುದೆಂದಿಲ್ಲ. ಪುತ್ರನೂ ಔಪಾಸನ, ವೈಶ್ವದೇವ ಆರಂಭಿಸಿದಂತೆ ಮಾಸಿಶ್ರಾದ್ಧವನ್ನೂ ವಿವಾಹವಾದ ಕೂಡಲೆ ಆರಂಭಿಸಬೇಕು. ಅಲ್ಲಿ ಶ್ರಾದ್ಧವೆನ್ನುವುದು ದಿವಂಗತ ಮಾತಾಪಿತೃಗಳಿಗೆ ಎನ್ನುವುದಕ್ಕಿಂತ ಗೃಹಸ್ಥನ ಸಂಸ್ಕಾರಕ್ಕೆ ಎಂದು ಕಾಣಿಸುತ್ತದೆ. ಕೃತಜ್ಞತೆಯೇ ಒಂದು ಸಂಸ್ಕಾರವೆಂದು ತೆಗೆದುಕೊಂಡರೆ, ಕೃತಜ್ಞರಾದವರೆಲ್ಲರೂ ಶ್ರಾದ್ಧವನ್ನು ಖಂಡಿತ ಮಾಡಬಹುದು. ಗಂಡುಮಕ್ಕಳಿಲ್ಲ ಆದ್ದರಿಂದ ಹೆಣ್ಣು ಮಾಡಬಹುದೇ ಎಂಬ ಪ್ರಶ್ನೆಗಿಂತ ಮಗ ಮಾಡುತ್ತಿದ್ದಾಗಲೂ ಮಗಳು ಕೃತಜ್ಞತೆಯಿಂದ ತಂದೆ ತಾಯಿಗಳಿಗೆ ಬೇರೆ ಶ್ರಾದ್ಧ ಮಾಡಬಹುದೇ ಎಂಬ ಪ್ರಶ್ನೆ ಯುಕ್ತ. ಮಾಡಬಹುದು ಎಂದೇ ನನ್ನ ಖಚಿತವಾದ ಅಭಿಪ್ರಾಯ. ಇದಕ್ಕೆ ಶಾಸ್ತ್ರವಾಕ್ಯಗಳನ್ನು ಹುಡುಕಿಕೊಂಡು ಹೋಗಬೇಕಾದ್ದಿಲ್ಲ. Male chauvinism ಪ್ರಬಲವಾಗಿದ್ದ ಆ ಕಾಲದಲ್ಲಿ ಅದನ್ನು ಬರೆದಿರಬಹುದೆಂದು ನಾವು ಉಪೇಕ್ಷಿಸಲೂ ಬಾರದು. ಅವರು ಮಾಡಬಾರದೆಂಬುದಕ್ಕೆ ಸಕಾರಣಗಳು ಇದ್ದರೆ ಒಪ್ಪಿಕೊಳ್ಳೋಣ. ಮೊದಲಿನಿಂದ ಮಾಡಿಲ್ಲ ಎನ್ನುವುದಾಗಲಿ, ಶಾಸ್ತ್ರಗಳು ಹೇಳಿಲ್ಲವೆಂಬುದಾಗಲಿ ಸಮಾಧಾನವಲ್ಲ. ಮಾಡಲು inconvenient ಎನ್ನುವುದು ಬೇರೆ ಮಾತು.

(9) ಆ ರೀತಿ ಸ್ಪಷ್ಟವಾಗಿ ಸೂತ್ರ ಸಿಗುವುದಿಲ್ಲ. ಆದರೆ ಅತಿಥಿಯ ಮನಸ್ಸನ್ನು ಯಾವ ರೀತಿಯಲ್ಲಿಯೂ ನೋಯಿಸಬಾರದು. ಹಾಗೇ ಅತಿಥಿ ಯಾರು ಎಂಬುವುದರ ಮೇಲೆ ಹೋಗುತ್ತದೆ. ಆ ಸಮಯದಲ್ಲಿ ಸುಮ್ಮನೆ ಹರಟೆಗೆ ಬಂದವನೋ ಕಾಲಹರಣ ಮಾಡಲು ಬಂದವನೋ ಅತಿಥಿಯಾಗಲಾರ. ನಮ್ಮ discretion ಖಂಡಿತ ಉಪಯೋಗಿಸಬೇಕು.

(10) ವಾಮಾಚಾರ, ಮಾಟ, ಮದ್ದು ಎಲ್ಲವೂ just

absurd. ತನಗೋ, ಇತರರಿಗೋ ಹಿಂಸೆಗೋಸ್ಕರವೇ ಹೊರಟಿರುವ ಯಾವುದೂ ಗ್ರಾಹ್ಯವಲ್ಲ. ಅವುಗಳಿಂದ ಯಾರಿಗೂ ಏನೂ ಆಗುವುದೂ ಸಾಧ್ಯವಿಲ್ಲ. ಆ ರೀತಿ ಮಂತ್ರಗಳಿಗೆ ಯಾವ ಶಕ್ತಿಯೂ ಇಲ್ಲ. ನಮ್ಮಲ್ಲಿ ಮೂಲಭೂತವಾಗಿ ಈ ವಿಷಯವಾಗಿ ಅಡಗಿರುವ ಭಯವನ್ನೇ ಅವರೆಲ್ಲಾ exploit ಮಾಡುತ್ತಾರೆ. ಮಾಡುತ್ತಿದ್ದಾರೆ. ನಾನಂತೂ ಯಾರಿಗೂ ಏನೂ ಆಗಿರುವುದನ್ನು ಕಂಡಿಲ್ಲ.

(11) ಬ್ರಹ್ಮಯಜ್ಞವೆಂದರೆ ಕಲಿತಿರುವ ವೇದಭಾಗವನ್ನು ನಿತ್ಯ ಸ್ವಲ್ಪ ಸ್ವಲ್ಪ ಹೇಳಿಕೊಳ್ಳುವುದು ಅಷ್ಟೆ. ಅದಕ್ಕೆ ಒಂದು ಸ್ವಲ್ಪ Paraphernalia ಜೋಡಿಸಿದ್ದಾರೆ-ವೇದದ ಮಹತ್ವವನ್ನು ಮುಂದಿಟ್ಟು ಮಾಡುವುದಕ್ಕೋಸ್ಕರ. ವೇದಾಧ್ಯಯನವನೇ ಮಾಡದಿದ್ದವನು ಬ್ರಹ್ಮಯಜ್ಞ ಮಾಡುವುದರಲ್ಲಿ ಅರ್ಥವಿಲ್ಲ. ಕೇವಲ ಗಾಯತ್ರಿಯನ್ನು ಪಾದಪಾದವಾಗಿ, ಅರ್ಧ, ಪೂರ್ತಿಯಾಗಿ ಹೇಳಿದರೆ ಸಾಕು, ಬ್ರಹ್ಮಯಜ್ಞವಾಯಿತು ಎನ್ನುತ್ತಾರೆ. ಅದು ನಿತ್ಯ ಹೇಳಬೇಕಾದ ವೇದಭಾಗಕ್ಕೆ ಶಾಂತಿಪಾಠ ಇದ್ದಂತೆ. ಬರೀ ಅಷ್ಟರಿಂದಲೇ ಏನೂ ಆಗುವುದಿಲ್ಲ. ಹಾಗೆ ಶ್ರುತಿಯಾಗಲಿ, ಸೂತ್ರವಾಗಲಿ ಹೇಳುವುದೂ ಇಲ್ಲ.

ಶ್ರೀಕಂಠ ! ನಿನ್ನ ಪ್ರಶ್ನೆಗಳಿಗೆ ಯಥಾಮತಿ ಉತ್ತರ ಕೊಟ್ಟಿದ್ದೇನೆ. ಇದರ ಮೇಲೂ ನಿನಗೆ ಸಂದೇಹಗಳು ಬರಬಹುದು, ಸಂಕೋಚವಿಲ್ಲದೆ ಬರಿ.

ನನ್ನ KEB deposit ಗೆ, ಶ್ರೀಕಂಠನ ಹತ್ತಿರ ಬರೆದುಕೊಟ್ಟಿದ್ದೆ. ಅದನ್ನು ತೆಗೆದುಕೊಂಡು ಭಗವಾನ್‌ಗೆ ಕೊಟ್ಟಿದೀಯೆಂದು ನಂಬಿದ್ದೇನೆ. ಇಲ್ಲದಿದ್ದರೆ ಕೊಡು. ಪಾಪು Phone ಮಾಡುತ್ತಿರುತ್ತಾನೆ. ನಿನ್ನ ಅತ್ತೆಯವರು ದಿವಂಗತರಾದ ವಿಷಯ ನಿನಗೆ ತಿಳಿದಿರಬಹುದು.

ನಾವು ಆರೋಗ್ಯವಾಗಿದ್ದೇವೆ. ಚಿ||ಗಳಿಗೆ ನನ್ನ ಆಶೀರ್ವಾದ ಗಳು. ದತ್ತ ಜಯಂತೀ ಆಹ್ವಾನಪತ್ರಿಕೆ ಬಂದಿದೆ.

ಇತಿ ನಿಮ್ಮವ

ಕುಮಾರಸ್ವಾಮೀ

೪೮೭

ಗತಾನುಗತಿಕೋ ಲೋಕಃ ; ಸ್ತ್ರೀಯರು ಹೇಳುವ ಮಂತ್ರಗಳು

कुशलम् श्री : Mysore

01.02.97

ಶ್ರೀಕಂಠ !

ನಿನ್ನ ಕಾಗದ ಆವತ್ತೇ ತಲಪಿತು. ಬರೆಯಲು ಪುರಸತ್ತೇ ಆಗಲಿಲ್ಲ. ಕ್ಷಮಿಸು. ಈಗ ವೇದಪಾಠಕ್ಕೆ 4-5 ಜನ ಬರುತ್ತಿದ್ದಾರೆ. ಅವರುಗಳಿಗೆ ಬೇರೆಬೇರೆ ಸಮಯದಲ್ಲಿ ಹೇಳಬೇಕು. ವಾರಕ್ಕೆ ಮೂರು ದಿನಗಳು ಸಾಯಂಕಾಲ ಭಾಗವತ ಹೇಳುತ್ತಿದ್ದೇನೆ (ನನ್ನ ಬಹಳ ದಿನಗಳ ಆಸೆ!). ಅದಕ್ಕೆ ಸ್ವಲ್ಪ ಪೂರ್ವಾವಲೋಕನ ಅವಶ್ಯ. ಹೀಗಾಗಿ ಕಾಲಾವಕಾಶವೇ ಸಿಗಲಿಲ್ಲ.

1) ನಿನ್ನ ಮತ್ತು ಸ್ವಾಮಿಗಳ encounter ತಮಾಷೆಯಾಗಿತ್ತು. ಅವರುಗಳು ಯಾರೂ ನನ್ನ ಹತ್ತಿರ ಬರುವುದೂ ಇಲ್ಲ. ನನ್ನನ್ನು ಕರೆಸಿ ಮಾತನ್ನು ಕೂಡ ಆಡುವುದಿಲ್ಲ. ನಿನಗೆ ಭ್ರಾಂತಿ. ನೀನು ನನ್ನ ಮೇಲಿನ ವಿಪರೀತವಾದ ಅಭಿಮಾನದಿಂದ ನನ್ನನ್ನು ಅವರ ಕೈಯಲ್ಲೆಲ್ಲಾ ಹೊಗಳುತ್ತಿದ್ದೀಯೆ. ಆದರೆ ಪರಿಣಾಮ ಮಾತ್ರ Nil. ನಿನ್ನೆ ತಾನೇ, ಭಾಗವತದಲ್ಲಿ ದಕ್ಷಯಜ್ಞದಲ್ಲಿ ಅವಮಾನಿತಳಾದ ದಾಕ್ಷಾಯಣಿಯು ಒಂದು ಮಾತನ್ನು ಹೇಳುತ್ತಾಳೆ, "ಅಪ್ಪ! ಲೋಕದಲ್ಲಿ ಸಾಧುಗಳು ಇನ್ನೊಬ್ಬರಲ್ಲಿರುವ ಗುಣ ದೋಷಗಳನ್ನು ಎರಡನ್ನೂ ಸಮಾನವಾಗಿ ನೋಡುತ್ತಾರೆ. ನೀಚರು ಗುಣಗಳನ್ನು ಬಿಟ್ಟು ದೋಷಗಳನ್ನೇ ನೋಡುತ್ತಾರೆ. ಮಹಾತ್ಮರು ಇನ್ನೊಬ್ಬನಲ್ಲಿರುವ ದೋಷಗಳನ್ನು ನೋಡದೆ ಗುಣಗಳನ್ನು ಮಾತ್ರ ನೋಡುತ್ತಾರೆ. ಮಹಾತ್ಮರು ಒಬ್ಬನಲ್ಲಿ ಅಲ್ಪ ಗುಣವಿದ್ದರೂ ಅದನ್ನೇ ಬಹಳವಾಗಿ ಕೊಂಡಾಡುತ್ತಾರೆ. ಹೀಗಿರುವಾಗ ಗುಣೈಕನಿಧಿಯಾದ ನನ್ನ ಪತಿಯಾದ ಈಶ್ವರನನ್ನು ಬಾಯಿಗೆ ಬಂದ ಹಾಗೆ ಬಯ್ದೆಯಲ್ಲವೆ?" ಎಂದು. ಇನ್ನೊಬ್ಬರಲ್ಲಿರುವ ಗುಣವನ್ನು Recognise ಮಾಡಲು ಮನಸ್ಸು ಇಷ್ಟಪಡುವುದಿಲ್ಲ. ಅದನ್ನೇ ಈರ್ಷ್ಯೆ ಅಥವಾ ಅಸೂಯೆ ಎಂದು ಕರೆಯುವುದು. ಅದು ಸ್ವಭಾವವಾಗಿ ಮನುಷ್ಯನಲ್ಲಿರುವುದರಿಂದ ತಪ್ಪಿಸಿಕೊಳ್ಳುವುದು ಬಹಳ ಕಷ್ಟ. ಅದರಲ್ಲಿಯೂ ತಮ್ಮ ಯೋಗ್ಯತೆಗೆ ಮೀರಿದ ಆಶ್ರಮವನ್ನೋ, ಅಧಿಕಾರವನ್ನೋ ಹೊಂದಿದವನಿಗೆ ಯಾವತ್ತೂ ಒಂದು ಬಗೆ Complex ಇದ್ದೇ ಇರುತ್ತದೆ. ತಾನು ಇನ್ನೊಬ್ಬರಲ್ಲಿರುವ ಗುಣವನ್ನು Recognise ಮಾಡಿಬಿಟ್ಟರೆ ತನ್ನ position ಗೆ ಎಲ್ಲಿ ಧಕ್ಕೆ ಬಂದು ಬಿಡುತ್ತದೆಯೋ ಎಂಬ ಭಯ ಇರುತ್ತದೆ. ಆದ್ದರಿಂದ ಅವರುಗಳು ಆದಷ್ಟು ತಮಗಿಂತ ಕಮ್ಮಿ ದರ್ಜೆ ಮನುಷ್ಯರ ಸಹವಾಸದಲ್ಲಿಯೇ ಇರಲು ಇಷ್ಟಪಡುತ್ತಾರೆ. ಇರಲಿ. ಅವರು ಬಂದು ಮಾತನಾಡಿಸದಿದ್ದರೆ ನನಗೆ ಯಾವ ವಿಧವಾದ ನಷ್ಟವೂ ಇಲ್ಲ. ಹಿಂದೆ ಬೊಂಬಾಯಿನಲ್ಲಿರುವ...ವರಿಗೆ, ಅವರು ಆಶ್ರಮದಿಂದ publish ಮಾಡಿರುವ "ಮಂತ್ರ ಪುಷ್ಪಂ" (ನಿನ್ನ ಹತ್ತಿರ ಒಂದು copy ಇರಬೇಕು) ಎಂಬ ಪುಸ್ತಕದಲ್ಲಿರುವ ಕೆಲವು

ತಪ್ಪುಗಳ ಮೇಲೆ comment ಮಾಡಿ ಬರೆದಿದ್ದೆ. ಅವರು ಅದಕ್ಕೆ convenient ಆಗಿ ಉತ್ತರವನ್ನೇ ಕೊಡಲಿಲ್ಲ. ಏನು ಮಾಡಲು ಸಾಧ್ಯ? ಈಗ ಮೊನ್ನೆ ... ವಿದ್ಯಾಪೀಠದ vice-chancellor ಒಂದು casette ನಲ್ಲಿ ಆರಣ್ಯಕದ ಮೊದಲನೇ ಪ್ರಶ್ನೆಯ ಮೇಲೆ (ಅರುಣ ಎಂದು ರೂಢಿಯಲ್ಲಿ ಹೇಳುತ್ತಾರೆ. ಸೂರ್ಯನಮಸ್ಕಾರ ಮಂತ್ರ ಎಂದು ತಪ್ಪಾಗಿಯೂ ಹೇಳುವುದುಂಟು) English ನಲ್ಲಿ Introduction ಕೊಟ್ಟಿದ್ದಾರೆ. ಆಮೇಲೆ ಯಾರೋ ವೈದಿಕರು ಅದನ್ನು ಹೇಳಿದ್ದಾರೆ. ಅವರೂ ವಿಚಾರವೇ ಮಾಡದೆ ಈಗಿರುವ ರೂಢಿಯಂತೆ 'ಇದು ಸೂರ್ಯನಮಸ್ಕಾರ ಮಂತ್ರಗಳು. ಅದರಲ್ಲಿಯೂ "ಅಷ್ಟಯೋನೀಮ್ ಅಷ್ಟಪುತ್ರಾಂ" ಎಂಬ ಮಂತ್ರಗಳಿಂದ ಗರ್ಭಿಣಿಗೆ ಗರ್ಭಸ್ರಾವವೇ ಆಗಿ ಬಿಡುತ್ತದೆ' ಎಂದೆಲ್ಲಾ ಹೇಳಿದ್ದಾರೆ. ಯಾಕೋ ಬಹಳ ಬೇಜಾರಾಯಿತು. ತಕ್ಷಣ ಅವರಿಗೆ ಒಂದು ಕಾಗದ ಬರೆದಿದ್ದೇನೆ. ಅದಕ್ಕೂ ಮುಕ್ಕಾಲು ಪಾಲು ಉತ್ತರ ಕೊಡುವುದಿಲ್ಲ. ನನಗೆ ಗೊತ್ತಿದೆ. ಏನು ಮಾಡಲು ಸಾಧ್ಯ? "ಗತಾನುಗತಿಕೋ ಲೋಕಃ ನ ಲೋಕಃ ಪಾರಮಾರ್ಥಿಕಃ."

2) ಉಪನಯನದಲ್ಲಿ ವಟುವಿಗೆ ಕ್ಷೌರ ಮಾಡುವ ಸಂದರ್ಭದಲ್ಲಿ ಆಚಾರ್ಯನನ್ನು (ತಂದೆ) ಉದ್ದೇಶಿಸಿ, ತಾಯಿಯಾದವಳು ಒಂದು ಮಂತ್ರ ಹೇಳುತ್ತಾಳೆ :

ಯತ್ಕ್ಷುರೇಣಮರ್ಚಯತಾ ಸುಪೇಶಸಾ ವಪ್ತಾವಪಸಿ ಕೇಶಾನ್
ಶುಂಧಿಶಿರೋ ಮಾಸ್ಯಾಯುಃ ಪ್ರಮೋಷೀಃ

ಕತ್ತರಿಸಿದ ಕೂದಲನ್ನು ಅತ್ತಿಮರದ ಬುಡದಲ್ಲಿಯೋ ದರ್ಭಸ್ತಂಬದ ಮೇಲೆಯೋ ಇಡುವಾಗ ಅವಳು ಈ ಕೆಳಗಿನ ಮಂತ್ರವನ್ನು ಹೇಳುತ್ತಾಳೆ:

ಉಪ್ತ್ವಾಯ ಕೇಶಾನ್ ವರುಣಸ್ಯ ರಾಜ್ಞೋ ಬೃಹಸ್ಪತಿಸ್ಸವಿತಾ ಸೋಮೋ ಅಗ್ನಿಃ ! ತೇಭ್ಯೋ ನಿಧಾನು ಬಹುಧಾನ್ವವಿಂದನ್ನನ್ತರಾದ್ಯಾವಾಪೃಥಿವೀ ಅಪಸ್ಸುವಃ

ಸೀಮಂತದಲ್ಲಿ ವೀಣೆಯಲ್ಲಿ ನುಡಿಸುವ ಮಂತ್ರ :
ಸೋಮ ಏವ ನೋ ರಾಜೇತ್ಯಾಹುಃ ಬ್ರಾಹ್ಮಣೀಃ ಪ್ರಜಾಃ!
ವಿವೃತ್ತಚಕ್ರಾ ಆಸೀನಾಸ್ತೀರೇಣ ಕಾವೇರಿ ತವ್ವ ॥

ಶ್ರೀಕಂಠ ! ನಾವು 16ನೇ ತಾರೀಖು ಮಂಜುನಾಥ್‌ರವರ ಮೊಮ್ಮಗನ ಚೌಲಕ್ಕೆ ಬರುತ್ತಿದ್ದೇವೆ. ಇಲ್ಲಿಂದ 13ನೇ ತಾರೀಖು ಸಾಯಂಕಾಲ 4 ಗಂಟೆಗೆ ಹೊರಡುವ ಪಣಜಿ Busಗೆ ಹೊರಡಬೇಕೆಂದಿದ್ದೇವೆ. 14,15 ಸ್ವಲ್ಪ ಎಲ್ಲರ ಮನೆಗಳಿಗೂ ಸಾಧ್ಯವಾದಷ್ಟು ಹೋಗುವ ಅಪೇಕ್ಷೆ ಇದೆ. ಜತೆಗೆ ಪಾಪುವಿನ Provident Fund, Gratuity ಬಗ್ಗೆ finalise ಮಾಡಬೇಕು. ಅವನು sign ಮಾಡಿದ form ಗಳನ್ನು 1 ತಿಂಗಳ ಹಿಂದೆಯೇ ಹರೀಂದ್ರನಿಗೆ ಕಳಿಸಿದ್ದೆ. ನಾನು ಬರುವ ವೇಳೆಗೆ process ಆಗಿರುತ್ತದೆ ಎಂದು ನಂಬಿದ್ದೇನೆ. ಇಲ್ಲದಿದ್ದರೆ ನಾನೇ ನೋಡಬೇಕು. ಪಾಪುವು 14 ನೇ ತಾರೀಖು ಡೆಲ್ಲಿಗೆ ಬರುತ್ತಿದ್ದಾನೆ. 17ನೇ ತಾರೀಖು ಬೊಂಬಾಯಿ IIT ಯಲ್ಲಿ Seminar ಕೊಟ್ಟು 18 ರಾತ್ರಿ ಬೆಂಗಳೂರಿಗೆ ಬರುತ್ತಿದ್ದಾನೆ. ನಾವು ಅಷ್ಟರೊಳಗೆ ಬೆಂಗಳೂರಿಗೆ ಹೋಗಬೇಕು. 16ನೇ ತಾರೀಖು ಚೌಲ ಮುಗಿಸಿಕೊಂಡು ರಾತ್ರಿ-ರೈಲಿನಲ್ಲಿ ಬೆಂಗಳೂರಿಗೆ ಹೊರಡಬೇಕೆಂದಿದ್ದೇವೆ. 14ನೇ ತಾರೀಖು ಶುಕ್ರವಾರ ಮಧ್ಯಾಹ್ನ ನಿನ್ನ ಮನೆಗೆ ಊಟಕ್ಕೆ ಬರುತ್ತೇವೆ. ನಾನು ಬಂದ ಮೇಲೆ ನೀನು ಬಂದು ಹೇಳಿ, ನಿನಗೆ ನಿರಾಶೆ ಮಾಡುವುದಕ್ಕಿಂತ, ನಾನೇ ಬರೆದು ಬಿಟ್ಟಿದ್ದೇನೆ. ಅಕಸ್ಮಾತ್ ನಿನಗೆ ತೊಂದರೆ ಏನಾದರೂ ಇದ್ದರೆ, ಸ್ವಲ್ಪವೂ ಯೋಚಿಸಬೇಡ. ತಿಳಿಸಿಬಿಡು. ಇನ್ನೊಂದು ಬಾರಿ ನೋಡೋಣ.

ನನ್ನ ಶಿಷ್ಯನ Scooter ತೆಗೆದುಕೊಂಡು 'ಇಂದು' ಮನೆಗೆ ಹೋಗಿದ್ದೆವು. ಮಗು ಬಹಳ ಚೆನ್ನಾಗಿದೆ. ನಿನ್ನ ಅಳಿಯನಿಗೆ 2nd Shift ಆದ್ದರಿಂದ ನೋಡಲು ಆಗಲಿಲ್ಲ. ನಿಮ್ಮ ಕೇಶವಮೂರ್ತಿಗಳು ಈಗ Regular ಆಗಿ ಭಾಗವತಕ್ಕೆ ಬರುತ್ತಿದ್ದಾರೆ (ಬಹಳ ದೂರ).

ನಾವು ಆರೋಗ್ಯವಾಗಿದ್ದೇವೆ. ಚಿ||ಗಳಿಗೆ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮಿ

೪೮೭

ಸಂಸ್ಕಾರನಷ್ಟ

ಧರ್ಮವಿರೋಧ ; ಮಂತ್ರಸಿದ್ಧಿ

कुशलम् श्री : Mysore
28.4.97

ಶ್ರೀಕಂಠ!

ನಿನ್ನ ಕಾಗದ ತಲಪಿತು. ಇಷ್ಟು ದಿನಗಳ ಕಾಲ ನಿನ್ನ ಮೌನವನ್ನು ಕಂಡು ಆಶ್ಚರ್ಯವಾಗಿತ್ತು ! ಆದರೆ ನೀನು ಹಿಂದೆ ಬರೆದ ಕಾಗದ (ಉಪನಯನಕ್ಕೆ) ತಲಪಿಲ್ಲ. ಕಾರಣ ಗೊತ್ತಾಗಲಿಲ್ಲ. ಆದರೆ ನಿನ್ನ ಈ ಬಾರಿಯ ಕಾಗದದಲ್ಲಿ ನೀನು 1028/1 ಎಂಬ ನಂಬರನ್ನು ಬಿಟ್ಟಿದ್ದೀಯ. ಆದೇ ಮನೆಯ ನಂಬರು. "408 ಲಕ್ಷ್ಮೀ ರಾಮಸ್ವಾಮಿ ಸೌಧ" ಎಂಬುದು ಇಲ್ಲದಿದ್ದರೂ ಪರವಾಯಿಲ್ಲ. ನಂಬರ್ ಇದ್ದರೆ ತಲಪುತ್ತದೆ. ಏಕೆಂದರೆ ಲಕ್ಷ್ಮೀರಾಮಸ್ವಾಮಿಸೌಧ

ಎನ್ನುವುದು ಈಚಿನ ಹೆಸರು. ಆದ್ದರಿಂದ ನಂಬರ್ ಬರೆಯುವುದು ಮರೀಬೇಡ. ಹೋದ ಕಾಗದ ಹಾಗೇ ಆಗಿರಬಹುದು. ಈ ಸಾರಿ 'ತಿಳಿದ' postman ಯಾರೋ ತಂದುಕೊಟ್ಟಿರಬೇಕು.

1) ಉಪನಯನಕ್ಕೆ, ಸೂತ್ರಕಾರರು ಹೇಳುವುದು ಗರ್ಭಾಷ್ಟಮ (ಏಳನೇವರ್ಷ) ಅಥವಾ ಎಂಟನೇ ವರ್ಷ. ಇದು ಬಹುಮುಖ್ಯ ಕಾಲ. ಹಾಗೆಯೇ ವಸಂತ ಋತುವನ್ನೂ ಹೇಳುತ್ತಾರೆ. ಅವೆರಡೂ ಸಿದ್ಧವಾಗಿದ್ದರೆ ಯಾವತ್ತು ಬೇಕಾದರೂ ಮಾಡಬಹುದು. 9 ನೇ ವರ್ಷದಿಂದ 16 ವರ್ಷದವರೆಗೂ, ಕಾಲಾತೀತ ಎಂದು ಹೇಳಬಹುದು. ಆಗ ಖಂಡಿತ ಯಾವುದನ್ನೂ ನೋಡಬೇಕಾದ್ದಿಲ್ಲ. ನೋಡುತ್ತಾ ಕೂತರೆ ಆ ಹುಡುಗನಿಗೆ ಒಂದೊಂದು ದಿನದ ಸಂಧ್ಯಾ ವಂದನಾದಿಗಳ ಪ್ರಯೋಜನವೂ ತಪ್ಪುತ್ತದಲ್ಲವೇ? ಆ ನಷ್ಟಕ್ಕೆ ನಾವು ಕಾರಣರಾಗಬಾರದು. ಎಲ್ಲಾ ಅನುಕೂಲಗಳನ್ನೂ ಮಾಡಿಕೊಂಡು ತಕ್ಷಣ ಆರಂಭಿಸಬೇಕು. ರಾಮಾಯಣದಲ್ಲಿ ರಾಮನು ಕಾಡಿಗೆ ಹೊರಟಾಗ ದಶರಥನು ಎಷ್ಟೆಷ್ಟೋ ಕೇಳಿಕೊಳ್ಳುತ್ತಾನೆ, "ರಾಮ ! ಇವತ್ತು ಒಂದು ರಾತ್ರಿ ಇದ್ದು ಹೋಗು. ನಿನ್ನ ಜತೆಯಲ್ಲಿದ್ದ ಹಾಗೆ ಆಗುತ್ತದೆ. ನನ್ನ ಸಂತೋಷಕ್ಕೆ ಭಂಗ ತರಬೇಡ" ಎಂದು. ಅದಕ್ಕೆ ರಾಮನು "ಅಪ್ಪಾ! ಅಯಾಚಿತವಾಗಿ ಕಾಡಿನ ವಾಸ, ಋಷಿಗಳ ಸಾಂಗತ್ಯ ಲಭಿಸಿದೆ. ನಿನ್ನನ್ನು ಸಂತೋಷಪಡಿಸಬೇಕೆಂದು ನಾನು ಇವತ್ತು ಇಲ್ಲಿಯೇ ಇದ್ದರೆ, ಇವತ್ತಿನ ವನವಾಸದ ಫಲವನ್ನು ಕಟ್ಟಿಕೊಡುವವರು ಯಾರು? ಅದು ಹೋದ ಹಾಗೇ ಅಲ್ಲವೇ! ಆದ್ದರಿಂದ ನಾನು ಈಗಲೇ ಹೊರಡುತ್ತೇನೆ" ಎಂದು ಹೇಳಿ ಹೊರಡುತ್ತಾನೆ. ಹಾಗೆ ಉಪನಯನಸಂಸ್ಕಾರ ಮಾಡಿಕೊಂಡು ಚಿತ್ತಶುದ್ಧಿಗೋಸ್ಕರ ಮಾಡುವ ಸಂಧ್ಯಾವಂದನಾದಿಗಳು, ಒಂದೇ ದಿವಸದಲ್ಲಿ ಫಲ ಕೊಡುವುದಿಲ್ಲ. ದೀರ್ಘಕಾಲ ಮಾಡಬೇಕು. ಒಂದು ದಿವಸದ್ದು ಮಾಡದಿದ್ದರೆ, ಅದು ನಷ್ಟವಾಯಿತೇ ಹೊರತು ಅದನ್ನು ತುಂಬಿಕೊಡಲು ಬರುವುದಿಲ್ಲ. ತಿಥಿ, ವಾರ, ನಕ್ಷತ್ರಗಳಾಗಲಿ, ಗುರುಬಲವಾಗಲಿ ಆ ನಷ್ಟವನ್ನು ತುಂಬಲು ಸಾಧ್ಯವೇ ? ಪುನಃ ಹೇಳಬೇಕಾಗುತ್ತದೆ – ತಿಥಿ, ವಾರ, ನಕ್ಷತ್ರಗಳು, ನಮ್ಮ ಅನುಕೂಲಕ್ಕೆ ಮಾಡಿಕೊಂಡಿರುವ ವಿಭಾಗಗಳು. By themselves ಅವು ಯಾವ ಮನುಷ್ಯನ ಮೇಲೆ ಯಾವ ಪರಿಣಾಮವನ್ನೂ ಬೀರುವುದು ಸಾಧ್ಯವಿಲ್ಲ. ಇನ್ನು ಗುರುಬಲವಂತೂ ಗುರುವಿನ ಚಲನೆಯಿಂದ ಉಂಟಾಗುವುದು. ಅವನ ಚಲನೆಯಿಂದ ಒಂದು ವ್ಯಕ್ತಿಗೆ, ಏನೋ ಒಂದು ವಿಶೇಷವಾದ ಬಲ ಬರುತ್ತದೆಂದು ಹೇಳಿದರೆ ಹಾಸ್ಯಾಸ್ಪದವಾಗುತ್ತದೆ. ಅದೂ ಅಲ್ಲದೆ, ನಮ್ಮ ಶಾಸ್ತ್ರಕಾರರೇ (ಜ್ಯೋತಿಷ್ಯವನ್ನು ಒಪ್ಪಿರುವವರೇ) ಗುರುಬಲವನ್ನು ಆಗಂತುಕವೆಂದು (incidental) ವೆಂದು ಹೇಳುತ್ತಾರೆ. ಸೂತ್ರಕಾರರು ಹೇಳಿರುವಕಾಲ ಮುಖ್ಯವಾದುದರಿಂದ, ಗುರುಬಲವೆಂಬುದು ಕೇವಲ ಆಗಂತುಕವಾದ್ದರಿಂದ ಅದನ್ನು ನೋಡಬೇಕಾದ ಆವಶ್ಯಕತೆಯಿಲ್ಲ ಎಂಬುದು ಅವರ ಅಭಿಪ್ರಾಯ. ನಾನು ಚಿ|| ಗೆ ಗರ್ಭಾಷ್ಟಮದಲ್ಲಿ ಮಾಡಿದೆ. ಆಗ ಅವನಿಗೆ ಗುರುಬಲವಿರಲಿಲ್ಲ. ಅದರ ಬಗ್ಗೆ ನನಗೆ ಚಿಂತೆ ಇರಲಿಲ್ಲ. ಆದರೆ ನಾನೇ 3-4 ತಿಂಗಳು ಹುಷಾರಿಲ್ಲದೆ ಮಲಗಿದ್ದರಿಂದ ಸ್ವಲ್ಪ ಉದಾಸೀನ ಮಾಡಿದೆ. ಆದರೆ ಅದೃಷ್ಟವಶಾತ್, ಕೇಶವಮೂರ್ತಿ ಘನಪಾಠಿಗಳು ಮನೆಗೆ ಬಂದಿದ್ದರು. ಆಗ, "ಕುಮಾರಸ್ವಾಮಿ ! ಪಾಪುವಿಗೆ ಗರ್ಭಾಷ್ಟಮ. ಉಪನಯನ ಮಾಡುವುದಿಲ್ಲವೇ?" ಎಂದು ಕೇಳಿದರು. "ನನ್ನ ದೇಹಾಲಸ್ಯದಿಂದ ಈವರ್ಷ ಬೇಡ ಎಂದುಕೊಂಡಿದ್ದೇನೆ" ಎಂದು ಹೇಳಿದ್ದಕ್ಕೆ ಅವರು "ಅದಕ್ಕೂ ಇದಕ್ಕೂ ಏನು ಸಂಬಂಧ ! ಅವನ ಸಂಸ್ಕಾರವನ್ನು ಇದಕ್ಕೋಸ್ಕರ ಮುಂದೂಡಬೇಡ" ಎಂದು ಹೇಳಿದರು. ಹಾಗೇ ಮಾಡಿದೆ. ಆಗ ಮಾಡಿದ್ದಕ್ಕೆ ಸರಿಯಾಗಿ, ಅವನ ಗುರುಗಳಿಗೆ ವಹಿಸಿಕೊಟ್ಟೆ. 7-8 ವರ್ಷಗಳ ಕಾಲ ಅವರ ಕೈಯಲ್ಲಿ ಅಧ್ಯಯನ ಮಾಡಿದ. ನನಗಿಂತ ಚೆನ್ನಾಗಿ, ನನ್ನ ಜತೆಯಲ್ಲಿ ಮಂತ್ರಗಳನ್ನು ಹೇಳಿ, ನಮಗೆ ಅನಂತವಾದ ತೃಪ್ತಿಯನ್ನು ಕೊಟ್ಟ. ಉಪನಯನ ಸಂಸ್ಕಾರದ ಪ್ರಯೋಜನ ಮತ್ತೇನಾಗಬೇಕು !! ತಿಥಿ ವಾರ ನಕ್ಷತ್ರಗಳನ್ನು ನೋಡುವುದಕ್ಕೆ ಬದಲಾಗಿ ಉಪನಯನಸಂಸ್ಕಾರದ ಸ್ವರೂಪವೇನು, ಸರಿಯಾಗಿ ಮಾಡುವುದಾದರೆ, ಅದರ ಪ್ರಯೋಜನ ಪೂರ್ತಿ ಸಿಗಬೇಕಾದರೆ ಹೇಗೆ ಮಾಡಬೇಕು ಎಂಬ ವಿಷಯವನ್ನು ಚೆನ್ನಾಗಿ ತಿಳಿದುಮಾಡುವುದು – ಉತ್ತಮ ಪಕ್ಷ. ಲೌಕಿಕಕಾರ್ಯಗಳಲ್ಲಿಯೂ ಇದೇ ನ್ಯಾಯ ಅನ್ವಯಿಸುತ್ತದೆ. ಒಂದು ಒಳ್ಳೆಯ operation ಮಾಡಬೇಕಾದರೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಬೇಕಾದ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡು ಆದಷ್ಟು ಬೇಗ ಮಾಡಿದರೆ, ಅದು ಸಾರ್ಥಕವಾಗುತ್ತದೆಯೇ, ಅಥವಾ ತಿಥಿವಾರ ನಕ್ಷತ್ರಗಳನ್ನು ನೋಡಿ ಒಳ್ಳೆಯ ಮುಹೂರ್ತದಲ್ಲಿ ಮಾಡಿಬಿಟ್ಟರೆ ಸಾಕೇ? ಒಳ್ಳೆಯ ಅಡುಗೆಯನ್ನು ಮಾಡಿ ಅತಿಥಿಗಳನ್ನು ತೃಪ್ತಿಪಡಿಸಬೇಕಾದರೆ ಅಡುಗೆಯ ವಿಷಯ ಅನುಭವಪಡೆಯಬೇಕು. Plan ಮಾಡಬೇಕು. ಸರಿಯಾದ ಸಾಮಾನುಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಸಕಾಲದಲ್ಲಿ ಆರಂಭಿಸಬೇಕು. ಹೀಗೆ ಮಾಡಿದರೆ ತಾನೇ ಅತಿಥಿಗಳನ್ನು ಸಂತೋಷಪಡಿಸಲು ಸಾಧ್ಯ? ಒಳ್ಳೆಯ ಮುಹೂರ್ತ ನೋಡಿ ಪ್ರಾರಂಭ ಮಾಡಿಬಿಟ್ಟರೆ ತಾನೇ, ನಳಪಾಕ ಮಾಡಲು ಸಾಧ್ಯವೇ! ಹೀಗೆಯೇ ನಮ್ಮ ಉಪನಯನ ವಿವಾಹಾದಿ ಸಂಸ್ಕಾರಗಳು, ಪೂಜಾ ಹೋಮಗಳು ಇತ್ಯಾದಿ. ದುರದೃಷ್ಟವಶಾತ್, ಒಬ್ಬರಿಗೂ ಅದರ ಬಗ್ಗೆ ತಿಳಿದುಕೊಳ್ಳುವ

ಆಸ್ಥೆ ಇಲ್ಲ, ತಿಳಿಸಿಕೊಡುವವರೂ ಇಲ್ಲ. ಘಂಟೆಗಟ್ಟಲೆ ಜ್ಯೋತಿಷ್ಕರ ಹತ್ತಿರ ಹೋಗಿ ಕಾಲಕಳೆಯುತ್ತಾರೆ. ಅದರ $^{1}/_{2}$ ದಷ್ಟು ಭಾಗ ಕರ್ಮದ ವಿಷಯ ತಿಳಿದುಕೊಳ್ಳಲು ಪ್ರಯತ್ನಪಟ್ಟರೆ ಸಾರ್ಥಕವಾಗುತ್ತದೆ.

2) ತಂದೆ, ತಾಯಿ, ಅಂತಲ್ಲ, ಯಾರು ಅಧರ್ಮವನ್ನು ಮಾಡಿದರೂ ಅಧರ್ಮವೇ. ಲೋಕವಿರೋಧ ಎಂಬುದು ಸರಿಯಲ್ಲ, ಶಾಸ್ತ್ರವಿರೋಧ ಅಥವಾ ಧರ್ಮವಿರೋಧ ಎಂದಿಟ್ಟುಕೊಳ್ಳಬೇಕು. "ದೃಷ್ಟೋ ಧರ್ಮವ್ಯತಿಕ್ರಮಃ ಸಾಹಸಂ ಚ ಮಹತಾಮ್" (ಮಹಾತ್ಮರು ಧರ್ಮವ್ಯತಿಕ್ರಮವನ್ನು ಮಾಡಲು ಸಾಹಸಮಾಡಿದ್ದಾರೆ. ಅದು ಸಾಹಸವೇ ಹೊರತು ಧರ್ಮವಾಗಲಾರದು) ಎಂಬುದೇ ಎಲ್ಲಾ ಮಹರ್ಷಿಗಳ ಅಭಿಪ್ರಾಯ. Law is above all ಎನ್ನುವುದೇ ಆ ನ್ಯಾಯ.

3) ಯಾವ ಗ್ರಹಣಕ್ಕೂ ಯಾವ ಪಾವಿತ್ರ್ಯವೂ ಇಲ್ಲ. ಅದು ಪ್ರಕೃತಿಸಿದ್ಧವಾದ ಒಂದು ನಿಯಮ. ಹಗಲು, ರಾತ್ರಿಗಳಿದ್ದಂತೆ! ಆದರೆ ಅದು ಸ್ವಲ್ಪ ಅಪರೂಪವಾಗಿ ಸಂಭವಿಸುವುದರಿಂದ, ಎಲ್ಲರಿಗೂ ವಿಶೇಷವಾಗಿ ಕಾಣಿಸುತ್ತದೆ. ಅಮಾವಾಸ್ಯೆ ಇದ್ದ ಹಾಗೆ!! ಆ ಕಾಲಕ್ಕೇ, ಆ ಘಟನೆಗೇ ಯಾವ ರೀತಿಯಾದ ಗುಣವೂ ಇರಲು ಸಾಧ್ಯವಿಲ್ಲ. ನೀನು ಬರೆದಿರುವ ಫಲಶ್ರುತಿಗೆ ಅರ್ಥವೇ ಇಲ್ಲ. ಮಂತ್ರಸಿದ್ಧಿ ಎನ್ನುವುದು ಏನು ಅಂತ ನನಗೆ ಗೊತ್ತಿಲ್ಲ. ಮಂತ್ರಾರ್ಥ ಮನಸ್ಸಿಗೆ ಮನನವಾಗಿ (ಅದೂ ಸರಿಯಾದ ಆಧ್ಯಾತ್ಮಿಕ ಪರವಾದ ಮಂತ್ರಾರ್ಥವಾದರೆ) ಅದರಿಂದ ಮನುಷ್ಯನು ಅಧ್ಯಾತ್ಮ ಮಾರ್ಗದಲ್ಲಿ ಮುಂದುವರೆಯಲು ಸಾಧ್ಯವಾದರೆ, ಅದೇ ಮಂತ್ರ ಸಿದ್ಧಿಯೇ ವಿನಾ, ಯಾವುದೋ ಐಹಿಕ ಫಲಗಳನ್ನು ಪಡೆಯುವುದೋ, ದೇವತಾ ಸಾಕ್ಷಾತ್ಕಾರವಾಗುತ್ತದೆಂದು ಹೇಳುವದೋ, ಎಲ್ಲಾ ಕಥೆಯೇ ಹೊರತು ವಾಸ್ತವವಲ್ಲ. ಗಣಪತಿ ಮೂಲಮಂತ್ರದಲ್ಲಿರುವ "ಸರ್ವಜನಂ ಮೇ ವಶಮಾನಯ" ಎನ್ನುವುದು ಸಿದ್ಧಿಯಾಗುತ್ತದೆ ಎಂಬುದು ಕೆಲವರ ವಾದ. ಹಾಗಾದದ್ದನ್ನು ನಾನು ಇದುವರೆಗೂ ಎಲ್ಲಿಯೂ ನೋಡಿಲ್ಲ, ಕೇಳಿಯೂ ಇಲ್ಲ. ವಾಸ್ತವವಾಗಿ ಅಥರ್ವಶೀರ್ಷದಲ್ಲಿ ಸಿದ್ಧಿಯಾಗುವುದಕ್ಕೆ ಏನಿದೆ? ಆರಂಭದಲ್ಲಿಯೂ, ಕೇವಲ ಬ್ರಹ್ಮ ಪರವಾಗಿದೆ. ಆಮೇಲೂ ಅವನ ರೂಪವರ್ಣನೆ ಇದೆ. ಅದರಲ್ಲಿ ಸಿದ್ಧಿಯೆಂದರೇನು? ಬ್ರಹ್ಮಸಾಕ್ಷಾತ್ಕಾರವಾಗುವುದಾದರೆ ಬಹಳ ಸಂತೋಷ. ಆದರೆ ಬ್ರಹ್ಮಸಾಕ್ಷಾತ್ಕಾರವು ಅಷ್ಟು ಸುಲಭವಲ್ಲ. ಅಥರ್ವಶೀರ್ಷ Guidance ಆಗಬಹುದು ಅಷ್ಟೆ. ಇನ್ನು ಅವನ ರೂಪವನ್ನು ಜಪಮಾಡುತ್ತಿದ್ದರೆ 'ಸಿದ್ಧಿ' ಅಂದರೆ ಅವನ ಸಾಕ್ಷಾತ್ಕಾರವೆಂದರ್ಥವೇ? ಆರಂಭದಲ್ಲಿ ತಾನೇ ಅವನಿಗೆ ಯಾವ ರೂಪವೂ ಇಲ್ಲ, ಅವನು ಆನಂದಸ್ವರೂಪ, ಚಿನ್ಮಯ, ಜ್ಞಾನಮಯ ಅಂತ ಹೇಳಿ, ಅವನು ಆನೆಮುಖದಿಂದ ಸಾಕ್ಷಾತ್ಕಾರನಾಗುತ್ತಾನೆ ಎಂಬುದಕ್ಕೆ ಅರ್ಥವೇ ಇಲ್ಲ. ಮತ್ತೆ ರೂಪವರ್ಣನೆ ಇದೆಯಲ್ಲಾ ಅಂದರೆ, ಅದು ನಮ್ಮ ತೃಪ್ತಿಗೋಸ್ಕರ. ವಾಸ್ತವ ಸ್ಥಿತಿಯಲ್ಲ.

ಶ್ರೀಕಂಠ! ಮೂಲಭೂತವಾದ ನಮ್ಮ vedantic concepts ಮನನವಾಗಿದ್ದರೆ ಈ ತರಹ ಸಂದೇಹಗಳಿಗೆ ಅವಕಾಶವೇ ಇರುವುದಿಲ್ಲ. ಅದು ಇಲ್ಲದಿರುವುದೇ ನಮ್ಮ ಸಮಾಜದ ಒಂದು ದೊಡ್ಡ ನ್ಯೂನತೆ.

ನಾವು ಆರೋಗ್ಯವಾಗಿದ್ದೇವೆ. ನಿನ್ನ ಕಾಗದ ಖಂಡಿತ ಬೇಜಾರು ತರುವುದಿಲ್ಲ. ಪ್ರತ್ಯುತ ನನಗೆ ಬರೆಯಲು ಸ್ಫೂರ್ತಿಯನ್ನು ಕೊಡುತ್ತದೆ. ಹರಕೆ ಬಗ್ಗೆ ಆಪಸ್ತಂಬಸೂತ್ರವನ್ನು ಆಮೂಲಾಗ್ರವಾಗಿ ಪರಿಶೀಲಿಸಿದೆ. ಸಿಗಲಿಲ್ಲ. ಆದರೆ ಓದಿದ್ದು ಚೆನ್ನಾಗಿ ಜ್ಞಾಪಕವಿದೆ. ಬೇರೆಲ್ಲಾದರೂ ಇದೆಯೇ ನೋಡಿ ತಿಳಿಸುತ್ತೇನೆ. Kindly excuse me. ನೀನಿನ್ನೂ ಮೈಸೂರು ಕಡೆ ಬಂದೇ ಇಲ್ಲ. ಮಗಳನ್ನು ನೋಡುವುದಕ್ಕಾದರೂ ಬರುತ್ತೀಯೇನೋ ಅಂದುಕೊಂಡಿದ್ದೆ. ಅದೂ ಆಗಿಲ್ಲ. ಒಂದು ಬಾರಿ ಬನ್ನಿ.

ಇತಿ ನಿಮ್ಮವ

ಕುಮಾರಸ್ವಾಮೀ

ಳಅಅ

ಪಿತೃಯಜ್ಞ

ಮಾತೃವಿಗೆ ಶ್ರಾದ್ಧ ; ಧರ್ಮಮಾರ್ಗ ತಿಳಿಸುವುದು ಮುಖ್ಯ ; 'ಬ್ರಾಹ್ಮಣ' ವಾಕ್ಯ ; ದೀರ್ಘಸ್ವರಿತ

कुशलम् श्री : Mysore

31.5.97

ಶ್ರೀಕಂಠ !

ನಿನ್ನ ಕಾಗದ ಬಂದು ಬಹಳದಿನಗಳಾದುವು. ಕುಳಿತು ಉತ್ತರ ಬರೆಯಲು ಆಗಲೇ ಇಲ್ಲ. ಈಗ 5-6 ಜನ ಪಾಠಕ್ಕೆ ಬರುತ್ತಿದ್ದಾರೆ. ಆದರೆ ಒಬ್ಬೊಬ್ಬರು ಒಂದೊಂದು ಸಮಯದಲ್ಲಿ ಬರುತ್ತಾರೆ. ಹೀಗಾಗಿ ನನಗೆ ಪುರಸತ್ತೇ ಇಲ್ಲವಾಗಿದೆ. ಆದ್ದರಿಂದ ಬರೆಯಲು ತಡವಾಯಿತು. ತಪ್ಪು ತಿಳಿಯುವುದಿಲ್ಲವೆಂದು ನಂಬಿದ್ದೇನೆ. ನಿನ್ನ ಪ್ರಶ್ನೆಗಳು ಚೆನ್ನಾಗಿರುತ್ತವೆ. ಆದರೆ ಇದುವರೆಗೆ ನನ್ನ ನಿನ್ನ ಮಾತು-ಕಥೆಗಳಿಂದ, ನನ್ನ ಕಾಗದಗಳಿಂದ ಆ ಪ್ರಶ್ನೆಗಳಿಗೆ ನೀನೇ ಉತ್ತರವನ್ನು ಹೇಳಬಹುದೆಂದೆನಿಸುತ್ತದೆ. ಆದರೆ ನಿನಗೆ ನನ್ನಿಂದಲೇ ಬರಬೇಕೆಂಬ ಆಸೆಯಿರುವುದು ಗೊತ್ತು. ಬರೆಯುತ್ತೇನೆ.

1) ಸೂತ್ರಕಾರರು ಉತ್ತರಾಯಣ, ಶುಕ್ಲಪಕ್ಷ, ಹಗಲು ಇವುಗಳು 'ಪುಣ್ಯಾನಿ' ಎಂದು ಹೇಳಿರುವುದರಿಂದ ಅದನ್ನು ಅನುಸರಿಸುವುದೂ ಯುಕ್ತ.

2) ಮಾತುಲಕನ್ಯಾವಿವಾಹವನ್ನು ನಿಷೇಧಿಸಿ ಎಲ್ಲಾ ಸೂತ್ರಕಾರರೂ ಬರೆದಿದ್ದಾರೆ. ಬೋಧಾಯನರು, ಮಾತುಲಕನ್ಯಾ ವಿವಾಹ ಮಾಡಿಕೊಂಡವನು ಗುರುತಲ್ಪಗಮನ ಮಾಡಿದಷ್ಟು ಪಾಪಿಯಾಗುತ್ತಾನೆ ಎನ್ನುತ್ತಾರೆ.

3) ಪಿತೃಯಜ್ಞವನ್ನು ಮಾಡಿಬಂದರೆ ಅಶುಚಿ ಎಂಬ ಭಾವನೆ ಬರಬಾರದು. ಸಾಮಾನ್ಯವಾಗಿ ಅಶುಚಿಯಾದರೆ ಸ್ನಾನದ ಅಗತ್ಯ. ಪಿತೃಯಜ್ಞವನ್ನು ಅತ್ಯಂತ ಶುಚಿಯಾಗಿ ಮಾಡಬೇಕೆನ್ನುವ ಉದ್ದೇಶದಿಂದಲೇ, ಕರ್ತೃವು ಸುಮಾರು 6-7 ಸ್ನಾನಗಳನ್ನು ಮಾಡುತ್ತಾನೆ. ಒದ್ದೆಯಲ್ಲಿಯೇ ಕ್ರಿಯೆಗಳನ್ನು ನಡೆಸುತ್ತಾನೆ. ಅಂಥವನ ಜತೆಯಲ್ಲಿ ಹೋಗಿ ಪಿತೃಯಜ್ಞಕ್ಕೆ ಸಹಕಾರಿಯಾದರೆ, ನಾವು ಅಶುಚಿಯಾಗುತ್ತೇವೆ ಎಂಬ ಭಾವನೆ ಬರುವುದು ಅಯುಕ್ತವಲ್ಲವೇ? ಅನೇಕ ವೇಳೆ ಶವವೂ ಅಶುಚಿಯಾಗಿದ್ದು (2 ದಿವಸ ಆಗಿಬಿಟ್ಟಿರುತ್ತದೆ) ಮುಟ್ಟುವುದಕ್ಕೇ ಅಸಹ್ಯವಾಗಿದ್ದು, ದಹನ ದೇಶವೂ ಅಶುಚಿ, ಅಸಹ್ಯಗಳಿಂದ ಕೂಡಿದ್ದರೆ (ಈಗ ಅನೇಕ ಕಡೆ ಇರುವುದೇ ಹಾಗೆ!) ಯಾವನಿಗಾದರೂ ಸ್ನಾನ ಮಾಡಬೇಕೆನಿಸುತ್ತದೆ. ಮೊನ್ನೆ ಇಲ್ಲಿ...ಯಾರೋ ನಿಧನರಾದಾಗ ಹೋಗಿದ್ದೆ. ಅಲ್ಲಿ ಅವರೆಲ್ಲಾ ನಡೆದುಕೊಂಡ ರೀತಿ, ಆ ಶವವನ್ನು ಸ್ನಾನವನ್ನೂ ಮಾಡಿಸದೆ van ನಲ್ಲಿ ಹಾಕಿಕೊಂಡ ರೀತಿ, ಕರ್ತೃವು ಸ್ನಾನವನ್ನೂ ಮಾಡದೆ, ರಾತ್ರಿಯ ದಟ್ಟಿ ಪಂಚೆಯಲ್ಲೇ ಮನೆಯ ಮುಂದೆ ಹಾಕಿದ ಬೆಂಕಿಯನ್ನು ಮಡಕೆಯಲ್ಲಿ ತುಂಬಿಕೊಂಡು ಹೋದ ರೀತಿ, ಇವುಗಳನ್ನೆಲ್ಲಾ ನೋಡಿ, ಯಾಕೋ ಮನಸ್ಸಿಗೆ ಬಹಳ ಅಸಹ್ಯವಾಗಿ, ಮನೆಗೆ ಬಂದು ಸ್ನಾನ ಮಾಡಿದೆ!! ಅಶುಚಿತ್ವವೆನ್ನುವುದು ದೈಹಿಕ ಮತ್ತು ಮಾನಸಿಕ. ಎರಡಕ್ಕೂ ನಮಗೆ ಗೊತ್ತಿರುವುದು ಸ್ನಾನವೊಂದೇ. ಮಾಡಬೇಕೇ, ಇಲ್ಲವೇ ಎನ್ನುವುದು ವ್ಯಕ್ತಿಗೆ ಬಿಟ್ಟ ಅಭಿಪ್ರಾಯ. ಆದರೆ ಈಗಿನ ಕಾಲದಂತೆ ಭಯದಿಂದ ಮಾಡಬೇಕಾದ ಅಗತ್ಯ ಖಂಡಿತ ಇಲ್ಲ.

4) ಎಲ್ಲಾ ಸೂತ್ರಕಾರರೂ ಹೇಳಿರುವ ಮಾಸಿಶ್ರಾದ್ಧದಲ್ಲಿ ಮಾತೃವಿಗೆ ಶ್ರಾದ್ಧವಿಲ್ಲ. ಕೇವಲ ಮಾಸಿಶ್ರಾದ್ಧಮಾಡುತ್ತಿದ್ದಾಗ, ಮಾತೃವಿಗೆ ಶ್ರಾದ್ಧ ಪ್ರತ್ಯೇಕವಾಗಿ ಮಾಡುತ್ತಿರಲಿಲ್ಲವೆನಿಸುತ್ತದೆ. ಇದು ನಿಂತುಹೋಗಿ, ಸಾಂವತ್ಸರಿಕ ಶ್ರಾದ್ಧ ಯಾವಾಗ ಆರಂಭವಾಯಿತೆನ್ನೆವುದು ತಿಳಿಯದು. ಅದು ಆರಂಭವಾದಾಗ, ಯಾರೋ ಮಾತೃವಿಗೂ ಮಾಡಿದರೆ ಯುಕ್ತವೆಂದು ಯೋಚಿಸಿ ಆರಂಭಿಸಿದ್ದಾರೆ. ನ್ಯಾಯ.

5) ಆರ್ಯಸಮಾಜದವರು ವೇದಗಳನ್ನೇ ಎಲ್ಲಕ್ಕೂ ಪ್ರಮಾಣವಾಗಿಟ್ಟುಕೊಂಡು ಹೋಗಬೇಕೆನ್ನುವವರು. ಆದರೆ ನಮ್ಮ ಜೀವನವನ್ನು ಹಸನಾಗಿ ಮಾಡಿಕೊಳ್ಳಲು ಕೇವಲ ವೇದ ಒಂದು ಸಾಲದು. ಉಪನಿಷತ್ತು, ಸ್ಮೃತಿಗಳು, ಸೂತ್ರಗಳು, ಎಲ್ಲವುಗಳಿಂದಲೂ ಇವತ್ತಿನ ಸ್ಥಿತಿಗತಿಗಳಿಗೆ ತಕ್ಕಂತೆ, ತತ್ತ್ವಗಳನ್ನು ಆರಿಸಿಕೊಂಡು ರೂಪಿಸಿಕೊಳ್ಳಬೇಕು. ಜನರಿಗೆ ತೋರಿಸಿಕೊಡಬೇಕಾದ್ದು, ಧಾರ್ಮಿಕರಾಗಿ ಬಾಳುವರೀತಿ. ತೋರಿಸಿಕೊಡುವವರು ಧರ್ಮವನ್ನು ಸರಿಯಾಗಿ ತಿಳಿದುಕೊಂಡು ಅದನ್ನು ಆಚರಿಸುತ್ತಿರಬೇಕು. ಅಂಥವರು ಒಬ್ಬರಲ್ಲ, ಇಬ್ಬರಲ್ಲ, ಸಾವಿರಾರು ಸಂಖ್ಯೆಯಲ್ಲಿ ಬೇಕಾಗಿದೆ.

ನನ್ನ ದೈನಂದಿನ ಕಾರ್ಯಕ್ರಮಗಳು ನಡೆಯುತ್ತಿವೆ. ಭಾಗವತವೂ ನಡೆಯುತ್ತಿದೆ. ಈಗ ತಾನೇ ಪ್ರಹ್ಲಾದ ಚರಿತ್ರೆಯನ್ನು ಮುಗಿಸಿದೆ (7ನೇ ಸ್ಕಂಧ). ಬಹಳ ಮುಖ್ಯವಾದ ವಿಷಯಗಳು ಬಂದಿದ್ದುವು. ಹೇಳುವುದಕ್ಕೇ ಆನಂದವಾಗುತ್ತಿತ್ತು. ಕೆಲವರು ಆರಂಭದಲ್ಲಿ ಅತ್ಯುತ್ಸಾಹ ತೋರಿಸಿ, ಈಗ 3 ತಿಂಗಳುಗಳಿಂದಲೂ ಮುಖವನ್ನೇ ತೋರಿಸಿಲ್ಲ. Phone ಕೂಡ ಮಾಡಿಲ್ಲ. ಕಾರಣ ಗೊತ್ತಿಲ್ಲ. ಪಾಪುವು ಇನ್ನು 8-10 ತಿಂಗಳುಗಳಲ್ಲಿ Ph.D., ಮುಗಿಸಿ ಬರುವ ನಿರೀಕ್ಷೆ ಇದೆ. ಅಲ್ಲಿಂದ Music Body ತರುವ ವಿಷಯ ನೀನು ಬರೆದಿದ್ದು ಸಂಪೂರ್ಣ ಮರೆತುಹೋಗಿದೆ. ಕ್ಷಮಿಸು. ಪುನಃ Details ಬರಿ. ಅವನಿಗೆ ಹೇಳುತ್ತೇನೆ. ಖಂಡಿತ ತರುತ್ತಾನೆ.

6) 'ಗೊಮೃಗಕಂಠೇನ', ಈ ಬ್ರಾಹ್ಮಣವಾಕ್ಯಗಳನ್ನು (ಮಂತ್ರವಲ್ಲ) ಹೇಳಕೂಡದೆಂದಲ್ಲ. ಅಶ್ವಮೇಧದಲ್ಲಿ, ಅಶ್ವದ ರಕ್ತವನ್ನು ಹೋಮಮಾಡುವ ವಿಧಾನವನ್ನೂ ಅದರ ಫಲ ಶ್ರುತಿಯನ್ನೂ ಹೇಳುತ್ತಿದೆ ಆ ವಾಕ್ಯಗಳು. ಆ ವಿನಿಯೋಗ ಜ್ಞಾಪಕ ಬಂದರೆ ಮನಸ್ಸಿಗೆ ಬೇಜಾರಾಗುತ್ತದೆ ಎಂಬುದರಿಂದ ಹೇಳುವುದು ಬೇಡ ಎಂದು ಹೇಳಿದ್ದೆ. ಹೇಳಿದರೆ ದೋಷವೆಂದಲ್ಲ.

7) ತ್ರ್ಯಂಬಕಂ ಯಜಾಮಹೇ ಘನದಲ್ಲಿ ಕೊನೆಯಲ್ಲಿ ದೀರ್ಘ ಸ್ವರಿತವುಂಟು.

ನಾವು ಆರೋಗ್ಯವಾಗಿದ್ದೇವೆ. ನೀನಿನ್ನೂ ಮೈಸೂರಿಗೆ ಬಂದು ಹೋಗುವ ಕಾರ್ಯಕ್ರಮ ಇಟ್ಟುಕೊಂಡೇ ಇಲ್ಲವೆಂದು ಕಾಣುತ್ತದೆ. ಈಚೆಗೆ 'ಇಂದು'ವನ್ನೂ ಸಂಧಿಸಿಲ್ಲ. ಚಿ|| ಗಳಿಗೆ ನನ್ನ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮೀ

೪೮೯

ಸ್ವಾಮಿಗಳಿಗೆ ಪತ್ರ

ಜಪ ; ಆತ್ಮದರ್ಶನ ; ಉಪಾಸನೆ ; ಸ್ವಾಧ್ಯಾಯ

कुशलम्　　　　श्री :　　　　MYSORE

15-6-97

ಶ್ರೀಕಂಠ !

ನಿನ್ನ ಕಾಗದ ತಲಪಿತು. ಸ್ವಲ್ಪ ಬೇಗಲೇ ಉತ್ತರ ಬರೆಯುತ್ತಿದ್ದೇನೆ. ಇವತ್ತು ಭಾನುವಾರವೆಂದು ಎಲ್ಲರಿಗೂ ಪಾಠಕ್ಕೆ ರಜ ಕೊಟ್ಟಿದ್ದೇನೆ. ಆದ್ದರಿಂದ ಸ್ವಲ್ಪ ಪುರಸತ್ತಾಗಿದೆ. ಕಾಗದ ಬರೆಯಬೇಕೆಂದು ಕುಳಿತಿದ್ದೇನೆ. ನಿನ್ನ ಪ್ರಶ್ನೆಗಳು ಕುತೂಹಲಕಾರಿಯಾಗಿವೆ. ಇಂಥಾ ಪ್ರಶ್ನೆಗಳು ಎಲ್ಲರಿಗೂ ಸಹಜವಾಗಿ ಬರುತ್ತವೆ.

1) ಸಾಮಾನ್ಯವಾಗಿ ಮಠದ ಸ್ವಾಮಿಗಳಿಗೆ, ಸನ್ಯಾಸಿಗಳಿಗೆ ಕಾಗದ ಬರೆಯಬೇಕಾದರೆ "ಶ್ರೀ ಶ್ರೀ ... ಸ್ವಾಮಿಗಳವರ ಸನ್ನಿಧಾನದಲ್ಲಿ, ಶಿಷ್ಯನಾದ...ಯು ಮಾಡುವ ಅನಂತ ಸಾಷ್ಟಾಂಗ ನಮಸ್ಕಾರಗಳು" ಎಂದು ಆರಂಭಿಸಿ, "ಇತಿ ಸಾಷ್ಟಾಂಗ ಪ್ರಣಾಮಗಳು" ಎಂದು ರುಜು ಹಾಕಿದರೆ ಸಾಕು. ಆಂಗ್ಲೇಯ ಭಾಷೆಯಲ್ಲಿ ಬರೆದರೆ,

"To our respected Holiness Sri Sri.. Swamiji of Sringeri or Ramakrishna Mutt etc." ಎಂದು ಆರಂಭಿಸಿ "With our salutations" ಎಂದು ಮುಗಿಸಿದರೆ ಸಾಕು.

2) ಕಲಿಯುಗದಲ್ಲಿ ಜಪಕ್ಕೆ ಸ್ಥಾನವಿಲ್ಲ ಎಂದು ನಾನು ಹೇಳಿಲ್ಲವೆಂದುಕೊಂಡಿದ್ದೇನೆ. ಯಾವ ಕಾಲದಲ್ಲಿಯೂ ಜಪವೆನ್ನುವುದು ಕಷ್ಟಸಾಧ್ಯವೇ! ಜಪವೆಂದರೆ ಪುನರಾವೃತ್ತಿ (Repetition) ಇರುವುದರಿಂದ ಮನಸ್ಸು ಬೇಜಾರುಪಟ್ಟು ಕೊಳ್ಳುತ್ತದೆ. ಅದರ ಸ್ವಭಾವವೇ ಅದು. ಅದಕ್ಕೇ ಮಂತ್ರಗಳಲ್ಲಿ ನಾನಾ ತರಹ ವ್ಯತ್ಯಾಸಗಳನ್ನು ಮಾಡಿದ್ದಾರೆ. ತಾತ್ಪರ್ಯ ಒಂದೇ ಆದರೂ ಒಕ್ಕಣೆ ಬೇರೆ. ಪದಗಳು ಬೇರೆ ಬೇರೆ. ಸ್ವರಗಳು ಬೇರೆ. ಹೀಗೆ varieties ಇರುವುದರಿಂದ ಮನಸ್ಸು ರುಚಿಯಿಂದ ಹೇಳುತ್ತದೆ. ಅಲ್ಲದೆ ಅದಕ್ಕೆ ಬೇಜಾರಾದರೆ, ಎಲ್ಲಿಯೋ ಓಡುತ್ತದೆ. ಜಪವೆಂದರೆ ಏಕಾಗ್ರತೆಯಿಂದ ಒಂದು ದೇವತೆಯಲ್ಲಿ ಮನಸ್ಸು ನಿಲ್ಲಿಸಿ ಅದನ್ನೇ ಚಿಂತನೆ ಮಾಡುವುದು ಎಂದರ್ಥ. ಮಂತ್ರದಲ್ಲಿಯೇ ಮನಸ್ಸು ನಿಲ್ಲದಿದ್ದರೆ ಏಕಾಗ್ರತೆ ಎಲ್ಲಿಂದ ಬಂತು? ಏಕಾಗ್ರತೆಗೆ ಮೊದಲನೆಯ ಸಾಧನ, ಮನಸ್ಸಿಗೆ ಅದರಲ್ಲಿ ರುಚಿ ಹತ್ತಬೇಕು. Repetition ಯಾವಾಗಲೂ ರುಚಿಗೆ ವಿರೋಧ. ದಿವಸವೂ ಒಂದೇ ಅಡುಗೆ, ಒಂದೇ ತರಹ ತಿಂಡಿಮಾಡುತ್ತಿದ್ದರೆ ಬೇಜಾರಾಗುವುದಿಲ್ಲವೇ! ಹಾಗೆ. ಒಂದೇ ಸಿಹಿ ಪದಾರ್ಥವನ್ನು ಬೇರೆ ಬೇರೆ ತರಹ ಮಾಡಿದರೆ ರುಚಿ ಹುಟ್ಟುತ್ತದೆ. ಬರೀ ಹುಳಿಯನ್ನೇ ಮಾಡಿದರೂ, ತರಕಾರಿಯನ್ನಾದರೂ ವ್ಯತ್ಯಾಸಮಾಡಿದರೆ, ರುಚಿಗೆ ಅನುಕೂಲವಾಗುತ್ತದೆ. ಮಂತ್ರಗಳೂ ಹಾಗೇ. ಅದಕ್ಕೇ ಸಹಸ್ರನಾಮದಲ್ಲಿ, ಸಾವಿರವೂ ಬೇರೆ ಬೇರೆ ತರಹ ಇರುತ್ತವೆ. ಒಂದೇ ನಾಮವನ್ನು ಸಾವಿರ ಬಾರಿ ಹೇಳಿದರೂ ಸಹಸ್ರನಾಮವಾಗುತ್ತದೆ. ಆದರೆ ಮನಸ್ಸು ಒಪ್ಪುವುದಿಲ್ಲ. ಆದ್ದರಿಂದ ಒಂದೇ ಮಂತ್ರವನ್ನು ಜಪಿಸುವುದು ಕಷ್ಟವೆಂದು ಹೇಳಿದೆ.

3) Self-realisation ಬಗ್ಗೆ ನನ್ನ ಪಾತ್ರವೇನೆಂದು ಕೇಳಿದ್ದೀಯೆ? ನಾನೂ ಆತ್ಮದರ್ಶನ ಪ್ರತಿಯೊಬ್ಬ ಮನುಷ್ಯನ ಅಂತಿಮ ಧ್ಯೇಯವಾಗಿರಬೇಕೆಂದು ನಂಬಿದವನು. ಆದರೆ ಅದಕ್ಕೆ ನಾವು ಬಹ...ಳ ದೂರದಲ್ಲಿದ್ದೇವೆ ಎಂದೂ ಗೊತ್ತಿದೆ. ಆಕಾಶದಲ್ಲಿ ಪ್ರಕಾಶಮಾನವಾಗಿ ಕಾಣುವ ನಕ್ಷತ್ರದಂತೆ ಆತ್ಮದರ್ಶನವೆಂಬ ಜ್ಯೋತಿಯು ಹೊಳೆಯುತ್ತಿದೆ. ಆದರೆ ನನಗಂತೂ ಅದು ನಕ್ಷತ್ರ ದಷ್ಟೇ ದೂರ. ಅದರ ಸನಿಹಕ್ಕೆ ಹೋಗಬೇಕೆಂಬುದೂ ಗೊತ್ತಿದೆ. ಆಸೆಯೂ ಇದೆ. ಆದರೆ ನಾನು ಯಾವ level ನಲ್ಲಿದ್ದೇನೆ ಎಂಬ ಅರಿವೂ ಇದೆ. ದೈವೀಸಂಪತ್ತು ಅಥವಾ ಆತ್ಮಗುಣಗಳೆಂಬ ಹಿಮಾಲಯದ ಅಗ್ರಶಿಖರಕ್ಕಾದರೂ ಹತ್ತುವಷ್ಟಾದರೆ, ನಕ್ಷತ್ರ ಸ್ವಲ್ಪ ಹತ್ತಿರವಾದೀತೇನೋ! ಗೌರೀಶಂಕರಕ್ಕೆ ಹತ್ತುವ ಪ್ರಯತ್ನದಲ್ಲಿಯೇ ಮುಗ್ಗರಿಸುತ್ತಿದ್ದೇನೆ. ಪುನಃಪುನಃ ಜಾರಿಜಾರಿ ಕೆಳಕ್ಕೆ ಬೀಳುತ್ತಿದ್ದೇನೆ. ಒಂದೇ ಸಮಾಧಾನವೆಂದರೆ, ಹೊರಟ ಜಾಗಕ್ಕೇ ಜಾರಿ ಬಂದು ಬಿದ್ದಿಲ್ಲ!! ಆದ್ದರಿಂದ ಆತ್ಮದರ್ಶನ ನನಗೊಂದು ಧ್ಯೇಯವಾಗಿದೆಯೇ ಹೊರತು ಅದರ ಬಗ್ಗೆ ಚರ್ಚೆ ಮಾಡುವ ಯೋಗ್ಯತೆ ಇಲ್ಲ, ಇಷ್ಟವೂ ಇಲ್ಲ. ಹಾಗೆಂದು ಅದೊಂದು ಹೊಂದಲಾರದ ಮಾಯಾಧ್ಯೇಯವಲ್ಲ. ಪ್ರತಿಯೊಬ್ಬನೂ ಹೊಂದಲೇಬೇಕಾದ, ಹೊಂದಬಹುದಾದ ಉಚ್ಚಧ್ಯೇಯ. ಆದರೆ ಅದಕ್ಕೆ ಒಂದೇಬಾರಿ ಹಾರುವ ಯಾವ ಸಾಧನವೂ ಇಲ್ಲ. ಮೆಟ್ಟಲು ಮೆಟ್ಟಲಾಗಿಯೇ ಹೋಗಬೇಕು. ಬರುವ ಅವಘಡಗಳನ್ನೆಲ್ಲಾ ಎದುರಿಸಿ, ಮುಂದೆ ಸಾಗುತ್ತಿರಬೇಕು. ನನ್ನ ಪ್ರಯತ್ನ ಇಷ್ಟಕ್ಕೇ ಈಗ ಸೀಮಿತವಾಗಿದೆ (self-realisation ಬ್ರಹ್ಮಜ್ಞಾನ, ಆತ್ಮದರ್ಶನ, ಮೋಕ್ಷ ಎಲ್ಲಾ ಒಂದೇ).

4) ಉಪಾಸನೆ ಎಂದರೆ ಒಂದು ದೇವತೆಯನ್ನೋ, ಪ್ರತೀಕವನ್ನೋ (Symbol) ಸದಾಕಾಲದಲ್ಲಿಯೂ ಚಿಂತನೆ ಮಾಡುವ ಅಭ್ಯಾಸ. ತ್ಯಾಗರಾಜಸ್ವಾಮಿಗಳು ಶ್ರೀರಾಮನ ಉಪಾಸನೆ ಮಾಡುತ್ತಿದ್ದರಂತೆ. ಅವರಿಗೆ ಸತತವೂ ರಾಮನ

ಚಿಂತೆಯೇ! ಹಾಗೆಯೇ ಪುರಂದರದಾಸರು ವಿಟ್ಠಲನ ಉಪಾಸನೆ ಮಾಡುತ್ತಿದ್ದರು. ಆದರೆ ತಮ್ಮ ಉಪಾಸನಾಬಲದಿಂದ ಯಾರಿಗೂ ಯಾವುದನ್ನೂ ಮಂತ್ರಿಸಿಕೊಡುತ್ತಿರಲಿಲ್ಲ. ಹಾಗೆ ಮಾಡಿದರೆ ಅದು ಉಪಾಸನೆಯೇ ಅಲ್ಲ.

5) ಸ್ವಾಧ್ಯಾಯವೆಂದರೆ, ವೇದಾಧ್ಯಯನವೆಂದರ್ಥ. ಸ್ವಲ್ಪ ಉದಾರವಾಗಿ ಅರ್ಥ ಮಾಡಿದರೆ, ಸ್ವವೃತ್ತಿಯ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುವುದೆಂದರ್ಥ. ಪ್ರತಿಯೊಬ್ಬನೂ ತನ್ನ ವೃತ್ತಿಯನ್ನು ಚೆನ್ನಾಗಿ ನಡೆಸಬೇಕಾದರೆ ಅದರ ಬಗ್ಗೆ ಪೂರ್ಣ ಮಾಹಿತಿ ಪಡೆದುಕೊಳ್ಳಬೇಕು. ಇದೇ ಸ್ವಾಧ್ಯಾಯ.

ಶ್ರೀಕಂಠ! ಕಾಗದ ಸಾಕಷ್ಟು ದೊಡ್ಡದಾಯಿತು. ಕ್ಷಮಿಸು. ಹೀಗೇ ಬರೆಯುತ್ತಿರು. ಮಗಳ ಮನೆಗೆ ಬರಲೇ ಇಲ್ಲ ಅಂತ ಕಾಣುತ್ತೆ.

ನಾವು ಆರೋಗ್ಯವಾಗಿದ್ದೇವೆ. ಪಾಪುವಿನಿಂದ ವಾರಕ್ಕೊಂದು ಬಾರಿ phone ಬರುತ್ತಿರುತ್ತದೆ.

ಇತಿ ನಿಮ್ಮವ

ಕುಮಾರಸ್ವಾಮೀ

೪೯೦

ನಾಂದೀ ; ಮಠ ; ಸಾಧನ ಬೇರೆ, ಗುರಿ ಬೇರೆ

कुशलम् श्री : MYSORE

30-06-97

ಶ್ರೀಕಂಠ !

ನಿನ್ನ ಕಾಗದ ತಲಪಿತು. 'ಇಂದು'ವಿನ ಯಜಮಾನರು ಬಂದಿದ್ದರು, ಕೇಳಿಕೊಂಡು ಹೋದರು. ಶನಿವಾರ ಬಂದು ಮಾಡಿಸುವುದಾಗಿ ಹೇಳಿದ್ದೇನೆ.

1) ಇಬ್ಬರೂ ಹೆಣ್ಣುಮಕ್ಕಳಿಗೆ ಒಂದೇ ದಿನ ವಿವಾಹ ಮಾಡುವುದಾದರೆ ಒಂದೇ ನಾಂದೀಶ್ರಾದ್ಧ ಮಾಡಿ ಇಬ್ಬರನ್ನೂ ಧಾರೆಎರೆದು ಕೊಡಬಹುದು. ಬೇರೆಬೇರೆ ದಿನ ಮಾಡಿದರೆ ಪ್ರಶ್ನೆಯೇ ಇಲ್ಲ. ಒಂದೇದಿನದಲ್ಲಿ ಎರಡು ನಾಂದಿಯ ಪ್ರಶ್ನೆಯೇ ಇಲ್ಲ. ಒಬ್ಬೊಬ್ಬ ಹೆಣ್ಣುಮಗಳಿಗೂ ಬೇರೆಬೇರೆ ನಾಂದೀ ಮಾಡಬೇಕಾದ್ದಿಲ್ಲ. ಪಿತೃಗಳ ಅನುಗ್ರಹ ಪಡೆದುಕೊಂಡು ಒಂದೇ ದಿನದಲ್ಲಿ ಎಷ್ಟು ಧಾರೆ ಬೇಕಾದರೂ ಎರೆದು ಕೊಡಬಹುದು. ದಾನಮಾಡುವ ಕಾರ್ಯಕ್ಕೆ ಅಥವಾ ಕಾರ್ಯಗಳಿಗೆ, ಪಿತ್ರನುಗ್ರಹವೇ ಹೊರತು, ಒಂದು ದಾನಕ್ಕೆ ಒಂದು ನಾಂದೀ ಎಂಬ concept ಅಲ್ಲ.

2) ಮಠ ಎನ್ನುವುದು ಯಾರಿಗೂ ಇಲ್ಲ. ಶೃಂಗೇರಿಮಠ ಸ್ಥಾಪನೆಯಾದದ್ದು ಕ್ರಿ.ಶ. 8ನೇ ಶತಮಾನದಲ್ಲಿ. ಅದಕ್ಕೆ ಹಿಂದೆ ಮಠವೂ ಇರಲಿಲ್ಲ, ಶಿಷ್ಯರುಗಳು ಮೊದಲೇ ಇರಲಿಲ್ಲ. ಆ ಮಠ ಆರಂಭವಾದ ಮೇಲೆ, ಅನೇಕರು ಅದಕ್ಕೆ ಶಿಷ್ಯರೆಂದು ಭಾವಿಸಿಕೊಂಡರು. ಕಾಣಿಕೆ ಕೊಡಲು ಆರಂಭಿಸಿದರು. ನಮ್ಮವರು ಯಾರೂ ಹಾಗೆ ಮಾಡಲಿಲ್ಲ ಅಂತ ಕಾಣುತ್ತೆ. ಆದ್ದರಿಂದ ನಾವು ಯಾವ ಮಠಕ್ಕೂ ಶಿಷ್ಯರಲ್ಲ ಎಂದು ಹೇಳಿದ್ದು. ಉತ್ತಮರಾದ ಗುರುಗಳು ಎಲ್ಲಿದ್ದರೂ ನಾವು ಅವರುಗಳಿಗೆ ಶಿಷ್ಯರೇ. ಒಂದು ಮಠಕ್ಕೆ ಶಿಷ್ಯರಾದ ಮಾತ್ರಕ್ಕೇ, ಇನ್ನೊಂದು ಮಠದ ಸ್ವಾಮಿಗಳ, ಯುಕ್ತಿಯುಕ್ತವಾದ, ಧರ್ಮದ ಮಾತುಗಳನ್ನು ಕೇಳಬಾರದೆಂದಿಲ್ಲ. ಅಥವಾ ನಮ್ಮ ಗುರುಗಳ ಮಾತನ್ನೇ, ಯಾವುದಾದರೂ ನಡೆಸಬೇಕು ಅಂತಲೂ ಅಲ್ಲ. ಕೆಲವರಲ್ಲಿ ಭಕ್ತಿ ಬರುತ್ತದೆ. ಶಿಷ್ಯರು ಎನ್ನಿಸಿಕೊಳ್ಳುತ್ತೇವೆ. ಕುಲದೇವರು ಇದ್ದಹಾಗೆ. ಆತ್ಮದರ್ಶನ ಮಾಡಿಕೊಂಡವರು ಸದಾಶಿವ ಬ್ರಹ್ಮೇಂದ್ರರು, ರಮಣಮಹರ್ಷಿ, ರಾಮಕೃಷ್ಣ ಪರಮಹಂಸ ಇವರುಗಳು ನಮ್ಮ ಮಾರ್ಗದರ್ಶನಕ್ಕೆ ಇದ್ದಾರೆ. ಮಾರ್ಗದಲ್ಲಿ ಕಷ್ಟಪಟ್ಟುಕೊಂಡು ಹೋಗಬೇಕಾದ್ದು, ಗುರಿಮುಟ್ಟಬೇಕಾದ್ದು ನಮ್ಮ ಕೆಲಸ. ಪುಸ್ತಕಗಳು ಮಾರ್ಗದರ್ಶನ ಮಾಡಿದರೂ, ಪ್ರತ್ಯಕ್ಷ ಅನುಭವ ಪಡೆದವರು ತೋರಿಸಿದಂತಾಗುವುದಿಲ್ಲ. ಒಳ್ಳೆ Steel making ಇದ್ದಹಾಗೆ. ಅಥವಾ ಒಳ್ಳೆಯ ಅಡುಗೆ ಮಾಡಿದ ಹಾಗೆ. ಕರ್ಮಗಳನ್ನು ಮಾಡುತ್ತಾ ಯಾರೂ ಆತ್ಮದರ್ಶನ ಮಾಡಿಕೊಳ್ಳಲು ಸಾಧ್ಯವಿಲ್ಲ. ಅದು ಕೇವಲ ಸಾಧನ ಮಾತ್ರ. ಪಾಶ್ಚಾತ್ಯ ದೇಶದಲ್ಲಿಯೂ ಇದ್ದಾರೆ. ಆದರೆ ಅವರ ಸಿದ್ಧಾಂತದ ಪ್ರಕಾರ ಆತ್ಮದರ್ಶನದ ಲಕ್ಷಣವು ವ್ಯತ್ಯಾಸವಾಗಬಹುದು.

ನಾವು ಆರೋಗ್ಯವಾಗಿದ್ದೇವೆ. ಶನಿವಾರ ನೀನೇ ಇದ್ದರೆ ಚೆನ್ನಾಗಿರುತ್ತದೆ. ಚಿ|| ಗಳಿಗೆಲ್ಲಾ ಆಶೀರ್ವಾದಗಳು.

ನಿನ್ನ accident ವಿಷಯಕೇಳಿ ಬಹಳ ವ್ಯಥೆಯಾಯಿತು. ಏನಾಯಿತು, ಹೇಗಾಯಿತು ಎಂಬ details ಬರೆದಿಲ್ಲ, ಬರಿ.

ಇತಿ ನಿನ್ನವ

ಕುಮಾರಸ್ವಾಮೀ

೪೯೧

ಕಾತ್ಯಾಯನಾಯ ; ವೇದ, ಆಗಮ

ಗೌರೀ ಗಣೇಶ ವಿಸರ್ಜನೆ ಮಾಡುವುದು ; ವ್ರತಕಥೆ ; ಘನ ; ಋಗ್ವೇದ

कुशलम् श्री: MYSORE

2-10-97

ಶ್ರೀಕಂಠ !

ನಿನ್ನ ಎರಡು ಕಾಗದಗಳೂ ತಲಪಿದವು. ಮೊದಲನೆಯ ಕಾಗದಕ್ಕೆ ಉತ್ತರ ಬರೆಯಬೇಕು ಎನ್ನುವುದರಲ್ಲೇ ನಿನ್ನ ಕಾರ್ಡ್ ಬಂದಿತು. ನಾನು ಹಿಂದೆಯೇ ಬರೆದಿದ್ದಂತೆ ಈ ವೇದಪಾಠ ಹೇಳುವ ಅವಸರದಲ್ಲಿ, ಕೂತು ಬರೆಯಲು ಸ್ವಲ್ಪ ಪುರಸತ್ತು ಕಡಮೆ. ಆದ್ದರಿಂದ ಬರೆಯಲು ತಡವಾಗುತ್ತದೆ. ತಪ್ಪು ತಿಳಿಯಬೇಡ.

1) ಕಾತ್ಯಾಯನಾಯ ಎನ್ನುವುದು ಪುಲ್ಲಿಂಗವೇ. ಅಲ್ಲಿ ಕನ್ಯಕುಮಾರಿಯ ತಂದೆಗೆ (ಕಾತ್ಯಾಯನನಿಗೆ) ಮುಕ್ತಿ ನೀಡಿದವಳು ಎಂದು ಅರ್ಥಮಾಡುತ್ತಾರೆ. ದುರ್ಗಿಃ ಅಥವಾ ದುರ್ಗೀಃ ಎರಡೂ ವ್ಯಾಕರಣ ರೀತ್ಯಾ ತಪ್ಪೇ. ಸರಿಯಾಗಿ ಹೇಳಬೇಕಾದರೆ ತಂ ನೋ ದುರ್ಗಾ ಎಂದು ಹೇಳಬೇಕು. ದುರ್ಗಿಃ ಎನ್ನುವುದು "ಛಾಂದಸ" ಅಂದರೆ ವೇದದಲ್ಲಿ ಬಂದಿರುವ ವ್ಯಾಕರಣವಿರೋಧವಾದ ಪ್ರಯೋಗ. ಅದನ್ನು ವ್ಯತ್ಯಾಸ ಮಾಡದೆ ಹಾಗೇ ಹೇಳಬೇಕೆನ್ನುವುದು ಅಧ್ಯಯನಮರ್ಯಾದೆ ಅಷ್ಟೆ. ಕಾತ್ಯಾಯನೀ ಎನ್ನುವುದೇ ಪುಲ್ಲಿಂಗದಲ್ಲಿ ಛಾಂದಸ ಪ್ರಯೋಗವಾಗಿದೆ ಎಂದು ಬೇಕಾದರೂ ಹೇಳಬಹುದು.

ತಂದೆಗೆ ಮುಕ್ತಿಯನ್ನು ನೀಡಿದ (ದಕ್ಷ ಪ್ರಜಾಪತಿಗೆ) ಕನ್ಯಾಕುಮಾರಿಯಾದ ದುರ್ಗಿಯು, ನಮ್ಮ ಬುದ್ಧಿಯನ್ನು ಪ್ರಚೋದಿಸಲಿ, ಅವಳನ್ನು ಧ್ಯಾನಿಸುತ್ತೇವೆ ಎಂದರ್ಥ.

2) ವೇದಗಳಿಗೂ ಆಗಮಶಾಸ್ತ್ರಗಳಿಗೂ ಯಾವ ಸಂಬಂಧವೂ ಇಲ್ಲ. ವೇದಗಳಲ್ಲಿ ವಿಗ್ರಾಹಾರಾಧನೆ ಇಲ್ಲ. ವಿಗ್ರಹಾರಾಧನೆ ಆರಂಭವಾದಾಗ, ವಿಗ್ರಹಗಳನ್ನು ಮಾಡುವ ಬಗೆ, ದೇವಸ್ಥಾನ ಪ್ರತಿಷ್ಠೆ, ಆ ವಿಗ್ರಹಗಳ ಪೂಜಾಕ್ರಮ ಇವುಗಳಿಗೆ ಒಂದು ಶಾಸ್ತ್ರ ಬೇಕಾಯಿತು. ಅದಕ್ಕೆ ಆಗಮಶಾಸ್ತ್ರ ಹೊರಟಿತು. ಅದು ಯಾವಾಗ ಆರಂಭವಾಯಿತು ಎಂಬುದು ನಿಖರವಾಗಿ ಗೊತ್ತಿಲ್ಲ. ಅನೇಕರು ಆಗಮಶಾಸ್ತ್ರಗಳು ವೇದಗಳಷ್ಟೇ ಪ್ರಾಚೀನವೆಂದು ಹೇಳಿಕೊಳ್ಳು ತ್ತಾರೆ!! ಅವುಗಳಲ್ಲಿ ಶಿವಾರಾಧನೆ ಮಾಡುವವರಿಗೆ ಶೈವಾಗಮ (ಇದರಲ್ಲೇ ಅನೇಕ ಭೇದಗಳಿವೆ), ವಿಷ್ಣು ಆರಾಧನೆ ಮಾಡುವವರಿಗೆ ಪಾಂಚರಾತ್ರ, ವೈಖಾನಸ ಎಂದು ಎರಡು ಆಗಮಗಳಿವೆ. ಈಚೆಗೆ ಇವರೆಲ್ಲರೂ ತಮ್ಮ ಪೂಜಾ, ಪ್ರತಿಷ್ಠಾ ಕ್ರಮಗಳಲ್ಲಿ ವೇದಮಂತ್ರ ಗಳನ್ನು ಅಳವಡಿಸಿಕೊಂಡಿದ್ದಾರೆ. ಈ ಆಗಮಗಳು ಮೂಲತಃ ಪರಮಾತ್ಮನಿಂದಲೇ ಬಂದುವು ಎಂದು ಹೇಳುತ್ತಾರೆ (ವೇದ ಗಳಂತೆ).

3) ಗೌರೀ ಗಣೇಶಗಳು ಬರುವುದು, ವಿಸರ್ಜನೆ ಮಾಡುವುದು ಇವೆಲ್ಲವೂ ನಮ್ಮ ಕಲ್ಪನೆಗಳು. ಹಾಗೆಯೇ, ಮನುಷ್ಯನ ರೀತಿ ನೀತಿಗಳನ್ನು ಅವರಿಗೂ impose ಮಾಡುವುದೂ ನಮ್ಮ ಕೆಳಮಟ್ಟದ ಕಲ್ಪನೆ. ಒಂದು ಕ್ರಮದಂತೆ ಪೂಜೆ, ಆರಾಧನಾದಿಗಳನ್ನು ಮಾಡಿಕೊಂಡು ಬರಲಿ ಎಂಬ ದೃಷ್ಟಿಯಿಂದ ವರ್ಷದಲ್ಲಿ ಯಾವುದೋ ಒಂದು ದಿನ ವ್ರತವೆಂದು ವಿಧಿಸಿದ್ದಾರೆ. ಅಂದರೆ ಬೇರೆ ದಿನಗಳು ಅವರನ್ನು ಪೂಜೆ ಮಾಡಬಾರದೆಂದರ್ಥವಲ್ಲ. ಯಾವಾಗ ಬೇಕಾದರೂ ಮಾಡಬಹುದೆಂದು ಹೇಳಿದರೆ, ಮನುಷ್ಯನ ಸಹಜ ಸೋಮಾರಿತನದಲ್ಲಿ ಮುಂದುವರಿಸಿ, ಮುಂದುವರಿಸಿ, ಮಾಡುವುದನ್ನೇ ಬಿಟ್ಟುಬಿಡಬಹುದೆಂಬ ಉದ್ದೇಶದಿಂದ ಒಂದು ದಿನ ಕಡ್ಡಾಯಮಾಡಿದರು. ಹಾಗೇ ಅನೇಕ ದಿನಗಳು ಪೂಜೆ ಮಾಡಬೇಕೆಂದು ವಿಧಿಸಿಬಿಟ್ಟರೆ ಕಷ್ಟಸಾಧ್ಯವೆಂದು ಬಿಟ್ಟು ಬಿಡಬಹುದೆಂಬ ಅಭಿಪ್ರಾಯದಿಂದ, ಒಂದು ದಿನ ವಿಸರ್ಜನೆ ಮಾಡಬೇಕೆಂದು ವಿಧಿಸಿದರು. ಅದನ್ನೇ ನಾವು ವಿಪರೀತ ಪ್ರಮಾಣವನ್ನಾಗಿಟ್ಟುಕೊಂಡು rigid ಆಗಿ ದಿವಸ, ವಾರ, ನಕ್ಷತ್ರಗಳನ್ನು ನೋಡಲು ಆರಂಭಿಸಿದ್ದೇವೆ. ಅವರು ಬರಲು ಹೇಗೆ ನಕ್ಷತ್ರ ವಾರಗಳನ್ನು ನೋಡಿಬರುವುದಿಲ್ಲವೋ ಹಾಗೆಯೇ ಕಳಿಸಲೂ ವಾರ ನಕ್ಷತ್ರಗಳನ್ನು ನೋಡಬೇಕಾದ್ದಿಲ್ಲ. ಶುಕ್ರವಾರ ತಾಯಿ ಮನೆಯಿಂದ ಹೋಗಬಾರದು ಎಂದರೆ ಅವತ್ತು ಅತ್ತೆ ಮನೆಯಿಂದ ಹೊರಟು ಬರಬಹುದೇ ಎಂದು ಪ್ರಶ್ನೆ ಏಳುತ್ತದೆ. ಆದ್ದರಿಂದ ಆ Hair splitting discussionಗೆ ಅರ್ಥವೇ ಇಲ್ಲ. ನಮಗೆ ಅನುಕೂಲವಾಗಿ ಎಷ್ಟು ದಿನ ಪೂಜೆ ಮಾಡಲು ರುಚಿ ಇರುತ್ತದೆಯೋ ಅಷ್ಟು ದಿನಗಳೂ ಇಟ್ಟುಕೊಂಡು ಅವಶ್ಯವಾಗಿ ಪೂಜೆ ಮಾಡಬಹುದು. ವಾರ ನಕ್ಷತ್ರಗಳಿಗೋಸ್ಕರ ಮನಸ್ಸಿಗೆ ಇಷ್ಟವಿಲ್ಲದಿದ್ದರೂ, ಬೇಜಾರಿನಿಂದ, ಬಲಾತ್ಕಾರವಾಗಿ ಇಟ್ಟುಕೊಳ್ಳ ಬೇಕಾದ ಅಗತ್ಯ ಖಂಡಿತ ಇಲ್ಲ. ಪುನಃ ಹೇಳಬಯಸುತ್ತೇನೆ. ಅವರು ಬರುವುದು, ಹೋಗುವುದು! ಎಲ್ಲಾ ನಮ್ಮ ಕ್ಷುದ್ರಮನಸ್ಸಿನ ಕಲ್ಪನೆಗಳೇ ಹೊರತು, ಬರುವವರು ಯಾರು, ಹೋಗುವವರು ಯಾರು?

ವಿಗ್ರಹಗಳನ್ನು ನದಿಗೆ ಬಿಡುವುದು ಎನ್ನುವುದೂ ನಮ್ಮ ಒಂದು ಕಲ್ಪಿತ ವ್ಯಾಪಾರ (ಅದು ಮಣ್ಣಿನ ವಿಗ್ರಹವಾದ್ದರಿಂದ). ಕಲ್ಪದ ಪ್ರಕಾರ ಬೆಳ್ಳಿ ಅಥವಾ ಚಿನ್ನದಲ್ಲಿ ವಿಗ್ರಹ ಮಾಡಿಸಿ, ಪೂಜೆ ಮಾಡಿ ದಾನ ಕೊಡಬೇಕು. ಮಣ್ಣನ್ನು ಯಾರೂ ದಾನ ತೆಗೆದುಕೊಳ್ಳುವುದಿಲ್ಲವಾದ್ದರಿಂದ (ನಮಗೆ ಅದೇ economical ಆಗಿರುವುದರಿಂದ ಅದನ್ನೇ ಪಟ್ಟಾಗಿ ಹಿಡಿದಿದ್ದೇವೆ) ಅದನ್ನು ನದಿಗೆ ಬಿಡುವ ಅಭ್ಯಾಸ ಬಂದಿದೆ. ಬಿಡದಿದ್ದರೆ ಯಾವ ಪ್ರಮಾದವೂ ಇಲ್ಲ. ವಿಗ್ರಹದಿಂದ ವಿಸರ್ಜನೆಯಾದ ಮೇಲೆ ವಿಗ್ರಹದಲ್ಲಿ ದೇವತಾಸಾನ್ನಿಧ್ಯವಿಲ್ಲವೆಂದೇ ಅರ್ಥ. ಅದನ್ನು ಬಿಟ್ಟರೂ ಅಷ್ಟೆ,

ಇಟ್ಟುಕೊಂಡರೂ ಅಷ್ಟೆ. ಇಟ್ಟುಕೊಂಡರೆ ಗಣಪತಿ ಮಾಡುವವರ ಹೊಟ್ಟೆಯ ಮೇಲೆ ಹೊಡೆದಂತಾಗುತ್ತದೆ ಅಷ್ಟೆ (This may be purely a social aspect, but deserves to be considered seriously).

4) ವ್ರತದಲ್ಲಿರುವ ಕಥೆಗಳು ರೋಚನಾರ್ಥವಾಗಿ (ಅಂದರೆ ಆ ವ್ರತದಲ್ಲಿ ಜನಗಳಿಗೆ ರುಚಿ ಉಂಟು ಮಾಡಲು) ಹೊರಟಿವೆ. "ರೋಚನಾರ್ಥಾ ಫಲಶ್ರುತಿಃ" ಎನ್ನುವುದು ವ್ಯಾಸವಾಕ್ಯ. ಯಾವ ಫಲಶ್ರುತಿಯೇ ಆಗಲಿ, ಕಥೆಯೇ ಆಗಲಿ, ವಾಸ್ತವವಲ್ಲ. ಕೇವಲ ರುಚ್ಯುತ್ಪಾದನೆಗೆ ಹೊರಟಿರುವುದು. ಡಿ.ವಿ.ಜಿ. ಮಾತಿನಲ್ಲಿ ಹೇಳುವುದಾದರೆ ಅವೆಲ್ಲವೂ advertisement ಇದ್ದಹಾಗೆ !!

5) ನಾವು ಹೇಳಿದ ಘನ ಏಳನೆ ಕಾಂಡದ 5ನೇ ಪ್ರಶ್ನೆಯಲ್ಲಿ ಬರುತ್ತದೆ. ಅದು ಕೇವಲ ಬ್ರಾಹ್ಮಣ. ಮಂತ್ರವಲ್ಲ. 'ಬೃಹದ್ರಥನ್ತರ' ಎಂಬ ಸಾಮವನ್ನು ಹೇಳಿದರೆ ಸಿಗುವ ಫಲದ ಬಗ್ಗೆ ಫಲಶ್ರುತಿ ಅಷ್ಟೆ. ಅರ್ಥವೇನೂ ಇಲ್ಲ. ಹೇಳಲು, ಕೇಳಲು ಚೆನ್ನಾಗಿರುತ್ತದೆಂದು ಹೇಳುತ್ತೇವೆ.

6) "ಋಗ್ವೇದ"ವು ನಾಲ್ಕು ವೇದಗಳಲ್ಲಿ ಒಂದು. ಋಕ್ ಸಮೂಹವನ್ನು ಋಗ್ವೇದವೆಂದು ಕರೆಯಬಹುದು. ನಾನು ಅದರ ಅಧ್ಯಯನ ಮಾಡದಿರುವುದರಿಂದ ಅದರ ಬಗ್ಗೆ ಉಪನ್ಯಾಸ ಮಾಡಲು, ಅಸಮರ್ಥ.

ಪಾಪುವು ಮುಂದಿನ Feb, March ನಲ್ಲಿ ಬರುವ ನಿರೀಕ್ಷೆ ಇದೆ. ನಿನ್ನ ಪುಸ್ತಕದ ಬಗ್ಗೆ ಹೇಳುತ್ತೇನೆ. ನಾವು ಆರೋಗ್ಯವಾಗಿದ್ದೇವೆ. ಈ ತಿಂಗಳು 16ನೇ ತಾರೀಖು ಸಹ್ಯಾದ್ರಿ ಕಾಲೇಜಿನಲ್ಲಿ ವೇದಗಳ ಬಗ್ಗೆ ಮಾತನಾಡಲು ಆಹ್ವಾನಿಸಿದ್ದಾರೆ (ಮಹಾಬಲನ ಪ್ರೋತ್ಸಾಹ). ಬರುತ್ತೇನೆ. 15ನೇ ತಾರೀಖು ಅನಂತವ್ರತ ಇಟ್ಟುಕೊ ಎಂದು ಶ್ರೀಕಂಠನಿಗೂ ಬರೆದಿದ್ದೇನೆ. ಅವನು ಇಟ್ಟುಕೊಂಡರೆ ನಾನು 15 ರಾತ್ರಿ ಭದ್ರಾವತಿಗೆ ಬರುತ್ತೇನೆ. 16 ರಾತ್ರಿಯಲ್ಲಿ ನಾನು ವಾಪಸ್ಸು ಹೊರಡಬೇಕು. ಆದ್ದರಿಂದ ಈ ಸಾರಿ ನಿನ್ನಲ್ಲಿ ಭೋಜನ ಸಾಧ್ಯವಾಗಲಾರದು. ಪುನಃ ನವಂಬರ್‌ನಲ್ಲಿ ಅನಂತ ಲಕ್ಷ್ಮಣನ ಮನೆಯ ಕಾರ್ಯಕ್ರಮಕ್ಕೆ ಬರುತ್ತೇನೆ. ಆಗ ಖಂಡಿತ ಊಟ ಮಾಡುತ್ತೇನೆ.

ಎಲ್ಲರಿಗೂ, ನಿನ್ನ ಸ್ನೇಹಿತರಿಗೂ ನನ್ನ ಅನಂತ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮೀ

೪೯೨

ಮನೆ ಕಟ್ಟುವುದು

ವಾಸ್ತುಶಾಸ್ತ್ರ ; ಪೂರ್ಣಕುಂಭ ಸ್ವಾಗತ ; ಪಂಚಾಗ್ನಿ ; ನಾಸದೀಯ ಸೂಕ್ತ ; ಕೂಷ್ಮಾಂಡ ಹೋಮ ; ಕರ್ತೃವೇ ಹವಿಸ್ಸು ಕೊಡಬೇಕು

कुशलम्   श्री:   MYSORE

24.11.97

ಶ್ರೀಕಂಠ !

ಬಹಳ ದಿನಗಳ ಮೇಲೆ ಬಂದ ನಿನ್ನ ಕಾಗದ ನೋಡಿ ಬಹಳ ಸಂತೋಷವಾಯಿತು. ನೀನು ಮೈಸೂರಿಗೆ ಬಂದಾಗ ನಾನು ಮದ್ರಾಸಿಗೆ ಹೋಗಿದ್ದೆ. ಅನ್ಯಾಯ. ಹಿಂದೆಯೂ ಹಾಗೇ ಆಯಿತು. ಆದರೆ ನಾನು 5 ರಿಂದ 8ರವರೆಗೂ ಬೆಂಗಳೂರಿನಲ್ಲೇ ಇದ್ದೆ. 7ನೇ ತಾರೀಖು ಕಿಟ್ಟಣ್ಣನ ಮಗಳ ವಿವಾಹದಲ್ಲಿ ರಮೇಶ, ಜ್ಯೋತಿ ಇವರನ್ನೂ ನೋಡಿದೆ. ನಾನು ಬಂದಿದ್ದು ಮಧ್ಯಾಹ್ನ $3^1/_2$ (ನನ್ನ ದೊಡ್ಡ ಅತ್ತಂಬಿಯವರ ಶ್ರಾದ್ಧ ಮಾಡಿಸಿ ಬರಬೇಕಾಯಿತು). ನೀನು ಬಂದು ಹೋಗಿದ್ದೆಯೋ ಏನೋ ಗೊತ್ತಿಲ್ಲ. ನಾನು ಕೇಳಲೂ ಇಲ್ಲ. ನಿನ್ನ ತಮ್ಮನ ಮಗಳ photo, ...ಅವರ ಮಗಳ photo ಎಲ್ಲಾ ತಲಪಿದೆ. ಪಾಪುವಿಗೆ ಕಳಿಸಿಕೊಡುತ್ತೇನೆ. ಅವನು ಬಂದ ಮೇಲೆ ಯಾವುದಾದರೊಂದು ನಿಶ್ಚಯ. March ನಲ್ಲಿ Thesis defend ಮಾಡಿಕೊಂಡು 1 ತಿಂಗಳು America ಸುತ್ತಾಡಿ May ನಲ್ಲಿ ಬರುತ್ತೇನೆಂದು ಹೇಳಿದ. ನಾವೂ ನಿರೀಕ್ಷಿಸುತ್ತಿದ್ದೇವೆ...ನಿನ್ನ ತಮ್ಮನಿಗೂ ಅವರ ಮಕ್ಕಳ photo ತಲಪಿತೆಂದು ಹೇಳಿ, ನನ್ನ ಆಶೀರ್ವಾದಗಳನ್ನು ತಿಳಿಸು.

1) ಶ್ರೀಕಂಠ ! ಮನೆ ಕಟ್ಟುವುದು ವಾಸಮಾಡುವವರ ಸೌಕರ್ಯಾರ್ಥವಾಗಿಯೇ ಹೊರತು, ಮನೆಯಿಂದ ಯಾವುದೋ ಅದೃಷ್ಟಫಲ ಸಿಗುತ್ತೆಂಬುವುದು ಮೌಢ್ಯದ ಪರಾಕಾಷ್ಠೆ. ಮನೆಗಳಿಗೆ ಬಾಗಿಲು ಕಿಟಕಿ ಇಡುವುದು ಗಾಳಿ, ಬೆಳಕು ಬರಲೆಂದು, ಐಶ್ವರ್ಯ ಬರುವುದಕ್ಕಲ್ಲ. ಬರಲು ಸಾಧ್ಯವೂ ಇಲ್ಲ. ತಮಿಳು ನಾಡಿನಲ್ಲಿ ದಕ್ಷಿಣ ದಿಕ್ಕಿಗೆ ಬಾಗಿಲಿರುವ ಮನೆಗೆ ಇವತ್ತಿಗೂ ಬಾಡಿಗೆ ಜಾಸ್ತಿ. ಕಾರಣ, ಅಲ್ಲಿ ದಕ್ಷಿಣದಿಂದಲೇ ಗಾಳಿ ಬೀಸುವುದು. ಆ ದೇಶದ ಸೆಖೆಗೆ ಎಲ್ಲರಿಗೂ ಗಾಳಿಬೇಕು (ಈಗ A.C. fan ಎಲ್ಲಾ ಇದೆ. ಆದರೂ ಪ್ರಕೃತಿದತ್ತವಾದ ಗಾಳಿ ಬೀಸಿದ ಹಾಗೆ ಆಗುವುದಿಲ್ಲ). ಆದ್ದರಿಂದ ಸಾಮಾನ್ಯವಾಗಿ, ಆದಷ್ಟೂ South facing ಕಟ್ಟುತ್ತಾರೆ. ಅಡುಗೆ ಮನೆಯಲ್ಲಿ ಒಲೆ ಇಡಬೇಕಾದರೆ ಯಥಾಪ್ರಕಾರ ಹೊಗೆ ಹೋಗುವಂತಿರಬೇಕು. ಈಶಾನ್ಯದಲ್ಲಿ ಅಗ್ನಿ ಇಟ್ಟರೆ ಪಶ್ಚಿಮದಿಂದಲೋ, ದಕ್ಷಿಣದಿಂದಲೋ (ಅಥವಾ South West ನಿಂದ) ಗಾಳಿ ಬೀಸಿ, ಹೋಮ ಮಾಡುವವನಿಗೆ ಹೊಗೆ ಮುಖಕ್ಕೆ

ಬರುವುದಿಲ್ಲ, ಜತೆಗೆ ಅಗ್ನಿಗೆ ದೀರ್ಘದಂಡನಮಸ್ಕಾರ ಮಾಡಲು space ಬೇಕಾದಷ್ಟು ಸಿಗುತ್ತದೆ. ಇಷ್ಟೇ ಹೊರತು ಅದಕ್ಕೆ ಯಾವ ಅದೃಷ್ಟಫಲವೂ ಇಲ್ಲ. ಒಂದು ಜ್ಞಾಪಕ ಇಟ್ಟುಕೊ. "ದೃಷ್ಟೇ ಸಂಭವತಿ ಅದೃಷ್ಟಕಲ್ಪನಾ ಅನ್ಯಾಯ್ಯಮ್" ಎನ್ನುವುದು ವೇದಗಳಲ್ಲಿ ಒಂದು ದೊಡ್ಡ ನ್ಯಾಯ. ಯಾವ ನಿಯಮ, ವಿಧಿಯಾದರೂ ದೃಷ್ಟ (ಕಣ್ಣಿಗೆ ಕಾಣಿಸುವ) ಫಲವನ್ನು ಹೇಳಬೇಕೇ ಹೊರತು ಅದೃಷ್ಟವನ್ನು ಹೇಳಬಾರದು. ಏಕೆಂದರೆ ಅದು ಅದೃಷ್ಟವಾದ್ದರಿಂದ ಕಲ್ಪಿಸಬೇಕು. ನಮ್ಮ ಕಲ್ಪನೆ ಅನ್ಯಾಯ ಎನ್ನುವುದೇ ತಾತ್ಪರ್ಯ.

ನಮ್ಮ ಮಹರ್ಷಿಗಳ ಸ್ವಭಾವದಂತೆ, ಮನೆಗೂ ಒಂದು ದೇವತೆಯನ್ನು ಕಲ್ಪಿಸಿಕೊಂಡಿದ್ದಾರೆ. ಅವನೇ ವಾಸ್ತೋಷ್ಪತಿ. ವಾಸ್ತು ಎಂದರೆ ಮನೆ ಕಟ್ಟುವ ನಿವೇಶನ ಎಂದರ್ಥ. ಅದಕ್ಕೆ presiding deity ವಾಸ್ತೋಷ್ಪತಿ. ಮನೆಗೆ ಹೋಗುವುದಕ್ಕೆ ಮುಂಚೆ ಅವನನ್ನು ಆರಾಧನೆ ಮಾಡಿ ಹೋಗಬೇಕು ಎನ್ನುವುದೇ ಅವರ ಆಶಯ. ನೀರಿನಲ್ಲಿ, ಅನ್ನದಲ್ಲಿ , ವಿಗ್ರಹಗಳಲ್ಲಿ, ಸೂರ್ಯಮಂಡಲದಲ್ಲಿ, ಚಂದ್ರನಲ್ಲಿ, ದೇವತಾತ್ವವನ್ನು ಕಲ್ಪಿಸಿದಂತೆ, ನಮ್ಮ ವಾಸಕ್ಕೆ ವರ್ಷಗಟ್ಟಲೆ ಅನುಕೂಲ ಮಾಡಿಕೊಟ್ಟು ನಮಗೆ ಉಪಕಾರಮಾಡುವುದರಿಂದ, ಮನೆಯಲ್ಲಿ ದೇವತಾತ್ವವನ್ನು ಕಲ್ಪಿಸಿಕೊಳ್ಳುವುದು ನಮ್ಮ ಉತ್ತಮ ಸಂಸ್ಕೃತಿ. ಆ ವಾಸ್ತೋಷ್ಪತಿಗೆ ವೇದೋಕ್ತವಾಗಿ ಆರಾಧನೆ ಮಾಡಲು ಆಪಸ್ತಂಬರು 4 ಮಂತ್ರಗಳನ್ನು ಆರಿಸಿಕೊಂಡಿದ್ದಾರೆ. ಅವುಗಳಲ್ಲಿ ಮೊದಲನೇ ಎರಡು ಮಂತ್ರ ವಾಸ್ತವವಾಗಿ ಗೃಹಪ್ರವೇಶದಲ್ಲಿ ಮಾಡುವುದಲ್ಲ. ಅಗ್ನಿಹೋತ್ರಿಯು ಅಗ್ನಿಯನ್ನು ಅರಣಿಸಮಾರೋಪಣ ಮಾಡಿಕೊಂಡು ಎಲ್ಲಿಗಾದರೂ ಪ್ರವಾಸ ಹೊರಡಬೇಕಾದರೆ, ಸಮಾರೋಪಣಕ್ಕೆ ಮುಂಚೆ, ಆ ಮಂತ್ರಗಳಿಂದ ಎರಡು ಆಹುತಿ ಕೊಟ್ಟು ಆಮೇಲೆ ಸಮಾರೋಪ ಮಾಡಿಕೊಳ್ಳುತ್ತಾನೆ. ಅಲ್ಲಿ ವಾಸ್ತೋಷ್ಪತಿ ಎಂದರೆ ರುದ್ರ ಎಂದರ್ಥ. "ರುದ್ರಃ ಖಲು ವೈ ವಾಸ್ತೋಷ್ಪತಿಃ" ಎಂದೇ ಅದರ ಬ್ರಾಹ್ಮಣ. ರುದ್ರ ಯಾವತ್ತೂ ಯಜ್ಞ ಶಾಲೆಯಲ್ಲಿದ್ದು ಅದನ್ನು ಕಾಯುತ್ತಿರುತ್ತಾನೆ ಎಂಬ ಕಲ್ಪನೆ. ಆದ್ದರಿಂದ ಪ್ರವಾಸ ಹೋಗುವಾಗ ಯಜ್ಞಶಾಲೆಯನ್ನು ಕಾಯಲಿ ಎಂದು ಅವನನ್ನು ಪ್ರಾರ್ಥಿಸಿ ಹೊರಡುತ್ತಾನೆ. ಆಪಸ್ತಂಬರು ಆ ಎರಡು ಮಂತ್ರಗಳನ್ನು ತೆಗೆದುಕೊಂಡು ವಾಸ್ತೋಷ್ಪತಿಗೆ ಸಂಬಂಧಪಟ್ಟ ಎರಡು ಮಂತ್ರಗಳನ್ನು ಸೇರಿಸಿಕೊಂಡು, ಗೃಹಪ್ರವೇಶದಲ್ಲಿ ಹೋಮಕ್ಕೆ ಹೇಳಿದ್ದಾರೆ. ಆದರೆ ಆ ಮಂತ್ರಗಳಲ್ಲಿರುವ ವಾಸ್ತು ಶಬ್ದಕ್ಕೂ ಈಗ ಚಾಲ್ತಿಯಲ್ಲಿರುವ ವಾಸ್ತು ಶಾಸ್ತ್ರದ ವಾಸ್ತು ಶಬ್ದಕ್ಕೂ ಯಾವ ಸಂಬಂಧವೂ ಇಲ್ಲ.

ಆಪಸ್ತಂಬ ಶುಲ್ಬಸೂತ್ರದಲ್ಲಿ ಯಜ್ಞಕ್ಕೆ ಬೇಕಾದ ಸಾಮಾನುಗಳು, ಇಟ್ಟಿಗೆಗಳಿಗೋಸ್ಕರ dimensions ಹೇಳಿದಾರೆಯೇ ಹೊರತು ಬೇರೆ ಯಾವುದಕ್ಕೂ ಅಲ್ಲ. ಅಲ್ಲಿಯೂ ದಕ್ಷಿಣಾಗ್ನಿ semi circular ಆಗಿರುತ್ತದೆ. ಗಾರ್ಹಪತ್ಯವು circular ಆಗಿರುತ್ತದೆ. ಆಹವನೀಯ square. ಅವುಗಳಿಗೆ ಒಂದು ಕ್ರಮಕ್ಕೋಸ್ಕರ measurements ಕೊಟ್ಟಿದ್ದಾರೆ. ಅವುಗಳ shape ಹಾಗೇ ಏಕಿರಬೇಕು ಎಂಬ ಪ್ರಶ್ನೆಗೆ ಉತ್ತರವಿಲ್ಲ. ಅದು ಮಹರ್ಷಿಗಳ ಕಲ್ಪನೆ ಅಷ್ಟೆ. ಆ shape ಬರಬೇಕಾದರೆ ಇಟ್ಟಿಗೆಗಳೂ ಬೇರೆಬೇರೆ ಆಕಾರಗಳಲ್ಲಿರಬೇಕು. ಅವುಗಳನ್ನು ಮಾಡುವುದು ಹೇಗೆ ಎಂಬುದನ್ನು ಹೇಳಿದ್ದಾರೆ. ಯಜ್ಞ ಶಾಲೆಯ ನಿರ್ಮಾಣವನ್ನೂ ಹೇಳಿದ್ದಾರೆ. ದಿಕ್ಕುಗಳನ್ನೂ ಹೇಳಿದ್ದಾರೆ. ಎಲ್ಲವೂ ಯಜ್ಞ ಮಾಡುವವನ convenience ಗೋಸ್ಕರವೇ ಹೊರತು, ಅದೃಷ್ಟ ಖಂಡಿತ ಇಲ್ಲ. ವೇದಗಳಲ್ಲಿರಬಹುದು. ಆದರೆ ಅವುಗಳನ್ನು ಅರ್ಥವಾದವೆಂದು ತಳ್ಳಿಹಾಕಬೇಕು. ದಿಕ್ಕುಗಳಿಗೆ ಮತ್ಯಾವ ಪ್ರಾಮುಖ್ಯತೆಯೂ ಇಲ್ಲ. They are all relative. ನಮ್ಮ ಅನುಕೂಲಕ್ಕೆ ಮಾಡಿಕೊಂಡಿರುವುದು (ಒಂದು ಜಾಗದ Co-ordinates fix ಮಾಡಲು).

ಯಾವ ಮಹರ್ಷಿಗಳೂ ಈ ವಾಸ್ತುಶಾಸ್ತ್ರದ ಬಗ್ಗೆ ಚಕಾರ ಶಬ್ದವನ್ನೂ ಹೇಳಿಲ್ಲ. ಪುರಾಣಗಳಲ್ಲಿರಬಹುದು. ನನಗೆ ಗೊತ್ತಿಲ್ಲ. ಪುರಾಣಗಳಲ್ಲಿರುವುದನ್ನು ಕಥೆ ಎಂದು ತಿಳಿದುಬಿಡಬೇಕು. ಇವೆಲ್ಲಾ ಈಚೆಗೆ ಆರಂಭವಾಗಿದೆ. ಜನಗಳಿಗೆ ಹಿರಿಯರ ಸಂಪ್ರದಾಯದಲ್ಲಿ ಬಹಳ ಭಕ್ತಿ. ನಮ್ಮ ಹಿರಿಯರು ಯಾರೂ ವಾಸ್ತುಶಾಸ್ತ್ರವನ್ನನುಸರಿಸಿ ಮನೆಗಳನ್ನು ಕಟ್ಟಿದಂತೆ ಕಾಣುವುದಿಲ್ಲ. ನಮ್ಮ ತೀ|| ರವರು ಹೇಳುತ್ತಿದ್ದಂತೆ, ಹಿಂದಿನ ಕಾಲದ ಮನೆಗಳೆಲ್ಲವೂ (ರಾಜ ಮಹಾರಾಜರುಗಳನ್ನು ಬಿಟ್ಟು) ಕಳ್ಳಕಾಕರ ಭೀತಿಯಿಂದ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆಯೇ ಕಟ್ಟಿದ್ದಾರೆ. ಗಾಳಿ ಇಲ್ಲ, ಬೆಳಕಿಲ್ಲ, ನೀರು ಹೋಗಲು ವಸತಿ ಇಲ್ಲ, ಹೆಂಚುಗಳಲ್ಲಿ ಹಾವು, ಚೇಳುಗಳು ಬೇಕಾದಷ್ಟು. ಶೌಚಗೃಹವಂತೂ ನರಕದ ಗುಂಡಿ. ಇವೆಲ್ಲಾ ವಾಸ್ತುಶಾಸ್ತ್ರವಾದರೆ God only should save us. ಹಾಗಾದರೆ ಹಿಂದಿನವರಿಗೆ "ವಾಸ್ತುಶಾಸ್ತ್ರ" ಗೊತ್ತಿರಲಿಲ್ಲವೇ? ಎಂದು ಕೇಳಬೇಕಾಗುತ್ತದೆ. ಸ್ವಲ್ಪ common sense ಉಪಯೋಗಿಸೋಣ. ಮನೆಯಲ್ಲಿ ನಾವು ವಾಸ ಮಾಡಬೇಕು. ಅದಕ್ಕೆ ಅಷ್ಟೇ ಪ್ರಯೋಜನ. ನಮಗೆ ಒಳ್ಳೆಯದಾಗುವುದಕ್ಕೆ, ಕೆಟ್ಟದಾಗುವುದಕ್ಕೆ ನಮ್ಮ ಪ್ರಾರಬ್ಧಕರ್ಮ ಕಾರಣವೇ ಹೊರತು (ಅಥವಾ ಅವರುಗಳ ಪ್ರಕಾರ ಗ್ರಹಗತಿಗಳು!!!) ಬೇರೆ ಯಾವುದೂ ಕಾರಣವಾಗಲು ಸಾಧ್ಯವಿಲ್ಲ. ಮನೆಯ ಬಾಗಿಲನ್ನೋ ಕಿಟಕಿಯನ್ನೋ ವಾಸ್ತುಶಾಸ್ತ್ರದಂತೆ ಇಟ್ಟುಬಿಟ್ಟರೆ, ಮನೆಯಲ್ಲಿ ಹಣದ

ಹೊಳೆ ಹರಿಯುತ್ತದೆಯೇ? ಹಣ ಸಂಪಾದನೆ ಮಾಡಲು ಲೋಕದಲ್ಲಿ ನಾನಾ ಉಪಾಯಗಳಿವೆ. ಅವುಗಳಲ್ಲಿ ಬಾಗಿಲು, ಕಿಟಕಿಗಳು don't find a place definitely. ಹೀಗಿರುವಾಗ ವಾಸ್ತುಶಾಸ್ತ್ರ, ವಾಸ್ತುಶಾಸ್ತ್ರ ಎಂದು ಹೇಳಿದರೆ ಏನು ಹೇಳಬೇಕೆಂದು ತಿಳಿಯುವುದಿಲ್ಲ. ಈ ಜ್ಯೋತಿಷ್ಯ ಇದ್ದ ಹಾಗೆ, ಜನಗಳ ಮುಗ್ಧತೆಯನ್ನೂ ಅಜ್ಞಾನವನ್ನೂ (gullibility) exploit ಮಾಡಲು ಹೊರಟಿರುವ ಇನ್ನೊಂದು ಶಾಸ್ತ್ರ, ಅಷ್ಟೆ.

ಗುದ್ದಲಿಪೂಜೆ ಎನ್ನುವುದೂ ಯಾವ ಕೆಲಸವನ್ನು ಆರಂಭಿಸಬೇಕಾದರೂ ಗಣಪತಿ ಪೂಜೆ ಮಾಡಿದಂತೆ ಮಾಡುವ ಒಂದು ಕ್ರಿಯೆ ಅಷ್ಟೆ. siteನಲ್ಲಿ ಎಲ್ಲಿ ಪೂಜೆ ಮಾಡಿದರೂ ಬರುತ್ತೆ.

2) "ಪೂರ್ಣಕುಂಭ" ಸ್ವಾಗತ ಎನ್ನುವುದು ನಾವು ನಮ್ಮ ಮನೆಗೆ ಬರುವ ದೊಡ್ಡವರಿಗೆ ತೋರಿಸುವ ಒಂದು ಮರ್ಯಾದೆ. ಅವರು ಬಂದ ತಕ್ಷಣ ಅವರಿಗೆ ಪಾದ್ಯ, ಅರ್ಘ್ಯಕೊಡಬೇಕು. ಎಷ್ಟೋಕಡೆ ಅದು ಸಾಧ್ಯವಾಗುವುದಿಲ್ಲ, ಆದ್ದರಿಂದ ಈ ನೀರನ್ನೇ ಒಂದು ಕುಂಭಕ್ಕೆ ತುಂಬಿ, ಅದನ್ನು ಭಕ್ತಿಪೂರ್ವಕವಾಗಿ, ಮಂತ್ರಗಳಿಂದ ಅವರನ್ನು ಸ್ತೋತ್ರಮಾಡಿ, ಅವರ ಕೈಯಲ್ಲಿ ಸ್ಪರ್ಶ ಮಾಡಿಸುವುದು (ಕೊಟ್ಟ ಹಾಗೆ!!). ಅದಕ್ಕಿಂತ, 'ದೊಡ್ಡವರನ್ನು ಸ್ವಾಗತಿಸುವ ಒಂದು ಕ್ರಮ' ಎಂದರೆ ಸರಿಹೋಗುತ್ತದೆ. ಅವುಗಳಲ್ಲಿ ಅವರಿಗೆ, ಇವರಿಗೆ ಎನ್ನುವ ಯಾವ ವ್ಯತ್ಯಾಸವೂ ಇಲ್ಲ.

3) ಅಗ್ನಿಗೆ ವೇದದಲ್ಲಿ ಬೇಕಾದಷ್ಟು ಹೆಸರುಗಳಿವೆ. ಅಗ್ನಿ ಹೋತ್ರಿ ಮೂರು ಅಗ್ನಿ ಇಟ್ಟಿರುತ್ತಾನೆ (ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ). ಕೆಲವು ಯಜ್ಞಗಳಲ್ಲಿ ಆವಸಥ್ಯ (ಆವಸದ್ಯ ಅಲ್ಲ) ಮತ್ತು ಅನ್ವಾಹಾರ್ಯ ಎಂದು ಎರಡು ಅಗ್ನಿ ಸೇರಿ ಪಂಚಾಗ್ನಿ ಗಳಿರುತ್ತವೆ. ಬಚ್ಚಲು ಮನೆ ಅಗ್ನಿಗೆ ನಾವೇ "ಸ್ನಾನ ಗೃಹಾಗ್ನಿ" ಎಂದು ಹೆಸರಿಡಬಹುದು. ಅಡುಗೆ ಮನೆ ಅಗ್ನಿಗೆ "ಪಚನಾಗ್ನಿ" ಎಂದು ಹೆಸರಿಡಬಹುದು (ಎಂದರೆ ಅಡುಗೆ ಕ್ರಿಯೆಗೆ ಉಪಯೋಗಿಸುವ ಅಗ್ನಿ ಎಂದರ್ಥ. ವಿಶೇಷವೇನೂ ಇಲ್ಲ).

4) "ನಾಸದೀಯಸೂಕ್ತ" ಎನ್ನುವುದು ಋಗ್ವೇದ, ಯಜುರ್ವೇದಗಳಲ್ಲಿದೆ. ಅದರ ಆರಂಭ **"ನಾಸದಾಸೀನ್ನೋ ಸದಾಸೀತ್ತದಾನೀಮ್" (ನ ಅಸತ್, ನೋ ಸತ್ ಆಸೀತ್, ತದಾನೀಂ)** "ನಾಸದಾ" ಎಂದು ಆರಂಭವಾಗುವುದರಿಂದ ನಾಸದೀಯ ಸೂಕ್ತ ಎಂದು ಹೆಸರು ಬಂತು. ನಾಸದೀಯ ಎನ್ನುವುದಕ್ಕೆ ಅರ್ಥವೇನೂ ಇಲ್ಲ.

5) ಶ್ರಾದ್ಧದಿನ ಕೂಷ್ಮಾಂಡಹೋಮ ಧಾರಾಳವಾಗಿ ಮಾಡಬಹುದು. ಔಪಾಸನ ಆದ ಕೂಡಲೆ ಅದರಲ್ಲಿಯೇ ಮಾಡಬೇಕು.

6) 4 ಜನ ಕುಳಿತು ಹವಿಸ್ಸನ್ನು ಕೊಡುವುದು ಸರಿಯೇ ಅಲ್ಲ, ಯಜಮಾನ ಒಬ್ಬನೇ ಕುಳಿತು 4 ಹವಿಸ್ಸುಗಳನ್ನೂ, ಒಂದಾದ ಮೇಲೆ ಒಂದು ಮಾಡಬೇಕು. ಕೈಲಾಗದಿದ್ದರೆ ಒಂದೇ ಹವಿಸ್ಸಿನಿಂದ ಮಾಡಬಹುದು. ಎರಡರಿಂದ ಅಥವಾ ಮೂರರಿಂದ. ಅದರಲ್ಲಿ preference ಯಾವುದೂ ಇಲ್ಲ. Convenience and availability. ಜತೆಗೆ ಯಾವುದನ್ನು ಮಾಡಿದರೆ ಕರ್ತೃವಿಗೆ ಮನಸ್ಸಿಗೆ ಹೆಚ್ಚು ಸಂತೋಷವಾಗುವುದೋ ಅದು.

ನಿನ್ನ ಪ್ರಶ್ನೆಗಳ ಉತ್ತರ ಸಾಕಷ್ಟು ದೀರ್ಘವಾಯಿತು. ನಿನಗೆ ಓದಲು ತಾಳ್ಮೆ ಇರಬೇಕು.

ನಾವು ಆರೋಗ್ಯವಾಗಿದ್ದೇವೆ. December ಕೊನೆಗೆ ಪಣಜಿಗೆ ಹೋಗಬೇಕು. ಸುಮನಿಗೆ ಬಾಣಂತನ ಮಾಡಬೇಕು. ಅವಳು ಇಲ್ಲಿಗೆ ಬರಲು ಸಾಧ್ಯವಿಲ್ಲವಾಗಿರುವುದರಿಂದ, ಸೌ॥ ಯೇ ಅಲ್ಲಿಗೆ ಹೋಗುತ್ತಿದ್ದಾಳೆ. ನಾನು ಹೋಗಿ, ಬಿಟ್ಟು ಬರುತ್ತೇನೆ.

ಚಿ ॥ ಗಳಿಗೆಲ್ಲಾ ನನ್ನ ಆಶೀರ್ವಾದಗಳು. ಎಲ್ಲರಿಗೂ ನನ್ನನ್ನು ಜ್ಞಾಪಿಸು.

ಇತಿ ನಿಮ್ಮವ

ಕುಮಾರಸ್ವಾಮೀ

ಬೆಂಗಳೂರಿನಲ್ಲಿ ನನ್ನ ಚಿಕ್ಕಪ್ಪ (ತಂದೆ ತಮ್ಮ) ನವರ ಹೆಂಡತಿ ಚಿಕ್ಕಮ್ಮನವರಿಗೆ ಹುಷಾರಿಲ್ಲ. ಈಗ ಗುಣಮುಖರಾಗಿದ್ದಾರೆಂದು ತಿಳಿಯಿತು.

೪೯೩

ಅತಿಥಿ ಉಪಚಾರ

ಸಂಧ್ಯಾವಂದನೆ, ಬ್ರಹ್ಮಚಾರಿಯನ್ನು ಪೂರ್ವಪಂಕ್ತಿಗೆ ಕರೆಯುವುದು

कुशलम् श्री: MYSORE

28.1.98

ಶ್ರೀಕಂಠ !

ನಿನ್ನ ಕಾಗದ ತಲುಪಿತು. ಹುಡುಗಿಯ photograph ತಲಪಿತು. ಚಿ॥ ಯು March ನಲ್ಲಿಯೇ ಬರುವ ನಿರೀಕ್ಷಣೆ ಇದೆ. ಆದ್ದರಿಂದ ಅದುವರೆಗೂ ತಡೆಯೋಣ ಎಂದುಕೊಂಡಿದ್ದೇನೆ. ಅವನೇ ಬಂದು ಪ್ರತ್ಯಕ್ಷವಾಗಿ ನೋಡಿ ನಿಶ್ಚಯ ಮಾಡಲಿ.

ನಿನ್ನ ಮಗನು ಯೂರೋಪಿನ ದೇಶಗಳಿಗೆ ಹೋಗಿರುವುದನ್ನು ಕೇಳಿ ಸಂತೋಷವಾಯಿತು. ಎಷ್ಟು ದಿನಗಳೆಂಬುದನ್ನು ಬರೆದಿಲ್ಲ, ವಿಮಾನಗಳ ಭವಣೆಯನ್ನು ಓದಿದೆ. ನಮಗೆ ಎಷ್ಟೆಷ್ಟು ಐಹಿಕ ಸೌಕರ್ಯಗಳು ಏರ್ಪಟ್ಟವೆಯೋ, ಅಷ್ಟೇ tension ಉಂಟು ಮಾಡುವಂಥ ಸನ್ನಿವೇಶಗಳೂ ಸಿದ್ಧವಾಗುತ್ತಿವೆ !!! ವಿಧಿಯಿಲ್ಲ, ಆ ಸುಖಕ್ಕೋಸ್ಕರ ಈ ದುಃಖವನ್ನು ಅನುಭವಿಸಬೇಕು. ಅಂತೂ ಈಗ ಸುಖವಾಗಿ ಸೇರಿದ್ದಾನೆಂಬುದು ಕೇಳಿ ಸಮಾಧಾನ. ನಿನ್ನ ಕಾರ್ಡೂ, ನಾನು ಗೋವಾಕ್ಕೆ ಹೊರಡುವ ಹಿಂದಿನ ದಿನ ತಲಪಿತು.

ನಿನ್ನ ಪ್ರಶ್ನೆಗಳು

1) ನಾವು ಯಾವ ವೈದಿಕ ಕರ್ಮ ಮಾಡುತ್ತಿದ್ದರೂ ಅತಿಥಿಗಳು ಬಂದರೆ ಅವರನ್ನು ಕರೆದು ಉಪಚರಿಸಿ, ಆಮೇಲೆ ಮುಂದುವರಿಸುವುದು ಸಾಮಾನ್ಯಧರ್ಮ. ಆದರೆ ಎಂಥಾ ಅತಿಥಿಗಳು ಎಂಬುವುದರ ಮೇಲೆ ಹೋಗುತ್ತದೆ. ಹರಟೆ ಹೊಡೆಯುವುದಕ್ಕೋ, ವ್ಯವಹಾರ ಮಾಡುವುದಕ್ಕೋ, ಸುಮ್ಮನೆ visit ಕೊಡುವುದಕ್ಕೋ, ಜಗಳವಾಡುವುದಕ್ಕೋ ಬಂದವರು ಈ ಗುಂಪಿಗೆ ಸೇರಲಾರರು. ಯೋಗ್ಯರಾದ ಶ್ರೋತ್ರಿಯರು ನಮಗೆ ಅತ್ಯಂತ ಪೂಜ್ಯರು. ತುಂಬಾ ಕಷ್ಟದಲ್ಲಿದ್ದು ತಕ್ಷಣ ಪರಿಹಾರ ಕೇಳಲು ಬಂದಿರುವವರು, ಇಂಥವರನ್ನು ಕಾಯಿಸಬಾರದು. ಅವರು ನೊಂದುಕೊಂಡರೆ ನಾವು ಮಾಡಿದ್ದೆಲ್ಲವೂ ವ್ಯರ್ಥವಾಗುತ್ತದೆ. ಯದ್ಯಪಿ, ಯಾರು ಬಂದರೂ ನಮ್ಮ ಏಕಾಗ್ರತೆಗೆ (ಅದಿದ್ದರೆ !!) ಭಂಗ ಬಂದೇ ಬರುತ್ತದೆ. ಆದರೂ ಎದ್ದು ಹೋಗಬೇಕಾದ ಅಗತ್ಯವನ್ನು, ಅತಿಥಿಗಳ ಯೋಗ್ಯತೆಯ ಮೇಲೆ ನಿಶ್ಚಯಿಸಬೇಕು. ಈ ನಿಶ್ಚಯ ಯಜಮಾನನಿಗೆ ಸೇರಿದ್ದು. ವಿವಾಹ, ಉಪನಯನ ಇತ್ಯಾದಿ ಸಮಾರಂಭಗಳಲ್ಲಿ ನಾವು ಕರ್ಮದಲ್ಲಿ ನಿರತರಾಗಿರುವಾಗ ಬಂದವರನ್ನು ಖಂಡಿತ ಖುದ್ದಾಗಿ ಆಹ್ವಾನಿಸಬೇಕಾದ್ದಿಲ್ಲ. ಅದಕ್ಕೆ ಬೇರೆ ಜನರನ್ನು ನೇಮಕ ಮಾಡಬೇಕು. ನಮ್ಮ ಕೆಲಸ ಮುಗಿದ ಮೇಲೆ ಮಾತನಾಡಿಸಿದರೆ ಬರುತ್ತದೆ.

2) ಯಾರಿಗಾದರೂ ಸಂಧ್ಯಾವಂದನೆ ಕಾಲ ಮೀರಿಹೋಗವಂತಿದ್ದು ಆ ಕಾಲಕ್ಕೆ ಸ್ನಾನ ಮಾಡಲು ಸಾಧ್ಯವಾಗದಿದ್ದರೆ (ಪರಿಸ್ಥಿತಿಯ ಒತ್ತಡದಿಂದ, ಶೋಂಭೇರಿತನದಿಂದಲ್ಲ), ಸಕಾಲಕ್ಕೆ ಸಂಧ್ಯಾವಂದನೆ ಮಾಡುವುದು ಯುಕ್ತ. ಆದ್ದರಿಂದ ಸಂಧ್ಯಾವಂದನೆ ಮಾಡಿ ಸ್ನಾನ ಮಾಡಬೇಕು. ಇಲ್ಲಿ ಸಂಧ್ಯಾವಂದನೆಗೆ ಕಾಲ ಪ್ರಧಾನ ; ಸ್ನಾನಾದಿಗಳು ಅಂಗ. ''ಅಂಗಲೋಪತ್ವೇ ಪ್ರಧಾನಲೋಪಃ ಅನ್ಯಾಯ್ಯಃ'' (ಅಂಗಲೋಪವಾಗುತ್ತದೆಂದು ಪ್ರಧಾನಕ್ಕೇ ಲೋಪ ಮಾಡುವುದು ಅನ್ಯಾಯ) ಎಂಬ ನ್ಯಾಯ ಇಲ್ಲಿಗೆ ಅನ್ವಯವಾಗುತ್ತದೆ. ಅದರಲ್ಲಿ ಬ್ರಹ್ಮಚಾರಿ, ಗೃಹಸ್ಥ ಎಂಬ ಭೇದವಿಲ್ಲ. ಆದರೆ ಔಪಾಸನ, ದೇವತಾರ್ಚನೆ ಇವುಗಳಿಗೆ ಕಾಲಾವಕಾಶವಿರುವುದರಿಂದ ಸ್ನಾನ ಮಾಡಿಯೇ ಮಾಡಬೇಕು. ಸಂಧ್ಯಾವಂದನೆಯನ್ನೂ ಆದಷ್ಟು ಸ್ನಾನ ಮಾಡಿಯೇ ಮಾಡುವುದಕ್ಕೆ ಪ್ರಯತ್ನಿಸಬೇಕು. ಅನಿವಾರ್ಯವಾದಾಗ, ಮೊದಲೇ ಮಾಡಬಹುದು.

3) ಬ್ರಹ್ಮಚಾರಿಗಳನ್ನು ಶ್ರಾದ್ಧಕ್ಕೆ ಧಾರಾಳವಾಗಿ ಕರೆಯಬಹುದು. ಕರೆಯಬಾರದು ಎಂದು ಹೇಳುವುದು ಅವರಲ್ಲೇನೋ ದೋಷವಿದೆಯೆಂದಲ್ಲ, ಅವರ ಸೌಕರ್ಯಕ್ಕೋಸ್ಕರ. ವಿದ್ಯಾಭ್ಯಾಸ ನಿರತನಾಗಿರುವ ಬ್ರಹ್ಮಚಾರಿಗೆ ಶ್ರಾದ್ಧಭೋಜನ, ದಕ್ಷಿಣಾ ಪರಿಗ್ರಹಗಳಿಂದ, ಅವನ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದು ಸಹಜ. ಆದ್ದರಿಂದ ಅವನು ಬೇಡ. ಅವನಿಗೆ ತೊಂದರೆ ಕೊಡುವುದು ಬೇಡ ಎನ್ನುವುದು ಉದ್ದೇಶ. ಅವನು ವಿದ್ಯಾಭ್ಯಾಸವನ್ನೆಲ್ಲಾ ಮುಗಿಸಿ ಧನಸಂಪಾದನೆ ಮಾಡುತ್ತಿರುವಾಗ, ಕೇವಲ ವಿವಾಹ ಮಾಡಿಕೊಳ್ಳದಿರುವುದರಿಂದ ಬ್ರಹ್ಮಚಾರಿಯೆಂದು ಪರಿಗಣಿಸಿ ಈ ನಿಷೇಧವನ್ನು ಅವನ ಮೇಲೆ ಹೇರಬೇಕಾದ್ದಿಲ್ಲ.

ಈಗ ಒಬ್ಬನೇ ಇದ್ದೇನೆ. ಬೇಜಾರು. ಆದರೆ ನನ್ನ ಮಿತ್ರರು, ಶಿಷ್ಯರು, ನನಗೆ ಅಡುಗೆ ಮಾಡಿಕೊಳ್ಳಲು ಬಿಟ್ಟೇ ಇಲ್ಲ. ಒಬ್ಬರ ಮನೆ ತಿಂಡಿ, ಇನ್ನೊಬ್ಬರ ಮನೆ ಊಟ, ಹೀಗೇ ಸಾಗುತ್ತಿದೆ. ವೇದಪಾಠ, ಭಾಗವತ ಇರುವುದರಿಂದ ಸ್ವಲ್ಪ ಒಂಟಿತನದಿಂದ ಮುಕ್ತನಾಗಿದ್ದೇನೆ. ಇನ್ನೂ ಒಂದು ಒಂದೂವರೆ ತಿಂಗಳು ಹೀಗೇ ಕಾಲ ಕಳೆಯಬೇಕು. ಮನೆ ಬಿಟ್ಟು ಬೇರೆ ಕಡೆ ಇರಲೂ ಮನಸ್ಸು ಒಪ್ಪುತ್ತಿಲ್ಲ. ಭದ್ರಾವತಿಗೆ ಬರಬೇಕೆಂಬ ನಿನ್ನ ಆಹ್ವಾನಕ್ಕೆ ಚಿರಋಣಿ. ನಾನು ಆಗ ಬಂದಿದ್ದಾಗಲೇ, ಶ್ರೀಕಂಠ, ವಿಜಯಲಕ್ಷ್ಮೀ ಎಲ್ಲರೂ ಹೇಳಿದ್ದರು. ಇಲ್ಲಿಯೂ ಪಾಠ ಮುಂದುವರಿಸಬೇಕೆಂಬ ಆಸೆ ಇರುವವರು ಇರುವುದರಿಂದ, ಸ್ವಸ್ಥಾನದ ಮೇಲಿನ ಮೋಹದಿಂದ ಹೇಗೋ ಇಲ್ಲಿಯೇ ಇರಬೇಕೆಂದು ನಿಶ್ಚಯಿಸಿದ್ದೇನೆ.

ಗೋವಾದಲ್ಲಿ ಮಗು, ಬಾಣಂತಿ, ಮಾಮಿ ಎಲ್ಲರೂ ಆರೋಗ್ಯವಾಗಿದ್ದಾರೆ. ಚಿ|| ಯು March, April ನಲ್ಲಿ ಬರುವ ನಿರೀಕ್ಷಣೆ ಇದೆ.

ಇನ್ನೊಂದು ಸಣ್ಣ ವಿಷಯ. M.P.M,S.B.M ನಲ್ಲಿ Feb. 4 ನೇ ತಾರೀಖಿಗೆ Mature ಆಗುವ ನನ್ನ F.D ಒಂದಿದೆ. ಅದನ್ನು ಇನ್ನೂ 6 ತಿಂಗಳು (180 days) Renew ಮಾಡುವ ಅಪೇಕ್ಷೆ. ಚಿ|| ಯ ವಿವಾಹದ ವೇಳೆಗೆ ಸಿಗಲಿ ಎಂಬ ಆಸೆ. ಅದಕ್ಕೇನು ಮಾಡಬೇಕು? Manager ಗೆ F.D. receipt ನ್ನು Regd.

post ಮೂಲಕ ಕಳಿಸಿದರೆ ಸಾಕೇ ಎಂಬುದನ್ನು ವಿಚಾರಿಸಿ ಕೂಡಲೆ ಬರಿ.

ಚಿ॥ ಗಳಿಗೆಲ್ಲಾ ಆಶೀರ್ವಾದಗಳು

ಇತಿ ನಿನ್ನವ

ಕುಮಾರಸ್ವಾಮೀ

೪೯೪

ಗೃಹಪ್ರವೇಶ

कुशलम् श्री: ಮೈಸೂರು

12.3.98

ಶ್ರೀಕಂಠ !

ನಿನ್ನ ಕಾರ್ಡು ತಲಪಿತು. ನಿನ್ನ ಹಿಂದಿನ ಕಾಗದ ತಲಪಿತ್ತು. Renew ಮಾಡಿದ F.D. receipt ಕೂಡ MPM Bank ನಿಂದ ಬಂದಿತ್ತು, ನಿನಗೆ ಉತ್ತರ ಬರೆಯಬೇಕೆಂದು ಕಾಗದವನ್ನು ಮೇಲೆಯೇ ಇಟ್ಟುಕೊಂಡಿದ್ದೆ ಆಮೇಲೆ ಸುಮಾರು ಯಾರ್‍ಯಾರಿಗೋ, ಕಾಗದಗಳನ್ನು ಬರೆದೆ. ನಿನಗೂ ಬರೆದಿದ್ದೇನೆ ಎಂದುಕೊಂಡು ಬಿಟ್ಟಿದ್ದೇನೆ. ಈಗ ಇಲ್ಲ ಎಂದು ತಿಳಿಯಿತು. Kindly excuse me.

ಗೃಹಪ್ರವೇಶಕ್ಕೆ ನೀನು ಬರೆದಿರುವುದು ಸರಿಯಾಗಿದೆ (ಸೂತ್ರಕಾರರ ಅಭಿಮತಕ್ಕೆ). ಕೊನೆಯಲ್ಲಿ ಕಲಶದ ನೀರಿನಿಂದ ಮನೆ ಒಳಗೆ ಸುತ್ತಲೂ ಪರಿಷೇಚನದಂತೆ ಮಾಡಬೇಕು (ಶಿವಗ್‌ಂ ಶಿವಮ್). ಅದೊಂದೇ ನೀನು ಬಿಟ್ಟಿದ್ದೀಯೆ. ಬಾಕಿ ಎಲ್ಲ ಯಥಾವತ್ತಾಗಿದೆ.

ಇದನ್ನು ಬಾಡಿಗೆ ಮನೆಗೆ ಹೋಗುವಾಗೆಲ್ಲಾ ಮಾಡಬೇಕಾಗಿಲ್ಲ, ಸ್ವಂತ ಮನೆಗೆ ಪ್ರವೇಶ ಮಾಡುವುದಾದರೆ ಸಾಕು. ತಮ್ಮ ಸ್ವಂತ factory ಗೇ ಪ್ರವೇಶವಾದರೂ ಮಾಡಬಹುದು. Ist Floor ಕೇವಲ addition ಆದರೆ ಬೇಕಿಲ್ಲ. ಅದನ್ನೂ ಪೂರ್ಣವಾದ ಒಂದು ವಾಸಗೃಹದಂತೆಯೇ ಕಟ್ಟಿದ್ದರೆ ಮಾಡುವುದು ಯುಕ್ತ (ಒಟ್ಟಿನಲ್ಲಿ ಒಂದು ಸಂಸಾರವು ವಾಸಮಾಡುವಂತಿದ್ದರೆ. ತಾವೇ additional ಆಗಿ ಓಡಾಡಲು ಮಾಡಿಕೊಂಡರೆ ಬೇಕಾಗಿಲ್ಲ).

ಈ ಕಾರ್ಯಕ್ರಮದಲ್ಲಿ ಹಿಂದಿನ ದಿವಸವೇನೂ ಮಾಡಬೇಕಾದ್ದಿಲ್ಲ, ಅದೊಂದು ದುರಭ್ಯಾಸ ಕರ್ಣಾಟಕದಲ್ಲಿ ಎಲ್ಲಾ ಕಡೆಯಲ್ಲೂ ಹರಡಿದೆ (ತಮಿಳುನಾಡಿನಲ್ಲಿ ಇಲ್ಲ). ರಾತ್ರಿ ಹೋಗಿ "ರಾಕ್ಷೋಘ್ನ ಹೋಮ" ಅಂತ ಮಾಡುತ್ತಾರೆ. ಅದನ್ನು ನಾನು ದುರಭ್ಯಾಸ ಎಂತಲೇ ಹೇಳುತ್ತೇನೆ. ಮೊದಲನೆಯದಾಗಿ ಯಜಮಾನ ಗೃಹಪ್ರವೇಶ ಮಾಡದೆ, ವಾಸ್ತುಹೋಮ ಮಾಡದೆ, ಒಳಗಡೆ ಬೇರೆ ಹೋಮ ಯಾವುದನ್ನೂ ಮಾಡಲು ಅವಕಾಶವಿಲ್ಲ, ಪುರೋಹಿತ ಪ್ರವೇಶಮಾಡಿ ಅಗ್ನಿಪ್ರತಿಷ್ಠೆ ಮಾಡಿ ಹೋಮ ಮಾಡುವುದು ಸರ್ವಥಾ ಅನುಚಿತ.

ಎರಡನೆಯದಾಗಿ ನಮ್ಮ ವೈದಿಕ ಮರ್ಯಾದೆಯಲ್ಲಿ, ಅಸ್ತಮಾನವಾದ ಮೇಲೆ ಯಾವ ಹೋಮವನ್ನೂ ಮಾಡಕೂಡದು (ಔಪಾಸನ, ಅಗ್ನೀಹೋತ್ರ ಹೊರತಾಗಿ). ಯಾವ ಹೋಮವಿದ್ದರೂ ಸೂರ್ಯೋದಯವಾದ ಮೇಲೆಯೇ ಮಾಡಬೇಕು. ಅದಕ್ಕೇ ವಿವಾಹಾದಿಗಳನ್ನು ಮಧ್ಯರಾತ್ರಿಯಲ್ಲಿ ಮಾಡಿದರೂ ಪಾಣಿಗ್ರಹಣ, ಸಪ್ತಪದಿ, ಪ್ರಧಾನಹೋಮಗಳನ್ನು ಉದಯಾನಂತರವೇ ಮಾಡುತ್ತಾರೆ. ಆದ್ದರಿಂದ ಹಿಂದಿನ ದಿನ ರಾತ್ರಿ ಹೋಗಿ ಮಾಡುವುದು ಸರ್ವಥಾ ನಿಷಿದ್ಧ. ಹೇಗೆ ಬಂದಿದೆ ಎಂದು ಕೇಳಿದರೆ ನಾನು ಉತ್ತರ ಹೇಳಲಾರೆ. ಈಗ ಅನೇಕ ಅವಿವೇಕ ಆಚಾರಗಳು ಬಂದು ಸೇರಿರುವಂತೆ ಇದೂ ಒಂದು ಬಂದು ಸೇರಿಕೊಂಡಿದೆ ಅಂತ ಹೇಳಬೇಕು.

ಅಮ್ಮಾಮಿಯು 8 ದಿನಗಳ ಕೆಳಗೆ ಗೋವಾದಿಂದ ಬಂದಳು. ನನ್ನ ವನವಾಸ! ಮುಗಿದಂತಾಯಿತು. ಬೇಜಾರಾಗಿ ಹೋಗಿತ್ತು. ಚಿ॥ ಯು ಈಗ June ನಲ್ಲಿ ಬರುತ್ತೇನೆ ಎಂದು ಹೇಳುತ್ತಿದ್ದಾನೆ. Thesis ಬರೆಯುತ್ತಿದಾನಂತೆ,

ನಾವು ಆರೋಗ್ಯ. ಚಿ॥ ಗಳಿಗೆ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ,

ಸೂರ್ಯೋದಯವಾದ ಮೇಲೆ :

ಹಾಲಿ ವಾಸವಾಗಿರುವ ಮನೆಯಲ್ಲಿ :

ದೇವರ ಪೂಜೆ

ಔಪಾಸನ

ಆಮೇಲೆ ದಂಪತಿಗಳು ಪರಿವಾರದೊಡನೆ ಔಪಾಸನಾಗ್ನಿ ಜೊತೆಯಲ್ಲಿ ನೂತನ ಗೃಹಪ್ರವೇಶ.

ಅಗ್ನಿ ಪ್ರತಿಷ್ಠಾಪನೆ

ಕಲಶಕ್ಕೆ ಷೋಡಶೋಪಚಾರ – ವಾಸ್ತು ಪೂಜೆ.

ಅಗ್ನಿಮುಖದಿಂದ ಕೂಷ್ಮಾಂಡಹೋಮ, ಶ್ರೀ ಗಣಪತಿ ಹೋಮ, ಶ್ರೀ ರುದ್ರಹೋಮ, ಶ್ರೀ ಪುರುಷಸೂಕ್ತ ಹೋಮ, ಶ್ರೀಸೂಕ್ತ ಹೋಮ, ವಾಸ್ತು ಹೋಮ

ಮಂಗಳಾರತಿ

ಕಲಶದ ಜಲದಿಂದ ಗೃಹಕ್ಕೆ ಪರಿಷೇಚನೆ ಮತ್ತು ಪ್ರಾಶನ.

೪೮೫

ಬೂದಗುಂಬಳಕಾಯಿ

ರಾಕ್ಷೋಘ್ನ ಹೋಮ ; ರುದ್ರಾಭಿಷೇಕ ಮಾಡಲು ನ್ಯಾಸ ಮಾಡುವುದು, ಪ್ರಾಣಾಯಾಮ

कुशलम् श्री: MYSORE

31.3.98

ಶ್ರೀಕಂಠ !

ನಿನ್ನ ಕಾಗದ ತಲಪಿತು. ನಿನ್ನ ಮಗನು ವಿದೇಶ ಪ್ರವಾಸವನ್ನು successful ಆಗಿ ಮಾಡಿಕೊಂಡು ಬಂದದ್ದನ್ನು ಕೇಳಿ ಸಂತೋಷವಾಯಿತು. ಅವನು ಇತೋಪ್ಯತಿಶಯವಾಗಿ ಅಭಿವೃದ್ಧಿಗೆ ಬರಲೆಂದು ಪ್ರಾರ್ಥನೆ ಮಾಡುತ್ತೇನೆ ಮತ್ತು ಹಾರ್ದಿಕವಾಗಿ ಆಶೀರ್ವದಿಸುತ್ತೇನೆ.

1) ಗೃಹಪ್ರವೇಶದಲ್ಲಿ ಮನೆ ಸುತ್ತ ನೂಲು ಕಟ್ಟುವುದು, ಬೂದುಗುಂಬಳಕಾಯಿ ಒಡೆದು ಅರಿಶಿನ ಕುಂಕುಮ ಹಾಕಿ ಸುತ್ತಲೂ ಬಲಿ ಇಡುವುದು ಇವೆಲ್ಲಾ ಅವೈದಿಕ. ಹಳೇ ಕಾಲದಲ್ಲಿ ಪ್ರಾಯಃ ಕಾಡು ಜನರು ತಿಳಿವಳಿಕೆಯಿಲ್ಲದೆ ಮಾಡುತ್ತಿದ್ದ ಪದ್ಧತಿಗಳು. ಕುಂಬಳಕಾಯಿ ಒಡೆದುಹಾಕಿ ಇಡುವದಂತೂ ಆಡನ್ನೇ ಬಲಿಕೊಡುವುದರ ಪ್ರತ್ಯಾಮ್ನಾಯ. ಹಿಂದಿನ ಕಾಲದಲ್ಲಿ ಮನೆ ನಿಲ್ಲಬೇಕಾದರೆ, ಸೇತುವೆ, Dam ಇತ್ಯಾದಿಗಳು ನಿಲ್ಲಬೇಕಾದರೆ ಪಶುವನ್ನು (ಮನುಷ್ಯರನ್ನೂ) ಬಲಿಕೊಡುತ್ತಿದ್ದರು (ಅಜ್ಞಾನ ವಿಜೃಂಭಿತ). ಪಶುವನ್ನು ಕೊಲ್ಲಲು ಇಷ್ಟವಿಲ್ಲದೆ ಈಗ ಕುಂಬಳಕಾಯಿ, ಕುಂಕುಮ (ಎಲ್ಲಾ ರಕ್ತ ಮಾಂಸಗಳಂತೆ ಕಾಣುತ್ತದೆ) ಇತ್ಯಾದಿಗಳನ್ನು ಉಪಯೋಗಿಸುತ್ತಾರೆ. It is the crudest form of worship. ಅದೇನೋ ಚೆನ್ನಾಗಿರುತ್ತಂತೆ!!!...ನನಗೇನೋ ಅಸಹ್ಯ.

ರಾಕ್ಷೋಘ್ನ ಹೋಮವೆಂದರೆ ಉದಕಶಾಂತಿಯಲ್ಲಿ ಹೇಳುವ "ಕೃಣುಷ್ವಪಾಜಃ..." ಎಂಬ ಮೊದಲನೇ ಅನುವಾಕದಿಂದ ಹೋಮ ಮಾಡುವುದು. ಇದು ಸಂಹಿತೆಯ ಮೊದಲನೆ ಕಾಂಡದಲ್ಲಿ ಬರುತ್ತದೆ. ಅದಕ್ಕೆ ರಾಕ್ಷೋಘ್ನಸೂಕ್ತವೆಂದು ಹೆಸರು. ದೇವತೆಗಳು ಅಸುರರೊಡನೆ ಯುದ್ಧಕ್ಕೆ ಹೊರಟಾಗ ಈ ಸೂಕ್ತದಿಂದ ಹೋಮ ಮಾಡಿ ಹೊರಟದ್ದರಿಂದ ರಾಕ್ಷಸಸಂಹಾರ ಸುಲಭವಾಯಿತು ಎಂದು ಹೇಳುತ್ತಾರೆ. ಆದ್ದರಿಂದ ನಮಗೂ ಯಾರಾದರೂ ರಾಕ್ಷಸರಂಥ ಶತ್ರುಗಳಿದ್ದರೆ ತನ್ನಿವಾರಣಾರ್ಥವಾಗಿ ಈ ಹೋಮವನ್ನು ಮಾಡಬಹುದೆಂದು ಹೇಳುತ್ತಾರೆ. ಅದು ಕೇವಲ ಅಗ್ನಿಪ್ರಾರ್ಥನೆ ಅಷ್ಟೆ. ಅದನ್ನು ಗೃಹಪ್ರವೇಶದಲ್ಲಿ ಯಾಕೆ ಮಾಡಬೇಕೋ ತಿಳಿಯದು. ನಮಗಿಂತ ಮುಂಚೆ ರಾಕ್ಷಸರೇ ಅದರೊಳಗೆ ಬಂದು ಕೂತಿರುತ್ತಾರೆಂದು ನಾವ್ಯಾಕೆ ಕಲ್ಪಿಸಿಕೊಳ್ಳಬೇಕೆಂದು ತಿಳಿಯಲಿಲ್ಲ. ಹಾಗೆ ಎಂಥ ರಾಕ್ಷಸರಿದ್ದರೂ ವಾಸ್ತೋಷ್ಪತಿಯ ಹೋಮ, ಪ್ರಾರ್ಥನೆಗಳಾದ ಮೇಲೆ ಅವರ್ಯಾರೂ ಉಳಿಯಲು ಸಾಧ್ಯವಿಲ್ಲ. ಆದ್ದರಿಂದ ರಾಕ್ಷೋಘ್ನ ಹೋಮವೆನ್ನುವುದು ಅನುಕ್ತ, ಅನುಪಯುಕ್ತ, ಅನವಶ್ಯಕ.

2) ನ್ಯಾಸವೆಂದರೆ ಇಡುವುದು ಎಂದರ್ಥ. "ಸೋऽಹಂ ಭಾವೇನ ಪೂಜಯೇತ್" (ನಾನೇ ಅವನು–ಪರಮಾತ್ಮ– ಎಂಬ ಭಾವನೆಯಿಂದ ಪೂಜಿಸಬೇಕು) ಎಂಬ ನ್ಯಾಯದಂತೆ, ನಾವೇ ಈಶ್ವರನೆಂದು ಭಾವಿಸಲು ಅನುಕೂಲವಾಗಲು, ನಮ್ಮ ದೇಹದಲ್ಲಿಯೇ ಈಶ್ವರನಲ್ಲಿರುವ ಎಲ್ಲಾ ದೇವತೆಗಳನ್ನೂ ಸ್ಥಾಪನೆ ಮಾಡಿಬಿಟ್ಟರೆ, ನಾವೇ ರುದ್ರರಂತೆ ಆಗಬಹುದೇನೋ ಎಂಬ ಭಾವನೆಯಿಂದ ಈ ನ್ಯಾಸಗಳನ್ನು ಮಾಡಿದ್ದಾರೆ (ಲಘುನ್ಯಾಸ, ಮಹಾನ್ಯಾಸ ಇತ್ಯಾದಿ). ಬರೀ ಭಾವನೆ ಬಂದರೆ ಸಾಕು ಎಂದು ಹೇಳಬಹುದು. ಆದರೆ ಆ ಮಂತ್ರಗಳನ್ನೂ, ಅರ್ಥಗಳನ್ನೂ ನೋಡಿದರೆ ನಮಗೆ ಯಾವ ದೇವತೆಯ ಭಾವನೆಯೂ ಬರಲು ಸಾಧ್ಯವಿಲ್ಲ. ಆದ್ದರಿಂದ ಗಂಭೀರವಾಗಿ ನಿನಗೆ ಯಾವ ಯಾವ ಮಂತ್ರಗಳನ್ನು ಹೇಳಿದರೆ ಆನಂದ ಉಂಟಾಗುತ್ತೋ ಅವುಗಳನ್ನು ಹೇಳಿಕೊಂಡು ಅಭಿಷೇಕ ಮಾಡು. ಲಘುನ್ಯಾಸವೂ ಬೇಡ, ಮಹಾನ್ಯಾಸ ಮೊದಲೇ ಬೇಡ. ಅಭಿಷೇಕವೆಂಬುದು ದೇವತೆಗೆ ಮಾಡುವ ಒಂದು ಉಪಚಾರ. ಆ ದೇವತಾ ಪ್ರಾರ್ಥನೆ ಮಾಡುತ್ತಾ ಅಭಿಷೇಕ ಮಾಡಿದರಾಯಿತು.

3) ಪ್ರಾಣಾಯಾಮದಲ್ಲಿ ಪೂರಕಕ್ಕೆ ಎರಡರಷ್ಟು ರೇಚಕ, ಮೂರರಷ್ಟು ಕುಂಭಕವೆಂದು ಹೇಳುತ್ತಾರೆ. ಕುಂಭಕವನ್ನು ಆದಷ್ಟು ಜಾಸ್ತಿ ಮಾಡಬೇಕು. ಅದಕ್ಕೇ ಕುಂಭಕ ಮಾಡುವಾಗ ಮಾನಸಿಕವಾಗಿ ಮೂರು ಬಾರಿ "ಓಂ ಭೂಃ...ಓಂ" ಎಂಬ ಮಂತ್ರವನ್ನು ಧ್ಯಾನ ಮಾಡಬೇಕು. ರೇಚಕ ಸಾಮಾನ್ಯವಾಗಿ ಅವಸರದಲ್ಲಿ ಬೇಗ ಹೋಗಿ ಬಿಡುತ್ತದೆ. ಹಾಗೆ ಮಾಡದೆ ಆದಷ್ಟು Control ಮಾಡಿ ಬಿಡಬೇಕು. ಅದಕ್ಕೇ ಅದು ಪೂರಕದ ಎರಡರಷ್ಟಿರಬೇಕೆಂದರು. ಇವೆಲ್ಲಾ ಕೇವಲ Guidance ಗೆ. ಮುಖ್ಯವಾಗಿ ಉಸಿರೆಳೆದು, ನಿಲ್ಲಿಸಿ, ಬಿಡಬೇಕು. ಇದೇ ಪ್ರಾಣಾಯಾಮ.

ಇತಿ ನಿನ್ನವ

ಕುಮಾರಸ್ವಾಮೀ

೪೮೬

ಪ್ರಾಣಾಯಾಮ ; ಅಷ್ಟಾವಧಾನ ಸೇವೆ

कुशलम् श्री: ಮೈಸೂರು

27-4-98

ಶ್ರೀಕಂಠ !

ನಿನ್ನ 7.4.98 ರ ಕಾಗದ ತಲಪಿತು. ಸುಮ ಮಕ್ಕಳು ಎಲ್ಲಾ ಬಂದಿದ್ದುದರಿಂದ ಉತ್ತರ ಬರೆಯಲು ತಡವಾಯಿತು. ನಾನು ಬರೆದಿದ್ದ ಎಲ್ಲಾ ಕೆಲಸಗಳನ್ನೂ ಮಾಡಿರುವುದಕ್ಕಾಗಿ ನನ್ನ ಅನಂತ ಕೃತಜ್ಞತೆಗಳು. Pass bookಗೆ entry ಮಾಡಿಸಿ ನೀನೇ ಇಟ್ಟುಕೊಂಡಿರು. ನಾನು ಯಾವಾಗಲಾದರೂ ಬಂದಾಗ ತೆಗೆದುಕೊಳ್ಳುತ್ತೇನೆ.

1) ಪ್ರಾಣಾಯಾಮವನ್ನು ನಾನು ಬರೆದಿರುವ ರೀತಿಯಲ್ಲಿಯೇ ನಿತ್ಯ ಮಾಡುತ್ತೇನೆ. ಬೆಳಗಿನ ಸಂಧ್ಯಾವಂದನೆಯಲ್ಲಿ 15, ಸಾಯಂಕಾಲ 15. ಆದರಿಂದ ನಿಜವಾಗಲೂ ದೇಹ ಬಹಳ ಹಗುರವಾಗಿರುತ್ತದೆ. ಅದು ಪ್ರಾಣಾಯಾಮ. ಪ್ರಾಣಸ್ಯ ಆಯಾಮಃ – ಪ್ರಾಣವಾಯುವನ್ನು ತಡೆಗಟ್ಟುವುದು.

2) ಅಷ್ಟಾವಧಾನ ಸೇವೆಯಲ್ಲಿ ಋಗ್ವೇದಕ್ಕೆ ಪುರುಷಸೂಕ್ತದಲ್ಲಿ ಬರುವ 16 ಮಂತ್ರಗಳಲ್ಲಿ (ಋಗ್ವೇದರೀತ್ಯಾ) ಯಾವುದನ್ನು ಬೇಕಾದರೂ ಹೇಳಬಹುದು. ಯಜುರ್ವೇದಕ್ಕೆ ರುದ್ರದಲ್ಲಿ ಮೊದಲನೆಯ 15 ಮಂತ್ರಗಳಲ್ಲಿಯೇ **ದ್ರಾಪೇ ಅಂಧಸಸ್ಪತೇ ಮತ್ತೆ ಸಹಸ್ರಾಣಿ ಸಹಸ್ರಶಃ** ಎಂಬ ಅನುವಾಕಗಳಲ್ಲಿನ ಯಾವುದಾದರೂ ಒಂದು ಮಂತ್ರವನ್ನು ಹೇಳಬಹುದು. ಅವೆಲ್ಲಾ ಎರಡೇ ವಾಕ್ಯಗಳಿಗೆ ಒಂದು ಮಂತ್ರ.

ಸಾಮವೇದಕ್ಕೆ 'ಏತತ್ಸಾಮ ಗಾಯನ್ನಾಸ್ತೇ ಹಾ' ಧಾರಾಳವಾಗಿ ಹೇಳಬಹುದು. ಅಥರ್ವಣವೇದಕ್ಕೆ ಅಥರ್ವಶೀರ್ಷ ಉಪನಿಷತ್ತಿನ 10 ಮಂತ್ರಗಳಲ್ಲಿ (ಮಂತ್ರ ವಿಭಾಗ ನಿನಗೆ ಬರೆದುಕೊಟ್ಟಿರುವ ಜ್ಞಾಪಕ) ಯಾವುದನ್ನು ಹೇಳಿದರೂ ಸರಿ. ಪೂರ್ತಿ ಹೇಳುವುದು ಅಗತ್ಯವಿಲ್ಲ. Time ಇದ್ದು ಜನಗಳೂ ತಾಳ್ಮೆಯಿಂದ ಕೇಳುವುದಾದರೆ 2, 3, 4 ಮಂತ್ರಗಳನ್ನು ಅಥವಾ ಪೂರ್ತಿ ಸೂಕ್ತವನ್ನೂ ಹೇಳಬಹುದು.

ಒಟ್ಟಿನಲ್ಲಿ–ಹೇಳುವುದು ಹಿತವಾಗಿರಬೇಕು, ಮಿತವಾಗಿರಬೇಕು. ನಮ್ಮ ಪಾಂಡಿತ್ಯಪ್ರದರ್ಶನ ಆಗಬಾರದು.

ನಾವು ಇಲ್ಲಿ ಆರೋಗ್ಯವಾಗಿದ್ದೇವೆ. ಚಿ|| ಯು ಜೂನ್ ಕೊನೆಯಲ್ಲಿ ಬರುವ ನಿರೀಕ್ಷೆ ಇದೆ. ಅದುವರೆಗೂ ನಾವು ಇಲ್ಲಿಯೇ ಇರಬೇಕು.

ಮಂಜುನಾಥ್ ಆರೋಗ್ಯವಾಗಿರುವರೇ? ಅವರು ಭದ್ರಾವತಿಗೆ ಬರಬೇಕೆಂದು ಪ್ರತಿ ಕಾಗದದಲ್ಲಿಯೂ ಆಹ್ವಾನ ನೀಡುತ್ತಿರುತ್ತಾರೆ. ಯದ್ಯಪಿ ಅವರ ಆಹ್ವಾನಕ್ಕೆ ನಾನು ಕೃತಜ್ಞ ನಿಜ. ಆದರೂ ಸುಮ್ಮಸುಮ್ಮನೆ ಊರು ಬಿಟ್ಟು ಬರಲು ಮನಸ್ಸು ಒಡಂಬಡುವುದಿಲ್ಲ. ಆದ್ದರಿಂದ ಇನ್ನೂ ಬಂದಿಲ್ಲ ಎಂದು ತಿಳಿಸು.

ಚಿ|| ಗಳಿಗೆ ಆಶೀರ್ವಾದಗಳು

ಇತಿ ನಿಮ್ಮವ

ಕುಮಾರಸ್ವಾಮೀ

೪೯೭

ಸಮುದ್ರಯಾನ ; ಶ್ರಾದ್ಧ

ಪೂರ್ವಪಂಕ್ತಿ ; ಗಾಯತ್ರೀ ಜಪ, ಮನೆಯಲ್ಲಿ ಪೂಜೆಯಾದ ಮೇಲೆ

ಕುಶಲಮ್ ಶ್ರೀ: MYSORE

13.7.98

ಶ್ರೀಕಂಠ !

ನಿನ್ನ ಕಾಗದ ತಲಪಿತು. ನೀನು ಕಳಿಸಿದ್ದ ಹಲ್ಲುಪುಡಿಯೂ ತಲಪಿತು. ಬಹ...ಳ Thanks. ನಿನ್ನ ಕಾಗದಕ್ಕೆ ಉತ್ತರ ಬರೆಯಲು ಪುರಸತ್ತೇ ಆಗಲಿಲ್ಲ. ಈಗ postal strike ಬೇರೆ ಆರಂಭವಾಗಿದೆ. ಹೇಗಾದರೂ ಆಗಲಿ ಅಂತ ಹೇಳಿ ಇವತ್ತು ಪುರಸತ್ತು ಇದ್ದುದರಿಂದ ಬರೆಯಲು ಕೂತಿದ್ದೇನೆ.

1) ಸಮುದ್ರಯಾನ ನಿಷೇಧವೇನೋ ಇದೆ. ನಿಜ. ಆದರೆ ಅದು ಈಚಿನ ಸ್ಮೃತಿಗಳಲ್ಲಿದೆ. ಸೂತ್ರಕಾರರು ಯಾರೂ ಅದರ ಬಗ್ಗೆ ಉಲ್ಲೇಖವಮಾಡಿಲ್ಲ. ಕಲಿವರ್ಜ್ಯ(ಕಲಿಯುಗದಲ್ಲಿ ಬಿಡಬೇಕಾದದ್ದು) ಪ್ರಕರಣದಲ್ಲಿ ಸಮುದ್ರಯಾತ್ರಾಸ್ವೀಕಾರಃ ಎಂದು ಸೇರಿಸಿದ್ದಾರೆ. ಆ ನಿಷೇಧಕ್ಕೆ ಕಾರಣ ಏನೂ ಗೊತ್ತಿಲ್ಲ. ನಮ್ಮ ಹಿರಿಯರು ಹೇಳುತ್ತಿದ್ದುದು, "ಸಮುದ್ರದಲ್ಲಿ ತಿಂಗಳುಗಟ್ಟಲೆ ಹೋಗಬೇಕಾಗುತ್ತದೆ. ನೀರಿನಮೇಲೆ ಸಂಧ್ಯಾವಂದನೆ ಮಾಡುವುದು ನಿಷಿದ್ಧ. ಆದ್ದರಿಂದ ತಿಂಗಳುಗಟ್ಟಲೆ ಸಂಧ್ಯಾವಂದನೆ ಬಿಟ್ಟುಹೋಗುತ್ತದೆ. ಆಗ ಅಬ್ರಾಹ್ಮಣನಾಗುತ್ತಾನೆ" ಎಂದು. ಶಿಖೆಯಿಲ್ಲದೆ, ಕಚ್ಚೆ ಬದ್ಧನಲ್ಲದೆ ಸಂಧ್ಯಾವಂದನಾದಿಗಳನ್ನು ಮಾಡುವುದು; ಸಮುದ್ರದ ಮೇಲೆ, ಪರದೇಶದಲ್ಲಿ, ಸಂಧ್ಯಾವಂದನೆ ಮಾಡುವಷ್ಟೇ ನಿಷೇಧ. ಆದರೆ ಅವುಗಳಿಗೆಲ್ಲಾ License ಕೊಟ್ಟು ಬಿಟ್ಟಿದ್ದಾರೆ. ಇದಕ್ಕೆ ಯಾಕೆ ಇಷ್ಟು ಪ್ರಾಧಾನ್ಯ ಕೊಟ್ಟರೋ ಗೊತ್ತಿಲ್ಲ. ಈಗಂತೂ ತಿಂಗಳುಗಟ್ಟಲೆ ಸಮುದ್ರದ ಮೇಲೆ ಹೋಗುವುದು ಎನ್ನುವುದು ಇಲ್ಲವೇ ಇಲ್ಲ. ಒಂದು ದಿನದೊಳಗೆ ಪ್ರಯಾಣ ಮುಗಿಯುತ್ತದೆ. ಆದ್ದರಿಂದ ಸಂಧ್ಯಾವಂದನೆ ಬಿಟ್ಟುಹೋಗುವ ಪ್ರಶ್ನೆಯೇ ಇಲ್ಲ. I prefer a righteous person who has gone to foreign countries several times to one who feigns patriotism but has committed all sorts of unrighteous deeds.

ಮೊನ್ನೆ...ನ ಮಗನಿಗೆ ಮದ್ರಾಸಿನಲ್ಲಿ ಮದುವೆಯಾಯಿತು. ನನ್ನ ಮೊಮ್ಮಗಳು ಚೇತನ್ ಹೋಗಿದ್ದಳು. ಅವಳು ಹೇಳುತ್ತಾಳೆ, "ಅಜ್ಜ! ಅವನು ಅಗ್ನಿಯ ಮುಂದೆ ಕೂತು ಬೇಜಾರಿನಿಂದ ಆಡುವುದನ್ನು ನೋಡಿದರೆ, ಎರಡು ಕೆನ್ನೆಗೆ ಕೊಟ್ಟು ಎಳೆದು ಹಾಕಿ ಬಿಡೋಣ ಅನ್ನಿಸುತ್ತಿತ್ತು" ಎಂದು. ಇಂಥಾ ಅಶ್ರದ್ಧೆ ಇರುವವರು ಭಾರತದಲ್ಲಿದ್ದರೇನು? ಪರದೇಶಕ್ಕೆ ಹೋದರೇನು? ಆ...ನ ಮಗ ಸೊಸೆ ಇಲ್ಲಿಗೆ ಬಂದು ಸತ್ಯನಾರಾಯಣ ವ್ರತ ಮಾಡಿದರಂತೆ. ನಮಗೂ ಆಹ್ವಾನವಿತ್ತು. ನಾನು ಹೋಗಲಿಲ್ಲ. ಹೋದವರು ಹೇಳಿದರು. ಆ ಹುಡುಗನು "ನನ್ನ ಕೈಲಿ ಆಗೋಲ್ಲ. ನಾನು ಎದ್ದು ಹೋಗ್ತೀನಿ" ಅನ್ನುತ್ತಿದ್ದನಂತೆ. ಪುರೋಹಿತರು "ಇಲ್ಲ ಇಲ್ಲ, ನಾನು ಸಹಸ್ರನಾಮ ಹೇಳಬೇಕು. ಇನ್ನೂ ಒಂದು ಗಂಟೆ ಕೂತುಕೋಬೇಕು" ಅಂತ ಕೂಗುತ್ತಿದ್ದರಂತೆ. ಕೊನೆಗೆ ಹುಡುಗನ ತಾಯಿ "ಅಷ್ಟೋತ್ತರವೇ ಸಾಕು" ಎಂದು ಸಮನ್ವಯ ಮಾಡಿದಳಂತೆ !! ಇದೇ ಶ್ರದ್ಧೆಯ ವೈಖರಿ! ಇಂತಹವರು "ಪರದೇಶಕ್ಕೆ ಹೋಗಲಿಲ್ಲ. ಭಾರತದಲ್ಲಿಯೇ ಇದ್ದು ನಮ್ಮ ಸಂಸ್ಕೃತಿ ಕಾಪಾಡಿಕೊಂಡಿದ್ದಾರೆ" ಎಂದು ಸಂತೋಷಪಡಬೇಕೇ !!!

2) ಶ್ರಾದ್ಧದಲ್ಲಿ ಪೂರ್ವಪಂಕ್ತಿಭೋಜನ ಎನ್ನುವುದು ಒಂದು ನಿಷಿದ್ಧವಾದ ಕರ್ಮವೆಂದಾಗಲಿ, ಭಯಂಕರವಾದ ಕರ್ಮವೆಂದಾಗಲಿ ಭಾವಿಸಬಾರದು. ಶ್ರಾದ್ಧಭೋಜನ ನಿಷೇಧ ಎಂದು ಯಾರೂ ಹೇಳಿಲ್ಲ. ಪ್ರತ್ಯುತ ಪಿತೃಯಜ್ಞದಲ್ಲಿ ಭಾಗವಹಿಸುವುದು ಪ್ರತಿಯೊಬ್ಬನ ಕರ್ತವ್ಯ. ಹಾಗೆ ನಿಷೇಧವಿದ್ದರೆ ಸೂತ್ರಕಾರರು ನಿಮಂತ್ರಿತ ಬ್ರಾಹ್ಮಣರು ವಿದ್ಯಾವಂತರೂ, ಶೌಚಪರರೂ ಆಗಿರಬೇಕೆಂದು ಹೇಳುತ್ತಲೇ ಇರಲಿಲ್ಲ. Physical ಆಗಿ ತೆಗೆದುಕೊಂಡರೂ, ಶ್ರಾದ್ಧ ಭೋಜನದಲ್ಲಿ ನಿಷೇಧವೇನಿದೆ? ಶ್ರಾದ್ಧದಲ್ಲಿ ಶುದ್ಧವಾದ, ಶುಚಿಯಾದ ಅಡುಗೆ. ಮಾಡುವವರೂ ಶುಚಿಯಾಗಿರುತ್ತಾರೆ. ಹೀಗಿರುವಾಗ ಶ್ರಾದ್ಧ ಭೋಜನವೇ ಒಂದು ಪಾಪ, ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಹೇಳುವುದೆಲ್ಲಾ ಭ್ರಾಂತಿ. ಉಪನಯನ, ವಿವಾಹ ಮಾಡಿದ ಒಂದು ವಾರದಲ್ಲಿ ಪೂರ್ವಪಂಕ್ತಿಗೆ ಹೋಗಬಹುದೇ ಎಂದು ಕೇಳಿದ್ದೀಯ? ಅವತ್ತೇ ಹೋಗಬಹುದು. ಯಾವ ನಿಷೇಧವೂ ಇಲ್ಲ. ವಿವಾಹ, ಉಪನಯನಗಳ ಮುಂಚೆ ನಾಂದೀಶ್ರಾದ್ಧ ಮಾಡುವುದಿಲ್ಲವೇ? ಇವೆಲ್ಲವೂ ಶ್ರಾದ್ಧವು ಸತ್ತವರಿಗೆ ಮಾಡುವುದು ಎಂಬ ಭಯದಿಂದ ಉಂಟಾಗಿರುವ ಅಜ್ಞಾನಭ್ರಾಂತಿ. ಅದನ್ನು ಪಿತೃಯಜ್ಞ ಎಂದು ಕರೆಯುವುದು ಅನೇಕರಿಗೆ ಗೊತ್ತಿಲ್ಲದೆ ಇರಬಹುದು. ಅದೊಂದು ಅತ್ಯಂತ ಪವಿತ್ರವಾದ ಕರ್ಮ. ಅಗ್ನಿಹೋತ್ರಿಗಳು ದರ್ಶೇಷ್ಟಿಯೆಂಬ ದೊಡ್ಡ ಕರ್ಮವನ್ನು ಮಾಡುವ ಹಿಂದಿನ ದಿನ ಪಿಂಡಪಿತೃಯಜ್ಞವನ್ನು ಮಾಡುತ್ತಾರೆ. ಅದಕ್ಕೆ ಬಂದವರೇ ಮಾರನೆದಿನ ಇಷ್ಟಿಗೂ ಬರುತ್ತಾರೆ. ವಿವಾಹ ಉಪನಯನಗಳು ಮಂಗಳಕಾರ್ಯ, ಶ್ರಾದ್ಧವು ಅಮಂಗಳ ಎಂಬ ತಪ್ಪು ತಿಳುವಳಿಕೆ ಎಲ್ಲರಿಗೂ ಬಂದಿದೆ. ಶ್ರಾದ್ಧವು ಖಂಡಿತ ಅಮಂಗಳ ಕಾರ್ಯವಲ್ಲ. ಗೃಹಸ್ಥನಾದ ಮೇಲೆ ಮಾಡಬೇಕಾದ ಸಪ್ತ ಪಾಕಯಜ್ಞಗಳಲ್ಲಿ "ಮಾಸಿಶ್ರಾದ್ಧ" ವೂ ಸೇರಿದೆ. ವಿವಾಹವಾದ ಕೂಡಲೆ ಕೃಷ್ಣಪಕ್ಷ ಬಂತು ಅಂದರೆ ಮಾಸಿಶ್ರಾದ್ಧವನ್ನು ಮಾಡಿಯೇ ತೀರಬೇಕು.

3) ದಿವಸವೂ ಶ್ರಾದ್ಧಭೋಜನಕ್ಕೆ (ಪೂರ್ವಪಂಕ್ತಿಗೆ): ನಿತ್ಯ ಆ ರೀತಿ ಊಟ ಮಾಡುತ್ತಾ ಬಂದರೆ ಅವನ ಆಧ್ಯಾತ್ಮಿಕ ಬೆಳವಣಿಗೆ ಕುಂಠಿತವಾಗುತ್ತದೆಂಬ ಉದಾತ್ತ ಯೋಚನೆಯಿಂದ ಸ್ವಲ್ಪ restrictions ಇಟ್ಟುಕೊ ಎನ್ನುತ್ತಾರೆ. ಶಾಸ್ತ್ರೀಯವಾಗಿ ಯಾವ ನಿಷೇಧವಿಲ್ಲ. It is purely a matter of convenience & health.

4) ಸಾಮಾನ್ಯವಾಗಿ ಶ್ರಾದ್ಧಭೋಜನ ಗುರುವಾಗಿರುತ್ತದೆ. ರಾತ್ರಿ ಊಟ ಬೇಕಾಗುವುದಿಲ್ಲ. ಮಾಡಿದರೆ ದೇಹಕ್ಕೆ ತೊಂದರೆಯಾಗಬಹುದು. ಆದ್ದರಿಂದ ಬೇಡವೆನ್ನುತ್ತಾರೆ.

5) ಪೂರ್ವಪಂಕ್ತಿಭೋಜನ ಮಾಡಿ ಗಾಯತ್ರೀಜಪದಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಅನುಚಿತ. ಶ್ರಾದ್ಧಭೋಜನ ಪಾಪಕಾರ್ಯವೆಂದಾಗುತ್ತದೆ.

6) ಮನೆಯಲ್ಲಿ ಪೂಜೆ ಮಾಡಿಕೊಂಡು ಶ್ರಾದ್ಧದ ಪೂರ್ವ ಪಂಕ್ತಿಗೆ ಧಾರಾಳವಾಗಿ ಹೋಗಬಹುದು. ಇಲ್ಲಿ ಹೆಚ್ಚು ಕಮ್ಮಿ ಪ್ರಶ್ನೆ ಇಲ್ಲ. ಇದು ದೇವಪೂಜೆ. ಅದು ಪಿತೃಪೂಜೆ. ಪೂಜೆ ಮಾಡಿಕೊಂಡು ಹೋಗಲು ಏನೂ ಅಡ್ಡಿ ಇಲ್ಲ. ಪೂಜೆ ಮಾಡಿದ ಮಾತ್ರಕ್ಕೇ ಮನೆಯಲ್ಲಿಯೇ ಊಟ ಮಾಡಬೇಕೆಂಬ ನಿಯಮವೇನೂ ಇಲ್ಲ.

ನೀನು ಹೇಳಿರುವ Music ಪುಸ್ತಕದ ಹೆಸರು ಮರೆತುಹೋಗಿದೆ. ಕ್ಷಮಿಸು. ಪುನಃ ಬರಿ. ಚಿ॥ ಗಳಿಗೆಲ್ಲಾ ಆಶೀರ್ವಾದ ತಿಳಿಸು.

ಶ್ರೀಕಂಠ! ಪಾಪು ಬರುವ ದಿನ ಇನ್ನೂ ಅನಿಶ್ಚಿತವಾಗಿದೆ. Thesis ಮುಗಿಸಲು time ತೆಗೆದುಕೊಳ್ಳುತ್ತಿದೆ. ಅದನ್ನು submit ಮಾಡಿದ ಮೇಲೆ examinersಗೆ 1 ತಿಂಗಳು ಅವಕಾಶ ಕೊಡಬೇಕಂತೆ. ಆಮೇಲೆ ಅವರೆಲ್ಲರೂ ಸೇರಿ, ಅವರೆದುರಿಗೆ ಇವನು defend ಮಾಡಿಕೊಳ್ಳಬೇಕು. ಅವರನ್ನು ಸೇರಿಸುವುದಕ್ಕೇ 1-1½ ತಿಂಗಳಾಗುತ್ತದೆ ಅಂತಾನೆ. ಅಂದರೆ ಇನ್ನೂ 3-4 ತಿಂಗಳುಗಳಾಗಬಹುದು. ಆದ್ದರಿಂದ ನಿನ್ನ ಇಬ್ಬರು ಸ್ನೇಹಿತರಿಗೂ

ಅವನನ್ನು ಕಾಯುವುದು ಬೇಡವೆಂದು ಹೇಳು. ನನ್ನನ್ನು ಕ್ಷಮಿಸಬೇಕೆಂದೂ ಹೇಳು.

ಇತಿ ನಿನ್ನವ
ಕುಮಾರಸ್ವಾಮೀ

೪೯೮

ವೇದ : Conviction

कुशलम् श्री: ಮೈಸೂರು
17.8.98

ಶ್ರೀಕಂಠ !

ನನ್ನ ಹಿಂದಿನ ಕಾಗದ ನಿನಗೆ ತಲಪಿರಬಹುದು (ಸಮುದ್ರಯಾನ, ಶ್ರಾದ್ಧಭೋಜನ ಪ್ರಾಯಶ್ಚಿತ್ತ ಇತ್ಯಾದಿಗಳ ಬಗ್ಗೆ ನೀನು ಕೇಳಿದ್ದೆ). ನಿನ್ನಿಂದ ಉತ್ತರ ಬರಲಿಲ್ಲ. ಪಾಪುವಿನ Insurance premium ಕಳಿಸಬೇಕು. ನೀನು ಊರಿನಲ್ಲಿದ್ದೀಯೋ ಇಲ್ಲವೋ ಎಂದು ತಿಳಿದುಕೊಳ್ಳಲು ಈ ಕಾಗದ ಬರೆಯುತ್ತಿದ್ದೇನೆ. ಈ ಕಾಗದ ಸಿಕ್ಕಿದ ತಕ್ಷಣ ಉತ್ತರ ಬರಿ.

ಈ ತಿಂಗಳು 1,2,3 ಮದ್ರಾಸಿನಲ್ಲಿದ್ದೆ. 2ನೇ ತಾರೀಖು IIT ದೇವಸ್ಥಾನದ ವಾರ್ಷಿಕೋತ್ಸವ ಇಟ್ಟುಕೊಂಡಿದ್ದರು. ಅವತ್ತು ಲಲಿತಾಸಹಸ್ರನಾಮಹೋಮ ಮತ್ತು ನಕ್ಷತ್ರಮಂತ್ರಗಳಿಂದ ಹೋಮಮಾಡಿದ್ದೆ. 1 ಮತ್ತು 3, ನನ್ನ ಶಿಷ್ಯರು computer Srinivasan ರವರ ಮನೆಯಲ್ಲಿ, 1ನೇ ತಾರೀಖು ನಮ್ಮ 4 ಉಪನಿಷನ್ಮಂತ್ರಗಳಿಗೆ ಹೋಮ. 3ನೇ ತಾರೀಖು 5-6 ತಿಂಗಳುಗಳ ಹಿಂದೆ ವಿವಾಹವಾದ ಅವರ ಮಗಳು ಅಳಿಯಂದಿರ ಕೈಯಲ್ಲಿ (ನಾನು ಅವರ ವಿವಾಹಕ್ಕೆ ಹೋಗಲು ಆಗಿರಲಿಲ್ಲ) ಪುರುಷಸೂಕ್ತ ಹೋಮ ಮಾಡಿಸಿದೆ. 3 ದಿನಗಳು ಶುದ್ಧ ವೇದೋಕ್ತ ಕರ್ಮಗಳ ಆನಂದವನ್ನು ನಾನಂತೂ ಅನುಭವಿಸಿದೆ. ಬಾಕಿಯವರೂ ಅನುಭವಿಸಿದರೆಂದು ತಿಳಿಯಿತು. ಮಂತ್ರ ಹೇಳಲು 4-5 ಜನ ಘನಪಾಠಿಗಳಿದ್ದರು. ನಿಶ್ಶಬ್ದದಿಂದ ಕೂತಿರುವ audience, ಅಸ್ಖಲಿತವಾದ ಮಂತ್ರೋಚ್ಚಾರಣೆ, ಶ್ರದ್ಧೆಯಿಂದ ಹೋಮ ಮಾಡುತ್ತಿರುವ ಯಜಮಾನರು, ಎಲ್ಲವೂ ಸೇರಿ ಒಂದು ಅಪೂರ್ವವಾದ ಶೋಭೆ ಉಂಟಾಗಿತ್ತು. ಅದರ ಆನಂದವನ್ನು ಅನುಭವಿಸಿಯೇ ನೋಡಬೇಕು. ನನಗೆ ಸಂತೋಷ ಆಶ್ಚರ್ಯಗಳೆಂದರೆ, ವೇದ ಎಂದರೆ ಏನು ಅಂತಲೇ ತಿಳಿಯದಿದ್ದವರೂ ಕೂಡ, ಎಲ್ಲಾ ಮುಗಿದ ಮೇಲೆ 'ಏನೋ ಆನಂದವಾಗಿತ್ತು. ಈ ತರಹ ನಾವೆಲ್ಲೂ ನೋಡೇ ಇರಲಿಲ್ಲ, ಕೇಳಿಯೂ ಇರಲಿಲ್ಲ' ಎಂದರು. ಶುದ್ಧವಾದ ವೇದೋಕ್ತ ಕರ್ಮಗಳ ಮಹಿಮೆಯೇ ಅದು. ಆಮೇಲೆ ಬೆಂಗಳೂರಿಗೆ ಬಂದೆ. ಸುಬ್ಬುವಿನ (ಸುನಂದನ ಮಗ) ಗೃಹಪ್ರವೇಶ ಮಾಡಿಸಬೇಕಾಗಿತ್ತು. ಆದರೆ ಸುನಂದನನ್ನು Nursing Home ಗೆ admit ಮಾಡಬೇಕಾದ್ದರಿಂದ ಅದನ್ನು postpone ಮಾಡಿದೆವು. ಸರಿ. ಶೈಲು ಮನೆಯಲ್ಲಿಯೇ ಉಪಾಕರ್ಮವನ್ನು ಮಾಡಿಕೊಂಡು ಮೈಸೂರಿಗೆ ವಾಪಸು ಬಂದೆ. ಉಪಾಕರ್ಮಕ್ಕೆ 15-16 ಜನ ಇದ್ದರು ಅಷ್ಟೇ. ಅದರೆ ಚೆನ್ನಾಗಿತ್ತು. ಶೈಲು ಮನೆಯ ಎದುರು ಮನೆಯವರು, ಪಕ್ಕದ ಮನೆಯವರು, ಸಾಯಂಕಾಲ ಬಂದು, "ಇವತ್ತು ಬೆಳಗ್ಗೆ ನಿಮ್ಮ ಮನೆಯಲ್ಲಿ ಮಂತ್ರ ಹೇಳುತ್ತಿದ್ದುದು ನಮ್ಮನ್ನು ಯಾವುದೋ ಲೋಕಕ್ಕೆ ಕರೆದುಕೊಂಡು ಹೋದಂತಿತ್ತು. ನಾವೆಲ್ಲರೂ ಹೊರಗಡೆ ಬಂದು ಕೇಳುತ್ತಾ ನಿಂತಿದ್ದೆವು" ಅಂತ ಹೇಳುತ್ತಿದ್ದುದನ್ನು ಕೇಳಿದೆ. ಅವರೆಲ್ಲರೂ ಬ್ರಾಹ್ಮಣೇತರರು. ಆದರೂ ಶುದ್ಧವಾದ ಆ ಮಹರ್ಷಿಪ್ರಣೀತವಾದ ವೇದಮಂತ್ರಗಳನ್ನು ಕೇಳಿ ಅತ್ಯಂತ ಪ್ರಭಾವಿತರಾಗಿದ್ದಾರೆ. ವೇದ ಮಂತ್ರಗಳ ಈ ಮಹತ್ತ್ವವನ್ನು ಕೇಳಿ ಪುಲಕಾಂಕಿತನಾದೆ. ಇವತ್ತಿನ ಕಾಲದಲ್ಲಿ ಇದು ಎಲ್ಲರ ಕೈಯಲ್ಲೂ ಏಕೆ ಸಾಧ್ಯವಾಗುತ್ತಿಲ್ಲ ಎಂದು ಯೋಚಿಸಿಯೇ ಯೋಚಿಸುತ್ತೇನೆ. ಬಗೆಹರಿಯುತ್ತಿಲ್ಲ. ಒಂದಂತೂ ಶತಃಸಿದ್ಧ. ವೇದಾಧ್ಯಯನ ಮಾಡಿದ ಕೆಲವು ವೈದಿಕರಿಗೇ ಅವರು ಕಲಿತಿರುವುದರಲ್ಲಿ conviction ಸುತರಾಂ ಇಲ್ಲದೆ ಹೋಗಿದೆ. Conviction ಇಲ್ಲದಿರುವಾಗ ಆನಂದ ಉಂಟಾಗುವುದು ಸಾಧ್ಯವೇ ಇಲ್ಲ. ಅವರಿಗೇ ಯಾವಾಗ ಆನಂದವಿಲ್ಲವೋ ಇತರರಿಗೆ ಸಂತೋಷ ಉಂಟುಮಾಡುವುದು ಅಸಾಧ್ಯವಾದ ಮಾತು. ಎರಡನೆಯದಾಗಿ, ಹೇಗೋ ಒಂದು ಹೇಳಿ ಮುಗಿಸಿದರೆ ಸಾಕು, ಫಲಸಿಗುತ್ತದೆಂಬ ಮಿಥ್ಯಾ ನಂಬಿಕೆ. ಫಲ ಏನು ಎಂದು ಕೇಳಿದರೆ ಗೊತ್ತಿಲ್ಲ. ಅದೃಷ್ಟವಾದ್ದು ಏನೋ ಸಿಗುತ್ತದೆಂಬ ಸುಳ್ಳು ನಂಬಿಕೆ. ಈ ಫಲಾಕಾಂಕ್ಷೆಯೇ ನಮ್ಮ ವೇದೋಕ್ತ ಕರ್ಮಗಳ ಸ್ವರೂಪವನ್ನು ಕೆಡಿಸಿ ಹಾಳುಮಾಡಿರುವುದು. ಅದರಿಂದ ಸಿಗುವ ಸಾತ್ತ್ವಿಕಾನಂದವೇ ಫಲ ಎಂದು ಹೇಳುತ್ತಾ ಬಂದಿದ್ದರೆ, ಈ ಅವಸ್ಥೆ ಬರುತ್ತಿರಲಿಲ್ಲವೆಂದು ಕಾಣುತ್ತೆ. ಜತೆಗೆ ಕೆಲವು ವೈದಿಕರಿಗೇ ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವ ಒಲವು, ಅಭಿಮಾನಗಳು. ನಾವು ವೇದಾಭಿಮಾನಿಗಳೇ ಆಗಿದ್ದರೆ, ನಿಜವಾಗಿ, ನಮ್ಮ ವೈದಿಕ ಸಂಸ್ಕೃತಿಯಲ್ಲಿ (ಇಲ್ಲಿ ಸಂಸ್ಕೃತಿಯೆಂದರೆ, ವೇಷಭೂಷಣ, ನಡೆ, ನುಡಿ), ತೀವ್ರವಾದ ಅಭಿಮಾನ ಹೆಮ್ಮೆಗಳು ಇರಬೇಕು. ಹೃದಯವನ್ನೆಲ್ಲಾ ಪಾಶ್ಚಾತ್ಯರಿಗೆ ಮಾರಿಕೊಂಡು, ಕೇವಲ ನಾಲಗೆಯಲ್ಲಿ ವೇದಾಕ್ಷರವನ್ನು ಉಚ್ಚರಿಸಿದರೆ, ಕೇಳುವವರಿಗೆ ಅದರಿಂದ ಆನಂದ ಖಂಡಿತ ಆಗುವುದಿಲ್ಲ. ಪ್ರತ್ಯುತ ತಿರಸ್ಕಾರವೇ ಬರಬಹುದು. ಇದು ನಮ್ಮ ಸಮಾಜದ ದೊಡ್ಡ ನ್ಯೂನತೆ.

ಮೂರನೆಯದಾಗಿ, ಈ ಪವಿತ್ರ ಪರಂಪರೆಯನ್ನು ಸರಿಯಾಗಿ ಕಾಪಾಡದೆ, ಅಕ್ಷರಸ್ಫುಟವಿಲ್ಲದೆ, ಸ್ವರದಾರ್ಢ್ಯವಿಲ್ಲದೆ, ಸಂಸ್ಕೃತ ಅನಭಿಜ್ಞರೆಲ್ಲರೂ ವೇದಾಧ್ಯಯನಕ್ಕೆ ಆರಂಭಿಸಿರುವುದು. ಇದು ಇವತ್ತಿನ ದೊಡ್ಡ ಪಿಡುಗು ಅಂತಲೇ ಹೇಳಬೇಕು. ನಮ್ಮ ಸಮಾಜದ ಬೇರೆ ವಿದ್ಯಾಭ್ಯಾಸಗಳಲ್ಲಿಯೂ ಇದೇ ರೀತಿ ಆಗಿದೆ ನಿಜ. ಆದರೆ ವೇದವಿದ್ಯೆಗೂ ಈ ಅವಸ್ಥೆ ಬರುತ್ತೆ ಅಂದುಕೊಂಡಿರಲಿಲ್ಲ, ಬಂದಿದೆ. ಶೋಚನೀಯ.

ಶ್ರೀಕಂಠ್ಪ! ಏನೋ ಬರೆಯಲು ಆರಂಭಿಸಿಬಿಟ್ಟೆ. ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಮೈಯೆಲ್ಲಾ ಪರಚಿಕೊಳ್ಳುವಂತಾಗುತ್ತದೆ. ದೊಡ್ಡ ದೊಡ್ಡ ವೇದವಿದ್ವಾಂಸರಿದ್ದ ಈ ಮೈಸೂರಿನಲ್ಲಿ ಇವತ್ತು ಉದಕಶಾಂತಿ ಹೇಳಲು 4 ಜನ ಸಿಗುವುದಿಲ್ಲವೆಂದರೆ ನಿನಗೆ ಆಶ್ಚರ್ಯವಾಗಬಹುದು. ಹೀಗೆ ಹೇಳಿದರೆ ಜನಗಳು ನನ್ನನ್ನು "ಅವರು ಬಹಳ Strictು. ತಾವೊಬ್ಬರೇ ವೇದ ಚೆನ್ನಾಗಿ ಹೇಳುವವರು ಎಂಬ ಅಹಂಕಾರ" ಎಂದೆಲ್ಲಾ ಟೀಕಿಸುತ್ತಾರೆ. ಅದರಿಂದ ನನಗೆ ಯಾವ ವಿಧವಾದ ನಷ್ಟವೂ ಇಲ್ಲ. ಆದರೂ ವೇದದ ಪಾವಿತ್ರ್ಯವನ್ನು ತಿಳಿಯದೆ ಹೀಗೆ ಟೀಕೆ ಮಾಡುತ್ತಾರಲ್ಲ ಎಂದು ಸಂಕಟವಾಗುತ್ತದೆ.

ಇರಲಿ, ನೀವೆಲ್ಲಾ ಆರೋಗ್ಯವೆಂದು ನಂಬಿದ್ದೇನೆ. ಎಲ್ಲರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ನಿನ್ನ ಕಾಗದ ಬಂದ ತಕ್ಷಣ Cheque ನ್ನು ಕಳಿಸುತ್ತೇನೆ. ನಾವು ಆರೋಗ್ಯವಾಗಿದ್ದೇವೆ.

ಇತಿ ನಿಮ್ಮವ

ಕುಮಾರಸ್ವಾಮೀ

೪೯೯

ಪೂಜೆ, ಶ್ರಾದ್ಧ

ರಾತ್ರಿಯಲ್ಲಿ ಹೋಮ, ದೇವತೆಯ ಸ್ತೋತ್ರ ಮತ್ತು ಉಪಚಾರ

कुशलम् श्री: MYSORE
24.8.98

ಶ್ರೀಕಂಠ !

ನಿನ್ನ ಕಾಗದ ತಲುಪಿತು. ನಿನ್ನ ಹಾರ್ದಿಕವಾದ ಹೊಗಳಿಕೆ ವಾಕ್ಯಗಳಿಗೆ ಏನು ಹೇಳಬೇಕೆಂದು ಗೊತ್ತಿಲ್ಲ. ನಿನ್ನ ಅಭಿಮಾನಕ್ಕೆ ನಾನು ಋಣಿ.

ಈ....ನ ವ್ಯವಹಾರ ಏನು ಎಂದು ಕೇಳಿದ್ದೀಯೆ. ಹಿಂದೆ ಭದ್ರಾವತಿಯಲ್ಲಿದ್ದಾಗಲೇ ಅವನ ಮಗನಿಗೆ accident ಆಗಿ handicap ಆಗಿದ್ದಾನೆಂದೂ, ಒಂದು STD Booth ಹಾಕಿಕೊಳ್ಳಲು ಮರಿಗೆ ಹೇಳಿ ಸಹಾಯ ಮಾಡಿಸಬೇಕೆಂದೂ ಕೇಳಿದ. ಆಗ ಬರೆದು ಕೊಟ್ಟೆ. ಮರಿ ಸಹಾಯಮಾಡಿ, Booth ಹಾಕಿಸಿಕೊಟ್ಟಿದ್ದಾನೆ. ಜತೆಗೆ ಅವನ ಮೇಲಿನ ಅನುಕಂಪದಿಂದ ನಾನು ಒಂದುಸಾವಿರ ರೂಪಾಯಿ ಕೊಟ್ಟೆ! ಈ ವರ್ಷ Feb. ಯಲ್ಲಿ (ಅಮ್ಮಾಮಿ Goa ಕ್ಕೆ ಹೋಗಿದ್ದರು) ಮನೆಹುಡುಕಿಕೊಂಡು ಬಂದು "VISLಗೆ ಏನೋ supply ಮಾಡುತ್ತಿದ್ದೇವೆ. Urgent ಆಗಿ ದುಡ್ಡು ಬೇಕಾಗಿದೆ. BNV ಗೆ ಒಂದು ಕಾಗದ ಬರೆದುಕೊಟ್ಟರೆ ಕೊಡುತ್ತಾರೆ" ಅಂತ ಹೇಳಿದ. ಸರಿ ಅಂತ ಬರೆದುಕೊಟ್ಟೆ. Amount ಎಷ್ಟು ಅನ್ನುವುದು ಗೊತ್ತಿರಲಿಲ್ಲ. ಆಮೇಲೆ ಅದರ ಬಗ್ಗೆ ನಾನು ಮರೆತೇ ಬಿಟ್ಟಿದ್ದೆ. ಬಾಲುವಿನ ವಿವಾಹ ಸಂದರ್ಭದಲ್ಲಿ, ನರಸಿಂಹನ ಮನೆಗೆ ಶ್ರಾದ್ಧ ಮಾಡಿಸಲು ಹೋಗಿದ್ದಾಗ ಮರಿ,... ರೂ. 30,000 ತೆಗೆದುಕೊಂಡು ಹೋಗಿ, ಮುಖವನ್ನೇ ತೋರಿಸದೆ ಇರುವುದನ್ನು ಹೇಳಿದ. ಆಗಲೇ, ಅವನಿಗೆ ಒಂದು ಕಾಗದ ಬರೆಯೋಣವೆಂದು, ನಿನ್ನನ್ನು ವಿಳಾಸ ತಿಳಿಸುವಂತೆ ಹೇಳಿದೆ – ಈಗ ನೋಡಿದರೆ, ಬರೀ ಸುಳ್ಳು ಹೇಳಿದ್ದಾನೆ. ಅವನಿಗೆ ಯಾವ ವಿಧವಾದ ಅನುಕಂಪವನ್ನೂ ತೋರಿಸಬೇಕಾದ್ದಿಲ್ಲ. ಅವನು ಭದ್ರಾವತಿಗೆ ಬಂದ ತಕ್ಷಣ ಅವನು ಇರುವ ಜಾಗವನ್ನು ಪತ್ತೆಹಚ್ಚಿ, ಕೂಡಲೆ ನನಗೆ phone ಮಾಡಿ ತಿಳಿಸು. ನಾನು ಮರಿಗೆ ತಿಳಿಸುತ್ತೇನೆ. ಮುಂದೆ ಅವರು ಕಾರ್ಯಕ್ರಮ ತೆಗೆದುಕೊಳ್ಳಲಿ ಅಥವಾ ಬೆಂಗಳೂರು ವಿಳಾಸ ಸಿಕ್ಕಿದರೂ ಸರಿಯೇ. ಅವನು VISL ಗೆ ಏನೋ supply ಮಾಡುತ್ತಾನಂತೆ. Purchase officeನಲ್ಲಿಯೋ Acc. Officeನಲ್ಲಿಯೋ ವಿಚಾರಿಸಿದರೆ ಅವನ Where abouts ತಿಳಿಯಬಹುದು. ನನಗೆ ಇಂಥಾ ದುಷ್ಟವ್ಯಕ್ತಿಗಳ ಕೈಯಲ್ಲಿ ಹೇಗೆ ವ್ಯವಹರಿಸುವುದು ಎನ್ನುವುದೇ ತಿಳಿಯುವುದಿಲ್ಲ. ನಿನಗೆ ಅನವಶ್ಯಕವಾಗಿ ತೊಂದರೆ ಕೊಡುತ್ತಿದ್ದೇನೆ. ವಿಧಿಯಿಲ್ಲ. ನನಗೋಸ್ಕರ ಸ್ವಲ್ಪ ಒದ್ದಾಟ ತೆಗೆದುಕೊ. ಆ ದುಡ್ಡಿನ ವ್ಯವಹಾರದಲ್ಲಿ ನನ್ನದು direct ಪಾತ್ರವಿಲ್ಲದಿದ್ದರೂ ನನ್ನನ್ನು ನಂಬಿ ಮರಿಯು ಕೊಟ್ಟಿರುವುದರಿಂದ ನಾನು ನೈತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಆದಕ್ಕೆ ನಿನ್ನನ್ನೂ ಗುರಿಮಾಡುತ್ತಿದ್ದೇನೆ. Kindly excuse me.

1) ಪೂಜೆಗೆ ಮುಂಚೆ, ಶ್ರಾದ್ಧಾದಿಗಳಿಗೆ ಮುಂಚೆ ಏನೂ ಕುಡಿಯದೆ, ತಿನ್ನದೆ ಮಾಡುವುದು ಶ್ರದ್ಧಾದ್ಯೋತಕವೇ ಹೊರತು ಅದರಿಂದಲೇ ಏನೋ ಪುಣ್ಯ ಬರುತ್ತದೆಂದಲ್ಲ. ಅಥವಾ ಕುಡಿದುಬಿಟ್ಟರೆ ಪಾಪ ಬರುತ್ತದೆಂದೂ ಅಲ್ಲ. ಪಿತೃಕಾರ್ಯ, ದೇವತಾಕಾರ್ಯಗಳಲ್ಲಿರುವ ನಮ್ಮ ಅತೀವವಾದ ಶ್ರದ್ಧೆಯಲ್ಲಿ, ಈ ತಿಂಡಿ, ಕಾಫಿ ಎನ್ನುವುದೂ ನಮಗೆ ಕ್ಷುಲ್ಲಕ. ನಮಗೆ ಬೇಕಾಗುವುದೇ ಇಲ್ಲ ಎಂಬ ಭಾವನೆಯನ್ನು ತೋರಿಸುತ್ತದೆ. ವೇದಮಾತೆಯು, ಕೂಷ್ಮಾಂಡಹೋಮ ಪ್ರಕರಣದಲ್ಲಿ "ಪಯೋ ಬ್ರಾಹ್ಮಣಸ್ಯ ವ್ರತಂ" ಎಂದು ಹೇಳಿದಳು. ಅಂದರೆ 3 ದಿನಗಳೂ

ಕೇವಲ ಹಾಲುಕುಡಿದುಕೊಂಡಿದ್ದು ನಿತ್ಯ ಹೋಮ ಮಾಡಬೇಕು. ಆದರೆ ವೇದಮಾತೆಗೇ ನಮ್ಮ ಅಸಾಮರ್ಥ್ಯ ಗೊತ್ತಿರಬೇಕು, ಅದಕ್ಕೇ ಹೇಳಿದಳು. "ಯದಿ ಮನ್ಯೇತೋಪದ ಸ್ಯಾಮೀತಿ, ಓದನಂ ಧಾನಾಸ್ಸಕ್ತೂನ್ ಘೃತಮಿತ್ಯನುವ್ರತಯೇತ್, ಆತ್ಮನೋಽನುಪದಾಸಾಯ" ಎಂದು ಹೇಳಿದಳು. ಅಂದರೆ ಮೂರುದಿನಗಳೂ ಹಾಲು ಕುಡಿದುಕೊಂಡು ಇದ್ದುಬಿಟ್ಟರೆ ನನ್ನ ದೇಹ ಬಿದ್ದೇ ಹೋಗುತ್ತದೆ. ಸಾಧ್ಯವೇ ಇಲ್ಲ ಎನ್ನುವುದಾದರೆ, ಹುರಿದ ಅಕ್ಕಿ ಅನ್ನ, ಅಥವಾ ಬೇಳೆಗಳು, ಸತ್ತು ಹಿಟ್ಟು ಅಥವಾ ತುಪ್ಪ ಇವುಗಳನ್ನು ತಿಂದುಕೊಂಡಾದರೂ ಇದ್ದು ಹೋಮವನ್ನು ಮಾಡಬೇಕು. ದೇಹವನ್ನು ಘಾಸಿಗೊಳಿಸಬಾರದು. ಇದರಿಂದ ತಾತ್ಪರ್ಯವೇನೆಂದರೆ ಮೂರುದಿನಗಳೂ ಶ್ರದ್ಧೆಯಿಂದ, ಏಕಾಗ್ರತೆಯಿಂದ ಹೋಮಮಾಡುವುದು ಪ್ರಧಾನ, ಕೇವಲ ಹಾಲು ಕುಡಿದುಕೊಂಡಿರುವುದು ಒಂದು ಅಂಗನಿಯಮ. ಅದನ್ನು ಪಾಲಿಸಲು ಸಾಧ್ಯವಿದ್ದರೆ ಮಾಡಲಿ. ಇಲ್ಲದಿದ್ದರೆ ಪ್ರಧಾನಕ್ಕೆ ಲೋಪಬರದಂತೆ ಮಾಡಬೇಕು ಎನ್ನುವುದೇ ತಾತ್ಪರ್ಯ. ಪೂಜಾ, ಶ್ರಾದ್ಧಾದಿಗಳಲ್ಲೂ ಅಷ್ಟೆ. ಅವುಗಳನ್ನು ಶ್ರದ್ಧೆಯಿಂದ, ಏಕಾಗ್ರತೆಯಿಂದ ಮಾಡಿ ಆನಂದವನ್ನು ಅನುಭವಿಸಬೇಕು. ಅದಕ್ಕೆ ಉಪವಾಸವೆನ್ನುವುದು ಪೂರಕವಾಗುವುದಾದರೆ (complimentary) ಸಂತೋಷ. ಇಲ್ಲ, ಏಕಾಗ್ರತೆಯನ್ನು ಕೆಡಿಸುತ್ತೆ ಅನ್ನುವುದಾದರೆ, ಆ ಉಪವಾಸ ಮಾಡುವುದನ್ನೇ ಖಂಡಿತ ಬಿಡಬೇಕು. ಇವತ್ತಿನ ಜನಕ್ಕೆ (ಹಿಂದಿನವರಿಗೂ) ಏನಾಗಿದೆ ಅಂದರೆ ಪೂಜಾ, ಶ್ರಾದ್ಧಾದಿಕ್ರಿಯೆಗಳನ್ನು ಮಾಡಿಬಿಟ್ಟರೆ ಸಾಕು. ಅವುಗಳಿಂದ ಏನೋ ಫಲ ಬರುತ್ತೆ. ಆ ಕ್ರಿಯೆಗಳಲ್ಲಿ ಉಪವಾಸವೂ ಒಂದು ಕ್ರಿಯೆ. ಅದನ್ನು ಮಾಡದಿದ್ದರೆ ಫಲ ಸಿಗುವುದಿಲ್ಲ. ಆದ್ದರಿಂದ ಹೇಗೋ ಕಷ್ಟಪಟ್ಟುಕೊಂಡು ಗೊಣ್ಣು ಗೊಣ್ಣು ಅಂದುಕೊಂಡು ತಲೆನೋವಿನ ಬಾಧೆಯಾದರೂ ಪಟ್ಟುಕೊಂಡು ಆ ಕ್ರಿಯೆಗಳನ್ನು ಮಾಡಿದರೆ ಸಾಕು, ಫಲಸಿಗುತ್ತೆ ಎನ್ನುವ ಒಂದು ತಪ್ಪು ನಂಬಿಕೆಯೇ ಇದಕ್ಕೆಲ್ಲಾ ಕಾರಣವಾಗಿದೆ. ಈ ಎಲ್ಲಾ ಕರ್ಮಗಳಿಗೂ ಚಿತ್ತ ಶುದ್ಧಿಯೊಂದೇ ಫಲ. ಅಂದರೆ ಅವುಗಳನ್ನು ಮಾಡುವಾಗ, ಮಾಡಿ ಮುಗಿಸಿದಾಗ ಒಂದು ವಿಚಿತ್ರವಾದ ದೈವಿಕಾನಂದದ ಅನುಭವವೇ ಫಲ. ಅದಕ್ಕೆ ಯಾವ ಯಾವ ನಿಯಮಗಳು ಸಹಕಾರಿಯಾಗುತ್ತವೆಯೋ ಅವೆಲ್ಲವೂ ಗ್ರಾಹ್ಯ – ಯಾವುವು ವಿರೋಧವಾಗುತ್ತವೆಯೋ ಅವು ಅಗ್ರಾಹ್ಯ. ಇಷ್ಟು ಜ್ಞಾಪಕದಲ್ಲಿ ಇಟ್ಟುಕೊಂಡರೆ ಮನಸ್ಸಿಗೆ ಯಾವ ಸಂದೇಹವೂ ಬರುವುದಿಲ್ಲ. ಇತರರ ಮನೆಗೆ ಹೋಗಿ ಪೂಜೆ ಮಾಡಿಸಲು, ನಾವು ಕೈಲಾಗದೆ ಹೊಟ್ಟೆಗೆ ಸ್ವಲ್ಪ ಹಾಕಿಕೊಂಡು ಹೋದರೆ ಖಂಡಿತ ಯಾವ ತಪ್ಪೂ ಇಲ್ಲ.

2) ಋಗ್ವೇದಿಗಳ ಗೃಹಪ್ರವೇಶ ಪ್ರಯೋಗವನ್ನು ನಾನು ನೋಡಿಲ್ಲ. ನೋಡಿಬರೆಯುತ್ತೇನೆ. ಆದರೆ ಸೂರ್ಯಾಸ್ತವಾದ ಮೇಲೆ, ಯಾವ ಹೋಮಕ್ಕೂ ಅವಕಾಶವಿಲ್ಲವೆಂಬುದು ಸಾಮಾನ್ಯ ನಿಯಮ. ಅದನ್ನು ಎಲ್ಲಾ ವೇದದವರೂ ಎಲ್ಲಾ ಸೂತ್ರಕಾರರೂ ಒಪ್ಪುತ್ತಾರೆ.

3) ಯಾವ ದೇವತೆಯ ಪೂಜೆಯಾದರೂ, ಅದೊಂದು ಉಪಚಾರ. ಪೂಜೆ ಅಂದರೇ ಉಪಚಾರ. ಹಾಗೆ ಉಪಚಾರ ಮಾಡುವಾಗ ಆ ದೇವತೆಯನ್ನು ಸ್ತೋತ್ರ ಮಾಡುತ್ತಾ ಒಂದೊಂದು ಉಪಚಾರವನ್ನೂ ಮಾಡುವುದು ಯುಕ್ತ. ಅನೇಕ ದೇವತೆಗಳು, ವೇದದಲ್ಲಿ ಇಲ್ಲವಾದ್ದರಿಂದ, ನಮಗೆ ವೇದಮಂತ್ರಗಳನ್ನೇ ಹೇಳಿ ಉಪಚಾರ ಮಾಡಬೇಕೆಂಬ ಆಸೆ ಇರುವುದರಿಂದ, General ಆಗಿ ಪುರುಷಸೂಕ್ತ, ಶ್ರೀಸೂಕ್ತಗಳಿಂದ ಪೂಜೆ ಮಾಡುತ್ತೇವೆ. ವ್ರತಪುಸ್ತಕದಲ್ಲಿ ಒಂದೊಂದು ವ್ರತದಲ್ಲಿಯೂ ಆಯಾಯಾ ದೇವತೆಗಳನ್ನುದ್ದೇಶಿಸಿ, ಕೆಲವು ಶ್ಲೋಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಆ ದೇವತೆಯ ಹೆಸರೊಂದನ್ನು ಬಿಟ್ಟರೆ, ಬೇರೆ ಇರುವುದೆಲ್ಲಾ ಶುದ್ಧ ವ್ಯರ್ಥಪದಗಳು.

> ಕರವೀರೈಃ ಜಾಜಿಕುಸುಮೈಃ ಚಂಪಕೈಃ ಬಕುಳೈರಪಿ।
> ಮಯಾಹೃತೈಶ್ಚ ಪುಷ್ಪೈಃ ಪೂಜಾಂ ಸ್ವೀಕ್ರಿಯತಾಂ ಪ್ರಭೋ॥

(ಕಣಿಗಲೆ, ಜಾಜಿ, ಚಂಪಕ, ಬಕುಳ ಮೊದಲಾದ ನಾನಾ ತರಹದ ಹೂವುಗಳಿಂದ ಮಾಡುವ ಪೂಜೆಯನ್ನು ಸ್ವೀಕರಿಸು.)

ಈ ಶ್ಲೋಕದಿಂದ ನಮಗೆ ಯಾವ ದೇವತೆಯ ಮೇಲೆ ಭಕ್ತಿ ಬರುತ್ತದೆ? ಅದಕ್ಕೆ ಬದಲು ಎಲ್ಲಾ ದೇವತೆಗಳೂ ಆ ಪರಮಾತ್ಮನ, ವಿರಾಟ್‌ಪುರುಷನ ಅಂಶ, ಅವನಿಗೆ ಅರ್ಪಿಸಿದರೆ ಅವರಿಗೂ ಅರ್ಪಿಸಿದಂತಾಗುತ್ತದೆ (ಬೇರಿಗೆ ನೀರು ಬಿಟ್ಟರೆ ಕೊಂಬೆಗಳಿಗೆ ಹೋಗುವಂತೆ). ಅಥವಾ ಶಕ್ತಿಸ್ವರೂಪಿಣಿಯು ಪರಮಾತ್ಮನ ಅವಿಭಾಜ್ಯವಾದ ಅಂಶ. ಎಲ್ಲ ಸ್ತ್ರೀ ದೇವತೆಗಳೂ ಆ ಶಕ್ತಿಯ ಅನೇಕ ಸ್ವರೂಪಗಳು ಎಂದು ಭಾವಿಸಿ, ವಿರಾಟ್ ಪುರುಷನ ಸ್ತೋತ್ರವಾದ ಪುರುಷಸೂಕ್ತದಿಂದಲೋ ಅಥವಾ ಶಕ್ತಿಯ ಸ್ತೋತ್ರವಾದ ಶ್ರೀಸೂಕ್ತದಿಂದಲೋ ಮಾಡುವುದು ಬಹಳ ಯುಕ್ತ. ಅನೇಕಸಾರಿ, ವ್ರತಪುಸ್ತಕದಲ್ಲಿರುವ ಶ್ಲೋಕಗಳಲ್ಲಿ ಬಹಳ ತಪ್ಪು ಇರುತ್ತದೆ. ಕೆಲವು ಶ್ಲೋಕಗಳು ಅರ್ಥವತ್ತಾಗಿ, ಹೇಳಲೂ ಮುದ್ದಾಗಿರುತ್ತವೆ. ಅಂಥವನ್ನು ಹೇಳಿದರೆ ಸಾಕು. ಒಟ್ಟಿನಲ್ಲಿ ಅರ್ಥಪುಷ್ಟಿ ಇರಬೇಕು. ನಮಗೂ ಸ್ವಲ್ಪಮಟ್ಟಿಗೆ ಅವುಗಳ ತಾತ್ಪರ್ಯಗಳ ಅರಿವಿರಬೇಕು. ಈ ನ್ಯಾಯವು ಮಂತ್ರಗಳಿಗೂ ಅನ್ವಯಿಸುತ್ತದೆ.

ನಿನ್ನ Music ಪುಸ್ತಕದ ಬಗ್ಗೆ, ಪಾಪುವಿಗೆ ಹೇಳುತ್ತೇನೆ. ನಾವು

ಇಲ್ಲಿ ಆರೋಗ್ಯವಾಗಿದ್ದೇವೆ. ನಾನು Oct. ಆರಂಭದಲ್ಲಿ ಭದ್ರಾವತಿಗೆ ಬರಬಹುದು. ಈಗ ಬಂದಾಗ ಎಲ್ಲಿ ಇಳಿದುಕೊಳ್ಳುವುದು ಎಂದು ಯೋಚಿಸುತ್ತಿದ್ದೇನೆ. ನಿನ್ನ ಮನೆಯಲ್ಲಿ ನನಗೆ ಬೇರೆ ಎಲ್ಲಾ ಕಡೆಗಿಂತ ಸ್ವಾತಂತ್ರ್ಯ ಹೆಚ್ಚು. ಆದರೆ, ಮೊದಲೇ ಸಣ್ಣಮನೆ. ನಾವೂ ಅಲ್ಲಿ ಬಂದು ಸೇರಿಕೊಂಡು ನಿಮಗೆ ತೊಂದರೆ ಮಾಡಬಾರದು ಎನ್ನುವುದೂ ಮನಸ್ಸಿನಲ್ಲಿ ಬರುತ್ತಿದೆ. ಯೋಚಿಸುತ್ತೇನೆ. ಚಿ॥ ಗಳಿಗೆಲ್ಲಾ ಆಶೀರ್ವಾದಗಳು

ಇತಿ ನಿಮ್ಮವ
ಕುಮಾರಸ್ವಾಮೀ

೫೦೦

ತಂದೆ ತಾಯಿ ಸತ್ತ ವರ್ಷ, ಪೂರ್ವಪಂಕ್ತಿ, ತರ್ಪಣ

ಕುಶಲಮ್ ಶ್ರೀ: ಮೈಸೂರು
23.9.98

ಶ್ರೀಕಂಠ !

ನಿನ್ನ ಕಾಗದ ತಲಪಿತು...ನ ಚಲನವಲನಗಳ ಮೇಲೆ ನಿಗಾ ಇರಲಿ.

1) ನಮ್ಮ ಶಾಸ್ತ್ರಕಾರರು ಸಹಜವಾಗಿ ಆದಷ್ಟು ಪರಿಗ್ರಹ ಮಾಡುವುದನ್ನು ಬಿಡಬೇಕೆಂದು ಯೋಚಿಸಿ (ಅವೆಲ್ಲಾ ನಿವೃತ್ತಿಮಾರ್ಗಕ್ಕೆ ಪ್ರತಿಬಂಧಕಗಳು), ನಾನಾ ತರಹ ಅಡ್ಡಿಗಳನ್ನು ಹಾಕಿದ್ದಾರೆ-ನಮಗೆ ಪ್ರವೃತ್ತಿಸಂಕೋಚವನ್ನು ಅಭ್ಯಾಸ ಮಾಡಿಸುವುದಕ್ಕೋಸ್ಕರ. ಪ್ರವೃತ್ತಿ ಸಂಕೋಚವೆಂದರೆ Restraint of our natural tendencies. ನಮಗೆ ಸಹಜವಾಗಿರುವ ತಿನ್ನುವ ಆಸೆ, ಮಲಗುವ ಆಸೆ, ಪ್ರತಿಗ್ರಹ ಮಾಡುವ ಆಸೆ ಇವಕ್ಕೆ ಸ್ವಲ್ಪಸ್ವಲ್ಪ ಕಡಿವಾಣ ಹಾಕಿದರೇ ಮುಂದೆ ನಿವೃತ್ತಿಮಾರ್ಗಕ್ಕೆ ಹೋಗಲು ಸಹಾಯಕವಾಗುತ್ತದೆಂದು ಯೋಚಿಸಿದ್ದಾರೆ. ಆದರೆ ಏಕ್‌ದಂ ಪ್ರವೃತ್ತಿಯನ್ನು ನಿಲ್ಲಿಸುವುದು ದುಃಸಾಧ್ಯ. ಆದ್ದರಿಂದ ಸ್ವಲ್ಪಸ್ವಲ್ಪವಾಗಿ ನಿಲ್ಲಿಸಲು ಅಭ್ಯಾಸಮಾಡಿಕೊಂಡು ಕೊನೆಗೆ ಪೂರ್ತಿ ನಿಲ್ಲಿಸಲು ಸಾಧ್ಯವಾಗುತ್ತದೆಂದು ತಿಳಿದು ಅವುಗಳಿಗೆ ಕಡಿವಾಣ ಹಾಕಲು ಅನೇಕ ವಿಧಿಗಳನ್ನು ಕೊಟ್ಟರು. ತಿನ್ನುವ ಪ್ರವೃತ್ತಿಗೆ ಕಡಿವಾಣ ಹಾಕಲು ಏಕಾದಶೀ ಮುಂತಾದುವನ್ನು ವಿಧಿಸಿದರು. ಪರಾನ್ನವನ್ನು ತಿನ್ನಕೂಡದೆಂದರು. ಕೊನೆಗೆ ತಾಯಿ ತಂದೆ ಸತ್ತ ವರ್ಷಗಳಾದರೂ ಪರಾನ್ನವನ್ನು ಬಿಡಬೇಕೆಂದರು. ಪೂಜೆ ಮಾಡಲು, ಶ್ರಾದ್ಧ ಮಾಡಲು ಉಪವಾಸ ಇದ್ದೇ ಮಾಡಬೇಕೆಂದರು. ಹೀಗೆ ನಮ್ಮ ತಿನ್ನುವ ಪ್ರವೃತ್ತಿಗೆ ಸ್ವಲ್ಪ ಕಡಿವಾಣ ಹಾಕಿದರು. ಮಲಗುವ ಸಹಜಪ್ರವೃತ್ತಿಗೆ ಕಡಿವಾಣ ಹಾಕಲು, ಏಕಾದಶೀ, ಶಿವರಾತ್ರಿಗಳು ಜಾಗರಣೆ ಮಾಡಬೇಕೆಂದರು. ನಿತ್ಯ ಮಲಗುವುದು ಇದ್ದೇ ಇದೆ. ಆ ದಿವಸಗಳಲ್ಲಾದರೂ, ದೇವತಾಧ್ಯಾನ ಮಾಡುತ್ತಾ ನಿದ್ರೆಯನ್ನು ಮರೆಯಲಿ ಎಂದು. ಅಂದರೆ ನಮ್ಮ ಇಂದ್ರಿಯಗಳ ಮೇಲೆ ನಮಗೆ ಅಂಕುಶ ಹಾಕುವುದಕ್ಕೆ ಬರಲಿ ಎನ್ನುವ ಉದ್ದೇಶ. ಪ್ರತಿಗ್ರಹ ಮಾಡುವುದಕ್ಕೆ ಕಡಿವಾಣ ಹಾಕಲು ಅನೇಕ ವಿಧಿಗಳನ್ನು ಕೊಟ್ಟರು. ಶ್ರಾದ್ಧಕ್ಕೆ ನಿಮಂತ್ರಣಕ್ಕೆ ಬಂದವನು ಮೂರುದಿನ ಬೇರೆಲ್ಲೂ ಹೋಗಬಾರದು (ಇದು ತಿನ್ನುವ ಆಸೆಗೂ ಕಡಿವಾಣ!), ಅಯೋಗ್ಯ ಪ್ರತಿಗ್ರಹ ಮಾಡಬಾರದು. ಕೆಲಸವೇ ಮಾಡದೆ ಪ್ರತಿಗ್ರಹ ಮಾಡಬಾರದು. ತಾಯಿ ತಂದೆ ಸತ್ತ ವರ್ಷ ಪ್ರತಿಗ್ರಹ ಮಾಡಬಾರದು, etc,etc. ಇವೆಲ್ಲಾ ವಿಧಿ, ನಿಷೇಧಗಳು ಕೇವಲ, ಪ್ರವೃತ್ತಿಸಂಕೋಚಕ್ಕೋಸ್ಕರವೇ ಹೊರಟವೆಯೇ ಹೊರತು ಆ ಕಾರ್ಯವೇ ದೋಷವೆಂದಲ್ಲ. ತಿನ್ನುವುದಾಗಲಿ, ಪ್ರತಿಗ್ರಹಮಾಡುವುದಾಗಲಿ, ಪಾಪವಲ್ಲ. ಮಾಡ್ತಾ ಇದ್ದರೆ ಮಾಡ್ತಾನೇ ಇರಬೇಕು ಎನ್ನಿಸುತ್ತದೆ. ನಮಗೆ ಬೇಡವೆನಿಸಿದರೂ (ಅಂದರೆ ಬುದ್ಧಿ ಹೇಳಿದರೂ) ಅಭ್ಯಾಸ ಬಲದಿಂದ ಇಂದ್ರಿಯಗಳು ಆ ಕಡೆಗೇ ಎಳೆಯುತ್ತವೆ. ಅದನ್ನು avoid ಮಾಡಬೇಕು ಎನ್ನುವುದೇ ಆ ನಿಯಮಗಳ ಉದ್ದೇಶ. ಇದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ, ಮನಸ್ಸಿಗೆ ಯಾವ ಸಂದೇಹವೂ ಬರುವುದಿಲ್ಲ. ಕಿರಿಕಿರಿಯೂ ಆಗುವುದಿಲ್ಲ.

2) ಪೂರ್ವಪಂಕ್ತಿಗೆ ಹೋಗಲು ನಿಷೇಧವಿರುವುದೂ ಈ ಪ್ರವೃತ್ತಿಸಂಕೋಚಕ್ಕೋಸ್ಕರವೇ. ದೋಷವೆಂದಲ್ಲ. ಇನ್ಯಾರೂ ಸಿಗದೆ, ಇವರಲ್ಲಿಯೇ ಮಾಡುವವರಿಗೆ ವಿಪರೀತ ಶ್ರದ್ಧಾ ಭಕ್ತಿಗಳಿದ್ದ ಪಕ್ಷದಲ್ಲಿ ಅವಶ್ಯವಾಗಿ ಹೋಗಬೇಕು. ಪರಾನ್ನವನ್ನು ತಿನ್ನುವುದೇ ಒಂದು ಪಾಪವಲ್ಲ, ದೋಷವಲ್ಲ. ಆರಂಭಿಸಿದರೆ, ಅದನ್ನೇ ಇಂದ್ರಿಯಗಳು ಅಭ್ಯಾಸ ಮಾಡಿಕೊಳ್ಳುತ್ತವೆ. ಆಮೇಲೆ controlಗೆ ಸಿಗುವುದೇ ಇಲ್ಲ ಎಂಬ ಉದ್ದೇಶದಿಂದ ಬೇಡ ಎಂದು ಹೇಳಿದ್ದಾರೆ.

3) ಹೌದು. ವರ್ಷಾಂತವಾಗುವವರೆಗೂ ತರ್ಪಣ ಕೊಡುವ ಅಭ್ಯಾಸವಿಲ್ಲ. ಅವರಿಗೆ ದೇವತಾತ್ವ ಪ್ರಾಪ್ತಿಯಾಗುವುದು ಒಂದು ವರ್ಷವಾದ ಮೇಲೆಯೇ. ತರ್ಪಣವನ್ನು ಕೊಡಬೇಕಾದರೆ ದೇವ ತಾತ್ವ ಪ್ರಾಪ್ತಿಯಾಗಿರಬೇಕು ಎಂದೇ ಇಟ್ಟುಕೊಂಡಿದ್ದಾರೆ.

ಆಶ್ವಲಾಯನ ಪ್ರಯೋಗ ಸಿಕ್ಕಿಲ್ಲ. ನೋಡಿ ಬರೆಯುತ್ತೇನೆ. ದಯವಿಟ್ಟು S.N. ಅವರಿಗೆ ತಿಳಿಸಿಬಿಡು- ಇವನನ್ನು ನೆಚ್ಚಿ ಕೊಳ್ಳುವುದು ಬೇಡ ಅಂತ. ಇವನು ಬರುವುದು ಇನ್ನೂ Indefinite ಆಗಿದೆ. Post doctoral research ಗೆ ನಿಂತರೆ ಇನ್ನೂ ಎರಡು ವರ್ಷ ಆಗುತ್ತದೆ. ಅವನು ಮಧ್ಯದಲ್ಲಿ ಬಂದು ವಿವಾಹ ಮಾಡಿಕೊಂಡು ಹೋಗುತ್ತಾನೋ ಏನೋ ಗೊತ್ತಿಲ್ಲ. ಅಥವಾ

ಅಲ್ಲಿಯೇ ಯಾರನ್ನಾದರೂ ಮಾಡಿಕೊಳ್ಳುತ್ತೇನೆಂದು ಹೇಳಿ ಇದ್ದು ಬಿಟ್ಟರೂ ನಾನೇನೂ ಮಾಡಲಾರೆ. ಆದ್ದರಿಂದ ನನ್ನನ್ನು ಕ್ಷಮಿಸಿಬೇಕೆಂದು ಹೇಳಿ, ಇವನನ್ನು ಮರೆತು ಬೇರೆ ಪ್ರಯತ್ನಿಸಲು ಪ್ರಾರ್ಥಿಸಿದೆನೆಂದು ಹೇಳು.

ನಾವು ಆರೋಗ್ಯವಾಗಿದ್ದೇವೆ. ನಾನು 3ನೇ ತಾರೀಖು ರಾತ್ರಿ ಬೆಂಗಳೂರಿನಿಂದ ಹೊರಟು ರೈಲಿನಲ್ಲಿ ಬರುತ್ತಿದ್ದೇನೆ. ಸೀದ ನನ್ನ ಶಿಷ್ಯ ನರಸಿಂಹಮೂರ್ತಿ ಮನೆಗೆ ಹೋಗಿ ಸ್ನಾನಾದಿಗಳನ್ನು ಮುಗಿಸಿಕೊಂಡು ಶ್ರೀಕಂಠನ ಮನೆಗೆ ಅನಂತವ್ರತವನ್ನು ಮಾಡಿಸಲು ಹೋಗುತ್ತೇನೆ. 5ನೇ ತಾರೀಖು ನಿನ್ನ ಮನೆಯ ಆತಿಥ್ಯ! ಚಿ॥ ಗಳಿಗೆ ನನ್ನ ಆಶೀರ್ವಾದಗಳನ್ನು ತಿಳಿಸು.

ಇತಿ ನಿಮ್ಮವ
ಕುಮಾರಸ್ವಾಮೀ

೫೦೧

legacy ; ಧರ್ಮ

ಕುಶಲಮ್ ಶ್ರೀ: ಮೈಸೂರು
15.10.98

ಶ್ರೀಕಂಠ !

ನಾನು ಶನಿವಾರ ರಾತ್ರಿ ಹೊರಟವನು ಭಾನುವಾರ ಬೆಳಗ್ಗೆ 6-10 ಕ್ಕೆಲ್ಲಾ ಬೆಂಗಳೂರಿಗೆ ಸುಖವಾಗಿ ತಲಪಿದೆ. ಪ್ರತಾಪ್ ಸ್ಟೇಷನ್ನಿಗೆ ಬಂದಿದ್ದರು. ಅವತ್ತೇ ಮಧ್ಯಾಹ್ನ ಹೊರಟು ಮೈಸೂರಿಗೆ ಸಾಯಂಕಾಲ ತಲಪಿದೆವು. ಮೊನ್ನೆ ಮಹಾಲಯಶ್ರಾದ್ಧ ಸುಗಮವಾಗಿ ನೆರವೇರಿತು.

ಈ ಸಾರಿಯ ನನ್ನ ಭದ್ರಾವತಿಯ ಪ್ರವಾಸ ಸ್ಮರಣೀಯವಾಗಿತ್ತು (Courtesy B.V. SRIKANTHA). 6 ದಿನಗಳೂ ಬಿಡುವಿಲ್ಲದಷ್ಟು ಮಾತು, ಕೆಲಸಗಳಿದ್ದರೂ ಮನಸ್ಸಿಗೆ ಬಹಳ ಉಲ್ಲಾಸವಾಗಿತ್ತು. ಎಲ್ಲಿಯೂ ನನಗೆ ಮಾನಸಿಕವಾಗಿ ಶ್ರಮವಾಗಲಿಲ್ಲ, ಆದರಿಂದಲೇ ಅಷ್ಟು ಉಲ್ಲಸಿತವಾಗಿರುವುದಕ್ಕೆ ಸಹಾಯವಾಯಿತು. ನೀನು ಏರ್ಪಾಡುಮಾಡಿದ್ದ Discussions ಅಂತೂ ಬಹಳ ಚೆನ್ನಾಗಿಯೇ ಇತ್ತು ಅಂತಾ ಹೇಳಬಹುದು. ಅಂತೂ ನಿನ್ನ ಮಾತುಗಳಿಂದ ಜನಗಳಲ್ಲಿ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವನ್ನುಂಟುಮಾಡಿದ್ದೀಯೆ. ಇಲ್ಲದಿದ್ದರೆ ಅಷ್ಟು ಜನ ಸೇರಲು ಸಾಧ್ಯವೇ ಇರಲಿಲ್ಲ, ಆದರೂ ಈ ಕೆಲಸ ಒಂದು– ಎರಡು ದಿನಗಳಲ್ಲಿ ಸಾಧ್ಯವಿಲ್ಲ, ತಿಂಗಳುಗಟ್ಟಲೆ ಇದ್ದು ಪರಿಹಾರ ಮಾಡಬೇಕು. ಒಂದು ಸಂದೇಹಕ್ಕೆ ಸಮಾಧಾನ ಸಿಕ್ಕರೆ ಅದರಿಂದ ಮತ್ತೊಂದು ಹುಟ್ಟಿಕೊಳ್ಳುತ್ತದೆ.

ನಮ್ಮ ಧರ್ಮದ ಮೂಲಸ್ವರೂಪ ತಿಳಿಯದೆ ಈ ತರಹ ಸಂದೇಹಗಳಿಗೆ ಆಸ್ಪದವಾಗಿದೆ. ಇದು ಇವತ್ತಿಂದಲ್ಲ, ಸಾವಿರಾರು ವರ್ಷಗಳ legacy. ಹಿಂದಿನ ಕಾಲದಲ್ಲಿ ಈ ತರಹ ಸಂದೇಹಗಳು ಬರುತ್ತಿರಲಿಲ್ಲವೆಂದಲ್ಲ, ಸಂದೇಹವನ್ನೇ ಪಡಬಾರದು ಎಂದು ಹೇಳಿಕೊಟ್ಟದ್ದರಿಂದ ತಮ್ಮ ಕುತೂಹಲಗಳನ್ನು ಅಡಗಿಸಿಕೊಂಡು ಬಿಟ್ಟಿದ್ದರು. ಈಗ ವೈಜ್ಞಾನಿಕ ಯುಗವಾಗಿದ್ದರಿಂದ, ಸಂದೇಹಗಳು ಹೆಚ್ಚು ಹೆಚ್ಚು ಬರುತ್ತಿವೆ. ಸುಮ್ಮನೆ ಹಿರಿಯರು ಮಾಡಿಕೊಂಡು ಬಂದಿದ್ದು ಎಂದರೆ ಸಮಾಧಾನವಾಗುವುದಿಲ್ಲ, ಆದರೆ ಅವರುಗಳಿಗೆ ಸರಿಯಾಗಿ ಸಮಾಧಾನ ಹೇಳುವವರಿಲ್ಲ. ಪರಿಸ್ಥಿತಿ ಶೋಚನೀಯ ವಾಗಿದೆ.

ಅಂತೂ ಅವರನ್ನು ಕುತೂಹಲಿಗಳನ್ನಾಗಿ ಮಾಡಿದ್ದಕ್ಕೆ ನಿನಗೆ ನನ್ನ ಹಾರ್ದಿಕ BIG THANKS. ಹಾಗೆಯೇ ಸಮಾಧಾನಗಳನ್ನೂ ಹೇಳಲು ಕಲಿತುಕೊ.

...ನ ವಿಷಯ ಕೇಳಿ ಸ್ವಲ್ಪ ನಿರಾಳವಾಯಿತು. ಮರಿ ದೊಡ್ಡಪ್ಪನ ಮಗ...ಗೆ ಅವನನ್ನು ನೋಡಿಕೊಳ್ಳುವಂತೆ ಹೇಳಿ ಅಂತ ಹೇಳಿದ್ದೆ. ಹೇಳಿದಾರಂತೆ. ಅವನು ಅವರಿಗೆ ಅತ್ಯಂತ ಹತ್ತಿರದವನಾದ್ದರಿಂದ, ...ನ್ನು tackle ಮಾಡಲು authority ಇರುತ್ತದೆ. ನಿನಗೆ ಅಷ್ಟು ಸ್ವಾತಂತ್ರ್ಯವಿರುವುದಿಲ್ಲ, ಆದ್ದರಿಂದ ಹೇಳಿದ್ದೇನೆ. ಅವನ ಭದ್ರಾವತಿಯ ರೂಮಿನ address ಕೊಡು. ನಾನು ಗೋವಾದಿಂದ ಒಂದು ಕಾಗದ ಬರೆಯುತ್ತೇನೆ. ನೀನೂ ಗೋವಕ್ಕೇ ಕಾಗದ ಬರಿ. ನಾನು 19 ನೇ ತಾರೀಖು ಮಧ್ಯಾಹ್ನ ಗೋವಾಕ್ಕೆ ಹೋಗುತ್ತೇನೆ. ಅಲ್ಲಿಂದಲೇ ನಿನಗೆ ಪಾಪುವಿನ premium ಗೆ Cheque ಕಳಿಸುತ್ತೇನೆ.

ಗೋವಾದಲ್ಲಿ Nov. 28 ರವರೆಗೂ ಇರುತ್ತೇನೆ.

ಚಿ॥ ಗಳಿಗೆ ನನ್ನ ಆಶೀರ್ವಾದಗಳು. ಅವತ್ತಿನ ಊಟ ಇನ್ನೂ ನಾಲಗೆಯಲ್ಲಿಯೇ ಇದೆ ಎಂದು ವೇದಳಿಗೆ ಹೇಳು.

ಇತಿ ನಿನ್ನವ
ಕುಮಾರಸ್ವಾಮೀ

೫೦೨

ಸಂಧ್ಯಾವಂದನೆ

ಸಾಯಂಸಂಧ್ಯಾವಂದನೆ ತಪ್ಪಿದರೆ ಬೆಳಗ್ಗೆ ಹೇಳಿಕೊಳ್ಳುವ circus, ಸವಿತೃ ಪ್ರಾರ್ಥನೆ, ವರುಣನ ಪ್ರಾರ್ಥನೆ, ಶ್ರೇಷ್ಠ ಪೂಜೆ

ಕುಶಲಮ್ ಶ್ರೀ: MYSORE
21.11.98

ಶ್ರೀಕಂಠ !

ನಿನ್ನ ಕಾಗದ ಗೋವಾಕ್ಕೇ ತಲಪಿತು. ನನ್ನ ಸೂರತ್ ಕಾರ್ಯಕ್ರಮ ಇಲ್ಲದ್ದರಿಂದ 15ನೇ ತಾರೀಖೇ ಪಣಜಿ ಬಿಟ್ಟು

16 ಬೆಂಗಳೂರಿಗೆ ಬಂದು 19 ಸಾಯಂಕಾಲ ಇಲ್ಲಿಗೆ ಬಂದೆವು. ಆದ್ದರಿಂದ ಇಲ್ಲಿಗೆ ಬಂದೇ ಕಾಗದ ಬರೆಯೋಣ ಎಂದು ಸುಮ್ಮನಾದೆ. ಇದರ ಜತೆಯಲ್ಲಿಯೇ ಚೆಕ್ಕನ್ನೂ ಕಳಿಸಿದ್ದೇನೆ. ದಯವಿಟ್ಟು L.I.C ಗೆ ಕಟ್ಟಿಬಿಡು.

1) ಸಂಧ್ಯಾವಂದನೆಯಲ್ಲಿ ಅಷ್ಟು ಬಾರಿ ಆಚಮನ ಮಾಡುವ ಆವಶ್ಯಕತೆ ಖಂಡಿತ ಇಲ್ಲ, ಆರಂಭದಲ್ಲಿ ಮಾಡಿದರೆ ಸಾಕು. ಆದರೆ **ಆಪೋಹಿಷ್ಠಾ** ಎಂದು ಮಾರ್ಜನೆ ಮಾಡಿಕೊಂಡಾಗ ಸ್ನಾನದಂತಾಗುತ್ತದೆ. ಸ್ನಾನವಾದ ಮೇಲೆ ಆಚಮನ ಮಾಡಬೇಕು. ಆದ್ದರಿಂದ ಆಗಲೂ ಇಟ್ಟುಕೊಂಡಿದ್ದಾರೆ. ನಾವು ಮಾಡಿಕೊಳ್ಳುವುದು ಸ್ನಾನವಲ್ಲ, ಕೇವಲ ಮಾರ್ಜನೆ. ಆದ್ದರಿಂದ ಆಚಮನ ಬೇಕಿಲ್ಲ, **ಸೂರ್ಯಶ್ಚ, ಅಗ್ನಿಶ್ಚ** ಇವೆಲ್ಲಾ ಪಾಪಶಮನಾರ್ಥ ಮಾಡುವ ಪ್ರಾಶನ. ಪಾಪಪರಿಹಾರವಾಗಿ ಶುದ್ಧನಾದೆ ಎಂಬ ಭಾವನೆ ಬರಬೇಕು. ಶುದ್ಧನಾದೆ ಎಂಬ ಭಾವನೆ ಬಂದ ಸೂಚಕವಾಗಿ ಆಚಮನ ಮಾಡಬೇಕು. ಇದು ನಿತ್ಯ ಆಗುವುದರಿಂದ ಆಚಮನವೇನೂ ಬೇಕಿಲ್ಲ, ಬಾಕಿ ಎಲ್ಲವೂ ಹಾಗೇ. ಆದರೆ ಕೈ ಎಂಜಲಾಗುತ್ತದೆ ಎನ್ನುವುದು ತಪ್ಪು ಅಭಿಪ್ರಾಯ. ನಾಲಗೆಯನ್ನು ಮುಟ್ಟಿದರೆ ಎಂಜಲೇ ಹೊರತು ಕೇವಲ ಓಷ್ಠ (ತುಟಿ) ಸ್ಪರ್ಶವಾದರೆ ಎಂಜಲಾಗುವುದಿಲ್ಲ. ಆಚಮನ ಮಾಡುವಾಗ ಕೇವಲ ಓಷ್ಠ ಸ್ಪರ್ಶವೇ ಹೊರತು, ನಾಲಗೆಯನ್ನು ಸ್ಪರ್ಶ ಮಾಡಬೇಕಾದ ಅಗತ್ಯವೇನಿಲ್ಲ. ಹಾಗಿದ್ದರೂ ಮೂರು ಬಾರಿ ನೀರನ್ನು ಕುಡಿದ ಮೇಲೆ ಗೋವಿಂದಾಯ ನಮಃ ಎಂದು ಕೈ ತೊಳೆದುಕೊಳ್ಳುತ್ತೇವೆ.

2) ಈ ಪ್ರಶ್ನೆಯೇ ಅನುಚಿತ. ಸಾಯಂ ಸಂಧ್ಯಾವಂದನೆ ಮಾಡಲು ಆಗದೆ ಇರುವ ಪ್ರಸಂಗ ಅಪರೂಪ ಎಂದು ನನ್ನ ಭಾವನೆ. ಮಾಡಬೇಕು ಎನ್ನುವುದಾದರೆ ಹೇಗಾದರೂ ಅವಕಾಶ ಕಲ್ಪಿಸಿಕೊಳ್ಳಬಹುದು. ಅಕಸ್ಮಾತ್ ಮಾಡಲು ಸಾಧ್ಯವಾಗದಿದ್ದರೆ, ಆ ಮಂತ್ರ ಬಿಟ್ಟು ಹೋಗುತ್ತೆ ಅಷ್ಟೆ. ಅದನ್ನು ಬೆಳಗ್ಗೆ ಹೇಳಿಕೊಳ್ಳುವುದು ಅಪ್ರಾಸಂಗಿಕವಾಗುತ್ತದೆ. ಅದರಲ್ಲಿ **ಯದಹ್ನಾ ಪಾಪಂ ಅಕಾರ್‌ಷಂ...ಅಹಸ್ತತ್** ಎಂಬ ಶಬ್ದಗಳು ಬರುತ್ತವೆ. ಸಾಯಂಕಾಲ ಮಾಡಿದರೇ ಅವುಗಳ ಅರ್ಥ ಹೊಂದುತ್ತದೆ. ಬೆಳಗ್ಗೆ ಸೂರ್ಯಶ್ಚ ಎಂಬ ಮಂತ್ರದಲ್ಲಿ ಆ ಕಾಲಕ್ಕೆ ಸರಿಯಾದ ಶಬ್ದಗಳಿವೆ. ಅದೂ ಅಲ್ಲದೆ ಅವುಗಳನ್ನೇನೂ ಮಾಡದೆ, ಕೇವಲ ಅರ್ಘ್ಯಪ್ರದಾನ ಮಾಡಿ, ಉಪಸ್ಥಾನ ಮಾಡಿದರೆ ಸಾಕು. ಸಂಧ್ಯಾವಂದನೆಯಾಗುತ್ತದೆ. ಈ circus ಎಲ್ಲಾ ಬೇಕಿಲ್ಲ.

3) **ಆಸತ್ಯೇನ ರಜಸಾ** ಎನ್ನುವುದು ಸವಿತೃ ಪ್ರಾರ್ಥನೆ. ಯಾವಾಗ ಬೇಕಾದರೂ ಹೇಳಬಹುದು. ನಾವು ಅದನ್ನು ಸಂಧ್ಯಾವಂದನೆಯಲ್ಲಿ (ಮಾಧ್ಯಾಹ್ನಿಕ) ಉಪಸ್ಥಾನ ಮಂತ್ರವಾಗಿ ಸೇರಿಸಿಕೊಂಡಿದ್ದೇವೆ ಅಷ್ಟೆ. ವಾಸ್ತವವಾಗಿ ಅದರಲ್ಲಿ 4-5 ಬೇರೆ ಬೇರೆ ಕಡೆ ಬಂದಿರುವ ಸವಿತೃಮಂತ್ರಗಳು ಜೋಡಿಸಲ್ಪಟ್ಟಿವೆ. ಸವಿತೃ ಪ್ರಾರ್ಥನೆ ಮಾಡುವಾಗೆಲ್ಲಾ ಹೇಳಬಹುದು.

4) ಈ ಪ್ರಶ್ನೆಯೂ ಅನುಚಿತ. ಹಗಲಿನ ಅಧಿಪತಿ ಮಿತ್ರನೆಂದೂ ಸಾಯಂಕಾಲ ಅಥವಾ ರಾತ್ರಿ ಅಧಿಪತಿ ವರುಣನೆಂದೂ ಪರಿಗಣಿಸಲ್ಪಟ್ಟಿದೆ. ಹಾಗಿರುವಾಗ ಹಗಲಿನಲ್ಲಿ **ಇಮಂ ಮೇ ವರುಣ** ಹೇಳುವುದು ಅಸಂಗತವಾಗುವುದಿಲ್ಲವೇ? ಅದು ವರುಣ ಪ್ರಾರ್ಥನೆ. ಯಾವಾಗ ಬೇಕಾದರೂ ಹೇಳಬಹುದು. ಆದರೆ ನಾವು ಅದನ್ನು ರಾತ್ರಿಯ ಆರಂಭವಾದ ಸಾಯಂಕಾಲದ ಉಪಸ್ಥಾನ ಮಂತ್ರವಾಗಿ ಇಟ್ಟುಕೊಂಡಿದ್ದೇವೆ. ಅಷ್ಟೆ. ಸಾಯಂಕಾಲ ಪಶ್ಚಿಮಾಭಿಮುಖವಾಗಿ ಹೇಳುವುದೂ ಸೂರ್ಯನು ಅಸ್ತಂಗತನಾಗುತ್ತಿದ್ದಾನೆ, ವರುಣನು ಪಶ್ಚಿಮ ದಿಕ್ಕಿಗೆ ಅಧಿಪತಿ, ಆದ್ದರಿಂದ ಪಶ್ಚಿಮಾಭಿಮುಖವಾಗಿ ಹೇಳುತ್ತೇವೆ. ಬೆಳಗ್ಗೆ ಹೊತ್ತು ಪಶ್ಚಿಮಾಭಿಮುಖವಾಗಿ ನಿಂತು ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಆ ಮಂತ್ರವನ್ನು ಯಾವ ದಿಕ್ಕಿಗೆ ಬೇಕಾದರೂ ನಿಂತು ಹೇಳಬಹುದು. ವರುಣ ಪ್ರಾರ್ಥನೆ-ನಾವು ಪಶ್ಚಿಮಾಭಿಮುಖರಾಗಿ ಹೇಳುವುದು ಸಾಯಂಕಾಲದಲ್ಲಿ ಸೂರ್ಯ ಆ ಕಡೆ ಇರುತ್ತಾನೆ ಎನ್ನುವ ದೃಷ್ಟಿಯಿಂದ.

5) **ನಮೋ ವಃ ಪಿತರೋ ರಸಾಯ** ಎಂಬುದು ಪಿತೃಗಳಿಗೆ ನಮಸ್ಕಾರ ಮಾಡುವ ಮಂತ್ರ. ಯಾವಾಗ ಬೇಕಾದರೂ ಹೇಳಬಹುದು.

6) ವೇದೋಕ್ತಪೂಜೆ ಶ್ರೇಷ್ಠ ಅಥವಾ ಉತ್ತಮ ಎಂದಲ್ಲ, ಪುರಾಣೋಕ್ತ ಶ್ಲೋಕಗಳು ಮಧ್ಯಮ ಎಂದಲ್ಲ. ಯಾವುದನ್ನು ಹೇಳಿದರೆ ಮನಸ್ಸಿಗೆ ಪರಮಾತ್ಮನ ಆರಾಧನೆ ಮಾಡಿದ ತೃಪ್ತಿ ಹೆಚ್ಚು ಬರುತ್ತದೋ ಅದನ್ನು ಮಾಡಬೇಕು. ಆದರೆ ಯಾವುದೋ ದೇವತೆ ಹೆಸರು ಬಂದಿರುವುದರಿಂದ, ಅದು ಹೆಚ್ಚು ಶ್ರೇಷ್ಠ, ಫಲಕಾರಿ ಎಂಬುದೆಲ್ಲಾ ಮೂರ್ಖತನವಾಗುತ್ತದೆ. ಪರಮಾತ್ಮನ (ಅವನ ಪ್ರತೀಕದ ಹೆಸರೇ ಇರಲಿ) ಸ್ಮರಣೆಯಾಗಬೇಕು. ಅದು ಯಾವುದರಿಂದ ಚೆನ್ನಾಗಿ ಆಗುತ್ತದೋ ಅದೇ ಶ್ರೇಷ್ಠ. ಅದು ವೇದೋಕ್ತ ಮಂತ್ರಗಳಿಂದ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅವರವರ ರುಚಿಗೆ ಬಿಟ್ಟದ್ದು.

ಶ್ರೀಕಂಠ!...ನ ಭದ್ರಾವತಿ ರೂಮ್ ಅಡ್ರೆಸ್ ಕೊಡು ಎಂದು ಹೇಳಿದ್ದೆ. ನೀನು ಬರೆದಿಲ್ಲ, ವಿಚಾರಿಸಿ ಬರಿ. ಅವನಿಗೆ ನಾನೇ ಒಂದು ಕಾಗದ ಬರೆಯಬೇಕೆಂದಿದ್ದೇನೆ. Effect ಇಲ್ಲದಿರಬಹುದು (ಅವರೆಲ್ಲಾ ಬಹ...ಳ thickskinned!) ಆದರೂ ನನಗೆ ಸಮಾಧಾನ.

ಗೋವಾದಲ್ಲಿ ಒಂದು ತಿಂಗಳು ನನ್ನ ನಿತ್ಯಕಾರ್ಯಕ್ರಮಗಳು ಏನೂ ಇಲ್ಲದಿದ್ದರೂ ಮಗು ಅನನ್ಯಳೊಡನೆ ಕಳೆದ ಕಾಲ ಸ್ಮರಣೀಯವಾಗಿತ್ತು. ಅವಳೂ ನನ್ನನ್ನು ತುಂಬಾ ಹೊಂದಿಕೊಂಡು, ಕೊನೆಯಲ್ಲಿ "ಅಜ್ಜ" ಎಂದು ಹೇಳಲು ಪ್ರಯತ್ನವನ್ನು ಪಡುತ್ತಿದ್ದಳು. ಅವಳ ಜತೆಯಲ್ಲಿ ಆಡುವುದರಲ್ಲಿ ಕಾಲ ಕಳೆದದ್ದೇ ತಿಳಿಯಲಿಲ್ಲ. ಮಕ್ಕಳಿಗೆ ಬೇಕಾದವನಾಗಿದ್ದೇನಲ್ಲಾ ಎಂಬ ಮನವರಿಕೆಯೇ ನನ್ನ ಜನ್ಮ ಸಾರ್ಥಕವಾಯಿತು, ಕೃತಾರ್ಥನಾದೆ ಎನಿಸಿತು. ನಾವು ಆರೋಗ್ಯವಾಗಿದ್ದೇವೆ. Dec. 13,14,15 ಸುರೇಶ ಗೃಹಪ್ರವೇಶ, ರುದ್ರ ಹೋಮಾದಿಗಳನ್ನಿಟ್ಟುಕೊಂಡಿದ್ದಾನೆ. ಆಗ ಸಂಧಿಸ ಬಹುದೇನೋ!! ಚಿ॥ ಗಳಿಗೆ ಆಶಿಷಃ

ಇತಿ ನಿಮ್ಮವ

ಕುಮಾರಸ್ವಾಮೀ

೫೦೩

Audience (ನಿನಗೆ ಧನ್ಯವಾದ)

कुशलम् श्री: ಮೈಸೂರು

10.2.99

ಶ್ರೀಕಂಠ !

ಅವತ್ತು ರಾತ್ರಿ ನಾವು ಹೊರಟವರು ಬೆಳಗ್ಗೆ 6-30ಕ್ಕೆ ಬೆಂಗಳೂರು ತಲಪಿದೆವು. ಪ್ರತಾಪ, ಚೇತನ್, ಸ್ಟೇಷನ್ನಿಗೆ ಬಂದಿದ್ದರು. ಮನೆಗೆ ಹೋಗಿ ಸ್ನಾನಾದಿಗಳನ್ನು ಮುಗಿಸಿ, ಊಟ ಮಾಡಿಕೊಂಡು ಪುನಃ $1^1/_2$ ಗೆ ಸ್ಟೇಷನ್ನಿಗೆ ಬಂದೆವು. ಸಾಯಂಕಾಲ 5-15ಕ್ಕೆ ಮೈಸೂರು ತಲಪಿದೆವು. ಶನಿವಾರ ಶ್ರಾದ್ಧ ಸುಗಮವಾಗಿ ಆಯಿತು. ಒಂದು ದಿನ ಸ್ವಲ್ಪ ಆಯಾಸವಾಗಿತ್ತು, ಚೆನ್ನಾಗಿ ನಿದ್ರೆ ಮಾಡಿದ ಮೇಲೆ ಸರಿಹೋಯಿತು.

ನಿನ್ನ ಹಾರ್ದಿಕ ಪ್ರಯತ್ನದಿಂದ ಈ ಸಾರಿಯ ನನ್ನ ಭದ್ರಾವತಿ ವಾಸ ಸ್ಮರಣೀಯವಾಗಿ ಉಳಿದಿದೆ. 3 ದಿನಗಳು ಸಾಯಂಕಾಲದ ವೇಳೆ ಬುದ್ಧಿಗೆ, ಮನಸ್ಸಿಗೆ ಒಂದು ಆಹ್ಲಾದಕರವಾದ ವ್ಯಾಯಾಮವಾಗಿತ್ತು, ನಾನು ಅಂಥಾ Receptive audience ನ್ನು ಅನುಭವಿಸಿರಲಿಲ್ಲ, ಬಹ...ಳ ಸಂತೋಷವಾಯಿತು. Paper Town ನಲ್ಲಂತೂ ತುಂಬಾ ಉಲ್ಲಾಸವಾಗಿತ್ತು. All credit should go to you.I extend my heart felt gratitude to you. Paper Town ನಲ್ಲಿ ಹೇಳಿದಂತೆ ಒಂದು ವಾರ ಹೇಳಿ ನಮ್ಮ ಶಾಸ್ತ್ರಗಳ ಸ್ವರೂಪವನ್ನೂ, ಅವುಗಳನ್ನು twist ಮಾಡಿ ತಪ್ಪು ತಪ್ಪಾಗಿ ತಿಳಿದುಕೊಂಡು ಬೆಳೆದಿರುವ ಸಂಪ್ರದಾಯಗಳೆಂಬ ಮುಳ್ಳುಕಂಟಿಗಳ ಸ್ವರೂಪವನ್ನೂ, ಚೆನ್ನಾಗಿ ಮನದಟ್ಟು ಮಾಡಬೇಕೆಂಬ ಆಸೆ ಇದೆ. ನೋಡೋಣ.

ಇದರ ಜತೆಯಲ್ಲಿ ಶ್ರೀ ರಾಮಸ್ವಾಮಿಗಳು ಕೇಳಿದ್ದ ಹಿರಣ್ಯಗರ್ಭ ಸೂಕ್ತದ ಮಂತ್ರಾರ್ಥವನ್ನು ಬರೆದು ಕಳಿಸಿದ್ದೇನೆ. ಅವರಿಗೆ ತಲಪಿಸು.

ಈ ವೇಳೆಗೆ ಮಂಜುನಾಥ್ ಬಂದಿರಬಹುದು. ಅವರಿಗೆ ನನ್ನ ನಮಸ್ಕಾರಗಳನ್ನು ತಿಳಿಸು. ಅವರ ಗೈರುಹಾಜರಿಯಲ್ಲಿಯೂ ಅವರ ಧರ್ಮಪತ್ನಿ ಮತ್ತು ಮಕ್ಕಳು ಚೆನ್ನಾಗಿ ನೋಡಿಕೊಂಡರೆಂದು ಹೇಳು. ಕೊನೇ ಎರಡು ದಿನ ನಮಗೇ ಮನೆ ಬಿಟ್ಟುಕೊಟ್ಟದ್ದರಿಂದ ನಿರ್ಯೋಚನೆಯಾಗಿ ಕಾಲ ಕಳೆದೆವೆಂದು ಹೇಳು. ಚಿ॥ ಗಳಿಗೆಲ್ಲಾ ಆಶೀರ್ವಾದಗಳನ್ನು ತಿಳಿಸು.

ನಿನ್ನ ಮನೆ ಊಟವನ್ನು ತೃಪ್ತಿಯಾಗಿ ಮಾಡಲು ಹೊಟ್ಟೆ ಇರಲಿಲ್ಲ. ಏನು ಮಾಡಲಿ !! ವೇದನಿಗೂ, ರವಿಗೂ ನನ್ನ ಅನಂತ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೫೦೪

ವೈದಿಕ, ಲೌಕಿಕ

कुशलम् श्री: MYSORE

18.7.99

ಶ್ರೀಕಂಠ !

ಸಮಾಚಾರ ತಿಳಿದು ಬಹ...ಳ ಸಂತೋಷವಾಯಿತು. ಇಷ್ಟು ಹತ್ತಿರವೇ ಇದ್ದರೂ, ಎಲ್ಲೆಲ್ಲೋ ಹುಡುಕಬೇಕಾಯಿತಲ್ಲವೇ!! ಇದನ್ನೇ 'ಅದೃಷ್ಟ' ಅಂತಲೋ 'ವಿಧಿ' ಅಂತಲೋ ಹೇಳುವುದು. ಹುಡುಗ, ಹುಡುಗಿ ಮಾತಾಡಿ ಒಪ್ಪಿದ್ದಾರೆ ಎಂದು ನಂಬಿದ್ದೇನೆ. ಬಹಳ ಸಂತೋಷ. ಎಲ್ಲಕ್ಕಿಂತ, ನಾನೇ ಶಾಸ್ತ್ರೀಯವಾಗಿ ನಾಲ್ಕು ದಿನಗಳ ವಿವಾಹವನ್ನೇ ಮಾಡಿಸಬೇಕೆಂದು ನಿಶ್ಚಯಮಾಡಿ, ಅವರಿಗೂ ಹೇಳಿ, ಅವರನ್ನು ಇಲ್ಲಿಗೆ ಕಳಿಸಿರುವುದು ಅತ್ಯಂತ ಸಂತೋಷದ ಮತ್ತು ಹೆಮ್ಮೆಯ ಸಂಗತಿ. I am really proud of you for your courage & conviction. ನೀನು ಹಿಂದೆಯೇ ಹೇಳುತ್ತಿದ್ದೆ, ನಿಜ. ಆದರೆ ಆ ಸಮಯ ಬಂದಾಗ ಅನೇಕರು ಹಿಂದೇಟು ಹೊಡೆಯುತ್ತಾರೆ. ಹೆಣ್ಣಿನವರು ನಮ್ಮನ್ನು ಎಲ್ಲಿ ಹಳೇ ಗೊಡ್ಡುಗಳು ಎಂದು ತಿಳಿದುಕೊಳ್ಳುತ್ತಾರೋ ಎಂಬ ಭಯ!! ಅವರು ಮೊನ್ನೆ ಬಂದು ಎಲ್ಲಾ ಹೇಳಿದರು. ಕೆಲವು ಸಂಕೇತಿ

ಸಂಪ್ರದಾಯಗಳನ್ನೂ ಅನುಸರಿಸಬೇಕೆಂದರು. ನನ್ನ ವೈದಿಕ ಕಾರ್ಯಕ್ರಮಕ್ಕೆ ವಿರೋಧವಿಲ್ಲದಂತೆ ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳಿದ್ದೇನೆ.

ನೀನೂ, ಬೇರೆ ಅನೇಕರ ಹಾಗೆ ನನ್ನನ್ನು ಸ್ವಲ್ಪ consult ಮಾಡದೆ ದಿನವನ್ನು ನಿಶ್ಚಯಿಸಿದ್ದೀಯೆ!! 19ನೇ ತಾರೀಖು, ನನ್ನ ತಂಗಿಯ ಮಗ ಪ್ರದೀಪನಿಗೆ ವಿವಾಹ ನಿಶ್ಚಯವಾಗಿದೆ. ವಸಂತಲಕ್ಷ್ಮೀ, ನಾರಾಯಣಸ್ವಾಮಿ ಅವರು ಬಂದಿದ್ದಾಗ, ಮೈಸೂರಿನಲ್ಲಿಯೇ ವಿವಾಹವೆಂದಾಗಿತ್ತು. ಆದರೆ, ನಿನ್ನೆ, ವಿವಾಹವು ಶಿವಮೊಗ್ಗಾದಲ್ಲಿಯೆಂದೂ, ಛತ್ರವನ್ನೂ ನಿಶ್ಚಯ ಮಾಡಿಯಾಗಿದೆ ಯಂದೂ ಬಂದು ಹೇಳಿದರು. ಆ ವಿವಾಹವನ್ನೂ ನಾನೇ ಮಾಡಿಸಬೇಕು. ಪ್ರದೀಪ, ನನ್ನ ಶಿಷ್ಯ ಬೇರೆ. ವೈದಿಕನೂ ಹೌದು. ಈಗ 3-4 ತಿಂಗಳುಗಳಿಂದ ಹೇಳುತ್ತಿದ್ದಾನೆ. ಅದನ್ನು ತಪ್ಪಿಸಿಕೊಳ್ಳುವ ಹಾಗಿಲ್ಲ. ಮೈಸೂರಿನಲ್ಲಿ ಆಗಿಬಿಟ್ಟದ್ದರೆ ಯೋಚನೆ ಇರುತ್ತಿರಲಿಲ್ಲ. ಈಗ ಶಿವಮೊಗ್ಗಾದಲ್ಲಿ 19 ವಿವಾಹ ಮಾಡಿ, 20ನೇ ತಾರೀಖು ನಿಮ್ಮ ಮನೆ ಕೆಲಸಕ್ಕೆ ನಾನು ಬರಲು ಸಾಧ್ಯವಾಗುವುದಿಲ್ಲ. ಅವರು Taxi ಮಾಡಿಕೊಂಡು 20ನೇ ತಾರೀಖು ಅಲ್ಲಿಂದ ಹೊರಟು ಮೈಸೂರಿನಲ್ಲಿ ಗೃಹಪ್ರವೇಶ ಮಾಡಿ, ಔಪಾಸನ ಆರಂಭಿಸಬೇಕು. ಆದ್ದರಿಂದ ನನಗೆ 21ನೇ ತಾರೀಖು ಬೆಳಗ್ಗೆವರೆಗೂ ಪುರಸತ್ತಿರುವುದಿಲ್ಲ. ಆಮೇಲೆ ಎರಡೂ ಮೈಸೂರಿನಲ್ಲಿಯೇ ಆಗುವುದರಿಂದ ಯೋಚನೆ ಇಲ್ಲ. ಶನಿವಾರ 20ನೇ ತಾರೀಖು ಛತ್ರದಲ್ಲಿಯೇ ರವಿಗೆ ವ್ರತಾದಿಗಳನ್ನು ಮಾಡಿಸಿ, ಸಾಯಂಕಾಲ ಉದಕಶಾಂತಿಯನ್ನು ಮಾಡಬೇಕೆಂದು ಅವರಿಗೆ ಹೇಳಿದ್ದೆ. ಈಗ ಅದಕ್ಕೇನಾದರೂ ಬೇರೆ ಏರ್ಪಾಡು ಮಾಡಬೇಕು ಅಥವಾ, ನಾನೇ ಮಾಡಿಸಬೇಕೆಂದರೆ, 17ನೇ ತಾರೀಖು ಭದ್ರಾವತಿಯಲ್ಲಿಯೇ ಮಾಡಿಕೊಳ್ಳಿ. ನಾನು 16ಕ್ಕೆ ಅಲ್ಲಿಗೆ ಬಂದು, ನಿಮ್ಮ ಮನೆಯಲ್ಲಿ ಮಾಡಿಸಿ, 18ಕ್ಕೆ ಶಿವಮೊಗ್ಗಕ್ಕೆ ಹೋಗುತ್ತೇನೆ. 21 ಬೆಳಗ್ಗೆ ನಿಮ್ಮ ಜತೆಗೆ ಸೇರುತ್ತೇನೆ. ವ್ರತಾದಿಗಳನ್ನು, ವಿವಾಹಾತ್ಪೂರ್ವ ಯಾವಾಗ ಬೇಕಾದರೂ ಮಾಡಿಕೊಳ್ಳಬಹುದು. ಅದಕ್ಕೂ ವಿವಾಹಕ್ಕೂ ಯಾವ ಸಂಬಂಧವೂ ಇಲ್ಲ.

ಯಾವುದನ್ನೂ ನಿಶ್ಚಯಮಾಡಿ ತಿಳಿಸು. ಒಂದು ಸಾರಿ ನೀನು ಮೈಸೂರಿಗೆ ಬಂದು ಮುಖತಃ ಮಾತನಾಡಿದರೆ ವಾಸಿ ಎಂದು ನನಗನಿಸುತ್ತದೆ. ನಿನ್ನ ಸೌಕರ್ಯ ನೋಡಿಕೊಂಡು ಬಾ. ಇಲ್ಲಿ ಆನಂದರಾಮು ಮನೆಯನ್ನು ನಿಮಗೆ ಬಿಟ್ಟು ಕೊಡುವುದಾಗಿ ಹೇಳಿದರು. ಬಹಳ ಸೌಕರ್ಯವಾಯಿತು. ಅಲ್ಲಿಗೇ ಪ್ರವೇಶ ಮಾಡಿ, 4 ದಿನ ಔಪಾಸನವನ್ನು ಅಲ್ಲಿ ಮಾಡಬಹುದು. ಇಲ್ಲದಿದ್ದರೆ ಯಜ್ಞೇಶ್ವರನನ್ನು ತೆಗೆದುಕೊಂಡು ಭದ್ರಾವತಿಗೆ ಹೋಗಬೇಕು (ಈಗಲೂ ನನಗೆ ಅದೇ ಹೆಚ್ಚು ಸೂಕ್ತವೆನಿಸುತ್ತದೆ). ಯಾವುದಕ್ಕೂ ಸ್ವಲ್ಪ discuss ಮಾಡಿ ನಿಶ್ಚಯಿಸಬೇಕು.

ನಾವು ಇಲ್ಲಿ ಆರೋಗ್ಯವಾಗಿದ್ದೇವೆ. ಎಲ್ಲರಿಗೂ ನನ್ನ ಅನಂತ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ.

೫೦೫

ವಧುವಿನ ಒಪ್ಪಿಗೆ

ದರ್ಶಪೂರ್ಣಕಾಲವು ಗ್ರಹಣಪುಣ್ಯಕಾಲದಲ್ಲಿ ಅಂತರ್ಗತ, ಗೋತ್ರಕ್ಕೆ 'ಸ'ಕಾರ ಸೇರಿಸುವುದು, ವಿದ್ಯಾವಂತರ passivity

ಕುಶಲಮ್ ಶ್ರೀ: MYSORE

15-8-99

ಶ್ರೀಕಂಠ !

ನಿನ್ನ ಕಾಗದ ನಿನ್ನೆ ತಲಪಿತು (Inland letter ಈಗ 2.00 ಗಳಾಗಿದೆ ಎಂಬುದನ್ನು ನೀನು ಮರೆತಿರುವಂತೆ ಕಾಣುತ್ತದ್ದೆ!!!) . ಆಗ ತಾನೇ ನಿನಗೆ ಒಂದು ಕಾಗದ ಬರೆದು ಕವರಿನಲ್ಲಿ ಹಾಕಿ ಅಂಟಿಸಿಯೂ ಇಟ್ಟಿದ್ದೆ. ಅದನ್ನು ತೆಗೆದು ಈಗ ಬೇರೆ ಬರೆಯುತ್ತಿದ್ದೇನೆ.

ನೀನು ಹೊರಟುಹೋದ ಮಾರನೇ ದಿನವೇ ನನಗೆ ಛಳಿ, ಜ್ವರ ಬಂದು ಎರಡು ದಿನ ಕಾಡಿತು. ಕೊನೆಗೆ ವೈದ್ಯರ ಹತ್ತಿರ ಹೋಗಿ ಔಷಧಿ ತೆಗೆದುಕೊಂಡು ಬಂದೆ. ಮೊನ್ನೆಯಿಂದ ಹುಷಾರಾಗಿದ್ದೇನೆ. ನನ್ನ F.D. ವಿಷಯ ತಿಳಿಸಿದ್ದಕ್ಕೆ ತುಂಬಾ THANKS. ಪಾಪುವಿನ ವಿವಾಹಕ್ಕೆ ಅಗತ್ಯವಾಗಿದೆ. ಅದಕ್ಕೇ Renew ಮಾಡಲಿಲ್ಲ. ನೀನು ಬಂದಾಗ ಪಾಪುವಿನ Ins. prem. ಕೊಡಲು ಮರೆತೆ. ಇದರ ಜತೆಯಲ್ಲಿ ಕಳಿಸಿದ್ದೇನೆ. ಕಟ್ಟಿಬಿಡು.

ವಿವಾಹದ ಬಗ್ಗೆ ನೀನು ಕೇಳಿರುವ ಪ್ರಶ್ನೆಗಳಿಗೆ ನಾನು ಬರೆದಿರುವ ಲೇಖನದಲ್ಲಿ (ನಿನ್ನ ಹತ್ತಿರ copy ಇದೆ ಎಂದು ನಂಬಿದ್ದೇನೆ) ಉತ್ತರ ಸಿಗುತ್ತದೆ ಎಂದುಕೊಂಡಿದ್ದೇನೆ. ಅದನ್ನು ಆಮೂಲಾಗ್ರವಾಗಿ ನೀನೂ, ರವಿಯೂ ಒಂದು ಸಾರಿ ಓದಿ ಅರ್ಥಮಾಡಿಕೊಳ್ಳಿ. ನಾನು ಮಾಡಿಸುವಾಗ follow ಮಾಡಿ ಸಂತೋಷಪಡಲು ಸೌಕರ್ಯವಾಗುತ್ತದೆ. ಬರೀ ರವಿ ಒಬ್ಬನೇ ಅಲ್ಲ, ಅವನ ಭಾವೀ ಪತ್ನಿಯೂ ಓದಬೇಕು. ಇನ್ನೊಂದು ವಿಷಯ. ಈ 4 ದಿನಗಳ ವಿವಾಹದ ವಿಷಯವನ್ನು ಅವಳಿಗೆ ತಿಳಿಸಿದ್ದೀರೆಂದು ನಂಬಿದ್ದೇನೆ. ಅವಳ full co-operation ಅತ್ಯಗತ್ಯ. ಒಂದು

ವೇಳೆ ಅವಳಿಗೆ ಅವುಗಳೆಲ್ಲಾ ಇಷ್ಟವಿಲ್ಲದಿದ್ದರೆ I shall be the last person to come forward and get it done! ಇದನ್ನು ಸ್ಪಷ್ಟವಾಗಿ ತಿಳಿಸು. "ಅವಳನ್ನೇನು ಕೇಳುವುದು? ನಾವು ಹೇಳಿದ ಹಾಗೆ ಕೇಳುತ್ತಾಳೆ" ಎಂಬ ಹಿರಿಯರ ಧೋರಣೆ ಬೇಡ. ಅವಳೂ ವಿದ್ಯಾವತಿ. ವಯಸ್ಸಿಗೆ ಬಂದಿರುವವಳು. Her consent and co-operation are absolutely essential. ಅದನ್ನು ಮುಂಚೆ ಖಚಿತಮಾಡಿಕೊಳ್ಳಿ.

1) ವಿವಾಹದ ದಿನ ಸಾಯಂಕಾಲ ಛತ್ರವನ್ನು 4 ಘಂಟೆ ವೇಳೆಗೆ ಬಿಡಬೇಕು. ಅವತ್ತು Reception ಕಾರ್ಯಕ್ರಮ ಇಲ್ಲವೆಂದು ಅವರೇ ನನಗೆ ಹೇಳಿದ್ದರು.

2) ವಿವಾಹ ದಿನ ರಾತ್ರಿ ಔಪಾಸನವಾದ ಮೇಲೆ, ನಿಮ್ಮ ಬಿಡಾರದಿಂದ ಧಾರಾಳವಾಗಿ ಛತ್ರಕ್ಕೆ ಹೋಗಿ ಊಟ ಮಾಡಿಕೊಂಡು ಬರಬಹುದು. ನಿತ್ಯವೂ ಅವರ ಮನೆಗೇ ಹೋಗಿ ಬೆಳಗ್ಗೆ ಸಾಯಂಕಾಲ ಬರಬಹುದು.

3) ಹುಡುಗಿಯು ನಿಮ್ಮ ಮನೆಯಲ್ಲಿಯೇ ಇರಬೇಕಾದ ಆವಶ್ಯಕತೆಯಿಲ್ಲ. ಬೇರೆ ಊರಿನಲ್ಲಿದ್ದರೆ ವಿಧಿಯಿಲ್ಲ. ಹೋಗಿ ಬರುವ ತೊಂದರೆ ತಪ್ಪಿಸಿಕೊಳ್ಳಲು ಅಲ್ಲಿಯೇ ಇರಬಹುದು (ಐಚ್ಛಿಕ). ಅಥವಾ ಬೆಳಗ್ಗ್ಯೆ ಬಂದು, ಸಾಯಂಕಾಲದ ಔಪಾಸನವನ್ನು ಮುಗಿಸಿಕೊಂಡು ಹೋಗಬಹುದು.

4) ಮೂರುದಿನಗಳೂ ಬೆಳಗ್ಗೆ ಸಾಯಂಕಾಲ ಔಪಾಸನ ಬಿಟ್ಟರೆ ಬೇರೆ ಯಾವ ವೈದಿಕ ಕಾರ್ಯಕ್ರಮವೂ ಇಲ್ಲ. ಹುಡುಗನು ಔಪಾಸನ ಮುಗಿಸಿಕೊಂಡು ಹೊರಗೆ ಹೋಗಿಬರಬಹುದು. ಸಾಯಂಕಾಲದ ಔಪಾಸನೆ ವೇಳೆಗೆ (ಸೂರ್ಯಾಸ್ತಮಾನ ಕಾಲಕ್ಕೆ) ಸಂಧ್ಯಾವಂದನೆ ಮಾಡಿ ಸಿದ್ಧವಾಗಿದ್ದರೆ ಸಾಕು.

ನಿನ್ನ ಪೂಜಾವಿಧಾನವನ್ನು ಪರಿಶೀಲಿಸಲು ನನಗೆ ಸ್ವಲ್ಪ ಕಾಲಾವಕಾಶ ಬೇಕು. ಈಗ "ಶ್ರಾದ್ಧ" ಪುಸ್ತಕ ಬಂದು ಕೂತಿದೆ. ಅದರ proof correction ಮಾಡಬೇಕು. ಆಮೇಲೆ ನಿನ್ನದು ತೆಗೆದುಕೊಳ್ಳುತ್ತೇನೆ.

11ನೇ ತಾರೀಖು ಅಮಾವಾಸ್ಯೆ ಸಾಯಂಕಾಲ 4-35 ರವರೆಗೆ ಇದೆ (ಬೆಳಗ್ಗೆ ಅಲ್ಲ). ಗ್ರಹಣ 5-18ಕ್ಕೆ. ಸಾಮಾನ್ಯವಾಗಿ ಅಮಾವಾಸ್ಯೆ ಸಮಯದಲ್ಲಿಯೇ ಗ್ರಹಣ ಬರಬೇಕು. ಈ 40 ನಿಮಿಷಗಳ ವ್ಯತ್ಯಾಸ ಪ್ರಾಯಃ ತಿಥಿಯ calculationನಲ್ಲಿ ವ್ಯತ್ಯಾಸವಾಗಿರಬಹುದು. ಅಷ್ಟೆ. celestial phenomena ಹಿಂದುಮುಂದಾಗುವುದಿಲ್ಲ. ದೊಡ್ಡದರಲ್ಲಿ ಸಣ್ಣದು ಅಂತರ್ಗತ ವಾಗುತ್ತದೆ ಎಂಬ ಒಂದು ನ್ಯಾಯವನ್ನು ಇಟ್ಟುಕೊಂಡಿದ್ದಾರೆ. ಗ್ರಹಣಪುಣ್ಯಕಾಲ ಅಮಾವಾಸ್ಯಾಪುಣ್ಯಕಾಲಕ್ಕಿಂತ ದೊಡ್ಡದು ಎಂಬ ಭಾವನೆ. ಅದರಿಂದ ದರ್ಶಪುಣ್ಯಕಾಲವು ಗ್ರಹಣಪುಣ್ಯ ಕಾಲದಲ್ಲಿ ಅಂತರ್ಗತ. ಆದ್ದರಿಂದ ಒಂದು ತರ್ಪಣ ಸಾಕು ಎಂಬ ಅಭಿಪ್ರಾಯ. ಸಪತ್ನೀಮಾತೃವು, ಏಕೋದ್ದಿಷ್ಟ ಪಿತೃಗಳ ಜತೆಯಲ್ಲಿ ಸೇರಿರುವುದರಿಂದ ದರ್ಶ, ಗ್ರಹಣ, ಸಂಕ್ರಮಣಾದಿ ಪುಣ್ಯಕಾಲ ಗಳಲ್ಲಿ ಮಾಡುವ ಶ್ರಾದ್ಧದಲ್ಲಿ ಅವಳು ಬರುವುದಿಲ್ಲ. ಮಹಾಲಯಪಕ್ಷದಲ್ಲಿ ಮಾಡುವ ಶ್ರಾದ್ಧದಲ್ಲಿ ಮಾತ್ರ.

ಗೋತ್ರಕ್ಕೆ ಸಕಾರ ಸೇರಿಸಿ ಹೇಳುವುದು ತಪ್ಪೆಂದು ಹೇಳಲು ಬರುವುದಿಲ್ಲ. ವ್ಯಾಕರಣ ರೀತ್ಯಾ "ಸ" ಗೋತ್ರವೆಂದರೆ ತತ್ಸಮಾನ ಗೋತ್ರವೆಂದರ್ಥ. "ಆತ್ರೇಯ ಗೋತ್ರ" ಎಂದರೆ ಆತ್ರೇಯರ ಗೋತ್ರ. ಆತ್ರೇಯ ಸಗೋತ್ರವೆಂದರೆ ಆತ್ರೇಯರ ಸಮಾನ ಗೋತ್ರ. ಎರಡೂ ಒಂದೇ ಅರ್ಥ. ಹಾಗಿದ್ದರೂ "ಸ" ಕಾರ ಅವಶ್ಯವಿಲ್ಲ. ಕರ್ಣಾಟಕರಿಗೆ ಅದು ಅಭ್ಯಾಸ. ನಿರ್ಣಯಸಿಂಧುಕಾರರೂ, ಶ್ರಾದ್ಧದಲ್ಲಿ ಮಾತ್ರ 'ಸ' ಕಾರ ಸೇರಿಸಿ ಹೇಳಬೇಕೆಂದು ಯಾವುದೋ ಸ್ಮೃತಿವಾಕ್ಯವನ್ನು ಹೇಳುತ್ತಾರೆ.

ನನಗೆ ಈಚೀಚೆಗೆ ಈ ವಿದ್ಯಾವಂತ community ಯ passivity ಯನ್ನು ಕಂಡು irritation ಮತ್ತು frustration ಎರಡೂ ಆರಂಭವಾಗಿಬಿಟ್ಟದೆ. ಮೊದಲು ಮೊದಲು ತಾಳ್ಮೆಯಿಂದ ಹೇಳೋಣವೆನಿಸುತ್ತಿತ್ತು. ಈಗ ಪುನಃ ಪುನಃ ಅದೇ ತಪ್ಪುಗಳನ್ನು ತಿಳಿದೂ ತಿಳಿದೂ, ಯೋಚನೆಯೇ ಇಲ್ಲದೆ ಮಾಡುವುದನ್ನು ನೋಡಿ ತುಂಬಾ irritate ಆಗುತ್ತದೆ. ತಾಳ್ಮೆಯೂ ಹೋಗುತ್ತದೆ. ಅನವಶ್ಯಕವಾಗಿ ಕ್ರೋಧ ಬರುತ್ತದೆ. ಆದ್ದರಿಂದ ಇನ್ನು ಮೇಲೆ ಅಂಥಾ ಸನ್ನಿವೇಶಗಳನ್ನೇ ಸಂಪೂರ್ಣವಾಗಿ avoid ಮಾಡಬೇಕೆಂದಿದ್ದೇನೆ. ಸಾಕು. ನನ್ನಷ್ಟಕ್ಕೆ ನಾನು ತೃಪ್ತಿಯಾಗಿ ಮಾಡಿಕೊಂಡಿದ್ದರೆ ಸಾಕು.

ಚಿ|| ಗಳಿಗೆಲ್ಲಾ ಆಶೀರ್ವಾದಗಳನ್ನು ತಿಳಿಸು.

ಇತಿ ನಿಮ್ಮವ

ಕುಮಾರಸ್ವಾಮೀ

೫೦೬

ಕಳ್ಳ ಒಕ್ಕಲು

ವೀರಮಂಡಿ ; ಪಂಚಪಾತ್ರೆ ; ನಂದಾದೀಪ ; ಕ್ರಮ, ಜಟೆ, ಘನ

ಕುಶಲಮ್ ಶ್ರೀ: **ಮೈಸೂರು**

11.10.99

ಶ್ರೀಕಂಠ !

ನಿನ್ನ ಕಾಗದ ತಲಪಿತು. ನಿನ್ನ ಹಲ್ಲು ನೋವಿನ ಅನುಭವವನ್ನು ಕೇಳಿ ಆಶ್ಚರ್ಯವೇನೂ ಆಗಲಿಲ್ಲ. ಸೌ|| ಯೂ ಮತ್ತೆ ಕೆಲವರೂ ಅನುಭವಿಸಿರುವುದನ್ನು ನೋಡಿದ್ದೇನೆ. ನಿನ್ನ ದೃಷ್ಟಿಯೇ ಬಿತ್ತು ಅಂತ ಕಾಣುತ್ತೆ! ಈಗ ನನಗೂ ಹಲ್ಲು ಸ್ವಲ್ಪ ತೊಂದರೆ ಕೊಡಲು ಆರಂಭಿಸಿದೆ. ನೋವಿಲ್ಲ. ಆದರೆ ತಣ್ಣೀರು ತಗಲಿದರೆ ಜುಮುಗುಟ್ಟುತ್ತದೆ. ಗಟ್ಟಿಯಾದದ್ದನ್ನು ಅಗಿಯಲು ಸಾಧ್ಯವಿಲ್ಲ. ಸೌ|| ಯ ಹಲ್ಲುವೈದ್ಯರಿಗೇ ನಾನೂ ತೋರಿಸಿದೆ. ಆವರು ಒಸಡುಗಳು Weak ಆಗಿವೆ ಎಂದು ಹೇಳಿ ಒಂದು Medicated paste ಮತ್ತು ಎಣ್ಣೆ ಕೊಟ್ಟಿದ್ದಾರೆ. ಉಪಯೋಗಿಸುತ್ತಿದ್ದೇನೆ. 2 ತಿಂಗಳುಗಳಲ್ಲಿ improve ಆಗುತ್ತದೆಂದು ಹೇಳಿದ್ದಾರೆ. ನೋಡಬೇಕು. ಇನ್ನು ನಿನ್ನ ಪ್ರಶ್ನೆಗಳು.

1) ವೇದಾಂತದ ಸಿದ್ಧಾಂತಗಳ ಸ್ವಲ್ಪ ಪರಿಚಯ ಇರುವವರಿಗೆ ಈ ಪ್ರಶ್ನೆ ಉದ್ಭವವಾಗಕೂಡದು. ನಮ್ಮ ವೇದೋಪನಿಷತ್ತುಗಳೆಲ್ಲವೂ ಪರಮಾತ್ಮ ಒಬ್ಬನೇ ಎಂದು ಒಕ್ಕೊರಲಿನಿಂದ ಘೋಷಿಸುತ್ತಿವೆ. "ಏಕಂ ಸತ್ ವಿಪ್ರಾಃ ಬಹುಧಾ ವದಂತಿ" (ಸದ್ವಸ್ತು ಅಂದರೆ ಪರಮಾತ್ಮ ಒಂದೇ. ಆದರೆ ತಿಳಿದವರು ನಾನಾ ರೀತಿ ಹೇಳುತ್ತಾರೆ) ಎಂದು ಋಗ್ವೇದ ಹೇಳುತ್ತಿದೆ. ನಮ್ಮ ಸೌಕರ್ಯಾರ್ಥವಾಗಿ, ನಮ್ಮ ಸಂಕುಚಿತ ಜ್ಞಾನಕ್ಕೆ ಹಿಡಿಸುವಂತೆ, ನಮ್ಮ ಧ್ಯಾನ ಪೂಜಾದಿಗಳಿಗೆ ಅನುಕೂಲವಾಗುವಂತೆ ಮಹರ್ಷಿಗಳು ನಮಗೆ ನಾನಾ ತರಹ ದೇವತೆಗಳನ್ನು ಕೊಟ್ಟಿದ್ದಾರೆ. ಹೆಸರುಗಳು ಬೇರೆ ಬೇರೆ, ರೂಪ ಆಕಾರಗಳು ಬೇರೆ ಬೇರೆ, ಹೆಂಡತಿಯರು ಬೇರೆ ಬೇರೆ, ಅವರುಗಳ ಶಕ್ತಿ efforts ಬಗ್ಗೆ ಬೇರೆ ಬೇರೆ ಕಥೆಗಳು, ಹೀಗೆ ಅನೇಕ ಮುಖವಾಗಿ ಹೊರಟಿವೆ. ನಾವು ನಮಗೆ ಅಥವಾ ನಮ್ಮ ಪೂರ್ವಜರಿಗೆ ಯಾವುದು ಇಷ್ಟವಾಯಿತೋ ಅದನ್ನು ನಮ್ಮ ಕುಲದೇವತೆ ಎಂದು ಇಟ್ಟುಕೊಂಡೆವು. ಆ ದೇವತೆಯ ಒಕ್ಕಲು ಎಂದು ಕರೆದುಕೊಂಡೆವು. ಹಾಗೆಯೇ ಬೇರೆ ದೇವತೆಯನ್ನು ಆರಾಧಿಸಕೂಡದೆಂದೂ ಹಾಗೆ ಆರಾಧಿಸಿದ್ದೇ ಆದರೆ ಕುಲದೇವತೆಗೆ ಕೋಪ ಬರುವುದೆಂದೂ, ಕಥೆಗಳನ್ನು ಕಟ್ಟಿದರು. ನಮ್ಮ ಮನೆಯಲ್ಲಿ ನಾವು ತಿರುಪತಿ ತಿಮ್ಮಪ್ಪನ ಒಕ್ಕಲೇ ಆದರೂ ಕಳ್ಳ ಒಕ್ಕಲು, ದರ್ಶನಕ್ಕೆ ಹೋಗಬಾರದು ಎಂಬ ಕಥೆಯನ್ನು ಹಬ್ಬಿಸಿದ್ದಾರೆ. ಅದು ಯಾರು, ಯಾವಾಗ, ಯಾವ ಕಾರಣಕ್ಕೋಸ್ಕರ ಎಂದು ತಿಳಿಯದು. ಅಂತೂ ನನಗೆ ತಿಳಿದಂತೆ ನನ್ನ ತಂದೆ, ಅಜ್ಜಂದಿರು ಹೋಗಿರಲಿಲ್ಲ ವಂತೆ! ನಾನೂ, ಹುಡುಗತನದಲ್ಲಿ ನಂಬಿಕೊಂಡು ಹೋಗಿರಲಿಲ್ಲ (ಹೋಗಲು ಅವಕಾಶವೂ ಇರಲಿಲ್ಲ. ಆರ್ಥಿಕ ಸ್ಥಿತಿಯು ಬಿಡುತ್ತಲೂ ಇರಲಿಲ್ಲ). ವೇದಾಂತ ವಿಚಾರಗಳು ಸ್ವಲ್ಪಮಟ್ಟಿಗೆ ತಿಳಿದ ಮೇಲೆ ಈ ಕಥೆಗಳಲ್ಲಿ ಅರ್ಥವಿಲ್ಲವೆಂದು ಮಂದಟ್ಟಾಯಿತು. ಹೋಗಬೇಕೆಂದು ಅನಿಸಲೇ ಇಲ್ಲ. ಒಂದು ಸಾರಿ, ಕಿಟ್ಟಣ್ಣನ (H.N. Krishna Murthy) ಮಗನಿಗೆ ಉಪನಯನವಾಯಿತು. ಕೇಶವಮೂರ್ತಿ ಘನಪಾಠಿಗಳೇ ಮಾಡಿಸಿದರು. ಆಗ ಹೋಗಿದ್ದೆ. ಅಲ್ಲಿನ Q ಗಲಾಟೆ, Commercialization ಎಲ್ಲ ಕಂಡು ಜುಗುಪ್ಸೆಯಾಗಿ ಇನ್ನು ನಿನ್ನ ದರ್ಶನವನ್ನು ಮನೆಯ ಪೂಜೆಯಲ್ಲೇ ಮಾಡುತ್ತೇನೆಂದು ಹೇಳಿ ಬಂದುಬಿಟ್ಟೆ. ಪುನಃ ಹೋಗಿಲ್ಲ. ಹೋಗುವ ಅಪೇಕ್ಷೆಯೂ ಇಲ್ಲ. ಯಾರೋ ಯಾವುದೋ ಕಾರಣದಿಂದ ಒಂದು ವದಂತಿಯನ್ನು ಹೊರಡಿಸುತ್ತಾರೆ. ಅದೇ ಪ್ರಮಾಣವಾಗಿ ಕುಳಿತುಬಿಡುತ್ತದೆ. ನಾಮ ರೂಪ ವಿವರ್ಜಿತನಾದ ಆ ಪರಮಾತ್ಮನಿಗೆ ನಾವೇ ಒಂದು ಹೆಸರು ಕೊಟ್ಟು ಒಂದು ಆಕಾರವನ್ನು ಕೊಟ್ಟು ಒಂದು ಕಥೆಯನ್ನು ಕಟ್ಟಿ (ಶ್ರೀನಿವಾಸ ಕಲ್ಯಾಣ ಮುಂತಾದುವೆಲ್ಲವೂ ಕಾಲ್ಪನಿಕ ಕಥೆಗಳೇ ಹೊರತು ಯಥಾರ್ಥವಲ್ಲ) ಒಂದು ಕಡೆ ಅವನ ಕಾಲ್ಪನಿಕ ವಿಗ್ರಹವನ್ನು ಪ್ರತಿಷ್ಠೆ ಮಾಡಿದ ಮೇಲೆ ಅಲ್ಲಿಗೆ ಹೋಗಬಾರದು, ಕಳ್ಳ ಒಕ್ಕಲು ಎಂದೆಲ್ಲಾ ಹೇಳಿದರೆ, ಅವು ಪ್ರಮಾಣವೆಂದು ಒಪ್ಪಿಕೊಳ್ಳುವುದು ಹೇಗೆ? ದೇವಾಲಯದಲ್ಲಿ ಕಲ್ಲಿನಲ್ಲಿಯೋ, ಮಣ್ಣಿನಲ್ಲಿಯೋ, ಲೋಹದಲ್ಲಿಯೋ ಇರುವ ವಿಗ್ರಹದಲ್ಲಿ ದೇವತಾ ಸಾನ್ನಿಧ್ಯವಿದೆಯೆಂದು ತಿಳಿದುಕೊಳ್ಳುವುದು ಪುರುಷನಿಷ್ಠ (subjective) ಗುಣವೇ ಹೊರತು ವಸ್ತುನಿಷ್ಠ (objective) ವಲ್ಲ. ನಮಗೆ ಆ ವಿಗ್ರಹದಲ್ಲಿ ದೇವತಾಬುದ್ಧಿ ಇದೆಯೇ ಹೊರತು, ಅದೇ ಆ ದೇವತೆಯಲ್ಲ. ಇದು ಮನಸ್ಸಿಗೆ ಬಂದರೆ ನಮಗೆ ಆ ಭಯಗಳೆಲ್ಲಾ ಹೋಗುತ್ತವೆ. ಒಂದು ವೇಳೆ ಅಲ್ಲಿ ದೇವತಾಸಾನ್ನಿಧ್ಯವಿದೆ ಎಂದು ಕಲ್ಪಿಸಿಕೊಂಡರೂ, ದೇವತಾದರ್ಶನಕ್ಕೆ ಭಕ್ತಿಯಿಂದ ಹೋದವರನ್ನು ಶಿಕ್ಷಿಸುವುದಕ್ಕೆ ಅವನು ಕಾದಿದ್ದಾನೆ ಎಂದು ಕಲ್ಪಿಸಿಕೊಳ್ಳುವುದು ದೇವತಾತ್ವಕ್ಕೇ ಹಾನಿ ಉಂಟುಮಾಡಿದ ಹಾಗೆ ಆಗುವುದಿಲ್ಲವೇ? ಆದ್ದರಿಂದ ನಿನ್ನ ಸ್ನೇಹಿತರಿಗೆ ಧೈರ್ಯವಾಗಿ, ಯಾವ ಅಳುಕೂ ಇಲ್ಲದೆ ಹೋಗಿ ಬರಬಹುದೆಂದು ಹೇಳು.

2) ಪಿತೃಕಾರ್ಯದಲ್ಲಿ ಪಿಂಡಪ್ರದಾನ, ತರ್ಪಣಾದಿಗಳನ್ನು ಮಾಡಲು ವೀರಮಂಡಿಯಲ್ಲಿ ಕುಳಿತುಕೊಳ್ಳಬೇಕೆಂಬುದು ಒಂದು ಕ್ರಮ. ಪ್ರಾಚೀನಾವೀತಿ ಇದ್ದಂತೆ. ಸಾಧ್ಯವಾಗುವುದಿಲ್ಲವೆಂದರೆ ಪದ್ಮಾಸನದಲ್ಲಿಯೇ ಕುಳಿತು ಮಾಡಬಹುದು. ಅನವಶ್ಯಕವಾಗಿ ಒಂದು ಕ್ರಮವನ್ನು ವ್ಯತ್ಯಾಸ ಮಾಡಬೇಕಾದ್ದಿಲ್ಲವೆಂದು ನನ್ನ ಅಭಿಪ್ರಾಯ.

3) ಪಂಚಪಾತ್ರೆ ಎಂದರೆ ವಾಸ್ತವವಾಗಿ ಐದು ಪಾತ್ರೆಗಳ ಸಮೂಹ ಎಂದರ್ಥ. ದೇವರಿಗೆ ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ಶುದ್ಧೋದಕ ಹೀಗೆ ಐದು ಬೇರೆ ಬೇರೆ ಪಾತ್ರೆಗಳಲ್ಲಿಟ್ಟು ಕೊಳ್ಳಬೇಕು. ಅಂದರೆ ಒಂದರ ಶೇಷದಿಂದ ಇನ್ನೊಂದು ಕಾರ್ಯವನ್ನು ಮಾಡಬಾರದು ಎಂಬ ಉದ್ದೇಶ. ಅದು ಸ್ವಲ್ಪ impracticable ಆಯಿತು ಅಂತ ಕಾಣುತ್ತೆ. ಆಗ ಒಂದೇ ಪಾತ್ರೆ ಇಟ್ಟುಕೊಂಡು ಉದ್ಧರಣೆಯನ್ನು ಹೊಂದಿಸಿದರು. ಉದ್ಧರಣೆಯಿಂದ ತೆಗೆದ ಮೇಲೆ ಅದು ಶೇಷವೆನಿಸಿಕೊಳ್ಳುವುದಿಲ್ಲ. ಉದ್ಧರಣೆಯಲ್ಲಿ ಒಂದು ಕೆಲಸವನ್ನು ಮಾಡಿ ಅದರಲ್ಲಿಯೇ ಮಿಕ್ಕಿದ್ದರೆ ಅದು ಶೇಷ. ಅದು ಇನ್ನೊಂದು ಕೆಲಸಕ್ಕೆ ಬರುವುದಿಲ್ಲ. ಬಿಸಾಡಬೇಕು.

4) ನಂದಾದೀಪವೆಂದರೆ ಸದಾ ಇರುವ ದೀಪವೆಂದರ್ಥ. ದೇವರ ಹತ್ತಿರ ಸದಾ ದೀಪವಿರಬೇಕೆಂಬುದು ಶ್ರದ್ಧಾ ಭಕ್ತಿಗಳ ಕುರುಹು ಅಷ್ಟೆ. ಅವನವನ ಶಕ್ತಿಯ ಮೇಲೂ ಅವಲಂಬಿಸುತ್ತದೆ. ದೀಪಗಳು ಇಲ್ಲದ, ಕತ್ತಲು ಕತ್ತಲಾದ ಹಳೆಯ ಕಾಲದ ಮನೆಗಳಲ್ಲಿ ದೇವರು ಕತ್ತಲೆಯಲ್ಲಿರಬಾರದು ಎಂಬ ಭಾವನೆಯಿಂದ ನಂದಾ ದೀಪದ idea ಬಂದಿದೆ.

5) ಕ್ರಮ, ಜಟೆ, ಘನ ಇವುಗಳೆಲ್ಲವೂ ವಿಕೃತಿಗಳು. ಅವುಗಳನ್ನು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ, ಪ್ರಯೋಜನ ಮೊದಲೇ ಇಲ್ಲ, ಹೇಳುವವನಿಗೆ, ಕೇಳುವವನಿಗೆ ಚೆನ್ನಾಗಿರುತ್ತದೆಂದು ಹೇಳಬೇಕಷ್ಟೆ. ಸಂಗೀತದಲ್ಲಿ ಕಲ್ಪನಾ ಸ್ವರಗಳಿದ್ದಂತೆ. ಪೂಜೆಯಲ್ಲೆಲ್ಲಾ ರುದ್ರ ಕ್ರಮ ಹೇಳುವುದು ಯುಕ್ತವಲ್ಲ. ಅದು ಪ್ರಾರ್ಥನೆಯಾಗಲಿ, ಸ್ತೋತ್ರವೆಂದಾಗಲಿ ಆಗುವುದಿಲ್ಲ. ಇನ್ನೂ ಪದಪಾಠ ಹೇಳಬಹುದು. ನಾಲ್ಕು ಜನ ಸೇರಿದೆಡೆ, ಸಣ್ಣದಾಗಿ, ಒಂದು ಕ್ರಮ, ಘನಗಳನ್ನು ಹೇಳಿದರೆ ಕೇಳಲು ಇಂಪಾಗಿರುತ್ತದೆ.

ನಾವು ಆರೋಗ್ಯ. ಚಿ|| ಗಳಿಗೆ ನನ್ನ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮಿ

೫೦೭

ಅಭಯಪ್ರದಾನ

ಕುಶಲಮ್ ಶ್ರೀ: ಮೈಸೂರು

25-11-99

ಶ್ರೀಕಂಠ !

ನಿನ್ನ ಕಾಗದ ಮೊನ್ನೆ (ಶನಿವಾರ) ಸಾಯಂಕಾಲ ತಲಪಿತು. ನಿನ್ನೆ ಭಾನುವಾರವಾದ್ದರಿಂದ ಇವತ್ತು ಬರೆಯುತ್ತಿದ್ದೇನೆ. ಈ ಕಾಗದ ತಲಪುವ ವೇಳೆಗೆ ವಿಶುವು ಹುಷಾರಾಗಿ ನೀನು ಅಲ್ಲಿಂದ ಹೊರಟೇ ಇರಬಹುದೇನೋ ! ಹೇಗಾದರೂ ಆಗಲಿ ಬರೆಯಬೇಕೆಂದು ಕೂತಿದ್ದೇನೆ.

ನಿನ್ನ ಪರಿಸ್ಥಿತಿ ಅರ್ಥವಾಗುತ್ತದೆ. ಆದರೆ ಇಂಥವೆಲ್ಲಾ ನಮ್ಮ ಜೀವನಗಳಲ್ಲಿ ಬರುತ್ತಲೇ ಇರುತ್ತವೆ. Let us be optimistic and hope for the best. ವಿಶುವಿಗೆ ಇನ್ನೂ ಅಂಥಾ ವಯಸ್ಸೇನೂ ಆಗದಿರುವುದರಿಂದ ಗುಣಮುಖನಾಗುತ್ತಾನೆ. ನೀನು ಸಿದ್ಧತೆಗಳ ಬಗ್ಗೆ ಯೋಚಿಸಬೇಡ. ಈ ಕಾಲದಲ್ಲಿ ಹಣ ಒಂದಿದ್ದರೆ ಎಲ್ಲವನ್ನೂ 2-3 ದಿನಗಳಲ್ಲಿ ಸಿದ್ಧ ಮಾಡಬಹುದು. ಆತಂಕಕ್ಕೇನೂ ಅವಕಾಶವಿಲ್ಲ. ನಿನ್ನೆ ನಿನ್ನ ಭಾವೀ ಬೀಗ-ಬೀಗಿತ್ತಿಯರು ಬಂದಿದ್ದರು. ಸಿದ್ಧ ಮಾಡಬೇಕಾದ ಸಾಮಾನುಗಳ ಪಟ್ಟಿಯನ್ನು ಕೊಟ್ಟಿದ್ದೇನೆ. ಎಲ್ಲವನ್ನೂ ಹೊಂದಿಸುತ್ತೇನೆಂದು ನಾರಾಯಣಸ್ವಾಮಿ ಹೇಳಿದ್ದಾರೆ. ತುಂಬಾ ಉತ್ಸಾಹದಿಂದ ಇದ್ದಾರೆ. ಆದ್ದರಿಂದ ಇಲ್ಲಿನ ವಿಷಯಕ್ಕೆ ನೀನು ತಲೆಕೆಡಿಸಿಕೊಳ್ಳಬೇಡ. ಮೈಸೂರಿಗೆ you are always welcome. ಆದರೆ ಸಾಮಾನುಗಳ ವಿಷಯ ನಾನು ನೋಡಿಕೊಳ್ಳುತ್ತೇನೆ (ಸಾಮಾನುಗಳೆಂದರೆ ನಮ್ಮ ವೈದಿಕ ಕರ್ಮಗಳಿಗೆ ಬೇಕಾದ್ದು).

ನಾವು ಆರೋಗ್ಯವಾಗಿದ್ದೇವೆ. ಸೌ|| ಯೂ ಮೊನ್ನೆ ಎರಡು ಹಲ್ಲು ತೆಗೆಸಿಕೊಂಡಳು!!

ವಿಶುವಿಗೂ ಮತ್ತಿತರ ಚಿ|| ಗಳಿಗೂ ನನ್ನ ಅನಂತ ಆಶೀರ್ವಾದಗಳು. ಅವನಿಗೆ ಬೇಗನೇ ಗುಣವಾಗಲೆಂದು ಈಶ್ವರನನ್ನು ಪ್ರಾರ್ಥಿಸುತ್ತಿದ್ದೇನೆ.

ಇತಿ ನಿಮ್ಮವ

ಕುಮಾರಸ್ವಾಮಿ

೫೦೮

ವೈದಿಕ ಕರ್ಮದ kick

ಕುಶಲಮ್ ಶ್ರೀ: MYSORE

14.12.99

ಶ್ರೀಕಂಠ !

ನಿನ್ನ ಕಾಗದ, ನಿನ್ನ ಮಗನ Bio-data ಎರಡೂ ತಲಪಿದುವು. Bio-data ವನ್ನು ಸದ್ಯದಲ್ಲಿಯೇ ಪಾಪುವಿಗೆ ಕಳಿಸುತ್ತೇನೆ.

ವಿವಾಹ ನಡೆದ ಬಗ್ಗೆ ನೀನು ಸೂಚಿಸಿರುವ ಮೌನ-ಸಂತೋಷವು, ಅತ್ಯಂತ ಪರಿಣಾಮಕಾರಿ. ಸಂತೋಷಾಧಿಕ್ಯ

ವಾದಾಗ ಮಾತುಗಳು ಹೊರಡುವುದಿಲ್ಲ, ಅದಕ್ಕೇ ಅಲ್ಲವೇ ದಕ್ಷಿಣಾ ಮೂರ್ತಿ ಗುರುಗಳನ್ನು "ಗುರೋಽಸ್ತು ಮೌನಂ ವ್ಯಾಖ್ಯಾನಂ" ಎಂದು ಹೇಳುತ್ತಾರೆ! ಪರಮ ಬ್ರಹ್ಮಾನಂದದಲ್ಲಿ ಮುಳುಗಿರುವವನು ತನ್ನ ಸಂತೋಷವನ್ನು ಸೂಚಿಸುವುದು ಹೇಗೆ? ಮೌನವಾಗಿ ಇರುತ್ತಿದ್ದರಂತೆ!!

ಶ್ರೀಕಂಠ ! ವಿವಾಹದ ದಿನ ನನಗೆ ಸ್ವಲ್ಪ ಕಿರಿಕಿರಿಯಾಯಿತು. ಜನಗಳ ಗಲಾಟೆ, ನಿಮ್ಮ ಬೀಗರು ಬಂದು ಧಾರೆ ನೀರು ಬಿಡಲು ಬೇರೆಯವರಿಗೂ ಅವಕಾಶ ಕೊಡಬೇಕೆಂದು ಕೇಳಿದ್ದು, ಇವೆಲ್ಲಾ ಸ್ವಲ್ಪ ಮನಸ್ಸು ವ್ಯಗ್ರವಾಗಲು ಅವಕಾಶವಾಯಿತು. ಆದರೆ ವಸಂತ ಲಕ್ಷ್ಮಿಯ ungruntling co-operation ಮಾತ್ರ ಬಹ...ಳ ಸಂತೋಷವಾಯಿತು. ಆಮೇಲೆ ಸಾಯಂಕಾಲದಿಂದ 4 ದಿನಗಳೂ ಮನಸ್ಸಿಗೆ ಅತ್ಯಂತ ಮುದವನ್ನುಂಟುಮಾಡಿದುವು. ರವಿ, ಸುಮ ಇಬ್ಬರೂ ನಾನು ಬರುವ ಹೊತ್ತಿಗೆ ಎಲ್ಲವನ್ನೂ ಸಿದ್ಧ ಮಾಡಿ ಇಡುತ್ತಿದ್ದ ಬಗೆ ಯಾರಿಗೆ ತಾನೇ ಸಂತೋಷವನ್ನುಂಟು ಮಾಡುವುದಿಲ್ಲ?

ಶುದ್ಧವಾದ, ಮಹರ್ಷಿಪ್ರೋಕ್ತವಾದ ರೀತಿಯಲ್ಲಿ ಒಂದು ಕರ್ಮವನ್ನು ನಡೆಸಿದರೆ ಮನಸ್ಸಿಗೆ ಎಷ್ಟು ಸಂತೋಷವಾಗುತ್ತ ದೆಂಬುದನ್ನು ರವಿ, ಸುಮ ಇಬ್ಬರೂ ತೋರಿಸಿಕೊಟ್ಟರು. Aldous Huxley ಹೇಳಿದ, "A well - performed ritual is the work of an art by which even a sceptical spectator will get a kick" statement ಉ ಅಕ್ಷರಶಃ ನಿಜವಾದದ್ದನ್ನು ಅಲ್ಲಿ ಕಾಣಬಹುದಾಗಿತ್ತು, ನನಗಂತೂ, ಅತ್ಯಾನಂದವಾಯಿತು. ಆ ಆನಂದವನ್ನು ಅನುಭವಿಸಲು ಸಹಾಯಮಾಡಿದ ಸುಮ, ರವಿ ದಂಪತಿಗಳಿಗೆ, ನಿನಗೆ, ವೇದಳಿಗೆ, ವಸಂತಲಕ್ಷ್ಮೀ ದಂಪತಿಗಳಿಗೆ, ನನ್ನ ಅನಂತಾನಂತ, ಕೃತಜ್ಞತಾ ಪೂರ್ವಕವಾದ ವಂದನೆಗಳು. THANK YOU VERY MUCH ಎಂದಿಷ್ಟೇ ಹೇಳಬಲ್ಲೆ.

ಈ ಆನಂದವನ್ನು identify ಮಾಡಲೂ ಆಗದಿರುವುದು ನಮ್ಮ ಸಮಾಜದ ಶೋಚನೀಯ ಪರಿಸ್ಥಿತಿ. ದುಃಖದ ಸಂಗತಿಯೆಂದರೆ ಅತ್ಯಂತ ಆಧುನಿಕರಾದ, ವಿದ್ಯಾವಂತರಾದ ಯುವಕ ಯುವತಿಯರಿಗೂ ಅದರ ಪರಿವೆಯೇ ಇಲ್ಲದಿರುವುದು!! ಇದು ಕೇವಲ ನಮ್ಮ ಸಮಾಜವಲ್ಲ, ಇಡೀ ಭಾರತದ ಸಮಾಜವೇ ಹೀಗಾಗಿದೆ.

ಶ್ರೀಕಂಠ! ಸುಮಳು ನಿಮಗೆ ಸೊಸೆಯಾಗಿ, ರವಿಗೆ ಧರ್ಮ ಪತ್ನಿಯಾಗಿ, ನಿಮ್ಮೆಲ್ಲರ ಮನಸ್ಸನ್ನು ಸಂತೋಷಪಡಿಸಿಕೊಂಡು, ಖುಷಿಯಾಗಿದ್ದಾಳೆಂದು ನಂಬಿದ್ದೇನೆ. ನಾನೂ ಯಾವತ್ತಾದರೂ ಬಂದು ಆ ಖುಷಿಯಲ್ಲಿ ಪಾಲುಗೊಳ್ಳುತ್ತೇನೆಂದು ಹೇಳು.

ಚಿ|| ಗಳಿಗೆಲ್ಲಾ ನನ್ನ ಅನಂತ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೫೧೮

ಅಗ್ನಿ ಆರಾಧನೆ ; ಏಕಾದಶಿ

ಪ್ರಾಯಶ್ಚಿತ್ತ-ದುರ್ಗಾ-ಸೂರ್ಯ ಹೋಮ, 'ವಿದ್ಮಹೇ'

कुशलम् श्री: MYSORE

12-2-2000

ಶ್ರೀಕಂಠ !

ನಿನ್ನ ಕಾಗದ ಬಹಳ ಹಿಂದೆಯೇ ತಲಪಿತು. ಉತ್ತರ ಬರೆಯಲು ಪುರಸತ್ತಿಲ್ಲದೆ ತಡವಾಯಿತು. ಕ್ಷಮಿಸು. ನಿನ್ನ ಮಗನ ಅಮೆರಿಕಾ ಪ್ರವಾಸದ ವಿಷಯವನ್ನು ಸುಮ ಇಲ್ಲಿಗೆ ಎಳ್ಳು ಬೀರಲು ಬಂದಿದ್ದಾಗಲೇ ಹೇಳಿದಳು. ಆದರೆ details ಗೊತ್ತಾಗಿರಲಿಲ್ಲ, ಈಗ ತಿಳಿಯಿತು. ಬಹಳ ಸಂತೋಷ. ನಾನೇನೋ ಅವನ Bio-data ವನ್ನು ಅಮೆರಿಕಾಕ್ಕೆ ಕಳಿಸಿದ್ದೇನೆ. ಅದು ಎಷ್ಟರಮಟ್ಟಿಗೆ ಸಫಲವಾಗುತ್ತದೆಯೋ ಗೊತ್ತಿಲ್ಲ. Anyhow it is redundant now! ಅವನು ಹೀಗೆಯೇ ಪ್ರಗತಿ ಹೊಂದುತ್ತಿರಲೆಂದು ಹೃತ್ಪೂರ್ವಕವಾಗಿ ಆಶೀರ್ವದಿಸುತ್ತೇನೆ. ದೇವತಾಪ್ರಾರ್ಥನೆಯನ್ನೂ ಮಾಡುತ್ತೇನೆ.

1) ಮಹರ್ಷಿಗಳ ಕಾಲದಲ್ಲಿ ಅಗ್ನಿಯ ಉಪಯೋಗವು ಆಗತಾನೇ ತಿಳಿದಿತ್ತು. ಸಹಜವಾಗಿ ಸೂರ್ಯನ ಮೇಲೆ ಅವರುಗಳಿಗೆ ಯಾವ ಭಕ್ತಿ ಉಂಟಾಯಿತೋ ಅದೇ ತರಹ ಅಗ್ನಿಯ ಮೇಲೂ ಪ್ರಸರಿಸಿತು. ಆದ್ದರಿಂದ ಅಗ್ನಿಪೂಜೆ ಆರಂಭವಾಯಿತು. ಅವನನ್ನು ದೇವತಾತ್ವೇನ ಪರಿಗ್ರಹಿಸಿದ ಮೇಲೆ ಯಾವ ರೀತಿ ಅವನನ್ನು ಆರಾಧಿಸುವುದೆಂದು ಯೋಚಿಸಿ ಆ ದೇವತೆಯನ್ನು ಸದಾ ಕಾಪಾಡಿಕೊಂಡು ಮನೆಯಲ್ಲಿಟ್ಟುಕೊಳ್ಳುವುದೇ ಒಂದು ಬಗೆಯ ಈಶ್ವರ ಸಮಕ್ಷತಾಭ್ಯಾಸ (Practising the presence of God) ವಾಗುತ್ತದೆಂದು ಯೋಚಿಸಿ ಆರಂಭಿಸಿದರು. ಬೆಳಗ್ಗೆ ಸಾಯಂಕಾಲ ಆ ದೇವತೆಗೆ ಆಹುತಿ ಕೊಡುವುದನ್ನೂ ಅಭ್ಯಸಿಸಿದರು, ಸೂರ್ಯನಿಗೆ ಬೆಳಗ್ಗೆ ಸಾಯಂಕಾಲ ಅರ್ಘ್ಯ ಕೊಡುವಂತೆ! ಪ್ರಾಯಃ ಮೊದಮೊದಲು ಒಂದೇ ಅಗ್ನಿಯನ್ನು ಇಟ್ಟುಕೊಂಡಿರುವಂತೆ ತೋರುತ್ತದೆ. ಆಮೇಲೆ ವೇದಗಳ ಆವಿರ್ಭಾವವಾಗುವ ಹೊತ್ತಿಗೆ ಮೂರು ಅಗ್ನಿಗಳ ಕಲ್ಪನೆ ಬಂದಿದೆ

(ಗಾರ್ಹಪತ್ಯ, ದಕ್ಷಿಣಾಗ್ನಿ, ಆಹವನೀಯ). ಬೆಳಗ್ಗೆ, ಸಾಯಂಕಾಲ ಕೊಡುವ ಆಹುತಿಗೆ "ಅಗ್ನಿಹೋತ್ರ" ವೆಂದು ಹೆಸರು ಕೊಟ್ಟರು. ಇವುಗಳಿಗೆ "ತ್ರೇತಾಗ್ನಿ" ಅಥವಾ "ಶ್ರೌತಾಗ್ನಿ" ಎಂದು ಹೆಸರು. ಇವುಗಳಲ್ಲಿ "ಗಾರ್ಹಪತ್ಯ" ವು ಜೀವಾಗ್ನಿ. ಯಾವಾಗಲೂ ರಕ್ಷಿಸಲ್ಪಡುವಂಥಾದ್ದು. ಬೆಳಗ್ಗೆ, ಸಾಯಂಕಾಲ, ಗಾರ್ಹಪತ್ಯದಿಂದ, ದಕ್ಷಿಣಾಗ್ನಿ, ಆಹವನೀಯಗಳಿಗೆ ಉನ್ನಯನ ಮಾಡಿ, ಅಗ್ನಿಹೋತ್ರವನ್ನು ಮಾಡುತ್ತಾರೆ. ಇವುಗಳಲ್ಲಿ ಆಹವನೀಯಾಗ್ನಿ ಮುಖ್ಯ. ಅದರಲ್ಲಿ ಪ್ರಧಾನಾಹುತಿಗಳೆಲ್ಲಾ ಕೊಡಲ್ಪಡುತ್ತವೆ. ಎಲ್ಲ ಯಜ್ಞಯಾಗಾದಿಗಳಿಗೂ ಈ ಮೂರು ಅಗ್ನಿಗಳೇ. ಅದರಲ್ಲಿಯೂ ಆಹವನೀಯದಲ್ಲಿಯೇ ಮುಖ್ಯವಾಗಿ ನಡೆಯುವುದು (ಶ್ರಾದ್ಧವನ್ನು ಪಿತೃಯಜ್ಞವೆಂದು ಭಾವಿಸಿ, ಬ್ರಾಹ್ಮಣರು ಆಹವನೀಯ ಸ್ವರೂಪರೆಂದು ಭಾವಿಸುತ್ತಾರೆ. ಅದರಿಂದಲೇ "ಬ್ರಾಹ್ಮಣಸ್ತು ಆಹವನೀಯಾರ್ಥೇ" ಎಂಬ ವಾಕ್ಯ ಹೊರಟಿರುವುದು). ಕರ್ಮಕಾಂಡ ಪೂರಾ ಈ ಮೂರು ಅಗ್ನಿಗಳ ಸುತ್ತಲೇ ಸುತ್ತುತ್ತದೆ.

ಈ ಅಗ್ನಿಹೋತ್ರವನ್ನು ಎಲ್ಲರೂ (ದ್ವಿಜರು) ಮಾಡಬೇಕೆಂಬುದೇ ವೈದಿಕಾನುಶಾಸನ. ಆದರೆ ಮಹರ್ಷಿಗಳ ಕಾಲಕ್ಕೇ ಇದು ಸ್ವಲ್ಪ ದುಃಸಾಧ್ಯವೆಂದು ತೋರಿ "ಸ್ಮಾರ್ತಾಗ್ನಿ" ಅಥವಾ "ಔಪಾಸನಾಗ್ನಿ" ಎಂದು ಆರಂಭಿಸಿದರು. ಗೃಹಸ್ಥನಾದ ಕೂಡಲೆ, ಈ ಅಗ್ನಿ ಪರಿಚರ್ಯೆ ಮತ್ತು ಈ ಅಗ್ನ್ಯಾರಾಧನೆಯನ್ನು ಅವಶ್ಯವಾಗಿ ಮಾಡಬೇಕೆಂದು ಯೋಚಿಸಿ, ಸೂತ್ರಕಾರರೆಲ್ಲರೂ ಈ ಔಪಾಸನೆಯನ್ನು ನಮಗೆ ಅಳವಡಿಸಿಕೊಟ್ಟಿದ್ದಾರೆ. ನಮಗೆ ಈಗ ಅದೂ ದುಃಸಾಧ್ಯವಾಗಿದೆ ಎನ್ನುವುದು ಬೇರೆ ವಿಷಯ.

2) ಏಕಾದಶೀ ಬಗ್ಗೆ ವೇದಗಳಾಗಲಿ ಸೂತ್ರಕಾರರಾಗಲಿ ಪ್ರಸಿದ್ಧ ಮನು, ಯಾಜ್ಞವಲ್ಕ್ಯಾದಿ ಸ್ಮೃತಿಕಾರರಾಗಲಿ ಏನನ್ನೂ ಪ್ರಸ್ತಾಪಿಸಿಲ್ಲ. ಪಕ್ಷದ ಹದಿನೈದು ದಿನಗಳಲ್ಲಿ ಅದು ಹನ್ನೊಂದನೆಯ ದಿನ. ಹೆಸರೇ ಅದನ್ನು ಸೂಚಿಸುತ್ತದೆ. ಆ ಹೆಸರುಗಳನ್ನು ಕೊಟ್ಟಿರುವವರೂ ನಾವೇ. ಏಕಾದಶಿಗೆ ಬೇರೆ ದಿನಗಳಿಂದ ವಿಶೇಷವನ್ನೇನೂ ನಾವು ನೋಡಲಾರೆವು. ಪ್ರಾಯಃ ಪಕ್ಷಕ್ಕೊಂದು ದಿನ ಆಹಾರವನ್ನು ಬಿಡುವುದು ಆರೋಗ್ಯವೆಂದು ಕಂಡುಕೊಂಡಿರಬೇಕು (ಇದೊಂದು ಪ್ರವೃತ್ತಿಸಂಕೋಚದ ವಿಧಾನ). ಅದಕ್ಕೆ ಯಾರೋ ಮಹನೀಯರು ಏಕಾದಶಿಯನ್ನು ಆರಿಸಿಕೊಂಡಿರಬೇಕು (ಪುರಾಣಗಳಲ್ಲಿ ಅಂಬರೀಷ, ರುಕ್ಮಾಂಗದ ಇವರ ಚರಿತ್ರೆಯಲ್ಲಿ ಏಕಾದಶೀ ದಿನ ಭೋಜನವಿಲ್ಲದೆ ಇದ್ದಿರುವ ಕಥೆ ಬರುತ್ತದೆ). ಅದಕ್ಕೆ "ಉಪವಾಸ" ಎಂಬ ಹೆಸರೂ significant ಆಗಿದೆ. ಉಪವಾಸ ಶಬ್ದಕ್ಕೆ ಸಂಸ್ಕೃತದಲ್ಲಿ ಭೋಜನವಿಲ್ಲದಿರುವುದು ಎಂಬುದಾಗಿ ರೂಢಿಯಾದ ಅರ್ಥ. ಆದರೆ ಶಬ್ದಾರ್ಥವನ್ನು ತೆಗೆದುಕೊಂಡರೆ ಆಹಾರದ ವಿಷಯವೇ ಅದರಲ್ಲಿ ಬರುವುದಿಲ್ಲ. ಉಪ-ಸಮೀಪೇವಾಸಃ ಇತ್ಯರ್ಥಃ. ಅಂದರೆ ದೇವತಾ ಸಮೀಪದಲ್ಲಿದ್ದುಬಿಡುವುದು ಎಂದರ್ಥ. ಹಾಗೆ ದೇವತಾ ಸಾಮೀಪ್ಯದ ರುಚಿಯನ್ನು ಅನುಭವಿಸುತ್ತಿರುವವನು, ಆಹಾರದ ಮೇಲೆ ಗಮನವಿಲ್ಲದೆ ನಿರಾಹಾರಿಯಾಗಿದ್ದಿರಬೇಕು. ಬರ್‍ತಾ ಬರ್‍ತಾ ಅನೇಕ ತತ್ತ್ವಗಳು ತಿರುವು ಮುರುವು ಆಗಿರುವಂತೆ, ದೇವತಾಸಾಮೀಪ್ಯದಲ್ಲಿ, ತದೇಕರುಚಿಯಿಂದ ಇದ್ದು ಆಹಾರವಿಲ್ಲದೆ ಹೋಗುವುದೆಂಬುದು ಹೋಗಿ, ಆಹಾರವಿಲ್ಲದಿರುವುದೇ ಉಪವಾಸವೆಂದಾಗಿರಬೇಕು. ಹಾಗಾಗಿ ಏಕಾದಶೀ ದಿನ ಉಪವಾಸ ಆರಂಭವಾಗಿದೆ. ಈಗಲೂ ಅನೇಕರು ಅವತ್ತು ಭಜನೆ, ಪಾರಾಯಣಗಳಲ್ಲಿ ಕಾಲ ಕಳೆಯುತ್ತಾರೆ. ಅದನ್ನೇ ಕೆಲವರು ಪ್ರಧಾನವಾಗಿಟ್ಟುಕೊಂಡು, ಬಹಳ rigid ಆಗಿ, ತೀರ್ಥವನ್ನೂ ತೆಗೆದುಕೊಳ್ಳಕೂಡದೆಂದು (ಕೆಲವರು ಎಂಜಲನ್ನೂ ನುಂಗದೆ, ಇರುವುದನ್ನು ನೋಡಿದ್ದೇನೆ) ಶ್ರಾದ್ಧವನ್ನೂ ಮಾಡಕೂಡದೆಂದು ನಿಯಮಗಳನ್ನು ಹಾಕಿಕೊಂಡಿದ್ದಾರೆ. ಇದು ತಿರುಳನ್ನು ಎಸೆದು ಸಿಪ್ಪೆಯನ್ನು ತಿಂದಂತೆಯೇ ಸರಿ. ಆಹಾರಾಭಾವ ನಿಯಮ ಏತಕ್ಕೆ ಎನ್ನುವುದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ, ಈ ಅತಿರೇಕಗಳಿಗೆಲ್ಲಾ ಅವಕಾಶ ಇರುವುದಿಲ್ಲ.

3) ಎಲ್ಲಾ ಅಗ್ನಿಮುಖಗಳಲ್ಲಿ ಜಯಾದಿ, ಅಭ್ಯಾತಾನ, ರಾಷ್ಟ್ರಭೃತ್ ಎಂಬ ಹೋಮಗಳನ್ನು ಮಾಡಬೇಕೆಂಬುದು ಆಪಸ್ತಂಬರ ಮತ. ಆ ಮಂತ್ರಗಳು ಸಕಲ ಜನಕ್ಷೇಮವನ್ನೂ ಬಯಸಿ ಮಾಡುವುದಾದ್ದರಿಂದ, ಪ್ರತಿಯೊಬ್ಬರೂ ಎಲ್ಲಾ ಹೋಮ ಕಾರ್ಯಗಳಲ್ಲಿಯೂ ಕಡ್ಡಾಯವಾಗಿ, ಏಕಾಗ್ರತೆಯಿಂದ ಮಾಡಬೇಕೆಂದು ನನ್ನ ಅಭಿಪ್ರಾಯ. ಪ್ರಾಯಶ್ಚಿತ್ತಹೋಮಗಳೂ ಕೂಡ, ನಮ್ಮ ವಿನಯಭಾವವನ್ನು, ತಪ್ಪುಮಾಡುವ ಸ್ವಭಾವವನ್ನು, ಅವುಗಳನ್ನು ಕ್ಷಮಿಸಬೇಕೆಂದು ಕೇಳುವ ಉತ್ತಮ ಸಂಸ್ಕೃತಿಯನ್ನು ಸೂಚಿಸುತ್ತವೆ. ಯದ್ಯಪಿ ನಮಗೆ ತಿಳಿದಂತೆ ಯಾವ ತಪ್ಪೂ ಮಾಡದಿದ್ದರೂ, ಅಕಸ್ಮಾತ್ ಸಂಭವಿಸಿದ್ದಿರಬಹುದಾದ ತಪ್ಪುಗಳಿಗೆ ಕ್ಷಮೆ ಬೇಡುವುದು ಸುಸಂಸ್ಕೃತಿ.

4) ದುರ್ಗಾಸೂಕ್ತದಿಂದ (ಈ ಶಬ್ದವೇ ತಪ್ಪು, ಇರಲಿ) ಧಾರಾಳವಾಗಿ ಹೋಮ ಮಾಡಬಹುದು. ಎರಡೆರಡು ವಾಕ್ಯಗಳಿಗೆ ಒಂದು ಮಂತ್ರ. ನಾರಾಯಣಸೂಕ್ತದಿಂದಲೂ ಮಾಡಬಹುದು. ಆದರೆ ಅದರಲ್ಲಿ ಮಧ್ಯೆಮಧ್ಯೆ ಮೂರು ವಾಕ್ಯಗಳಿಗೆ ಒಂದು ಮಂತ್ರವಾಗುತ್ತದೆ. ಆ ಮಂತ್ರವಿಭಾಗವನ್ನು ಅಲ್ಲಿ ಬಂದಾಗ ಹೇಳುತ್ತೇನೆ.

5) ಸೂರ್ಯಹೋಮ ಎಂದು ಬೇರೆ ಇಲ್ಲ. ಸೂರ್ಯಪರವಾದ ಮಂತ್ರಗಳನ್ನು ಆರಿಸಿಕೊಂಡು ಮಾಡಬಹುದು. ಮಿತ್ರ, ಸವಿತಾ, ಸೂರ್ಯ, ಪೂಷನ್ ಎಂದು ಬೇರೆಬೇರೆ ಹೆಸರುಗಳಿಂದ ಕೂಗುತ್ತಾರೆ.

ಪಾಪುವು March 18 ರಿಂದ 22 ರವರೆಗೆ France ನಲ್ಲಿ ಒಂದು International Conference ನಲ್ಲಿ Paper Present ಮಾಡುತ್ತಿದ್ದಾನೆ. ಆಗಲೆ ಒಂದು 10 ದಿನ ರಜ ತೆಗೆದುಕೊಂಡು ಇಲ್ಲಿಗೆ ಬರುತ್ತೇನೆಂದಿದ್ದಾನೆ, ಅವನ ಭಾವೀಪತ್ನೀ ಸಮೇತನಾಗಿ. ಆಗ March 27 ಅವನ ವಿವಾಹವನ್ನು ಮಾಡಬೇಕೆಂದಿದ್ದೇನೆ. ನಿಶ್ಚಯವಾದ ಮೇಲೆ ತಿಳಿಸುತ್ತೇನೆ.

ಪ್ರಣತಾರ್ತಿಹರನ್ ಭೇಟಿಯಾಗುತ್ತಿರುತ್ತಾರೆ. ನನ್ನ 'ಶ್ರಾದ್ಧ' ಪುಸ್ತಕಕ್ಕೆ ಒಂದು final ರೂಪ ಕೊಡಲು ಬಹಳ ಪ್ರಯತ್ನ ಪಡುತ್ತಿದ್ದಾರೆ. ಯಾವತ್ತು ಆಗುತ್ತದೆಯೋ ಗೊತ್ತಿಲ್ಲ.

"ವಿದ್ಮಹೇ" ಎಂದರೆ ತಿಳಿದುಕೊಳ್ಳುತ್ತೇವೆ ಅಥವಾ ಧ್ಯಾನ ಮಾಡುತ್ತೇವೆ ಎಂದರ್ಥ. ಆ ತತ್ಪುರುಷನನ್ನು, ಮಹಾದೇವನನ್ನು ಧ್ಯಾನಿಸುತ್ತೇವೆ. "ವಿದ್ಮಹೇ" "ಧೀಮಹಿ" ಎರಡು ಪದಗಳನ್ನೂ ಒಂದೇ ಅರ್ಥದಲ್ಲಿ ತೆಗೆದುಕೊಳ್ಳಬೇಕು. ತತ್ಪುರುಷಾಯ, ಮಹಾದೇವಾಯ ಎಂದು ಚತುರ್ಥೀವಿಭಕ್ತಿ ಇದ್ದರೂ, 'ಅನ್ನು' ಎಂಬ ದ್ವಿತೀಯಾವಿಭಕ್ತಿಯ ಅರ್ಥವನ್ನು ಮಾಡಬೇಕು.

ಸುಮ, ರವಿ ದಂಪತಿಗಳಿಗೆ, ವೆಂಕಟೇಶ್ವರನಿಗೆ, ವೇದನಿಗೆ ನನ್ನ ಅನಂತ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೫೧೦

ದರ್ಭಧಾರಣ, ಪೂರ್ಣಾಹುತಿ, ವಿನಿಯೋಗ

ಮಂತ್ರ, ಯಜಮಾನನೇ ಹೋಮ ಮಾಡಬೇಕು, ಫಲ ವರ್ಣಾವಣೆ

ಕುಶಲಮ್ ಶ್ರೀ: ಮೈಸೂರು
30.3.2000

ಶ್ರೀಕಂಠ !

ನಿನ್ನ ಕಾರ್ಡು ತಲಪಿತು. ಪುನಃ ನಿನ್ನ ದೀರ್ಘಪತ್ರವೂ ತಲಪಿತು. ನಿನ್ನ ಮನಸ್ಸಿನ ಕಾಳಜಿ, ನನ್ನ ಮೇಲಿನ ಅಭಿಮಾನ ಎಲ್ಲವೂ ಅರ್ಥವಾಗುತ್ತದೆ. ಆದರೆ ನಿನ್ನ ಹಾಗೆಯೇ ಯೋಚಿಸುವವರು ಎಷ್ಟು ಮಂದಿ ಸಿಗುತ್ತಾರೆ? ಎಲ್ಲರಿಗೂ ತಾವು ತಿಳಿದುಕೊಂಡಿರುವುದೇ ಸರಿಯೆಂಬ ದುರಭಿಮಾನ, ವಾಸ್ತವಿಕ ಸ್ಥಿತಿಯನ್ನು ತಮ್ಮ ಪೂರ್ವಾಗ್ರಹಗಳ ಹಿನ್ನೆಲೆಯಲ್ಲಿ ತಿರುಚಿನೋಡುವ ಸ್ವಭಾವ, ಅಸೂಯಾಪರತ್ವ, ಗುಣಗ್ರಾಹಿತ್ವದ ಅಭಾವ ಇತ್ಯಾದಿಗಳು ಹೇರಳವಾಗಿವೆ. ನನ್ನಲ್ಲಿ ಇಲ್ಲವೆಂತಲ್ಲ, ಅವುಗಳನ್ನು ಹೇಗಾದರೂ ಮಾಡಿ ಕಳೆದುಕೊಳ್ಳಬೇಕೆಂಬ ಆಸೆ ಬಹಳ ಇದೆ. ಆದ್ದರಿಂದ ಯಾರಾದರೂ ನನ್ನ ಆ ಅವಗುಣಗಳನ್ನು Point out ಮಾಡಿ ತೋರಿಸಿದರೆ ಖಂಡಿತ ತಿದ್ದಿಕೊಳ್ಳಲು ಪ್ರಯತ್ನಪಡುತ್ತೇನೆ. ಇರಲಿ.

1) ಪವಿತ್ರ ಹಾಕಿಕೊಂಡು ಅದರ ಜತೆಯಲ್ಲಿ ದರ್ಭೆಗಳನ್ನು ಧಾರಣೆ ಮಾಡುವುದು ಕೇವಲ ಶುದ್ಧಿಗೋಸ್ಕರ. ದರ್ಭೆಗಳ ಮೇಲೆ ಕೂರುವುದು, ಕೈಯಲ್ಲಿ ದರ್ಭಧಾರಣ ಮಾಡುವುದು, ಪವಿತ್ರಧಾರಣೆ ಇವೆಲ್ಲವೂ ಪವಿತ್ರತಾದ್ಯೋತಕಗಳು. ನಮಗೆ "ನಾವು ಶುದ್ಧರು, ಪವಿತ್ರರು" ಎಂಬ ಭಾವನೆ ಬರಲು ಅನುಕೂಲವಾದ ಕ್ರಿಯೆಗಳು. ಆ ದರ್ಭೆಗಳನ್ನು ಸಂಕಲ್ಪವನ್ನು ಮಾಡಿದ ಕೂಡಲೇ (ಕರಿಷ್ಯೇ, ಸಂಸ್ಕರಿಷ್ಯಾಮಿ) ಉತ್ತರಕ್ಕೆ ಬಿಸಾಡಿ, ಕೈತೊಳೆದುಕೊಳ್ಳಬೇಕು. ಇದೊಂದು ಅಭ್ಯಾಸ. ಅಷ್ಟೆ.

2) ಪೂರ್ಣಾಹುತಿಮುತ್ತಮಾಂ ಜುಹೋತಿ । ಸರ್ವಂ ವೈ ಪೂರ್ಣಾಹುತಿಃ । ಸರ್ವಮೇವಾಪ್ನೋತಿ । ಅಥೋ ಇಯಂ ವೈ ಪೂರ್ಣಾಹುತಿಃ । ಅಸ್ಯಾಮೇವ ಪ್ರತಿತಿಷ್ಠತಿ ॥

ವಸೋರ್ಧಾರಾಂ ಜುಹೋತಿ ವಸೋರ್ಮೇ ಧಾರಾಸದಿತಿ ವಾ ಏಷಾಹೂಯತೇ ಘೃತಸ್ಯ ವಾ ಏನಮೇಷಾಧಾರಾ- ಮುಷ್ಮಿನ್ಲೋಕೇ ಪಿನ್ವಮಾನೋಪತಿಷ್ಠತ ಆಜ್ಯೇನ ಜುಹೋತಿ ತೇಜೋ ವಾ ಆಜ್ಯಮ್ ತೇಜೋ ವಸೋರ್ಧಾರಾ ತೇಜಸೈವಾಸ್ಮೈ ತೇಜೋಽವರುಂಧೇಽಥೋ ಕಾಮಾ ವೈ ವಸೋರ್ಧಾರಾ ಕಾಮಾನೇವಾವರುಂಧೇ

ಮೊದಲನೆಯದು ಅಶ್ವಮೇಧದಲ್ಲಿ ಕೊಡುವ ಕೊನೆಯ ಆಹುತಿಯ ಬ್ರಾಹ್ಮಣ. ಎರಡನೆಯದು ಗರುಡಚಯನದಲ್ಲಿ ಮಾಡುವ ವಸೋರ್ಧಾರೆಯ ಬ್ರಾಹ್ಮಣ.

3) ಚತುಷ್ಪಾತ್ರ ಪ್ರಯೋಗದಲ್ಲಿ ಪ್ರಣೀತಾ, ಇಧ್ಮ, ಬ್ರಹ್ಮ ಸ್ಥಾನಗಳಿಲ್ಲ. ಯಜಮಾನ ಒಬ್ಬನೇ ಮಾಡುವ ಹೋಮಗಳಲ್ಲಿ ಆಜ್ಯಸಂಸ್ಕಾರಕ್ಕೋಸ್ಕರ, ಹೋಮದರ್ವಿಗಳ ಸಂಸ್ಕಾರಕ್ಕೋಸ್ಕರ ಮಾಡುವ ಕಾರ್ಯ. ಷಟ್ಪಾತ್ರ ಪ್ರಯೋಗದಲ್ಲಿ ಅಗ್ನಿಮುಖದ ಪೂರ್ತಿ ಪ್ರಯೋಗ ಬರುತ್ತದೆ. (1), (2), (3), (4), (5), (6), (7), (8), (9), (10) ಇಷ್ಟೂ ಮಂತ್ರಗಳನ್ನು ಒಂದು ಹೋಮದ ಕೊನೆಯಲ್ಲಿ ಅನಾಜ್ಞಾತಪ್ರಾಯಶ್ಚಿತ್ತ ಹೋಮಗಳ ಜತೆಯಲ್ಲಿ ಹೇಳಿ ಹೋಮ ಮಾಡುತ್ತಾರೆ ಪ್ರಾಯಶ್ಚಿತ್ತಾರ್ಥವಾಗಿ. 13ನೇ ಮಂತ್ರ, ಔಪಾಸನಾಗ್ನಿ ಅನುಗತನಾಗಿಬಿಟ್ಟರೆ (ಆರಿಹೋಗಿದ್ದರೆ) ಪುನಸ್ಸಂಧಾನ ಮಾಡಲು ಉಪವಾಸದ ಬದಲಾಗಿ ಮಾಡುವ ಹೋಮಮಂತ್ರ. ಯಾವಾಗ ಅನುಗತನಾಗುತ್ತಾನೋ ಆ ಒಂದು

ಹೊತ್ತು ಯಜಮಾನ ಉಪವಾಸವಿರಬೇಕು (ಅಶ್ರದ್ಧೆಯಿಂದ ಅಗ್ನಿ ಅನುಗತನಾಗಿರಬಹುದು ಎಂಬ ಕಾರಣದಿಂದ). ಉಪವಾಸ ಸಾಧ್ಯವಿಲ್ಲವೆಂದರೆ ಈ ಮಂತ್ರದಿಂದ ಹೋಮ ಮಾಡಿದರೆ ಸಾಕು ಎನ್ನುತ್ತಾರೆ ಆಪಸ್ತಂಬರು. (14)(17)(18) ಈ ಮೂರನ್ನೂ ಪುನಸ್ಸಂಧಾನದಲ್ಲಿ ಹೇಳಿ ಹೋಮ ಮಾಡುತ್ತೇವೆ. (15) (16) (19) ಈ ಮೂರು ಮಂತ್ರಗಳನ್ನೂ ಸೇರಿಸಿಕೊಂಡು ಪುನಸ್ಸಂಧಾನದಲ್ಲಿ ಹೋಮ ಮಾಡುವುದುಂಟು (ನಮ್ಮ ಹಿಂದಿನ ಪ್ರಯೋಗ ಪದ್ಧತಿ). 14, 17, 18 ಮಂತ್ರಗಳನ್ನೂ ಹೇಳಿಯೇ ತೀರಬೇಕಾದ ವಿಧಿಯಿಲ್ಲ. ಆದರೆ ಅರ್ಥವತ್ತಾಗಿದೆ ಎಂದು ಮಾಡಬಹುದು. (20) ನೇ ಮಂತ್ರ, ವಿವಾಹವಾದ ದಿನ ವರನು ವಧುವನ್ನು ಕರೆದುಕೊಂಡು, ಅಗ್ನಿಸಮೇತನಾಗಿ ತನ್ನ ಮನೆಗೆ ಪ್ರವೇಶ ಮಾಡುವಾಗ ವಧುವಿನ ಕೈಯಲ್ಲಿ ಹೇಳಿಸುವ ಮಂತ್ರ.

4) ಹತ್ತಾರು ಜನ ಕುಳಿತುಕೊಂಡು ಒಂದೇ ಅಗ್ನಿಯಲ್ಲಿ ಹೋಮ ಮಾಡುವುದು ನಮ್ಮ ಸಂಸ್ಕೃತಿಯೇ ಅಲ್ಲ. ಅದೂ ಅಲ್ಲದೆ ಹೋಮ ಮಾಡುವುದು ಒಂದು ಪ್ರಯೋಜನಕ್ಕೆ ಅಂತ ಆದ ಮೇಲೆ, ಪ್ರಯೋಜನ ಯಾರಿಗೆ ಬೇಕೋ ಅವನು ಮಾಡಬೇಕು. ಯಾರ್‍ಯಾರೋ ಮಾಡಿ, ಯಜಮಾನನಿಗೆ ಫಲವನ್ನು transfer ಮಾಡಲು ಸಾಧ್ಯವಿಲ್ಲ. ಹೆಚ್ಚು ಸಂಖ್ಯೆಯಲ್ಲಿ ಮಾಡಿದರೆ, ದೇವತೆಗೆ ಹೆಚ್ಚು ತೃಪ್ತಿ ಎಂಬ ಭಾವನೆ ಇದೆ. ಆಗ ಯಜಮಾನ ಒಬ್ಬನೇ ಕಷ್ಟ ಪಟ್ಟು ಅಷ್ಟು ಸಂಖ್ಯೆಯನ್ನೂ ಮಾಡಬೇಕು. ಇಲ್ಲದಿದ್ದರೆ, ಎಷ್ಟಾಗುತ್ತೋ ಅಷ್ಟು ಮಾಡಿ ತೃಪ್ತಿಪಟ್ಟುಕೊಳ್ಳಬೇಕು. ನನ್ನ ಅಭಿಪ್ರಾಯದಲ್ಲಿ ಯಾವ ಹೋಮಕ್ಕೂ, ಯಾವ ಪೂಜೆಗೂ ಎಲ್ಲರೂ ಭಾವಿಸಿರುವಂತೆ ವಿಹಿತವಾದ ಭೌತಿಕ ಪ್ರಯೋಜನಗಳು ಖಂಡಿತ ಇಲ್ಲ. ಚಿತ್ತಶುದ್ಧಿ, ಅಂತಃಕರಣಸಂಸ್ಕಾರ ಇವೇ ಪ್ರಯೋಜನ. ಅದು ಯಜಮಾನನಿಗೆ ಬೇಕಾದರೆ ತಾನೊಬ್ಬನೇ ಮಾಡಬೇಕು. ಇದಕ್ಕೆ ಸಂಖ್ಯೆ ಪ್ರಧಾನವಲ್ಲ. ಎಷ್ಟು ಸಾರಿ, ಎಷ್ಟು ಹೊತ್ತು ಮಾಡಲು ಸಾಧ್ಯವೋ ಅಷ್ಟು ಮಾಡಬೇಕು. ಜತೆಗೆ ಮಂತ್ರಹೇಳಲು, ದಕ್ಷಿಣಾತ್ಯಾಗಮಾಡಲು ಎಷ್ಟು ಜನ ವೈದಿಕರನ್ನು ಬೇಕಾದರೂ ಕೂರಿಸಿಕೊಳ್ಳಬಹುದು. ಈ ಸಂಖ್ಯೆಯ ಮೇಲಿನ obsession ನಮಗೆ ಹೋಗಬೇಕು. ಅದರಲ್ಲಿ ಯಾವ ಪಾವಿತ್ರ್ಯವೂ ಇಲ್ಲ. ಒಂದು ಕ್ರಮಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಎಲ್ಲಾ ಸಂಖ್ಯಾವಾಚಕಗಳೂ ದೇವತೆಗಳೇ (ಸಂಖ್ಯೆಯೂ ಒಂದು ದೇವತೆ. ಕಾರಣ ಅವುಗಳಿಂದ ನಾವು ಉಪಕೃತರು). ಹರನ್ ಸುಮಾರು ದಿನಗಳಿಂದ ನನಗೆ ಸಿಕ್ಕಿಯೇ ಇಲ್ಲ. ಚಿ|| ಗಳಿಗೆಲ್ಲಾ ಆಶೀರ್ವಾದಗಳು.

ಇತಿ ನಿಮ್ಮವ, ಕುಮಾರಸ್ವಾಮೀ

೫೧೧

ವೇದಘೋಷ ; ಸ್ವಸೂತ್ರ

ಕರ್ಮ ಚೆನ್ನಾಗಿ ನಡೆಯುವುದು ಮುಖ್ಯ ; ಸದ್ಗುಣ ಪ್ರೀತಿ

ಕುಶಲಮ್ ಶ್ರೀ : MYSORE

10.6.2000

ಶ್ರೀಕಂಠ !

ನಿನಗೆ ಕಾಗದ ಬರೆಯಬೇಕೆಂದು ಸುಮಾರು ದಿನಗಳಿಂದ ಪ್ರಯತ್ನ. ಪುರಸತ್ತೇ ಆಗಲಿಲ್ಲ. ಬೆಂಗಳೂರಿನ ಉಪನಯನದಿಂದ ಬಂದ ಮೇಲೆ ಇಲ್ಲಿ ನನ್ನ ಶಿಷ್ಯೆ ರಾಜೇಶ್ವರಿ ಮಗನಿಗೆ (7 ವರ್ಷ) ಉಪನಯನ ಮಾಡಿಸಬೇಕಾಯಿತು. ಅವಳು 3 ವರ್ಷಗಳಿಂದ ಹೇಳುತ್ತಿದ್ದಾಳೆ. ಆದ್ದರಿಂದ ಅದರಲ್ಲಿ Busy ಯಾಗಿದ್ದೆ. ಈಗಲೂ ನನ್ನ ಪಾಠಗಳ ಮಧ್ಯೆ, ಬೆಳಗ್ಗೆ ಸಾಯಂಕಾಲ ಹುಡುಗನನ್ನು ಕರೆದುಕೊಂಡು ಬಂದು ಸಂಧ್ಯಾವಂದನೆ, ಅಗ್ನಿಕಾರ್ಯಗಳನ್ನು ಮಾಡಿಸಿಕೊಂಡು ಹೋಗುತ್ತಿದ್ದಾರೆ. ಉಪನಯನ ಬಹಳ ಚೆನ್ನಾಗಿ ನಡೆಯಿತು. ಎಲ್ಲದಕ್ಕಿಂತ 7 ವರ್ಷದ ಹುಡುಗ, ಹೇಳಿಕೊಟ್ಟ ಮಂತ್ರಗಳನ್ನು ಬಹಳ ಸ್ಪಷ್ಟವಾಗಿ ಸ್ವರ ತಪ್ಪದೆ ಹೇಳಿದ್ದು. ಅದನ್ನು ಕೇಳುವುದೇ ಒಂದು ಆನಂದವಾಗಿತ್ತು. ಎಲ್ಲರೂ ಆನಂದಪಟ್ಟರು. ಜತೆಗೆ ನನಗೆ ಇಷ್ಟರಾದ ರಘುನಾಥ, ರಘುರಾಮ, ಸುಬ್ರಹ್ಮಣ್ಯ, ರಮೇಶ, ಚಂದ್ರಶೇಖರ, ಪ್ರದೀಪ ಇವರ ಗುಂಪೇ ಇತ್ತು. ವೇದ ಘೋಷವು ಎಲ್ಲರನ್ನೂ Mesmerise ಮಾಡಿತು. ಹಿಂದಿನ ದಿನ ಸ್ವಲ್ಪ ಕಠಿಣವಾಗಿಯೇ ಮಾತನಾಡಿದ್ದೆ. ಅದರ ಪ್ರಭಾವವೋ ಏನೋ ಉಪನಯನದ ದಿನ Perfect Silence ನ್ನು maintain ಮಾಡಿದ್ದರು. ಆ Silence, ಮಗುವಿನ ಸ್ಪಷ್ಟವಾದ ವೇದೋಚ್ಚಾರಣೆ, ಪವಿತ್ರನಾದ ಯಜ್ಞೇಶ್ವರನ ಸನ್ನಿಧಿ, ಶಿಖಾಮಂತರಾಗಿ ಮಡಿಮಡಿಯಾಗಿರುವ ವೈದಿಕ ಸಮೂಹ, ಅವರ ವೇದಘೋಷ ಎಲ್ಲವೂ ಸೇರಿ ಒಂದು ದೇವಲೋಕಸದೃಶವಾದ ವಾತಾವರಣವೇ ಸೃಷ್ಟಿಯಾಗಿತ್ತು. ಎಲ್ಲರೂ ಅದರ ಆನಂದಾನುಭವದಲ್ಲಿ ತೇಲಿಹೋದರು. ಎಲ್ಲರೂ ಕೊನೆಯಲ್ಲಿ ಬಂದು ನನಗೆ, "ಇಂಥಾ ಉಪನಯನವನ್ನೇ ನಾವು ನೋಡಿಲ್ಲ. ನೂರಾರು ಉಪನಯನಗಳಲ್ಲಿ ಭಾಗವಹಿಸಿದ್ದೇವೆ, ಆದರೆ ಇಂಥಾ ಸಂತೋಷ ಎಲ್ಲಿಯೂ ಆಗಿರಲಿಲ್ಲ" ಎಂದು ತುಂಬುಹೃದಯದಿಂದ ಹೇಳಿದರು. ಆದರೆ ನನಗೇನು ಆಶ್ಚರ್ಯವೆಂದರೆ, ಯಾರು ಉಪನಯನಮಾಡಿದರೂ ಇದೇ ಮಂತ್ರಗಳನ್ನೇ ಹೇಳಬೇಕು, ಇದೇ ಕ್ರಮದಲ್ಲಿ ಮಾಡಿಸಬೇಕು, ವ್ಯತ್ಯಾಸ ಆಗುವುದಕ್ಕೆ ಕಾರಣವೇನು ಎನ್ನುವುದು ತಿಳಿಯಲಿಲ್ಲ. ಇನ್ನೂ ತಿಳಿದಿಲ್ಲ. ಈಗ ಸುಮಾರು ವರ್ಷಗಳಿಂದಲೂ ಬೇರೆಯವರು ಮಾಡಿಸುವ ಉಪನಯನಾದಿ

ಗಳಿಗೆ ನಾನು ಹೋಗೇ ಇಲ್ಲ ಅಂತಿಟ್ಟುಕೋ ! ಆದ್ದರಿಂದ ವ್ಯತ್ಯಾಸ ತಿಳಿಯದೆ ಇರಬಹುದು. ರಾಜೇಶ್ವರಿ ಅವರು ತೆಲುಗರು (ಮುಲಕನಾಡು). ರಮೇಶ ನನ್ನನ್ನು ಸಾಕಷ್ಟು ಭಯಪಡಿಸಿದ್ದ. ಅವರ ಸಂಪ್ರದಾಯಗಳ ಮಧ್ಯೆ ಸಿಕ್ಕುಹಾಕಿಕೊಂಡು ನೀವೇನು ಮಾಡುತ್ತೀರಿ? ಎಂದು. ನನಗೂ ಸ್ವಲ್ಪ ಯೋಚನೆಯಾಗಿತ್ತು. ಆದರೆ ದೈವವಶಾತ್, ಯಾರೂ ಮಧ್ಯೆ ಒಂದು ಚಕಾರ ಶಬ್ದವನ್ನೂ ಎತ್ತಲಿಲ್ಲ. ನಾನು ಮಾಡಿಸುವುದನ್ನು ನೋಡುತ್ತಾ ಆನಂದವಾಗಿ ಕುಳಿತುಬಿಟ್ಟಿದ್ದರು !! ಅದೂ ಒಂದು ಪವಾಡವೇನೋ!! ಇರಲಿ.

ಆಶ್ವಲಾಯನಸೂತ್ರದಲ್ಲಿ ಗೃಹಪ್ರವೇಶಕ್ರಮವನ್ನು ಹೇಳಿಲ್ಲ. ಆದರೆ ಅವರ ಪ್ರಯೋಗದಲ್ಲಿ ಹೇಳಿದ್ದಾರೆ. ಅಲ್ಲಿಯೂ ಔಪಾಸನಾಗ್ನಿ ಸಮೇತ ಪ್ರವೇಶ, ವಾಸ್ತುಹೋಮ, ನವಗ್ರಹ ಹೋಮಗಳನ್ನು ಹೇಳಿದ್ದಾರೆ (ಪ್ರಯೋಗ ಈಚಿನದಾದ್ದರಿಂದ ನವಗ್ರಹಹೋಮ ಹೇಳಿದ್ದಾರೆ.). ರಾಕ್ಷೋಘ್ನಹೋಮವನ್ನು (ಅದೂ ಹಿಂದಿನ ರಾತ್ರಿ ಮಾಡುವುದು) ಅವರೂ ಹೇಳಿಲ್ಲ. Hindu ಮಂಜುನಾಥ, ಗೃಹಪ್ರವೇಶ ಮಾಡಿಕೊಂಡಾಗ ನಾರ್ವೆ (ದೇವರಭಟ್ಟರ ಊರು) ಯಿಂದ 3-4 ಜನ ವೈದಿಕರು ಬಂದಿದ್ದರು. ನಾನು attend ಮಾಡಲಿಲ್ಲ. ಆದರೆ ಮಾರನೆದಿನ ಒಂದು ಗಣಪತಿ ಹೋಮ ನಾನೇ ಮಾಡಿಸಿದೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಮಂಜುನಾಥನು, ಶ್ರೀನಿವಾಸಮೂರ್ತಿಯ ಹೆಂಡತಿಗೆ ಪುಂಸವನ, ಸೀಮಂತ, ಮಗುವಿಗೆ ಜಾತಕರ್ಮ, ನಾಮಕರಣ, ಚೌಲ, ಎಲ್ಲವನ್ನೂ ನಾನೇ ಮಾಡಿಸಬೇಕೆಂದು (ಆಪಸ್ತಂಬವಾದರೂ ಏನೂ ಚಿಂತೆಯಿಲ್ಲ ಎಂದು ಧೈರ್ಯವಾದ stand ತೆಗೆದುಕೊಂಡು!) ಆಗ್ರಹ ಮಾಡಿ ಮಾಡಿಸಿಕೊಂಡರು. ಅದಕ್ಕೆ ಖಂಡಿತವಾಗಿ ಬಹಳ ಧೈರ್ಯಬೇಕು. ಅದನ್ನು ಅವರು ಆಗ exhibit ಮಾಡಿದರು. ವೇದೋಕ್ತವಾದ ಕರ್ಮವು ಚೆನ್ನಾಗಿ ನಡೆಯುವುದು ಪ್ರಧಾನ ಉದ್ದೇಶವಾಗಿರಬೇಕೇ ಹೊರತು, ಸ್ವಶಾಖೆ, ಸ್ವಸೂತ್ರ ಎಂಬ ದುರಭಿಮಾನದಿಂದ ಅದರ ಸ್ವರೂಪವನ್ನು ಕೆಡಿಸಬಾರದು. ತಮ್ಮ ಸೂತ್ರದಲ್ಲಿಯೇ ಯೋಗ್ಯವಾಗಿ ಚೆನ್ನಾಗಿ ಮಾಡಿಸುವವರು ಸಿಕ್ಕಿದರೆ, ಆದರಣೀಯ. ಆದರೆ ದುರಭಿಮಾನ ಇರಕೂಡದೆಂದು ನನ್ನ ಅಭಿಪ್ರಾಯ. ಮುಖ್ಯವಾಗಿ ಸದ್ಗುಣಗ್ರಾಹಿತನವನ್ನು ನಾವು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಅದು ಎಲ್ಲಿಯೇ ಇರಲಿ, ಯಾರಲ್ಲೇ ಇರಲಿ ಅವುಗಳು ಯಾವಾಗಲೂ ಮಾನ್ಯ. ಆದರಣೀಯ. ಅಷ್ಟು ಮನಸ್ಸಿನಲ್ಲಿಟ್ಟು ಕೊಂಡರೆ, ನಮ್ಮ ಜೀವನ ಹಸನಾಗುತ್ತದೆ. ನೆಮ್ಮದಿಯಿಂದ ಬಾಳಬಹುದು. ಹೃದಯ ಯಾವಾಗಲೂ ಹಗುರವಾಗಿರುತ್ತದೆ.

ನಾನು ಪ್ರಾಯಃ September ತಿಂಗಳ ಮಧ್ಯದಲ್ಲಿ ಶ್ರೀಕಂಠನ ತಾಯಿಯವರ ವರ್ಷಾಬ್ದಿಕಕ್ಕೆ 3 ದಿನಗಳು ಬರಬೇಕಾಗ ಬಹುದು.

ಚಿ|| ಗಳಿಗೆಲ್ಲಾ ನನ್ನ ಅನಂತ ಆಶೀರ್ವಾದಗಳನ್ನು ತಿಳಿಸು.

ಇತಿ ನಿಮ್ಮವ

ಕುಮಾರಸ್ವಾಮೀ

೫೧೨

ತ್ರಿಕಾಗ್ನಿ, ರುದ್ರನ ಪ್ರಾರ್ಥನೆ, ಸ್ಥಾಲೀಪಾಕ

ಕುಶಲಮ್ ಶ್ರೀ: ಮೈಸೂರು

9.7.2000

ಶ್ರೀಕಂಠ !

ನಿನ್ನ ವಿಶ್ವಾಸಾಭಿಮಾನಗಳು ತುಂಬಿ ತುಳುಕುತ್ತಿರುವ ಕಾಗದ ಬಂದು ತಲಪಿತು. ನೀನೇನೋ ಉತ್ತರವನ್ನು ನಿಧಾನವಾಗಿ ಬರೆಯಿರಿ ಎಂದು ಬರೆದಿದ್ದರೂ, ಇವತ್ತು ಬಿಟ್ಟರೆ ಪುರಸತ್ತು ಸಿಗುವುದು ಕಷ್ಟವೆಂದು ತಿಳಿದು ಬರೆಯಲು ಕುಳಿತಿದ್ದೇನೆ. ನನ್ನ ಮಾತು ಕೇಳುತ್ತಾ ಕುಳಿತು Busನ್ನು Miss ಮಾಡಿಕೊಂಡು ನಡೆದುಕೊಂಡು ಹೋಗಬೇಕಾದದ್ದನ್ನು ಕೇಳಿ ವ್ಯಥೆಯಾಯಿತು. ನಿನಗೆ ನಡೆಯುವುದೇನೂ ಹೊಸದಲ್ಲದಿದ್ದರೂ ಅನವಶ್ಯವಾಗಿ ನಡೆಯಬೇಕಾಗಿ ಬಂದರೆ ಬೇಜಾರಾಗುತ್ತದೆ.

1) ನಿನ್ನ...ಮಾಡುತ್ತಿರುವ ಶ್ಲಾಘನೀಯವಾದ ಕೆಲಸಕ್ಕೆ ಕೊನೆಯ ಹಂತಕ್ಕೆ ನನ್ನ ಸಲಹೆ ಕೇಳಿದ್ದೀಯೆ. ಎಲ್ಲಾ ಕೆಲಸಗಳೂ ಶೃಂಗೇರಿಯವರ ಸಲಹೆಯಂತೆ ನಡೆಯುತ್ತಿರುವುದರಿಂದ ಅವರು ಹೇಳುವಂತೆಯೇ ಮಾಡುವುದು ಉಚಿತ. ಯುಕ್ತ. ಯಾವುದಕ್ಕೂ ಅವರನ್ನು ಕೇಳಿ ಮಾಡುವುದೇ ಋಜುವಾದ ಮಾರ್ಗ.

2) ನಮಸ್ತೇ ಅಸ್ತು ಭಗವನ್...ಎನ್ನುವುದು ಯಾರೋ ನನ್ನಂಥವರು ಸೇರಿಸಿರುವ ಒಂದು ವಾಕ್ಯ. ವಾಸ್ತವವಾಗಿ ತ್ರಿಕಾಗ್ನಿ ಎಂದರೆ ಏನೂ ಅರ್ಥವಿಲ್ಲ. 'ತ್ರಿಕ' ಎಂದರೆ ಮೂರು. ತ್ರಿಕಾಗ್ನಿ ಎಂದರೆ ಗಾರ್ಹಪತ್ಯ, ದಕ್ಷಿಣಾಗ್ನಿ, ಆಹವನೀಯ ಎಂದು ಹೇಳಬಹುದು. ಆದರೆ 'ತ್ರಿಕಾಗ್ನಿಕಾಲಾಯ' ಎಂದರೆ ಅರ್ಥ ಹೇಳುವುದು ಕಷ್ಟ. ಹಾಗೇ ತ್ರಿಕಾಲಾಗ್ನಿ ಎನ್ನುವುದೂ ಕಷ್ಟವೇ. ಮೂರು ಕಾಲಗಳಲ್ಲಿಯೂ ಇರುವ ಅಗ್ನಿ ಎಂದರ್ಥ. ಅದಕ್ಕೆ ಕಾಲಾಯ ಎಂದು ಸೇರಿಸಿದರೆ ಏನರ್ಥ ಮಾಡಬೇಕೋ ಗೊತ್ತಿಲ್ಲ. ಏನೋ ಪ್ರಾಸಬದ್ಧವಾಗಿದೆ. ಈಶ್ವರನ ವಿಶೇಷಣಗಳು ಎಂದು ಹೇಳಬೇಕು. ಆದರೆ ವೇದದ ರುದ್ರನಿಗೂ ಈ ವಿಶೇಷಣಗಳಿಗೂ ಯಾವ ಸಂಬಂಧವೂ ಇಲ್ಲ. ಆದಷ್ಟು ಅದನ್ನು ಹೇಳದಿದ್ದರೇ ವಾಸಿ ಎನಿಸುತ್ತದೆ.

3) "ತಮುಷ್ಟುಹಿ..." "ಅಯಂಮೇ..." ಎರಡು ಮಂತ್ರಗಳೂ ಋಗ್ವೇದದಲ್ಲಿರುವ ರುದ್ರದೇವತೆಯ ಪ್ರಾರ್ಥನೆ. ಧಾರಾಳವಾಗಿ ಹೇಳಬಹುದು. ನಿನಗೆ ಪಾಠವಾಗದಿದ್ದರೆ ಸುಮ್ಮನಿದ್ದುಬಿಡು. ಹೇಳಿಯೇ ತೀರಬೇಕೆಂಬ ನಿಯಮವೇನೂ ಇಲ್ಲ.

4) ಆಪಸ್ತಂಬರು ವಿವಾಹ ಪ್ರವೇಶಹೋಮ ಮಾಡಿದ ಮೇಲೆ ಆಗ್ನೇಯ ಸ್ಥಾಲೀಪಾಕವನ್ನು ವಿಸ್ತಾರವಾಗಿ ಹೇಳಿದ್ದಾರೆ. ಆಮೇಲೆ ಔಪಾಸನ ಆರಂಭಿಸಿ, ದರ್ಶಪೂರ್ಣಮಾಸಗಳಲ್ಲಿ ಪಾರ್ವಣಸ್ಥಾಲೀಪಾಕವನ್ನು ಆಗ್ನೇಯ ಸ್ಥಾಲೀಪಾಕದಂತೆಯೇ ಮಾಡಬೇಕೆಂದು ಹೇಳಿ ಈ ಪಾರ್ವಣ ಸ್ಥಾಲೀಪಾಕದಂತೆಯೇ ಬಾಕಿ ಎಲ್ಲ ಕರ್ಮಗಳನ್ನೂ ಮಾಡಬೇಕೆಂದು ಹೇಳಿದರು.

"ಪಾರ್ವಣೇನ ಅತೋಽನ್ಯಾನಿ ಕರ್ಮಾಣಿ ವ್ಯಾಖ್ಯಾತಾನಿ, ಆಚಾರಾತ್ ಯಾನಿ ಗೃಹ್ಯಂತೇ"

ಆ ಇತರ ಕರ್ಮಗಳಲ್ಲಿ (ರುದ್ರಹೋಮ, ಗಣಪತಿಹೋಮ ಇತ್ಯಾದಿ.)

"ಯಥೋಪದೇಶಂ ದೇವತಾಃ !"

(ಉಪದೇಶ ಮಾಡಿರುವಂತೆ, ಅಂದರೆ ಅದರ ವಿಧಿಯಲ್ಲಿ ಹೇಳಿರುವಂತೆ ದೇವತೆಗಳು. ಅವುಗಳಿಗೆ ಏನು ಹವಿಸ್ಸನ್ನು ಹೇಳಿದೆಯೋ ಅದೇ ಹವಿಸ್ಸು).

"ಅಗ್ನಿಗ್‌ಂ ಸ್ವಿಷ್ಟಕೃತಂ ಚಾಂತರೇಣ"

ಆ ದೇವತೆಗಳಿಗೆ – ಅಗ್ನಿಗೂ, ಸ್ವಿಷ್ಟಕೃತ್ತಿಗೂ ಮಧ್ಯದಲ್ಲಿ ಹವಿಸ್ಸನ್ನು ಕೊಡಬೇಕು. ಅಂದರೆ ಆಗ್ನೇಯ ಸ್ಥಾಲೀಪಾಕದಲ್ಲಿ ಏನು ಮೊದಲು 'ಅಗ್ನಯೇ ಸ್ವಾಹಾ' ಎಂದು ಮಾಡುತ್ತೇವೆಯೋ, ಏನು ಕೊನೆಯಲ್ಲಿ 'ಅಗ್ನಯೇ ಸ್ವಿಷ್ಟಕೃತೇ ಸ್ವಾಹಾ' ಮಾಡುತ್ತೇವೆಯೋ ಅವುಗಳೆರಡಕ್ಕೂ ಮಧ್ಯೆ ಬಾಕಿ ಎಲ್ಲಾ ದೇವತೆಗಳಿಗೂ ಹೋಮ ಮಾಡಬೇಕೆಂದರ್ಥ. ಇವೆರಡು ಆಹುತಿಗಳಿಗೆ ಅನ್ನವೇ ದ್ರವ್ಯ. ಮಧ್ಯದಲ್ಲಿ ಮಾಡುವ ದೇವತೆಗಳಿಗೆ, ಅವುಗಳವುಗಳಿಗೆ ಹೇಳಿರುವ ಹವಿಸ್ಸನ್ನು ಮಾಡಬಹುದು. ಎಲ್ಲಾ ಹೋಮಗಳೂ ಆಜ್ಯಭಾಗಾಂತವೇ. ಮೊದಲು ಮಾಡುವ 'ಅಗ್ನಯೇ ಸ್ವಾಹಾ' ಎಂಬುದನ್ನೇ ಮುಖಾಹುತಿ ಎಂದುಕೊಳ್ಳಬಹುದು. ಅದೇಕೋ ಏನೋ, ಸುದರ್ಶನರು ಭಾಷ್ಯದಲ್ಲಿ ಈ 'ಅಗ್ನಯೇ ಸ್ವಾಹಾ' ಎಂಬ ಆಗ್ನೇಯ ಸ್ಥಾಲೀಪಾಕದ ಪ್ರಕೃತಿಹೋಮವನ್ನು ಬಿಟ್ಟು, 'ಅಗ್ನಿಂ' ಎಂಬ ಶಬ್ದಕ್ಕೆ ಆಜ್ಯಾಹುತಿ ಕೊಡಬೇಕೆಂದು ಹೇಳಿ ಅದಕ್ಕೆ ಮುಖಾಹುತಿ ಎಂದು ಕರೆದುಬಿಟ್ಟರು. ಅದೇ ಚಾಲ್ತಿಗೆ ಬಂದು ಪ್ರಯೋಗಕ್ಕೂ ಅಗ್ನಿಮುಖಪ್ರಯೋಗ ಎಂಬ ಹೆಸರು ಬಂತು. ಆಪಸ್ತಂಬರು ಎಲ್ಲಿಯೂ ಈ 'ಮುಖ' ಶಬ್ದವನ್ನು ಉಪಯೋಗಿಸಿಲ್ಲ.

ಪಾಪುವು Augustನಲ್ಲಿ expected !! ಶಿಷ್ಯವರ್ಗದ ಸ್ತ್ರೀಯರಲ್ಲಿ ವಿವಾಹಿತರು, ಅವಿವಾಹಿತರು ಎಲ್ಲರೂ ಇದ್ದಾರೆ; ಉಪನಿಷತ್ತು ಹೇಳುತ್ತಿದ್ದೇನೆ. ಚಿ॥ಗಳಿಗೆಲ್ಲಾ ಆಶಿಷಃ.

ಇತಿ ನಿಮ್ಮವ

ಕುಮಾರಸ್ವಾಮೀ

೫೧೩.

ಸೂರ್ಯನಮಸ್ಕಾರ ; ಜಪ, ಹೋಮ

ಮಹರ್ಷಿಗಳ ಮೂಲಭೂತ ತತ್ತ್ವ ; ತರ್ಪಣದ order

ಕುಶಲಮ್ ಶ್ರೀ: ಮೈಸೂರು

27.9.2000

ಶ್ರೀಕಂಠ !

ನಾನು ಭದ್ರಾವತಿಯನ್ನು ಬಿಟ್ಟು ಆಗಲೇ 15 ದಿನಗಳಾದುವು. ಆದರೂ ಅಲ್ಲಿಯ ಮಾನಸಿಕ ಸಂತೋಷದ ಅನುಭವ ಇನ್ನೂ ಹಚ್ಚ ಹಸಿರಾಗಿದೆ. ವಿಶೇಷವಾಗಿ, ನಿನ್ನ ಸ್ನೇಹಿತರು, ಶಿಷ್ಯರುಗಳಿಂದ ಕೂಡಿದ ಪೇಪರ್‌ಟೌನಿನ ಗುಂಪನ್ನು ನೋಡಿ ಬಹಳ ಸಂತೋಷವಾಯಿತು. ಅವರೆಲ್ಲರೂ ಸುಸಂಸ್ಕೃತ ಜನ, Open minded people, ಯೋಚನಾ ಸಾಮರ್ಥ್ಯವುಳ್ಳ ಜನ ಎನಿಸಿತು. ಅಂಥವರಿಗೆ ಹೇಳಿದರೆ ಸ್ವಲ್ಪವಾದರೂ ನಮ್ಮ ಧರ್ಮದ ನಿಜಸ್ವರೂಪ ಜನರಲ್ಲಿ ಪ್ರಚಾರವಾಗಬಹುದೇನೋ ಎನಿಸುತ್ತದೆ. ಅವರ ಜತೆಯಲ್ಲಿ ಅಲ್ಪಕಾಲವಾದರೂ ಕಳೆಯುವುದಕ್ಕೆ ಅವಕಾಶಮಾಡಿಕೊಟ್ಟದ್ದಕ್ಕೆ ನಿನಗೆ ವಿಶೇಷವಾದ ಕೃತಜ್ಞತೆಗಳು. ಹಾಗೆಯೇ ಹೆಗಡೆ ಮತ್ತು ಭಟ್‌ರವರಿಗೂ. ನನ್ನ ಪುಸ್ತಕಗಳನ್ನು ಅವರೆಲ್ಲರಿಗೂ ಹಂಚು. ಇನ್ನೂ ಬೇಕಾದರೆ ಕಳಿಸಿಕೊಡುತ್ತೇನೆ. ಅದರಲ್ಲಿರುವ ವಿಷಯಗಳನ್ನು ಓದಿ ಸಂತೋಷಪಡಬೇಕಾದರೆ ಅಂತಹವರೇ ಸರಿ.

ನಾನು ಒಂದು ದಿನಕ್ಕೆ ಮದ್ರಾಸಿಗೆ ಹೋಗಿ ಮೊನ್ನೆ ಬಂದೆ. ಅಲ್ಲೂ ಚೆನ್ನಾಗಿ ನಡೆಯಿತು.

1) ಸೂರ್ಯನಮಸ್ಕಾರದ ವಿಷಯದಲ್ಲಿ ಕೇಳಿದ್ದೀಯೆ. ಈಗ ವೇ॥ ವೆಂಕಟರಾಮಾವಧಾನಿಗಳದ್ದು ತಪ್ಪುಗ್ರಹಿಕೆ ಎನ್ನಿಸುತ್ತಿದೆ. ಅವರು ಒಂದೊಂದು ವಾಕ್ಯಕ್ಕೂ ನಮಸ್ಕಾರ ಎಂದು ಬರೆದಿರುವುದು ಸರಿಯಲ್ಲ. ಅವೆಲ್ಲವೂ ನಾಲ್ಕು ನಾಲ್ಕು ವಾಕ್ಯಗಳ ಮಂತ್ರಗಳು. ಸೂರ್ಯನ ಪ್ರಾರ್ಥನೆಗೇ ವಿನಿಯೋಗವಾಗಿರುವ ಮಂತ್ರಗಳು. ನಾಲ್ಕು ವಾಕ್ಯಗಳಲ್ಲಿ ಹೇಳಿದರೇನೇ ಅರ್ಥಪೂರ್ತಿಯಾಗುತ್ತದೆ. ಒಂದೊಂದು ವಾಕ್ಯಕ್ಕೆ ಏನೂ ಅರ್ಥವಿಲ್ಲ. ಉದಾಹರಣೆಗೆ

"ಹೃದ್ರೋಗಂ ಮಮ ಸೂರ್ಯ" ಎಂದರೆ "ಸೂರ್ಯ! ನನ್ನ ಹೃದ್ರೋಗವನ್ನು" ಎಂದರ್ಥ. ಬರೀ ಅಷ್ಟೇ ಹೇಳಿದರೆ ಅದು ಪ್ರಾರ್ಥನೆಯಾಗುವುದಿಲ್ಲ. ಹೃದ್ರೋಗವನ್ನು ಏನು ಮಾಡಬೇಕು? ಎಂಬ ಪ್ರಶ್ನೆ ಏಳುತ್ತದೆ. ಹೀಗೇ ಎಲ್ಲಾ ವಾಕ್ಯಗಳೂ. ಆದ್ದರಿಂದ ನಾಲ್ಕು ವಾಕ್ಯಗಳ ಒಂದೊಂದು ಮಂತ್ರವನ್ನೂ ಹೇಳಿ ನಮಸ್ಕಾರ ಮಾಡುವುದೇ ಯುಕ್ತ. ರೂಢಿಯಲ್ಲಿ "ಉದ್ಯನ್ನದ್ಯಮಿತ್ರಮಹಃ" ಎಂಬ ವಾಕ್ಯದಿಂದ ಆರಂಭಿಸಿ, 3 ಮಂತ್ರಗಳನ್ನು ಅಂದರೆ 12 ವಾಕ್ಯಗಳನ್ನು ಹೇಳುತ್ತಾರೆ. ಆದರೆ ಇಲ್ಲಿ ಒಟ್ಟು 6 ಮಂತ್ರಗಳು (24-ವಾಕ್ಯಗಳು) ಇವೆ.

೧. ಉದ್ಯನ್ನದ್ಯ ಮಿತ್ರಮಹಃ । ಸಪತ್ನಾನ್ಮೇ ಅನೀನಶಃ । ದಿವೈನಾನ್ ವಿದ್ಯುತಾ ಜಹಿ । ನಿಮ್ರೋಚನ್ನ ಧರಾಂ ಕೃಧಿ ॥

೨. ಉದ್ಯನ್ನದ್ಯ ವಿನೋ ಭಜ । ಪಿತಾಪುತ್ರೇಭ್ಯೋ ಯಥಾ। ದೀರ್ಘಾಯುತ್ವಸ್ಯ । ತಸ್ಯ ನೋ ದೇಹಿ ಸೂರ್ಯ ॥

೩. ಉದ್ಯನ್ನದ್ಯಮಿತ್ರಮಹಃ । ಆರೋಹನ್ನುತ್ತರಾಂ ದಿವಮ್। ಹೃದ್ರೋಗಂ ಮಮ ಸೂರ್ಯ । ಹರಿಮಾಣಂ ಚ ನಾಶಯ ।

೪. ಶುಕೇಷು ಮೇ ಹರಿಮಾಣಮ್ । ರೋಪಣಾಕಾಸು ದಧ್ಮಸಿ । ಅಥೋ ಹಾರಿದ್ರವೇಷು ಮೇ । ಹರಿಮಾಣಂ ನಿದಧ್ಮಸಿ॥

೫. ಉದಗಾದಯಮಾದಿತ್ಯಃ। ವಿಶ್ವೇನ ಸಹಸಾ ಸಹ । ದ್ವಿಷಂತಂ ಮಮ ರನ್ಧಯನ್ । ಮೋ ಅಹಂ ದ್ವಿಷತೋ ರಥಮ್॥

೬. ಯೋನಶ್ಶಪಾದಶಪತಃ। ಯಶ್ಚನಶ್ಶಪತಶ್ಶಪಾತ್। ಉಷಾಶ್ಚಸ್ಮೈ ನಿರ್ಮುಕ್ಚ। ಸರ್ವ ಪಾಪಗ್ಂ ಸಮೂಹತಾಮ್॥ ತೈ. ಬ್ರಾಹ್ಮಣ ತೃತೀಯಾಷ್ಟಕ ಅಷ್ಟಮ ಪ್ರಪಾಠಕ 6ನೇ ಅನುವಾಕ.

ಈ ಮೇಲಿನ ಆರು ಮಂತ್ರಗಳು ಸೂರ್ಯನ ಪರವಾಗಿ ಇವೆ. ಇವುಗಳನ್ನೇ ಹೇಳಿಕೊಂಡು ಎಷ್ಟು ಸಂಖ್ಯೆಯಲ್ಲಿ (ಕೈಲಾದಷ್ಟು) ಬೇಕಾದರೂ ಮಾಡಬಹುದು. 12, 24, 48, 60,72, 84, 96, 108 etc. ಒಂದು ಮಂತ್ರಕ್ಕೆ (ನಾಲ್ಕುವಾಕ್ಯ) ಒಂದು ನಮಸ್ಕಾರ. ಸೂರ್ಯದರ್ಶನ ಮಾಡಿಕೊಂಡು ಮಾಡುವುದು ಉತ್ತಮ ಪಕ್ಷ. ಬಿಸಿಲು, ಶ್ರಮ ಎನ್ನುವುದಾದರೆ ಕಲಶದಲ್ಲಿ ಆವಾಹನೆ ಮಾಡಿ ಮಾಡಬಹುದು. ಅಷ್ಟಾಕ್ಷರಿಯನ್ನು ನೀರಿನಲ್ಲಿ ಬರೆಯುವುದು ಅವೆಲ್ಲ ಏನೂ ಬೇಕಿಲ್ಲ. ವೆಂಕಟರಾಮಾವಧಾನಿಗಳೂ ಆ ಕಾಲದಲ್ಲಿ ಇದ್ದ ನಂಬಿಕೆಯನ್ನು ಅನುಸರಿಸಿದ್ದಾರೆಂದು ಕಾಣುತ್ತೆ.

2) ಹೋಮ ಮಾಡಬೇಕಾದರೆ, ಜಪಮಾಡಿ ತದ್ದಶಾಂಶ ಅಥವಾ ಶತಾಂಶ ಮಾಡಬೇಕೆನ್ನುವ concept ಬಹಳ ಕಾಲದ ಮೇಲೆ ಬಂದಿರುವುದು. ವೇದಗಳ ಕಾಲದಲ್ಲಿ ಖಂಡಿತ ಇರಲಿಲ್ಲ. ಜಪ ಅಥವಾ ಹೋಮವೇ ಹೊರತು ಎರಡೂ ಬೇಕಿಲ್ಲ. ಮಹರ್ಷಿಗಳಿಗೆ ಹೋಮವೇ ಸಮ್ಮತ. ಕಾರಣ ಅದರಲ್ಲಿ ಏಕಾಗ್ರತೆಗೆ ಅನುಕೂಲವಾಗುತ್ತದೆಂಬುದೇ. ಸಂಖ್ಯೆಗೆ ಯಾವ ಪ್ರಾಮುಖ್ಯತೆ ಯನ್ನೂ ಕೊಡಬೇಕಾದ್ದಿಲ್ಲ. ಸುಮ್ಮನೆ ಲೆಕ್ಕವಿಲ್ಲದೆ ಮಾಡುವುದಕ್ಕಿಂತ ಒಂದು ಕ್ರಮ ಇರಲಿ ಎಂಬ ಉದ್ದೇಶದಿಂದ ಸಂಖ್ಯಾನಿಯಮವನ್ನು ಜಾರಿಗೆ ತಂದಿದ್ದಾರೆ. ಆ ಸಂಖ್ಯಾನಿಯಮವನ್ನು ಪ್ರಧಾನವಾಗಿಟ್ಟು ಕೊಂಡು ಬೇರೆ ಜನರನ್ನು ಕರೆದು ಜಪ ಮಾಡಿಸುವುದು ತಪ್ಪು ಅಂತಲೇ ನನ್ನ ಭಾವನೆ. ಜಪ ಅಥವಾ ಹೋಮವೆಂದರೆ ದೇವತಾ ಪ್ರಾರ್ಥನೆ. ಯಾರು ಪ್ರಾರ್ಥನೆ ಮಾಡಬೇಕೋ ಅವರು ಜಪವೋ ಹೋಮವೋ ಮಾಡಬೇಕೇ ಹೊರತು ಇನ್ನೊಬ್ಬರು ಅವರಿಗೋಸ್ಕರ ಮಾಡುವುದು ಎನ್ನುವುದು ಸಮಂಜಸ ವಾಗುವುದಿಲ್ಲ. ಆ ದೇವತೆಯು ಸಂಖ್ಯಾಪ್ರಿಯಳು. ಎಷ್ಟೆಷ್ಟು ಹೆಚ್ಚು ಸಂಖ್ಯೆಯಲ್ಲಿ ಅವಳನ್ನು ಪ್ರಾರ್ಥಿಸಿದರೆ ಅಷ್ಟಷ್ಟು ಹೆಚ್ಚು ಫಲ ಸಿಗುತ್ತದೆಂಬ ತಪ್ಪು ಭಾವನೆಯೇ ಈ ಅಭ್ಯಾಸಕ್ಕೆ ಕಾರಣ. ಬೇರೆ ಯಾರು ಮಾಡಿದರೂ ಆ ದೇವತೆಯು ತೃಪ್ತಿಹೊಂದಿ, ಮಾಡಿದವರನ್ನು ನೇಮಕಗೊಳಿಸಿರುವ ಯಜಮಾನನಿಗೆ ಫಲ ಕೊಡುತ್ತದೆಂಬ ಮಿಥ್ಯಾನಂಬಿಕೆ. ಇದು ತೋಟದ ಕೆಲಸವಲ್ಲ, ಗದ್ದೆ ಕೆಲಸವಲ್ಲ, ಮನೆಕಟ್ಟುವ ಕೆಲಸವಲ್ಲ. ಅಲ್ಲಿ ಮಾಡಿದವರಿಗೆ ಕೂಲಿ. ಅದರ ಫಲ ಕೂಲಿಕೊಡುವ ಯಜಮಾನನಿಗೆ!! ಅಧ್ಯಾತ್ಮ ಪ್ರಪಂಚದಲ್ಲಿ ಈ ನ್ಯಾಯ ಅನ್ವಯಿಸುವುದಿಲ್ಲ. ಮೊದಲನೆಯದಾಗಿ ಯಾವ ಜಪಕ್ಕಾಗಲಿ, ಹೋಮಕ್ಕಾಗಲಿ ಪ್ರಾಪಂಚಿಕ ಫಲವಿಲ್ಲ. ಚಿತ್ತಶುದ್ಧಿ, ಆತ್ಮಧೈರ್ಯಗಳೇ ಫಲ. ಇವುಗಳು ಮಾಡಿದವನಿಗೆ ಬರುತ್ತದೆಯೇ ಹೊರತು, ಯಜಮಾನನಿಗೆ ವರ್ಗಾಯಿಸಲು ಸಾಧ್ಯವಿಲ್ಲ. ಆದ್ದರಿಂದ ಯಜಮಾನ ತನಗೆಷ್ಟು ಸಾಧ್ಯವೋ ಅಷ್ಟು ಮಾಡಬೇಕು. ರುಚಿಯಾಗಿ ಮಾಡಬೇಕು. ಅನೇಕರನ್ನು ಕರೆದು ಸತ್ಕರಿಸಿ, ದಕ್ಷಿಣಾತ್ಯಾಗಮಾಡಲಿ. ಅದು ಅತ್ಯಂತ ಯುಕ್ತ. ಅವರಿಗೆ ದಕ್ಷಿಣೆ ಕೊಡಬೇಕೆಂದು ಅವರ ಕೈಯಲ್ಲಿ ಜಪ ಹೋಮಾದಿಗಳನ್ನು ಮಾಡಿಸಿ, ತಾನು ಫಲವನ್ನು ಅಪೇಕ್ಷಿಸುವುದು ದಡ್ಡತನವಾಗುತ್ತದೆ. ಯಾವ ಜಪಕ್ಕೂ ಉಪದೇಶ ಬೇಕಿಲ್ಲ. ಗೊತ್ತಿಲ್ಲದೆ ಇರುವುದಾದರೆ ಹೇಳಿಸಿಕೊಳ್ಳಬೇಕು. ಅಷ್ಟೆ. ವೇದಮಂತ್ರವಾದರಂತೂ, ಖಂಡಿತ ಗುರುಗಳ ಕೈಯಲ್ಲಿ ಸರಿಯಾಗಿ ಹೇಳಿಸಿಕೊಂಡೇ ಮಾಡಬೇಕು. (ಸ್ವರ, ವರ್ಣಗಳು ತಪ್ಪಾಗುವ chance ಇರುವುದರಿಂದ).

3) ಈಗ ಎರಡು ಮೂರು ಸಂಕೇತಿ ವಾರ್ತೆಗಳಲ್ಲಿ...ಗಳು ಬರೆದಿರುವುದನ್ನು ನೀನು ಓದಿರಬಹುದು. ಅವುಗಳಿಗೆ ನಾನು ಉತ್ತರ ಬರೆಯುವುದಿಲ್ಲ (not necessary to show my reaction).

ಅವರುಗಳು ಆಪಸ್ತಂಬ ಮಹರ್ಷಿಗಳು ಹೇಳಿದಂತೆ ಮಾಡುವ

ನಾಲ್ಕು ದಿನಗಳ ವಿವಾಹ, ಮೂರುದಿನಗಳ ಉಪನಯನಗಳನ್ನು ಕೃತಯುಗದ ಸಮಾಚಾರವೆಂದೂ, ಈ ಆಧುನಿಕ ಯುಗದಲ್ಲಿ ಅವುಗಳು ಸಾಧ್ಯವಿಲ್ಲವೆಂದೂ ಇಬ್ಬರೂ ಪ್ರತಿಪಾದಿಸಿದ್ದಾರೆ. ಮಹರ್ಷಿಗಳು ಹೇಳಿರುವುದು ತ್ರಿಕಾಲಾಬಾಧಿತವಾದ ಧರ್ಮಗಳು. ಅಗ್ನಿ ಪರಿಚರ್ಯೆ, ಅದರಿಂದ ಉಂಟಾಗುವ ಚಿತ್ತಶುದ್ಧಿ, ಸಾತ್ವಿಕಾನಂದಗಳು ಕೇವಲ ಕೃತಯುಗಕ್ಕೆ ಸೀಮಿತವಲ್ಲ. ಮಹರ್ಷಿಗಳೂ, ಕೃತಯುಗದವರಲ್ಲ. ಅವರು ಬರೆದಿರುವುದು ನಮ್ಮಂಥ ಸಾಮಾನ್ಯ ಜನತೆಗೇ. ನಿತ್ಯವೂ ಪ್ರವರದಲ್ಲಿ ಆ ಮಹರ್ಷಿಗಳ ಹೆಸರು ಹೇಳುವ ನಾವು ಅವರ ವಿಷಯದಲ್ಲಿ ಅಷ್ಟು ಅಸಡ್ಡೆಯಿಂದ ಮಾತನಾಡುವುದು ಸಲ್ಲದು. ಯಂತ್ರಗಳನ್ನೇ ಕಾಣದಿದ್ದ ಯುಗದಲ್ಲಿ ಬೀಸಲು ಬೀಸುವಕಲ್ಲು ಹಾಗೂ ಕುಟ್ಟಲು ಹಾರೆ ಒನಕೆಗಳನ್ನು ಉಪಯೋಗಿಸುತ್ತಿದ್ದ ಕಾಲದಲ್ಲಿ ಚಾಲ್ತಿಗೆ ಬಂದ ಗೋದುಮಕಲ್ಲೆಂಬ ಹೆಂಗಸರ ಶಾಸ್ತ್ರವನ್ನು ಈವತ್ತಿನ ಯಾಂತ್ರಿಕ ಯುಗದಲ್ಲಿಯೂ ವೇದೋಕ್ತವಿಧಿಯಂತೆ ಆಚರಿಸುವುದು ಹೇಗೆ ಸೂಕ್ತ ? ಯಾವುದೋ ಕಾಲದಲ್ಲಿ ಎಲ್ಲರೂ ಶಿಖೆ ಬಿಟ್ಟಿದ್ದಾಗ, ಹಾಗೇ ತಲೆ ಬಿಟ್ಟುಕೊಂಡು ವಿವಾಹ ಮಂಟಪದಲ್ಲಿ ಕೂರುವುದಕ್ಕಿಂತ ಪೇಟಾ ಭೂಷಣವಾಗಿರುತ್ತದೆಂಬ ಭಾವನೆಯಿಂದ ಬಂದಿರುವ ಅಭ್ಯಾಸವನ್ನು ಇವತ್ತು ಪೂರ್ತಿ ಕ್ರಾಪ್‌ಮಯವಾಗಿರುವ ಆಧುನಿಕಯುಗದಲ್ಲಿಯೂ, ಅದೂ ಯಾರ್‍ಯಾರೋ ಬಳಸಿರುವ ಪೇಟವನ್ನು ಬಾಡಿಗೆಗೆ ತಂದು, ಬಹಳ ದೊಡ್ಡ ಶಾಸ್ತ್ರವಿಧಿಯಂತೆ ಆಚರಿಸುವುದು ಆಧುನಿಕತೆಯೇ? ಬಹಳ ಹಿಂದೆ 7-8 ವರ್ಷಗಳ ಕನ್ಯೆ, 15-16 ವರ್ಷಗಳ ಹುಡುಗ, ಇವರುಗಳ ವಿವಾಹದಲ್ಲಿ ಸಂಬಂಧಮಾಲೆಯಲ್ಲಿ ಸೋದರಮಾವಂದಿರು ಅವರನ್ನು ಹೆಗಲ ಮೇಲೆ ಕೂರಿಸಿಕೊಂಡು (ಬಂದವರಿಗೆಲ್ಲಾ ಕಾಣಿಸಲಿ ಎಂಬ ಉದ್ದೇಶವೂ ಇದ್ದಿರಬಹುದು) ಕರೆದುಕೊಂಡು ಬಂದರು. ಈ ಆಧುನಿಕ ಕಾಲದಲ್ಲಿ 25-28 ವರ್ಷಗಳ ಪ್ರೌಢೆಯನ್ನೂ, 30-32 ವರ್ಷಗಳ ಪ್ರೌಢನನ್ನೂ, ಹೆಗಲ ಮೇಲೆ ಏರಿಸಿಕೊಳ್ಳುವುದು ಶಾಸ್ತ್ರವೆಂದು ಹೇಳುವುದು ಆಧುನಿಕತೆಯೇ? ಇವತ್ತಿನ ಕಾಲದಲ್ಲಿಯೂ ಮಹರ್ಷಿಗಳ ಮೂಲಭೂತವಾದ ತತ್ತ್ವಗಳು ಅನುಸರಿಸಲು ಸಾಧ್ಯ ಎಂಬುದನ್ನು ನಾವು ಮರೆಯಬಾರದು. ಅನೇಕರು ಅನುಸರಿಸುತ್ತಿದ್ದಾರೆ, ಅನುಸರಿಸಿ ಅದರ ಪ್ರಯೋಜನವನ್ನು ಪಡೆದಿದ್ದಾರೆ. ಪಡೆಯುತ್ತಿದ್ದಾರೆ.

4) ತರ್ಪಣದ Order : ೧. ದ್ವಾದಶ ಪಿತೃಗಳು ೨. ಸಪತ್ನೀಮಾತೃ ೩. ತಂದೆಯ ಅಣ್ಣತಮ್ಮಂದಿರು (ಅವರುಗಳಿಗೆ ಪತ್ನೀವಿಯೋಗವಿದ್ದರೆ ಸಪತ್ನೀಕಾನ್ ಎಂದು ಹೇಳಬೇಕು. ಜೀವಂತವಾಗಿದ್ದರೆ ಇಲ್ಲ. ಚಿಕ್ಕಪ್ಪ, ದೊಡ್ಡಪ್ಪಂದಿರು ಬದುಕಿದ್ದು ಅವರ ಪತ್ನಿಯರು ಹೋಗಿದ್ದರೆ, ಅವರಿಗೆ ಆ ಚಿಕ್ಕಪ್ಪ ದೊಡ್ಡಪ್ಪಂದಿರು ಹೋಗುವವರೆಗೂ ತರ್ಪಣವಿಲ್ಲ) ೪. ತಂದೆಯ ಅಕ್ಕತಂಗಿಯರು (ಇಲ್ಲಿಯೂ ಅವರ ಗಂಡಂದಿರು ಹೋಗಿದ್ದರೆ ಸಭರ್ತೃಕಾಃ ಎಂದು ಹೇಳಬೇಕು. ಮೊದಲೇ ಗಂಡಂದಿರು ಹೋಗಿದ್ದರೆ, ಅತ್ತೆ ಹೋಗುವವರೆಗೂ ಅವರಿಗೂ ತರ್ಪಣವಿಲ್ಲ). ೫. ತಂದೆಯ ಅಕ್ಕತಂಗಿಯರು (ಇಲ್ಲಿಯೂ ಅವರುಗಳ ಗಂಡಂದಿರಿಗೆ ಅವರ ಜತೆಯಲ್ಲಿಯೇ ತರ್ಪಣ). ೬. ತಾಯಿಯ ಅಣ್ಣ ತಮ್ಮಂದಿರು (ಮಾವಂದಿರ ಹೆಂಡತಿಯರಿಗೆ, ಮಾವಂದಿರು ಹೋದಮೇಲೆಯೇ ತರ್ಪಣ. ಮೊದಲೇ ಹೋಗಿದ್ದರೆ ಮಾವಂದಿರು ಹೋಗುವವರೆಗೂ ತರ್ಪಣವಿಲ್ಲ). ೭. ತಾಯಿಯ ಅಕ್ಕತಂಗಿಯರು (ಅವರ ಗಂಡಂದಿರ ವಿಷಯದಲ್ಲಿ ಮೇಲೆ ಹೇಳಿದ ನ್ಯಾಯವೇ) ೮. ಸ್ವಂತ ಅಣ್ಣತಮ್ಮಂದಿರು (ಅವರ ಪತ್ನಿಯರ ವಿಷಯದಲ್ಲಿಯೂ ಅದೇ ನ್ಯಾಯ) ೯. ಸ್ವಂತ ಅಕ್ಕತಂಗಿಯರು (ಅವರ ಗಂಡಂದಿರಿಗೂ ಅವರು ಹೋದಮೇಲೇ ತರ್ಪಣ) ೧೦. ಮಾವ, ಅತ್ತೆ, (ಮಾವನ ಜತೆಯಲ್ಲಿಯೇ ಅತ್ತೆಗೂ. ಅತ್ತೆ ಮೊದಲು ಹೋಗಿದ್ದರೆ ಅವರಿಗೆ ಪ್ರತ್ಯೇಕವಾಗಿಲ್ಲ) ೧೧. ಗುರು, ಆಚಾರ್ಯ (ಸ್ವಂತ ತಂದೆ).

ಶ್ರೀಕಂಠ! ಇನ್ನಾವಾಗಲಾದರೂ ಬಂದು 4-5 ದಿನಗಳು ಭಾಗವತದ ಪ್ರಹ್ಲಾದಸ್ತುತಿಯ ಮೇಲೆ ಮಾತನಾಡಬೇಕೆಂದಿದ್ದೇನೆ. ತುಂಬಾ ಚೆನ್ನಾಗಿದೆ. ಸಕಲ ಧರ್ಮಗಳೂ ಅವುಗಳಲ್ಲಿ ಅಡಗಿದೆ. ಇವತ್ತು ಮೋಹನ್ ಕುಮಾರ್ ಬಂದಿದ್ದರು. 'ಇಂದು' 2ನೇ ತಾರೀಖು ಭದ್ರಾವತಿಗೆ ಹೋಗುತ್ತಿದ್ದಾಳಂತೆ. "ಹೃದಯಸಂಪನ್ನತೆ" ಕಾಪಿಗಳನ್ನು ಕಳಿಸಲೇ ? ವಿನಿಯೋಗ ಮಾಡಲು ಸಾಧ್ಯವೇ ತಿಳಿಸು. ಪುಸ್ತಕದ ಹಣ ನಿನ್ನ ಹತ್ತಿರವೇ ಇರಲಿ. 'ಇಂದು' ಕೈಯಲ್ಲಿ ಕಳಿಸಿದರೆ ಸಾಕು. Oct. 22 ಮೈಸೂರಿಗೆ ಬರಬೇಕೆನ್ನುವುದು ಜ್ಞಾಪಕ ಇರಲಿ, ಎಲ್ಲರಿಗೂ ನನ್ನ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ.

ವೇ॥ ನರಸಿಂಹಮೂರ್ತಿಗಳಿಗೆ ಪುಸ್ತಕ ತಲಪಿತೇ?

೫೧೪

ನಾನು – ಡಿ.ವಿ.ಜಿ.

ಕುಶಲಮ್ ಶ್ರೀ: ಮೈಸೂರು

13.11.2000

ಮಾನ್ಯ ಅಶ್ವತ್ಥನಾರಾಯಣ ಇವರಲ್ಲಿ ಶ್ರೀಕಂಠ ಕುಮಾರಸ್ವಾಮಿಯು ಮಾಡುವ ಅನಂತ ನಮಸ್ಕಾರಗಳು.

ತಾವು ಸಮುದಾಯ ಕೇಂದ್ರಕ್ಕೆ ಬರೆದಿದ್ದ ಪತ್ರವನ್ನು ಡಾ|| ಪ್ರಣತಾರ್ತಿಹರನ್‌ರವರು ತಂದುಕೊಟ್ಟರು. ಓದಿ ಕುಣಿದಾಡುವಂತಾಯಿತು. ಬರೆವಣಿಗೆಯಲ್ಲಿ (ಪುಸ್ತಕದ) ಪ್ರಪ್ರಥಮ ಪ್ರಯತ್ನವಾದ ಈ ಪುಸ್ತಕದ ವಿಷಯದಲ್ಲಿ ಅಷ್ಟೊಂದು ಪ್ರೋತ್ಸಾಹದ ಮಾತುಗಳನ್ನು ಕೇಳಲು ಯಾವ ಲೇಖಕನಿಗೆ ತಾನೇ ಆನಂದವಾಗುವುದಿಲ್ಲ!! ಅದರಲ್ಲಿಯೂ ಕನ್ನಡ ಪ್ರೊಫೆಸರ್‌ರವರ ಬಾಯಿನಿಂದ!! ನಿಜವಾಗಲೂ ಧನ್ಯನೆಂದುಕೊಂಡೆ. ಇದೇ ಅಲ್ಲವೇ ಹೃದಯಸಂಪನ್ನತ್ವೆ!! ಮೊನ್ನೆ ತಾನೇ ಇಲ್ಲಿಯೇ ವಾಸವಾಗಿರುವ ಕೌಲಗಿ ಶೇಷಾಚಾರ್ಯರೆಂಬ (ಮಾಜಿ ಪ್ರಿನ್ಸಿಪಾಲ್, ಉಡುಪಿ ಸಂಸ್ಕೃತ ಕಾಲೇಜು) 90 ವರ್ಷದ ಹಿರಿಯ ವಿದ್ವಾಂಸರು ಮಗನನ್ನು ಜತೆಮಾಡಿಕೊಂಡು ನನ್ನ ಮನೆ ಹುಡುಕಿಕೊಂಡು ಬಂದು, ನನ್ನನ್ನು ಸಂಧಿಸಿ, ಪುಸ್ತಕದ ಬಗ್ಗೆ ಬಹಳ ಪ್ರಶಂಸೆಯ ಮಾತುಗಳನ್ನು ಆಡಿಹೋದರು. ಅವರ ಹೃದಯಸಂಪನ್ನತೆಗೆ ನನಗೇನು ಹೇಳಬೇಕೆಂದು ತೋಚಲಿಲ್ಲ. ಅಭಿವಾದಯೇ ಹೇಳಿ ಅವರ ಪಾದೋಪಸಂಗ್ರಹಣ ಮಾಡಿದೆ ಅಷ್ಟೆ. ಅವರಂಥ, ನಿಮ್ಮಗಳಂತಹ ಶುದ್ಧಹೃದಯರು, ಗುಣಗ್ರಾಹಿಗಳು, ನಮ್ಮ ಸುತ್ತಮುತ್ತ ಇದ್ದಾರೆನ್ನುವುದೇ ನಮ್ಮ ಪವಿತ್ರಭಾರತದ ಉಜ್ವಲ ಸಂಸ್ಕೃತಿ ಇನ್ನೂ ಜೀವಂತವಾಗಿದೆ ಎನ್ನುವುದಕ್ಕೆ ನಿದರ್ಶನ ಎಂದು ನಾನು ಭಾವಿಸಿದ್ದೇನೆ. ಅಶ್ವತ್ಥನಾರಾಯಣ! ಉತ್ಪ್ರೇಕ್ಷೆ ಮಾಡುತ್ತಿಲ್ಲ, ನಿಮ್ಮ ಹೃದಯಂಗಮವಾದ ಪುಸ್ತಕದ ಮೇಲಿನ ವ್ಯಾಖ್ಯಾನವನ್ನು ಓದಿ ಮನಸಾರ ನಿಮಗೆ ನಮಸ್ಕರಿಸಿದೆ. ಇನ್ನೊಬ್ಬರಿಗೆ ಓದಲು ಹೋಗಿ ಗದ್ಗದಿತನಾದೆ. ಕಣ್ಣಾಲಿಗಳು ತುಂಬಿ ಬಂದುವು. ನಮ್ಮ ಹೃದಯಕ್ಕೆ ಅತ್ಯಂತ ಹತ್ತಿರವಾದವರು ಬಂದಾಗ ಹಾಗಾಗುವುದು ಸಹಜವೇ ತಾನ್ನೆ।

ತಾವು ನನಗೆ ಅತ್ಯಂತ ಮಾನ್ಯರಾದ ಡಿ.ವಿ.ಜಿ.ಯವರ ಗ್ರಂಥಗಳ ಸಾಲಿಗೆ ನನ್ನ ಗ್ರಂಥವನ್ನೂ ಸೇರಿಸಿರುವುದು ತಮ್ಮ ಹಿರಿಯತನವನ್ನು ತೋರಿಸುತ್ತದೆಯೇ ಹೊರತು ಅವರ ಸಾಲಿಗೆ ಸೇರಲು ನನಗೆ ಯಾವ ಯೋಗ್ಯತೆಯೂ ಇಲ್ಲ. ನಾನು ಕೇವಲ ನಾರು ಅಷ್ಟೆ. ಅವರುಗಳು ಸದಾ ಸುಗಂಧ ಬೀರುತ್ತಿರುವ ಪುಷ್ಪ.

ಪೂಜ್ಯ ಕೇಶವಮೂರ್ತಿ ಘನಪಾಠಿಗಳ ವೇದಪಠಣದ ಧ್ವನಿ ಮುದ್ರಿಕೆ ನನ್ನ ಹತ್ತಿರ ಇದೆ. ಕೇಳಬಹುದು. ಸಾವಿತ್ರಮ್ಮನವರ ಬಳಿ ಆ ಧ್ವನಿಮುದ್ರಿಕೆ ಇದೆಯೋ ಇಲ್ಲವೋ ತಿಳಿಯದು. ಇನ್ನೊಂದು ಬಾರಿ ಅವರಲ್ಲಿ ಹೋದಾಗ ಕೇಳುತ್ತೇನೆ.

ನಿಮ್ಮನ್ನು ಸಂಧಿಸುವ ಚಪಲ ನನಗೂ ಬಹಳವಾಗಿದೆ. ನೀವೂ ನಿಮ್ಮ ಮಿತ್ರರೂ ಜಯನಗರದಲ್ಲಿಯೇ ಇರುವುದರಿಂದ ನಾನು ಆ ಕಡೆ ಬಂದಾಗ ಇಬ್ಬರನ್ನೂ ಭೇಟಿಮಾಡಬಹುದೇನೋ। ತಾವುಗಳು ಮೈಸೂರಿಗೆ ಬರುವ ಅವಕಾಶ ಇಲ್ಲವೇ? ಬಂದಾಗ ಅವಶ್ಯವಾಗಿ ಬರಬೇಕು. ನಾನು ಬೆಂಗಳೂರಿಗೆ ಬರುತ್ತಿರುತ್ತೇನೆ. ನನ್ನ ಹಿರೀಮಗಳು ಶೈಲಜೆ ವಾಣಿ ಸ್ಕೂಲಿನಲ್ಲಿ ಸಂಸ್ಕೃತಕ್ಕೆ Part time ಉಪಾಧ್ಯಾಯಿನಿಯಾಗಿದ್ದಾಳೆ. ಮುಂದಿನ ತಿಂಗಳು 14,15ಕ್ಕೆ ಬರುತ್ತಿದ್ದೇನೆ. ಆಗ Phone ನಲ್ಲಿ ಸಂಧಿಸಿ, ಪ್ರತ್ಯಕ್ಷ ಭೇಟಿಗೆ ಕಾರ್ಯಕ್ರಮ ನಿರ್ಧರಿಸೋಣ.

ತಾವು ಬರೆದಿರುವಂತೆ ಪುಸ್ತಕದ ಬೆಲೆ ದುಬಾರಿ ಎಂದು ನನಗೂ ಅನಿಸಿತು. ಇದರಲ್ಲೆಲ್ಲಾ ಅನನುಭವಿಯಾದ ನಾನು ಸಮುದಾಯ ಕೇಂದ್ರದವರು ಹೇಳಿದ್ದಕ್ಕೆ ಪ್ರತಿ ಹೇಳಲಿಲ್ಲ. ಆದರೆ ಈಗ ಅವರೇ ಅದರ ಬೆಲೆಯನ್ನು 20 ರೂ.ಗಳಿಗೆ ಇಳಿಸಿದ್ದಾರೆ. (50%, Reduction Sale !!)

ತಾವು ಬೇಗನೆ ಉತ್ತರ ಬರಲಿ ಎಂದು ಬರೆದಿದ್ದೀರಿ. ಈಗಾಗಲೇ ಹತ್ತಿರ ಹತ್ತಿರ 2ತಿಂಗಳುಗಳಾಗುತ್ತಿವೆ. ತಡವಾದದ್ದಕ್ಕೆ ಕ್ಷಮಿಸಬೇಕು, ಕಾರಣ ಏನಾದರೂ ಇರಲಿ.

ತಮ್ಮನ್ನು ಸಂಧಿಸುವ ಅವಕಾಶವನ್ನು ಇದಿರು ನೋಡುತ್ತಿರುವ

ನಿಮ್ಮವ

ಶ್ರೀಕಂಠಕುಮಾರಸ್ವಾಮೀ.

೫೧೫

ಔಪಾಸನ

ಕುಶಲಮ್ ಶ್ರೀ: ಮೈಸೂರು

29.11.2000

ಶ್ರೀಕಂಠ !

ನಿನ್ನ Inland Letter ಮತ್ತು Post Card ತಲಪಿದುವು. ಮಗುವನ್ನು ನೋಡಿ ನಮಗೂ ಬಹಳ ಸಂತೋಷವಾಯಿತು. ಸುಂದರವಾಗಿದೆ. ಹೆಣ್ಣಾಗಲಿ, ಗಂಡಾಗಲಿ ಸಂಸ್ಕಾರದ ಪ್ರಭಾವ ಅವುಗಳ ಮೇಲೆ ಇದ್ದೇ ಇರುತ್ತದೆ. ಪರಮ ಸಂಸ್ಕಾರವಂತನಾಗಿ ಬೆಳೆದು ಭಾರತದ ಸತ್ಪ್ರಜೆಯಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

1) ಔಪಾಸನದ ಕ್ರಮ ಸರಿಯಾಗಿದೆ. ಆದರೆ ಬೆಳಗ್ಗೆ, ಸಂಜೆ ಎರಡು ಹೊತ್ತೂ ಮೊದಲನೆಯ ಆಹುತಿಯನ್ನು ಮಧ್ಯದಲ್ಲಿಯೂ ಎರಡನೆಯ ಆಹುತಿಯನ್ನು (ಅಗ್ನಯೇ ಸ್ವಿಷ್ಟಕೃತೇ) ಕೊನೆಯಲ್ಲಿಯೂ ಕೊಡಬೇಕು. ಮಧ್ಯದಲ್ಲಿ ಕೊಟ್ಟ ಆಹುತಿಗೂ, ಕೊನೆಯಲ್ಲಿ ಕೊಟ್ಟ ಆಹುತಿಗೂ ಸಂಪರ್ಕ ಬರದಂತೆ ಮಾಡಬೇಕು. ಬೆಳಗ್ಗೆ:

ಪರಮೇಶ್ವರ ಪ್ರೀತ್ಯರ್ಥಂ ಪ್ರಾತಃ ಔಪಾಸನಹೋಮಂ ಹೋಷ್ಯಾಮಿ.

2) ಸಾಯಂಕಾಲ : – ಪರಮೇಶ್ವರಪ್ರೀತ್ಯರ್ಥಂ ಸಾಯಮ್ ಔಪಾಸನ ಹೋಮಂ ಹೋಷ್ಯಾಮಿ

ಎಂದರೆ ಒಂದು ದೇವತೆಯನ್ನು ಕುರಿತು ಮಾಡುವ (ಉಪ = ಸಮೀಪೇ. ಆಸನಂ=ಸ್ಥಾನಂ) ಉಪಾಸನೆಯೆಂದರೆ ಸಮೀಪದಲ್ಲಿ ಕುಳಿತು ಧ್ಯಾನ ಮಾಡುವುದೆಂದರ್ಥ. ಋಷಿಗಳ ಕಾಲದವರಿಗೆ ಅಗ್ನಿ, ಸೂರ್ಯರೇ ಪ್ರತ್ಯಕ್ಷ ದೇವತೆಗಳಾಗಿದ್ದರು. ಅವರು ಹಾಗೆಯೇ ಇದ್ದಾರೆ. ಆದರೆ ನಮ್ಮ perceptions ಬದಲಾಗಿವೆ. ಆ ಪ್ರತ್ಯಕ್ಷ ದೇವತೆಯ ಉಪಾಸನೆ ಮಾಡುವುದು, ಸತ್ವಗುಣಾಭಿವೃದ್ಧಿಗೆ ಒಂದು ಮಾರ್ಗ (ನಾವು ಇವತ್ತು ಪೂಜೆ ಮಾಡುವಂತೆ !). ಸೂರ್ಯನ ಆರಾಧನೆ ಇದ್ದೇ ಇತ್ತು. ಅದೇ ಸಂಧ್ಯಾವಂದನೆ. ಹಾಗೆಯೇ ಅಗ್ನ್ಯಾರಾಧನೆಯನ್ನೂ ಮಾಡಬೇಕೆಂದು ವಿವಾಹಾಗ್ನಿಯನ್ನು ಆಜೀವಪರ್ಯಂತವಾಗಿ ಸಂರಕ್ಷಿಸಿಕೊಂಡು ನಿತ್ಯವೂ ಬೆಳಗ್ಗೆ ಸಾಯಂಕಾಲ ಅದಕ್ಕೆ ಆಹಾರ ಕೊಟ್ಟು ನಮಸ್ಕರಿಸುವುದನ್ನೂ ಇಟ್ಟುಕೊಂಡರು. ಅಗ್ನಿಗೆ ಆಹಾರ ಕೊಡುವುದು ಒಂದು. ಅದನ್ನು ಆರಿಹೋಗದ ಹಾಗೆ ಕಾಪಾಡುವುದು ಎರಡನೆಯದು. ಇದೇ ಅಗ್ನಿ ಪರಿಚರ್ಯೆ. ಮನೆಯಲ್ಲಿ ಅಗ್ನಿಭಗವಾನನು ಸದಾ ಜೀವಂತವಾಗಿರುವಾಗ ನಮಗೆ ದೇವತಾ ಸಾನ್ನಿಧ್ಯವು ಸದಾ ಇರುವಂತೆ ಭಾಸವಾಗುತ್ತದೆ. ನಾವು ಮಾಡುವುದಕ್ಕೆಲ್ಲಾ ಅವನು ಸಾಕ್ಷೀಭೂತನಾಗಿದ್ದಾನೆ ಎಂಬ ಭಾವನೆ ನಮ್ಮನ್ನು ಸದಾ ಜಾಗೃತಗೊಳಿಸುತ್ತಿರುತ್ತದೆ. ಡಿ.ವಿ.ಜಿ.ಯವರು ಅದನ್ನು ಈಶ್ವರ ಸಮಕ್ಷತಾಭ್ಯಾಸ (Practising the presence of God) ಎನ್ನುತ್ತಾರೆ. ನಮ್ಮ ಸತ್ವಗುಣಾಭಿವೃದ್ಧಿಗೆ ಇದು ಅತ್ಯಂತ ಅವಶ್ಯಕವಾದದ್ದು. ಅಷ್ಟೇ ಪ್ರಯೋಜನ.

ನಾವು ನಾಡಿದ್ದು ಹೊರಡುತ್ತಿದ್ದೇವೆ. ಇಲ್ಲಿ ಆರೋಗ್ಯ. ಚಿ||ಗಳಿಗೆ ಆಶೀರ್ವಾದಗಳು.

ಇತಿ ನಿಮ್ಮವ
ಕುಮಾರಸ್ವಾಮೀ

೫೧೬

ಹೋಮ ವಿಚಾರ

ಇನ್ನೊಬ್ಬರ ಜತೆ ಸೇರಿದರೇ ಪುಣ್ಯವಲ್ಲ ; ಬ್ರಹ್ಮತ್ವ ; ಪತ್ನಿಗೂ ಫಲವಿದೆ ; ಅವಭೃಥ ಸ್ನಾನ ; ದರ್ಭೆ ಪುನಃ ಬಳಕೆಯಾಗಬಹುದು

कुशलम्　　　　श्री:　　　　ಮೈಸೂರು
30.1.2001

ಶ್ರೀಕಂಠ !

ನಿನ್ನಿಂದ ಪತ್ರ ಬಂದು ಬಹಳ ದಿನಗಳಾಯಿತೆಂದು ಯೋಚಿಸುತ್ತಿದ್ದೆ. ಆಗ ಬಂತು. ಆದರೆ ನಿನಗೆ ನಾನು ಹೇಳಿದ ತಾರೀಖಿಗೆ ತಲಪುವಂತೆ ಬರೆಯಲಾಗಲಿಲ್ಲ. ಏಕೆಂದರೆ ನಿನ್ನ ಕಾಗದ ನನಗೆ ತಲಪಿದ್ದೇ 25ನೇ ತಾರೀಖು ಮಧ್ಯಾಹ್ನ. ತಕ್ಷಣ ಬರೆದು ಹಾಕಿದ್ದರೂ 27 ನೇ ತಾರೀಖು (after the event) ತಲಪುತ್ತಿತ್ತು. ಪ್ರಯೋಜನವಿಲ್ಲವೆಂದು ತಿಳಿದು ಸುಮ್ಮನಾದೆ. ಆ ಪ್ರಶ್ನೆಗಳಿಗೆ ಉತ್ತರವಂತೂ ಬರೆಯುತ್ತಿದ್ದೇನೆ – for future guidance.

1) ದಂಪತಿಗಳು ಪೂಜೆಗಾಗಲಿ, ಹೋಮಕ್ಕಾಗಲಿ ಕುಳಿತಾಗ ಇಬ್ಬರೂ ಧಾರಾಳವಾಗಿ ಮಾಡಬಹುದು. ಆದರೆ ಸಾಮಾನ್ಯವಾಗಿ ಮನೆಯ ಯಜಮಾನಿತಿಗೆ ಬೇರೆ ಜವಾಬ್ದಾರಿಗಳು ಹೆಚ್ಚು ಇರುವುದರಿಂದ, ಮನೋವಿಕ್ಷಿಪ್ತತೆಗೆ ಅವಕಾಶ ಉಂಟೆಂದು ಭಾವಿಸಿ ಅವರು ಹೋಮಕಾರ್ಯ ಮಾಡುವುದು ಬೇಡ ಎಂದಿಟ್ಟುಕೊಂಡಿದ್ದಾರೆ. ಅವರು ನೆಮ್ಮದಿಯಿಂದ ಹೋಮ ಕಾರ್ಯದಲ್ಲಿ ಪೂರ್ತಿ ಭಾಗವಹಿಸುವ ಅವಕಾಶವಿದ್ದರೆ, ಧಾರಾಳವಾಗಿ ಹೋಮ ಮಾಡಬಹುದು.

2) ಯಾರೋ ಏರ್ಪಾಡು ಮಾಡಿಕೊಂಡು ಮಾಡುವಾಗ, ತಾವೂ ಕುಳಿತು ಹೋಮ ಮಾಡಿಬಿಟ್ಟರೆ ಪುಣ್ಯಪ್ರಾಪ್ತಿಯಾಗುತ್ತದೆ ಎಂಬ ಭ್ರಾಂತಿಗೆ ಔಷಧವಿಲ್ಲ. ಇಂಥಾ ಕಾರ್ಯಗಳಲ್ಲಿ, ಹೋಮಾದಿಗಳನ್ನು ಮಾಡುವುದರ ಜೊತೆಗೆ, ಅದಕ್ಕೆ ಬೇಕಾಗುವ ಸಿದ್ಧತೆಗಳು, ದ್ರವ್ಯತ್ಯಾಗ, ಅನ್ನದಾನಾದಿಗಳು ಎಲ್ಲವೂ ನಡೆಯುತ್ತವೆ. ಅವುಗಳನ್ನೂ ಪ್ರತಿಯೊಬ್ಬರೂ ಮಾಡಬೇಕು. ತಮಗೆ ಮಾಡಲಿಕ್ಕಾಗದಿದ್ದರೆ, ಮಾಡುತ್ತಿರುವವರಿಗೆ ಎಷ್ಟು ಸಹಾಯ ಸಾಧ್ಯವೋ ಅಷ್ಟೂ ಮಾಡುವುದು, ಹೋಮ ಮಾಡುವುದಕ್ಕಿಂತ ಹೆಚ್ಚು ಶ್ರೇಯಸ್ಕರವೆಂದು ನನ್ನ ಅಭಿಪ್ರಾಯ.

3) ಬ್ರಹ್ಮತ್ವವೆಂಬುದು ಎಲ್ಲಾ ಹೋಮಕ್ಕೂ ಅಗತ್ಯ. ಮನೆಯ ಹೋಮದಲ್ಲಿ ವಿಶೇಷವೇನೂ ಇಲ್ಲ.

4) ಪತ್ನಿಯು ಯಜಮಾನನಿಗೆ ಆಜ್ಯ ತುಂಬಿಕೊಟ್ಟು ಸಹಾಯ ಮಾಡಿದರೆ ಅವಳು ಹೋಮ ಮಾಡಿದ ಹಾಗಾಯಿತು. ಹೋಮ ಎನ್ನುವ ಕ್ರಿಯೆ, ಮಂತ್ರಾರ್ಥದಿಂದ ಮನಸ್ಸಿನಲ್ಲಿ ಉಂಟಾದ ಪಶ್ಚಾತ್ತಾಪದ ಚಿಹ್ನೆಯೇ ಹೊರತು, ಆಜ್ಯವನ್ನು ಹೋಮ ಮಾಡುವುದರಿಂದಲೇ ಯಾವ ಫಲವೂ ಇಲ್ಲ. ಮಂತ್ರ ತಾತ್ಪರ್ಯವನ್ನು ಮನಸ್ಸಿನಲ್ಲಿ ತೆಗೆದುಕೊಂಡು ಹೋಮಕಾರ್ಯಕ್ಕೆ assist ಮಾಡುವುದೂ ಹೋಮಕ್ರಿಯೆ ಮಾಡಿದಂತೆಯೇ. ತನಗೂ ತನ್ಮೂಲಕ ಗಂಡನಿಗೂ ಮನಸ್ಸು ವಿಕ್ಷಿಪ್ತವಾಗದಂತೆ ನೋಡಿಕೊಳ್ಳುವುದು ಹೋಮಕ್ಕಿಂತ ಉತ್ತಮವಾದ ಕಾರ್ಯ.

5) ಎಲ್ಲಾ ಯಜ್ಞಗಳಲ್ಲಿಯೂ 2-3 ದಿನ ಯಜಮಾನನು ದೀಕ್ಷೆಯಲ್ಲಿರುತ್ತಾನೆ. ಆ ಮೂರು ಅಥವಾ ಐದು ದಿನಗಳು ಅವನಿಗೆ ಸ್ನಾನಕ್ಕೆ ಅವಕಾಶವಿಲ್ಲ. ಆದ್ದರಿಂದ ಯಜ್ಞವೆಲ್ಲಾ ಮುಗಿದ ಮೇಲೆ, ದೀಕ್ಷಾವ್ರತ ಮುಗಿಯಿತು ಎಂದು ತೋರಿಸಲು, ಕೊನೆಯಲ್ಲಿ ಅವಭೃಥಸ್ನಾನವನ್ನು ವಿಧಿಸಿದ್ದಾರೆ. ಸ್ವಲ್ಪ ಲೌಕಿಕವಾಗಿ ಹೇಳುವುದಾದರೆ, ಗಂಟೆಗಟ್ಟಲೆಗಳು ಕೂತು ಹೋಮ ಮಾಡಿ ಸಾಕಾಗಿರುತ್ತದೆ. ಸ್ನಾನ ಮಾಡಿದರೆ fresh ಆಗಿರುತ್ತದೆ. ಆದ್ದರಿಂದ ಸ್ನಾನ ಎಂದು ಹೇಳಿದರು.

6) ಹೋಮಾದಿಗಳಿಗೆ ಉಪಯೋಗಿಸಿದ ದರ್ಭೆ ಚೆನ್ನಾಗಿದ್ದರೆ ಪುನಃ ಧಾರಾಳವಾಗಿ ಉಪಯೋಗಿಸಬಹುದು.

ಶ್ರೀಕಂಠ ! ನಾನು ಮುಂದಿನ ತಿಂಗಳು 27, 28ಕ್ಕೆ ಬರುತ್ತಿದ್ದೇನೆ. ದತ್ತಾತ್ರಿ ತಮ್ಮ, ಗುಂಡನ ಮನೆಯಲ್ಲಿ ರುದ್ರಹೋಮ, ರಾಮಪಟ್ಟಾಭಿಷೇಕಗಳನ್ನು ಇಟ್ಟುಕೊಂಡಿದ್ದಾನೆ. ಸಾಯಂಕಾಲ ಪುರಸತ್ತಿರುತ್ತೆ. ನಿಮಗೆ ಇಷ್ಟವಾದರೆ ಮಾತನಾಡಬಹುದು. 26 ಬೆಳಗ್ಗೆಯೇ ಬರುತ್ತೇನೆ. ಆದ್ದರಿಂದ 26, 27, 28 ಇಟ್ಟುಕೊಳ್ಳ ಬಹುದು. ಗುಂಡ, ನಾನು ಇರಲು ಅವನ ಮನೆಯ ಹತ್ತಿರವೇ ಏರ್ಪಡಿಸುತ್ತೇನೆಂದು ಹೇಳಿದ್ದಾನೆ. ಇಲ್ಲದಿದ್ದರೆ ಮಂಜುನಾಥನ ಮನೆ ಇದ್ದೇ ಇದೆ. ಯಾವುದಕ್ಕೂ ಕಾಗದ ಬರಿ.

ನಿನ್ನ ಸೊಸೆ, ಮೊಮ್ಮಗನನ್ನೂ ಕರೆದುಕೊಂಡು ಎಳ್ಳು ಬೀರಲು ಬಂದಿದ್ದಳು. ಮಗು ತುಂಬಾ ಚೆನ್ನಾಗಿದೆ. ಸಂತೋಷವಾಯಿತು. ರವಿಗೂ, ವೇದಳಿಗೂ ನನ್ನ ಅನಂತ ಆಶೀರ್ವಾದಗಳು. ವೆಂಕಟೇಶ್ವರನಿಗೂ ತಿಳಿಸು.

ಇತಿ ನಿಮ್ಮವ

ಕುಮಾರಸ್ವಾಮೀ

೫೧೭

ಹೋಮ-ಮಂತ್ರವಿಚಾರ

ಪತ್ನಿಗೇ ಮಂತ್ರ ಬಂದರೆ, ಮೊದಲು ಪೂಜೆ, ಹೋಮ ಆದಮೇಲೆ, ವಸೋರ್ಧಾರೆ, ಆರತಿ, ವಿವಿಧ ಮಂತ್ರ ವಿನಿಯೋಗ ; ಮಂತ್ರ : ನ್ಯಾಸ, ರುದ್ರದಿಂದ ನ್ಯಾಸ, ಆಶೀರ್ವಾದ ಮಂತ್ರ, ಪ್ರಧಾನಹೋಮಮಂತ್ರ, ಅಷ್ಟಾವಧಾನ, ತ್ರಿಸುಪರ್ಣ, ವಿವಿಧ ದೇವತೆಗಳಿಗೆ, ದಹರವಿದ್ಯೆ

कुशलम्　　　श्री:　　　MYSORE

26.3.2001

ಶ್ರೀಕಂಠ !

ನಿಮಗೆಲ್ಲರಿಗೂ ವೃಷನಾಮ ಸಂವತ್ಸರದ ಶುಭಾಶಯಗಳು. ನಮ್ಮ ಹಾರ್ದಿಕ ಆಶೀರ್ವಾದಗಳು.

ನಿನ್ನ Inland Letter, Post Card ಎರಡೂ ತಲಪಿದುವು. Inland-Letterನಲ್ಲಿ 'ಪುರಸತ್ತಾದಾಗ' ಎಂದು ಬರೆದಿದ್ದರಿಂದ ಸುಮ್ಮನಿದ್ದೆ. ಆದರೆ Cardನಲ್ಲಿ ಜವಾಬು ಕೂಡಲೇ ಬೇಕೆಂದು ಬರೆದಿರುವುದರಿಂದ ಬರೆಯಲು ಕೂತೆ. ಮೊದಲು ಕಾರ್ಡಿನ ಪ್ರಶ್ನೆಗಳು.

1) ಪತ್ನಿಗೆ ಮಂತ್ರ ಬರುವಾಗ ಪತಿಯು ಪಕ್ಕದಲ್ಲಿ ಕುಳಿತು ಅವಳು ಮಂತ್ರ ಹೇಳಿಕೊಂಡು ಮಾಡುವುದನ್ನು ತಾನು enjoy ಮಾಡುವುದು ಶ್ರದ್ಧೆಯ ಅತಿಶಯ, ದೊಡ್ಡತನ ಎಂದು ನನಗೆ ಅನಿಸುತ್ತದೆ. Inferiority complex ಏನೂ ಬೇಡ. ಅವಳು ಎಷ್ಟಾದರೂ ಅರ್ಧಾಂಗಿ. ಆ ಹೆಸರು ಸಾರ್ಥಕವಾಗಲಿ. ಹಾಗೆ ಮನಸ್ಸು ಒಪ್ಪದಿದ್ದರೆ, ಅವಳ ಕೈಯಲ್ಲಿ ಸ್ರುಕ್ಕಿಗೆ ಹಾಕಿಸಿಕೊಂಡು, ಅವಳೇ ಮಂತ್ರ ಹೇಳಿ ತಾನು ಹೋಮ ಮಾಡಬಹುದು. ಅದು ಅವಳ ದೊಡ್ಡತನವಾಗುತ್ತದೆಂಬುದನ್ನು ಮರೆಯಬಾರದು. ಇಬ್ಬರೂ ಹೋಮ ಮಾಡುವುದರಲ್ಲಿ ಅರ್ಥವಿಲ್ಲ. ಕೇವಲ ಹೋಮಕ್ರಿಯೆ ಯಿಂದ ಏನೂ ಸಿಗಲು ಸಾಧ್ಯವಿಲ್ಲ. ಅದೇ ಆನಂದವನ್ನು ಪತ್ನಿ ಮಾಡಿದರೂ ಅನುಭವಿಸಬಹುದು. ಅನುಭವಿಸಲು ಬರಬೇಕು.

2) ಹೋಮಕ್ಕೆ ಮುಂಚಿನ ಪೂಜೆಯಲ್ಲಿ ಪೂಜೆ ಪೂರ್ತಿ ಮಾಡಬೇಕು. ಹೋಮವಾದ ಮೇಲೆ ಇನ್ನೊಂದು ಬಾರಿ ಮಂಗಳಾರತಿ (ಅಗ್ನಿಗೂ ಸೇರಿ).

3) ಹೋಮವೆಲ್ಲಾ ಆದಮೇಲೆ 'ಸಪ್ತ ತೇ ಅಗ್ನೇ' ಹೇಳಿ ಪೂರ್ಣಾಹುತಿ ಮಾಡುವ ಮುಂಚೆ ಕಲಶಕ್ಕೆ ಪೂಜೆ ಮಾಡಿ (ನೈವೇದ್ಯ, ಮಂಗಳಾರತಿ) ಆಮೇಲೆ ಪೂರ್ಣಾಹುತಿ, ಆಮೇಲೆ ಉಪಸ್ಥಾನ. ಅಗ್ನಿಗೆ ಬೇರೆ ನೈವೇದ್ಯವಿಲ್ಲ. ಅವನಿಗೆ ಆಜ್ಯಹೋಮ ಮಾಡುವುದೇ ನೈವೇದ್ಯ.

4) ರುದ್ರಮಂತ್ರಗಳಿಂದ ಹೋಮ ಮುಗಿದ ತಕ್ಷಣ ವಸೋರ್ಧಾರೆ. "ಹವ್ಯವಾಹಮಭಿಮಾತಿಷಾಹಮ್..." ಎಂಬ ಅಗ್ನಿಸ್ವಿಷ್ಟಕೃದ್ಧೋಮಕ್ಕೆ ಮುಂಚೆಯೇ ; ಅಂದರೆ ಜಯಾದಿಗಿಂತಲೂ ಮುಂಚೆ ; ವಸೋರ್ಧಾರೆ ಆದಮೇಲೆ ಜಯಾದಿ.

5) 'ಆರತಿ' ಮಾಡುವುದು ಕೇವಲ ಲೌಕಿಕ. ಉಪಸ್ಥಾನ, ನಮಸ್ಕಾರ ಎಲ್ಲಾ ಮಾಡಿ, 'ಯಸ್ಯ ಸ್ಮೃತ್ಯಾ' ಆದಮೇಲೆ ಮಾಡಿದರಾಯಿತು.

6) ವ್ಯಾಹೃತಿಹೋಮಮಂತ್ರಗಳು, ಪಾಹಿ ತ್ರಯೋದಶ ಮಂತ್ರಗಳು, ಪ್ರಾಯಶ್ಚಿತ್ತಾರ್ಥ. ವಿರಜಾಹೋಮ ಮಂತ್ರಗಳು ಸನ್ಯಾಸಾಶ್ರಮ ಸ್ವೀಕಾರಕ್ಕೆ ಮುಂಚೆ ಮಾಡುವುದು. ವೈಶ್ವದೇವ

ಮಂತ್ರಗಳು ನಿತ್ಯ ವೈಶ್ವದೇವದಲ್ಲಿ ವಿನಿಯೋಗ. 'ತ್ವಮಗ್ನೇ ದ್ಯುಭಿಃ' ...ಎನ್ನುವುದು ಅಗ್ನಿಪ್ರಾರ್ಥನೆ. ಯಾವ ಹೋಮದಲ್ಲಿ ಬೇಕಾದರೂ ಹೇಳಬಹುದು.

Inland Letter

1) ನ್ಯಾಸವೆನ್ನುವುದೇ ಅವೈದಿಕ. ಮಾಡಬೇಕಾದ ಅಗತ್ಯವಿಲ್ಲ.

2) ರುದ್ರದಿಂದ ನ್ಯಾಸ ಎನ್ನುವುದೇ ತಪ್ಪು.

3) ಹಾಗೆ ವಿಹಿತವಾಗಿ ಇಂಥವರಿಗೆ ಆಶೀರ್ವಾದ ಮಂತ್ರ ಎಂಬುದು specific ಆಗಿ ಎಲ್ಲಿಯೂ ಇಲ್ಲ. ಯಜ್ಞದಲ್ಲಿ ಋತ್ವಿಜರು ಯಜಮಾನನ ಪರವಾಗಿ ಪ್ರಾರ್ಥನೆ ಮಾಡುತ್ತಾರೆ. ಅದನ್ನೇ ಆಶೀರ್ವಾದವಾಗಿ ಉಪಯೋಗಿಸುತ್ತಾರೆ. ಅಥವಾ ಯಜಮಾನನೇ ಮಾಡುವ ಪ್ರಾರ್ಥನೆ. ಹೋತೃವು ಮಾಡುವ ಸ್ತೋತ್ರಗಳು.

4) 'ಇಮಾಂ ತ್ವಮಿಂದ್ರ...ಕೃಧಿ' ಇದು ವಿವಾಹದಲ್ಲಿ ವರನು ಪ್ರಧಾನ ಹೋಮದಲ್ಲಿ ಪ್ರಾರ್ಥನೆ ಮಾಡಿ ಹೋಮ ಮಾಡುವ ಮಂತ್ರ. 'ಈ ನನ್ನ ವಧುವು ಇಂದ್ರನ ಅನುಗ್ರಹದಿಂದ ಅನೇಕ ಮಕ್ಕಳುಗಳನ್ನು ಪಡೆದು ಸುಖವಾಗಿರಲಿ' ಎಂದು ಪ್ರಾರ್ಥನೆ. ಅದನ್ನೇ ನಾವು ಸುಮಂಗಲಿಗೆ ಆಶೀರ್ವಾದವಾಗಿ ಹೇಳುತ್ತೇವೆ. ಉಪನಯನವಾದ ಹುಡುಗ ಮಾಡುವ ಪ್ರಾರ್ಥನೆ "ಅಗ್ನೇ ತೇಜಸ್ವಿನ್...ಮಯಿ ಸೂರ್ಯೋ ಭ್ರಾಜೋ ದಧಾತು." ಇದನ್ನೇ ಆಶೀರ್ವಾದ ರೂಪದಲ್ಲಿ ಹೇಳುತ್ತೇವೆ. ಯಾವ ದೇವತಾ ಪ್ರಾರ್ಥನೆಯೂ ಆಶೀರ್ವಾದ ರೂಪ ಎಂದು ತಿಳಿದುಕೊಂಡು ಹೇಳುವುದು, ಅಷ್ಟೆ. Specifics ಇಲ್ಲ.

5) ಅಷ್ಟಾವಧಾನದಲ್ಲಿ ಅವನ್ನೆಲ್ಲಾ ಹೇಳುವ ಕಾರಣ ಅವು ಆಯಾಯಾ ವೇದದ ಆರಂಭ ಮಂತ್ರಗಳು. ಇನ್ನೇನೂ ವೈಶಿಷ್ಟ್ಯವಿಲ್ಲ.

6) ಭೋಜನ ಸಮಯದಲ್ಲಿ ತ್ರಿಸುಪರ್ಣ ಹೇಳುವುದು ಒಂದು 'misconcept' ಎಂದೇ ನನ್ನ ಭಾವನೆ. ಅದರಲ್ಲಿ ಬರುವ ಮಂತ್ರಗಳು ಬ್ರಹ್ಮಜ್ಞಾನವನ್ನು ಪಡೆಯಲು ಶ್ರಮಿಸುತ್ತಿರುವ ಮನುಷ್ಯನು ಪ್ರತಿಬಂಧಕ ನಿವೃತ್ತ್ಯರ್ಥವಾಗಿ ಮಾಡುವ ಪ್ರಾರ್ಥನೆಗಳು. ಬ್ರಹ್ಮಜ್ಞಾನಕ್ಕೋಸ್ಕರ ಮಾಡುವುದಾದ್ದರಿಂದ ಅವುಗಳಿಗೆ ವಿಪರೀತ ಪ್ರಾಶಸ್ತ್ಯ, ವೇದಾಂತಕ್ಕೆ ಎಲ್ಲಿಯೂ ಪ್ರಾಶಸ್ತ್ಯವೇ. ಆ ಪ್ರಾಶಸ್ತ್ಯವನ್ನು ತೋರಿಸಲು ಅದರಲ್ಲಿ ಒಂದು ಬ್ರಾಹ್ಮಣವನ್ನು ಹೇಳುತ್ತಾರೆ. 'ಯೇ ಬ್ರಾಹ್ಮಣಾಃ...ಆ ಸಹಸ್ರಾತ್ ಪಂಕ್ತಿಂ ಪುನಂತಿ' ಎಂದು (ಅಂದರೆ ತ್ರಿಸುಪರ್ಣ ಹೇಳುವ ಬ್ರಾಹ್ಮಣರು, ತಮ್ಮ ಪಂಕ್ತಿಯಲ್ಲಿರುವ-ಅಂದರೆ ತಮ್ಮ ಸಹವಾಸದಲ್ಲಿರುವ-ಸಹಸ್ರಾರು ಜನರನ್ನೂ ಪವಿತ್ರಗೊಳಿಸುತ್ತಾರೆ). ಆದ್ದರಿಂದ ಅದನ್ನು ಊಟ ಮಾಡುವಾಗ ಹೇಳುತ್ತಾರೆ. ಆದರೆ ಆ ಮಂತ್ರಗಳಿಗೂ ಊಟಕ್ಕೂ ಯಾವ ಯಾವ ಸಂಬಂಧವೂ ಇಲ್ಲ. ಪ್ರತ್ಯುತ ಆ ಮಂತ್ರಗಳನ್ನು ಹೇಳಬೇಕಾದರೆ ಊಟ ಬಿಟ್ಟು ಏಳಬೇಕು!!!

7) ಮೇಧಾಸೂಕ್ತ, ಸರಸ್ವತೀಪರವಾದದ್ದು; ಅಘಮರ್ಷಣ ವರುಣಪರ; ದೂರ್ವಾಸೂಕ್ತ, ವನಸ್ಪತ್ಯಭಿಮಾನಿ ದೇವತೆ. ಮೃತ್ತಿಕಾಸೂಕ್ತ, ಭೂಮಿ ದೇವತೆಯ ಪ್ರಾರ್ಥನೆ. ಅವುಗಳನ್ನು ಆಯಾಯಾ ಸಂದರ್ಭದಲ್ಲಿ ಹೇಳಬಹುದು.

8) ದಹರವಿದ್ಯೆ ಎನ್ನುವುದು ಬ್ರಹ್ಮವಿದ್ಯೆ. ಉಪನಿಷತ್ತುಗಳೆಲ್ಲಾ ದಹರವಿದ್ಯೆಯೇ.

ಪಾಪುವು ಈಗ Cornell ಹತ್ತಿರ Ithaca ಎಂಬಲ್ಲಿ ಮನೆ ಮಾಡಿಕೊಂಡಿದ್ದಾನೆ. ಕನಕಳು, Washington D.C. ಯಲ್ಲಿ ಕೆಲಸ ಮಾಡುತ್ತಾಳೆ. ವಾರಕ್ಕೆರಡು ದಿನಗಳು, ಇವನು ಅಲ್ಲಿಗೆ ಹೋಗುತ್ತಾನೆ, ಅಥವಾ ಅವಳೇ ಇಲ್ಲಿಗೆ ಬರುತ್ತಾಳೆ. ಈ Juneನಲ್ಲಿ IIT Madras ಗೆ apply ಮಾಡುತ್ತಿದ್ದಾನೆ. ಸಿಗುತ್ತದೆಂದು ಕೊಂಡಿದ್ದೇವೆ.

ಇಲ್ಲಿಯ ಒಂದು ದೇವಸ್ಥಾನದಲ್ಲಿ 'ಶ್ರೀಮದ್ರಾಮಾಯಣ'ದ ಮೇಲೆ 5 ದಿನಗಳು ಉಪನ್ಯಾಸ ಏರ್ಪಡಿಸಿದ್ದಾರೆ. ಅದರ ಪ್ರಕಟಣೆ ಚೆನ್ನಾಗಿತ್ತು. ಇದರ ಜತೆಯಲ್ಲಿ ಕಳಿಸಿದ್ದೇನೆ. ಚಿ॥ಗಳಿಗೆಲ್ಲಾ ಆಶಿಷಃ. ನಿನ್ನ ಮನಸ್ಸಿಗೆ ತೊಂದರೆ ಮಾಡುತ್ತಿರುವ ಸಮಸ್ಯೆ ಏನು?

ಇತಿ ನಿಮ್ಮವ

ಕುಮಾರಸ್ವಾಮೀ

೫೧೮

ಕಲಶ, ಹೋಮ

ಎರಡು ಹೋಮ, ಪುರುಷಸೂಕ್ತ ಮತ್ತು ಉತ್ತರ ನಾರಾಯಣ, ಮಹಾವಿಷ್ಣು ಆವಾಹನೆ, 'ತಚ್ಛಂಯೋಃ', ಮಂತ್ರಘಟಕ

ಕುಶಲಮ್ ಶ್ರೀ: ಮೈಸೂರು

23.5.2001

ಶ್ರೀಕಂಠ !

ನಿನ್ನ ಕಾಗದ ತಲಪಿ ಬಹಳ ದಿನಗಳಾದುವು. ನೀನು ಆತುರವೇನೂ ಸೂಚಿಸದಿದ್ದರಿಂದ, ತಡಮಾಡಿದೆ. ನೀನು ನಿನ್ನೆ Phone ಮಾಡಿದ ಮೇಲೆ, ಬರೆಯಬೇಕೆಂದು ಕುಳಿತಿದ್ದೇನೆ.

1) ಒಂದೇ ಕಲಶದಲ್ಲಿ ಮೊದಲು ವರುಣನನ್ನು ಆವಾಹನೆ

ಮಾಡಿ, ಅದರಲ್ಲಿಯೇ ಪುರುಷನಾದ ನಾರಾಯಣನನ್ನೂ, ಶ್ರೀ ಅಂದರೆ ಲಕ್ಷ್ಮಿಯನ್ನೂ ಆವಾಹನೆ ಮಾಡಬೇಕು. ಆ ಕಲಶಕ್ಕೇ ಪುರುಷಸೂಕ್ತ ಮಂತ್ರಗಳಿಂದಲೂ ಶ್ರೀಸೂಕ್ತಮಂತ್ರಗಳಿಂದಲೂ ಷೋಡಶೋಪಚಾರ ಪೂಜೆ.

2) ಎರಡು ಹೋಮಗಳನ್ನೂ ಒಂದಾದ ಮೇಲೆ ಒಂದು ಧಾರಾಳವಾಗಿ ಮಾಡಬಹುದು.

3) ಪುರುಷಸೂಕ್ತವೆಂದರೆ, 'ಯತ್ರ ಪೂರ್ವೇ....ದೇವಾಃ' ಅಲ್ಲಿಗೆ ಮುಗಿಯುತ್ತದೆ. ಮುಂದಿನ ಅನುವಾಕಕ್ಕೆ ಉತ್ತರನಾರಾಯಣವೆಂದು ಹೆಸರು. ಅದು ಪುರುಷಸೂಕ್ತವಲ್ಲ, ಆದರೆ ಅದರ continuation ಇದ್ದ ಹಾಗೇ ಇದೆ (ಅರ್ಥದೃಷ್ಟಿಯಿಂದ). ಸೇರಿಸಿ ಹೋಮ ಮಾಡಿದರೆ ಖಂಡಿತ ತಪ್ಪಿಲ್ಲ, ಅದರಲ್ಲಿಯೂ ನಾಲ್ಕು ನಾಲ್ಕು ವಾಕ್ಯಗಳಿಗೆ ಒಂದು ಮಂತ್ರ. ಕೊನೆಯಲ್ಲಿ 'ಹ್ರೀಶ್ಚ ತೇ...ಸರ್ವಂ ಮನಿಷಾಣ' ಎಂಬ ಏಳು ವಾಕ್ಯಗಳಿಗೆ ಒಂದು ಮಂತ್ರ.

4) ಕಲಶದಲ್ಲಿ ಮೊದಲೇ ಹೇಳಿದಂತೆ, ಪುರುಷ ಅಥವಾ ನಾರಾಯಣ, ಲಕ್ಷ್ಮೀ ಇಬ್ಬರನ್ನು ಆವಾಹನೆ ಮಾಡಿದರೆ ಸಾಕು. ಪುರುಷಸೂಕ್ತಕ್ಕೂ, ನಾರಾಯಣಸೂಕ್ತಕ್ಕೂ ಒಂದೇ ದೇವತೆ.

5) ಬೇರೆಬೇರೆಯಾಗಿ ಮಾಡಿದರೆ ಪುರುಷಸೂಕ್ತಕ್ಕೂ ಮಹಾವಿಷ್ಣುವನ್ನೇ ಆವಾಹನೆ ಮಾಡಿಕೊಳ್ಳಬೇಕು.

6) 'ತಚ್ಚಂ ಯೋಃ' ಈ ಮಂತ್ರವು ಶಾಂತಿಮಂತ್ರ, ಹೋಮಕ್ಕೆ ಬರುವುದಿಲ್ಲ. ಹೋಮಾರಂಭದಲ್ಲಿ ಇದನ್ನು ಹೇಳಿ ಪುರುಷ ಸೂಕ್ತದಿಂದ ಹೋಮ ಆರಂಭಿಸಬಹುದು. ಕೂಷ್ಮಾಂಡ ಹೋಮಕ್ಕೆ 'ನಮೋ ಬ್ರಹ್ಮಣೇ' ಹೇಳಿದಂತೆ.

7) ಅದರಲ್ಲಿ ಮೊದಲಲ್ಲಿ ಎರಡೆರಡು ವಾಕ್ಯಗಳಿಗೆ ಒಂದು ಮಂತ್ರ. 'ನಾರಾಯಣ ಪರೋ ಜ್ಯೋತಿಃ', ಇಂದ, 'ನಾರಾಯಣ ಪರೋ ಧ್ಯಾತಾ ಧ್ಯಾನಂ ನಾರಾಯಣಃ ಪರಃ' ಎಂಬ ಮೂರು ವಾಕ್ಯಗಳಿಗೆ ಒಂದು ಮಂತ್ರ. ಪುನಃ, ತಸ್ಯ ಮಧ್ಯೆ ಮಹಾನಗ್ನಿಃ, ಸೋऽಗ್ರಭುಕ್, ತಿರ್ಯಗೂರ್ಧ್ವಮ್, ಇವು ಮೂರು ವಾಕ್ಯಗಳಿಗೆ ಒಂದು ಮಂತ್ರ. ಬಾಕಿ ಎಲ್ಲಾ ಎರಡು ವಾಕ್ಯಗಳಿಗೆ ಒಂದು ಮಂತ್ರ.

ರಾಮಾಯಣ ಉಪನ್ಯಾಸ ಚೆನ್ನಾಗಿ ನಡೆಯಿತು-ಎಲ್ಲರೂ ತುಂಬಾ ಸಂತೋಷಪಟ್ಟರು. ಸಾಮಾನ್ಯವಾಗಿ ಈ ಜನಗಳ ಸಂತೋಷ ಹೇಗೆಂದರೆ, ತತ್ಕಾಲದಲ್ಲಿ ಸಂತೋಷ, ಸಂಭ್ರಮ; ಆಮೇಲೆ ಅದನ್ನು pursue ಮಾಡುವುದಿಲ್ಲ. ಕೆಲವರು Taperecord ಮಾಡಿಕೊಂಡು, ಈಗಲೂ ಕೇಳಿ ಕೇಳಿ ಸಂತೋಷಪಡುತ್ತಿದ್ದಾರೆ. ಆದರೆ ರಾಮಾಯಣ ಕೇಳಿದ್ದರಿಂದಲೇ ಪುಣ್ಯ ಎಂದು ನಾನು ಹೇಳದೆ ಇರುವುದು ಅನೇಕರಿಗೆ ನಿರಾಶೆ. ವಾಲ್ಮೀಕಿಯ ಭಾವುಕತೆಯ, ರೋಮಾಂಚನವನ್ನುಂಟು ಮಾಡುವ ಮಾತುಗಳು, ಸಂದರ್ಭಗಳನ್ನು, appreciate ಮಾಡಲು ಸಾಮಾನ್ಯರಿಗೆ ಸಾಧ್ಯವಿಲ್ಲ. ಅವರಿಗೆ ಕಥೆ ಕೇಳಿಬಿಟ್ಟರೆ ಏನೋ ಪುಣ್ಯಸಂಚಯವಾಯಿತು ಎಂದು ತಿಳಿಯುತ್ತಾರೆ. ಅದನ್ನು ನಾನು ಇಲ್ಲವೆಂದು ಹೇಳಿದರೆ ಅವರಿಗೆ ನಿರಾಶೆ, ಅಪನಂಬಿಕೆ. ಇಂಥಾ ಜನಗಳೇ 95% ಇದ್ದಾರೆ. ಏನು ಮಾಡಬೇಕೋ ತಿಳಿಯದು.

ಈಗ 6 ಜನ ಶಿಷ್ಯೆಯರು ಬರುತ್ತಿದ್ದಾರೆ. ಅವರಿಗೂ ಉಪನಿಷತ್ತು, ಪುರುಷಸೂಕ್ತ ಹೇಳುತ್ತಿದ್ದೇನೆ. ಅದರಲ್ಲಿಯೂ ಮಲ್ಲಾಡಿಹಳ್ಳಿ ಆಶ್ರಮದಲ್ಲಿ ಮತ್ತೂರಿನ High School Physical Instructor ವೆಂಕಟರಮಣ ಎನ್ನುವವರ ಮಗಳು ದೀಪಾ, ಒಂದು ಅಪೂರ್ವವಾದ ಹುಡುಗಿ. ಅವಳ ವೇದಗ್ರಹಣ ಸಾಮರ್ಥ್ಯ ಅನ್ಯಾದೃಶ. ಒಳ್ಳೆ ಪ್ರತಿಭೆ. ಅವಳಿಗೆ ಹೇಳಿಕೊಡುವುದೇ ಒಂದು ಆನಂದ. ನಾನು ಇದುವರೆಗೂ ಅಷ್ಟು ಸುಸಂಸ್ಕೃತಳಾದ ಶಿಷ್ಯಳನ್ನಾಗಲಿ, ಶಿಷ್ಯನನ್ನಾಗಲಿ ನೋಡಿಯೇ ಇಲ್ಲ ಎಂದರೂ ತಪ್ಪಾಗಲಾರದು. ಆದರೆ ಅವಳು ಮಲ್ಲಾಡಿಹಳ್ಳಿಯಲ್ಲಿದ್ದಾಳೆ. ಇಲ್ಲಿಗೆ 5-6 ದಿನ ಬಂದು ಹೇಳಿಸಿಕೊಂಡು ಹೋಗುತ್ತಾಳೆ.

ಚಿ॥ಗಳಿಗೆಲ್ಲಾ ಆಶೀರ್ವಾದಗಳು. ನಿನ್ನ ಮೊಮ್ಮಗ, ಸೊಸೆ ಆರೋಗ್ಯವೇ ? ಅವರಿಗೆ ನನ್ನ ವಿಶೇಷ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೫೧೯

ಅಭಿಪ್ರಾಯಭೇದ ಅನಿವಾರ್ಯ

ಕುಶಲಮ್ ಶ್ರೀ: ಮೈಸೂರು

31.5.2001

ದೀಪಾ !

ನೀನು ಊರು ಬಿಟ್ಟು ತಿಂಗಳಿಗಿಂತ ಹೆಚ್ಚಾಯಿತು. ಸಮಾಚಾರವೇ ಇಲ್ಲ. ಈಗ 8-10 ದಿನಗಳಿಂದ ನಿನ್ನ ಜ್ಞಾಪಕ ತುಂಬಾ ಬರುತ್ತಿದೆ... ಬೆಳಗ್ಗೆ 6 ಗಂಟೆಯಲ್ಲಿ Phone ಬಂದರೆ ನಿನ್ನದೇಯೋ ಏನೋ ಎಂದು ಆಸೆಯಿಂದ ಓಡಿಬರುತ್ತಿದ್ದೆ. ಆದರೆ ಯಾರೋ ಮದ್ರಾಸಿನಿಂದಲೋ ಬೆಂಗಳೂರಿನಿಂದಲೋ ಮಾಡಿರುತ್ತಿದ್ದರು. ಮಾಮನನ್ನು ಮರತೇಬಿಟ್ಯಾ ? ಮಾಮನನ್ನು ಮರೆತರೂ ಮಾಮಿಯನ್ನಾದರೂ ಜ್ಞಾಪಿಸಿಕೊಳ್ಳಬೇಕಲ್ಲವೇ ? ನಿನ್ನ ಚಟುವಟಿಕೆಗಳಲ್ಲಿ ನಮ್ಮನ್ನು ಸ್ಮರಿಸಿಕೊಳ್ಳಲು ಅವಕಾಶವೇ

ಇಲ್ಲವೇನೋ ? ಶೈಲುವು Phone ಮಾಡಿದಾಗಲೆಲ್ಲಾ ನಿನ್ನನ್ನೇ ಜ್ಞಾಪಿಸಿಕೊಳ್ಳುತ್ತಾಳೆ. ರಾಮಾಯಣದ Casetteನ್ನು ಈಗಾಗಲೇ 6-7 ಬಾರಿ ಕೇಳಿ ಮುದಗೊಂಡಿದ್ದಾಳೆ. ಇನ್ನೂ ಕೇಳುತ್ತಿದ್ದಾಳೆ. ಹಾಗೆ ಕೇಳಿದಾಗಲೆಲ್ಲಾ ನಿನ್ನ ಜ್ಞಾಪಕ ಬಂದು ನಿನಗೆ Thanks ಕೊಡುತ್ತಾಳೆ. ನೀನು ಯೋಚಿಸಿ ರಿಕಾರ್ಡ್ ಮಾಡದೆ ಹೋಗಿದ್ದಿದ್ದರೆ ಅವಳು ಕೇಳಿ ಅನುಭವಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಅವಳಿಗೆ ಅದು ಹೊಳೆದೇ ಇರಲಿಲ್ಲವಂತೆ !! ಇಲ್ಲದಿದ್ದರೆ ಬೆಂಗಳೂರಿನಿಂದ ಬರುವಾಗಲೇ ಅದಕ್ಕೆ ಸಿದ್ಧಳಾಗಿ ಬರುತ್ತಿದ್ದಳು ! ನೀನು ಅದನ್ನು ಮಾಡಿ ದೊಡ್ಡ ಉಪಕಾರ ಮಾಡಿದ್ದೀಯೆಂದು ಅವಳ ಭಾವನೆ. ಅದು ನಿಜವೂ ಅಹುದು.

ನಾಮಸ್ಮರಣೆ, ಮಂತ್ರಶಕ್ತಿ ಇವುಗಳ ವಿಚಾರಗಳಲ್ಲಿ ನನಗೂ ಸ್ವಾಮಿಗಳಿಗೂ ಭಿನ್ನಾಭಿಪ್ರಾಯವಿದೆ ಎಂಬುದು ನಿನಗೆ ಗೊತ್ತೇ ಇದೆ. ಆದರೆ ಆ ಭಿನ್ನಾಭಿಪ್ರಾಯವು ನೀನು ಅಥವಾ ಸ್ವಾಮಿಗಳು ನನ್ನಲ್ಲಿಟ್ಟಿರುವ ಅಭಿಮಾನಕ್ಕೆ ಅಡ್ಡಿಯಾಗಬಾರದು, ಅಡ್ಡಿಯಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಎಲ್ಲಾ ವಿಷಯಗಳಲ್ಲಿಯೂ ಏಕಾಭಿಪ್ರಾಯ ಇರುವುದು ದುಃಸಾಧ್ಯ. ಆ ರೀತಿ ಅಭಿಪ್ರಾಯ ಭೇದವಿರುವವರೊಡನೆ ವ್ಯವಹಾರ ಅಗತ್ಯವಿಲ್ಲವೆಂಬ ಭಾವನೆ ಇದ್ದರೆ ಅದಕ್ಕೆ ನಾನೇನೂ ಮಾಡಲಾರೆ.

...ದೀಪಾ ! ನನ್ನ ವಾದಗಳಿಂದ ನಿನ್ನನ್ನು confuse ಮಾಡಬೇಕು ಎಂದು ಬರೆಯುತ್ತಿಲ್ಲ. ತೋಚಿದ ಕೆಲವು ಅಭಿಪ್ರಾಯಗಳನ್ನು ಬರೆದಿದ್ದೇನೆ ಅಷ್ಟೆ. ಶೈಲುವಿನಂತೆ ನೀನೂ ನನಗೆ ಮಗಳು. ಸ್ವತಂತ್ರವಾದ ಅಭಿಪ್ರಾಯ ಉಳ್ಳವಳು. (ಇಲ್ಲದಿದ್ದರೂ ನೀನು ಹಾಗೆ ಆಗಬೇಕು). ಆದರೂ ಮಗಳತ್ವ ಎಲ್ಲೂ ಹೋಗುವುದಿಲ್ಲವಲ್ಲವೇ ! ಮಾಮನಿಗೆ ಎಲ್ಲರನ್ನೂ ಕಂಡರೆ ಮೋಹ ಎಂದು ಉಪಹಾಸ್ಯ ಮಾಡಬಹುದು. ಇರಲಿ. ಆ ತರಹ ಮೋಹ ಅಭಿಪ್ರೇತವಾದದ್ದು ಎಂತಲೇ ನನ್ನ ಅಭಿಪ್ರಾಯ. ಕಾಗದ ತಲಪಿದ ತಕ್ಷಣ ಉತ್ತರ ಬರಿ. ಸ್ವಾಮಿಗಳಿಗೆ ನನ್ನ ನಮಸ್ಕಾರಗಳನ್ನು ತಿಳಿಸು. ನನ್ನ ನೇರವಾದ ಮಾತುಗಳಿಗೆ ಕ್ಷಮಿಸಬೇಕೆಂದು ನನ್ನ ಪರವಾಗಿ ಪ್ರಾರ್ಥಿಸು. ನಿನಗೆ ಪಾಠ ಹೇಳುವ ಆತುರ ಹೆಚ್ಚಾಗುತ್ತಿದೆ.

ಇತಿ ನಿನ್ನ ಮಾಮ
ಕುಮಾರಸ್ವಾಮಿ

೫೨೦
ಶತಚಂಡೀ ; ಉಪಾಕರ್ಮ, ಜಪ

ವೇದೋಕ್ತ ಕರ್ಮದ ಮಹಿಮೆ, ಪ್ರತೀಕಗಳು, ಪರೇಹನಿ ತರ್ಪಣ

ಕುಶಲಮ್ ಶ್ರೀ: ಮೈಸೂರು
14.7.2001

ಶ್ರೀಕಂಠ !

ನಿನ್ನ ಕಾಗದ ತಲಪಿತು. ಬಹಳ ಸಂತೋಷ. 'ಶ್ರಾದ್ಧ' ಪುಸ್ತಕದ ಮೇಲೆ ಮೇ|ಬ್ರಂ| ನರಸಿಂಹಮೂರ್ತಿಗಳೂ, ಅನಂತಕೃಷ್ಣಶರ್ಮರವರೂ ವಾಚಾ ಮೆಚ್ಚುಗೆ ವ್ಯಕ್ತಪಡಿಸಿದರು... ರವರೂ ಬರೆದಿದ್ದರು. ಆದರೆ ಮೆಚ್ಚುಗೆ ಜತೆಗೆ ಟೀಕೆಯೂ ಇದೆ. ಆ ಟೀಕೆಗಳಿಗೆ ಒಂದೊಂದಕ್ಕೂ ಉತ್ತರ ಬರೆದಿದ್ದೆ. ಆದರೆ ಅವರು ಪುನಃ ಉತ್ತರಿಸಲಿಲ್ಲ !

1) 10 ಜನ ಕುಂಡದ ಸುತ್ತಲೂ ಕೂತು (ಶತಚಂಡೀಹೋಮ) ಹೋಮ ಮಾಡಿದರೆ, 8-10 ಶ್ಲೋಕಗಳನ್ನು ಹೇಳುವುದರಲ್ಲಿ ಯಜ್ಞೇಶ್ವರನಿಗೆ ತೆಗೆದುಕೊಳ್ಳಲು ಆಗದೆ, ವಿಪರೀತ ಹೊಗೆಯಾಗಿ ಹೇಳಲೂ ಆಗದೆ, ಹೋಮ ಮಾಡಲೂ ಆಗದೆ, ಕೊನೆಗೆ ಮುಗಿಯುವವರೆಗೂ ದೊಡ್ಡ circus ಆಗುತ್ತದೆ. ಯಾವ ಪ್ರಯೋಜನವೂ ಇಲ್ಲ. ದಯವಿಟ್ಟು ಕ್ಷಮಿಸಬೇಕೆಂದು ಹೇಳು. ಈ ಶತಚಂಡೀ, ಸಹಸ್ರಚಂಡೀ, ಮಹಾರುದ್ರ, ಅತಿರುದ್ರ ಇವುಗಳೆಲ್ಲಾ ಕೇವಲ ಕಲ್ಪಿತ. ಯಾವುದೋ ಕಾಲದಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹೋಮ ಮಾಡಿದಷ್ಟೂ ಹೆಚ್ಚು ಫಲವೆಂಬ ಭ್ರಮೆಗೆ ಬಿದ್ದು ಅವುಗಳನ್ನು ಕಲ್ಪಿಸಿರುವಂತೆ ಕಾಣುತ್ತದೆ. ಪೂಜೆ, ಹೋಮಗಳ ಮೂಲಭೂತ ತತ್ತ್ವ ತಿಳಿದಿರುವವರು ಈ ಭ್ರಮೆಗೆ ಖಂಡಿತ ಬೀಳುವುದಿಲ್ಲ.

2) ಉಪಾಕರ್ಮ ಶನಿವಾರವೇ, ಸಂದೇಹವಿಲ್ಲ. ಹಿಂದಿನ ದಿನ 8 ಘಂಟೆ ಮೇಲೆ ಪೂರ್ಣಿಮೆ ಬರುವುದರಿಂದ ಅವತ್ತೇ ಉಪಾಕರ್ಮ ಎಂಬ ವಾದವುಂಟು. ಇವೆಲ್ಲಾ ಸುಮ್ಮನೆ hair-splitting discussions. 'ಶ್ರಾವಣ್ಯಾಂ ಪೌರ್ಣಮಾಸ್ಯಾಂ' ಎಂದು ಸೂತ್ರಕಾರರು ಹೇಳುತ್ತಾರೆ. ಇವಕ್ಕೆಲ್ಲಾ ನಾವು ಸಾಮಾನ್ಯವಾಗಿ ಉದಯವ್ಯಾಪಿನೀ ತಿಥಿಯನ್ನು ತೆಗೆದುಕೊಳ್ಳುತ್ತೇವೆ. ಅದರಂತೆ ಶನಿವಾರವೇ (ಧರ್ಮಸಿಂಧುವಿನಲ್ಲಿಯೂ ಸ್ಪಷ್ಟವಾಗಿದೆ). ಹಾಗೆ ಶನಿವಾರವೇ ಗಾಯತ್ರೀಜಪ ಎಂದು ಪಂಚಾಂಗದಲ್ಲಿ ಬರೆದಿದ್ದಾರೆ. ಗಾಯತ್ರೀಜಪ, ಪ್ರಾಯಶ್ಚಿತ್ತಾರ್ಥವಾಗಿ ಮಾಡುವುದು. ಅದಕ್ಕೆ ಸೂತ್ರಕಾರರು 'ಶ್ರಾವಣ್ಯಾಂ ಪೌರ್ಣಮಾಸ್ಯಾಂ ತಿಲಭಕ್ಷಃ. ಉಪೋಷ್ಯ ವಾ ಶ್ವೋಭೂತೇ ಮಾಹಾನದಮುದಕಮುಪಸ್ಪೃಶ್ಯ ಸಾವಿತ್ರಿಯಾ ಸಮಿತ್ಸಹಸ್ರಮಾದಧ್ಯಾತ್ ಜಪೇದ್ವಾ' ಎಂದರು. ಅಂದರೆ ಶ್ರಾವಣ ಪೂರ್ಣಿಮೆ ದಿನ ಉಪವಾಸ ಮಾಡಿ, ಮಾರನೆ ದಿನ ಮಹಾನದೀ ಸ್ನಾನ ಮಾಡಿ, ಸಾವಿತ್ರೀಮಂತ್ರದಿಂದ ಸಹಸ್ರಹೋಮ ಮಾಡಬೇಕು, ಅಥವಾ ಜಪಿಸಬೇಕು. ಇಲ್ಲಿ ಜಪ ಎಷ್ಟು ಮುಖ್ಯವೋ ಶ್ರಾವಣ ಪೂರ್ಣಿಮೆ ದಿನ ಉಪವಾಸ

ಮಾಡುವುದೂ ಅಷ್ಟೇ ಮುಖ್ಯ! (ನಾವು ಅವತ್ತು ಹಬ್ಬದಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದೇವೆನ್ನುವುದು ಬೇರೆ ವಿಷಯ.) ಎಲ್ಲೆಲ್ಲಿಯೂ ಪ್ರಾಯಶ್ಚಿತ್ತಕ್ಕೆ ಉಪವಾಸವೇ ಪ್ರಧಾನ. ಆದ್ದರಿಂದ ಶ್ರಾವಣ ಪೂರ್ಣಿಮೆ ಮಾರನೆ ದಿನ (ಅದು ಅರ್ಥಾತ್ ಪ್ರತಿಪತ್ ಬಂದಿರುತ್ತದೆ), ಜಪ ಮಾಡಬೇಕೆನ್ನುವುದು ಸೂತ್ರಕಾರರ ತಾತ್ಪರ್ಯವೇ ಹೊರತು, ಜಪಕ್ಕೆ ಪ್ರತಿಪತ್ ಇರಬೇಕೆನ್ನುವುದಲ್ಲ. ಅದಕ್ಕೆ ಗಾಯತ್ರೀಪ್ರತಿಪತ್ ಎಂದು ಹೆಸರು ಕೊಟ್ಟು, ಜಪಕ್ಕೆ ಪ್ರತಿಪತ್ತು ಬೆಳಗ್ಗೆ ಇರಬೇಕೇ, ಮಧ್ಯಾಹ್ನ ಇರಬೇಕೇ ಎಂದೆಲ್ಲಾ ಚರ್ಚಿಸುವುದು, ಮೌರ್ಖ್ಯವೆಂದು ಹೇಳದೇ ವಿಧಿಯಿಲ್ಲ.

ಆದ್ದರಿಂದ ಶನಿವಾರ ಉಪಾಕರ್ಮ ಮಾಡಿಕೊಂಡು ಭಾನುವಾರ ಸಾವಿತ್ರೀ ಜಪವನ್ನು ಮಾಡಬೇಕು (ಹೋಮ ಮಾಡುವುದು ಉತ್ತಮ ಪಕ್ಷ).

3) ಬೆಂಗಳೂರಿನಲ್ಲಿ ವಿವಾಹ ಮಾಡಿಸಲು ಹೋಗಿದ್ದಾಗ ಹಲ್ಲು ನೋವು ಹೆಚ್ಚಾಗಿ ಮೇಲುಗಡೆ ಒಂದು ಹಲ್ಲು ಕೀಳಿಸಬೇಕಾಯಿತು. ಈಗ ನೋವೇನೂ ಇಲ್ಲ. ಆದರೂ ತಣ್ಣೀರು ತಗಲಿದರೆ ಜುಂ ಎನ್ನುತ್ತದೆ. ಅದಕ್ಕೆ medicated paste ಕೊಟ್ಟಿದ್ದಾರೆ. ಉಪಯೋಗಿಸುತ್ತಿದ್ದೇನೆ (ಅಂತೂ ಮಾಮನಿಗೂ ಹಲ್ಲುನೋವು ಬಂದಿತೆಂಬುದು ನಿನಗೆ ಸ್ವಲ್ಪ ಸಮಾಧಾನ ಸಂಗತಿಯಲ್ಲವೇ !!!) (ತಮಾಷೆಗೆ ಬರೆದಿದ್ದೇನೆ). ಹಲ್ಲುಗಳನ್ನು clean ಮಾಡಿಸಿಕೊಳ್ಳಬೇಕು ಅಂದರು. 160 ರೂ. ಗಳನ್ನು ಕೊಟ್ಟು clean ಮಾಡಿಸಿಕೊಂಡೆ. ಬೆಂಗಳೂರಿನಲ್ಲಿ ನಾರಾಯಣನ ಮಗ ಶಂಕರನಿಗೆ ವಿವಾಹ ನಡೆಯಿತು. 4 ದಿನಗಳ ಶಾಸ್ತ್ರೀಯ ವಿವಾಹ. ತುಂಬಾ ಚೆನ್ನಾಗಿ, ಹಿತವಾಗಿ ನಡೆಯಿತು. ಮೊದಲು ನನಗೆ ಬಹಳ ಮುಜುಗರವೇ ಆಗಿತ್ತು. ಅವರಿಬ್ಬರೂ ಹೊಯಿಸಳ ಕರ್ನಾಟಕರು (ಹುಡುಗಿಯು ಪಟ್ಟಾಭಿಯ ಅಕ್ಕನ ಮಗಳು). ಅವರ ಸಂಪ್ರದಾಯಗಳು ನಾನಾ ವಿಧ. ನನಗೆ ಗೊತ್ತೂ ಇಲ್ಲ. ಹೇಗಾದರೂ ತಪ್ಪಿಸಿಕೊಳ್ಳೋಣವೆಂದು ನೋಡಿದೆ. ಆಗಲಿಲ್ಲ. ಕೊನೆಗೆ ಹೋದೆ. ನನ್ನ ಶಿಷ್ಯರ Party ಪೂರ್ತಿ ಬಂದಿದ್ದರು. ಜಂಬುನಾಥಘನಪಾಠಿಗಳೂ ಬಂದಿದ್ದರು. ಅದೇನು ವೇದಮಂತ್ರಗಳ ಮಹಿಮೆಯೋ ಗೊತ್ತಿಲ್ಲ. ಒಬ್ಬರೂ ತುಟಿ ಪಿಟಕ್ಕನ್ನಲಿಲ್ಲ. ನಾನು ಯಾವ ಸಂಪ್ರದಾಯವನ್ನೂ ಅನುಸರಿಸಲೂ ಇಲ್ಲ. 10-45ಕ್ಕೆ ಮುಹೂರ್ತ ಎಂದು Invitationನಲ್ಲಿ print ಮಾಡಿಸಿದ್ದರು. 8 ಗಂಟೆಗೆ ಆರಂಭಿಸಿ 10 ಘಂಟೆಗೆ ಸರಿಯಾಗಿ, ಅಗ್ನ್ಯುಪಸ್ಥಾನವನ್ನೂ ಮಾಡಿ ಮುಗಿಸಿಬಿಟ್ಟೆ. ಅಗ್ನಿಯನ್ನು ತೆಗೆದಿಟ್ಟು ಸ್ವಲ್ಪ ಹೊತ್ತು ಸ್ವಸ್ತಿ ಹೇಳುತ್ತಿದ್ದು, 10-45ಕ್ಕೆ ಸರಿಯಾಗಿ ಮಾಂಗಲ್ಯಧಾರಣೆ ಮಾಡಿಸಿಬಿಟ್ಟೆ. ಮುಗಿಯಿತು. ಆಮೇಲೆ ಲೌಕಿಕ ಸಮಾರಂಭಗಳು. ನಾನು ಊಟ ಮಾಡಿಕೊಂಡು 4 ಘಂಟೆಗೆ ಬಂದೆ. ಕೂಡಲೆ ಅಗ್ನಿಯನ್ನು ತೆಗೆದುಕೊಂಡು ಅವರ ಮನೆಗೆ ಗೃಹಪ್ರವೇಶ ಮಾಡಿ, ಪ್ರವೇಶ ಹೋಮಾದಿಗಳೆಲ್ಲಾ ನಡೆಯಿತು. ಯಾವ ಕಿರಿಕಿರಿಯೂ ಆಗಲಿಲ್ಲ. ಎಲ್ಲರೂ (ಕರ್ಮ ನಡೆಯುವಾಗ, ಬೆಳಗ್ಗೆ ಹೆಚ್ಚು ಜನ ಇರಲಿಲ್ಲ.) ತುಂಬಾ ನಿಶ್ಶಬ್ದವಾಗಿ ಕೂತಿದ್ದರು.

ಎರಡು ದಿನ ನಾರಾಯಣ ಇದ್ದ ಮನೆಯಲ್ಲಿಯೇ ಔಪಾಸನ ಮಾಡಿದ. ಮೂರನೇ ದಿನ ಶೈಲು ಮನೆ ಹತ್ತಿರದಲ್ಲಿಯೇ ಮಾಡಿದ್ದ ತನ್ನ ಸಣ್ಣ ಮನೆಗೇ ಅಗ್ನಿಯನ್ನು ತಂದು ಅಲ್ಲಿಯೇ ಔಪಾಸನ ಶೇಷ ಹೋಮಾದಿಗಳೆಲ್ಲಾ ನಡೆಯಿತು, ತುಂಬಾ ಹಿತವಾಗಿತ್ತು. ಆದರೆ ನನಗೆ ಎಲ್ಲಕ್ಕಿಂತ ಸಂತೋಷವೆಂದರೆ, ಬೆಳಗ್ಗೆ ಅಲ್ಲಿಗೆ ಬಂದಿದ್ದ ಹೆಣ್ಣಿನ ಕಡೆಯವರೆಲ್ಲರೂ (ಏನೂ ಗೊತ್ತಿಲ್ಲದಿರುವವರು) ವಿವಾಹ ನಡೆದ ರೀತಿ ನೋಡಿ ಆನಂದಪಟ್ಟಿದ್ದು. ಅವರಿಗ್ಯಾರಿಗೂ ತಮ್ಮ ಸಂಪ್ರದಾಯಗಳು ಯಾವುದೂ (ಜೀರಿಗೆ ಬೆಲ್ಲ, ಅಕ್ಷತಾರೋಪಣ, ಐದು ಕಲಶದ ಧಾರೆ ಇತ್ಯಾದಿ) ನಡೆಯಲಿಲ್ಲ ಎನ್ನುವುದು ತಿಳಿಯದಂತೆ ನಡೆದುಹೋಯಿತು. "ನಿಮ್ಮ ಶಾಸ್ತ್ರೀಯವಾದ ಕ್ರಮದಲ್ಲಿ, ಮಂತ್ರದ ಸುನಾದದಲ್ಲಿ ನಮಗೆ ಅವುಗಳ ಅಭಾವ ತಿಳಿಯಲೇ ಇಲ್ಲ" ಎಂದು ಸಂತೋಷದಿಂದ ಹೇಳಿದರು. ಅದು ಶುದ್ಧ ವೇದೋಕ್ತ ಕರ್ಮದ ಮಹಿಮೆ.

4) ಮಹಾನಾರಾಯಣದಲ್ಲಿ ಅವುಗಳಿಗೆ ಪ್ರತೀಕಗಳೆಂದು ಹೆಸರು. ಇಂಥಾ ಪ್ರತೀಕಗಳು ನಮ್ಮ ಯಜುರ್ವೇದದಲ್ಲಿ ಸುಮಾರು ಕಡೆ ಬರುತ್ತದೆ. ಅವುಗಳು 'ಪ್ರತೀಕ' ಅಂದರೆ ಗುರುತು ಅಷ್ಟೆ. ಆ ಮಂತ್ರಗಳನ್ನು ಪೂರ್ತಿ ಹೇಳಬೇಕೆಂದರ್ಥ. ಪೂರ್ತಿ ಅಧ್ಯಯನ ಮಾಡಿದವರಿಗೂ ಕೆಲವರಿಗೆ ಇದು ತಿಳಿದೇ ಇಲ್ಲ !! ನ್ಯಾಯವಾಗಿ ರಾಮಕೃಷ್ಣಾಶ್ರಮದವರು, ಮಂತ್ರಗಳನ್ನು ಆರಿಸಿ Print ಮಾಡಿರುವುದರಿಂದ, ಅವುಗಳನ್ನು Bracketನಲ್ಲಿಯಾದರೂ ಪೂರ್ತಿ ಕೊಡಬೇಕಾಗಿತ್ತು. ಒಟ್ಟು ವೇದಗಳ ಪುಸ್ತಕಗಳಲ್ಲಿ ಅಧ್ಯಯನ ಕ್ರಮದಂತೆ Print ಮಾಡಿರುವುದರಿಂದ ಸರಿಹೋಗುತ್ತದೆ (ಅವು ವೇದಗಳಲ್ಲಿ ಒಂದು ಕಡೆ ಎಲ್ಲಿಯಾದರೂ ಬಂದಿರುವುದರಿಂದ). ಆದರೆ ಅಷ್ಟಷ್ಟು ಭಾಗವನ್ನೇ ಬೇರೆ Print ಮಾಡುವಾಗ ಕೊಟ್ಟೇ ಕೊಡಬೇಕು. ಸಾಂಪ್ರದಾಯಿಕವಾಗಿ ಮಾಡುವ ಸೂರ್ಯ ನಮಸ್ಕಾರದಲ್ಲಿಯೂ ಅರುಣ ಪ್ರಶ್ನೆಯಲ್ಲಿ ಇಂಥಾ ಪ್ರತೀಕಗಳು ಹೇರಳವಾಗಿವೆ. ಅವುಗಳನ್ನು ಹಾಗೇ ಹೇಳಿಕೊಂಡು ಸೂರ್ಯ ನಮಸ್ಕಾರ ಮಾಡುತ್ತಾರೆ !!

5) ಶ್ರಾದ್ಧದಲ್ಲಿ ಪರೇಽಹನಿ ತರ್ಪಣ ಬೇಕೇಇಲ್ಲ ಎಂದು ನನ್ನ ಅಭಿಪ್ರಾಯ. ಅದೊಂದು ಅರ್ಥವಿಲ್ಲದ ಕ್ರಮ (ನಾನೇನೋ ಅದರಲ್ಲಿ ಬರೆದಿದ್ದೇನೆ), ಈಗ ನಾನು ಮಾಡುವುದಿಲ್ಲ. ಮಾಡಿದರೆ

ಯಾರಿಗೆ ಶ್ರಾದ್ಧವಾಗಿದೆಯೋ ಅವರಿಗೆ ಮಾತ್ರ ತರ್ಪಣ. ಮಹಾಲಯದಲ್ಲಿ ನಿನ್ನ ತಮ್ಮನಿಗೆ ಅವಶ್ಯವಾಗಿ ತರ್ಪಣ ಕೊಡಬೇಕು. "ಅಸ್ಮತ್ ಭ್ರಾತರಂ ವಿಶ್ವನಾಥಶರ್ಮಾಣಮ್ ಆತ್ರೇಯ ಗೋತ್ರಂ ವಸುರೂಪಂ ತರ್ಪಯಾಮಿ, ತರ್ಪ ತರ್ಪ". ಚಿ||ಗಳಿಗೆಲ್ಲಾ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೩೨೧

ಸ್ವಾಹಾಕಾರ, ಬ್ರಹ್ಮತ್ವ ಮತ್ತು ಹವಿಸ್ಸು

ಸ್ತ್ರೀಯರು ಪೂರ್ವಪಂಕ್ತಿಗೆ ; ಚಿಂತಿಸಬೇಕು

कुशलम्　　　　श्री:　　　　ಮೈಸೂರು

12-12-2001

ಶ್ರೀಕಂಠ !

ನಿನ್ನ ಕಾಗದ ತಲುಪಿತು. 5-6 ವರ್ಷಗಳ ಹಿಂದಿನ ಶ್ರಾದ್ಧ ಕರ್ಮವನ್ನು ಜ್ಞಾಪಿಸಿಕೊಂಡು ನನ್ನನ್ನು ಹೊಗಳಿ ಬರೆದಿದ್ದೀಯೆ. ಏನು ಹೇಳಲೂ ತೋಚುವುದಿಲ್ಲ. ಆದರೆ ಇಷ್ಟು ಹೇಳಬಲ್ಲೆ. ಆ ವಾಕ್ಯಗಳು ಅರ್ಥವಾದರೆ ಪ್ರತಿಯೊಬ್ಬನಿಗೂ ಖಂಡಿತವಾಗಿ ಆ ತರಹ ಭಾವನೆಗಳು ಬರುತ್ತವೆಂದು ನನ್ನ ಅಭಿಪ್ರಾಯ. ಅರ್ಥವಾಗುವುದೊಂದೇ ಅಲ್ಲ. ಆ ಅರ್ಥವನ್ನು ಅನುಭವಿಸಬೇಕು. ಅನೇಕ ವಿದ್ವಾಂಸರಿಗೆ ಅವುಗಳ ಅರ್ಥ ಚೆನ್ನಾಗಿ ಗೊತ್ತಿದ್ದರೂ (ಅವುಗಳ ಮೇಲೆ ಗಂಟೆಗಟ್ಟಲೆ ಉಪನ್ಯಾಸ ಮಾಡಬಲ್ಲರು) ಆ ಸಮಯದಲ್ಲಿ ಅದರ ಅರ್ಥದ ಕಡೆ ಅವರು ಗಮನವನ್ನೇ ಹರಿಸುವುದಿಲ್ಲ. ಅರ್ಥವಾಗದಿರುವವರು ಹೇಗೆ ಯಾಂತ್ರಿಕವಾಗಿ ಉಚ್ಚಾರಣೆ ಮಾಡುತ್ತಾರೋ ಹಾಗೇ ಅವರೂ ಮಾಡುತ್ತಾರೆ. ಭಾವನೆಗಳು ಉತ್ಪತ್ತಿಯಾಗುವುದು ಹೇಗೆ ? ನಮ್ಮ ದೇಶದಲ್ಲಿ ಕರ್ತೃವಿನ ಕೈಯಲ್ಲಿ ಏನನ್ನೂ ಹೇಳಿಸುವ ಅಭ್ಯಾಸವೇ ಇಲ್ಲದಿರುವುದರಿಂದ ಅವರುಗಳಿಗೆ ಅರ್ಥ ತಿಳಿದುಕೊಳ್ಳುವ ಉಮೇದೂ ಇಲ್ಲ. ಜತೆಗೆ ಕ್ರಿಯೆ ಮಾಡಿದರೆ ಸಾಕು, ಪಿತೃಗಳು ತೃಪ್ತರಾಗುತ್ತಾರೆ, ನಮ್ಮನ್ನು ಕಾಡುವುದಿಲ್ಲ ಎಂಬ ತಪ್ಪು ಗ್ರಹಿಕೆ ಬೇರೆ. ಹೀಗಾಗಿ ಭಾವನೆಗಳು ಉತ್ಪತ್ತಿಯಾಗುವ ಅವಕಾಶವೇ ಇಲ್ಲ. Schumache ಹೇಳಿದಂತೆ "When you understand what you are doing, you feel a sense of involvement and participation; when you do not understand anything you feel a sense of estrangement." ಇದು ನಮ್ಮ ಕ್ರಿಯೆಗಳಿಗೆ ಅಕ್ಷರಶಃ ಅನ್ವಯಿಸುತ್ತದೆ. ಆದರೂ ಅದನ್ನು ವ್ಯತ್ಯಾಸ ಮಾಡಿಕೊಳ್ಳಲು ಯತ್ಕಿಂಚಿತ್ ಪ್ರಯತ್ನವೂ ಕಾಣುತ್ತಿಲ್ಲ. ಹಾಗೆಂದು ಬಿಟ್ಟೂ ಇಲ್ಲ. ಇದೇ ದುಃಖಪಡುವ ಸಂಗತಿ. ನಾವೆಲ್ಲರೂ ಮಾನ್ಯ ಡಿ.ವಿ.ಜಿ. ಅವರು ಹೇಳುವಂತೆ 'ಬುದ್ಧಿ ಹೇಡಿ' (Intellectual cowards) ಗಳಾಗಿದ್ದೇವೆ. ಈ ಪರಿಸ್ಥಿತಿ ಹೋಗಬೇಕು. ಕಾದು ನೋಡೋಣ.

ಅ) ಆಯುಷ್ಯ ಸೂಕ್ತವನ್ನು ಏಕಸ್ವರದಲ್ಲಿ ಹೇಳಿದರೂ ಸ್ವಾಹಾ ಎನ್ನುವುದನ್ನು "ಸ್ವಾಹಾ" ಎಂತಲೇ ಹೇಳಬೇಕು.

ಆ) ಮೃತ್ಯುಸೂಕ್ತಕ್ಕೆ ಸ್ವಾಹಾಕಾರವನ್ನು ಕೊನೆಯ ಪದಕ್ಕೆ ಮಾತ್ರ ಬರೆಯುತ್ತೇನೆ.

1) ಶಚೀಪತಿಸ್ಸ್ವಾಹಾ 2) ಮೋತವೀರಾನ್ಸ್ವಾಹಾ 3) ಜರಾಮಶೀಮಹಿ ಸ್ವಾಹಾ 4) ಭಿಷಜಾ ಶಚೀಭಿಸ್ಸ್ವಾಹಾ 5) ವಿವಧೀರ್ವಿಕ್ರಮಸ್ವಸ್ವಾಹಾ 6) ಅತಿಮೃತ್ಯುಂ ತರಾಮ್ಯಹಗ್ಗ್ಂ ಸ್ವಾಹಾ 7) ವಿಧೇಮ ಸ್ವಾಹಾ 8) ತನುವೋ ರುದ್ರರೀರಿಷಸ್ಸ್ವಾಹಾ 9) ನಮಸಾ ವಿಧೇಮತೇ ಸ್ವಾಹಾ 10) ಪತಯೇ ರಯೀಣಾಗ್ಂ ಸ್ವಾಹಾ 11) ಸ್ವಸ್ತಿದಾ ಅಭಯಂಕರಸ್ಸ್ವಾಹಾ 12) ಮೃತ್ಯೋರ್ಮುಕ್ಷೀಯ ಮಾಮೃತಾತ್ ಸ್ವಾಹಾ 13) ಸರ್ವಾನವ ಯಜಾಮಹೇ ಸ್ವಾಹಾ 14) ಮೃತ್ಯವೇ ಸ್ವಾಹಾ 15) ಮೃತ್ಯವೇ ಸ್ವಾಹಾ

ಇ) ಬ್ರಹ್ಮತ್ವಕ್ಕೆ ಕೇವಲ ಅಗ್ನಿಮುಖವಲ್ಲ. ಪೂರ್ತಿ ಪ್ರಯೋಗ ತಿಳಿದಿರುವವನಾಗಬೇಕು. ಆದರೆ ನಮ್ಮ ಸ್ಮಾರ್ತಕರ್ಮಗಳಲ್ಲಿ ಆಪಸ್ತಂಬರು ಕೇವಲ 'ಬ್ರಾಹ್ಮಣಂ ದಕ್ಷಿಣತೋ ನಿಷಾದ್ಯ' (ಬ್ರಾಹ್ಮಣನನ್ನು ದಕ್ಷಿಣ ಭಾಗದಲ್ಲಿ ಕುಳ್ಳಿರಿಸಿ) ಎಂದು ಹೇಳುತ್ತಾರೆ. ಅಲ್ಲಿ ಯಜ್ಞದ ಬ್ರಹ್ಮಧರ್ಮಗಳು ಯಾವುದೂ ಅನ್ವಯಿಸುವುದಿಲ್ಲ. ಆದರೂ ತಿಳಿದವನಾಗಿರಬೇಕು.

ಈ) ಅವನು ಎಲ್ಲಾ ಮಂತ್ರಗಳನ್ನೂ, ಸ್ವಾಹಾಕಾರವನ್ನೂ ಧಾರಾಳವಾಗಿ ಹೇಳಬಹುದು. ಹವಿಸ್ಸು ಕೊಡದೆ ಇದ್ದಾಗ ಸ್ವಾಹಾಕಾರ ಹೇಳಬಾರದೆಂದು ಕೆಲವರ ವಾದ. ಅದರಿಂದ ಸ್ವಾಹಾಕಾರ ಹೇಳಲು ನಿಷೇಧವಿಲ್ಲ. ಸ್ವಾಹಾ ಅಂತ ಹೇಳಿ ಹವಿಸ್ಸು ಕೊಡದಿದ್ದರೆ, ಆ ಪದ ವ್ಯರ್ಥವೆಂದರ್ಥ ಅಷ್ಟೆ. ಮಂತ್ರಗಳಲ್ಲಿಯೇ ಎಷ್ಟೋ ಸ್ವಾಹಾಕಾರಗಳು ಬರುತ್ತವೆ. ಅವುಗಳನ್ನೆಲ್ಲಾ ಪಾರಾಯಣ ಮಾಡುವಾಗ ಹೇಳುತ್ತೇವೆ. ಆದರೆ ಹವಿಸ್ಸಿಲ್ಲ, ಆ ಪದ ದಂಡವಾಯಿತೆಂದರ್ಥ.

ಉ) ಸ್ತ್ರೀಯರನ್ನು ಬ್ರಾಹ್ಮಣರ ಸ್ಥಾನದಲ್ಲಿ ಕೂರಿಸಿದರೆ 'ಬ್ರಹ್ಮನ್! ಇಧ್ಮಮಾಧಾಸ್ಯೇ' ಎಂದೆಲ್ಲಾ address ಮಾಡಿ

ಹೇಳಲಾಗುವುದಿಲ್ಲ. ಅದಕ್ಕೆ ಸ್ತ್ರೀಲಿಂಗ ಇಲ್ಲವೂ ಇಲ್ಲ. ಇನ್ನೇನಾದರೂ ಬೇರೆ ಶಬ್ದ ಕಂಡುಹಿಡಿಯಬೇಕು. ಅದರ ಬಗ್ಗೆ ನಾನು ಯೋಚಿಸಿಯೇ ಇಲ್ಲ. ಅವರೇ ಕುಳಿತು ಸಂಧ್ಯಾವಂದನಾದಿಗಳು, ಹೋಮಾದಿಗಳನ್ನು ಮಾಡುವುದು ಬೇರೆ.

ಚಿ॥ಗಳಿಗೆ, ಮಗುವಿಗೆ, ವೇದನಿಗೆ ನನ್ನ ಅನಂತ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮೀ

೫೨೨

ತರ್ಪಣದಲ್ಲಿ ವ್ಯಕ್ತಿನಾಮ, ಹೋಮಸಂಖ್ಯೆ

ಋಗ್ವೇದ ಯಜುರ್ವೇದ ಪುರುಷಸೂಕ್ತ, ಕೂಷ್ಮಾಂಡ ಹೋಮ

कुशलम् श्री: ಮೈಸೂರು

21.3.2002

ಶ್ರೀಕಂಠ !

ನಿನ್ನ Inland Letter ಮತ್ತು card ತಲಪಿದುವು. ಮೊದಲು ನಾನೇ ಭದ್ರಾವತಿಗೆ ಬರುತ್ತಿದ್ದೇನೆಂದು ಯೋಚಿಸಿ ಬರೆಯಲು ತಡ ಮಾಡಿದೆ. ಆಮೇಲೆ ಯಾಕೋ ದೇಹಶ್ರಮ ಜಾಸ್ತಿ ಎನಿಸಿತು. 23ಕ್ಕೆ ಅಲ್ಲಿಗೆ ಬಂದು ಶ್ರಮಪಟ್ಟುಕೊಂಡು 29ನೇ ಶ್ರಾದ್ಧಕ್ಕೆ ದೇಹಾಲಸ್ಯವಾದರೆ ಎಂಬ ಭಯ ಬಂದಿತು. ದೇಹಾಲಸ್ಯದಿಂದ, ಮಾಡುವುದರಲ್ಲಿ ಸ್ವಲ್ಪವಾದರೂ ಅಶ್ರದ್ಧೆ ಉಂಟಾದರೆ ಅದು ನನಗೆ ಸಹಿಸಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ವಿಜಯಲಕ್ಷ್ಮಿಗೆ Phone ಮಾಡಿ, ನನ್ನ ಪರಿಸ್ಥಿತಿಯನ್ನು ಹೇಳಿ, ಇನ್ಯಾರನ್ನಾದರೂ ಆಹ್ವಾನಿಸಿರೆಂದು ಹೇಳಿದೆ. ಅವರೂ ಒಪ್ಪಿಕೊಂಡರು. ಆದ್ದರಿಂದ ನನ್ನ ಭದ್ರಾವತಿ ಪ್ರಯಾಣ cancel ಆಗಿದೆ.

Inland Letterನ ಕೆಲವು ಪ್ರಶ್ನೆಗಳಿಗೆ ಉತ್ತರ.

1) ಮಾತಾಪಿತೃಗಳು ಹತ್ತಿರವಾಗಿರುವಷ್ಟು ಮಾತಾಮಹ ಮಾತಾಮಹಿಯರು ಇರುವುದಿಲ್ಲ. ಆದ್ದರಿಂದ ಮಾತಾಪಿತೃಗಳಿಬ್ಬರ ಹೆಸರನ್ನೂ ಉಲ್ಲೇಖಿಸುತ್ತೇವೆ. ಮಾತಾಮಹವರ್ಗ ಬಂದಾಗ ಸಪತ್ನೀಕಾನಾಂ ಎಂದು ಹೇಳಿದರೆ ಸಾಕು ಎನ್ನುವ ಭಾವನೆ. ಪ್ರತ್ಯೇಕವಾಗಿ 'ಮಮ ಮಾತುಃ ಪ್ರಪಿತಾಮಹೀ, ಮಾತುಃ ಪಿತಾಮಹೀ, ಮಾತಾಮಹೀನಾಂ' ಎಂದು ಹೇಳಿದರೆ ಖಂಡಿತ ತಪ್ಪಿಲ್ಲ (ಅವರ ಸ್ಮರಣೆ ಇದ್ದರೆ.)

2) ಸಾವಿತ್ರೀ (ಗಾಯತ್ರೀ) ಮಂತ್ರದಿಂದ ಹೋಮ ಮಾಡುವಾಗ 108 ಅಥವಾ ಸಾವಿರ ಮಾಡಬಹುದು. 108, 1000ಗಳಲ್ಲಿಯೂ ಕೂಡ ಯಾವ ಒಂದು ಉದ್ದೇಶ ಕಾಣುವುದಿಲ್ಲ. ಅನೇಕ ಕಡೆ ಆ ಸಂಖ್ಯೆಗಳನ್ನು ಉಪಯೋಗಿಸಿದ್ದಾರೆ (ಅಷ್ಟೋತ್ತರಶತ, ಸಹಸ್ರ). ಆ ಸಂಖ್ಯೆಗಳಲ್ಲಿಯೇ ಯಾವ ವಿಶೇಷವೂ ಇಲ್ಲ. ಬೇರೆ ಸಂಖ್ಯೆಗಳನ್ನು choose ಮಾಡಿಕೊಂಡು ಮಾಡಿದರೆ (200, 300, 500 etc.) ಯಾವ ತಪ್ಪೂ ಇಲ್ಲ. ಮುಖ್ಯವಾಗಿ ಏಕಾಗ್ರತೆಯಿಂದ, ಬೇಜಾರಾಗದೆ ಇರುವಂತೆ ಮಾಡಬೇಕು. ಅದಕ್ಕೆ ಎಷ್ಟು ಸಂಖ್ಯೆ ಅನುಕೂಲವೋ ಅಷ್ಟು. ಅಥರ್ವಶೀರ್ಷದಿಂದ 28 ಹೋಮ ಇಟ್ಟುಕೊಂಡು 3 ಬಾರಿ (4 ಬಾರಿ ಅಲ್ಲ) ಎಂದು ಹೇಳಿರಬಹುದು. ಅದೇನೂ mandatory ಅಲ್ಲ. 108 ಹೋಮ ಎಂದಿಟ್ಟುಕೊಂಡು 11 ಬಾರಿ ಹೇಳಿ ಮಾಡಬಹುದು. ಯಥಾಶಕ್ತಿ. ಗಣಪತಿ ಗಾಯತ್ರಿಯು ಸಣ್ಣ ಮಂತ್ರವಾದ್ದರಿಂದ 108 ಮಾಡಬಹುದು. ಗಣಾನಾಂ ತ್ವಾ ಮಂತ್ರವು ನಾವು ಪೂಜೆ ಮಾಡುವ, ಧ್ಯಾನ ಮಾಡುವ ಗಣಪತಿಗೆ ಸಂಬಂಧಪಟ್ಟಿದ್ದಲ್ಲ. ಆದ್ದರಿಂದ ಆ ಮಂತ್ರದಿಂದ ಮಾಡುವುದು ಯುಕ್ತವಲ್ಲ.

3) ಋಗ್ವೇದ ಪುರುಷಸೂಕ್ತ ಮಂತ್ರಗಳನ್ನು ಹೇಳಿ ಮಾಡಿದರೆ 'ಅತ್ಯತಿಷ್ಠದ್ದಶಾಂಗುಲಮ್ ಸ್ವಾಹಾ' ಎಂದೇ ಮಾಡಬೇಕು. ನಮ್ಮ ಪುರುಷಸೂಕ್ತದಿಂದ ಮಾಡುವುದಾದರೆ ಅತ್ಯತಿಷ್ಠದ್ದಶಾಂಗುಲಗ್ಂ ಸ್ವಾಹಾ ಎಂದೇ ಮಾಡಬೇಕು.

4) ಕೂಷ್ಮಾಂಡಹೋಮಕ್ಕೆ ಸಂಕಲ್ಪ 'ಮಮ ಸಮಸ್ತ ಏನೋ ನಿರ್ಹರಣಾರ್ಥಂ ಕೂಷ್ಮಾಂಡೈಃ ಹೋಷ್ಯಾಮಿ॥'

ಇಲ್ಲಿ ನಾವು ಆರೋಗ್ಯವಾಗಿದ್ದೇವೆ. ಚಿ॥ಗಳಿಗೆಲ್ಲಾ ಆಶೀರ್ವಾದಗಳನ್ನು ತಿಳಿಸು.

ಇತಿ ನಿಮ್ಮವ

ಕುಮಾರಸ್ವಾಮೀ

೫೨೩

ಚೌಲೋಪನಯನ, ಚಪ್ಪರ ಪೂಜೆ

ಸಾಯಂಸಂಧ್ಯಾವಂದನೆಯಿಂದಲೇ ಆರಂಭ, ಬ್ರಹ್ಮಯಜ್ಞ, ಪಾಲಾಶದಂಡ, ಕೂಷ್ಮಾಂಡಹೋಮ, ಅಕ್ಷರಾಭ್ಯಾಸ, ಪುಣ್ಯಾಹ, ಎರಡು ಕಲಶ, ಜನ್ಮನಕ್ಷತ್ರ, ಪುಣ್ಯಾಹವಾಚನ

कुशलम् श्री: ಮೈಸೂರು

19.8.2002

ಶ್ರೀಕಂಠ !

ನಿನ್ನ ದೀರ್ಘವಾದ ಪತ್ರ ತಲಪಿತು. ಮೊದಲ ಎರಡು

ಪುಟಗಳಿಗೆ ನನ್ನ ಪ್ರತಿಕ್ರಿಯೆ ಏನಿಲ್ಲ, ನಿನ್ನ ವಿಶ್ವಾಸದ ಬರವಣಿಗೆಗೆ ಎಂದು ಸುಮ್ಮನಾಗುತ್ತೇನೆ.

1) ಚೌಲೋಪನಯನ ಎಂಬ ಶಬ್ದ ಅಷ್ಟು ಯುಕ್ತವಾಗಿಲ್ಲ. ಚೌಲಕರ್ಮವೆಂದರೆ ಸಾಕು. ಅದಕ್ಕೆ ಉಪನಯನ ಶಬ್ದದ ಅಗತ್ಯವಿಲ್ಲ. ಹಾಗೆಯೇ ನಿನಗೆ ಇನ್ನೂ ಎಲ್ಲಕ್ಕೂ 'ಶ್ರೀ' ಸೇರಿಸುವ ಭ್ರಮೆ ಹೋಗಿಲ್ಲ ಅಂತ ಕಾಣುತ್ತೆ. 'ಶ್ರೀ ಗಣಪತಿ ಪೂಜೆ' ಅಂತೇನೂ ಹೇಳಬೇಕಾದ್ದಿಲ್ಲ. 'ಗಣಪತಿ ಪೂಜೆ' ಅಂದರೆ ಸಾಕು. ಗಣಪತಿಯಲ್ಲಿಯೇ "ಶ್ರೀ"ಯೂ ಅಡಕವಾಗಿದೆ. ಚೌಲದಲ್ಲಿ ಕುಮಾರಭೋಜನವನ್ನು specific ಆಗಿ ಹೇಳಿಲ್ಲ. 3 ವರ್ಷದ ಹುಡುಗನಿಗೆ ಏನಾದರೂ ಆಹಾರ ಕೊಟ್ಟೇ ಇರುತ್ತಾರೆ ಎಂಬ ಅಭಿಪ್ರಾಯ. ಗಣಪತಿ ಪೂಜೆ, ಪುಣ್ಯಾಹ, ನಾಂದೀ, ಚೌಲಹೋಮ, ದಿಗ್ವಪನ (ಮಂತ್ರವತ್ ವಪನ) ಆಮೇಲೆ ನಾಪಿತನಿಂದ ವಪನ ಇಷ್ಟೇ, ಜಡೆ ಇದ್ದರೂ ಒಂದು ಚೂರು ಕತ್ತರಿಸಬಹುದಲ್ಲವೇ ? ಸಾಕು.

2) ನಾಂದೀಶ್ರಾದ್ಧವನ್ನು 3 ದಿನಗಳು ಮುಂಚೆಯೇ ಮಾಡಬಹುದು. ತುಂಬಾ ಮುಂಚೆ ಮಾಡಿದರೆ ಏನಾದರೂ ವಿಘ್ನ ಬರಬಹುದೆಂಬ ಚಿಂತೆ ಇರುತ್ತದೆ. ಅದೂ ಅಲ್ಲದೆ ನಾಂದೀ ಶ್ರಾದ್ಧದ ಉದ್ದೇಶವೇ, ಮಾಡುವ ಸಂಸ್ಕಾರಕ್ಕೆ ಪಿತೃಗಳ ಅನುಗ್ರಹ ಸಂಪಾದಿಸಬೇಕೆಂಬುದು. ತುಂಬಾ ಮುಂಚಿತವಾದರೆ, ಅದರ ಉದ್ದೇಶವೇ ಸಫಲವಾಗದಿರಬಹುದು.

ನಾಂದೀಶ್ರಾದ್ಧ ಮೊದಲೇ ಮಾಡಿದ್ದರೂ ಚೌಲದ ದಿನ ಗಣಪತಿಪೂಜೆ, ಪುಣ್ಯಾಹ ಮಾಡಿ ಆರಂಭಿಸಬೇಕು. ಉಪನಯನದಲ್ಲಿಯೂ ಗಣಪತಿ ಪೂಜೆ, ಪುಣ್ಯಾಹ ಮಾಡಿ, ಜನಿವಾರಧಾರಣೆಯಿಂದ ಆರಂಭ. ಪುಣ್ಯಾಹವಾಚನವೆಂಬುದು, ಅವತ್ತಿನ ದಿನ ಶುದ್ಧವಾಗಿದೆಯೆಂದು ನಾಲ್ಕು ಜನ ಹಿರಿಯರಿಂದ ಹೇಳಿಸುವ ಒಂದು ಕ್ರಮ. ಅದು ಉಪನಯನವಾಗಲಿ, ಚೌಲವಾಗಲಿ, ಅವತ್ತೇ ಹಿರಿಯರ ಬಾಯಿನಿಂದ ಪುಣ್ಯದಿನ ಎಂದು ಹೇಳಿಸಬೇಕು. ನಾಂದೀಶ್ರಾದ್ಧಕ್ಕೂ ಪುಣ್ಯಾಹ ಅವಶ್ಯ. ಪುಣ್ಯಾಹವೆಂದರೆ ಹಿರಿಯರು 'ಓಂ ಪುಣ್ಯಾಹಂ', 'ಓಂಸ್ವಸ್ತಿ', 'ಓಂ ಋಧ್ಯತಾಂ' ಎಂದು ಹೇಳುವುದು. ಅದಕ್ಕೆ ಕಲಶ, ತೆಂಗಿನಕಾಯಿಗಳು ಬೇಕಿಲ್ಲ. ಹಿರಣ್ಯವರ್ಣಾಃ ಎಂಬ ಮಂತ್ರ ಪಾರಾಯಣವೂ ಅವಶ್ಯವಿಲ್ಲ. ಅವು ಕೇವಲ ಶುದ್ಧಿಗೋಸ್ಕರ ಮಾಡುವುದು. ಮಾಡದಿದ್ದರೂ ಬರುತ್ತದೆ.

3) ದಿಗ್ವಪನವನ್ನು ತಂದೆಯೇ ಮಾಡಬೇಕು. ಮಾಡಿದ ಮೇಲೆ ಕಾಲು ತೊಳೆದು ಆಚಮನ ಮಾಡಿದರೆ ಸಾಕು. ಸ್ನಾನ ಅವಶ್ಯವಿಲ್ಲ.

4) ಸ್ವಂತ ಔಪಾಸನಾಗ್ನಿ ಅಲ್ಲದಿರುವುದು ಲೌಕಿಕಾಗ್ನಿ. ಆಜ್ಯಭಾಗಾಂತವೆಂದರೆ 'ಅಗ್ನಯೇ ಸ್ವಾಹಾ' 'ಸೋಮಾಯ ಸ್ವಾಹಾ' ಎಂದು ಮಾಡಿ ನಿಲ್ಲಿಸುವುದು. ಎಲ್ಲಾ ಸಂಸ್ಕಾರಗಳಿಗೂ ಸೂತ್ರಕಾರರು ಇದನ್ನೇ ಹೇಳುತ್ತಾರೆ.

5) ಚೌಲದ ದಿನ ಕುಮಾರಭೋಜನ ಆದಮೇಲೆ ಅಗ್ನಿ ಪ್ರತಿಷ್ಠಾಪಿಸಿ, ಬ್ರಹ್ಮನಿಗೆ ದಕ್ಷಿಣೆ ಕೊಟ್ಟು ದಿಗ್ವಪನ, ಉಪನಯನದ ದಿನ ಕುಮಾರ ಭೋಜನವಾದ ಮೇಲೆ ದಿಗ್ವಪನ ಮಾಡಿ ಅಗ್ನಿ ಪ್ರತಿಷ್ಠಾಪನೆ ಮಾಡಬೇಕು.

6) ಉಪನಯನದ ದಿನ ಯಜ್ಞೋಪವೀತ ಧಾರಣಕ್ಕಿಂತ ಮುಂಚೆ ಯಜ್ಞೋಪವೀತದಾನ ಮಾಡುವ ಪದ್ಧತಿ ಇದೆ. ಜನಿವಾರ ಹಾಕಿಕೊಳ್ಳಲು ದಾನದ ಆವಶ್ಯಕತೆಯಿಲ್ಲ. ಅದೊಂದು ಅಭ್ಯಾಸ ಬಂದಿದೆ. ಕಾರಣ ಗೊತ್ತಿಲ್ಲ. ನಾನು ಮಾಡುವುದಿಲ್ಲ. ದಕ್ಷಿಣೆ ಎಷ್ಟಿದೆಯೋ ಅಷ್ಟು ಜನರಿಗೆ ಕೊಡಬಹುದು.

7) ಚಪ್ಪರದ ಪೂಜೆ ವಿಷಯ ಯಾವ ಗ್ರಂಥದಲ್ಲಿಯೂ ಕಾಣೆ. ನನಗೇನೂ ಗೊತ್ತಿಲ್ಲ.

8) ಉಪನಯನವು ಸಾಮಾನ್ಯವಾಗಿ ಮಧ್ಯಾಹ್ನ ಮುಗಿಯುತ್ತದೆ. ಮಾಧ್ಯಾಹ್ನಿಕ ಸಂಧ್ಯಾವಂದನೆಯನ್ನು ಸೂತ್ರಕಾರರು ಹೇಳಿಲ್ಲ. ಉಪನಯನದಲ್ಲಿ ಸಾಯಂಸಂಧ್ಯಾವಂದನೆಯೇ ಆರಂಭ.

9) ಬ್ರಹ್ಮಯಜ್ಞ ಖಂಡಿತ ಅಗತ್ಯ.

10) ಪಾಲಾಶದಂಡವನ್ನು ನ್ಯಾಯವಾಗಿ ವಿವಾಹದಲ್ಲಿ ಸಮಾವರ್ತನವಾಗುವವರೆಗೂ ಇಟ್ಟುಕೊಳ್ಳಬೇಕು. ಅದಕ್ಕೆ ವಿಸರ್ಜನೆಗೆ ಅಂತ ಬೇರೆ ಇಲ್ಲ. ಹಾಳಾದರೆ, ಮುರಿದುಹೋದರೆ ಅದೇ ವಿಸರ್ಜನೆ.

11) ಚೌಲದಲ್ಲಿ ಮತ್ತು ಉಪನಯನದಲ್ಲಿ ಕೂಷ್ಮಾಂಡ ಹೋಮ ಧಾರಾಳವಾಗಿ ಮಾಡಬಹುದು.

12) ಅಕ್ಷರಾಭ್ಯಾಸವನ್ನು ಯಾವ ಸೂತ್ರಕಾರರೂ ಹೇಳಿಲ್ಲ. ಸಾಮಾನ್ಯವಾಗಿ 5ನೇ ವರ್ಷ ಮಾಡಬೇಕು. ಮಂತ್ರಗಳು ಏನೂ ಇಲ್ಲ. ಅಕ್ಕಿಯನ್ನು ತಟ್ಟೆಯಲ್ಲಿಟ್ಟು ಶ್ರೀಃ ಶಿವಾಯ ಸಿದ್ಧಂ ನಮಃ ! ಎಂದು ಬರೆಸಿ ಪೂಜೆ ಮಾಡಿಸುತ್ತಾರೆ. ಬೇರೆ ಮಂತ್ರಗಳು ಯಾವುದೂ ಇಲ್ಲ.

13) ಹತ್ತು ದಿವಸ ಮೈಲಿಗೆ ಎನ್ನುವುದೇ ಇಲ್ಲ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಪುಣ್ಯಾಹದ ಪ್ರಶ್ನೆಯಿಲ್ಲ.

14) ಆಂಧ್ರ, ಕರ್ನಾಟಕರಲ್ಲಿ ಪುಣ್ಯಾಹಕ್ಕೆ ಎರಡು ಕಲಶ ಇಡುತ್ತಾರೆ. ಕಾರಣ ಗೊತ್ತಿಲ್ಲ. ಪ್ರಾಯಃ ಒಂದು ಕಲಶ ಇಡುವುದು

ಶ್ರಾದ್ಧ, ಅಪರಕಾರ್ಯಗಳಲ್ಲಿ ಎಂಬ ಭಯ ಅಂತ ಕಾಣುತ್ತೆ. ಸೂತ್ರರೀತ್ಯಾ ಕಲಶವೇ ಇಲ್ಲ.

15) ಅವರವರ ನಕ್ಷತ್ರ ಎಂದು ಹೇಳುವುದೇ Misnomer ಎಂದು ನನ್ನ ಅಭಿಪ್ರಾಯ. ಜನನದ ದಿನ ಚಂದ್ರನಿಗೆ ಹತ್ತಿರ ಕಾಣುವ ನಕ್ಷತ್ರ ಜನ್ಮನಕ್ಷತ್ರ ಎಂದು ಹೇಳುತ್ತಾರೆ. ಹಾಗೆ ಕಾಣುವುದು illusion. ವಾಸ್ತವವಾಗಿ ಚಂದ್ರನಿಗೂ ಆ ನಕ್ಷತ್ರಕ್ಕೂ ಕೋಟಿಗಟ್ಟಲೆ ಮೈಲಿ ದೂರ ಇರುತ್ತದೆ. ಜನ್ಮದ ದಿನ ಆ ನಕ್ಷತ್ರ ಚಂದ್ರನ ಹತ್ತಿರ ಕಾಣಿಸುತ್ತಿತ್ತು ಎಂದು ಹೇಳಬಹುದು ಅಷ್ಟೆ. ಪ್ರಾರ್ಥನೆ ಮಾಡಿದರೆ ಎಲ್ಲಾ ನಕ್ಷತ್ರ ದೇವತೆಗಳನ್ನೂ ಪ್ರಾರ್ಥಿಸಬೇಕು.

16) 'ಪುಣ್ಯಾಹ'ವೆಂದರೆ 'ಶುಭವಾದ ಹಗಲು' ಎಂದರ್ಥ. 'ಪುಣ್ಯಾಹವಾಚನ'ವೆಂದರೆ ಇವತ್ತು ಶುಭವಾದ ಹಗಲಾಗಿದೆ ಎಂದು ಹಿರಿಯರು ಹೇಳುವುದು. ಇದಕ್ಕೂ ಕಲಶಕ್ಕೂ ವರುಣನಿಗೂ ಯಾವ ಸಂಬಂಧವೂ ಇಲ್ಲ. ಅದನ್ನು ಮಾಡುವುದು ಆ ತೀರ್ಥವನ್ನು ಪ್ರೋಕ್ಷಿಸಿಕೊಂಡು, ಶುದ್ಧರಾಗಬೇಕೆಂಬ ಉದ್ದೇಶ ಅಷ್ಟೆ.

ಚಿ॥ಗಳಿಗೆಲ್ಲಾ ನನ್ನ ಆಶೀರ್ವಾದಗಳು. ಉತ್ತರಗಳು ಸ್ವಲ್ಪ Brief ಆಗಿವೆ. Details ಬೇಕಿಲ್ಲ, ನಿನಗೆ ಗೊತ್ತಿದೆ ಎಂದು ಬಿಟ್ಟಿದ್ದೇನೆ.

Post ಮಾಡುವಾಗ Stamp ಅಂಟಿಸಿ Post ಮಾಡಲು ಮರೆಯಬೇಡ !!

ಇತಿ ನಿಮ್ಮವ
ಕುಮಾರಸ್ವಾಮೀ

೫೨೪

ಸತ್ತವರು ಕಾಡುವುದಿಲ್ಲ, ಅಕ್ಷರಾಭ್ಯಾಸ, ಹೋಮದ್ರವ್ಯ

कुशलम् श्री: ಮೈಸೂರು
2.10.2002

ಶ್ರೀಕಂಠ !

ನಿನ್ನ ಕಾಗದ ತಲಪಿತು. ನಿನ್ನ ಹೊಗಳಿಕೆಗೆ ನಾನೇನೂ ಉತ್ತರ ಹೇಳಲಾರೆ. ನಿನ್ನ ವಿಶ್ವಾಸ ಎಂದುಕೊಳ್ಳುತ್ತೇನೆ.

1) ನಿನ್ನ ಕೃಷ್ಣಮೂರ್ತಿ ಎನ್ನುವವರ ಸಂದೇಹ ಸುಮಾರು ಜನಕ್ಕಿದೆ. ನೆನ್ನೆ ಬೆಂಗಳೂರಿನಿಂದ Phone - ಯಾರೋ ಅವರ ಅಣ್ಣಂದಿರು ಮನೆ ಬಿಟ್ಟು ಹೋಗಿ 30 ವರ್ಷಗಳಾದುವಂತೆ (ಅವರು ಹೋದಾಗ 33 ವರ್ಷ. ಈಗ 63 ವರ್ಷಗಳಿರಬಹುದು). ಅದಕ್ಕೆ, 'ಅವರಿಗೆ ಮೃತರಾಗಿದ್ದಾರೆ ಎಂದು ತಿಳಿದು ಎಲ್ಲಾ ಕರ್ಮಗಳನ್ನೂ ಮಾಡಬೇಕು. ಇಲ್ಲದಿದ್ದರೆ ನಿಮಗೆ ತೊಂದರೆಯಾಗುತ್ತದೆ' ಎಂದು ಹೇಳಿಬಿಟ್ಟರಂತೆ. ಅವರಿಗೆ Dilemma! ಕೊನೆಗೆ ನನ್ನನ್ನು ಕೇಳಿದರು. ಖಂಡಿತ ಮಾಡಬೇಡಿ ಅಂತ ಹೇಳಿದೆ. ಅವರು ಕಾಣಿಸದಿದ್ದ ಮಾತ್ರಕ್ಕೇ 63 ವರ್ಷಗಳಿಗೇ ಸತ್ತುಹೋಗಿದ್ದಾರೆಂದು ಏಕೆ ಭಾವಿಸಬೇಕು ? ಜೀವಂತವಾಗಿದ್ದು ಪುನಃ ವಾಪಸು ಬರಲಿ ಎಂದು ಆಶಿಸಬೇಕೇ ಹೊರತು, ಅವರು ಸತ್ತರು ಎಂದು ತಿಳಿದು ಕರ್ಮಗಳನ್ನು ಮಾಡುವುದೆಂದರೆ ಬಹಳ ಅನ್ಯಾಯ, ಅಧರ್ಮ. ಕರ್ಮ ಮಾಡದಿದ್ದರೆ ಅವರು ಬಂದು ಕಾಡುತ್ತಾರೆ ಎಂದು ಹೇಳುವುದು Cock and Bull story. ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ನಾವು ಸಂಸ್ಕಾರ ಮಾಡಿ ಸತ್ತವರಿಗೆ ಸದ್ಗತಿಯನ್ನು ಕೊಡಲು ಖಂಡಿತ ಸಾಧ್ಯವಿಲ್ಲ. ಅವರ ಸದ್ಗತಿಯೋ, ದುರ್ಗತಿಯೋ, ಅವರವರ ಕರ್ಮಫಲವನ್ನು ಅವಲಂಬಿಸಿದೆಯೇ ಹೊರತು, ನಾವು ಇಲ್ಲಿ ಮಾಡುವ ಅರ್ಥವಾಗದ ಕ್ರಿಯೆಗಳಿಂದಲ್ಲ. ಆದ್ದರಿಂದ ಅವರಿಗೆ ಹೇಳು. ಮನೆಯಲ್ಲಿ ಬರುತ್ತಿರುವ ನಮ್ಮ ಕಷ್ಟಗಳಿಗೆ ನಾವೇ ಕಾರಣರೇ ಹೊರತು ಯಾರೋ ಸತ್ತವರನ್ನು ಹೊಣೆ ಮಾಡುವುದು ಖಂಡಿತ ಅನ್ಯಾಯ. ಅಸಂಗತ. ನಮಗೆ ಬರುತ್ತಿರುವ ಕಷ್ಟಗಳನ್ನು analyse ಮಾಡಿದರೆ (dispassionate ಆಗಿ) ನಮಗೇ ಕಾರಣ ತಿಳಿಯುತ್ತದೆ. ಪೂರ್ವಜರ ಶ್ರಾದ್ಧವನ್ನು ಅವಶ್ಯ ಮಾಡಬೇಕು. ಅವರು ಪಿಶಾಚಿಗಳಾಗಿ ಬಂದು ಕಾಡದೆ ಇರಲಿ ಎನ್ನುವುದಕ್ಕಲ್ಲ, ನಮ್ಮ ಕೃತಜ್ಞತಾದ್ಯೋತಕವಾಗಿ ಮಾಡಬೇಕಷ್ಟೆ.

2) ಅಕ್ಷರಾಭ್ಯಾಸ ಸೂತ್ರೋಕ್ತ ಸಂಸ್ಕಾರವಲ್ಲ. ನಾವೇ ಕಲ್ಪಿಸಿಕೊಂಡಿರುವುದು. ಆದ್ದರಿಂದ ಅದಕ್ಕೆ ಯಾವ ಮಂತ್ರವೂ ಇಲ್ಲ. ಶಿವನಿಗೆ ನಮಸ್ಕಾರ ಎನ್ನುವುದನ್ನೇ 'ಶಿವಾಯ ಸಿದ್ಧಂ ನಮಃ' ಎಂದು ಬರೆಸುತ್ತಾರೆ. ಅದನ್ನು ಗಟ್ಟಿಯಾದ ಒಂದು ದರ್ಭೆ ಕಡ್ಡಿಯಿಂದ ಬರೆದರೆ ಸಾಕು. ಅದಕ್ಕೇ ಷೋಡಶೋಪಚಾರ ಪೂಜೆ ಮಾಡುತ್ತಾರೆ (ಅಕ್ಷರವೇ ಒಂದು ದೇವತೆ ಎಂಬ ಭಾವನೆಯಿಂದ). ಬೇರೆ ಯಾವ ಕಾರ್ಯಕ್ರಮವೂ ಇಲ್ಲ. ಅದಕ್ಕೇ ಅದನ್ನು ಚೌಲದ ಜತೆಯಲ್ಲಿ ಮಾಡಿಸುತ್ತಾರೆ. ಆಗ ಚೌಲವನ್ನು ಐದನೇ ವರ್ಷದಲ್ಲಿ ಮಾಡುತ್ತಿದ್ದರು. ಮೂರನೇ ವರ್ಷದಲ್ಲಿ ಮಾಡಿದರೆ ಆಗ ಅಕ್ಷರಾಭ್ಯಾಸ ಮಾಡುವುದು ಅಯುಕ್ತ. ಆಗ ಐದನೇ ವರ್ಷದಲ್ಲಿ ಬೇರೆಯೇ ಮಾಡಬೇಕು.

3) ಎಲ್ಲಾ ಹೋಮಗಳಿಗೂ (specific ಆಗಿ ವಿಧಿ ಹೇಳದೆ ಇದ್ದರೆ) ಆಜ್ಯ accepted ದ್ರವ್ಯ. ಒಂದು ವೇಳೆ ವಿಧಿ ಹೇಳಿದ್ದರೂ, ಆಜ್ಯದಲ್ಲಿ ಮಾಡಿದರೆ ಸಾರ್ಥಕವಾಗುತ್ತದೆ. ಜನಗಳಿಗೆ ಬೇರೆ ಬೇರೆ ದ್ರವ್ಯಗಳಲ್ಲಿ ಮಾಡಿದರೆ ಏನೋ ಅಜ್ಞಾತವಾದ ತೃಪ್ತಿ. ಅದು ಹೋಮ ಎಂದರೇನು ಎಂಬ ಸ್ವರೂಪ ತಿಳಿಯದೆ, ಕೇವಲ

ಬಹಿಃಕ್ರಿಯೆಗಳನ್ನೇ ಪ್ರಧಾನವಾಗಿ ಇಟ್ಟುಕೊಂಡಿರುವವರ ಪಾಡು. ನನ್ನನ್ನು ಕೇಳಿದರೆ, ಎಲ್ಲಕ್ಕೂ ಆಜ್ಯದ್ರವ್ಯವೇ ಸಾಕು ಎಂದು ನನ್ನ ವಾದ. ಆ ದ್ರವ್ಯದಿಂದ ದೇವತೆಯು ವಿಶೇಷ ತೃಪ್ತಿ ಹೊಂದುವುದು ಎಂಬುದೆಲ್ಲಾ ಕಥೆ. ಮಂತ್ರಾರ್ಥವನ್ನು ಮನಸ್ಸಿನಲ್ಲಿ ತೆಗೆದುಕೊಂಡು ದೇವತಾಧ್ಯಾನ ಮಾಡುತ್ತಾ ನಮಗೆ ಪವಿತ್ರವಾದದ್ದನ್ನು ಅವನಿಗೆ ಅಗ್ನಿಯ ಮೂಲಕ ಅರ್ಪಿಸಿದಂತೆ ಮಾಡುವುದೇ ಹೋಮ. ಇದಕ್ಕೆ ಆಜ್ಯಕ್ಕಿಂತ ಪವಿತ್ರವಾದ, ಹವ್ಯವಾಹನನು ಇಷ್ಟವಾಗಿ ತೆಗೆದುಕೊಳ್ಳುವ ವಸ್ತು ಬೇರೊಂದಿಲ್ಲ. ರುದ್ರಹೋಮದಲ್ಲಿಯೂ ಭತ್ತ+ಎಳ್ಳು ದ್ರವ್ಯವಾಗಿ ಉಪಯೋಗಿಸುವುದು economy ಅಂತ ನನ್ನ ಅಭಿಪ್ರಾಯ. 'ಶ್ರಾದ್ಧ' ಪುಸ್ತಕಗಳು ಬಂದಿವೆ. ಪಾಪುವಿನ ಇಂಡಿಯಾದ ಕೆಲಸ ಇನ್ನೂ ಯಾವುದೂ ನಿಶ್ಚಿತವಿಲ್ಲ. ಕಾಯುತ್ತಿದ್ದೇವೆ. ಚಿ||ಗಳಿಗೆಲ್ಲಾ ನನ್ನ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೫೨೫

ಸಪ್ತಶತೀ ಹೋಮ, (ಹಲವು) ಕರ್ಮಗಳನ್ನು ಬೆರೆಸುವುದು

ಅಪರಕರ್ಮವಾದರೂ ಆನಂದ ಸಾಧ್ಯ

कुशलम् श्री: MYSORE

25.1.2003

ಶ್ರೀಕಂಠ !

ನಿನ್ನ ಕಾಗದ ತಲಪಿತು. ನನ್ನ ಅಮ್ಮಾಮಿ (ಯಶೋದೆ) ಯ ಕೆಲಸಗಳನ್ನು ಮಾಡಿಸುತ್ತಿದ್ದುದರಿಂದ ಬರೆಯಲು ಪುರಸತ್ತಾಗಲಿಲ್ಲ. ನಿನ್ನೆ ವೈಕುಂಠ. ಇವತ್ತು ಬಿಡುವು. ನಿನ್ನ ಪ್ರಶ್ನೆಗೆ Phoneನಲ್ಲಿಯೇ ಉತ್ತರ ಕೊಟ್ಟಿದ್ದೇನೆ.

1) ಸಪ್ತಶತೀಹೋಮ ನಡೆಯುವಾಗ ಯಾರು ಬೇಕಾದರೂ (ಚೆನ್ನಾಗಿ ಹೇಳಲು ಬರುವವರು) ಹೇಳಬಹುದು. ಅವು ಪುರಾಣ ಶ್ಲೋಕಗಳು. ಸಂಸ್ಕೃತ ಅಭ್ಯಾಸವಿದ್ದರೆ ಸಾಕು. ಉಪದೇಶ ಆಗಬೇಕು ಎಂದೆಲ್ಲಾ ಹೇಳುವುದುಂಟು. ಅವೆಲ್ಲಾ ಏನೂ ಬೇಕಿಲ್ಲ. ವೇದಾಭ್ಯಾಸ ಮಾಡಿರುವವರಿಗೆ (ಮಾಡದಿದ್ದರೂ ಚಿಂತೆಯಿಲ್ಲ) ಪುರಾಣ ಶ್ಲೋಕಗಳನ್ನು ಹೇಳಲು ಅಡ್ಡಿ ಏನು ಬಂತು ! ಆದರೆ ತಪ್ಪಿಲ್ಲದೆ ಹೇಳಲು ಕಲಿಯಬೇಕು.

2) ಹೋಮ ನಡೆಯುವಾಗ ಅರ್ಚನೆ ಮಾಡುವುದು ಯುಕ್ತವೇ. ಆದರೆ ನನ್ನ ಅಭಿಪ್ರಾಯದಲ್ಲಿ ಕ್ರಿಯೆಗಳು clash ಆಗುತ್ತೆ ಅನಿಸುತ್ತದೆ. Attention ಅರ್ಚನೆಯಲ್ಲಿರಬೇಕೇ ಹೋಮದಲ್ಲಿರಬೇಕೇ ಅಂದರೆ ಹೋಮ ಪ್ರಧಾನವಾದುದರಿಂದ ಎಲ್ಲರ attention ಹೋಮದಲ್ಲಿಯೇ ಇರಬೇಕು. ಆದ್ದರಿಂದ ಹೇಳುವವರೆಲ್ಲರೂ (ಹೆಂಗಸರಾಗಲಿ, ಗಂಡಸರಾಗಲಿ) ಹೋಮ ಮಾಡುವವರ ಜತೆಯಲ್ಲಿಯೇ synchronise ಮಾಡಿಕೊಂಡು ಹೇಳುವುದು ಸಮಂಜಸ. ಕೇಳಲು ಶ್ರಾವ್ಯವಾಗಿ, ಮನೋಹರವಾಗಿರುತ್ತದೆ. ಬೇರೆ ಕುಳಿತು ಪೂಜೆ ಅಥವಾ ಅರ್ಚನೆ ಮಾಡಬಾರದೆಂತಲ್ಲ. ಅದೇ ಪ್ರತ್ಯೇಕ ಕರ್ಮವಾಗುತ್ತದೆ. ಇದೇ ನ್ಯಾಯ ರುದ್ರಹೋಮ ಮತ್ತು ಬಾಕಿ ಎಲ್ಲಾ ಹೋಮಗಳಿಗೂ ಅನ್ವಯಿಸುತ್ತದೆ. ಅದಕ್ಕೇ ನಾನು ನಾಲ್ಕಾರು ಕರ್ಮಗಳನ್ನು ಒಂದೇ ಕಡೆ ಮಾಡುವುದನ್ನು ಒಪ್ಪುವುದಿಲ್ಲ. ಎಲ್ಲಾ ಒಂದಕ್ಕೊಂದು jumble ಆಗಿ ಬರೀ ಗಲಾಟೆ ಎನಿಸುತ್ತದೆ. ಯಾವುದನ್ನು ನೋಡಿ, ಕೇಳಿ, ಆನಂದಿಸಬೇಕೆಂಬುದು ತಿಳಿಯದೆ ಹೋಗುತ್ತದೆ.

ಮಾಮನ (ಕೃಷ್ಣಮಾಮ) ಮನೆಯಲ್ಲಿ ಕೆಲಸಗಳು ಚೆನ್ನಾಗಿ ನೆರವೇರಿದುವು. ಬಾಲು, ಗಿರೀಶ ಇಬ್ಬರೂ ಬಹಳ ಶ್ರದ್ಧೆಯಿಂದ ಮಾಡಿದರು. ಮನಸ್ಸಿಗೆ ಸ್ವಲ್ಪವೂ ಕಿರಿಕಿರಿಯಾಗಲಿಲ್ಲ. ಮಾಮನೂ ಒಂದೇ ಮನಸ್ಸಿನಿಂದ co-operate ಮಾಡಿದರು. ಅಪರ ಕರ್ಮವೇ ಆದರೂ ಸೂತ್ರೋಕ್ತರೀತಿಯಲ್ಲಿ ನಡೆದರೆ ಎಷ್ಟು ಸುಂದರವಾಗಿರುತ್ತದೆ ; ಕರ್ತೃವಿಗೆ, ಇತರರಿಗೆ ಎಷ್ಟು ಆನಂದವನ್ನು ಕೊಡುತ್ತದೆಂಬುದನ್ನು ಅಲ್ಲಿ ನೋಡಬಹುದಾಗಿತ್ತು. ನನಗೆ ಮಂತ್ರ ಜತೆಯಲ್ಲಿ ಹೇಳಲು ರಘುರಾಮ, ಸುಬ್ರಹ್ಮಣ್ಯ ಇದ್ದರು. ಮೊದಲು ಎರಡು ದಿನಗಳೂ ದೊಡ್ಡ ಯಜ್ಞದಂತೆ ಇತ್ತು. ಅನೇಕರಿಗೆ ನಮ್ಮ ಸಂಪ್ರದಾಯಗಳು ನಡೆಯಲಿಲ್ಲವೆಂಬ ದುಬ್ಧಿ ಇತ್ತೇನೋ ಗೊತ್ತಿಲ್ಲ. ಯಾರೂ ನೇರವಾಗಿ ನನ್ನನ್ನು ಬಂದು ಕೇಳಲಿಲ್ಲ ! ಸಂಚಯನದ ದಿನದಿಂದಲೇ ನಿತ್ಯವಿಧಿಯನ್ನು ಆರಂಭಿಸಿ, ಮಾಡಿದರು. ಎಲ್ಲವೂ ಆಮೇಲೆ ಮನೆಯಲ್ಲಿಯೇ. ಬಹಳ ಹಿತವಾಗಿತ್ತು. ಏನೋ ಅವ್ಯಕ್ತವಾದ ಭಯ ಇಟ್ಟುಕೊಂಡು ಎಲ್ಲೆಲ್ಲೋ ಮಾಡಿ ಅವ್ಯವಸ್ಥೆಯಾಗಿ, ಮುಗಿಯುವುದು ಯಾವಾಗ ಎಂದು ನಿಟ್ಟುಸಿರು ಬಿಡುವಂತಾಗಿದೆ, ಇವತ್ತಿನ ಪರಿಸ್ಥಿತಿ. ಇದಕ್ಕೆ ಪೂರ್ತಿ ವಿರುದ್ಧವಾದ ಪರಿಸ್ಥಿತಿಯನ್ನು ಅವರ ಮನೆಯಲ್ಲಿ ನೋಡಬಹುದಾಗಿತ್ತು.

ಮಧುವಿಗೆ ಸದ್ಯದಲ್ಲಿಯೇ ಮದ್ರಾಸಿನಿಂದ offer ಬರುವ ನಿರೀಕ್ಷೆ ಇದೆ. ಕಾಯುತ್ತಿದ್ದೇವೆ. ಅವನು, ಕನಕ, ಮಗು ಅಲ್ಲಿ ಚೆನ್ನಾಗಿದ್ದಾರೆ. ಚಿ||ಗಳಿಗೆಲ್ಲಾ ಆಶಿಷಃ.

ಇತಿ ನಿನ್ನವ

ಕುಮಾರಸ್ವಾಮೀ

೫೨೬

ಶಿವಲಿಂಗಕ್ಕೆ ಭಸ್ಮಾರ್ಚನೆ

ಔಪಾಸನದ ಪ್ರಾರಂಭ ಮತ್ತು ಮುಕ್ತಾಯ, ಗೃಹಪ್ರವೇಶ

कुशलम् श्री: MYSORE

4.2.2003

ಶ್ರೀಕಂಠ !

ನಿನ್ನ ಕಾಗದ ತಲಪಿತು. ಬೇಗನೇ ಉತ್ತರ ಬರೆಯುತ್ತಿದ್ದೇನೆ. ಪುರಸತ್ತಾಗಿದ್ದೆ !!

1) ಶಿವಲಿಂಗಕ್ಕೆ ಭಸ್ಮಾರ್ಚನೆ ಮಾಡುವುದನ್ನು ನಾನು ಕೇಳಿಲ್ಲ. ನೋಡಿಯೂ ಇಲ್ಲ. ಪುರಾಣಾದಿಗಳಲ್ಲಿ ಇದ್ದ ಹಾಗೂ ಇಲ್ಲ. ಮಾಡಿದರೆ ತಪ್ಪು ಅಂತ ಹೇಳಲಿಕ್ಕೆ ಬರುವುದಿಲ್ಲ.

2) ನಿತ್ಯ ಔಪಾಸನ ಮಾಡಬೇಕಾದರೆ ಅಕ್ಕಿಗೆ ಆಜ್ಯ ಹಾಕಬೇಕಾದ್ದಿಲ್ಲ. ಕೇವಲ ತೊಳೆದು ಒಣಗಿರುವ ಅಕ್ಕಿಯನ್ನು ಹಾಗೇ ಹೋಮ ಮಾಡಬೇಕು. ನೀನು ಬರೆದಿರುವ ಕ್ರಮ ಸರಿಯಾಗಿದೆ. ನಿತ್ಯವೂ ಪವಿತ್ರಧಾರಣೆ ಮಾಡಬೇಕಾದ ಆವಶ್ಯಕತೆ ಇಲ್ಲ. ಪತ್ನಿಯು ನಿತ್ಯವೂ ಪಕ್ಕದಲ್ಲಿ ಇರಬೇಕಾದ್ದಿಲ್ಲ. ಪುರಸತ್ತಾಗಿದ್ದರೆ ಜತೆಯಲ್ಲಿರಬಹುದು. ಆದರೆ ನಾವು ಶ್ರಾದ್ಧದ ದಿನ ಮಾಡುವಂತೆ ಅವಳ ಕೈಗೆ ಅಕ್ಕಿ ಹಾಕಿ, ಅವಳ ಕೈಯಿಂದ ತೆಗೆದುಕೊಂಡು ಮಾಡಬೇಕಾದ್ದಿಲ್ಲ. ನಿತ್ಯ ಮಾಡುವಾಗ, ಅವಳ ಗೃಹಕೃತ್ಯದ ಕೆಲಸಗಳಿಗೆ ಪ್ರತಿಬಂಧಕವಾಗಬಾರದೆಂಬ ಉದ್ದೇಶ. ಶ್ರಾದ್ಧದ ದಿನ ವರ್ಷದಲ್ಲಿ ಒಂದು ದಿನ ಮಾಡುತ್ತಿರುವುದರಿಂದ ಅವಳಿಗೂ participation ಇದ್ದಂತಾಗಲಿ ಎಂಬ ದೃಷ್ಟಿಯಿಂದ ಅವಳ ಕೈಗೆ ಕೊಟ್ಟು ತೆಗೆದುಕೊಳ್ಳುತ್ತೇವೆ. ನಿತ್ಯದಲ್ಲಿ ಅವಳು ಕೊನೆಯಲ್ಲಿ ಬಂದು ನಮಸ್ಕರಿಸಿ ರಕ್ಷಾಧಾರಣೆ ಮಾಡಿದರೆ ಸಾಕು. ಆದರೆ ಔಪಾಸನ ಸಮಯದಲ್ಲಿ ಅವಳು ಮನೆಯಲ್ಲಿ ಇದ್ದೇ ತೀರಬೇಕು. ಅವಳಿಲ್ಲದೆ ಹೋದರೆ ಯಜ್ಞೇಶ್ವರನು ಆಹಾರವನ್ನು ಸ್ವೀಕರಿಸುವುದಿಲ್ಲವಂತೆ.

ಬೆಳಗ್ಗೆ ಅಥವಾ ಸಾಯಂಕಾಲ ಅಗ್ನಿ ಆರಿಹೋಗಿದ್ದರೆ, ಲೌಕಿಕಾಗ್ನಿಯನ್ನು ಆ ಬೂದಿಯಲ್ಲಿಯೇ ಪ್ರತಿಷ್ಠೆ ಮಾಡಿ, ಆಜ್ಯ ಸಂಸ್ಕಾರವನ್ನು ಮಾಡಿಕೊಂಡು, 'ಓಂ ಭೂರ್ಭುವಸ್ಸುವಃ ಸ್ವಾಹಾ ಪ್ರಜಾಪತಯ ಇದಂ ನ ಮಮ' ಎಂದು ಮಾಡಿದರೆ ಸಾಕು.

ತೊಳೆದ ಅಕ್ಕಿಯನ್ನು ಕೈನಲ್ಲಿಯೇ ಹೋಮ ಮಾಡಬೇಕು. ಸ್ರುಕ್ಕಿನಿಂದಲ್ಲ.

3) ಔಪಾಸನವನ್ನು ಪ್ರಾರಂಭಿಸಬೇಕಾದರೆ, ಬೆಳಗಿನಿಂದ ಉಪವಾಸ ಇದ್ದು, ಸಾಯಂಕಾಲ ಸೂರ್ಯಾಸ್ತಮಾನಕ್ಕೆ ಮುಂಚೆ ಪುನಸ್ಸಂಧಾನ ಮಾಡಿ (ಶ್ರಾದ್ಧದ ದಿನ ಮಾಡುವಂತೆ – ಇದು ಅಗ್ನಿಮುಖವಲ್ಲ) ಅಸ್ತಮಾನವಾದ ಮೇಲೆ ಸಾಯಮೌಪಾಸನ ಮಾಡಬೇಕು. ಆಮೇಲೆ ಊಟ. ಸಾಮಾನ್ಯವಾಗಿ ಔಪಾಸನ ಆರಂಭ ಸಾಯಂಕಾಲ. ನಿಲ್ಲಿಸಬೇಕಾದರೆ ಪ್ರಾತರೌಪಾಸನ ಮಾಡಿ ನಿಲ್ಲಿಸಬೇಕು.

4) ಗೃಹಪ್ರವೇಶಕ್ಕೆ, ಹಳೆ ಮನೆಯಲ್ಲಿ ಪುನಸ್ಸಂಧಾನ ಮಾಡಿ (ಚತುಷ್ಪಾತ್ರ ಪ್ರಯೋಗ), ಹಿಂದಿನ ದಿನದ ಸಾಯಮೌಪಾಸನ, ಅವತ್ತಿನ ಪ್ರಾತರೌಪಾಸನ ಎರಡನ್ನೂ ಮಾಡಿ, ತೆಗೆದುಕೊಂಡು ಹೋಗಿ ನೂತನಗೃಹದಲ್ಲಿ ಪ್ರತಿಷ್ಠೆ ಮಾಡಿ ಅಲ್ಲಿ ಅಗ್ನಿಮುಖ ರೀತ್ಯಾ ಎಲ್ಲವನ್ನೂ ಮಾಡಬೇಕು.

'ಶ್ರಾದ್ಧ' ಪುಸ್ತಕ ವಿದ್ವಾನ್ ನರಸಿಂಹಮೂರ್ತಿಯವರಿಗೆ ಕೊಟ್ಟೆಯಾ ? ಇಲ್ಲಿ ಇಬ್ಬರು ಮೂರು ಜನ ಕನ್ನಡ ಸಾಹಿತ್ಯ ವಿಮರ್ಶಕರು ಅದನ್ನು ಕೂಲಂಕಷವಾಗಿ ಓದಿ ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ಚಿ॥ಗಳಿಗೆಲ್ಲಾ ಆಶೀರ್ವಾದಗಳು.

ಇತಿ ನಿಮ್ಮವ

ಕುಮಾರಸ್ವಾಮೀ

೫೨೭

ಹೋಮವಿಚಾರ (ಪ್ರವರದಲ್ಲಿ ಋಷಿ ಏಕತೆ)

ಕುಶಲಮ್ ಶ್ರೀ: ಮೈಸೂರು

25.3.2003

ಶ್ರೀಕಂಠ !

ನೀನು ವಿದ್ವಾನ್ ನರಸಿಂಹಮೂರ್ತಿಗಳಿಗೆ ಖುದ್ದಾಗಿ ಹೋಗಿ ಪುಸ್ತಕ ಕೊಟ್ಟು ಬಂದಿದ್ದು ಕೇಳಿ ಸಂತೋಷವಾಯಿತು. ಆ ವಿಷಯವನ್ನು ವಿಜಯಲಕ್ಷ್ಮಿಯೂ ಹೇಳಿದರು. ನೀನು ವಿಜಯಲಕ್ಷ್ಮಿಗೆ ಇನ್ನೂ ಪುಸ್ತಕ ಕೊಟ್ಟಿಲ್ಲವಂತೆ ! ಕೊಡು. ನಾನೇ ಇಲ್ಲಿ ಕೊಡಬೇಕೆಂದಿದ್ದೆ. ಹೊರಡುವಾಗ ಮರೆತುಹೋಯಿತು.

1) ಪುರುಷಸೂಕ್ತವನ್ನು ಎರಡು ಬಾರಿ ಹೇಳಿ ಹೋಮ ಮಾಡಿದರೆ ಸಾಕು. ಶ್ರೀಸೂಕ್ತದಲ್ಲಿ 15 ಮಂತ್ರಗಳಿವೆ (12 ಅಲ್ಲ). ಅದನ್ನೂ ಎರಡು ಬಾರಿ ಮಾಡಬೇಕು. ನಾರಾಯಣಸೂಕ್ತದಲ್ಲಿ 12 ಮಂತ್ರಗಳಿವೆ. ಅದನ್ನು ಮೂರು ಬಾರಿ ಹೇಳಿ ಮಾಡಬೇಕು. ನೀನು ಬರೆದಿರುವ ಎರಡು ಮಂತ್ರಗಳಿಗೆ ಮೂರುಮೂರು ವಾಕ್ಯಗಳು ಸರಿಯಾಗಿದೆ. 'ಅದ್ಭ್ಯಃ ಸಂಭೂತಃ... ಸರ್ವಂ ಮನಿಷಾಣ' ಈ ಅನುವಾಕದಿಂದಲೂ ಹೋಮ ಮಾಡಬೇಕು. ಇದರಲ್ಲಿಯೂ 4 ವಾಕ್ಯಗಳಿಗೆ ಒಂದು ಮಂತ್ರ. ಕೊನೆಯಲ್ಲಿ 'ಹ್ರೀಶ್ಚ ತೇ' ಆರಂಭಿಸಿ ಸರ್ವಂ ಮನಿಷಾಣ ಎಂಬ ಏಳು ವಾಕ್ಯಗಳನ್ನೂ ಸೇರಿಸಿ ಒಂದು ಮಂತ್ರ. ಈ ಅನುವಾಕದಿಂದ 5 ಬಾರಿ ಹೇಳಿ ಹೋಮ ಮಾಡಬೇಕು.

ಆಯುರ್ದಾ ಅಗ್ನೇ ಹವಿಷೋ ಜುಷಾಣೋ ಘೃತಪ್ರತೀಕೋ ಘೃತಯೋನಿರೇಧಿ । ಘೃತಂ ಪೀತ್ವಾ ಮಧು ಚಾರುಗವ್ಯಂ ಪಿತೇವ ಪುತ್ರಮಭಿರಕ್ಷತಾದಿಮಮ್ ॥

ಹೇ ಅಗ್ನೇ ! ನಾವು ಕೊಡುವ ಹವಿಸ್ಸನ್ನು ಸೇವಿಸಿ ಸಂತೋಷಪಡುವ, ಆಜ್ಯವೇ ಪ್ರತೀಕ (symbol) ವಾಗಿರುವ, ಆಜ್ಯದಿಂದಲೇ ಜಾಜ್ವಲ್ಯಮಾನನಾಗುವ ನೀನು ನಮಗೆ ದೀರ್ಘಾಯುಸ್ಸನ್ನು ಕೊಡು. ನಾವು ಕೊಡುವ ಈ ಮಧುರವಾದ, ಗೋಘೃತವನ್ನು ಸ್ವೀಕರಿಸಿ, ತಂದೆಯು ಮಗನನ್ನು ಹೇಗೆ ಕಾಪಾಡುತ್ತಾನೋ ಹಾಗೆ ಈ ಯಜಮಾನನನ್ನು ಕಾಪಾಡು.

2) ಗೋತ್ರ ಒಂದೇ ಆದರೂ, ಪ್ರವರದಲ್ಲಿರುವ ಮಹರ್ಷಿಗಳ ಹೆಸರು ಒಂದೇ ಆದರೂ ವಿವಾಹ ಸಂಬಂಧ ಕೂಡದು ಎಂದು ಹೇಳುತ್ತಾರೆ. ಮುಖ್ಯವಾಗಿ ಸಪ್ತಪೂರುಷದೊಳಗೆ ಗಂಡು ಹೆಣ್ಣು ಇರಬಾರದು (Seven generations). ಇದು ಇವತ್ತು genetic scienceನವರೂ ಹೇಳುತ್ತಾರೆ. ಏಳುತಲೆ ಕಳೆದಿದ್ದರೆ ಸಗೋತ್ರವೇ ಸಾಧು ಎನ್ನುವುದಾದ ಮೇಲೆ, ಪ್ರವರದಲ್ಲಿ ಋಷಿ ಏಕತೆ ಬಗ್ಗೆ ಯೋಚಿಸಬೇಕಾದ್ದೇ ಇಲ್ಲ.

ಚಿ॥ಗೆ ನನ್ನ ಆಶೀರ್ವಾದಗಳು.

ಇತಿ ನಿಮ್ಮವ
ಕುಮಾರಸ್ವಾಮಿ

೫೨೮

ಚೌಲ, ಶ್ರಾದ್ಧ

ಆರುಣಪ್ರಶ್ನೆ, ಆಶ್ವಲಾಯನ ಶ್ರಾದ್ಧಪ್ರಯೋಗ

ಕುಶಲಮ್ ಶ್ರೀ: ಮೈಸೂರು
9.6.2003

ಶ್ರೀಕಂಠ !

ನಿನ್ನ ಎರಡು ಕಾಗದಗಳೂ ತಲಪಿದವು. ನೀನು ಬೆಂಗಳೂರಿನಿಂದ (25.5.2003) ಬರೆದ ಕಾಗದಕ್ಕೆ ಉತ್ತರ ಬರೆಯಬೇಕೆನ್ನುವುದರಲ್ಲಿ ನಿನ್ನ ಎರಡನೇ ಕಾಗದ ಬಂದಿತು. 'ಶ್ರಾದ್ಧ' ಪುಸ್ತಕದ ಮೇಲಿನ ಅಭಿಪ್ರಾಯಗಳನ್ನು ಕೇಳಿ ಬಹಳ ಸಂತೋಷವಾಯಿತು. ಈಗ ಎರಡನೇ ಮುದ್ರಣ ಕಾರ್ಯ ವಹಿಸಿಕೊಂಡಿರುವ ಉದಯರವಿ ಪ್ರಿಂಟರ್ಸ್ ಮಾಲೀಕರ ವೃದ್ಧ ತಂದೆಯವರಾದ ಗೋಪೀನಾಥ್ ಅದನ್ನು ಓದಿ ನನ್ನನ್ನು ನೋಡಿ ಮಾತನಾಡಿಸಿಯೇ ತೀರಬೇಕೆಂದು ಹೇಳಿಕಳಿಸಿದ್ದರು. ನಾನು ಹೋದೆ. ಅವರು ಮಾಧ್ವರು. ವಿಶ್ವವಿದ್ಯಾಲಯದ Registrar ಆಫೀಸಿನಲ್ಲಿ ಇದ್ದರಂತೆ. ಈಗ 85 ವರ್ಷ. ಸಾಹಿತಿಗಳು. ಕನ್ನಡ ಸಾಹಿತ್ಯದ ಸುಮಾರು ಎಲ್ಲಾ ಪುಸ್ತಕಗಳನ್ನೂ ಓದಿದ್ದಾರೆ. 'ಕುಮಾರಸ್ವಾಮಿಗಳೇ ! ನಾನು ಕನ್ನಡ ಸಾಹಿತ್ಯದ ಸಾವಿರಾರು ಪುಸ್ತಕಗಳನ್ನು ಓದಿದ್ದೇನೆ. ಆದರೆ ನೀವು ಬರೆದಿರುವ ಭಾಷೆ, ಶೈಲಿ, ಹೃದಯಸ್ಪರ್ಶಿಯಾದ ಮಾತುಗಳು ನಾನು ಎಲ್ಲಿಯೂ ಓದಿಲ್ಲ ಅಂತಲೇ ಹೇಳಬಲ್ಲೆ, ನೀವು ನಿಜವಾದ ಸಾಹಿತಿಗಳಪ್ಪಾ!!' ಎಂದು ಕಣ್ಣಲ್ಲಿ ನೀರೇ ಹಾಕಿದರು. ನಿಜವಾಗಲೂ ಸಂತೋಷ ವಾಯಿತು. ನಾನು ಸಾಹಿತಿಯಲ್ಲ, ಸಾಹಿತ್ಯದ ರೂಪರೇಖೆಗಳೂ ತಿಳಿಯದು. ಆದರೂ ಸಾಹಿತ್ಯ ಪ್ರಪಂಚದವರು ಅದನ್ನು ಓದಿ ಸಂತೋಷಪಟ್ಟಿದ್ದಾರೆಂದರೆ ಹೆಮ್ಮೆಯೇ ! (Justifiable pride!!) ಇರಲಿ.

1) ಚೌಲಸಂಸ್ಕಾರವು ಆಲಂಕಾರಿಕ ಕರ್ಮ ಎಂದು ಅನೇಕ ಬಾರಿ ಹೇಳಿದ್ದೇನೆ. ಆ ಕಾಲದಲ್ಲಿ ಅವರುಗಳಿಗೆ ಮುಂದೆ ಸ್ವಲ್ಪ ಕೂದಲು ತೆಗೆದು ಶಿಖೆಯನ್ನು ಬಿಡುವುದು ಅಲಂಕಾರವಾಗಿತ್ತು. ನಮ್ಮ ಭಾರತೀಯ ಸಂಸ್ಕೃತಿಯೇ ಅದಾಗಿತ್ತು. ಪಾಶ್ಚಾತ್ಯರ ಆಳ್ವಿಕೆ ಬಂದ ಮೇಲೆ ಅವರ ವೇಷಭೂಷಣಗಳಲ್ಲಿ ನಮಗೆ ಆದರ, ಪ್ರೀತಿ, ರುಚಿ, ಗೌರವಗಳು ಆರಂಭವಾಗಿ ಈಗ ರಕ್ತಗತವಾಗಿವೆ. ಹಿಂದೆ ನಮ್ಮ ಸಂಸ್ಕೃತಿ ಹೇಗಿತ್ತು ಎಂಬುದೂ ಅನೇಕರಿಗೆ ತಿಳಿಯದೆ ಹೋಗಿದೆ. ಈಗ crop ಬಿಡುವುದೇ ಅಲಂಕಾರವಾಗಿದೆ. ಆದ್ದರಿಂದ ಚೌಲದಲ್ಲಿ ಮಂತ್ರವತ್ ವಪನ ಮಾಡಿದ ಮೇಲೆ ನಾಪಿತನಿಂದ crop ಬಿಡಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಹಿಂದಿನ ಕಾಲದಲ್ಲಿ ನಾಪಿತನ ಅಗತ್ಯ ಇದ್ದಿದ್ದು ಹಿಂದಿನಂತೆ ಶಿಖೆ ಬಿಡುವ ಸಲುವಾಗಿ. ಹಾಗೆ ಚೌಲವಾಗುವವರೆಗೂ ಹುಡುಗನಿಗೆ ಕೂದಲನ್ನು ಹಾಗೇ ಇಟ್ಟುಕೊಂಡಿದ್ದರೆ, ನಮ್ಮ ಸಂತೋಷಕ್ಕೆ ಅವತ್ತು ನಾಪಿತನ ಕೈಯಲ್ಲಿ ಹಿಂದಿನಂತೆ ಶಿಖೆ ಇಡಿಸಿ ಮುಂದೆ ಕೂದಲು ಬೆಳೆದ ಮೇಲೆ crop ಬಿಡಿಸಬಹುದು ಅಥವಾ ಅವತ್ತು crop ಬಿಡಿಸುವುದರಲ್ಲಿ ಏನೂ ಅಡ್ಡಿಯಿಲ್ಲ. ಆದರೆ ಅವತ್ತು ಶಿಖೆ ಬಿಡಿಸುವುದು ಒಂದು ನಿಯಮ, ಪುಣ್ಯಕಾರ್ಯ ಎಂದೇನೂ ಭಾವಿಸಬೇಕಾದ್ದಿಲ್ಲ. ಅವನು ಶಿಖೆ ಇಟ್ಟುಕೊಂಡು ಮಾಡಬೇಕಾದ ವೈದಿಕ ಕೆಲಸಗಳು ಯಾವುದೂ ಇಲ್ಲ. ನಮ್ಮ ಸಂಸ್ಕೃತಿಯಂತೆ ಇರುವ ವೇಷವನ್ನು ಒಂದು ಅಥವಾ ಎರಡು ತಿಂಗಳು ನೋಡುತ್ತಿರಬಹುದು ಅಷ್ಟೆ (ಅದರಲ್ಲಿ ಸಂತೋಷವಿದ್ದರೆ!!). ಹಾಗಲ್ಲದೆ ಚೌಲದ ವೇಳೆಗೇ ಅವನಿಗೆ crop ಮಾಡಿಸಿದ್ದರೆ ನಾಪಿತನ ಆವಶ್ಯಕತೆಯೇ ಇಲ್ಲ. ಮಂತ್ರವತ್ ವಪನ ಮಾಡಿದರೆ ಸಾಕು.

ಅ) ಚೌಲವಾದ ಮಾರನೇ ದಿನವೇ ಶ್ರಾದ್ಧವನ್ನು ಖಂಡಿತ ಮಾಡಬಹುದು. ಚೌಲದಲ್ಲಿ ನಾಂದೀಶ್ರಾದ್ಧ ಬರುತ್ತದೆ. ಅದನ್ನು ಮಾಡಿರುವುದರಿಂದ 15 ದಿನಗಳು ಶ್ರಾದ್ಧ ಮಾಡಬಾರದೆಂದು ಹೇಳುತ್ತಾರೆ. ಈ ನಿಷೇಧಕ್ಕೆ ಏನರ್ಥ ಎಂಬುದು ತಿಳಿಯದು.

ಮಹಾಲಯ ಪಕ್ಷದಲ್ಲಿ 15 ದಿನಗಳೂ ನಿತ್ಯ ಶ್ರಾದ್ಧ ಮಾಡಬೇಕು. ನಾಂದೀಶ್ರಾದ್ಧವೂ ಶ್ರಾದ್ಧವೇ. ಅದು ಮಂಗಳಕರವಾದ ಶ್ರಾದ್ಧ, ವಾರ್ಷಿಕ ಶ್ರಾದ್ಧ ಅಮಂಗಳ ಎಂಬ ತಪ್ಪು ಭಾವನೆಯೇ ಈ ನಿಷೇಧಕ್ಕೆ ಕಾರಣವಿರಬೇಕು. ಎರಡೂ ಮಂಗಳಕರಗಳೇ. ಒಂದು ಸಂಸ್ಕಾರದ ಅಂಗವಾಗಿ ಮಾಡುವುದು (ಅದಕ್ಕೆ ನಾಂದೀ ಎಂಬ ಹೆಸರನ್ನು ಕೊಟ್ಟರು). ಇನ್ನೊಂದು ವಾರ್ಷಿಕಶ್ರಾದ್ಧ ಅಷ್ಟೆ. ಚೌಲವೆಂಬ ಸಂಸ್ಕಾರವನ್ನು ಮಾಡಿ ಪಿತೃಗಳಿಗೆ ನಮ್ಮ ಕೃತಜ್ಞತೆಯನ್ನು ಅರ್ಪಿಸಬಾರದೇ ? ಸಂಸ್ಕಾರದ ಮೊದಲಿನಲ್ಲಿ ಅವರ ಅನುಗ್ರಹಕೋಸ್ಕರ ನಾಂದೀಶ್ರಾದ್ಧವನ್ನು ಮಾಡುತ್ತೇವೆ. ಮುಗಿದಮೇಲೆ ನಿರ್ವಿಘ್ನವಾಗಿ ನೆರವೇರಿದ್ದಕ್ಕೆ ನಮ್ಮ ಕೃತಜ್ಞತೆಗಳನ್ನು ಅವರಿಗೆ ಶ್ರಾದ್ಧರೂಪದಲ್ಲಿ ಅರ್ಪಿಸುತ್ತೇವೆ. ಏನೂ ಭಯಪಡಬೇಕಾದ್ದಿಲ್ಲ. ಧಾರಾಳವಾಗಿ ಮಾಡಬಹುದೆಂದು ಹೇಳು.

2) ನೀನು ಬರೆದಿರುವ ವಾಕ್ಯಗಳು ಪ್ರಾಯಃ ನಮ್ಮ (ತೈತ್ತಿರೀಯ) ಆರಣ್ಯಕದ ಅರುಣಪ್ರಶ್ನೆಯ (ಪ್ರಥಮ ಪ್ರಶ್ನೆ) ಕೊನೆಯ ಅನುವಾಕವಿರಬೇಕು. ಅದಷ್ಟೂ ಬ್ರಾಹ್ಮಣ ವಾಕ್ಯಗಳು. ಆರುಣಕೇತುಕಚಯನದ ಆ ಮಂತ್ರಗಳನ್ನು ಯಾವರೀತಿ ಹೇಳಬೇಕು, ನಿಯಮಗಳೇನು ಎಂಬುದನ್ನು ಹೇಳುತ್ತಿದ್ದಾರೆ. 'ಸಂವತ್ಸರಮೇತದ್ವ್ರತಂ ಚರೇತ್। ದ್ವೌ ವಾ ಮಾಸೌ। ನಿಯಮಸ್ಸಮಾಸೇನ...ತಪಸ್ವೀ ಪುಣ್ಯೋ ಭವತಿ' ಎಂದು ಮುಗಿಯುತ್ತದೆ. ಅದನ್ನು ಪಾರಾಯಣ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಹೇಳು. ಅದೂ ಅಲ್ಲದೆ ಆರುಣಕೇತುಕ ಚಯನಮಂತ್ರಗಳಿಗೂ (ಅರುಣ ಪ್ರಶ್ನೆಗೂ) ಸೂರ್ಯನಿಗೂ ಯಾವ ಸಂಬಂಧವೂ ಇಲ್ಲ.

3) ಶ್ರೀ ಬಾಲಕೃಷ್ಣ ಅವರಿಗೆ ನನ್ನ ಹಾರ್ದಿಕ ಆಶೀರ್ವಾದಗಳನ್ನು ತಿಳಿಸು. ನನ್ನ ಹತ್ತಿರ ಆಶ್ವಲಾಯನಶ್ರಾದ್ಧಪ್ರಯೋಗ ಪುಸ್ತಕ ಇಲ್ಲ. ಅದರಲ್ಲಿಯೂ ಹೋಮ, ಭೋಜನ, ಪಿಂಡಪ್ರದಾನ ಗಳನ್ನು ಹೇಳಿದ್ದಾರೆ. ಮಂತ್ರಗಳೂ, ಸ್ವಲ್ಪ ಪ್ರಯೋಗದ ವಿವರಗಳೂ ವ್ಯತ್ಯಾಸವಾಗಬಹುದೇ ಹೊರತು ಬಾಕಿ concepts ಮಾತ್ರ ಈಷದಪಿ ವ್ಯತ್ಯಾಸವಿಲ್ಲ. ಮಾಡುವಾಗ ಈ ಭಾವನೆ ಗಳನ್ನು ಹೃದಯದಲ್ಲಿಟ್ಟುಕೊಂಡಿದ್ದರೆ ಸಾಕು. ಪುಸ್ತಕ ಸಿಕ್ಕಿದರೆ ಬರೆಯಲು ಕಷ್ಟವೇನಿಲ್ಲ. ಚಿ॥ಗಳಿಗೆಲ್ಲಾ ಆಶೀರ್ವಾದ ಗಳು.

ಇತಿ ನಿನ್ನವ

ಕುಮಾರಸ್ವಾಮೀ

೫೨೯*

ಸತ್ತ್ವಗುಣಕ್ಕೆ ಬುನಾದಿ (ಉಪನಯನಸಂಸ್ಕಾರದ ಮಹತ್ತ್ವ)

कुशलम् श्री: ಮೈಸೂರು

27.6.2002

ಅಖಿಲಾ, ಶಂಕರ್,

ಚಿ॥ ನಕುಲ ಭರದ್ವಾಜನ ಉಪನಯನ ಮಹೋತ್ಸವಾಹ್ವಾನ ಪತ್ರಿಕೆ ತಲಪಿತು. ಬಹಳ ಸಂತೋಷವಾಯಿತು. ಅದರಲ್ಲಿಯೂ ಉಪನಯನದ ವಿಷಯದಲ್ಲಿ ನೀವು ಬರೆದಿರುವ ಸಂಕ್ಷಿಪ್ತ ವ್ಯಾಖ್ಯಾನವಂತೂ ಅತ್ಯಂತ ಸರಳವಾಗಿ ಹೃದಯವನ್ನು ಮುಟ್ಟುವಂತಿದೆ. ಪರಮ ಸಂತೋಷ. ಗರ್ಭಾಷ್ಟಮದಲ್ಲಿ ಶಾಸ್ತ್ರೀಯವಾಗಿ ನಡೆಯುವ ಉಪನಯನಸಂಸ್ಕಾರಕ್ಕೆ ಪ್ರತ್ಯಕ್ಷವಾಗಿ ಬರಬೇಕೆಂಬ ಆಸೆ. ಆದರೆ ಕಾರಣಾಂತರಗಳಿಂದ ದುಃಸಾಧ್ಯವಾಗಿದೆ. ಮನ್ನಿಸಬೇಕು.

ಉಪನಯನಸಂಸ್ಕಾರದ ವಿಷಯ ನಿಮಗೇನೂ ಹೇಳಬೇಕಾಗಿಲ್ಲವೆನಿಸುತ್ತದೆ. ಇಷ್ಟು ಮಾತ್ರ ಹೇಳಬಯಸುತ್ತೇನೆ. ಅನೇಕರು ಭಾವಿಸಿರುವಂತೆ, ಉಪನಯನ ಮಾಡುವುದು ಹುಡುಗನಿಗೆ ಕೊಡುವ ಶಿಕ್ಷೆಯಲ್ಲ. ವಿವಾಹಕ್ಕೆ ಬೇಕಾದ Pre- requisite ಊ ಅಲ್ಲ. ಅದು ಅವನ ಅಂತಃಕರಣದಲ್ಲಿ ಸತ್ತ್ವಗುಣಾವಿರ್ಭಾವಕ್ಕೆ ಹಾಕಿಕೊಡುವ ಬುನಾದಿ. ಪ್ರತಿಯೊಬ್ಬನೂ ಸನ್ಮನುಷ್ಯನಾಗಿ ಬಾಳಬೇಕೆಂಬುದು ನಿರ್ವಿವಾದವಾದ ವಿಷಯ. ಅದಕ್ಕೆ ಮೊದಲನೆಯದಾಗಿ ರಜಸ್ಸು, ತಮಸ್ಸುಗಳನ್ನು ಹತ್ತಿಕ್ಕಿ ಸತ್ತ್ವಗುಣವನ್ನು ಬೆಳೆಸಿಕೊಳ್ಳುವದೊಂದೇ ಮಾರ್ಗ. ಇದನ್ನು ತಿಳಿದೇ ಪುಣ್ಯಶ್ಲೋಕರಾದ ನಮ್ಮ ಮಹರ್ಷಿಗಳು ನಮಗೆ ಅನೇಕ ಸಾಧನಗಳನ್ನು ಅನುಗ್ರಹಿಸಿದ್ದಾರೆ. ಅದರಲ್ಲಿ ಉಪನಯನ ಸಂಸ್ಕಾರವು ಒಂದು ಮುಖ್ಯವಾದ ಸಾಧನ. ಸತ್ತ್ವಗುಣಗಳಲ್ಲೆಲ್ಲಾ ಕೃತಜ್ಞತೆಯೆಂಬ ಗುಣ ಬಹಳ ಸರಳವಾದದ್ದು, ಅಭ್ಯಾಸ ಮಾಡಲು ಅತ್ಯಂತ ಸುಲಭವೂ ಹೌದು. ಉಪಕಾರ ಮಾಡಿದವರನ್ನು ಸ್ಮರಿಸಿಕೊಳ್ಳಲು ಯಾರಿಗೆ ತಾನೇ ಕಷ್ಟವಾದೀತು ? ಉಪನಯನ ವಾದ ಕೂಡಲೆ ಸೂರ್ಯೋದಯ ಅಸ್ತಮಾನ ಕಾಲಗಳಲ್ಲಿ ಮಾಡುವ ಸಂಧ್ಯಾವಂದನೆಯು, ನಮಗೆ ಜೀವನಾಧಾರನಾಗಿ, ನಾನಾ ರೀತಿಯಲ್ಲಿ ಉಪಕಾರ ಮಾಡುತ್ತಿರುವ ಸೂರ್ಯ ಭಗವಾನನಿಗೆ ಸಲ್ಲಿಸುವ ಕೃತಜ್ಞತಾಪೂರ್ವಕವಾದ ವಂದನೆ. ನಮಗೆ ಸೂರ್ಯನು ಒಂದು ಕೇವಲ ತೇಜೋಮಂಡಲವಲ್ಲ. It is not just a mass of heat and light at some million

* ಬಿ.ವಿ.ಎಸ್. ಅವರು ಅನ್ಯಕುಟುಂಬಗಳಿಂದ ಸಂಗ್ರಹಿಸಿದ ಪತ್ರಗಳು : ಪ್ರಬಂಧತ್ಮಾಕ ಪತ್ರಗಳು : ವಿಷಯಾನುಕ್ರಮ.

degrees centigrade. ಅದರಿಂದ ಅಪರಿಮಿತವಾದ ಉಪಕಾರವನ್ನು ಪಡೆದಿರುವ ನಾವು, ಅದನ್ನು ದೇವತಾತ್ವೇನ ಪರಿಗಣಿಸುತ್ತೇವೆ. ಉಪಕಾರವನ್ನು ನಿತ್ಯವೂ ಸ್ಮರಿಸಿಕೊಳ್ಳುತ್ತೇವೆ. ಸ್ಮರಣೆಯ ದ್ಯೋತಕವಾಗಿ ಅವನನ್ನು ಸ್ತೋತ್ರ ಮಾಡುತ್ತಾ, ನಮ್ಮ ಜೀವನಾಧಾರಭೂತವಾದ ತೀರ್ಥವನ್ನು ಮೂರು ಬೊಗಸೆ ಕೊಡುತ್ತೇವೆ. ಪ್ರಕೃತಿಯಲ್ಲಿ ಬಾಕಿ ಎಲ್ಲಾ ಕೆಲಸವೂ ನಡೆಯುವಂತೆ, ಅವನೂ ತನ್ನ ಕೆಲಸ ಮಾಡುತ್ತಿದ್ದಾನೆ ನಿಜ. ಆದರೆ ನಮಗೆ ಅವನ ಕೆಲಸ ಅತ್ಯಂತ ಉಪಕಾರವಾಗಿರುವುದರಿಂದ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇವೆ. ಅದೇ ಸುಸಂಸ್ಕೃತಿ. ಅದೇ ಸತ್ತ್ವಗುಣ. ಇದನ್ನು ಜನ್ಮದಿಂದಲೇ ಅಭ್ಯಾಸ ಮಾಡಬೇಕಲ್ಲವೇ? ಹೌದು. ನಿಜ. ಆದರೆ ಈ ಕೃತಜ್ಞತಾದಿ ಭಾವನೆಗಳು ಬರಬೇಕಾದರೆ ಸ್ವಲ್ಪ ವಯಸ್ಸಾಗಬೇಕು. ಏಳು, ಎಂಟನೇ ವರ್ಷದಲ್ಲಿ ಬುದ್ಧಿಯ ಪಟುತ್ವ ಬಂದು ಅಂಥ ಭಾವನೆಗಳನ್ನು ಯೋಚಿಸಲು ಸಾಮರ್ಥ್ಯ ಬರುತ್ತದೆಂದು ಮಹರ್ಷಿಗಳ ಆಶಯ. ಇನ್ನೂ ಸಣ್ಣ ಮಕ್ಕಳಿಗೆ, ಇವತ್ತು ಮನೆಯಲ್ಲಿ ತಾಯಿ ತಿಂಡಿ ಕೊಟ್ಟರೆ ಅನ್ನ ಹಾಕಿದರೆ 'thank you' ಎಂದು ಹೇಳು ಎಂದು ಅಭ್ಯಾಸ ಮಾಡಿಸುತ್ತಾರೆ (ನಮ್ಮಕಾಲದಲ್ಲಿ ಅದೆಲ್ಲಾ ಏನೂ ಇರಲೇ ಇಲ್ಲ !!). ಬಹಳ ಒಳ್ಳೆಯ ಸಂಸ್ಕೃತಿ. ಅದರ ಸಂಪೂರ್ಣ ತಾತ್ತ್ವಿಕ ಭಾವನೆ ಅರ್ಥವಾಗಬೇಕಾದರೆ ಸ್ವಲ್ಪ ವಯಸ್ಸಾಗಬೇಕು. ತಾಯಿಯು ತನ್ನ ಅಮೃತಮಯವಾದ ಹಾಲನ್ನು ಕೊಟ್ಟು ನಮ್ಮನ್ನು ಬೆಳೆಸಿರುವ ಉಪಕಾರಕ್ಕೆ ನಾವೇನು ತಾನೇ ಕೊಡಲು ಸಾಧ್ಯ ! 'THANK YOU' ಎಂದು ಹೇಳುವುದೊಂದೇ ! ಇದನ್ನು ಮನಸ್ಸಿನಲ್ಲಿಟ್ಟು ಕೊಂಡೇ 'ಗರ್ಭಾಷ್ಟಮೇಷು ಉಪನಯೀತ' ಎಂದು ಹೇಳಿದರು. ಅದೂ ಅಲ್ಲದೆ ಆ ವಯಸ್ಸಿನಲ್ಲಿ ಮುಗ್ಧನಾದ, ಮಗುವಿನಂತಿರುವ ಹುಡುಗನ ಮನಸ್ಸು ನಿಷ್ಕಲ್ಮಷವಾಗಿರುತ್ತದೆ. ನಮ್ಮಂತೆ ರಾಗದ್ವೇಷಗಳು, ಈರ್ಷ್ಯಾಸೂಯೆಗಳು, ಕಾಮಕ್ರೋಧಗಳು ಇವುಗಳಿಂದ ಕಲುಷಿತವಾಗಿರುವುದಿಲ್ಲ. ಅಂಥಾ ಹೃದಯಕ್ಕೆ ಸುಲಭವಾದ ಕೃತಜ್ಞತೆಯೆಂಬ ಸತ್ತ್ವಗುಣವನ್ನು ಅಭ್ಯಾಸ ಮಾಡಿಸಿದರೆ, ಬಲು ಬೇಗ ಹಿಡಿಯುತ್ತದೆ. ಆ ನಿಷ್ಕಲ್ಮಷ ಹೃದಯ ಬೆಳಗ್ಗೆ ಎದ್ದು ರಕ್ತವರ್ಣವಾಗಿ ಪೂರ್ವದಿಗಂತದಲ್ಲಿ ಸಮುದ್ರದಿಂದ ಮೇಲೆ ಬರುವಂತೆ ಬರುತ್ತಿರುವ ಸೂರ್ಯಭಗವಾನನನ್ನು ನೋಡುತ್ತಾ ಕೃತಜ್ಞತೆಯಿಂದ 'ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್' ಎಂದು ಹೇಳಿ ಮೂರು ಬೊಗಸೆ ನೀರು ಕೊಟ್ಟರೆ, ಯಾವ ಶುದ್ಧ ಹೃದಯ ತಾನೇ, ಚರಿತಾರ್ಥತೆಯಿಂದ ತುಂಬುವುದಿಲ್ಲ ! ಶರೀರದಲ್ಲಿ ರೋಮಾಂಚನವಾಗುವುದಿಲ್ಲ ! ಈ ದೈವೀ ಸಂತೋಷವು ನಿರ್ಮಲ ಹೃದಯರಿಗೆ ಉತ್ಕಟವಾಗಿ ಆಗುವುದೆಂದು ಶಂಕರ ಭಗವತ್ಪಾದರ ಆಶಯ. 'ಯಾವದ್ಯಾವತ್ ಅಂತಃಕರಣಸ್ಯ ನಿರ್ಮಲತ್ವಂ ತಾವತ್ತಾವತ್ ಆನಂದಸ್ಯ ಉತ್ಕರ್ಷಃ !' (ಅಂತಃಕರಣವು ಎಷ್ಟೆಷ್ಟು ನಿರ್ಮಲವಾಗಿರುತ್ತದೆಯೋ, ಅಷ್ಟಷ್ಟು ಆನಂದದ ಉತ್ಕರ್ಷ) ಎಂದರು, ಅವರ ತೈತ್ತಿರೀಯೋಪ ನಿಷದ್ಭಾಷ್ಯದಲ್ಲಿ. ನಿರ್ಮಲಾಂತಃಕರಣವಾಗಿರುವ ನಕುಲ ಭರದ್ವಾಜನಿಗೆ ಈ ಆನಂದೋತ್ಕರ್ಷದ ಅನುಭವವಾಗಲೆಂದೇ ಗರ್ಭಾಷ್ಟಮದಲ್ಲಿ ಉಪನಯನ ಮಾಡಬೇಕು. ಯಾವುದೋ ಬಾಕಿ ಸಣ್ಣ ಪುಟ್ಟ ಕ್ಷುಲ್ಲಕ ನಿಯಮಗಳಿಗೆ ಹೆದರಿ, ಅಥವಾ ಆನಂದದಾಯಕವಾದ ಸಂಧ್ಯಾವಂದನೆಯನ್ನೇ ವ್ಯಥಾ ಲಂಬಿಸಿ ಕಷ್ಟದಾಯಕವಾಗಿ ಮಾಡಿರುವುದನ್ನು ಕಂಡು ಕಷ್ಟವೆಂದು ತಿಳಿದು, ಆದಷ್ಟು ವಯಸ್ಸಾದ ಮೇಲೆ ಉಪನಯನವನ್ನು ಮಾಡಬೇಕೆಂದು ಹೇಳುತ್ತಾರೆಂದು ಕಾಣುತ್ತದೆ. ಅಖಿಲಾ ! ಈ ಸಣ್ಣ ವಯಸ್ಸಿನಿಂದಲೇ ಅವನಿಗೆ ಒಂದು ದೈವಿಕಾನಂದವನ್ನು ಪಡೆಯುವ ಅವಕಾಶ ಇರುವುದನ್ನು ನಾವು ಯಾವುದೋ ತಪ್ಪುಗ್ರಹಿಕೆಯಿಂದ ಅವನಿಗೆ ತಪ್ಪಿಸಬಹುದೇ? ಇದು ನಮ್ಮ ಅಪರಾಧವಾಗುತ್ತದೆ. ವಯಸ್ಸಾದ ಮೇಲೂ ಮಾಡಬಹುದು. ಆದರೆ ಈ ನಿರ್ಮಲ ಹೃದಯದಲ್ಲಿ ಸಿಗುವ ಆನಂದವನ್ನು ಕೊಡುವರಾರು ? ಅವನ ಪ್ರಬುದ್ಧ ಜೀವನದಲ್ಲಿ ಇದರ ಆನಂದದ ರುಚಿಯನ್ನು ತಿಳಿದುಕೊಂಡಾಗ ಬಾಲ್ಯದ ಅನೇಕ ವರ್ಷಗಳು ನನಗೆ ಆ ಆನಂದ ಸಿಗಲಿಲ್ಲವಲ್ಲಾ ಎಂದು ಅವನು ದುಃಖ ಪಡುವಂಥ ಸಂದರ್ಭ ಬಂದಾಗ, ನಮ್ಮ ಸ್ಥಿತಿ ಏನು ? ಈ ಸಣ್ಣ ಮುಗ್ಧ ನಿರ್ಮಲಾಂತಃಕರಣದ ಆನಂದ ಪುನಃ ಸಿಗುವುದಿಲ್ಲ, ತಪ್ಪಿಸಿದರೆ ಹೋಗೇ ಹೋಯಿತು. ಶ್ರೀರಾಮಚಂದ್ರನು ತಂದೆಯಾದ ದಶರಥನಿಗೆ ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ದಶರಥನು ಕಾಡಿಗೆ ಹೊರಟಿದ್ದ ರಾಮನನ್ನು 'ಈ ಒಂದು ರಾತ್ರಿ ನನ್ನ ಕಣ್ಣೆದುರಿಗೆ ಇದ್ದು ಹೋಗು' ಎಂದು ಹೇಳುತ್ತಾನೆ. ರಾಮ, ಅದಕ್ಕೆ 'ಅಪ್ಪಾ ! ಯಾವುದೋ ಪುಣ್ಯದಿಂದ ನನಗೆ ಋಷಿಗಳ ಸಹವಾಸದಲ್ಲಿ 14 ವರ್ಷ ವನವಾಸ ಮಾಡುವ ಅವಕಾಶ ಸಿಕ್ಕಿದೆ. ಇವತ್ತೊಂದು ರಾತ್ರಿ ನಾನು ಇಲ್ಲಿದ್ದುಬಿಟ್ಟರೆ ಆ ಒಂದು ದಿವಸದ ವನವಾಸದ ಆನಂದವನ್ನು ನನಗೆ ತುಂಬಿಕೊಡುವರಾರು ?' ಎಂದು ಕೇಳಿ ತಕ್ಷಣವೇ ಹೊರಟುಬಿಟ್ಟ. ಆದ್ದರಿಂದ ಸನ್ಮನುಷ್ಯತ್ವವನ್ನು ಸಂಪಾದನೆ ಮಾಡುವ ಮಾರ್ಗದಲ್ಲಿ postponement ಅನ್ನುವುದು ಇರಕೂಡದಲ್ಲವೇ ? ಅದಕ್ಕೇ ಹುಡುಗನ ಬುದ್ಧಿ ಪಟುವಾಗಿದ್ದರೆ 3ನೇ ವರ್ಷ, 5ನೇ ವರ್ಷಗಳಲ್ಲಿಯೇ ಉಪನಯನ ಮಾಡಬಹುದು. ಮಾಡಬೇಕು.

ಅಖಿಲಾ ! ಶಂಕರ್ ! ಇದು ನಕುಲನಿಗೆ ಹೇಗೆ ಸಂಸ್ಕಾರವೋ

ಹಾಗೇ ನಿಮಗೂ ಒಂದು ಸಂಸ್ಕಾರವೇ. ಅಲ್ಲಿ ನಡೆಯುವ ಒಂದೊಂದು ಕ್ರಿಯೆಯಲ್ಲಿಯೂ, ವಿನಯ, ಆತ್ಮಸಮರ್ಪಣೆ, ಸ್ವಾಹಂಕಾರ ವಿಸರ್ಜನೆ ಮುಂತಾದ ಸತ್ತ್ವಗುಣಾವಿರ್ಭಾವವೇ ಕಾಣುತ್ತದೆ. ಅವು ನಮಗೆ ಪಾಠ. ನಮ್ಮನ್ನು ನೋಡಿ ತಾನೇ ಅವನು ಕಲಿಯುತ್ತಾನೆ !! ಅವನೂ ನಿರ್ಮಲ ಹೃದಯದಿಂದ ಯಜ್ಞೇಶ್ವರನನ್ನು ಪ್ರಾರ್ಥಿಸುವ ಮಂತ್ರಗಳು ಅವನ ವಿಷಯದಲ್ಲಿ ಯಥಾರ್ಥವಾಗಿ, ಸಪ್ತರ್ಷಿಗಳಿಗೆ, ಆಂಗೀರಸರೇ ಮೊದಲಾದ ಮಹರ್ಷಿಗಳಿಗೆ, ಪ್ರಜಾಪತಿಗೆ, ಅಗ್ನಿಭಗವಾನನಿಗೆ ಏನೇನು ಮೇಧೆ, ಮನೀಷೆಗಳಿದ್ದುವೋ, ಅವೆಲ್ಲವೂ ಅವನಿಗೆ ಅತಿಶಯವಾಗಿ ಉಂಟಾಗಲಿ. ಅವನು ಆಧ್ಯಾತ್ಮಿಕ ವಿದ್ಯೆಯ ಪಾರವನ್ನು ಮುಟ್ಟುವಂತೆ ಮಾಡು ಎಂದು ಆಚಾರ್ಯನು 'ಅಧ್ವನಾಮ್ ಅಧ್ವಪತೇ ಶ್ರೇಷ್ಠಸ್ಯ ಅಧ್ವನಃ ಪಾರಮಶೀಯ' ಎಂಬ ಮಂತ್ರದಿಂದ ಪ್ರಾರ್ಥಿಸುತ್ತಿದ್ದಾನೆ. ಆ ಮಂತ್ರವು ನಕುಲ ಭರದ್ವಾಜನ ವಿಷಯದಲ್ಲಿ ಅಕ್ಷರಶಃ ನಿಜವಾಗಿ, ಜೀವನವೃತ್ತಿವಿದ್ಯೆಯು ಜತೆಗೆ ಅಧ್ಯಾತ್ಮವಿದ್ಯೆಯಲ್ಲಿಯೂ ಪಾರಂಗತನಾಗಲೆಂದು ಯಜ್ಞಪುರುಷನನ್ನು ಪ್ರಾರ್ಥಿಸುತ್ತೇನೆ. ನನ್ನ ಹಾರ್ದಿಕ ಆಶೀರ್ವಾದಗಳನ್ನು ಕಳಿಸುತ್ತಿದ್ದೇನೆ. ಉಪನಯನದಿನದಿಂದ ಮೂರು ದಿನ ಅಗ್ನಿಪರಿಚರ್ಯೆ ಮಾಡಬೇಕು. ಸೂರ್ಯನಂತೆ ಅಗ್ನಿಯು ನಮಗೆ ಪ್ರತ್ಯಕ್ಷ ದೇವತೆ. ಅವನ ಪರಿಚರ್ಯೆ ಮಾಡುವುದೆಂದರೆ ಡಿ.ವಿ.ಜಿ.ಯವರ ಮಾತಿನಲ್ಲಿ ಈಶ್ವರ ಸಮಕ್ಷತಾಭ್ಯಾಸ (Practicing the Presence of God) ಅದನ್ನೂ ಮಾಡಲಿ. ಅಗ್ನಿಯ ಉಪಕಾರವೇನೆಂದು ನಮಗೆ ಸ್ಪಷ್ಟವಾಗಿ ತಿಳಿದಿದೆ. ಅವನಿಗೆ ಅಗ್ನಿಕಾರ್ಯ ಮಾಡುವುದೆಂದರೆ ನಮ್ಮ ಕೃತಜ್ಞತೆಯ ಪರಾಕಾಷ್ಠೆ. ಅವನಿಗೆ ಬೇಕಾದ್ದು ಒಣಕಲು ಸಮಿತ್ತುಗಳು. ಆದರೆ ಅವನಿಗೆ ಅದರಿಂದ ಮೃಷ್ಟಾನ್ನ ಭೋಜನ ಮಾಡಿದ ಸಂತೋಷ (ಅವನು ಸಂತೋಷದಿಂದ ಸಮಿತ್ತನ್ನು ಸ್ವೀಕರಿಸಿ ಉರಿಯುವುದೇ ಅವನ ತೃಪ್ತಿದ್ಯೋತಕ). ಹಾಗೇ ನಿತ್ಯ ಸಂಧ್ಯಾವಂದನೆ, ಅಗ್ನಿಕಾರ್ಯ ಮಾಡಿಕೊಂಡು ಬರಲಿ. ಪವಿತ್ರ ಭಾರತಭೂಮಿಯ ಆದರ್ಶಪುತ್ರನಾಗಿ, ತೇಜೋವಂತನಾಗಿ ಕಂಗೊಳಿಸಲಿ.

ನನ್ನ ಗೈರುಹಾಜರಿಗೆ ಕ್ಷಮೆ ಇರಲಿ.

ಇತಿ ನಿಮ್ಮವ

ಕುಮಾರಸ್ವಾಮೀ

೫೩.೦

ಅನುಷ್ಠಾನ ವೇದಾಂತ

कुशलम् श्री: Mysore

11-8-2001

ಶ್ರೀನಿವಾಸನ್,

ಮೈಸೂರಿನಲ್ಲಿದ್ದುಕೊಂಡೇ ನಿಮಗೆ ಪತ್ರ ಬರೆಯುವ ಸಂದರ್ಭ ಬರುತ್ತದೆಂದುಕೊಂಡಿರಲಿಲ್ಲ. ನಿಮಗೆ ಆದ ಅಪಘಾತದ ಸುದ್ದಿ ತಿಳಿದ ತಕ್ಷಣ ಬಂದು ನೋಡಬೇಕೆಂಬ ತವಕ ಬಹಳವಾಯಿತು. ವೀಣಾಳ ತಂದೆಯವರು, ನಿಮ್ಮನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಲು ನಿಶ್ಚಯಿಸಿ ಆಗಲೇ ಏರ್ಪಾಡು ಮಾಡಿಯಾಗಿದೆಯೆಂದು ತಿಳಿಸಿದರು. ಹತಾಶನಾದೆ. ಮೊನ್ನೆ ಬೆಳಗ್ಗೆ ಕಾಲಿನ ಭಾಗವನ್ನು amputate ಮಾಡಿದ್ದಾರೆ ಎಂದು ಹೇಳಿದಾಗ ನೋಡುವ ಆತುರ ಇನ್ನೂ ಜಾಸ್ತಿಯಾಯಿತು. ನಿಮ್ಮ ಮಾನಸಿಕ ಶ್ರಮದಲ್ಲಿ ಪಾಲ್ಗೊಳ್ಳಲು ನಾನೊಬ್ಬನಿದ್ದೇನೆ ಎಂದು ತೋರಿಸುವ ಭಾವನೆಯಿಂದ ಬರೆಯುತ್ತಿದ್ದೇನೆ.

4-5 ದಿನಗಳಿಂದಲೂ, ಪಾಠ ಹೇಳುವಾಗ, ಬೆಳಗ್ಗೆ ಸಾಯಂಕಾಲ ನಿಮ್ಮ ಜಾಗ ಖಾಲಿ ಇರುವುದನ್ನು ನೋಡಿದಾಗ ದುಃಖ ಒತ್ತರಿಸಿ ಬರುತ್ತದೆ. ಕಂಠ ಗದ್ಗದಿತವಾಗಿಬಿಡುತ್ತದೆ. ಪಾಠ ಹೇಳುವುದೇ ಕಷ್ಟವಾಗುತ್ತಿದೆ. ಪ್ರಯತ್ನಪೂರ್ವಕವಾಗಿ ನಿಮ್ಮನ್ನು ಮರೆತು ಪಾಠ ಹೇಳುತ್ತಿದ್ದೇನೆ. ಇಷ್ಟು attachment ಏಕೆ ಎಂದು ನಾನೇ ಯೋಚಿಸಿದ್ದೇನೆ. ಗೊತ್ತಾಗಿಲ್ಲ. ಇವತ್ತೆಲ್ಲಾ ನೀವು ಬರುವುದಕ್ಕೆ ಆರಂಭಿಸಿ ಒಂದು ವರ್ಷವಾಗಿರಬಹುದು. ಆದರೂ ಸ್ವಂತ ಬಂಧುಗಳಿಗಿಂತ ಹತ್ತಿರವಾದಂತೆ ಭಾಸವಾಗುತ್ತಿತ್ತು. ನಿಮ್ಮ ಸಮಯಪಾಲನೆ, ನಗುಮುಖ, ಚೆನ್ನಾಗಿ ಕಲಿತು ಹೇಳಬೇಕು ಎನ್ನುವ ಶ್ರದ್ಧಾತಿಶಯ, ಮನೆಯವನಂತೆ ಅವಳ ಹತ್ತಿರಲೂ ನಡೆದುಕೊಳ್ಳುವ ರೀತಿ ಎಲ್ಲವೂ ನಿಮ್ಮನ್ನು ನಮ್ಮ ಮನೆಯವರನ್ನಾಗಿ ಮಾಡಿತ್ತು. ಬೇರೆಯವರ ಹತ್ತಿರ ಮಾತನಾಡಲು ಸಂಕೋಚ ಪಟ್ಟುಕೊಳ್ಳುವ ಮಾಮಿ ನಿಮ್ಮ ಹತ್ತಿರ ಧಾರಾಳವಾಗಿ ನಿಸ್ಸಂಕೋಚವಾಗಿ ಮಾತನಾಡುತ್ತಿದ್ದಳು. ಅದೇ ನಿಮ್ಮ 'ಹೃದಯಸಂಪನ್ನತೆ'. ಆ ನಿಮ್ಮ ಶುದ್ಧ, ನಿಷ್ಕಲ್ಮಷವಾದ ಹೃದಯವೇ ನಮ್ಮನ್ನು ಹತ್ತಿರಕ್ಕೆ ತಂದಿದೆ. 'ಮನೋ ಹಿ ಜನ್ಮಾಂತರ ಸಂಗತಿಜ್ಞಮ್' (ಜನ್ಮಾಂತರದ ಸಂಗತಿಯು ಮನಸ್ಸಿಗೆ ತಿಳಿದಿದೆ) ಎಂಬ ಸುಭಾಷಿತೋಕ್ತಿ ಉಂಟು. ಅದರಂತೆ ನಮಗೆ ಜನ್ಮಾಂತರದ ಹತ್ತಿರ ಸಂಬಂಧ ಇದ್ದಿರಬೇಕು. ಈಗ ನಿಮ್ಮನ್ನು ಕಾಣದೆ ನಾವಿಬ್ಬರೂ ಪರಿತಾಪ ಪಡುತ್ತಿದ್ದೇವೆ.

ನಿನ್ನೆ ವಿಶ್ವನಾಥ್ ಬಂದು ಹೇಳಿದರು – ಬಹಳ Calm ಆಗಿದ್ದಾರೆಂದು ಕೇಳಿ ಸಂತೋಷಪಟ್ಟೆ. ಹೆಮ್ಮೆಪಟ್ಟೆ. ನಾವೆಲ್ಲಾ ವೇದಾಂತವನ್ನು ಉಪನ್ಯಾಸ ಬಿಗಿಯುತ್ತೇವೆ. ಆದರೆ ಅದರ ತತ್ತ್ವಗಳನ್ನು ಜೀವನದಲ್ಲಿ ಎಷ್ಟರಮಟ್ಟಿಗೆ ಅಳವಡಿಸಿಕೊಂಡಿದ್ದೇವೋ ಗೊತ್ತಿಲ್ಲ. ನೀವು ಅದನ್ನು ಜೀವನದಲ್ಲಿ ಹೇಗೆ ಅಳವಡಿಸಿ

ಕೊಳ್ಳಬೇಕೆಂಬುದನ್ನು ತೋರಿಸುತ್ತಿದ್ದೀರಿ. ನಿಮ್ಮ ಮಾನಸಿಕ ಸಮತೋಲನದ ಮುಂದೆ ನಮ್ಮದೆಲ್ಲಾ ತೃಣಪ್ರಾಯ ಎಂದೇ ಹೇಳಬೇಕು. ಆದರೂ ನಿಮ್ಮ ನಿಕಟವರ್ತಿಗಳಿಗೆ, ರಕ್ತಸಂಬಂಧಿಗಳಿಗೆ ದುಃಖವಾಗಬಾರದೆಂದರೆ ಕಷ್ಟಸಾಧ್ಯ. ವಿಧಿಯನ್ನು ಮೀರಲು ಸಾಧ್ಯವಿಲ್ಲವೆಂಬ ತತ್ತ್ವ ಗೊತ್ತಿದ್ದರೂ ದುಃಖವನ್ನು ತಡೆಯುವುದು ಬಹಳ ಶ್ರಮ. ನಾನು ನಿಮಗೆ ವೇದಾಂತ ಹೇಳಲು ಹೊರಟರೆ "It is just like carrying coal to New Castle". ಆದರೆ ದುಃಖಿಗಳಲ್ಲಿ ನಾನೂ ಒಬ್ಬನಿದ್ದೇನೆ, ಎಂದು ಮಾತ್ರ ಹೇಳಬಲ್ಲೆ.

ಶ್ರೀನಿವಾಸನ್ ! ನಿಮ್ಮ ವೇದಾಭ್ಯಾಸದ ತೀವ್ರವಾದ ಆಸೆಯು ಹೀಗೆ ಆರಂಭದಲ್ಲಿಯೇ ಮುರುಟ ಹೋಯಿತೆಂದು ದುಃಖಪಡಬೇಡಿ. ನಿಮ್ಮ ಪಾದ ನ್ಯೂನವಾಗಿದ್ದರೂ, ಆ ವೇದಪುರುಷನ ಅನುಗ್ರಹದಿಂದ, ವೇದಾಭ್ಯಾಸ ಮುಂದುವರಿಸಬಹುದು. ಇಲ್ಲಿಯತನಕ ಬರಲು ನಿಮಗೆ ಕಷ್ಟವೆಂದಾದರೆ, ವಾರಕ್ಕೆರಡು ದಿನಗಳು ನಾನೇ ನಿಮ್ಮಲ್ಲಿಗೆ ಬಂದು ಪಾಠ ಹೇಳುತ್ತೇನೆ. ಯೋಚಿಸಬೇಡಿ.

ವಯಸ್ಸಾಗಿರುವ ನಿಮ್ಮ ತಾಯಿಯವರಿಗೂ, ನಿಮ್ಮ ಜೀವನ ಸಂಗಾತಿಯಾಗಿರುವ ನಿಮ್ಮ ಧರ್ಮಪತ್ನಿಯವರಿಗೂ, ಮನಸ್ಸಿನ ಆಘಾತವನ್ನು ತಡೆದುಕೊಳ್ಳಲು ಬಹ....ಳ ಕಷ್ಟವಾಗಿರಬೇಕು. ಅವರ ಜತೆಗೆ ಆತ್ಮೀಯ ಬಂಧುವಾಗಿ, ಆ ಆಘಾತದಲ್ಲಿ ಪಾಲ್ಗೊಳ್ಳಲು ನಾನೂ ಇದ್ದೇನೆ ಎಂದು ಅವರಿಗೆ ತಿಳಿಸಿ. ನಿಮ್ಮನ್ನು ಸಶರೀರರನ್ನಾಗಿ ನೋಡುತ್ತಿರುವುದೇ ಪರಮಾತ್ಮನ ಕರುಣೆಯೆಂದು ಭಾವಿಸಿ, ಆ ಆಘಾತವನ್ನು ಸ್ವಲ್ಪ ಕಮ್ಮಿ ಮಾಡಿಕೊಳ್ಳಬೇಕು. ನಾನು ಇಲ್ಲಿ ಕೂತು ಕೇವಲ ವಚನಗಳಿಂದ ಸಾಂತ್ವನ ಹೇಳುತ್ತಿರುವುದಕ್ಕೆ ಕ್ಷಮೆ ಇರಲಿ. ಜತೆಯಲ್ಲಿದ್ದು ಯಾವ ರೀತಿಯ ಸಹಾಯವನ್ನೂ ಮಾಡಲಾಗಲಿಲ್ಲ. ನಿತ್ಯಪೂಜೆಯಲ್ಲಿ ಪರಮೇಶ್ವರನನ್ನು ನಿಮಗೆ ಶೀಘ್ರವಾಗಿ ಆರೋಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುವುದೊಂದೇ ನಾನು ಮಾಡುವ ಸಹಾಯ. ಅವರಿಗೂ ಆ ಆಘಾತವನ್ನು ಭರಿಸುವ ಮಾನಸಿಕ ಸಾಮರ್ಥ್ಯವನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಮುಂದಿನ ವಾರ ಬೆಂಗಳೂರಿಗೆ ಬರುತ್ತಿದ್ದೇನೆ. ಪ್ರತ್ಯಕ್ಷ ಸಂಧಿಸುತ್ತೇನೆ.

ಇತಿ ನಿಮ್ಮವ
ಕುಮಾರಸ್ವಾಮೀ

೫೩೧

ಒಬ್ಬ ತಾಯಿಯ ಸಾವು (ಮತ್ತು ಅದರ ಸುತ್ತ)

कुशलम् श्री: ಮೈಸೂರು
20.2.2001

ನಾಗರಾಜ ಮತ್ತು ಸಹೋದರರಿಗೆ ಕುಮಾರಸ್ವಾಮಿಯು ಮಾಡುವ ಅನಂತ ಆಶೀರ್ವಾದಗಳು.

ಕಾಗದವನ್ನು ಹೇಗೆ ಆರಂಭಿಸಬೇಕೆಂಬುದೇ ತಿಳಿಯದೆ ಒದ್ದಾಡುತ್ತಿದ್ದೇನೆ. ನನ್ನಲ್ಲಿ ಹಾರ್ದಿಕವಾದ ವಿಶ್ವಾಸವಿಟ್ಟುಕೊಂಡು ಅಷ್ಟು ಶ್ರಮಪಟ್ಟು (ನನ್ನ ಅಭಿಪ್ರಾಯಗಳು ಎಲ್ಲರಿಗೂ ತಿಳಿಯಬೇಕೆಂಬ ಉದ್ದೇಶದಿಂದ) ನನ್ನ ಮಾತುಗಳನ್ನು Recording ಮಾಡಿದ ನಾಗರಾಜನಿಗೆ ಮಾತೃವಿಯೋಗವಾಗಿರುವಾಗ, ನನ್ನ ಮಾತುಗಳ ಸಾರ್ಥಕತೆಯನ್ನು ಯಾವ ರೀತಿಯಲ್ಲಿಯೂ ಮಾಡಿಕೊಳ್ಳದೆ ಸುಮ್ಮನೆ ಕುಳಿತಿರುವ ನನ್ನ ಮೇಲೆಯೇ ನನಗೆ ಜುಗುಪ್ಸೆ ಉಂಟಾಗುತ್ತಿದೆ. ನಿಮಗೆ ಯಾವ ರೀತಿಯಲ್ಲಿ ಸಮಾಧಾನ ಹೇಳಲಿ ಎನ್ನುವುದೇ ಗೊತ್ತಾಗುತ್ತಿಲ್ಲ. ಕ್ಷಮಿಸಬೇಕು. ನನ್ನ ಮೇಲೇ ನಂಬಿಕೆ ಇಟ್ಟು, ನನಗೆ ಅನುಕೂಲವಾದ ರೀತಿಯಲ್ಲಿಯೇ ದಿವಸಗಳನ್ನು ನಿಶ್ಚಯ ಮಾಡಿಕೊಂಡು ಏರ್ಪಾಡು ಮಾಡಿ ಕೊಂಡಿರುವವರಿಗೆ ನಿರಾಶೆ ಮಾಡಲೂ ಇಷ್ಟವಿಲ್ಲ. ಹೀಗೆ ದ್ವಂದ್ವದಲ್ಲಿ ಸಿಕ್ಕಿಕೊಂಡು ಬಹಳ ತೊಳಲಾಡುತ್ತಿದ್ದೇನೆ. ಭದ್ರಾವತಿಯವರದ್ದು ಸ್ವಲ್ಪ ಭಾರಿ ಏರ್ಪಾಡಾದ್ದರಿಂದ ಅನೇಕರು ನನ್ನ ನಿರೀಕ್ಷಣೆಯಲ್ಲಿಯೇ ಇರುವುದರಿಂದ ಅಲ್ಲಿಗೇ ಹೋಗುವುದೆಂದು ನಿಶ್ಚಯಿಸಿದೆ. ನಿಮ್ಮ ವಿಶ್ವಾಸ ಕಮ್ಮಿ ಅಂತಲ್ಲ. ನಿಮಗೆ ನನ್ನ ಆವಶ್ಯಕತೆಯು ಕಮ್ಮಿ ಅಂತಲೂ ಅಲ್ಲ. ಕೇವಲ ಪೂರ್ವಾಂಗೀಕೃತ (accepted commitment) ವಾದ್ದರಿಂದ ಅದಕ್ಕೆ ಸ್ವಲ್ಪ preference ಕೊಟ್ಟಿದ್ದೇನೆ ಅಷ್ಟೆ. ಅನ್ಯಥಾ ಭಾವಿಸಬೇಡಿ.

ನಾನು ನನ್ನ ಪೂರ್ವವಯಸ್ಸಿನಲ್ಲಿಯೇ ನನ್ನ ತಾಯಿಯವರನ್ನು ಕಳೆದುಕೊಂಡೆ. ಮಾತೃವಿಯೋಗದ ದುಃಖವೇನು ಎಂಬುದನ್ನು ನಾನು ಬಲ್ಲೆ. ಆದರೆ ನೀವುಗಳೆಲ್ಲರೂ ನನಗಿಂತ ಅದೃಷ್ಟವಂತರು ಎಂದು ಹೇಳಬೇಕು. ನನಗಿಂತ ಬಹಳ ವರ್ಷಗಳ ಕಾಲ ನೀವು ಅವರ ಸಹಯೋಗವನ್ನು ಅನುಭವಿಸಿದ್ದೀರಿ. ಅವರೂ ತುಂಬು ಜೀವನ ನಡೆಸಿ, ಮಕ್ಕಳ ಪ್ರವರ್ಧಮಾನವನ್ನು ಕಂಡು, ಮೊಮ್ಮಕ್ಕಳನ್ನೂ ಕಂಡು (ಮರಿಮಕ್ಕಳೂ ಆಗಿರಬಹುದು, ಗೊತ್ತಿಲ್ಲ) ತೃಪ್ತಿಯಾಗಿ ದಿವಂಗತರಾಗಿದ್ದಾರೆ. ಸಾಮಾನ್ಯವಾಗಿ ಎಲ್ಲರಿಗೂ ಬರತಕ್ಕಂಥ ಕಾಲದಲ್ಲಿಯೇ ಮೃತ್ಯು ಬಂದಿದೆ. ಹಾಗೆಂದು ಅವರು ಹೋದದ್ದಕ್ಕೆ ದುಃಖವಾಗದಿರಲು ಸಾಧ್ಯವಿಲ್ಲ. ತಾಯಿಯಂತೆ ನಿರ್ವ್ಯಾಜವಾದ ಪ್ರೀತಿಯನ್ನು ಮಕ್ಕಳಮೇಲೆ ತೋರಿಸುವ ಇನ್ನೊಂದು ವ್ಯಕ್ತಿ ಪ್ರಪಂಚದಲ್ಲಿ ಯಾರೂ ಇಲ್ಲ. ಆ ತರಹ ನಿರ್ವ್ಯಾಜವಾದ ಪ್ರೀತಿ ಪರಮಾತ್ಮನಮೇಲೆ ನಮಗೆಲ್ಲಾ ಇರಬೇಕು ಎಂದು ಹೇಳುತ್ತಾರೆ. ಈ ನಿರ್ವ್ಯಾಜಪ್ರೀತಿ ಎನ್ನುವುದು ಎಲ್ಲಾದರೂ

ಇರುವುದು ಸಾಧ್ಯವೇ ಎಂಬ ಪ್ರಶ್ನೆಗೆ Prof. ಹಿರಿಯಣ್ಣನವರು "Yes ! such a self-less love can be seen in a mother. She shows self-less or self-disinterested love to her children only. If it gets extended towards all childern in the world, she becomes a real Jnani." ಅಂಥಾ ನಿರ್ವ್ಯಾಜಪ್ರೇಮವನ್ನು ಉಣಿಸಿದ ತಾಯಿಗೆ ನಾವು ಯಾವ ರೀತಿ ಕೃತಜ್ಞತೆಯನ್ನು ತೋರಿಸಲು ಸಾಧ್ಯ ? ಇರುವಾಗ, ಅವರಿಗೆ ಆದಷ್ಟು ಸೇವೆ ಮಾಡಿ ಅವರನ್ನು ತೃಪ್ತಿಪಡಿಸಿ, ಅವರು ದಿವಂಗತರಾದ ಮೇಲೂ ನಮ್ಮ ಭಕ್ತಿ, ಕೃತಜ್ಞತೆ, ಪ್ರೀತಿಗಳನ್ನು ತೋರಿಸಬೇಕು. ಆ ರೀತಿಯ ಅಭಿವ್ಯಕ್ತಿಯೇ ಅಂತ್ಯೇಷ್ಟಿ ಅಥವಾ ಔರ್ಧ್ವದೈಹಿಕ ಕ್ರಿಯೆಗಳು.

ಅವರು ಜೀವಂತವಿದ್ದಾಗ ನಾವು ಮಾಡಿದ ಸೇವೆಯಿಂದ ಸಂತೋಷಪಡುತ್ತಾರೆ. ಅದನ್ನು ವ್ಯಕ್ತವೂ ಪಡಿಸುತ್ತಾರೆ. ಆದರೆ ಔರ್ಧ್ವದೈಹಿಕ ಕ್ರಿಯೆಗಳು ಕೇವಲ ಭಾವನಾತ್ಮಕ ಕ್ರಿಯೆಗಳು. ಅವುಗಳು ಅವರಿಗೆ ತಲಪುವುದೂ ಇಲ್ಲ, ಅವರು ತೃಪ್ತಿಪಡಲು ಸಾಧ್ಯವೂ ಇಲ್ಲ. ಆದರೆ ಅವುಗಳನ್ನು ಮಾಡಿ, ನಾವು ನಮ್ಮ ಕೃತಜ್ಞತಾದಿಗಳನ್ನು ತೋರಿಸಿದೆವು ಎಂಬ ಸಮಾಧಾನವೇ ನಮ್ಮ ಜೀವನದಲ್ಲಿ ನಮಗೆ ಋಣಮುಕ್ತರಾದ ಒಂದು ಧನ್ಯತೆಯನ್ನು ಕೊಡುತ್ತದೆ. ಋಣಮುಕ್ತತೆಯನ್ನು ಸಂಪಾದಿಸಬೇಕು ಎನ್ನುವುದೇ ಮನುಷ್ಯನ ಉತ್ತಮ ಸಂಸ್ಕೃತಿ. ತನ್ನ ಕೃತಜ್ಞತಾ ಅಭಿವ್ಯಕ್ತಿಯು ಉಪಕಾರ ಮಾಡಿದ ವ್ಯಕ್ತಿಗೆ ತಿಳಿಯಬೇಕು ಎಂದು ಅಪೇಕ್ಷಿಸುವುದು ಉಪಕೃತನ ಅಲ್ಪತನ ಎಂದು ಹೇಳುತ್ತಾರೆ. ಹಾಗೆಯೇ ಉಪಕಾರ ಮಾಡಿರುವವನು, ಉಪಕೃತರು ತನಗೆ ಕೃತಜ್ಞತೆಯನ್ನು ತೋರಿಸಬೇಕೆಂದು ಅಪೇಕ್ಷಿಸುವುದೂ ಅಲ್ಪತನ. ನಮಗೆ ಜನ್ಮ ಕೊಟ್ಟು ಸಾಕಿ, ಸಲಹಿದಂಥ ತಾಯಿಯು ನಮ್ಮಿಂದ ಖಂಡಿತವಾಗಿ ಕೃತಜ್ಞತೆಯನ್ನು ಅಪೇಕ್ಷಿಸುವುದಿಲ್ಲ. ಆದರೆ ತೋರಿಸುವುದು ನಮ್ಮ ಉತ್ತಮ ಸಂಸ್ಕೃತಿಸೂಚಕ. ಅನೇಕರು ಹೇಳುತ್ತಾರೆ, "ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡುವುದರಿಂದ ದೇಹವನ್ನು ಬಿಟ್ಟಿರುವ ಜೀವನಿಗೆ ಸದ್ಗತಿ ಸಿಗುತ್ತದೆ. ಮಾಡದಿದ್ದರೆ, ಅವರಿಗೆ ಗತಿ ಇಲ್ಲದೆ ಪಿಶಾಚಿಗಳಾಗಿರುತ್ತಾರೆ" ಎಂದು. ಇವೆಲ್ಲಾ ಕೇವಲ ಮಕ್ಕಳಿಗೆ ಹೇಳುವ ಕಥೆಗಳು. ಮೊದಲನೆಯದಾಗಿ ಪ್ರತಿಯೊಬ್ಬ ಜೀವಿಯೂ ತನ್ನ ತನ್ನ ಕರ್ಮಕ್ಕನುಸಾರವಾಗಿ ಅನ್ಯದೇಹವನ್ನು ಸಂಪಾದಿಸಿ ಕರ್ಮಫಲಗಳನ್ನು ಅನುಭವಿಸುತ್ತಾನೆಂಬುದು ನಮ್ಮ ಸಿದ್ಧಾಂತ. ಹಾಗಿರುವಾಗ ಅವನ ಗತಿಯನ್ನು ವ್ಯತ್ಯಾಸ ಮಾಡುವುದು ಹೇಗೆ? ಎರಡನೆಯದಾಗಿ ಈ ಲೋಕದಲ್ಲಿ ನಾವುಗಳು ಯಾವುದೋ ಕೆಲವು ಕ್ರಿಯೆಗಳನ್ನು ಮಾಡಿದಾಕ್ಷಣಕ್ಕೇ ಒಬ್ಬ ವ್ಯಕ್ತಿಯ ಭವಿಷ್ಯವನ್ನೇ ವ್ಯತ್ಯಾಸ ಮಾಡಬಹುದು ಎಂದು ಹೇಳುವುದು ಸಾಹಸದ ಮಾತು. ಈ ರೀತಿ ಭಯದಿಂದಲಾದರೂ ಔರ್ಧ್ವದೈಹಿಕ ಕ್ರಿಯೆಗಳನ್ನು ಆರಂಭಿಸಲಿ; ಮಾಡುತ್ತಾ ಮಾಡುತ್ತಾ ಅವುಗಳೆಲ್ಲವೂ ಅರ್ಥವಾದಂತೆ ಆ ಭಯ ಹೋಗಿ, ಉತ್ತಮವಾದ ಭಾವನಾ ಅಭಿವ್ಯಕ್ತಿತ್ವ ಎಂದು ತಿಳಿದು ಸಂತೋಷಪಟ್ಟುಕೊಳ್ಳುತ್ತಾನೆ ಎಂಬುದು ಅವರ ಉದ್ದೇಶವಾಗಿರಬೇಕು. ಆದರೆ ದುರದೃಷ್ಟವಶಾತ್, ನಾವು ಮಾಡುವುದು ನಮಗೆ ಯಾವುದೂ ಅರ್ಥವಾಗುವುದೇ ಇಲ್ಲ, ಆದ್ದರಿಂದ ಇವತ್ತಿಗೂ ಅದೇ ಭಯದಿಂದಲೇ ಮಾಡುವ ಅಭ್ಯಾಸ ಬಂದಿದೆ.

ಇನ್ನೊಮ್ಮೆ ಹೇಳಬಯಸುತ್ತೇನೆ. ಕೇವಲ ಕ್ರಿಯೆಯನ್ನು ಮಾಡಿದ್ದರಿಂದ ಯಾರಿಗೂ, ಯಾವ ವಿಧವಾದ ಪ್ರಯೋಜನವೂ ಇಲ್ಲ (ಪುರೋಹಿತರಿಗೆ ದಕ್ಷಿಣೆ ಸಿಗುವುದು ಬೇರೆ ಮಾತು !!). ಭಾವನಾಸಹಿತವಾದ ಕ್ರಿಯೆಗೆ ಏನಾದರೂ ಪ್ರಯೋಜನವೇ ಹೊರತು ಕೇವಲ ಕ್ರಿಯೆಗಲ್ಲ. ಕ್ರಿಯೆ ಇಲ್ಲದಿದ್ದರೂ ಚಿಂತೆಯಿಲ್ಲ, ಭಾವನೆ ಇದ್ದರೆ ಸಾಕು ಎನಿಸಿಬಿಡುತ್ತದೆ. ಆದರೆ ಮನುಷ್ಯ ಸ್ವಭಾವದಲ್ಲಿ ಭಾವನೆಗೆ ಅನುಗುಣವಾದ ಕ್ರಿಯೆಯನ್ನು ಮಾಡುವುದು ಇದೆ. ಅದನ್ನು ತಪ್ಪಿಸಿಕೊಳ್ಳಲು ಆಗುವುದಿಲ್ಲ. ಆದರೆ ಯಾವುದೋ ಕಾರಣದಿಂದ ಕ್ರಿಯೆ ಮಾಡಲು ಆಗದೆ ಇದ್ದಾಗ ಭಾವನೆಗಳನ್ನು ಮನಸ್ಸಿನಲ್ಲಿ ತಂದುಕೊಂಡು ಅವರನ್ನು ಸ್ಮರಿಸಿಕೊಂಡರೆ ಖಂಡಿತ ಸಾರ್ಥಕವಾಗುತ್ತದೆ.

ಇವತ್ತು ನೀವೆಲ್ಲರೂ ಅಷ್ಟೊಂದು ಶ್ರದ್ಧೆಯಿಂದ phone ಮಾಡಿದಾಗ ನನಗೆ ಕಣ್ಣಲ್ಲಿ ನೀರೇ ಬಂತು. ಅಮ್ಮನಿಗೆ ನಾವೇನೂ ಮಾಡಲು ಆಗುತ್ತಿಲ್ಲವಲ್ಲಾ ಎಂದು ಮೈಯೆಲ್ಲಾ ಪರಚಿಕೊಂಡಂತೆ ಆಗುತ್ತಿರುವ ನಿಮ್ಮಂಥ ಮಕ್ಕಳನ್ನು ಪಡೆದ ನಿಮ್ಮ ತಾಯಿಯೇ ಧನ್ಯರು !! "ಅವರಿಗೆ ದಹನದಿಂದ ಉಂಟಾದ ತಾಪವನ್ನು ನಾನು ವಾಸೋದಕವನ್ನು ಕೊಟ್ಟು ಪರಿಹರಿಸಬೇಕು. ಅದರಿಂದ ಉಂಟಾದ ದಾಹವನ್ನು ನಾನು ತಿಲೋದಕವನ್ನು ಕೊಟ್ಟು ಪರಿಹರಿಸಬೇಕು. ಅದರಿಂದ ಉಂಟಾದ ಹಸಿವನ್ನು ನಾನು ಪಿಂಡ ಪ್ರದಾನ ಮಾಡಿ ಪರಿಹರಿಸಬೇಕು" ಎಂಬ ಭಾವನೆಗಳನ್ನು ಅಭಿವ್ಯಕ್ತಿಗೊಳಿಸುವ ಕ್ರಿಯೆಗಳೇ ನಿತ್ಯವಿಧಿ. ಆ ಭಾವನೆಗಳು ಬರಲು ಅನುಕೂಲವಾಗುವಂತೆ ಒಂದು ಶಿಲೆಯಲ್ಲಿ ಅಮ್ಮನ ಆತ್ಮವನ್ನು ಆವಾಹಿಸಿ ಅದಕ್ಕೆ ಸಕಲವನ್ನೂ ಅರ್ಪಿಸುತ್ತೇವೆ. ಅಮ್ಮನಿಗೆ ತೃಪ್ತಿಯಾಯಿತು ಎಂಬ ಭಾವನೆ ದೃಢೀಕೃತವಾಗಿ ಹೃದಯ ತುಂಬುತ್ತದೆ. ಕಂಠ ಗದ್ಗದವಾಗುತ್ತದೆ. ಈ ಕೆಲಸವನ್ನು ದಹನ ದಿನದಿಂದಲೇ ಆರಂಭಿಸಬೇಕು. ಆದರೆ ನಾವೆಲ್ಲರೂ ಅಜ್ಞರಾಗಿ, ಎಲ್ಲಕ್ಕೂ ಪುರೋಹಿತರನ್ನೇ ಅವಲಂಬಿಸಿರುವುದರಿಂದ, ಅವರ ಅನುಕೂಲ, ಅನಾನುಕೂಲಗಳನ್ನು ಅನುಸರಿಸಿ ನಡೆದುಕೊಳ್ಳ

ಬೇಕಾಗುತ್ತದೆ. We have to pity ourselves at our plight. ಆದರೆ ಅದಕ್ಕೆ ಪರಿಹಾರವನ್ನು ಯಾರೂ serious ಆಗಿ ಕುಳಿತು ಯೋಚಿಸಿಲ್ಲ. ಇವತ್ತು ಕುಮಾರ ಹೇಳಿದಂತೆ, ನಾವುಗಳೇ ಪ್ರತಿಯೊಬ್ಬರೂ ಅವುಗಳನ್ನು ಕಲಿಯುವುದೇ ಪರಿಹಾರ. ಈ ಅಸಹಾಯಕ ಪರಿಸ್ಥಿತಿಯಲ್ಲಿ, 'ಅಮ್ಮ ! ನಿನಗೆ ನಾವುಗಳು ಇಷ್ಟೇ ಮಾಡಲು ಸಾಧ್ಯವಾಗಿದೆ' ಎಂದು ಹೇಳಿ ಒಂದು ಹಿಡಿ ಅನ್ನವನ್ನು ಹೊರಗಡೆ ಇಟ್ಟು ನಮಸ್ಕಾರ ಮಾಡಿದರೆ ಸಾಕು. ನಿಜವಾಗಲೂ ಖಂಡಿತವಾಗಲೂ ಸಾರ್ಥಕವಾಗುತ್ತದೆ. ಪುರೋಹಿತರು ಹೇಳುವ ಸಂಸ್ಕೃತ ವಾಕ್ಯಗಳಿಂದಲೇ (ಅವರು ಅದನ್ನು ತಪ್ಪುತಪ್ಪಾಗಿಯೂ ಹೇಳಬಹುದು) ಕರ್ಮ ಪೂರ್ತಿಯಾಗುತ್ತದೆ ಎಂಬ ಭಾವನೆ ಬೇಡ. ನಮಗೆ ಹಾಗೇ ರೂಢಿಯಾಗಿದೆ, ನಿಜ. ಸಾಧ್ಯವಿದ್ದಲ್ಲಿ ಹಾಗೇ ಮಾಡೋಣ. ಇಲ್ಲದಿದ್ದಾಗ ಆ ಕರ್ಮದ ಮೂಲಭೂತ ತತ್ತ್ವವನ್ನು ತಿಳಿದುಕೊಂಡು ನಮಗೆ ತಿಳಿದ ಭಾಷೆಯಲ್ಲಿಯೇ ಆ ಕರ್ಮಗಳನ್ನು ಮಾಡಿದರೆ ಸಾಕು. ಚರಿತಾರ್ಥವಾಗುತ್ತದೆ.

ನಾಗರಾಜ ! ನಿನ್ನ ತಾಯಿಯವರು ರಾಧಾಕೃಷ್ಣನ ಮಗಳ ವಿವಾಹದಲ್ಲಿ ನಿನ್ನ ಧರ್ಮಪತ್ನಿಯನ್ನು (ಆಗ ಇನ್ನೂ ಹುಡುಗಿ, ಸಣ್ಣವಳಾಗಿದ್ದಳು !!!) ಕರೆದುಕೊಂಡು ನಿನ್ನ ಜತೆಯಲ್ಲಿ ನನಗೆ ನಮಸ್ಕಾರ ಮಾಡಿಸಿದ್ದು ಜ್ಞಾಪಕವಿದೆ. ಅವರಿಗೆ ನನ್ನನ್ನು ಕಂಡರೆ ಏನೋ ಒಂದು ಅವ್ಯಕ್ತವಾದ ವಿಶ್ವಾಸ. ಅದನ್ನು ನಿನ್ನ ಮನೆಯಲ್ಲಿಯೇ ಎರಡು ಮೂರು ಬಾರಿ ತೋರಿಸಿದ್ದಾರೆ. ಎಲ್ಲಿ ಸಿಕ್ಕಿದರೂ ಹತ್ತಿರ ಬಂದು ವಿಶ್ವಾಸದಿಂದ ಮಾತನಾಡಿಸದೆ ಇರುತ್ತಿರಲಿಲ್ಲ. ಆ ಸಾಧ್ವಿಯ ಉತ್ತರಕ್ರಿಯೆಗಳಲ್ಲಿ ಭಾಗವಹಿಸುವುದು ನನ್ನ ಕರ್ತವ್ಯ. ಆದರೆ ಪರಿಸ್ಥಿತಿಯು ಒತ್ತಡಕ್ಕೆ ಸಿಕ್ಕಿ ಅಸಹಾಯಕನಾಗಿದ್ದೇನೆ. ಏನೂ ಮಾಡಲು ಆಗುತ್ತಿಲ್ಲ. ಅವರನ್ನು ಸ್ಮರಿಸಿಕೊಂಡು, ಕಣ್ಣಾಲಿಗಳು ತುಂಬುತ್ತಿದೆ. ಕಂಠ ಗದ್ಗದವಾಗುತ್ತಿದೆ. ಕೈ ತನ್ನ steadiness ಕಳೆದುಕೊಳ್ಳುತ್ತಿದೆ. ಅವರ ವಿಶ್ವಾಸವನ್ನು ಸ್ಮರಿಸಿಕೊಂಡು ಕಣ್ಣಲ್ಲಿ ಎರಡು ತೊಟ್ಟು ನೀರು ಬಿಡುವುದೇ ನಾನು ಅವರಿಗೆ ಸಲ್ಲಿಸುವ ತಿಲೋದಕ. ಅದೇ ನನ್ನ ಅಂತಿಮ ಶ್ರದ್ಧಾಂಜಲಿ.

ನೀವು ಯಾರನ್ನು ಮಾಡಿಸಬೇಕೆಂದು ಆಹ್ವಾನ ಮಾಡಿದ್ದೀರೋ, ಅವರಲ್ಲಿ ಅಚಲವಾದ ಶ್ರದ್ಧೆ ಇಟ್ಟುಕೊಂಡು ಅವರು ಹೇಳಿದಂತೆ ಮಾಡಿಕೊಂಡು ಹೋಗಿ. ಯಾವ comments ಗೂ ಅವಕಾಶ ಕೊಡಬೇಡಿ. ಅವರ ಹತ್ತಿರ ಚರ್ಚೆಯೂ ಕೂಡದು. ಮಾಡುವಾಗ ನಾನು Recordನಲ್ಲಿ ಹೇಳಿರುವ Conceptಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಿಕೊಂಡು ಹೋಗಿ. ಎಲ್ಲವೂ ಚರಿತಾರ್ಥವಾಗುತ್ತದೆ. ನಿಮ್ಮ ಆಂತರಿಕ ಶ್ರದ್ಧೆ, ನಿಮ್ಮ ತಾಯಿಯಲ್ಲಿರುವ ನಿಮ್ಮ ಭಕ್ತಿ, ಪ್ರೀತಿಗಳು ಮುಖ್ಯವೇ ಹೊರತು, ಕರ್ಮ ಮಾಡುವ ವಿಧಾನವಲ್ಲ. ಅವುಗಳನ್ನೂ ಒಂದು ಕ್ರಮ ಅನುಸರಿಸಿ ಮಾಡಬೇಕು, ನಿಜ. ಆದರೆ ಅದೇ ಮುಖ್ಯವಲ್ಲ, ಹೃದಯದಲ್ಲಿ ಯಾವಾಗಲೂ ನಿಮ್ಮ ತಾಯಿಯವರು ನಿಮಗೆ ಮಾಡಿರುವ ಉಪಕಾರದ ಸ್ಮರಣೆ ಜಾಗೃತವಾಗಿರಲಿ. ಸಾಕು.

ನಿಮ್ಮ ಮಾ||ಯವರು ಯಾವ ಲೋಕದಲ್ಲಿಯೇ ಇರಲಿ, ನೀವುಗಳು ಶ್ರದ್ಧೆಯಿಂದ ಇರುವುದನ್ನು ನೋಡಿ, ಖಂಡಿತವಾಗಿ ತೃಪ್ತಿಯಿಂದ ನಗುತ್ತಿದ್ದಾರೆ. ಆ ತೃಪ್ತಿಯ ನಗುವೇ ನಿಮಗೆ ಆಶೀರ್ವಾದ. ಭವಿಷ್ಯದಲ್ಲಿ ನಿಮ್ಮನ್ನು ಎಲ್ಲಾ ಸಮಸ್ಯೆಗಳಿಂದಲೂ ಕಾಪಾಡುವ ವಜ್ರಕವಚ. ಅದು ಖಂಡಿತ ನಿಮ್ಮೆಲ್ಲರಿಗೂ ಸಿದ್ಧವಾಗಿದೆಯೆಂದು ನನ್ನ ನಂಬಿಕೆ.

'ಸಂ ತ್ವಾ ಸಿಂಚಾಮಿ ಯಜುಷಾ ಪ್ರಜಾಮಾಯುರ್ಧನಂ ಚ' (ಇದು ನಮ್ಮ ಪಿತೃಮೇಧ ಮಂತ್ರಗಳಿಗೆ ಶಾಂತಿಮಂತ್ರ) ಅದು ನಿಮ್ಮ ವಿಷಯದಲ್ಲಿಯೂ ಅಕ್ಷರಶಃ ಸಾರ್ಥಕವಾಗಲಿ.

ನಾಗರಾಜ ! ನಾನು 24ನೇ ತಾರೀಖು ಶನಿವಾರ ಮಧ್ಯಾಹ್ನ Tippu ವಿನಲ್ಲಿ ಬರುತ್ತಿದ್ದೇನೆ. ಸಾಧ್ಯವಾದರೆ 4½ - 5 ಗಂಟೆ ವೇಳೆಗೆ ನಿನ್ನನ್ನು ಮನೆಯಲ್ಲಿ ನೋಡುತ್ತೇನೆ. ಯಾವುದಕ್ಕೂ phone ಮಾಡುತ್ತೇನೆ.

ಇತಿ ನಿಮ್ಮವ

ಕುಮಾರಸ್ವಾಮೀ

೫೩.೨

ಅಪರಕರ್ಮ ವಿಚಾರ

ಅಪಘಾತದಲ್ಲಿ ಪತ್ನಿಯನ್ನು ಕಳೆದುಕೊಂಡ ನಾರಾಯಣಸ್ವಾಮಿ ಅವರಿಗೆ ಬರೆದ ಪತ್ರ

कुशलम्   श्रीः   Mysore

3.9.98

ನಾರಾಯಣಸ್ವಾಮಿ !

ಇವತ್ತು ಬೆಳಗ್ಗೆ ನೀನು phone ಮಾಡಿದ ಮೇಲೆ ನಿನ್ನ ಹೃದಯಪೂರ್ವಕವಾದ ಕಳಕಳಿ (ಕರ್ಮ ಸರಿಯಾಗಿ ನಡೆಯಬೇಕು ಎನ್ನುವುದು), ಆ ಕರ್ಮಗಳಲ್ಲಿರುವ ಭಾವುಕತೆ, ಶ್ರದ್ಧೆಗಳನ್ನು ಅರ್ಥ ಮಾಡಿಕೊಂಡೆ (ಹಿಂದೆಯೂ ಮಾಡಿಕೊಂಡಿದ್ದೆ). ನಾನೇ ಬರಬೇಕು ಅನ್ನುವಷ್ಟು ಉತ್ಸಾಹ (ಮಾನಸಿಕವಾಗಿ). ಆದರೆ ದೇಹ ಕೇಳುತ್ತಿಲ್ಲ. ಇನ್ನೂ ವಿಪರೀತ ಸುಸ್ತು. ಕೈಕಾಲು ಸಾಯುತ್ತಿದೆ ಅನ್ನುತ್ತಾರಲ್ಲಾ ಹಾಗಿದೆ. ಆದ್ದರಿಂದ ನನ್ನ ಉತ್ಸಾಹವನ್ನು ಅದುಮಿ ಕಾಗದ ಬರೆಯಲು ಕೂತಿದ್ದೇನೆ.

ಮನೆಯಲ್ಲಿಯೇ ಎಲ್ಲಾ ಕೆಲಸಗಳನ್ನೂ ಮಾಡಬೇಕೆಂದು ನಿಶ್ಚಯಿಸಿರುವುದು ಎಲ್ಲ ವಿಧಗಳಿಂದಲೂ ಯುಕ್ತ ಮತ್ತು ಶಾಸ್ತ್ರೀಯ. ಅನೇಕರಿಗೆ ಈ ಕೆಲಸಗಳೆಂದರೆ ಏನೋ ಒಂದು ವಿಚಿತ್ರವಾದ ಭಯ ಬಂದುಬಿಟ್ಟಿದೆ. ಇನ್ನೊಬ್ಬರಿಗೂ ಭಯವನ್ನು ಉಂಟು ಮಾಡುತ್ತಾರೆ. ಆ ಭಯದ ಮೂಲಕಾರಣವನ್ನು ಸ್ವಲ್ಪ ವಿಚಾರ ಮಾಡಿದರೆ ಅದು ಬುಡವೇ ಇಲ್ಲದ್ದು ಎಂದು ಚೆನ್ನಾಗಿ ತಿಳಿಯುತ್ತದೆ. ಮೊದಲೆರಡು ದಿನಗಳು, ಮರಣ ಹೊದಿರುವ ನಮ್ಮ ತಾಯಿ ಅಥವಾ ತಂದೆಯ ಶರೀರಕ್ಕೆ ಮಾಡುವ ಸಂಸ್ಕಾರ. ಎಷ್ಟಾದರೂ ನಮಗೆ ಜನ್ಮ ಕೊಟ್ಟು ಸಾಕಿ ಸಲಹಿರುವ ಮಾತಾಪಿತೃಗಳ ಶರೀರಗಳಲ್ಲವೇ !! ಪ್ರಾಣ ಹೋಗಿ ಅದು ಶವವಾಗಿರಬಹುದು. ಆದರೆ ನಮ್ಮ ಪಾಲಿಗೆ ಇನ್ನೂ ತಾಯಿ ತಂದೆಯರ ದೇಹ ಎಂಬ ಭಾವನೆ ಹೋಗಲು ಸಾಧ್ಯವೇ ಇಲ್ಲ. ಅದು ಪವಿತ್ರ. ಅಂಥಾ ಪವಿತ್ರ ದೇಹವನ್ನು ಸುಮ್ಮನೆ ಬಿಸಾಕಬಾರದು ಎನ್ನುವ ದೃಷ್ಟಿಯಿಂದ 'ದಹನ', 'ಸಂಚಯನ' ಎಂಬ ಸಂಸ್ಕಾರಗಳನ್ನು ಅಳವಡಿಸಿದ್ದಾರೆ. ದೇವತೆಗಳಿಂದ ಸೃಷ್ಟಿಯಾಗಿ ನಮ್ಮ ದೇಹದ ಪ್ರತಿಯೊಂದು ಭಾಗಕ್ಕೂ ಅಧಿಷ್ಠಾನದೇವತೆಗಳಾಗಿದ್ದುಕೊಂಡು, ಆಯಾಯಾ ಅಂಗಗಳ ಚಟುವಟಿಕೆಗೆ ಕಾರಣೀಭೂತರಾದ ಆ ದೇವತೆಗಳಿಗೇ ಪುನಃ ಆ ಅಂಗಗಳು ತಲಪಲಿ ಎಂಬ ಭಾವನೆಯಿಂದ ಮಂತ್ರವತ್ತಾಗಿ ಅಗ್ನಿಯನ್ನು ಸಂಧಾನ ಮಾಡಿ, ಆ ಕವ್ಯವಾಹನನಲ್ಲಿ ದೇಹವನ್ನು ಹವಿಸ್ಸಾಗಿ ಅರ್ಪಿಸುತ್ತೇವೆ. ಅದಕ್ಕೇ ಸೂತ್ರಕಾರರು ಅದನ್ನು 'ಪಿತೃಮೇಧ' ಅಥವಾ 'ಪಿತೃಯಜ್ಞ' ಎಂದು ಕರೆದರು. ಬಾಕಿ ಯಜ್ಞಗಳು ಕಣ್ಣಿಗೆ ಕಾಣದಿರುವ ದೇವತೆಗಳಿಗೆ ಮಾಡುತ್ತೇವೆ. ಆದರೆ ಇದು ಪ್ರತ್ಯಕ್ಷ ದೇವತೆಗಳಾದ ಮಾತಾಪಿತೃಗಳಿಗೆ ಮಾಡುವ ಯಜ್ಞ, ಅದನ್ನು ವಿಶೇಷವಾಗಿ ಮಾಡಬೇಡವೇ !! ಈ ಕಾರಣದಿಂದಲೇ ಪ್ರಾಣ ಹೋದಮೇಲೆ ಆ ದೇಹವನ್ನು 3-4 ಘಂಟೆಗಳ ಮೇಲೆ ಇಡಬಾರದೆನ್ನುತ್ತಾರೆ. ಅದು ಪರ್ಯುಷಿತ (ಹಳಸುವುದು) ವಾಗುತ್ತದಂತೆ ! ಹಳಸಿದ್ದನ್ನು ದೇವತೆಗಳಿಗೆ ಹವಿಸ್ಸಾಗಿ ಕೊಡಬಾರದಲ್ಲವೇ ! ಅದನ್ನು ಹೊತ್ತುಕೊಂಡು ಹೋಗುವಾಗಲೂ ದೇವತೆಗಳಿಗೆ ಕೊಡುವ ಪವಿತ್ರವಾದ ಹವಿಸ್ಸನ್ನು ಹೊತ್ತುಕೊಂಡು ಹೋಗುತ್ತಿದ್ದೇವೆ ಎಂಬ ಭಾವನೆಯಿಂದ ಮಡಿಯಾಗಿ, ಶ್ರದ್ಧೆಯಿಂದ ಹೊರಬೇಕಂತೆ !! ಆ ದಹನ ಕಾಲದಲ್ಲಿ ಹೇಳುವ ಮಂತ್ರಗಳೂ, ಹೋಮಗಳೂ ಎಲ್ಲವೂ ನಮಗೆ ಮಾತಾಪಿತೃಗಳಲ್ಲಿರುವ ಭಕ್ತಿ, ಪ್ರೀತಿ, ಗೌರವಗಳನ್ನು ಬಹಳ ಮುದ್ದಾಗಿ ಸೂಚಿಸುವಂಥ ಮಂತ್ರಗಳು !! ಅವುಗಳ ತಾತ್ಪರ್ಯ ತಿಳಿದುಕೊಂಡು ಭಾವುಕತೆಯಿಂದ ಕಣ್ಣಲ್ಲಿ ನೀರು ತುಂಬಿಕೊಳ್ಳುವುದೊಂದೇ ಅವುಗಳಿಗೆ ಪ್ರಯೋಜನವೇ ಹೊರತು, ಆ ಕ್ರಿಯೆಗಳಿಂದ ಸತ್ತವರಿಗೆ ಏನೋ ಸಿಗುತ್ತದೆಂತಲ್ಲ. ಜನಗಳಲ್ಲಿ ಬಹಳ ವರ್ಷಗಳಿಂದ ಇದೊಂದು misconcept ಬಂದುಬಿಟ್ಟಿದೆ. "ಆ ದೇಹಕ್ಕೆ ಸಂಸ್ಕಾರ ಮಾಡದಿದ್ದರೆ ಅವರಿಗೆ ಸದ್ಗತಿ ಸಿಗುವುದಿಲ್ಲ, ಪಿಶಾಚಗಳಾಗಿ ನಮ್ಮನ್ನು ಕಾಡುತ್ತಾರೆ. ಆದ್ದರಿಂದ ಸಂಸ್ಕಾರ ಮಾಡಲು ಒಂದು ಸಂತಾನವಾದರೂ ಬೇಕು." ಇದರಷ್ಟು ತಪ್ಪು ಅಭಿಪ್ರಾಯ ಬೇರಾವುದೂ ಇಲ್ಲ. ಇದರಿಂದಲೇ ಎಲ್ಲರಿಗೂ ಈ ಕರ್ಮಗಳ ವಿಷಯದಲ್ಲಿ ಭಯ ಬಂದಿರುವುದು. ನಾರಾಯಣ ಸ್ವಾಮಿ! ನಮ್ಮ ಕರ್ಮಸಿದ್ಧಾಂತದ ಪ್ರಕಾರ ಅವರವರ ಕರ್ಮಫಲವನ್ನು ಅನುಭವಿಸಲು ಅವರುಗಳು ನಿಗದಿಯಾದ ಶರೀರವನ್ನು ಮುಂದಿನ ಜನ್ಮದಲ್ಲಿ ಹೊಂದುತ್ತಾರೆ. ಅದು ಯಾವುದು ಎಂಬುದು ಯಾರಿಗೂ ತಿಳಿಯದು. ಆದರೆ "Even Gods cannot alter the results of the Karma, performed by the individual" ಎನ್ನುವುದು ಸಿದ್ಧಾಂತ. ಎಲ್ಲರೂ ಒಪ್ಪುವಂಥಾದ್ದೂ ಹೌದು. ಹೀಗಿರುವಾಗ ನಾವು (ಮಕ್ಕಳೇ ಆಗಲಿ), ಅವರ ಹೆಸರು ಹೇಳಿ ಕೆಲವು ಕರ್ಮಗಳನ್ನು ಮಾಡಿ, ಅವರಿಗೆ ಸದ್ಗತಿಯನ್ನು ಕೊಡಿಸುತ್ತೇವೆ ಎನ್ನುವುದು ಬಹಳ ಧಾರ್ಷ್ಟ್ಯದ ಮಾತು. ಅವರಿಗೆ ಸದ್ಗತಿ ಸಿಗಲಿ ಎಂದು ಪ್ರಾರ್ಥನೆ ಮಾಡುವುದು ಬೇರೆ. That is our prayer, our wish. ಆದರೆ ವಸ್ತುಸ್ಥಿತಿ ಬೇರೆ. ಹಾಗೆಂದು ಪ್ರಾರ್ಥನೆ ಮಾಡುವುದು ತಪ್ಪೆಂದಲ್ಲ, ಅದು ಮನುಷ್ಯ ಸ್ವಭಾವ. ಸಜ್ಜನರ ಸ್ವಭಾವ. We always wish the best for others. ಈ ಔರ್ಧ್ವದೈಹಿಕ ಕ್ರಿಯೆಗಳಲ್ಲಿ ನಾವು ಮಾಡುವುದೂ ಅಷ್ಟೆ. ಅದಕ್ಕೆ ಯಾಕೆ ಇಷ್ಟೊಂದು ಭಯ ಎನ್ನುವುದು ತಿಳಿಯಲಿಲ್ಲ. ಅದೊಂದು ಪವಿತ್ರ ಯಜ್ಞ, ಬೇರೆ ಯಜ್ಞಗಳಿಗಿಂತ ಉತ್ತಮವಾದ ಯಜ್ಞ ಎನ್ನುವುದನ್ನು ಸ್ಮರಿಸಿಕೊಂಡರೆ ಭಯ ತಾನಾಗಿ ಬಿಟ್ಟುಹೋಗುತ್ತದೆ. ದೇಹವು ದಹನವಾದ ಮೇಲೆ, ಉಳಿದ ಅಸ್ಥಿಗಳು ಪವಿತ್ರ ಎಂಬ ಭಾವನೆಯಿಂದ ಅವುಗಳನ್ನು ಭಕ್ತಿಯಿಂದ ಕೂಡಿಹಾಕಿ, ಪವಿತ್ರವಾದ ನದಿಯಲ್ಲಿ ವಿಸರ್ಜನೆ ಮಾಡುವುದು, ಇದೂ ನಮಗೆ ಅವರಲ್ಲಿರುವ ಭಕ್ತಿ, ಪ್ರೀತಿಗಳ ಸೂಚಕ ಕ್ರಿಯೆಯೇ ಹೊರತು ಅವುಗಳಿಂದ ಅವರಿಗೆ ಯಾವ ವಿಧವಾದ ಪರಿಣಾಮವೂ ಆಗುವುದು ಸಾಧ್ಯವಿಲ್ಲ.

ಇದಾದಮೇಲೆ ನಿತ್ಯವಿಧಿ ಎಂದು ಮಾಡುತ್ತೇವೆ. ಇದಂತೂ ಕೇವಲ ಭಾವನಾಪ್ರಧಾನವಾದ ಕರ್ಮ. ಮಂತ್ರಗಳೇ ಇಲ್ಲ, ನಮ್ಮ ಭಾವನೆಗಳನ್ನು ಸೂಚಿಸುವ ಕೆಲವು ಸಂಸ್ಕೃತ ವಾಕ್ಯಗಳಿರುತ್ತವೆ. ಆತ್ಮವು ಶರೀರವನ್ನು ಬಿಟ್ಟು ಹೋಗುವಾಗ ಸೂಕ್ಷ್ಮವಾದ ಪಂಚ ಪ್ರಾಣಗಳು, ಪಂಚ ಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ ಈ 17 ಇಂದ್ರಿಯ ಸಹಿತವಾಗಿ ಹೋಗುತ್ತದೆ. ಜೀವಂತ ದೇಹದಲ್ಲಿ 75-80 ವರ್ಷಗಳು ಇದ್ದು ಆ ಇಂದ್ರಿಯಗಳ ಸಹಾಯದಿಂದ ಅನುಭವಿಸಿದ

ಸಕಲ ನೆನಪುಗಳೊಡನೆ ಆತ್ಮನು ಹೊರಗೆ ಹೋಗಿರುತ್ತಾನೆ (ಯದ್ಯಪಿ ಆತ್ಮ, ಶುದ್ಧ ಚೈತನ್ಯ. ಆದರೆ ಅಜ್ಞಾನಾವಸ್ಥೆಯಲ್ಲಿ ಈ ಇಂದ್ರಿಯಗಳ ಆವರಣ ಇದ್ದೇ ಇರುತ್ತದೆ. ಆ ಆವರಣವನ್ನು ಕಳಚಿ ಶುದ್ಧ ಜ್ಞಾನಸ್ವರೂಪನಾಗುವುದೇ ವೇದಾಂತ ಸಾಧನೆ). ಅಷ್ಟು ವರ್ಷಗಳು ತಾನು ವಾಸ ಮಾಡುತ್ತಿದ್ದ ಮನೆಯನ್ನು ಬಿಟ್ಟು ಹೋದಾಗ ಅದರ ಸ್ಮರಣೆ ಬರುವುದು ಸಹಜವಲ್ಲವೇ ! ಜತೆಗೆ ಅಜ್ಞಾನದಿಂದ, ತಾನೇ ದೇಹ ಎಂಬ ಅಧ್ಯಾಸ ಬೇರೆ (false identity) ಮಾಡಿಕೊಂಡಿರುತ್ತಾನೆ. ಆದ್ದರಿಂದ ಆ ದೇಹದ ನೆನಪು ಸದಾ ಕಾಲವೂ ಬರುತ್ತಿರುತ್ತದಂತೆ ! ಈ ದೇಹಾಭಿಮಾನವನ್ನೇ 'ಪ್ರೇತತ್ವ' ಎಂದು ಹೇಳುತ್ತಾರೆ. ಸಂಕಲ್ಪದಲ್ಲಿಯೂ 'ಪ್ರೇತಸ್ಯ, ಪ್ರೇತತ್ವ ವಿಮೋಚನಾರ್ಥಂ' ಎಂದು ಹೇಳುತ್ತೇವೆ. ಈ ಶಬ್ದಗಳೇ ಜನಗಳಿಗೆ ಭಯ. ಪ್ರೇತ ಅಂದ ಕೂಡಲೆ ಪಿಶಾಚಿ ಜ್ಞಾಪಕಕ್ಕೆ ಬರುತ್ತದೆ. ಭಯವಾಗುತ್ತದೆ. ನಮ್ಮ ಈ ಪ್ರೇತ, ಪಿಶಾಚಿಗಳು ಕೇವಲ ಕಾಲ್ಪನಿಕ. 'ಪ್ರೇತಃ' ಅಂದರೆ ಸಂಸ್ಕೃತದಲ್ಲಿ 'ಪ್ರ + ಇತಃ' (ಇಲ್ಲಿಂದ ಹೋದವನು) ಎಂದರ್ಥ. ಅಂದರೆ ದೇಹವನ್ನು ಬಿಟ್ಟುಹೋಗಿರುವ ಆತ್ಮನಿಗೇ ಪ್ರೇತ ಎಂದು ಹೆಸರು. ಶವಕ್ಕೂ ಪ್ರೇತ ಎಂದು ಹೇಳುವ ರೂಢಿ ಬಂದಿದೆ. ಆದರೆ ಇಲ್ಲಿ ಸರಿಯಾದ ಅರ್ಥ ಆತ್ಮನೇ. ಅವನಿಗೆ ತಾನು ಬಿಟ್ಟುಹೋದ ದೇಹದ ಮೇಲೆ ಇರುವ ಅಭಿಮಾನವೇ 'ಪ್ರೇತತ್ವ'. ಆ ಅಭಿಮಾನ ಅವನಿಗೆ ಹೋಗಬೇಕು. ಪುನಃಪುನಃ ಅದನ್ನೇ ಸ್ಮರಿಸಿಕೊಂಡು ಕಷ್ಟಪಡಬೇಡ ಎಂಬ ಭಾವನೆಯಿಂದ ಮಾಡುವ ಕ್ರಿಯೆಗಳೇ ನಿತ್ಯವಿಧಿ.

ಆ ಆತ್ಮನಿಗೆ ಕೇವಲ ಸ್ಮರಣೆಯೇ ಅಲ್ಲ. ಬಹಳ ತಾಪವಾಗುತ್ತದಂತೆ !! ತಾನು ಅನೇಕ ವರ್ಷಗಳು ವಾಸಮಾಡಿದ್ದ ಗೂಡನ್ನು ತನ್ನೆದುರಿಗೇ ಸುಟ್ಟುಹಾಕುತ್ತಿರುವುದನ್ನು ನೋಡಿ ಬಹಳ ತಾಪಪಡುತ್ತಾನಂತೆ ! ನಮ್ಮ ಸ್ವಂತ ಮನೆಯಲ್ಲಿ 50-60 ವರ್ಷಗಳು ವಾಸಮಾಡಿ ಕೊನೆಯಲ್ಲಿ ನಮ್ಮನ್ನು ಹೊರಕ್ಕೆ ತಳ್ಳಿ ಆ ಮನೆಗೆ ಯಾರಾದರೂ ಬೆಂಕಿ ಹಚ್ಚಿದರೆ ನಮಗೆ ತಾಪವಾಗುವುದಿಲ್ಲವೇ!! ಆ ತಾಪವನ್ನೇ ನಮ್ಮ ತಂದೆತಾಯಿಗಳೂ ಪಡುತ್ತಾರೆಂದು ನಾವು ಭಾವಿಸಿ, ಅದಕ್ಕೇನಾದರೂ ಪರಿಹಾರ ಮಾಡಬೇಕೆಂದು ಹೊರಟಿರುವುದೇ ನಿತ್ಯವಿಧಿ. ಅವರ ಸ್ವರೂಪವನ್ನು ಒಂದು ಶಿಲೆಯಲ್ಲಿ ಭಾವಿಸಿಕೊಂಡು ಅದಕ್ಕೆ 'ದಹನಜನಿತ ತಾಪೋಪಶಮನಾರ್ಥಂ ವಾಸೋದಕಂ ದದಾಮಿ' (ದಹನದಿಂದ ಉಂಟಾದ ತಾಪದ ಉಪಶಮನಕ್ಕೋಸ್ಕರ ವಾಸೋದಕವನ್ನು ಕೊಡುತ್ತೇನೆ) ಎಂದು ಹೇಳಿ ಹೊಸ ಬಟ್ಟೆಯ ನೀರನ್ನು ಶಿಲೆಯ ಮೇಲೆ ಹಿಂಡುತ್ತೇವೆ. ಅಷ್ಟೇ ಅಲ್ಲ, ಆ ತಾಪದಿಂದ ಅವರಿಗೆ ವಿಪರೀತ ದಾಹ, ಹಸಿವುಗಳು ಉಂಟಾಗುತ್ತವೆ. ಅದಕ್ಕೆ 'ದಹನಜನಿತತೃಷ್ಣೋಪಶಮನಾರ್ಥಂ ತಿಲೋದಕಂ ದದಾಮಿ' (ದಾಹ ಉಪಶಮನಕ್ಕೋಸ್ಕರ ತಿಲೋದಕವನ್ನು ಕೊಡುತ್ತೇನೆ), 'ದಹನಜನಿತಕ್ಷುದುಪಶಮನಾರ್ಥಂ ಪಿಂಡಂ ದದಾಮಿ' (ಹಸಿವಿನ ಶಮನಕ್ಕೋಸ್ಕರ ಪಿಂಡಪ್ರದಾನ ಮಾಡುತ್ತೇನೆ.), ಎಂದು ಹೇಳಿ ತಿಲೋದಕ ಪಿಂಡದಾನಾದಿಗಳನ್ನು ಮಾಡಬೇಕು. ಇಷ್ಟೇ ನಿತ್ಯವಿಧಿ. ಇದರಿಂದ ಅವರಿಗೆ ತಾಪ, ತೃಷ್ಣಾ, ಕ್ಷುತ್ ಇವುಗಳ ಶಮನವಾಗುತ್ತದೆಯೋ ಎಂದು ಕೇಳಿದರೆ ಗೊತ್ತಿಲ್ಲ. ಆದರೆ ಯಾರಿಗಾದರೂ ಹಾಗಾಗುವುದು ಸಹಜ (ನಮ್ಮಂತೆ ಇರುವ ಅಜ್ಞಾನಿಗಳಿಗೆ. ಅದಕ್ಕೇ ಸನ್ಯಾಸಿ ಜ್ಞಾನಿಯಾಗಿದ್ದಾನೆ. ಅವನಿಗೆ ಈ ದೇಹಾಭಿಮಾನವಿಲ್ಲ ಎಂದು ತಿಳಿದು ಅವನು ಪ್ರಾಣ ಬಿಟ್ಟಾಗ ಇದೆಲ್ಲಾ ಮಾಡುವುದಿಲ್ಲ) ಎಂದು ತಿಳಿದು ಮಾಡುತ್ತೇವೆ. ಅವರು ಕಷ್ಟಪಡುವುದನ್ನು imagine ಮಾಡಿಕೊಂಡು ಸಹಿಸಲಾರದೆ, ನಾವೇನೋ ಪರಿಹಾರ ಮಾಡಿ ಸಮಾಧಾನಪಟ್ಟುಕೊಳ್ಳುವ ಬಗೆ ಇದು. ಶೃಂಗೇರಿ ಶಾರದಾಂಬೆಯು ನವರಾತ್ರಿಯಲ್ಲಿ ಬಾಣಂತಿ ಎಂದು ಭಾವಿಸಿ, ನಾವು ಕಷಾಯ, ಲೇಹ್ಯಗಳನ್ನು ತಿನ್ನುವ ಹಾಗೆ! ಪುರಿ ಜಗನ್ನಾಥನಿಗೆ ವರ್ಷದಲ್ಲಿ 15 ದಿನಗಳು ಜ್ವರ ಎಂದು ಭಾವಿಸಿ, ಭಕ್ತರೆಲ್ಲರೂ, ಕಷಾಯ, ಔಷಧಿಗಳನ್ನು ಸೇವಿಸುತ್ತಾರೆ. ಮೋತಿಲಾಲ್ ನೆಹರೂ, ಮಗ ಜೈಲಿಗೆ ಹೋಗಿದ್ದಾಗ ಅವನು ಕಲ್ಲಿನ ಮೇಲೆ ಮಲಗುತ್ತಾನೆಂದು ಅವನ ಕಷ್ಟ ಸ್ಮರಿಸಿಕೊಂಡು ತಾವು ಆನಂದ ಭವನದಲ್ಲಿ ನೆಲದ ಮೇಲೆ ಮಲಗುತ್ತಿದ್ದರಂತೆ !! ನನ್ನ ಮಾ|| ಯವರು ನಾನು ರೈಲಿನಲ್ಲಿ ವಾರಾಣಸಿಗೆ ಹೋಗುವಾಗ ಉಪವಾಸ ಮಾಡುತ್ತೇನೆಂದು ತಿಳಿದು ತಾವೂ ಎರಡು ದಿನ ಉಪವಾಸ ಇರುತ್ತಿದ್ದರಂತೆ !! ಇವೆಲ್ಲಾ ಪ್ರೀತ್ಯಭಿಮಾನಗಳು ಇರುವೆಡೆ ನಡೆಯುವಂಥ ಸಹಜ ಕ್ರಿಯೆಗಳು. ಅದನ್ನೇ ನಾವೂ ನಿತ್ಯವಿಧಿಯಲ್ಲಿ ಮಾಡುತ್ತೇವೆ. ಅದಕ್ಕೇ ಆ ನಿತ್ಯವಿಧಿಯನ್ನು ದಹನ ಮಾಡಿದ ಕೂಡಲೆ ಆರಂಭಿಸಬೇಕು. ಹಾಗೆಯೇ ಮರಣಹೊಂದಿದ ವ್ಯಕ್ತಿಯು ಎಲ್ಲಿ ಇದ್ದುಕೊಂಡು ಎಲ್ಲವನ್ನೂ ಅನುಭವಿಸಿದರೋ ಅಲ್ಲಿಯೇ ಮಾಡುವುದು ಯುಕ್ತ. ಮನೆಯಲ್ಲಿಯೇ ಮಾಡುವುದು ಸರ್ವಥಾ ಯುಕ್ತ. ನಮಗೆ ಅವರನ್ನು ಸ್ಮರಿಸಿಕೊಂಡು ಭಾವನಾಯುಕ್ತರಾಗಿ ಮಾಡಲೂ ಅನುಕೂಲ.

ಇಲ್ಲಿ ಭಯಕ್ಕೆ ಪ್ರಸಂಗವೇನು ಎನ್ನುವುದೇ ತಿಳಿಯಲಿಲ್ಲ. ನಾವು ಅಲ್ಲಿಯೇ ಮಾಡಿಬಿಟ್ಟರೆ ಪಿಶಾಚಿಯಾಗಿ ಎಲ್ಲಿ ಬಂದು ಬಿಡುತ್ತಾರೋ ಎಂಬ ಭಯವಿರಬಹುದು. ಮೊದಲನೆಯದಾಗಿ, ಇರುವವರೆಗೂ ನಮ್ಮನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ನಮ್ಮ ತಾಯಿ ತಂದೆಯರು ಸತ್ತ ತಕ್ಷಣ ಪಿಶಾಚಿಗಳಾಗಿ ನಮ್ಮನ್ನು ಬಂದು ಕಾಡುತ್ತಾರೆಂಬ ಯೋಚನೆ ಬರುವುದು, ಕಾಡುಜನಗಳ

ಸಂಸ್ಕೃತಿ. ನಾವು ಅದನ್ನು ಬಿಡಬೇಕು. ಎರಡನೆಯದಾಗಿ ನಾವು ನಿತ್ಯವಿಧಿಯನ್ನು ಬೇರೆ ಕಡೆ ಮಾಡಿದ ಮಾತ್ರಕ್ಕೇ ನಮ್ಮ ಮನೆಯ ಮೇಲಿನ ಅಭಿಮಾನ ಅವರಿಗೆ ಹೋಗಲು ಸಾಧ್ಯವೇ ! ಅವರು ಯಾವಾಗಲೂ ಎಲ್ಲೆಲ್ಲಿಯೂ ತಮ್ಮ ಅಭಯಹಸ್ತವನ್ನು ನಮ್ಮ ತಲೆಯ ಮೇಲಿಟ್ಟು ಕಾಪಾಡುತ್ತಿರುತ್ತಾರೆಂದು ಭಾವಿಸುವುದು ಸುಸಂಸ್ಕೃತಿಯಲ್ಲವೇ ! ಆ ಕೆಲಸವನ್ನು ಮಾಡಿ ಮುಗಿಸಿ ಅವರನ್ನು ದೂರ ತಳ್ಳಿ ನಿರಾಳವಾಗಿ ಬಂದಿದ್ದೇವೆಂದು ಭಾವಿಸುವುದು It is the crudest culture. It is ultimate stupidity.

ಹೀಗೆ ಹತ್ತು ದಿನಗಳು ನಿತ್ಯವಿಧಿಯನ್ನು ಮಾಡಿ ಮುಗಿಸಿ ಹತ್ತನೇ ದಿನ ಅವರಿಗೆ ವಿಪರೀತ ಹಸಿವಾಗಿರುತ್ತದೆಂದು ಭಾವಿಸಿ, ಪ್ರಭೂತಬಲಿಯನ್ನು ಕೊಡುತ್ತೇವೆ. ಆಮೇಲೆ ನಮ್ಮ ಮನಸ್ಸಿಗೆ ಉಂಟಾಗಿರುವ ಶೋಕವು ಕಮ್ಮಿಯಾಯಿತೆಂದು ಭಾವಿಸಿ, ಶಾಂತಿ ಸಮಾಧಾನಗಳನ್ನು ಹೊಂದಲು, 'ಶಾಂತಿಹೋಮ, ಆನಂದ ಹೋಮ' ಎಂದು ಮಾಡುತ್ತೇವೆ.

11ನೇ ದಿನ ಸ್ನಾನಾದಿಗಳಿಂದ ಶುಚಿರ್ಭೂತರಾಗಿ, ಮಧ್ಯಾಹ್ನ ಸತ್ತವರನ್ನು ಉದ್ದೇಶಿಸಿ 'ಮಹೈಕೋದ್ದಿಷ್ಟ' ಎಂಬ ಶ್ರಾದ್ಧವು ನಡೆಯುತ್ತದೆ. ಸಾಮಾನ್ಯವಾಗಿ ಶ್ರಾದ್ಧವೆಂದರೆ, ತ್ರಿಪೂರುಷೋದ್ದೇಶೀನ, ವಿಶ್ವೇದೇವ ಸಹಿತವಾಗಿ ಮಾಡುವುದು. ಅವತ್ತು ಅವರು ಯಾರೂ ಇಲ್ಲದೆ ಕೇವಲ ಮಾತಾ, ಪಿತೃ ಉದ್ದೇಶವಾಗಿ ಮಾಡುವುದಕ್ಕೆ 'ಏಕೋದ್ದಿಷ್ಟ' ಎಂದು ಹೆಸರು. ಅದರಲ್ಲಿಯೂ ವಿಶೇಷವಾದ ಶ್ರಾದ್ಧವಾದ್ದರಿಂದ 'ಮಹೈಕೋದ್ದಿಷ್ಟ' ಎನ್ನುತ್ತಾರೆ. ಸೂತ್ರಕಾರರ ಕಾಲದಲ್ಲಿಯೇ ಬ್ರಾಹ್ಮಣರು ಬಂದು ಪ್ರತ್ಯಕ್ಷವಾಗಿ ಊಟಮಾಡಲು ಭಯಪಟ್ಟಿದ್ದಾರೆ ಅಂತ ಕಾಣುತ್ತೆ. ಅದಕ್ಕೇ ಸೂತ್ರಕಾರರೇ, ಬ್ರಾಹ್ಮಣಾಲಾಭವಾದರೆ, ಅಗ್ನಿಯನ್ನೇ ಬ್ರಾಹ್ಮಣನೆಂದು ಭಾವಿಸಿ, ಅದರಲ್ಲಿಯೇ ಸಾಮಾನ್ಯವಾಗಿ ಗೃಹಸ್ಥನು ಊಟ ಮಾಡುವ 32 ಕಬಳಗಳನ್ನು ಹೋಮ ಮಾಡಬೇಕೆನ್ನುತ್ತಾರೆ. ಸುಮ್ಮನೆ ಅಗ್ನಿಯಲ್ಲಿ ಕೊಡುವುದಕ್ಕೆ ಬದಲಾಗಿ ಪುರುಷಸೂಕ್ತ ಮಂತ್ರಗಳಿಂದ ಕೊಡುತ್ತೇವೆ (ಇದರಲ್ಲಿಯೂ ಅಗ್ನಿಯೇ ಪ್ರೇತವೆಂಬ ಭಯದಿಂದ ಹಿಮ್ಮೊಗನಾಗಿ ನಿಂತು ಹೋಮ ಮಾಡುವುದು ಮುಂತಾದ ಕೆಟ್ಟ ದುಷ್ಟ ಪದ್ಧತಿಗಳೆಲ್ಲಾ ಬಂದಿವೆ. ಇವೆಲ್ಲಾ ಅಯುಕ್ತ ಅನಾಗರಿಕ, ಕುಸಂಸ್ಕೃತಿ). ಇದೇ 11ನೇ ದಿನದ ಶ್ರಾದ್ಧ.

12ನೇ ದಿನ 'ಸಪಿಂಡೀಕರಣಶ್ರಾದ್ಧ'. ಇದು ವರ್ಷಾಂತದಲ್ಲಿ ಮಾಡಬೇಕಾದ್ದು. ಅಲ್ಲಿವರೆಗೂ ನಾವೇ ಇರುತ್ತೇವೋ ಇಲ್ಲವೋ ಎಂಬ ಸಂದೇಹದಿಂದ 12ನೇ ದಿನವೇ ಮಾಡುವ ಅಭ್ಯಾಸ ಬಂದಿದೆ. ಅಂದರೆ ಸತ್ತ ನಮ್ಮ ಮಾತಾಪಿತೃಗಳು, ದೇವತಾತ್ವವನ್ನು ಹೊಂದಿ ನಮ್ಮ ಹಿಂದಿನ ಪಿತೃದೇವತೆಗಳ ಜತೆ ಸೇರಿದರು ಎಂದು ಭಾವಿಸಿಕೊಳ್ಳುವುದಕ್ಕೋಸ್ಕರ ಮಾಡುವ ಒಂದು ಉತ್ತಮವಾದ ಶ್ರಾದ್ಧಕರ್ಮ. ಇದು ಪಾರ್ವಣ ಶ್ರಾದ್ಧದಂತೆಯೇ ನಡೆಯುತ್ತದೆ. ಸತ್ತವರ ಪಿತೃ, ಪಿತಾಮಹ, ಪ್ರಪಿತಾಮಹ, ವಿಶ್ವೇದೇವ, ವಿಷ್ಣು ಇವರ ಜತೆಗೆ ಮರಣ ಹೊಂದಿದ ಮಾತಾಪಿತೃ (ಪ್ರೇತ) ಇಷ್ಟು ಜನರಿಗೆ ನಡೆಯುತ್ತದೆ. ಎಲ್ಲ ಶ್ರಾದ್ಧದಂತೆಯೇ ಮಾಡಬೇಕು. ಪ್ರೇತಸ್ಥಾನಕ್ಕೆ (ನಮ್ಮ ಸ್ವಂತ ಮಾತಾಪಿತೃಗಳಲ್ಲವೇ!) ವಿಶೇಷವಾದ ಉಪಚಾರ ಮಾಡಬೇಕಂತೆ ! ಆ ಸ್ಥಾನಗಳಿಗೆ ಸರಿಯಾದವರು ಬರಲು ಭಯಪಡುತ್ತಾರೆ. ಆದ್ದರಿಂದ ಅದಕ್ಕೆಂದೇ ನಾಮಕರಣ ಮಾಡಿಕೊಂಡಿರುವ "ಸಪಿಂಡೀಬ್ರಾಹ್ಮಣರು" ಎಂಬವರನ್ನು ಕರೆಯುತ್ತಾರೆ. ಅವರು ಬಂದು ಅಡುಗೆ ಮಾಡಿಕೊಂಡು ಊಟ ಮಾಡಿ, ಪಾತ್ರೆ ತೊಳೆದು ಹೊರಟು ಹೋಗಬೇಕಂತೆ! ಅವರು ಹೋದ ಜಾಗಕ್ಕೆ ಸಗಣಿ ನೀರು ಹಾಕುತ್ತಾರೆ!! ಇದರಂಥ ಕುಕೃತ್ಯ, ಅಜ್ಞಾನ ವಿಜೃಂಭಿತ ಕ್ರಿಯೆ ಇನ್ನಾವುದೂ ಇರಲಾರದು. ಮನೆಗೆ ಬಂದವರನ್ನು ಯಾರನ್ನೂ ಈ ರೀತಿ treat ಮಾಡಕೂಡದು. ಅದರಲ್ಲಿಯೂ ನಮ್ಮ ಮಾತಾಪಿತೃಗಳನ್ನು !!! ತುಂ....ಬಾ ಅನ್ಯಾಯ. ಆದ್ದರಿಂದ ಈಚೆಗೆ ಆ ಸ್ಥಾನಗಳಿಗೆ ಕೂರ್ಚ ಕಟ್ಟಿಹಾಕಿ, ಅವುಗಳನ್ನೇ ಮಾತಾಪಿತೃಗಳೆಂದು ಭಾವಿಸಿ, ಸಪಿಂಡೀಕರಣ ಮಾಡುವ ಅಭ್ಯಾಸ ಬಂದಿದೆ. ನ್ಯಾಯವಾಗಿಯೂ ಇದೆ. ಭಕ್ತಿಶ್ರದ್ಧೆಗಳನ್ನು ತೋರಿಸಲು ನಮಗೆ ಇಷ್ಟವಿದ್ದರೂ, ಆ 'ಸಪಿಂಡೀ ಬ್ರಾಹ್ಮಣ'ರನ್ನು ನೋಡಿದರೇ ಅಸಹ್ಯವಾಗುತ್ತದೆ. ನಮಸ್ಕಾರ ಮಾಡಲೂ ಮನಸ್ಸು ಬರುವುದಿಲ್ಲ, ಹಾಗೆ ತಿರಸ್ಕಾರದಿಂದ ಅವರಿಗೆ ಉಪಚಾರಾದಿಗಳನ್ನು ಮಾಡಲು ಹೋದರೆ ಕೇವಲ ಕೃತಕವಾಗುತ್ತದೆ. ಯೋಗ್ಯರು ಬರುವುದಿಲ್ಲ, ಆದ್ದರಿಂದ ಕೂರ್ಚಗಳನ್ನಿಟ್ಟು ಮಾಡುವುದು ಯುಕ್ತ. ಶ್ರಾದ್ಧಾಂತದಲ್ಲಿ ಸತ್ತವರ ಪಿತೃ, ಪಿತಾಮಹಾದಿಗಳಿಗೆ ಪಿಂಡಪ್ರದಾನವನ್ನು ಮಾಡಿ ಪ್ರೇತಕ್ಕೆ ಒಂದು ಸೌತೆಕಾಯಿನಂತಹ ಪಿಂಡವನ್ನು ಮಾಡಿ ಅದನ್ನು ಮೂರು ಭಾಗ ಮಾಡಿ ಒಂದೊಂದು ಭಾಗವನ್ನು ಪಿತೃ, ಪಿತಾಮಹ, ಪ್ರಪಿತಾಮಹ ಪಿಂಡಗಳ ಜತೆ ಸಂಯೋಜನೆ ಮಾಡಿ, ಅವರ ಜತೆ ಸೇರಿಕೊಂಡಂತೆ ಭಾವಿಸುವುದು. ಇದೇ ಸಪಿಂಡೀಕರಣ. ಅಲ್ಲಿಗೆ, ಸತ್ತುಹೋಗಿರುವ ನಮ್ಮ ಮಾತಾಪಿತೃಗಳಿಗೆ ಹಳೇ ಪಿತೃಗಳ ಜತೆ ದೇವತಾತ್ವ ಪ್ರಾಪ್ತಿಯಾಯಿತು ಎಂದು ಭಾವಿಸಿಕೊಂಡು ಅವತ್ತಿನಿಂದ 'ಪ್ರೇತ' ಶಬ್ದವಿಲ್ಲ ಎಂದು ಹೇಳುತ್ತೇವೆ. ಅಂದರೆ ಆತ್ಮನಿಗೆ ಈ ದೇಹಾಭಿಮಾನ ಹೋಯಿತು ಎಂಬ ಭಾವನೆ. ನಾವು ಇಲ್ಲಿ ಪಿಂಡಗಳನ್ನು ಸೇರಿಸಿದ ಮಾತ್ರಕ್ಕೇ ಅವರಿಗೆ ದೇವತಾತ್ವ ಪ್ರಾಪ್ತಿಯಾಗುತ್ತದೆಂದಲ್ಲ, ಆಗಲು ಸಾಧ್ಯವೂ ಇಲ್ಲ, ಆದರೆ 'ಆಗಿದೆ' ಎಂದು ಹೇಳಿ ನಾವು ಭಾವಿಸಿಕೊಳ್ಳಲು ಯಾರ ಅಡ್ಡಿಯೂ ಇಲ್ಲ ಅಲ್ಲವೇ ! ಅದು ಸುಪುತ್ರನ ಲಕ್ಷಣ. ಅವರು ಯಾವ ಯೋನಿಯಲ್ಲಿ

ಯಾವ ಶರೀರವನ್ನು ಧಾರಣೆ ಮಾಡಿ ಹುಟ್ಟಿದ್ದಾರೆಂಬುದು ನಮಗೆ ತಿಳಿಯದ ವಿಷಯ. ಆದರೂ ಅವರಿಗೆ ಉತ್ತಮವಾದ ದೇವತಾತ್ವ ಸಿಕ್ಕಿದೆಯೆದು ಭಾವಿಸುವುದು, ಆ ರೀತಿ ಪ್ರಾರ್ಥನೆ ಮಾಡುವುದು, ಸುಸಂಸ್ಕೃತರ ಸ್ವಭಾವ. ಅದನ್ನೇ ಮಾಡುತ್ತಿದ್ದೇವೆ. ಇದರಲ್ಲಿ ಭಯಕ್ಕೆ ಜಾಗವೇನಿದೆ ಎಂದು ಭಯಪಡುವವರನ್ನೇ ಕೇಳಬೇಕು. ಇದಿಷ್ಟೇ ಔರ್ಧ್ವದೈಹಿಕಕ್ರಿಯೆಗಳು.

13ನೇ ದಿನ ವೈಕುಂಠಸಮಾರಾಧನೆ ಎಂದಿಟ್ಟಿದ್ದಾರೆ. ಅದು ಶಾಸ್ತ್ರೀಯವಾಗಿ ಎಲ್ಲೂ ಇಲ್ಲ. ಅವರ ನೆಪದಲ್ಲಿ ಅನ್ನದಾನವಾಗಲಿ ಎನ್ನುವುದೇ ಉದ್ದೇಶ ಇರಬಹುದು. ಜತೆಗೆ ಅನೇಕ ದಾನಗಳನ್ನು ಕೊಡುವ ಅಭ್ಯಾಸ ಇಟ್ಟುಕೊಂಡಿದ್ದಾರೆ. ಅವುಗಳಿಗೆ ಹೇಳುವ ಕಾರಣಗಳು, ಕಥೆಗಳೆಲ್ಲಾ ಅಡಗೂಲಜ್ಜಿ ಕಥೆಗಳು. ಗರುಡ ಪುರಾಣದಲ್ಲಿಯೇ ಇರಬಹುದು. ಪುರಾಣಗಳಲ್ಲಿ ಇಂಥಾ ಅಡಗೂಲಜ್ಜಿ ಕಥೆಗಳು ಬೇಕಾದಷ್ಟಿವೆ. ಅವುಗಳ ಮುಖ್ಯ ತಾತ್ಪರ್ಯ ತ್ಯಾಗ ಮಾಡುವುದು. ಸ್ವಭಾವವಾಗಿ ನಾವು ಲೋಭಿಗಳು. ತ್ಯಾಗ ಮಾಡಲು ಹೋಗುವುದಿಲ್ಲ. ಈ ನೆಪದಲ್ಲಾದರೂ ಸ್ವಲ್ಪ ತ್ಯಾಗ ಮಾಡಿ ತ್ಯಾಗಬುದ್ಧಿಯನ್ನು ಬೆಳೆಸಿಕೊಳ್ಳಲಿ ಎಂಬ ಸದುದ್ದೇಶದಿಂದ ಕಥೆಗಳನ್ನು ಹೇಳಿ ಭಯಪಡಿಸಿದ್ದಾರೆ, ವ್ಯಾಸ ಮಹರ್ಷಿಗಳು. ಈ ಕಾಲದಲ್ಲಿ ಆ ವಸ್ತುಗಳನ್ನು ದಾನ ಕೊಡುವುದು ಸರ್ವಥಾ ವ್ಯರ್ಥ. ತೆಗೆದುಕೊಂಡವರಿಗೆ ಉಪಯೋಗವೂ ಇಲ್ಲ. ಆದ್ದರಿಂದ ಎಷ್ಟು ತ್ಯಾಗ ಮಾಡುವ ಸಾಮರ್ಥ್ಯವಿದೆಯೋ ಅಷ್ಟನ್ನೂ ದಕ್ಷಿಣಾ ರೂಪವಾಗಿ ಎಲ್ಲರಿಗೂ ಕೊಡುವುದು ತುಂಬಾ ಯುಕ್ತ ಎಂದು ನನ್ನ ಅಭಿಪ್ರಾಯ. Cash ಇದ್ದರೆ ಆಗುವಷ್ಟು ಉಪಯೋಗ, kind ನಿಂದ ಆಗುವುದಿಲ್ಲ. ಅವರಿಗೇನು ಬೇಕೋ ಅದನ್ನು ಕೊಂಡುಕೊಳ್ಳಲಿ. Cash ನಿಂದ ಆಗುವಷ್ಟು ತೃಪ್ತಿ, ಸಂತೋಷಗಳು ಇನ್ಯಾವುದರಿಂದಲೂ ಆಗುವುದಿಲ್ಲವೆಂಬುದನ್ನು ನಾನು ನೋಡಿದ್ದೇನೆ.

ನಾರಾಯಣಸ್ವಾಮಿ ! ತಿಳಿದಷ್ಟು ಮಟ್ಟಿಗೆ ಬರೆದಿದ್ದೇನೆ. 4 ಜನರ ಮಾತುಗಳನ್ನು ಕೇಳಬೇಕಾದ ಆವಶ್ಯಕತೆ ಖಂಡಿತ ಇಲ್ಲ. ನೀವೇ ಯೋಚನೆ ಮಾಡಿ, ಸರಿಯಾದುದನ್ನು ಧೈರ್ಯವಾಗಿ ಮಾಡಿ. ಇಲ್ಲಿ ನಿಮ್ಮಗಳ ಮನಸ್ಸಂತೋಷ, ತೃಪ್ತಿ ಮುಖ್ಯವೇ ಹೊರತು, ಇತರರನ್ನು ತೃಪ್ತಿಪಡಿಸಬೇಕಾದ ಅಗತ್ಯವಿಲ್ಲ.

ನಿನ್ನ ಚಿ||ಗಳಿಗೆ ನನ್ನ ಅನಂತ ಆಶೀರ್ವಾದಗಳು. ನಾನು ಬರಲಾಗದೆ ಇರುವುದಕ್ಕೆ ಕ್ಷಮೆ ಇರಲಿ.

ಇತಿ ನಿಮ್ಮವ

ಕುಮಾರಸ್ವಾಮೀ

ಆ. ಮಗಳಿಗೆ ಬರೆದ ಪತ್ರಗಳು

೫೩೩

ಅರ್ಥಜ್ಞಾನ ಮತ್ತು ತಲ್ಲೀನತೆ : ಚಂಡೀಹೋಮ

कुशलम्　　　　श्री:　　　　Madras

26.10.85

ಶೈಲು !

ನಿನ್ನ emotional ಕಾಗದ ತಲುಪಿತು.

ಹೋದ ಭಾನುವಾರ ಇಲ್ಲಿ ಚಂಡೀಹೋಮ ನಡೆಯಿತು. ಹೋಮಕ್ಕೆ ಆರಂಭದಲ್ಲಿ 20 ನಿಮಿಷ ಸಪ್ತಶತಿಯಲ್ಲಿರುವ ವಿಷಯವನ್ನೂ , ಹೋಮ ಮಾಡುವುದರ ಉದ್ದೇಶವನ್ನೂ ಕುರಿತು ಹೇಳಿದೆ. ಆಮೇಲೆ ಒಂದೊಂದು ಅಧ್ಯಾಯ ಸಮಾಪ್ತಿಯಲ್ಲಿಯೂ ಮುಂದಿನ ಅಧ್ಯಾಯದಲ್ಲಿ ಏನು ಹೇಳುತ್ತದೆಂಬುದನ್ನು 2 ನಿಮಿಷ ಹೇಳುತ್ತಿದ್ದೆ. ಅದು ಅವರುಗಳಿಗೆಲ್ಲಾ ನನ್ನ ಜತೆಯಲ್ಲಿ ಸೇರಿ ಅನುಭವಿಸುವುದಕ್ಕೆ ಅವಕಾಶವಾಗಿ ಬಹಳ ಸಂತೋಷಪಟ್ಟರು ಎಂದು ಕಾಣುತ್ತೆ. ಶ್ಲೋಕಗಳು ಅರ್ಥವಾಗದಿದ್ದರೂ, ಅಭಿಪ್ರಾಯವನ್ನು ಮೊದಲೇ ತಿಳಿಸಿದ್ದರಿಂದ ಅಲ್ಪಸ್ವಲ್ಪವಾದರೂ follow ಮಾಡಲು ಅನುಕೂಲವಾಯಿತು. ನಾವೂ ಶ್ಲೋಕಗಳನ್ನು ನಿಧಾನವಾಗಿ ಹೇಳುತ್ತಿದ್ದೆವು. ಅದರಲ್ಲಿಯೂ 11ನೇ ಅಧ್ಯಾಯದ ನಾರಾಯಣಸ್ತುತಿಯಲ್ಲಿ ಎಲ್ಲರೂ ನಿಜವಾಗಿಯೂ ಆ ಮಹಾಮಾಯಾ ಸ್ವರೂಪಿಣಿಯಾದ ದೇವಿಯೊಡನೆ ಸ್ವಲ್ಪ ಕಾಲ ಕಳೆದರೋ ಎಂಬಂತೆ ನಿಶ್ಚಲವಾಗಿ ಅನುಭವಿಸುತ್ತಿದ್ದರು. ವಾಸ್ತವವಾಗಿ ಆ ಸ್ತೋತ್ರಗಳು ಅರ್ಥಗರ್ಭಿತವಾಗಿ ಬಹಳ ಮುದ್ದಾಗಿವೆ. ಛಂದಸ್ಸು ಕೂಡ ಹೇಳಲು ಚೆನ್ನಾಗಿರುವಂತೆ ಅಳವಡಿಸಿದೆ. 4 ಜನ ಗಟ್ಟಿಯಾಗಿ ಬಿಡಿಸಿ ಬಿಡಿಸಿ ಹೇಳಿದರೆ ಯಾರಿಗೆ ತಾನೇ ಮೈಮರೆಯುವುದಿಲ್ಲ! (ನಿನಗೂ ಎಲ್ಲಾದರೂ ಪುಸ್ತಕ ಸಿಕ್ಕಿದರೆ ಆ ಅಧ್ಯಾಯವನ್ನು ಓದಿ ನೋಡು).

ಮುದ್ದು ಕಾಂಚನಳಿಗೂ ಚೇತನಳಿಗೂ ಅಜ್ಜನನ್ನು ಜ್ಞಾಪಿಸು.

ಇತಿ ನಿನ್ನವ

कुमारस्वामी

೫೩೪

ದೇವೀಸಪ್ತಶತಿ ; ಜ್ಞಾನಕ್ಕೆ ತಾರತಮ್ಯವಿಲ್ಲ ; ಚಿತ್ತಶುದ್ಧಿಯೇ ಫಲ

कुशलम्　　　　श्री:　　　　Madras

7-11-85

ಶೈಲು !

ನಿನ್ನ ಕಾಗದ ತಲಪಿತು. ನೀನು ಉತ್ತರ ಬರೆಯಲು ತಡವಾಗುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ನಾನೇನೂ ತಡ ಮಾಡುವುದಿಲ್ಲ. ನನಗೆ ಬೇರೆ ಕೆಲಸವೇನಿದೆ ! ಕೇಳುವವರಿದ್ದರೆ ಸಾಕು, ಹೇಳುತ್ತೇನೆ ! ಓದುವವರಿದ್ದರೆ ಸಾಕು, ಬರೆಯುತ್ತೇನೆ ! ಕಷ್ಟವೇನೆಂದರೆ ನಾನು ಎಷ್ಟೋ ಜನಕ್ಕೆ ಬರೆದರೂ ಒಬ್ಬರಿಂದಲೂ ಉತ್ತರವೇ ಬರುವುದಿಲ್ಲ. ನಾನು ಬರೆಯುವುದನ್ನು comment ಮಾಡಿಯೋ ಅಥವಾ ಸಂಶಯಗಳನ್ನು ಕೇಳಿಯೋ, ಅಥವಾ ಸಂತೋಷಪಟ್ಟುಕೊಂಡೋ ಬರೆದರೆ ನಾನೂ ಮುಂದೆ ವ್ಯವಹಾರ ಮಾಡಲು ಉತ್ಸಾಹ ಬರುತ್ತದೆ. ಉತ್ತರವೇ ಬರೆಯದೆ ಸ್ತಬ್ಧರಾಗಿದ್ದು ಬಿಟ್ಟರೆ ಏನು ಮಾಡಬೇಕೆಂದು ತಿಳಿಯುವುದಿಲ್ಲ.

ದೇವೀಸಪ್ತಶತಿಯು ನೀನು ಹೇಳಿದಷ್ಟು ಮೋಸವಾಗಿಲ್ಲ. ಆರಂಭವೇ ಚೆನ್ನಾಗಿದೆ. ಸುರಥನೆಂಬ ರಾಜನೂ, ಸಮಾಧಿಯೆಂಬ ವೈಶ್ಯನೂ ಯಾವ ರೀತಿ ಮನೆಯಿಂದ ಹೊಡೆದು ಓಡಿಸಲ್ಪಟ್ಟಿದ್ದರೂ ಸಂಸಾರದ ಯೋಚನೆಯೇ ಮಾಡುತ್ತಿರುವರೆಂಬುದನ್ನು ಹೇಳಿ ಅದಕ್ಕೆ ಕಾರಣವೇ ಮಾಯೆ ಎಂದು ಋಷಿಯ ಮೂಲಕ ಹೇಳಿಸಿ

ಆ ಮಾಯಾಸ್ವರೂಪವನ್ನು ವರ್ಣಿಸುತ್ತಾ ಅವಳನ್ನು ದೇವೀ ಸ್ವರೂಪವಾಗಿ ಭಾವಿಸಿದರೆ ಉಪಾಸನೆ ಮಾಡಬಹುದೆಂಬುದನ್ನು ತಿಳಿಸಿ ಆರಂಭಿಸುತ್ತಾರೆ. ಆ ಉಪಾಸನೆಯೂ ಅವಳಿಂದ ನಿವೃತ್ತಿ ಹೊಂದುವುದಕ್ಕೇ ಹೊರತು ಅಭೀಷ್ಟವನ್ನು ಈಡೇರಿಸಿ ಕೊಳ್ಳುವುದಕ್ಕಲ್ಲ. ಮೊದಲೇ ಮಾಯೆ. ಅವಳೇನು ಕೊಟ್ಟಾಳು ! ನೀನು ಬರೆದಂತೆ 4ನೇ ಅಧ್ಯಾಯ (ಯಾ ದೇವೀ) ಬಹಳ ಚೆನ್ನಾಗಿದೆ. ಆಮೇಲೆ ಬರುವುದೆಲ್ಲಾ ರಾಕ್ಷಸವಧೆ. ಅಲ್ಲಿಯೂ ಮಧ್ಯೆ ಮಧ್ಯೆ ವೇದಾಂತ ತತ್ತ್ವಗಳನ್ನು ಚೆನ್ನಾಗಿ ಅಳವಡಿಸಿದ್ದಾರೆ. ಅವುಗಳನ್ನು ನೋಡಬೇಕು, ಅನುಭವಿಸಬೇಕು. 11ನೇ ಅಧ್ಯಾಯವಂತೂ ನಿಜವಾಗಿಯೂ ಬಹಳ ಚೆನ್ನಾಗಿದೆ. ಅದು ಅವಳ ಸ್ತೋತ್ರ. ಆದರೆ ಅರ್ಥಪುಷ್ಟಿಯಿಂದ ಕೂಡಿ, ವೇದಾಂತ ಬ್ರಹ್ಮಸ್ವರೂಪವೇ ಅವಳು ಎಂಬುದನ್ನು ಎತ್ತಿ ತೋರಿಸುತ್ತದೆ. ಜತೆಗೆ ಛಂದಸ್ಸೂ ಹೇಳಲು ಬಹು ಚೆನ್ನಾಗಿದೆ. ನಿಧಾನವಾಗಿ ಪದ ಪದ ಬಿಡಿಸಿ ಹೇಳಿದರೆ ನಮಗೇ ಸಂತೋಷವಾಗುತ್ತದೆ. ನನಗೇನೋ ಕಣ್ಣಲ್ಲಿ ನೀರು ಬರದೆ ಇರುವುದಿಲ್ಲ. ಆದ್ದರಿಂದ ಓದಿ ನೋಡು. Prejudice ಇಟ್ಟುಕೊಳ್ಳಬೇಡ. ಕೊನೆಯಲ್ಲೂ ಕ್ಷತ್ರಿಯ ರಾಜನಾದ ಸುರಥನಿಗೆ ರಾಜ್ಯವನ್ನೂ, ವೈಶ್ಯನಾದ ಸಮಾಧಿಗೆ ಮೋಕ್ಷವನ್ನೂ ದಯಪಾಲಿಸುತ್ತಾಳೆ. ಸುರಥನಿಗೆ ಇನ್ನೂ ರಾಜ್ಯವನ್ನು ಅನುಭವಿಸಬೇಕೆಂಬ ಆಸೆ ಇತ್ತು ಅಂತ ಕಾಣುತ್ತೆ. ಆದರೆ ಜನ್ಮತಃ ವೈಶ್ಯನಾದರೂ ಸಮಾಧಿಗೆ ಮೋಕ್ಷ ಪಡೆಯುವ ಯೋಗ್ಯತೆ ಜಾಸ್ತಿ ಇತ್ತು. ಆದ್ದರಿಂದ ಅವನಿಗೆ ಮೋಕ್ಷ. ಜ್ಞಾನಕ್ಕೆ ಜಾತಿಯ ತಾರತಮ್ಯ ವಿಲ್ಲ ಎಂಬುದಕ್ಕೆ ಇದೊಂದು ಉದಾಹರಣೆಯಾಗಲಾರದೇ ?

ಆದರೆ ಹೋಮ ಸಮಯದಲ್ಲಿ ದೇವೀ ಉವಾಚ ಸ್ವಾಹಾ। ರಾಜೋವಾಚ ಸ್ವಾಹಾ.... ಇವುಗಳನ್ನು ನಾನೂ ಒಪ್ಪುವುದಿಲ್ಲ (ಹೋಮದಲ್ಲಿ ಸಂಜಯ ಉವಾಚ ಎಂದು ಎಲ್ಲೂ ಬರುವುದಿಲ್ಲ. ನೀನೆಲ್ಲೋ ಭಗವದ್ಗೀತೆ ಜ್ಞಾಪಿಸಿಕೊಂಡು ಚಂಡೀಹೋಮದ ಉವಾಚಕ್ಕೆ ಸಂಜಯನನ್ನು ಸೇರಿಸಿದ್ದೀಯೆ !!) ಅವುಗಳಿಗೇನೂ ಅರ್ಥವಿಲ್ಲ. 700 ಶ್ಲೋಕಗಳಾಗಬೇಕು ಎಂಬ ಆಗ್ರಹದಿಂದ ಅವುಗಳನ್ನೂ ಒಂದೊಂದು ಮಂತ್ರವಾಗಿ ತೆಗೆದುಕೊಂಡಿದ್ದಾರೆ. 700 ಎಂಬ ನಂಬರಿನಲ್ಲಿ ಏನು ಪಾವಿತ್ರ್ಯವೋ ನಾನು ಕಾಣೆ. ಅಥವಾ ಸಪ್ತಶತೀ ಎಂಬ ಶಬ್ದವನ್ನು ಸಾರ್ಥಕಗೊಳಿಸಲು ಮಾಡಿರುವ exercise ಅಂತ ಕಾಣುತ್ತೆ. ನಮ್ಮ ಲಲಿತಾ ಸಹಸ್ರನಾಮದಲ್ಲಿಯೂ ಈ ಭ್ರಮೆ ಉಂಟು. ಯಾವ ನಾಮವೂ Repeat ಆಗಬಾರದು ಎಂಬ ಪ್ರತಿಜ್ಞೆಯನ್ನು ಹಾಕಿಕೊಂಡು ಕೆಲವು ಪದವಿಭಾಗಗಳನ್ನು ಮಾಡಲು ಬಹಳ ಕಷ್ಟಪಟ್ಟಿದ್ದಾರೆ. ಉದಾಹರಣೆಗೆ 'ತತ್ತ್ವಮಯೀ' ಎಂದು ಎರಡು ಕಡೆ ಬರುತ್ತೆ. ಒಂದು ಕಡೆ 'ತತ್ತ್ವಮಯ್ಯೈ ನಮಃ' ಆಯಿತು. ಇನ್ನೊಂದು ಕಡೆ ಪುನರುಕ್ತಿಯ ದೋಷವಿರಬಾರದೆಂದು 'ತಸ್ಮೈ ನಮಃ, ತುಭ್ಯಂ ನಮಃ, ಅಯ್ಯೈ ನಮಃ' ಎಂದು ಮಾಡಿದ್ದಾರೆ. ಅವುಗಳಿಗೆ ಬಹು ಕಷ್ಟಪಟ್ಟು ಅರ್ಥ ಹೇಳಬೇಕು. ಹಾಗೆಯೇ ಸಾಧ್ವೀ ಎಂದು ಎರಡು ಕಡೆ ಬರುತ್ತದೆ. 'ಸಾಧ್ವ್ಯೈನಮಃ' ಆಯಿತು. ಇನ್ನೊಂದು ಕಡೆ 'ಸಾಧುನೇ ನಮಃ', 'ಯ್ಯೈ ನಮಃ' ಎಂದು ಮಾಡಿದ್ದಾರೆ. ಇವೆಲ್ಲಾ intellectual Juggleryಯೇ ಹೊರತು ಬೇರೇನೂ ಅಲ್ಲ. ಬರೆದ ಮಹರ್ಷಿಗಳಿಗೆ ಇವೇನೂ ಮನಸ್ಸಿನಲ್ಲಿದ್ದ ಹಾಗೆ ಕಾಣಲಿಲ್ಲ. ಸಪ್ತಶತೀ ಎಂದು ಹೆಸರು ಕೊಟ್ಟ ಮಾತ್ರಕ್ಕೇ correct ಆಗಿ 700 ಎಂದರ್ಥವಲ್ಲ. About 700 ಎಂದರ್ಥ. ಅದೇನೋ ಭಾರಿ ಕಷ್ಟಪಟ್ಟಿದ್ದಾರೆ.

ವೇದಮಂತ್ರಗಳಲ್ಲಿಯೂ ಈ ತಾಪತ್ರಯವಿದ್ದೇ ಇದೆ. ಉವಾಚಕ್ಕೆ ಹೋಮ ಮಾಡದಿದ್ದರೂ ಮಂತ್ರಗಳ ಮಧ್ಯೆ ಎಷ್ಟೋ ಪ್ರಶ್ನಾರ್ಥಕವಾಕ್ಯಗಳೂ ಇವೆ. 'ಕುತ ಆಜಾತಾ ಕುತ ಇಯಂ ವಿಸೃಷ್ಟಿಃ ಮುಖಂ ಕಿಮಸ್ಯ ಕೌ ಬಾಹೂ। ಕಾವೂರೂ ಪಾದಾವುಚ್ಯೇತೇ' ಇಂಥಾವೆಲ್ಲಾ ಇವೆ. ಇವುಗಳನ್ನು ಹೇಳಿ ಹೋಮ ಮಾಡಿದರೆ ಏನು ಅರ್ಥ ಎಂದು ಕೇಳಿದರೆ ಉತ್ತರ ಹೇಳುವುದು ಕಷ್ಟ. ಆದ್ದರಿಂದ ಹೋಮವೆಂಬುದು ಕೇವಲ ಪ್ರಾರ್ಥನಾ ವಿಶೇಷದ ಒಂದು ರೀತಿ. ಜಪ ಪೂಜೆಗಳು ಇದ್ದ ಹಾಗೆ ಹೋಮ ಎಂದಿಟ್ಟುಕೊಂಡರೇ ಅವುಗಳಿಗೆ ಏನಾದರೂ ಅರ್ಥಕಲ್ಪನೆ ಮಾಡಬಹುದು. ಎಲ್ಲವೂ ಕೇವಲ ಚಿತ್ತಶುದ್ಧ್ಯರ್ಥವೇ ಹೊರತು ಫಲಪ್ರಾಪ್ತಿ ಸಾಧ್ಯವಿಲ್ಲ ಎಂದು ಹೇಳಿದರೇ ಅವುಗಳಿಗೆ ಸಾರ್ಥಕ್ಯ ಕಲ್ಪನೆ ಮಾಡಬಹುದು. ಇಲ್ಲದಿದ್ದರೆ ಪ್ರಶ್ನೆಗಳನ್ನು ಹಾಕಿ ಯಾವ ಫಲ ಸಿಗಲು ಸಾಧ್ಯ ? ಎಂದು ಕೇಳಿದರೆ ಉತ್ತರ ಏನು ಹೇಳುವುದು? ಹಾಗಾದರೆ ಇಷ್ಟು ವಿಧಾನಗಳು ಏಕೆ ? ಜಪ ಅಥವಾ contemplation ಒಂದೇ ಸಾಲದೇ ಎಂದು ಕೇಳಬಹುದು. ಅಧಿಕಾರಿ ಭೇದೇನ ಬೇಕಾಗಿವೆ. ಎಲ್ಲರಿಗೂ ಜಪ ಸಾಧ್ಯವಿಲ್ಲದೆ ಇರಬಹುದು. ಪೂಜೆ ಅಥವಾ ಹೋಮವೆಂದರೆ, ಎಲ್ಲಾ ಬಹಿರಿಂದ್ರಿಯಗಳಿಗೂ ಕೆಲಸವಿರುತ್ತದೆ. ಮನಸ್ಸಿಗೆ ಮಂತ್ರದ ಮೇಲೆ, ಮಂತ್ರಾರ್ಥದ ಮೇಲೆ ಗಮನ ಹೋಗಲು ಅನುಕೂಲ ಜಾಸ್ತಿ (ಗಟ್ಟಿಯಾಗಿ ಹೇಳುವುದರಿಂದ). ಹೀಗಾಗಿ ಸಕಲ ಇಂದ್ರಿಯಗಳೂ ಒಂದೇ ತರಹ ವ್ಯಾಪಾರದಲ್ಲಿ ನಿರತವಾಗಿರುವುದರಿಂದ ಅದರಿಂದ ಉಂಟಾಗಬೇಕಾದ ಬೌದ್ಧಿಕ ಅನುಭವ ಸಂಪೂರ್ಣವಾಗಿರುತ್ತದೆ. ಇನ್ನು ಬೇರೆ ಯಾವ ಪ್ರಯೋಜನವೂ ಕಾಣಿಸಲಿಲ್ಲ. ಈ ತತ್ತ್ವಜ್ಞಾನ ತಿಳಿಯದಿರುವುದೇ ಇವತ್ತಿನ ನಮ್ಮ ಅವಿವೇಕಪೂರಿತವಾದ ಕರ್ಮಾನುಷ್ಠಾನಗಳಿಗೆಲ್ಲಾ ಕಾರಣವಾಗಿದೆ. ಆಧ್ಯಾತ್ಮಿಕ ವಿಷಯದಲ್ಲಿ science ಪ್ರವೇಶ ಮಾಡದಿದ್ದರೂ scientific reasoningನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿರುವವನೇ ತತ್ತ್ವಮಾರ್ಗದಲ್ಲಿಯೂ ಜಯಿಸಿಯಾನು ! ಇಲ್ಲದಿದ್ದರೆ ಐಹಿಕೋಪಭೋಗಗಳನ್ನೂ

ಆಧ್ಯಾತ್ಮಿಕ ಸಾಧನೆಯನ್ನೂ mix ಮಾಡಿ ಫಜೀತಿ ಮಾಡುತ್ತಾನೆ (ಈಗ ನಮ್ಮ ಸಮಾಜದಲ್ಲಿ ಆಗಿರುವಂತೆ). ಇದನ್ನು ನಾವುಗಳೆಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾನೇನೋ ನನ್ನ ಪುರಾಣವನ್ನೇ ಬರೆದುಬಿಟ್ಟಿದ್ದೇನೆ. ಅಮ್ಮ ಬಾಕಿ ವಿಷಯಗಳನ್ನು ಬರೆಯುತ್ತಾಳೆ. ಮುದ್ದು ಕಾಂಚನ, ಚೇತನರಿಗೆ ನನ್ನ ಸಪ್ರೇಮ ಆಶೀರ್ವಾದಗಳು.

ಇತಿ ನಿನ್ನವ

ಕುಮಾರಸ್ವಾಮಿ

೫೩೫

ಚಿತ್ರಾಯಾಗ (ಅಂತಃಕರಣಶುದ್ಧಿ)

ಕುಶಲಮ್ ಶ್ರೀ: Madras

28.11.85

ಶೈಲು !

ನಿನ್ನ ಕಾಗದ ನಿನ್ನೆ ತಲಪಿತು. ಮೊನ್ನೆ ತಾನೇ ನಿನಗೊಂದು ಕಾಗದವನ್ನು ಬರೆದಿದ್ದೆ. ನಿನ್ನ ಪ್ರಶ್ನೆಗಳಿಗೆಲ್ಲಾ ಅದರಲ್ಲೇ ಉತ್ತರ ಇದೆ ಅಂದುಕೊಂಡಿದ್ದೇನೆ. ಮೊನ್ನೆ ವೇದಭಾಷ್ಯದಲ್ಲಿ ಯಾವುದೋ ಒಂದು ಭಾಗವನ್ನು ನೋಡುತ್ತಿದ್ದೆ. ಅದರಲ್ಲಿ ಒಂದು ವಿಷಯ ಪ್ರತಿಪಾದಿತವಾಗಿದ್ದುದನ್ನು ಓದಿ ಬಹಳ ಸಂತೋಷವಾಯಿತು. ಅದನ್ನು ಇಲ್ಲಿ ಎಲ್ಲರಿಗೂ ಹೇಳಿದೆ. ಅವರಿಗೆಲ್ಲಾ ಎಷ್ಟು ಅರ್ಥವಾಯಿತೋ, ಎಷ್ಟು ಸಂತೋಷವಾಯಿತೋ ಕಾಣೆ. ನನಗೇನೋ ಬಹಳ ಆನಂದವಾಯಿತು. ಅದನ್ನು ತಕ್ಷಣ ನಿನಗೂ ಬರೆಯಬೇಕೆಂದು ಕೂತೆ.

ನಮ್ಮ ಯಜುರ್ವೇದದಲ್ಲಿ ಎರಡನೇ ಕಾಂಡದಲ್ಲಿ ಸುಮಾರು ಕಾಮ್ಯೇಷ್ಟಿಗಳನ್ನು (ಕಾಮ್ಯಫಲವನ್ನು ಕುರಿತು ಮಾಡುವ ಇಷ್ಟಿಗಳು) ಹೇಳಿದ್ದಾರೆ. ಅದರಲ್ಲಿ ಚಿತ್ರಾಯಾಗ ಅಂತ ಒಂದು. ಚಿತ್ರಯಾ ಯಜೇತ ಪಶುಕಾಮಃ (ಪಶುಕಾಮನಾದವನು ಚಿತ್ರಾಯಾಗ ಮಾಡಬೇಕು.). ಇದಕ್ಕೆ ಭಾಷ್ಯ ಬರೆಯುತ್ತಾ ವಿದ್ಯಾರಣ್ಯಸ್ವಾಮಿಗಳು ಕೊನೆಯಲ್ಲಿ "ಅತ್ರ ಮೀಮಾಂಸಾ" ಎಂದು ಆರಂಭಿಸಿದ್ದಾರೆ (ಮೀಮಾಂಸಾ ಅಂದರೆ ವಿಚಾರ ಎಂದರ್ಥ). ಜ್ಯೋತಿಷ್ಟೋಮಃ ಸ್ವರ್ಗಕಾಮೋ ಯಜೇತ ಎಂಬ ವೇದವಾಕ್ಯದಂತೆ ಸ್ವರ್ಗಕಾಮ ನಾದವನು ಜ್ಯೋತಿಷ್ಟೋಮವನ್ನು ಮಾಡಬೇಕು. ಅಂದರೆ ಜ್ಯೋತಿಷ್ಟೋಮಯಾಗಕ್ಕೆ ಸ್ವರ್ಗ ಫಲ. ಆದರೆ ಸ್ವರ್ಗವನ್ನು ಈ ದೇಹದಲ್ಲಿ ಅನುಭವಿಸಲು ಸಾಧ್ಯವಿಲ್ಲದ್ದರಿಂದ ಆಮುಷ್ಮಿಕದಲ್ಲಿ (ಬೇರೆ ಲೋಕದಲ್ಲಿ) ಅನ್ಯದೇಹ ಉತ್ಪತ್ತಿಯನ್ನು ಕಲ್ಪನೆ ಮಾಡಿಕೊಂಡು ಸ್ವರ್ಗಸುಖವನ್ನು ಅನುಭವಿಸುತ್ತಾನೆಂದು ಹೇಳಬೇಕು. ಹಾಗೆಯೇ ಈ ಚಿತ್ರಾಯಾಗದಿಂದಲೂ ಕೂಡ ಮರಣಾನಂತರ ಅನ್ಯ ದೇಹೋತ್ಪತ್ತಿಯಾಗಿ ಆಮುಷ್ಮಿಕದಲ್ಲಿಯೇ ಪಶ್ವಾದಿ ಸುಖಗಳನ್ನು ಅನುಭವಿಸುತ್ತಾನೆಂದು ಹೇಳಬೇಕೇ ಎಂದರೆ ಬೇಕಿಲ್ಲ. ಅನ್ಯದೇಹೋತ್ಪತ್ತಿ ಎಂಬ ಕಲ್ಪನೆಯು ಜ್ಯೋತಿಷ್ಟೋಮದಲ್ಲಿ ಅಪರಿಹಾರ್ಯ. ಅದನ್ನು ಎಲ್ಲಾ ಕಡೆಯಲ್ಲಿಯೂ ಮಾಡುವುದು ಉಚಿತವಲ್ಲ. ಅದೂ ಅಲ್ಲದೆ ಈ ದೇಹದಲ್ಲಿಯೇ ಪಶ್ವಾದಿಲಾಭವನ್ನು ಪಡೆದು ಸುಖಿಸುವುದು ಸಾಧ್ಯವಾದುದರಿಂದ ಅದು ಪಾರಲೌಕಿಕವಲ್ಲ. ಐಹಿಕ ಫಲವೇ. ಹಾಗಾದರೆ ಪ್ರತಿಗ್ರಹಾದಿ ದೃಷ್ಟೋಪಾಯಮಂತರೇಣ ಪಶ್ವಾದಿ ಅಲಾಭಾತ್ ಫಲಂ ಆಮುಷ್ಮಿಕಮೇವ (ಪಶುಲಾಭ ಎನ್ನುವುದು ಪ್ರಪಂಚದಲ್ಲಿ ದೃಷ್ಟಪ್ರಯೋಜನ. ಆ ಫಲಕ್ಕೆ ದೃಷ್ಟವಾದ ಉಪಾಯಗಳು ಲೋಕದಲ್ಲಿ ನಿಶ್ಚಿತವಾಗಿವೆ. ಒಂದು-ದಾನ ಕೊಡುವ ಕಡೆ ಹೋಗಿ ಪ್ರತಿಗ್ರಹ ಮಾಡಬೇಕು. ಅಥವಾ ದುಡ್ಡು ಕೊಟ್ಟು ತೆಗೆದುಕೊಳ್ಳಬೇಕು. ಇವೆರಡು ಉಪಾಯಗಳು ವಿನಾ ಪಶ್ವಾದಿ ಲಾಭವು ಸಾಧ್ಯವಿಲ್ಲದ್ದರಿಂದ ನಿಮ್ಮ ಚಿತ್ರಾಯಾಗಕ್ಕೆ ಫಲ ಐಹಿಕವಲ್ಲ , ಆಮುಷ್ಮಿಕವೇ ಎಂದು ಹೇಳಬೇಕಲ್ಲವೇ ?) ಹಾಗಲ್ಲ. ಚಿತ್ರಾಯಾಗದಿಂದ ಪಶುಲಾಭವೆಂದು ವೇದ ತಾತ್ಪರ್ಯವಲ್ಲ. ಪಶ್ವಾದಿಪ್ರತಿಗ್ರಹಕ್ಕೆ ಪ್ರತಿಬಂಧಕಗಳು ಏನಾದರೂ ಇದ್ದ ಪಕ್ಷದಲ್ಲಿ ಅದನ್ನು ನಿವೃತ್ತಿ ಮಾಡುವುದಕ್ಕೆ ಚಿತ್ರಾಯಾಗವೇ ಹೊರತು ಅದರಿಂದಲೇ ನೇರವಾಗಿ ಪಶುಲಾಭವಾಗುವುದಿಲ್ಲ. ಹಾಗೆ ಯಾವುದೂ ಪ್ರತಿಬಂಧಕವಿಲ್ಲವಾದರೆ ಅದರ ಫಲ ಐಹಿಕವಲ್ಲ , ಆಮುಷ್ಮಿಕವೇ ಎಂದುಕೊಳ್ಳಬೇಕು. ಇದಿಷ್ಟೂ ಭಾಷ್ಯ. ಸುಮಾರು ದಿನಗಳಿಂದ ಇದ್ದ ಸಂದೇಹ ವೇದಭಾಷ್ಯದಿಂದಲೇ ನಿವೃತ್ತಿಯಾಯಿತು. ಲೋಕದಲ್ಲಿ ಯಾವುದೊಂದು ಕಾರ್ಯವೂ ಕಾರಣವಿಲ್ಲದೆ ನಡೆಯಲು ಸಾಧ್ಯವಿಲ್ಲ. ಜತೆಗೆ ಯಾವುದೋ ಕಾರ್ಯಕ್ಕೆ ಯಾವುದೋ ಕಾರಣವಾಗುವುದೂ ಸಾಧ್ಯವಿಲ್ಲ (ಇದೇ scientific temper ಎನ್ನುವುದು). ಅದು ಪ್ರತ್ಯಕ್ಷ ಸಿದ್ಧವಾಗಿರಬೇಕು. ಮಣ್ಣಿನಿಂದ ವಸ್ತ್ರವಾಗುವುದಿಲ್ಲ. ತಂತುವಿನಿಂದ ಘಟವಾಗಲು ಸಾಧ್ಯವಿಲ್ಲ. ಮೋಡವಿಲ್ಲದೆ ಮಳೆ ಬರುವುದಿಲ್ಲ. ನೀರಿಲ್ಲದೆ ಮೋಡವಾಗಲು ಸಾಧ್ಯವಿಲ್ಲ. ಇವೆಲ್ಲಾ ಪ್ರಕೃತಿಯಲ್ಲಿ ಪ್ರತ್ಯಕ್ಷಸಿದ್ಧವಾದ ಕಾರ್ಯಕಾರಣಭಾವಗಳು. ಹಾಗೆಯೇ ದುಡ್ಡು ಸಂಪಾದನೆಗೆ, ಮಕ್ಕಳಾಗುವುದಕ್ಕೆ, ಮದುವೆಯಾಗುವುದಕ್ಕೆ ಎಲ್ಲಕ್ಕೂ ಹೇಳಬಹುದು. ಈ ಕಾರ್ಯಗಳಿಗೆ ಪೂಜೆ, ಹೋಮಾದಿಗಳು ಕಾರಣವೆಂದರೆ, ಪ್ರತ್ಯಕ್ಷಾನುಭವಕ್ಕೆ ವಿರೋಧವಾಗುತ್ತಿದೆಯೆಲ್ಲಾ ಎಂದು ಬಹಳ ಯೋಚಿಸುತ್ತಿದ್ದೆ. ವ್ಯಾಸರೇ ಭಾಗವತದಲ್ಲಿ ರೋಚನಾರ್ಥಾ ಫಲಶ್ರುತಿಃ ಎಂದು ಹೇಳಿ ಸಂದೇಹವನ್ನು ಪರಿಹರಿಸಿದ್ದರು. ಈ ವೇದಭಾಷ್ಯವು ಸಂದೇಹವನ್ನು ಪೂರ್ತಿ ನಿವೃತ್ತಿ ಮಾಡಿತು. ಅದಕ್ಕೇ ಮನಸ್ಸಿಗೆ ಬಹಳ ಆನಂದವಾಗಿ

ನಿನಗೆ ಬರೆಯುತ್ತಿದ್ದೇನೆ. ಹಾಗಾದರೆ ಆ ಕರ್ಮಗಳೆಲ್ಲಾ ಬೇಕಿಲ್ಲವೇ ಎಂದರೆ ಕೇವಲ ಅಂತಃಕರಣ ಶುದ್ಧಿಯೇ ಹೊರತು ಬೇರೆ ಇಲ್ಲವಾದ್ದರಿಂದ ಅದಕ್ಕೋಸ್ಕರವಾದರೂ ಮಾಡಿಯೇ ತೀರಬೇಕು.

ನಮ್ಮವರ Hockey, Cricket ಎರಡರ Performance ನಿಜವಾಗಲೂ Pathetic ಆಗಿತ್ತು.

ಇತಿ ನಿನ್ನವ

ಕುಮಾರಸ್ವಾಮಿ

೫೩೬

Scientific temper (ಚಿತ್ರಾಯಾಗ : ಸ್ಪಷ್ಟನೆ)

कुशलम् श्री: Madras

4.12.85

ಶೈಲು !

ನಿನ್ನ ಕಾಗದ ತಲಪಿತು. ನಿನ್ನ ಸಂದೇಹಗಳ ಬಗ್ಗೆ ಸ್ವಲ್ಪ ಆಶ್ಚರ್ಯವೂ ಆಯಿತು. ನಾನು ಚಿತ್ರಾಯಾಗದ ವಿಷಯ ಬರೆದದ್ದು, ಮುಖ್ಯವಾಗಿ ಮಹರ್ಷಿಗಳ scientific temper ನೋಡಿ ಸಂತೋಷಪಡುವುದಕ್ಕೋಸ್ಕರ. ಎರಡನೆಯದಾಗಿ ನಾನು ಹೇಳುತ್ತಿರುವುದಕ್ಕೆ ಒಂದು authority ಯೂ ಇದೆ ಎಂದು ತೋರಿಸುವುದಕ್ಕೋಸ್ಕರ. ಅಲ್ಲಿ ಪ್ರಧಾನವಾಗಿ observe ಮಾಡಬೇಕಾದ್ದು ಎರಡು. ಮೊದಲನೆಯದಾಗಿ ದೃಷ್ಟವಾದ ಪ್ರಯೋಜನ ಅಥವಾ ಫಲವಿರುವಾಗ ಅದೃಷ್ಟವನ್ನು ಕಲ್ಪನೆ ಮಾಡಬಾರದು 'ದೃಷ್ಟೇ ಸಂಭವತಿ ಅದೃಷ್ಟ ಕಲ್ಪನಮ್ ಅನ್ಯಾಯ್ಯಃ' (ದೃಷ್ಟಫಲವನ್ನು ಹೇಳುವುದು ಸಾಧ್ಯವಿದ್ದರೆ ಅದೃಷ್ಟಕಲ್ಪನೆ ಮಾಡುವುದು ಅನ್ಯಾಯ) ಎಂಬುದೊಂದು ದೊಡ್ಡ ನ್ಯಾಯ. ಅಂದರೆ ಯಾವ ಕರ್ಮಕ್ಕಾದರೂ (ಅದು ವೇದೋಕ್ತ ಕರ್ಮವಾಗಲಿ ಲೌಕಿಕವಾಗಲಿ) ದೃಷ್ಟ ಪ್ರಯೋಜನವನ್ನೇ ನೋಡಬೇಕು. ಸಾಧ್ಯವೇ ಇಲ್ಲವೆಂದರೆ ಅದೃಷ್ಟವನ್ನು ಕಲ್ಪನೆ ಮಾಡೋಣ. ಈಗ 'ಜ್ಯೋತಿಷ್ಟೋಮಃ ಸ್ವರ್ಗಕಾಮೋ ಯಜೇತ' ಎಂದು ವಿಧಿ ಇದ್ದರೆ ಸ್ವರ್ಗಫಲವನ್ನು ಈ ಶರೀರದಲ್ಲಿ ಈ ಲೋಕದಲ್ಲಿ ಅನುಭವಿಸಲು ಸಾಧ್ಯವಿಲ್ಲ (ಸ್ವರ್ಗವೆಂಬುದು ಪರಲೋಕದಲ್ಲಿದೆಯೆಂಬ ನಂಬಿಕೆ ಇರುವುದರಿಂದ). ಆದ್ದರಿಂದ ಅದನ್ನು ಅನುಭವಿಸುವುದಕ್ಕೋಸ್ಕರ ಆ ಜೀವನಿಗೆ ಈ ಪಾರ್ಥಿವ ದೇಹ ಬಿದ್ದುಹೋದ ಅನಂತರ ಅನ್ಯದೇಹವು ಉತ್ಪತ್ತಿಯಾಗುತ್ತದೆಂದು ಕಲ್ಪಿಸಿ ಆ ದೇಹದಲ್ಲಿ ಸ್ವರ್ಗಸುಖವನ್ನು ಅನುಭವಿಸುತ್ತಾನೆಂದು ಹೇಳಬೇಕು. ಸುಮ್ಮಸುಮ್ಮನೆ ಎಲ್ಲಾದಕ್ಕೂ ಸ್ವರ್ಗದಲ್ಲಿ ಸುಖವನ್ನು ಅನುಭವಿಸುತ್ತಾನೆಂದು ಕಲ್ಪನೆ ಮಾಡುವುದು ನ್ಯಾಯವಲ್ಲ. ಈಗ ಚಿತ್ರಾಯಾಗದಿಂದ ಪಶುಲಾಭವಾಗುವುದು ಫಲವಾದರೆ ಅದನ್ನು ಈ ಲೋಕದಲ್ಲಿಯೇ ಅನುಭವಿಸುವುದು ಸಾಧ್ಯವಾದುದರಿಂದ ಪರಲೋಕದಲ್ಲಿ ಅನುಭವಿಸುತ್ತಾನೆಂದು ಕಲ್ಪಿಸುವ ಅಗತ್ಯವಿಲ್ಲ.

ಎರಡನೆಯದಾಗಿ ಈ ಲೋಕದಲ್ಲಿಯೇ ಅನುಭವಿಸುತ್ತಾನೆಂದು ನಿಶ್ಚಯವಾದರೆ, ಈ ಪ್ರಾಪಂಚಿಕ ಸುಖೋಪಭೋಗ ವಸ್ತುಗಳ ಲಾಭಕ್ಕೆ ಕೆಲವು ದೃಷ್ಟೋಪಾಯಗಳಿದೆಯಲ್ಲವೇ ? ಅವು ಪ್ರತ್ಯಕ್ಷ ಸಿದ್ಧ. ಉಪಾಯಗಳ ಸಂಪರ್ಕವೇ ಇಲ್ಲದಿರುವಾಗ ಆ ವಸ್ತುವಿನ ಲಾಭವಾಗುತ್ತದೆಂದು ಹೇಳುವುದು ತಪ್ಪಾಗುತ್ತದೆ ಎಂಬುದು. (ಇದನ್ನೇ ನಾನು Scientific temper ಎನ್ನುವುದು). ನಮಗೆ ಕಣ್ಣಿಗೆ ಕಾಣುವ ಪ್ರಕೃತಿಯಲ್ಲಿ (Nature) ಯಾವ Phenomenon ತೆಗೆದುಕೊಂಡರೂ ಅದಕ್ಕೆ ಕಾರ್ಯಕಾರಣ ಭಾವ ಸಿದ್ಧವಾಗಿದೆ. ಅದನ್ನೇ ವೈಜ್ಞಾನಿಕರು ಕಂಡುಹಿಡಿಯಲು ಹೊರಟಿರುವುದು ! ಒಂದು ಕಾರ್ಯಕ್ಕೆ ಅನೇಕ ಕಾರಣಗಳಿರಬಹುದು. ಆದರೆ ಯಾವುದೋ ಕಾರಣಗಳಿಂದ ಯಾವುದೋ ಕಾರ್ಯವಾಗುವುದು ಸಾಧ್ಯವಿಲ್ಲ. ಮೃತ್ತಿನಿಂದ ಪಟವಾಗುವುದಿಲ್ಲ. ತಂತುವಿನಿಂದ ಘಟವಾಗುವುದಿಲ್ಲ. ಮೋಡವಿಲ್ಲದೆ ಮಳೆಯಿಲ್ಲ. ನೀರಿಲ್ಲದೆ ಮೋಡವಿಲ್ಲ (ಯಾಭಿರಾದಿತ್ಯಸ್ತಪತಿ ರಶ್ಮಿಭಿಃ ತಾಭಿಃ ಪರ್ಜನ್ಯೋ ವರ್ಷತಿ). ಹಾಗೆಯೇ ಪಶುಲಾಭವಾಗಬೇಕಾದರೆ ಯಾರಾದರೂ ದಾನ ಕೊಡುತ್ತಿರುವಾಗ ಪ್ರತಿಗ್ರಹ ಮಾಡಬೇಕು, ಇಲ್ಲ ದುಡ್ಡು ಕೊಟ್ಟು ಕೊಂಡುಕೊಳ್ಳಬೇಕು, ಇಲ್ಲ ಕದ್ದು ತರಬೇಕು! ಈ ಉಪಾಯಗಳಲ್ಲದೆ ಯಾರಿಗಾದರೂ ಪಶುಲಾಭವಾಗಲು ಸಾಧ್ಯವಿಲ್ಲ. ಪುತ್ರಲಾಭವಾಗಬೇಕಾದರೆ ಸ್ತ್ರೀಪುರುಷ ಸಂಪರ್ಕವಾಗಬೇಕು. ಸ್ತ್ರೀಯ ಕ್ಷೇತ್ರವೂ ಫಲವತ್ತಾಗಿರಬೇಕು. ಇದು ಪ್ರಕೃತಿ ನಿಯಮ. ಪ್ರತ್ಯಕ್ಷ ಸಿದ್ಧ. ಇದನ್ನು ಸುಳ್ಳಾಗಿಸಲು ಅಥವಾ ವಿರೋಧಿಸಲು ಯಾವ ವೇದಗಳೂ ಹೊರಟಿಲ್ಲ. ಉಪನಿಷತ್ತು ಮೊದಲೇ ಹೊರಟಿಲ್ಲ. ಹಾಗೇನಾದರೂ ಪ್ರತ್ಯಕ್ಷಕ್ಕೆ ವಿರುದ್ಧವಾಗಿ ಹೇಳಿದರೆ ವೇದಗಳೇ ಅಪ್ರಮಾಣವಾದಾವು ಎಂದರು ಭಗವತ್ಪಾದರು. ಪ್ರತ್ಯಕ್ಷಪ್ರಮಾಣವೆಂಬುದು ಎಲ್ಲಕ್ಕಿಂತಲೂ ಮೊದಲನೆಯ ಪ್ರಮಾಣ. ಅದನ್ನು ಅನುಸರಿಸಿ ಅನುಮಾನ, ಶಬ್ದಪ್ರಮಾಣಗಳೇ ಹೊರತು ಅದಕ್ಕೆ ವಿರೋಧವಾಗಿದ್ದರೆ ಅವು ನಿಲ್ಲುವುದೇ ಇಲ್ಲ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೇ ಚಿತ್ರಯಾ ಯಜೇತ ಪಶುಕಾಮಃ ಎನ್ನುವುದರ ಭಾಷ್ಯದಲ್ಲಿ ಪ್ರತಿಗ್ರಹಾದಿ ದೃಷ್ಟೋಪಾಯಮಂತರೇಣ ಪಶ್ವಾದಿ ಅಲಾಭಾತ್ ಎಂದರು. ಪ್ರತಿಗ್ರಹ ಮಾಡುವುದೇ ಮೊದಲಾದುವು ಪಶುಲಾಭಕ್ಕೆ ದೃಷ್ಟೋಪಾಯಗಳು. ಈ ಚಿತ್ರಾಯಾಗದಲ್ಲಿ ಆ ತರಹ ಉಪಾಯವೇನೂ ಕಾಣಲಿಲ್ಲವಲ್ಲಾ! ಆದ್ದರಿಂದ ಈ ಯಾಗದ ಫಲ ಅದೃಷ್ಟ; ಪರಲೋಕದಲ್ಲಿಯೇ ಸಿಗುತ್ತದೆ ಎಂದು ಹೇಳೋಣವೇ ಎಂಬುದು ಪೂರ್ವಪಕ್ಷ. ಅದಕ್ಕೆ ಉತ್ತರ: ನೀನು

ಹೇಳುವುದು ಸರಿ. ಪಶುಲಾಭಕ್ಕೆ ಬೇಕಾದ ದೃಷ್ಟೋಪಾಯಗಳು ಇಲ್ಲಿಲ್ಲ. ಆದ್ದರಿಂದ ಈ ಯಾಗದಿಂದ ನೇರವಾಗಿ ಪಶುಲಾಭವಾಗುವುದು ಸಾಧ್ಯವಿಲ್ಲ. ಅದಕ್ಕೋಸ್ಕರ ಅದೃಷ್ಟ ಫಲವನ್ನು ಕಲ್ಪನೆಯೂ ಮಾಡಬೇಕಾದ್ದಿಲ್ಲ. ಈ ಯಾಗದ ಫಲವು ಪ್ರತಿಗ್ರಹಾದಿಗಳಿಗೆ ಏನಾದರೂ ಪ್ರತಿಬಂಧಕವಿದ್ದರೆ ನಿವೃತ್ತಿಯಾಗುತ್ತದೆಂಬುದೇ ಹೊರತು ಪಶುಲಾಭವನ್ನಲ್ಲ ಎಂದು. ಪ್ರತಿಬಂಧಕವೇನಿರಬಹುದು ಎಂದರೆ ದಾನ ಕೊಡುವವನಿಗೆ ಈ ವ್ಯಕ್ತಿಯನ್ನು ಕಂಡರೆ ಗೌರವ ಬರದೆ ದಾನ ಕೊಡದೆ ಇರಬಹುದು. ಈ ಯಾಗವನ್ನು ಮಾಡಿ ಅಂತಃಕರಣ ಶುದ್ಧಿಯಿಂದ ಹೋದರೆ ಯಾರಿಗಾದರೂ ಆ ವ್ಯಕ್ತಿಯಲ್ಲಿ ಗೌರವ ಬರುವುದಿಲ್ಲವೇ ? ಆಗ ಪ್ರತಿಗ್ರಹ ಮಾಡಬಹುದು. ಅಥವಾ ದುಡ್ಡಿಲ್ಲದೆ ಇರುವುದು ಪ್ರತಿಬಂಧಕವಾಗಿರಬಹುದು. ಈ ಯಾಗದ ದೆಸೆಯಿಂದ ಅಂತಃಕರಣ ಶುದ್ಧಿಯಾಗಿ, ದುಡ್ಡು ಸಂಪಾದನೆ ಮಾರ್ಗವನ್ನು ಯೋಚಿಸುವ ಸಾಮರ್ಥ್ಯ ಬರಬಹುದು. ಅದರಿಂದ ದುಡ್ಡು ಸಂಪಾದಿಸಿ ಪಶುವನ್ನು ಕೊಂಡುಕೊಳ್ಳಬಹುದು. ಅಷ್ಟೇ ಹೊರತಾಗಿ ಚಿತ್ರಾಯಾಗ ಮಾಡಿದಾಕ್ಷಣಕ್ಕೆ ಪಶುಲಾಭವಾಗಿಬಿಡುತ್ತದೆ ಎಂದು ಹೇಳುವುದು ತಪ್ಪು. ಇದೇ ನ್ಯಾಯ ಸಕಲ ಕಾಮ್ಯಕರ್ಮಗಳಿಗೂ ಅನ್ವಯಿಸುತ್ತದೆ. ಕೌಸಲ್ಯಾದಿಗಳ ಕ್ಷೇತ್ರ ಫಲವತ್ತಾಗಿಲ್ಲದೆ, ದಶರಥನು ಅವರೊಡನೆ ಸಂಪರ್ಕ ಹೊಂದದೆ ಇದ್ದರೆ ಅವನು ಸಹಸ್ರ ಪುತ್ರಕಾಮೇಷ್ಟಿಯನ್ನು ಮಾಡಿದರೂ ಅವನಿಗೆ ಪುತ್ರಲಾಭವಾಗುತ್ತಿರಲಿಲ್ಲ. ವೇದೋಕ್ತಕರ್ಮಕ್ಕೆ ಏನಾದರೂ ಗೌರವವನ್ನು ಕೊಡಬೇಕು ಎಂಬ ಅಪೇಕ್ಷೆಯಿಂದ ಅದಕ್ಕೆ ಚಿತ್ತಶುದ್ಧಿ ಎಂದು ಹೇಳಬೇಕಷ್ಟೆ. ಪ್ರಪಂಚದ ಯಾವ ಭಾಗದಲ್ಲಿಯೂ ಕೂಡ, ಕಾರ್ಯಕಾರಣ ಭಾವವಿಲ್ಲದೆ ಯಾವ ಕಾರ್ಯವೂ ಆಗಿರುವುದಿಲ್ಲ. ಈ ಹೋಮಗಳಿಂದ, ಇಷ್ಟಿಗಳಿಂದ ಫಲವಾಗಿದೆ ಎಂದು ಹೇಳುವವರೂ ಕೂಡ ಆ ಕಾರ್ಯಕ್ಕೆ ಬೇಕಾದ ಸಾಧನಗಳನ್ನು ಅನುಸರಿಸದೆ ಫಲವನ್ನು ಅನುಭವಿಸಿದ್ದನ್ನು ನಾವೆಲ್ಲೂ ನೋಡಿಲ್ಲ. ಹಾಗೇನಾದರೂ ಹೇಳಿದರೆ ಅದನ್ನು miracle ಅನ್ನುತ್ತಾರೆ. ಅಂದರೆ ಅದು ಪ್ರಕೃತಿಗೆ ವಿರೋಧ ಎಂದರ್ಥ. ಅದನ್ನು ನಾವು ಒಪ್ಪಿದರೂ ಸರಿ, ಒಪ್ಪದಿದ್ದರೂ ಚಿಂತೆಯಿಲ್ಲ. ಎರಡರಿಂದಲೂ ನಮಗಾಗುವ ಪ್ರಯೋಜನ ಏನೂ ಇಲ್ಲ. ಆದರೆ ನಂಬಿದರೆ ಅಪಾಯ ಎಂದು ನನ್ನ ಭಾವನೆ. miracle ಎನ್ನುವುದು ನಿಜವೆಂದು ಇಟ್ಟುಕೊಂಡರೂ ಅದು ಸಂಭವಿಸುವುದು ಕೋಟಿ ಕೋಟಿ ಜನಗಳಲ್ಲಿ ಒಬ್ಬನಿಗಿರಬಹುದು. ಅದನ್ನು ನಂಬಿಕೊಂಡು ನಾವುಗಳು ಫಲಕ್ಕೆ ಬೇಕಾದ ಸಾಧನಗಳನ್ನು ಅನುಸರಿಸದೆ ಅದರಲ್ಲಿ ಎಳ್ಳಷ್ಟೂ ಪ್ರಯತ್ನ ಪಡದೆ ಸುಲಭವಾದ ಮಾರ್ಗವೆಂದು ಈ ಹೋಮಾದಿಗಳನ್ನು ಅವಲಂಬಿಸುವುದು ಅಪಾಯವಲ್ಲವೇ ? ಜತೆಗೆ ಅನ್ಯಾಯಾರ್ಜಿತವಾದ ದ್ರವ್ಯವಿರುವವರಿಗೆ ಇದು Passport ಆಗಿಬಿಡುತ್ತೆ. ಪೂಜಾಹೋಮಾದಿಗಳಿಂದ ದುಡ್ಡು ಬಂತು ಎಂದು ಹೇಳಿಬಿಟ್ಟರೆ ಅವರು ಸಂಪಾದಿಸಿದ ಅನ್ಯಾಯಮಾರ್ಗವನ್ನು ದೇವತಾ ಅನುಗ್ರಹ ಎಂದು ಭಾವಿಸುವುದಿಲ್ಲವೇ ? ಅದೂ ಅಲ್ಲದೆ ಸಾಮಾನ್ಯ ಜನಗಳಿಗೋಸ್ಕರ ಏರ್ಪಟ್ಟಿರುವ ವೇದೋಕ್ತಕರ್ಮಗಳು ಕೋಟಿಯಲ್ಲೊಬ್ಬನಿಗೆ ಫಲಿಸುವ miracle ಆಗಿಬಿಟ್ಟರೆ ಪ್ರಯೋಜನವೇನು ? ಶ್ರದ್ಧಾಭಕ್ತಿಗಳಿಂದ ಮಾಡದೆ ಇದ್ದುದರಿಂದ ಫಲ ಬರಲಿಲ್ಲ ಎಂದು ಹೇಳುವುದ್ಕಕಿಂತ ಅದಕ್ಕೆ ಯಾವ ದೃಷ್ಟ ಫಲವೂ ಖಂಡಿತವಾಗಿ ಇಲ್ಲ ಎಂದು ಹೇಳುವುದೇ ಯುಕ್ತ. ಹಾಗಾದರೆ ದಂಡವೇ ಎಂದರೆ, ಚಿತ್ತಶುದ್ಧಿಯಾಗುತ್ತದೆ ಎಂದು ಹೇಳಬೇಕು ಅಷ್ಟೆ - ಅದಕ್ಕೋಸ್ಕರ ಅವನು ಉಪಯೋಗಿಸಿಕೊಂಡರೆ! ಇಲ್ಲದಿದ್ದರೆ ದಂಡವೇ !

ನೀನು ಬರೆದಿರುವಂತೆ ಈ ಕರ್ಮಗಳನ್ನು ಮಾಡಿಯೇ ಚಿತ್ತಶುದ್ಧಿ ಸಂಪಾದನೆ ಮಾಡಬೇಕೆಂಬುದು ಖಂಡಿತವಾಗಿ ಇಲ್ಲ. ವೇದೋಕ್ತ ಕರ್ಮಗಳಿಗೆ ಚಿತ್ತಶುದ್ಧಿಯೇ ಫಲವೆಂದು ಹೇಳಬೇಕೇ ಹೊರತು ವೇದೋಕ್ತ ಕರ್ಮಗಳಿಂದಲೇ ಚಿತ್ತಶುದ್ಧಿಯಲ್ಲ. ಅನೇಕ ಸಾಧನಗಳಲ್ಲಿ ಅದೂ ಒಂದು. ಅತ್ಯಂತ ಮಂದವಾದ ಸಾಧನ. ಅಹಿಂಸಾ, ಸತ್ಯ, ದಯಾ ಮೊದಲಾದ ಗುಣಗಳನ್ನು ಅಭ್ಯಾಸ ಮಾಡುವುದೇ ಚಿತ್ತಶುದ್ಧಿ. ಈ ಗುಣಗಳನ್ನು ನೇರವಾಗಿ ಅಭ್ಯಾಸ ಮಾಡಿ ಆತ್ಮಗುಣಸಂಪನ್ನನಾಗಬಹುದು. ಅದಕ್ಕೆ ವಿವೇಕದ ಮಟ್ಟ ಸ್ವಲ್ಪ ಉತ್ತಮವಾದದ್ದಾಗಿರಬೇಕಲ್ಲವೇ ? ಎಷ್ಟು ಜನಕ್ಕೆ ಆ ಗುಣಗಳನ್ನು ಅಭ್ಯಾಸ ಮಾಡಬೇಕೆಂಬುದು Natural ಆಗಿರುತ್ತದೆ ? ಎಲ್ಲರಿಗೂ ಪ್ರಾಪಂಚಿಕ ಸುಖೋಪಭೋಗ ವಸ್ತುಗಳಲ್ಲಿ ಆಸೆ ಸಹಜವಾಗಿರುತ್ತದೆ. ಅದಕ್ಕೆ ಪ್ರಧಾನ ಸಾಧನಭೂತವಾದ ಹಣದಲ್ಲಿ ಆಸೆ ಬರುವುದು ಸ್ವಭಾವ. ಅದು ಈ ಆತ್ಮಗುಣಗಳಿಂದ ಬರುವುದಿಲ್ಲ ಎಂದಮೇಲೆ ಯಾವ ಮನುಷ್ಯನು ತಾನೇ ಸ್ವಭಾವವಾಗಿ ಈ ಗುಣಗಳನ್ನು ಅಭ್ಯಾಸ ಮಾಡಲು ಹೋಗುತ್ತಾನೆ? ಅವನಿಗೆ ಆತ್ಮ, ಆತ್ಮದರ್ಶನ, ಪುಣ್ಯ, ಪಾಪ ಎಂಬ ಶಬ್ದಗಳೇ ಅಪರಿಚಿತವಾಗಿರುತ್ತವೆ. ಅಂಥವನಿಗೆ ಅವುಗಳನ್ನು introduce ಮಾಡುವುದೇ ಮಹರ್ಷಿಗಳ ಉದ್ದೇಶ. ವಿಚಾರಶಕ್ತಿ ಬಂದು, ಉದ್ದೇಶದ ಅರಿವಾದರೆ ತಾನೇ ಯಾವನಾದರೂ ವಿವೇಕಪೂರಿತವಾಗಿ ಯೋಚಿಸಲು ಸಾಧ್ಯ ! ಅವನ ಉದ್ದೇಶವೇ ಕೇವಲ ದ್ರವ್ಯಸಂಪಾದನೆ, ಉಪಭೋಗ ವಸ್ತುಗಳ ಸಂಗ್ರಹವೇ ಆಗಿಬಿಟ್ಟರೆ, ಅವನಿಗೆ ವಿಚಾರಶಕ್ತಿ ಬರುವುದೆಂತು ? ಉದ್ದೇಶದ ಅರಿವಾಗುವುದೆಂತು ? ನಮ್ಮ ಇಷ್ಟಿ, ಹೋಮ, ಪೂಜೆ, ದೇವಸ್ಥಾನ ಎಲ್ಲವುಗಳ ಉದ್ದೇಶವೂ ಇಷ್ಟೇ ಹೊರತಾಗಿ ಬೇರೇನೂ ಅಲ್ಲ. ಅವನ ತುಚ್ಛವಾದ ಇಷ್ಟಗಳನ್ನು ಅರಿತು, ಅದನ್ನೇ ಕೊಡುತ್ತೇನೆಂದು ಆಸೆ ತೋರಿಸಿ, ಅವನನ್ನು ಮಹತ್ತರವಾದ ಆ ಬ್ರಹ್ಮವಸ್ತುವಿನ ಸ್ವರೂಪದ ಕಡೆಗೆ ಸ್ವಲ್ಪಮಟ್ಟಿಗಾದರೂ ತಿರುಗಿಸುವುದೇ ಕರ್ಮಗಳ

ಉದ್ದೇಶ. ನೀನು ನಿನ್ನ levelನಲ್ಲಿ ಇದ್ದುಕೊಂಡು ಮಾತನಾಡಬೇಡ. ಸಾಮಾನ್ಯ ಜನಗಳ ಆಶೋತ್ತರಗಳು ಏನಿರಬಹುದೆಂಬುದನ್ನು ಯೋಚಿಸು. ತಮಗೆ ಸಂಪಾದನೆಯನ್ನು ಅಪೇಕ್ಷಿಸುವುದರ ಜತೆಗೆ, ತಮ್ಮ ದ್ವೇಷಿಗಳಿಗೆ ನಷ್ಟವಾಗಬೇಕೆಂಬ ಅಪೇಕ್ಷೆಯೂ ಬೇಕಾದಷ್ಟು ಜನಕ್ಕಿದೆ. ಇದು ಮಾನವ ಸ್ವಭಾವ. ಅಂಥವರು ಅತ್ಯಂತ ಮಂದಾಧಿಕಾರಿಗಳಿರಬಹುದು. ಆದರೆ ಅವರಿಗೂ ದಾರಿ ತೋರಿಸಬೇಕಲ್ಲವೇ ? ವೇದಗಳು ಕೇವಲ ಉತ್ತಮಾಧಿಕಾರಿಗಳಿಗೋಸ್ಕರ ಏರ್ಪಟ್ಟಿದ್ದಲ್ಲ. ಉತ್ತಮಾಧಿಕಾರಿಗಳು ಅದರ ಹತ್ತಿರವೇ ಹೋಗಬೇಕಾದ್ದಿಲ್ಲ. ಅದಕ್ಕೇ ಕೃಷ್ಣನು ಅರ್ಜುನನಿಗೆ ಹೇಳಿದ್ದು, 'ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ' ಎಂದು. ಉತ್ತಮಾಧಿಕಾರಿಯೂ ವೇದೋಕ್ತ ಕರ್ಮಗಳನ್ನು ಮಾಡಬಹುದು, ಕೇವಲ ಲೋಕಸಂಗ್ರಹಾರ್ಥವಾಗಿ; ಅವುಗಳನ್ನು ಯಾವ ರೀತಿ ಹೇಗೆ ಮಾಡಿ ಅಂತಃಕರಣ ಶುದ್ಧಿಯನ್ನು ಪಡೆಯಬಹುದು ಎಂದು ತೋರಿಸುವುದಕ್ಕೋಸ್ಕರ. ಇಲ್ಲದಿದ್ದರೆ ಅವನು ನೇರವಾಗಿ ಆತ್ಮಗುಣಗಳನ್ನು ಅಭಿವೃದ್ಧಿ ಮಾಡಿಕೊಳ್ಳುತ್ತಾ ಹೋಗಬಹುದು. ಮಂದಾಧಿಕಾರಿಗಳಿಗೆ ಫಲದ ರುಚಿ ತೋರಿಸದೆ ಹೋದರೆ ಹತ್ತಿರ ಯಾರು ಬರುತ್ತಾರೆ ? ಅದನ್ನು ವ್ಯಾಸರ ಬಾಯಿನಲ್ಲೇ ಕೇಳಬೇಕು.

ಪರೋಕ್ಷವಾದೋ ವೇದೋऽಯಂ ಬಾಲಾನಾಮನುಶಾಸನಮ್।
ಕರ್ಮಮೋಕ್ಷಾಯ ಕರ್ಮಾಣಿ ವಿಧತ್ತೇ ಹ್ಯಗದಂ ಯಥಾ ॥
ವೇದೋಕ್ತಮೇವ ಕುರ್ವಾಣೋ ನಿಃಸಂಗೋऽರ್ಪಿತಮೀಶ್ವರೇ।
ನೈಷ್ಕಾರ್ಮ್ಯಾಂ ಲಭತೇ ಸಿದ್ಧಿಂ ರೋಚನಾರ್ಥಾ ಫಲಶ್ರುತಿಃ॥

ವೇದವೆಂಬುದು ಪರೋಕ್ಷವಾದ. ಅಂದರೆ ನಮಗೆ ಆಪಾತತಃ (ಪ್ರತ್ಯಕ್ಷವಾಗಿ) ನೋಡಿದ್ದರಿಂದ ಏನೋ ಅರ್ಥ ಕಂಡರೂ ವೇದದ ಉದ್ದೇಶ ಅದಲ್ಲ. ಅದು ಮನಸ್ಸಿನಲ್ಲಿ ಏನೋ ಅರ್ಥವಿಟ್ಟುಕೊಂಡು, ಹೊರಗಡೆ ನೋಡುವವರಿಗೆ ಬೇರೆ ಅರ್ಥ ಬರುವಂತೆ ಹೇಳುತ್ತಿದೆ. ಅದರ ದ್ರಷ್ಟೃಗಳಾದ ಮಹರ್ಷಿಗಳು ಈಗಿಲ್ಲದಿರುವುದರಿಂದ ಅವರ ಅಭಿಪ್ರಾಯವೇನೆಂದು ಕೇಳಲು ಸಾಧ್ಯವಿಲ್ಲ. ಆದ್ದರಿಂದ ಬಹು ಎಚ್ಚರಿಕೆಯಿಂದ ಕಾರ್ಯಕಾರಣ ಭಾವಗಳನ್ನು ಸರಿಯಾಗಿ ವಿಮರ್ಶೆ ಮಾಡಿ, ವೇದಗಳ ಉದ್ದೇಶವನ್ನು ತಿಳಿದುಕೊಳ್ಳಬೇಕಾಗಿದೆ. ಅದು ಕೇವಲ ಮಂದಾಧಿಕಾರಿಗಳಿಗೆ (ಬಾಲಾನಾಂ) ಕೆಲವು ನಿಯಮಗಳನ್ನು ವಿಧಿಸಿದಂತೆ ವಿಧಿಸಿದೆ. ಆ ಕರ್ಮಗಳನ್ನು ಮಾಡಿ ಅವುಗಳಿಂದ ಮೋಕ್ಷ ಪಡೆಯುವುದೇ ಉದ್ದೇಶ. ಯಾವ ರೀತಿ ಬಾಲಕನಿಗೆ ಕಹಿ ಔಷಧ (ಅಗದಂ) ಕೊಡಬೇಕಾದರೆ ಅವನಿಗೆ ಲಡ್ಡು ಸಕ್ಕರೆ ಕೊಡುತ್ತೇನೆಂದು ಹೇಳಿ ಆಸೆ ತೋರಿಸಿ ಕೊಡುತ್ತೇವೆಯೋ, ವೇದದಲ್ಲಿ ಹೇಳಿರುವ ಫಲವೂ ಅಷ್ಟೆ ! ಮೊದಮೊದಲಲ್ಲಿ ಆ ಹುಡುಗನು ಅದನ್ನು ನಂಬಿದರೂ ಸ್ವಲ್ಪ ವಿವೇಕ ಬಂದಮೇಲೆ, 'ಓಹೋ ! ಈ ಔಷಧದಿಂದ ಲಡ್ಡು, ಸಕ್ಕರೆ ಪ್ರಯೋಜನವಲ್ಲ; ಆರೋಗ್ಯವೇ ಪ್ರಯೋಜನ'ವೆಂದು ಹೇಗೆ ನಿಶ್ಚಯಿಸಿಕೊಳ್ಳುತ್ತಾನೋ ಹಾಗೆ ವಿವೇಕಿಯಾದವನು ಮೊದಲು ಆಸೆಯಿಂದ ಕರ್ಮ ಆರಂಭಿಸಿದರೂ, ವಿವೇಕದಿಂದ ಅದರ ಪ್ರಯೋಜನ ಕೇವಲ ಚಿತ್ತಶುದ್ಧಿ ಎಂದು ನಿಶ್ಚಯಿಸಬೇಕು. ಆಗ ಕೇವಲ ಈಶ್ವರಾರ್ಪಣವೆಂದು ಕರ್ಮ ಮಾಡಿದಾಗ ಅಂತಃಕರಣಶುದ್ಧಿಯಾಗಿ 'ನೈಷ್ಕರ್ಮ್ಯಾಂ ಲಭತೇ ಸಿದ್ಧಿಂ' ಆತ್ಮದರ್ಶನಕ್ಕೆ ಬೇಕಾದ ಸಿದ್ಧಿಯನ್ನು ಪಡೆಯುತ್ತಾನೆ.

ನಮ್ಮ ಬೆಂಗಳೂರು ಪ್ರವಾಸವನ್ನು ನಿರೀಕ್ಷಿಸುತ್ತಿದ್ದೇನೆ. ಕಾಂಚನ, ಚೇತು ಅವರಿಗೆ ನನ್ನ ಸಪ್ರೇಮ ಆಶಿಷಃ.

ಇತಿ ನಿನ್ನವ
ಕುಮಾರಸ್ವಾಮಿ

೫೩೭

ವಿವೇಕ : (It must become our second nature)

ಕುಶಲಮ್ ಶ್ರೀ: Madras
30.1.86

ಶೈಲು !

ನಾನು phoneನಲ್ಲಿ ಹೇಳಿದಂತೆ ಕಾಗದ ಬರೆಯಲು ಪುರಸತ್ತೇ ಕಮ್ಮಿಯಾಗಿದೆ. ಇವತ್ತು ಈಗತಾನೇ ಎರಡು class ಮುಗಿಸಿ ಬಂದು ಕೂತಿದ್ದೇನೆ. ಬರೆದು ಮುಗಿಸಬೇಕೆಂಬ ಆಸೆಯೇನೋ ಇದೆ. ನಿನ್ನ ಕಾಗದದಲ್ಲಿ ಬರೆದಿರುವ ಕಾಂಚನ್ ವಿಷಯ, ಚೇತನ್ ಬರೆದಿರುವುದು, ಎಲ್ಲಾ ನೋಡಿ ಪುನಃ ಅವರೊಡನೆ ಓಡಾಡಿದ ಸವಿನೆನಪುಗಳೆಲ್ಲಾ ಮರುಕಳಿಸಿದುವು. ನನಗೆ ಕಾಂಚನ್ ಬಂದು 'ಅಜ್ಜ ! ನಾನೂ ಬರ್‌ಬೇಕು' ಎಂದು ಹೇಳುವುದನ್ನೂ, ಅವಳ ಮುಖವನ್ನೂ, ಆ pleading ಕಣ್ಣುಗಳನ್ನೂ ನೆನೆಸಿಕೊಂಡರೇ ಪುಲಕಿತವಾಗುತ್ತದೆ. ಅದೇ ಮುಗ್ಧ ಮಕ್ಕಳಿಂದ ಉಂಟಾಗುವ ಸಂತೋಷ.

ಸಾಮಾನ್ಯ ನಮ್ಮ ಪ್ರಪಂಚದಲ್ಲಿ ತೆಗೆದುಕೊಂಡರೆ, ನಮಗೆ ಇಂದ್ರಿಯಗಳಿಂದ ಬರುವ ಅಭ್ಯಾಸವು ಎಷ್ಟು ಬೇಗ Habit ಆಗಿಬಿಡುತ್ತದೋ, ಹಾಗೆಯೇ ಬೌದ್ಧಿಕ ಮತ್ತು ಮಾನಸಿಕ ಅನುಭವಗಳೂ, ಅಭ್ಯಾಸವಾಗಬೇಕು. ನಶ್ಯ ಹಾಕುವುದು, ಕಾಫಿ ಕುಡಿಯುವುದು, ಹರಟೆ ಹೊಡೆಯುವುದು, ಸಿನಿಮಾ ಹಾಡು ಕೇಳುವುದು, ಸಿನಿಮಾ ನೋಡುವುದು, ಮಲಗುವುದು,ಕಥೆ ಓದುವುದು ಇವೆಲ್ಲಾ ನಮಗೆ Habit ಆಗಿಬಿಡುತ್ತವೆ. ಹಾಗೆಯೇ ವೈರಾಗ್ಯ, ಸತ್ಯತಾ, ದಯಾ, ಅಹಿಂಸೆ, ಋಜುತ್ವ, ಮಾರ್ದವ ಇವೇ ಮೊದಲಾದ ಬೌದ್ಧಿಕಗುಣಗಳೂ, ಮಾನಸಿಕ Habit ಆಗಬೇಕು. ಅಂದರೆ ಕಾಫಿ ಕುಡಿದರೆ ಚೆನ್ನಾಗಿರುತ್ತದೆ ಎಂಬ ಬೌದ್ಧಿಕ

ಗ್ರಹಣವಾದ ಅನುಭವವನ್ನು ಹೇಗೆ ಮನಸ್ಸು, ಇಂದ್ರಿಯಗಳಿಗೆ Transfer ಮಾಡಿ, ಕುಡಿಯಲು ಆರಂಭಿಸಿ, ಅದು Habit ಆಗಿಬಿಟ್ಟಿತೋ ಹಾಗೆ ವೈರಾಗ್ಯಾದಿಗಳೂ ಆಗಬೇಕು. ವೈರಾಗ್ಯವೆಂಬುದು ಬುದ್ಧಿಗ್ರಹಣವಾಗಿದೆ. ಅದನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ actionಗೆ ತರಬೇಕು. ಮನಸ್ಸು, ಇಂದ್ರಿಯಗಳು ಆ ವೈರಾಗ್ಯಸೂಚಕವಾದ ಕಾರ್ಯದಲ್ಲಿ ನಿರತವಾಗುವಂತೆ ಮಾಡಬೇಕು. ಆದರೆ ನಾವು ಸ್ವಭಾವವಾಗಿ ತದ್ವಿರುದ್ಧವಾದ ಕಾರ್ಯವನ್ನೇ ಮಾಡುತ್ತೇವೆ. ಆಗ ಆ ವೈರಾಗ್ಯ ಕೇವಲ ಬುದ್ಧಿಗ್ರಹಣವಾಗಿಯೇ ಉಳಿಯುತ್ತದೆ. 'ಸತ್ಯಂ ವದ' ಎಂಬುದು ಬುದ್ಧಿಗ್ರಹಣವಾಗಿದೆ. ಆದರೆ ನಮ್ಮ ಪ್ರತಿನಿತ್ಯದ ಕಾರ್ಯಗಳಲ್ಲಿ ತದ್ವಿರುದ್ಧವಾಗಿಯೇ ಮಾಡುತ್ತಿದ್ದರೆ, ಆ ಅನುಭವವು Habit ಆಗುವುದು ಹೇಗೆ ? ದಯೆಯೂ ಅಷ್ಟೆ. Kindness ಮೇಲೆ ಉಪನ್ಯಾಸ ಮಾಡುವುದು, ಕೈ ಹಿಡಿದ ಹೆಂಡತಿ ವಿಷಯದಲ್ಲಿಯೂ ದಯೆಯನ್ನು ತೋರಿಸುವಷ್ಟು ಅಭ್ಯಾಸವನ್ನೂ ಮಾಡಲಾಗದಿದ್ದರೆ ಪ್ರಯೋಜನವೇನು ? ಸಮಾನದರ್ಶಿತ್ವ ಎಂಬುದು ಬುದ್ಧಿಗ್ರಹಣವಾಗಿದೆ. ಅದನ್ನು ಮನಸ್ಸು, ಇಂದ್ರಿಯಗಳಿಗೆ ಹೇಳಿಕೊಟ್ಟರೆ ತಾನೇ ಅವು ಕಾರ್ಯರೂಪಕ್ಕೆ ತಂದು ನಮ್ಮ ಬೌದ್ಧಿಕ ಅನುಭವವನ್ನು ಶಾಶ್ವತವನ್ನಾಗಿ (Permanent) ಮಾಡಿಯಾವು ? ಅದಕ್ಕೇ Prof. Radhakrishnan ಹೇಳಿದರು, This is the only country where we talk so much about honesty, but dishonesty pervades everywhere ಎಂದು. ಈ ಗುಣಗಳೆಲ್ಲಾ ಏಕಾಂತದಲ್ಲಿದ್ದು ಅಭ್ಯಾಸ ಮಾಡುವುದು ದುಃಸಾಧ್ಯ. ನಮ್ಮ ಮನಸ್ಸನ್ನು ಸಮಾಜ ಸಂಪರ್ಕವೆಂಬ ಸಾಣೆಕಲ್ಲಿನ ಮೇಲೆ ತೇಯಬೇಕು. ಆಗಲೇ ಹರಿತವಾಗಲು ಸಾಧ್ಯ. ಇಲ್ಲದಿದ್ದರೆ ಮೊಂಡಾಗಿಯೇ ಉಳಿಯುತ್ತದೆ. ಬುದ್ಧಿಯನ್ನೂ ಮೊಂಡು ಮಾಡುತ್ತದೆ. ಬುದ್ಧಿಗ್ರಹಣವಾದ ತಕ್ಷಣ ಆ ಅನುಭವವು Permanent ಎಂದು ಭಾವಿಸುವುದು ತಪ್ಪು ಕಲ್ಪನೆ. ಹಾಗಿದ್ದರೆ ನಾವೆಲ್ಲರೂ ಯಾವತ್ತೋ ಜ್ಞಾನಿಗಳಾಗುತ್ತಿದ್ದೆವು !

ದಯೆ ತೋರಿಸುವ ಸಂದರ್ಭಗಳು ಬರಬೇಕು. ಋಜುತ್ವವನ್ನು ತೋರಿಸುವ ಸಂದರ್ಭ ಬರಬೇಕು. ಮಾರ್ದವವನ್ನು ತೋರಿಸುವ ಸಂದರ್ಭಗಳು ಬರಬೇಕು. ಅವು ಹೆಚ್ಚು ಹೆಚ್ಚು ಬಂದಂತೆ ನಮ್ಮ ಅನುಭವವೂ ಹೆಚ್ಚು ಹೆಚ್ಚು ಶಾಶ್ವತವಾಗುತ್ತದೆ.

ಆದ್ದರಿಂದ ಕೇವಲ ಯಾವುದೋ ಒಂದು ಕ್ಷಣದಲ್ಲಿ ಬಂದ ವಿವೇಕಪೂರಿತವಾದ ಮಾತಿನಿಂದಾಗಲಿ, ಕ್ಷಣಿಕವಾದ ಕಾರ್ಯದಿಂದಾಗಲಿ ನಾವು ಸಂತೋಷಪಡಬೇಕಾದ್ದಿಲ್ಲ. ಅದು ಶಾಶ್ವತವಾಗಬೇಕು. ಅಪ್ರತಿಬದ್ಧವಾಗಬೇಕು. ಅದಕ್ಕೆ ಸತತವಾದ ಅಭ್ಯಾಸಬೇಕು. It must become our second nature. Samuel Smiles ಇದನ್ನು ಬಹಳ ಚೆನ್ನಾಗಿ ಹೇಳುತ್ತಾರೆ, As habits belonging to the body are produced by external acts, so habits of the mind are produced by the execution of inward practical purposes; ie. carrying them into action or acting upon them - the principles of truth, justice, integrity and charity. Good habits are a necklace of pearls; untie one of them, the whole unthreads. ಶೈಲು ! ಚೇತನ್, ಕಾಂಚನ್‌ರಿಗೆ ಅಜ್ಜನನ್ನು ಜ್ಞಾಪಿಸು. ಅಕ್ಕ, ಅತ್ತಂಬಿ ಬಂದಿದ್ದರೆ ನನ್ನ ಅನಂತ ನಮಸ್ಕಾರಗಳನ್ನು ತಿಳಿಸು. ಅವರೊಡನೆ ಮಾತನಾಡಿಯೇ ಬಹಳ ದಿನಗಳಾದಂತೆ ತೋರುತ್ತಿದೆ. ಅಂತೂ ಅವರು ಮದರಾಸಿಗೆ ಬರುವುದನ್ನು ಬಿಟ್ಟೇಬಿಟ್ಟರು. ಜ್ಞಾಪಿಸು.

ಇತಿ ನಿನ್ನವ

कुमारस्वामी

೫೩೮

ವಿಗ್ರಹಾರಾಧನೆ (symbolism)

कुशलम् श्री: Madras

25-2-86

ಶೈಲು !

ನನ್ನ ಕಾಗದ ನೋಡಿ ಪುನಃ ನಿನಗೆ ಆಶ್ಚರ್ಯವಾಗಬಹುದು. ನೀನು ಹಿಂದೆ ಯಾವುದೋ ಒಂದು ದಿನ ವಿಗ್ರಹಾರಾಧನೆ ಬಗ್ಗೆ ಪ್ರಶ್ನೆ ಕೇಳಿದ್ದೆ. ಅದಕ್ಕೆ ನಾನು ಸಾಧಾರಣ ಸಮಾಧಾನ ಕೊಟ್ಟಿದ್ದರೂ ನನಗೇ ತೃಪ್ತಿಯಾಗಿರಲಿಲ್ಲ. Prof. Radhakrishnan ಬರೆದದ್ದು ಜ್ಞಾಪಕವಿತ್ತು. ತಕ್ಷಣ ಸಿಗಲಿಲ್ಲ. ಇವತ್ತು Libraryಯಲ್ಲಿ ನೋಡುತ್ತಿದ್ದಾಗ ಸಿಕ್ಕಿತು. ಬರೆಯಬೇಕೆಂದು ಕೂತೆ.

ಪಾಪು ನಿನ್ನೆಯೇ ತಲಪಿ ಗಲಾಟೆ ಮಾಡುತ್ತಿರಬಹುದು. ಈ 10 ದಿನಗಳಲ್ಲಿ ಬೆಂಗಳೂರು ಯಾಕೆ ಎಂದು ಎಷ್ಟೋ ಹೇಳಿದೆ. "ನಾನು ಅತ್ತಂಬಿ ನೋಡಬೇಕು. ಶೈಲುವನ್ನು ನೋಡಬೇಕು. ಚೇತು, ಕಾಂಚನರನ್ನು ನೋಡಬೇಕು. Homesick ಆಗಿ ಅಷ್ಟು ದೂರದಿಂದ ಬಂದಿದ್ದೇನೆ. ಇನ್ನು ಪುನಃ 2-3 ತಿಂಗಳುಗಳಾಗುತ್ತೆ. ನಾನು ನೋಡಿಯೇ ತೀರಬೇಕು" ಎಂದು ಹಟ ಮಾಡಿದ. ಇನ್ನು ಅದನ್ನೇ ಹಚ್ಚಿಕೊಂಡು ಅಲ್ಲಿಗೆ ಹೋಗಿ ಪುನಃ Homesick ಆಗಬಾರದು ಎಂದು ಯೋಚಿಸಿ ಕಳಿಸಿಕೊಟ್ಟೆ.

Idol worship ವಿಷಯ ಅವರು ಬರೆದಿರುವುದನ್ನು ಬರೆಯುತ್ತೇನೆ. ಆಮೇಲೆ ನನ್ನ Explanations ಕೊಡುತ್ತೇನೆ...

ಇದೆಲ್ಲಾ Self explanatoryಯಾಗಿದೆ. ನಮ್ಮ ಪೂಜೆ, ಹೋಮ, ಅಗ್ನಿಹೋತ್ರ ಎಲ್ಲವೂ ಈ symbolismನ್ನು ಅವಲಂಬಿಸಿಯೇ ಹೊರಟಿರುವುದು. ಅದಕ್ಕೇ ಸಂಧ್ಯಾವಂದನೆಯಲ್ಲಿ

ಕೂಡ ಅಸಾವಾದಿತ್ಯೋ ಬ್ರಹ್ಮ (ಈ ಆದಿತ್ಯನೇ ಪರಮಾತ್ಮನಾದ ಬ್ರಹ್ಮ) ಎಂದು ಹೇಳುತ್ತೇವೆ. ನಮ್ಮ ವೇದಗಳಲ್ಲಿ ವಿಗ್ರಹರೂಪದಲ್ಲಿ ಪರಮಾತ್ಮನ ಆರಾಧನೆಯನ್ನು ಮಾಡುವುದು ಕಾಣಿಸಲಿಲ್ಲ. ಆದರೆ ವೇದಮಹರ್ಷಿಗಳಿಗೂ ಈ symbolಗಳ (ಪ್ರತೀಕ) ಆವಶ್ಯಕತೆ ಮನುಷ್ಯನಿಗೆ ಎಷ್ಟರಮಟ್ಟಿಗೆ ಇದೆ ಎನ್ನುವುದು ತಿಳಿದಿತ್ತು. ಸ್ಥೂಲದಿಂದ ಸೂಕ್ಷ್ಮ, ದೃಷ್ಟದಿಂದ ಅದೃಷ್ಟ, ಜ್ಞಾತದಿಂದ ಅಜ್ಞಾತ ಎನ್ನುವ ದಾರಿ ಅವರಿಗೆ ಚೆನ್ನಾಗಿ ತಿಳಿದಿತ್ತು. ಮನಸ್ಸಿನ ಸ್ವಭಾವದಲ್ಲಿ ಅದೃಷ್ಟವನ್ನೂ, ಅಜ್ಞಾತವನ್ನೂ ಹಿಡಿಯಲಾರದೆಂದು ತಿಳಿದು ಅದಕ್ಕೆ ಪ್ರತೀಕಗಳ ಆಸರೆಯನ್ನೂ, ಅವಲಂಬನೆಯನ್ನೂ ಕೊಟ್ಟರು. ಅವರಿಗೆ ಆಗ ಸುಲಭವಾಗಿ ಕಾಣಿಸಿದ್ದು - ಪ್ರಕೃತಿಯಲ್ಲಿ ನಮಗೆ ಉಪಕಾರ ಮಾಡುತ್ತಿರುವ ಸೂರ್ಯ, ಚಂದ್ರ, ಅಗ್ನಿ, ಇತ್ಯಾದಿಗಳು. ಅವುಗಳಿಗೆ ದೇವತಾತ್ವ ಕಲ್ಪನೆ ಮಾಡಿ, ತನ್ಮೂಲಕ ಬ್ರಹ್ಮೋಪಾಸನೆ, ಬ್ರಹ್ಮನ ತಿಳುವಳಿಕೆಯನ್ನು ಪಡೆಯಲಿ ಎಂಬುದೇ ಉದ್ದೇಶ. ಒಟ್ಟಿನಲ್ಲಿ ಮನಸ್ಸನ್ನು ಒಂದು ಕಡೆ-ಬ್ರಹ್ಮಭಾವವು ಹೆಚ್ಚಾಗಿ ಆವಿರ್ಭಾವವಾಗಿರುವ ಕಡೆ-ನಿಲ್ಲಿಸಲು ಸಾಧನ. ಅದನ್ನು ಸಾಧನವೆಂದು ತಿಳಿದುಕೊಳ್ಳದೆ, ನಮಗೆ ಅವುಗಳನ್ನು ಮಾಡಲು ರುಚಿ ಉತ್ಪಾದನೆ ಮಾಡಲು ಹೇಳಿರುವ ಫಲಶ್ರುತಿಗಳನ್ನೂ, ಅರ್ಥವಾದಗಳನ್ನೂ ಯಥಾರ್ಥವೆಂದು ನಂಬಿ, ಅವುಗಳನ್ನು ಪಡೆಯುವ ಸಾಧನಗಳೆಂದು ಮೋಸಹೋಗಿ ಅದರಲ್ಲೇ ಬಿದ್ದು ನಾರುತ್ತಿದ್ದೇವೆ.

ಬುದ್ಧನಾದ ಮೇಲೆ ಬೌದ್ಧರಲ್ಲಿ ವಿಗ್ರಹಾರಾಧನೆ ಆರಂಭವಾಯಿತು. ಅಲ್ಲಿಂದ ಅದರ ಗಾಳಿ ನಮಗೂ ಬೀಸಿ, ನಾನಾ ತರಹ ದೇವತೆಗಳ ವಿಗ್ರಹಗಳನ್ನು ಪೂಜಿಸಲು ಆರಂಭಿಸಿದೆವು. ಆ ದೇವತೆಯಲ್ಲಿ ಭಕ್ತಿ ಗೌರವಗಳು ಮೂಡುವುದಕ್ಕೋಸ್ಕರ ಅದರ ಬಗ್ಗೆ ಪುರಾಣಗಳು ಸೃಷ್ಟಿಯಾದುವು. ಅವುಗಳಲ್ಲಿ ಯಾವುದೂ ಖಂಡಿತ ತಪ್ಪಿಲ್ಲ -ಅವು ಕೇವಲ ಪ್ರತೀಕ, ಆತ್ಮದರ್ಶನ ಮಾಡಿಕೊಳ್ಳಲು ಒಂದು ಸಾಧನ ಎಂಬ ತಿಳುವಳಿಕೆ ಇರುವವರೆಗೂ. ಯಾವಾಗ ಅದೇ ಪರಮಾರ್ಥ, ಅದನ್ನು ಮಾಡುತ್ತಿದ್ದರೆ ನನಗೆ ಸಕಲವೂ ಸಿದ್ಧಿಸುತ್ತದೆ ಎಂಬ ಮಿಥ್ಯಾಪ್ರತೀತಿ ಆರಂಭವಾಯಿತೋ ಅಲ್ಲಿಗೆ ನಮ್ಮ ಕಥೆ ಮುಗಿಯಿತು. ಅದಕ್ಕೇ ಎಲ್ಲಾ ಕಡೆಗಳಲ್ಲಿಯೂ "ಯಥಾ ಸಾಲಗ್ರಾಮೇ ವಿಷ್ಣುಬುದ್ಧಿಃ, ಯಥಾ ಪ್ರತಿಮಾದಿಷು ವಿಷ್ಣ್ವಾದಿಬುದ್ಧಿಃ, ಯಥಾ ಶ್ರಾದ್ಧೇ ಬ್ರಾಹ್ಮಣೇಷು ಪಿತೃಪಿತಾಮಹಪ್ರಪಿತಾಮಹಬುದ್ಧಿಃ" ಎಂದು ಪದೇ ಪದೇ ಹೇಳುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಪೂಜೆ ಮಾಡುವಾಗ, ಹೋಮ ಮಾಡುವಾಗ ಎಷ್ಟಾದರೂ ಇದು ಸುಮ್ಮನೆ ಪ್ರತೀಕ; ಇದರಲ್ಲೇನಿದೆ ? ಎಂದು ಅಶ್ರದ್ಧೆಯಿಂದಲೋ ಅಕ್ರಮವಾಗಿಯೋ ಮಾಡುವುದು ಅನುಚಿತವಾಗುತ್ತದೆ. ಎಲ್ಲವನ್ನೂ ಶ್ರದ್ಧೆಯಿಂದ ಭಕ್ತಿಯಿಂದ ಮಾಡಬೇಕು. ಮಾಡಿದ್ದರಿಂದ ಯಾವುದೋ ಐಹಿಕ, ಆಮುಷ್ಮಿಕ ಫಲಗಳು ಸಿಗುತ್ತವೆಂಬ ಭಕ್ತಿ ಶ್ರದ್ಧೆಯಲ್ಲ. ಇದು ಪರಮಾತ್ಮನ ಪ್ರತೀಕ; ಇದಕ್ಕೆ ಮಾಡಿದ ಆರಾಧನೆ ಅವನಿಗೆ ಮಾಡಿದಂತಾಗುತ್ತದೆ ಎಂಬ ಸಮಗ್ರ ಭಾವನೆಯಿಂದ. ಅಷ್ಟು ಕಾಲವಾದರೂ ಅವ್ಯಕ್ತನಾದ, ಅಚಿಂತ್ಯನಾದ, ನಿರ್ವಿಕಾರನಾದ ಆ ಪರಮಾತ್ಮನ ಸಾನ್ನಿಧ್ಯದಲ್ಲಿದ್ದೆ ಎಂಬ ದಿವ್ಯಾನಂದದ ಅನುಭವದಲ್ಲಿ ಮುಳುಗುವುದೇ ಅದಕ್ಕೆ ಪ್ರಯೋಜನ (Religious Experience). ಇದನ್ನೇ ತ್ಯಾಗರಾಜಸ್ವಾಮಿಗಳು ತಮ್ಮ ರಾಮ ವಿಗ್ರಹ ಪೂಜೆ ಮಾಡಿದಾಗ ಅನುಭವಿಸಿರುವುದು. ಇದನ್ನೇ ಕನಕದಾಸರು ಉಡುಪಿ ಶ್ರೀಕೃಷ್ಣನನ್ನು ನೋಡಿ ಅನುಭವಿಸಿದ್ದು (ಇದಕ್ಕೋಸ್ಕರ ಕೃಷ್ಣನ ವಿಗ್ರಹವನ್ನು ಹಿಂದು ಮುಂದು ತಿರುಗಿಸಬೇಕಾದ್ದಿಲ್ಲ.). ಇದನ್ನೇ ಪುರಂದರದಾಸರು ವಿಟ್ಠಲನ ಎದುರಿಗೆ ನಿಂತು ಅನುಭವಿಸಿದ್ದು. ಅವರ ಆನಂದಾನುಭವವೇ ರಸರೂಪವಾಗಿ ಹೊರಗೆ ಬಂದು ನಮಗೆ ಇವತ್ತು ಕೀರ್ತನೆಗಳು, ಪದಗಳು ಎಂಬ ಹೆಸರಿನಿಂದ ಸ್ಫೂರ್ತಿ ಕೊಡುತ್ತಿರುವುದು.

ಹಸ್ತಮುತ್ಕ್ಷಿಪ್ಯ ಯಾತೋಽಸಿ ಬಲಾತ್ ಕೃಷ್ಣ ಕಿಮದ್ಭುತಂ।
ಹೃದಯಾದ್ಯದಿ ನಿರ್ಯಾಸಿ ಪೌರುಷಂ ಗಣಯಾಮಿ ತೇ॥

ಎಂದು ಉದ್ಗರಿಸಿದ ಲೀಲಾಶುಕನ ಅನುಭವವೂ ಇದೇ (ಕೃಷ್ಣ ಬಂದು ಅವನ ಕೈಹಿಡಿದುಕೊಂಡನೇ, ಅವನ ಕೈ ಯಾವ size ನಲ್ಲಿತ್ತು ಇವೆಲ್ಲಾ ಪ್ರಶ್ನೆಗಳು ಬರಬಾರದು. ಅವೆಲ್ಲಾ ಕೇವಲ ಅಂತಃಕರಣ ಧರ್ಮಗಳು.) ತ್ಯಾಗರಾಜಸ್ವಾಮಿಗಳಿಗೆ ರಾಮಚಂದ್ರಸ್ವಾಮಿ ಪ್ರತ್ಯಕ್ಷನಾದನೆಂದರೆ ಅದು ಅವರ ಅಂತಃಕರಣ ಧರ್ಮ. ಮಧುಸೂದನಸರಸ್ವತಿಗಳು,

ಧ್ಯಾನಾಭ್ಯಾಸವಶೀಕೃತೇನ ಮನಸಾ ತನ್ನಿರ್ಗುಣಂ ನಿಷ್ಕ್ರಿಯಂ
ಜ್ಯೋತಿಃ ಕಿಂಚನ ಯೋಗಿನೋ ಯದಿ ಪರಂ ಪಶ್ಯಂತಿ ಪಶ್ಯಂತು ತೇ।
ಅಸ್ಮಾಕಂ ತು ತದೇವ ಲೋಚನಚಮತ್ಕಾರಾಯ ಭೂಯಾತ್ ಚಿರಂ
ಕಾಲಿಂದೀಪುಲಿನೋದರೇ ಕಿಮಪಿ ಯಂ ನೀಲಂ ಮಹೋ ಧಾವತಿ॥

ಎಂದು ಮುಕ್ತಕಂಠದಿಂದ ಸ್ತೋತ್ರ ಮಾಡಿದರು, ಪರಮ ಅದ್ವೈತಾಚಾರ್ಯರಾಗಿದ್ದಾಗಲೂ ಕೂಡ. ಪ್ರಾಯಃ ನಿರ್ವಿಕಾರ ಬ್ರಹ್ಮನನ್ನು ಹಿಡಿಯುವಷ್ಟು ಮನಸ್ಸು ಪಕ್ವವಾಗದಿರುವ ಕಾಲ ಅಂತ ಕಾಣುತ್ತೆ. ಆನಂದವಾಗಿ ಹಾಡಿದರು. ಅದೇ ರೀತಿ ನಾವೂ ಪ್ರತೀಕಗಳನ್ನು ಪೂಜಿಸಿ (ಶ್ರದ್ಧೆಯಿಂದ, ಭಕ್ತಿಯಿಂದ, ಒಂದು ಕ್ರಮದಿಂದ) ಕ್ರಮಕ್ರಮವಾಗಿ ಅಂತಃಕರಣ ಶುದ್ಧಿಯನ್ನು ಪಡೆದು, ಸಕಲ ಭೂತಗಳಲ್ಲಿಯೂ ಚೈತನ್ಯವಸ್ತುವಾಗಿ ವಿರಾಜಿಸುತ್ತಿರುವ ಆ ಪರಮಾತ್ಮನನ್ನು ಕಾಣುವಂತಾಗಲೆಂದು ಪ್ರಾರ್ಥಿಸುತ್ತೇನೆ.

ಶೈಲು ! 4 ಪೇಜು ಓದಲು ಸ್ವಲ್ಪ ಕಷ್ಟವೇ ಆಗಬಹುದು. ಆದರೂ ಎರಡನೇ ಬಾರಿ ಓದು. ಚೇತು, ಕಾಂಚನರಿಗೆ ನನ್ನ ಸಪ್ರೇಮ ಆಶೀರ್ವಾದಗಳು.

ಇತಿ ನಿನ್ನವ
ಕುಮಾರಸ್ವಾಮಿ

೫೩೯

(ಹೋದ ಜನ್ಮದ) ಪುಣ್ಯದ ಫಲ ?

कुशलम् श्री: Madras
19.11.86

ಶೈಲು !

ನನ್ನ ಕಾಗದ ತಲಪಿ ನಿನ್ನ ಕೋಪ ಸ್ವಲ್ಪ ಶಮನವಾಗಿರಬಹುದು!! ಆ ಕಾಗದವನ್ನು ಬಹಳ ತಡವಾಗಿ ಬರೆದದ್ದಕ್ಕೆ ಪ್ರಾಯಶ್ಚಿತ್ತಾರ್ಥವಾಗಿ ಈ ಕಾಗದವನ್ನು ಬರೆಯುತ್ತಿದ್ದೇನೆ. ಕಾಂಚು, ಚೇತನ್ ಹೇಗಿದ್ದಾರೆ ? ಮಂಗಳವಾರ ಬೆಳಗ್ಗೆ ಬೇಗ ಎದ್ದು ಸಿದ್ಧವಾಗಿರುವಂತೆ ಹೇಳು !! ನಾವೂ ಅವರನ್ನು ನೋಡುವ ನಿರೀಕ್ಷಣೆಯಲ್ಲಿಯೇ ಇದ್ದೇವೆ.

ನಿನ್ನೆ ಒಂದು ವಿಷಯ ಚರ್ಚೆಗೆ ಬಂತು. ಅದನ್ನು ನಿನ್ನ ಮುಂದೆಯೂ ಇಡುತ್ತೇನೆ. ಯೋಚಿಸು. ಸಾಮಾನ್ಯವಾಗಿ ನಾವೆಲ್ಲರೂ ಇವತ್ತಿನ ದಿನದಲ್ಲಿ ಯಾರಾದರೂ ಒಬ್ಬನು ಐಹಿಕವಾಗಿ ಧನವಂತನಾಗಿ ಐಶ್ವರ್ಯ ಸಂಪತ್ತಿಯುಳ್ಳವನಾಗಿದ್ದರೆ, "ಅವನು ಹೋದ ಜನ್ಮದಲ್ಲಿ ತುಂಬಾ ಪುಣ್ಯ ಮಾಡಿದ್ದ, ಅನುಭವಿಸುತ್ತಿದ್ದಾನೆ" ಎನ್ನುತ್ತೇವೆ. ಅಥವಾ "ಅವನ ಹಿರಿಯರು ಮಾಡಿದ ತಪಃಫಲವನ್ನು ಅನುಭವಿಸುತ್ತಿದ್ದಾನೆ" ಎನ್ನುತ್ತೇವೆ. ಈಗ 15 ವರ್ಷಗಳ ಕೆಳಗೆ ಶೃಂಗೇರಿ ಗುರುಗಳನ್ನು ನೋಡಲು ಹೋಗಿದ್ದಾಗ ಇಲ್ಲಿಯ ರಾಮನಾಥದೀಕ್ಷಿತರೆಂಬ ದೊಡ್ಡ ವೇದಾಧ್ಯಾಪಕರ ಮಗ ಬಂದಿದ್ದ. ಯಾರೋ ಅವನನ್ನು introduce ಮಾಡುತ್ತಾ (ಆ ದೀಕ್ಷಿತರಿಗೆ 5 ಜನ ಗಂಡುಮಕ್ಕಳು. ಅಲ್ಲಿ ಬಂದವನೊಬ್ಬನಿಗೇ ವೇದಾಧ್ಯಯನ ಮಾಡಿಸಿದ್ದರು. ಬಾಕಿಯವರು ಉದ್ಯೋಗದಲ್ಲಿದ್ದರು !) ಇಂಥವರ ಮಗ ಎಂದು ಹೇಳಿ, ಅವನ ಅಣ್ಣಂದಿರು ಒಬ್ಬೊಬ್ಬರೂ ಬಹಳ ದೊಡ್ಡ ದೊಡ್ಡ ಉದ್ಯೋಗಗಳಲ್ಲಿ ಇರುವುದಾಗಿ ಹೇಳಿದರು. ಗುರುಗಳು ತಕ್ಷಣ, "ಅವನ ಪೂರ್ವಜರು ಮಾಡಿದ ತಪಃಫಲವನ್ನೆಲ್ಲಾ ಇವರುಗಳು ಅನುಭವಿಸುತ್ತಿದ್ದಾರೆ" ಎಂದು ಹೇಳಿದರು. ನಮ್ಮಲ್ಲಿಯೂ ಕೌಶಿಕ ಸಂಕೇತಿಗಳು ಲೌಕಿಕವಾಗಿ ಬಹಳ ಮುಂದುವರಿದಿರುವುದಕ್ಕೆ ಅವರ ಹಿರಿಯರು ಮಾಡಿದ ತಪಸ್ಸೇ ಕಾರಣ ಎಂದು ನಾನೇ ಹೇಳಿರುವುದೂ ಉಂಟು.

ಈ ವಾದವು ಸಮಂಜಸವಲ್ಲ ಎಂದು ಈಗ ಅನ್ನಿಸುತ್ತಿದೆ. ಪುಣ್ಯಕಾರ್ಯದ ಫಲಿತಾಂಶವು ಒಬ್ಬ ಮನುಷ್ಯನಿಗೆ ಇನ್ನೂ ಹೆಚ್ಚು ಐಶ್ವರ್ಯ ಕೊಡುವುದೆಂದು ಹೇಳುವುದು ಸರಿಯಲ್ಲವೆಂದು ನನ್ನ ಭಾವನೆ. ಪುಣ್ಯಕಾರ್ಯವೆಂಬುದು, ದಾನವೇ ಆಗಲಿ, ಪರೋಪಕಾರವೇ ಆಗಲಿ, ಸರಿಯಾದ ಪೂಜೆ, ಹೋಮಗಳೇ ಆಗಲಿ, ಎಲ್ಲವೂ ಸತ್ವಗುಣಪ್ರಧಾನವಾದ ವಾಸನೆಯಿಂದ ಪ್ರೇರಿತವಾದುವು (ನಾನು ರಜೋಗುಣ, ತಮೋಗುಣ ಪ್ರೇರಿತವಾದ ದಾನಾದಿಗಳ ಬಗ್ಗೆ ಮಾತನಾಡುತ್ತಿಲ್ಲ). ಅದಕ್ಕೆ ಫಲ ಇನ್ನೂ ಸತ್ವಗುಣಾಭಿವೃದ್ಧಿಯಾಗಿ, ಆ ಐಹಿಕಸುಖದಲ್ಲಿ ತೀವ್ರ ವೈರಾಗ್ಯ ಬರಬೇಕೇ ಹೊರತಾಗಿ, ಐಹಿಕಸುಖವು ಅದರಿಂದ ಉಂಟಾಗುತ್ತದೆಂದು ಹೇಳುವುದು ಆ ಪುಣ್ಯಕಾರ್ಯಕ್ಕೇ ಅನ್ಯಾಯ ಮಾಡಿದಂತಾಗುತ್ತದೆ. ಹಾಗೆಯೇ ದಾರಿದ್ರ್ಯವೆಲ್ಲಾ ಪಾಪದ ಫಲ ಎಂದು ಹೇಳುವುದೂ ತಪ್ಪು. ಪ್ರಪಂಚದ ಚರಿತ್ರೆಯಲ್ಲಿ ಯಾವ ಭಕ್ತನನ್ನೋ ಮಹಾತ್ಮನನ್ನೋ ತೆಗೆದುಕೊಂಡರೂ ಕೂಡ Christ, Mohammed, ಬುದ್ಧ, ಶಂಕರ, ರಾಮಾನುಜ, ಮಧ್ವ, ತ್ಯಾಗರಾಜರು, ಪುರಂದರದಾಸರು, ಕನಕದಾಸರು, ತುಕಾರಾಮ್, ತುಳಸೀದಾಸ್, ಸೂರದಾಸ್, ರಾಮಕೃಷ್ಣಪರಮಹಂಸರು, ವಿವೇಕಾನಂದ, ರಮಣಮಹರ್ಷಿ, ಗಾಂಧಿ ಎಲ್ಲರೂ ನಮ್ಮ definition ಪ್ರಕಾರ ದರಿದ್ರರೇ ! ಹಾಗಾದರೆ ಅವರು ಪಾಪ ಮಾಡಿದ್ದರೆಂದು ಹೇಳೋಣವೇ! ಪ್ರತ್ಯುತ ಅವರು ಅತ್ಯಂತ ಪುಣ್ಯ ಮಾಡಿ ಹುಟ್ಟಿದ್ದಿರಬೇಕು ಅನ್ನಿಸುವುದಿಲ್ಲವೇ? ಅವರಿಗಿದ್ದ ಆತ್ಮಗುಣಗಳು ಪುಣ್ಯಪ್ರಭಾವವೆಂದು ಹೇಳಿದರೆ ಉಚಿತವಾಗುವುದಿಲ್ಲವೇ ? ಅವರು ಧನಸಂಪಾದನೆಗೇ ಪ್ರಯತ್ನಪಟ್ಟಿದ್ದರೆ ಅವರಿಗೆ ಸುಖವಾಗಿ ಬೇಕಾದಷ್ಟು ಸಿಗುತ್ತಿತ್ತು ! ಇವತ್ತು ಧನಸಂಪಾದನೆ ಮಾಡಿರುವವರೆಲ್ಲ ಪುಣ್ಯ ಮಾಡಿದ್ದರೆಂದು ಹೇಳಿದರೆ ಸರಿಹೋಗುತ್ತದೆಯೇ ? ಯಾವ ವಿಧವಾದ ಸಾತ್ವಿಕಗುಣಗಳೂ ಇಲ್ಲದೆ ಕೇವಲ ಧನಸಂಪಾದನೆಯ ದೃಷ್ಟಿಯನ್ನೇ ಇಟ್ಟುಕೊಂಡು ಪ್ರಯತ್ನಪಟ್ಟಿರುವವರು ಕೋಟ್ಯಧೀಶ್ವರರಾಗಿದ್ದಾರೆ. ಅಷ್ಟೇ ಪ್ರಯತ್ನಪಟ್ಟವರು ಯಾಕಾಗಿಲ್ಲ ಎಂದು ಕೇಳಬಹುದು. ಪ್ರಯತ್ನ-ಶೈಥಿಲ್ಯವಿರಬಹುದು. ಅಥವಾ ಸಂಪಾದನೆ ಮಾಡಲು ಬೇಕಾದ ಪೂರ್ವವಾಸನೆಗಳ ಶೈಥಿಲ್ಯವೂ ಇರಬಹುದು. ಕೇವಲ ಧನಸಂಗ್ರಹವೆಂಬುದು ತಮೋಗುಣ ವಾಸನೆ. ಅದಕ್ಕೆ ಸ್ವಲ್ಪ ಸತ್ವ ರಜಸ್ಸುಗಳು ಕಲೆತರೆ, ಅದರಲ್ಲಿ ಪ್ರಯತ್ನಶೈಥಿಲ್ಯ ಉಂಟಾಗಿ, ಸಂಗ್ರಹ ಮಾಡುವುದು ಕಮ್ಮಿಯಾಗುತ್ತದೆ. ಯಥಾಪ್ರಕಾರ ಆ ವಾಸನೆಗಳೂ ಪೂರ್ವಜನ್ಮದಿಂದ ಬಂದಿರತಕ್ಕಂಥವು. ಆದ್ದರಿಂದ ಧನಸಂಪಾದನೆಗೆ ಪೂರ್ವಜನ್ಮದ ಪುಣ್ಯ ಅವಶ್ಯವೆಂದು ಹೇಳುವುದು ಸಮಂಜಸವಲ್ಲ. ನಿಜವಾಗಲೂ ಒಬ್ಬನು ಪೂರ್ವಪುಣ್ಯವನ್ನು ಗಳಿಸಿದ್ದರೆ ಅವನಿಗೆ ಯಥಾಲಾಭ ಸಂತುಷ್ಟಿಯುಂಟಾಗಿ, ಇನ್ನೂ ಹೆಚ್ಚು ಸಂಪಾದಿಸುವುದರಲ್ಲಿ ವೈರಾಗ್ಯ ಹುಟ್ಟಬೇಕೇ ಹೊರತಾಗಿ, ಅವನಿಗೆ ಧನಲಾಭವನ್ನು ಮಾಡಿ ರಜೋಗುಣ, ತಮೋಗುಣಗಳ ಅಭಿವೃದ್ಧಿಯಾಗುವಂತೆ ಆಗಬಾರದಲ್ಲವೇ ?

ಭಾಗವತದಲ್ಲಿಯೂ ಒಂದು ಕಡೆ, "ವೇದಗಳು ಮನುಷ್ಯನನ್ನು ಪ್ರವೃತ್ತಿಮಾರ್ಗದಿಂದ ತಿರುಗಿಸಿ ನಿವೃತ್ತಿಮಾರ್ಗಕ್ಕೆ ಹಾಕುವುದಕ್ಕೋಸ್ಕರವೇ ಹೊರಟಿವೆ ಎಂದು ಹೇಳುತ್ತಿರುವಾಗ ಅಂಥ ವೈದಿಕ ಕರ್ಮಗಳಿಗೆ ಪ್ರವೃತ್ತಿಯನ್ನೇ ಫಲವಾಗಿ ಹೇಳುವುದು ಅನ್ಯಾಯ

ವಲ್ಲವೇ ?" ಎಂದು ಕೃಷ್ಣ ಉದ್ಧವನನ್ನು ಪ್ರಶ್ನೆ ಮಾಡುತ್ತಿದ್ದಾನೆ.

ಹಾಗಾದರೆ ಗರುಡಪುರಾಣದಲ್ಲಿ ಹೇಳಿರುವ "ದಾರಿದ್ರ್ಯ ದೋಷೇಣ ಕರೋತಿ ಪಾಪಂ, ಪಾಪಾಚ್ಚ ತಸ್ಮಾತ್ ಸ ಪುನರ್ದರಿದ್ರಃ" (ದಾರಿದ್ರ್ಯದೋಷದಿಂದ ಪಾಪ ಮಾಡುತ್ತಾನೆ. ಆ ಪಾಪದಿಂದ ಪುನಃ ದರಿದ್ರನಾಗಿ ಹುಟ್ಟುತ್ತಾನೆ) ಎಂಬ ಶ್ಲೋಕಕ್ಕೆ ಅರ್ಥವೇನು ಎಂದು ಕೇಳಿದರು. ಅಲ್ಲಿ ದಾರಿದ್ರ್ಯವೆಂದರೆ ಅಸಂತುಷ್ಟಿ ಎಂದು ಅರ್ಥ ಮಾಡಬೇಕೆಂದು ಹೇಳಿದೆ. ಎಷ್ಟೇ ಇದ್ದರೂ ಅತೃಪ್ತಿ ಇದ್ದುಬಿಟ್ಟರೆ, ಆ ದೋಷದಿಂದ, ಪಾಪಮಾರ್ಗದಲ್ಲಿಯಾದರೂ ಸಂಪಾದನೆ ಮಾಡಲು ಪ್ರಯತ್ನಪಡುತ್ತಾನೆ. ಆ ಪಾಪದೋಷದಿಂದ ಪುನಃ ಅವನಿಗೆ ಅಸಂತುಷ್ಟಿ ಹೆಚ್ಚುತ್ತದೆ. ಆದ್ದರಿಂದ "ಪುನರ್ದರಿದ್ರಃ ಪುನರೇವ ಪಾಪೀ" ಇದು ಹೊಸ interpretation ನಿಮ್ಮದು ಎಂದು ನಮ್ಮ Mrs. Radhakrishnan ಅಮ್ಮ ಎಲ್ಲರೂ ಹೇಳಿದರು. ಹೊಸದಿರಬಹುದು, ಆದರೆ ಸಮಂಜಸವಾಗಿದೆಯೋ ಎನ್ನಿಸುತ್ತಿದೆ. ಎಲ್ಲರೂ ಯೋಚನೆ ಮಾಡಿ ಎಂದು ಹೇಳಿದ್ದೇನೆ. ನೀನೂ ಯೋಚಿಸು. ಪುಣ್ಯಕಾರ್ಯದ ಫಲವಾಗಿ ದುಡ್ಡು ಬರುತ್ತದೆ ಎಂದು ಹೇಳಿಬಿಟ್ಟರೆ, ಅನ್ಯಾಯವಾಗಿ ಸಂಪಾದನೆ ಮಾಡುವವನೇ ಪುಣ್ಯದ ಫಲ ಎಂದು sanction ಮಾಡಿಕೊಂಡು ಇನ್ನೂ ಹೆಚ್ಚು ಅನ್ಯಾಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆಯೋ ಎಂಬ ಭಯ. ಪೂಜಾದಿಗಳಿಗಂತೂ ಧನಸಂಪಾದನೆ ಫಲ ಹೇಳುವುದು ಖಂಡಿತ ಅನ್ಯಾಯ. ಮೊದಲನೆಯದಾಗಿ ಕಾರ್ಯಕಾರಣ ಭಾವವಿಲ್ಲ. ಎರಡನೆಯದಾಗಿ ಅವೆಲ್ಲ ಮನುಷ್ಯನಿಗೆ ನಿವೃತ್ತಿ ಧರ್ಮವನ್ನು ಅಭ್ಯಾಸ ಮಾಡಲು ಅನುಕೂಲ ಮಾಡುವ ಸಾಧನಗಳು. ಅಂಥವೇ ಪ್ರವೃತ್ತಿಯಲ್ಲಿ ಅವನನ್ನು ಹಾಕಿ ಮುಳುಗಿಸುವುದಾದರೆ ಅವುಗಳ ಹಿನ್ನೆಲೆಯೇ ತಪ್ಪಾಗುವುದಲ್ಲವೇ? ಇನ್ನು ಪೂರ್ವಜರ ತಪಃಫಲವನ್ನು ಅನುಭವಿಸುತ್ತಿದ್ದಾರೆ ಎಂದು ಹೇಳುವುದು ತೀರಾ ಅಸಂಗತ. ಅವರುಗಳ ತಪಃಫಲ ಇವನಿಗೆ transfer ಆಗುವುದಿಲ್ಲ! ಒಂದು. ಎರಡನೆಯದಾಗಿ, ತಪಸ್ಸಿನ ಫಲ ಧನಸಂಪಾದನೆ (ಒಂದು ವೇಳೆ ಫಲ ಬರುವುದಾದರೆ!!) ಎಂದು ಹೇಳಬಹುದೇ? ಆ ರೀತಿ ತಪಸ್ಸು ಮಾಡಿ ವಿಚಿತ್ರವಾದ ವರಗಳನ್ನು ಕೇಳಿ ಸ್ವಯಂ ನಾಶ ಮಾಡಿಕೊಂಡವರ ಕಥೆಗಳನ್ನು ತಾನೇ ನಾವು ಓದುತ್ತಿದ್ದೇವೆ! ಅವುಗಳಿಂದ ಕಲಿಯಬೇಕಾದ್ದೇನೆಂದರೆ ತಪಸ್ಸನ್ನು ಮಾಡಿ ಆ ತರಹ ಫಲಗಳನ್ನು ಕೇಳಬಾರದು. ಆ ತರಹ ಫಲಕ್ಕೋಸ್ಕರ ತಪಸ್ಸನ್ನು ಮಾಡಲಾಗದು ಎಂದು.

ಅಂತೂ ಶೈಲು ! ನಿನ್ನ ತಲೆಯನ್ನೂ ಸ್ವಲ್ಪ ಕೆಡಿಸಿದ್ದೇನೆ. ಸ್ವಲ್ಪ ಮೆದುಳಿಗೆ ಕೆಲಸ ಕೊಡು. ನಾನು ಬಂದಾಗ ಮಾತನಾಡೋಣ. ಕಿಟ್ಟಣ್ಣನ ಸೊಸೆಯೂ ಗಂಡುಮಗುವಿಗೆ ಜನ್ಮ ಕೊಟ್ಟಳಂತೆ (12ನೇ ತಾರೀಖು). ತಂದೆಗೆ ಕನಕಾಭಿಷೇಕ ಮಾಡಬೇಕೆಂದು ಬರೆದಿದ್ದಾನೆ. ಮಗುವಿಗೆ ಜಾತಕರ್ಮ, ನಾಮಕರಣಗಳನ್ನು ಮಾಡಬೇಕೆನ್ನುವುದು ಗೊತ್ತೇ ಇಲ್ಲ ಅಂತ ಕಾಣುತ್ತೆ, ಬೇಗ ಮಾಡು ಎಂದು ಬರೆದಿದ್ದೇನೆ. ಕನಕಾಭಿಷೇಕಕ್ಕೆ ನನ್ನನ್ನು ಸಿಕ್ಕಿಸಬೇಡ, ಸುಬ್ರಹ್ಮಣ್ಯನನ್ನು ಕರೆದು ಮಾಡಿಸಿಕೊಳ್ಳಿ. ಅನವಶ್ಯವಾಗಿ ಅವನೊಡನೆ ಸ್ಪರ್ಧೆ ಬೇಡ ಎಂದು ಬರೆದಿದ್ದೇನೆ. ಏನಾಗುತ್ತದೋ ಗೊತ್ತಿಲ್ಲ. 25 ನೇ ತಾರೀಖು ಬೆಳಗ್ಗೆ ಸಂಧಿಸೋಣ !

ಇತಿ ನಿನ್ನವ

ಕುಮಾರಸ್ವಾಮಿ

೩೪೦

ಜನ್ಮಸಂಸ್ಕಾರ ಮತ್ತು ಸೇವೆ

कुशलम् श्रीः Madras

21.4.87

ಶೈಲು !

ನಿನ್ನೆ ಬೆಳಗ್ಗೆ ತಾನೇ ನಿನಗೊಂದು ಕಾಗದ ಬರೆದೆ. ಮಧ್ಯಾಹ್ನ ಮನೆಗೆ ಬಂದರೆ ನಿನ್ನ ಕಾಗದ ಬಂದಿತ್ತು. ಈಗ ನಾನು ನಿನಗೆ ತಿರುಗಿಸಿ ಹೇಳಬೇಕಾಗುತ್ತದೆ, "you have a knack of writing letters in such a way as to make others shed tears of joy"

...ರಾಯರ ಮನೆಯ ಅವಸ್ಥೆ ಕೇಳಿ ಬಹಳ ದುಃಖವಾಯಿತು. ಶೈಲು ! ನೀನು ಬರೆದಿರುವಂತೆ ಅವರವರ Culture (ಸಂಸ್ಕಾರ) ಖಂಡಿತವಾಗಿ ಕಾರಣ. ಜತೆಗೆ, ಬೆಳೆದಿರುವ ರೀತಿ, ಜೀವನದಲ್ಲಿ ಆಮೇಲೆ ಸಿಗುವ ಸಂಗಾತಿಯ ಸಂಸ್ಕಾರ ಎಲ್ಲವೂ ಸೇರುತ್ತದೆ... ರಾಯರ ಗಂಡು ಮಕ್ಕಳಿಗೆ ಸಂಸ್ಕಾರವಿಲ್ಲ ಎಂದು ಹೇಳಲು ಬರುವುದಿಲ್ಲ. ಆದರೆ ಅದು Nurture ಆಗಲಿಲ್ಲ ಎನಿಸುತ್ತದೆ. ತಂದೆ ತಾಯಿಗಳು ಮಾಡುವುದನ್ನು ನೋಡಿ ಆ ಸಂಸ್ಕಾರವು ಬೆಳೆಯಬೇಕು. ಅಥವಾ ಸತ್ಸಂಗದಿಂದ ಬೆಳೆಯಬೇಕು. ಅಥವಾ ವಿವೇಕಪೂರಿತವಾದ ವಿಚಾರಶಕ್ತಿಯಿಂದ ಅದು ಬೆಳೆಯಬೇಕು. ಮೂರೂ ಇಲ್ಲದಿದ್ದರೆ ಜನ್ಮತಃ ಬಂದ ಸಂಸ್ಕಾರವು ದುರ್ಬಲ ವಾಗುತ್ತದೆ. ಜನ್ಮದಲ್ಲಿಯೇ ಬಲವತ್ತರವಾದ ಸಂಸ್ಕಾರ ಇರುವವನ ವಿಷಯವನ್ನು ನಾನು ಹೇಳುತ್ತಿಲ್ಲ. ಸಾಮಾನ್ಯನ ವಿಷಯ ಹೇಳುತ್ತಿದ್ದೇನೆ.

ನಾನು ನನ್ನ ತಾಯಿಯವರಿಗೆ.... ಸೇವೆ ಮಾಡಿದೆನೆಂದರೆ ಅತಿಶಯವೇನೂ ಅಲ್ಲ. ಜನ್ಮತಃ ಸಂಸ್ಕಾರವಿತ್ತು. ಮನೆಯ ವಾತಾವರಣದಲ್ಲಿ ಹೆಚ್ಚು ಬೆಳೆಯಲು ಅವಕಾಶವಿಲ್ಲದಿದ್ದರೂ, ಸ್ವಲ್ಪ ಪ್ರೌಢವಯಸ್ಕನಾದ ಮೇಲೆ, ನಾನೇ ಓದಿ, ಆ ತತ್ತ್ವಗಳ ವಿಚಾರ ಮಾಡುವ ಸದವಕಾಶ ಒದಗಿತು. ಸ್ವಲ್ಪ ಸಂಸ್ಕಾರ ಬಲಿಯಿತು. ಎಲ್ಲಕ್ಕಿಂತ ಹೆಚ್ಚಾಗಿ ನಿನ್ನ ಅಮ್ಮನ ಸಹೃದಯತೆಯ

Cooperation ಏ ಅದಕ್ಕೆ ಕಾರಣ ಎಂದು ಹೇಳಬೇಕು. ಅವಳಿಗೆ ವಿರುದ್ಧ ಸಂಸ್ಕಾರವಂತೂ ಖಂಡಿತ ಇರಲಿಲ್ಲ. ಪ್ರತ್ಯುತ ಅಜ್ಜನಿಗೆ, ತಾಯಿಗೆ ಸೇವೆ ಮಾಡಿದ ಸಂಸ್ಕಾರ ಅವಳಿಗೆ ಪ್ರಬಲವಾಗಿತ್ತು. ನನಗೆ ಅದು ಅತ್ಯಂತ ಸಹಾಯವಾಯಿತು. ಇಲ್ಲದಿದ್ದರೆ ಏಕಾಂಗಿಯಾಗಿ ನಾನು 6 ತಿಂಗಳುಗಳ ಕಾಲ ಸಂಭಾಳಿಸಲು ಸಾಧ್ಯವಾಗುತ್ತಿರಲಿಲ್ಲ-ಅದೂ ನಮ್ಮ ಮನೆ ಮಡಿ ಅವಾಂತರ ದಲ್ಲಿ !! (ಅವಳು ಮೂರು ದಿನ ಹೊರಗಾದಾಗ ಹೇಗೆ ಮಾಡುತಿದ್ದೆನೆಂಬುದು ಸಂಪೂರ್ಣವಾಗಿ ಮರೆತುಹೋಗಿದೆ. ನೀವು ಬೇರೆ ಚಿಕ್ಕಮಕ್ಕಳು. ತೀ॥ರವರಿಗೆ ಬೇರೆ ಆಲಸ್ಯ. ಅಮ್ಮನನ್ನು 5ನೇ ದಿನ ನದೀಸ್ನಾನಕ್ಕೆ ಬೇರೆ ಕರೆದುಕೊಂಡು ಹೋಗಬೇಕು!!).

ನನಗೂ ಆಗ ಯೌವನ, ಹೇಗೋ ಮಾಡಿದೆ. ಆದರೆ ಈಗಲೂ ಯೋಚನೆ ಮಾಡಿದರೆ, ನಾನೂ ಒಂದೆರಡು ಸಂದರ್ಭಗಳಲ್ಲಿ ಸ್ವಲ್ಪ rude ಆಗಿಯೇ ನಡೆದುಕೊಂಡೆನೋ ಎನ್ನಿಸಿದೆ. ಈಗಿನಷ್ಟು ವಿವೇಕ ಆಗ ಖಂಡಿತ ಇರಲಿಲ್ಲ. ಅಮ್ಮನಿಗೆ ಸಂತೋಷ ಪಡಿಸುವುದು ಕರ್ತವ್ಯವೆಂದು ಮಾಡುತ್ತಿದ್ದೆ. ಒಂದೊಂದು ಸಂದರ್ಭದಲ್ಲಿ ನನ್ನ ದೇಹಾಯಾಸ ಆ ಕರ್ತವ್ಯದೃಷ್ಟಿಯನ್ನೂ ಮರೆಸುತ್ತಿತ್ತು. 15 ತಿಂಗಳುಗಳಾದ ಮೇಲೆ ವಾಸ್ತವವಾಗಿ, ನಿತ್ಯವೂ ಪೂಜೆ ಮಾಡುವಾಗ ಪ್ರಾರ್ಥನೆ ಮಾಡುತ್ತಿದ್ದೆ, "ಸ್ವಾಮೀ ! ಅಮ್ಮನ ಪ್ರಾಣವನ್ನು ತೆಗೆದುಕೊಂಡು ಹೋಗುವುದಾದರೆ ತೆಗೆದುಕೊಂಡು ಹೋಗಿಬಿಡು. ಇಷ್ಟು ಕಾಡಿಸಬೇಡ. ನನ್ನನ್ನು ಪರೀಕ್ಷಿಸಬೇಡ. ನನಗೆ ಶ್ರಮ ಜಾಸ್ತಿಯಾಗಿ, ಅವರನ್ನು ತಿರಸ್ಕಾರ ಮಾಡುವ ಸಂದರ್ಭವನ್ನು ಒದಗಿಸಬೇಡ" ಎಂದು. ನನ್ನ ಪ್ರಾರ್ಥನೆಯನ್ನು ಕೇಳಿದನೋ ಎಂಬಂತೆ ಒಂದು ತಿಂಗಳಲ್ಲಿಯೇ ಮಾ॥ಯವರು ದಿವಂಗತರಾದರು.

ತೀ॥ರವರಿಗೂ, ಅಮ್ಮನಿಗೆ ಮಾಡಿದಷ್ಟು ದಿನ ಸೇವೆ ಮಾಡದಿದ್ದರೂ, ಮನಸ್ಸಿಟ್ಟು ಮಾಡಿದೆ. ತೀ॥ರವರಿಗೆ ಮಾಡಬೇಕಾದ ಸಂದರ್ಭದಲ್ಲಿಯಂತೂ, ನಿನ್ನ ಅಮ್ಮನ Co-operation ಅಸ್ಸಾದೃಶ ಎಂದು ಹೇಳಬೇಕು. ಹೊರಗಡೆಯಿಂದ ಬಂದ ಹುಡುಗಿ ಯಾರು ತಾನೇ ಅಷ್ಟು ಸಹಾಯ ಮಾಡಬಲ್ಲಳು! ಶೈಲು ! ತೀ॥ರವರು, ಗೊತ್ತಿಲ್ಲದೆ ಮಲವಿಸರ್ಜನೆ ಮಾಡಿಬಿಡುತ್ತಿದ್ದರು. ಅವರಿಗೆ ತೊಳೆಯುವುದು ಬಹಳ ಪ್ರಯಾಸದ ಕೆಲಸವಾಗುತ್ತಿತ್ತು. ಕಟ್ಟುಮಟ್ಟಾದ ಶರೀರ. ನನಗೊಬ್ಬನಿಗೇ ಎತ್ತಿ ತೊಳೆಯುವುದು ಸಾಧ್ಯವೇ ಇರಲಿಲ್ಲ. ನಾನು ಅವರನ್ನು ಎರಡು ಕೈಗಳಲ್ಲಿಯೂ ಎತ್ತಿ ಹಿಡಿಯುತ್ತಿದ್ದೆ. ಅಮ್ಮನೇ ಕೈಹಾಕಿ ತೊಳೆಯುತ್ತಿದ್ದಳು.

ನನಗೇ ಸಂಕೋಚವಾಗುತ್ತಿತ್ತು. ಆದರೆ ಅವಳು ಆ ಸಂದರ್ಭದಲ್ಲಿ ಹೇಳಿದ ಮಾತು ಇನ್ನೂ ಜ್ಞಾಪಕದಲ್ಲಿದೆ, "ನಾ ಯಂಗಡೆ ಅಜ್ಜನಿಕ್ಕಿ ಪಣ್ಣೆ ಅಭ್ಯಾಸೋರಾಂದಿ. ನಾ ಪಣ್ಣಾಣೆ. ನಿಂಗ್ಯೊಂಡೂ ಯೋಚನೆ ಪಣ್ವಾಣೆಂಗ್ಯೋ"+ ಎಂದು. ಯಾವ ಸೊಸೆ ಈ ಮಾತನ್ನು, ಆ ತರಹ ಕೆಲಸದ ವಿಷಯದಲ್ಲಿ ಹೇಳುತ್ತಾಳೆ ! ನೀನೇನೋ "Anna! hats off to you" ಎಂದು ಹೇಳಿದ್ದೀಯೆ. ನನ್ನದು ಖಂಡಿತ ಹೆಚ್ಚಿಲ್ಲ. ಅವರಿಬ್ಬರ ರಕ್ತದಿಂದ ಹುಟ್ಟಿದವನು. ನನ್ನ ಕರ್ತವ್ಯ. ಆದರೆ ಅನ್ಯಳಾದ ನಿನ್ನ ಅಮ್ಮನು ಮಾಡಿದ್ದು ಅತ್ಯಂತ ಅತಿಶಯ. "Hats off to Amma" ಎಂದು ಹೇಳು !

ಅಂಥಾ ಹುಡುಗರು, ತಂದೆ ತಾಯಿಗಳು ಸತ್ತಾಗ ಆಮೇಲೆ ಶ್ರಾದ್ಧಾದಿಗಳನ್ನು ಮಾಡುವುದು hypocrisy ಯಲ್ಲವೇ ಎಂದು ನಿನ್ನ ಪ್ರಶ್ನೆ. ಅವರು ಅದನ್ನು ಕೇವಲ ಭಯಕ್ಕೋಸ್ಕರ ಮಾಡುವುದಾದರೆ ಖಂಡಿತ hypocrisy. ಹಾಗಿಲ್ಲದೆ, ತಮ್ಮ indifferenceಗೆ ಅವರಿಗೇ ಪಶ್ಚಾತ್ತಾಪವಾಗಿ, ತಮ್ಮ ದುಃಖವನ್ನು ಪರಿಹಾರ ಮಾಡಿಕೊಳ್ಳಲು ಆ ಅವಕಾಶವನ್ನು ಉಪಯೋಗಿಸಿ ಕೊಳ್ಳುತ್ತೇವೆಂದು ಹೇಳಿದರೆ ಅದನ್ನು ಕೂಡದೆಂದು ಹೇಳುವುದು ನ್ಯಾಯವಲ್ಲ ಎಂದು ನನ್ನ ಅಭಿಪ್ರಾಯ. None is beyond redemption. ಕೊಲೆಗಾರನಿಗೂ ತಿದ್ದಿಕೊಳ್ಳುವುದಕ್ಕೆ ಸಂದರ್ಭವನ್ನು ಕಲ್ಪಿಸಿಕೊಡಬೇಕೆನ್ನುವ ನಮ್ಮ ಧರ್ಮದಲ್ಲಿ ಅಂಥಾ ಮಕ್ಕಳು ಶ್ರಾದ್ಧಾದಿಗಳನ್ನು ಮಾಡುವುದು ದಂಡ ಎಂದು general ಆಗಿ ಹೇಳುವುದು ಅತಿಯಾಗುತ್ತದೇನೋ ಎನಿಸುತ್ತದೆ. ನನಗೇ, ನಾನು ಎರಡು ಮೂರು ಸಂದರ್ಭಗಳಲ್ಲಿ ಯೌವನದ ಮದದಿಂದಲೋ, ಶಾರೀರಕ ಶ್ರಮದಿಂದಲೋ, ಮಾ॥ ಯವರನ್ನೂ, ತೀ॥ರವರನ್ನೂ ಮನ ನೋಯಿಸಿದ್ದೇನೆ, ಎಂಬ ದುಃಖ ಕೊರೆಯುತ್ತಲೇ ಇರುತ್ತದೆ. ಅವರ ಶ್ರಾದ್ಧಾದಿಗಳನ್ನು ಮಾಡಿದಾಗ, ಅದನ್ನು ಸ್ಮರಿಸಿಕೊಂಡು, ಕ್ಷಮಿಸಬೇಕೆಂದು ಪ್ರಾರ್ಥಿಸಿ, ಮಾತಾಪಿತೃಸ್ವರೂಪರಾದ ಬ್ರಾಹ್ಮಣರಿಗೇ ಕಣ್ಣಲ್ಲಿ ನೀರು ಬಿಟ್ಟುಕೊಂಡು ಉಪಚಾರ ಮಾಡುತ್ತೇನೆ. ಮನಸ್ಸಿಗೆ ಎಷ್ಟೋ ಸಮಾಧಾನವಾಗುತ್ತದೆ. "ಅಣ್ಣ! ಮಾಡುವಾಗ neglect ಮಾಡಿಬಿಟ್ಟು ಈಗ ಶ್ರಾದ್ಧದಲ್ಲಿ ಕಣ್ಣೀರು ಬಿಟ್ಟರೆ ಏನು ಪ್ರಯೋಜನ" ಎಂದು ಕೇಳುವೆಯಾ !

ಹಾಗೆ ಪಶ್ಚಾತ್ತಾಪ ಪಡದವರಿಗೆ, ಈ ರೀತಿಯಾದ ಯಾವ ಸಂದರ್ಭವೂ ಇಲ್ಲವೇ ಇಲ್ಲ ಎಂದಿಟ್ಟುಕೊ ! ಅವರು ಕೊರೆದು ಕೊರೆದು letting out ಗೆ ಅವಕಾಶವೇ ಇಲ್ಲದೆ ಜರ್ಝರಿತರಾಗು ತ್ತಾರೆ. ಇರಬಹುದು. ಈ ರೀತಿ ಪಶ್ಚಾತ್ತಾಪವಿಲ್ಲದೆ, ಕೇವಲ ಭಯದಿಂದ ಮಾಡುವವರ ಸಂಖ್ಯೆಯೇ ಜಾಸ್ತಿ ಇರಬಹುದು. ಅಂಥವರಿಗೂ ಶ್ರಾದ್ಧದ Concept ಸರಿಯಾಗಿ ತಿಳಿದಿದ್ದರೆ, ಪಶ್ಚಾತ್ತಾಪ ಬರುತ್ತೇನೋ ಎಂದು ನನ್ನ ಆಸೆ.

ಇಂತು ಆಶೀರ್ವಾದಗಳು

\+ ನನಗೆ ನಮ್ಮ ಅಜ್ಜನಿಗೆ (ಸೇವೆ) ಮಾಡಿ ಅಭ್ಯಾಸವಿದೆ. ನಾನು ಮಾಡುತ್ತೇನೆ. ನೀವು ಒಂದೂ ಯೋಚಿಸಬೇಡಿ.

೫೪೧

ಆತ್ಮವಿಮರ್ಶೆ (concern for others)

ಕುಶಲಮ್ ಶ್ರೀ: Madras
1.6.88

ಶೈಲು !

ನನ್ನ ಅರ್ಧ ಕಾಗದ ತಲಪಿರಬಹುದು. ಕಾಯುತ್ತಿರುವ ಕಲ್ಲಿನ ಮೇಲೆ ನೀರು ಸಿಂಪಡಿಸಿದಂತಾಗಿರಬೇಕು !! ಅದಕ್ಕೇ ಬರೆಯಲು ಕೂತಿದ್ದೇನೆ. ಕೊಡಗಟ್ಟಲೇ ನೀರು ಸುರಿಯೋಣವೆಂದು !

ನಿನ್ನೆ ಇದ್ದಕ್ಕಿದ್ದ ಹಾಗೆಯೇ ನನ್ನ ಶಿಷ್ಯರೆಲ್ಲರೂ ಸೇರಿ ನನ್ನ 60ನೇ ವರ್ಷವನ್ನು ಕೊಂಡಾಡಬೇಕೆಂದು ಬೇಕಾದಷ್ಟು ಹಣ್ಣು, ಸಿಹಿ ಎಲ್ಲಾ ತಂದು ಮಂತ್ರಗಳನ್ನು ಹೇಳಿ ನಮಸ್ಕಾರ ಮಾಡಿದರು. ಪಾಪುವೂ ಇದ್ದ. ಮಂತ್ರ ಹೇಳಿದ್ದು adorable ಆಗಿತ್ತು. ನಿನ್ನೆ ಅವರ ಸೌರಮಾನ ರೀತ್ಯಾ ವೈಶಾಖಮಾಸದ ಅನೂರಾಧ ನಕ್ಷತ್ರವಂತೆ ! ಆದ್ದರಿಂದ CSK Prime mover ಆಗಿ ಏರ್ಪಾಡು ಮಾಡಿಕೊಂಡು ಬಂದಿದ್ದರು. ಅಂತೂ ನನ್ನ ಷಷ್ಟ್ಯಬ್ದಿ ಪೂರ್ತಿ ಚೆನ್ನಾಗಿಯೇ ನಡೆಯಿತು ! ನಾನೂ ಸ್ವಲ್ಪ ಮಾತನಾಡಿದೆ. ಏನು ಹೇಳಬೇಕೆಂದು ತೋಚಲಿಲ್ಲ. ನನ್ನ ಕಥೆಯನ್ನೇ ಸ್ವಲ್ಪ ಹೇಳಿಕೊಂಡೆ. ಪಾಪುವಿಗೆ ನಾನು ಮಾತನಾಡಿದ್ದು ಹಿಡಿಸಲಿಲ್ಲವಂತೆ !! ಇನ್ನೊಬ್ಬರ ಮನೆಯಲ್ಲಿ, ಇನ್ನೊಬ್ಬರ ಬಗ್ಗೆ ನೀನು ಇನ್ನೂ ಬಹಳ ಚೆನ್ನಾಗಿ ಹೇಳುತ್ತೀಯೆ ! ಇವತ್ತು it was just gossipping ಎಂದುಬಿಟ್ಟ !! ಇರಬಹುದು. ನನ್ನದೇ ನಾನು ಹೇಳಿಕೊಳ್ಳಬೇಕಾದರೆ constraints ಇರುತ್ತದೆ. ಹೇಗೆ ಹೇಗೋ ಹೋಯಿತು. ಅದು ಹೇಗಾದರೂ ಇರಲಿ. ಎಲ್ಲರೂ ವಿಶ್ವಾಸಾಭಿಮಾನಗಳಿಂದ ಬಂದು ನನ್ನ ಶ್ರೇಯಸ್ಸನ್ನು ಬಯಸಿದುದೇ ನನಗೆ ಮಾನಸಿಕವಾದ ಬೆಂಬಲ.

ಅಂತೂ ಶೈಲು ! ನನ್ನ ಜೀವನದಲ್ಲಿ ಸ್ಮರಿಸಿಕೊಂಡು ಆನಂದಪಡುವಂಥ ಸನ್ನಿವೇಶಗಳು ಅನೇಕ ಇವೆ. ಹಾಗೆಯೇ ದುಃಖಪಡುವ ಸನ್ನಿವೇಶಗಳೂ ಇವೆ. Missed Opportunities ಬಗ್ಗೆ ನಾನು ಹೇಳುತ್ತಿಲ್ಲ. ಅವುಗಳ ಬಗ್ಗೆ ಈಗ ನನಗೆ ವ್ಯಥೆಯೂ ಇಲ್ಲ. ವ್ಯಥೆಪಟ್ಟು ಪ್ರಯೋಜನವೂ ಇಲ್ಲ. ಆದರೆ ನನ್ನ ದುಡುಕಿನಿಂದ, ಪೂರ್ವಾಪರ ವಿಮರ್ಶೆ ಮಾಡಿ ಕೆಲಸ ಮಾಡದ ಅಸಾಮರ್ಥ್ಯದಿಂದ ಕೆಲವು ಜೀವಗಳನ್ನು ನೋಯಿಸಿದ್ದೇನೆ. ಕೆಲವು temporaryಯಾಗಿ ನೋಯಿಸಿದ್ದೇನೆ. ಕೆಲವು ಆಜೀವಪರ್ಯಂತ ನೊಂದುಕೊಳ್ಳುವಂತೆ ಮಾಡಿದ್ದೇನೆ. ಅವುಗಳನ್ನೆಲ್ಲಾ ನೆನೆಸಿಕೊಂಡರೆ ಹೊಟ್ಟೆ ಕಲಕಿದಂತಾಗುತ್ತದೆ. ಏನು ಪ್ರಾಯಶ್ಚಿತ್ತ ಮಾಡಿಕೊಂಡರೆ ತಾನೇ ಅವು ಪರಿಹಾರವಾಗುತ್ತವೆ! ಕೊನೆಯವರೆಗೂ ಪಶ್ಚಾತ್ತಾಪದಿಂದ ಬೇಯುವುದೇ ಪ್ರಾಯಶ್ಚಿತ್ತ ಅಂತ ಕಾಣುತ್ತೆ. ಯಾವಾಗಲಾದರೂ ಕುಳಿತು ನನ್ನ ಮನಸ್ಸಿನಲ್ಲಿ ಆಗುತ್ತಿರುವ ಆಂದೋಳನಗಳನ್ನು ಬರೆವಣಿಗೆಗೆ ಇಳಿಸಿದರೆ ಸ್ವಲ್ಪ ಸಮಾಧಾನ ವಾದೀತೋ ಏನೋ !! ನಿನ್ನೆ ಅವುಗಳ ಸ್ಮರಣೆ ಬಂದರೂ, ಅಡಗಿಸಿ, ನನ್ನ ಜೀವನದ ಸಂತೋಷಪಡುವ ವಿಷಯಗಳನ್ನೇ ಹೇಳಿ ಮುಗಿಸಿದೆ.

60 ವರ್ಷಗಳ ಜೀವನದಲ್ಲಿ 95% ಸ್ವಾರ್ಥಸಾಧನೆಗೇ ವಿನಿಯೋಗವಾಗಿದೆ. ಅನೇಕರಿಗೆ ವೇದಪಾಠ ಹೇಳುವುದೇ ಪರಾರ್ಥವೆನ್ನುವುದಾದರೆ ನಾನೂ ಹೇಳಿಕೊಳ್ಳಬಹುದು. ಆದರೆ ಅದು ನಾನು ಲೋಕಕ್ಕೆ ಮಾಡಿರುವ ಒಂದು ದೊಡ್ಡ ಪ್ರಯೋಜನ ಎಂದು ಹೇಳಲು ಇಷ್ಟವಾಗುತ್ತಿಲ್ಲ. ಅದೇ ದೊಡ್ಡ ಧರ್ಮ ಎಂದು ಹೇಳಬಹುದೇ ಎಂದರೆ ಇಲ್ಲವೆಂದು ಹೇಳಬೇಕಾಗುತ್ತದೆ. ನನ್ನಿಂದ ವೇದಾಧ್ಯಯನವನ್ನು ಮಾಡಿ, ಅದರಿಂದ ಅವರ ಆತ್ಮಗುಣಗಳೋ, ಸಾಮಾನ್ಯ ಧರ್ಮಗಳೋ ಅಭಿವೃದ್ಧಿಯಾಗಿದ್ದರೆ, ನಾನೂ ಹೇಳಿಕೊಳ್ಳಬಹುದು. ಒಬ್ಬಿಬ್ಬರು ನನ್ನ ಸಹವಾಸದಿಂದ, ಅಧಾರ್ಮಿಕ ಕೆಲಸಗಳನ್ನು ಬಿಟ್ಟರೆಂಬುದನ್ನು ಧೈರ್ಯವಾಗಿ ಹೇಳಬಲ್ಲೆ. ಅದಷ್ಟೇ ಹೊರತು ಬೇರೇನೂ ಸಾಧಿಸಿರುವ ಹಾಗೆ ಕಾಣುವುದಿಲ್ಲ. ಪ್ರಹ್ಲಾದ ನರಸಿಂಹನಿಗೆ ಹೇಳಿದ್ದು ಜ್ಞಾಪಕಕ್ಕೆ ಬರುತ್ತದೆ.

ಪ್ರಾಯೇಣ ದೇವ ಮುನಯಃ ಸ್ವವಿಮುಕ್ತಿಕಾಮಾಃ
ಮೌನಂ ಚರಂತಿ ವಿಜನೇ ನ ಪರಾರ್ಥನಿಷ್ಠಾಃ।
ನೈತಾನ್ ವಿಹಾಯ ಕೃಪಣಾನ್ ವಿಮುಮುಕ್ಷುಃ ಏಕಃ
ನಾನ್ಯಂ ತ್ವದಸ್ಯ ಶರಣಂ ಭ್ರಮತೋಽನುಪಶ್ಯೇ॥

(ದೇವ ! ಪ್ರಾಯಃ ಮಹರ್ಷಿಗಳೂ ಕೂಡ ತಮ್ಮ ಸ್ವಂತ ಮೋಕ್ಷ ಸಂಪಾದನೆಗೋಸ್ಕರ ಕಾಡಿಗೆ ಹೋಗಿ ಮೌನವನ್ನಾಚರಿಸಿದ ರೆಂದು ಕಾಣುತ್ತೆ. ಇನ್ನೊಬ್ಬರ ಪ್ರಯೋಜನದ ಬಗ್ಗೆ ಲಕ್ಷ್ಯವೇ ಕೊಡಲಿಲ್ಲ. ಈ ಲೋಕದಲ್ಲಿ ಕಷ್ಟಪಡುತ್ತಿರುವ ಇವರೆಲ್ಲರನ್ನೂ ಬಿಟ್ಟು ನಾನೊಬ್ಬನೇ ಮೋಕ್ಷಕ್ಕೆ ಬರಲು ಇಷ್ಟವಿಲ್ಲ. ನೀನಲ್ಲದೆ ಸಂಸಾರ ಭ್ರಮಣದಲ್ಲಿ ತೊಳಲಾಡುತ್ತಿರುವ ಇವರಿಗೆಲ್ಲಾ ಇನ್ನಾರು ಶರಣು ಇದ್ದಾರೆ !)

ಇದು ನಿಜವಾದ ಧರ್ಮ. Concern for others. ಲೋಕಹಿತ. ಈಶ್ವರ ಸೇವೆ. ಇದನ್ನು ನಾನು ಮಾಡಿದ್ದೇನೆಯೇ ಎಂದು ಯೋಚಿಸಿದರೆ ಏನೂ ಕಾಣಿಸುವುದಿಲ್ಲ. ಅಂಧಕಾರ-ಮಯವಾಗಿದೆ. ಗುರುಗಳು ನನ್ನ ವೇದಾಧ್ಯಾಪನವನ್ನು ಕೇಳಿ ಸಂತೋಷಪಟ್ಟು ನನಗೆ ಅನುಗ್ರಹಿಸಿರಬಹುದು. ನನ್ನ ಕೈಯಲ್ಲಿ ನೂರಾರು ಜನರು ವೇದಾಧ್ಯಯನವನ್ನು ಮಾಡಿರಬಹುದು. ನಾನೂ ಕಟ್ಟುನಿಟ್ಟಾಗಿ ಸಂಧ್ಯಾವಂದನೆ, ಪೂಜೆ, ಬ್ರಹ್ಮಯಜ್ಞಾದಿಗಳನ್ನು ಮಾಡಿರಬಹುದು. ಸಕಾಲಕ್ಕೆ ಮಗನಿಗೆ ಸಂಸ್ಕಾರಗಳನ್ನು ಮಾಡಿರಬಹುದು. ಇಬ್ಬರು ಹೆಣ್ಣುಮಕ್ಕಳಿಗೂ ಶಾಸ್ತ್ರೀಯವಾಗಿ ವಿವಾಹ ಮಾಡಿರಬಹುದು. ಆದರೆ ಇವುಗಳೆಲ್ಲವೂ ಲೋಕಸೇವೆ

ಎನಿಸಿಕೊಳ್ಳುತ್ತವೆಯೇ, ಅಥವಾ ಧರ್ಮಾಚರಣೆ ಎನಿಸಿಕೊಳ್ಳುತ್ತವೆಯೇ ಎಂದರೆ ಉತ್ತರ ಹೇಳಲು ಬಾಯೇ ಹೊರಡುತ್ತಿಲ್ಲ. ಇವುಗಳೆಲ್ಲವನ್ನೂ ನಾನು ಹೇಳುವ ಆತ್ಮಗುಣಗಳಲ್ಲಿಯಾಗಲಿ, ಸಾಮಾನ್ಯ ಧರ್ಮಗಳಲ್ಲಿಯಾಗಲಿ ಎಲ್ಲಿ ಸೇರಿಸುವುದು ಸಾಧ್ಯ !! ಇವುಗಳನ್ನು ಮಾಡಿದ್ದರಿಂದ ಯಾವ ಆತ್ಮಗುಣ ತಾನೇ ನನಗೆ ಅಭಿವೃದ್ಧಿಯಾಗಿದೆ ಎಂದು ಯೋಚಿಸಿದರೆ ಹೃದಯ ತತ್ತರಿಸುತ್ತದೆ. ಒಂದು Courage of Conviction (ಧೃತಿ) ಆದರೂ ಬಂದಿದೆ ಎಂದು ಹೇಳಬಹುದೋ ಎಂದರೆ, ಅದೂ I feel it is tinged by egoism ಎನಿಸುತ್ತದೆ. ಪರಮಾತ್ಮನು ನಮಗೆ ಕೊಟ್ಟಿರುವ ಗುಣಗಳನ್ನೂ, ಶಕ್ತಿಯನ್ನೂ ಆದಷ್ಟು ಲೋಕಕ್ಕೆ ಪ್ರಯೋಜನವಾಗುವಂತೆ ಉಪಯೋಗಿಸುವುದೇ ಧರ್ಮ ಎಂದು ಡಿ.ವಿ.ಜಿ. ಹೇಳುವಾಗ, ಕೇವಲ ವೇದಾಧ್ಯಯನ, ಅಧ್ಯಾಪನದಿಂದ ಧರ್ಮಸಾಧನೆಯಾಯಿತು ಎಂದು ಹೇಳಿದರೆ ಆತ್ಮವಂಚನೆಯಾಗುತ್ತದೆ ಅಂತ ಕಾಣುತ್ತದೆ. ಆಗ ಸಂಗೀತಗಾರರೂ, ಕಾಲೇಜಿನ ಉಪಾಧ್ಯಾಯರುಗಳೂ, ಆಟಗಾರರೂ, ಪ್ರತಿಯೊಬ್ಬರೂ ಧಾರ್ಮಿಕರು ಎಂದು ಹೇಳಬೇಕಾಗುತ್ತದೆ. ಅಲ್ಲಿಯೂ ಯಶಸ್ಸಾಧನೆ ಎಂಬ ಸ್ವಾರ್ಥವೇ ಪ್ರೇರೇಪಿಸಿದೆಯೇ ಹೊರತು ಬೇರೇನೂ ಕಾಣಿಸಲಿಲ್ಲ. ಇವತ್ತು ನನಗೆ ಧರ್ಮದೇವತೆ ಪ್ರತ್ಯಕ್ಷಳಾದರೆ, ನಾನು ನನ್ನ ಸ್ವಂತ ಉದ್ಧಾರವನ್ನು ನೋಡಿಕೊಳ್ಳುತ್ತೇನೆಯೇ ಹೊರತು, ಪ್ರಹ್ಲಾದನಂತೆ, ಇತರ ಜನಗಳ ಉದ್ಧಾರವನ್ನು ಗಮನಿಸುವ ಯೋಗ್ಯತೆ ಇದೆಯೇ ! ಇವುಗಳನ್ನೆಲ್ಲ ಯೋಚನೆ ಮಾಡಿದರೆ ಒಂದೊಂದು ಸಾರಿ ಮೈಪರಚಿಕೊಳ್ಳುವಂತಾಗುತ್ತದೆ. ಬರಗೂರಿನ ದೀಕ್ಷಿತರು ಮಾಡಿದಂಥ ಉಪಕಾರ ನಾವು - ನಾನು- ಯಾವತ್ತಾದರೂ ಮಾಡಿದ್ದೇನೆಯೇ ! ಅವರ ತ್ಯಾಗಕ್ಕೆ ಸಮಾನವಾದ ತ್ಯಾಗವೂ ಇಲ್ಲದಿರುವಾಗ ಬುದ್ಧ, ಕ್ರಿಸ್ತ, ಶಂಕರರು, ಗಾಂಧಿ ಇವರುಗಳನ್ನೆಲ್ಲಾ ಯೋಚಿಸಲೂ ಸಾಧ್ಯವಿಲ್ಲ. ಈ ತಿಳುವಳಿಕೆ ಬರುವುದಕ್ಕೇ 60 ವರ್ಷಗಳಾಗಿ ಹೋದುವು. ಇನ್ನು ಅಭ್ಯಾಸ ಮಾಡಬೇಕೆಂದರೆ ಶಾರೀರಕ ಅಸಾಮರ್ಥ್ಯ, ಹಳೆಯ ವಾಸನಾಜಾಡ್ಯ ಇವೆರಡೂ ಆಲಸ್ಯವನ್ನು ಹೆಚ್ಚಿಸುತ್ತವೆಯೇ ಹೊರತು ಮತ್ತೇನೂ ಮಾಡುವುದಿಲ್ಲ. ಅಂತೂ ಪ್ರವಾಹಕ್ಕೆ ಎದುರಾಗಿ ಈಜುವ ಸಾಮರ್ಥ್ಯವಿದ್ದಾಗ ಏನೂ ಮಾಡುವುದು ಬಿಟ್ಟು ಪ್ರವಾಹದಲ್ಲಿ ನಿಲ್ಲಲೂ ಸಾಮರ್ಥ್ಯವಿಲ್ಲದೆ ಕೊಚ್ಚಿಕೊಂಡು ಹೋಗುವ ಸ್ಥಿತಿಯಲ್ಲಿರುವಾಗ, ಮೇಲೆ ಹೋಗುವ ಯೋಚನೆ ! ಇದೇ introspection ಎನ್ನಬಹುದೋ ಏನೋ !...

ಇತಿ ನಿನ್ನವ

कुमारस्वामी

೫೪೨

universal love

कुशलम् श्री: Durgapur

18.7.1989

ಶೈಲು !

ನಾನು ಇಲ್ಲಿಗೆ ಬಂದ ಕೂಡಲೆ ಕಾಗದ ಬರೆದೆ. ನಿನ್ನ ಕಾಗದ ಬಂದ ಮೇಲೆ ಅಮ್ಮನೂ ಕಾಗದ ಬರೆದಿದ್ದಾಳೆ. ಒಂದಕ್ಕೂ ಉತ್ತರವಿಲ್ಲ. ಯೋಚನೆ ಏನೂ ಇಲ್ಲ. ಆದರೂ ಕಾಗದದ ನಿರೀಕ್ಷಣೆಯಲ್ಲಿದ್ದು ಬರದಿದ್ದುದರಿಂದ ನಿರಾಶೆ ಅಷ್ಟೆ. ಅದೂ ಈಗ ಪಾಪುವೂ ಊರಿನಲ್ಲಿಲ್ಲದಿರುವುದರಿಂದ ನಮಗೆ ನಿಮ್ಮ ಕಾಗದಗಳೇ ಜೀವನಕ್ಕೆ ಸ್ವಲ್ಪ ನಗುವನ್ನು ಕೊಡುವವು ! ನಿನ್ನೆ ಖಂಡಿತ ಬರುತ್ತದೆಂದುಕೊಂಡು ಕಾದಿದ್ದೆವು. ಯಾವುದೂ ಬರಲಿಲ್ಲ. ಅದಕ್ಕೇ ಇವತ್ತು ಬರೆಯಲು ಕೂತೆ.

ನನಗೆ ಕಾಲವೇನೋ ಕಳೆಯುತ್ತಿದೆ. As a matter of fact ಏನೇನು ಮಾಡಬೇಕೆಂದಿರುವೆನೋ, ಅವೆಲ್ಲವೂ ಆಗುತ್ತಿಲ್ಲ ! ಒಂದೊಂದಾಗಿ ಮಾಡುತ್ತಿದ್ದೇನೆ. ಶೇಷಗಿರಿಗೆ ವಿವಾಹದ ಮೇಲಿನ ಲೇಖನವನ್ನು ಕಳಿಸಬೇಕು. ಇನ್ನೂ ಬರೆಯಲು ಆರಂಭಿಸಿಲ್ಲ. ನಾನು ಶ್ರಾದ್ಧದ ವಿಷಯದಲ್ಲಿ ಬರೆದಿದ್ದ ಅತ್ಯಂತ brief ಲೇಖನದಿಂದ ಕೆಲವರಿಗೆ ಸಂದೇಹಗಳು ಬಂದಿದೆಯೆಂದು ತಿಳಿಯಿತು (ನಾವು ಮಾಡಿದ್ದು ತಲಪುವ ವಿಷಯದಲ್ಲಿ , ಶ್ರಾದ್ಧ ಕಾಲದ ವಿಷಯದಲ್ಲಿ). ಅವುಗಳಿಗೆ ವಿಶದವಾಗಿ ಬರೆಯಬೇಕೆಂದು ಯೋಚಿಸಿ 25 ಪೇಜುಗಳಷ್ಟು ಬರೆದು, ನಿನ್ನೆ ನರಸಿಂಹನಿಗೆ Post ಮಾಡಿದ್ದೇನೆ. ತಲಪಿತೋ ಇಲ್ಲವೋ ವಿಚಾರಿಸು. ಹಾಗೇ ನೀನೂ ಓದು !! ಅಷ್ಟಾದರೂ ಮಕ್ಕಳ ಸ್ಮರಣೆ ತುಂಬಾ ಬರುತ್ತಿದೆ. ಹೂವು ಕುಯ್ಯುವಾಗ, ಬೆಂಡೆಕಾಯಿ ಕೀಳುವಾಗ, ಬೆಕ್ಕಿನ ಮರಿಗಳು Compoundನಲ್ಲಿ ಆಟವಾಡುವಾಗೆಲ್ಲಾ ಕಾಂಚನ್‌ಳ ಜ್ಞಾಪಕ ಬರುತ್ತದೆ. ಏನಾದರೂ ಮಾತನಾಡುವಾಗ, ಓದುವಾಗ ಚೇತನಳ ಜ್ಞಾಪಕ ಬರುತ್ತದೆ. ಕಾಂಚನಳೊಡನೆ, ಅವಳಿಗೆ ತೃಪ್ತಿಯಾಗುವಷ್ಟು ನಾನು ಆಟವಾಡಲು ಸಾಧ್ಯವಿರದಿದ್ದರೂ, ಅವಳು ಮನೆಯಲ್ಲಿರಬೇಕೆನಿಸುತ್ತದೆ. ಚೇತನ್ ಹತ್ತಿರ ನಾನು ಓದಿದ ಕೆಲವು ಭಾಗಗಳನ್ನು ಹೇಳಿ ಸಂತೋಷಪಡಬೇಕೆನಿಸುತ್ತದೆ. ನಿನ್ನೆ ರಾತ್ರಿ Mr. Rao ಬಂದು ನಾನು ರಾಮಾಯಣ ಉಪನ್ಯಾಸ ಮಾಡುತ್ತಿದ್ದಾಗ ತೆಗೆದ photoಗಳನ್ನು ತಂದು ತೋರಿಸಿದರು. ನಾನೂ ಚೇತನ್ ಇಬ್ಬರೂ ಘನ ಹೇಳುತ್ತಿರುವುದೂ ಇದೆ. ನಾನು ಹೇಳುತ್ತಿರುವಾಗ ನೀವೆಲ್ಲಾ ನಗುತ್ತಿರುವುದೂ, ಕಾಂಚನ್ ಅದರ ಕಡೆ ಲಕ್ಷ್ಯವೇ ಇಲ್ಲದೆ, ಎಲ್ಲಿಯೋ ಎರಡು ಕಣ್ಣುಗಳನ್ನೂ ಬಿಟ್ಟುಕೊಂಡು (ಪ್ರಾಯಃ photo ತೆಗೆಯುವವರನ್ನು ನೋಡುತ್ತಿದ್ದಳೋ ಏನೋ !!)

ನೋಡುತ್ತಿರುವುದೂ ಇದೆ. ಬಹಳ ಚೆನ್ನಾಗಿದೆ. Sweet memories. ಆದ್ದರಿಂದ ನವರಾತ್ರಿ ರಜದಲ್ಲಿ ಮಕ್ಕಳಿಗೆ ಒಂದು ವಾರ leave ಹಾಕುವಂತೆ ಹೇಳಿ ಬಾ. ಸಾಧ್ಯವಾದರೆ ಕಾಶಿಗೆ ಹೋಗೋಣ. ಇಲ್ಲದಿದ್ದರೆ ಇಲ್ಲಿಯೇ ಖುಷಿಯಾಗಿ ಕಾಲ ಕಳೆಯೋಣ. ಆಗ ಈ ಊರಿನಲ್ಲಿ ದುರ್ಗಾಪೂಜೆ ಗಲಾಟೆಯೂ ಬೇಕಾದಷ್ಟಿರುತ್ತದೆ. Aprilನಲ್ಲಿ ಬರಬೇಡ. ನಾವೇ ಅಲ್ಲಿಗೆ ಬರುತ್ತೇವೆ. ನೀನು ಬಂದು ಹೋದಮೇಲೆ, ನಾವಿಬ್ಬರೂ 8 ದಿನಗಳು ಬೊಂಬಾಯಿಗೆ ಹೋಗಿ ಬರಬೇಕೆಂದಿದ್ದೇವೆ (ಪಾಪುವಿನ Shifts ನೋಡಿಕೊಂಡು !). ನೀನೂ ಬರುವುದಾದರೆ, ಇಲ್ಲಿಂದ ಹೋಗುವಾಗ ಒಟ್ಟಿಗೆ ಬೊಂಬಾಯಿಗೆ ಹೋಗಿ, ನೀನು ಅಲ್ಲಿಂದಲೇ ಬೆಂಗಳೂರಿಗೆ ಹೋಗಬಹುದು. (ಅಣ್ಣನದು utopian ideas ಎಂದು ಹೇಳಬೇಡ. All Practicable) ಯಾವುದಕ್ಕೂ ನಿಶ್ಚಯ ಮಾಡಿ ಕಾಗದ ಬರಿ. Reservations ಮಾಡಿಸಬೇಕು.

ನರಸಿಂಹನು ಕೊಟ್ಟಿರುವ ಹಿರಿಯಣ್ಣನವರ ಪುಸ್ತಕಗಳನ್ನು ಓದುತ್ತಿದೇನೆ. ಬಹಳ ಚೆನ್ನಾಗಿವೆ. ನಿನ್ನೆ ಯಾವುದೋ ಭಾಗವನ್ನು ಓದುತ್ತಾ ಬಹಳ ಸಂತೋಷವಾಗಿ, ಅಮ್ಮನನ್ನು ಕರೆದು ಓದಿ ಹೇಳಿ, ಅರ್ಥ ಹೇಳಿ ಸಂತೋಷಪಟ್ಟೆ. "ಅದ್ವೈತ ವೇದಾಂತ, ಮೋಕ್ಷಾದಿಗಳನ್ನು ಸಾಮಾನ್ಯವಾಗಿ, ಸಂಸಾರ ತ್ಯಾಗ ಮಾಡಿದವರು ಅಭ್ಯಾಸ ಮಾಡಬೇಕಾದದ್ದು. ಸಂಸಾರದಲ್ಲಿಯೇ ಇದ್ದುಕೊಂಡು, ಅವುಗಳನ್ನು ಅಭ್ಯಾಸ ಮಾಡಲು ಸಾಧ್ಯವಿಲ್ಲ. ಅಭ್ಯಾಸ ಮಾಡುವವರಿಂದ ಸಮಾಜಕ್ಕೆ ಯಾವ ವಿಧವಾದ ಉಪಯೋಗವೂ ಇಲ್ಲ. ಆದ್ದರಿಂದ ಈ ವೇದಾಂತವೆಂಬುದು ಸಮಾಜಸೇವೆ ಎಂಬ ಧರ್ಮಕ್ಕೆ ಬಾಹಿರವಾದದ್ದು" ಎಂಬ ಅಭಿಪ್ರಾಯ ಸಾಮಾನ್ಯವಾಗಿ ಎಲ್ಲರಿಗೂ ಉಂಟು. ಆದರೆ ಹಿರಿಯಣ್ಣನವರು ತಮ್ಮದೇ ಆದ ರೀತಿಯಲ್ಲಿ (ಆದರೆ ಉಪನಿಷತ್ತುಗಳ ಭಾಷ್ಯದ ಅರ್ಥದ ಚೌಕಟ್ಟಿನಲ್ಲಿ), ಹಾಗಿಲ್ಲವೆಂಬುದನ್ನು ಸಾಧಿಸಿರುವ ರೀತಿ ಅನ್ಯಾದೃಶ. ಏನೂ ಬೇಡ. ಎರಡನೇ ಉಪನಿಷತ್ತಿನಲ್ಲಿ ಬರುವ, ತಸ್ಯ ಯಜುರೇವ ಶಿರಃ। ಋಗ್ದಕ್ಷಿಣಃ ಪಕ್ಷಃ। ಸಾಮೋತ್ತರಃ ಪಕ್ಷಃ। ಆದೇಶ ಆತ್ಮಾ। ಅಥರ್ವಾಂಗಿರಸಃ ಪುಚ್ಛಂ ಪ್ರತಿಷ್ಠಾ॥ ಎಂಬ ಮನೋಮಯ, ವಿಜ್ಞಾನಮಯ ಕೋಶಗಳನ್ನು ಅವರು ವರ್ಣಿಸಿರುವ ರೀತಿ ಅತ್ಯಂತ ಮನೋಹರವಾಗಿದೆ. ಅಭ್ಯಾಸ ಸಾಧ್ಯವಾಗಿದೆ. ಅವರ ಪ್ರಕಾರ ಮೊದಲೆರಡು ಕೋಶಗಳು (ಅನ್ನಮಯ, ಪ್ರಾಣಮಯ) ನಮ್ಮ ನೀತಿಜೀವನಕ್ಕೆ ಅಪ್ರಕೃತ. ವಿಜ್ಞಾನಮಯ ಕೋಶಗಳೇ ನಮ್ಮ ನೀತಿಜೀವನಕ್ಕೆ ಬೇಕಾದುವು. ... ಪ್ರತಾಪನು ಈ ಪ್ರಶ್ನೆಯನ್ನು ನನಗೆ ಎಷ್ಟೋ ಸಾರಿ ಕೇಳಿದ್ದಾನೆ. ನಾನು ಸರಿಯಾಗಿ ಉತ್ತರ ಕೊಟ್ಟಿರಲಿಲ್ಲ. ಜ್ಞಾನಿಯು ಅವನ ಪಾಡಿಗೆ ಅವನು ಆನಂದವಾಗಿರುತ್ತಾನೆ- ಇಂದ್ರಿಯಗಳು Reflex actionನಿಂದ ಕೆಲಸ ಮಾಡುತ್ತವೆ ಎಂದು! ನನಗೂ ತೃಪ್ತಿಯಾಗಿರಲಿಲ್ಲ. ಅವನಿಗೂ ಸಮಾಧಾನವಾಗಿರಲಿಲ್ಲ. ಇದನ್ನು ಓದಿದ ಮೇಲೆ ಬಹಳ ಸಂತೋಷವಾಯಿತು. ಅವರು ಪುಸ್ತಕ ಪೂರ, ಜ್ಞಾನಿಯೆಂದರೆ Universal good, Universal loveನ್ನು ಚಿಂತಿಸುವವನು ಎಂದೇ ನಮ್ಮ ಉಪನಿಷದ್ ಸಿದ್ಧಾಂತ ಎಂಬುದನ್ನು ಒತ್ತಿ ಒತ್ತಿ ಹೇಳಿದ್ದಾರೆ. ಇದು ಸರಿಯಾದ ವೇದಾಂತ. ಪ್ರತಾಪನಿಗೆ ಹೇಳು. ಇನ್ನು ಕೆಲವು ಭಾಗಗಳನ್ನು ಮುಂದಿನ ಕಾಗದದಲ್ಲಿ ಬರೆಯುತ್ತೇನೆ. ಚೇತನ್, ಕಾಂಚನ್‌ರಿಗೆ ಜ್ಞಾಪಿಸು. ನವರಾತ್ರಿಯಾದ ಮೇಲೆ ಒಂದು ವಾರ ರಜದ ಪಾಠವನ್ನು ನಾನೇ ಇಲ್ಲಿ ಹೇಳಿಕೊಡುತ್ತೇನೆಂದು ಹೇಳು. ಈಗ ಇಲ್ಲಿ ಹವಾ ತಣ್ಣಗಿದೆ ಎಂದು ಹೇಳಲು ಸಾಧ್ಯವಿಲ್ಲ. ಮಧ್ಯಾಹ್ನ, ರಾತ್ರಿ fan ಬೇಕು. ಆದರೆ ಮಳೆ ಬಂದರೆ ತಣ್ಣಗಾಗುತ್ತದೆ. October ವೇಳೆಗೆ ಇನ್ನೂ ಹಿತವಾಗಿರುತ್ತದೆಂದುಕೊಂಡಿದ್ದೇನೆ.

ಇತಿ ನಿಮ್ಮವ

ಅಣ್ಣ alias ಅಜ್ಜ

ೞ೪ೞ

Discussion ಗೆ ಬರುತ್ತಾರೆ

ಕುಶಲಮ್ ಶ್ರೀ: Durgapur
26.7.89

ಶೈಲು !

ಹೋದವಾರ ತಾನೇ ಒಂದು ಕಾಗದ ಬರೆದೆ. ನಿನ್ನಿಂದ ಕಾಗದವನ್ನು ನಿರೀಕ್ಷಿಸಿ ಸಾಕಾಯಿತು. ಕೊನೆಗೆ ನಾನೇ ಬರೆಯುವುದು ಸರಿ ಎಂದು ಆರಂಭಿಸಿದ್ದೇನೆ. ನಾನು ಓದಿದ್ದನ್ನು share ಮಾಡಿಕೊಳ್ಳಲು ಹತ್ತಿರ ಯಾರೂ ಇಲ್ಲ. ಅಮ್ಮನಿಗೇನೋ ಹೇಳುತ್ತೇನೆ. ಆದರೆ ಇಂಗ್ಲಿಷ್‌ನಲ್ಲಿರುವುದನ್ನು ಹಾಗೇ ಅರ್ಥ ಮಾಡಿಕೊಂಡರೆ ಚೆನ್ನಾಗಿರುತ್ತದೆಂದೆನ್ನಿಸಿತು. ಆದ್ದರಿಂದ ಬರೆಯಲು ಕೂತಿದ್ದೇನೆ...ಇಬ್ಬರೇ ಇಬ್ಬರು ಹೇಗೋ ತಳ್ಳುತ್ತಿದ್ದೇವೆ. ಆಗಾಗ್ಗೆ ಪಾಪುವಿನ ಸ್ನೇಹಿತರು discussionಗೆ ಬರುತ್ತಾರೆ. RECನಲ್ಲಿರುವ ನಾರಾಯಣ ಅಯ್ಯರ್ ವೇದಪಾಠ ಆರಂಭಿಸಿದ್ದಾರೆ. ಶುಕ್ರ, ಶನಿ, ಭಾನು. ಪಾಪ! ಅಷ್ಟು ದೂರದಿಂದ Bus ಹಿಡಿದು ಬರುವುದೇ ಕಷ್ಟ. ಒಂದೊಂದು ದಿನ ಸಾಯಂಕಾಲ Hero-Honda ತೆಗೆದುಕೊಂಡು ಅಮ್ಮನನ್ನು ಪೇಟೆಗೀಟೆಗೆ ಕರೆದುಕೊಂಡು ಹೋಗುತ್ತೇನೆ. ಪಾಪುವಂತೂ ಕಾಗದ ಬರೆದೇ ಇಲ್ಲ (ಬರೆಯುವುದೂ ಇಲ್ಲ). ಸುಮನಿಂದಲೂ ಕಾಗದ ಬಂದಿಲ್ಲ. ತಿಂಗಳಿಗೊಂದು ಬಾರಿ ಬರುತ್ತೇವೆಂದು ಹೇಳಿ ಬರಲೂ ಇಲ್ಲ. ನೀನು October ನಲ್ಲಿ ದುರ್ಗಾಪುರಕ್ಕೆ ಬರುವುದು ಖಚಿತ ತಾನೇ! ಪುನಃ ನಿನ್ನ usual ಸಂದೇಹಗಳನ್ನು ಮುಂದಿಡಬೇಡ ! ಚೇತನ್ ಹೇಳಿದಂತೆ ಕೇಳು !!

ಇತಿ ನಿನ್ನವ, ಅಣ್ಣ

೫೪೪
ಶಂಕರರ ಯೋಗಕೌಶಲ್ಯ

कुशलम्   श्री:   Durgapur
4.8.89

ಶೈಲು !

ನಿನ್ನ 24ನೇ ತಾರೀಖಿನ ಕಾಗದ ಇವತ್ತು ತಲಪಿತು. ಈ ವೇಳೆಗೆ ನಾನು ಎರಡು ಕಾಗದಗಳನ್ನು ಬರೆದಿದ್ದೇನೆ ಎಂದುಕೊಂಡಿದ್ದೇನೆ. ಮಿ। ಶೆಟ್ಟಿಯ ಕಾಗದವನ್ನು ಓದಿದೆ. ಆ Projectನಲ್ಲಿ ಅಷ್ಟೇನೂ interest ಬರಲಿಲ್ಲ. ಮದ್ರಾಸಿನಲ್ಲಿ ಇರುವುದಕ್ಕೋಸ್ಕರ ಹೋಗಬೇಕಾದ ಆವಶ್ಯಕತೆಯೇನೂ ಇಲ್ಲ. ಕೇವಲ Discussionಗೆ 2-3 ದಿವಸಗಳಿಗೋಸ್ಕರ ಹೋಗಿ ಬರಬಹುದು ಅಷ್ಟೆ. ಹಾಗೇ ಬರೆಯುತ್ತೇನೆ.

Wimbledon Tennis Match ಗಳನ್ನು ನಾವೂ ಪೂರಾ ನೋಡಿದೆವು. Finalನಲ್ಲಿ Edberg ತೀರ ಸಪ್ಪೆಯಾಗಿ ಆಟವಾಡಿದ. Championನಂತೆ ಆಡಲಿಲ್ಲ. ಹೆಂಗಸರ ಪೈಕಿ Steffiದು ಚೆನ್ನಾಗಿತ್ತು. ಪಾಪ 20 ವರ್ಷದ ಹುಡುಗಿ ದೊಡ್ಡ stalwartನ್ನು ಸೋಲಿಸಿ 3ನೇ ಸಲವೂ cupನ್ನು ಸಂಪಾದಿಸಿದರೆ ಹರ್ಷಾತಿರೇಕದಿಂದ ಕಣ್ಣೀರು ಬರದೆ ಏನು !! ಹಾಗೆಯೇ ಗುರುವಾರ ಬರುತ್ತಿರುವ Mujrim Hajir ಎಂಬ ಧಾರಾವಾಹಿಯೂ ಬಹಳ ಚೆನ್ನಾಗಿದೆ. ಹೋದ ಶನಿವಾರ ರಾತ್ರಿ Telefilm ಒಂದನ್ನು ನೋಡಿದೆವು (Riste). ನನಗೇನೋ ಬಹಳ ಹಿಡಿಸಿತು. ಅಭಿನಯದ ಅತಿರೇಕವಿಲ್ಲ. ಅಳುವಿನ ಗೋಳಿಲ್ಲ. ಎಷ್ಟು ಬೇಕೋ ಅಷ್ಟು. ಕೊನೆಯಲ್ಲಿ ಆ ಹುಡುಗಿ ಮಗುವನ್ನು ಆ ಹೆಂಗಸಿನ ತೊಡೆಯ ಮೇಲೆ ಹಾಕಿದಾಗ ನಾನೂ ಕಣ್ಣೀರು ಒರೆಸಿಕೊಂಡೆ !! ಅಂಥಾ ಚಿತ್ರಗಳನ್ನು ನೋಡಬೇಕೆನ್ನಿಸುತ್ತೆ.

ಸುಮನ Thesis Presentation ಮಾಡುವ ವಿಷಯದಲ್ಲಿ IIM ನವರು Examinee Reportನ್ನೇ ಕಳೆದುಬಿಟ್ಟಿದ್ದರಂತೆ ! ಸುಮನ ಹತ್ತಿರ ಇದ್ದ Copy ಯನ್ನೇ ಕಳಿಸಿ, August 3ನೇ ವಾರದಲ್ಲಿಟ್ಟುಕೊಳ್ಳುವಂತೆ ಬರೆದಿದ್ದಾಳಂತೆ ! ಆ ಗಲಾಟೆಯಲ್ಲಿ ಇಲ್ಲಿಗೆ ಬರಲೂ ಇಲ್ಲ. ಕಾಗದವೂ ಬರೆಯಲಿಲ್ಲ.

ಮೊನ್ನೆ ರಾತ್ರಿ ಇದ್ದಕ್ಕಿದ್ದ ಹಾಗೇ ರಾಮಣ್ಣ ಬಂದ. ಅವತ್ತು ಬೆಳಗ್ಗೆ ಬಂದನಂತೆ ! ನರಸಿಂಹನ ಹತ್ತಿರ address ತೆಗೆದುಕೊಂಡು ಹುಡುಕಿಕೊಂಡು ಬಂದಿದ್ದಾನೆ. ನೋಡಿಯೇ 5-6 ವರ್ಷಗಳಾದುವು. ಬಹಳ ಸಂತೋಷವಾಯಿತು. ತುಂಬಾ ಹೊತ್ತು ಮಾತನಾಡುತ್ತಿದ್ದೆವು. ನಾಳೆ ರಾತ್ರಿ ಊಟಕ್ಕೆ ಬರುತ್ತಿದ್ದಾನೆ. ಭಾನುವಾರ ವಾಪಸು ಹೋಗಬೇಕಂತೆ. ಪಾಪುವನ್ನು ನೋಡುವುದಾಗಲಿಲ್ಲವಲ್ಲಾ ಎಂದು ವ್ಯಥೆಪಟ್ಟ ! (ಅವನನ್ನು ನೋಡಿಯೇ ಇಲ್ಲ). December ನಲ್ಲಿ ನಾವಿಲ್ಲದೆ ಇರುವಾಗ ಬಂದಿದ್ದನಂತೆ! ಆಗ Aspಗೆ ನೋಡಲು ಹೋಗಿದ್ದನಂತೆ. ಒಬ್ಬ ಬೆಳ್ಳಗೆ, ಉದ್ದಕ್ಕೆ ಬಹಳ Dynamic ಆಗಿ ಓಡಾಡುತ್ತಿದ್ದ , Cont. Casting section ನಲ್ಲಿ ಎಂದು ಹೇಳಿದ. ಅವನೇ ಪಾಪು ಎಂದು ಹೇಳಿದೆ.

ನರಸಿಂಹನಿಗೆ ಎರಡು ಮೂರು ಕಾಗದ ಬರೆದಿದ್ದೇನೆ. ತಲಪಿದವೋ ಇಲ್ಲವೋ ತಿಳಿಯಲಿಲ್ಲ. ನೆನ್ನೆ ರಾಮಕೃಷ್ಣಾಶ್ರಮದ ಸ್ವಾಮೀಜಿ ಸೋಮನಾಥಾನಂದರವರು ಬರದಿರುವ "ಹೈಮಾಚಲ ಸಾನ್ನಿಧ್ಯದಲ್ಲಿ" ಎಂಬ ಪುಸ್ತಕವನ್ನು ಓದುತ್ತಿದ್ದೆ. ಅವರ ಪುಸ್ತಕಕ್ಕಿಂತ ಅದಕ್ಕೆ ಕುವೆಂಪು ಬರೆದಿರುವ ಮುನ್ನುಡಿಯೇ ಬಹಳ ಚೆನ್ನಾಗಿದೆ. ಮೊದಲು ಓದಲು ಆರಂಭಿಸಿದಾಗ ಬರೆದಿರುವವರು ಯಾರು ಎನ್ನುವುದನ್ನು ನೋಡದೇ ಓದಲು ಶುರು ಮಾಡಿದೆ. ಬಹಳ ಚೆನ್ನಾಗಿತ್ತು. ಡಿ.ವಿ.ಜಿ. ಬರೆದಿದ್ದಾರೋ ಏನೋ ಎಂದು ನೋಡಿದರೆ, ಕುವೆಂಪು !! ಆತನ ಮೇಲೆ ಬಹಳ comments ಕೇಳಿದ್ದೇನೆ. ಆದರೆ ಅದರಲ್ಲಿ ಬರೆದಿರುವುದು ಅವರ ಅಭಿಪ್ರಾಯಗಳೇ ಆದಲ್ಲಿ , ಬಹಳ ದೊಡ್ಡ ಮನುಷ್ಯರೆಂದೇ ಹೇಳಬೇಕು. ಮುನ್ನುಡಿಯನ್ನು ಭಗವತ್ಪಾದರ ಒಂದು ಶ್ಲೋಕದಿಂದ (ಅದನ್ನು ಎಲ್ಲಿಯೋ ಓದಿದ್ದೆ , ಗುರುತು ಹಾಕಿಕೊಂಡಿರಲಿಲ್ಲ. ಮರೆತುಹೋಗಿತ್ತು.) ಆರಂಭಿಸುತ್ತಾರೆ.

> ರೂಪಂ ರೂಪವಿವರ್ಜಿತಸ್ಯ ಭವತೋ ಧ್ಯಾನೇನ ಯತ್ಕಲ್ಪಿತಂ
> ಸ್ತುತ್ಯಾ ಅನಿರ್ವಚನೀಯತಾಖಿಲಗುರೋ ದೂರೀಕೃತಂ ಯನ್ಮಾಯಯಾ।
> ವ್ಯಾಪಿತ್ವಂ ಚ ನಿರಾಕೃತಂ ಭಗವತೋ ಯತ್ತೀರ್ಥಯಾತ್ರಾದಿನಾ
> ಕ್ಷನ್ತವ್ಯಂ ಜಗದೀಶ ತದ್ವಿಕಲತಾ ದೋಷತ್ರಯಂ ಮತ್ಕೃತಮ್॥

(ಜಗದೀಶ್ವರ ! ನನ್ನ ಮನೋವೈಕಲ್ಯದಿಂದ ನಾನು ಮಾಡಿರುವ ಮೂರು ದೋಷಗಳನ್ನು ಕ್ಷಮಿಸು. ರೂಪವಿಲ್ಲದಿರುವ ನಿನಗೆ ಧ್ಯಾನ ಮಾಡುತ್ತಾ ರೂಪವನ್ನು ಕಲ್ಪಿಸಿದ್ದೇನೆ. ಅನಿರ್ವಚನೀಯ ನೆಂದು ಹೇಳುತ್ತಿರುವ ನಿನ್ನ ಅನಿರ್ವಚನೀಯತ್ವವನ್ನು, ಸ್ತೋತ್ರ ಮಾಡಿ ದೂರ ಮಾಡಿದ್ದೇನೆ. ಸರ್ವವ್ಯಾಪಿಯೆಂದು ಹೇಳುವ ನಿನ್ನ ವ್ಯಾಪಿತ್ವವನ್ನು ತೀರ್ಥಯಾತ್ರಾದಿಗಳನ್ನು ಮಾಡಿ ನಿರಾಕರಿಸಿದ್ದೇನೆ. - ತೀರ್ಥಕ್ಷೇತ್ರಗಳಲ್ಲಿ ಮಾತ್ರ ನೀನು ಇದ್ದೀಯೆ ಎಂದು ಹೇಳಿದ ಹಾಗಾಯಿತು ಎಂದರ್ಥ.)

ಇದಕ್ಕೆ ಕುವೆಂಪು ಬರೆಯುತ್ತಾರೆ, ''ಭಗವಂತನಲ್ಲಿ ಕ್ಷಮಾಯಾಚನೆ ಮಾಡುವ ಭಕ್ತಿಸ್ವಾರಸ್ಯವನ್ನು ಅನುಭವಿಸುವುದಕ್ಕಾಗಿಯೇ ಎಂಬಂತೆ ತೋರುತ್ತದೆ ಈ ಶ್ಲೋಕ. ಮತ್ತಾವ ಅಪರಾಧಗಳನ್ನೂ ಮಾಡಲಾರದೆ ಅಪರಾಧದರಿದ್ರರಾಗಿದ್ದ ಅದ್ವೈತ ಜ್ಞಾನಿಯಾದ ಆಚಾರ್ಯರು ಮೇಲೆ ಹೇಳಿದ ಮೂರು ಮಹಾಪರಾಧಗಳನ್ನೂ ತಮ್ಮ ಕರ್ಮಭಂಡಾರದಿಂದ ಸಂಶೋಧಿಸಿ ತೆಗೆದು ಪಾಪಾನುಭವದ ಮತ್ತು ಪ್ರಾರ್ಥನಾ ಪುಣ್ಯಾನುಭವದ ಎರಡು ಮಾಯಾ ಭೋಗಗಳನ್ನೂ ಒಟ್ಟಿಗೆ ಅನುಭವಿಸುವ ಯೋಗ ಕೌಶಲ್ಯವನ್ನು ಪ್ರದರ್ಶಿಸಿದ್ದಾರೆ.

ಅನೇಕ ಶತಮಾನಗಳ ಹಿಂದೆಯೇ ಭಗವಂತನ ಪಾದಾರವಿಂದಗಳೆಡೆಗೆ ಹೊರಟಿರುವ ಈ ರೂಪ-ಸ್ತೋತ್ರ-ಯಾತ್ರಾ ವಿರೋಧಿಯಾದ ಆಚಾರ್ಯರ ಪ್ರಾರ್ಥನಾ ಸ್ತುತಿ ಇನ್ನೂ ತನ್ನ ನೆಲೆಗೆ ತಲಪಿಲ್ಲವೆಂದೇ ತೋರುತ್ತದೆ."

ಆಮೇಲೆ ತೀರ್ಥಯಾತ್ರಾದಿಗಳಿಗೂ ವೇದಾಂತರೀತ್ಯಾ ಅರ್ಥ ಉಂಟೆಂದು ತಮ್ಮದೇ ಶೈಲಿಯಲ್ಲಿ ಬಹು ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಅದನ್ನೆಲ್ಲಾ ನಾನು ಬರೆಯಲು ಹೋಗುವುದಿಲ್ಲ.

...ಶೈಲು ! ಅವರು ಬರೆದಿರುವ ಶೈಲಿ, ವಿಶ್ಲೇಷಣೆಗಳನ್ನು ನನ್ನ Crude ಭಾಷೆಯಲ್ಲಿ ಬರೆಯಲು ಇಷ್ಟವಿಲ್ಲದೆ ಹಾಗೇ ಬರೆದಿದ್ದೇನೆ. ಬೇಜಾರು ಮಾಡಿಕೊಳ್ಳದೆ ಓದು. ನಾನಂತೂ ಓದಿ ಓದಿ ಖುಷಿಪಟ್ಟೆ. ಹಿರಿಯಣ್ಣನವರದ್ದನ್ನು ಕೆಲವು ಬರೆಯಬೇಕೆಂದಿದ್ದೆ. ಮುಂದಿನ ಕಾಗದದಲ್ಲಿ ಬರೆಯುತ್ತೇನೆ. ಚೇತನ್ ! ಕಾಂಚನ್ ! ದುರ್ಗಾಪುರಕ್ಕೆ ಹೊರಡಲು ಅಮ್ಮನನ್ನು ಒಪ್ಪಿಸಿದಿರಾ !

Hero-Honda ದ್ದನ್ನು Madras ನಲ್ಲಿ ಏನಾದರೂ ಪ್ರತಾಪ್ ಮಾಡಲು ಸಾಧ್ಯವಾಯಿತೇ ಕೇಳು ! ಮಂಗಳನ ಅಡ್ರೆಸ್ ಕೊಡಬೇಕೆಂದು ನರಸಿಂಹನಿಗೆ ಬರೆದಿದ್ದೆ. ಅವನು ಇನ್ನೂ ಬರೆದಿಲ್ಲ. ನೀನೇ ಕೇಳಿ ಮುಂದಿನ ಕಾಗದದಲ್ಲಿಯೇ ಬರಿ.

ಇತಿ ನಿನ್ನವ

ಅಣ್ಣ

೫೪೫

hypocrite (ಅಸಮರ್ಥ ?)

ಕುಶಲಮ್ ಶ್ರೀ: Durgapur

11.8.89

ಶೈಲು !

ಈ ಕಾಗದ ಬರುವ ಹೊತ್ತಿಗೆ L & T Deputy GM Sri Veera Raghavan ಎಂಬುವರು ನಿಮಗೆ ಗೌರೀಹಬ್ಬದ ಕಾಣಿಕೆಯನ್ನು ಕೊಟ್ಟಿರಬಹುದು. ನಿನ್ನ ಕಾಗದಕ್ಕಿಂತ ಚೇತನ್ ಬರೆದದ್ದು ಬಹಳ ಚೆನ್ನಾಗಿತ್ತು. ಅವಳಿಗೆ ಬೇರೆ ಬರೆದಿದ್ದೇನೆ. ಅವಳು ಬರೆದಿರುವುದನ್ನು ನೋಡಿದರೆ 10 ವರ್ಷಗಳ ಹಿಂದೆ Trichyಯಲ್ಲಿ ಪಾಪುವು ಮಂಜುವಿನ ತೊಡೆಯ ಮೇಲೆ ಕುಳಿತುಕೊಂಡು ನನ್ನ ಹತ್ತಿರ 1 ಘಂಟೆ ಕಾಲ ದೇಶಭಕ್ತಿಯ ಮೇಲೆ, ಪರದೇಶಕ್ಕೆ ಹೋಗುವುದರ ಮೇಲೆ ವಾದ ಮಾಡಿದ್ದು ಜ್ಞಾಪಕಕ್ಕೆ ಬರುತ್ತದೆ. ನಾನು ಬೇಕಂತಲೇ, ಹೋದರೆ ಏನು ತಪ್ಪು, ದೇಶಭಕ್ತಿ ಇಲ್ಲದಿದ್ದರೆ ಏನು ತಪ್ಪು ಎಂದು ಕುತರ್ಕ ಮಾಡಿದೆ. ಅವನು spirited ಆಗಿ ಉತ್ತರ ಕೊಟ್ಟಿದ್ದು ಮರತೇ ಇಲ್ಲ. ಅವನ ಮರಮಾಪೊಣ್ಣಲ್ಲವೇ ![+] ಆದರೂ ಅಸಾಧ್ಯ ! ಪರಮ.... ಸಂತೋಷ. ಇಂಥವರು ನಮ್ಮ ದೇಶದಲ್ಲಿ ಹೆಚ್ಚಾಗಿ ಹುಟ್ಟಬೇಕು. ಇದು ವಿವೇಕಪೂರಿತವಾದ ದೇಶಭಕ್ತಿ.

ನೀನು Octoberನಲ್ಲಿ ಬರಲು ಸಾಧ್ಯವಿಲ್ಲವೆಂಬುದು ತಿಳಿದು ಬಹಳ ನಿರಾಶೆಯೇನೋ ಆಯಿತು. ನಿನ್ನ sorry, excuse ಎಲ್ಲವೂ ನಿರಾಶೆಯನ್ನು ಕಮ್ಮಿ ಮಾಡಲು ಸಾಧ್ಯವಿಲ್ಲವಲ್ಲವೇ ! ನಿರಾಶೆಪಟ್ಟುಕೊಳ್ಳುವುದು ನನ್ನ ಹಕ್ಕು !! ನಿನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಲ್ಲೆ. ಏನೂ ಚಿಂತೆ ಇಲ್ಲ. ಬೊಂಬಾಯಿನಿಂದ ನಾವೇ ಬರಲು ಪ್ರಯತ್ನಿಸುತ್ತೇವೆ (ಈಗಲೇ ನಿಶ್ಚಯವಾಗಿ ಹೇಳಲಾರೆ). If Mohammed Cannot go to the mountains, the mountains will come to Mohammed !! ನಾರಾಯಣನನ್ನೂ ನೋಡಿ ಬರಬೇಕೆನ್ನಿಸಿದೆ. ನಿನ್ನ ಅತ್ತೆಯವರು ಈಗಾಗಲೇ ಒಂದು ಸಾರಿ ಬದರಿ ಯಾತ್ರೆ ಹೋಗಿ ಬಂದರಲ್ಲವೇ! (ನಾನು ಯಾತ್ರೆಯ ವಿಷಯ ಬರೆದ ಕುವೆಂಪುರವರ ಕಾಗದ ತಲಪಿರಬಹುದು !).

ನರಸಿಂಹನಿಂದಲೂ ಕಾಗದ, ನನಗೆ ಬೇಕಾದ articleನ copy, ನಾನು ಶ್ರಾದ್ಧದ ಮೇಲೆ ಬರೆದಿದ್ದ article ನ copy ಎಲ್ಲವೂ ತಲಪಿದುವು. ಪಾಪ ! ಮಗುವಿನ ಸಾನ್ನಿಧ್ಯದಿಂದ ಬಹಳ ಸಂತೋಷಪಟ್ಟಿದ್ದಾನೆ. ಸಹಜವೇ ! ಇದುವರೆಗೂ ಮಾನಸಿಕವಾಗಿ ಬಹಳ ವ್ಯಥೆಪಟ್ಟಿರಬೇಕು. ತೋರಿಸಿಕೊಳ್ಳಲಿಲ್ಲ. ಮಕ್ಕಳ ಆಟದಿಂದ ಸಂತೋಷಪಡದೆ ಇರುವವರು ಯಾರು ? ಹಾಗಿದ್ದರೆ ಪಶುಗಳೆಂದೇ ಹೇಳಬೇಕು. ಪಶುಗಳೂ ಸ್ವಲ್ಪ ಕಾಲ ಮಕ್ಕಳ ಆಟವನ್ನು ನೋಡಿ ಸಂತೋಷಪಡುತ್ತವೆ !!

...ಗೊತ್ತಿದ್ದರೂ ಮಾಡುತ್ತೇವೆಂಬುದಕ್ಕೆ ಕಾರಣವನ್ನು ಪ್ರೊ. ಹಿರಿಯಣ್ಣ ಹೇಳುತ್ತಾರೆ...

ಇದನ್ನೇ ಡಿವಿಜಿಯವರು ಮನಸ್ಸಿಗೂ, ಬುದ್ಧಿಗೂ ಇರುವ ಅಂತರ ಎಂದು ಹೇಳುವುದು. ಬುದ್ಧಿ ವಿವೇಚನೆ ಮಾಡಿ, ವಿಚಾರ ಮಾಡಿ, ಸರಿ ಎಂದು ಹೇಳಿದ್ದನ್ನು ಮನಸ್ಸು ಸುಲಭವಾಗಿ ಒಪ್ಪುವುದಿಲ್ಲ. ಮನಸ್ಸಿಗೆ ಹಳೆಯ ರಜೋಗುಣ, ತಮೋಗುಣ ವಾಸನೆಗಳು (ಅವುಗಳ intensity, proportion ಒಬ್ಬೊಬ್ಬರಿಗೂ ವ್ಯತ್ಯಾಸವಾಗುತ್ತದೆ. ಅವರವರ ಪೂರ್ವಜನ್ಮಗಳ ವಾಸನೆಗಳನ್ನು ಅನುಸರಿಸಿರುತ್ತವೆ) ಅಂಟಿಕೊಂಡಿರುವುದರಿಂದ ಆ ದಾರಿಯಲ್ಲಿಯೇ ಹೋಗುವುದಕ್ಕೆ ಪ್ರಯತ್ನಪಡುತ್ತದೆ. ಇಂದ್ರಿಯಗಳು ಮನಸ್ಸಿಗೆ ಅಧೀನವಾಗಿರುವುದರಿಂದ, ಮನಸ್ಸು ಪ್ರಚೋದಿಸಿದಂತೆ ಇಂದ್ರಿಯಗಳು ಕೆಲಸ ಮಾಡಿಬಿಡುತ್ತವೆ. ಅದಕ್ಕೇ ಮನಸ್ಸನ್ನು ಲಗಾಮೆಂದೂ, ಇಂದ್ರಿಯಗಳನ್ನು ಕುದುರೆಯೆಂದೂ ಹೇಳುತ್ತಾರೆ.

[+] ಸೋದರ ಸೋದರಿಯರಿಗೆ ಪರಸ್ಪರರ ಹೆಣ್ಣುಮಕ್ಕಳು 'ಮರಮಾಪೊಣ್ಣು'ಗಳು.

ಬುದ್ಧಿ ಸಾರಥಿ ನಿಜ. ಆದರೆ ಸಾರಥಿ ದುರ್ಬಲನಾಗಿದ್ದರೆ, ಲಗಾಮು ಎತ್ತೆತ್ತಲಾಗೋ ಹೋಗುತ್ತದೆ. ಇಂದ್ರಿಯಗಳು ಸ್ವೇಚ್ಛೆಯಾಗಿ ಸಂಚರಿಸುತ್ತವೆ. ಬುದ್ಧಿಗೆ ತೋರಿದ್ದನ್ನು ಮಾಡುವುದು ಏನು ಕಷ್ಟ! ತೋರಿದರೂ ಬೇರೆ ತರಹ ಮಾಡಿದರೆ you are hypocrite ಅಂತ ಹೇಳಬಹುದು. ಅದಕ್ಕೇ D.V.G. 'ಹಾಗೆ hypocrites ಎಂದು ಹೇಳುವುದಕ್ಕೆ ಬದಲು ಅಸಾಮರ್ಥ್ಯ ಎಂದು ಹೇಳಬಹುದಲ್ಲವೇ !' ಎಂದರು. ನಾವೆಲ್ಲರೂ ಆ ಕೋಟಿಗೆ ಸೇರಿದವರೇ. ಹಾಗೆಂದು ಅಸಹಾಯರಾಗಿ ಕೂರಬೇಕಾದ್ದಿಲ್ಲ. ನಿರಾಶರಾಗಿ ತಲೆಯ ಮೇಲೆ ಕೈಹೊತ್ತುಕೊಳ್ಳಬೇಕಾದ್ದಿಲ್ಲ. ಸತತವಾಗಿ ಬುದ್ಧಿಗೂ ಮನಸ್ಸಿಗೂ ಇರುವ ಅಂತರವನ್ನು ಕಮ್ಮಿ ಮಾಡುತ್ತಾ ಹೋಗಬೇಕು. ಅದು ಸುಲಭವಲ್ಲ. ಒಂದು ದಿನ, ಒಂದು ವರ್ಷದಲ್ಲಿ ಆಗುವ ಕೆಲಸವೂ ಅಲ್ಲ. ಪುನಃ ಪುನಃ ಅದೇ ತಪ್ಪನ್ನು ಮಾಡುತ್ತೇವೆ. ಮುಗ್ಗರಿಸುತ್ತೇವೆ. ಆದರೆ ವಿವೇಕಜ್ಞಾನ ದೃಢವಾಗಿದ್ದರೆ, ತಪ್ಪನ್ನು ತಿಳಿದುಕೊಂಡು, ಸರಿ ಮಾಡಿಕೊಳ್ಳುತ್ತಲೇ ಹೋಗಲು ಪ್ರಯತ್ನಿಸಬೇಕು. ಕೆಲವರಿಗೆ ಜನ್ಮತಃ ಸತ್ವಗುಣ ವಾಸನೆಗಳೇ ಪ್ರಬಲವಾಗಿದ್ದು ಬುದ್ಧಿ ಹೇಳಿದ್ದನ್ನು ಕೂಡಲೆ ಮಾಡುತ್ತಾರೆ. ಅವರು ಬಹಳ ದೊಡ್ಡವರು. ನಮಗೆ ಅಷ್ಟು ಪುಣ್ಯವಿಲ್ಲ. ಆದರೆ ಅವೆಲ್ಲಾ ಸ್ವಭಾವವಾಗಿ ಬರಬೇಕು ಎಂದು ಕಾದು ಕೂರುವುದು ಮೂರ್ಖತನವಾಗುತ್ತದೆ. ನಾವು ಈಗ ಮಾಡಿದರೆ ತಾನೇ ಮುಂದೆ ಅದು ಸ್ವಭಾವವಾಗಿ ಪರಿಣಮಿಸಲು ಸಾಧ್ಯ !! ಆದ್ದರಿಂದ ನಮ್ಮ ಪ್ರಯತ್ನ ನಿರಂತರ, ಚಿರಕಾಲ ನಡೆಯಬೇಕು. ಲಕ್ಷ್ಯದ ಮರೆವಿಲ್ಲದೆ ಇರಲಿ ಎನ್ನುವುದಕ್ಕೆ ಸಾಧಕಗಳೇ ಹಿರಿಯಣ್ಣ, ಗುಂಡಪ್ಪ, ರಾಧಾಕೃಷ್ಣನ್‌ರವರ ಪುಸ್ತಕಗಳು. Prof. Schrodinger ಹೇಳಿದಂತೆ, "You are the statue and you are the chisel. You must go on making the statue better and better every day. You are the conqueror and you are the conquered."

೫೪೬

ಮದ್ರಾಸ್‌ನಲ್ಲಿ ಆನಂದ (ಉಪಾಕರ್ಮದ ಒಂದು ಅನುಭವ)

कुशलम्　　　　श्री:　　　　Durgapur
18.8.89

ಶೈಲು !

ಹೋದ ವಾರ ಬರೆದ ಕಾಗದ ತಲಪಿರಬಹುದು. ಹಾಗೆಯೇ L & T DGM ಹತ್ತಿರ ಕಳಿಸಿದ ಗೌರೀಹಬ್ಬದ ಕಾಣಿಕೆಯೂ ತಲಪಿರಬಹುದು. ನಿನ್ನೆ ಮಧ್ಯಾಹ್ನ ಪಾಪು ಬಂದ. ಇದುವರೆಗೂ ಒಂದು ಕಾಗದವನ್ನೂ ಬರೆದಿರಲಿಲ್ಲ. ಅಮ್ಮನ ಚಡಪಡಿಕೆ ನಿನಗೆ ಗೊತ್ತೇ ಇದೆ. ಅವನ ಸ್ನೇಹಿತರು ಇಲ್ಲಿಗೆ ಬಂದಿದ್ದಾಗ ಹೀಗೆ ಆತ್ರೇಯ ಕಾಗದವೇ ಬರೆದಿಲ್ಲ ಎಂದು ಹೇಳಿದ್ದೆವು. ಬಂದ... ತಕ್ಷಣ ಕಾಗದಗಳನ್ನೆಲ್ಲಾ ಓದಿದ, ಓದಿಸಿದ. ಚೇತು ಬರೆದದ್ದನ್ನು ಇನ್ನೊಂದು ಸಾರಿ ಓದಿದೆವು. ಪಾಪುವಿನ comments, "ನಂಗೆಲ್ಲಾ ಇತ್ತಂಡೆ ವಯಸ್ಸುಳ್ಳೆ Ba! Ba ! Blacksheep ಚೊಲ್ಲಾಣೆಂದ್ನೋ. ಇಂದೆ super normal ಹುಡುಗಿ patriotism ಮೇಲೆ poem ಅಳದಾಂದೀ !!"+ ಇನ್ನೊಂದು ಸಾರಿ ಓದಿದಾಗ ನಿಜವಾಗಲೂ ಚೇತುವಿನ ಬಗ್ಗೆ ಹೆಮ್ಮೆ ಉಂಟಾಯಿತು.

ಶೈಲು ! ಮೊನ್ನೆ (16ನೇ ತಾರೀಖು) ಉಪಾಕರ್ಮ ಮಾಡಿದೆ (ಈ ಕಾಗದ ಅದಕ್ಕೋಸ್ಕರವೇ ಆರಂಭಿಸಿದೆ). ಪಾಪುವು ಅವತ್ತಿಗೆ ಬರಲು ಸಾಧ್ಯವಾಗಲಾರದೆಂದು Septನಲ್ಲಿ ಮಾಡುತ್ತೇನೆಂದು ಹೇಳಿಬಿಟ್ಟಿದ್ದೆ. ಆದರೆ ಕುಪ್ಪುಸ್ವಾಮಿ ಬಂದು 'Vizag ಗೆ ಹೊರಟುಹೋಗುತ್ತೇನೆ. ಉಪಾಕರ್ಮ ಇಲ್ಲಿಯೇ ನಿಮ್ಮ ಹತ್ತಿರ ಮಾಡಿಕೊಂಡು ಹೋಗಬೇಕು' ಎಂದು ಕೇಳಿದರು. ಆದ್ದರಿಂದ ಮೊನ್ನೆಯೇ fix ಮಾಡಿ RECಯಿಂದ ನಾರಾಯಣ ಅಯ್ಯರ್‌ನ್ನೂ ಕರೆದೆ. ಇನ್ಯಾರೋ ಮಣಿ ಎನ್ನುವವರು, 'ಮಗನಿಗೆ ಪ್ರಥಮೋಪಾಕರ್ಮ. ಬರುತ್ತೇನೆ' ಎಂದು ಹೇಳಿ ಹೋದರು. ಸರಿ, ಇಷ್ಟೇ ಜನ ಅಂದುಕೊಂಡು ಮೇಲಿನ ರೂಮಿನಲ್ಲಿಯೇ ಸಿದ್ಧ ಮಾಡಿಕೊಂಡೆ. 8 ಘಂಟೆಗೆ ಅವರುಗಳ ಜತೆಗೆ ಇನ್ನೂ 10 ಜನ ಬಂದುಬಿಟ್ಟರು...ಸ್ವಲ್ಪ ಜಾಗ ಕಿಷ್ಕಿಂಧವಾಯಿತು. ಆದರೆ ಅವರುಗಳಲ್ಲಿ ಕೆಲವರು ಬಂದ ಬಗೆಯನ್ನು ನೋಡಿಯೇ ಕಸಿವಿಸಿಯಾಯಿತು. ದಟ್ಟಿ ಸುತ್ತಿಕೊಂಡು ಷರಟು ಹಾಕಿಕೊಂಡು ಸೀದಾ ಒಳಕ್ಕೇ ಬಂದು ಅಲ್ಲಿ ಬಿಚ್ಚಲು ಆರಂಭ !! ಹೇಳಿ ಕೊಟ್ಟದ್ದನ್ನು ಚೆನ್ನಾಗಿ ಹೇಳುತ್ತಾರೆಯೇ ಅಂದರೆ ಅವರುಗಳಿಗೆಲ್ಲಾ ಅದು ಅಭ್ಯಾಸವೇ ಇಲ್ಲ ! ಕ್ಷಣ ಕ್ಷಣಕ್ಕೂ ಮದ್ರಾಸ್ ಜ್ಞಾಪಕ ಬರುತ್ತಿತ್ತು. ಶೈಲು ! ನಿಜವಾಗಿಯೂ ಅಲ್ಲಿ enjoy ಮಾಡಿದೆ. ಅವರಿಗೆಲ್ಲಾ "ಏಹಿಶ್ರೀಶ್ಚ ಹ್ರೀಶ್ಚ...ಮೇಧಾಮನೀಷೇ ಮಾವಿಶತಾಗ್ಂ..." ಎಂಬ ಮಂತ್ರಗಳನ್ನು ಹೇಳಿಕೊಟ್ಟಾಗ ಅವರು ಸ್ಪಷ್ಟವಾಗಿ ಉಚ್ಚ ಕಂಠದಿಂದ ಹೇಳಿದಾಗ, ಅರ್ಥವು ಮನಸ್ಸಿಗೆ ನಾಟಿ, ಸಂತೋಷದಿಂದ ಕಣ್ಣಲ್ಲಿ ನೀರು ಬಿಟ್ಟಿದ್ದೇನೆ...ಅದು ಹೇಗೆ ಈ emotional aspects, ಈ ನಮ್ಮ ಕರ್ಮಗಳಲ್ಲಿ ಸಂಪೂರ್ಣವಾಗಿ ನಾಶವಾಗಿ, ಕೇವಲ ಕ್ರಿಯಾತ್ಮಕವಾಗಿ ಉಳಿದಿವೆ ಎನ್ನುವುದು ನನಗೆ ಅರ್ಥವೇ ಆಗುತ್ತಿಲ್ಲ. ಉಪಾಕರ್ಮ ಮಾಡಿಕೊಳ್ಳಬೇಕು ಎನ್ನುವ ನಂಬಿಕೆ ಇದೆ, ಆದರೆ ಅದರ ಉದ್ದೇಶವೇನು ! ಅದರಲ್ಲಿ ಏನನ್ನು ಅನುಭವಿಸಬೇಕು ಎನ್ನುವುದು ತಿಳಿಯದೆ ಕುರುಡರಂತೆ, Robotಗಳಂತೆ, ಕ್ರಿಯೆಗಳನ್ನು ಮಾತ್ರ ನಡೆಸುತ್ತಿದ್ದೇವೆ...

+ ನಾವೆಲ್ಲಾ ಇವಳ ವಯಸ್ಸಲ್ಲಿ ಬ್ಯಾ ಬ್ಯಾ ಬ್ಲ್ಯಾಕ್‌ಷೀಪ್ ಹೇಳುತ್ತಿದ್ದೆವು. ಈ ಸೂಪರ್ ನಾರ್ಮಲ್ ಹುಡುಗಿ ದೇಶಭಕ್ತಿಗೀತೆ ಬರೆಯುತ್ತಾಳೆ !!

ಗೌರೀ ಗಣೇಶ ಬಂತು. ಹೋದ ವರ್ಷದ ವೈಭವ ಜ್ಞಾಪಕಕ್ಕೆ ಬರುತ್ತದೆ. ಅಂತೂ ನಾನು ಗತವೈಭವಗಳನ್ನು ನೆನೆಸಿಕೊಂಡೇ ಸಂತೋಷಪಡಬೇಕಾಗಿದೆ ಅಂತ ಕಾಣುತ್ತೆ. ಚೀತು, ಕಾಂಚನ್‌ರಿಗೆ ಜ್ಞಾಪಿಸು. ಪ್ರತಾಪ್ ಈ ಸಾರಿ ಉಪಾಕರ್ಮಕ್ಕೆ ಏನು ಮಾಡಿದರು!

ಇತಿ ನಿನ್ನವ
कुमारस्वामी

೫೪೭

ಸತ್ ಚಿತ್ ಆನಂದ

कुशलम्　　　श्रीः　　　Durgapur
2.9.89

ಶೈಲು !

ನಿನ್ನ ಕಾಗದ ನಿನ್ನೆ ತಲಪಿತು. ಇಷ್ಟು ದಿನಗಳಿಗೆ Inland Letter ಪೂರ್ತಿ ಬರೆದಿರುವುದನ್ನು ನೋಡಿದೆ !! ತುಂ...ಬಾ ಸಂತೋಷವಾಯಿತು. ಕಾಗದವೂ ಚೆನ್ನಾಗಿತ್ತು. ನೀನು ತಾರೀಖನ್ನು 19.8.89 ಎಂದು ಬರೆದಿದ್ದೀಯೆ, ಆದರೆ 23ನೇ ತಾರೀಖು ಗೋಕುಲಾಷ್ಟಮಿ ಮಾಡಿದೆವು ಎಂದು ಬರೆದಿದ್ದೀಯೆ. ಒಂದಕ್ಕೊಂದು ಸಮನ್ವಯವೇ ಆಗಲಿಲ್ಲ. ಚಿಂತೆ ಮಾಡಿ ತಿಳಿಯದೆ ಸುಮ್ಮನಾಗಿಬಿಟ್ಟೆ.

ಶೈಲು ! ನನಗೆ ಕಾಗದ ಬರೆಯಲು ಏನೇನೂ ಕಷ್ಟವಿಲ್ಲ. ನಿಮಗೆ ಓದುವಷ್ಟು ತಾಳ್ಮೆ ಇರಬೇಕಷ್ಟೆ !! ನಾನು ನಿಮ್ಮಿಂದ ನನ್ನ ಪ್ರತಿಯೊಂದು ಕಾಗದಕ್ಕೂ ಉತ್ತರವನ್ನೂ ಅಪೇಕ್ಷಿಸುವುದಿಲ್ಲ. ನನ್ನ ಪಾಡಿಗೆ ನಾನು ಬರೆಯುತ್ತೇನೆ. ಏನೂ ಯೋಚಿಸಬೇಡ. Now that you have encouraged me, be prepared for my harangue.

ನಾಳೆ ಗೌರೀಹಬ್ಬ. ಪುನಃ ಹೋದ ವರ್ಷದ ಸ್ಮರಣೆ ಮರುಕಳಿಸುತ್ತದೆ. ಈ ವರ್ಷ ಒಬ್ಬರೂ ಇಲ್ಲ. ಪಾಪುವೂ ಇವತ್ತು ಬೆಳಗ್ಗೆ ಕಲ್ಕತ್ತಾಕ್ಕೆ ಹೋಗಿದ್ದಾನೆ...ನಾಳೆ ಹಬ್ಬದ ಊಟಕ್ಕೆ ಬಂದುಬಿಡು ಎಂದು ಹೇಳಿದರೆ, "ಗೌರೀಹಬ್ಬಕ್ಕೆ ನನ್ನದೇನು ಕೆಲಸ! ನಾನು ನರೇಶನನ್ನು ನೋಡಿಕೊಂಡು ನಾಳೆ ಸಾಯಂಕಾಲ ಬರುತ್ತೇನೆ" ಎಂದು ಹೇಳಿ ಹೊರಟುಹೋದ. ಇಲ್ಲಿಯ ಕೆಲವು ತಮಿಳರನ್ನು ಕರೆಯಬೇಕೆಂದು ಅಮ್ಮನ ಆಸೆ. ಆದರೆ ಅವರುಗಳನ್ನು ಕರೆಯಲು ನಾನೇ ಹೋಗಬೇಕು !!

...ಶೈಲು ! ನೀವು ಕರೋತಿ ರೂಪಾಣಿ ಹೇಳಿ ಅವಿನಯಮಪನಯ ಹೇಳಿದಾಗ ಆಗಿದ್ದುದು ಇದೇ. You had that stillness resulting from the liberation of your intellect from the mundane things of the world. ಯಾವಾಗ ಮನಸ್ಸು ಈ ರಾಗದ್ವೇಷಗಳಿಂದ ಮುಕ್ತವಾಗಿರುತ್ತದೋ (ಅದು ಕ್ಷಣಿಕವೇ ಆಗಲಿ) ಆಗ ಅದು ಆ ಪರಿಶುದ್ಧವಾದ ಆನಂದ ಸ್ವರೂಪನಾದ ಆತ್ಮನೊಡನೆ ಸೇರಿ ವಿಹರಿಸುತ್ತದೆ. ಅದೇ ಶುದ್ಧವಾದ ಆನಂದ. ದೈವಿಕ ಆನಂದ. ನಮಗೆ ತಿಳಿಯದೆಯೇ ಕಂಠ ಗದ್ಗದವಾಗುತ್ತದೆ. ಆನಂದಬಾಷ್ಪಗಳು ಕಣ್ಣಿನಿಂದ ಸುರಿಯುತ್ತವೆ. ಸುತ್ತಮುತ್ತಲಿನ ವಾತಾವರಣ ಮರೆತು ಹೋಗುತ್ತದೆ. ಆ ಸ್ಥಿತಿ momentary ಯೇ ನಿಜ. ಆದರೆ ಅದರಿಂದ ಹೊರಕ್ಕೆ ಬಂದ ಮೇಲೆ ಮನಸ್ಸು ಸ್ವಲ್ಪ ಹೊತ್ತಾದರೂ ಪ್ರಫುಲ್ಲವಾಗಿ, ಉತ್ಸಾಹವಾಗಿರುತ್ತದೆ. ಕುಣಿಯುಂತಾಗುತ್ತದೆ. ನನಗೆ ಅವರು "Small is beautiful" ನಲ್ಲಿ ಬರೆದಿರುವ ಆ Beautiful ವಾಕ್ಯಗಳನ್ನು ಬರೆಯುವಾಗ ಕುಣಿದಾಡುವಂತಾಗುತ್ತಿತ್ತು. ನನ್ನ ಹೃದಯದ ಆಳದಲ್ಲಿರುವ ಯಾವುದೋ ತಂತಿಯನ್ನು ಮೀಟಿದಂತಾಗುತ್ತಿತ್ತು. ಅವರಿಗೆ ಕಾಲು ಹಿಡಿದು ನಮಸ್ಕರಿಸ ಬೇಕೆನ್ನಿಸಿತು. ಅವರ ಒಂದೊಂದು ವಾಕ್ಯದಲ್ಲಿಯೂ ಅವರ firm Convictions ರೂಪಿತವಾಗಿವೆ. ನಿಜವಾಗಲೂ ದೊಡ್ಡ ಮಹರ್ಷಿ!!

ನಾನು ಸ್ವಲ್ಪ emotional ನಿಜ. ಆದರೆ ತಪ್ಪೇನಿಲ್ಲ. ಅದನ್ನು ಪುನಃ ಅವರೇ ಹೇಳಿದಂತೆ, "We are not made of mindless atoms but we are made on the image of God, the embodiment of ಸತ್, ಚಿತ್, ಆನಂದ."

ಚೇತನ್ I rank ಹತ್ತಿರ ಬಂದದ್ದು ಕೇಳಿ ಬಹಳ ಸಂತೋಷವಾಯಿತು. ಚೇತನ್ ! ಏನೂ ಯೋಚಿಸಬೇಡ. ನಿನ್ನ ಪಾಡಿಗೆ ನೀನು ಓದು. ಮುಂದೆ I rank ನಿನಗೇ ! ಅವರುಗಳನ್ನು ಬಂದು ನೋಡುವುದನ್ನೇ ಕಾಯುತ್ತಿದ್ದೇನೆ.

ಇತಿ ನಿನ್ನವ
ಅಣ್ಣ

೫೪೮

ಗುರುಗಳ ದಿವ್ಯತೆ (ಜನ್ಮಸಂಸ್ಕಾರ)

कुशलम्　　　श्रीः　　　Durgapur
5.10.89

ಶೈಲು !

ನಿನ್ನ ಕಾಗದ ತಲಪಿತು.

ನವರಾತ್ರಿ ಆರಂಭವಾಗಿದೆ. ಇಲ್ಲಿ ಶನಿವಾರದಿಂದ ದುರ್ಗಾಪೂಜೆ ಗಲಾಟೆ. ಸದ್ಯಕ್ಕೆ ಎಲ್ಲಾ ಕಡೆಗಳಲ್ಲಿಯೂ ಚಪ್ಪರ

ಕಟ್ಟುವ ಸಂಭ್ರಮ ! ದುಡ್ಡು ಸಂಗ್ರಹಿಸುವ ಸಂಭ್ರಮ. ಅದೂ Collection ಅಂದರೆ 100 ರೂ.ಗಳು !! (ಒಂದೊಂದು family ಹತ್ತಿರ!). ಅದೇನು ಮಾಡುತ್ತಾರೋ ನೋಡಬೇಕು. ನನಗೆ IIT ಜ್ಞಾಪಕಕ್ಕೆ ಬರುತ್ತದೆ. ನವರಾತ್ರಿಯಲ್ಲಿ ಪೂರಾ Busyಯಾಗಿರುತ್ತಿದ್ದೆ. ಸಹಸ್ರನಾಮ ಹೇಳಿಕೊಡುವ ಸಂಭ್ರಮ, ಮಂತ್ರಪುಷ್ಪ, ಅಷ್ಟಾವಧಾನ ಸೇವೆಗಳನ್ನು ಮಾಡುವ ಉತ್ಸಾಹ, ಉತ್ಸವದಲ್ಲಿ ಸುತ್ತುವಿಕೆ ಎಲ್ಲವೂ ಚೆನ್ನಾಗಿತ್ತು. ವನವಾಣಿ ಸ್ಕೂಲ್‌ನ ಹತ್ತಿರ ಬರುವಾಗ ವೇದಪಾರಾಯಣ ಮಾಡುತ್ತಿದ್ದಾಗ ಪಾಪುವು "ಸೀದಂತೀ ದೇವೀ ಸುಕೃತಸ್ಯ ಲೋಕೇ" ಎಂದು ಬೆರಳು ಮಡಿಸಿಕೊಂಡು ಆರಂಭಿಸಿದ್ದು ಇನ್ನೂ ಜ್ಞಾಪಕಕ್ಕೆ ಬರುತ್ತದೆ. ಅಂತೂ ಜೀವನದಲ್ಲಿ ಅನೇಕ ಸುಖಗಳನ್ನು (ನನ್ನ ರೀತಿ) ಅನುಭವಿಸಿದೆ. ಸ್ಮರಣೀಯವಾದ ಸುಖಗಳವು. ಅವುಗಳ ಸ್ಮರಣೆಯೇ ದೇಹವನ್ನು ರೋಮಾಂಚಗೊಳಿಸುತ್ತದೆ.

ಶೃಂಗೇರಿ ಗುರುಗಳು ಸಮಾಧಿಸ್ಥರಾದ ಸುದ್ದಿಯನ್ನು T.V.ಯಲ್ಲಿ ರಾತ್ರಿ Newsನಲ್ಲಿ ಕೇಳಿದೆ. ಮಾರನೆ ದಿನ ರಾಜೀವ್ ಗಾಂಧೀ ಹೋಗಿದ್ದನ್ನೂ ನೋಡಿದೆ. ಮನಸ್ಸಿಗೆ ವೇದನೆಯಾಯಿತು. ಯದ್ಯಪಿ ವೈಯಕ್ತಿಕವಾಗಿ ಅವರ ವಿಶೇಷ ವಾತ್ಸಲ್ಯಾಭಿಮಾನಗಳಿಗೆ ಪಾತ್ರನಾಗಿದ್ದೆ. ಅದನ್ನು ಸ್ಮರಿಸಿಕೊಳ್ಳದಿದ್ದರೆ ಕೃತಘ್ನನಾದೇನು ! ಅವರ ನಿಕಟ ಪರಿಚಯವನ್ನು ನಾನೇ ಬೆಳೆಸಿಕೊಳ್ಳದೆ ಹಿಂತೆಗೆದನೇ ಹೊರತು ಅವರು ಯಾವತ್ತೂ ನನ್ನನ್ನು ದೂರ ಮಾಡಿರಲಿಲ್ಲ. Adyar ಅನಂತಪದ್ಮನಾಭಸ್ವಾಮಿ ದೇವಸ್ಥಾನಕ್ಕೆ ಅವರ ದರ್ಶನಕ್ಕೆ ಹೋಗಿದ್ದಾಗ (ಅವರು ಮದ್ರಾಸಿಗೆ ಬಂದು ಆಗಲೇ 25 ದಿನಗಳಾಗಿತ್ತು !!) ನಗುತ್ತಾ, "ಏನಪ್ಪಾ ! ಬರಲೇ ಇಲ್ಲ ! ನಿಮ್ಮನ್ನು ನೋಡಬೇಕೆಂದು ಎರಡು ಮೂರು ಜನರ ಕೈಯಲ್ಲಿ ಹೇಳಿಕಳಿಸಿದೆನಲ್ರೀ!" ಎಂದು ಕಳಕಳಿಯಿಂದ ಹೇಳಿದರು. ಊರಿನಲ್ಲಿರಲಿಲ್ಲವೆಂದು ಸುಳ್ಳು ಹೇಳಿ ತಪ್ಪಿಸಿಕೊಂಡೆ...ಆದರೂ ಮನಸ್ಸಿಗೆ ವ್ಯಥೆಯಾಯಿತು. ಸುದ್ದಿಯನ್ನು ಕೇಳಿ ಏನು ಮಾಡಬೇಕೆಂದು ತೋಚಲಿಲ್ಲ. ಮಠದ Private Secretary ಗೌರೀಶಂಕರ್ (ರಾಮಚಂದ್ರಶಾಸ್ತ್ರಿಗಳ ಮಗ) ಎಂಬುವರಿಗೆ ನನ್ನ ಅವರ ಪರಿಚಯದ, ಅವರು ನನ್ನ ವಿಷಯದಲ್ಲಿ ತೋರಿಸಿದ ಅಭಿಮಾನದ, ಅವರ ಉದಾರ ಸ್ವಭಾವದ ವಿಷಯಗಳನ್ನು ಬರೆದು ಒಂದು ಕಾಗದವನ್ನು Post ಮಾಡಿದೆ. ನರಸಿಂಹನ ಅಡ್ರೆಸ್‌ಗೇ ಕಳಿಸಿದೆ-ಅವನ ಮೂಲಕ ಹೋದರೆ ಕಾಗದವನ್ನು ಓದಿಯಾದರೂ fileಗೆ ಹಾಕುವರೆಂಬ ಉದ್ದೇಶದಿಂದ! ಸಕಾಲದಲ್ಲಿ ತಲಪಿ, ಗೌರೀಶಂಕರ್‌ಗೆ Personal ಆಗಿ ಕೊಟ್ಟೆವೆಂದು ನರಸಿಂಹ ಕಾಗದ ಬರೆದಿದ್ದಾನೆ. ಕಾಗದ ಬಹ...ಳ ಚೆನ್ನಾಗಿತ್ತೆಂದೂ ಒಂದೊಂದು ಸಂದರ್ಭವೂ ಓದುತ್ತಾ ಓದುತ್ತಾ ಕಣ್ಣಿಗೆ ಕಟ್ಟಿದಂತಾಯಿತೆಂದೂ ಬರೆದಿದ್ದಾನೆ. ನಿನಗೆ ತೋರಿಸಿದನೋ ಇಲ್ಲವೋ ಗೊತ್ತಿಲ್ಲ. ಭದ್ರಾವತಿಯಲ್ಲಿದ್ದಾಗ ನಾನು ಅವರ ardent critic ಆಗಿದ್ದರಿಂದ ಆರಂಭಿಸಿ, ಅವರು ನನಗೆ ಶೇಷವಸ್ತ್ರ ಕೊಟ್ಟು ಅನುಗ್ರಹಿಸಿದ್ದನ್ನು ಬರೆದಿದ್ದೆ. ವಾಸ್ತವವಾಗಿ ಯೋಚನೆಯೇ ಮಾಡದೆ ನಿಮ್ಮಗಳಿಗೆ ಕಾಗದ ಬರೆಯುವಂತೆ ಉದ್ದಕ್ಕೆ ಬರೆದುಕೊಂಡು ಹೋದೆ. ಎಲ್ಲವೂ ನಡೆದ ವಿಷಯಗಳೇ ಆದ್ದರಿಂದ ತಡೆಬಡೆಯೇ ಇಲ್ಲದೆ ಬರೆದೆ. ಪುನಃ ನನಗೆ ಓದಲು ಸಾಧ್ಯವಾಗಲಿಲ್ಲ. ನನಗೇ ಕಣ್ಣೀರು ತುಂಬಿ ಬಂತು !! ಅಮ್ಮನಿಗೆ ಓದಲು ಕೊಟ್ಟು Post ಮಾಡಿಬಿಟ್ಟೆ. ಅವರು ಕೊನೆಯಲ್ಲಿ ಹೇಳಿದ ಎರಡು ದೊಡ್ಡ ಮಾತುಗಳು ಇನ್ನೂ ಪ್ರತಿಧ್ವನಿತವಾಗುತ್ತಿವೆ. "ಕುಮಾರಸ್ವಾಮಿ! ನಾನು ಮಾಡಬೇಕಾದ ಕೆಲಸ ನನ್ನ ಕೈಯಲಾಗಲಿಲ್ಲ. ನೀವು ಮಾಡಿದ್ದೀರಿ ಕಣ್ರೀ ! ಬಹ....ಳ ಸಂತೋಷ. ಇಗೋ ! ನನ್ನ ಜ್ಞಾಪಕಾರ್ಥವಾಗಿ ಇದನ್ನು ಕೊಡುತ್ತಿದ್ದೇನೆ. ಇಟ್ಟುಕೊಳ್ಳಿ" ಎಂದು ಶೇಷವಸ್ತ್ರವನ್ನು ಕೊಟ್ಟರು. ಪುಲಕಾಂಕಿತನಾದೆ. ಯಾವುದೋ ಸಾಮಾನ್ಯ ದರಿದ್ರ ಕುಟುಂಬದಲ್ಲಿ ಹುಟ್ಟಿ, ದಾರಿದ್ರ್ಯದಲ್ಲಿಯೇ ಬೆಳೆದು ಸಾಮಾನ್ಯ ವಿದ್ಯಾಭ್ಯಾಸ ಮಾಡಿ ಸಾಮಾನ್ಯರಂತೆ ಸಂಪಾದನೆಗೆ ಒಂದು ವೃತ್ತಿಯನ್ನು ಅವಲಂಬಿಸಿ ಬಾಳುತಿದ್ದ ನನ್ನನ್ನು, ವ್ಯಾಖ್ಯಾನ ಸಿಂಹಾಸನದಲ್ಲಿ ಕೂತು ಸಾವಿರಾರು ಮಂದಿಗಳ ಗೌರವಕ್ಕೆ ಪಾತ್ರರಾಗಿ ಜಗದ್ಗುರುವೆನಿಸಿಕೊಂಡಿದ್ದ ಅವರು ಅಷ್ಟೊಂದು ಅಭಿಮಾನದಿಂದ ನಡೆಸಿಕೊಂಡದ್ದನ್ನು ಕಂಡು ಮೂಕನಾದೆ. ನಾನೂ ಧನ್ಯ, ನನ್ನ ಪೂರ್ವಜರೂ ಧನ್ಯರೆಂಬ ಭಾವನೆ ಬಂದಿತು. ಶೈಲು! ಅವತ್ತಿನ ನನ್ನ ಸಂತೋಷ ನಿಜವಾಗಲೂ ಅಪಾರವಾದದ್ದು. ಅಲ್ಪನಾದ ನಾನೆಲ್ಲಿ ! ಶಂಕರಭಗವತ್ಪಾದರ ಪೀಠದಲ್ಲಿ ವಿರಾಜಮಾನರಾಗಿ ಕುಳಿತಿರುವ ಅವರೆಲ್ಲಿ !

ಶೈಲು ! ನೀನು ಕೇಳಿರುವ ಸಂದೇಹಕ್ಕೆ ನಾನು ಅಲ್ಲಿ ಬಂದಾಗಲೇ ಉತ್ತರ ಕೊಡುತ್ತೇನೆ. ಆದರೆ ಸದ್ಯಕ್ಕೆ ಇಷ್ಟು ಹೇಳಬಲ್ಲೆ. ಪ್ರತಿಯೊಬ್ಬರಿಗೂ, ಹುಟ್ಟುವಾಗ ಇರುವ ಸಂಸ್ಕಾರವೇ (ವಾಸನೆಗಳೇ) ಬಲವತ್ತರವಾದದ್ದು. ಅದರಲ್ಲಿ ಸಂದೇಹವಿಲ್ಲ. ಆದರೆ ಅವುಗಳು ಬೆಳೆಯುವುದಕ್ಕೋ ಅಥವಾ ಹಾಗೆಯೇ ಸುಪ್ತವಾಗಿ ನಶಿಸಿಹೋಗುವುದಕ್ಕೋ ವಾತಾವರಣ, ಸಂಗ ಇವೇ ಕಾರಣಗಳು. ವಾತಾವರಣವನ್ನೂ ಮೀರಿಸಿ, ಬೆಳೆಯುವಷ್ಟು ಸತ್ವಗುಣ ಜಾಗ್ರತವಾಗಿರುವವರು ಮಹಾತ್ಮರು - ಸ್ವಾಮಿ ವಿವೇಕಾನಂದ, ಗಾಂಧಿ, ಬುದ್ಧ ಅವರೆಲ್ಲಾ ಇದ್ದ ಹಾಗೆ. ಸಾಮಾನ್ಯರಿಗೆ, ಇರುವ ವಾಸನೆಗಳಿಗೆ ನೀರು ಗೊಬ್ಬರ ಹಾಕಿ ಬೆಳೆಸದೆ ಹೋದರೆ ಬೆಳೆಯುವುದಿಲ್ಲ - ಅವು ಸತ್ವಗುಣವೇ ಆಗಲಿ, ತಮೋಗುಣವೇ

ಆಗಲಿ. ಆ ನೀರು ಗೊಬ್ಬರಗಳೇ ತಾಯಿ ತಂದೆಗಳು ಒದಗಿಸಬೇಕಾದದ್ದು...ಕುಂಭಕರ್ಣನ ಸತ್ವಗುಣ, ರಾವಣನ ತಮೋಗುಣದ ಮುಂದೆ ಅಡಗಿಯೇ ಹೋಯಿತು. ಆದ್ದರಿಂದ ನಮ್ಮ ಜವಾಬ್ದಾರಿ ಬೇಕಾದಷ್ಟಿದೆ. ಅವರವರ ಸಂಸ್ಕಾರವೆಂದು ನಾವು ಕೈ ಕಟ್ಟಿ ಕುಳಿತರಾಗುವುದಿಲ್ಲ. ತಮೋಗುಣ ಪ್ರಧಾನವಾದ ವಾತಾವರಣದಲ್ಲಿಯೇ ಬೆಳೆದ ನಾರಾಯಣನಿಗೆ (ಭದ್ರಾವತಿ) ಸ್ವಲ್ಪ ಸತ್ವಗುಣಸಂಗ ದೊರಕಿದೊಡನೆಯೇ ಸತ್ವಗುಣ ಬಲವಾಗಿ, ತಮೋಗುಣ ಸ್ವಲ್ಪ ಸ್ವಲ್ಪವಾಗಿ ಅಡಗಿತಲ್ಲವೇ ! ಇದಕ್ಕೆ ವಿರುದ್ಧ ವಾದ ದೃಷ್ಟಾಂತಗಳನ್ನೂ ನಾವು ನೋಡಿದ್ದೇವೆ. ಇರಲಿ.

ಇತಿ ನಿನ್ನವ

ಕುಮಾರಸ್ವಾಮಿ

೫೪೯

ತೆಂಡುಲ್ಕರ್ (prodigy)

ಕುಶಲಮ್ ಶ್ರೀ: Durgapur

16.12.89

ಶೈಲು !

ನಿನ್ನ ಕಾಗದ ತಲಪಿತು.... ಕಾಂಚನ್ ವಿಷಯದಲ್ಲಿ ನನಗೂ, ನಿನಗೂ ಜಗಳವಾಗುತ್ತಿದ್ದುದನ್ನು ನಾನೂ ಮರೆತಿಲ್ಲ. ಇನ್ನೂ ಆಡಬೇಕು ಅನಿಸುತ್ತದೆ ! ಅವಳಿನ್ನೂ, ಅವಳ characteristic ಮುಖ ಮಾಡಿಕೊಂಡು, "ಇಂದಮ್ಮ ಚೊಲ್ರತೆ ಪಾ ಅಜ್ಜಾ!"+ ಎಂದು ರಾಗವಾಗಿ ಹೇಳಿದ್ದು ಮರೆಯಲು ಸಾಧ್ಯವೇ ಇಲ್ಲ !! ಅವಳಿಗೆ ಇನ್ನೂ ಸ್ವಲ್ಪ ಸ್ವಾತಂತ್ರ್ಯವನ್ನು ಕೊಡಬೇಕು. ರುಚಿಯಿಂದ ತನ್ನ ಬರೆವಣಿಗೆಯನ್ನು ಮಾಡುವಂತೆ ಮಾಡಬೇಕು ! (ಹೇಗೆ ಎಂದು ಕೇಳಬೇಡ ! As an ex-miss you must be able to devise ways and means !!)... ಒಂದೇ ಒಂದು ಹೇಳಬಲ್ಲೆ. ಕಾಂಚನ್ ವಯಸ್ಸಿನಲ್ಲಿ ಅವಳಿಗೆ ಬರುವ Rank ಮೇಲೆ, Marks ಮೇಲೆ, ಹೆಚ್ಚು ಗಮನವಿಡುವುದು ಬೇಕಿಲ್ಲ ಅನಿಸುತ್ತದೆ. ಅವಳು ಸ್ವಭಾವತಃ ಬುದ್ಧಿವಂತೆ. ಎಂದಾದರೂ pick up ಮಾಡಿಕೊಳ್ಳುತ್ತಾಳೆ. ಈಗ ಸ್ವಲ್ಪ ಆಟಗುಳಿಯಾಗಿದ್ದಾಳಷ್ಟೆ!!

Cricket Match ನ್ನು ನೋಡಿದೆಯಾ ! 16 ವರ್ಷದ Tendulkar ಆಡಿದ್ದು ಅಮೋಘವಾಗಿತ್ತು. ಅದೂ ದೊಡ್ಡ ದೊಡ್ಡವರು 4 ಜನ, ತುಪು ತುಪು ಎಂದು ಬಿದ್ದು ಹೋಗಿರುವಾಗ ಎಂಥವನಿಗಾದರೂ ಎದೆಗುಂದುತ್ತದೆ ! ಅಂಥಾದ್ದರಲ್ಲಿ ಧೈರ್ಯವಾಗಿ ಆ hostile bowling ನ್ನು ಎದುರಿಸಿ ನಿಂತ ಆ ಪೋರನನ್ನು ನೋಡಿದರೆ ಯಾರಿಗೆ ತಾನೇ ಹೃದಯ ಮಿಡಿಯದು ! ನಮ್ಮವರು ಎಲ್ಲರೂ ಅವತ್ತೇ out ಆಗಿ ಬಿಡುತ್ತಾರೆಂದುಕೊಂಡಿದ್ದೆ ! (based on previous experience only !). ಹಾಗಾಗದೆ ಅವತ್ತೆಲ್ಲಾ ಆಡಿ, ಮಾರನೆ ದಿನ Lunchವರೆಗೂ ಇಬ್ಬರೂ ಎಳೆದಾಡಿದ್ದು (ಆಗ ಎಳೆದಾಡಬೇಕಾಗಿತ್ತು !) ನಿಜವಾಗಲೂ ಅಭಿನಂದನೀಯ! ಜತೆಗೆ ಇವತ್ತಿನ exhibition Matchನಲ್ಲಿ ಅದೇ ಪೋರ Khader bowlingಗೆ ಮೂರು Continuous sixers ಹೊಡೆಯುವುದೇ! ಒಂದೇ overನಲ್ಲಿ 27 runಗಳನ್ನು ಮಾಡಿದ ಮಹಾರಾಯ ! He is really a prodigy !!

ಇಲ್ಲಿ ಛಳಿ, ಕೊರೆತ ಹಾಗೇ ಇದೆ. ಇನ್ನೂ ಹೆಚ್ಚಾಗುತ್ತೆ ಎಂದು ಹೇಳುತ್ತಿದ್ದಾರೆ, ನೋಡಬೇಕು. ಛಳಿಯಲ್ಲಿ ಮನೆ ಬಿಟ್ಟು ಹೋಗುವುದಕ್ಕೇ ಬೇಜಾರು. ಬೀದಿಯಲ್ಲಿಯೂ ಮೊದಲಿನಂತೆ ಜನ ತಿರುಗಾಡುವುದಿಲ್ಲ. 4½ ಗಂಟೆಗೇ ಕತ್ತಲಾಗಿಬಿಡುತ್ತದೆ. ಎಷ್ಟೊತ್ತಾದರೂ, ರಾತ್ರಿ ಕಾಲ ಕಳೆಯುವುದೇ ಇಲ್ಲ ಅನಿಸುತ್ತದೆ. ಓದುವುದು, ಬರೆಯುವುದರಲ್ಲಿಯೇ ಕಾಲ ಕಳೆಯುತ್ತಿದ್ದೇನೆ...

+ ಈ ಅಮ್ಮ ಹೇಳುವುದನ್ನು ನೋಡಜ್ಜಾ !

೫೫೦

ರುಚಿ

ಕುಶಲಮ್ ಶ್ರೀ: Durgapur

5.1.1990

ಶೈಲು !

ನೆನ್ನೆ ಸಾಯಂಕಾಲ ತಾನೇ ಭುವನೇಶ್ವರದಿಂದ ವಾಪಸ್ಸು ಬಂದೆವು. ನಿನ್ನ ಕಾಗದ ಬಂದಿತ್ತು. ನಾವು ಅಲ್ಲಿಂದ ಹೊರಡುವ ದಿನವೇ ನೀನು ಸುಮನಿಗೆ ಬರೆದಿದ್ದ ಕಾಗದ ಓದಿದ್ದೆ. ನನ್ನ ದಕ್ಷಿಣ ದೇಶದ ಪ್ರವಾಸ ನಿಶ್ಚಯವನ್ನು ವಿರೋಧಿಸುತ್ತೀಯೆಂದು ಗೊತ್ತಿತ್ತು. ಅದನ್ನು expect ಮಾಡಿಕೊಂಡೇ ಬಂದೆ. ನೀನು ನನಗೆ ಬರೆಯುವುದಕ್ಕೆ ನನ್ನ permission ಬೇಕೇ ! You have got every right to disagree with me and all liberty to write to me what you feel. ಆದರೆ ನಿನ್ನ ತರ್ಕ ಸರಣಿಯಲ್ಲಿ ನನ್ನನ್ನು ಮರತೇಬಿಟ್ಟಿರುವಂತಿದೆ. ನಿನ್ನ ಅಭಿಪ್ರಾಯ, ನೀನು ಅದನ್ನು ಬರೆಯುವಾಗ ಅನುಭವಿಸಿರುವ ಮಾನಸಿಕ ಆಂದೋಳನ, ಅಮ್ಮನ ಬಗ್ಗೆ ನಿನ್ನ ಚಿಂತೆ ಎಲ್ಲವನ್ನೂ ಅರ್ಥ ಮಾಡಿಕೊಳ್ಳಬಲ್ಲೆ. ಪಾಪುವಿನ ವಿಷಯದಲ್ಲಿ ಅಮ್ಮನಿಗಿರುವ attachmentನ (bordering towards ಮೋಹ) ಅತಿರೇಕವನ್ನು ನೋಡಿದ್ದೇನೆ. ಅರ್ಥ

ಮಾಡಿಕೊಂಡಿದ್ದೇನೆ. ಅನುಭವಿಸಿದ್ದೇನೆ. ಆ ವಿಷಯದಲ್ಲಿ ನಿನಗಿಂತ ನಾನು ಹೆಚ್ಚು ಅನುಭವಿ ಎಂದು ಹೇಳಿದರೆ ತಪ್ಪಾಗಲಾರದಲ್ಲವೇ! ನೀನು ಬರೆದಿರುವುದರಲ್ಲಿ ಒಂದಕ್ಷರವೂ ತಪ್ಪಿಲ್ಲ. ಅಮ್ಮನ attachment ಊ ತಪ್ಪಲ್ಲ. ವಾಸ್ತವವಾಗಿ ಹೇಳುವುದಾದರೆ, ನಾನು ದುರ್ಗಾಪುರಕ್ಕೆ ಹೊರಟುಬಂದಿದ್ದು, ಕೇವಲ ಅಮ್ಮನಿಗೋಸ್ಕರ ಅಲ್ಲ , ನನ್ನ ಮೋಹವೂ ಅದರಲ್ಲಿ ಸೇರಿತ್ತು. As a matter of fact, the proposal to come to Durgapur was mooted by me and not by her. ನಾನೂ ಮಗನ ಜತೆಯಲ್ಲಿ ಸಂತೋಷದಿಂದ ಇರಬೇಕೆಂದೇ ಹೊರಟುಬಂದಿದ್ದು. ಈಗ ಆ ಸಂತೋಷವಿಲ್ಲವೆಂದಲ್ಲ. ಆದರೆ ನನ್ನ usual ಕಾರ್ಯಕ್ರಮಗಳ ಜತೆಗೆ ಮಗನ ಜತೆಯ ವಾಸದ ಸಂತೋಷವನ್ನೂ ಅನುಭವಿಸಬೇಕೆಂದು ಬಂದೆ. ಅದು ಇಲ್ಲದೆ ಹೋಯಿತು. ಸುಮಾರು 45 ವರ್ಷಗಳಿಂದ ಒಂದಲ್ಲ ಒಂದು ವಿಧವಾದ ಧಾರ್ಮಿಕ (ಧಾರ್ಮಿಕ ಎಂಬ ಶಬ್ದವು ಬಹಳ ದೊಡ್ಡದು, ವೈದಿಕವೆಂದು ಹೇಳೋಣ), ವೈದಿಕ ಚಟುವಟಿಕೆಗಳನ್ನು ಇಟ್ಟುಕೊಂಡಿದ್ದೆ. ಅದರಿಂದ ಏನು ಸಾಧನೆ ಮಾಡಿದೆನೆಂದು ಕೇಳಬೇಡ. ಎಲ್ಲರಿಗೂ ಸಹಜವಾಗಿ ಇರುವ Spiritual or Religious ದಾಹವನ್ನು ಆ ರೀತಿ ಇಂಗಿಸಿಕೊಂಡಿದ್ದೆ. ಅದರಲ್ಲಿಯೂ 15 ವರ್ಷಗಳ ಹಿಂದಿನಿಂದ ವೇದಭಾಷ್ಯವನ್ನು ಓದಿ, ರಾಮಾಯಣ, ಭಾಗವತಗಳನ್ನು ಹೇಳುವ ಅವಕಾಶ ಸಿಕ್ಕಿದಂದಿನಿಂದ ಮನಸ್ಸಿಗೆ ಏನೋ ಒಂದು ಬಗೆ ನೆಮ್ಮದಿ, ಆನಂದ, ತೃಪ್ತಿ ಎಲ್ಲವನ್ನೂ ಅನುಭವಿಸುತ್ತಿದ್ದೆ. ಶೈಲು ! ನಾನೇನೂ ದೊಡ್ಡ ಉಪಾಸಕನಲ್ಲ. ವೇದಾಂತಿ ಮೊದಲೇ ಅಲ್ಲ. ಧರ್ಮಿಷ್ಠನೆಂಬ ಶಬ್ದದಿಂದ ಹೇಳಿಕೊಳ್ಳಲೂ ನಾಚಿಕೆಯಾಗುತ್ತದೆ. ಆದರೆ ನಿಜವಾದ ಉಪಾಸನೆಯ, ವೇದಾಂತದ, ಧರ್ಮ ವಿಷಯವನ್ನು ಓದಿದಾಗ, ಕೇಳಿದಾಗ, ನೋಡಿದಾಗ ಪುಲಕಾಂಕಿತ ನಾಗುತ್ತೇನೆ. ಆನಂದಬಾಷ್ಪಗಳಿಂದ ಕಣ್ಣು ಒದ್ದೆಯಾಗುತ್ತದೆ. ಕಂಠ ಗದ್ಗದವಾಗುತ್ತದೆ. Schumaker ಹೇಳಿದ Liberation from the enemies greed and envy ಯಿಂದ ಉಂಟಾಗುವ stillnessನಲ್ಲಿ ಆನಂದವನ್ನು ಅನುಭವಿಸುತ್ತೇನೆ. ಅದು ಅತ್ಯಂತ ಕೆಳಗಿನ ಮಟ್ಟದ ಧಾರ್ಮಿಕ ಸಾಧನೆಯಾದರೂ ಅಲ್ಲಾದರೂ ಇದ್ದೇನಲ್ಲಾ ಎಂಬ ಒಂದು ಸಂತೋಷವಿದೆ. ಆ ಸಂತೋಷ ವನ್ನಾದರೂ ಆಗಾಗ್ಗೆ ಅನುಭವಿಸಬೇಕೆಂಬ ಆಸೆ ಇರುವುದು ತಪ್ಪಲ್ಲವೆಂದು ನಂಬಿದ್ದೇನೆ. ಅದು ಬಿಟ್ಟರೆ ಎಲ್ಲರಂತೆ ನಾನೂ ಇಂದ್ರಿಯಗಳಿಗೆ ದಾಸನಾಗಿರುವ ಬಡಪಾಯಿ. ಧನದ ಮೇಲಿನ ಮೋಹ ಹೋಗಿಲ್ಲ. ಹೆಂಡತಿಯ ಮೇಲಿನ ಮೋಹ ಕಮ್ಮಿಯಾಗಿಲ್ಲ. ಇಂದ್ರಿಯ ಸೌಖ್ಯದಲ್ಲಿ ವೈರಾಗ್ಯ ಬಂದಿಲ್ಲ. ಮಕ್ಕಳ ಮೇಲಿನ ಮೋಹ ಕುಂಠಿಸಿಲ್ಲ. ಹೀಗಿರುವ ನಾನು ಏಕಾಂತದಲ್ಲಿ ಕುಳಿತು ಮನನ ಮಾಡುವುದಾಗಲಿ, ಉಪಾಸನೆ ಮಾಡುವುದಾಗಲಿ ಬಹು ದೂರದ ಮಾತು. ಮಾಡುತ್ತೇನೆಂದು ಹೇಳಿದರೆ ಮಿಥ್ಯಾಚಾರಿ ಯಾಗುತ್ತೇನೆ. ನಿಜವಾದ, ನನ್ನ ಮಟ್ಟದಲ್ಲಿನ ಉಪಾಸನೆಯೆಂದರೆ, ನಾಲ್ಕು ಜನಕ್ಕೆ ಹೇಳುವುದೇ ! ಆ ಸಮಯದಲ್ಲಿ ನನಗೆ ಸಿಗುವ ಏಕಾಗ್ರತೆ, ಸಂತೋಷ, ಬುದ್ಧಿಯ ಪರಿಪಾಕ ಬೇರೆ ಯಾವಾಗಲೂ ಸಿಗುವುದಿಲ್ಲ. ನನ್ನ ಪೂಜೆ, ಸಂಧ್ಯಾವಂದನೆ ಎಲ್ಲವೂ ಯಾಂತ್ರಿಕವಾಗಿ ನಡೆಯುತ್ತವೆ. ಹಾಗೆಂದು ಬಿಟ್ಟಿಲ್ಲ. ಬಿಡಲೂ ಕೂಡದು. ಇತರರಿಗೆ ಹೇಳುವಾಗ ಸಿಗುವ ಸಂತೋಷವನ್ನು ಅಲ್ಲಿಯೂ ಅನುಭವಿಸಬೇಕು. ಅದು ಮುಂದಿನ ಜನ್ಮದಲ್ಲಿ ಯಾದರೂ ಸಿಗಲೆಂದು ಪ್ರಾರ್ಥಿಸುತ್ತೇನೆ. ಅದಕ್ಕೆ ಆ ಸಂತೋಷವನ್ನು ಆದಷ್ಟು frequent ಆಗಿ ಅನುಭವಿಸಬೇಕು. (ನನಗೆ ಒಂದೇ ಒಂದು ಸಂತೋಷವೆಂದರೆ ಅವುಗಳನ್ನು ಎಷ್ಟು ಬಾರಿ ಎಷ್ಟು ಕಡೆ ಪುನಃ ಪುನಃ ಚರ್ವಿತ ಚರ್ವಣವಾಗಿಯೇ ಹೇಳಿದರೂ, ಅದರಿಂದ ಉಂಟಾಗುವ ಆನಂದಕ್ಕೆ ಧಕ್ಕೆ ಬಂದಿಲ್ಲವೆಂಬುದೇ ! ಇದುವರೆಗೂ ಯಾವತ್ತೂ ಬೇಜಾರಾಗಿಲ್ಲವೆಂಬುದೇ ನನಗೆ ಅತ್ಯಂತ ಸಂತೋಷವಾದ ಸಂಗತಿ. ಅದರಲ್ಲಿ ಸ್ವಭಾವವಾಗಿ ರುಚಿ ಉಂಟಾಗಿದೆಯೆಂದರ್ಥ.) ಅದರಲ್ಲಿ ಉಂಟಾಗಿರುವ ರುಚಿಯನ್ನು ಅಭಿವೃದ್ಧಿಪಡಿಸಬೇಕು. ಅದೊಂದೇ ನನಗಿರುವ ಧಾರ್ಮಿಕ ಸಾಧನ. ಪರೋಪಕಾರಾದಿ ಆತ್ಮಗುಣಾಭ್ಯಾಸದಲ್ಲಿಯೂ ಆ ಸಂತೋಷವುಂಟು. ಆದರೆ ಶೈಲು ! ನಾನು ಹಿಂದೆಯೇ ಬರೆದಿದ್ದಂತೆ, ನಾನು ಅದಕ್ಕೆ ಅರ್ಹನಲ್ಲ. ನನಗೆ ಆ ಯೋಗ್ಯತೆಯೂ ಇಲ್ಲ. ಆ ಗುಣಗಳು ಆವಿರ್ಭವಿಸಿರುವ ಪ್ರಸಂಗಗಳು, ಅವುಗಳನ್ನು ತೋರಿಸಿರುವ ಪ್ರಾತಃಸ್ಮರಣೀಯರಾದ ವ್ಯಕ್ತಿಗಳು, ಆ ಗುಣಗಳನ್ನು ಅಭಿವ್ಯಕ್ತಪಡಿಸುವ ಕಾರ್ಯಗಳು, ಇವುಗಳನ್ನಾದರೂ, ಓದಿ, ಕೇಳಿ, ಕಂಡು, ಸಂತೋಷಪಡುವುದು ಬೇಡವೆನ್ನುವೆಯಾ ! ನಿಜ! ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಸಾಮಾನ್ಯನಂತೆ ಬೆಳೆದು ನೀನು ಬರೆದಿರುವಂತೆ ಅಲ್ಪ ಸ್ವಲ್ಪ ಮಾಡಿದ್ದೇನೆ. ಮಾಡಿಸಿಯೂ ಇದ್ದೇನೆ. ಅಷ್ಟಕ್ಕೆ ಬೆನ್ನು ತಟ್ಟಿಕೊಂಡು Complascent ಆಗಿ ಇರು ಅನ್ನುತ್ತೀಯಾ !

ಇಲ್ಲಿಗೆ ಬಂದಾಗ ಬಹಳ ಆಶೋತ್ತರಗಳಿಂದ ಬಂದೆ. ಮಗನ ಮೇಲಿನ ಮೋಹ ನನ್ನನ್ನು ಇಲ್ಲಿಗೆ ಎಳೆದರೂ, ಇಲ್ಲಿಯೂ ಅಲ್ಪಸ್ವಲ್ಪ ವಾದರೂ ನನ್ನ ಧಾರ್ಮಿಕ (ವೈದಿಕ) ಆನಂದವನ್ನು ಅನುಭವಿಸ ಬಹುದೆಂಬ ಆಸೆಯಿಂದ ಬಂದೆ. ಮದ್ರಾಸಿನಿಂದ ಬಿಟ್ಟು ಬರುವಾಗ, ನನ್ನ ಅಭಿಮಾನಿಗಳೆಲ್ಲರೂ, "ನಿಮಗೆ ಯೋಚನೆಯೇ ಇಲ್ಲ. ಜೇನಿದ್ದ ಕಡೆ ನೊಣಗಳು ಮುತ್ತಿಯೇ ಮುತ್ತುತ್ತವೆ. ನಮಗೇ

ದೊಡ್ಡ ನಷ್ಟ. ಕಸ್ತೂರಿಯನ್ನು ಮುಚ್ಚಿಟ್ಟರೆ ವಾಸನೆಯನ್ನು ಮುಚ್ಚಿಡಲಾಗುತ್ತದೆಯೇ" ಎಂದೆಲ್ಲಾ ಹೇಳಿ ನನ್ನ ಆಸೆಗೂ, ಅಹಂಕಾರಕ್ಕೂ ನೀರೆರೆದರು. ನಿಜವಾಗಲೂ ನಂಬಿದೆ (ಹೊಗಳಿಕೆಯನ್ನು ನಂಬಲು ಯಾರಿಗೆ ತಾನೇ ಬೇಕಾಗುವುದಿಲ್ಲ !!). ಮೊದಲು 2-3 ತಿಂಗಳು ಬಹಳ Busy ಯಾಗಿದ್ದುದರಿಂದ ಗೊತ್ತಾಗಲಿಲ್ಲ. ಪಾಪುವೂ ನಿತ್ಯ ಸ್ವಲ್ಪ ವೇದದ ಭಾಗ ಹೇಳುತ್ತಿದ್ದ. ರಾಮಾಯಣ ಹೇಳಿಸಿಕೊಳ್ಳಲು ಆರಂಭಿಸಿದ. ಅವನ ಸ್ನೇಹಿತ ಶ್ರೀರಾಂ ಉಪನಿಷತ್ ಹೇಳಿಸಿಕೊಳ್ಳಲು ಬರುತ್ತಿದ್ದ. ರಾಮಾಯಣವನ್ನು 5 ದಿನ ಹೇಳಿದೆ. ಲಲಿತಾಸಹಸ್ರನಾಮ ಉಪನ್ಯಾಸ ಮಾಡಿದೆ. ಅದನ್ನು ಕೇಳಿ ಬಂದ Sarma ಎಂಬುವರ ಶ್ರದ್ಧಾಭಕ್ತಿಗಳನ್ನು ಕಂಡು ಮುಗ್ಧನಾದೆ. ಓಹೋ ! ನಾನು ಜೇನು, ಕಸ್ತೂರಿಯೇ ನಿಜ ಎಂದು ನಂಬಿದೆ. 'ಮದ್ರಾಸ್ ಇಲ್ಲಿಯೂ Repeat ಆಗುತ್ತದೆ. ಯಾವ ಯೋಚನೆಯೂ ಇಲ್ಲ. ನಾನು ತಂದಿರುವ ಪುಸ್ತಕಗಳು ಸಾರ್ಥಕವಾಗುತ್ತವೆ' ಎಂಬ ತೀವ್ರವಾದ ಆಶೋತ್ತರಗಳಿಂದ ನಿನ್ನ ಜತೆಯಲ್ಲಿ ಬಂದೆ. ನಾನು ಜೂನ್‌ನಲ್ಲಿ ವಾಪಸು ಬಂದ ಮೇಲೆ ನನ್ನ ಆಶೋತ್ತರಗಳು ಕೇವಲ ನೀರ ಮೇಲಣ ಗುಳ್ಳೆ ಎಂದು ತಿಳಿಯಿತು. ನಾನು ಜೇನೂ ಅಲ್ಲ. ಕಸ್ತೂರಿ ಮೊದಲೇ ಅಲ್ಲ ಎಂಬುದು ನಿಶ್ಚಯುವಾಯಿತು. ಪಾಪುವೂ shiftನಲ್ಲಿ independent ಆಗಿ ನೋಡಿಕೊಳ್ಳಬೇಕಾಗಿ ಬಂದಿದ್ದರಿಂದ ಈ ಕಡೆ ಗಮನ ಕಮ್ಮಿಯಾಯಿತು. 8 ಘಂಟೆಗಳ ಕಾಲ ಒಂದೇ ಸಮನೆ ದುಡಿದು ಬಂದವನಿಗೆ, ಆಹಾರನಿದ್ರೆಗಳನ್ನು ಬಿಟ್ಟು, ಇವುಗಳಲ್ಲೆಲ್ಲಾ ರುಚಿ ಬರುವುದು ದುಃಸಾಧ್ಯವೆಂದು ಗೊತ್ತು. ಬಲಾತ್ಕಾರವಾಗಿ ಮಾಡಿಸಲು ಇಷ್ಟವಿಲ್ಲ . ಇನ್ಯಾರಿಗೆ ಹೇಳಲಿ ! ಪಾಪ ! ಅಮ್ಮನೇ, ನನ್ನ ಒದ್ದಾಟವನ್ನು ನೋಡಲಾರದೆ, "ನಾನೇ ನಿತ್ಯ ಕೂತುಕೊಂಡು ಕೇಳುತ್ತೇನೆ. ನನಗೇ ಭಾಗವತವನ್ನು ಹೇಳಿ" ಎಂದಳು. ಅದು ಅವಳ ಸಹಾನುಭೂತಿ !

ಶೈಲು ! ಈ ಪರಿಸ್ಥಿತಿಯಲ್ಲಿ , ನನ್ನನ್ನು ಜನ ಹುಡುಕಿಕೊಂಡು ಬರದಿದ್ದ ಮೇಲೆ, ನಾನೇ ಹೋಗೋಣ ಎಂದು ನಿಶ್ಚಯ ಮಾಡಿದ್ದು ತಪ್ಪು ಅನ್ನುತ್ತೀಯಾ ! ಅವರುಗಳಿಗೆ ಬೇಕೋ ಬೇಡವೋ ನನಗಾದರೂ ಒಂದು ಸಾತ್ವಿಕ ಸಂತೋಷ ಉಂಟಾಗುತ್ತದೆಂಬುವುದರಲ್ಲಿ ಸಂಶಯವಿಲ್ಲ. ಈ ನಿಶ್ಚಯದಿಂದ ಅಮ್ಮನ ಸಂತೋಷವನ್ನು ಕಸಿದುಕೊಳ್ಳುತ್ತಿದ್ದೇನೆ ಎನ್ನುವುದು ಗೊತ್ತು. ಆದರೆ ಪಾಪುವಿನ ಜತೆಯ ವಾಸ ಅವಳಿಗೊಬ್ಬಳಿಗೇ ಸಂತೋಷವೆಂದು ತಿಳಿಯಬೇಡ. ನಾನೂ ಸಂತೋಷಪಡುತ್ತಿದ್ದೇನೆ. ಅವಳಷ್ಟು ನನಗಿಲ್ಲದಿರಬಹುದು. ಎಷ್ಟಾದರೂ ಅವಳದ್ದು ಮಾತೃಹೃದಯ. ಆದರೆ ನನಗೂ ಸಾಕಷ್ಟೇ ಮೋಹವಿದೆ. ಅವಳಂತೆ ನಾನು ಒಂದೊಂದು ಸಾರಿ ಅಭಿವ್ಯಕ್ತಗೊಳಿಸದಿರಬಹುದು ಅಷ್ಟೆ. ಆ ಸಂತೋಷವನ್ನು ನಾನೂ Sacrifice ಮಾಡಿಯೇ ಈ ನಿಶ್ಚಯವನ್ನು ಮಾಡಿದ್ದೇನೆ. ಮಗನ ಸಹವಾಸದ ಸಂತೋಷದ ವಿಷಯ ಆಗಾಗ್ಗೆಯಾದರೂ ಅನುಭವಿಸಬಹುದು. ಇದು ಹೋದದ್ದು ಹೋದಂತೆಯೇ. ಅದೂ ಅಲ್ಲದೆ "ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಕಲಾಂ" (ಉಪಭೋಗ ವಸ್ತುಗಳಿಂದಲೂ ಸುಖವುಂಟು. ಆದರೆ ಅವುಗಳಿಗಿಂತ ಉಪಭೋಗದಲ್ಲಿ ಆಸೆಯೇ ಇಲ್ಲದಿರುವುದೆಂಬುದು ಒಂದು ಸಂತೋಷ (ತೃಷ್ಣಾಕ್ಷಯ). ಅದು ಭೋಗವಸ್ತುಗಳಿಂದ ಉಂಟಾಗುವ ಸಂತೋಷಕ್ಕಿಂತ 16 ಪಟ್ಟು ಹೆಚ್ಚು) ಎಂದು ಹೇಳುವಂತೆ, ಈ ಸಂತೋಷಕ್ಕೂ, ಆ ಸಂತೋಷಕ್ಕೂ ಅಜಗಜಾಂತರ ವ್ಯತ್ಯಾಸವುಂಟು. ಇದು ಕೇವಲ ರಜಸ್ತಮೋಗುಣ ಭೂಯಿಷ್ಠವಾದದ್ದು. ಅದು ಸತ್ವರಜೋಗುಣಯುಕ್ತವಾದದ್ದು. ಅದೆಲ್ಲಾ ಉಪನ್ಯಾಸಕ್ಕೆ ಲಾಯಕ್ಕು ಎಂದು ನೀನು ಹೇಳಬಹುದು. ಹಾಗೇನಿಲ್ಲ. ಈಗ ಆ ಸಂತೋಷವನ್ನು ಅನುಭವಿಸುವ ಯೋಗ್ಯತೆಯನ್ನು ಸಂಪಾದಿಸಿಕೊಂಡಿರುವಾಗ, ಅದಕ್ಕೆ ಅವಕಾಶವಿರುವಾಗ, ಅದನ್ನು ಅನುಭವಿಸಲು ಪ್ರಯತ್ನಪಡಬೇಕಾದ್ದು ಕರ್ತವ್ಯವೆಂದು ನನ್ನ ಭಾವನೆ. ಆ ಸಂತೋಷದಲ್ಲಿ ರುಚಿಯೇ ಇಲ್ಲದಿರುವವರು ಬೇಕಾದಷ್ಟು ಜನ ಇದ್ದಾರೆ. ಅವರಿಗೆ ಏನೂ ಹೇಳಲು ಬರುವುದಿಲ್ಲ. ಆದರೆ ಅದರಲ್ಲಿ ರುಚಿ ಇರುವಾಗ ಅದನ್ನು ಅಭಿವೃದ್ಧಿ ಪಡಿಸಬೇಕಾದ್ದು ಕರ್ತವ್ಯ-Even at the cost of some other smaller pleasure. ಅಮ್ಮನಿಗೂ ಅದರಲ್ಲಿ ರುಚಿ ಇರುವುದೆಂದು ನನಗೆ ಗೊತ್ತು. ಮದ್ರಾಸಿನಲ್ಲಿ ಎಷ್ಟೋ ಸಾರಿ ಪಾಪುವಿನಿಂದ ಕಾಗದ ಬರದೆ, ಚಡಪಡಿಸಿ, ನಾವಿಬ್ಬರೂ ಜಗಳವಾಡಿ, ಕೂಗಾಡಿದ್ದರೂ, ಭಾಗವತ ಹೇಳುವಾಗ ಅವಳು ಅದನ್ನೆಲ್ಲಾ ಮರೆತು ಕೇಳಿದ್ದನ್ನು ನೋಡಿದ್ದೇನೆ. ಮುಗಿದ ತಕ್ಷಣ ಅವರುಗಳ ಕೈಯಲ್ಲಿ ಅಳುಮುಂಜಿ ಮಾಡಿಕೊಂಡು ಹೇಳುತ್ತಿದ್ದಳು, ನಿಜ. ಆದರೆ ಕೇಳುವಾಗ ರುಚಿಯಿಂದಲೇ ಕೇಳುತ್ತಿದ್ದಳು. ಆದ್ದರಿಂದ ಅವಳ ಪುತ್ರ-ಸಹವಾಸದ ಸಂತೋಷಕ್ಕೆ ಧಕ್ಕೆ ಬಂದರೂ ಪರವಾಯಿಲ್ಲವೆಂದು ನಿಶ್ಚಯಿಸಿದೆ.

ನಾವೆಲ್ಲರೂ ಕೂತು, ಮಾತನಾಡಿ, ಚರ್ಚೆ ಮಾಡಿ, ಜಗಳಾಡಿಯೇ ತೀರ್ಮಾನಕ್ಕೆ ಬಂದಿದ್ದೇವೆ. It is not my unilateral decision. ಅವನಿಗೂ ನಮ್ಮ ಜತೆಯಲ್ಲಿರಬೇಕೆಂಬ ಆಸೆ ಇರುವುದೂ ಗೊತ್ತು. ನಿನ್ನ ಕಾಗದದಲ್ಲಿ ಬರೆದಿರುವುದನ್ನು brief ಆಗಿ ಹೇಳಿದೆ. "ಅತ್ತಕ್ಕ ಚೊಲ್ಲು ! ನಾನೂ ಅಮ್ಮ ಅಣ್ಣೊಗ್ಡೆ ಪಿಂತಿಲೇ ವಾರಾಣೆ ಅಂಡುಟೆ"+ ಎಂದು ಹೇಳಿದ.

+ ಅವಳಿಗೆ ಹೇಳು! ನಾನೂ ಅಮ್ಮ ಅಣ್ಣನ ಹಿಂದೆಯೇ ಓಡಿಬರುತ್ತೇನೆ ಅಂತ.

ಆದರೆ ಅವನು Hostelನಲ್ಲಿ ಸ್ನೇಹಿತರ ಜತೆಯಲ್ಲಿ ಮರೆತು ಕೆಲವು ಕಾಲ ಇರಬಲ್ಲ. ಬೇಕಾದಾಗ ಓಡಿಯೂ ಬರಬಲ್ಲ ! Of course ! ಅವನಿಗೆ ಭದ್ರಾವತಿಗೆ Transfer ಆಗಿಬಿಟ್ಟರೆ ಯಾವ ಯೋಚನೆಯೂ ಇಲ್ಲ.

ಈಗ ಸುಮನ ಗರ್ಭದ ವಿಷಯ ತಿಳಿದ ಮೇಲೆ, ನನ್ನ ನಿಶ್ಚಯ ಸರಿ ಎಂದೆನ್ನಿಸಿದೆ. ಇಲ್ಲಿಯಾಗಲಿ, ಭುವನೇಶ್ವರದಲ್ಲಾಗಲಿ ಬಾಣಂತನ ಮಾಡುವುದು ದುಃಸಾಧ್ಯವಾದ ಮಾತು. ಅವಳ ಮಗುವೋ ಮಧ್ಯ ಬೇಸಗೆಯಲ್ಲಿ ಪ್ರಪಂಚಕ್ಕೆ ಬರುವ ನಿಶ್ಚಯ ಮಾಡಿದಂತಿದೆ. ಆದ್ದರಿಂದ ಅವನಿಗೆ ಭದ್ರಾವತಿ ಸಿಗಲಿ ಎಂದು ಎಲ್ಲರೂ ಪ್ರಾರ್ಥಿಸೋಣ. ಇಲ್ಲದಿದ್ದರೆ ನಮ್ಮ ನಿಶ್ಚಯದಂತೆ ಅವನಿಗೆ ಭದ್ರಾವತಿಯೂ ಸಿಗದೆ, ಅವನಿಗೆ ಬೇಕಾದ sectionಗೂ ಹಾಕದಿದ್ದರೆ Resign ಮಾಡುತ್ತೇನೆನ್ನುತ್ತಿದ್ದಾನೆ. GATE ಪರೀಕ್ಷೆ ಬರೆಯುತ್ತಿದ್ದಾನೆ. Study Leave ತೆಗೆದುಕೊಂಡು ಬೆಂಗಳೂರಿನಲ್ಲೋ, ಮದ್ರಾಸಿನಲ್ಲೋ M. Tech ಓದಬಹುದು (1 $^1/_2$ ವರ್ಷ). ಆಮೇಲೆ ನೋಡೋಣ.

ಶೈಲು ! ಇಲ್ಲಂತೂ ಕೊರೆತ ವಿಪರೀತವಾಗಿದೆ. 6^0C Temp. (Min.) ಮಲಗಬೇಕಾದರೆ, ನಾನು ಪಂಚಕವಚಧಾರಣ ಮಾಡಿರುತ್ತೇನೆ (ಬನೀನು, ಸ್ವೆಟರ್, ಷರಟು, ತೋಳುಪೂರ್ತಿ ಇರುವ ಸ್ವೆಟರ್, ತಲೆಗೆ ಪಂಚೆ !!). ಇಷ್ಟಾದರೂ, ಮಲಗಿದ್ದಾಗ ಸ್ವಲ್ಪ ಹೊರಳಿದರೆ ತಣ್ಣಗಾಗುತ್ತದೆ (ಹೊದಿಕೆಯೂ ಒಂದು ಬೆಡ್‌ಷೀಟು, ರಗ್ಗು , ಬೆಡ್‌ಷೀಟು, ಎರಡು ರಗ್ಗು !!!). ಆದರೆ ಮನೆಯ ಸುತ್ತಲೂ ನೋಡಲು ಹೃದಯಂಗಮವಾಗಿದೆ. ನಾನಾ ರಂಗುಗಳ ಸೇವಂತಿಗೆ ಹೂಗಳು ಭರ್ತಿ ಗೊಂಚುಗೊಂಚಲಾಗಿ ಬಿಟ್ಟು ಬಣ್ಣಗಳ ಹಾಸಿಗೆ ಇದ್ದಂತಿದೆ. Emotionನ ಗಂಧವೇ ಇಲ್ಲದ ಪಾಪುವೂ ಬೆಳಗ್ಗೆ Night shiftನಿಂದ ಬಂದು, ಒಂದು ಸಾರಿ ಸುತ್ತ ಓಡಾಡಿ ಸಂತೋಷಪಟ್ಟು ಒಳಕ್ಕೆ ಬರುತ್ತಾನೆ !! ಬಾಳೆಗೊನೆಗಳು ಇನ್ನೂ ಬಲಿತಿಲ್ಲ.

ಅಮ್ಮ ಭುವನೇಶ್ವರಕ್ಕೆ 15ನೇ ತಾರೀಖು ಹೋಗುತ್ತಾಳೆ. ನನ್ನ ಅಮ್ಮನ ಶ್ರಾದ್ಧದ ವೇಳೆಗೆ ಬರುತ್ತಾಳೆ (15.2.90). ಸುಮ, ಉದಯ Feb ಕೊನೆಗೆ ಬರುತ್ತಾರಂತೆ. ಚೇತನ್ ಹುಟ್ಟಿದ ಹಬ್ಬ ಆಯಿತೇ ! ನನ್ನ M.O. ತಲಪಿರಬಹುದು. ಕಾಂಚನ್ ಏನನ್ನುತ್ತಾಳೆ!

ಇತಿ ನಿನ್ನವ

ಅಣ್ಣ

೫೫೧

ಧನುರ್ಮಾಸ (ಅತಿರೇಕ ಭಕ್ತಿ)

कुशलम् श्री: Durgapur

6.1.1990

ಶೈಲು !

...ನಿನ್ನ ಕಾಗದಗಳಲ್ಲಿ ಕೆಲವು ವಿಷಯಗಳನ್ನು mention ಮಾಡಿದ್ದೀಯೆ. ಅದಕ್ಕೆ ಉತ್ತರ ಬರೆಯುವುದು ಯುಕ್ತವೆಂದು ತಿಳಿದು ಆರಂಭಿಸಿದೆ.

1) ಮೊದಲನೆಯದಾಗಿ ಈ ಧನುರ್ಮಾಸದ ಪೂಜೆ ಯಾರು, ಯಾವಾಗ ಇದನ್ನು ಆರಂಭಿಸಿದರೆಂಬುದು ಗೊತ್ತಿಲ್ಲ. ಯಾವ ಪುರಾಣದಲ್ಲಿಯಾಗಲಿ, ಆಗಮಶಾಸ್ತ್ರಗಳಲ್ಲಿಯಾಗಲಿ, ಈ ಒಂದು ತಿಂಗಳು ಬೆಳಗಿನ ಜಾವ ಎದ್ದು ಪೂಜೆ ಮಾಡಬೇಕೆಂಬ ನಿಯಮ ಇದ್ದಂತಿಲ್ಲ. ಅದೂ ಅಲ್ಲದೆ ನಮ್ಮ ಶಾಸ್ತ್ರರೀತ್ಯಾ ಧನುರ್ಮಾಸ ಎನ್ನುವುದೇ ತಪ್ಪು. ಸೂರ್ಯನು ಧನೂರಾಶಿಯಲ್ಲಿ ಇರುತ್ತಾನೆಂಬುದೇ ಹೊರತು ಅದಕ್ಕೆ ಮಾಸತ್ವವಿಲ್ಲ. ತಮಿಳುನಾಡಿನಲ್ಲಿ ಮಾತ್ರ ಅವುಗಳನ್ನೇ ಮಾಸವೆಂದು ಪರಿಗಣಿಸುತ್ತಾರೆ. ನಮ್ಮಲ್ಲೆಲ್ಲಾ ಚಾಂದ್ರಮಾನ ಮಾಸಗಳಿಗೇ (ಮಾರ್ಗಶಿರ, ಪುಷ್ಯ ಇತ್ಯಾದಿ) ಮಾಸವೆಂದು ಹೆಸರು. ಆ ತಿಂಗಳಿನಲ್ಲಿ ಛಳಿ, ತಡವಾಗಿ ಸೂರ್ಯೋದಯ ಎರಡು ಬಿಟ್ಟರೆ ವಿಶೇಷವೇನೂ ಕಾಣಿಸಲಿಲ್ಲ. ವೈದಿಕನಿಯಮರೀತ್ಯಾ ನೋಡಿದರೆ ಆ ಅವೇಳೆಯಲ್ಲಿ ಯಾವ ಕರ್ಮವನ್ನೂ ಮಾಡಲೇಬಾರದು. ಅದಕ್ಕೆ ರಾಕ್ಷಸಕಾಲವೆಂದೇ ಹೆಸರು. ಅಂದರೆ ತಮೋಗುಣಾಭಿವೃದ್ಧಿಗೆ ಅನುಕೂಲವಾದ ಕಾಲ. ಅದು ಮಲಗುವುದಕ್ಕೆ ಸರಿಯಾದ ಕಾಲವೇ ಹೊರತು ಚಿತ್ತಶುದ್ಧ್ಯರ್ಥವಾಗಿ ಮಾಡುವ ಕರ್ಮಗಳಿಗಲ್ಲ. ನಮ್ಮ ರೀತ್ಯಾ ಸಂಧ್ಯಾವಂದನೆ, ಔಪಾಸನಾದಿಗಳನ್ನು ಮಾಡದೆ ಬೇರೆ ಯಾವುದಕ್ಕೂ ಅರ್ಹತೆ ಇಲ್ಲ. ಸೂರ್ಯೋಪಸ್ಥಾನಕ್ಕಾದರೂ ಸೂರ್ಯೋದಯವಾಗಿರಬೇಕು. ಇಲ್ಲದಿದ್ದರೆ ಅರ್ಥವೇ ಇಲ್ಲದೆ ಹೋಗುತ್ತದೆ. ಅದಕ್ಕೇ ನಮ್ಮಲ್ಲಿ ಹಿಂದಿನವರು, ಬೆಳಗ್ಗೆ ಎದ್ದು ಸ್ನಾನ ಮಾಡಿ, ಅರ್ಘ್ಯಪ್ರದಾನ, ಜಪಗಳನ್ನು ಮಾಡಿ, ಪೂಜೆ ಮಾಡಿ, ಸೂರ್ಯೋದಯವಾದ ಮೇಲೆ ಉಪಸ್ಥಾನ ಮಾಡುತ್ತಿದ್ದರು. ಇಷ್ಟೆಲ್ಲಾ Circus ಏಕೆ ಎನ್ನುವುದು ನನಗೂ ತಿಳಿಯಲಿಲ್ಲ. ಆ ಛಳಿಯಲ್ಲಿ ಬೆಳಗಿನ ಜಾವ ಎದ್ದು ತಣ್ಣೀರಿನಲ್ಲಿ ಸ್ನಾನ ಮಾಡಿ ಕೂರುವುದೇ, ಇಂದ್ರಿಯ ನಿಗ್ರಹ ಮಾಡುವ ಒಂದು ಸಾಧನವೆಂದು ತಿಳಿದುಕೊಳ್ಳಬಹುದು. ಈಗ ಆ ಕಷ್ಟವನ್ನು Circumvent ಮಾಡಲು ತಮಿಳುನಾಡಿನಲ್ಲಿ ಇನ್ನೊಂದು ಬಗೆ

ಮಾಡುತ್ತಾರೆ. ದೇವಸ್ಥಾನದಲ್ಲಿ, ಪೂಜೆ (ಅರ್ಚಕನು ಮಾತ್ರ ಆ ಕಷ್ಟ ಅನುಭವಿಸಿದರೆ ಸಾಕು !). ಎಲ್ಲರೂ ಭಜನೆ ಮಾಡಿದರೆ ಸಾಕು.

ಮೊದಮೊದಲು, ಅಭ್ಯಾಸಕ್ಕೆ ಒಂದು ಕ್ರಮವಿದ್ದರೆ ಒಳ್ಳೆಯದೆಂಬ ದೃಷ್ಟಿಯಿಂದ ಎಲ್ಲರಿಗೂ ಸಾಧ್ಯವಾಗುವಂತೆ ಕೆಲವು ಕಾಲ- ನಿಯಮಗಳನ್ನು ವಿಧಿಸಿದ್ದಾರೆ. ಸೋಮಾರಿತನದಿಂದ ಇಷ್ಟಬಂದಂತೆ ಮಾಡಲು ಹೊರಡುವುದು ಬೇಡ ಎಂಬ ದೃಷ್ಟಿಯಿಂದ ಕಾಲಕ್ಕೆ Importance ಕೊಟ್ಟಿದ್ದಾರೆ. ಮಹರ್ಷಿಗಳ ಅಭಿಪ್ರಾಯವೂ ಅದೇ ಎಂದು ನಂಬಿದ್ದೇನೆ. ಇಲ್ಲದಿದ್ದರೆ ಅವರು ಎಲ್ಲಾ ಕರ್ಮಗಳಿಗೂ ಕಾಲಾತೀತದ ಅವಕಾಶವನ್ನು ಕೊಡುತ್ತಿರಲಿಲ್ಲ. ಒಂದು ಕಾಲದಲ್ಲಿ ಮಾಡಿದರೇ ಫಲ ಬರುವುದಾದರೆ ಬೇರೆ ಕಾಲದಲ್ಲಿ ಮಾಡುವುದು ಹೇಗೆ ?

2) "ರಾ" ಎಂಬ ಅಕ್ಷರವನ್ನು ಹೇಳಿ ಬಾಯಿ ತೆಗೆದು "ಮ" ಎಂದು ಬಾಯಿ ಮುಚ್ಚಿಕೊಂಡುಬಿಟ್ಟರೆ, ಬಾಯಿ ತೆಗೆದಾಗ ಹೋದ ಪಾಪ ಮತ್ತೆ ಬರಲು ಸಾಧ್ಯವಿಲ್ಲ ಎಂದು ಹೇಳುವುದು ರಾಮನಾಮೋಪಾಸಕರ ಅತಿರೇಕಭಕ್ತಿ.

ಇತಿ ನಿನ್ನವ

ಅಣ್ಣ

೫೫೨

conviction

कुशलम्　　　श्री:　　　Durgapur

23.1.1990

ಶೈಲು !

...ಇಲ್ಲಿ ಈಗ ಛಳಿ ಕಮ್ಮಿಯಾಗುತ್ತಿದೆ. ಹೂವುಗಳಂತೂ ಸಮೃದ್ಧಿಯಾಗಿ ಬಿಡುತ್ತಿದೆ. ಅವುಗಳನ್ನು ಬಿಟ್ಟು ಹೋಗುವುದು ಹೇಗೆ ಎನ್ನುವುದೂ ಒಂದು ಯೋಚನೆಯಾಗಿದೆ. ಈಗ 7-8 ದಿನಗಳ ಕೆಳಗೆ Paperನಲ್ಲಿ ಓದಿದ್ದನ್ನು ನಿನಗೆ ಬರೆಯಬೇಕೆಂದಿದ್ದೆ. Vaticanನವರು, ಎಲ್ಲಾ Churchಗಳಿಗೂ ಒಂದು mandate ಕಳಿಸಿದ್ದಾರಂತೆ ! "Yoga or meditation cannot be a substitute for prayer, They can be Practised along with prayer but not as a substitute. Prayer without faith is blind and faith without prayer will disintegrate" ಎಂದು. ನನಗೆ ಓದಿ ಸಂತೋಷವಾಯಿತು. ಈ ರೀತಿ ನಮ್ಮ ಆಚಾರ್ಯರುಗಳು ಹೇಳಬೇಕು. ಅಲ್ಲಿ faith ಅಂದರೆ ಪರಮಾತ್ಮನೊಬ್ಬನಿದ್ದಾನೆ ಎಂಬ ನಂಬಿಕೆ. ಅದು ನಮಗೆ ಶ್ರುತಿಯಿಂದಲೇ ತಿಳಿಯಬೇಕೇ ಹೊರತು, ನಾವೇ ಅನುಭವಿಸಿಲ್ಲ. ಅದಕ್ಕೇ ಅದು faith. ಕೇವಲ ನಂಬಿಕೆಯೇ ಸಾಲದು. ಅವನ ಸ್ಮರಣೆಯೂ ಬೇಕು. ಡಿ.ವಿ.ಜಿ. ಹೇಳುವಂತೆ, ಭಗವನ್ಮಹಿಮಾ ಸ್ಮರಣೆಯೂ ಧರ್ಮದ ಒಂದು ಅಂಗ. ಕೇವಲ ಸತ್ಯನಿಷ್ಠೆ, ಅಹಿಂಸಾ ಮೊದಲಾದ ಗುಣಗಳು ಸಾಲದು. ಭಗವತ್ ಸಾನ್ನಿಧ್ಯವನ್ನೂ ಅಭ್ಯಾಸ ಮಾಡಬೇಕು. ಅದೇ Prayer. ಅದೇ ಪ್ರಾರ್ಥನೆ. ಅದನ್ನೇ ಉಪಸ್ಥಾನವೆಂದು ಕರೆಯುವುದು. ಅದರಿಂದಲೇ ನಮ್ಮ ನಂಬಿಕೆ ದೃಢವಾಗಿ, ನಾವು ಮುಂದೆ ಮುಂದೆ ಹೋಗಲು ಅನುಕೂಲವಾಗುತ್ತದೆ. ಅದನ್ನು ಅವರುಗಳು ಅಷ್ಟು ಚೆನ್ನಾಗಿ ಹೇಳಿದ್ದಾರೆಂದರೆ ಅವರ conviction ಎಷ್ಟರ ಮಟ್ಟಿಗೆ ಇರಬೇಕು!! ಯದ್ಯಪಿ, ಸಹಸ್ರನಾಮಗಳು, ವೇದೋಪನಿಷತ್ತುಗಳು ಅವನ ಮಹಿಮೆಯನ್ನು ಕೊಂಡಾಡುವುದಕ್ಕೆ ಹೊರಟಿವೆಯೇ ಹೊರತು ಬೇರೇನೂ ಅಲ್ಲ.

ಶೈಲು ! ನಾವು, April ಕೊನೆಯ ವಾರದಲ್ಲಿ ಈ ಊರನ್ನು ಬಿಡುತ್ತೇವೆ. ನೀನು ಮನೆ ನೋಡಿದರೂ May ಮೊದಲನೇ ವಾರದಿಂದ ಅಲ್ಲಿಗೆ ಹೋಗಲು ಸಾಧ್ಯ. ತುಂಬಾ ಒಳ್ಳೆಯ ಮನೆ ಸಿಕ್ಕಿದರೆ earlyಯಾಗಿಯೇ fix ಮಾಡಿದರೂ ಚಿಂತೆಯಿಲ್ಲ. ಒಂದು ತಿಂಗಳ ಬಾಡಿಗೆ ಕೊಡೋಣ. ಯಾವುದೂ ಪಾಪುವಿನ Transferನ್ನು ಅವಲಂಬಿಸಿದೆ. ತಿಳಿದ ತಕ್ಷಣ information ಕೊಡುತ್ತೇನೆ. ಅಮ್ಮ ಬರುವುದನ್ನೇ ಕಾಯುತ್ತಿದ್ದೇನೆ. 31ನೇ ತಾರೀಖು ಬರುತ್ತೇನೆಂದು ಹೇಳಿಹೋಗಿದ್ದಾಳೆ. ಕಾಂಚು ಚೇತನ್ ಇವರಿಗೆ ನನ್ನ ಜ್ಞಾಪಕ ಕೊಡು.

ಇತಿ ನಿನ್ನವ

ಅಣ್ಣ

೫೫೩

ವೇದಾಂತ ಮತ್ತು ಸ್ಥೈರ್ಯ

कुशलम्　　　श्री:　　　Durgapur

30.1.1990

ಶೈಲು !

ನನ್ನ ಹೋದವಾರದ ಕಾಗದ ನಿನಗೆ ತಲಪಿರಬಹುದು. ಅದರ ಹಿಂದಿನ ಕಾಗದಗಳೂ ತಡವಾಗಿಯಾದರೂ ತಲಪಿರಬಹುದೆಂಬ ಆಸೆಯಿಂದಿದ್ದೇನೆ. ನನ್ನ ಸ್ವಯಂಪಾಕ ಅವ್ಯಾಹತವಾಗಿ ಸಾಗಿದೆ ! ಇವತ್ತು ಮಜ್ಜಿಗೆಹುಳಿಯನ್ನು ಪ್ರಯತ್ನಪಟ್ಟು ಮಾಡಿದ್ದೇನೆ. ಹೇಗಿದೆ ಎಂಬುವುದು ಊಟ ಮಾಡಿದಾಗ ನೋಡಬೇಕು !! ಪುಳಕೇರಿಯನ್ನೇನೋ ಚೆನ್ನಾಗಿಯೇ ಮಾಡುವುದಕ್ಕೆ ಕಲಿತಿದ್ದೇನೆ. ಚಟ್ನಿಯನ್ನೂ ಮಾಡುತ್ತೇನೆ. ಆದ್ದರಿಂದ ನಿನ್ನ ಅಮ್ಮ ಹೇಳುವಷ್ಟು

ಮೋಸವಿಲ್ಲ. Refresher Course ಇದ್ದ ಹಾಗಿದೆ !!

ಅಮ್ಮ, ಹೋದ 17ನೇ ತಾರೀಖು ಭುವನೇಶ್ವರಕ್ಕೆ ಹೊರಟಳು. ಅವತ್ತೇ ಸಾಯಂಕಾಲ ತಲಪಿರಬೇಕು. ಇದುವರೆಗೂ ತಲಪಿದ್ದಕ್ಕೂ ಸುದ್ದಿ ಇಲ್ಲ. ಬರುವುದಕ್ಕೂ ಸಮಾಚಾರವಿಲ್ಲ. ... ಅಡುಗೆ ಮಾಡಲು ಬಂದರೂ ಅದ್ಯಾಕೋ ಮಾಡಲು ಬೇಜಾರು. ಅದು ಹೆಂಗಸರಿಗೇ ಸರಿ ಎನಿಸುತ್ತದೆ. Please don't mistake me for a male chauvinist. ಸೃಷ್ಟಿಯಲ್ಲಿ ಕೆಲವು ಜಾತಿಗಳಿಗೆ ಸ್ವಭಾವಸಿದ್ಧವಾದ ಕೆಲವು ಗುಣಗಳನ್ನು ದೇವರು ಕೊಟ್ಟಿದ್ದಾನೆ. ಅದನ್ನು ಅವುಗಳಿಗೇ ಉಪಯೋಗಿಸಿಕೊಂಡರೆ ಜೀವನವು ಸುಖಮಯವಾಗುವುದು. ಸ್ವಭಾವಕ್ಕೆ ವಿರುದ್ಧವಾದ ಕೆಲಸಗಳನ್ನು ಮಾಡಬಾರದೆಂದಲ್ಲ. ಆದರೆ ಅದಕ್ಕೆ ಬಹಳ ಕಾಲ ಕಷ್ಟ ಪಡಬೇಕು. ನನಗೆ ಪುಸ್ತಕ, T.V. ಬಿಟ್ಟರೆ ಬೇರೆ ಯಾವ ಸಹವಾಸಿಯೂ ಇಲ್ಲ. ಅಮ್ಮನಾದರೂ ಇದ್ದರೆ, ಜಗಳ, argument, ಪೂರ್ವಕಥಾ ಸ್ಮರಣೆ ಇವುಗಳಲ್ಲಿ ಹೇಗೋ ಕಾಲಹರಣವಾಗುತ್ತದೆ. ಇಲ್ಲದಿದ್ದರೆ it is time killing. ನನಗೆ ಈ ತರಹ ಸಮಸ್ಯೆ ಎದುರಿಸುತ್ತಿರುವುದು ಇದೇ ಪ್ರಪ್ರಥಮವಾಗಿದೆ. ಇನ್ನು ಮೇಲೆ ಅಭ್ಯಾಸ ಮಾಡಿಕೊಳ್ಳಬೇಕು ಅಂತ ಕಾಣುತ್ತೆ.

ನಿನ್ನೆ 9 ಗಂಟೆಗೆ Wagle ki Duniya ನೋಡುತ್ತಿದ್ದೆ. ಹೋದ ವಾರವೂ ಚೆನ್ನಾಗಿತ್ತು. ಈ ವಾರವೂ ಚೆನ್ನಾಗಿತ್ತು. ಹೋದ ವಾರವಂತೂ ನಿಮ್ಮೆಲ್ಲರ ಜ್ಞಾಪಕ ಬಂತು. ಕೆಲಸ ಮಾಡುವವರು ಬರದಿದ್ದರೆ, ನೀವುಗಳು ಆಕಾಶ ಕಳಚಿಬಿದ್ದಂತೆ ಆಡುವುದು, ಅವಳ ನಿರೀಕ್ಷಣೆ, ಮಾಡುವ ಕಾತರ, ಅವಳು ಬಂದುಬಿಟ್ಟರೆ ಪಡುವ ಸಂಭ್ರಮ ಎಲ್ಲವನ್ನೂ ಚೆನ್ನಾಗಿ act ಮಾಡಿದ್ದಾರೆ. ಆ ಮನುಷ್ಯನಂತೂ ಚೆನ್ನಾಗಿ act ಮಾಡುತ್ತಾನೆ. ನಿನ್ನೆಯೂ ಅವನು ಲಂಚ ಕೊಡಲು ಕಷ್ಟಪಡುವ ಬಗೆ ಬಹಳ ಚೆನ್ನಾಗಿತ್ತು. ಕೊನೆಗೆ ಏನೂ ಇಲ್ಲದೆ ಅವನಿಗೆ License ಸಿಕ್ಕಿದಾಗ ಅವನಿಗೆ ಆದ ಆಶ್ಚರ್ಯ, ಸಂತೋಷಗಳನ್ನು ಬಹು ಚೆನ್ನಾಗಿ ಅಭಿನಯದಲ್ಲಿ ತೋರಿಸುತ್ತಾನೆ.

1965ನೇ ಇಸವಿಯ Reader's Digest ಓದುತ್ತಿದ್ದೆ. ಅದರಲ್ಲಿ ಒಂದು Blue Babyಯ ಕಥೆ ಬರುತ್ತದೆ. (Feb. 1965 "We gave Diana back her life")

ಶೈಲು ! ಆ ಹುಡುಗಿಯ ತಂದೆ ತಾಯಿಗಳ ಸ್ಥೈರ್ಯ, ಧೈರ್ಯಗಳು ಯಾರಾದರೂ ಮೆಚ್ಚುವಂಥಾದ್ದೇ. ವೇದಾಂತಾಭ್ಯಾಸವು ಹೇಳಿಕೊಡುವುದಾದರೆ ಈ ಮನೋಧೈರ್ಯವನ್ನೇ. ಅವರಿಗೆ ಅದು ವೇದಾಂತವೆಂದೇ ಗೊತ್ತಿಲ್ಲದೆ ಜೀವನದಲ್ಲಿ ಅಭ್ಯಾಸ ಮಾಡಿಕೊಂಡಿದ್ದಾರೆ. ನಾವು ವೇದಾಂತ ಪ್ರವಚನಗಳನ್ನು ಮಾಡಿ, ಪ್ರವಚನಗಳನ್ನು ಕೇಳಿ, ಭಯದಿಂದಲೇ ಪ್ರಾಣ ಬಿಡುತ್ತಿದ್ದೇವೆ. ಅವರು ನಿಜವಾಗಲೂ ಮುಂದುವರಿದ ಜನಾಂಗವೆಂದು ಹೇಳಿದರೆ ಖಂಡಿತ ತಪ್ಪಲ್ಲ. ಕೇವಲ ಐಹಿಕವಾಗಿ ಅಲ್ಲ. ಆಧ್ಯಾತ್ಮಿಕವಾಗಿಯೂ ಮುಂದುವರಿದಿದ್ದಾರೆ. ನಾವುಗಳು ಸುಮ್ಮನೆ ನಮ್ಮ ಹಿಂದಿನವರ ಚರಿತ್ರೆಯ ಮೇಲೆ ಹೊಗಳಿಕೊಂಡು ಬಾಳಲು ಪ್ರಯತ್ನಿಸುತ್ತಿದ್ದೇವೆ.

ಸೀತಾರಾಮು ಬಂದಿದ್ದರೇ ? ಅವರು ಕಟ್ಟಿರುವ ಮನೆ ನೋಡಿದೆಯಾ ? ಬೇರೆ ಎಲ್ಲಾದರೂ ಮನೆ ನೋಡುತ್ತಿರುವೆಯಾ? ಚೇತು ಕಾಂಚನ್‌ರಿಗೆ ಜ್ಞಾಪಿಸು.

ಇತಿ ನಿನ್ನವ

ಅಣ್ಣ

ಜಜಜ

ಘನಪಾಠಿಗಳು ಮತ್ತು Dedication

कुशलम् श्री: Durgapur

13.3.1990

ಶೈಲು !

ನಿನ್ನ exercise ಹಾಳೆಯ ಕಾಗದ ತಲಪಿತು. ಕೊಂಡು ಕೊಂಡಿದ್ದ ಬಿಳಿಯ ಹಾಳೆಗಳೆಲ್ಲಾ ಮುಗಿದುಹೋದುವೇ! ನಿನ್ನ ಕಾಗದದ ಜತೆಯಲ್ಲಿಯೇ ಸೀತಾರಾಂ ಕಾಗದವೂ ಬಂತು. ಪಾಪ! ಬಹಳ ಸಂತೋಷಪಟ್ಟುಕೊಂಡು ಬರೆದಿದ್ದಾರೆ. ಅವರಿಗೆ ನಾನು ಅವರ ಮನೆಗೆ ಬರುವುದು ಏನೋ ಒಂದು ಸಂಭ್ರಮ. ಶುದ್ಧ ಹೃದಯರು, ಇಬ್ಬರೂ ನಿನ್ನ ಮನೆಗೆ ಬಂದುದು ಆಶ್ಚರ್ಯವೇ ! ನಿನ್ನ ಮನೆಗೆ ದೂರವಾದುದು "Blessing in disguise" ಎಂತಲೇ ನನ್ನ ಭಾವನೆ. ದೂರ ಇದ್ದರೆ- ಮಕ್ಕಳು, ನೀನು ಅಲ್ಲಿಗೆ ಬಂದು ಎರಡು ದಿನಗಳು ಇದ್ದು ಬರಬಹುದು. ಹತ್ತಿರ ಇದ್ದರೆ ಬರುವುದು ಹೋಗುವುದು ಆಗಿಬಿಡುತ್ತದೆ. ಅಷ್ಟು ಹಿತವಾಗುವುದಿಲ್ಲ. ಅಲ್ಲವೇ !

ಅಮ್ಮನಿಂದ ಕಾಗದವೇ ಇಲ್ಲ ಎಂದು ಬರೆದಿದ್ದೀಯೆ. ಅಮ್ಮನ complaint "ಶೈಲು ಅವಳ ಅಣ್ಣನಿಗೆ ಮಾತ್ರ ಬರೆಯುತ್ತಾಳೆ. ಅಮ್ಮನಿಗೆ ಅದರಲ್ಲಿ ಏನೂ ಇರುವುದೇ ಇಲ್ಲ. ನಾನೇನು ಬರೆಯಲಿ!" ಎನ್ನುವುದೇ. ಅದಕ್ಕೇ ಸುಮ ಉಪಾಯ ಮಾಡುತ್ತಾಳೆ. Dear Anna and Amma ಎಂದು ಬರೆದುಬಿಡುತ್ತಾಳೆ !! ಆದರೆ ಅವಳಿಗೂ ಅಮ್ಮ ಬರೆದೇ ಇಲ್ಲ ಅಂತಿಟ್ಟುಕೊ.

ನಿನ್ನೆ ತೀ||ರವರ ಶ್ರಾದ್ಧ. ಯಥಾಪ್ರಕಾರ ನಾರಾಯಣ ಅಯ್ಯರ್, ಸೀತಾರಾಮಯ್ಯ. ಸೀತಾರಾಮಯ್ಯನವರ ತಾಯಿ

ಬಂದು ತರಕಾರಿ, ತೆಂಗಿನಕಾಯಿ, ಹಣ್ಣು ಮೊದಲಾದವುಗಳಲ್ಲಿ ಸಹಾಯ ಮಾಡಿದರು. ಅಮ್ಮ ಗೋಡಂಬಿ ಬರ್ಫಿ ಮಾಡಿದ್ದಳು. ಬಹಳ ಚೆನ್ನಾಗಿತ್ತು! ಇನ್ನು ಮೇಲೆ ಅಮ್ಮನ ಪಾಕದ ಸವಿಯನ್ನು ನೀವೂ frequent ಆಗಿ ಅನುಭವಿಸಬಹುದು. ಮನೆಯದೇ ಬಾಳೆಎಲೆ, ಬಾಳೆದಿಂಡು. ಕಾಯೂ ಬಿಟ್ಟಿದೆ. ಆದರೆ ಅದನ್ನು ಹಣ್ಣು ಮಾಡಬೇಕೆಂಬುದು ಅಪೇಕ್ಷೆ. ಆದ್ದರಿಂದ ಕಾಯಿ ಕೀಳಲಿಲ್ಲ. ನಾನಾ ತರಹ ಹೂಗಳೂ ಬಿಡುತ್ತಿವೆ. ಇವುಗಳೆಲ್ಲವನ್ನೂ ಬಿಟ್ಟು ಹೋಗುವುದೂ ಒಂದು ಕಷ್ಟವಾಗಿದೆ.

ಮದ್ರಾಸಿನಲ್ಲಿ ಶೇಷಗಿರಿ, ನಿನ್ನ ಮನೆಯಲ್ಲಿ ನನ್ನ ಹತ್ತಿರ ಮಾತನಾಡಿದ ಮೇಲೆ ಬಹಳ serious ಆಗಿ ಕೆಲಸಕ್ಕೆ ಮುಂದುವರೆದಿದ್ದಾನೆ. ಅವನ ಪ್ರಕಾರ, ನನ್ನ ಅಭಿಪ್ರಾಯಗಳನ್ನು ಸಣ್ಣ ಸಣ್ಣ Pamphletಗಳನ್ನಾಗಿ ಮಾಡಿ ಎಲ್ಲರಿಗೂ ಹಂಚಬೇಕೆನ್ನುವುದೇ. ಅದಕ್ಕಾಗಿ ಒಂದು trust ಮಾಡಬೇಕಂತೆ! ಆಗಲೇ Donations collect ಮಾಡಲು ಆರಂಭಿಸಿದ್ದಾನೆ.

ನರಸಿಂಹನು ಇನ್ನೊಂದು ಮಗುವಿಗೆ ತಂದೆಯಾಗುವುದನ್ನು ಅವನೇ ತಿಳಿಸಿದ್ದ. ಅಷ್ಟು ವರ್ಷಗಳು ಮಕ್ಕಳಿಲ್ಲದುದ್ದಕ್ಕೆ, he seems to be compensating with a vengeance. ಆದರೂ ಇನ್ನು ಸ್ವಲ್ಪ ಎಚ್ಚರಿಕೆಯಾಗಿರಬಹುದಿತ್ತೇನೋ ! ಉಷಳ ಕ್ಷೇಮವನ್ನೂ ನೋಡಬೇಕು. ಮಗುವಿನ ಕ್ಷೇಮವನ್ನೂ ನೋಡಬೇಕು. ಆಗಲಿ, ಈಗೇನೂ ಮಾಡಲೂ ಬರುವುದಿಲ್ಲ ! ಅದರಿಂದಲೇ ಖುಷಿಯಾಗಿರೋಣ.

ನಮ್ಮ Indians ಆಡಿದ Cricket match ನೋಡಿದೆಯಾ! ಅವತ್ತು Newzealand ಮೇಲೆ ಸೋತಾಗ ನಿಜವಾಗಲೂ Bishan Bediಗಿಂತ ಹೆಚ್ಚಾಗಿ ನಾನೇ I was fretting and fuming. ಬೇಕಾದಷ್ಟು time ಇತ್ತು. Runrate required was only 3.5 or 4. ಆದರೆ wickets ಹೆಚ್ಚು ಇರಲಿಲ್ಲ. ಆಗ ಕಪಿಲ್‌ದೇವ್ ಚೆನ್ನಾಗಿ ಆಡುತ್ತಿದ್ದವನು, ಅಂಥಾ atrocious strokeನ್ನು ಹೊಡೆಯಬಹುದೇ ! ಆಗಲೇ ಆ overನಲ್ಲಿ ಒಂದು boundaryಯನ್ನು ಹೊಡೆದಾಗಿತ್ತು. ಸುಮ್ಮನೆ ಒಂದು Single ಹೊಡೆದಿದ್ದರೂ ಆಗಿತ್ತು. ಹಾಗೆ stroke ಹೊಡೆದು Catch ಕೊಟ್ಟ. It was inexcusable. I fully agreed with Bedi when he said that the whole team is fit to be thrown into the Pacific Ocean !! Australia ದ ಮೇಲೂ ಹಾಗೇ ಆಡಿದರು. ಅದೇ Australiaದವರು ಆಡಿದ್ದನ್ನು ಯಾರಾದರೂ ಅನುಕರಿಸಬೇಕಾಗಿತ್ತು. Strictly professional and almost clinical in their approach. ಅವರು between the wickets ಓಡುವ ಬಗೆ it was a pleasure to watch. ಅಂತೂ ನಮ್ಮ ಭಾರತೀಯರಿಗೆ ಯಾವುದರಲ್ಲಿಯೂ methodical approach ಇಲ್ಲವೆನ್ನುವುದು ಚೆನ್ನಾಗಿ ಖಚಿತವಾಯಿತು. ಇದೇ ನ್ಯೂನತೆಯನ್ನು ಎಲ್ಲಾ fieldಗಳಲ್ಲಿಯೂ ನೋಡಬಹುದು. Scientific and engineering research, politics, religion, rituals, profession ಎಲ್ಲಾದರಲ್ಲಿಯೂ! ನನಗೆ ಜ್ಞಾಪಕ ಬರುತ್ತದೆ. ಹಿಂದೆ ಪೂಜ್ಯ ಘನಪಾಠಿಗಳು, ಭದ್ರಾವತಿಯಲ್ಲಿ , ದೇವಸ್ಥಾನದಲ್ಲಿ ರುದ್ರಹೋಮ ಮಾಡುತ್ತಿದ್ದಾಗ ವಲ್ಲೀಶಾಯಿ ಕೂತಿದ್ದರು. ಎಲ್ಲಾ ಮುಗಿದ ಮೇಲೆ, ವಲ್ಲೀಶಾಯಿ, “ಕುಮಾರಸ್ವಾಮಿಗಳೇ ! ನಮ್ಮ worksನ engineers ಎಲ್ಲರೂ ಘನಪಾಠಿಗಳು ಮಾಡುವ ಹೋಮವನ್ನು ಬಂದು ನೋಡಬೇಕು. ಆಚಮನದಿಂದ ಹಿಡಿದು, ಪೂರ್ಣಾಹುತಿ ಮುಗಿಯುವವರೆಗೂ, ಅವರು ಒಂದೊಂದು ಸಣ್ಣ ಕೆಲಸದಲ್ಲಿಯೂ ತೋರಿಸುವ ಶ್ರದ್ಧೆ, Dedication, ಏಕಾಗ್ರತೆ ಎಲ್ಲವೂ ಅನುಕರಣೀಯವಾದದ್ದು. ನಮ್ಮ ಹುಡುಗರೆಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ಅವರನ್ನು ಅನುಕರಿಸಿದರೆ, ನಮ್ಮ works ಎಲ್ಲಕ್ಕಿಂತಲೂ ಮುಂದುವರಿಯುವುದರಲ್ಲಿ ಸಂದೇಹವಿಲ್ಲ” ಎಂದು ಬಹಳ ಸಂತೋಷದಿಂದ ಹೇಳಿದರು. ನಿಜವಲ್ಲವೇ ! ನಮಗೆ ಯಾವ ಕೆಲಸ ತೆಗೆದುಕೊಂಡರೂ slip-shod ಆಗಿ ಮಾಡುವುದೇ ಅಭ್ಯಾಸ. ದುಃಖ ಸಂಗತಿಯೆಂದರೆ, ಆ ರೀತಿ neglect ಮಾಡಿ ಮಾಡುವುದನ್ನು ನಾವು ಅನೇಕ ಬಾರಿ ವೈರಾಗ್ಯವೆಂದು ಪರಿಗಣಿಸುವುದೂ ಉಂಟು!

ಕಾಂಚನ್ ನನ್ನ ಕಾಗದವನ್ನು ಓದುವುದನ್ನು ತಾಳ್ಮೆಯಿಂದ ಕೇಳುವಷ್ಟು ದೊಡ್ಡವಳಾಗಿಬಿಟ್ಟಳೇ ! ಅವಳ ಆಗಿನ ಮುಖವನ್ನು ನೋಡಬೇಕೆನ್ನಿಸಿತು !! ಅಂತೂ ನೀವು ಹೋದ ವರ್ಷ ದುರ್ಗಾಪುರಕ್ಕೆ ಬಂದಿದ್ದು ಸರಿಹೋಯಿತು.

ಅಮ್ಮನ ಮಂಡಿ ನೋವು ಸ್ವಲ್ಪ ಕಮ್ಮಿಯಾಗಿದೆ. DSP hospitalನ expert Dr. Khanಗೆ ತೋರಿಸಿದೆವು. ಅವರೇನೂ X Ray ತೆಗೆಯಲಿಲ್ಲ. ಮಾತ್ರೆಗಳನ್ನು ಕೊಟ್ಟಿದ್ದಾರೆ. ನಾಳೆ ಪುನಃ ಹೋಗಬೇಕು. ನಮ್ಮ ticket confirm ಆದಕೂಡಲೇ ಪುನಃ ಬರೆಯುತ್ತೇನೆ.

ಇತಿ ನಿನ್ನವ, ಅಣ್ಣ

೯. ಸ್ವಾಮೀಜಿಯೊಬ್ಬರಿಗೆ ಬರೆದ ಪತ್ರ

ಹಹಹ

ಧರ್ಮದ ಮೌಲ್ಯ

ಕುಶಲಮ್ ಶ್ರೀ: ಮೈಸೂರು

24.7.1999

...ಸಮಾಜದಲ್ಲಿ ನಡೆಯುತ್ತಿರುವ ಅಕ್ರಮಗಳಿಂದ ಬೇಸತ್ತು, ಸಂಕಟಪಟ್ಟು (ಅವೆಲ್ಲವೂ ನಮ್ಮ ಧರ್ಮದ ಮೂಲಭೂತ ತತ್ತ್ವ ತಿಳಿಯದೆ ನಡೆಯುತ್ತಿರುವುದೆಂದು ನನ್ನ ಅಭಿಪ್ರಾಯ) ಹೇಗಾದರೂ ಮಾಡಿ ಅಲ್ಪಸ್ವಲ್ಪವಾದರೂ ತಿಳಿಸಬೇಕೆಂಬ ಉದ್ದೇಶದಿಂದ ಹೊರಟಿರುವವನು ನಾನು. ನಾನು ತಿಳಿದುಕೊಂಡಿರುವುದೇ ಸರಿಯೆಂಬ ಆಗ್ರಹ ನನಗಿಲ್ಲ. ಆದರೆ ಜನಗಳಿಗೆ ಧರ್ಮದ ಬಹಿರ್ವ್ಯಾಪಾರಗಳಲ್ಲಿ ಆಸಕ್ತಿಯನ್ನು ಕಮ್ಮಿಯಾಗಿಸಿ ಆಂತರಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಎಲ್ಲಾ ವಿದ್ವಾಂಸರೂ, ಧಾರ್ಮಿಕ ಧುರೀಣರೂ ಪ್ರಯತ್ನಪಡಬೇಕೆಂಬುದು ನನ್ನ ಅಭಿಪ್ರಾಯ...

ಕುಮಾರಸ್ವಾಮಿ

ಪ್ರಸ್ತುತ ಸಂಪುಟವನ್ನು ಕುರಿತ ಅನಿಸಿಕೆಗಳು

ಹಾಸನ **ಡಾ. ಎ.ಎಸ್. ವೇಣುಗೋಪಾಲರಾವ್**
ನವೆಂಬರ್ ೫, ೨೦೦೩ ನಿವೃತ್ತ ಕನ್ನಡ ಪ್ರಾಧ್ಯಾಪಕರು

ಕಳೆದ ನಾಲ್ಕು ದಶಕಗಳಲ್ಲಿ , ಜನಾಂಗೀಯ ಅಧ್ಯಯನ, ಸಂಶೋಧನೆ, ಸಂಸ್ಕೃತಿ-ಸಮೀಕ್ಷೆಗಳ ಬಗೆಗಿನ ಆಸಕ್ತಿ ವಿಶೇಷವಾಗಿ ಬೆಳೆದಿರುವುದು ಹರ್ಷದಾಯಕ ಸಂಗತಿ. ರಾಜ್ಯದ ವಿಶ್ವವಿದ್ಯಾನಿಲಯಗಳ ಜಾನಪದ ವಿಭಾಗಗಳು, ವಿಶೇಷವಾಗಿ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಅಧ್ಯಯನ ವಿಭಾಗ ನೀಡುತ್ತಿರುವ ಮಾರ್ಗದರ್ಶನ, ಪ್ರೋತ್ಸಾಹ, ಪೋಷಣೆಗಳು ಸ್ತುತ್ಯರ್ಹ. ಕ್ಷೇತ್ರಕಾರ್ಯ ಹಾಗೂ ಬರವಣಿಗೆಯು ಬೇಡುವ ದೈಹಿಕ ಹಾಗೂ ಬೌದ್ಧಿಕ ಶ್ರಮವನ್ನೂ ಸಂಶೋಧನ ವಿದ್ಯಾರ್ಥಿಗಳು ಪ್ರೀತಿಯಿಂದ ಸ್ವೀಕರಿಸುವಂತೆ ಮಾಡಿರುವುದು ಈ ವಿಭಾಗಗಳ ಸಿದ್ಧಿ ಎಂದೇ ಹೇಳಬಹುದಾಗಿದೆ. ಅಧ್ಯಯನ-ವಿಷಯ ಕ್ರೋಡೀಕರಣ, ಮೌಲ್ಯಮಾಪನಗಳಲ್ಲಿನ ಶೈಕ್ಷಣಿಕ ಶಿಸ್ತು ಆರೋಗ್ಯಕರವಾದ ಬೆಳವಣಿಗೆಯೇ ಸರಿ. ಎಂ.ಫಿಲ್. ಹಾಗೂ ಪಿಎಚ್.ಡಿ., ಪದವಿಗಳ ಅಗತ್ಯ ಹಾಗೂ ಅನಿವಾರ್ಯತೆಗಳು ಈ ಕಠಿಣ ಕಾರ್ಯಕ್ಕೆ ಸೂಕ್ತ ಪ್ರಚೋದನೆಯನ್ನು ನೀಡಿರಬಹುದಾದರೂ ಬಹುಮಟ್ಟಿಗೆ ಕನ್ನೆನೆಲವಾಗಿಯೇ ಉಳಿದಿದ್ದ ಜನಾಂಗೀಯ ಅಧ್ಯಯನದ ಕುತೂಹಲ, ಆಕರ್ಷಣೆಗಳನ್ನೂ ಗಂಭೀರವಾಗಿಯೇ ಗಮನಿಸಬೇಕು.

ಈ ಕ್ಷೇತ್ರದಲ್ಲಿ ಇಲ್ಲಿಯವರೆಗಿನ ಸಾಧನೆಯನ್ನು ನೋಡಿದರೆ ಜನಾಂಗೀಯ ಅಧ್ಯಯನದಲ್ಲಿ ವಿಶೇಷ ಒತ್ತು ದೊರಕಿರುವುದು ಹಕ್ಕಿಪಿಕ್ಕಿಗಳು, ಕಾಡುಗೊಲ್ಲರು, ಲಂಬಾಣಿಗಳು, ಮ್ಯಾಸಬೇಡರು, ಸಿದ್ದಿಗಳು, ಗೊಂಡರು ಮುಂತಾದ ಬುಡಕಟ್ಟುಗಳ ಬಗೆಗೆ. ಇದು ನಿಜಕ್ಕೂ ಸಮಕಾಲೀನ ಹಾಗೂ ಸಾರ್ವಕಾಲೀನ ಅಗತ್ಯವೇ ಆಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಭಾರತದಂತಹ ಸಮಗ್ರ-ಸಂಕೀರ್ಣ ಸಮಾಜದ ಬಗೆಗೆ ವ್ಯಾಪಕವಾದ ಅಧ್ಯಯನ ಇತರ ಜಾತಿ-ಉಪಜಾತಿ-ಮತಗಳನ್ನೂ ಒಳಗೊಳ್ಳುತ್ತದೆ - ಒಳಗೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಬ್ರಾಹ್ಮಣವರ್ಗದ ಉಪಜಾತಿಗಳ ಸಾಂಸ್ಕೃತಿಕ ಅಧ್ಯಯನವೂ ಮಹತ್ವಪೂರ್ಣವಾಗುತ್ತದೆ. ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ನಡೆದಿರುವಂತೆ ತೋರುವುದಿಲ್ಲ. ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರು ಮುಲಕನಾಡು ಬ್ರಾಹ್ಮಣರನ್ನು ಕುರಿತು, ಡಾ. ಶಾಲಿನೀ ರಘುನಾಥ್ ಅವರು ಹವ್ಯಕರನ್ನು ಕುರಿತು, ಡಾ. ಪಾಂಡುರಂಗ ಅವರು ಹೊಯ್ಸಳ ಕರ್ಣಾಟಕರನ್ನು ಕುರಿತು ನಡೆಸಿದ ಅಧ್ಯಯನ, ಪ್ರಕಟಿಸಿದ ಕೃತಿಗಳು ಬೆರಳೆಣಿಕೆಯ ಉದಾಹರಣೆಗಳಷ್ಟೆ !

ಹೀಗಿರುವಲ್ಲಿ , ಡಾ. ಪ್ರಣತಾರ್ತಿಹರನ್ ಅವರ- **ಸಂಕೇತಿ, ಒಂದು ಅಧ್ಯಯನ (ಸಂಸ್ಕೃತಿ–ಸಮೀಕ್ಷೆ)** ಥಟ್ಟನೆ ಮನಸೆಳೆಯುವ, ಕುತೂಹಲವನ್ನು ಹೆಚ್ಚಿಸುವ ಮೌಲಿಕ ಕೃತಿಯೇ ಸರಿ. ಆಳ-ಅಗಲಗಳಲ್ಲಿ, ವಿಶಿಷ್ಟ ಆಯಾಮಗಳಲ್ಲಿ , ಸಮಗ್ರತೆಯಲ್ಲಿ , ಸೂಕ್ಷ್ಮತೆಯಲ್ಲಿ , ಮೂಲಕಾಳಜಿಗಳಲ್ಲಿ ಅವರ ಅಧ್ಯಯನ ಪ್ರಾಯಶಃ ಪ್ರಥಮ ದರ್ಜೆಯದು. “ತನಗೆ ತಾನೇ ಸಾಟಿಯಾದುದು.” ಈ ಕೃತಿ ಮೈಸೂರಿನ ‘ಸಮುದಾಯ ಅಧ್ಯಯನ ಕೇಂದ್ರ’ದ ಪ್ರಕಟಣೆಯಾಗಿ ೨೦೦೩ರಲ್ಲಿ ಪ್ರಕಾಶಿತವಾಯಿತು. ೧೯೯೩ರಲ್ಲಿಯೇ ಮುಕ್ತಾಯಗೊಂಡು, ಪಿಎಚ್.ಡಿ., ಪದವಿಯನ್ನು ಗಳಿಸಿಕೊಟ್ಟ ಇಂಥ ಮೌಲಿಕ ಕೃತಿ ಸುಮಾರು ಹತ್ತು ವರ್ಷಗಳ ಕಾಲ ಕತ್ತಲ-ಗರ್ಭದಲ್ಲೇ ಉಳಿದದ್ದೇ ಒಂದು ಸೋಜಿಗ ! ಬೆಟರ್ ಲೇಟ್ ದ್ಯಾನ್ ನೆವರ್ ಎಂಬಂತೆ ಇದೀಗ ತುಂಬ ಅಚ್ಚುಕಟ್ಟಾಗಿ, ಸುಂದರ ಮುದ್ರಣವಿನ್ಯಾಸ, ಗಟ್ಟಿರಟ್ಟಿನ ರಕ್ಷಾಕವಚ, ಸಮೃದ್ಧ ಚಿತ್ರಗಳು, ನಕ್ಷೆಗಳು, ಉದ್ಧೃತಿಗಳು ಎಲ್ಲವನ್ನೂ ತುಂಬಿಕೊಂಡ ಈ ತುಂಬುಕೃತಿ ತನ್ನ ಹೊರ ರೂಪದಂತೆಯೇ ಒಳಹೂರಣದ ಪೌಷ್ಟಿಕತೆ ಹಾಗೂ ಸ್ವಾದಗಳಿಂದ ಕಣ್ಣು-ಮನಸ್ಸುಗಳನ್ನೂ ತುಂಬಿಬಿಡುತ್ತದೆ. ಯಾವುದೇ ವಿದ್ವತ್ಪ್ರಪಂಚಕ್ಕೆ ಯಾವುದೇ ಕಾಲದಲ್ಲಿ ಶೋಭಾಯಮಾನವಾಗಬಲ್ಲ ಈ ಪ್ರಕಟಿತ ಮಹಾಪ್ರಬಂಧ, ಆ ಪ್ರಕಾರದ ಆದರ್ಶ ಕೃತಿಯೂ ಆಗಿದೆ.

ಸಾಮಾನ್ಯವಾಗಿ ಪಿಎಚ್.ಡಿ., ಪದವಿಗಾಗಿ ಮಾಡುವ ಅಧ್ಯಯನ ಸಂಶೋಧನೆಗಳು, ಇಂಥ ಕೃತಿಯ ಪ್ರಕಟಣೆಯಲ್ಲಿ ಮುಕ್ತಾಯವಾಗಿಬಿಡುತ್ತವೆ. ಉದ್ದೇಶ ಸಫಲವಾಯಿತು, ಸಾರ್ಥಕವಾಯಿತು ಎಂಬ “ಧನ್ಯತೆ” ಸಂಶೋಧಕನನ್ನು ತುಂಬಿ ಬಿಡುತ್ತದೆ. ಇದು ಮುಗಿದ ಪ್ರಯಾಣ, ಮತ್ತೆ ಹಿಂತಿರುಗಿ ನೋಡುವುದೇಕೆ ? ಎಂಬ ಅಕ್ಯಾಡಮಿಕ್ ಆಯಾಸ, ಸುದೀರ್ಘ ಸುಷುಪ್ತಿಯನ್ನೇ ಬಯಸುತ್ತದೆ ! ಆದರೆ ಈಗಲೂ - ಇನ್ನು ಮುಂದೆಯೂ ಇದೇ ವಿಷಯವನ್ನು ಕುರಿತ ಮತ್ತಷ್ಟು ಅಧ್ಯಯನ, ಮಾಹಿತಿ ಸಂಗ್ರಹಣ, ಸಂಶೋಧನ, ಸಮೀಕ್ಷೆಗಳಲ್ಲಿ ಅತ್ಯಂತ ಲವಲವಿಕೆಯಿಂದ ಡಾ. ಹರನ್ ತೊಡಗಿಕೊಂಡಿರುವುದು ತುಂಬ ಅಪರೂಪದ ಆದರ್ಶವೇ ಸರಿ. ಈ ನಿಟ್ಟಿನಲ್ಲಿ

ಅವರ ಶ್ರದ್ಧೆ-ಶ್ರಮಗಳು ಬೆರಗುಗೊಳಿಸುತ್ತವೆ. ತಮ್ಮ ವ್ಯಾಸಂಗವಿಷಯದಲ್ಲಿ ಅವರು ಒಂದು ರೀತಿಯಲ್ಲಿ "ಭ್ರಮರ-ಕೀಟ ನ್ಯಾಯ"ದಂತೆ, ತಾವೇ ವಿಷಯವೂ-ವಿಷಯಿಯೂ ಆಗಿಬಿಡುವಂತೆ ತೋರುತ್ತಾರೆ. ಯಾಕೆ ಹೇಳುತ್ತೇನೆಂದರೆ, ಅಪರಿಮಿತ ಕಷ್ಟಸಹಿಷ್ಣುತೆ, ಶ್ರದ್ಧೆ, ಪ್ರಾಮಾಣಿಕತೆ ನಿಶ್ಚಿತಗುರಿಯತ್ತ ನಿಶ್ಚಿತಪ್ರಯಾಣದ ಸಾಹಸ - ವ್ಯವಸಾಯಾತ್ಮಿಕಾಬುದ್ಧಿ (!) ಸಂಕೇತಿಗಳಲ್ಲಿ ಎದ್ದುಕಾಣುವ ಗುಣ. ಆಧುನಿಕತೆಯ ಸುಲಭಜಾಲದ ಪ್ರಲೋಭನೆಗೆ (ಜನಪ್ರಿಯತೆಗಾಗಿ ಸುಲಭಸಾಧ್ಯವಾದ ಬರವಣಿಗೆ, ಬಹುಮಾನ, ಪ್ರಶಸ್ತಿ, ಸನ್ಮಾನ ಇತ್ಯಾದಿ) ಮನಸ್ಸು ಮಾರಿಕೊಳ್ಳದೆ, ಸಂಶೋಧನೆಯಂತಹ ಕಠಿಣ ಶಿಸ್ತನ್ನೇ ಪ್ರೀತಿಪೂರ್ವಕವಾಗಿ ಡಾ. ಹರನ್ ಇಂದಿಗೂ ಆಯ್ಕೆ ಮಾಡಿಕೊಂಡಿದ್ದಾರೆ. ಅವರ ವಿದ್ವತ್ತು-ಪರಿಶ್ರಮಗಳಿಗೆ ಉಚಿತವಾದ ಪ್ರಶಸ್ತಿಗಳು ಇನ್ನೂ ದೊರಕಿಲ್ಲ ಎಂಬ ಕೊರಗು ಅವರ ಮಿತ್ರರಿಗೆ-ಹಿತೈಷಿಗಳಿಗೆ ಉಂಟೇ ವಿನಃ ಆ ಬಗ್ಗೆ ಅವರು ಅಚ್ಚರಿಗೊಳಿಸುವಷ್ಟು ವಿಮುಖರಾಗಿದ್ದಾರೆ. ತಾವೇ ನಿರ್ಮಿಸಿಕೊಂಡ ಕಲ್ಲುಮುಳ್ಳಿನ ಕಠಿಣ ಹಾದಿಯಲ್ಲೇ ಹೂವು ಚೆಲ್ಲುತ್ತಾ ಉಲ್ಲಾಸದಿಂದ ಸಾಗಿಬಿಟ್ಟಿದ್ದಾರೆ.

ಅವರ ಮುಂದುವರಿದ ಅಧ್ಯಯನ-ಸಂಶೋಧನೆಗಳನ್ನೇ ಗಮನಿಸಿದರೂ ಈ ವಿಷಯ ಸ್ಪಷ್ಟವಾಗುತ್ತದೆ. ಪ್ರಕೃತ, ಅವರ ಅಧ್ಯಯನದ ಪತ್ರಸಾಹಿತ್ಯದ ಹಸ್ತಪ್ರತಿ ನನ್ನೆದುರಿಗಿದೆ. ಮೊದಲನೆಯ ಭಾಗದಲ್ಲಿ ಸಂಕೇತಿ ಕುಟುಂಬಗಳಲ್ಲಿನ ಹಲವಾರು ಸಂದರ್ಭಗಳ ಪತ್ರವ್ಯವಹಾರಗಳ ಸಂಗ್ರಹವಿದೆ. ಅವುಗಳು ಮನೆಯಲ್ಲಿನ ಪುತ್ರೋತ್ಸವ, ಜನ್ಮಕುಂಡಲಿ, ಚೌಲಸಂಸ್ಕಾರಕ್ಕೆ ಆಹ್ವಾನ, ಉಪನಯನ, ವಿದ್ಯಾಭ್ಯಾಸಕ್ಕಾಗಿ ಪರಸ್ಥಳದಲ್ಲಿ ವಾಸಿಸುತ್ತಿರುವ ಮಕ್ಕಳು ಮೊಮ್ಮಕ್ಕಳ ಕಷ್ಟಕಾರ್ಪಣ್ಯ, ಆರ್ಥಿಕ ಮುಗ್ಗಟ್ಟು, ವಿವಾಹಪ್ರಯತ್ನ- ನಿರಾಕರಣೆ, ಮುಂತಾದ ಆತ್ಮೀಯವೂ ಹೃದ್ಯವೂ ಆದ ಸಂದರ್ಭಗಳನ್ನೂ ಸಂಬಂಧಗಳನ್ನೂ ಒಳಗೊಂಡಿವೆ. ಪತ್ರಗಳ ಒಟ್ಟು ಸಂಖ್ಯೆ ೪೩೫ ರಷ್ಟು! ಕಾಲದ ಹರವು ೧೮೯೧ ರಿಂದ ೨೦೦೩ರವರೆಗೆ. ಹೀಗೆ ಪತ್ರಗಳನ್ನು ಸಂಗ್ರಹಿಸಿ ಸಂಪಾದಿಸಿರುವುದೇ ಒಂದು ಸಾಹಸ. ಏಕೆಂದರೆ ನಮ್ಮದೇಶದಲ್ಲಿ ಪೌರಾಣಿಕ ಪ್ರಜ್ಞೆಗೆ ಇರುವ ಮಹತ್ವ ಇತಿಹಾಸ ಪ್ರಜ್ಞೆಗೆ ಇಲ್ಲ. ಈ ಕಾರಣದಿಂದ 'ದಾಖಲಾತಿ'- ಡಾಕ್ಯುಮೆಂಟೇಷನ್- ಕಡೆಗೆ ಗಮನ ತೀರ ಕಡಿಮೆ- ಇಲ್ಲವೇ ಇಲ್ಲ ಎನ್ನುವಷ್ಟು. ಸಂಶೋಧಕರಿಗೆ ಇದೊಂದು ಪ್ರಾಥಮಿಕ ಸಂಕಷ್ಟ. ಸ್ಥಳ ಪುರಾಣಗಳು, ಹೇಳಿಕೇಳಿದ ಸಂಗತಿಗಳು ಸಮೃದ್ಧ. ಅವುಗಳಲ್ಲಿ ಉತ್ಪ್ರೇಕ್ಷೆ, ಕಲ್ಪನಾವಿಲಾಸಗಳೇ ಮೂರುಪಾಲು. ಅಪ್ಪಟ ಸತ್ಯ ಒಂದು ಪಾಲು. ಅದನ್ನು ಹೆಕ್ಕಿ ತೆಗೆಯಬಲ್ಲ- ಅದಕ್ಕೆ ಸಹಕಾರಿಯಾಗಬಲ್ಲ ದಾಖಲಾತಿಗಳು ತೀರ ದುರ್ಲಭ. ಹೀಗಿರುವಾಗ, ಇಷ್ಟು ದೊಡ್ಡ ಪ್ರಮಾಣದಲ್ಲಿ ವೈಯಕ್ತಿಕ ಪತ್ರಗಳನ್ನೂ ಹುಡುಕಿ ಸಂಗ್ರಹಿಸಿಕೊಂಡ ಡಾ. ಹರನ್ ಅವರ ಹರಸಾಹಸ ಅನನ್ಯವಾದದ್ದೇ !

ಇನ್ನು 'ಎರಡನೆಯ ಭಾಗ'ದ ೧೨೦ ಪತ್ರಗಳು ಏಕಕರ್ತೃಕ ಪತ್ರಗಳು. ಬರೆದವರು ಘನವಿದ್ವಾಂಸರೂ, ಪ್ರಕಾಂಡ ಪಂಡಿತರೂ, ಸಹೃದಯಶ್ರೀಮಂತರೂ ಆದ ಪ್ರೊ. ಶ್ರೀಕಂಠಕುಮಾರಸ್ವಾಮಿಗಳು. ಪ್ರಾಚೀನ - ಅರ್ವಾಚೀನ ವಿದ್ವತ್ತಿನಲ್ಲಿ ಅವರು ಶಿಖರಪ್ರಾಯರು. ಅಧಿಕಾರವಾಣಿಯಿಂದ ನುಡಿಯಬಲ್ಲವರು, ಮಾಗದರ್ಶನ ಮಾಡಬಲ್ಲವರು, ಸ್ವೋಪಜ್ಞರಾದ ಚಿಂತಕರು. ಶಾಸ್ತ್ರಗೌರವ ಸಹಜವಾಗಿಯೇ ಅವರಲ್ಲಿ ಮಿಗಿಲಾಗಿದ್ದರೂ, ಅನೇಕ ಸಂದರ್ಭಗಳಲ್ಲಿ 'ಪ್ರಮಾಣಮಂತಃಕರಣಂ' ಎಂಬ ನೆಲೆಗೆ ಸಂದ ಸತ್ಯನಿಷ್ಠರು. ಮುಖ್ಯವಾಗಿ ಆಧುನಿಕ ಮನಸ್ಸುಗಳೂ ಒಪ್ಪುವಂತಹ ಸತ್ಯ ಪ್ರತಿಪಾದಕರಾದ ಈ ಪಂಡಿತವರ್ಯರು ಸಂಕೇತಿ ಸಮಾಜದ ಭೂಷಣಪ್ರಾಯರಾಗಿದ್ದಾರೆ. ಉಪನಯನ ವಿಧಿ, ವ್ರತಾಚರಣೆ, ಸಗೋತ್ರ ವಿವಾಹ, ಷೋಡಶ ಕರ್ಮಗಳು ಮುಂತಾದ ಹತ್ತು ಹಲವು ಸಂದರ್ಭಗಳಲ್ಲಿ ಅವರು ತಾಳಿದ ಖಚಿತ ನಿಲವು-ನೀಡಿದ ಮಾರ್ಗದರ್ಶನಗಳು ಈ ಪತ್ರಗಳಲ್ಲಿ ದಾಖಲಾಗಿವೆ. ಅವುಗಳನ್ನು ಸಂಗ್ರಹಿಸಿ, ಪ್ರತ್ಯೇಕ ಭಾಗವಾಗಿ ಸೇರ್ಪಡಿಸಿರುವುದು ತುಂಬ ಔಚಿತ್ಯಪೂರ್ಣವಾಗಿದೆ.

ಹೀಗೆ ದಾಖಲೆಗಳನ್ನು ಸಂಗ್ರಹಿಸಿಕೊಂಡ ಡಾ. ಹರನ್, ಅವುಗಳ ಸಂದರ್ಭ, ಬರವಣಿಗೆಯ ಶೈಲಿ, ಬಳಸಿದ ಭಾಷೆ, ಅವುಗಳಲ್ಲಿ ತೋರಿಬರುತ್ತಿರುವ ಕಾಲಾನುಗುಣವಾದ ಬದಲಾವಣೆಗಳು, ಆ ಮೂಲಕ ಇಡಿಯ ಒಂದು ಉಪಜಾತಿಯ ಮಾನಸಿಕ-ಆರ್ಥಿಕ-ಸಾಂಸ್ಕೃತಿಕ ಆಘಾತಗಳು, ಹೊಂದಾಣಿಕೆಗಳು, ಹಾಗೆ ಹರಿಯುತ್ತಿರುವ ಜೀವನ ಪ್ರವಾಹದ ಏರಿಳಿತಗಳನ್ನು ತುಂಬ ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ತೆರೆದ ಮನಸ್ಸಿನಿಂದ ಅಧ್ಯಯನ ಮಾಡಿದ್ದಾರೆ. ಯಾವ ಪೂರ್ವಾಗ್ರಹಕ್ಕೂ ಮನಸ್ಸನ್ನು ತೆತ್ತುಕೊಳ್ಳದೆ, ಆದರೆ ಖಚಿತವಾದ ತಮ್ಮ ನಿಲುವನ್ನು ತೊದಲಿಲ್ಲದೆ ದಾಖಲಿಸಿದ್ದಾರೆ. ಈ ಸತ್ಯನಿಷ್ಠೆ ಹಾಗೂ ಸತ್ಯನಿಷ್ಠುರತೆ ಒಂದು ಅನುಕರಣೀಯ ಆದರ್ಶವೇ ಸರಿ.

ವಿಶೇಷವಾಗಿ, ಪರಸ್ಥಳಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಹಿರಿಯರಿಗೆ ಬರೆದ ಪತ್ರಗಳು ಗಮನಾರ್ಹವಾಗಿವೆ. ಸಂಸ್ಕೃತ ಹಾಗೂ ಆಂಗ್ಲಭಾಷೆಯ ಪದ, ವಾಕ್ಯ, ಉದ್ಧೃತಗಳ ಬಳಕೆಯಲ್ಲಿ ಈ ತರುಣರು ತೋರುವ ಉತ್ಸಾಹವನ್ನು ಡಾ. ಹರನ್ ಗಮನಿಸಿದ್ದಾರೆ. ತಮಿಳು-ಮಲೆಯಾಳ ಪ್ರದೇಶದಿಂದ ಬಂದ ಸಂಕೇತಿಗಳು ಕನ್ನಡವನ್ನು ಹೊಸತಾಗಿ ಕಲಿತು ಪ್ರಯೋಗಿಸತೊಡಗಿದ ಸಂಭ್ರಮವನ್ನು ದಾಖಲಿಸಿದ್ದಾರೆ. ಮನೆಯ ಶುಭಸಮಾರಂಭಗಳಿಗೆ ಎಂಟುದಿನ ಮುಂಚಿತವಾಗಿ ಬರುವಂತೆ ಪತ್ರ ಬರೆಯುತ್ತಿದ್ದುದು ಕ್ರಮೇಣ ಕಾಲ-ದೂರ-ಸೌಕರ್ಯಗಳ ಕಾರಣವಾಗಿ 'ಒಂದು ದಿನದ ಮಟ್ಟಿಗಾದರೂ', 'ಅನುಕೂಲವನ್ನು ನೋಡಿಕೊಂಡು' ಎಂಬಂತೆ ಬದಲಾದುದು; ವೈಯಕ್ತಿಕ ಆಹ್ವಾನ ಪತ್ರಮುಖೇನಕ್ಕೆ ತಿರುಗಿದುದು- ಇಂಥ ಸೂಕ್ಷ್ಮಗಳು ಅವರ ಗಮನಕ್ಕೆ ಬಂದಿವೆ. ಕಾಲದಿಂದ ಕಾಲಕ್ಕೆ ಬದಲಾದ-

ಸಂಕೀರ್ಣವಾದ ವಿದ್ಯಾರ್ಥಿಗಳ ಊಟ-ವಸತಿ-ಓದುಗಾರಿಕೆ ಸಮಸ್ಯೆಗಳನ್ನೂ ತೆರೆದ ಮನಸ್ಸಿನಿಂದ ಪರಿಶೀಲಿಸಿದ್ದಾರೆ. ಅನ್ಯಾಶ್ರಯದ ಅಪಮಾನ ಮುಜುಗರಗಳಿಂದ ವಿದ್ಯಾರ್ಥಿಗಳನ್ನು ಪಾರುಮಾಡಿದ ಆಧುನಿಕ ವಸತಿನಿಲಯಗಳ ಬಗೆಗೆ ಡಾ. ಹರನ್ ಸಹಜವಾಗಿಯೇ ಅಭಿಮಾನದ ನುಡಿಗಳನ್ನಾಡಿದ್ದಾರೆ. ಪ್ರಾಯಶಃ ಬಹುಮಟ್ಟಿಗೆ ಏಕಾಂತಜೀವಿಗಳೂ ವಿಶೇಷ ಸ್ವಪ್ರಜ್ಞಾಶೀಲರೂ ಆದ ಸಂಕೇತಿ ವಿದ್ಯಾರ್ಥಿಗಳ ಒಳಕೊರಗುಗಳನ್ನೂ ಖಿನ್ನತೆಯನ್ನೂ ನಿವಾರಿಸಿ ಸಮೂಹಜೀವಿಗಳಾಗಿ, ಬಹಿರ್ಮುಖತೆಯನ್ನೂ ಹೊಂದಾಣಿಕೆಯನ್ನೂ ಬೆಳೆಸಿಕೊಳ್ಳುವಲ್ಲಿ ಈ ವಿದ್ಯಾರ್ಥಿನಿಲಯಗಳು ನೆರವಾಗುವಂತೆ ನನಗೆ ತೋರುತ್ತದೆ. ನಾನು ಗಮನಿಸಿದ ಒಂದೆರಡು ವಿಶೇಷ ಅಂಶಗಳನ್ನು ಪ್ರಾಯಶಃ ದಾಖಲಿಸಬಹುದೆಂದು ತೋರುತ್ತದೆ.

೧) ಕಾಲ-ಸಂದರ್ಭಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೂ ಸಂಕೇತಿ ವಿದ್ಯಾರ್ಥಿಗಳ ಈ ಪತ್ರಗಳು ಹೆಚ್ಚು ಸಾಲಂಕೃತ ಭಾಷೆಯಲ್ಲಿರುವಂತಿವೆ.

- ಪತ್ರ ೧೨. IV ಫಾರಂ ವಿದ್ಯಾರ್ಥಿ, ದಿನಾಂಕ ೧೨.೧೨.೨೨.

ದಿವ್ಯ ಶ್ರೀಚರಣ ಸನ್ನಿಧಿಯಲ್ಲಿ / ಪತ್ರಿಕೆಯು ಹಸ್ತಗತವಾಯ್ತು/ ವ್ಯಾಕುಲಚಿತ್ತನಾಗಿದ್ದೇನೆಂಬಂಶವು ಅವನಿಗೂ ತಿಳಿದಿರಬಹುದಾಗಿದ್ದಾಗ್ಯೂ/

- ಪತ್ರ ೧೫ : ಬಾಲಕಕೃತಾನೇಕ ಸಾಷ್ಟಾಂಗ ವಿಜ್ಞಪ್ತಯಃ ತದುಪರಿಸಾಂಪ್ರತಂ / ಮಂದಭಾಗ್ಯನಾದ ನನ್ನ / ಇತರಾಪಿ ಇನ್ನೂ

- ಪತ್ರ ೧೬: ಯತ್ಕೇಕೃತೇ / ಇತ್ಯಾದಿ--

೨) ಹಿರಿಯರಿಗೆ ಬರೆವ ಪತ್ರಗಳಲ್ಲೂ ವಿದ್ಯಾರ್ಥಿಯ ಉಪದೇಶ ಚಾಪಲ್ಯ !

- ಪತ್ರ ೧೮: ಅತಿಯಾದ ವ್ಯಾಕರಣಕ್ಕೆ ಎದೆಒಡೆದುಕೊಳ್ಳುವುದು ಅವಿವೇಕ (!) / ವ್ಯಾಕರಣವು ಸಾಹಿತ್ಯದ ತಿಳುವಳಿಕೆಗೆ ಸಹಕಾರಿಯಾಗಿರಬೇಕೇ ವಿನಃ ... ಇತ್ಯಾದಿ

೩) ಕಿರಿಯನಾದ ತಮ್ಮನ ಬಗ್ಗೆ (ವಯಸ್ಸಿನ ಅಂತರ ಹೆಚ್ಚು ಇರಲಾರದು) ಕಳಕಳಿ ಗಮನಾರ್ಹ. ಜೊತೆಜೊತೆಗೆ ಬುದ್ಧಿ ಹೇಳುವ ಉತ್ಸಾಹ ಎದ್ದು ಕಾಣುತ್ತದೆ (ಪತ್ರ ೧೯). ಪ್ರತಿಯಾಗಿ ಪತ್ರ ೨೧: ತಮ್ಮನ ಬಗೆಗೆ ಮರುಕ ಪ್ರಾಮಾಣಿಕವಾಗಿದೆ.

೪) ಪತ್ರ-೧೭. ಗ್ರಾಮೀಣ ಪರಿಸರದಿಂದ ಬಂದ ಎಳೆಯ ಬಾಲಕನ ಆತಂಕ, ಭಯ, ಅರ್ಥವಾಗುವಂತಿದೆ. ಸಂಸ್ಕೃತ ಪಾಠಶಾಲೆಗೇ ಕಳುಹಿಸುವಂತೆ ಕೋರುವ ಕಳವಳವೂ ಸರಿಯೇ. ಅದಕ್ಕೆ ಅಪರಿಚಯದ ಆಂಗ್ಲಪಾಠ / ಸಹಪಾಠಿಗಳೊಡನೆ ಹೊಂದಾಣಿಕೆಯ ಕಷ್ಟ / ಬೆಂಗಳೂರಿನ ವಿಕ್ಷುಬ್ಧವಾತಾವರಣ... ಇವು ಕಾರಣವಿರಬಹುದು (ದಿ. ೧.೭.೨೯). ಆದರೆ ಅದನ್ನು 'ರ್ಯಾಗಿಂಗ್' ಎಂಬ ವಿಕೃತ ನಡೆವಳಿಕೆಯ ಅಡಿಯಲ್ಲಿ ತರಬಹುದೆ? ಲಾಲಸೆ-ದಬ್ಬಾಳಿಕೆ-ಕೇಂಕಾರ ಹಿರಿಯ ವಿದ್ಯಾರ್ಥಿಗಳಲ್ಲಿರಬಹುದು. ಆದರೆ 'ರ್ಯಾಗಿಂಗ್'ನ ಹಿಂಸಾರತಿಯ ಸಮಸ್ಯೆ ಬೇರೆ ಬಗೆಯದಲ್ಲವೆ?

೫) ೧೯೫೦-೫೧ರ ವೇಳೆಗೂ ದೂರು ಹೇಳುವ ಪ್ರವೃತ್ತಿ, ವ್ಯಂಗ್ಯದ ಭಾಷೆ ಸುದೀರ್ಘವಾಗಿಯೇ ಇದೆ. ಉದಾ. ಪತ್ರ. ೨೯. "ಯಾವಾಗ ಗಂಡನೆನಿಸಿಕೊಂಡವನು ಹೆಂಡತಿಯಾದವಳ ಕೈಗೊಂಬೆಯಾದನೋ...ಸೈಗೊಡುವುದೇ ನ್ಯಾಯವಾಗಿದೆ... ಇತ್ಯಾದಿ!"

೬) ಪತ್ರ ೩೦/೩೮...'ಹೊಸ ಜನಗಳ ಪರಿಚಯ, ಹೊಸ ಊರು ಒಂದೂ ಬೇಡವಾಗಿರುವುದರಿಂದ...' ಈ ಒಂಟಿತನ, ಅಂತರ್ಮುಖತೆ ಅದರ ಮತ್ತೊಂದು ಮುಖವಾದ ಪರೋಪದೇಶ, ಸಾಲಂಕೃತ ಭಾಷೆ...ಪ್ರಮಾಣದಲ್ಲಿ ಸಂಕೇತಿ ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿದೆಯೆ ? ಬೆಳೆದ ಪರಿಸರ ಕಾರಣವೆ ? ನಗರೀಕರಣದತ್ತ ಸುಲಭವಾಗಿ ಒಲಿಯದ rigidityಯೆ ? ಇದು ಆಕ್ಷೇಪಣೆಯಲ್ಲ, ಸ್ವಲ್ಪ ಅಧ್ಯಯನಯೋಗ್ಯವೇನೋ.

೭) ಪತ್ರ ೧೪ : ತಿರುವಾಂಕೂರು ಮಹಾರಾಜರ ಬಗೆಗಿನ ಗಾಢ ಸಂಬಂಧ. ತಮ್ಮ ಟಿಪ್ಪಣಿ ತೀರಸರಿ. ವಿಷಯ ಹೃದ್ಯವೂ ಹೌದು.

ವಿದ್ಯಾರ್ಥಿಗಳ ಈ ಭಾವುಕ / ವಿಜೃಂಭಿತ / ಕೆಲವೊಮ್ಮೆ ಉಪದೇಶಾತ್ಮಕ ಭಾಷೆಗೆ ವ್ಯತಿರಿಕ್ತವಾಗಿ ಗ್ರಾಮೀಣ ಹಿರಿಯರ ಪತ್ರಗಳಲ್ಲಿನ ಸಹಜತೆ, ಆತ್ಮೀಯತೆ, ವಾತ್ಸಲ್ಯ ಇವು ವಿಶೇಷವಾಗಿ ಮನಮುಟ್ಟುವಂತಿವೆ. ಗ್ರಾಮದಿಂದ ನಗರದತ್ತ / ಆಧುನಿಕ ವಿದ್ಯಾಭ್ಯಾಸದ pre-sumed ಬುದ್ಧಿವಂತಿಕೆಯಿಂದ ಮನೋಧರ್ಮದಲ್ಲಾದ ಬದಲಾವಣೆ ಕಾರಣವಿರಬಹುದೇ ?

ಪ್ರೊ. ಶ್ರೀಕಂಠಕುಮಾರಸ್ವಾಮಿಗಳ ಪಾಂಡಿತ್ಯದ ಹರಹು- ವಿಸ್ತಾರ ಹಾಗೂ ಆಳವನ್ನು ಪ್ರಕಟಿಸುವುದು ಸಹಜವೇ. ಆದರೆ ಅದಕ್ಕಿಂತ ಮಹತ್ವದ ಸಂಗತಿ ಎಂದರೆ ಈ ಮಹನೀಯರ ತೆರೆದ ಮನಸ್ಸು, ಅಚ್ಚರಿ ಎನಿಸುವಷ್ಟು ಆಧುನಿಕವಷ್ಟೇ ಅಲ್ಲದೆ ಅಪೂರ್ವ ಸ್ವಂತಿಕೆ. ಬಹುಮಟ್ಟಿಗೆ ಸಂಪ್ರದಾಯನಿಷ್ಠರೂ ಕರ್ಮಠರೂ ಆದ ಸಂಕೇತಿಗಳಲ್ಲಿ ಸ್ವಾಮಿಗಳು ಎದ್ದುಕಾಣುವ ವಿಶಿಷ್ಟ ವ್ಯಕ್ತಿತ್ವ ಉಳ್ಳವರಾಗಿ ತೋರುತ್ತಾರೆ. ಸಂಪ್ರದಾಯಗಳ ಹೊರಹೊದಿಕೆಗಿಂತ ಅಂತಃಸತ್ವದ ಕಡೆಗೆ ಅವರ ಆರೋಗ್ಯಕರ ಮನಸ್ಸು ಧಾವಿಸುತ್ತದೆ. ಮಡಿ-ಮೈಲಿಗೆ, ವ್ರತಾಚರಣೆ, ಉಪನಯನ ಇತ್ಯಾದಿಗಳನ್ನು ಕುರಿತ ಅವರ ಚಿಂತನೆಗಳನ್ನು ಗಮನಿಸಬಹುದು. ಗಣಪತಿವ್ರತವನ್ನು ಕುರಿತಂತೆ "ಸಮಾಧಾನ ನಿನ್ನ ಮನಸ್ಸೇ. ನಿನಗೆ ಹೇಗೆ ತೃಪ್ತಿಯೋ ಹಾಗೆ ಮಾಡು. ಕೊನೆಗೆ photo ಇಟ್ಟುಕೊಂಡು ಮಾಡಿದರೂ ಬರುತ್ತದೆ... ನಿನ್ನ ಸೌಕರ್ಯ, ನಿನ್ನ ಮಾನಸಿಕ

preparationಗೆ ತಕ್ಕಂತೆ ಮಾಡು. ಯಾವುದಕ್ಕೂ rigid ಆಗಿ attach ಮಾಡಿಕೊಳ್ಳುವುದು ಬೇಡ. ಭಯವೂ ಬೇಡ" (ಪತ್ರ ೪೩೮). "ಈ ನಿಷೇಧಗಳಿಗೆ ಯಾವುದಕ್ಕೂ ಅರ್ಥವಿಲ್ಲ. ಯಾವ ಸೂತ್ರಕಾರರೂ ಹೇಳಿಯೂ ಇಲ್ಲ. ಶ್ರಾದ್ಧವೆಂಬುದು ಒಂದು ಅಮಂಗಳಕಾರ್ಯ ಎಂಬ ತಪ್ಪುನಂಬಿಕೆಯ ಮೇಲೆ ಹೊರಟಿರುವ ಸಂಪ್ರದಾಯಗಳು ಇವು. ಅವಕ್ಕೆ ಈಷದಪಿ ಪ್ರಮಾಣವಿಲ್ಲ" (ಪತ್ರ ೪೪೩), "ಬೇಜಾರು ಯಾವಾಗ ಎಂದರೆ ಸಕಾರಣವಾಗಿ, ಸಶಾಸ್ತ್ರೀಯವಾಗಿ ವಿಷಯವನ್ನು ತಿಳಿಸಿದರೂ ಕಿವಿಗೆ ಹಾಕಿಕೊಳ್ಳದೆ ಕೇವಲ ಸಂಪ್ರದಾಯಜಾಡ್ಯಕ್ಕೆ ನೇತುಬೀಳುವ ಮೌರ್ಖ್ಯವನ್ನು ತೋರಿಸಿದಾಗ. ಕೆಲವು ವೇಳೆ ಅಂಥದನ್ನು ಕಂಡಾಗ ಅಪ್ರಯತ್ನವಾಗಿ ಕ್ರೋಧವೂ ಬರುವುದುಂಟು (ಪತ್ರ ೪೪೪)", ಇತ್ಯಾದಿ ಚಿಂತನೆಗಳನ್ನು ಗಮನಿಸಬಹುದು. "ಪಿತೃಶ್ರಾದ್ಧವನ್ನು ಸೋದರರು ಪ್ರತ್ಯೇಕವಾಗಿಯೇ ಸ್ವಯಾರ್ಜಿತ ಸಂಪಾದನೆಯಿಂದ ಮಾಡಿ ಕೃತಕೃತ್ಯರಾಗಬೇಕು", "ಆತ್ಮತೃಪ್ತಿಗೆ, ಆಹ್ವಾನಿತ ಬ್ರಾಹ್ಮಣರ ಸಂತೃಪ್ತಿಗೇ ವಿನಃ ಸತ್ತ ಪಿತೃಗಳು ತೃಪ್ತರಾಗುತ್ತಾರೆ ಎಂಬ ಭಾವನೆ ತಪ್ಪು" ಎಂದು ಸ್ವಾಮಿಗಳು ಕಂಠೋಕ್ತವಾಗಿ ನುಡಿದುಬಿಡುತ್ತಾರೆ (ಪತ್ರ ೪೪೬). ಹಾಗೆಯೇ "ಗ್ರಹಣ ಕಾಲದಲ್ಲಿ ಶಾಂತಿ ಎನ್ನುವುದು ಮೌರ್ಖ್ಯ, ಮೌಢ್ಯ. ಯಾರೂ ಯಾವ ಶಾಂತಿಯನ್ನೂ ಮಾಡಿಕೊಳ್ಳಬೇಕಾದುದಿಲ್ಲ. ನಮ್ಮ ಸೂತ್ರಕಾರರಾಗಲೀ ಮನ್ವಾದಿ ಸ್ಮೃತಿಕಾರರಾಗಲೀ ಯಾರೂ ಹೇಳಿಲ್ಲ" ಎಂಬ ಖಚಿತ ತೀರ್ಮಾನವನ್ನು ಗಮನಿಸಬೇಕು (ಪತ್ರ ೪೫೨). "ದುರದೃಷ್ಟವಶಾತ್ ಇವತ್ತಿನ ವಿವಾಹಗಳು ಸಂಸ್ಕಾರದ ವಿಡಂಬನೆಗಳಾಗಿ ಕೂತಿವೆ. ಯಾಂತ್ರಿಕವಾಗಿ ಪುರೋಹಿತರು ಹೇಳಿದ ಕೆಲವು ಕ್ರಿಯೆಗಳನ್ನು ಅಂಧರಂತೆ ಮಾಡಿ ವಿವಾಹಸಂಸ್ಕಾರವನ್ನು ನೆರವೇರಿಸಿದೆವೆಂಬ ಚರಿತಾರ್ಥತೆಯಿಂದ ಬೆನ್ನುತಟ್ಟಿಕೊಳ್ಳುತ್ತೇವೆ. ಇದಕ್ಕಿಂತ Mockery ಬೇರೇನು ಬೇಕು !" ಎಂಬ ಮಾತಿನ ವಿಷಾದದ ದನಿಯನ್ನು ಗಮನಿಸಬೇಕು (ಪತ್ರ ೪೫೩). ವಿಧವಾ ವಿವಾಹದ ಬಗ್ಗೆ- "ಧಾರಾಳವಾಗಿ ಮಾಡಬಹುದು (ಸ್ತ್ರೀಯು ಒಪ್ಪಿದರೆ!) ಯಾವ ಪಾಪವೂ ಇಲ್ಲ" (ಪತ್ರ ೪೫೯) ಎಂಬವರೆಗೂ ಈ ಪುಣ್ಯಪುರುಷರ ಔದಾರ್ಯ ಬೆಳೆದಿದೆ.

ಪರಮಪೂಜ್ಯರಾದ ಈ ಹಿರಿಯರ ಸ್ವೋಪಜ್ಞ ಚಿಂತನೆಯ ಪತ್ರಗಳನ್ನು ಸಂಗ್ರಹಿಸಿ ಮಹಾಪ್ರಬಂಧದ ಅಧ್ಯಾಯವಾಗಿ ಅಳವಡಿಸಿರುವುದು ಪ್ರಶಂಸನೀಯ. ಆದರೆ ಈ ಚಿಂತನೆಗಳು ಸಂಕೇತಿ ಸಮುದಾಯದ ಸಾಮಾನ್ಯ ಸ್ವೀಕೃತಿಗಳು ಇರಲಾರವು. ಅವರು ಏರಬಹುದಾದ ಬೌದ್ಧಿಕ ಎತ್ತರ, ಹೃದಯವಂತಿಕೆಯನ್ನು ಸೂಚಿಸುವ ವಿಶಿಷ್ಟ ಉದಾಹರಣೆಯಾಗಿರಬಹುದು! ಮಡಿ-ಹುಡಿಗಳಲ್ಲಿ, ಆಚಾರ ವ್ಯವಹಾರಗಳಲ್ಲಿ, ಬ್ರಾಹ್ಮಣ ಸಮಾಜದ ಇತರ ಉಪಜಾತಿಗಳಿಗಿಂತ ಹೆಚ್ಚು ಪ್ರಮಾಣದ ಸಂಪ್ರದಾಯನಿಷ್ಠೆ ಸಂಕೇತಿಗಳಲ್ಲಿ ಕಂಡುಬರುತ್ತದೆ (ವಿಶೇಷವಾಗಿ ಮಲೆನಾಡು ಸಂಕೇತಿಗಳಲ್ಲಿ).

ಬಹುಮುಖ್ಯವಾಗಿ ಸಂಕೇತಿಗಳು ಸಾಮೂಹಿಕ ವಲಸೆಗಾರರು. ಆದರೆ ನದೀತೀರ, ಗ್ರಾಮೀಣ ಪರಿಸರಗಳೇ ಅವರಿಗೆ ನಗರಗಳಿಗಿಂತ ಹೆಚ್ಚು ಪ್ರಿಯ. ವಲಯ ಕಿರಿದಾದಷ್ಟೂ ನಿರ್ದಿಷ್ಟ ಗುಂಪುಗಳಾಗಿ ಉಳಿದು ಸ್ವರಕ್ಷಣೆ ಪೋಷಣೆಗಳ ಮೂಲಕ ತಮ್ಮ ವಿಶಿಷ್ಟತೆಯನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ಛಲ ಈ ಉಪಜಾತಿಯಲ್ಲಿ ಗಾಢವಾಗಿ ತೋರುತ್ತದೆ.

ಹೀಗೆ ತಮ್ಮತನವನ್ನು ಬಿಟ್ಟುಕೊಡದೆಯೇ ನಿಂತನೆಲಕ್ಕೆ ತಮ್ಮ ಕಾಣಿಕೆಯನ್ನೂ ಸಲ್ಲಿಸುತ್ತಿರುವ ಸಂಕೇತಿಗಳು, ಸಮುದಾಯದ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ರುದ್ರಪಟ್ಟಣ ಪ್ರಾಂತ್ಯದಲ್ಲಿ ಸಂಗೀತಪ್ರತಿಭೆ, ಮತ್ತೂರಿನಲ್ಲಿ ವೇದವಿದ್ಯಾ ಪಾಂಡಿತ್ಯದ ಪ್ರಖರತೆ - ಸಂಸ್ಕೃತ ಪ್ರೀತಿ, ವಿಶೇಷವಾಗಿ ಗಮಕ ವಾಚನ - ವ್ಯಾಖ್ಯಾನಗಳ ಮೂಲಕ ಕನ್ನಡ ಕಾವ್ಯಪರಂಪರೆಗೆ ನೀಡಿದ ಕಾಣಿಕೆ ಇವು ಗಮನಾರ್ಹ. ಇಂತಹ ವಿಶಿಷ್ಟತೆಗಳನ್ನು ಪ್ರಕಟಪಡಿಸುತ್ತಲೇ ವ್ಯವಸಾಯಕ್ಕೂ ಅಂಟಿಕೊಂಡು ಶ್ರಮದ ಕಾಯಕನಿರತರಾಗಿರುವುದು ಸಂಕೇತಿಗಳ ಅನನ್ಯತೆಯೇ ಸರಿ. ಇಂಥ ಸವ್ಯಸಾಚಿತನ, ಈ ಸಮುದಾಯದ ಸಾಚಾತನಕ್ಕೂ "ಆಶಿಷ್ಠೋ ದೃಢಿಷ್ಠೋ, ಬಲಿಷ್ಠಃ" ಆದ ವ್ಯಕ್ತಿತ್ವಕ್ಕೂ ಕಾರಣವಾಗಿರುವಂತಿದೆ. ಮಣ್ಣಿನ ಬದುಕನ್ನು ದೃಢವಾಗಿ ಅಪ್ಪಿಕೊಂಡು ಮನಸ್ಸನ್ನು ಮುಗಿಲಿಗೆ ಚಾಚುವ ದ್ಯಾವಾಪೃಥಿವೀ ಸಾಹಸಕ್ಕೆ ಸಂಕೇತಿಗಳು ಸಂಕೇತವಾಗಿದ್ದಾರೆ. ಅವರ ಜೀವನ ಪ್ರೀತಿ, ಸತ್ವ, ಬಗೆದಷ್ಟೂ ಚಿಮ್ಮುವ ಚಿಲುಮೆಯಾದುದರಿಂದ ಡಾ. ಹರನ್ ಅವರ ಸಂಶೋಧನೆ, ಸಾಂಸ್ಕೃತಿಕ ಅಧ್ಯಯನಗಳ ವ್ಯಾಪ್ತಿಗೆ ತಕ್ಕ ಆಹಾರ-ವಿಹಾರಗಳನ್ನು ಈ ಸಮುದಾಯ ನಿಸ್ಸಂದೇಹವಾಗಿ ಅವರಿಗೆ ಒದಗಿಸಿದೆ. ಶ್ರೀಯುತರ ಶ್ರಮ-ಶ್ರದ್ಧೆಗಳು ಸಾರ್ಥಕವಾಗಿವೆ. ಸಂಶೋಧನಾಕ್ಷೇತ್ರಕ್ಕೆ, ವಿದ್ವತ್ ಪ್ರಪಂಚಕ್ಕೆ ಬೆಲೆಯುಳ್ಳ ಕೊಡುಗೆಯನ್ನು ಶ್ರೀಯುತರು ತಮ್ಮ ಮಹಾಪ್ರಬಂಧದ- ನಿರಂತರ ಸಂಪ್ರಬಂಧದ - ಮೂಲಕ ನೀಡಿದ್ದಾರೆ, ಕೃತಾರ್ಥರಾಗಿದ್ದಾರೆ. ಅಂಥ ಸಾಹಸಕ್ಕೆ ತೊಡಗುವವರಿಗೆ ಮಾದರಿಯಾಗಿದ್ದಾರೆ - ದಾರಿದೀಪವೂ ಆಗಿದ್ದಾರೆ.

* * *

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಡಾ. ಆರ್. ಇಂದಿರಾ
ಸಮಾಜಶಾಸ್ತ್ರ ಪ್ರಾಧ್ಯಾಪಕರು

ಮಾನವ ಸಂಬಂಧಗಳ ಮೌಲ್ಯವೇ ನಶಿಸಿಹೋಗುತ್ತಿರುವಂಥ ಈ ಹೊತ್ತಿನಲ್ಲಿ, ಒಬ್ಬರೊಡನೊಬ್ಬರು ಪತ್ರಮುಖೇನ ಸಂಪರ್ಕವನ್ನಿಟ್ಟುಕೊಳ್ಳುವಂಥ ಪದ್ಧತಿಯ ಔಚಿತ್ಯವನ್ನೇ ಪ್ರಶ್ನಿಸುವಂಥ ಸಮಯ ಬಂದಿದೆ ಎನ್ನುವುದು ಅತಿಶಯೋಕ್ತಿಯಲ್ಲ. ದಿನೇ ದಿನೇ ಕಡಿಮೆಯಾಗುತ್ತಿರುವ ದೂರವಾಣಿ ದರಗಳು, ಹೆಚ್ಚುತ್ತಿರುವ ಸಾರ್ವಜನಿಕ ದೂರವಾಣಿ ಸೇವಾಕೇಂದ್ರಗಳು, ಊರಿನ ತುಂಬಾ ತುಂಬಿರುವ

ಇಂಟರ್‌ನೆಟ್ ಕೇಂದ್ರಗಳು ಮತ್ತು ಎಲ್ಲೆಡೆ ಎಲ್ಲರ ಕೈಗಳಲ್ಲಿ ರಾರಾಜಿಸುತ್ತಿರುವ ಮೊಬೈಲ್ ಫೋನ್‌ಗಳು, ಪತ್ರಗಳನ್ನು ಬರೆಯುವ ಅಭ್ಯಾಸವನ್ನೇ ತಪ್ಪಿಸುತ್ತಿವೆ. ನಾವು ಕುಳಿತ ಕಡೆಯೇ ಜಗತ್ತಿನ ಯಾವ ಭಾಗವನ್ನಾದರೂ ಕ್ಷಣಮಾತ್ರದಲ್ಲಿ ಸಂಪರ್ಕಿಸಬಹುದು ಎನ್ನುವ ಅನುಕೂಲವನ್ನು ತಂತ್ರಜ್ಞಾನ ನಮಗೆ ತಂದುಕೊಟ್ಟಿರುವಾಗ, ಪತ್ರ ಬರೆಯುವ ಕೆಲಸವನ್ನು 'Waste of Precious time' ಎನ್ನುವವರು ನಮ್ಮ ಮಧ್ಯದಲ್ಲಿ ಬಹು ಮಂದಿ ಇದ್ದಾರೆ. ದಿನದಲ್ಲಿ ೨೪ ಗಂಟೆಗಳ ಬದಲು, ೪೮ ಗಂಟೆಗಳಿದ್ದರೂ ಸಾಲದು ಎಂಬಂಥ ಸ್ಥಿತಿಯನ್ನು ತಲುಪಿರುವ ನಮಗೆ ಪತ್ರ ಬರೆಯಲು, ಬೇರೆಯವರು ಬರೆದಿರುವ ಪತ್ರಗಳನ್ನು ಓದಲು ಸಮಯವಾದರೂ ಎಲ್ಲಿದೆ ? ಎರಡು-ಮೂರು ದಶಕಗಳ ಹಿಂದೆ ಕೂಡ ಪತ್ರಗಳನ್ನೇ ನಂಬಿ, ದಿನಗಳನ್ನು ಕಳೆಯುತ್ತಿದ್ದ ಕಾಲವಿತ್ತು. ಪತ್ರಗಳು ತಮ್ಮೊಡನೆ ತರುವ ಆಶೆ-ನಿರಾಶೆಗಳು, ಸೋಲು-ಗೆಲವುಗಳು, ಸುಖ-ದುಃಖಗಳು, ಸುದ್ದಿ-ಸಂಗತಿಗಳು ಬದುಕಿನ ಬಗ್ಗೆ ಭರವಸೆಯನ್ನೂ ಮೂಡಿಸುತ್ತಿದ್ದವು, ಭಯವನ್ನೂ ಹುಟ್ಟಿಸುತ್ತಿದ್ದವು. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. 'Time is money' ಎಂಬ ಸಿದ್ಧಾಂತಕ್ಕೆ ಅಂಟಿಕೊಂಡಿರುವ ವಾಣಿಜ್ಯೀಕೃತ ಬದುಕಿನಲ್ಲಿ, ಪತ್ರಗಳ ಪ್ರಸ್ತುತತೆಯೇ ಪ್ರಶ್ನಾರ್ಹವಾಗಿದೆ.

ಆಧುನಿಕ ಯುಗದಲ್ಲಿ ಪತ್ರಗಳ ಮುಖೇನ ಸಂಪರ್ಕವನ್ನಿಟ್ಟುಕೊಳ್ಳುವ ಪದ್ಧತಿ ಕ್ರಮೇಣ ಹಿಂದಕ್ಕೆ ಸರಿಯುತ್ತಿದ್ದರೂ ಪತ್ರಗಳ ಉಪಯುಕ್ತತೆಯೇನೂ ಕಡಿಮೆಯಾಗಿಲ್ಲ. ಯಾವುದೇ ಸಂಸ್ಥೆಯನ್ನಾಗಲಿ, ಸಂಬಂಧವನ್ನಾಗಲಿ ಅಥವಾ ಘಟನೆಯನ್ನಾಗಲಿ, ಐತಿಹಾಸಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಬೇಕಾದಾಗ, ಈ ವಿಷಯಗಳಿಗೆ ಸಂಬಂಧಿಸಿದ ಪತ್ರಗಳಿದ್ದಲ್ಲಿ, ಅವು ಉಪಯುಕ್ತ ವಿಷಯ ಮೂಲಗಳಾಗಬಹುದು ಎಂಬುದು ಸತ್ಯ. ಹೆಚ್ಚು-ಕಡಿಮೆ ಎಲ್ಲ ವಿಷಯಗಳಿಗೂ ಸಂಬಂಧಿಸಿದಂತೆ Websites ಇಂದು ದೊರೆಯುತ್ತಿವೆಯಾದರೂ, ವಿಷಯಕ್ಕೆ ಸಂಬಂಧಿಸಿದ ಸೂಕ್ಷ್ಮತೆಗಳು ಅವುಗಳಲ್ಲಿ ಬಿಂಬಿತವಾಗಿಲ್ಲದಿರುವಂಥ ಸಾಧ್ಯತೆಯೂ ಇದೆ. ಅದರಲ್ಲೂ ಮಾನವಸಂಬಂಧಗಳು ಸೂಕ್ಷ್ಮಾತಿಸೂಕ್ಷ್ಮಗಳನ್ನು ಒಳಗೊಂಡಂಥ ವಿಚಾರವಾದ್ದರಿಂದ, ಆ ಸಂಬಂಧಗಳನ್ನು ಸುತ್ತುವರೆದಿದ್ದ ಭಾವನೆಗಳು, ಆಚರಣೆಗಳು, ಸಂದಿಗ್ಧಗಳು ಅಥವಾ ಸಮಸ್ಯೆಗಳು-ಇವುಗಳೆಲ್ಲದರ ಬಗೆಗಿನ ಒಳನೋಟ ಪತ್ರಗಳಲ್ಲಿ ದೊರೆಯುವ ಸಾಧ್ಯತೆಯಿದೆ.

ಪತ್ರಗಳು ಅತ್ಯಂತ ಆಸಕ್ತಿಕರವಾದ ವಿಷಯಮೂಲವಾಗಿರುತ್ತವೆಂಬ ವಿಷಯವನ್ನು ಅನೇಕ ಸಂಶೋಧಕರು ಮನಗಂಡಿರಲಾರರು. ಸಮಾಜವನ್ನು ಅಧ್ಯಯನ ವಿಷಯವನ್ನಾಗಿ ಹೊಂದಿರುವ ಸಂಶೋಧಕರಿಗೆ, ವೈಯಕ್ತಿಕ ದಾಖಲೆಗಳ ಗುಂಪಿಗೆ ಸೇರಿದ ಪತ್ರಗಳು, ಅನೇಕ ಸಂದರ್ಭಗಳಲ್ಲಿ ಅತ್ಯಂತ ಉಪಯುಕ್ತ ಮಾಹಿತಿಯನ್ನು ನೀಡಬಲ್ಲಂಥ ಶಕ್ತಿಯನ್ನು ಪಡೆದಿವೆ. ಥಾಮಸ್ ಮತ್ತು ಜೆನನ್‌ಕಿ ಎಂಬ ಸಂಶೋಧಕರು ತಮ್ಮ The Polish Peasant in Europe and America ಎಂಬ ಅಧ್ಯಯನದಲ್ಲಿ ಪತ್ರಗಳನ್ನು ವ್ಯಾಪಕವಾಗಿ ಬಳಸಿದ್ದರು. ತಮ್ಮ ಅಧ್ಯಯನ- ವಿಷಯವಾದ ಪೋಲಿಷ್ ರೈತ ಸಮುದಾಯದ ಸಾಮಾಜಿಕ ಜೀವನದಲ್ಲಿ ಕಾಲದಿಂದ ಕಾಲಕ್ಕೆ ತೋರಿದ ಬದಲಾವಣೆಗಳನ್ನು ತಿಳಿದುಕೊಳ್ಳಲು ಥಾಮಸ್ ಮತ್ತು ಜೆನನ್‌ಕಿಯವರುಗಳಿಗೆ ನೆರವಾದವು- ಆ ರೈತರು ಬರೆದಿದ್ದ ಏಳುನೂರಕ್ಕೂ ಹೆಚ್ಚು ಪತ್ರಗಳು. ಪತ್ರಗಳನ್ನು ಬರೆಯುವವರು ಮತ್ತು ಆ ಪತ್ರಗಳನ್ನು ಸ್ವೀಕರಿಸುವವರು ಇವರ ನಡುವೆ ಇರುವ ಸಂಬಂಧದ ಸ್ವರೂಪವನ್ನು ಆಧರಿಸಿ, ಪತ್ರಗಳ ಉಪಯುಕ್ತತೆಯನ್ನು ಅಳೆಯಲು ಸಾಧ್ಯ. ಪತ್ರಗಳು ಸಾಮಾನ್ಯವಾಗಿ ಬರಹಗಾರರ ವೈಯಕ್ತಿಕ ಅನುಭವಗಳು ಅಥವಾ ಅಭಿಪ್ರಾಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದರೂ ಸಮಕಾಲೀನ ಸಮಾಜ ಮತ್ತು ಸಂಸ್ಕೃತಿಗಳ ಬಗ್ಗೆ ಅವುಗಳು ನೀಡಬಹುದಾದಂಥ ಸುಳಿವುಗಳು ಅತ್ಯಮೂಲ್ಯ ಮಾಹಿತಿಮೂಲಗಳಾಗಬಹುದೆಂಬುದರಲ್ಲಂತೂ ಸಂದೇಹವಿಲ್ಲ.

ವಿವಿಧ ಸಂದರ್ಭಗಳಲ್ಲಿ ಬರೆದ ಪತ್ರಗಳನ್ನು ಈ 'ಸಂಕೇತಿ ಶತಮಾನದ ಪತ್ರಗಳು' ಎಂಬ ಪುಸ್ತಕವಾಗಿ ಹೊರತರುವಲ್ಲಿ ಡಾ. ಹರನ್ ಅವರ ಶ್ರಮ ಮತ್ತು ಶ್ರದ್ಧೆಗಳೆರಡೂ ಮೆಚ್ಚುಗೆಗೆ ಪಾತ್ರವಾಗುವಂಥವು. ಪುಸ್ತಕದ ಮೊದಲನೆಯ ಭಾಗದಲ್ಲಿ ನಾವು ಕಾಣುವ ಬಹುತೇಕ ಪತ್ರಗಳು ತೀರಾ Ordinary ಎನಿಸುವಂಥ ವಿಷಯಗಳನ್ನು ಕುರಿತು ಬರೆದಿರುವಂಥದ್ದು. ಆದರೆ ಸುಮಾರು ೧೧೩ ವರ್ಷಗಳ ಕಾಲವ್ಯಾಪ್ತಿಯಲ್ಲಿ ಬರೆದಿರುವ ಈ ಪತ್ರಗಳಲ್ಲಿ ನಾವು ಇತಿಹಾಸ, ಸಮಾಜಶಾಸ್ತ್ರ, ಶಿಕ್ಷಣಶಾಸ್ತ್ರ, ಮಾನವಶಾಸ್ತ್ರ, ಸಾಹಿತ್ಯ-ಇವೇ ಮುಂತಾದ ಅಧ್ಯಯನ ಕ್ಷೇತ್ರಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವವರಿಗೆ ಆಸಕ್ತಿ ಹುಟ್ಟಿಸುವಂಥ ವಿಚಾರಗಳನ್ನು ಕಾಣಬಹುದು. ಅನೇಕ ಪತ್ರಗಳಲ್ಲಿ ಸಂಕೇತಿ ಎಂಬ ಜಾತಿ ಗುಂಪಿಗೆ ಸೇರಿದ ಜನರ ಪ್ರಸ್ತಾಪಗಳೇ ಹೆಚ್ಚಾಗಿ ಕಂಡುಬಂದರೂ, ಆಯಾ ಕಾಲಘಟ್ಟದ ಸಾಮಾಜಿಕ-ಆರ್ಥಿಕ ಸ್ಥಿತಿ-ಗತಿಗಳ ಬಗ್ಗೆ ಕೂಡ ಈ ಪತ್ರಗಳಲ್ಲಿ ಮಾಹಿತಿ ದೊರೆಯುತ್ತದೆ. ಪುಸ್ತಕದ ಮೊದಲನೆಯ ಭಾಗದಲ್ಲಿನ ಪತ್ರಗಳಲ್ಲಿ ಕಂಡುಬರುವ ವಿಷಯ ವ್ಯಾಪ್ತಿ ವಿಶಾಲವಾದುದು: ಉನ್ನತ ಶಿಕ್ಷಣ, ಆರ್ಥಿಕ ಮುಗ್ಗಟ್ಟು, ಮಹಿಳಾ ಶಿಕ್ಷಣ, ನಿರುದ್ಯೋಗ, ಹಳ್ಳಿಯಿಂದ ನಗರಗಳಿಗೆ ಬಂದವರ ಬವಣೆಗಳು, ಅನಾರೋಗ್ಯ, ಶಿಶುಜನನ, ಹಬ್ಬಗಳ ಆಚರಣೆಗಳು, ಪ್ಲೇಗ್‌ನಂಥ ಪಿಡುಗು ತರುತ್ತಿದ್ದ ಕ್ಲೇಶಗಳು, ಕೃಷಿ, ಕುಟುಂಬದ ಸದಸ್ಯರ ಆರೋಗ್ಯ-ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಕಾಳಜಿಗಳು, ಮಳೆ-ಬೆಳೆ, ಮದುವೆ, ಹೊರನಾಡಿನಲ್ಲಿರುವ ಸಂಕೇತಿಗಳು-ಹೀಗೆ ಇನ್ನೂ ಹತ್ತು ಹಲವಾರು ವಿಚಾರಗಳನ್ನು ಕುರಿತಂತೆ ಒಂದು ನೋಟ ಈ ಪತ್ರಗಳಲ್ಲಿ ದೊರೆಯುತ್ತದೆ.

ಭಾಗ ಒಂದರಲ್ಲಿ ಮುದ್ರಿತವಾಗಿರುವ ಎಲ್ಲ ಪತ್ರಗಳ ಬಗ್ಗೆಯೂ ವಿವರವಾಗಿ ಬರೆಯುವುದು ಕಾಲ ಹಾಗೂ ಸ್ಥಳದ ದೃಷ್ಟಿಯಿಂದ ಸಾಧ್ಯವಿಲ್ಲದೆ ಹೋದರೂ, ಸಮಾಜಶಾಸ್ತ್ರದ ವಿದ್ಯಾರ್ಥಿನಿಯಾಗಿ ನನಗೆ ವಿಶೇಷವೆನಿಸಿದ ಕೆಲ ವಿಚಾರಗಳನ್ನು ಮಾತ್ರ ಇಲ್ಲಿ ಪ್ರಸ್ತಾಪ

ಮಾಡುತ್ತೇನೆ. ೧೯೩೧ರಲ್ಲಿ ಬರೆದ ಪತ್ರವೊಂದರಲ್ಲಿ, ಆ ಕಾಲದಲ್ಲಿಯೇ M.A., B.T. ಪದವಿಯನ್ನು ಪಡೆದ ಮಹಿಳೆಯೊಬ್ಬರ ಉದ್ಯೋಗದ ಹುಡುಕಾಟದ ಪ್ರಸ್ತಾಪವಿದೆ. ಮಹಿಳೆಯರು ಉನ್ನತ ಶಿಕ್ಷಣಕ್ಕೆ ಕಾಲಿಡುತ್ತಿರುವುದು ಇತ್ತೀಚೆಗೆ ಮಾತ್ರವೇನೋ ಎಂಬಂತೆ ಚಿತ್ರಿಸುವವರಿಗೆ, ಏಳು ದಶಕಗಳ ಹಿಂದೆಯೇ ಕಾಲೇಜು ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ್ದ ಮಹಿಳೆಯೊಬ್ಬರಿದ್ದರು ಎನ್ನುವುದು ಮುಖ್ಯವಾದ ವಿಚಾರ. ಭಾರತದಲ್ಲಿ ವಿದ್ಯಾವಂತ ನಿರುದ್ಯೋಗದ ಸಮಸ್ಯೆ ೧೯೩೦ರ ದಶಕದಲ್ಲೇ ಉದ್ಭವವಾಗಿತ್ತು ಎನ್ನುವ ವಿಚಾರ ಕೂಡ ಗಮನಾರ್ಹ. ಆ ಕಾಲದಲ್ಲಿ, ವಿದ್ಯೆಯಿದ್ದುಬಿಟ್ಟರೆ ಸಾಕು, ಕೆಲಸ ಬೇಡದಿದ್ದರೂ ದೊರೆಯುತ್ತಿತ್ತು ಎನ್ನುವವರಿಗೆ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಲು ಈ ವಿಷಯವನ್ನು ಕುರಿತಂತೆ ಬರೆದಿರುವ ಪತ್ರಗಳು ನೆರವಾಗುತ್ತವೆ.

ವಿದ್ಯೆಯನ್ನು ಅರಸಿ ಊರಿನಿಂದ ದೂರದ ಪಟ್ಟಣ ಅಥವ ನಗರಗಳಿಗೆ ವಲಸೆ ಬರುವಂಥ ಪ್ರಕ್ರಿಯೆ ಭಾರತೀಯ ಸಮಾಜದಲ್ಲಿ ಬಹು ಹಿಂದಿನಿಂದಲೂ ಜಾರಿಯಲ್ಲಿದೆ. ಆದರೆ ಈಗಿರುವ ಅನುಕೂಲಗಳಲ್ಲಿ ೧/೧೦ ಭಾಗವೂ ಇಲ್ಲದಿದ್ದ ಕಾಲದಲ್ಲಿ ವಿದ್ಯಾಕಾಂಕ್ಷಿಗಳು ಪಟ್ಟ ಕಷ್ಟಗಳು, ಅನುಭವಿಸಿದ ಬವಣೆಗಳು ಇಂದಿನ ಯುವಜನಾಂಗಕ್ಕೆ ಒಂದು revelation. ಕೂತೆಡೆ ಜೀವನ ತಂದುಕೊಡಬಹುದಾದ ಎಲ್ಲ ಸೌಲಭ್ಯಗಳನ್ನೂ ಅನುಭವಿಸುವ ಹಣವಂತ ಯುವಕ-ಯುವತಿಯರನೇಕರಿಗೆ, ತಮ್ಮನ್ನು ಈ ಸ್ಥಿತಿಗೆ ತರಬೇಕಾದರೆ, ತಮ್ಮ ಹಿರಿಯರು ಎಂತಹ ಪಾಡು ಪಟ್ಟಿದ್ದಾರೆ ಎಂದು ತಿಳಿದುಕೊಳ್ಳಲು ಮೊದಲನೆಯ ಭಾಗದಲ್ಲಿರುವ ಅನೇಕ ಪತ್ರಗಳು eye-openers. ಹಾಗೆಯೇ ವಾರಾನ್ನದ ಪದ್ಧತಿಯನ್ನು ಕುರಿತ ಮನಮುಟ್ಟುವ ಚಿತ್ರಣವೂ ನಮಗಿಲ್ಲಿ ದೊರೆಯುತ್ತದೆ. ವಿದ್ಯೆಯನ್ನು ಕಲಿಯಲು ಅವಕಾಶ ದೊರೆತರೂ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗದಿದ್ದರೆ, ಎಂತಹ ಪಾಡನ್ನು ಪಡಬೇಕಾಗುತ್ತದೆ ಎಂಬ ಬಹುಮುಖ್ಯವಾದ ಅಂಶವನ್ನು ಹತ್ತು ಹಲವಾರು ಪತ್ರಗಳು ಎತ್ತಿ ಹಿಡಿಯುತ್ತವೆ. ಇಂದಿಗೂ ಕೂಡ ಉಚಿತ ಶಿಕ್ಷಣ, ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕಗಳನ್ನು ಒದಗಿಸಿಬಿಟ್ಟರೆ ಬಡವರ ವಿದ್ಯೆಯ ಸಮಸ್ಯೆ ಬಗೆಹರಿದುಬಿಡುತ್ತದೆ ಎಂಬ ಅಭಿಪ್ರಾಯವೊಂದಿದೆ. ಆದರೆ ಬದುಕಿಗೆ ಆಧಾರವಾದ ಆಹಾರಕ್ಕಾಗಿಯೇ ಅಹರ್ನಿಶಿ ಸಂಘರ್ಷ ನಡೆಸಬೇಕಾದಾಗ, ಕಲಿಯುವ ಆಸೆ ಕಮರಿಹೋಗಬಹುದು ಎನ್ನುವ ಕಟುಸತ್ಯ ಅಂದೂ ಇತ್ತು, ಇಂದಿಗೂ ಇದೆ.

ಹಬ್ಬ, ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಭಾಗವಹಿಸುವುದು ಅಥವಾ ಭಾಗವಹಿಸಲಾರದಿರುವುದು-ಇವುಗಳ ಬಗ್ಗೆ ಅನೇಕ ಪತ್ರಗಳಲ್ಲಿ ಪ್ರಸ್ತಾಪವಿದೆ. ಈ ವಿಷಯವನ್ನು ಕುರಿತಂತೆ ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಭಾಗವಹಿಸುವಿಕೆ ಅಥವಾ ಭಾಗವಹಿಸಲಾಗದಿರುವುದು-ಅವರವರ ಸಮಯ-ಸಂದರ್ಭ, ಅನುಕೂಲ-ಅನಾನುಕೂಲಗಳಿಗೆ ಬಿಟ್ಟುದಾದ್ದರಿಂದ, ಅದೊಂದು ವೈಭವೀಕರಿಸಬೇಕಾದ ವಿಷಯವಂತೂ ಖಂಡಿತ ಅಲ್ಲ. ಇಂದಿನ ಯಾಂತ್ರಿಕ ಮತ್ತು ವೇಗವಾಗಿ ಚಲಿಸುವ ಬದುಕಿನಲ್ಲಿ, ತಮ್ಮ ವೃತ್ತಿ ಹಾಗೂ ಇತರ ಜವಾಬ್ದಾರಿಗಳಲ್ಲಿ ಮಗ್ನರಾಗಿರುವ ಅನೇಕರು 'ನನ್ನನ್ನು ಎಲ್ಲಿಯೂ ಕರೆಯೋದು ಬೇಡ, ನನ್ನ ಪಾಡಿಗೆ ನಾನಿರಲು ಬಿಟ್ಟರೆ ಸಾಕು' ಎನ್ನುವಂಥ ಪರಿಸ್ಥಿತಿಯನ್ನು ತಲುಪಿದ್ದಾರೆ. ಇದಕ್ಕೆ ವಿರುದ್ಧವಾಗಿ ಕರೆದ ಕಡೆಗಳಿಗೆ ಬಹು ಆಸಕ್ತಿಯಿಂದ ಹೋಗುವವರು ಇಂದಿಗೂ ಇದ್ದಾರೆ. ವಾಣಿಜ್ಯೀಕೃತ ಮನರಂಜನೆಯ ಧಾಳಿಗೆ ಸಿಲುಕಿರುವ ನಮ್ಮ ಸಮಾಜದಲ್ಲಿ, ಅರ್ಥಪೂರ್ಣ ಮಾನವ ಸಂಬಂಧಗಳೇ ಕಡಿಮೆಯಾಗುತ್ತಿವೆ. ದಿನವಿಡೀ ಧಾಳಿ ಮಾಡುವ ಧಾರಾವಾಹಿಗಳಿಗೆ ದಾಸರಾದ ಅನೇಕರಿಗೆ ಜಗತ್ತಿನ ಬೇರ್‍ಯಾವ ಗೊಡವೆಯೇ ಬೇಡ ! ಅಂಥವರು ತಮ್ಮ ಮನೆಗೆ ಬಂದವರನ್ನು 'ಯಾಕಾದರೂ ಹೋದೆವಪ್ಪಾ' ಎಂದೆನಿಸುವಷ್ಟು ಮಟ್ಟಿಗೆ ಅಲಕ್ಷಿಸುವಂಥ ಸ್ಥಿತಿ ಇಂದು ಬಂದುಬಿಟ್ಟಿದೆ. ಆದರೆ ಜೀವನದಲ್ಲಿ ಬೇರ್‍ಯಾವ ಮನರಂಜನೆಗೂ ಅವಕಾಶಗಳಿಲ್ಲದಿದ್ದಾಗ, ಯಾವುದಾದರೂ ಒಂದು ನೆಪದಲ್ಲಿ ಒಬ್ಬರೊಡನೊಬ್ಬರು ಸಂಪರ್ಕ ಬೆಳೆಸುವುದು ಎಷ್ಟು ಮುಖ್ಯವಾಗಿತ್ತು ಎನ್ನುವುದನ್ನು ನಮಗೆ ಇಲ್ಲಿರುವ ಅನೇಕ ಪತ್ರಗಳು ತಿಳಿಸುತ್ತವೆ. ಸಮಾರಂಭದಲ್ಲಿ ಭಾಗವಹಿಸುವುದು ಮಾನವಸಂಬಂಧಗಳ ಒಂದು ಮುಖವಷ್ಟೆ ; ಅದರ ಮತ್ತೊಂದು ಮುಖವೆಂದರೆ, ಸಹಕಾರ, ಸಹಬಾಳ್ವೆ, ಸುಖ-ದುಃಖಗಳ ಹಂಚಿಕೆ, ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಳ್ಳುವುದು-ಇವೇ ಮುಂತಾದ ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವುದು. ಒಟ್ಟಿನಲ್ಲಿ ಹೇಳುವುದಾದರೆ, ಪತ್ರಗಳ ಒಳಹೊಕ್ಕು ಅವುಗಳಲ್ಲಿ ಹೊರನೋಟಕ್ಕೆ ಕಾಣುವ ವಿಚಾರಗಳ ಹಿಂದಿರುವ ಭಾವನೆ-ಆಚರಣೆಗಳನ್ನು ಅರ್ಥೈಸುವ ಸೂಕ್ಷ್ಮ ಸಂಶೋಧನಾ ಮನಸ್ಸನ್ನು ಹೊಂದಿರುವವರಿಗೆ ಆಸಕ್ತಿಯನ್ನು ಕೆರಳಿಸುವಂಥ, ಚಿಂತನೆಗೆ ಆಹಾರವಾಗುವಂಥ ಮಾಹಿತಿ ಮೊದಲನೆಯ ಭಾಗದ ಪತ್ರಗಳಲ್ಲಿದೆ ಎಂಬುದು ನನ್ನ ಅಭಿಪ್ರಾಯ.

ಎರಡನೆಯ ಭಾಗದಲ್ಲಿ ಮುದ್ರಿತವಾಗಿರುವ ಪ್ರೊ. ಶ್ರೀಕಂಠಕುಮಾರಸ್ವಾಮಿಗಳ ಪತ್ರಗಳಲ್ಲಿ ನಾನು ಕಂಡದ್ದು ಸಂಪ್ರದಾಯ ಹಾಗೂ ಪ್ರಗತಿಪರ ನಿಲುವುಗಳ ಒಂದು ವಿಶಿಷ್ಟ ಮಿಲನ. ಸ್ವತಃ ತಂತ್ರಜ್ಞಾನದ ಪ್ರಾಧ್ಯಾಪಕರಾಗಿ, ತಾಂತ್ರಿಕ ಶಿಕ್ಷಣದ ಮುಂಚೂಣಿಯಲ್ಲಿರುವ IIT ಸಂಸ್ಥೆಯ 'ತಂತ್ರಜ್ಞಾನ ಸಂಸ್ಕೃತಿ'ಯ ಪರಿಸರದಲ್ಲಿದ್ದೂ, ವಿಷಯಗಳನ್ನು ವಿವರಿಸಿ, ವಿಮರ್ಶಿಸಿ, ವಿಶ್ಲೇಷಿಸುವ ಅವರ ಪತ್ರಬರಹದ ವೈಖರಿ, ಇಂದಿನ businesslike ಪತ್ರಗಳ Context ನಲ್ಲಿ ನಿಜಕ್ಕೂ ಅಚ್ಚರಿಯನ್ನು ಮೂಡಿಸುವಂತಹುದು. ವ್ಯಕ್ತಿಯು ವಿವಿಧ Life cycle Rituals ಗಳ ಆಚರಣೆಯ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು-ಕ್ರಿಯಾವಿಧಿಗಳನ್ನು ಕುರಿತು ಪ್ರೊ. ಶ್ರೀಕಂಠಕುಮಾರ ಸ್ವಾಮಿಗಳು ನಿಶ್ಚಿತವಾದ ಅಭಿಪ್ರಾಯಗಳನ್ನು ಹೊಂದಿದ್ದಾರೆ ಎನ್ನುವುದು ಅವರು ಬರೆದಿರುವ ಹಲವಾರು ಪತ್ರಗಳಲ್ಲಿ ಕಂಡುಬರುತ್ತದೆ. ಅವರು ತಮ್ಮ ಅನೇಕ ಪತ್ರಗಳಲ್ಲಿ ದೀರ್ಘವಾಗಿ ವಿಶ್ಲೇಷಿಸಿರುವ ಪ್ರಗತಿಪರ ವಿಚಾರಗಳು ಮನಸ್ಸಿಗೆ ತುಂಬಾ ಹಿಡಿಸಿವೆ.

ಎರಡನೇ ಭಾಗದಲ್ಲಿರುವ ಪತ್ರಗಳು ಭಾರತೀಯ ಸಮಾಜವನ್ನು ಧಾರ್ಮಿಕ-ಐತಿಹಾಸಿಕ ದೃಷ್ಟಿಕೋನಗಳಿಂದ ವಿಮರ್ಶಾತ್ಮಕ ವಿಶ್ಲೇಷಣೆಗೆ ಒಳಪಡಿಸುವವರಿಗೆ ಅತ್ಯಂತ revealing ಮಾಹಿತಿಯ ಮೂಲಗಳಾಗಿವೆ ಎಂದು ಹೇಳುವುದು ಅತಿಶಯೋಕ್ತಿಯಲ್ಲ. ಸಂಪ್ರದಾಯವನ್ನು 'ಅನುಸರಿಸು'ವುದಕ್ಕೆ ಮೊದಲು 'ಅನ್ವೇಷಿಸು'ವ ಮನಸ್ಸಿರುವ ಅಧ್ಯಯನಕಾರರಿಗೆ, ಸಂಶೋಧಕರಿಗೆ ಮತ್ತು ಆಸಕ್ತರಿಗೆ ಪ್ರೊ. ಶ್ರೀಕಂಠಕುಮಾರ ಸ್ವಾಮಿಯವರ ಪತ್ರಗಳು ಬಹು ಪ್ರಸ್ತುತ. ಕುಟುಂಬ ಜೀವನವೇ ಆಗಲಿ, ಮಹಿಳೆಯರ ಸ್ಥಿತಿ-ಗತಿಗಳೇ ಆಗಲಿ, ಶಾಸ್ತ್ರ-ಸಂಪ್ರದಾಯಗಳನ್ನೇ ಆಗಲಿ, ತೆರೆದ ಮನಸ್ಸಿನಿಂದ, ಒಂದು holistic perspectiveನಿಂದ ನೋಡುವುದೇ ಔಚಿತ್ಯಪೂರ್ಣ ಸಂಶೋಧನಾ ಬಗೆ. ನಾವೆಂದುಕೊಂಡದ್ದೇ ಸರಿ ಎಂಬ ಧೋರಣೆಯಿಂದ ಸಮಾಜವನ್ನು ನೋಡುವುದನ್ನು ಬಿಟ್ಟು, ಭಿನ್ನ ಭಿನ್ನ ಆಲೋಚನಾ ಲಹರಿಗಳನ್ನು ಅಧ್ಯಯನ ಮಾಡಿ, ಅರ್ಥೈಸುವವರೇ ನಿಜವಾದ ಸಂಶೋಧಕರು. ಅಂತಹ ಸಂಶೋಧಕರಿಗೆ ಸಾಕಷ್ಟು ಆಹಾರ ಎರಡನೆಯ ಭಾಗದ ಪತ್ರಗಳಲ್ಲಿದೆ.

ಸುಮಾರು ೧೧೩ ವರ್ಷಗಳ ಕಾಲವ್ಯಾಪ್ತಿಯಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ , ಬೇರೆ ಬೇರೆಯವರಿಂದ ಬರೆಯಲ್ಪಟ್ಟ ಪತ್ರಗಳನ್ನು ಸಂಗ್ರಹಿಸಿ, ಅವುಗಳನ್ನು ಪುಸ್ತಕರೂಪದಲ್ಲಿ ಹೊರತರುವ ಪ್ರಯತ್ನ ಒಂದು ಸಾಹಸವೇ ಸರಿ. ಇಂದಿನ hightech ಸಂಶೋಧನಾ ಪರಿಸರದಲ್ಲಿ , ಓದುವ ಸಂಸ್ಕೃತಿಯೇ ನಶಿಸಿಹೋಗುತ್ತಿರುವಾಗ, ಪತ್ರಗಳನ್ನು ಓದುವ ತಾಳ್ಮೆ ತಾನೇ ಯಾರಿಗಿದೆ ಎನ್ನಬಹುದು ನಾವು. ಆದರೆ ವಿಷಯಮೂಲಗಳಾಗಿ ಅವುಗಳ ಉಪಯುಕ್ತತೆಯನ್ನು ತಳ್ಳಿಹಾಕುವಂತೆಯೂ ಇಲ್ಲ. ಪತ್ರಗಳಲ್ಲಿ ವ್ಯಕ್ತವಾಗಿರುವ ವಿಷಯಗಳನ್ನೆಲ್ಲ , ವಿಮರ್ಶಿಸದೆ, ಅವುಗಳ ಸಮಕಾಲೀನ ಸಂದರ್ಭಗಳನ್ನು ಗಣನೆಗೆ ತೆಗೆದುಕೊಳ್ಳದೆ, generalizationsಗಾಗಿ ಬಳಸಬಾರದು ಎಂಬುದು ಸಮಾಜದ ಅಧ್ಯಯನಕಾರರು ಕಡ್ಡಾಯವಾಗಿ ಗಮನಿಸಲೇಬೇಕಾದ ಒಂದು ಸಂಗತಿ. ಆದರೆ ಅವುಗಳ 'data base value' ಮಾತ್ರ ಇಂದಿಗೂ ಪ್ರಸ್ತುತ.

ಪತ್ರಗಳು ಕಾಲಾನುಕ್ರಮ ಹಾಗೂ ವಿಷಯಾನುಕ್ರಮದಲ್ಲಿ ಜೋಡಣೆಯಾಗುವುದೆಂದರೆ, ಸಂಶೋಧಕರಿಗೆ 'ಸುಸೂತ್ರ ಸಂಶೋಧನಾ ಸಾಧನ'ವಾದಂತೆ. ಡಾ. ಹರನ್ ಅವರ ಈ ಪ್ರಯತ್ನಕ್ಕೆ ಸಾರ್ಥಕ ಸ್ಪಂದನ ದೊರೆಯಲಿ ಎಂಬುದು ನನ್ನ ಹಾರೈಕೆ.

* * *

ಪ್ರಾಚ್ಯ ವಿದ್ಯಾ ಸಂಶೋಧನಾಲಯ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ವಿದ್ವಾನ್
ಡಾ। ಟಿ.ವಿ. ಸತ್ಯನಾರಾಯಣ
ಹಿರಿಯ ಸಂಶೋಧಕರು

ಸಮುದಾಯ ಅಧ್ಯಯನ ಕೇಂದ್ರದವರು ಪ್ರಕಟಿಸುತ್ತಿರುವ "ಶತಮಾನದ ಪತ್ರಗಳು" ಎಂಬ ಈ ಕೃತಿ ಅಪೂರ್ವವೂ, ಅನುಪಮವೂ ಆಗಿದೆ. ಕುಶಲಸಮಾಚಾರಗಳನ್ನು ತಿಳಿಯಲು ಬರೆಯುತ್ತಿದ್ದ ಪತ್ರಗಳಲ್ಲೇ ಜೀವನದ ಎಷ್ಟೊಂದು ಸಮಸ್ಯೆಗಳನ್ನು, ಆಗುಹೋಗುಗಳನ್ನು, ಪ್ರಶ್ನಿಸಿಕೊಂಡು ಅದಕ್ಕೆ ಪರಿಹಾರವನ್ನೂ ಪಡೆದುಕೊಂಡು, ಜೀವಿಸುತ್ತಿದ್ದ ರೀತಿಯನ್ನು ಕಂಡಾಗ, ಓದಿದಾಗ ನಿಜಕ್ಕೂ ಆಶ್ಚರ್ಯವಾಗುತ್ತದೆ. ಈ ಕೃತಿ ನಮ್ಮ ಜೀವನದ ಸಮಸ್ತ ದರ್ಶನವನ್ನು ಮಾಡಿಕೊಡುವುದರಲ್ಲಿ ಸಮರ್ಥವಾಗಿದೆ. ಸಂಸಾರದ ದ್ವಂದ್ವಗಳನ್ನು ಬಹುವಾಗಿ ಇಲ್ಲಿ ನೋಡಬಹುದು, ತಿಳಿಯಬಹುದು. ಜೊತೆಗೆ ಒಂದುಬಗೆಯ ಜೀವನದಲ್ಲಿ ಬದುಕುವಂತಹ ಕಲೆಯನ್ನು, ಶಿಕ್ಷಣವನ್ನು ಇದರಿಂದ ನಾವು ಪಡೆಯಬಹುದು.

ಇಂದಿನ ಎಷ್ಟೋ ಧಾರ್ಮಿಕ ಆಚರಣೆಗಳು, ಶಾಸ್ತ್ರೀಯ ಕರ್ಮಗಳು, ಸಂಸ್ಕಾರವಿಶೇಷಗಳು ಹಿಂದಿನ ಧರ್ಮಪ್ರವರ್ತಕರಾದ ಋಷಿಗಳು ಹೇಳಿದಂತೆ ನಡೆಯುತ್ತಲೇ ಇಲ್ಲ. ನೂರಕ್ಕೆ ತೊಂಬತ್ತು ಭಾಗ ಶಾಸ್ತ್ರಕ್ಕೆ ವಿರುದ್ಧವಾಗಿಯೇ ನಡೆಯುತ್ತಿವೆ. ಆದರೂ ಆಗುವ ತಪ್ಪುಗಳನ್ನು, ಕ್ಲೇಶಗಳನ್ನು ಶಾಸ್ತ್ರಕಾರರ ತಲೆಗೆ ಕಟ್ಟುತ್ತೇವೆ. ಇದಕ್ಕೆ ಕಾರಣ ಈ ಕ್ಷೇತ್ರದಲ್ಲಿ ಆಳವಾದ ಹಾಗೂ ನಿಖರವಾದ ಜ್ಞಾನವಿಲ್ಲದಿರುವುದು. ಇದರಲ್ಲಿ ಅಪಾರ ಅನುಭವವುಳ್ಳವರು ಇದರ ಬಗ್ಗೆ ಸೂಕ್ತವಾಗಿ ಸಹೃದಯತೆಯಿಂದ ತಿಳಿಸಿಕೊಡದಿರುವುದೂ ಒಂದು ಕೊರತೆ. ಹೀಗಾಗಿ ಜನರಿಗೆ ಈ ಆಚರಣೆಗಳ ಹಿನ್ನೆಲೆಯೇ ತಿಳಿಯದಿರುವಾಗ ವಾಸ್ತವವಾಗಿ ಅದರಲ್ಲಿ ಉಪೇಕ್ಷೆ ಬರುವುದು ಸಹಜ. ಅದನ್ನು ದೂರ ಮಾಡಿ, ಇವುಗಳ ಅರ್ಥ ಮಹತ್ತ್ವಗಳು ಮತ್ತು ನಿಜವಾಗಿ ಏಕೆ ಇದನ್ನು ಆಚರಿಸುತ್ತಿದ್ದರು ಎನ್ನುವ ಸತ್ಯವನ್ನು ತಿಳಿಸಿಕೊಡಬೇಕು.

ನಮ್ಮ ಸಮಾಜದಲ್ಲಿ ಎರಡು ದಾರಿಗಳು ಈಗ ಹಸುವಿನ ಕೊಂಬುಗಳಂತೆ ಒಂದಕ್ಕೊಂದು ಸೇರದೆ, ಭಿನ್ನಭಿನ್ನವಾಗಿ ಹೋಗುತ್ತಿವೆ. ಇದರ ಮಧ್ಯದಲ್ಲಿರುವವರು ಅತಂತ್ರರಾಗಿದ್ದಾರೆ. ಒಂದು, ವೇದಾದಿಜ್ಞಾನವನ್ನು ಪಡೆದ ಅನೇಕ ವೈದಿಕರು, ಶಾಸ್ತ್ರವೇತ್ತರು ಅವರ ಮನೆಯವರು ಹಿಂದಿನಿಂದಲೂ ಅತಿಯಾದ ಮಡಿವಂತಿಕೆಯಲ್ಲಿ ಮುಳುಗಿ ಬೇರೆಯವರೆಲ್ಲ ಅಪ್ರಯೋಜಕರು ಎಂದು ಭಾವಿಸಿದುದು. ಎರಡನೆಯದೆಂದರೆ, ಕೆಲವರು ಎಲ್ಲ ಆಚಾರ-ವಿಚಾರಗಳನ್ನೂ ಮಡಿವಂತಿಕೆಗಳನ್ನೂ ಬಿಟ್ಟು, ಪರಮ ನಾಸ್ತಿಕರಾಗಿ ನಮ್ಮ ಎಲ್ಲ ಸಂಪ್ರದಾಯ ಪರಂಪರೆಗಳನ್ನು ತೆಗಳುವುದು. ಇವರಿಬ್ಬರ ಮಧ್ಯೆ ಅಲ್ಪಸ್ವಲ್ಪ ಆಚಾರವಿಚಾರಗಳನ್ನು ತಿಳಿದು ಶ್ರದ್ಧಾಭಕ್ತಿಗಳಿಂದ ಕೆಲವಾರು ಕಾರ್ಯಗಳನ್ನು ಆಚರಿಸಬೇಕೆನ್ನುವವರು ; ಇಂತಹ ಮಧ್ಯಮಸ್ಥಿತಿಯವರಿಗೆ ತುಂಬಾ ಕಷ್ಟ. ವೇದಗಳ ಬಗ್ಗೆ , ಯಜ್ಞಯಾಗಾದಿಗಳ ಬಗ್ಗೆ , ಧಾರ್ಮಿಕ ಆಚರಣಾದಿಗಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಪ್ರಶ್ನೆ ಕೇಳಿದರೂ ಅದನ್ನು ತಪ್ಪೆಂದು ಭಾವಿಸುವ, ಅಪರಾಧವೆಂದು ತೀರ್ಮಾನಿಸುವ, ಇವನಿಗೇನು

ಗೊತ್ತು ? ಇವನಿಗೇನು ಅರ್ಹತೆ ಇದೆ ಎಂದು ಹೀಯಾಳಿಸುವ ಸಂಪ್ರದಾಯವಾದಿಗಳೇ ಹೆಚ್ಚು. ತಿಳಿದ ವಿಜ್ಞಾನಿಗಳು, ವಿದ್ವಜ್ಜನರು ಒಂದೆಡೆ ಸೇರಿ ಇವುಗಳ ಬಗ್ಗೆ ವಿಚಾರ ವಿನಿಮಯ ನಡೆಸಿ, ಸೂಕ್ತ ಮಾರ್ಪಾಡುಗಳೊಂದಿಗೆ, ಇವುಗಳ ಹೊಸತನವನ್ನು ರೂಪಿಸಿಕೊಡಬೇಕು.

ಇಂತಹ ಒಂದು ಮಹತ್ತರವಾದ ಕೆಲಸವನ್ನು ಪ್ರೊ। ಶ್ರೀಕಂಠಕುಮಾರಸ್ವಾಮಿಯವರು ಅನೇಕ ವರ್ಷಗಳ ಹಿಂದೆಯೇ ದಿಟ್ಟತನದಿಂದ ಮಾಡಿದ್ದಾರೆ. ಇದು ಪತ್ರೋತ್ತರ ಶಿಕ್ಷಣ. ನಮಗೆ ಇದು ಉಪನಿಷತ್ತುಗಳ ಪರಂಪರೆಯನ್ನು ಜ್ಞಾಪಿಸುತ್ತದೆ. ಉಪನಿಷತ್ತುಗಳಲ್ಲೂ ಗುರುವು ಶಿಷ್ಯನ ಪ್ರಶ್ನೆಗಳಿಗೆ ಉತ್ತರಿಸುವುದು, ತಂದೆಯು ಮಗನ ಸಂದೇಹಗಳನ್ನು ಪರಿಹರಿಸುವುದು, ಹೀಗೆ ಸಂವಾದರೂಪದಲ್ಲಿ ಬಂದಿದೆ.

ನಾವಿಂದು ಆಚರಿಸುತ್ತಿರುವ ಸಂಸ್ಕಾರಗಳಲ್ಲಿ ಎಷ್ಟೋ ಕ್ರಿಯೆಗಳು ಅರ್ಥವನ್ನು ಕಳೆದುಕೊಂಡಿವೆ. ಬೇಕಿಲ್ಲವೇನೋ, ಆದರೂ ಮಾಡುತ್ತಿದ್ದೇವೆ. ವಧೂವರರನ್ನು ನೋಡುವ ವಿಧಾನ : ಈಗ ಮೊದಲೇ ಗಂಡುಹೆಣ್ಣುಗಳು ನೋಡುತ್ತಾರೆ, ಒಪ್ಪುತ್ತಾರೆ. ನಂತರ ಮದುವೆ. ಆದರೂ ಮದುವೆಯಲ್ಲಿ ಅಂತರಪಟವನ್ನು ಹಿಡಿಯುವುದು, ವಯಸ್ಸಾದ ಹೆಣ್ಣಿನ ತಂದೆ-ತಾಯಿಗಳು ವರನ ಕಾಲು ತೊಳೆದು, ಆ ನೀರನ್ನು ತಲೆಯ ಮೇಲೆ ಪ್ರೋಕ್ಷಿಸಿಕೊಳ್ಳುವುದು ಖಂಡಿತಾ ಸರಿಯಲ್ಲ. ಕಾಶೀಯಾತ್ರೆಯ ಭರಾಟೆ ಏಕೋ ತಿಳಿಯದು. ಆ ಕಾಲದಲ್ಲಿ ವೇದಾಧ್ಯಯನಕ್ಕಾಗಿ, ಶಾಸ್ತ್ರವಿದ್ಯಾಭ್ಯಾಸಕ್ಕಾಗಿ ಕಾಶಿಗೆ ಹೋಗುತ್ತಿದ್ದರು. ಕಷ್ಟಪಟ್ಟು ಓದುತ್ತಿದ್ದರು. ವಿದ್ಯೆ ಪರಿಪೂರ್ಣನಾದವನನ್ನು ದೇವಸಮಾನನೆಂದು ಗೌರವಿಸಿ ಕರೆತಂದು, ಮದುವೆ ಮಾಡುತ್ತಿದ್ದರು. ಅವನು ಐಹಿಕ ಸುಖಗಳನ್ನು ತ್ಯಜಿಸಿದ್ದನೆಂದು ತಿಳಿದು, ಈಗ ಭೋಗಭಾಗ್ಯಗಳನ್ನು ಅನುಭವಿಸಲೆಂದು, ಅಲಂಕಾರಸಾಮಗ್ರಿಗಳು, ವೇಷಭೂಷಣಗಳು, ಬಳುವಳಿಗಳು ಎಲ್ಲವನ್ನೂ ಕೊಡುತ್ತಿದ್ದರು. ಆದರೆ ಇಂದು ಹಾಗಿದೆಯೇ? ಇಲ್ಲ. ಆದರೂ ಅದೇ ಕಂದಾಚಾರ. ಇದು ಏಕೆ ? ಇಂದಿನ ರೀತಿನೀತಿಗೆ ಅನುಗುಣವಾಗಿ ಗೌರವಿಸಿದರೆ ಸಾಲದೆ ?

ಚೌಲಸಂಸ್ಕಾರದಲ್ಲಿ ಮಗುವಿನ ಕೂದಲನ್ನು ಕತ್ತರಿಸುವುದು ಆರೋಗ್ಯದ ದೃಷ್ಟಿಯಿಂದ, ಚೆನ್ನಾಗಿ ಕಾಣಲೆಂದು. ಇದಕ್ಕೆ ಚರಕ-ಸುಶ್ರುತ ಸಂಹಿತೆಗಳಲ್ಲಿ ಆಧಾರವಿದೆ. ಹೆಣ್ಣುಮಕ್ಕಳು-ಗಂಡು ಮಕ್ಕಳು ಇಬ್ಬರಿಗೂ ಕೂದಲನ್ನು ಕತ್ತರಿಸಬೇಕು. ಇದರಿಂದ ಮುಖ ಅಂದವಾಗಿ ಕಾಣುತ್ತದೆ. ತಲೆಯು ಹಗುರವಾಗುತ್ತದೆ. ಇದು ಹಿನ್ನೆಲೆ. ಆದರೆ ಹೆಣ್ಣುಮಗುವಿಗೆ ತಲೆಗೂದಲನ್ನು ಕತ್ತರಿಸಿದರೆ ಅದು ಬಹು ದೊಡ್ಡ ಅಪರಾಧ. ಹಿಂದಿನ ಕಾಲದಲ್ಲಿ ; ಇದು ಸರಿಯಲ್ಲ. ಉಪನಯನದಲ್ಲಿ ಶಿಷ್ಯನು ಗುರುವಿನ ಬಳಿಗೆ ವಿದ್ಯಾಭ್ಯಾಸಕ್ಕೆಂದು ಹೋಗುತ್ತಿದ್ದುದು ಹಿಂದಿನ ಆಚರಣೆ. ಜೀವನದ ಕಷ್ಟ-ಸುಖಗಳ ಅನುಭವವಾಗಲೆಂದು ಗುರುವು ಅವನನ್ನು ಎಲ್ಲ ಕೆಲಸ ಕಾರ್ಯಗಳಲ್ಲಿ ತೊಡಗಿಸುತ್ತಿದ್ದ. ಕಾಡಿನಲ್ಲೇ ಜೀವಿಸಬೇಕಾಗಿತ್ತು. ಅಲ್ಲಿರುವ ಆಹಾರ ಸಾಮಗ್ರಿಗಳು, ವೇಷಭೂಷಣಗಳನ್ನೇ ಉಪಯೋಗಿಸಬೇಕಾಗಿತ್ತು. ಇಂದಿನಷ್ಟು ಪ್ರಪಂಚದ ನಾಗರಿಕತೆ, ಆವಶ್ಯಕತೆ ಹೆಚ್ಚಿರಲಿಲ್ಲ. ಹೀಗಾಗಿ ಆ ಕಾಲಕ್ಕೆ ತಕ್ಕಂತೆ ಆಚರಣೆ ನಡೆದುಬಂದಿದೆ. ದೇಹದ ರಕ್ಷಣೆಗಾಗಿ ನಾರುಬಟ್ಟೆ ಉಡುತ್ತಿದ್ದರು. ಪ್ರಕೃತಿಯಲ್ಲಿರುವ ಹುಲ್ಲುಗಳನ್ನೇ ಹೆಣೆದು ಉಡುದಾರ ಮಾಡಿಕೊಂಡರು. ಕಾಡಿನ ಹಿಂಸ್ರಜಂತುಗಳಿಂದ, ಸರೀಸೃಪಾದಿಗಳಿಂದ, ದುಷ್ಟರಿಂದ ರಕ್ಷಣೆಗಾಗಿ ದಂಡವನ್ನು ಹಿಡಿದರು, ಹೊಟ್ಟೆಹೊರೆಯಲು ಭಿಕ್ಷೆ ಬೇಡಿದರು. ಆದರೆ ಇಂದು ಅದೇ ಕ್ರಮ ಆಗಬೇಕಾಗಿಲ್ಲ. ಇಂದಿನ ರೀತಿನೀತಿಗೆ ತಕ್ಕಂತೆ ನಾವು ಆಚರಿಸಿಕೊಳ್ಳಬಹುದು.

ಗ್ರಹಣಕಾಲದಲ್ಲಿ ಊಟ ಮಾಡಬಾರದು ಇತ್ಯಾದಿಗಳಿಗೂ ವೈಜ್ಞಾನಿಕ ಹಿನ್ನೆಲೆಯಿದೆ. ಗ್ರಹಣಕಾಲದಲ್ಲಿ ಆಯಾಯಾ ಗ್ರಹಗಳ ಪ್ರಭಾವ ಜೀವಿಗಳ ಮೇಲೆ ಇದ್ದೇಇರುತ್ತದೆ. ನಾವು ತಿಂದ ಆಹಾರ ಗ್ರಹಣಕಾಲದಲ್ಲಿ ಪಚನವಾಗದಿದ್ದರೆ, ಅದರಿಂದ ತೊಂದರೆಯಾಗಬಹುದು. ಹಾಗಾಗಿ ಅದು ಖಾಲಿಯಾಗಿರಬೇಕು ಎಂದು ಚಿಂತಿಸಿರಬಹುದು. ತೊಂದರೆಯಾದರೆ ಅದು ಎಲ್ಲರಿಗೂ ಆಗಬೇಕೆಂದೇನೂ ಇಲ್ಲ. ಯಾರೋ ಒಬ್ಬರಿಗೆ ಆಗಬಹುದು. ಆ ವ್ಯಕ್ತಿ ನಾವೇ ಆಗಬಹುದೇನೋ ? ಹಾಗಾಗಿ ಎಚ್ಚರಿಕೆ ಅಗತ್ಯ ಎಂದು ಹೇಳಿರುವುದು.

ಪ್ರೊ। ಶ್ರೀಕಂಠಕುಮಾರಸ್ವಾಮಿಯವರು ಅನೇಕ ಬಾಹ್ಯಪ್ರಪಂಚದ ಕಡೆ ಕೆಲಸ ಮಾಡಿದವರಾದ್ದರಿಂದ ಆಧುನಿಕ ಪ್ರಪಂಚದ ರೀತಿ-ನೀತಿಗಳನ್ನು ಬಲ್ಲವರು. ಈ ಕಾಲದ ಜನರ ಮನೋಭಾವನೆಗಳನ್ನೂ ಬಲ್ಲವರು. ಹೀಗೆ ಪ್ರಾಚೀನತೆ-ಆಧುನಿಕತೆ ಎರಡನ್ನೂ ಮೈಗೂಡಿಸಿಕೊಂಡವರಾದ್ದರಿಂದ ನಮ್ಮ ಹಿಂದಿನ ಋಷಿಗಳ, ಶಾಸ್ತ್ರಕಾರರ ಮರ್ಮವನ್ನು ತಿಳಿದಿದ್ದಾರೆ. ಆಚರಣೆಗಳ ಮಹತ್ತ್ವವನ್ನು ತಲಸ್ಪರ್ಶಿಯಾಗಿ ತಿಳಿದುಕೊಂಡಿದ್ದಾರೆ. ಅವರ ಎಲ್ಲ ಉತ್ತರಗಳು ಒಪ್ಪುವಂತಹುದೇ ಆಗಿವೆ. ಇಂತಹ ಅಪೂರ್ವ ಕಾಗದಪತ್ರಗಳನ್ನು ಅವರಿಂದ ಸಂಗ್ರಹಿಸಿ, ಮುದ್ರಿಸಿ ಕೊಟ್ಟಿರುವುದು, ಹಿಂದಿನವರು ಮಾಡಿರುವ ಸಿದ್ಧಿಸಾಧನೆಗಳ ಮೇಲೆ ಬೆಳಕು ಚೆಲ್ಲುತ್ತದೆ.

ಇಂತಹ ಪತ್ರಗಳನ್ನು ಸಂಗ್ರಹಿಸಿ, ಪುಸ್ತಕವಾಗಿ ತರಬೇಕೆಂದು ಚಿಂತಿಸಿದ ಡಾ. ಪ್ರಣತಾರ್ತಿಹರನ್ ಅವರ ಸಾಹಸ ಮೆಚ್ಚುವಂತಹುದು. ಕಾಗದಪತ್ರಗಳನ್ನು ಸಂಗ್ರಹಿಸಲು ಮನೆಮನೆಗೆ ನೂರಾರು ಬಾರಿ ಅಲೆದಿದ್ದಾರೆ. ಬೇಸರವಿಲ್ಲದೆ ಸುತ್ತಿದ್ದಾರೆ. ವಿದ್ವಜ್ಜನರ ಮನೆಗಳಿಗೆ ಹಗಲು-ರಾತ್ರಿಯೆನ್ನದೆ ಅಲೆದಿದ್ದಾರೆ. ಹಾಸನದಿಂದ ಮೈಸೂರಿಗೆ ಅನೇಕ ಬಾರಿ ಬಂದು, ಹಗಲು-ರಾತ್ರಿಯೆನ್ನದೆ ತಿಳಿದವರ ಮನೆಗಳಿಗೆ ಹೋಗಿ ವಿಚಾರವಿನಿಮಯ ಮಾಡಿ, ಚರ್ಚಿಸಿ, ಸದುತ್ತರ ಪಡೆದು, ಸೂಕ್ತರೀತಿಯಲ್ಲಿ ಸಂಪಾದಿಸಿ, ಮುದ್ರಿಸಿಕೊಟ್ಟಿದ್ದಾರೆ. ಛಲ ಬಿಡದ ತ್ರಿವಿಕ್ರಮನಂತೆ ಈ ಕೃತಿಯ ಪ್ರಕಟಣೆಗೆ ಶ್ರಮಿಸಿದ್ದಾರೆ. ಇವರ ನಿರಂತರ ಶ್ರಮ, ಪ್ರಯತ್ನ, ಉತ್ಸಾಹ, ಕಾರ್ಯದಕ್ಷತೆ, ಕಾರ್ಯಶ್ರದ್ಧೆ,

ಅಪಾರ ಅನುಭವ, ಜ್ಞಾನಪ್ರೌಢಿಮೆ ಎಲ್ಲವೂ ಮೆಚ್ಚುವಂತಹವುಗಳು. ಸಮುದಾಯ ಅಧ್ಯಯನ ಕೇಂದ್ರದವರು ಇಂತಹ ವಿನೂತನ ಕೃತಿಯೊಂದನ್ನು ಪ್ರಕಟಿಸಿ ಹೊರತಂದಿರುವುದು ಕನ್ನಡನಾಡಿನ ಜನರೆಲ್ಲ ಸಂತೋಷಪಡುವಂತಹುದು.

* * *

ಬೆಂಗಳೂರು **ಪ್ರೊ. ಜಿ. ಅಶ್ವತ್ಥನಾರಾಯಣ**

೧.೦೧.೨೦೦೪ ನಿವೃತ್ತ ಕನ್ನಡ ಪ್ರಾಧ್ಯಾಪಕರು

ಅಸ್ತಿತ್ವದಲ್ಲಿದ್ದರೂ ಆಧಿಕ್ಯವಿಲ್ಲದ, ಪ್ರಬುದ್ಧ ಬರಹಗಳಿದ್ದರೂ ಪ್ರಸಿದ್ಧಿಯಿಲ್ಲದ ಲಲಿತಪ್ರಬಂಧದ ಹಲವಾರು ಪ್ರಕಾರಗಳಲ್ಲಿ ಪತ್ರಸಾಹಿತ್ಯವೂ ಒಂದು. ಕನ್ನಡದಲ್ಲಿ ಪತ್ರಸಾಹಿತ್ಯ ನಿರೀಕ್ಷಿತ ಮಟ್ಟದಲ್ಲಿ ಬೆಳೆದಿಲ್ಲ. ಈ ಮಾದರಿಯ ಸಾಮುದಾಯಿಕ ಕೌಟುಂಬಿಕ ಪತ್ರಮಾಲೆಯ ಗ್ರಂಥ ಪ್ರಕಟವಾಗುತ್ತಿರುವುದು ಬಹುಮಟ್ಟಿಗೆ ಇದೇ ಮೊದಲು ಎನ್ನಬಹುದು. ಇದು ಹೊರನೋಟಕ್ಕೆ ಒಂದು ಉಪವರ್ಗದ ಪತ್ರಾವಳಿಯಾದರೂ, ಅಂತಃಸತ್ತ್ವದಲ್ಲಿ ಬ್ರಾಹ್ಮಣವರ್ಗಕ್ಕೆ, ಭಾರತದ ಎಲ್ಲ ಸಮುದಾಯಗಳಿಗೆ ಸಂಬಂಧಿಸಿದ ಅರ್ಥಸೂಕ್ಷ್ಮಗಳು ಇಲ್ಲಿ ಅಡಕವಾಗಿವೆ.

* * *

ಸರ್ಕಾರಿ ಕಲಾ ಕಾಲೇಜು **ನಾಗೇಶ್. ಎಸ್.**

ಹಾಸನ ಗ್ರಂಥಪಾಲಕರು

...ಇಲ್ಲಿನ ಪತ್ರಗಳು ನಮ್ಮ ಹಿಂದಿನವರು ಸಾಮಾಜಿಕ ಸಮಸ್ಯೆಗಳನ್ನು ಹೇಗೆ ಎದುರಿಸಿದರು ಎಂಬುದನ್ನು ತಿಳಿಸಿ ನಮಗೆ ದಾರಿದೀಪಗಳಾಗಿವೆ; ಮೂಢನಂಬಿಕೆಗಳನ್ನು ತೊಲಗಿಸಿ ವಿಚಾರವಂತರನ್ನಾಗಿ ಮಾಡಲು ಶಕ್ತವಾಗಿವೆ.

* * *

ಮೈಸೂರು **ಬಿ.ವಿ. ವೆಂಕಟನಾರಾಯಣ**

೧.೦೧.೨೦೦೪ ನಿವೃತ್ತ ಬ್ಯಾಂಕ್ ಮ್ಯಾನೇಜರ್

...ನಮ್ಮ ಹಿಂದಿನವರು ಉನ್ನತವಾಗಿ ಬಾಳಿದ ಎಡೆಗಳ ದರ್ಶನ ಇಲ್ಲಿ ಆಗುತ್ತದೆ. ಅವರು ಎಷ್ಟು ಬೆಂದು ನಮ್ಮನ್ನು ಈ ಮಟ್ಟಕ್ಕೆ ತಂದರು ಎಂಬುದೂ ಇಲ್ಲಿ ತಿಳಿಯುತ್ತದೆ. ಮುಂದಿನ ಪೀಳಿಗೆಯನ್ನು ರೂಪಿಸುವಲ್ಲಿ ನಮ್ಮ ಹೊಣೆ ಏನು ಎಂಬುದೂ ತಿಳಿಯುತ್ತದೆ.

* * *

ಸರ್ಕಾರಿ ವಿಜ್ಞಾನ ಕಾಲೇಜು **ಡಾ. ಬಿ.ಎಸ್. ನರಹರಿ**

ಹಾಸನ ಭೌತಶಾಸ್ತ್ರ ಪ್ರಾಧ್ಯಾಪಕರು

'ಸಂಸ್ಕೃತಿ' ಎನ್ನುವುದು ಬಹು ವ್ಯಾಪಕವೂ ಸಂಕೀರ್ಣವೂ ಅಮೂರ್ತವೂ ಆದ ಸಂಗತಿ. 'ಸಮುದಾಯ'ದ ಸ್ವರೂಪವೂ ಅದಕ್ಕಿಂತ ತೀರಾ ಭಿನ್ನವಾದುದಲ್ಲ. ಅದು ಮೂರ್ತ, ಮತ್ತು ಸಂಸ್ಕೃತಿಯು ಅದರ ಮೂಲಕ ವ್ಯಕ್ತವಾಗುವುದು ಮೂರ್ತವಾಗಿ. ಒಬ್ಬ ವ್ಯಕ್ತಿಯ ನೂರು ವರ್ಷದ ಜೀವಿತದ ಸಾಂಸ್ಕೃತಿಕ ಸ್ವರೂಪವನ್ನು ಹಿಡಿದಿಡುವುದೇ ಅತಿ ಸಾಹಸದ ಕೆಲಸ. ಒಂದು ಸಮುದಾಯದ ಕೊನೆಯ ಪಕ್ಷ ಹತ್ತು ಸಹಸ್ರ ವರ್ಷಗಳ-ಬೇಡವೆಂದರೆ ಒಂದು ಸಾವಿರ ವರ್ಷಗಳ-ವಿಶಿಷ್ಟ ಸಾಂಸ್ಕೃತಿಕ ಪರಿಪಾಕವನ್ನು ಅಳೆಯುವುದು ಸುಲಭದ ಮಾತಲ್ಲ. ಪರಿವರ್ತನಶೀಲತೆಯ ದೃಷ್ಟಿಯಿಂದ ಇಪ್ಪತ್ತನೆಯ ಶತಮಾನವು ಭಾರತೀಯ ಸಮಾಜಕ್ಕೆ ಅತಿ ವಿಶಿಷ್ಟವಾದುದು. ಒಂದು ಮಹಾಪರಂಪರೆಯ ಬೇರುಗಳನ್ನು ಹಿಡಿದು ನಿತ್ಯಪರಿವರ್ತನಶೀಲವಾದ ೨೧ನೆಯ ಶತಮಾನದ ಬಾಗಿಲಲ್ಲಿ ನಿಂತು ಅದರ ಸಾಂಸ್ಕೃತಿಕ ಸ್ವರೂಪವನ್ನು ಗ್ರಹಿಸಿ ಹಿಡಿದಿಡುವುದು ಸಾಧಾರಣವಾದ ಕೆಲಸವಲ್ಲ. ವೈದಿಕ ಪರಂಪರೆಯನ್ನು ಆಳವಾಗಿ ಅಭ್ಯಸಿಸಿ, ಹಲವು ದಶಕಗಳ ಕಾಲ ಅದರ ಜೀವನಕ್ರಮದಲ್ಲಿ ಹಾಸುಹೊಕ್ಕಾಗಿ, ಅನುಷ್ಠಾನಗಳನ್ನು ನಿಯತವಾಗಿ ಮಾಡುತ್ತಿರುವವರಿಗೂ ಅದರ ನಿತ್ಯಜೀವಂತವೂ ಕ್ರಿಯಾಶೀಲವೂ ನಮ್ಯವೂ ಚಿರಂತನ ಸ್ಫೂರ್ತಿಯ ಆಕರವೂ ಆದ ವಿಸ್ಮಯಸ್ವರೂಪವು ಇದಮಿತ್ಥಮ್ ಎಂದು ಅರ್ಥವಾಗಲಾರದು. ಆ ಬಗೆಗೆ ಮೇಲ್ಪದರದ ಅಲ್ಪಾತಿ ಅಲ್ಪ ಹೊರಗ್ರಹಿಕೆಗಳನ್ನು ಆಧರಿಸಿ ಖಚಿತ ನುಡಿಗಳನ್ನಾಡುವ ಉದಾಸೀನ ವರ್ತನೆಯೇ ಈಗ ವಿಜೃಂಭಿಸುತ್ತಿದೆ. ಅದರ ನಡುವೆ ನಿಂತು, ಈ ಮಹಾಪರಂಪರೆಯನ್ನು ಅರ್ಥಮಾಡಿಕೊಳ್ಳಲು ಎಲ್ಲ ಸಾಧ್ಯ ಆಕರಗಳನ್ನೂ ದುಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಇಲ್ಲಿ ಕಾಣುತ್ತದೆ.

'ಸಂಕೇತಿ : ಒಂದು ಅಧ್ಯಯನ' – ಕೆಲವು ಅನಿಸಿಕೆಗಳು

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು
ಡಾ. ಆರ್. ರಾಮಕೃಷ್ಣ
ಭಾಷಾವಿಜ್ಞಾನ ಪ್ರಾಧ್ಯಾಪಕರು

...ನಿಜಕ್ಕೂ ನಿಮ್ಮ ಶ್ರಮ ಸಾರ್ಥಕವಾಗಿದೆ. ನನಗಂತೂ ಬಹಳ ಮೆಚ್ಚುಗೆಯಾಯಿತು. ನಿಮ್ಮ ವಿಚಾರಸರಣಿ, ವಿಶ್ಲೇಷಣಾ ವಿಧಾನ, ಅಧ್ಯಯನಕ್ರಮ, ವಿಷಯ ವಿಂಗಡಣೆ, ವಿಷಯ ಪ್ರಾತಿನಿಧ್ಯ, ಸುಂದರ ಮುದ್ರಣದ ಹಿಂದಿನ ಕಲಾಪ್ರೇಮ ಎಲ್ಲವೂ ಸಂತಸದ ಸಂಗತಿಯೇ...

* * *

ಕಾಫಿ ಬೋರ್ಡ್
ಬೆಂಗಳೂರು
ಕೆ.ವಿ. ಸುಬ್ಬರಾವ್, ಎಂ.ಎ.,ಬಿ.ಎಲ್.,
ಜಾಯಿಂಟ್ ಸೆಕ್ರೆಟರಿ (ರಿ.),

...ಡಾಕ್ಟೋರಲ್ ಪ್ರಬಂಧಗಳಿಗೆ ನೀಡುತ್ತಿರುವ ಡಿಗ್ರಿಗಳ ವಿಷಯವಾಗಿ ಒಂದು ದಿನ ಚರ್ಚೆ ಹೊರಳಿತು. ಶ್ರದ್ಧೆ-ಶ್ರಮಗಳಿಗೆ ಒಂದು ಮಾದರಿಯಾಗಿ ನಿಲ್ಲಬಲ್ಲ ಪ್ರಬಂಧವನ್ನು ನಾನು ನಿಮಗೆ ತಂದುಕೊಡುತ್ತೇನೆ ಎಂದು ಹೇಳಿ ಪ್ರೊ. ಅಶ್ವತ್ಥನಾರಾಯಣರಾಯರು ಮಾರನೆಯ ದಿವಸವೇ ತಂದುಕೊಟ್ಟರು...

...ಸಂಕೇತಿಗಳಿಗೆ ಬೇಸಾಯವೇ ಮುಖ್ಯ ವೃತ್ತಿ. ಸಂಸಾರ ಪ್ರಾರಂಭಿಸಿದ ಮೇಲೆ ಮನೆ ಕಟ್ಟುವ ಸಂದರ್ಭ ಬಂದರೆ, ಆಗಲೂ ಬೇಸಾಯ ದೃಷ್ಟಿಯನ್ನು ಗಮನದಲ್ಲಿಟ್ಟಿರುತ್ತಾರೆ. ಸಂಸಾರದಲ್ಲಿ ಮಿಕ್ಕ ಸಮುದಾಯಗಳಿಗೆ ಹೋಲಿಸಿದರೆ ಸಂಕೇತಿಗಳ ಕುಟುಂಬಗಳಲ್ಲಿ ಸ್ವಲ್ಪ ನಚ್ಚು ಹೆಚ್ಚು. ಬೇಸಾಯವನ್ನು ಮುಖ್ಯ ವೃತ್ತಿಯಾಗಿಟ್ಟುಕೊಂಡು ಕಲೆ, ಸಾಹಿತ್ಯ ಮುಂತಾದ ಜೀವನವನ್ನು ಸಂಸ್ಕರಣಗೊಳಿಸುವ ಇತರ ಕಲೆಗಳನ್ನು ರೂಢಿಸಿಕೊಂಡು ಬಂದಿದ್ದಾರೆ. ಶ್ರಮಜೀವಿಗಳು. ಡಾ. ಹರನ್‌ರವರು ಸಂಕೇತಿ ಅಧ್ಯಯನವನ್ನು ಬಹು serious ಆಗಿ ಕೈಗೊಂಡು ಆ ಸಮುದಾಯದ ಎಲ್ಲ ಮುಖಗಳನ್ನೂ ಪರಿಚಯ ಮಾಡಿಕೊಟ್ಟಿದ್ದಾರೆ...ಸಾಕಷ್ಟು ವ್ಯಾಸಂಗ (Desk Work) ಕ್ಷೇತ್ರಾಭ್ಯಾಸ (Field Studies) ಎರಡೂ ಹೊಯ್‌ಕಯ್ ಆಗಿ ಬೆರೆತಿವೆ...

* * *

ಕನ್ನಡ ಪ್ರಭ ದಿನಪತ್ರಿಕೆ
ಬೆಂಗಳೂರು
ಡಾ. ಸುರೇಶ ಪಾಟೀಲ
ವಿಮರ್ಶಕರು

ಶಿಷ್ಟಜನಾಂಗವೆಂದು ಅಖಿಲಭಾರತ ಮಟ್ಟದಲ್ಲಿ ಗುರುತಿಸಲ್ಪಡುವ ಬ್ರಾಹ್ಮಣರದು ದೇಶದಾದ್ಯಂತ ಏಕರೂಪದ ಸಂಸ್ಕೃತಿಯೇನೂ ಅಲ್ಲ. ವೇದೋಪನಿಷತ್ತುಗಳು-ಶ್ರುತಿ-ಸ್ಮೃತಿ ಮತ್ತು ಪುರಾಣಗಳನ್ನು ಆಧಾರವಾಗಿಟ್ಟುಕೊಂಡ ಜನಾಂಗವಾಗಿ ಇವರಲ್ಲಿ ಸ್ಥೂಲವಾಗಿ ಕೆಲವು ಸಮಾನ-ಸಾಮಾನ್ಯಾಂಶಗಳು ಕಂಡುಬರುತ್ತವಾದರೂ ಅಖಿಲಭಾರತ ಮಟ್ಟದಿಂದ ನೋಡುವುದಾದರೆ ಇವರಲ್ಲೂ ಅನೇಕ ಉಪವಿಭಾಗಗಳು ಕಂಡುಬರುತ್ತವೆ. ಈ ಉಪವಿಭಾಗ ಮುಖ್ಯವಾಗಿ ವಿಂಧ್ಯೋತ್ತರ ಪಂಚಗೌಡ ಭೇದ ಮತ್ತು ವಿಂಧ್ಯದಕ್ಷಿಣ ದ್ರಾವಿಡಭೇದ ಎಂದು ಎರಡು ತೆರನಾಗಿದೆ ಮತ್ತು ಈ ಒಂದೊಂದು ಉಪವಿಭಾಗದಲ್ಲೂ ಮತ್ತೆ ಅನೇಕ ಒಳಜಾತಿಗಳಿದ್ದು ಈ ಜಾತಿಗಳ ಜೀವನಕ್ರಮ ವಿಶಿಷ್ಟವೂ ಅಧ್ಯಯನಪೂರ್ಣವೂ ಆಗಿದೆ. ಈ ಒಂದೊಂದನ್ನೂ ಕುರಿತಂತೆ ಐತಿಹಾಸಿಕ-ಸಾಂಸ್ಕೃತಿಕ ಅಧ್ಯಯನಕ್ಕೆ ಸಾಕಷ್ಟು ಅವಕಾಶವಿದೆ. ಇಂಥ ದಕ್ಷಿಣದ ಉಪಪಂಗಡಗಳಲ್ಲಿ ತಮಿಳುನಾಡಿನಿಂದ ಕರ್ನಾಟಕಕ್ಕೆ ಸುಮಾರು ಸಾವಿರ ವರ್ಷದ ಹಿಂದೆಯೇ ವಲಸೆ ಬಂದ ಸಂಕೇತಿ ಸಮುದಾಯವು ವಿಶಿಷ್ಟವಾದುದು. ಉಳಿದ 'ಬ್ರಾಹ್ಮಣ' ಸಮುದಾಯಗಳಿಂದ ತಮ್ಮದೇ ಜೀವನಕ್ರಮ ; ಲೌಕಿಕ, ಅಲೌಕಿಕ ನೆಲೆಗಳಿಂದ ತಮ್ಮ ವಿಶಿಷ್ಟತೆಯನ್ನು ಇನ್ನೂ ಉಳಿಸಿಕೊಂಡಿರುವ ಈ ಜನಾಂಗದ ಒಟ್ಟು ಸಂಸ್ಕೃತಿಯನ್ನು ಕುರಿತಂತೆ ಡಾ. ಪ್ರಣತಾರ್ತಿಹರನ್ ಅವರು ನಡೆಸಿದ ಆಳವೂ ಶಾಸ್ತ್ರೀಯವೂ ಮತ್ತು ಸಮಗ್ರವೂ ಆದ ಅಧ್ಯಯನದ ಫಲವೇ ಪ್ರಸ್ತುತ ಗ್ರಂಥ. ಇದು ಮುಖ್ಯವಾಗಿ ಕರ್ನಾಟಕವನ್ನು ಮೂಲನೆಲೆಯನ್ನಾಗಿಟ್ಟುಕೊಂಡ ಸಂಕೇತಿಗಳ ಸಂಸ್ಕೃತಿಯನ್ನು ಕುರಿತದ್ದಾಗಿದೆ.

ಇಲ್ಲಿ ಉಲ್ಲೇಖಿಸತಕ್ಕ ಇನ್ನೊಂದು ಅಂಶವೆಂದರೆ, ಕೊನೆಯಲ್ಲಿ ಸೇರಿಸಿದ ೫ ಅನುಬಂಧಗಳು ಗ್ರಂಥದ ಮೌಲಿಕತೆಯನ್ನು ಹೆಚ್ಚಿಸಿವೆ. ಸಂಶೋಧನೆಯು ನಿರ್ದಿಷ್ಟ ಜನಾಂಗ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟಿದ್ದಾದ್ದರಿಂದ ಅದಕ್ಕೆ ಸಂಬಂಧಿಸಿದ ಪರಿಭಾಷೆಗಳನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಈ ಅನುಬಂಧಗಳು ಪೂರಕವಾಗಿವೆ. ಈ ಎಲ್ಲ ಅಧ್ಯಾಯಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ನಮಗೆ ಗ್ರಂಥಕರ್ತರ ಪರಿಶ್ರಮ ಮನದಟ್ಟಾಗುತ್ತದೆ. ದಾಖಲೆ ಸಂಗ್ರಹ, ಕ್ಷೇತ್ರಕಾರ್ಯ, ಐತಿಹ್ಯವೇ ಮೊದಲಾದ ಅಂಶಗಳ ಸಂಗ್ರಹ ಮತ್ತು ಅವುಗಳ ಯಥಾರ್ಥ ತರ್ಕಬದ್ಧ ನಿರೂಪಣೆಗಳೇ ಈ ಪ್ರಬಂಧದ ಮೂಲಶಕ್ತಿಯಾಗಿವೆ...

ಈ ಪ್ರಬಂಧವನ್ನು ಒಂದು ರೀತಿಯಲ್ಲಿ ಸಂಕೇತಿಗಳ 'ಸಾಂಸ್ಕೃತಿಕ ವಿಶ್ವಕೋಶ' ಎಂದೂ ಕರೆಯಬಹುದಾಗಿದೆ. ಅಂದರೆ ಅಷ್ಟರಮಟ್ಟಿಗೆ ಒಂದು ಜನಾಂಗಕ್ಕೆ ಸಂಬಂಧಪಟ್ಟ ವಿವರಗಳನ್ನೆಲ್ಲ ಇದು ಒಳಗೊಂಡಿದೆ.

'ಜನಾಂಗ'ಗಳ ಸ್ವರೂಪ, ಸಮುದಾಯಗಳಲ್ಲಿ ಆಗುತ್ತಿರುವ ಸಾಂಸ್ಕೃತಿಕ ಸ್ಥಿತ್ಯಂತರ ಹಾಗೂ, ಕೈಗಾರಿಕೀಕರಣ-ನಗರೀಕರಣಗಳ ಮುಂದುವರಿಕೆಯಾಗಿ ದಾಪುಗಾಲಿಡುತ್ತಾ ಧಾವಿಸುತ್ತಿರುವ ಇವತ್ತಿನ 'ಜಾಗತೀಕರಣ'ದ ಸಂದರ್ಭದಲ್ಲಿ ನಮ್ಮ ದೇಶೀಯ, ಪ್ರಾದೇಶಿಕ ಮತ್ತು ಸ್ಥಳೀಯ ಸಂಸ್ಕೃತಿಗಳು ತಮ್ಮತನವನ್ನು ಅನಿವಾರ್ಯವಾಗಿ ಲಯವಾಗಿಸಿಕೊಳ್ಳುತ್ತ ಸಾಂಸ್ಕೃತಿಕ ಸೂಕ್ಷ್ಮಗಳು ಅರ್ಥ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಅಂಥ ಸೂಕ್ಷ್ಮಗಳನ್ನು ತಿಳಿದುಕೊಳ್ಳುವ, ಉಳಿಸಿಕೊಳ್ಳುವ, ಅವುಗಳ ಮೂಲಕ ನಮ್ಮ ಸಂಸ್ಕೃತಿಯನ್ನು ಪುನರ್‌ರೂಪಿಸುವ ನಿಟ್ಟಿನಲ್ಲಿ ಇಂಥ ಅಧ್ಯಯನಗಳು ಅಗತ್ಯ. ನಮ್ಮದು ಬಹುಜನಾಂಗೀಯ ಮತ್ತು ಬಹುಮುಖೀ ಸಂಸ್ಕೃತಿಯ ಸಮಾಜ ಮತ್ತು ದೇಶ. ಒಂದೊಂದು ಧರ್ಮ- ಪ್ರದೇಶ-ಪ್ರಾಂತ್ಯಗಳ ಒಳಗೆ ಇರುವ ವೈವಿಧ್ಯತೆ ಮತ್ತು ಅವುಗಳ ಗುಣವಿಶೇಷವನ್ನು ಅರಿಯಲು ಇಂಥ ಜನಾಂಗೀಯ ಅಧ್ಯಯನಗಳು ಅಪೇಕ್ಷಣೀಯವಾಗಿವೆ. ಈ ದೃಷ್ಟಿಯಿಂದ ಡಾ. ಪ್ರಣತಾರ್ತಿಹರನ್ ಅವರ ಈ ಗ್ರಂಥವು ಇಂಥ ಉಪಸಮುದಾಯಗಳ ಅಧ್ಯಯನಕ್ಕೆ ಮಾದರಿಯಾಗಿದೆ. ಇಂಥ ಒಂದು ಮಹತ್ವದ ಮತ್ತು ಮಾದರಿಯ ಗ್ರಂಥರಚನೆ ಮಾಡಿರುವ ಡಾ. ಬಿ.ಎಸ್. ಪ್ರಣತಾರ್ತಿಹರನ್ ಅಭಿನಂದನಾರ್ಹರಾಗಿದ್ದಾರೆ.

* * *

ಬೆಂಗಳೂರು **ಪ್ರೊ. ಕೆ.ಎಸ್. ಕೃಷ್ಣಮೂರ್ತಿ**
೧೭.೧೨.೦೩ ನಿವೃತ್ತ ಕನ್ನಡ ಪ್ರಾಧ್ಯಾಪಕರು

...ಮೊಟ್ಟಮೊದಲನೆಯದಾಗಿ 'ಸಂಕೇತಿ : ಒಂದು ಅಧ್ಯಯನ' ಮಹಾಕೃತಿಯ ಪ್ರಕಟಣೆಗಾಗಿ ನಿಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಇದೊಂದು ಮಹಾಸಾಹಸವೇ ಸರಿ.

ಈ ಗ್ರಂಥವು ಸಂಕೇತಿ ಅಧ್ಯಯನದ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ತಲೆತಲಾಂತರದಿಂದ ಬಂದಿದ್ದ ವಿಷಯಗಳನ್ನೇ ಹೇಳಿಕೊಂಡು ಅದೇ ಸಂಕೇತಿಗಳ ಚರಿತ್ರೆ ಎಂದು ತಿಳಿದವರಿಗೆ ಈ ಗ್ರಂಥದ ವಿಷಯವು ಸಂಕೇತಿಗಳಷ್ಟೇ ಅಲ್ಲ, ಎಲ್ಲ ಬ್ರಾಹ್ಮಣ ಸಮುದಾಯದ ಜನರ ಕಣ್ಣುಗಳನ್ನೂ ತೆರೆಸುತ್ತದೆ. ಸಂಕೇತಿಗಳೆಂಬ ಒಂದು ಸಣ್ಣ ಬ್ರಾಹ್ಮಣ ಸಮುದಾಯದ ಮೇಲೆ ಇಷ್ಟೊಂದು ವಿಷಯ ಗರ್ಭೀಕೃತವಾಗಿದೆ ಎಂಬುದು ನಿಮ್ಮ ಗ್ರಂಥವನ್ನು ಅವಲೋಕಿಸಿದ ಮೇಲೆಯೇ ಅರ್ಥವಾಗುತ್ತದೆ.

ಈ ಮಹಾಪ್ರಬಂಧದ ರಚನೆಗಾಗಿ ನೀವು ಕೈಗೊಂಡ ಕ್ಷೇತ್ರಕಾರ್ಯ ಎಷ್ಟು ಶ್ರಮದಾಯಕವಾದುದು ಮತ್ತು ವಿಪುಲವಾದುದು ಎಂಬುದು ನೀವು ಕೊಟ್ಟಿರುವ ಅನುಬಂಧಗಳಿಂದ ತಿಳಿಯುತ್ತದೆ. ಒಟ್ಟಿನಲ್ಲಿ ಇದೊಂದು ಶಾಶ್ವತ ಕೃತಿ ಎಂಬುದು ಸುಸ್ಪಷ್ಟ.

ನಿಮ್ಮ ಮಹಾಗ್ರಂಥದಲ್ಲಿ ಬಹು ಮುಖ್ಯವಾದ ವಿಷಯವೆಂದರೆ ಕರ್ನಾಟಕದ ಸಂಕೇತಿಗಳ ಐತಿಹಾಸಿಕ ವಲಸೆಗಳು ಮತ್ತು ಅವರ ಆಂತರಿಕ ವಲಸೆಗಳು. ಇದೊಂದು ಕಣ್ಣು ತೆರೆಸುವ ವಿಷಯವಾಗಿದೆ.

* * *

ಮೈಸೂರು **ಲ.ನ. ಶಾಸ್ತ್ರಿ**
೧೭.೧೨.೦೩ ಸಂಶೋಧಕರು ಮತ್ತು ಲೇಖಕರು

ನಾನು ಹಲವಾರು ಪಿಎಚ್.ಡಿ., ಪ್ರಬಂಧಗಳನ್ನು ನೋಡಿದ್ದೇನೆ.... ನಿಮ್ಮ ಈ ಪುಸ್ತಕ ಅದಕ್ಕೆ ಒಂದು ದೊಡ್ಡ ಅಪವಾದ.... REAL SCIENTIFIC RESEARCH .

ಬ್ರಾಹ್ಮಣ ಜನಾಂಗದ ಒಂದು ಉಪಸಂಸ್ಕೃತಿಯ ಪರಿಚಯವನ್ನು ಅತ್ಯಂತ ವಿಶದವಾಗಿ ಮಾಡಿಕೊಟ್ಟಿರುತ್ತೀರಿ. ಇದಕ್ಕೆ ಸಂಕೇತಿ ಜನಾಂಗದವರಷ್ಟೇ ಅಲ್ಲ, ಕನ್ನಡಿಗರೆಲ್ಲರೂ ಕೃತಜ್ಞರಾಗಿರಬೇಕು. ನಿಮಗೆ ಪಿಎಚ್.ಡಿ., ಬಂದು ಹತ್ತು ವರ್ಷವಾದ ನಂತರ ಪುಸ್ತಕ ಪ್ರಕಟವಾಗುತ್ತಿದ್ದರೂ ಅದು FRESH ಆಗಿಯೇ ಇದೆ. ಇಂತಹ ಅಧ್ಯಯನ ಮಾಡುವವರಿಗೆ SOURCE BOOK ಆಗಿ ನೂರ್ಕಾಲ ಬೆಳಗುತ್ತದೆ....

* * *

ಸಾಮಾಜಿಕ ಪ್ರಜ್ಞೆಗೆ ನಮಸ್ಕಾರ

ವಿಶ್ವಕುಟುಂಬದ ಗೌರವಾನ್ವಿತ ಸದಸ್ಯ

ಡಾ. ಆರ್. ಎಸ್. ಚಂದ್ರಶೇಖರಮೂರ್ತಿ

ಚಿಕಿತ್ಸೆಯ ಬಹುಕ್ಷೇತ್ರಗಳಲ್ಲಿ ಪರಿಣತರಾದ ಮೇಧಾವೀ ವೈದ್ಯ ಡಾ. ಚಂದ್ರಶೇಖರಮೂರ್ತಿ, ಎಂ.ಡಿ.,ಎಫ್.ಆರ್.ಸಿ.ಎಸ್. (ಇಂಗ್ಲೆಂಡ್), ಎಫ್.ಆರ್.ಸಿ.ಎಸ್. (ಎಡಿನ್‌ಬರೊ), ಎಫ್.ಎ.ಸಿ.ಎಸ್., ಡಿಪ್ಲೊಮೇಟ್ ಅಮೆರಿಕನ್ ಬೋರ್ಡ್ ಆಫ್ ಸರ್ಜರಿ, ಹೈ ಡೆಸರ್ಟ್ ಮೆಡಿಕಲ್ ಗ್ರೂಪ್, ಹೆರಿಟೇಜ್ ಹೆಲ್ತ್ ಕೇರ್, ಕ್ಯಾಲಿಫೋರ್ನಿಯಾ, ಯು.ಎಸ್.ಎ., ಅವರು ಹುಟ್ಟಿದ್ದು ಹಾಸನಜಿಲ್ಲೆಯ ಕಟ್ಟೇಪುರಗ್ರಾಮದ ಗಂಗಾಧರಶಾಸ್ತ್ರಿಗಳ ವಂಶದಲ್ಲಿ ; ವೈದ್ಯರಾಗಿ ರೂಪುಗೊಂಡುದು ಮೈಸೂರಿನಲ್ಲಿ; ವಿಸ್ತೃತ ಅಧ್ಯಯನದ ಮೂಲಕ ವೃತ್ತಿನೈಪುಣ್ಯದ ಎತ್ತರಗಳನ್ನೇರಿ ತಮ್ಮ ಅಮೂಲ್ಯ ವೈದ್ಯಕೀಯ ಸೇವೆ ಸಲ್ಲಿಸಿದ್ದು ಭಾರತ, ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿ ! ಇದೀಗ ಅವರು ಅಮೆರಿಕದ ಘನಸೇವೆಯಲ್ಲಿ ಕರ್ನಲ್.

ಅದು 1978ರ ಕಾಲ ; ಡಾ. ಮೂರ್ತಿ North Carolina Stateನ Sprucepine Cityಯಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದ ಸಮಯ. ಅಮೆರಿಕದ ಅಧ್ಯಕ್ಷ ರೇಗನ್ ಆ ಪ್ರಾಂತ್ಯದ ಪ್ರವಾಸದಲ್ಲಿದ್ದರು ; ಡಾ. ಮೂರ್ತಿ Surgeon on duty ಆಗಿ ವಿಶ್ವದ ಅತಿಪ್ರತಿಷ್ಠಿತ ಅಧ್ಯಕ್ಷರ ವೈದ್ಯಕೀಯ ನಿರ್ವಹಣೆಗಾಗಿ ನಿಯುಕ್ತರಾದರು. ವೃತ್ತಿನೈಪುಣ್ಯಕ್ಕೆ ಮರ್ಯಾದೆ ಸಂದ ಸನ್ನಿವೇಶ! ಅಂಥ ಗೌರವ ಅವರಿಗೆ ಹಲವು ಬಾರಿ ಸಂದಿದೆ. 1991ರಲ್ಲಿ ಅವರು U.S. Army Reservesನ ಗೌರವಾನ್ವಿತ ಸದಸ್ಯರಾಗಿದ್ದರು; Special Surgeon ಆಗಿ ಸೇವೆ ಸಲ್ಲಿಸಿದರು; Charge of Surgical Department ಆಗಿಯೂ ಇದ್ದರು. Nashville Medical Collegeನಲ್ಲಿ Surgery ಮತ್ತು Anatomy ವಿಭಾಗಗಳ ಉಪಪ್ರಾಧ್ಯಾಪಕರಾಗಿದ್ದ ಅವರನ್ನು ಅಮೆರಿಕ ಸರ್ಕಾರ ಕೊಲ್ಲಿಯುದ್ಧಕ್ಕೆ ಕಳಿಸಿಕೊಟ್ಟಿತು. Operation Desert Shield ಮತ್ತು Operation Desert Stormಗಳಲ್ಲಿ ಸರ್ಜಿಕಲ್ ವಿಭಾಗದ ಮುಖ್ಯಸ್ಥರಾಗಿ ಆರು ತಿಂಗಳು ಸಲ್ಲಿಸಿದ ಅನುಪಮ ಸೇವೆಗಾಗಿ ಸರ್ಕಾರ ಅವರಿಗೆ ಸುವರ್ಣಪದಕ ನೀಡಿ ಗೌರವಿಸಿತು ! ಕರ್ತೃತ್ವಶಾಲಿಗಳಿಗೆ ಗುರುತರ ಜವಾಬ್ದಾರಿಗಳೂ ಗೌರವ ಪ್ರಶಸ್ತಿಗಳೂ ಕಾದಿರುತ್ತವೆ !

ಡಾ. ಚಂದ್ರಶೇಖರಮೂರ್ತಿ (ಜ. 1933) ಅವರದು ವಿದ್ವಾಂಸರ ವಂಶ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರೂಪುಗೊಂಡುದು ಹಾಸನ ಜಿಲ್ಲೆಯ ಕಟ್ಟೇಪುರ ಎಂಬ ಅಗ್ರಹಾರ. ದೇಶದ ಅತಿಶ್ರೇಷ್ಠ ವಿದ್ವಾಂಸರನ್ನು ಒಂದೆಡೆ ಸೇರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದಲೇ ರೂಪುಗೊಂಡುದು ಅದು. ಅಲ್ಲಿನ ಪ್ರಸಿದ್ಧ ವಿದ್ವಾಂಸ ಗಂಗಾಧರಶಾಸ್ತ್ರಿಗಳ ಒಬ್ಬರೇ ಮಗ ಕೆ.ಜಿ. ಸುಬ್ರಹ್ಮಣ್ಯ ಶಾಸ್ತ್ರಿಗಳು. ಅವರಾದರೋ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿ ಬಿ.ಎ., ಪದವಿಯನ್ನೂ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಓದಿ ಸಾಹಿತ್ಯ ವಿದ್ವಾನ್ ಪದವಿಯನ್ನೂ ಒಂದೇ ಕಾಲಕ್ಕೆ (1924) ಪಡೆದರು ; ನವೀನಂ ರಾಮಾನುಜಾಚಾರ್ಯ ಸುವರ್ಣಪದಕದಿಂದಲೂ ಮರ್ಯಾದಿತರಾದರು. ಸಾಹಿತ್ಯ, ವೇದ, ಶಾಸ್ತ್ರಗಳಲ್ಲಿ ನೈಪುಣ್ಯ ಪಡೆದರು; ಶಾಲಾ ಕಾಲೇಜುಗಳಲ್ಲಿ ಅಧ್ಯಾಪನ ಮಾಡಿದರು ; ಮನೆಯಲ್ಲಿ ಗುರುಕುಲ ನಡೆಸಿದರು ; ಪುರಾಣಪ್ರವಚನಗಳ ಚಕ್ರವರ್ತಿಯಾದರು ; ಶಂಕರರ ಮತ್ತು ಅವರ ತತ್ತ್ವಜ್ಞಾನದ ಬಗೆಗಿನ ಅಧಿಕಾರವಾಣಿ ಎನಿಸಿದರು. ಅವರು ಕೈ ಹಿಡಿದದ್ದು ಅಗ್ರಹಾರದ ವೇದಪಾರಂಗತ ಸುಬ್ರಹ್ಮಣ್ಯಾವಧಾನಿಗಳ ಮಗಳು ಗಂಗಮ್ಮನವರನ್ನು. ಈ ದಂಪತಿಗಳ ಏಳು ಗಂಡು ಮಕ್ಕಳಲ್ಲಿ ಮೂರನೆಯವರಾಗಿ ಹುಟ್ಟಿದವರು ಡಾ. ಮೂರ್ತಿ ಅವರು.

ಡಾ. ಮೂರ್ತಿಯವರ ಸಾಧನಾಯುಗದ ಕಥೆಯೂ ಸ್ಫೂರ್ತಿದಾಯಕವಾದದ್ದು ; ಹಾಸನದ ಅರಳೇಪೇಟೆ ಪ್ರಾಥಮಿಕ ಶಾಲೆಯಿಂದ ಬಂದು ಬಸವಪಟ್ಟಣದ ಮಾಧ್ಯಮಿಕ ಶಾಲೆಯಲ್ಲಿ ಸೀತಾರಾಮಯ್ಯ ಎಂಬ ಅಧ್ಯಾಪಕರ ಗರಡಿಗೆ ಸೇರಿದಾಗಲೇ

ಅವರ ಪ್ರತಿಭೆಯ ಕಣ್ಣು ಕುಡಿಯೊಡೆದಿತ್ತು. ಆ ಕಾಲಕ್ಕೆ ಅವರ ತಂದೆಯವರ ಗುರುಕುಲದ ವಿದ್ಯಾರ್ಥಿಯಾಗಿದ್ದವರು ಪಿ.ವಿ. ಶ್ರೀಕಂಠಯ್ಯನವರು ; ಅವರು ಕೊಣನೂರಿನ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದವರು. ತಮ್ಮ ಗುರುಗಳಾದ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಸಲ್ಲಿಸಬಹುದಾದ ಸಾರ್ಥಕ ಗುರುದಕ್ಷಿಣೆ ಎಂದರೆ ಜಾಣಬಾಲಕ ಚಂದ್ರಶೇಖರನನ್ನು ತಮ್ಮ ಗರಡಿಯಲ್ಲಿ ಪಳಗಿಸುವುದು ಎಂದು ಅವರಿಗೆ ತೋರಿತು. ಗುರುಗಳನ್ನು ಕಾಡಿ ಬೇಡಿ ಆ ಬಾಲಕನನ್ನು ತಮ್ಮ ಶಾಲೆಗೆ ಸೆಳೆದುಕೊಂಡರು. ಅಲ್ಲಿಂದ ಮುಂದಿನದು ತಡೆಯಿಲ್ಲದ ಓಟ : ಮೈಸೂರಿನ ಬನುಮಯ್ಯ ಪ್ರೌಢಶಾಲೆ ; ಹಾಸನದಲ್ಲಿ ಇಂಟರ್, ರಾಜ್ಯಕ್ಕೆ ಒಂಬತ್ತನೆಯ ರ್‍ಯಾಂಕ್ ; ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದು, 1956ಕ್ಕೆ ವೈದ್ಯ ಪದವಿ. ಆಗ ಚಂದ್ರಶೇಖರ್‌ಗೆ 23 ವರ್ಷ ವಯಸ್ಸು. ಆಗಲೇ ಮಂಗಳೂರಿನ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನಲ್ಲಿ ಪೆಥಾಲಜಿ ಅಧ್ಯಾಪನ ; ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಮೂರು ವರ್ಷ ಅನಾಟಮಿ ಅಧ್ಯಾಪನ ; 1960ರಲ್ಲಿ ಲಂಡನ್‌ಗೆ ಪಯಣ, ಮೂರು ವರ್ಷಗಳ ಅಧ್ಯಯನ, ಅನುಭವ, ಎರಡು FRCS ಪದವಿಗಳೊಂದಿಗೆ ಭಾರತಕ್ಕೆ ಮರುಯಾನ ; ಇಡೀ ಮೈಸೂರು ರಾಜ್ಯದಲ್ಲಿನ 'Youngest FRCS Specialist' ಎಂಬ ಹೊಗಳಿಕೆಗೆ ಭಾಜನ ; ಹುಬ್ಬಿ ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ಮತ್ತು ಸರ್ಜರಿ ಎರಡೂ ವಿಭಾಗಗಳಿಗೆ ಉಪಪ್ರಾಧ್ಯಾಪಕರಾಗಿ ಆಯ್ಕೆ ; ಹೀಗೆ ಎರಡು Facultyಗಳಿಗೆ ಆಯ್ಕೆಯಾದ ಮೊದಲ ಮತ್ತು ಕೊನೆಯ ಪ್ರಾಧ್ಯಾಪಕ ಎಂಬ ದಾಖಲೆಯ ಸ್ಥಾಪನೆ ! ಅಲ್ಲಿಂದ ಮುಂದೆ ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಮೆಡಿಕಲ್ ಕಾಲೇಜು, ಮತ್ತೆ ಹುಬ್ಬಿ ; ತಡೆಯಿಲ್ಲದ ಉನ್ನತಿಯನ್ನರಸಿ ಇಂಗ್ಲೆಂಡಿಗೆ; ಯುರಾಲಜಿ ಮತ್ತು ಆರ್ತೋಪೀಡಿಕ್ ನೈಪುಣ್ಯ ಸಾಧನೆ; ಯು.ಪಿ.ಎಸ್.ಸಿ. ಮೂಲಕ ಸರ್ಜಿಕಲ್ ಸ್ಪೆಷಲಿಸ್ಟ್, ಡಿವಿಷನಲ್ ಮೆಡಿಕಲ್ ಆಫೀಸರ್, ಕೇಂದ್ರೀಯ ರೈಲ್ವೆ ಆಸ್ಪತ್ರೆಯ ಮುಖ್ಯಸ್ಥರಾಗಿ ಆಯ್ಕೆಯಾದಾಗ ಭಾರತದಲ್ಲೇ ಇದ್ದು ಅಧ್ಯಾಪನ ಮಾಡಬೇಕೆಂಬ ಕನಸನ್ನು ನನಸಾಗಿಸಿಕೊಳ್ಳಲು ಮರುಯಾನ; ಅಹಮದಾಬಾದ್‌ನಲ್ಲಿ ನಡೆದ Officers' Training ಸಮಯದಲ್ಲಿ Best Student Gold Medal ಪ್ರಾಪ್ತಿ. ಆದರೇನು ? ಆಕಾಶ ಹಿಡಿಯ ಹೊರಟ ಪ್ರತಿಭಾವಂತನಿಗೆ ಜುಗುಪ್ಸೆ ತಂದ ಅಸೂಯೆ, ಆಲಸ್ಯ, ತೊಡರುಗಾಲುಗಳ ಸರಣಿ 'ಅಮೆರಿಕೆಗೆ ಹೋದರೆ ಆದೀತು' ಎಂದು ಯೋಚಿಸುವಂತೆ ಮಾಡಿತು.

ಅಮೆರಿಕೆಯ ನೆಲದಲ್ಲಿ ಕಾಲಿಟ್ಟಾಗ ಡಾ. ಚಂದ್ರಶೇಖರಮೂರ್ತಿ ಅವರಿಗೆ ವಯಸ್ಸು ನಲವತ್ತು. ಅವರ ಆವರೆಗಿನ ಅಧ್ಯಯನ, ಸ್ನಾತಕೋತ್ತರ ಅಧ್ಯಾಪನ, ನಡೆಸಿದ್ದ ಶಸ್ತ್ರಚಿಕಿತ್ಸೆಗಳ ವರದಿ ಯಾವುದೂ ನೆರವಿಗೆ ಬರಲಿಲ್ಲ-ಅಮೆರಿಕದ ನೆಲದಲ್ಲಿ. ಮೊದಲಿನಿಂದ ಸಾಮಾನ್ಯ ವಿದ್ಯಾರ್ಥಿಯಂತೆ ಆರು ವರ್ಷ ಅಧ್ಯಯನ ಮಾಡಿದರು ; ಶೇ. 99 ಅಂಕ ಗಳಿಸಿದರು ; ಇಡೀ ಅಮೆರಿಕೆಯಲ್ಲಿ ಮೊದಲ ಸ್ಥಾನ ಅವರದಾಗಿತ್ತು. ಭಾರತೀಯನಾದ ಅವರ ಬಗೆಗಿನ ತಾರತಮ್ಯವೂ ಮಾಯವಾಗಿತ್ತು. ಥೊರಾಸಿಕ್, ಕಾರ್ಡಿಯಾಕ್, ವಾಸ್ಕ್ಯುಲಾರ್ ಎಲ್ಲದರ General Surgeon ಆಗಿ ಅವರು ಬೆಳೆದಿದ್ದರು. Florida, Campa Cityಯ ಮೆಡಿಕಲ್ ಕಾಲೇಜಿನಲ್ಲಿ Assistant Prof. of Surgery; Chief of Surgery Residential Programme; Veterans' Administration Hospitalನಲ್ಲಿ Chief Surgeon, HOD of Surgery ; ಲಾಸ್ ಏಂಜಲೀಸ್ ಆಸ್ಪತ್ರೆಯಲ್ಲಿ ಜನರಲ್ ಸರ್ಜರಿ, ಥೊರಾಸಿಕ್ ಮತ್ತು ವಾಸ್ಕ್ಯುಲಾರ್ ಸರ್ಜರಿಯ ವಿವಿಧ ವಿಭಾಗಗಳ Surgeon-ಹೀಗೆ ಅವರ ಸೇವೆ ತಡೆಯಿಲ್ಲದೆ ಸಾಗಿತು ; ಅಮೆರಿಕ ಅವರನ್ನು ಗುರುತಿಸಿತು.

ಮೈಸೂರಿನಲ್ಲಿ 1947-48ರ ಸಮಯದಲ್ಲಿ ನಡೆದ ಸ್ವರಾಜ್ಯದ ಆಂದೋಲನದಲ್ಲಿ ಭಾಗಿಯಾಗಿದ್ದ ಚಂದ್ರಶೇಖರಮೂರ್ತಿಯವರು ರಾಮಸ್ವಾಮಿಅಯ್ಯರ್‌ರ ಮರಣಕ್ಕೆ ಸಾಕ್ಷಿಯಾಗಿ ಅಲ್ಲಿಯೇ ಸತ್ಯಾಗ್ರಹದಲ್ಲಿ ತೊಡಗಿದ್ದವರು. ಅವರಿಗೆ ಅಧ್ಯಯನ, ಅಧ್ಯಾಪನ ಮತ್ತು ಅರ್ಪಣಾಭಾವಗಳ ಪ್ರೇರಣೆ ದೊರೆತದ್ದು ತಂದೆ ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರಿಗಳಿಂದ. ಅವರ ಅರ್ಧಶತಮಾನದ ಗೆಳೆಯ ಮೈಸೂರು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ. ಜಿ. ಸುಬ್ರಹ್ಮಣ್ಯಂ ಹೇಳುವಂತೆ ಆ ಕಾಲೇಜಿನ ಅನಾಟಮಿ ವಿಭಾಗಕ್ಕೆ ಜೀವಕಳೆ ಬಂದದ್ದೇ ಚಂದ್ರಶೇಖರಮೂರ್ತಿ ಅವರಿಂದ ; ಯಾವ ಶಸ್ತ್ರಚಿಕಿತ್ಸೆಯೂ-ಅದು ಅವರಿಗೆ ಸಂಬಂಧಿಸದ ಕ್ಷೇತ್ರದ್ದಾದರೂ-ಮೂರ್ತಿಯವರಿಗೆ ಒಂದು ಸವಾಲಾಗಿರಲಿಲ್ಲ ; ಅವರೊಬ್ಬ ಬಹುಮುಖ ಪ್ರತಿಭೆಯಾಗಿಯೇ ಮೊದಲಿನಿಂದಲೂ ಬೆಳೆದು ಬಂದವರು. ಚಂದ್ರಶೇಖರಮೂರ್ತಿಯವರು ತಮ್ಮ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿ ವಿವಾಹವಾದದ್ದು ಸ್ವಾತಂತ್ರ್ಯ ಹೋರಾಟಗಾರರೂ ಸಮಾಜಸೇವಕರೂ ಆದ ಕೊಣನೂರು ಕೇಶವಮೂರ್ತಿಗಳ ಮಗಳು ಕೆ.ಕೆ. ವಿಜಯಲಕ್ಷ್ಮಿ ಅವರನ್ನು. ಅವರೇ ಕೃತಜ್ಞತೆಯಿಂದ ನೆನೆಯುವಂತೆ ಅವರ ಎಲ್ಲ ಸಾಧನೆಗಳ ಹಿಂದೆ ವಿಜಯಲಕ್ಷ್ಮಿ ಅವರ ತ್ಯಾಗ ಮತ್ತು ಸಹಕಾರ ಇದ್ದೇ ಇದೆ. ಕಲ್ಲು ಶಿಲ್ಪವಾಗಲು ಉಳಿಯ ಏಟು ಒಂದೇ ಸಾಲದು, ಸೌಂದರ್ಯಕ್ಕೆ ಮುದ್ರೆಯೊತ್ತುವ ಕಣ್ಣುಗಳೂ ಬೇಕು. ಅದೆಲ್ಲವನ್ನೂ ಪಡೆದ ಅದೃಷ್ಟಶಾಲಿ ಡಾ. ಚಂದ್ರಶೇಖರಮೂರ್ತಿ !

–ಬಸು

ಡಾ|| ಚಂದ್ರಶೇಖರಮೂರ್ತಿ ಅವರ ವಂಶವೃಕ್ಷ

ಕಟ್ಟೇಪುರ ಗಂಗಾಧರಶಾಸ್ತ್ರೀ

ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರೀ+ಗಂಗಮ್ಮ (ಅಗ್ರಹಾರ ಸುಬ್ರಹ್ಮಣ್ಯಾವಧಾನೀ ಅವರ ಮಗಳು)
(1901-1992) (1907-1997)

- ಕೆ.ಎಸ್. ಶಾಮಣ್ಣ +ಕೆ.ಎಸ್. ಲೀಲಾವತಿ
- ಆರ್.ಎಸ್. ಕೇಶವಮೂರ್ತಿ (ಆರ್.ಎಸ್. ರಾಜಣ್ಣ) +ಎಸ್.ವಿ. ನಾಗರತ್ನ
- ಡಾ. ಆರ್.ಎಸ್. ಚಂದ್ರಶೇಖರಮೂರ್ತಿ +ಕೆ.ಕೆ. ವಿಜಯಲಕ್ಷ್ಮಿ
  - ಡಾ. ಮೀರಾ (ಮೀನಾಕ್ಷಿ), ಎಂ.ಬಿ.ಬಿ.ಎಸ್, ಕಂಪ್ಯೂಟರ್ ಸೈನ್ಸ್ ಕನ್ಸಲ್ಟೆಂಟ್, (ಮೆಡಿಕಲ್ ಫೀಲ್ಡ್) ಜ : 1958 +ರಾಮಮೂರ್ತಿ, ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಎಂಜಿನಿಯರ್ ; ಮೆನೇಜರ್, ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ವಿಂಗ್, BELL LABS, ATNT CO.
  - ಡಾ. ರಘು, ನೇತ್ರ ಪರಿಣತ, ಜ : 1964.
  - ಅಪರ್ಣ, M. Public Health, ಅಧಿಕಾರಿ, ಫ್ರೆಂಚ್ ಫಾರ್ಮಸುಟಿಕಲ್ ಕಂಪನಿ.
- ಆರ್.ಎಸ್. ರಾಮನಾಥ +ಸುವರ್ಣಲಕ್ಷ್ಮಿ
- ಎ.ಕೆ. ಸುಂದರೇಶನ್ (ಸೋದರಮಾವ ಎ.ಎಸ್. ಕೃಷ್ಣಪ್ಪ ಅವರಿಗೆ ದತ್ತು, ಅಗ್ರಹಾರ) +ರಾಧಾ
- ಆರ್.ಎಸ್. ಶ್ರೀಧರ +ವೇದವತಿ
- ಡಾ.ಆರ್. ಎಸ್. ಕೃಷ್ಣಮೂರ್ತಿ +ರೋಸಲಿನ್

ಜ್ಯೋತಿ ಬೆಳಗುವ

ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ

ಸಮಾಜಸೇವಾ ವ್ರತಿ, ಧರ್ಮಸಂರಕ್ಷಕ, ವಿಪ್ರಭಾಸ್ಕರ ಶ್ರೀ ಬೆಟ್ಟದಪುರ ನಾರಾಯಣಸ್ವಾಮಿ ಸುಬ್ರಹ್ಮಣ್ಯ (ಜ. 15.10.1942) ಅವರದು ಜ್ಯೋತಿ ಬೆಳಗುವ ಜೀವನ. ಶ್ರೀ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ, ಶ್ರೀ ಜ್ಯೋತಿ ಕೇಂದ್ರೀಯ ವಿದ್ಯಾಲಯ, ಶ್ರೀ ಜ್ಯೋತಿ ಚಾರಿಟಬಲ್ ಟ್ರಸ್ಟ್, ಶ್ರೀ ಮಲ್ಲಿಕಾರ್ಜುನ ವೇದ-ಸಂಸ್ಕೃತ ಪಾಠಶಾಲಾ, ವೈದಿಕ ಧರ್ಮಸಹಾಯಸಭಾ ಟ್ರಸ್ಟ್... ಬಿ.ಎನ್.ವಿ. ಅವರು ಸಮಾಜ ಸೇವೆಗೆಂದೇ ಸ್ಥಾಪಿಸಿ ಪೋಷಿಸುತ್ತಿರುವ ಸಂಸ್ಥೆಗಳ ಪಟ್ಟಿ ಹೀಗೆ ಬೆಳೆಯುತ್ತದೆ. ಅದರ ಜತೆಗೆ ಅಬಲಾಶ್ರಮ, ಸರ್.ಎಂ. ವಿಶ್ವೇಶ್ವರಯ್ಯ ಕೋ-ಆಪರೇಟಿವ್ ಬ್ಯಾಂಕ್, ನ್ಯಾಷನಲ್ ಎಜುಕೇಷನ್ ಟ್ರಸ್ಟ್, ಶ್ರೀ ಸುರಸರಸ್ವತೀ ಸಭಾ ಶೃಂಗೇರಿ... ಹೀಗೆ ಅನೇಕ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿಸ್ವಾರ್ಥ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಅಮೃತಸ್ಪರ್ಶದಿಂದ ಜೀವ ಪಡೆದ, ಮುನ್ನಡೆದ, ಮಿಂಚಿ ಮೆರೆದ ವ್ಯಕ್ತಿಗಳಿಗೆ, ಕುಟುಂಬಗಳಿಗೆ, ಸಂಘ-ಸಂಸ್ಥೆಗಳಿಗೆ ಲೆಕ್ಕವಿಲ್ಲ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಐದನೆಯ ಬಾರಿ ಸರ್ವಾನುಮತದಿಂದ ಪ್ರತಿಷ್ಠಾಪನೆಗೊಂಡ ಗೌರವ ಅವರದು. ಸಾರ್ವತ್ರಿಕ ಸಮಾಜಕ್ಕೆ ಅವರು ಸಲ್ಲಿಸಿದ ಸೇವೆ ಅದಕ್ಕಿಂತ ದೊಡ್ಡದು. ಅದಕ್ಕಾಗಿ ರಾಜ್ಯೋತ್ಸವ ಪ್ರಶಸ್ತಿ (1991), ರಾಜೀವಗಾಂಧಿ ಪ್ರಶಸ್ತಿ (1995) ಅವರನ್ನು ಅಲಂಕರಿಸಿವೆ. ಅವೆಲ್ಲಕ್ಕಿಂತ ಹೆಚ್ಚಾಗಿ ಸಮಗ್ರ ಸಮಾಜದ ಪ್ರೀತಿಯ, ಗೌರವದ, ಆತ್ಮೀಯತೆಯ, ಆರಾಧ್ಯಮೂರ್ತಿ ಅವರಾಗಿದ್ದಾರೆ ; ಆದರೆ ಎಲೆಮರೆಯಲ್ಲಿ ಉಳಿಯುವುದರಲ್ಲಿ ತೃಪ್ತರಾಗಿದ್ದಾರೆ.

ಬಿ.ಎನ್.ವಿ. ಪುಟಗೊಂಡದ್ದು ಬಡತನದ ಮೂಸೆಯಲ್ಲಿ. ತಂದೆ ನಾರಾಯಣಸ್ವಾಮಿ ಅವರು ಸ್ವರ್ಗಸ್ಥರಾದಾಗ ಬಿ.ಎನ್.ವಿ. 18 ತಿಂಗಳ ಮಗು. ಆಗ ಅವರ ಮನೆಗೆ ದಿಕ್ಕಾದವರು ತಾಯಿ ಕಾವೇರಮ್ಮನವರ ತಾಯಿ ಪುಟ್ಟಕ್ಕಯ್ಯಮ್ಮ. ಆಕೆಯೇ ವೃದ್ಧೆ, ವಿಧವೆ, ಬಡವಿ; ಮಂದಿಯ ಮನೆಯಲ್ಲಿ ಅಡುಗೆ ಕೆಲಸ ಮಾಡಿ ಐದು ಜನರ ಸಂಸಾರ ಪೋಷಿಸಿದರು. ಬೆಟ್ಟದಪುರದ ಶ್ಯಾನುಭೋಗರ ಧೀಮಂತ ಮನೆತನಕ್ಕೆ ಸಾಲಿಗ್ರಾಮ, ಕೃಷ್ಣರಾಜನಗರದಲ್ಲಿ ಹೀಗೆ ಅನಾಥ ಮುದುಕಿಯೊಬ್ಬಳ ಮಡಿಲು ಆಸರೆಯಾಯಿತು; ಬಿ.ಎನ್.ವಿ. ಕಣ್ಣು ಬಿಡುವಾಗಲೇ ಬಡತನದ ಬೇಗೆಯ ಅನುಭವ ಪಡೆದರು, ಅಜ್ಜಿಯ ಛಲ ಮತ್ತು ಸೇವೆಯ ಸಂಜೀವಿನೀಮಂತ್ರದ ಉಪದೇಶ ಪಡೆದರು. ಮುಂದೆ ಮಡಿಕೇರಿಯಲ್ಲಿ ಅಕ್ಕನ ಆಶ್ರಯದಲ್ಲಿ ಡ್ರಾಫ್ಟ್ಸ್‌ಮನ್ ತರಪೇತಿ (1960-61), ಬೆಂಗಳೂರಿನ ಕೈಗಾರಿಕೆಗಳಲ್ಲಿ 10 ವರ್ಷ ಅನುಭವ, ಬೆಂಗಳೂರಿನ ಸರಕಾರಿ ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯ ವಿದ್ವಾನ್ ಹರವೆ ಮಲ್ಲಿಕಾರ್ಜುನಶಾಸ್ತ್ರಿಗಳ ಏಕಮಾತ್ರ ಪುತ್ರಿ ಸೀತಾ ಅವರೊಂದಿಗೆ ವಿವಾಹ (1968), ಬೆಳಕಾಗಿ ಬಂದ ಮಗಳು ಜ್ಯೋತಿಯ ಜನನ (25.6.1971); ಜೀವನದ ಮಹಾ ತಿರುವು.

ಅದು ಮೆಕ್ಯಾನಿಕಲ್ ಎಂಜಿನಿಯರ್ ಬಿ.ಎನ್.ವಿಗೆ ಆತ್ಮವಿಶ್ವಾಸ ತುಂಬಿದ ವರ್ಷ (1971). ಜ್ಯೋತಿ ಗ್ರೂಪ್ ಆಫ್ ಇಂಡಸ್ಟ್ರೀಸ್ ಸ್ಥಾಪನೆ, ಶ್ರೀಮಂತಿಕೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಉತ್ತಮ ಸ್ಟೈಯಿನ್‌ಲೆಸ್ ಸ್ಟೀಲ್ ಉಪಕರಣಗಳ ತಯಾರಕರು ಎಂಬ ಬಿರುದುಬಾವಲಿ. ಅದೃಷ್ಟದೇವತೆಯಾಗಿ ಬಂದಿದ್ದ ಮಗಳು ಜ್ಯೋತಿ ಬದುಕಿನ ಮೌಲ್ಯಗಳನ್ನು ತುಂಬಿ ಅನಂತ ಜ್ಯೋತಿಯಾದಾಗ (28.10.86) ತತ್ತರಿಸಿದ ಸಂಸಾರದ ದೋಣಿ, ಜ್ಯೋತಿಯದೇ ಸ್ಫೂರ್ತಿ, ಸಮಾಜ ಸೇವಾದೀಕ್ಷೆ : ಶೈಕ್ಷಣಿಕ ಸೇವೆ-ಸಾಮಾಜಿಕ ಸೇವೆ- ಧಾರ್ಮಿಕ ಸೇವೆ : ಬೆಳಕಿನ ಹಲವು ಹೆಬ್ಬಾಗಿಲುಗಳ ಅನಾವರಣ.

ಸಾಂಸ್ಕೃತಿಕ ಪುನರುತ್ಥಾನ, ವೈದಿಕ ಪರಂಪರೆಯ ಜಾಗೃತಿ : ಧಾರ್ಮಿಕ ಗ್ರಂಥಗಳ ಪ್ರಕಾಶನ, ವೇದಕ್ಕಾಗಿ ಗುರುಕುಲ, ಅಧ್ಯಯನಾಸಕ್ತರಿಗೆ ಆಶ್ರಯ, ವೇದಶಾಸ್ತ್ರ ವಿದ್ವಾಂಸರಿಗೆ ಸಂಮಾನ, ವಿದ್ವತ್‌ಗೋಷ್ಠಿ, ವೇದಪಾರಾಯಣ ಪದ್ಧತಿಯ ಪುನರುಜ್ಜೀವನ, ಕೃಷ್ಣ ಯಜುರ್ವೇದ ಕನ್ನಡ ಪ್ರಕಾಶನ, ವೇದದರ್ಶನ ಸಮಾರಂಭ, ವ್ಯಾಸವಂದನಾ. ಸಂಗೀತ, ನೃತ್ಯಕ್ಕೆ

ಪ್ರೋತ್ಸಾಹ: ಗಾಯನ ಸಮಾಜ ಹಾಗೂ ಕರ್ನಾಟಕ ಗಾನಕಲಾ ಪರಿಷತ್ ಮೂಲಕ ವಿದ್ವಾಂಸರಿಗೆ ಸಂಮಾನ, ನಿಧಿಸಮರ್ಪಣೆ, ಸಮ್ಮೇಳನಾಧ್ಯಕ್ಷರಿಗೆ ಹತ್ತು ಸಹಸ್ರ ರೂಪಾಯಿಗಳ ನಿಧಿಯೊಂದಿಗೆ ಜ್ಯೋತಿ ಮೆಮೋರಿಯಲ್ ಅವಾರ್ಡ್, ಕಲಾ ಸಂಸ್ಥೆಗಳ ಪೋಷಣೆ, ಡಿ. ಸುಬ್ರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್‌ನ ಅಧ್ಯಕ್ಷತೆ. ಅನಾಥಸೇವೆ: ಆರ್ಥಿಕವಾಗಿ ಹಿಂದುಳಿದ ಎಲ್ಲ ಜಾತಿಗಳವರಿಗೆ ಉಚಿತ ವಿದ್ಯಾಭ್ಯಾಸ, ವಿವಾಹ, ಚಿಕಿತ್ಸೆ, ಶುಭಕಾರ್ಯಗಳು; ಅಲಕ್ಷಿತರಿಗೆ ಮಾಸಿಕ 100 ರೂ. ಪಿಂಚಣಿ; ಅಬಲಾಶ್ರಮದ ಅನಾಥ ಹೆಣ್ಣುಮಕ್ಕಳ ಪುನರ್ವಸತಿ ಅಭಿಯಾನದಲ್ಲಿ ಸಹಯೋಗ. ಶಿಕ್ಷಣ: ಅತ್ಯಂತ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವಿದ್ಯಾದಾನ, ಎಲ್‌ಕೆಜಿಯಿಂದ ಪದವಿಪೂರ್ವ ಹಂತದವರೆಗೆ 2000 ಮಕ್ಕಳ ಯೋಗಕ್ಷೇಮ, 'ಶಾಲಾ ಮಕ್ಕಳು ತಮ್ಮ ಮಕ್ಕಳಂತೆ, ಸಿಬ್ಬಂದಿ ತಮ್ಮ ಪರಿವಾರದಂತೆ' ಎಂಬ ಕೀರ್ತಿ; ಎಲ್ಲರಿಗೆ ಉಚಿತ ಪ್ರವಾಸ, ಉಚಿತ ವೈದ್ಯಕೀಯ ತಪಾಸಣೆ, ಉಚಿತ ವಿಶೇಷ ಬೋಧನಾತರಗತಿಗಳು; ಹಿಂದುಳಿದ ಮಕ್ಕಳಿಗೆ ಕಲಿಸಿ ಸತತವಾಗಿ ಶೇ. 100 ಫಲಿತಾಂಶ. ಸಾಮಾಜಿಕ ಕಾಳಜಿ; ಗಣರಾಜ್ಯೋತ್ಸವ: ಅನಾಥಾಶ್ರಮ ಮತ್ತು ಕೊಳೆಗೇರಿ ಮಕ್ಕಳಿಗಾಗಿಯೇ ಆಹ್ವಾನ, ಆಟ, ಊಟ, ಬಹುಮಾನ, ವಸ್ತ್ರದಾನ; ಸಮತಾಭಾವದ ಅನುಷ್ಠಾನ. ಸಮಾಜ ಸಂಘಟನೆ: ರಾಜ್ಯಮಟ್ಟದ ಬ್ರಾಹ್ಮಣರ ಸಮ್ಮೇಳನ, ಬಡವರಿಗಾಗಿ ನಿಧಿ ಸ್ಥಾಪನೆ, ಹಣಕಾಸು ಸುಧಾರಣೆ, ಸದಸ್ಯ ಬಲ ಹೆಚ್ಚಳ; ಬೆಟ್ಟದಪುರ ಸಂಕೇತಿ ಸಂಘದ ಬಲವರ್ಧನೆ. ಜಾತ್ಯತೀತ ನೆಲೆಯಲ್ಲಿ ಸಾರ್ವತ್ರಿಕ ಸೇವೆ ಮಾಡುತ್ತಲೇ ಜಾತಿ ಸಂಘಟನೆಯು ಜಾತೀಯವಾಗದಂತೆ ಸಮನ್ವಯ; ಜಾತಿ ಜನರ ವಿಕಾಸವು ದೇಶವಿಕಾಸಕ್ಕೆ ಪೂರಕವಾಗಲೆಂಬ ಆಶಯ. ಒಟ್ಟಾಗಿ ಶೃಂಗೇರಿಯ ಶ್ರೀಸುರಸರಸ್ವತೀ ಸಭಾದ ಕಾರ್ಯದರ್ಶಿ ಡಾ|| ಬಿ.ಎಸ್. ರಾಮಕೃಷ್ಣರಾವ್ ಅವರ ಸಾರಭೂತವಾಣಿ ಇದು, "...ಅವರು ಅಪಾರವಾಗಿ ದಾನ ಮಾಡಿದ್ದಾರೆ, ದಾನ ಮಾಡಿದ್ದರ ಬಗ್ಗೆ ಮೌನ ವಹಿಸಿದ್ದಾರೆ. ಸಂಕ್ಷೇಪವಾಗಿ ಹೇಳಬಹುದಾದರೆ ಆಗರ್ಭ ಶ್ರೀಮಂತರಲ್ಲದ ಶ್ರೀಸಾಮಾನ್ಯರೊಬ್ಬರು, ತಾವು ನಂಬಿದ ತತ್ತ್ವಕ್ಕಾಗಿ, ಆದರ್ಶಗಳಿಗಾಗಿ, ಬೆವರು ಸುರಿಸಿ ದುಡಿದ ಹಣವನ್ನು ಈ ಪ್ರಮಾಣದಲ್ಲಿ ಸಾರ್ವಜನಿಕರಿಗೆಂದು ಸದ್ವಿನಿಯೋಗ ಮಾಡಿರುವ, ಮಾಡುತ್ತಿರುವ ಇನ್ನೊಂದು ಜ್ವಲಂತ ಉದಾಹರಣೆಯನ್ನು ನಾನು ಸಾಕ್ಷಾತ್ಕರಿಸಿಕೊಂಡಿಲ್ಲ."

ಸಾಮರ್ಥ್ಯ, ಸಹಾಯ, ಸೇವೆಗೆ ಪರ್ಯಾಯ ಹೆಸರು ಬಿ.ಎನ್.ವಿ. "ಸಮಾಜದಿಂದ ಪಡೆದುಕೊಂಡ ಲಾಭದಲ್ಲಿ ಕಿಂಚಿತ್ತಾದರೂ ಸಮಾಜಕ್ಕೆ ಮರಳಿಸುವುದು" ಎಂಬುದು ಅವರ ಘೋಷವಾಕ್ಯ. ಅವರಂತೂ ಸರ್ವಸ್ವವನ್ನೂ ಸಮಾಜಕ್ಕಾಗಿ ಸಮರ್ಪಿಸಿದ್ದಾರೆ. ಅದು ಸದ್ದುಗದ್ದಲವಿಲ್ಲದ ಅವರ ಭಗವಂತನ ಪೂಜೆ. ಸರಳಜೀವನ, ಸ್ನೇಹಪರತೆ, ಸಜ್ಜನಿಕೆ, ನಿಷ್ಠಾವಂತ ದುಡಿಮೆ ಅವರ ರೀತಿ; ನಗುಮೊಗದ ಇರವು, ಹೃದಯ ಶ್ರೀಮಂತಿಕೆ, ನಿರಾಡಂಬರ; 'ಕ್ರಿಯಾಸಿದ್ಧಿಸ್ಸತ್ತ್ವೇ ಭವತಿ ಮಹತಾಂ ನೋಪಕರಣೇ' ಎಂಬ ಕವಿವಾಣಿಯ ಅಭಿವ್ಯಕ್ತಿ ಅವರು. ಕವಿ ಎನ್.ಎಸ್.ಎಲ್. ಅವರು ಹೇಳುವಂತೆ, 'ಕರ್ಮಯೋಗಿಯ ರೀತಿ ಸೇವೆಗೈಯುತ್ತ ಧರ್ಮಮಾರ್ಗದಿ ನಡೆವ ಕೃತಕೃತ್ಯರಿವರು'. ಬಿ.ಎನ್.ವಿ. ಅವರಿಂದ ಸಮಾಜದ ದೀನದಲಿತರ, ವಿದ್ಯಾರ್ಥಿಗಳ, ಅನಾರೋಗ್ಯ ಪೀಡಿತರ, ಅಶಕ್ತರ ಕಲ್ಯಾಣಕಾರ್ಯ ನಡೆಯುತ್ತಿದೆ. ನಿಜ. ಅದು ಸಾಧ್ಯವಾಗಿರುವುದು ಅವರ ಪಕ್ಕದಲ್ಲಿ 'ಎಲ್ಲ ಮಕ್ಕಳ ಮಾತೆ ಪ್ರಿಯ ಮಡದಿ ಸೀತಾ' ಇರುವುದರಿಂದ. ಉದಾಹರಣೆಗೆ ವೇದಪಾಠಶಾಲೆಯ ಎಲ್ಲ 30 ಮಕ್ಕಳ ಊಟ ತಿಂಡಿ ತಯಾರಿಸಿ ನಿರ್ವಹಿಸುವವರು ಅವರು, ಅವರ ಖಾಯಿಲೆ ಕಸಾಲೆಗೆ ಚಿಕಿತ್ಸೆ ನೋಡಿಕೊಳ್ಳುವವರು ಅವರು, ಒಬ್ಬೊಬ್ಬರ ಹುಟ್ಟುಹಬ್ಬಕ್ಕೂ ಸಿಹಿ ಉಣಿಸಿ ಉಡುಗೊರೆ ನೀಡುವವರು ಅವರು... ಅದೊಂದು ತಪಸ್ಸು. ಬಿ.ಎನ್.ವಿ. ಅವರ ಎಲ್ಲ ಸಾಧನೆಗಳ ಹಿಂದಿನ ಕನಸು, ಜತೆಗಿನ ಸ್ಫೂರ್ತಿ, ಮುನ್ನಡೆಯ ಸ್ಪಂದನಶಕ್ತಿ ಅವರು. "ಜೀವವಿರುವವರೆಗೂ ಸಮಾಜಸೇವಾಕಾರ್ಯ ಮುಂದುವರಿಸುತ್ತೇನೆ" ಎಂಬ ಬಿ.ಎನ್.ವಿ. ಅವರ ವಾಕ್ಕಿನ ಅಂತಃಶಕ್ತಿ ಸೀತಾ ಅವರು.

ಬಿ.ಎನ್.ವಿ. ಅವರ ಷಷ್ಟ್ಯಬ್ದಿ ಸಂಬಂಧದ ಅಭಿನಂದನೆಗಾಗಿ ಸಹಸ್ರಸಂಖ್ಯೆಯಲ್ಲಿ ಸಾಮಾನ್ಯರಿಂದ ಹಿಡಿದು ಅತಿ ಗಣ್ಯರವರೆಗೆ ಸೇರಿದ್ದ ಸುಂದರವಾದ ಬೃಹತ್ ಸಮಾವೇಶದಲ್ಲಿ (1.12.2002) ನಡೆದದ್ದು ಇದು : ಬಿ.ಎನ್.ವಿ. ದಂಪತಿಗೆ ಹಾರ ಅರ್ಪಿಸಿ ಶುಭ ಹೇಳಲು ಇಡೀ ಸಭೆ-ಇಡೀ ಸಹಸ್ರಾರು ಅಭಿಮಾನಿಗಳು-ಸಾಲುಗಟ್ಟಿ ನಿಂತರು. ಹಾಗೆ ನಿಂತ ಹಿಂದೂ, ಕ್ರಿಶ್ಚಿಯನ್, ಮುಸಲ್ಮಾನ ಬಂಧುಗಳ ನಡುವೆ ಖ್ಯಾತನಟ ಶಿವರಾಂ ಕೂಡ ಇದ್ದರು. ಅವರು ಪುಳಕಗೊಂಡಿದ್ದರು. ಕೊನೆಯಲ್ಲಿ ವೇದಿಕೆಯಿಂದ, ಕೂಗಿ ತಮ್ಮ ಸಂತಸ ಹಂಚಿಕೊಂಡರು, "ಇಂಥ ಸಭೆಯನ್ನು...ಹೀಗೆ ಇಡೀ ಸಭೆಗೆ ಸಭೆಯೇ ಸಾಲುಗಟ್ಟಿ ನಿಂತು ಹಾರ ತುರಾಯಿ ಸಮರ್ಪಿಸಿ ಶುಭ ಹೇಳಲು ಹಾತೊರೆದುದನ್ನು ನನ್ನ ಜೀವನದಲ್ಲಿ ಕಂಡಿರಲಿಲ್ಲ...". ಅದು ನಿಜ. ಬಿ.ಎನ್.ವಿ. ದಂಪತಿ ಬದುಕಿರುವುದೇ ಹಾಗೆ. ಏಕೆಂದರೆ ಅವರ ಬಾಳನ್ನು ಜ್ಯೋತಿ ಬೆಳಗುತ್ತಿದೆ.

(ಬಸು)

ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ವಂಶವೃಕ್ಷ

ನಾರಾಯಣಪ್ಪ+ಲಕ್ಷ್ಮೀದೇವಮ್ಮ
(ಬೆಟ್ಟದಪುರ)

ವೆಂಕಟರಮಣಯ್ಯ+ಚೆನ್ನಮ್ಮ

ಬಿ.ವಿ. ನಾರಾಯಣಸ್ವಾಮಿ+ಕಾವೇರಮ್ಮ

ಬಿ.ಎನ್.ವಿ. ಸುಬ್ರಹ್ಮಣ್ಯ+ಸೀತಾ

ನಾರಾಯಣಪ್ಪ+ಪುಟ್ಟಕ್ಕಯ್ಯಮ್ಮ
(ಸಾಲಿಗ್ರಾಮ) (ಹನಸೋಗೆ)

ಶ್ರೀನಿವಾಸ+ಯಜ್ಞಮ್ಮ
(ಹರವೆ)

ನರಸಿಂಹಶಾಸ್ತ್ರಿ+ಸಣ್ಣಮ್ಮ
(ಹರವೆ)

ಮಲ್ಲಿಕಾರ್ಜುನಶಾಸ್ತ್ರಿ+ಪಾರ್ವತಮ್ಮ
(ಹರವೆ)

ವ್ಯಾಖ್ಯಾನ ಕೇಸರಿ

ಮತ್ತೂರು ಕೃಷ್ಣಮೂರ್ತಿ

ಮತ್ತೂರ್‌ಜೀ ಎಂದರೆ, ಖ್ಯಾತಿವೆತ್ತ ಮತ್ತೂರು ಕೃಷ್ಣಮೂರ್ತಿ ಅವರು ಎಂಬುದು ಎಲ್ಲರಿಗೂ ಗೊತ್ತು. ಅವರ ಶ್ರೀಮತಿಯವರು ತೆರೆಮರೆಯ ರಾಜಲಕ್ಷ್ಮೀ ಅವರು. 'ಮತ್ತೂರು' ಕೃಷ್ಣಮೂರ್ತಿಗಳ ಪೂರ್ವಿಕರು ಹಾಸನದ ಪಕ್ಕದ 'ಮುದಲಾಪುರ'ದವರು ; ವಿಜಯನಗರ ಸಂಸ್ಥಾನದಿಂದ ತಮ್ಮ ಪಾಂಡಿತ್ಯಕ್ಕಾಗಿ ಮರ್ಯಾದಿತರಾದವರು; ಕ್ಷಾತ್ರ ಮತ್ತು ಬ್ರಹ್ಮತೇಜ ಎರಡೂ ಉಳ್ಳವರು. ಆದರೆ ಕೃಷ್ಣಮೂರ್ತಿಯವರು ಬದುಕಿನ ಹೊಸ ಉಸುರು ಪಡೆದದ್ದು ಮತ್ತೂರಿನಲ್ಲಿ. ಆದ್ದರಿಂದ ಅವರ ಹೆಸರಿನ ಜತೆಗೆ 'ಮತ್ತೂರು' ಸೇರಿದ್ದು ಉಚಿತವೇ. ಆದರೆ ಅವರು ಅಷ್ಟಕ್ಕೇ ನಿಲ್ಲಲಿಲ್ಲ, 'ಮತ್ತೂರ್‌ಜೀ' ಅಥವಾ ಇನ್ನೂ ಸರಿಯಾಗಿ ಹೇಳುವುದಾದರೆ ಅಂತಾರಾಷ್ಟ್ರೀಯ ಭಾಷೆಯಲ್ಲಿ 'ಮತೂರ್‌ಜೀ' ಆಗಿ ಬೆಳೆದರು; ಬೆಂಗಳೂರಿನಲ್ಲಿ ವಿಸ್ತೃತ ಜ್ಞಾನವನ್ನೂ ಅನುಭವವನ್ನೂ ಹೊಂದಿದರು, ಲಂಡನ್‌ನಲ್ಲಿ ವಿಸ್ತೃತ ಸಾಂಸ್ಕೃತಿಕ ಸೇವೆ ಮಾಡಿದರು. ಕಲಾವಿದರಾದರು, ಸಾಹಿತಿಯಾದರು, ತತ್ತ್ವಜ್ಞಾನಿಯಾದರು, ಗಾಂಧೀಭಕ್ತರಾದರು. ಅವರು ಭೌತಿಕವಾಗಿ ಹೇಗೆ ಅಗ್ನಿಯಂತೆ ಮಿನುಗುತ್ತಾರೋ ಅವರ ಕೀರ್ತಿಯೂ ಜಗತ್ತಿನಾದ್ಯಂತ ಹಾಗೇ ಹರಡಿ ಪ್ರಜ್ವಲಿಸಿತು. ದೇಶದ ಅತಿಗಣ್ಯರಿಂದ ಹಿಡಿದು ಜಗತ್ತಿನ ಗಣ್ಯಾತಿಗಣ್ಯರ ಒಡನಾಟದಿಂದ ಅತೀವ ಆತ್ಮಪ್ರಜ್ಞೆ ಮತ್ತು ನಿಶ್ಚಿತ ಜೀವನದೃಷ್ಟಿಯ ಹೆಮ್ಮರವಾಗಿ ಬೆಳೆದರು. ಮರಳಿ ಭಾರತಕ್ಕೆ ಬಂದು ಇಳಿವಯಸ್ಸಿನಲ್ಲೂ ನವಯುವಕರನ್ನೂ ನಾಚಿಸುವಂತೆ ದುಡಿದು ಸಮಾಜಸೇವೆಗೆ ತೊಡಗಿಸಿಕೊಂಡು ಸಾರ್ವತ್ರಿಕ ಸಮಾಜಕ್ಕೆ ಹಿತ ಉಂಟು ಮಾಡುತ್ತಿರುವ 'ಮತೂರ್‌ಜೀ' ಭಾರತದ ಹೆಮ್ಮೆಯಪುತ್ರ. ವಿಸ್ತಾರವಾದ ಓದು, ಆಳವಾದ ಅನುಭವ, ಅರಗಿದ ಚಿಂತನೆ, ತಿಳಿಮನ, ಸರ್ವಜನಸುಖದ ಅತೀವ ಆಸೆ- ಇವೆಲ್ಲದರ ಮೂರ್ತರೂಪವಾಗಿ ಹೊರಡುವ ಮಂದಸ್ಮಿತದ ಮೈಸೂರು ಮಲ್ಲಿಗೆಯಂಥ ಮಿತ, ಸರಸ, ಸಾರಭೂತ ಮಾತು, ಉಪನ್ಯಾಸ. ಜನರು ಮಂತ್ರಮುಗ್ಧರಾಗುವುದಕ್ಕೆ ಬೇಕಾದಷ್ಟು ಸಾತ್ವಿಕ ಸರಕು. ಕಾವ್ಯವಾಚನ ಮತ್ತು ವ್ಯಾಖ್ಯಾನಕ್ಕೆ ಗೌರವದ ಶಿಖರವನ್ನು ಕಲ್ಪಿಸಿ, ಆಕರ್ಷಣೆಯ ಅಟ್ಟ ಕಟ್ಟಿ, ಅದಕ್ಕೊಂದು ಹೊಸ ಆಯಾಮವನ್ನೇ ಕೊಟ್ಟ ಸಾಧನೆ ಅವರದು; ಅರ್ಧ ಶತಮಾನದ ಕೈಂಕರ್ಯದ ಫಲ.

ಈ ಕಲಾವಿದನಿಗೆ, ಈ ಸಾಂಸ್ಕೃತಿಕ ರಾಯಭಾರಿಗೆ, ಈ ಎಲ್ಲೆಯರಿಯದ ಜೀವನೋತ್ಸಾಹಿಗೆ, ಈ ಸಮಾಜಸೇವಾವ್ರತಿಗೆ, ಈ ಗಾಂಧೀಭಕ್ತನಿಗೆ, ಈ ಮಾತಿನ ಮುದ್ದುಗಾರನಿಗೆ, ಈ ಛಲಗಾರನಿಗೆ- ಧರ್ಮಪತ್ನಿ, ರಾಜಲಕ್ಷ್ಮೀ. ಹೌದು, 'ಈ' ರಾಜಲಕ್ಷ್ಮಿಯಲ್ಲ, ಏಕೆಂದರೆ ಅವರು ಎಂದೂ ತೆರೆಯ ಹಿಂದೆ ಇದ್ದವರು, ಈಗಂತೂ ತೆರೆಮರೆಗೆ ಸಂದೇಬಿಟ್ಟಿರುವವರು, ಆದರೆ ಎಂದೂ ಕೃಷ್ಣಮೂರ್ತಿಗಳ ಸಾಧನಾಲೋಕದ ರಾಜ್ಯಲಕ್ಷ್ಮಿಯಾದಂಥವರು.

ಸಮಾಜಸೇವೆ ಎಂದರೆ ಸಾರ್ವತ್ರಿಕ ಸಂಪರ್ಕ; ಹಗಲಿರುಳೂ, ಸಾಮಾನ್ಯರಿಂದ ಗಣ್ಯರವರೆಗೆ ಅತಿಥಿಗಳೂ, ಅಭ್ಯಾಗತರೂ, ಪರಿಚಿತರೂ, ಅಪರಿಚಿತರೂ ಬರುವ ಸಂದರ್ಭ. ಅವರ ಆದರೋಪಚಾರ ನಡೆಯಲೇಬೇಕು. ಅದು ದಣಿವರಿಯದ ಕೆಲಸ, ತಾಳ್ಮೆಯನ್ನು ಪರೀಕ್ಷಿಸುವ ಕೆಲಸ. ಆದರೆ ಅದಕ್ಕಾಗಿಯೇ ಮನಸ್ಸನ್ನು ಹದಗೊಳಿಸಿಕೊಂಡವರಿಗೆ ಅದು ಸಹಜಾನಂದದ ಜೀವನದೋಟ. ರಾಜಲಕ್ಷ್ಮೀ, ಬಂದವರನ್ನು ಮನೆಮಂದಿಯಂತೆ ಕಂಡರು, ಪಾದರಸದಂತೆ ಓಡಾಡಿದರು, ನಗುನಗುತ್ತ ಸತ್ಕಾರ ಮಾಡಿದರು; ತಮ್ಮ ನೋವುಗಳನ್ನು ಅದರಲ್ಲಿ ಮರೆತರು, ಅದರಲ್ಲಿ ಜೀವನಸಾರ್ಥಕ್ಯ ಕಂಡರು. ಅವರಿಗೂ ಬಡತನದ ದಿನಗಳಿದ್ದವು, ಆಗಲೂ ಈ ಕೈಂಕರ್ಯ ನಡೆಸಿದರು. ಮನೆಯಲ್ಲಿ ಅಡುಗೆಸಾಮಾನು ಇಲ್ಲದಿದ್ದಾಗಲೂ ಯಾರಿಗೂ ಅದು ಅರಿವಿಗೇ ಬರದಂತೆ ನಿರ್ವಹಿಸಿ ನಗೆ ಬೀರಿ ಅತಿಥಿಗಳನ್ನು ಸತ್ಕರಿಸಿ ಕಳಿಸಿ ಭಗವಂತನನ್ನು ನೆನೆದವರು ಆ ತಾಯಿ.

ಆ ತಾಯಿಗೆ ಮಕ್ಕಳಿರಲಿಲ್ಲ, ಆದರೆ ಅವರು ಎಲ್ಲ ಮಕ್ಕಳ ತಾಯಿಯಾಗಿದ್ದರು. ಅಂಥ ಒಬ್ಬ ಮಗ ಪ್ರೊ॥ ಚಂದ್ರಶೇಖರ್ ಉಲ್ಲೇಖಿಸಿರುವ ಒಂದು ಸಂದರ್ಭ ಮನಮಿಡಿಯುವಂತಿದೆ, ಅಲ್ಲದೆ ಮತ್ತೂರ್‌ಜೀ ದಂಪತಿಗಳ

ಜೀವನಾದರ್ಶಕ್ಕೆ ಒಂದು ರೂಪಕದಂತಿದೆ : ಮತ್ತೂರ್ಜಿ ಲಂಡನ್‌ನಲ್ಲಿ ಭಾರತೀಯ ವಿದ್ಯಾಭವನದ ಹೊಣೆ ಹೊತ್ತು ಅಲ್ಲಿಯೇ ಇರಲು ಹೊರಟಿದ್ದರು. ರಾಜಲಕ್ಷ್ಮೀ ಅವರೂ ಪತಿಯನ್ನು ಅನುಸರಿಸಿ ಹೊರಡಬೇಕಿತ್ತು. ಇಂಗ್ಲಿಷ್ ಬಾರದವರಿಗೆ ಲಂಡನ್‌ನಲ್ಲಿ ಸೊಗಸೇನು, ಫಲವೇನು ? ಮತ್ತೂರ್ಜಿ ಪತ್ನಿಯನ್ನು ವಿದ್ಯಾಭವನದ ಶಾಲೆಗೆ ಹಾಕಿದರು. ಅಲ್ಲಿ ಅವರು ಇಂಗ್ಲಿಷ್ ಕಲಿಯಬೇಕಿತ್ತು. ನಿತ್ಯವೂ ಪಾಠ ಮುಗಿಸಿಕೊಂಡು ಮನೆಗೆ ಬಂದಾಗ ಪತಿಯ ಎದುರು ಅವತ್ತಿನ ಪಾಠಗಳನ್ನು ಒಪ್ಪಿಸುವುದು ವಾಡಿಕೆ. ಆ ಸಂಜೆ ಕೂಡ ಮತ್ತೂರ್‌ಜಿ ಪತ್ನಿಗೆ ರಾಗವಾಗಿ ಕೇಳಿದರು, "ಇಂಡೇನೊ ಅತ್ತಾ ಕಲ್ತಾ ?" (ಇವತ್ತು ಏನು ಕಲಿತೆ ?). ಪತ್ನಿ ಅವತ್ತಿನ ಪಾಠ ತೋರಿಸಿದರು. "ಇದನ್ನು ಸೇರಿಸಿ ಓದಲು ಹೇಳಿದರು-ಅರ್ಥ ಹೇಳಿಕೊಡಲಿಲ್ಲ" ಅಂದರು. "ಏನು ಓದು ನೋಡುವಾ" ಅಂದರು ಪತಿ. ರಾಜಲಕ್ಷ್ಮೀ ನಾಲ್ಕಾರು ಪುಟ್ಟ ಪುಟ್ಟ ವಾಕ್ಯಗಳನ್ನು ಓದಿದರು. ಅವರಿಗೆ ಅವುಗಳ ಅರ್ಥ ಮಾತ್ರ ತಿಳಿದಿರಲಿಲ್ಲ. "ಇತ್ತರ್ಕ್ ಅರ್ಥೊ ಅತ್ತಾದಿ? ಅಪ್ಡಿಅಂಡಾಕ ಅತ್ತಾದೀ ?" (ಇದಕ್ಕೆ ಏನು ಅರ್ಥ ? ಹಾಗೆಂದರೆ ಏನು ?) ಎಂದು ಮುಗ್ಧ ಕುತೂಹಲದಿಂದ ಕೇಳಿದರು. ಒಂದು ಸಾಲನ್ನೂ ಓದಿದರು, "How many children have you got ?" ಈ ವಿಚಿಕಿತ್ಸಕ ವಾಕ್ಯವನ್ನು ಓದಿ, "ಅಪ್ಡಿ ಅಂಡಾಕ ಅತ್ತಾ ಅರ್ಥೋ" (ಹಾಗೆಂದರೆ ಏನು ಅರ್ಥ ?) ಎಂದರು, ಮತ್ತೆ ಕಣ್ಣುಗಳನ್ನು ಹೊಳಪಿಸಿ.

ಮತ್ತೂರರು ನಿರ್ಭಾವದಿಂದ ಸಹಜವಾಗಿ ಅರ್ಥ ಹೇಳಿದರು, "ನಿನಗೆ ಎಷ್ಟು ಜನ ಮಕ್ಕಳು ?" ರಾಜಲಕ್ಷ್ಮೀಯವರ ಬಾಯಿ ಕಟ್ಟಿತು, ಕಂಠ ಬಿಗಿದುಬಂತು, ಅಳಲು ಮೊದಲಿಟ್ಟರು. ಸಮಾಧಾನವಾಗುವವರೆಗೆ ಅಳಲು ಆಗಲಿಲ್ಲ. ಅಲ್ಲಿದ್ದ ಇತರರು ಮುಜುಗರಗೊಳ್ಳದಂತೆ ಮರೆಮಾಚಿ ಸೆರಗಿನಿಂದ ಕಣ್ಣು ಒರೆಸಿಕೊಂಡರು. ಅದು ಮಕ್ಕಳಿಲ್ಲದ ಎಲ್ಲ ಹೆಣ್ಣುಗಳ ಮೌನರೋದನ. ಆಗ ಮತ್ತೂರ್‌ಜಿ ತಮ್ಮ ಎಂದಿನ ಧಾಟಿಯಲ್ಲಿ ಹೇಳಿದರು, "ಅಯ್ಯೋ ಧಡ್ಡೀ! ಅಳನ್ಯದಿ ಅತ್ತಕ್ಕಿ? ಪಶ್ಶಾಳ ಪೆತ್ತಿಗಳಿಕ್ಕಿ ತಂಗ್ಡೆ ಪಶ್ಶಾ ಮಾತ್ರೊ ಪಶ್ಶಾ. ನಂಬ್ಳಿಕ್ಕಿ ಊರೆಲ್ಲ ಪಶ್ಶಾಕ ಕಡೇ. ನಂದೊ, ಚಂದ್ರು, ಗೋಪಾಲೊ, ಜಾನಕೀ ಎಲ್ಲಾರೂ ನಂಬ್ಡೆ ಪಶ್ಶಾಳೆ!" (ಅಯ್ಯೋ ದಡ್ಡಿ, ಅದಕ್ಕೆ ಅಳುತ್ತಾರೆಯೇನೆ ? ಮಕ್ಕಳನ್ನು ಹೆತ್ತವರಿಗೆ ತಮ್ಮ ಮಕ್ಕಳು ಮಾತ್ರ ಮಕ್ಕಳು. ನಮಗೆ ಊರಿನವರೆಲ್ಲ ಮಕ್ಕಳು ಕಣೇ. ನಂದ, ಚಂದ್ರ, ಗೋಪಾಲ, ಜಾನಕಿ ಎಲ್ಲರೂ ನಮ್ಮ ಮಕ್ಕಳೆ !) (ಜಾನಕಿಯ ಗಂಡ ಡಾ. ನಂದಕುಮಾರ್ ಈಗ ಲಂಡನ್‌ನ ವಿದ್ಯಾಭವನದ ಕಾರ್ಯಕಾರೀ ನಿರ್ದೇಶಕರು.) ಮತ್ತೂರ್‌ಜಿ ಪಾಠ ಮುಂದುವರಿಸಿದರು, ರಾಜಲಕ್ಷ್ಮೀಜೀ ಪಾಠ ಕಲಿತರು; ಎಂದೆಂದೂ ಎಲ್ಲ ಮಕ್ಕಳನ್ನೂ ತಮ್ಮ ಮಕ್ಕಳಂತೆಯೇ ಪರಿಭಾವಿಸಿದರು.

'ಈ' ತಾಯಿ ರಾಜಲಕ್ಷ್ಮೀ ಲಂಡನಿಗೆ ಹೋದರು. ಅಲ್ಲಿ ಪರದೇಶೀಯರ ಮಧ್ಯದಲ್ಲಿ ಮತ್ತೂರ್ಜಿ ಅವರ ಹೆಗಲಿಗೆ ಹೆಗಲಾಗಿ ನಿಂತರು, ವಿದ್ಯಾಭವನದ ಅಣು ಅಣುವಿನಲ್ಲಿ ಸೇರಿದರು. ಪ್ರಧಾನಿಗಳಿಂದ ಹಿಡಿದು ಹಳ್ಳಿಯ ಸರಳ ಮುಗ್ಧರವರೆಗೆ ಎಲ್ಲರೂ ಅವರ ಆದರಾತಿಥ್ಯದ ಸವಿ ಪಡೆದರು. ಆಕೆ ಎಲ್ಲರೊಡನೆ ನಗುವಿನ ಭಾಷೆಯಲ್ಲಿ ಮಾತಾಡಿದರು, ತಮ್ಮ ಕೆಲಸದಿಂದ ಎಲ್ಲರ ಮನ ಗೆದ್ದರು; ಆದರೆ ಎಲೆಮರೆಯ ಕಾಯಂತೆ ಉಳಿದರು. ಅವರು ಹೆಸರಿಗಾಗಿ ದುಡಿಯಲಿಲ್ಲ, ತನಗಾಗಿ 'ಅದಿಲ್ಲ ಇದಿಲ್ಲ' ಎಂದು ಗೊಣಗಲಿಲ್ಲ. ಅವರ ವಾತ್ಸಲ್ಯದ ಸುಧೆ ಉಂಡ ಮಕ್ಕಳ ಅಂತಃಕರಣ ಮೂಡಿಸಿದ ನುಡಿ ಇದು : "ತನ್ನನ್ನು ಕಾರ್ಯಕ್ರಮಕ್ಕೆ ಕರೆಯಲಿಲ್ಲ ಅನ್ನಲಿಲ್ಲ, ತನಗೆ ಕೂರಲು ಕುರ್ಚಿ ಇಲ್ಲದಿದ್ದರೆ ಪ್ರಶ್ನಿಸಲಿಲ್ಲ. ತನ್ನ ಚಿತ್ರ ಬಂದರೆ ಹಿಗ್ಗಲಿಲ್ಲ, ಬರದಿದ್ದರೆ ಕುಗ್ಗಲಿಲ್ಲ. ಭವನದಲ್ಲಿ ಉಂಡುಹೋದ ಅನೇಕರಿಗೆ ಅಡುಗೆ ಮಾಡಿದವಳು ನಮ್ಮ ಚಿಕ್ಕಮ್ಮ ಎಂಬುದೇ ತಿಳಿಯುತ್ತಿರಲಿಲ್ಲ. ಯಾರೋ caterersಗೆ ದುಡ್ಡು ಕೊಟ್ಟು ಮಾಡಿಸಿರಬಹುದು ಎಂದು ಬಗೆದವರುಂಟು. ತುಟಿ ಪಿಟಕ್ಕೆನ್ನದೆ ಪತಿಸೇವೆಯೇ ಧರ್ಮವೆಂದು ಸಂಪೂರ್ಣ ನಂಬಿ ಬಾಳಿದವಳು, ನಿಮಿಷಾರ್ಧದಲ್ಲಿ ಬೇಕು ಬೇಕೆಂಬುದನ್ನು ಸೃಷ್ಟಿಸಿಕೊಟ್ಟವಳು ಈ ಚಿಕ್ಕಮ್ಮ."

ಈ 'ಚಿಕ್ಕಮ್ಮ' ಇತರರಿಗಾಗಿ ನಿತ್ಯೋತ್ಸವ ನಡೆಸಿದವರು, ತನ್ನ ಜೀವನವನ್ನು ಒಂದು ಯಜ್ಞವಾಗಿ ಮಾಡಿದವರು, ಹುಟ್ಟಿದ ಮನೆಗೆ ಹೆಸರು ತಂದವರು, ಸೇರಿ ಬಾಳಿದ ಮನೆಗೆ ದೀಪವಾಗಿ ಬೆಳಕು ತಂದವರು ; ಸೇವೆಯ ತಪಸ್ಸು ಮಾಡಿಯೇ ಅಮರರಾದವರು.

ಈ ಹೊತ್ತು ನಮ್ಮ ಪ್ರಾರ್ಥನೆ ಇದು : ಈ 'ಚಿಕ್ಕಮ್ಮ'ನ ಆತ್ಮಕ್ಕೆ ಶಾಂತಿ ದೊರೆಯಲಿ, ಕಿರಿಯರಿಗೆ ಮಾರ್ಗದರ್ಶನ ಮಾಡುತ್ತ ಮತ್ತೂರ್ಜಿ ನಮ್ಮ ನಡುವೆ ನೂರ್ಕಾಲವಿರಲಿ, ಸೇವೆಯ ಬೆಳಕು ಆರದಿರಲಿ.

–ಬಸು

ಮತ್ತೂರು ಶ್ರೀ ಕೃಷ್ಣಮೂರ್ತಿ ಅವರ ವಂಶವೃಕ್ಷ

ನಾರ್ಶಿಭಟ್ಟರು (ಮುದಲಾಪುರ) (ಜ : ೧೬೮೦)

ಕೇಶವಭಟ್ಟರು (ಜ : ೧೭೧೦)

ಚನ್ನೇದೇವರು (ಜ : ೧೭೪೦)

ತಿರುಮಲಾವಧಾನಿಗಳು
ಕೇಶವಭಟ್ಟರು (ಜ : ಕ್ರಿ.ಶ. ೧೭೭೦)
ಅಯಂಣ ಹೆಬ್ಬಾರು (ಅಪುತ್ರವಂತರು)

ನಾರ್ಶಿಭಟ್ಟರು (ಜ : ೧೮೦೦)
ನಾರಾಯಣಭಟ್ಟರು
ಸೀತಾರಾಮಭಟ್ಟರು
ಚನ್ನಾವಧಾನೀ
ಎಂಕಣ್ಣಶಾಸ್ತ್ರಿಗಳು
ರಾಮಾವಧಾನೀ

ಅನಂತರಾಮಯ್ಯ
ಕೇಶವಯ್ಯ (ಜ : ೧೮೨೦) + ನರ್ಸಮ್ಮ

ಸೀತಾರಾಮಯ್ಯ (ಜ : ೧೮೪೦) + ತಿಮ್ಮಮ್ಮ

ಅನಂತರಾಮ (ಅನಂತಯ್ಯ) + ಸುಬ್ಬಮ್ಮ
ಹಿರಿಯಂಣ (ಕೇಶವಯ್ಯ) (ಜ. ೧೮೬೦)

ಜೋಡಿದಾರ್ ಸೀತಾರಾಮಯ್ಯ (ಜ. ೧೮೮೦) ಲಕ್ಷ್ಮೀದೇವಮ್ಮ (ಪುಟ್ಟಮ್ಮ)
(ಮುದಲಾಪುರ)

ರಾಮಕೃಷ್ಣಯ್ಯ + ನಂಜಮ್ಮ

ಅನಂತ + ಜಾನಕಿ-ಜ್ಞಾನಾಂಬ
-ಸರೋಜ
-ಸೌಮಿತ್ರಿ
-ಶಿವಕುಮಾರ
-ಸಂಧ್ಯಾ
-ಗಾಯತ್ರಿ

ಕೇಶವಮೂರ್ತಿ
+ ಲಕ್ಷ್ಮೀದೇವಿ

ದೊರೆಸ್ವಾಮಿ + ಸುಬ್ಬಲಕ್ಷ್ಮಿ
-ಕೃಷ್ಣಮೂರ್ತಿ
-ಸುಂದರ
-ಚಂದ್ರಶೇಖರ
-ಶ್ರೀನಿವಾಸ

ಶಂಕರಮೂರ್ತಿ
+ ಸೀತಾಲಕ್ಷ್ಮಿ

ಮತ್ತೂರು ಕೃಷ್ಣಮೂರ್ತಿ
+ ರಾಜಲಕ್ಷ್ಮಿ

ಜಾನಕಿ + ನಂದಕುಮಾರ
-ರಘುನಂದನ
-ಸೀತಾಲಕ್ಷ್ಮಿ

ಪೋಷಕರು

ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ : ಶ್ರೀ ಎಚ್.ಎಂ. ಲಕ್ಷ್ಮೀಶ ಬಿ.ಎಸ್‌ಸಿ., (53), ತಂದೆ : ಎಚ್.ಕೆ. ಮಂಜುನಾಥಯ್ಯ, ತಾಯಿ : ಸರಸ್ವತಮ್ಮ, ತಂದೆಯ ತಂದೆ: ಕೇಶವಯ್ಯ, ಹಳ್ಳಿ ಮೈಸೂರು, ಹೊ.ನ.ತಾ, ಹಾಸನ ಜಿಲ್ಲೆ, ವ್ಯವಸಾಯ. ಲಕ್ಷ್ಮೀಶ: ಜೂನಿಯರ್ ಎಂಜಿನಿಯರ್ (BSNL) ಹಾಸನ ವಿಭಾಗ; ಮಧ್ಯಪ್ರದೇಶದಲ್ಲಿ ತರಬೇತಿ, ಕರ್ನಾಟಕದ ಹಲ ಜಿಲ್ಲೆಗಳಲ್ಲಿ ಸೇವೆ. ನಾರಾಯಣರಾವ್ ಅವರಲ್ಲಿ ಗಾಯನ ಕಲಿಕೆ ವಿದ್ವತ್‌ವರೆಗೆ. ಪತ್ನಿ : ಸುಕನ್ಯಾ ಎಚ್.ಆರ್. (ಸುಮಾ), ತಂದೆ ಕೆ.ಟಿ. ರಾಮಕೃಷ್ಣಯ್ಯ, ತಾಯಿ ಲಲಿತಮ್ಮ, ತಂದೆಯ ತಂದೆ ತಿಪ್ಪಯ್ಯ ; ಹಿರಗನಹಳ್ಳಿ, ಹಾಸನ ತಾಲ್ಲೂಕು, ಹಾಸನಜಿಲ್ಲೆ. ಸುಮಾ : ಅಧ್ಯಾಪಕಿ, ಪ್ರಾಥಮಿಕ ಶಾಲೆ, ಚಿಕ್ಕಕೊಂಡಗುಳ. ಮಕ್ಕಳು : ದೀಪ್ತಿ, ಸ್ವಾತಿ.

ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ : ಶ್ರೀ ಕೆ.ಎನ್. ಸೂರ್ಯನಾರಾಯಣ, ಡಿಪ್ಲೊಮಾ-ಇನ್-ಮೆಕ್ಯಾನಿಕಲ್ ಎಂಜಿನಿಯರಿಂಗ್ (53), ತಂದೆ : ನಾರಣಪ್ಪ, ತಾಯಿ : ಸಾವಿತ್ರಮ್ಮ (ಸಾತಿ); ತಂದೆಯ ತಂದೆ : ಸುಬ್ರಹ್ಮಣ್ಯ ; ದೊಡ್ಡಕೊಂಡುಗಳ, ಹಾಸನ ಹೋಬಳಿ, ಹಾಸನ ತಾಲ್ಲೂಕು; ವ್ಯವಸಾಯ. KNS ವೃತ್ತಿ : ಜೂನಿಯರ್ ಎಂಜಿನಿಯರ್ P.W.D. (RHE); ಬೆಳಗಾಂ, ಗುಲ್ಬರ್ಗ, ಬಳ್ಳಾರಿ, ಹಾಸನ ಇ. ಜಿಲ್ಲೆಗಳಲ್ಲಿ ಸೇವೆ. ವಿಶೇಷ ಪರಿಣತಿ : ಕೊಳವೆಬಾವಿ. ಪತ್ನಿ : ಭಾಗ್ಯ, ತಂದೆ : ನಾರಾಯಣರಾವ್ (ಗುಂಡಪ್ಪ), ತಾಯಿ : ಗೌರಮ್ಮ; ಹಾನಗಲ್, ವ್ಯವಸಾಯ. ಮಕ್ಕಳು : ಪ್ರದೀಪಕುಮಾರ K.S., ಪೂರ್ಣಿಮಾ K.S.

ಶ್ರೀಮತಿ ಸತ್ಯವತೀ, ಶ್ರೀ ಹರವೆ ಕೇಶವಮೂರ್ತಿ : ಹರವೆ ಶ್ಯಾನುಭೋಗ್ ನಾರಣಯ್ಯ ಕೇಶವಮೂರ್ತಿ ಎಂ.ಎ., ಬಿ.ಎಸ್‌ಸಿ., ಆರ್. ಫಾರ್ಮಾ (ಜ. 1929); ವಿದ್ಯಾಭ್ಯಾಸದ ನಂತರ ಸ್ವಂತ ಮೋಟಾರ್ ಸರ್ವಿಸ್, ರಾಷ್ಟ್ರೀಕರಣದ ನಂತರ ಸಾರಾಭಾಯಿ ಕೆಮಿಕಲ್ಸ್‌ನ ಈ.ಆರ್. ಸ್ಕ್ವಿಬ್ಸ್ ಎಂಬ ಖ್ಯಾತನಾಮ ಔಷಧ ಸಂಸ್ಥೆಯ ವೈದ್ಯಕೀಯ ಪ್ರತಿನಿಧಿಯಾಗಿ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಸೇವೆ ; 1988ರಲ್ಲಿ ನಿವೃತ್ತಿ, ನಂತರ ಹೋಟೆಲ್ ಉದ್ಯಮ, ಸ್ಕ್ರೀನ್ ಪ್ರಿಂಟಿಂಗ್, ಮೆಡಿಕಲ್ ಸ್ಟೋರ್ಸ್. ಸಾರ್ವಜನಿಕ ಸೇವೆ. ಅಖಿಲ ಭಾರತ ಗ್ರಾಹಕ್ ಪಂಚಾಯತ್‌ನ ಮೈಸೂರು ನಗರ ಅಧ್ಯಕ್ಷ, ಸರಸ್ವತಿ ಶಿಕ್ಷಣ ಸಂಸ್ಥೆಯ ಸ್ಥಾಪಕ ವಿಶ್ವಸ್ತ, ಮಹಾಜನ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯ, 1977 ರಿಂದ 5 ವರ್ಷ ಬೆಟ್ಟದಪುರ ಸಂಕೇತಿ ಸಂಘದ ಗೌರವ ಕಾರ್ಯದರ್ಶಿ (ಕಲ್ಯಾಣಮಂಟಪದ ಶಂಕುಸ್ಥಾಪನೆ ನಡೆಸಿದ ಕೀರ್ತಿ). ವಿಶ್ವಹಿಂದು ಪರಿಷತ್ ಮೈಸೂರು ಮಹಾನಗರದ ಅಧ್ಯಕ್ಷ. ದೇಶ ವಿದೇಶ ಸಂಚಾರ, ಅಪಾರ ಅನುಭವ ; ಚಿಂತಕ, ಲೇಖಕ. ಪತ್ನಿ : ಸತ್ಯವತೀ ರಾ.ಭಾ. ವಿಶಾರದೆ, ಸದ್ಗೃಹಿಣಿ.

ಡಾ. ಶ್ರೀಮತಿ ಆರ್. ಇಂದಿರಾ, ಶ್ರೀ ಎಸ್. ಕೆ. ಲಕ್ಷ್ಮೀನಾರಾಯಣ : ರೊಟೇರಿಯನ್ ಲಕ್ಷ್ಮೀನಾರಾಯಣ (ಬಾಬು), 1994ರಲ್ಲಿ ರೋಟರಿ ವೆಸ್ಟ್ ಕ್ಲಬ್ ಆಫ್ ಮೈಸೂರ್‌ನ ಸದಸ್ಯರಾಗಿ ಸೇರಿ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ರೋಟರಿ ವೆಸ್ಟ್ ಅಸೋಸಿಯೇಷನ್‌ನ ಕಾರ್ಯದರ್ಶಿ, ಸಮುದಾಯ ಸೇವೆಯ ನಿರ್ದೇಶಕ; 32ನೇ ರೋಟರಿ ಡಿಸ್ಟ್ರಿಕ್ಟ್ ಕಾನ್‌ಫರೆನ್ಸ್‌ನ ಖಜಾಂಚಿ ಆಗಿ ಸೇವೆ ಸಲ್ಲಿಸಿ ಈಗ ಜ್ಹೋನ್ VII, R.1. ಡಿಸ್ಟ್ರಿಕ್ಟ್ 3180 ರ ಅಸಿಸ್ಟೆಂಟ್ ಗವರ್ನರ್ ಆಗಿದ್ದಾರೆ. ಮೈಸೂರಿನ ಸಾಂಸ್ಕೃತಿಕ ವಲಯದಲ್ಲಿ ಪರಿಚಿತರು. ಅರಳಿಕಟ್ಟೆ ಶ್ರೀರಾಮಮಂದಿರದಲ್ಲಿ ಸಂಗೀತ ಕಾರ್ಯಕ್ರಮಗಳ ಆಯೋಜನೆಗೆ 12ನೆಯ ಕಿರಿ ವಯಸ್ಸಿನಲ್ಲೇ ತೊಡಗಿದವರು, ಈಗ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದ ಕಾರ್ಯದರ್ಶಿಯಾಗಿ ಕಲಾಸೇವೆ ಮುಂದುವರಿಸಿದ್ದಾರೆ, ಹಿಂದಿನ ಅದರ ವೈಭವವನ್ನು ಮರಳಿ ತರುವ ಯತ್ನ ನಡೆಸಿದ್ದಾರೆ. ಕಂಪ್ಯೂಟರೀಕೃತ ಮುದ್ರಣಕ್ಕೆ ಕಾಲಿಟ್ಟ ಮೈಸೂರಿನ ಮೊದಲಿಗರಲ್ಲೊಬ್ಬರು, ಕೇವಲ 10-15 ವರ್ಷಗಳಲ್ಲಿ ಅವರ 'ರೆಡಿ ಪ್ರಿಂಟ್' ನಗರದ ಹಿರಿಯ ಕಂಪೋಸಿಂಗ್ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಸಂಸ್ಥೆಯಾಗಿ ಬೆಳೆದಿದೆ. ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಸದಸ್ಯರೂ ಆಗಿದ್ದ ಅವರು ನಗರದ ಹಲವು ಸಮಾಜ ಸೇವಾ ಸಂಘಟನೆಗಳ ಜೊತೆ ಗುರುತಿಸಿಕೊಂಡವರು, ಪ್ರಗತಿಪರ ರೈತ. ಪತ್ನಿ : ಡಾ. ಆರ್. ಇಂದಿರಾ ಮೈಸೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪ್ರಾಧ್ಯಾಪಿಕೆ, ರೋಟರಿ ವೆಸ್ಟ್‌ನ ಸದಸ್ಯೆ.

ಶ್ರೀಮತಿ ಕೆ.ಎಸ್. ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್ : ಬಸವಪಟ್ಟಣದ ಬಿ. ಶಾಮಣ್ಣ ಮತ್ತು ಲಕ್ಷ್ಮಮ್ಮ ದಂಪತಿಗಳ ಮೊದಲ ಮಗನಾಗಿ ವಿಶ್ವನಾಥರಾವ್ ಹುಟ್ಟಿದ್ದು ತುರ್ವೆಕೆರೆ ತಾಲ್ಲೂಕು ಸುಂಕಲಾಪುರದಲ್ಲಿ (17.4.1927).

45 ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿ, ಬಿ.ಎಸ್‌ಸಿ, ಬಿ.ಟಿ., ಪದವೀಧರ ; 1947 ರಿಂದ ಪ್ರೌಢಶಾಲಾ ಶಿಕ್ಷಕ, ಮುಖ್ಯೋಪಾಧ್ಯಾಯರಾಗಿ ಬಡ್ತಿ. ಇಂಗ್ಲಿಷ್ ಭಾಷಾ ಎಂ.ಎ., ಜೊತೆಗೆ ಎಂ.ಎಡ್., 1982ರಲ್ಲಿ ನಿವೃತ್ತರಾಗುವವರೆಗೆ ವಿವಿಧ ಕಾಲೇಜುಗಳ ಪ್ರಾಂಶುಪಾಲ. ನಂತರವೂ ಪ್ರಾಂಶುಪಾಲ, ಆಡಳಿತ ಮಂಡಳಿ ಸಲಹೆಗಾರ, ಆರ್.ಎಸ್.ಎಸ್. ಸ್ವಯಂಸೇವಕ, ಜತೆಗೆ ವಿ.ವಿ.ದ ಯು.ಟಿ.ಸಿ. ತರಪೇತಿ; ಕ್ರೀಡಾಪಟು, ರಾಜ್ಯಮಟ್ಟದ ಪಂದ್ಯಾವಳಿಗಳ ಸಂಘಟಕ. ಕೌಶಿಕ ಸಂಕೇತಿ ಸಂಘ ಮತ್ತು ವಿದ್ಯಾರ್ಥಿ ನಿಲಯಗಳ ಪದಾಧಿಕಾರಿ ; ಇಂಗ್ಲೆಂಡ್ ಪ್ರವಾಸ; ರಾಷ್ಟ್ರೋತ್ಥಾನ ಪರಿಷತ್, ವಿಶ್ವಹಿಂದು ಪರಿಷತ್, ವಿದ್ಯಾಭಾರತಿ ಸಂಸ್ಥೆ, ರಾಜ್ಯ ಪ್ರೌಢಶಾಲಾ ಶಿಕ್ಷಕ ಸಂಘ, ಹಾಸನ ಜಿಲ್ಲಾ ಬ್ರಾಹ್ಮಣ ಸಂಘ, ಶ್ರೀ ಸೀತಾ ರಾಮಾಂಜನೇಯ ದೇವಾಲಯ, ಕರ್ಣಾಟಕ ರಾಜ್ಯ ವಿಜ್ಞಾನ ಪರಿಷತ್ ಇ. ಸಂಸ್ಥೆಗಳ ಸಹಯೋಗ. ಲೇಖಕ, ಭಾಷಣಕಾರ. ಪತ್ನಿ : ಕೃಷ್ಣಾಪುರದ ಸರ್ವೆ ಸುಬ್ಬರಾಯರು ಮತ್ತು ವೆಂಕಟಲಕ್ಷ್ಮಮ್ಮನವರ ಮಗಳು ಕೆ.ಎಸ್. ನಾಗಮ್ಮ ಹಿಂದಿ ಶಿಕ್ಷಕಿ, ಸಂಗೀತಾಸಕ್ತೆ, ಹಲವು ಸಂಸ್ಥೆಗಳಲ್ಲಿ ಪದಾಧಿಕಾರಿ.

ಶ್ರೀಮತಿ ಎಸ್.ಕೆ. ಪಾರ್ವತಮ್ಮ, ಶ್ರೀ ಬಿ.ಎಸ್. ಕೃಷ್ಣಮೂರ್ತಿ : ಬಸವಪಟ್ಟಣದ ಕೇಶವ ಅವಧಾನಿಗಳ ಮಗ ಶ್ರೀ (ಅಪ್ಪಪ್ಪ) ಸುಬ್ಬರಾಯರ ನಾಲ್ಕನೆಯ ಮಗ ಶ್ರೀ ಬಿ.ಎಸ್. ಕೃಷ್ಣಮೂರ್ತಿಯವರು ಸುಮಾರು ಅರ್ಧಶತಮಾನ ಕಾಲ ಅಡಿಕೆ ತುಡಿಕೆ ಮಾಡಿದ ಮಹಾಕೃಷಿಕ ಮತ್ತು ವಹಿವಾಟುದಾರರು. ಅಡಿಕೆಗೆ ಬೆಲೆ ಇಲ್ಲದ ಕಾಲದಲ್ಲೂ, ಆ ಕಾಲಾನುಗುಣವಾದ ತಮ್ಮ ಹನ್ನೆರಡು ಮಕ್ಕಳ ತುಂಬು ಸಂಸಾರವನ್ನು ಗೌರವದಿಂದ ನಡೆಸಿ ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿದವರು ; ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಆಳುಕಾಳುಗಳ ಯೋಗಕ್ಷೇಮಕ್ಕಾಗಿ ತುಡಿದವರು. ಒಕ್ಕಲು ಮಕ್ಕಳ ಹಳ್ಳಿಯವರೆಲ್ಲರೂ ಒಮ್ಮೆಗೇ ಖಾಯಿಲೆ ಬಿದ್ದಾಗಲೂ ಜಿಲ್ಲಾ ಕೇಂದ್ರಕ್ಕೊಯ್ದು ಚಿಕಿತ್ಸೆ ಮಾಡಿಸಿ ಮಾನವೀಯತೆ ಮೆರೆದವರು; ಪ್ರತಿಯಾಗಿ ಅವರ ಅವ್ಯಾಜ ಪ್ರೀತಿಗೆ ಪಾತ್ರರಾದವರು. ಅವರು ವರಿಸಿದ್ದೂ ಕೀರ್ತಿವಂತರಾದ ಸೋಮನಹಳ್ಳಿಯ ವೇ॥ ಬ್ರ॥ ಶ್ರೀ ಸುಬ್ರಹ್ಮಣ್ಯ ಘನಪಾಠಿಗಳ ತಂಗಿ ಪಾರ್ವತಮ್ಮನವರನ್ನು, ತಾಳ್ಮೆಯ ಮೂರ್ತಿಯನ್ನು ; ಇಡೀ ತಾಲ್ಲೂಕಿನಲ್ಲಿದ್ದ ಇವರ ರೈತರು ಇಬ್ಬರನ್ನೂ ಮನಸಾರೆ ಆರಾಧಿಸುತ್ತಿದ್ದುದು ಹಣಕ್ಕೆ ಒತ್ತುಕೊಡದ ಅವರ ಹೃದಯ ಶ್ರೀಮಂತಿಕೆಗೆ. ಅವರ ಮಕ್ಕಳೆಲ್ಲ ಮಾಡಿರುವ ಸಾಧನೆಗೆ ಬೆಂಗಾವಲಾದುದು ಮನೆತನಕ್ಕೆ ದಕ್ಕಿದ ಈ ಸರಳತೆ ಮತ್ತು ಧೃತಿ. ಕಲೆ, ವಹಿವಾಟು ಮತ್ತು ಸಮಾಜಸೇವೆಯಲ್ಲಿ ರಾಜೀವ್ ಟ್ರೇಡರ್ಸ್‌ನ ಶ್ರೀ ಬಿ.ಕೆ. ರಾಮಚಂದ್ರ ಅವರು ತೊಡಗಿಸಿಕೊಂಡು ಮಾಡಿದ ಸಾಧನೆಯ ಹಿನ್ನೆಲೆ ಇಂಥದು.

ಶ್ರೀಮತಿ ಸುಧಾ, ಶ್ರೀ ಎಸ್. ಅರುಣಕುಮಾರ್ : ತಂದೆ : ಶ್ರೀ ಎಸ್. ಸತ್ಯನಾರಾಯಣರಾವ್, ಸ್ಟೇಷನ್ ಸೂಪರಿಂಟೆಂಡೆಂಟ್ (ನಿವೃತ್ತ), ದಕ್ಷಿಣ ರೈಲ್ವೆ, ಮಂಡ್ಯ ; ತಂದೆಯ ತಂದೆ ಶ್ರೀ ಕೆ. ಸುಬ್ಬರಾವ್, ಮಂಡ್ಯಜಿಲ್ಲೆ ಕೆರೆಗೋಡಿನವರು, ಶಾನುಭೋಗರ ಮನೆತನ ; ತಾಯಿ : ಶ್ರೀಮತಿ ಎಸ್. ಸಾವಿತ್ರಮ್ಮ; ತಾಯಿಯ ತಂದೆ : ಶ್ರೀ ಬಿ. ಮಹಾದೇವಯ್ಯ, ಮುಖ್ಯ ಗುಮಾಸ್ತರು, ತಾಲ್ಲೂಕು ಆಫೀಸು ; ಬೋಗಾದಿ ಮೂಲದವರು. ಸತ್ಯನಾರಾಯಣರಾವ್ ಹಾಗೂ ಸಾವಿತ್ರಮ್ಮ ದಂಪತಿಯ ಕೊನೆಯ ಮಗ ಅರುಣಕುಮಾರ್ (೪೫) ಈಗ ಮಂಡ್ಯದ ಬಾಲಕರ ಸರ್ಕಾರಿ ಕಾಲೇಜಿನಲ್ಲಿ ಪ್ರವಾಚಕ. ಕಾರಣಾಂತರದಿಂದ ಬಾಲ್ಯದಲ್ಲಿ ಅಂಧತ್ವ, ತಾಯಿಯವರ ಮುಂದಾಲೋಚನೆ, ಸತತ ಪರಿಶ್ರಮ ಮತ್ತು ಸಾಹಸದಿಂದ ವಿದ್ಯಾಭ್ಯಾಸ, ಮೈ.ವಿ.ವಿ.ದ ಎಂ.ಎ., (ಇತಿಹಾಸ) ಪದವಿ (೧೯೮೩). ಕೃಷ್ಣರಾಜ ಒಡೆಯರ ಬಗೆಗೆ ಸಂಶೋಧಿಸಿದ ಅನುಭವ. ಮುಂಬಯಿಯಿಂದ ಕಂಪ್ಯೂಟರ್ ತಂದು ೧೫ ದಿನದಲ್ಲಿ ಕಲಿತ ಸಾಹಸಿ; ಶೈಕ್ಷಣಿಕವಾಗಿ ವ್ಯಾಪಕ ಬಳಕೆ, ಇ-ಮೇಲ್‌ನಲ್ಲಿ ವ್ಯಾಪಕ ಸಂಪರ್ಕ, ಆಕಾಶವಾಣಿ ಮತ್ತು ದೂರದರ್ಶನಗಳ ಉತ್ತಮ ಕಾರ್ಯಕ್ರಮಗಳ ಸಿ.ಡಿ. ಮುದ್ರಣದ ಅಪರೂಪದ ಕಲ್ಪನೆ, ಕಾರ್ಯಸಾಧನೆ. ನೆಟ್‌ನಿಂದ ವ್ಯಾಪಕ ಮಾಹಿತಿ ಸಂಗ್ರಹ, ಬೋಧನೆಯ ನೈಪುಣ್ಯ; ಇ-ಬುಕ್‌ಗಳ ಬಳಕೆ, ವಿದ್ಯಾರ್ಥಿಗಳಿಗಾಗಿ ಅದರಲ್ಲೇ ಟಿಪ್ಪಣಿ ತಯಾರಿಕೆ. ಕುಣಿಗಲ್‌ನ ಶಾಲಾ ಅಧ್ಯಾಪಕ ಶ್ರೀ ಗುಂಡಣ್ಣನವರ ಮಗಳು ಶ್ರೀಮತಿ ಸುಧಾ ಧರ್ಮಪತ್ನಿ. ಮಗಳು ವಾಗ್ದೇವಿ (೯) ; ಸುಖದ ಸಂಸಾರ.

ಶ್ರೀಮತಿ ಲಕ್ಷ್ಮೀ ಶ್ರೀ ಹೆಚ್. ಕೆ. ವೆಂಕಟರಾಮಯ್ಯ : ಶ್ರೀ ಹಂದನಹಾಲು ಕೃಷ್ಣಾವಧಾನಿ ವೆಂಕಟರಾಮಯ್ಯ (ಜ : ೩೧-೧೦-೧೯೨೮) ಸಂಘಟನಾ ಚತುರ, ದಕ್ಷ ಕಾರ್ಮಿಕ ನಾಯಕ, ಉದಾರ ಮನಸ್ಸಿನ ಕ್ರಿಯಾಶೀಲ. ಜನ್ಮ ಕೊಟ್ಟ ತಂದೆ ಹೆಬ್ಬಾಲೆ ಶ್ರೀ ಕೇಶವಯ್ಯ, ತಾಯಿ ಶ್ರೀಮತಿ ಶಾರದಮ್ಮ ; ದತ್ತುವಾಗಿ ಬಂದದ್ದು ಹಂದನಹಾಲು ಶ್ರೀ ಕೃಷ್ಣಾವಧಾನಿ, ಶ್ರೀಮತಿ ನಂಗ್ಯಾರಮ್ಮ ದಂಪತಿಗೆ. 'ಇಂಟರ್' ಆದ ಮೇಲೆ ೧೯೫೨ರಲ್ಲಿ ಭಾರತೀಯ ರೈಲ್ವೆ ನೌಕರರಾದರು. ೩೧-೧೦-೧೯೮೬ರಂದು ನಿವೃತ್ತರಾಗುವ ವೇಳೆಗೆ ೩೫ ವರ್ಷಗಳ ಬಹುಮುಖ ಸೇವೆ ಸಲ್ಲಿಸಿದಂತಾಗಿತ್ತು : ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಸೇಷನ್‌ನ ಅಂಗಸಂಸ್ಥೆಯಾದ ಅಖಿಲಭಾರತ ರೈಲ್ವೆ ಫೆಡರೇಷನ್‌ನ ಸಕ್ರಿಯ ನಾಯಕ ; ದಕ್ಷಿಣ ಭಾರತ ರೈಲ್ವೆ ಮಜ್ದೂರ್ ಯೂನಿಯನ್‌ನ (ಎಸ್.ಆರ್.ಎಂ.ಯು.) ಜ್ಹೋನಲ್ ಸೆಕ್ರೆಟರಿ ಹಾಗೂ ಡಿವಿಷನಲ್ ಸೆಕ್ರೆಟರಿ ; ರೈಲ್ವೆ ಆಸ್ಪತ್ರೆಯ ಕಾರ್ಯಸಮಿತಿ ಸದಸ್ಯ ; ೧೯೭೪ರ ರೈಲ್ವೆ ಚಳವಳಿಯಲ್ಲಿ ಭಾಗಿ, ತುರ್ತುಪರಿಸ್ಥಿತಿಯಲ್ಲಿ ಸಂಕಷ್ಟ ; ೧೯೮೪ರಲ್ಲಿ ರೈಲ್ವೆ ವಸತಿ ಬಡಾವಣೆಗಾಗಿ ಹೋರಾಟ, ಮುಂದೆ ಹಲವು ಲೇಔಟ್‌ಗಳ ಯಶಸ್ವಿ ನಿರ್ವಹಣೆ ; ರೈಲ್ವೆ ಸಹಕಾರ ಬ್ಯಾಂಕಿಗೆ ಎರಡು ಬಾರಿ ಸತತವಾಗಿ ಆಯ್ಕೆ-ಹೀಗೆ ಅದರ ಸಾಲು. ಅತ್ಯುತ್ತಮ ಪುಸ್ತಕಗಳ ಸಂಗ್ರಹ, ಓದುವ ಗೀಳು, ದಾನಶೀಲತೆ-ವ್ಯಕ್ತಿತ್ವದ ಹರಹು. ೧೯೬೫ರಲ್ಲಿ ಶ್ರೀಮತಿ ಲಕ್ಷ್ಮೀ ಅವರೊಂದಿಗೆ ವಿವಾಹ : ಮೂವರು ಪುತ್ರರು ; ಸೇವೆಯಲ್ಲಿ ಸಾರ್ಥಕ್ಯ.

ಶ್ರೀಮತಿ ಜಯಲಕ್ಷ್ಮೀ, ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ

ವೇ॥ ಬ್ರ॥ ಶ್ರೀ॥ ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ (ಜ. ೬.೫.೧೯೨೮), B.Sc., B.Sc. Eng. (Metl.), M.S. (Metl.) ಅವರು ಯಜುರ್ವೇದವನ್ನೂ ಆಪಸ್ತಂಬಸೂತ್ರವನ್ನೂ ಪೂರ್ಣವಾಗಿ ಅಧ್ಯಯನಮಾಡಿದ ವೈದಿಕ, ವಿಜ್ಞಾನಿ, ಲೇಖಕ, ಪ್ರವಚನಕಾರ. ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ open hearth, electric pig iron Furnace ಮತ್ತು Blast Furnaceನ ವಿಭಾಗ ಮುಖ್ಯಸ್ಥ (ನಿವೃತ್ತ), ಮದರಾಸಿನ IITಯ ಮೆಟಲರ್ಜಿ ವಿಭಾಗದ ಉಪಪ್ರಾಧ್ಯಾಪಕ (ನಿವೃತ್ತ), ಪುರೋಹಿತ, ಚಿಂತಕ ಮತ್ತು ಮಾನವೀಯ ನೆಲಗಟ್ಟಿನ ಸುಧಾರಣಾವಾದಿ. ವೇದಗಳು, ಸೂತ್ರಗಳು, ಇತಿಹಾಸಕಾವ್ಯಗಳು ಮತ್ತು ಭಾಗವತವನ್ನು ಅಧ್ಯಯನ ಮಾಡಿ ಪ್ರಭಾವಿತರಾಗಿ ವೈಜ್ಞಾನಿಕ ದೃಷ್ಟಿಯಿಂದ ಭಾರತೀಯಧರ್ಮವನ್ನು ವಿಶ್ಲೇಷಿಸತೊಡಗಿದ ಪಂಡಿತ.

ಫಲಜ್ಯೋತಿಷ್ಯದಲ್ಲಿ ನಂಬಿಕೆ ಇಲ್ಲದ ಕುಮಾರಸ್ವಾಮಿ ಅವರ ಮುತ್ತಜ್ಜ ಸೂರ್ಯನಾರಾಯಣ ಅವರು ಒಬ್ಬ ಜ್ಯೋತಿಷಿಯಾಗಿದ್ದರು, ವ್ಯವಸಾಯವನ್ನು ನಂಬಿ ರುದ್ರಪಟ್ಟಣದಲ್ಲಿ ನೆಲೆಸಿದ್ದರು, ಸಮಾಜದಲ್ಲಿ ಒಬ್ಬ ಗಣ್ಯವ್ಯಕ್ತಿಯಾಗಿದ್ದರು. ಅಜ್ಜ ಸುಬ್ರಹ್ಮಣ್ಯ ಅವರ ವೃತ್ತಿಯೂ ವ್ಯವಸಾಯವೇ. ತಂದೆ ಆರ್.ಕೆ. ಶ್ರೀನಿವಾಸಯ್ಯ ಅವರೂ ಜ್ಯೋತಿಷ್ಕರಾಗಿದ್ದರು. ಅವರು ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳ ಪ್ರೌಢಶಾಲೆಗಳಲ್ಲಿ ಕನ್ನಡ ಪಂಡಿತರಾಗಿಯೂ ಸೇವೆ ಸಲ್ಲಿಸಿದರು. ಕುಮಾರಸ್ವಾಮಿ ಅವರ ತಾಯಿ ಸೀತಮ್ಮನವರ ತಂದೆ ಸುಬ್ರಹ್ಮಣ್ಯ ಅವರೂ ಹರವೆಯಲ್ಲಿ ವ್ಯವಸಾಯ ಮಾಡಿ ಬದುಕುತ್ತಿದ್ದವರೇ. ಆದರೆ ಈ ಎಲ್ಲ ಪಾರಂಪರಿಕ ಮಾರ್ಗಗಳನ್ನು ಬಿಟ್ಟು ಕುಮಾರಸ್ವಾಮಿಯವರು ವಿಜ್ಞಾನಿಯಾದರು, ವೈದಿಕರಾದರು.

ಮೊದಲಿನಿಂದಲೂ ಪ್ರತಿಭಾಶಾಲಿಯಾಗಿದ್ದ ಕುಮಾರಸ್ವಾಮಿಯವರ ಪ್ರಾರಂಭಿಕ ವಿದ್ಯಾಭ್ಯಾಸ ಆದದ್ದು ಮೈಸೂರು ಮತ್ತು ಬೆಂಗಳೂರಿನಲ್ಲಿ. ಅನಂತರ ಬೆಂಗಳೂರಿನಲ್ಲಿ ೧೯೪೫ರಲ್ಲಿ ಇಂಟರ್, ಪ್ರಥಮದರ್ಜೆ; ೧೯೪೭ರಲ್ಲಿ ಸೆಂಟ್ರಲ್ ಕಾಲೇಜಿನಿಂದ B.Sc., ಪದವಿ, ಎರಡನೆಯ ರ್‍ಯಾಂಕ್, 'ರಸಾಯನಶಾಸ್ತ್ರ'ಕ್ಕೆ ಬಂಗಾರದ ಪದಕ; ೧೯೪೮-೫೨ರ ಅವಧಿಯಲ್ಲಿ ವಾರಾಣಸಿ ಯಲ್ಲಿ ವಾಸ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ B.Sc. Eng. (Metallurgy) ಉನ್ನತ ದರ್ಜೆಯಲ್ಲಿ ; ೧೯೭೫ರಲ್ಲಿ ಮದ್ರಾಸ್ IIT ಯಲ್ಲಿ M.S. (Metallurgy) ಪದವಿ.

ವೃತ್ತಿಯನ್ನು ಆರಂಭಿಸಿದ್ದು ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತಪಾಠಶಾಲೆಯಲ್ಲಿ-ಗುಮಾಸ್ತರಾಗಿ. ರಸಾಯನಶಾಸ್ತ್ರದ ಅವರ ಅಸಾಧಾರಣ ಉತ್ತರಪತ್ರಿಕೆಯಿಂದ ಪ್ರಭಾವಿತರಾಗಿ ಬಸಪ್ಪ ಇಂಟರ್ ಕಾಲೇಜಿನವರು ಅಧ್ಯಾಪಕ ಹುದ್ದೆ ಕೊಟ್ಟರು. ೧೯೫೨ ರಿಂದ ೧೯೬೫ರವರೆಗೆ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಬ್ಲಾಸ್ಟ್‌ಫರ್ನೇಸ್ ಓಪನ್‌ಹಾರ್ತ್ ವಿಭಾಗದಲ್ಲಿ ಮುಖ್ಯಸ್ಥರಾಗಿ ಸೇವೆ, 'ಲೋಹಶಾಸ್ತ್ರ ನಿಪುಣ' ಎಂಬ ಖ್ಯಾತಿ. ಮದರಾಸಿನ IIT ಯಲ್ಲಿ ೧೯೬೫ ರಿಂದ ೧೯೮೮ರವರೆಗೆ ಲೋಹಶಾಸ್ತ್ರ ಬೋಧನೆ, ಉಪಪ್ರಾಧ್ಯಾಪಕರಾಗಿ ನಿವೃತ್ತಿ.

ಜತೆಜತೆಗೇ ಜೀವನಕ್ಕೆ ವೈದಿಕ ಆಯಾಮ : ಮಲ್ಲಿಕಾರ್ಜುನಶಾಸ್ತ್ರಿಗಳಲ್ಲಿ ರುದ್ರಚಮಕ, ಕೌಶಿಕ ಸುಬ್ರಹ್ಮಣ್ಯ ಕೌಶಿಕರಲ್ಲಿ ತೈತ್ತಿರೀಯ ಬ್ರಾಹ್ಮಣ ಮೂರನೇ ಅಷ್ಟಕ, ಕಾಶಿಯಲ್ಲಿ ಕಿಕ್ಕೇರಿ ದೇವರ ಭಟ್ಟರಿಂದ ನ್ಯಾಯಶಾಸ್ತ್ರ , ತೆನ್ನಂತೋಟಂ ಯಜ್ಞನಾರಾಯಣದೀಕ್ಷಿತರಿಂದ ಏಳು ಕಾಂಡ ತೈತ್ತಿರೀಯ ಸಂಹಿತೆ, ಜೊತೆಗೆ ಬೆಂಗಳೂರಿನಲ್ಲಿ ಲಕ್ಷ್ಮೀನರಸಿಂಹಶಾಸ್ತ್ರಿಗಳಲ್ಲಿ ಅಧ್ಯಯನ. ಮದರಾಸು ನಾರಾಯಣ ಶಾಸ್ತ್ರಿ ಅವರು, ಶಿವಮೊಗ್ಗೆಯ ಕೇಶವಮೂರ್ತಿ ಘನಪಾಠಿಗಳು, ಮದರಾಸಿನ ಕಾಶೀ ಘನಪಾಠಿಗಳಲ್ಲಿ ವೇದಶಾಸ್ತ್ರಗಳ ಅಂತರಂಗದರ್ಶನ.

ಅವರನ್ನು ಹತ್ತಿರದಿಂದ ಬಲ್ಲ ಶ್ರೀ ಬಿ.ವಿ. ಶ್ರೀಕಂಠ್ ಅವರು ಹೇಳುವಂತೆ, "ಮೊದಲಲ್ಲಿ ಇವರು ಸಂಪ್ರದಾಯಸ್ಥರಾಗಿದ್ದರು. ಒಂದೇ ಜನಾಂಗದಲ್ಲಿ , ಒಂದೇ ಶಾಖೆಯಲ್ಲಿ ಭಿನ್ನಭಿನ್ನವಾದ ಸಂಪ್ರದಾಯಗಳನ್ನು ನೋಡಿ ಬೇಸತ್ತು, ಸೂತ್ರಗಳನ್ನು ಪೂರ್ಣವಾಗಿ ಓದಿ ಅದರಂತೆ ಅನುಸರಿಸುತ್ತಿದ್ದಾರೆ."

ಪ್ರೊ. ಕುಮಾರಸ್ವಾಮಿಯವರು ತಮ್ಮ ಪತ್ರಗಳಲ್ಲಿ ಮತ್ತೆ ಮತ್ತೆ ಹೇಳಿರುವ ಮಾತೆಂದರೆ 'ನಮ್ಮ ಸಂಸ್ಕಾರಗಳಲ್ಲಿ ಭಾವನೆ ಮುಖ್ಯ, ಅದರಿಂದ ಆಗುವುದು ಅಂತರಂಗ ಸಂಸ್ಕಾರ, ಆತ್ಮಗುಣಗಳನ್ನು ಬೆಳೆಸಿಕೊಳ್ಳಬೇಕಾದುದೇ ಅದರ ಫಲ.' ಅವರೇ ಹೇಗೆ ಕರ್ಮಾನುಷ್ಠಾನ ಮಾಡುತ್ತಾರೆ ಎಂಬ ಬಗೆಗೆ ಬಿ.ವಿ. ಶ್ರೀಕಂಠ ಅವರು ೧೧.೧೧.೦೩ ರಂದು ಬರೆದ ಪತ್ರದಲ್ಲಿನ ಸಾಲುಗಳು ಇಲ್ಲಿವೆ, "೮-೧೦ ವರ್ಷಗಳ ಹಿಂದೆ ಅವರ ತಂದೆಯವರ ಶ್ರಾದ್ಧಕ್ಕೆ ನಾನು ಪೂರ್ವಪಂಕ್ತಿಗೆ ಹೋಗಿದ್ದೆ. ನನಗೂ ಶ್ರಾದ್ಧಪಾಠವಾಗಿದ್ದರಿಂದ ಅವರು ಮಾಡುವ ಕ್ರಮ, ಮಂತ್ರಹೇಳುವುದು, ಕೈಕರಣಗಳು ಇತ್ಯಾದಿಗಳನ್ನು observe ಮಾಡುತ್ತಿದ್ದೆ. ಕಡೆಯಲ್ಲಿ ಪಿತೃಪ್ರಾರ್ಥನೆ ಮಾಡುತ್ತಿದ್ದಾರೆ-ಆಗ

ಅವರ ಮುಖದ ವರ್ಚಸ್ಸು, ಶ್ರದ್ಧೆ, ದುಃಖದಿಂದ ಕೂಡಿದ ಮುಖ, ಮಂತ್ರೋಚ್ಚಾರಣೆ ಇವುಗಳನ್ನು ನೋಡಿ ಬಿಕ್ಕಿ ಬಿಕ್ಕಿ ಅಳುವ ಹಾಗೆ ಆಗಿ ಕಣ್ಣುಗಳಲ್ಲಿ ನೀರು ಬಂತು. ನೀರು ಬರುವುದನ್ನು control ಮಾಡಲು ಆಗಲೇ ಇಲ್ಲ. ಅತ್ತುಬಿಟ್ಟೆ. ನಾನು ನನ್ನ ತಂದೆ ತಾಯಿ ಅಜ್ಜಿ ಶ್ರಾದ್ಧಮಾಡುತ್ತೇನೆ. ದುಃಖವಾಗುತ್ತೆ. ಆದರೆ ಬಿಕ್ಕಿ ಬಿಕ್ಕಿ ಅಳುವ ಹಾಗೆ ಆಗಿಲ್ಲ. ಮಾಮನವರು ಯಾವ ಕರ್ಮ ಮಾಡಿದರೂ, ಅವರ ದೃಷ್ಟಿ, ಜ್ಞಾನ, ಮನಸ್ಸು ಎಲ್ಲವೂ ಆ ಕರ್ಮದಲ್ಲಿಯೇ ಇರುತ್ತದೆ. ಇದು ಅಪರೂಪ."

ಕುಮಾರಸ್ವಾಮಿಯವರಿಗೆ, ಪವಿತ್ರ ವೇದಮಂತ್ರಗಳನ್ನು ಕೊಟ್ಟ ಮಹರ್ಷಿಗಳ ಬಗೆಗೆ ಅಚಲ ಭಕ್ತಿ. ನಮ್ಮ ಕಾಲದಲ್ಲಿ ಅವರ ಹಾಗೆ ಋಷಿಋಣವನ್ನು ತೀರಿಸಿದವರನ್ನು ಕಾಣೆವು. ನಿರಂತರವಾಗಿ ಅರ್ಧಶತಮಾನದಿಂದ ಗುರುಕುಲ ನಡೆಸಿಕೊಂಡು ಬರುತ್ತಿರುವ ಅವರು ಈವರೆಗೆ ನೂರಾರು ಪುರುಷರಿಗೂ ಮಹಿಳೆಯರಿಗೂ ವೇದವನ್ನು ಹೇಳಿಕೊಟ್ಟಿದ್ದಾರೆ, ವೈದಿಕ ಜೀವನಮಾರ್ಗದಲ್ಲಿ ಪ್ರೀತಿ, ಗೌರವ, ಶ್ರದ್ಧೆ ಹುಟ್ಟಿಸಿದ್ದಾರೆ; ಶೃಂಗೇರಿಯ ಪರಮಪೂಜ್ಯ ಗುರುಗಳಿಗೆ ಅವರು ಪ್ರಿಯರಾಗಿರುವುದರಲ್ಲಿ ಆಶ್ಚರ್ಯವಿಲ್ಲ. ಅವರದು ಚಿಕಿತ್ಸಕ ದೃಷ್ಟಿ, ಸಮನ್ವಯ ಸಿದ್ಧಾಂತ.

ಶ್ರೀಕಂಠಕುಮಾರಸ್ವಾಮಿಯವರ ಧರ್ಮಪತ್ನಿ , ಶ್ರೀಮತಿ ಜಯಲಕ್ಷ್ಮೀ ಅವರ ತಂದೆ ಎಸ್.ಎಲ್. ಶ್ರೀಕಂಠಯ್ಯನವರು ಮೈಸೂರಿನ ಪ್ರತಿಷ್ಠಿತ NIE ಸಂಸ್ಥೆಯಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದವರು, ಜ್ಯೋತಿಷ್ಕರೂ ಆಗಿದ್ದವರು, ವೇದ ಸಂಸ್ಕೃತದಲ್ಲಿ ಪ್ರವೇಶ ಹೊಂದಿದ್ದವರು. ಜಯಲಕ್ಷ್ಮಿ ಅವರಿಗೂ ಆ ಸಂಸ್ಕಾರವಿದೆ.

ಅವರ ಇಬ್ಬರು ಹೆಣ್ಣುಮಕ್ಕಳಲ್ಲಿ ಹಿರಿಯವರು ಶ್ರೀಮತಿ ಶೈಲಜಾ ಪ್ರತಾಪ್. ಅವರಿಗೆ ಅವರ ತಂದೆಯವರು ಬರೆದ ಪತ್ರಗಳಲ್ಲಿ "Intellectಗೆ ವ್ಯಾಯಾಮ ಕೊಡಬೇಕು" ಎಂಬ ಕುಮಾರಸ್ವಾಮಿಯವರದೇ ಮಾತಿನ ನಿಚ್ಚಳ ಸಾಕ್ಷ್ಯವಿದೆ. ಎರಡನೆಯ ಮಗಳು ಸುಮ ಡಾಕ್ಟೊರೇಟ್ ಪದವೀಧರೆ. ಮಗ ಶ್ರೀನಿವಾಸ್ (ಪಾಪು) ಬಿ.ಟೆಕ್ ಮಾಡಿ ಅಮೆರಿಕೆಯಲ್ಲಿ ದೊಡ್ಡ ಹುದ್ದೆಯಲ್ಲಿದ್ದು Ph.D., ಮಾಡಿದ್ದಾರೆ. ಅವರೂ ವೇದಾಧ್ಯಯನ ಮಾಡಿದ್ದಾರೆ. ಕುಮಾರಸ್ವಾಮಿಯವರ ಹೆಣ್ಣುಮಕ್ಕಳೂ, ಮಮ್ಮಕ್ಕಳೂ ವೇದಮಂತ್ರಗಳಲ್ಲಿ ಪ್ರವೇಶ ಪಡೆದಿದ್ದಾರೆ. ಅದು ಕುಮಾರಸ್ವಾಮಿಯವರ ಅಭಿರುಚಿಗೆ ತಕ್ಕುದಾಗಿದೆ.

'ಹೃದಯ ಸಂಪನ್ನತೆ' ಎಂಬ ಕೃತಿ ಕುಮಾರಸ್ವಾಮಿಯವರ ಉದಾತ್ತ ದೃಷ್ಟಿ ಮತ್ತು ಮಾನವೀಯ ಪರಿಕಲ್ಪನೆಯ ಪಕ್ವಕೃತಿ. 'ಶ್ರಾದ್ಧ'ವು ವೈದಿಕ ಮಾರ್ಗದಲ್ಲಿ ಶ್ರದ್ಧೆಯನ್ನು ನೂತನಗೊಳಿಸುವ ಸಕಾಲಿಕ ಕೃತಿ. ಕುಮಾರಸ್ವಾಮಿಯವರದು ಒಂದು ಚಳವಳಿ, ವೇದಮಾರ್ಗವನ್ನು ಬೆಳಗಿಸುವುದು ಅದರ ಗುರಿ. ಸನಾತನವಾದ ವೈದಿಕ ಜೀವನಮಾರ್ಗ ಪ್ರಜ್ವಲಿಸಬೇಕೆಂಬುದು ಅವರ ಆಸೆ.

ವಿಳಾಸ : ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ, ೪೦೮, ಲಕ್ಷ್ಮೀ ರಾಮಸ್ವಾಮಿಸೌಧ, ೧೦೨೮/೧, ಚಾಮರಾಜಪುರಂ, ಮೈಸೂರು-೫೭೦ ೦೦೫, ದೂರವಾಣಿ : ೨೩೩೦೪೫೪

ಶ್ರೀಮತಿ ಬಿ.ಎಸ್. ವೇದಾವತಿ, ಶ್ರೀ ಬಿ.ವಿ. ಶ್ರೀಕಂಠ್ : ಭದ್ರಾವತಿ ವೆಂಕಟರಾಮಯ್ಯ ಶ್ರೀಕಂಠ್ (ಜ. ೧೯೩೧) ಸಾಲಿಗ್ರಾಮದ ಎಸ್.ಎಮ್.ವೆಂಕಟರಾಮಯ್ಯ LME, ಮತ್ತು ಸಣ್ಣಮ್ಮ ಶಾಂತಮ್ಮ ಅವರ ಮೊದಲ ಮಗ. ತಂದೆಯ ತಂದೆ ಕೋಟೆಮಲ್ಲಪ್ಪಯ್ಯ ಪೈಲ್ವಾನ್. ತಾಯಿಯ ತಂದೆ ಬದನೆ ಬೆಳೆಗಾಗಿ ಮಹಾರಾಜರಿಂದ ಪ್ರಶಂಸಿತರಾದ 'ಬದನೆಕಾಯಿ ಶ್ರೀಕಂಠಯ್ಯ'. ತಂದೆ ಸಿಮೆಂಟ್ ಕಾರ್ಖಾನೆಯ ಸಂರಚನಾ ಶಾಸ್ತ್ರದಲ್ಲಿ ನಿಪುಣ, ಭದ್ರಾವತಿ ಸೇರಿದಂತೆ (೧೯೨೪-೧೯೫೪) ದೇಶದ ನಾನಾ ಕಡೆ ಅದರ ಅಭಿವೃದ್ಧಿಗಾಗಿ ದುಡಿದವರು, ಆ ಬಗೆಗೆ ಪುಸ್ತಕ ಬರೆದವರು; ಸಂಗೀತ ಮತ್ತು ನಾಟಕದಲ್ಲಿ ಆಸಕ್ತ, ರಂಗಭೂಮಿಯ ನಟ, ವಿವಿಧ ಸಂಗೀತವಾದ್ಯಗಳು ಮತ್ತು ಅಪರೂಪದ ಗ್ರಾಮಾಫೋನ್ ಡಿಸ್ಕುಗಳ ಸಂಗ್ರಾಹಕ ಮತ್ತು ವಾದಕ, ಛಾಯಾಚಿತ್ರಗ್ರಾಹಕ, ಜಾದೂಗಾರ. ಬಿ.ವಿ. ಶ್ರೀಕಂಠ್, B.Sc., ಭದ್ರಾವತಿಯ ಕಾಗದದ ಕಾರ್ಖಾನೆಯಲ್ಲಿ ಫೋರ್‌ಮನ್ ಆಗಿ ಸೇರಿ (೧೯೫೫) ಸೀನಿಯರ್ ಸೂಪರಿಂಟೆಂಡೆಂಟ್ ಆಗಿ ನಿವೃತ್ತರಾದವರು (೧೯೮೯).

ಬಾಲ್ಯದಿಂದ ಭದ್ರಾವತಿಯೇ ಆಡುಂಬೊಲ. ತಂದೆಯ ಕಾಲದಿಂದ ಅನ್ನ ಹಾಕಿದ ಕೃತಜ್ಞತೆಗಾಗಿ ಸಾಲಿಗ್ರಾಮದ 'ಎಸ್.ವಿ.' ಬದಲು ಭದ್ರಾವತಿಯ 'ಬಿ.ವಿ.' ಶ್ರೀಕಂಠ್ ಆದರು. ಅಂತರಕಾಲೇಜು ಪಂದ್ಯಗಳ ಸ್ಪರ್ಧಿ, ಫುಟ್‌ಬಾಲ್ ಟೀಮಿನ ಆಟಗಾರ, ಪಿಂಗ್‌ಪಾಂಗ್‌ನಲ್ಲೂ ನಿಪುಣ, ಹಲಟೂರ್ನಿಗಳಲ್ಲಿ ಪ್ರಶಸ್ತಿಗೆ ಪಾತ್ರ. ಮೈಸೂರಿನಲ್ಲಿ ಇಂಟರ್‌ಕೊಲಿಜಿಯೇಟ್ ಮ್ಯೂಸಿಕ್ ಕಾಂಪಿಟಿಷನ್‌ನಲ್ಲಿ ಬೆಳ್ಳಿ ಫಲಕ ವಿಜೇತ, ಜೊತೆಗೆ ಬೆಳ್ಳಿ ಕಪ್‌ನ ವಿಶೇಷ ಬಹುಮಾನ ವಿಜೇತ. ಕಾಲೇಜಿನ Scouts and Guides Troupನ ನಾಯಕ. ಮೈಸೂರಿನಲ್ಲಿ (ತಾನು ಕಲಿಯುತ್ತಿದ್ದ) ಯುವರಾಜ ಹಾಗೂ ಮಹಾರಾಜ ಕಾಲೇಜುಗಳಲ್ಲಿ ಅವರಷ್ಟೇ ಪ್ರತಿಭಾವಂತರಾದ ತಮ್ಮ ಬಿ.ವಿ. ವಿಶ್ವೇಶ್ವರ್ ಒಡನೆ ಸೇರಿ Band Party ರಚನೆ, ರಾಜ್ಯ ಸ್ಕೌಟ್ಸ್ ಮತ್ತು ಗೈಡ್‌ನ ಬ್ಯಾಂಡ್

ತಂಡದ ನಾಯಕತ್ವ, ೧೯೫೨ರ ಮೈಸೂರು ದಸರಾ ಮೆರವಣಿಗೆಯಲ್ಲಿ ಅವಕಾಶ, ಹೈದರಾಬಾದಿನಲ್ಲಿ ಪ್ರಧಾನಿ ನೆಹರೂ ಅವರಿಂದಲೂ ಮೆಚ್ಚುಗೆ, ಪ್ರಶಸ್ತಿ ; 'B.V. Brothers'ಗೆ ಕೀರ್ತಿಯ ಶಿಖರ. ಭದ್ರಾವತಿಯ ಕಾಗದದ ಕಾರ್ಖಾನೆಯಲ್ಲಿ ಹೊಸ Pulp Millನ್ನು Commission ಮಾಡುವ ಹೊಣೆ, ಬೇರೆ ಬೇರೆ ಪೇಪರ್ ಮಿಲ್‌ಗಳ ಕೆಲಸಗಾರರಿಗೆ ತರಬೇತಿಯ ಜವಾಬ್ದಾರಿ. ೧೯೭೦ರಲ್ಲಿ ಸಿಲೋನ್ ಪ್ರವಾಸ. ಹಿಂದಿರುಗಿದ ಮೇಲೆ ವೇದ ಕಲಿಕೆ : ವೇ|| ಬ್ರ|| ಶ್ರೀ ಕೆ.ಎಸ್. ರಾಮಸ್ವಾಮಿ ಶಾಸ್ತ್ರಿಗಳೂ, ವೇ|| ಬ್ರ|| ಶ್ರೀ ಆರ್.ಕೆ. ಶ್ರೀಕಂಠಕುಮಾರಸ್ವಾಮಿಗಳೂ ಗುರುಗಳು. ಎಂ.ಪಿ.ಎಂ. ಸೇವೆಯಲ್ಲಿದ್ದಾಗಲೂ ಕ್ರೀಡೆ ಮತ್ತು ಸಂಗೀತಸೇವೆಯ ಮುಂದುವರಿಕೆ. ಮೊದಲು ಗೀತಾ ಆರ್ಕೆಸ್ಟ್ರಾ, ಅನಂತರ S.S. Music Party (Srikant & Subbanarasaiah Music Party) ಮೂಲಕ ಇಡೀ ಕರ್ನಾಟಕದ ಜನರಿಗೆ ಮನೋರಂಜನೆ. BVS- Mouth Organ, Bul Bul Sitar, Harmonium, Key Board, Spanish Guitar, Mandolin, Balalayaka, Banjoಗಳಲ್ಲಿ ಪರಿಣತ. ನಿರ್ದಿಷ್ಟ ಶ್ರುತಿಜ್ಞಾನ. ಯಾವುದೇ ಹೊಸವಾದ್ಯಗಳನ್ನು ಅರ್ಧ ಗಂಟೆಯಲ್ಲಿ ಪಳಗಿಸಿಕೊಳ್ಳಬಲ್ಲ ಪ್ರತಿಭಾಶಾಲಿ. ಯಾವ ಗುರುಗಳೂ ಇಲ್ಲದೆ ಆದ ಈ ಸಿದ್ಧಿಯು ಶೃಂಗೇರಿ ಶ್ರೀ ಶಾರದಾಮಾತೆಯದೇ ಅನುಗ್ರಹವೆಂಬ ಅಚಲಭಕ್ತಿ. ಭಾಗವಹಿಸಿದ್ದ ೩೦ ಅಖಿಲ ಕರ್ನಾಟಕ ಸಂಗೀತ ಸ್ಪರ್ಧೆಗಳಲ್ಲಿ ೨೯ರಲ್ಲಿ ಮೊದಲ ಬಹುಮಾನ, ಒಂದರಲ್ಲಿ ಎರಡನೆಯ ಬಹುಮಾನ. ಮೌತ್ ಆರ್ಗನ್ ಮತ್ತು ಸ್ಪ್ಯಾನಿಷ್ ಗಿಟಾರ್‌ನಲ್ಲಿ ವಿಶೇಷ ಸಿದ್ಧಿ. Mouth Organ ವಾದನಕ್ಕೆ ೨ ಬಾರಿ ದಕ್ಷಿಣಭಾರತ ಸ್ಪಧೆಯಲ್ಲಿ ಮೊದಲ ಬಹುಮಾನ, ಚಿನ್ನದ ಪದಕ. ಶ್ರೀ ರಂಭಾಪುರಿ ಸ್ವಾಮಿಗಳಿಂದಲೂ ರಜತ ಪದಕ ಸಂಮಾನ. ತಮಗೇ ಬಹುಮಾನ ಬರುತ್ತದೆಂಬ ಮುಜುಗರದಿಂದ ಸ್ಪರ್ಧೆಗೆ ಹೋಗುವುದನ್ನೇ ನಿಲ್ಲಿಸಿದ ಉದಾರಿ. ಪಾಶ್ಚಾತ್ಯ ಸಂಗೀತದಲ್ಲೂ ಅವರಿಗೆ ಒಲವುಂಟು. ವೇದಮಂತ್ರಗಳನ್ನು ವಿವಿಧ ವಾದ್ಯಗಳಲ್ಲಿ ನುಡಿಸುವ ಪ್ರಯೋಗಶೀಲ. ೧೯೮೨ ರಿಂದ ಉಪಯುಕ್ತ ಮಂತ್ರಗಳ ಅಧ್ಯಾಪನ. "ಪ್ರತಿ ಗೃಹಸ್ಥನೂ ತನ್ನ ಆಶ್ರಮೋಕ್ತ ಕರ್ಮಗಳನ್ನು ತಾನೇ ಮಾಡಿಕೊಳ್ಳುವಂತಾಗಬೇಕು ; ಆಸಕ್ತರಿಗೆ ಹೇಳಿಕೊಡು. ಅದೇ ನೀನು ನನಗೆ ಕೊಡುವ ಗುರುದಕ್ಷಿಣೆ" ಎಂಬ ವೇ||ಬ್ರ||ಶ್ರೀ ರಾಮಸ್ವಾಮಿಶಾಸ್ತ್ರಿಗಳ ಆದೇಶದ ಸ್ಫೂರ್ತಿ. ಪುರುಷರಂತೆಯೇ ಮಹಿಳೆಯರಿಗೂ ಮಂತ್ರಪಾಠ. ರುದ್ರಪಟ್ಟಣದ ಆರ್. ಅನಂತ ಶ್ರೀನಿವಾಸಯ್ಯ ಮತ್ತು ಆರ್.ಎ. ರತ್ನಮ್ಮನವರ ಮಗಳು ಬಿ.ಎಸ್. ವೇದಾವತಿ ಅವರೊಂದಿಗೆ ೧೯೫೯ರಲ್ಲಿ ವಿವಾಹ. ವೇದಾವತಿ ಅವರಿಗೂ ವೀಣೆ, ಸ್ಪ್ಯಾನಿಷ್ ಗಿಟಾರ್‌ನಲ್ಲಿ ಪ್ರವೇಶ, ವೇದಮಂತ್ರಗಳನ್ನು ನುಡಿಸಿಕೊಂಡು ಹೇಳಬಲ್ಲ ತರಬೇತಿ, ನಿತ್ಯವೂ ಗೃಹಿಣಿಯರಿಗೆ ಸೌಂದರ್ಯಲಹರಿ ಮೊದಲಾದ ಸ್ತೋತ್ರಗಳ ಪಾಠ. ಮಕ್ಕಳು ಮೊಮ್ಮಕ್ಕಳಿಗೆಲ್ಲ ಸಂಗೀತ ಮತ್ತು ವೇದಮಂತ್ರಗಳಲ್ಲಿ ಪರಿಶ್ರಮ, ತಾಂತ್ರಿಕವಿದ್ಯೆ ಮತ್ತು ನೌಕರಿಗಳಲ್ಲೂ ಆಧುನಿಕ ಸಾಧನೆ.

೧೯೮೦ರ ನಂತರದ ದಿನಗಳಲ್ಲಿ ವೈದಿಕಪದ್ಧತಿಗಳ ಬಗೆಗೆ ವಿಶೇಷ ಆಸಕ್ತಿ ವಹಿಸಿದ ಬಿ.ವಿ. ಶ್ರೀಕಂಠ್ ಅವರು ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ ಅವರೊಂದಿಗೆ ಆಳವಾಗಿ ಚರ್ಚಿಸಿದರು, ಪತ್ರಗಳ ಮೂಲಕವೂ ಉತ್ತರ ಪಡೆದರು. RKS ಅವರಿಂದ ಪ್ರಭಾವಿತರಾಗಿ ನೂರಾರು ಜಿಜ್ಞಾಸುಗಳ ಸಂದೇಹಗಳನ್ನು ತಾವೇ ಪರಿಹರಿಸುತ್ತಿದ್ದಾರೆ. ಹಳೆಯ ಕುಶಲ ವಸ್ತುಗಳು, ದಾಖಲೆಗಳನ್ನೆಲ್ಲಾ ಸಂಗ್ರಹಿಸಿ ಜೋಪಾನಗೊಳಿಸುವ ಪ್ರಶಂಸಾರ್ಹ ಗುಣವಿರುವ ಶ್ರೀಕಂಠ, ಆರ್.ಕೆ.ಎಸ್. ಅವರು ಜಿಜ್ಞಾಸುಗಳಿಗೆ ಬರೆದ ಪತ್ರಗಳನ್ನೆಲ್ಲ ಸಂಗ್ರಹಿಸಿ ಇಟ್ಟಿದ್ದಾರೆ. ಅದನ್ನು ಸಮುದಾಯ ಅಧ್ಯಯನ ಕೇಂದ್ರ ಈ ಸಂಪುಟದಲ್ಲಿ ಬಳಸಿಕೊಂಡಿದೆ. ವಿಳಾಸ: ಬಿ.ವಿ. ಶ್ರೀಕಂಠ, ಬಿ.ಎಸ್‌ಸಿ., ಸೀನಿಯರ್ ಸೂಪರಿಟೆಂಡೆಂಟ್ (ನಿವೃತ್ತ) ಎಂ.ಪಿ.ಎಂ., 'ವೇದಶ್ರೀ', ಶ್ರೀ ಗಣೇಶ ಕಾಲೋನಿ, ಮುಖ್ಯರಸ್ತೆ, ೨ನೇ ಅಡ್ಡರಸ್ತೆ, ಜನ್ನಾಪುರ, ಭದ್ರಾವತಿ - ೫೭೭೩೦೧, ಶಿವಮೊಗ್ಗ ಜಿಲ್ಲೆ. ದೂರವಾಣಿ : ೯೮೪೪೮೦ ೭೬೯೨೪.

ಶ್ರೀಮತಿ ಶೈಲಜಾ, ಶ್ರೀ ಪ್ರತಾಪ್ : ಶೈಲಜಾ ಅವರ ತಂದೆ ಪ್ರೊ. ಶ್ರೀಕಂಠ ಕುಮಾರಸ್ವಾಮಿಯವರು, ತಾಯಿ ಶ್ರೀಮತಿ ಜಯಲಕ್ಷ್ಮಿ ಅವರು. ಭದ್ರಾವತಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಸಂಸ್ಕೃತದಲ್ಲಿ ಬಿ.ಎ., ಪದವಿ ಪಡೆದದ್ದು ಮದರಾಸಿನ ಕ್ವೀನ್ ಮೇರೀಸ್ ಕಾಲೇಜಿನಿಂದ. ಮದರಾಸಿನಲ್ಲಿಯೇ ಒಂದು ವರ್ಷ ಬ್ಯಾಂಕ್ ಉದ್ಯೋಗಿಯಾಗಿದ್ದ ಶೈಲಜ ಕಳೆದ ಐದು ವರ್ಷಗಳಿಂದ ಬೆಂಗಳೂರಿನ ವಾಣಿ ವಿದ್ಯಾಕೇಂದ್ರದಲ್ಲಿ ಸಂಸ್ಕೃತ ಅಧ್ಯಾಪಿಕೆಯಾಗಿ ಕೆಲಸ ಮಾಡುತ್ತಿದ್ದಾರೆ. ಸಂಗೀತವನ್ನು ಮೆಚ್ಚಿಕೊಳ್ಳುವ ಶೈಲಜಾ ಅವರು, ಮನೆಯ ಪರಿಸರದಲ್ಲಿ ಶ್ರವಣಮಾತ್ರದಿಂದ ವೇದಮಂತ್ರಗಳನ್ನು ಕಲಿತಿದ್ದಾರೆ, ಮಕ್ಕಳಿಗೂ ಕಲಿಸಿದ್ದಾರೆ. ಅವರ ವಿಶೇಷ ಅಭಿರುಚಿ ಅಧ್ಯಾತ್ಮ. ಭಾರತೀಯಸಂಸ್ಕೃತಿಯ ಬಗೆಗಿನ ಅವರ 'ವಾರದ ಪ್ರವಚನ'ಗಳಿಗೆ ಆಶ್ರಯ ಅವರ ವಾಣಿವಿದ್ಯಾಕೇಂದ್ರ, ಅವರ ಪ್ರವಚನದ ಮೂಲವಸ್ತು- ಆಕರ ತಂದೆಯವರ ದೀರ್ಘ ಪತ್ರಗಳು. ಪತಿ : ಶ್ರೀ ಪ್ರತಾಪ್ ಬಿ.ಇ. (ಮೆಕ್ಯಾನಿಕಲ್)., ಕೈಗಾರಿಕೋದ್ಯಮಿ. ತಂದೆ ಭಾಸ್ಕರ್ ಅವರ ಹೆಸರಿನಲ್ಲಿಯೇ 'ಭಾಸ್ಕರ್ ಇಂಡಸ್ಟ್ರೀಸ್' ನಡೆಸುತ್ತಿದ್ದಾರೆ. ಪ್ರತಾಪ್, ಶತಾಯುಷಿ ಹರವೆ ಶ್ರೀನಿವಾಸಯ್ಯನವರ ಮಮ್ಮಗ. ಮಕ್ಕಳು : ಚೇತನ ಹರವೆ, ಕಾಂಚನ ಹರವೆ. ಶೈಲಜಾ ಅವರಿಗೆ ಪ್ರೊ. ಶ್ರೀಕಂಠಕುಮಾರಸ್ವಾಮಿ ಅವರು ಬರೆದ ಪತ್ರಗಳು ಶೈಲಜಾ ಅವರ ಅಭಿರುಚಿ, ಆಸಕ್ತಿ ಮತ್ತು ಚಿಂತನ ಶಕ್ತಿಗೂ ಸಾಕ್ಷಿ.

ಸಮುದಾಯ ಅಧ್ಯಯನ ಕೇಂದ್ರ

ಪುಸ್ತಕ ಪೋಷಕರ ವಿವರ

ಮಹಾಸಂಪುಟ ಪ್ರಾಯೋಜಕರು

ಶ್ರೀಮತಿ ಕೆ.ಕೆ. ವಿಜಯಲಕ್ಷ್ಮಿ, ಡಾ. ಆರ್.ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.
ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು
ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್

ಮಹಾದಾನಿಗಳು

ಶ್ರೀಮತಿ ಪಾರ್ವತಮ್ಮ, ವಿದ್ವಾನ್ ಶ್ರೀ ಬಿ.ಎಸ್. ಸುಬ್ಬರಾಯಶಾಸ್ತ್ರೀ, ಬಸವಪಟ್ಟಣ
ಶ್ರೀಮತಿ ರಾಜಲಕ್ಷ್ಮೀ, ಮತ್ತೂರು ಶ್ರೀ ಕೃಷ್ಣಮೂರ್ತಿ, ಬೆಂಗಳೂರು

ಮಹಾಪೋಷಕರು

ಶ್ರೀಮತಿ ಕಮಲಮ್ಮ, ಶ್ರೀ ಕೆ. ನಾಗರಾಜ್, ಬೆಂಗಳೂರು
ಶ್ರೀಮತಿ ಜಯಲಕ್ಷ್ಮೀ, ಶ್ರೀ ಕೆ. ಸುಬ್ಬರಾಯನ್, ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ, ಶ್ರೀ ವೈ.ಎನ್. ನರಸಿಂಗರಾವ್, ಮೈಸೂರು
ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ, ಶ್ರೀ ಎಂ.ಎಸ್. ರಾಮರಾವ್, ಮೈಸೂರು
ಶ್ರೀಮತಿ ಲಕ್ಷ್ಮೀ, ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು
ಶ್ರೀಮತಿ ಶಾರದಾಬಾಯಿ, ಶ್ರೀ ಹರಿ ಆಚಾರ್ಯ, ಮಂಡ್ಯ

ಪೋಷಕರು

ಶ್ರೀಮತಿ ಶಾಂತಾ, ಶ್ರೀ ಕೆ. ಲಕ್ಷ್ಮಣರಾವ್, ಮೈಸೂರು
ಶ್ರೀಮತಿ ಲಕ್ಷ್ಮೀಕಿರಣ, ಶ್ರೀ ಜಿ. ಆನಂದಕುಮಾರ್, ಮೈಸೂರು
ಶ್ರೀಮತಿ ಕೆ.ಎನ್. ಸುಶೀಲಮ್ಮ, ಶ್ರೀ ಆರ್.ಎಸ್. ವಾಸುದೇವಮೂರ್ತಿ, ಮೈಸೂರು
ಶ್ರೀಮತಿ ಎಂ.ಎಸ್. ರುಕ್ಮಿಣಿ, ಶ್ರೀ ಎಚ್.ಆರ್. ಸೂರ್ಯನಾರಾಯಣ, ಮೈಸೂರು
ಶ್ರೀಮತಿ ಎಂ. ಗಾಯತ್ರಿ, ಶ್ರೀ ದೇವರಾಜು, ಮಂಡ್ಯ
ಶ್ರೀಮತಿ ಸಾವಿತ್ರಮ್ಮ, ಶ್ರೀ ಎಸ್. ಸತ್ಯನಾರಾಯಣರಾವ್, ಮಂಡ್ಯ
ಶ್ರೀಮತಿ ಲಲಿತಮ್ಮ, ಶ್ರೀ ಎಚ್.ಕೆ. ಸುಬ್ಬಣ್ಣ, ಹಾಸನ
ಶ್ರೀಮತಿ ಸುಕನ್ಯಾ, ಶ್ರೀ ಲಕ್ಷ್ಮೀಶ, ಹಾಸನ
ಶ್ರೀಮತಿ ಭಾಗ್ಯ, ಶ್ರೀ ಸೂರ್ಯನಾರಾಯಣ, ಹಾಸನ
ಶ್ರೀಮತಿ ಸತ್ಯವತಿ, ಶ್ರೀ ಹರವೆ ಕೇಶವಮೂರ್ತಿ, ಮೈಸೂರು
ಡಾ. ಶ್ರೀಮತಿ ಆರ್. ಇಂದಿರಾ, ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು
ಶ್ರೀಮತಿ ಕೆ.ಎಸ್. ನಾಗಮ್ಮ, ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು
ಶ್ರೀಮತಿ ಸರಳ, ಶ್ರೀ ಬಿ.ಕೆ. ರಾಮಚಂದ್ರ, ಬಸವಪಟ್ಟಣ

ದಾನಿಗಳು

ಶ್ರೀಮತಿ ಪ್ರಭಾಮೂರ್ತಿ, ಶ್ರೀ ಬಿ.ಕೆ. ಕೇಶವಮೂರ್ತಿ, ಮೈಸೂರು

ಶ್ರೀಮತಿ ಸರೋಜ, ಶ್ರೀ ಎಚ್.ಆರ್. ಹಿರಿಯಣ್ಣ, ಮೈಸೂರು

ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ನಾಗೇಶ್, ಬೆಂಗಳೂರು

ಶ್ರೀಮತಿ ಕೆ.ಎಸ್. ಲೀಲಾವತಿ, ಶ್ರೀ ಕೆ.ಎಸ್. ಶಾಮಣ್ಣ, ಮೈಸೂರು

ಶ್ರೀಮತಿ ಲಕ್ಷ್ಮಿ, ಶ್ರೀ ಎಚ್.ಕೆ. ಸತ್ಯನಾರಾಯಣ, ಮೈಸೂರು

ಶ್ರೀಮತಿ ಎಚ್.ಎಮ್. ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್, ಮೈಸೂರು

ಶ್ರೀಮತಿ ಪಾರ್ವತಿ, ಶ್ರೀ ಪಿ.ಆರ್. ಹರಿಹರನ್, ಮೈಸೂರು

ಶ್ರೀಮತಿ ರಾಧಾ, ಶ್ರೀ ಆರ್.ಎಸ್. ಅನಂತನಾರಾಯಣ, ಬೆಂಗಳೂರು

ಶ್ರೀಮತಿ ಶಶಿಕಲಾ, ಶ್ರೀ ವೆಂಕಟೇಶಮೂರ್ತಿ, ಮೈಸೂರು

ಶ್ರೀಮತಿ ಲೀಲಾವತಿ, ಶ್ರೀ ಜಿ.ಕೆ. ನರಸಿಂಹಮೂರ್ತಿ, ಮಂಡ್ಯ

ಶ್ರೀಮತಿ ಸುಧಾ, ಶ್ರೀ ಎ.ಎಸ್. ಅರುಣಕುಮಾರ್, ಮಂಡ್ಯ

ಶ್ರೀಮತಿ ಪ್ರೇಮಲತಾ, ಶ್ರೀ ಎಂ.ಆರ್. ರಾಮಶೇಷ, ಮಾದಾಪುರ

ಶ್ರೀಮತಿ ಐ.ವಿ. ರಮಾಮಣಿ, ಶ್ರೀ ಕೆ.ಎಸ್. ನಾಗರಾಜ, ಪಿರಿಯಾಪಟ್ಟಣ

ಶ್ರೀಮತಿ ಲಲಿತಮ್ಮ, ಶ್ರೀ ಕೇಶವಮೂರ್ತಿ, ಕೊಣನೂರು

ಸಮುದಾಯ ಅಧ್ಯಯನ ಕೇಂದ್ರ

ಗೌರವಾಧ್ಯಕ್ಷರು

ಬಿ.ಎನ್.ವಿ. ಸುಬ್ರಹ್ಮಣ್ಯ

ಅಧ್ಯಕ್ಷರು

ಆರ್.ವಿ. ಶ್ರೀನಿವಾಸಯ್ಯ

ಕಾರ್ಯದರ್ಶಿ

ಡಾ. ಪ್ರಣತಾರ್ತಿಹರನ್

ಖಜಾಂಚಿ

ಎಚ್.ಎನ್. ರಘುನಾಥ್

ಪುಸ್ತಕ ಸಲಹಾ ಸಮಿತಿ

ಪ್ರೊ. ಎ.ವಿ. ನರಸಿಂಹಮೂರ್ತಿ
ಪ್ರೊ. ಜಿ. ಅಶ್ವತ್ಥನಾರಾಯಣ
ಡಾ. ಎಂ.ಎಲ್. ಲಲಿತಮ್ಮ
ಎನ್.ಎಸ್. ಶಾರದಾ ಪ್ರಸಾದ್
ಡಾ. ಟಿ.ವಿ. ಸತ್ಯನಾರಾಯಣ
ವಿದ್ವಾನ್ ಎಚ್.ವಿ. ನಾಗರಾಜರಾವ್
ವಿದ್ವಾನ್ ಆನಂದತೀರ್ಥ ನಾಗಸಂಪಿಗೆ
ಡಾ. ಮೀರಾಮೂರ್ತಿ
ಡಾ. ಕೆ. ಅನಂತರಾಮು
ಕೆ. ರಾಘವೇಂದ್ರರಾವ್

ಸಂಚಾಲನ ಸಮಿತಿ

ಬಿ.ವಿ. ವೆಂಕಟನಾರಾಯಣ
ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು)
ಕೇಶವಮೂರ್ತಿಹರವೆ
ಆರ್.ಎಸ್. ಅನಂತನಾರಾಯಣ
ಡಾ. ಎ.ಎಸ್. ಚಂದ್ರಶೇಖರ್
ಎಂ.ಕೆ. ವಿಜಯಲಕ್ಷ್ಮಿ
ಡಾ. ಬಿ.ವಿ. ಸುಧಾಮಣಿ
ಡಾ. ವಿಜಯಾಹರನ್

ಜ್ಞಾನಗಂಗೆಗೆ ದಂಡೆಗಳಿಲ್ಲ ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮ ಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ, ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು